ಅಮೆರಿಕಾಯಣ

ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಂಕ್ಷಿಪ್ತ ಇತಿಹಾಸ



ಪ್ರೊ.ವೈ.ಆರ್. ಮೋಹನ್

ಅಮೆರಿಕಾಯಣ

ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಂಕ್ಷಿಪ್ತ ಇತಿಹಾಸ

ಪ್ರೊ. ವೈ. ಆರ್. ಮೋಹನ್

ಅಭಿನವ

ನಂ. ೫೮, ಮಹಡಿ ೫ನೆಯ 'ಎ' ಅಡ್ಡರಸ್ತೆ
ಸುಬ್ಬಣ್ಣಗಾರ್ಡನ್, ವಿಜಯನಗರ
ಬೆಂಗಳೂರು – ೫೬೦ ೦೪೦

AMERIKĀYANA - A brief History of United States of Amerika by Prof. Y.R. Mohan, No. 1826 37th Street NE; Tuscaloosa, Alabama 35406, USA. Published by Abhinava # 58, Upstairs 5th 'A' Cross, Subbanna Garden, Vijayanagar Bangalore - 560 040. Karnataka. India

Published First in 2003 Pages : xiv + 868

Price : Rs. 650/- ($25)

ಪ್ರಧಾನ ಸಂಪಾದಕ
ನ. ರವಿಕುಮಾರ

ಬೆಲೆ : ಆರು ನೂರಾ ಐವತ್ತು ರೂಪಾಯಿಗಳು ಮಾತ್ರ

ಸಂಪಾದನೆ ಮತ್ತು ಪರಿಷ್ಕರಣೆ
ಪ್ರೊ. ಪ್ರಭುಶಂಕರ
ಪ್ರೊ. ಕೆ.ಎಸ್. ಶಿವಣ್ಣ, ಮೈಸೂರು

ಸಂಪಾದಕ ಮಂಡಳಿ
ಪಿ. ಚಂದ್ರಿಕಾ
ಬಿ.ಯು. ಸುಮಾ
ಸಿರಾಜ್ ಅಹಮದ್
ಶ್ರೀಧರಹೆಗಡೆ ಭದ್ರನ್

ಮುಖಪುಟ ವಿನ್ಯಾಸ : ಬಿ. ದೇವರಾಜ್

ಅಕ್ಷರ ಜೋಡಣೆ :
ಶ್ರೀ ಚಂದ್ರಾ ಐತಾಳ ಮತ್ತು
ಶ್ರೀಮತಿ ಸುಜಾತ ಐತಾಳ, ಅಮೆರಿಕ

ಮುದ್ರಣ
ಇಳಾ ಮುದ್ರಣ
ನಂ. ೩೬, ೪೦ ಅಡಿ ರಸ್ತೆ, ರಾಘವಸಗರ
ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು - ೨೬. ✆ : ೬೭೫೭೧೫೯

ಪ್ರೊ. ವೈ.ಆರ್. ಮೋಹನ್

ಮೂಲತಃ ಮಲೆನಾಡಿನವರು. ಬೇಗವಳ್ಳಿ, ತೂದೂರು, ಶಿವಮೊಗ್ಗಗಳಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸಮಾಜಶಾಸ್ತ್ರ ವಿಷಯದಲ್ಲಿ ಪದವಿ. ನಂತರ ಅಮೆರಿಕದ ಮಿಸ್ಸಿಸ್ಸಿಪಿ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ.

ದೆಹಲಿ, ಮುಂಬಯಿಗಳಲ್ಲಿ ಪಿಎಚ್‌ಡಿ ಪದವಿ ಕೇಂದ್ರಗಳಲ್ಲಿ ಹಾಗು ಕೊಲೆಜಿಯೇಟ್ ಕಾಲೇಜುಗಳಲ್ಲಿ ಉಪನ್ಯಾಸಕರಾಗಿ ನಂತರ ೧೯೭೯ ರಿಂದ ೧೯೯೭ರವರಗೆ ಟಸ್ಕಲೂಸ ಅಲಬಾಮದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ.

ದಕ್ಷಿಣ ಪ್ರಾಂತ ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ವೃತ್ತಿ ಸಂಘದ ಅಧ್ಯಕ್ಷತೆ ಮತ್ತು ದಕ್ಷಿಣ ಪ್ರಾಂತ ಕನ್ನಡಿಗರನ್ನು ಒಂದುಗೂಡಿಸಲು 'ಸಹ್ಯಾದ್ರಿ' ಕನ್ನಡ ಕೂಟವನ್ನು ಪ್ರಾರಂಭಿಸಿ ಕನ್ನಡ ಸಮ್ಮೇಳನಗಳನ್ನು ನಿರ್ವಹಿಸಿದ್ದಾರೆ.

ಪುಸ್ತಕಗಳು: ಸಮಾಜಶಾಸ್ತ್ರ (ಮೂವರು ಸಹೋದ್ಯೋಗಿಗಳೊಡನೆ. ಬೆಂಗಳೂರು ವಿ.ವಿ.ಯಿಂದ ಪ್ರಕಟಿತ)
ನೆನಪುಗಳು (ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ. ಅಮೆರಿಕನ್ನಡ ಮತ್ತು ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ, ಬೆಂಗಳೂರು ಇವರಿಂದ ೨೦೦೦ದಲ್ಲಿ ಪ್ರಕಟಿತ)
ಪಾರ್ಕಿನ್‌ಸನ್ ಖಾಯಿಲೆಯಿಂದ ನಾನು ಕಲಿತದ್ದೇನು (ಸಪ್ನಾ ಬುಕ್ ಹೌಸ್, ಬೆಂಗಳೂರು ಇವರಿಂದ ಪ್ರಕಟಿತ)

ಸಮಾಜಶಾಸ್ತ್ರ ಕುರಿತು ಅನೇಕ ಸಂಶೋಧನಾ ಪ್ರಬಂಧಗಳು ಪ್ರಾದೇಶಿಕ ಶೈಕ್ಷಣಿಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಸದ್ಯ ಅಮೆರಿಕದ ಟಸ್ಕಲೂಸ ಅಲಬಾಮದಲ್ಲಿ ನೆಲೆಸಿದ್ದಾರೆ.

ಅರ್ಪಣೆ

- ನಾನು ಅಮೆರಿಕಕ್ಕೆ ಬರಲು ಸರ್ವವಿಧಗಳಲ್ಲಿ ಸಹಾಯ ಮಾಡಿದ ಸೋದರಿ ಉಷಾ ಮತ್ತು ಡಾ. ರಾಮ ಅವರಿಗೆ

- ಇಪ್ಪತ್ತು ನಾಲ್ಕು ಘಂಟೆ ನಿರಂತರವಾಗಿ ಪಾರ್ಕಿನ್‌ಸನ್ ಕಾಯಿಲೆಯ ಪಾವಕದಲ್ಲಿ ಬೆಂದು ಬಸವಳಿಯುತ್ತಿರುವ ನನ್ನನ್ನು ಸಲಹಿ ಶುಶ್ರೂಷೆ ಮಾಡುತ್ತಿರುವ ಸಹಧರ್ಮಿಣಿ ನಂದಾಳಿಗೆ

- ಪ್ರತಿ ವರ್ಷ ಭಾರತದಿಂದ ಬಂದು ನನ್ನೊಡನೆ ಕೆಲವು ದಿನಗಳಾದರೂ ಇದ್ದು ನನ್ನ ಅಗತ್ಯಗಳನ್ನು ಕೇಳಿ ತಿಳಿದು ಅವನ್ನು ಪೂರೈಸಲು ಸಾಧ್ಯವಾದಷ್ಟು ಪ್ರಯತ್ನ ಪಟ್ಟು, ನನ್ನನ್ನು ಸಂತೋಷಪಡಿಸಿ ಕಣ್ ತುಂಬಿ ಬರುವಂತೆ ಮಾಡಿಹೋಗುವ ಆತ್ಮೀಯ ಬಂಧು ತುಳಸೀದಾಸ್‌ನಿಗೆ

– ಮೋಹನ್

ಇತಿಹಾಸದ ಇತಿ ಮಿತಿ

'ಚರಿತ್ರೆ ತೋರದು ನಮಗೆ ಸತ್ಪಥವ
ತಾನಾಗಿ ಹಿರಿಯಾದರ್ಶಗಳ ಪಂಜು
ವರ್ತಮಾನದ ಬಾಳ್ವೆಗಮರದಿರಲೆಂದು
ಗತಕಾಲದಲಿ ಮುಸುಕಿದ್ದ ದಟ್ಟ ಕಾವಳೆ ಮಂಜು --
ಹೆಚ್ಚೆಂದರಿದು, ತನ್ನನೆಂದಿಗೂ ನೆಚ್ಚಿ
ಅನುಕರಿಸಿ ಮುನ್ನಡೆಯದ ಥರ
ನೀಡಬಹುದೆಚ್ಚರಿಕೆ,
ಆಗಿ ಅಪಾಯ ಗಂಟೆಯ ಸ್ವರ'

– ಕೆ. ಎಸ್. ನಿಸಾರ್ ಅಹಮದ್

ಪರಿವಿಡಿ

ಮುನ್ನುಡಿ

'ಅಮೆರಿಕ' ಎಂದ ತಕ್ಷಣ ಪ್ರೀತಿ, ವಿಶ್ವಾಸ, ಪ್ರಚೋದನೆ, ಭಯ, ತಿರಸ್ಕಾರ, ದ್ವೇಷ ಮುಂತಾದ ಹಲವಾರು ಭಾವಗಳು ಪ್ರಪಂಚದಾದ್ಯಂತ ಇರುವ ಜನಾಂಗಗಳಲ್ಲಿ, ದೇಶಗಳಲ್ಲಿ ಉಂಟಾಗುತ್ತವೆ. ಇಂತಹ ದ್ವಂದ್ವವನ್ನು ಪ್ರೇರಿಸುವ ಜಗತ್ತಿನ ಏಕಮೇವಾದ್ವಿತೀಯ ಮಿಲಿಟರಿ ಮತ್ತು ಆರ್ಥಿಕ ಶಕ್ತಿಗಳನ್ನು ಹೊಂದಿರುವ ದೇಶವಾದ ಅಮೆರಿಕ ಅಥವಾ ಸಂಯುಕ್ತ ಸಂಸ್ಥಾನಗಳ ಇತಿಹಾಸ ಅತ್ಯಂತ ಸ್ವಾರಸ್ಯವೂ, ಬೋಧಕವೂ ಮತ್ತು ಸ್ಫೂರ್ತಿದಾಯಕವೂ ಆಗಿದೆ. ಇಂತಹ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಈ ದೇಶವನ್ನು ಕುರಿತಂತೆ 'ಇದಮಿತ್ಥಂ' ಎಂದು ವ್ಯಾಖ್ಯಾನಿಸುವುದು ಅತ್ಯಂತ ಕಷ್ಟಕರವಾದ ಕಾರ್ಯವಾಗುತ್ತದೆ. ಹಾಲಿವುಡ್ ಚಲನಚಿತ್ರಗಳ ಮೂಲಕ ಅಮೆರಿಕವನ್ನು ಗ್ರಹಿಸಲು ಪ್ರಯತ್ನಿಸುವವರ ವಿಷಯದಲ್ಲಂತೂ ಇನ್ನಷ್ಟು ಕ್ಲಿಷ್ಟಕರವಾದ ಪರಿಸ್ಥಿತಿ ಉಂಟಾಗುತ್ತದೆ. ಹಾಲಿವುಡ್‌ನ ಚಲನಚಿತ್ರಗಳ ಮಾಯಾಲೋಕದ ಪಡಿಯಚ್ಚಿನಂತೆ ಅಮೆರಿಕ ಇದೆ ಎಂಬ ತೀರ್ಮಾನವಂತೂ ಗಾಬರಿ ಹುಟ್ಟಿಸುತ್ತದೆ. ಒಟ್ಟಿನಲ್ಲಿ ಅಮೆರಿಕ ಎಂಬ ದೇಶ, ಭಾವನೆ, ಸಂಸ್ಕೃತಿ ಮತ್ತು ಭಾವನಾ ಸಮುಚ್ಚಯಗಳು ನಮ್ಮ ನಿಲುವಿಗೆ ಎಟುಕುವುದರ ಬಗ್ಗೆ ಭ್ರಮೆನಿರಸನ ಉಂಟಾಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಹೀಗಾಗಿ ಅಮೆರಿಕವನ್ನು ಕುರಿತಂತೆ ಅಂತಿಮ ನಿರ್ದಿಷ್ಟ ಮತ್ತು ಸಮಗ್ರ ಅಭಿಪ್ರಾಯ ಅಸಾಧ್ಯ. ಇಂತಹ ಸಂದಿಗ್ಧ ಪರಿಸ್ಥಿತಿಯೇ ಪಂಡಿತರಿಂದ ಹಿಡಿದು ಪಾಮರರವರೆಗೂ ಎಲ್ಲರನ್ನೂ ಕೈಬೀಸಿ ಕರೆಯುತ್ತಾ ಅಮೆರಿಕ ಆಕರ್ಷಣೆಯನ್ನು ಉಂಟುಮಾಡುತ್ತಿದೆ.

ಅತ್ಯಂತ ಪ್ರಾಚೀನ ಇತಿಹಾಸವನ್ನು ಇಂದಿನ ವಿಶ್ವದ ರಾಷ್ಟ್ರಗಳ ಸಮೂಹದಲ್ಲಿ ಪಡೆದುಕೊಂಡಿರುವ ಭಾರತ ಮತ್ತು ಅದರ ಸಮಾಜದಲ್ಲಿ ಸಮಾಜೀಕರಣ ಪ್ರಕ್ರಿಯೆಗೆ ಒಳಗಾದ ಹಾಗೂ ತನ್ನ ಪರಂಪರೆಯ ಬಗ್ಗೆ ವೈಭವೀಕರಣಗೊಳಿಸುವ ಪ್ರವೃತ್ತಿ ಇರುವ ಭಾರತೀಯನಿಗೆ ಅಮೆರಿಕದ ಇತಿಹಾಸ 'ಸಪ್ಪೆ' ಎಂದು ತೋರಿಬಂದರೆ ಆಶ್ಚರ್ಯವಿಲ್ಲ. ಏಕೆಂದರೆ ಭಾರತದಷ್ಟು ದೀರ್ಘವಾದ ಐತಿಹಾಸಿಕ ಹಿನ್ನೆಲೆ ಅಮೆರಿಕಕ್ಕೆ ಇಲ್ಲ. ಈ ದೃಷ್ಟಿಯಿಂದ ಭಾರತದೊಡನೆ ಹೋಲಿಸಿದಾಗ ಅಮೆರಿಕ ಪುಟ್ಟ ಶಿಶುವಿನಂತೆ ತೋರ ಬಹುದು. ಆದರೆ ಅದರ ಇತಿಹಾಸ ಕಾಲಮಾನ ದೃಷ್ಟಿಯಿಂದ ಅಳೆದಾಗ ಕಿರಿದಾದರೂ ಅದು ವಿಕಾಸಗೊಂಡು ಹಿರಿದಾಗಿ ಬೆಳೆದುಬಂದಿರುವ ರೀತಿಯಂತೂ ಅಚ್ಚರಿಗೊಳಿಸುತ್ತದೆ.

ಆಧುನಿಕ ಭಾರತದ ಮೇಲೆ ಅಮೆರಿಕದ ಇತಿಹಾಸ ಮತ್ತು ಪರಂಪರೆಯ ಪ್ರಭಾವ

ಗಣನೀಯವಾಗಿರುವುದಂತೂ ಸ್ಪಷ್ಟವಾಗಿದೆ. ಅಮೆರಿಕದ ಆರಂಭದ ಇತಿಹಾಸದೊಡನೆ ಭಾರತದ ಆಧುನಿಕ ಇತಿಹಾಸವನ್ನು ಸ್ಥೂಲವಾಗಿ ಹೋಲಿಸುವ ಪ್ರಯತ್ನ ಮಾಡಿದಾಗ, ನಮಗೆ ಕಂಡುಬರುವ ಕೆಲವು ವಿಷಯಗಳು ಸ್ವಾರಸ್ಯಕರವಾಗಿ ತೋರುತ್ತವೆ. ಬ್ರಿಟಿಷ್ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ದೈತ್ಯ ಶಕ್ತಿಗೆ ಪ್ರಪ್ರಥಮ ಸವಾಲಾಗಿ ನಿಂತು ಕೊಡಲಿಪೆಟ್ಟು ಹಾಕಿದ ಕೀರ್ತಿ ೧೮ನೆಯ ಶತಮಾನದ ಅಮೆರಿಕನ್ನರಿಗೆ ಸಲ್ಲುತ್ತದೆ. ಭಾರತೀಯರಿಗೆ ಸ್ವಾರಸ್ಯದ ವಿಷಯ ಎಂದರೆ, ಅಮೆರಿಕನ್ನರು ಬ್ರಿಟಿಷರ ವಸಾಹತು ವ್ಯವಸ್ಥೆಯಿಂದ ಸಶಸ್ತ್ರ ಹೋರಾಟದ ಮೂಲಕ ಬೇರ್ಪಟ್ಟು ಸ್ವಾತಂತ್ರ್ಯವನ್ನು ಪಡೆದುಕೊಂಡ ಸರಿಸುಮಾರಿಗೆ ನಮ್ಮ ದೇಶ ಅದೇ ಬ್ರಿಟಿಷ್ ವಸಾಹತು ವ್ಯವಸ್ಥೆಯೊಳಗೆ ಸ್ವಾತಂತ್ರ್ಯವನ್ನು ಕಳೆದುಕೊಂಡು ಸೇರ್ಪಡೆಯಾಗುತ್ತಾ ಸಾಗುತ್ತಿದ್ದುದು ಒಂದು ಕುತೂಹಲಕಾರಿಯಾದ ಐತಿಹಾಸಿಕ ಸಂಗತಿಯಾಗಿದ್ದುದು.

ಕರ್ನಾಟಕದ ಐತಿಹಾಸಿಕ ಸಂದರ್ಭದಲ್ಲಿ ಹೈದರಲಿ ಮತ್ತು ಟೀಪು ಸುಲ್ತಾನರು ಬ್ರಿಟಿಷರ ವಿರುದ್ಧ ಯುದ್ಧಗಳನ್ನು ಮಾಡುತ್ತಿದ್ದ ಕಾಲದಲ್ಲೇ ಜಾರ್ಜ್ ವಾಷಿಂಗ್‌ಟನ್ನನ ನೇತೃತ್ವದಲ್ಲಿ ಜಯ ಸಾಧಿಸಿ ಅಮೆರಿಕನ್ನರು ಸ್ವತಂತ್ರರಾದರು. ನಮಗೆ ದೊರಕುವ ದಾಖಲೆಗಳಿಂದ ಹೇಳುವುದಾದರೆ ಅಂದಿನ ಸಮಕಾಲೀನ ವಿಶ್ವದ ಆಗುಹೋಗುಗಳೊಡನೆ ಸಂಪರ್ಕವನ್ನೂ, ಆಸಕ್ತಿಯನ್ನೂ ಇಟ್ಟುಕೊಂಡಿದ್ದ ಕನ್ನಡ ನಾಡಿನ ಟೀಪು ಸುಲ್ತಾನನು ಅಮೆರಿಕನ್ ಕ್ರಾಂತಿಯ ಅಂತಿಮ ಜಯವನ್ನು ಫ್ರೆಂಚ್ ಮತ್ತು ಇತರ ಮೂಲಗಳಿಂದ ಪಡೆದುಕೊಂಡು ಸಂತೋಷಿಸಿದ. ಆದರೆ ಅಂದಿನ ತಾಂತ್ರಿಕ ಮಿತಿಯೊಳಗೆ ಬದುಕುತ್ತಿದ್ದ ಟೀಪು ಸುಲ್ತಾನ್, ಜಾರ್ಜ್ ವಾಷಿಂಗ್‌ಟನ್ನನ ಬದಲು ಅವನಷ್ಟೇ ಕ್ರಿಯಾಶೀಲನೂ ಸ್ವಾತಂತ್ರ್ಯಪ್ರಿಯನೂ ಮತ್ತು ಅಂದಿನ ಅಮೆರಿಕನ್ ಜ್ಞಾನಯುಗದ ಸಮರ್ಥ ಪ್ರತಿನಿಧಿಯೂ, ಪ್ರತಿಭಾವಂತನೂ ಆಗಿದ್ದ ಬೆಂಜಮಿನ್ ಫ್ರಾಂಕ್ಲಿನ್‌ಗೆ, ಐತಿಹಾಸಿಕವಾಗಿ ತಪ್ಪಾಗಿದ್ದರೂ ಆತನ ನೇತೃತ್ವದಲ್ಲಿಯೇ ಬ್ರಿಟಿಷರ ವಿರುದ್ಧ ಹೋರಾಡಿ ಅಮೆರಿಕನ್ನರು ಜಯಗಳಿಸಿದ ಬಗ್ಗೆ ತನ್ನ ಸಂತೋಷವನ್ನು ವ್ಯಕ್ತಪಡಿಸುವ ಪತ್ರವನ್ನು ಬರೆದನು. ಮತ್ತೊಂದು ಸ್ವಾರಸ್ಯದ ಸಂಗತಿಯೆಂದರೆ, ಜಾರ್ಜ್ ವಾಷಿಂಗ್‌ಟನ್ನನಿಗೆ ರಣರಂಗದಲ್ಲಿ ಸೆರೆಸಿಕ್ಕು ಶರಣಾಗತನಾದ ಬ್ರಿಟಿಷ್ ದಂಡನಾಯಕ ಕಾರನ್‌ವಾಲಿಸ್ ಮುಂದೆ ಭಾರತ ಬ್ರಿಟಿಷ್ ವಸಾಹತು ವ್ಯವಸ್ಥೆಯ ಉನ್ನತಾಧಿಕಾರಿಯಾಗಿ ಬಂದದ್ದು!

ಭಾರತದ ಸ್ವಾತಂತ್ರ್ಯಸಂಗ್ರಾಮದ ಕಾಲದಲ್ಲಿ – ಅಂದರೆ, ಸುಮಾರು ೧೮೮೫-೧೯೪೭ರ ಅವಧಿಯಲ್ಲಿ – ಅಮೆರಿಕ ದೇಶವು ಭಾರತೀಯರಿಗೆ ಸ್ಫೂರ್ತಿಯ ಚಿಲುಮೆಯಾಯಿತು. ಉಗ್ರಗಾಮಿಗಳಿಗೆ ಅಮೆರಿಕ ಆಶ್ರಯವನ್ನು ತನ್ನ ನೆಲದಲ್ಲಿ ಕೊಟ್ಟಿತು. ಗದ್ದರ್ ಚಳವಳಿ ಇದಕ್ಕೊಂದು ಉದಾಹರಣೆಯಾಗಿದೆ. ಸ್ವಾತಂತ್ರ್ಯಸಂಗ್ರಾಮದ ಅನೇಕ ಉನ್ನತಮಟ್ಟದ ನೇತಾರರು ಅಮೆರಿಕದಲ್ಲಿ ಉಚ್ಚ ಶಿಕ್ಷಣವನ್ನು ಪಡೆದುಕೊಂಡರು ಮತ್ತು

ಬ್ರಿಟಿಷರ ವಿರುದ್ಧ ಪ್ರಚಾರ ಮಾಡಿದರು. ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್‌ರವರು ಪ್ರಥಮಬಾರಿಗೆ ಅಮೆರಿಕದ ನೆಲದ ಮೇಲೆ ಕಾಲಿಟ್ಟಾಗ ತಮಗೆ ಮರುಜನ್ಮ ಬಂದಿತೆಂದು ಹೇಳಿದ್ದಾರೆ. ಅಮೆರಿಕದ ದಾರ್ಶನಿಕರಾದ ಥೋರೊ ಮತ್ತು ಎಮರ್‌ಸನ್ ಭಾರತೀಯ ಬುದ್ಧಿಜೀವಿಗಳಿಗೆ ಪ್ರೇರಣೆಯಾದರು. ಗಾಂಧೀವಾದದಲ್ಲಿ ಥೋರೋವಿನ ಅಚ್ಚಳಿಯದ ಪ್ರಭಾವ ಅಡಗಿದೆ ಎಂಬುದು ಎಲ್ಲರಿಗೂ ತಿಳಿದ ಸತ್ಯವಾಗಿದೆ. ಎರಡನೆಯ ಮಹಾ ಯುದ್ಧದ ಕಾಲದಲ್ಲಿ ಭಾರತಕ್ಕೆ ಸ್ವಾತಂತ್ರ್ಯದ ಆಶ್ವಾಸನೆಯನ್ನು ನೀಡಬೇಕೆಂದು ವಿನ್‌ಸ್ಟನ್ ಚರ್ಚಿಲ್ಲರ ಮೇಲೆ ಒತ್ತಡವನ್ನು ತಂದವರು ಅಂದಿನ ಅಮೆರಿಕದ ಅಧ್ಯಕ್ಷ ಫ್ರಾಂಕ್ಲಿನ್ ರೂಸ್‌ವೆಲ್ಟರು. ಆಧುನಿಕ ಭಾರತದ ಸಂವಿಧಾನದ ಮೇಲೆ ಅಮೆರಿಕದ ಸಂವಿಧಾನದ ಪ್ರಭಾವವನ್ನು ತಜ್ಞರು ಗುರುತಿಸಿದ್ದಾರೆ. ಸ್ವಾತಂತ್ರ್ಯೋತ್ತರ ಭಾರತ ಅಮೆರಿಕದೊಡನೆ ಹೊಂದಿರುವ ಬಾಂಧವ್ಯದ ಇತಿಹಾಸದಲ್ಲಿ ಏರುಪೇರುಗಳಿದ್ದರೂ, ಭಿನ್ನಾಭಿಪ್ರಾಯಗಳು ಸ್ಪಷ್ಟವಾಗಿದ್ದರೂ, ಮೂಲದ ತಾತ್ವಿಕ ಸಂಬಂಧಗಳು ಕಡಿದುಹೋಗುವಷ್ಟು ತೀಕ್ಷ್ಣವಾಗಿಲ್ಲದಿರುವುದು ಸಂತಸದ ಸಂಗತಿಯಾಗಿದೆ. ಹೀಗೆ ೧೮ನೆಯ ಶತಮಾನದಿಂದ ಇಂದಿನವರೆಗೆ ಭಾರತ ಮತ್ತು ಅಮೆರಿಕ ಅನೇಕ ಸ್ವಾರಸ್ಯಕರ ಮಜಲುಗಳನ್ನು ಹಾದುಬಂದಿವೆ.

ಅಮೆರಿಕದ ಬಗೆಗೆ ಅನೇಕ ತೆರನಾದ ತೀಕ್ಷ್ಣ ಭಿನ್ನಾಭಿಪ್ರಾಯಗಳು ವ್ಯಕ್ತವಾಗಿರುವುದು ವಾಸ್ತವಿಕ ಸಂಗತಿಯಾದರೂ, ಭಾರತದಂತೆ ಈ ರಾಷ್ಟ್ರವೂ ಸಹ ಇಷ್ಟೊಂದು ತೀವ್ರವಾದ ಭಿನ್ನತೆಗಳನ್ನೂ ಮತ್ತು ದ್ವಂದ್ವಗಳನ್ನೂ ತನ್ನೊಳಗೆ ಅರಗಿಸಿಕೊಂಡು ಜೀವಂತವಾಗಿ ಬದುಕುತ್ತಿರುವುದರ ರಹಸ್ಯ ಅದರ 'ಮುಕ್ತತೆ'ಯಲ್ಲಿ ಅಡಗಿದೆ ಎಂದು ಹೇಳಬಹುದು. ತೀವ್ರತರಹದ ಭಿನ್ನತೆಗಳೂ ಮತ್ತು ವೈವಿಧ್ಯಗಳೂ ಇರುವಂತಹ ಸಮಾಜ ಮಾತ್ರ ಮುಕ್ತತೆಯ ಲಕ್ಷಣಗಳನ್ನು ಅಭಿವ್ಯಕ್ತಗೊಳಿಸಬಲ್ಲುದು. ಯಾವುದನ್ನೂ ತಿರಸ್ಕರಿಸದ ಮತ್ತು ಎಲ್ಲವನ್ನೂ ತರ್ಕಬದ್ಧವಾಗಿ ವಿಶ್ಲೇಷಿಸುವ ಮತ್ತು ಒರೆಹಚ್ಚಿ ನೋಡುವ ಮೂಲಭೂತ ವಾದ ಗುಣ ಅಮೆರಿಕದ ಪರಂಪರೆಯಲ್ಲಿದೆ ಎನ್ನುವುದು ನನ್ನ ಅನಿಸಿಕೆ. ಆದುದರಿಂದಲೇ ಭಾರತ ಮತ್ತು ಅಮೆರಿಕ ಸಂಬಂಧಗಳು ಸಿಡಿದುಹೋಗುವ ಸಾಧ್ಯತೆಗಳು ಇಲ್ಲವೇ ಇಲ್ಲ ಎನ್ನಬಹುದು. ಭಾರತದ ೧೯ನೆಯ ಶತಮಾನದ ಜ್ಞಾನೋದಯದ ಹೊಂಬೆಳಕಾದ ಸ್ವಾಮಿ ವಿವೇಕಾನಂದರು ೧೮೯೩ರಲ್ಲಿ – ಚಿಕಾಗೋ ನಗರದಲ್ಲಿ, ಸರ್ವಧರ್ಮ ಮತ್ತು ಸರ್ವಸಂಸ್ಕೃತಿಗಳ ಸಮನ್ವಯವನ್ನು ಘೋಷಿಸಿದ ಐತಿಹಾಸಿಕ ಸಂಗತಿ ಸಾಧ್ಯವಾದದ್ದು ಇಂತಹ ಮುಕ್ತ ಸಮಾಜದ ಲಕ್ಷಣದಿಂದ ಎನ್ನಬಹುದೇನೋ. ಇಂತಹ ನೂರಾರು ಉದಾಹರಣೆಗಳನ್ನು ನೀಡಬಹುದಾದರೂ, ಅಂತಹ ಉದಾಹರಣೆಗಳು ಈ ಮೂಲ ಸತ್ಯವನ್ನೇ ಎತ್ತಿಹಿಡಿಯುತ್ತವೆ ಎಂಬುದಂತೂ ನಿರ್ವಿವಾದ. ಆದುದರಿಂದಲೇ ಅಮೆರಿಕ ಪ್ರಚಲಿತ ಸಂದರ್ಭದಲ್ಲಿ ಅತ್ಯಂತ ಮೇಧಾವಿ ಹಾಗೂ ಚಿಂತನಶೀಲವ್ಯಕ್ತಿ ಎಂದು ಖ್ಯಾತಿ ಗಳಿಸಿರುವ ಮತ್ತು ತನ್ನ ದೇಶದ ಆಗುಹೋಗುಗಳನ್ನು ತೀಕ್ಷ್ಣವಾಗಿ ಹಾಗೂ ಕಟುವಾಗಿ ಟೀಕಿಸುವ ಮುಕ್ತಚಿಂತಕನಾದ ಚಾಮ್‌ಸ್ಕಿಯನ್ನು ಕೊಡುಗೆಯಾಗಿ ಕೊಟ್ಟಿದೆ. ಇಂತಹ

ನಿರ್ಭೀತ ಅಭಿವ್ಯಕ್ತಿಯನ್ನು ಅನಾವರಣಗೊಳಿಸುವ ಸಾಧ್ಯತೆಯಿರುವುದು ಮುಕ್ತ ಸಮಾಜಕ್ಕಲ್ಲದೇ, ಮೂಲಭೂತವಾದಿಗಳೇ ಅಧಿನಾಯಕರಾಗಿರುವ ಸಮುದಾಯಗಳಿಗಲ್ಲ. ಇದು ಅಮೆರಿಕದ ಇತಿಹಾಸದ ಮತ್ತು ಪರಂಪರೆಯ ಅಧ್ಯಯನದಿಂದ ಒಡಮೂಡುವ ವಿಶಿಷ್ಟ ಲಕ್ಷಣ.

ಮನುಕುಲದ ಇತಿಹಾಸದಲ್ಲಿ ದ್ವಂದ್ವಗಳು ಅನಿವಾರ್ಯವೂ ಶಾಶ್ವತವೂ ಆಗಿರುವಂತೆ ತೋರುತ್ತದೆ. ಅಮೆರಿಕದ ಇತಿಹಾಸ ಈ ಮಾತಿಗೆ ಹೊರತಾಗಿಲ್ಲ, ಅಂತರ್ಯುದ್ಧ (ಕ್ರಿ.ಶ. ೧೮೬೧-೧೮೬೫) ಅಮೆರಿಕದ ಇತಿಹಾಸದಲ್ಲಿ ಒಂದು ಪರ್ವಕಾಲ. ದೇಶದ ಕರಿಜನಾಂಗವನ್ನು ದಾಸ್ಯದಿಂದ ಮುಕ್ತಗೊಳಿಸಲು ಈ ಭೀಕರಯುದ್ಧವು ನಡೆಯಿತು. ಸ್ವಾರಸ್ಯದ ಸಂಗತಿಯೆಂದರೆ, ಪ್ರಧಾನವಾಗಿ ಬಿಳಿಯ ಜನಾಂಗದವರೇ ಎರಡು ಗುಂಪು ಗಳಾಗಿ ಯುದ್ಧಮಾಡಿ, ಅಂತಿಮವಾಗಿ ಕರಿಜನಾಂಗದವರ ದಾಸ್ಯವಿಮುಕ್ತಿಗೆ ಕಾರಣರಾದರು. ಇದಲ್ಲದೆ ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಕೈಗಾರಿಕಾ ಕ್ರಾಂತಿಯ ಪರಿಣಾಮ ವಾಗಿ ವಿಶ್ವರಾಷ್ಟ್ರ ಸ್ಥಾನದತ್ತ ಸಾಗುತ್ತಿದ್ದ ಅಮೆರಿಕ ಪ್ರಬಲ ಐರೋಪ್ಯ ರಾಷ್ಟ್ರಗಳ ಮಾದರಿಯಲ್ಲೇ ವಸಾಹತುಗಳನ್ನು ಗಳಿಸಿ ಸಾಮ್ರಾಜ್ಯವನ್ನು ಕಟ್ಟುವ ಪ್ರಯತ್ನವನ್ನೂ ಮಾಡಿತು. ೧೮ನೆಯ ಶತಮಾನದಲ್ಲಿ ವಸಾಹತುಶಾಹಿ ವಿರುದ್ಧ ಹೋರಾಟ ಮಾಡಿ ಸ್ವಾತಂತ್ರ್ಯ ಗಳಿಸಿದ ದೇಶವಾದ ಅಮೆರಿಕ ತನ್ನ ಗಡಿಯ ಆಚೆ ಬಹುದೂರದ ಫಿಲಿಪೈನ್ಸ್ ನಂತಹ ಪ್ರದೇಶಗಳನ್ನು ಆಕ್ರಮಿಸಿಕೊಂಡು ಸಾಮ್ರಾಜ್ಯವನ್ನು ಕಟ್ಟಿದುದು ಈ ದೇಶದ ಇತಿಹಾಸದ ಒಂದು ದ್ವಂದ್ವವಲ್ಲವೇ? ಅದೇ ರೀತಿ ಅಮೆರಿಕನ್ನರ ಬದುಕಿನ ಅತ್ಯಂತ ಪವಿತ್ರ ಪರಿಕಲ್ಪನೆಯಾದ ಬಂಡವಾಳ ವ್ಯವಸ್ಥೆ ಆರಂಭದಲ್ಲಿ ಸ್ವಚ್ಛಂದತೆಯ ತತ್ತ್ವ ವನ್ನಾಧರಿಸಿ ಜನಸಾಮಾನ್ಯರನ್ನು ಅಧಃಪಾತಾಳಕ್ಕೆ ತಳ್ಳಿತು. ಅದರ ಸುಧಾರಣೆಗಾಗಿ ಆಂದೋಳನಗಳು ನಡೆದು ಅಂತಿಮವಾಗಿ ೨೦ನೆಯ ಶತಮಾನದ ಆರಂಭಕಾಲದಲ್ಲಿ ಫ್ರಾಂಕ್ಲಿನ್-ಡಿ-ರೂಸ್‌ವೆಲ್ಟರ ನೇತೃತ್ವದಲ್ಲಿ ತನ್ನೆಲ್ಲಾ ಕ್ರೌರ್ಯಲಕ್ಷಣಗಳನ್ನು ಕಳಚಿಕೊಂಡು ಬಂಡವಾಳ ವ್ಯವಸ್ಥೆಯು ಜನಸಾಮಾನ್ಯರಿಗೂ ದೇಶದ ಪ್ರಗತಿಯಲ್ಲಿ ಪಾಲಿರಬೇಕೆಂದು ಕಲ್ಯಾಣ ರಾಜ್ಯದತ್ತ ಸಾಗಿದುದು ಅಮೆರಿಕ ಇತಿಹಾಸದ ಮತ್ತೊಂದು ಮೈಲಿಗಲ್ಲು ಎಂದು ಹೇಳಬಹುದು. ಎರಡು ಮಹಾಯುದ್ಧಗಳಲ್ಲಿ, ಪ್ರಧಾನವಾಗಿ ಯೂರೋಪ್ ದೇಶಗಳಿಗೆ ಬೆಂಬಲ ಕೊಟ್ಟು ಅಮೆರಿಕ ಪ್ರಪಂಚದಲ್ಲಿ ತಲೆಯೆತ್ತುತ್ತಿದ್ದ ಫ್ಯಾಸಿಸಂ, ನಾಜಿಸಂ ಮತ್ತು ಮಿಲಿಟರಿಜಂಗಳನ್ನು ಹತ್ತಿಕ್ಕಿತು; ಪ್ರಜಾಪ್ರಭುತ್ವದ ಭಾವನೆಗಳನ್ನು ಎಲ್ಲ ಕಡೆ ಪ್ರೋತ್ಸಾಹಿಸಲು ಪ್ರಯತ್ನಿಸಿತು. ೧೯೪೫ರ ನಂತರ ಆರಂಭವಾದ ಶೀತಲ ಯುದ್ಧದಲ್ಲಿ ಜಯಗಳಿಸಿ ಇಂದು ಅಮೆರಿಕ ಏಕಮೇವಾದ್ವಿತೀಯ ಸೂಪರ್‌ಶಕ್ತಿಯಾಗಿ ಬೆಳೆದಿದೆ. ಸ್ವಾರಸ್ಯದ ಸಂಗತಿಯೆಂದರೆ ಅಮೆರಿಕ ಮಿಲಿಟರಿ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ದುರ್ಬಲವಾಗಿದ್ದ ಅಮೆರಿಕ ಭಾರತದಂತೆ ಅಲಿಪ್ತ ನೀತಿಯನ್ನು ಅನುಸರಿಸಿತ್ತು. ಆದರೆ ಶೀತಲಯುದ್ಧದ ಕಾಲದಲ್ಲಿ ಅಮೆರಿಕನ್ ಸರ್ಕಾರ ಭಾರತದಂತಹ ಅಲಿಪ್ತ ರಾಷ್ಟ್ರಗಳ

ನೀತಿಯನ್ನು ಪ್ರಶ್ನಿಸಿತು. ಇಂದು ಅಮೆರಿಕದ ಕೈಗಾರಿಕಾ – ಮಿಲಿಟರಿ ಸಂಕೀರ್ಣ ಒಂದು ದೈತ್ಯಶಕ್ತಿಯಾಗಿ ಸಂಚಯಗೊಂಡಿದೆ. ಈಗ ನಡೆಯುತ್ತಿರುವ ಇರಾಕ್ ಮೇಲಿನ ದಾಳಿ ಈ ದೈತ್ಯಶಕ್ತಿಯ ಪ್ರಮಾಣವನ್ನೂ ಮತ್ತು ಪರಿಣಾಮವನ್ನೂ ತೋರಿಸುತ್ತದೆ. ಇದನ್ನು ಎಲ್ಲರೂ ತಮ್ಮ ಮನೆಗಳ ದಿವಾನ್‌ಖಾನೆಗಳಲ್ಲಿ ಕುಳಿತು ತಮ್ಮ ಟಿ.ವಿ.ಗಳಲ್ಲಿ ನೋಡ ಬಹುದಾಗಿದೆ. ಹೀಗೆ ವಸಾಹತು ಪರಿಸ್ಥಿತಿಯಿಂದ ವಲಸಿಗರ ನಾಡೆಂದೇ ಹೆಸರು ಪಡೆದ ಅಮೆರಿಕ ೧೩ ರಾಜ್ಯಗಳಿಂದ ಆರಂಭವಾಗಿ ಇಂದು ೫೦ ರಾಜ್ಯಗಳ ಬೃಹತ್ ಒಕ್ಕೂಟವಾಗಿ ಬೆಳೆದು ಪ್ರಪಂಚದ ಎಲ್ಲರನ್ನೂ ತನ್ನೆಡೆಗೆ ಆಕರ್ಷಿಸುತ್ತಿದೆ ಮತ್ತು ಜೊತೆಜೊತೆಗೆ ದ್ವೇಷಾಸೂಯೆಗಳನ್ನೂ ಕೆರಳಿಸುತ್ತಿದೆ.

ಇಂತಹ ಸಂಕೀರ್ಣತೆಗಳನ್ನು ಒಳಗೊಂಡಿರುವ ಅಮೆರಿಕದಂತಹ ಬೃಹತ್‌ರಾಷ್ಟ್ರದ ಸ್ಥೂಲಪರಿಚಯವಾದರೂ ಜಗತ್ತಿನ ಕನಿಷ್ಠಪಕ್ಷ ವಿದ್ಯಾವಂತ ವರ್ಗದವರಿಗೆ ಇರುವುದು ಅವಶ್ಯಕವಾಗಿದೆ. ನಾನಾ ಕಾರಣಗಳಿಗಾಗಿ ಪ್ರಪಂಚದ ಎಲ್ಲಾ ದೇಶಗಳಿಗೆ ಅಮೆರಿಕ ಬೇಕಾಗಿದೆ; ಆದರೆ ಅನೇಕ ದೇಶಗಳು ಅಮೆರಿಕಕ್ಕೆ ಬೇಕಾಗದೆ ಇರಬಹುದು. ಇಂತಹ ಸ್ವಾರಸ್ಯಕರ ಇತಿಹಾಸವುಳ್ಳ ಅಮೆರಿಕದ ಚರಿತ್ರೆಯನ್ನು ಪರಿಚಯಮಾಡಿಕೊಡುವ ಪ್ರಯತ್ನವನ್ನು ಪ್ರೊ. ವೈ.ಆರ್. ಮೋಹನ್‌ರವರು ಮಾಡಿದ್ದಾರೆ. ತಮ್ಮ ಕೃತಿಗೆ 'ಅಮೆರಿಕಾಯಣ' ಎಂದು ನಾಮಕರಣ ಮಾಡಿದ್ದಾರೆ. ಇದಕ್ಕೆ ಭಾರತದ ರಾಷ್ಟ್ರೀಯ ಕಾವ್ಯ ರಾಮಾಯಣ ಸ್ಫೂರ್ತಿ ಇರಬಹುದೇ? ವೈ.ಆರ್. ಮೋಹನ್‌ರವರು, ನನಗೆ ತಿಳಿದುಬಂದಂತೆ ಅತ್ಯಂತ ಅಪರೂಪದ ವ್ಯಕ್ತಿ, ಭಾರತದ ಮೂಲದವರೇ ಆಗಿದ್ದು ಅಮೆರಿಕದಲ್ಲಿ ಮೂರು ದಶಕಗಳಿಗೂ ಹೆಚ್ಚಾಗಿ ವಾಸಿಸುತ್ತಿದ್ದು, ಸಮಾಜಶಾಸ್ತ್ರದ ಪ್ರಾಧ್ಯಾಪಕರಾಗಿ ವಿಶಿಷ್ಟ ಸೇವೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಮೂಲ ಸಂಸ್ಕೃತಿಯ ಬೇರುಗಳನ್ನು ಸಂಪೂರ್ಣವಾಗಿ ಕಡಿದುಹಾಕಿಕೊಳ್ಳದೆ, ಅಮೆರಿಕನ್ ಸಂಸ್ಕೃತಿಯ ಸಾರವತ್ತಾದ ಭಾಗವನ್ನು ಗ್ರಹಿಸಿ ಅದನ್ನು ಕನ್ನಡಿಗರಿಗೆ ಹಂಚುವ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ. 'ಅಮೆರಿಕಾಯಣ' ಗ್ರಂಥರಚನೆಗೆ ಮುನ್ನ ಈ ವಿದ್ವಾಂಸರು ಕನ್ನಡದಲ್ಲಿ ಅನೇಕ ಕೃತಿಗಳನ್ನು ರಚಿಸಿ, ಗೌರವ ಪ್ರಶಸ್ತಿಗಳಿಗೆ ಪಾತ್ರರಾಗಿದ್ದಾರೆ ಎಂದು ನನಗೆ ತಿಳಿದುಬಂದಿದೆ.

ಎಲ್ಲಕ್ಕಿಂತ ಮಿಗಿಲಾಗಿ, 'ಅಮೆರಿಕಾಯಣ' ಗ್ರಂಥ ರಚನೆಯ ಹಿನ್ನೆಲೆಯನ್ನು ಕೇಳಿ ನನಗೆ ರೋಮಾಂಚನ, ದಿಗ್ಭ್ರಮೆ, ಆಶ್ಚರ್ಯಗಳುಂಟಾದವು. ಏಕೆಂದರೆ, ಪ್ರೊ. ವೈ.ಆರ್. ಮೋಹನ್‌ರವರು ತಮ್ಮ ವೃದ್ಧಾಪ್ಯದ ಜೊತೆಗೆ ಸೇರಿಕೊಂಡಿದ್ದ ಭೀಕರವಾದ ಖಾಯಿಲೆ ದೊಂದಿಗೆ ಬದುಕಿರಬೇಕಾಗಿದ್ದಂತಹ ಪರಿಸ್ಥಿತಿಯಲ್ಲಿ, ಕನ್ನಡ ಭಾಷೆಯಲ್ಲಿ, ಕನ್ನಡಿಗರಿಗಾಗಿ ಅಮೆರಿಕ ದೇಶದ ಇತಿಹಾಸವನ್ನು ತಿಳಿಸುವ ಗ್ರಂಥಗಳು ಅತ್ಯಂತ ಕನಿಷ್ಠ ಸಂಖ್ಯೆ ಯಲ್ಲಿರುವುದನ್ನು ಗ್ರಹಿಸಿ ಇಂತಹ ಸಾಹಸಕ್ಕೆ ಕೈಹಾಕಿ ಪೂರ್ಣಗೊಳಿಸಿರುವುದು

ಕರ್ನಾಟಕದ ಪ್ರಾಧ್ಯಾಪಕ ವರ್ಗದವರಿಗೂ, ಸಂಶೋಧಕರಿಗೂ ಮತ್ತು ವಿದ್ಯಾರ್ಥಿಗಳಿಗೂ ಒಂದು ಅಪರೂಪದ ಮಾದರಿಯೆಂದರೆ ಉತ್ಪ್ರೇಕ್ಷೆಯಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇದು ಪ್ರೊ. ಮೋಹನ್‌ರವರು ಸಮಾಜಶಾಸ್ತ್ರಜ್ಞರಾಗಿ, ಅಮೆರಿಕನ್ ಇತಿಹಾಸವನ್ನು ಪ್ರಾಯಃ ಅಭ್ಯಸಿಸಿ, ಅರಗಿಸಿಕೊಂಡು, ಹತ್ತಾರು ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಒಂದು ಅಚ್ಚುಕಟ್ಟಾದ ಕೃತಿಯನ್ನು ನಮಗೆ ನೀಡಿರುವುದು.

ಇಪ್ಪತ್ತೊಂದು ಅಧ್ಯಾಯಗಳಲ್ಲಿ ಭೌಗೋಳಿಕ ಪರಿಸರದ ಪರಿಚಯದಿಂದ ಆರಂಭ ವಾಗಿ, ವಸಾಹತುಗಳ ಸ್ಥಾಪನೆಯಿಂದ ಹಿಡಿದು, ಇತ್ತೀಚೆಗೆ ಅಧಿಕಾರದಿಂದ ನಿವೃತ್ತಿಯಾದ ಅಧ್ಯಕ್ಷ ಬಿಲ್ ಕ್ಲಿಂಟನ್‌ವರೆಗೆ ಯಾವ ಮುಖ್ಯಾಂಶಗಳನ್ನೂ ಬಿಡದೆ ಪರಿಚಯಿಸಿದ್ದಾರೆ. ಇದೊಂದು ಸಾಹಸವೇ ಸರಿ. ಇದಕ್ಕಾಗಿ ನಾನು ಗ್ರಂಥಕರ್ತರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

ಪ್ರೊ. ವೈ.ಆರ್. ಮೋಹನ್‌ರವರ ನಿರೂಪಣೆ ಸರಳವಾಗಿದೆ ಮತ್ತು ನೇರವಾಗಿದೆ. ಅಲ್ಲಲ್ಲಿ ನಿರೂಪಣೆ ಸಾಹಿತ್ಯದ ಝಳಕುಗಳಿಂದ ಉಜ್ವಲಗೊಂಡಿದೆ. ಕೆಲವು ಶೀರ್ಷಿಕೆಗಳು ಇದನ್ನು ಅಭಿವ್ಯಕ್ತಗೊಳಿಸುತ್ತವೆ. ಯಾವುದೇ ಪಂಥ ಪ್ರಭೇದಗಳಿಗೆ ಒಳಗಾಗದೆ ಸಾಧ್ಯವಾದಷ್ಟೂ ವಸ್ತುನಿಷ್ಠೆಯನ್ನು ಪ್ರೊ. ವೈ.ಆರ್. ಮೋಹನ್‌ರವರು ತೋರಿದ್ದಾರೆ. ಅನೇಕ ದಶಕಗಳಿಂದ ಅಮೆರಿಕದ ನಿವಾಸಿಗಳಾಗಿರುವ ಅವರಿಗೆ ಹತ್ತಿರದಿಂದ ಅಮೆರಿಕನ್ನರ ಬದುಕನ್ನು ನೋಡುವ ಸದವಕಾಶವಿತ್ತು. ಇದರ ಜೊತೆಗೆ ಅವರು ಸಮಾಜಶಾಸ್ತ್ರಜ್ಞರೂ ಆಗಿದ್ದರಿಂದ ಅವರ ದೃಷ್ಟಿ ಸೂಕ್ಷ್ಮವೂ ತೀಕ್ಷ್ಣವೂ ಆಯಿತು. ಇದೆಲ್ಲದರ ಲಾಭ ಇಂದು ನಮಗಾಗಿದೆ. ಈ ಗ್ರಂಥವು ವಿದ್ವಾಂಸರಿಗೂ ವಿದ್ಯಾರ್ಥಿಗಳಿಗೂ ಹಾಗೂ ಜನ ಸಾಮಾನ್ಯರಿಗೂ ಉಪಯುಕ್ತವಾಗಲೆಂದು ಆಶಿಸುತ್ತೇನೆ.

ಇಂತಹ ವಿಶಿಷ್ಟ ವಿದ್ವಾಂಸರ ಕೃತಿಗೆ ಸಲಹಾ ರೂಪದ ಕೆಲವು ಸಣ್ಣಪುಟ್ಟ ಕಾರ್ಯಗಳಲ್ಲಿ ನನ್ನನ್ನು ತೊಡಗಿಸಿಕೊಂಡಿದ್ದಕ್ಕೆ ನನ್ನ ವಿದ್ಯಾಗುರುಗಳಾಗಿದ್ದ ಹಾಗೂ ನಮ್ಮ ನಾಡಿನ ಶ್ರೇಷ್ಠ ವಿದ್ವಾಂಸರಾಗಿರುವ ಪ್ರೊ. ಪ್ರಭುಶಂಕರ ಅವರಿಗೆ ನಾನು ಚಿರಋಣಿ.

ನಾನೇ ಮುನ್ನುಡಿ ಬರೆಯಬೇಕೆಂದು ಪ್ರೋತ್ಸಾಹಿಸಿದ, ಇಂದು ಅತ್ಯಂತ ಅಪರೂಪವೂ ಕಷ್ಟದಾಯಕವೂ ಆಗಿರುವ ಒಳ್ಳೆಯ ಶಾಸ್ತ್ರೀಯ ಗ್ರಂಥಗಳ ಪ್ರಕಟಣೆ ಮತ್ತು ಹಂಚಿಕೆಗಳಲ್ಲಿ ತೊಡಗಿಸಿಕೊಂಡಿರುವ, 'ಅಭಿನವ'ದ ಸಂಪಾದಕರಾಗಿರುವ ಅಪರೂಪದ ಯುವಕ ಶ್ರೀ ನ. ರವಿಕುಮಾರ್ ಅವರಿಗೆ ನನ್ನ ಧನ್ಯವಾದಗಳು.

೨೦-೪-೦೩ **- ಪ್ರೊ. ಕೆ.ಎಸ್. ಶಿವಣ್ಣ**

ಮೈಸೂರು (ಮೈಸೂರು ವಿ.ವಿ.ಯ ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕರು)

ಪ್ರೊ. ವೈ.ಆರ್. ಮೋಹನ್ ಮತ್ತು ಅಮೆರಿಕಾಯಣ

ಪ್ರತಿಭೆ-ಪರಿಶ್ರಮಗಳಿಗೆ ಗೌರವದ ಕಾಣಿಕೆ

ಶ್ರೀ ವೈ.ಆರ್. ಮೋಹನ್ ಅವರನ್ನು ನಾನು ಅರವತ್ತರ ದಶಕಗಳಿಂದ ಬಲ್ಲೆ. ಅವರು ನನ್ನ ಆಪ್ತ ಮಿತ್ರರಾದ ದಿವಂಗತ ತ್ಯಾನಂದೂರು ಪುಟ್ಟಣ್ಣನವರ ('ನಾ ಕಂಡ ಮಲೆನಾಡು' ಎಂಬ ಕೃತಿಯಿಂದ ಸಾಹಿತ್ಯಲೋಕವನ್ನು ಪ್ರವೇಶಿಸಿ ಅಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದುಕೊಂಡ ಕೃಷಿಕರು, ಕೃಷಿತಜ್ಞರು) ಅಣ್ಣನ ಮಗನಾಗಿ ಪರಿಚಿತರಾದರು. ಅನಂತರ ತಮ್ಮ ಓದು, ಬೋಧನ ಕೌಶಲ, ಸಜ್ಜನಿಕೆ, ಸುಸಂಸ್ಕೃತ ನಡೆ-ನುಡಿಗಳಿಂದ ನನ್ನ ಹೃದಯವನ್ನು ಸೂರೆಗೊಂಡರು. ಇದಾದ ಮೇಲೆ ಅನೇಕ ವರ್ಷಗಳ ಕಾಲ ಅವರನ್ನು ಭೇಟಿ ಮಾಡುವುದು ಸಾಧ್ಯವಾಗಲೇ ಇಲ್ಲ.

ಅಮೆರಿಕ ಸಂಯುಕ್ತ ಸಂಸ್ಥಾನಗಳ ದಕ್ಷಿಣದ ಅಲಬಾಮಾ ಪ್ರಾಂತದ ಟಸ್ಕಲೂಸ ಎಂಬ ಊರಿನಲ್ಲಿ ಅವರು ನೆಲೆಸಿದ್ದಾರೆ. ಅಮೆರಿಕದ ಪಶ್ಚಿಮ ತೀರದ ಸ್ಯಾನ್‌ಹೋಸೆಯ ನನ್ನ ಮಗಳ ಮನೆಯಲ್ಲಿ ಕಳೆದ ವರ್ಷ ನಾನು ತಂಗಿದ್ದಾಗ ದೂರವಾಣಿಯಲ್ಲಿ ಅವರೊಂದಿಗೆ ಮಾತನಾಡಿದೆ. ಪಾರ್ಕಿನ್‌ಸನ್ ಖಾಯಿಲೆಯಿಂದ ಅವರು ಬಳಲುತ್ತಿರುವುದು ತಿಳಿದಿತ್ತು. ಅವರೊಂದಿಗೆ ಮಾತನಾಡಿದಾಗ ಆ ರೋಗದ ತೀವ್ರತೆಯ ಚಿತ್ರ ದೊರಕಿತು. 'ನಿಮ್ಮನ್ನು ನೋಡಿಯೇ ತೀರಬೇಕು' ಎಂದರು. ನನ್ನ ಹೃದಯವೂ ಅದೇ ಭಾವನೆಯನ್ನು ಮಾರ್ನುಡಿಯಿತು. ಎರಡೇ ದಿನಗಳಲ್ಲಿ, ಸಾವಿರಾರು ಮೈಲಿಗಳ ದೂರದಲ್ಲಿದ್ದ ಅವರ ಊರನ್ನು ತಲುಪಿ ಅವರ ಮನೆ ಸೇರಿದೆ.

ಶ್ರೀ ಮೋಹನ್ ಅವರಿಗೆ ಪಾರ್ಕಿನ್‌ಸನ್ ಖಾಯಿಲೆ ಕಾಡುತ್ತಿದೆ ಎಂದಷ್ಟೇ ಕೇಳಿದ್ದೆ. ಆದರೆ ಅದು ಎಷ್ಟು ಘೋರವಾದ ಸ್ವರೂಪವನ್ನು ತಾಳಬಲ್ಲುದು ಎಂದಾಗಲಿ, ಅದು ಎಷ್ಟು ಯಾತನಾಪೂರ್ಣವಾಗಿರಬಹುದು ಎಂದಾಗಲಿ ನಾನು ಊಹಿಸಿರಲಿಲ್ಲ. ಇದ್ದಕ್ಕಿದ್ದಂತೆ, ನಾನು ನೋಡನೋಡುತ್ತಿದ್ದಂತೆಯೇ ಅವರ ಕೈಕಾಲುಗಳೆಲ್ಲ ಮರಗಟ್ಟಿ ಅವರು ನಿಶ್ಚಲರಾಗಿಬಿಟ್ಟರು. ಅವರು ಅನುಭವಿಸುತ್ತಿದ್ದ ನೋವು ಮುಖದಲ್ಲಿ ಹೆಪ್ಪುಗಟ್ಟಿದಂತೆ ಕಾಣುತ್ತಿತ್ತು. ಎಷ್ಟೋ ಹೊತ್ತಿನ ಮೇಲೆ ಅವರು ಸಾಮಾನ್ಯ ಸ್ಥಿತಿಗೆ ಹಿಂತಿರುಗುತ್ತಿದ್ದರು. ಮತ್ತೆ ಆ ಸ್ಥಿತಿ ಬರಬಾರದೆಂದೇನೂ ಇಲ್ಲ. ಆದರೆ ಯಾವಾಗ ಬರುತ್ತದೆ, ಎಷ್ಟು ಹೊತ್ತು ಹಾಗಿರುತ್ತದೆ ಎಂದು ಹೇಳುವಂತಿಲ್ಲ. ನಾಲ್ಕೈದು ದಿನ ಅವರೊಂದಿಗೆ ಇದ್ದು ಹಿಂದಕ್ಕೆ ಬಂದೆ. ಅವರ ಶ್ರೀಮತಿಯವರು ಮಾತ್ರ ಅವರೊಂದಿಗಿದ್ದರು. ಅಮೆರಿಕ

ದೇಶದ ಜೀವನದ ದುರ್ಭರ ಸ್ಥಿತಿಯಿಂದಾಗಿ ಅವರು ಕೆಲಸಕ್ಕೆ ಹೋಗಬೇಕಾಗಿತ್ತು. ಹೊರಗೆ ಕೆಲಸವನ್ನೂ ಮಾಡಿ ಗಂಡನ ಯೋಗಕ್ಷೇಮವನ್ನು ಅವರು ನೋಡಿ ಕೊಳ್ಳಬೇಕಾಗಿತ್ತು. ಸಹನೆಯ ಮೂರ್ತಿಯಂತಿದ್ದ ಆ ಮಹಾತಾಯಿ ಅಷ್ಟೆಲ್ಲವನ್ನು, ಸ್ವಲ್ಪವೂ ಬೇಸರಿಸದೆ ಮಾಡಿ, ಹೋಗಿಬರುವ ನಮ್ಮಂತಹವರನ್ನು ಸತ್ಕರಿಸುತ್ತಿದ್ದರು.

ಮೋಹನ್ ಅವರ ಜೊತೆಯಲ್ಲಿ ನಾನಿದ್ದ ದಿನಗಳಲ್ಲಿ ಗೊತ್ತಾಯಿತು – ಅವರು ತಮ್ಮ ರೋಗದ ತೀವ್ರತೆಯನ್ನು ತಡೆದುಕೊಳ್ಳುವುದಕ್ಕಾಗಿಯೂ, ಮಾನಸಿಕ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳುವುದಕ್ಕಾಗಿಯೂ ಅವರು ಬರವಣಿಗೆ ಮಾಡುವುದು ಅಗತ್ಯ ಎಂದು ವೈದ್ಯರು ಸಲಹೆ ನೀಡಿದ್ದರಂತೆ. ಅದರಂತೆ ಮೋಹನ್ ತಮ್ಮ ನೆನಪುಗಳನ್ನು ದಾಖಲಿಸಿದರು. ಅವರ ಶೈಲಿ, ನಿರೂಪಣಾ ಸಾಮರ್ಥ್ಯ – ಅವರು ಅಪಾರವಾದ ಯಾತನೆಯ ಅವಧಿಯಲ್ಲೇ ಈ ಬರವಣಿಗೆ ನಡೆದಿದ್ದರೂ – ಅವರ ಈ ಮೊದಲ ಪುಸ್ತಕವೇ ಈ ವರ್ಷದ ಅತ್ಯುತ್ತಮ ಪುಸ್ತಕ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಗಳಿಸಿತು! ಅವರು ಪಾರ್ಕಿನ್‌ಸನ್ ಖಾಯಿಲೆಯನ್ನು ಕುರಿತೇ ಒಂದು ಪುಸ್ತಕವನ್ನು ಬರೆದು ಅದೂ ಪ್ರಕಟಣೆಗೊಂಡಿತು.

'ಅಮೆರಿಕಾಯಣ' ಮೋಹನ್‌ರವರ ಮೂರನೆಯ ಕನ್ನಡ ಪುಸ್ತಕ. ಈ ಪುಸ್ತಕ ಬರೆದದ್ದರ ಹಿನ್ನೆಲೆಯನ್ನು ಲೇಖಕರೇ ತಮ್ಮ ಪ್ರಸ್ತಾವನೆಯಲ್ಲಿ ತಿಳಿಸಿದ್ದಾರೆ. ಇಂಥ ಅಗಾಧವಾದ ಪುಸ್ತಕವನ್ನು ಅಂಥ ತಮ್ಮ ವರ್ಣಿಸಲಸಾಧ್ಯವಾದ ಅನಾರೋಗ್ಯದ ಸ್ಥಿತಿಯಲ್ಲಿ ಮೋಹನ್ ರಚಿಸಿದ್ದಾರೆ ಎಂದರೆ, ನಾನು ಖುದ್ದಾಗಿ ಅವರ ನರಳುವಿಕೆಯನ್ನು ನೋಡಿದ್ದರಿಂದ ಮಾತ್ರ, ನಂಬಲು ಸಾಧ್ಯವಾಗಿದೆ. ಆತ ಪರಮಸಾಹಸಿ. ಬದುಕಿನ ವ್ಯವಹಾರಗಳಲ್ಲಿ ಹೇಗೋ ವಿದ್ವತ್ತಿನ ಈ ಪವಾಡ ಸದೃಶ ಸೃಷ್ಟಿಯಲ್ಲೂ ಅವರು ಪರಮಪ್ರಾಮಾಣಿಕರು. ತುಂಬ ಶ್ರಮಪಟ್ಟು, ಆಕರ ಗ್ರಂಥಗಳಲ್ಲಿ ಮುಖ್ಯವಾದುವು ಗಳನ್ನೆಲ್ಲ ಅಧ್ಯಯನ ಮಾಡಿ ಅಮೆರಿಕದ ಇತಿಹಾಸವನ್ನು – ಇದರಲ್ಲಿ ರಾಜಕೀಯ ಹಾಗೂ ಸಾಮಾಜಿಕ ಕ್ರಾಂತಿಗಳೆರಡೂ ಸೇರಿವೆ – ಬರೆದಿದ್ದಾರೆ. ಅವರ ಕೃತಿಯನ್ನು ನಾನು ಅಮೆರಿಕದಲ್ಲಿರುವಾಗಲೇ ಆಮೂಲಾಗ್ರವಾಗಿ ಓದಿದ್ದೆ. ಒಂದು ದೇಶದ ಇತಿಹಾಸವು ಮೋಹನ್‌ರವರಿಗೆ ದೊರೆತಿರುವ ಆಕರ್ಷಣೀಯ ಶೈಲಿಯಿಂದಾಗಿ ಸೊಗಸಾದ ಕಾದಂಬರಿಯಂತೆ ಓದಿಸಿಕೊಳ್ಳುತ್ತದೆ. ಅವರ ಕೃತಿಯನ್ನು ಇತಿಹಾಸದ ನಿವೃತ್ತ ಪ್ರಾಧ್ಯಾಪಕರಾದ ಮಿತ್ರ ಡಾ. ಶಿವಣ್ಣನವರಿಗೆ ತೋರಿಸಿ ಅಗತ್ಯವಾದ ಕಡೆ ಪರಿಷ್ಕಾರ ಮಾಡಿಕೊಡಿ ಎಂದು ಕೇಳಿಕೊಂಡೆ. ಅವರು ತಮ್ಮ ಅಮೂಲ್ಯವಾದ ಕಾಲವನ್ನು ನೀಡಿ, ಒಂದು ತಿಂಗಳ ಕಾಲ ಹಸ್ತಪ್ರತಿಯನ್ನು ಓದಿದರು. 'ಮೋಹನ್‌ರವರು ಸಮಾಜಶಾಸ್ತ್ರದ ಪ್ರಾಧ್ಯಾಪಕರು ಎನ್ನುತ್ತೀರಿ. ಆದರೆ ಈ ಇತಿಹಾಸ ಗ್ರಂಥವನ್ನು ತುಂಬ ಸೊಗಸಾದ ಶೈಲಿಯಲ್ಲಿ, ಸ್ವಾರಸ್ಯಕರವಾಗಿ ಬರೆದಿದ್ದಾರೆ. ಪರಿಷ್ಕಾರ ಮಾಡಬೇಕಾದ ಅಗತ್ಯವಿಲ್ಲ.

ಆದರೆ ಪರಿವಿಡಿಯನ್ನು – ಅದರಲ್ಲೂ ಅಧ್ಯಾಯಗಳ ಮರು ಜೋಡಣೆ ಮಾಡಬೇಕಷ್ಟೆ' ಎಂದವರೇ ಅಷ್ಟನ್ನು ಮಾಡಿಕೊಟ್ಟಿದ್ದಾರೆ. ಅವರ ಉಪಕಾರವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಮೋಹನ್ ಆರ್ಥಿಕವಾಗಿ ಆಢ್ಯರಲ್ಲ – ಆದರೆ ಮಿತ್ರ ಶ್ರೀಮಂತರು. ಈ ಸಂದರ್ಭದಲ್ಲಿ ನನಗೆ ಪರಿಚಿತರಾದ ಅವರ ಮಿತ್ರರು ಐತಾಳದ್ವಯರು – ಶ್ರೀ ಚಂದ್ರ ಐತಾಳರು ಮತ್ತು ಶ್ರೀ ನಾಗ ಐತಾಳರು. ಇಬ್ಬರೂ ಅಮೆರಿಕದಲ್ಲಿ ನೆಲೆಸಿರುವವರು. ಚಂದ್ರ ಐತಾಳರಂತೆಯೇ ಅವರ ಶ್ರೀಮತಿಯವರೂ ಮೋಹನ ಅವರಲ್ಲಿ ವಿಶ್ವಾಸ ತೋರಿದವರು. ಇವರೂ – ಇವರ ಇತರ ಮಿತ್ರರೂ ಉದಾರವಾಗಿ ಆರ್ಥಿಕ ನೆರವು ನೀಡಿ ಮೋಹನರ ಈ ಕೃತಿ ಬೆಳಕು ಕಾಣಲು ಕಾರಣರಾಗಿದ್ದಾರೆ. 'ಸ್ವರ್ಗದೊಳಗಾದರೂ ಇಂಥ ಸ್ನೇಹ ದೊರಕೀತೆ?' ಎಂದು ಶ್ರೀ ವಿ.ಸೀ. ಅವರಂತೆ ನಾವೂ ಉದ್ಗರಿಸಬೇಕಷ್ಟೆ.

'ಅಭಿನವ'ದ ಮಿತ್ರ ಶ್ರೀ ರವಿಕುಮಾರ್‌ರವರು ಶ್ರಮವಹಿಸಿ ಈ ಕೃತಿಯನ್ನು ತುಂಬ ಸುಂದರವಾಗಿ ಪ್ರಕಟಿಸುತ್ತಿದ್ದಾರೆ. ಅವರಿಗೂ ಇದನ್ನು ಇಡಿಯಾಗಿ ಡಿ.ಟಿ.ಪಿ. ಮಾಡಿಕೊಟ್ಟ ಚಂದ್ರ ಐತಾಳ ದಂಪತಿಗೂ ಹೃತ್ಪೂರ್ವಕ ಕೃತಜ್ಞತೆಗಳು.

ಅಮೆರಿಕದಲ್ಲಿ ಸಹಸ್ರಸಹಸ್ರ ಸಂಖ್ಯೆಯಲ್ಲಿ ಕನ್ನಡಿಗರು ನೆಲೆಸಿದ್ದಾರೆ. ಅವರಲ್ಲಿ ಮೋಹನರಂತೆ ಭಾಷಾ ಋಣ ತೀರಿಸಿದ ಪ್ರತಿಭಾವಂತ ಲೇಖಕರು ಒಂದು ಕೈ ಬೆರಳೆಣಿಕೆಗೂ ಸಿಕ್ಕುವುದಿಲ್ಲ. ನಾನು ಭೇಟಿ ಮಾಡಿದ ಅನಂತರ ಮೋಹನರಿಗೆ ಎರಡು ಬಾರಿ ಮಿದುಳಿನ ಆಪರೇಷನ್ – ಎರಡೂ ಎಂಟು-ಹತ್ತು ಗಂಟೆಗಳ ಕಾಲ ನಡೆದವು – ಆಗಿವೆ. ಇವೆಲ್ಲವನ್ನು ಸಹಿಸಿಕೊಂಡೂ ತಮ್ಮ ಲೇಖಣಿಯ ಮಸಿ ಆರಲು ಬಿಡದೆ ಮೋಹನರು ಬೌದ್ಧಿಕವಾಗಿ ಪಾದರಸದಂತಿದ್ದಾರೆ. ಅವರ ಎಲ್ಲ ಪ್ರಯತ್ನಗಳೂ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ. ಅವರ ಸಾಹಿತ್ಯಕ ಚಟುವಟಿಕೆಗಳಲ್ಲಿ ನನಗೂ ಒಂದು ಪಾತ್ರನೀಡಿದ ಈ ಮಿತ್ರರಿಗೆ ನಾನು ಕೃತಜ್ಞನಾಗಿದ್ದೇನೆ.

ಮೈಸೂರು — **- ಪ್ರೊ. ಪ್ರಭುಶಂಕರ್**

ಏಪ್ರಿಲ್ ೨೦, ೨೦೦೩

ಅರಿವವರ ಚರಣಾಂಬುಜಕೆ ಶರಣು

ನುಡಿವ ಬೆಡಗು

ಒಂಬತ್ತು ವರ್ಷಗಳ ಹಿಂದೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತರಾದ, ಹದಿಹರೆಯದವರ ಭಾವನೆಗಳಿಗೆ ವೇದಿಕೆಯಾಗಬೇಕೆಂಬ ಹಂಬಲದಿಂದ ರೂಪಗೊಂಡಿದ್ದು ಅಭಿನವ.

ಅಭಿನವ ಚಾತುರ್ಮಾಸಿಕ : ಯಾವುದೇ ತತ್ವ/ವಾದ/ಚಳುವಳಿ/ಗುಂಪಿನ ಮುಖವಾಣಿಯಾಗದೆ ಬದುಕಿನ ಎಲ್ಲಾ ಸ್ತರದ ಅನುಭವಗಳಿಗೆ ಸ್ಪಂದಿಸುವ ಜಾಡನ್ನೇ ನಂಬಿಕೆಯಾಗಿಸಿಕೊಂಡ ಪತ್ರಿಕೆ. ಪ್ರತಿ ಸಂಚಿಕೆ ಯಾವುದಾದರೊಂದು ಸಮಸ್ಯೆ/ಕಲಾಪ್ರಕಾರ/ಮಾಧ್ಯಮ ಅಥವ ಯಾರಾದರೊಬ್ಬ ಸಾಹಿತಿ/ಕಲಾವಿದ/ಚಿಂತಕನ ಒಟ್ಟು ಕೆಲಸಗಳ ಮಡಿಲಾಗಿರುತ್ತದೆ. ಈಗಾಗಲೇ ಪರ್ಯಾಯ ಚಿಂತನೆ-ಉಪಭೋಗವಾದ, ಸಿನಿಮಾ, ವೊಲೆ ಷೋಯಿಂಕಾ, ಸಂಗೀತ, ಪರಿಸರ, ಪುತಿನ, ದೇಶೀದರ್ಶನಗಳು, ದೇವನೂರ ಮಹಾದೇವ, ಹಿಂಸೆ, ನೋಮ್‌ಚಾಮ್‌ಸ್ಕಿ, ಪಾರ್ಟಿಷನ್ – ಕುರಿತ ಸಂಚಿಕೆಗಳು ಹೊರಬಂದಿವೆ.

ಅಭಿನವ ಪುಸ್ತಕ ಯೋಜನೆ : ಸೃಜನಶೀಲತೆಯ ಎಲ್ಲಾ ಆಯಾಮಗಳಾಗೂ ವೇದಿಕೆಯಾಗಬೇಕೆಂಬ ಆಶಯದಿಂದ ಅನ್ಯ, ಅನನ್ಯ, ಅನ್ಯೋನ್ಯ ಪುಸ್ತಕ ಯೋಜನೆಯನ್ನು ಆರಂಭಿಸಿದ್ದು ವಾರ್ಷಿಕ ೫೦೦ ಪುಟಗಳ ಸಾಹಿತ್ಯವನ್ನು ನೀಡಲಾಗುತ್ತಿದೆ. ಭೂಮಿ, ಜೈವಿಕಶಾಸ್ತ್ರ, ಪರಿಸರ, ಮಾನವಶಾಸ್ತ್ರ, ಮನಶಾಸ್ತ್ರ, ಚರಿತ್ರೆ, ಭಾಷಾ ವಿಜ್ಞಾನ, ಪ್ರಸ್ತುತ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಕುರಿತ ತಲಸ್ಪರ್ಶಿಯಾದ ನಲವತ್ತಕ್ಕೂ ಹೆಚ್ಚು ಕೃತಿಗಳು ಪ್ರಕಟಗೊಂಡಿವೆ. ಅನೇಕ ಪ್ರಶಸ್ತಿಗಳನ್ನು ಗಳಿಸಿವೆ. (ಆಜೀವ ಚಂದಾ ರೂ. ೧೦,೦೦೦/–)

ಶತಮಾನ ಚಿಂತನೆ : ತಮ್ಮ ಚಿಂತನೆ/ಕೆಲಸಗಳ ಮೂಲಕ ಜಗತ್ತಿನ ಗಮನ ಸೆಳೆದ ಗ್ರಾಮ್ಷಿ, ಫುಕೋ, ಇಲಿಚ್, ಐನ್‌ಸ್ಟೈನ್, ಗಾಂಧಿ, ಸೂಕಿ, ರಸೆಲ್, ಸೈದ್ ಮುಂತಾದವರ ವಿಚಾರಗಳನ್ನು ಕನ್ನಡದ ಪರಿಸರದ ಹಿನ್ನೆಲೆಯಲ್ಲಿ ಪರಿಶೀಲಿಸುವ

ಹದಿನೈದು ಪುಸ್ತಕಗಳು ಪ್ರಕಟಗೊಳ್ಳುತ್ತಿವೆ. ಈ ಮಾಲಿಕೆಯ ಸಂಪಾದಕರು : ಜಿ. ರಾಜಶೇಖರ.

ಬೇಂದ್ರೆ-ಅಡಿಗ ಕಾವ್ಯ ಪ್ರಶಸ್ತಿ : ಹದಿಹರೆಯದವರ ಹಸ್ತಪ್ರತಿ ಕವನ ಸಂಕಲನಗಳಿಗೆ ರೂ. ೨೦೦೦/- ನಗದು ಮತ್ತು ಫಲಕವನ್ನು ನೀಡಲಾಗುತ್ತಿದೆ.

*

ಇದು ಅಭಿನವದ ನಲವತ್ತಮೂರನೆಯ ಪ್ರಕಟಣೆ. ಇಂತಹ ಬೃಹತ್ ಕೃತಿಯ ಕಡೆಗೆ ನಮ್ಮ ಗಮನ ಸೆಳೆದ ಶ್ರೀ ಪ್ರಭುಶಂಕರ್ ಅವರಿಗೆ, ಈ ಕೃತಿಯನ್ನು ಪ್ರಕಟಿಸಲು ಒಪ್ಪಿಗೆ ನೀಡಿದ ಮೋಹನ್ ಅವರಿಗೆ, ಪುಸ್ತಕಕ್ಕಾಗಿ ಹಣ ಸಂಗ್ರಹಿಸಿ, ಎಲ್ಲಾ ಹಂತಗಳಲ್ಲೂ ಎಚ್ಚರಿಕೆಯಿಂದ ಆಸಕ್ತಿಯಿಂದ ಕೆಲಸ ನಿರ್ವಹಿಸಿದ ಶ್ರೀ ನಾಗ ಐತಾಳರಿಗೆ, ಅಕ್ಷರ ಜೋಡಣೆ ಮಾಡಿರುವ ಶ್ರೀ ಚಂದ್ರ ಐತಾಳ ಮತ್ತು ಶ್ರೀಮತಿ ಸುಜಾತ ಐತಾಳರಿಗೆ, ಧನಸಹಾಯ ಮಾಡಿದ ಎಲ್ಲರಿಗೆ (ಪುಸ್ತಕದ ಪ್ರಕಟಣಾ ವೆಚ್ಚವನ್ನು ಭರಿಸಲು ಅಮೆರಿಕದ ಮೋಹನ್ ಅವರ ಗೆಳೆಯರು ನೀಡಿರುವ ಹಣವನ್ನು ಪುಸ್ತಕವು ಮಾರಾಟವಾದ ನಂತರ ವೈ.ಆರ್. ಮೋಹನ್ ಅವರ ವೈದ್ಯಕೀಯ ಸೌಲಭ್ಯಗಳಿಗೆ ನೀಡಲಾಗುವುದು), ಮುನ್ನುಡಿ ಬರೆದುಕೊಟ್ಟಿರುವ ಶ್ರೀ ಶಿವಣ್ಣ ಅವರಿಗೆ ಮತ್ತು ಮುಖಪುಟ ವಿನ್ಯಾಸ ಮಾಡಿದ ದೇವರಾಜ್, ಮುದ್ರಣ ಕಾರ್ಯ ನಿರ್ವಹಿಸಿದ ಇಳಾ ಮುದ್ರಣದವರಿಗೆ ಕೃತಜ್ಞತೆಗಳು.

ಹಾಗೆಯೇ ನಮ್ಮೆಲ್ಲಾ ಕೆಲಸಗಳನ್ನು ಬೆಂಬಲಿಸುತ್ತಿರುವ ಶ್ರೀ ಚಿ. ಶ್ರೀನಿವಾಸರಾಜು, ಎಚ್.ಎಸ್. ರಾಘವೇಂದ್ರರಾವ್, ಜಿ. ರಾಜಶೇಖರ, ರವಿಬೆಳಗೆರೆ, ಪ್ರೊ. ಕಾರ್ಲೋಸ್, ಡಾ. ಜೆ.ಕೆ. ರಾಮಸ್ವಾಮಿ, ಪಿ. ಶ್ರೀನಿವಾಸ್, ಅಜಿತಾ ವೇಣುಕೃಷ್ಣಪ್ರಸಾದ್ ಮುಂತಾದ ಹಿರಿಯರಿಗೆ-ಗೆಳೆಯರಿಗೆ ಕೃತಜ್ಞತೆಗಳು.

– ನ. ರವಿಕುಮಾರ

ಅಭಿನವದ ಪರವಾಗಿ

ಪ್ರಸ್ತಾವನೆ

ಹಾಸ್ಯಪ್ರಜ್ಞೆಗೆ ಹೆಸರಾದ ಫ್ರೆಂಚ್ ತತ್ವಜ್ಞಾನಿ ವಾಲ್ಟೇರನ ದೃಷ್ಟಿಯಲ್ಲಿ ಇತಿಹಾಸ ಬದುಕಿರುವವರು ಸತ್ತವರನ್ನು ಕುರಿತು ಬರೆಯುವಾಗ ತೋರುವ ಕೈಚಳಕ. ಅಮೆರಿಕದ ಇತಿಹಾಸ ಇದಕ್ಕೆ ಹೊರತಲ್ಲ. ಆದರೆ ಅಮೆರಿಕದ ಇತಿಹಾಸ ಒಂದಾನೊಂದು ಕಾಲದ ರಾಜ-ರಾಣಿಯರ, ಚಕ್ರವರ್ತಿ/ನಿಯರ ವೈಭವ ಜೀವನದ, ಅವರು ಗೆದ್ದ ಅಥವಾ ಸೋತ ಕದನಗಳ ಅಥವಾ ಅವರ ಬಗ್ಗೆ ಪ್ರಚಾರದಲ್ಲಿದ್ದ ಅಪನಿಂದೆಗಳ ವರದಿಯಲ್ಲ. ಅಮೆರಿಕದಲ್ಲಿ ರಾಜ-ರಾಣಿಯರು ಇರಲೇ ಇಲ್ಲ. ಈ ಇತಿಹಾಸ ಸಾಮಾನ್ಯ ಜನರು ಸೂರ್ಯ ಮುಳುಗದ ಸಾಮ್ರಾಜ್ಯದ ಸೇನಾಬಲವನ್ನು ಎದುರಿಸಿ ಅಮೆರಿಕದ ವಸಾಹತುಗಳಲ್ಲಿ ಸ್ವಾತಂತ್ರ್ಯದ ಕ್ರಾಂತಿಯನ್ನು ಹಬ್ಬಿಸಿದ ಕತೆ. ಸಾಮಾನ್ಯ ಪ್ರಜೆಗಳು, ರೈತರು, ಕಾರ್ಮಿಕರು, ಯುವಕರು ಮತ್ತು ಕೆಲವು ದಿಟ್ಟ ಮಹಿಳೆಯರು ಕ್ರಾಂತಿಯ ಮಕ್ಕಳಾಗಿ ಆಗಿನ ಕಾಲದಲ್ಲಿ ಜಗತ್ತಿನ ಅತ್ಯುತ್ತಮ ಸೈನ್ಯವನ್ನು ತಮ್ಮ ತುಕ್ಕು ಹಿಡಿದ ತುಪಾಕಿಗಳಿಂದ, ಹಳೆಯ ಹತಾರುಗಳಿಂದ, ಕೊರೆಯುವ ಚಳಿಯಲ್ಲಿ, ಮೊಣಕಾಲೆತ್ತರಕ್ಕೆ ಬಿದ್ದಿದ್ದ ಹಿಮದಲ್ಲಿ ಬರಿಕಾಲಿನಲ್ಲಿ ತಮ್ಮ ಜೀವದ ಹಂಗು ತೊರೆದು ಹೋರಾಡಿ ನವರಾಷ್ಟ್ರ ನಿರ್ಮಾಣ ಮಾಡಿದ ಮೈನವಿರೇಳಿಸುವ ಕತೆ! ಈ ಕತೆಗೆ ಅನೇಕ ಉಪಕತೆಗಳು – ಆದಿವಾಸಿಗಳ ಕತೆ, ಔದ್ಯೋಗಿಕ ಕ್ರಾಂತಿಯ ಕತೆ, ಜಾಗತಿಕ ಯುದ್ಧಗಳ ಕತೆ, ಯಾದವೀ ಕಲಹದ ಕತೆ, ವೈಜ್ಞಾನಿಕ ಪ್ರಗತಿಯ ಕತೆ, ಅಣುಶಕ್ತಿ ಸಂಶೋಧನೆಯ ಕತೆ – ಇಂಥ ನೂರಾರು ಉಪಕತೆಗಳು ಸೇರಿ 'ಅಮೆರಿಕಾಯಣ' ಮೂಡಿಬಂದಿದೆ. ಇದು ಶಾಲಾ ಕಾಲೇಜು ಅಧ್ಯಾಪಕರಿಗಾಗಿ, ವಿದ್ಯಾರ್ಥಿಗಳಿಗಾಗಿ ಬರೆದ ಪಠ್ಯಪುಸ್ತಕವಲ್ಲ. ಶ್ರೀಸಾಮಾನ್ಯರಿಗಾಗಿ ಬರೆದ ಕಥನ.

ಶ್ರೀ ಕುವೆಂಪು ಅವರ ಸಾಂಕೇತಿಕ (symbolic) ಭಾಷೆಯಲ್ಲಿ ಹೇಳುವುದಾದರೆ, ಇತಿಹಾಸ ನಾವು ಕೈಗೊಳ್ಳುವ ಒಂದು 'ಮಾನಸಯಾತ್ರೆ'. ಭೂತಕಾಲಕ್ಕೆ ಕರೆದೊಯ್ಯುವ ಕಾಲಯಂತ್ರವನ್ನೇರಿ (Time Machine), ಎಂದೋ ಆಗಿ ಸಂದು ಹೋದ ಸಂಗತಿಗಳನ್ನು, ಹಿಂದೆ ಬದುಕಿದ್ದು ಈಗ ನೆನಪಾಗಿ ಹೋಗಿರುವ ವ್ಯಕ್ತಿಗಳನ್ನು ಪುನಃ ಸಂದರ್ಶಿಸಲು, ಅಂತೆಯೇ ಹಿಂದೆ ಶೋಭಾಯಮಾನವಾಗಿದ್ದು ಈಗ ಅವನತಿ ಹೊಂದಿರುವ ನಾಗರಿಕತೆಗಳನ್ನು ಮಾನಸಚಕ್ಷುಗಳಿಂದ ನೋಡಿ ಆನಂದಿಸಲು, ಭವ್ಯ ಕಲಾಕೃತಿಗಳು ಸೃಷ್ಟಿಗೊಳ್ಳುವುದನ್ನು ಕಂಡು ಪರವಶರಾಗುವ ರಸಯಾತ್ರೆ! ಹಾಗೆಯೇ ಮಾನವರು ದಾನವರಾಗಿ

ಯಾದವೀ ಕಲಹದಿಂದ ಹಿಡಿದು ಅಣುಬಾಂಬಿನ ಮಾರಣಹೋಮ ಮತ್ತು ವಿಯೆಟ್‌ನಾಮ್ ಯುದ್ಧದ ಮೀಲಾಯ್ ಹತ್ಯಾಕಾಂಡದಂಥ ಕ್ರೌರ್ಯದ ಪರಮಾವಧಿಯನ್ನು ಕಂಡು ತಲ್ಲಣಿಸಿ ದಿಗ್ಭ್ರಮೆಗೊಳಿಸುವ ಮಾನಸಯಾತ್ರೆಗೆ ಆಮಂತ್ರಣ ಅಮೆರಿಕಾಯಣ.

ನಾನು ಅಮೆರಿಕ ದೇಶಕ್ಕೆ ವಲಸೆ ಬಂದು ನೆಲೆಸಿ ಕಾಲು ಶತಮಾನದ ಮೇಲಾಯಿತು. ಈಗ ನಾನು ಅಮೆರಿಕದ ಪ್ರಜೆ. ನಾನು ಈ ದೇಶಕ್ಕೆ ಬಂದಾಗಿನಿಂದಲೂ ಈ ದೇಶದ ಬಗ್ಗೆ ಆಳವಾಗಿ ಆಲೋಚಿಸಿದ್ದೇನೆ, ವಿಸ್ಮಯಪಟ್ಟಿದ್ದೇನೆ ಮತ್ತು ಮೆಚ್ಚುಗೆ ವ್ಯಕ್ತಪಡಿಸಿದ್ದೇನೆ. ಕೆಲವು ಪ್ರಾಚೀನ ದೇಶಗಳಿಗೆ ಹೋಲಿಸಿದರೆ ಅಮೆರಿಕ ಹೊಚ್ಚ ಹೊಸ ದೇಶ. ಕಾಲದ ದೃಷ್ಟಿಯಿಂದ ನೋಡಿದರೆ ನಾಲ್ಕೈದು ಸಾವಿರ ವರ್ಷಗಳ ಇತಿಹಾಸ ಹೊಂದಿರುವ ದೇಶಗಳ ಮುಂದೆ ಅಮೆರಿಕ ಕೇವಲ ಎರಡು ಶತಮಾನಗಳು ತುಂಬಿ ಮೂರನೆಯ ಶತಮಾನಕ್ಕೆ ಕಾಲಿರಿಸಿರುವ ಪಡ್ಡೆ ದೇಶ. ಆದರೆ ಸಹಸ್ರಾರು ವರ್ಷಗಳ ಅವಧಿಯಲ್ಲಿ ಆ ದೇಶಗಳು ಸಾಧಿಸಲಾರದ ಅದ್ಭುತಗಳನ್ನು ಅಮೆರಿಕ ಅಲ್ಪಾವಧಿಯಲ್ಲಿ ವಿಸ್ಮಯಪಡುವಂತೆ ಸಾಧಿಸಿ, ವಯಸ್ಸಿನಲ್ಲಿ ಪಡ್ಡೆಯಾದರೂ ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಉತ್ಪಾದನೆಯಲ್ಲಿ, ವಿಜ್ಞಾನದಲ್ಲಿ, ವಾಣಿಜ್ಯದಲ್ಲಿ, ಕೈಗಾರಿಕೆಯಲ್ಲಿ, ಕೃಷಿ-ಪಶುಪಾಲನೆಯಲ್ಲಿ ಮತ್ತು ನೆಲ, ಜಲ ಹಾಗು ಬಾಹ್ಯಾಕಾಶ ಸಂಶೋಧನೆಗಳಲ್ಲಿ ಮಿಕ್ಕ ಎಲ್ಲ ದೇಶಗಳನ್ನೂ ಮೀರಿಸಿ ಮುಂಚೂಣಿ ಸ್ಥಾನದಲ್ಲಿ ನಿಂತಿರುವ ಕೌತುಕವಾಗಿದೆ!

ಈ ಅದ್ಭುತ ದೇಶವನ್ನು ಯಾವುದೋ ಮಂತ್ರಶಕ್ತಿ ಸೃಷ್ಟಿ ಮಾಡಿದ್ದಲ್ಲ. ನಿಜವಾದ ಅರ್ಥದಲ್ಲಿ ಅಮೆರಿಕದ ಇತಿಹಾಸ ಸಾಮಾನ್ಯ ಅಮೆರಿಕನ್ನರ ಸಾಹಸದ ಕತೆಯಾಗಿದೆ. ಈ ಕತೆ ಪುರಾಣದ ಹರವು, ಮಹಾಕಾವ್ಯದ ತೀಕ್ಷ್ಣತೆ ಹಾಗೂ ಹೃದಯಸ್ಪರ್ಶಿ ಸನ್ನಿವೇಶಗಳಿಂದ ಕೂಡಿ ರಸವತ್ತಾಗಿದೆ. ಲೋಕನಾಯಕತ್ವದ ಪಟ್ಟಕ್ಕೇರಿರುವ ಈ ದೇಶದ ಅನನ್ಯ ಸಂಪತ್ತು, ಸೌಲಭ್ಯಗಳು ಮತ್ತು ಸಾಧನೆಗಳು ಸಾಮಾನ್ಯ ಜನರ ಬೆವರು, ರಕ್ತ ಮತ್ತು ಕಣ್ಣೀರುಗಳಿಂದ ಉತ್ಪಾದನೆಗೊಂಡಿದೆ ಎನ್ನುವುದನ್ನು ನಾವು ಮರೆಯಬಾರದು.

ಹಿಮಾಲಯ ಪರ್ವತಗಳಷ್ಟು ಎತ್ತರವಿಲ್ಲದಿದ್ದರೂ ದಟ್ಟವಾದ ಕಾಡುಗಳಿಂದ ಕಿಕ್ಕಿರಿದು, ವಿವಿಧ ರೀತಿಯ ಪ್ರಾಣಿಗಳಿಗೆ, ಪಕ್ಷಿ ಸಂಕುಲಗಳಿಗೆ ಆಶ್ರಯವಾಗಿರುವ ಅಮೆರಿಕದ ಬೆಟ್ಟ-ಗುಡ್ಡಗಳು, ಸಹಸ್ರಾರು ಮೈಲಿ ಹರಿದು ಅಸದೃಶ ಜಲಪಾತಗಳನ್ನು ಸೃಷ್ಟಿಸಿ ಅನೇಕ ರೀತಿಯ ಜಲಜಂತುಗಳಿಗೆ ಆಶ್ರಯ ನೀಡಿ ಕೊನೆಯಲ್ಲಿ ಸಾಗರವನ್ನು ಸೇರುವ ನದಿಗಳು, ವಿಶಾಲವಾದ ಉಪ್ಪು ನೀರಿನ ಹಾಗೂ ಸಿಹಿ ನೀರಿನ ಸರೋವರಗಳು, ಮೇರೆಯಿಲ್ಲದೆ ಹಬ್ಬಿರುವ ಹುಲ್ಲುಗಾವಲುಗಳು ಅಮೆರಿಕದ ಪ್ರಕೃತಿ ಸೌಂದರ್ಯದ ಪ್ರತೀಕಗಳು.

ಅಮೆರಿಕನ್ನರ ಚಾರಿತ್ರ್ಯವನ್ನು ರೂಪಿಸುವುದರಲ್ಲಿ ಪ್ರಕೃತಿ ಮಹತ್ತರ ಪಾತ್ರ ವಹಿಸಿದೆ.

ಅಮೆರಿಕನ್ನರ ಕಷ್ಟಸಹಿಷ್ಣುತೆ, ಸಾಹಸಪ್ರಿಯತೆ, ಸ್ವಾತಂತ್ರ್ಯಪ್ರಿಯತೆ, ಸ್ವಾವಲಂಬನೆ ಮತ್ತು ಪರೋಪಕಾರ – ಇವು ಜನರು ಮತ್ತು ಪ್ರಕೃತಿಯ ನಡುವಣ ಪ್ರಕ್ರಿಯೆ ಮೂಲಕ ಮೂಡಿಬಂದ ಗುಣಗಳು. ನಾನು ಭಾರತದಲ್ಲಿದ್ದಾಗ ನನಗೆ ಅಮೆರಿಕದ ಸ್ಥೂಲ ಪರಿಚಯವಿತ್ತೇ ವಿನಾ ನಿಕಟ ಪರಿಚಯದಿಂದ, ಕಣ್ಣಾರೆ ಕಂಡಾಗ ಉಂಟಾಗುವ ವಿಸ್ಮಯ ಅನುಭವಿಸಿರಲಿಲ್ಲ. ಅಮೆರಿಕಕ್ಕೆ ವಲಸೆ ಬಂದು ನೆಲೆಸಿದ ಮೇಲೆ ನಾನಾ ಪ್ರಾಂತ್ಯಗಳ ಪರ್ಯಟನೆ ಮಾಡಿ ಅಮೆರಿಕದ ಪ್ರಕೃತಿ ಸಂಪತ್ತನ್ನು ಕಂಡು ಬೆರಗಾಗಿದ್ದೇನೆ. ನಿತ್ಯ ಜೀವನದಲ್ಲಿ ಮತ್ತು ಕಾರ್ಯರಂಗದಲ್ಲಿ ಅಮೆರಿಕನ್ನರೊಡನೆ ವ್ಯವಹರಿಸುವಾಗ ಅವರ ನಡೆ, ನುಡಿ, ನಂಬಿಕೆಗಳು, ವ್ಯಕ್ತಿತ್ವ ಮತ್ತು ಪೂರ್ವಾಗ್ರಹಗಳ ಪರಿಚಯವಾಗಿ ಈ ಜನ ಎರಡು ಶತಮಾನಗಳೊಳಗೆ ಇಷ್ಟು ಸಮೃದ್ಧ ರಾಷ್ಟ್ರವನ್ನು ಹೇಗೆ ನಿರ್ಮಾಣ ಮಾಡಿದರು ಎನ್ನುವ ಪ್ರಶ್ನೆ ನನ್ನ ಕುತೂಹಲವನ್ನು ಕೆರಳಿಸಿ ಅಮೆರಿಕದ ಇತಿಹಾಸವನ್ನು ಕುರಿತ ಪುಸ್ತಕಗಳನ್ನು ಓದುವ ಹವ್ಯಾಸವನ್ನು ನಾನು ಬೆಳೆಸಿಕೊಂಡೆ. ಇಂಗ್ಲಿಷಿನಲ್ಲಿ ಅಮೆರಿಕವನ್ನು ಕುರಿತ ಅಸಂಖ್ಯಾತ ಪುಸ್ತಕಗಳಿವೆ. ರಾಜಕೀಯ ದೃಷ್ಟಿಯಿಂದ ಬರೆದ ಪುಸ್ತಕಗಳು ನನಗೆ ಇಷ್ಟವಾಗಲಿಲ್ಲ. ಇತಿಹಾಸ ಕೇವಲ ರಾಜಕಾರಣಿಗಳ, ರಾಜಕಾರಣಿಯರ, ಆಂದೋಳನಗಳ ಅಥವಾ ಯುದ್ಧಗಳ ದಾಖಲೆಯಲ್ಲ. ಬದಲಿಗೆ ಇತಿಹಾಸ ಜನ-ಜೀವನ ಚರಿತ್ರೆಯಾದಾಗ ಮಾತ್ರ ಅದು ಅರ್ಥವತ್ತಾಗುತ್ತದೆ ಮತ್ತು ಸಫಲಗೊಳ್ಳುತ್ತದೆ.

ಇಲ್ಲಿ ನನ್ನ ಸ್ನೇಹಿತನೊಬ್ಬನ ಮನೆಗೆ ಹೋಗಿದ್ದಾಗ ಬೆಂಗಳೂರಿನಿಂದ ಬಂದಿದ್ದ ಅವನ ತಂದೆ-ತಾಯಿಗಳು ಮಾತನಾಡಲು ಸಿಕ್ಕಿದ್ದರು. ಅವರು ಅಮೆರಿಕದ ರಾಜಧಾನಿ ವಾಷಿಂಗ್‌ಟನ್ ಪ್ರವಾಸ ಮುಗಿಸಿ ಬಂದಿದ್ದರು. ಅಲ್ಲಿ ಲಿಂಕನ್ ಸ್ಮಾರಕ, ಜಫರ್‌ಸನ್ ಸ್ಮಾರಕ ಮುಂತಾದುವನ್ನು ನೋಡಿ ಪ್ರಭಾವಿತರಾಗಿದ್ದುದು ಅವರನ್ನು ನೋಡಿದರೆ ಗೊತ್ತಾಗುತ್ತಿತ್ತು. ಅವನ ತಂದೆ ಆಫೀಸರ್, ತಾಯಿ ವಿದ್ಯಾವಂತೆ. ಕನ್ನಡದಲ್ಲಿ ವಿಶಾಲವಾಗಿ ಓದಿಕೊಂಡಿದ್ದರು. ಅಲ್ಪ ಸ್ವಲ್ಪ ಇಂಗ್ಲಿಷ್ ಬರುತ್ತಿತ್ತು. ಅವರು ಹೇಳಿದರು – 'ಈ ದೇಶ ಹುಟ್ಟಿ ಇನ್ನೂ ಮುನ್ನೂರು ವರ್ಷಾನು ಆಗಿಲ್ಲ ಅಂತೀರಿ. ಯಾಪಾಟಿ ಮುಂದುವರ್‍ದುಬಿಟ್ಟಿದೆ ನೋಡಿ. ಈ ದೇಶದ ಸಾಧನೆಗಳನ್ನು ಅರ್ಥ ಮಾಡ್ಕೋಬೇಕಾದ್ರೆ ಅದರ ಇತಿಹಾಸ ತಿಳ್ಕೊಬೇಕಲ್ಲವೆ? ಇಂಗ್ಲಿಷ್‌ನಲ್ಲಿ ಬೇಕಾದಷ್ಟು ಪುಸ್ತಕ ಸಿಗ್ತಾವೆ. ಕನ್ನಡದಲ್ಲಿ ಇದ್ದಿದ್ರೆ ನಾನೂ ಓದಿ ತೀಳ್ಕೊಬೋದಿತ್ತು. ಬೆಂಗ್ಳೂರಿಗೆ ಹೋದ್‌ಮೇಲೆ ಹುಡ್ಕಿ ನೋಡಬೇಕು' – ಈ ಮಾತುಗಳು ನನ್ನ ಮನಸ್ಸಿನಲ್ಲಿ ಉಳಿದುಬಿಟ್ಟವು.

ಹೀಗೆ ಆಲೋಚನೆ ಮಾಡುತ್ತಿದ್ದಾಗ ಅಮೆರಿಕದ ಇತಿಹಾಸವನ್ನು ಕನ್ನಡದಲ್ಲಿ ಸರಳವಾದ ಕಥನ (Narrative) ಶೈಲಿಯಲ್ಲಿ ಬರೆಯಬೇಕೆಂಬ ಬಯಕೆ ಹುಟ್ಟಿತು. ಅಂತರಂಗದಲ್ಲಿ ಹುದುಗಿದ್ದ ಬಯಕೆಯನ್ನು ಕಾರ್ಯಗತಗೊಳಿಸಲು ಬಹಳ ಸಮಯ ಕಾಯಬೇಕಾಯಿತು. ಕಾರಣ ನಾನು ಪಾರ್ಕಿನ್‌ಸನ್ ಖಾಯಿಲೆಯಿಂದ ನರಳುತ್ತಿರುವು

ದರಿಂದ ಓದಬೇಕಾದ ಪುಸ್ತಕಗಳನ್ನು ಓದಿ, ಬರೆಯುವ ಸಾಮಗ್ರಿಯನ್ನು ಸಿದ್ಧಗೊಳಿಸಿಕೊಳ್ಳುವುದು ಬಹಳ ನಿಧಾನವಾಯಿತು. ಈ ಮಧ್ಯೆ ನಾನು ಪ್ರಾರಂಭಿಸಿದ 'ನೆನಪುಗಳು' ಮತ್ತು 'ಪಾರ್ಕಿನ್‌ಸನ್ ಕಾಯಿಲೆಯಿಂದ ನಾನು ಕಲಿತಿದ್ದೇನು?' ಎನ್ನುವ ಎರಡು ಕೃತಿಗಳನ್ನು ಬರೆದು ಮುಗಿಸಬೇಕಾಗಿದ್ದರಿಂದ 'ಅಮೆರಿಕಾಯಣ' ಬರೆಯುವ ಯೋಜನೆಯನ್ನು ಮುಂದೆ ಹಾಕಬೇಕಾಯಿತು.

ನನ್ನ ಪಾರ್ಕಿನ್‌ಸನ್ ಕಾಯಿಲೆ ಹಂತ ಹಂತವಾಗಿ ಮುಂದುವರಿದು ನನ್ನ ದೇಹವನ್ನು ಶಿಥಿಲಗೊಳಿಸುತ್ತಿರುವುದರಿಂದ ಅಮೆರಿಕಾಯಣ ಬರೆದು ಮುಗಿಸುವಷ್ಟು ಕಾಲಾವಕಾಶ ಮತ್ತು ಮೈಮನಗಳನ್ನು ಆದಷ್ಟು ಆರೋಗ್ಯಕರವಾಗಿರುವಂತೆ ಕರುಣಿಸಿ ಕಾಪಾಡುವಂತೆ ದೇವರನ್ನು ಪ್ರಾರ್ಥಿಸುತ್ತಿದ್ದೆ.

ಮೇಲೆ ತಿಳಿಸಿದಂತೆ ಅಮೆರಿಕಾಯಣ ಇತಿಹಾಸವನ್ನು ನವರಸಗಳಿಂದ ಕೂಡಿದ ಸರಳ ಕಥನದಂತೆ ನಿರೂಪಣೆ ಮಾಡುವ ಪ್ರಯತ್ನವಾಗಿದೆ. ಈ ಪ್ರಯತ್ನ ಎಷ್ಟರ ಮಟ್ಟಿಗೆ ಸಫಲವಾಗಿದೆ ಎನ್ನುವುದನ್ನು ಓದುಗರೇ ನಿರ್ಧರಿಸಬೇಕು. ಈ ಕಥನವನ್ನು ಬರೆಯುವಾಗ ಎಲ್ಲಾ ಇಂಗ್ಲಿಷ್ ಪದಗಳನ್ನು ಕನ್ನಡಕ್ಕೆ ತರ್ಜುಮೆ ಮಾಡುವ ಗೋಜಿಗೆ ಹೋಗಲಿಲ್ಲ. ಸಾಮನ್ಯವಾಗಿ ಬಳಕೆಯಲ್ಲಿರುವ ಇಂಗ್ಲಿಷ್ ಪದಗಳನ್ನು ಹಾಗೇ ಉಳಿಸಿದ್ದೇನೆ. ಅಮೆರಿಕಾಯಣ ಅಮೆರಿಕದ ಮೂಲನಿವಾಸಿಗಳ ಜೀವನದಿಂದ ಪ್ರಾರಂಭವಾಗಿ ೧೯೬೦ರ ದಶಕದಲ್ಲಿ ಪರ್ಯವಸಾನಗೊಳ್ಳುತ್ತದೆ. ಈಚಿನ ಸಂಗತಿಗಳು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವುದರಿಂದ – ಈ ಸುದೀರ್ಘ ಕಥನವನ್ನು ಮುಂದುವರಿಸುವ ಅಗತ್ಯ ತೋರದಿದ್ದರಿಂದ – ಅಲ್ಲಿಗೆ ಕೊನೆಗೊಳಿಸಿದ್ದೇನೆ.

ಈ ಪುಸ್ತಕದ ಪ್ರಕಟಣೆಯ ಸಂದರ್ಭದಲ್ಲಿ ತುಂಬ ಆಸ್ಥೆ ವಹಿಸಿದ ಶ್ರೀ ಕೃಷ್ಣಶಾಸ್ತ್ರಿ ಅವರನ್ನು ನೆನೆಯುತ್ತೇನೆ. ಅಮೆರಿಕದಲ್ಲಿ ಕನ್ನಡ ಸಾಹಿತ್ಯ, ಸಂಸ್ಕೃತಿಗೆ ಬೆಂಬಲ ನೀಡುವ ಅವರ ಮನೋಧರ್ಮ ನಿಜಕ್ಕೂ ಮೆಚ್ಚುವಂತಹದು. ಅದೇ ರೀತಿ ಪ್ರಕಟಣೆಯ ಸರ್ವಭಾರವನ್ನೂ ಹೊತ್ತು ನನ್ನ ಶಕ್ತಿಗೂ ಮೀರಿದ ಈ ಕೆಲಸವನ್ನು ನಿರ್ವಹಿಸಿಕೊಂಡ ಡಾ. ನಾಗ ಐತಾಳರಿಗೂ ಈ ನೆನಕೆ ಸಲ್ಲುತ್ತದೆ. ಇವರು ಅಮೆರಿಕದಲ್ಲಿ ನೆಲೆಸಿದ್ದರೂ ಭಾರತಕ್ಕೆ ಹೋಗಿ ಚರಿತ್ರೆಯ ವಿದ್ವಾಂಸರನ್ನು ಹಾಗೂ ಪ್ರಕಾಶಕರನ್ನು ಖುದ್ದಾಗಿ ಭೇಟಿ ಮಾಡಿ ಎಲ್ಲ ವಿವರಗಳನ್ನು ನನಗೆ ವರದಿ ಮಾಡುತ್ತಾ ಪುಸ್ತಕದ ಪ್ರಕಟಣೆಯ ಕಾರ್ಯವನ್ನು ಪೂರೈಸಿದ್ದಾರೆ. ಇವರಲ್ಲದೆ ಅಮೆರಿಕಕ್ಕೆ ಪ್ರವಾಸ ಬಂದಿದ್ದಾಗ ನನ್ನ ಬಳಿಗೆ ಬಂದು ನನ್ನ ಸ್ಥಿತಿಯ ಬಗ್ಗೆ ಮತ್ತು ಪುಸ್ತಕದ ಕುರಿತು ಮಹತ್ತಾದ ಕಾಳಜಿ ತೋರಿಸಿದ ಪ್ರೊ. ಪ್ರಭುಶಂಕರ ಅವರನ್ನೂ ಮರೆಯಲಾಗದು. ಮೈಸೂರಿಗೆ ಹಿಂದಿರುಗಿದ ನಂತರ ಪ್ರೊ. ಶಿವಣ್ಣ ಅವರನ್ನು ಪುಸ್ತಕದ ದಾಖಲೆಗಳನ್ನೊಮ್ಮೆ ವಿಮರ್ಶಿಸುವಂತೆ ನನ್ನ ಪರವಾಗಿ ಕೇಳಿಕೊಂಡಿದ್ದಲ್ಲದೆ, ಪುಸ್ತಕದ ವಿಷಯಗಳ ಕುರಿತು ಸಲಹೆಗಳನ್ನು ಇತ್ತು ಅವರು

ಸಹಕರಿಸಿದ್ದಾರೆ. ಅದೇ ಪ್ರಕಾರ ಪ್ರೊ. ಶಿವಣ್ಣ ಅವರು ನನ್ನ ಪರಿಚಯವಿಲ್ಲದಿದ್ದರೂ ಈ ಪುಸ್ತಕದಲ್ಲಿ ಕಾಣಿಸಿಕೊಂಡಿರುವ ತಾರೀಖುಗಳು ಇತ್ಯಾದಿ ವಿವರಗಳನ್ನು ಕೂಲಂಕಷ ವಾಗಿ ವಿಮರ್ಶಿಸಿ, ಮುನ್ನುಡಿ ಬರೆದು ನನಗೆ ಉಪಕಾರ ಮಾಡಿದ್ದಾರೆ. ಹೀಗೆ ಈ ಮೇಲೆ ಕಾಣಿಸಿದ ಎಲ್ಲ ಮಹನೀಯರುಗಳಿಗೂ ನಾನು ಆಭಾರಿಯಾಗಿದ್ದೇನೆ.

ಶ್ರೀ ಕೃಷ್ಣಶಾಸ್ತ್ರಿ ಮತ್ತು ಡಾ. ನಾಗ ಐತಾಳ ಅವರ ಪ್ರಯತ್ನದಿಂದಾಗಿ ಅಮೆರಿಕದಲ್ಲಿ ಈ ಪುಸ್ತಕ ಪ್ರಕಟಣೆಗಾಗಿ ಒದಗಿದ ಧನ ಸಹಾಯವೂ ನಾನು ಪಡಬೇಕಾಗಿದ್ದ ಪರಿಶ್ರಮವನ್ನು ಇಲ್ಲವಾಗಿಸಿದ್ದಲ್ಲದೆ, ಪ್ರಕಟಣೆಯ ವೆಚ್ಚವನ್ನು ಅಮೆರಿಕದಲ್ಲಿ ನೆಲೆಸಿರುವ ಹಲವಾರು ಕನ್ನಡಿಗರೇ ಭರಿಸಿಕೊಂಡಿರುವಂತಾಗಿದೆ. ಅಮೆರಿಕದಲ್ಲಿ ನೆಲೆಸಿರುವ ಕನ್ನಡಿಗರಿಂದ ಪುಸ್ತಕ ಪ್ರಕಟವಾಗುವ ಪರಿಸರದಲ್ಲಿ ಇದೊಂದು ವಿಶೇಷವೇ ಸರಿ. ಈ ರೀತಿ ಹಣಸಹಾಯ ಮಾಡಿದ ಎಲ್ಲರಿಗೂ ನನ್ನ ವಂದನೆಗಳು ಸಲ್ಲುತ್ತವೆ. ಈ ಸ್ನೇಹಿತರ ಸಂಖ್ಯೆಯ ಪಟ್ಟಿ ಸಾಕಷ್ಟು ದೊಡ್ಡದಿರುವುದರಿಂದ ಅದನ್ನು ಇಲ್ಲಿ ನಮೂದಿಸಿಲ್ಲ. ಆದರೆ ನಾನೇ ಆ ಪಟ್ಟಿಯಲ್ಲಿರುವ ಪ್ರತಿಯೊಬ್ಬರಿಗೂ ಧನ್ಯವಾದದ ಕಾಗದವೊಂದನ್ನು ಬರೆದು ಪುಸ್ತಕದ ಪ್ರತಿಯೊಡನೆ ಕಳಿಸಿಕೊಡುವ ಆಶ್ವಾಸನೆ ನೀಡುತ್ತೇನೆ.

ಏಪ್ರಿಲ್ ೨೦೦೩ — ವೈ. ಆರ್. ಮೋಹನ್

ಟಸ್ಕಲೂಸ

ಅಲಬಾಮಾ (ಯುಎಸ್ಎ)

ಕೃತಜ್ಞತೆಗಳು

- ಒಂದು ಸಾವಿರದ ಇನ್ನೂರು ಕೈಬರಹದ ಪುಟಗಳನ್ನು ಕಂಪ್ಯೂಟರ್‌ನಲ್ಲಿ ಬರಹ ಲಿಪಿಗೆ ಶ್ರದ್ಧೆಯಿಂದ ಪರಿವರ್ತಿಸಿ ವ್ಯವಸ್ಥಿತವಾಗಿ ಕರಡು ಪ್ರತಿ ತಯಾರಿಸಿಕೊಟ್ಟ ಡಾ. ಚಂದ್ರ ಮತ್ತು ಸುಜಾತ ಐತಾಳರಿಗೆ,

- ಈ ಪುಸ್ತಕವನ್ನು ಪ್ರಕಟಿಸಲು ಒಪ್ಪಿದ ಅಭಿನವದ ಗೆಳೆಯರಿಗೆ, ಮುಖಪುಟ ವಿನ್ಯಾಸ ಮಾಡಿದ ಬಿ. ದೇವರಾಜ್ ಅವರಿಗೆ, ಅಲ್ಪ ಸಮಯದಲ್ಲಿ ಮುದ್ರಿಸಿದ ಇಳಾ ಮುದ್ರಣ ಇವರಿಗೆ,

- ನನ್ನ ಯೋಗಕ್ಷೇಮ ವಿಚಾರಿಸಲು ಆಗಾಗ ಬರುವಾಗ ನನಗೆ ಇಷ್ಟವಾದ ತರತರದ ಭಕ್ಷ್ಯ ಭೋಜ್ಯಗಳನ್ನು ತಯಾರಿಸಿ ತಂದು, ಉಣಬಡಿಸಿ ತೃಪ್ತಿಪಡಿಸುವ ತಂಗಿ ಆಶಾ ಮತ್ತು ನನ್ನನ್ನು ಎಲ್ಲ ವಿಧದಲ್ಲಿ ಪ್ರೋತ್ಸಾಹಿಸಿ, ತಮ್ಮ ಸಹಾಯ ಹಸ್ತ ನೀಡಿ ಬೆಂಬಲಿಸುತ್ತ ಬಂದಿರುವ ಸಹೃದಯ ಬಂಧು ಡಾ. ರಾಮಪ್ರಸಾದರಿಗೆ,

- ನನ್ನ ಅಚ್ಚಾದ ಬರಹಗಳನ್ನೆಲ್ಲ ಬಿಡದೆ ಓದಿ ಮೆಚ್ಚುಗೆ ವ್ಯಕ್ತಪಡಿಸಿ ನಾನು ಅಮೆರಿಕಕ್ಕೆ ವಲಸೆ ಬಂದಾಗಿನಿಂದ ತಪ್ಪದೆ ಕಾಗದ ಬರೆಯುತ್ತಿರುವ ನನ್ನ ಅಚ್ಚು-ಮೆಚ್ಚಿನ ಗೀತಾಳಿಗೆ,

- ನಾನು ಅಮೆರಿಕ ಇತಿಹಾಸವನ್ನು ಕನ್ನಡ ಜನಸಾಮಾನ್ಯರಿಗೆ ಬರೆಯಬೇಕೆನ್ನುವ ಯೋಜನೆಯನ್ನು ತಿಳಿಸಿದಾಗ ನನ್ನನ್ನು ಪ್ರೋತ್ಸಾಹಿಸಿ ಕನ್ನಡದಲ್ಲಿ ಬರೆದ ಅಮೆರಿಕದ ಇತಿಹಾಸದ ಹಳೆಯ ಪಠ್ಯಪುಸ್ತಕಗಳನ್ನು ಒದಗಿಸಿ, ಕಾಲು ಶತಮಾನದಿಂದ ನನ್ನೊಡನೆ ಸಂಪರ್ಕ ಇಟ್ಟುಕೊಂಡು ನನ್ನ ಮನಸ್ಸನ್ನು ಉಲ್ಲಾಸಗೊಳಿಸುತ್ತ ಬಂದಿರುವ ಗೆಳೆಯ ಟಿ. ವೈ. ರಾಮಚಂದ್ರನಿಗೆ,

- ನನಗೆ ಬೇಕಾದ ಪುಸ್ತಕಗಳು, ಲೇಖನಗಳು, ಅಂಕಿ-ಅಂಶಗಳು — ಇತ್ಯಾದಿ ಎಲ್ಲವನ್ನೂ ಸಮಯಕ್ಕೆ ಸರಿಯಾಗಿ ಒದಗಿಸಿ ಸಹಕರಿಸಿದ ಅಲಬಾಮ ವಿಶ್ವವಿದ್ಯಾನಿಲಯದ ಲೈಬ್ರೇರಿಯನ್ ಮಂಗಳಾ ಕೃಷ್ಣಮೂರ್ತಿಯವರಿಗೆ,

- ನನ್ನ ಕಾಯಿಲೆ ಕಡು ಕಷ್ಟದ ಪರಿಸ್ಥಿತಿಯಲ್ಲಿ ನೆರವು ನೀಡಿದ ಸಂಜಯ-ಬಿಂದು ಮತ್ತು ಜಯದೀಪ್-ಸ್ಮಿತಾ ಅವರಿಗೆ

ಅಧ್ಯಾಯ ೧

ಅಮೆರಿಕದ ಭೌಗೋಳಿಕ ಲಕ್ಷಣಗಳು

ಯಾವುದೇ ದೇಶದ ಇತಿಹಾಸಕ್ಕೂ ಅಲ್ಲಿನ ಭೌಗೋಳಿಕ ಪರಿಸರಕ್ಕೂ ನಿಕಟವಾದ ಸಂಬಂಧವಿರುತ್ತದೆ. ಆದುದರಿಂದಲೇ ಭೂಗೋಳವನ್ನು ಚರಿತ್ರೆಯ ಒಂದು ಕಣ್ಣೆಂದು ಪರಿಚಯ ಮಾಡಿಕೊಳ್ಳುವುದು ಅವಶ್ಯಕ.

ಎಲ್ಲರಿಗೂ ತಿಳಿದಿರುವ ಹಾಗೆ ಅಮೆರಿಕಕ್ಕೆ ಬರುವವರೆಲ್ಲ ದೊಡ್ಡ ಪಟ್ಟಣಗಳು, ಹೆಸರುವಾಸಿಯಾದ, ಎಲ್ಲರೂ ನೋಡಿಬರುವಂತಹ ಜಾಗಗಳು, ಜೂಜಾಟದ ಕೇಂದ್ರಗಳು, ಡಿಸ್ನಿವರ್ಲ್ಡ್‌ನಂತಹ ಮನೋರಂಜನಾ ಸ್ಥಳಗಳು, ಸೂಪರ್ ಮಾರ್ಕೆಟ್‌ಗಳು, ಬೃಹದಾಕಾರದ ಮಾಲ್‌ಗಳು ಇಂಥ ಜಾಗಗಳನ್ನು ನೋಡಿ ಅಮೆರಿಕದಲ್ಲಿ ಎಲ್ಲಾ ನೋಡಿದ್ದಾಯಿತು ಎಂದು ತೃಪ್ತಿಪಟ್ಟುಕೊಳ್ಳುತ್ತಾರೆ. ಆದರೆ ನಿಜವಾದ ಅಮೆರಿಕ ನೋಡಬೇಕೆಂದರೆ ಅಲ್ಲಿನ ಪ್ರಕೃತಿಯ ನಾನಾ ರೂಪಗಳನ್ನು, ಪ್ರಾಂತದಿಂದ ಪ್ರಾಂತಕ್ಕೆ ಬದಲಾಗುವ ಹವಾಗುಣ, ಕಾಡು ಮೇಡುಗಳು, ಕೊನೆಯಿಲ್ಲದಂತೆ ಹರಡಿಕೊಂಡಿರುವ ಹುಲ್ಲುಗಾವಲುಗಳು, ವಿವಿಧ ರೀತಿಯ ಪ್ರಾಣಿಗಳು-ಪಕ್ಷಿಗಳು, ನದಿಗಳು-ಸರೋವರಗಳು ಗುಡ್ಡ ಬೆಟ್ಟಗಳು ಇವುಗಳನ್ನು ಕಂಡು ಅನುಭವಿಸಬೇಕು, ನೋಡಿ ಖುಷಿಪಡಬೇಕು.

ಈಗ ನಾವು ಅಮೆರಿಕ ಎಂದು ಕರೆಯುವ ಈ ಭೂಭಾಗ ಒಂದಾನೊಂದು ಕಾಲದಲ್ಲಿ ಹೆಸರಿಲ್ಲದ ಭೂಖಂಡವಾಗಿತ್ತು. ಯೂರೋಪಿನ ಜನ ನಾವು ಅಮೆರಿಕವನ್ನು 'ಕಂಡು ಹಿಡಿದೆವು' ಎಂದು ಜಂಬ ಕೊಚ್ಚಿಕೊಂಡರೂ ಅವರು ಬರುವುದಕ್ಕೆ ಮುಂಚೆಯೆ ಇಲ್ಲಿ ಜನ ವಾಸಮಾಡುತ್ತಿದ್ದರು. ಈ ಅಮೆರಿಕದ ಆದಿವಾಸಿಗಳಿಗೆ ತಾವು ಇದ್ದ ಜಾಗ ಬಿಟ್ಟು ಬೇರೆ ಭೂಭಾಗಗಳ ಬಗ್ಗೆ ಹೆಚ್ಚಿಗೆ ಗೊತ್ತಿರಲಿಲ್ಲ. ಇವರು ಎಲ್ಲಿಂದ ಬಂದರು ಎನ್ನುವುದು ಇನ್ನೂ ಖಚಿತವಾಗಿ ತಿಳಿದಿಲ್ಲ. ಆದಿವಾಸಿಗಳಿಗೂ ಗೊತ್ತಿಲ್ಲ. ಎಲ್ಲಿಂದ ಬಂದದ್ದು ಎಂದು ಕೇಳಿದರೆ ಒಂದೊಂದು ಬುಡಕಟ್ಟಿನವರು ಒಂದೊಂದು ಕತೆ ಹೇಳುತ್ತಾರೆ. ಕತೆಗಳು ಕೇಳುವುದಕ್ಕೆ ಚೆನ್ನಾಗಿದ್ದರೂ ಆಧಾರ ಇಲ್ಲದಿರುವುದರಿಂದ ನಂಬುವುದಕ್ಕಾಗುವುದಿಲ್ಲ.

ಒಂದು ಪಂಗಡದವರು ತಾವು ತಮ್ಮ ಸುತ್ತಲಿನ ಎಲ್ಲವೂ ಪ್ರಾಣಿ, ಪಕ್ಷಿ, ಗಿಡ, ಮರ ಪ್ರತಿಯೊಂದೂ ಆಕಾಶದಿಂದ ಬಂದಿದ್ದು ಎಂದು ನಂಬುತ್ತಾರೆ. ಮತ್ತೆ ಕೆಲವು ಪಂಗಡದವರು ತಂದೆ ಸೂರ್ಯ ಮತ್ತು ತಾಯಿ ನೆಲ ಇವರ ಕೂಡಿಕೆಯಿಂದಾದ

ಪವಾಡದಿಂದ ತಮ್ಮ ಪಂಗಡದವರು ಹುಟ್ಟಿದ್ದು ಎಂದು ಹೇಳುತ್ತಾರೆ. ನಮ್ಮ ಜಾನಪದ ಕತೆಗಳಂತೆ ಇವು ಬರಿ ಊಹಾಪೋಹಗಳು. ಪಶ್ಚಿಮ ಪ್ರಾಂತಗಳಲ್ಲಿರುವ ಆದಿವಾಸಿಗಳು ಪವಿತ್ರವೆಂದು ಪೂಜೆ ಮಾಡುವ 'ಕಿವ' ಎನ್ನುವ ಕಲ್ಲಿನ ಕಮರಿಯ ಆಳದಲ್ಲಿ 'ಸಿಪಾಪು' ಎಂಬ ಸುರಂಗದ ಮೂಲಕ ಭೂಗರ್ಭದಿಂದ ತಮ್ಮ ತಾತ ಮುತ್ತಾತಂದಿರು ಹೊರಬಂದರು ಎಂದು ಹೇಳುತ್ತಾರೆ. ಇವೆಲ್ಲ ನಂಬಿದರೆ ಉಂಟು, ಇಲ್ಲದೆ ಹೋದರೆ ಇಲ್ಲ. ವಿಜ್ಞಾನಿಗಳು ಹೇಳುವುದು ಈ ಆದಿವಾಸಿಗಳು ಸೈಬೀರಿಯಾ ಪ್ರದೇಶದಿಂದ ಅಲಾಸ್ಕಕ್ಕೆ ಬಂದು ಅಲ್ಲಿಂದ ಹಿಮಗಡ್ಡೆ ಸೇತುವೆ ಮೇಲೆ ಬೇರಿಂಗ್ ಜಲಸಂಧಿಯ ಮೂಲಕ ಈ ಭೂಖಂಡಕ್ಕೆ ಬಂದರು ಎಂದು. ಆದಿವಾಸಿಗಳು ಬಂದಮೇಲೆ ಹಿಮಕರಗಿ, ಭೂಖಂಡಗಳು ಬೇರೆಯಾಗಿ, ವಾಪಸ್ಸು ಹೋಗಲಾರದೆ ಇವರು ಹೊರಪ್ರಪಂಚದ ಸಂಪರ್ಕ ಕಡಿದುಕೊಂಡರು. ಹೀಗೆ ವಲಸೆ ಬಂದ ಆದಿವಾಸಿಗಳು ಈ ವಿಶಾಲ ಭೂಖಂಡದಲ್ಲಿ ಬೇರೆ ಬೇರೆ ಪಂಗಡಗಳಾಗಿ ವಿಭಾಗವಾಗಿ ಬೇರೆ ಬೇರೆ ಪ್ರಾಂತಗಳಲ್ಲಿ ನೆಲೆಸಿದರು. ಒಂದಾನೊಂದು ಕಾಲದಲ್ಲಿ ಈ ಭೂಖಂಡ ಹೇಗಿತ್ತು ಎಂದು ಊಹಿಸಿ ಕೊಂಡರೆ ಮನಸ್ಸು ಪುಳಕಿತಗೊಂಡು ಮೈ ರೋಮಾಂಚನಗೊಳ್ಳುತ್ತದೆ! ಆದಿವಾಸಿಗಳಿಗೆ ಕಾಲದ ಪರಿವೆ ಇರಲಿಲ್ಲ. ವಾರ, ತಿಂಗಳು ಮತ್ತು ವರ್ಷಗಳ ಲೆಕ್ಕಾಚಾರ ಗೊತ್ತಿರಲಿಲ್ಲ. ಕಾಲ, ನದಿನೀರು ಹರಿದ ಹಾಗೆ ಋತುಮಾನದ ಪ್ರಕಾರ ಬೇಸಿಗೆ, ಮಳೆಗಾಲ, ಹುಟ್ಟು ಮತ್ತು ಸಾವು ಎಲ್ಲ ಕಾಲಚಕ್ರ ಸುತ್ತಿದಂತೆ ಬಂದು ಹೋಗುತ್ತಿದ್ದವು. ಆದಿವಾಸಿಗಳಿಗೆ ತಮ್ಮ ತಮ್ಮ ಪಂಗಡಗಳ ಜನರನ್ನು ಬಿಟ್ಟು ತಾವು ನೆಲಸಿದ ಭೂಮಿಯ ಅಂಚಿನ ಆಚೆ ಬೇರೆ ನೆಲ, ಬೇರೆ ಜನ ಇರಬಹುದು ಎಂಬುದು ಗೊತ್ತೇ ಇರಲಿಲ್ಲ. ಅವರು ನೆಲಸಿದ ಭೂಖಂಡ ಎಷ್ಟು ವಿಶಾಲವಾಗಿತ್ತೆಂದರೆ ಅದರ ಉತ್ತರದ ಅಂಚು ಸದಾಕಾಲ ಹಿಮಗಡ್ಡೆ ಕಟ್ಟಿಕೊಂಡಿರುತ್ತಿದ್ದ, ಚರ್ಮ ಕೊರೆಯುವಂಥ ಶೀತದ ಗಾಳಿ ಬೀಸುವ ಆರ್ಕ್‌ಟಿಕ್ ಪ್ರದೇಶದವರೆಗೆ ಹಬ್ಬಿತ್ತು. ಅದರ ಪೂರ್ವ ಮತ್ತು ಪಶ್ಚಿಮ ತೀರಗಳನ್ನು ಮೇರೆಯಿಲ್ಲದ ಕಡಲು ತನ್ನ ತೆರೆಗಳಿಂದ ತೊಳೆಯುತ್ತಿತ್ತು. ತಲೆಕೆಳಗಾದ ತ್ರಿಕೋಣದ ಆಕಾರದಲ್ಲಿರುವ ಈ ಭೂಖಂಡದ ತಳಭಾಗ ಉತ್ತರಕ್ಕೆ ಹರಡಿಕೊಂಡಿದ್ದು ಅದರ ತಲೆ ದಕ್ಷಿಣದಲ್ಲಿ ಮತ್ತೊಂದು ತಲೆಕೆಳಗಾದ ತ್ರಿಕೋಣಾಕಾರದ ಭೂಖಂಡದ ತಳಭಾಗಕ್ಕೆ ಊರಿಕೊಂಡಿದೆ. ಈ ತ್ರಿಕೋಣಾಕಾರದ ದಕ್ಷಿಣ ಭೂಖಂಡದ ತಲೆ ದಕ್ಷಿಣ ಧ್ರುವದವರೆಗೂ ಚಾಚಿಕೊಂಡಿದೆ. ಈ ಭೂಖಂಡದ ರಚನೆ ಇತರ ಭೂಖಂಡಗಳಂತೆ ಸಾಮಾನ್ಯವಾಗಿದ್ದರೂ ಅದರ ಹರಹು ಅತ್ಯಂತ ವಿಶಾಲವಾದುದು. ಪೂರ್ವದಲ್ಲಿ ಕಿರಿದಾದ ಕಡಲತೀರದ ಸಮತಟ್ಟಾದ ನೆಲ, ಅದಾದ ಮೇಲೆ ದೊಡ್ಡ ಪಟ್ಟೆ ಎಳೆದಂತೆ ಹರಡಿಕೊಂಡಿರುವ ಸಮಶೀತೋಷ್ಣ ಪ್ರದೇಶ; ಅದರ ಪಕ್ಕದಲ್ಲಿ ಕೋಟೆಗೋಡೆಗಳಂತೆ ನಿಂತಿರುವ ಅಪಲೇಷಿಯನ್ ಪರ್ವತ ಸಾಲು. ಆದರಿಂದಾಚೆಗೆ ದೈತ್ಯಾಕಾರದ ಕಣಿವೆ, ಕಣಿವೆಯ ತಳದಲ್ಲಿ ಹರಿಯುವ ಮಿಸ್ಸಿಸ್ಸಿಪ್ಪಿ ನದಿ. ಈ ಕಣಿವೆಯ ಪ್ರದೇಶದ ಪಕ್ಕದಲ್ಲಿಯೇ ಕಾರ್ಡಿಲೆರಸ್ ಬೆಟ್ಟದ ಸಾಲುಗಳು.

ಪಶ್ಚಿಮಕ್ಕೆ ಸರಿದಂತೆ ನೆಲ ಇಳಿಜಾರಾಗಿ ಶಾಂತ ಸಾಗರದ ತೀರದಲ್ಲಿ ಕೊನೆಗೊಳ್ಳುತ್ತದೆ. ಪೂರ್ವ ಮತ್ತು ಪಶ್ಚಿಮ ತೀರಗಳ ನಡುವಿನ ಅಂತರ ಮೂರುಸಾವಿರ ಮೈಲಿಗಳು. ಈ ವಿಶಾಲ ಪ್ರದೇಶದ ೧/೩ ಭಾಗವನ್ನು ಮಧ್ಯದ ಬೃಹತ್ ಕಣಿವೆ ಆಕ್ರಮಿಸಿಕೊಂಡಿದೆ. ಮಾನವರ ವಾಸಕ್ಕೆ ಯೋಗ್ಯವಾದ ಇಷ್ಟು ವಿಶಾಲವಾದ ಪ್ರದೇಶ ಪ್ರಪಂಚದಲ್ಲಿ ಬೇರೆ ಎಲ್ಲೂ ಇಲ್ಲ.

ಒಂದಾನೊಂದು ಕಾಲದಲ್ಲಿ ಈ ಭೂಖಂಡದ ಒಂದು ಮಿಲಿಯನ್ ಮುನ್ನೂರು ಸಾವಿರ ಚದುರ ಮೈಲಿಗಳು (ಮಧ್ಯದ ಹುಲ್ಲುಗಾವಲು, ಪಶ್ಚಿಮದ ಪರ್ವತಗಳು ಮತ್ತು ನೈರುತ್ಯ ಪ್ರದೇಶದ ಬಂಜರು ಭೂಮಿಯನ್ನು ಬಿಟ್ಟು) ಅನಾದಿಕಾಲದ ಅತಿದಟ್ಟವಾದ ಅರಣ್ಯಗಳಿಂದ ಮುಚ್ಚಿಹೋಗಿದ್ದವು. ಆ ಅರಣ್ಯದಲ್ಲಿ ಮರಗಳ ದಟ್ಟಣೆ ಎಷ್ಟಿತ್ತೆಂದರೆ ಒಂದು ಅಳಿಲು ಕೊಂಬೆಯಿಂದ ಕೊಂಬೆಗೆ ಹಾರುತ್ತ ಒಂದು ಸಾವಿರ ಮೈಲಿ ಹೋದರೂ ಸೂರ್ಯನ ಬೆಳಕು ಬಿದ್ದ ನೆಲ ಕಾಣುವುದು ದುಸ್ಸಾಧ್ಯವಾಗಿತ್ತು! ಈ ಭೂಖಂಡದ ಉತ್ತರದಲ್ಲಿ ಮಹಾ ಸರೋವರಗಳಿವೆ. ಅವು ಎಷ್ಟು ವಿಶಾಲವಾದುವೆಂದರೆ ಒಂದು ನೂರು ಸಾವಿರ ಚದುರ ಮೈಲಿ ಪ್ರದೇಶವನ್ನು ಆಕ್ರಮಿಸಿಕೊಂಡು ಪ್ರಪಂಚದ ಒಟ್ಟು ಸಿಹಿನೀರಿನ ಪ್ರಮಾಣದಲ್ಲಿ ಅರ್ಧದಷ್ಟು ನೀರನ್ನು ಶೇಖರಿಸಿಕೊಂಡಿವೆ! ಮೇಲೆ ತಿಳಿಸಿರುವ ಮಹಾ ಸರೋವರಗಳಲ್ಲಿ ಮೊದಲಿನ ನಾಲ್ಕು ಸರೋವರಗಳ ನೀರು ಕೊನೆಯ ಸರೋವರಕ್ಕೆ ಧುಮುಕುವಲ್ಲಿ ಉಂಟಾದ ಜಲಪಾತದ ಪಾತ್ರ ಒಂದು ಮೈಲಿಗಿಂತಲೂ ಅಗಲವಾಗಿದೆ! ಈ ಭೂಖಂಡದ ಮಧ್ಯದ ಕಣಿವೆಯಲ್ಲಿ ಮಿಸ್ಸಿಸ್ಸಿಪ್ಪಿ ಮತ್ತು ಅದರ ಉಪನದಿಗಳು ಒದಗಿಸುವ ಅಗಾಧ ಪ್ರಮಾಣದ ನೀರು ಉತ್ತರದಿಂದ ದಕ್ಷಿಣಕ್ಕೆ ನಾಲ್ಕು ಸಾವಿರ ಮೈಲಿ ಹರಿದು ಸಾಗರ ಸೇರುತ್ತದೆ! ನಾವು ದೋಣಿಯಲ್ಲಿ ಕುಳಿತು ದಕ್ಷಿಣದಿಂದ ಪ್ರಯಾಣಿಸಿದರೆ ನೇರವಾಗಿ, ಎರಡು ಪಕ್ಕಗಳಲ್ಲಿ ಹರಿದೋಡುವಂತೆ ಕಾಣುವ ಹುಲ್ಲುಗಾವಲು ಮತ್ತು ಮೈದಾನ ಪ್ರದೇಶಗಳನ್ನು ದಾಟಿ, ಕೊಲ್ಲಿ ಪ್ರದೇಶದ ಸಹಿಸಲಾರದ ಶೆಕೆಯಿಂದ ಪಾರಾಗಿ, ಎರಡು ಸಾವಿರ ಮೈಲಿ ದೂರದ ತಣ್ಣನೆಯ ಉತ್ತರ ಪ್ರಾಂತವನ್ನು ಸೇರಬಹುದು. ಈ ಬೃಹತ್ ಕಣಿವೆ ಕ್ರಮೇಣ ಉಬ್ಬುತ್ತ ಹೋಗಿ ಪಶ್ಚಿಮ ತೀರದ ಸಮುದ್ರಮಟ್ಟಕ್ಕಿಂತ ಐದು ಸಾವಿರ ಅಡಿಗಳಷ್ಟು ಎತ್ತರದ ಸಮತಟ್ಟು ಪ್ರದೇಶವಾಗಿ ಪರಿವರ್ತನೆಗೊಳ್ಳುತ್ತದೆ. ಅಲ್ಲಿ ಅದು ಪಶ್ಚಿಮದ ಪರ್ವತ ಸಾಲುಗಳಿಂದ ಆವೃತಗೊಳ್ಳುತ್ತದೆ. ಈ ಕೆಲವು ಪರ್ವತಗಳ ಶಿಖರಗಳು ಹದಿನಾಲ್ಕು ಸಾವಿರ ಅಡಿಗಳಿಗಿಂತಲೂ ಎತ್ತರವಾಗಿದ್ದು ಕೇವಲ ಕೆಲವು ಜಾಗಗಳಲ್ಲಿ ಮಾತ್ರ ಮನುಷ್ಯರು ನಡೆದಾಡಬಹುದಾಗಿದೆ. ನೀರು ನಿಂತು ನಿಧಾನವಾಗಿ ಹರಿಯುವ ಜೌಗು ಪ್ರದೇಶದ ಪಶ್ಚಿಮದಲ್ಲಿ ಕೊಲರಾಡೊ ನದಿ ನೆಲವನ್ನು ಕೊಚ್ಚಿ ಕೊರೆದುಕೊಂಡು ಹೋಗಿ ಕಿರಿದಾದ ಕ್ಯಾಲಿಫೋರ್ನಿಯಾ ಕೊಲ್ಲಿಯನ್ನು ಸೇರುತ್ತದೆ. ಈ ನದಿ ಕೊಚ್ಚಿ ಕೊರೆದು ಉಂಟಾದ (canyons) ಪ್ರಪಾತ/ ಕಂದರಗಳಲ್ಲಿ ಒಂದು, ಇಪ್ಪತ್ತು ಮೈಲಿ ಅಗಲವಾಗಿಯೂ, ಮುನ್ನೂರು ಮೈಲಿ

ಉದ್ದವಾಗಿಯೂ ಮತ್ತು ಸರಾಸರಿ ಒಂದು ಮೈಲಿ ಆಳವಾಗಿಯೂ ಇದ್ದು, ಪ್ರಪಂಚದ ನೈಸರ್ಗಿಕ ಕೌತುಕಗಳಲ್ಲಿ ಒಂದಾಗಿದೆ. ವಿಜ್ಞಾನಿಗಳು ಇದನ್ನು ಪ್ರಕೃತಿ ನಿರ್ಮಿಸಿದ ಅದ್ಭುತ ಭೂಗರ್ಭ ಪ್ರದರ್ಶನ ಎಂದು ಹೇಳುತ್ತಾರೆ.

ಶಾಂತ ಸಮುದ್ರ ತೀರದ ಮೈದಾನ ಪ್ರದೇಶಗಳಲ್ಲಿ ಅದ್ಭುತಗಾತ್ರದ ಮರಗಳು ಇನ್ನೂರು ಅಡಿಗಳಿಗಿಂತಲೂ ಎತ್ತರವಾಗಿ ಬೆಳೆಯುತ್ತವೆ. ಈ ಕಾಡಿನಲ್ಲಿರುವ ಒಂದು ಹೆಮ್ಮರದ ಬೊಡ್ಡೆಯ ಸುತ್ತಳತೆ ತೊಂಬತ್ತಮೂರು ಅಡಿಗಳು. ಈ ಮರಕ್ಕೆ ನಾಲ್ಕುಸಾವಿರ ವರ್ಷಗಳಾಗಿವೆ ಎಂದು ವಿಜ್ಞಾನಿಗಳು ನಿರ್ಧರಿಸಿದ್ದಾರೆ. ಈ ಹೆಮ್ಮರ ಭೂಮಿಯ ಎಲ್ಲ ಪ್ರಾಣಿಗಳಿಗಿಂತ ಅತ್ಯಂತ ಪುರಾತನವಾದುದು. ಇಂಥ ವಿಶಾಲವಾದ ದೇಶದಲ್ಲಿ ಪ್ರಾದೇಶಿಕ ಗುಡ್ಡ ಬೆಟ್ಟಗಳು ದಟ್ಟವಾದ ಕಾಡುಗಳಿಂದ ಮುಚ್ಚಿಹೋಗಿವೆ. ಈ ಕಾಡುಗಳ ನಡುವೆ ಅಲ್ಲಲ್ಲಿ ಕಾಣುವ ವಿಶಾಲವಾದ ಕನ್ನಡಿಗಳಂತೆ ಹೊಳೆಯುವ ಒಂದು ಸಾವಿರ ಸರೋವರ ಗಳು ಇವೆ. ಇದಕ್ಕೆ ವ್ಯತಿರಿಕ್ತವಾಗಿರುವುದು ನೀರಿಲ್ಲದ, ಅಲ್ಲಿ ಇಲ್ಲಿ ಅಪರೂಪಕ್ಕೆ ಸಿಗುವ ಕ್ಯಾಕ್ಟಸ್ ಕಳ್ಳಿಯ ಗುಂಪುಗಳಿಂದ ಕೂಡಿದ ನೈರುತ್ಯದ ಮರಳುಗಾಡು ಪ್ರದೇಶ. ಇವುಗಳಿಗೆಲ್ಲ ವ್ಯತಿರಿಕ್ತವಾಗಿರುವುದು ಆಗ್ನೇಯ ಪ್ರದೇಶ. ಅಲ್ಲಿಯ ಗಾಳಿಯಲ್ಲಿ ತೇವಾಂಶ ಹೆಚ್ಚಾಗಿರುವುದರಿಂದ ವಿಪರೀತ ಶೆಕೆ. ಕೆಸರು ನೀರಿನ ಜೌಗು ಪ್ರದೇಶಗಳಲ್ಲಿ ಸೊಳ್ಳೆ, ಹಾವು ಮತ್ತು ಇತರ ವಿಷ ಜಂತುಗಳ ಕಾಟ. ಈ ಪ್ರದೇಶ ಕಡಲ ಮಟ್ಟಕ್ಕಿಂತ ಕೆಳಗಿರುವುದರಿಂದ ಇಲ್ಲಿ ಪೈನ್ ಮರಗಳಲ್ಲದೆ ಬೇರೆ ಸಸ್ಯಗಳು ಬೆಳೆಯಲಾರವು. ಇದು ಒಂದು ರೀತಿಯ ಬಂಜರುಭೂಮಿ ಎನ್ನಲು ಅಡ್ಡಿಯಿಲ್ಲ. ಮೇಲೆ ತಿಳಿಸಿದ ಎಲ್ಲ ಪ್ರದೇಶಗಳಿಗಿಂತ ತೀರಾ ಭಿನ್ನವಾಗಿರುವುದು ವಾಯುವ್ಯ ಪ್ರದೇಶ. ಇದು ಹಾರಿ ಮೊರೆದು, ಜಾರಿ ಹರಿವ ಝರಿಗಳಿಂದ, ಹಿಮಾಚ್ಛಾದಿತ ಪರ್ವತಗಳಿಂದ ಮತ್ತು ಪಶ್ಚಿಮದ ನೀಲ ಶಾಂತ ಸಾಗರದವರೆಗೂ ಚಾಚಿಕೊಂಡಿರುವ ಗುಡ್ಡಗಾಡುಗಳಿಂದ ಕೂಡಿ ರಮಣೀಯ ವಾಗಿದೆ.

ಇವುಗಳಲ್ಲದೆ ಪಶ್ಚಿಮದಲ್ಲಿ ದಿಗಂತದವರೆಗೆ ಮೈಚಾಚಿರುವ ಮೈದಾನಗಳು ಮತ್ತು ಬಂಜರಾದ, ದುರ್ಗಮವಾದ ಪರ್ವತಗಳ ಕೊನೆಯಿಲ್ಲದ ಸಂಕೀರ್ಣ ಸಾಲುಗಳನ್ನು ನಾವು ನೋಡಬಹುದು. ಈ ಭೂಖಂಡದ ವೈಪರೀತ್ಯಗಳಿಗೆ ಮಿತಿಯಿಲ್ಲ. ಕಡಲ ಮಟ್ಟಕ್ಕಿಂತ ಕೆಳಗಿರುವ ಕೊಲ್ಲಿ ಪ್ರದೇಶಗಳಲ್ಲಿ ಬೀಸುವ ಗಾಳಿಯಲ್ಲಿ ತೇವಾಂಶ ಹೆಚ್ಚಾಗಿರುವುದರಿಂದ ಅಲ್ಲಿ ಉಷ್ಣ ವಲಯದ ಶೆಖೆಯ ಹವಾಮಾನ ಅನುಭವಿಸುತ್ತೇವೆ. ಪಶ್ಚಿಮದ ಪ್ರಸ್ಥಭೂಮಿಯ ಮೇಲೆ ತೇವಾಂಶ ಇಲ್ಲದ ಒಣಗಾಳಿ ಬೀಸಿ ಹವಾಮಾನ ಹಿತಕರವಾಗಿರುತ್ತದೆ. ಮೇಯ್ನ್ (Maine) ಪ್ರಾಂತದಲ್ಲಿ ತೀಕ್ಷ್ಣವಾದ ಛಳಿಗಾಳಿ ಮತ್ತು ಹೇರಳವಾದ ಹಿಮಸುರಿಯುವ ದೀರ್ಘವಾದ ಛಳಿಗಾಲವನ್ನು ಅನುಭವಿಸಬೇಕಾಗುತ್ತದೆ. ಭೂಖಂಡದ ಮಧ್ಯದ ಕಣಿವೆ ಮತ್ತು ಉತ್ತರ ಪ್ರಾಂತಗಳು ಛಳಿಗಾಲದಲ್ಲಿ ಹಿಮದ ಬಿರುಗಾಳಿ ಬೀಸಿ ಬಹುಭಾಗಗಳು ಹಿಮಪಾತದಡಿಯಲ್ಲಿ ಹುದುಗಿ ಹೋಗುವ ಸಂಭವವಿದೆ.

ಈ ರೀತಿಯ ಹವಾಮಾನದ ವೈಪರೀತ್ಯಗಳನ್ನು ಮತ್ತು ಋತುಮಾನದ ಬದಲಾವಣೆಗಳನ್ನು ನಾವು ಅಮೆರಿಕದಲ್ಲಿ ಕಂಡು ಅನುಭವಿಸಬಹುದು.

ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ನೂರಾರು ಮೈಲಿಗಳ ದೂರ. ಮೇಲಾಗಿ, ಪರ್ವತ ಸಾಲುಗಳು ಉತ್ತರದಿಂದ ದಕ್ಷಿಣದ ಕಡೆಗೆ ಹಬ್ಬಿರುವುದರಿಂದ ಎಲ್ಲ ಪ್ರಾಂತಗಳ ಹವಾಗುಣದಲ್ಲಿ ತೀವ್ರ ಬದಲಾವಣೆಗಳು, ವಿಶಿಷ್ಟವಾಗಿ ಅಟ್ಲಾಂಟಿಕ್ ಸಾಗರ ತೀರ ಪ್ರದೇಶದ ಉದ್ದಕ್ಕೂ ಹೆಚ್ಚಾಗಿ ಉಂಟಾಗುತ್ತವೆ. ದೇಶದ ಮಧ್ಯದಲ್ಲಿರುವ ಕಣಿವೆ ಪ್ರದೇಶದ ಮೇಲೆ ಉತ್ತರದ ಆರ್ಕಟಿಕ್ ಪ್ರದೇಶದಿಂದ ಮೈಯನ್ನು ಮರಗಟ್ಟಿಸುವಂತಹ ಶೀತಗಾಳಿ ಯಾವ ಅಡೆತಡೆಯಿಲ್ಲದೆ ಬೀಸುತ್ತದೆ. ಅದರಂತೆಯೆ ಭೂಮಧ್ಯ ರೇಖೆಯಿಂದ ಬೀಸುವ ಗಾಳಿ ಯಾವ ತಡೆಯೂ ಇಲ್ಲದೆ ಕಣಿವೆ ಪ್ರದೇಶದ ಮೇಲೆ ಬೀಸುತ್ತದೆ. ಆದ್ದರಿಂದ ಚಳಿಗಾಲದಲ್ಲಿ ತೀರ ದಕ್ಷಿಣ ಪ್ರದೇಶಗಳಲ್ಲಿ ಕೂಡ ವಿಪರೀತ ಛಳಿಯಿಂದಾಗಿ ನೀರು ಹೆಪ್ಪುಗಟ್ಟುತ್ತದೆ; ಬೇಸಿಗೆಯಲ್ಲಿ ತೀರ ಉತ್ತರ ಪ್ರಾಂತಗಳು ಕೂಡ ಬಿಸಿಲಿನ ಝಳದಲ್ಲಿ ಬಸವಳಿಯುತ್ತವೆ. ಹೀಗೆ ಎಲ್ಲ ರೀತಿಯಿಂದಲೂ ಈ ದೇಶ ತೀವ್ರ ವ್ಯತ್ಯಾಸಗಳಿಂದ ಕೂಡಿ ರಹಸ್ಯಮಯವಾಗಿದೆ; ಪ್ರಕೃತಿಯು ತದ್ವಿರುದ್ಧ ಶಕ್ತಿಗಳ ಆಡುದಾಣವಾಗಿದೆ.

ಅಮೆರಿಕದ ಭೂಮಿಯ ಅಡಿಯಲ್ಲಿ ಹುದುಗಿದ್ದ ಬೆಳ್ಳಿ, ಬಂಗಾರ, ತಾಮ್ರ, ತೈಲ ಮುಂತಾದ ಅತುಲ ಐಶ್ವರ್ಯದ ರಾಶಿ ಆದಿವಾಸಿಗಳಿಗೆ ಗೊತ್ತಿರಲಿಲ್ಲ. ಅವರಿಗೆ ಅದರ ಅವಶ್ಯಕತೆಯೂ ಇರಲಿಲ್ಲ. ಬೇಟೆಗಾರರಾಗಿದ್ದ ಅವರಿಗೆ ಅತಿ ಮುಖ್ಯವಾಗಿದ್ದು ದೆಂದರೆ – ಮೇರೆಯಿಲ್ಲದ ಹುಲ್ಲುಗಾವಲಿನಲ್ಲಿ ಹಿಂಡುಹಿಂಡಾಗಿ ಅಲೆಯುತ್ತಿದ್ದ ಮಿಲಿಯನ್‌ಗಟ್ಟಲೆ ಕಾಡುಕೋಣಗಳು, ವಿವಿಧ ಜಾತಿಯ ಮೃದುರೋಮ ಚರ್ಮ (Fur) ಹೊಂದಿರುವ ಪ್ರಾಣಿಗಳು, ಹಗಲನ್ನು ಕತ್ತಲೆಗೊಳಿಸುವಷ್ಟು ಆಕಾಶದ ಅಗಲಕ್ಕೆ ಹರಡಿಕೊಂಡು ಹಾರಾಡುವ ಅಸಂಖ್ಯಾತ ಕಾಡುಪಾರಿವಾಳಗಳು, ನದಿಗಳಲ್ಲಿ ಮತ್ತು ಸರೋವರಗಳಲ್ಲಿ ಸಮೃದ್ಧವಾಗಿ ದೊರೆಯುತ್ತಿದ್ದ ಮೀನುಗಳು. ಹೀಗೆ ಅವರು ಉನ್ನತ ಮಟ್ಟದ ನಾಗರಿಕತೆಯನ್ನು ಬೆಳೆಸದೆ, ನಿಸರ್ಗದ ಮಕ್ಕಳಾಗಿ ಉಳಿದರು. ಅಮೆರಿಕದ ಪ್ರಕೃತಿಯ ಮಿತಿಯಿಲ್ಲದ ವೈವಿಧ್ಯ, ಹವಾಮಾನದಲ್ಲಿ ಹಠಾತ್ತಾಗಿ ಉಂಟಾಗುವ ತೀವ್ರ ಬದಲಾವಣೆಗಳು ಮತ್ತು ಪ್ರಕೃತಿಯ ತದ್ವಿರುದ್ಧ ಶಕ್ತಿಗಳು ಅನೇಕ ಶತಮಾನಗಳ ನಂತರ ಇಂಗ್ಲೆಂಡಿನಿಂದ ಮತ್ತು ಪ್ರಪಂಚದ ನಾನಾ ಭಾಗಗಳಿಂದ ವಲಸೆ ಬಂದು ನೆಲಸಿದವರ ಮೇಲೆ ತೀವ್ರತರವಾದ ಪ್ರಭಾವ ಬೀರಿ ಅವರ ಚಾರಿತ್ರ್ಯವನ್ನು ರೂಪಿಸಲು ಕಾರಣವಾಗಿವೆ. ಈಗ ನಾವು ವಸಾಹತುಗಳು ಸ್ಥಾಪನೆಯಾದ ರೀತಿ ನೀತಿಗಳು, ಅವುಗಳಿಗಿದ್ದ ಐತಿಹಾಸಿಕ ಹಿನ್ನೆಲೆ ಹಾಗೂ ವಸಾಹತು ಕಾಲದ ಜೀವನದ ವಿವಿಧ ಮುಖಗಳನ್ನು ಮುಂದಿನ ಅಧ್ಯಾಯದಲ್ಲಿ ಪರಿಚಯ ಮಾಡಿಕೊಳ್ಳಬಹುದು.

❑

ಅಧ್ಯಾಯ ೨

ವಸಾಹತುಗಳ ಕಾಲ

ಭೌಗೋಳಿಕ ಅನ್ವೇಷಣೆ ಮತ್ತು ವಸಾಹತುಗಳ ಸ್ಥಾಪನೆ :

ಶತಮಾನ : ಹದಿನೈದನೆಯ ಶತಮಾನ

ಇಸವಿ : ೧೪೯೨

ತಿಂಗಳು : ಅಕ್ಟೋಬರ್

ತಾರೀಖು : ಹನ್ನೆರಡನೆಯ ತಾರೀಖು

ಕಾಲ : ಬೆಳಗಿನ ಜಾವ ಸುಮಾರು ಎರಡು ಘಂಟೆ ಇರಬಹುದು.

ನಡೆದ ಸಂಗತಿ:

ಆ ಬೆಳ್ದಿಂಗಳ ರಾತ್ರಿಯಲ್ಲಿ ಮೇರೆಯಿಲ್ಲದ ಕಡಲ ತೆರೆಗಳ ಮೇಲೆ ಒಂದು ಪುಟ್ಟ ಹಡಗು ತೇಲಿಹೋಗುತ್ತಿತ್ತು. ಸುತ್ತ ಮುತ್ತ ಎತ್ತೆತ್ತಲೂ ಜಲ. ಹಡಗಿನ ಧ್ವಜಸ್ತಂಭದಿಂದ ಹಾರಾಡುತ್ತಿದ್ದ ಬಾವುಟದಿಂದ ಮತ್ತು ಹಡಗಿನ ಎರಡು ಪಕ್ಕಗಳಲ್ಲಿ ಕೆತ್ತಿದ್ದ ಚಿಹ್ನೆಗಳಿಂದ ಅದು ಸ್ಪೇನ್ ದೇಶದ ಹಡಗು ಎಂದು ಸುಲಭವಾಗಿ ಗುರುತಿಸಬಹುದಿತ್ತು. ಸ್ಪೇನ್ ದೇಶದಿಂದ ಹೊರಟ ಹಡಗು ನೇರ ಪಶ್ಚಿಮ ದಿಕ್ಕಿಗೆ ಪ್ರಯಾಣ ಮಾಡಿ ಮೂರು ಸಾವಿರ ಮೈಲಿ ಬಂದಿತ್ತು. ಹಡಗಿನ ನಾವಿಕರು ಮೂವತ್ತುಮೂರು ದಿನಗಳು ಸತತವಾಗಿ ಪ್ರಯಾಣ ಮಾಡಿ ನೆಲಕಾಣದೆ ಕಂಗಾಲಾಗಿದ್ದರು.

ಹಡಗಿನ ಕೂವೆಯ ತುದಿಯಲ್ಲಿ ನಿಂತು ಕಾವಲು ಕಾಯುತ್ತಿದ್ದ ನಾವಿಕನಿಗೆ ದೂರದಲ್ಲಿ ಬೆಳ್ದಿಂಗಳಲ್ಲಿ ಹೊಳೆಯುತ್ತಿದ್ದ ಮರಳಿನ ತೀರ ಕಾಣಿಸಿತು. ನಾವಿಕನ ಸಂತೋಷಕ್ಕೆ ಪಾರವಿಲ್ಲದಂತಾಗಿ ತನ್ನ ಶಕ್ತಿ ಮೀರಿ 'ನೆಲ! ನೆಲ!' ಎಂದು ಕೂಗತೊಡಗಿದ.

ನಿದ್ದೆಯಿಂದ ಎಚ್ಚರಗೊಂಡು ನಾವಿಕರು ಕಣ್ಣುಜ್ಜಿಕೊಳ್ಳುತ್ತ ಹೋಗಿ ಹಡಗಿನ ಕಟ್ಟಣೆ ಹಿಡಿದು ನಿಂತು ತಮ್ಮ ಕಡೆಗೆ ಬರುತ್ತಿದ್ದ ದ್ವೀಪದ ಮರಳ ತೀರವನ್ನು ಆಶ್ಚರ್ಯದಿಂದ ನೋಡುತ್ತ ಆನಂದಪಟ್ಟರು. ಹಡಗು ತೀರವನ್ನು ತಲುಪಿ ನಿಂತಾಗ ನಾಯಕ ಕ್ರಿಸ್ಟೋಫರ್ ಕೊಲಂಬಸ್ ಸ್ಪೇನ್ ದೇಶದ ಧ್ವಜವನ್ನು ದಡದ ಮೇಲೆ ನೆಟ್ಟು ಆ ದ್ವೀಪಕ್ಕೆ 'ಸಾನ್‌ಸಾಲ್ವಡೋರ್' ಎಂದು ಹೆಸರಿಟ್ಟ. ಕೊಲಂಬಸ್‌ಗೆ ನಿಜವಾಗಿ ತಾವು ಎಲ್ಲಿಗೆ

ಬಂದಿದ್ದೇವೆ ಎನ್ನುವುದು ತಿಳಿಯಲಿಲ್ಲ. ವಾಸ್ತವಾಗಿ ಅವನು ತಲುಪಿದ್ದು ಪಶ್ಚಿಮ ಇಂಡೀಸ್‌ನ ದ್ವೀಪವನ್ನು. ತನ್ನ ಈ ಅನ್ವೇಷಣೆ ಪಶ್ಚಿಮ ನಾಗರಿಕತೆಯಲ್ಲಿ ಒಂದು ಮಹತ್ತಾದ ಘಟನೆ ಎನ್ನುವುದೂ ಅವನಿಗೆ ಅರಿವಾಗಲಿಲ್ಲ.

ಸಾನ್‌ಸಾಲ್ವಡೋರ್ ಎರಡು ಭೂಖಂಡಗಳಿಗೆ ಹೆಬ್ಬಾಗಿಲು ಎನ್ನುವುದು ಕೂಡ ಕೊಲಂಬಸ್‌ಗೆ ಹೊಳೆಯದೆ ಹೋಯಿತು. ನಿಜ ಸಂಗತಿಯನ್ನು ತಿಳಿಯಲು ಅವನು ನಿರಾಕರಿಸಿದ. ಅವನಿಗೆ ತಿಳಿಯದಂತೆ, ಅವನ ಚರಿತ್ರಾರ್ಹ ಸಮುದ್ರಯಾನ ಪಶ್ಚಿಮ ಯೂರೋಪಿಯನ್ನರಿಗೆ ಹೊಸದಾದ ಜನವಸತಿಯಿಲ್ಲದ, ಸಂಪದ್ಭರಿತ ಭೂಭಾಗಕ್ಕೆ ದಾರಿ ತೋರಿದಂತಾಯಿತು. ಆ ಕಾಲದಿಂದ ಯೂರೋಪಿನಿಂದ, ಅನಂತರ ಆಫ್ರಿಕಾ ಮತ್ತು ಇತರ ದೇಶಗಳಿಂದ ವಲಸೆಗಾರರು ತಂಡ ತಂಡವಾಗಿ ಈ ಹೊಸ ಪ್ರಪಂಚಕ್ಕೆ ವಲಸೆ ಬಂದು ನೆಲಸತೊಡಗಿದರು. (ಈ ವಲಸೆಯ ಪ್ರವಾಹ ಇಂದಿಗೂ ನಿಂತಿಲ್ಲ.)

ಕೊಲಂಬಸ್ ಒಬ್ಬ ಬುದ್ಧಿಶಾಲಿಯಾದ, ಹಿಡಿದ ಕೆಲಸವನ್ನು ಶ್ರದ್ಧೆಯಿಂದ ಮಾಡುವ ನಿಪುಣನಾದ ನಾವಿಕನಾಗಿದ್ದನು. ಇಂಥವನು ತಾನು ಕಂಡುಹಿಡಿದ 'ಹೊಸ ಪ್ರಪಂಚದ' ಮಹತ್ವವನ್ನು ತಿಳಿಯದೆಹೋಗಿದ್ದಕ್ಕೆ ಕಾರಣ ಅವನು ದೃಢವಾಗಿ ನಂಬಿದ್ದದ್ದು ಯೂರೋಪಿನಿಂದ ಪಶ್ಚಿಮ ದಿಕ್ಕಿಗೆ ನೇರವಾಗಿ ಸಮುದ್ರಯಾನ ಮಾಡಿದರೆ ಹಿಂದೆ, ಮಾರ್ಕೊ ಪೋಲೊ ವರ್ಣಿಸಿದ ಶ್ರೀಮಂತ ದೇಶಗಳಾದ ಇಂಡಿಯ, ಚೀನ ಮತ್ತು ಜಪಾನ್‌ಗಳನ್ನು ಖಂಡಿತವಾಗಿ ತಲುಪಬಹುದು ಎಂಬುದು. ಅವನು ಸಮುದ್ರಯಾನ ಹೊರಟಿದ್ದು ಹೊಸ ಪ್ರಪಂಚ ಹುಡುಕುವುದಕ್ಕಲ್ಲ. ಪೂರ್ವದ ಪ್ರಾಚೀನ ದೇಶಗಳಿಗೆ ಪಶ್ಚಿಮ ದಿಕ್ಕಿನಿಂದ ನೇರವಾದ ಸಮುದ್ರ ಮಾರ್ಗವನ್ನು ಕಂಡು ಹಿಡಿಯುವುದು ಅವನ ಗುರಿಯಾಗಿತ್ತು. ಆದ್ದರಿಂದ ಅವನು ತಾನು ತಲುಪಿರುವುದು ಇಂಡಿಯ ಎಂದುಕೊಂಡ. ಅಲ್ಲಿನ ಆದಿವಾಸಿಗಳನ್ನು 'ಇಂಡಿಯ'ನ್ನರೆಂದು ಕರೆದ.

ಪೂರ್ವದ ದೇಶಗಳಿಗೆ ಸಮುದ್ರ ಮಾರ್ಗ ಕಂಡು ಹಿಡಿಯುವ ಅಗತ್ಯ ಕೊಲಂಬಸ್‌ಗೆ ಮನದಟ್ಟಾಗಿತ್ತು. ಆ ಮಾರ್ಗದಿಂದ ವ್ಯಾಪಾರಕ್ಕೆ ಅಸಂಖ್ಯಾತ ಅವಕಾಶಗಳು ತೆರೆದುಕೊಳ್ಳುತ್ತವೆ ಎನ್ನುವುದು ಅವನಿಗೆ ತಿಳಿದಿತ್ತು. ವ್ಯಾಪಾರ ಹೆಚ್ಚುತ್ತ ಹೋದ ಹಾಗೆ ಮಿತಿಯಿಲ್ಲದ ಲಾಭ ಗಳಿಕೆ ಸಾಧ್ಯ ಎಂದು ಅವನು ಲೆಕ್ಕ ಹಾಕಿದ್ದ. ಪೂರ್ವ ದೇಶದ ಮೆಣಸು, ದಾಲ್ಚಿನ್ನಿ, ಶುಂಠಿ, ಜಾಯಿಕಾಯಿ ಮತ್ತು ಲವಂಗ ಮುಂತಾದ ಮಸಾಲೆ ಪದಾರ್ಥಗಳಿಗೆ ಯೂರೋಪಿನಲ್ಲಿ ಬಹಳ ಬೆಲೆ ಇತ್ತು. ಈ ಮಸಾಲೆ ಪದಾರ್ಥಗಳು ಮಾಂಸ ಮುಂತಾದ ಆಹಾರ ಪದಾರ್ಥಗಳು ಕೆಡದಂತೆ ಇಡಲು ಅಗತ್ಯವಾಗಿದ್ದವು. ಹೆಚ್ಚಿನ ಬೇಡಿಕೆ ಇದ್ದ ಇತರ ವಸ್ತುಗಳೆಂದರೆ ಕಚ್ಚಾರೇಶ್ಮೆ, ಹತ್ತಿ, ರತ್ನಕಂಬಳಿಗಳು, ಮಸ್ಲಿನ್ ಬಟ್ಟೆ ಇತ್ಯಾದಿಗಳು.

ಈ ವಸ್ತುಗಳು ಪಶ್ಚಿಮ ಯೂರೋಪಿಗೆ ಇಟಲಿಯ ನಗರ ಸಂಸ್ಥಾನಗಳ ಮೂಲಕ

ಸರಬರಾಜಾಗುತ್ತಿದ್ದವು. ಹನ್ನೊಂದನೆಯ ಶತಮಾನದಲ್ಲಿ ವೆನಿಸ್ ನಗರ ವೇಗವಾಗಿ ಬೆಳೆಯುತ್ತಿದ್ದ ದೊಡ್ಡ ವ್ಯಾಪಾರ ಕೇಂದ್ರವಾಗಿತ್ತು. ವೆನಿಸ್ ನಗರದ ವ್ಯಾಪಾರಿಗಳು ಆ ಕಾಲದ ಮಹಾನಗರವಾಗಿದ್ದ ಕಾನ್ಸ್‌ಟಂಟಿನೋಪೆಲ್‌ಗೆ ಆಹಾರ ಪದಾರ್ಥಗಳನ್ನು ದೊಡ್ಡ ಪ್ರಮಾಣದಲ್ಲಿ ರಫ್ತು ಮಾಡುತ್ತಿದ್ದರು. ಇದರೊಂದಿಗೆ ಈ ವ್ಯಾಪಾರಿಗಳು 'ಸ್ಲಾವ್' ಯುವಕರನ್ನು ಸೆರೆ ಹಿಡಿದು ಅಥವಾ ಹತ್ತಿರದ ಡಾಲ್ಮೇಷಿಯನ್ ತೀರ ಪ್ರದೇಶದಲ್ಲಿ ಹರಾಜಿನಲ್ಲಿ ಹಣ ಕೊಟ್ಟುಕೊಂಡು ಈಜಿಪ್ತ್ ಮತ್ತು ಸಿರಿಯಾ ದೊರೆಗಳ ಮತ್ತು ಧನಿಕರ ಅಂತಃಪುರಗಳಿಗೆ ಗುಲಾಮರಾಗಿ ಸರಬರಾಜು ಮಾಡುತ್ತಿದ್ದರು. ಇಂಗ್ಲಿಷ್ ಪದ 'Slave' ಮೊದಲಿನಲ್ಲಿ 'Slav' ನ ಸೂಚಕ ಪದವಾಗಿತ್ತು!

ವೆನಿಸ್ ವ್ಯಾಪಾರಿಗಳು ಪೂರ್ವದೇಶಗಳಿಂದ ಆಮದು ಮಾಡಿಕೊಂಡ ಪದಾರ್ಥಗಳನ್ನು ಪೂರ್ವ ಮತ್ತು ಪಶ್ಚಿಮ ಯೂರೋಪಿನ ದೇಶಗಳಿಗೆ ಸರಬರಾಜು ಮಾಡಿ ಲಾಭಗಳಿಸ ತೊಡಗಿದರು. ಇದು ಸ್ಥಳೀಯ ವರ್ತಕರನ್ನು ಎಚ್ಚರಗೊಳಿಸಿ ತಾವು ಉತ್ಪಾದಿಸುವ ವಸ್ತುಗಳನ್ನು – ಉಣ್ಣೆಯ ಬಟ್ಟೆಗಳು, ಮೃದುರೋಮದ ಚರ್ಮಗಳು, ಮರದ ದಿಮ್ಮಿಗಳು – ರಫ್ತು ಮಾಡುವ ದೃಷ್ಟಿಯಿಂದ ಅವುಗಳ ಉತ್ಪಾದನೆಯನ್ನು ಹೆಚ್ಚು ಮಾಡಿದರು. ಉತ್ಪಾದನೆ ಹೆಚ್ಚಿಸಲು ಕೈಗಾರಿಕೆಗಳ ಸಂಖ್ಯೆಯೂ, ಉತ್ಪಾದನೆ ಹೆಚ್ಚಿದಂತೆ ವಸ್ತುಗಳಿಗೆ ಬೇಡಿಕೆಯೂ ಹೆಚ್ಚುತ್ತಾ ಹೋಯಿತು. ಕೈಗಾರಿಕಾ ಕೇಂದ್ರಗಳಲ್ಲಿ ಕೆಲಸಗಾರರ ಸಂಖ್ಯೆ ಹೆಚ್ಚಿದಂತೆಲ್ಲ ಅವು ದೊಡ್ಡ ಪಟ್ಟಣಗಳಾಗಿ ಬೆಳೆದವು. ಪಟ್ಟಣಗಳಲ್ಲಿ ಜನಸಂಖ್ಯೆ ಜಾಸ್ತಿಯಾಗುತ್ತ ಹೋದ ಹಾಗೆ ಆಹಾರ ಸಾಮಗ್ರಿಗಳ ಬೇಡಿಕೆಯೂ ಹೆಚ್ಚುತ್ತ ಹೋಯಿತು. ಪೂರ್ವ ದೇಶದ ಸಂಬಾರ ಪದಾರ್ಥಗಳಿಗೆ ಬೇಡಿಕೆ ಹೆಚ್ಚಾದಂತೆ ಬೆಲೆ ದುಬಾರಿಯಾದರೂ ಬೇಡಿಕೆ ಕಡಿಮೆ ಆಗಲಿಲ್ಲ. ಆಗ ತಾನೆ ಕೊನೆಗೊಂಡ ಧರ್ಮಯುದ್ಧದಿಂದ ಹಿಂತಿರುಗಿ ಬಂದ ಸೈನಿಕರು ಪೂರ್ವದೇಶಗಳ ವಸ್ತುಗಳನ್ನು, ಪದಾರ್ಥಗಳನ್ನು ಹೇರಳವಾಗಿ ತಂದು ಜನರು ಆ ಪದಾರ್ಥಗಳ ಮೇಲೆ ಅವಲಂಬಿತರಾಗುವಂತೆ ಮಾಡಿದ್ದರು.

ಕಾಲಕ್ರಮೇಣ ಸಂಬಾರ ಪದಾರ್ಥಗಳನ್ನು ಪೂರ್ವದೇಶಗಳಿಂದ ಆಮದು ಮಾಡಿಕೊಳ್ಳುವುದು ಬಹಳ ದುಬಾರಿಯಾಗುತ್ತ ಹೋಯಿತು. ಪದಾರ್ಥಗಳನ್ನು ಸಾಗಿಸುವುದೇ ಕಷ್ಟವಾಯಿತು. ವರ್ತಕರು ಕಡಲುಗಳ್ಳರ ಮತ್ತು ಹೆದ್ದಾರಿಯ ದರೋಡೆಗಾರರ ದಾಳಿಗೆ ಸಿಕ್ಕು ತತ್ತರಿಸಿದರು. ಮೇಲಾಗಿ ದಾರಿ ಹಾಯ್ದು ಹೋಗುವ ಎಲ್ಲ ಪ್ರಾಂತಗಳಲ್ಲಿ ತೆರಿಗೆ ಕೊಡಬೇಕಾದುದರಿಂದ ಲಾಭ ಗಳಿಸುವುದು ದುಸ್ಸಾಧ್ಯವಾಯಿತು. ಕಾಲ ಕ್ರಮೇಣ ವರ್ತಕರು ಪೂರ್ವ ದೇಶಗಳಿಂದ ಪದಾರ್ಥಗಳನ್ನು ಕಡಿಮೆ ಬೆಲೆಗೆ ತರಿಸಿಕೊಳ್ಳಲು ಬೇರೆ ದಾರಿಗಳನ್ನು ಹುಡುಕತೊಡಗಿದರು.

ಪೂರ್ವ ದೇಶಗಳಿಗೆ ಹೊಸ ಸಮುದ್ರ ಮಾರ್ಗಗಳನ್ನು ಹುಡುಕುವ ಪ್ರಯತ್ನಗಳಿಗೆ

ಬೆಂಬಲ ಕೊಟ್ಟವನು ಪೋರ್ಚುಗಲ್‌ನ ರಾಜಕುಮಾರ ಹೆನ್ರಿ. ಆ ಕಾಲದಲ್ಲಿ ನೌಕಾವಿದ್ಯೆ ಬಹಳ ಹಿಂದುಳಿದಿತ್ತು. ಹಡಗುಗಳನ್ನು ಚಿಕ್ಕದಾಗಿ, ಒಡ್ಡೊಡ್ಡಾಗಿ ಕಟ್ಟುತ್ತಿದ್ದರು. ನಾವಿಕರು ಹಡಗನ್ನು ನಡೆಸಲು ಅಗತ್ಯವಾದ ಮಾಹಿತಿ ನೀಡುವ ದಿಕ್‌ಸೂಚಿ ಮುಂತಾದ ಉಪಕರಣಗಳು ಹಳೆಯದಾಗಿ, ಉಪಯೋಗಕ್ಕೆ ಬಾರದಂತಾಗಿದ್ದವು.

ಹೆನ್ರಿ ನೌಕಾ ವಿದ್ಯೆಯನ್ನು ಕ್ರೋಡೀಕರಿಸಿ ಉತ್ತಮಗೊಳಿಸಿದನು. ಅವನು ಸುಪ್ರಸಿದ್ಧ ಭೂಗೋಳ ಶಾಸ್ತ್ರಜ್ಞರನ್ನು, ಖಗೋಳ ಮತ್ತು ಗಣಿತ ಶಾಸ್ತ್ರ ಪರಿಣಿತರನ್ನು ತನ್ನ ಆಸ್ಥಾನಕ್ಕೆ ಕರೆತಂದು ಆಶ್ರಯ ನೀಡಿದನು. ಇದಲ್ಲದೆ ಅವನು ಒಂದು ಬಾಹ್ಯಾಕಾಶ ವೀಕ್ಷಣಾಲಯ ವನ್ನು ಕಟ್ಟಿಸಿದನು. ನೌಕಾ ವಿದ್ಯೆಯ ಮುಖ್ಯಾಂಶಗಳ ಕೋಷ್ಟಕ ಅವನ ಮೇಲ್ವಿಚಾರಣೆಯಲ್ಲಿ ತಯಾರಾಯಿತು. ಅವನು ನೇಮಿಸಿದ ನೌಕೆಗಳ ನಾಯಕರು ಸಮುದ್ರ ಪರ್ಯಟನೆ ಮಾಡಿ ಅಜ್ಹೋರ್ ದ್ವೀಪಗಳನ್ನು ಮತ್ತು ಕೆನರಿ ದ್ವೀಪಗಳನ್ನು ಪರಿಶೋಧನೆ ಮಾಡಿ, ಮುಂದುವರಿದು ಆಫ್ರಿಕ ಖಂಡದ ತೀರವನ್ನು ಅನುಸರಿಸಿ ದಕ್ಷಿಣಕ್ಕೆ ನಾವೆಯನ್ನು ನಡೆಸಿಕೊಂಡು ಹೋಗಿ 'ವರ್ಡೆ' ಭೂಶಿರವನ್ನು ತಲುಪಿದರು. ಹೆನ್ರಿ ಪ್ರಾರಂಭಿಸಿದ ನೌಕಾ ಪರ್ಯಟನೆಗಳನ್ನು ಅವನ ಕಾಲಾನಂತರ ಖಾಸಗಿ ವರ್ತಕರು ಮುಂದುವರಿಸಿಕೊಂಡು ಹೋದರು. ಪೋರ್ಚುಗೀಸರ ನೌಕೆಗಳು ದಕ್ಷಿಣ ದಿಕ್ಕಿನಲ್ಲಿ ಪರಿಶೋಧನೆ ಮುಂದುವರಿಸಿ ಆಫ್ರಿಕದ ತೀರವನ್ನು ಅನುಸರಿಸಿ ಹೋಗಿ ಭೂಮಧ್ಯ ರೇಖೆ ಮತ್ತು ಅಂಗೋಲ ಪ್ರದೇಶವನ್ನು ತಲುಪಿ ಅದರಿಂದ ಆಚೆಗೂ ಹೋಗಿ ಬಂದರು. ಈ ಎಲ್ಲ ಪರ್ಯಟನೆ ಗಳಿಂದ ಪೋರ್ಚುಗೀಸರಿಗೆ ಖಚಿತಪಟ್ಟ ಅಂಶವೆಂದರೆ ಆಫ್ರಿಕ ಖಂಡವನ್ನು ಬಳಸಿಕೊಂಡು ಹೋಗುವಂಥ ಸಮುದ್ರ ಮಾರ್ಗವನ್ನು ಕಂಡು ಹಿಡಿದರೆ ಅಲ್ಲಿಂದ ನೇರವಾಗಿ ಇಂಡಿಯ ಮತ್ತು ಸಂಬಾರ ದ್ವೀಪಗಳನ್ನು ತಲುಪುವುದು ಸುಲಭವಾಗುತ್ತದೆ ಎಂಬುದು. ಹಾಗೆ ತಲುಪಿದ ಮೇಲೆ ವ್ಯಾಪಾರ ವಿನಿಮಯದಿಂದ ಅಪಾರ ಲಾಭ ಗಳಿಸುವುದು ಖಂಡಿತ ಎಂದು ಅವರು ನಿರ್ಧರಿಸಿದರು. ಪೋರ್ಚುಗೀಸ್ ನಾವಿಕರು ಸಮುದ್ರ ಪರ್ಯಟನೆಯನ್ನು ಮುಂದುವರಿಸಿ ೧೪೮೮ರಲ್ಲಿ ಬಾರ್ತಲೋಮಿಯೊಡಿಯಾಸ್ ಎಂಬ ನಾವಿಕನು ಆಫ್ರಿಕದ ಗುಡ್‌ಹೋಪ್ ಭೂಶಿರವನ್ನು ಸುತ್ತುಹಾಕಿ ಬಂದನು. ೧೪೯೮ರಲ್ಲಿ ವಾಸ್ಕೋಡಗಾಮ ಅಲ್ಲಿಂದ ಇನ್ನೂ ಮುಂದಕ್ಕೆ ಪ್ರಯಾಣ ಬೆಳಸಿ ಇಂಡಿಯಾದ ಕಲ್ಲೀಕೋಟೆಯನ್ನು ತಲುಪಿದನು.

ಕ್ರಿಸ್ಟೋಫರ್ ಕೊಲಂಬಸ್

ಕ್ರಿಸ್ಟೋಫರ್ ಕೊಲಂಬಸ್ ಇಟಲಿಯ ಜನೋವ ಎಂಬ ಊರಿನಲ್ಲಿ ೧೪೫೧ರಲ್ಲಿ ಹುಟ್ಟಿದನು. ಅವನ ತಂದೆ ನೇಯ್ಗೆಕಾರನಾಗಿದ್ದನು. ಕೊಲಂಬಸ್ ಚಿಕ್ಕಂದಿನಲ್ಲಿಯೆ ಸಮುದ್ರ ಪರ್ಯಟನೆ ಪ್ರಾರಂಭಿಸಿದನು. ಶಾಲೆಯಲ್ಲಿ ಕಲಿತಿದ್ದಕ್ಕಿಂತಲೂ ಹೆಚ್ಚಿಗೆ ತಾನೇ ಸ್ವತಃ ಕಷ್ಟಪಟ್ಟು ಓದಿ ಭೂಗೋಳ, ನೌಕಾವಿದ್ಯೆ ಮತ್ತು ಲ್ಯಾಟಿನ್ ಭಾಷೆಗಳನ್ನು ಕಲಿತನು.

ಅವನು ೧೪೭೬ರಲ್ಲಿ ಪೋರ್ಚುಗಲ್ ದೇಶಕ್ಕೆ ವಲಸೆ ಹೋಗಿ, ಮೆಡೈರಾ ಊರಿನ ಹುಡುಗಿಯನ್ನು ಮದುವೆಯಾಗಿ, ಅಲ್ಲಿಯೇ ಕೆಲವು ಕಾಲ ನೆಲೆನಿಂತನು. ೧೪೮೦ರ ದಶಕದಲ್ಲಿ ಕೊಲಂಬಸ್ ಬಹಳ ಆಸಕ್ತಿಯಿಂದ ಪಶ್ಚಿಮದಿಂದ ಸಮುದ್ರಯಾನ ಮಾಡಿ ಪೂರ್ವ ದಿಕ್ಕಿನ ದೇಶಗಳನ್ನು ತಲುಪುವ ಯೋಜನೆಯನ್ನು ಸಿದ್ಧಗೊಳಿಸಿದನು. ಪಶ್ಚಿಮದಿಂದ ಹೊರಟು ಪೂರ್ವವನ್ನು ತಲುಪುವ ಗೀಳು ಹಿಡಿದು ಅದರ ಆಲೋಚನೆಯಲ್ಲಿ ಪರವಶನಾದನು. ಅಷ್ಟರಲ್ಲಿ ಪೋರ್ಚುಗಲ್ ಆಫ್ರಿಕಾ ಖಂಡದ ಪರಿಶೋಧನೆಯಲ್ಲಿ ತೊಡಗಿದ್ದರಿಂದ ಕೊಲಂಬಸ್‌ನ ಯೋಜನೆಯನ್ನು ಪರಿಗಣಿಸಲಿಲ್ಲ. ಬೇರೆ ಯಾವ ದೇಶಗಳೂ ಅವನಿಗೆ ಹಣ ಸಹಾಯ ಮಾಡಲು ಮುಂದೆ ಬರಲಿಲ್ಲ. ಹತಾಶನಾದ ಕೊಲಂಬಸ್ ಕಡೆಯಲ್ಲಿ ಸ್ಪೇನಿನ ರಾಣಿ ಇಸಬೆಲ್ಲಳ ಸಹಾಯ ಕೋರಿದನು. ಸಹಾಯ ಕೂಡಲೆ ಒದಗಿಬರಲಿಲ್ಲ. ಕೊನೆಗೆ ಫರ್ಡಿನೆಂಡ್ ರಾಜನ ಸಲಹೆಗಾರನಾದ ಸಾನ್ ಟಾಂಜಲ್, ರಾಜನನ್ನು ಒಪ್ಪಿಸಿ ಕೊಲಂಬಸ್ ಯೋಜನೆಯನ್ನು ಕಾರ್ಯಗತ ಮಾಡಲು ರಾಜಧನ ಮತ್ತು ತಾನು ಸ್ವತಃ ಕೂಡಿಸಿದ ಹಣವನ್ನು ಒದಗಿಸಿದನು.

ಈ ಚರಿತ್ರಾರ್ಹ ಸಮುದ್ರಪರ್ಯಟನೆಗಾಗಿ ಕೊಲಂಬಸ್ 'ಸಂತ ಮರಿಯಾ' ಎಂಬ ಹೆಸರಿನ ಹಡಗನ್ನು ಬಾಡಿಗೆಗೆ ತೆಗೆದುಕೊಂಡನು. ಅದರ ಜೊತೆಗೆ 'ಪಿಂಟ' ಮತ್ತು 'ನೀನ್ಯಾ' ಎನ್ನುವ ಹೆಸರಿನ ಎರಡು ಚಿಕ್ಕ ನೌಕೆಗಳನ್ನು ಪಾಲೊಸ್ ನಗರ ಒದಗಿಸಿಕೊಟ್ಟಿತು. ಹೀಗೆ ಪ್ರಾರಂಭವಾದ ಸಮುದ್ರಪರ್ಯಟನೆ 'ಹೊಸ ಪ್ರಪಂಚದ' ಅನ್ವೇಷಣೆಯಲ್ಲಿ ಯಶಸ್ವಿಯಾಯಿತು. ಕೊಲಂಬಸ್ ಮಾತ್ರ ಅದು ಹೊಸ ಪ್ರಪಂಚ ಎಂದು ಒಪ್ಪಲಿಲ್ಲ; ತಾನು ತಲುಪಿದ್ದು ಏಷ್ಯಾದ ತೀರಪ್ರದೇಶ ಎಂದು ಖಂಡಿತವಾಗಿ ನಂಬಿದ್ದನು.

ಸಾನ್ ಸಾಲ್ವಡೊರ್‌ನಿಂದ ಕೊಲಂಬಸ್ ಮುಂದುವರೆದು ಕ್ಯೂಬಾ ತಲುಪಿದನು. ಅಲ್ಲಿಯ ಜನರು 'ಕ್ಯೂಬನೊಕಾಸ್'[೧] ಎಂದು ಮಾತನಾಡಿಕೊಳ್ಳುವುದನ್ನು ಕೇಳಿ ಕೊಲಂಬಸ್, ಅವರು ಮಾರ್ಕೊಪೋಲೊ ವರ್ಣಿಸಿದ 'ಭವ್ಯ ಖಾನ್' ಬಗ್ಗೆ ಹೇಳುತ್ತಿದ್ದಾರೆ ಎಂದು ತಪ್ಪಾಗಿ ತಿಳಿದು, ಕಾಡನ್ನು ಶೋಧಿಸಿ ಖಾನ್ ಅರಮನೆಯನ್ನು ಪತ್ತೆಮಾಡುವಂತೆ ತನ್ನ ಗೂಢಾಚಾರರನ್ನು ಕಳುಹಿಸಿದನು. ಆ ಪ್ರಯತ್ನ ವಿಫಲವಾದರೂ ಅವನು ತಾನು ಏಷ್ಯಾ ಖಂಡದ ತೀರವನ್ನು ಪರಿಶೋಧನೆ ಮಾಡಿದ್ದೇನೆ ಎನ್ನುವ ಭಾವನೆಯಿಂದಲೆ ಸ್ಪೇನಿಗೆ ಹಿಂತಿರುಗಿದನು. ಅನಂತರ ಈ ಪ್ರದೇಶಗಳಿಗೆ ಮತ್ತೆ ಮೂರು ಬಾರಿ ಪರ್ಯಟನೆ ಮಾಡಿದರೂ ತಾನು ಏಷ್ಯಾ ಖಂಡವನ್ನು ತಲುಪಿದ್ದೇನೆ ಎನ್ನುವ ನಂಬಿಕೆಯನ್ನು ಬದಲಾಯಿಸಲಿಲ್ಲ! ತನ್ನ ಪರ್ಯಟನೆಗಳನ್ನು ಮುಗಿಸಿ ೧೫೦೪ರಲ್ಲಿ ಅಂತಿಮವಾಗಿ ಸ್ಪೇನಿಗೆ ಹಿಂತಿರುಗಿದನು. ಎರಡು ವರ್ಷಗಳ ನಂತರ ೧೫೦೬ರಲ್ಲಿ ವೆಲ್ಲ ಡೊಲಿಡ್ ಎಂಬಲ್ಲಿ ಕೊಲಂಬಸ್ ಕಾಲವಾದನು.

---

೧. ಕ್ಯೂಬನೊಕಾಸ್ ಎಂದರೆ ನಡುವಣ ಕ್ಯೂಬ ಎಂದು ಅರ್ಥ

ಹೊಸಪ್ರಪಂಚವನ್ನು ಕಂಡುಹಿಡಿದವನು ಕೊಲಂಬಸ್. ಆದರೂ ಈ ಭೂಖಂಡಕ್ಕೆ ಅವನ ಹೆಸರಿಡದೆ ಬೇರೆಯವನ ಹೆಸರನ್ನು ಇಟ್ಟಿದ್ದು ಚಾರಿತ್ರಿಕ ವಿಪರ್ಯಾಸ ಎನ್ನಿಸುತ್ತದೆ. ಈ ಹೊಸಪ್ರಪಂಚಕ್ಕೆ ಅಮೆರಿಗೊ ವೆಸ್‌ಪುಸಿ ಎಂಬುವನ ಹೆಸರಿನ ಆಧಾರದ ಮೇಲೆ 'ಅಮೆರಿಕ' ಎಂದು ಹೆಸರಿಡಲಾಯಿತು. ಆತ ಫ್ಲಾರೆನ್ಸಿನ ವರ್ತಕ ಮತ್ತು ನಾವಿಕ. ಇವನನ್ನು ಇಟಲಿಯ ಪ್ರತಿನಿಧಿಯಾಗಿ ಸ್ಪೇನಿಗೆ ಕಳುಹಿಸಿದ್ದರು. ಇವನಿಗೆ ಕೊಲಂಬಸ್‌ನ ಪರಿಚಯವಿತ್ತು. ಕೊಲಂಬಸ್ ಸಮುದ್ರಪರ್ಯಟನೆಯಿಂದ ಮೊದಲ ಬಾರಿಗೆ ವಾಪಸ್ಸಾದಾಗ ಅವನಿಗೆ ಸ್ವಾಗತ ಬಯಸಲು ಸೇರಿದ್ದವರಲ್ಲಿ ವೆಸ್‌ಪುಸಿಯೂ ಇದ್ದ. ಕೊಲಂಬಸ್‌ನ ಎರಡನೆಯ ಮತ್ತು ಮೂರನೆಯ ಸಮುದ್ರಯಾನಕ್ಕೆ ಹಡಗನ್ನು ಸಿದ್ಧಗೊಳಿಸಿದವನು ವೆಸ್‌ಪುಸಿ. ಹೊಸಪ್ರಪಂಚಕ್ಕೆ ವೆಸ್‌ಪುಸಿ ನಾಲ್ಕು ಬಾರಿ ಹೋಗಿ ಬಂದ. ಆದರೆ ಈತ ಅನ್ವೇಷಣ ತಂಡಗಳ ನಾಯಕನಾಗಿರಲಿಲ್ಲ. ವೆಸ್‌ಪುಸಿಯ ವೈಶಿಷ್ಟ್ಯ ಅವನ ಅಪಾರ ಭೂಗೋಳ ಪರಿಜ್ಞಾನ ಮತ್ತು ಅವಲೋಕಿಸಿದ ಸಂಗತಿಗಳನ್ನು ವಿಶ್ಲೇಷಣೆ ಮಾಡಿ ವಿವರಿಸುವ ಕಲೆಗಾರಿಕೆಯಲ್ಲಿ ಎದ್ದುಕಾಣುತ್ತಿತ್ತು. ಕೊಲಂಬಸ್ ಕಂಡುಹಿಡಿದದ್ದು ನಿಜಕ್ಕೂ 'ಹೊಸ ಪ್ರಪಂಚ' ಎಂದು ಸಾಧಿಸಿ, ಈ ಅನ್ವೇಷಣೆಯ ಮಹತ್ವ ಮತ್ತು ಪರಿಣಾಮಗಳನ್ನು ಕುರಿತು ಬರೆದ ಅವನ ಲೇಖನಗಳು ಜನಪ್ರಿಯವಾದವು. ಆದ್ದರಿಂದ ೧೫೦೭ರಲ್ಲಿ ಪ್ರಸಿದ್ಧ ಭೂಗೋಳ ಶಾಸ್ತ್ರಜ್ಞನಾದ ಮಾರ್ಟಿನ್ ವಾಲ್ಡ್ ಸೀಮ್ಯೂಲರ್ 'ಹೊಸಪ್ರಪಂಚ'ವನ್ನು ಅಮೆರಿಗೊ ವೆಸ್‌ಪುಸಿ ಹೆಸರಿನ ಆಧಾರದ ಮೇಲೆ 'ಅಮೆರಿಕ' ಎಂದು ಕರೆಯಬೇಕೆಂದು ಸೂಚಿಸಿದನು. ಆದ್ದರಿಂದ ಅನಾದಿಕಾಲದಿಂದ ಹೆಸರಿಲ್ಲದಿದ್ದ ಈ ಭೂಖಂಡಕ್ಕೆ ಅಮೆರಿಕ ಎಂದು ಹೆಸರಿಡಲಾಯಿತು.

ಸ್ಪೇನಿನ ಪ್ರಾಬಲ್ಯ

ಪೋರ್ಚುಗೀಸರ ಆಸಕ್ತಿ ಆಫ್ರಿಕ ಖಂಡದಲ್ಲಿ ಇದ್ದದ್ದರಿಂದ ಹೊಸಪ್ರಪಂಚ ಸ್ಪಾನಿಷರಿಗೆ ತೆರವಾಯಿತು. ಈ ಅವಕಾಶವನ್ನು ಉಪಯೋಗಿಸಿಕೊಂಡ ಸ್ಪಾನಿಷರು, ಕೊಲಂಬಸ್ 'ಹಿಸ್ಪಾನಿಯೋಲ' ಎಂದು ಹೆಸರಿಟ್ಟ ಪ್ರದೇಶವನ್ನು ತಮ್ಮ ಮೂಲನೆಲೆಯಾಗಿ ಮಾಡಿಕೊಂಡು ಅಲ್ಲಿಂದ ಕರೀಬಿಯನ್ ಪ್ರಾಂತವನ್ನು ಆಕ್ರಮಿಸಿಕೊಂಡು ಅದರ ಪಕ್ಕದಲ್ಲಿದ್ದ ಎರಡು ಮಹಾ ಭೂಖಂಡಗಳ ವಿಶಾಲಪ್ರದೇಶವನ್ನು ವಶಮಾಡಿಕೊಂಡರು.

೧೫೧೩ರಲ್ಲಿ ಯುವಾನ್ ಪೋನ್ಸ್ ದಿ ಲಿಯೋನ್ (Juan Ponce de Leon) ಎಂಬ ನಾವಿಕನು ಉತ್ತರ ಅಮೆರಿಕ ಖಂಡದ ಮೇಲೆ ಕಾಲಿರಿಸಿದ ಸ್ಪಾನಿಷರಲ್ಲಿ ಮೊದಲಿಗನಾದನು. ಅವನು ಫ್ಲೋರಿಡಾದ ಪೂರ್ವತೀರವನ್ನು ಪರಿಶೋಧಿಸಿದನು. ೧೫೧೯ರಲ್ಲಿ ಕೊರ್ಟೆಜ್ (Corte's) ತನ್ನ ಸೈನ್ಯದೊಡನೆ ಮೆಕ್ಸಿಕೊವನ್ನು ಮುತ್ತಿಗೆ ಹಾಕಿ ವಶಪಡಿಸಿಕೊಂಡು, ಆ್ಯಜ್ಟೆಕ್ (Aztec) ಸಾಮ್ರಾಜ್ಯವನ್ನು ನೆಲಸಮಗೊಳಿಸಿ ಅಪಾರ ಪ್ರಮಾಣದ ಚಿನ್ನ ಮತ್ತು ಬೆಳ್ಳಿಯನ್ನು ಕೊಳ್ಳೆಹೊಡೆದನು. ಅದೇ ವರ್ಷದಲ್ಲಿ ಫರ್ಡಿನಂಡ್

ಮೆಜಲ್ಲನ್ (Ferdinand Magellan) ತನ್ನ ಭೂಪರ್ಯಟನೆಯನ್ನು ಪ್ರಾರಂಭಿಸಿ ದಕ್ಷಿಣ ಅಮೆರಿಕಾ ಖಂಡದ ಕಟ್ಟಕಡೆಯ ತುದಿಯಲ್ಲಿರುವ ಜಲಸಂಧಿಯನ್ನು ಕಂಡುಹಿಡಿದು, ಈ ಭೂಖಂಡದ ಗಾತ್ರ ಎಷ್ಟು ದೊಡ್ಡದು ಎನ್ನುವುದನ್ನು ತೋರಿಸಿಕೊಟ್ಟನು. ೧೫೩೦ರ ದಶಕದಲ್ಲಿ ಫ್ರಾನ್ಸಿಸ್ಕೊ ಪಿಜ್ಹಾರೊ ಪೆರುವಿನ ಇಂಕಾ ಸಾಮ್ರಾಜ್ಯವನ್ನು ಸೋಲಿಸಿ ಮತ್ತಷ್ಟು ಐಶ್ವರ್ಯವನ್ನು ದೋಚಿ ಸ್ಪೇನಿನ ಖಜಾನೆಯನ್ನು ತುಂಬಿಸಿದನು. ೧೫೩೬ರಲ್ಲಿ ಪೆಡ್ರೊ ಡ ಮೆಂಡೋಜ಼ ಬ್ಯೂನಸ್ ಐರಿಸ್ ನಗರವನ್ನು ಸ್ಥಾಪನೆ ಮಾಡಿದನು. ಇದಾದ ಒಂದು ದಶಕದೊಳಗೆ ಫ್ರಾನ್ಸಿಸ್ಕೊ ವಾಸ್ಕ್ವೇಜ಼್ ಡ ಕೊರನಾಡೊ ತನ್ನ ಸೈನ್ಯವನ್ನು ಉತ್ತರ ಅಮೆರಿಕದ ಕಾನ್ಸಾಸ್ ಪ್ರಾಂತದವರೆಗೆ ಮತ್ತು ಪಶ್ಚಿಮದಲ್ಲಿ ಮಹಾ ಪ್ರಪಾತ ದವರೆಗೂ ನಡೆಸಿಕೊಂಡು ಹೋಗಿ ಆಕ್ರಮಣ ಮಾಡಿದನು. ಅಷ್ಟರಲ್ಲಿ ಹರ್ನಾಂಡೊ ಡ ಸೋಟೊ ಮಿಸ್ಸಿಸ್ಸಿಪ್ಪಿ ನದಿಯನ್ನು ಪರಿಶೋಧನೆ ಮಾಡಿದ್ದನು. ಹೀಗೆ ಕೊಲಂಬಸ್ ಸಾನ್ ಸಾಲ್ವಡೋರ್ ದ್ವೀಪದಲ್ಲಿ ಮೊದಲಬಾರಿ ಕಾಲಿರಿಸಿ ಐವತ್ತು ವರ್ಷಗಳಾದ ಮೇಲೆ ಸ್ಪೇನ್ ಅಪಾರವಾದ ಅಮೆರಿಕ ಸಾಮ್ರಾಜ್ಯದ ಮೇಲೆ ಒಡೆತನವನ್ನು ಸ್ಥಾಪಿಸಿ ಮೆರೆಯಿತು.

ಅಧಿಕಾರಮದ, ಚಿನ್ನದ ದುರಾಶೆ, ಸಾಹಸಪ್ರಿಯತೆ ಮತ್ತು ಆದಿವಾಸಿಗಳನ್ನು ಕ್ರಿಸ್ತಮತಕ್ಕೆ ಪರಿವರ್ತಿಸುವುದು ಇವು ಎಲ್ಲಾ ಪರಿಶೋಧನೆಗಳ ಆಕ್ರಮಣಗಳ ಮುಖ್ಯ ಉದ್ದೇಶಗಳಾಗಿದ್ದವು. ಈ 'ಹೊಸ ಪ್ರಪಂಚ' ಆಕ್ರಮಣಕಾರರಿಗೆ ಸುಖ ಸಂತೋಷಗಳ ಭರವಸೆ ನೀಡುವ ಗಂಧರ್ವಲೋಕವಾಗಿ ತೋರಿತು. ಪೋನ್ಸ್ ದಿ ಲಿಯೊನ್ ಮೊದಲಾದವರು ಅಮೆರಿಕದಲ್ಲಿ ಚಿರಯೌವನದ ಕಾರಂಜಿ ಸಿಗಬಹುದೆಂದು ನಿರೀಕ್ಷಿಸಿದ್ದರು. ಈ ಹೊಸ ಪ್ರಪಂಚ ಮಾನವರ ಒಳ್ಳೆಯತನ ಮತ್ತು ನೀಚತನ ಎರಡನ್ನೂ ಹೊರತಂದಿತು.

ಇಂಡಿಯನ್ನರು ಮತ್ತು ಐರೋಪ್ಯರು

ಆಕ್ರಮಣಕಾರರು ಧೈರ್ಯಶಾಲಿಗಳು ಮತ್ತು ಕಲ್ಪನಾಶಕ್ತಿಯುಳ್ಳವರಾಗಿದ್ದರು. ಆದರೆ ಅವರು ಏನೂ ಅರಿಯದ ಆದಿವಾಸಿಗಳಿಂದ ಎಲ್ಲವನ್ನೂ ಕಿತ್ತುಕೊಂಡು ತಮ್ಮ ಚಕ್ರಾಧಿಪತ್ಯವನ್ನು ಕಟ್ಟಿದರು. ಅಮೆರಿಕದಲ್ಲಿ ವಸಾಹತುಗಳ ಸ್ಥಾಪನೆ ಮಾನವನ ಇತಿಹಾಸದಲ್ಲಿ ನಡೆದಿರುವ ಅತ್ಯಂತ ಹೀನವಾದ ಮತ್ತು ಕ್ರೂರವಾದ ದಬ್ಬಾಳಿಕೆ ಮತ್ತು ಆಕ್ರಮಣಗಳ ಉದಾಹರಣೆಗಳಿಗೆ ಮುಕುಟಪ್ರಾಯವಾಗಿದೆ. ಸಾನ್ ಸಾಲ್ವಡೋರ್ ಆದಿವಾಸಿಗಳನ್ನು ಕುರಿತು 'ಏನೂ ಅರಿಯದ ಪಾಪದವರು, ನಂಬಲು ಸಾಧ್ಯವಾಗದಷ್ಟು ಉದಾರಿಗಳು, ಕೇಳಿದವರಿಗೆ 'ಇಲ್ಲ' ಎನ್ನಲಾರದ ವಿಶಾಲ ಹೃದಯಿಗಳು, ಪ್ರೀತಿ ವಿಶ್ವಾಸಗಳನ್ನು ತೋರಲು ತಮ್ಮ ಹೃದಯವನ್ನು ಅರ್ಪಿಸಲು ಸಿದ್ಧರಾದ ಕರುಣಾಳುಗಳು' ಎಂದು ಕೊಲಂಬಸ್ ಬರೆದಿಟ್ಟಿದ್ದಾನೆ. ಆದಿವಾಸಿಗಳ ಈ ವರ್ತನೆಗೆ ಅವರು ಈ ಬಿಳಿಯರನ್ನು (White men) ದೇವತೆಗಳೆಂದು ಭಾವಿಸಿದ್ದು ಕಾರಣವಾಗಿತ್ತು!

ಸ್ಪಾನಿಯರು ಆದಿವಾಸಿಗಳ ಒಳ್ಳೆಯತನವನ್ನು ದುರುಪಯೋಗಪಡಿಸಿಕೊಂಡು ಅವರಿಗೆ

ಎಲ್ಲ ರೀತಿಯಲ್ಲಿ ಮೋಸ ಮಾಡಿದರು. ಒಂದು ಪ್ರದೇಶವನ್ನು ವಶಪಡಿಸಿಕೊಳ್ಳುವುದಕ್ಕೆ ಮುಂಚೆ ಅವರು ಆದಿವಾಸಿಗಳಿಗೆ ಅರ್ಥವಾಗದ ಭಾಷೆಯಲ್ಲಿ ಅವರು ಏನು ಮಾಡಬೇಕು ಏನು ಮಾಡಬಾರದು ಎನ್ನುವುದನ್ನು ಓದಿ ಹೇಳುತ್ತಿದ್ದರು. ಆ ಪ್ರಣಾಳಿಕೆ, ಪ್ರಪಂಚ, ಕ್ರಿಶ್ಚಿಯನ್ನರು ಮತ್ತು ಕ್ರಿಶ್ಚಿಯನ್ನರಲ್ಲದ ಭಾಗಗಳಾಗಿ ಸೃಷ್ಟಿಗೊಂಡಿರುವುದರಿಂದ ಹಿಡಿದು, ಆದಿವಾಸಿಗಳು ಸ್ಪಾನಿಷ್ ರಾಜನ ಪ್ರಭುತ್ವವನ್ನು ಒಪ್ಪಿಕೊಳ್ಳಬೇಕೆಂದು ಪೋಪ್ ಆರನೆಯ ಅಲೆಕ್ಸಾಂಡರ್ ಹೊರಡಿಸಿದ ಆಜ್ಞೆಯವರೆಗೆ ಎಲ್ಲ ವಿವರಣೆಗಳನ್ನು ಒಳಗೊಂಡಿತ್ತು. ಈ ಆಜ್ಞೆಯನ್ನು ಒಪ್ಪಿಕೊಂಡು ಅದರಂತೆ ನಡೆದುಕೊಂಡರೆ ಪ್ರೀತಿಯಿಂದ, ಆದರದಿಂದ ನಿಮ್ಮನ್ನು ನೋಡಿಕೊಳ್ಳುತ್ತೇವೆ. ಹಾಗೆ ನಡೆಯದಿದ್ದರೆ, ಬಲಪ್ರಯೋಗ ಮಾಡಿ ನಿಮ್ಮ ದೇಶಕ್ಕೆ ನುಗ್ಗಿ ನಿಮ್ಮನ್ನು ಮತ್ತು ನಿಮ್ಮ ಹೆಂಡತಿ ಮಕ್ಕಳನ್ನು ಹಿಡಿದು ಗುಲಾಮರನ್ನಾಗಿ ಮಾಡಿಕೊಳ್ಳುತ್ತೇವೆ. ಇದರಿಂದ ಆಗಬಹುದಾದ ಸಾವು ನೋವುಗಳಿಗೆ ನೀವೇ ಕಾರಣರಾಗುತ್ತೀರಿ ಎನ್ನುವ ಸೊಕ್ಕಿನ ಪ್ರಕಟಣೆಯನ್ನು ಆದಿವಾಸಿಗಳಿಗೆ ಕೇಳಿತೋ ಇಲ್ಲವೋ ಎನ್ನುವ ರೀತಿಯಲ್ಲಿ ಓದಲಾಗುತ್ತಿತ್ತು. ಇದನ್ನು ಪ್ರತಿಭಟಿಸಿ ಹೋರಾಡಿದ ಆದಿವಾಸಿಗಳನ್ನು ಸ್ಪಾನಿಷರು ಕೊಂದು ಛಿದ್ರಗೊಳಿಸಿ ಅವರ ಭೂಮಿಯನ್ನು ಕಸಿದುಕೊಂಡು, ಸಾಯದೆ ಉಳಿದವರನ್ನು ಅಲ್ಲಿಂದ ಓಡಿಸಿ, ಸೆರೆಸಿಕ್ಕವರನ್ನು ಗುಲಾಮರಂತೆ ನಡೆಸಿಕೊಂಡರು. ಎಲ್ಲಾ ವಸಾಹತುಶಾಹಿಗಳೂ ಆದಿವಾಸಿಗಳನ್ನು ಕ್ರೂರತನದಿಂದ ನಡೆಸಿಕೊಂಡರು. ಪೋರ್ಚುಗೀಸರು ಆಫ್ರಿಕದಲ್ಲಿ ಸಹಸ್ರಾರು ಆಫ್ರಿಕನ್ನರನ್ನು ಗುಲಾಮಗಿರಿಗೆ ಮಾರಿ ಹೇರಳವಾಗಿ ಹಣ ಗಳಿಸಿದರು. ಡಚ್ಚರು ತಮ್ಮ ಪೂರ್ವ ಇಂಡೀಸ್ ವಸಾಹತುಗಳಲ್ಲಿ ಇದೇ ಕೆಲಸ ಮಾಡಿದರು. ಫ್ರೆಂಚರು ಕೂಡ ಇದಕ್ಕೆ ಹೊರತಾಗಿರಲಿಲ್ಲ.[೨]

---

೨. ಬಿಳಿಯರು ಮತ್ತು ಆದಿವಾಸಿಗಳ ಘರ್ಷಣೆಗಳು, ಆದಿವಾಸಿಗಳ ಭೂಮಿಯನ್ನು ಆಕ್ರಮಣ ಮಾಡಿ ಪಶ್ಚಿಮ ಗಡಿಪ್ರದೇಶವನ್ನು ವಿಸ್ತರಿಸುತ್ತ ಹೋಗಿದ್ದು ಮತ್ತು ಆದಿವಾಸಿಗಳ ಬಗ್ಗೆ ಅವರಿಗಿದ್ದ ಪೂರ್ವಗ್ರಹ ಪೀಡಿತ ಅಭಿಪ್ರಾಯಗಳು ನಮಗೆ ಪ್ರಾಚೀನ ಭಾರತದ ಆರ್ಯರ ಕಾಲದ ನೆನಪು ತರುತ್ತವೆ. ಅಮೆರಿಕನ್ನರು ಆದಿವಾಸಿಗಳನ್ನು ಮನುಷ್ಯರೇ ಅಲ್ಲವೆಂದು ಭಾವಿಸಿದ್ದರು. ಆದಿವಾಸಿಗಳ ಭೂಮಿಯನ್ನು ವಶಪಡಿಸಿಕೊಳ್ಳುತ್ತಿದ್ದ ರೀತಿ ಎಂದರೆ ಒಂದೋ ಎರಡೊ ಸಂಸಾರಗಳು ಗಡಿಪ್ರದೇಶವನ್ನು ಅತಿಕ್ರಮಿಸಿ ನೆಲಸುವುದು. ತಮ್ಮ ಭೂಮಿಯನ್ನು ಆಕ್ರಮಿಸಿದ ಇವರನ್ನು ಹೊಡೆದೋಡಿಸಲು ಪ್ರಯತ್ನಪಟ್ಟ ಆದಿವಾಸಿಗಳನ್ನು ದುಷ್ಟರು, ಕ್ರೂರಿಗಳು, ನರಭಕ್ಷಕರು ಎಂದು ವರ್ಣಿಸಿ ತಮ್ಮ ಸಂರಕ್ಷಣೆಗೆ ಸರ್ಕಾರದ ಸೈನ್ಯ ಕರೆಸಿ ಆದಿವಾಸಿಗಳನ್ನು ಕೊಲ್ಲಿಸುತ್ತಿದ್ದರು. ಭಾರತದಲ್ಲಿ ಆರ್ಯರು ಉತ್ತರದಿಂದ ದಕ್ಷಿಣಕ್ಕೆ ಮುಂದುವರಿದಂತೆ ಆದಿವಾಸಿಗಳೊಡನೆ ಘರ್ಷಣೆ ಅನಿವಾರ್ಯವಾಯಿತು. ಆದಿವಾಸಿಗಳನ್ನು ಆರ್ಯರು ರಾಕ್ಷಸರೆಂದು ಕರೆದು, ಅವರು ಕ್ರೂರಿಗಳು, ನರಭಕ್ಷಕರು ಎಂದು ವರ್ಣಿಸಿದರು. ಆದಿವಾಸಿಗಳ ಭೂಮಿಯನ್ನು ಕೆಲವು ಆಶ್ರಮವಾಸಿಗಳು ಅತಿಕ್ರಮಿಸಿ ನೆಲಸುವುದು. ಆದಿವಾಸಿಗಳು ಆಕ್ರಮಣಕಾರರ ಮೇಲೆ ದಾಳಿ ಮಾಡಿದರೆ ಅವರು ರಾಜನ ಮೊರೆಹೊಕ್ಕು ಸೈನ್ಯ ಕರೆಸಿ ಅವರನ್ನು ಕೊಲ್ಲಿಸುತ್ತಿದ್ದರು.

ಇಂಗ್ಲಿಷ್ ವಸಾಹತುಗಾರರು ಆದಿವಾಸಿಗಳನ್ನು ಸ್ವತಂತ್ರರು, ವಿನಯಶೀಲರು, ಮೋಸ ಮತ್ತು ವಂಚನೆ ಇಲ್ಲದವರು ಎಂದು ವರ್ಣಿಸಿದ್ದಾರೆ. ಮೇಲೆ ಹೀಗೆ ಹೇಳಿದರೂ ಒಳಗೊಳಗೇ ಪಿತೂರಿ ನಡೆಸಿ, ಆದಿವಾಸಿಗಳನ್ನು ಶೋಷಣೆ ಮಾಡಿ, ಸದೆಬಡಿದು, ವಿನಾಶದ ಹಾದಿ ಹಿಡಿಯುವಂತೆ ಮಾಡಿದರು. ಆದಿವಾಸಿಗಳಿಗೆ (ಕೊಲಂಬಸ್ ಇಂಡಿಯನ್ನರೆಂದು ಹೆಸರಿಟ್ಟ ಜನ) ಈ ಬಿಳಿಯರ ವರ್ತನೆ ಅರ್ಥವಾಗಲಿಲ್ಲ. ಭೂಮಿ ಬೇಕಾದರೆ ಪ್ರೀತಿಯಿಂದ ಕೇಳಿದರೆ ನಾವು ಕೊಡುವುದಿಲ್ಲವೆ? ಬಿಳಿಯರು ಮೋಸ, ದಗ, ಕೊಲೆ ಸುಲಿಗೆ ಇಂತಹ ಕ್ರೂರ ಕೆಲಸಗಳನ್ನು ಯಾಕೆ ಮಾಡುತ್ತಾರೆ ಎನ್ನುವುದು ಅವರಿಗೆ ಬಿಡಿಸಲಾರದ ಒಗಟಾಯಿತು.

ನ್ಯೂ ಇಂಗ್ಲೆಂಡ್ ವಸಾಹತಿನಲ್ಲಿ ನೆಲಸಿದ ಮೊದಲನೆಯ ತಂಡದ ವಲಸೆಗಾರರು ಇಂಡಿಯನ್ನರೊಡನೆ ಒಳ್ಳೆಯ ರೀತಿಯಲ್ಲಿ ವ್ಯವಹರಿಸಿದರು. ಅವರಿಗೆ ಓದು ಬರಹ ಕಲಿಸಿ, ಕ್ರೈಸ್ತ ಮತಕ್ಕೆ ಸೇರಿಸುವ ಪ್ರಯತ್ನ ಮಾಡಿದರು. ಅವರು ಇಂಡಿಯನ್ನರ ಹಕ್ಕುಗಳನ್ನು ಗೌರವಿಸಿದರು. ಆದರೆ ಕಾಲಕ್ರಮೇಣ ಬಿಳಿಯರು ಮತ್ತು ಇಂಡಿಯನ್ನರ ನಡುವಣ ಸಂಬಂಧಗಳು ಕ್ಷೀಣಿಸುತ್ತ ಹೋಗಿ ೧೬೭೫ರಲ್ಲಿ ರಾಜ ಫಿಲಿಪ್‌ನ ಕದನದಲ್ಲಿ ಪರ್ಯಾವಸಾನಗೊಂಡು ಇಂಡಿಯನ್ನರು ಸಂಪೂರ್ಣವಾಗಿ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡರು.

ರಾಜ ಫಿಲಿಪ್‌ನ ಕದನ ಯಾಕೆ ನಡೆಯಿತೆಂದರೆ ಸಸಸ್ಸಮಾನ್ ಎನ್ನುವ 'ಪ್ರಾರ್ಥಿಸುವ ಇಂಡಿಯನ್' (ಕ್ರೈಸ್ತರಾದ ಇಂಡಿಯನ್ನರನ್ನು ಬಿಳಿಯರು ಹಾಗೆ ಕರೆಯುತ್ತಿದ್ದರು) ಒಬ್ಬನ ಕೊಲೆಯ ಮುಯ್ಯಿ ತೀರಿಸಲು ಎಂದು ಹೇಳುತ್ತಾರೆ. ರಾಜ ಫಿಲಿಪ್ ವಾಮ್‌ಪಾನೋಯಗ್ ಬುಡಕಟ್ಟನ್ನು ಆಳುತ್ತಿದ್ದ ದೊರೆ. ಸಸಸ್ಸಮಾನ್ ಕ್ರೈಸ್ತನಾದರೂ ಆ ರಾಜನ ಸೇವೆ ಮಾಡಿಕೊಂಡಿದ್ದ. ಸ್ವಲ್ಪ ಕಾಲದ ಮೇಲೆ ಅವನು ರಾಜನ ಸೇವೆಯನ್ನು ಬಿಟ್ಟು ಕ್ರೈಸ್ತಮತದವರೊಡನೆ ಮತ್ತೆ ಸೇರಿಕೊಂಡನು. ಇದು ರಾಜದ್ರೋಹ ಎಂದು ಆ ಬುಡಕಟ್ಟಿನ ಯಾರೋ ಇವನನ್ನು ಕೊಲೆಮಾಡಿದರು. ಪ್ಲಿಮತ್ ವಸಾಹತಿನ ಬಿಳಿಯರು ವಾಮ್‌ಪಾನೋಯಗ್ ಬುಡಕಟ್ಟಿನ ಮೂವರನ್ನು ಹಿಡಿದು ಕೊಲೆಗಾರರು ಎಂದು ತೀರ್ಮಾನಿಸಿ ಅವರನ್ನು ಗಲ್ಲಿಗೇರಿಸಿದರು. ರಾಜ ಫಿಲಿಪ್‌ನ ಕದನ ಪ್ರಾರಂಭವಾದದ್ದು ಹೀಗೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ಬಿಳಿಯರು ರಾಜ ಫಿಲಿಪ್‌ನ ಬುಡಕಟ್ಟನ್ನಲ್ಲದೆ ನಿರ್ದೋಷಿಗಳಾಗಿದ್ದ ರೋಡ್ ಐಲ್ಯಾಂಡ್ ಆಶ್ರಿತ ಪ್ರದೇಶದಲ್ಲಿ ವಾಸಿಸುತ್ತಿದ್ದ ಇಂಡಿಯನ್ನರ ಮೇಲೆ ದಾಳಿ ಮಾಡಿ ಹತ್ಯಾಕಾಂಡ ನಡೆಸಿ ಅವರ ಭೂಮಿಯನ್ನು ಕಿತ್ತುಕೊಂಡರು. ಇಂಡಿಯನ್ನರೂ ಬಿಳಿಯರಿಗೆ ಆಸ್ತಿ ಪಾಸ್ತಿ ನಷ್ಟ ಮತ್ತು ಸಾವು-ನೋವುಗಳನ್ನು ಉಂಟುಮಾಡಿದರು. ರಾಜ ಫಿಲಿಪ್‌ನ ಮರಣ ಮತ್ತು ಇಂಡಿಯನ್ನರಿಗೆ ಯುದ್ಧ ಮುಂದುವರಿಸಲು ಸಾಧನ ಸಾಮಗ್ರಿಗಳು ಸಿಕ್ಕದೇ ಹೋಗಿ

೧೬೭೮ರಲ್ಲಿ ಕದನ ಕೊನೆಗೊಂಡಿತು. ಸಾವಿರಾರು ಇಂಡಿಯನ್ನರು ಈ ಕದನದಲ್ಲಿ ಕೊಲ್ಲಲ್ಪಟ್ಟರು. ಹೀಗೆ ಇಂಡಿಯನ್ನರ ಸಂಖ್ಯೆ ಕಡಿಮೆಯಾಗುತ್ತಹೋಯಿತು.

ಇಂಡಿಯನ್ನರ ಜನಸಂಖ್ಯೆ ಕ್ಷೀಣಿಸಲು ಕದನಗಳು ಮಾತ್ರ ಕಾರಣವಲ್ಲ. ಯೂರೋಪಿಯನ್ನರಿಂದ ಹರಡಿದ ಮೈಲಿ, ಸಿಡುಬು ಮುಂತಾದ ಅಂಟುರೋಗಗಳಿಗೆ ಇಂಡಿಯನ್ನರಲ್ಲಿ ನಿರೋಧಕ ಶಕ್ತಿ ಇರಲಿಲ್ಲ. ಆದ್ದರಿಂದ ಸಾವಿರಾರು 'ಇಂಡಿಯನ್ನರು' ಈ ರೋಗಗಳಿಗೆ ಬಲಿಯಾದರು. ಬಿಳಿಯರ ಮತ್ತು ಇಂಡಿಯನ್ನರ ನಡುವಣ ಘರ್ಷಣೆಯ ಎಲ್ಲ ಸಂದರ್ಭಗಳಲ್ಲಿ ಮೊದಲು ದಾಳಿ ಮಾಡುತ್ತಿದ್ದ ಆಕ್ರಮಣಕಾರರು ಬಿಳಿಯರು!

ಇಂಡಿಯನ್ನರು ಪೂರ್ಣಮಾನವರಲ್ಲ ಎಂದು ಬಿಳಿಯರು ನಂಬಿದ್ದರು. ದೊಡ್ಡ ಹಡಗುಗಳಲ್ಲಿ ತಾವು ಕಂಡರಿಯದ ಶಸ್ತ್ರಾಸ್ತ್ರಗಳನ್ನು ಹಿಡಿದುಬಂದ ಬಿಳಿಯರನ್ನು ದೇವತೆಗಳೆಂದು ಭೋಳೆ ಸ್ವಭಾವದ ಇಂಡಿಯನ್ನರು ನಂಬಿದ್ದರು. ಬಿಳಿಯರು ತಮಗಿಂತ ಬೇರೆಯಾಗಿ ಕಾಣುವವರೆಲ್ಲ ಕೀಳಾದವರು ಎಂಬ ದುರಭಿಮಾನ ಬೆಳೆಸಿಕೊಂಡರು. ಈ ದುರಭಿಮಾನದ ದೃಷ್ಟಿಗೆ ಮೋಸ, ದಗ, ಸುಳ್ಳು ಎಲ್ಲ ಜಾಣತನವಾಗಿ ತೋರಿದವು. ಮನುಷ್ಯರ ಅಪಹರಣ, ಗುಲಾಮಗಿರಿ, ಎಲ್ಲ ಕೆಲಸಗಾರರನ್ನು ಕಲೆಹಾಕಿ, ತರಪೇತಿ ನೀಡುವ ಪರಿಣಾಮಕಾರಿಯಾದ ವಿಧಾನಗಳಾಗಿ ಕಂಡುಬಂದವು. (ಇಂತಹ ದುರಭಿಪ್ರಾಯಗಳನ್ನು ಹೊಂದಿರುವ ಜನರು ಈಗಲೂ ಇರುವುದರಿಂದ ಅಮೆರಿಕದಲ್ಲಿ ಬಿಳಿಯರು ಮತ್ತು ಬಿಳಿಯರಲ್ಲದ ಜನರ ಪರಸ್ಪರ ಸಂಬಂಧಗಳು ಹೆಚ್ಚು ಹೆಚ್ಚು ಸಂಕೀರ್ಣವಾಗಿ, ಬಗೆಹರಿಯದ ಸಮಸ್ಯೆಗಳಿಗೆ ಎಡೆ ಮಾಡಿಕೊಟ್ಟಿವೆ.)

ಸ್ಪೇನಿನ ಅವನತಿ

ಅಮೆರಿಕ ಖಂಡಗಳ ಅಪಾರ ಐಶ್ವರ್ಯದ ಆಧಾರದ ಮೇಲೆ ಸ್ಪೇನ್ ಕೊಬ್ಬಿ ಬೆಳೆಯಿತು. ಈ ಸಮಯದಲ್ಲಿ ಪಶ್ಚಿಮ ಯೂರೋಪಿನ ದೇಶಗಳು ಯಾವ ಸಾಹಸವನ್ನೂ ಕೈಗೊಳ್ಳದೆ ಸುಮ್ಮನಿದ್ದವು. ಇಂಗ್ಲೆಂಡಿನ ರಾಜ ಏಳನೆಯ ಹೆನ್ರಿ VII ಜಾನ್ ಕ್ಯಾಬಟ್‌ನನ್ನು ಎರಡು ಬಾರಿ (೧೪೯೭ ಮತ್ತು ೧೪೯೮) ಹೊಸಪ್ರಪಂಚಕ್ಕೆ ಕಳುಹಿಸಿದನು. ಕ್ಯಾಬಟ್ ನ್ಯೂಫೌಂಡ್‌ಲ್ಯಾಂಡ್ ಮತ್ತು ಉತ್ತರ ಅಮೆರಿಕದ ಈಶಾನ್ಯ ತೀರಪ್ರದೇಶವನ್ನು ಪರಿಶೋಧನೆ ಮಾಡಿದನು. ಈ ಪರಿಶೋಧನೆಗಳ ಆಧಾರದ ಮೇಲೆ ಬ್ರಿಟಿಷರು ಈ ಭಾಗಗಳ ಮೇಲೆ ತಮ್ಮ ಹಕ್ಕನ್ನು ಸಾಧಿಸಿದರು. ಹಕ್ಕು ಸಾಧಿಸಿದ ಎಷ್ಟೋ ಕಾಲದ ನಂತರ ವಸಾಹತುಗಳನ್ನು ಸ್ಥಾಪಿಸಿದರು. ಫ್ರೆಂಚರ ಪರವಾಗಿ ೧೫೨೪ರಲ್ಲಿ ಗಿಯೋವನಿಡ ವೆರ್ರಜ್ಞೋನೊ ಎನ್ನುವ ನಾವಿಕನು ಸಮುದ್ರಯಾನ ಮಾಡಿ ಕರೊಲಿನ ಪ್ರದೇಶದಿಂದ ನೋವ ಸ್ಕೋಷಿಯದವರೆಗೆ ಪರಿಶೋಧನೆ ಮಾಡಿದನು. ಇದಾದ ಹತ್ತು ವರ್ಷಗಳ ಮೇಲೆ ಫ್ರೆಂಚರವನಾದ ಜಾಕ್ ಕಾರ್ಟಿಯರ್ ಸೆಂಟ್ ಲಾರೆನ್ಸ್ ನದಿಯನ್ನು ಪರಿಶೋಧಿಸುತ್ತ ಇಂದಿನ ಮಾಂಟ್ರಿಯಾಲ್‌ವರೆಗೆ ದೋಣಿಯಲ್ಲಿ ಹೋಗಿಬಂದನು.

ಆದರೆ ಬ್ರಿಟಿಷರಂತೆ ಫ್ರೆಂಚರು ಶಾಶ್ವತ ವಸಾಹತುಗಳನ್ನು ಸ್ಥಾಪಿಸಲಿಲ್ಲ. ಬ್ರಿಟಿಷರು ವಸಾಹತುಗಳನ್ನು ಸ್ಥಾಪಿಸಲು ಬಹಳ ಸಮಯ ತೆಗೆದುಕೊಂಡದ್ದು ಮತ್ತು ಫ್ರೆಂಚರು ವಸಾಹತುಗಳನ್ನು ಸ್ಥಾಪಿಸದೆ ಹೋದುದಕ್ಕೆ ಕಾರಣ ಆ ಎರಡೂ ದೇಶಗಳಲ್ಲೂ ಆಂತರಿಕ ಪರಿಸ್ಥಿತಿ ಮತೀಯ ಮತ್ತು ರಾಜಕೀಯ ಘರ್ಷಣೆಗಳಿಂದ ಹದಗೆಟ್ಟಿದ್ದದ್ದು.

ಆದರೆ ಈ ದೇಶಗಳಲ್ಲಿ ವಾಣಿಜ್ಯ ವರ್ಗಗಳು ಬೆಳೆದು ಪ್ರಭಾವಶಾಲಿಯಾದಂತೆಲ್ಲ ಇಂಗ್ಲೆಂಡ್, ಫ್ರಾನ್ಸ್ ಮತ್ತು ನೆದೆರ್‌ಲ್ಯಾಂಡ್‌ಗಳಲ್ಲಿ ಕೈಗಾರಿಕೆಗಳು, ವಾಣಿಜ್ಯ ಮತ್ತು ವ್ಯಾಪಾರ ವ್ಯವಹಾರಗಳು ರಭಸದಿಂದ ಹೆಚ್ಚಿಕೊಳ್ಳುತ್ತ ಹೋದವು. ಡಚ್ಚರ ವ್ಯಾಪಾರ ನೌಕಾದಳ ಆಗಿನ ಪ್ರಪಂಚದಲ್ಲಿ ಅತಿ ದೊಡ್ಡದಾಗಿತ್ತು. ಒಂದು ಕಾಲದಲ್ಲಿ ಪೋರ್ಚುಗೀಸರು ದೂರಪ್ರಾಚ್ಯ ದೇಶಗಳ ವ್ಯಾಪಾರದ ಮೇಲೆ ಏಕಸ್ವಾಮ್ಯತೆ ಹೊಂದಿದ್ದರು. ಡಚ್ ವ್ಯಾಪಾರಿಗಳು ಪೋರ್ಚುಗೀಸರ ಏಕಸ್ವಾಮ್ಯತೆಯನ್ನು ಮುರಿದು ದೂರಪ್ರಾಚ್ಯದ ವ್ಯಾಪಾರ ವ್ಯವಹಾರಗಳನ್ನು ಸ್ವಾಧೀನಗೊಳಿಸಿಕೊಂಡರು. ಸ್ಪಾನಿಷರ ಹಿಡಿತದಲ್ಲಿದ್ದ ಕರೆಬ್ಬಿಯನ್ ಪ್ರದೇಶದ ವ್ಯಾಪಾರದಲ್ಲೂ ಡಚ್ಚರು ಬಲಪ್ರಯೋಗದಿಂದ ಒಳಹೊಕ್ಕು ಸ್ಪೇನ್ ಪ್ರಾಬಲ್ಯವನ್ನು ಕುಗ್ಗಿಸಿದರು. ೧೬ನೆಯ ಶತಮಾನದ ಕೊನೆಯಲ್ಲಿ ಕೆಲವು ಇಂಗ್ಲಿಷ್ ವ್ಯಾಪಾರಿ ಕಂಪನಿಗಳು ಹುಟ್ಟಿಕೊಂಡು ಸ್ವಲ್ಪ ಕಾಲದಲ್ಲಿಯೇ ಪ್ರಬಲವಾಗಿ ಬೆಳೆದು ವಸಾಹತುಗಳ ಸ್ಥಾಪನೆಯಲ್ಲೂ ಬಹಳ ಮುಖ್ಯಪಾತ್ರ ವಹಿಸಿದವು. ಈ ಕಂಪನಿಯ ಅನುಕೂಲತೆಯೆಂದರೆ ಕೆಲವು ವ್ಯಾಪಾರಿಗಳು ಒಟ್ಟಿಗೆ ಸೇರಿ ವ್ಯಾಪಾರ ಅಥವಾ ಕೈಗಾರಿಕೆಯಲ್ಲಿ ಹಣ ಹೂಡುವುದು. ಹೀಗೆ ಸೇರಿಸಿದ ಅಪಾರ ಮೊತ್ತದ ಹಣವನ್ನು ಉತ್ಪಾದನೆಯಲ್ಲಿ ತೊಡಗಿಸಿ ಹೆಚ್ಚು ಲಾಭ ಗಳಿಸಲು ಸಾಧ್ಯವಾಗುತ್ತದೆ. ಹಣ ಹೂಡಿದ ಪ್ರತಿಯೊಬ್ಬನೂ ತಾನು ಹೂಡಿದಷ್ಟು ಹಣಕ್ಕೆ ಮಾತ್ರ ಜವಾಬ್ದಾರನಾಗುತ್ತಾನೆ. ಇದು ನಷ್ಟದ ಪರಿಸ್ಥಿತಿಯಲ್ಲಿ ಅವನಿಗೆ ರಕ್ಷಣೆ ನೀಡುತ್ತದೆ. ಇಂಥ ಕಂಪನಿಗಳ ಮೂಲಕ ಇಂಗ್ಲೆಂಡ್ ಅತ್ಯಂತ ವಿಸ್ತಾರವಾದ ಚಕ್ರಾಧಿಪತ್ಯವನ್ನು ಸ್ಥಾಪಿಸಲು ಸಾಧ್ಯವಾಯಿತು. ಈ ರೀತಿಯಲ್ಲಿ ಡಚ್ಚರು, ಫ್ರೆಂಚರು ಮತ್ತು ಮುಖ್ಯವಾಗಿ ಬ್ರಿಟಿಷರು ಅತ್ಯಂತ ಪ್ರಬಲವಾದ ವಸಾಹತುಶಾಹಿಗಳಾಗಿ ಬೆಳೆದು ಸ್ಪಾನಿಷರ ಪ್ರಾಬಲ್ಯವನ್ನು ಕುಗ್ಗಿಸಿದರು.

ಇಂಗ್ಲಿಷ್ ವಸಾಹತುಗಳ ಸ್ಥಾಪನೆ

ಅಮೆರಿಕದಲ್ಲಿ ಇಂಗ್ಲಿಷ್ ವಸಾಹತನ್ನು ಸ್ಥಾಪಿಸಿದ ಮೊಟ್ಟ ಮೊದಲಿಗನೆಂದರೆ ಸರ್ ಹಂಫ್ರಿ ಗಿಲ್ಬರ್ಟ್. ಇವನು ಆಕ್ಸ್‌ಫರ್ಡ್‌ನಲ್ಲಿ ಓದಿದ ಯೋಧ; ದೂರದ ಅಪರಿಚಿತ ದೇಶಗಳ ಬಗ್ಗೆ ಜೀವನಪರ್ಯಂತ ಆಸಕ್ತಿ ಉಳ್ಳವನಾಗಿದ್ದನು. ನೌಕಾವಿದ್ಯೆಯಲ್ಲಿ, ಭೌಗೋಳಿಕ ವಿಷಯಗಳಲ್ಲಿ ಪರಿಣತನಾಗಿದ್ದನು. ೧೫೭೮ರಲ್ಲಿ ಇಂಗ್ಲೆಂಡಿನ ರಾಣಿ ಗಿಲ್ಬರ್ಟ್‌ನಿಗೆ ವಿಧರ್ಮಿಗಳ, ಕ್ರಿಶ್ಚಿಯನ್ನರ ಆಡಳಿತದಲ್ಲಿರದ ಹೊಸದೇಶಗಳನ್ನು ಪರಿಶೋಧಿಸಿ ವಸಾಹತುಗಳನ್ನು ಸ್ಥಾಪಿಸುವ ಅಧಿಕಾರ ವಹಿಸಿದಳು. ಗಿಲ್ಬರ್ಟ್‌ನ

ಮೊದಲನೆಯ ಸಮುದ್ರಯಾನದಲ್ಲಿ ಏನಾಯಿತು ಎನ್ನುವುದು ಖಚಿತವಾಗಿ ತಿಳಿದು ಬಂದಿಲ್ಲ. ೧೫೮೩ರಲ್ಲಿ ಪ್ರಾರಂಭವಾದ ಅವನ ಎರಡನೆಯ ಸಮುದ್ರಯಾನದಲ್ಲಿ ಐದು ಹಡಗುಗಳು ಮತ್ತು ಇನ್ನೂರು ವಲಸೆಗಾರರು ಇದ್ದರು. ಗಿಲ್ಬರ್ಟ್ ಈ ವಲಸೆಗಾರರನ್ನು ಕರೆದೊಯ್ದು ನ್ಯೂಫೌಂಡ್‌ಲ್ಯಾಂಡ್‌ನಲ್ಲಿ ಇಳಿಸಿದನು. ನಂತರ ನೆಲಸಲು ಇನ್ನೂ ಉತ್ತಮವಾದ ಜಾಗಗಳನ್ನು ಹುಡುಕಲು ದಕ್ಷಿಣದ ಕಡೆಗೆ ಹಡಗಿನಲ್ಲಿ ಪ್ರಯಾಣ ಮುಂದುವರಿಸಿದನು. ಗಿಲ್ಬರ್ಟ್‌ನಿಗೆ ವಸಾಹತು ಸ್ಥಾಪನೆ ಮಾಡಲು ಆಗಲಿಲ್ಲ. ಅವನು ಇಂಗ್ಲೆಂಡಿಗೆ ವಾಪಸ್ಸು ಹೋಗುತ್ತಿದ್ದಾಗ ಅಜ಼ೋರ್ ದ್ವೀಪಗಳ ಬಳಿ ಬಿರುಗಾಳಿ ಎದ್ದು ಅವನ ಹಡಗು ಮುಳುಗಿಹೋಯಿತು.

ಗಿಲ್ಬರ್ಟ್ ಮುಗಿಸದ ಕೆಲಸವನ್ನು ಅವನ ತಮ್ಮ ಸರ್ ವಾಲ್ಟರ್ ರ್‍ಯಾಲೆ ಮುಂದುವರಿಸಿದನು. ಇವನು ಸ್ಫುರದ್ರೂಪಿಯಾದ, ಮಹತ್ವಾಕಾಂಕ್ಷೆಯುಳ್ಳ ಹುರುಪಿನ ವ್ಯಕ್ತಿಯಾಗಿದ್ದರಿಂದ ಎಲಿಜ಼ಬೆತ್ ರಾಣಿಗೆ ಬಹಳ ಅಚ್ಚುಮೆಚ್ಚಿನವನಾಗಿದ್ದ. ಇವನು ಅನೇಕ ಅನ್ವೇಷಣಕಾರರ ತಂಡಗಳನ್ನು ಉತ್ತರ ಅಮೆರಿಕ ಪೂರ್ವ ತೀರವನ್ನು ಪರಿಶೋಧನೆ ಮಾಡಲು ಕಳುಹಿಸಿದನು. ಈ ಪ್ರದೇಶಕ್ಕೆ, ಕನ್ಯೆಯಾಗಿಯೇ ಉಳಿದಿದ್ದ ರಾಣಿ ಎಲಿಜ಼ಬೆತ್‌ಳ ಗೌರವಾರ್ಥವಾಗಿ 'ವರ್ಜೀನಿಯ' ಎಂದು ಹೆಸರಿಟ್ಟನು. ೧೫೮೫ರಲ್ಲಿ ಇವನು ಸುಮಾರು ನೂರು ವಲಸೆಗಾರರನ್ನು ಉತ್ತರ ಕರೊಲಿನ ತೀರಕ್ಕೆ ಸಮೀಪದ ರಾನೋಕ್ ದ್ವೀಪದಲ್ಲಿ ವಾಸ ಮಾಡಲು ಕಳುಹಿಸಿದನು. ಆದರೆ ಇವರು ಅಲ್ಲಿ ವಾಸ ಮಾಡಲಾರದೆ ಮಾರನೆಯ ವರ್ಷ ಇಂಗ್ಲೆಂಡಿಗೆ ವಾಪಸಾದರು. ರ್‍ಯಾಲೆ ೧೫೮೭ರಲ್ಲಿ ಮತ್ತೊಂದು ವಲಸೆಗಾರರ ಗುಂಪನ್ನು ಗವರ್ನರ್ ಜಾನ್ ವೈಟ್ (John White)ನ ನಾಯಕತ್ವದಲ್ಲಿ ರಾನೋಕ್ ದ್ವೀಪಕ್ಕೆ ಕಳುಹಿಸಿದನು. ಈ ಗುಂಪಿನಲ್ಲಿ ಕೆಲವು ಹೆಂಗಸರು ಮತ್ತು ಮಕ್ಕಳು ಇದ್ದರು. ಗವರ್ನರ್ ಜಾನ್ ವೈಟ್ ಒಂದು ತಿಂಗಳು ರಾನೋಕ್ ದ್ವೀಪದಲ್ಲಿ ತಂಗಿದ್ದು ನಂತರ ಆಹಾರಪದಾರ್ಥಗಳು ಮತ್ತು ಇತರ ಅಗತ್ಯವಸ್ತುಗಳನ್ನು ತರಲು ಇಂಗ್ಲೆಂಡಿಗೆ ವಾಪಸ್ಸು ಹೋದನು. ಅವನು ತನ್ನ ಮಗಳು ಎಲಿನಾರ್ ಮತ್ತು ಮೊಮ್ಮಗಳು ವರ್ಜೀನಿಯಾ ಡೇರ್ ಇಬ್ಬರನ್ನೂ ರಾನೋಕ್ ದ್ವೀಪದಲ್ಲಿ ಬಿಟ್ಟುಹೋದನು. ಅವನ ಮೊಮ್ಮಗಳು ಹೊಸಪ್ರಪಂಚದಲ್ಲಿ ಜನಿಸಿದ ಮೊದಲನೆಯ ಇಂಗ್ಲಿಷ್ ಶಿಶು. ವೈಟ್ ಈ ವಲಸೆಗಾರರಿಗಾಗಿ ಇಂಗ್ಲೆಂಡಿನಿಂದ ಆಹಾರ ಪದಾರ್ಥಗಳು ಮತ್ತು ಇತರ ಅಗತ್ಯವಸ್ತುಗಳನ್ನು ತುಂಬಿಸಿಕೊಂಡು ಹೊರಟ ಹಡಗು ರಾನೋಕ್ ದ್ವೀಪವನ್ನು ತಲುಪಲೇ ಇಲ್ಲ. ಮುಂದಿನ ವರ್ಷ ಮತ್ತೊಂದು ಸಾಮಾನು ಸರಂಜಾಮು ತುಂಬಿಸಿ ಕಳುಹಿಸಿದ ಹಡಗು ರಾನೋಕ್ ದ್ವೀಪ ತಲುಪಿದಾಗ ಒಬ್ಬ ವಲಸೆಗಾರನೂ ಇರಲಿಲ್ಲ! ಅವರಿಗೆ ಏನಾಯಿತು? ಎಲ್ಲರೂ ಹಸಿವಿನಿಂದ ಸತ್ತರೋ ಅಥವಾ ಬೇರೆ ಎಲ್ಲಿಗಾದರೂ ಹೋದರೊ? ಎನ್ನುವುದು ಖಚಿತವಾಗಿ ತಿಳಿಯಲಿಲ್ಲ. ಅವರು ಬಿಟ್ಟುಹೋದ ಒಂದೇ ಒಂದು ಸುಳಿವು ಎಂದರೆ ಒಂದು ಬಾಗಿಲ ಮೇಲೆ ಕೆತ್ತಿದ್ದ 'ಕ್ರೊಯಟೋಯನ್' ಎಂಬ ಇಂಡಿಯನ್ ಬುಡಕಟ್ಟಿನ

ಹೆಸರು. ಇದರಿಂದ ಒಂದು ದಂತಕತೆ ಹುಟ್ಟಿಕೊಂಡಿತು. ಆ ದಂತಕತೆಯ ಪ್ರಕಾರ ಇಂಗ್ಲಿಷ್ ವಲಸೆಗಾರರು ಇಂಡಿಯನ್ ಬುಡಕಟ್ಟಿಗೆ ಸೇರಿಕೊಂಡು ಅವರಂತೆ ಆಗಿ ಅವರ ಬುಡಕಟ್ಟಿನಲ್ಲಿ ವಿಲೀನಗೊಂಡರು – ಎನ್ನುವ ನಂಬಿಕೆ ಜನಪ್ರಿಯವಾಯಿತು. ಆದರೆ ಈ ವಲಸೆಗಾರರು ಅದೃಶ್ಯರಾದುದು ಇಂದಿಗೂ ರಹಸ್ಯವಾಗಿ ಉಳಿದಿದೆ.

ರಾನೋಕ್ ದ್ವೀಪದ ವಲಸೆಗಾರರಿಗೆ ಆಹಾರ ಸಾಮಗ್ರಿಗಳನ್ನು ಕೊಂಡೊಯ್ಯುತ್ತಿದ್ದ ಹಡಗು ಅಲ್ಲಿಗೆ ಹೋಗಿ ತಲುಪದಿರಲು ಸ್ಪಾನಿಷ್ ನೌಕಾದಳದ ದಾಳಿಯು ಕಾರಣವಾಗಿತ್ತು. ಇಂಗ್ಲಿಷ್ ನಾವಿಕರು ತಮ್ಮ ಹಡಗುಗಳ ಮೇಲೆ ದಾಳಿ ಮಾಡಿ ಕೊಳ್ಳೆ ಹೊಡೆಯುತ್ತಿದ್ದುದು ಮತ್ತು ರಾಣಿ ಎಲಿಜ಼ಬೆತ್ ನೆದರ್‌ಲ್ಯಾಂಡಿನಲ್ಲಿ ಸೇರಿಕೊಂಡಿದ್ದ ಬಂಡಾಯಕಾರರಿಗೆ ಸಹಾಯ ಮಾಡುತ್ತಿದ್ದುದು ಸ್ಪೇನಿನ ದೊರೆ ಫಿಲಿಪ್‌ಗೆ ಬಹಳ ಕೋಪ ಉಂಟುಮಾಡಿದ್ದವು. ಆದ್ದರಿಂದ ಅವನು ಇಂಗ್ಲೆಂಡಿನ ಮೇಲೆ ದಾಳಿ ಮಾಡಲು ನಿರ್ಧರಿಸಿದನು. ಸ್ಪಾನಿಷ್ ನೌಕಾದಳ ಆಗ ಜಗತ್ತಿನಲ್ಲೇ ಅತಿ ದೊಡ್ಡದಾಗಿತ್ತು. ಸ್ಪೇನ್ ಮತ್ತು ಇಂಗ್ಲೆಂಡ್ ದೇಶಗಳ ನಡುವೆ ಜರುಗಿದ ನೌಕಾಯುದ್ಧದಲ್ಲಿ ಇಂಗ್ಲಿಷರ ಚಿಕ್ಕ ನೌಕೆಗಳು ಸ್ಪಾನಿಷರ ದೊಡ್ಡ ಹಡಗುಗಳನ್ನು ಛಿದ್ರಗೊಳಿಸಿ ಅಪಾರ ಹಾನಿ ಉಂಟು ಮಾಡಿದವು. ಇಂಗ್ಲಿಷ್ ಕಡಲ್ಗಾಲುವೆಯಲ್ಲಿ ಸ್ಪಾನಿಷರ ದೊಡ್ಡ ಹಡಗುಗಳು ಬೇಗನೆ ಅತ್ತ ಇತ್ತ ತಿರುಗಲಾರದೆ, ವೇಗವಾಗಿ ಚಲಿಸಲಾರದೆ ಇಂಗ್ಲಿಷರ ಫಿರಂಗಿಗಳಿಗೆ ಸುಲಭವಾಗಿ ಗುರಿಯಾದವು. ಸ್ಪಾನಿಷರ ದುರದೃಷ್ಟಕ್ಕೆ ಹವಾಮಾನ ಬದಲಾಗಿ ಬಿರುಗಾಳಿ ಬೀಸಿ, ಧಾರಾಕಾರವಾಗಿ ಮಳೆ ಸುರಿದು ಅನೇಕ ಹಡಗುಗಳು ದಿಕ್ಕು ತಪ್ಪಿದವು. ಹೇಗೋ ತಪ್ಪಿಸಿ ಉಳಿದುಕೊಂಡ ಕೆಲವು ಹಡಗುಗಳು ಬ್ರಿಟಿಷ ದ್ವೀಪಗಳನ್ನು ಬಳಸಿ ಸ್ಪೇನನ್ನು ಸೇರಿಕೊಂಡವು.

ಸ್ಪಾನಿಷ್ ನೌಕಾದಳದ ಸೋಲು ಬ್ರಿಟಿಷ್ ನೌಕಾದಳದ ಅಭ್ಯುದಯಕ್ಕೆ ಕಾರಣವಾಯಿತು. ಪ್ರಬಲವಾದ ನೌಕಾದಳದ ಸಹಾಯದಿಂದ ಬ್ರಿಟಿಷರು ಎಲ್ಲ ಸಮುದ್ರ ಮಾರ್ಗಗಳನ್ನು ನಿಯಂತ್ರಿಸಲು ಸಾಧ್ಯವಾಯಿತು. ಇದರಿಂದಾಗಿ ಇಂಗ್ಲಿಷರು ಕ್ರಮೇಣ ಸೂರ್ಯ ಮುಳುಗದ ಸಾಮ್ರಾಜ್ಯದ ಒಡೆಯರಾದರು.

೧೫೮೪ರಷ್ಟು ಹಿಂದೆಯೆ ಅಮೆರಿಕದಲ್ಲಿ ವಸಾಹತುಗಳನ್ನು ಸ್ಥಾಪಿಸಲು ಸರ್ಕಾರ ಧನಸಹಾಯ ಮಾಡಬೇಕಾದ ಅಗತ್ಯವನ್ನು ಕುರಿತು ಹಾಕ್‌ಲ್ಯುಟ್ ಎಂಬ ವಿದ್ವಾಂಸನು ಲೇಖನಗಳನ್ನು ಬರೆದು ವಸಾಹತುಗಳಿಂದ ಇಂಗ್ಲೆಂಡಿಗೆ ಆಗುವ ಅನುಕೂಲಗಳನ್ನು ಪರಿಣಾಮಕಾರಿಯಾಗುವಂತೆ ವಿವರಿಸಿದ್ದನು. ಇಂಡ್ಲೆಂಡ್ ಉತ್ಪಾದನೆ ಮಾಡುವ ವಸ್ತುಗಳಿಗೆ ಅಮೆರಿಕ ವಸಾಹತುಗಳು ಮಾರುಕಟ್ಟೆಗಳಾಗುತ್ತವೆ ಮತ್ತು ಕೆಲಸವಿಲ್ಲದೆ ಸುಮ್ಮನೆ ಕಾಲಹರಣ ಮಾಡುವ ಇಂಗ್ಲಿಷ್ ಯುವಕರಿಗೆ ಅಲ್ಲಿ ಕೆಲಸ ದೊರೆಯುತ್ತದೆ, ಅಲ್ಲಿನ ಕಾಡಿನ ಮರಗಳು ಹಡಗುಗಳನ್ನು ಕಟ್ಟಲು ಸಿಗುತ್ತವೆ ಎಂದು ವಾದಿಸಿ ರಾಣಿ ಎಲಿಜ಼ಬೆತಳ ಮನ ಒಲಿಸಲು ಮಾಡಿದ ಪ್ರಯತ್ನಗಳು ಸಫಲವಾಗಲಿಲ್ಲ. ೧೬೦೩ರಲ್ಲಿ ರಾಣಿ

ಎಲಿಜ಼ಬೆತಳು ಮರಣ ಹೊಂದಿದ ಮೇಲೆ ಅಮೆರಿಕದಲ್ಲಿ ವಸಾಹತುಗಳ ಸ್ಥಾಪನೆಗಾಗಿ ಪೂರ್ಣ ಪ್ರಮಾಣದ ಪ್ರಯತ್ನಗಳು ಪ್ರಾರಂಭವಾದವು. ಖಾಸಗಿ ವರ್ತಕರು ಈ ಸಾಹಸಕಾರ್ಯದಲ್ಲಿ ಹಣ ಹೂಡಲು ಉತ್ಸುಕತೆಯಿಂದ ಮುಂದೆ ಬಂದರು. ವರ್ತಕರ ಮುಖ್ಯ ಗುರಿ ಲಾಭ ಗಳಿಕೆಯಾಗಿತ್ತು, ದೇಶದ ಹಿತಾಸಕ್ತಿಗಳಲ್ಲ. ಉದ್ದೇಶ ಏನೇ ಇರಲಿ, ವರ್ತಕರು ಆಗ ಧನಸಹಾಯ ನೀಡಿ ಬೆಂಬಲಿಸದೆ ಹೋಗಿದ್ದರೆ ಅಮೆರಿಕದಲ್ಲಿ ಇಂಗ್ಲಿಷ್ ವಸಾಹತುಗಳ ಸ್ಥಾಪನೆ ಸಾಧ್ಯವಾಗುತ್ತಿರಲಿಲ್ಲ.

ಸೆಪ್ಟೆಂಬರ್ ೧೬೦೫ರಲ್ಲಿ ಎರಡು ಇಂಗ್ಲಿಷ್ ವರ್ತಕರ ಗುಂಪುಗಳು ಆಗಿನ ರಾಜ ಒಂದನೆಯ ಜೇಮ್ಸ್‌ನ ಆಸ್ಥಾನಕ್ಕೆ ಅಮೆರಿಕದ ವರ್ಜೀನಿಯಾ ಪ್ರದೇಶದಲ್ಲಿ ವಸಾಹತುಗಳನ್ನು ಸ್ಥಾಪನೆ ಮಾಡಲು ಅಪ್ಪಣೆ ಪಡೆಯಲು ಅರ್ಜಿ ಸಲ್ಲಿಸಿದವು. ಕೆಲವು ತಿಂಗಳ ನಂತರ ಅಪ್ಪಣೆ ದೊರೆಯಿತು. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಎರಡು ಸಂಯುಕ್ತ ಬಂಡವಾಳ (ಬ್ಯಾಂಕ್) ಸಂಸ್ಥೆಗಳನ್ನು ರಚಿಸಲಾಯಿತು. ಒಂದು ಬ್ಯಾಂಕ್ ಲಂಡನ್ ವರ್ತಕರ ನಿಯಂತ್ರಣಕ್ಕೆ ಒಳಪಟ್ಟಿತ್ತು. ಇನ್ನೊಂದು ಪ್ಲಿಮತ್ ಮತ್ತು ಬ್ರಿಸ್ಟಲ್ ವರ್ತಕರ ನಿರ್ವಹಣೆಗೆ ಒಳಪಟ್ಟಿತ್ತು. ಲಂಡನ್ ವರ್ತಕರ ಬ್ಯಾಂಕ್ ದಕ್ಷಿಣ ವರ್ಜೀನಿಯಾ ಪ್ರಾಂತದಲ್ಲಿ ವಸಾಹತುಗಳ ಸ್ಥಾಪನೆ ಮಾಡಬೇಕೆಂದು ಮತ್ತು ಪ್ಲಿಮತ್-ಬ್ರಿಸ್ಟಲ್ ವರ್ತಕರ ಬ್ಯಾಂಕ್ ಉತ್ತರ ವರ್ಜೀನಿಯಾ ಪ್ರಾಂತದಲ್ಲಿ ವಸಾಹತುಗಳ ಸ್ಥಾಪನೆ ಮಾಡಬೇಕೆಂದು ನಿರ್ಧರಿಸಲಾಯಿತು. ಅಮೆರಿಕದಲ್ಲಿ ವಸಾಹತುಗಳನ್ನು ಸ್ಥಾಪನೆ ಮಾಡಲು ಹೊರಡಿಸಿದ ರಾಜಾಜ್ಞೆಯ ಮತ್ತು ಹಣ ಹೂಡಿದ ವರ್ತಕರ ಉದ್ದೇಶ, ಅವರು ಹೊರಡಿಸಿದ ಪ್ರಣಾಳಿಕೆ ಪ್ರಕಾರ, ಕ್ರೈಸ್ತ ಮತ ಪ್ರಚಾರಣೆ ಮುಖ್ಯವಾಗಿತ್ತು. ಆ ಪ್ರಣಾಳಿಕೆಯಲ್ಲಿ ವರ್ತಕರ ಹಕ್ಕು ಬಾಧ್ಯತೆಗಳನ್ನು ವಿವರಿಸಲಾಗಿತ್ತು. ಅದರ ಪ್ರಕಾರ ಭೂಮಿಯನ್ನು ಅಗೆದು ಚಿನ್ನ, ಬೆಳ್ಳಿ ಮತ್ತು ತಾಮ್ರದ ಅದುರುಗಳನ್ನು ಹೊರತೆಗೆಯಲು ಗಣಿಗಳನ್ನು ಸ್ಥಾಪಿಸುವ ಹಕ್ಕನ್ನು ಅವರು ಪಡೆದಿದ್ದರು.

ಡಿಸೆಂಬರ್ ೨೦, ೧೬೦೬ರಲ್ಲಿ ಲಂಡನ್ ಕಂಪನಿಯವರು ಮೂರು ಹಡಗುಗಳಲ್ಲಿ ಒಂದು ನೂರು ವಲಸೆಗಾರರನ್ನು ಅಮೆರಿಕಕ್ಕೆ ಕಳುಹಿಸಿದರು. ಈ ಹಡಗುಗಳು ೧೬೦೭ರ ಮೇ ತಿಂಗಳಲ್ಲಿ ಚೆಸ್‌ಪೀಕ್ ಕೊಲ್ಲಿಯ ಪ್ರದೇಶವನ್ನು ತಲುಪಿ 'ಜೇಮ್ಸ್ ಟೌನ್' ವಸಾಹತನ್ನು ಸ್ಥಾಪಿಸಿದರು. ಇದು 'ಹೊಸ ಪ್ರಪಂಚ'ದಲ್ಲಿ ಸ್ಥಿರವಾಗಿ ಸ್ಥಾಪನೆಗೊಂಡ ಇಂಗ್ಲಿಷ್ ವಸಾಹತುಗಳಲ್ಲಿ ಮೊದಲನೆಯದು. ಜೇಮ್ಸ್ ಟೌನ್ ಸ್ಥಾಪನೆಯಾದಂದಿನಿಂದ ಕಷ್ಟ ನಷ್ಟಗಳಿಗೆ ಗುರಿಯಾಯಿತು. ಈ ವಲಸೆಗಾರರಿಗೆ ಒಂದಾದ ಮೇಲೆ ಒಂದರಂತೆ ಕೆಡಕುಗಳು ಉಂಟಾದವು. ವಲಸೆಗಾರರು ಮಾಡಿದ ಮೊದಲನೆಯ ತಪ್ಪು ವಾಸಕ್ಕೆ ತಗ್ಗಾದ ಜವುಗು ಪ್ರದೇಶವನ್ನು ಆರಿಸಿಕೊಂಡಿದ್ದು. ಮಲೇರಿಯ ಹರಡುವ ಸೊಳ್ಳೆ ತುಂಬಿದ ಆ ಜಾಗ ಅವರಿಗೆ ಇಂಡಿಯನ್ನರ ದಾಳಿಯಿಂದ ಸುರಕ್ಷಿತವಾಗಿರುವಂತೆ ಕಂಡುದರಿಂದ ಅಲ್ಲಿ ನೆಲಸಿದರು. ಅವರು ತಡವಾಗಿ ಬಂದುದರಿಂದ ಸಸಿಗಳನ್ನು ನೆಡುವ

ಕಾಲ ಮುಗಿದು ಏನನ್ನೂ ಬೆಳೆಯಲಾರದೆ ಆಹಾರದ ಕೊರತೆ ಉಂಟಾಯಿತು. ಅವರ ನಾಯಕರು ಲಂಡನ್ ವರ್ತಕರ ಸಹಾಯಕರಾಗಿದ್ದವರು. ಕಾಡಿನ ಜೀವನದ ಸಮಸ್ಯೆಗಳನ್ನು ಅವರು ಎದುರಿಸಲಾರದೆ ಹೋದರು. ಬಹುಮಂದಿ ವಲಸೆಗಾರರಿಗೆ ಹೊಸ ಪರಿಸರಕ್ಕೆ ಹೊಂದಿಕೊಳ್ಳುವ ಬುದ್ಧಿವಂತಿಕೆಯಾಗಲಿ, ಉಪಯೋಗಕ್ಕೆ ಬರುವಂತಹ ಕೈಕಸುಬುಗಳಾಗಲಿ ಗೊತ್ತಿರಲಿಲ್ಲ. ಅವರು ತಮ್ಮೊಳಗೆ ಜಗಳ ಪ್ರಾರಂಭಿಸಿದರು. ಮೊದಲನೆಯ ಚಳಿಗಾಲದಲ್ಲಿ ಅವರಲ್ಲಿ ಅರ್ಧಭಾಗಕ್ಕಿಂತ ಹೆಚ್ಚು ಜನ ಅವಸಾನ ಹೊಂದಿದರು. ೧೬೦೯ರಲ್ಲಿ ಕಂಪನಿಯವರು ಜೇಮ್ಸ್ ಟೌನ್ ವಸಾಹತನ್ನು ಬಲಗೊಳಿಸಲು ಸರ್ ಥಾಮಸ್ ಗೇಟ್ಸ್‌ನ ನಾಯಕತ್ವದಲ್ಲಿ ಒಂಬತ್ತು ಹಡಗುಗಳಲ್ಲಿ ಆಹಾರ ಸಾಮಗ್ರಿಗಳೊಂದಿಗೆ ನಾವಿಕರು ಮತ್ತು ವಲಸೆಗಾರರು ಸೇರಿ ೫೦೦ ಜನರನ್ನು ಕಳುಹಿಸಿದರು. ದಾರಿಯಲ್ಲಿ ಬಿರುಗಾಳಿಗೆ ಸಿಕ್ಕ ಹಡಗುಗಳು ಮುಳುಗಿ ಗೇಟ್ಸ್ ಮತ್ತು ಅಳಿದುಳಿದ ಇತರರು ಬರ್ಮುಡ ದ್ವೀಪದಲ್ಲಿ ಚಳಿಗಾಲ ಕಳೆಯಬೇಕಾಯಿತು. (ಈ ಸಂಗತಿಯ ಆಧಾರದ ಮೇಲೆ ಶೇಕ್ಸ್‌ಪಿಯರ್ ತನ್ನ 'ಟೆಂಪೆಸ್ಟ್' ನಾಟಕವನ್ನು ಬರೆದನು) ಗೇಟ್ಸ್ ಮತ್ತು ಸಂಗಡಿಗರು ಎರಡು ಚಿಕ್ಕ ಹಡಗುಗಳಲ್ಲಿ ಜೇಮ್ಸ್ ಟೌನ್ ತಲುಪಿದಾಗ ಅದು ಸ್ಮಶಾನದಂತೆ ಕಂಡುಬಂತು. ಅಲ್ಲಿ ನೆಲಸಿದ್ದವರಲ್ಲಿ ಅರವತ್ತು ಜನ ಮಾತ್ರ ಅರೆಜೀವಿಗಳಾಗಿ ಹೇಗೋ ಬದುಕಿ ಉಳಿದಿದ್ದರು. ಉಳಿದವರು ಹಸಿವು, ರೋಗ ರುಜಿನಗಳಿಂದ ಸತ್ತು ಮಣ್ಣು ಪಾಲಾಗಿದ್ದರು. ಅಲ್ಲಿನ ದೃಶ್ಯ ಹೃದಯವಿದ್ರಾವಕವಾಗಿತ್ತು. ತಿನ್ನಬಹುದಾದ ಎಲ್ಲವನ್ನೂ ಜನ ತಿಂದು ಮುಗಿಸಿದ್ದರು. ಒಬ್ಬ ತನ್ನ ಹೆಂಡತಿಯನ್ನು ಕೊಂದು ತಿಂದಿದ್ದನು!

ಕಷ್ಟಜೀವನದ ಅನುಭವವಿಲ್ಲದುದು ಅವರ ಸಾವಿಗೆ ಮುಖ್ಯಕಾರಣವಾಯಿತು. ಇದರಲ್ಲಿ ಕಂಪನಿಯವರ ತಪ್ಪೂ ಸೇರಿತ್ತು. ವಲಸೆಗಾರರಲ್ಲಿ ಹೆಚ್ಚು ಜನ ಏಳು ವರ್ಷಗಳ ಕರಾರಿನ ಮೇಲೆ ಬಂದಿದ್ದು, ಸಂಬಳಕ್ಕಾಗಿ ಕೆಲಸಮಾಡಲು ಕರೆತಂದವರಾಗಿದ್ದರು. ಭೂಮಿಯೆಲ್ಲ ಕಂಪನಿಗೆ ಸೇರಿದ್ದು, ಸ್ವಂತ ಸಾಗುವಳಿಗೆ ಅವಕಾಶವಿರಲಿಲ್ಲ. ಸಾಗುವಳಿ ಮಾಡುವುದೂ ಅವರಿಗೆ ಗೊತ್ತಿರಲಿಲ್ಲ. ಇಂಗ್ಲೆಂಡಿನಲ್ಲಿ ಕಷ್ಟದ ಪರಿಸ್ಥಿತಿ ಉಂಟಾಗಿ ಭೂಮಿಯನ್ನು ಕಳೆದುಕೊಂಡು ಕೆಲಸವಿಲ್ಲದೆ ಇದ್ದ ಅನುಭವಸ್ಥ ರೈತರುವಲಸೆ ಬರಲು ತಯಾರಿದ್ದರು. ಅಂಥವರನ್ನು ಬಿಟ್ಟು ಕಡಿಮೆ ಸಂಬಳಕ್ಕೆ ಒಪ್ಪಿಕೊಂಡ ಗೂಂಡಾಗಳನ್ನು, ಅಪರಾಧಿಗಳನ್ನು ಮತ್ತು ಮೈಗಳ್ಳ ಅಲೆಮಾರಿಗಳನ್ನು ಕರೆತಂದಿದ್ದು ಕಂಪನಿಯವರ ದೊಡ್ಡ ತಪ್ಪು.

ವರ್ಜೀನಿಯಾ ಪ್ರಾಂತದ ಬಗ್ಗೆ ಕಂಪನಿಯವರಿಗೆ ಹೆಚ್ಚಿನ ಮಾಹಿತಿ ಇರಲಿಲ್ಲ. ಅವರಿಗೇ ಗೊತ್ತಿಲ್ಲದ ಮೇಲೆ ಇನ್ನು ವಲಸೆಗಾರರಿಗೆ ಇವರು ಅಲ್ಲಿ ಬದುಕುವ ಬಗೆಯನ್ನು ಹೇಳಿಕೊಡುವುದು ಹೇಗೆ ಸಾಧ್ಯ? ವಸಾಹತು ನಡೆಸಿಕೊಂಡು ಹೋಗಲು ವಲಸೆಗಾರರ ಒಂದು ಸಮಿತಿ ರಚನೆ ಮಾಡಿದ್ದರು. ಆದರೆ ಅಧಿಕಾರವನ್ನು ಕಂಪನಿಯವರು ತಾವೇ ಇಟ್ಟುಕೊಂಡುಬಿಟ್ಟರು. ವಲಸೆಗಾರರಿಗೆ ವ್ಯವಸಾಯ ಮಾಡಿ, ಮನೆ ಮಠ ಕಟ್ಟಿಕೊಳ್ಳಿ

ಎಂದು ಒತ್ತಾಯ ಮಾಡುವುದನ್ನ ಬಿಟ್ಟು, ಮರಳಗಾಡಲ್ಲಿ ಮರೀಚಿಕೆ ಹಿಡಿಯುವುದಕ್ಕೆ ಹೋದ ಹಾಗೆ, ಕಂಪನಿಯವರು ವಲಸೆಗಾರರನ್ನು ಚಿನ್ನ ಹುಡುಕಲು, ಅಲ್ಲಿ ಹರಿಯುತ್ತಿದ್ದ ನದಿಗಳನ್ನು ಪರಿಶೋಧಿಸಿ ಅವುಗಳ ಮೂಲಕ ಶಾಂತಿಸಾಗರಕ್ಕೆ ಹೋಗಿ ಸೇರಲು ದಾರಿ ಯಾವುದಾದರೂ ಇದೆಯೆ ಎಂದು ಕಂಡುಹಿಡಿಯುವಂತಹ ಪ್ರಯೋಜನವಿಲ್ಲದ ಕೆಲಸಗಳಲ್ಲಿ ತೊಡಗಿಸಿದರು. ಇದರಿಂದಾಗಿ ವಸಾಹತುಗಾರರಿಗೆ ತಾವು ಇಲ್ಲಿಗೆ ಬಂದಿರುವ ಉದ್ದೇಶ ಏನು ಎಂದು ತಿಳಿಯದೆ ಗೊಂದಲದ ಪರಿಸ್ಥಿತಿ ಉಂಟಾಯಿತು. ಅವರಲ್ಲಿ ಕೆಲವರು ಸೋಮಾರಿಗಳು, ಮತ್ತೆ ಕೆಲವರು ಇಂಡಿಯನ್ನರಿಗೆ ಆಯುಧಗಳನ್ನು ಮಾರಿ ಲಾಭ ಪಡೆದರು. ಇದು ತಮ್ಮ ಕತ್ತನ್ನು ತಾವೇ ಕೊಯ್ದು ಕೊಳ್ಳುವಂತ ಮೂರ್ಖತನ ಎಂದು ಅವರ ಮಂದ ಬುದ್ಧಿಗೆ ಹೊಳೆಯಲಿಲ್ಲ.

ಪ್ರತಿವರ್ಷ ಎಷ್ಟೋ ವಸಾಹತುಗಾರರು ಹೊಟ್ಟೆಗಿಲ್ಲದೆ ಸಾಯುತ್ತಿದ್ದರು. ಪೌಹಾಟನ್ ಇಂಡಿಯನ್ನರು ಮೊದಲ ವರ್ಷದ ಚಳಿಗಾಲದಲ್ಲಿ ಸಹಾಯ ಮಾಡದೆ ಹೋಗಿದ್ದರೆ ಈ ವಸಾಹತು ಉಳಿಯುತ್ತಿರಲಿಲ್ಲ. ವಸಾಹತುಗಾರರಿಗೆ ಇಂಡಿಯನ್ನರು ಆಹಾರ ಒದಗಿಸಿ, ಕಾಡಿನಲ್ಲಿ ಬದುಕುವುದು ಹೇಗೆ ಎನ್ನುವುದನ್ನು ಹೇಳಿಕೊಟ್ಟು, ಹೊಸ ಬೆಳೆಗಳಾದ ಜೋಳ, ಸಿಹಿ ಗೆಣಸು ಇವುಗಳನ್ನು ಬೆಳೆಯುವುದು ಹೇಗೆ ಎಂದು ತೋರಿಸಿಕೊಟ್ಟು ಅವರ ಜೀವ ಉಳಿಸಿದರು. ಇಂಡಿಯನ್ನರಿಂದ ಇದನ್ನೆಲ್ಲ ಕಲಿತು ಕ್ರಮೇಣ ವಸಾಹತುಗಾರರು ತಮ್ಮ ಆಹಾರ ಪರಿಸ್ಥಿತಿಯನ್ನು ಸುಧಾರಿಸಿಕೊಂಡರು. ಹೀಗೆ ಚೇತರಿಸಿಕೊಂಡ ವಸಾಹತುಗಾರರು 'ಉಪ್ಪುಂಡ ಮನೆಗೆ ಎರಡು ಬಗೆ'ದರು ಎನ್ನುವ ಗಾದೆಯಂತೆ ಮೋಸ, ದಗ, ಪಿತೂರಿಗಳಿಂದ ಇಂಡಿಯನ್ನರ ಭೂಮಿಗಳನ್ನು ಆಕ್ರಮಣ ಮಾಡತೊಡಗಿದರು. ಈ ವಿಶ್ವಾಸಘಾತಕರ ಆಕ್ರಮಣವನ್ನು ಇಂಡಿಯನ್ನರು ಸುಮ್ಮನೆ ಸಹಿಸಿಕೊಂಡಿರಲಿಲ್ಲ. ಸಮಯ ಬಂದಾಗ ಇಂಡಿಯನ್ನರು ವೀರಾವೇಶದಿಂದ ಹೋರಾಡಿ ಬಿಳಿಯರಿಗೆ ಅಪಾರ ಹಾನಿ, ಸಾವುನೋವುಗಳನ್ನು ಉಂಟುಮಾಡುತ್ತಿದ್ದರು. ಜೇಮ್ಸ್ ಟೌನ್ ಉಳಿಸಿದವನು ಜಾನ್ ರಾಲ್ಫೀ. ಈತ ಹೊಗೆಸೊಪ್ಪಿನ ಒಳ್ಳೆಯ ತಳಿಯ ಬೀಜಗಳನ್ನು ಹೇಗೋ ಸಂಪಾದಿಸಿ ಹೊಗೆಸೊಪ್ಪಿನ ವ್ಯವಸಾಯವನ್ನು ಪ್ರಾರಂಭಿಸಿದನು. ಹೊಗೆಸೊಪ್ಪಿನ ವ್ಯಾಪಾರ ಲಾಭದಾಯಕವಾಗಿ, ಜೇಮ್ಸ್ ಟೌನ್ ಅಭಿವೃದ್ಧಿಗೊಂಡಿತು. ರಾಲ್ಫೀ ವಸಾಹತುಗಳ ಮೇಲೆ ಇಂಡಿಯನ್ನರ ದಾಳಿಯನ್ನು ನಿಲ್ಲಿಸಿ ಶಾಂತಿ ಸ್ಥಾಪನೆ ಮಾಡಲು ಪೌಹಟನ್ ಇಂಡಿಯನ್ನರ ಮುಖ್ಯಸ್ಥನ ಮಗಳಾದ ಪೋಕಹಾಂಟಸಳನ್ನು ಮದುವೆಯಾದನು. ಪೋಕಹಾಂಟಸಳು ಅಸದೃಶಳಾದ ಸುಂದರಿಯಾಗಿದ್ದಳು. ಅವಳು ಅಮೆರಿಕದಲ್ಲಿ ದಂತಕತೆ ಯಾಗಿದ್ದಾಳೆ. ಈಗಲೂ ಉತ್ತಮ ಕುಲದ ವರ್ಜೀನಿಯನ್ನರು ತಾವು ರಾಜಕುಮಾರಿ ಪೋಕಹಾಂಟಸಳ ರಕ್ತಸಂಬಂಧಿಗಳೆಂದು ಹೇಳಿಕೊಳ್ಳಲು ಹೆಮ್ಮೆಪಡುತ್ತಾರೆ!

೧೬೨೨ರಲ್ಲಿ ಪೋಕಹಾಂಟಸಳ ಚಿಕ್ಕಪ್ಪನ ನಾಯಕತ್ವದಲ್ಲಿ ಪೌಹಾಟನ್

ಇಂಡಿಯನ್ನರು ಬಿಳಿಯರ ಆಕ್ರಮಣವನ್ನು ತಡೆಗಟ್ಟಲು ದಂಗೆಯೆದ್ದರು. ಈ ಘರ್ಷಣೆಯಲ್ಲಿ ೩೪೭ ಬಿಳಿಯರನ್ನು ಪೋಕಹಾಂಟಸಳ ಸಂಬಂಧಿಗಳು ಕೊಂದುಹಾಕಿದರು. ಹೀಗೆ ಸತ್ತವರಲ್ಲಿ ಪೋಕಹಾಂಟಸಳ ಗಂಡ ರಾಲ್ಫೀಯೂ ಸೇರಿದ್ದನು. ರಾಲ್ಫೀ ಮತ್ತು ರಾಜಕುಮಾರಿ ಪೋಕಹಾಂಟಸಳ ದುರಂತಕತೆ ಹೃದಯಸ್ಪರ್ಶಿಯಾಗಿದೆ.

ವರ್ಜೀನಿಯ ವಸಾಹತನ್ನು ಉಳಿಸಿದ್ದು ಹೊಗೆಸೊಪ್ಪಿನ ಬೆಳೆ. ಇಲ್ಲಿ ಬೆಳೆದ ಹೊಗೆ ಸೊಪ್ಪನ್ನು ಇಂಗ್ಲೆಂಡಿಗೆ ರಫ್ತು ಮಾಡಿ ಲಾಭ ಗಳಿಸಿ ಈ ವಸಾಹತುಗಳ ಜನಜೀವನ ಉತ್ತಮಗೊಳ್ಳುತ್ತ ಹೋಯಿತು. ಹೊಗೆಸೊಪ್ಪಿನ ಮಾರಾಟದಿಂದ ಬಂದ ಲಾಭ ಕಂಪನಿಗೆ ಸೇರುತ್ತಿರಲಿಲ್ಲ. ಏಕೆಂದರೆ ಮೊದಲು ಬಂದ ವಲಸೆಗಾರರು ತಮ್ಮ ಏಳು ವರ್ಷಗಳ ಕರಾರು ಮುಗಿಸಿ ಸ್ವತಂತ್ರರಾಗಿದ್ದರು. ಕಂಪನಿಯವರು ವಲಸೆಗಾರರನ್ನು ಉಳಿಸಿಕೊಳ್ಳಲು ಮೊದಲು ಅವರನ್ನು ಗೇಣಿದಾರರನ್ನಾಗಿ ಮಾಡಿ ಕಾಲಾನಂತರ ಭೂಮಿಯ ಒಡೆತನವನ್ನು ಅವರಿಗೆ ವಹಿಸಿದ್ದರಿಂದ ಅವರೆಲ್ಲ ಸ್ವಂತ ಆಸ್ತಿವಂತರಾಗಿದ್ದರು. ಆದ್ದರಿಂದ ಹೊಗೆಸೊಪ್ಪಿನಿಂದ ಬಂದ ಲಾಭ ರೈತರಿಗೆ ಸೇರುತ್ತಿತ್ತು. ಹೀಗೆ ಈ ವಸಾಹತುಗಳು ಆರ್ಥಿಕವಾಗಿ ಅಭಿವೃದ್ಧಿಗೊಳ್ಳುತ್ತ ಹೋದವು.

ವಸಾಹತುಗಳ ನಿರ್ವಹಣೆಯಲ್ಲಿ ಕೆಲವು ಮುಖ್ಯ ಮಾರ್ಪಾಡುಗಳಾಗಿ ವಸಾಹತುಗಳ ಅಭಿವೃದ್ಧಿಗೆ ಅನುಕೂಲವಾಯಿತು. ಪರಿಷ್ಕೃತವಾದ ಪ್ರಣಾಳಿಕೆಯ ಪ್ರಕಾರ ಒಬ್ಬ ಸ್ಥಳೀಯ ಮುಖ್ಯ ಆಡಳಿತಗಾರನನ್ನು ನೇಮಿಸಿ ಅವನಿಗೆ ವಸಾಹತುಗಾರರನ್ನು ನಿಯಂತ್ರಿಸುವ ಅಧಿಕಾರವನ್ನು ಕೊಡಲಾಯಿತು. ವಸಾಹತುಗಾರರಿಗೆ ಸ್ವಂತ ಭೂಮಿಯನ್ನು ಪಡೆಯುವುದು ಸುಲಭ ಮಾಡಲಾಯಿತು. ೧೬೧೯ರಲ್ಲಿ ಪ್ರಾರಂಭಾವಸ್ಥೆಯ ಸ್ವಯಂ ಆಡಳಿತ ಸರ್ಕಾರವನ್ನು ಸ್ಥಾಪನೆ ಮಾಡಲಾಯಿತು. ಇದು ಕೆಲವು ನಗರಗಳು ಕೂಡಿ ಆದ ಸಂಸ್ಥೆ ಎನ್ನಬಹುದು. ವಸಾಹತಿನ ಬೇರೆ ಬೇರೆ ಭಾಗಗಳಿಂದ ಆಯ್ಕೆಯಾದ ಪ್ರತಿನಿಧಿಗಳಿಂದ ಕೂಡಿದ ಈ ಸಂಸ್ಥೆ ವಸಾಹತಿನ ಮುಖ್ಯ ಆಡಳಿತಗಾರನಿಗೆ ಸ್ಥಳೀಯ ಸಮಸ್ಯೆಗಳ ಪರಿಹಾರದ ಬಗ್ಗೆ ಸಲಹೆ ನೀಡುತ್ತಿತ್ತು. ಈ ವ್ಯವಸ್ಥೆಯಿಂದ ಕಾಲಕ್ರಮದಲ್ಲಿ ಅಮೆರಿಕದ ಪ್ರಜಾಪ್ರತಿನಿಧಿ ಸರ್ಕಾರ ಬೆಳೆದು ವ್ಯವಸ್ಥೆಗೊಂಡಿತು.

ಈ ಎಲ್ಲ ಸುಧಾರಣೆಗಳು ಲಂಡನ್ ಕಂಪನಿಯನ್ನು ಉಳಿಸಲಾಗಲಿಲ್ಲ. ೧೬೨೨ರಲ್ಲಿ ವರ್ಜೀನಿಯಾ ವಸಾಹತಿನ ವಿರುದ್ಧ ಇಂಡಿಯನ್ನರು ದಂಗೆ ಎದ್ದರು. ಕಂಪನಿ ಈ ದಂಗೆಯ ಪರಿಣಾಮದಿಂದ ಚೇತರಿಸಿಕೊಳ್ಳಲಿಲ್ಲ. ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್ ವರ್ಜೀನಿಯಾ ವಸಾಹತು ದುರಾಡಳಿತಕ್ಕೆ ಒಳಗಾಗಿರುವುದನ್ನು ಸಹಿಸಲಾರದೆ ಹಿಂದೆ ವಸಾಹತು ಸ್ಥಾಪನೆಗೆ ಒಪ್ಪಿಗೆ ಇತ್ತ ರಾಜಾಜ್ಞೆಯನ್ನು ರದ್ದುಗೊಳಿಸಿದನು. ಲಂಡನ್ ಕಂಪನಿ ದಿವಾಳಿ ಎದ್ದಿತು. ಆದಾಗ್ಯೂ ೧೬೨೪ರ ಹೊತ್ತಿಗೆ ವರ್ಜೀನಿಯಾ ಪ್ರಾಂತ ಭದ್ರವಾಗಿ ಸ್ಥಾಪಿತಗೊಂಡು ಅಭಿವೃದ್ಧಿಗೊಳ್ಳುತ್ತ ಹೋಯಿತು.

ಪಿಲಿಗ್ರಿಮ್ಸ್ ಮತ್ತು ಪ್ಯುರಿಟನ್ನರು

ಹಾಲೆಂಡಿನಲ್ಲಿ ನೆಲಸಿದ್ದ ಇಂಗ್ಲಿಷರ ಒಂದು ಸಮುದಾಯ ಅಮೆರಿಕದ ಹಡ್ಸನ್ ನದಿಯ ಮುಖಪ್ರದೇಶದ ಬಳಿ ನೆಲಸಲು ಅನುಮತಿ ಪಡೆದುಕೊಂಡಿತು. ಆ ಪ್ರದೇಶ ಲಂಡನ್ ಕಂಪನಿಯ ಆಡಳಿತ ಪ್ರಾಂತದೊಳಗೆ ಸೇರಿತ್ತು. 'ತೀರ್ಥಯಾತ್ರಿಗಳು' (Pilgrims) ಎಂದು ಕರೆಯಲ್ಪಡುತ್ತಿದ್ದ ಈ ಇಂಗ್ಲಿಷರ ಸಮುದಾಯ ಮತಧರ್ಮದ ಭಿನ್ನಾಭಿಪ್ರಾಯದ ದೆಸೆಯಿಂದ ಇಂಗ್ಲೆಂಡಿನಲ್ಲಿ ಕಿರುಕುಳ, ಹಿಂಸೆ, ಹಲ್ಲೆ ಮುಂತಾದ ಕ್ರೂರ ವರ್ತನೆಗಳನ್ನು ತಪ್ಪಿಸಿಕೊಳ್ಳಲು ೧೬೦೮ರಲ್ಲಿ ಇಂಗ್ಲೆಂಡಿನಿಂದ ಹಾಲೆಂಡಿಗೆ ಬಂದು ಲೆಡನ್ನಿನಲ್ಲಿ ನೆಲಸಿದ್ದರು. ಹತ್ತು ವರ್ಷಗಳ ಮೇಲೆ ಹಾಲೆಂಡಿನಲ್ಲಿ ಅವರಿಗೆ ಜೀವನ ಮಾಡುವುದು ಕಷ್ಟವಾಗುತ್ತ ಬಂತು. ತಮ್ಮ ಮಕ್ಕಳು ಇಂಗ್ಲಿಷ್ ಸಂಪ್ರದಾಯದ ಸಂಪರ್ಕ ಕಳೆದುಕೊಳ್ಳುತ್ತಾರೆ ಎಂದು ಪರಿತಪಿಸಿದರು. ತಮ್ಮ ಮತಧರ್ಮವನ್ನು ಯಾವ ಅಡೆತಡೆ ಮತ್ತು ಕಿರುಕುಳಗಳಿಲ್ಲದೆ ಅನುಸರಿಸಲು ಅನುಕೂಲವಾದ ಹಾಗು ಶಾಂತಿಯಿಂದ, ಸ್ವತಂತ್ರವಾಗಿ ಬದುಕಲು ಯುಕ್ತವಾದ ವಾಸಸ್ಥಳವನ್ನು ಹುಡುಕಲು 'ಹೊಸ ಪ್ರಪಂಚಕ್ಕೆ' ವಲಸೆ ಹೋಗಲು ತಯಾರಿ ನಡೆಸಿದರು. ಸೆಪ್ಟೆಂಬರ್ ೧೬೨೦ರಲ್ಲಿ ಸುಮಾರು ನೂರು ಜನರ ಒಂದು ಗುಂಪು – ಅವರಲ್ಲಿ ಮೂವತ್ತೈದು ಜನ ಲೆಡೆನ್ನಿನ ವಾಸಿಗಳಾಗಿದ್ದ ತೀರ್ಥಯಾತ್ರಿಗಳೂ ಸೇರಿದ್ದರು – ಇಂಗ್ಲೆಂಡಿನ ಪ್ಲಿಮತ್ ಪಟ್ಟಣದಿಂದ 'ಮೇ ಫ್ಲವರ್' ಎಂಬ ಹಡಗಿನಲ್ಲಿ ಹೊಸ ಪ್ರಪಂಚಕ್ಕೆ ಪ್ರಯಾಣ ಬೆಳೆಸಿದರು. ಮತಧರ್ಮದ ಭಿನ್ನಾಭಿಪ್ರಾಯಗಳಿಗಾಗಿ ತಾಯ್ನಾಡನ್ನು ತೊರೆದು ಬಂದವರಲ್ಲಿ ಇವರು ಮೊದಲಿಗರು.

ಇಂಗ್ಲೆಂಡಿನ ರಾಜ ಎಂಟನೆಯ ಹೆನ್ರಿ ಕ್ಯಾಥೊಲಿಕ್ ಚರ್ಚನ್ನು ಬಿಟ್ಟು ಹೊರಬಂದಿದ್ದು ಮುಖ್ಯವಾಗಿ ತನ್ನ ಬಂಜೆ ಹೆಂಡತಿಯಿಂದ ಪಾರಾಗುವ ಸಲುವಾಗಿ ಮತ್ತು ರಾಜ್ಯದ ಮೇಲೆ ತನ್ನ ಹಿಡಿತವನ್ನು ಬಿಗಿಪಡಿಸುವುದಕ್ಕಾಗಿ. ಅವನ ಮಗಳು ರಾಣಿ ಎಲಿಜ಼ಬೆತ್ ಕೂಡ ರಾಜಕೀಯ ಕಾರಣಗಳಿಗಾಗಿ ಮಾತ್ರ ಪ್ರಾಟೆಸ್ಟಂಟ್ ಮತವನ್ನು ಅನುಸರಿಸುತ್ತಿದ್ದಳೇ ಹೊರತು ಮನಸ್ಸಾಕ್ಷಿಯಾಗಿ ಅಲ್ಲ. ಕ್ಯಾಥೊಲಿಕ್ ರಾಜ್ಯವಾದ ಸ್ಪೇನಿನ ವಿರುದ್ಧವಾಗಿ ತನ್ನ ನಿಲುವನ್ನು ಸಮರ್ಥಿಸಿಕೊಳ್ಳಲು ಪ್ರಾಟೆಸ್ಟಂಟ್ ಮತವನ್ನು ಉಪಯೋಗಿಸಿಕೊಂಡಳು ಅಷ್ಟೆ. ನಿಜವಾದ ಶ್ರದ್ಧೆ ಅವಳಿಗೆ ಇರಲಿಲ್ಲ.

ಬಹುಸಂಖ್ಯಾತ ಇಂಗ್ಲಿಷರು ಕ್ಯಾಥೊಲಿಕರಾಗಿಯೇ ಉಳಿದುಕೊಂಡರು. ಮಿಕ್ಕವರು ಆ್ಯಂಗ್ಲಿಕನ್ ಚರ್ಚನ್ನು ಸೇರಿಕೊಂಡರು. ಕ್ಯಾಥೊಲಿಕ್ ಮತದ ಕಲುಷಿತ ಪೂಜಾವಿಧಿಗಳನ್ನು ತ್ಯಜಿಸಿದ ಇವರು ತಾವು 'ಪರಿಶುದ್ಧರು' (Puritons) ಎನ್ನುವ ಭಾವನೆ ಬೆಳಸಿಕೊಂಡರು. ಸರ್ಕಾರದ ಬೆಂಬಲ ಪಡೆದಿದ್ದ ಆ್ಯಂಗ್ಲಿಕನ್ ಚರ್ಚ್‌ನಲ್ಲಿ ಕೆಲವರಿಗೆ ಕ್ಯಾಥೊಲಿಕ್ ಚರ್ಚ್‌ನ ಅವಶೇಷಗಳು ಬಹಳವಾಗಿರುವಂತೆ ಕಂಡುಬಂದು ಇನ್ನೂ ಹೆಚ್ಚಿನ ಸುಧಾರಣೆಗಳು ಆಗಬೇಕೆಂದು ಒತ್ತಾಯ ಮಾಡಿದರು. ಆ್ಯಂಗ್ಲಿಕನ್ನರಾಗಿದ್ದುಕೊಂಡು ಸುಧಾರಣೆಗಳನ್ನು

ಬೇಗನೆ ಆಗಬೇಕೆಂದು ತಮ್ಮ ಬೇಡಿಕೆಗಳನ್ನು ಮಂಡಿಸಿದರು. ಅವರ ಬೇಡಿಕೆಗಳ ಪ್ರಕಾರ – ಆ್ಯಂಗ್ಲಿಕನ್ ಚರ್ಚಿನಲ್ಲಿ ಪೂಜಾವಿಧಿಗಳು ಬಹಳ ಸರಳವಾಗಿರಬೇಕು, ಚರ್ಚಿನ ಮೇಲಿನ ವರ್ಗದ ಅಧಿಕಾರಿಗಳನ್ನು ತೆಗೆದು ಹಾಕಬೇಕು, ಮತ್ತು ಪ್ರಾದೇಶಿಕ ಚರ್ಚುಗಳಿಗೆ ಸ್ಥಳೀಯ ವ್ಯವಹಾರಗಳಲ್ಲೂ ಹೆಚ್ಚಿನ ಹೊಣೆಗಾರಿಕೆ ಕೊಡಬೇಕು – ಈ ಸುಧಾರಣೆಗಳು ಬೇಗನೆ ಆಗಬೇಕೆಂದು ಪರಿಶುದ್ಧರು ಆಗ್ರಹಪಡಿಸಿದರು. ಮತ್ತೆ ಕೆಲವರು, ಆ್ಯಂಗ್ಲಿಕನ್ ಚರ್ಚ್ ಸುಧಾರಣೆ ಮಾಡಲಾರದಷ್ಟು ಕೆಟ್ಟಿರುವುದರಿಂದ ಪ್ರತಿಯೊಂದು ಧಾರ್ಮಿಕ ಸಭೆ ತನ್ನ ವ್ಯವಹಾರಗಳನ್ನು ಚರ್ಚಿನ ಮೇಲಧಿಕಾರಿಗಳ ಕೈವಾಡ ಇಲ್ಲದೆ ತಾನೇ ನಿರ್ವಹಣೆ ಮಾಡಬೇಕಾದುದು ಅಗತ್ಯ ಎಂದು ವಾದಿಸಿದರು. ಇಷ್ಟಕ್ಕೆ ನಿಲ್ಲಿಸದೆ ಅವರು ಇನ್ನೂ ಮುಂದುವರಿದು ಪ್ರತಿ ವ್ಯಕ್ತಿ ತನ್ನ ಮತದ ನಂಬಿಕೆಗಳನ್ನು ಯಾರ ಒತ್ತಾಯವೂ ಇಲ್ಲದೆ ತಾನೇ ನಿರ್ಧರಿಸಬೇಕು ಎನ್ನುವ ನಿರ್ಣಯವನ್ನು ಮಂಡಿಸಿದರು. ಇವರಿಗೆ 'ಪ್ರತ್ಯೇಕತಾವಾದಿಗಳು' ಎಂದು ಹೆಸರು. ಒಂದನೆಯ ಜೇಮ್ಸ್ ರಾಜನ ಕಾಲದ ಇಂಗ್ಲೆಂಡಿನಲ್ಲಿ ಪರಿಶುದ್ಧರು ಹೇಗೋ ಹೊಂದಿಕೊಂಡು ಇರಲು ಸಾಧ್ಯವಿತ್ತು. ಆದರೆ ಆ್ಯಂಗ್ಲಿಕನ್ ಚರ್ಚನ್ನು ತಿರಸ್ಕರಿಸಿದ ಪ್ರತ್ಯೇಕತಾವಾದಿಗಳಿಗೆ ಉಳಿಗಾಲವಿಲ್ಲದಂತಾಗಿ ಅವರಿಗೆ ಇದ್ದದ್ದು ಎರಡೇ ದಾರಿಗಳು – ಒಂದು ತಲೆಮರೆಸಿಕೊಂಡು ಅಜ್ಞಾತವಾಸ ಮಾಡುವುದು ಅಥವಾ ಹುಟ್ಟಿದ ಊರನ್ನು ಬಿಟ್ಟು ಕಂಡರಿಯದ 'ಹೊಸಪ್ರಪಂಚ'ಕ್ಕೆ ವಲಸೆ ಹೋಗುವುದು.

ಪ್ರತ್ಯೇಕತಾವಾದಿಗಳಿಗೆ ಹುಟ್ಟಿದ ಊರಿನಲ್ಲಿ ಭವಿಷ್ಯ ದುಸ್ತರವಾಗಿ ಕಂಡುಬಂದಿದ್ದರಿಂದ ಅವರು ತಾಯ್ನಾಡನ್ನು ತೊರೆದು ಹೊಸಪ್ರಪಂಚಕ್ಕೆ ವಲಸೆ ಹೋದರು. ಪ್ರತ್ಯೇಕತಾವಾದಿಗಳಾದ ತೀರ್ಥಯಾತ್ರಿಗಳನ್ನು ಹೊತ್ತ ಹಡಗು ಅವರು ಹೋಗಬೇಕಾಗಿದ್ದ ಹಡ್ಸನ್ ನದಿಯ ಮುಖಪ್ರದೇಶಕ್ಕೆ ಅವರನ್ನು ತಲುಪಿಸದೆ ಉತ್ತರದಲ್ಲಿದ್ದ ಕಾಡ್ ಭೂಶಿರದ ಕೊಲ್ಲಿಯ ತೀರಕ್ಕೆ ತಂದು ಇಳಿಸಿತು. ದೀರ್ಘವಾದ ಕಡಲಯಾನದಿಂದ ಬಹಳವಾಗಿ ಬಳಲಿದ್ದ ತೀರ್ಥಯಾತ್ರಿಗಳು ಹಡಗು ಇಳಿಸಿದಲ್ಲಿಯೇ ಇರಲು ನಿರ್ಧರಿಸಿದರು. ಈ ಪ್ರದೇಶ ಲಂಡನ್ ಕಂಪನಿಯ ಅಧಿಕಾರವ್ಯಾಪ್ತಿಗೆ ಒಳಪಟ್ಟಿರಲಿಲ್ಲ. ಆದ್ದರಿಂದ ಅವರು ಸರ್ಕಾರದ ಎಲ್ಲಾ ನಿಯಂತ್ರಣಗಳಿಂದ ಮುಕ್ತರಾಗಿದ್ದರು. ಹೊಸ ಜಾಗಕ್ಕೆ ಕಾಲಿಡುವ ಮೊದಲು ಈ ತೀರ್ಥಯಾತ್ರಿಗಳು ತಮ್ಮೊಳಗೆ ಒಂದು ಒಪ್ಪಂದ ಮಾಡಿಕೊಂಡರು. ಇದಕ್ಕೆ 'ಮೇ ಫ್ಲವರ್' ಒಪ್ಪಂದ ಎಂದು ಹೆಸರು. ಈ ಒಪ್ಪಂದದ ಪ್ರಕಾರ ಅವರೇ ರಚಿಸಿದ ಒಂದು ನಿರ್ವಹಣಾ ಸಮಿತಿಯ ನಿಯಂತ್ರಣಕ್ಕೆ ಎಲ್ಲರೂ ಒಳಗಾಗಿರಬೇಕು ಮತ್ತು ಅದು ವಿಧಿಸುವ ನ್ಯಾಯಬದ್ಧವಾದ ಕಾನೂನುಗಳು ಎಲ್ಲರಿಗೂ ಸಮವಾಗಿ ಅನ್ವಯವಾಗುತ್ತವೆ. ಇದರಿಂದ ಎಲ್ಲರಿಗೂ ಅನುಕೂಲವಾಗಿ, ವಸಾಹತಿಗೆ ಒಳಿತಾಗುತ್ತದೆ. ಇದು ಈ ಒಪ್ಪಂದದ ಸಾರಾಂಶ. ಈ ರೀತಿಯಾಗಿ ಸಾಮಾನ್ಯ ಜನರು ಕೂಡಿ ಸರಳರೀತಿಯಲ್ಲಿ ಒಂದು ಸರ್ಕಾರವನ್ನು ರಚಿಸಿಕೊಂಡರು. ಕಂಡರಿಯದ

ವಿಶಾಲವಾದ ದಟ್ಟಡವಿಯ ಪ್ರದೇಶದಲ್ಲಿ ಪರಕೀಯತೆ ಮತ್ತು ಒಂಟಿತನ ಅನುಭವಿಸಿದ ಈ ವಲಸೆಗಾರರು ಅನ್ಯೋನ್ಯತೆಯ ಅಗತ್ಯವನ್ನು ಮನಗಂಡರು. ಸಾಮಾಜಿಕ ಮತ್ತು ರಾಜಕೀಯ ಸಂಘ-ಸಂಸ್ಥೆಗಳ ಉಪಯುಕ್ತತೆಯನ್ನು ಅರಿತುಕೊಂಡರು. ಈ ತಿಳುವಳಿಕೆ ಅಮೆರಿಕದಲ್ಲಿ ಪ್ರಜಾರಾಜ್ಯ ಮತ್ತು ಗಣರಾಜ್ಯಗಳ ಬೆಳವಣಿಗೆಗೆ ನಾಂದಿಯಾಯಿತು.

ಡಿಸೆಂಬರ್ ತಿಂಗಳ ಕೊರೆಯುವ ಚಳಿಯಲ್ಲಿ ಹೆಪ್ಪುಗಟ್ಟಿದ ಮೆಸಾಚ್ಯುಸೆಟ್ಸ್ ತೀರದ ಪ್ಲಿಮತ್ ಎಂಬ ಸ್ಥಳದಲ್ಲಿ ಬಂದಿಳಿದ ಈ ವಲಸೆಗಾರರು ಆಹಾರದ ಕೊರತೆಯಿಂದ ಉಗ್ರವಾದ ಹಸಿವನ್ನು ಸಹಿಸಿಕೊಂಡು ಚಳಿಗಾಲವನ್ನು ಕಳೆಯಬೇಕಾಯಿತು. ಆ ಗುಂಪಿನ ಅರ್ಧಭಾಗ ಜನರು ವಲಸೆಗಾರರು ಹಸಿವು ಮತ್ತು ಚಳಿಯನ್ನು ಸಹಿಸಲಾರದೆ ಸತ್ತರು. ಚಳಿಗಾಲ ಕಳೆದ ಮೇಲೆ ವಸಂತ ಮಾಸದಲ್ಲಿ ಆ ಪ್ರದೇಶದಲ್ಲಿ ವಾಸವಾಗಿದ್ದ ಇಂಡಿಯನ್ನರು ಇವರಿಗೆ ಆಹಾರವನ್ನು ಒದಗಿಸಿ, ವ್ಯವಸಾಯ ಮಾಡುವ ಕ್ರಮ ಮತ್ತು ಕಾಡಿನಿಂದ, ನದಿಗಳಿಂದ ಆಹಾರ ಒದಗಿಸಿಕೊಳ್ಳುವ ಮಾರ್ಗಗಳನ್ನು ತೋರಿಸಿಕೊಟ್ಟರು. ಆ ಪ್ರಕಾರವಾಗಿ ವಲಸೆಗಾರರು ನವೆಂಬರ್ ತಿಂಗಳಲ್ಲಿ ಸಮೃದ್ಧವಾದ ಬೆಳೆಯನ್ನು ಪಡೆದರು. ಕಷ್ಟಕಾಲದಲ್ಲಿ ಸಹಾಯ ಮಾಡಿದ ಇಂಡಿಯನ್ನರಿಗೆ ಕೃತಜ್ಞತೆ ತೋರುವ ಸಲುವಾಗಿ ಅವರನ್ನು ಔತಣಕ್ಕೆ ಆಹ್ವಾನಿಸಿ ತಮ್ಮ ಧನ್ಯವಾದಗಳನ್ನು ಅರ್ಪಿಸಿದರು. ಅಂದಿನಿಂದ ಆ ಸಂಪ್ರದಾಯ ಹಬ್ಬವಾಗಿ ಪ್ರತಿ ನವೆಂಬರ್ ತಿಂಗಳಲ್ಲಿ 'ಧನ್ಯವಾದ ನೀಡುವ ದಿನ' (Thanks giving Day)ವನ್ನು ಅಮೆರಿಕನ್ನರು ಆಚರಿಸುತ್ತಾರೆ. ತೀರ್ಥಯಾತ್ರಿಗಳ ಸಂಖ್ಯೆ ಹೆಚ್ಚಲಿಲ್ಲ, ಇವರು ಧನಿಕರಾಗಲೂ ಇಲ್ಲ. ಆದರೂ ಸಹ ಚರಿತ್ರೆಯಲ್ಲಿ ಇವರ ಸ್ಥಾನ ಭದ್ರವಾಗಿದೆ. ಇವರು ಜನರನ್ನು ಗೆದ್ದಿದ್ದು ಸ್ಪೇನಿನ ಕೋರ್ಟೆಸ್‌ನಂತೆ ಕತ್ತಿ ಮತ್ತು ಕೋವಿಗಳಿಂದಲ್ಲ, ಎದೆಗಾರಿಕೆ ಮತ್ತು ಧರ್ಮನಿಷ್ಠೆಗಳಿಂದ.

ಅಮೆರಿಕದ ಉತ್ತರ ಪ್ರಾಂತಗಳಿಗೆ ಮೊದಲು ಬಂದು ನೆಲಸಿದವರು ಪರಿಶುದ್ಧರು ಎಂದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದ್ದರೂ, ಅವರಿಗಿಂತ ಮೊದಲು ಪ್ಲಿಮತ್ ಕಂಪನಿಯವರ ಒಂದು ಗುಂಪು ವಲಸೆಗಾರರನ್ನು ಕೆನ್ನೆಬೆಕ್ ನದಿಯ ದಡದಲ್ಲಿ ಸ್ಥಾಪಿಸಿದ್ದರು. ಇದು ನಡೆದಿದ್ದು ೧೬೦೭ರಷ್ಟು ಹಿಂದೆ. ಈ ವಲಸೆಗಾರರು ಕೆಲವು ತಿಂಗಳ ಮೇಲೆ ವಸಾಹತು ಬಿಟ್ಟು ಹೊರಟುಹೋದರು. ಆದರೂ ಮೀನುಗಾರರು ಮತ್ತು ವ್ಯಾಪಾರಿಗಳು ಈ ಪ್ರಾಂತಕ್ಕೆ ಬಂದು ಹೋಗಿ ಮಾಡುತ್ತಿದ್ದರು. ೧೬೧೪ರಲ್ಲಿ ಕ್ಯಾಪ್ಟನ್ ಜಾನ್‌ಸ್ಮಿತ್ ಎನ್ನುವವನು ಈ ಪ್ರಾಂತವನ್ನು ಪರಿಶೋಧಿಸಿ ಇದಕ್ಕೆ 'ನ್ಯೂ ಇಂಗ್ಲೆಂಡ್' ಎಂದು ನಾಮಕರಣ ಮಾಡಿದನು. ಈ ಪ್ರಾಂತದ ಅಲ್ಲಲ್ಲಿ ಕೆಲವು ವ್ಯಾಪಾರಕೇಂದ್ರಗಳು ಸ್ಥಾಪಿತವಾದವು. ೧೬೨೦ರಲ್ಲಿ ಪ್ಲಿಮತ್ ಕಂಪನಿಯವರು ನ್ಯೂ ಇಂಗ್ಲೆಂಡ್ ಪ್ರಾಂತದ ಆಡಳಿತಸಮಿತಿಯನ್ನು ಪುನರ್ರಚನೆ ಮಾಡಿದರು. ಈ ಸಮಿತಿ ವಸಾಹತು ಸ್ಥಾಪನೆಗಿಂತಲೂ ಭೂಮಿ ಮತ್ತು ಆಸ್ತಿ ಪಾಸ್ತಿಗಳ ಮಾರಾಟದಲ್ಲಿ ಹೆಚ್ಚು ಆಸಕ್ತಿ ವಹಿಸಿತು. ಈ ಸಮಿತಿ

ಕಾಡ್ ಭೂಶಿರ ಪ್ರಾಂತದ ಕೆಲವು ಭಾಗಗಳನ್ನು ವಲಸೆಗಾರರಿಗೆ ದತ್ತಿಗೆ ಕೊಟ್ಟಿತು. ಹೀಗೆ ದತ್ತಿಗೆ ಪಡೆದವರಲ್ಲಿ ಇಂಗ್ಲೆಂಡಿನ ಡೋರ್‌ಚೆಸ್ಟರ್‌ನಿಂದ ವಲಸೆ ಬಂದಿದ್ದ ಪರಿಶುದ್ಧರ ಒಂದು ಚಿಕ್ಕ ಸಮುದಾಯವೂ ಸೇರಿತ್ತು. ಈ ಪರಿಶುದ್ಧರು (puritans) ಸೇಲಮ್ ಎಂಬ ಸ್ಥಳದಲ್ಲಿ ತಮ್ಮ ವಸಾಹತನ್ನು ಸ್ಥಾಪಿಸಿದರು. 'ಡೋರ್‌ಚೆಸ್ಟರ್ ಸಾಹಸಿಗರು' ಎಂದು ಹೆಸರುವಾಸಿಯಾಗಿದ್ದ ಇವರು 'ಮೆಸಾಚ್ಯುಸೆಟ್ಸ್ ಕೊಲ್ಲಿಯ ಕಂಪನಿ'ಯನ್ನು ಸ್ಥಾಪಿಸಿದರು. ಮೇಲಾಗಿ ಇವರು ಚಾರ್ಲ್ಸ್ ಮತ್ತು ಮೆರ್ರಿ ಮ್ಯಾಕ್ ನದಿಗಳ ನಡುವಣ ಪ್ರದೇಶವನ್ನು ರಾಜನಿಂದ ದತ್ತಿಗೆ ಪಡೆದುಕೊಂಡರು.

ವ್ಯಾಪಾರ ಮಾಡಿ ಲಾಭ ಗಳಿಸುವುದು ಈ ಮೆಸಾಚ್ಯುಸೆಟ್ಸ್ ಕಂಪನಿಯ ಉದ್ದೇಶವಾಗಿತ್ತು. ಆದರೆ ಇಂಗ್ಲೆಂಡಿನಲ್ಲಿ ಪರಿಶುದ್ಧರಿಗೆ ಪರಿಸ್ಥಿತಿ ಬಿಗಡಾಯಿಸುತ್ತ ಬಂದಿತ್ತು. ಅದು ಒಂದನೆಯ ಚಾರ್ಲ್ಸ್ ರಾಜನಾಗಿದ್ದ ಕಾಲ. ರಾಜ ಮತಧರ್ಮದ ವಿಷಯಗಳಲ್ಲಿ ವಿಲಿಯಮ್ ಲಾಡ್ ಎಂಬ ಪ್ರಬಲನಾಗಿದ್ದ ಆ್ಯಂಗ್ಲಿಕನ್ ಪಾದ್ರಿಯ ಸಲಹೆಗಳನ್ನು ಪಾಲಿಸುತ್ತಿದ್ದ. ಲಾಡ್ ಚರ್ಚಿನ ವಿಶದವಾದ ಶಾಸ್ತ್ರವಿಧಿಗಳನ್ನು ಕಡಿಮೆ ಮಾಡುವುದರ ಬದಲು ಹೆಚ್ಚು ಬಲಪಡಿಸಿದನು. ಆ್ಯಂಗ್ಲಿಕನ್ ಚರ್ಚನ್ನು ಕೇಂದ್ರ ನಿಯಂತ್ರಣಕ್ಕೆ ಒಳಪಡಿಸಿದನು. ರಾಜನ ಸಹಾಯದಿಂದ ಪರಿಶುದ್ಧ ಅಭಿಪ್ರಾಯ ಹೊಂದಿದ್ದ ಪಾದ್ರಿಗಳನ್ನು ಉಪದೇಶ ವೇದಿಕೆಗಳಿಂದ ಹೊರಹಾಕಿದನು. ಈ ಕಾರಣಗಳಿಂದ ಪರಿಶುದ್ಧರಿಗೆ ಆ್ಯಂಗ್ಲಿಕನ್ ಚರ್ಚಿನಲ್ಲಿ ಮುಂದುವರಿಯಲು ಸಾಧ್ಯವಾಗಲಿಲ್ಲ. ಆದ್ದರಿಂದ ಇಂಗ್ಲೆಂಡಿನಲ್ಲಿದ್ದ ಮೆಸಾಚ್ಯುಸೆಟ್ಸ್ ಕೊಲ್ಲಿಯ ಕಂಪನಿಯ ನಾಯಕರು ಅಮೆರಿಕಕ್ಕೆ ವಲಸೆ ಹೋಗಲು ನಿರ್ಧರಿಸಿದರು.

೧೬೩೦ರ ಬೇಸಿಗೆಯಲ್ಲಿ ಒಂದು ಸಾವಿರ ವಲಸೆಗಾರರು ತಾವು ರಾಜನಿಂದ ಪಡೆದಿದ್ದ ದತ್ತಿಗೆ ಶಾಸನವನ್ನು ಜೊತೆಯಲ್ಲಿರಿಸಿಕೊಂಡು 'ಹೊಸ ಪ್ರಪಂಚ' ಕ್ಕೆ ಹೊರಟು ಬಂದರು. ಸ್ವಲ್ಪ ಸಮಯದಲ್ಲೇ ಅವರು ಬಾಸ್ಟನ್ ಎಂಬ ಊರನ್ನು ಸ್ಥಾಪನೆ ಮಾಡಿದರು. ಕ್ರಮೇಣ ಇವರು ಆ ಪ್ರದೇಶದಲ್ಲಿ ಅನೇಕ ಊರುಗಳನ್ನು ಸ್ಥಾಪಿಸಿದರು. ಈ ವಲಸೆಗಾರರು ಜೇಮ್ಸ್ ಟೌನ್ ಮತ್ತು ಪ್ಲಿಮತ್‌ಗಳಲ್ಲಿ ನೆಲಸಿದ ವಲಸೆಗಾರರಂತೆ ಹೆಚ್ಚು ಕಷ್ಟ ನಷ್ಟಗಳನ್ನು ಅನುಭವಿಸಲಿಲ್ಲ.

ಮೆಸಾಚ್ಯುಸೆಟ್ಸ್ ಕೊಲ್ಲಿಯ ಕಂಪನಿಯವರು ಸ್ಥಾಪಿಸಿದ ವಸಾಹತಿಗೆ ವಲಸೆಗಾರರು ಅವಿರತವಾಗಿ ಬರುತ್ತಲೇ ಇದ್ದರು. ೧೬೪೦ರ ಹೊತ್ತಿಗೆ ಹತ್ತು ಸಾವಿರಕ್ಕಿಂತಲೂ ಹೆಚ್ಚು ವಲಸೆಗಾರರು ಅಲ್ಲಿ ನೆಲೆಗೊಂಡಿದ್ದರು. ಸ್ಥಿತಿವಂತರೂ ಶ್ರಮಜೀವಿಗಳೂ ಆಗಿದ್ದ ಈ ವಲಸೆಗಾರರು ಕಾಲಕ್ರಮದಲ್ಲಿ ಒಂದು ಸಂಕೀರ್ಣ ನಾಗರಿಕತೆಯ ಬೆಳವಣಿಗೆಗೆ ಕಾರಣಪುರುಷರಾದರು. ಇವರು ವ್ಯವಸಾಯ ಅಗತ್ಯವೆಂದು ತಿಳಿದಿದ್ದರೂ ಅದು ಹೆಚ್ಚು ಲಾಭದಾಯಕವಲ್ಲ ಎಂದು ನಿರ್ಧರಿಸಿ, ಮೀನುಗಾರಿಕೆ, ನುಣುಪು ಕೂದಲಿನ ಚರ್ಮ

(fur), ಇವುಗಳ ವ್ಯಾಪಾರ ಮತ್ತು ನೌಕಾನಿರ್ಮಾಣದಂತಹ ಲಾಭದಾಯಕ ಕಸುಬುಗಳಲ್ಲಿ ನಿರತರಾದರು.

ಮೆಸಾಚ್ಯುಸೆಟ್ಸ್ ಕೊಲ್ಲಿಯ ಕಂಪನಿ ಆಡಳಿತಕ್ಕೆ ಒಳಪಟ್ಟ ವಸಾಹತಿನ ರಾಜ್ಯಪಾಲನಾಗಿ (Goverrner) ಆಯ್ಕೆಗೊಂಡ ಜಾನ್ ವಿನ್‌ತ್ರಾಪ್ ವಿವೇಕಶಾಲಿ ಮತ್ತು ಕಾರ್ಯಶೀಲ ಆಡಳಿತಗಾರನಾಗಿದ್ದ. ಇವನು ವಿಚಾರ ವಿನಿಮಯ ಮತ್ತು ಪರಸ್ಪರ ಒಪ್ಪಂದಗಳ ಮೂಲಕ ತನ್ನ ಗುರಿ ಸಾಧಿಸುತ್ತಿದ್ದನು. ಕೇವಲ ಕೆಲವರ ಕೈಯಲ್ಲಿ ಅಧಿಕಾರ ಕೊಟ್ಟರೆ ಅದು ದುರಾಡಳಿತಕ್ಕೆ ಕಾರಣವಾಗಬಹುದೆಂದು ತಿಳಿದಿದ್ದ ಅವನು ಅಧಿಕಾರವನ್ನು ಹಲವಾರು ದಕ್ಷರಾದ ವ್ಯಕ್ತಿಗಳು ಹಂಚಿಕೊಂಡು ಒಗ್ಗಟ್ಟಿನಿಂದ ಕೆಲಸ ಮಾಡುವುದು ಸಾಮಾಜಿಕ ಬೆಳವಣಿಗೆ ಮತ್ತು ಸಾಮರಸ್ಯಕ್ಕೆ ಅಗತ್ಯವೆಂದೂ ನಂಬಿದ್ದನು. ಆದ್ದರಿಂದ ಸುಮಾರು ಒಂದು ನೂರು ಪ್ರಾಪ್ತ ವಯಸ್ಕರಾದ ವಲಸೆಗಾರನ್ನು 'ಸ್ವತಂತ್ರರು' (free men) ಎಂದು ಪರಿಗಣಿಸಿ ಅವರು ರಾಜಕೀಯ ವ್ಯವಹಾರಗಳಲ್ಲಿ ಭಾಗವಹಿಸುವಂತೆ ಮಾಡಿದನು. ಅವರಲ್ಲಿ ಕೆಲವರು ಚರ್ಚಿನ ಸದಸ್ಯರಾಗಿರಲಿಲ್ಲ. ಆದ್ದರಿಂದ ಇನ್ನು ಮುಂದೆ ಚರ್ಚಿನ ಸದಸ್ಯರಲ್ಲದವರು 'ಸ್ವತಂತ್ರ'ರಾಗಲು ಅರ್ಹರಲ್ಲ ಎಂದು ತೀರ್ಮಾನಿಸಲಾಯಿತು. ಸ್ವತಂತ್ರರು ಪ್ರಾಂತದ ಮುಖ್ಯಾಧಿಕಾರಿಯನ್ನು ಚುನಾಯಿಸುವ ಹಕ್ಕನ್ನು ಪಡೆದರು. ಪರಿಶುದ್ಧರ ಪ್ರಜಾತಂತ್ರ ಸಮುದಾಯದಲ್ಲಿ ಪಾದ್ರಿಗಳಿಗೆ ಹೆಚ್ಚಿನ ಗೌರವವಿತ್ತು. ಆದರೆ ಅವರು ಚರ್ಚಿನ ಸದಸ್ಯರ ನಿಯಂತ್ರಣಕ್ಕೆ ಒಳಗಾಗಿದ್ದರು. ಚರ್ಚಿನ ಕಾರ್ಯಕಲಾಪಗಳು ಮತ್ತು ರೀತಿ ನೀತಿಗಳನ್ನು ಸದಸ್ಯರ ಬಹುಮತದ ಮೇಲೆ ನಿರ್ಧರಿಸಲಾಗುತ್ತಿತ್ತು.

ನ್ಯೂ ಇಂಗ್ಲೆಂಡಿನ ಇತರ ವಸಾಹತುಗಳು

ಏಳಿಗೆ ಹೊಂದಿದ ಮೆಸಾಚ್ಯುಸೆಟ್ಸ್ ಕೊಲ್ಲಿಯ ವಸಾಹತಿನಿಂದ ವಲಸೆಗಾರರ ಗುಂಪುಗಳು ನ್ಯೂ ಇಂಗ್ಲೆಂಡಿನ ಇತರ ಭಾಗಗಳಿಗೆ ಹೋಗಿ ನೆಲೆಗಳನ್ನು ಸ್ಥಾಪಿಸಲಾರಂಭಿಸಿದರು. ಇದಕ್ಕೆ ಜನಸಂಖ್ಯೆ ಹೆಚ್ಚಾಗುತ್ತ ಹೋಗಿದ್ದು ಒಂದು ಕಾರಣ. ಮತ್ತೊಂದು ಕಾರಣ ಪರಿಶುದ್ಧರ ಅಸಹಿಷ್ಣುತೆ. ೧೬೩೦ರ ಮೊದಲಲ್ಲಿ ಮೆಸಾಚ್ಯುಸೆಟ್ಸ್‌ನ ಹಲವಾರು ಧಾರ್ಮಿಕ ಪರಿಷತ್ತುಗಳು (congregations) ನೈರುತ್ಯ ದಿಕ್ಕಿನಲ್ಲಿ ಮುಂದುವರಿದು ಕನೆಕ್ಟಿಕಟ್ ನದಿಯ ಫಲವತ್ತಾದ ಕಣಿವೆಯ ಪ್ರದೇಶವನ್ನು ಹೊಕ್ಕು ಅಲ್ಲಲ್ಲಿ ನೆಲೆಗಳನ್ನು ಸ್ಥಾಪಿಸಿದರು. ಈ ಪರಿಷತ್ತುಗಳಲ್ಲಿ ಮುಖ್ಯವಾದದ್ದು ರೆವರೆಂಡ್ ಥಾಮಸ್ ಹೂಕರ್ ನೇತೃತ್ವದಲ್ಲಿ ರಚನೆಗೊಂಡಿದ್ದ ಪರಿಷತ್ತು. ೧೬೩೬ರಲ್ಲಿ ಇವನು ಹಾರ್ಟ್‌ಫರ್ಡ್ ಊರನ್ನು ಸ್ಥಾಪಿಸಿದನು. ಹೂಕರ್ 'ಅತ್ಯಾವಶ್ಯಕವಾದ ಆಜ್ಞೆಗಳು' ಎಂಬ ನಿಬಂಧನೆಗಳನ್ನು ರಚಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದನು. ಈ ಆಜ್ಞೆಗಳು ರಾಜ್ಯಾಂಗದಂತೆ ಕನೆಕ್ಟಿಕಟ್ ಕಣಿವೆಯಲ್ಲಿ ಸ್ಥಾಪನೆಗೊಂಡ ಊರುಗಳ ನಿರ್ವಹಣೆಗೆ ಅಗತ್ಯವಾದ ಸರ್ಕಾರವನ್ನು ರಚಿಸಲು ಮಾರ್ಗದರ್ಶಕವಾದವು. ೧೬೩೦ರ ದಶಕದಲ್ಲಿ ಪರಿಶುದ್ಧರು ತಂಡ ತಂಡವಾಗಿ

ಇಂಗ್ಲೆಂಡಿನಿಂದ ನೇರವಾಗಿ ಬಂದು ನ್ಯೂ ಹೇವನ್ ಊರಿನ ಸುತ್ತ ಮುತ್ತ ನೆಲೆಗಳನ್ನು ಸ್ಥಾಪಿಸಿದರು. ೧೬೬೨ರ ರಾಜಶಾಸನದ ಪ್ರಕಾರ ಈ ಎಲ್ಲ ವಸತಿಗಳನ್ನು ಕನೆಕ್ಟಿಕಟ್ ನಗರಾಡಳಿತಕ್ಕೆ ಒಳಪಡಿಸಲಾಯಿತು.

ಹೂಕರ್ ಮತ್ತೆ ಕೆಲವರು ಮತಧರ್ಮದ ವಿಷಯವಾಗಿ ಕನೆಕ್ಟಿಕಟ್ ನಾಯಕರೊಡನೆ ಜಗಳವಾಡಿದ್ದರೂ ಮೂಲ ತತ್ವಗಳ ಬಗ್ಗೆ ಯಾವ ಭಿನ್ನಾಭಿಪ್ರಾಯಗಳು ಇರಲಿಲ್ಲ. ಆದರೆ ಎಲ್ಲ ನಿವಾಸಿಗಳೂ ಹಾಗಿರಲಿಲ್ಲ. ಭಿನ್ನಾಭಿಪ್ರಾಯ ವ್ಯಕ್ತಪಡಿಸುವವರನ್ನು ಸಭೆಯಲ್ಲಿ ಬಹುಮತದವರು ಬಾಯಿ ಮುಚ್ಚಿಸುತ್ತಿದ್ದರು. ರಾಜರ್ ವಿಲಿಯಮ್ಸ್ ಎನ್ನುವ ಸೇಲಂ ಊರಿನ ಪಾದ್ರಿ ಪರಿಶುದ್ಧರಿಗಿಂತಲೂ ಉಗ್ರ ಮತಾಭಿಮಾನಿ ಆಗಿದ್ದನು. ತನ್ನ ಸ್ವಂತ ನಂಬಿಕೆಗಳನ್ನು ತನಗೆ ತಿಳಿದಂತೆ ಅನುಸರಿಸುವ ಸ್ವಾತಂತ್ರ್ಯ ಪ್ರತಿಯೊಬ್ಬನಿಗೂ ಇರಬೇಕೆಂದು ವಿಲಿಯಮ್ಸ್ ವಾದಿಸಿ ಮತಧರ್ಮದಲ್ಲಿ ಸರ್ಕಾರ ಕೈಹಾಕುವುದನ್ನು ಉಗ್ರವಾಗಿ ಖಂಡಿಸಿದನು. ನ್ಯಾಯಾಧೀಶರಿಗೆ ಮತಧರ್ಮದ ಮೇಲೆ ಅಧಿಕಾರ ಇರ ಕೂಡದು ಎಂದು ಹೇಳಿ, ಸರ್ಕಾರ ಬಲಾತ್ಕಾರದಿಂದ ವ್ಯಕ್ತಿಯ ಮೇಲೆ ಹೇರಿದ ಮತಧರ್ಮ ದೇವರ ಮೂಗಿನಲ್ಲಿ ಗಬ್ಬು ನಾತ ಹೊಡೆಯುತ್ತದೆ ಎಂದು ವಾದಿಸಿ, ಇನ್ನೂ ಮುಂದುವರಿದು ವಲಸೆಗಾರರಿಗೇ ಆಗಲಿ ಅಥವಾ ರಾಜನಿಗೇ ಆಗಲಿ ಅಮೆರಿಕದ ನೆಲದ ಮೇಲೆ, ಅದನ್ನು ಇಂಡಿಯನ್ನರಿಂದ ಧರ್ಮಮಾರ್ಗದಲ್ಲಿ ಕೊಂಡ ಹೊರತು, ಯಾವ ಹಕ್ಕೂ ಇಲ್ಲ ಎಂದು ಘೋಷಿಸಿದನು! ಈ ಉಗ್ರಗಾಮಿಯನ್ನು ಕ್ರೈಸ್ತಮತದಿಂದ ಹೊರಗೆ ಹಾಕಿದರು. ವಿಲಯಮ್ಸ್ ತನ್ನ ಕೆಲವು ಅನುಯಾಯಿಗಳೊಡನೆ ಅಲ್ಲಿಂದ ಹೊರಟು ನಾರಾಗನ್‌ಸೆಟ್ ಕೊಲ್ಲಿಯ ಪ್ರದೇಶದಲ್ಲಿ ನೆಲಸಿ ೧೬೩೬ರಲ್ಲಿ 'ಪ್ರಾವಿಡೆನ್ಸ್' ಎಂಬ ಊರನ್ನು ಸ್ಥಾಪಿಸಿದನು. ೧೬೪೪ರಲ್ಲಿ ವಿಲಿಯಮ್ಸ್ ಈ ವಸತಿಗಳಿಗೆ ರಾಜಶಾಸನವನ್ನು ಪಡೆದನು. ಅಂದಿನಿಂದ ಈ ವಸಾಹತು ರ್ಹೋಡ್ ಐಲೆಂಡ್ ಮತ್ತು ಪ್ರಾವಿಡೆನ್ಸ್ ಪ್ಲಾಂಟೇಷನ್ ಎಂದು ಕರೆಯಲ್ಪಟ್ಟಿತು. ಈ ವಸಾಹತಿನಲ್ಲಿ ಪ್ರಜಾರಾಜ್ಯ ಸ್ಥಾಪಿಸಲಾಯಿತು. ವ್ಯಕ್ತಿಗಳಿಗೆ ಮತಧರ್ಮ, ನಂಬಿಕೆ ಮತ್ತು ನಡವಳಿಕೆಗಳಲ್ಲಿ ಸಂಪೂರ್ಣ ಸ್ವಾತಂತ್ರ್ಯ ಕೊಡಲಾಯಿತು. ಸರ್ಕಾರ ಮತ್ತು ಚರ್ಚುಗಳನ್ನು ನಿರ್ದಿಷ್ಟವಾಗಿ ಬೇರ್ಪಡಿಸಲಾಯಿತು.

ಬಾಸ್ಟನ್‌ನ ಪ್ರಮುಖನೊಬ್ಬನ ಹೆಂಡತಿ ಆ್ಯನಿ ಹಚ್ಚಿನ್‌ಸನ್ ಎನ್ನುವವಳು ಹಠಮಾರಿ ಮತ್ತು ತಾನು ಹೇಳಿದ್ದೇ ಸರಿ ಎನ್ನುವ ಜಿಗುಟು ಸ್ವಭಾವದ ವ್ಯಕ್ತಿ. ಅವಳು ತನ್ನ ಚರ್ಚಿನ ಪಾದ್ರಿ ಕೊಡುತ್ತಿದ್ದ ಉಪದೇಶವನ್ನು ಕೆಲವು ಸಮಯ ತನ್ನ ಮನೆಯಲ್ಲಿ ಇತರರೊಂದಿಗೆ ಚರ್ಚಿಸುತ್ತಿದ್ದಳು. ಮತ್ತೆ ಕೆಲವು ಸಮಯ ಉಪದೇಶವನ್ನು ಎಲ್ಲರ ಎದುರಿನಲ್ಲಿ ಖಂಡಿಸಿ ನಿರಾಕರಿಸುತ್ತಿದ್ದಳು. ಅವಳ 'ಅನುಭಾವಿ ಪರಿಶುದ್ಧ ಮತ'ದ ಪ್ರಕಾರ ನೀತಿಯುತವಾದ ನಡತೆಗೂ ಮೋಕ್ಷಸಾಧನೆಗೂ ಏನೂ ಸಂಬಂಧವಿಲ್ಲ. ಮೋಕ್ಷ ದೇವರ ಕೃಪೆಯಿಂದ ಮಾತ್ರ ಸಾಧ್ಯ; ಒಳ್ಳೆಯ ನಡತೆಯಿಂದಲ್ಲ. ಪಾದ್ರಿಗಳು ಹಾಗಿರಲಿ, ಬೈಬಲ್

ಕೂಡ ವ್ಯಕ್ತಿಗಳು ದೇವರಿಂದ ನೇರವಾಗಿ ಪಡೆಯುವ ಅಂತರ್‌ದೃಷ್ಟಿಗೆ ಎಡೆ ಮಾಡಿ ಕೊಡಬೇಕು ಎಂದು ಬೋಧಿಸುತ್ತಿದ್ದಳು. ಅಂತರ್‌ದೃಷ್ಟಿಯ ಮಹತ್ವವನ್ನು ಒಪ್ಪಿಕೊಂಡ ಕೆಲವರು ಇವಳ ಅನುಯಾಯಿಗಳಾದರು. ತನ್ನ ವಾದ ವಿವಾದಗಳಿಂದ ಇವಳು ಚರ್ಚಿನ ಅಧಿಕಾರಿಗಳಿಗೆ ಕೋಪ ಬರಿಸಿದ ಪರಿಣಾಮವಾಗಿ ಅವಳನ್ನು ವಸಾಹತಿನಿಂದ ಗಡೀಪಾರು ಮಾಡಿದರು. ಆ್ಯನಿ ಹಚ್ಚಿನ್‌ಸನ್ ತನ್ನ ಕೆಲವು ಅನುಯಾಯಿಗಳೊಡನೆ ಹೊರಟು ವಿಲಿಯಮ್ ಕಾಡಿಂಗ್‌ಟನ್‌ನ ನಾಯಕತ್ವದಲ್ಲಿ ನರಾಗನ್‌ಸೆಟ್ ಪ್ರದೇಶದಲ್ಲಿ ಆಶ್ರಯ ಪಡೆದಳು. ಕೊನೆಗೆ ಇವಳು ಡಚ್ಚರ ಆಡಳಿತಕ್ಕೆ ಸೇರಿದ್ದ ಲಾಂಗ್ ಐಲೆಂಡ್‌ಗೆ ಹೋಗಿ ಅಲ್ಲಿ ೧೬೪೩ರಲ್ಲಿ ನಡೆದ ಇಂಡಿಯನ್ನರ ದಾಳಿಯಲ್ಲಿ ಅವಸಾನ ಹೊಂದಿದಳು.

ಮೇರಿಲ್ಯಾಂಡ್ ಮತ್ತು ಕರೊಲಿನ ವಸಾಹತುಗಳು

ಅನೇಕ ಐಶ್ವರ್ಯವಂತರು ಮತ್ತು ಪ್ರಬಲರಾದ ಇಂಗ್ಲಿಷರು ವಸಾಹತುಗಳ ಸ್ಥಾಪನೆಯಲ್ಲಿ ಆಸಕ್ತಿ ಉಳ್ಳವರಾಗಿದ್ದರು. ಪ್ರಯತ್ನಪಟ್ಟು ರಾಜನ ಆಸ್ಥಾನದಿಂದ ಅವರು ವಸಾಹತು ಪ್ರದೇಶಗಳನ್ನು ದತ್ತಿಗೆ ಪಡೆದುಕೊಂಡರು. ದತ್ತಿಗೆ ಪಡೆದಮೇಲೆ ಆ ಪ್ರದೇಶಗಳು ತಾತ್ವಿಕವಾಗಿ ಅವರ ಸ್ವತ್ತುಗಳಾದವು. ಹೀಗೆ ದತ್ತಿಗೆ ಪಡೆದುಕೊಂಡ ಇಂಗ್ಲಿಷರು ವಿಸ್ತಾರವಾದ ಪ್ರದೇಶಗಳ ಮಾಲೀಕರಾದರು. ಮಾಲೀಕರು ವಲಸೆಗಾರರಿಗೆ ಭೂಮಿಯನ್ನು ಗೇಣಿಗೆ ಕೊಟ್ಟು ಪ್ರತಿವರ್ಷ ನಿಗದಿಯಾದ ವರಮಾನ ಪಡೆಯುತ್ತಿದ್ದರು. ಗೇಣಿಯಿಂದ ಬರುವ ವರಮಾನವಲ್ಲದೆ, ಬೇಸಾಯ ಮಾಡದೆ ಇರುವ ಭೂಮಿಯನ್ನು ಹಾಗೆಯೆ ಇಟ್ಟುಕೊಂಡು ಬೆಲೆ ಏರಿದಾಗ ಮಾರಿ ಲಾಭ ಗಳಿಸುವ ಸಾಧ್ಯತೆಗಳು ಇದ್ದವು ಹೀಗೆ ದತ್ತಿಗೆ ಪಡೆದ ವಸಾಹತುಗಳಲ್ಲಿ ಮೊದಲನೆಯದು ಇಂಗ್ಲೆಂಡಿನ ರಾಜ ಒಂದನೆಯ ಚಾರ್ಲ್ಸ್‌ನು ಜಾರ್ಜ್ ಕಾಲ್‌ವರ್ಟ್, ಲಾರ್ಡ್ ಬಾಲ್ಟಿಮೋರ್‌ನಿಗೆ ದತ್ತಿಗೆ ಕೊಟ್ಟ ಮೇರಿಲ್ಯಾಂಡ್ ಪ್ರದೇಶ. ಇದರಿಂದ ಅಪಾರ ಲಾಭ ಪಡೆಯಲು ಅವನು ಹವಣಿಸುತ್ತಿದ್ದ. ಕಾಲ್‌ವರ್ಟನು ಕ್ಯಾಥಲಿಕ್ ಮತದವನಾದುದರಿಂದ ಈ ವಸಾಹತನ್ನು ಕ್ಯಾಥಲಿಕರಿಗೆ ಆಶ್ರಯಧಾಮವನ್ನಾಗಿ ಮಾಡಲು ಮನಸ್ಸು ಮಾಡಿದನು. ಆದರೆ ಇಂಗ್ಲೆಂಡಿನ ರಾಜನು ದತ್ತಿಗೆಯನ್ನು ಅಧಿಕೃತಗೊಳಿಸುವುದಕ್ಕೆ ಸ್ವಲ್ಪಸಮಯದ ಮುಂಚೆ ಕಾಲ್‌ವರ್ಟನು ಮರಣ ಹೊಂದಿದುದರಿಂದ ಮೇರಿಲ್ಯಾಂಡ್ ದತ್ತಿ ಅವನ ಮಗನಾದ ಸಿಸಿಲಿಯಸ್‌ಗೆ ಸಿಕ್ಕಿತು. ೧೬೩೪ರಲ್ಲಿ ವಲಸೆಗಾರರ ಮೊದಲನೆಯ ತಂಡ ಬಂದು ನೆಲಸಿ 'ಸೇಂಟ್ ಮೇರಿ' ಎಂಬ ಊರನ್ನು ಪೊಟೊಮ್ಯಾಕ್ ನದಿಯ ಉತ್ತರದಲ್ಲಿ ಸ್ಥಾಪಿಸಿದರು. ಪಕ್ಕದಲ್ಲಿ ಅಭಿವೃದ್ಧಿಗೊಂಡ ವರ್ಜೀನಿಯ ವಸಾಹತು ಇದ್ದದ್ದು ಮೇರಿಲ್ಯಾಂಡ್‌ನಲ್ಲಿ ನೆಲಸಿದ್ದವರಿಗೆ ಬಹಳ ಅನುಕೂಲವಾಯಿತು. ಮೇರಿಲ್ಯಾಂಡಿನವರಿಗೆ ಹೊಗೆಸೊಪ್ಪನ್ನು ಬೆಳಸಿ ಆರ್ಥಿಕವಾಗಿ ಅಭಿವೃದ್ಧಿಗೊಳ್ಳಲು ಕಷ್ಟವಾಗಲಿಲ್ಲ.

ಇಂಗ್ಲೆಂಡಿನ ಉತ್ತರವಲ್ಲಿರುವ ಗುಡ್ಡಗಾಡಿನಲ್ಲಿ ಹೊಸಪ್ರಪಂಚದ ಹೆಚ್ಚು ಸಂಪರ್ಕ

ವಿಲ್ಲದ ಡುರ್‌ಹ್ಯಾಮ್ ಪ್ರಾಂತದ ಪಾಲಟೈನ್‌ನಲ್ಲಿ ಜಾರಿಯಲ್ಲಿದ್ದ ಶಾಸನದ ಆಧಾರದ ಮೇಲೆ ಮೆರಿಲ್ಯಾಂಡಿನ ಶಾಸನವನ್ನು ರಚಿಸಲಾಯಿತು. ಡುರ್‌ಹ್ಯಾಮ್ ಪ್ರಾಂತದ ಧರ್ಮಾಧಿಕಾರಿಗೆ (Bishop) ರಾಜನಂತೆ ಸರ್ವಾಧಿಕಾರವಿತ್ತು. ಅದರಂತೆ ಮೇರಿಲ್ಯಾಂಡಿನಲ್ಲಿ ಮಧ್ಯಯುಗದ ಊಳಿಗಮಾನ್ಯ ಪದ್ಧತಿಯನ್ನು ಸ್ಥಾಪಿಸುವ ಅಧಿಕಾರವಿತ್ತು. ಹಾಗೆಯೆ ಗುಲಾಮಗಿರಿಯನ್ನು ಮುಂದುವರಿಸುವ ಮತ್ತು ಕಾನೂನುಗಳನ್ನು ಮಾಡುವ ನ್ಯಾಯಾಧೀಶರನ್ನು ನೇಮಿಸುವ ಎಲ್ಲಾ ಅಧಿಕಾರ ಲಾರ್ಡ್ ಬಾಲ್ಟಿಮೋರನ ಕೈಯಲ್ಲಿತ್ತು. ಆದರೆ ಅವನು ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ವಸಾಹತಿಗೆ ಒಳ್ಳೆಯ ಜನರನ್ನು ಆಕರ್ಷಿಸಲು ಅವರಿಗೆ ಭೂಮಿಯ ಒಡೆತನ ಕೊಡಬೇಕು ಮತ್ತು ಅವರ ಬದುಕಿಗೆ ಸಂಬಂಧಿಸಿದ ವಿಷಯಗಳಲ್ಲಿ ಅವರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದರಲ್ಲಿ ಅವರಿಗೆ ಹೆಚ್ಚಿನ ಅವಕಾಶಗಳಿರಬೇಕು ಎನ್ನುವುದನ್ನು ತಿಳಿದು ಅದಕ್ಕೆ ತಕ್ಕಂತೆ ಕಾಯಿದೆಗಳನ್ನು ಜಾರಿಗೆ ತಂದನು.

ಲಾರ್ಡ್ ಬಾಲ್ಟಿಮೋರ್‌ನಿಗೆ ಮೇರಿಲ್ಯಾಂಡನ್ನು ಕ್ಯಾಥಲಿಕ್ ವಸಾಹತನ್ನಾಗಿ ಮಾಡಬೇಕೆಂದು ಇಷ್ಟವಿತ್ತು. ಆದರೆ ಅಲ್ಲಿ ಆಗಲೇ ಪ್ರಾಟೆಸ್ಟಂಟರು ಹೆಚ್ಚಾಗಿ ಇದ್ದುದರಿಂದ ಅವನು ಈ ಎರಡು ಮತದವರ ನಡುವೆ ಘರ್ಷಣೆ ತಪ್ಪಿಸುವುದರ ಸಲುವಾಗಿ ೧೬೪೯ರಲ್ಲಿ 'ಸಹಿಷ್ಣುತಾ ಕಾನೂನನ್ನು' (Toleration Act) ಜಾರಿಗೆ ತಂದನು. ಈ ಕಾನೂನಿನ ಪ್ರಕಾರ, ಕ್ರಿಸ್ತನಲ್ಲಿ ನಂಬಿಕೆ ಉಳ್ಳವರಿಗೆಲ್ಲರಿಗೂ ಅವರವರ ನಂಬಿಕೆಗೆ ತಕ್ಕಂತೆ ನಡೆದುಕೊಳ್ಳುವ ಸ್ವಾತಂತ್ರ್ಯ ದೊರಕಿತು. ಕಾಲ್‌ವರ್ಟನ ಮನೆತನದವರು ಅಮೆರಿಕದ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅದಕ್ಕೆ ತಕ್ಕಂತೆ ಹೊಂದಿಕೊಂಡು ಹೋಗಿದ್ದರಿಂದ ಅವರು ಮೇರಿಲ್ಯಾಂಡಿನಲ್ಲಿ ಅಪಾರವಾದ ಐಶ್ವರ್ಯವನ್ನು ಸಂಪಾದಿಸಿ, ತಮ್ಮ ಪ್ರಭಾವವನ್ನು ಅಮೆರಿಕದ ಕ್ರಾಂತಿಯವರೆಗೂ ಉಳಿಸಿಕೊಂಡು ಬಂದರು.

ಇಂಗ್ಲೆಂಡಿನ ಅಂತರ್ಯುದ್ಧದ ಕಾಲದಲ್ಲಿ (ಒಂದನೆಯ ಚಾರ್ಲ್ಸ್ ದೊರೆ ಮತ್ತು ಪಾರ್ಲಿಮೆಂಟ್ ನಡುವಣ ಘರ್ಷಣೆ ಚಾರ್ಲ್ಸ್‌ನ ಶಿರಚ್ಛೇದದಲ್ಲಿ ಕೊನೆಗೊಂಡು ಪಾರ್ಲಿಮೆಂಟ್‌ನಲ್ಲಿ ಆಲಿವರ್ ಕ್ರಾಮ್‌ವೆಲ್ಲನ ಪ್ರಭಾವ ಬೆಳೆದ ಕಾಲ) ಮತ್ತು ಅಂತರ್ಯುದ್ಧದ ನಂತರ, ಆಲಿವರ್ ಕ್ರಾಮ್‌ವೆಲ್ಲನ ಆಡಳಿತ ಕಾಲದಲ್ಲಿ ಹೊಸ ವಸಾಹತುಗಳ ಸ್ಥಾಪನೆ ಆಗಲಿಲ್ಲ. ೧೬೬೦ರಲ್ಲಿ ಎರಡನೆಯ ಚಾರ್ಲ್ಸ್ ಪಟ್ಟಕ್ಕೆ ಬಂದಾಗ ಹೊಸ ವಸಾಹತುಗಳ ಸ್ಥಾಪನೆ ಮತ್ತೆ ಪ್ರಾರಂಭವಾಯಿತು. ಸರ್ಕಾರವೂ ಹೆಚ್ಚು ವಸಾಹತುಗಳ ಸ್ಥಾಪನೆಯಲ್ಲಿ ಆಸಕ್ತಿ ಹೊಂದಿತ್ತು. ವಸಾಹತುಗಳನ್ನು ಹೆಚ್ಚಿಸುವುದರ ಮೂಲಕ ಸರ್ಕಾರ ಉತ್ತರ ಅಮೆರಿಕದ ಮೇಲೆ ಹೆಚ್ಚಿನ ನಿಯಂತ್ರಣ ಪಡೆಯಲು ಹವಣಿಸಿತು. ಅಮೆರಿಕವಲ್ಲಿ ಪ್ರಬಲವಾದ ರಾಜಶಕ್ತಿಯಾಗಿ ಬೆಳೆಯಬೇಕೆಂಬ ದೃಷ್ಟಿಯಿಂದ ಸರ್ಕಾರ ವಲಸೆಗಾರರ ಕರಾರುಗಳನ್ನು ಸರಳಗೊಳಿಸಿತು. ಭೂಮಿಯ ಒಡೆತನ

ಪಡೆಯುವುದು ಸುಲಭವಾಗುವಂತೆ ವ್ಯವಸ್ಥೆ ಮಾಡಲಾಯಿತು. ಪರಮತ ಸಹಿಷ್ಣುತೆ ಮತ್ತು ರಾಜಕೀಯ ಹಕ್ಕುಗಳಿಗೆ ಸರ್ಕಾರ ಬೆಂಬಲ ನೀಡಿತು.

ಸರ್ಕಾರ ಒಪ್ಪಿಗೆ ನೀಡಿದ ಹೊಸ ಯೋಜನೆ ಅಂದರೆ ವರ್ಜೀನಿಯದ ದಕ್ಷಿಣದಲ್ಲಿ ಅತಿ ವಿಶಾಲವಾದ ಪ್ರಾಂತವನ್ನು ವಸಾಹತು ಅಭಿವೃದ್ಧಿಯಲ್ಲಿ ಆಸಕ್ತಿ ಇದ್ದ ಎಂಟುಜನ ಮಾಲೀಕರಿಗೆ ಕೊಡಲಾಯಿತು. ಈ ಎಂಟು ಜನರಲ್ಲಿ ಕ್ಲಾರೆಂಡನ್ ಸಾಹುಕಾರ ಸರ್ ಆ್ಯಂಟನಿ ಆಶ್‌ಲಿ ಕೂಪರ್ ಮತ್ತು ವರ್ಜೀನಿಯಾದ ಮಾಜಿ ಗವರ್ನರ್ ವಿಲಿಯಂ ಬರ್ಕ್‌ಲಿ ಸೇರಿದ್ದರು. ಒಂದನೆಯ ಚಾರ್ಲ್ಸ್‌ನ ಗೌರವಾರ್ಥ ಈ ಪ್ರಾಂತವನ್ನು 'ಕರೊಲಿನ' ಎಂದು ಕರೆಯಲಾಯಿತು.

ಈ ಮಾಲೀಕರು ಅತಿವಿಶಾಲವಾದ ಈ ಪ್ರಾಂತದ ನಿರ್ವಹಣೆಗಾಗಿ ತತ್ವಜ್ಞಾನಿ ಜಾನ್ ಲಾಕ್‌ನ ಸಹಾಯದಿಂದ ಒಂದು ರೀತಿಯ ಜಹಗೀರುದಾರು ಪದ್ಧತಿಯನ್ನು ಹೋಲುವ ವಂಶಪಾರಂಪರ್ಯವಾದ ರಾಜಕೀಯ ವ್ಯವಸ್ಥೆಯನ್ನು ಕೂಲಿಗಾಗಿ ಸ್ಥಾಪನೆ ಮಾಡಲು ಪ್ರಯತ್ನಿಸಿದರು. ಈ ವ್ಯವಸ್ಥೆಯಲ್ಲಿ ಲಾಭ ಎಲ್ಲ ಭೂಮಾಲೀಕರಿಗೆ; ಆದರೆ ದುಡಿಮೆಯೆಲ್ಲ – ಭೂಮಿಯಿಲ್ಲದ ರೈತರದು ಮತ್ತು ದುಡಿಯುವ ಕೆಲಸಗಾರರದು. ಯೂರೋಪಿನಲ್ಲಿ ಈ ವ್ಯವಸ್ಥೆ ನಡೆಯಬಹುದಿತ್ತೇನೋ ಆದರೆ ಅಮೆರಿಕದಲ್ಲಿ ಅದು ಸಾಧ್ಯವಾಗಲಿಲ್ಲ. ಆದ್ದರಿಂದ ಇವರು ವರ್ಜೀನಿಯ ಮತ್ತು ಮೇರಿಲ್ಯಾಂಡಿನ ಆಡಳಿತ ವ್ಯವಸ್ಥೆಯನ್ನು ಅನುಸರಿಸಿದರು. ೧೬೭೦ರಲ್ಲಿ ಈ ವಸಾಹತುಗಳಲ್ಲಿ ನೆಲಸಲು ಬಂದ ಮೊದಲಿಗರಲ್ಲಿ ಹೆಚ್ಚಿನವರು ಇಂಗ್ಲಿಷರು. ಇವರು ಬಾರ್ಬೆಡಾಸ್ ಕಬ್ಬಿನ ಗದ್ದೆಗಳಿಂದ ಬಂದವರು. ಬಾರ್ಬೆಡಾಸ್ ದ್ವೀಪದ ಕಬ್ಬಿನ ಗದ್ದೆಗಳಲ್ಲಿ ಕೆಲಸ ಮಾಡಲು ಗುಲಾಮರನ್ನು ತಂದಮೇಲೆ ಸಣ್ಣ ಹಿಡುವಳಿಗಾರರಿಗೆ ನಷ್ಟವಾಗಿ ಕೆಲಸ ಹುಡುಕಲು ಅವರು ವಲಸೆ ಹೊರಟರು. ಹೀಗೆ ಬಂದು ನೆಲಸಿದವರು ೧೬೮೦ರಲ್ಲಿ ಚಾರ್ಲ್ಸ್‌ಟೌನ್ (ಈಗ ಚಾರ್ಲ್ಸ್‌ಟನ್) ಊರನ್ನು ಸ್ಥಾಪಿಸಿದರು.

ವರ್ಜೀನಿಯಾಕ್ಕೆ ಸ್ವಲ್ಪ ದಕ್ಷಿಣದಲ್ಲಿದ್ದ ಅಲ್ಬಮರ್ಲೆ ಜಿಲ್ಲೆಯಲ್ಲಿ ವರ್ಜೀನಿಯಾದಿಂದ ಬಂದವರು ಒಂದು ನೆಲೆಯನ್ನು ಸ್ಥಾಪಿಸಿದರು. ಈ ಪ್ರಾಂತಗಳಲ್ಲಿ ಬೇರೆ ಬೇರೆ ರೀತಿಯ ಎರಡು ಸಮುದಾಯಗಳು ಬೆಳೆದವು. ಚಾರ್ಲ್ಸ್‌ಟನ್ ವಸಾಹತು ಆಹಾರ ಪದಾರ್ಥಗಳನ್ನು ಪಶ್ಚಿಮ ಇಂಡೀಸ್ ದ್ವೀಪಗಳಿಗೆ ರಫ್ತು ಮಾಡುವುದು, ನುಣುಪು ಕೂದಲಿನ ಚರ್ಮಗಳ ವ್ಯಾಪಾರ ಮುಂತಾದ ವಾಣಿಜ್ಯ ಸಂಬಂಧವಾದ ಆರ್ಥಿಕ ವ್ಯವಸ್ಥೆಯನ್ನು ಅನುಸರಿಸಿ ಅಭಿವೃದ್ಧಿಗೊಂಡು ಬೇರೆ ವಸಾಹತುಗಳ ಸಂಪರ್ಕದಿಂದ ಅಂತರ ಪ್ರಾಂತೀಯ ಕೇಂದ್ರವಾಯಿತು. ಅಲ್ಬಮರ್ಲೆ ವಸಾಹತು ಬಡಜನರು ನೆಲಸಿದ್ದ ಹಿಂದುಳಿದ ಒಂದು ರೀತಿಯ ಹಳ್ಳಿಗಾಡು ಪ್ರದೇಶವಾಗಿತ್ತು. ೧೭೧೨ರಲ್ಲಿ ಇವೆರಡು ಪ್ರಾಂತಗಳನ್ನು ಅಧಿಕೃತವಾಗಿ ಉತ್ತರ ಮತ್ತು ದಕ್ಷಿಣ ಕರೊಲಿನ ವಸಾಹತುಗಳೆಂದು ವಿಂಗಡಿಸಲಾಯಿತು.

ಇತರ ವಸಾಹತುಗಳು:

ವಸಾಹತುಗಳ ಸ್ಥಾಪನೆಯಲ್ಲಿ ಬ್ರಿಟಿಷರು ಯಶಸ್ವಿಗಳಾಗಿ ಸೇಂಟ್ ಲಾರೆನ್ಸ್ ಕಣಿವೆಯಿಂದ ಹಿಡಿದು ಫ್ಲಾರಿಡಾವರೆಗಿನ ತೀರಪ್ರದೇಶದ ಮೇಲೆ ಏಕಸ್ವಾಮ್ಯತೆಯನ್ನು ಪಡೆದಿದ್ದರು. ೧೬೬೦ರಲ್ಲಿ ಡಚ್ಚರು ಬ್ರಿಟಿಷರ ಏಕಸ್ವಾಮ್ಯತೆಗೆ ಸವಾಲು ಹಾಕಿದರು. ಸ್ಪೇನಿನ ಮೇಲೆ ನಡೆದ ಯುದ್ಧದಲ್ಲಿ ಇವೆರಡು ದೇಶಗಳು 'ಮಿತ್ರ ದೇಶ' ಗಳಾಗಿದ್ದವು. ಆದರೆ ಬ್ರಿಟಿಷರ ಮತ್ತು ಡಚ್ಚರ ನಡುವೆ ಮನಃಸ್ತಾಪ ಉಂಟಾಗಿ ವೈರತ್ವ ಬೆಳೆಯಿತು; ವೈರತ್ವಕ್ಕೆ ಎರಡು ದೇಶಗಳ ಹತ್ತಿ ಗಿರಣಿ ಮಾಲೀಕರು ಮತ್ತು ವ್ಯಾಪಾರಿಗಳ ನಡುವೆ ಪೈಪೋಟಿ ಕಾರಣವಾಗಿತ್ತು. ವಸಾಹತುಗಳೊಡನೆ ವ್ಯಾಪಾರ ಮಾಡದಂತೆ ಡಚ್ಚರ ಹಡಗುಗಳನ್ನು ಬ್ರಿಟಿಷರ ನೌಕೆಗಳು ತಡೆಯುತ್ತಿದ್ದುದು ದ್ವೇಷಕ್ಕೆ ಮತ್ತೊಂದು ಕಾರಣವಾಗಿತ್ತು.

ಇವೆರಡು ದೇಶಗಳು ಕೂಡಲೆ ಯುದ್ಧ ಪ್ರಾರಭಿಸಲು ಕಾರಣವಾದ ಸಂಗತಿ ಎಂದರೆ, ಇಂಗ್ಲೆಂಡಿನ ರಾಜ ಎರಡನೆಯ ಚಾರ್ಲ್ಸ್ ತನ್ನ ತಮ್ಮ ಜೇಮ್ಸ್ ಡ್ಯೂಕ್ ಆಫ್ ಯಾರ್ಕ್‌ನಿಗೆ ಕನೆಕ್ಟಿಕಟ್ ಮತ್ತು ಮೇರಿಲ್ಯಾಂಡ್ ನಡುವಣ ಎಲ್ಲ ಪ್ರದೇಶವನ್ನು ದತ್ತಿಗೆ ಕೊಟ್ಟ ಪ್ರಸಂಗ. ಹೀಗೆ ಮಾಡಿದುದು ಯುದ್ಧ ಸಾರಿದಂತಾಯಿತು. ೧೬೬೪ರಲ್ಲಿ ಬ್ರಿಟಿಷ್ ಸೈನಿಕರು ಡಚ್ಚರ ವಶದಲ್ಲಿದ್ದ 'ನ್ಯೂ ಆ್ಯಮ್‌ಸ್ಟರ್‌ಡ್ಯಾಮ್'ನ್ನು ಸುಲಭವಾಗಿ ವಶಪಡಿಸಿಕೊಂಡರು. ಆಗ ಆ ಪಟ್ಟಣದಲ್ಲಿ ಇದ್ದವರು ಕೇವಲ ೧೫೦೦ ಜನರು ಮಾತ್ರ.

ಬೇಗನೆ ಡಚ್ಚರ ವಶದಲ್ಲಿದ್ದ ವಸಾಹತುಗಳು, ವಸತಿಗಳು ಒಂದೊಂದಾಗಿ ಬ್ರಿಟಿಷರಿಗೆ ಶರಣಾದವು. ನ್ಯೂ ಆ್ಯಮ್‌ಸ್ಟರ್‌ಡ್ಯಾಮ್ ನಗರ ನ್ಯೂಯಾರ್ಕ್ ಆಯಿತು. ಡ್ಯೂಕ್ ಆಫ್ ಯಾರ್ಕ್ ಡಚ್ಚರನ್ನು ಅವರ ಪಾಡಿಗೆ ಅವರು ಇರುವಂತೆ ಬಿಟ್ಟನು. ಸ್ವಲ್ಪ ಕಾಲದಲ್ಲಿಯೇ ಡಚ್ಚರು ಹೊಸ ಪರಿಸ್ಥಿತಿಗೆ ಹೊಂದಿಕೊಂಡರು. ಡ್ಯೂಕ್ ಆಫ್ ಯಾರ್ಕನು ಹಡ್ಸನ್ ನದಿ ಮತ್ತು ಡೆಲವೇರ್ ನದಿಯ ನಡುವಣ ನ್ಯೂ ಜರ್ಸಿ ಪ್ರದೇಶವನ್ನು ಜಾನ್, ಲಾರ್ಡ್ ಬರ್ಕ್‌ಲಿ ಮತ್ತು ಸರ್ ಜಾರ್ಜ್ ಕಾರ್ಟರೇಟ್ ಎನ್ನುವ ತನ್ನ ಸ್ನೇಹಿತರಿಗೆ ದಾನ ಮಾಡಿದನು. ಅವರಿಬ್ಬರು ಆ ಪ್ರದೇಶದ ಮಾಲೀಕರಾದರು. ಇವರು ವಲಸೆಗಾರರನ್ನು ಆಕರ್ಷಿಸಲು ಭೂಮಿಯನ್ನು ಸ್ವಂತಕ್ಕೆ ಮಾಡಿಕೊಳ್ಳುವ ಕ್ರಮವನ್ನು ಸರಳಗೊಳಿಸಿದರು, ಮತೀಯ ಸ್ವಾತಂತ್ರ್ಯ ಮತ್ತು ಸ್ಥಳೀಯ ಪ್ರಜಾಪ್ರಭುತ್ವ ಸರ್ಕಾರವನ್ನು ಸ್ಥಾಪಿಸಿದರು.

೧೬೭೪ರಲ್ಲಿ ಲಾರ್ಡ್ ಬರ್ಕ್‌ಲಿ ತನ್ನ ಪಾಲಿನ ನ್ಯೂ ಜರ್ಸಿ ಪ್ರದೇಶವನ್ನು ಇಬ್ಬರು ಕ್ವೇಕರರಿಗೆ (Quakers) ಮಾರಿದನು. ಕ್ವೇಕರರು ಉಗ್ರ ಪ್ರತ್ಯೇಕತಾವಾದಿಗಳು. ಅವರ ಮತಧರ್ಮದಲ್ಲಿ ಪೂಜಾವಿಧಿಗಳಾಗಲಿ, ಪಾದ್ರಿಗಳಾಗಲಿ ಇರಲಿಲ್ಲ. ಅವರು ಅಂತರಂಗದ ಬೆಳಕಿಗೆ (Inner light) ಹೆಚ್ಚಿನ ಮಹತ್ವ ಕೊಟ್ಟರು. ಸತ್ಯದ ನೇರ ಆಧ್ಯಾತ್ಮಿಕ ಅನುಭವವನ್ನು ಎಲ್ಲರೂ ಪಡೆಯಬಹುದೆಂದು ನಂಬಿದ್ದರು. ಅವರು ಬಹಳ ನಮ್ರ

ಸ್ವಭಾವದವರು ಮತ್ತು ತೀವ್ರ ಸ್ವಾಭಿಮಾನಿಗಳು. ತೋರಿಕೆಯ ಆಡಂಬರಗಳನ್ನು ತೊರೆದು, ಯಾರಿಗೂ ತಲೆಬಾಗದೆ, ತಮಗೆ ಇಷ್ಟ ಬಂದಂತೆ ಪೂಜೆ ಮಾಡುವ ಹಕ್ಕನ್ನು ಸತ್ತರೂ ಬಿಟ್ಟುಕೊಡದೆ ಇರುವಂಥ ಶ್ರದ್ಧೆ ಉಳ್ಳವರು. ತಮ್ಮ ಮತಧರ್ಮವನ್ನು ಹರಡಲು ಉತ್ಸುಕರಾಗಿದ್ದರೂ ಅವರು ಪರಮತ ಸಹಿಷ್ಣುಗಳಾಗಿದ್ದರು. ಘರ್ಷಣೆ ಉಂಟಾದಾಗ ಅದನ್ನು ಅಹಿಂಸಾಮಾರ್ಗದಿಂದ ಪರಿಹರಿಸುತ್ತಿದ್ದರು.

೧೬೭೦ರಲ್ಲಿ ಸರ್ ಜಾರ್ಜ್ ಕಾರ್ಟರೇಟ್ ಸತ್ತಾಗ ಅವನ ಸ್ವತ್ತಾಗಿದ್ದ ನ್ಯೂ ಜರ್ಸಿಯ ಅರ್ಧಭಾಗವನ್ನು ಕ್ವೇಕರರು ಕೊಂಡು ಇಡೀ ನ್ಯೂಜರ್ಸಿಯ ಪ್ರಾಂತವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಇದರಿಂದ ಅವರು ಇಲ್ಲಿ ನೆಲಸಿ ತಮ್ಮ ಮತಧರ್ಮವನ್ನು ಯಾವ ಅಡಚಣೆಗಳೂ ಇಲ್ಲದಂತೆ ನೆಮ್ಮದಿಯಾಗಿ ಆಚರಿಸಲು ಸಾಧ್ಯವಾಯಿತು. ಈ ಪ್ರಾಂತದ ಮಾಲೀಕರಾದ ಕ್ವೇಕರರು ಅದನ್ನು ನಿರ್ವಹಣೆ ಮಾಡಲು ಅತ್ಯಂತ ಉದಾರವಾದ ರಾಜ್ಯಾಂಗವನ್ನು ರಚಿಸಿದರು. ೧೬೭೭ರ ಒಪ್ಪಂದಗಳು ಮತ್ತು ರಿಯಾಯಿತಿಗಳನ್ನು ಒಳಗೊಂಡ ನ್ಯಾಯಾಂಗವನ್ನು ರಚನೆ ಮಾಡಿ ವಸಾಹತಿನಲ್ಲಿರುವ ವ್ಯಕ್ತಿಸ್ವಾತಂತ್ರ್ಯ, ತಪ್ಪಿತಸ್ಥರಿಗೆ ನ್ಯಾಯದರ್ಶಿ (ಜ್ಯೂರಿ-Jury)ಗಳ ಸಮ್ಮುಖದಲ್ಲಿ ವಿಚಾರಣೆಯ ಹಕ್ಕು ಮತ್ತು ಇತರ ಸಾಮಾಜಿಕ ಹಕ್ಕು ಬಾಧ್ಯತೆಗಳನ್ನು ನೀಡಲಾಯಿತು.

ಕ್ವೇಕರರು ತಮ್ಮ ಮುಖ್ಯ ವಸಾಹತನ್ನು ನ್ಯೂಜರ್ಸಿಯ ಪಶ್ಚಿಮಕ್ಕಿರುವ ಪ್ರದೇಶದಲ್ಲಿ ಸ್ಥಾಪನೆ ಮಾಡಿದರು. ಫಲವತ್ತಾದ ಈ ಪ್ರದೇಶ ವಿಲಿಯಂ ಪೆನ್ ಎಂಬ ನೌಕಾದಳಪತಿಯ ಮಗನಿಗೆ ಸೇರಿತ್ತು. ವಿಲಿಯಂ ಪೆನ್ ಐಶ್ವರ್ಯವಂತನಾದರೂ ವಿಲಾಸ ಜೀವನವನ್ನು ತೊರೆದು, ಕ್ವೇಕರ್ ಮತಪ್ರಚಾರಕನಾದನು. ನೌಕಾದಳಪತಿಯಾಗಿದ್ದ ಅವನ ತಂದೆ ಇಂಗ್ಲೆಂಡಿನ ರಾಜ ಎರಡನೆಯ ಚಾರ್ಲ್ಸ್‌ನಿಗೆ ಸಾಲವಾಗಿ ಕೊಟ್ಟ ೧೬೦೦೦ ಪೌಂಡ್ ನಗದು ಹಣಕ್ಕೆ ಇವನು ಉತ್ತರಾಧಿಕಾರಿಯಾದನು. ರಾಜ ಎರಡನೆಯ ಚಾರ್ಲ್ಸ್ ಸಾಲವನ್ನು ವಾಪಸು ಕೊಡುವಾಗ ಅಷ್ಟು ದೊಡ್ಡ ಮೊತ್ತದ ನಗದು ಹಣ ಕೊಡಲು ಮನಸ್ಸು ಬಾರದೆ, ಆದಕ್ಕೆ ಬದಲಾಗಿ ಬ್ರಿಟಿಷರ ವಶದಲ್ಲಿದ್ದ ಅಮೆರಿಕ ಭೂಭಾಗವನ್ನು ಕೊಡಲು ಒಪ್ಪಿಕೊಂಡನು. ಈ ಒಪ್ಪಂದದ ಪ್ರಕಾರ ೧೬೮೧ರಲ್ಲಿ ಮೇರಿಲ್ಯಾಂಡ್‌ನ ಉತ್ತರಕ್ಕೆ ಮತ್ತು ಡೆಲವೇರ್ ನದಿಯ ಪಶ್ಚಿಮಕ್ಕಿದ್ದ ಪ್ರದೇಶವನ್ನು ವಿಲಿಯಂ ಪೆನ್ ಪಡೆದುಕೊಂಡನು. ರಾಜನ ಇಷ್ಟದಂತೆ ನೌಕಾದಳಪತಿಯ ಗೌರವಾರ್ಥವಾಗಿ ಈ ಪ್ರದೇಶವನ್ನು ಪೆನ್ಸಿಲ್‌ವೇನಿಯ ಎಂದು ಕರೆಯಲಾಯಿತು. ಡ್ಯೂಕ್ ಆಫ್ ಯಾರ್ಕನು ಮೇರಿಲ್ಯಾಂಡ್ ಮತ್ತು ಡೆಲವೇರ್ ಕೊಲ್ಲಿಯ ನಡುವಣ ಡೆಲವೇರ್ ಪ್ರಾಂತವನ್ನು ವಿಲಿಯಂ ಪೆನ್‌ನ ಆಡಳಿತಕ್ಕೆ ಒಳಪಡಿಸಿದನು.

ಪೆನ್ಸಿಲ್‌ವೇನಿಯ ವಸಾಹತನ್ನು ವಿಲಿಯಂ ಪೆನ್ ಒಂದು 'ಪವಿತ್ರ ಪ್ರಯೋಗ' (Holy Experiment) ಎಂದು ಪರಿಗಣಿಸಿದನು. ಈತನು ಇಂಡಿಯನ್ನರೊಡನೆ ನೀತಿಯುತ

ವಾಗಿ ನಡೆದುಕೊಂಡನು. ಬೇರೆ ಬಿಳಿಯರಂತೆ ಇಂಡಿಯನ್ನರ ಭೂಮಿಯನ್ನು ಬಲಾತ್ಕಾರದಿಂದ ಕಸಿದುಕೊಳ್ಳದೆ ನ್ಯಾಯವಾದ ರೀತಿಯಲ್ಲಿ ವ್ಯವಹರಿಸಿದನು. ತನ್ನ ವಸಾಹತಿನಲ್ಲಿ ನೆಲಸಿದ ಎಲ್ಲರೂ ಇಂಡಿಯನ್ನರೊಡನೆ ನ್ಯಾಯಬದ್ಧವಾಗಿ ವ್ಯವಹರಿಸುವಂತೆ ಮಾಡಿದನು. ವಿಲಿಯಂ ಪೆನ್‌ನ ಅಭಿಪ್ರಾಯಗಳು ಪ್ರಜಾಸತ್ತಾತ್ಮಕವಾಗಿರುವುದಕ್ಕಿಂತ ಹೆಚ್ಚಾಗಿ ಪಿತೃವಾತ್ಸಲ್ಯಪೂರಿತವಾಗಿದ್ದವು. ಅವನು ಸ್ಥಾಪಿಸಿದ ಆಡಳಿತ ಸಂಸ್ಥೆಯ ಸದಸ್ಯರು ವಸಾಹತಿನ ಗವರ್ನರ್ ಮಂಡಿಸಿದ ಕಾಯಿದೆಗಳನ್ನು ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕು ಪಡೆದಿದ್ದರು.

ಪೆನ್ ಪರೋಪಕಾರಿಯಾಗಿದ್ದರೂ ತನ್ನ ಸ್ವಂತ ಹಿತಾಸಕ್ತಿಗಳನ್ನು ಕಡೆಗಣಿಸಲಿಲ್ಲ. ಭೂಮಿಯನ್ನು ಚಿಕ್ಕ ಮತ್ತು ದೊಡ್ಡ ಹಿಡುವಳಿಗಾರರಿಗೆ ಸರಳ ಕರಾರಿನ ಮೇಲೆ ಮಾರಿ ಅಪಾರ ಹಣ ಗಳಿಸಿದನು. ವಿಶಾಲವಾದ ಭಾಗಗಳನ್ನು ತನ್ನ ಸ್ವಂತಕ್ಕಾಗಿ ಉಳಿಸಿಕೊಂಡನು. ವಿಶಾಲಪ್ರದೇಶವನ್ನು ಮಾರಿದಾಗ ಅದನ್ನು ಕೊಂಡವರ ಮೇಲೆ ವಾರ್ಷಿಕ ತೆರಿಗೆಯನ್ನು (Quit rent) ವಿಧಿಸುತ್ತಿದ್ದನು. ವಿಲಿಯಂ ಪೆನ್ ಪೆನ್ಸಿಲ್‌ವೇನಿಯ ವಸಾಹತನ್ನು ಪ್ರವರ್ಧಮಾನಕ್ಕೆ ತರಲು ಸತತವಾಗಿ ಶ್ರಮಿಸಿದನು. ಈ ವಸಾಹತಿನ ಉಜ್ವಲ ವರ್ಣನೆಗಳನ್ನು ಪ್ರಕಟಿಸಿ ಇಂಗ್ಲೆಂಡಿನಲ್ಲಿ ಪ್ರಚುರ ಪಡಿಸಿದನು. ಆ ಪ್ರಕಟಣೆಯನ್ನು ಯೂರೋಪಿನ ನಾನಾ ಭಾಷೆಗಳಿಗೆ ಭಾಷಾಂತರಿಸಿ ಪ್ರಚುರಪಡಿಸಿದನು. ಇದು ಅನೇಕ ವಲಸೆಗಾರರನ್ನು ಆಕರ್ಷಿಸಿತು. ಜರ್ಮನಿಯಿಂದ ಬಹಳ ಹೆಚ್ಚು ಜನ ವಲಸೆ ಬಂದು ಪೆನ್ಸಿಲ್‌ವೇನಿಯಾದಲ್ಲಿ ನೆಲಸಿದರು. ಇವರನ್ನು 'ಪೆನ್ಸಿಲ್‌ವೇನಿಯಾ ಡಚ್ಚರು' ಎಂದು ಕರೆಯುತ್ತಾರೆ. 'ಡಚ್' ಎನ್ನುವುದು ' Deutsch ' ಪದದ ಅಪಭ್ರಂಶವಾಗಿದೆ.

೧೬೮೫ರ ಹೊತ್ತಿಗೆ ಪೆನ್ಸಿಲ್‌ವೇನಿಯಾ ವಸಾಹತಿನಲ್ಲಿ ಒಂಬತ್ತು ಸಾವಿರ ಜನರು ನೆಲಸಿದ್ದರು. ೧೭೦೦ರ ಸುಮಾರಿಗೆ ಜನಸಂಖ್ಯೆ ಅದರ ಎರಡು ಪಟ್ಟಾಯಿತು. ಈ ವಸಾಹತಿನಲ್ಲಿ ಗೋಧಿ, ಜೋಳ, ಜವೆಗೋಧಿ ಮತ್ತು ಇತರ ಬೆಳೆಗಳನ್ನು ಸಮೃದ್ಧವಾಗಿ ಬೆಳೆಯುತ್ತಿದ್ದರು. ತಮ್ಮ ಅಗತ್ಯಕ್ಕೆ ಉಪಯೋಗಿಸಿಕೊಂಡು ಹೆಚ್ಚಾಗಿ ಉಳಿದ ಗೋಧಿ, ಜೋಳ ಮುಂತಾದುವನ್ನು ಪಶ್ಚಿಮ ಇಂಡೀಸ್ ದ್ವೀಪಗಳ ಕಬ್ಬಿನ ಪ್ಲಾಂಟೇಶನ್‌ಗಳಿಗೆ ರಫ್ತು ಮಾಡುತ್ತಿದ್ದರು.

ಪೆನ್ಸಿಲ್‌ವೇನಿಯ ವಸಾಹತಿನ ಸ್ಥಾಪನೆ ಬಹುಮಟ್ಟಿಗೆ ಅಮೆರಿಕದಲ್ಲಿ ಬ್ರಿಟಿಷ್ ವಸಾಹತು ಸಾಮ್ರಾಜ್ಯದ ತಳಪಾಯ ಹಾಕಿ ಮುಗಿಸಿದಂತಾಯಿತು. ಇದಾದ ಸುಮಾರು ಐವತ್ತು ವರ್ಷಗಳ ಮೇಲೆ ಈ ಸಾಮ್ರಾಜ್ಯದ ಅಂತಿಮ ವಸಾಹತನ್ನು ಸ್ಥಾಪಿಸಲಾಯಿತು. ಇದೇ ಜಾರ್ಜಿಯ ವಸಾಹತು. ಈ ವಸಾಹತು ಸ್ಥಾಪನೆಯ ಸಂದರ್ಭಗಳು ಅಸಾಧಾರಣವಾದುವು. ಲಂಡನ್ನಿನ ಕೆಲವು ದಾನಿಗಳು, ಸಾಲ ತೀರಿಸಲಾಗದೆ ಜೈಲುವಾಸ ಅನುಭವಿಸುತ್ತಿದ್ದ ಪ್ರಾಮಾಣಿಕ ವ್ಯಕ್ತಿಗಳ ಸ್ಥಿತಿಗೆ ಮರುಕಗೊಂಡು, ಈ ನತದೃಷ್ಟರನ್ನು ಜೈಲಿನಿಂದ

ಬಿಡುಗಡೆ ಮಾಡಿ ಇವರನ್ನು 'ಹೊಸ ಪ್ರಪಂಚಕ್ಕೆ' ಕಳುಹಿಸಿ ಹೊಸಬಾಳನ್ನು ಪ್ರಾರಂಭಿಸುವ ಅವಕಾಶ ಮಾಡಿಕೊಡಬೇಕೆಂದು ಮನಸ್ಸು ಮಾಡಿ, ಕೆರೊಲಿನ ವಸಾಹತುಗಳಿಂದ ಆಚೆಯ ದಕ್ಷಿಣ ಪ್ರದೇಶವನ್ನು ದತ್ತಿಗೆ ಕೊಡಬೇಕೆಂದು ಸರ್ಕಾರಕ್ಕೆ ಅರ್ಜಿ ಸಲ್ಲಿಸಿದರು. ದಕ್ಷಿಣ ಕೆರೊಲಿನ ಮತ್ತು ಸ್ಪಾನಿಷರ ಫ್ಲಾರಿಡ ವಸಾಹತುವಿನ ನಡುವೆ ಸ್ಪಾನಿಷರ ದಾಳಿಯನ್ನು ತಡೆಯುವಂತಹ ಒಂದು ಪ್ರಾಂತವನ್ನು ಸ್ಥಾಪಿಸಲು ಕಾತರವಾಗಿದ್ದ ಸರ್ಕಾರ ದಾನಿಗಳು ಸಲ್ಲಿಸಿದ ಕೋರಿಕೆಯನ್ನು ಮನ್ನಣೆ ಮಾಡಿ ಅವರು ಕೇಳಿದ ಪ್ರದೇಶವನ್ನು ೧೭೩೨ರಲ್ಲಿ ದತ್ತಿಗೆ ನೀಡಿದರು. ಸರ್ಕಾರ ನಿರ್ದೇಶಿಸಿದಂತೆ ಈ ಪ್ರದೇಶದ ಆಡಳಿತ ನಿರ್ವಹಣೆಗಾಗಿ ಧರ್ಮದರ್ಶಿಗಳ (Trustees) ಒಂದು ಸಮಿತಿಯನ್ನು ರಚಿಸಲಾಯಿತು. ಧರ್ಮದರ್ಶಿಗಳು ಸ್ವಂತ ಲಾಭವನ್ನು ಪಡೆಯದೆ ಇಪ್ಪತ್ತೊಂದು ವರ್ಷಗಳು ವಸಾಹತಿನ ಆಡಳಿತ ನಡೆಸಿಕೊಂಡುಹೋಗಬೇಕೆಂದು ಆದೇಶ ನೀಡಲಾಯಿತು.

ಈ ಯೋಜನೆಯ ಪ್ರಕಾರ ಜೈಲಿನಿಂದ ಬಿಡಿಸಿ ತಂದ ಪ್ರತಿ ಸಾಲಗಾರನನ್ನು ೫೦ ಎಕರೆ ಸಾಗುವಳಿ ಭೂಮಿಯ (ಮಾರುವ ಹಕ್ಕಿಲ್ಲದ) ವ್ಯವಸಾಯಕ್ಕೆ ಜವಾಬ್ದಾರನನ್ನಾಗಿ ಮಾಡಿ ನೆಲೆ ನಿಲ್ಲುವಂತೆ ಮಾಡಿದರು. ಇವರು ಕಷ್ಟಪಟ್ಟು ದುಡಿಯುವಂತೆ ಮಾಡಲು ಮದ್ಯಪಾನ ಮತ್ತು ಗುಲಾಮರನ್ನು ಇಟ್ಟುಕೊಳ್ಳುವುದನ್ನು ನಿಷೇಧಿಸಲಾಯಿತು. ಧರ್ಮದರ್ಶಿಗಳ ಮುಖ್ಯಸ್ಥನಾದ ಜೇಮ್ಸ್ ಓಗ್ಲ್‌ತೋರ್ಪ್ (James Oglethorpe) ೧೭೩೩ರಲ್ಲಿ ಸವಾನ್ನಾ (Savannah) ಊರನ್ನು ಸ್ಥಾಪಿಸಿದನು. ಕಾಲಕ್ರಮೇಣ ವಸಾಹತಿನಲ್ಲಿ ನೆಲೆನಿಂತವರು ವೈವಿಧ್ಯತೆ ಇಲ್ಲದ ಶಿಸ್ತಿನ ಜೀವನ ನಡೆಸಲು ನಿರಾಕರಿಸಿದರು. ಅವರಲ್ಲಿ ಕೆಲವರು ತಮ್ಮ ಹಿಡುವಳಿಯನ್ನು ೫೦ ಎಕರೆಗಳಿಗಿಂತ ಹೆಚ್ಚಿಸಲು ಬೇರೆ ಮಾರ್ಗಗಳನ್ನು ಕಂಡುಹಿಡಿದರು. ಸ್ವಲ್ಪ ಕಾಲದಲ್ಲಿಯೇ ಪಾನನಿರೋಧ ರದ್ದಾಗಿ ವ್ಹಿಸ್ಕಿ, ರಮ್ ಮುಂತಾದವು ದೊರೆಯುವಂತಾಯಿತು. ಕೆಲಸಕ್ಕೆ ಗುಲಾಮರನ್ನು ಆಮದು ಮಾಡಿಕೊಂಡರು. ಹೀಗೆ ಜಾರ್ಜಿಯ ದಕ್ಷಿಣ ಕೆರೊಲಿನದಂತೆ ಆಯಿತು. ಭ್ರಮೆನಿರಸನರಾದ ಧರ್ಮದರ್ಶಿಗಳು ತಮ್ಮ ಜವಾಬ್ದಾರಿಯನ್ನು ಬಿಟ್ಟು ಕೈತೊಳೆದುಕೊಂಡರು. ಈ ವಿದ್ಯಮಾನಗಳಿಂದಾಗಿ ೧೭೫೨ರಲ್ಲಿ ಜಾರ್ಜಿಯ ರಾಜನ ಆಡಳಿತಕ್ಕೆ ಒಳಪಟ್ಟಿತು.

ವಸಾಹತುಗಳ ಸಂಸ್ಕೃತಿ ಮತ್ತು ನಾಗರಿಕತೆ

ಇಂಗ್ಲೆಂಡ್ ಸ್ಥಾಪಸಿದ ಅಮೆರಿಕದ ವಸಾಹತುಗಳಿಗೆ ಬಂದು ನೆಲಸಿದವರಲ್ಲಿ ಬಹುಸಂಖ್ಯಾತರು ಇಂಗ್ಲಿಷರಾಗಿದ್ದರು. ಈ ಬಹು ಸಂಖ್ಯಾತರೊಡನೆ ಜರ್ಮನರು, ಐರಿಷರು, ಡಚ್ಚರು, ಫ್ರೆಂಚರು, ಸ್ವೀಡಿಷರು, ಪೋರ್ಚುಗೀಸರು ಮತ್ತು ಇತರ ಐರೋಪ್ಯರು ಮಿಶ್ರಣಗೊಂಡಿದ್ದರು. ಹೀಗೆ ವಲಸೆ ಬಂದು ನೆಲಸಿದವರು ತಮ್ಮ ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ತಮ್ಮೊಡನೆ ತಂದಿದ್ದರು. ಈ ಸಂಸ್ಕೃತಿ ಮತ್ತು ನಾಗರಿಕತೆಗಳ ವೈವಿಧ್ಯತೆ ವಲಸೆಗಾರರು ಬಂದ ದೇಶ, ಅವರ ಸಾಮಾಜಿಕ ಅಂತಸ್ತು, ಬುದ್ಧಿಮಟ್ಟ ಮತ್ತು

ಅಭಿರುಚಿಗಳನ್ನು ಅವಲಂಬಿಸಿತ್ತು. ಆದರೆ ಅವರೆಲ್ಲರೂ ಐರೋಪ್ಯರು ಎಂದು ಸುಲಭವಾಗಿ ಗುರುತಿಸಬಹುದಿತ್ತು. ಅಮೆರಿಕದಲ್ಲಿ ನೆಲಸಿದ ವಲಸೆಗಾರರು ತಮ್ಮ ಪರಂಪರೆಯನ್ನು ಸಂಪೂರ್ಣವಾಗಿ ಕಳೆದುಕೊಳ್ಳಲಿಲ್ಲ. ಕಾಲಕ್ರಮೇಣ ಇವರು ಮತ್ತು ಇವರಿಗಿಂತ ಹೆಚ್ಚಾಗಿ ಇವರ ಸಂತತಿಯವರು ಏನೋ ಒಂದು ರೀತಿಯಲ್ಲಿ ತಾವು ಬಿಟ್ಟುಬಂದ ನಾಡಿನವರಿಗಿಂತ ತೀರಾ ಬೇರೆಯಾಗುತ್ತಾ ಹೋದರು. ಈ 'ಬೇರೆತನವೆ' ಇವರ ವಿಶಿಷ್ಟ ಲಕ್ಷಣ. ಇದು ಅವರು 'ಅಮೆರಿಕನ್ನ'ರು, ಐರೋಪ್ಯರಲ್ಲ ಎನ್ನುವುದರ ಕುರುಹು.

ಹೊಸಪ್ರಪಂಚಕ್ಕೆ ಬಂದು ನೆಲಸಿದ ಯೂರೋಪಿಯನ್ನರಲ್ಲಿ ಉಂಟಾದ ಸೂಕ್ಷ್ಮವಾಗಿದ್ದರೂ ಗಾಢವಾದ ಬದಲಾವಣೆಗಳು ಅವರ ಸ್ವ-ಇಚ್ಛೆಯಿಂದ ಆದುವಲ್ಲ. ವಲಸೆಗಾರರಲ್ಲಿ ಹೆಚ್ಚಿನ ಎಲ್ಲರೂ ವಲಸೆ ಬಂದಿದ್ದು ನಿಜವಾಗಿ ಹೊಸ ಪ್ರಪಂಚದಲ್ಲಿ ಪರಿಸ್ಥಿತಿಗಳು ತಾವು ಬಿಟ್ಟುಬಂದ ದೇಶದ ಪರಿಸ್ಥಿತಿಗಳಿಗಿಂತ ಬೇರೆ ತೆರವಾಗಿರುತ್ತವೆ ಎನ್ನುವ ಆಸೆಯಿಂದ. ಸಮೃದ್ಧವಾದ ಜೀವನ ನಡೆಸುವ ಬಯಕೆಯಿಂದ. ಮತೀಯ ಸ್ವಾತಂತ್ರ್ಯದ ಆಸೆಯಿಂದ ಪ್ರಚೋದಿತರಾಗಿ ಬಂದವರು ಅವರು. ವಲಸೆಗಾರರಲ್ಲಿ ಬಡವರಿಂದ ಹಿಡಿದು ಉಗ್ರ ಪ್ರತ್ಯೇಕತಾವಾದಿಗಳವರೆಗೆ ಯಾರಿಗೂ ಹೊಸ ನಾಗರಿಕತೆಯನ್ನು ಬೆಳೆಸಬೇಕೆಂಬ ಆಸೆ ಇರಲಿಲ್ಲ. ತಮ್ಮ ಹಳೆಯ ಸಂಸ್ಕೃತಿಯನ್ನು ತಮ್ಮ ಅನುಕೂಲತೆಗಳಿಗೆ ತಕ್ಕಂತೆ ಪುನರ್ರಚನೆ ಮಾಡಿಕೊಳ್ಳಲು ಬಯಸಿದ್ದರು ಅಷ್ಟೆ.

ನಾವು 'ಅಮೆರಿಕನ್ ಲಕ್ಷಣ' ಎಂದು ಕರೆಯುವ ಮಾನಸಿಕ ಕಲ್ಪನೆ ಯಾವ ವಿಶಿಷ್ಟ ಯೂರೋಪಿಯನ್ ಸಂಪ್ರದಾಯದಿಂದ ಸೃಷ್ಟಿಗೊಂಡಿದ್ದಲ್ಲ. 'ಹೊಸ ಪ್ರಪಂಚಕ್ಕೆ' ಹರಿದು ಬಂದ ವಲಸೆಗಾರರ ಪ್ರವಾಹದಲ್ಲಿ ಬಹುಸಂಖ್ಯಾತರು ತರುಣರು, ಮದುವೆಯಾಗದವರು, ಎಲ್ಲ ಕಸುಬಿನವರು ಮತ್ತು ಎಲ್ಲ ಸಾಮಾಜಿಕ ವರ್ಗಗಳನ್ನು ಪ್ರತಿನಿಧಿಸುತ್ತಿದ್ದವರು. ಅಮೆರಿಕ ಮತ್ತೊಂದು ಯೂರೋಪ್ ಏಕೆ ಆಗಲಿಲ್ಲ? ನ್ಯೂ ಇಂಗ್ಲೆಂಡ್ ಇಂಗ್ಲೆಂಡಿನಂತೆ ಏಕೆ ಆಗಲಿಲ್ಲ? ಈ ಪ್ರಶ್ನೆಗಳಿಗೆ ಉತ್ತರ ಹುಡುಕಲು ನಾವು ಅಮೆರಿಕದ ಪ್ರಕೃತಿ ಸಂಪತ್ತನ್ನು ಒಳಹೊಕ್ಕು ನೋಡಬೇಕಾಗಿದೆ. ಬೇರೆ ಬೇರೆ ದೇಶಗಳಿಂದ ಬಂದವರನ್ನು 'ಅಮೆರಿಕನ್ನ'ರಾಗಿ ಮಾಡಿದ್ದು ಅಲ್ಲಿನ ಪರಿಸರ. ಯೂರೋಪ್ ಮತ್ತು ಅಮೆರಿಕಗಳ ನಡುವೆ ಮೂರು ಸಾವಿರ ಮೈಲಿಗಳ ಸಮುದ್ರ ಹರಡಿಕೊಂಡಿದೆ. ಅಟ್ಲಾಂಟಿಕ್ ಸಾಗರದಿಂದ ಹಡಗುಗಳು ಅಮೆರಿಕದ ತೀರ ಪ್ರದೇಶಗಳಿಗೆ ಆಗಾಗ ಬಂದು ಹೋಗುತ್ತಿದ್ದವು. ಯೂರೋಪಿನ ಸಂಪರ್ಕ ಇಷ್ಟಕ್ಕೆ ಸೀಮಿತಗೊಂಡಿತ್ತು. ಚಳಿಗಾಲದಲ್ಲಿ ಹಡಗುಗಳ ಸಂಚಾರ ನಿಂತುಹೋಗಿ ಸಂಪರ್ಕ ಕಡಿಮೆ ಹೋಗುತ್ತಿತ್ತು. ವಸಾಹತುಗಳ ಕಾಲದಲ್ಲಿ ಹಡಗಿನ ಪ್ರಯಾಣ ಅಪಾಯಕಾರಿಯಾಗಿತ್ತು. ಹಡಗಿನಲ್ಲಿ ಹೊರಟವರು ವಾಪಸು ಬರುವ ಭರವಸೆ ಇರಲಿಲ್ಲ.

ಅಮೆರಿಕ ಭೂಖಂಡ ಇತರ ಭೂಖಂಡಗಳಿಂದ ಪ್ರತ್ಯೇಕವಾಗಿ, ಬಹುದೂರದಲ್ಲಿದೆ.

ವಸಾಹತುಗಳ ಕಾಲದಲ್ಲಿ ಅಮೆರಿಕವನ್ನು ಸಂಪರ್ಕಿಸುವುದು ಅತ್ಯಂತ ಕಷ್ಟವಾಗಿತ್ತು. ಮೊದಲು ಬಂದ ವಲಸೆಗಾರರು ಭಯಂಕರ ಏಕಾಕಿತನವನ್ನು ಅನುಭವಿಸಿದರು. ತಾಯ್ನಾಡಿನ ಸಂಬಂಧ ಕಡಿದುಕೊಂಡು, ಹಿಂದೆ ಆದುದನ್ನು ಮರೆತು ತಮ್ಮ ಮುಂದಿನ ಜೀವನವನ್ನು ಈ ಕಂಡರಿಯದ ಕಾಡು ಮೇಡುಗಳಲ್ಲಿ ಅವರು ರೂಪಿಸಿಕೊಳ್ಳಬೇಕಾಗಿತ್ತು, ಅಥವಾ ಹಸಿವಿನಿಂದಲ್ಲದಿದ್ದರೂ ಒಂಟಿತನದಿಂದ ಸಾಯಬೇಕಿತ್ತು. ಬದುಕಲು ಬೇಕಾದುದೆಲ್ಲವನ್ನೂ ಪ್ರಕೃತಿಯೊಡನೆ ಹೋರಾಡಿ ಪಡೆಯಬೇಕಾಗಿತ್ತು. ಯಾರಿಂದಲೂ ಸಹಾಯ ನಿರೀಕ್ಷಿಸುವಂತಿರಲಿಲ್ಲ. ಪ್ರತಿಯೊಬ್ಬನೂ ಸ್ವಾವಲಂಬಿಯಾಗಿ ದುಡಿದು ಬದುಕಬೇಕಾಗಿತ್ತು. ವಸಾಹತುಗಳ ಕಾಲದ ಈ ಪರಿಸ್ಥಿತಿಯಲ್ಲಿ ಅಮೆರಿಕನ್ನರ ವಿಶಿಷ್ಟತೆಯ ಮೂಲವನ್ನು ನಾವು ಕಾಣಬಹುದು.

ಎಲ್ಲ ಜನರ ಸ್ವಭಾವ ಸಾತ್ವಿಕ ಮತ್ತು ತಾಮಸಿಕ ಲಕ್ಷಣಗಳಿಂದ ಕೂಡಿರುತ್ತದೆ. ಅಮೆರಿಕನ್ನರ ಸ್ವಭಾವದಲ್ಲಿ ಎದ್ದು ಕಾಣುವ ಸಾತ್ವಿಕ ಗುಣಗಳೆಂದರೆ ಸ್ವಾವಲಂಬನೆ, ವ್ಯಕ್ತಿ ವೈಶಿಷ್ಟ್ಯ, ಕಷ್ಟಸಹಿಷ್ಣುತೆ ಮತ್ತು ಸಾಹಸಪ್ರಿಯತೆ. ತಾಮಸಿಕ ಗುಣಗಳೆಂದರೆ, ವಸಾಹತುಗಳ ಕಾಲದಿಂದ ರೂಢಿಯಾಗಿರುವ ಕೆಲವು ವರ್ತನೆಗಳು – ಸಮಯ ಸಾಧಕತನ, ತನಗೆ ಬೇಕಾದುದನ್ನು ಯಾವ ರೀತಿಯಿಂದಾದರೂ ತನ್ನ ಇಷ್ಟಕ್ಕೆ ಅಡ್ಡಬಂದವರನ್ನು ತಳ್ಳಿ ಪಡೆಯುವ ಸ್ವಾರ್ಥಪರತೆ, ಹಿಂಸಾಪ್ರವೃತ್ತಿ – ಹಿಂಸೆ ಸರ್ವೆಸಾಮಾನ್ಯ ಸಂಗತಿ ಎನ್ನುವ ಮನೋಭಾವ. ಇವೆಲ್ಲ ಅಮೆರಿಕನ್ ಸ್ವಭಾವದ ತಾಮಸಿಕ ಅಂಶಗಳು. ವಸಾಹತುಗಾರರು ತಮ್ಮ ಎಲ್ಲ ಕೆಲಸಗಳನ್ನು ತಾವೇ ಖುದ್ದಾಗಿ ಮಾಡಿಕೊಳ್ಳಬೇಕಾಗಿತ್ತು. ಇದು ಕೆಲಸಗಾರರ ಅಭಾವದಿಂದ ಅನಿವಾರ್ಯವಾಗಿತ್ತು. ಇಂಗ್ಲೆಂಡಿನಲ್ಲಿ ಭೂಮಿ ದುರ್ಲಭವಾಗಿತ್ತು, ಕೆಲಸಗಾರರು ಹೇರಳವಾಗಿ ದೊರೆಯುತ್ತಿದ್ದರು. ಅಮೆರಿಕದಲ್ಲಿ ಭೂಮಿ ಧಾರಾಳವಾಗಿ ದೊರೆಯುತ್ತಿತ್ತು, ಕೆಲಸಗಾರರು ಸಿಗುವುದು ದುರ್ಲಭವಾಗಿತ್ತು!

ವಸಾಹತುಗಾರರು ಸಂಪೂರ್ಣ ಸ್ವತಂತ್ರರಾಗಿದ್ದರು ಮತ್ತು ಸ್ವಯಂ ಆಡಳಿತಕ್ಕೆ ಒಳಪಟ್ಟು ತಮ್ಮನ್ನು ತಾವೇ ಆಳಿಕೊಳ್ಳುತ್ತಿದ್ದರು. ಪ್ರತಿಯೊಬ್ಬ ವಸಾಹತುಗಾರನು, ನೆಲೆನಿಂತ ಪ್ರಾರಂಭದ ದಿನಗಳಲ್ಲಿ, ತಾವೇ ಭೂಮಾಲಿಕ, ಉದ್ಯೋಗಸ್ಥ, ಕಸುಬುದಾರ, ಅನ್ವೇಷಣಕಾರ, ಎಲ್ಲ ಆಗಿರಬೇಕಾಗಿತ್ತು. ಇದರಿಂದ ನಾವು ವಸಾಹತುಗಾರರು ಸರ್ವತೋಮುಖ ಪ್ರತಿಭೆಯ ಕುಶಲಕರ್ಮಿಗಳಾಗಿದ್ದರು ಎಂದು ಊಹಿಸುವುದು ತಪ್ಪಾಗುತ್ತದೆ. ವಸಾಹತುಗಾರರು ತಾವೇ ಎಲ್ಲ ಕೆಲಸಗಳನ್ನು ಮಾಡುವುದು ಅನಿವಾರ್ಯ ವಾಗಿತ್ತು. ಏಕೆಂದರೆ ಅವರು ನೆಲಸಿದ್ದ ಹಿಂದುಳಿದ, ಅನಾಗರಿಕ ಪರಿಸರದಲ್ಲಿ ಸಂಕೀರ್ಣ ಕಾರ್ಯವಿಭಜನೆಗೆ ಮತ್ತು ಒಂದು ಕಸುಬಿನಲ್ಲಿ ವಿಶಿಷ್ಟ ಪರಿಣತಿ ಪಡೆಯಲು ಅವಕಾಶ ವಿರಲಿಲ್ಲ. ಈ ವಸಾಹತುಗಳು ಒಂದು ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಾಗಿ ವಿಕಾಸಗೊಳ್ಳುವುದರೊಳಗೆ ಒಂದು ಹೊಸ ರೀತಿಯ ಆಲೋಚನಾಕ್ರಮವನ್ನು

ಅಮೆರಿಕನ್ನರು ಬೆಳೆಸಿಕೊಂಡಿದ್ದರು. ಈ ಹೊಸ ರೀತಿಯ ಆಲೋಚನಾಕ್ರಮವನ್ನು ಸಾಮಾನ್ಯವಾಗಿ 'ಅಮೆರಿಕನ್ ಚಾತುರ್ಯ' (American Ingenuity) ಎಂದು ಕರೆಯುತ್ತಾರೆ.

ಅಮೆರಿಕದ ಸಮೃದ್ಧ ಪ್ರಕೃತಿ ಸಂಪತ್ತು ಫಲವತ್ತಾದ ನೆಲೆ ಮತ್ತು ಅಪಾರವಾದ ಸಸ್ಯ ಮತ್ತು ಪ್ರಾಣಿ ಸಂಪತ್ತು ವಸಾಹತುಗಾರರಿಗೆ ಮಿತಿ ಇಲ್ಲದ ಆಹಾರವನ್ನು ಒದಗಿಸಿತ್ತು. ಕೆಲವರು ಬಡವರಾಗಿದ್ದರು, ಆದರೆ ಯಾರೂ ಹಸಿದುಕೊಂಡಿರಲಿಲ್ಲ. ದಂಪತಿಗಳು ಹೆಚ್ಚು ಮಕ್ಕಳನ್ನು ಬಯಸುತ್ತಿದ್ದರು. ಆಹಾರ ಸಮೃದ್ಧವಾಗಿದ್ದರಿಂದ ಅವರನ್ನು ಸಾಕುವುದು ಕಷ್ಟವಾಗಿರಲಿಲ್ಲ. ವಸಾಹತುಗಳಲ್ಲಿ ಹೆಂಗಸರ ಸಂಖ್ಯೆ ಕಡಿಮೆಯಾಗಿತ್ತು. ಆದ್ದರಿಂದ ಹೆಂಗಸರು ಮತ್ತು ಮಕ್ಕಳನ್ನು ಹೆಚ್ಚು ಸಹನೆಯಿಂದ ಸಲಿಗೆ ಕೊಟ್ಟು ನೋಡಿಕೊಳ್ಳುತ್ತಿದ್ದರು. ಕೆಲವು ಪೀಳಿಗೆಗಳ ನಂತರ ಅಮೆರಿಕನ್ನರಿಗೂ ಅವರ ತಾಯ್ನಾಡಿನಲ್ಲಿರುವ ಸಂಬಂಧಿಕರಿಗೂ ದೈಹಿಕ ಲಕ್ಷಣಗಳಲ್ಲಿ ಗಮನಾರ್ಹವಾದ ತಾರತಮ್ಯಗಳು ತೋರಿಬಂದವು. ಸಾಮಾನ್ಯವಾಗಿ ಅಮೆರಿಕನ್ನರು ಯೂರೋಪಿಯನ್ನರಿಗಿಂತ ಎತ್ತರವಾಗಿ, ದೇಹಾಕೃತಿಯಲ್ಲಿ ದೊಡ್ಡವರಾಗಿ ಬೆಳೆದಿದ್ದರು. ಈ ತಾರತಮ್ಯಗಳು ಪರಿಸರದ ಅಂಶಗಳ – ಸಮೃದ್ಧವಾದ ಮತ್ತು ಪುಷ್ಟಿಕರವಾದ ಆಹಾರ, ದುಡಿಮೆ, ಪರಿಶ್ರಮಗಳು – ಇವುಗಳ ಪರಿಣಾಮ ಎಂದರೆ ತಪ್ಪಾಗಲಾರದು.

ದೈಹಿಕ ತಾರತಮ್ಯಗಳಲ್ಲದೆ, ವಸಾಹತುಗಳು ಸಂಕೀರ್ಣ ಸಮಾಜವಾಗಿ ವಿಕಾಸಗೊಂಡಂತೆಲ್ಲ ಅಮೆರಿಕನ್ನರು ಯೂರೋಪಿಯನ್ನರಿಗಿಂತ ಭಿನ್ನವಾದ ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ಬೆಳೆಸಿಕೊಂಡರು. ಸಂಸ್ಕೃತಿ ಮತ್ತು ನಾಗರಿಕತೆ ಎರಡನ್ನೂ ಸಾಮಾನ್ಯವಾಗಿ ಒಂದೇ ಅರ್ಥದಲ್ಲಿ ಬಳಸುತ್ತಾರೆ. ಈ ಎರಡು ಪದಗಳು ವಾಸ್ತವವಾಗಿ ಎರಡು ಭಿನ್ನವಾದ ಕಲ್ಪನೆಗಳು. ಅಮೆರಿಕನ್ ಸಂಸ್ಕೃತಿ ಎಂದರೆ ಅಮೆರಿಕನ್ನರ ನಡೆ ನುಡಿಗಳು, ನಂಬಿಕೆಗಳು, ಆಚಾರ ವಿಚಾರಗಳು, ಸಾಹಿತ್ಯ, ಸಂಗೀತ, ತತ್ವಜ್ಞಾನ ಮತ್ತು ಮತಧರ್ಮ ಇವುಗಳೆಲ್ಲವೂ ಕೂಡಿ ಆದ ಒಂದು ಪರಂಪರೆ. ಇನ್ನೂರಕ್ಕೂ ಹೆಚ್ಚು ವರ್ಷಗಳ ಅವಧಿಯಲ್ಲಿ ಅಮೆರಿಕ ತನ್ನದೇ ಆದ ಒಂದು ವಿಶಿಷ್ಟ ಸಂಸ್ಕೃತಿಯನ್ನು ವಿಶ್ವಕ್ಕೆ ನೀಡಿದೆ.

ಅಮೆರಿಕ ಉತ್ಪಾದಿಸುವ ಅಸಂಖ್ಯಾತ ವಸ್ತುಗಳು ಅಮೆರಿಕ ನಾಗರಿಕತೆಯ ಕುರುಹುಗಳಾಗಿವೆ. ಅಮೆರಿಕದ ಔದ್ಯೋಗಿಕ ಸಂಸ್ಥೆಗಳು ಮತ್ತು ಬೃಹತ್ ಕೈಗಾರಿಕೆಗಳು ಅಮೆರಿಕನ್ ನಾಗರಿಕತೆಯ ಮಟ್ಟವನ್ನು ಸೂಚಿಸುವ ಅಳತೆಗೋಲುಗಳಾಗಿವೆ. ಅಮೆರಿಕದ ಸಂಸ್ಕೃತಿ ಮತ್ತು ನಾಗರಿಕತೆಗಳಿಗೆ ವಸಾಹತುಗಳ ಕಾಲದಲ್ಲಿಯೇ ಬೀಜಾಂಕುರವಾಯಿತು. ಎಲ್ಲ ವಸಾಹತುಗಳೂ ಒಂದೇ ತೆರನಾಗಿ ಬೆಳೆಯಲಿಲ್ಲ. ವಸಾಹತುಗಾರರು ನೆಲಸಿದ ಪರಿಸರದ ಭೌಗೋಳಿಕ ಲಕ್ಷಣಗಳು ಅವರ ಜೀವನ ರೀತಿಯ ಮೇಲೆ ಪ್ರಭಾವ ಬೀರಿದವು.

ಭೌಗೋಳಿಕ ಲಕ್ಷಣಗಳಿಗೆ ಅನುಗುಣವಾಗಿ ವಸಾಹತುಗಳು ಎರಡು ಮೂಲಭೂತ ಜೀವನ ನಮೂನೆಗಳನ್ನು ಬೆಳಸಿಕೊಂಡವು. ಮೇರಿಲ್ಯಾಂಡ್, ವರ್ಜೀನಿಯಾ ಉತ್ತರ ಮತ್ತು ದಕ್ಷಿಣ ಕೆರೊಲಿನಗಳು ಹಾಗು ಜಾರ್ಜಿಯ ವಸಾಹತುಗಳು ಒಂದು ದಾರಿಯಲ್ಲಿ ಹೋದರೆ, ಪೆನ್ಸಿಲ್‌ವೇನಿಯ ಮತ್ತು ಉತ್ತರದ ವಸಾಹತುಗಳು ಇನ್ನೊಂದು ದಾರಿ ಹಿಡಿದು ಹೋದವು.

ದಕ್ಷಿಣದ ವಸಾಹತುಗಳಲ್ಲಿ: ಪ್ಲಾನ್‌ಟೇಷನ್ ಸಂಸ್ಕೃತಿ ಮತ್ತು ಗುಲಾಮಗಿರಿ

ವ್ಯವಸಾಯ ದಕ್ಷಿಣ ವಸಾಹತುಗಳ ಜೀವನಾಡಿಯಗಿತ್ತು. ಹಿಂದೆ ತಿಳಿಸಿರುವಂತೆ, ದಕ್ಷಿಣ ವಸಾಹತುಗಳಿಗೆ ಮೊದಲು ಬಂದು ನೆಲೆನಿಂತವರು ಲಂಡನ್ ಕಂಪನಿಯ ಕೆಲಸಗಾರರು. ಇವರು ಏಳು ವರ್ಷದ ಕರಾರಿನ ಪ್ರಕಾರ ಬಂದವರು. ಕೆಲಸ ಮಾಡಿದ್ದಕ್ಕೆ ಇವರಿಗೆ ಕಂಪನಿಯ ಲಾಭದಲ್ಲಿ ಒಂದು ಪಾಲು ಸಿಗುತ್ತಿತ್ತು. ಕರಾರು ಮುಗಿದ ಮೇಲೆ ಇವರಿಂದ ಕಂಪನಿಗೆ ಲಾಭವಿರುತ್ತಿರಲಿಲ್ಲ. ಆದ್ದರಿಂದ ಇವರ ಅಗತ್ಯಗಳನ್ನು ಪೂರೈಸಲು ಮತ್ತು ಹೊಸ ಬಂಡವಾಳಗಾರರನ್ನು ಆಕರ್ಷಿಸಲು ಕಂಪನಿಯ ವಶದಲ್ಲಿದ್ದ ಭೂಮಿಯನ್ನು ಹಂಚುವ ಮತ್ತು ಹೊಸದಾಗಿ ಬಂದು ನೆಲಸುವವರಿಗೆ ದತ್ತಿಗೆ ಕೊಡುವ ವ್ಯವಸ್ಥೆ ಮಾಡಲಾಯಿತು. ಈ ವ್ಯವಸ್ಥೆಯ ಪ್ರಕಾರ ಈ ವಸಾಹತುಗಳ ಅಭಿವೃದ್ಧಿಯಲ್ಲಿ ಆಸಕ್ತಿ ಇದ್ದು ಬಂಡವಾಳ ಹೂಡಲು ಸಿದ್ಧರಾಗಿದ್ದ ಕೆಲವು ಐಶ್ವರ್ಯವಂತ ಇಂಗ್ಲಿಷರಿಗೆ ಸಾವಿರಾರು ಎಕರೆ ಭೂಮಿಯನ್ನು ಕೊಡಲಾಯಿತು. ವರ್ಜೀನಿಯ ವಸಾಹತಿನಲ್ಲಿ ನೆಲಸುವ ಆಸಕ್ತಿ ತೋರಿದ ಸಣ್ಣ ಹಿಡುವಳಿದಾರರಿಗೆ ಅವರು ಸಾಗುವಳಿ ಮಾಡಲು ಸಾಧ್ಯವಾದಷ್ಟು ಭೂಮಿಯನ್ನು ದತ್ತಿಗೆ ಕೊಡಲಾಯಿತು.

ಕಂಪನಿಯ ಈ ನಿರ್ಣಯದಿಂದ 'ತಲೆ ಹಕ್ಕು' (Head Right) ಎನ್ನುವ ವ್ಯವಸ್ಥೆ ವರ್ಜೀನಿಯ ವಸಾಹತಿನಲ್ಲಿ ಭದ್ರವಾಗಿ ಸ್ಥಾಪಿತವಾಯಿತು. ಈ ವಸಾಹತನ್ನು ಪ್ರವೇಶಿಸುವ ಪ್ರತಿಯೊಂದು 'ತಲೆ'ಗೂ ೫೦ ಎಕರೆ ಭೂಮಿಯನ್ನು ದತ್ತಿಗೆ ಕೊಡಲಾಯಿತು. ದತ್ತಿಗೆ ಪಡೆದ ಪ್ರತಿಯೊಬ್ಬನೂ ಅದರ ಒಡೆತನಕ್ಕಾಗಿ ಮಾಡಬೇಕಾಗಿದ್ದುದು ಇಷ್ಟೆ – ತನಗೆ ಸೇರಿದ ಭೂಮಿಯ ಗಡಿಯನ್ನು ಗುರುತು ಮಾಡಬೇಕು, ಅದರಲ್ಲಿ ಯಾವುದಾದರೂ ಒಂದು ಬೆಳೆಯನ್ನು ಬೆಳೆಸಿರಬೇಕು ಮತ್ತು ಆ ಭೂಮಿಯಲ್ಲಿ ವಾಸಕ್ಕಾಗಿ ಒಂದು ಕಟ್ಟಡ ಕಟ್ಟಬೇಕು. ಅವರು ಇಷ್ಟು ಮಾಡಿದರೆ ಸಾಕು, ಭೂಮಿಯ ಒಡೆತನ ದೊರೆಯುತ್ತಿತ್ತು.

ಪ್ರಾರಂಭದಲ್ಲಿ 'ತಲೆ ಹಕ್ಕ'ನ್ನು ಯಾವ ಷರತ್ತೂ ಇಲ್ಲದೆ ಕೊಡಲಾಗುತ್ತಿತ್ತು. ಕ್ರಮೇಣ ದತ್ತಿಗೆ ಪಡೆಯುವವರು 'ಕ್ವಿಟ್ ರೆಂಟ್' ಎನ್ನುವ ವಾರ್ಷಿಕ ವಂತಿಗೆ ಕೊಡಬೇಕಾಗುವಂತೆ ಮಾಡಿದರು. ಇದು ಒಂದು ರೀತಿಯ ತೆರಿಗೆ. ಈ ತೆರಿಗೆ ತೆರುವುದರಿಂದ ಭೂದಾನ ಕೊಟ್ಟವರ ಸಾರ್ವಭೌಮತ್ವವನ್ನು ಒಪ್ಪಿಕೊಂಡು ಅವರಿಗೆ ಚಿರಋಣಿಗಳಾಗಿ ಇರಬೇಕು ಎನ್ನುವ ಅಧೀನತೆಯ ಭಾವನೆಯನ್ನು ಭೂದಾನ ಪಡೆದವರಲ್ಲಿ ಉಂಟು ಮಾಡುವುದು ಅದರ ಗುರಿಯಾಗಿತ್ತು. 'ತಲೆ ಹಕ್ಕಿ'ನ ವ್ಯವಸ್ಥೆ ಸ್ವಂತ ಭೂಮಿಯಿಲ್ಲದ

ಯೂರೋಪಿಯನ್ ರೈತರು ಈ ವಸಾಹತಿಗೆ ಬರಲು ಉತ್ತೇಜನ ನೀಡಿತು. ಆದರೆ ಈ ಬಡರೈತರು ಸಮುದ್ರಯಾನಕ್ಕೆ ತಗಲುವ ಹಣ ಕೊಡುವ ಸ್ಥಿತಿಯಲ್ಲಿ ಇರಲಿಲ್ಲ. ವಸಾಹತಿನಲ್ಲಿ ಬಂಡವಾಳ ಹೂಡಿ ಲಾಭ ಪಡೆಯಲು ಹವಣಿಸಿ ಬರುವ ವಲಸೆಗಾರರ ಜೊತೆಯಲ್ಲಿ ಬಂಡವಾಳಗಾರರು ಪ್ರಯಾಣದ ಖರ್ಚು ಕೊಟ್ಟು ಈ ಬಡರೈತರನ್ನು ಕರೆತಂದರೆ ಕೆಲಸಗಾರರ ಕೊರತೆ ಪರಿಹಾರವಾಗುತ್ತದೆ ಎನ್ನುವ ನಂಬಿಕೆಯಿಂದ ಯೂರೋಪಿನ ರೈತರನ್ನು ಪ್ರಯಾಣಕ್ಕೆ ತಗಲುವ ಹಣಕ್ಕೆ ಪ್ರತಿಯಾಗಿ ಒಂದು ನಿರ್ದಿಷ್ಟ ಕಾಲದವರೆಗೆ ಕೆಲಸ ಮಾಡುವ ಕರಾರಿನ ಮೇಲೆ ಕರೆತಂದರು. ಹೀಗೆ ಕರಾರಿನ ಮೇಲೆ ಬಂದ ಕೆಲಸಗಾರರಿಗೆ ನಾಗರಿಕ ಮತ್ತು ರಾಜಕೀಯ ಹಕ್ಕುಗಳು ಇರಲಿಲ್ಲ. ಮಾಲೀಕನ ಅಡಿಯಾಳುಗಳಾದ ಇವರನ್ನು ಅವನು, ತನಗೆ ಬೇಕಾದ ಹಾಗೆ ನಿಯಂತ್ರಿಸುವ ಮತ್ತು ಶಿಕ್ಷಿಸುವ ಹಕ್ಕನ್ನು ಪಡೆದಿದ್ದನು.

ಈ ಕರಾರಿಗೆ ಬದ್ಧರಾಗಿದ್ದ ಕೆಲಸಗಾರರು (Indentured Servants) ತಮ್ಮ ಕೆಲಸದ ಅವಧಿ ಮುಗಿದ ಮೇಲೆ ಸ್ವತಂತ್ರರಾಗುತ್ತಿದ್ದರು. ಬಿಡುಗಡೆಯಾದವರಿಗೆ ಸಾಮಾನ್ಯವಾಗಿ, ಒಂದು ಜೊತೆ ಬಟ್ಟೆ, ಬಿತ್ತಲು ಬೇಕಾದ ಬೀಜಗಳು ಮತ್ತು ಸಂರಕ್ಷಣೆಗೆ ಬೇಕಾದ ಒಂದು ಬಂದೂಕು ಕೊಡುತ್ತಿದ್ದರು. ಹೀಗೆ ಕೊಡುತ್ತಿದುದರ ಉದ್ದೇಶ ಬಿಡುಗಡೆಯಾದ ಮೇಲೆ ಕೆಲಸಗಾರನು ಅಲ್ಲಿಯೇ ನೆಲಸಿ ಸ್ವತಃ ಬೇಸಾಯಗಾರನಾಗುವಂತೆ ಉತ್ತೇಜನ ನೀಡುವುದಾಗಿತ್ತು. ಕರಾರಿಗೆ ಬದ್ಧರಾಗಿ ಬಂದ ಕೆಲಸಗಾರರು ವರ್ಜೀನಿಯ ವಸಾಹತು ಪ್ರವೇಶಿಸಿದಾಗ ಅವರಿಗೆ ಸಿಗಬೇಕಾಗಿದ್ದ 'ತಲೆ ಹಕ್ಕು ಭೂಮಿ' ಪ್ರಯಾಣದ ಖರ್ಚನ್ನು ಕೊಟ್ಟು ಕರೆತಂದವರಿಗೆ ಸಲ್ಲುತ್ತಿತ್ತು. ಹೀಗೆ ಈ ವ್ಯವಸ್ಥೆಯಿಂದ ಹಣವಂತರಿಗೆ ಎರಡು ಅನುಕೂಲಗಳಾಗುತ್ತಿದ್ದವು – ಪುಕ್ಕಟೆ ಭೂಮಿ ಮತ್ತು ಸಂಬಳವಿಲ್ಲದ ಕೆಲಸಗಾರರು ಸುಲಭವಾಗಿ ಸಿಗುತ್ತಿದ್ದರು! ಆದರೆ ಎಷ್ಟೋ ಜನ ಸೇವಕರು ಕರಾರಿನಲ್ಲಿ ನಿಗದಿಯಾದ ಕಾಲ ಮುಗಿಯುವುದರೊಳಗೆ ಭೂಸ್ವಾಮ್ಯ ಪಡೆದಿರುತ್ತಿದ್ದರು. ಇಲ್ಲವೆ 'ತಳ ಊರಿದವ'ರಾಗುತ್ತಿದ್ದರು (Squatters). ತಳ ಊರುವುದೆಂದರೆ ಭೂಮಾಲೀಕರ ಭೂಮಿಯ ಸರಹದ್ದಿನ ಆಚೆ, ಯಾರಿಗೂ ಸೇರಿರದ ಜಾಗದಲ್ಲಿ ಪರವಾನಗಿ ಇಲ್ಲದೆ ನೆಲಸಿ ಸಾಗುವಳಿ ಮಾಡುವುದು. ಕಡೆಯಲ್ಲಿ ಅವರು ನೆಲಸಿದ ಭೂಮಿಯ ಸ್ವಾಮ್ಯತೆ ಪಡೆದ ಮಾಲಿಕ ಅದನ್ನು ನ್ಯಾಯಬದ್ಧವಾಗಿ ವಶಪಡಿಸಿಕೊಳ್ಳಲು ಬಂದಾಗ ಈ 'ತಳ ಊರಿದವರು' 'ತಳ ಊರಿದವರ ಹಕ್ಕ'ನ್ನು (Squatter's Right) ಚಲಾಯಿಸುತ್ತಿದ್ದರು. ಈ 'ಹಕ್ಕು' ಏನೆಂದರೆ ನ್ಯಾಯಬದ್ಧವಾಗಿ ಆ ಭೂಮಿಯ ಸ್ವಾಮ್ಯತೆ ಪಡೆದವನಿಂದ ತಳ ಊರಿದವ ಭೂಮಿಯನ್ನು ಅದರ ಮೂಲಬೆಲೆಗೆ (ಅಲ್ಲಿನವರೆಗೆ ಆಗಿರುವ ಅಭಿವೃದ್ಧಿಗಳನ್ನು ಗಣನೆಗೆ ತಂದುಕೊಳ್ಳದೆ) ಕೊಳ್ಳುವ ಒಂದು ಹುನ್ನಾರು ಅಷ್ಟೆ. ಇದು ವಾದ ವಿವಾದಗಳಿಗೆ, ನ್ಯಾಯಾಲಯದಲ್ಲಿ ಮೊಕದ್ದಮೆಗೆ, ಮತ್ತೆ ತೀರ ವಿಪರೀತಕ್ಕೆ ಹೋದಾಗ ಹೊಡೆದಾಟ ಬಡಿದಾಟಗಳಿಗೆ ಕಾರಣವಾಗುತ್ತಿತ್ತು. ತಳ ಊರಿದವನನ್ನು ಬಲಾತ್ಕಾರವಾಗಿ

ಅಲ್ಲಿಂದ ಉಚ್ಚಾಟನೆ ಮಾಡಿದರೆ ಅವನು ಅಲ್ಲಿಂದ ಪಶ್ಚಿಮಕ್ಕೆ ಸ್ವಲ್ಪ ದೂರಕ್ಕೆ ಹೋಗಿ ತಳ ಊರಿ ಅದೇ ಕೆಲಸವನ್ನು ಪುನಃ ಮಾಡುತ್ತಿದ್ದನು.

ಇದೇ ಸಮಯದಲ್ಲಿ ಅಮೆರಿಕಕ್ಕೆ ಆಫ್ರಿಕದಿಂದ ಕರಿಯ ಗುಲಾಮರನ್ನು ಕರೆತರಲಾಯಿತು. ಡಚ್ ಹಡಗಿನ ಮೇಲೆ ಹಿಡಿದು ತಂದ ಕರಿಯ ಗುಲಾಮರ ಮೊದಲ ತಂಡದವರನ್ನು ೧೬೧೯ರಲ್ಲಿ ಜೇಮ್ಸ್ ಟೌನ್‌ನಲ್ಲಿ ಮಾರಾಟ ಮಾಡಿದರು. ಮೊದಲು ಬಂದ ಗುಲಾಮರ ಬಗ್ಗೆ ಖಚಿತವಾದ ದಾಖಲೆ ಪತ್ರಗಳು ಇಲ್ಲದಿರುವುದರಿಂದ ಈ ಗುಲಾಮರು ಮಾಲೀಕರ ಸ್ವತ್ತಾಗಿದ್ದರೋ ಅಥವಾ ಕರಾರು ಸೇವಕರಂತೆ ಕೆಲವು ಕಾಲಾನಂತರ ಬಿಡುಗಡೆ ಪಡೆದು ಸ್ವತಂತ್ರರಾದರೋ ಹೇಳುವುದು ಕಷ್ಟ. ಆದರೆ ೧೬೬೦ರ ಹೊತ್ತಿಗೆ ವರ್ಜೀನಿಯ ಪ್ರಾಂತದ ಕಾನೂನುಗಳು ಗುಲಾಮಗಿರಿಯನ್ನು ನ್ಯಾಯಬದ್ಧವಾದ ವ್ಯವಸ್ಥೆ ಎಂದು ನಿರ್ಣಯಿಸಿ ಅದನ್ನು ಸಮಾಜದಲ್ಲಿ ಭದ್ರವಾಗಿ ನೆಲೆಗೊಳ್ಳುವಂತೆ ಮಾಡಿದ್ದವು.

ದಕ್ಷಿಣ ವಸಾಹತುಗಳಲ್ಲಿ ಹೇಳಿಕೊಳ್ಳುವಂಥ ಯಾವ ಕೈಗಾರಿಕೆಗಳು ಇರಲಿಲ್ಲ. ಅವರಿಗೆ ಅಗತ್ಯವಾದ ವಸ್ತುಗಳು – ನೇಗಿಲುಗಳು, ಬಂದೂಕುಗಳು, ಪುಸ್ತಕಗಳು, ಪಿಂಗಾಣಿ ಪಾತ್ರೆಗಳು – ಎಲ್ಲವನ್ನು ಇಂಗ್ಲೆಂಡಿನಿಂದಲೆ ತರಿಸಿಕೊಳ್ಳಬೇಕಾಗಿತ್ತು. ಈ ವಸ್ತುಗಳಿಗೆ ಬದಲಾಗಿ ಇಂಗ್ಲೆಂಡಿನಲ್ಲಿ ಬೇಡಿಕೆ ಇದ್ದ ಹತ್ತಿ, ಸಕ್ಕರೆ, ನೀಲಿ (Indigo) ದ್ರಾಕ್ಷಿ, ಕಿತ್ತಳೆಹಣ್ಣುಗಳು ಮತ್ತು ರೇಷ್ಮೆ ಮುಂತಾದುವನ್ನು ರಫ್ತು ಮಾಡುತ್ತಿದ್ದರು. ಇವುಗಳೆಲ್ಲಕ್ಕಿಂತ ಮುಖ್ಯಬೆಳೆ ಎಂದರೆ ಹೊಗೆಸೊಪ್ಪು. ಹೊಗೆಸೊಪ್ಪಿನ ಉತ್ಪಾದನೆ ಹೆಚ್ಚಾಗುತ್ತ ಹೋಗಿ ೧೭೭೦ರ ದಶಕದಲ್ಲಿ ಅದು ಒಂದು ನೂರು ಮಿಲಿಯನ್ ಪೌಂಡುಗಳಿಗಿಂತ ಹೆಚ್ಚಾಯಿತು. ಉತ್ಪಾದನೆ ವಿಪರೀತ ಹೆಚ್ಚಿ ಹೊಗೆಸೊಪ್ಪಿನ ಬೆಲೆ ಕುಸಿಯತೊಡಗಿತು. ಹೀಗೆ ಕುಸಿದ ಬೆಲೆ ಸಣ್ಣ ಹಿಡುವಳಿಗಾರರ ಮೇಲೆ ತೀವ್ರ ಪರಿಣಾಮ ಬೀರಿತು. ಅವರಿಗೆ ಜೀವನ ಮಾಡುವುದೆ ಕಷ್ಟವಾಯಿತು. ಅದೇ ಸಮಯದಲ್ಲಿ ರಾಜನಿಗೆ ಆಪ್ತವಾಗಿದ್ದ ಕೆಲವರು ವಿಸ್ತಾರವಾದ ಪ್ರದೇಶಗಳನ್ನು ದತ್ತಿಗೆ ಪಡೆದರು. ಅದಕ್ಕೆ ಮತ್ತಷ್ಟು ಭೂಮಿಯನ್ನು ಕೊಂಡು ಸೇರಿಸಿದರು. ಇಂಥ ಪ್ರಭಾವಶಾಲಿಗಳಾದ ಭೂಮಾಲೀಕರು ಯೂರೋಪಿನಲ್ಲಿದ್ದ ಊಳಿಗಮಾನ್ಯ ಪದ್ಧತಿಯನ್ನು ಹೋಲುವ ವ್ಯವಸ್ಥೆಯನ್ನು ಈ ವಸಾಹತುಗಳಲ್ಲಿ ಸ್ಥಾಪಿಸಿದರು. ಈ ವ್ಯವಸ್ಥೆಯನ್ನು 'ಪ್ಲಾನ್‌ಟೇಶನ್' ಎಂದು ಕರೆಯಲಾಯಿತು. ಅಮೆರಿಕದಲ್ಲಿ ವಸಾಹತನ್ನು 'ಪ್ಲಾನ್‌ಟೇಶನ್' ಎಂದು, ಅಲ್ಲಿ ನೆಲಸಿದವರನ್ನು 'ಪ್ಲಾನ್‌ಟರ್ಸ್' ಅಂದರೆ ಸ್ಥಾಪಿಸಿದವರು ಎಂದು ಕರೆದರು. ಕ್ರಮೇಣ ದೊಡ್ಡ ಪ್ರಮಾಣದ ಹಿಡುವಳಿಗೆ 'ಪ್ಲಾನ್‌ಟೇಶನ್' ಎಂದು ಕರೆಯುವುದು ರೂಢಿಯಾಯಿತು.

ಇಂಥ ಪ್ಲಾನ್‌ಟರ್‌ಗಳು ಇಂಗ್ಲೆಂಡಿನ ಏಜೆಂಟರ ಮೂಲಕ ವ್ಯವಹಾರ ನಡೆಸುತ್ತಿದ್ದರು.

ಈ ಏಜೆಂಟರು ಪ್ಲಾನ್‌ಟೇಶನ್‌ನಲ್ಲಿ ಬೆಳೆದುದನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡುತ್ತಿದ್ದರು. ಪ್ಲಾನ್‌ಟರುಗಳಿಗೆ ಬೇಕಾದ, ಇಂಗ್ಲೆಂಡಿನಲ್ಲಿ ತಯಾರಾದ; ವಸ್ತುಗಳನ್ನು ಪಟ್ಟಿ ಮಾಡಿ ಇಂಗ್ಲೆಂಡಿನ ಉತ್ಪಾದನಕಾರರಿಗೆ ಕಳುಹಿಸಿ ಆ ವಸ್ತುಗಳನ್ನು ತರಿಸಿ ಕೊಡುತ್ತಿದ್ದರು ಮತ್ತು ಸಾಲ ಪಡೆಯುವುದಕ್ಕೆ ಸುಲಭ ಏರ್ಪಾಡು ಮಾಡುತ್ತಿದ್ದರು. ಪ್ಲಾನ್‌ಟರುಗಳಿಗೆ ಇದು ಬಹಳ ಅನುಕೂಲವಾಗಿತ್ತು. ಆದರೆ ಅಭಿವೃದ್ಧಿಗೆ ಹಾನಿಕರವಾಗಿತ್ತು. ಏಕೆಂದರೆ ಪ್ಲಾನ್‌ಟರುಗಳು ಏಜೆಂಟರಿಗೆ ಕಮಿಷನ್ ಕೊಡುವುದಲ್ಲದೆ ಎಲ್ಲ ವ್ಯವಹಾರಗಳಲ್ಲೂ ಅವರನ್ನು ಅವಲಂಬಿಸಿಕೊಂಡಿರಬೇಕಾದ ಪರಿಸ್ಥಿತಿ ಉಂಟಾಯಿತು. ಏಜೆಂಟರ ಮೂಲಕ ಎಲ್ಲ ವಸ್ತುಗಳನ್ನು ಸುಲಭವಾಗಿ ತರಿಸಿಕೊಳ್ಳ ಬಹುದಾದ್ದರಿಂದ ತಾವೇ ಕೈಗಾರಿಕೆಗಳನ್ನು ಸ್ಥಾಪಿಸಿ ವಸ್ತುಗಳನ್ನು ಉತ್ಪಾದನೆ ಮಾಡುವ ತೊಂದರೆ ತೆಗೆದುಕೊಳ್ಳಲಿಲ್ಲ. ಉತ್ತರದ ವಸಾಹತುಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಅಣಬೆಗಳಂತೆ ಹುಟ್ಟಿಕೊಂಡು ಅಭಿವೃದ್ಧಿಗೊಳ್ಳುತ್ತಿರುವಾಗ, ದಕ್ಷಿಣದ ವಸಾಹತುಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಹುಟ್ಟುವ ಮುಂಚೆಯೇ ಸತ್ತಿರುತ್ತಿದ್ದವು! ಅಮೆರಿಕನ್ ಕ್ರಾಂತಿಗೆ ಕೆಲವೇ ವರ್ಷಗಳ ಹಿಂದೆ ಪರಿಸ್ಥಿತಿ ಹೇಗಿತ್ತೆಂದರೆ ಒಬ್ಬ ಪ್ಲಾಂಟರ್ ತನ್ನ ರೇಷ್ಮೆ ವಸ್ತ್ರದ ಬಣ್ಣ ಬದಲಾಯಿಸಲು ಅಮೆರಿಕದಿಂದ ಲಂಡನ್ನಿಗೆ ಕಳುಹಿಸಬೇಕಾಗಿತ್ತು. ಹಲಕೆಲವು ಸ್ಥಳೀಯ ಉದ್ಯೋಗಗಳು – ಕಬ್ಬಿಣದ ಅದುರಿನ ಗಣಿಗಳು, ಹಿಟ್ಟಿನ ಗಿರಣಿಗಳು ಮತ್ತು ಪೀಪಾಯಿ ತಯಾರಿಕೆ – ಅಲ್ಲಲ್ಲಿ ಕಂಡುಬರುತ್ತಿದ್ದವು. ಯಾವ ಮುಖ್ಯ ಕೈಗಾರಿಕೆಯೂ ಬೆಳೆಯಲಿಲ್ಲ; ಕುಶಲ ಕಸುಬುದಾರರೂ ಇರಲಿಲ್ಲ.

ದಕ್ಷಿಣ ವಸಾಹತು ವ್ಯವಸಾಯಗಾರರ ಪ್ರಪಂಚವಾಗಿತ್ತು; ಜೀವನಶೈಲಿ ಹಳ್ಳಿಗಾಡಿನದಾಗಿತ್ತು. ಇಡೀ ಕರೊಲಿನ ಪ್ರಾಂತಕ್ಕೆ ಚಾರ್ಲ್ಸ್‌ಟನ್ ಒಂದೇ ದೊಡ್ಡ ಪಟ್ಟಣವಾಗಿತ್ತು. ಬಹುಸಂಖ್ಯಾತರು ಚಿಕ್ಕ ರೈತರಾಗಿದ್ದರು. ಇವರು ವಸಾಹತಿನ ತೀರ ಪಶ್ಚಿಮ ತುದಿಯಲ್ಲಿ ನೆಲಸಿದ್ದರು. ಆದರೆ ದೊಡ್ಡ ಪ್ಲಾನ್‌ಟೇಶನ್ ಮಾಲೀಕರು ತಮ್ಮ ಗುಲಾಮರಿಂದ, ಜಾರ್ಜಿಯನ್ ಶೈಲಿಯ ಮಹಲುಗಳಿಂದ ಮತ್ತು ಸಾವಿರಗಟ್ಟಲೆ ಎಕರೆಗಳ ವಿಸ್ತಾರದ ಹಿಡುವಳಿಯಿಂದ ಈ ಸಮಾಜದ ಜೀವನಶೈಲಿಯನ್ನು ರೂಪಿಸಿದರು. ಮತ್ತು ಈ ವರ್ಗದವರೆ ರಾಜಕೀಯ ಧುರೀಣರಾಗುತ್ತಿದ್ದರು. 'ಜಂಟ್ರಿ' (Gentry) ಎಂದು ಕರೆಯುತ್ತಿದ್ದ ಇವರ ಜೀವನಶೈಲಿ ವಿಸ್ಮಯಕಾರಿಯಾಗಿತ್ತು. ೧೮ನೆಯ ಶತಮಾನದ ಮೊದಲ ಭಾಗದಲ್ಲಿ ಇವರು ದೊಡ್ಡ ನದಿಗಳ ತೀರದಲ್ಲಿ ಹಳ್ಳಿಯ ಕೇಂದ್ರಗಳನ್ನು ಸ್ಥಾಪಿಸಿ ಅಲ್ಲಿ 'ವಸಾಹತು ಶೈಲಿ'ಯ ಭವ್ಯವಾದ ಭವನಗಳನ್ನು ನಿರ್ಮಾಣ ಮಾಡಿದರು. ಈ ಭವನಗಳ ಅಕ್ಕ ಪಕ್ಕ ಸಾಮಾನು ಸರಂಜಾಮು ದಾಸ್ತಾನು ಮಾಡುವ ಕಟ್ಟಡಗಳು, ಸೇವಕರ ವಾಸಸ್ಥಳಗಳು ಇರುತ್ತಿದ್ದವು. ಈ ಕಟ್ಟಡಗಳು ಎರಡು ಕಡೆ ಮುಖ ಮಾಡಿದ್ದವು. ಕೆಳಗೆ ನೀರನ್ನು ನೋಡಿದರೆ ನದಿಯ ವಿಶಾಲ ಹರಹು ಕಾಣುತ್ತಿತ್ತು; ತಿರುಗಿ ನೆಲವತ್ತ ನೋಡಿದಾಗ ಅ

ಭವನಕ್ಕೆ ಬರುವ ಕುದುರೆ ಸವಾರರನ್ನು, ಸಾರೋಟುಗಳನ್ನು, ಭವನದ ಮೆಟ್ಟಿಲುಗಳವರೆಗೆ ಕರೆತಂದು ಬಿಟ್ಟು, ನಂತರ ಕೊಂಡೊಯ್ಯುವ ದೊಡ್ಡ ವೃತ್ತಾಕಾರದ ರಸ್ತೆ ಕಾಣಿಸುತ್ತಿತ್ತು.

ಈ ನವ ಶ್ರೀಮಂತವರ್ಗ, ನಮ್ಮ ನವಕೋಟಿ ನಾರಾಯಣರು ರಾಜ ಮಹಾರಾಜರನ್ನು ಅನುಕರಣೆ ಮಾಡಿದಂತೆ, ತಮ್ಮ ಜೀವನಶೈಲಿಯನ್ನು 'ಇಂಗ್ಲಿಷ್ ಕಂಟ್ರಿ ಜಂಟಲ್‌ಮೆನ್' ರ ಮಾದರಿಯಲ್ಲಿ ರೂಪಿಸಿಕೊಂಡರು. ಈ ಭವ್ಯ ಭವನಗಳು ಸಮೃದ್ಧ ಜೀವನದ ಕೇಂದ್ರಗಳಾಗಿದ್ದವು. ಅಲ್ಲಿ ನಡೆಯುತ್ತಿದ್ದ ಅತಿಥಿಸತ್ಕಾರ ದಂತಕಥೆಯಾಗಿದೆ. ಈಗಲೂ ದಾಕ್ಷಿಣಾತ್ಯರು 'ದಾಕ್ಷಿಣದ ಆತಿಥ್ಯ'ದ (Southern Hospitality) ಬಗ್ಗೆ ಹೆಮ್ಮೆ ಪಟ್ಟುಕೊಳ್ಳುತ್ತಾರೆ. ಇಂತಹ ಸುಖಜೀವನ ಸವಿಯುವುದರಲ್ಲೂ ಈ ಪ್ಲಾನ್‌ಟರುಗಳು ಲಂಡನ್ನಿನಲ್ಲಿ ಆ ದಿನಗಳಲ್ಲಿ ಪ್ರಚಲಿತವಾಗಿದ್ದ ಶೈಲಿ (Style) ಮತ್ತು ವೈಖರಿ (Fashion)ಗಳನ್ನು ಅನುಕರಣೆಮಾಡುತ್ತಿದ್ದರು. ಮೇಲ್ನೋಟಕ್ಕೆ ಅತುಳೈಶ್ವರ್ಯದ ಒಡೆಯರಾಗಿ (Lords) ಕಂಡುಬಂದರೂ ಅವರು ಬದುಕುತ್ತಿದ್ದುದು ಸಾಲದ ಹಣದ ಮೇಲೆಯೇ. ಈ ಸಾಲ ಪಡೆಯಲು ಅವರು ಮುಂದಿನ ಫಸಲನ್ನು ಆಧಾರವಾಗಿ ಇಡಬೇಕಾಗಿತ್ತು. ಹೀಗೆ ಇವರ ಪ್ಲಾನ್‌ಟೇಶನ್‌ಗಳು ಲಂಡನ್ನಿನ ವರ್ತಕರಿಗೆ ಗಿರವಿ ಇಟ್ಟಿದ್ದ ಆಸ್ತಿಗಳಾಗಿದ್ದವು.

ಅನ್ನಾಪೊಲಿಸ್ ಮತ್ತು ವಿಲಿಯಮ್ಸ್‌ಬರ್ಗ್ ಊರುಗಳು ಮತ್ತು ಚಾರ್ಲ್ಸ್‌ಟನ್ ನಗರ ದಾಕ್ಷಿಣಾತ್ಯ ಮಹಿಳೆಯರು ಮತ್ತು ಮಹನೀಯರು ತಮ್ಮ ಐಶ್ವರ್ಯ ಮೆರೆಸಲು, ಕಾಡು ಹರಟೆ ಹೊಡೆಯಲು ಮತ್ತು ವಿನೋದ ವಿಲಾಸಗಳಲ್ಲಿ ಕಾಲಕಳೆಯಲು ಸೇರುತ್ತಿದ್ದ ಸ್ಥಳಗಳು. ಕುದುರೆ ಜೂಜು, ಇಸ್ಪೀಟು ಆಟ ಮತ್ತು ದಾಳ (Dices) ಉರುಳಿಸಿ ಆಡುವ ಪಂದ್ಯಗಳು – ಇವರ ಅಚ್ಚುಮೆಚ್ಚಿನ ಮನೋರಂಜನೆಗಳಾಗಿದ್ದವು.

೧೭೦೦ರ ಹೊತ್ತಿಗೆ ದಕ್ಷಿಣ ವಸಾಹತುಗಳಲ್ಲಿ ಗುಲಾಮಗಿರಿ ಭದ್ರವಾಗಿ ನೆಲಸಿತ್ತು. ಹೊಗೆಸೊಪ್ಪಿನ ಬೆಲೆ ಕುಸಿತ ಮತ್ತು ಪೆನ್ಸಿಲ್‌ವೇನಿಯ ಪ್ರದೇಶದಲ್ಲಿ ಫಲವತ್ತಾದ ಭೂಮಿಯನ್ನು ಸಾಗುವಳಿ ಮಾಡಲು ಇಷ್ಟವುಳ್ಳವರು ಪಡೆಯುವ ಅವಕಾಶಗಳು ತೆರೆದುಕೊಂಡಿದ್ದರಿಂದ, ಹೊಗೆಸೊಪ್ಪಿನ ಬೆಳೆಗಾರರಿಗೆ ಕೆಲಸಗಾರರ ಕೊರತೆ ಉಂಟಾಯಿತು. ಆದ್ದರಿಂದ ಅವರು ಕರಿಯ ಗುಲಾಮರನ್ನು ತಂದು ಕೆಲಸ ಮಾಡಿಸುವುದು ಅನಿವಾರ್ಯವಾಯಿತು. ೧೬೭೨ರಲ್ಲಿ ರಚನೆಗೊಂಡ ರಾಯಲ್ ಆಫ್ರಿಕನ್ ಕಂಪನಿ ಅಂದಿನಿಂದ ಸತತವಾಗಿ ಗುಲಾಮರನ್ನು ಒದಗಿಸುತ್ತಿದ್ದುದರಿಂದ ಗುಲಾಮರನ್ನು ಸುಲಭವಾಗಿ ಪಡೆಯಬಹುದಾಗಿತ್ತು. ಆದ್ದರಿಂದ ದೊಡ್ಡ ಪ್ರಮಾಣದ ಹಿಡುವಳಿಗಳು ರೂಢಿಗೊಂಡವು.

ದಕ್ಷಿಣ ಕೆರೊಲಿನದ ಭತ್ತದ ಗದ್ದೆಗಳಲ್ಲಿ ಮೊದಲಿನಿಂದ ಗೇಯುತ್ತಿದ್ದವರು ಗುಲಾಮರು ಮಾತ್ರ. ಸ್ವತಂತ್ರರಾಗಿದ್ದ ಕೆಲಸಗಾರರು ಆ ಕಡುಕಷ್ಟದ ಕೆಲಸವನ್ನು ಮಾಡಲು

ಮತ್ತು ಅನಾರೋಗ್ಯಕರವಾದ ಸ್ಥಳದಲ್ಲಿ ವಾಸ ಮಾಡಲು ನಿರಾಕರಿಸಿದರು. ೧೮ನೆಯ ಶತಮಾನದ ಮೊದಲ ಭಾಗದಲ್ಲಿ ಆಫ್ರಿಕದಿಂದ ಸಹಸ್ರಾರು ಗುಲಾಮರನ್ನು ಹಿಡಿದು ತರಲಾಯಿತು. ೧೭೩೦ರ ಸುಮಾರಿಗೆ ಪೆನ್ಸಿಲ್‌ವೇನಿಯ ಪ್ರಾಂತದ ದಕ್ಷಿಣ ಭಾಗಗಳಲ್ಲಿನ ಜನಸಂಖ್ಯೆಯಲ್ಲಿ ಶೇಕಡ ಮೂವತ್ತರಷ್ಟು ಕರಿಯ ಜನರಿದ್ದರು. ಕೆಲವು ಪ್ರದೇಶಗಳಲ್ಲಿ ಕರಿಯರ ಜನಸಾಂದ್ರತೆ ಬಹಳ ಹೆಚ್ಚಾಗಿತ್ತು. ಹೀಗೆ ಕರಿಯರ ಸಂಖ್ಯೆ ಹೆಚ್ಚಾದಂತೆ ಬಿಳಿಯರಲ್ಲಿ ಅವರ ಬಗ್ಗೆ ಆಧಾರವಿಲ್ಲದ ಪೂರ್ವಾಗ್ರಹಪೀಡಿತವಾದ ಅಪನಿಂದೆಗಳು, ಕಾರಣವಿಲ್ಲದ ಭಯ ಮತ್ತು ಮೈಬಣ್ಣದ ಆಧಾರದ ಮೇಲೆ ಬೆಳೆಸಿಕೊಂಡ ಶ್ರೇಷ್ಠ ಭಾವನೆಗಳು ಹೆಚ್ಚುತ್ತ ಹೋಗಿ ಸಂಕೀರ್ಣ ಸಮಸ್ಯೆಗಳಿಗೆ ಕಾರಣವಾದವು. ಇದು ಇಂದಿಗೂ ಅನ್ವಯಿಸುತ್ತದೆ.

ಪ್ರತಿಯೊಂದು ವಸಾಹತಿನಲ್ಲಿ ಕರಿಯರ ವರ್ತನೆಗಳನ್ನು ನಿಯಂತ್ರಿಸುವ ನಿಬಂಧನೆಗಳನ್ನು ಜಾರಿಗೆ ತರಲಾಯಿತು. ಈ ನಿಬಂಧನೆಗಳು ದಕ್ಷಿಣಕ್ಕೆ ಹೋದಂತೆಲ್ಲ ಹೆಚ್ಚು ಕಠೋರವಾಗುತ್ತ ಹೋದವು. ಕರಿಯರಿಗೆ ನಾಗರಿಕ ಹಕ್ಕುಗಳು ಇರಲಿಲ್ಲ. ನಿಬಂಧನೆಗಳನ್ನು ಉಲ್ಲಂಘಿಸಿದವರಿಗೆ ಕ್ರೂರ ಶಿಕ್ಷೆ ವಿಧಿಸಲಾಗುತ್ತಿತ್ತು. ಸಣ್ಣ ಪುಟ್ಟ ಅಪರಾಧಗಳಿಗೆ ಚಾವಟಿಯ ಏಟಿನ ಶಿಕ್ಷೆ ಸಾಮಾನ್ಯವಾಗಿತ್ತು. ಹೆಚ್ಚು ಹಾನಿಕರವಾದ ಅಪರಾಧಗಳಿಗೆ ನೇಣು ಹಾಕಿ ಸಾಯಿಸುವುದು ಅಥವಾ ಜೀವಂತವಾಗಿ ಸುಡುವುದು ಪದ್ಧತಿಯಾಗಿತ್ತು. ಪರಿಸ್ಥಿತಿ ಹೀಗಿದ್ದರೂ ಸುಸಂಘಟಿತವಾದ ಗುಲಾಮರ ದಂಗೆಗಳಾಗುತ್ತಿದ್ದುದು ಅಪರೂಪ. ವೈಯಕ್ತಿಕ ಮಟ್ಟದಲ್ಲಿ ಕರಿಯರ ಮತ್ತು ಬಿಳಿಯರ ನಡುವೆ ಹಲ್ಲೆ ನಡೆಯುತ್ತಿದ್ದುದು ಸಾಮಾನ್ಯವಾಗಿತ್ತು. ಬಿಳಿಯರೊಳಗೂ ವೈಯಕ್ತಿಕ ಮಟ್ಟದಲ್ಲಿ ಹೊಡೆದಾಟ ಬಡಿದಾಟಗಳು ಸರ್ವೇಸಾಮಾನ್ಯವಾಗಿದ್ದವು. ವೈಯಕ್ತಿಕ ಹಿಂಸಾಚಾರ ಅಮೆರಿಕದ ಇತಿಹಾಸದ ಉದ್ದಕ್ಕೂ ಕಂಡುಬರುವ ನಾಗರಿಕತೆಯ ವಿಲಕ್ಷಣ ಅಂಗವಾಗಿದೆ.

ಕರಿಯರ ಬಗ್ಗೆ ಬಿಳಿಯರು ಬೆಳೆಸಿಕೊಂಡಿದ್ದ 'ಕಾರಣವಿಲ್ಲದ ಭಯ' ಅವರ ಮನಸ್ಸನ್ನು ಹೊಕ್ಕು ಕೊರೆಯುತ್ತಿದ್ದ ಚಿಂತೆಯ ಪಡಿನೆರಳಾಗಿತ್ತು. ಆ ಚಿಂತೆ ಏನೆಂದರೆ ವರ್ಣಸಂಕರದಿಂದ ಉಂಟಾಗಬಹುದಾದ ದುಷ್ಪರಿಣಾಮಗಳು ತಮ್ಮನ್ನು ನಾಶ ಮಾಡುತ್ತವೆ ಎನ್ನುವ ನಂಬಿಕೆ! ಆದ್ದರಿಂದ ಕರಿಯರಿಗೆ ಸ್ವಾತಂತ್ರ್ಯ ಕೊಡದೆ ಅವರನ್ನು ಸದಾ ಗುಲಾಮಗಿರಿಯಲ್ಲಿಡಬೇಕಾದುದು ಅಗತ್ಯವೆಂದು ನಂಬಿದ್ದರು. ಆದರೆ ವಾಸ್ತವವಾಗಿ ಆಗಿದ್ದೇ ಬೇರೆ. ವರ್ಣಸಂಕರ ನಡೆದುಹೋಯಿತು, ಕರಿಯರಿಂದಲ್ಲ; ಬಿಳಿಯರಿಂದ! ಬಿಳಿಯ ಮಾಲೀಕರು ತಮ್ಮ ಅಧೀನದಲ್ಲಿದ್ದ ಕರಿಯ ದಾಸಿಯರ ಮೇಲೆ ಅತ್ಯಾಚಾರ ನಡೆಸಿದ್ದರಿಂದ! ಹೀಗೆ ಗುಲಾಮಗಿರಿ ಎಂಬ ಹೇಯವಾದ ಕ್ರೂರ ವ್ಯವಸ್ಥೆ ಅಮೆರಿಕದ ವಸಾಹತು ಪ್ರಪಂಚದಲ್ಲಿ ಕ್ಯಾನ್ಸರ್ ರೋಗದಂತೆ ಹರಡಿಕೊಂಡಿತು. ಕಾಲಕ್ರಮೇಣ ಗುಲಾಮರ ಸ್ಥಿತಿಗತಿಗಳನ್ನು ಸುಧಾರಿಸಬೇಕೆಂಬ ಆಲೋಚನೆ ಜನರಲ್ಲಿ ಸುಪ್ತವಾಗಿ ಬೆಳೆಯಿತು. ಆದರೆ ಗುಲಾಮಗಿರಿಯನ್ನು ಸಂಪೂರ್ಣವಾಗಿ ರದ್ದು ಮಾಡುವ ಬಗ್ಗೆ ಯಾರೂ ಆಗ ಮಾತೆತ್ತಲಿಲ್ಲ!

ಅಮೆರಿಕದ ಇಂಗ್ಲಿಷ್ ವಸಾಹತುಗಳು ಜ್ಞಾನ ಮತ್ತು ಸಂಸ್ಕೃತಿ ರಂಗಗಳಲ್ಲಿ ಇಂಗ್ಲೆಂಡನ್ನು ಹಿಂಬಾಲಿಸುತ್ತಿದ್ದವು. ಈ ಹೇಳಿಕೆ ಹೆಚ್ಚಾಗಿ ದಕ್ಷಿಣದ ವಸಾಹತುಗಳಿಗೆ ಅನ್ವಯವಾಗುತ್ತದೆ. ಏಕೆಂದರೆ ದಕ್ಷಿಣದ ವಸಾಹತುಗಳು ಇಂಗ್ಲೆಂಡಿನೊಡನೆ ನಿಕಟವಾದ ಆರ್ಥಿಕ ಸಂಬಂಧ ಹೊಂದಿದ್ದವು. ಹಣವಂತರಾದ ಪ್ಲಾನ್‌ಟರುಗಳು ಇಂಗ್ಲೆಂಡಿನಲ್ಲಿ ತಯಾರದ ಬಟ್ಟೆಗಳನ್ನು ತೊಡುತ್ತಿದ್ದರು. ಇಂಗ್ಲಿಷ್ ಕೋಚ್ ಗಾಡಿಗಳಲ್ಲಿ ಕುಳಿತು ಹಳ್ಳಿಯ ಪ್ರದೇಶಗಳನ್ನು ಸುತ್ತಿ ಬರುತ್ತಿದ್ದರು. ಆಮದು ಮಾಡಿಕೊಂಡ ಅತ್ಯುತ್ತಮವಾದ ಪಿಂಗಾಣಿ ಪಾತ್ರೆಗಳನ್ನು ಮತ್ತು ಪೀಠೋಪಕರಣಗಳನ್ನು ಉಪಯೋಗಿಸುತ್ತಿದ್ದರು. ಉತ್ತಮ ದರ್ಜೆಯ ಪುಸ್ತಕ ಭಂಡಾರಗಳನ್ನು ಕಟ್ಟಿ ಇಂಗ್ಲೆಂಡ್ ಮತ್ತು ಯೂರೋಪಿನ ಪುಸ್ತಕಗಳಿಂದ ತುಂಬಿಸಿದ್ದರು. ಅನೇಕರು ತಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕಾಗಿ ಹೊರದೇಶಗಳಿಗೆ ಕಳುಹಿಸುತ್ತಿದ್ದರು.

ದಕ್ಷಿಣ ವಸಾಹತುಗಳಲ್ಲಿ ಐಶ್ವರ್ಯವಂತರಿಗೂ ಮತ್ತು ಬಡವರಿಗೂ ವಿದ್ಯಾಭ್ಯಾಸದ ವಿಷಯಗಳಲ್ಲಿ ಬಹಳ ಅಂತರವಿತ್ತು. ಹಾಗೆಯೇ ಈ ವಸಾಹತಿನ ಐಶ್ವರ್ಯವಂತ ವಿದ್ಯಾವಂತರು ಹೊರಗಿನ ಸಾಧಾರಣ ವಿದ್ಯಾವಂತರ ಮಟ್ಟಕ್ಕೂ ಬರುತ್ತಿರಲಿಲ್ಲ. ೧೬೯೩ರಲ್ಲೇ ವರ್ಜೀನಿಯಾದಲ್ಲಿ ವಿಲಿಯಂ ಮತ್ತು ಮೇರಿ ಕಾಲೇಜು ಸ್ಥಾಪಿತವಾಗಿದ್ದರೂ ದಕ್ಷಿಣ ವಸಾಹತುಗಳಲ್ಲಿ ಪರಿಣಾಮಕಾರಿಯಾದ ಪ್ರಾಥಮಿಕ ಅಥವಾ ಪ್ರೌಢಶಾಲಾ ವಿದ್ಯಾಭ್ಯಾಸ ಕ್ರಮ ಸ್ಥಾಪಿತವಾಗಿರಲಿಲ್ಲ. ವಸಾಹತುಗಳಲ್ಲಿ ನೆಲಸಿದವರು ಆ ಹಳ್ಳಿಗಾಡಿನ ವಿಶಾಲಪ್ರದೇಶದಲ್ಲಿ ಅಲ್ಲಿ ಇಲ್ಲಿ ಚದುರಿಹೋಗಿ, ನದಿಗಳು, ಕಾಡುಗಳು ಮುಂತಾದ ಪ್ರಕೃತಿಯ ಅಡೆತಡೆಗಳಿಂದ ಬೇರ್ಪಟ್ಟಿದ್ದರು. ಶಾಲೆಗಳ ಅಧೋಗತಿಗೆ ಇದು ಮುಖ್ಯ ಕಾರಣಗಳಲ್ಲಿ ಒಂದಾಗಿತ್ತು. ವಸಾಹತಿನ ಮೂಲೆ ಮುಡುಕುಗಳಲ್ಲಿ ನೆಲಸಿ ಹೊರಗಿನ ಸಂಪರ್ಕವಿಲ್ಲದ ರೈತರಲ್ಲಿ ಅನೇಕರು ಮತ್ತು ಎಲ್ಲ ಗುಲಾಮರು ಅನಕ್ಷರಸ್ಥರಾಗಿ ಉಳಿದರು.

೧೮ನೆಯ ಶತಮಾನದ ಮಧ್ಯದಲ್ಲಿ ಆ್ಯಂಗ್ಲಿಕನ್ ಚರ್ಚ್ ದಕ್ಷಿಣದ ಎಲ್ಲ ವಸಾಹತು ಗಳಲ್ಲಿ ಸ್ಥಾಪಿತವಾಗಿತ್ತು. ಆ್ಯಂಗ್ಲಿಕನ್ ಪಾದ್ರಿಗಳ ಖರ್ಚು ವೆಚ್ಚಗಳನ್ನು ಸಾರ್ವಜನಿಕರ ಹಣದಿಂದ ಕೊಡಲಾಗುತ್ತಿತ್ತು. ವರ್ಜೀನಿಯ ರಾಜ್ಯಾಡಳಿತ ಸಭೆ (Assembly) ಆ್ಯಂಗ್ಲಿಕನ್ ಚರ್ಚಿನ ಪೂಜಾವಿಧಿಗಳಲ್ಲಿ ವಸಾಹತುವಾಸಿಗಳು ಹಾಜರು ಇರಬೇಕೆಂದು ಕಡ್ಡಾಯ ಮಾಡಿತು. ೧೬೪೯ರಿಂದ ಆ್ಯಂಗ್ಲಿಕನ್ ಚರ್ಚ್ ಬಗ್ಗೆ ಭಿನ್ನಾಭಿಪ್ರಾಯವುಳ್ಳವರಿಗೆ ಮತದಾನದ ಹಕ್ಕನ್ನು ನಿರಾಕರಿಸಲಾಯಿತು. ಆ್ಯಂಗ್ಲಿಕನ್ ಅಲ್ಲದವರನ್ನು ವಸಾಹತಿನಿಂದ ಓಡಿಸಲಾಯಿತು.

ಮೇರಿಲ್ಯಾಂಡ್ ಪ್ರದೇಶದಲ್ಲಿ ಲಾರ್ಡ್ ಬಾಲ್ಟಿಮೋರ್ ಕ್ರೈಸ್ತರಲ್ಲದವರನ್ನು ದ್ವೇಷಿಸಿದರೂ ಸಹ, ಬಹುಸಂಖ್ಯಾತರಾಗಿದ್ದ ಪ್ರಾಟೆಸ್ಟಂಟರನ್ನು ಕ್ಯಾಥೊಲಿಕರೊಡನೆ ಕೂಡಿ ಬಾಳಬೇಕೆಂದು ಆಗ್ರಹ ಪಡಿಸಿದನು. ಅವನು ಜಾರಿಗೆ ತಂದ 'ಸಹಿಷ್ಣುತಾ ಕಾಯಿದೆ'

(Toleration Act) ಪ್ರಕಾರ ಕ್ಯಾಥೊಲಿಕರ ಬಗ್ಗೆ ತಿರಸ್ಕಾರ ತೋರಿಸುವ ನಿಂದನಾತ್ಮಕ ಪದಗಳನ್ನು ಉಪಯೋಗಿಸುವವರಿಗೆ ದಂಡ/ಜುಲ್ಮಾನೆಗಳನ್ನು ವಿಧಿಸಲಾಗುತ್ತಿತ್ತು. ಆದರೆ ಈ ವಸಾಹತಿಗೆ ಉಗ್ರ ಪರಿಶುದ್ಧರು (Militant Puritans) ಹೆಚ್ಚಿನ ಸಂಖ್ಯೆಯಲ್ಲಿ ಬಂದು ನೆಲಸಿದ ಮೇಲೆ ಲಾರ್ಡ್ ಬಾಲ್ಟಿಮೋರ್ ಜಾರಿಗೆ ತಂದ ಕಾಯಿದೆ ಬಹುಕಾಲ ಉಳಿಯಲಿಲ್ಲ. ಮೇರಿಲ್ಯಾಂಡ್ ವಸಾಹತಿನ ಜನಸಂಖ್ಯೆಯಲ್ಲಿ ಶೇಕಡ ಹತ್ತು ಭಾಗ ಮಾತ್ರ ಕ್ಯಾಥೊಲಿಕರಿದ್ದುದರಿಂದ ಪಕ್ಷಪಾತಕ್ಕೆ ಗುರಿಯಾದರು. ೧೭೦೪ರಲ್ಲಿ ಕ್ಯಾಥೊಲಿಕ್ ಪಾದ್ರಿಗಳು ಧರ್ಮ ಪ್ರವಚನ ಮಾಡುವುದನ್ನು ನಿಷೇಧಿಸಲಾಯಿತು. ೧೭೧೮ರಲ್ಲಿ ಕ್ಯಾಥೊಲಿಕರು ಮತದಾನದ ಹಕ್ಕನ್ನು ಕಳೆದುಕೊಂಡರು. ಕೆರೊಲಿನ ವಸಾಹತುಗಳಿಗೆ ಎಲ್ಲ ಮತಸ್ಥರು, ಯಹೂದ್ಯರು ಮತ್ತು ಕ್ವೇಕರರೂ ಸಹ ಬಂದು ನೆಲಸಲು ಅವಕಾಶಮಾಡಿ ಕೊಡಬೇಕೆಂದು ಆ ವಸಾಹತುಗಳ ಮಾಲೀಕರು ಮೊದಲೇ ಮಾಡಿಕೊಂಡಿದ್ದ ನಿರ್ಧಾರ ವನ್ನು ಕಾರ್ಯಗತಗೊಳಿಸಲು ಸಾಧ್ಯವಾಗದೆ ಹೋಯಿತು. ೧೭೦೬ರಲ್ಲಿ ಕೆರೊಲಿನ ವಸಾಹತುಗಳಲ್ಲಿ ಆ್ಯಂಗ್ಲಿಕನ್ ಚರ್ಚ್ ಸ್ಥಾಪನೆಗೊಂಡಿತು. ಜಾರ್ಜಿಯ ವಸಾಹತಿನಲ್ಲಿ ಪ್ರಾರಂಭದಲ್ಲಿ ಸರ್ಕಾರ ಬೆಂಬಲಿಸಿದ ಮತ ಯಾವುದೂ ಇರಲಿಲ್ಲ. ಆದರೆ ೧೭೫೮ರಲ್ಲಿ ಆ್ಯಂಗ್ಲಿಕನ್ ಮತ ಸ್ಥಾಪನೆಯಾಯಿತು. ದಕ್ಷಿಣದ ವಸಾಹತುಗಳಲ್ಲಿ ಆ್ಯಂಗ್ಲಿಕನ್ ಚರ್ಚ್ ಹೆಚ್ಚು ಪ್ರಭಾವಶಾಲಿಯಾಗಲಿಲ್ಲ. ಮೊದಲೇ ತಿಳಿಸಿರುವಂತೆ, ವಸಾಹತಗಾರರ ನೆಲೆಗಳು ಎಲ್ಲಾ ಕಡೆಗಳಲ್ಲಿ ಚದುರಿ ಹೋಗಿದ್ದು ಮತಸ್ಥಾಪನೆಗೆ ಅನುಕೂಲವಾಗಲಿಲ್ಲ. ಇಂಗ್ಲಿಷ್ ಚರ್ಚ್ ಅಧಿಕಾರಿಗಳು ಅಮೆರಿಕದ ಚರ್ಚುಗಳನ್ನು ಅಲಕ್ಷ್ಯ ಮಾಡಿದ್ದು ಪರಿಸ್ಥಿತಿಯನ್ನು ಇನ್ನೂ ಹದಗೆಡಿಸಿತು. ವಸಾಹತುಗಳಲ್ಲಿ ಆ್ಯಂಗ್ಲಿಕನ್ ಬಿಷಪ್ ಇರಲಿಲ್ಲ. ಆದ್ದರಿಂದ ಆ್ಯಂಗ್ಲಿಕನ್ ಮತಕ್ಕೆ ಹೊಸದಾಗಿ ಸೇರಿದವರು ಚರ್ಚಿನ ಉಪದೇಶಿಯಾಗಿ ಅಥವಾ ಪಾದ್ರಿಯಾಗಿ ತರಪೇತಿ ಪಡೆಯಬೇಕಾಗಿದ್ದರೆ ಮತ್ತು ಆ ಸ್ಥಾನಗಳಿಗೆ ಅಧಿಕೃತವಾಗಿ ನೇಮಕಗೊಳ್ಳಲು ಅನುಮತಿ ಪಡೆದುಕೊಳ್ಳಬೇಕಾದರೆ ಇಂಗ್ಲೆಂಡಿಗೆ ಹೋಗಬೇಕಾಗಿತ್ತು. ವಸಾಹತುಗಳ ಆ್ಯಂಗ್ಲಿಕನ್ ಚರ್ಚುಗಳ ನಿರ್ವಹಣೆಗಾಗಿ ಇಂಗ್ಲೆಂಡಿನಿಂದ ಬರುತ್ತಿದ್ದ ಅಧಿಕಾರಿಗಳು ಅಲ್ಲಿ ಯಶಸ್ವಿ ಜೀವನ ನಡೆಸಲು ಆಗದಂಥವರು. ಅವರ ವಿದ್ಯಾಭ್ಯಾಸ ಮಟ್ಟವೂ ಹೆಚ್ಚಿನದಾಗಿರಲಿಲ್ಲ. ಅಂಥವರು ವಸಾಹತಿಗೆ ಬಂದು ಚರ್ಚಿನ ಜವಾಬ್ದಾರಿ ವಹಿಸಿಕೊಂಡಮೇಲೆ ಅವರಿಗೂ ಮತ್ತು ಚರ್ಚಿನ ಸದಸ್ಯರಿಗೂ ಸತತವಾಗಿ ಘರ್ಷಣೆ ನಡೆಯುತ್ತಿತ್ತು. ದಕ್ಷಿಣ ವಸಾಹತುಗಳ ಆ್ಯಂಗ್ಲಿಕನ್ ಚರ್ಚಿನೊಡನೆ ಭಿನ್ನಾಭಿಪ್ರಾಯ ಹೊಂದಿದ್ದ ಕ್ರೈಸ್ತ ಪರಿಷತ್ತುಗಳು ತಮ್ಮ ಅನುಯಾಯಿಗಳ ಮೇಲೆ ಪ್ರಭಾವ ಬೀರಿ ಹಳ್ಳಿಗಾಡಿನ ಸಂಪ್ರದಾಯಸ್ಥ ಸಮುದಾಯಗಳ ಸಮಸ್ಯೆಗಳನ್ನು ಎದುರಿಸಿ ಉಳಿದು ಕೊಂಡವು. ೧೮ನೆಯ ಶತಮಾನದಲ್ಲಿ ದಕ್ಷಿಣದ ಹಿಂದುಳಿದ ಹಳ್ಳಿಗಳನ್ನು ಪ್ರವೇಶಿಸಿದ ಪ್ರೆಸ್ಬಿಟೇರಿಯನ್ನರು ಮತ್ತು ಬ್ಯಾಪ್ಟಿಸ್ಟರು ಸರ್ವಸ್ವವನ್ನೂ ತ್ಯಾಗಮಾಡಿ ತಮ್ಮ ಚರ್ಚುಗಳನ್ನು ಕಟ್ಟಿದರು. ಚರ್ಚಿನ ಪೂಜಾವಿಧಿಗಳಲ್ಲಿ ಭಾಗವಹಿಸಲು ಇವರು ಎಷ್ಟೇ ದೂರವಾದರೂ

ಸಂತೋಷದಿಂದ ನಡೆದು ಹೋಗುತ್ತಿದ್ದರು. ಉತ್ತರ ಕೆರೊಲಿನದ ಕೆಲವು ಭಾಗಗಳನ್ನು ಉಳಿದು ಮಿಕ್ಕ ದಕ್ಷಿಣ ವಸಾಹತು ಪ್ರಪಂಚದಲ್ಲಿ ಇವರು ಅಲ್ಪಸಂಖ್ಯಾತರಾಗಿಯೇ ಉಳಿದರು.

ಉತ್ತರದ ವಸಾಹತುಗಳಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳು

ಮೇರಿಲ್ಯಾಂಡಿನ ಉತ್ತರಕ್ಕೆ ಇದ್ದ ಸಮುದಾಯಗಳಲ್ಲಿ ಬಹುಸಂಖ್ಯಾತರು ರೈತರಾಗಿದ್ದರು. ಆದರೆ ಅಲ್ಲಿನ ಸಾಮಾಜಿಕ ವ್ಯವಸ್ಥೆ ಬೇರೆ ತರದಲ್ಲಿ ರೂಪುಗೊಂಡಿತು. ಉತ್ತರದ ಹವಾಮಾನದಲ್ಲಿ – ಚಳಿ, ಮಂಜು, ಹಿಮ – ವೈಪರೀತ್ಯ ಹೆಚ್ಚು. ಸುದೀರ್ಘವಾದ ಚಳಿಗಾಲ ಬೇರೆ. ಇಂಥ ಪ್ರದೇಶದಲ್ಲಿ ದಕ್ಷಿಣ ವಸಾಹತುಗಳಲ್ಲಿ ಭತ್ತ, ಕಬ್ಬು ಮುಂತಾದುವನ್ನು ಬೆಳೆಯುವುದು ಸಾಧ್ಯವಿಲ್ಲ. ಹೊಗೆಸೊಪ್ಪಿಗೂ ಅಲ್ಲಿ ಉಳಿಗಾಲವಿಲ್ಲ. ಉತ್ತರ ವಸಾಹತುಗಳಲ್ಲಿ ಮುಖ್ಯವಾದ ಬೆಳೆ ಎಂದರೆ ಜೋಳ (Indian Corn) ಜೋಳ ವಿವಿಧ ಉಪಯೋಗಗಳಿಗೆ ಬರುವ ಧಾನ್ಯ. ಈ ಧಾನ್ಯವನ್ನು ನಾನಾ ರೀತಿಯಲ್ಲಿ ತಯಾರಿಸಿ ಊಟ ಉಪಹಾರಗಳಲ್ಲಿ ಉಪಯೋಗಿಸಬಹುದು. ಇದರಿಂದ ಮದ್ಯ ತಯಾರಿಸಬಹುದು, ಪ್ರಾಣಿಗಳಿಗೆ ಮೇವು ತಯಾರಿಸಬಹುದು. ಆದ್ದರಿಂದ ಎಲ್ಲ ವಸಾಹತುಗಳಲ್ಲಿ ಜೋಳ ಎಲ್ಲಾ ಜನರ ಮುಖ್ಯ ಆಹಾರವಾಯಿತು. ಕ್ರಮೇಣ ವ್ಯವಸಾಯ ವಿಸ್ತಾರಗೊಡು, ಜೋಳ ಮಾತ್ರವಲ್ಲದೆ ರೈತರು ವಿವಿಧ ಬೆಳೆಗಳನ್ನು ಬೆಳೆಯತೊಡಗಿದರು. ಕಾಡನ್ನು ಕಡಿದು, ಭೂಮಿಯನ್ನು ಬೇಸಾಯಕ್ಕೆ ತಯಾರು ಮಾಡಿ, ಸುತ್ತಲೂ ಬೇಲಿ ಹಾಕಿ, ಗೋಧಿ, ಸಣ್ಣ ಗೋಧಿ (Rye), ತೋಕೆ ಗೋಧಿ (Oats), ಜವೆ ಗೋಧಿ (Barley), ತರಕಾರಿಗಳು ಮತ್ತು ಸ್ಥಳೀಯ ಸಸ್ಯಗಳಾದ ಕುಂಬಳಕಾಯಿ ಮತ್ತು ಆಲೂಗಡ್ಡೆಗಳು – ಇವುಗಳೆಲ್ಲವನ್ನು ಹೆಚ್ಚು ಪ್ರಮಾಣದಲ್ಲಿ ಬೆಳೆಯತೊಡಗಿದರು. ನ್ಯೂ ಇಂಗ್ಲೆಂಡ್ ವಸಾಹತಿನ ಜನರು ವ್ಯವಸಾಯವಲ್ಲದೆ ಮೀನುಗಾರಿಕೆಯಲ್ಲಿಯೂ ನಿರತರಾಗಿದ್ದರು. ಆದರೆ ಇವರು ಹಿಡಿದ ಮೀನಿಗೆ ಯೂರೋಪಿನಲ್ಲಿ ಬೇಡಿಕೆ ಇರಲಿಲ್ಲ. ಉತ್ತರದ ವಸಾಹತುಗಳಲ್ಲಿ ಆಹಾರದ ಕೊರತೆಯಿರಲಿಲ್ಲ. ಅವರು ಎದುರಿಸಬೇಕಾಗಿದ್ದ ಸಮಸ್ಯೆಯೆಂದರೆ, ಉಪಯೋಗಿಸಿ ಉಳಿದ ಅಪಾರ ಪ್ರಮಾಣದ ಧಾನ್ಯಗಳನ್ನು ಯೂರೋಪಿನಲ್ಲಿ ಉತ್ಪಾದನೆ ಆದ ವಸ್ತುಗಳಿಗೆ ಪರಿವರ್ತಿಸುವುದು ಹೇಗೆ ಎನ್ನುವುದು. ಅವರು ಸ್ವಲ್ಪಕಾಲದಲ್ಲಿಯೇ ಈ ಸಮಸ್ಯೆಯನ್ನು ಬಗೆಹರಿಸುವ ವಿಧಾನಗಳನ್ನು ತಿಳಿದುಕೊಂಡರು. ಸುದೀರ್ಘ ಚಳಿಗಾಲದ ಸಹಿಸಲಾರದ ಚಳಿಯಲ್ಲಿ ಜನರು ಹೆಚ್ಚಿನ ಸಮಯವನ್ನು ಮನೆಯೊಳಗೆ ಕಳೆಯಬೇಕಾಗುವುದು ಅನಿವಾರ್ಯ. ಆ ಸಮಯವನ್ನು ಉಪಯೋಗಿಸಿಕೊಂಡು ಎಲುಬಿನ ಗುಂಡಿಗಳು, ಚರ್ಮದ ಷರಾಯಿಗಳು ಮತ್ತು ನಾರಿನಿಂದ ಮಾಡಿದ ಚೀಲಗಳು ಮುಂತಾದುವನ್ನು ಜನರು ತಮ್ಮ ತಮ್ಮ ಮನೆಗಳಲ್ಲಿ ಉತ್ಪಾದನೆ ಮಾಡತೊಡಗಿದರು. ಕೆಲವರು ಕುರಿಗಳನ್ನು ಸಾಕತೊಡಗಿದರು. ನೂಲು ತೆಗೆಯುವ

ಚರಕ ಸರ್ವೇಸಾಮಾನ್ಯವಾಗಿ ಎಲ್ಲರ ಮನೆಗಳಲ್ಲೂ ಇತ್ತು. ೧೭೫೦ರವರೆಗೂ ಶೇಕಡ ೯೦ರಷ್ಟು ಪೆನ್ಸಿಲ್‌ವೇನಿಯ ರೈತರು ತಮ್ಮ ಬಟ್ಟೆಗಳನ್ನು ತಾವೇ ತಯಾರಿಸಿಕೊಳ್ಳುತ್ತಿದ್ದರು.

ಈ ಪರಿಸ್ಥಿತಿಯಲ್ಲಿ ಮನೆಯವರು ತಾವು ಯಾವ ಕಸುಬನ್ನು ಮಾಡುತ್ತಿದ್ದರೋ ಅದರಲ್ಲಿ ಪರಿಣತರಾದರು, ವಿಶಿಷ್ಟ ಕುಶಲತೆಯನ್ನು ಬೆಳೆಸಿಕೊಂಡರು. ಒಂದು ಕಸುಬಿನಲ್ಲಿ ತಜ್ಞರಾದಮೇಲೆ ಮುಂದಿನ ಹೆಜ್ಜೆಯೆಂದರೆ ವಸ್ತುಗಳನ್ನು ಮಾರಾಟಕ್ಕಾಗಿ ಉತ್ಪಾದಿಸುವುದು. ಮಾರಾಟಕ್ಕಾಗಿ ಉತ್ಪಾದನೆ ಮಾಡಿದರೆ ಅವುಗಳ ಗುಣಮಟ್ಟ ಹೆಚ್ಚುತ್ತದೆ; ಗುಣಮಟ್ಟ ಹೆಚ್ಚಾದ ವಸ್ತುಗಳಿಗೆ ಬೇಡಿಕೆ ಹೆಚ್ಚುತ್ತದೆ; ಬೆಡಿಕೆ ಹೆಚ್ಚಿದರೆ ಉತ್ಪಾದನೆ ಹೆಚ್ಚಾಗಿ ಹೊಸ ಮಾರುಕಟ್ಟೆಗಳನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ. ಗೃಹ ಕೈಗಾರಿಕೆಗಳಿಗಿಂದ ವಸಾಹತು ಜನರಿಗೆ ಬೇಕಾದ ಎಲ್ಲಾ ವಸ್ತುಗಳನ್ನು ಉತ್ಪಾದಿಸುವುದು ಸಾಧ್ಯವಾಗಲಿಲ್ಲ. ಮೇಲಾಗಿ, ಹೆಚ್ಚಾಗಿ ಉಳಿದ ದವಸ ಧಾನ್ಯಗಳನ್ನು ಮಾರದಿದ್ದರೆ ಅವು ಕೊಳೆತು ಹೋಗುತ್ತವೆ. ಇದಕ್ಕೆ ಪರಿಹಾರ ಮಾರ್ಗವೆಂದರೆ ಪ್ರಪಂಚದ ಇತರ ಭಾಗಗಳಲ್ಲಿಗೆ ಹೋಗಿ ದವಸ ಧಾನ್ಯಗಳನ್ನು ಮಾರಿ ಅದಕ್ಕೆ ಪ್ರತಿಯಾಗಿ ತಮಗೆ ಬೇಕಾದ ವಸ್ತುಗಳನ್ನು ತುಂಬಿಸಿಕೊಂಡು ಬರುವುದು. ಪ್ರಪಂಚದ ಇತರ ಭಾಗಗಳಿಗೆ ತಮ್ಮ ವಸ್ತುಗಳನ್ನು ಕೊಂಡೊಯ್ಯಲು ಉತ್ತಮವಾದ ವ್ಯಾಪಾರೀ ಹಡಗುಗಳನ್ನು ಮೊದಲು ಪೂರೈಸಬೇಕಾಯಿತು. ಅದೃಷ್ಟವಶಾತ್ ನ್ಯೂ ಇಂಗ್ಲೆಂಡ್ ಪ್ರದೇಶದ ಅಪಾರವಾದ ಅರಣ್ಯದಲ್ಲಿ ದಟ್ಟವಾಗಿ ಬೆಳೆದು ನಿಂತ ಮರಗಳಿಂದ ಪ್ರಪಂಚದಲ್ಲೇ ಅತ್ಯುತ್ತಮವಾದ ನೌಕಾ ಉತ್ಪಾದನೆ ಮಾಡುವ ಅನುಕೂಲತೆ ಇತ್ತು. ಈ ಕಾರಣದಿಂದ ಅತ್ಯುತ್ತಮವಾದ ನೌಕಾ ನಿರ್ಮಾಣ ಕೈಗಾರಿಕೆ ಬೆಳೆಯಲು ಕಾರಣವಾಯಿತು. ಇದರಿಂದಾಗಿ ಬಾಸ್ಟನ್, ಸೇಲಂ, ನ್ಯೂಪೋರ್ಟ್, ಪೋರ್ಟ್ಸ್‌ಮತ್ ಮತ್ತು ಇತರ ಉತ್ತರದ ರೇವುಪಟ್ಟಣಗಳು ನೌಕಾ ನಿರ್ಮಾಣ ಕೈಗಾರಿಕೆಯ ಕೇಂದ್ರಗಳಾದವು. ಈ ಕೇಂದ್ರಗಳಲ್ಲಿ ನಿರ್ಮಾಣವಾದ ನೌಕೆಗಳು ನ್ಯೂ ಇಂಗ್ಲೆಂಡ್ ವಸಾಹತುಗಳ ಸಮುದ್ರದಾಚೆಯ ವ್ಯಾಪಾರಯುಗವನ್ನು ಸಾಧ್ಯಗೊಳಿಸಿದವು. ಪಶ್ಚಿಮ ಇಂಡೀಸ್ ದ್ವೀಪಗಳಲ್ಲಿ ಕಬ್ಬಿನ ಬೆಳೆಗಾರರು ಸಕ್ಕರೆಯನ್ನು ತಯಾರಿಸುವಾಗ ಅದರ ಜೊತೆಯಲ್ಲಿ ಉತ್ಪತ್ತಿಯಾಗುತ್ತಿದ್ದ ಜೇನುಬೆಲ್ಲವನ್ನು (Molasses) ನ್ಯೂ ಇಂಗ್ಲೆಂಡ್ ವರ್ತಕರು ವಸಾಹತುಗಳಲ್ಲಿ ಉತ್ಪಾದಿಸಿದ ವಸ್ತುಗಳಿಗೆ ವಿನಿಮಯ ಮಾಡಿ, ಆ ಜೇನುಬೆಲ್ಲವನ್ನು ತಂದು ನ್ಯೂ ಇಂಗ್ಲೆಂಡ್ ಮದ್ಯ ತಯಾರಕರಿಗೆ ಮಾರುತ್ತಿದ್ದರು. ಈ ಮದ್ಯ ತಯಾರಿಕಾ ಕೇಂದ್ರಗಳು ತಾವು ಕೊಂಡ ಜೇನುಬೆಲ್ಲದಿಂದ 'ರಮ್' (Rum) ಎನ್ನುವ ಮದ್ಯವನ್ನು ದೊಡ್ಡಪ್ರಮಾಣದಲ್ಲಿ ಉತ್ಪಾದನೆ ಮಾಡಲು ಪ್ರಾರಂಭಿಸಿದರು. ಕ್ರಮೇಣ ರಮ್ ತಯಾರಿಕೆ ಒಂದು ಲಾಭದಾಯಕ ಕೈಗಾರಿಕೆಯಾಗಿ ಬೆಳೆಯಿತು. ವಸಾಹತುಗಳಲ್ಲಿ ಮಾರಿ ಉಳಿದ ರಮ್‌ನ್ನು ಹಡಗುಗಳಲ್ಲಿ ಆಫ್ರಿಕಕ್ಕೆ ಸಾಗಿಸಿ ಅಲ್ಲಿ ಅದನ್ನು ವಿನಿಮಯ ಮಾಡಿ ಪಡೆದ ಗುಲಾಮರನ್ನು ಹಡಗುಗಳಲ್ಲಿ ಪಶ್ಚಿಮ ಇಂಡೀಸ್ ದ್ವೀಪಗಳಿಗೆ ಸಾಗಿಸಿ ಕಬ್ಬಿನ ಬೆಳೆಗಾರರಿಗೆ ಮಾರಿ ಹೆಚ್ಚಿನ ಲಾಭ

ಪಡೆಯುತ್ತಿದ್ದರು. ನ್ಯೂ ಇಂಗ್ಲೆಂಡಿನ ಹಲವಾರು ವರ್ತಕರು ಗುಲಾಮರನ್ನು ಮಾರುವಂತಹ ಅತಿಹೀನವಾದ ಲಾಭದಾಯಕವಾದ ವ್ಯಾಪಾರ ಮಾಡಿ ಹಣವಂತರಾದರು.

ಹೀಗೆ ವ್ಯಾಪಾರ ಉತ್ತರ ವಸಾಹತುಗಳ ಅಭಿವೃದ್ಧಿಗೆ ಕಾರಣವಾಯಿತು. ಉತ್ತರ ವಸಾಹತುಗಳಲ್ಲಿ ವ್ಯಾಪಾರಿಗಳು ಪ್ರಬಲರಾದರು. ತಮ್ಮ ಪ್ರಾಬಲ್ಯದಿಂದ ಅವರು ಮುಂದಾಳುಗಳಾಗಿ ವಸಾಹತುಗಳ ಜೀವನರೀತಿಯನ್ನು ತಮ್ಮ ಮೌಲ್ಯಗಳಿಗೆ ಅನುಗುಣವಾಗಿ ವ್ಯವಸ್ಥೆಗೊಳಿಸಿದರು. ಕಡಲಾಚೆಯ ವ್ಯಾಪಾರ ವ್ಯವಹಾರ ಉತ್ತರ ವಸಾಹತುಗಳಲ್ಲಿ ಪಟ್ಟಣಗಳು ಬೆಳೆಯಲು ಉತ್ತೇಜನ ನೀಡಿದವು. ವಿಸ್ತರಿಸುತ್ತಿದ್ದ ವ್ಯಾಪಾರದಿಂದ ಬಾಸ್ಟನ್, ಫಿಲಡೆಲ್ಫಿಯ ಮತ್ತು ನ್ಯೂಯಾರ್ಕ್‌ಗಳು ವ್ಯಾಪಾರಕೇಂದ್ರಗಳಾಗಿ ಅಭಿವೃದ್ಧಿ ಹೊಂದಿದವು. ಈ ಕೇಂದ್ರಗಳಿಗೆ ಯೂರೋಪಿನಲ್ಲಿ ತಯಾರಾದ ಪದಾರ್ಥಗಳನ್ನು ಮತ್ತು ಭೋಗ-ವಿಲಾಸ ವಸ್ತುಗಳನ್ನು ಹಡಗುಗಳು ತಂದು ಅಂಗಡಿಗಳನ್ನು ತುಂಬಿಸುತ್ತಿದ್ದವು. ಇದಕ್ಕೆ ಬದಲಾಗಿ ಉತ್ತರದ ವಸಾಹತುಗಳು ಧಾನ್ಯಗಳು, ನುಣುಪು ಕೂದಲಿನ ಚರ್ಮಗಳು ಮತ್ತು ಮರದ ದಿಮ್ಮಿಗಳನ್ನು ಯೂರೋಪಿಗೆ ರಫ್ತು ಮಾಡುತ್ತಿದ್ದವು.

ವಸಾಹತುಗಳ ಕಾಲದ ಎಲ್ಲಾ ಪಟ್ಟಣಗಳಲ್ಲಿ ಕೊಳಚೆ, ಗಲೀಜು, ಜನದಟ್ಟಣೆ ಸಾಮಾನ್ಯವಾಗಿದ್ದವು. ರೇವುಪಟ್ಟಣಗಳಲ್ಲಿ ರಜೆಯ ಮೇಲಿದ್ದ ನಾವಿಕರು ಮತ್ತು ಇತರ ವಿಲಾಸಪ್ರಿಯರು ತುಂಬಿರುತ್ತಿದ್ದರು. ಕುಡಿತ, ಸೂಳೆಗಾರಿಕೆ, ಕಳ್ಳತನ ಮತ್ತು ಹಿಂಸಾಚಾರಗಳು ನಡೆಯುತ್ತಿದ್ದವು. ಪಟ್ಟಣಗಳು ಅಮೆರಿಕ ವಸಾಹತುಗಳ ಜ್ಞಾನಕೇಂದ್ರಗಳಾಗಿದ್ದವು. ಇಂಗ್ಲೆಂಡಿನ ಪುಸ್ತಕಗಳು, ಯೂರೋಪಿಯನ್ನರ ಚಿಂತನೆಗಳು. ಅಲೋಚನೆಗಳು ಮತ್ತು ಅಭಿಪ್ರಾಯಗಳು ಈ ರೇವು ಪಟ್ಟಣಗಳ ಮೂಲಕವೇ ಅಮೆರಿಕ ತಲುಪುತ್ತಿದ್ದವು. ಈ ಪಟ್ಟಣಗಳಲ್ಲಿ ನಾನಾ ಪ್ರಾಂತದ ಜನರು ಕೂಡಿ ವಿಚಾರ ವಿನಿಮಯ ನಡೆಸುತ್ತಿದ್ದರು. ವಿಚಾರ ವಿನಿಮಯದಿಂದ ಬಹುಶಃ ಮೊದಲಬಾರಿಗೆ ತಮ್ಮ ಸಾರ್ವಜನಿಕ ಆಸಕ್ತಿಗಳ ಅರಿವಾಗಿರಬೇಕು. ಆಗ ಅವರಿಗೆ 'ನಾವು', 'ನಮ್ಮವರು' ಎನ್ನುವ ಭಾವನೆ ಅಸ್ಪಷ್ಟವಾಗಿ ಮೂಡಿರಬಹುದು. ನಾವು ಅಮೆರಿಕ ವಸಾಹತುಗಳಲ್ಲಿ ನೆಲಸಿದವರು. ನಮ್ಮ ಆಸಕ್ತಿಗಳು – ಇಂಗ್ಲಿಷರ ಅಥವಾ ಯೂರೋಪಿಯನ್ನರ ಆಸಕ್ತಿಗಳಲ್ಲ, ನಮ್ಮದು ವಿಶಿಷ್ಟ ಅಮೆರಿಕನ್ನರ ಆಸಕ್ತಿಗಳು ಎನ್ನುವ ಭಾವನೆಯ ಬೀಜಾಂಕುರವಾಗಿರಬಹುದು.

ವಸಾಹತುಗಳಲ್ಲಿ ಭೂವಿತರಣೆ ಮತ್ತು ಸಮುದಾಯ ವ್ಯವಸ್ಥೆ

ಉತ್ತರದ ವಸಾಹತುಗಳಲ್ಲಿ ವ್ಯಾಪಾರ ಅತಿಮುಖ್ಯವಾಗಿದ್ದರೂ ಸ್ವಂತ ಸಾಗುವಳಿ ಮಾಡುವ ರೈತನೇ ವಸಾಹತಿನ ಬೆನ್ನುಮೂಳೆಯಾಗಿದ್ದ. ರೈತ ಸ್ವಂತ ಹಿಡುವಳಿ ಪಡೆಯಲು ಅನುಸರಿಸಬೇಕಾದ ವಿಧಾನಗಳು ದಕ್ಷಿಣ ವಸಾಹತುಗಳಲ್ಲಿ ಜಾರಿಯಲ್ಲಿದ್ದ ವಿಧಾನಗಳಿಗಿಂತ ಬೇರೆಯಾಗಿರಲಿಲ್ಲ. ಪೆನ್ಸಿಲ್‌ವೇನಿಯ ಮತ್ತು ನ್ಯೂ ಜರ್ಸಿಗಳಲ್ಲಿ 'ತಲೆ ಹಕ್ಕು' ವ್ಯವಸ್ಥೆ ಜಾರಿಯಲ್ಲಿತ್ತು. ಭೂಮಾಲಿಕರು ಸರಳ ಕರಾರಿನ ಮೇಲೆ ಜಮೀನು ಹಂಚುತ್ತಿದ್ದುದರಿಂದ

೧೮ನೆಯ ಶತಮಾನದ ವಲಸೆಗಾರರು ಪೆನ್ಸಿಲ್‌ವೇನಿಯ ಪ್ರದೇಶಕ್ಕೆ ಹೋಗಲು ಹಾತೊರೆಯುತ್ತಿದ್ದರು. ನ್ಯೂಯಾರ್ಕ್ ಪ್ರದೇಶವಲ್ಲಿ ಗೇಣಿದಾರ ಪದ್ಧತಿಯು ಇನ್ನೂ ಜಾರಿಯಲ್ಲಿತ್ತು.

ನ್ಯೂ ಇಂಗ್ಲೆಂಡ್ ವಸಾಹತುಗಳಲ್ಲಿ ಸಮುದಾಯದ ಹಿತಾಸಕ್ತಿಗಳಿಗೆ ಅನುಸಾರವಾಗಿ ಜಮೀನು ವಿತರಣೆ ಮಾಡುತ್ತಿದ್ದರು. ಇದು ಅಲ್ಲಿಯ ಸಾರ್ವಜನಿಕ ವ್ಯವಸ್ಥೆಯ ಮೇಲೆ ತೀವ್ರ ಪರಿಣಾಮ ಬೀರಿತು. ನ್ಯೂ ಇಂಗ್ಲೆಂಡ್ ವಸಾಹತುಗಳಲ್ಲಿ ಬೇಸಾಯವಾಗದ ಎಲ್ಲ ಭೂಮಿಯನ್ನು ಸರ್ಕಾರದ ಸ್ವತ್ತಾಗಿ ಪರಿಗಣಿಸಲಾಗುತ್ತಿತ್ತು. ಒಬ್ಬ ಅರ್ಜಿದಾರನಿಗೆ ಜಮೀನು ದತ್ತಿ ಕೊಡುವುದರ ಬದಲು, ಸರ್ಕಾರ ಹಲವು ಸಮುದಾಯಗಳಿಗೆ ಒಟ್ಟಿಗೆ ೩೬ ಚದರಮೈಲಿ ಸುತ್ತಳತೆಯ 'ಊರು-ಕೇರಿ' (Townships)ಗಳನ್ನು ದತ್ತಿ ಕೊಡುತ್ತಿದ್ದರು. ದತ್ತಿ ಪಡೆದ ಮೇಲೆ ಈ ಊರುಗಳ ಮಾಲೀಕರು ಒಂದು ಸೂಕ್ತವಾದ ಜಾಗವನ್ನು ಆರಿಸಿ ಅಲ್ಲಿ ಒಂದು ಕೇರಿಯನ್ನು ಸ್ಥಾಪಿಸುತ್ತಿದ್ದರು. ಈ ಕೇರಿಯ ಸುತ್ತಲೂ ಪ್ರತಿ ಕುಟುಂಬ ಸೂಕ್ತವಾದ ಜಮೀನನ್ನು ಆರಿಸಿಕೊಂಡು ಅದರಲ್ಲಿ ತಮ್ಮ ಮನೆ ಕಟ್ಟಿಕೊಂಡು, ಸಾಕಷ್ಟು ದೊಡ್ಡದಾದ ತರಕಾರಿ ತೋಟವನ್ನು ಬೆಳೆಸಬೇಕಾಗಿತ್ತು. ಹಲವು ಕೇರಿಗಳು ಸೇರಿ ಒಂದು ಹಳ್ಳಿಯಾಗುತ್ತಿತ್ತು. ಈ ಹಳ್ಳಿಯಲ್ಲಿ ನೆಲಸುವವರೆಲ್ಲರೂ ಸೇರಿ ಹಳ್ಳಿಯ ಗಡಿಯಾಚೆಯ ಭೂಮಿಯನ್ನು ಸಾಗುವಳಿಗೆ ತಯಾರು ಮಾಡುತ್ತಿದ್ದರು. ಹೀಗೆ ತಯಾರಾದ ಭೂಮಿಯನ್ನು ಪಟ್ಟೆಗಳಾಗಿ ವಿಂಗಡಿಸಿ ಹಂಚುತ್ತಿದ್ದರು. ಎಲ್ಲ ಫಲವತ್ತಾದ ಭೂಮಿಯನ್ನು ಒಬ್ಬನಿಗೆ ಸೇರುವುದನ್ನು ತಪ್ಪಿಸಲು ಹೀಗೆ ಮಾಡುತ್ತಿದ್ದರು. ಪ್ರತಿ ಕುಟುಂಬಕ್ಕೆ ಅದರ ಅಗತ್ಯಗಳನ್ನು ಪೂರೈಸಲು ಸಾಕಾಗುವಷ್ಟು ಭೂಮಿಯನ್ನು ಮಾತ್ರ ಕೊಡುತ್ತಿದ್ದರು. ಕೆಲವು ಪ್ರತಿಷ್ಠಿತ ಕುಟುಂಬಗಳಿಗೆ ಮತ್ತು ಸ್ಥಳೀಯ ಚರ್ಚಿನ ಪಾದ್ರಿಗೆ ವಿಶಾಲವಾದ ಭೂಮಿಯನ್ನು ಹಂಚುತ್ತಿದ್ದರು. ಬೇರೆ ಯಾರೂ ಹೆಚ್ಚಿನ ಭೂಮಿಯನ್ನು ಸೇರಿಸಿಕೊಳ್ಳು ವಂತಿರಲಿಲ್ಲ. ಭೂಮಿ ದತ್ತಿಗೆ ಕೊಟ್ಟಿದ್ದರಿಂದ ಯಾರೂ ಹಣ ಕೊಡಬೇಕಾಗಿರಲಿಲ್ಲ. ಉಳಿದ ಎಲ್ಲ ಭೂಮಿ ಇಡೀ ಸಮುದಾಯಕ್ಕೆ ಸೇರಿತ್ತು. ಅಲ್ಲಿ ನೆಲಸಿದವರಿಗೆಲ್ಲ ಆ ಭೂಮಿಯಲ್ಲಿ ತಮ್ಮ ದನಕರುಗಳನ್ನು ಮೇಯಿಸಲು, ಕಾಡಿನ ನಾಟಾ ಮತ್ತು ಇತರ ಪದಾರ್ಥಗಳನ್ನು ಉಪಯೋಗಿಸಲು ಹಕ್ಕನ್ನು ಪಡೆದಿದ್ದರು. ಈ ಹಂಚಿಕೆಯ ವ್ಯವಸ್ಥೆ ಸ್ವಲ್ಪ ಕಾಲದಲ್ಲಿಯೇ ಸಮುದಾಯಜೀವನ ಬೆಳೆಯಲು ಕಾರಣವಾಯಿತು. ಪ್ರತಿಹಳ್ಳಿ ಯಲ್ಲೂ ಒಂದು ಚರ್ಚು ಮತ್ತು ಒಂದು ಶಾಲೆ ಪ್ರಾರಂಭವಾದವು. ಹೀಗೆ ಈ ಕೇಂದ್ರದ ಸುತ್ತಮುತ್ತ ಬೇರೆ ಚಟುವಟಿಕೆಗಳೂ ನಡೆಯುತ್ತಿದ್ದವು.

ಈ ಬಗೆಯಲ್ಲಿ ಬೆಳೆದ ಊರುಗಳಲ್ಲಿ ಎಲ್ಲಾ ಬಗೆಯ ಕುಶಲ ಕಸಬುದಾರರು – ಬಡಿಗೆಯವರು, ಚಿಪ್ಪಿಗರು, ಗಾಜು ತಯಾರಿಸುವವರು, ಗಾರೆ ಕೆಲಸದವರು, ನೇಯ್ಗೆಯವರು, ಕಮ್ಮಾರರು ಮತ್ತು ಇತರ ಕೈ ಕಸುಬಿನವರು ಇರುತ್ತಿದ್ದರು. ವಿಶಿಷ್ಟ ಪರಿಣತಿ

ಮತ್ತು ತರಬೇತಿ ಪಡೆದವರು ಹೊಸ ಉದ್ಯಮ ಮತ್ತು ವ್ಯಾಪಾರ ಪ್ರಾರಂಭಿಸುತ್ತಿದ್ದರು. ಇದರಿಂದ ಬೇರೆ ಉದ್ಯಮಗಳು ಹುಟ್ಟಲು ಅವಕಾಶಗಳು ದೊರೆಯುತ್ತಿದ್ದವು. ಉದಾಹರಣೆಗೆ ಷೂ ತಯಾರಿಸುವ ಉದ್ಯಮದಿಂದ ಚರ್ಮ ಹದಮಾಡುವ ಉದ್ಯಮ ಬೆಳೆಯಲು ಅವಕಾಶವಾಯಿತು.

ಈ ಊರು-ಕೇರಿಗಳ ವ್ಯವಸ್ಥೆ ಸಮುದಾಯದ ಕ್ರಮಬದ್ಧವಾದ ಬೆಳವಣಿಗೆಗೆ ಕಾರಣವಾಯಿತು. ಹೊಸದಾಗಿ ನೆಲಸಲು ಬಂದವರನ್ನು ಊರು-ಕೇರಿಗೆ ಸೇರಿಸಿಕೊಳ್ಳಲು ಊರಿನ ಸದಸ್ಯರ ಬಹುಮತ ಬೇಕಾಗಿತ್ತು. ಊರು-ಕೇರಿಯ ವ್ಯವಸ್ಥೆ ಮೂಲತಃ ಪ್ರಜಾಸತ್ತಾತ್ಮಕವಾಗಿತ್ತು. ಸ್ಥಳೀಯ ವಿವಾದಾಂಶಗಳನ್ನು ನಗರ (ಹಲವು ಊರು-ಕೇರಿಗಳ ಕೇಂದ್ರ) ಸಭೆಯಲ್ಲಿ ಚರ್ಚಿಸಿ ಸದಸ್ಯರ ಬಹುಮತದ ಅಭಿಪ್ರಾಯದಂತೆ ನಿರ್ಣಯಿಸಲಾಗುತ್ತಿತ್ತು. ನಗರಗಳು ತಮ್ಮ ಪ್ರತಿನಿಧಿಗಳನ್ನು ವಸಾಹತುವಿನ ನ್ಯಾಯಾಂಗಕ್ಕೆ ಕಳುಹಿಸುತ್ತಿದ್ದರು. ರಾಜಕೀಯ ಅಧಿಕಾರ ಸರ್ಕಾರದಲ್ಲಿ ಕೇಂದ್ರೀಕೃತವಾಗದೆ ಅನೇಕ ಪ್ರಜಾಪ್ರತಿನಿಧಿ ಸಭೆ ಮತ್ತು ಸಮಿತಿಗಳಲ್ಲಿ ಹಂಚಿಹೋಗಿತ್ತು.

ಉತ್ತರದ ವಸಾಹತುಗಳಲ್ಲಿ ಭೂಮಿ ಯಥೇಚ್ಛವಾಗಿ ದೊರಕಿದರೂ ಅದನ್ನು ಸಾಗುವಳಿ ಮಾಡಲು ಸಾಕಷ್ಟು ಕೆಲಸಗಾರರು ಸಿಗುತ್ತಿರಲಿಲ್ಲ. ಸಮಾಜದಲ್ಲಿ ಖಚಿತವಾದ ವರ್ಗವ್ಯವಸ್ಥೆ ಇರಲಿಲ್ಲವಾದರೂ ಯಾರು ಶ್ರೀಮಂತರು, ಯಾರು ಮಧ್ಯಮವರ್ಗದವರು ಮತ್ತು ಯಾರು ಬಡವರು ಎನ್ನುವ ಅಸ್ಪಷ್ಟ ಅರಿವು ಜನರಲ್ಲಿತ್ತು. ಆದರೆ ಯೂರೋಪ್ ಮತ್ತಿತರ ಸಮಾಜದಲ್ಲಿ ಇದ್ದಂಥ ಹಕ್ಕುಬಾಧ್ಯತೆಗಳು ಇರದ ಖಾಯಂ ಊಳಿಗವರ್ಗ ಅಮೆರಿಕನ್ನರಲ್ಲಿ ಬೆಳೆದು ಬರಲಿಲ್ಲ. ಇದಕ್ಕೆ ಕಾರಣ ತಮ್ಮ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳಬೇಕೆಂದು ಹವಣಿಸುವ ಅಮೆರಿಕನ್ನರನ್ನು ಮೇರೆ ಇಲ್ಲದ ಗಡಿನಾಡು ಪ್ರದೇಶ ಸದಾ ತೆರೆದುಕೊಂಡಿದ್ದು ಆಹ್ವಾನಿಸುತ್ತಿದ್ದುದು. ವಸಾಹತುಗಳಲ್ಲಿ ಊಜಿತಗೊಳ್ಳದವರು ತಮ್ಮ ಅದೃಷ್ಟ ಹುಡುಕಿಕೊಂಡು ಗಡಿನಾಡು ಪ್ರದೇಶಕ್ಕೆ ಹೋಗಿ ಸ್ವತಂತ್ರರಾಗಿ ಬದುಕುತ್ತಿದ್ದರು. ಈ ಗಡಿನಾಡು ಹೋದಷ್ಟೂ ತೆರೆದುಕೊಳ್ಳುತ್ತಿತ್ತು! ಇಂಗ್ಲೆಂಡ್ ಮತ್ತು ಯೂರೋಪಿನಲ್ಲಿ ಜನರು ಹೋಗುವುದಕ್ಕೆ ಗಡಿನಾಡು ಇದ್ದರೆ ತಾನೆ? ಗಡಿನಾಡು ಕರೆದರೂ ಹೋಗಲು ಸ್ವಾತಂತ್ರ್ಯ ಇರದ ನತದೃಷ್ಟರೆಂದರೆ ಅಮೆರಿಕ ವಸಾಹತುಗಳಿಗೆ ಆಫ್ರಿಕದಿಂದ ಹಿಡಿದು ತಂದ ಗುಲಾಮರು. ಈ ಗುಲಾಮರು ಉತ್ತರ ವಸಾಹತುಗಳಲ್ಲೂ ಇದ್ದರು. ಆದರೆ ಗುಲಾಮರ ಅಗತ್ಯ ದಕ್ಷಿಣ ವಸಾಹತುಗಳಲ್ಲಿ ಇದ್ದಷ್ಟು ಉತ್ತರ ವಸಾಹತುಗಳಲ್ಲಿ ಇರಲಿಲ್ಲ. ಉತ್ತರದವರು ಸಾಗುವಳಿ ಮಾಡುತ್ತಿದ್ದ ಬೆಳೆಗಳಿಗೆ ಕೆಲಸಗಾರರ ತಂಡದ ಅಗತ್ಯ ಇರಲಿಲ್ಲ. ದಕ್ಷಿಣದಲ್ಲಿ ಬೆಳೆಯುವ ಭತ್ತ, ಕಬ್ಬು ಮುಂತಾದುವುಗಳಿಗೆ ಎಷ್ಟು ಕೆಲಸಗಾರರು ಇದ್ದರೂ ಸಾಲದು. ಉತ್ತರದ ವಸಾಹತುಗಳಲ್ಲಿ ಸುದೀರ್ಘವಾದ ಚಳಿಗಾಲದಲ್ಲಿ ಕೆಲಸಗಾರರ ಅಗತ್ಯ ಬಹಳ ಕಡಿಮೆ. ಈ ಕಾರಣಗಳಿಂದ ಉತ್ತರದ

ವಸಾಹತುಗಳು ಗುಲಾಮರನ್ನು ಅಧಿಕಸಂಖ್ಯೆಯಲ್ಲಿ ಕರೆತರಲಿಲ್ಲ. ಉತ್ತರ ಪ್ರಾಂತಗಳಲ್ಲಿದ್ದ ಕರಿಯರು, ಗುಲಾಮರಾಗಲಿ ಅಥವಾ ಸ್ವತಂತ್ರರಾಗಲಿ, ಮನೆಗೆಲಸದ ಸೇವಕರಾಗಿ ಕೆಲಸ ಮಾಡುತ್ತಿದ್ದರು. ಇನ್ನು ಕೆಲವರು ಪೇಟೆ ಪಟ್ಟಣಗಳಲ್ಲಿ ಕೀಳು ಕಸುಬುಗಳನ್ನು – ಬೀದಿ ಗುಡಿಸುವುದು, ಕಸ ಎತ್ತುವುದು ಮುಂತಾದವು – ಮಾಡಿಕೊಂಡಿದ್ದರು. ದಕ್ಷಿಣದ ಪ್ಲಾನ್‌ಟೇಶನ್ ಗುಲಾಮರಿಗೆ ಹೋಲಿಸಿದರೆ ಉತ್ತರದಲ್ಲಿದ್ದ ಗುಲಾಮರ ಕೆಲಸ ಸುಲಭವಾಗಿತ್ತು. ಇದರಿಂದ ಉತ್ತರದ ಮಾಲೀಕರು ಹೆಚ್ಚು ದಯಾಳುಗಳಗಿದ್ದರೆಂದು ಭಾವಿಸಿದರೆ ತಪ್ಪಾಗುತ್ತದೆ. ಉತ್ತರ ವಸಾಹತುಗಳವರು ಕರಿಯರ ಬಗ್ಗೆ ದಕ್ಷಿಣದವರಂತೆ ಪೂರ್ವಾಗ್ರಹ ಮತ್ತು ತಪ್ಪು ಭಾವನೆಗಳನ್ನು ಬೆಳೆಸಿಕೊಂಡಿದ್ದರು. ಕರಿಯರು ಏನಾದರೂ ತಪ್ಪು ಮಾಡಿದರೆ ಅಥವಾ ಅವರು ಮಾಡಿದ್ದು ತಪ್ಪಲ್ಲದಿದ್ದರೂ ತಪ್ಪು ಎಂದು ಬಿಳಿಯರು ಭಾವಿಸಿದರೆ ಸಾಕು, ತಪ್ಪು ಮಾಡಿದ ಕರಿಯರಿಗೆ ಕಠಿಣ ಮತ್ತು ಕ್ರೂರವಾದ ಶಿಕ್ಷೆಗಳನ್ನು ವಿಧಿಸುತ್ತಿದ್ದರು. ಈ ಶಿಕ್ಷೆಗಳು ಕಠೋರತೆಯಲ್ಲಿ ಮತ್ತು ಕ್ರೂರತನದಲ್ಲಿ ದಕ್ಷಿಣದವರು ಕೊಡುತ್ತಿದ್ದ ಶಿಕ್ಷೆಗಳಿಗೆ ಯಾವ ತರದಲ್ಲೂ ಕಡಿಮೆಯಾಗಿರಲಿಲ್ಲ. ೧೭೧೨ರಲ್ಲಿ ನ್ಯೂಯಾರ್ಕ್ ನಗರದ ಗುಲಾಮರು ದಂಗೆ ಎದ್ದುದರ ಪರಿಣಾಮವಾಗಿ ಒಂಬತ್ತು ಜನ ಬಿಳಿಯರು ಸತ್ತರು. ಬಿಳಿಯರ ಸಾವಿನ ಮುಯ್ಯಿ ತೀರಿಸಲು ಅಧಿಕಾರಿಗಳು ೧೩ ಗುಲಾಮರನ್ನು ನೇಣುಗಂಬಕ್ಕೆ ಏರಿಸಿದರು, ನಾಲ್ಕು ಗುಲಾಮರನ್ನು ಜೀವಸಹಿತ ಸುಟ್ಟುಹಾಕಿದರು, ಒಬ್ಬ ಗುಲಾಮನನ್ನು ಸಣ್ಣ ಬೆಂಕಿಯಲ್ಲಿ ಜೀವಸಹಿತ ಬೇಯಿಸಿ ಕೊಂದರು. ಮತ್ತೊಬ್ಬನನ್ನು ದೊಡ್ಡ ಚಕ್ರಕ್ಕೆ ಬಿಗಿದು ಕಟ್ಟಿ, ಚಕ್ರ ತಿರುಗಿಸಿ ಅವನ ಮೈ ಮೂಳೆಗಳನ್ನು ಮುರಿದು ಸಾಯಿಸಿದರು. ಕಡೆಗೆ ಒಬ್ಬನನ್ನು ಸರಪಳಿಗಳಿಂದ ಕಂಬಕ್ಕೆ ಬಿಗಿದು ಕಟ್ಟಿ ಅನ್ನ ನೀರಿಲ್ಲದೆ ಸಾಯುವಂತೆ ಮಾಡಿದರು!

ವಸಾಹತುಗಳ ಮೇಲೆ ಪ್ಯೂರಿಟನ್ನ ಪಂಥದ ಪ್ರಭಾವ

ಪರಿಶುದ್ಧ ಮತ, ಮತಧರ್ಮವೂ ಹೌದು; ಒಂದು ವಿಧವಾದ ವೈಚಾರಿಕತೆಯೂ ಹೌದು. ಅದು ಮತಧರ್ಮವಾಗಿ, ವೈಚಾರಿಕತೆಯಾಗಿ ನ್ಯೂ ಇಂಗ್ಲೆಂಡ್ ಜೀವನದ ಎಲ್ಲ ಅಂಶಗಳನ್ನೂ ವ್ಯಾಪಿಸಿಕೊಂಡಿತ್ತು. ಪರಿಶುದ್ಧರು ಅಮೆರಿಕಕ್ಕೆ ಬಂದಿದ್ದು ಒಂದು 'ಪರಿಶುದ್ಧವಾದ' ಚರ್ಚನ್ನು ಸ್ಥಾಪಿಸುವ ಸಲುವಾಗಿ. ಪರಿಶುದ್ಧರ ನಂಬಿಕೆಯ ಪ್ರಕಾರ – ಮನುಷ್ಯ ಮೂಲತಃ ಪಾಪಿಷ್ಠ. ಅವನ ಉದ್ಧಾರ ದೇವರ ಕೃಪೆಯಿಂದ ಮಾತ್ರ ಸಾಧ್ಯ. ದೇವರ ಕೃಪೆ ಎಲ್ಲರಿಗೂ ಸುಲಭವಾಗಿ ಸಿಗುವುದಿಲ್ಲ. ಮಾನವ ಜನಾಂಗದ ಬಹುಸಂಖ್ಯಾತರು ನರಕದ ಬೆಂಕಿಯಲ್ಲಿ ನಿರಂತರವಾಗಿ ಬೇಯುವುದು ಅವರ ಹಣೆಬರಹ. ಪ್ರತಿಯೊಬ್ಬ ಮನುಷ್ಯನ ಅದೃಷ್ಟವನ್ನು ದೇವರು ಮೊದಲೇ ನಿರ್ಧರಿಸುತ್ತಾನೆ. ಸರ್ವಜ್ಞನಾದ ದೇವರಿಗೆ ಪ್ರತಿಯೊಂದು ಆತ್ಮದ ಭವಿಷ್ಯವೂ ಗೊತ್ತಿರುತ್ತದೆ. ಆದರೂ ಜೀವನದಲ್ಲಿ ಜನರು ನಿರಾಶರಾಗಬಾರದು. ಮಾನವರು ಉದ್ಧಾರವಾಗಲು ಪ್ರಯತ್ನ ಪಡುವುದನ್ನು ಬಿಡಬಾರದು.

ದೇವರ ಆಶೀರ್ವಾದಗಳು ಭೌತಿಕವಾಗಿರಬಹುದು ಅಥವಾ ಪಾರಮಾರ್ಥಿಕ ವಾಗಿರಬಹುದು. ಪ್ರಾಪಂಚಿಕ ವಸ್ತುಗಳಾದ ಹಣ, ಆಸ್ತಿ ಪಾಸ್ತಿ, ವಸ್ತ್ರ ಒಡವೆಗಳು, ಉಪಕರಣಗಳು, ಮನೆ, ಅಂತಸ್ತು, ಕೀರ್ತಿ, ಅಧಿಕಾರ ಇವುಗಳನ್ನು ಹೆಚ್ಚಿಗೆ ಪಡೆಯುವು ದರಲ್ಲಿ ಯಾರು ಯಶಸ್ವಿಯಾಗುತ್ತಾರೊ ಅವರು ಪಾರಮಾರ್ಥಿಕವಾಗಿ ಉದ್ಧಾರ (Salvation) ವಾಗುತ್ತಾರೆ ಎನ್ನುವುದರ ಸಂಕೇತ. ಪ್ರಾಪಂಚಿಕ ವಸ್ತುಗಳನ್ನು ಗಳಿಸಲು ಕಷ್ಟ ಪಟ್ಟು ದುಡಿಯಬೇಕು, ದುಂದು ವೆಚ್ಚ ಮಾಡಬಾರದು ಮತ್ತು ಕೆಲಸದ ಮೇಲೆ ಸದಾ ಶ್ರದ್ಧೆ ಇಟ್ಟಿರಬೇಕು. ಯಾರು ಈ ಗುಣಗಳನ್ನು ಬೆಳೆಸಿಕೊಳ್ಳುತ್ತಾರೋ ಅವರು ಇಹ-ಪರಗಳನ್ನು ಸಾಧಿಸುತ್ತಾರೆ.

ಪ್ರಾಪಂಚಿಕ ಸಾಧನೆ ಮತ್ತು ಯಶಸ್ಸು ಪಾರಮಾರ್ಥಿಕ ಉದ್ಧಾರದ ಚಿಹ್ನೆ ಮಾತ್ರ, ಭರವಸೆ ಅಲ್ಲ. ದೇವರ ಕೃಪೆಗೆ ಪಾತ್ರನಾದವನು ಮಹತ್ತರವಾದ ಅಲೌಕಿಕ ಭಾವನೆಗಳನ್ನು ಅನುಭವಿಸುತ್ತಾನೆ. ದೇವರನ್ನು ಸಂಪರ್ಕಿಸಿದ ಸಂಕೇತವಾಗಿ ಅವನಲ್ಲಿ ಆಧ್ಯಾತ್ಮಿಕ ಚಿಹ್ನೆಗಳು ತೋರಿಬರುತ್ತವೆ. ಅಂಥ ಅನುಭವಗಳನ್ನು ಹೊಂದಿದವರು ಆ ಅನುಭವಗಳನ್ನು ಘೋಷಿಸಬೇಕಾಗಿತ್ತು, ಮತ್ತು ತಮಗಾದ ಅನುಭವಗಳು ಅಪ್ಪಟವಾದವು, ನಿಷ್ಕಪಟ ವಾದವು ಎಂದು ಅಲ್ಲಿ ಸೇರಿರುವವರಿಗೆ ಸಾಬೀತು ಮಾಡಿದರೆ ಮಾತ್ರ ಅವರನ್ನು ಚರ್ಚ್ ಸದಸ್ಯರನ್ನಾಗಿ ಚುನಾಯಿಸುತ್ತಿದ್ದರು.

ಮೆಸಾಚ್ಯುಸೆಟ್ಸ್ ಕೊಲ್ಲಿ ಮತ್ತು ಉಳಿದ ನ್ಯೂ ಇಂಗ್ಲೆಂಡ್ ಪ್ರಾಂತದಲ್ಲಿ (ರ್‍ಹೋಡ್ ಐಲೆಂಡ್ ಬಿಟ್ಟು) ಸರ್ಕಾರ ಮತ್ತು ಚರ್ಚ್‌ಗಳ ನಡುವೆ ನಿಕಟವಾದ ಸಂಬಂಧವಿತ್ತು. ಈ ಸಂಬಂಧ ಸರ್ಕಾರ ಚರ್ಚಿಗೆ ಆರ್ಥಿಕ ನೆರವು ನೀಡುವುದಕ್ಕೆ ಸೀಮಿತವಾಗದೆ ಮತಧರ್ಮದ ಎಲ್ಲ ವಿಷಯಗಳಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸುವ ಪರಿಸ್ಥಿತಿ ಉಂಟಾಗಿತ್ತು. ವಸಾಹತುಗಳ ಪ್ರಾರಂಭದಲ್ಲಿ ಮೆಸಾಚ್ಯುಸೆಟ್ಸ್‌ನಲ್ಲಿ ಚರ್ಚ್ ಹಾಜರಿ ಕಡ್ಡಾಯವಾಗಿತ್ತು. ನ್ಯಾಯಾಧೀಶರು ಲೌಕಿಕ (Civil) ಕಾಯಿದೆಗಳನ್ನಲ್ಲದೆ ನೀತಿನಿಯಮಗಳನ್ನು ಬಲವಂತ ವಾಗಿ ಜಾರಿಗೆ ತರುತ್ತಿದ್ದರು. ಹಾಗೆಯೆ ಪಾದ್ರಿಗಳು ಮತಧರ್ಮಕ್ಕೆ ಸಂಬಂಧಪಡದ ವಿಷಯಗಳಲ್ಲಿ ಕೈಹಾಕುತ್ತಿದ್ದರು. ಅವರು ನ್ಯಾಯಾಧೀಶರಿಗೆ ಬುದ್ಧಿವಾದ ಹೇಳುವುದರಿಂದ ಹಿಡಿದು ಎಲ್ಲ ಸಾಮಾಜಿಕ ಚಟುವಟಿಕೆಗಳ ಮೇಲ್ವಿಚಾರಣೆ ಮಾಡುವುದು ಮತ್ತು ಎಲ್ಲ ವಿಷಯಗಳ ಮೇಲೆ ತಮ್ಮ ನಂಬಿಕೆಗೆ ಅನುಗುಣವಾಗಿ ವ್ಯಾಖ್ಯಾನ ಮಾಡುವುದರವರೆಗೆ ಲೌಕಿಕ ವ್ಯವಹಾರಗಳಲ್ಲಿ ತೊಡಗಿರುತ್ತಿದ್ದರು.

ಹದಿನೇಳನೆಯ ಶತಮಾನದ ಕ್ರೈಸ್ತರಿಗೆ ಪರಮತ ಸಹಿಷ್ಣುತೆಯೆಂದರೆ ಏನೆಂದು ಗೊತ್ತಿರಲಿಲ್ಲ. ತಮ್ಮಂತೆಯೆ ನಂಬದಿರುವವರನ್ನು ಯಾವ ವಸಾಹತಿನವರೂ ಸಹಿಸುತ್ತಿರ ಲಿಲ್ಲ. ಭಿನ್ನಾಭಿಪ್ರಾಯ ಉಳ್ಳವರ ಮೇಲೆ ಪರಿಶುದ್ಧರು ಕ್ಷುದ್ರರಾಗಿ ವರ್ತಿಸುತ್ತಿದ್ದರು. ೧೬೭೦ರಲ್ಲಿ ಮೆಸಾಚ್ಯುಸೆಟ್ಸ್ ಕೊಲ್ಲಿಯ ವಸಾಹತುಗಾರರಲ್ಲಿ ಅರ್ಧಕ್ಕಿಂತಲೂ ಹೆಚ್ಚು

ಜನರು ಇಹ-ಪರಗಳೆರಡನ್ನೂ ಕಳೆದುಕೊಂಡವರಾಗಿದ್ದರು. ಅಂದರೆ, ಅವರನ್ನು ಚರ್ಚ್ ಸದಸ್ಯತ್ವದಿಂದ ತೆಗೆದುಹಾಕಿದ್ದರು. ಇದರಿಂದಾಗಿ ಅವರು ಚುನಾವಣೆಗಳಲ್ಲಿ ಮತ ಚಲಾಯಿಸುವ ಹಕ್ಕನ್ನು ಕಳೆದುಕೊಂಡಿದ್ದರು. ಶ್ರದ್ಧೆಯಿಂದ ನಂಬಿದವರಿಗೂ 'ಪರಿಶುದ್ಧಮತ' ಒಂದು ಕಟ್ಟುಗ್ರವಾದ, ಯಾರನ್ನೂ ಬೆಳೆಯಗೊಡದೆ ತಡೆಯುವ, ವಿಪರೀತ ಮಡಿವಂತಿಕೆಯ ಮತಧರ್ಮವಾಗಿ ತೋರಿತು. ಪರಿಶುದ್ಧರಲ್ಲಿ ಅನೇಕರು ಸಂಕುಚಿತ ಮನೋಭಾವ, ಮನೋವಿಕಾರವನ್ನು ಹೋಲುವ ನಿರ್ದಯತೆ ಮತ್ತು ಗಡಸುತನ, ಹಾಗೂ ಪಾಪ(sin)ದ ಬಗ್ಗೆ ಸದಾ ಚಿಂತಿಸುವ ವ್ಯಾಕುಲಚಿತ್ತರಾಗಿದ್ದರು. ಇದು ಪರಿಶುದ್ಧಮತದ ಒಂದು ಮುಖ.

ಈ ಮತದ ಇನ್ನೊಂದು ಮುಖ ಅದರ ಕ್ರಿಯಾತ್ಮಕತೆಯನ್ನು ತೋರಿಸುತ್ತದೆ. ವೈಚಾರಿಕತೆ ಇದರ ಮುಖ್ಯ ಲಕ್ಷಣ. ಪರಿಶುದ್ಧರು ತಮ್ಮ ನಂಬಿಕೆಗಳನ್ನು ಕೂಲಂಕಷವಾಗಿ ಪರೀಕ್ಷಿಸಿ ಅವುಗಳು ತರ್ಕಬದ್ಧವಾಗಿವೆಯೆ ಮತ್ತು ಪವಿತ್ರಗ್ರಂಥ ಸಮ್ಮತವಾಗಿದೆಯೆ ಎಂದು ತಿಳಿದುಕೊಳ್ಳಲು ಪ್ರಯತ್ನಪಟ್ಟರು. ಕುರುಡು ನಂಬಿಕೆ ಮತ್ತು ಸರಳ ನಿರೂಪಣೆಗಳನ್ನು ಅವರು ನಿರಾಕರಿಸಿದರು. ಅಜ್ಞಾನವನ್ನು ಅವರು ಖಂಡಿಸಿದರು. ಪ್ರಕೃತಿಯ ಅಡೆತಡೆಗಳನ್ನು ಕಡೆಗಣಿಸಿ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಿದರು. ಪ್ರತಿಯೊಬ್ಬನೂ ಬೈಬಲ್ಲನ್ನು ತಾನೇ ಓದಿ ಅರ್ಥ ಮಾಡಿಕೊಳ್ಳುವಂತಾಗಬೇಕು ಎನ್ನುವುದು ಅವರ ಧೋರಣೆ. ಚರ್ಚಿನ ಅಧಿಕಾರಿಗಳು, ಮುಖ್ಯವಾಗಿ ಪಾದ್ರಿಗಳು ಮತ್ತು ಉಪದೇಶಿಗಳು ವಿದ್ಯಾವಂತರಾಗಿರಲೇಬೇಕೆಂದು ಒತ್ತಾಯ ಮಾಡಿದರು. ಅವರೇ ಅವಿದ್ಯಾವಂತರಾದರೆ ಬೇರೆಯವರಿಗೆ ಅವರು ಮಾರ್ಗದರ್ಶನ ಮಾಡುವುದು ಹೇಗೆ? ಇವರು ವಿದ್ಯೆಗೆ ಬಹುಮುಖ್ಯ ಸ್ಥಾನ ಕೊಟ್ಟರು. ಬಾಸ್ಟನ್ ನಗರವನ್ನು ಸ್ಥಾಪನೆ ಮಾಡಿದ ಆರು ವರ್ಷಗಳ ಒಳಗೆ ಪರಿಶುದ್ಧರು ಹಾರ್ವರ್ಡ್ ಕಾಲೇಜನ್ನು ಸ್ಥಾಪಿಸಿದರು. ಇದು ವಸಾಹತುಗಳ ಚರಿತ್ರೆಯಲ್ಲಿ ಜರುಗಿದ ಒಂದು ಅತಿ ಮಹತ್ವದ ಸಾಧನೆ.

ಅಮೆರಿಕದ ರಾಜಕೀಯ ಸಂಸ್ಥೆಗಳ ಬೆಳವಣಿಗೆಗೆ ಪರಿಶುದ್ಧರು ಮಹತ್ತರ ಕೊಡುಗೆ ನೀಡಿದ್ದಾರೆ. ಅವರ ರಾಜಕೀಯ ತತ್ವಗಳಲ್ಲಿ ಮೊದಲನೆಯದು, ಮಿತವಾದ ಸರ್ಕಾರ (Limited Government) ಮನುಷ್ಯರು ಮೂಲತಃ ಪಾಪಿಷ್ಠರಾದ್ದರಿಂದ ಅವರ ಕೈಗೆ ಹೆಚ್ಚಿಗೆ ಅಧಿಕಾರ ಕೊಡಬಾರದು. ಎರಡನೆಯದು ಸ್ವಯಂ ಆಡಳಿತ. ಸ್ವತಂತ್ರರಾದ ಜನರು ತಮ್ಮನ್ನು ತಾವೇ ಆಳಿಕೊಳ್ಳುವ ಜವಾಬ್ದಾರಿ, ಹೊಣೆಗಾರಿಕೆ ಬೆಳೆಸಿಕೊಳ್ಳಬೇಕು. ಮೂರನೆಯದು, ವ್ಯಕ್ತಿ ವೈಶಿಷ್ಟ್ಯ ಹಾಗೂ ಸ್ವಾತಂತ್ರ್ಯ. ಪ್ರತಿಯೊಬ್ಬನೂ ಬೈಬಲ್ ಸ್ವತಃ ಓದಿ ವ್ಯಾಖ್ಯಾನ ಮಾಡುವಂತಿರಬೇಕು. ನಾಲ್ಕನೆಯದು, ಸಮುದಾಯಕ್ಕೆ ಸದಸ್ಯರನ್ನು ಸಾರ್ವಜನಿಕರ ಹಿತಕ್ಕಾಗಿ ನಿಯಂತ್ರಿಸುವ ಹಕ್ಕು ಇರಬೇಕು. ಈ ತತ್ವಗಳಲ್ಲಿ ಅಡಗಿರುವ ಅಸಮಂಜಸತೆಗಳು ಪರಿಹರಿಸಲಾಗದ ಸಮಸ್ಯೆಗಳಿಗೆ ಕಾರಣವಾಗಿವೆ. ತಾವು 'ಅವಿಷ್ಟ'

ಎಂದು ಪರಿಗಣಿಸಿದ ಕಾನೂನುಗಳಿಗೆ ವಿಧೇಯರಾಗಿರಬೇಕಾದುದು ಜನರ ನೀತಿಯುತವಾದ ಕರ್ತವ್ಯವೆ? ವ್ಯಕ್ತಿ ಸ್ವಾತಂತ್ರ್ಯ ಮುಖ್ಯವೊ? ಅಥವಾ ಬಹುಮತದವರ ಅಭಿಪ್ರಾಯ ಮುಖ್ಯವೊ? ಇಂತಹ ಪ್ರಶ್ನೆಗಳು ನ್ಯೂ ಇಂಗ್ಲೆಂಡ್ ವಸಾಹತಿನಲ್ಲಿ ಉಂಟುಮಾಡಿದ ಉದ್ವೇಗ, ವಾಗ್ವಾದಗಳು ಮತ್ತು ಘರ್ಷಣೆಗಳು ಅಮೆರಿಕದ ಇತಿಹಾಸದುದ್ದಕ್ಕೂ ಉಳಿದು ಬಂದಿವೆ. ಚರ್ಚ್ ಸುತ್ತಲೂ ಬೆಳೆದು ಬಂದಿದ್ದ ಸಮುದಾಯದ ಪ್ರಾಬಲ್ಯವನ್ನು ಆರ್ಥಿಕ ಅಭಿವೃದ್ಧಿ ಪರೋಕ್ಷವಾಗಿ ಕುಗ್ಗಿಸಿತು. ಅಸಹಿಷ್ಣುತೆಯ ಕಾರಣದಿಂದ ಬೇರೆ ಕಡೆಗಳಿಂದ ಈ ವಸಾಹತಿಗೆ ವಲಸೆಗಾರರು ಬರಲು ಹಿಂಜರಿದರು. ಇದು ಸ್ಥಳೀಯ ಮಾರುಕಟ್ಟೆಗಳ ಬೆಳವಣಿಗೆಯನ್ನು ಕುಂಠಿತಗೊಳಿಸಿತು ಮತ್ತು ನ್ಯೂ ಇಂಗ್ಲೆಂಡ್ ವರ್ತಕರಿಗೆ ಕೆಟ್ಟ ಹೆಸರು ತಂದಿತು. ಕ್ರಮೇಣ ಪ್ರಬಲರಾಗಿದ್ದ ಚರ್ಚಿನ ಅಧಿಕಾರಿಗಳಿಗೂ ವರ್ತಕರಿಗೂ ಅಧಿಕಾರಕ್ಕಾಗಿ ಸೆಣಸಾಟ ಪ್ರಾರಂಭವಾಯಿತು. ವರ್ತಕರ ಹಣ ಮತ್ತು ಅಂತಸ್ತು, ಚರ್ಚಿನ ಅಧಿಕಾರವನ್ನು ಮತ್ತು ಪ್ರಾಮುಖ್ಯತೆಯನ್ನು ತೊಡೆದು ಹಾಕಿದವು. ವರ್ಗಕಲಹ ಗಳು ಮತ್ತು ವಲಸೆಗಾರರು ಪಶ್ಚಿಮದ ಗಡಿನಾಡನ್ನು ವಿಸ್ತರಿಸುತ್ತ ಮುಂದುವರಿಯುವುದು ವಸಾಹತಿನ ಸಾಮಾಜಿಕ ಒಗ್ಗಟ್ಟನ್ನು ಮುರಿದವು.

ಮತಧರ್ಮದಲ್ಲಿ ಆಂತರಿಕ ವಾಗ್ವಾದಗಳು ಘರ್ಷಣೆಗಳನ್ನು ಉಂಟುಮಾಡಿದವು. ಒಂದು ವಾಗ್ವಾದ ಚರ್ಚಿನ ಅಧಿಕಾರಿಗಳ ಕರ್ತವ್ಯ ಮತ್ತು ಪ್ರತಿಯೊಬ್ಬನೂ ಪವಿತ್ರ ಗ್ರಂಥವನ್ನು ಸ್ವತಃ ಓದಿ ಅರ್ಥ ಮಾಡಿಕೊಳ್ಳಬೇಕೆಂಬ ನಂಬಿಕೆಯನ್ನು ಕುರಿತದ್ದಾಗಿತ್ತು. ಪ್ರತಿಯೊಬ್ಬನೂ ಸ್ವತಃ ಬೈಬಲ್ಲನ್ನು ಅರ್ಥ ಮಾಡಿಕೊಳ್ಳುವುದಾದರೆ ಪಾದ್ರಿಗಳ ಮತ್ತು ಉಪದೇಶಿಗಳ ಪಾತ್ರವೇನು ಎನ್ನುವ ಪ್ರಶ್ನೆ ಚರ್ಚೆಗೆ ಕಾರಣವಾಯಿತು. ಇದು ಚರ್ಚನ್ನು ಬಲಹೀನಗೊಳಿಸಿತು. ಹಾಗೆಯೇ ವೈಚಾರಿಕತೆ ಮತ್ತು ಅನುಭಾವಿಕತೆ ನಡುವಣ ಘರ್ಷಣೆ. ಪರಿಶುದ್ಧ ಮತದ ಪ್ರಕಾರ ವ್ಯಕ್ತಿ ತನ್ನ ಮತವನ್ನು ಅರ್ಥ ಮಾಡಿಕೊಳ್ಳುವುದೇ ಅಲ್ಲದೆ ದೇವರ ಸಾನಿಧ್ಯವನ್ನು ಅನುಭವಿಸಬೇಕಾದುದು ಬಹಳ ಮುಖ್ಯ. ಇದು ಅರ್ಥ ಮಾಡಿಕೊಳ್ಳುವುದು ಮುಖ್ಯವೊ, ಅನುಭವಿಸುವುದು ಮುಖ್ಯವೊ ಎನ್ನುವ ಚರ್ಚೆಗೆ ಕಾರಣವಾಗಿ ಜನರು ಉತ್ತರಕ್ಕಾಗಿ ಬೇರೆ ಬೇರೆ ಪಥಗಳನ್ನು ಹಿಡಿದು ಹೋಗತೊಡಗಿದರು. ಕೆಲವರು ಯೂನಿಟೇರಿಯನ್ ಮತಾವಲಂಬಿಗಳಾದರು. ಈ ಮತ ವೈಚಾರಿಕತೆಯ ಪರಮಾವಧಿಯನ್ನು ಮುಟ್ಟಿತ್ತು. ಆದ್ದರಿಂದ ಅದು ಮತಧರ್ಮವೇ ಅಲ್ಲ ಎಂದು ಕೆಲವರು ವಾದಿಸಿದರು. ಇನ್ನು ಕೆಲವರು ಸುಲಭವಾದ ಮಾರ್ಗಗಳನ್ನು ಹಿಡಿದು ಕ್ರೈಸ್ತ ಧರ್ಮ ಪ್ರಚಾರಕ (Evangelical) ಪಂಥಗಳನ್ನು ಸೇರಿಕೊಂಡರು. ದೇವರ ಸ್ತೋತ್ರ (Hymn singing) ಮಾಡುವುದು, ಶಿಬಿರಗಳಲ್ಲಿ ಒಟ್ಟಿಗೆ ಸೇರುವುದು ಮತ್ತು ಉದ್ವೇಗಪೂರಿತವಾದ ಉಪದೇಶಗಳನ್ನು ಕೇಳುವುದು ಈ ಮತಪ್ರಚಾರಕ ಪಂಥಗಳ ಮುಖ್ಯ ಲಕ್ಷಣಗಳು.

೧೬೬೦ರಲ್ಲಿ ಎರಡನೆಯ ಚಾರ್ಲ್ಸ್ ಪಟ್ಟಕ್ಕೆ ಬಂದ ಸಮಯದಲ್ಲಿ ಸಂಪ್ರದಾಯಸ್ಥ

ಪರಿಶುದ್ಧರು ಮತಧರ್ಮದ ಮಟ್ಟ ಕುಂದುತ್ತಿರುವುದರ ಬಗ್ಗೆ ಕಳವಳಗೊಂಡಿದ್ದರು. ರಾಜನ ಅಧಿಕಾರ ಮತ್ತೆ ಪ್ರಬಲವಾಯಿತು. ರಾಜನ ಪ್ರಾಬಲ್ಯದಿಂದ ಪರಿಶುದ್ಧರಿಗೆ ಹೆಚ್ಚಿನ ತೊಂದರೆಗಳು ಉಂಟಾದವು. ೧೬೮೦ರಲ್ಲಿ ಮೆಸಾಚ್ಯುಸೆಟ್ಸ್ ಕೊಲ್ಲಿಯ ರಾಜಶಾಸನವನ್ನು ರದ್ದು ಮಾಡಲಾಯಿತು. ಎಲ್ಲ ನ್ಯೂ ಇಂಗ್ಲೆಂಡ್ ವಸಾಹತುಗಳನ್ನು ಗವರ್ನರ್ ಆಡಳಿತಕ್ಕೆ ಒಳಪಡಿಸಲಾಯಿತು. ರಾಜಶಾಸನವನ್ನು ರದ್ದುಗೊಳಿಸಿದ್ದು ಚರ್ಚಿನ ಅಧಿಕಾರಿಗಳು ರಾಜಕೀಯ ಪ್ರಭಾವವನ್ನು ಕಳೆದುಕೊಳ್ಳುವಂತೆ ಮಾಡಿತು. ಚುನಾವಣೆಯಲ್ಲಿ ಮತ ನೀಡಲು ಚರ್ಚಿನ ಸದಸ್ಯರಾಗಿರಬೇಕೆಂಬ ಅಗತ್ಯವನ್ನು ತೆಗೆದುಹಾಕಲಾಯಿತು. ಪರಿಶುದ್ಧರು ಸ್ಥಾಪಿಸಿದ ಈ ವಸಾಹತು ೧೬೯೧ರಲ್ಲಿ ರಾಜನ ಆಡಳಿತಕ್ಕೆ ಒಳಪಟ್ಟಿತು. ಆದರೂ ಈ ಮತದ ಚರ್ಚಿನ ಅಧಿಕಾರಿಗಳು ಜನರು ಚರ್ಚಿನ ಬಗ್ಗೆ ಅಸಡ್ಡೆ ತೋರದಂತೆ, ದೇವರನ್ನು ಮರೆತು ವಿಷಯಾಸಕ್ತರಾಗದಂತೆ ಮಾಡಲು ಸುಧಾರಣೆಗಳ ವಿರುದ್ಧ ಸುಧಾರಣೆ (counter reformation) ಯನ್ನು ಜಾರಿಗೆ ತಂದರು. ಇದು ಸಮಾಜವನ್ನು ಹಿಂದಿನ ಸ್ಥಿತಿಗೆ ತಿರುಗುವಂತೆ ಮಾಡುವ ಒಂದು ರೀತಿಯ ಆಂದೋಳನ. ಭಿನ್ನಾಭಿಪ್ರಾಯ ಹೊಂದಿದ ಹೆಂಗಸರನ್ನು ಮಾಟಗಾತಿಯರು ಎಂದು ಪರಿಗಣಿಸಿ ಶಿಕ್ಷೆ ವಿಧಿಸುತ್ತಿದ್ದರು. ಇದು ವಿಪರೀತಕ್ಕೆ ಹೋಗಿ, ಮನೋವಿಕಾರವಾಗಿ ಪರಿಣಮಿಸಿ, ೧೬೯೨ರಲ್ಲಿ ಸೇಲಂ ಊರಿನಲ್ಲಿ ಇಪ್ಪತ್ತು ನತದೃಷ್ಟ ಮಹಿಳೆಯರನ್ನು 'ಮಾಟಗಾತಿಯರು' ಎಂದು ತೀರ್ಮಾನಿಸಿ ಜೀವಸಹಿತ ಸುಟ್ಟುಹಾಕಿದರು! ೧೮ನೆಯ ಶತಮಾನದಲ್ಲಿ ವಸಾಹತುಗಳು ಪಶ್ಚಿಮದ ಕಡೆಗೆ ಮುಂದುವರಿದಂತೆ, ವ್ಯವಸ್ಥಿತವಾದ ಹಿಡುವಳಿಗಳು, ನಗರಗಳು ಬೆಳೆಯುತ್ತ ಬಂದಂತೆ, ಚರ್ಚಿಗೆ ಹೋಗುವವರ ಸಂಖ್ಯೆ ಕಡಿಮೆಯಾಗುತ್ತ ಬಂತು. ಚರ್ಚಿನ ಪಾದ್ರಿಗಳ, ಉಪದೇಶಿಗಳ ಗುಣಮಟ್ಟವೂ ಇಳಿಯುತ್ತ ಬಂತು. ಜನಸಾಮಾನ್ಯರಲ್ಲಿ ಮತಧರ್ಮದ ಬಗ್ಗೆ ಶ್ರದ್ಧಾಸಕ್ತಿಗಳು ಕಡಿಮೆಯಾಗುತ್ತ ಹೋದವು.

ವಸಾಹತುಗಳಲ್ಲಿ ಮಹಾಜಾಗೃತಿ

೧೮ನೆಯ ಶತಮಾನದ ಪ್ರಾರಂಭದಲ್ಲಿಯೆ ಎಲ್ಲ ವಸಾಹತುಗಳ ಜನರಲ್ಲಿ ಮತಧರ್ಮದ ಬಗ್ಗೆ ಇದ್ದ ಹುರುಪು ಮತ್ತು ಉದ್ವೇಗಗಳು ಕಡಿಮೆಯಾಗಿದ್ದವು. ಆದರೆ ಬಹುಸಂಖ್ಯಾತರ ಮತಧರ್ಮಕ್ಕೆ ಸ್ಥಳೀಯ ಸಮುದಾಯಗಳು ಬೆಂಬಲ ನೀಡಬೇಕೆನ್ನುವುದನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪಿದ್ದರು. ನಿರಂತರವಾಗಿ ಬರುತ್ತಲೇ ಇದ್ದ ವಲಸೆಗಾರರು ಬೇರೆ ಬೇರೆ ಮತಧರ್ಮಗಳು ವಸಾಹತುಗಳಲ್ಲಿ ಹರಡಲು ಕಾರಣರಾದರು. ಹಾಗೆ ಹರಡಿದ ಮತಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸಬಹುದು – ಕ್ವೇಕರ್ಸ್, ಮೆನ್ನೊನೈಟ್ಸ್, ಲೂದರನ್ಸ್, ರ್ಹೋಡ್ ಐಲೆಂಡಿನ ಬ್ಯಾಪ್ಟಿಸ್ಟರು ಹಾಗು ಸಮುದ್ರತೀರದ ಊರುಗಳಲ್ಲಿದ್ದ ಯಹೂದ್ಯರ ಮತ್ತು ಕ್ಯಾಥೊಲಿಕರ ಸಣ್ಣ ಪುಟ್ಟ ಸಮುದಾಯಗಳು. ಮತಧರ್ಮಗಳ ವೈವಿಧ್ಯ ಮತ್ತು ಆಗ ತಾನೆ ಬೆಳೆಯುತ್ತಿದ್ದ 'ವಿಚಾರೋಪಾಸನೆ' (Worship of Reason) ಕೆಲವರಲ್ಲಿ ಮತಧರ್ಮದ ಬಗ್ಗೆ ಅನುಮಾನ ಹುಟ್ಟಿಸಿದವು.

ಅನೇಕ ಪರಿಶುದ್ಧಮತದ ಚರ್ಚುಗಳನ್ನು 'ಆರ್ಮಿನಿಯನಿಸಂ' (Arminianism) ಎಂಬ ಪಂಥದವರು ಆಕ್ರಮಿಸಿಕೊಂಡು 'ನರಕಶಿಕ್ಷೆ' 'ಹಣೆಬರಹ' (Predestination) ಮುಂತಾದ ಪರಿಶುದ್ಧರ ನಂಬಿಕೆಗಳನ್ನು ಹೀಗಳೆದು, ವ್ಯಕ್ತಿಯ ಸ್ವಇಚ್ಛೆ (Free Will) ಯನ್ನು ಎತ್ತಿಹಿಡಿದು, ಸತ್ಕಾರ್ಯಗಳನ್ನು ಮಾಡುತ್ತ ಮರ್ಯಾದೆಯಿಂದ ಬದುಕಿದರೆ ಎಲ್ಲರೂ ಪಾರಮಾರ್ಥಿಕ ಉದ್ಧಾರ ಸಾಧಿಸಬಹುದು ಎಂದು ವಾದಿಸಿದರು. ಮತಧರ್ಮಗಳ ವೈವಿಧ್ಯ ಮತೀಯ ಸೌಹಾರ್ದತೆಯನ್ನು ಕೆಡಿಸಿ, ಘರ್ಷಣೆಗೆ ಕಾರಣವಾಯಿತು. ಸ್ವಾಯತ್ತತೆಯನ್ನು ಬಯಸಿದ ಕೆಲವು ಗುಂಪುಗಳು ಪಂಥಗಳಾಗಿ (Sects) ಬೆಳೆದವು. ಪ್ರತಿ ಪಂಥದವರೂ ತಮಗೆ ಎಲ್ಲವೂ ಗೊತ್ತಿದೆ, ತಾವು ನಂಬಿರುವುದೇ ಸತ್ಯ, ಮಿಕ್ಕಿದ್ದೆಲ್ಲ ಮಿಥ್ಯ ಎನ್ನುವ ಧೋರಣೆ ತಳೆದಿದ್ದರು.

೧೭೪೦ರಲ್ಲಿ ಈ ಗೊಂದಲ ಪರಿಸ್ಥಿತಿಗಳನ್ನು ಸುಧಾರಣೆ ಮಾಡುವಂಥ ಒಂದು ಸಾಮೂಹಿಕ ಆಂದೋಳನ ಜರುಗಿತು. ಇದನ್ನು 'ಮಹಾ ಜಾಗೃತಿ' (The Great Awakening) ಎಂದು ಕರೆಯುತ್ತಾರೆ. ಈ ಮಹಾಜಾಗೃತಿ ಜನಗಳಲ್ಲಿ ಸುಪ್ತವಾಗಿದ್ದ ಭಾವನೆಗಳನ್ನು ಜಾಗೃತಗೊಳಿಸಿ ಭಕ್ತಿಭಾವ ಉಕ್ಕುವಂತೆ ಮಾಡಿ ಅವರು ತಮ್ಮ ಉದ್ಧಾರಕ್ಕಾಗಿ ದೇವರನ್ನು ಮೊರೆಹೋಗುವಂತೆ ಮಾಡಿತು. ಭಕ್ತಿಯಿಂದ ಪ್ರಭಾವಿತರಾದ ಜನರು ಹೆಚ್ಚಾದಂತೆ ಇದು ಸಾಮೂಹಿಕ ಆಂದೋಳನವಾಗಿ ಪರಿಣಮಿಸಿತು. ಜನರ ಭಾವನೆಗಳನ್ನು ಉದ್ದೀಪನಗೊಳಿಸಿ, ಅವರ ಮನಸ್ಸನ್ನು ಪರಿವರ್ತಿಸುವ ಈ ಆಂದೋಳನ ಹೆಚ್ಚಾಗಿ ಯುವಜನರನ್ನು ಆಕರ್ಷಿಸಿತು. ಇದು 'ತಲೆಮಾರುಗಳ ಅಂತರ' (Generation Gap) ವನ್ನು ಸೃಷ್ಟಿಸಿತು. ಯುವಜನರು ಭಕ್ತಿಬಾವದ ಮೂಲಕ ಪಾರಮಾರ್ಥಿಕ ಉದ್ಧಾರವನ್ನು ಸಾಧಿಸುವ ವಿಧಾನವನ್ನು ಅನುಸರಿಸಿದರು. ಆದರೆ ಅವರ ಹಿರಿಯರು ಹಳೆಯ ನಂಬಿಕೆಗಳನ್ನು ಉಳಿಸಿಕೊಳ್ಳಲು ಪ್ರಯತ್ನಪಟ್ಟರು. 'ಮಹಾ ಜಾಗೃತಿ' 'ಭಕ್ತಿಭಾವ' ಗಳ ಪ್ರಭಾವವನ್ನು ಹೆಚ್ಚಿಸಿತು. ಮಹಾ ಜಾಗೃತಿಯ ಹರಿಕಾರ ಜಾರ್ಜ್ ವೈಟ್‌ಫೀಲ್ಡ್ ಎಂಬ ಉಪದೇಶಿ. ಇವನು ಅಮೆರಿಕದ ಎಲ್ಲ ಪ್ರಾಂತಗಳಿಗೆ ಭೇಟಿಕೊಟ್ಟು ಭಕ್ತಿಭಾವದ ಮಹತ್ವವನ್ನು ಮನಮುಟ್ಟುವಂತೆ ಉಪದೇಶಿಸಿದನು. ಅವನು ಪಂಥಗಳ ಸಣ್ಣತನವನ್ನು ಖಂಡಿಸಿ ದೇವರಲ್ಲಿ ನಂಬಿಕೆ ಇರುವವರೆಲ್ಲರೂ ಒಟ್ಟಾಗಬೇಕೆಂದು ಕರೆ ನೀಡಿದನು. ಸಾತ್ವಿಕರೂ ಶ್ರದ್ಧಾವಂತರೂ ಆಗಿರುವ ಕ್ರಿಶ್ಚಿಯನ್ನರೆಲ್ಲರಿಗೂ ದೇವರು ಸ್ವರ್ಗದ ಬಾಗಿಲುಗಳನ್ನು ಸದಾ ತೆರೆದಿರುತ್ತಾನೆ ಎಂದು ಭರವಸೆ ನೀಡಿದನು.

ಭಕ್ತಿಭಾವಗಳ ಉತ್ಕರ್ಷವನ್ನು ಬಹಳ ಕಾಲ ಅದೇ ಮಟ್ಟದಲ್ಲಿ ನಡೆಸಿಕೊಂಡು ಬರಲು ಆಗಲಿಲ್ಲ. ಮಹಾ ಜಾಗೃತಿಯ ಭಾವಾತಿರೇಕ ಬಹಳ ಜನರಿಗೆ ಅಸಹ್ಯವೆನಿಸಿತು. ಇದು ಅನೇಕ ಪ್ರಾರ್ಥನಾಸಭೆ (Congregations)ಗಳಲ್ಲಿ ಒಳಜಗಳಗಳನ್ನು ಉಂಟು ಮಾಡಿತು. ಸಂಪ್ರದಾಯಸ್ಥರು ಭಕ್ತಿಭಾವಗಳ ಉತ್ಕರ್ಷವನ್ನು ಪ್ರಶ್ನಿಸಿ, ದಯಾಮಯನಾದ

ದೇವರು ಮಾನವರ ಹೊಗಳಿಕೆಗೆ ಮರುಳಾಗುವುದಿಲ್ಲ ಎಂದು ವಾದಿಸಿದರು. ಮಹಾ ಜಾಗೃತಿ ಭಿನ್ನಾಭಿಪ್ರಾಯವುಳ್ಳ ಗುಂಪುಗಳಿಗೆ ಕಾರಣವಾಗಿದ್ದರೂ ಅದು ಪ್ರತ್ಯೇಕತೆಯನ್ನು ತಡೆಗಟ್ಟಿತು. ಪ್ರತ್ಯೇಕತೆಯೆಂದರೆ ಹಳೆಯ ಮತದಿಂದ ಹೊರಬಂದು ತಮ್ಮದೇ ಆದ ಪ್ರತ್ಯೇಕ ಮತವನ್ನು ಸ್ಥಾಪನೆ ಮಾಡುವುದು. ಭಿನ್ನಾಭಿಪ್ರಾಯ ಹೊಂದಿದ ಗುಂಪು ಹಳೆಯ ಮತದೊಳಗೆ ಇದ್ದುಕೊಂಡೇ ತನ್ನ ವಿಶಿಷ್ಟ ನಂಬಿಕೆ ನಡವಳಿಕೆಗೆ ಬದ್ಧವಾಗಿ ನಡೆದುಕೊಳ್ಳುತ್ತದೆ. ಜಾರ್ಜ್ ವೈಟ್‌ಫೀಲ್ಡ್ ಮತ್ತು ಆತನ ಅನುಯಾಯಿಗಳು ಪ್ರಾಟೆಸ್ಟಂಟರಲ್ಲಿ ಭಿನ್ನಾಭಿಪ್ರಾಯವುಳ್ಳ ಪಂಗಡಗಳು ಇರುವುದನ್ನು ಅನುಮೋದಿಸಿ ಬೆಂಬಲಿಸಿದರು. ಇದರಿಂದಾಗಿ ಪ್ರಾಟೆಸ್ಟಂಟರಲ್ಲಿ ಸ್ವಾಯತ್ತತೆ ಉಳ್ಳ ಪಂಗಡಗಳು (Denominations) ಬೆಳೆಯಲು ಅನುಕೂಲವಾಯಿತು. ಸ್ವಾಯತ್ತತೆಯ ಪಂಗಡವೆಂದರೆ ಪ್ರತಿ ಪಂಗಡ ತನ್ನ ವಿಶಿಷ್ಟ ಅಭಿಪ್ರಾಯಗಳು, ಪ್ರಾರ್ಥನಾರೀತಿಗಳು ಮತ್ತು ಪೂಜಾವಿಧಿಗಳನ್ನು ಅನುಸರಿಸುವ ಹಕ್ಕನ್ನು ಪಡೆದಿರುವುದು. ಹಾಗೆಯೇ ಇತರ ಪಂಗಡಗಳ ಸಮಾನ ಹಕ್ಕನ್ನು ಒಪ್ಪಿಕೊಂಡು ಅವರ ನಂಬಿಕೆ ಪ್ರಾರ್ಥನೆ ಮತ್ತು ಪೂಜೆಗಳನ್ನು ಆಚರಿಸುವ ಸ್ವಾತಂತ್ರ್ಯವನ್ನು ಅನುಮೋದಿಸುವುದು. ಪಂಗಡಗಳ ಸ್ವಾಯತ್ತತೆ ಅವುಗಳನ್ನು ಸರ್ಕಾರದ ಅವಲಂಬನೆಯಿಂದ ದೂರ ಸರಿಯುವಂತೆ ಮಾಡಿತು. ಏಕೆಂದರೆ ರಾಜಕೀಯವು ಜನರಲ್ಲಿ ಒಡಕನ್ನು ಉಂಟುಮಾಡಿ ಮತಧರ್ಮವನ್ನು ಕಲುಷಿತಗೊಳಿಸುತ್ತದೆ ಎಂದು ಅವರು ನಂಬಿದ್ದರು.

ಸರ್ಕಾರದ ಅವಲಂಬನೆಯನ್ನು ಕಳಚಿಕೊಂಡ ಚರ್ಚ್ ಪಂಗಡಗಳು ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ತಮ್ಮ ಧ್ಯೇಯ, ಧೋರಣೆ, ಚಿಂತನೆ ಮತ್ತು ವೈಚಾರಿಕತೆಗಳನ್ನು ಪರಂಪರಾಗತವಾಗುವಂತೆ ಮಾಡಿದರು. ವಿದ್ಯಾಸಂಸ್ಥೆಗಳನ್ನಲ್ಲದೆ ಅನಾಥಾಲಯಗಳು ಮತ್ತು ಅಮೆರಿಕದ ಮೂಲನಿವಾಸಿಗಳಿಗಾಗಿ ಸೇವಾಸಂಸ್ಥೆಗಳನ್ನು ಸ್ಥಾಪಿಸಿದರು. ಅವರು ಆಗ ಸ್ಥಾಪಿಸಿದ ಸಂಸ್ಥೆಗಳು ಈಗಲೂ ಹೆಸರುವಾಸಿಯಾಗಿವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಹೆಸರಿಸಬಹುದು – ಬ್ರೌನ್ ವಿಶ್ವವಿದ್ಯಾಲಯ, ಡಾರ್ಟ್‌ಮತ್ ಕಾಲೇಜು ಮತ್ತು ರಟ್ಗರ್ಸ್ ವಿಶ್ವವಿದ್ಯಾಲಯ.

ಅಮೆರಿಕನ್ ಜ್ಞಾನಪುನರುಜ್ಜೀವನ

ವಸಾಹತುಗಳ ಇತಿಹಾಸದಲ್ಲಿ ಮಹಾ ಜಾಗೃತಿ ಒಂದು ನಿಜವಾದ ರಾಷ್ಟ್ರೀಯ ಘಟನೆ. ಅದು ಆಗ ಬೆಳೆಯುತ್ತಿದ್ದ ವಸಾಹತುಗಳ ಪರಸ್ಪರ ಸಂಬಂಧಗಳ ಮೇಲೆ ಬೆಳಕು ಚೆಲ್ಲುತ್ತದೆ. ಈ ಪರಸ್ಪರ ಸಂಬಂಧಗಳೇ ಕಾಲಕ್ರಮದಲ್ಲಿ ಅಮೆರಿಕ ವಸಾಹತುಗಳನ್ನು ಒಂದು ರಾಷ್ಟ್ರವನ್ನಾಗಿ ಮಾಡಿದವು. ಉತ್ತರ, ದಕ್ಷಿಣ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ವಿಸ್ತರಿಸುತ್ತಿದ್ದ, ಪ್ರತ್ಯೇಕವಾಗಿದ್ದ ಹದಿಮೂರು ವಸಾಹತುಗಳು ಒಂದಾಗಲು ಪ್ರಯತ್ನಿಸುತ್ತಿದ್ದವು. ವಸಾಹತುಗಳ ನಡುವೆ ವ್ಯಾಪಾರ ಪ್ರಾಮುಖ್ಯ ಪಡೆಯಿತು.

೧೮ನೆಯ ಶತಮಾನದಲ್ಲಿ ಯೂರೋಪಿನಲ್ಲಿ ಉಂಟಾದ 'ಜ್ಞಾನೋದಯ' (Enlightenment) ಅಮೆರಿಕದ ವಸಾಹತುಗಳ ಮೇಲೆ ಮಹತ್ತರವಾದ ಪ್ರಭಾವ ಬೀರಿತು. ವಸಾಹತುಗಳನ್ನು ಸ್ಥಾಪಿಸಿದವರು, ಸುಪ್ರಸಿದ್ಧ ವಿಜ್ಞಾನಿಗಳಾದ ಗೆಲಿಲಿಯೊ, ಡೆಕಾರ್ಟ್ ಮತ್ತು ನ್ಯೂಟನ್ ಅವರ ಸಮಕಾಲೀನರಾಗಿದ್ದರು. ಈ ಮಹಾ ಅನ್ವೇಷಣಾಕಾರರು ಒದಗಿಸಿದ ಬಾಹ್ಯಪ್ರಪಂಚದ ಹೊಸ ಪರಿಜ್ಞಾನ ಮತ್ತು ಹೊಸ ವೈಚಾರಿಕತೆ ಉಂಟುಮಾಡಿದ ಉದ್ವೇಗಕಾರಕ ಪರಿಸರದಲ್ಲಿ ಅಮೆರಿಕನ್ ಸಮಾಜ ಪ್ರಬುದ್ಧಮಾನಕ್ಕೆ ಬಂದಿತು. ಜನರು, ಈ ವಿಶ್ವ ಸರ್ವಶಕ್ತನಾದ, ಕೆಲವು ಸಮಯ ಕೋಪಿಷ್ಠನಾದ ದೇವರ ಸೃಷ್ಟಿ ಎನ್ನುವ ನಂಬಿಕೆ ಬಿಟ್ಟು, ವಿಶ್ವಕ್ಕೆ ಆಧಾರವಾಗಿರುವುದು ವ್ಯಕ್ತಿಸಂಬಂಧವಿಲ್ಲದ ಪ್ರಕೃತಿ ನಿಯಮಗಳು ಮತ್ತು ವೈಜ್ಞಾನಿಕ ನಿಯಮಗಳು ಎಂಬ ವ್ಯಾಖ್ಯಾನವನ್ನು ಒಪ್ಪಿಕೊಂಡರು. ವಿಶ್ವ ತರ್ಕಬದ್ಧವಾಗಿ ರಚಿತಗೊಂಡ ಒಂದು ಮಹಾ ಯಂತ್ರ. ದೇವರು ಇದನ್ನು ಸೃಷ್ಟಿಸಿದ ಯಂತ್ರಜ್ಞ. ಈ ಯಂತ್ರಜ್ಞ ತನ್ನ ಸೃಷ್ಟಿಯ ಮೇಲೆ ಕಾವಲಿರುತ್ತಾನೆಯೆ ಹೊರತು ಯಂತ್ರಚಾಲನೆಯಲ್ಲಿ ಅವನು ಕೈಹಾಕುವುದಿಲ್ಲ ಎನ್ನುವ ಯಾಂತ್ರಿಕ ಕಲ್ಪನೆ ಬೆಳೆಸಿಕೊಂಡರು. ಆದ್ದರಿಂದ ಜನರು ವೈಚಾರಿಕತೆಯಿಂದ ಜ್ಞಾನ ಪಡೆಯಬಹುದು, ದೇವರ ಅಂತರ್ಜ್ಞಾನದಿಂದಲ್ಲ ಎಂಬ ನಿರ್ಧಾರಕ್ಕೆ ಬಂದರು. ಇದರಿಂದಾಗಿ ಪ್ರಕೃತಿ ನಿಯಮಗಳನ್ನು ತಿಳಿಯುವುದು ಬಹಳ ಮುಖ್ಯ ಎಂದು ತೀರ್ಮಾನಿಸಿದರು. ಪ್ರಕೃತಿ ನಿಯಮಗಳನ್ನು ಅರ್ಥಮಾಡಿಕೊಂಡರೆ ಈ ವಿಶ್ವ ಹೇಗೆ ನಡೆಯುತ್ತದೆ ಎನ್ನುವ ರಹಸ್ಯ ತಿಳಿಯಬಹುದು. ಹೀಗೆ ಪ್ರಕೃತಿಯ ರಹಸ್ಯ ನಿಯಮಗಳನ್ನು ತಿಳಿದುಕೊಳ್ಳುವುದರ ಮೂಲಕ ಮನುಷ್ಯರು ತಮ್ಮ ಪರಿಸರವನ್ನು ಗೆದ್ದು ತಮ್ಮ ಜೀವನವನ್ನು ಉತ್ತಮ ಪಡಿಸಿಕೊಳ್ಳಬಹುದು – ಎನ್ನುವ ನಿರ್ಧಾರಕ್ಕೆ ಬಂದರು.

೧೮ನೆಯ ಶತಮಾನದ ಹೊತ್ತಿಗಾಗಲೇ ಯೂರೋಪ್ ಮತ್ತು ಅಮೆರಿಕದ ಬುದ್ಧಿಜೀವಿಗಳು ಮಾನವ ಮತ್ತು ಪ್ರಪಂಚವನ್ನು ಹೊಸದೃಷ್ಟಿಕೋನದಿಂದ ನೋಡಿ ಅರ್ಥಮಾಡಿಕೊಳ್ಳುವುದರ ಅಗತ್ಯವನ್ನು ಒಪ್ಪಿಕೊಂಡಿದ್ದರು. 'ವೈಚಾರಿಕತೆ ಯುಗ'ದ (The Age of Reason) ಮೂಲತತ್ವಗಳನ್ನು ಜನರು ಅನುಮೋದಿಸಿದ್ದರು. ವೈಚಾರಿಕತೆಯಿಂದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎನ್ನುವುದನ್ನು ಅಮೆರಿಕನ್ನರು ಅನುಭವದಿಂದ ತಿಳಿದಿದ್ದರು. ಬುದ್ಧಿವಂತಿಕೆಯಿಂದ ಕಾಡು ಮೇಡುಗಳನ್ನು – ತಮ್ಮ ಪರಿಸರವನ್ನು ವ್ಯವಸಾಯಭೂಮಿಯಾಗಿ ಪರಿವರ್ತಿಸಿ ಕ್ರಮೇಣ ಒಂದು ಸಂಪತ್ ಭರಿತವಾದ ಸಮಾಜವನ್ನು ಬೆಳಸಿದರು. ಆದ್ದರಿಂದ ವೈಚಾರಿಕತೆಯ ವಿಧಾನಗಳಿಂದ ಪ್ರಗತಿಯನ್ನು ಸಾಧಿಸಬಹುದು ಎನ್ನುವುದು ಅಮೆರಿಕನ್ನರಿಗೆ ಅನುಭವವೇದ್ಯವಾಗಿತ್ತು. ಪ್ರತಿಯೊಬ್ಬನೂ ತನ್ನ ಸ್ಥಿತಿಯನ್ನು ಉತ್ತಮಗೊಳಿಸಿಕೊಂಡು ಪ್ರಗತಿಪರನಾಗಲು ಸಾಧ್ಯ ಎನ್ನುವುದು ಅವರಿಗೆ ಸ್ವತಃ ಸಿದ್ಧವಾಗಿ ತೋರಿತು. ಏಕೆಂದರೆ ಅವರು ನೆಲಸಿದ ದೇಶದ

ವೈಶಾಲ್ಯ ಮತ್ತು ಪ್ರಕೃತಿ ಸಂಪತ್ತಿನ ವಿಪುಲತೆ ಪ್ರತಿಯೊಬ್ಬನಿಗೂ ಪ್ರಗತಿ ಹೊಂದಲು ಅಗಣಿತ ಅವಕಾಶಗಳನ್ನು ಒದಗಿಸಿತ್ತು.

ಆ ಸಮಯದಲ್ಲಿ ಡೀಯಿಸಂ (Deism) ಎನ್ನುವ ಒಂದು ಪಂಥ ಜನಾದರಣೀಯವಾಗಿತ್ತು. ಆ ಪಂಥದವರು ದೇವರನ್ನು ಅವನು ಸೃಷ್ಟಿಸಿದ ಅದ್ಭುತಗಳಾಗಿ ಆರಾಧಿಸುತ್ತಿದ್ದರೇ ಹೊರತು ಅವನು ತಮಗೆ ಒಳಿತು ಅಥವಾ ಕೆಡುಕನ್ನು ಮಾಡಬಲ್ಲ ಶಕ್ತಿಯುಳ್ಳವನು ಎನ್ನುವ ಕಾರಣದಿಂದಲ್ಲ. ಈ ಪಂಥ ವಿಶಿಷ್ಟವಾಗಿ ಅಮೆರಿಕದ ವಿದ್ಯಾವಂತರಲ್ಲಿ ಜನಪ್ರಿಯವಾಗಿತ್ತು.

ಸಾಮಾನ್ಯ ಅಮೆರಿಕನ್ನರು ಕಾರ್ಯಶೀಲರು, ತರ್ಕ ಊಹಾಪೋಹಗಳಲ್ಲಿ ಅನಾಸಕ್ತರು, ನಿರಂತರವಾಗಿ ಏನಾದರೂ ಮಾಡುತ್ತಲೇ ಇರುವ ಪ್ರವೃತ್ತಿಯವರು, ಅದ್ಭುತ ಕಲ್ಪನಾ ಲೋಕವನ್ನು ರಚಿಸುವವರಲ್ಲ. ಅವರು ವಾದ ವಿವಾದಗಳಲ್ಲಿ ಆಸಕ್ತಿಯಿಲ್ಲದವರು. ಅವರು ತಮ್ಮ ಪ್ರಪಂಚ ಹೇಗಿದೆಯೋ ಹಾಗೆ ಒಪ್ಪಿಕೊಂಡು ಅದರಿಂದ ಏನು ಪಡೆಯಬಹುದೋ ಅದನ್ನು ಪಡೆದು ಬದುಕುವಂಥವರು. ಈ ಮನೋಭಾವ ೧೮ನೆಯ ಶತಮಾನದ ಮಧ್ಯಕಾಲದ ವಸಾಹತುಗಳಲ್ಲಿನ ಜನರಲ್ಲಿ ಉತ್ಕಟ ಕುತೂಹಲ, ಹೊಂದಿಕೊಳ್ಳುವ ಜೀವನದೃಷ್ಟಿ ಮತ್ತು ತಮ್ಮ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳುವ ಬುದ್ಧಿವಂತಿಕೆ ಮತ್ತು ಭರವಸೆಗಳನ್ನು ಮೂಡಿಸಿ ಸಮಾಜ ಪ್ರಗತಿ ಹೊಂದಲು ಕಾರಣವಾಯಿತು.

ವಸಾಹತುಗಳಲ್ಲಿ ವರ್ಗವಿಂಗಡನೆಯನ್ನು ಕಾಣಬಹುದಿತ್ತು. ಕರಿಯರು, ಗುಲಾಮರಲ್ಲದವರೂ ಸೇರಿ, ಎಲ್ಲಾ ವಸಾಹತುಗಳಲ್ಲೂ ಸಾಮಾಜಿಕ ಮತ್ತು ನ್ಯಾಯಬದ್ಧ ಪೂರ್ವಾಗ್ರಹ ಮತ್ತು ಪಕ್ಷಪಾತಕ್ಕೆ ಒಳಗಾಗಿದ್ದರು. ಹಣವಂತರು ಜನಸಾಮಾನ್ಯರಿಗೆ ಸಮಾನ ಅಂತಸ್ತನ್ನು ನಿರಾಕರಿಸಿದ್ದರು. ವಸಾಹತುಗಾರರು, ತಮ್ಮ ಪೂರ್ವಿಕರಂತೆ, ಆಸ್ತಿವಂತರು ಮತ್ತು ಸ್ಥಿತಿವಂತರು ಮಾತ್ರ ಸಮಾಜವನ್ನು ರಕ್ಷಿಸಬಲ್ಲರು ಎಂದು ನಂಬಿದ್ದರು. ಈ ಕಾರಣದಿಂದ ಎಲ್ಲಾ ವಸಾಹತುಗಳಲ್ಲೂ ಒಂದು ನಿರ್ದಿಷ್ಟ ಪ್ರಮಾಣದ ಆಸ್ತಿಯ ಒಡೆತನ, ಮತದಾನದ ಹಕ್ಕನ್ನು ಪಡೆಯಲು ಅಗತ್ಯವಾದ ಅರ್ಹತೆ ಎಂದು ನಿರ್ಣಯಿಸಲಾಯಿತು. ಅಧಿಕಾರ ಸ್ಥಾನಗಳಿಗೆ ಆಯ್ಕೆಯಾಗಲು ಹೆಚ್ಚಿನ ಆಸ್ತಿಯನ್ನು ಹೊಂದಿರಬೇಕಾದುದು ಅಗತ್ಯವಾಗಿತ್ತು. ಎಲ್ಲ ವಸಾಹತುಗಳಲ್ಲಿ ಹೆಚ್ಚು ಕಡಿಮೆ ಎಲ್ಲರೂ ಚಿಕ್ಕ ಅಥವಾ ದೊಡ್ಡ ಭೂಮಾಲೀಕರಾಗಿದ್ದುದರಿಂದ ಅವರೆಲ್ಲರೂ ಮತದಾನದ ಹಕ್ಕನ್ನು ಪಡೆದಿದ್ದರು. ಪರಿಸ್ಥಿತಿ ಹೀಗಿದ್ದರೂ ವಸಾಹತು ಸಮಾಜವು ಪ್ರಜಾಸತ್ತಾತ್ಮಕವಾಗಿತ್ತು ಎಂದು ಭಾವಿಸುವುದು ತಪ್ಪಾಗುತ್ತದೆ. ಸಾಮಾನ್ಯ ರೈತನು ತಾನು ಸಾಮಾಜಿಕ ಮತ್ತು ರಾಜಕೀಯ ಅಂತಸ್ತಿನಲ್ಲಿ ದೊಡ್ಡ ಪ್ಲಾನ್‌ಟರ್‌ಗೆ ಅಥವಾ ಐಶ್ವರ್ಯವಂತನಿಗೆ ಸಮನಾದವನು ಎಂದು ತಿಳಿದಿರಲಿಲ್ಲ. ಸಾಮಾನ್ಯ ಜನರಿಗೆ ತಾವು ಮತ ಚಲಾಯಿಸಿ

ಅಧಿಕಾರ ಸ್ಥಾನದಲ್ಲಿರುವ ಐಶ್ವರ್ಯವಂತರನ್ನು ತೆಗೆದುಹಾಕಬಹುದು ಎಂದು ತಿಳಿದಿದ್ದರೂ, ಸ್ವಇಚ್ಛೆಯಿಂದ ತಮಗಿಂತಲೂ ಹೆಚ್ಚಿನ ಸ್ಥಿತಿವಂತರನ್ನು ಅಧಿಕಾರ ಸ್ಥಾನಗಳಿಗೆ ಆಯ್ಕೆ ಮಾಡುತ್ತಿದ್ದರು.

ವಸಾಹತುಗಳಲ್ಲಿ ವರ್ಗ ವಿಂಗಡನೆ ಯೂರೋಪಿನಲ್ಲಿದ್ದಷ್ಟು ಬಿಗಿಯಾಗಿರಲಿಲ್ಲ. ವಸಾಹತು ಸಮಾಜದಲ್ಲಿ ಅಂತಸ್ತನ್ನು ಕೇವಲ ಆರ್ಥಿಕ ಮಟ್ಟದ ಮೇಲೆ ನಿರ್ಧರಿಸಲಾಗುತ್ತಿತ್ತು. ಅಮೆರಿಕದಲ್ಲಿ ವಂಶಪಾರಂಪರ್ಯವಾದ ಅಂತಸ್ತು, ಬಿರುದು ಬಾವಲಿಗಳು ಇರಲಿಲ್ಲ. ಸತತವಾಗಿ ವಿಶೇಷ ಅಂತಸ್ತು, ಸೌಕರ್ಯ ಮತ್ತು ಅನುಕೂಲಗಳನ್ನು ಅನುಭವಿಸುವ ವರ್ಗ ಇರಲಿಲ್ಲ. ಆಗಿನ ಅಮೆರಿಕದಲ್ಲಿ ವಸಾಹತಿನಲ್ಲಿ ಯಶಸ್ಸು ಗಳಿಸದವನು ಗಡಿನಾಡು ಪ್ರದೇಶಕ್ಕೆ ಹೋಗಿ ಹೊಸ ಪ್ರಯತ್ನ ಮಾಡಿ ಮೇಲಕ್ಕೆ ಬರಬಹುದಿತ್ತು. ಮೇರೆ ಇಲ್ಲದ ಭೂಮಿಯಲ್ಲಿ ಗಡಿನಾಡು ಪಶ್ಚಿಮದ ಕಡೆಗೆ ವಿಸ್ತರಿಸುತ್ತ ಹೋಗುತ್ತಿತ್ತು. ದುಡಿದು ಮೇಲೆ ಬರುವವನಿಗೆ ಮೇರೆ ಇಲ್ಲದ ಅವಕಾಶಗಳು ತೆರೆದುಕೊಳ್ಳುತ್ತಿದ್ದವು.

ಯೂರೋಪಿನ ಸಾಮಾಜಿಕ ಮತ್ತು ರಾಜಕೀಯ ಚಿಂತನೆಗಳಿಂದ ಸಂಪೂರ್ಣ ಕಳಚಿಕೊಳ್ಳಲಾರದೆ, ಇಂಗ್ಲೆಂಡ್ ಮತ್ತು ಯೂರೋಪಿನ ಅನೇಕ ಸಂಪ್ರದಾಯ ಮತ್ತು ಸಂಸ್ಥೆಗಳನ್ನು ಅನುಕರಣೆ ಮಾಡುತ್ತಿದ್ದರೂ, ಅಮೆರಿಕನ್ನರು ತಮ್ಮದೇ ಆದ, ಬದಲಾವಣೆಗಳಿಗೆ ಹೊಂದಿಕೊಳ್ಳಬಲ್ಲ, ಯೂರೋಪಿಗಿಂತಲೂ ಹೆಚ್ಚು ಪ್ರಜಾಸತ್ತಾತ್ಮಕವಾದ ಸಮಾಜವನ್ನು ಸ್ಥಾಪನೆ ಮಾಡಿದರು. ಆಗಿನ ಪ್ರಪಂಚದಲ್ಲಿ ಅಂಥ ಪ್ರಜಾಸತ್ತಾತ್ಮಕ ಸಮಾಜ ಮತ್ತೆಲ್ಲೂ ಇರಲಿಲ್ಲ. ವ್ಯಕ್ತಿಗಳನ್ನು ಅವರ ಸಾಧನೆಗಾಗಿ, ಅವರು ಮಾಡಿದ ಸಾರ್ವಜನಿಕ ಹಿತಾಸಕ್ತಿಗಳನ್ನು ಹೆಚ್ಚಿಸುವ ಕೆಲಸಗಳಿಗಾಗಿ ಗೌರವಿಸುತ್ತಿದ್ದರೇ ಹೊರತು ಅವರ ಅಪ್ಪಂದಿರು, ಅಜ್ಜಂದಿರು ಮಾಡಿರಬಹುದಾದ ಕೆಲಸಕ್ಕಾಗಿ ಅಲ್ಲ!

ವಸಾಹತು ಪ್ರಪಂಚದಲ್ಲಿ ಆಗಾಗ ಪ್ರಾಂತೀಯ ಕಲಹಗಳು ನಡೆಯುತ್ತಿದ್ದವು. ಅಮೆರಿಕ ಅತಿ ವಿಶಾಲವಾದ ಭೂಪ್ರದೇಶ. ಒಂದು ಪ್ರಾಂತದಿಂದ ಮತ್ತೊಂದು ಪ್ರಾಂತಕ್ಕೆ ಪ್ರಯಾಣ ಬಹಳ ನಿಧಾನ, ತ್ರಾಸದಾಯಕ ಮತ್ತು ದುಬಾರಿಯಾಗಿತ್ತು. ಕೇವಲ ಕೆಲವರಿಗೆ ಮಾತ್ರ ಬೇರೆ ಪ್ರಾಂತಗಳ ನಿಕಟ ಪರಿಚಯವಿತ್ತು. ಚಾರಿತ್ರಿಕ ಆಕಸ್ಮಿಕದ ಪರಿಣಾಮವಾಗಿ ಅಮೆರಿಕ ಭೂಖಂಡದ ಮೇಲೆ ಹದಿಮೂರು ಪ್ರತ್ಯೇಕ ರಾಜಕೀಯ ಘಟಕಗಳು ಸ್ಥಾಪನೆಗೊಂಡು ರಾಜನ ಆಡಳಿತದ ಮೂಲಕ ಒಂದುಗೂಡಿದ್ದವು. ರಾಜನ ಅಧಿಕಾರಿಗಳು ವಸಾಹತುಗಾರರು ರಾಷ್ಟ್ರೀಯ ಭಾವನೆ ಬೆಳೆಸಿಕೊಳ್ಳದಂತೆ ಎಚ್ಚರಿಕೆ ವಹಿಸಿದ್ದರು. ವಸಾಹತುಗಾರರಿಗೆ ತಾವು ಪ್ರತ್ಯೇಕ ರಾಷ್ಟ್ರದವರು ಎನ್ನುವ ಭಾವನೆ ಇರಲಿಲ್ಲ. ಅವರು ಯಾರು, ಎಲ್ಲಿಯವರು ಎನ್ನುವುದನ್ನು ಪ್ರಾಂತೀಯತೆಯ ಮೂಲಕ ತಿಳಿದುಕೊಳ್ಳಬೇಕಾಗಿತ್ತು. ಅವರು ತಮ್ಮನ್ನು ವರ್ಜೀನಿಯದವರು, ನ್ಯೂಯಾರ್ಕಿನವರು ಅಥವಾ

ಹೆಚ್ಚೆಂದರೆ ನ್ಯೂಇಂಗ್ಲೆಂಡಿನವರು ಎಂದು ಪರಿಚಯಿಸಿಕೊಳ್ಳುತ್ತಿದ್ದರು. ಅಲ್ಲಿಂದಾಚೆಗೆ ಅವರು ತಮ್ಮನ್ನು ಇಂಗ್ಲೆಂಡ್ ರಾಜನ ಪ್ರಜೆಗಳು ಎಂದು ಗುರುತಿಸಿಕೊಳ್ಳುತ್ತಿದ್ದರು. ಆಗಿನ ಕಾಲದಲ್ಲಿ, ಅಂದರೆ ೧೮ನೆಯ ಶತಮಾನದ ಅರ್ಧ ಭಾಗದವರೆಗೂ 'ಅಮೆರಿಕನ್' ಪದಕ್ಕೆ ಹೆಚ್ಚಿನ ರಾಜಕೀಯ ಮಹತ್ವ ಇರಲಿಲ್ಲ.

ವಸಾಹತುಗಳ ನಡುವಣ ಸಂಬಂಧಗಳು ಯಾವಾಗಲೂ ಶಾಂತಿಯುತವಾಗಿರಲಿಲ್ಲ. ಆರ್ಥಿಕ ಆಸಕ್ತಿಗಳು ಘರ್ಷಣೆಗೆ ಕಾರಣವಾಗುತ್ತಿದ್ದವು. ಮುಖ್ಯವಾಗಿ ಈ ಘರ್ಷಣೆಗಳು ಪೂರ್ವದ ವಸಾಹತುಗಳಿಗೂ ಮತ್ತು ಪಶ್ಚಿಮದ ವಸಾಹತುಗಳಿಗೂ ನಡೆಯುತ್ತಿದ್ದವು. ಪೂರ್ವದ ವಸಾಹತುಗಳು ಸ್ಥಿರವಾಗಿ ಸ್ಥಾಪಿತಗೊಂಡ ಹಳೆಯ ಪ್ರಾಂತವಾಗಿತ್ತು. ಪಶ್ಚಿಮದ ವಸಾಹತುಗಳು ನೆಲೆಯಿಲ್ಲದೆ ಮುಂದೆ ಮುಂದೆ ಸಾಗುವ ಸಮುದಾಯಗಳಿಂದ ಕೂಡಿದ ಗಡಿನಾಡು (Frontier) ಪ್ರದೇಶವಾಗಿತ್ತು. ಪಾಶ್ಚಾತ್ಯರು ಭೂಮಿಯನ್ನು ಬೇಗನೆ ವಿಸ್ತರಿಸಿ ಉಪಯೋಗಿಸಲು ಬೆಂಬಲ ನೀಡುವ ಭೂಶಾಸನಗಳನ್ನು ಜಾರಿಗೆ ತರಬೇಕೆಂದು ಒತ್ತಾಯ ಮಾಡಿದರೆ ಪೌರ್ವಾತ್ಯರು ಇದನ್ನು ವಿರೋಧಿಸುತ್ತಿದ್ದರು. ಏಕೆಂದರೆ ಹೊಸಭೂಮಿಯನ್ನು ವಿಸ್ತರಿಸುತ್ತ ಹೋದರೆ ತಮ್ಮ ಹಿಡುವಳಿಗಳ ಬೆಲೆ ಕುಸಿಯುತ್ತದೆ ಎನ್ನುವ ಭಯಕ್ಕಾಗಿ.

ಪಾಶ್ಚಾತ್ಯರು ಯಾವಾಗಲೂ ಇಂಡಿಯನ್ನರನ್ನು ವಿರೋಧಿಸುತ್ತಿದ್ದರು. ಇಂಡಿಯನ್ನರ ಭೂಮಿಯನ್ನು ಬಿಳಿಯರು ಆಕ್ರಮಣ ಮಾಡಿ ಕೊಳ್ಳುತ್ತಿದುದರಿಂದ. ವಸಾಹತುಗಾರರಿಗೂ ಇಂಡಿಯನ್ನರಿಗೂ ಪದೇ ಪದೇ ಘರ್ಷಣೆಗಳು ನಡೆಯುತ್ತಿದ್ದವು. ಪೌರ್ವಾತ್ಯರಿಗೆ ಇಂಡಿಯನ್ನರ ದಾಳಿಯ ಭಯವಿರಲಿಲ್ಲ. ಆದ್ದರಿಂದ ಅವರು ಪಾಶ್ಚಾತ್ಯರಿಗೆ ಸಂಯಮದಿಂದ ಇರಬೇಕೆಂದು ಬೋಧಿಸುತ್ತಿದ್ದರು. ಯುದ್ಧದಿಂದ ಅಪಾರ ಹಣ ಖರ್ಚಾಗಿ ಎಲ್ಲರಿಗೂ ತೊಂದರೆ ಉಂಟಾಗುತ್ತದೆ ಎಂದು ವಾದಿಸುತ್ತಿದ್ದರು. ಕೆಲವು ಪೌರ್ವಾತ್ಯರು ಇಂಡಿಯನ್ನರಿಗೆ ಮದ್ಯ ಮತ್ತು ಆಯುಧಗಳನ್ನು ಮಾರಿ ಲಾಭ ಗಳಿಸುತ್ತಿದ್ದರು. ಆದ್ದರಿಂದ ಪಾಶ್ಚಾತ್ಯರು ಪೌರ್ವಾತ್ಯರನ್ನು ಇಂಡಿಯನ್ನರಿಗಿಂತ ಹೆಚ್ಚಾಗಿ ದ್ವೇಷಿಸುತ್ತಿದ್ದರು. ಈ ಪ್ರಾಂತೀಯ ಕಲಹಗಳು ಪ್ರತಿಯೊಂದು ಪ್ರಾಂತದೊಳಗಿನ ಒಳಗುಂಪುಗಳ ಸೆಣಸಾಟದಿಂದ ಹೆಚ್ಚು ಸಂಕೀರ್ಣವಾಗುತ್ತ ಹೋದವು. ಭೂಮಿಯನ್ನು ಕೊಂಡು ನಂತರ ಹೆಚ್ಚಿನ ಬೆಲೆಗೆ ಮಾರಿ ಲಾಭ ಗಳಿಸುತ್ತಿದ್ದ ಪೌರ್ವಾತ್ಯ ವರ್ತಕರು ಪಶ್ಚಿಮ ಗಡಿಪ್ರದೇಶದ ರೈತರೊಡನೆ ಸೇರಿ ಭೂಮಿಯನ್ನು ವಿಸ್ತಾರಗೊಳಿಸಬೇಕೆಂದು ಒತ್ತಾಯ ಮಾಡುತ್ತಿದ್ದರು. ಇದನ್ನು ವಿರೋಧಿಸಿ ನುಣುಪುಗೂದಲಿನ ಚರ್ಮದ ಮಾರಾಟಗಾರರು ಪಶ್ಚಿಮದ ಕಾಡುಗಳನ್ನು ರಕ್ಷಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿಕೊಂಡರು.

ಪ್ರಾಂತೀಯ ಸರ್ಕಾರದ ನ್ಯಾಯಾಂಗದಲ್ಲಿ ಪೌರ್ವಾತ್ಯರ ಪ್ರತಿನಿಧಿಗಳು ಹೆಚ್ಚಾಗಿದ್ದು ಗಡಿನಾಡು ಪ್ರದೇಶಗಳಿಗೆ ಸಮಾನ ಪ್ರಾತಿನಿಧ್ಯ ದೊರೆಯಲಿಲ್ಲ. ನ್ಯಾಯಾಂಗದಲ್ಲಿ ಬಹುಮತ ಪಡೆದಿದ್ದ ಪೌರ್ವಾತ್ಯರು ಪಶ್ಚಿಮದ ಸಣ್ಣ ಹಿಡುವಳಿದಾರರ ಮೇಲೆ

ತಲೆಗಂದಾಯ ಹಾಕಿದರು. ಈ ಎಲ್ಲ ಘರ್ಷಣೆಗಳು ಮತ್ತು ಕಿರುಕುಳಗಳು ೧೬೭೬ರ ದಂಗೆಗೆ ಕಾರಣವಾದವು. ಈ ದಂಗೆ ಪ್ರಾರಂಭವಾದದ್ದು ಇಂಡಿಯನ್ನರು ಗಡಿನಾಡು ಪ್ರದೇಶದ ಮೇಲೆ ದಾಳಿ ಮಾಡಿದ್ದರಿಂದ. ಆಗ ಗವರ್ನರ್ ಆಗಿದ್ದ ಸರ್ ವಿಲಿಯಂ ಬರ್ಕ್‌ಲಿ ಇಂಡಿಯನ್ನರ ಬಗ್ಗೆ ಸಹಾನುಭೂತಿ ಉಳ್ಳವನಾಗಿದ್ದ. ಆದ್ದರಿಂದ ದಾಳಿ ಮಾಡಿದ ಇಂಡಿಯನ್ನರನ್ನು ಮಾತ್ರ ಶಿಕ್ಷಿಸಬೇಕೆಂದು ನಿರಪರಾಧಿ ಇಂಡಿಯನ್ನರನ್ನು ಅವರ ಪಾಡಿಗೆ ಬಿಡಬೇಕೆಂದು ಆಜ್ಞೆ ಮಾಡಿದನು. ಆದರೆ ನಥಾನಿಯಲ್ ಬೇಕನ್ ಎಂಬ ಇಂಡಿಯನ್ನರ ಕಡುದ್ವೇಷಿಯ ನಾಯಕತ್ವದಲ್ಲಿ ದಂಗೆ ಎದ್ದ ಬಿಳಿಯರು ಆ ಪ್ರದೇಶದ ಸುತ್ತ ಮುತ್ತ ಇದ್ದ ನಿರಪರಾಧಿ ಇಂಡಿಯನ್ನರನ್ನು ಕೊಂದು, ವಸಾಹತು ಸರ್ಕಾರದ ಕೇಂದ್ರವಾಗಿದ್ದ ಜೇಮ್ಸ್ ಟೌನ್‌ಗೆ ಮುತ್ತಿಗೆ ಹಾಕಿದರು. ಈ ಕದನದಲ್ಲಿ ಜೇಮ್ಸ್ ಟೌನ್‌ನ್ನು ಸುಟ್ಟುಹಾಕಿದರು. ಸರ್ಕಾರದ ಸೈನಿಕರು ಸೆರೆಸಿಕ್ಕಿದ ಅನೇಕ ದಂಗೆಕೋರರನ್ನು ಗಲ್ಲಿಗೇರಿಸಿ ಕೊಂದರು. ಈ ದಂಗೆಯ ನಂತರ ಕೆಲವು ಸುಧಾರಣೆಗಳನ್ನು ಜಾರಿಗೆ ತಂದರು.

೧೭೬೩ರಲ್ಲಿ ಪೆನ್ಸಿಲ್‌ವೇನಿಯಾದಲ್ಲಿ ನಡೆದ 'ಪ್ಯಾಕ್ಸ್‌ಟನ್ ಹುಡುಗರ' (Paxton Boys) ದಂಗೆ ಕೂಡ ಗಡಿನಾಡು ಪ್ರದೇಶದ ಮೇಲೆ ಇಂಡಿಯನ್ನರು ದಾಳಿ ಮಾಡಿದಾಗ ಪೌರ್ವಾತ್ಯರು ಅದನ್ನು ಗಣನೆಗೆ ತೆಗೆದುಕೊಳ್ಳದೆ ಅಸಡ್ಡೆ ಮಾಡಿದ್ದರ ಪರಿಣಾಮ. ದಾಳಿ ನಡೆದಾಗ ತಮ್ಮ ಸಹಾಯಕ್ಕೆ ಬಾರದೇ ಹೋದ ಸರ್ಕಾರದ ಮೇಲೆ ಕೋಪಗೊಂಡ ಲಂಕಾಸ್ಟರ್ ಜಿಲ್ಲೆಯ ಸ್ಕಾಟ್ ಮತ್ತು ಐರಿಷ್ ಜನರ ತಂಡ ನಿರಪರಾಧಿಗಳಾಗಿದ್ದ ಕಾನಿಸ್‌ಟೋಗ ಇಂಡಿಯನ್ನರ ಮೇಲೆ ದಾಳಿ ಮಾಡಿ ಸಾಮೂಹಿಕ ಹತ್ಯಾಕಾಂಡ ನಡೆಸಿದರು. ನಂತರ ದಂಗೆಕಾರರು ಪ್ರಾಂತದ ರಾಜಧಾನಿ ಫಿಲಡೆಲ್ಫಿಯಾದ ಮೇಳೆ ದಾಳಿ ನಡೆಸಲು ಹೊರಟರು. ಬೆಂಜಮಿನ್ ಫ್ರಾಂಕ್ಲಿನ್‌ನ ನಾಯಕತ್ವದಲ್ಲಿ ಒಂದು ನಿಯೋಗ ದಂಗೆಕೋರರನ್ನು ತಡೆದು ನಿಲ್ಲಿಸಿ ಮಾತುಕತೆ ನಡೆಸಿ ದಾಳಿಯನ್ನು ತಪ್ಪಿಸಿತು. ೧೭೭೧ರಲ್ಲಿ ಇದೇ ರೀತಿಯ ಇನ್ನೊಂದು ದಂಗೆ ನಡೆಯಿತು. ಉತ್ತರ ಕೆರೊಲಿನದ ಗಡಿನಾಡು ಜನರ 'ರೆಗ್ಯುಲೇಟರ್ಸ್' ಎಂಬ ಹೆಸರಿನ ಒಂದು ಗುಂಪು ಸರ್ಕಾರದ ಸೈನಿಕರ ಮೇಲೆ ದಾಳಿ ನಡೆಸಿದತು. ಆ ವಸಾಹತಿನ ಪಶ್ಚಿಮಭಾಗದಲ್ಲಿ ಘೋರ ಕದನ ನಡೆದು ಸರ್ಕಾರದ ಸೈನ್ಯ 'ರೆಗ್ಯುಲೇಟರ್ಸ್' ದಂಗೆಕಾರರನ್ನು ನುಚ್ಚುನೂರು ಮಾಡಿ ಸೆರೆಸಿಕ್ಕ ನಾಯಕರನ್ನು ಗಲ್ಲಿಗೇರಿಸಿತು.

ವಸಾಹತು ಪ್ರಪಂಚದಲ್ಲಿ ಕಲಹ, ದಂಗೆ ಮತ್ತು ಘರ್ಷಣೆಗಳು ಆಗಾಗ ನಡೆಯುತ್ತಿದ್ದರೂ ಸಾಧಾರಣವಾಗಿ ಸಾಮಾಜಿಕ ಸಂಬಂಧಗಳು ಸಾಮರಸ್ಯದಿಂದ ಕೂಡಿದ್ದವು. ಜನರು ಐಶ್ವರ್ಯ ಮತ್ತು ಅಂತಸ್ತಿಗಾಗಿ ಉಗ್ರವಾಗಿ ಸ್ಪರ್ಧಿಸುತ್ತಿದ್ದರು. ನತದೃಷ್ಟರಾದ ಗುಲಾಮರನ್ನು ಬಿಟ್ಟರೆ, ಮಿಕ್ಕವರಿಗೆ ಸ್ಪರ್ಧಿಸಲು ಅವಕಾಶಗಳಿದ್ದು, ಸ್ಪರ್ಧೆ ಹೆಚ್ಚುಕಡಿಮೆ ನ್ಯಾಯಬದ್ಧವಾಗಿ ನಡೆಯುತ್ತಿತ್ತು. ಸ್ಪರ್ಧೆಯಲ್ಲಿ ಗೆದ್ದವರಿಗೆ

ಸಮೃದ್ಧವಾದ ಬಹುಮಾನ (ಹಣ, ಅಂತಸ್ತು, ಗೌರವ ಇತ್ಯಾದಿ) ದೊರೆಯುತ್ತಿತ್ತು. ಒಟ್ಟಿನಲ್ಲಿ ವಸಾಹತಿನ ಅಮೆರಿಕನ್ನರು ಸುಖಜೀವಿಗಳಾಗಿದ್ದರು. ಅಲ್ಪಸಂಖ್ಯಾತರಾಗಿ, ಬ್ರಿಟಿಷರ ಅಧೀನತೆಯಲ್ಲಿ ಇದ್ದರೂ ಸಹ ಅವರು ದೃಢವಾಗಿ ಏಳಿಗೆ ಹೊಂದುತ್ತ ಹೆಚ್ಚು ಪ್ರಭಾವಾಶಾಲಿಗಳಾಗಿ ಬೆಳೆದರು. ಇವರಿಗೆ ಉಜ್ವಲ ಭವಿಷ್ಯ ಕಾದಿದೆ ಎನ್ನುವುದು ಸ್ಪಷ್ಟವಾಗಿ ತೋರುತ್ತಿತ್ತು. ಈ ಹಿನ್ನೆಲೆಯಲ್ಲಿ ವಸಾಹತುಗಳಲ್ಲಿ ವಾಸಿಸುತ್ತಿದ್ದ ಅಮೆರಿಕನ್ನರು ಕ್ರಾಂತಿ ನೆಡೆಸಲು ಪ್ರೇರಣೆ ನೀಡಿದ ವಿವಿಧ ಅಂಶಗಳನ್ನು ಮುಂದಿನ ಅಧ್ಯಾಯನಲ್ಲಿ ಪರಿಶೀಲಿಸಬಹುದು.

❑

ಅಧ್ಯಾಯ – ೩

ವಸಾಹತುಗಳು ಮತ್ತು ಅಮೆರಿಕನ್ ಕ್ರಾಂತಿ

ಅಮೆರಿಕದ ವಸಾಹತುಗಳಲ್ಲಿ, ಅದರಲ್ಲೂ ಪ್ರಾರಂಭದ ದಿನಗಳಲ್ಲಿ, ಇಂಗ್ಲೆಂಡಿನ ಆಡಳಿತವನ್ನು ಯಾರೂ ಪ್ರಶ್ನಿಸುತ್ತಿರಲಿಲ್ಲ. ಕಾಲ ಸರಿದಂತೆ ಕೆಲವು ಸಾಹಸಪ್ರವೃತ್ತಿಯ ವಸಾಹತುಗಾರರು ತಮಗೆ ಅನುಕೂಲ ಹಾಗೂ ಲಾಭದಾಯಕವಾದ ಸಂದರ್ಭಗಳಲ್ಲಿ ಬ್ರಿಟಿಷ್ ಕಾಯಿದೆಗಳನ್ನು ಉಲ್ಲಂಘಿಸುತ್ತಿದ್ದರು. ನ್ಯಾಯಬಾಹಿರವಾದ ಚಟುವಟಿಕೆಗಳಿಗೆ ಶಿಕ್ಷೆ ವಿಧಿಸುತ್ತಾರೆ ಎಂದು ಗೊತ್ತಿದ್ದೂ ಅವರು ಮೊಂಡು ಧೈರ್ಯದಿಂದ ನ್ಯಾಯದ ಉಲ್ಲಂಘನೆ ಮಾಡುತ್ತಿದ್ದರು. ಅವರ ಮೊಂಡು ಧೈರ್ಯಕ್ಕೆ ಎರಡು ಕಾರಣಗಳಿದ್ದವು. ಮೊದಲನೆಯದಾಗಿ, ಇಂಗ್ಲೆಂಡ್ ಅಮೆರಿಕಕ್ಕೆ ಮೂರುಸಾವಿರ ಮೈಲಿಗಳ ದೂರದಲ್ಲಿತ್ತು. ಇಂಗ್ಲೆಂಡಿನ ಸೈನ್ಯವಾಗಲೀ ಅಥವಾ ಪೊಲೀಸ್ ಪಡೆಯಾಗಲೀ ಅಮೆರಿಕದಲ್ಲಿ ಸ್ಥಿರವಾಗಿ ಸ್ಥಾಪನೆಗೊಂಡಿರಲಿಲ್ಲ. ಆದ್ದರಿಂದ ಕಾನೂನನ್ನು ಮುರಿದ ಇವರನ್ನು ಹಿಡಿದು ಶಿಕ್ಷಿಸಲು ಪೊಲೀಸರು ಇಂಗ್ಲೆಂಡಿನಿಂದ ಬರಬೇಕಾಗಿತ್ತು! ಅವರು ಬರುವುದಿಲ್ಲ ಎನ್ನುವ ಭರವಸೆಯಿಂದ ಇಲ್ಲಿ ಈ ಚಟುವಟಿಕೆಗಳನ್ನು ನಡೆಸಿದ್ದರು. ಎರಡನೆಯದಾಗಿ, ಬ್ರಿಟಿಷರ ಅಸಮರ್ಥ ಆಡಳಿತ. ರಾಜನ ಪ್ರತಿನಿಧಿಗಳು ರಾಜನೀತಿಯನ್ನು ನಿರ್ದೇಶಿಸುವ ಪ್ರಯತ್ನದಲ್ಲಿ ಸ್ಥಳೀಯ ವಿಷಯ ಮತ್ತು ಸಮಸ್ಯೆಗಳನ್ನು ನಿರ್ವಹಿಸಲು ಸ್ಥಳೀಯ ಸಂಸ್ಥೆಗಳಿಗೆ ಬಿಡುತ್ತಿದ್ದರು. ಸಾಮ್ರಾಜ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಮಾತ್ರ ಅವರು ನಿರ್ವಹಿಸುತ್ತಿದ್ದರು. ಸಾಮ್ರಾಜ್ಯಕ್ಕೆ ವಿರುದ್ಧವಾದ ನಡತೆ ಅಥವಾ ನಿರ್ಣಯಗಳನ್ನು ನಿಷೇಧಿಸುವ ಅಧಿಕಾರ ಅವರಿಗೆ ಇತ್ತು. ಕಡಲಾಚೆಯ ವಿಷಯಗಳನ್ನು ಪಾರ್ಲಿಮೆಂಟ್‌ನಲ್ಲಿ ನಿರ್ಧರಿಸಲಾಗುತ್ತಿತ್ತು.

ಪ್ರತಿಯೊಂದು ವಸಾಹತಿಗೂ ಒಬ್ಬ ರಾಜ್ಯಪಾಲಕ (governer) ಇರುತ್ತಿದ್ದನು. ರಾಜ್ಯಪಾಲಕ ವಸಾಹತಿನ ರಾಜನಿದ್ದಂತೆ. ವಸಾಪತಿನ ಕಾಯಿದೆಗಳನ್ನು ಜಾರಿಗೆ ತರುವುದು, ಅಧಿಕಾರಿಗಳನ್ನು ನೇಮಕ ಮಾಡುವುದು, ವಸಾಹತಿನ ಪ್ರಜಾಪ್ರತಿನಿಧಿಸಭೆಗಳನ್ನು ಸೇರಿಸುವುದು ಮತ್ತು ಮುಕ್ತಾಯಗೊಳಿಸುವುದು, ಕಾಯಿದೆಗಳನ್ನು ಮಂಡಿಸುವುದು – ಇಷ್ಟೆಲ್ಲ ಅಧಿಕಾರ ಅವನ ಕೈಯಲ್ಲಿತ್ತು. ವಸಾಹತಿನ ಯಾವ ಕಾಯಿದೆಯನ್ನಾದರೂ ರದ್ದು ಮಾಡುವ ಅಧಿಕಾರವೂ ಅವನಿಗಿತ್ತು. ಆದರೆ ಅವನು ಆರ್ಥಿಕವಾಗಿ ವಸಾಹತಿನ ಪ್ರಜೆಗಳನ್ನು ಅವಲಂಬಿಸಿರಬೇಕಾಗಿತ್ತು. ಅಂದರೆ ಅವನ ಖರ್ಚು ವೆಚ್ಚಗಳೆಲ್ಲವನ್ನೂ ಪ್ರಜೆಗಳು ಕೊಡುತ್ತಿದ್ದ ತೆರಿಗೆಯಿಂದ ಪೂರೈಸಬೇಕಾಗಿತ್ತು.

ಪ್ರತಿಯೊಂದು ವಸಾಹತಿನಲ್ಲೂ ಒಂದು ಪ್ರಜಾಪ್ರತಿನಿಧಿ ಸಭೆ ಇರುತ್ತಿತ್ತು. ಈ ಸಭೆಯಲ್ಲಿ ಎರಡು ಮನೆಗಳು ಇರುತ್ತಿದ್ದವು. ಕೆಳಮನೆಗೆ ಪ್ರತಿನಿಧಿಗಳನ್ನು ಅರ್ಹರಾದ ಪ್ರಜೆಗಳು ಚುನಾಯಿಸಿ ಕಳುಹಿಸುತ್ತಿದ್ದರು. ಅವರಿಗೆ ಕಾಯಿದೆಗಳನ್ನು ಮಂಡಿಸುವ ಮತ್ತು ಒಪ್ಪಿಗೆ ನೀಡುವ ಅಥವಾ ನಿರಾಕರಿಸುವ ಅಧಿಕಾರ ಇತ್ತು. ಸರ್ಕಾರದ ಹಣವನ್ನು ನಿಯಂತ್ರಿಸುವ ಅಧಿಕಾರವೂ ಅವರಿಗಿತ್ತು. ಈ ಸಭೆಯ ಮೇಲಿನ ಮನೆಗೆ ಸದಸ್ಯರನ್ನು ರಾಜನು ನೇಮಿಸುತ್ತಿದ್ದನು. ಇವರ ಮುಖ್ಯ ಕೆಲಸ ರಾಜ್ಯಪಾಲಕನಿಗೆ ಸಲಹೆ ನೀಡುವುದು. ನ್ಯಾಯಾಧೀಶರನ್ನೂ ರಾಜನೇ ನೇಮಿಸುತ್ತಿದ್ದ. ಈ ನ್ಯಾಯಾಧೀಶರ ಅಧಿಕಾರ ಅವಧಿ ರಾಜನ ಮರ್ಜಿಯನ್ನು ಅವಲಂಬಿಸಿತ್ತು. ಸಾಮಾನ್ಯವಾಗಿ ಮೇಲ್ಮನೆಯ ಸದಸ್ಯರನ್ನು ಮತ್ತು ನ್ಯಾಯಾಧೀಶರನ್ನು ಸ್ಥಳೀಯ ನಾಯಕರಿಂದ ಆಯ್ದುಕೊಳ್ಳುತ್ತಿದ್ದರು. ಕೆಳಮನೆಯ ಸದಸ್ಯರು ವಸಾಹತಿನ ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ಇವರಿಗೆ ಪ್ರಜೆಗಳ ಬೆಂಬಲ ಇರುತ್ತಿತ್ತು. ಇವರು ಕ್ರಮೇಣವಾಗಿ ತಮ್ಮ ಪ್ರಭಾವವನ್ನು ಬೆಳೆಸಿಕೊಳ್ಳುತ್ತಿದ್ದರು. ರಾಜ್ಯಪಾಲರು ಬದಲಾದರೂ ಇವರು ಸದಸ್ಯರಾಗಿ ಮುಂದುವರಿಯುತ್ತಿದ್ದರು. ಅನುಭವಸ್ಥರೂ ಪ್ರಭಾವಶಾಲಿಗಳೂ ಆದ ಇವರ ನಿಯಂತ್ರಣಕ್ಕೆ ವಸಾಹತುಗಳ ವ್ಯವಹಾರಗಳು ಒಳಪಟ್ಟಿರುತ್ತಿದ್ದವು.

ವಸಾಹತುಗಳ ಆಡಳಿತ ರೀತಿಯನ್ನು ರೂಪಿಸುವುದು ರಾಜನ 'ರಹಸ್ಯ ಸಮಿತಿ' (Privy Council)ಯ ಜವಾಬ್ದಾರಿಯಾಗಿತ್ತು. ಈ ಸಮಿತಿ ಸಂದರ್ಭಕ್ಕೆ ತಕ್ಕಂತೆ ನಿಯಮವನ್ನು ರೂಪಿಸಿ ಅದನ್ನು ಜಾರಿಗೆ ತರುತ್ತಿತ್ತು. (ಎಲ್ಲವನ್ನೂ ವಿಕೇಂದ್ರೀಕರಣಗೊಳಿಸಲಾಗಿತ್ತು.) ಈ ಸಮಿತಿ ವಸಾಹತುಗಳಿಗೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ಅಹವಾಲುಗಳನ್ನು ಕೇಳುವ ಕಟ್ಟಕಡೆಯ ನ್ಯಾಯಾಲಯದಂತೆ ಕೆಲಸ ಮಾಡುತ್ತಿತ್ತು. ರಹಸ್ಯ ಸಮಿತಿ ಅನೇಕ ಉಪಸಮಿತಿಗಳನ್ನು ನೇಮಿಸಿತ್ತು. ಈ ಉಪಸಮಿತಿಗಳು ವಸಾಹತುಗಳ ವ್ಯವಹಾರಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ರಹಸ್ಯಸಮಿತಿಗೆ ಸಲಹೆ ಕೊಡುತ್ತಿದ್ದವು. ಈ ಉಪಸಮಿತಿಗಳಲ್ಲಿ ಬಹಳ ಮುಖ್ಯವಾದುದೆಂದರೆ 'ಲಾರ್ಡ್ಸ್ ಆಫ್ ಟ್ರೇಡ್' (Lords of Trade) ಸಮಿತಿ. ೧೬೯೬ರಲ್ಲಿ 'ದಿ ಬೋರ್ಡ್ ಆಫ್ ಟ್ರೇಡ್' (The Board of Trade) ಎನ್ನುವ ಹೊಸ ಸಮಿತಿ ಹಿಂದಿನ ಸಮಿತಿಯ ಕಾರ್ಯಗಳನ್ನು ವಹಿಸಿಕೊಂಡಿತು. ವಸಾಹತುಗಳ ರಾಜ್ಯಪಾಲರನ್ನು ಮತ್ತು ಇತರ ಉನ್ನತ ಅಧಿಕಾರಿಗಳನ್ನು ನೇಮಕ ಮಾಡುವುದು, ವಸಾಹತುಗಳಲ್ಲಿ ಜಾರಿಗೆ ಬಂದ ಕಾನೂನುಗಳನ್ನು ವಿಮರ್ಶಿಸುವುದು ಮತ್ತು ಬ್ರಿಟಿಷ್ ಸಾಮ್ರಾಜ್ಯದ ಹಿತಾಸಕ್ತಿಗಳಿಗೆ ಅನುಕೂಲಕರವಲ್ಲದ ಕಾನೂನುಗಳನ್ನು ರದ್ದುಗೊಳಿಸುವುದು – ಇವು ದಿ ಬೋರ್ಡ್ ಆಫ್ ಟ್ರೇಡ್ ಸಮಿತಿಯ ಮುಖ್ಯ ಕಾರ್ಯಗಳಾಗಿದ್ದವು. ಈ ಸಮಿತಿಯ ಕಾರ್ಯದಕ್ಷತೆಯಲ್ಲಿ ಏರುಪೇರುಗಳಿದ್ದರೂ ಕೂಡ ಅದರ ಶಿಫಾರಸುಗಳಿಗೆ ರಾಜ ಮತ್ತು ಅವನ ರಹಸ್ಯ ಸಮಿತಿಯ ಒಪ್ಪಿಗೆ ತಪ್ಪದೆ ಸಿಗುತ್ತಿತ್ತು.

ಎಲ್ಲ ವಸಾಹತುಗಳು ತಮ್ಮ ಏಜೆಂಟರನ್ನು ಲಂಡನ್‌ನಲ್ಲಿ ನೇಮಿಸಿದ್ದವು. ಈ ಏಜೆಂಟರುಗಳು ತಮ್ಮನ್ನು ನೇಮಿಸಿರುವ ವಸಾಹತಿನ ಅಭಿಪ್ರಾಯವನ್ನು ಬೋರ್ಡಿನ ಸದಸ್ಯರ ಮುಂದೆ ಮಂಡಿಸುತ್ತಿದ್ದರು. ಆಗ ಸುಪ್ರಸಿದ್ಧ ಏಜೆಂಟ್ ಆಗಿದ್ದವನು ಬೆಂಜಮಿನ್ ಫ್ರಾಂಕ್ಲಿನ್. ಇವನು ತನ್ನ ದೀರ್ಘ ಸೇವಾ ಅವಧಿಯಲ್ಲಿ ಪೆನ್ಸಿಲ್‌ವೇನಿಯ, ಜಾರ್ಜಿಯ, ನ್ಯೂ ಜರ್ಸಿ ಮತ್ತು ಮೆಸಾಚ್ಯುಸೆಟ್ಸ್ ವಸಾಹತುಗಳನ್ನು ಪ್ರತಿನಿಧಿಸಿದ್ದನು.

ಅಮೆರಿಕದಲ್ಲಿ ಬ್ರಿಟಿಷರು ಕೇಂದ್ರ ಸರ್ಕಾರವನ್ನು ಸ್ಥಾಪಿಸಲಿಲ್ಲ. ಇದು ಅಮೆರಿಕದಲ್ಲಿ ಸಂಯುಕ್ತ ಸಂಸ್ಥಾನ (Federal) ವ್ಯವಸ್ಥೆ ಬೆಳೆಯಲು ಕಾರಣವಾಯಿತು. ಈ ವ್ಯವಸ್ಥೆಯಲ್ಲಿ ಸಂಸ್ಥಾನಗಳು (States) ಸ್ವಾಯತ್ತತೆಯನ್ನು ಉಳಿಸಿಕೊಂಡು ಅನೇಕ ಕ್ಷೇತ್ರಗಳಲ್ಲಿ ಪ್ರಭುತ್ವ (Sovereign) ಹೊಂದಿ, ಸ್ವತಂತ್ರ ಘಟಕಗಳಾಗಿ ಬೆಳೆಯಲು ಸಾಧ್ಯವಾಯಿತು.

ಬ್ರಿಟಿಷರ ವಾಣಿಜ್ಯ ನೀತಿ

ಯೂರೋಪಿಯನ್ನರಿಗೆ ಅಮೆರಿಕದ ವಸಾಹತುಗಳು ಮುಖ್ಯವೆನಿಸಿದ್ದು ಆರ್ಥಿಕ ಕಾರಣಗಳಿಗಾಗಿ ಮಾತ್ರ. ೧೬, ೧೭, ೧೮ನೆಯ ಶತಮಾನಗಳ ಆರ್ಥಿಕ ಚಿಂತನಕಾರರು ಚಿನ್ನ ಮತ್ತು ಬೆಳ್ಳಿಯನ್ನು ಶೇಖರಿಸಿಟ್ಟ ಪ್ರಮಾಣ 'ಒಂದು ದೇಶದ ಅಭಿವೃದ್ಧಿಯನ್ನು ಅಳೆಯುವ ಅಳತೆಗೋಲು' ಎಂದು ನಂಬಿದ್ದರು. ಇದಕ್ಕೆ 'ವಾಣಿಜ್ಯ ತತ್ವ' ಎಂದು ಹೆಸರು. ಈ ತತ್ವದ ಪ್ರಕಾರ ವಸಾಹತುಶಾಹಿ ರಾಷ್ಟ್ರಗಳು ತಮ್ಮ ವಸಾಹತುಗಳನ್ನು ಅಲ್ಲಿ ಸಿಗಬಹುದಾದ ಚಿನ್ನ ಮತ್ತು ಬೆಳ್ಳಿಯ ಪ್ರಮಾಣಕ್ಕಾಗಿ ಅಮೂಲ್ಯವಾದ ಸ್ವತ್ತುಗಳೆಂದು ಪರಿಗಣಿಸಿದ್ದರು. ಹೊನ್ನು ಮತ್ತು ಮಣ್ಣಿಗಾಗಿ ನಡೆದ ಸ್ಪರ್ಧೆಯಲ್ಲಿ ಗೆದ್ದ ಮೊದಲ ರಾಷ್ಟ್ರ ಸ್ಪೇನ್. ಮೆಕ್ಸಿಕೋ ಮತ್ತು ಇತರ ದಕ್ಷಿಣ ಅಮೆರಿಕ ಗಣಿಗಳು ಚಿನ್ನ ಮತ್ತು ಬೆಳ್ಳಿಯನ್ನು ಅಧಿಕ ಪ್ರಮಾಣದಲ್ಲಿ ಸ್ಪೇನಿನ ಬೊಕ್ಕಸಕ್ಕೆ ಸುರಿದವು. ಅಂಥ ಗಣಿಗಳಿಲ್ಲದ ದೇಶಗಳು ಚಿನ್ನ ಮತ್ತು ಬೆಳ್ಳಿಯನ್ನು ಬೇರೆ ಮಾರ್ಗಗಳಲ್ಲಿ – ಅಂದರೆ ಮೋಸ, ವಂಚನೆ ಅಥವಾ ಸರ್ ಫ್ರಾನ್ಸಿಸ್ ಡ್ರೇಕ್‌ನಂತೆ ಕಡಲ್ಗಳ್ಳತನದಿಂದ ಸಂಪಾದಿಸುತ್ತಿದ್ದರು.

೧೭ನೆಯ ಶತಮಾನದ ಮಧ್ಯಂತರದಲ್ಲಿ ಹೆಚ್ಚಿನ ಅಪಾಯಕಾರಿಯಲ್ಲದ, ಕಾಲಕ್ರಮದಲ್ಲಿ ಹೆಚ್ಚು ಲಾಭದಾಯಕವಾಗುವಂಥ ಒಂದು ವಿಧಾನ ಬಳಕೆಗೆ ಬಂತು. ಈ ವಿಧಾನಕ್ಕೆ 'ಸಮತೋಲನದ ವ್ಯಾಪಾರ ವಿನಿಮಯ' ಎಂದು ಹೆಸರು. ಯಾವ ದೇಶ ತನ್ನ ಎಲ್ಲ ಅಗತ್ಯಗಳನ್ನು ಪೂರೈಸಿ ಸ್ವಯಂಪೂರ್ಣತೆಯನ್ನು ಪಡೆದುಕೊಂಡು, ಅದೇ ಸಮಯದಲ್ಲಿ ಬೇರೆ ದೇಶಗಳಲ್ಲಿ ಮಾರಬಹುದಾದ ವಸ್ತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪಾದನೆ ಮಾಡುವಂತಾದರೆ, ಆ ದೇಶ ತಾನು ಆಮದು ಮಾಡಿಕೊಳ್ಳುವುದಕ್ಕಿಂತ ಹೆಚ್ಚು ರಫ್ತು ಮಾಡಬಹುದು. ರಫ್ತು ಹೆಚ್ಚಾದಂತೆ, ಲಾಭ ಹೆಚ್ಚಾಗುತ್ತದೆ. ಲಾಭದಿಂದ ಬಂದ ಹಣದಿಂದ ಇತರ ವಸ್ತುಗಳನ್ನು ಕೊಳ್ಳದೆ, ಚಿನ್ನ ಮತ್ತು ಬೆಳ್ಳಿಗಳನ್ನು ಕೊಂಡು ಸಂಗ್ರಹಿಸಬಹುದು. ಇದರಿಂದ ಆ ದೇಶ ಅಭಿವೃದ್ಧಿ ಹೊಂದುತ್ತದೆ. ಇಂಥ ದೇಶ ಅನುಕೂಲಕರವಾದ

ಸಮತೋಲನ ವ್ಯಾಪಾರ ವಿನಿಮಯ ಹೊಂದಿದೆ (Favorable Balance of Trade) ಎಂದು ಅರ್ಥಶಾಸ್ತ್ರಜ್ಞರು ನಿರ್ಧರಿಸುತ್ತಿದ್ದರು.

'ವಾಣಿಜ್ಯ ತತ್ವ' ದ ಸಾರಾಂಶವೆಂದರೆ ರಫ್ತುಮಾಡುವ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಿ, ಆಮದು ಮಾಡಿಕೊಳ್ಳುವುದನ್ನು ಎಲ್ಲ ರೀತಿಯಿಂದ ಕಡಿಮೆ ಮಾಡಬೇಕಾದುದು ಅಗತ್ಯ. ಇಂಥ ವ್ಯವಸ್ಥೆಯಲ್ಲಿ ಚಿನ್ನ ಬೆಳ್ಳಿ ಅದಿರು ಸಿಗುವಂಥ ಜಾಗಗಳು ಇಲ್ಲದ ವಸಾಹತುಗಳು ಕೂಡ ಅಮೂಲ್ಯ ಎಂದು ಪರಿಗಣಿಸಬೇಕು. ಏಕೆಂದರೆ ಆ ವಸಾಹತಿನಲ್ಲಿರುವ ಕಚ್ಚಾ ಪದಾರ್ಥಗಳನ್ನೇ ಬಳಸಿ ವಸ್ತುಗಳನ್ನು ಉತ್ಪಾದಿಸಿ ರಫ್ತು ಮಾಡಬಹುದು. ವಸಾಹತುಗಳು ಉತ್ಪಾದಿಸಿದ ವಸ್ತುಗಳಿಗೆ ಮಾರುಕಟ್ಟೆಗಳಾಗಬಹುದು. ಚಿನ್ನ ಬೆಳ್ಳಿ ಅಧಿಕ ಪ್ರಮಾಣದಲ್ಲಿ ಹೊಂದಿರುವುದು ಐಶ್ವರ್ಯದ ಕುರುಹು ಎಂದು ಪರಿಗಣಿಸಿದರೆ, ಐಶ್ವರ್ಯಕ್ಕೆ ದಾರಿ ವ್ಯಾಪಾರ; ದಾರಿ ತೋರುವವರು ವರ್ತಕರು. ಅವರೇ ರಾಜ್ಯವೆಂಬ ಹಡಗನ್ನು ಆರ್ಥಿಕ ಅಭಿವೃದ್ಧಿ ಮತ್ತು ರಾಜಕೀಯ ಪ್ರಾಬಲ್ಯದೆಡೆಗೆ ನಡೆಸಿಕೊಂಡು ಹೋಗುವ ನಾವಿಕರು!

ವ್ಯಕ್ತಿಯೇ ಆಗಲಿ ಸರ್ಕಾರವೇ ಆಗಲಿ ರಫ್ತು ಮಾಡಲು ಹೆಚ್ಚಿನ ವಸ್ತುಗಳೊ ಅಥವಾ ಬೇರೆ ಏನಾದರೂ ಇರಲೇಬೇಕು. ಆದ್ದರಿಂದ ಆ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಬೇಕು. ತಮ್ಮ ದೇಶದಲ್ಲಿ ಉತ್ಪಾದನೆ ಹೆಚ್ಚಿಸಲು ಬ್ರಿಟಿಷ ಪಾರ್ಲಿಮೆಂಟ್ ಹೊರದೇಶದಿಂದ ಬರುವ ಆಹಾರ ಪದಾರ್ಥಗಳ ಮೇಲೆ ಹೆಚ್ಚು ತೆರಿಗೆ ಹಾಕಿತು. ಹತ್ತಿಯ ಬಟ್ಟೆ, ಕಬ್ಬಿಣ ಮತ್ತು ಇತರ ಪದಾರ್ಥಗಳ ಉತ್ಪಾದನೆ ಹೆಚ್ಚಿಸಲು ಸರ್ಕಾರದ ಹಣಸಹಾಯ, ಸುಂಕ ರಿಯಾಯಿತಿ ಮುಂತಾದ ಅನುಕೂಲಗಳನ್ನು ಮಾಡಿಕೊಟ್ಟಿತು. ದೇಶದ ಉತ್ಪಾದನೆಯನ್ನು ಹೆಚ್ಚಿಸುವುದನ್ನೇ ಗುರಿಯಾಗಿಟ್ಟುಕೊಂಡು ಪಾರ್ಲಿಮೆಂಟ್ ಒಂದು ಕಾಯಿದೆಗಳ ಸರಣಿಯನ್ನೇ ಜಾರಿಗೆ ತಂದಿತು. ಈ ಕಾಯಿದೆಗಳಿಗೆ 'ನೌಕಾಸಂಚಾರದ ಕಾಯಿದೆಗಳು' (Navigation Acts) ಎಂದು ಹೆಸರು. ಇವು ಒಂದೊಂದಾಗಿ ಜಾರಿಗೆ ಬರಲು ಅರ್ಧಶತಮಾನ ಹಿಡಿಯಿತು. ಹಾಗೆ ಜಾರಿಗೆ ಬರಲು ಕಾರಣ – ಬ್ರಿಟಿಷ್ ವ್ಯಾಪಾರೀ ನೌಕಾದಳವನ್ನು ಅಭಿವೃದ್ಧಿಗೊಳಿಸುವುದು, ವಸಾಹತುಗಳಿಂದ ಬರುತ್ತಿದ್ದ ಕಚ್ಚಾ ಪದಾರ್ಥಗಳು ಬೇರೆ ಎಲ್ಲೂ ಹೋಗದೆ ನೇರವಾಗಿ ಇಂಗ್ಲೆಂಡಿಗೆ ಬರುವಂತೆ ಮಾಡುವುದು, ಬೇರೆ ದೇಶಗಳಲ್ಲಿ ತಯಾರಾದ ವಸ್ತುಗಳನ್ನು ಮತ್ತು ಬೇರೆ ದೇಶದ ನೌಕೆಗಳನ್ನು ವಸಾಹತುಗಳ ಬಂದರಿಗೆ ಬರದಂತೆ ತಡೆಯುವುದು. ಇವುಗಳಲ್ಲದೆ ಬೇರೆ ಬೇರೆ ಉದ್ದೇಶಗಳಿಗಾಗಿ ಜಾರಿಗೆ ತಂದ ಕಾಯಿದೆಗಳು ಅಮೆರಿಕದ ವಸಾಹತುಗಳ ಮೇಲೆ ಪರಿಣಾಮ ಉಂಟುಮಾಡಿದವು.

ನೌಕಾಸಂಚಾರದ ಕಾಯಿದೆಗಳು

೧೬೫೦ರ ದಶಕ ಆಲಿವರ್ ಕ್ರಾಮ್‌ವೆಲನ ಕಾಲ. ಆ ಕಾಲದಲ್ಲಿ ಡಚ್ಚರು ಕಡಲಾಚೆಯ

ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರಗಳಲ್ಲಿ ಇಂಗ್ಲಿಷರೊಡನೆ ತೀವ್ರವಾದ ಸ್ಪರ್ಧೆಗೆ ಇಳಿದಿದ್ದರು. ೧೬೫೦ಕ್ಕೆ ಹಿಂದೆ ಅಮೆರಿಕ ವಸಾಹತುಗಳು ರಫ್ತು ಮಾಡುತ್ತಿದ್ದ ವಸ್ತುಗಳು ಡಚ್ಚರ ನೌಕೆಗಳಲ್ಲಿ ಯೂರೋಪಿಗೆ ತಲುಪುತ್ತಿದ್ದದ್ದು ಪದ್ಧತಿ. ಈ ಪದ್ಧತಿಯನ್ನು ತಪ್ಪಿಸಲು ಇಂಗ್ಲೆಂಡಿನ ಪಾರ್ಲಿಮೆಂಟ್ ೧೬೫೦-೫೧ರಲ್ಲಿ ಇಂಗ್ಲೆಂಡಿನ ಅಮೆರಿಕ ವಸಾಹತುಗಳಿಗೆ ಬೇರೆ ದೇಶದ ಹಡಗುಗಳು ಹೋಗದಂತೆ ತಡೆಯಾಜ್ಞೆ ಹೊರಡಿಸಿತು. ಇಂಗ್ಲೆಂಡ್ ಆಮದು ಮಾಡಿಕೊಂಡ ಪದಾರ್ಥಗಳನ್ನು ಇಂಗ್ಲಿಷ್ ಹಡಗುಗಳು ಅಥವಾ ಆ ಪದಾರ್ಥ ಗಳನ್ನು ರಫ್ತು ಮಾಡಿದ ದೇಶದ ಹಡಗುಗಳು ಮಾತ್ರ ಇಂಗ್ಲೆಂಡಿಗೆ ತಲುಪಿಸಬೇಕಾಗಿತ್ತು. ಬೇರೆ ದೇಶದ ಹಡಗುಗಳು ಇಂಗ್ಲೆಂಡಿನ ತೀರಪ್ರದೇಶಗಳೊಡನೆ ವ್ಯಾಪಾರ ಮಾಡುವುದನ್ನು ನಿಲ್ಲಿಸಲಾಯಿತು. ಇವು ಇಂಗ್ಲಿಷರ ಮತ್ತು ಡಚ್ಚರ ನಡುವೆ ಕದನಗಳಿಗೆ ಕಾರಣವಾದವು.

೧೬೬೦ರಲ್ಲಿ ಎರಡನೆಯ ಚಾರ್ಲ್ಸ್ ಇಂಗ್ಲೆಂಡಿನ ರಾಜನಾದ ಮೇಲೆ ಬ್ರಿಟಿಷ್ ವ್ಯಾಪಾರೀ ನೌಕಾದಳ ವಿಸ್ತಾರಗೊಂಡಿತು. ಇಂಗ್ಲೆಂಡಿನ ರಾಯಲ್ ನೌಕಾದಳ ಕ್ರಮೇಣವಾಗಿ ಡಚ್ಚರ ಪ್ರಭಾವ ಕ್ಷೀಣಿಸುವಂತೆ ಮಾಡಿತು. ೧೬೬೦ರಲ್ಲಿ ಜಾರಿಗೆ ಬಂದ ಕಾಯಿದೆ ವಸಾಹತುಗಳ ಎಲ್ಲ ವ್ಯಾಪಾರವನ್ನು ಬ್ರಿಟಿಷ್ ಹಡಗುಗಳಿಗೆ ಮಾತ್ರ ಮೀಸಲಾಗಿಸಿತು. ಮೇಲಾಗಿ ಆ ಹಡಗುಗಳಲ್ಲಿ ಕ್ಯಾಪ್ಟನ್ ಮತ್ತು ನಾವಿಕರಲ್ಲಿ ಮುಕ್ಕಾಲು ಭಾಗ ಇಂಗ್ಲಿಷರಾಗಿರಬೇಕಾದುದು ಅಗತ್ಯ ಎಂದು ಸಾರಿತು. ಬ್ರಿಟಿಷ್ ಪಾರ್ಲಿಮೆಂಟ್ ಅಮೆರಿಕ ವಸಾಹತುಗಳಿಗೆ ಹೋಗುವ ಎಲ್ಲಾ ಯೂರೋಪಿಯನ್ ವಸ್ತುಗಳನ್ನು ಮೊದಲು ಇಂಗ್ಲೆಂಡಿಗೆ ತಂದು ನಂತರ ವಸಾಹತುಗಳಿಗೆ ರವಾನಿಸಬೇಕಾದುದು ಅಗತ್ಯವೆಂದು ನಿರ್ದೇಶಿಸಿತು.

ಇಂಗ್ಲೆಂಡಿನ ವರ್ತಕರು ಅಮೆರಿಕ ವಸಾಹತುಗಳನ್ನು ಒಂದು ಮಹಾ ಆರ್ಥಿಕ ವ್ಯವಸ್ಥೆಯ ಅಂಗವೆಂದು ಭಾವಿಸಿದ್ದರು. ಆ ಆರ್ಥಿಕ ವ್ಯವಸ್ಥೆಯಲ್ಲಿ ಇಂಗ್ಲೆಂಡ್ ಉತ್ಪಾದನೆ ಯಲ್ಲಿ ವಿಶಿಷ್ಟ ಪರಿಣತಿ ಪಡೆದ ಮಹಾ ಉತ್ಪಾದನಾ ಕೇಂದ್ರ ಮತ್ತು ವಸಾಹತುಗಳು ಈ ಕೇಂದ್ರಕ್ಕೆ ಕಚ್ಚಾ ಪದಾರ್ಥಗಳನ್ನು ಒದಗಿಸುವ ಘಟಕಗಳೆಂದು ತಿಳಿದಿದ್ದರು. ಆದ್ದರಿಂದ ಇಂಗ್ಲೆಂಡಿನಲ್ಲಿ ಹೊಗೆಸೊಪ್ಪು ಬೆಳೆಯುವುದನ್ನು ನಿಷೇಧಿಸಲಾಗಿತ್ತು. ಈ ವ್ಯವಸ್ಥೆಯನ್ನು ವಸಾಹತುಕಾರರು ಒಪ್ಪಿದ್ದರು. ಏಕೆಂದರೆ ಆಗ ಅಮೆರಿಕ ಇನ್ನೂ ಅಭಿವೃದ್ಧಿ ಹೊಂದಿರದ ಪ್ರದೇಶವಾಗಿತ್ತು. ಆದರೆ ಈ ಅಭಿವೃದ್ಧಿಗೊಳ್ಳದ ದೇಶ ಪ್ರಕೃತಿ ಸಂಪತ್ತಿನಿಂದ ತುಂಬಿ ತುಳುಕುತ್ತಿತ್ತು. ಇದು ಇಂಗ್ಲೆಂಡಿಗೆ ಕಚ್ಚಾಪದಾರ್ಥಗಳನ್ನು ಒದಗಿಸುವ ಅಕ್ಷಯಪಾತ್ರೆ ಯಾಗಿತ್ತು.

ಈ ಎಲ್ಲ ಕಾಯಿದೆಗಳಲ್ಲಿ ಬ್ರಿಟಿಷರ ಸ್ವಾರ್ಥಪರತೆಯನ್ನು ಕಾಣಬಹುದು. ಆದರೆ 'ಕಬ್ಬಿಣದ ಕಾಯಿದೆ' (Iron Act) ಇದಕ್ಕೆ ಹೊರತಾಗಿದೆ. ಅಮೆರಿಕದ ಕಬ್ಬಿಣ ಕೈಗಾರಿಕೆ ಯನ್ನು ಅಭಿವೃದ್ಧಿಗೊಳಿಸಲು ಈ ಕಾಯಿದೆಯನ್ನು ಅನುಮೋದಿಸಲಾಯಿತು. ಅಮೆರಿಕ

ವಸಾಹತುಗಳಿಂದ ಇಂಗ್ಲೆಂಡಿಗೆ ರಫ್ತು ಮಾಡಲ್ಪಡುತ್ತಿದ್ದ ಕಚ್ಚಾ ಕಬ್ಬಿಣ (pig iron), ಕಬ್ಬಿಣದ ಸರಳು ಮುಂತಾದವುಗಳ ಮೇಲಿನ ಎಲ್ಲಾ ತೆರಿಗೆಯನ್ನು ತೆಗೆದುಹಾಕಲಾಯಿತು. ಇದರಿಂದ ಅಮೆರಿಕದಲ್ಲಿ ಕಬ್ಬಿಣದ ಕೈಗಾರಿಕೆ ಬೆಳೆಯಲು ಸಹಾಯವಾಯಿತು. ಮೇಲೆ ತಿಳಿಸಿದ ಎಲ್ಲ ಕಾಯಿದೆಗಳಿಂದ ಇಂಗ್ಲೆಂಡ್, ಅಮೆರಿಕ ವಸಾಹತುಗಳ ಮುಖ್ಯ ಗಿರಾಕಿಯಾಯಿತು, ಅಂದರೆ ಅಮೆರಿಕದ ಕಚ್ಚಾ ಪದಾರ್ಥಗಳನ್ನು ಕೊಳ್ಳುವ ಬಂಡವಾಳಗಾರನಾಯಿತು ಮತ್ತು ವಸಾಹತುಗಾರರಿಗೆ ಬೇಕಾಗಿದ್ದ ಇಂಗ್ಲೆಂಡ್ ಉತ್ಪಾದಿಸುತ್ತಿದ್ದ ವಸ್ತುಗಳನ್ನು ಒದಗಿಸುವ ವ್ಯಾಪಾರಿಯಾಯಿತು. ಇಂಗ್ಲೆಂಡ್ ಜಾರಿಗೆ ತಂದ ಕಾಯಿದೆಗಳು ಅಮೆರಿಕ ವಸಾಹತುಗಳ ಉದ್ಯೋಗಗಳಿಗೆ ಅನ್ವಯವಾಗಲಿಲ್ಲ. ಈ ಕಾಯಿದೆಗಳಿಂದ ನೌಕಾನಿರ್ಮಾಣಕ್ಕೆ ಉತ್ತೇಜನ ದೊರಕಿ ಅಮೆರಿಕಕ್ಕೆ ಅನುಕೂಲವೆ ಆಯಿತು. ಅನೇಕ ಇಂಗ್ಲಿಷ್ ವ್ಯಾಪಾರಿಗಳು ವಸಾಹತುಗಳಲ್ಲಿ ತಯಾರಾದ ಹಡಗುಗಳನ್ನು ಕೊಂಡರು. ರಮ್ ಉತ್ಪಾದನೆ, ಪೀಪಾಯಿಗಳ ತಯಾರಿಕೆ ಮತ್ತು ಷೂಗಳ ತಯಾರಿಕೆ ಮುಂತಾದ ಉದ್ಯೋಗಗಳು ಯಾವ ಅಡೆತಡೆಗಳಿಲ್ಲದೆ ನಡೆಯುತ್ತಿದ್ದವು.

ಇಂಗ್ಲೆಂಡ್ ಜಾರಿಗೆ ತಂದ ನೌಕಾಸಂಚಾರದ ಕಾಯಿದೆ ಮುಂತಾದ ನಿರ್ಬಂಧಗಳು ಸರ್ಕಾರದ ಅಸಮರ್ಥ ಅಧಿಕಾರಿಗಳಿಂದಾಗಿ ಪರಿಣಾಮಕಾರಿಯಾಗಲಿಲ್ಲ. ೧೭ ಮತ್ತು ೧೮ನೆಯ ಶತಮಾನಗಳ ಬ್ರಿಟಿಷ್ ಸರ್ಕಾರ ಬೃಹದಾಕಾರವಾಗಿದ್ದು ಭ್ರಷ್ಟಾಚಾರದಿಂದ ಕಲುಷಿತಗೊಂಡಿತ್ತು. ರಾಜ ಮತ್ತು ಅವನ ಮಂತ್ರಿಗಳು ಸರ್ಕಾರಿ ಅಧಿಕಾರದ ಸ್ಥಾನಗಳನ್ನು, ರಾಜಕೀಯ ಅನುಕೂಲತೆ ಪಡೆಯಲು ಮತ್ತು ತಮ್ಮ ಸಾಲಗಳನ್ನು ತೀರಿಸಲು, ಆಡಳಿತ ನಿರ್ವಹಿಸಲು ಗೊತ್ತಿಲ್ಲದ ಅಸಮರ್ಥರಿಗೆ ಮಾರಿಕೊಳ್ಳುತ್ತಿದ್ದರು. ಕಳ್ಳ ಸಾಗಾಣಿಕೆ ಕೆಲವರ ಮುಖ್ಯ ಕಸುಬಾಯಿತು. ಇಂಗ್ಲಿಷ್ ಅಧಿಕಾರಿಗಳಿಗೆ ಲಂಚ ರುಷುವತ್ತುಗಳನ್ನು ಕೊಡುವುದು ಸಂಪ್ರದಾಯವಾಗಿತ್ತು. ಹೀಗೆ ಬ್ರಿಟಿಷರ ವಾಣಿಜ್ಯ ನೀತಿ ವಸಾಹತುಗಳ ಕೆಲವು ಆಸಕ್ತಿಗಳಿಗೆ ಮಾರಕವಾಯಿತು; ಮುಖ್ಯವಾಗಿ ಹೊಗೆಸೊಪ್ಪು ಬೆಳೆಯುವವರಿಗೆ ಅನುಕೂಲವಾಯಿತು. ಅನುಕೂಲ ಪಡೆದವರು ಈ ಕಾಯಿದೆಯ ಲೋಪದೋಷಗಳನ್ನು ಉಪಯೋಗಿಸಿಕೊಂಡು ಕಳ್ಳ ಸಾಗಾಣಿಕೆ ಮುಂತಾದ ನ್ಯಾಯಬಾಹಿರವಾದ ವ್ಯವಹಾರಗಳಲ್ಲಿ ನಿರತರಾಗಿ ಹಣವಂತರಾದರು. ಈ ವ್ಯಾಪಾರ ವ್ಯವಹಾರಗಳು ತಮ್ಮ ಕಣ್ಣೆದುರು ನಡೆಯುತ್ತಿದ್ದರೂ ಅಧಿಕಾರಿಗಳು ಬೇರೆ ಕಡೆಗೆ ಮುಖ ತಿರುಗಿಸಿ, ನೋಡಿಯೂ ನೋಡದಂತೆ ಇದ್ದುಬಿಡುತ್ತಿದ್ದರು. ಇದು ಪರೋಕ್ಷವಾಗಿ ವಸಾಹತುಕಾರರು ಸ್ವಂತ ಉದ್ಯೋಗ ಮತ್ತು ಕೈಗಾರಿಕೆಗಳನ್ನು ಬೆಳೆಸಲು ಸಹಾಯವಾಯಿತು.

ಬ್ರಿಟಿಷ್ ಮತ್ತು ಫ್ರೆಂಚರ ನಡುವಿನ ಪೈಪೋಟಿ ಹಾಗೂ ಯುದ್ಧ

ತೊನ್ನು, ಮಣ್ಣು ಮತ್ತು ಕಚ್ಚಾಪದಾರ್ಥಗಳಿಗಾಗಿ ಇಂಗ್ಲೆಂಡ್ ಮತ್ತು ಇತರ ಯೂರೋಪಿಯನ್ ದೇಶಗಳು ತೀವ್ರ ಪೈಪೋಟಿ ನಡೆಸಿದ್ದವು. ೧೭ ಮತ್ತು ೧೮ನೆಯ

ಶತಮಾನಗಳಲ್ಲಿ ಈ ದೇಶಗಳಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಯುದ್ಧಗಳು ನಡೆಯುತ್ತಲೇ ಇದ್ದವು. ಪ್ರಬಲ ರಾಷ್ಟ್ರಗಳಿಗೆ ಪರಸ್ಪರ ಸಂಘರ್ಷಣೆ ನಡೆದಾಗ ಆ ರಾಷ್ಟ್ರಗಳು ಎಲ್ಲಿ ಮುಖಾಮುಖಿ ಸಾಧ್ಯವೋ ಅಲ್ಲಿ ಅಂದರೆ ಅಮೆರಿಕದಲ್ಲಿ ಹಾಗೂ ಇತರ ಕಡೆಗಳಲ್ಲಿ ಮತ್ತು ಯೂರೋಪಿನಲ್ಲಿ – ಹೋರಾಟ ನಡೆಸಿದವು.

ಹೊನ್ನು , ಮಣ್ಣು ಮತ್ತು ಮಾರುಕಟ್ಟೆಗಳ ಮೇಲೆ ಸಾರ್ವಭೌಮತ್ವ ಸ್ಥಾಪಿಸಲು ಸೆಣಸಾಡುತ್ತಿದ್ದ ಪ್ರಬಲ ರಾಷ್ಟ್ರಗಳ ಸ್ವಾರ್ಥಪರತೆ ಮತ್ತು ದುರಾಶೆಗಳಿಗೆ ಮಿತಿಯೇ ಇರಲಿಲ್ಲ. ಅತ್ಯಂತ ವಿಶಾಲವಾದ ಅಮೆರಿಕ ಕೂಡ ಇಂಗ್ಲಿಷರಿಗೆ, ಫ್ರೆಂಚರಿಗೆ, ಡಚ್ಚರಿಗೆ ಮತ್ತು ಸ್ಪಾನಿಷರಿಗೆ ಸಾಲದೇ ಹೋಯಿತು. ಅಮೆರಿಕದ ಸಮೃದ್ಧವಾದ ಪ್ರಕೃತಿಸಂಪತ್ತು ಶಾಂತಿ ಮತ್ತು ಸೌಹಾರ್ದತೆಗಳನ್ನು ಉಂಟುಮಾಡುವುದರ ಬದಲು ಬೇರೆ ಬೇರೆ ರಾಷ್ಟ್ರಗಳಲ್ಲಿ ದ್ವೇಷಾಸೂಯೆಗಳನ್ನು ಮತ್ತು ಹಿಂಸಾಪ್ರವೃತ್ತಿಯನ್ನು ಪ್ರಚೋದಿಸಿತು. ೧೬ನೆಯ ಶತಮಾನದಲ್ಲಿ ಫ್ರೆಂಚರ ಮತ್ತು ಸ್ಪಾನಿಷರ ನಡುವೆ ಫ್ಲಾರಿಡಾದಲ್ಲಿ ಭೀಕರ ಕದನ ನಡೆಯಿತು.

ಉತ್ತರ ಅಟ್ಲಾಂಟಿಕ್ ಸಾಗರದ ಮೀನು ಹಿಡಿಯುವ ಪ್ರದೇಶಗಳು ಕೆನಡಾ ಮತ್ತು ನ್ಯೂ ಇಂಗ್ಲೆಂಡ್ ವಸಾಹತಿನ ನಡುವೆ ಘರ್ಷಣೆಗೆ ಕಾರಣವಾದವು. ಫ್ರೆಂಚರು ಮತ್ತು ಇಂಗ್ಲಿಷರು ಮೇನ್ (Maine), ನೋವಾಸ್ಕೋಶಿಯ ಮತ್ತು ನ್ಯೂ ಫೌಂಡ್‌ಲ್ಯಾಂಡ್ ಬಂದರುಗಳನ್ನು ಸ್ವಾಧೀನ ಪಡಿಸಿಕೊಳ್ಳಲು ಸತತವಾಗಿ ಕಾದಾಡಿದರು. ನುಣುಪು ಕೂದಲಿನ ಚರ್ಮದ ವ್ಯಾಪಾರ ಇನ್ನೂ ಹೆಚ್ಚಿನ ಘರ್ಷಣೆಗಳಿಗೆ ಪ್ರಚೋದನೆ ನೀಡಿತು. ಚರ್ಮದ ವ್ಯಾಪಾರಿಗಳು ಬೇಟೆಯಾಡುವ ಸ್ಥಳಗಳ ಮೇಲೆ ನಿಯಂತ್ರಣ ಸಾಧಿಸಲು ಸೆಣಸಾಡಿದರು. ಫ್ರೆಂಚರು ತಮ್ಮ ವ್ಯಾಪಾರವನ್ನು ಅಲ್‌ಗಾನ್‌ಕ್ವಿನ್ ಮತ್ತು ಹ್ಯೂರಾನ್ ಇಂಡಿಯನ್ನರ ಮೂಲಕ ನಡೆಸುತ್ತಿದ್ದರು. ಇದರಿಂದ ಫ್ರೆಂಚರಿಗೂ 'ಪಂಚ ರಾಷ್ಟ್ರಗಳು' ಎಂದು ಕರೆಯಲ್ಪಡುತ್ತಿದ್ದ ಇರಾಕ್ವೈಸ್ ಇಂಡಿಯನ್ ಬುಡಕಟ್ಟುಗಳ ಒಕ್ಕೂಟಕ್ಕೂ ಘರ್ಷಣೆ ಪ್ರಾರಂಭವಾಗಿ ೧೬೪೯ರ ಹೊತ್ತಿಗೆ ಅವರ ನಡುವೆ ದೊಡ್ಡ ಯುದ್ಧ ಪ್ರಾರಂಭವಾಗಿ ಅನೇಕ ದಶಕಗಳವರೆಗೆ ಮುಂದುವರಿಯಿತು. ಬ್ರಿಟಿಷರು ಡಚ್ಚರನ್ನು ಸೋಲಿಸಿ ಅವರ ಆಡಳಿತಕ್ಕೆ ಒಳಪಟ್ಟಿದ್ದ ನ್ಯೂ ಆ್ಯಮ್‌ಸ್ಟರ್‌ಡ್ಯಾಮ್ (ಈಗಿನ ನ್ಯೂ ಯಾರ್ಕ್)ನ್ನು ವಶಪಡಿಸಿಕೊಂಡ ಮೇಲೆ, ಇಂಗ್ಲಿಷರು ಇರಾಕ್ವೈಸ್ ಇಂಡಿಯನ್ನರೊಡನೆ ಸ್ನೇಹ ಬೆಳಸಿ ಅವರಿಂದ ನುಣುಪು ಕೂದಲಿನ ಚರ್ಮಗಳನ್ನು ಕೊಂಡು ಅದಕ್ಕೆ ಬದಲಾಗಿ ಅವರಿಗೆ ಬಂದೂಕುಗಳನ್ನು ಒದಗಿಸುತ್ತಿದ್ದರು. ಇರಾಕ್ವೈಸ್ ಇಂಡಿಯನ್ನರು ಬ್ರಿಟಿಷ್ ಮತ್ತು ಫ್ರೆಂಚರಿಗೆ ನಡೆದ ಕೊನೆಯ ಹಾಗೂ ನಿರ್ಣಯಕಾರಿ ಯುದ್ಧದಲ್ಲಿ ಮುಖ್ಯ ಪಾತ್ರ ವಹಿಸಿದರು.

ಹಲವಾರು ವರ್ಷಗಳಿಂದ ಫ್ರೆಂಚರು ಅಮೆರಿಕದ ವಾಯುವ್ಯ ಪ್ರದೇಶದಲ್ಲಿ ಅನೇಕ

ಸಣ್ಣ ವ್ಯಾಪಾರಕಟ್ಟೆಗಳನ್ನು ಸ್ಥಾಪಿಸಿದ್ದರು. ಇಂಗ್ಲಿಷರು ಒಹಾಯೊ ನದಿಯ ಉತ್ತರ ಪ್ರಾಂತದಲ್ಲಿ ತಮ್ಮ ವ್ಯಾಪಾರಕಟ್ಟೆಗಳನ್ನು ಸ್ಥಾಪಿಸುತ್ತ ಬಂದರು. ೧೭೪೮ರಲ್ಲಿ ಇಂಗ್ಲಿಷರು ಪಶ್ಚಿಮ ಒಹಾಯೊ ಪ್ರಾಂತದಲ್ಲಿ ಒಂದು ಕೋಟೆಯನ್ನು ಕಟ್ಟಿದರು. ಹೀಗೆ ತಮ್ಮ ನೆಲೆಗಳನ್ನು ವಿಸ್ತರಿಸುತ್ತ, ಮೊದಲು ದೂರದಲ್ಲಿದ್ದ ಫ್ರೆಂಚರು ಮತ್ತು ಇಂಗ್ಲಿಷರು ಹತ್ತಿರ ಹತ್ತಿರ ಸರಿದು ಕಡೆಯಲ್ಲಿ ಮುಖಾಮುಖಿಯಾಗಿ ಸಂಧಿಸಿದರು. ಫ್ರೆಂಚರು ಬಹಳ ಕಾಲದಿಂದ ತಮ್ಮದು ಎಂದು ತಿಳಿದುಕೊಂಡಿದ್ದ ಭೂಪ್ರದೇಶದಲ್ಲಿ ಇಂಗ್ಲಿಷರು ಪ್ರವೇಶಿಸಿದ್ದನ್ನು ಕಂಡು ಕೋಪಾವಿಷ್ಟರಾದರು. ೧೭೫೨ರಲ್ಲಿ ಫ್ರೆಂಚರು ಪಶ್ಚಿಮ ಒಹಾಯೊದಲ್ಲಿದ್ದ ಇಂಗ್ಲಿಷರ ಕೋಟೆಯ ಮೇಲೆ ದಿಢೀರನೆ ದಾಳಿ ಮಾಡಿ ಅದನ್ನು ನಾಶ ಮಾಡಿ ಅಳಿದುಳಿದ ಇಂಗ್ಲಿಷರನ್ನು ಪೆನ್ಸಿಲ್‌ವೇನಿಯಕ್ಕೆ ಓಡಿಸಿದರು. ನಂತರ ಅವರು ಈರಿ (Erie) ಸರೋವರದಿಂದ ಪೆನ್ಸಿಲ್‌ವೇನಿಯ ಸೆರಗಿನ ಉದ್ದಕ್ಕೂ ಅನೇಕ ಕೋಟೆಗಳನ್ನು ಕಟ್ಟಿದರು. ಪೆನ್ಸಿಲ್‌ವೇನಿಯ ಅಧಿಕಾರಿಗಳು ಇದಕ್ಕೆ ಹೆಚ್ಚಿನ ಗಮನ ಕೊಡಲಿಲ್ಲ.

ವರ್ಜೀನಿಯಾದ ಲೆಫ್ಟಿನೆಂಟ್ ಗವರ್ನರ್ ಆಗಿದ್ದ ರಾಬರ್ಟ್ ಡಿನ್‌ವಿಡ್ಡೀ ಆಗ ಇಪ್ಪತ್ತೊಂದು ವರ್ಷದವ, ಭೂಮಿಯನ್ನು ಅಳತೆ ಮಾಡುವ ಕೆಲಸದಲ್ಲಿದ್ದ ಜಾರ್ಜ್ ವಾಷಿಂಗ್‌ಟನ್‌ನನ್ನು ಫ್ರೆಂಚರು ವರ್ಜೀನಿಯ ಪ್ರಾಂತದೊಳಗೆ ಅತಿಕ್ರಮಣ ಮಾಡಿರುವುದಕ್ಕೆ ಎಚ್ಚರಿಕೆ ನೀಡಲು ಕಳುಹಿಸಿಕೊಟ್ಟನು. ವಾಷಿಂಗ್‌ಟನ್ ವಾಯುವ್ಯ ಪ್ರಾಂತಕ್ಕೆ ಪ್ರಯಾಣ ಬೆಳಸಿ ಅಲ್ಲಿನ ಕೋಟೆಯ ರಕ್ಷಣಾಧಿಕಾರಿಗೆ ಎಚ್ಚರಿಕೆಯ ಸಂದೇಶವನ್ನು ತಿಳಿಸಿದನು. ಆದರೆ ಆ ಸಂದೇಶ ರಕ್ಷಣಾಧಿಕಾರಿಯ ಮೇಲೆ ಯಾವ ಪರಿಣಾಮವನ್ನೂ ಮಾಡಲಿಲ್ಲ. ವಾಷಿಂಗ್‌ಟನ್ ವಾಪಸು ಬಂದು ಡಿನ್‌ವಿಡ್ಡೀಗೆ ಕೊಟೆಯ ರಕ್ಷಣಾಧಿಕಾರಿ 'ನಾವು ಒಹಾಯೊ ಪ್ರಾಂತವನ್ನು ಖಂಡಿತ ವಶಪಡಿಸಿಕೊಳ್ಳುತ್ತೇವೆ' ಎಂದು ಹೇಳಿದ್ದನ್ನು ವರದಿ ಮಾಡಿದನು. ನಂತರ ಗವರ್ನರ್ ೧೭೫೪ರಲ್ಲಿ ಅವನಿಗೆ ಲೆಫ್ಟಿನೆಂಟ್ ಕರ್ನಲ್ ಆಗಿ ಬಡ್ತಿ ನೀಡಿ, ನೂರ ಐವತ್ತು ಸೈನಿಕರೊಂದಿಗೆ ದೌಡಾಯಿಸಿ, ಫ್ರೆಂಚರು ಕಟ್ಟಿದ್ದ ಕೋಟೆಗಳ ಸ್ವಲ್ಪ ದಕ್ಷಿಣಕ್ಕಿರುವ, ಯುದ್ಧದಲ್ಲಿ ಸೈನ್ಯವನ್ನು ಇಳಿಸಲು ಅನುಕೂಲವಾದ ಒಂದು ಸ್ಥಳವನ್ನು ವಶಪಡಿಸಿಕೊಳ್ಳುವಂತೆ ಆಜ್ಞಾಪಿಸಿ ಕಳುಹಿಸಿದನು. ಉತ್ಸಾಹಶಾಲಿಯಾದರೂ ಯುದ್ಧದಲ್ಲಿ ಅನುಭವವಿಲ್ಲದ ವಾಷಿಂಗ್‌ಟನ್ ತನಗೆ ವಹಿಸಿದ ಕೆಲಸವನ್ನು ಸಮರ್ಪಕವಾಗಿ ಮಾಡಲಿಲ್ಲ. ಅವನು ತನ್ನ ಸೈನ್ಯದ ತುಕಡಿಯೊಂದಿಗೆ ಒಹಾಯೊ ನದಿ ಕವಲೊಡೆಯುವ ಜಾಗ ಸೇರುವುದರೊಳಗೆ ಫ್ರೆಂಚರು ಆ ಪ್ರದೇಶವನ್ನು ಆಕ್ರಮಿಸಿಕೊಂಡು ಒಂದು ಪ್ರಬಲವಾದ ಕೋಟೆಯನ್ನು ಕಟ್ಟಲು ಪ್ರಾರಂಭಿಸಿದ್ದರು. ವಾಷಿಂಗ್‌ಟನ್ ತನ್ನ ಸೈನ್ಯದ ತುಕಡಿಯ ನಾಲ್ಕು ಪಟ್ಟು ಫ್ರೆಂಚ್ ಸೈನಿಕರಿದ್ದಾರೆ ಎಂದು ಗೊತ್ತಿದ್ದೂ ಅವಿವೇಕದಿಂದ ಮುನ್ನುಗ್ಗಿದನು. ಹೀಗೆ ಮುನ್ನುಗ್ಗಿ ಹೋಗುತ್ತಿರುವಾಗ ಅಕಸ್ಮಾತ್ತಾಗಿ ಸಿಕ್ಕಿದ ಫ್ರೆಂಚರ ಒಂದು ಸ್ಥಳಶೋಧಕ ದಳವನ್ನು ಸೋಲಿಸಿ ಹಿಂದಕ್ಕೆ ಅಟ್ಟಿದನು. ಇದು ಫ್ರೆಂಚರ ಇಡೀ ಸೈನ್ಯವನ್ನು ತನ್ನ ಮೇಲೆ ಬೀಳುವಂತೆ ಆಹ್ವಾನಿಸಿದಂತೆ

ಆಯಿತು. ಇವನು ತನ್ನ ಸೈನ್ಯದ ತುಕಡಿಯೊಂದಿಗೆ ಅವಸರದಿಂದ, ರಕ್ಷಣೆಗೋಸ್ಕರ ಒಂದು ಚಿಕ್ಕ ಕೋಟೆಯಲ್ಲಿ ಆಶ್ರಯ ಪಡೆದು ಫ್ರೆಂಚರನ್ನು ಎದುರಿಸಲು ಸಿದ್ಧನಾದನು. ಫ್ರೆಂಚರು ಸುಲಭವಾಗಿ ಆ ಕೋಟೆಯನ್ನು ಸುತ್ತುವರಿದು ನಿಂತರು. ಬೇರೆ ಮಾರ್ಗವಿಲ್ಲದೆ ವಾಷಿಂಗ್‌ಟನ್ ಶರಣಾಗಲೇಬೇಕಾಯಿತು! ಫ್ರೆಂಚರು ಕುತಂತ್ರದಿಂದ ಒಂದು ಹೇಳಿಕೆಯನ್ನು ತಯಾರಿಸಿ ವಾಷಿಂಗ್‌ಟನ್‌ನಿಂದ ಸಹಿ ಹಾಕಿಸಿಕೊಂಡರು. ಆ ಹೇಳಿಕೆ ಫ್ರೆಂಚ್ ಭಾಷೆಯಲ್ಲಿದ್ದುದರಿಂದ ವಾಷಿಂಗ್‌ಟನ್‌ಗೆ ಆ ಹೇಳಿಕೆಯಲ್ಲಿ ಏನಿತ್ತು ಎಂದು ತಿಳಿಯಲಿಲ್ಲ. ನಿಜವಾಗಿ ಅದರಲ್ಲಿ ಇದ್ದ ಹೇಳಿಕೆಯ ಪ್ರಕಾರ ತಾನು ಭೂಶೋಧಕ ದಳದ ನಾಯಕನನ್ನು ಕೊಲೆ ಮಾಡಿದವನು ಎಂದು ಒಪ್ಪಿಕೊಂಡಿದ್ದನು. ಹೀಗೆ ಒಪ್ಪಿಗೆ ಬರೆಸಿಕೊಂಡು ಮತ್ತೆ ಈ ಕಡೆ ಬಾರದಂತೆ ಎಚ್ಚರಿಕೆ ನೀಡಿ ಸೆರೆಯಾಳುಗಳನ್ನು ಬಿಡುಗಡೆ ಮಾಡಿದರು. ಒಹಾಯೊ ಕಣಿವೆ ಭದ್ರವಾಗಿ ಫ್ರೆಂಚರ ಕೈಸೇರಿತ್ತು.

ಸೋತುಬಂದಿದ್ದ ವಾಷಿಂಗ್‌ಟನ್‌ನನ್ನು ವೀರನಂತೆ ಜನ ಸ್ವಾಗತಿಸಿದರು. ಅದು ನಿಜವಾಗಿ ಘೋಷಿಸಿದ ಯುದ್ಧವಾಗಿಲ್ಲದಿದ್ದರೂ ಫ್ರೆಂಚರಿಗೆ ಮೊದಲ ಭಾರಿಗೆ ಧಕ್ಕೆ ಉಂಟುಮಾಡಿದ್ದಕ್ಕಾಗಿ ವಾಷಿಂಗ್‌ಟನ್‌ನನ್ನು ಶ್ಲಾಘಿಸಿದರು. ಫ್ರೆಂಚರು ಒಹಾಯೊ ಕಣಿವೆಯ ಬಹುಭಾಗವನ್ನು ಆಕ್ರಮಿಸಿಕೊಂಡಿದ್ದರು. ಇಂಡಿಯನ್ನರು ಫ್ರೆಂಚರ ಪರ ವಹಿಸಿದರು. ಬ್ರಿಟಿಷರ ಜನಸಂಖ್ಯೆ ಫ್ರೆಂಚರಿಗಿಂತ ಬಹಳ ಹೆಚ್ಚಾಗಿದ್ದರೂ ಅವರಲ್ಲಿ ಒಗ್ಗಟ್ಟಿರಲಿಲ್ಲ ಮತ್ತು ಅವರು ವ್ಯವಸ್ಥಿತರಾಗಿರಲಿಲ್ಲ. ಮೇಲಾಗಿ ಅವರು ತಮ್ಮ ಅಜ್ಞಾನದಿಂದ ಮತ್ತು ಅಹಂಕಾರದಿಂದ, ಬ್ರಿಟಿಷರು ತಾವೇ ಶ್ರೇಷ್ಠ ಎಂದು ಮೆರೆಯುತ್ತಿದ್ದ ಕಾಲ ಅದು. ಯುದ್ಧಗಳು ಅರೆಮನಸ್ಸಿನ ಅಸ್ತವ್ಯಸ್ತ ಪ್ರಯತ್ನಗಳಾದವು. ಅಲ್ಲದೆ ಅವರು ಸ್ಥಳೀಯ ಸಾಧನಗಳನ್ನು, ಅನುಕೂಲತೆಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಿ ಕೊಳ್ಳಲಿಲ್ಲ. ಇದರಿಂದ ಇಂಗ್ಲಿಷರು ಬಹಳ ಕಾಲದವರೆಗೆ ಒಂದಾದ ಮೇಲೊಂದರಂತೆ ಸೋಲನ್ನು ಅನುಭವಿಸಿದರು.

ಈ ಮಧ್ಯೆ ಫ್ರೆಂಚರಿಂದ ಶಸ್ತ್ರಾಸ್ತ್ರಸಜ್ಜಿತರಾಗಿದ್ದ ಇಂಡಿಯನ್ನರು ಗಡಿಪ್ರದೇಶದಲ್ಲಿ ನೆಲಸಿದ್ದ ಇಂಗ್ಲಿಷರನ್ನು ಕೊಂದು ರಕ್ತದ ಕೋಡಿ ಹರಿಸಿದರು. ನೂರ ಐವತ್ತು ವರ್ಷಗಳಿಂದ ತಮ್ಮ ನೆಲೆಯನ್ನು ನಾಶ ಮಾಡಿ, ತಮ್ಮ ನೆಲವನ್ನು ಆಕ್ರಮಿಸಿಕೊಂಡ ಬಿಳಿಯರ ಮೇಲೆ ಮುಯ್ಯಿ ತೀರಿಸಿಕೊಳ್ಳಲು ಗಡಿನಾಡು ಪ್ರದೇಶಗಳಲ್ಲಿ ನೆಲಸಿದ್ದ ಮತ್ತು ತಮ್ಮನ್ನು ತಾವೇ ರಕ್ಷಿಸಿಕೊಳ್ಳಲು ಅಶಕ್ತರಾಗಿದ್ದ ಬಿಳಿಯರ ನೆಲೆಗಳ ಮೇಲೆ ನಂಬಲಾರದಂಥ ಕ್ರೂರತನದಿಂದ ದಾಳಿ ನಡೆಸಿದರು.

೧೭೫೬ರಲ್ಲಿ ಇಂಗ್ಲಿಷ್ ಮತ್ತು ಫ್ರೆಂಚರ ನಡುವಣ ಘರ್ಷಣೆಗಳು ಯೂರೋಪಿಗೂ ಹರಡಿ 'ಏಳು ವರ್ಷಗಳ ಯುದ್ಧ' ಎಂದು ಹೆಸರಾಯಿತು. ಇದು ಸಾಮ್ರಾಜ್ಯ ಸ್ಥಾಪನೆಗಾಗಿ ನಡೆದ ಮಹಾಯುದ್ಧ. ಪ್ರಪಂಚರಂಗದಲ್ಲೂ ಬ್ರಿಟಿಷರು ಸೋಲಿನ ಮೇಲೆ ಸೋಲನ್ನು

ಅನುಭವಿಸಬೇಕಾಯಿತು. ಆಗ ಇಂಗ್ಲೆಂಡಿನ ರಾಜ ಎರಡನೆಯ ಜಾರ್ಜ್ ಯುದ್ಧದ ಜವಾಬ್ದಾರಿಯನ್ನು, ಇಷ್ಟವಿಲ್ಲದಿದ್ದರೂ, ವಿಲಿಯಂ ಪಿಟ್ಟ್ (William Pitt)ನಿಗೆ ವಹಿಸಿಕೊಡುವುದು ಅನಿವಾರ್ಯವಾಯಿತು. ರಾಜನಿಗೆ ಪಿಟ್ಟ್‌ನನ್ನು ಕಂಡರೆ ಆಗುತ್ತಿರಲಿಲ್ಲ. ಆದರೆ ಪಿಟ್ಟ್ ಯುದ್ಧಕೌಶಲದಲ್ಲಿ ಪರಿಣತನಾಗಿದ್ದರಿಂದ ಯುದ್ಧಕ್ಕೆ ಸಂಬಂಧಿಸಿದ ಎಲ್ಲ ವ್ಯವಹಾರಗಳನ್ನು ಅವನಿಗೆ ವಹಿಸಿಕೊಡಲಾಯಿತು. ಅಧಿಕಾರ ವಹಿಸಿಕೊಂಡ ವಿಲಿಯಂ ಪಿಟ್ಟ್ ಉತ್ತರ ಅಮೆರಿಕದಲ್ಲಿ ಅಸ್ತಿತ್ವಕ್ಕೆ ಬರಬಹುದಾದ ಅಪಾರ ಸಂಪತ್ತು ಮತ್ತು ಅದರ ಉಪಯುಕ್ತತೆಯನ್ನು ಮನಗಂಡಿದ್ದನು. ಆದ್ದರಿಂದ ಅವನು ಸೈನಿಕರಿಗಾಗಿ ಮತ್ತು ಹಣಕ್ಕಾಗಿ ದೂರದೃಷ್ಟಿಯಿಲ್ಲದ ಜಿಪುಣರಾದ ವಸಾಹತಿನ ಸಭಾಸದಸ್ಯರನ್ನು ಕೇಳುವ ಗೋಜಿಗೆ ಹೋಗದೆ ನೇರವಾಗಿ ಇಂಗ್ಲೆಂಡಿನಿಂದ ಬ್ರಿಟಿಷ್ ಸೈನಿಕರನ್ನು ಮತ್ತು ರಾಜನ ಖಜಾನೆಯಿಂದ ಹಣ ತರಿಸಿಕೊಂಡು ವ್ಯವಸ್ಥಿತವಾಗಿ ಯುದ್ಧದ ತಯಾರಿ ನಡೆಸಿದನು. ಬ್ರಿಟಿಷ್ ನೌಕಾಪಡೆಯ ಸಹಾಯದಿಂದ ಫ್ರೆಂಚ್ ನೌಕಾಪಡೆಯನ್ನು ಸುತ್ತುವರಿದು ತಡೆಗಟ್ಟಿ ಫ್ರೆಂಚ್ ಮತ್ತು ಕೆನಡಾ ದೇಶಗಳ ನಡುವಣ ಸಂಪರ್ಕವನ್ನು ಕಡಿದುಹಾಕಿದನು. ವಿಲಿಯಂ ಪಿಟ್ಟ್ ಹಿರಿಯ ಸೈನ್ಯಾಧಿಕಾರಿಗಳ ಆಕ್ಷೇಪಣೆಗಳನ್ನು ಗಮನಿಸದೆ ಸೈನ್ಯದ ಉತ್ತಮ ಅಧಿಕಾರಸ್ಥಾನಗಳಿಗೆ ಕಿರಿಯ ವಯಸ್ಸಿನ ದಕ್ಷರಾದವರನ್ನು ನೇಮಕ ಮಾಡಿದನು. ಅಂತಹ ದಕ್ಷರಾದ ದಳಪತಿಗಳಲ್ಲಿ ಮುಖ್ಯನಾದವನು ಜೇಮ್ಸ್ ವುಲ್ಫ್. ಮತ್ತೊಬ್ಬ ದಕ್ಷ ಅಧಿಕಾರಿ ಎಂದರೆ ಮೇಜರ್ ಜನರಲ್ ಜೆಫ್ರಿ ಆ್ಯಮ್‌ಹರ್ಸ್ಟ್. ಇವರಿಬ್ಬರು ಕೂಡಿ ೧೭೫೮ರಲ್ಲಿ ಫ್ರೆಂಚರ ವಶದಲ್ಲಿದ್ದ ಲೂಯಿಸ್‌ಬರ್ಗ್ ಕೋಟೆಯನ್ನು ವಶಪಡಿಸಿಕೊಂಡರು.

ವಿಲಿಯಂ ಪಿಟ್ಟ್‌ನ ಯುದ್ಧಕೌಶಲ ಸಫಲವಾಗುತ್ತಿದ್ದಂತೆ ಫ್ರೆಂಚರ ಕೋಟೆಗಳನ್ನು ಒಂದೊಂದಾಗಿ ಗೆಲ್ಲುತ್ತಾ ಬಂದರು. ೧೭೫೮ರ ಚಳಿಗಾಲದಲ್ಲಿ ಡುಕೇಸ್ನ್ (Duquesne) ಕೋಟೆ ಬ್ರಿಟಿಷರ ಕೈವಶವಾಯಿತು. ನಂತರ ಈ ಕೋಟೆಯ ಹೆಸರನ್ನು ಬದಲಾಯಿಸಿ ವಿಲಿಯಂ ಪಿಟ್ಟ್‌ನ ಗೌರವಾರ್ಥವಾಗಿ 'ಫೋರ್ಟ್ ಪಿಟ್ಟ್' (Fort Pitt) ಎಂದು ಕರೆಯಲಾಯಿತು. ಕಾಲಾಂತರ ಇದು ಪಿಟ್ಟ್ಸ್‌ಬರ್ಗ್ ನಗರವಾಯಿತು. ಆ ವರ್ಷದ ಬೇಸಿಗೆಯಲ್ಲಿ ನಯಾಗರ ಕೋಟೆಯನ್ನು ಬ್ರಿಟಿಷರು ವಶಪಡಿಸಿಕೊಂಡರು. ಆ್ಯಮ್‌ಹರ್ಸ್ಟನು 'ಕ್ರೌನ್ ಪಾಯಿಂಟ್' ಎನ್ನುವ ಮುಖ್ಯಸ್ಥಳವನ್ನು ಗೆದ್ದನು. ಜೇಮ್ಸ್ ವುಲ್ಫ್ ತನ್ನ ಸೈನ್ಯದೊಡನೆ ದೋಣಿಗಳಲ್ಲಿ ಸೇಂಟ್ ಲಾರೆನ್ಸ್ ನದಿಯನ್ನು ಹಾಯ್ದು ಕ್ವಿಬೆಕ್ ಪ್ರಾಂತ ವನ್ನು ಸೇರಿದನು. ಅಲ್ಲಿ ಫ್ರೆಂಚ್ ಸೇನಾಧಿಪತಿ ಮಾಂಟ್‌ಕಾಮ್ (Montcalm)ನು ಸೈನ್ಯ ಮುಂದುವರಿಯಲಾಗದಂತಹ ದುಸ್ಸಾಧ್ಯವಾದ ರಕ್ಷಣಾವ್ಯವಸ್ಥೆಯನ್ನು ಮಾಡಿದ್ದನು. ವುಲ್ಫ್ ತನ್ನ ಸೈನ್ಯದೊಡನೆ ತಿಂಗಳಾನುಗಟ್ಟಲೆ ಕಾದಿರಬೇಕಾಯಿತು. ಸತತವಾದ ಪ್ರಯತ್ನದಿಂದ ಕಡೆಗೆ ಒಂದು ಕಾಲ್ದಾರಿಯನ್ನು ಪತ್ತೆ ಮಾಡಿದನು. ವುಲ್ಫ್ ರಾತ್ರಿಯ ಕತ್ತಲೆಯ ಮರೆಯಲ್ಲಿ ತನ್ನ ಸೈನ್ಯವನ್ನು ಆ ಕಾಲ್ದಾರಿಯಲಿ ನಡೆಸಿ ಕ್ವಿಬೆಕ್‌ನ ಹಿಂಬದಿ ಯಲ್ಲಿದ್ದ ಕಡಿದಾದ ಬಂಡೆಗಳನ್ನು ಹತ್ತಿ ಬಂದು ಅಬ್ರಹಾಂ ಮೈದಾನ ಪ್ರದೇಶವನ್ನು

ಸೇರಿದನು. ಅಲ್ಲಿ ನಡೆದ ಯುದ್ಧದಲ್ಲಿ ವುಲ್ಫ್‌ನ ಸೈನಿಕರು ಗುಂಡಿನ ಮಳೆಗರೆದು ಮೇಲ್ವಾಯ್ದು ಬರುತ್ತಿದ್ದ ಫ್ರೆಂಚರ ಪಡೆಗಳನ್ನು ಛಿದ್ರಗೊಳಿಸಿದರು. ಫ್ರೆಂಚರು ಪರಾಜಿತರಾದರು, ಆದರೆ ವುಲ್ಫ್ ಮತ್ತು ಮಾಂಟ್‌ಕಾಮ್ ಇಬ್ಬರೂ ಯುದ್ಧದಲ್ಲಿ ಸಾವನ್ನಪ್ಪಿದರು.

೧೭೬೦ರಲ್ಲಿ ಮಾಂಟ್ರಿಯಾಲ್ ಪತನವಾಯಿತು. ನಂತರ ಫ್ರೆಂಚರು ಉತ್ತರ ಅಮೆರಿಕದ ಮೇಲೆ ತಮ್ಮ ಹಕ್ಕನ್ನು ಬಿಟ್ಟುಕೊಟ್ಟರು. ಇದರಿಂದ ಕೆನಡ ಸಂಪೂರ್ಣವಾಗಿ ಬ್ರಿಟಿಷರ ವಶವಾಯಿತು. ಸ್ಪೇನ್ ಬ್ರಿಟಿಷರ ಮುನ್ನಡೆಯನ್ನು ನಿಲ್ಲಿಸಲು ಪ್ರಯತ್ನಿಸಿ ವಿಫಲವಾಯಿತು. ೧೭೬೨ರಲ್ಲಿ ಬ್ರಿಟಿಷ್ ನೌಕಾಪಡೆ ದೂರಪ್ರಾಚ್ಯದ ಮನಿಲ ನಗರವನ್ನು ವಶಪಡಿಸಿಕೊಂಡಿತು. ಇನ್ನೊಂದು ನೌಕಾದಳ ಕ್ಯೂಬವನ್ನು ಗೆದ್ದಿತು. ಫ್ರೆಂಚರ ವಶದಲ್ಲಿದ್ದ 'ಸಕ್ಕರೆ ದ್ವೀಪಗಳು' (Sugar Islands) ಪತನಗೊಂಡವು. ಈ ಸಮಯದಲ್ಲಿಯೆ ದೂರದ ಇಂಡಿಯದಲ್ಲಿ ಇಂಗ್ಲಿಷರು ಫ್ರೆಂಚರ ನೆಲೆಗಳನ್ನು ಒಂದೊಂದಾಗಿ ನಾಶಮಾಡಿದರು. ೧೭೬೩ರಲ್ಲಿ 'ಪ್ಯಾರಿಸ್ ಒಪ್ಪಂದ'ದ ಪ್ರಕಾರ ಶಾಂತಿಸ್ಥಾಪನೆಯಾಯಿತು. ಈ ಒಪ್ಪಂದದ ಪ್ರಕಾರ ಫ್ರಾನ್ಸ್ ಉತ್ತರ ಅಮೆರಿಕದ ಮೇಲಿನ ಎಲ್ಲ ಹಕ್ಕುಗಳನ್ನು ಬಿಟ್ಟುಕೊಟ್ಟಿತು. ಹಾಗೆಯೆ ಅಮೆರಿಕದ ಮಿಸ್ಸಿಸ್ಸಿಪ್ಪಿ ಕಣಿವೆಯ ಪೂರ್ವಾರ್ಧ ಪ್ರಾಂತವೆಲ್ಲ ಇಂಗ್ಲಿಷರಿಗೆ ಸೇರಿತು. ಪ್ರತ್ಯೇಕವಾದ ಒಪ್ಪಂದದ ಪ್ರಕಾರ ಸ್ಪೇನ್ ಮಿಸ್ಸಿಸ್ಸಿಪ್ಪಿ ನದಿಯ ಪಶ್ಚಿಮಕ್ಕೆ ಇದ್ದ ಪ್ರಾಂತ ಮತ್ತು ನ್ಯೂ ಆರ್ಲಿಯನ್ಸ್ ನಗರವನ್ನು ಪಡೆಯಿತು. ಸಕ್ಕರೆ ದ್ವೀಪಗಳು ಮತ್ತು ಇಂಡಿಯಾ ಹಾಗೂ ಆಫ್ರಿಕದ ಕೆಲವು ಫ್ರೆಂಚರ ವಸಾಹತುಗಳನ್ನು ಬ್ರಿಟಿಷರು ಅವರಿಗೆ ವಾಪಸು ಮಾಡಿದರು. ಹಾಗೆಯೇ ಫಿಲಿಪೀನ್ ದ್ವೀಪಗಳನ್ನು ಮತ್ತು ಕ್ಯೂಬವನ್ನು ಬ್ರಿಟಿಷರು ಸ್ಪೇನಿಗೆ ಕೊಟ್ಟು ಅವಕ್ಕೆ ಬದಲಾಗಿ ಪೂರ್ವ ಮತ್ತು ಪಶ್ಚಿಮ ಫ್ಲಾರಿಡವನ್ನು ಪಡೆದುಕೊಂಡರು.

ಇಂಗ್ಲಿಷ್ ವಸಾಹತುಗಾರರ ದೃಷ್ಟಿಯಲ್ಲಿ ಬ್ರಿಟಿಷರ ಈ ದಿಗ್ವಿಜಯ ಒಂದು ಪವಾಡದಂತೆ ಕಂಡಿತು. 'ಪ್ಯಾರಿಸ್ ಒಪ್ಪಂದ' ಅವರಿಗೆ ಗಡಿನಾಡಿನ ಯುದ್ಧ, ರಕ್ತಪಾತ ಎಲ್ಲವನ್ನೂ ನಿಲ್ಲಿಸಿ, ಸ್ಥಿರವಾದ ಶಾಂತಿಸ್ಥಾಪನೆ ಮಾಡಿದ ವರಪ್ರಸಾದದಂತೆ ತೋರಿತು. ಈ ದಿಗ್ವಿಜಯ ಅಮೆರಿಕ ವಸಾಹತುಗಾರರಲ್ಲಿ ತಾಯ್ನಾಡ ಮಮತೆಯನ್ನು ಮತ್ತು ತಮ್ಮ ರಾಜನ ಬಗ್ಗೆ ಹೆಮ್ಮೆಯನ್ನು ಹತ್ತು ಪಟ್ಟು ಹೆಚ್ಚುವಂತೆ ಮಾಡಿತು.

ಯುದ್ಧದ ಪರಿಣಾಮಗಳು

ವಸಾಹತು ಯುದ್ಧ ಮುಗಿದು ಶಾಂತಿಸ್ಥಾಪನೆಯಾದರೂ ಸಮಸ್ಯೆಗಳು ಮುಗಿಯಲಿಲ್ಲ. ೧೭೬೩ರಲ್ಲಿ ಬ್ರಿಟಿಷ್ ಸಾಮ್ರಾಜ್ಯ ಅಪಾರವಾಗಿ ಹರಡಿಕೊಂಡಿತ್ತು. ಇಂತಹ ವಿಸ್ತಾರವಾದ ಸಾಮ್ರಾಜ್ಯವನ್ನು ನಿರ್ವಹಿಸಲು ಎಷ್ಟು ಹಣವಿದ್ದರೂ ಸಾಲದು. ಯುದ್ಧದಲ್ಲಿ ಜಯ ಗಳಿಸಿ ಸಾಮ್ರಾಜ್ಯ ಸ್ಥಾಪಿಸಲು ವಿಲಿಯಂ ಪಿಟ್ಟ್‌ನು ಭಾರಿ ಮೊತ್ತದ ಹಣವನ್ನು ಖರ್ಚು

ಮಾಡಿದ್ದನು. ಈ ಹಣದ ಬಹುಭಾಗ ಸಾಲದ ಹಣವಾಗಿತ್ತು. ಈಗ ಸಾಲವನ್ನು ಮರುಪಾವತಿ ಮಾಡಬೇಕಾಗಿ ಬಂತು. ಇದರಿಂದ ಆರ್ಥಿಕ ವ್ಯವಸ್ಥೆಯಲ್ಲಿಉಂಟಾಗುವ ಬಿಗಿತ ಮತ್ತು ಒತ್ತಡಗಳ ಅರಿವು ಎಲ್ಲರಿಗೂ ಸ್ಪಷ್ಟವಾಯಿತು. ಮೇಲಾಗಿ, ಹಡ್ಸನ್ಸ್ ಕೊಲ್ಲಿಯಿಂದ ಇಂಡಿಯಾ ದೇಶದವರೆಗೆ ಹಬ್ಬಿದ್ದ ಬ್ರಿಟಿಷ್ ಸಾಮ್ರಾಜ್ಯದ ಪ್ರತಿದಿನದ ನಿರ್ವಹಣೆಯ ಅಪಾರ ವೆಚ್ಚವನ್ನು ತೆರುವುದನ್ನು ಮೊದಲೆ ತೆರಿಗೆಯ ಭಾರದಿಂದ ನರಳುತ್ತಿದ್ದ ಬ್ರಿಟಿಷ್ ಪ್ರಜೆಗಳಿಂದ ನಿರೀಕ್ಷಿಸುವಂತಿರಲಿಲ್ಲ. ಯುದ್ಧದ ಮೊದಲು ಅಮೆರಿಕ ವಸಾಹತುಗಳನ್ನು ನಿರ್ವಹಿಸಲು ತಗಲುತ್ತಿದ್ದ ವೆಚ್ಚ ಸುಮಾರು ೭೦,೦೦೦ ಪೌಂಡುಗಳಾಗಿತ್ತು. ೧೭೬೩ರ ನಂತರ ಆ ವೆಚ್ಚ ಐದು ಪಟ್ಟು ಹೆಚ್ಚಾಯಿತು.

ಅಮೆರಿಕನ್ ಸಾಮ್ರಾಜ್ಯ ಕೂಡ ಹೆಚ್ಚು ಸಂಕೀರ್ಣವಾಗಿ ಬೆಳೆದಿತ್ತು. ಒಹಾಯೊ ಕಣಿವೆಯ ವಿಸ್ತಾರವಾದ ಪ್ರದೇಶದ ಆಡಳಿತವನ್ನು ಯಾರು ವಹಿಸಿಕೊಳ್ಳಬೇಕು ಎನ್ನುವುದು ಖಚಿತವಾಗಿ ಇತ್ಯರ್ಥವಾಗಿರಲಿಲ್ಲ. ಏಳು ವರ್ಷಗಳ ಸತತವಾದ ಇಂಡಿಯನ್ನರ ದಾಳಿ ವಸಾಹತುಗಾರರ ಪಶ್ಚಿಮದ ವಲಸೆಯನ್ನು ತಡೆಹಿಡಿದಿತ್ತು. ನುಣುಪು ಕೂದಲಿನ ಚರ್ಮದ ವ್ಯಾಪಾರಿಗಳು ಫ್ರೆಂಚರ ನಿಯಂತ್ರಣದಲ್ಲಿದ್ದ ಪ್ರದೇಶಗಳಿಂದ ಲಾಭ ಗಳಿಸುವ ಉದ್ದೇಶದಿಂದ ವಸಾಹತುಗಾರರನ್ನು ಆ ಪ್ರದೇಶಗಳಿಗೆ ಪ್ರವೇಶಿಸದಂತೆ ಅಡೆ ತಡೆ ಉಂಟು ಮಾಡಿದ್ದರು. ವಸಾಹತುಗಳ ಈ ಸಮಸ್ಯೆಗಳನ್ನು, ಪ್ರತಿಸ್ಪರ್ಧಿಗಳ ಸಂಘರ್ಷಣೆಗಳನ್ನು ಪರಿಹರಿಸುವ ಸಾಮರ್ಥ್ಯ ಇದ್ದದ್ದು ಬ್ರಿಟಿಷ್ ಸರ್ಕಾರಕ್ಕೆ ಮಾತ್ರ. ಆದರೆ ಬ್ರಿಟಿಷ ಸರ್ಕಾರ ಈ ಸವಾಲನ್ನು ಎದುರಿಸಲು ಯಾವ ಕಾರ್ಯಕ್ರಮವನ್ನೂ ಕೈಗೊಳ್ಳಲಿಲ್ಲ. ವಿದ್ಯಾವಂತ ಇಂಗ್ಲಿಷರಿಗೂ ಅಮೆರಿಕದ ಪರಿಸ್ಥಿತಿಗಳ ಬಗ್ಗೆ ಏನೂ ಗೊತ್ತಿರಲಿಲ್ಲ. ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಸಮರ್ಪಕವಾದ ಸಂಪರ್ಕ ವ್ಯವಸ್ಥೆ ಇರಲಿಲ್ಲ. ಇಂಗ್ಲೆಂಡಿನವರಿಗೆ ಅಮೆರಿಕದ ಸುದ್ದಿ ಸಮಾಚಾರಗಳು ಅಧಿಕಾರಿಗಳ ಮೂಲಕ, ಪಟ್ಟಭದ್ರ ಹಿತಾಸಕ್ತಿಗಳನ್ನು ಸಾಧಿಸಲು ಪ್ರಯತ್ನಿಸುತ್ತಿರುವ ಗುಂಪುಗಳ ಮೂಲಕ, ವಸಾಹತುಗಳ ಏಜೆಂಟರುಗಳು ಹಾಗೂ ವ್ಯಾಪಾರಿಗಳ ಮೂಲಕ ತಿಳಿಯುತ್ತಿದ್ದವು. ಈ ಸುದ್ದಿ ಸಮಾಚಾರಗಳು ಉತ್ಪ್ರೇಕ್ಷೆ ಮತ್ತು ಪೂರ್ವಾಗ್ರಹಗಳಿಂದ ಕೂಡಿರುತ್ತಿದ್ದವು. ಆದ್ದರಿಂದ ಇಂಗ್ಲೆಂಡಿನ ರಾಜಕೀಯ ಧುರೀಣರಿಗಲ್ಲದೆ ಪಾರ್ಲಿಮೆಂಟ್ ಸದಸ್ಯರಿಗೂ ಅಮೆರಿಕದ ಪರಿಸ್ಥಿತಿಗಳ ವಸ್ತುನಿಷ್ಠ ವರದಿಗಳು ದೊರೆಯುತ್ತಿರಲಿಲ್ಲ. ಹೀಗೆ ಅಜ್ಞಾನದಲ್ಲಿ ಮುಳುಗಿದ್ದ ಇಂಗ್ಲಿಷ್ ರಾಜಕೀಯ ಧುರೀಣರು ವಸಾಹತುಗಾರರನ್ನು ಅವಲಕ್ಷಣದ ಕೀಳು ಜನರೆಂದು ಭಾವಿಸಿದ್ದರು! ಇಂಗ್ಲಿಷರು ಎಲ್ಲಾ ರೀತಿಯಿಂದ ಅಮೆರಿಕನ್ನರಿಗಿಂತ ಉತ್ತಮರು ಎಂಬ ಗರ್ವದಿಂದ ಅಧಿಕಾರಸ್ಥಾನಗಳಿಗೆ ನೇಮಕ ಮಾಡುವುದರಲ್ಲಿ, ಸೈನ್ಯದಲ್ಲಿ ಬಡ್ತಿ ಕೊಡುವುದರಲ್ಲಿ ಮತ್ತು ಇತರ ವಿಷಯಗಳಲ್ಲಿ ಅವರು ಇಂಗ್ಲಿಷರ ಪರವಾಗಿದ್ದು ಪಕ್ಷಪಾತ ತೋರಿಸುತ್ತಿದ್ದರು. ಜಾರ್ಜ್ ವಾಷಿಂಗ್‌ಟನ್ ಕೂಡ ಅವರ ಪಕ್ಷಪಾತಕ್ಕೆ ಒಳಗಾಗಿದ್ದ. ಅವನಿಗೆ ಸೈನ್ಯದಲ್ಲಿ ನ್ಯಾಯವಾಗಿ ಸಿಗಬೇಕಾಗಿದ್ದ ಬಡ್ತಿಯನ್ನು ವಿರೋಧಿಸಿ ಅದು ಬ್ರಿಟಿಷನಾದ

ತನಗೆ ಸಿಗಬೇಕೆಂದು ಒಬ್ಬ ಸಾಮಾನ್ಯ ಸೈನ್ಯಾಧಿಕಾರಿ ತಕರಾರು ತೆಗೆದಿದ್ದಕ್ಕಾಗಿ ವಾಷಿಂಗ್‌ಟನ್ ವರ್ಜೀನಿಯಾದಿಂದ ಸೈನ್ಯದ ಮುಖ್ಯಕೇಂದ್ರವಾಗಿದ್ದ ಬಾಸ್ಟನ್ ನಗರಕ್ಕೆ ಹೋಗಿ ಮುಖ್ಯ ಸೇನಾಧಿಪತಿಯ ಕಛೇರಿಯಲ್ಲಿ ತನ್ನ ಅರ್ಹತೆಯನ್ನು ಸ್ಥಾಪಿಸಬೇಕಾಗಿ ಬಂತು.

ಕಾಲಕ್ರಮೇಣ ಅಮೆರಿಕ ವಸಾಹತುಗಾರರು ಐಶ್ವರ್ಯವಂತರೂ ಪ್ರಭಾವಶಾಲಿಗಳೂ ಆಗಿ ಬೆಳೆಯುತ್ತಿರುವುದನ್ನು ಬ್ರಿಟಿಷರು ಸಹಿಸದಾದರು. ಇಂಗ್ಲಿಷರಿಗೂ ಮತ್ತು ಫ್ರೆಂಚರಿಗೂ ನಡೆದ ಮಹಾಯುದ್ಧದ ಸಮಯದಲ್ಲಿ ಅಮೆರಿಕನ್ ವರ್ತಕರು ಫ್ರೆಂಚ್ ಪಶ್ಚಿಮ ಇಂಡೀಸ್ ದ್ವೀಪಗಳೊಡನೆ ವ್ಯಾಪಾರ ಮುಂದುವರಿಸಿಕೊಂಡು ಹೋಗಿದ್ದು ಇಂಗ್ಲಿಷರಿಗೆ ಅಸಮಾಧಾನ ಉಂಟುಮಾಡಿತ್ತು. ಬ್ರಿಟಿಷರ ದೃಷ್ಟಿಯಲ್ಲಿ ಅದು ಅನ್ಯಾಯ ಹಾಗೂ ದೇಶದ್ರೋಹ ವಾಗಿತ್ತು. ಅಮೆರಿಕನ್ನರ ದೃಷ್ಟಿಯಲ್ಲಿ ಅದು ಒದಗಿಬಂದ ಸದವಕಾಶವನ್ನು ಉಪಯೋಗಿಸಿ ಕೊಳ್ಳುವ ಜಾಣತನವಾಗಿತ್ತು. ಪಶ್ಚಿಮ ಇಂಡೀಸ್‌ಗಳ ಕಬ್ಬಿನ ಬೆಳೆಗಾರರಿಗೆ ಅಮೆರಿಕದ ಆಹಾರಪದಾರ್ಥಗಳು, ನಾಟಾಗಳು ಮತ್ತು ಇತರ ವಸ್ತುಗಳು ಅತ್ಯಗತ್ಯವಾಗಿತ್ತು. ಅವುಗಳಿಗೆ ಹೇರಳವಾಗಿ ಹಣ ಕೊಡಲು ಸಿದ್ಧರಾಗಿದ್ದರು. ವ್ಯಾಪಾರಿಗಳಿಗೆ ದೇಶಪ್ರೇಮ, ಕಾನೂನು ಮತ್ತು ಸದಾಚಾರಗಳಿಗಿಂತ ಹೆಚ್ಚು ಆಕರ್ಷಣೀಯವಾಗಿ ಕಂಡಿದ್ದು ಲಾಭಗಳಿಕೆ!

ಅಮೆರಿಕ ವಸಾಹತುಗಳ ಮೇಲೆ ತನ್ನ ಸಾರ್ವಭೌಮತ್ವವನ್ನು ಹೇರಿ ಆಡಳಿತವನ್ನು ಬಿಗಿಪಡಿಸಲು ಬ್ರಿಟಿಷ್ ಸರ್ಕಾರ ಮಾಡಿದ ಪ್ರಯತ್ನಗಳು ಸಮಸ್ಯೆಗಳನ್ನು ಪರಿಹರಿಸುವುದರ ಬದಲು ಇನ್ನೂ ಹೆಚ್ಚಿನ ಸಂಕೀರ್ಣ ಸಮಸ್ಯೆಗಳನ್ನು ಸೃಷ್ಟಿ ಮಾಡಿದವು. ವಸಾಹತುಗಳಲ್ಲಿ ಜಾರಿಯಲ್ಲಿದ್ದ ಬ್ರಿಟಿಷ್ ಚಕ್ರಾಧಿಪತ್ಯದ ಎಲ್ಲ ನಿಯಂತ್ರಣಗಳನ್ನು ಹೆಚ್ಚು ಹೆಚ್ಚು ಬಿಗಿಪಡಿಸುವ ಕೆಲಸ ೧೭೪೮ರಲ್ಲಿ ಪ್ರಾರಂಭವಾಯಿತು. ವರ್ಜೀನಿಯ ಮತ್ತು ದಕ್ಷಿಣ ಕೆರೊಲಿನ ಪ್ರಾಂತಗಳಲ್ಲಿ ಜಾರಿಯಲ್ಲಿದ್ದ ಮುಖ್ಯ ಸ್ಥಳೀಯ ಕಾಯಿದೆಗಳಿಗೆ ಬ್ರಿಟಿಷ್ ಸರ್ಕಾರ ಸಮ್ಮತಿಯನ್ನು ನಿರಾಕರಿಸಿತು. ವಸಾಹತುಗಳ ನ್ಯಾಯಾಲಯಗಳ ಮೇಲಿನ ನಿಯಂತ್ರಣಗಳನ್ನು ಬ್ರಿಟಿಷ್ ಸರ್ಕಾರ ಮತ್ತಷ್ಟು ಬಿಗಿಪಡಿಸಿತು. ೧೭೬೧ರಲ್ಲಿ ಮೆಸಾಚ್ಯೂಸೆಟ್ಸ್ ಪ್ರಾಂತದಲ್ಲಿ ಸಾರ್ವಜನಿಕ 'ಹುಡುಕುವ ಹುಕುಂ' (General Search Warrants) ಜಾರಿಗೆ ತರಲಾಯಿತು. ಈ ಹುಕುಂ ಸುಂಕದ ಅಧಿಕಾರಿಗಳಿಗೆ ಯಾವ ಸಮಯದಲ್ಲಾದರೂ ಮನೆ ಮತ್ತು ದಾಸ್ತಾನು ಮಳಿಗೆಗಳನ್ನು ಪ್ರವೇಶಿಸಿ ಕಳ್ಳ ಸಾಗಾಣಿಕೆಯ ವಸ್ತುಗಳಿಗಾಗಿ ಹುಡುಕುವ ಅಧಿಕಾರವನ್ನು ಕೊಟ್ಟಿತ್ತು. ಯುದ್ಧಕಾಲದಲ್ಲಿ ಈ ಹುಕುಂಗಳ ಅಗತ್ಯವಿತ್ತು. ಶಾಂತಿಸ್ಥಾಪನೆಯಾದ ಮೇಲೆ ಅವುಗಳನ್ನು ಜಾರಿಗೆ ತಂದಿದ್ದು ವಸಾಹತು ಗಾರರು ಸರ್ಕಾರ ತಮ್ಮ ನಾಗರಿಕ ಸ್ವಾತಂತ್ರ್ಯ (Civil liberties)ದ ಮೇಲೆ ಅತಿಕ್ರಮಣ ಮಾಡಿದಂತೆ ಎಂದು ಭಾವಿಸಿದರು.

ಫ್ರೆಂಚರ ಪೈಪೋಟಿ ಕೊನೆಗೊಂಡ ಮೇಲೆ ಬ್ರಿಟಿಷರು ಮತ್ತು ವಸಾಹತುಗಾರರು

ಇಂಡಿಯನ್ನರ ಮೇಲೆ ಹೆಚ್ಚು ಬಲಾತ್ಕಾರ ಮಾಡಲು ಪ್ರಾರಂಭಿಸಿದರು. ಅಪ್ರಮಾಣಿಕರಾದ ಚರ್ಮದ ವ್ಯಾಪಾರಿಗಳು ಇಂಡಿಯನ್ನರಿಗೆ ಮೋಸ ಮಾಡಿ ಹಣವಂತರಾದರು. ನಿರ್ದಯರೂ ಕ್ರೂರಿಗಳೂ ಆದ ಬ್ರಿಟಿಷ್ ಸೈನಿಕರು ಇಂಡಿಯನ್ನರನ್ನು ಹುಳು ಹುಪ್ಪಟೆಗಳನ್ನು ಕೊಲ್ಲುವಂತೆ ಕೊಂದು ಅವರ ಕುಲ ನಾಶ ಮಾಡಬೇಕೆಂಬ ಅಭಿಪ್ರಾಯ ಹೊಂದಿದ್ದರು. ಅಮೆರಿಕ ಪಶ್ಚಿಮ ಪ್ರಾಂತದ ಸೈನ್ಯಾಧಿಕಾರಿಯಾಗಿದ್ದ ಜೆಫ್ರಿ ಆ್ಯಮ್‌ಹರ್ಸ್ಟನು ಇಂಡಿಯನ್ ಬುಡಕಟ್ಟುಗಳಿಗೆ ಮೈಲಿ (Small pox) ರೋಗಾಣುಗಳನ್ನು ಅಂಟಿಸಿ ಎಲ್ಲರನ್ನೂ ನಾಶ ಮಾಡಬೇಕೆಂದು ಸೂಚಿಸಿದ್ದನು! ಇನ್ನೊಬ್ಬ ಸೈನ್ಯಾಧಿಕಾರಿ ಇಂಡಿಯನ್ನರನ್ನು ಬೇಟೆಯ ಮೃಗಗಳಂತೆ ನಾಯಿಗಳನ್ನು 'ಛೂ' ಬಿಟ್ಟು ಅಟ್ಟಿಸಿಕೊಂಡು ಹೋಗಿ ಗುಂಡಿಕ್ಕಿ ಕೊಲ್ಲುವಂತಿದ್ದರೆ ಎಷ್ಟು ಚೆನ್ನ – ಎಂದು ಉದ್ಗಾರ ಮಾಡಿದ್ದನು!

ಬಿಳಿಯರ ಅತಿಕ್ರಮಣ, ಕ್ರೂರ ಹಿಂಸಾಚಾರ ಮತ್ತು ಮೋಸ ವಂಚನೆಗಳನ್ನು ತಾಳಲಾರದೆ ಹತಾಶರಾದ ಇಂಡಿಯನ್ನರು ಅಟ್ಬಾವ ಬುಡಕಟ್ಟಿನ ಮುಖ್ಯಸ್ಥನಾಗಿದ್ದ ಪಾಂಟಿಯಾಕ್ ಎಂಬುವನ ನಾಯಕತ್ವದಲ್ಲಿ ಜೀವದ ಹಂಗು ತೊರೆದು ಬಿಳಿಯರನ್ನು ಹಿಮ್ಮೆಟ್ಟಿಸಲು ತಮ್ಮ ಕಟ್ಟಕಡೆಯ ಪ್ರಯತ್ನ ಮಾಡಿದರು. 'ಪಾಂಟಿಯಾಕನ ದಂಗೆ' ಎಂದು ಹೆಸರಾದ ಈ ಇಂಡಿಯನ್ನರ ಹೋರಾಟ ಬಿಳಿಯರಿಗೆ ಅಪಾರ ಹಾನಿ ಉಂಟುಮಾಡಿದರೂ ಸಫಲವಾಗಲಿಲ್ಲ. ೧೭೬೪ರ ಹೊತ್ತಿಗೆ ಅಳಿದುಳಿದ ಪಶ್ಚಿಮದ ಬುಡಕಟ್ಟುಗಳು ಪ್ರಾಂತಾಧಿಕಾರಿ ಸರ್ ವಿಲಿಯಂ ಜಾನ್ಸನ್ ನೀಡಿದ ಶಾಂತಿ ಕರಾರನ್ನು ಒಪ್ಪಿಕೊಂಡಿದ್ದರು. ಜಾನ್ಸನ್ ಇಂಡಿಯನ್ನರನ್ನು ಅರ್ಥ ಮಾಡಿಕೊಂಡ, ಅವರ ದುಸ್ಥಿತಿಗೆ ಮರುಗುತ್ತಿದ್ದ ಆತ, ದಯಾಳುವಾಗಿದ್ದ. ಬಿಳಿಯರಲ್ಲಿ ಇವನೊಬ್ಬ ಮಾತ್ರ ಅಧಿಕಾರದ ಮದದಲ್ಲಿ ಮಾನವೀಯತೆಯನ್ನು ಕಳೆದುಕೊಳ್ಳದ ಅಪರೂಪದ ವ್ಯಕ್ತಿಯಾಗಿದ್ದ!

ಹೀಗೆ ಗಡಿನಾಡು ಪ್ರಾಂತ ದ್ವೇಷಾಸೂಯೆಗಳ ದಳ್ಳುರಿಯಲ್ಲಿ ಬೇಯುತ್ತಿರುವಾಗ, ಪರಸ್ಪರ ವಿರೋಧ ಗುಂಪುಗಳ ಭೂಮಾರಾಟಗಾರರು ಅಪಲೇಷಿಯನ್ ಪರ್ವತಗಳಾಚೆಯ ಭೂಮಿಯನ್ನು ದತ್ತಿಗೆ ಕೊಡಬೇಕೆಂದು ಗಲಭೆ ಮಾಡುತ್ತಿರುವಾಗ, ಬ್ರಿಟಿಷ್ ಸರ್ಕಾರ ಹೊಸ ರಾಜನೀತಿಯನ್ನು ಘೋಷಿಸಿತು. ವಲಸೆಗಾರರು ಯಾರೂ ಅಪಲೇಷಿಯನ್ ಪರ್ವತ ದಾಟಿ ಆಚೆಗೆ ಹೋಗಬಾರದು; ನಿಷಿದ್ಧ ಪ್ರದೇಶದಲ್ಲಿ ಪರವಾನಗಿ ಪಡೆದ ವರ್ತಕರು ಮಾತ್ರ ಇಂಡಿಯನ್ನರೊಡನೆ ವ್ಯಾಪಾರ ಮಾಡಬಹುದು. ಇಂಡಿಯನ್ನರ ಭೂಮಿಯನ್ನು ಬಿಳಿಯರು ಕೊಳ್ಳುವುದನ್ನು ನಿಷೇಧಿಸಲಾಯಿತು. ಇದಕ್ಕೆ ಪರಿಹಾರವಾಗಿ ಮೂರು ವಸಾಹತುಗಳನ್ನು ಕ್ವಿಬೆಕ್, ಪೂರ್ವ ಮತ್ತು ಪಶ್ಚಿಮ ಫ್ಲಾರಿಡಾ – ರಚಿಸಲಾಯಿತು. ಆದರೆ ಈ ವಸಾಹತುಗಳಿಗೆ ಸ್ಥಳೀಯ ಪ್ರಜಾಪ್ರತಿನಿಧಿ ಸಭೆಗಳನ್ನು ಸ್ಥಾಪಿಸಲು ಅನುಮತಿ ಕೊಡಲಿಲ್ಲ.

೧೭೬೩ರ ಸರ್ಕಾರಿ ಘೋಷಣೆಗಳು ಅಮೆರಿಕದ ಜನರನ್ನು ರೋಷಾವೇಷ

ಗೊಳಿಸಿದವು. ಕೆಲವು ವಲಸೆಗಾರರು ನಾವು ಈಗ 'ಕೆಂಟಕಿ' ಎಂದು ಕರೆಯುವ ಪ್ರಾಂತಕ್ಕೆ ನುಗ್ಗಿದ್ದರು. ಇವರನ್ನು ಸರ್ಕಾರ ಇಂಡಿಯನ್ನರ ಮರ್ಜಿಗೆ ಒಡ್ಡಿತು! ಒಹಾಯೊ ಕಣಿವೆಯ ಭೂಅಭಿವೃದ್ಧಿ ಯೋಜನೆಗಳು ಕಾರ್ಯಗತವಾಗದೆ ಹೋಗಿದ್ದು ಅನೇಕ ಪ್ರಭಾವಶಾಲಿ ಅಮೆರಿಕನ್ ವಸಾಹತುಗಾರರನ್ನು ಕೆರಳಿಸಿತು. ನುಣುಪು ಕೂದಲಿನ ಚರ್ಮದ ವ್ಯಾಪಾರಿಗಳನ್ನು ಪರವಾನಗಿ ಪಡೆಯುವಂತೆ ಮಾಡಿದ್ದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಬ್ರಿಟಿಷ್ ಸರ್ಕಾರ ಜಾರಿಗೆ ತಂದ ಪಶ್ಚಿಮ ಪ್ರಾಂತದ ಕಾಯಿದೆಗಳು ಅಮೆರಿಕನ್ನರಿಗೆ ಹಿಡಿಸಲಿಲ್ಲ. ಆದರೆ ಗಡಿನಾಡಿನ ಸಂಕೀರ್ಣ ಸಮಸ್ಯೆಗಳಿಗೆ ಸುಲಭ ಪರಿಹಾರಗಳು ಇಲ್ಲದೆ ಹೋದುದರಿಂದ ಜನರು ತೀವ್ರ ವಿರೋಧ ವ್ಯಕ್ತಪಡಿಸಲಿಲ್ಲ. ಆದರೆ ವಸಾಹತುಗಳಿಂದ ಹಣ ಸಂಗ್ರಹಿಸಲು ಬ್ರಿಟಿಷರು ಮಾಡಿದ ಪ್ರಯತ್ನಗಳಿಗೆ ಜನರು ತೀವ್ರ ವಿರೋಧ ವ್ಯಕ್ತಪಡಿಸಿದರು.

೧೭೬೪ರಲ್ಲಿ ಪ್ರಧಾನಮಂತ್ರಿ ಜಾನ್ ಗ್ರೆನ್‌ವಿಲ್ಲನ ನಾಯಕತ್ವದಲ್ಲಿ ಪಾರ್ಲಿಮೆಂಟ್ ಸಕ್ಕರೆ ಕಾಯಿದೆಯನ್ನು ಜಾರಿಗೆ ತಂದಿತು. ಈ ಕಾಯಿದೆ ಅಮೆರಿಕ ನೇರವಾಗಿ ಆಮದು ಮಾಡಿಕೊಳ್ಳುವ ಸಕ್ಕರೆ, ಕಾಫಿ, ವೈನ್ (wine) ಮತ್ತು ಇನ್ನೂ ಅನೇಕ ಆಹಾರಪದಾರ್ಥಗಳ ಮೇಲೆ ತೆರಿಗೆ ವಿಧಿಸಿತು. ಅಮೆರಿಕ ಯೂರೋಪಿನಿಂದ ಇಂಗ್ಲೆಂಡ್ ಮೂಲಕವಾಗಿ ಆಮದು ಮಾಡಿಕೊಳ್ಳುತ್ತಿದ್ದ ಪದಾರ್ಥಗಳ ಮೇಲಿನ ತೆರಿಗೆಯನ್ನು ಎರಡು ಪಟ್ಟು ಹೆಚ್ಚಿಸಲಾಯಿತು. ತೆರಿಗೆಗೆ ಒಳಪಟ್ಟ ಪದಾರ್ಥಗಳ ಪಟ್ಟಿಗೆ ಕಬ್ಬಿಣ, ಕಚ್ಚಾ ರೇಷ್ಮೆ, ಪೊಟಾಷ್ ಮತ್ತು ಇನ್ನೂ ಅನೇಕ ವಸ್ತುಗಳನ್ನು ಸೇರಿಸಲಾಯಿತು. ೧೭೩೩ರಲ್ಲಿ ಹೊರದೇಶದಿಂದ ಅಮೆರಿಕ ಆಮದು ಮಾಡಿಕೊಳ್ಳುತ್ತಿದ್ದ ಜೇನುಬೆಲ್ಲದ ಮೇಲೆ ಒಂದು ಗ್ಯಾಲನ್‌ಗೆ ಆರು ಪೆನ್ನಿಗಳ ತೆರಿಗೆ ಹಾಕುತ್ತಿದ್ದರು; ಇದನ್ನು ಮೂರು ಪೆನ್ನಿಗಳಿಗೆ ಇಳಿಸಿದರು. ತೆರಿಗೆ ಆರು ಪೆನ್ನಿ ಇದ್ದಾಗ ಕಳ್ಳಸಾಗಾಣಿಕೆ ಹೆಚ್ಚಾಗಿದ್ದರೂ ಸುಂಕ ಸಾಕಾದಷ್ಟು ಸಿಗುತ್ತಿತ್ತು. ಮೂರು ಪೆನ್ನಿಗೆ ಇಳಿಸಿದ ಮೇಲೆ ಕಳ್ಳ ಸಾಗಾಣಿಕೆಯನ್ನು ನಿಲ್ಲಿಸದಿದ್ದರೆ ಸರ್ಕಾರಕ್ಕೆ ಅಪಾರ ನಷ್ಟ ಉಂಟಾಗುವುದರಿಂದ ಹೊಸ ಕಾಯಿದೆಗಳನ್ನು ಬಿಗಿ ಮಾಡಿ ಪ್ರಬಲವಾಗಿ ಜಾರಿಗೆ ತಂದರು. ಕಳ್ಳ ಸಾಗಾಣಿಕೆ ಮಾಡುವಾಗ ಹಿಡಿದವರನ್ನು ಮತ್ತು 'ಸಕ್ಕರೆ ಕಾಯಿದೆ'ಯನ್ನು ಮುರಿದವರನ್ನು ಬ್ರಿಟಿಷ ನೌಕಾ ಅಧಿಕಾರಿಗಳ ಮುಂದೆ ವಿಚಾರಣೆಗೆ ಗುರಿಪಡಿಸುತ್ತಿದ್ದರು. ಪ್ರಧಾನಮಂತ್ರಿ ಗ್ರೆನ್‌ವಿಲ್ಲನು ಕಳ್ಳ ಸಾಗಾಣಿಕೆ ಮತ್ತು ಭ್ರಷ್ಟಾಚಾರ ಗಳನ್ನು ಕಿತ್ತೊಗೆದು, ಅನೇಕ ದಶಕಗಳಿಂದ ಅಸಮರ್ಥವಾಗಿ, ಜನರ ಅಸಡ್ಡೆಗೆ ಗುರಿಯಾಗಿದ್ದ ಸುಂಕದ ಕಛೇರಿಗಳಿಗೆ ದಕ್ಷ ಅಧಿಕಾರಿಗಳನ್ನು ನೇಮಿಸಿ, ಸುಂಕ ಸಂಗ್ರಹಣೆ ದಕ್ಷತೆಯಿಂದ ನಡೆಯುವಂತೆ ಮಾಡಲು ದೃಢ ಮನಸ್ಸು ಮಾಡಿದ್ದನು.

ಇಷ್ಟೆಲ್ಲ ನಿಯಂತ್ರಣಗಳು, ನಿರ್ಬಂಧಗಳು ಸಾಲದಾಗಿ ಇನ್ನೊಂದು ಹೊಸ ನಿರ್ಧಾರ, ಪಾರ್ಲಿಮೆಂಟ್‌ನ ಮೆದುಳ ಶಿಶು (Parliament's brain child) ಅಮೆರಿಕದ ಉದ್ಯಮಿ

ಮತ್ತು ವರ್ತಕರನ್ನು ಗಾಬರಿಗೊಳಿಸಿತು. ಈ ಹೊಸ ನಿರ್ಧಾರದ ಪ್ರಕಾರ ಅಮೆರಿಕದಲ್ಲಿ ಕಾಗದದ ಹಣವನ್ನು ಅಚ್ಚುಮಾಡುವುದನ್ನು ನಿರ್ಬಂಧಿಸಲಾಯಿತು. ಈ ನಿರ್ಬಂಧ ಜಾರಿಗೆ ಬಂದ ಸಮಯದಲ್ಲಿ ಅಮೆರಿಕನ್ನರು ಸಂದಿಗ್ಧ ಪರಿಸ್ಥಿತಿಯಲ್ಲಿದ್ದರು. ಯುದ್ಧಾನಂತರ ಅವರ ವ್ಯಾಪಾರ ಕುಗ್ಗಿತ್ತು; ಸಾಲದ ಹೊರೆ ವಿಪರೀತವಾಗಿತ್ತು. ಈ ಪರಿಸ್ಥಿತಿಯಲ್ಲಿ ಹೊಸ ತೆರಿಗೆಗಳು ಜಾರಿಗೆ ಬಂದು ಅವರ ಕಷ್ಟನಷ್ಟಗಳನ್ನು ಹೆಚ್ಚಿಸಿದವು. ಹಣದುಬ್ಬರ ತಡೆಯಲು ಕಾಗದದ ಹಣ ಅಚ್ಚುಮಾಡುವುದರ ಮೇಲೆ ನಿರ್ಬಂಧ! ಇವುಗಳೆಲ್ಲದರ ಒಟ್ಟು ಪರಿಣಾಮ ಏನಾಗುವುದೆನ್ನುವುದರ ಅನಿಶ್ಚಯತೆ ಮತ್ತು ಗೊಂದಲದ ಪರಿಸ್ಥಿತಿ ಅಮೆರಿಕ ವಸಾಹತು ಪ್ರಪಂಚದಲ್ಲಿ ಉಂಟಾಯಿತು. ಬ್ರಿಟಿಷ್ ಪಾರ್ಲಿಮೆಂಟಿಗೆ ತಮ್ಮ ಮೇಲೆ ತೆರಿಗೆ ಹಾಕುವ ಹಕ್ಕಿದೆ ಎಂದು ಒಪ್ಪಿಕೊಳ್ಳಲು ಅಮೆರಿಕನ್ನರು ತಯಾರಿರಲಿಲ್ಲ. ತಾವು ಸ್ವತಃ ಒಪ್ಪಿಕೊಂಡ ಅಥವಾ ತನ್ನ ಪ್ರತಿನಿಧಿಯ ಮೂಲಕ ಒಪ್ಪಿಗೆ ಕೊಟ್ಟ ತೆರಿಗೆಗಳಲ್ಲದೆ ಬೇರೆ ಎಲ್ಲಾ ತೆರಿಗೆಗಳಿಂದ ಪ್ರತಿಯೊಬ್ಬ ವ್ಯಕ್ತಿ ಬಿಡುಗಡೆ ಹೊಂದಿರಬೇಕು ಎನ್ನುವ ಜೇಮ್ಸ್ ಓಟಿಸ್ (James Otis)ನ ಅಭಿಪ್ರಾಯವನ್ನು ಅಮೆರಿಕನ್ನರು ಅನುಮೋದಿಸಿದರು. 'ಸಕ್ಕರೆ ಕಾಯಿದೆ' ಕುರಿತು 'ನಮ್ಮ ವ್ಯಾಪಾರದ ಮೇಲೆ ತೆರಿಗೆ ಹಾಕುವುದಾದರೆ, ನಮ್ಮ ಭೂಮಿಯ ಮೇಲೆ ಯಾಕೆ ತೆರಿಗೆ ಹಾಕಬಾರದು?' ಎಂದು ಪ್ರಶ್ನಿಸಿದರು. ನಾವು ಬೆಳೆದುದರ ಮೇಲೆ, ನಾವು ಉಪಯೋಗಿಸುವ ಎಲ್ಲ ವಸ್ತುಗಳ ಮೇಲೆ ಮತ್ತು ನಮ್ಮ ಸ್ವಂತ ವಸ್ತುಗಳ ಮೇಲೆ ಯಾಕೆ ತೆರಿಗೆ ಹಾಕಬಾರದು ಎನ್ನುವ ವಿಷಯದ ಬಗ್ಗೆ ದೊಡ್ಡ ಚರ್ಚೆ ಪ್ರಾರಂಭವಾಯಿತು.

ಅಮೆರಿಕನ್ನರ 'ಪ್ರಾತಿನಿಧ್ಯವಿಲ್ಲದ ತೆರಿಗೆ' ನ್ಯಾಯಬಾಹಿರವಾದುದು ಎನ್ನುವ ವಾದ ಬ್ರಿಟಿಷರಿಗೆ ಕಪಟದ ಕೊಂಕು ನುಡಿಯಂತೆ ಕಂಡಿತು. ತೆರಿಗೆ ಕಾಯಿದೆಗಳಿಗೂ ಮತ್ತು ಇತರ ಕಾಯಿದೆಗಳಿಗೂ ಇರುವ ವ್ಯತ್ಯಾಸ ಕೃತಕವಾದುದು, ಅಮೆರಿಕದಲ್ಲಿ ಪಾರ್ಲಿಮೆಂಟ್ ಸಾರ್ವಭೌಮತ್ವ ಪಡೆದಿದೆಯೇ ಅಥವಾ ಇಲ್ಲವೆ ಎನ್ನುವ ಪ್ರಶ್ನೆ ಅರ್ಥಹೀನವಾದದ್ದು, ಹಾಗೆ ಪ್ರಶ್ನಿಸುವುದು ದೇಶದ್ರೋಹವಾಗುತ್ತದೆ! ಈ ವಸಾಹತುಗಳನ್ನು ಆಳುವವರು ಪಾರ್ಲಿಮೆಂಟ್ ನೇಮಿಸಿದ ಅಧಿಕಾರಿಗಳಲ್ಲವೆ? ಅವು ನಡೆಯುತ್ತಿರುವುದು ಪಾರ್ಲಿಮೆಂಟ್ ಜಾರಿಗೆ ತಂದ ಕಾಯಿದೆಗಳಿಂದಲ್ಲವೆ? ವಸಾಹತುಗಾರರು ತಾವು ಮೂರನೆಯ ಜಾರ್ಜ್ ದೊರೆಯ ಪ್ರಜೆಗಳು ಎಂದು ಒಪ್ಪಿಕೊಂಡ ಮೇಲೆ, ಎಲ್ಲಾ ಪ್ರಜೆಗಳಂತೆ ಇವರೂ ಈ ವಿಶಾಲವಾದ ಸಾಮ್ರಾಜ್ಯವನ್ನು ನಿರ್ವಹಿಸಲು ತಗಲುವ ವೆಚ್ಚವನ್ನು ತುಂಬಿಸಲು ತಮ್ಮ ನ್ಯಾಯವಾದ ಪಾಲಿನ ಹಣವನ್ನು ಸಂತೋಷದಿಂದ ಕೊಡಬೇಕಾದುದು ಕರ್ತವ್ಯ. ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಅಮೆರಿಕ ವಸಾಹತುಗಳ ಪ್ರತಿನಿಧಿಗಳು ಇರಲಿಲ್ಲ ಎಂದು ಹೇಳುವುದು ಸತ್ಯಕ್ಕೆ ದೂರವಾಗುತ್ತದೆ. ಪ್ರತಿಯೊಂದು ವಸಾಹತು ತನ್ನ ಏಜೆಂಟನನ್ನು ಲಂಡನ್ನಿನಲ್ಲಿ ಇರಿಸಿತ್ತು. ಈ ಏಜೆಂಟನು ತನ್ನ ವಸಾಹತಿನ ಪ್ರತಿನಿಧಿಯಾಗಿ ಪಾರ್ಲಿಮೆಂಟ್‌ನಲ್ಲಿ ಭಾಗವಹಿಸುತ್ತಿದ್ದ. ಇಷ್ಟು ಬ್ರಿಟಿಷರು ಮಂಡಿಸಿದ ವಾದದ ಸಂಕ್ಷಿಪ್ತ ಸಾರಾಂಶ.

ವಾದ ವಿವಾದಗಳಿಗೆ ಕಾರಣಾವಾದ ಇನ್ನೊಂದು ವಿಷಯ 'ತಾತ್ವಿಕ ಪ್ರಾತಿನಿಧ್ಯ' (virtual representation) ಮತ್ತು 'ನೇರ ಪ್ರಾತಿನಿಧ್ಯ' (direct representation)ಗಳ ನಡುವಣ ವ್ಯತ್ಯಾಸಗಳು. ಬ್ರಿಟಿಷ್ ರಾಜಕೀಯ ವ್ಯವಸ್ಥೆಯಲ್ಲಿ 'ತಾತ್ವಿಕ ಪ್ರಾತಿನಿಧ್ಯ'ಕ್ಕೆ ಅವಕಾಶವಿತ್ತು. ತಾತ್ವಿಕ ಪ್ರಾತಿನಿಧ್ಯದ ಪ್ರಕಾರ ಸಾವಿರಾರು ಬ್ರಿಟಿಷ್ ಪ್ರಜೆಗಳಿಗೆ ಪಾರ್ಲಿಮೆಂಟಿನಲ್ಲಿ ಪ್ರಾತಿನಿಧ್ಯವಿರಲಿಲ್ಲ. ಇಂತಹ ಪರಿಸ್ಥಿತಿ ಹೇಗೆ ಉಂಟಾಗುತ್ತಿತ್ತೆಂದರೆ ಒಂದು ಪ್ರದೇಶದಲ್ಲಿ ಚುನಾವಣೆ ಮುಗಿದ ನಂತರ ಅಲ್ಲಿನ ಕೆಲವರು ಹೊಸ ಉಪನಗರಕ್ಕೆ ಹೋಗಿ ನೆಲಸುತ್ತಾರೆ ಎಂದು ಊಹಿಸೋಣ. ಆ ಉಪನಗರ ಚುನಾವಣೆ ಮುಗಿದ ನಂತರ ಅಸ್ತಿತ್ವಕ್ಕೆ ಬಂದಿದ್ದರಿಂದ ಅಲ್ಲಿ ನೆಲಸುವವರನ್ನು ಪಾರ್ಲಿಮೆಂಟಿನಲ್ಲಿ ಪ್ರತಿನಿಧಿಸುವವರು ಯಾರೂ ಇರುವುದಿಲ್ಲ. ಇಂಗ್ಲೆಂಡಿನ ಕೆಲವು ದೊಡ್ಡ ಪಟ್ಟಣಗಳಿಗೆ ಪಾರ್ಲಿಮೆಂಟ್ ಸದಸ್ಯರನ್ನು ಚುನಾಯಿಸುವ ಹಕ್ಕು ಇರಲಿಲ್ಲ. ಆದರೆ ಕೆಲವು ಚಿಕ್ಕ ಹಳೆಯ ಪಟ್ಟಣಗಳು ಪಾರ್ಲಿಮೆಂಟ್ ಸದಸ್ಯರನ್ನು ಚುನಾಯಿಸುವ ಹಕ್ಕನ್ನು ಪಡೆದಿದ್ದವು! ಪ್ರತಿಯೊಬ್ಬ ಪಾರ್ಲಿಮೆಂಟ್ ಸದಸ್ಯನು ಇಡೀ ದೇಶದ ಮತ್ತು ಚಕ್ರಾಧಿಪತ್ಯದ ಆಸಕ್ತಿಗಳನ್ನು ಪ್ರತಿನಿಧಿಸುತ್ತಾನೆ ಎನ್ನುವುದು ತಾತ್ವಿಕ ಪ್ರಾತಿನಿಧ್ಯದ ವೈಶಿಷ್ಟ್ಯ. ಅಮೆರಿಕನ್ನರಿಗೆ ಈ 'ತಾತ್ವಿಕ ಪ್ರಾತಿನಿಧ್ಯ' ಅರ್ಥವಿಲ್ಲದ ರಾಜಕೀಯ ಪದ್ಧತಿ ಎನ್ನಿಸಿತು. ಅಮೆರಿಕ ವಸಾಹತುಗಳಲ್ಲಿ ಮೊದಲಿನಿಂದಲೂ ವಸಾಹತಿನ ಪ್ರಜಾಪ್ರತಿನಿಧಿ ಸಭೆಗೆ ಚುನಾಯಿಸಿ ಬರುತ್ತಿದ್ದ ಪ್ರತಿಯೊಬ್ಬ ಸದಸ್ಯನೂ ತಾನು ಚುನಾವಣೆಗೆ ನಿಂತ ಜಿಲ್ಲೆಯ ಜನರನ್ನು ಪ್ರತಿನಿಧಿಸುವುದು ತನ್ನ ಅತಿಮುಖ್ಯ ಕರ್ತವ್ಯ ಎಂದು ತಿಳಿದಿದ್ದನು. ಇದನ್ನೆ 'ನೇರ ಪ್ರಾತಿನಿಧ್ಯ' ಎನ್ನುವುದು. ಈ ತಾತ್ವಿಕ ಮತ್ತು ನೇರ ಪ್ರಾತಿನಿಧ್ಯಗಳ ನಡುವಣ ಗೊಂದಲ ಮತ್ತು ಚರ್ಚೆ ಬ್ರಿಟಿಷರ ಮತ್ತು ವಸಾಹತುಗಾರರ ರಾಜಕೀಯ ಪದ್ಧತಿಗಳು ಕಾಲಕ್ರಮದಲ್ಲಿ ಬೇರೆ ಬೇರೆ ಪಥಗಳಲ್ಲಿ ಬೆಳೆದು ಬಂದಿರುವುದನ್ನು ಎತ್ತಿ ತೋರಿಸುತ್ತವೆ.

ಸ್ಟಾಂಪ್ ಕಾಯಿದೆ

ಬ್ರಿಟಿಷ್ ಪಾರ್ಲಿಮೆಂಟ್, ಅಮೆರಿಕದ ವೃತ್ತಪತ್ರಿಕೆಗಳು, ದಾಖಲೆ ಪತ್ರಗಳು, ಪರವಾನಗಿಗಳು (Licenses) ಮತ್ತು ಇನ್ನೂ ಕೆಲವು ವಸ್ತುಗಳಿಗೆ ಸುಂಕವನ್ನು ಹೆಚ್ಚಿಸಿತು. ಪ್ರಧಾನ ಮಂತ್ರಿ ಗ್ರೆನ್‌ವಿಲ್ಲನು ಸ್ಟಾಂಪ್ ಕಾಯಿದೆ ಅಮೆರಿಕದಲ್ಲಿ ವರ್ಷಕ್ಕೆ ೬೦,೦೦೦ ಪೌಂಡ್ ಸುಂಕವನ್ನು ಸಂಗ್ರಹಿಸಬಹುದು ಎಂದು ಅಂದಾಜು ಮಾಡಿದ್ದನು. ಆದರೆ ಈ ಸುಂಕಕ್ಕೆ ಈ ಎಲ್ಲ ವಸಾಹತುಗಳವರು ಒಗ್ಗಟ್ಟಾಗಿ ಸೇರಿ ತೀವ್ರ ವಿರೋಧ ವ್ಯಕ್ತಪಡಿಸಿದರು. ಸಕ್ಕರೆ ಕಾಯಿದೆಗಿಂತಲೂ ಸ್ಟಾಂಪಿನ ಕಾಯಿದೆಗೆ ಜನರು ತೀವ್ರ ವಿರೋಧ ವ್ಯಕ್ತಪಡಿಸಲು ಕಾರಣ ಅವರ ದೃಷ್ಟಿಯಲ್ಲಿ ಅದು ನೇರವಾದ ತೆರಿಗೆ (direct tax); ಚಕ್ರಾಧಿಪತ್ಯದ ಸಾಲ ತೀರಿಸಲು ತಮ್ಮ ತಲೆಯ ಮೇಲೆ ಹೇರಿದ ಕರಭಾರವಾಗಿ ತೋರಿತು. ಪ್ರಾರಂಭದಲ್ಲಿ ಪಾರ್ಲಿಮೆಂಟಿಗೆ ತಮ್ಮ ವಿರೋಧ ವ್ಯಕ್ತಪಡಿಸಿ ಕೋರಿಕೆಗಳನ್ನು ಸಲ್ಲಿಸಿದರು. ಆದರೆ ಪಾರ್ಲಿಮೆಂಟ್ ತಮ್ಮ ಕೋರಿಕೆಗಳನ್ನು ಕಡೆಗಣಿಸಿದ್ದರಿಂದ ವಸಾಹತುಗಳಲ್ಲಿ ಬಲವಾದ

ಪ್ರತಿಭಟನೆಗಳು ಪ್ರಾರಂಭವಾದವು. ಈ ಪ್ರತಿಭಾಟನೆಗಳ ಮುಂದಾಳುತ್ವ ವಹಿಸಿದ್ದು ವರ್ಜೀನಿಯ ವಸಾಹತು. ೧೭೬೫ರಲ್ಲಿ ಪ್ಯಾಟ್ರಿಕ್ ಹೆನ್ರಿ (Patrick Henry) ವರ್ಜೀನಿಯ ಪ್ರಜಾಪ್ರತಿನಿಧಿ ಸಭೆಯಲ್ಲಿ 'ವಸಾಹತು ಪ್ರಜಾಪ್ರತಿನಿಧಿ ಸಭೆ ಮಾತ್ರ ವರ್ಜೀನಿಯನ್ನರ ಮೇಲೆ ತೆರಿಗೆ ಹಾಕುವ ವಿಶಿಷ್ಟ ಮತ್ತು ಸಂಪೂರ್ಣ ಹಕ್ಕು ಪಡೆದಿದೆ; ವಸಾಹತುಗಳ ಮೇಲೆ ತೆರಿಗೆ ಹಾಕುವ ಹಕ್ಕು ಪಾರ್ಲಿಮೆಂಟಿಗೆ ಖಂಡಿತವಾಗಿ ಇಲ್ಲ' ಎಂಬ ನಿರ್ಣಯವನ್ನು ಮಂಡಿಸಿದನು. ಮೆಸಾಚ್ಯುಸೆಟ್ಸ್ ಸಭೆಯಲ್ಲಿ ತೆರಿಗೆಯ ವಿರೋಧವಾಗಿ ಅನೇಕ ನಿರ್ಣಯಗಳನ್ನು ಮಂಡಿಸಿದರು. ನಂತರ 'ಸ್ವಾತಂತ್ರ್ಯದ ಪುತ್ರರು' (Sons of Liberty) ಎಂಬ ತೀವ್ರಗಾಮಿಗಳ ಸಂಘ ಸ್ಟಾಂಪ್ ಕಾಯಿದೆಯ ವಿರುದ್ಧ ಚಳುವಳಿ ಆರಂಭಿಸಿತು. ಈ ಸಂಘದ ನಾಯಕರು ಘನತೆ ಗೌರವವುಳ್ಳ ವ್ಯಕ್ತಿಗಳಾಗಿದ್ದರೂ ಅವರ ಅನುಯಾಯಿ ಗಳಲ್ಲಿ ಕೆಲವು ಹುಡುಗರು ತಮ್ಮ ಗುರಿ ಸಾಧಿಸಲು ಹಿಂಸಾಕೃತ್ಯಗಳಲ್ಲಿ ತೊಡಗಿದರು. ಅವರು ಬಾಸ್ಟನ್ ನಗರದಲ್ಲಿ ಒಂದು ಕ್ರೂರ ಗಲಭೆ ಎಬ್ಬಿಸಿ ಸ್ಟಾಂಪ್ ಮಾಸ್ಟರ್ ಮತ್ತು ಲೆಫ್ಟಿನೆಂಟ್ ಗವರ್ನರ್ ಇಬ್ಬರ ಮನೆಗಳನ್ನು ಲೂಟಿ ಮಾಡಿ ಮುಖ್ಯವಾದ ಸರ್ಕಾರದ ದಾಖಲೆ ಪತ್ರಗಳನ್ನು ನಾಶ ಮಾಡಿದರು. ಮೇರಿಲ್ಯಾಂಡಿನ ಸ್ಟಾಂಪ್ ಮಾಸ್ಟರ್ ರಾಜೀನಾಮೆ ಕೊಡಲು ನಿರಾಕರಿಸಿದಾಗ ಅವನ ಪ್ರತಿಕೃತಿಯನ್ನು (effigy) ಸುಟ್ಟು ಹಾಕಿದರು. ಅವನು ನ್ಯೂಯಾರ್ಕಿಗೆ ಓಡಿಹೋಗಿ ತಲೆಮರೆಸಿಕೊಂಡನು. ಆದರೆ ಅಲ್ಲಿಯ 'ಸ್ವಾತಂತ್ರ್ಯ ಪುತ್ರರು' ಅವನಿಗೆ ಕಿರುಕುಳ ಕೊಟ್ಟು ಕಡೆಯಲ್ಲಿ ಅವನು ರಾಜೀನಾಮೆ ಕೊಡುವಂತೆ ಮಾಡಿದರು. ಅನೇಕ ಸ್ಟಾಂಪ್ ಮಾಸ್ಟರ್‌ಗಳ ಗತಿಯೂ ಹೀಗೆಯೇ ಆಯಿತು.

ಸ್ವಲ್ಪಕಾಲ ಸ್ಟಾಂಪ್‌ಕಾಗದ ಬೇಕಾಗುವಂತಹ ವ್ಯವಹಾರಗಳನ್ನು ಯಾರೂ ನಡೆಸಲಿಲ್ಲ. ನಂತರ ಕ್ರಮೇಣವಾಗಿ ಕಾನೂನಿಗೆ ವಿರುದ್ಧವಾಗಿ ಸ್ಟಾಂಪ್ ಇಲ್ಲದ ಕಾಗದದ ಮೇಲೆ ಬರೆದ ದಾಖಲೆಗಳು, ಲೆಕ್ಕಪತ್ರಗಳನ್ನು ಉಪಯೋಗಿಸಿ ವ್ಯವಹಾರ ನಡೆಸಿಕೊಂಡು ಹೋದರು. ಜನರ ದೊಂಬಿಗೆ ಹೆದರಿ ಬ್ರಿಟಿಷ್ ಅಧಿಕಾರಿಗಳು ಈ ಎಲ್ಲಾ ನ್ಯಾಯಬಾಹಿರ ವಾದ ವ್ಯವಹಾರಗಳನ್ನು ನೋಡಿಯೂ ನೋಡದಂತೆ ಇದ್ದುಬಿಟ್ಟರು. ವಸಾಹತುಗಳಲ್ಲಿ ಬ್ರಿಟಿಷರ ಕಾನೂನುಗಳು ಶಕ್ತಿಹೀನವಾಗಿದ್ದವು. ಸ್ಟಾಂಪ್ ಕಾಯಿದೆ ಅಮೆರಿಕನ್ನರಲ್ಲಿ ಇಷ್ಟು ತೀವ್ರ ಪ್ರತಿಕ್ರಿಯೆ ಉಂಟುಮಾಡಲು ಕಾರಣ ಈ ಕಾನೂನು ಪ್ರತಿ ವಸಾಹತಿನ ಮೇಲೆ ಮತ್ತು ಲೆಕ್ಕವಿಲ್ಲದಷ್ಟು ಹಿತಾಸಕ್ತಿಗಳ ಮೇಲೆ – ಲಾಯರು, ವ್ಯಾಪಾರಿಗಳು, ವೃತ್ತಪತ್ರಿಕೆಗಳ ಸಂಪಾದಕರು ಚರ್ಚಿನ ಅಧಿಕಾರಿಗಳು – ಎಲ್ಲರೂ ತಮ್ಮ ವ್ಯವಹಾರಗಳಲ್ಲಿ ಸ್ಟಾಂಪ್ ಕಾಗದ ಬಳಸಬೇಕಾದುದು ಕಡ್ಡಾಯವಾಗಿತ್ತು. ಆದರೆ ಸ್ಟಾಂಪ್ ಕಾಗದ ಕೊಂಡರೆ ತಮ್ಮ ಸ್ವಯಂ ಆಡಳಿತದ ಹಕ್ಕನ್ನು ಬಿಟ್ಟುಕೊಟ್ಟಂತೆ ಆಗುತ್ತದೆ ಎಂದು ಅಮೆರಿಕನ್ನರು ನಂಬಿದ್ದರು.

ಒಬ್ಬ ತಂದೆ ತನ್ನ ಮಗನಿಗೆ ಕಹಿ ಔಷಧ ಕುಡಿಯಲು ಬಲಾತ್ಕಾರ ಮಾಡಿದಾಗ,

ಮಗ ಕುಡಿಯಲು ಒಪ್ಪದೆ ಹಠ ಮಾಡಿದರೆ ತಂದೆ ಅದನ್ನು ಅರ್ಥ ಮಾಡಿಕೊಂಡು ಸಹನೆಯಿಂದ ವರ್ತಿಸಬೇಕು. ಅಮೆರಿಕನ್ನರ ಬಗ್ಗೆ ಬ್ರಿಟಿಷರು ಇದೇ ಮನೋಭಾವ ತಾಳಿದ್ದರು. ಆದರೆ ಸಹನೆಗೂ ಮಿತಿ ಇರುತ್ತದೆ. ಮಗನ ಕಾಯಿಲೆ ವಾಸಿಮಾಡಲು ತಂದೆ ಬಲಾತ್ಕಾರದಿಂದ ಕುಡಿಸಲೇ ಬೇಕಾಗುತ್ತದೆ. ಹೀಗೆ ಮಾಡುವುದು ಮಗನ ಒಳಿತಿಗೆ. ಅದೇ ರೀತಿ ಕೆಲವು ಬ್ರಿಟಿಷ್ ರಾಜಕೀಯ ನಾಯಕರು ಅಮೆರಿಕದಲ್ಲಿ ಇಂಗ್ಲೆಂಡ್ ರಾಜನ ಸಾರ್ವಭೌಮತ್ವವನ್ನು ಸ್ಥಾಪಿಸುವ ಮತ್ತು ಎಲ್ಲ ಅಧಿಕಾರವನ್ನು, ವಸಾಹತುಗಳ ಸ್ವಾಯತ್ತತೆಯನ್ನು ಕಡೆಗಣಿಸಿ, ಕೇಂದ್ರೀಕೃತ ಮಾಡುವ ಕಾಲ ಬಂದಿದೆ ಎಂದು ವಾದಿಸಿದರು.

ಸ್ಟಾಂಪ್ ಕಾಯಿದೆಯ ವಿರುದ್ಧವಾಗಿ ಪ್ರತಿಭಟನೆ ಮತ್ತೂ ತೀವ್ರಗೊಂಡಿತು. ಅಮೆರಿಕನ್ನರು ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸಿದರು. ಒಂದು ಸಾವಿರದಷ್ಟು ವ್ಯಾಪಾರಿಗಳು ಇಂಗ್ಲೆಂಡಿನಿಂದ ಆಮದು ಮಾಡಿಕೊಳ್ಳುವುದನ್ನು ಸಂಪೂರ್ಣವಾಗಿ ನಿಲ್ಲಿಸುವ ಮನವಿಪತ್ರಕ್ಕೆ ರುಜು ಹಾಕಿದರು. ಇದು ಇಂಗ್ಲೆಂಡಿನ ವರ್ತಕರಿಗೆ ತೀವ್ರ ನಷ್ಟ ಉಂಟುಮಾಡಿತು. ಅವರು ಸ್ಟಾಂಪ್ ಕಾಯಿದೆಯನ್ನು ರದ್ದು ಗೊಳಿಸುವಂತೆ ತಮ್ಮ ಪಾರ್ಲಿಮೆಂಟಿನ ಮೇಲೆ ಒತ್ತಾಯ ಹಾಕಿದರು. ಅದರ ಪರಿಣಾಮವಾಗಿ ೧೭೬೬ರಲ್ಲಿ ಪಾರ್ಲಿಮೆಂಟ್ ಸ್ಟಾಂಪ್ ಕಾಯಿದೆಯನ್ನು ಹಿಂತೆಗೆದುಕೊಂಡಿತು. ನಂತರ ಅಮೆರಿಕನ್ನರು ಬ್ರಿಟಿಷ್ ವಸ್ತುಗಳ ಮೇಲಿನ ಬಹಿಷ್ಕಾರವನ್ನು ರದ್ದು ಮಾಡಿದರು.

ಒಂದು ಸಂಘರ್ಷಣೆಗೆ ಪರಿಹಾರವಾಯಿತೆಂದು ಉಸಿರಾಡುವಷ್ಟರಲ್ಲಿಯೇ ಮತ್ತೊಂದು ಸಂಘರ್ಷಣೆ ಪ್ರಾರಂಭವಾಯಿತು. ಸ್ಟಾಂಪ್ ಕಾಯಿದೆಯನ್ನು ಕೊನೆಗೊಳಿಸಿದ ದಿನವೇ ಪಾರ್ಲಿಮೆಂಟ್ 'ಹಕ್ಕು ಸ್ಪಷ್ಟಪಡಿಸುವ ಕಾಯಿದೆ' (Declaration Act)ಯನ್ನು ಜಾರಿಗೆ ತಂದಿತು. ಈ ಕಾಯಿದೆ 'ವಸಾಹತುಗಳು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಅಧೀನವಾದವು; ಆದ್ದರಿಂದ ಪಾರ್ಲಿಮೆಂಟ್ ತನಗೆ ಇಷ್ಟಬಂದ ಯಾವ ಕಾಯಿದೆಯನ್ನಾದರೂ ವಸಾಹತುಗಳನ್ನು ಮತ್ತು ಅಮೆರಿಕನ್ನರನ್ನು ನಿರ್ಬಂಧದಲ್ಲಿಡುವ ಸಲುವಾಗಿ ಜಾರಿಗೆ ತರಬಹುದು' ಎನ್ನುವುದನ್ನು ಸ್ಪಷ್ಟಪಡಿಸಿತು. ಅಮೆರಿಕನ್ನರಿಗೆ ಈ 'ಸ್ಪಷ್ಟಪಡಿಸುವ ಕಾಯಿದೆ' ಸಂವಿಧಾನಕ್ಕೆ ವಿರುದ್ಧವಾದುದು ಅನ್ನಿಸಿತು. ಈ ಕಾಯಿದೆ ಬ್ರಿಟಿಷರು ಮತ್ತು ಅಮೆರಿಕನ್ನರು ಒಂದೇ ವಿಷಯವನ್ನು ಹೇಗೆ ಬೇರೆ ಬೇರೆ ರೀತಿಯಲ್ಲಿ ಅರ್ಥಮಾಡಿಕೊಳ್ಳುತ್ತಾರೆ ಎನ್ನುವುದನ್ನು ಸ್ಪಷ್ಟಪಡಿಸಿತು. ಪ್ರತಿನಿಧಿಸುವುದರ (representation) ಬಗ್ಗೆ ಭಿನ್ನಾಭಿಪ್ರಾಯಗಳನ್ನು ಹಿಂದೆ ತಿಳಿಸಲಾಗಿದೆ. ವಾದ ವಿವಾದಗಳಿಗೆ ಕಾರಣವಾದ ಇನ್ನೊಂದು ಪದ, 'ಸಂವಿಧಾನ' (Constitution) ಬ್ರಿಟಿಷರ ವ್ಯಾಖ್ಯಾನದಂತೆ ಸಂವಿಧಾನ, ಸಮಾಜದಲ್ಲಿ ಬೆಳೆದುಬಂದಿರುವ ಎಲ್ಲಾ ಕಾಯಿದೆಗಳು, ಸಂಪ್ರದಾಯಗಳು, ಸಂಘ-ಸಂಸ್ಥೆಗಳು ಸೇರಿ ಆಗಿರುವ ಒಂದು ವ್ಯವಸ್ಥೆ. ಈ ವ್ಯವಸ್ಥೆಗೆ ಅನುಗುಣವಾಗಿ ರಾಷ್ಟ್ರ ತನ್ನ

ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕು. ಅಮೆರಿಕದಲ್ಲಿ ಸಂವಿಧಾನ ಎಂದರೆ ಒಂದು 'ಲಿಖಿತ ಪ್ರಣಾಳಿಕೆ' (written document) . ಈ ಪ್ರಣಾಳಿಕೆ ಸರ್ಕಾರದ ಇತಿಮಿತಿಗಳನ್ನು ಸ್ಪಷ್ಟಪಡಿಸುತ್ತದೆ.

ಇವುಗಳಿಗಿಂತ ಇನ್ನೂ ಹೆಚ್ಚಿನ ವಿವಾದಗ್ರಸ್ಥ ಪದ ಎಂದರೆ 'ಸಾರ್ವಭೌಮತ್ವ' (sovereignty). ಬ್ರಿಟಿಷರಿಗೆ ಸಾರ್ವಭೌಮತ್ವ ಎಂದರೆ ಅಧಿಕಾರದ ಪರಮಾವಧಿ. ಸಾರ್ವಭೌಮತ್ವ ಅವಿಭಾಜ್ಯವಾದುದು. ಇಂಗ್ಲೆಂಡಿನಲ್ಲಿ ಪರಮಾವಧಿ ಅಧಿಕಾರ ಮತ್ತು ಅಂತಿಮ ರಾಜಕೀಯ ಬಲ ಇರುವುದು ಪಾರ್ಲಿಮೆಂಟಿನಲ್ಲಿ, ರಾಜನಲ್ಲಿ ಅಲ್ಲ. ಆದ್ದರಿಂದ 'ಸ್ಪಷ್ಟ ಪಡಿಸುವ ಕಾಯಿದೆ' (Declaratory Act) ಬ್ರಿಟಿಷರಿಗೆ ಸ್ವಯಂಸ್ಪಷ್ಟವಾಗಿತ್ತು! ಆದರೆ ಅಮೆರಿಕನ್ನರಿಗೆ ಇದು ನುಂಗಲಾರದ ತುತ್ತಾಯಿತು. ಅವರಿಗೆ ಪಾರ್ಲಿಮೆಂಟಿನ ಸಾರ್ವಭೌಮತ್ವ ಸಂವಿಧಾನದ ಉಲ್ಲಂಘನೆಯಲ್ಲದೆ ಮತ್ತೇನೂ ಅಲ್ಲ ಎನಿಸಿತು! ಹಮ್ಮು ಬಿಮ್ಮುಗಳಿಂದ ತುಂಬಿದ, ದೂರದೃಷ್ಟಿಯಿಲ್ಲದ ಬ್ರಿಟಿಷ್ ಅಧಿಕಾರಿಗಳು ಅಮೆರಿಕನ್ನರ ವಾದವನ್ನು ಬರಿದೆ ಕೇಳಲು ಕೂಡಾ ನಿರಾಕರಿಸಿದರು!

ಅಮೆರಿಕನ್ ಕ್ರಾಂತಿಗೆ ಹಿನ್ನೆಲೆ ಟೌನ್‌ಷೆಂಡ್ ಕಾಯಿದೆಗಳು

ಬ್ರಿಟಿಷ ಸರ್ಕಾರಕ್ಕೆ ಹಣದ ಅಗತ್ಯ ಬಹಳವಾಗಿತ್ತು; ವಾರ್ಷಿಕ ಬಜೆಟ್ ೮.೫ ಮಿಲಿಯನ್ ಪೌಂಡುಗಳು. ಅಪಾರ ಮೊತ್ತದ ಹಣವನ್ನು ಸರ್ಕಾರ ಹೊಂದಿಸುವುದು ಅತ್ಯಗತ್ಯವಾಗಿತ್ತು! ಆದ್ದರಿಂದ ೧೭೬೭ರಲ್ಲಿ ಆಗ ಚಾನ್ಸೆಲರ್ ಆಫ್ ದಿ ಎಕ್ಸ್‌ಚೆಕರ್ (The Chancellor of the exchequer) ಆಗಿದ್ದ ಚಾರ್ಲ್ಸ್ ಟೌನ್‌ಷೆಂಡನು (Charles Townshend) ಹೊಸ ತೆರಿಗೆಗಳ ಒಂದು ಸರಣಿಯನ್ನೇ ಜಾರಿಗೆ ತಂದನು. ಹೊಸ ತೆರಿಗೆಗಳಿಗೆ ಒಳಗಾದ ಬಹಳ ವಸ್ತುಗಳಲ್ಲಿ ಕೆಲವು ಮುಖ್ಯವಾದುವೆಂದರೆ – ಗಾಜು, ಸೀಸ, ಬಣ್ಣಗಳು, ಕಾಗದ ಮತ್ತು ವಸಾಹತುಗಳು ಆಮದು ಮಾಡಿಕೊಳ್ಳುತ್ತಿದ್ದ ಟೀ. ಟೌನ್‌ಷೆಂಡನು ಲಕ್ಷಣವಾದ ಹಾಸ್ಯಪ್ರವೃತ್ತಿಯ ವ್ಯಕ್ತಿಯಾಗಿದ್ದರೂ, ಅಪ್ರಮಾಣಿಕ ಮತ್ತು ವ್ಯವಹಾರಜ್ಞಾನವಿಲ್ಲದವನಾಗಿದ್ದನು. ಅವನು ಅಮೆರಿಕನ್ನರನ್ನು 'ಕೃತಘ್ನರಾದ ಪುಂಡು ಹುಡುಗರು' ಎಂದು ಭಾವಿಸಿದ್ದ.

ಟೌನ್‌ಷೆಂಡನ ಅಭಿಪ್ರಾಯದಲ್ಲಿ ತೆರಿಗೆಯನ್ನು ಪ್ರತ್ಯಕ್ಷ ಮತ್ತು ಪರೋಕ್ಷ ಎಂದು ವಿಂಗಡಿಸುವುದು ಸಂಪೂರ್ಣ ತಿಳಿಗೇಡಿತನ! ಹೀಗೆ ವಿಂಗಡಿಸುವ ವಸಾಹತುಗಾರರು ಮಹಾಮೂರ್ಖರು ಎಂದು ಅವನು ತೀರ್ಮಾನಿಸಿದ್ದ. ತೆರಿಗೆಗಳ ಬಗ್ಗೆ ಎಚ್ಚರ ವಹಿಸಿದ್ದ ವಸಾಹತುಗಾರರು ಟೌನ್‌ಷೆಂಡ್ ವಿಧಿಸಿದ ತೆರಿಗೆಗಳಿಗೆ ಕೂಡಲೇ ಪ್ರತಿಕ್ರಿಯೆ ತೋರಿ ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸಿದರು. ಅದರ ಜೊತೆಗೆ ವಸಾಹತುಗಳಲ್ಲಿ ಉತ್ಪಾದನೆ ಹೆಚ್ಚಿಸಲು ವಿಸ್ತಾರವಾದ ಯೋಜನೆಗಳನ್ನು ಕಾರ್ಯಗತ ಮಾಡಲು ಪ್ರಯತ್ನಿಸಿದರು.

ಇದರ ಪರಿಣಾಮವಾಗಿ ೧೭೬೯ರ ಕೊನೆಯಲ್ಲಿ ಇಂಗ್ಲೆಂಡಿನಿಂದ ಆಮದು ಮಾಡಿಕೊಳ್ಳುತ್ತಿದ್ದ ಪದಾರ್ಥಗಳನ್ನು ಅರ್ಧಕ್ಕಿಂತ ಹೆಚ್ಚು ಕಡಿಮೆ ಮಾಡಿದರು.

ಪ್ರಾಂತೀಯ ಸುಂಕದ ಅಧಿಕಾರಿಗಳ ಮಂಡಳಿ ವ್ಯಾಪಾರಿ ಕಾಯಿದೆಗಳನ್ನು ಕಡ್ಡಾಯವಾಗಿ ಜಾರಿಗೆ ತರುವ ಅಧಿಕಾರ ಹೊಂದಿತ್ತು. ಈ ಮಂಡಳಿಯ ಮುಖ್ಯ ಕಛೇರಿ ಬಾಸ್ಟನ್ ನಗರದಲ್ಲಿತ್ತು. ಕಾಯಿದೆಗಳನ್ನು ಉಲ್ಲಂಘಿಸಿದವರನ್ನು ನೌಕಾನ್ಯಾಯಾಲಯಗಳಲ್ಲಿ ವಿಚಾರಣೆಗೆ ಗುರಿಪಡಿಸುತ್ತಿದ್ದರು. ನೌಕಾಸೇನಾಧಿಕಾರಿಗಳೇ ಇಲ್ಲಿ ನ್ಯಾಯಾಧೀಶರು. 'ಜೂರಿ' (Jury)ಗಳು ಇರುತ್ತಿರಲಿಲ್ಲ. ನ್ಯಾಯಾಧೀಶರೇ ತೀರ್ಪು ನೀಡಿ ಶಿಕ್ಷೆ ವಿಧಿಸುತ್ತಿದ್ದರು. ಈ ಮಂಡಳಿಯ ಸುಂಕದ ಅಧಿಕಾರಿಗಳು ಕುತಂತ್ರದಿಂದ ಪ್ರಾಮಾಣಿಕ ವರ್ತಕರ ವಿರುದ್ಧ ತೀರ್ಪು ನೀಡುವಂತೆ ವ್ಯವಸ್ಥೆ ಮಾಡಿ, ವರ್ತಕ ತಪ್ಪಿತಸ್ಥನೆಂದು ನ್ಯಾಯಾಲಯದಲ್ಲಿ ತೀರ್ಮಾನವಾದ ಮೇಲೆ ಆ ವರ್ತಕರಿಂದ ಹಡಗು ಮತ್ತು ಅದರ ಸರಕನ್ನು ವಶಪಡಿಸಿಕೊಳ್ಳುತ್ತಿದ್ದರು. ನಂತರ ವರ್ತಕರಿಂದ ಆ ಹಡಗು ಮತ್ತು ಅದರ ಸರಕಿನ ಒಟ್ಟುಬೆಲೆಯ ೧/೩ ಭಾಗ ಹಣವನ್ನು ವಸೂಲು ಮಾಡುತ್ತಿದ್ದರು. ಅವರು ವಶಪಡಿಸಿಕೊಂಡ ಎಲ್ಲ ಹಡಗುಗಳಿಂದ ಇದೇ ಮೊತ್ತದ ಹಣವನ್ನು ತಮ್ಮ ಸ್ವಂತಕ್ಕಾಗಿ ವಸೂಲಿ ಮಾಡುತ್ತಿದ್ದರು.

ಅಧಿಕಾರಿಗಳ ದರ್ಪ, ಮೋಸ, ವಂಚನೆ ಮತ್ತು ಭ್ರಷ್ಟಾಚಾರಗಳಿಂದ ರೋಸಿಹೋಗಿದ್ದ ವಸಾಹತುಗಾರರು ಬ್ರಿಟಿಷರ ಮತ್ತು ಅಮೆರಿಕನ್ನರ ನಡುವಣ ರಾಜಕೀಯ ಸಂಬಂಧಗಳ ಬಗ್ಗೆ ಗಂಭೀರವಾಗಿ ಯೋಚಿಸತೊಡಗಿದರು. ೧೭೬೮ರಲ್ಲಿ ಮೆಸಾಚ್ಯುಸೆಟ್ಸ್‌ನ ಒಂದು ಸಾರ್ವಜನಿಕ ನ್ಯಾಯಾಲಯು ಒಂದು ಸುತ್ತೋಲೆಯನ್ನು ಎಲ್ಲಾ ವಸಾಹತುಗಳ ನ್ಯಾಯಾಂಗಗಳಿಗೆ ಕಳುಹಿಸಿತು. ಆ ಸುತ್ತೋಲೆ ಟೌನ್‌ಷೆಂಡ್ ಕಾಯಿದೆಗಳ ಬಗ್ಗೆ ಅಭಿಪ್ರಾಯಗಳು ಮತ್ತು ಯಾವರೀತಿಯ ಕಾರ್ಯಾಚರಣೆ ಮಾಡಬೇಕು ಎನ್ನುವುದನ್ನೆಲ್ಲ ವಿವರವಾಗಿ ತಿಳಿಸುವಂತೆ ವಿನಂತಿಸುವ ಪತ್ರವಾಗಿತ್ತು. ಆ ಸುತ್ತೋಲೆ ಕಳುಹಿಸಿದ ಸುದ್ದಿ ಇಂಗ್ಲೆಂಡಿಗೆ ತಲುಪಿದಾಗ, ವಸಾಹತುಗಳ ಆಡಳಿತದ ಕಾರ್ಯದರ್ಶಿಯಾಗಿದ್ದ ಲಾರ್ಡ್ ಹಿಲ್ಸ್‌ಬರೋ (Lord of Hillsborough) ಕೂಡಲೇ ಅಲ್ಲಿನ ನ್ಯಾಯಾಂಗ (Legislature)ವನ್ನು ರದ್ದುಗೊಳಿಸುವಂತೆ ಮೆಸಾಚ್ಯುಸೆಟ್ಸ್‌ನ ರಾಜ್ಯಪಾಲನಿಗೆ ಅಪ್ಪಣೆ ಮಾಡಿದನು. ಬ್ರಿಟಿಷ ಸೈನ್ಯದ ಎರಡು ತುಕಡಿಗಳನ್ನು ಹಡಗಿನಲ್ಲಿ ಬಾಸ್ಟನ್‌ಗೆ ರವಾನಿಸಿದನು. ಬ್ರಿಟಿಷ್ ಅಧಿಕಾರಿಗಳ ಇಂತಹ ವೈರಸಾಧಕ ವರ್ತನೆಯಿಂದ ಅಮೆರಿಕನ್ನರಿಗೆ ಬ್ರಿಟಿಷರು ತಮ್ಮ ಸ್ವಾತಂತ್ರ್ಯವನ್ನು ನಾಶಮಾಡಲು ಪಿತೂರಿ ನಡೆಸಿದ್ದಾರೆ ಎನ್ನುವುದು ಮನದಟ್ಟಾಯಿತು. ಶಾಂತಿಸ್ಥಾಪನೆಯಾಗಿ, ಯಾವ ಶತ್ರುಗಳ ಸುಳಿವೂ ಇಲ್ಲದ ಕಾಲದಲ್ಲೂ ಬ್ರಿಟಿಷ್ ಸೈನಿಕರು ಬಾಸ್ಟನ್ ನಗರದ ರಸ್ತೆಗಳಲ್ಲಿ ಗಸ್ತು ತಿರುಗುವುದು ಅಲ್ಲಿನ ನಾಗರಿಕರಿಗೆ ಬ್ರಿಟಿಷರ ಉದ್ಧಟತನ ಎನ್ನಿಸಿತು. ನಗರವಾಸಿಗಳಿಗೂ ಮತ್ತು ಬ್ರಿಟಿಷ್ ಸೈನಿಕರಿಗೂ ಆಗಾಗ ಸಣ್ಣಪುಟ್ಟ ಘರ್ಷಣೆಗಳು ನಡೆಯುತ್ತಿದ್ದುದು ಸಾಮಾನ್ಯ ಸಂಗತಿಯಾಗಿತ್ತು.

ಇಂತಹ ಘರ್ಷಣೆಗಳು ಹೆಚ್ಚುತ್ತ ಹೋಗಿ 'ಬಾಸ್ಟನ್ ಸಾಮೂಹಿಕ ಕೊಲೆ' (Boston massacre) ಎಂದು ಹೆಸರುವಾಸಿಯಾದ ದುರಂತದಲ್ಲಿ ಕೊನೆಗೊಂಡಿತು. ೧೭೭೦ರ ಮಾರ್ಚ್ ತಿಂಗಳಲ್ಲಿ ರೊಚ್ಚಿಗೆದ್ದ ನಗರವಾಸಿ ಗುಂಪಿನ ಮೇಲೆ ಬ್ರಿಟಿಷ್ ಸೈನಿಕರು ಗುಂಡು ಹಾರಿಸಿದರು. ಐದು ಜನರು ಸತ್ತು ಅನೇಕರಿಗೆ ಗಾಯಗಳಾದವು. ಈ ದುರಂತವು ಹೊಗೆಯಾಡುತ್ತಿದ್ದ ಅಮೆರಿಕನ್ನರ ದ್ವೇಷ ದಳ್ಳುರಿಯಾಗಿ ಹಬ್ಬುವಂತೆ ಮಾಡಿತು.

ಅಮೆರಿಕನ್ನರ ಪ್ರತಿಭಟನೆಗೆ ಮಣಿದು ಬ್ರಿಟಿಷ್ ಅಧಿಕಾರಿಗಳು ತೆರಿಗೆ ಸಂಗ್ರಹಿಸುವುದನ್ನು ನಿಲ್ಲಿಸಿದರು. ಏಪ್ರಿಲ್ ೧೭೭೦ರಲ್ಲಿ ಪಾರ್ಲಿಮೆಂಟ್ ಟೌನ್‌ಷೆಂಡ್ ಕಾಯಿದೆಗಳನ್ನು (ಟೀ ಮೇಲೆ ಹಾಕಿದ್ದ ಮೂರು ಪೆನ್ನಿ ತೆರಿಗೆಯನ್ನು ಮಾತ್ರ ಬಿಟ್ಟು) ರದ್ದು ಮಾಡಿತು. ವಸಾಹತುಗಳು ಬ್ರಿಟಿಷ್ ವಸ್ತುಗಳನ್ನು ಬಹಿಷ್ಕರಿಸಿದ್ದರೂ ಅನೇಕ ವರ್ತಕರು ಬ್ರಿಟಿಷ್ ಟೀಯನ್ನು ತೆರಿಗೆ ಕೊಟ್ಟು ಆಮದು ಮಾಡಿಕೊಳ್ಳುತ್ತಿದ್ದರು. ಆನಂತರದ ಎರಡು ವರ್ಷಗಳಲ್ಲಿ ಯಾವ ಸಂದಿಗ್ಧ ಪರಿಸ್ಥಿತಿಯೂ ಉಂಟಾಗಲಿಲ್ಲ.

ಟೀ ಹಗರಣ

೧೭೭೩ರಲ್ಲಿ ಒಂದು ಹೊಸ ಪರಿಸ್ಥಿತಿ ಉಂಟಾಗಿ ವಸಾಹತುಗಳ ರಾಜಕೀಯ ಅಸ್ಥಿರತೆ ಅಂತಿಮವಾಗಿ – ಉತ್ಕಟ ಸ್ಥಿತಿಗೆ ತಲುಪುವಂತೆ ಮಾಡಿತು. ವಸಾಹತುಗಳ ಇತಿಹಾಸದ ಉದ್ದಕ್ಕೂ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ, ಇಂಗ್ಲೆಂಡಿನ ಕಡಲಾಚೆಯ ಎಲ್ಲಾ ವ್ಯಾಪಾರದ ಮೇಲೆ ಏಕಸ್ವಾಮ್ಯತೆಯನ್ನು ಪಡೆದಿತ್ತು. ಬಹಳ ಕಾಲದಿಂದ ನಡೆದು ಬಂದಿದ್ದ ಈ ಏಕಸ್ವಾಮ್ಯತೆಯಿಂದ ಕಂಪನಿ ಅಪಾರ ಹಣ ಗಳಿಸಿತ್ತು. ಆದರೆ ಹಲವಾರು ದಶಕಗಳ ಅಸಮರ್ಥ ಆಡಳಿತ, ಭ್ರಷ್ಟಾಚಾರ ಮತ್ತು ತೀವ್ರಗತಿಯಲ್ಲಿ ಹೆಚ್ಚುತ್ತಿರುವ ಸೈನ್ಯದ ಖರ್ಚುವೆಚ್ಚಗಳು ಕಂಪನಿಯನ್ನು ದಿವಾಳಿತನದ ಅಂಚಿಗೆ ತಂದೊಡ್ಡಿದ್ದವು. ಈ ಕಂಪನಿಯ ವಶದಲ್ಲಿದ್ದ ಬೆಲೆಬಾಳುವ ಆಸ್ತಿಗಳಲ್ಲಿ ೧೭ ಮಿಲಿಯನ್ ಪೌಂಡುಗಳಷ್ಟು ಅತ್ಯುತ್ತಮವಾದ 'ಟೀ' ಕಂಪನಿಯ ದಾಸ್ತಾನು ಮಳಿಗೆಗಳಲ್ಲಿ ಶೇಖರವಾಗಿತ್ತು. ಲಾಗಾಯ್ತಿನಿಂದ ಈಸ್ಟ್ ಇಂಡಿಯಾ ಕಂಪನಿಯ ಟೀಯನ್ನು ಬ್ರಿಟಿಷ್ ಸಗಟು ವ್ಯಾಪಾರಸ್ಥರಿಗೆ ನಂತರ ಆ ವ್ಯಾಪಾರಸ್ಥರು ಅಮೆರಿಕನ್ ಸಗಟು ವ್ಯಾಪಾರಿಗಳಿಗೆ ಮಾರುತ್ತಿದ್ದರು. ಅಮೆರಿಕನ್ ಸಗಟು ವ್ಯಾಪಾರಿಗಳು ಅದನ್ನು ಸ್ಥಳೀಯ ವರ್ತಕರಿಗೆ ಮಾರುತ್ತಿದ್ದರು. ಸ್ಥಳೀಯ ವರ್ತಕರು ತಮ್ಮ ಗಿರಾಕಿಗಳಿಗೆ ಮಾರುತ್ತಿದ್ದರು. ಅಮೆರಿಕನ್ ಸಗಟು ವ್ಯಾಪಾರಸ್ಥರು ದುಬಾರಿಯಾದ ಸುಂಕವನ್ನು ಕೊಡುವುದೆ ಅಲ್ಲದೆ ಮೂರು ಪೆನ್ನಿಗಳ ಟೌನ್‌ಷೆಂಡ್ ತೆರಿಗೆಯನ್ನೂ ತೆರಬೇಕಾಗಿತ್ತು. ಆಗ ಪ್ರಧಾನಮಂತ್ರಿಯಾಗಿದ್ದ ಲಾರ್ಡ್ ನಾರ್ತ್ (Lord North)ನು ಬ್ರಿಟಿಷ್ ತೆರಿಗೆಯನ್ನು ಮನ್ನಾ ಮಾಡಿ ಈಸ್ಟ್ ಇಂಡಿಯಾ ಕಂಪನಿ ತನ್ನ ಏಜೆಂಟರ ಮೂಲಕ ಟೀಯನ್ನು ನೇರವಾಗಿ ಅಮೆರಿಕದಲ್ಲಿ ಮಾರಲು ಅನುಮತಿ ನೀಡಿದನು. ಬ್ರಿಟಿಷ್ ಮತ್ತು ಅಮೆರಿಕನ್ ಸಗಟು ವ್ಯಾಪಾರಿಗಳನ್ನು ತೆಗೆದು

ಹಾಕಿದನು. ಇವರನ್ನು ತೆಗೆದುಹಾಕಿದ್ದರಿಂದ ಟೀಯ ಚಿಲ್ಲರೆ ವ್ಯಾಪಾರ ಬಹಳ ಕಡಿಮೆಯಾಗಿ, ಕೊಳ್ಳುವವರು ಜಾಸ್ತಿಯಾಗಿ, ಕಂಪನಿಗೆ ಬಹಳ ಲಾಭ ದೊರೆಯುತ್ತದೆ ಎಂದು ನಾರ್ತ್ ಲೆಕ್ಕ ಹಾಕಿದ್ದನು. ಮೂರು ಪೆನ್ನಿಗಳ ಟೌನ್‌ಷೆಂಡ್ ತೆರಿಗೆಯನ್ನು ಮನ್ನಾ ಮಾಡುವಂತೆ ಕಂಪನಿಯ ಡೈರೆಕ್ಟರುಗಳು ಕೇಳಿಕೊಂಡಾಗ ನಾರ್ತ್ ಆ ತೆರಿಗೆಯನ್ನು ಮುಂದುವರಿಸಲು ಕಾರಣ, ವಸಾಹತುಗಳ ಮೇಲೆ ತೆರಿಗೆ ಹಾಕುವ ಹಕ್ಕು ಪಾರ್ಲಿಮೆಂಟಿಗೆ ಇದೆ ಎಂದು ತೋರಿಸುವ ಸಲುವಾಗಿ, ಆದ್ದರಿಂದ ಅದನ್ನು ಮನ್ನಾ ಮಾಡುವುದಿಲ್ಲ ಎಂದು ಖಚಿತಪಡಿಸಿದನು.

ಈಸ್ಟ್ ಇಂಡಿಯಾ ಕಂಪನಿ ಕೆಲವು ಅಮೆರಿಕನ್ ವರ್ತಕರನ್ನು ತಮ್ಮ ಏಜೆಂಟರುಗಳಾಗಿ ನೇಮಿಸಿಕೊಂಡು ನಂತರ ೧೭೦೦ ಟೀ ತುಂಬಿದ ಪೆಟ್ಟಿಗೆಗಳನ್ನು ಬೇರೆ ಬೇರೆ ಬಂದರುಗಳಿಗೆ ರವಾನಿಸಿತು. ಅಮೆರಿಕನ್ನರಿಗೆ ಕಡಿಮೆ ಬೆಲೆಗೆ ಸಿಗುವ ಈ ಉತ್ತಮ ಟೀಯನ್ನು ಕೊಳ್ಳಲು ಆಸೆಯಾದರೂ, ಸ್ವಲ್ಪ ಆಲೋಚಿಸಿದ ಮೇಲೆ ಈ ಅಗ್ಗದ ಟೀಯನ್ನು ಕೊಂಡರೆ ಅದರಿಂದ ಆಗುವ ಅಪಾಯವನ್ನು ಅರ್ಥಮಾಡಿಕೊಂಡರು. ಪಾರ್ಲಿಮೆಂಟ್ ಈಸ್ಟ್ ಇಂಡಿಯಾ ಕಂಪನಿಗೆ ಟೀ ವ್ಯಾಪಾರದ ಮೇಲೆ ಏಕಸ್ವಾಮ್ಯತೆಯನ್ನು ಅನುಗ್ರಹಿಸಿದಂತೆ ಅಮೆರಿಕನ್ ವ್ಯಾಪಾರಿಗಳನ್ನು ಕೂಡ ಬೇರೆ ಬೇರೆ ಮಾಡಿ, ಎಲ್ಲಾ ವ್ಯಾಪಾರವನ್ನು ಅಥವಾ ಯಾವುದಾದರೊಂದು ವ್ಯಾಪಾರವನ್ನು ಬೇಕಾದವರ ಏಕಸ್ವಾಮ್ಯತೆಗೆ ಒಳಪಡಿಸುವ ಅಪಾಯವಿತ್ತು. ಈ ಸತ್ಯ ಸ್ಪಷ್ಟವಾದ ಕೂಡಲೇ ವಸಾಹತುಗಾರರು ಒಂದಾಗಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ನ್ಯೂಯಾರ್ಕ್ ಮತ್ತು ಫಿಲಡೆಲ್ಫಿಯಾದಲ್ಲಿ ಜನರ ರೋಷಾವೇಶ ಎಷ್ಟಿತ್ತೆಂದರೆ ಟೀ ಹೊತ್ತು ತಂದ ಹಡಗುಗಳನ್ನು ಬಂದರಿನ ಒಳಗೆ ಬಿಡದೆ ಹಿಂತಿರುಗಿ ಇಂಗ್ಲೆಂಡಿಗೆ ಹೋಗುವಂತೆ ಆಜ್ಞಾಪಿಸಿದರು. ಆದರೆ ಬಾಸ್ಟನ್‌ನಲ್ಲಿ ಪರಿಸ್ಥಿತಿ ಬೇರೆ ತೆರನಾಗಿತ್ತು. ಟೀ ಹೊತ್ತ ಡಾರ್ಟ್‌ಮತ್ (Dartmouth) ಹಡಗು ಬಂದರಿಗೆ ಬಂದು ಲಂಗರು ಹಾಕಿ ನಿಂತಿತು. ಬಾಸ್ಟನ್ ಪ್ರದೇಶದ ಜನ ಸ್ಯಾಮ್ ಆ್ಯಡಮ್ಸ್ (Sam Adams)ನ ನಾಯಕತ್ವದಲ್ಲಿ ಆ ಹಡಗು ತಂದ ಟೀಯನ್ನು ಹಡಗಿನಿಂದ ಇಳಿಸದ ಹಾಗೆ ಮಾಡಲು ತೀರ್ಮಾನಿಸಿದ್ದರು. ಆದರೆ ರಾಜ್ಯಪಾಲನಾಗಿದ್ದ ಹಚ್ಚಿನ್‌ಸನ್ (Hutchinson) ತೆರಿಗೆ ವಸೂಲು ಮಾಡಿ ಕಾಯಿದೆಯನ್ನು ಜಾರಿಗೆ ತರಲು ದೃಢ ಮನಸ್ಸು ಮಾಡಿದನು. ಹಲವಾರು ದಿನಗಳು ನಗರವಾಸಿಗಳು ಸಿಟ್ಟಿನಿಂದ ಕುದಿಯುತ್ತಿದ್ದರು. ಟೀ ಹೊತ್ತು ತಂದ ಡಾರ್ಟ್‌ಮತ್ ಮತ್ತು ತಡವಾಗಿ ಬಂದ ಇನ್ನೂ ಎರಡು ಹಡಗುಗಳು ಲಂಗರು ಹಾಕಿ ಕಾಯುತ್ತ ನಿಂತಿದ್ದವು. ಡಿಸೆಂಬರ್ ೧೬, ೧೭೭೩ರ ರಾತ್ರಿ ವಸಾಹತುಕಾರರ ಒಂದು ತಂಡ ಇಂಡಿಯನ್ನರಂತೆ ವೇಷಭೂಷಣಗಳನ್ನು ತೊಟ್ಟು ಲಂಗರು ಹಾಕಿ ನಿಂತಿದ್ದ ಹಡಗುಗಳನ್ನು ಹತ್ತಿ ಹೋಗಿ ಅವು ಹೊತ್ತು ತಂದಿದ್ದ ಟೀ ಪೆಟ್ಟಿಗೆಗಳನ್ನು ಹೊರಗೆ ತಂದು ನೀರಿಗೆ ಎಸೆದರು. ಬಂದರಿನ ಕಟ್ಟೆಯಲ್ಲಿ ಘೇರಾಯಿಸಿದ್ದ ಸಾವಿರಾರು ಜನರ ಗುಂಪು ಅವರಿಗೆ ಉತ್ತೇಜನ ನೀಡಿ ಹುರಿದುಂಬಿಸಿದರು!

ಅಷ್ಟು ದೊಡ್ಡ ಪ್ರಮಾಣದ ಟೀಯನ್ನು ನೀರಿಗೆಸೆದು ನಾಶಗೊಳಿಸಿದ್ದು ದೊಡ್ಡ ಅಪರಾಧ. ಇದರಲ್ಲಿ ಇಂಡಿಯನ್ನರಂತೆ ವೇಷ ಧರಿಸಿದ 'ದೇಶಪ್ರೇಮಿಗಳು' (patriots) ಮಾತ್ರವಲ್ಲದೆ ಇನ್ನೂ ಅನೇಕರ ಕೈವಾಡವಿತ್ತು. ಈ 'ಬಾಸ್ಟನ್ ಟೀಪಾರ್ಟಿ'ಯ ಸುದ್ದಿ ಇಂಗ್ಲೆಂಡನ್ನು ತಲುಪಿದಾಗ ಇಂಗ್ಲಿಷರು ಕೋಪದಿಂದ ಕುದಿಯತೊಡಗಿದರು. ಬಾಸ್ಟನ್ ಪಟ್ಟಣವನ್ನು ಫಿರಂಗಿಗಳಿಂದ ಉಡಾಯಿಸಬೇಕೆಂದು ಬಹಳ ಜನ ಸಲಹೆ ನೀಡಿದರು. ಸದ್ಯ ಇದು ಬಾಯಿಮಾತಿನ ಬೆದರಿಕೆಯಾಗಿ ಉಳಿಯಿತು. ವಸಾಹತುಗಾರರಿಗೆ ಪಾಠ ಕಲಿಸಲೇಬೇಕೆಂದು ಎಲ್ಲರೂ ಅಭಿಪ್ರಾಯಪಟ್ಟರು. ಇಂಗ್ಲೆಂಡಿನ ರಾಜ ಮೂರನೆಯ ಜಾರ್ಜ್ ಉದ್ಗರಿಸಿದನೆಂದು ಹೇಳಲಾದ 'ನಾವು ಅವರನ್ನು ಅಧೀನರಾಗಿ ಮಾಡಿಕೊಳ್ಳಬೇಕು, ಇಲ್ಲವೆ ಅವರ ಪಾಡಿಗೆ ಅವರನ್ನು ಬಿಟ್ಟುಬಿಡಬೇಕು' ಎನ್ನುವ ಹೇಳಿಕೆ ಭವಿಷ್ಯವಾಣಿಯಂತೆ ಸ್ವಲ್ಪ ಸಮಯದಲ್ಲೇ ಸಾಕ್ಷಾತ್ಕಾರಗೊಳ್ಳುತ್ತದೆ ಎಂದು ಅವನಿಗೇ ತಿಳಿಯಲಿಲ್ಲ. ೧೭೭೪ರಲ್ಲಿ ಪಾರ್ಲಿಮೆಂಟ್ ಈ ಟೀ ಹಗರಣಕ್ಕೆ ಪ್ರತಿಕ್ರಿಯೆ ತೋರಿಸಿತು. ವಸಾಹತುಗಾರರನ್ನು ಶಿಕ್ಷಿಸಲು ಮೂರು ನಿರ್ಬಂಧಕಾರಿ ಕಾಯಿದೆಗಳನ್ನು ಜಾರಿಗೆ ತಂದಿತು. ಮೊದಲನೆಯದು ಬಾಸ್ಟನ್ ಬಂದರು ಕಾಯಿದೆ (The Boston Port Act). ಟೀ ನೀರಿಗೆಸೆದು ಮಾಡಿದ ನಷ್ಟವನ್ನು ಜನರು ತಮ್ಮ ಹಣದಿಂದ ತುಂಬಿಸಿಕೊಡುವವರೆಗೆ ಬಾಸ್ಟನ್ ಬಂದರನ್ನು ಎಲ್ಲಾ ವ್ಯಾಪಾರ ವ್ಯವಹಾರಗಳಿಗೆ ಮುಚ್ಚಲಾಗಿದೆ ಎಂದು ಪಾರ್ಲಿಮೆಂಟ್ ಪ್ರಕಟಣೆ ಮಾಡಿತು. ಎರಡನೆಯದಾಗಿ, ನ್ಯಾಯ ನಿರ್ವಹಣ ಕಾಯಿದೆ (The Administration of Justice Act). ಕಟ್ಟಳೆ ನಡೆಯುತ್ತಿರುವ ನ್ಯಾಯಾಲಯದಲ್ಲಿ ಬ್ರಿಟಿಷ್ ಆರೋಪಿಗೆ ನಿಷ್ಪಕ್ಷಪಾತ ತೀರ್ಪು ದೊರೆಯಲಾರದು ಎನ್ನುವ ಭಾವನೆ ರಾಜ್ಯಪಾಲನಿಗೆ ಉಂಟಾದರೆ ಆ ಕಟ್ಟಳೆಯನ್ನು ಮೆಸಾಚ್ಯುಸೆಟ್ಸ್ ಪ್ರಾಂತದ ಹೊರಗಿನ (ಇಂಗ್ಲೆಂಡ್) ನ್ಯಾಯಾಲಯಕ್ಕೆ ವರ್ಗಾಯಿಸಲು ಅನುಮತಿ ಕೊಡಲಾಯಿತು. ಮೂರನೆಯದಾಗಿ, ಮೆಸಾಚ್ಯುಸೆಟ್ಸ್ ಸರ್ಕಾರದ ಕಾಯಿದೆ (The Massachusetts Government Act). ಇದರ ಉದ್ದೇಶ ರಾಜ್ಯಪಾಲನ ಪ್ರಾಬಲ್ಯವನ್ನು ಹೆಚ್ಚಿಸುವುದಲ್ಲದೆ ಸ್ಥಳೀಯ (local) ಸಮಿತಿಗಳನ್ನು ಶಕ್ತಿಗುಂದುವಂತೆ ಮಾಡುವುದು. ಸಮಿತಿಯಲ್ಲಿ ನೇಮಕ ಸದಸ್ಯರ ಸಂಖ್ಯೆ ಹೆಚ್ಚಿಸಿ ಚುನಾಯಿತ ಸದಸ್ಯರ ಸಂಖ್ಯೆ ಕಡಿಮೆ ಮಾಡುವುದು ಈ ಕಾಯಿದೆಯ ಇನ್ನೊಂದು ಗುರಿ. **ಇದರಿಂದ ಸ್ಥಳೀಯ ಸಮಿತಿ ನೇಮಕ ಸಮಿತಿ ಯಾಗುತ್ತದೆ.** ಜೂರಿ (jury) ಆಯ್ಕೆ ವಿಧಾನದಲ್ಲಿ ಬದಲಾವಣೆಗಳನ್ನು ಉಂಟುಮಾಡುವ ಸೂಚನೆಗಳನ್ನು ಈ ಕಾಯಿದೆ ಅಳವಡಿಸಿಕೊಂಡಿತ್ತು.

ಅಮೆರಿಕನ್ನರು ಈ ಕಾಯಿದೆಗಳೆಲ್ಲವೂ ನ್ಯಾಯಬಾಹಿರವೆಂದು ಘೋಷಿಸಿ ಅವುಗಳಿಗೆ 'ಸಹಿಸಲಾಗದ ಕಾಯಿದೆಗಳು' (Intolerable Acts) ಎಂದು ಹೆಸರಿಟ್ಟರು. ಸಮಸ್ಯೆಗಳನ್ನು ನ್ಯಾಯಬದ್ಧವಾದ ಕ್ರಮಗಳಿಂದ ಪರಿಹರಿಸಲು ಪ್ರಯತ್ನ ಪಡದೆ ಬ್ರಿಟಿಷರು ಬೆದರಿಕೆ, ಶಿಕ್ಷೆ ಮತ್ತು ಬಲಾತ್ಕಾರದಿಂದ ಅಮೆರಿಕನ್ನರನ್ನು ಅಧೀನರನ್ನಾಗಿ ಮಾಡಲು ಪಣ

ತೊಟ್ಟವರಂತೆ ವರ್ತಿಸಿದರು. ಅಮೆರಿಕನ್ನರು ಇದನ್ನು ಸಹಿಸಲಾರದೆ ಹೋದರು. ಇದರ ಪರಿಣಾಮ – ಕ್ರಾಂತಿ.

ಇಂಗ್ಲೆಂಡಿನ ರಾಜ ಮೂರನೆಯ ಜಾರ್ಜ್ ವಸಾಹತುಗಳ ಮೇಲೆ ತನಗೆ ಇರುವ ಅಧಿಕಾರಕ್ಕೆ ಮಿತಿಯೇ ಇಲ್ಲ ಎಂದು ನಂಬಿದ್ದನು. ಸಾಮಾನ್ಯವಾಗಿ ಎಲ್ಲ ಇಂಗ್ಲಿಷರೂ 'ವಸಾಹತಿನವರು ತಮಗಿಂತ ಕೀಳು, ನಾವು ಅವರ ಒಡೆಯರು' ಎನ್ನುವ ಸೊಕ್ಕಿನ ಮನೋಭಾವ ಬೆಳೆಸಿಕೊಂಡಿದ್ದರು. ಲಾರ್ಡ್ ನಾರ್ತ್ ಜಾರಿಗೆ ತಂದ ಬಲಾತ್ಕಾರದ ಕಾಯಿದೆಗಳು ವಿಶಿಷ್ಟವಾಗಿ ಮೆಸಾಚ್ಯುಸೆಟ್ಸ್‌ಗೆ ಮಾತ್ರ ಅನ್ವಯವಾಗುತ್ತವೆ, ಬೇರೆ ವಸಾಹತುಗಳು ಇದನ್ನು ಪ್ರತಿಭಟಿಸಲಾರವು ಎಂದು ಊಹಿಸಿದ್ದು ತಪ್ಪಾಯಿತು. ಎಲ್ಲ ವಸಾಹತುಗಳೂ ಒಗ್ಗಟ್ಟಾಗಿ ಪ್ರತಿಭಟನೆ ಪ್ರಾರಂಭಿಸಿದವು. ಜೂನ್ ೧೭೭೪ರಲ್ಲಿ ಮೆಸಾಚ್ಯುಸೆಟ್ಸ್‌ನಲ್ಲಿ ಸರ್ವ ವಸಾಹತು ಸದಸ್ಯರ ಸಭೆ ಸೇರಿ ಮುಂದಿನ ಸಾಮೂಹಿಕ ಪ್ರತಿಭಟನಾ ವಿಧಾನಗಳನ್ನು ಪರಿಶೀಲಿಸಿದರು. ಆನಂತರ ಸೆಪ್ಟೆಂಬರ್ ತಿಂಗಳಲ್ಲಿ ಫಿಲಡೆಲ್ಫಿಯಾದಲ್ಲಿ ಮೊದಲನೆಯ ಕಾಂಟಿನೆಂಟಲ್ ಕಾಂಗ್ರೆಸ್ (The First Continental Congress) ಎಲ್ಲ ವಸಾಹತುಗಳ ಪ್ರತಿನಿಧಿಗಳ ಸಭೆ ಸೇರಿಸಿತು. ಜಾರ್ಜಿಯ ಮಾತ್ರ ಪ್ರತಿನಿಧಿಗಳನ್ನು ಕಳುಹಿಸಲಿಲ್ಲ. ಆ ಸಭೆಯಲ್ಲಿ ಸಮಸ್ಯೆಯನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ಪರಿಶೀಲಿಸಲಾಯಿತು. ಬೇರೆ ಬೇರೆ ಅಭಿಪ್ರಾಯಗಳನ್ನು ಚರ್ಚಿಸಲಾಯಿತು. ಜೇಮ್ಸ್ ವಿಲ್ಸನ್ ಮತ್ತು ಜಾನ್ ಆ್ಯಡಮ್ಸ್ ಅವರ ಅಭಿಪ್ರಾಯಗಳಿಗೆ ಹೆಚ್ಚಿನ ಬೆಂಬಲ ದೊರೆಯಿತು. ಕಾಂಗ್ರೆಸ್, ಕುಂದುಕೊರತೆಗಳ ಹೇಳಿಕೆಯನ್ನು ಅನುಮೋದಿಸಿ ೧೭೭೪ರಿಂದ ಬ್ರಿಟಿಷ್ ಸಾಮ್ರಾಜ್ಯದ ಎಲ್ಲ ಚಟುವಟಿಕೆಗಳನ್ನು ಸಂಪೂರ್ಣವಾಗಿ ಖಂಡಿಸಲು ನಿರ್ಣಯ ಮಾಡಿತು. ಮೆಸಾಚ್ಯುಸೆಟ್ಸ್ ಸದಸ್ಯರು ಮಂಡಿಸಿದ 'ಜನರು ತಮ್ಮ ಹಕ್ಕುಗಳನ್ನು ರಕ್ಷಿಸಲು ಶಸ್ತ್ರಸನ್ನದ್ಧರಾಗಬೇಕು' ಎನ್ನುವ ಸೂಚನೆಯನ್ನು ಅನುಮೋದಿಸಲಾಯಿತು. ಸದಸ್ಯರೆಲ್ಲರೂ ಸೇರಿ 'ಕಾಂಟಿನೆಂಟಲ್ ಸಂಘ' (Continental Association)ವನ್ನು ರಚನೆ ಮಾಡಿದರು. ಈ ಸಂಘದ ಮುಖ್ಯ ಉದ್ದೇಶ ಬ್ರಿಟಿಷ್ ವಸ್ತುಗಳನ್ನು ನಿಷೇಧಿಸುವುದು ಮತ್ತು ಬ್ರಿಟಿಷ್ ಸಾಮ್ರಾಜ್ಯಕ್ಕೆ ಎಲ್ಲ ರಫ್ತುಗಳನ್ನು ನಿಲ್ಲಿಸುವುದು. ಈ ನಿಷೇಧವನ್ನು ಜಾರಿಗೆ ತರಲು ಮತ್ತು ಇದನ್ನು ಉಲ್ಲಂಘಿಸುವವರನ್ನು ಬಹಿರಂಗಪಡಿಸಿ ಜನರ ತಿರಸ್ಕಾರಕ್ಕೆ ಗುರಿಯಾಗುವಂತೆ ಮಾಡಲು ಸ್ಥಳೀಯ ಸಮಿತಿಗಳನ್ನು ಸ್ಥಾಪಿಸಿದರು.

ಕಾಂಟಿನೆಂಟಲ್ ಕಾಂಗ್ರೆಸ್ ಸಾರ್ವಜನಿಕರ ಅಭಿಪ್ರಾಯವನ್ನು ಪ್ರತಿಬಿಂಬಿಸಲು ಯಶಸ್ವಿಯಾಯಿತು ಎನ್ನುವುದಾದರೆ, ಆಗಿನಿಂದಲೆ ಅಮೆರಿಕನ್ ಕ್ರಾಂತಿ ಪ್ರಾರಂಭವಾಯಿತು ಎಂದು ಹೇಳಿದರೆ ತಪ್ಪಾಗಲಾರದು. ಅಂದರೆ ಎಲ್ಲರೂ ಕೂಡಲೆ ಸಂಪೂರ್ಣ ಸ್ವಾತಂತ್ರ್ಯ ವನ್ನು ಬಯಸಿದ್ದರೆಂದು ಅರ್ಥವಲ್ಲ. ಅವರು ಎಲ್ಲ ನಿರೀಕ್ಷೆಗಳನ್ನು ಮೀರಿ ತೀವ್ರತರದ

ಬದಲಾವಣೆಗಳನ್ನು ಕಾರ್ಯಗತ ಮಾಡಲು ದೃಢ ಮನಸ್ಸು ಮಾಡಿದ್ದರು. ತಡವರಿಸುತ್ತ, ಮುಗ್ಗರಿಸುತ್ತ ಆದರೂ ಕಠೋರ ನಿರ್ಧಾರದಿಂದ ಅವರು ತಮ್ಮ ಸಾಮೂಹಿಕ ಆಸಕ್ತಿಗಳನ್ನು, ತಮ್ಮ 'ಅಮೆರಿಕನತ್ವ' (Americanism)ವನ್ನು ರೂಪಿಸುತ್ತ ಬಂದಿದ್ದರು. ಅವರ ಈ ಪ್ರಯತ್ನ ತಮ್ಮನ್ನು ಪರಸ್ಪರ ಬ್ರಿಟಿಷರ ಪ್ರಾಬಲ್ಯದಿಂದ ರಕ್ಷಿಸಿಕೊಳ್ಳುವ ಪ್ರಶ್ನೆ ಮಾತ್ರ ಆಗಿರಲಿಲ್ಲ. ಅವರು ಹೊಸದೇಶವೊಂದನ್ನು ಹುಟ್ಟುಹಾಕುತ್ತಿದ್ದರು

ಆರಂಭದ ಪ್ರತಿಭಟನೆಗಳು

ಮೊದಲನೆಯ ಕಾಂಟಿನೆಂಟಲ್ ಕಾಂಗ್ರೆಸ್ಸಿನ ಕಾರ್ಯಕಲಾಪಗಳು ಬ್ರಿಟಿಷ್ ಅಧಿಕಾರಿಗಳನ್ನು ವಸಾಹತುಗಳ ಮೇಲೆ ಬಲಪ್ರದರ್ಶನ ಮಾಡುವಂತೆ ಪ್ರಚೋದಿಸಿತು. ಇಂಗ್ಲೆಂಡಿನ ರಾಜ ಮೂರನೆಯ ಜಾರ್ಜ್ 'ನ್ಯೂ ಇಂಗ್ಲೆಂಡ್ ಸರ್ಕಾರಗಳು ದಂಗೆಯ ಪರಿಸ್ಥಿತಿಯಲ್ಲಿವೆ. ಅವರು ಇಂಗ್ಲೆಂಡಿನ ಪ್ರಜೆಗಳಾಗಿರುತ್ತಾರೋ ಅಥವಾ ಸ್ವತಂತ್ರ ರಾಗುತ್ತಾರೋ ಎನ್ನುವುದನ್ನು ಗುದ್ದಾಟದಿಂದಲೇ ನಿರ್ಧರಿಸಬೇಕಾಗಿದೆ!' ಎಂದು ಹೇಳಿದ್ದು ಅವನು ತನ್ನ ಪ್ರಜೆಗಳಿಗೆ ಪಾಠ ಕಲಿಸಲು (ಸಂಧಾನದ ಮಾತುಕತೆಗಳನ್ನು ಬದಿಗೊತ್ತಿ) ಮೊದಲೆ ದೃಢಮನಸ್ಸು ಮಾಡಿದ್ದನೆಂಬುದನ್ನು ಸ್ಪಷ್ಟ ಪಡುತ್ತದೆ. ಜನರಲ್ ಥಾಮಸ್ ಗೇಜ್ (Thomas Gage) ಆಗಲೇ ಉತ್ತರ ಅಮೆರಿಕದ ಎಲ್ಲಾ ಬ್ರಿಟಿಷ್ ಪಡೆಗಳ ದಂಡನಾಯಕನಾಗಿದ್ದನು. ಅವನೇ ಮೆಸಾಚ್ಯುಸೆಟ್ಸ್‌ನ ರಾಜ್ಯಪಾಲನೂ ಆಗಿದ್ದ. ಕೆಂಪು ಸಮವಸ್ತ್ರ ಧರಿಸಿದ ಬ್ರಿಟಿಷ್ ಸೈನ್ಯದ ನೂರಾರು ತುಕಡಿಗಳು (ಇವರಿಗೆ ಕೆಂಪು ಕೋಟಿ ನವರು (red coats) ಎಂದು ಅಡ್ಡ ಹೆಸರು) ಬಾಸ್ಟನ್ನಿನಲ್ಲಿ ಬಂದಿಳಿದವು. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ – ಅಮೆರಿಕದಲ್ಲಿ ಬ್ರಿಟಿಷರ ಬಲಪ್ರದರ್ಶನವನ್ನು ಬೆಂಬಲಿಸಿ ಕೂಗಿದ ಘೋಷಣೆಗಳು ಅನುರಣಿತವಾದವು!

ಜನವರಿ ೧೭೭೫ರಲ್ಲೇ ಮೆಸಾಚ್ಯುಸೆಟ್ಸ್ ಮೇಲೆ ಸೈನ್ಯ ಕಾರ್ಯಾಚಾರಣೆ ನಡೆಸಲು ಪಾರ್ಲಿಮೆಂಟ್ ನಿರ್ಧರಿಸಿದ್ದರೂ ಅದು ಹೊರಡಿಸಿದ ಆಜ್ಞೆ ಏಪ್ರಿಲ್ ತಿಂಗಳವರೆಗೆ ಜನರಲ್ ಗೇಜ್‌ನಿಗೆ ತಲುಪಲಿಲ್ಲ. ಏತನ್ಮಧ್ಯೆ ಬ್ರಿಟಿಷರು ಮತ್ತು ಅಮೆರಿಕನ್ನರು ಹೋರಾಟಕ್ಕೆ ತಯಾರಿ ನಡೆಸಿದ್ದರು. ಇಂಗ್ಲೆಂಡಿನ ಮತ್ತು ಬ್ರಿಟಿಷ್ ಪಶ್ಚಿಮ ಇಂಡೀಸ್ ಬಂದರುಗಳನ್ನು ಬಿಟ್ಟು, ಪಿಕ್ಕ ಎಲ್ಲಾ ಬಂದರುಗಳನ್ನು ವಸಾಹತುಗಳ ಹಡಗುಗಳು ಬಾರದಂತೆ ಮುಚ್ಚಲು ಪಾರ್ಲಿಮೆಂಟ್ ಆಜ್ಞೆ ಮಾಡಿತು. ಮೆಸಾಚ್ಯುಸೆಟ್ಸ್‌ನ 'ದೇಶಪ್ರೇಮಿಗಳು' (ಬ್ರಿಟಿಷರ ವಿರುದ್ಧ ಹೋರಾಡಲು ಸಿದ್ಧರಾಗಿದ್ದ ಅಮೆರಿಕನ್ನರು ತಮ್ಮನ್ನು ಹಾಗೆ ಕರೆದುಕೊಳ್ಳುತ್ತಿದ್ದರು) ಬ್ರಿಟಿಷರ ಕಾಯಿದೆಗಳಿಗೆ ಹೊರತಾದ ಪ್ರಾಂತೀಯ ಸಭೆಯನ್ನು ಸ್ಥಾಪಿಸಿದರು. ವಸಾಹತಿನ ಸೈನ್ಯವನ್ನು ರಚಿಸಿ, 'ಮಿನಿಟ್‌ಮೆನ್'(Minute men) ಮತ್ತು ಇತರ ಹೋರಾಟಗಾರರಿಗೆ ತರಬೇತಿ ಕೊಡಲಾರಂಭಿಸಿದರು. ಈ 'ಮಿನಿಟ್‌ಮೆನ್ನ'ರು ಕ್ರಮವಾಗಿ ಶಿಸ್ತಿನಿಂದ ಯುದ್ಧದ ತರಬೇತಿ ಪಡೆದು, ಸದಾಸಿದ್ಧ ಶಸ್ತ್ರಧಾರಿಗಳಾಗಿ,

ಕದನಕ್ಕೆ ಕರೆ ಬಂದಲ್ಲಿಗೆ ಹೋಗುವ ವೃತ್ತಿಸೈನಿಕರಲ್ಲ. ಮಿನಿಟ್‌ಮೆನ್ ಎಲ್ಲರೂ ಸಾಮಾನ್ಯ ಪ್ರಜೆಗಳು. ಅಮೆರಿಕನ್ ಕ್ರಾಂತಿಯ ಸಮಯದಲ್ಲಿ ಈ ಸಾಧಾರಣ ಪ್ರಜೆಗಳು ದೇಶಕ್ಕಾಗಿ ಹೋರಾಡಬೇಕೆಂದು ಕರೆ ಬಂದಾಗ ಒಂದೇ ನಿಮಿಷದಲ್ಲಿ ಮನೆ-ಮಠ, ಮಡದಿ-ಮಕ್ಕಳು ಎಲ್ಲವನ್ನೂ ತೊರೆದು, ಯುದ್ಧದ ತರಬೇತಿ ಇಲ್ಲದಿದ್ದರೂ, ತಮ್ಮ ಜೀವದ ಆಸೆ ಬಿಟ್ಟು, ಪ್ರಪಂಚದ ಅತ್ಯಂತ ಪ್ರಬಲ ಚಕ್ರಾಧಿಪತ್ಯದ, ನುರಿತ ಸೈನ್ಯದೊಡನೆ ಹೋರಾಡಲು ಸ್ವಇಚ್ಛೆಯಿಂದ ಒಂದು 'ದೇಶಪ್ರೇಮಿಗಳ ಪಡೆ'ಗೆ ಸೇರಿಕೊಳ್ಳುತ್ತಿದ್ದ ಧೀರರು!

ಏಪ್ರಿಲ್ ೧೪, ೧೭೭೫ರಲ್ಲಿ ಸೈನ್ಯಕಾರ್ಯಾಚರಣೆ ಅನುಮತಿ ನೀಡಿದ ಆಜ್ಞೆ ಜನರಲ್ ಗೇಜ್‌ನಿಗೆ ತಲುಪಿ ಕೂಡಲೇ ಕಾರ್ಯನಿರತನಾದನು. ಬಾಸ್ಟನ್ ನಗರಕ್ಕೆ ಸುಮಾರು ಇಪ್ಪತ್ತು ಮೈಲಿ ದೂರದಲ್ಲಿದ್ದ ಕಾಂಕಾರ್ಡ್ (Concord)ನಲ್ಲಿ 'ದೇಶಪ್ರೇಮಿಗಳು' ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿ ಇಟ್ಟಿದ್ದರು. ಏಪ್ರಿಲ್ ೧೮ರ ರಾತ್ರಿ ಗೇಜ್‌ನು ೭೦೦ ಸುಸಜ್ಜಿತ ಸೈನಿಕರನ್ನು ಆ ಶಸ್ತ್ರಾಸ್ತ್ರಸಂಗ್ರಹವನ್ನು ವಶಪಡಿಸಿಕೊಳ್ಳಲು ಕಳುಹಿಸಿದನು. ಇದರ ಸುಳಿವು ಸಿಕ್ಕಿದ ಪಾಲ್ ರೀವಿಯರ್ (Paul Revere) ರಾತ್ರೋರಾತ್ರಿ ತನ್ನ ಕುದುರೆಯನ್ನೇರಿ ದೌಡಾಯಿಸಿ 'ಬ್ರಿಟಿಷರು ಬರುತ್ತಿದ್ದಾರೆ! ಬ್ರಿಟಿಷರು ಬರುತ್ತಿದ್ದಾರೆ!" ಎಂದು ಕೂಗುತ್ತ ಹಳ್ಳಿಗಾಡಿನವರನ್ನೆಲ್ಲ ಎಚ್ಚರಿಸುತ್ತ ಮಧ್ಯರಾತ್ರಿಯ ಹೊತ್ತಿಗೆ ಲೆಕ್ಸಿಂಗ್‌ಟನ್ ಊರನ್ನು ಸೇರಿ ಅಲ್ಲಿ ಅಡಗಿಕೊಂಡಿದ್ದ ಜಾನ್ ಹ್ಯಾನ್‌ಕಾಕ್ (John Hancock) ಮತ್ತು ಸ್ಯಾಮ್ ಆ್ಯಡಮ್ಸ್ (Sam Adams) ಅವರಿಗೆ ಎಚ್ಚರಿಕೆಯಿಂದಿರುವಂತೆ ತಿಳಿಸಿದನು. ಅಲ್ಲಿ ಅವನು ವಿಲಿಯಂ ಡೇವ್ಸ್ (William Dawes) ಮತ್ತು ಡಾ. ಸಾಮ್ಯುಯಲ್ ಪ್ರೆಸ್‌ಕಾಟ್ (Dr. Samuel Prescott) ಅವರನ್ನು ಕೂಡಿಕೊಂಡು ಮೂವರೂ ಕಾಂಕಾರ್ಡ್ ಕಡೆಗೆ ಕುದುರೆಯನ್ನು ನಾಗಾಲೋಟದಿಂದ ಓಡಿಸಿದರು. ಮಧ್ಯದಾರಿಯಲ್ಲಿ ಬ್ರಿಟಿಷ್ ಕಾವಲು ಪಡೆಯವರು ಆ ಮೂವರನ್ನು ತಡೆದು ನಿಲ್ಲಿಸಿದರು. ಆದರೆ ಪ್ರೆಸ್‌ಕಾಟ್ ತಪ್ಪಿಸಿಕೊಂಡು ಹೋಗಿ ಕಾಂಕಾರ್ಡ್‌ಅನ್ನು ತಲುಪಿ ಅಲ್ಲಿ ಎಲ್ಲರಿಗೂ ಬ್ರಿಟಿಷ್ ಸೈನ್ಯ ಬರುತ್ತಿರುವುದನ್ನು ತಿಳಿಸಿ ಅವರು ಸಿದ್ಧರಾಗಿರುವಂತೆ ಮಾಡಿದನು.

ಮಾರನೆಯ ದಿನ ಮುಂಜಾನೆ ಬ್ರಿಟಿಷ್ ಸೈನ್ಯದ ತುಕಡಿ ಲೆಕ್ಸಿಂಗ್‌ಟನ್ ತಲುಪಿದಾಗ ಅಲ್ಲಿ ಸಾರ್ವಜನಿಕರು ಸೇರುವ ಸ್ಥಳದಲ್ಲಿ ೭೦ ಮಿನಿಟ್‌ಮೆನ್ ಇವರನ್ನು ಎದುರಿಸಿದರು. ಎರಡು ಕಡೆಯವರಿಗೂ ಚರ್ಚೆ ನಡೆದು, ಅಮೆರಿಕನ್ನರು ಹಿಂದೆ ಸರಿಯುತ್ತಿದ್ದಂತೆ ಯಾರೋ ಒಂದು ಗುಂಡು ಹಾರಿಸಿದರು. ಇದು 'ಜಗತ್ತಿನ ಸುತ್ತ ಕೇಳಿಸಿದ ಗುಂಡಿನೇಟು' ಎಂದು ಪ್ರಸಿದ್ಧವಾಗಿದೆ. ಅದಕ್ಕೆ ಪ್ರತಿಯಾಗಿ ಬ್ರಿಟಿಷ್ ಸೈನಿಕರು ಮಿನಿಟ್‌ಮೆನ್‌ರ ಮೇಲೆ ಗುಂಡು ಹಾರಿಸಿದರು. ಪರಿಣಾಮವಾಗಿ ಎಂಟು ಜನರು ಸತ್ತು ಅನೇಕರಿಗೆ ಗಾಯಗಳಾದವು. ಮಿನಿಟ್‌ಮೆನ್‌ರು ಚದುರಿಹೋದರು. ಬ್ರಿಟಿಷ್ ಸೈನಿಕರು ಕಾಂಕಾರ್ಡ್ ಕಡೆಗೆ ಹೆಜ್ಜೆ ಹಾಕಿದರು. ಕಾಂಕಾರ್ಡ್‌ನಲ್ಲಿ ಬ್ರಿಟಿಷ್ ಸೈನಿಕರು ದೇಶಪ್ರೇಮಿಗಳು ಸಾಗಿಸಲು

ಸಮಯವಿಲ್ಲದೆ ಬಿಟ್ಟು ಹೋಗಿದ್ದ ಶಸ್ತ್ರಸಂಗ್ರಹಗಳನ್ನು ನಾಶ ಮಾಡಿದರು. ಆ ಪ್ರದೇಶಕ್ಕೆ ಎಲ್ಲಾ ಕಡೆಯಿಂದಲೂ ಅಮೆರಿಕನ್ ಹೋರಾಟಗಾರರು ನುಗ್ಗಿ ಬರತೊಡಗಿದರು. ಕಾಂಕಾರ್ಡಿನ ಉತ್ತರ ಸೇತುವೆ ಬಳಿ ಬಿರುಸಾದ ಹೋರಾಟ ನಡೆದು ಹದಿನಾಲ್ಕು ಬ್ರಿಟಿಷ್ ಸೈನಿಕರು ಹತರಾದರು. ಈ ದಾಳಿಯಿಂದ ಬ್ರಿಟಿಷ್ ಸೈನ್ಯ ಹಿಮ್ಮೆಟ್ಟಬೇಕಾಯಿತು. ಅನಿರೀಕ್ಷಿತ ಘಟನೆಗಳಿಂದ ಕಂಗಾಲಾದ ಬ್ರಿಟಿಷ್ ಸೇನಾತುಕಡಿ ಹಿಂತಿರುಗಿ ಬಾಸ್ಟನ್ ಕಡೆಗೆ ಹೆಜ್ಜೆ ಹಾಕತೊಡಗಿತು. ಬಾಸ್ಟನ್‌ಗೆ ಹೋಗುವ ದಾರಿಯುದ್ದಕ್ಕೂ ಈ ಬ್ರಿಟಿಷ್ ಸೈನ್ಯದ ತುಕಡಿ, ಅಡಗಿ ನಿಂತು ಗುಂಡು ಹಾರಿಸುತ್ತಿದ್ದ ರೈತರ ದಾಳಿಗೆ ತುತ್ತಾಯಿತು. ಈ ಸೈನ್ಯದ ತುಕಡಿಯನ್ನು ರಕ್ಷಿಸಿ ಬಾಸ್ಟನ್ ತಲುಪುವಂತೆ ಮಾಡಲು ಜನರಲ್ ಗೇಜ್‌ನು ಮತ್ತೆ ೧೫೦೦ ಸೈನಿಕರನ್ನು ಕಳುಹಿಸಬೇಕಾಗಿ ಬಂತು. ಅಮೆರಿಕನ್ ಕ್ರಾಂತಿಯ ಮೊದಲನೆಯ ದಿನ ಮುಗಿದಾಗ ೨೭೩ ಬ್ರಿಟಿಷ್ ಸೈನಿಕರು ಸತ್ತಿದ್ದರು. ಅಮೆರಿಕನ್ ಹೋರಾಟಗಾರರಲ್ಲಿ ಸತ್ತವರ ಸಂಖ್ಯೆ ನೂರಕ್ಕಿಂತಲೂ ಕಡಿಮೆಯಾಗಿತ್ತು!

ಎರಡು ಪಕ್ಷಗಳು ಸಾವು-ನೋವುಗಳನ್ನು ಅನುಭವಿಸಿದುದರ ಪರಿಣಾಮವಾಗಿ ಶಾಂತಿ ಸಂಧಾನಗಳಿಗೆ ಎಡೆಯಿಲ್ಲದಂತೆ ಯುದ್ಧ ಕೈಮೀರಿ ಹೋಗಿತ್ತು. ಮೆಸಾಚ್ಯುಸೆಟ್ಸ್ ಪ್ರಾಂತ ಸರ್ಕಾರ ವ್ಯವಸ್ಥೆ ಮಾಡಿದ ಕ್ಷಿಪ್ರ ದಾಳಿಯಿಂದ ಟೈಕಾನ್‌ಡೆರೊಗ ಕೋಟೆ (Fort Ticonderoga) ಮತ್ತು ಕ್ರಾಸ್ ಪಾಯಿಂಟ್‌ಗಳು (Crown Point) ಅಮೆರಿಕನ್ನರ ವಶವಾದವು. ಅಲ್ಲಿ ಸಂಗ್ರಹವಾಗಿದ್ದ ಸರಕು ಸಾಮಗ್ರಿಗಳು ಮತ್ತು ಕೆಲವು ಅತ್ಯುತ್ತಮವಾದ ಫಿರಂಗಿಗಳು ಅವರ ಕೈಸೇರಿದವು. ಇತರ ವಸಾಹತುಗಳು ಮೆಸಾಚ್ಯುಸೆಟ್ಸ್‌ನ ಧ್ಯೇಯವನ್ನು ಅನುಮೋದಿಸಿ ಸಹಾಯಹಸ್ತ ನೀಡಿದವು. ಟೈಕಾನ್‌ಡೆರೊಗ ಕೋಟೆಯನ್ನು ವಶಪಡಿಸಿಕೊಂಡ ದಿನವೇ (ಮೇ ೧೦, ೧೭೭೫) ಫಿಲಡೆಲ್ಫಿಯಾದಲ್ಲಿ ಎರಡನೆಯ ಕಾಂಟಿನೆಂಟಲ್ ಕಾಂಗ್ರೆಸ್ ಸಭೆ ಸೇರಿತು. ಈ ಸಭೆಯಲ್ಲಿ ಸೇರಿದ್ದ ಪ್ರತಿನಿಧಿಗಳು ಮೊದಲನೆಯ ಕಾಂಗ್ರೆಸ್ಸಿನ ಪ್ರತಿನಿಧಿಗಳಿಗಿಂತ ಹೆಚ್ಚು ತೀವ್ರಗಾಮಿಗಳಾಗಿದ್ದರು. ಮೊದಲನೆಯ ಕಾಂಗ್ರೆಸ್‌ನಲ್ಲಿ ಭಾಗವಹಿಸಿದ್ದ ಕೆಲವು ಪ್ರತಿನಿಧಿಗಳು ಈ ಸಭೆಯಲ್ಲಿ ಹಾಜರಿದ್ದರು. ಜಾನ್ ಆ್ಯಡಮ್ಸ್, ಸ್ಯಾಮ್ ಆ್ಯಡಮ್ಸ್, ಪ್ಯಾಟ್ರಿಕ್ ಹೆನ್ರಿ, ವರ್ಜೀನಿಯ ಪ್ರತಿನಿಧಿ ರಿಚರ್ಡ್ ಹೆನ್ರಿ ಲೀ ಮತ್ತು ದಕ್ಷಿಣ ಕೆರೊಲಿನದ ಕ್ರಿಸ್ಟೋಫರ್ ಗ್ಯಾಡ್ಸ್‌ಡನ್ – ಇವರೆಲ್ಲ ಮೊದಲನೆಯ ಕಾಂಗ್ರೆಸ್‌ನಲ್ಲಿ ಪ್ರತಿನಿಧಿಗಳಾಗಿದ್ದರು. ಎರಡನೆಯ ಕಾಂಗ್ರೆಸ್‌ನಲ್ಲಿ ಹಾಜರಿದ್ದ ವಿಶಿಷ್ಟ ವ್ಯಕ್ತಿಗಳೆಂದರೆ ಥಾಮಸ್ ಜೆಫರ್‌ಸನ್, ಜಾರ್ಜ್ ವಾಷಿಂಗ್‌ಟನ್, ಬೆಂಜಮಿನ್ ಫ್ರಾಂಕ್ಲಿನ್ ಮತ್ತು ಜಾನ್ ಹ್ಯಾನ್‌ಕಾಕ್. ಜಾನ್ ಹ್ಯಾನ್‌ಕಾಕ್‌ನನ್ನು ಎರಡನೆಯ ಕಾಂಗ್ರೆಸ್ಸಿನ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದರು. ಥಾಮಸ್ ಜೆಫರ್‌ಸನ್ ವರ್ಜೀನಿಯಾದ ಒಬ್ಬ ಪ್ಲಾನ್‌ಟರ್. ವಾಗ್ಮಿಯಲ್ಲದಿದ್ದರೂ ಉತ್ತಮ ಬರಹಗಾರನಾಗಿದ್ದನು. ಅವನು ಬರೆದ ಒಂದು ಪ್ರಬಂಧದಲ್ಲಿ 'ರಾಜ ಪ್ರಭುತ್ವ' (Monarchy) ಸಂಪ್ರದಾಯವನ್ನು ಟೀಕಿಸಿ, ಮೂರನೆಯ ಜಾರ್ಜನಿಗೆ 'ರಾಜರು ಸೇವಕರು,

ಪ್ರಜೆಗಳ ಮಾಲೀಕರಲ್ಲ' ಎಂದು ಎಚ್ಚರಿಕೆ ನೀಡಿದ್ದನು. ಜಾರ್ಜ್ ವಾಷಿಂಗ್‌ಟನ್ ಕೂಡ ವರ್ಜೀನಿಯ ಪ್ರತಿನಿಧಿ. ಅವನು ಒಳ್ಳೆಯ ಬರಹಗಾರನೂ ಅಲ್ಲ, ಮಾತುಗಾರನೂ ಅಲ್ಲ. ಆದರೆ ಅವನಂತಹ ದಕ್ಷ ಸೈನ್ಯಾಧಿಪತಿ ವಸಾಹತುಗಳಲ್ಲಿ ಮತ್ತಾರೂ ಇರಲಿಲ್ಲ. ಬೆಂಜಮಿನ್ ಫ್ರಾಂಕ್ಲಿನ್ ಬಹುಮುಖ ಪ್ರತಿಭೆಯ ಸಂಶೋಧಕ ಮತ್ತು ರಾಜಕಾರಣಿ. ಈ ಪ್ರತಿನಿಧಿಗಳ ಮೇಲೆ ಹೊಸರಾಷ್ಟ್ರವನ್ನು ಕಟ್ಟುವ ಮಹತ್ತರವಾದ ಹೊಣೆಗಾರಿಕೆ ಬಿದ್ದಿತ್ತು.

ಬ್ರಿಟಿಷರ ಆಳ್ವಿಕೆಯಲ್ಲಿದ್ದ ವಸಾಹತುಗಳು ಆಳುವವರ ಅನುಮತಿಯಿಲ್ಲದೆ ಸ್ಥಾಪಿಸಿದ ಕಾಂಗ್ರೆಸ್ ನ್ಯಾಯಬಾಹಿರವಾದ ಸಂಸ್ಥೆಯಾಗಿತ್ತು. ಜಾರಿಯಲ್ಲಿದ್ದ ಕಾಯಿದೆಗಳ ಆಧಾರವಿಲ್ಲದೆ ರಚಿತವಾಗಿದ್ದ ಕಾಂಗ್ರೆಸ್‌ಗೆ ನ್ಯಾಯಬದ್ಧವಾದ ಅಧಿಕಾರ ಇರಲಿಲ್ಲ. ಆದರೂ ತೀವ್ರಗತಿಯಿಂದ ಜರುಗುತ್ತಿದ್ದ ಯುದ್ಧದ ಪರಿಸ್ಥಿತಿಗಳ ಒತ್ತಡದಲ್ಲಿ ಕಾಂಗ್ರೆಸ್ ಕೆಲವು ಕಷ್ಟದ ನಿರ್ಧಾರಗಳನ್ನು ಮಾಡಬೇಕಾಗಿತ್ತು. ಈ ನಿರ್ಧಾರಗಳನ್ನು ಅನುಸರಿಸಿ ಕಾಂಗ್ರೆಸ್ ಕೈಗೊಳ್ಳುವ ಕಾರ್ಯಾಚರಣೆಯ ಮೇಲೆ ಪ್ರತಿಯೊಬ್ಬ ಅಮೆರಿಕನ್ನನ ಭವಿಷ್ಯ ಅವಲಂಬಿಸಿತ್ತು! ಕಾಂಗ್ರೆಸ್‌ನ ಮೊದಲ ಮತ್ತು ಬಹುಮುಖ್ಯವಾದ ಸವಾಲಾಗಿತ್ತು. ಬಾಸ್ಟನ್ ಸುತ್ತ ಮುತ್ತ ಚದುರಿಹೋದ ಹೋರಾಟಗಾರರನ್ನು ಕಾಂಗ್ರೆಸ್ ಒಂದುಗೂಡಿಸಿ 'ಕಾಂಟಿನೆಂಟಲ್ ಸೈನ್ಯ' (continental army)ವನ್ನು ರಚನೆ ಮಾಡಿ ಜಾರ್ಜ ವಾಷಿಂಗ್‌ಟನ್‌ನನ್ನು ಮುಖ್ಯ ಸೇನಾಧಿಪತಿಯಾಗಿ ನೇಮಿಸಿತು. ವಾಷಿಂಗ್‌ಟನ್ ತನ್ನ ಸೈನ್ಯದೊಡನೆ ಯುದ್ಧದ ಮುಂಚೂಣಿ ಪ್ರದೇಶದೆಡೆಗೆ ಹೊರಟಮೇಲೆ, ಕಾಂಗ್ರೆಸ್ ಸೈನ್ಯ ಭರ್ತಿ ಮಾಡುವುದು ಮತ್ತು ಯುದ್ಧಕ್ಕೆ ಅವಶ್ಯವಾದ ಆಹಾರ ಪದಾರ್ಥಗಳು ಮತ್ತು ಇತರ ಸರಕು ಸಾಮಗ್ರಿಗಳ ಸಂಗ್ರಹಣದಲ್ಲಿ ತೊಡಗಿಸಿಕೊಂಡಿತು.

ಆ ಸಮಯದಲ್ಲೇ ಮೆಸಾಚ್ಯುಸೆಟ್ಸ್‌ನಲ್ಲಿ ಸ್ವಾತಂತ್ರ್ಯ ಯುದ್ಧದ ಮೊದಲನೆಯ ಮಹಾ ಹೋರಾಟ ನಡೆಯಿತು. ಬಾಸ್ಟನ್ ಪರ್ಯಾಯದ್ವೀಪದಲ್ಲಿ ಬ್ರಿಟಿಷ್ ಪಡೆಗಳನ್ನು ನೇರವಾಗಿ ಎದುರಿಸಲು ಸಾಧ್ಯವಿರಲಿಲ್ಲ. ಆದರೆ ಉತ್ತರ ಮತ್ತು ದಕ್ಷಿಣದ ಎತ್ತರದ ಭೂಪ್ರದೇಶಗಳಿಂದ ಬಾಸ್ಟನ್ ನಗರದ ಮೇಲೆ ಫಿರಂಗಿ ದಾಳಿ ನಡೆಸಬಹುದಿತ್ತು. 'ದೇಶಪ್ರೇಮಿಗಳು' ಬಂಕರ್‌ಹಿಲ್ ಮತ್ತು ಬ್ರೀಡ್ಸ್‌ಹಿಲ್ ಗುಡ್ಡಗಳನ್ನು ಆಕ್ರಮಿಸಿಕೊಂಡರು. ಬ್ರೀಡ್ಸ್‌ಹಿಲ್‌ನಲ್ಲಿ ಸೈನ್ಯ ಮತ್ತು ಶಸ್ತ್ರಗಳನ್ನು ಹುದುಗಿಸಿಡಬಹುದಾದ ಗುಪ್ತ ಸ್ಥಳಗಳನ್ನು ಸ್ಥಾಪಿಸಿದ್ದನ್ನು ತಿಳಿದು ಅವರನ್ನು ಅಲ್ಲಿಂದ ಓಡಿಸಲು ಜನರಲ್ ಗೇಜ್ ಕೂಡಲೇ ನಿರ್ಧರಿಸಿದನು. ೧೭೭೫ರ ಜೂನ್ ೧೭ರಂದು ೨೨೦೦ ಬ್ರಿಟಿಷ್ ಸೈನಿಕರು ಬಂಕರ್‌ಹಿಲ್ ಮತ್ತು ಬ್ರೀಡ್ಸ್‌ಹಿಲ್ ಪ್ರದೇಶಗಳನ್ನೊಳಗೊಂಡ ಚಾರ್ಲ್ಸ್ ಟೌನ್ ಪ್ರದೇಶದ ಮೇಲೆ ದಾಳಿ ನಡೆಸಿದರು. ಅಲ್ಲಿ ನಡೆದ ಭಯಂಕರ ಹೋರಾಟದಲ್ಲಿ ಅಮೆರಿಕನ್ನರು ಜೀವದ ಹಂಗು ತೊರೆದು ಕೋವಿಗಳಿಗೆ ತುಂಬುವ ಮಸಿ (gun powder) ಖರ್ಚಾಗುವವರೆಗೂ

ಹೋರಾಡಿದರು. ಅಪಾರ ಸಾವು ನೋವುಗಳನ್ನು ಅನುಭವಿಸಿದರೂ ಕಡೆಯಲ್ಲಿ ಬ್ರಿಟಿಷ್ ಸೈನಿಕರು ಚಾರ್ಲ್ಸ್ ಟೌನ್ ಪರ್ಯಾಯ ದ್ವೀಪವನ್ನು ವಶಪಡಿಸಿಕೊಂಡು ವಿಜಯ ಸಾಧಿಸಿದರು, ಆದರೆ ಅದಕ್ಕಾಗಿ ಅವರು ಅಗಾಧ ಪ್ರಮಾಣದ ಬೆಲೆ ತೆರಬೇಕಾಯಿತು. ಈ ಹೋರಾಟದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಬ್ರಿಟಿಷ್ ಸೈನಿಕರು ಸತ್ತರು; ದೇಶಪ್ರೇಮಿಗಳಲ್ಲಿ ಸತ್ತವರ ಸಂಖ್ಯೆ ೪೦೦ ಮಾತ್ರ!

'ಬಂಕರ್‌ಹಿಲ್ ಕದನ' (The Battle of Bunker Hill) ಎಂದು ಹೆಸರಾದ ಈ ಹೋರಾಟ ಶಾಂತಿ ಸಂಧಾನದ ಎಲ್ಲ ಆಸೆಗಳನ್ನೂ ಅಳಿಸಿಹಾಕಿತು. ಎರಡು ಪಕ್ಷಗಳು ಹರಿಸಿದ ರಕ್ತ – ಗೆಲ್ಲಲೇಬೇಕು ಎನ್ನುವ ಹಠವನ್ನು ಎರಡು ಪಕ್ಷಗಳಲ್ಲೂ ಬೆಳೆಸಿತು. ಬ್ರಿಟಿಷ್‌ರು ಜನರಲ್ ಗೇಜ್‌ನನ್ನು ತೆಗೆದುಹಾಕಿ ಅವನ ಸ್ಥಾನದಲ್ಲಿ ಜನರಲ್ ವಿಲಿಯಂ ಹಾವಿ (William Howe)ನನ್ನು ಸೇನಾಧಿಪತಿಯಾಗಿ ನೇಮಿಸಿದರು. ಜಾರ್ಜ ವಾಷಿಂಗ್‌ಟನ್‌ನು ಡಾರ್‌ಚೆಸ್ಟರ್ (Dorchester) ಉನ್ನತ ಪ್ರದೇಶವನ್ನು ಆಕ್ರಮಿಸಿ ಭದ್ರಪಡಿಸಿದನು. ಆ ಉನ್ನತ ಪ್ರದೇಶದಿಂದ ಬಾಸ್ಟನ್ ನಗರದ ಮೇಲೆ ಫಿರಂಗಿ ದಾಳಿ ನಡೆಸಬಹುದಾಗಿತ್ತು. ಜನರಲ್ ಹಾವಿ ಯುದ್ಧ ಮುಂದುವರಿಸದೆ ವಿವೇಕ, ಶೌರ್ಯದ ಉತ್ತಮ ಭಾಗ ಎಂದು ಆಲೋಚಿಸಿ, ತನ್ನ ಸೈನ್ಯದೊಂದಿಗೆ ನದಿಯ ಮಾರ್ಗವಾಗಿ ನೋವಾ ಸ್ಕೋಶಿಯ (Nova Scotia) ಪ್ರಾಂತದ ಹ್ಯಾಲಿಫ್ಯಾಕ್ಸ್ (Halifax) ನಗರವನ್ನು ತಲುಪಿದನು. ಮಾರ್ಚ್ ೧೭, ೧೭೭೬ರಲ್ಲಿ ಬ್ರಿಟಿಷ್ ಸೈನ್ಯದ ಕಡೆಯ ತುಕಡಿಗಳು ಮತ್ತು ಭಯಗ್ರಸ್ತರಾದ ರಾಜನಿಷ್ಠ ಅಮೆರಿಕನ್ನರು (American loyalists) ಬಾಸ್ಟನ್ ನಗರವನ್ನು ಬಿಟ್ಟು ಹೊರಟುಹೋದರು. ಆ ದಿನವೇ ಜಾರ್ಜ ವಾಷಿಂಗ್‌ಟನ್ ತನ್ನ ಸೈನ್ಯದೊಂದಿಗೆ ಬಾಸ್ಟನ್ ನಗರವನ್ನು ಪ್ರವೇಶಿಸಿದನು. ಆ ದಿನವನ್ನು ಬಾಸ್ಟನ್ ನಾಗರಿಕರು 'ವಿಸರ್ಜನಾದಿನ'ವನ್ನಾಗಿ (Evacuation day) ಆಚರಿಸಿದರು!

ಕಾಂಟಿನೆಂಟಲ್ ಕಾಂಗ್ರೆಸ್ ಮೂರನೆಯ ಜಾರ್ಜ್ ರಾಜನಿಗೆ ಶಾಂತಿ ಸಂಧಾನವನ್ನು ಸೂಚಿಸುವ ಅಂತಿಮ ಕೋರಿಕೆಯನ್ನು ಸಲ್ಲಿಸಿತು. ಇದನ್ನು 'ಆಲಿವ್ ಬ್ರ್ಯಾಂಚ್ ಪೆಟಿಷನ್' (Olive branch Petition) ಎಂದು ಕರೆಯುತ್ತಾರೆ. ಇದು ಮಧ್ಯಮಪರರನ್ನು (Moderators) ತೃಪ್ತಿ ಪಡಿಸಲು ಮಾಡಿದ ಪ್ರಯತ್ನ. ಈ ಕೋರಿಕೆಗೆ ರಾಜನಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ನಂತರ ಕಾಂಗ್ರೆಸ್ 'ಶಸ್ತ್ರಸನ್ನದ್ಧರಾಗಲು ಕಾರಣ ಮತ್ತು ಅವಶ್ಯಕತೆಗಳ ಪ್ರಕಟಣೆ' (Declaration of the Causes and Necessity of Taking up Arms)ಯನ್ನು ಅನುಮೋದಿಸಿತು. ಈ ಪ್ರಕಟಣೆ ೧೭೬೩ರಿಂದ ಬ್ರಿಟಿಷ್‌ರು ನಡೆಸಿದ ಕಾರ್ಯಾಚರಣೆಗಳನ್ನು ಖಂಡಿಸಿ, ಅಮೆರಿಕನ್ನರು ವಿನಾಕಾರಣ ಶತ್ರುಗಳ ದಾಳಿಗೆ ಗುರಿಯಾದವರು – ಆಳ್ವಿಕೆ ಮತ್ತು ದಬ್ಬಾಳಿಕೆಗಳ ನಡುವೆ ಆಯ್ಕೆ ಮಾಡುವ ಕಾಲ ಬಂದಿದೆ, ಬಲ ಪ್ರಯೋಗಿಸಿ ಪ್ರತಿಭಟನೆ ಮಾಡುವುದು ಅಗತ್ಯ – ಎನ್ನುವ ಹೇಳಿಕೆಗಳನ್ನು

ಅನುಮೋದಿಸಲಾಯಿತು. ನಂತರ ಜುಲೈ ೧೭೭೫ರಲ್ಲಿ ಕಾಂಗ್ರೆಸ್ ಕ್ವಿಬೆಕ್ ಮೇಲೆ ದಾಳಿ ಮಾಡಲು ಸೈನ್ಯಕ್ಕೆ ಆಜ್ಞೆ ನೀಡಿತು. ಇದು ಫ್ರೆಂಚರ ಬೆಂಬಲ ಪಡೆಯಲು ಮಾಡಿದ ಪ್ರಯತ್ನ. ಕಷ್ಟನಷ್ಟಗಳನ್ನು, ಸಾವು ನೋವುಗಳನ್ನು ಲೆಕ್ಕಿಸದೆ, ಸರಿಯಾದ ಸೈನ್ಯದ ತರಪೇತು ಇಲ್ಲದ ಈ ಸಾಮಾನ್ಯ ಅಮೆರಿಕನ್ನರ ಸೈನ್ಯದ ಒಂದು ಪಡೆ ರಿಚರ್ಡ್ ಮಾಂಟ್ಗೊಮರಿ (Richard Montgomery) ಸೈನ್ಯಾಧಿಪತ್ಯದಡಿಯಲ್ಲಿ ಚಾಮ್‌ಪ್ಲೈನ್ (Champlain) ಸರೋವರದ ಮಾರ್ಗವಾಗಿ ಕ್ವಿಬೆಕ್ ಕಡೆಗೆ ಮುಂದುವರಿಯಿತು. ಇನ್ನೊಂದು ಕಡೆ ಬೆನೆಡಿಕ್ಟ್ ಆರ್ನಾಲ್ಡ್ (Benedict Arnold) ಸೈನ್ಯಾಧಿಪತ್ಯದಡಿಯಲ್ಲಿ ದುಸ್ಸಾಧ್ಯವಾದ ಮೇನ್ (Maine)ನ ದಟ್ಟವಾದ ಅರಣ್ಯದ ಮೂಲಕ ವರ್ಣಿಸಲಸದಳ ವಾದ ಕಷ್ಟಗಳನ್ನು ಎದುರಿಸಿ ಕ್ವಿಬೆಕ್ ಕಡೆಗೆ ಮುಂದುವರಿದು ಮಾಂಟ್ಗೊಮರಿಯ ಸೈನ್ಯವನ್ನು ಸೇರಿಕೊಂಡು, ಎರಡು ಸೈನ್ಯಗಳು ಸೇರಿ ಕ್ವಿಬೆಕ್‌ಗೆ ಮುತ್ತಿಗೆ ಹಾಕಿದವು. ಸೆಪ್ಟೆಂಬರ್ ಮಧ್ಯದಿಂದ ಡಿಸೆಂಬರ್ ಕೊನೆಯವರೆಗೆ ಛಳಿ, ಮಳೆ, ಹಿಮಪಾತ, ಹಸಿವು, ರೋಗರುಜಿನಗಳನ್ನು ಸಹಿಸಿಕೊಂಡೂ ಸಹ ಮುತ್ತಿಗೆ ಮುಂದುವರಿಸಿಕೊಂಡು ಬಂದವು. ಆದರೆ ಡಿಸೆಂಬರ್ ೩೧ರ ಅಂತಿಮ ದಾಳಿಯಲ್ಲಿ ಸೋತು ಹಿಮ್ಮೆಟ್ಟಬೇಕಾಯಿತು. ಈ ದಾಳಿಯಲ್ಲಿ ಮಾಂಟ್ಗೊಮರಿ ಮರಣ ಹೊಂದಿ, ಆರ್ನಾಲ್ಡನು ಗಾಯಗೊಂಡು ತಪ್ಪಿಸಿಕೊಂಡು ಅಳಿದುಳಿದ ಸೈನ್ಯದೊಂದಿಗೆ ಅಸಾಧ್ಯವಾದ ಕಷ್ಟಗಳನ್ನು ಸಹಿಸಿಕೊಂಡು ಬಾಸ್ಟನ್‌ಗೆ ಬಂದು ಸೇರಿದನು.

ಕಾಂಗ್ರೆಸ್ ತಾನೇ ಸರ್ಕಾರದ ಕಾರ್ಯಗಳನ್ನು ವಹಿಸಿಕೊಂಡು ಹೊರದೇಶಗಳಿಂದ ಆರ್ಥಿಕ ನೆರವನ್ನು ಪಡೆಯಲು ಪ್ರಯತ್ನಿಸುವ ಒಂದು ಸಮಿತಿಯನ್ನು ಸ್ಥಾಪಿಸಿತು. ಇನ್ನೊಂದು ಸಮಿತಿ ಶಸ್ತ್ರ ಸಾಮಗ್ರಿಗಳನ್ನು ಸಂಗ್ರಹಿಸಲು ರಚಿತವಾಯಿತು. ನೌಕಾಪಡೆ ಯನ್ನು ಕಟ್ಟಲು ಎಸೆಕ್ ಹಾಪ್ಕಿನ್ಸ್ (Esek Hopkins)ನನ್ನು ನೌಕಾದಳಪತಿಯಾಗಿ ನೇಮಿಸಿತು. ಈ ಎಲ್ಲಾ ವಿದ್ಯಮಾನಗಳ ನಡುವೆ ಬಹಳ ಅಮೆರಿಕನ್ನರು ತ್ವರಿತಗತಿಯಲ್ಲಿ ಜರಗುತ್ತಿರುವ ಬದಲಾವಣೆಗಳು ತಮ್ಮನ್ನು ಎಲ್ಲಿಗೋ ಕರೆದೊಯ್ಯುತ್ತಿವೆ ಎನ್ನುವ ಅನಿಶ್ಚಯದಲ್ಲಿ ಪರಿತಪಿಸತೊಡಗಿದರು. ಕ್ರಾಂತಿ ಈಗಿರುವ ಬ್ರಿಟಿಷ್ ಆಳ್ವಿಕೆಗಿಂತ ಕಠೋರವಾದ ದಬ್ಬಾಳಿಕೆಯಲ್ಲಿ ಪರ್ಯಾವಸಾನವಾದರೆ ಗತಿ ಏನು? ಪ್ರಜಾರಾಜ್ಯಕ್ಕೆ ಬದಲಾಗಿ ಗೂಂಡಾರಾಜ್ಯ ಬಂದರೆ ಏನು ಮಾಡುವುದು? ಈಚೆಗೆ ಜರುಗಿದ ಘಟನೆಗಳಲ್ಲಿ ಗೂಂಡಾಗಿರಿ, ಅಶಿಸ್ತು ಹಿಂಸಾಚಾರಗಳಲ್ಲಿ – ಕಳ್ಳರು, ದುಡಿಯಲಾರದೆ ಬಡವರಾಗಿರುವ ಪೈಗಳ್ಳರು, ಬರಿ ಮಾತಿನಿಂದ ಜನರನ್ನು ಮರುಳು ಮಾಡುವ ಮಾತಿನ ಮಲ್ಲರು – ಇವರದ್ದೇ ಮೇಲುಗೈ ಆಗಿರುವುದನ್ನು ಅವಲೋಕಿಸಿದ ಅಮೆರಿಕನ್ನರಿಗೆ ಈ ಶಿಸ್ತುಗೇಡಿಗಳ ಕೈಯಲ್ಲಿ ಸರ್ಕಾರ ಮತ್ತು ಅಧಿಕಾರ ಸಿಕ್ಕರೆ ಏನಾಗಬಹುದು ಎಂದು ಊಹಿಸಿ ಭಯಗ್ರಸ್ತರಾದರು. ೧೮ನೆಯ ಶತಮಾನ ರಾಜರ, ಚಕ್ರಾಧಿಪತಿಗಳ ಯುಗವಾಗಿತ್ತು. ಆ ಪರಿಸ್ಥಿತಿಯಲ್ಲಿ ರಾಜನಿಲ್ಲದೆ ಜನ ತಮ್ಮನ್ನು ತಾವೇ ಆಳಿಕೊಳ್ಳಬಲ್ಲರೆ? ಸಾಮಾನ್ಯ

ಜನರ ಕೈಯಲ್ಲಿ ಅಧಿಕಾರ ಮಂಗನ ಕೈಯಲ್ಲಿ ಕೊಟ್ಟ ಮಾಣಿಕ್ಯದಂತೆ ಆದರೆ ಗತಿ ಏನು? ಈ ಅನುಮಾನಗಳು ಜನರಲ್ಲಿ ಗೊಂದಲ ಉಂಟುಮಾಡಿದ್ದವು. ಸ್ವಾತಂತ್ರ್ಯ ತರುಬಹುದಾದ ಪರಿಣಾಮಗಳ ಬಗ್ಗೆ ಅಮೆರಿಕನ್ನರು ಗಂಭೀರವಾಗಿ ಯೋಚಿಸ ತೊಡಗಿದರು.[೧]

ಜನರ ತಳಮಳವನ್ನು ಗಮನಿಸದೆ ಕಾಲ ತನ್ನಷ್ಟಕ್ಕೆ ತಾನು ನದಿಯನೀರಿನಂತೆ ಹರಿದೋಡುತ್ತಿತ್ತು. ಜನವರಿ ೧೭೭೬ರಲ್ಲಿ ಜರುಗಿದ ಎರಡು ಘಟನೆಗಳು ಅಮೆರಿಕ ವಸಾಹತುಗಳನ್ನು ಸ್ವಾತಂತ್ರ್ಯದೆಡೆಗೆ ಸೆಳೆದುಬಿಟ್ಟವು. ಮೊದಲನೆಯದು ಬ್ರಿಟಿಷರು ಅಮೆರಿಕ ವಸಾಹತುಗಳ ಮೇಲೆ ಯುದ್ಧ ಮಾಡಲು ಬೇರೆ ಬೇರೆ ದೇಶಗಳಿಂದ ಸಿಪಾಯಿಗಳನ್ನು (mercenaries) ಗೊತ್ತು ಮಾಡಿದ್ದರು. ಸಾವಿರಾರು ಬಾಡಿಗೆ ಹೆಸ್ಸಿಯನ್ (Hessian) ಸೈನಿಕರನ್ನು (ಜರ್ಮನಿಯ Hesse-Kassel ಪ್ರಾಂತದವರು) ಹಡಗಿನಲ್ಲಿ ಅಮೆರಿಕಕ್ಕೆ ರವಾನಿಸಲಾಗಿದೆ ಎನ್ನುವ ಸುದ್ದಿ ತಿಳಿದ ಮೇಲೆ ಸಂಧಾನ ಸಾಧ್ಯವಿಲ್ಲ ಎಂಬುದು ಮನದಟ್ಟಾಯಿತು. ಎರಡನೆಯ ನಿರ್ಣಾಯಕ ಘಟನೆಯೆಂದರೆ ಥಾಮಸ್ ಪೇನ್ (Thomas Paine) ಬರೆದ 'ಸಾಮಾನ್ಯ ತಿಳುವಳಿಕೆ' (Common Sense) ಪುಸ್ತಿಕೆಯ ಪ್ರಕಟಣೆ. ಈ ಪುಸ್ತಿಕೆಯಲ್ಲಿ ಅವನು ಅಮೆರಿಕ ಸಂಪೂರ್ಣ ಸ್ವಾತಂತ್ರ್ಯ ಪಡೆಯಬೇಕು ಎಂದು ಕರೆಕೊಟ್ಟು ಧೈರ್ಯದಿಂದ ಇಂಗ್ಲೆಂಡಿನ ರಾಜ ಮೂರನೆಯ ಜಾರ್ಜ್‌ನನ್ನು ಮತ್ತು ರಾಜಪ್ರಭುತ್ವವನ್ನು ಖಂಡಿಸಿದನು. ಅವನು ಮೂರನೆಯ ಜಾರ್ಜ್‌ನನ್ನು 'ರಾಜ ಮೃಗ' (Royal Brute) ಎಂದು ಕರೆದು, ರಾಜಪ್ರಭುತ್ವವನ್ನು 'ಭ್ರಷ್ಟ ಸಂಸ್ಥೆ' ಎಂದು ಹೀಗಳೆದನು. 'ಸ್ವಯಂ

---

೧ ವಸಾಹತುಗಳ, ಅಮೆರಿಕನ್ನರ ಸ್ವಾತಂತ್ರ್ಯಪೂರ್ವ ಮನಸ್ಥಿತಿಯನ್ನು ಗಮನಿಸಿದರೆ ನನಗೆ ಸ್ವಾತಂತ್ರ್ಯಪೂರ್ವ ಭಾರತೀಯರ ಮನಸ್ಥಿತಿಯ ಸ್ಮರಣೆ ಮರುಕಳಿಸುತ್ತದೆ. ಬ್ರಿಟಿಷ್ ಸರ್ಕಾರ ಹಾಗೂ ಮೈಸೂರು ಮಹಾರಾಜರ ಆಡಳಿತದಲ್ಲಿ ಉನ್ನತ ಹುದ್ದೆಗಳಲ್ಲಿದ್ದ ಅಧಿಕಾರಿಗಳು, ಸುಖ ಸಂಪತ್ತಿನಲ್ಲಿ ಮುಳುಗಿ ಏಳುತ್ತಿದ್ದ ದೊಡ್ಡ ಜಮೀನ್ದಾರರು, ಜಹಗೀರುದಾರರು, ಸಗಟು ವ್ಯಾಪಾರಿಗಳು, ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುತ್ತಿದ್ದ ರೆವಿನ್ಯೂ ಅಧಿಕಾರಿಗಳು ಮುಂತಾದವರು—ಗಾಂಧಿ, ನೆಹರು ಮೊದಲಾದ ನಾಯಕರನ್ನು ಅರಾಜಕತೆಯನ್ನು ಹರಡಿ ದೇಶವನ್ನು ವಿನಾಶದ ಹಾದಿಯಲ್ಲಿ ಕೊಂಡೊಯ್ಯುತ್ತಿರುವ ಪುಂಡು ಪೋಕರಿಗಳೆಂದು ಹೀಗಳೆಯುತ್ತಿದ್ದುದನ್ನು ನಾನು ಕಿವಿಯಾರೆ ಕೇಳಿದ್ದೇನೆ. ಅಮೆರಿಕದಲ್ಲಿ ರಾಜನಿಷ್ಠರು ಇದ್ದಂತೆ ಭಾರತದಲ್ಲೂ ರಾಜನಿಷ್ಠರು ಬೇಕಾದಷ್ಟು [illegible]ಪ್ಪರು. ಸ್ವಾತಂತ್ರ್ಯ ಬಂದು ಜನಗಳಿಗೆ ಅಧಿಕಾರ ಸಿಕ್ಕರೆ ಬ್ರಿಟಿಷರು ಸ್ಥಾಪಿಸಿದ ಸ್ಥಿರತೆ, ಶಿಸ್ತು, ಶಾಂತಿ ಎಲ್ಲ ನಾಶವಾಗಿ ಅಸಮರ್ಥರಾದ, ಚಾರಿತ್ರ್ಯಹೀನ ಸಾಧಾರಣ ಪ್ರಜೆಗಳ ಕೈಯಲ್ಲಿ ಅಧಿಕಾರ ಸಿಕ್ಕು, ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಮತ್ತು ಗೂಂಡಾಗಿರಿ ಹೆಚ್ಚಿಸಿ, ಬ್ರಿಟಿಷರ ದಬ್ಬಾಳಿಕೆಯ ಬದಲು ಬಹುಸಂಖ್ಯಾತರ ಅಂದರೆ ಬಡಬಗ್ಗರ, ವಿದ್ಯಾಹೀನ ಅಸಂಸ್ಕೃತರ, ಜಾತಿಯ ಆಧಾರದ ಮೇಲೆ ಆಯ್ಕೆಯಾಗಿ ಅಧಿಕಾರಕ್ಕೆ ಬರುವ ಅಸಮರ್ಥ ನಾಯಕರ ದಬ್ಬಾಳಿಕೆಗೆ ಗುರಿಯಾಗಿ ನರಳಬೇಕಾಗುತ್ತದೆ ಎಂದು ಸ್ವಾತಂತ್ರ್ಯ ಚಳುವಳಿಯ ವಿರುದ್ಧ ಕಾರ್ಯಾಚರಣೆ ನಡೆಸಿದವರೂ ಇದ್ದರು.

ಆಡಳಿತ ಸರ್ಕಾರ ನಮ್ಮ ಸಹಜ ಹಕ್ಕು' ಎಂದು ಆಗ್ರಹ ಪಡಿಸಿದನು. ವಸಾಹತುಗಳಲ್ಲಿ ಪ್ರತಿಯೊಬ್ಬನೂ ಈ ಪುಸ್ತಿಕೆಯನ್ನು ಓದಿ ಪ್ರಭಾವಿತನಾದನೆಂದರೆ ಉತ್ಪ್ರೇಕ್ಷೆಯಾಗಲಾರದು.

ಪೇನ್‌ನ ಬರವಣಿಗೆ ಕಾಂಗ್ರೆಸ್ ಮೇಲೆ ಪ್ರಭಾವ ಬೀರಿ ಸ್ವಾತಂತ್ರ್ಯ ಸಾಧಿಸಲು ಕಾರ್ಯನಿರತವಾಯಿತು. ಕಾಂಟಿನೆಂಟಲ್ ಕಾಂಗ್ರೆಸ್ ಅಮೆರಿಕನ್ ವರ್ತಕರಿಗೆ ಬ್ರಿಟಿಷ್ ವ್ಯಾಪಾರ ವ್ಯವಸ್ಥೆಯ ಮೇಲೆ ಪೈಪೋಟಿ ನಡೆಸುವಂತೆ ಹುರಿದುಂಬಿಸಿತು. ಅಮೆರಿಕದ ಬಂದರುಗಳನ್ನು ಎಲ್ಲ ವಿದೇಶಿ ಹಡಗುಗಳಿಗೆ ತೆರೆಯಲಾಯಿತು. ಸಂಸ್ಥಾನದ ಸಭೆಗಳಿಗೆ ಸಂವಿಧಾನಗಳನ್ನು ರಚಿಸುವಂತೆ ಪ್ರೇರೇಪಿಸಿ ಸಂಸ್ಥಾನ ಸರ್ಕಾರಗಳನ್ನು (State Governments) ಸ್ಥಾಪಿಸುವಂತೆ ಒತ್ತಾಯ ಮಾಡಿತು. ಅಮೆರಿಕನ್ ಸ್ವಾತಂತ್ರ್ಯದ ಅಗತ್ಯವನ್ನು ಕುರಿತು ಒಂದು ಸರಿಯಾದ ಸಮರ್ಥನೆಯನ್ನು ರಚಿಸಲು ಕಾಂಗ್ರೆಸ್ ಒಂದು ಸಮಿತಿಯನ್ನು ನೇಮಿಸಿತು. ಆ ಸಮಿತಿಯಲ್ಲಿ ಥಾಮಸ್ ಜೆಫರ್ಸನ್, ಬೆಂಜಮಿನ್ ಫ್ರಾಂಕ್ಲಿನ್, ಜಾನ್ ಆ್ಯಡಮ್ಸ್, ರಾಜರ್ ಶರ್ಮನ್ ಮತ್ತು ರಾಬರ್ಟ್ ಲಿವಿಂಗ್‌ಸ್ಟನ್ ಸದಸ್ಯರಾಗಿದ್ದರು. ಸಮಿತಿ ಥಾಮಸ್ ಜೆಫರ್ಸನ್‌ನನ್ನು ಸಮರ್ಥನೆಯ ಕರಡನ್ನು ತಯಾರಿಸುವಂತೆ ವಿನಂತಿಸಿತು. ಜೆಫರ್ಸನ್ ರಚಿಸಿದ ಸಮರ್ಥನೆಯ ಕರಡನ್ನು ಅಲ್ಲಲ್ಲಿ ಕೆಲವು ಬದಲಾವಣೆಗಳೊಡನೆ ಜುಲೈ ೪, ೧೭೭೬ರಂದು ಕಾಂಗ್ರೆಸ್ಸಿನ ಸರ್ವಸದಸ್ಯರು ಅಧಿಕೃತವಾಗಿ ಅಂಗೀಕರಿಸಿದರು. ಜೆಫರ್ಸನ್ ರಚಿಸಿದ ಪ್ರಣಾಳಿಕೆಯಲ್ಲಿ ಎರಡು ಭಾಗಗಳಿವೆ: ಮೊದಲನೆಯ ಭಾಗ ಮುನ್ನುಡಿಯಂತೆ ಪ್ರಣಾಳಿಕೆಯ ಗುರಿಗಳ ಸಂಕ್ಷಿಪ್ತ ವಿವರಣೆಯನ್ನು ಒಳಗೊಂಡಿದೆ. ಯಾವ ಜನರಿಗೇ ಆಗಲಿ ಆಂದೋಳನ ಮಾಡುವ ಹಕ್ಕು ಇರುವುದನ್ನು ಸಮರ್ಥಿಸಿ, ಅಮೆರಿಕನ್ನರು ಕಟ್ಟುತ್ತಿರುವ ಹೊಸ ಗಣರಾಜ್ಯ (Republican Government) ಯಾವ ತತ್ವಗಳ ಆಧಾರದ ಮೇಲೆ ನಿಂತಿದೆ ಎನ್ನುವುದನ್ನು ಸೂಚಿಸುತ್ತದೆ.

ಪ್ರಣಾಳಿಕೆಯ ಎರಡನೆಯ ಭಾಗ (ಮೊದಲ ಭಾಗಕ್ಕಿಂತ ಉದ್ದವಿರುವ) ಇಂಗ್ಲೆಂಡಿನ ದೊರೆ ಮೂರನೆಯ ಜಾರ್ಜ್ ಮೇಲೆ ಹೊರಿಸಿದ ದೋಷಾರೋಪಣೆಗಳನ್ನು ಒಳಗೊಂಡು, ವಸಾಹತುಗಾರರು ಯಾಕೆ ತಮ್ಮ ಹಕ್ಕುಗಳನ್ನು ಚಲಾಯಿಸಲು ಮನಸ್ಸು ಮಾಡಿದರು ಎನ್ನುವುದನ್ನು ವಿವರಿಸುತ್ತದೆ. ಜೆಫರ್ಸನ್ ಸಮರ್ಥಿಸಿದ ಈ ಆಂದೋಳನದ ಹಕ್ಕು ಪ್ರಪಂಚದಾದ್ಯಂತ ದಬ್ಬಾಳಿಕೆಗೆ ಒಳಗಾದ ಎಲ್ಲರಿಗೂ ಸ್ಫೂರ್ತಿದಾಯಕವಾಗಿದೆ. ಜುಲೈ ೪, ೧೭೭೬ರಂದು ಈ ಕೆಳಕಂಡ ಪ್ರಕಟಣೆ ಹೊರಡಿಸಲಾಯಿತು:

'ನಾವು ಈ ಸತ್ಯಗಳನ್ನು ಸ್ವಯಂಸ್ಪಷ್ಟವೆಂದು ಎತ್ತಿಹಿಡಿಯುತ್ತೇವೆ – ಎಲ್ಲಾ ಮಾನವರು ಸಮಾನರಾಗಿ ಸೃಷ್ಟಿಗೊಂಡಿದ್ದಾರೆ, ಅವರು ಸೃಷ್ಟಿಕರ್ತನಿಂದ ನಿಶ್ಚಿತವಾದ, ಪರಬಾರೆ ಮಾಡಲಾರದ ಹಕ್ಕುಗಳನ್ನು ಪಡೆದಿದ್ದಾರೆ. ಜೀವನ, ಸ್ವಾತಂತ್ರ್ಯ ಮತ್ತು

ಸುಖ-ಸಂತೋಷ-ಸಾಧನೆ ಆ ಹಕ್ಕುಗಳಲ್ಲಿ ಕೆಲವು. ಈ ಹಕ್ಕುಗಳನ್ನು ಪಡೆಯುವುದಕ್ಕಾಗಿ ಮಾನವರು ಸರ್ಕಾರಗಳನ್ನು ಸ್ಥಾಪಿಸುತ್ತಾರೆ. ಈ ಸರ್ಕಾರಗಳು ತಮ್ಮ ನ್ಯಾಯಬದ್ಧ ಅಧಿಕಾರಗಳನ್ನು ಪಡೆಯುವುದು ಆಳಿಸಿಕೊಳ್ಳುವವರ ಅಂಗೀಕಾರದಿಂದ. ಯಾವಾಗ ಲಾದರೂ ಯಾವ ರೀತಿಯ ಸರ್ಕಾರವೇ ಆಗಲಿ, ಈ ಹಕ್ಕುಗಳನ್ನು ನಾಶಪಡಿಸುವಂತಾದರೆ, ಅದನ್ನು ಬದಲಾಯಿಸುವ ಅಥವಾ ರದ್ದು ಮಾಡುವ ಮತ್ತು ಹೊಸ ಸರ್ಕಾರವನ್ನು ಸ್ಥಾಪಿಸುವ ಹಕ್ಕು ಜನರಿಗಿದೆ.'

ಇದು ಸ್ವಾತಂತ್ರ್ಯಘೋಷಣೆಯ ಸಾರಾಂಶ. ಕ್ರಾಂತಿಯ ಕಲ್ಪನೆ ಹೊಸದೇನೂ ಅಲ್ಲ. ಆದರೆ ಜನರು ತಮ್ಮ ಹಕ್ಕನ್ನು, ವ್ಯವಸ್ಥಿತವಾಗಿ ವಿವರಿಸುವ ಮತ್ತು ಸಮರ್ಥಿಸುವ, ತಮ್ಮ ಮೇಲೆ ದಬ್ಬಾಳಿಕೆ ನಡೆಸುತ್ತಿರುವವರನ್ನು ತೆಗೆದುಹಾಕಿ ಹೊಸವ್ಯವಸ್ಥೆಯನ್ನು ಸ್ಥಾಪಿಸುವ ಅಧಿಕಾರ ಪಡೆದಿದ್ದು ಹಿಂದೆ ಎಂದೂ ಆಗಿರಲಿಲ್ಲ. ಅಮೆರಿಕನ್ ಸ್ವಾತಂತ್ರ್ಯ ಘೋಷಣೆ ಒಂದು ಚಾರಿತ್ರಿಕ ಪ್ರಣಾಳಿಕೆ ಮಾತ್ರವಲ್ಲ; ಅದು ಮೊದಲಲ್ಲಿ ಹೇಗೋ ಹಾಗೆ ಇಂದು ಕೂಡ ಅಮೆರಿಕನ್ ಪರಂಪರೆಯಲ್ಲಿ, ಸಾಹಿತ್ಯದಲ್ಲಿ ಎದ್ದು ತೋರುವ ಒಂದು ಸ್ಮಾರಕವಾಗಿದೆ ಎಂದು ಸಾಹಿತಿಗಳನೇಕರು ಅಭಿಪ್ರಾಯಪಟ್ಟಿದ್ದಾರೆ.

ಸ್ವಾತಂತ್ರ್ಯವನ್ನು ಘೋಷಿಸಿದ್ದೇನೋ ಆಯಿತು. ಮುಂದಿನ ಕೆಲಸ ಅದನ್ನು ಉಳಿಸಿ ಬೆಳೆಸುವುದು. ಅಮೆರಿಕ ವಸಾಹತುಗಳಲ್ಲಿ ಯಾವ ರಾಜಕೀಯ ಸಂಪ್ರದಾಯಗಳೂ ಇರಲಿಲ್ಲ. ತಮ್ಮದೇ ಆದ ನ್ಯಾಯಬದ್ಧವಾದ ಆಡಳಿತವ್ಯವಸ್ಥೆಯೂ ಇರಲಿಲ್ಲ. ಆಡಳಿತ ಬ್ರಿಟಿಷರದಾಗಿತ್ತು. ಈಗ ಕಾಂಗ್ರೆಸ್ ಹೊಸ ರಾಜಕೀಯ ಸಂಸ್ಥೆಗಳನ್ನು, ಹೊಸ ರಾಷ್ಟ್ರೀಯ ಭಾವನೆಗಳನ್ನು ಯುದ್ಧ ನಡೆಯುವ ಸಮಯದಲ್ಲೇ ಸೃಷ್ಟಿಸಿ ಬೆಳೆಸಬೇಕಾಗಿ ಬಂತು. ಕಾಂಟಿನೆಂಟಲ್ ಕಾಂಗ್ರೆಸ್ ಅಮೆರಿಕ ಸ್ವತಂತ್ರವಾಗಬೇಕು ಎನ್ನುವ ನಿರ್ಣಯವನ್ನು ಬಹುಮತದಿಂದ ಅನುಮೋದಿಸಿದ ದಿನವೇ ಜನರಲ್ ಹಾವಿ ತನ್ನ ಸೈನ್ಯದೊಡನೆ ನ್ಯೂ ಯಾರ್ಕಿನ ಸ್ಟಾಟನ್ ಐಲೆಂಡ್‌ಗೆ ಬಂದಿಳಿದನು. ನ್ಯೂಯಾರ್ಕ್ ನಗರದ ಮೇಲೆ ದಾಳಿ ಮಾಡುವುದು ಅವನ ಉದ್ದೇಶವಾಗಿತ್ತು. ಅವನ ಕೈಕೆಳಗೆ ೩೨೦೦೦ ಸುಸಜ್ಜಿತರಾಗಿದ್ದ ಸೈನಿಕರಿದ್ದರು. ಇವರ ಸಹಾಯಕ್ಕಾಗಿ ಒಂದು ಪ್ರಬಲವಾದ ನೌಕಾಪಡೆ ಸಿದ್ಧವಾಗಿತ್ತು. ಆ ನೌಕಾಪಡೆಯ ನಾಯಕ ಜನರಲ್ ಹಾವಿಯ ತಮ್ಮ ರಿಚರ್ಡ್ ಹಾವಿ (Richard Howe). ಬ್ರಿಟಿಷರ ಬಲಪ್ರದರ್ಶನದ ಎದುರು ಅಮೆರಿಕನ್ನರ ಸೈನ್ಯದ ಮತ್ತು ಆರ್ಥಿಕ ದುರ್ಬಲತೆಗಳು ಎದ್ದು ಕಾಣುತ್ತಿದ್ದವು. ಆಗ ಅಮೆರಿಕದಲ್ಲಿ ವ್ಯವಸಾಯ ಮುಖ್ಯ ಕಸುಬಾಗಿತ್ತು. ಆದ್ದರಿಂದ ಹಣ ಮತ್ತು ಯುದ್ಧ ಸಾಮಗ್ರಿಗಳ ಕೊರತೆ ಯಾವಾಗಲೂ ಇರುತ್ತಿತ್ತು. ರಾಜಕೀಯವಾಗಿ ದೇಶದಲ್ಲಿ ಒಗ್ಗಟ್ಟು ಇರಲಿಲ್ಲ. ಅಮೆರಿಕನ್ನರು ಬ್ರಿಟಿಷರ ರಾಜನೀತಿಗಳನ್ನು ಒಪ್ಪದಿದ್ದರೂ ಅನೇಕರು ತಾಯ್ನಾಡಾದ ಇಂಗ್ಲೆಂಡಿನ ಮೇಲೆ ಯುದ್ಧ ಮಾಡಲು ಹಿಂಜರಿದರು. ಮೆಸಾಚ್ಯುಸೆಟ್ಸ್‌ನಲ್ಲಿ ಕೂಡ ಬಹಳ ಅಮೆರಿಕನ್ನರು ರಾಜನಿಷ್ಠ

(loyalists)ರಾಗಿದ್ದರು. ಇವರನ್ನು 'ಟೋರಿ'ಗಳೆಂದು (Tories) ಕರೆಯುತ್ತಿದ್ದರು. ದೇಶಪ್ರೇಮಿಗಳು ಬಹುಸಂಖ್ಯಾತರಾಗಿದ್ದರೂ ಅವರಲ್ಲಿ ಎಷ್ಟೋ ಜನ ಯುದ್ಧದ ಬಗ್ಗೆ ಉದಾಸೀನರಾಗಿದ್ದರು. ಮತ್ತೆ ಕೆಲವರು ಎಲ್ಲ ಚೆನ್ನಾಗಿ ನಡೆಯುತ್ತಿದ್ದಾಗ ಜೊತೆಯಲ್ಲಿದ್ದು ಕಷ್ಟ ಬಂದಾಗ ಕೈಬಿಡುತ್ತಿದ್ದರು.

ಅಮೆರಿಕನ್ನರು ಯುದ್ಧದಲ್ಲಿ ನುರಿತಿರಲಿಲ್ಲ. ಅವರ ಈ ದುರ್ಬಲತೆ ಜನರಲ್ ಹಾವಿ ನ್ಯೂಯಾರ್ಕಿನ ಮೇಲೆ ಸೈನ್ಯ ಕಾರ್ಯಾಚರಣೆ ಮಾಡಿದಾಗ ಸಾಬೀತಾಯಿತು. ಆಗಸ್ಟ್ ತಿಂಗಳ ಕೊನೆಯಲ್ಲಿ ಜನರಲ್ ಹಾವಿಯ ಸೈನ್ಯ ಸ್ಟಾಟನ್ ಐಲೆಂಡಿನಿಂದ ನ್ಯೂಯಾರ್ಕ್ ಕೊಲ್ಲಿಯನ್ನು ಹಾಯ್ದು ಬ್ರೂಕ್‌ಲಿನ್ ಸೇರಿತು. ಲಾಂಗ್ ಐಲೆಂಡ್ ಕದನದಲ್ಲಿ ಬ್ರಿಟಿಷ್ ಸೈನ್ಯ ವಾಷಿಂಗ್‌ಟನ್‌ನ ಸೈನ್ಯವನ್ನು ಸುತ್ತು ಹಾಕಿ ಸುಲಭವಾಗಿ ಸೋಲಿಸಿತು. ಜನರಲ್ ಹಾವಿ ಮನಸ್ಸು ಮಾಡಿದ್ದರೆ ಯುದ್ಧವನ್ನು ಅಲ್ಲಿಗೆ ಮುಗಿಸಬಹುದಿತ್ತು. ಜಯ ಸಾಧಿಸುವುದೋ ಅಥವಾ ಸಂಧಾನ ಮಾಡಿಕೊಳ್ಳುವುದೋ ಎಂದು ಹಾವಿಯ ಮನಸ್ಸು ತೊಳಲಾಡಿತು. ಅವನ ಅನಿಶ್ಚಯ ಸ್ಥಿತಿಯನ್ನು ಉಪಯೋಗಿಸಿಕೊಡು ವಾಷಿಂಗ್‌ಟನ್ ತನ್ನ ಪಡೆಗಳನ್ನು ಮನ್‌ಹ್ಯಾಟನ್ ದ್ವೀಪಕ್ಕೆ ಹಿಮ್ಮೆಟ್ಟಿಸಿದನು. ಜನರಲ್ ಹಾವಿ ತನ್ನ ನೌಕಾದಳವನ್ನು ಮನ್‌ಹ್ಯಾಟನ್ ಉತ್ತರದಲ್ಲಿ ಇಳಿಸಿ ವಾಷಿಂಗ್‌ಟನ್ ತನ್ನ ಸೈನ್ಯದೊಡನೆ ತಪ್ಪಿಸಿಕೊಡು ಹೋಗದಂತೆ ಮಾಡಬಹುದಿತ್ತು. ಹಾಗೆ ಮಾಡದೆ ಜನರಲ್ ಹಾವಿ ನ್ಯೂಯಾರ್ಕ್ ನಗರದ ಮೇಲೆ ನೇರವಾಗಿ ದಾಳಿ ಮಾಡಿದನು. ಹೀಗೆ ಮಾಡಿದುದರಿಂದ ಅಮೆರಿಕನ್ನರಿಗೆ ತಪ್ಪಿಸಿಕೊಳ್ಳಲು ಉತ್ತರ ದಿಕ್ಕಿನಲ್ಲಿ ದಾರಿ ಮಾಡಿಕೊಟ್ಟಂತಾಯಿತು. ಬ್ರಿಟಿಷ್ ಸೈನಿಕರ ದಾಳಿಯನ್ನು ದೇಶಪ್ರೇಮಿಗಳ ಸೈನ್ಯ ತಾಳಲಾರದೆ ಹೋಯಿತು. ಕನೆಕ್ಟಿಕಟ್ ಸೈನಿಕರು ಹೇಡಿಗಳಂತೆ ಓಡುತ್ತಿದ್ದುದನ್ನು ಕಂಡ ವಾಷಿಂಗ್‌ಟನ್ ಕೋಪಾವಿಷ್ಟನಾಗಿ ತನ್ನ ಟೊಪ್ಪಿಗೆಯನ್ನು ನೆಲಕ್ಕೆಸೆದು ಆ ಹೇಡಿಗಳನ್ನು ಗುಂಡಿಕ್ಕಿ ಕೊಲ್ಲುವುದಾಗಿ ಹೆದರಿಸಿದರೂ ಪ್ರಯೋಜನವಾಗದೆ, ಸೋಲನ್ನೊಪ್ಪಿಕೊಂಡು ಮೇಲಿನ ಮನ್‌ಹ್ಯಾಟನ್ ಭಾಗಕ್ಕೆ ಹಿಮ್ಮೆಟ್ಟಿ ಹೋಗಬೇಕಾಯಿತು. ಜನರಲ್ ಹಾವಿ ಅವನನ್ನು ಬೆನ್ನಟ್ಟಿ ಹೋಗಲಿಲ್ಲ.

ಇಷ್ಟಾದರೂ ವೈರಿಗಳ ನೌಕಾದಳವು ಸುತ್ತುವರಿದಿರುವ ದ್ವೀಪದಲ್ಲಿ ತನಗೂ ಮತ್ತು ತನ್ನ ಸೈನ್ಯಕ್ಕೂ ಇರುವ ಅಪಾಯವನ್ನು ವಾಷಿಂಗ್‌ಟನ್ ಗಮನಿಸಲಿಲ್ಲ. ಯಾವಾಗ ಜನರಲ್ ಹಾವಿ ಒಂದು ಸುಸಜ್ಜಿತ ಸೈನ್ಯ ತುಕಡಿಯನ್ನು ವೆಸ್ಟ್‌ಚೆಸ್ಟರ್‌ಗೆ ಕಳುಹಿಸಿ ವಾಷಿಂಗ್‌ಟನ್ ಸೈನ್ಯವನ್ನು ಹಿಂಭಾಗದಿಂದ ದಾಳಿ ಮಾಡಲು ಆಜ್ಞಾಪಿಸಿದನೋ ಆಗ ವಾಷಿಂಗ್‌ಟನ್ ಸೈನ್ಯದೊಂದಿಗೆ ಉತ್ತರಕ್ಕೆ ಹೋಗಿ ದ್ವೀಪವನ್ನು ಬಿಟ್ಟು ಭೂಖಂಡವನ್ನು ಸೇರಿ ಮುಂದುವರಿದು, ಹಲವಾರು ಬಾರಿ ಸಿಕ್ಕಿಬೀಳುವುದನ್ನು ಸ್ವಲ್ಪದರಲ್ಲಿ ತಪ್ಪಿಸಿಕೊಂಡು, ಹೋಗಿ ನ್ಯೂಜರ್ಸಿಯನ್ನು ತಲುಪಿದನು. ನ್ಯೂಯಾರ್ಕ್ ನಗರದ ಸುತ್ತ ಮುತ್ತ ನಡೆದ

ಕದನಗಳ ಅಂತಿಮ ಪರಿಣಾಮವಾಗಿ ಬ್ರಿಟಿಷರ ವಿಜಯ ಖಂಡಿತ ಎನ್ನುವುದರ ಮುನ್ಸೂಚನೆಯಂತೆ ತೋರಿಬಂತು. ಸೋತು ಹಿಮ್ಮೆಟ್ಟಿದರೂ ವಾಷಿಂಗ್‌ಟನ್ ಒಂದು ರೀತಿಯ ನೈತಿಕ ವಿಜಯ ಸಾಧಿಸಿದ್ದನು. ಸೋಲುಗಳಿಂದ ಅವನು ಅನೇಕ ಪಾಠಗಳನ್ನು ಕಲಿತ. ಇನ್ನುಮುಂದೆ ತನ್ನ ಸೈನ್ಯವನ್ನು ಅಂತಹ ಅಪಾಯಕಾರಕ ಸನ್ನಿವೇಶಗಳಲ್ಲಿ ಸಿಕ್ಕಿಸುವುದಿಲ್ಲ ಎಂದು ದೃಢ ನಿಶ್ಚಯ ಮಾಡಿದನು. ಈ ಕದನಗಳಲ್ಲಿ ಪಡೆದ ಅನುಭವ ಗಳಿಂದ ಅವನ ಕೈಕೆಳಗಿನ ದೇಶಪ್ರೇಮಿಗಳು ಸೈನಿಕರಾಗಿ ಪರಿವರ್ತನೆಗೊಂಡಿದ್ದರು! ಡಿಸೆಂಬರ್ ೧೭೭೬ರಲ್ಲಿ ವಾಷಿಂಗ್‌ಟನ್ ತನ್ನ ಸೈನ್ಯದೊಡನೆ ನ್ಯೂಜರ್ಸಿಯಿಂದ ಪೆನ್ಸಿಲ್ ವೇನಿಯ ಪ್ರಾಂತಕ್ಕೆ ಹಿಮ್ಮೆಟ್ಟಿಹೋದನು. ಆಗ ಜನರಲ್ ಹಾವಿ ತನ್ನ ಸೈನ್ಯದ ಕಾರ್ಯಾಚರಣೆಯನ್ನು ನಿಲ್ಲಿಸಿ, ಚಳಿಗಾಲ ಕಳೆಯಲು ನ್ಯೂ ಯಾರ್ಕಿಗೆ ಹಿಂತಿರುಗಿದನು. ಮೊದಲು ತನ್ನ ಸೈನ್ಯದ ತುಕಡಿಗಳನ್ನು ಟ್ರೆಂಟನ್ (Trenton), ಪ್ರಿನ್ಸ್‌ಟನ್ (Princeton) ಮತ್ತು ಇತರ ಮುಖ್ಯಸ್ಥಳಗಳಲ್ಲಿ ಇರಿಸಿದ್ದನು.

ಟ್ರೆಂಟನ್‌ನಲ್ಲಿ ಬೀಡುಬಿಟ್ಟಿದ್ದ ಸೈನ್ಯದ ತುಕಡಿಯಲ್ಲಿದ್ದವರು ಅಮೆರಿಕನ್ನರು ದ್ವೇಷಿಸುತ್ತಿದ್ದ ಬಾಡಿಗೆ ಸೈನಿಕರು (Hessian mercenaries). ವಾಷಿಂಗ್‌ಟನ್ ಅವರ ಮೇಲೆ ದಾಳಿ ಮಾಡಲು ನಿರ್ಧರಿಸಿದನು. ಕ್ರಿಸ್‌ಮಸ್ ರಾತ್ರಿಯಲ್ಲಿ ಬಿರುಗಾಳಿ ಭೋರ್ಗರೆಯುತ್ತಿದ್ದಾಗ, ಕೊರೆಯುವ ಚಳಿಗೆ ನೀರು ಹೆಪ್ಪುಗಟ್ಟಿ ಹಿಮಗಡ್ಡೆಯಿಂದ ತುಂಬಿದ್ದ ಡೆಲವೇರ್ (Delaware) ನದಿಯನ್ನು ದಾಟಿ ವಾಷಿಂಗ್‌ಟನ್ ಮತ್ತು ಅವನ ಸೈನಿಕರು ಅನಿರೀಕ್ಷಿತ ದಾಳಿ ಮಾಡಿ ಹೆಸ್ಸಿಯನ್ ಸೈನ್ಯ ತುಕಡಿಯನ್ನು ಸದೆಬಡಿದು, ೯೦೦ ಜನ ಹೆಸ್ಸಿಯನ್ ಸೈನಿಕರನ್ನು ಸೆರೆಹಿಡಿದರು. ಇದಾಗಿ ಕೆಲವು ದಿನಗಳ ಮೇಲೆ ಪ್ರಿನ್ಸ್‌ಟನ್‌ನಲ್ಲಿ ನಡೆದ ಕದನದಲ್ಲಿ ವಾಷಿಂಗ್‌ಟನ್ ಜಯಗಳಿಸಿದನು. ಈ ವಿಜಯಗಳು ಅಮೆರಿಕನ್ನರನ್ನು ಹುರಿದುಂಬಿಸಿ ಅವರಲ್ಲಿ ನೈತಿಕ ಸ್ಥೈರ್ಯವನ್ನು ತುಂಬಿಸಿದವು.

ಸಂಸ್ಥಾನಗಳ ಮತ್ತು ಕಾಂಟಿನೆಂಟಲ್ ಕಾಂಗ್ರೆಸ್ಸಿನ ಪ್ರತಿನಿಧಿಗಳ ಹೊಸ ಸರ್ಕಾರವನ್ನು ರಚಿಸುವ ಪ್ರಯತ್ನಗಳನ್ನು ಆ ಕಾಲದಲ್ಲಿ ಜರುಗುತ್ತಿದ್ದ ಯುದ್ಧದ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕು. ಪ್ರಾರಂಭದಲ್ಲಿ ಅಮೆರಿಕನ್ನರು ಅನುಭವಿಸಿದ ಸೋಲುಗಳು ಗೊಂದಲ ಪರಿಸ್ಥಿತಿಗಳಿಗೆ ಎಡೆ ಮಾಡಿಕೊಟ್ಟಿದ್ದವು. ಸಂಸ್ಥಾನಗಳ ನಡುವೆ ಜಗಳದಿಂದಾಗಿ ನ್ಯಾಯಬದ್ಧವಾದ ಕೇಂದ್ರಸರ್ಕಾರವನ್ನು ಸ್ಥಾಪಿಸುವ ಆಸೆ ಮಣ್ಣುಪಾಲಾಯಿತು. ದೊಡ್ಡ ಸಂಸ್ಥಾನಗಳು ಗಾತ್ರ ಮತ್ತು ಜನಸಂಖ್ಯೆಯನ್ನು ಕಡೆಗಣಿಸಿ, ಎಲ್ಲಾ ಸಂಸ್ಥಾನಗಳಿಗೂ ಸಮಾನ ಪ್ರಾತಿನಿಧ್ಯವನ್ನು ನೀಡುವುದಕ್ಕೆ ತಮ್ಮ ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಿದವು. ವಿಶಾಲ ಭೂಭಾಗಗಳನ್ನು ಹೊಂದಿದ ಸಂಸ್ಥಾನಗಳು ತಾವು ಉಪಯೋಗಿಸಿ ಉಳಿದ ಭಾಗಗಳನ್ನು ಕೇಂದ್ರಸರ್ಕಾರಕ್ಕೆ ಒಪ್ಪಿಸಲು ನಿರಾಕರಿಸಿದವು. ಹೀಗಾಗಿ ನವೆಂಬರ್ ೧೭೭೭ರವರೆಗೂ ಸಂಯುಕ್ತ ಸಂಸ್ಥಾನಗಳನ್ನು (Confederation of States) ರಚಿಸುವ ಕಾಯಿದೆಗಳನ್ನು ಸಂಸ್ಥಾನ ಸರ್ಕಾರಗಳಿಗೆ ಕಳುಹಿಸಿ ಅನುಮೋದನೆ ಪಡೆಯಲು ಆಗಲಿಲ್ಲ.

ರಾಜ್ಯಾಂಗ/ಸಂವಿಧಾನ ರಚನೆಯ ಜವಾಬ್ದಾರಿಯನ್ನಲ್ಲದೆ ಯುದ್ಧ ನಡೆಸಲು ಅಗತ್ಯವಾದ ಎಲ್ಲ ಕಾರ್ಯಕಾರಿ ಸಮಿತಿಯ ಜವಾಬ್ದಾರಿಗಳನ್ನು ಕಾಂಟಿನೆಂಟಲ್ ಕಾಂಗ್ರೆಸ್ ಹೊರಬೇಕಾಗಿ ಬಂತು. ಈ ಸಂಕೀರ್ಣ ಜವಾಬ್ದಾರಿಗಳನ್ನು ಅದು ನೂರಾರು ಕಮಿಟಿ/ಸಮಿತಿಗಳ ಮೂಲಕ ನೆರವೇರಿಸಿತು. ದಣಿವರಿಯದ ಜಾನ್ ಆ್ಯಡಮ್ಸ್ ಎಂಬತ್ತು ಕಮಿಟಿಗಳಲ್ಲಿ ಕೆಲಸ ಮಾಡುತ್ತಿದ್ದ. ಕಾಂಗ್ರೆಸ್, ಫ್ರಾನ್ಸ್ ಮತ್ತು ಇತರ ದೇಶಗಳೊಡನೆ ಫಲಪ್ರದವಾದ ರಾಯಭಾರ ನಡೆಸಿ, ಅಪಾರ ಮೊತ್ತದ ಹಣವನ್ನು ಸಾಲವಾಗಿ ಪಡೆಯಿತು. ಕಾಂಟಿನೆಂಟಲ್ ಹಣವನ್ನು ಜಾರಿಗೆ ತಂದಿತು, ಸಂಸ್ಥಾನಗಳಿಂದ ಹಣ ಮತ್ತು ತಮ್ಮ ಅಗತ್ಯ ಪೂರೈಸಿ ಮಿಕ್ಕಿದ ಆಹಾರ ಪದಾರ್ಥಗಳನ್ನು ಯುದ್ಧ ಕಾರ್ಯಾಚರಣೆಗೆ ಒದಗಿಸುವಂತೆ ಆದೇಶ ನೀಡಿತು. ಅಂಚೆ ಮತ್ತು ಸಾರಿಗೆ ವ್ಯವಸ್ಥೆಗಳು ಕ್ರಮವಾಗಿ ನಡೆಯುವಂತೆ ಮಾಡಿತು. ವಾಷಿಂಗ್‌ಟನ್‌ನ ವಶದಲ್ಲಿದ್ದ ಯುದ್ಧದ ಮೇಲ್ವಿಚಾರಣೆಯನ್ನು ನಡೆಸುತ್ತಿತ್ತು. ಕೇಂದ್ರ ಸರ್ಕಾರ ರಚನೆಗೆ ಅಡಚಣೆ ಉಂಟಾಗಿದ್ದು ಮುಖ್ಯವಾಗಿ ಹಿಂದೆಂದೂ ಅಂತ ಸರ್ಕಾರ ಇರದೆ ಹೋಗಿದ್ದು. ಅಮೆರಿಕನ್ ಕೇಂದ್ರ ಸರ್ಕಾರ ಎನ್ನುವುದು ಇರಲೇ ಇಲ್ಲ. ಇನ್ನೊಂದು ಅಡಚಣೆ ಎಂದರೆ ಮೇಲಿಂದ ಅಧಿಕಾರ ಚಲಾಯಿಸುವುದರ ಬಗ್ಗೆ ಅಮೆರಿಕನ್ನರಿಗಿದ್ದ ಸಂಶಯ. ಬ್ರಿಟಿಷರ ದಬ್ಬಾಳಿಕೆ ಸಂಸ್ಥಾನಗಳನ್ನು ಒಂದುಗೂಡಿಸಿದ್ದರೂ ಅದು ಅಧಿಕಾರ ಸಂಸ್ಥಾನಗಳ ಕೈಯಲ್ಲಿರಬೇಕೆಂಬ ನಂಬಿಕೆಯನ್ನು ಬಲಪಡಿಸಿತ್ತು. ಪಾರ್ಲಿಮೆಂಟ್ ತಮ್ಮನ್ನು ನಡೆಸಿಕೊಂಡ ರೀತಿಯನ್ನು ಜನರು ಮರೆತಿರಲಿಲ್ಲ. ಆದ್ದರಿಂದ ಅವರು ತೆರಿಗೆ ಹಾಕುವ ಹಕ್ಕನ್ನು ಕೇಂದ್ರ ಸರ್ಕಾರಕ್ಕೆ ಕೊಡಲು ನಿರಾಕರಿಸಿದರು.

ವಿಶಿಷ್ಟ ಅರ್ಥದಲ್ಲಿ ಅಮೆರಿಕದಲ್ಲಿ ನಿಜವಾದ ಕ್ರಾಂತಿ ಪ್ರತಿ ವಸಾಹತುವಿನಲ್ಲೂ ಪ್ರತ್ಯೇಕವಾಗಿ ಅಂಕುರವಾಗಿ ಸುಪ್ತವಾಗಿ ಬೆಳೆದು, ಸ್ವಾತಂತ್ರ್ಯಘೋಷಣೆಯಲ್ಲಿ ವ್ಯಕ್ತಗೊಂಡಿತು. ಕಾಂಟಿನೆಂಟಲ್ ಕಾಂಗ್ರೆಸ್ ಎಲ್ಲ ವಸಾಹತುಗಳ ಪರವಾಗಿ ಇಂಗ್ಲೆಂಡಿನ ಸಂಬಂಧವನ್ನು ಅಧಿಕೃತವಾಗಿ ಕೊನೆಗೊಳಿಸಲಿಲ್ಲ. ಪ್ರತಿ ವಸಾಹತು ಪ್ರತ್ಯೇಕವಾಗಿ ಇಂಗ್ಲೆಂಡಿನೊಡನೆ ತನ್ನ ಸಂಬಂಧವನ್ನು ಅಧಿಕೃತವಾಗಿ ಕಡಿದುಕೊಂಡಿತು. ವಸಾಹತು ಸ್ಥಾಪನೆಯ ಕರಾರುಪತ್ರಗಳನ್ನು ಆಧಾರವಾಗಿಟ್ಟುಕೊಂಡು ಸಂಸ್ಥಾನಗಳು ತಮ್ಮ ಸಂವಿಧಾನ/ರಾಜ್ಯಾಂಗಗಳನ್ನು ರಚಿಸಿಕೊಂಡವು. ಸಂಸ್ಥಾನ ಸರ್ಕಾರಗಳು ಹೆಚ್ಚುಕಡಿಮೆ ಒಂದೇ ರೀತಿಯಲ್ಲಿ ರಚನೆಗೊಂಡಿದ್ದವು. ಪ್ರತಿ ಸರ್ಕಾರದಲ್ಲಿ ಮೂರು ವಿಭಾಗಗಳನ್ನು ಸ್ಥಾಪಿಸಲಾಯಿತು – ಶಾಸಕಾಂಗ (Legislature), ಕಾರ್ಯಾಂಗ (Executive) ಮತ್ತು ನ್ಯಾಯಾಂಗ (Judiciary). ರಾಜ್ಯಪಾಲರ ಮತ್ತು ನ್ಯಾಯಾಧೀಶರ ಅಧಿಕಾರವನ್ನು ಸಾಧ್ಯವಾದಷ್ಟು ಕಡಿಮೆ ಮಾಡಲಾಯಿತು. ಸರ್ಕಾರದ ಅಧಿಕಾರ ಶಾಸಕಾಂಗದಲ್ಲಿ ಕೇಂದ್ರೀಕೃತವಾಗಿತ್ತು. ಶಾಸಕಾಂಗ ಪ್ರಜೆಗಳ ಹಿತಾಸಕ್ತಿಯನ್ನು ರಕ್ಷಿಸಲು ರಚಿತವಾದ ವ್ಯವಸ್ಥೆ. ಶಾಸಕಾಂಗದ ಸದಸ್ಯರು ಪ್ರಜಾಪ್ರತಿನಿಧಿಗಳು, ಪ್ರಜೆಗಳ ಅಭಿಲಾಷೆಯನ್ನು ಪೂರೈಸುವುದು ಅವರ ಕರ್ತವ್ಯ. ಸಂವಿಧಾನದಲ್ಲಿ ಹಕ್ಕುಗಳ ಕಾಯಿದೆಯನ್ನು (Bill of

Rights) ಸೇರಿಸಿದ್ದರು. ಈ ಕಾಯಿದೆಗಳು ಸರ್ಕಾರದ ಎಲ್ಲಾ ಶಾಖೆಗಳಲ್ಲಿ ಪ್ರಜೆಗಳನ್ನು ಅಧಿಕಾರ ದುರುಪಯೋಗದಿಂದ ರಕ್ಷಿಸುವ ಸಾಧನಗಳಾಗಿದ್ದವು.

ಎಲ್ಲ ಸಂಸ್ಥಾನಗಳ ಸರ್ಕಾರಗಳು ಬ್ರಿಟಿಷ್ ರಾಜಕೀಯ ವ್ಯವಸ್ಥೆಯ ಒಳ್ಳೆಯ ಅಂಶಗಳನ್ನು – ನಿಷ್ಪಕ್ಷಪಾತ ಮತ್ತು ಯುಕ್ತ ಕಾನೂನುಕ್ರಮ (Due process)ಗಳನ್ನು ಒಳಗೊಂಡಿದ್ದವು. ಇವುಗಳ ಜೊತೆಗೆ ಅಪೂರ್ವವಾದ ಅಮೆರಿಕನ್ ತತ್ವ 'ವ್ಯಕ್ತಿ ವೈಶಿಷ್ಟ್ಯ' ಮತ್ತು 'ಅಧಿಕಾರ ವಿಕೇಂದ್ರೀಕರಣ' (ಸರ್ಕಾರದಲ್ಲಾಗಲೀ ಅಥವಾ ವ್ಯಕ್ತಿಯಲ್ಲಾಗಲೀ ಹೆಚ್ಚು ಅಧಿಕಾರ ಹೆಚ್ಚು ಕಾಲ ಸೇರದಂತೆ ಜಾಗರೂಕರಾಗಿರುವ ಅವಶ್ಯಕತೆ) – ಈ ಲಕ್ಷಣಗಳನ್ನು ಕೂಡ. ಲಿಖಿತ ರಾಜ್ಯಾಂಗ/ ಸಂವಿಧಾನ ಶಾಸಕಾಂಗ ಮತ್ತು ಪ್ರಜೆಗಳ ನಡುವಣ ಕರಾರು ಅಥವಾ ಒಪ್ಪಂದ – ಅದು ಪ್ರಜಾಪ್ರತಿನಿಧಿಗಳ ಅಧಿಕಾರ ಮತ್ತು ಕರ್ತವ್ಯಗಳನ್ನು ಸ್ಪಷ್ಟಪಡಿಸುತ್ತದೆ. ಅಸ್ಪಷ್ಟವಾದ ಬ್ರಿಟಿಷರ ಅಲಿಖಿತ (unwritten) ರಾಜ್ಯಾಂಗ ವಾದ ವಿವಾದಗಳಿಗೆ ಎಡೆ ಮಾಡಿಕೊಟ್ಟಿತ್ತು. ಲಿಖಿತ ರಾಜ್ಯಾಂಗ ರಚನೆ ಕ್ರಾಂತಿಯ ಯುಗದ ಅಪೂರ್ವ ಕೊಡುಗೆ. ರಾಜಕೀಯ ವ್ಯವಸ್ಥೆ ಮತ್ತು ಅಧಿಕಾರ ನಿಗದಿಯಾದ ಕಾಲಕ್ಕೆ ನ್ಯಾಯಬದ್ಧವಾಗಿ ಮತ್ತು ವ್ಯವಸ್ಥಿತವಾದ ರೀತಿಯಲ್ಲಿ ಹಸ್ತಾಂತರ ಗೊಳ್ಳುವುದು ನಿಜವಾಗಿಯೂ ಒಂದು ಅದ್ಭುತ ಸಾಧನೆ. ಪ್ರಪಂಚದಾದ್ಯಂತ ಸ್ವಾತಂತ್ರ್ಯಕ್ಕಾಗಿ ಹೋರಾಡುವುದರಲ್ಲಿ ನಿರತವಾದ ದೇಶಗಳಿಗೆ ಈ ಸಾಧನೆ ದಾರಿದೀಪವಾಗಿದೆ.

ಅಮೆರಿಕನ್ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟ ಗುಲಾಮರಾಗಿ ನರಳುತ್ತಿದ್ದವರಿಗೆ ವ್ಯಕ್ತಿಸ್ವಾತಂತ್ರ್ಯ ಪಡೆಯಲು ನೇರವಾದ ದಾರಿ ತೋರಿತು. ಬ್ರಿಟಿಷ್ ಸೈನ್ಯವನ್ನು ಸೇರಿ ಯುದ್ಧದಲ್ಲಿ ಭಾಗವಹಿಸುವ ಗುಲಾಮರನ್ನು ಬಿಡುಗಡೆ ಮಾಡುವುದಾಗಿ ಬ್ರಿಟಿಷ್ ಸರ್ಕಾರ ಪ್ರಕಟಿಸಿತು. ಅಮೆರಿಕದ 'ದೇಶಪ್ರೇಮಿಗಳ ಸೈನ್ಯ' (The Partriot Army)ವನ್ನು ಸೇರಿಕೊಳ್ಳುವುದರ ಮೂಲಕ ಇನ್ನುಕೆಲವು ಗುಲಾಮರು ತಮ್ಮ ಸ್ವಾತಂತ್ರ್ಯವನ್ನು ಪಡೆದರು. ೧೭೭೮ರ ಒಂದು ವರದಿಯು ದೇಶಪ್ರೇಮಿಗಳ ಸೈನ್ಯದಲ್ಲಿ ಗುಲಾಮರು ೭೫೫ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿದ್ದರು ಎಂದು ತಿಳಿಸುತ್ತದೆ. ಇವರು ಅಮೆರಿಕನ್ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮೊದಲಿನಿಂದ ಕೊನೆಯವರೆವಿಗೂ ವೀರಾವೇಶದಿಂದ ಹೋರಾಡಿದರು. ಸಂಸ್ಥಾನ ಸರ್ಕಾರಗಳಲ್ಲಿ ಆದ ಬದಲಾವಣೆಗಳಿಂದ ಗುಲಾಮರ ಸ್ಥಿತಿಗತಿಗಳಲ್ಲಿ ಅನುಕೂಲಕರವಾದ ಬದಲಾವಣೆಗಳು ಅನುಷ್ಠಾನಕ್ಕೆ ಬಂದವು. ೧೭೮೦ರಲ್ಲಿ ಪೆನ್ಸಿಲ್‌ವೇನಿಯ ಸಂಸ್ಥಾನ ಗುಲಾಮರ ಬಿಡುಗಡೆ ಕಾಯಿದೆಗಳನ್ನು ಜಾರಿಗೆ ತಂದಿತು. ಅದನ್ನು ಅನುಸರಿಸಿ ಉಳಿದ ಸಂಸ್ಥಾನಗಳಲ್ಲೂ ಕ್ರಮೇಣವಾಗಿ ಗುಲಾಮರ ಬಿಡುಗಡೆಯ ಪ್ರಕ್ರಿಯೆ ಪ್ರಾರಂಭವಾಯಿತು. ಒಂದು ನಿರ್ದಿಷ್ಟವಾದ ತಾರೀಖಿನಿಂದ ನಂತರ ಹುಟ್ಟಿದ ಗುಲಾಮರಿಗೆ ಅವರು ಪ್ರೌಢಾವಸ್ಥೆ ತಲುಪಿದಾಗ ಬಿಡುಗಡೆ ಹೊಂದುವಂತೆ ವ್ಯವಸ್ಥೆ ಮಾಡಲಾಯಿತು. ಅಮೆರಿಕನ್ ಕ್ರಾಂತಿ ಪ್ರಾರಂಭವಾದ ಮೇಲೆ ಎಲ್ಲ ಸಂಸ್ಥಾನಗಳಲ್ಲೂ (ಜಾರ್ಜಿಯ ಮತ್ತು ದಕ್ಷಿಣ ಕೆರೊಲಿನಗಳನ್ನು ಬಿಟ್ಟು) ಗುಲಾಮರನ್ನು ಆಮದು

ಮಾಡಿಕೊಳ್ಳುವುದನ್ನು ನಿಷೇಧಿಸಲಾಯಿತು. ಈ ಪ್ರಗತಿಗಳು ಗುಲಾಮಗಿರಿ ಶೀಘ್ರವಾಗಿ ನಶಿಸುವುದೆಂಬ ಆಸೆ ಹುಟ್ಟಿಸಿದವು. ಆದರೆ ಹಾಗಾಗಲಿಲ್ಲ. ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಬುಡಮೇಲು ಮಾಡುವಂತಹ ಬದಲಾವಣೆಗಳೇನೂ ಆಗಲಿಲ್ಲ. ಜೆಫರ್ಸನ್ ಪ್ರಜಾಪ್ರಭುತ್ವದಲ್ಲಿ ಗಾಢವಾದ ನಂಬಿಕೆ ಉಳ್ಳವನು. ಆದರೆ ಅವನು ದೊಡ್ಡ ಆಸ್ತಿವಂತ ಮತ್ತು ಹಲವು ಗುಲಾಮರ ಮಾಲಿಕನಾಗಿದ್ದನು. ಇದು ಆಗಿನ ಪರಿಸ್ಥಿತಿಯನ್ನು ಸೂಚಿಸುತ್ತದೆ. ಅವನು ಕ್ರಾಂತಿಕಾರಕ ಸಾಮಾಜಿಕ ಬದಲಾವಣೆಗಳನ್ನು ಸೂಚಿಸಲಿಲ್ಲ. ರಾಜ್ಯಾಂಗವನ್ನು ರಚಿಸಿದವರು ಹೊಸಪ್ರಪಂಚವನ್ನು, ಉತ್ತಮ ಪರಿಸ್ಥಿತಿಗಳನ್ನು ಸೃಷ್ಟಿಸಲು ಪ್ರಯತ್ನಿಸಿದರೇ ಹೊರತು, ಮೇಲ್ವರ್ಗದವರ ಸಂಪತ್ತು, ಸೌಲಭ್ಯ, ಸವಲತ್ತುಗಳನ್ನು ಕಿತ್ತು ಹಾಕುವುದು ಅವರ ಉದ್ದೇಶವಾಗಿರಲಿಲ್ಲ. ಭೂಮಿಗೆ ಸಂಬಂಧಪಟ್ಟಂತೆ, ತೆರಿಗೆಗೆ ಸಂಬಂಧಪಟ್ಟಂತೆ ಘರ್ಷಣೆಗಳು ನಡೆಯುತ್ತಲೇ ಇದ್ದವು. ಆದರೆ ಯಾವ ವಿಶಿಷ್ಟ ವರ್ಗ ಅಥವಾ ಹಿತಾಸಕ್ತಿಯಾಗಲಿ ಸರ್ಕಾರವನ್ನಾಗಲಿ, ಪ್ರಾಂತಸಭೆಗಳನ್ನಾಗಲಿ ತಮ್ಮ ಪ್ರಭಾವಕ್ಕೆ ಸಂಪೂರ್ಣವಾಗಿ ಅಧೀನಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಕೆಲವು ಸಮಯ ಸಂಸ್ಥಾನ ಶಾಸಕಾಂಗ ವಿಶೇಷ ಚುನಾವಣೆಯನ್ನು ಏರ್ಪಡಿಸಿ, ಚುನಾಯಿತ ಸದಸ್ಯರನ್ನು, ರಾಜ್ಯಾಂಗದಲ್ಲಿ ನ್ಯೂನತೆಗಳಿದ್ದರೆ ಅವುಗಳನ್ನು ಸರಿಪಡಿಸಿ ಹೊಸ ಪ್ರಣಾಳಿಕೆಗಳನ್ನು ರಚಿಸಲು ಕರೆದ ಅಧಿವೇಶನಗಳಿಗೆ (conventions) ಕಳುಹಿಸಲಾಗುತ್ತಿತ್ತು. ಇದು ರಾಜ್ಯಾಂಗ/ಸಂವಿಧಾನ ಪ್ರಜೆಗಳ ಮತ್ತು ಅವರ ನಾಯಕರ ನಡುವಣ ಒಪ್ಪಂದ ಎನ್ನುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಬ್ರಿಟಿಷರ ವಿಫಲ ಯೋಜನೆಗಳು

ಏಪ್ರಿಲ್ ೧೭೭೭ರಲ್ಲಿ ವಾಷಿಂಗ್‌ಟನ್ ಕೈಕೆಳಗೆ ೫೦೦೦ಕ್ಕಿಂತಲೂ ಕಡಿಮೆ ಸೈನಿಕರಿದ್ದರು. ಬ್ರಿಟಿಷರು ಜಯಗಳಿಸಲು ಭಾರೀ ಯೋಜನೆಗಳನ್ನು ಕೈಗೊಂಡಿದ್ದರು. ಒಂದು ಯೋಜನೆಯ ಪ್ರಕಾರ ಜನರಲ್ ಬ್ರುಗೋಯನ್ (Burgoyne)ನು ಒಂದು ದೊಡ್ಡ ಸೈನ್ಯದೊಡನೆ ಕೆನಡಾದಿಂದ ಚಾಂಪ್ಲೇನ್ (Champlain) ಸರೋವರಮಾರ್ಗವಾಗಿ ಆಲ್ಬನಿ (Albany) ತಲುಪುವುದು, ಅದೇ ಸಮಯದಲ್ಲಿ ಲೆಫ್ಟಿನೆಂಟ್ ಕರ್ನಲ್ ಬ್ಯಾರಿ ಸೆಂಟ್ ಲೆಜರ್(Barry St. Leger) ತನ್ನ ಸೈನ್ಯದೊಡನೆ ಆನ್‌ಟೇರಿಯೊ (Ontario) ಸರೋವರದ ಸಮೀಪದ ಆಸ್‌ವೇಗೊ ಕೋಟೆ (Fort Oswego)ಯಿಂದ ಪೂರ್ವಮುಖವಾಗಿ ಹೊರಟು ಆಲ್ಬನಿ ಕಡೆಗೆ ಬರುವುದು. ಇವರನ್ನು ಕೂಡಿಕೊಳ್ಳಲು ಮೂರನೆಯ ಸೈನ್ಯ ಜನರಲ್ ಹಾವಿಯ ಸೈನ್ಯಾಧಿಪತ್ಯದಲ್ಲಿ ಹಡ್ಸನ್ ನದಿ ಮೂಲಕ ಉತ್ತರದಿಕ್ಕಿಗೆ ನಡೆದು ಮೇಲೆ ತಿಳಿಸಿದ ಎರಡು ಸೈನ್ಯಗಳನ್ನು ಸೇರಿಕೊಳ್ಳುವುದು. ನ್ಯೂ ಇಂಗ್ಲೆಂಡ್ ಪ್ರಾಂತವನ್ನು ಪ್ರತ್ಯೇಕಗೊಳಿಸಿ, ದೇಶಪ್ರೇಮಿಗಳ ಸೈನ್ಯವನ್ನು ಈ ಮೂರು ಸೈನ್ಯಗಳು ಒಟ್ಟಾಗಿ ಸೇರಿ ತುಂಡರಿಸುವುದು ಇವರ ಯೋಜನೆಯ ಗುರಿಯಾಗಿತ್ತು.

ಈ ಮೂರು ಸೈನ್ಯಗಳ ಜಂಟಿ ಕಾರ್ಯಾಚರಣೆ ಹುರುಪಿನಿಂದ ಪ್ರಾರಂಭವಾಗಿ ಮಹಾ ಪ್ರಮಾದದಲ್ಲಿ ಕೊನೆಗೊಂಡಿತು. ಬ್ರುಗೋಯನ್ ಸೈನ್ಯ ಟೈಕಾಂಡರೋಗ (Ticonderoga) ಕೋಟೆಯನ್ನು ವಶಪಡಿಸಿಕೊಂಡು, ನಂತರ ಮುಂದುವರಿದು ಜಾರ್ಜ್ ಸರೋವರದ ಆಚೆಯ ಪ್ರದೇಶವನ್ನು ಸೇರಿತು. ಅಲ್ಲಿಂದ ಆಚೆ ಸೈನ್ಯದ ಚಲನೆ ಸ್ಥಗಿತಗೊಂಡಿತು. ಅಗಾಧ ಪ್ರಮಾಣದ ಸಾಮಾನು ಸರಂಜಾಮುಗಳನ್ನು, ಭಾರವಾದ ಶಸ್ತ್ರಾಸ್ತ್ರಗಳು – ೫೩ಕ್ಕೂ ಹೆಚ್ಚು ದೊಡ್ಡ ಫಿರಂಗಿಗಳು – ಇವನ್ನೆಲ್ಲ ಉತ್ತರ ಸಾರಟೋಗದ ದಟ್ಟವಾದ ಅರಣ್ಯದ ಮೂಲಕ ಸಾಗಿಸುವುದು ಅತಿ ಪ್ರಯಾಸಕರವಾಗಿತ್ತು. ಅಮೇರಿಕನ್ ದೇಶಪ್ರೇಮಿ ಹೋರಾಟಗಾರರು ಬರುವ ದಾರಿಯುದ್ದಕ್ಕೂ ದೊಡ್ಡ ಮರಗಳನ್ನು ಕಡಿದು ಸೈನ್ಯ ಅಡ್ಡಹಾಕಿ ಸೈನ್ಯ ಬೇಗನೆ ಮುಂದುವರಿಯದಂತೆ ಮಾಡಿದರು. ಆ ಸಮಯದಲ್ಲಿ ನ್ಯೂಜರ್ಸಿಯಲ್ಲಿ ಜನರಲ್ ಹಾವಿ ವಾಷಿಂಗ್‌ಟನ್‌ನನ್ನು ಅವನ ಸೈನ್ಯ ಸಮೇತ ಹಿಡಿಯಲು ಪ್ರಯತ್ನಿಸುತ್ತ ಕಾಲಹರಣ ಮಾಡಿದನು. ನಂತರ ಜುಲೈ ೨೩ರಂದು ನ್ಯೂಯಾರ್ಕಿನಿಂದ ತನ್ನ ಸೈನ್ಯದ ಹೆಚ್ಚು ಭಾಗದೊಂದಿಗೆ ಫಿಲಡೆಲ್ಫಿಯ ನಗರದ ಮೇಲೆ ದಾಳಿ ಮಾಡಲು ಹೊರಟನು. ಅವನು ಬಿಟ್ಟುಹೋದ ಒಂದು ಸೈನ್ಯದ ತುಕಡಿ ಮಾತ್ರ ಜನರಲ್ ಹೆನ್ರಿ ಕ್ಲಿನ್‌ಟನ್ ಕೈಕೆಳಗೆ ಬ್ರುಗೋಯನ್‌ನ ಸೈನ್ಯಕ್ಕೆ ಸಹಾಯನೀಡಲು ನ್ಯೂಯಾರ್ಕಿನಲ್ಲಿ ಉಳಿದುಕೊಂಡಿತು.

ಸೇಂಟ್ ಲೆಜರ್‌ನ ಸೈನ್ಯ ಜುಲೈ ೨೬ರವರೆಗೂ ಆಸ್‌ವೇಗೋ ಕೋಟೆಯನ್ನು ಬಿಟ್ಟು ಹೊರಡಲಿಲ್ಲ. ಆನಂತರ ಹೊರಟ ಅವನ ಸೈನ್ಯವೂ ಸ್ಟಾನ್‌ವಿಕ್ಸ್(Stanwix) ಕೋಟೆಯ ಬಳಿ ಮುಂದುವರಿಯಲು ಅಡೆ ತಡೆಗಳನ್ನು ಎದುರಿಸಬೇಕಾಯಿತು. ಸೇಂಟ್ ಲೆಜರ್ ಸ್ಟಾನ್‌ವಿಕ್ಸ್ ಕೋಟೆಗೆ ಮುತ್ತಿಗೆ ಹಾಕಿದನು. ಆಗ ಜನರಲ್ ಬೆನೆಡಿಕ್ಟ್ ಆರ್ನಾಲ್ಡ್ ತನ್ನ ಸೈನ್ಯದೊಡನೆ ಬಂದು ಲೆಜರ್‌ನನ್ನು ಸೋಲಿಸಿ ಆಸ್‌ವೇಗೊ ಕೋಟೆಗೆ ಹಿಮ್ಮೆಟ್ಟು ವಂತೆ ಮಾಡಿದನು. ಈ ರೀತಿಯಲ್ಲಿ ಬ್ರಿಟಿಷರ ಮಹಾ ಯೋಜನೆ ಮುರಿದುಬಿದ್ದಿತು. ಅಮೇರಿಕನ್ ಹೋರಾಟಗಾರರು ಆಲ್ಬನಿ ನಗರದ ಉತ್ತರದಲ್ಲಿ ಒಟ್ಟಾಗತೊಡಗಿದರು. ಬ್ರುಗೋಯನ್ ತಾನು ಅಪಾಯ ಪರಿಸ್ಥಿತಿಯಲ್ಲಿದ್ದೇನೆ ಎನ್ನುವುದನ್ನು ಅರಿತೂ ಅಸಡ್ಡೆ ಮಾಡಿದನು. ಜನರಲ್ ಹಾವಿ ಫಿಲಡೆಲ್ಫಿಯ ನಗರದ ಮೇಲೆ ದಾಳಿ ಮಾಡಲು ಮುಂದುವರಿದಾಗ ವಾಷಿಂಗ್‌ಟನ್ ತನ್ನ ಸೈನ್ಯದೊಡನೆ ಅವನನ್ನು ಎದುರಿಸಿದನು. ಸೆಪ್ಟೆಂಬರ್ ೧೧ರಂದು ನಡೆದ ಬ್ರ್ಯಾಂಡಿ ವೈನ್ (Brandy Wine) ಕದನದಲ್ಲಿ ವಾಷಿಂಗ್‌ಟನ್ ಸೋತುಹೋದನು. ಜನರಲ್ ಹಾವಿ ಫಿಲಡೆಲ್ಫಿಯ ನಗರವನ್ನು ಪ್ರವೇಶಿಸಿದನು. ಆದರೆ ಅವನಿಗೆ ವಾಷಿಂಗ್‌ಟನ್‌ನ ಸೈನ್ಯವನ್ನು ಸಂಪೂರ್ಣವಾಗಿ ನಾಶ ಮಾಡಲು ಆಗಲಿಲ್ಲ. ಅಳಿದುಳಿದ ಸೈನ್ಯ ಮತ್ತೆ ಅಕ್ಟೋಬರ್ ತಿಂಗಳಲ್ಲಿ ಜರ್ಮನ್ ಟೌನ್ (German Town) ಎಂಬಲ್ಲಿ ಹಾವಿಯ ಸೈನ್ಯದ ಮೇಲೆ ದಾಳಿ ಮಾಡಿತು. ವಾಷಿಂಗ್‌ಟನ್ ಮತ್ತೆ ಸೋತು ಹಿಮ್ಮೆಟ್ಟಿದನು.

ಜನರಲ್ ಬ್ರುಗೋಯನ್‌ನ ಸೈನ್ಯವನ್ನು ಹೊರೆಷಿಯೋ ಗೇಟ್ಸ್ (Horatio Gates) ಮತ್ತು ಬೆನೆಡಿಕ್ಟ್ ಆರ್ನಾಲ್ಡ್ (Benedict Arnold) ತಮ್ಮ ಸೈನ್ಯಗಳೊಡನೆ ಸಾರಟೋಗದ ದಕ್ಷಿಣದಲ್ಲಿ ಸ್ಟಿಲ್‌ವಾಟರ್ (Stillwater) ಊರಿನ ಬಳಿ ತಡೆದು ನಿಲ್ಲಿಸಿದರು. ಬ್ರುಗೋಯನ್ ಈ ದಿಗ್ಬಂಧನವನ್ನು ಮುರಿಯಲು ಎರಡು ಬಾರಿ ಪ್ರಯತ್ನಿಸಿ ವಿಫಲ ನಾದನು. ಅವನ ಸಹಾಯಕ್ಕೆ ನ್ಯೂಯಾರ್ಕಿನಿಂದ ಹೊರಟ ಜನರಲ್ ಕ್ಲಿನ್‌ಟನ್‌ನ ಸೈನ್ಯ ಸಾರಟೋಗಕ್ಕೆ ೮೦ ಮೈಲಿ ದೂರದ ಕಿಂಗ್‌ಸ್ಟನ್ (Kingston)ಊರನ್ನು ತಲುಪಿತು. ಅಲ್ಲಿ ಇನ್ನೂ ಹೆಚ್ಚಿನ ಸೈನ್ಯ ಬಲ ಬೇಕಾಗಿರುವ ಅಗತ್ಯವನ್ನು ತಿಳಿದು, ಜನರಲ್ ಕ್ಲಿನ್‌ಟನ್ ದೊಡ್ಡ ಸೈನ್ಯವನ್ನು ಕೂಡಿಸಿಕೊಂಡು ಬರುವ ಸಲುವಾಗಿ ನ್ಯೂಯಾರ್ಕಿಗೆ ಹಿಂತಿರುಗಿದನು. ಜನರಲ್ ಕ್ಲಿನ್‌ಟನ್ ವಾಪಸಾದ ಮಾರನೆಯ ದಿನವೇ ಸಾರಟೋಗದಲ್ಲಿ ಜನರಲ್ ಬ್ರುಗೋಯನ್ ಶರಣಾಗತನಾದನು. ಸುಮಾರು ೫೭೦೦ ಬ್ರಿಟಿಷ್ ಸೈನಿಕರನ್ನು ಸೆರೆಹಿಡಿದು ವರ್ಜೀನಿಯ ಸಂಸ್ಥಾನಕ್ಕೆ ರವಾನಿಸಲಾಯಿತು. ಈ ಅದ್ಭುತ ದಿಗ್ವಿಜಯದ ಸುದ್ದಿ ಫ್ರಾನ್ಸ್ ದೇಶಕ್ಕೆ ಮುಟ್ಟಿದೊಡನೆ ರಾಜ ಲೂಯಿ XVI (Louis XVI) ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನು ಸ್ವತಂತ್ರ ರಾಷ್ಟ್ರವೆಂದು ಅಂಗೀಕರಿಸಿದನು!

ಬ್ರಿಟಿಷ್ ಪಡೆಗಳ ಶರಣಾಗತಿಯ ಸುದ್ದಿ ಇಂಗ್ಲೆಂಡ್ ತಲುಪಿದಾಗ ಪ್ರಧಾನಮಂತ್ರಿ ಲಾರ್ಡ್ ನಾರ್ತ್, ಫ್ರೆಂಚ್ ಮತ್ತು ಅಮೆರಿಕ ಬ್ರಿಟಿಷರ ವಿರುದ್ಧ ಒಟ್ಟಾಗುವುದನ್ನು ತಪ್ಪಿಸಲು ೧೭೬೫ರಿಂದ ಜಾರಿಗೆ ತಂದ – ವಸಾಹತುಗಳಿಗೆ ಸಂಬಂಧಿಸಿದ ಎಲ್ಲಾ ಕಾಯಿದೆಗಳನ್ನು ರದ್ದುಗೊಳಿಸಿದನು. ಪಾರ್ಲಿಮೆಂಟ್ ಇನ್ನು ಮುಂದೆ ವಸಾಹತುಗಳ ಮೇಲೆ ಯಾವ ತೆರಿಗೆಯನ್ನು ವಿಧಿಸುವುದಿಲ್ಲ ಎಂದು ಭರವಸೆ ನೀಡುವ ಹೇಳಿಕೆಯನ್ನು ಪಾರ್ಲಿಮೆಂಟಿನಲ್ಲಿ ಅನುಮೋದಿಸಲಾಯಿತು. ಆದರೆ ಪಾರ್ಲಿಮೆಂಟ್ ಈ ಬದಲಾವಣೆ ಗಳನ್ನು ಕೂಡಲೆ ಜಾರಿಗೆ ತರಲಿಲ್ಲ. ಇಂಗ್ಲೆಂಡಿನ ಶಾಂತಿ ಸಮಿತಿ ಫಿಲಡೆಲ್ಫಿಯಾಕ್ಕೆ ಬಂದಿದ್ದು ಜೂನ್ ೧೭೭೮ರಲ್ಲಿ. ಅಷ್ಟರಲ್ಲಿ ಕಾಂಗ್ರೆಸ್ ಫ್ರೆಂಚ್ ಕರಾರನ್ನು ಒಪ್ಪಿಕೊಂಡಾ ಗಿತ್ತು! ಬ್ರಿಟಿಷರ ಸಂಧಾನ ಸಲಹೆಗಳನ್ನು ತಿರಸ್ಕರಿಸಲಾಯಿತು. ಬ್ರಿಟಿಷ್ ಪ್ರತಿನಿಧಿಗಳು ಫಿಲಡೆಲ್ಫಿಯದಲ್ಲಿರುವಾಗಲೆ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳ ನಡುವೆ ಯುದ್ಧ ಪ್ರಾರಂಭ ವಾಯಿತು!

ಇಷ್ಟೆಲ್ಲ ಸಂಗತಿಗಳು ಜರುಗಿದರೂ ಅಮೆರಿಕ ಕ್ರಾಂತಿ ಪೂರ್ಣಗೊಳ್ಳಲಿಲ್ಲ. ಜರ್ಮನ್ ಟೌನ್ ಕದನಾನಂತರ ಚಳಿಗಾಲ ಕಳೆಯಲು ವಾಷಿಂಗ್‌ಟನ್ ತನ್ನ ಸೈನ್ಯವನ್ನು ಫಿಲಡೆಲ್ಫಿಯಕ್ಕೆ ೨೦ ಮೈಲಿ ದೂರದಲ್ಲಿರುವ ಫೋರ್ಜ್ ಕಣಿವೆ (Valley Forge)ಯಲ್ಲಿ ಬೀಡು ಬಿಡುವಂತೆ ವ್ಯವಸ್ಥೆ ಮಾಡಿದ್ದನು. ಅವನು ಆರಿಸಿದ ಸ್ಥಳ ಅನುಕೂಲವಾಗಿರಲಿಲ್ಲ. ಸರಬರಾಜು ವ್ಯವಸ್ಥೆ ಮುರಿದುಬಿದ್ದಿತ್ತು. ಸಾವಿರಾರು ಜನ ತಾವು ಸೈನ್ಯವಲ್ಲಿರಲು ಅರ್ಹರಲ್ಲ ಎಂದು ಬಿಡುಗಡೆ ಯಾಚಿಸಿದರು. ಸೈನ್ಯ ಬಿಡಲು ಮುಖ್ಯ ಕಾರಣ ಷೂ ಇಲ್ಲದಿರುವುದು! ಸದಾ ಹಿಮ ಬಿದ್ದು ಹೆಪ್ಪುಗಟ್ಟಿ ಕೈಕಾಲುಗಳಲ್ಲಿ ರಕ್ತಸಂಚಲನೆ

ನಿಲ್ಲಿಸುವಂಥ ಚಳಿಯಲ್ಲಿ ಕಾಲಿಗೆ 'ಷೂ' ಇಲ್ಲದೆ ಇರುವ ನರಕಯಾತನೆ ಊಹಿಸಲೂ ಸಾಧ್ಯವಿಲ್ಲ. ತಿಂಗಳಾನುಗಟ್ಟಲೆ ಎಲ್ಲರಿಗೂ ಮಿತಾಹಾರ (short ration)! ಕಾಂಗ್ರೆಸ್‌ನಲ್ಲಿ ಕೆಲವು ಸದಸ್ಯರು ವಾಷಿಂಗ್‌ಟನ್ ಮೇಲೆ ದೂರು ಹೇಳಲು ಪ್ರಾರಂಭಿಸಿದರು. ಅವನು ಕದನಗಳಲ್ಲಿ ಜಯ ಗಳಿಸದೆ ಹೋಗಿದ್ದು ಅವನ ಅರ್ಹತೆಯ ಬಗ್ಗೆಯೇ ಸದಸ್ಯರು ಅನುಮಾನ ಪಡಲು ಕಾರಣವಾಯಿತು. ವಾಷಿಂಗ್‌ಟನ್‌ನನ್ನು ತೆಗೆದುಹಾಕಿ ಸಾರಟೋಗ ದಲ್ಲಿ ದಿಗ್ವಿಜಯ ಸಾಧಿಸಿದ ಗೇಟ್ಸ್‌ನನ್ನು ಮಹಾದಂಡನಾಯಕನನ್ನಾಗಿ ಯಾಕೆ ನೇಮಿಸ ಬಾರದೆಂದು ಪ್ರಶ್ನಿಸಿದರು. ಚಳಿಗಾಲ ಮುಂದುವರಿದಂತೆಲ್ಲ ಕಾಂಟಿನೆಂಟಲ್ ಸೈನ್ಯ ಕರಗುತ್ತ ಬಂತು. ಕೆಲವು ಸೈನಿಕರು ತಮ್ಮ ಮನೆಗಳಿಗೆ ಹಿಂತಿರುಗಿದರು. ಸುಮಾರು ೨೦೦೦ ಸೈನಿಕರು ಹರಕು ಬಟ್ಟೆ ಮತ್ತು ಚಳಿಗೆ ಮರಗಟ್ಟಿದ್ದ ಕೈಕಾಲುಗಳನ್ನು ಎಳೆದುಕೊಂಡು ಹೋಗಿ ಫಿಲಡೆಲ್ಫಿಯದಲ್ಲಿ ಬ್ರಿಟಿಷ್ ಸೈನ್ಯವನ್ನು ಸೇರಲು ಪ್ರಯತ್ನಿಸಿದರು. ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಜನರಲ್ ಹಾವಿ ಅಮೆರಿಕನ್ನರನ್ನು ಸುಲಭವಾಗಿ ಸೋಲಿಸಬಹುದಿತ್ತು. ಆದರೆ ಅವನು ಯಾವ ಸೈನ್ಯ ಕಾರ್ಯಾಚರಣೆಯನ್ನು ಮಾಡಲಿಲ್ಲ. ೧೭೭೮ರ ಮೇ ತಿಂಗಳಲ್ಲಿ ಜನರಲ್ ಹಾವಿಯ ಜಾಗಕ್ಕೆ ಜನರಲ್ ಕ್ಲಿನ್‌ಟನ್‌ನನ್ನು ನೇಮಿಸಲಾಯಿತು.

ಜನರಲ್ ಕ್ಲಿನ್‌ಟನ್ ಮಹಾದಂಡನಾಯಕನಾದ ಮೇಲೆ ಬ್ರಿಟಿಷರ ಯುದ್ಧಕೌಶಲದಲ್ಲಿ ಅತಿ ಮುಖ್ಯ ಬದಲಾವಣೆಗಳಾದವು. ಬ್ರಿಟಿಷರು ಉತ್ತರ ಸಂಸ್ಥಾನಗಳಲ್ಲಿ ಯುದ್ಧ ಮಾಡುವುದನ್ನು ನಿಲ್ಲಿಸಿ, ಬಹಳ ಹೆಚ್ಚು ಸಂಖ್ಯೆ ರಾಜನಿಷ್ಠರಿದ್ದ ದಕ್ಷಿಣ ಕೆರೊಲಿನ ಮತ್ತು ಜಾರ್ಜಿಯ ಸಂಸ್ಥಾನಗಳನ್ನು ತಮ್ಮ ಕಾರ್ಯಾಚರಣೆಯ ಕ್ಷೇತ್ರಗಳನ್ನಾಗಿ ಮಾಡಿಕೊಂಡರು. ೧೭೭೮ರಲ್ಲಿ ಬ್ರಿಟಿಷರು ಸವನ್ನಾ (Savannah)ವನ್ನು, ೧೭೭೯ರಲ್ಲಿ ಜಾರ್ಜಿಯಾದ ಬಹುಭಾಗಗಳನ್ನು ಬ್ರಿಟಿಷರು ವಶಪಡಿಸಿಕೊಂಡರು. ೧೭೮೦ರಲ್ಲಿ ಜನರಲ್ ಕ್ಲಿನ್‌ಟನ್ ಸ್ವತಃ ದೊಡ್ಡ ಸೈನ್ಯದೊಡನೆ ಚಾರ್ಲ್ಸ್‌ಟನ್ ನಗರವನ್ನು ಮುತ್ತಿದನು. ೧೭೮೦ರ ಮೇ ತಿಂಗಳಲ್ಲಿ ಚಾರ್ಲ್ಸ್‌ಟನ್ ನಗರ ಶರಣಾಗತವಾದಾಗ ೫೦೦೦ ಅಮೆರಿಕನ್ ಸೈನಿಕರನ್ನು ಸೆರೆ ಹಿಡಿಯಲಾಯಿತು. ಇದು ಅಮೆರಿಕನ್ನರು ಅನುಭವಿಸಿದ ಅತಿ ದೊಡ್ಡ ಪರಾಭವ. ಈ ವಿಜಯ ಸಾಧಿಸಿದ ಮೇಲೆ ಜನರಲ್ ಕ್ಲಿನ್‌ಟನ್ ಜನರಲ್ ಕಾರ್ನ್‌ವಾಲಿಸ್ (Cornwallis)ನ ಕೈಕೆಳಗೆ ೮೦೦೦ ಸೈನಿಕರನ್ನು ಬಿಟ್ಟು ಬ್ರಿಟಿಷ್ ಸೈನ್ಯದ ಆಡಳಿತ ಕೇಂದ್ರವಾದ ನ್ಯೂಯಾರ್ಕಿಗೆ ಹಿಂತಿರುಗುದನು.

೧೭೮೦ರಲ್ಲಿ ಕಾಂಗ್ರೆಸ್ ಜನರಲ್ ಗೇಟ್ಸ್‌ನನ್ನು ದಕ್ಷಿಣ ಸೈನ್ಯಗಳ ಸೇನಾಧಿಪತಿಯನ್ನಾಗಿ ನೇಮಿಸಿತು. ಜನರಲ್ ಗೇಟ್ಸ್‌ನು ತನ್ನ ಸೈನ್ಯವನ್ನು ದಕ್ಷಿಣ ದಿಕ್ಕಿಗೆ ನಡೆಸಿಕೊಂಡು ಹೋಗಿ ಕೆರೊಲಿನ ಪ್ರಾಂತದ ಕ್ಯಾಮ್‌ಡನ್ (Camden)ನಲ್ಲಿ ಕಾರ್ನ್‌ವಾಲಿಸನ ಸೈನ್ಯವನ್ನು ಎದುರಿಸಿದನು. ಕಾರ್ನ್‌ವಾಲಿಸ್ ತನ್ನ ಚತುರ ಸೈನ್ಯ ಕಾರ್ಯಾಚರಣೆಯಿಂದ ಗೇಟ್ಸ್‌ನ

ಸೈನ್ಯವನ್ನು ಸೋಲಿಸಿ ಹಿಮ್ಮೆಟ್ಟಿಸಿದನು. ಇದಾದ ನಂತರ ಕಾಂಗ್ರೆಸ್ ಗೇಟ್ಸ್‌ನನ್ನು ವಾಪಸು ಕರೆಸಿಕೊಂಡು ನಥಾನಿಯಲ್ ಗ್ರೀನ್ (Nathaneal Greene)ನನ್ನು ಸೇನಾಧಿಪತಿಯನ್ನಾಗಿ ನೇಮಿಸಲು ಅನುಮತಿ ನೀಡಿತು. ಜನರಲ್ ಗ್ರೀನ್ ಕಾರ್ನ್‌ವಾಲಿಸನ ಸೈನ್ಯದ ಮೇಲೆ ನೇರವಾಗಿ ದಾಳಿ ನಡೆಸದೆ, ತನ್ನ ಸೈನ್ಯವನ್ನು ಹಲವು ಭಾಗಗಳಾಗಿ ವಿಂಗಡಿಸಿ, ಈ ತುಕಡಿಗಳು ಕಾರ್ನ್‌ವಾಲಿಸನ್ ಸೈನ್ಯದ ಮೇಲೆ ಅನೇಕ ಕಡೆಗಳಿಂದ ದಾಳಿ ಮಾಡಿದನು. ಜನವರಿ ೧೭೮೧ರಲ್ಲಿ ದಕ್ಷಿಣ ಕೆರೊಲಿನ ಕೌಪೆನ್ಸ್(Cowpens) ಎನ್ನುವ ಸ್ಥಳದಲ್ಲಿ ಜನರಲ್ ಡೇನಿಯಲ್ ಮಾರ್ಗನ್ (Daniel Morgan)ನ ಕೈಕೆಳಗಿನ ಅಮೆರಿಕನ್ ಸೈನ್ಯದ ತುಕಡಿ ಕಾರ್ನ್‌ವಾಲಿಸ್‌ನ ದಕ್ಷ ದಳಪತಿಗಳಲ್ಲಿ ಒಬ್ಬನಾದ ಬೆನಾಸ್ಟ್ರೆ ಟಾರ್ಲ್‌ಟನ್ (Banastre Tarleton)ನ ಸೈನ್ಯದ ಮೇಲೆ ದಾಳಿ ನಡೆಸಿ ಅಪಾರವಾದ ಸೋಲನ್ನು ಅನುಭವಿಸುವಂತೆ ಮಾಡಿತು. ಕಾರ್ನ್‌ವಾಲಿಸ್‌ನು ತನ್ನ ದೊಡ್ಡ ಸೈನ್ಯದೊಡನೆ ಜನರಲ್ ಮಾರ್ಗನ್‌ನ ಸೈನ್ಯವನ್ನು ಬೆನ್ನಟ್ಟಿ ಬಂದನು. ಆದರೆ ಮಾರ್ಗನ್‌ನ ಸೈನ್ಯ ಹೋಗಿ ಜನರಲ್ ಗ್ರೀನ್‌ನ ಸೈನ್ಯವನ್ನು ಕೂಡಿಕೊಂಡು ಬ್ರಿಟಿಷರನ್ನು ಎದುರಿಸಿ ಅವರಿಗೆ ಅಪಾರ ಸಾವು ನೋವುಗಳನ್ನುಂಟುಮಾಡಿತು. ಅಪಾರ ನಷ್ಟ ಅನುಭವಿಸಿದ ಕಾರ್ನ್‌ವಾಲಿಸ್‌ನು ಉತ್ತರ ಕೆರೊಲಿನದ ರೇವುಪಟ್ಟಣ ವಿಲ್ಮಿಂಗ್‌ಟನ್‌ಗೆ ಒಳಸರಿದುಹೋದನು. ಅಲ್ಲಿನ ಹೆಚ್ಚಿನ ಸೈನ್ಯ ಸೇರಿಸಲು ಹವಣಿಸಿದ್ದನು. ಹಾಗು ನೌಕಾದಳದ ಸಹಾಯ ಪಡೆಯಲು ವಿಲ್ಮಿಂಗ್‌ಟನ್ ಅನುಕೂಲವಾದ ಸ್ಥಳವಾಗಿದ್ದರಿಂದ ಕಾರ್ನ್‌ವಾಲಿಸ್ ಅಲ್ಲಿಗೆ ಹೋಗಿ ಸೇರಿದನು. ಆತ ತನ್ನ ಸೈನ್ಯದೊಡನೆ ಉತ್ತರ ವಿಲ್ಮಿಂಗ್‌ಟನ್‌ಗೆ ಹೋದನಂತರ ಜನರಲ್ ಗ್ರೀನ್‌ನ ಸೈನಿಕರು ದಕ್ಷಿಣ ಕೆರೊಲಿನದ ಹಳ್ಳಿಗಾಡಿನ ಪ್ರದೇಶವನ್ನು ಸಂಪೂರ್ಣವಾಗಿ ವಶಪಡಿಸಿಕೊಂಡರು.

ಕಾರ್ನ್‌ವಾಲಿಸ್‌ನು ವಿಲ್ಮಿಂಗ್‌ಟನ್ ನಗರದಿಂದ ತನ್ನ ಸೈನ್ಯದೊಂದಿಗೆ ವರ್ಜೀನಿಯಕ್ಕೆ ಹೋಗಿ ಬೆನೆಡಿಕ್ಟ್ ಆರ್ನಾಲ್ಡ್‌ನ ಸೈನ್ಯವನ್ನು ಸೇರಿಕೊಂಡನು. ಬೆನೆಡಿಕ್ಟ್ ಆರ್ನಾಲ್ಡ್‌ನು ಮೊದಲು ಅಮೆರಿಕ ರಾಷ್ಟ್ರವಾದಿಯಾಗಿದ್ದು, ದೇಶಪ್ರೇಮಿಗಳ ಸೈನ್ಯದ ನಾಯಕತ್ವ ವಹಿಸಿಕೊಂಡು, ಬ್ರಿಟಿಷ್ ಸೈನ್ಯಗಳ ಮೇಲೆ ದಾಳಿ ಮಾಡಿದ್ದವನು, ಹಣದ ದುರಾಸೆಯಿಂದ ತನ್ನನ್ನು ತಾನೇ ಬ್ರಿಟಿಷರಿಗೆ ಮಾರಿಕೊಂಡು ಅವರ ಗೂಢಚಾರಿಯಾಗಿ ಪರಿವರ್ತನೆಗೊಂಡು ದೇಶದ್ರೋಹಿಯಾಗಿದ್ದನು. ೧೭೮೦ರಲ್ಲಿ ಇವನು ಬ್ರಿಟಿಷರು ವೆಸ್ಟ್ ಪಾಯಿಂಟನ್ನು ವಶಪಡಿಸಿಕೊಳ್ಳಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡುವ ಪಿತೂರಿ ನಡೆಸಿದ್ದನು. ಈ ಪಿತೂರಿಯಲ್ಲಿ ಮುಖ್ಯ ಪಾತ್ರ ವಹಿಸಿದ್ದ ಬ್ರಿಟಿಷ್ ಗುಪ್ತಚಾರ ಜಾನ್ ಆಂಡ್ರೇ (John Andre) ಸಿಕ್ಕಿಬಿದ್ದು, ಅವನ ಬಳಿ ಸಿಕ್ಕಿದ ಕಾಗದ ಪತ್ರಗಳಿಂದ ಬೆನೆಡಿಕ್ಟ್ ಆರ್ನಾಲ್ಡನ ಗುಟ್ಟು ಬಯಲಾಯಿತು. ದೇಶದ್ರೋಹಿ ಆರ್ನಾಲ್ಡ್ ಬ್ರಿಟಿಷರ ಮೊರೆಹೊಕ್ಕು ಪ್ರಾಣ ಉಳಿಸಿಕೊಂಡನು. ಗೂಢಚಾರಿ ಆಂಡ್ರೇಯನ್ನು ಗಲ್ಲಿಗೇರಿಸಿದರು.

ಕಾರ್ನ್‌ವಾಲಿಸನ ಸೈನ್ಯ ಅಮೆರಿಕನ್ ಸೈನ್ಯಕ್ಕಿಂತ ದೊಡ್ಡದಾಗಿತ್ತು. ಆದರೆ ಫ್ರೆಂಚರು ಸಹಾಯ ಒದಗಿಸಿ ಅಮೆರಿಕನ್ನರ ಪ್ರಾಬಲ್ಯ ಹೆಚ್ಚುವಂತೆ ಮಾಡಿದರು. ಜನರಲ್ ಲಾಫಿಯಟ್ (Lafayette) ಮತ್ತು ಜನರಲ್ ವಾನ್ ಸ್ಟ್ಯೂಬೆನ್ (von Steuben) ತಮ್ಮ ಸೈನ್ಯಗಳನ್ನು ಕಾರ್ನ್‌ವಾಲಿಸನ ಮೇಲೆ ತಿರುಗಿಸಿದರು. ಪುನಃ ಕಾರ್ನ್‌ವಾಲಿಸನು ಹಿಮ್ಮೆಟ್ಟಿ, ಇನ್ನೂ ಹೆಚ್ಚಿನ ಸೈನಿಕರು ಮತ್ತು ಶಸ್ತ್ರಾಸ್ತ್ರಗಳನ್ನು ಕೂಡಿಸಿ ಯುದ್ಧ ತಯಾರಿಕೆಯನ್ನು ಹೆಚ್ಚು ಬಲಗೊಳಿಸುವ ಸಲುವಾಗಿ ಸಮುದ್ರ ಮಾರ್ಗವಾಗಿ ಹೋಗಿ ಚೆಸಪೀಕ್ ಕೊಲ್ಲಿಗೆ ಚಾಚಿಕೊಂಡಂತೆ ಇದ್ದ ಯಾರ್ಕ್ ಟೌನ್ (York Town) ಪರ್ಯಾಯ ದ್ವೀಪದಲ್ಲಿ ತನ್ನ ಸೈನ್ಯವನ್ನು ಸ್ಥಾಪಿಸಿದನು. ಬ್ರಿಟಿಷ್ ನೌಕಾದಳ ಅಮೆರಿಕದ ಅಟ್ಲಾಂಟಿಕ್ ಸಾಗರ ತೀರಪ್ರದೇಶದ ಮೇಲೆ ಸಂಪೂರ್ಣ ನಿಯಂತ್ರಣ ಸ್ಥಾಪಿಸಿತ್ತು. ಆದರೆ ಫ್ರೆಂಚರ ನೌಕಾದಳದ ಒಂದು ನೌಕಾಪಡೆ ಅಡ್ಮಿರಲ್ ಡಿಗ್ರಾಸ್‌ನ ಕೈಕೆಳಗೆ ಪಶ್ಚಿಮ ಇಂಡೀಸ್‌ನಲ್ಲಿ ತಂಗಿತ್ತು. ಇನ್ನೊಂದು ಫ್ರೆಂಚ್ ನೌಕಾತಂಡ ನ್ಯೂಪೋರ್ಟ್ (New Port) ರ್‍ಹೋಡ್ ಐಲೆಂಡ್ (Rhode Island)ನಲ್ಲಿ ಸ್ಥಾಪಿತವಾಗಿತ್ತು. ನ್ಯೂಪೋರ್ಟ್‌ನಲ್ಲಿ ಸೇನಾಧಿಪತಿ ಕಾಮ್ಟ್ ಡಿ ರೋಷಂಬೊನ ಕೈಕೆಳಗೆ ಒಂದು ಸುಸಜ್ಜಿತವಾದ ಸೈನ್ಯವೂ ಬೀಡುಬಿಟ್ಟಿತ್ತು. ವಾಷಿಂಗ್‌ಟನ್, ಡಿಗ್ರಾಸ್ ಮತ್ತು ರೋಷಂಬೊ ಇವರೊಡನೆ ಸಮಾಲೋಚನೆ ನಡೆಸಿ ಸೈನ್ಯ ಕಾರ್ಯಾಚರಣೆಯ ಯೋಜನೆಯನ್ನು ತಯಾರಿಸಿದರು. ಈ ಯೋಜನೆಯ ಪ್ರಕಾರ ಅಮೆರಿಕನ್ ಸೇನೆ ಫ್ರೆಂಚ್ ಸೇನೆಯೊಂದಿಗೆ ಸೇರಿ ಕಾರ್ನ್‌ವಾಲಿಸನನ್ನು ಸುತ್ತುವರಿದು ಸೋಲಿಸುವುದು ಅಥವಾ ನ್ಯೂಯಾರ್ಕ್‌ನಲ್ಲಿ ಬೀಡುಬಿಟ್ಟಿದ್ದ ಕ್ಲಿನ್‌ಟನ್‌ನ ಸೈನ್ಯದ ಮೇಲೆ ದಾಳಿ ಮಾಡುವುದು ಅಥವಾ ಇಬ್ಬರ ಮೇಲೂ ಏಕಕಾಲಿಕವಾಗಿ ದಾಳಿ ಮಾಡುವುದು – ಸಂದರ್ಭೋಚಿತವಾಗಿ ಯಾವುದು ಅತ್ಯಂತ ಸಮರ್ಪಕವಾದುದೋ ಆ ಯೋಜನೆಯನ್ನು ಕೈಗೊಳ್ಳುವ ನಿರ್ಧಾರ ಮಾಡಿದರು.

ಪಶ್ಚಿಮ ಇಂಡೀಸ್ ಮತ್ತು ನ್ಯೂಯಾರ್ಕ್‌ನಲ್ಲಿರುವ ಬ್ರಿಟಿಷ್ ನೌಕಾದಳ ಎರಡೂ ಒಟ್ಟಿಗೆ ಸೇರಿ ಕಾರ್ಯಾಚರಣೆ ನಡೆಸಿದ್ದರೆ, ವಾಷಿಂಗ್‌ಟನ್-ಡಿಗ್ರಾಸ್-ರೋಷಂಬೊ ಯೋಜನೆಯನ್ನು ನಿಷ್ಪ್ರಯೋಜಕಗೊಳಿಸಬಹುದಿತ್ತು. ಆದರೆ ಬ್ರಿಟಿಷ್ ನೌಕಾದಳಪತಿ ಜಾರ್ಜ್ ರಾಡ್ನಿ, ಪಶ್ಚಿಮ ಇಂಡೀಸ್ ನೌಕಾದಳದ ಒಂದು ತಂಡವನ್ನು ಮಾತ್ರ ನ್ಯೂಯಾರ್ಕಿಗೆ ಕಳುಹಿಸಿದನು. ಬ್ರಿಟಿಷರ ನ್ಯೂಯಾರ್ಕ್ ನೌಕಾದಳ ಮತ್ತು ಪಶ್ಚಿಮ ಇಂಡೀಸ್‌ನಿಂದ ಬಂದಿದ್ದ ನೌಕಾತಂಡ ಎರಡೂ ಸೇರಿ ಅಡ್ಮಿರಲ್ ಥಾಮಸ್ ಗ್ರೇವ್ಸ್ ನಾಯಕತ್ವದಲ್ಲಿ ಡಿಗ್ರಾಸ್‌ನ ಪ್ರಬಲವಾದ ಫ್ರೆಂಚ್ ನೌಕಾದಳವನ್ನು ಎದುರಿಸಬೇಕಾಯಿತು. ಡಿಗ್ರಾಸ್‌ನ ಫ್ರೆಂಚ್ ನೌಕಾದಳ ಬ್ರಿಟಿಷ್ ನೌಕಾದಳವನ್ನು ಸೋಲಿಸಿ ಚೆಸಪೀಕ್ ಕೊಲ್ಲಿಯ ಮೇಲೆ ಸಂಪೂರ್ಣ ನಿಯಂತ್ರಣ ಸ್ಥಾಪಿಸಿತು. ಇದರಿಂದಾಗಿ ಕಾರ್ನ್‌ವಾಲಿಸನಿಗೆ ಸಮುದ್ರಮಾರ್ಗವಾಗಿ ತಪ್ಪಿಸಿಕೊಂಡು ಹೋಗುವ ಅವಕಾಶ ಇಲ್ಲದಂತಾಯಿತು.

ಸೈನ್ಯ ಕಾರ್ಯಾಚರಣೆಯ ಮುಂದಿನ ಹಂತ ವಾಷಿಂಗ್‌ಟನ್‌ಗೆ ಬಿಟ್ಟದ್ದು – ಈ ಸಂದರ್ಭ ಅವನ ಮಹಾದಂಡನಾಯಕತ್ವದ ಅಪೂರ್ವ ಗಳಿಗೆಯಾಗಿತ್ತು! ಫ್ರೆಂಚ್ ಸೇನಾಧಿಪತಿ ರೋಷಂಬೊನ ಜೊತೆಯಾಗಿ ಬ್ರಿಟಿಷ್ ಜನರಲ್ ಕ್ಲಿನ್‌ಟನ್‌ಗೆ ನ್ಯೂಯಾರ್ಕಿನ ಮೇಲೆ ದಾಳಿ ಮಾಡುವವರಂತೆ ನಂಬಿಕೆ ಹುಟ್ಟಿಸಲು ಫ್ರೆಂಚ್ – ಅಮೆರಿಕನ್ ಸೈನ್ಯ ನ್ಯೂಯಾರ್ಕಿನ ದಿಕ್ಕಿಗೆ ಪ್ರಯಾಣ ಮಾಡಿ ಸ್ವಲ್ಪ ಕಾಲದ ನಂತರ ದಕ್ಷಿಣಕ್ಕೆ ತಿರುಗಿ, ತೀವ್ರಗತಿಯಲ್ಲಿ ಮುಂದುವರಿದು, ಸೆಪ್ಟೆಂಬರ್ ತಿಂಗಳ ಕಡೆಯಲ್ಲಿ ೧೭೦೦೦ ಸೈನಿಕರೊಂದಿಗೆ ಯಾರ್ಕ್ ಟೌನನ್ನು ಸುತ್ತುವರಿದು ಕಾರ್ನ್‌ವಾಲಿಸ್ ತಪ್ಪಿಸಿಕೊಂಡು ಹೋಗಲಾರದಂತೆ ದಿಗ್ಬಂಧನ ಹಾಕಿತು. ಕಾರ್ನ್‌ವಾಲಿಸನು ನಿಸ್ಸಹಾಯಕನಾದನು. ಆದರೂ ಅಕ್ಟೋಬರ್ ೧೭ರವರೆಗೆ ಹೋರಾಟ ನಡೆಸಿ, ನಂತರ ಕರಾರು ಮಾಡಿಕೊಳ್ಳಲು ಒಪ್ಪಿಕೊಂಡನು. ಆದರಂತೆ ಅಕ್ಟೋಬರ್ ೧೯ರಂದು ಏಳು ಸಾವಿರಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಬ್ರಿಟಿಷ್ ಸೈನಿಕರು ಕೋಟೆಯಿಂದ ಹೊರಬಂದು ತಮ್ಮ ಆಯುಧಗಳನ್ನು ಕೆಳಗಿಟ್ಟು ಶರಣಾಗತರಾದರು. ಅಮೆರಿಕರಲ್ಲಿ ನಡೆದ ಈ ಘಟನೆ ಮೈಸೂರು ರಾಜ್ಯದ ಮೇಲೆ ಪರಿಣಾಮ ಬೀರುತ್ತದೆ ಎಂದು ಯಾವ ಜೋಯಿಸರು ಮೈಸೂರಿನಲ್ಲಿ ಹೇಳಿರಲಿಲ್ಲ! ಇದು ಫ್ರೆಂಚ್ ಮತ್ತು ಅಮೆರಿಕನ್ ಸೈನ್ಯಗಳು ಸಾಧಿಸಿದ ಅದ್ಭುತ ವಿಜಯ. ಇದು ಬ್ರಿಟಿಷರು ಹೋರಾಡಬೇಕೆಂಬ ಕೆಚ್ಚನ್ನು ಕೊನೆಗೊಳಿಸಿತು. ಇತಿಹಾಸದ ವಿಪರ್ಯಾಸವೆಂದರೆ ಯಾರ್ಕ್‌ಟೌನ್‌ನಲ್ಲಿ ಸೋತು ಹೇಗೋ ಬದುಕಿ ಉಳಿದ ಕಾರ್ನ್‌ವಾಲೀಸನು ಇಂಗ್ಲೆಂಡಿಗೆ ಹಿಂತಿರುಗಿದ ಮೇಲೆ ೧೭೮೬ರಲ್ಲಿ ಇಂಡಿಯಾದ ಗವರ್ನರ್ ಜನರಲ್ ಆಗಿ ನೇಮಕಗೊಂಡನು. ಆ ಸಮಯದಲ್ಲಿ ಟಿಪ್ಪೂ ಸುಲ್ತಾನ್ ಮೈಸೂರು ರಾಜ್ಯವನ್ನು ಆಳುತ್ತಿದ್ದನು. ಶ್ರೀರಂಗಪಟ್ಟಣ ಮೈಸೂರಿನ ರಾಜಧಾನಿಯಾಗಿತ್ತು. ಕಾರ್ನ್‌ವಾಲೀಸ್ ಮೂರನೆಯ ಮೈಸೂರು ಯುದ್ಧದಲ್ಲಿ (೧೭೯೨) ಟಿಪ್ಪೂ ಸುಲ್ತಾನನ್ನು ಸೋಲಿಸಿ ಅವನನ್ನು ಕ್ಲಿಷ್ಟ ಹಾಗೂ ಅವಮಾನಕರವಾದ ಕರಾರಿಗೆ ಗುರಿಪಡಿಸಿದನು. ಟಿಪ್ಪು ತನ್ನ ಅರ್ಧ ರಾಜ್ಯವನ್ನು ಬಿಟ್ಟುಕೊಟ್ಟು, ಯುದ್ಧದ ಖರ್ಚನ್ನು ತುಂಬಿಸಲು ೩,೦೦೦,೦೦೦ ಪೌಂಡ್ ಕಾಣಿಕೆ ಕೊಟ್ಟು ಮೇಲಾಗಿ ತನ್ನ ಇಬ್ಬರು ಮಕ್ಕಳನ್ನು ಒತ್ತೆ ಇಡುವಂತೆ ಕಾರ್ನ್‌ವಾಲೀಸ್ ಷರತ್ತು ಹಾಕಿದನು.

ಕಾರ್ನ್‌ವಾಲೀಸ್ ಅಮೆರಿಕದಲ್ಲಿ ಕಳೆದು ಕೊಂಡ ಮಾನವನ್ನು ಇಂಡಿಯಾದಲ್ಲಿ ಮರಳಿ ಪಡೆದುಕೊಂಡನು. ಕಾರ್ನ್‌ವಾಲೀಸ್‌ನ ಅದೃಷ್ಟ ಟಿಪ್ಪು ಸುಲ್ತಾನ್‌ನಿಗೆ ದುರದೃಷ್ಟವಾಯಿತು.

ಪ್ಯಾರಿಸ್ ಶಾಂತಿ ಸಂಧಾನ

ಬ್ರಿಟಿಷರು ಅಮೆರಿಕನ್ನರ ಮೇಲೆ ವಿಜಯ ಸಾಧಿಸುತ್ತೇವೆ ಎಂದು ಇಟ್ಟುಕೊಂಡಿದ್ದ ಆಸೆಯ ಕುಡಿ ಯಾರ್ಕ್ ಟೌನ್ ಕದನದಲ್ಲಿ ಕಮರಿಹೋಯಿತು. ಫೆಬ್ರವರಿ ೨೭,

೧೭೮೫ರಲ್ಲಿ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಅಮೆರಿಕದಲ್ಲಿ ಯುದ್ಧ ಮುಂದುವರಿಸ ಕೂಡದು ಎನ್ನುವ ಮಸೂದೆಯನ್ನು ಬಹುಮತದಿಂದ ಅಂಗೀಕರಿಸಲಾಯಿತು. ರಾಜನಿಗೆ ಅಮೆರಿಕದೊಡನೆ ಶಾಂತಿ ಸಂಧಾನ ನಡೆಸುವಂತೆ ನಿರ್ದೇಶಿಸಲಾಯಿತು. ಮಾರ್ಚ್ ೨೦, ೧೭೮೨ರಂದು ಲಾರ್ಡ್ ನಾರ್ತ್ ಪ್ರಧಾನಮಂತ್ರಿ ಪದವಿಗೆ ರಾಜೀನಾಮೆ ನೀಡಿದನು. ಹೊಸ ಮಂತ್ರಿಮಂಡಳ ಅಧಿಕಾರಕ್ಕೆ ಬಂತು. ಲಾರ್ಡ್ ಶೆಲ್‌ಬರ್ನ್ (Lord Shelburne) ನಾಯಕತ್ವದಲ್ಲಿ ಅಮೆರಿಕದ ಪ್ರತಿನಿಧಿಗಳೊಡನೆ ಶಾಂತಿ ಸಂಧಾನಗಳು ನಡೆದವು. ಕಾಂಟಿನೆಂಟಲ್ ಕಾಂಗ್ರೆಸ್ ಜಾನ್ ಆ್ಯಡಮ್ಸ್‌ನನ್ನು ಶಾಂತಿ ಸಂಧಾನ ನಡೆಸಲು ನೇಮಿಸಿತು.

ಸೆಪ್ಟೆಂಬರ್ ೩ ೧೭೮೩ರಲ್ಲಿ ಪ್ಯಾರಿಸ್ ಶಾಂತಿ ಸಂಧಾನಕ್ಕೆ ಸಹಿ ಹಾಕಲಾಯಿತು. ಮೊದಲೆ ಒಪ್ಪಂದ ಮಾಡಿಕೊಂಡಂತೆ ಇಂಗ್ಲೆಂಡ್ ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನು ಸ್ವತಂತ್ರ ರಾಷ್ಟ್ರವೆಂದು ಅಂಗೀಕರಿಸಿತು. ಮಿಸ್ಸಿಸ್ಸಿಪ್ಪಿ ನದಿ ಪಶ್ಚಿಮ ಗಡಿ ಎಂದು ಪರಸ್ಪರ ಒಪ್ಪಿಕೊಂಡರು. ಉತ್ತರ ಮತ್ತು ದಕ್ಷಿಣ ಗಡಿಗಳ ಬಗ್ಗೆ ಇದ್ದ ಭಿನ್ನಾಭಿಪ್ರಾಯಗಳನ್ನು ಮುಂದೆ ಕ್ರಮವಾಗಿ ಸರಿಪಡಿಸ್ಕೊಳ್ಳುವುದೆಂದು ನಿರ್ಣಯಿಸಿದರು. ಫ್ಲಾರಿಡಾ ಸಂಸ್ಥಾನವನ್ನು ಸ್ಪೇನಿಗೆ ಹಿಂತಿರುಗಿಸಿಕೊಡಲಾಯಿತು. ಫ್ರಾನ್ಸ್ ೧೭೬೩ರಲ್ಲಿ ಕಳೆದುಕೊಂಡ ಆಫ್ರಿಕದಲ್ಲಿನ ಸೆನೆಗಲ್ (Senegal) ಮತ್ತು ಪಶ್ಚಿಮ ಇಂಡೀಸ್‌ನಲ್ಲಿರುವ ಟೊಬ್ಯಾಗೊ (Tobago) ದ್ವೀಪಗಳನ್ನು ಮರಳಿ ಪಡೆಯಿತು. ಬ್ರಿಟಿಷರು ಅಮೆರಿಕನ್ನರಿಗೆ ನ್ಯೂ ಫೌಂಡ್ ಲ್ಯಾಂಡ್ (Newfoundland) ಮತ್ತು ಸೆಂಟ್ ಲಾರೆನ್ಸ್ ಕೊಲ್ಲಿಯಲ್ಲಿ ಮೀನು ಹಿಡಿಯುವ ಸ್ವಾತಂತ್ರ್ಯವನ್ನು ಕೊಟ್ಟರು. ಹಾಗೆಯೇ ಲ್ಯಾಬ್ರಡಾರ್ (Labrador), ನೊವಾಸ್ಕೊಷಿಯ (Nova Scotia) ಮತ್ತು ಮ್ಯಾಗ್ಡಲೆನ್ (Magdalen) ತೀರಪ್ರದೇಶಗಳಲ್ಲಿ ತಾವು ಹಿಡಿದ ಮೀನನ್ನು ಒಣಗಿಸುವ ಹಕ್ಕನ್ನು ಕೊಟ್ಟರು. ಬ್ರಿಟಿಷ್ ವ್ಯಾಪಾರಿಗಳು ಅಮೆರಿಕನ್ನರಿಂದ ತಮಗೆ ಬರಬೇಕಾದ ಸಾಲ ವಸೂಲಿ ಮಾಡಲು ಸರ್ಕಾರದಿಂದ ಯಾವ ಅಡಚಣೆ ಬರುವುದಿಲ್ಲ ಎಂದು ಭರವಸೆ ಪಡೆದರು. ಅಮೆರಿಕ ಬಿಟ್ಟುಹೋದ ರಾಜನಿಷ್ಠರ ಆಸ್ತಿಯನ್ನು ಸರ್ಕಾರ ವಶಪಡಿಸಿಕೊಂಡಿತ್ತು. ಹಾಗೆ ವಶಪಡಿಸಿಕೊಂಡ ಆಸ್ತಿಯನ್ನು ವಾಪಸು ಮಾಡುವಂತೆ ಸಂಸ್ಥಾನ ಸರ್ಕಾರಗಳಿಗೆ ಸೂಚನೆ ಕೊಡಲಾಯಿತು.

ನವೆಂಬರ್ ೨೫, ೧೭೮೩ರಲ್ಲಿ ಬ್ರಿಟಿಷ್ ಸೈನ್ಯದ ಕಡೆಯ ತುಕಡಿ ನ್ಯೂಯಾರ್ಕ್ ನಗರವನ್ನು ಬಿಟ್ಟು ಹೊರಟುಹೋಯಿತು. ಡಿಸೆಂಬರ್ ೪ರಂದು ಬ್ರಿಟಿಷರು ಸ್ಟಾಟನ್ ಐಲೆಂಡ್ ಮತ್ತು ಲಾಂಗ್ ಐಲೆಂಡ್‌ಗಳನ್ನು ತ್ಯಜಿಸಿಹೋದರು. ಆ ದಿನವೇ ವಾಷಿಂಗ್‌ಟನ್ ತನ್ನ ಕೈಕೆಳಗಿನ ಸೈನ್ಯಾಧಿಕಾರಿಗಳಿಗೆ ವಿದಾಯ ಹೇಳಿ ನ್ಯೂಯಾರ್ಕಿನಿಂದ ಹೊರಟು, ಡಿಸೆಂಬರ್ ೨೩ರಂದು ಅನ್ನಾಪೊಲಿಸ್ (Annapolis)ನಲ್ಲಿ ಸೇರಿದ್ದ ಕಾಂಟಿನೆಂಟಲ್ ಕಾಂಗ್ರೆಸ್‌ನ ಮುಂದೆ ಹಾಜರಾಗಿ, ತನ್ನ ಸೈನ್ಯದ ಮಹಾದಂಡನಾಯಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಕ್ರಿಸ್‌ಮಸ್ ಹಬ್ಬದ ಹೊತ್ತಿಗೆ ಸರಿಯಾಗಿ ತನ್ನ ಮೌಂಟ್ ವೆರ್ನನ್ (Mount Vernon) ಮನೆಗೆ ವಾಪಸ್ಸಾದನು!

ಅಮೆರಿಕನ್ ಕ್ರಾಂತಿಯ ರಾಜಕೀಯ ಪರಿಣಾಮಗಳು

ಅಮೆರಿಕನ್ನರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜಯಗಳಿಸಿ, ಅಮೆರಿಕ ಸ್ವತಂತ್ರ ರಾಷ್ಟ್ರವಾಯಿತು. ಯುದ್ಧದ ಪರಿಣಾಮವಾಗಿ ಬ್ರಿಟಿಷರ ಅಧೀನತೆಯಲ್ಲಿ ವಸಾಹತುಗಳಾಗಿದ್ದ ಪ್ರಾಂತಗಳೂ ಸ್ವಾತಂತ್ರ್ಯ ಸಂಗ್ರಾಮದ ಕುಲುಮೆಯಲ್ಲಿ ತಮ್ಮ ಅಧೀನತೆ ಕಳೆದುಕೊಂಡು ಸಂಯುಕ್ತ ಸಂಸ್ಥಾನಗಳಾಗಿ ಮಾರ್ಪಾಡು ಹೊಂದಿದವು. ಯುದ್ಧ ನಡೆಯಿತು. ಸ್ವಾತಂತ್ರ್ಯ ಉದಯಿಸಿತು. ಆದರೆ ನಿಜವಾದ ಅರ್ಥದಲ್ಲಿ ಅಮೆರಿಕದಲ್ಲಿ ಕ್ರಾಂತಿ ಉಂಟಾಯಿತೆ ಎಂಬ ಪ್ರಶ್ನೆ ಏಳುತ್ತದೆ. ಜಾನ್ ಆ್ಯಡಮ್ಸ್‌ನ ಅಭಿಪ್ರಾಯದಲ್ಲಿ: *'ಕ್ರಾಂತಿಯಿಂದ ಪ್ರಭಾವಿತರಾದ ಜನರು ಯುದ್ಧ ಮಾಡಲು ನಿರ್ಧರಿಸಿದರು. ಕ್ರಾಂತಿ ಜನರ ಮನದಲ್ಲಿ ಮತ್ತು ಹೃದಯದಲ್ಲಿ ಅಡಗಿತ್ತು! ಅಮೆರಿಕನ್ನರ ಜೀವನದ ಮೂಲತತ್ವಗಳಲ್ಲಿ, ಅಭಿಪ್ರಾಯಗಳಲ್ಲಿ, ಭಾವನೆಗಳಲ್ಲಿ ಮತ್ತು ಪ್ರೀತಿ ವಾತ್ಸಲ್ಯಗಳಲ್ಲಿ ಆಗಿರುವ ಆಮೂಲಾಗ್ರವಾದ ಬದಲಾವಣೆಯೆ ನಿಜವಾದ ಅಮೆರಿಕನ್ ಕ್ರಾಂತಿ!'*

ಹಕ್ಕುಗಳಿಗಾಗಿ ಪ್ರಾರಂಭವಾದ ಹೋರಾಟ, ಸಾಮಾಜಿಕ ಆಂದೋಳನವಾಗಿ, ಈ ಹಕ್ಕುಗಳು ಪ್ರಜೆಗಳು ಸ್ಥಾಪಿಸಿದ ಸರ್ಕಾರಗಳ ಮೂಲಕ ವ್ಯಕ್ತಗೊಂಡಿದ್ದು ಆಗಿನ ಕಾಲಕ್ಕೆ ಒಂದು ಕ್ರಾಂತಿಕಾರಕ ಬದಲಾವಣೆಯಾಗಿತ್ತು. ಸರ್ಕಾರ ಮುಖ್ಯವಾಗಿ ಒಂದು ಒಪ್ಪಂದ ಎನ್ನುವ ಸಾಮಾಜಿಕ ತತ್ವ, ಪ್ರಜಾಪ್ರಭುತ್ವ, ಸರ್ಕಾರದ ಅಂಗಗಳನ್ನು ಬೇರ್ಪಡಿಸುವುದು ಮತ್ತು ಪ್ರಜೆಗಳ ಪ್ರಕೃತಿದತ್ತ ಪರಬಾರೆಯಾಗದಂಥ ಹಕ್ಕುಗಳು – ಈ ತಾತ್ವಿಕ ಅಂಶಗಳನ್ನು ಹೊಸದಾಗಿ ಸ್ಥಾಪಿಸಿದ ಸರ್ಕಾರಗಳ ರಾಜ್ಯಾಂಗ/ಸಂವಿಧಾನಗಳಲ್ಲಿ ಅಳವಡಿಸಲಾಯಿತು. ಈ ದೃಷ್ಟಿಯಲ್ಲಿ ಅಮೆರಿಕನ್ ಕ್ರಾಂತಿ ಅಪೂರ್ವವಾದುದು. ಅಮೆರಿಕನ್ನರ 'ನಾವು ಹುಟ್ಟಿನಿಂದಲೆ ಸ್ವತಂತ್ರರು' ಎನ್ನುವ ನಂಬಿಕೆ ತಮ್ಮ ಸ್ವಾತಂತ್ರ್ಯವನ್ನು ಕಸಿದುಕೊಂಡ ಸಾಮ್ರಾಜ್ಯದ ವಿರುದ್ಧ ತಮ್ಮ ಪ್ರಕೃತಿದತ್ತ ಹಕ್ಕುಗಳನ್ನು ರಕ್ಷಿಸಲು ಕಿಡಿಯಾಗಿ ಸಿಡಿದ ಕ್ರಾಂತಿ, ವಸಾಹತುಗಳಲ್ಲಿ ಕಾಡು ಕಿಚ್ಚಿನಂತೆ ಹಬ್ಬಿತು.

ರಾಜನೇ ಪ್ರತ್ಯಕ್ಷ ದೇವರು ಎಂದು ನಂಬಿದ್ದ ಆಗಿನ ಕಾಲದಲ್ಲಿ ಪ್ರಜಾಪ್ರಭುತ್ವದ ಕಲ್ಪನೆ ಒಂದು ಕ್ರಾಂತಿಕಾರಕ ತತ್ವವಾಗಿತ್ತು. ಪ್ರಜಾಪ್ರಭುತ್ವದ ಚಿಂತನೆ ಅಮೆರಿಕನ್ನರು ತಮ್ಮನ್ನು ತಾವೇ ಹೊಸಬೆಳಕಿನಲ್ಲಿ ನೋಡಿಕೊಳ್ಳುವಂತೆ ಮಾಡಿತು. ಹಳ್ಳಿಗಾಡಿನವರ ಸಂಕುಚಿತ ಮನೋಭಾವ, ಯೂರೋಪ್ ಸಂಸ್ಕೃತಿಯ ಪ್ರಾಂತೀಯ ಭಾವನೆಗಳನ್ನು ತ್ಯಜಿಸಿ, ರಾಷ್ಟ್ರೀಯ ಮನೋಭಾವ ಬೆಳೆಸಿಕೊಂಡಿದ್ದು ಅಮೆರಿಕನ್ ಕ್ರಾಂತಿಯ ಪರಿಣಾಮ. ಅಮೆರಿಕನ್ನರು ಪ್ರಜಾಪ್ರಭುತ್ವದ ಸ್ವತಂತ್ರ ಪ್ರಜೆಗಳಾಗಿ, ರಾಜಾಶ್ರಯದ ಸರಪಳಿಗಳನ್ನು ಕಿತ್ತೊಗೆದು, ಹಳೆಯ ಪ್ರಪಂಚದ ಕಂದಾಚಾರಗಳನ್ನು ಬಿಟ್ಟು, ಬಿಡುಗಡೆಯ ಹೊಸ ಪ್ರಪಂಚವನ್ನು ತಮಗೆ ಮಾತ್ರವಲ್ಲದೆ ಸ್ವಾತಂತ್ರ್ಯ ಬಯಸುವ ಸಕಲರಿಗೂ ಅನ್ವಯವಾಗುವ ರೀತಿಯಲ್ಲಿ ನಿರ್ಮಾಣ ಮಾಡುವ ಕಾರ್ಯವನ್ನು ಕೈಗೊಂಡರು.

ಅಮೆರಿಕನ್ ರಾಷ್ಟ್ರೀಯತೆ ಅನೇಕ ಕಾರಣಗಳಿಂದ ಬೆಳೆದು, ಅನೇಕ ರೂಪಗಳಲ್ಲಿ ವ್ಯಕ್ತಗೊಂಡಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಧಾರಣ ಜನರ ಅಸಾಧಾರಣ ತ್ಯಾಗ ಒಂದು ಬಹುಮುಖ್ಯವಾದ ಕಾರಣ. ಕಾಂಟಿನೆಂಟಲ್ ಸೈನ್ಯದ ಯೋಧರು ಬೇಸಿಗೆಯ ಬೇಗೆಯಲ್ಲಿ ಕೆರೊಲಿನ ಪ್ರಾಂತಗಳಲ್ಲಿ ಹೋರಾಡಿದಂತೆಯೇ ಅವರ ಸ್ವಾತಂತ್ರ್ಯ ದಾಹ ಅವರನ್ನು ಕೊರೆಯುವ ಛಳಿಯಲ್ಲಿ ಹೆಪ್ಪುಗಟ್ಟಿದ ಡೆಲವೇರ್ ನದಿಯನ್ನು ದಾಟಿ ಹೆಸ್ಸಿಯನ್ ಸೈನಿಕರ ಮೇಲೆ ದಾಳಿ ಮಾಡುವಂತೆ ಸ್ಫೂರ್ತಿ ನೀಡಿತು. ಅಂಥ ಯೋಧರಿಗೆ ಸಂಸ್ಥಾನದ ಗಡಿಗಳು ಅರ್ಥಹೀನವಾಗಿದ್ದವು.

ಅಮೆರಿಕನ್ ರಾಷ್ಟ್ರಧ್ವಜ ಹದಿಮೂರು ಪ್ರಾಂತಗಳನ್ನು/ಸಂಸ್ಥಾನಗಳನ್ನು ಪ್ರತಿನಿಧಿಸುವ ಹದಿಮೂರು ನಕ್ಷತ್ರಗಳು ಮತ್ತು ಹದಿಮೂರು ಪಟ್ಟೆಗಳನ್ನೊಳಗೊಂಡು ರಾಷ್ಟ್ರದ ಐಕ್ಯತೆಯ ಚಿಹ್ನೆಯಾಗಿ ರಾಷ್ಟ್ರೀಯ ಭಾವನೆಯನ್ನು ಉಕ್ಕಿಸುವ ಹೆಮ್ಮೆಯ ಹೆಗ್ಗುರುತಾಯಿತು! ಸಂಸ್ಥಾನಗಳನ್ನು ಪ್ರತ್ಯೇಕವಾಗಿ ಪ್ರತಿನಿಧಿಸುವುದು, ಪ್ರತ್ಯೇಕ ಅಂಚೆವ್ಯವಸ್ಥೆ ಇತ್ಯಾದಿಗಳು ಯಾರಿಗೂ ಬೇಡವಾಗಿದ್ದವು. ರಾಯಭಾರಿಗಳ ನೇಮಕ, ಮೈತ್ರಿ ಸಂಧಾನಗಳು, ವಾಣಿಜ್ಯ ಕರಾರುಗಳು ಎಲ್ಲದರಲ್ಲಿ ಸಾಮೂಹಿಕ ಜವಾಬ್ದಾರಿ ಇದ್ದು ಸಂಸ್ಥಾನಗಳು ಒಗ್ಗಟ್ಟಾಗಲು ಕಾರಣವಾಯಿತು. ಆರ್ಥಿಕ ಅಭಿವೃದ್ಧಿ ರಾಷ್ಟ್ರ ಸಂಘಟನೆಗೆ ಸಹಾಯವಾಯಿತು. ಬ್ರಿಟಿಷ್ ಸರಕುಗಳನ್ನು ಆಮದು ಮಾಡಿಕೊಳ್ಳುವುದು ನಿಲ್ಲಿಸಿದ ಮೇಲೆ ಸ್ಥಳೀಯ ಉತ್ಪಾದನೆ ತ್ವರಿತವಾಗಿ ಬೆಳೆದು ಅಮೆರಿಕ ಸ್ವಾವಲಂಬಿಯಾಯಿತು.

ಅಮೆರಿಕನ್ ಕ್ರಾಂತಿಯ ಸಾಮಾಜಿಕ ಪ್ರಭಾವ

ರಾಜಕೀಯ ಕ್ರಾಂತಿ ಸಮಾಜದ ಇತರ ವ್ಯವಸ್ಥೆಗಳನ್ನು ಬುಡಮೇಲು ಮಾಡಿ, ಅನೇಕ ಹೊಸ ಬದಲಾವಣೆಗಳನ್ನು ಉಂಟುಮಾಡಿ ಸಮಾಜದ ವರ್ಗವ್ಯವಸ್ಥೆ, ಮೌಲ್ಯಗಳು, ನ್ಯಾಯನೀತಿಗಳು ಮತ್ತು ಜನರ ನಂಬಿಕೆಗಳನ್ನು ತೀವ್ರತರವಾಗಿ ಪ್ರಭಾವಿತಗೊಳಿಸಿತು. ಸ್ವಾತಂತ್ರ್ಯ ಸಂಗ್ರಾಮ ಅಮೆರಿಕ ವಸಾಹತುಗಳನ್ನು ಒಂದು ಸ್ವತಂತ್ರವಾದ ಪ್ರಜಾಪ್ರಭುತ್ವವಾಗಿ ಮಾರ್ಪಾಡು ಮಾಡಿದುದೇ ಅಲ್ಲದೆ ಸಮಾಜ ವ್ಯವಸ್ಥೆಯಲ್ಲಿ ಮಹತ್ತರವಾದ ಬದಲಾವಣೆಗಳನ್ನು ಉಂಟುಮಾಡಿತು.

ಕ್ರಾಂತಿ ಜಾಗ್ರತಗೊಳಿಸಿದ 'ಸರ್ವರೂ ಸಮಾನರು' ಎನ್ನುವ ಮನೋಭಾವ ಅನೇಕ ವಿಧಗಳಲ್ಲಿ ವ್ಯಕ್ತಗೊಂಡಿತು. ಈ ಮನೋಭಾವ, ಸಮಾಜದಲ್ಲಿ ಹಳೆಯ ಸಂಪ್ರದಾಯದಂತೆ ಜನರನ್ನು ಮೇಲು ಮತ್ತು ಕೀಳು ಎಂದು ವರ್ಗೀಕರಣ ಮಾಡುವುದನ್ನು ತೊಡೆದುಹಾಕಿ, ಸಮಾನತೆಯ ಮನೋಭಾವವನ್ನು ಬೆಳೆಸಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜನರು ಮೇಲು-ಕೀಳೆಂಬ ಅಂತಸ್ತುಗಳನ್ನು ಲೆಕ್ಕಿಸದೆ ಒಟ್ಟಾಗಿ ಹೋರಾಡಿದರು. ಸ್ವಾತಂತ್ರ್ಯ ಗಳಿಸಿದ ಮೇಲೆ 'ನಾವೆಲ್ಲರೂ ಸಮಾನರು' ಎನ್ನುವ ಮನೋಭಾವ ಸಮಾಜದ ಎಲ್ಲ ಚಟುವಟಿಕೆಗಳಿಗೂ ಅನ್ವಯಿಸಿತು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೈನಿಕರಾಗಿ, ಹೋರಾಟಗಾರರಾಗಿ ಭಾಗವಹಿಸಿದ ಜನರಲ್ಲಿ ರಾಜಕೀಯ ಪ್ರಜ್ಞೆ ಬೆಳೆದು ಜನರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲು ಕಾರಣವಾಯಿತು. ರಾಜಕೀಯ ರಂಗದಲ್ಲಿ ಹೊಸ ಅವಕಾಶಗಳು ಹೆಚ್ಚುತ್ತ ಹೋಗಿ, ಹಿಂದೆ ಕೇವಲ ಕೆಲವರಿಗೆ ಮೀಸಲಾಗಿದ್ದ ಅವಕಾಶಗಳು ಸಾಮಾನ್ಯ ಜನರಿಗೂ ದೊರಕುವಂತಾಯಿತು. ಸಂಸ್ಥಾನ ಸರ್ಕಾರದ ಶಾಸಕಾಂಗಗಳಲ್ಲಿ ಸಾಮಾನ್ಯ ಪ್ರಜೆಗಳ ಸಂಖ್ಯೆ ಹೆಚ್ಚಾಯಿತು. ಬಿಡುಗಡೆಗಾಗಿ ಹೋರಾಡಿದವರು ತಮ್ಮ ಹಕ್ಕುಗಳು ದೈವದತ್ತವಾದವು ಎಂದು ನಂಬಿದವರು, ಬೇರೆಯವರಿಗೆ ಅವು ಅನ್ವಯ ವಾಗುವುದಿಲ್ಲ ಎಂದು ಹೇಳುವುದು ಅಸಂಬದ್ಧವಾಗಿ ತೋರಿತು. ಮತದಾರರು ಆಸ್ತಿವಂತ ರಾಗಿರಬೇಕು ಎನ್ನುವ ಅವಶ್ಯಕತೆಯನ್ನು ಕೆಲವು ಸಂಸ್ಥಾನಗಳಲ್ಲಿ ಸಡಿಲಗೊಳಿಸಲಾಯಿತು. ಪೆನ್ಸಿಲ್‌ವೇನಿಯಾ, ಡೆಲವೇರ್, ಉತ್ತರ ಕೆರೊಲಿನ, ಜಾರ್ಜಿಯ ಮತ್ತು ವರ್‌ಮಾಂಟ್ ಸಂಸ್ಥಾನಗಳಲ್ಲಿ ತೆರಿಗೆದಾರರು ಮತದಾನ ಮಾಡುವ ಹಕ್ಕು ಪಡೆದಿದ್ದರು. ಪ್ರಾತಿನಿಧ್ಯ ವಿಲ್ಲದ ತೆರಿಗೆಯನ್ನು ವಿರೋಧಿಸಿ ಆಂದೋಳನ ನಡೆಸಿದವರು, ಹಳ್ಳಿಗಾಡಿನ ಜನರಿಗೆ ಅವರ ಜನಸಂಖ್ಯೆಯ ಆಧಾರದ ಮೇಲೆ, ಸಂಸ್ಥಾನ ಸರ್ಕಾರಗಳ ಶಾಸಕಾಂಗಗಳಲ್ಲಿ ಹೆಚ್ಚಿನ ಪ್ರಾತಿನಿಧ್ಯವನ್ನು ನಿರಾಕರಿಸುವುದು ನ್ಯಾಯಬದ್ಧವಾಗಿ ತೋರಲಿಲ್ಲ. ಆದ್ದರಿಂದ ಸಂಸ್ಥಾನದ ಶಾಸಕಾಂಗಗಳಿಗೆ ಹೆಚ್ಚಿನ ಆಸ್ತಿವಂತರಲ್ಲದ ಸಾಮಾನ್ಯ ಪ್ರಜೆಗಳು ಪ್ರತಿನಿಧಿಗಳಾಗಿ ಚುನಾಯಿತರಾದರು.

ಭೂವಿತರಣಾ ಕಾಯಿದೆ

ಹಣದ ಕೊರತೆಯನ್ನು ಪರಿಹರಿಸಲು ಫೆಡರಲ್ ಸರ್ಕಾರ ಪಶ್ಚಿಮ ಗಡಿ ಪ್ರದೇಶಗಳ ಭೂಮಿಯನ್ನು ಮಾರಲು ನಿರ್ಧರಿಸಿತು. ೧೭೮೫ರ ಭೂಕಾಯಿದೆ ಪ್ರಕಾರ ಭೂಮಿಯನ್ನು ಅಳೆದು ಸಮಚತುಷ್ಕೋಣಾಕೃತಿಯ ಭಾಗಗಳಾಗಿ ಮಾಡಿ, ರಸ್ತೆಗಳ ಮತ್ತು ಹೊಲಗದ್ದೆಗಳ ರೂಪರೇಷೆಗಳನ್ನು ಗುರುತಿಸಿ, ಪ್ರತ್ಯೇಕ ಸಂಸ್ಥಾನಗಳನ್ನು ರಚಿಸುವ ಯೋಜನೆಯನ್ನು ಜಾರಿಗೆ ತರಲಾಯಿತು. ಸಂಸ್ಥಾನಗಳ ಚತುಷ್ಕೋಣಾಕೃತಿಯನ್ನು ಅಮೆರಿಕದ ಭೂಪಟದಲ್ಲಿ ಈಗಲೂ ನಾವು ಗುರುತಿಸಬಹುದು.

ಅಮೆರಿಕದ ವಾಯುವ್ಯ ಪ್ರದೇಶವನ್ನು ಅಳತೆ ಮಾಡಿ ಪೂರ್ವ-ಪಶ್ಚಿಮವಾಗಿ ಆರು ಚದರ ಮೈಲಿ ಮತ್ತು ಉತ್ತರ-ದಕ್ಷಿಣವಾಗಿ ಆರು ಚದರ ಮೈಲಿ ಇರುವಂಥ ಬಡಾವಣೆ ಗಳನ್ನು (Township) ರಚನೆ ಮಾಡಿದರು. ಪ್ರತಿ ಬಡಾವಣೆಯನ್ನು ಪುನಃ ಒಂದು ಮೈಲಿ ಚದರದ ೩೬ ಭಾಗಗಳನ್ನಾಗಿ ವಿಂಗಡಿಸಿದರು. ಒಂದು ಚದರ ಮೈಲಿ ಅಥವಾ ೬೪೦ ಎಕರೆ ಭೂಮಿಯನ್ನು ಎಕರೆಗೆ ಒಂದು ಡಾಲರಿಗೆ ಕಡಿಮೆಯಿಲ್ಲದಂತೆ ಹರಾಜು ಮಾಡಲಾಯಿತು. ಸಾಲದ ವ್ಯವಸ್ಥೆ ಇರಲಿಲ್ಲ. ಎಲ್ಲ ನಗದು ವ್ಯಾಪಾರ. ಇದು ಶ್ರೀಮಂತ ರಿಗೆ ಅನುಕೂಲವಾಯಿತು. ಬಡರೈತರಲ್ಲಿ ಅಷ್ಟು ದೊಡ್ಡ ಮೊತ್ತದ ಹಣ ಎಲ್ಲಿಂದ

ಬರಬೇಕು? ಕ್ರಮೇಣ ಸರ್ಕಾರ ಒಂದು ಚದರ ಮೈಲಿ ಭೂಮಿಯನ್ನು ಚಿಕ್ಕ ಚಿಕ್ಕ ಭಾಗಗಳನ್ನಾಗಿ ಮಾಡಿ, ಕಡಿಮೆ ಬೆಲೆಗೆ ಮಾರುವ ವ್ಯವಸ್ಥೆ ಮಾಡಿತು. ಪ್ರತಿಯೊಂದು ಬಡಾವಣೆಯಲ್ಲಿದ್ದ ೩೬ ಭಾಗಗಳಲ್ಲಿ ೧೬ನೆಯ ಸಂಖ್ಯೆಯ ಭಾಗದ ಆದಾಯವನ್ನು ಶಾಲೆಗಳನ್ನು ನಡೆಸಲು ಸರ್ಕಾರ ಮೀಸಲಾಗಿಟ್ಟಿತು. ಈ ಹಣದಿಂದ ಸಾರ್ವಜನಿಕ ಶಾಲೆಗಳು ಎಲ್ಲಾ ಕಡೆಗಳಲ್ಲೂ ಅಭಿವೃದ್ಧಿಗೊಳ್ಳಲು ಸಾಧ್ಯವಾಯಿತು.

೧೭೮೭ರ ವಾಯುವ್ಯ ಗಡಿ ಕಾಯಿದೆಯ ಪ್ರಕಾರ ಒಂದು ಪ್ರಾಂತದ/ಸಂಸ್ಥಾನದ ಜನಸಂಖ್ಯೆಯಲ್ಲಿ ಗಂಡಸರ ಸಂಖ್ಯೆ ೫೦೦೦ ಮುಟ್ಟುವವರೆಗೂ ಆ ಪ್ರಾಂತ ರಾಜ್ಯಪಾಲನ ಆಡಳಿತಕ್ಕೆ ಒಳಪಟ್ಟಿರಬೇಕು. ಆಡಳಿತ ನಿರ್ವಹಣೆಯಲ್ಲಿ ರಾಜ್ಯಪಾಲನಿಗೆ ಸಹಾಯಕರಾಗಿ ಮೂರು ನ್ಯಾಯಾಧೀಶರನ್ನು ನೇಮಿಸಲಾಗುತ್ತಿತ್ತು. ಕಾಲಕ್ರಮದಲ್ಲಿ ಯಾವ ಸಂಸ್ಥಾನದಲ್ಲಿ ೫೦೦೦ ಮತ ಚಲಾಯಿಸುವ ಪ್ರಾಪ್ತ ವಯಸ್ಸಿನ ಗಂಡಸರು ಇರುವರೋ, ಅವರಿಗೆ ಸಂಸ್ಥಾನ ಶಾಸಕಾಂಗ ರಚಿಸಿ, ತಮ್ಮ ಪ್ರತಿನಿಧಿಯನ್ನು ಕಾಂಗ್ರೆಸ್ಸಿಗೆ ಕಳುಹಿಸುವ ಅಧಿಕಾರ ಕೊಡಲಾಗುತ್ತಿತ್ತು.

ಅಂತಿಮವಾಗಿ, ಒಂದು ಪ್ರಾಂತದ ಜನಸಂಖ್ಯೆ ೬೦೦೦೦ ಮುಟ್ಟಿದಾಗ ಅದು ಅಧಿಕೃತ ಸಂಸ್ಥಾನ ಸರ್ಕಾರ ರಚಿಸುವ ಹಕ್ಕು ಪಡೆಯುವಂತೆ ವ್ಯವಸ್ಥೆ ಮಾಡಲಾಯಿತು. ಸಂಸ್ಥಾನ ಸರ್ಕಾರ ಸಂಸ್ಥಾನದ ರಾಜ್ಯಾಂಗವನ್ನು ರಚಿಸಿ ಅದಕ್ಕನುಗುಣವಾಗಿ ಆಡಳಿತ ನಡೆಸಬೇಕೆಂದು ನಿರ್ದೇಶಿಸಲಾಯಿತು. ಸಂಸ್ಥಾನ ಸರ್ಕಾರ ಎಲ್ಲ ವಿಷಯಗಳಲ್ಲೂ ಸ್ವಾಯತ್ತತೆ ಪಡೆದಿದ್ದರೂ ಎರಡು ಮುಖ್ಯ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗಿತ್ತು: ಮೊದಲನೆಯದಾಗಿ – ಸಂಸ್ಥಾನ ಸರ್ಕಾರ 'ಪ್ರಜಾರಾಜ್ಯ'ವಾಗಿರಬೇಕು. ಒಬ್ಬ ವ್ಯಕ್ತಿಯ ಅಥವಾ ಒಂದು ಗುಂಪಿನ ರಾಜ್ಯವಾಗಿರಬಾರದು. ಎರಡನೆಯದಾಗಿ – ಗುಲಾಮಗಿರಿಯನ್ನು ನಿಷೇಧಿಸುವುದು ಅಗತ್ಯವಾಗಿತ್ತು.

ರಾಷ್ಟ್ರವೀರರು

ಸ್ವಾತಂತ್ರ್ಯಕ್ಕಿಂತ ಮುಂಚೆ ಇಂಗ್ಲೆಂಡಿನ ವೀರರೇ ತಮ್ಮ ವೀರರು ಎಂದು ನಂಬಿದ್ದ ಅಮೆರಿಕನ್ನರು ಸ್ವಾತಂತ್ರ್ಯಾನಂತರ ಅಮೆರಿಕನ್ ವೀರರನ್ನು ಗುರುತಿಸಿ, ಗೌರವಿಸಲು ನಿರ್ಧರಿಸಿದರು. ಕ್ರಾಂತಿಗೆ ಕಾರಣಪುರುಷರಾದ ಕೆಲವು ವ್ಯಕ್ತಿಗಳು ಸರ್ವರ ಗೌರವಕ್ಕೆ ಪಾತ್ರರಾಗಿ 'ರಾಷ್ಟ್ರವೀರರು' ಎನ್ನಿಸಿಕೊಂಡು ಇತರರಿಗೆ ರಾಷ್ಟ್ರೀಯತೆ ಬೆಳೆಸಿಕೊಳ್ಳಲು ಸ್ಫೂರ್ತಿ ನೀಡಿದರು. ಬೆಂಜಮಿನ್ ಫ್ರಾಂಕ್‌ಲಿನ್ ಸ್ವಾತಂತ್ರ್ಯ ಸಂಗ್ರಾಮಕ್ಕಿಂತ ಮುಂಚೆಯೇ ತನ್ನ ಸಂಶೋಧನೆಗಳ ಮೂಲಕ ಸುಪ್ರಸಿದ್ಧನಾಗಿದ್ದನು. ಅವನ ವಿದ್ಯುಚ್ಛಕ್ತಿಯ ಪ್ರಯೋಗಗಳು, ಅವನು ಪ್ರಕಟಿಸುತ್ತಿದ್ದ 'ಪೂರ್ ರಿಚರ್ಡ್‌ಸ್ ಅಲ್ಮನಾಕ್' (Poor Richard's Amanac) ಎನ್ನುವ ವಾರ್ಷಿಕ ಅತ್ಯಂತ ಯಶಸ್ವಿಯಾಯಿತು. ಮೇಲಾಗಿ ಅವನು ಕಾಂಟಿನೆಂಟಲ್ ಕಾಂಗ್ರೆಸ್‌ಗೆ ಸಲ್ಲಿಸಿದ ಸೇವೆಯಿಂದ ಮತ್ತು ಫ್ರಾನ್ಸಿನಲ್ಲಿ ಅಮೆರಿಕದ ರಾಯಭಾರಿ

ಯಾಗಿ ಅತ್ಯಂತ ಜನಾನುರಾಗಿಯಾಗಿದ್ದನು. ಥಾಮಸ್ ಜೆಫರ್‌ಸನ್ ರಾಷ್ಟ್ರೀಯ ನಾಯಕನಾಗಿ ಜನರ ಗೌರವಕ್ಕೆ ಪಾತ್ರನಾಗಿದ್ದು ಅವನು ಬರೆದ 'ಸ್ವಾತಂತ್ರ್ಯ ಪ್ರಣಾಳಿಕೆ' (Declaration of Independence) ಯಿಂದಾಗಿ. ಅಮೆರಿಕನ್ ರಾಷ್ಟ್ರೀಯ ನಾಯಕರಲ್ಲಿ ಅತ್ಯಂತ ಗಮನಾರ್ಹ ವ್ಯಕ್ತಿ ಎಂದರೆ ಜಾರ್ಜ್ ವಾಷಿಂಗ್‌ಟನ್. ಕೆಲವು ಇತಿಹಾಸಕಾರರು ವಾಷಿಂಗ್‌ಟನ್ 'ಅಮೆರಿಕನತ್ವದ ಮಾನವ ಸಂಕೇತ' (human symbol of common Americanism) ಎಂದು ವರ್ಣಿಸಿದ್ದಾರೆ. ಅವನ ವಿಶಿಷ್ಟ ಗುಣಗಳಾದ – ಸ್ವಾರ್ಥ ತ್ಯಾಗ, ಪ್ರಾಮಾಣಿಕತೆ, ಕಾರ್ಯನಿಷ್ಠತೆ ಮತ್ತು ಅಧಿಕಾರ ನಿರ್ಲಿಪ್ತತೆ – ಈ ಗುಣಗಳು ಅವನನ್ನು 'ರಾಷ್ಟ್ರಪಿತ'ನಾಗಿ ಮಾಡಿದವು. ಅವನ ಪ್ರಾಮುಖ್ಯತೆಯನ್ನು ಕುರಿತು ಕೆಲವು ಇತಿಹಾಸಕಾರರು – 'ವಾಷಿಂಗ್‌ಟನ್ ಇಲ್ಲದೆ ಹೋಗಿದ್ದರೂ ಅಮೆರಿಕನ್ನರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಜಯ ಗಳಿಸುವ ಸಾಧ್ಯತೆ ಇತ್ತು. ಆದರೆ ಅವನಿಲ್ಲದೆ ಹೋಗಿದ್ದರೆ ಸ್ವತಂತ್ರ ಸಂಯುಕ್ತ ಸಂಸ್ಥಾನಗಳು ಒಂದು ರಾಷ್ಟ್ರವಾಗಿ ಪರಿವರ್ತನೆಗೊಳ್ಳುವುದು ಬಹಳ ಕಷ್ಟವಾಗುತ್ತಿತ್ತು' ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಮಹಿಳೆಯರ ಸ್ಥಾನಮಾನಗಳು

ಅಮೆರಿಕ ಸ್ವಾತಂತ್ರ್ಯ ಪಡೆದ ಮೇಲೆ ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಹಲಕೆಲವು ಪ್ರಗತಿಪರ ಬದಲಾವಣೆಗಳಾದವು. ಆದರೆ ಸ್ತ್ರೀಯ ಸ್ಥಾನಮಾನಗಳಲ್ಲಿ ಅಂಥ ಬದಲಾವಣೆಗಳು ಆಗಲಿಲ್ಲ. ಸ್ವಾತಂತ್ರ್ಯ ಸಂಗ್ರಾಮಕ್ಕಿಂತಲೂ ಮುಂಚೆ ಸ್ತ್ರೀಯರು ರಾಜಕೀಯ ಆಂದೋಳನದಲ್ಲಿ ಭಾಗವಹಿಸಿದ್ದರು. ಬ್ರಿಟಿಷ್ ಸರಕುಗಳನ್ನು ನಿಷೇಧಿಸುವ ಚಳುವಳಿಯಲ್ಲಿ ಸ್ತ್ರೀಯರು ಪ್ರಮುಖ ಪಾತ್ರ ವಹಿಸಿದರು. ಬ್ರಿಟಿಷ್ ಸರಕುಗಳ ನಿಷೇಧ ಸಫಲವಾಗಲು ಸ್ತ್ರೀಯರು ಕಾರಣರಾದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ತ್ರೀಯರು ತಮ್ಮ ಸಾಂಪ್ರದಾಯಿಕ ಕೆಲಸಗಳನ್ನಲ್ಲದೆ ಬೇರೆ ಕ್ಷೇತ್ರಗಳಲ್ಲಿ ಕೆಲಸ ಮಾಡುವುದು ಅನಿವಾರ್ಯವಾಯಿತು. ಗಂಡಸರು ಯುದ್ಧದಲ್ಲಿ ತೊಡಗಿರುವಾಗ ಹೆಂಗಸರು ಹೊಲ ಉತ್ತು ಬಿತ್ತಿದರು, ಅಂಗಡಿಯ ವ್ಯಾಪಾರ ವ್ಯವಹಾರಗಳನ್ನು ನಿರ್ವಹಿಸಿದರು ಮತ್ತು ಲೋಹದ ಪಾತ್ರೆ-ಪರಡಿಗಳನ್ನು ಕರಗಿಸಿ ಬಂದೂಕಿನ ಗುಂಡುಗಳನ್ನು ತಯಾರಿಸಿದರು. ಕೆಲವರು ಮಹಿಳಾ ಸಂಘಸಂಸ್ಥೆಗಳನ್ನು ಸ್ಥಾಪಿಸಿ ಸೈನಿಕರ ಅಗತ್ಯಗಳನ್ನು ಪೂರೈಸಲು ಹಣ ಸಂಗ್ರಹ ಮಾಡತೊಡಗಿದರು. ಅನೇಕ ಮಹಿಳೆಯರು ಸೈನ್ಯ ಸೇರಿ ಸೈನಿಕರ ಸೇವೆಯಲ್ಲಿ ನಿರತರಾಗಿದ್ದರು ಮತ್ತು ಸೈನ್ಯಕ್ಕೆ ಅಗತ್ಯವಾದ ಸರಕು-ಸಾಮಗ್ರಿಗಳನ್ನು ಒದಗಿಸಲು ಸಾರಿಗೆ ವ್ಯವಸ್ಥೆಯನ್ನು ನಿರ್ವಹಿಸಿದರು. ಕೆಲವು ಹೆಂಗಸರು ತಮ್ಮ ಗಂಡಂದಿರ ಜೊತೆಯಲ್ಲಿ ಸೈನ್ಯದ ಬೀಡಿನಲ್ಲಿ ಇರುತ್ತಿದ್ದರು. ಹಲವು ಸಂದರ್ಭಗಳಲ್ಲಿ ಈ ಹೆಂಗಸರು ಗಂಡಂದಿರ ಸ್ಥಾನದಲ್ಲಿ ನಿಂತು ಹೋರಾಡುತ್ತಲೂ ಇದ್ದರು. ಡೆಬ್ರಾ ಸ್ಯಾಂಪ್ಸನ್ (Deborah Sampson) ಎಂಬ ವಿಶಿಷ್ಟ ಮಹಿಳೆ ಚಮತ್ಕಾರದಿಂದ ವೇಷ ಮರೆಸಿ, ಹೆಸರನ್ನು ರಾಬರ್ಟ್ ಷರ್ಟ್‌ಲೆಫ್ (Robert Shurtleff) ಎಂದು ಬದಲಾಯಿಸಿಕೊಂಡು ಮೆಸಾಚ್ಯುಸೆಟ್ಸ್ ಸೈನ್ಯವನ್ನು ಸೇರಿ, ತಾನು

ಹೆಂಗಸು ಎನ್ನುವುದರ ಸುಳಿವೂ ಕೊಡದೆ ೧೭೮೧ರಿಂದ ೧೭೮೩ರರವರೆಗೆ ಸೈನಿಕಳಾಗಿ ಸೇವೆ ಸಲ್ಲಿಸಿದಳು!

೧೭೭೬ರಷ್ಟು ಹಿಂದೆಯೇ ಅಬಿಗೈಲ್ ಆ್ಯಡಮ್ಸ್ (Abigail Adams) ಎನ್ನುವವಳು ಗಂಡಸರ ದಬ್ಬಾಳಿಕೆಯನ್ನು ವಿರೋಧಿಸಿ ಮಹಿಳೆಯರ ಸಮಸ್ಯೆಗಳಿಗೆ ನಾಯಕರು ಗಮನ ಕೊಡದಿದ್ದರೆ, ಆಂದೋಳನ ಪ್ರಾರಂಭಿಸಿ, ತಮಗೆ ಧ್ವನಿ ಎತ್ತಲು ಅವಕಾಶ ಕೊಡದ, ತಮ್ಮ ಪ್ರಾತಿನಿಧ್ಯವಿಲ್ಲದೆ ಜಾರಿಗೆ ಬಂದಿರುವ ಕಾಯಿದೆಗಳನ್ನು ಕಡೆಗಣಿಸಿ ಕ್ರಾಂತಿ ಉಂಟುಮಾಡುವುದಾಗಿ ಹೇಳಿಕೆ ಕೊಟ್ಟಳು. ಆಂದೋಳನಕ್ಕೆ ಕರೆಕೊಟ್ಟರೂ ಅಂದಿನ ಪರಿಸ್ಥಿತಿಯಲ್ಲಿ ಅದು ಕಾರ್ಯಗತವಾಗಲಿಲ್ಲ. ಅಲ್ಲಿ ಇಲ್ಲಿ ಕೆಲವು ಬದಲಾವಣೆಗಳಾದರೂ ಅವು ಬಹಳ ಕಾಲ ಉಳಿಯಲಿಲ್ಲ.

ಸಮಾನತೆಯ ತತ್ವ ಮಹಿಳೆಯರಿಗೆ ಹೆಚ್ಚಿಗೆ ಅನುಕೂಲವಾಗಲಿಲ್ಲ. ಮಹಿಳೆಯರ ಆಸ್ತಿಯು ಗಂಡಂದಿರ ಅಧಿಕಾರಕ್ಕೆ ಒಳಪಟ್ಟಿತ್ತು. ಅವರಿಗೆ ರಾಜಕೀಯ ಹಕ್ಕುಗಳು ಇರಲಿಲ್ಲ. ಸ್ತ್ರೀಯರ ವಿದ್ಯಾಭ್ಯಾಸಕ್ಕೆ ಕೆಲವು ಅವಕಾಶ ಮತ್ತು ಅನುಕೂಲತೆಗಳನ್ನು ಒದಗಿಸಿದರೂ ಸ್ತ್ರೀಯರ ಅಭ್ಯುದಯ ದೂರದ ಧ್ಯೇಯವಾಗಿ ಉಳಿಯಿತು. ಸ್ವಾತಂತ್ರ್ಯ ಪಡೆದ ಹೊಸದರಲ್ಲಿ ಕೆಲವು ಮಹಿಳೆಯರು ತಮ್ಮ ಸ್ಥಾನಮಾನಗಳನ್ನು ಉತ್ತಮ ಪಡಿಸಲು ಮಾಡಿದ ಪ್ರಯತ್ನಗಳು ಕಾಲಾನಂತರದಲ್ಲಿ ಮಹಿಳೆಯರು ನಡೆಸಿದ ಹೋರಾಟಗಳಿಗೆ ಮೇಲ್ಪಂಕ್ತಿಯಾದವು.

ಗುಲಾಮಗಿರಿಯ ಸಮಸ್ಯೆ

ಕ್ರಾಂತಿಯ ಮೂಲತತ್ವಗಳಾದ 'ಸ್ವತಂತ್ರ' ಮತ್ತು 'ಸಮಾನತೆ'ಗಳು ಸ್ವತಂತ್ರ ಅಮೆರಿಕದ ಆಧಾರಸ್ತಂಭಗಳಾದವು. ಈ ತತ್ವಗಳ ಬೆಳಕಿನಲ್ಲಿ ನೋಡಿದಾಗ ಸ್ವತಂತ್ರ ರಾಷ್ಟ್ರದಲ್ಲಿ ಗುಲಾಮಗಿರಿ ಐತಿಹಾಸಿಕ ವಿಪರ್ಯಾಸವಾಗಿ ತೋರಿತು. ಇಂಗ್ಲೆಂಡಿನ ರಾಜನನ್ನು – ಜನರ ದೈವದತ್ತವಾದ ಹಕ್ಕುಗಳನ್ನು ಕಸಿದುಕೊಂಡು, ಅವರನ್ನು ಸತತವಾಗಿ ದಾಸ್ಯದಲ್ಲಿಡಲು ಹವಣಿಸುತ್ತಿರುವ ನಿರಂಕುಶ ದೊರೆ ಎಂದು ಆರೋಪ ಹೊರಿಸಿದ ಅಮೆರಿಕನ್ನರು ತಾವೇ ಗಲಾಮಗಿರಿಯ ಸಮಸ್ಯೆಯನ್ನು ಎದುರಿಸಬೇಕಾಯಿತು. ಯಾವ ದೈವದತ್ತವಾದ ಹಕ್ಕುಗಳನ್ನು, ಸ್ವಾತಂತ್ರ್ಯವನ್ನು ತಾವು ಬಯಸಿದ್ದರೋ ಅದೇ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯವನ್ನು ಆಫ್ರಿಕದಿಂದ ಹಿಡಿದು ತಂದ ಗುಲಾಮರಿಗೆ ಅನ್ವಯಿಸಕೂಡದೆಂದು ಕೆಲವು ವಸಾಹತುಗಳು, ಮುಖ್ಯವಾಗಿ – ದಕ್ಷಿಣ ಕೆರೊಲಿನ ಮತ್ತು ಜಾರ್ಜಿಯ – ಒತ್ತಾಯ ಮಾಡಿದವು.

ಕ್ರಾಂತಿ ಪ್ರಾರಂಭವಾಗುವ ಮೊದಲೇ ರ್ಹೋಡ್ ಐಲೆಂಡ್, ಕನೆಕ್ಟಿಕಟ್ ಮತ್ತು ಪೆನ್ಸಿಲ್‌ವೇನಿಯ ಸಂಸ್ಥಾನಗಳು ಗುಲಾಮರ ಆಮದನ್ನು ನಿಷಿದ್ಧಗೊಳಿಸಿದ್ದವು. ಸ್ವಾತಂತ್ರ್ಯ ಬಂದಮೇಲೆ ಜಾರ್ಜಿಯ ಮತ್ತು ದಕ್ಷಿಣ ಕೆರೊಲಿನ ಸಂಸ್ಥಾನಗಳನ್ನು ಬಿಟ್ಟು ಮಿಕ್ಕ

ಎಲ್ಲಾ ಸಂಸ್ಥಾನಗಳಲ್ಲಿ ಗುಲಾಮಗಿರಿಯನ್ನು ನಿಷೇಧಿಸಲಾಯಿತು. ಸ್ವಾತಂತ್ರ್ಯ ಸಂಗ್ರಾಮದ ಎಲ್ಲ ಕದನಗಳಲ್ಲಿ ಕರಿಯ ಸೈನಿಕರು ಭಾಗವಹಿಸಿದ್ದರು. ಅವರಲ್ಲಿ ಕೆಲವು ರಾಜನಿಷ್ಠರು ಬ್ರಿಟಿಷರೊಡನೆ ಸೇರಿದ್ದರು. ೧೭೭೫ರಲ್ಲಿ ಬ್ರಿಟಿಷರು ತಮ್ಮ ಸೈನ್ಯಕ್ಕೆ ಸೇರಿ ಅಮೆರಿಕನ್ನರ ವಿರುದ್ಧ ಯುದ್ಧ ಮಾಡಿದ ಎಲ್ಲ ಗುಲಾಮರಿಗೂ ಬಿಡುಗಡೆ ನೀಡುವುದಾಗಿ ಪ್ರಕಟಣೆ ಹೊರಡಿಸಿದ್ದರು.

ಕರಿಯರು ಹೆಚ್ಚಿನ ಸಂಖ್ಯೆಯಲ್ಲಿ ಬ್ರಿಟಿಷ್ ಸೈನ್ಯವನ್ನು ಸೇರುವುದನ್ನು ನೋಡಿದ ವಾಷಿಂಗ್‌ಟನ್ ಕರಿಯರನ್ನು ಸೈನ್ಯಕ್ಕೆ ಸೇರಿಸಿಕೊಳ್ಳಬಾರದೆಂದು ಜಾರಿಯಲ್ಲಿದ್ದ ನಿರ್ಬಂಧ ವನ್ನು ತೆಗೆದು ಹಾಕಿದನು. ಇದಕ್ಕೆ ಕಾಂಗ್ರೆಸ್ಸಿನ ಒಪ್ಪಿಗೆಯೂ ದೊರೆಯಿತು. ಜಾರ್ಜಿಯ ಮತ್ತು ದಕ್ಷಿಣ ಕೆರೊಲಿನಗಳು ಮಾತ್ರ ತಮ್ಮ ವಿರೋಧವನ್ನು ವ್ಯಕ್ತ ಪಡಿಸಿದವು. ಈ ರೀತಿಯಾಗಿ ಸುಮಾರು ೫೦೦೦ ಕರಿಯ ಸೈನಿಕರನ್ನು ಅಮೆರಿಕ ಸೈನ್ಯಕ್ಕೆ ಸೇರಿಸಿಕೊಳ್ಳ ಲಾಯಿತು. ಇವರು ಬಿಳಿಯ ಸೈನಿಕರ ತುಕಡಿಗಳಲ್ಲಿ ಅವರ ಕೈಕೆಳಗೆ ಕಾರ್ಯಾಚರಣೆ ಮಾಡಬೇಕಾಗಿತ್ತು. ಮೆಸಾಚ್ಯುಸೆಟ್ಸ್ ಕರಿಯ ಸೈನಿಕರ ಎರಡು ತಂಡಗಳನ್ನು ತರಬೇತಿ ಮಾಡಿತು. ರ್‍ಹೋಡ್ ಐಲೆಂಡ್ ಒಂದು ಕರಿಯ ಸೈನಿಕರ ತಂಡವನ್ನು ತಯಾರು ಮಾಡಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಕರಿಯ ಸೈನಿಕರಿಗೆ ಬಿಡುಗಡೆ ದೊರೆಯಿತು. ಕೆಲವು ಸೈನಿಕರಿಗೆ ಬಹುಮಾನವಾಗಿ ಹಲವಾರು ಎಕರೆ ಭೂಮಿಯನ್ನು ಕೊಟ್ಟರು. ಆದರೆ ಅಮೆರಿಕನ್ನರಿಗಿಂತ ಬ್ರಿಟಿಷರು ಸಾವಿರಾರು ಕರಿಯರನ್ನು ಬಿಡುಗಡೆ ಮಾಡಿದರು. ಹೀಗೆ ಬಿಡುಗಡೆ ಪಡೆದ ಕರಿಯರಲ್ಲಿ ಮುಕ್ಕಾಲು ಪಾಲು ಕೆನಡ ಮತ್ತು ಬ್ರಿಟಿಷ್ ಕೆರಿಬ್ಬಿಯನ್ ವಸಾಹತುಗಳಿಗೆ ಹೊರಟು ಹೋದರು.

ಉತ್ತರ ಸಂಸ್ಥಾನಗಳಲ್ಲಿದ್ದ ಗುಲಾಮರ ಸಂಖ್ಯೆ ಬಹಳ ಕಡಿಮೆ. ಇದ್ದ ಎಲ್ಲ ಗುಲಾಮ ರನ್ನೂ ಬಿಡುಗಡೆ ಮಾಡಲಾಯಿತು. ೧೭೭೭ರ ವೆರ್‌ಮಾಂಟ್‌ನ (Vermont ರಾಜ್ಯಾಂಗ ಗುಲಾಮಗಿರಿಯನ್ನು ನಿಷೇಧಿಸಿತು. ಮೆಸಾಚ್ಯುಸೆಟ್ಸ್ ರಾಜ್ಯಾಂಗ 'ಸಕಲ ಮಾನವರಿಗೂ ಸ್ವಾತಂತ್ರ್ಯ ಸಹಜ ಪ್ರವೃತ್ತಿ' ಎಂದು ಸಾರಿತು! ಬೇರೆ ಪ್ರಾಂತಗಳಲ್ಲಿ ಗುಲಾಮರನ್ನು ಕ್ರಮೇಣವಾಗಿ ಬಿಡುಗಡೆ ಮಾಡುತ್ತಿದ್ದರು. ೧೭೮೦ರಲ್ಲಿ ಪೆನ್ಸಿಲ್‌ವೇನಿಯದಲ್ಲಿ ಆ ವರ್ಷದಿಂದ ಗುಲಾಮ ಹೆಂಗಸರಿಗೆ ಹುಟ್ಟಿದ ಮಕ್ಕಳು ಅವರ ಇಪ್ಪತ್ತೆಂಟನೆಯ ವಯಸ್ಸಿಗೆ ಬಂದಾಗ ಬಿಡುಗಡೆ ದೊರೆಯುವಂತೆ ನಿರ್ಣಯಿಸಲಾಯಿತು. ೧೭೮೪ರಲ್ಲಿ ರ್‍ಹೋಡ್ ಐಲೆಂಡ್ ಆ ವರ್ಷ ಹುಟ್ಟಿದ ಗುಲಾಮ ಮಕ್ಕಳಿಗೆ – ಹುಡುಗರಿಗೆ ೨೧ ವರ್ಷಕ್ಕೆ ಮತ್ತು ಹುಡುಗಿಯರಿಗೆ ೧೮ ವರ್ಷಕ್ಕೆ – ಬಿಡುಗಡೆ ದೊರೆಯುವಂತೆ ಶಾಸನ ಮಾಡಲಾಯಿತು.

ಪೆನ್ಸಿಲ್‌ವೇನಿಯದ ದಕ್ಷಿಣಕ್ಕೆ ಇದ್ದ ಪ್ರದೇಶದಲ್ಲಿ ವ್ಯವಸಾಯಕ್ಕೆ ಹೆಚ್ಚಿನ ಕೆಲಸಗಾರರು ಬೇಕಾಗುತ್ತಿತ್ತು. ದಕ್ಷಿಣ ಕೆರೊಲಿನದಲ್ಲಿ ಹತ್ತಿ, ಕಬ್ಬು ಮತ್ತು ಭತ್ತ ಬೆಳೆಗಳ ವ್ಯವಸಾಯ

ದಲ್ಲಿ ಕೆಲಸಗಾರರು ಗುಂಪು ಗುಂಪಾಗಿ ಕೆಲಸ ಮಾಡಬೇಕಾದ ಅಗತ್ಯವಿತ್ತು. ಆದ್ದರಿಂದ ಅಲ್ಲಿನ ಭೂಮಾಲೀಕರಿಗೆ ಗುಲಾಮರ ಅಗತ್ಯವಿತ್ತು. ದಕ್ಷಿಣ ಕೆರೊಲಿನ ಮತ್ತು ಜಾರ್ಜಿಯ ಸಂಸ್ಥಾನಗಳಲ್ಲಿ ವ್ಯವಸಾಯ ಅತ್ಯಂತ ಕಠಿಣವಾದ ಉದ್ಯಮವಾಗಿತ್ತು. ಭತ್ತದ ಗದ್ದೆಗಳಲ್ಲಿ, ಕಬ್ಬಿನ ಗದ್ದೆಗಳಲ್ಲಿ ಉರಿಯುವ ಬಿಸಿಲಿನ ಬೇಸಿಗೆಯಲ್ಲಿ ಬೆನ್ನು ಮುರಿಯುವ ಕೆಲಸ ಮಾಡಲು ಗುಲಾಮರಲ್ಲದ ಬೇರೆ ಕೆಲಸಗಾರರು ನಿರಾಕರಿಸುತ್ತಿದ್ದರು. ಆದ್ದರಿಂದ ಈ ಪ್ರಾಂತಗಳು ಗುಲಾಮರ ಬಿಡುಗಡೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಸ್ವಾತಂತ್ರ್ಯದ ನಂತರ ಬೇರೆ ಎಲ್ಲ ಸಂಸ್ಥಾನಗಳಲ್ಲಿ ಗುಲಾಮರ ಬಿಡುಗಡೆಯನ್ನು ಸಂಸ್ಥಾನ ಸರ್ಕಾರಗಳು ಅನುಮೋದಿಸಿದರೂ ದಕ್ಷಿಣ ಕೆರೊಲಿನ ಮತ್ತು ಜಾರ್ಜಿಯ ಸಂಸ್ಥಾನಗಳ ಆರ್ಥಿಕ ಭದ್ರತೆಗೆ ಗುಲಾಮಗಿರಿ ಅಗತ್ಯವಾಗಿತ್ತು. ದಕ್ಷಿಣ ಕೆರೊಲಿನದಲ್ಲಿ ಕರಿಯರು ಬಹುಸಂಖ್ಯಾತ ರಾಗಿದ್ದರು. ಇದು ಬಿಳಿಯರನ್ನು ಅಧೀರರನ್ನಾಗಿ ಮಾಡಿತ್ತು. ಬಹುಸಂಖ್ಯಾತರಾದ ಕರಿಯರಿಗೆ ಬಿಡುಗಡೆ ದೊರೆತರೆ ತಮ್ಮ ಗತಿ ಏನು ಎಂದು ಕಳವಳಗೊಂಡಿದ್ದರು.

ಈ ಪರಿಸ್ಥಿತಿಯಲ್ಲಿ ಕೆಲವು ಹೆಸರಾಂತ ಅಮೆರಿಕನ್ನರು ಗುಲಾಮರ ಮಾಲೀಕರಾಗಿ ದ್ದರು – ವಾಷಿಂಗ್‌ಟನ್, ಜಫರ್‌ಸನ್ ಮತ್ತು ಪ್ಯಾಟ್ರಿಕ್ ಹೆನ್ರಿ ಮುಂತಾದವರು – ತಾವು ಮಾಡುತ್ತಿರುವುದು ತಪ್ಪು ಎಂದು ತಿಳಿದಿದ್ದರೂ ಗುಲಾಮಗಿರಿಯನ್ನು ಮುಂದುವರೆಸಿ ಕೊಂಡು ಹೋಗುವಂಥ ಸಂದಿಗ್ಧ ಪರಿಸ್ಥಿತಿಗೆ ಒಳಗಾಗಿ ಒಂದು ರೀತಿಯ ತಪ್ಪಿತಸ್ಥ ಭಾವನೆಯಿಂದ ಪರಿತಪಿಸುತ್ತಿದ್ದರು ಎನ್ನುವುದು ಆಗಿನ ಬರವಣಿಗೆಗಳಿಂದ ತಿಳಿದುಬರುತ್ತದೆ.

ಅಮೆರಿಕನ್ ರಾಷ್ಟ್ರೀಯ ಸಂಸ್ಕೃತಿ

ಹೊಸದಾಗಿ ಆವಿಷ್ಕರಣಗೊಂಡ ಅಮೆರಿಕನ್ ರಾಷ್ಟ್ರೀಯತೆ ಅನೇಕ ರೂಪಗಳನ್ನು ತಳೆಯಿತು. ಇಂಗ್ಲೆಂಡಿನ ಸಂಬಂಧ ಕಡಿದುಕೊಂಡ ಅಮೆರಿಕ ಸಂಯುಕ್ತ ಸಂಸ್ಥಾನಗಳು ಪ್ರತ್ಯೇಕ ರಾಷ್ಟ್ರವಾಗಿ ತನ್ನದೇ ಆದ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಿತು. ಎಲ್ಲ ಕ್ಷೇತ್ರ ಗಳಲ್ಲೂ ಇಂಗ್ಲೆಂಡಿನ ಅಧೀನತೆ ಮತ್ತು ಪ್ರಭಾವವನ್ನು ಅಳಿಸಿ, ತಮ್ಮ 'ಸಹಜ ಅಮೆರಿಕನತ್ವ' (common Americanism) ವನ್ನು ಬೆಳೆಸುವ ಪ್ರಯತ್ನ ಮಾಡಲಾಯಿತು. ಅಮೆರಿಕನತ್ವವನ್ನು ಬೆಳೆಸುವುದರ ಮೂಲಕ 'ಅಮೆರಿಕನ್ ಸಂಸ್ಕೃತಿ' ಕ್ರಮೇಣವಾಗಿ ವಿಕಾಸಗೊಂಡಿತು.

ಈ ಅಮೆರಿಕರಣ (Americanization) ಮತಧರ್ಮ ಸಂಸ್ಥೆಗಳಿಗೂ ಹಬ್ಬಿತು. ಆ್ಯಂಗ್ಲಿಕನ್ ಚರ್ಚ್, ಇಂಗ್ಲೆಂಡಿನ ಸಂಬಂಧ ತಪ್ಪಿದ ಮೇಲೆ, 'ಪ್ರಾಟೆಸ್ಟಂಟ್ ಎಪಿಸ್ಕೋಪಲ್ ಚರ್ಚ್' ಆಗಿ ಮಾರ್ಪಾಟಾಯಿತು. ಡಚ್ ಮತ್ತು ಜರ್ಮನ್ ಸುಧಾರಿತ ಚರ್ಚುಗಳು ಸಹ ಯೂರೋಪಿನ ಸಂಬಂಧ ಕಡಿದುಕೊಂಡವು. ಅಮೆರಿಕದ ರೋಮನ್ ಕ್ಯಾಥಲಿಕರು ಇಂಗ್ಲೆಂಡಿನ ವಿಕಾರ್ ಅಪಾಸ್ಟಲಿಕ್‌ನ (vicar apostolic) ಆಡಳಿತಕ್ಕೆ ಒಳ ಪಟ್ಟಿದ್ದರು. ಸ್ವಾತಂತ್ರ್ಯಾನಂತರ ಬಾಲ್ಟಿಮೋರ್‌ನ ಫಾದರ್ ಜಾನ್ ಕ್ಯಾರಲ್ ಕ್ಯಾಥಲಿಕ್

ಚರ್ಚುಗಳ ಆಡಳಿತ ವಹಿಸಿಕೊಂಡನು. ೧೭೮೯ರಲ್ಲಿ ಅವನು ಅಮೆರಿಕದ ಮೊದಲನೆಯ ರೋಮನ್ ಕ್ಯಾಥಲಿಕ್ ಬಿಷಪ್ ಆಗಿ ನೇಮಕಗೊಂಡನು.

ಅಮೆರಿಕನ್ ರಾಷ್ಟ್ರೀಯತೆ ವಿದ್ಯಾಕ್ಷೇತ್ರದ ಮೇಲೆ ಮಹತ್ತರವಾದ ಪರಿಣಾಮ ಬೀರಿತು. ನೋಅ ವೆಬ್‌ಸ್ಟರ್ (Noah Webster) ಬರೆದ ಹೊಸ ಪಠ್ಯ ಪುಸ್ತಕಗಳು ಅಪಾರ ಯಶಸ್ಸು ಗಳಿಸಿದವು. ೧೭೮೩ರಲ್ಲಿ ಪ್ರಕಟವಾದ ವೆಬ್‌ಸ್ಟರನ 'ಸ್ಪೆಲ್ಲಿಂಗ್ ಬುಕ್' (spelling book) ನಲ್ಲಿ ಅಮೆರಿಕನ್ನರು ಬಳಸುವ ಪದಗಳಿಗೆ, ಬರೆಯುವ ಶೈಲಿಗೆ ಪ್ರಾಮುಖ್ಯತೆ ಕೊಡಲಾಯಿತು. ಅಮೆರಿಕನ್ನರು ತಮ್ಮ ಸಾಹಿತ್ಯವನ್ನು ಗೌರವಿಸಿ ಉತ್ತೇಜನ ನೀಡಬೇಕೆಂದು ಕರೆ ಕೊಟ್ಟರು. ವೆಬ್‌ಸ್ಟರನ ಲೇಖನಗಳ ಸಂಗ್ರಹ ಕೂಡ ಜನಪ್ರಿಯತೆ ಗಳಿಸಿತು. ಈ ಸಂಗ್ರಹದಲ್ಲಿ ಅಮೆರಿಕನ್ ಕ್ರಾಂತಿಯ ನಾಯಕರು ಮಾಡಿದ ಭಾಷಣಗಳನ್ನು ಸೇರಿಸಿದ್ದನು. ವೆಬ್‌ಸ್ಟರನ ಪ್ರಕಾರ ಈ ನಾಯಕರು ಗತಕಾಲದ ಅಸದೃಶ ವಾಗ್ಮಿಗಳೆಂದು ಪರಿಗಣಿಸಲಾದ ಸಿಸಿರೊ (Cicero) ಮತ್ತು ಡೆಮಾಸ್ತನೀಸ್ (Demosthenes)ರಿಗೆ ಸರಿಸಮನಾದವರು ಎಂದು ಅಭಿಪ್ರಾಯ ಪಟ್ಟಿದ್ದಾನೆ.

ಆಗ ಕಾಲೇಜುಗಳಲ್ಲಿ ದೇಶಪ್ರೇಮ ಉಕ್ಕಿ ಹರಿಯುತ್ತಿತ್ತು. ೧೭೫೪ರಲ್ಲಿ ಸ್ಥಾಪಿಸಿದ ಕಿಂಗ್ಸ್ ಕಾಲೇಜ್‌ನ ಹೆಸರು ಬದಲಾಯಿಸಿ 'ಕೊಲಂಬಿಯ' ಎಂದು ಕರೆಯಲಾಯಿತು. ಸ್ವಾತಂತ್ರ್ಯ ಬಂದ ಎರಡು ದಶಕಗಳೊಳಗೆ ಹೆಚ್ಚು ಕಾಲೇಜುಗಳು ಸ್ಥಾಪಿತಗೊಂಡವು. ಈ ಕಾಲೇಜುಗಳಲ್ಲಿ ಕೆಲವು ಕಾಲಕ್ರಮದಲ್ಲಿ ಪ್ರಾಂತೀಯ ವಿಶ್ವವಿದ್ಯಾನಿಲಯಗಳಾಗಿ ಬೆಳೆದವು – ಮೇರಿಲ್ಯಾಂಡ್, ಜಾರ್ಜಿಯ, ದಕ್ಷಿಣ ಕೆರೊಲಿನ ಮತ್ತು ಉತ್ತರ ಕೆರೊಲಿನ ವಿಶ್ವವಿದ್ಯಾನಿಲಯಗಳು ಅವುಗಳಲ್ಲಿ ಕೆಲವು. ಹಾಗೆಯೇ ಜಾರ್ಜ್ ಟೌನ್, ಸೆಂಟ್ ಜಾನ್ಸ್ ಆಫ್ ಆ್ಯನಾಪೊಲಿಸ್, ವಿಲ್ಲಿಯಮ್ಸ್ ಮತ್ತು ಬೌಡೋಯಿನ್ ವಿದ್ಯಾಸಂಸ್ಥೆಗಳು ಸ್ಥಾಪಿತ ವಾಗಿ ಅಭಿವೃದ್ಧಿಗೊಳ್ಳುತ್ತ ಹೋದವು.

ದೇಶಪ್ರೇಮ ವಿಜ್ಞಾನ ಮತ್ತು ಕಲೆಗಳ ಮೇಲೂ ಮಹತ್ತರವಾದ ಪ್ರಭಾವ ಬೀರಿತು. ಅಮೆರಿಕನ್ನರ ಆಸಕ್ತಿ, ಘನತೆ, ಗೌರವ ಮತ್ತು ಸುಖ ಸಂತೋಷಗಳನ್ನು ಹೆಚ್ಚಿಸಲು ಅಮೆರಿಕನ್ ಅಕಾಡೆಮಿ ಆಫ್ ಆರ್ಟ್ಸ್ ಎಂಡ್ ಸೈನ್ಸಸ್ ಸಂಸ್ಥೆಯನ್ನು ಕ್ರಾಂತಿಯ ಕಾಲದಲ್ಲೇ ಬಾಸ್ಟನ್ ನಗರದಲ್ಲಿ ಸ್ಥಾಪಿಸಲಾಯಿತು. ಎಲ್ಲ ಮಾಧ್ಯಮಗಳ ಮೂಲಕ ಅಮೆರಿಕದ ಆಶ್ಚರ್ಯಕರವಾದ ಪ್ರಗತಿಯನ್ನು ಹೊಗಳಿ, ಈ ಪ್ರಗತಿ ಅಮೆರಿಕನ್ನರ ಅಸಾಧಾರಣ ಪ್ರತಿಭೆಯ ಪರಿಣಾಮ ಎಂದು ಪ್ರಚುರಪಡಿಸುತ್ತಿದ್ದರು. ಆ ಕಾಲದ ವರ್ಣಚಿತ್ರಕಾರರು ತಮ್ಮ ಕೃತಿಗಳಿಗೆ ದೇಶಪ್ರೇಮ ಉಕ್ಕಿಸುವ ವಿಷಯಗಳನ್ನೇ ಆರಿಸಿಕೊಳ್ಳುತ್ತಿದ್ದರು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೂಡ ಸಾಹಿತಿಗಳು ದೇಶಪ್ರೇಮ ವಿಷಯವನ್ನೇ ಉಪಯೋಗಿಸಿಕೊಂಡು ಅಮೆರಿಕದ ಭವ್ಯತೆಯನ್ನು ಹೊಗಳಿ ಕೊಂಡಾಡು ತ್ತಿದ್ದರು! ೧೭೮೦ರ ದಶಕದಲ್ಲಿ ಅಮೆರಿಕ ಈಗಿನಂತೆ ಪ್ರಬಲವಾದ ಕೇಂದ್ರೀಕೃತ

ರಾಷ್ಟ್ರವಾಗಿರದಿದ್ದರೂ, ಜನಸಾಮಾನ್ಯರು ತಮ್ಮ ಪರಸ್ಪರ ಹಿತಾಸಕ್ತಿಗಳನ್ನು ಅರಿತು ಕೊಂಡು, ತಮ್ಮ ಪರಂಪರೆಯ ಬಗ್ಗೆ ಹೆಮ್ಮೆ ಬೆಳೆಸಿಕೊಳ್ಳುತ್ತ ಹೋದರು. ನೂತನ ರಾಷ್ಟ್ರವಾದ ಅಮೆರಿಕದ ಆದರ್ಶ ಸೂತ್ರ (motto) ಎಂದರೆ 'ಈ ಪ್ಲೂರಿಬಸ್ ಊನಂ' (E Pluribus Unum) 'ಅನೇಕತೆಯಿಂದ ಏಕತೆ' – ಇದು ಸ್ವಾತಂತ್ರ್ಯ ಪಡೆದ ಕಾಲದಿಂದ ಅಮೆರಿಕದಲ್ಲಿ ನಡೆಯುತ್ತಿರುವ ಸಾಮಾಜಿಕ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ವಿವರಿಸುತ್ತದೆ.

ರಾಜ್ಯಾಂಗ ರಚನೆ

ಸ್ವಾತಂತ್ರ್ಯಾನಂತರ ಅಮೆರಿಕ ಕಾಂಗ್ರೆಸ್ಸಿನ ಆಡಳಿತಕ್ಕೆ ಒಳಪಟ್ಟಿತು. ಆಡಳಿತಕ್ಕೆ ಸಂಬಂಧಪಟ್ಟ ಕಾರ್ಯ ಕಲಾಪಗಳನ್ನು ವಿವಿಧ ಸಮಿತಿಗಳಿಗೆ ಕಾಂಗ್ರೆಸ್ ವಹಿಸಿಕೊಟ್ಟಿತ್ತು. ಕೇಂದ್ರ ಸರ್ಕಾರಕ್ಕೆ ಬದಲಾಗಿ ಸಂಯುಕ್ತ ಸಂಸ್ಥಾನಗಳ ಕಾಂಗ್ರೆಸ್ (The Congress of the Confederation) ಆಡಳಿತ ನಿರ್ವಹಣೆಯ ಜವಾಬ್ದಾರಿಯನ್ನು ಪಡೆದಿತ್ತು. ಆದರೆ ಸಂಯುಕ್ತ ಸಂಸ್ಥಾನಗಳಿಗೆ ಸರ್ಕಾರಕ್ಕೆ ಇರಬೇಕಾದ ಅಧಿಕಾರ (Authority) ಇರಲಿಲ್ಲ. ಸಂಯುಕ್ತ ಸಂಸ್ಥಾನಗಳು ಒಂದು ಸಂಘವಾಗಿತ್ತೇ ವಿನಾ ಸರ್ಕಾರವಾಗಿರಲಿಲ್ಲ. ಈ ಸಂಘ ಜನರನ್ನು ಹಣ ಕೊಡಿ ಎಂದು ಕೇಳಬಹುದಿತ್ತೇ ವಿನಾ ಒತ್ತಾಯ ಮಾಡುವ ಅಧಿಕಾರ ವಿರಲಿಲ್ಲ; ರಾಜಕೀಯ ಕರಾರು ಮಾಡಿಕೊಳ್ಳಬಹುದಿತ್ತೇ ವಿನಾ ಅದನ್ನು ಅನುಷ್ಠಾನಕ್ಕೆ ತರುವ ಅಧಿಕಾರವಿರಲಿಲ್ಲ. ಹೀಗೆ ಸಂಯುಕ್ತ ಸಂಸ್ಥಾನಗಳ ಕಾಂಗ್ರೆಸ್ ವಿದೇಶಿ ವ್ಯವಹಾರ ಗಳಲ್ಲಿ ಮತ್ತು ದೇಶದ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಏನೂ ಮಾಡಲು ಸಾಧ್ಯವಾಗದೆ ಹೋಯಿತು. ಕಾಂಗ್ರೆಸ್ ವಿವಿಧ ಸಮಿತಿಗಳ ಸಹಾಯದಿಂದ ದೇಶದಲ್ಲಿ ಅರಾಜಕತೆ ಉಂಟಾಗದಂತೆ ರಾಜ್ಯಭಾರ ಹೇಗೋ ನಡೆಸಿಕೊಂಡು ಹೋಗುತ್ತಿತ್ತು. ಆರ್ಥಿಕ ಪರಿಸ್ಥಿತಿ ಹದಗೆಟ್ಟು ಜನರಲ್ಲಿ ಅಸ್ಥಿರತೆ, ಅನಿಶ್ಚಯತೆ ಮತ್ತು ಭವಿಷ್ಯದ ಬಗ್ಗೆ ಆತಂಕ ಹೆಚ್ಚಿತು. ಪರಿಸ್ಥಿತಿ ಹದಗೆಡುವ ಮೊದಲೇ ಸೂಕ್ತಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯ ಸರ್ವರಿಗೂ ವೇದ್ಯವಾಯಿತು.

ಆರ್ಥಿಕ ಮುಗ್ಗಟ್ಟು ಮತ್ತು ವಿದೇಶಗಳ ಸಾಲದ ಹೊರೆಗಳನ್ನು ಪರಿಹರಿಸಲು ಕಾಂಗ್ರೆಸ್ ಮತ್ತು ಸಂಸ್ಥಾನದ ಸರ್ಕಾರಗಳು ಅಪಾರ ಮೊತ್ತದ ಕಾಗದ ಹಣವನ್ನು ಉತ್ಪಾದಿಸಿ ಚಾಲನೆ ಮಾಡಿದರು. ಪರಿಣಾಮವಾಗಿ ತೀವ್ರ ಹಣದುಬ್ಬರವಾಗಿ ಕಾಂಟಿನೆಂಟಲ್ ಡಾಲರ್ ಬೆಲೆಯಿಲ್ಲದಾಯಿತು. ಈ ಸಮಸ್ಯೆಯನ್ನು ಪರಿಹರಿಸಲು ಅನೇಕ ಸಂಸ್ಥಾನ ಸರ್ಕಾರಗಳು ತೆರಿಗೆಯನ್ನು ಹೆಚ್ಚಿಸಿ ಹಣದ ಚಲಾವಣೆಯನ್ನು ಕಡಿಮೆ ಮಾಡಿದವು. ಈ ಕ್ರಮದಿಂದಾಗಿ ಬೆಲೆಗಳು ಮತ್ತು ವೇತನಗಳು ತೀವ್ರವಾಗಿ ಕುಸಿದವು. ಬೆಲೆಗಳ ಕುಸಿತ ರೈತರ ಜೀವನವನ್ನು ದುಸ್ಸಾಧ್ಯವಾಗಿ ಮಾಡಿತು. ಬೆಲೆ ಕುಸಿತದಿಂದ ನಷ್ಟ ಅನುಭವಿಸಿದ ರೈತರು ತೆರಿಗೆಯನ್ನು ಕೊಡಲಾರದೆ, ಸಾಲವನ್ನು ತೀರಿಸಲಾರದೆ ಸಾಲ

ಗಾರರು ಅವರ ಆಸ್ತಿಯನ್ನು ಮುಟ್ಟುಗೋಲು ಮಾಡಿಕೊಳ್ಳುತ್ತಿದ್ದರು. ಸಾಲ ಪಾವತಿ ಮಾಡಲಾಗದ ಸಾಮಾನ್ಯ ಜನರಿಂದ ಜೈಲುಗಳು ತುಂಬಿ ಹೋಗಿದ್ದವು.

೧೭೮೬ರ ಬೇಸಿಗೆಯಲ್ಲಿ ಉದ್ರಿಕ್ತರಾದ ಮತ್ತು ಕೋಪಾವಿಷ್ಟರಾದ ಜನರ ಗುಂಪುಗಳು ರೈತರ ಆಸ್ತಿಯನ್ನು ಮುಟ್ಟುಗೋಲು ಹಾಕುವುದನ್ನು ಪ್ರತಿಭಟಿಸಿದವು. ಈ ಜನರ ಗುಂಪು ನ್ಯಾಯಾಲಯಗಳನ್ನು ಬಲಾತ್ಕಾರದಿಂದ ಮುಚ್ಚಿಸಿದವು. ಡೇನಿಯಲ್ ಶೇಯ್ಸ್ (Daniel Shays) ನ ನಾಯಕತ್ವದಲ್ಲಿ ದಂಗೆಕಾರರು ಸ್ಪ್ರಿಂಗ್‌ಫೀಲ್ಡ್ (Springfield) ಗೆ ಮುತ್ತಿಗೆ ಹಾಕಿ ಅಲ್ಲಿನ ಉಚ್ಚ ನ್ಯಾಯಾಲಯ ಸೇರದಂತೆ ತಡೆಗಟ್ಟಿದರು. ಆದರೆ ಅವರು ಸ್ಪ್ರಿಂಗ್‌ಫೀಲ್ಡಿನ ಶಸ್ತ್ರಾಗಾರವನ್ನು ಮುತ್ತಿದಾಗ ಅಲ್ಲಿನ ರಕ್ಷಣಾದಳದವರು ಅವರನ್ನು ಸೋಲಿಸಿ ಓಡಿಸಿದರು. ದಂಗೆ ನಿಂತಿತು. ಶೇಯ್ಸ್‌ನು ವೆರ್‌ಮಾಂಟ್ (Vermont) ಪ್ರಾಂತಕ್ಕೆ ಓಡಿಹೋದನು. ಈ 'ಶೇಯ್ಸ್‌ನ ದಂಗೆ' ಏನನ್ನೂ ಸಾಧಿಸಲಾರದೆ ಹೋದರೂ, ಜನರ ಸಮಸ್ಯೆಗಳನ್ನು ಪರಿಹರಿಸಲು ಕಾಂಗ್ರೆಸ್ ನಾಲಾಯಕ್ಕು ಎನ್ನುವುದನ್ನು ಸಾಬೀತು ಮಾಡಿದಂತಾಯಿತು. ದಂಗೆ, ಹಿಂಸಾಚಾರಗಳಿಂದ ಜನರು ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳುವ ಪರಿಸ್ಥಿತಿ ಬಂದಿರುವುದು ಬಹುಸಂಖ್ಯಾತ ಅಮೆರಿಕನ್ನರಿಗೆ ಅರಾಜಕತೆ ಹೆಚ್ಚು ದೂರವಿಲ್ಲ ಎನಿಸಿತು. ಪ್ರಬಲವಾದ ಕೇಂದ್ರ ಆಡಳಿತದ ಅವಶ್ಯಕತೆ ಎಲ್ಲರಿಗೂ ಮನದಟ್ಟಾಯಿತು.

ಬಹುಸಂಖ್ಯಾತ ಅಮೆರಿಕನ್ನರು ಪ್ರಬಲವಾದ ಕೇಂದ್ರ ಆಡಳಿತವನ್ನು ಒಪ್ಪಿಕೊಂಡರೂ, ಹೆಚ್ಚಿನ ಅಧಿಕಾರ ಕೇಂದ್ರೀಕರಣವಾದರೆ ಪ್ರಾಂತಗಳ/ಸಂಸ್ಥಾನಗಳ ಪ್ರಭುತ್ವ ಮತ್ತು ಸ್ವಾಯತ್ತತೆಗಳನ್ನು ನಾಶಗೊಳಿಸಬಹುದು ಎನ್ನುವ ಅನುಮಾನ ಕೆಲವರಲ್ಲಿ ಉಂಟಾಯಿತು. ಆಡಳಿತದ ಕೇಂದ್ರೀಕರಣ ಅನಿವಾರ್ಯವಾಗಿ ತೋರಿದ್ದರಿಂದ ಕೇಂದ್ರ ಸರ್ಕಾರ ರಚಿಸುವ ಪ್ರಯತ್ನವನ್ನು ಪ್ರಾರಂಭಿಸಿದರು. ಮಾರ್ಚ್ ೧೭೮೫ರಲ್ಲಿ ರಾಜ್ಯಾಂಗ ರಚನೆಯ ಮಾರ್ಗದಲ್ಲಿ ಮೊದಲ ಹೆಜ್ಜೆ ಇಡಲಾಯಿತು. ವರ್ಜೀನಿಯ ಮತ್ತು ಮೇರಿಲ್ಯಾಂಡ್ ಪ್ರತಿನಿಧಿಗಳು ಸರ್ವಪ್ರಾಂತಗಳ ಸಮ್ಮೇಳನ ಏರ್ಪಡಿಸುವ ಸೂಚನೆ ಕೊಟ್ಟರು. ಈ ಸಮ್ಮೇಳನದ ಉದ್ದೇಶ ವಾಣಿಜ್ಯ ಸಮಸ್ಯೆಗಳನ್ನು ಚರ್ಚಿಸುವುದು ಎಂದು ಪ್ರಕಟಿಸಿದರು. ಜನವರಿ ೧೭೮೬ರಲ್ಲಿ ವರ್ಜೀನಿಯ ಶಾಸಕ ಸಭೆ ಸರ್ವಪ್ರಾಂತಗಳ ಸಮ್ಮೇಳನವನ್ನು ಸೆಪ್ಟೆಂಬರ್ ತಿಂಗಳಲ್ಲಿ ಅನ್ನಾಪೊಲಿಸ್ ನಗರದಲ್ಲಿ ಏರ್ಪಡಿಸಿರುವುದಾಗಿ ತಿಳಿಸಿ ಪ್ರಾಂತಗಳ ಪ್ರತಿನಿಧಿಗಳಿಗೆ ಅಧಿಕೃತ ಆಹ್ವಾನ ಕಳುಹಿಸಿತು. ಈ ಸಮ್ಮೇಳನ ರಾಜಕೀಯ ಕ್ಷೇತ್ರದಲ್ಲಿ ಸುಧಾರಣೆ ಮಾಡಬೇಕೆಂದು ಹೊರಟವರಿಗೆ ನಿರಾಶೆ ಉಂಟುಮಾಡಿತು. ಕೇವಲ ಐದು ಪ್ರಾಂತಗಳ ಪ್ರತಿನಿಧಿಗಳು ಹಾಜರಿದ್ದರು. ಆದ್ದರಿಂದ ಆ ಸಮ್ಮೇಳನದಲ್ಲಿ ಯಾವ ಸುಧಾರಣೆಯನ್ನೂ ಮಂಡಿಸಲಿಲ್ಲ.

ಸಮ್ಮೇಳನದಲ್ಲಿ ಹಾಜರಿದ್ದ ಪ್ರತಿನಿಧಿಗಳಲ್ಲಿ ನ್ಯೂಯಾರ್ಕಿನ ವಕೀಲ ಅಲೆಗ್ಸಾಂಡರ್

ಹ್ಯಾಮಿಲ್‌ಟನ್‌ನೂ ಒಬ್ಬ. ತರುಣ ಅಲೆಗ್ಸಾಂಡರ್ ಹ್ಯಾಮಿಲ್‌ಟನ್ ಧೀಮಂತ, ಧೀರ ಮತ್ತು ಪ್ರತಿಭಾವಂತನಾಗಿದ್ದನು. ಅವನು ಅಧಿಕಾರ ಕೇಂದ್ರೀಕರಣ ಮಾತ್ರ ಈ ಹೊಸ ರಾಷ್ಟ್ರವನ್ನು ಛಿದ್ರಗೊಳಿಸದಂತೆ ಉಳಿಸಬಲ್ಲದು ಎಂದು ವಾದಿಸಿ, ಸಮ್ಮೇಳನ ವಿಫಲ ಗೊಂಡಿತೆಂದು ಖಿನ್ನರಾಗುವ ಬದಲು ಮತ್ತೊಂದು ಸಮ್ಮೇಳನವನ್ನು ರಾಜ್ಯಾಂಗ ಸುಧಾರಣೆಗಳನ್ನು ಚರ್ಚಿಸುವ ಸಲುವಾಗಿ ಫಿಲಡೆಲ್ಫಿಯದಲ್ಲಿ ಏರ್ಪಡಿಸಬೇಕೆಂದು ಸಲಹೆ ಮಾಡಿದನು. ಅವನ ಸಲಹೆಯನ್ನು ಎಲ್ಲರೂ ಒಪ್ಪಿಕೊಂಡರು. ನಂತರ ಕಾಂಗ್ರೆಸ್ ಅವನ ಸಲಹೆಯನ್ನು ಅಧಿಕೃತವಾಗಿ ಅನುಮೋದಿಸಿತು. ಫಿಲಡೆಲ್ಫಿಯದಲ್ಲಿ ನಡೆದ ಎರಡನೆಯ ಸಮ್ಮೇಳನದಲ್ಲಿ, ರ್‍ಹೋಡ್ ಐಲೆಂಡ್ ಬಿಟ್ಟು, ಮಿಕ್ಕ ಎಲ್ಲ ಸಂಸ್ಥಾನದ ಪ್ರತಿನಿಧಿಗಳು ಹಾಜರಿದ್ದರು. ೧೭೮೭ರ ಮೇ ತಿಂಗಳ ೨೫ರಂದು ಫಿಲಡೆಲ್ಫಿಯಾದ ರಾಜ್ಯಭವನದಲ್ಲಿ ಸಮ್ಮೇಳನ ಪ್ರಾರಂಭವಾಯಿತು. ಸಭಾಸದಸ್ಯರು ಸರ್ವಾನುಮತದಿಂದ ಜಾರ್ಜ್ ವಾಷಿಂಗ್‌ಟನ್‌ನನ್ನು ಅಧ್ಯಕ್ಷನನ್ನಾಗಿ ಚುನಾಯಿಸಿದರು. ಈ ಸಮ್ಮೇಳನ ನಾಲ್ಕು ತಿಂಗಳ ಕಾಲ ವಿಚಾರ ವಿನಿಮಯ ನಡೆಸಿ ರಾಜ್ಯಾಂಗವನ್ನು ರಚಿಸುವುದರಲ್ಲಿ ಯಶಸ್ಸು ಗಳಿಸಿತು.

ಥಾಮಸ್ ಜಫರ್‌ಸನ್ ಮತ್ತು ಜಾನ್ ಆ್ಯಡಮ್ಸ್ ಇಬ್ಬರೂ ಯೂರೋಪಿನಲ್ಲಿದ್ದುದರಿಂದ ಈ ಸಮ್ಮೇಳನದಲ್ಲಿ ಭಾಗವಹಿಸಲಾಗಲಿಲ್ಲ. ಅಮೆರಿಕ ರಾಜ್ಯಾಂಗವನ್ನು ರಚಿಸಿದ ಸದಸ್ಯರು ಅಸಾಧಾರಣ ವ್ಯಕ್ತಿಗಳಾಗಿದ್ದರು. ಆಶ್ಚರ್ಯವೇನೆಂದರೆ, ಅವರೆಲ್ಲ ಚಿಕ್ಕ ವಯಸ್ಸಿನವರು, ಅಂದರೆ ನಲವತ್ತರ ಪ್ರಾಯದವರು. ರಾಜ್ಯಾಂಗ ರಚಿಸಲು ಸೇರಿದ್ದ ಈ ಪ್ರತಿನಿಧಿಗಳು ನಾನಾ ರೀತಿಯ ಕೌಶಲ ಮತ್ತು ಪ್ರತಿಭೆಯುಳ್ಳವರಾಗಿದ್ದರು. ಅದೃಷ್ಟವಶಾತ್ ಅವರಲ್ಲಿ ಮೂಲತತ್ವಗಳ ಬಗ್ಗೆ ಹೆಚ್ಚಿನ ಭಿನ್ನಾಭಿಪ್ರಾಯಗಳಿರಲಿಲ್ಲ. ಈ ಮೂಲತತ್ವಗಳೆಂದರೆ: ರಾಷ್ಟ್ರದಲ್ಲಿ ಸಂಯುಕ್ತ ವ್ಯವಸ್ಥೆ ಏರ್ಪಡಬೇಕು – ಅಂದರೆ ಪ್ರಾಂತಗಳು/ಸಂಸ್ಥಾನಗಳು ಸಂಯುಕ್ತವಾಗಿದ್ದರೂ ಸ್ವಾತಂತ್ರ್ಯವುಳ್ಳವುಗಳಾಗಿರಬೇಕು. ಸರ್ಕಾರ ಪ್ರಜಾಪ್ರಭುತ್ವವಾಗಿರಬೇಕು; ಸರ್ಕಾರದ ಅಧಿಕಾರ ಪ್ರಜೆಗಳಿಂದ ಅವರ ಪ್ರತಿನಿಧಿಗಳ ಮೂಲಕ ಅಧಿಕೃತವಾಗಿರಬೇಕು; ಸರ್ಕಾರ ಪ್ರಜೆಗಳಿಗೆ ಹೊಣೆಯಾಗಿರಬೇಕು. ಸಾಮಾನ್ಯ ಪ್ರಜೆಗಳಿಗೂ ಕೂಡ ರಾಜಕೀಯ ಪ್ರಕ್ರಿಯೆಗಳಲ್ಲಿ ಭಾಗವಹಿಸಿ ತಮ್ಮನ್ನು ಪ್ರತಿನಿಧಿಸುವವರನ್ನು, ತಮ್ಮನ್ನು ನಿಯಂತ್ರಿಸುವ ಕಾಯಿದೆ ಮಂಡಿಸುವವರನ್ನು ಚುನಾಯಿಸುವ ಅವಕಾಶ ಇರಬೇಕು. ಸಮಾಜದಲ್ಲಿ ಯಾವ ವರ್ಗದವರಿಗೂ, ಅವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದರೂ ಕೂಡ, ಅವರಿಗೆ ಅನಿಯಂತ್ರಿತ ಅಧಿಕಾರ ಇರಕೂಡದು. ಕಾರಣ ಮನುಷ್ಯ ಮೂಲತಃ ಸ್ವಾರ್ಥಪರ; ಇತರರ ಹಿತಾಸಕ್ತಿಗಳನ್ನು ಪರಿಗಣಿಸುತ್ತಾನೆ ಎನ್ನುವ ಭರವಸೆಯಿಲ್ಲ. ಆದ್ದರಿಂದ ಬಡವರಿಗೂ ಕೂಡ ಸರ್ಕಾರ ರಚನೆಯಲ್ಲಿ ಭಾಗವಹಿಸುವ ಅವಕಾಶವಿದ್ದರೆ ಅವರು ತಮ್ಮನ್ನು ಪ್ರಬಲರಾದವರು ಶೋಷಣೆ ಮಾಡದಂತೆ ರಕ್ಷಿಸಿಕೊಳ್ಳಬಹುದು. ಅದೇ ರೀತಿ ಬಹುಸಂಖ್ಯಾತರಾದ ಬಡವರು ಮತ್ತು ಸಾಮಾನ್ಯ ವರ್ಗದವರು ಹಣವಂತರನ್ನು ಲೂಟಿ ಮಾಡುವ ಅವಕಾಶ ಇರಕೂಡದು. ಪ್ರತಿವ್ಯಕ್ತಿಗೂ

ತನ್ನ ಆಸ್ತಿಯ ಮೇಲೆ ಹಕ್ಕು ಇರಬೇಕು. ಇತರರು ಅದನ್ನು ಬಲಾತ್ಕಾರದಿಂದ ವಶ ಮಾಡಿಕೊಳ್ಳದಂತೆ ಸುರಕ್ಷತೆ ನೀಡಬೇಕು. ಪ್ರಜೆಗಳ ಆಸ್ತಿ ಸುರಕ್ಷಿತವಾಗಿರದಿದ್ದರೆ ಯಾವ ಸರ್ಕಾರವೂ ಭದ್ರವಾಗಿರುವುದಿಲ್ಲ. ಸರ್ಕಾರದ ವಿವಿಧ ಅಂಗಗಳ ನಡುವೆ ಅಧಿಕಾರ ಸಮತೋಲನವಾಗಿರಬೇಕು. ಯಾವ ಸಂಸ್ಥಾನ ಆಗಲಿ, ಸರ್ಕಾರದ ಯಾವ ಅಂಗವೇ ಆಗಲಿ, ಬೇರೆ ಸಂಸ್ಥಾನದ ಮೇಲೆ, ಬೇರೆ ಅಂಗಗಳ ಮೇಲೆ ಬಲಪ್ರಯೋಗ ಮಾಡಿ ಮೆರೆಯುವಂತೆ ಇರಬಾರದು. ಈ ಮುಖ್ಯ ಅಂಶಗಳನ್ನು ಅಳವಡಿಸಿಕೊಂಡ 'ಪ್ರತಿಬಂಧ ಮತ್ತು ಸಮತೋಲನ'ದ (checks and balance) ವ್ಯವಸ್ಥೆಯನ್ನು ಸ್ಥಾಪಿಸಲಾಯಿತು.

ಸಮ್ಮೇಳನದ ಪ್ರಾರಂಭದಲ್ಲೇ ಸದಸ್ಯರು ಕಾನ್‌ಫೆಡೆರೇಟ್ ಕಾಯಿದೆಗಳನ್ನು (Articles of Confederation) ಸುಧಾರಣೆ ಮಾಡುವುದಕ್ಕಿಂತಲೂ ಹೊಸರೀತಿಯ ಸರ್ಕಾರವನ್ನು ವ್ಯವಸ್ಥೆಗೊಳಿಸುವುದು ಮೇಲು ಎಂದು ನಿರ್ಧರಿಸಿ ಅದರ ರೂಪರೇಷೆಗಳನ್ನು ರಚಿಸತೊಡಗಿದರು. ಹಳೆಯ ಕಾನ್‌ಫೆಡೆರೇಷನ್ ವ್ಯವಸ್ಥೆಯನ್ನು ಛಿದ್ರಗೊಳಿಸಿ ಅದರ ಬದಲು ನಿಜವಾದ ರಾಷ್ಟ್ರೀಯ ಸರ್ಕಾರ ರಚಿಸಲು ಅಲೆಗ್ಸಾಂಡರ್ ಹ್ಯಾಮಿಲ್‌ಟನ್‌ನು ಕರೆಕೊಟ್ಟನು. ರಾಷ್ಟ್ರೀಯ ಸರ್ಕಾರ ರಚನೆಯಾಗಬೇಕೆಂಬ ಅವನು ಮಂಡಿಸಿದ ಕೋರಿಕೆ ಸರ್ವಾನುಮತದಿಂದ ಅಂಗೀಕೃತವಾಗಿ ಸದಸ್ಯರು ಹೊಸ ಸರ್ಕಾರ ರಚಿಸುವುದರಲ್ಲಿ ಕಾರ್ಯನಿರತರಾದರು. ಮೊದಲ ಹಂತದಲ್ಲೇ ಎರಡು ದೊಡ್ಡ ಸಮಸ್ಯೆಗಳು ಎದುರಾದವು. ಮೊದಲನೆಯದಾಗಿ: ರಾಷ್ಟ್ರೀಯ ಸರ್ಕಾರದ ಅಧಿಕಾರ ವ್ಯಾಪ್ತಿ ಏನು, ಎಷ್ಟು ಎನ್ನುವುದನ್ನು ನಿರ್ಧರಿಸುವುದು. ಇದನ್ನು ನಿರ್ಧರಿಸಲು ಸದಸ್ಯರಿಗೆ ಹೆಚ್ಚಿನ ಕಾಲ ಬೇಕಾಗಲಿಲ್ಲ. ತೆರಿಗೆ ವಸೂಲಿ, ಸಂಸ್ಥಾನಗಳ ನಡುವಣ ವ್ಯಾಪಾರ ನಿಯಂತ್ರಣ, ಸೈನ್ಯ ಮತ್ತು ನೌಕಾಪಡೆಗಳ ನಿರ್ವಹಣೆ, ಸಮಯ-ಬಂದಾಗ ಸೇನಾಪಡೆಗಳನ್ನು ಕರೆಸಿ, ದಂಗೆ, ರಾಜದ್ರೋಹ ಕಾರ್ಯಗಳಲ್ಲಿ ತೊಡಗುವ ಗುಂಪುಗಳನ್ನು ನಿವಾರಿಸುವುದು ಮತ್ತು ರಾಷ್ಟ್ರದ ಕಾಯಿದೆಗಳನ್ನು ಅನುಷ್ಠಾನಗೊಳಿಸುವುದು – ಇವು ರಾಷ್ಟ್ರೀಯ ಸರ್ಕಾರದ ಪ್ರಮುಖ ಕಾರ್ಯಗಳು. ಸಂಸ್ಥಾನ ಸರ್ಕಾರಗಳಿಗೆ ಹಣ ಚಲಾವಣೆ ಮಾಡುವ ಹಕ್ಕನ್ನು ರದ್ದುಗೊಳಿಸಿದರು. ಅವು ಬೇರೆ ದೇಶಗಳೊಡನೆ ಪ್ರತ್ಯೇಕ ಕರಾರುಗಳನ್ನು ಮಾಡಿಕೊಳ್ಳುವುದನ್ನು ನಿರ್ಬಂಧಿಸಲಾಯಿತು. ಕಾಂಗ್ರೆಸ್ಸಿನ ಅನುಮತಿ ಇಲ್ಲದೆ ಸಂಸ್ಥಾನ ಸರ್ಕಾರಗಳು ಆಮದು ಮತ್ತು ರಫ್ತು ಸರಕುಗಳ ಮೇಲೆ ತೆರಿಗೆ ಹಾಕುವುದನ್ನು ನಿಷೇಧಿಸಲಾಯಿತು.

ಎರಡನೆಯ ಸಮಸ್ಯೆ ಎಂದರೆ: ರಾಷ್ಟ್ರೀಯ ಸರ್ಕಾರವನ್ನು ನಿಯಂತ್ರಿಸುವುದು ಯಾರು ಎನ್ನುವ ಪ್ರಶ್ನೆ. ಇದು ಬಹಳ ವಾಗ್ವಾದಗಳಿಗೆ ಕಾರಣವಾಯಿತು. ದೊಡ್ಡ ಮತ್ತು ಚಿಕ್ಕ ಪ್ರಾಂತಗಳ ಪ್ರತಿನಿಧಿಗಳು ವಾಗ್ಯುದ್ಧ ಪ್ರಾರಂಭಿಸಿದರು. ದೊಡ್ಡ ಪ್ರಾಂತಗಳು ರಾಜಕೀಯ ಶಾಸಕಾಂಗಕ್ಕೆ ಕಳುಹಿಸುವ ಪ್ರತಿನಿಧಿಗಳ ಸಂಖ್ಯೆ ಆ ಸಂಸ್ಥಾನದ ಜನಸಂಖ್ಯೆಯ ಮೇಲೆ ಆಧಾರಿತವಾಗಿರಬೇಕೆಂದು ವಾದಿಸಿದರೆ, ಚಿಕ್ಕ ಸಂಸ್ಥಾನಗಳು ಜನಸಂಖ್ಯೆಯನ್ನು ಗಣನೆಗೆ

ತೆಗೆದುಕೊಳ್ಳದೆ ಎಲ್ಲ ಸಂಸ್ಥಾನಗಳಿಗೂ ಸಮಾನ ಪ್ರತಿನಿಧಿಗಳ ಸಂಖ್ಯೆ ಇರಬೇಕೆಂದು ಹಠ ಹಿಡಿದರು. ದೊಡ್ಡ ಸಂಸ್ಥಾನಗಳ ಪರವಾಗಿ ಜೇಮ್ಸ್ ಮ್ಯಾಡಿಸನ್ (James Madison) ಮತ್ತು ಚಿಕ್ಕ ಸಂಸ್ಥಾನಗಳ ಪರವಾಗಿ ವಿಲಿಯಂ ಪೇಟರ್‌ಸನ್ (William Paterson) ವಾದ ವಿವಾದ ನಡೆಸಿದರು. ಇದು ಬಹಳ ಮುಖ್ಯವಾದ ವಿಷಯ. ಎಲ್ಲಾ ಸಂಸ್ಥಾನಗಳು ಸಮಾನ ಸಂಖ್ಯೆಯ ಪ್ರತಿನಿಧಿಗಳನ್ನು ಕಳುಹಿಸುವಂತಾದರೆ ಅದು ಪ್ರಜಾ/ಜನತಾ ಸರ್ಕಾರದ ತತ್ವಕ್ಕೆ ವಿರೋಧವಾಗುತ್ತದೆ; ಪ್ರಜಾರಾಜ್ಯದ ಮುಖ್ಯತತ್ವ: ಬಹುಸಂಖ್ಯಾತರ ಆಡಳಿತ. ಜನಸಂಖ್ಯೆಯ ಪ್ರಮಾಣದ ಆಧಾರದ ಮೇಲೆ ಪ್ರತಿನಿಧಿಗಳ ಸಂಖ್ಯೆಯನ್ನು ನಿರ್ಧರಿಸುವುದಾದರೆ, ಅದು ಸಂಸ್ಥಾನ ರಚನೆಯ ತಳಹದಿಯನ್ನು ನಾಶಗೊಳಿಸುತ್ತದೆ. ಯಾಕೆಂದರೆ ಸಂಸ್ಥಾನ ರಚನೆ ಬರಿಯ ಜನಸಂಖ್ಯೆಯನ್ನು ಆಧರಿಸಿರುವುದಿಲ್ಲ. ಜನಸಂಖ್ಯೆ ಮುಖ್ಯವಾದರೂ, ಬೇರೆ ಮುಖ್ಯ ಅಂಗಗಳಾದ ಆರ್ಥಿಕ, ಭೌಗೋಳಿಕ ಮತ್ತು ಸಾಮಾಜಿಕ ಅಂಶಗಳನ್ನು ಕಡೆಗಣಿಸಲಾಗದು. ಈ ವಿಷಯಗಳನ್ನು ಕುರಿತು ಎರಡು ಪಂಗಡದವರಲ್ಲಿ ವಾದ ವಿವಾದಗಳು ಜುಲೈ ತಿಂಗಳ ಮಧ್ಯದವರೆಗೂ ನಡೆದು, ಪರಿಹಾರ ಕಾಣದೆ ಬಿಕ್ಕಟ್ಟಿನ ಪರಿಸ್ಥಿತಿ ಏರ್ಪಟ್ಟಿತ್ತು. ಕೊನೆಗೆ ಪ್ರತಿನಿಧಿಗಳು ಒಂದು ಒಪ್ಪಂದಕ್ಕೆ ಬಂದರು. ಈ ಒಪ್ಪಂದವನ್ನು 'ಮಹಾಸಂಧಾನ' (Great Compromise) ಎಂದು ಕರೆಯುತ್ತಾರೆ. ರಚಿತವಾಗಲಿರುವ ಹೊಸಸರ್ಕಾರದ ಕೆಳಮನೆಗೆ (Lower House) ಜನಸಂಖ್ಯೆಯ ಆಧಾರದ ಮೇಲೆ ಪ್ರತಿನಿಧಿಗಳ ಸಂಖ್ಯೆಯನ್ನು ನಿರ್ಧರಿಸಿ ಅವರು ಜನರಿಂದ ಚುನಾಯಿತ ರಾಗಬೇಕು. ಸರ್ಕಾರದ ಮೇಲ್ಮನೆಯಲ್ಲಿ (Upper House) – ಸೆನೆಟ್ – ಪ್ರತಿಯೊಂದು ಸಂಸ್ಥಾನವನ್ನು ಇಬ್ಬರು ಪ್ರತಿನಿಧಿಸಬೇಕು. ಈ ಇಬ್ಬರು ಪ್ರತಿನಿಧಿಗಳನ್ನು ಸಂಸ್ಥಾನ ಶಾಸಕಾಂಗಗಳು ಆಯ್ಕೆ ಮಾಡಿ ಕಳುಹಿಸಬೇಕು.

ನಂತರ ಉತ್ತರ ಮತ್ತು ದಕ್ಷಿಣ ಪ್ರತಿನಿಧಿಗಳ ನಡುವೆ ಗುಲಾಮಗಿರಿಯನ್ನು ಕುರಿತು ಮತ್ತೊಂದು ಸಂಕೀರ್ಣ ವಾಗ್ಯುದ್ಧ ನಡೆಯಿತು. ಉತ್ತರದ ಪ್ರತಿನಿಧಿಗಳು ತೆರಿಗೆ ವಸೂಲಿಯಲ್ಲಿ ಗುಲಾಮರನ್ನೂ ಗಣನೆಗೆ ತೆಗೆದುಕೊಳ್ಳಬೇಕೆಂದು ವಾದಿಸಿದರು. ದಕ್ಷಿಣದವರು ಅದಕ್ಕೆ ಒಪ್ಪಲಿಲ್ಲ. ಆದರೆ ಪ್ರಜಾಪ್ರತಿನಿಧಿ ಸಭೆಗೆ ಪ್ರತಿನಿಧಿಗಳ ಸಂಖ್ಯೆ ಯನ್ನು ನಿರ್ಧರಿಸುವಾಗ ಜನಸಂಖ್ಯೆಯಲ್ಲಿ ಗುಲಾಮರನ್ನು ಸೇರಿಸಬೇಕೆಂದು ಒತ್ತಾಯ ಮಾಡಿದರು. ಜನಸಂಖ್ಯೆ ಲೆಕ್ಕ ಹಾಕುವಾಗ ಗುಲಾಮರನ್ನು ಸೇರಿಸಿಕೊಳ್ಳಬೇಕೆಂದು ಒತ್ತಾಯಿಸಿದರೂ ಗುಲಾಮರಿಗೆ ಮತದಾನದ ಹಕ್ಕು ಕೊಡಲು ಅವರು ತಯಾರಿರಲಿಲ್ಲ! ದೀರ್ಘವಾದ ಚರ್ಚೆಯ ನಂತರ '೩/೫ ಸಂಧಾನ' ಕ್ಕೆ ಎಲ್ಲರೂ ಒಪ್ಪಿಕೊಂಡರು. ಅಂದರೆ ಒಟ್ಟು ಜನಸಂಖ್ಯೆಯಲ್ಲಿ ಗುಲಾಮರಲ್ಲದ ಇತರರಲ್ಲಿ ೩/೫ ಭಾಗವನ್ನು ಪ್ರತಿನಿಧಿಗಳ ಸಂಖ್ಯೆ ನಿರ್ಧಾರ ಮಾಡುವುದಕ್ಕೆ ಮತ್ತು ತೆರಿಗೆ ನಿಗದಿ ಮಾಡಲು ಗಣನೆಗೆ ತೆಗೆದುಕೊಳ್ಳಬೇಕೆಂದು ಒಪ್ಪಂದ ಮಾಡಿಕೊಂಡರು. ಕ್ಲಿಷ್ಟ ಸಮಸ್ಯೆಯಾದ ಗುಲಾಮರ ಮಾರಾಟದ ಬಗ್ಗೆ ಚರ್ಚೆಯನ್ನು ಮುಂದೆ ಹಾಕಲಾಯಿತು. ೧೮೦೮ರವರೆಗೆ ಗುಲಾಮರ

ಮಾರಾಟವನ್ನು ಕಾಂಗ್ರೆಸ್ ರದ್ದುಗೊಳಿಸಬಾರದು ಎನ್ನುವ ಠರಾವನ್ನು ಅನುಮೋದಿಸಿತು. ಇನ್ನೂ ಅನೇಕ ಭಿನ್ನಾಭಿಪ್ರಾಯಗಳನ್ನು ಕೊಡು-ಕೊಳ್ಳುವುದರ (give and take) ಮೂಲಕ ಪರಿಹರಿಸಲಾಯಿತು.

ಅಂತಿಮವಾಗಿ, ಪರಿಷ್ಕರಿಸಿ ಸಿದ್ಧವಾದ ರಾಜ್ಯಾಂಗ/ಸಂವಿಧಾನ ಪ್ರಣಾಳಿಕೆಗೆ ೧೭೮೭ಲ ನೆಯ ಇಸವಿ ಸೆಪ್ಟೆಂಬರ್ ತಿಂಗಳ ೧೭ನೆಯ ತಾರೀಖು ರಾಜ್ಯಾಂಗ ರಚನೆಯಲ್ಲಿ ಭಾಗವಹಿಸಿದ್ದ 'ರಾಷ್ಟ್ರಪಿತರು' (the Founding Fathers) ತಾವು ಸೃಷ್ಟಿಸಿದ ಸಂವಿಧಾನಕ್ಕೆ ತಮ್ಮ ಖಚಿತ ಸಮ್ಮತಿ ಸೂಚಿಸಿ ರುಜು ಮಾಡಿದರು. ಈ ರಾಜ್ಯಾಂಗ ರಾಷ್ಟ್ರೀಯ ಸರ್ಕಾರದ ಮೂರು ಮುಖ್ಯ ಅಂಗಗಳನ್ನು ವಿಶದಗೊಳಿಸಿತು – ಮೊದಲನೆಯದಾಗಿ: ನ್ಯಾಯ ವಿಧಾಯಕ ಸಭೆ (Legislature). ಇದರಲ್ಲಿ ಮೇಲ್ಮನೆ ಮತ್ತು ಕೆಳಮನೆ ಎಂದು ಎರಡು ವಿಭಾಗಗಳಿರುತ್ತವೆ. ಎರಡನೆಯದಾಗಿ: ರಾಷ್ಟ್ರಾಧ್ಯಕ್ಷ ಹಾಗೂ ಉಪರಾಷ್ಟ್ರಾಧ್ಯಕ್ಷರ ನ್ನೊಳಗೊಂಡ ಕಾರ್ಯನಿರ್ವಾಹಕ ಸಭೆ (Executive). ರಾಷ್ಟ್ರಾಧ್ಯಕ್ಷ ವಿಶಾಲ ಆಡಳಿತಾಧಿಕಾರವನ್ನು ಪಡೆದಿರುವಂತೆ ಮಾಡಿ ಉಪರಾಷ್ಟ್ರಾಧ್ಯಕ್ಷ ಮೇಲ್ಮನೆಯ ಕಾರ್ಯಕಲಾಪಗಳಲ್ಲಿ ಅಧ್ಯಕ್ಷತೆ ವಹಿಸುವಂತೆ ಮಾಡಲಾಯಿತು. ಮೂರನೆಯದಾಗಿ: ನ್ಯಾಯಾಧೀಶರ ಸಭೆ (Judiciary). ಇದರಲ್ಲಿ ರಾಷ್ಟ್ರದ ಶ್ರೇಷ್ಠ ನ್ಯಾಯಾಲಯ ಮತ್ತು ಕಾಂಗ್ರೆಸ್ ಸೃಷ್ಟಿಸಬಹುದಾದ ಕೆಳವರ್ಗದ ನ್ಯಾಯಾಲಯಗಳು ಸೇರಿರುತ್ತವೆ.

ಹೆಚ್ಚು ಅಧಿಕಾರವುಳ್ಳ ಅಧ್ಯಕ್ಷಪದವಿಯನ್ನು ಸೃಷ್ಟಿ ಮಾಡಿದ್ದು ಹಿಂದೆ ಯಾವ ಕಾಲದಲ್ಲೂ ಆಗಿರದಂಥ ಒಂದು ಹೊಸ ಬೆಳವಣಿಗೆ. ಸಮ್ಯಕ್ ಚಾರಿತ್ರ್ಯ, ಸಮ್ಯಗ್ ಜ್ಞಾನ ಮತ್ತು ನಿಷ್ಪಕ್ಷಪಾತ ಗುಣಗಳಿಂದ ಕೂಡಿದ್ದ ಜಾರ್ಜ್ ವಾಷಿಂಗ್‌ಟನ್ ಮೊದಲನೆಯ ಅಧ್ಯಕ್ಷನಾಗಿಲ್ಲದೆ ಹೋಗಿದ್ದರೆ, ರಾಜ್ಯಾಂಗವನ್ನು ರಚಿಸಿದ ರಾಷ್ಟ್ರಪಿತರು ಅಧ್ಯಕ್ಷ ಸ್ಥಾನದಲ್ಲಿ ಇಷ್ಟೊಂದು ವಿಶಾಲ ಅಧಿಕಾರವನ್ನು ಕೇಂದ್ರೀಕರಿಸುತ್ತಿರಲಿಲ್ಲ. ರಾಜ್ಯಾಂಗ/ಸಂವಿಧಾನ ರಾಷ್ಟ್ರಾಧ್ಯಕ್ಷನಿಗೆ ರಾಷ್ಟ್ರದ ಕಾಯಿದೆಗಳನ್ನು ಚಲಾಯಿಸುವ ಹೊಣೆಗಾರಿಕೆ ಕೊಟ್ಟದ್ದಲ್ಲದೆ ಅವನನ್ನು ಸೈನ್ಯದ ಎಲ್ಲಾ ಶಾಖೆಗಳ ಶ್ರೇಷ್ಠ ದಂಡನಾಯಕನನ್ನಾಗಿ (Commander in Chief of the armed forces) ಮಾಡಿತು. ವಿದೇಶ ವ್ಯವಹಾರಗಳ ಮೇಲ್ವಿಚಾರಣೆಯನ್ನೂ ಅವನಿಗೆ ವಹಿಸಿತು. ಫೆಡರಲ್ (Federal) ನ್ಯಾಯಾಧೀಶರನ್ನು ಮತ್ತು ಇತರ ಅಧಿಕಾರಿ ಗಳನ್ನು ನೇಮಿಸುವ ಅಧಿಕಾರವನ್ನೂ ಅಧ್ಯಕ್ಷನಿಗೆ ಕೊಡಲಾಯಿತು. ಕಾಂಗ್ರೆಸ್ ಮಂಡಿಸಿದ ಯಾವ ಕಾಯಿದೆಯನ್ನಾಗಲಿ ಅಧ್ಯಕ್ಷ ನಿಷೇಧಿಸುವ (Veto) ಅಧಿಕಾರಕೊಡಲಾಯಿತು. ಆದರೆ ಕಾಂಗ್ರೆಸ್ ಮತ್ತು ಸೆನೆಟ್‌ನಲ್ಲಿ ೨/೩ ಬಹುಮತದಿಂದ ಅಧ್ಯಕ್ಷನ ನಿಷೇಧ (Veto)ವನ್ನು ರದ್ದು ಮಾಡಬಹುದು ಎಂದೂ ನಿರ್ಧರಿಸಲಾಯಿತು. ರಾಷ್ಟ್ರಾಧ್ಯಕ್ಷನು ಪ್ರತಿವರ್ಷ ರಾಷ್ಟ್ರದ ಸ್ಥಿತಿಗತಿಗಳ ಬಗ್ಗೆ ವರದಿ ಮಾಡಬೇಕೆಂದು ರಾಜ್ಯಾಂಗ ನಿರ್ದೇಶಿಸಿಸು ವಂತೆ ಮಾಡಲಾಯಿತು. ರಾಷ್ಟ್ರಾಧ್ಯಕ್ಷನನ್ನು ಅಧಿಕಾರದಿಂದ ತೆಗೆದುಹಾಕಲು ರಾಜ್ಯಾಂಗ ಅವಕಾಶ ಮಾಡಿಕೊಟ್ಟಂತೆ. ಕಾಂಗ್ರೆಸ್ ಅಧ್ಯಕ್ಷನ ಮೇಲೆ ಆಪಾದನೆ ಹೊರಿಸಬಹುದು

(indictment). ಇವು ದೇಶದ್ರೋಹ, ಲಂಚಗುಳಿತನದಂಥ ಗಂಭೀರ (serious) ಅಪರಾಧಗಳಾಗಿರಬೇಕು – ಈ ಆಪಾದನೆಗಳು ಸಾಬೀತಾದರೆ ಕಾಂಗ್ರೆಸ್ ರಾಷ್ಟ್ರಾಧ್ಯಕ್ಷನನ್ನು ಅಧಿಕಾರದಿಂದ ತೆಗೆದು ಹಾಕಬಹುದೆಂದೂ (impeachment). ಅಧ್ಯಕ್ಷನ ಆಪಾದನೆಗಳ ವಿಚಾರಣೆ ಶ್ರೇಷ್ಠ ನ್ಯಾಯಾಲಯದ ಪ್ರಮುಖ ನ್ಯಾಯಾಧೀಶರ ಸಮ್ಮುಖದಲ್ಲಿ ನಡೆಯುವಂತೆ ರಾಜ್ಯಾಂಗ ನಿರ್ದೇಶಿಸಿದೆ.

ರಾಜ್ಯಾಂಗ ರಾಷ್ಟ್ರದ ಅಧ್ಯಕ್ಷನನ್ನು ಚುನಾಯಿಸಲು ದೀರ್ಘವಾದ ಜಟಿಲ ವ್ಯವಸ್ಥೆಯನ್ನು ಜಾರಿಗೆ ತಂದಿತು. ಪ್ರತಿ ಸಂಸ್ಥಾನವೂ ಹಲವು 'ಆಯ್ಕೆಗಾರರನ್ನು' (electors) ಆರಿಸಬೇಕು. ಈ ಆಯ್ಕೆಗಾರರ ಸಂಖ್ಯೆ ಆ ಸಂಸ್ಥಾನದ ಸೆನೆಟ್ ಮತ್ತು ಕಾಂಗ್ರೆಸ್ ಪ್ರತಿನಿಧಿಗಳ ಸಂಖ್ಯೆಗೆ ಸಮನಾಗಿರಬೇಕು. ಅಮೆರಿಕದ ರಾಜಕೀಯದಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇಬ್ಬರೂ ಪ್ರಜೆಗಳು ನೇರವಾಗಿ ಚುನಾಯಿಸಿದ ಅಧಿಕಾರಿಗಳಲ್ಲ. ಆಗಲೇ ತಿಳಿಸಿರುವಂತೆ ಇವರಿಬ್ಬರನ್ನೂ ರಾಜ್ಯಾಂಗ ನಮೂದಿಸಿರುವ ವಿಧಾನಗಳನ್ನು ಅನುಸರಿಸಿ 'ಎಲೆಕ್ಟರಲ್ ಕಾಲೇಜಿನ' ಸದಸ್ಯರು ಆಯ್ಕೆ ಮಾಡುತ್ತಾರೆ. ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ನವೆಂಬರ್ ತಿಂಗಳ ಮೊದಲನೆಯ ಸೋಮವಾರದ ನಂತರದ ಮೊದಲನೆಯ ಮಂಗಳವಾರ ಪ್ರತಿ ಸಂಸ್ಥಾನ – ಆ ಸಂಸ್ಥಾನದ ಸೆನೆಟರ್‌ಗಳ ಮತ್ತು ಕಾಂಗ್ರೆಸ್ ಸದಸ್ಯರ ಸಂಖ್ಯೆಗೆ ಸಮನಾದ ಸಂಖ್ಯೆಯ 'ಎಲೆಕ್ಟರ್'ಗಳನ್ನು ಆಯ್ಕೆ ಮಾಡುತ್ತಾರೆ. ಪ್ರಸ್ತುತ ಎಲೆಕ್ಟರಲ್ ಕಾಲೇಜಿನ ರಚನೆ ಅದು ಸ್ಥಾಪಿತಗೊಂಡ ಕಾಲಕ್ಕಿಂತ ಭಿನ್ನವಾಗಿದೆ. ರಾಜ್ಯಾಂಗದ ೨೩ನೆಯ ತಿದ್ದುಪಡಿಯನ್ನು ಅನುಸರಿಸಿ ೧೯೬೪ರಲ್ಲಿ ಮೊಟ್ಟ ಮೊದಲ ಬಾರಿಗೆ ಡಿಸ್ಟ್ರಿಕ್ಟ್ ಆಫ್ ಕೊಲಂಬಿಯ (District of Columbia) ಮೂರು ಎಲೆಕ್ಟರುಗಳನ್ನು ಚುನಾಯಿಸಿತು. ಇದರ ಜೊತೆಗೆ ಒಂದು ನೂರು ಸೆನೆಟರ್‌ಗಳು ಮತ್ತು ೪೩೫ ಕಾಂಗ್ರೆಸ್ ಸದಸ್ಯರು ಸೇರಿ ಪ್ರಸ್ತುತ ಎಲೆಕ್ಟರ್‌ಗಳ ಸಂಖ್ಯೆ ೫೩೮. ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಚುನಾಯಿಸಲು ೨೭೦ ಬಹುಮತ ಬೇಕಾಗುತ್ತದೆ.

ರಾಷ್ಟ್ರಪಿತರು ಎಲೆಕ್ಟರಲ್ ಕಾಲೇಜು ಸ್ಥಾಪಿಸಿದಾಗ ಪಕ್ಷಗಳು ಇರಲಿಲ್ಲ. ಈಗ ರಾಜಕೀಯ ಪಕ್ಷಗಳು ತಮ್ಮ ಸಂಸ್ಥಾನಗಳ ಅಧಿವೇಶನಗಳಲ್ಲಿ ಅಭ್ಯರ್ಥಿಗಳ ಪಟ್ಟಿಯನ್ನು ಅನುಮೋದಿಸುವ ಮೂಲಕ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುತ್ತಾರೆ. ನವೆಂಬರ್ ತಿಂಗಳಲ್ಲಿ ನಡೆಯುವ ಚುನಾವಣೆಯಲ್ಲಿ ಕೆಲವು ಸಂಸ್ಥಾನಗಳಲ್ಲಿ ಮತದಾನ ಪಟ್ಟಿಯ ಮೇಲಿನ ಪಂಕ್ತಿಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳ ಅಭ್ಯರ್ಥಿಗಳ ಹೆಸರುಗಳನ್ನು ಹಾಕಿರುತ್ತಾರೆ. ಹೇಗಾದರೂ ಸರಿ, ಯಾವ ಪಕ್ಷದ ಎಲೆಕ್ಟರುಗಳು ಬಹುಮತ ಪಡೆಯುತ್ತಾರೋ ಅವರು ಚುನಾಯಿತರಾಗುತ್ತಾರೆ. ಸಾಂಪ್ರದಾಯಿಕವಾಗಿ ಡಿಸೆಂಬರ್ ತಿಂಗಳ ಮೊದಲನೆಯ ಸೋಮವಾರದಂದು ಆಯಾಯ ಸಂಸ್ಥಾನಗಳ ರಾಜಧಾನಿಗಳಲ್ಲಿ ಎಲೆಕ್ಟರುಗಳು ಸಭೆ ಸೇರುತ್ತಾರೆ. ಲಾಗಾಯತ್ತಿನಿಂದ ಬಂದ ಪದ್ಧತಿಯಂತೆ ಎಲೆಕ್ಟರುಗಳು ತಮ್ಮ

ತಮ್ಮ ಪಕ್ಷ ನಾಮಕರಣ ಮಾಡಿರುವ ಅಭ್ಯರ್ಥಿಗಳಿಗೆ ತಮ್ಮ ಮತ ನೀಡುತ್ತಾರೆ. ಹೀಗೆ ಮಾಡಬೇಕೆಂದು ಕಾನೂನು ಇಲ್ಲ. ಆದರೂ ಎಲೆಕ್ಟರುಗಳು ಪದ್ಧತಿಯನ್ನು ಮೀರುವುದು ಅಪರೂಪ. ಎಲೆಕ್ಟರುಗಳು ತಮ್ಮ ಸಂಸ್ಥಾನದವನಲ್ಲದ ಒಬ್ಬ ಅಭ್ಯರ್ಥಿಗಾದರೂ ಮತ ನೀಡಬೇಕೆಂದು ರಾಜ್ಯಾಂಗದಲ್ಲಿ ನಿರ್ದೇಶಿಸಲಾಗಿದೆ. ಹೀಗೆ ಮಾಡುವುದರಿಂದ ಒಂದು ಪಕ್ಷ ಅಧ್ಯಕ್ಷಸ್ಥಾನ ಮತ್ತು ಉಪಾಧ್ಯಕ್ಷಸ್ಥಾನಗಳಿಗೆ ನಾಮಕರಣ ಮಾಡಿರುವವರು ಒಂದೇ ಸಂಸ್ಥಾನದವರಾಗುವ ಸಾಧ್ಯತೆಯನ್ನು ತಪ್ಪಿಸುತ್ತದೆ. ಎಲೆಕ್ಟರ್ ಕಾಂಗ್ರೆಸ್ ಸದಸ್ಯನಾಗಿರಬಾರದು ಮತ್ತು ಫೆಡರಲ್ ಸರ್ಕಾರದ ಅಭ್ಯರ್ಥಿಯಾಗಿರಬಾರದು.

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ ಯಾವ ಅಭ್ಯರ್ಥಿಗೂ ಬಹುಮತ ಬಾರದೆ ಹೋದಲ್ಲಿ, ಪ್ರಜಾಪ್ರತಿನಿಧಿ ಸಭೆ ಮುಂಚೂಣಿಯಲ್ಲಿರುವ ಮೂರು ಅಭ್ಯರ್ಥಿಗಳಲ್ಲಿ ಒಬ್ಬನನ್ನು ಅಧ್ಯಕ್ಷನನ್ನಾಗಿ ಆಯ್ಕೆ ಮಾಡುತ್ತದೆ. ಹೀಗೆ ಆಯ್ಕೆ ಮಾಡುವಾಗ ಆಯಾಯ ಸಂಸ್ಥಾನದ ಪ್ರತಿನಿಧಿಗಳು **ಒಟ್ಟಾಗಿ** ತಮ್ಮ ಸಂಸ್ಥಾನದ ಪರವಾಗಿ **ಒಂದು** ಮತ ನೀಡುತ್ತಾರೆ. ಸಂಸ್ಥಾನದ ಮತಗಳನ್ನು ಎಲ್ಲರಿಗಿಂತ ಹೆಚ್ಚು ಪಡೆದ ಅಭ್ಯರ್ಥಿ ಅಧ್ಯಕ್ಷನಾಗಿ ಚುನಾಯಿತನಾಗುತ್ತಾನೆ. ೧೮೦೦ ಮತ್ತು ೧೮೨೪ರ ಚುನಾವಣೆಗಳಲ್ಲಿ ಈ ವಿಧಾನವನ್ನು ಅನುಸರಿಸಿ ಅಧ್ಯಕ್ಷರನ್ನು ಆಯ್ಕೆ ಮಾಡಿದರು. ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದವರಲ್ಲಿ ಯಾರೂ ಬಹುಮತ ಪಡೆಯದೆ ಹೋದರೆ ಸೆನೆಟ್ ಮುಂಚೂಣಿಯಲ್ಲಿರುವ ಇಬ್ಬರು ಅಭ್ಯರ್ಥಿಗಳನ್ನು ಆಯ್ದು ಅವರಿಬ್ಬರಲ್ಲಿ ಯಾರು ಸೆನೆಟ್‌ನಲ್ಲಿ ಬಹುಮತ ಪಡೆಯುತ್ತಾರೊ ಅವನು ಉಪಾಧ್ಯಕ್ಷನಾಗಿ ಚುನಾಯಿಸಲ್ಪಡುತ್ತಾನೆ. ಈ ರೀತಿ ಆಗಿದ್ದು ೧೮೩೬ರ ಚುನಾವಣೆಯಲ್ಲಿ.

ಈ ರಾಜ್ಯಾಂಗದ ವಿಶಿಷ್ಟತೆಯೆಂದರೆ ಕೇಂದ್ರ ಸರ್ಕಾರದ ಅಧಿಕಾರವನ್ನು ವಿಶಾಲಗೊಳಿಸಿದರೂ ಸಹ ಸಂಸ್ಥಾನಗಳ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗದಂತೆ ವ್ಯವಸ್ಥೆಗೊಳಿಸುವುದು. ಕೇಂದ್ರ ಸರ್ಕಾರವನ್ನು ಬಲಪಡಿಸುವುದನ್ನು ವಿರೋಧಿಸಿದವರು ಪ್ರಬಲವಾದ ಕೇಂದ್ರ ಸರ್ಕಾರ ಸಂಸ್ಥಾನಗಳ ಸ್ವಾಯತ್ತತೆಯನ್ನು ನಾಶಗೊಳಿಸುತ್ತದೆ ಎಂದು ನುಡಿದ ಭವಿಷ್ಯ ಸುಳ್ಳಾಯಿತು. ಅಮೆರಿಕನ್ ಸಮಾಜ ಬೆಳೆದು ಹೆಚ್ಚು ಸಂಕೀರ್ಣಗೊಂಡಂತೆ ಸಂಸ್ಥಾನಗಳು ಪ್ರಬಲವಾಗಿ ಉಳಿದಿವೆ ಮತ್ತು ಆಡಳಿತದಲ್ಲಿ ಸಂಪೂರ್ಣ ಸ್ವಾಯತ್ತತೆ ಪಡೆದಿವೆ. ಈ ರಾಜ್ಯಾಂಗದಲ್ಲಿ ಸರ್ಕಾರ ವಿವಿಧ ಆಡಳಿತದ ಭಾಗಗಳು ಪರಸ್ಪರವಾಗಿ ತಮ್ಮ ಅಧಿಕಾರವನ್ನು ನಿಯಂತ್ರಿಸುವಂತೆ, ಚತುರತೆಯಿಂದ ವ್ಯವಸ್ಥೆಗೊಳಿಸಲಾಗಿದೆ. ಪರಸ್ಪರ ನಿಯಂತ್ರಣ ಯಾವ ಒಂದು ಭಾಗವನ್ನೂ ನಿರುಪಯುಕ್ತಗೊಳಿಸದಂತೆ ಎಚ್ಚರಿಕೆ ವಹಿಸಲಾಗಿದೆ. ಹೀಗೆ ರಾಜ್ಯಾಂಗ ಕೇಂದ್ರ ಸರ್ಕಾರದಲ್ಲಿ ಅಧಿಕಾರದ ದುರುಪಯೋಗವಾಗದೆ ಎಲ್ಲ ಕಾರ್ಯಗಳೂ ಸಲೀಸಾಗಿ ನಡೆಯುವಂತೆ ಈ 'ನಿರ್ಬಂಧ ಮತ್ತು ಸಮತೋಲನ' ವಿಧಾನವನ್ನು ಅನುಷ್ಠಾನಕ್ಕೆ ತಂದಿದೆ. ಈ ವಿಧಾನ ಶಾಸಕಾಂಗ, ಕಾರ್ಯಾಂಗ ಮತ್ತು

ನ್ಯಾಯಾಂಗಗಳನ್ನು ಬೇರ್ಪಡಿಸುವುದರಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಈ 'ನಿರ್ಬಂಧ ಮತ್ತು ಸಮತೋಲನಗಳ' ಇತರ ಉದಾಹರಣೆಗಳೆಂದರೆ: ರಾಷ್ಟ್ರಾಧ್ಯಕ್ಷನಿಗಿರುವ ನಿಷೇಧಿಸುವ ಹಕ್ಕು (veto) ಕಾಂಗ್ರೆಸ್‌ಗಿರುವ ಅಧ್ಯಕ್ಷನನ್ನು ಅಧಿಕಾರದಿಂದ ತೆಗೆಯುವ ಹಕ್ಕು (impeachment) ಇದರಲ್ಲಿ ಸೆನೆಟ್ ಕೂಡ ಪಾತ್ರವಹಿಸುವಂತೆ ವ್ಯವಸ್ಥೆ ಮಾಡಲಾಗಿದೆ. ಬೇರೆ ದೇಶಗಳೊಡನೆ ಒಪ್ಪಂದ ಮಾಡಿಕೊಳ್ಳಲು, ಹಾಗೂ ರಾಯಭಾರಿಗಳು ಮತ್ತು ಇತರ ಅಧಿಕಾರಿಗಳನ್ನು ನೇಮಕ ಮಾಡಲು ಸೆನೆಟ್ ಒಪ್ಪಿಗೆ ಅಗತ್ಯ. ಸರ್ಕಾರದ ಯಾವ ಅಂಗವಾಗಲಿ, ಅಗತ್ಯವಾದಾಗ ನ್ಯಾಯಾಧೀಶರ ವಿಮರ್ಶೆಗೆ (Judicial review) ಒಳಪಡಿಸಬಹುದು. ಕಡೆಯದಾಗಿ, ಯುದ್ಧ ಸಾರುವ ಅಧಿಕಾರ ಕಾಂಗ್ರೆಸ್ಸಿಗೆ ಇದ್ದರೂ ಸೈನ್ಯಗಳ ಮಹಾದಂಡನಾಯಕ ರಾಷ್ಟ್ರಾಧ್ಯಕ್ಷನಿಗೆ ಮಾತ್ರ! ಈ ರೀತಿಯಲ್ಲಿ ರಾಜ್ಯಾಂಗ ಕಾಂಗ್ರೆಸ್ ಮತ್ತು ಅಧ್ಯಕ್ಷನ ನಡುವೆ ಅಧಿಕಾರವನ್ನು ಸಮತೋಲನಗೊಳಿಸಿದೆ.

ರಾಜ್ಯಾಂಗದ ಅನುಮೋದನೆ

ರಾಜ್ಯಾಂಗವನ್ನು ರಚಿಸಿದವರು ತಾವು ತಯಾರಿಸಿದ ಕೃತಿ ಸಂಸ್ಥಾನಗಳ ವಿಶಿಷ್ಟ ಸಭೆಗಳಲ್ಲಿ ಅನುಮೋದನೆ ಪಡೆಯುವುದು ಅಗತ್ಯವೆಂದು ನಿರ್ಧರಿಸಿದರು. ಹೀಗೆ ಮಾಡುವುದರಿಂದ ರಾಜ್ಯಾಂಗ ಎಲ್ಲಾ ಅಧಿಕಾರದ ಉತ್ತುಂಗ ಮೂಲಸ್ಥಾನವಾಗುತ್ತದೆ. ಅಂದರೆ ಸರ್ವರ ಅಧಿಕಾರದ ಮೂಲ ರಾಜ್ಯಾಂಗ. ಅದನ್ನು ಮೀರುವ ಅಧಿಕಾರ ಯಾರಿಗೂ ಇಲ್ಲ. ರಾಜ್ಯಾಂಗ ಸಾಮಾನ್ಯ ಕರಾರು ಪತ್ರವಲ್ಲ; ಅದು ಸಂಕೀರ್ಣವಾದ ವಾದಗ್ರಸ್ತ ಒಡಂಬಡಿಕೆ! ಆದ್ದರಿಂದ ಅದು ರಾಷ್ಟ್ರದಾದ್ಯಂತ ಜನರಲ್ಲಿ ವಾದ ವಿವಾದಗಳನ್ನು ಉಂಟುಮಾಡಿತು. ರಾಜ್ಯಾಂಗದ ಪರ ವಹಿಸಿದವರನ್ನು 'ಸಂಯುಕ್ತ ರಾಷ್ಟ್ರವಾದಿಗಳು' (Federalists) ಎಂದು ಕರೆದರೆ, ಅದಕ್ಕೆ ವಿರೋಧ ವ್ಯಕ್ತಪಡಿಸಿನವರನ್ನು 'ಸಂಯುಕ್ತ ರಾಷ್ಟ್ರವಿರೋಧಿಗಳು' (Antifederalists) ಎಂದು ಕರೆದರು. ಸಂಯುಕ್ತ ರಾಷ್ಟವಾದಿಗಳು ಸಮಾಜದ ಗಟ್ಟಿ ಕುಳಗಳು, ಲಾಯರು, ವೈದ್ಯರು ಮುಂತಾದ ವೃತ್ತಿಪರರು, ಹಣವಂತರು, ವ್ಯಾಪಾರ-ವ್ಯವಹಾರಗಳಲ್ಲಿ ತೊಡಗಿಸಿಕೊಂಡವರು – ಸಂಪೂರ್ಣ ವ್ಯಕ್ತಿಸ್ವಾತಂತ್ರ್ಯವನ್ನು ಕಾಪಾಡುವುದಕ್ಕಿಂತ ಇವರು ವ್ಯವಸ್ಥಿತವಾದ ಮತ್ತು ದಕ್ಷತೆಯುಳ್ಳ ಸರ್ಕಾರ ಸ್ಥಾಪಿಸುವುದರಲ್ಲಿ ಹೆಚ್ಚಿನ ಆಸಕ್ತಿ ಉಳ್ಳವರಾಗಿದ್ದರು. ಆದರೆ ಅವರು ಪ್ರಜಾರಾಜ್ಯ ವಿರೋಧಿಗಳಾಗಿರಲಿಲ್ಲ. ಸಂಯುಕ್ತರಾಷ್ಟ್ರ ವಿರೋಧಿಗಳು ಸಾಮಾನ್ಯವಾಗಿ ಸಣ್ಣ ಹಿಡುವಳಿಗಾರರು, ಸಾಲಿಗರು ಮತ್ತು ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟವರು. ಇವರಿಗೆ ಅಧಿಕಾರದಲ್ಲಿ ಹೆಚ್ಚಿನ ಆಸಕ್ತಿ ಇರಲಿಲ್ಲ. ಹೀಗೆಂದ ಮಾತ್ರಕ್ಕೆ ಎಲ್ಲ ಜನರನ್ನೂ ಸಲೀಸಾಗಿ ಎರಡು ಬಣಗಳಾಗಿ ವಿಂಗಡಿಸಬಹುದಿತ್ತು ಎಂಬರ್ಥವಲ್ಲ. ಏಕೆಂದರೆ ಕೆಲವು ಹಣವಂತರು ರಾಜ್ಯಾಂಗ ವಿರೋಧಿಗಳಾಗಿದ್ದರು. ಅಂತೆಯೇ ಅನೇಕ ಬಡಬಗ್ಗರು ಸಂಯುಕ್ತ ರಾಷ್ಟ್ರವಾದಿಗಳಾಗಿದ್ದರು.

ಸಂಯುಕ್ತ ರಾಷ್ಟ್ರ ವಿರೋಧಿಗಳು, ರಾಜ್ಯಾಂಗ, ಅಧಿಕಾರವನ್ನು ರಾಷ್ಟ್ರಾಧ್ಯಕ್ಷನಲ್ಲಿ, ಸರ್ಕಾರದ ಇಲಾಖೆಗಳಲ್ಲಿ ಕೇಂದ್ರೀಕರಿಸಿದ್ದನ್ನು ಖಂಡಿಸಿದರು. ಎಲ್ಲಕ್ಕಿಂತಲೂ ಹೆಚ್ಚಾಗಿ ಅವರನ್ನು ಗಾಢವಾಗಿ ಕಾಡುತ್ತಿದ್ದ ಭಯ – ರಾಜ್ಯಾಂಗ ಸೃಷ್ಟಿಸಿದ ಈ ಹೊಸ ವ್ಯವಸ್ಥೆ ಸಂಸ್ಥಾನಗಳ ಸ್ವಾತಂತ್ರ್ಯವನ್ನು ನಾಶಗೊಳಿಸುತ್ತದೆ ಎನ್ನುವುದು. ಇಲ್ಲಿ ನಾವು ಗಮನಿಸ ಬೇಕಾದ ಸಂಗತಿಯೆಂದರೆ ಆಗಿನ ಕಾಲದಲ್ಲಿ ಈ ವಿಶಾಲವಾದ ದೇಶದಲ್ಲಿ ಜನಸಂಖ್ಯೆ ಅತಿ ವಿರಳವಾಗಿತ್ತು. ಸಂಪರ್ಕ ಸಾಧನಗಳು ಅಸಮರ್ಪಕವಾಗಿದ್ದವು. ಬಹುಸಂಖ್ಯಾತರ ಬದುಕಿನ ಮೇಲೆ ಕೇಂದ್ರ ಸರ್ಕಾರ ಹೆಚ್ಚಿನ ಪ್ರಭಾವ ಬೀರಿರಲಿಲ್ಲ. ಬಹಳ ಜನರು ಈ ಸಂವಿಧಾನ ಸೃಷ್ಟಿಸಿದ ಸಂಯುಕ್ತ ರಾಷ್ಟ್ರದ ಕೇಂದ್ರ ಆಡಳಿತ ವ್ಯವಸ್ಥೆ ಇಷ್ಟು ವಿಶಾಲವಾದ, ವೈವಿಧ್ಯತೆಯುಳ್ಳ ದೇಶದಲ್ಲಿ ಸರಿಯಾಗಿ ಕೆಲಸ ಮಾಡಲಾರದು ಎಂದು ನಂಬಿದ್ದರು.

ರಾಜ್ಯಾಂಗ ರಚನಾಸಭೆಗೆ ಬಂದಿದ್ದ ಬಹಳ ಸದಸ್ಯರು ಹಣವಂತರು. ಅವರು ಆಗಿನ ಸಾಮಾಜಿಕ ಪರಿಸ್ಥಿತಿ ಅಧೋಗತಿಗೆ ಇಳಿಯುತ್ತಿರುವುದನ್ನು ಕಂಡು ಅದನ್ನು ಸರಿಪಡಿಸಲು ಪ್ರಬಲವಾದ ಕೇಂದ್ರ ಸರ್ಕಾರವನ್ನು ರಾಜ್ಯಾಂಗದಲ್ಲಿ ಅಳವಡಿಸಿದರು. ಆರ್ಥಿಕ ಅಭಿವೃದ್ಧಿಗೆ ನೆರವಾಗುವ, ತನ್ನ ಹೊಣೆಗಾರಿಕೆಯನ್ನು ಪೂರೈಸುವಂಥ, ಸಾಮಾಜಿಕ ಪರಂಪರೆ ಕಾಪಾಡುವಂಥ ದೃಢವಾದ ಸರ್ಕಾರದಿಂದ ಹಣವಂತರಿಗೆ ಹೆಚ್ಚು ಅನುಕೂಲವಾಗುತ್ತಿದುದು ನಿಜ. ರಾಜ್ಯಾಂಗ ಈ ಕಾರ್ಯಗಳನ್ನು ಅಳವಡಿಸಿಕೊಂಡ ಕೇಂದ್ರ ಸರ್ಕಾರವನ್ನು ಸ್ಥಾಪಿಸಿದ್ದರಿಂದ ರಾಷ್ಟ್ರಪಿತರು ರಾಷ್ಟ್ರದ ಹಿತಕ್ಕಾಗಿ ಇದನ್ನೆಲ್ಲ ಮಾಡಲಿಲ್ಲ; ತಮ್ಮ ಸ್ವಂತ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವ ಸಲುವಾಗಿ ಈ ಹೊಸ ವ್ಯವಸ್ಥೆಗಳನ್ನು ಜಾರಿಗೆ ತಂದರು ಎಂದು ಹಲವರು ಆಪಾದಿಸಿದ್ದಾರೆ. ಹೀಗೆ ಆಪಾದನೆ ಮಾಡಿದವರಲ್ಲಿ ಮುಖ್ಯನಾದವನು ಚಾರ್ಲ್ಸ್ ಬಿಯರ್ಡ್ (Charles Beard) ಎನ್ನುವ ಲೇಖಕ. ಅವನು ಬರೆದ 'ಎನ್ ಎಕನಾಮಿಕ್ ಇಂಟರ್‌ಪ್ರಿಟೇಷನ್ ಆಫ್ ದಿ ಕಾನ್ಸ್‌ಟಿಟ್ಯೂಷನ್' (An Economic Interpretation of the Constitution) ಎಂಬ ಪುಸ್ತಕದಲ್ಲಿ ಈ ಆಪಾದನೆಗಳನ್ನು ವಿಶದಗೊಳಿಸಿದ್ದಾನೆ.

ರಾಜ್ಯಾಂಗ ರಚಿಸಿದ ರಾಷ್ಟ್ರಪಿತರಿಗೆ ಸ್ವಂತ ಹಿತಾಸಕ್ತಿಗಳಿದ್ದವು ನಿಜ. ಆದರೆ ಫಿಲಡೆಲ್ಫಿಯಾದ ರಾಜ್ಯಾಂಗ ರಚನಾಸಭೆಯಲ್ಲಿ ಅವರು ಪ್ರೇರಿತರಾಗಿದ್ದು ಸ್ವಾರ್ಥದಿಂದ ಅಲ್ಲ, ರಾಷ್ಟ್ರ ರಕ್ಷಣೆ ಮತ್ತು ಸರ್ವರ ಅಭ್ಯುದಯದಿಂದ. ವಾಷಿಂಗ್‌ಟನ್, ಬೆಂಜಮಿನ್ ಫ್ರಾಂಕ್‌ಲಿನ್ ಮತ್ತು ಮ್ಯಾಡಿಸನ್ ಇಂಥ ವಿಶಾಲ ಹೃದಯದ ವ್ಯಕ್ತಿಗಳನ್ನು ಸ್ವಾರ್ಥಿಗಳು ಎಂದು ಜರೆಯುವುದು ಉತ್ಪ್ರೇಕ್ಷೆಯಾಗುತ್ತದೆ. ಬಿಯರ್ಡ್‌ನು ಬರೆದುದರಲ್ಲಿ ಸತ್ಯಾಂಶ ಇರಬಹುದು, ಆದರೆ ನಾವು ರಾಜ್ಯಾಂಗದ ಮಹತ್ವವನ್ನಾಗಲೀ ಅಥವಾ ಅದನ್ನು ರಚಿಸಿದವರ ಸಚ್ಚಾರಿತ್ರ್ಯವನ್ನಾಗಲೀ ಕಡೆಗಣಿಸಬಾರದು. ಬಹಳ ಜನರು ಹೊಸ ಸರ್ಕಾರಕ್ಕೆ ಅವಕಾಶ ಕೊಡಲು ತಯಾರಿದ್ದರು. ಆದರೆ ಅದು ಸಂಸ್ಥಾನಗಳನ್ನು ತನ್ನ ಅಪಾರ ಅಧಿಕಾರ

ದಿಂದ ಅವಸಾನಗೊಳಿಸಕೂಡದು ಎನ್ನುವ ಭರವಸೆ ಅವರಿಗೆ ಬೇಕಿತ್ತು. ಈ ಭಯವನ್ನು ನಿವಾರಿಸಲು ರಾಜ್ಯಾಂಗ ರಚನಾಕಾರರು ತಿದ್ದುಪಡಿಗಳನ್ನು (Amendments) ಸಂವಿಧಾನಕ್ಕೆ ಸೇರಿಸಿದರು. ಈ ತಿದ್ದುಪಡಿಗಳು ಪ್ರಜೆಗಳ ನಾಗರಿಕ ಹಕ್ಕುಗಳನ್ನು ರಕ್ಷಿಸಿ, ಅವರ ಖಾಸಗಿ ಜೀವನದಲ್ಲಿ ಕೇಂದ್ರ ಸರ್ಕಾರ ಅತಿಕ್ರಮಣ ಮಾಡದಂತೆ ಭರವಸೆ ನೀಡಿದ ಮೇಲೆ ರಾಜ್ಯಾಂಗದ ವಿರುದ್ಧ ನಡೆಯುತ್ತಿದ್ದ ಪ್ರತಿಭಟನೆ ಬಹಳಷ್ಟು ಕಡಿಮೆಯಾಯಿತು. ಈ ತಿದ್ದುಪಡಿಗಳ ಮಹತ್ವದಿಂದಾಗಿ ಹೆಚ್ಚು ಸಂಸ್ಥಾನಗಳ ವಿಶಿಷ್ಟ ಸಭೆಗಳಲ್ಲಿ ರಾಜ್ಯಾಂಗವನ್ನು ಯಾವ ತೊಂದರೆಯಿಲ್ಲದೆ ಅನುಮೋದಿಸಲಾಯಿತು. ಮೊಟ್ಟ ಮೊದಲು ಡೆಲವೇರ್, ರಾಜ್ಯಾಂಗವನ್ನು ಸರ್ವಾನುಮತದಿಂದ ಡಿಸೆಂಬರ್ ೭, ೧೭೮೭ರಲ್ಲಿ ಅನುಮೋದಿಸಿತು. ಇದಾದ ಸ್ವಲ್ಪ ದಿನಗಳ ಮೇಲೆ ಪೆನ್ಸಿಲ್‌ವೇನಿಯ ಹಾಗೆಯೇ ಮಾಡಿತು. ನ್ಯೂಜರ್ಸಿಯಲ್ಲಿ, ಜಾರ್ಜಿಯದಲ್ಲಿ ಕೂಡ ರಾಜ್ಯಾಂಗವನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು. ಇದಾದ ಒಂದು ವಾರದ ಮೇಲೆ ಕನೆಕ್ಟಿಕಟ್ ಕೂಡ ಅನುಮೋದಿಸಿತು.

ಮೆಸಾಚ್ಯುಸೆಟ್ಸ್‌ನಲ್ಲಿ ರಾಜ್ಯಾಂಗ ಅನುಮೋದನೆ ಮೊದಲ ಬಾರಿಗೆ ಎರಡು ಬಣಗಳ ತೀವ್ರ ಸ್ಪರ್ಧೆಗೆ ಕಾರಣವಾಯಿತು. ಕಡೆಗೆ ಫೆಬ್ರವರಿ ೧೭೮೮ರಲ್ಲಿ (೧೮೭ ಮತಗಳು ಪರವಾಗಿ, ೧೬೮ ಮತಗಳು ವಿರೋಧವಾಗಿ) ನಡೆದ ಮತದಾನದಿಂದ ರಾಜ್ಯಾಂಗವನ್ನು ಅನುಮೋದಿಸಿತು. ೧೭೮೮ರ ಏಪ್ರಿಲ್ ತಿಂಗಳಲ್ಲಿ ಮೇರಿಲ್ಯಾಂಡ್, ಮೇ ತಿಂಗಳಲ್ಲಿ ದಕ್ಷಿಣ ಕೆರೊಲಿನ, ನ್ಯೂ ಹ್ಯಾಂಪ್‌ಶೈರ್ ಮತ್ತು ವರ್ಜೀನಿಯ ಸಂಸ್ಥಾನಗಳು ಜೂನ್ ತಿಂಗಳಲ್ಲಿ ರಾಜ್ಯಾಂಗವನ್ನು ಅನುಮೋದಿಸಿದವು. ಇನ್ನು ಉಳಿದ ಸಂಸ್ಥಾನಗಳೆಂದರೆ – ರ್‍ಹೋಡ್ ಐಲೆಂಡ್, ನ್ಯೂಯಾರ್ಕ್ ಮತ್ತು ಉತ್ತರ ಕೆರೊಲಿನ ಸಂಸ್ಥಾನಗಳು. ನ್ಯೂಯಾರ್ಕ್ ಸಂಸ್ಥಾನದಲ್ಲಿ ಸಂಯುಕ್ತ ರಾಷ್ಟ್ರವಿರೋಧಿಗಳು ಪ್ರಬಲರಾಗಿದ್ದರು. ಸಂಸ್ಥಾನದ ವಿಶಿಷ್ಟ ಸಭೆಯಲ್ಲಿ ರಾಜ್ಯಾಂಗದ ಒಟ್ಟು ೬೫ ಸದಸ್ಯರಲ್ಲಿ ೪೬ ಸದಸ್ಯರು ರಾಜ್ಯಾಂಗದ ವಿರುದ್ಧ ಮತ ನೀಡಿ ಅದನ್ನು ನಿರಾಕರಿಸಿದರು. ಆದರೆ ಸಂಯುಕ್ತ ರಾಷ್ಟ್ರದ ಬೆಂಬಲಿಗರ ಪರವಾಗಿ ಎರಡು ಮುಖ್ಯ ಅಂಶಗಳು ನೆರವು ನೀಡಿದವು. ಮೊದಲನೆಯದಾಗಿ: ಬಹು ಸಂಖ್ಯಾತ ಸಂಸ್ಥಾನಗಳು ರಾಜ್ಯಾಂಗವನ್ನು ಈಗಾಗಲೇ ಅನುಮೋದಿಸಿಬಿಟ್ಟಿದ್ದವು. ಎರಡನೆಯದಾಗಿ: ಅಲೆಗ್ಸಾಂಡರ್ ಹ್ಯಾಮಿಲ್‌ಟನ್ ರಾಜ್ಯಾಂಗದ ಪರವಾಗಿ ನಡೆಸಿದ ಸತತವಾದ ಪ್ರಯತ್ನಗಳು. ಇವನು ಮ್ಯಾಡಿಸನ್ ಮತ್ತು ಜಾನ್ ಜೇ (John Jay) ಅವರೊಡನೆ ಕೂಡಿ 'ದಿ ಫೆಡರಲಿಸ್ಟ್ ಪೇಪರ್ಸ್' (The Federalist Papers) ಎನ್ನುವ ತೀಕ್ಷ್ಣಮತಿಯ ಲೇಖನಗಳ ಸರಣಿಯನ್ನು ಪ್ರಕಟಿಸಿ ರಾಜ್ಯಾಂಗದ ವಿವರಣೆ ನೀಡಿ ಸಮರ್ಥಿಸಿದನು. ಈ ಲೇಖನಗಳು ಮೊದಲು ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟವಾದವು, ನಂತರ ಇವನ್ನು ಪುಸ್ತಕವಾಗಿ ಪ್ರಕಟಣೆ ಮಾಡಲಾಯಿತು. ಹ್ಯಾಮಿಲ್‌ಟನ್ ತಾನು ಹೋದ ಕಡೆಗಳಲ್ಲೆಲ್ಲ ರಾಜ್ಯಾಂಗವನ್ನು ತನ್ನ ಶಕ್ತಿ ಮೀರಿ ಸಮರ್ಥಿಸುತ್ತಿದ್ದನು. ಹ್ಯಾಮಿಲ್‌ಟನ್ ಚಾಣಾಕ್ಷತನದಿಂದ ರಾಜ್ಯಾಂಗದ ಪರ ವಹಿಸುವುದೋ ಅಥವಾ

ವಿರೋಧಿಸುವುದೋ ಎಂದು ಅನಿಶ್ಚಯ ಸ್ಥಿತಿಯಲ್ಲಿದ್ದ ಸದಸ್ಯರ ಮನ ಒಲಿಸಲು ಅವರಿಗೆ ಪುಕ್ಕಟ್ಟೆ ಔತಣದೂಟ ಮತ್ತು ಮದ್ಯಪಾನ ವ್ಯವಸ್ಥೆ ಮಾಡಿದ್ದನು! ಈ ಆಮಿಷಗಳಿಗೆ ಜಗ್ಗದವರಿಗೆ 'ರಾಜ್ಯಾಂಗ ಅನುಮೋದನೆಗೊಳ್ಳದೆ ಹೋದರೆ ನ್ಯೂಯಾರ್ಕ್ ನಗರ ಸಂಸ್ಥಾನವನ್ನು ಬಿಟ್ಟು ಹೋಗುತ್ತದೆ' ಎಂದು ಬೆದರಿಕೆ ಹುಟ್ಟಿಸುತ್ತಿದ್ದನು. ರಾಜ್ಯಾಂಗ ಸ್ವಾತಂತ್ರ್ಯವನ್ನು ನಾಶ ಮಾಡುತ್ತದೆ ಎನ್ನುವುದು ಹಾಸ್ಯಾಸ್ಪದವಾದ ಹೇಳಿಕೆ ಎಂಬುದನ್ನು ಅವನು ವಿಶದ ಪಡಿಸಿದನು.

ಅಂತಿಮವಾಗಿ, ರಾಜ್ಯಾಂಗಕ್ಕೆ ತಿದ್ದುಪಡಿಗಳನ್ನು ಪರಿಗಣಿಸುವ ಸಲುವಾಗಿ ಎರಡನೆಯ ಬಾರಿ ರಾಷ್ಟ್ರಮಟ್ಟದ ಸಭೆಯನ್ನು ಸೇರಿಸುವ ಭರವಸೆ ಸಿಕ್ಕ ಬಳಿಕ ಸದಸ್ಯರು ಮತ ನೀಡಲು ಒಪ್ಪಿಕೊಂಡರು. ಮತದಾನ ನಡೆದು ಸಂಯುಕ್ತ ರಾಷ್ಟ್ರವಾದಿಗಳು ಬಹಳ ಸಣ್ಣ ಅಂತರದಿಂದ – ೩೦-೨೭ ಮತಗಳಿಂದ ಗೆದ್ದರು. ನ್ಯೂಯಾರ್ಕ್ ರಾಜ್ಯಾಂಗವನ್ನು ಅನುಮೋದಿಸಿದ ಮೇಲೆ ಹೊಸ ಸರ್ಕಾರ ರಚಿಸಲು ದಾರಿ ಸಲೀಸಾಯಿತು. ಹೀಗೆ ಕ್ರಾಂತಿಯ ಮೂಲಕ ಸ್ವತಂತ್ರ ರಾಷ್ಟ್ರವಾಗಿ ಅಮೆರಿಕದ ಸಂಯುಕ್ತ ಉದಯವಾಯಿತು. ಆ ರಾಷ್ಟ್ರದ ಪ್ರಗತಿಗೆ ಬುನಾದಿ ಹಾಕಿದವರು ಜಾರ್ಜ್ ವಾಷಿಂಗ್‌ಟನ್ ಮತ್ತು ಸಂಯುಕ್ತವಾದಿಗಳು.

❑

ಅಧ್ಯಾಯ – ೪

ಅಧ್ಯಕ್ಷ ವಾಷಿಂಗ್‌ಟನ್ ಮತ್ತು ಸಂಯುಕ್ತವಾದಿಗಳು

೧೭೮೯ರ ಜನವರಿ-ಫೆಬ್ರವರಿ ತಿಂಗಳುಗಳಲ್ಲಿ ಸಂಸ್ಥಾನಗಳಲ್ಲಿ ಚುನಾವಣೆಗಳು ನಡೆದವು. ಏಪ್ರಿಲ್ ತಿಂಗಳ ಮೊದಲನೆಯ ವಾರದಲ್ಲಿ ಹೊಸ ಪ್ರಜಾಪ್ರತಿನಿಧಿ ಸಭೆಯ ಸದಸ್ಯರು (Congressmen) ಹೊಸರಾಷ್ಟ್ರದ ತಾತ್ಕಾಲಿಕ ರಾಜಧಾನಿಯಾದ ನ್ಯೂಯಾರ್ಕ್‌ನಲ್ಲಿ ಸೇರಿದರು. ರಾಷ್ಟ್ರಾಧ್ಯಕ್ಷರನ್ನು ಆಯ್ಕೆ ಮಾಡುವವರ (Presidential Electors) ಮತದಾನ ಚೀಟಿಗಳನ್ನು ಸೆನೆಟ್‌ನಲ್ಲಿ ಅಧಿಕೃತವಾಗಿ ಎಣಿಕೆ ಮಾಡಿದರು. ಜಾರ್ಜ್ ವಾಷಿಂಗ್‌ಟನ್‌ನನ್ನು ಸರ್ವಾನುಮತದಿಂದ ರಾಷ್ಟ್ರಾಧ್ಯಕ್ಷನನ್ನಾಗಿ, ಜಾನ್ ಆ್ಯಡಮ್ಸ್‌ನನ್ನು ಉಪರಾಷ್ಟ್ರಾಧ್ಯಕ್ಷನನ್ನಾಗಿ ಚುನಾಯಿಸಿದ್ದರು. ೧೭೮೯ರ ಏಪ್ರಿಲ್ ೩೦ರಂದು ಫೆಡರಲ್ ಭವನದಲ್ಲಿ ಜಾರ್ಜ್ ವಾಷಿಂಗ್‌ಟನ್ ರಾಷ್ಟ್ರಾಧ್ಯಕ್ಷನಾಗಿ ಪ್ರಮಾಣವಚನ ಸ್ವೀಕರಿಸಿದನು. 'ರಾಷ್ಟ್ರಪಿತ'ನೆಂದು ಗೌರವಾನ್ವಿತನಾಗಿರುವ ಜಾರ್ಜ್ ವಾಷಿಂಗ್‌ಟನ್‌ನ ದೃಢ ನಿಷ್ಠೆ, ಘನತೆ, ನ್ಯಾಯನಿಷ್ಠತೆ, ನಮ್ರತೆ ಲೋಕಪ್ರಸಿದ್ಧಿಯಾಗಿವೆ. ಅವನು ಅತಿ ಜಾಗರೂಕ ಹಾಗೂ ವಿನಯಶೀಲನಾದ ಅಧ್ಯಕ್ಷನಾಗಿದ್ದನು. ಹೊಣೆಗಾರಿಕೆಯ ತೀವ್ರ ಸಂವೇದನೆ ಮತ್ತು ಇತರರ ಟೀಕೆಗಳಿಗೆ ಸುಲಭವಾಗಿ ನೊಂದುಕೊಳ್ಳುವ ಮೃದುತ್ವದಿಂದ ಇವನು ಅಧಿಕಾರದಲ್ಲಿರುವವರೆಗೂ ನಿರಾಳವಾಗಿ, ನಿರಾತಂಕ ಸುಖ ಅನುಭವಿಸಲಿಲ್ಲ. ಅವನು ಸರ್ಕಾರದ ವಿವಿಧ ಭಾಗಗಳ ಅಧಿಕಾರ ಪ್ರತ್ಯೇಕವಾಗಿರುವುದಕ್ಕೆ ಹೆಚ್ಚಿನ ಮಹತ್ವ ಕೊಟ್ಟನು. ಅವನು ಯಾವ ಕಾಂಗ್ರೆಸ್ ಅಭ್ಯರ್ಥಿಯ ಪರವಾಗಲೀ ಅಥವಾ ವಿರೋಧವಾಗಲೀ ಮಾತನಾಡುತ್ತಿರಲಿಲ್ಲ. ರಾಷ್ಟ್ರಾಧ್ಯಕ್ಷನಾದವನು ಒಂದು ಕಾಯಿದೆಯನ್ನು ಮಂಡಿಸುವುದಾಗಲೀ ಅಥವಾ ಬೆಂಬಲಿಸುವುದಾಗಲೀ ತಪ್ಪು ಎಂದು ನಂಬಿದ್ದನು. ಒಂದು ಕಾಯಿದೆ ರಾಜ್ಯಾಂಗ ವಿರುದ್ಧವಾದುದು ಎಂದು ಖಚಿತಗೊಂಡಾಗ ಮಾತ್ರ ರಾಷ್ಟ್ರಾಧ್ಯಕ್ಷ ಅದನ್ನು 'ನಿಷಿದ್ಧ' (veto)ಗೊಳಿಸಬೇಕು ಎಂದು ನಂಬಿದ್ದನು.

ವಾಷಿಂಗ್‌ಟನ್ ತನ್ನ ಆಡಳಿತ ನಿರ್ವಹಣೆಗೆ ಅಗತ್ಯವಾದ ಸಲಹೆಗಾರರ ಮಂಡಳಿಗಳಿಗೆ ಒಂದು ಪಕ್ಷದ ಅಥವಾ ಪಂಗಡ ಜನರನ್ನು ಮಾತ್ರ ಆಯ್ದುಕೊಳ್ಳಲಿಲ್ಲ. ತನ್ನ ಹೇಳಿಕೆಗಳನ್ನು ಸಮರ್ಥಿಸುವವರನ್ನು ಕೂಡ ದೂರವಿಟ್ಟು, ತನಗೆ ಸಮರ್ಥರೆಂದು ಕಂಡುಬಂದವರನ್ನು ಮಾತ್ರ ಸಲಹೆಗಾರರನ್ನಾಗಿ ನೇಮಿಸಿಕೊಂಡನು. ಹ್ಯಾಮಿಲ್‌ಟನ್‌ನನ್ನು ಖಜಾನೆ ಕಾರ್ಯದರ್ಶಿ (Secretary of Treasury)ಆಗಿ, ಜೆಫರ್‌ಸನ್‌ನನ್ನು ವಿದೇಶಾಂಗ

ಕಾರ್ಯದರ್ಶಿ (Secretary of State)ಆಗಿ, ಜನರಲ್ ಹೆನ್ರಿ ನಾಕ್ಸ್‌ನನ್ನು ಸೇನಾ ಕಾರ್ಯದರ್ಶಿ (Secretary of War)ಆಗಿ ಮತ್ತು ಎಡ್ಮಂಡ್ ರಾನ್‌ಡಾಲ್ಫ್‌ನನ್ನು ಅಟಾರ್ನಿ ಜನರಲ್ (Attorney General)ಆಗಿ ನೇಮಕ ಮಾಡಿದನು. ವಾಷಿಂಗ್‌ಟನ್ ಪ್ರಬಲನಾದ ಹಾಗೂ ದಕ್ಷ ಆಡಳಿತಗಾರನಾಗಿದ್ದನು. ಹ್ಯಾಮಿಲ್‌ಟನ್ ಹೇಳಿದಂತೆ 'ಅವನು ಸಲಹೆ ಕೇಳುತ್ತಿದ್ದುದೂ ಹೆಚ್ಚು, ಯೋಚನೆ ಮಾಡುತ್ತಿದ್ದುದೂ ಹೆಚ್ಚು, ಆದರೆ ನಿರ್ಣಯ ಮಾಡುತ್ತಿದ್ದುದು ನಿಧಾನವಾಗಿ ಮತ್ತು ಖಚಿತವಾಗಿ'

ಹಕ್ಕು ಪ್ರತಿಪಾದಿಸುವ ಕಾಯಿದೆಗಳು

ಹೊಸ ರಾಷ್ಟ್ರದ ಹೊಸ ಕಾಂಗ್ರೆಸ್ಸಿಗೆ ಹೆಚ್ಚಿನ ಹೊಣೆಗಾರಿಕೆ ಇತ್ತು. ಹಿಂದಿನವರು ಹಾಕಿದ ಮೇಲ್ಪಂಕ್ತಿಯನ್ನು ಅನುಸರಿಸುವ ಅನುಕೂಲತೆ ಇವರಿಗೆ ಇರಲಿಲ್ಲ. ಯಾಕೆಂದರೆ ಹಿಂದೆ ಇದ್ದ ರಾಜಕೀಯ ವ್ಯವಸ್ಥೆಯೇ ಬೇರೆ, ಇವರು ರಚಿಸಿದ ರಾಜಕೀಯ ವ್ಯವಸ್ಥೆ ಆಗಿನ ಕಾಲದಲ್ಲಿ ಹೊಚ್ಚ ಹೊಸದು. ಆದ್ದರಿಂದ ಮೇಲ್ಪಂಕ್ತಿ ಹಾಕುವ ಜವಾಬ್ದಾರಿ ಹೊಸ ಕಾಂಗ್ರೆಸ್ಸಿಗರ ಮೇಲೆ ಬಿದ್ದಿತು. ಹಾಗೆಯೆ ಸರ್ಕಾರದ ಎಲ್ಲ ಶಾಖೆಗಳನ್ನು ರಚಿಸುವ ಜವಾಬ್ದಾರಿಯೂ ಕೂಡ ಇವರದೇ ಆಗಿತ್ತು. ಸೆಪ್ಟೆಂಬರ್ ೧೭೮೯ರ ಹೊತ್ತಿಗೆ ರಾಜ್ಯ ಖಜಾನೆ ಮತ್ತು ಯುದ್ಧದ ಇಲಾಖೆಗಳನ್ನು ಸ್ಥಾಪಿಸಿದ್ದರು. ನ್ಯಾಯಾಂಗ ಕಾಯಿದೆ ಪ್ರಕಾರ ೧೩ ಫೆಡರಲ್ ಡಿಸ್ಟ್ರಿಕ್ಟ್ ಕೋರ್ಟುಗಳು ಮತ್ತು ಮೂರು 'ಸರ್ಕ್ಯೂಟ್ ಕೋರ್ಟ್ಸ್ ಆಫ್ ಅಪೀಲ್'ಗಳನ್ನು (Circuit Courts of Appeal) ಅಸ್ತಿತ್ವಕ್ಕೆ ತರಲಾಯಿತು. ರಾಷ್ಟದ ಶ್ರೇಷ್ಠ ನ್ಯಾಯಾಲಯಕ್ಕೆ (Supreme Court) ಆರು ನ್ಯಾಯಾಧೀಶರನ್ನು ನೇಮಕ ಮಾಡಲಾಯಿತು. ವಾಷಿಂಗ್‌ಟನ್ ಜಾನ್ ಜೇ ಯನ್ನು (John Jay) ಶ್ರೇಷ್ಠ ನ್ಯಾಯಾಧೀಶನನ್ನಾಗಿ ನೇಮಿಸಲಾಯಿತು.

ಕಾಂಗ್ರೆಸ್ ಹನ್ನೆರಡು ತಿದ್ದುಪಡಿಗಳ (Amendments) ಪಟ್ಟಿಯನ್ನು ತಯಾರಿಸಿತು. ಪ್ರಜೆಗಳ ನಾಗರಿಕ ಹಕ್ಕುಗಳನ್ನು ಕಾಪಾಡುವುದು ಈ ತಿದ್ದುಪಡಿಗಳ ಉದ್ದೇಶ. ಹನ್ನೆರಡು ತಿದ್ದುಪಡಿಗಳಲ್ಲಿ ಹತ್ತು ತಿದ್ದುಪಡಿಗಳನ್ನು ಅನುಮೋದಿಸಲಾಯಿತು. ಈ ತಿದ್ದುಪಡಿಗಳೇ 'ಬಿಲ್ ಆಫ್ ರೈಟ್ಸ್' (Bill of Rights) – 'ಹಕ್ಕುಗಳನ್ನು ಪ್ರತಿಪಾದಿಸುವ ಕಾಯಿದೆಗಳು'. ರಾಜ್ಯಾಂಗ ಪ್ರತಿಪಾದಿಸುವ ಹಕ್ಕುಗಳೆಂದರೆ: ವಾಕ್ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ ಮತ್ತು ಮತಧರ್ಮ ಸ್ವಾತಂತ್ರ್ಯಗಳನ್ನು ಮೊಟಕು ಮಾಡುವಂಥ ಯಾವ ಕಾಯಿದೆಯನ್ನೂ ಜಾರಿಗೆ ತರಬಾರದು. ಆರೋಪಿಗೆ ನ್ಯಾಯಾಲಯದಲ್ಲಿ 'ಜ್ಯೂರಿ' ಸಮಕ್ಷಮದಲ್ಲಿ ವಿಚಾರಣೆ ನಡೆಯಬೇಕೆಂಬ ಕಾಂಗ್ರೆಸ್ ಹಕ್ಕನ್ನು ಪುನಃ ದೃಢಪಡಿಸಲಾಯಿತು. ಕಾರಣವಿಲ್ಲದೆ ಯಾರನ್ನೂ ತಪಾಸಣೆಗೆ ಮತ್ತು ಜಪ್ತಿಗೆ ಒಳಪಡಿಸಬಾರದು. ದುಷ್ಕೃತ್ಯ ಆರೋಪಿಯನ್ನು (person accused of crime) ಬಲಾತ್ಕಾರದಿಂದ ತನ್ನ ವಿರುದ್ಧವಾಗಿ ತಾನೇ ಸಾಕ್ಷಿ ಹೇಳುವಂತೆ ಮಾಡಬಾರದು. ಯಾರ ಪ್ರಾಣವನ್ನಾಗಲೀ, ಸ್ವಾತಂತ್ರ್ಯವನ್ನಾಗಲೀ ಅಥವಾ ಆಸ್ತಿಯನ್ನಾಗಲೀ ಕಸಿದುಕೊಳ್ಳಬಾರದು.

ಕೇಂದ್ರ ಸರ್ಕಾರಕ್ಕೆ ವಹಿಸಿಕೊಡದ ಅಧಿಕಾರ, ಅಥವಾ ಸಂಸ್ಥಾನಗಳಿಗೆ ನಿರಾಕರಿಸಿರುವ ಅಧಿಕಾರ, ಆಯಾಯ ಸಂಸ್ಥಾನಗಳಿಗಾಗಿ ಅಥವಾ ಜನರಿಗಾಗಿ ರಾಜ್ಯಾಂಗ ಕಾದಿರಿಸಿರಬೇಕು. ಇದು ಹತ್ತನೆಯ ತಿದ್ದುಪಡಿಯ ಸಾರಾಂಶ. (The powers not delegated to the United States by the constitution, nor prohibited by it to the states, are reserved to the states respectively, or to the people) ತಜ್ಞರು ಸೂಚಿಸಿರುವಂತೆ ತರ್ಕಬದ್ಧವಾಗಿ ಯೋಚಿಸಿದಾಗ ಈ ತಿದ್ದುಪಡಿಗಳು ಅನಾವಶ್ಯಕವೆಂದು ತೋರುತ್ತವೆ. ಯಾಕೆಂದರೆ ಈ ವಿಷಯಗಳಲ್ಲಿ ಕೈ ಹಾಕಲು ಕೇಂದ್ರ ಸರ್ಕಾರಕ್ಕೆ ಅಧಿಕಾರವಿಲ್ಲ. ಆದರೆ ಈ ಹಕ್ಕುಗಳ ಕಾಯಿದೆ ಜನರಿಗೆ ತಮ್ಮ ಹಕ್ಕುಗಳು ಸುರಕ್ಷಿತವಾಗಿವೆ ಎಂಬ ಭರವಸೆ ಹುಟ್ಟಿಸಲು ಅವಶ್ಯಕವಾಗಿದ್ದವು ಎನ್ನುವುದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ರಾಜ್ಯಾಂಗ ರಚಿಸುವ ಕೇಂದ್ರ ಸರ್ಕಾರ, ಸಂಸ್ಥಾನಗಳ ಸ್ವಾತಂತ್ರ್ಯವನ್ನು ಕಸಿದುಕೊಂಡು ಪ್ರಭಾವಯುತ ಮತ್ತು ಶಕ್ತಿಯುತವಾದ, ಯಾರ ನಿಯಂತ್ರಣಕ್ಕೂ ಒಳಗಾಗದ ಸರ್ಕಾರವಾಗುತ್ತದೆ ಎಂದು ತಮ್ಮ ಕಳವಳ ವ್ಯಕ್ತಪಡಿಸಿದವರಿಗೆ ಈ ಹಕ್ಕುಗಳ ಕಾಯಿದೆ ಅದು ಆಧಾರವಿಲ್ಲದ ಭಯ ಎನ್ನುವುದನ್ನು ಸಾದರಪಡಿಸಿತು. ಇದಕ್ಕಿಂತ ಹೆಚ್ಚು ಸಂಕೀರ್ಣ ವಾದ ಪ್ರಶ್ನೆ – ಕೇಂದ್ರ ಸರ್ಕಾರ ರಾಷ್ಟ್ರದ ಸಮಸ್ಯೆಗಳನ್ನು ಎದುರಿಸುವಷ್ಟು ಶಕ್ತಿಯುತ ವಾಗಿದೆಯೇ? ಎನ್ನುವುದು. ಕೇಂದ್ರ ಸರ್ಕಾರ ಕೂಡಲೇ ಎದುರಿಸಬೇಕಾಗಿದ್ದ ಅಸಂಖ್ಯಾತ ಸಮಸ್ಯೆಗಳಲ್ಲಿ ಅತಿಮುಖ್ಯವಾಗಿದ್ದುದು – ಅಮೆರಿಕದ ಪಶ್ಚಿಮ ಪ್ರಾಂತವನ್ನು ಬ್ರಿಟಿಷರು, ಸ್ಪಾನಿಷರು ಮತ್ತು ಇಂಡಿಯನ್ನರು ಅತಿಕ್ರಮಣ ಮಾಡುವ ಅಪಾಯದ ಪರಿಸ್ಥಿತಿ. ಸ್ವಾತಂತ್ರ್ಯ ಸಂಗ್ರಾಮದ ಪರಿಣಾಮವಾಗಿ ಅಸ್ತವ್ಯಸ್ತವಾಗಿದ್ದ ವಿದೇಶ ವ್ಯಾಪಾರ, ರಾಷ್ಟ್ರದ ಕುಸಿದು ಬಿದ್ದಿದ್ದ ಆರ್ಥಿಕ ವ್ಯವಸ್ಥೆ ಈ ಸಮಸ್ಯೆಗಳಿಗೆ ಕೂಡಲೇ ಪರಿಹಾರ ದೊರಕುವಂತೆ ಮಾಡಬೇಕಿತ್ತು.

ಆರ್ಥಿಕ ಸುಧಾರಣೆಗಳು

ಹೊಸ ರಾಷ್ಟ್ರದ ಆರ್ಥಿಕ ವ್ಯವಸ್ಥೆ ಕುಸಿದು ಬಿದ್ದು, ರಾಷ್ಟ್ರ ಅವನತಿ ಹೊಂದುವ ಎಲ್ಲಾ ಚಿಹ್ನೆಗಳು ಕಂಡುಬರುತ್ತಿದ್ದವು. ರಾಷ್ಟ್ರದ ಈ ಖಾಯಿಲೆಗೆ ಔಷಧ ರೂಪದಲ್ಲಿ ಸುಧಾರಣೆಗಳನ್ನು ಜಾರಿಗೆ ತರದೆ ಹೋಗದಿದ್ದರೆ ಅಮೆರಿಕ ಉಳಿಯುತ್ತಿರಲಿಲ್ಲ. ಸುಧಾರಣೆಯ ಹಾದಿಯಲ್ಲಿ ಕಾಂಗ್ರೆಸ್ ಇಟ್ಟ ಮೊದಲ ಹೆಜ್ಜೆ ಎಂದರೆ, ತನ್ನ ತೆರಿಗೆ ಹಾಕುವ ಅಧಿಕಾರವನ್ನು ಚಲಾಯಿಸಿದ್ದು. ಅಮೆರಿಕಕ್ಕೆ ಹೊರದೇಶಗಳಿಂದ ಬರುತ್ತಿದ್ದ ಎಲ್ಲ ಸರಕುಗಳಿಗೂ ಒಂದೇ ತೆರನಾದ ಶೇಕಡಾ ಐದು ಅಂಶ ತೆರಿಗೆ ವಿಧಿಸಿತು; ಮಾದಕ ಪದಾರ್ಥಗಳು (hemp) , ಗಾಜು ಮತ್ತು ಕಬ್ಬಿಣದ ಮೊಳೆಗಳು ಮುಂತಾದ ವಸ್ತುಗಳಿಗೆ ಹೆಚ್ಚಿನ ತೆರಿಗೆ ಹಾಕಿದರು. ಈ ೧೭೮೯ರ ಕರವಸೂಲಿ ಕಾಯಿದೆ, ಹೊರದೇಶದ ಹಡಗುಗಳು ಹೊತ್ತು ತರುವ ಸರಕುಗಳ ಮೇಲೆ ಪ್ರತಿ ಟನ್ನಿನ ಲೆಕ್ಕಾಚಾರದಂತೆ ತೆರಿಗೆ ಹಾಕುತ್ತಿದ್ದರು. ಇದು ಅಮೆರಿಕದ ವ್ಯಾಪಾರೀ ನೌಕಾದಳವನ್ನು ಪ್ರಬಲಗೊಳಿಸಲು

ಕಾರಣವಾಯಿತು. ಅಮೆರಿಕದ ಆಗಿನ ಪರಿಸ್ಥಿತಿ ಹೇಗಿತ್ತೆಂದರೆ, ಹೊರದೇಶಗಳಿಗೆ ಕೊಡಬೇಕಾಗಿದ್ದ ಸಾಲದ ಹೊರೆ ಅಪಾರವಾಗಿತ್ತು, ಸಾಲ ದೊರೆಯುವುದು ಅನುಮಾನ ವಾಗಿತ್ತು, ಆರ್ಥಿಕ ಭವಿಷ್ಯ ಅನಿಶ್ಚಯವಾಗಿತ್ತು. ಈ ಪರಿಸ್ಥಿತಿಯಲ್ಲಿ ದೇಶದ ಆರ್ಥಿಕ ಅವ್ಯವಸ್ಥೆಯನ್ನು ಸರಿಪಡಿಸುವ ಜವಾಬ್ದಾರಿಯನ್ನು ಖಜಾನೆಯ ಕಾರ್ಯದರ್ಶಿ ಅಲೆಗ್ಸಾಂಡರ್ ಹ್ಯಾಮಿಲ್‌ಟನ್‌ನ ಮೇಲೆ ಹೊರಿಸಿದರು. ಆಗ ಹ್ಯಾಮಿಲ್‌ಟನ್‌ನಿಗೆ ೩೪ ವರ್ಷ ಮಾತ್ರ. ಅಷ್ಟರೊಳಗಾಗಿ ಅವನು ತಾನೊಬ್ಬ ಅಸಾಧಾರಣ ಪುರುಷನೆಂದು ಸಾಬೀತುಗೊಳಿಸಿದ್ದನು. ಅವನು ಬ್ರಿಟಿಷ್ ಪಶ್ಚಿಮ ಇಂಡೀಸ್ ದ್ವೀಪದಲ್ಲಿ ಅವಿವಾಹಿತ ಹೆಂಗಸಿಗೆ ಹುಟ್ಟಿದವನು. ಅವನ ತಂದೆ ಎನಿಸಿಕೊಂಡವನು ಕೆಲಸಕ್ಕೆ ಬಾರದ ಸೋಮಾರಿ ಯಾಗಿದ್ದನು. ಹ್ಯಾಮಿಲ್‌ಟನ್ ತನ್ನ ತಾಯಿಯ ಬಳಗದಲ್ಲಿಯೇ ಬೆಳೆದನು. ೧೭೭೩ರಲ್ಲಿ ಅವನು ನ್ಯೂಯಾರ್ಕಿಗೆ ಬಂದು ಕಿಂಗ್ಸ್ ಕಾಲೇಜನ್ನು ಸೇರಿದನು. ಸ್ವಾತಂತ್ರ್ಯ ಸಂಗ್ರಾಮ ಪ್ರಾರಂಭವಾದಾಗ ಅವನು ಸೈನ್ಯಕ್ಕೆ ಸೇರಿದನು. ಇಪ್ಪತ್ತೆರಡು ವರ್ಷ ಪ್ರಾಯದ ಹ್ಯಾಮಿಲ್‌ಟನ್ ಸೈನ್ಯ ಶಿಬಿರದಲ್ಲಿ ಜನರಲ್ ವಾಷಿಂಗ್‌ಟನ್‌ನಿಗೆ ಅನುಚರನಾದನು. ನಂತರ ಇವನು ನ್ಯೂಯಾರ್ಕಿನ ಶ್ರೀಮಂತ ಮತ್ತು ಪ್ರಭಾವಶಾಲಿ ಫಿಲಿಪ್ ಶ್ಯೂಲರ್ (Philip Schuyler)ನ ಮಗಳನ್ನು ಮದುವೆಯಾಗಿ ಅಲ್ಲೇ ಲಾಯರ್ ಉದ್ಯೋಗವನ್ನು ಮುಂದುವರಿಸಿದನು. (ರಾಜ್ಯಾಂಗದ ರಚನೆಯಲ್ಲಿ ಇವನು ವಹಿಸಿದ ಮಹತ್ತರವಾದ ಪಾತ್ರವನ್ನು ಹಿಂದೆ ತಿಳಿಸಲಾಗಿದೆ.) ಸ್ವತಃ ದುಡಿದು ಮೇಲಕ್ಕೆ ಬಂದ ಇವನು ಐಶ್ವರ್ಯ ವಂತರ ಬಗ್ಗೆ ಮೆಚ್ಚುಗೆಯನ್ನೂ ಮತ್ತು ಸಾಮಾನ್ಯ ಜನರ ತಿಳುವಳಿಕೆಯ ಬಗ್ಗೆ ತಿರಸ್ಕಾರದ ಮನೋಭಾವವನ್ನು ವ್ಯಕ್ತಪಡಿಸುತ್ತಿದ್ದನು. ಪ್ರಜಾರಾಜ್ಯದ ಬಹುಸಂಖ್ಯಾತರ ಆಳ್ವಿಕೆಯ ಬಗ್ಗೆ ಅವನಿಗೆ ಭರವಸೆ ಇರಲಿಲ್ಲ!

ಹ್ಯಾಮಿಲ್‌ಟನ್ ಅಭಿಪ್ರಾಯದಲ್ಲಿ ರಾಷ್ಟ್ರಕ್ಕೆ ಬೇಕಾಗಿದ್ದದ್ದು ಒಂದು ಪ್ರಬಲವಾದ ಕೇಂದ್ರ ಸರ್ಕಾರ. ಸಣ್ಣ ಪುಟ್ಟ ಸಂಸ್ಥಾನಗಳಲ್ಲಿ ಒಗ್ಗಟ್ಟು ಇಲ್ಲದಿರುವುದು ಮತ್ತು ರಾಷ್ಟ್ರದ ಅಭಿವೃದ್ಧಿಗೆ ಅಡೆತಡೆಗಳನ್ನುಂಟುಮಾಡುವ ಪ್ರಾಂತೀಯ ಮನೋಭಾವವನ್ನು ಅಳಿಸಿಹಾಕಲು ಅವನು ಸಂಸ್ಥಾನಗಳನ್ನು ಬರಿಯ ಆಡಳಿತ ಕೇಂದ್ರಗಳನ್ನಾಗಿ ಮಾಡಲು ಹವಣಿಸಿದ್ದನು. ಖಜಾನೆಯ ಕಾರ್ಯದರ್ಶಿಯಾಗಿದ್ದ ಅವನು ಮುಖ್ಯವಾಗಿ, ಹೇಳಿದಂತೆ ಮಾಡುವ ಮತ್ತು ದೂರದೃಷ್ಟಿಯುಳ್ಳ ಆರ್ಥಿಕ ಯೋಜನೆಗಳನ್ನು ಸೃಷ್ಟಿಸುವ ಚಿಂತನಕಾರ ನಾಗಿದ್ದನು. ಅಮೆರಿಕದ ಅತಿ ಮುಖ್ಯ ಅವಶ್ಯಕತೆ ಬಂಡವಾಳ (Capital) ಎಂದು ಹ್ಯಾಮಿಲ್‌ಟನ್‌ನಿಗೆ ಮನದಟ್ಟಾಗಿತ್ತು. ಈ ವಿಶಾಲದೇಶದ ಭೌತಿಕ ಸಂಪತ್ತು ಮತ್ತು ಜನರ ಪರಿಶ್ರಮ ಹಾಗು ಬುದ್ಧಿವಂತಿಕೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಬಳಸಿಕೊಂಡರೆ ದೇಶದ ಆರ್ಥಿಕ ಪ್ರಗತಿಯನ್ನು ಸಾಧಿಸಬಹುದು ಎಂದು ನಂಬಿದ್ದನು. ಬಂಡವಾಳ ಹೂಡುವವರ ಮನ ಒಲಿಸಲು ಅಮೆರಿಕ ಒಪ್ಪಿಕೊಂಡ ನಿಯಮಗಳನ್ನು ಸಂಪೂರ್ಣವಾಗಿ ಪೂರೈಸಬೇಕಾದುದು ಅಗತ್ಯ. ಅಮೆರಿಕ ವಿದೇಶಗಳಿಗೆ ೧೧ ಮಿಲಿಯನ್ ಡಾಲರ್

ಸಾಲ ಕೊಡಬೇಕಾಗಿತ್ತು; ೪೦ ಮಿಲಿಯನ್ ಡಾಲರ್ ಸಾಲ ತನ್ನ ಪ್ರಜೆಗಳಿಗೆ ಕೊಡಬೇಕಾಗಿತ್ತು. ಪ್ರಜೆಗಳ ಸಾಲ ತೀರಿಸಲು ಹ್ಯಾಮಿಲ್‌ಟನ್ ಅನುಸರಿಸಿದ ಆರ್ಥಿಕ ಕಾರ್ಯಕ್ರಮದಂತೆ ಪ್ರಜೆಗಳು ಹಿಂದೆ ಕೊಂಡಿದ್ದ ಸರ್ಕಾರದ ಸೆಕ್ಯುರಿಟಿಗಳನ್ನು ವಾಪಸ್ಸು ತೆಗೆದುಕೊಂಡು ಅವುಗಳ ಬದಲಿಗೆ ಹೊಸ 'ಬಾಂಡ್'ಗಳನ್ನು ಅದೇ ಮೌಲ್ಯಕ್ಕೆ ಮಾರುವುದರ ಮೂಲಕ ಬಂದ ಹಣದಿಂದ ಯಾರೂ ಮುಟ್ಟಲಾಗದ ಒಂದು 'ನಿಧಿ'ಯನ್ನು ಸ್ಥಾಪಿಸಿ ಸಾರ್ವಜನಿಕರ ಸಾಲದ ಬಡ್ಡಿ ಮತ್ತು ಅಸಲು ಪಾವತಿ ಮಾಡುವ ಭರವಸೆ ನೀಡುವುದು. ಹಾಗೆಯೇ ಸಂಸ್ಥಾನಗಳಿಗೆ ಸಲ್ಲಬೇಕಾದ ೨೧ ಮಿಲಿಯನ್ ಡಾಲರ್‌ಗೂ ಹೆಚ್ಚಿನ ಸಾಲವನ್ನು ಕೇಂದ್ರ ಸರ್ಕಾರ ಅದೇ ಕರಾರಿನ ಮೇಲೆ ವಹಿಸಿಕೊಳ್ಳುವುದು ಎಂದು ಹ್ಯಾಮಿಲ್‌ಟನ್ ನಿರ್ಧರಿಸಿ ತನ್ನ ಸೂಚನೆಗಳನ್ನು ಕಾಂಗ್ರೆಸ್‌ನಲ್ಲಿ ಮಂಡಿಸಿದನು.

ಹೆಚ್ಚಿನ ಕಾಂಗ್ರೆಸ್ ಸದಸ್ಯರು 'ನಿಧಿ' ಕೂಡಿಸಿ ಸಾಲ ತೀರಿಸುವುದಕ್ಕೆ ಒಪ್ಪಿಗೆಯಿತ್ತರೂ ಅವರಲ್ಲಿ ಕೆಲವರು ಹೊಸದಾಗಿ ಹೊರಡಿಸಿರುವ 'ಬಾಂಡ್'ಗಳಲ್ಲಿ ಸ್ವಲ್ಪ ಭಾಗವಾದರೂ ಮೊದಲು ಸೆಕ್ಯೂರಿಟಿಗಳನ್ನು ಕೊಂಡವರಿಗೆ ಸೇರಬೇಕು ಎಂದು ವಾದಿಸಿದರು. ಮೊಟ್ಟಮೊದಲು ಸೆಕ್ಯೂರಿಟಿಗಳನ್ನು ಕೊಂಡವರಲ್ಲಿ ಸೈನಿಕರು, ರೈತರು ಮತ್ತು ವರ್ತಕರು ಇದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇವರು ಸಲ್ಲಿಸಿದ ಸೇವೆಗಾಗಿ ಈ ಸೆಕ್ಯೂರಿಟಿಗಳನ್ನು ಒತ್ತಾಯದಿಂದ ಅವರಿಗೆ ಕೊಟ್ಟಿದ್ದರು. ಹೀಗೆ ಸೆಕ್ಯೂರಿಟಿಗಳನ್ನು ಹೊಂದಿದ್ದವರಲ್ಲಿ ಬಹಳ ಜನ ತಮ್ಮ ಸೆಕ್ಯೂರಿಟಿಗಳನ್ನು ಅವುಗಳ ನಿಜ ಮೌಲ್ಯಕ್ಕಿಂತ ಅತಿ ಕಡಿಮೆ ಬೆಲೆಗೆ ಸಟ್ಟಾ ವ್ಯಾಪರಸ್ಥರಿಗೆ (speculators) ಮಾರಿಕೊಂಡಿದ್ದರು. ಆಗ ಅತಿಕಡಿಮೆ ಬೆಲೆಗೆ ಸೆಕ್ಯೂರಿಟಿಗಳನ್ನು ಕೊಂಡ ಸಟ್ಟಾ ವ್ಯಾಪರಸ್ಥರು ಹ್ಯಾಮಿಲ್‌ಟನ್ ಯೋಜನೆಯ ಪ್ರಕಾರ ಅಪಾರ ಲಾಭ ಗಳಿಸುವುದು ಖಚಿತವಾಗಿತ್ತು. ಹಾಗೆ ಲಾಭಗಳಿಸುವುದನ್ನು ಸಹಿಸಲಾರದವರು ಎತ್ತಿದ ಆಕ್ಷೇಪಣೆಗೆ ಹ್ಯಾಮಿಲ್‌ಟನ್ – 'ಸಟ್ಟಾ ವ್ಯಾಪಾರಿಗಳು ಸೆಕ್ಯೂರಿಟಿಗಳನ್ನು ಇದ್ದ ಮಾರುಕಟ್ಟೆಯ ಬೆಲೆಗೆ ಕೊಂಡರು. ನಷ್ಟಕ್ಕೆ ಈಡಾಗುತ್ತೇವೆ ಎನ್ನುವುದನ್ನು ಲೆಕ್ಕಿಸದೆ ಅದೃಷ್ಟವನ್ನು ನಂಬಿ, ಸೆಕ್ಯೂರಿಟಿಗಳನ್ನು ಖರೀದಿಸಿದರು. ನಷ್ಟದ ಗಂಡಾಂತರವನ್ನು ಎದುರಿಸಿದ ಇವರು ಲಾಭ ಗಳಿಸಿದರೆ ತಪ್ಪೇನೂ ಇಲ್ಲ' ಎಂದು ಹೇಳಿ ತನ್ನ ಯೋಜನೆಯನ್ನು ಸಮರ್ಥಿಸಿಕೊಂಡನು. ಕಾಂಗ್ರೆಸ್ ಅವನ ಸಮರ್ಥನೆಯನ್ನು ಅನುಮೋದಿಸಿತು. ಆದರೂ ಸಹ ಅವನ ಸಮಕಾಲೀನರು ಮತ್ತು ಕೆಲವು ಇತಿಹಾಸಕಾರರು ಅವನ ಯೋಜನೆಯ ಉದ್ದೇಶವನ್ನು ಪ್ರಶ್ನಿಸಿ ಅವನ ಕುಟಿಲತೆಯನ್ನು ಖಂಡಿಸಿದ್ದಾರೆ. ಹ್ಯಾಮಿಲ್‌ಟನ್ ಯೋಜನೆಯ ನಿಜವಾದ ಉದ್ದೇಶ ಶ್ರೀಮಂತರಿಗೆ ವಿಶಿಷ್ಟ ಅನುಕೂಲ ಮಾಡಿಕೊಡುವುದಾಗಿತ್ತು. ಶ್ರೀಮಂತರ ನೆರವಿದ್ದರೆ ಸರ್ಕಾರ ಭದ್ರವಾಗುತ್ತದೆ ಎಂದು ಅವನು ನಂಬಿದ್ದನು. ಶ್ರೀಮಂತರನ್ನು ಒಲಿಸಿಕೊಳ್ಳಲು ಅವರಿಗೆ ಲಾಭಗಳಿಸುವ ಅವಕಾಶಗಳನ್ನು ಮಾಡಿಕೊಡುವುದಕ್ಕಿಂತ ಸುಲಭ ಮಾರ್ಗ ಬೇರೆಯಿಲ್ಲ ಎನ್ನುವುದನ್ನು ಅವನು ಅರಿತುಕೊಂಡಿದ್ದ. ರಾಷ್ಟ್ರ ಸರ್ಕಾರ ಸಂಸ್ಥಾನಗಳ ಸಾಲವನ್ನು ವಹಿಸಿಕೊಳ್ಳುವುದರ ಬಗ್ಗೆ ಹ್ಯಾಮಿಲ್‌ಟನ್ ಹಾಕಿದ

ಯೋಜನೆ ಉತ್ತರ ಮತ್ತು ದಕ್ಷಿಣ ಬಣಗಳ ನಡುವೆ ವಾಗ್ವಾದಕ್ಕೆ ಈಡಾಯಿತು. ರಾಷ್ಟ್ರದ ಸಾಲದ ಒಟ್ಟು ಮೊತ್ತದ ೪/೫ ಭಾಗವನ್ನು ಉತ್ತರ ಸಂಸ್ಥಾನದವರು ಕೊಡಬೇಕಾಗಿತ್ತು. ದಕ್ಷಿಣ ಸಂಸ್ಥಾನಗಳು ಸ್ವಾತಂತ್ರ್ಯ ಸಂಗ್ರಾಮದ ಆರ್ಥಿಕ ಹೊಣೆಯ ಹೆಚ್ಚಿನ ಭಾಗವನ್ನು ಕೊಟ್ಟು ಮುಗಿಸಿದ್ದವು. ಆದ್ದರಿಂದ ಹ್ಯಾಮಿಲ್‌ಟನ್ ಯೊಜನೆ ಉತ್ತರದ ಸಂಸ್ಥಾನಗಳಿಗೆ ಹೆಚ್ಚು ಅನುಕೂಲವಾಗುತ್ತದೆ; ದಕ್ಷಿಣ ಸಂಸ್ಥಾನಗಳಿಗೆ ಅದರಿಂದ ಹೇಳಿಕೊಳ್ಳುವಂಥ ಅನುಕೂಲಗಳು ಇರಲಿಲ್ಲ. ಈ ಎರಡು ಬಣಗಳ ವಾಗ್ಯುದ್ಧ ತಪ್ಪಿಸಲು ಹ್ಯಾಮಿಲ್‌ಟನ್, ವರ್ಜೀನಿಯಾದ ಪ್ರತಿನಿಧಿಯಾಗಿದ್ದ ಮ್ಯಾಡಿಸನ್ ಮತ್ತು ಕಾರ್ಯದರ್ಶಿಯಾಗಿದ್ದ ಜಫರ್‌ಸನ್ ಅವರೊಡನೆ ಒಪ್ಪಂದ ಏರ್ಪಡಿಸಿದನು. ಅವರಿಬ್ಬರೂ ತಮ್ಮ ಅನುಯಾಯಿಗಳನ್ನು ಹ್ಯಾಮಿಲ್‌ಟನ್ ಯೋಜನೆಯನ್ನು ಬೆಂಬಲಿಸುವಂತೆ ಮಾಡಿದರೆ, ಹ್ಯಾಮಿಲ್‌ಟನ್ ತನ್ನ ಅನುಯಾಯಿಗಳನ್ನು ರಾಷ್ಟ್ರದ ಶಾಶ್ವತ ರಾಜಧಾನಿಯನ್ನು ಪೊಟೊಮಾಕ್ ನದಿ ದಂಡೆಯ ಮೇಲೆ ಸ್ಥಾಪಿಸಬೇಕು ಎನ್ನುವ ಮೆಡಿಸನ್ನನ ಯೋಜನೆಯನ್ನು ಬೆಂಬಲಿಸುವಂತೆ ಮಾಡಬೇಕೆಂದು ಒಪ್ಪಂದ ಮಾಡಿಕೊಂಡರು. ಈ ಒಪ್ಪಂದದಿಂದಾಗಿ ನಿಧಿಸಂಗ್ರಹ ಸಂಪೂರ್ಣ ಯಶಸ್ವಿಯಾಯಿತು. ಸ್ವಲ್ಪ ಕಾಲದಲ್ಲಿಯೇ ಅಮೆರಿಕ ಸಂಯುಕ್ತ ಸಂಸ್ಥಾನಗಳು ಪ್ರಪಂಚದ ಎಲ್ಲ ಹಣಕಾಸು ವ್ಯವಹಾರ ಕೇಂದ್ರಗಳಲ್ಲಿ ಅತಿ ಉನ್ನತ ಮೊತ್ತದ ಸಾಲ ಪಡೆಯುವ ಅರ್ಹತೆ (highest credit rating) ಪಡೆಯಿತು. ವಿದೇಶೀ ಬಂಡವಾಳ ಅಮೆರಿಕಕ್ಕೆ ಅವ್ಯಾಹತವಾಗಿ ಹರಿಯಲಾರಂಭಿಸಿತು!

ರಾಷ್ಟ್ರದ ಆರ್ಥಿಕ ವ್ಯವಸ್ಥೆ ಸಮರ್ಥವಾಗಿ ಸಾಗುವಂತೆ ಮಾಡಲು ಹ್ಯಾಮಿಲ್‌ಟನ್ ಒಂದು ರಾಷ್ಟ್ರೀಯ ಬ್ಯಾಂಕನ್ನು ಸ್ಥಾಪಿಸುವಂತೆ ಕಾಂಗ್ರೆಸ್ಸಿಗೆ ಸೂಚಿಸಿದನು. ರಾಷ್ಟ್ರೀಯ ಬ್ಯಾಂಕ್‌ನಿಂದ ಅನೇಕ ಉಪಯೋಗಗಳಿವೆ – ಇದನ್ನು ಸರ್ಕಾರದ ಹಣವನ್ನು ಸುರಕ್ಷಿತವಾಗಿ ಇಡುವ ಒಂದು ಖಜಾನೆಯಂತೆ ಉಪಯೋಗಿಸಬಹುದು, ಸರ್ಕಾರಕ್ಕೆ ಬರಬೇಕಾದ ಹಣವನ್ನು ವಸೂಲಿ ಮಾಡುವ ಇಲಾಖೆಯಂತೆ ಉಪಯೋಗಿಸಬಹುದು, ಇದರಿಂದ ಹಣವನ್ನು ಸ್ಥಳಾಂತರಿಸುವುದಕ್ಕೆ ಮತ್ತು ಖರ್ಚು ವೆಚ್ಚಗಳ ಮೇಲ್ವಿಚಾರಣೆ ಮಾಡುವುದು ಸುಲಭವಾಗುತ್ತದೆ. ಇವೆಲ್ಲಕ್ಕಿಂತ ಮುಖ್ಯವಾಗಿ ರಾಷ್ಟ್ರೀಯ ಬ್ಯಾಂಕ್ ನೋಟುಗಳನ್ನು ಮುದ್ರಿಸಿ ಚಲಾವಣೆಗೆ ತರಲು ಉಚಿತವಾದುದು ಈ ಸಂಸ್ಥೆ. ಈ ಸಂಯುಕ್ತ ಸಂಸ್ಥಾನದ ಬ್ಯಾಂಕ್‌ನ ಒಂದು ಭಾಗ ಸರ್ಕಾರಕ್ಕೆ ಸೇರಿದ್ದು, ಹತ್ತು ಮಿಲಿಯನ್ ಸ್ಟಾಕ್‌ಗಳಲ್ಲಿ ಶೇಕಡಾ ೮೦ ಭಾಗವನ್ನು ಖಾಸಗಿ ವ್ಯಕ್ತಿಗಳಿಗೆ ಮಾರುವಂತೆ ಏರ್ಪಡಿಸಲಾಯಿತು.

ರಾಷ್ಟ್ರೀಯ ಬ್ಯಾಂಕ್‌ನಿಂದ ದೇಶಕ್ಕೆ ಬಹಳ ಅನುಕೂಲಗಳಾಗುತ್ತವೆ ಎನ್ನುವುದು ನಿಜ. ಆದರೆ ಹ್ಯಾಮಿಲ್‌ಟನ್‌ನ ತಂತ್ರದಿಂದ ಶ್ರೀಮಂತ ವ್ಯಾಪಾರೀ ವರ್ಗಕ್ಕೆ ಇನ್ನೂ ಹೆಚ್ಚಿನ ಅನುಕೂಲಗಳು ಒದಗುವಂತೆ ಮಾಡಿದ್ದನು. ಬ್ಯಾಂಕಿನಲ್ಲಿರುವ ಸರ್ಕಾರದ ಹಣ ಸಾರ್ವಜನಿಕರಿಗೆ ಸೇರಿದ್ದು. ಆದರೆ ಆ ಹಣ ಉತ್ಪಾದಿಸುವ ಲಾಭ ಬ್ಯಾಂಕಿನಲ್ಲಿ ಹಣ

ಹೂಡಿದ ಕೇವಲ ಕೆಲವು ಶ್ರೀಮಂತರಿಗೆ ಲಭಿಸುತ್ತಿತ್ತು. ಉದ್ಯಮಿಗಳು ಮತ್ತು ಇತರ ಬಂಡವಾಳಗಾರರು ಬ್ಯಾಂಕಿನಿಂದ ಸಾಲ ಪಡೆಯುವ ಅನುಕೂಲತೆ ಇತ್ತು. ಬ್ಯಾಂಕಿನಲ್ಲಿ ಹೂಡಿದ ಸಾರ್ವಜನಿಕರ ಹಣವನ್ನು ಖಾಸಗಿ ವ್ಯಕ್ತಿಗಳು ನಿಯಂತ್ರಿಸುತ್ತಿದ್ದರು. ಬ್ಯಾಂಕಿನ ಒಟ್ಟು ೨೫ ಡೈರೆಕ್ಟರ್‌ಗಳಲ್ಲಿ ಐವರು ಮಾತ್ರ ಸರ್ಕಾರ ನೇಮಿಸಿದವರಾಗಿದ್ದರು. ಇಷ್ಟೆಲ್ಲ ನ್ಯೂನ್ಯತೆಗಳಿದ್ದರೂ ರಾಷ್ಟ್ರೀಯ ಬ್ಯಾಂಕ್ ಸ್ಥಾಪಿಸುವ ಮಸೂದೆಯನ್ನು ಕಾಂಗ್ರೆಸ್ ಮತ್ತು ಸೆನೆಟ್ ಎರಡರಲ್ಲೂ ಸುಲಭವಾಗಿ ಅನುಮೋದಿಸಲಾಯಿತು. ರಾಷ್ಟ್ರಾಧ್ಯಕ್ಷ ವಾಷಿಂಗ್‌ಟನ್ ಈ ಮಸೂದೆಗೆ ರುಜು ಹಾಕಲು ಹಿಂಜರಿದನು. ಸರ್ಕಾರ ಬ್ಯಾಂಕನ್ನು ಸ್ಥಾಪಿಸಿವುದು, ಬ್ಯಾಂಕಿನ ವ್ಯವಹಾರ ನಡೆಸುವುದು ರಾಜ್ಯಾಂಗಕ್ಕೆ ವಿರುದ್ಧವಾದುದು, ಹಾಗೆ ಮಾಡಬಹುದು ಎಂದು ರಾಜ್ಯಾಂಗದಲ್ಲಿ ಎಲ್ಲೂ ಹೇಳಿಲ್ಲ ಎಂದು ಅನುಮಾನ ಪಟ್ಟ ಅಧ್ಯಕ್ಷ ಎಂದಿನಂತೆ ಬೇರೆಯವರ ಸಲಹೆ ಪಡೆಯಲು ಹ್ಯಾಮಿಲ್‌ಟನ್ ಮತ್ತು ಜೆಫರ್‌ಸನ್ನನ್ನು ಸಮಾಲೋಚನೆಗೆ ಕರೆಸಿದನು. ಹ್ಯಾಮಿಲ್‌ಟನ್ ಸಹಜವಾಗಿ ಬ್ಯಾಂಕ್ ಸ್ಥಾಪನೆ ಮಾಡುವುದು ನ್ಯಾಯಬದ್ಧವಾಗಿದೆ ಮತ್ತು ಬ್ಯಾಂಕ್ ಸ್ಥಾಪನೆಯ ಮಸೂದೆಯ ಗುರಿ ರಾಜ್ಯಾಂಗ ಸ್ಪಷ್ಟಪಡಿಸಿದ ಅಧಿಕಾರವ್ಯಾಪ್ತಿಗೆ ಸೇರಿರುವುದರಿಂದ ಅದು ರಾಜ್ಯಾಂಗಬದ್ಧವಾಗಿಯೂ ಇದೆ ಎಂದು ವಾದಿಸಿದನು. ಜಫರ್‌ಸನ್ ಅವನ ವಾದವನ್ನು ಒಪ್ಪಲಿಲ್ಲ. ರಾಜ್ಯಾಂಗ ನಿರ್ದೇಶಿಸಿದಂತೆ ಯಾವ ಕಾಯಿದೆಗಳು ಅವಶ್ಯಕವಾದುವೋ ಮತ್ತು ಸಮಂಜಸವಾದುವೋ ಅಂಥ ಕಾಯಿದೆಗಳನ್ನು ಮಾತ್ರ ಕಾಂಗ್ರೆಸ್ ಜಾರಿಗೆ ತರಬೇಕಾದುದು ಅಗತ್ಯ. ಬ್ಯಾಂಕ್ ಸ್ಥಾಪಿಸುವುದು, ಹಣಕಾಸಿನ ವ್ಯವಹಾರ ಮಾಡುವುದು ಸರ್ಕಾರದ ಅವಶ್ಯ ಕರ್ತವ್ಯ ಅಲ್ಲ ಎಂದು ಜಫರ್‌ಸನ್ ವಾದಿಸಿದನು. ವಾಷಿಂಗ್‌ಟನ್ ಹ್ಯಾಮಿಲ್‌ಟನ್‌ನ ವಾದವನ್ನು ಒಪ್ಪಿಕೊಂಡು ಮಸೂದೆಗೆ ರುಜು ಮಾಡಿದನು. ರಾಷ್ಟ್ರೀಯ ಬ್ಯಾಂಕ್ ಪ್ರಾರಂಭದಿಂದಲೇ ಯಶಸ್ವಿಯಾಯಿತು. ಬ್ಯಾಂಕ್ ಚಲಾವಣೆ ಮಾಡಿದ ನೋಟುಗಳನ್ನು ಸಾರ್ವಜನಿಕರು ಕಾತರತೆಯಿಂದ ಒಪ್ಪಿಕೊಂಡರು. ಹೊಸ ಉದ್ಯಮಗಳಿಗೆ ಬಂಡವಾಳ ಹೊಂದಿಸುವುದು ಸುಲಭವಾಯಿತು. ಇತರ ಸಂಸ್ಥಾನಗಳು ಬ್ಯಾಂಕ್‌ಗಳನ್ನು ಸ್ಥಾಪಿಸಲು ಪ್ರಾರಂಭಿಸಿದವು. ೧೭೯೧ರಲ್ಲಿ ಕೇವಲ ಮೂರು ಸರ್ಕಾರಿ ಬ್ಯಾಂಕ್‌ಗಳು (state banks) ಇದ್ದವು; ೧೮೦೧ರ ವೇಳೆಗೆ ಅವುಗಳ ಸಂಖ್ಯೆ ೩೨ಕ್ಕೆ ಏರಿತ್ತು!

ಹ್ಯಾಮಿಲ್‌ಟನ್ನನ ಆರ್ಥಿಕ ಅಭಿವೃದ್ಧಿಯ ಯೋಜನೆ ಇಷ್ಟಕ್ಕೇ ಕೊನೆಗೊಳ್ಳಲಿಲ್ಲ. ಡಿಸೆಂಬರ್ ೧೭೯೧ರಲ್ಲಿ ಅವನು ಉತ್ಪಾದನೆಯನ್ನು ಕುರಿತು ತನ್ನ ಕೆಚ್ಚಿನ ಆರ್ಥಿಕ ಅಭಿವೃದ್ಧಿ ಯೊಜನೆಯನ್ನು ಮಂಡಿಸಿದನು. ಸುವ್ಯಸ್ಥಿತವಾದ ಸುಂಕ, ಸಹಾಯಧನ ಮತ್ತು ದೇಣಿಗೆಗಳ ಮೂಲಕ ಕಾಂಗ್ರೆಸ್ ಅಮೆರಿಕದ ಉತ್ಪಾದನೆಯನ್ನು ಉತ್ತೇಜನಗೊಳಿಸಿ, ವ್ಯವಸಾಯ ಆಧಾರಿತ ದೇಶವನ್ನು ಒಂದು ಸಂಕೀರ್ಣ, ಸ್ವಾವಲಂಬನೆಯ ಆರ್ಥಿಕ ವ್ಯವಸ್ಥೆಯಾಗಿ ಮಾರ್ಪಡಿಸುವ ಬೃಹತ್ ಯೋಜನೆಯನ್ನು ಕಾರ್ಯಗತಗೊಳಿಸಬೇಕೆಂದು ಕಾಂಗ್ರೆಸ್ಸಿಗೆ ಮನವಿ ಮಾಡಿದನು. ಈ ಯೋಜನೆಯಿಂದ ಯಥಾಪ್ರಕಾರ ಉದ್ಯೋಗಸ್ಥರು

ಮತ್ತು ವ್ಯಾಪಾರಿಗಳಿಗೆ ಅಪಾರ ಲಾಭ ಗಳಿಸಲು ಸಾಧ್ಯವಾಗುತ್ತಿತ್ತು. ಯಾಕೆಂದರೆ ಸರ್ಕಾರ ಇವರಿಗೆ ವಿದೇಶಿಗಳ ಪೈಪೋಟಿಯಿಂದ ರಕ್ಷಣೆ ನೀಡಿತ್ತು ಮತ್ತು ಉದ್ಯಮ/ಕೈಗಾರಿಕೆಗಳಿಗೆ ನಷ್ಟವಾಗುವುದನ್ನು ತಡೆಯಲು ಸರ್ಕಾರ ಸಹಾಯಧನ ನೀಡಿ ಸಹಕರಿಸುವುದು ಯೋಜನೆಯ ಒಂದು ಮುಖ್ಯ ಅಂಶವಾಗಿತ್ತು. ಈ ಯೋಜನೆಯ ಪರಿಣಾಮ ಸಾಮಾನ್ಯ ಪ್ರಜೆಗಳ ಮೇಲೆ – ವಿಶೇಷವಾಗಿ ರೈತರ ಮೇಲೆ – ತಾವು ಕೊಳ್ಳುವ ವಸ್ತುಗಳಿಗೆ ಹೆಚ್ಚಿನ ಬೆಲೆ ತೆರುವ ರೂಪದಲ್ಲಿ, ಹೆಚ್ಚಿನ ತೆರಿಗೆಯ ರೂಪದಲ್ಲಿ ಅವರ ಜೀವನವನ್ನು ದುಸ್ತರಗೊಳಿಸುವ ಸಾಧ್ಯತೆ ಇತ್ತು. ಇದಕ್ಕೆ ಹ್ಯಾಮಿಲ್‌ಟನ್ – ಈ ಅಸಮಾನತೆಗಳು ಕೇವಲ ತಾತ್ಕಾಲಿಕವಾದವು, ಕಾಲಕ್ರಮದಲ್ಲಿ ಈ ಯೋಜನೆಯಿಂದ ಉದ್ಯಮಗಳು, ಕೈಗಾರಿಕೆಗಳು ಮತ್ತು ವ್ಯವಸಾಯ ಎಲ್ಲವೂ ಪ್ರಗತಿ ಹೊಂದುವುದರಲ್ಲಿ ಅನುಮಾನವಿಲ್ಲ ಎಂದು ವಾದಿಸಿದನು. ಆದರೆ ಕಾಂಗ್ರೆಸ್ಸಿನಲ್ಲಿ ಈ ಬೃಹತ್ ಯೋಜನೆಗೆ ಬಹುಮತ ದೊರೆಯದೆ ಹೋಯಿತು. ಅವನ ಬೃಹತ್ ಯೋಜನೆಯನ್ನು ಚಿಕ್ಕ ಪುಟ್ಟ ಯೋಜನೆಗಳಿಗಾಗಿ ವಿಂಗಡಿಸಿದರು. ಅವನು ಸೂಚಿಸಿದ ನಿಖರವಾದ ಸುಂಕಗಳನ್ನು ಕಾಂಗ್ರೆಸ್ ೧೭೯೨ರಲ್ಲಿ ಅಂಗೀಕರಿಸಿ ಕಾಯಿದೆ ರೂಪದಲ್ಲಿ ಜಾರಿಗೆ ತಂದಿತು.

ವಿದೇಶಾಂಗ ನೀತಿ

ಹ್ಯಾಮಿಲ್‌ಟನ್ ಹಳ್ಳಿಯವರ, ರೈತರ ಮತ್ತು ಗಡಿಪ್ರದೇಶದಲ್ಲಿ ವಾಸಿಸುವ ಜನರ ಜೀವನ ಮತ್ತು ಸಮಸ್ಯೆಗಳನ್ನು ತಿಳಿದುಕೊಳ್ಳುವ ಆಸಕ್ತಿ ತೋರಿಸಲಿಲ್ಲ. ಆದ್ದರಿಂದ ಈ ಜನಗಳಿಗೆ ಮತ್ತು ದಕ್ಷಿಣ ಸಂಸ್ಥಾನದ ಪ್ಲಾನ್‌ಟರುಗಳಿಗೆ ಹ್ಯಾಮಿಲ್‌ಟನ್ ಯೋಜನೆಯಿಂದ ನೇರವಾದ ಅನುಕೂಲಗಳು ಆಗುತ್ತಿರಲಿಲ್ಲ. ಪೊಟೊಮಾಕ್ ನದಿಯು ಕೆಳಗಿನ ಪ್ರದೇಶದಲ್ಲಿನ ಜನ ಹ್ಯಾಮಿಲ್‌ಟನ್ ಯೋಜನೆಯನ್ನು ಒಪ್ಪಿಕೊಳ್ಳಲು ಕಾತರರಾಗಿರಲಿಲ್ಲ. ದಕ್ಷಿಣ ಕರೊಲಿನದ ಚಾರ್ಲ್ಸ್‌ಟೌನ್‌ನಲ್ಲಿ ಕೆಲವು ವರ್ತಕರ ಸಂಘ ಮತ್ತು ಆ ಸಂಸ್ಥಾನದ ಸರ್ಕಾರ ತನ್ನ ಸಾಲದ ಹೊರೆಯನ್ನು ಕೇಂದ್ರ ಸರ್ಕಾರ ವಹಿಸಿಕೊಳ್ಳುವ ಭರವಸೆಯಿಂದ ಹ್ಯಾಮಿಲ್‌ಟನ್ ಯೋಜನೆಯಲ್ಲಿ ಆಸಕ್ತಿ ತೋರಿಸಿದವು. ಬಹಳ ಜನ ಹ್ಯಾಮಿಲ್‌ಟನ್ ವಿರೋಧಿಗಳಾದರು. ಈ ವಿರೋಧಿಗಳ ಗುಂಪಿನಲ್ಲಿ ದಾಕ್ಷಿಣಾತ್ಯರು, ಹಳ್ಳಿಗರು ಮತ್ತು ರಾಜಕೀಯದಲ್ಲಿ ಆಸಕ್ತಿ ಉಳ್ಳವರು ಸೇರಿದ್ದರು. ಹ್ಯಾಮಿಲ್‌ಟನ್ ಯೋಜನೆಯ ಬಗ್ಗೆ ಜನರ ಭಿನ್ನಾಭಿಪ್ರಾಯಗಳು ಎರಡು ಪ್ರಬಲವಾದ ರಾಜಕೀಯ ಗುಂಪುಗಳು ಹುಟ್ಟಲು ಕಾರಣವಾದವು. ಒಂದು ಗುಂಪು ಹ್ಯಾಮಿಲ್‌ಟನ್ ಪರವಾದರೆ, ಇನ್ನೊಂದು ಅವನ ವಿರೋಧವಾಗಿತ್ತು. ಈ ಗುಂಪುಗುಳಿತನದಲ್ಲಿ ನಾವು ಇಂದಿನ ರಾಷ್ಟ್ರಮಟ್ಟದ ಎರಡು ಪ್ರಮುಖ ರಾಜಕೀಯ ಪಕ್ಷಗಳ ಬೀಜಾಂಕುರವಾಗಿದ್ದನ್ನು ಕಾಣಬಹುದು. ಹ್ಯಾಮಿಲ್‌ಟನ್ ಪರ ವಹಿಸಿದವರಿಗೆ 'ಸಂಯುಕ್ತ ರಾಷ್ಟ್ರೀಯರು' (Federalists) ಎಂದು ಹೆಸರು. ಮ್ಯಾಡಿಸನ್ ಮತ್ತು ಜೆಫರ್‌ಸನ್ ಅನುಯಾಯಿಗಳಿಗೆ 'ಪ್ರಜಾಧಿಪತ್ಯವಾದಿಗಳು' (Republicans) ಎಂದು ಹೆಸರು. ತಾವು ಪ್ರಜಾಪ್ರಭುತ್ವ ಪ್ರತಿಪಾದಿಸಿದರೆ, ಸಂಯುಕ್ತ

ರಾಷ್ಟ್ರೀಯರ ಉದ್ದೇಶ ರಾಜಪ್ರಭುತ್ವ (Monarchy) ಸ್ಥಾಪಿಸುವುದಾಗಿದೆ ಎಂದು ಜೆಫರಸನ್ ಪಕ್ಷದವರು ಪರೋಕ್ಷವಾಗಿ ಹ್ಯಾಮಿಲ್‌ಟನ್‌ನನ್ನು ಆರೋಪಿಸಿದರು. ಈ ಭಿನ್ನಾಭಿಪ್ರಾಯದ ಗುಂಪುಗಳು ರಾಷ್ಟ್ರಮಟ್ಟದ ರಾಜಕೀಯ ಪಕ್ಷಗಳಾಗಿ ಬೆಳೆಯಲು ಬಹಳ ಕಾಲ ಹಿಡಿಯಿತು. ಆಗಿನ ಕಾಲದ ತತ್ವಜ್ಞಾನಿಗಳು ಮತ್ತು ಚಿಂತನಕಾರರು ಗುಂಪುಗುಳಿತನ, ಪ್ರಾಂತೀಯತೆ ಮುಂತಾದ ಸಂಕುಚಿತ ಮನೋಭಾವಗಳನ್ನು ತೀವ್ರವಾಗಿ ಖಂಡಿಸಿದರು. ಹದಿನೆಂಟನೆಯ ಶತಮಾನದ ಇಂಗ್ಲೆಂಡಿನಲ್ಲಾಗಲೀ ಅಥವಾ ವಸಾಹತುಗಳಲ್ಲಿಯಾಗಲೀ 'ಪಕ್ಷ' ಅಥವಾ 'ಪಂಗಡ' ಎಂದರೆ ತಮ್ಮ ಸ್ವಪ್ರತಿಷ್ಠೆಯನ್ನು ಸರ್ಕಾರದ ಮೂಲಕ ಬೆಳೆಸಿಕೊಳ್ಳಲು ಪ್ರಯತ್ನಿಸುವ ಸಮಾಜದ್ರೋಹಿಗಳ ಗುಂಪು; ಇವರು ಸಾರ್ವಜನಿಕ ಕೆಲಸ ಮಾಡುವ ನೆವದಲ್ಲಿ ಸ್ವಂತ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳುವ ಭ್ರಷ್ಟಾಚಾರಿಗಳು ಎನ್ನುವ ಅಭಿಪ್ರಾಯವಿತ್ತು!

ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಮ್ಯಾಡಿಸನ್, ಹ್ಯಾಮಿಲ್‌ಟನ್‌ನ ವಿರೋಧಪಕ್ಷದ ನಾಯಕನಾದನು. ಮ್ಯಾಡಿಸನ್ ಸಂಸ್ಥಾನಗಳ ಪ್ರಾಮುಖ್ಯತೆಯನ್ನು, ಸ್ವಾಯತ್ತತೆಯನ್ನು ಎತ್ತಿ ಹಿಡಿದರೆ ಹ್ಯಾಮಿಲ್‌ಟನ್ ಈ ಸಂಸ್ಥಾನಗಳನ್ನೆಲ್ಲ ಒಂದು ಪ್ರಬಲವಾದ ಕೇಂದ್ರ ಸರ್ಕಾರದ ಅಡಿಯಲ್ಲಿ ಒಂದುಗೂಡಿಸಲು ಹವಣಿಸುತ್ತಿದ್ದನು. ಮ್ಯಾಡಿಸನ್ ಮತ್ತು ಜೆಫರ್‌ಸನ್ ಇಬ್ಬರೂ ಮೂಲತಃ ವರ್ಜೀನಿಯಾ ಸಂಸ್ಥಾನದವರು. ಅಲ್ಲಿ ಹ್ಯಾಮಿಲ್‌ಟನ್ ಸಾರ್ವಜನಿಕರ ಹಣದಿಂದ 'ನಿಧಿ' ಸ್ಥಾಪಿಸುವುದಕ್ಕೆ ಜನ ಪ್ರತಿಭಟನೆ ವ್ಯಕ್ತಪಡಿಸಿದ್ದರು, ಮತ್ತು ಕಾಂಗ್ರೆಸ್ ಸಂಸ್ಥಾನಗಳ ಸಾಲವನ್ನು ವಹಿಸಿಕೊಂಡುದು ರಾಜ್ಯಾಂಗಕ್ಕೆ ವಿರೋಧವಾಗಿದೆ ಎಂದು ಅದಕ್ಕೆ ತಮ್ಮ ಅಸಮ್ಮತಿಯನ್ನು ಬಹಿರಂಗ ಪಡಿಸಿದ್ದರು. ಆದರೆ ಹ್ಯಾಮಿಲ್‌ಟನ್ ಈ ಉತ್ಸಾಹಭರಿತ ವಿರೋಧವನ್ನು ನಾಶ ಪಡಿಸಬೇಕು ಇಲ್ಲದೆ ಹೋದರೆ ಅದು ರಾಜ್ಯಾಂಗವನ್ನು ನಾಶಗೊಳಿಸುತ್ತದೆ ಎಂದು ನಂಬಿದ್ದನು.

ನಿಧಿ ಶೇಖರಿಸುವುದು ಮತ್ತು ಕಾಂಗ್ರೆಸ್ ಸಂಸ್ಥಾನಗಳ ಸಾಲ ವಹಿಸಿಕೊಳ್ಳುವ ಬಗ್ಗೆ ಈ ಮೂವರು ಸಂಧಾನ ನಡೆಸಿ ಒಪ್ಪಂದ ಮಾಡಿಕೊಂಡು, ಕಾಂಗ್ರೆಸ್ ಅವುಗಳನ್ನು ಅನುಮೋದಿಸಿತು. ಆದರೆ ಕಾಲ ಸರಿದಂತೆ ಮ್ಯಾಡಿಸನ್ ಮತ್ತು ಜೆಫರ್‌ಸನ್ ಇಬ್ಬರೂ ಹ್ಯಾಮಿಲ್‌ಟನ್ ಯೋಜನೆಗಳಿಗೆ, ಕಾರ್ಯಕ್ರಮಗಳಿಗೆ ಸಂಧಾನಕ್ಕೆ ಅವಕಾಶವಿಲ್ಲದ ವಿರೋಧ ವ್ಯಕ್ತಪಡಿಸುತ್ತಾ ಬಂದರು – ಹ್ಯಾಮಿಲ್‌ಟನ್ ಸೂಚಿಸಿದ ವ್ಹಿಸ್ಕಿ (whiskey)ಯ ಮೇಲಿನ ಸುಂಕ, ರಾಷ್ಟ್ರೀಯ ಬ್ಯಾಂಕ್ ಸ್ಥಾಪನೆ, ಅವನ ಉತ್ಪಾದನೆಯ ಮೇಲಿನ ವರದಿ (report on manufactures) – ಇವುಗಳಿಗೆ ತೀವ್ರ ವಿರೋಧ ವ್ಯಕ್ತಪಡಿಸಿದರು. ವಿರೋಧ ಬೆಳೆದಂತೆಲ್ಲ ಜೆಫರ್‌ಸನ್ ಮತ್ತು ಹ್ಯಾಮಿಲ್‌ಟನ್ ನಡುವೆ ಹಗೆತನ ಹೆಚ್ಚುತ್ತಾ ಹೋಯಿತು. ಇದರಿಂದ ಅಧ್ಯಕ್ಷ ವಾಷಿಂಗ್‌ಟನ್ ಮನಸ್ಸಿಗೆ ನೋವುಂಟಾಯಿತು. ತಾತ್ವಿಕವಾಗಿ ಹ್ಯಾಮಿಲ್‌ಟನ್ ಮತ್ತು ಜೆಫರ್‌ಸನ್ ಇಬ್ಬರೂ ಉತ್ತರ ಮತ್ತು ದಕ್ಷಿಣ

ಧ್ರುವಗಳಿಂದ್ದಂತೆ. ಅವರಿಬ್ಬರ ವಾಗ್ಯುದ್ಧ ಮೊದಲಬಾರಿಗೆ ರಾಜ್ಯಾಂಗದ ನಿರ್ದೇಶನದಂತೆ ರಚಿತವಾದ ಸಂಯುಕ್ತ ಸಂಸ್ಥಾನಗಳ ಗುಣ ಲಕ್ಷಣಗಳನ್ನು ರೂಪಿಸಿ, ಅಮೆರಿಕ ಜನಜೀವನದ ಕೆಲವು ಪ್ರಧಾನ ವಿವಾದಾಂಶಗಳನ್ನು ವಿಶದಪಡಿಸಿತು. ಈ ವಿವಾದಾಂಶಗಳು ಈಗಲೂ ಆಗಾಗ ಕೇಳಿಬರುವುದುಂಟು.

ಹ್ಯಾಮಿಲ್‌ಟನ್ ಅಮೆರಿಕ ವೈವಿಧ್ಯತೆಗಳಿಂದ ಕೂಡಿದ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಾಗಿ ಬೆಳೆಯುತ್ತದೆ; ಈ ಆರ್ಥಿಕ ವ್ಯವಸ್ಥೆಯಲ್ಲಿ ವ್ಯವಸಾಯ, ವಾಣಿಜ್ಯ ಮತ್ತು ಕೈಗಾರಿಕೆಗಳಿಂದ ಒಂದು ಸಮತೋಲ ಸ್ಥಿತಿಯನ್ನು (ಅಂದರೆ ಹೆಚ್ಚಿನ ಏರು ಇಳಿತಗಳಿಲ್ಲದ) ಪಡೆಯುತ್ತದೆ – ಎಂದು ನುಡಿದ ಭವಿಷ್ಯ ಇಂದು ನಿಜವಾಗಿ ತೋರುತ್ತಿದೆ. ಜೆಫರ್‌ಸನ್ ದೃಷ್ಟಿಯಲ್ಲಿ ಅಮೆರಿಕ ಪ್ರಮುಖವಾಗಿ ವ್ಯವಸಾಯಗಾರರ ರಾಜ್ಯ. ಮುಂದೆಯೂ ಅದು ಹಾಗೆಯೇ ಉಳಿಯಬೇಕು ಎನ್ನುವುದು ಅವನ ಆಸೆ. ನಗರಗಳ ಬೆಳವಣಿಗೆ ಅವನಲ್ಲಿ ಭಯ ಹುಟ್ಟಿಸಿತ್ತು. ಬೃಹತ್ತಾದ ನಗರಗಳ ನೂರಾರು ಸಮಸ್ಯೆಗಳು – ಮುಖ್ಯವಾಗಿ ನಗರಗಳ ಜನಸಂದಣಿ – ಜನಸಂಖ್ಯೆ ಹೆಚ್ಚಾದಂತೆ ಬಹುಸಂಖ್ಯಾತ ಬಡವರ ಮತ್ತು ಅಲ್ಪಸಂಖ್ಯಾತ ಶ್ರೀಮಂತವರ್ಗಗಳ ನಡುವೆ ಘರ್ಷಣೆ ಸಂಭವಿಸಿ ಅರಾಜಕತೆ ಹರಡುವ ಸಾಧ್ಯತೆ ಹೆಚ್ಚುತ್ತದೆ ಎಂದು ಜೆಫರ್‌ಸನ್ ನಂಬಿದ್ದನು. ಜೆಫರ್‌ಸನ್ ಕೈಗಾರಿಕಾರಣದ ಕಡುವಿರೋಧಿಯಾಗಿದ್ದನು. ಅವನು ನೆಲ ಉತ್ತು ಬಿತ್ತಿ ಬೆಳೆ ತೆಗೆಯುವವರು ದೇವರ ಕೃಪೆಗೆ ಪಾತ್ರರಾದವರು ಎಂದು ನಂಬಿದ್ದನು. ಜೆಫರ್‌ಸನ್ ಅನೇಕ ಸುಧಾರಣೆಗಳನ್ನು ಜಾರಿಗೆ ತರಲು ಪ್ರಯತ್ನಿಸಿದನು. – 'ಹಿರಿಯ ಮಗ ಮಾತ್ರ ಪಿತ್ರಾರ್ಜಿತ ಆಸ್ತಿಗೆ ಹಕ್ಕುದಾರ' (primogeniture) ಎನ್ನುವ ಹಳೆಯ ಪದ್ಧತಿಯನ್ನು ರದ್ದುಗೊಳಿಸಿದನು. ಚರ್ಚಿಗೆ ಅಥವಾ ಮತಧರ್ಮ ಸಂಸ್ಥೆಗಳಿಗೆ ಸರ್ಕಾರ ಬೆಂಬಲ ನೀಡುವುದನ್ನು ವಿರೋಧಿಸಿದನು. ಸಾರ್ವಜನಿಕ ಶಾಲೆಗಳ ಗುಣಮಟ್ಟ ಹೆಚ್ಚಿಸಲು ಒಂದು ವಿವರವಾದ ಯೋಜನೆಯನ್ನು ಮಂಡಿಸಿದನು. ಹೆಚ್ಚು ಮಾನವೀಯತೆಯಿಂದ ಕೂಡಿದ ಅಪರಾಧ ಕಾಯಿದೆ (criminal code)ಯನ್ನು ಸೂಚಿಸಿದನು. ಹ್ಯಾಮಿಲ್‌ಟನ್ ಅರಾಜಕತೆ ಮತ್ತು ಅವ್ಯವಸ್ಥೆಗಳಿಗೆ ಅಂಜಿ, ಸುಭದ್ರ ಕೇಂದ್ರ ಸರ್ಕಾರ ಮತ್ತು ಸುವ್ಯವಸ್ಥಿತ ಆಡಳಿತವನ್ನು ಬೆಂಬಲಿಸಿದನು. ಜೆಫರ್‌ಸನ್ ಸರ್ಕಾರದ ದಬ್ಬಾಳಿಕೆಗೆ ಹೆದರಿ, ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಗಳನ್ನು ಎತ್ತಿ ಹಿಡಿದನು.

೧೭೯೧ರಲ್ಲಿ ಜೆಫರ್‌ಸನ್ ಮತ್ತು ಮ್ಯಾಡಿಸನ್ ಇಬ್ಬರೂ ಕೂಡಿ ಹಡ್ಸನ್ ನದಿಯ ಉತ್ತರಕ್ಕೆ ದೋಣಿ ಪ್ರವಾಸ ಮಾಡಿದರು. ಈ ಪ್ರವಾಸದ ಉದ್ದೇಶವನ್ನು ಸಂಯುಕ್ತ ರಾಷ್ಟ್ರವಾದಿಗಳು (Federalists) ಇವರಿಬ್ಬರೂ ನ್ಯೂಯಾರ್ಕಿನ ಶ್ರೀಮಂತ ಪಕ್ಷದ ವಿರೋಧಿಗಳಾದ ಗವರ್ನರ್ ಕ್ಲಿನ್‌ಟನ್, ಲಿವಿಂಗ್‌ಸ್ಟನ್ ಮತ್ತು ಅರಾನ್ ಬರ್ ಇವರೊಡನೆ ಸಮಾಲೋಚನೆ ನಡೆಸಲು ಹೋಗುತ್ತಿದ್ದಾರೆ ಎಂದು ನಿರ್ಣಯಿಸಿದರು.

ಅವರ ನಿರ್ಣಯ ತಪ್ಪಾಗಿದ್ದರೂ, ಕಾಲಕ್ರಮದಲ್ಲಿ ಜೆಫರ್‌ಸನ್‌ನ ಪ್ರಜಾಪ್ರಭುತ್ವವಾದಿಗಳಿಗೂ (Jeffersonian republicans) ನ್ಯೂಯಾರ್ಕಿನ ಶ್ರೀಮಂತ ಪಕ್ಷದ ವಿರೋಧಿಗಳಿಗೂ ಪರಸ್ಪರ ಹೊಂದಾಣಿಕೆ ಬೆಳೆದು ಎರಡು ಗುಂಪುಗಳು ಒಂದಾಗಿ ಹೊಸ ರಾಜಕೀಯ ಪಕ್ಷದ ಉದಯಕ್ಕೆ ಕಾರಣವಾಯಿತು. ಆಗ ಉದಯಿಸಿದ ಹೊಸ ಪಕ್ಷವೇ ಈಗಿನ ಡೆಮೊಕ್ರಾಟಿಕ್ ಪಕ್ಷ (Democratic party).

ಹ್ಯಾಮಿಲ್‌ಟನ್‌ನ ಸಂಯುಕ್ತ ರಾಷ್ಟ್ರಪಕ್ಷ ಮತ್ತು ಜೆಫರ್‌ಸನ್‌ನ ಪ್ರಜಾಪ್ರಭುತ್ವವಾದಿ ಪಕ್ಷಗಳ ನಡುವಣ ಸಂಘರ್ಷಣೆಗಳಿಂದ ದೂರವಿದ್ದವನು ಅಧ್ಯಕ್ಷ ವಾಷಿಂಗ್‌ಟನ್. ಪಕ್ಷಗಳ ರಾಜಕೀಯ ಅವನಿಗೆ ಕೆಟ್ಟದೆನಿಸಿತು. ಆದ್ದರಿಂದ ಅವನು ಯಾರ ಪರವನ್ನೂ ವಹಿಸಲಿಲ್ಲ. ಅವನು ಅಧ್ಯಕ್ಷಪದವಿಯಿಂದ ನಿವೃತ್ತನಾಗಲು ಕಾತರನಾಗಿದ್ದನು. ಆದರೆ ಹ್ಯಾಮಿಲ್‌ಟನ್ ಮತ್ತು ಜೆಫರ್‌ಸನ್ ಇಬ್ಬರೂ ಅವನನ್ನು ಅಧ್ಯಕ್ಷನಾಗಿ ಮುಂದುವರಿಯಲು ಒತ್ತಾಯ ಮಾಡಿದರು. ದೇಶದ ಆಗಿನ ಸ್ಥಿತಿಯಲ್ಲಿ ಪಕ್ಷಗಳ ಧೋರಣೆಗಳಿಂದ ಪ್ರಭಾವಿತನಾಗದೆ, ಪಕ್ಷಗಳ ರಾಜಕೀಯಕ್ಕೆ ನಿಲುಕದೆ ಎಲ್ಲರನ್ನೂ ಒಂದುಗೂಡಿಸಿ ಆಡಳಿತ ನಡೆಸಿಕೊಂಡು ಹೋಗುವ ಸಾಮರ್ಥ್ಯವಿದ್ದವನು ವಾಷಿಂಗ್‌ಟನ್ ಒಬ್ಬನೆ! ಎಲ್ಲರ ಗೌರವಕ್ಕೆ ಪಾತ್ರನಾಗಿದ್ದ ವಾಷಿಂಗ್‌ಟನ್‌ನಲ್ಲಿ ಜನರು ಅಪಾರ ಭರವಸೆ ಹೊಂದಿದ್ದರು. ೧೭೯೨ರಲ್ಲಿ ವಾಷಿಂಗ್‌ಟನ್ ಎರಡನೆಯ ಬಾರಿ ಒಮ್ಮತದಿಂದ ಅಧ್ಯಕ್ಷನಾಗಿ ಆರಿಸಿ ಬಂದನು. ಆದರೆ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ ಆ್ಯಡಮ್ಸ್‌ನಿಗೆ ೭೭ ಎಲೆಕ್ಟೊರಲ್ ಮತಗಳು ಮತ್ತು ಆಗತಾನೆ ಹುಟ್ಟಿದ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಕ್ಲಿನ್‌ಟನ್‌ಗೆ ೫೦ ಮತಗಳು ಬಂದಿದ್ದವು.

ವಾಷಿಂಗ್‌ಟನ್ ಎರಡನೆಯ ಬಾರಿಗೆ ಅಧ್ಯಕ್ಷನಾಗಿದ್ದ ಕಾಲದಲ್ಲಿ ವಿದೇಶಗಳೊಡನೆ ಏರ್ಪಟ್ಟಿದ್ದ ಸಂಬಂಧಗಳು ಜಟಿಲವಾಗುತ್ತ ಬಂದವು. ವಾಷಿಂಗ್‌ಟನ್ ಎರಡನೆಯ ಬಾರಿ ಅಧ್ಯಕ್ಷನಾದ ಕೆಲವೇ ತಿಂಗಳಲ್ಲಿ ಫ್ರಾನ್ಸ್‌ನಲ್ಲಿ ಮಹಾಕ್ರಾಂತಿ ಜರುಗಿತು. ಫ್ರಾನ್ಸ್‌ನಲ್ಲಿ ನಡೆಯುತ್ತಿದ್ದ ಸಂಗತಿಗಳನ್ನು ಅಮೆರಿಕನ್ನರು ಕುತೂಹಲದಿಂದ ಗಮನಿಸುತ್ತಿದ್ದರು. ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವದ ತಾತ್ವಿಕ ಆಧಾರದ ಮೇಲೆ ಪ್ರಾರಂಭವಾಗಿ ಉಜ್ವಲ ಭವಿಷ್ಯದ ಆಸೆಯನ್ನು ಹುಟ್ಟಿಸಿದ ಈ ಕ್ರಾಂತಿ, ಸ್ವಜನ ಹತ್ಯಾಕಾಂಡದಂತೆ ಮಾರ್ಪಾಡಾಗಿ ಫ್ರಾನ್ಸಿನಲ್ಲಿ ರಕ್ತದ ಹೊಳೆ ಹರಿಸಿದುದೇ ಅಲ್ಲದೆ ಆಸ್ಟ್ರಿಯಾ ಮತ್ತು ಪ್ರಷ್ಯಾ (Prussia) ದೇಶಗಳೊಡನೆ ಯುದ್ಧಕ್ಕೆ ಕಾರಣವಾಯಿತು. ೧೭೯೩ರಲ್ಲಿ ಫ್ರಾನ್ಸಿನ ದೊರೆ ಹದಿನಾರನೆಯ ಲೂಯಿಯ ಕೊಲೆಯಾದ ಮೇಲೆ ಇಂಗ್ಲೆಂಡ್ ಇತರ ರಾಜಪ್ರಭುತ್ವಗಳೊಡನೆ ಸೇರಿಕೊಂಡು ಫ್ರೆಂಚ್ ಪ್ರಜಾಪ್ರಭುತ್ವದ (French Republic) ಮೇಲೆ ಯುದ್ಧ ಪ್ರಾರಂಭಿಸಿತು. ಮುಂದಿನ ೨೨ ವರ್ಷಗಳು ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ನಡುವೆ ಯುದ್ಧ ನಡೆದು ೧೮೧೫ರಲ್ಲಿ ನೆಪೋಲಿಯನ್ನನ ಸೋಲಿನಲ್ಲಿ ಪರ್ಯವಸಾನಗೊಂಡಿತು. ಈ ಯುದ್ಧ ಅಧ್ಯಕ್ಷ ವಾಷಿಂಗ್‌ಟನ್‌ನನ್ನು ಎಡವಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿಕೊಳ್ಳುವಂತೆ ಮಾಡಿತು. ೧೭೭೮ರಲ್ಲಿ ಅಮೆರಿಕ ಫ್ರಾನ್ಸಿನೊಡನೆ ಮಾಡಿಕೊಂಡ

ಕರಾರಿನ ಪ್ರಕಾರ ಎರಡು ದೇಶಗಳು ಪರಸ್ಪರ ಮಿತ್ರ ದೇಶಗಳಾಗಿದ್ದುಕೊಂಡು ಯುದ್ಧ ಕಾಲದಲ್ಲಿ ಸೈನ್ಯ ಕಳುಹಿಸಿ ಸಹಾಯಮಾಡಬೇಕಾಗಿದ್ದು ಕರ್ತವ್ಯವಾಗಿತ್ತು. ಆದರೆ ಅಮೆರಿಕನ್ನರಿಗೆ ಯುದ್ಧದಲ್ಲಿ ಭಾಗವಹಿಸುವುದು ಬೇಕಾಗಿರಲಿಲ್ಲ. ಹ್ಯಾಮಿಲ್‌ಟನ್ ಮತ್ತು ಜೆಫರ್‌ಸನ್ ಇಬ್ಬರೂ ಅಮೆರಿಕ ಫ್ರಾನ್ಸಿನ ಪರವಾಗಿ ಯುದ್ಧಕ್ಕೆ ಇಳಿಯುವುದನ್ನು ವಿರೋಧಿಸಿದರು. ಹ್ಯಾಮಿಲ್‌ಟನ್ ಒಪ್ಪಂದ ಮಾಡಿಕೊಂಡ ಸರ್ಕಾರ ಈಗ ಫ್ರಾನ್ಸಿನಲ್ಲಿ ಇಲ್ಲದಿರುವುದರಿಂದ ಒಪ್ಪಂದವನ್ನು ರದ್ದು ಮಾಡುವಂತೆ ಸಲಹೆ ಮಾಡಿದನು. ಆದರೆ ಜೆಫರ್‌ಸನ್ ಒಪ್ಪಂದವನ್ನು ಮುಂದುವರಿಸಿ ಅದನ್ನು ಬ್ರಿಟಿಷ್ ಸರ್ಕಾರದೊಡನೆ ನಡೆಸುವ ವ್ಯವಹಾರಗಳಲ್ಲಿ ತಮಗೆ ಅನುಕೂಲವಾಗುವಂತೆ ಉಪಯೋಗಿಸಿಕೊಳ್ಳಬೇಕೆಂದು ಸಲಹೆ ನೀಡಿದನು. ವಾಷಿಂಗ್‌ಟನ್ ಇವರಿಬ್ಬರ ಸಲಹೆಗಳನ್ನು ತಿರಸ್ಕರಿಸಿ, ಯಾವ ದೇಶದ ಪರ ಅಥವಾ ವಿರೋಧವಾಗಿರದಂಥ ಮಧ್ಯಮ ಮಾರ್ಗದ ಹೇಳಿಕೆಯನ್ನು ಕೊಟ್ಟನು. ಈ ಹೇಳಿಕೆ ತಟಸ್ಥ ನೀತಿಯನ್ನು ಪ್ರತಿಪಾದಿಸಿ ಯುದ್ಧ ಮಾಡುತ್ತಿರುವ ಎರಡು ದೇಶಗಳೊಡನೆ ಅಮೆರಿಕ ಸ್ನೇಹದಿಂದ ಇದ್ದು ನಿಷ್ಪಕ್ಷಪಾತವಾಗಿ ನಡೆದುಕೊಳ್ಳುತ್ತದೆ ಎನ್ನುವ ಪ್ರಕಟಣೆಯಾಗಿ ಪ್ರಚುರಗೊಂಡಿತು. ಅಮೆರಿಕದ ಪ್ರಜೆಗಳು ಯಾವ ರೀತಿಯಿಂದಲೂ ಯುದ್ಧದಲ್ಲಿ ಭಾಗವಹಿಸಕೂಡದೆಂದು ಎಚ್ಚರಿಕೆ ನೀಡಿದನು. ಇದನ್ನು ಉಲ್ಲಂಘಿಸಿದವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಾಗಿ ಪ್ರಕಟಣೆ ಹೊರಡಿಸಿದನು.

ಜಾನ್ ಜೇ ಒಪ್ಪಂದಗಳು

೧೭೯೪ರಲ್ಲಿ ವಾಷಿಂಗ್‌ಟನ್ ಶ್ರೇಷ್ಠ ನ್ಯಾಯಾಧೀಶನಾಗಿದ್ದ ಜಾನ್ ಜೇಯನ್ನು ಬ್ರಿಟನ್ನಿನ ವಿಶಿಷ್ಟ ರಾಯಭಾರಿಯನ್ನಾಗಿ ನೇಮಿಸಿದನು. ಅಮೆರಿಕ ಮತ್ತು ಬ್ರಿಟನ್‌ಗಳ ನಡುವಣ ಎಲ್ಲ ವಿವಾದಾಂಶಗಳನ್ನು ಇತ್ಯರ್ಥ ಮಾಡಿಕೊಂಡು ಬರುವಂತೆ ಸಲಹೆ ನೀಡಿ ಅವನನ್ನು ಕಳುಹಿಸಿದನು. ಜಾನ್ ಜೇ ಇಂಗ್ಲೆಂಡಿನಲ್ಲಿ ವಿವಿಧ ವಿಷಯಗಳನ್ನು ಕುರಿತು ಹಲವಾರು ತಿಂಗಳು ಮಾತುಕತೆ ನಡೆಸಿದನು. ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸಿದ ನಂತರ ಅವರು ಒಂದು ಒಪ್ಪಂದಕ್ಕೆ ಬಂದರು. ಆ ಒಪ್ಪಂದದಲ್ಲಿ ಅಮೆರಿಕಕ್ಕೆ ಒಂದು ದೊಡ್ಡ ರಿಯಾಯಿತಿ ದೊರೆಯಿತು – ಬ್ರಿಟಿಷರು ಅಮೆರಿಕದ ಪಶ್ಚಿಮ ಪ್ರದೇಶದಲ್ಲಿ ಸ್ಥಾಪಿಸಿದ ಠಾಣ್ಯಗಳನ್ನು ಬಿಟ್ಟುಕೊಡಲು ಮತ್ತು ಬ್ರಿಟಿಷರು ವಶಪಡಿಸಿಕೊಂಡ ಅಮೆರಿಕನ್ ಹಡಗುಗಳ ಮಾಲೀಕರಿಗೆ ಪರಿಹಾರ ಧನ ಕೊಡಲು ಒಪ್ಪಿಕೊಂಡರು. ಇಂಗ್ಲೆಂಡಿನ ವಸಾಹತುಗಳನ್ನು ಅಮೆರಿಕದ ವ್ಯಾಪಾರಿ ಹಡಗುಗಳಿಗೆ ತೆರೆಯಲಾಗುವುದೆಂದು ಭರವಸೆ ನೀಡಿದರು. ಜಾನ್ ಜೇ ೧೭೫೬ರ ನಿಯಮಕ್ಕೆ ಒಪ್ಪಿಕೊಳ್ಳಬೇಕಾಗಿ ಬಂತು. ಬ್ರಿಟಿಷರ ಈ ನಿಯಮದಂತೆ ತಟಸ್ಥ ರಾಷ್ಟ್ರಗಳು ಸಾಮಾನ್ಯವಾಗಿ ಯಾವ ಬಂದರುಗಳನ್ನು ಪ್ರವೇಶಿಸಕೂಡದು ಎಂದು ವಾಣಿಜ್ಯ ನಿಬಂಧನೆಗಳು ನಿಷೇಧಿಸಿದ್ದವೋ ಆ ಬಂದರು ಗಳೊಡನೆ ಯುದ್ಧ ಕಾಲದಲ್ಲಿ ವ್ಯಾಪಾರ ವ್ಯವಹಾರ ಮಾಡಕೂಡದು ಎನ್ನುವುದನ್ನು ಖಚಿತಪಡಿಸಿದರು.

ವ್ಯಾಪಾರ ವ್ಯವಹಾರಗಳಲ್ಲಿ ಅಮೆರಿಕ ಇಂಗ್ಲೆಂಡನ್ನು 'ಅತ್ಯಂತ ಮೆಚ್ಚುಗೆಗೆ ಪಾತ್ರವಾದ ರಾಷ್ಟ್ರ' (most favored nation) ಎಂದು ಪರಿಗಣಿಸುವುದಾಗಿ ಜಾನ್ ಜೇ ಒಪ್ಪಿಕೊಂಡನು. ಹೀಗೆ ಒಪ್ಪಿಕೊಂಡಿದ್ದರಿಂದ ಬ್ರಿಟಿಷ್ ಸರಕುಗಳ ಮೇಲೆ ಅಮೆರಿಕ ತೆರಿಗೆ ಹಾಕುವುದನ್ನು ನಿಲ್ಲಿಸಬೇಕಾಯಿತು. ಇದು ಬ್ರಿಟಿಷ್ ವಿರೋಧಿಗಳಾಗಿದ್ದ ಕೆಲವು ಕಾಂಗ್ರೆಸ್ ಸದಸ್ಯರಿಗೆ ಸರಿ ಬೀಳಲಿಲ್ಲ. ಇದಕ್ಕಿಂತಲೂ ಹೆಚ್ಚು ಅವಮಾನಕರವಾದದ್ದೆಂದರೆ, ಸ್ವಾತಂತ್ರ್ಯಪೂರ್ವದಲ್ಲಿ ಅಮೆರಿಕನ್ನರು ಬ್ರಿಟಿಷ್ ವ್ಯಾಪಾರಿಗಳಿಂದ ಪಡೆದ ಸಾಲವನ್ನು ತೀರಿಸುವ ಹೊಣೆಗಾರಿಕೆಯನ್ನು ಕೇಂದ್ರ ಸರ್ಕಾರ ವಹಿಸಿಕೊಳ್ಳುತ್ತದೆ ಎಂದು ಜಾನ್ ಜೇ ನೀಡಿದ ಭರವಸೆ ಬಹಳ ಅಮೆರಿಕನ್ನರನ್ನು ಕೆರಳಿಸಿತು. ಬ್ರಿಟಿಷರು ಕೊಂಡೊಯ್ದ ಗುಲಾಮರ ಬೆಲೆಯನ್ನು ಹಿಂತಿರುಗಿಸುವುದರ ಬಗ್ಗೆ ಯಾವ ಮಾತುಕತೆಯನ್ನು ನಡೆಸದಿದ್ದರ ಬಗ್ಗೆ ಜಾನ್ ಜೇಯ ಮೇಲೆ ಅನೇಕರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಬ್ರಿಟಿಷರಿಂದ ಹೆಚ್ಚಿನ ರಿಯಾಯಿತಿಗಳನ್ನು ಪಡೆಯಲು ಅಸಮರ್ಥನಾದನೆಂದು ಅವನು ಎಲ್ಲರ ನಿಂದೆಗೆ ಗುರಿಯಾದನು. ಆತ ಜಾನ್ ಮಾಡಿಕೊಂಡ ಒಪ್ಪಂದವನ್ನು ಕಾಂಗ್ರೆಸ್ ಅನುಮೋದಿಸುವುದಿಲ್ಲ ಎಂದು ಎಲ್ಲರೂ ತಿಳಿದಿದ್ದರು. ಆದರೆ ಅಧ್ಯಕ್ಷ ವಾಷಿಂಗ್‌ಟನ್ ಎಲ್ಲ ವಿಷಯಗಳನ್ನೂ ಪರಿಶೀಲಿಸಿ ತನ್ನ ಮುಂದೆ ಇರುವುದು ಎರಡೇ ಮಾರ್ಗಗಳೆಂದು ತಿಳಿದುಕೊಂಡನು – ಒಪ್ಪಂದಕ್ಕೆ ರುಜು ಮಾಡುವುದು, ಇಲ್ಲದಿದ್ದರೆ ಬ್ರಿಟನ್ ಮೇಲೆ ಯುದ್ಧಕ್ಕೆ ಇಳಿಯುವುದು. ಜಾನ್ ಜೇಯನ ಒಪ್ಪಂದದಿಂದ ವಾಷಿಂಗ್‌ಟನ್‌ಗೆ ತೀರ ನಿರಾಶೆಯಾಗಿತ್ತು. ಆದರೆ ಅವನಿಗೆ ಬೇರೆ ದಾರಿಯೆ ಇರಲಿಲ್ಲ. ನಿರಾಸೆಯನ್ನು ನುಂಗಿಕೊಂಡು ಈ ಒಪ್ಪಂದವನ್ನು ಸೆನೆಟಿನಲ್ಲಿ ಮಂಡಿಸಿದನು. ಒಪ್ಪಂದದ ಪರವಾಗಿ ಮತ್ತು ವಿರೋಧವಾಗಿ ಸದಸ್ಯರಲ್ಲಿ ಕ್ಲಿಷ್ಟವಾದ ಚರ್ಚೆ ನಡೆದು, ಕಡೆಗೆ ಜೂನ್ ೨೪, ೧೭೯೫ರಲ್ಲಿ ಜಾನ್ ಜೇಯ ವಿವಾದಾತ್ಮಕ ಒಪ್ಪಂದವನ್ನು ಸೆನೆಟ್ ಅನುಮೋದಿಸಿತು.

ಒಪ್ಪಂದವನ್ನು ಸೆನೆಟ್‌ನಲ್ಲಿ ಮಂಡಿಸಿ ಅನುಮೋದನೆ ಪಡೆದುದು ವಾಷಿಂಗ್‌ಟನ್ ಮಾಡಿದ ಜಾಣತನದ ನಿರ್ಧಾರವೆಂದು ಇತಿಹಾಸಕಾರರು ಶ್ಲಾಘಿಸಿದ್ದಾರೆ. ಈ ಒಪ್ಪಂದ ಆ್ಯಂಗ್ಲೊ ಅಮೆರಿಕನ್ ಸಂಬಂಧಗಳನ್ನು ದೃಢಪಡಿಸಿ ವ್ಯವಸ್ಥಿತಗೊಳಿಸಿತು. ಇದು ಶಾಂತಿಸ್ಥಾಪನೆಗೆ ದಾರಿ ಮಾಡಿಕೊಟ್ಟು ರಾಷ್ಟ್ರಕ್ಕೆ ಆರ್ಥಿಕ ಮತ್ತು ರಾಜಕೀಯ ಭದ್ರತೆಯನ್ನು ಒದಗಿಸಿತು. ಈ ಒಪ್ಪಂದದ ಒಂದು ಅನಿರೀಕ್ಷಿತ ಪರಿಣಾಮವೆಂದರೆ, ಅಮೆರಿಕದ ನೈರುತ್ಯ ಪ್ರದೇಶಗಳ ಸಮಸ್ಯೆಗಳು ಪರಿಹಾರಗೊಂಡವು. ಆ ಪ್ರದೇಶದಲ್ಲಿದ್ದ ಸ್ಪಾನಿಷರು ಫ್ರೆಂಚರ ವಿರುದ್ಧ ಒಟ್ಟಾಗಿದ್ದ ಬಣದಿಂದ ಹೊರಬರಲು ಕಾರಣ – ಬ್ರಿಟಿಷರು ತಮ್ಮ ಸಮೃದ್ಧ ಅಮೆರಿಕನ್ ವಸಾಹತುಗಳ ಮೇಲೆ ದಾಳಿ ಮಾಡಬಹುದು ಎಂಬ ಭಯದಿಂದ. ಸ್ಪಾನಿಷರು ಆ್ಯಂಗ್ಲೊ ಅಮೆರಿಕನ್ ಒಪ್ಪಂದವನ್ನು ತಮ್ಮ ಮೇಲೆ ಆಕ್ರಮಣ ಮಾಡಲು ಈ ಎರಡು ರಾಷ್ಟ್ರಗಳು ಹಾಕಿರುವ ಯೋಜನೆ ಎಂದು ಅರ್ಥ ಮಾಡಿಕೊಂಡರು! ಆ್ಯಂಗ್ಲೊ ಅಮೆರಿಕನ್ ಆಕ್ರಮಣದ ಭಯದಿಂದಾಗಿ ಸ್ಪೇನ್ ಅಮೆರಿಕದೊಡನೆ ಒಪ್ಪಂದ ಮಾಡಿಕೊಳ್ಳಲು ಕೂಡಲೆ

ಸಿದ್ಧವಾಯಿತು. ಈ ಒಪ್ಪಂದದ ಪ್ರಕಾರ ಅಮೆರಿಕ ಮಿಸಿಸ್ಸಿಪ್ಪಿ ನದಿಯಲ್ಲಿ ವ್ಯಾಪಾರದ ದೋಣಿಗಳನ್ನು ನಡೆಸುವ ಮತ್ತು ನ್ಯೂ ಆರ್ಲಿಯನ್ಸ್‌ನಲ್ಲಿ ತಮ್ಮ ಸರಕುಗಳನ್ನು ಶೇಖರಿಸಿಡುವ ಹಕ್ಕನ್ನು ಪಡೆದುಕೊಂಡಿತು. ಸ್ಪೇನ್‌ನಿಂದ ಅಮೆರಿಕ ಪಡೆದ ಮತ್ತೊಂದು ಮುಖ್ಯ ರಿಯಾಯಿತಿ – ಫ್ಲಾರಿಡ ಪ್ರಾಂತದ ಗಡಿ ವಿವಾದದಲ್ಲಿ ಅಮೆರಿಕ ಹಾಕಿದ ಗಡಿಯನ್ನು ಸ್ಪೇನ್ ಅಂಗೀಕರಿಸಿದ್ದು.

ಜಾನ್ ಜೇಯ ಒಪ್ಪಂದದ ಪರಿಣಾಮವಾಗಿ ಅಪಲೇಷಿಯನ್ ಪರ್ವತ ಶ್ರೇಣಿ ಮತ್ತು ಮಹಾನದಿಯ (Great river) ನಡುವಣ ವಿಶಾಲವಾದ ಪ್ರದೇಶದ ಮೇಲೆ ಅಮೆರಿಕ ತನ್ನ ಹಕ್ಕನ್ನು ಸ್ಥಾಪಿಸಿತು. ಅಲ್ಲದೆ ಅದೇ ಸಮಯದಲ್ಲಿ ಸರ್ಕಾರದ ಬೊಕ್ಕಸದ ಹೆಚ್ಚುಪಾಲಿನ ಹಣವನ್ನು ಉಪಯೋಗಿಸಿ ವಾಯುವ್ಯ ದಿಕ್ಕಿನ ಪ್ರದೇಶವನ್ನು ಇಂಡಿಯನ್ನ ರಿಂದ ಬಿಡಿಸಿಕೊಳ್ಳಲು ನಡೆಸಬೇಕಾಗಿದ್ದ ಸೈನ್ಯಾಚರಣೆ ಕೂಡ ಅನುಕೂಲಕರವಾಗಿ ಇತ್ಯರ್ಥವಾಯಿತು. ಜಾನ್ ಜೇ ಇಂಗ್ಲಿಷರೊಡನೆ ಅವರು ಗಡಿಪ್ರಾಂತದಲ್ಲಿ ಸ್ಥಾಪಿಸಿದ್ದ ಕೋಟೆ ಕೊತ್ತಲಗಳನ್ನು ಬಿಟ್ಟುಕೊಡುವಂತೆ ಸಂಧಾನ ನಡೆಸುತ್ತಿದ್ದಂತೆಯೇ ಜನರಲ್ ಆ್ಯಂಥನಿ ವೇನ್ (General Anthony Wayne) 'ಫಾಲನ್ ಟಿಂಬರ್ಸ್' ಕದನದಲ್ಲಿ (Battle of Fallen Timbers) ಇಂಡಿಯನ್ನರನ್ನು ಸೋಲಿಸಿದನು. ನಂತರ ಮಾಡಿಕೊಂಡ ಗ್ರೀನ್‌ವಿಲ್ ಕರಾರಿನ (Treaty of Greenville) ಪ್ರಕಾರ ವಾಯುವ್ಯ ಪ್ರಾಂತದ ಮೇಲಿನ ತಮ್ಮ ಹಕ್ಕನ್ನು ಇಂಡಿಯನ್ನರು ಬಿಟ್ಟುಕೊಟ್ಟರು.

ಅಧ್ಯಕ್ಷ ವಾಷಿಂಗ್‌ಟನ್ ಸಕಾಲದಲ್ಲಿ ಸೈನ್ಯಾಚರಣೆ ನಡೆಸಿ ಪಶ್ಚಿಮ ಸಂಸ್ಥಾನದಲ್ಲಿ ಪ್ರಾರಂಭವಾದ 'ವ್ಹಿಸ್ಕಿ ದಂಗೆ' (Whisky rebellion)ಯನ್ನು ಹತ್ತಿಕ್ಕಿದ್ದು ಅಮೆರಿಕ ಒಂದು ಶಕ್ತಿಯುತ ರಾಷ್ಟ್ರವಾಗಿ ಬೆಳೆದಿದ್ದರ ಉಜ್ವಲ ಉದಾಹರಣೆಯಾಗಿದೆ. ಕೇಂದ್ರ ಸರ್ಕಾರ ಸಂಸ್ಥಾನಗಳ ಸಾಲವನ್ನು ವಹಿಸಿಕೊಂಡ ಖರ್ಚನ್ನು ಹೊರಬೇಕಾಗಿ ಬಂದಾಗ, ಹ್ಯಾಮಿಲ್‌ಟನ್ ಸಲಹೆಯಂತೆ ವ್ಹಿಸ್ಕಿಯ ಮೇಲೆ ಕಾಂಗ್ರೆಸ್ ಹೆಚ್ಚು ತೆರಿಗೆ ಹಾಕಿತು. ಜೋಳದಿಂದ ವ್ಹಿಸ್ಕಿ ತಯಾರಿಸುತ್ತಿದ್ದ ರೈತರಿಗೆ ಈ ತೆರಿಗೆ ನಷ್ಟ ಉಂಟುಮಾಡಿತು. ೧೭೯೪ರ ಬೇಸಿಗೆಯಲ್ಲಿ ಪಶ್ಚಿಮ ಪೆನ್ಸಿಲ್‌ವೇನಿಯದಲ್ಲಿ ರೈತರು ದಂಗೆ ಎದ್ದರು. ಹಿಂದೆ ತಿಳಿಸಿದ ಶೇಯ್ಸ್‌ನ ದಂಗೆ (Shay's rebellion) ಯಂತೆ ದಂಗೆಕಾರರು ನ್ಯಾಯ ತೀರ್ಮಾನ ಮಾಡಲು ಬಿಡದೆ ಸ್ಥಳೀಯ ಕಾಯಿದೆ ನಿರ್ವಹಣಾಧಿಕಾರಿಗಳನ್ನು ಪ್ರಾಣಾಪಾಯದ ಹೆದರಿಕೆ ಹುಟ್ಟಿಸಿ ಅವರು ಕಾರ್ಯ ನಿರ್ವಹಿಸದಂತೆ ತಡೆಗಟ್ಟಿದರು. ಆದರೆ ಹೊಸ ರಾಜ್ಯಾಂಗದ ನಿರ್ದೇಶನದಂತೆ ಅಧ್ಯಕ್ಷ ವಾಷಿಂಗ್‌ಟನ್ ಪ್ರಾಪ್ತವಾದ ಮತ್ತು ಪರಿಣಾಮಕಾರಿಯಾದ ನಿರ್ಧಾರ ಕೈಗೊಂಡು ೧೨೦೦೦ ಜನ ಸೈನಿಕರನ್ನು ಕೂಡಲೆ ದಂಗೆ ಹತ್ತಿಕ್ಕಲು ಕಳುಹಿಸಿದನು. ಈ ಸೈನ್ಯಾಬಲದ ಪ್ರದರ್ಶನವನ್ನು ಕಂಡ ದಂಗೆಕೋರರರು ಸುಳಿವಿಲ್ಲದಂತೆ ತಲೆ ಮರೆಸಿಕೊಂಡು ಹೋದರು. ನಂತರ ತೆರಿಗೆಯನ್ನು ಯಾವ ಪ್ರತಿಭಟನೆ

ಇಲ್ಲದೆ ಶಾಂತಿಯುತವಾಗಿ ವಸೂಲು ಮಾಡುತ್ತಿದ್ದರು. ಈ ತೆರಿಗೆಯನ್ನು ಜೆಫರ್‌ಸನ್ ಆಡಳಿತ ಕಾಲದಲ್ಲಿ ರದ್ದುಗೊಳಿಸಲಾಯಿತು. ವ್ಹಿಸ್ಕಿ ದಂಗೆ ಅರಾಜಕತೆ ಹರಡಬಹುದೆಂದು ಹೆದರಿದವರೆಲ್ಲರೂ ಧೈರ್ಯ ತಂದುಕೊಂಡು ನೆಮ್ಮದಿಯಿಂದಿರಲು ಸಾಧ್ಯವಾಯಿತು. ಇದು ಅಮೆರಿಕ ನಿಜವಾಗಿ ಸ್ವತಂತ್ರ ದೇಶ ಎನ್ನುವುದನ್ನು ಸಾಬೀತುಗೊಳಿಸಿ, ಸ್ವಾಯತ್ತತೆಯನ್ನು ಉಳಿಸಿಕೊಂಡ ಸಂಸ್ಥಾನಗಳು ಒಟ್ಟಾಗಿ ಸಂಯುಕ್ತ ಸಂಸ್ಥಾನಗಳು ಒಂದು ರಾಷ್ಟ್ರವಾಗಿ ಪರಿವರ್ತನೆಗೊಂಡಿರುವುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿತು.

ವಾಷಿಂಗ್‌ಟನ್ ನಿವೃತ್ತಿ

ಜಾರ್ಜ್ ವಾಷಿಂಗ್‌ಟನ್ ಅಧ್ಯಕ್ಷನಾಗಿ ಇರುವವರೆಗೂ ಅವನ ಅಪಾರ ಜನಾದರಣೆ, ಪಕ್ಷ ರಾಜಕೀಯ ಬೆಳೆಯಲು ಅಡ್ಡಿಯಾಯಿತು. ಅಲ್ಲದೆ ಅವನು ಅಧ್ಯಕ್ಷನಾಗಿರುವವರೆಗೂ ಹ್ಯಾಮಿಲ್‌ಟನ್ ಬೆಂಬಲಿಗರು ಮತ್ತು ಜೆಫರ್‌ಸನ್‌ನ ಅನುಯಾಯಿಗಳು ಎರಡು ಪ್ರತ್ಯೇಕ ಪಕ್ಷಗಳನ್ನು ಸ್ಥಾಪಿಸಲು ಅವಕಾಶವಾಗಲಿಲ್ಲ. ಮುಖ್ಯವಾದ ಹಣಕಾಸಿನ ವ್ಯವಹಾರಗಳ ಬಗ್ಗೆ ಮತ್ತು ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದಾಗ ವಾಷಿಂಗ್‌ಟನ್ ಹ್ಯಾಮಿಲ್‌ಟನ್‌ನ ಸಲಹೆಗಳನ್ನು ಅನುಸರಿಸುತ್ತಿದ್ದನು. ಈ ಕಾರಣದಿಂದ ಜೆಫರ್‌ಸನ್ ವಾಷಿಂಗ್‌ಟನ್ ಮೇಲೆ ಕೋಪಗೊಂಡಿದ್ದನು. ಹ್ಯಾಮಿಲ್‌ಟನ್ ಸಲಹೆಗಳನ್ನು ಕೇಳಿದ ಮಾತ್ರಕ್ಕೆ ವಾಷಿಂಗ್‌ಟನ್ ಉತ್ತರ ಸಂಸ್ಥಾನಗಳ ಶ್ರೀಮಂತರ ಮತ್ತು ವ್ಯಾಪಾರಿಗಳ ಕೈಗೊಂಬೆಯಾಗಿದ್ದನು ಎಂದು ತೀರ್ಮಾನಿಸುವುದು ತಪ್ಪಾಗುತ್ತದೆ. ವಾಷಿಂಗ್‌ಟನ್ ರಾಷ್ಟ್ರದ ಐಕ್ಯತೆಯ ಪ್ರತಿಪಾದಕನಾಗಿದ್ದನು. ಪಕ್ಷಗಳ ರಾಜಕೀಯ ಮತ್ತು ಅವುಗಳು ಸೃಷ್ಟಿಸುವ ಕಟು ವಾತಾವರಣ ಮತ್ತು ದ್ವೇಷಾಸೂಯೆಗಳು ವಾಷಿಂಗ್‌ಟನ್‌ನನ್ನು ತೀವ್ರವಾಗಿ ಅಸಂತುಷ್ಟನನ್ನಾಗಿ ಮಾಡಿ, ನಿವೃತ್ತಿ ಪಡೆಯಲು ಕಾತುರನಾಗುವಂತೆ ಮಾಡಿದವು. ಹ್ಯಾಮಿಲ್‌ಟನ್ ರಾಷ್ಟ್ರದ ಐಕ್ಯತೆಯನ್ನು ಪ್ರತಿಪಾದಿಸಿದನು, ಆದರೆ ಅಮೆರಿಕ ಮುಂದೆ ಹೇಗೆ ಅಭಿವೃದ್ಧಿಗೊಳ್ಳಬೇಕು ಎನ್ನುವುದರ ಬಗ್ಗೆ ತನ್ನ ಅಭಿಪ್ರಾಯವನ್ನು ವಿರೋಧಿಸುವ ವ್ಯಕ್ತಿಯನ್ನಾಗಲೀ ಅಥವಾ ಪಕ್ಷವನ್ನಾಗಲೀ ದಮನಗೊಳಿಸಲು ಸದಾ ಸಿದ್ಧನಾಗಿದ್ದನು!

ಜೆಫರ್‌ಸನ್ ತನ್ನ ಪ್ರಾಣ ಒತ್ತೆಯಿಟ್ಟು ದೇಶದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದವನು, ದೇಶ ಯಂತ್ರ ನಾಗರಿಕತೆಯನ್ನು ಅಳವಡಿಸಿಕೊಂಡು ಆರ್ಥಿಕ ಬೆಳವಣಿಗೆ ಹೊಂದಲು ಅಡ್ಡಿ ಮಾಡಿದನು. ಇವರಿಬ್ಬರಂತೆ ವಾಷಿಂಗ್‌ಟನ್ ಕುಶಾಗ್ರಮತಿಯಲ್ಲದಿದ್ದರೂ ಪ್ರಪಂಚದ ಆಗುಹೋಗುಗಳನ್ನು ವಾಸ್ತವಿಕವಾಗಿ ನೋಡಿ, ದೇಶದ ಹೊರಗೆ ಇತರ ದೇಶಗಳೊಡನೆ ಮತ್ತು ದೇಶದ ಒಳಗೆ ಪಕ್ಷಗಳು, ಪಂಥಗಳು ಮತ್ತಿತರ ಹಿತಾಸಕ್ತಿಗಳ ನಡುವೆ ಶಾಂತಿಸ್ಥಾಪನೆಯಾಗಬೇಕಾದ ಅಗತ್ಯವನ್ನು ಮನಗಂಡನು. ವೃದ್ಧಾಪ್ಯ ಮತ್ತು ಅನಾರೋಗ್ಯಗಳ ಕಾರಣದಿಂದ ಅಧ್ಯಕ್ಷ ಪದವಿಯಿಂದ ನಿವೃತ್ತನಾಗಲು ಹವಣಿಸಿದನು. ೧೭೯೬ರ ಸೆಪ್ಟೆಂಬರ್ ತಿಂಗಳಲ್ಲಿ ವಾಷಿಂಗ್‌ಟನ್ ತಾನು ನಿವೃತ್ತನಾಗುವುದನ್ನು ರಾಷ್ಟ್ರಕ್ಕೆ

ತನ್ನ 'ವಿದಾಯ ಭಾಷಣ'ದ (Farewell Address) ಮೂಲಕ ತಿಳಿಸಿದನು. ವಿದಾಯ ಭಾಷಣದಲ್ಲಿ ಅವನು ಉತ್ತರ ಮತ್ತು ದಕ್ಷಿಣ ಸಂಸ್ಥಾನಗಳು ಹೇಗೆ ಪರಸ್ಪರ ಪ್ರಗತಿಗೆ ಕಾರಣವಾಗಿವೆ ಎಂಬುದನ್ನು ಸ್ಪಷ್ಟಪಡಿಸಿ, ಸಂಸ್ಥಾನಗಳ ನಡುವೆ ಸೌಹಾರ್ದತೆ ಮತ್ತು ಸಹಕಾರಗಳಿಂದ ರಾಷ್ಟ್ರದ ಉನ್ನತಿ ಸಾಧಿಸಬಹುದೆಂಬುದನ್ನು ಒತ್ತಿ ಹೇಳಿದನು. ವಾಷಿಂಗ್‌ಟನ್ ರಾಜಕೀಯ ಪಕ್ಷಗಳ ದುಷ್ಪರಿಣಾಮ ಹೇಗೆ ಪ್ರಾಮಾಣಿಕರಾದವರನ್ನು ಅಪ್ರಮಾಣಿಕ ವಿಧಾನಗಳನ್ನು ಬಳಸುವಂತೆ ಮಾಡಿ ತಮಗೆ ಬೇಕಾದ ಅನುಕೂಲಗಳನ್ನು ಪಡೆದುಕೊಳ್ಳುವ ಸ್ವಾರ್ಥಪರರನ್ನಾಗಿ ಮಾಡುತ್ತದೆ ಎನ್ನುವುದನ್ನು ವಿಶದಪಡಿಸಿದನು. ಜನರನ್ನು ಕುರಿತು ಯಾವ ದೇಶವನ್ನಾಗಲೀ ಬದ್ಧದ್ವೇಷದಿಂದ ಕಾಣುವುದಾಗಲೀ ಅಥವಾ ಅತಿಯಾಗಿ ಹಚ್ಚಿಕೊಂಡು ಮೆರೆಸುವುದಾಗಲೀ ಮಾಡಬಾರದು ಎಂದು ಆಗ್ರಹಪಡಿಸಿದನು. ಅಮೆರಿಕನ್ನರು 'ಇಂಗ್ಲಿಷ್ ಪಂಗಡ' ಮತ್ತು 'ಫ್ರೆಂಚ್ ಪಂಗಡ'ಗಳಾಗಿ ವಿಭಜನೆಗೊಂಡಿರುವುದನ್ನು ಕಂಡು ವಾಷಿಂಗ್‌ಟನ್ ಗಾಬರಿಗೊಂಡಿದ್ದನು. ಅಮೆರಿಕ ಬೇರೆ ದೇಶಗಳೊಡನೆ ವ್ಯಾಪಾರ ವ್ಯವಹಾರಗಳನ್ನು ಬೆಳೆಸಿಕೊಳ್ಳಬೇಕು, ಆದರೆ ವಿದೇಶಗಳ ರಾಜಕೀಯದಿಂದ ದೂರವಿರಬೇಕು. ಯಾವ ದೇಶದೊಡನೆಯೂ ಶಾಶ್ವತವಾದ ಒಪ್ಪಂದವನ್ನು ಮಾಡಿಕೊಳ್ಳಬಾರದು. ಸಂದರ್ಭೋಚಿತವಾಗಿ ಮುಖ್ಯ ಉದ್ದೇಶ ಸಾಧನೆಗಾಗಿ ತಾತ್ಕಾಲಿಕವಾದ ಒಪ್ಪಂದಗಳನ್ನು ಮಾಡಿಕೊಳ್ಳುವುದರಿಂದ ಹೆಚ್ಚು ಪ್ರಯೋಜನ ಪಡೆಯಬಹುದು. ಇದು ವಾಷಿಂಗ್‌ಟನ್‌ನ 'ವಿದಾಯ ಭಾಷಣ'ದ ಸಾರಾಂಶ.

ಅಧ್ಯಕ್ಷ ಜಾನ್ ಆ್ಯಡಮ್ಸ್

ವಾಷಿಂಗ್‌ಟನ್ ವಿದಾಯ ಭಾಷಣ ಅಮೆರಿಕನ್ನರ ಚಿಂತನದ ಮೇಲೆ ಪ್ರಮುಖವಾದ ಹಾಗೂ ದೀರ್ಘಾವಧಿಯ ಪ್ರಭಾವ ಬೀರಿದರೂ ಕೂಡ ಅವನ ಭಾಷಣ ಜನರ ಮೇಲೆ ತಕ್ಷಣ ಪರಿಣಾಮಕಾರಿಯಾಗಲಿಲ್ಲ. ವಿಚಿತ್ರವೆಂದರೆ, ಅವನ ಭಾಷಣ ಪಕ್ಷ ರಾಜಕೀಯವನ್ನು ತೀಕ್ಷ್ಣಗೊಳಿಸಿ, ಚುನಾವಣೆಯ ಪ್ರಚಾರ ಮುಗಿಯುವ ವೇಳೆಗೆ ಕೇಂದ್ರ ರಾಷ್ಟ್ರೀಯವಾದಿಗಳು (Federalists) ಮತ್ತು ಸಂಯುಕ್ತ ಸಂಸ್ಥಾನವಾದಿಗಳು (Republicans) ಪರಸ್ಪರ ಮಾತಾಡಲು ನಿರಾಕರಿಸುವಷ್ಟು ವೈರ ಬೆಳೆಸಿಕೊಂಡಿದ್ದರು. ೧೭೯೬ರ ಚುನಾವಣೆಯಲ್ಲಿ ಥಾಮಸ್ ಜೆಫರ್‌ಸನ್ ಒಬ್ಬನನ್ನೆ ರಿಪಬ್ಲಿಕನ್ ಅಭ್ಯರ್ಥಿಯಾಗಿ ಎಲ್ಲರೂ ಪರಿಗಣಿಸಿದ್ದರು. ತರ್ಕಬದ್ಧವಾಗಿ ಹ್ಯಾಮಿಲ್‌ಟನ್ ಫೆಡೆರಲಿಸ್ಟ್ ಪಕ್ಷದ ಅಭ್ಯರ್ಥಿಯಾಗಬೇಕಾಗಿತ್ತು. ಆದರೆ ಅವನು ತನ್ನ ವಿವಾದಾತ್ಮಕ ನಿಲುವುಗಳಿಂದ ಮತ್ತು ತನ್ನ ನಿಷ್ಠುರವಾದ ಅಭಿಪ್ರಾಯಗಳಿಂದ ಅನೇಕರ ವೈರತ್ವವನ್ನು ಗಳಿಸಿದ್ದನು. ಕಾಂಗ್ರೆಸ್ ಸದಸ್ಯರಾಗಿದ್ದ ಫೆಡೆರಲಿಸ್ಟರು ಉಪಾಧ್ಯಕ್ಷನಾಗಿದ್ದ ಜಾನ್ ಆ್ಯಡಮ್ಸ್‌ನನ್ನು ಅಧ್ಯಕ್ಷಸ್ಥಾನಕ್ಕೂ ಮತ್ತು ಥಾಮಸ್ ಪಿಂಕ್‌ನಿಯನ್ನು (Thomas Pinckney) ಉಪಾಧ್ಯಕ್ಷ ಸ್ಥಾನಕ್ಕೂ ನಾಮಕರಣ ಮಾಡಿದರು. ಚುನಾವಣೆಯಲ್ಲಿ ಫೆಡೆರಲಿಸ್ಟರು ಬಹುಮತ ಗಳಿಸಿದರು. ಆದರೆ ಹ್ಯಾಮಿಲ್‌ಟನ್ನನು ಆಡಳಿತವನ್ನು ತನ್ನ ಕೈಯ್ಯಲ್ಲಿಟ್ಟುಕೊಳ್ಳಬೇಕೆಂದು ಹವಣಿಸಿ, ತನ್ನ ಅನುಯಾಯಿಗಳಿಗೆ ಪಿಂಕ್‌ನಿಗೆ ಮಾತ್ರ

ಮತ ನೀಡುವಂತೆ ನಿರ್ದೇಶಿಸಿದನು. ಇದರ ಸುಳಿವು ಸಿಕ್ಕ ಆ್ಯಡಮ್ಸ್‌ನ ಅನುಯಾಯಿಗಳು ಪಿಂಕ್‌ನಿಗೆ ಮತ ನೀಡದೆ ಸೇಡು ತೀರಿಸಿಕೊಂಡರು. ಇದರ ಪರಿಣಾಮವಾಗಿ ಎಲೆಕ್ಟರಲ್ ಕಾಲೇಜಿನಲ್ಲಿ ಆ್ಯಡಮ್ಸ್‌ನು ಜೆಫರ್‌ಸನ್ ಮೇಲೆ ೭೧-೬೮ ಮತಗಳಿಂದ ಗೆದ್ದನು. ಪಿಂಕ್‌ನಿ ಮೂರನೆಯವನಾಗಿ ಆರಿಸಿ ಬಂದನು. ಆದ್ದರಿಂದ ಜೆಫರ್‌ಸನ್ ಉಪಾಧ್ಯಕ್ಷನಾಗಿ ನೇಮಕಗೊಂಡನು.

ಜೆಫರ್‌ಸನ್ ಮತ್ತು ಆ್ಯಡಮ್ಸ್ ಪರಸ್ಪರ ಗೌರವಯುತವಾಗಿ ನಡೆದುಕೊಳ್ಳುತ್ತಿದ್ದರು. ಅವರಲ್ಲಿ ಪರಸ್ಪರ ಅನ್ಯೋನ್ಯತೆ ಬೆಳೆಯಲು ಕಾರಣ ಅವರಿಬ್ಬರೂ ಹ್ಯಾಮಿಲ್‌ಟನ್‌ನನ್ನು ದ್ವೇಷಿಸುತ್ತಿದ್ದರು. ಆ್ಯಡಮ್ಸ್ ಶ್ರಮಜೀವಿ ಮತ್ತು ಯಾರ ದಾಕ್ಷಿಣ್ಯವೂ ಇಲ್ಲದೆ ಬಿಚ್ಚು ಮನಸ್ಸಿನಿಂದ ಕಟುವಾಗಿ ಮಾತನಾಡುವವನಾಗಿದ್ದನು. ಆದ್ದರಿಂದ ಅವನಿಗೆ ಹೆಚ್ಚು ಜನರನ್ನು ತನ್ನ ಅನುಯಾಯಿಗಳಾಗಿ ಆಕರ್ಷಿಸಲು ಸಾಧ್ಯವಾಗಲಿಲ್ಲ. ಜನರು ರಿಪಬ್ಲಿಕನ್ ಪಕ್ಷದ ಕಡೆಗೆ ಗಮನ ಹರಿಸಿದರು. ಜಾನ್ ಜೇ ಮಾಡಿಕೊಂಡು ಬಂದ ಒಪ್ಪಂದ ಜನಾದರಣೆ ಪಡೆಯಲಿಲ್ಲ. ಈ ಒಪ್ಪಂದದ ದೆಸೆಯಿಂದ ಅನೇಕ ಫೆಡೆರಲಿಸ್ಟರು ಪಕ್ಷಾಂತರಗೊಂಡು ಮುಂಬರುವ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷ ಗೆಲ್ಲುವ ಸಾಧ್ಯತೆ ಹೆಚ್ಚುತ್ತ ಹೋಯಿತು.

ಇದೇ ಸಮಯದಲ್ಲಿ ಫ್ರೆಂಚರು ಅಮೆರಿಕನ್ ಹಡಗುಗಳ ಮೇಲೆ ದಾಳಿ ಮಾಡಲು ಪ್ರಾರಂಭಿಸಿದರು. ಈ ದಾಳಿ ಜಾನ್ ಜೇ ಒಪ್ಪಂದದ ವಿರುದ್ಧವಾದ ಫ್ರೆಂಚರ ಪ್ರತಿಕ್ರಿಯೆಯೂ ಆಗಿತ್ತು. ಪರೋಕ್ಷವಾಗಿ ಇದು ಮುಂದೆ ನಡೆಯಲಿರುವ ಚುನಾವಣೆಯ ಮೇಲೆ ಪ್ರಭಾವ ಬೀರುವ ಪ್ರಯತ್ನವೂ ಆಗಿತ್ತು. ಆ್ಯಡಮ್ಸ್ ಅಧ್ಯಕ್ಷನಾದ ಮೇಲೆ ಒಂದು ಶಾಂತಿಸಂಧಾನ ಸಮಿತಿಯನ್ನು ರಚಿಸಿದನು. ಫ್ರೆಂಚರೊಡನೆ ಅನುಕೂಲಕರವಾದ ಒಪ್ಪಂದ ಏರ್ಪಡಿಸುವುದು ಈ ಸಮಿತಿಯ ಮುಖ್ಯ ಗುರಿಯಾಗಿತ್ತು. ಅಧ್ಯಕ್ಷ ಆ್ಯಡಮ್ಸ್ ಮೂರು ಕಮಿಷನರುಗಳನ್ನು ಸಂಧಾನ ಸಮಿತಿಗೆ ನೇಮಕ ಮಾಡಿದನು. ಫ್ರೆಂಚ್ ವಿದೇಶ ಮಂತ್ರಿ ಟೆಲಿರ್ಯಾಂಡನು ಮೂರು ಏಜೆಂಟರುಗಳನ್ನು ಸಂಧಾನ ನಡೆಸಲು ಕಳುಹಿಸಿದನು. ಇವರು ಸಂಧಾನ ನಡೆಸಲು ಅಪಾರ ಮೊತ್ತದ ಲಂಚವನ್ನು ತೆರಬೇಕಾದ ಬೇಡಿಕೆಯನ್ನು ಮುಂದಿಟ್ಟರು. ಇದು 'ಎಕ್ಸ್, ವೈ, ಝಿ' (X, Y, Z) ಪ್ರಕರಣವೆಂದು ಹೆಸರುವಾಸಿಯಾಗಿದೆ. ಅಮೆರಿಕನ್ನರು ಅದನ್ನು ನಿರಾಕರಿಸಿದರು. ಸಂಧಾನ ಮುರಿದುಬಿತ್ತು. ೧೭೯೮ರಲ್ಲಿ ಅಧ್ಯಕ್ಷ ಆ್ಯಡಮ್ಸ್ ಕಮಿಷನ್ನರ ವರದಿಯನ್ನು ಪ್ರಕಟಿಸಿದನು. ಈ ವರದಿ ಅಮೆರಿಕನ್ನರನ್ನು ಕೆರಳಿಸಿತು. ಇದು ತಮ್ಮ ರಾಷ್ಟ್ರದ ಹೆಮ್ಮೆಗೆ ಫ್ರೆಂಚರು ಹಾಕಿದ ಸವಾಲು ಎಂದು ಭಾವಿಸಿದರು. ಅಧ್ಯಕ್ಷ ಆ್ಯಡಮ್ಸ್ 'ರಾಷ್ಟ್ರವೀರ'ನೆಂದು ಜನರು ಪರಿಗಣಿಸಿದರು. ಫೆಡೆರಲಿಸ್ಟರು ಫ್ರೆಂಚರೊಡನೆ ಯುದ್ಧ ಮಾಡಲು ಹಾತೊರೆದರು. ಕಾಂಗ್ರೆಸ್ ಏಕಪಕ್ಷವಾಗಿ ಫ್ರಾನ್ಸ್‌ನೊಡನೆ ಮಾಡಿಕೊಂಡಿದ್ದ ಒಪ್ಪಂದವನ್ನು ರದ್ದುಗೊಳಿಸಿತು. ಅಮೆರಿಕ ನೌಕಾವಿಭಾಗವನ್ನು ಸ್ಥಾಪಿಸಿ, ನಲವತ್ತಕ್ಕೂ ಹೆಚ್ಚು ಯುದ್ಧ ನೌಕೆಗಳನ್ನು ನಿರ್ಮಾಣ ಮಾಡಲು ತಗಲುವ

ಹಣವನ್ನು ಒದಗಿಸಿ, ಸೇನಾಪಡೆಯಲ್ಲಿ ಸೈನಿಕರ ಸಂಖ್ಯೆಯನ್ನು ಮೂರುಪಟ್ಟು ಹೆಚ್ಚಿಸಿತು. ಅಮೆರಿಕನ್ನರ ಖಾಸಗಿ ನೌಕೆಗಳು ಫ್ರೆಂಚ್ ನೌಕೆಗಳ ಮೇಲೆ ದಾಳಿ ಮಾಡಲು ಪ್ರಾರಂಭಿಸಿದವು. ಆ ಸಂದರ್ಭದಲ್ಲಿ ಫ್ರಾನ್ಸಿನ ಮೇಲೆ ಯುದ್ಧ ಸಾರಿದ್ದರೆ ಅಧ್ಯಕ್ಷ ಆ್ಯಡಮ್ಸ್‌ನು ಅತ್ಯಂತ ಜನಪ್ರಿಯನಾಗುತ್ತಿದ್ದನು. ಆದರೆ ಅದು ಅವನಿಗೆ ಬೇಡವಾಗಿತ್ತು. ಯುದ್ಧ ಸಾರುವ ಬದಲು ಅವನು ಅಮೆರಿಕದ ಸೇನಾಪಡೆ ಮತ್ತು ನೌಕಾಪಡೆಗಳನ್ನು ಬೆಳೆಸಿ ಬಲಪಡಿಸುವುದರಲ್ಲಿ ಹೆಚ್ಚಿನ ಆಸಕ್ತಿ ವಹಿಸಿದನು.

ಫ್ರೆಂಚರೊಡನೆ ಸ್ನೇಹವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದ ರಿಪಬ್ಲಿಕನ್ನರು ಸಂಶಯಕ್ಕೊಳಗಾದರು. ಫೆಡೆರಲಿಸ್ಟ್ ವೃತ್ತಪತ್ರಿಕೆಗಳು ರಿಪಬ್ಲಿಕನ್ನರನ್ನು ಮತ್ತು ಅಧ್ಯಕ್ಷ ಆ್ಯಡಮ್ಸ್‌ನನ್ನು ಕಟುವಾಗಿ ಟೀಕಿಸಿದವು. ಪತ್ರಿಕೆಗಳು ರಿಪಬ್ಲಿಕನ್ನರು ದೇಶದ್ರೋಹ ಕೃತ್ಯಗಳಲ್ಲಿ ತೊಡಗಲು ಹೇಸುವುದಿಲ್ಲವೆಂದು ಆಪಾದಿಸಿದವು. ಫ್ರಾನ್ಸಿನ ಮಹಾಕ್ರಾಂತಿಯ ದುಷ್ಪರಿಣಾಮಗಳು ಯೂರೋಪಿನಾದ್ಯಂತ ಹರಡುವ ಸಂಭವವಿದೆ ಎಂಬ ಊಹಾಪೋಹಗಳು ಅಲ್ಲಿನ ಸಂಪ್ರದಾಯಸ್ಥರಲ್ಲಿ ಭಯ ಹುಟ್ಟಿಸಿದವು. ಭಯಗ್ರಸ್ತರಾದ ಯೂರೋಪಿಯನ್ನರು ಹೆಚ್ಚಿನ ಸಂಖ್ಯೆಯಲ್ಲಿ ಅಮೆರಿಕಕ್ಕೆ ವಲಸೆ ಹೋದರು. ಫೆಡರಲಿಸ್ಟ್ ಸಂಪ್ರದಾಯಸ್ಥರು ಈ ಸಂದರ್ಭವನ್ನು ಉಪಯೋಗಿಸಿಕೊಂಡು ತಮ್ಮ ವಿರೋಧಿಗಳಾದ ಲಿಬರಲ್ ಪಕ್ಷದವರನ್ನು ತುಳಿದು ಹಾಕಲು ಪ್ರಯತ್ನಿಸಿದರು. ೧೭೯೮ರಲ್ಲಿ ಫೆಡರಲಿಸ್ಟರು ದಮನಕಾರಿ ಕಾಯಿದೆಗಳ (repressive laws) ಒಂದು ಸರಣಿಯನ್ನೇ ಕಾಂಗ್ರೆಸ್ ಅಂಗೀಕರಿಸುವಂತೆ ಮಾಡಿ ಆ ಕಾಯಿದೆಗಳನ್ನು ಜಾರಿಗೆ ತಂದರು. ಅನ್ಯದೇಶೀಯರ ನಿಯಂತ್ರಣ ಮತ್ತು ದೇಶದ್ರೋಹ ಚಟುವಟಿಕೆಗಳನ್ನು ನಾಶಗೊಳಿಸುವುದೇ ಈ ಕಾಯಿದೆಗಳ ಉದ್ದೇಶವಾಗಿತ್ತು. ೧೮೦೦ರ ಚುನಾವಣೆ ಹತ್ತಿರ ಬಂದಂತೆಲ್ಲ ಫೆಡರಲಿಸ್ಟರು ಈ ಕಾಯಿದೆಗಳನ್ನು ಉಪಯೋಗಿಸಿ ವಿರೋಧ ಪಕ್ಷದವರನ್ನು ಮತ್ತು ತಮಗೆ ವಿರೋಧವಾದ ಪತ್ರಿಕೆಗಳನ್ನು ಮಾತೆತ್ತದಂತೆ ಮಾಡಿದರು. ಅನೇಕರನ್ನು ವಿಚಾರಣೆಗೆ ಗುರಿಪಡಿಸಿ ಶಿಕ್ಷೆ ವಿಧಿಸಿದರು. ಜೆಫರ್‌ಸನ್ನನ ಅಭಿಪ್ರಾಯದಲ್ಲಿ ಈ ದಮನಕಾರಿ ಕಾಯಿದೆಗಳು ರಾಜ್ಯಾಂಗಕ್ಕೆ ವಿರೋಧವಾಗಿದ್ದವು. ರಾಜ್ಯಾಂಗದ ಮೊದಲನೆಯ ತಿದ್ದುಪಡಿಯನ್ನು (First Amendment) ಈ ಕಾಯಿದೆಗಳು ಉಲ್ಲಂಘಿಸುತ್ತವೆ ಎಂದು ವಾದಿಸಿದನು. ರಾಜ್ಯಾಂಗದ ಮೊದನೆಯ ತಿದ್ದುಪಡಿ ಜನರ ವಾಕ್ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ ಮತ್ತು ಸಂಸ್ಥಾನಗಳ ಹಕ್ಕನ್ನು ಪ್ರತಿಪಾದಿಸುತ್ತದೆ. ಈ ವಿಷಯ ಕುರಿತು ಜೆಫರ್‌ಸನ್ ಮ್ಯಾಡಿಸನ್‌ನೊಡನೆ ಸಮಾಲೋಚನೆ ನಡೆಸಿದನು. ಇದರ ಪರಿಣಾಮವಾಗಿ ಇವರಿಬ್ಬರೂ ಕೂಡಿ ದಮನಕಾರಿ ಕಾಯಿದೆಗಳನ್ನು ಖಂಡಿಸುವ ಮಸೂದೆಗಳನ್ನು ವರ್ಜೀನಿಯದ ಮತ್ತು ಕೆಂಟಕಿ ನ್ಯಾಯ ವಿಧಾಯಕ ಸಭೆಗಳಲ್ಲಿ ಮಂಡಿಸಿದರು. ಈ ಮಸೂದೆಗಳು ಮುಖ್ಯವಾಗಿ ಫೆಡರಲಿಸ್ಟರ ದಬ್ಬಾಳಿಕೆಯನ್ನು ವಿರೋಧಿಸುವ ವಿಧಾನಗಳಾಗಿದ್ದವು ಮತ್ತು ಜೆಫರ್‌ಸನ್ ಅಧ್ಯಕ್ಷಸ್ಥಾನಕ್ಕೆ ಸಿದ್ಧನಾಗಿರುವುದನ್ನು ಸೂಚಿಸುವ ಚುನಾವಣೆಯ ಪ್ರಚಾರವೂ ಆಗಿತ್ತು. ಹಿಂಸಾಚಾರದಿಂದ

ದೂರವಿರುವಂತೆ ಜೆಫರ್‌ಸನ್ ತನ್ನ ಅನುಯಾಯಿಗಳಿಗೆ ಉಪದೇಶಿಸಿದನು. ಆಗಿನ ಸಂದರ್ಭದಲ್ಲಿ ಜೆಫರ್‌ಸನ್‌ನ ಧೋರಣೆ ರಿಪಬ್ಲಿಕನ್ನರಿಗೆ ಅನುಕೂಲಕರವಾಯಿತು. ಫ್ರೆಂಚ್ ವಿದೇಶಾಂಗ ಮಂತ್ರಿ ಟೆಲಿರ್‍ಯಾಂಡನು ನಿಜವಾಗಿ ಅಮೆರಿಕದೊಡನೆ ಯುದ್ಧ ಬಯಸಿದ ವನಲ್ಲ. ಅವನ ಲಂಚ ರುಷುವತ್ತುಗಳನ್ನು ಪಡೆಯುವ ಪ್ರಯತ್ನಗಳಿಗೆ ಅಮೆರಿಕನ್ನರು ತೀವ್ರ ವಿರೋಧ ಪ್ರದರ್ಶಿಸುವುದನ್ನು ಅರ್ಥಮಾಡಿಕೊಂಡ ಅವನು ತನ್ನ ನಿಲುವನ್ನು ಬದಲಿಸಿ ಸಂಧಾನ ಮಾಡಿಕೊಳ್ಳಲು ಮಾತುಕತೆಗಳಿಗೆ ಸಿದ್ಧನಿರುವುದಾಗಿ ಅಧ್ಯಕ್ಷ ಆ್ಯಡಮ್ಸ್‌ನಿಗೆ ತಿಳಿಸಿದನು. ಫ್ರೆಂಚರಲ್ಲಿ ಆದ ಈ ಬದಲಾವಣೆಗಳ ಅನುಕೂಲ ಪಡೆಯಲು ಅಧ್ಯಕ್ಷ ಆ್ಯಡಮ್ಸ್‌ನು ಕೂಡಲೆ ಕಾರ್ಯನಿರತನಾದನು. ಅಮೆರಿಕದ ಸರ್ವತೋಮುಖ ಬೆಳವಣಿಗೆಗೆ ಶಾಂತಿ, ಒಗ್ಗಟ್ಟು ಮತ್ತು ಭದ್ರತೆ ಬಹಳ ಮುಖ್ಯ ಎಂದು ಅವನು ಮನಗಂಡಿದ್ದನು. ಆದರೆ ಪ್ರಮುಖ ಫೆಡರಲಿಸ್ಟರು ತಲೆ ಕೆಟ್ಟವರಂತೆ ಕಾಲು ಕೆರೆದು ಯುದ್ಧ ಮಾಡಲು ಹಾತೊರೆಯುತ್ತಿದ್ದರು. ಫ್ರಾನ್ಸ್ ಅಲ್ಲದಿದ್ದರೆ ಸ್ಪೇನ್, ಒಟ್ಟಿನಲ್ಲಿ ಅವರಿಗೆ ಬೇಕಾಗಿದ್ದು ಯುದ್ಧ. ಹ್ಯಾಮಿಲ್‌ಟನ್ ತಾನೇ ಸೇನಾನಿಯಾಗಿ ಹೊಸದಾಗಿ ರಚನೆಗೊಂಡಿದ್ದ ಅಮೆರಿಕನ್ ಸೇನಾಪಡೆಗಳನ್ನು ಲೂಯಿಸಿಯಾನ (Louisiana) ಮತ್ತು ಫ್ಲಾರಿಡಾ (Florida) ಗಳನ್ನು ಅತಿಕ್ರಮಿಸುವಂತೆ ಮಾಡಿ ನಂತರ ಇತರ ದಕ್ಷಿಣ ಪ್ರಾಂತಗಳನ್ನು ಆಕ್ರಮಿಸಲು ಸೇನಾಪಡೆಗಳನ್ನು ನುಗ್ಗಿಸಲು ಹವಣಿಸಿದ್ದನು. ಅಧ್ಯಕ್ಷ ಆ್ಯಡಮ್ಸ್‌ನು ತನ್ನ ರಾಜಕೀಯ ಅನುಕೂಲತೆಗಾಗಿ ದೇಶವನ್ನು ಯುದ್ಧದಲ್ಲಿ ತೊಡಗಿಸಲು ನಿರಾಕರಿಸಿದನು. ಆ್ಯಡಮ್ಸ್‌ನು ಹ್ಯಾಮಿಲ್‌ಟನ್‌ನ ಪ್ರಭಾವಕ್ಕೆ ಒಳಗಾಗಿದ್ದ ತನ್ನ ಆಡಳಿತ ಮಂಡಳದ ಒಪ್ಪಿಗೆ ಪಡೆಯದೆ, ಫ್ರಾನ್ಸಿನಲ್ಲಿ ಅಮೆರಿಕವನ್ನು ಪ್ರತಿನಿಧಿಸಲು ಹೊಸ ಕಾರ್ಯದರ್ಶಿಯೊಬ್ಬನ ಹೆಸರನ್ನು ಸೆನೆಟ್ ಅನುಮೋದನೆಗಾಗಿ ಕಳುಹಿಸಿದನು. ಸೆನೆಟ್‌ನಲ್ಲಿ ಫೆಡರಲಿಸ್ಟರು ಆ ಕಾರ್ಯದರ್ಶಿ ನೇಮಕವನ್ನು ತೀವ್ರವಾಗಿ ವಿರೋಧಿಸಿದರು. ಆಗ ಅಧ್ಯಕ್ಷ ಆ್ಯಡಮ್ಸ್‌ನು ತನ್ನ ಪದವಿಗೆ ರಾಜಿನಾಮೆ ನೀಡುವುದಾಗಿ ಬೆದರಿಸಿದನು. ಅವನು ರಾಜಿನಾಮೆ ಕೊಟ್ಟಿದ್ದರೆ ಜೆಫರ್‌ಸನ್ ಅಧ್ಯಕ್ಷ ಪದವಿಗೆ ಏರುತ್ತಿದ್ದನು. ಜೆಫರ್‌ಸನ್‌ನ ಬದ್ಧವೈರಿಗಳಾದ ಫೆಡರಲಿಸ್ಟರಿಗೆ ಇದು ನುಂಗಲಾರದ ತುತ್ತಾಯಿತು. ವಿಧಿಯಿಲದೆ ಆ್ಯಡಮ್ಸ್‌ನ ಸಲಹೆಗಳನ್ನು ಅನುಮೋದಿಸಲೇ ಬೇಕಾಯಿತು. ಅದರಲ್ಲಿ ಒಂದು ಚಿಕ್ಕ ಬದಲಾವಣೆ ಮಾಡಲಾಯಿತು. ಒಬ್ಬ ಪ್ರತಿನಿಧಿಯ ಬದಲಾಗಿ ಮೂವರನ್ನು ಫ್ರಾನ್ಸಿಗೆ ಕಳುಹಿಸಲಾಯಿತು. ಅಮೆರಿಕನ್ ಪ್ರತಿನಿಧಿಗಳು ಫ್ರಾನ್ಸಿಗೆ ಬಂದಾಗ ಅದು ನೆಪೋಲಿಯನ್ನನ ಆಡಳಿತಕ್ಕೆ ಒಳಪಟ್ಟಿತ್ತು! ನೆಪೋಲಿಯನ್ ಟೆಲಿರ್‍ಯಾಂಡನಿಗಿಂತ ಕಠಿಣ ಷರತ್ತುಗಳನ್ನು ಹಾಕಿದನು. ಅಂತಿಮವಾಗಿ ನೆಪೋಲಿಯನ್ ೧೭೭೮ರ ಫ್ರೆಂಚ್ ಅಮೆರಿಕನ್ ಒಪ್ಪಂದವನ್ನು ರದ್ದುಗೊಳಿಸುವ '೧೮೦೦ರ ಒಪ್ಪಂದ'ಕ್ಕೆ ರುಜು ಹಾಕಿದನು. ಫ್ರೆಂಚರು ಅಮೆರಿಕನ್ ಹಡಗುಗಳಿಗೆ ನಷ್ಟ ಉಂಟುಮಾಡಿದ ಬಗ್ಗೆ ಯಾವ ಮಾತುಕತೆ ನಡೆಯಲಿಲ್ಲವಾದರೂ ಯುದ್ಧದ ಭಯ ಕೊನೆಗೊಂಡಿದ್ದು ಎಲ್ಲರಿಗೂ ಸಮಾಧಾನಕರವಾಗಿತ್ತು.

೧೮೦೦ರ ಚುನಾವಣೆ

ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ನಡೆದ ಸ್ಪರ್ಧೆಯಲ್ಲಿ ಆ್ಯಡಮ್ಸ್ ಮತ್ತು ಜೆಫರ್‌ಸನ್ ಇಬ್ಬರಿಗೂ ಜನಬೆಂಬಲದಲ್ಲಿ ಹೆಚ್ಚಿನ ಅಂತರವಿರಲಿಲ್ಲ. ಆ್ಯಡಮ್ಸ್‌ನು ಶಾಂತಿಸ್ಥಾಪನೆಗಾಗಿ ಪ್ರಯತ್ನ ಪಟ್ಟಿದ್ದರಿಂದ ಜನರು ಫೆಡರಲಿಸ್ಟರ ಮೇಲಿನ ತಮ್ಮ ಸಿಟ್ಟನ್ನು ಅವನ ಮೇಲೆ ತೀರಿಸಿ ಕೊಳ್ಳಲಿಲ್ಲ. ಸಂಪ್ರದಾಯಸ್ಥರಿಗೆ ಆ್ಯಡಮ್ಸ್‌ನ ದೃಢಮನಸ್ಸು ಮತ್ತು ಕಾರ್ಯತತ್ಪರತೆಗಳು ಮೆಚ್ಚುಗೆ ಆದವು. ಆದರೂ ರಿಪಬ್ಲಿಕನ್ನರು ಫ್ರೆಂಚ್ ಮಾದರಿಯ ಮಿತಿಮೀರಿದ, ನಿಯಂತ್ರಣರಹಿತವಾದ ಸಮಾಜಸುಧಾರಣೆಗಳನ್ನು ತರಬಹುದೆಂಬ ಭೀತಿ ಸಂಪ್ರದಾಯಸ್ಥ ರನ್ನು ಕಾಡುತ್ತಿತ್ತು. ರಾಷ್ಟ್ರೀಯ ಮನೋಭಾವವುಳ್ಳ ಮತದಾರರು ಫೆಡರಲಿಸ್ಟರು ಸ್ಥಾಪಿಸಿದ ಪ್ರಬಲವಾದ ಕೇಂದ್ರಸರ್ಕಾರವನ್ನು ಜೆಫರಸನ್ನೀಯರು ಸಂಸ್ಥಾನಗಳ ಸ್ವಾಯತ್ತತೆಯ ಹೆಸರಿನಲ್ಲಿ ಹಾಳುಗೆಡವಿದರೆ ಏನು ಗತಿ ಎಂದು ಚಿಂತಿಸುತ್ತಿದ್ದರು. ಹ್ಯಾಮಿಲ್‌ಟನ್ ಯೋಜನೆಗಳಿಂದ ಉಂಟಾದ ಆರ್ಥಿಕ ಪ್ರಗತಿಗೂ ಅಪಾಯ ಉಂಟಾಗಬಹುದು ಎಂದು ಶಂಕಿಸಿದರು. ಇಂಥ ಅನಿಶ್ಚಯದ ಪರಿಸ್ಥಿತಿಯಲ್ಲಿ ಫೆಬ್ರವರಿ ೧೮೦೧ರಲ್ಲಿ ನಡೆದ ಮತದಾನದಲ್ಲಿ ಎಲೆಕ್ಟರುಗಳ ಮತಗಳನ್ನು ಎಣಿಸಿದಾಗ ರಿಪಬ್ಲಿಕನ್ನರು ಬಹಳ ಕಿರಿದಾದ ಅಂತರದಿಂದ (೭೩-೬೫) ಜಯಗಳಿಸಿದ್ದರು.

ರಿಪಬ್ಲಿಕನ್ ಪಕ್ಷವೇನೋ ಗೆದ್ದಿತು. ಆದರೆ ಯಾರು ಅಧ್ಯಕ್ಷರಾಗಬೇಕೆನ್ನುವುದು ಖಚಿತಪಡಲಿಲ್ಲ. ಏಕೆಂದರೆ ರಾಜ್ಯಾಂಗ, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳನ್ನು ಸ್ಪಷ್ಟವಾಗಿ ಬೇರ್ಪಡಿಸಿರಲಿಲ್ಲ. ರಾಜ್ಯಾಂಗದ ಪ್ರಕಾರ ಒಬ್ಬ ಎಲೆಕ್ಟರನು ಎರಡು ಅಭ್ಯರ್ಥಿ ಗಳಿಗೆ ಮತ ನೀಡಬಹುದಾಗಿತ್ತು. ಈ ಇಬ್ಬರಲ್ಲಿ ಹೆಚ್ಚು ಮತ ಪಡೆದವನು ಅಧ್ಯಕ್ಷ ನಾಗಿಯೂ ಅವನಿಗಿಂತ ಕಡಿಮೆ ಮತ ಪಡೆದವನು ಉಪಾಧ್ಯಕ್ಷನಾಗಿಯೂ ನೇಮಕಗೊಳ್ಳ ಬೇಕಾಗಿತ್ತು. ಆ ಚುನಾವಣೆಯಲ್ಲಿ ಏರಾನ್ ಬರ್ (Aaron Burr) ಎಂಬ ಮಾಜಿ ಸೆನೆಟರ್ ಮತ್ತು ರಾಜಕೀಯ ಹಾಗೂ ನ್ಯಾಯಾಲಗಳಲ್ಲಿ ಹ್ಯಾಮಿಲ್‌ಟನ್‌ನ ಕಡುವಿರೋಧಿ ಉಪಾಧ್ಯಕ್ಷ ಸ್ಥಾನಕ್ಕೆ ನಿಂತಿದ್ದನು. ರಿಪಬ್ಲಿಕನ್ನರು ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಲು ಜೆಫರ್‌ಸನ್ ಮತ್ತು ಬರ್ ಇಬ್ಬರಿಗೂ ತಲಾ ೭೩ ಮತ ನೀಡಿದ್ದರಿಂದ ಯಾರು ಅಧ್ಯಕ್ಷರಾಗಬೇಕೆನ್ನುವುದನ್ನು ಪ್ರಜಾಪ್ರತಿನಿಧಿ ಸಭೆ ನಿರ್ಧರಿಸಬೇಕಾಗಿ ಬಂತು. ಆ ಸಭೆಯಲ್ಲಿ ಒಟ್ಟು ಹದಿನಾರು ಸಂಸ್ಥಾನ ನಿಯೋಗಗಳಲ್ಲಿ (delegations) ರಿಪಬ್ಲಿಕನ್ನರ ನಿಯಂತ್ರಣದಲ್ಲಿದ್ದವು ಎಂಟು ನಿಯೋಗಗಳು ಮಾತ್ರ. ಮತದಾನ ನಡೆದಾಗ ಜೆಫರ್‌ಸನ್ ಎಂಟು ಮತಗಳನ್ನು ಪಡೆದನು. ಆದರೆ ಅಧ್ಯಕ್ಷನಾಗಲು ಇನ್ನು ಒಂದೇ ಒಂದು ಮತ ಅವಶ್ಯವಾಗಿ ಬೇಕಾಗಿತ್ತು. ಆರು ಸಂಸ್ಥಾನ ನಿಯೋಗಗಳು ಬರ್‌ಗೆ ಮತ ನೀಡಿದವು. ಎರಡು ನಿಯೋಗಗಳ ಮತಗಳನ್ನು ತಾಂತ್ರಿಕ ತಪ್ಪುಗಳಿಂದಾಗಿ ಎಣಿಕೆಗೆ ತೆಗೆದುಕೊಳ್ಳಲಿಲ್ಲ. ಮೂವತ್ತೈದು ಬಾರಿ ಮತದಾನ ನಡೆದರೂ ಈ ಬಿಕ್ಕಟ್ಟು ಬಗೆಹರಿಯಲಿಲ್ಲ! ಜೆಫರ್‌ಸನ್‌ನ ಪ್ರತಿಗಾಮಿ ಯೋಜನೆಗಳಿಗೆ ಹೆದರಿ ಫೆಡರಲಿಸ್ಟರು ಪ್ರತಿಬಾರಿಯೂ ಒಮ್ಮತದಿಂದ

ಬರ್‌ಗೆ ಮತ ನೀಡಿ ಈ ಬಿಕ್ಕಟ್ಟು ಬಗೆಹರಿಯದಂತೆ ಮಾಡಿದ್ದರು. ಅಂತಿಮವಾಗಿ ಹ್ಯಾಮಿಲ್‌ಟನ್‌ನು ಬರ್ ಮೇಲಿನ ದ್ವೇಷದಿಂದ ತನ್ನ ಮತವನ್ನು ಜೆಫರ್‌ಸನ್‌ಗೆ ನೀಡಿ ಬಿಕ್ಕಟ್ಟನ್ನು ಬಗೆಹರಿಸಿದನು. ಜೆಫರ್‌ಸನ್ ಅಧ್ಯಕ್ಷನಾಗಿ ಆಯ್ಕೆಯಾದನು, ಏರಾನ್ ಬರ್ ಉಪಾಧ್ಯಕ್ಷನಾಗಿ ನೇಮಕಗೊಂಡನು. ಈ ರೀತಿಯ ಬಿಕ್ಕಟ್ಟು ಇನ್ನುಮುಂದೆ ಆಗದಂತೆ ಮಾಡಲು ರಾಜ್ಯಾಂಗಕ್ಕೆ ಹನ್ನೆರಡನೆಯ ತಿದ್ದುಪಡಿ ಲಗತ್ತಿಸಲಾಯಿತು. ಈ ತಿದ್ದುಪಡಿ ಎಲೆಕ್ಟರಲ್ ಕಾಲೇಜಿನಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಪ್ರತ್ಯೇಕ ಮತದಾನ ನಡೆಯಲು ಅವಕಾಶ ಕಲ್ಪಿಸಿತು. ಈ ತಿದ್ದುಪಡಿಯನ್ನು ೧೮೦೪ರಲ್ಲಿ ಅಧಿಕೃತವಾಗಿ ಅಂಗೀಕರಿಸಲಾಯಿತು.

೧೮೦೧ರ ಮಾರ್ಚ್ ತಿಂಗಳ ನಾಲ್ಕನೆಯ ತಾರೀಖು ಪೊಟೋಮಾಕ್ ನದಿ ತೀರದಲ್ಲಿ ಹೊಸದಾಗಿ ನಿರ್ಮಿತವಾದ, ರಾಷ್ಟ್ರಪಿತ ವಾಷಿಂಗ್‌ಟನ್‌ನ ಹೆಸರಿನಿಂದ ಶೋಭಿಸುತ್ತಿದ್ದ ರಾಜಧಾನಿಯಲ್ಲಿ ಥಾಮಸ್ ಜೆಫರ್‌ಸನ್ ಪ್ರಮಾಣ ವಚನ ಸ್ವೀಕರಿಸಿ, ರಾಷ್ಟ್ರವನ್ನುದ್ದೇಶಿಸಿ ತನ್ನ ಆರಂಭ ಭಾಷಣ ಮಾಡಿದನು. ಫೆಡರಲಿಸ್ಟರು ಜೆಫರ್‌ಸನ್ ರಾಜ್ಯಾಂಗವನ್ನು ನಾಶ ಮಾಡಿ, ಉಗ್ರಗಾಮಿ ಸಾಮಾಜಿಕ ವ್ಯವಸ್ಥೆಯನ್ನು ಸ್ಥಾಪಿಸುತ್ತಾನೆ ಎಂದು ಊಹಿಸಿದ್ದು ತಪ್ಪಾಯಿತು. ಜೆಫರ್‌ಸನ್ ಯಾವ ತೀವ್ರ ಸಾಮಾಜಿಕ ಬದಲಾವಣೆಗಳನ್ನೂ ಮಾಡುವ ಸಾಹಸಕ್ಕೆ ಹೋಗದೆ ಫೆಡರಲಿಸ್ಟರು ಸಾಧಿಸಿದ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನು ಅಂಗೀಕರಿಸಿ ಅದೇ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋದನು.

೧೮೦೦ರ ಚುನಾವಣೆಯ ವೈಶಿಷ್ಟ್ಯವೆಂದರೆ ಯುದ್ಧ, ರಕ್ತಪಾತವಿಲ್ಲದೆಯೆ ಸರ್ಕಾರ ಬದಲಾಗಿ, ಅಧಿಕಾರ ಫೆಡರಲಿಸ್ಟರ ಕೈಯಿಂದ ರಿಪಬ್ಲಿಕನ್ನರ ಕೈಗೆ ಪ್ರಜಾಪ್ರಭುತ್ವದ ತತ್ವಗಳ ಆಧಾರದ ಮೇಲೆ ಶಾಂತರೀತಿಯಿಂದ ವರ್ಗಾಯಿಸಲ್ಪಟ್ಟಿದ್ದು ಆ ಕಾಲದಲ್ಲಿ ಅದು ಒಂದು ಅದ್ಭುತ ಸಾಧನೆಯೇ ಸರಿ. ಈಗ ನಾವು ಜೆಫರಸನ್ನನ ಸಾಧನೆಗಳನ್ನು ಪರಿಚಯ ಮಾಡಿಕೊಳ್ಳಬಹುದು.

❑

ಅಧ್ಯಾಯ - ೫

ಥಾಮಸ್ ಜೆಫರ್‌ಸನ್

ವಿಶಿಷ್ಟ ಆಡಳಿತ ವೈಖರಿ ಮತ್ತು ಸಂಯಮ ಜೆಫರ್‌ಸನ್‌ನ ಆಡಳಿತದ ಮುಖ್ಯಗುಣಗಳಾಗಿದ್ದವು. ಈ ವೈಶಿಷ್ಟ್ಯವನ್ನು ಅವನು ತನ್ನ ಆರಂಭ ಭಾಷಣದಲ್ಲಿ ವ್ಯಕ್ತಪಡಿಸಿದನು. ಅವನ ಭಾಷಣದಿಂದ ನಮಗೆ ತಿಳಿದು ಬರುವ ಸಂಗತಿಯೆಂದರೆ ಅವನು ಜನರನ್ನು ಸಂತೋಷಗೊಳಿಸಲು ಎಲ್ಲ ರೀತಿಯ ವಾಗ್ದಾನಗಳನ್ನು ಮಾಡುವ ರಾಜಕಾರಣಿಯೂ ಅಲ್ಲ ಮತ್ತು ಸಮಾಜ ವ್ಯವಸ್ಥೆಯನ್ನು ಬುಡಮೇಲು ಮಾಡಲು ಹೊರಟ ಕ್ರಾಂತಿಕಾರಿಯೂ ಅಲ್ಲ. ಜೆಫರ್‌ಸನ್‌ನ ವಿಶಿಷ್ಟ ಗುಣ ನಮ್ರತೆ. ಈ ಅಧ್ಯಕ್ಷಸ್ಥಾನ ನನ್ನ ಬುದ್ಧಿಮಟ್ಟಕ್ಕೆ ಮಿಗಿಲಾದುದು; ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಳ್ಳುವಾಗ ಮನಸ್ಸಿನಲ್ಲಿ ಆತಂಕ ಮತ್ತು ಮುಂದೆ ಏನಾಗುವುದೋ ಎಂಬ ಭಯ ಆವರಿಸಿಕೊಂಡಿದೆ ಎಂದು ಆರಂಭ ಭಾಷಣದಲ್ಲಿ ಹೇಳಿಕೊಂಡಿದ್ದಾನೆ. ಎಲ್ಲ ಪ್ರಜೆಗಳ ಹಕ್ಕುಗಳನ್ನು ಕಾಪಾಡುವುದು ಸರ್ಕಾರದ ಕರ್ತವ್ಯ ಎಂಬುದನ್ನು ಖಚಿತಪಡಿಸಿದನು. ಪ್ರಜಾಪ್ರಭುತ್ವದಲ್ಲಿ ಬಹುಸಂಖ್ಯಾತರ ಇಷ್ಟದಂತೆ ನಡೆಯಬೇಕಾದುದು ಅಗತ್ಯವಾದರೂ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಅಸಡ್ಡೆ ಮಾಡಬಾರದು. ಅಲ್ಪಸಂಖ್ಯಾತರೂ ಸಮಾನ ಹಕ್ಕುಳ್ಳವರು. ಆದ್ದರಿಂದ ಸಮಾನ ನ್ಯಾಯ ಮತ್ತು ರಕ್ಷಣೆ ಅವರಿಗೆ ದೊರೆಯಬೇಕು. ಇದನ್ನು ಉಲ್ಲಂಘಿಸಿದರೆ ಅದು ದಬ್ಬಾಳಿಕೆಯಾಗುತ್ತದೆ. ಅಮೆರಿಕ ಇತರ ರಾಷ್ಟ್ರಗಳೊಡನೆ ದೀರ್ಘಕಾಲದ ಒಪ್ಪಂದ ಮಾಡಿಕೊಂಡು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಕೊಳ್ಳಬಾರದು. ರಾಷ್ಟ್ರದ ಸಾಲವನ್ನು ಮೊದಲು ಕೊಟ್ಟು ತೀರಿಸಬೇಕು, ಬೇಕಾದಾಗ ಸಾಲ ಪಡೆಯುವ ಅರ್ಹತೆಯನ್ನು ರಾಷ್ಟ್ರ ಉಳಿಸಿಕೊಳ್ಳಬೇಕು. ವ್ಯವಸಾಯ ಮತ್ತು ವಾಣಿಜ್ಯಗಳನ್ನು ಉತ್ತಮಗೊಳ್ಳುವಂತೆ ಉತ್ತೇಜನ ನೀಡಬೇಕು. ಪಕ್ಷ ರಾಜಕೀಯ ದ್ವೇಷದ ದಳ್ಳುರಿಯಾಗದಂತೆ ಸಂಯಮ ಬೆಳೆಸಿಕೊಳ್ಳಬೇಕು. ಭಿನ್ನಾಭಿಪ್ರಾಯ ಸಹಜವಾದುದು, ಆದರೆ ಅದನ್ನು ತಾತ್ವಿಕ ವಿಭಿನ್ನತೆ ಎಂದು ತಪ್ಪಾಗಿ ಭಾವಿಸಬಾರದು. ನಾವೆಲ್ಲರೂ ರಿಪಬ್ಲಿಕನ್ನರೂ ಹೌದು, ಫೆಡರಲಿಸ್ಟರೂ ಹೌದು. ವಿವೇಕ ಪೂರ್ಣವಾದ, ಮಿತವ್ಯಯದ ಸರ್ಕಾರವನ್ನು ರಚಿಸಿ, ಪ್ರಜೆಗಳಿಗೆ ರಕ್ಷಣೆ ನೀಡಿ, ಅವರ ಸ್ವಂತ ಉದ್ದಿಮೆ, ಕಸುಬು ಮತ್ತು ಇತರ ಆಸಕ್ತಿಗಳನ್ನು ತಾವೇ ಸ್ವತಃ ನಿರ್ವಹಣೆ ಮಾಡಲು ಅವಕಾಶ ಕಲ್ಪಿಸಿಕೊಡುವುದು ತನ್ನ ಮುಖ್ಯ ಉದ್ದೇಶವೆಂದು ಜೆಫರ್‌ಸನ್ ತನ್ನ ಆರಂಭ ಭಾಷಣದಲ್ಲಿ ವಿಶದಪಡಿಸಿದನು. ಜೆಫರ್‌ಸನ್ ಮಾಡಿದ ವಾಗ್ದಾನಗಳನ್ನು

ಕಾರ್ಯಗತಗೊಳಿಸಲು ಉದ್ಯುಕ್ತನಾದನು. ವ್ಹಿಸ್ಕಿ ಮೇಲೆ ಹೇರಿದ ತೆರಿಗೆ ಮತ್ತು ಇತರ ಫೆಡರಲಿಸ್ಟ್ ತೆರಿಗೆಗಳನ್ನು ರದ್ದುಗೊಳಿಸಿದನು. ಬಜೆಟ್‌ನ್ನು ಸಮತೋಲನಕ್ಕೆ ತರಲು ಜೆಫರ್‌ಸನ್ ಸೈನ್ಯ ಮತ್ತು ನೌಕಾದಳಗಳ ಖರ್ಚುವೆಚ್ಚಗಳನ್ನು ಕಡಿಮೆ ಮಾಡಲು ಅವುಗಳಿಗೆ ಮೀಸಲಾದ ಹಣವನ್ನು ಕಡಿಮೆ ಮಾಡಿದನು. ತನ್ನ ಎಂಟು ವರ್ಷಗಳ ಆಡಳಿತದ ಅವಧಿಯಲ್ಲಿ ರಾಷ್ಟ್ರೀಯ ಸಾಲವನ್ನು ೮೩ ಮಿಲಿಯನ್ ಡಾಲರ್‌ಗಳಿಂದ ೫೭ ಮಿಲಿಯನ್‌ಗಳಿಗೆ ಇಳಿಸಿದನು. ೧೭೯೮ರ ವಲಸೆಗಾರರು ಪೌರತ್ವ ಪಡೆಯುವುದರ ಮೇಲಿನ ನಿರ್ಬಂಧ ಕಾಯಿದೆಗಳನ್ನು ರದ್ದುಗೊಳಿಸಿದನು. ರದ್ದುಗೊಳಿಸಲಾಗಿದ್ದ ಪೌರತ್ವ ಪಡೆಯಲು ಐದು ವರ್ಷಗಳು ಕಾಯಬೇಕಾದ ಕಾಯಿದೆಯನ್ನು ಪುನಃ ಜಾರಿಗೆ ತಂದನು. ಈ ಬದಲಾವಣೆಗಳು ಕ್ರಾಂತಿಕಾರಕ ಬದಲಾವಣೆಗಳಲ್ಲ. ಹ್ಯಾಮಿಲ್‌ಟನ್ ರಚಿಸಿದ್ದ ಆರ್ಥಿಕ ವ್ಯವಸ್ಥೆಯನ್ನು ಜೆಫರ್‌ಸನ್ ಕಿತ್ತುಹಾಕುವ ಪ್ರಯತ್ನ ಮಾಡಲಿಲ್ಲ. ಆತ ಮಾಡಿದ ಸಾಲವನ್ನು ತೀರಿಸಬಹುದೇ ಹೊರತು ಅವನು ಬೆಳೆಸಿದ ಆರ್ಥಿಕ ವ್ಯವಸ್ಥೆಯನ್ನು ತೆಗೆದುಹಾಕುವುದು ಸಾಧ್ಯವಾಗದು ಎಂದು ಜೆಫರ್‌ಸನ್ ನಮ್ರತೆಯಿಂದ ಹೇಳಿ ಕೊಂಡಿದ್ದಾನೆ.

ಜೆಫರ್‌ಸನ್ ಹೊಸ ಶೈಲಿಯ ಆಡಳಿತವನ್ನು ಆರಂಭಿಸಿದನು. ಶ್ವೇತಭವನದಲ್ಲಿ (White House) ಅವನ ನಿತ್ಯ ಜೀವನರೀತಿ ಮತ್ತು ನಡವಳಿಕೆಗಳು ಸರಳ ಹಾಗೂ ಅನೌಪಚಾರಿಕ (informal) ವಾಗಿದ್ದವು. ಶ್ವೇತಭವನದಲ್ಲಿದ್ದಾಗ ಅವನು ಅನೇಕ ವೇಳೆ ಹಳೆಯ, ಅಲ್ಲಲ್ಲಿ ಹರಿದ ಒಂದು ಕೋಟು ಮತ್ತು ಚಪ್ಪಲಿಗಳನ್ನು ಹಾಕಿಕೊಂಡಿರುತ್ತಿದ್ದನು. ಅದೇ ವೇಶದಲ್ಲಿ ವಿದೇಶಗಳಿಂದ ಉತ್ತಮ ವೇಷ ಭೂಷಣಗಳನ್ನು ಧರಿಸಿ ತಮ್ಮ ಹುದ್ದೆಯ ನೇಮಕಪತ್ರಗಳನ್ನು (credentials) ಅರ್ಪಿಸಲು ಬಂದ ರಾಯಭಾರಿಗಳನ್ನು ಮತ್ತು ಪ್ರತಿನಿಧಿಗಳನ್ನು ಭೇಟಿಯಾಗುತ್ತಿದ್ದನು. ಕೆಲಸದ ವೇಳೆಯಲ್ಲಿ ಭೇಟಿಯಾಗಲು ಬರುತ್ತಿದ್ದ ಕಾಂಗ್ರೆಸ್ ಸದಸ್ಯರು, ಸ್ನೇಹಿತರು, ವಿದೇಶಿ ಅಧಿಕಾರಿಗಳು ಮತ್ತು ಸಾಮಾನ್ಯ ಪ್ರಜೆಗಳು ತಮ್ಮ ಸರದಿಯ ಪ್ರಕಾರ ಕಾದು ಅಧ್ಯಕ್ಷರನ್ನು ಭೇಟಿಯಾಗಬೇಕಿತ್ತು. ಎಲ್ಲರೂ ಸಮಾನ ಹಕ್ಕುಳ್ಳವರು; ಮೇಲು-ಕೀಳು ಎಂಬ ತಾರತಮ್ಯವಿಲ್ಲ, ಯಾರೂ ನಿಮಗಿಂತ ಮೇಲಿನವರಲ್ಲ ಹಾಗೆಯೇ ನೀವು ಇತರರಿಗಿಂತ ಮೇಲಿನವರಲ್ಲ – ಸರಳತೆ ಮತ್ತು ಸಮಾನತೆ ನಮ್ಮ ಜೀವನಸೂತ್ರವೆಂದು ಜೆಫರ್‌ಸನ್ ಪ್ರತಿಪಾದಿಸಿದನು. ಸರಳತೆ ಮತ್ತು ಅನೌಪಚಾರಿಕತೆ ಉಪಯುಕ್ತವಾದ ರಾಜಕೀಯ ತಂತ್ರಗಳೆಂಬುದನ್ನು ಜೆಫರ್‌ಸನ್ ಮನಗಂಡಿದ್ದನು. ಅವನು ನುರಿತ ರಾಜಕಾರಣಿಯಾಗಿದ್ದನು, ಶ್ವೇತಭವನದಲ್ಲಿ ಅವನು ಪದೇ ಪದೇ ಅನೌಪಚಾರಿಕ ಔತಣಕೂಟಗಳನ್ನು ಕಾಂಗ್ರೆಸ್ ಸದಸ್ಯರಿಗಾಗಿ ಏರ್ಪಡಿಸು ತ್ತಿದ್ದನು. ಈ ಕೂಟಗಳಲ್ಲಿ ಸ್ವಂತ ವ್ಯಾಪಾರ ವ್ಯವಹಾರಗಳಿಗೆ ಸಂಬಂಧಪಟ್ಟ ವಿಷಯ ಗಳನ್ನು ಚರ್ಚಿಸಲು ಅವಕಾಶವಿರಲಿಲ್ಲ. ಅಂಥ ವಿಷಯಗಳನ್ನು ಎತ್ತಬಾರದು ಎನ್ನುವುದಕ್ಕೆ ಎಲ್ಲರ ಮೌನ ಸಮ್ಮತಿ ಇತ್ತು. ಈ ಔತಣಕೂಟಗಳಲ್ಲಿ ಜೆಫರ್‌ಸನ್ ತಾನೇ ಖುದ್ದಾಗಿ

ಅತಿಥಿಗಳಿಗೆ ಭಕ್ಷ್ಯ ಭೋಜ್ಯಗಳನ್ನು ಬಡಿಸಿ ಖುಷಿ ಪಡಿಸುತ್ತಿದ್ದನು. ಅನೌಪಚಾರಿಕವಾದರೂ ಈ ಔತಣಕೂಟಗಳು ಅನೇಕ ರಾಜಕೀಯ ಅನುಕೂಲತೆಗಳನ್ನು ಅನಾಯಾಸವಾಗಿ ಒದಗಿಸುತ್ತಿದ್ದವು. ಅತಿಥಿಗಳಿಗೆ ಹರಟೆ ಹೊಡೆಯಲು ಬೇಕಾದಷ್ಟು ಅವಕಾಶವಿತ್ತು. ಹರಟೆ ಹೊಡೆಯುವಂತೆ ಅವರನ್ನು ಜೆಫರ್‌ಸನ್ ಉತ್ತೇಜಿಸುತ್ತಿದ್ದನು. 'ನೋಡಿ, ನಾವು ಈ ಗೋಡೆಗಳ ನಡುವೆ ಸುರಕ್ಷಿತವಾಗಿದ್ದೇವೆ; ಈ ಗೋಡೆಗಳಿಗೆ ಕಿವಿಗಳಿಲ್ಲ!' ಎಂದು ಸೂಚನೆ ಕೊಡುತ್ತಿದ್ದನು. ಮಾದಕ ಪಾನೀಯಗಳನ್ನು ಯತೇಚ್ಛವಾಗಿ ಸೇವಿಸುತ್ತ ಹೇರಳವಾದ ಭಕ್ಷ್ಯ ಭೋಜ್ಯಗಳನ್ನು ಸವಿಯುತ್ತ ಲಂಗು-ಲಗಾಮಿಲ್ಲದೆ ಹರಟೆ ಅನವರತ ವಾಗಿ ಸಾಗಿ, ಅನೇಕ ಗುಪ್ತ ಸಂಗತಿಗಳು ಅನಾಯಾಸವಾಗಿ ಅಧ್ಯಕ್ಷನ ಕಿವಿಗೆ ತಲುಪುತ್ತಿದ್ದವು.

ಜೆಫರ್‌ಸನ್ ಕಾಂಗ್ರೆಸ್ಸಿನಲ್ಲಿ ತನ್ನ ಆಪ್ತ ಸದಸ್ಯರನ್ನು ಮತ್ತು ಆಡಳಿತ ಮಂಡಳಿಯ ಸದಸ್ಯರನ್ನು ದುಡಿಸಿಕೊಂಡನು. ಇವರ ಸಹಾಯದಿಂದ ಕಾಂಗ್ರೆಸ್ ತನ್ನ ಯೋಜನೆಗಳನ್ನು ಒಪ್ಪಿಕೊಂಡು ತನ್ನ ಸೂಚನೆಗಳನ್ನು ಅನುಸರಿಸುವಂತೆ ಮಾಡಿದನು. ಸಂಸ್ಥಾನಗಳೊಡನೆ ಸೌಹಾರ್ದತೆಯ ಸಂಪರ್ಕ ಬೆಳೆಸಿಕೊಂಡು, ಘರ್ಷಣೆಗೆ ಕಾರಣವಾಗುವ ಅವಕಾಶಗಳನ್ನು ಕಡಿಮೆ ಮಾಡಿ, ಜನರಲ್ಲಿ ಒಗ್ಗಟ್ಟು ಬೆಳೆಸುವ ಅಂಶಗಳ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದನು. ಅವನ ಅಭಿಪ್ರಾಯದಲ್ಲಿ ಎಲ್ಲರೂ ಹೆಚ್ಚು ಕಡಿಮೆ ಫೆಡರಲಿಸ್ಟರು ಮತ್ತು ರಿಪಬ್ಲಿಕನ್ನರಾಗಿರುತ್ತಾರೆ. ಈ ಎರಡು ಪಕ್ಷಗಳ ನಡುವೆ ಬಗೆಹರಿಸಲಾರದಂಥ ವಿಭಿನ್ನತತ್ವ ಯಾವುದೂ ಇಲ್ಲ. ಎರಡು ಪಕ್ಷದವರನ್ನು ತನ್ನ ಅನುಯಾಯಿಗಳಾಗುವಂತೆ ಜೆಫರ್‌ಸನ್ ಕರೆ ನೀಡಿದನು. ಅವನ ಪ್ರಯತ್ನ ಸಫಲವಾಯಿತು. ನಾಲ್ಕು ವರ್ಷಗಳ ನಂತರ ಜೆಫರ್‌ಸನ್ ಎರಡನೆಯ ಬಾರಿ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದಾಗ, ಒಟ್ಟು ೧೭೬ ಎಲೆಕ್ಟರಲ್ ಮತಗಳಲ್ಲಿ ಅವನಿಗೆ ೧೬೨ ಮತಗಳು ಮತ್ತು ಅವನ ಪ್ರತಿಸ್ಪರ್ಧಿ ಚಾರ್ಲ್ಸ್ ಪಿಂಕ್‌ನಿಗೆ ಕೇವಲ ೧೪ ಮತಗಳು ದೊರಕಿ ಜೆಫರ್‌ಸನ್ ಜಯ ಗಳಿಸಿದನು. ಜೆಫರ್‌ಸನ್ ಅಧ್ಯಕ್ಷತೆಯ ಮೊದಲನೆಯ ಅವಧಿಯಲ್ಲಿ ಅಧಿಕವಾದ ಕಷ್ಟ ಮತ್ತು ಸಮಸ್ಯೆಗಳನ್ನು ನ್ಯಾಯಾಲಯಗಳು ತಂದೊಡ್ಡಿದವು. ಜೆಫರ್‌ಸನ್ ಬಿಚ್ಚು ಮನಸ್ಸಿನವನೂ ಸಹಿಷ್ಣತೆಯುಳ್ಳವನಾಗಿದ್ದರೂ ಅವನಲ್ಲಿ ಕೆಲವು ಮೊಂಡು ಪೂರ್ವಾಗ್ರಹಗಳಿದ್ದವು. ಅವನು ರಾಜಪ್ರಭುತ್ವದ ಕಡು ವಿರೋಧಿಯಾಗಿದ್ದನು. ಬ್ರಿಟಿಷ್ ಸರ್ಕಾರ ವ್ಯವಸ್ಥೆಯನ್ನು ತಿರಸ್ಕರಿಸಿದನು. ನ್ಯಾಯಾಲಯ ಗಳ ಪಟ್ಟಭದ್ರ ಹಿತಾಸಕ್ತಿಗಳನ್ನು ಮತ್ತು ನ್ಯಾಯಾಧೀಶರನ್ನು ಅವನು ಇಷ್ಟಪಡುತ್ತಿರಲಿಲ್ಲ. ನ್ಯಾಯಾಧೀಶರಿಗೆ ಸ್ವಾತಂತ್ರ್ಯ ಇರಬೇಕೆಂದು ಅವನು ಒಪ್ಪಿಕೊಂಡಿದ್ದರೂ ಅವರ ಅಧಿಕಾರದಾಹವನ್ನು ಖಂಡಿಸಿದನು. ಜೆಫರ್‌ಸನ್ ನ್ಯಾಯಾಧೀಶರಲ್ಲಿ ನಂಬಿಕೆ ಕಳೆದು ಕೊಳ್ಳಲು ಕಾರಣ; 'ದಮನಕಾರಿ ಕಾಯಿದೆಗಳು' ಜಾರಿಯಲ್ಲಿದ್ದ ಕಾಲದಲ್ಲಿ ಫೆಡರಲಿಸ್ಟರು ನೇಮಿಸಿದ ನ್ಯಾಯಾಧೀಶರು ತೋರಿದ ಪೂರ್ವಾಗ್ರಹಪೀಡಿತ ವರ್ತನೆಗಳಿಂದ. ಆಗ ಕಾಂಗ್ರೆಸ್ಸಿನಲ್ಲಿ ಬಹುಸಂಖ್ಯಾತರಾಗಿದ್ದ ಫೆಡರಲಿಸ್ಟರು ೧೮೦೧ರ ನ್ಯಾಯಾಂಗ ಕಾಯಿದೆ ಯನ್ನು ತುರ್ತಾಗಿ ಕಾಂಗ್ರೆಸ್ಸಿನಲ್ಲಿ ಮಂಡಿಸಿ ಒತ್ತಾಯದಿಂದ ಅಂಗೀಕೃತವಾಗುವಂತೆ

ಮಾಡಿದ್ದು ಜೆಫರ್‌ಸನ್ ಸಹನೆ ಮೀರುವಂತೆ ಮಾಡಿತು. ೧೮೦೧ರ ಕಾಯಿದೆಯ ಮುಖ್ಯ ಉದ್ದೇಶ ಜೆಫರ್‌ಸನ್‌ನ ಯೋಜನೆಗಳನ್ನು ಕಾರ್ಯಗತವಾಗದಂತೆ ಮಾಡುವುದು. ಈ ನ್ಯಾಯಾಂಗ ಕಾಯಿದೆ ಆರು ಹೊಸ ಸರ್ಕ್ಯೂಟ್ ನ್ಯಾಯಾಲಯ (circuit courts)ಗಳನ್ನು ಮತ್ತು ಹದಿನಾರು ಫೆಡರಲ್ ನ್ಯಾಯಾಧೀಶರನ್ನು ಹಾಗೂ ಅವರ ಸಹಾಯಕ್ಕೆ ವಕೀಲರ, ಪೊಲೀಸ್ ಅಧಿಕಾರಿಗಳ ಮತ್ತು ಗುಮಾಸ್ತರ ಒಂದು ಸಣ್ಣ ಸೈನ್ಯವನ್ನೇ ಸೃಷ್ಟಿಸಿತು. ಮೇಲಾಗಿ ಆಗ ಅಧ್ಯಕ್ಷನಾಗಿದ್ದ ಆ್ಯಡಮ್ಸ್‌ನ ಸಹಾಯದಿಂದ ಈ ಹೊಸಹುದ್ದೆಗಳಿಗೆ ಸಂಪ್ರದಾಯಸ್ಥ ಫೆಡರಲಿಸ್ಟರನ್ನು ನೇಮಿಸಲಾಯಿತು. ಅಧ್ಯಕ್ಷ ಆ್ಯಡಮ್ಸ್ ವರ್ಜೀನಿಯದ ಜಾನ್ ಮಾರ್ಷಲ್ (John Marshall)ನನ್ನು ಶ್ರೇಷ್ಠ ನ್ಯಾಯಾಲಯದ (Supreme Court) ಮುಖ್ಯ ನ್ಯಾಯಾಧೀಶನನ್ನಾಗಿ ನೇಮಕ ಮಾಡಿದನು. ಜೆಫರ್‌ಸನ್‌ಗೆ ಮಾರ್ಷಲ್‌ನನ್ನು ಕಂಡರೆ ಆಗುತ್ತಿರಲಿಲ್ಲ. ಇಬ್ಬರೂ ಬದ್ಧದ್ವೇಷಿಗಳಾಗಿದ್ದರು. ಚುನಾವಣೆ ಮುಗಿದು ಹೊಸ ಕಾಂಗ್ರೆಸ್ ಆರಂಭವಾದಾಗ ರಿಪಬ್ಲಿಕನ್ನರು ೧೮೦೧ರ ನ್ಯಾಯಾಂಗ ಕಾಯಿದೆಯನ್ನು ರದ್ದುಗೊಳಿಸಿ ತಮ್ಮ ಪ್ರತೀಕಾರ ತೀರಿಸಿಕೊಂಡರು. ಇಷ್ಟಾದರೂ ಜೆಫರ್‌ಸನನ ಸಿಟ್ಟು ಇಳಿಯಲಿಲ್ಲ. ಅವನು ಅಧಿಕಾರ ಸ್ವೀಕರಿಸಿದ ಮೇಲೆ ಆ್ಯಡಮ್ಸ್ ಅಧಿಕಾರ ವಹಿಸಿಕೊಡುವ ಕಡೆಗಳಿಗೆಗಳ ಗೊಂದಲದಲ್ಲಿ ಅವನು ಕೊಲಂಬಿಯ ಡಿಸ್ಟ್ರಿಕ್ಟ್‌ನಲ್ಲಿ ನೇಮಿಸಿದ್ದ ಫೆಡರಲಿಸ್ಟ್ ನ್ಯಾಯಾಧೀಶರು ಇನ್ನೂ ಮುಂದುವರಿಯದಂತೆ ಮಾಡಿದ್ದನು. ಜೆಫರ್‌ಸನ್ ಕೋಪಾವಿಷ್ಟನಾಗಿ ಆ ನ್ಯಾಯಾಧೀಶರು ಕಾರ್ಯಾಚರಣೆ ಮಾಡದಂತೆ ತಡೆಯೊಡ್ಡಿದನು. ಈ ತಡೆಯಾಜ್ಞೆಯನ್ನು ತೊಡೆದು ಹಾಕಿ ತನ್ನ ಕಮಿಷನ್‌ನ್ನು ವಾಪಸ್ಸು ಕೊಡುವಂತೆ ವಿಲಿಯಂ ಮಾರ್‌ಬರಿ (William Marbury) ಶ್ರೇಷ್ಠ ನ್ಯಾಯಾಲಯಕ್ಕೆ ಕೋರಿಕೆ ಸಲ್ಲಿಸಿದನು. ಆ ಶ್ರೇಷ್ಠ ನ್ಯಾಯಾಲಯದ ಕಟ್ಟಳೆ ಉನ್ನತ ನ್ಯಾಯಾಧೀಶನಾಗಿದ್ದ ಜಾನ್ ಮಾರ್ಷಲ್‌ನನ್ನು ಮುಜುಗರದ ಸನ್ನಿವೇಶದಲ್ಲಿ ಸಿಕ್ಕಿಸಿತು. ಅವನು ಮಾರ್‌ಬರಿಯ ಕೋರಿಕೆಯನ್ನು ಸ್ವೀಕರಿಸದೆಹೋದರೆ ಎಲ್ಲರೂ ಇವನನ್ನು ಜೆಫರ್‌ಸನ್‌ನ್ನು ಎದುರಿಸಲಾರದೆ ಹೆದರಿ ಹೀಗೆ ಮಾಡಿದನೆಂದು ಹೀಯಾಳಿಸಬಹುದು. ಇದು ನ್ಯಾಯಾಲಯಕ್ಕೆ ಅಪಕೀರ್ತಿ ತರಬಹುದು. ಕೋರಿಕೆಯನ್ನು ಸ್ವೀಕರಿಸಿದರೆ ನ್ಯಾಯಾಲಯ ನೇರವಾಗಿ ಸರ್ಕಾರದ ಕಾರ್ಯಾಂಗ (Executive)ದೊಡನೆ ಘರ್ಷಣೆಗೆ ಗುರಿಯಾಗುತ್ತದೆ. ವಿದೇಶಾಂಗ ಸೆಕ್ರೆಟರಿಯಾಗಿದ್ದ ಮ್ಯಾಡಿಸನ್ ನ್ಯಾಯಾಲಯದ ಆಜ್ಞೆಯನ್ನು ಕಡೆಗಣಿಸಬಹುದು. ಇದು ನ್ಯಾಯಾಲಯದ ಘನತೆಗೆ ಹೆಚ್ಚಿನ ಧಕ್ಕೆ ಉಂಟುಮಾಡಬಹುದು. ಜಾನ್ ಮಾರ್ಷಲ್ ಈ ಸಮಸ್ಯೆಯನ್ನು ಕುಶಲತೆಯಿಂದ ಬಗೆಹರಿಸಿ ಸಮರ್ಥ ನ್ಯಾಯಾಧೀಶನೆಂದು ಹೆಸರು ಪಡೆದನು. ಮಾರ್ಷಲ್ ನೀಡಿದ ತೀರ್ಪಿನ ಪ್ರಕಾರ ಮಾರ್‌ಬರಿ ತನ್ನ ಸ್ಥಾನವನ್ನು ಪಡೆಯಬೇಕಾದುದು ನ್ಯಾಯಸಮ್ಮತವಾಗಿದೆ. ಆದರೆ ಮಾರ್‌ಬರಿಯನ್ನು ನೇಮಿಸುವಂತೆ ಮ್ಯಾಡಿಸನ್‌ನನ್ನು ಒತ್ತಾಯ ಮಾಡಲು ನ್ಯಾಯಾಲಯಕ್ಕೆ ಸಾಧ್ಯವಿಲ್ಲ. ಏಕೆಂದರೆ ನೇಮಕ ಮಾಡುವುದು ನ್ಯಾಯಾಲಯಕ್ಕೆ ಸೇರಿದ ಕೆಲಸವಲ್ಲ. ಮಾರ್‌ಬರಿಯ ಕೋರಿಕೆ ೧೭೮೯ರ

ಒಂದು ಅಸ್ಪಷ್ಟವಾದ ಕಾಯಿದೆಯ ಆಧಾರದ ಮೇಲೆ ಮಾಡಲಾಗಿದೆ. ಆ ಕಾಯಿದೆ ರಾಜ್ಯಾಂಗ ವಿರುದ್ಧವಾದುದು ಎಂದು ಆಗಲೇ ತೀರ್ಮಾನವಾಗಿರುವುದರಿಂದ ಮಾರ್‌ಬರಿಯ ಕಟ್ಟಳೆ ಆಧಾರರಹಿತವಾದುದು ಎಂದು ತನ್ನ ತೀರ್ಪನ್ನು ನೀಡಿದನು.

ಮಾರ್‌ಬರಿಯ ಕಟ್ಟಳೆಯಿಂದಾಗಿ ಫೆಡರಲಿಸ್ಟ್ ನ್ಯಾಯಾಧೀಶರ ಪ್ರಭಾವಕ್ಕೊಳಗಾಗಿರುವ ನ್ಯಾಯಾಲಯಗಳ ಮೇಲೆ ತಕ್ಕ ಕ್ರಮ ಕೈಗೊಳ್ಳಲು ಜೆಫರ್‌ಸನ್ ದೃಢ ಮನಸ್ಸು ಮಾಡಿದನು. ಪಕ್ಷಪಾತ ಮಾಡುವ ನ್ಯಾಯಾಧೀಶರನ್ನು ತೆಗೆದುಹಾಕುವಂತೆ ಒತ್ತಾಯ ಮಾಡಿದನು. ಮೊದಲು ಜಿಲ್ಲಾ ನ್ಯಾಯಾಧೀಶ ಜಾನ್ ಪಿಂಕ್‌ನಿ ಮೇಲೆ ಆಪಾದನೆಗಳನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸುವಂತೆ ಮಾಡಿದನು. ನ್ಯಾಯಾಗೀಶ ಪಿಂಕ್‌ನಿ ತಲೆ ಕೆಟ್ಟವನಂತೆ ವರ್ತಿಸುತ್ತಿದ್ದ; ನ್ಯಾಯಪೀಠದ ಮೇಲೆ ಕುಡಿದು ಬಂದು ಕುಳಿತು ಅಶ್ಲೀಲವಾಗಿ ಒಡಬಡಿಸುತ್ತಿದ್ದನು. ಸೆನೆಟ್ ಅವನನ್ನು ಕೆಲಸದಿಂದ ತೆಗೆದುಹಾಕಿತು. ಹಾಗೆಯೇ ಶ್ರೇಷ್ಠ ನ್ಯಾಯಾಲಯದ ಉಪನ್ಯಾಯಾಧೀಶನಾಗಿದ್ದ ಸಾಮ್ಯುಯಲ್ ಚೇಸ್ (Samuel Chase) ದಮನಕಾರಿ ಕಾಯಿದೆಗಳಿಗೆ ಒಳಪಟ್ಟ ಕಟ್ಟಳೆಗಳನ್ನು ತೀರ್ಮಾನಿಸುವಾಗ ಸರ್ವಾಧಿಕಾರಿಯಂತೆ ವರ್ತಿಸಿ ತನ್ನ ಇಚ್ಛಾನುಸಾರವಾಗಿ ತೀರ್ಪುಗಳನ್ನು ಕೊಟ್ಟನೆಂಬ ಆಪಾದನೆಯ ಮೇಲೆ ಜೆಫರ್‌ಸನ್ ಅವನನ್ನು ತೆಗೆದುಹಾಕಲು ಪ್ರಯತ್ನಪಟ್ಟನು. ಆದರೆ ಚೇಸ್ ಮಾಡಿದ್ದು ರಾಜ್ಯಾಂಗದ 'ಮಹಾ ಅಪರಾಧ ಮತ್ತು ದುರ್ನಡತೆ'ಗಳ (high crimes and misdemeanors) ನಿರೂಪಣೆಗೆ ಒಳಪಡದೆ ಹೋದುದರಿಂದ ಅವನನ್ನು ಬಿಡುಗಡೆ ಮಾಡಬೇಕಾಯಿತು.

ಕೆಲವು ಸಣ್ಣಪುಟ್ಟ ತೊಂದರೆಗಳನ್ನು ಬಿಟ್ಟರೆ, ಜೆಫರ್‌ಸನ್ ಆಡಳಿತದ ಮೊದಲು ನಾಲ್ಕು ವರ್ಷಗಳು ಜಯಪ್ರದವಾಗಿದ್ದವು. ಹಣ ಉಳಿತಾಯ ಮಾಡಲು ಸೈನ್ಯ ಮತ್ತು ನೌಕಾದಳಗಳ ಸಂಖ್ಯಾಬಲವನ್ನು ಕಡಿಮೆ ಮಾಡಿದನು. ಇದರಿಂದ ದೇಶದ ಸುರಕ್ಷಣೆಗೆ ಧಕ್ಕೆ ಉಂಟಾಗುವ ಸಾಧ್ಯತೆ ಇದ್ದರೂ ಬ್ರಿಟನ್ ಮತ್ತು ಫ್ರಾನ್ಸ್‌ಗಳ ನಡುವೆ ಏರ್ಪಟ್ಟ ೧೮೦೨ರ ಅಮೈನ್ಸ್ (Amines) ಒಪ್ಪಂದದ ಪ್ರಕಾರ ಯುದ್ಧ ನಿಂತು ಶಾಂತಿ ಸ್ಥಾಪನೆ ಆಗಿದ್ದರಿಂದ, ಜೆಫರ್‌ಸನ್ ಅಮೆರಿಕ ಹೊರಗಿನ ದಾಳಿಗೆ ಸಿಕ್ಕುವ ಸಂಭವ ಕಡಿಮೆ ಎಂದು ಮನಗಂಡು ಸೈನ್ಯ ಮತ್ತು ನೌಕಾದಳಗಳಲ್ಲಿ ಖೋತಾ ಮಾಡಿದನು. ಚಿಕ್ಕ ನೌಕಾದಳವಾಗಿದ್ದರೂ ಸಹ ಅದನ್ನು ಬಾರ್ಬೆರಿ (Barbary) ಕಡಲ್ಗಳ್ಳರ ಮೇಲೆ ಕಾರ್ಯಾಚರಣೆಯಲ್ಲಿ ತೊಡಗಿಸಿ ಜೆಫರ್‌ಸನ್ ಜಯ ಸಾಧಿಸಿದನು.

ಮೆಡಿಟರೇನಿಯನ್ ಸಮುದ್ರಮಾರ್ಗದಲ್ಲಿ ಹೋಗಿ ಬರುವ ವ್ಯಾಪಾರದ ಹಡಗುಗಳ ಮೇಲೆ ಉತ್ತರ ಆಫ್ರಿಕದ ಅರಬ್ಬೀ ಸಂಸ್ಥಾನಗಳಾದ ಮೊರಾಕೊ, ಅಲ್ಜಿಯರ್ಸ್, ಟ್ಯೂನಿಸ್ ಮತ್ತು ಟ್ರಿಪೊಲಿಗಳು ತಲೆತಲಾಂತರದಿಂದ ಸುಂಕ ವಸೂಲಿ ಮಾಡುತ್ತಿದ್ದರು. ಯೂರೋಪಿಯನ್ ದೇಶಗಳು ಆ ದೇಶಗಳ ಮೇಲೆ ಯುದ್ಧ ಮಾಡುವುದಕ್ಕಿಂತಲೂ

ಸುಂಕ ಕೊಡುವುದು ಸುಲಭ ಎಂದು ಪ್ರತಿ ವರ್ಷ ಸುಂಕ ಒಪ್ಪಿಸುತ್ತ ಬಂದಿದ್ದವು. ವಾಷಿಂಗ್‌ಟನ್ ಮತ್ತು ಆ್ಯಡಮ್ಸ್ ತಮ್ಮ ಆಡಳಿತ ಕಾಲದಲ್ಲಿ ಯೂರೋಪ್ ದೇಶಗಳನ್ನು ಅನುಸರಿಸಿ ಸುಂಕ ಕೊಡುತ್ತ ಬಂದಿದ್ದರು. ಜೆಫರ್‌ಸನ್ ಇದು ಹೇಡಿತನವೆಂದು ಭಾವಿಸಿದನು. ಟ್ರಿಪೊಲಿಯ ಪಾಶ (Pasha) ಸುಂಕವನ್ನು ಹೆಚ್ಚಿಸಿದಾಗ ಜೆಫರ್‌ಸನ್ ಸುಂಕ ಕೊಡುವುದನ್ನು ನಿಲ್ಲಿಸಿದನು. ಈ ಕಾರಣವಾಗಿ ೧೮೦೧ರ ಮೇ ತಿಂಗಳಲ್ಲಿ ಟ್ರಿಪೊಲಿ ಅಮೆರಿಕದ ಮೇಲೆ ಯುದ್ಧ ಸಾರಿತು. ಆಗ ಜೆಫರ್‌ಸನ್ ತನ್ನ ನೌಕಾದಳವನ್ನು ಕಳುಹಿಸಿ ಅರಬ್ಬೀ ನೌಕಾದಳವನ್ನು ಎದುರಿಸಿದನು. ಬಹಳ ದೂರದಲ್ಲಿದ್ದರೂ ಅಮೆರಿಕ ಒಂದೇ ಈ ಸುಂಕರೂಪದ ಶೋಷಣೆಯನ್ನು ನಿರಾಕರಿಸಿ ಅರಬ್ಬೀ ದೇಶಗಳ ಸವಾಲನ್ನು ಎದುರಿಸಲು ನೌಕಾದಳವನ್ನು ಮೆಡಿಟರೇನಿಯನ್ ಸಮುದ್ರ ಪ್ರವೇಶಕ್ಕೆ ರವಾನಿಸಿತು. ಅಮೆರಿಕದ ನೌಕಾದಳ ಅರಬ್ಬೀ ದೇಶಗಳ ಮೇಲೆ ಸಂಪೂರ್ಣ ವಿಜಯ ಸಾಧಿಸದೆ ಹೋದರೂ, ಟ್ರಿಪೊಲಿಯ ಪಾಶ ಸಂಧಾನ ಮಾಡಿಕೊಳ್ಳುವಂತೆ ಒಪ್ಪಿಸುವುದರಲ್ಲಿ ಸಫಲವಾಯಿತು. ಈ ಸಂಘರ್ಷಣೆ ಅಮೆರಿಕಕ್ಕೆ ಅನುಕೂಲವಾಗುವಂಥ ಒಪ್ಪಂದದಲ್ಲಿ ಪರಿಸಮಾಪ್ತಿ ಯಾಯಿತು.

ಲೂಯಿಸಿಯಾನದ ಖರೀದಿ

ಜೆಫರ್‌ಸನ್ ಆಡಳಿತದ ಅತ್ಯುನ್ನತ ಸಾಧನೆ ಎಂದರೆ ಮಿಸಿಸ್ಸಿಪ್ಪಿ ನದಿ ಮತ್ತು ಶಿಲಾಪರ್ವತಗಳ (Rocky Mountains) ನಡುವಣ ಲೂಯಿಸಿಯಾನ ಎಂದು ಕರೆಯಲ್ಪಡುತ್ತಿದ್ದ ಮಹಾ ವಿಸ್ತಾರದ ಪ್ರದೇಶವನ್ನು ಅಮೆರಿಕಕ್ಕೆ ಸೇರಿಸಿಕೊಂಡ ಮಹತ್ತ್ವಾದ ಘಟನೆ. ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ಮಿಸಿಸ್ಸಿಪ್ಪಿ ನದಿಯು ಸಮುದ್ರ ಸೇರುವ ಪ್ರದೇಶ ಮತ್ತು ನ್ಯೂ ಆರ್ಲಿಯನ್ಸ್ ನಗರಗಳಿಗೆ ಪ್ರವೇಶ ದೊರೆಯದೆಹೋದರೆ ಅಪಲೇಷಿಯನ್ ಪರ್ವತ ಸಾಲುಗಳ ಆಚೆ ಇರುವ ಪ್ರದೇಶವನ್ನು ಕಳೆದುಕೊಳ್ಳ ಬೇಕಾಗುತ್ತದೆ ಎಂದು ಜೆಫರ್‌ಸನ್ ಮನಗಂಡಿದ್ದನು. ಅವನು ಅಧ್ಯಕ್ಷನಾದ ಕೆಲವು ಸಮಯದಲ್ಲೇ ಸ್ಪೇನ್ ಲೂಯಿಸಿಯಾನವನ್ನು ಫ್ರಾನ್ಸಿಗೆ ವಾಪಸ್ಸು ಮಾಡಿದ ಸುದ್ದಿ ತಿಳಿದು ಅಮೆರಿಕ ಎಚ್ಚರದಿಂದ ಇರಬೇಕು ಎಂದು ನಿರ್ಧರಿಸಿದನು. ಲೂಯಿಸಿಯಾನ ಸ್ಪೇನಿನ ಆಡಳಿತಕ್ಕೆ ಒಳಪಟ್ಟಿದ್ದಾಗ ತೀರ ಆತಂಕ ಪಡಬೇಕಾಗಿರಲಿಲ್ಲ, ಏಕೆಂದರೆ ಆಗ ಸ್ಪೇನಿನ ಪ್ರಾಬಲ್ಯ ಕುಗ್ಗಿ ಅದು ಯುದ್ಧ ಮಾಡುವ ಸ್ಥಿತಿಯಲ್ಲಿರಲಿಲ್ಲ. ಆದರೆ ಲೂಯಿಸಿಯಾನ ಫ್ರಾನ್ಸಿನ ಮೇಲೆ ಪ್ರಭುತ್ವ ಸಾಧಿಸಿದ್ದ ನೆಪೋಲಿಯನ್‌ನ ಕೈವಶವಾದರೆ ಅಮೆರಿಕಕ್ಕೆ ಅಪಾಯ ತಪ್ಪಿದ್ದಲ್ಲ ಎಂದು ಜೆಫರ್‌ಸನ್ ಮುಂದಾಲೋಚನೆ ಮಾಡಿದ್ದನು. ನೆಪೋಲಿಯನ್ ಕೆನಡ ಆಕ್ರಮಿಸಲು ಹವಣಿಸುತ್ತಿದ್ದಾನೆಯೆ ಅಥವಾ ಗಡಿಪ್ರದೇಶದ ಇಂಡಿಯನ್ನರನ್ನು ಎತ್ತಿ ಕಟ್ಟಿ ಅಮೆರಿಕಕ್ಕೆ ತೊಂದರೆ ಕೊಡಲು ಯೋಚಿಸಿದ್ದಾನೆಯೆ ಎನ್ನುವುದನ್ನು ಊಹಿಸುವುದು ಕಷ್ಟವಾಗಿತ್ತು. ಈ ರೀತಿ ಆಲೋಚನಾಪರನಾದ ಜೆಫರ್‌ಸನ್ ತಾನು ಹೊಸದಾಗಿ ಫ್ರಾನ್ಸಿನ ಸಚಿವನಾಗಿ ನೇಮಿಸಿದ್ದ ರಾಬರ್ಟ್

ಲಿವಿಂಗ್‌ಸ್ಟನ್‌ನನ್ನು ನ್ಯೂ ಆರ್ಲಿಯನ್ಸ್‌ನ ಉಪಯೋಗ ಮಾಡಿಕೊಳ್ಳಲು ಅಮೆರಿಕಕ್ಕೆ ಹಕ್ಕಿದೆ ಎಂದು ಪ್ರತಿವಾದಿಸಿ ಆ ಹಕ್ಕನ್ನು ಮನ್ನಣೆ ಮಾಡುವುದಾಗಿ ನೆಪೋಲಿಯನ್ನನ ಆಶ್ವಾಸನೆ ಪಡೆಯುವುದಲ್ಲದೇ ಪಶ್ಚಿಮ ಫ್ಲಾರಿಡಾ ಫ್ರೆಂಚರ ವಶಕ್ಕೆ ಬಂದಿದ್ದರೆ, ಆ ಪ್ರದೇಶವನ್ನು ಕೊಳ್ಳುವ ಬಗ್ಗೆ ಮಾತುಕತೆ ನಡೆಸಿ ನೆಪೋಲಿಯನ್ನನ ಅಭಿಪ್ರಾಯ ತಿಳಿದುಕೊಂಡು ಬರುವಂತೆ ಫ್ರಾನ್ಸಿಗೆ ಕಳುಹಿಸಿದನು.

ಜೆಫರ್‌ಸನ್‌ನ ಸಂಶಯಗಳು ಆಧಾರರಹಿತವಾಗಿರಲಿಲ್ಲ. ವಾಸ್ತವವಾಗಿ ಫ್ರಾನ್ಸ್ ಉತ್ತರ ಅಮೆರಿಕದಲ್ಲಿ ಪ್ರಭುತ್ವ ಸ್ಥಾಪಿಸಲು ಹವಣಿಸುತ್ತಿತ್ತು. ಆದ್ದರಿಂದ ಸ್ಪೇನಿನೊಡನೆ ಗುಪ್ತ ಸಂಧಾನ ಮಾಡಿಕೊಂಡು ಲೂಯಿಸಿಯಾನ ಪ್ರದೇಶವನ್ನು ವಾಪಸ್ಸು ಪಡೆದುಕೊಂಡಿತ್ತು. ನೆಪೋಲಿಯನ್ ಲೂಯಿಸಿಯಾನ ಪ್ರದೇಶವನ್ನು ಫ್ರೆಂಚ್ ವೆಸ್ಟ್ ಇಂಡೀಸ್ ಕಬ್ಬಿನ ತೋಟಗಳಿಗೆ ಆಹಾರ ಒದಗಿಸುವ ಕಣಜವನ್ನಾಗಿ ಮಾಡಲು ಮನಸ್ಸು ಮಾಡಿದ್ದನು. ಆದರೆ ಅದೇ ಸಮಯದಲ್ಲಿ ಫ್ರಾನ್ಸಿನ ಅಧೀನದಲ್ಲಿದ್ದ ಸಾಂಟೋ ಡೊಮಿಂಗೋ (Santo Domingo) ದ್ವೀಪ ಗುಲಾಮರ ದಂಗೆಯಿಂದಾಗಿ ಫ್ರೆಂಚರ ಕೈಬಿಟ್ಟುಹೋಗಿತ್ತು. ೧೭೯೩ರಲ್ಲಿ ಆ ದ್ವೀಪದ ಗುಲಾಮರಿಗೆ ಬಿಡುಗಡೆ ನೀಡಲಾಯಿತು. ಆದರೂ ಅವರು 'ಕರಿಯ ನೆಪೋಲಿಯನ್' ಎಂದು ಬಿರುದು ಪಡೆದ ಟೂಸ್ಸೇಂಟ್ ಲೂವೆರ್ಟ್ಯೂರ್ (Toussaint L'ouverture) ಎಂಬುವನ ನೇತೃತ್ವದಲ್ಲಿ ತಮ್ಮ ಹೋರಾಟವನ್ನು ಮುಂದುವರಿಸಿದರು. ೧೮೦೧ರ ವೇಳೆಗೆ ಸಾಂಟೋ ಡೊಮಿಂಗೋ ದ್ವೀಪ ಸಂಪೂರ್ಣವಾಗಿ ಅವರ ಕೈವಶವಾಗಿತ್ತು. ಯೂರೋಪಿನಲ್ಲಿ ಕದನ ವಿರಾಮವಾದ ಸಮಯವನ್ನು ಉಪಯೋಗಿಸಿಕೊಂಡು ಫ್ರಾನ್ಸಿನಿಂದ ನೆಪೋಲಿಯನ್ ಜನರಲ್ ಚಾರ್ಲ್ಸ್ ಲೆಕ್ಲರ್ಕ್ (Charles Leclerc) ಸೇನಾಧಿಪತ್ಯದಲ್ಲಿ ದಂಗೆಯನ್ನು ಹತ್ತಿಕ್ಕಿ ದ್ವೀಪವನ್ನು ವಶ ಮಾಡಿಕೊಳ್ಳಲು ೨೦೦೦೦ ಸೈನಿಕರನ್ನು ಕಳುಹಿಸಿದನು. ಲೆಕ್ಲರ್ಕ್‌ನ ಸೈನ್ಯಾಚರಣೆಯ ಬಗ್ಗೆ ತಿಳಿದ ಜೆಫರ್‌ಸನ್ನನು ಲೂಯಿಸಿಯಾನವನ್ನು ಅದೇ ರೀತಿ ಫ್ರೆಂಚರು ವಶಪಡಿಸಿಕೊಳ್ಳಬಹುದು ಎಂದು ಚಿಂತಿಸತೊಡಗಿದನು. ೧೮೦೩ರಲ್ಲಿ ಮತ್ತೆ ನ್ಯೂ ಆರ್ಲಿಯನ್ಸ್ ಮತ್ತು ಫ್ಲಾರಿಡಾಗಳನ್ನು ಕೊಂಡುಕೊಳ್ಳಲು ನೆಪೋಲಿಯನ್ ಜೊತೆ ಸಂಧಾನ ನಡೆಸಲು ಸಚಿವ ಲಿವಿಂಗ್‌ಸ್ಟನ್‌ನನ್ನು ಫ್ರಾನ್ಸಿಗೆ ಕಳುಹಿಸಿದನು. ನ್ಯೂ ಆರ್ಲಿಯನ್ಸ್ ಮತ್ತು ಫ್ಲಾರಿಡಾಗಳನ್ನು ಸಂಧಾನದಿಂದ ಕೊಳ್ಳಲು ಆಗದೆ ಹೋದರೆ ಯುದ್ಧ ಮಾಡಿ ಅವುಗಳನ್ನು ವಶಪಡಿಸಿಕೊಳ್ಳಲೇಬೇಕೆಂದು ಜೆಫರ್‌ಸನ್ ನಿರ್ಧರಿಸಿದನು. ಇದಕ್ಕಾಗಿ ತಾನು ದ್ವೇಷಿಸುತ್ತಿದ್ದ ಬ್ರಿಟಿಷರೊಡನೆ ಒಪ್ಪಂದ ಮಾಡಿಕೊಳ್ಳಲೂ ತಯಾರಿದ್ದನು. ನ್ಯೂ ಆರ್ಲಿಯನ್ಸ್ ನೆಪೋಲಿಯನ್ನನ ವಶವಾದ ದಿನ ನಾವು ಇಂಗ್ಲಿಷರೊಡನೆ ಮತ್ತು ಅವರ ನೌಕಾದಳದೊಡನೆ ನಿಕಟ ಸಂಬಂಧ ಮಾಡಿಕೊಳ್ಳಬೇಕಾದುದು ಅನಿವಾರ್ಯವಾಗುತ್ತದೆ ಎಂದು ಜೆಫರ್‌ಸನ್ ಜನರಿಗೆ ಮುನ್ಸೂಚನೆ ನೀಡಿದನು. ಅಕ್ಟೋಬರ್ ೧೮೦೩ರಲ್ಲಿ ಸ್ಪೇನ್ ಅನಿರೀಕ್ಷಿತವಾಗಿ ಹಿಂದೆ ಮಾಡಿಕೊಂಡ ಕರಾರಿಗೆ ವಿರುದ್ಧವಾಗಿ ನ್ಯೂ

ಆರ್ಲಿಯನ್ಸ್‌ನಲ್ಲಿ ಅಮೆರಿಕಕ್ಕೆ ಸಾಮಗ್ರಿಗಳನ್ನು ಸಂಗ್ರಹಿಸಿಡಲು ಉಗ್ರಾಣಗಳನ್ನು ಕಟ್ಟಲು ಅನುಮತಿ ಕೊಟ್ಟಿದ್ದನ್ನು ರದ್ದುಗೊಳಿಸಿತು. ಅಮೆರಿಕ ನ್ಯೂ ಆರ್ಲಿಯನ್ಸ್ ಪ್ರವೇಶಿಸುವ ಹಕ್ಕನ್ನು ಕಳೆದುಕೊಂಡಿತು. ಕೂಡಲೆ ಜೆಫರ್‌ಸನ್ ತನ್ನ ಅನುಯಾಯಿ ಹಾಗೂ ಆಪ್ತ ಸ್ನೇಹಿತನೂ ಆದ ಜೇಮ್ಸ್ ಮನ್ರೊ (James Monroe)ನನ್ನು ಪೂರ್ಣ ಅಧಿಕಾರವುಳ್ಳ ಕಾರ್ಯದರ್ಶಿಯನ್ನು ನೇಮಿಸಿ, ಅವನಿಗೆ ನ್ಯೂ ಆರ್ಲಿಯನ್ಸ್ ಮತ್ತು ಫ್ಲಾರಿಡಾಗಳನ್ನು ಕೊಳ್ಳಲು ಹತ್ತು ಮಿಲಿಯನ್ ಡಾಲರ್ ಕೊಡುವುದಾಗಿ ಅಧಿಕಾರಯುಕ್ತವಾಗಿ ಫ್ರಾನ್ಸ್ ಸರ್ಕಾರಕ್ಕೆ ತಿಳಿಸಿ ವ್ಯವಹಾರ ನಡೆಸುವಂತೆ ಸೂಚನೆ ಕೊಟ್ಟು ಪ್ಯಾರಿಸ್‌ಗೆ ಕಳುಹಿಸಿದನು. ಫ್ರಾನ್ಸ್‌ನೊಡನೆ ವ್ಯವಹಾರ ಕುದುರದೆ ಹೋದರೆ ಮನ್ರೊ ಮತ್ತು ಲಿವಿಂಗ್‌ಸ್ಟನ್ ಇಬ್ಬರೂ ಸೇರಿ ಬ್ರಿಟಿಷರೊಡನೆ ಹತ್ತಿರದ ಸಂಬಂಧಗಳನ್ನು ಬೆಳೆಸಲು ಸಂಧಾನ ನಡೆಸಲು ಜೆಫರ್‌ಸನ್ ಒಪ್ಪಿಗೆ ನೀಡಿದ್ದನು.

ಅದೃಷ್ಟವಶಾತ್ ಮನ್ರೊ ಫ್ರಾನ್ಸ್ ತಲುಪುವುದರೊಳಗೆ ಸಂದಿಗ್ಧ ಪರಿಸ್ಥಿತಿ ಬಗೆಹರಿದಿತ್ತು. ಸಾಂಟೋ ಡೊಮಿಂಗೋ ದ್ವೀಪದ ಮೇಲೆ ದಾಳಿ ಮಾಡಲು ಹೊರಟ ಜನರಲ್ ಲೆಕ್ಲರ್ಕ್‌ನ ಸೈನ್ಯ ವಿಪತ್ತಿಗೆ ಒಳಗಾಯಿತು. ಸಾಂಟೋ ಡೊಮಿಂಗೋ ದಂಗೆಯ ನಾಯಕನಾಗಿದ್ದ ಟೂಸ್ಸೇಂಟ್ ಶರಣಾಗತನಾದರೂ ಸಹ ದ್ವೀಪವಾಸಿಗಳು ಹೋರಾಟವನ್ನು ಮುಂದುವರಿಸಿದರು. ಫ್ರೆಂಚ್ ಸೈನಿಕರು 'ಹಳದಿ ಜ್ವರ' (yellow fever)ದಿಂದ ನರಳಿದರು. ಜನರಲ್ ಲೆಕ್ಲರ್ಕ್ ಹಳದಿ ಜ್ವರಕ್ಕೆ ಬಲಿಯಾದನು. ಅವನ ಸೈನಿಕರು – ಕೇವಲ ಕೆಲವರನ್ನು ಬಿಟ್ಟು – ಬಾಕಿ ಎಲ್ಲರೂ ಹಳದಿ ಜ್ವರಕ್ಕೆ ತುತ್ತಾದರು. ಈ ದುರ್ಘಟನೆ ಅಮೆರಿಕದಲ್ಲಿ ಫ್ರೆಂಚ್ ಪ್ರಭುತ್ವ ಸ್ಥಾಪಿಸಲು ಇಚ್ಛಿಸಿದ್ದ ನೆಪೋಲಿಯನ್‌ನನ್ನು ಯೋಚನೆಗೀಡುಮಾಡಿತು. ಅವನಿಗೆ ಸಾಂಟೋ ಡೊಮಿಂಗೋ ಇಲ್ಲದ ಗುಡ್ಡಗಾಡಿನ ಲೂಯಿಸಿಯಾನ ಪ್ರಾಂತ ಪ್ರಯೋಜನಕ್ಕೆ ಬಾರದಂತೆ ಕಂಡಿತು. ಏಪ್ರಿಲ್ ೧೧, ೧೮೦೩ ರಂದು ನೆಪೋಲಿಯನ್ ವಿದೇಶ ಮಂತ್ರಿ ಟೆಲಿರ್ಯಾಂಡನಿಗೆ ನ್ಯೂ ಆರ್ಲಿಯನ್ಸ್ ಮಾತ್ರವಲ್ಲದೆ ಪೂರ್ತಿ ಲೂಯಿಸಿಯಾನ ಪ್ರಾಂತವನ್ನು ಸೂಕ್ತವಾದ ಬೆಲೆಗೆ ಅಮೆರಿಕಕ್ಕೆ ಮಾರುವಂತೆ ಆಜ್ಞಾಪಿಸಿದನು. ಟೆಲಿರ್ಯಾಂಡನು ತನ್ನ ಕಛೇರಿಗೆ ಲಿವಿಂಗ್‌ಸ್ಟನ್‌ನನ್ನು ಬರಮಾಡಿಕೊಂಡು ಈ ಸುದ್ದಿಯನ್ನು ತಿಳಿಸಿದಾಗ ಲಿವಿಂಗ್‌ಸ್ಟನ್ ಗರ ಬಡಿದವನಂತೆ ಮಾತಿಲ್ಲದೆ ನಿಂತುಬಿಟ್ಟನು! ಟೆಲಿರ್ಯಾಂಡನು ಅವನನ್ನು ಎಚ್ಚರಗೊಳಿಸಿ ಪೂರ್ತಿ ಲೂಯಿಸಿಯಾನ ಪ್ರಾಂತಕ್ಕೆ ಬೆಲೆ ಕಟ್ಟುವಂತೆ ಹೇಳಿದನು. ಲಿವಿಂಗ್‌ಸ್ಟನ್‌ನು ಐದು ಮಿಲಿಯನ್ ಡಾಲರ್‌ಗಳಿಗೆ ಸಮನಾದ ಫ್ರೆಂಚ್ ಹಣವನ್ನು ಕೊಡುವುದಾಗಿ ಹೇಳಿದನು. ಟೆಲಿರ್ಯಾಂಡನು ಅದು ತೀರ ಕಡಿಮೆ, ಈ ವಿಷಯ ಕುರಿತು ಒಂದೆರಡು ದಿನಗಳು ಯೋಚಿಸಿ ಎಂದು ಲಿವಿಂಗ್‌ಸ್ಟನ್‌ಗೆ ಕಾಲಾವಕಾಶ ಕೊಟ್ಟು ಕಳುಹಿಸಿದನು. ಲಿವಿಂಗ್‌ಟನ್‌ಗೆ ಫ್ರೆಂಚರು ಪೂರ್ತಿ ಲೂಯಿಸಿಯಾನವನ್ನು ಅಮೆರಿಕಕ್ಕೆ ಮಾರಲು ಆತುರ ಪಡುತ್ತಿದ್ದಾರೆ ಎಂದು ಇನ್ನೂ ನಂಬಲು ಸಾಧ್ಯವಾಗಲಿಲ್ಲ!

ಮಾರನೆಯ ದಿನವೇ ಮಾರ್ಗನ್ ಬಂದು ಲಿವಿಂಗ್‌ಸ್ಟನ್‌ನನ್ನು ಕೂಡಿಕೊಂಡನು. ಇಬ್ಬರೂ ಲೂಯಿಸಿಯಾನ ಖರೀದಿ ಮಾಡುವ ನಿರ್ಧಾರದ ಹೊಣೆಯನ್ನು ಹಂಚಿಕೊಂಡರು. ಅಷ್ಟು ದೊಡ್ಡ ಪ್ರಾಂತವನ್ನು ಕೊಳ್ಳುವ ಬಗ್ಗೆ ಜೆಫರ್‌ಸನ್ ಲಿವಿಂಗ್‌ಸ್ಟನ್‌ಗೆ ಯಾವ ಸಲಹೆಯನ್ನೂ ಕೊಟ್ಟಿರಲಿಲ್ಲ. ಕಾಗದ ಬರೆದು ಸಲಹೆ ಪಡೆಯಲು ಬಹಳ ಸಮಯಹಿಡಿಯುತ್ತದೆ. ಈಗ ಇಬ್ಬರೂ ಒಮ್ಮತದಿಂದ ಲೂಯಿಸಿಯಾನ ಖರೀದಿಸಲು ದೃಢ ಮನಸ್ಸು ಮಾಡಿದರು. ಮೇ ತಿಂಗಳ ಮೊದಲಲ್ಲಿ ಇಬ್ಬರೂ ಕೂಡಿ೬೦ ಮಿಲಿಯನ್ ಫ್ರಾಂಕ್ (೧೫ ಮಿಲಿಯನ್ ಡಾಲರ್) ಗಳಿಗೆ ಫ್ರೆಂಚ್ ಸರ್ಕಾರ ಲೂಯಿಸಿಯಾನ ಪ್ರಾಂತವನ್ನು ಅಮೆರಿಕಕ್ಕೆ ಮಾರುವ ಕರಾರು ಪತ್ರಕ್ಕೆ ರುಜು ಮಾಡಿದರು. ಲೂಯಿಸಿಯಾನ ಪ್ರಾಂತವನ್ನು ಅನಿರೀಕ್ಷಿತವಾಗಿ ಮಾರಲು ನೆಪೋಲಿಯನ್ ನಿರ್ಧರಿಸಿದ್ದು ಅಮೆರಿಕನ್ನರಿಗೆ ಒಂದು ರೀತಿಯ ಅನುಮಾನ ಉಂಟಾಗಿತ್ತು. ಆದರೆ ಲೂಯಿಸಿಯಾನ ಖರೀದಿಯನ್ನು ಕಾಂಗ್ರೆಸ್ ಅಂಗೀಕರಿಸುವುದರಲ್ಲಿ ಯಾವ ಅನುಮಾನವೂ ಇರಲಿಲ್ಲ. ಆದರೆ ಸರ್ಕಾರಕ್ಕೆ ಹೊಸ ಪ್ರದೇಶವನ್ನು ಸೇರಿಸಿಕೊಳ್ಳಲು ರಾಜ್ಯಾಂಗದ ಪ್ರಕಾರ ಅಧಿಕಾರವಿದೆಯೇ? ಹಾಗೆಯೇ ಕರಾರಿನ ಪ್ರಕಾರ ಲೂಯಿಸಿಯಾನ ಪ್ರಾಂತದ ೫೦೦೦೦ ಜನರಿಗೆ ಅಮೆರಿಕನ್ ಪೌರತ್ವವನ್ನು ನೀಡಲು ಕಾರ್ಯಾಂಗಕ್ಕೆ (Executive) ರಾಜ್ಯಾಂಗ ಅಧಿಕಾರ ನೀಡಿದೆಯೇ? ಎನ್ನುವ ವಿಷಯಗಳು ಜೆಫರ್‌ಸನ್‌ನನ್ನು ಯೋಚನೆಗೀಡುಮಾಡಿದವು. ಅವನ ಸಲಹೆಗಾರರು ರಾಜ್ಯಾಂಗ ತಿದ್ದುಪಡಿ ೩/೪ ಸಂಸ್ಥಾನಗಳ ಅನುಮೋದನೆ ಪಡೆದು ಅಧಿಕೃತವಾಗಲು ಬಹಳ ಸಮಯ ಹಿಡಿಯುತ್ತದೆ, ಅಲ್ಲಿಯವರೆಗೆ ಕರಾರನ್ನು ಮುಂದೆ ಹಾಕುವುದು ಅಪಾಯಕಾರಿಯಾದುದು ಎಂದು ಎಚ್ಚರಿಕೆ ನೀಡಿದರು. ಆದ್ದರಿಂದ ದೇಶದ ಹಿತದೃಷ್ಟಿಯಿಂದ ಜೆಫರ್‌ಸನ್ ಕರಾರನ್ನು ಒಪ್ಪಿಕೊಂಡನು. ಅದೇ ರೀತಿ ಕಾಂಗ್ರೆಸ್ ತಾತ್ವಿಕ ಸೂಕ್ಷ್ಮತೆಗಳನ್ನು ಬದಿಗೊತ್ತಿ ಕರಾರನ್ನು ಅಂಗೀಕರಿಸಿತು.

ಲೂಯಿಸಿಯಾನ ಪ್ರಾಂತವನ್ನು ಖರೀದಿಸಿದ್ದು ಫೆಡರಲಿಸ್ಟರ ಪ್ರಭಾವ ಮತ್ತಷ್ಟು ಕ್ಷೀಣಿಸಲು ಕಾರಣವಾಯಿತು. ಪಶ್ಚಿಮ ಮತ್ತು ದಕ್ಷಿಣದ ಸಂಸ್ಥಾನಗಳು ಸಂಪೂರ್ಣವಾಗಿ ಜೆಫರ್‌ಸನ್ ಪರವಾಗಿದ್ದವು. ಉತ್ತರದ ಸಂಸ್ಥಾನಗಳು ಕೂಡ ಅವನನ್ನು ಬೆಂಬಲಿಸುವ ಸಾಧ್ಯತೆ ಹೆಚ್ಚುತ್ತಲಿತ್ತು. ದೇಶದ ವ್ಯವಹಾರಗಳಲ್ಲಿ ನ್ಯೂ ಇಂಗ್ಲೆಂಡಿನ ರಾಜಕಾರಣಿಗಳ ಪ್ರಭಾವ ಕ್ಷೀಣಿಸಿತ್ತು. ಅನೇಕ ಉಗ್ರವಾದಿ ಫೆಡರಲಿಸ್ಟರು ನ್ಯೂ ಇಂಗ್ಲೆಂಡನ್ನು ಸಂಯುಕ್ತ ಸಂಸ್ಥಾನಗಳಿಂದ ಬೇರ್ಪಡಿಸಲು ಆಲೋಚಿಸುತ್ತಿದ್ದರು. ೧೮೦೪ರಲ್ಲಿ ಮಾಜಿ ವಿದೇಶಾಂಗ ಸೆಕ್ರೆಟರಿ ಟಿಮೊತಿ ಪಿಕರಿಂಗ್ (Timothy Pickering) ನಾಯಕತ್ವದಲ್ಲಿ ಎಸ್ಸೆಕ್ಸ್ ಹುಂಟ (Essex Junta) ಎನ್ನುವ ಗುಂಪು ರಚನೆಗೊಂಡು ಉತ್ತರ ಸಂಸ್ಥಾನಗಳನ್ನು ಸಂಯುಕ್ತ ಸಂಸ್ಥಾನಗಳಿಂದ ಬೇರ್ಪಡಿಸಿ ಉತ್ತರ ಸಂಸ್ಥಾನಗಳ ಕೂಟವನ್ನು (Northern Confederacy) ಸ್ಥಾಪಿಸಲು ಪಿತೂರಿ ನಡೆಸಿದರು. ಅವರು ಮೊದಲು ನ್ಯೂಯಾರ್ಕ್ ಸಂಸ್ಥಾನವನ್ನು ವಶಪಡಿಸಿಕೊಂಡು ನಂತರ ಅಮೆರಿಕದ ಈಶಾನ್ಯ ಸಂಸ್ಥಾನಗಳನ್ನು ಸಂಯುಕ್ತ ಸಂಸ್ಥಾನ

ಗಳಿಂದ ಬೇರ್ಪಡಿಸುವ ಯೋಜನೆ ಹಾಕಿದ್ದರು. ಆದರೆ ಈ ಯೋಜನೆಗೆ ಅವರ ಪಕ್ಷದವರೆ ವಿರೋಧಿಸಿದ್ದರಿಂದ ಆ ಯೋಜನೆಯನ್ನು ಬಿಟ್ಟು ಬೇರೊಂದು ಉಪಾಯವನ್ನು ಹೂಡಿದರು. ಈ ಉಪಾಯದಂತೆ ನ್ಯೂಯಾರ್ಕ್ ಸಂಸ್ಥಾನ ಗವರ್ನರ್ ಚುನಾವಣೆಯಲ್ಲಿ ರಿಪಬ್ಲಿಕನ್ ಅಭ್ಯರ್ಥಿಯನ್ನು ಎದುರಿಸಿ ಚುನಾವಣೆಗೆ ನಿಲ್ಲುವಂತೆ ಉಪಾಧ್ಯಕ್ಷನಾಗಿದ್ದ ಏರಾನ್ ಬರ್‌ನನ್ನು ಹುರಿದುಂಬಿಸಿದರು. ಬರ್ ಇವರು ತೋರಿಸಿದ ಆಮಿಷಕ್ಕೆ ಒಳಗಾಗಿ ಚುನಾವಣೆಗೆ ನಿಂತನು. ಆದರೆ ಚುನಾವಣೆಯಲ್ಲಿ ಬರ್ ಸೋತುಹೋದನು. ಆ ಕಾರಣದಿಂದ ಪಿತೂರಿಗಾರರ ಯೋಜನೆ ಅವಸಾನ ಹೊಂದಿತು.

ಈ ಘಟನೆಗಳು ಒಂದು ದುರಂತಕ್ಕೆ ಕಾರಣವಾದವು. ಚುನಾವಣೆಯಲ್ಲಿ ಹ್ಯಾಮಿಲ್‌ಟನ್ ಬರ್‌ನ ವಿರುದ್ಧ ಅತ್ಯಂತ ಕಟುವಾದ ಟೀಕೆಗಳಿಂದ ಕೂಡಿದ ಪ್ರಚಾರ ನಡೆಸಿದನು. ಚುನಾವಣೆ ಮುಗಿದ ಮೇಲೂ ಹ್ಯಾಮಿಲ್‌ಟನ್ ತನ್ನ ಪ್ರಚಾರ ನಿಲ್ಲಿಸದೆ ಬರ್‌ನ ಚಾರಿತ್ರ್ಯವನ್ನು ಹೀಯಾಳಿಸಿ ಮಾತನಾಡತೊಡಗಿದನು. ಹ್ಯಾಮಿಲ್‌ಟನ್‌ನ ಟೀಕೆಗಳು ಆಧಾರರಹಿತವಾಗಿವೆ ಎಂದು ತಳ್ಳಿ ಹಾಕುವಂತಿರಲಿಲ್ಲ. ಬರ್ ನಿಜವಾಗಿ ಅನೇಕ ರಾಜಕೀಯ ಮತ್ತು ಲೈಂಗಿಕ ಅಪಚಾರಗಳನ್ನು ಮಾಡಿದ್ದ. ಟೀಕೆಗಳಿಂದ ಉದ್ರೇಕ ಗೊಂಡ ಬರ್ ಹ್ಯಾಮಿಲ್‌ಟನ್‌ನನ್ನು ದ್ವಂದ್ವ ಯುದ್ಧಕ್ಕೆ (duel) ಬರುವಂತೆ ಸವಾಲು ಹಾಕಿದನು. ಜುಲೈ ೧೧, ೧೮೦೪ರಲ್ಲಿ ನ್ಯೂಜರ್ಸಿಯ ವೀಹಾಕೆನ್ (Weehawken) ಎನ್ನುವ ಸ್ಥಳದಲ್ಲಿ ಇಬ್ಬರೂ ಪಿಸ್ತೂಲುಗಳನ್ನು ಹಿಡಿದು ಒಬ್ಬರನ್ನೊಬ್ಬರು ಎದುರಿಸಿದರು. ಹ್ಯಾಮಿಲ್‌ಟನ್ ತಿರಸ್ಕಾರಭಾವದಿಂದ ಗುಂಡು ಹಾರಿಸಲು ನಿರಾಕರಿಸಿದನು. ಆದರೆ ಬರ್ ಗುರಿಯಿಟ್ಟು ಗುಂಡು ಹಾರಿಸಿ ಹ್ಯಾಮಿಲ್‌ಟನ್‌ನನ್ನು ಮರಣಾಂತಿಕವಾಗಿ ಗಾಯ ಗೊಳಿಸಿದನು. ಹೀಗೆ ತೊಡಕಿನ ವ್ಯಕ್ತಿಯಾದರೂ ಮಹಾ ಮೇಧಾವಿ ಹ್ಯಾಮಿಲ್‌ಟನ್‌ನ ಜೀವನ ದುರಂತದಲ್ಲಿ ಕೊನೆಗೊಂಡಿತು.

ಲೂಯಿಸಿಯಾನ ಪರಿಶೋಧನೆ

ರಾಜಕೀಯದಲ್ಲಿ ಅಧಿಕಾರಸ್ಥಾನಗಳನ್ನು ಗಿಟ್ಟಿಸಲು ಅಸಮರ್ಥರಾಗಿದ್ದ ಅಸಂತುಷ್ಟ ರಾಜಕಾರಣಿಗಳಾದ ಪಿಕರಿಂಗ್ ಮತ್ತು ಅವನ ಪಂಗಡದವರು ಸಂಯುಕ್ತಸಂಸ್ಥಾನದಿಂದ ಹೊರಬಂದು ಹೊಸದೊಂದು ಸಂಸ್ಥಾನವನ್ನು ಸ್ಥಾಪಿಸುವ ಕನಸು ಕಾಣುತ್ತಿರುವ ಸಮಯದಲ್ಲಿ ಜೆಫರ್‌ಸನ್ ತಾನು ಹೊಸದಾಗಿ ಪಡೆದ ಲೂಯಿಸಿಯಾನ ಮತ್ತು ಅದರಾಚೆಯ ಪ್ರಾಂತಗಳ ಪರಿಶೋಧನೆ ಮಾಡುವುದರಲ್ಲಿ ನಿರತನಾಗಿದ್ದನು. ೧೮೦೩ನೆಯ ಇಸವಿಯ ಮೊದಲ ದಿನಗಳಲ್ಲಿ ಅವನು ಕಾಂಗ್ರೆಸ್‌ನಿಂದ ೨೫೦೦ ಡಾಲರ್‌ಗಳನ್ನು ಮಂಜೂರು ಮಾಡಿಸಿಕೊಂಡು ಹಾಗೆಯೆ ಫ್ರೆಂಚರಿಂದ ರಹದಾರಿ ಪಡೆದು ಲೂಯಿಸಿಯಾನ ಮತ್ತು ಅದರಾಚೆಯ ಪ್ರಾಂತಗಳನ್ನು ಪರಿಶೋಧನೆ ಮಾಡಲು ನುರಿತ ಸೈನಿಕನೂ ತನ್ನ ಖಾಸಾ ಕಾರ್ಯದರ್ಶಿ ಆಗಿದ್ದ ಮೆರ್ರಿವೆದರ್ ಲುವಿಸ್ (Merriwether Lewis) ಎಂಬ

ವರ್ಜೀನಿಯ ಯುವಕನನ್ನು ಪರಿಶೋಧನಾತಂಡದ ನಾಯಕನನ್ನಾಗಿ ನೇಮಿಸಿಕೊಂಡನು. ಲುವಿಸ್ ತನ್ನ ಸಹಚರನಾಗಿ ಇಂಡಿಯನ್ನರೊಡನೆ ನಡೆದ ಯುದ್ಧಗಳಲ್ಲಿ ಪರಿಣತಿ ಪಡೆದಿದ್ದ ವಿಲಿಯಂ ಕ್ಲಾರ್ಕ್ (William Clark)ನನ್ನು ಆಯ್ದುಕೊಂಡನು.

೧೮೦೩-೦೪ರಲ್ಲಿ ಲುವಿಸ್ ಮತ್ತು ಕ್ಲಾರ್ಕ್‌ರು ಸೆಂಟ್ ಲೂಯಿಸ್ (St. Louis) ಹತ್ತಿರ ಪರಿಶೋಧನೆ ಕಾರ್ಯದಲ್ಲಿ ಅನುಭವವಿದ್ದ ೪೮ ಜನರ ಗುಂಪನ್ನು ಸೇರಿಸಿ ತರಬೇತಿ ಕೊಟ್ಟರು. ತರಬೇತಿ ಮುಗಿದ ನಂತರ ಅವರು ಎರಡು ದೋಣಿಗಳಲ್ಲಿ – ಒಂದು ಚಪ್ಪಟೆ ತಳದ ಮೇಲ್ಛಾವಣಿ ಇರುವ ದೋಣಿ, ಇನ್ನೊಂದು ದೊಡ್ಡ ಮರದ ದಿಮ್ಮಿಯನ್ನು ಕೊರೆದು ಮಾಡಿದ ದೋಣಿ – ಹೊರಟು ಮಿಸ್ಸೂರಿ ನದಿ (Missouri river) ಯ ಗುಂಟ ಸಾಗಿ ಕೆಲವು ತಿಂಗಳು ಪ್ರಯಾಣ ಮಾಡಿ ಈಗಿನ ಉತ್ತರ ಡಕೋಟ (North Dakota) ಪ್ರಾಂತವನ್ನು ಸೇರಿ ಅಲ್ಲಿ ಒಂದು ನಿಲ್ದಾಣವನ್ನು ಸ್ಥಾಪಿಸಿ ಚಳಿಗಾಲವನ್ನು ಅಲ್ಲೇ ಕಳೆದರು. ಏಪ್ರಿಲ್ ೧೮೦೫ರಲ್ಲಿ ಲುವಿಸ್ ಮತ್ತು ಕ್ಲಾರ್ಕ್ ತಮ್ಮ ಪ್ರಯಾಣದಲ್ಲಿ ಕಲೆಹಾಕಿದ ಕೌತುಕದ ವಸ್ತುಗಳನ್ನು ಒಂಬತ್ತು ಪೆಟ್ಟಿಗೆಗಳಲ್ಲಿ ಜೆಫರ್‌ಸನ್‌ಗೆ ಕಳುಹಿಸಿ ಕೊಟ್ಟು ತಮ್ಮ ಪ್ರಯಾಣವನ್ನು ಮುಂದುವರಿಸಿ ಪರ್ವತ ಪ್ರದೇಶದ ಪರಿಶೋಧನೆಗೆ ಹೊರಟರು. (ಈ ಪ್ರಯಾಣದಲ್ಲಿ ಸಕಗವೆ (Sacagawea) ಹೆಸರಿನ ಷೊಷೋನ್ (Shoshone) ಇಂಡಿಯನ್ ಮಹಿಳೆ ಮತ್ತು ಅವಳ ಫ್ರೆಂಚ್-ಕೆನಡಿಯನ್ ಗಂಡ ಮಾರ್ಗದರ್ಶಿಗಳಾಗಿದ್ದರು.) ಹೀಗೆ ಮುಂದುವರಿದು ಮಿಸ್ಸೂರಿ ಮಹಾಜಲಪಾತವನ್ನು ದಾಟಿ ಭೂಖಂಡ ಇಬ್ಭಾಗವಾಗುವ ಸ್ಥಳ (Continental divide) ದ ಮೇಲಾಸಿ ತಿಳಿನೀರು (Clearwater) ಮತ್ತು ಕೊಲಂಬಿಯ ನದಿಗಳ ಮಾರ್ಗವಾಗಿ ಶಾಂತಸಾಗರ ಪ್ರದೇಶವನ್ನು ತಲುಪಿದರು. ಕೊಲಂಬಿಯ ನದಿಯ ಉಗಮಸ್ಥಾನದಲ್ಲಿ ಅವರು ಕ್ಲಾಟ್‌ಸಾಪ್ (Fort Clatsop) ಎಂಬ ಚಿಕ್ಕ ಕೋಟೆಯನ್ನು ಕಟ್ಟಿ ಚಳಿಗಾಲವನ್ನು ಅಲ್ಲೇ ಕಳೆದರು. ಆ ನಂತರ ಪುನಃ ಬಹುಭಾಗ ಅದೇ ಮಾರ್ಗದಲ್ಲಿ ಹಿಂತಿರುಗಿ ಪೀತಶಿಲಾ (yellowstone) ಪ್ರದೇಶವನ್ನು ಹಾದು ಸೆಪ್ಟೆಂಬರ್ ೨೩, ೧೮೦೬ರಲ್ಲಿ ಸುಮಾರು ಎರಡೂವರೆ ವರ್ಷಗಳ ಮೇಲೆ ಮತ್ತೆ ಸೆಂಟ್ ಲೂಯಿಸ್‌ಗೆ ಬಂದು ಸೇರಿದರು.

ಪರಿಶೋಧನೆ ಮುಗಿಸಿ ವಾಪಸ್ಸು ಬಂದ ಲುವಿಸ್ ಮತ್ತು ಕ್ಲಾರ್ಕ್ ತಂಡದವರನ್ನು ದೇಶ ಸಂತೋಷದಿಂದ ಸ್ವಾಗತಿಸಿ ಅಭಿನಂದಿಸಿತು. ಪರಿಶೋಧನೆ ತಂಡದವರು ರಾಕಿ ಪರ್ವತಶ್ರೇಣಿಗಳನ್ನು ದಾಟಲು ಅನೇಕ ದಾರಿಗಳನ್ನು ಕಂಡುಹಿಡಿದುದೇ ಅಲ್ಲದೆ ಅವರು ಸಂಧಿಸಿದ ಅನೇಕ ಇಂಡಿಯನ್ ಬುಡಕಟ್ಟುಗಳೊಡನೆ ಸ್ನೇಹ ಬೆಳಸಿದರು. ಅವರು ಪರಿಶೋಧಿಸಿದ ಪ್ರದೇಶದ ಪ್ರಕೃತಿ ಸಂಪತ್ತಿನ ಉಪಯುಕ್ತವಾದ ಅಂಕಿ-ಅಂಶಗಳನ್ನು, ಕುತೂಹಲಕಾರಿ ವಿವರಣೆಗಳನ್ನು ಸಂಗ್ರಹಿಸಿ ಟಿಪ್ಪಣಿ ಬರೆದಿದ್ದರು ಮತ್ತು ಕರಾರುವಾಕ್ಕಾದ ನಕ್ಷೆಯನ್ನು ತಯಾರಿಸಿದ್ದರು. ಅವೆಲ್ಲವನ್ನೂ ಮುದ್ರಿಸಿ ಪ್ರಕಟಿಸಿದರು. ಈ ಪ್ರಕಟಣೆ ವಿಜ್ಞಾನಿಗಳಿಗೆ, ವಿದ್ಯಾರ್ಥಿಗಳಿಗೆ ಮತ್ತು ಪರಿಶೋಧಕರಿಗೆ ಆಧಾರಗ್ರಂಥವಾಯಿತು.

ಜೆಫರ್‌ಸನ್ ರೂಪಿಸಿದ ಪ್ರಜಾಪ್ರಭುತ್ವ

ಲೂಯಿಸಿಯಾನ ಪ್ರಾಂತವನ್ನು ಕೊಂಡಿದ್ದು ಜೆಫರ್‌ಸನ್ ಹುಟ್ಟುಹಾಕಿದ ರಿಪಬ್ಲಿಕನ್ ಪಕ್ಷದ ರಚನೆಯನ್ನು ಮತ್ತು 'ಜೆಫರ್‌ಸನ್‌ನ ಪ್ರಜಾಪ್ರಭುತ್ವ' ಎನ್ನುವ ರಾಜಕೀಯ ತತ್ವಗಳನ್ನು ಪೂರ್ಣಗೊಳಿಸಿತು. ಅದು ದೇಶದ ಎಲ್ಲಾ ಕಡೆ ಫೆಡರಲಿಸಮ್ ಕ್ಷೀಣಿಸಲು ಕಾರಣವಾಯಿತು. ಈ ಅದ್ಭುತ ಸಾಧನೆ ಹೇಗೆ ಸಾಧ್ಯವಾಯಿತು? ಜೆಫರ್‌ಸನ್‌ನ ಯಶಸ್ಸಿಗೆ ಅವನ ವ್ಯಕ್ತಿತ್ವ ಬಹುಮಟ್ಟಿಗೆ ಕಾರಣವಾಗಿತ್ತು. ಪ್ರಜಾಪ್ರಭುತ್ವವನ್ನು ಬೆಳಸುವುದರಲ್ಲಿ ಅವನ ಮನೋಭಾವ ವಾಷಿಂಗ್‌ಟನ್ ಮತ್ತು ಆ್ಯಂಡ್ರೂ ಜಾಕ್‌ಸನ್ (Andrew Jackson) ನಡುವಣ ಮನೋಭಾವವನ್ನು ಹೋಲುತ್ತಿತ್ತು. ಅದು ಆ ಕಾಲಕ್ಕೆ ತಕ್ಕಂಥ ಮನೋವೃತ್ತಿಯಾಗಿತ್ತು. ವಸಾಹತುಗಳ ಕಾಲದಲ್ಲಿ ಜನರು ಪ್ರಜಾಪ್ರಭುತ್ವವನ್ನು ಪಾಲಿಸಿದ್ದರೂ ಅದರಲ್ಲಿ ಅವರಿಗೆ ಸಂಪೂರ್ಣ ನಂಬಿಕೆ ಇರಲಿಲ್ಲ. ಇಂಥ ಅನಿಶ್ಚಯ ರಾಜಕೀಯ ಪರಿಸ್ಥಿತಿಯಿಂದ ಪೂರ್ಣ ಪ್ರಜಾಪ್ರಭುತ್ವದ ಉಗಮ, ಜೆಫರ್‌ಸನ್‌ನಂತಹ ಉದಾರ ಮನೋಭಾವದವನಾದರೂ ಹಳೆಯ ರೈತ ಸಂಪ್ರದಾಯಗಳನ್ನು ಮತ್ತು ಧ್ಯೇಯವನ್ನು ಮೈಗೂಡಿಸಿಕೊಂಡ ಬಹುಸಂಖ್ಯಾತರ ಆಳ್ವಿಕೆಯನ್ನು ದೃಢಪಡಿಸುವ ನಾಯಕನ ಬರವನ್ನು ಕಾಯುತ್ತಿತ್ತು.

ಪ್ರಜಾಪ್ರಭುತ್ವವಾದಿ (Democrat) ಯಾದ ನಾಯಕನು ಸುಭದ್ರವಾದ ಸರ್ಕಾರವನ್ನು ಸ್ಥಾಪಿಸಿ, ದೇಶವನ್ನು ಸಮರ್ಥವಾದ ಆಡಳಿತದ ಮೂಲಕ ಸಂಪದ್ಭರಿತವಾಗಿ ಮಾಡಬಲ್ಲನೆಂದು ಜೆಫರ್‌ಸನ್ ಸಾಬೀತುಗೊಳಿಸಿದನು. ಅವನು ಆಡಳಿತಕ್ಕೆ ಹೋಲಿಸಿದರೆ ೧೭೯೦ರ ಫೆಡರಲಿಸ್ಟರ ಆಳ್ವಿಕೆ ಸ್ವಾರ್ಥಪರತೆ ಮೂಢತನದಿಂದ ಕೂಡಿದ ದಬ್ಬಾಳಿಕೆಯಾಗಿತ್ತು ಎನ್ನಬಹುದು. ಫೆಡರಲಿಸ್ಟರು ಉದಾರತತ್ವದ ಪಕ್ಷ (Liberal party)ದ ಸಮತಾವಾದಿ ಆಡಳಿತ (egalitarian regime) ಸಮಾಜವನ್ನು ಬುಡಮೇಲು ಮಾಡಿ, ಫ್ರಾನ್ಸ್‌ನಲ್ಲಿ ನಡೆದ ಮಹಾಕ್ರಾಂತಿ ಮತ್ತು ಆ ಕ್ರಾಂತಿಯಿಂದ ಅಧಿಕಾರಕ್ಕೆ ಬಂದ ಉಗ್ರವಾದಿಗಳು ಹರಿಸಿದ ರಕ್ತದ ಹೊಳೆ ಅಮೆರಿಕದಲ್ಲಿ ಆಗಬಹುದೆಂದು ನಂಬಿದ್ದರು. ಫ್ರಾನ್ಸಿನೊಡನೆ ಸ್ನೇಹ ಬೆಳೆಸಿಕೊಂಡ ಮತ್ತು ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವ ತತ್ವಗಳಲ್ಲಿ ನಂಬಿಕೆಯುಳ್ಳ ಜೆಫರ್‌ಸನ್‌ನ ಅನುಯಾಯಿಗಳು ಅಮೆರಿಕದಲ್ಲಿ ಫ್ರೆಂಚ್ ಮಾದರಿಯ ಸರ್ಕಾರವನ್ನು ಸ್ಥಾಪಿಸಬಹುದು ಎಂದು ಜನರಲ್ಲಿ ಫೆಡರಲಿಸ್ಟರು ಅನುಮಾನ ಹುಟ್ಟಿಸಿದ್ದರು.

ಜೆಫರ್‌ಸನ್ ತನ್ನ ಸಮರ್ಥ ಆಡಳಿತದಿಂದಾಗಿ ಜನರ ಮನಸ್ಸಿನಿಂದ ಅರಾಜಕತೆಯ ಭಯವನ್ನು ತೊಡೆದುಹಾಕಿದನು. ಜನರು ಜೆಫರ್‌ಸನ್‌ನ ವ್ಯಕ್ತಿತ್ವವನ್ನು ಕ್ರಮೇಣ ಅರಿತುಕೊಂಡು ಅವನು ಫೆಡರಲಿಸ್ಟರು ಹೇಳುವಂತೆ ಕ್ರಾಂತಿಕಾರಿ ಅಲ್ಲ; ಅವನ ಅಭ್ಯುದಯವನ್ನು ಸಹಿಸದ ಕೆಲವರು ಆಪಾದಿಸುವಂತೆ ಸರ್ವಾಧಿಕಾರಿಯೂ ಅಲ್ಲ

ಎನ್ನುವುದನ್ನು ಮನಗಂಡರು. ಹ್ಯಾಮಿಲ್‌ಟನ್ನನ ಅನೇಕ ಆರ್ಥಿಕ ಯೋಜನೆಗಳನ್ನು ಮುಂದುವರಿಸಿಕೊಂಡು ಹೋಗಿ ತಾನು ವೈರ ಸಾಧಿಸುವ ಸಣ್ಣಬುದ್ಧಿಯವನಲ್ಲ ಎಂದು ಜೆಫರ್‌ಸನ್ ಸಾಬೀತುಗೊಳಿಸಿದನು. ಅವನು ಸಹಜ ಪ್ರಜಾಪ್ರಭುತ್ವವಾದಿ ಎನ್ನುವುದಕ್ಕೆ ಯಾವಾಗಲೂ ಬಹುಸಂಖ್ಯಾತರ ಅಭಿಪ್ರಾಯಗಳನ್ನು ತನ್ನ ಸ್ವಂತ ಅಭಿಪ್ರಾಯಗಳಿಂದ ಬೇರ್ಪಡಿಸಿ ಅವರ ಅಭಿಪ್ರಾಯಗಳಿಗೆ ಆದ್ಯತೆ ನೀಡುತ್ತಿದ್ದನು. ಜೆಫರ್‌ಸನ್‌ನ ಆಡಳಿತಕಾಲದಲ್ಲಿ ದೇಶದಲ್ಲಿ ಸುಭಿಕ್ಷ ನೆಲಸಿ, ಸಂಪತ್ತು ಅಭಿವೃದ್ಧಿಗೊಂಡಿತು. ಜೆಫರ್‌ಸನ್ ರೈತರ ಹಿತೈಷಿಯಾಗಿದ್ದನು. ಆದರೆ ವ್ಯಾಪಾರ ವಾಣಿಜ್ಯಗಳನ್ನು ಕಡೆಗಣಿಸಲಿಲ್ಲ. ವೃದ್ಧಿಗೊಳ್ಳುತ್ತಿದ್ದ ದೇಶದ ಸಂಪತ್ತನ್ನು ವ್ಯಾಪರಿವರ್ಗ ಉಪಯೋಗಿಸಿಕೊಂಡು ಬೆಳೆಯಿತು. ಜೆಫರ್‌ಸನ್ ಪಕ್ಷರಾಜಕೀಯವನ್ನು ಮೀರಿ ಎಲ್ಲ ಪ್ರಜೆಗಳ ಅಧ್ಯಕ್ಷನಾಗಿ ಎಲ್ಲ ಪಕ್ಷದವರ ಬೆಂಬಲ ಗಳಿಸಲು ಪ್ರಯತ್ನಿಸಿದನು.

ಫೆಡರಲಿಸ್ಟರು ದೇಶ ಸಮೃದ್ಧವಾಗಲು ಮತ್ತು ಸಮರ್ಥವಾದ ಸರ್ಕಾರ ಬೇಕಿದ್ದರೆ ಪ್ರಜೆಗಳು ಹೆಚ್ಚಿನ ತೆರಿಗೆ ಕೊಡಬೇಕಾಗುತ್ತದೆ ಮತ್ತು ವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸಬೇಕಾಗುತ್ತದೆ ಎಂದು ತಮ್ಮ ರಾಜಕೀಯ ತತ್ತ್ವವನ್ನು ಪ್ರತಿಪಾದಿಸಿದ್ದರು. ಜೆಫರ್‌ಸನ್ ಆಡಳಿತದಲ್ಲಿ ಹೆಚ್ಚಿನ ತೆರಿಗೆ ಇಲ್ಲದೆ ಮತ್ತು ವ್ಯಕ್ತಿಸ್ವಾತಂತ್ರ್ಯವನ್ನು ಕುಗ್ಗಿಸದೆ ಸಮರ್ಥ ಸರ್ಕಾರದ ಮೂಲಕ ವ್ಯಕ್ತಿಸ್ವಾತಂತ್ರ್ಯವನ್ನು ರಕ್ಷಿಸಿ ದೇಶದ ಸಂಪತ್ತನ್ನು ಹೆಚ್ಚಿಸಲಾಯಿತು.

ಜೆಫರ್‌ಸನ್‌ನ ವಿದೇಶಾಂಗ ನೀತಿ

ಜೆಫರ್‌ಸನ್ ತನ್ನ ಅಧ್ಯಕ್ಷತೆಯ ಎರಡನೆಯ ಅವಧಿಯನ್ನು ಅದುವರೆಗೆ ತಾನು ಸಾಧಿಸಿದ್ದರ ಬಗ್ಗೆ ಹೆಮ್ಮೆ, ಭವಿಷ್ಯದ ಬಗ್ಗೆ ಭರವಸೆ ಮತ್ತು ಜನರ ಸಾರ್ವತ್ರಿಕ ಬೆಂಬಲಗಳಿಂದ ಉಂಟಾದ ಆತ್ಮವಿಶ್ವಾಸ ಮತ್ತು ಉತ್ಸಾಹದಿಂದ ಆರಂಭಿಸಿದನು. ಆದರೆ ಸ್ವಲ್ಪ ಕಾಲದಲ್ಲಿಯೆ ಅವನು ಸ್ವದೇಶ ಮತ್ತು ಪರದೇಶಗಳಲ್ಲಿ ಕಷ್ಟಗಳನ್ನು ಎದುರಿಸ ಬೇಕಾಯಿತು. ಸ್ವದೇಶದಲ್ಲಿ ಅವನ ಕಷ್ಟಗಳು ಪ್ರಾರಂಭವಾಗಿದ್ದು ಅವನ ರಿಪಬ್ಲಿಕನ್ ಪಕ್ಷದಿಂದಲೆ. ಫೆಡರಲಿಸ್ಟರು ರಾಜಕೀಯದಲ್ಲಿ ಮೂಲೆಗುಂಪಾದ ಮೇಲೆ ರಿಪಬ್ಲಿಕನ್ ಪಕ್ಷಕ್ಕೆ ವಿರೋಧವೇ ಇಲ್ಲದಂತಾಯ್ತು. ವಿರೋಧಪಕ್ಷವಿಲ್ಲದೆ ರಿಪಬ್ಲಿಕನ್ ಪಕ್ಷದಲ್ಲಿ ಒಗ್ಗಟ್ಟು ಕಡಿಮೆಯಾಗಿ ಅಶಿಸ್ತು ತಲೆ ಎತ್ತಿತು. ಅದೇ ಸಮಯದಲ್ಲಿ ಯೂರೋಪಿನಲ್ಲಿ ನೆಪೋಲಿಯನ್ನನು ಪುನಃ ಅತಿಕ್ರಮಣದ ಬೆದರಿಕೆ ಹಬ್ಬಿಸಿದ್ದು, ಯಾವ ರಾಷ್ಟ್ರದೊಡನೆಯೂ ವಿಶಿಷ್ಟ ಸಂಬಂಧ ಬೆಳೆಸದೆ ತಟಸ್ಥವಾಗಿದ್ದ ಅಮೆರಿಕ ಹೊಸ ಸಮಸ್ಯೆಗಳ ಕಗ್ಗಂಟಿನಲ್ಲಿ ಸಿಕ್ಕಿಕೊಳ್ಳುವಂತೆ ಮಾಡಿತು.

ಜೆಫರ್‌ಸನ್‌ನ ಸ್ವದೇಶ ಸಮಸ್ಯೆಗಳು ಅಷ್ಟೇನೂ ಆಪತ್ಕಾರಕವಲ್ಲದಿದ್ದರೂ ಉಪದ್ರಕಾರಿಗಳಾಗಿದ್ದವು. ಆ ಸಮಸ್ಯೆಗಳಿಗೆ ಅವನ ವೈಯಕ್ತಿಕ ಗುಣಗಳಾದ ಇತರರಿಂದ

ಒಳ್ಳೆ ಅಭಿಪ್ರಾಯಗಳನ್ನು (ಫೆಡರಲಿಸ್ಟರೂ ಸೇರಿ) ತೆಗೆದುಕೊಳ್ಳಲು ಹಿಂಜರಿಯದಿರುವುದು, ತತ್ವಗಳನ್ನು ವ್ಯವಹಾರಗಳಿಗೆ ಹೊಂದಿಸಿಕೊಳ್ಳುವುದು ಮತ್ತು ಮೆದು ಸ್ವಭಾವಗಳೇ ಕಾರಣವಾಗಿದ್ದವು. ಜೆಫರ್‌ಸನ್‌ನನ್ನು ಟೀಕಿಸುವುದರಲ್ಲಿ ಪ್ರಮುಖನಾದ ಕಾಂಗ್ರೆಸ್ ಸದಸ್ಯ ಜಾನ್ ರಾನ್‌ಡಾಲ್ಫ್ (John Randolph) ತನ್ನ ರಿಪಬ್ಲಿಕನ್ ಪಕ್ಷದವನೇ. ರಾನ್‌ಡಾಲ್ಫ್ ಬುದ್ಧಿವಂತ ಮತ್ತು ಆಕರ್ಷಣೀಯ, ಭಾವನಾತ್ಮಕ ವ್ಯಕ್ತಿಯಾದರೂ ಮುಚ್ಚಿದ ಮನಸ್ಸಿನವನು. ಅವನು 'ಕ್ವಿಡ್ಸ್' (Quids) ಎನ್ನುವ ಒಳಪಂಗಡದ ನಾಯಕನಾಗಿದ್ದನು. ರಾನ್‌ಡಾಲ್ಫ್ ನಪುಂಸಕನೆಂದು ಸುದ್ದಿ ಹರಡಿತ್ತು. ಇದರಿಂದ ಮನಸ್ಸಿನ ಸಮತೋಲನ ಕಳೆದುಕೊಂಡ ಈತ ಅಸೂಯಾಪರನಾದ, ಆಶಾಭಂಗದಿಂದ ಹುಳಿಗೊಂಡ ಮನಸ್ಸಿನ ಹಠಮಾರಿಯಂತೆ ವರ್ತಿಸತೊಡಗಿದನು. ಸಂಸ್ಥಾನಗಳ ಸ್ವಾಯತ್ತತೆಯನ್ನು ಕೇಂದ್ರಸರ್ಕಾರ ಅತಿಕ್ರಮಿಸದಂತೆ ಕಾಪಾಡುವುದು ತನ್ನ ಪವಿತ್ರ ಕರ್ತವ್ಯ ಎಂದು ನಂಬಿ ಅದನ್ನು ಅತಿರೇಕಕ್ಕೆ ಕೊಂಡೊಯ್ದನು. ೧೮೦೪ರಲ್ಲಿ ರಾನ್‌ಡಾಲ್ಫ್ ಮತ್ತು ಜೆಫರ್‌ಸನ್‌ರ ನಡುವೆ ಮೊದಲ ಘರ್ಷಣೆ ಸಂಭವಿಸಿತು. ೧೭೯೫ರಲ್ಲಿ ಜಾರ್ಜಿಯ ಪ್ರಜಾಪ್ರತಿನಿಧಿ ಸಭೆ ಈಗಿನ ಅಲಾಬಾಮ ಮತ್ತು ಮಿಸಿಸ್ಸಿಪ್ಪಿ ಸಂಸ್ಥಾನಗಳ ವಿಶಾಲ ಭೂಪ್ರದೇಶವನ್ನು ನಾಲ್ಕು ಭೂಅಭಿವೃದ್ಧಿ ಕಂಪನಿಗಳಿಗೆ ಅತಿಕಡಿಮೆ ಬೆಲೆಗೆ (ಎಕರೆಗೆ ಎರಡು ಸೆಂಟುಗಳಿಗೂ ಕಡಿಮೆ) ಮಾರಿಕೊಂಡಿತ್ತು. ಈ ವ್ಯವಹಾರದಲ್ಲಿ ಅನೇಕ ಶಾಸಕರು ಲಂಚ ಸ್ವೀಕರಿಸಿದ್ದು ಬಯಲಾದ ಮೇಲೆ ಮುಂದಿನ ಶಾಸಕ ಸಭೆ ಆ ವ್ಯಾಪಾರವನ್ನು ರದ್ದುಗೊಳಿಸಿತು. ಆದರೆ ರದ್ದುಗೊಳಿಸುವ ಶಾಸನ ಜಾರಿಗೆ ಬರುವ ಮೊದಲೆ ಭೂಅಭಿವೃದ್ಧಿ ಕಂಪನಿಯವರು ತಾವು ಕೊಂಡ ಭೂಪ್ರದೇಶದ ಮುಕ್ಕಾಲು ಭಾಗವನ್ನು ಮೂರನೆಯವರಿಗೆ ಮಾರಿ ಕೊಂಡಿದ್ದರು. ಹೀಗೆ ಭೂಮಿಯನ್ನು ಕೊಂಡವರು ವ್ಯಾಪಾರ ರದ್ದುಗೊಳಿಸಿದ್ದರಿಂದ ತಾವು ಕಳೆದುಕೊಂಡ ಹಣಕ್ಕೆ ಪರಿಹಾರ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಕೋರಿಕೆ ಸಲ್ಲಿಸಿದರು. ತಿಳಿಯದೆ ಮೋಸಹೋದ ಇವರಿಗೆ ಪರಿಹಾರವಾಗಿ ಐದು ಮಿಲಿಯನ್ ಎಕರೆಗಳನ್ನು ಕೊಡಬೇಕೆಂದು ಪ್ರತಿಪಾದಿಸುವ ಮಸೂದೆಯನ್ನು ಜೆಫರ್‌ಸನ್ ಶಾಸಕಸಭೆಯಲ್ಲಿ ಮಂಡಿಸಿದನು. ರಾನ್‌ಡಾಲ್ಫ್ ಈ ಮಸೂದೆಯನ್ನು ವಿರೋಧಿಸಿ, ಸರ್ಕಾರ ಮಾಡುತ್ತಿರುವುದು ದಗಲಬಾಜಿತನವೆಂದು ಶಾಸಕಸಭೆಯಲ್ಲಿ ತಾರಕಸ್ವರದಲ್ಲಿ ಕೂಗಾಡಿ ಗೊಂದಲವೆಬ್ಬಿಸಿ ಮಸೂದೆ ಅಂಗೀಕಾರವಾಗದಂತೆ ಮಾಡಿದನು.

ಜೆಫರ್‌ಸನ್ ಅಧ್ಯಕ್ಷತೆಯ ಎರಡನೆಯ ಅವಧಿಯ ಪ್ರಾರಂಭದಲ್ಲೆ ಅವನಿಗೆ ರಾನ್‌ಡಾಲ್ಫ್‌ನ ಕಾಟ ಹೆಚ್ಚಾಗತೊಡಗಿತು. ಜೆಫರ್‌ಸನ್ ಎಲ್ಲರ ಮಾತನ್ನು ಸುಲಭವಾಗಿ ನಂಬುವ ಭೋಳೆ ಸ್ವಭಾವದವನು ಎಂದು ರಾನ್‌ಡಾಲ್ಫ್ ಪ್ರಚಾರ ಮಾಡತೊಡಗಿದನು. ಅಂತಿಮವಾಗಿ ಡಿಸೆಂಬರ್ ೧೮೦೫ರಲ್ಲಿ ಪಶ್ಚಿಮ ಫ್ಲಾರಿಡಾವನ್ನು ಸ್ಪೇನ್‌ನಿಂದ ಕೊಳ್ಳಲು ವ್ಯವಹಾರ ನಡೆಸಲು ಜೆಫರ್‌ಸನ್ ಎರಡು ಮಿಲಿಯನ್ ಡಾಲರುಗಳನ್ನು ಮಂಜೂರು ಮಾಡುವಂತೆ ಕೋರಿಕೆಯನ್ನು ಸಲ್ಲಿಸಿದಾಗ ರಾನ್‌ಡಾಲ್ಫ್ ಇದರಲ್ಲಿ ಏನೋ ಒಳಸಂಚು

ನಡೆದಿದೆಯೆಂದು ಆಪಾದಿಸಿ ಅಂದಿನಿಂದ ಸರ್ಕಾರದ ಕಡುವಿರೋಧಿಯಾಗಿ ಸರ್ಕಾರ ಮಂಡಿಸುವ ಅಲ್ಲ ಮಸೂದೆಗಳನ್ನು ವಿರೋಧಿಸಲು ನಿಶ್ಚಯಿಸಿದನು.

ಏರಾನ ಬರ್ ನಡೆಸಿದ ಪಿತೂರಿ

ಅಧ್ಯಕ್ಷ ಜೆಫರ್‌ಸನ್‌ನ ಎರಡನೆಯ ಅವಧಿಯಲ್ಲಿ ಬಹಳ ಕಷ್ಟ ಕೊಟ್ಟ ಇನ್ನೊಬ್ಬ ರಿಪಬ್ಲಿಕನ್ ಸದಸ್ಯನೆಂದರೆ ಏರಾನ್ ಬರ್ ೧೮೦೧ರ ಚುನಾವಣೆಯಲ್ಲಿ ಇವರಿಬ್ಬರೂ ಅಧ್ಯಕ್ಷಸ್ಥಾನಕ್ಕೆ ಅಭ್ಯರ್ಥಿಗಳಾಗಿದ್ದು ಅಂತಿಮವಾಗಿ ಅತಿ ಚಿಕ್ಕ ಅಂತರದಿಂದ ಜೆಫರ್‌ಸನ್ ಅಧ್ಯಕ್ಷನಾದಾಗಿನಿಂದಲೂ ಅವನು ಬರ್ ಮೇಲೆ ಪ್ರತೀಕಾರ ತೀರಿಸಲು ಹವಣಿಸುತ್ತಿದ್ದನು. ೧೮೦೪ರ ಚುನಾವಣೆಯಲ್ಲಿ ಜೆಫರ್‌ಸನ್ ಉಪಾಧ್ಯಕ್ಷ ಸ್ಥಾನಕ್ಕೆ ಬರ್‌ನನ್ನು ನೇಮಿಸದೆ ಅವನ ಕಡುವಿರೋಧಿ ನ್ಯೂಯಾರ್ಕ್ ಗವರ್ನರ್ ಆಗಿದ್ದ ಜಾರ್ಜ್ ಕ್ಲಿನ್‌ಟನ್‌ನನ್ನು ನೇಮಿಸಿದನು. ಉಪಾಧ್ಯಕ್ಷನಾಗಿದ್ದಾಗಲೆ ಬರ್ ದೇಶದ್ರೋಹ ಕಾರ್ಯಗಳಲ್ಲಿ ಭಾಗವಹಿಸುತ್ತ ಬಂದಿದ್ದನು. ಆಗ ವಾಷಿಂಗ್‌ಟನ್‌ನಲ್ಲಿ ಬ್ರಿಟಿಷ್ ಸಚಿವನಾಗಿದ್ದ ಆ್ಯಂತನಿ ಮೆರ್ರಿ (Anthony Merry)ಯನ್ನು ಭೇಟಿ ಮಾಡಿ ೧೧೦,೦೦೦ ಪೌಂಡ್ ರುಷುವತ್ತು ಮತ್ತು ಬ್ರಿಟಿಷ್ ನೌಕಾದಳದ ಸಹಾಯದಿಂದ ಅಮೆರಿಕದ ಪಶ್ಚಿಮ ಪ್ರಾಂತವನ್ನು ಸಂಯುಕ್ತ ಸಂಸ್ಥಾನಗಳಿಂದ ಬೇರ್ಪಡಿಸಿ ಬ್ರಿಟಿಷರ ಕೈವಶವಾಗುವಂತೆ ಮಾಡುವುದಾಗಿ ಪಿತೂರಿ ನಡೆಸಿದನು. ಆದರೆ ಬ್ರಿಟಿಷರು ಮಾತಿಗೆ ಮರುಳಾಗಲಿಲ್ಲ. ಇಷ್ಟಾದರೂ ಬರ್ ತನ್ನ ಮಸಲತ್ತನ್ನು ಮುಂದುವರಿಸಿದನು. ಆಗ ಅವನು ಲೂಯಿಸಿಯಾನ ಪ್ರಾಂತದ ಗವರ್ನರ್ ಆಗಿದ್ದ ಜನರಲ್ ಜೇಮ್ಸ್ ವಿಲ್ಕಿನ್‌ಸನ್ (James Wilkinson)ನೊಡನೆ ಸೇರಿ ದೇಶ ದ್ರೋಹ ಕೃತ್ಯಗಳನ್ನು ಮುಂದುವರಿಸಿದನು. ಜೇಮ್ಸ್ ವಿಲ್ಕಿನ್‌ಸನ್ ಸಹ ದೇಶದ್ರೋಹಿ. ಅವನು ಸ್ಪಾನಿಷ್ ಸರ್ಕಾರದಿಂದ ಗುಟ್ಟಾಗಿ ಹಣ ಪಡೆಯುತ್ತಿದ್ದನು.

೧೮೦೬ರಲ್ಲಿ ಬರ್ ಮತ್ತು ವಿಲ್ಕಿನ್‌ಸನ್ ಇಬ್ಬರು ಕೂಡಿ ಒಹಾಯೊ ನದಿಯ ಬ್ಲೆನ್ನರ್‌ಹ್ಯಾಸೆಟ್ (Blennerhassett island) ದ್ವೀಪದಲ್ಲಿ ಒಂದು ಸಣ್ಣ ಸೈನ್ಯವನ್ನು ಸೇರಿಸಿದರು. ಬರ್‌ನ ಸೇನಾಧಿಪತ್ಯದಲ್ಲಿ ಈ ತುಕಡಿ ದೋಣಿಗಳಲ್ಲಿ ನ್ಯೂ ಆರ್ಲಿಯನ್ಸ್ ಕಡೆಗೆ ಪ್ರಯಾಣ ಬೆಳೆಸಿತು. ಅವರ ಉದ್ದೇಶ ಏನಾಗಿತ್ತು ಎಂದು ಖಚಿತವಾಗಿರಲಿಲ್ಲ. ಬರ್‌ನ ಉದ್ದೇಶ ಏನೇ ಆಗಿದ್ದರೂ ಅವನು ಮಾಡುತ್ತಿದ್ದುದು ನ್ಯಾಯಬಾಹಿರವಾಗಿತ್ತು. ವಿಲ್ಕಿನ್‌ಸನ್ ಬರ್‌ನಿಗೆ ನಂಬಿಕೆ ದ್ರೋಹ ಮಾಡಿ ಅವನ ದೇಶದ್ರೋಹ ಚಟುವಟಿಕೆಗಳನ್ನು ಜೆಫರ್‌ಸನ್‌ನಿಗೆ ತಿಳಿಸಿದನು. ಅಧ್ಯಕ್ಷ ಜೆಫರ್‌ಸನ್ ಕೂಡಲೇ ಬರ್‌ನ ದೇಶದ್ರೋಹ ಕಾರ್ಯಗಳ ಬಗ್ಗೆ ದೇಶಕ್ಕೆ ಎಚ್ಚರಿಕೆ ನೀಡುವ ಪ್ರಕಟಣೆ ಹೊರಡಿಸಿ ಬರ್‌ನನ್ನು ಸೆರೆಹಿಡಿಯುವಂತೆ ಆಜ್ಞಾಪಿಸಿದನು. ಬರ್ ಸ್ಪೇನಿನ ಆಡಳಿತಕ್ಕೆ ಒಳಪಟ್ಟಿದ್ದ ಫ್ಲಾರಿಡಾಕ್ಕೆ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದನು. ಅವನ ಪ್ರಯತ್ನ ಸಫಲವಾಗದೆ ಅವನನ್ನು ಫೆಬ್ರವರಿ ೧೮೦೭ರಲ್ಲಿ ಸೆರೆಹಿಡಿದು ವರ್ಜೀನಿಯ ಸಂಸ್ಥಾನದ ರಿಚ್‌ಮಂಡ್ ನಗರಕ್ಕೆ

ಬಲವಾದ ಕಾವಲಿನಲ್ಲಿ ರವಾನಿಸಿದರು. ಜೆಫರ್‌ಸನ್ ಬರ್‌ನನ್ನು ದೇಶದ್ರೋಹದ ಅಪರಾಧಕ್ಕಾಗಿ ಶಿಕ್ಷಿಸುವ ಕ್ರಮ ಕೈಗೊಂಡನು. ರಾಷ್ಟ್ರಾಧ್ಯಕ್ಷನಿಗೆ ದೇಶದ್ರೋಹಿಗಳೆಂದು ಸಾಬೀತಾದವರಿಗೆ ಕ್ಷಿಪ್ರವಾಗಿ ಶಿಕ್ಷೆ ವಿಧಿಸುವ ಅಧಿಕಾರವಿತ್ತು. ಜೆಫರ್‌ಸನ್ ಹಾಗೆ ಮಾಡಬಹುದಾಗಿತ್ತು. ಆದರೆ ಬರ್‌ನನ್ನು ಅವನು ಎಷ್ಟು ತೀವ್ರವಾಗಿ ದ್ವೇಷಿಸುತ್ತಿದ್ದನೆಂದರೆ ಬರ್‌ನ ವಿರುದ್ಧ ಸಾಕ್ಷಿ ಹೇಳಿದ ಅವನ ಅನುಯಾಯಿಗಳ ಅಪರಾಧಗಳನ್ನು ಸಂಪೂರ್ಣವಾಗಿ ಮನ್ನಣೆ ಮಾಡಿದನು. ಬರ್‌ನ ಅಪರಾಧಗಳನ್ನು ವಿಚಾರಣೆ ಮಾಡುತ್ತಿದ್ದ ಉನ್ನತ ನ್ಯಾಯಾಧೀಶ ಮಾರ್ಷಲ್ ಜೆಫರ್‌ಸನ್‌ನ ಬದ್ಧವೈರಿಯಾಗಿದ್ದ. ನ್ಯಾಯಾಲಯದಲ್ಲಿ ನಡೆಯುತ್ತಿದ್ದ ಕಟ್ಟಳೆ ಹೆಸರಿಗೆ ಮಾತ್ರ ಬರ್‌ನ ವಿಚಾರಣೆಯಾಗಿತ್ತು. ವಾಸ್ತವವಾಗಿ ಅದು ಸೇಡು ತೀರಿಸಲು ಹವಣಿಸುತ್ತಿದ್ದ ಅಧ್ಯಕ್ಷ ಮತ್ತು ಪೂರ್ವಾಗ್ರಹಪೀಡಿತನಾದ ಉನ್ನತ ನ್ಯಾಯಾಧೀಶನ ನಡುವಣ ಸ್ಪರ್ಧೆಯಾಗಿತ್ತು. ಈ ಸ್ಪರ್ಧೆಯಲ್ಲಿ ಅಂತಿಮವಾಗಿ ಗೆದ್ದವನು ನ್ಯಾಯಾಧೀಶ ಮಾರ್ಷಲ್. ಅಪರಾಧವನ್ನು ನಿರ್ಣಯಿಸುವ 'ಜ್ಯೂರಿ' (jury) ಮುಂದೆ 'ಒಳಸಂಚು' (treason) ಎನ್ನುವ ಪದವನ್ನು ಮಾರ್ಷಲ್ ತೀರಾ ಸಂಕುಚಿತ ಅರ್ಥ ಬರುವಂತೆ ನಿರೂಪಿಸಿ, ಜ್ಯೂರಿ ಬರ್‌ನನ್ನು ತಪ್ಪಿತಸ್ಥನೆಂದು ತೀರ್ಮಾನಿಸಲು ಸಾಧ್ಯವಾಗದಂತೆ ಮಾಡಿದನು. ಇದರಿಂದಾಗಿ ಬರ್‌ನ ಚಟುವಟಿಕೆಗಳು 'ಒಳಸಂಚು' ಎಂದು ಸಾಬೀತಾಗದೆ ಬರ್ ನಿರಪರಾಧಿ ಎಂದಿ ಜ್ಯೂರಿ ತೀರ್ಪು ನೀಡಿತು. ಹಿಂದೆ ರಾನ್‌ಡಾಲ್ಫ್‌ನ ರಾದ್ಧಾಂತದಲ್ಲಿ ಆದಂತೆಯೇ ಈ ಬರ್‌ನ ವ್ಯವಹಾರವೂ ಜೆಫರ್‌ಸನ್‌ಗೆ ವಿರುದ್ಧವಾಗಿ ನಿರ್ಣಯಗೊಂಡಿತು. ಇದರಿಂದ ಜೆಫರ್‌ಸನ್ ಮಹಾ ಸೋಲನ್ನು ಅನುಭವಿಸಿದ ಎಂದು ಹೇಳಲಾಗುವುದಿಲ್ಲ. ಈ ಕಟ್ಟಳೆಗಳಲ್ಲಿ ಎರಡು ಕಡೆಯವರೂ ತೀರ ಕೆಳಮಟ್ಟದ ವರ್ತನೆಯನ್ನು ಪ್ರದರ್ಶಿಸಿ ತಮ್ಮ ಗೌರವಕ್ಕೆ ಕಳಂಕ ತಂದುಕೊಂಡರು ಅಷ್ಟೆ. ತನ್ನ ಪ್ರತಿಷ್ಠೆಗೆ ಧಕ್ಕೆಯಾದುದರಿಂದ ಮಾರ್ಷಲ್ ಮೇಲೆ ಮತ್ತು ನ್ಯಾಯಾಲಯಗಳ ಮೇಲೆ ಜೆಫರ್‌ಸನ್‌ನ ದ್ವೇಷ ಹೆಚ್ಚಾಗುತ್ತ ಹೋಯಿತು. ಜೆಫರ್‌ಸನ್‌ನಂಥ ರಾಜನೀತಿಜ್ಞನಿಗೆ ಇಂಥ ವರ್ತನೆ ತಕ್ಕುದಲ್ಲ; ಅದು ಅವನ ವರ್ಚಸ್ಸನ್ನು ಕಡಿಮೆ ಮಾಡಿತು.

ನೆಪೋಲಿಯನ್ ಬ್ರಿಟಿಷರು ಮತ್ತು ಅಮೆರಿಕ

ರಾನ್‌ಡಾಲ್ಫ್ ಮತ್ತು ಬರ್‌ನ ಪ್ರಕರಣಗಳು ಲೂಯಿಸಿಯಾನ ಪ್ರಾಂತವನ್ನು ಕೊಂಡಿದ್ದರ ಪರೋಕ್ಷವಾದ ಪರಿಣಾಮಗಳು ಎಂದು ಹೇಳಬಹುದು. ಈ ಪ್ರಕರಣಗಳಿಗಿಂತಲೂ ಸಂಕೀರ್ಣವಾದ ಗಂಭೀರ ಸಮಸ್ಯೆಗಳನ್ನು ಜೆಫರ್‌ಸನ್ ಮತ್ತು ಇಡೀ ದೇಶ ಎದುರಿಸಬೇಕಾದ ಪರಿಸ್ಥಿತಿ ಉಂಟಾಗಿದ್ದಕ್ಕೆ ಲೂಯಿಸಿಯಾನ ಖರೀದಿಸಿದ್ದೆ ಕಾರಣವಾಯಿತು. ನೆಪೋಲಿಯನ್ ಲೂಯಿಸಿಯಾನ ಪ್ರಾಂತವನ್ನು ಬಿಟ್ಟುಕೊಟ್ಟದ್ದಕ್ಕೆ ಯೂರೋಪಿನ ಮೇಲೆ ಪ್ರಭುತ್ವ ಸ್ಥಾಪಿಸಲು ಯುದ್ಧ ಪ್ರಾರಂಭಿಸುವ ಮುನ್ನ ಎಲ್ಲ ಅಡಚಣೆಗಳನ್ನೂ ನಿವಾರಿಸಬೇಕೆಂದು ಅವನ ಮುಂದಾಲೋಚನೆ ಕಾರಣವಾಗಿತ್ತು. ಈ ಯುದ್ಧ ಜೆಫರ್‌ಸನ್‌ನಿಗೆ ದೊಡ್ಡ ಸವಾಲನ್ನು ತಂದೊಡ್ಡಿತು. ಯುದ್ಧದ ಪ್ರಾರಂಭವಾದ

ದಿನಗಳಲ್ಲಿ ಅದು ಅಮೆರಿಕಕ್ಕೆ ಅನುಕೂಲಕರವಾಗಿತ್ತು. ಹೊರದೇಶಗಳೊಡನೆ ವ್ಯಾಪಾರ ಹೆಚ್ಚಾಗಿ ದೇಶದ ಸಂಪತ್ತು ಹೆಚ್ಚಿತು. ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳಿಗೆ ಅಮೆರಿಕದಲ್ಲಿ ತಯಾರಾದ ವಸ್ತುಗಳ – ವಿಶೇಷವಾಗಿ ಹಡಗುಗಳ – ಅಗತ್ಯ ಬಹಳವಾಗಿತ್ತು. ಆದ್ದರಿಂದ ಅಮೆರಿಕದಲ್ಲಿ ಹಡಗು ಕಟ್ಟುವ ಉದ್ಯಮ ವಿಸ್ತರವಾಗಿ ಬೆಳೆಯಿತು. ಅಂತರರಾಷ್ಟ್ರೀಯ ವ್ಯಾಪಾರ ಹಲವು ಪಟ್ಟು ಹೆಚ್ಚಾಯಿತು. ಆದರೆ ೧೮೦೭ರ ಹೊತ್ತಿಗೆ ಪರಿಸ್ಥಿತಿ ತೀವ್ರವಾಗಿ ಬದಲಾಯಿಸಿತು. ೧೮೦೫ರ ಅಕ್ಟೋಬರ್ ತಿಂಗಳಲ್ಲಿ ನಡೆದ ಟ್ರಫಾಲ್‌ಗರ್ ಕದನವಲ್ಲಿ ಸ್ಪೇನ್ ಮತ್ತು ಫ್ರಾನ್ಸ್ ದೇಶಗಳ ಸಂಯುಕ್ತ ನೌಕಾದಳವನ್ನು ಬ್ರಿಟನ್ನಿನ ಹೊರ್ಷಿಯೋ ನೆಲ್ಸನ್ (Horatio Nelson) ಛಿದ್ರಗೊಳಿಸಿದನು. ಆದರೆ ಫ್ರಾನ್ಸಿನಲ್ಲಿ ನೆಪೋಲಿಯನ್ ತನ್ನ ಪ್ರಭುತ್ವ ಸ್ಥಾಪಿಸಿ, ತನ್ನ ಸೈನ್ಯಬಲದಿಂದ ಇಂಗ್ಲೆಂಡಿನೊಡನೆ ಮೈತ್ರಿ ಬೆಳೆಸಿಕೊಂಡಿದ್ದ ಯೂರೋಪಿಯನ್ ದೇಶಗಳನ್ನು ಒಂದೊಂದಾಗಿ ಗೆದ್ದು ೧೮೦೬ರ ಹೊತ್ತಿಗೆ ಯೂರೋಪಿನಾದ್ಯಂತ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು. ಆದರೆ ಯೂರೋಪಿನ ಸುತ್ತಣ ಸಮುದ್ರ ಮಾರ್ಗಗಳ ಮೇಲೆ ಬ್ರಿಟಿಷರು ಸಂಪೂರ್ಣ ನಿಯಂತ್ರಣ ಸಾಧಿಸಿದ್ದರು. ಆದ್ದರಿಂದ ಈ ಎರಡು ದೇಶಗಳು ಪರಸ್ಪರ ನೇರವಾಗಿ ದಾಳಿ ಮಾಡಲು ಸಾಧ್ಯವಾಗದೆ ಹೋಯಿತು.

ನೇರವಾಗಿ ದಾಳಿ ಮಾಡಲು ಸಾಧ್ಯವಾಗದೆ ಹೋದುದರಿಂದ ಫ್ರಾನ್ಸ್ ಮತ್ತು ಇಂಗ್ಲೆಂಡ್ ವಾಣಿಜ್ಯ ಯುದ್ಧ (commercial war) ಪ್ರಾರಂಭಿಸಿದವು. ಇಂಗ್ಲೆಂಡಿನೊಡನೆ ಎಲ್ಲ ವ್ಯಾಪಾರ ವ್ಯವಹಾರಗಳನ್ನು ರದ್ದುಗೊಳಿಸುವ ಕಾಯಿದೆಯನ್ನು ನೆಪೋಲಿಯನ್ ಜಾರಿಗೆ ತಂದನು. ಇದಕ್ಕೆ ಪ್ರತೀಕಾರವಾಗಿ ಬ್ರಿಟಿಷರು ಯೂರೋಪಿನ ಎಲ್ಲಾ ಬಂದರುಗಳಿಗೆ ತಡೆಯೊಡ್ಡಿದರು. ವಿದೇಶಿ ವ್ಯಾಪಾರಿ ಹಡಗುಗಳು ಮೊದಲು ಇಂಗ್ಲೆಂಡಿನ ಬಂದರಿಗೆ ಹೋಗಿ ಬ್ರಿಟಿಷ್ ಅಧಿಕಾರಿಗಳು ವಿಧಿಸಿದ ಸುಂಕವನ್ನು ಕೊಟ್ಟು ಯೂರೋಪಿನ ಬಂದರುಗಳಿಗೆ ಪ್ರವೇಶ ದೊರಕಿಸಿಕೊಳ್ಳಬೇಕಾಗಿತ್ತು. ಇದಕ್ಕೆ ಪ್ರತಿಯಾಗಿ ೧೮೦೭ರಲ್ಲಿ ನೆಪೋಲಿಯನ್ ಮಿಲಾನ್ ಶಾಸನ (Milan decree) ವನ್ನು ಜಾರಿಗೆ ತಂದನು. ಯಾವ ಹಡಗು ಬ್ರಿಟಿಷ್ ಅಧಿಕಾರಿಗಳು ವಿಧಿಸಿದ ಸುಂಕವನ್ನು ಕೊಡುತ್ತದೆಯೋ ಆ ಕ್ಷಣದಿಂದ ಅದು ಇಂಗ್ಲೆಂಡಿನ ಸ್ವತ್ತಾಗುತ್ತದೆ. ಆದ್ದರಿಂದ ಫ್ರಾನ್ಸ್ ಅದನ್ನು ವಶ ಪಡಿಸಿಕೊಳ್ಳಬಹುದು ಎನ್ನುವುದು ಮಿಲಾನ್ ಶಾಸನದ ತರ್ಕ. ಈ ಯುದ್ಧದಿಂದ ಫ್ರಾನ್ಸ್ ಮತ್ತು ಇಂಗ್ಲೆಂಡ್ ದೇಶಗಳಿಗೆ ಹೆಚ್ಚಿನ ನಷ್ಟವಾಗಲಿಲ್ಲ, ಏಕೆಂದರೆ ಕಳ್ಳತನದಲ್ಲಿ ಈ ಎರಡು ದೇಶಗಳ ನಡುವೆ ವ್ಯಾಪಾರ ನಡೆಯುತ್ತಲೇ ಇತ್ತು. ಈ ಯುದ್ಧದಿಂದ ಶೋಷಣೆಗೆ ಒಳಗಾದವರು ವಿದೇಶಿ ವರ್ತಕರು ಮಾತ್ರ. ಜೆಫರ್‌ಸನ್ ಆ ಆಂಗ್ಲ-ಫ್ರೆಂಚ್ ನಿರ್ಬಂಧಗಳು ಅತ್ಯಂತ ಅವಮಾನಕರವಾದುವೆಂದು ಭಾವಿಸಿದನು. ಆಂಗ್ಲ-ಫ್ರೆಂಚ್ ಯುದ್ಧ ಕೆಲವು ಅಮೆರಿಕನ್ ವ್ಯಾಪಾರಿಗಳಿಗೆ ಲಾಭದಾಯಕವಾಗಿತ್ತು. ಇದನ್ನು ಬ್ರಿಟಿಷರು ಸಹಿಸದಾದರು. ೧೭೫೬ರಲ್ಲಿ ಜಾರಿಗೆ ಬಂದ ಬ್ರಿಟಿಷ್ ಕಾಯಿದೆಯ ಪ್ರಕಾರ ತಟಸ್ಥ ರಾಷ್ಟ್ರಗಳು ಶಾಂತಿಕಾಲದಲ್ಲಿ ಯಾವ ದೇಶಗಳೊಡನೆ ವ್ಯಾಪಾರ ಮಾಡದಂತೆ ನಿರ್ಬಂಧಿಸಲಾಗಿತ್ತೋ ಹಾಗೆಯೇ

ಯುದ್ಧಕಾಲದಲ್ಲಿಯೂ ಸಹ ತಟಸ್ಥ ರಾಷ್ಟ್ರಗಳು ಆ ದೇಶಗಳೊಡನೆ ವ್ಯಾಪಾರ ನಡೆಸುವುದನ್ನು ನಿಷೇಧಿಸಲಾಗಿತ್ತು. ಆದರೆ ಅಮೆರಿಕನ್ ವ್ಯಾಪಾರಿಗಳು ಚತುರೋಪಾಯದಿಂದ ಆ ಕಾಯಿದೆಯಿಂದ ತಪ್ಪಿಸಿಕೊಂಡು ಕಳ್ಳತನದಲ್ಲಿ ತಮ್ಮ ವ್ಯಾಪಾರವನ್ನು ಮುಂದುವರಿಸಿದ್ದರು. ಈ ಕಳ್ಳ ವ್ಯಾಪಾರ ಬ್ರಿಟಿಷರನ್ನು ಕೆರಳಿಸಿತ್ತು; ಅದನ್ನು ಹತ್ತಿಕ್ಕಲು ಅವರು ದೃಢ ಮನಸ್ಸು ಮಾಡಿದರು.

ಕಳ್ಳವ್ಯಾಪಾರ ನಿಲ್ಲಿಸಲು ಮತ್ತು ಅಮೆರಿಕ ಹಡಗುಗಳಲ್ಲಿ ಕೆಲಸಕ್ಕೆ ಸೇರಿಕೊಂಡ ಬ್ರಿಟಿಷ್ ಪ್ರಜೆಗಳ ಮತ್ತು ನಾವಿಕರನ್ನು ವಶಕ್ಕೆ ತೆಗೆದುಕೊಳ್ಳುವ ಸಲುವಾಗಿ ಬ್ರಿಟಿಷ್ ನೌಕಾಪಡೆಯ ಯುದ್ಧನೌಕೆಗಳು ಅಮೆರಿಕದ ವ್ಯಾಪಾರಿ ಹಡಗುಗಳನ್ನು ಸಮುದ್ರ ಮಾರ್ಗದಲ್ಲಿ ತಡೆದು ನಿಲ್ಲಿಸಿ ಆ ಹಡಗುಗಳನ್ನು ಶೋಧಿಸಿ ಅಲ್ಲಿ ಕೆಲಸಕ್ಕೆ ಸೇರಿದ್ದ ಬ್ರಿಟಿಷ್ ಪ್ರಜೆಗಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿದ್ದರು. ಇವರಲ್ಲಿ ಕೆಲವರು ಕ್ರಮಬದ್ಧವಾಗಿ ಅಮೆರಿಕದ ಪೌರತ್ವ ಪಡೆದಿದ್ದರೂ ಕೂಡ ಅದನ್ನು ಕಡೆಗಣಿಸಿ ಬಲಾತ್ಕಾರದಿಂದ ಹಡಗಿನಿಂದ ಹೊರಗೆಳೆದು ವಶಕ್ಕೆ ತೆಗೆದುಕೊಳ್ಳುತ್ತಿದ್ದರು. ಕೆಲವು ಸಮಯ ಹುಟ್ಟಿನಿಂದಲೆ ಅಮೆರಿಕನ್ನರಾದವರನ್ನೂ ಕೂಡ ಬಲಾತ್ಕಾರದಿಂದ ಹಿಡಿದೊಯ್ಯುತ್ತಿದ್ದರು. ಈ ಅವಮಾನವನ್ನು ಅಮೆರಿಕನ್ನರು ಸಹಿಸಲಾರದೆ ಕೋಪದಿಂದ ಉರಿಯ ತೊಡಗಿದರು. ಆದರೆ ಅಧ್ಯಕ್ಷ ಜೆಫರ್‌ಸನ್ ತಟಸ್ಥ ನೀತಿಯನ್ನು ಅನುಸರಿಸಿ ನಿರ್ಲಿಪ್ತನಾಗಿದ್ದನು. ಯುದ್ಧವನ್ನು ಅವನು ತೀವ್ರವಾಗಿ ದ್ವೇಷಿಸುತ್ತಿದ್ದನು. ಸೈನ್ಯ ಮತ್ತು ನೌಕಾದಳಗಳಲ್ಲಿ ಖೋತಾ ಮಾಡಿ ದೇಶದ ರಕ್ಷಣೆಯನ್ನು ಅಲಕ್ಷಿಸಿದ್ದನು.

ಜೆಫರ್‌ಸನ್‌ನ ತಟಸ್ಥ ನೀತಿ ನಿಷ್ಪ್ರಯೋಜಕವಾಯಿತು. ಆಂಗ್ಲ ಮತ್ತು ಫ್ರೆಂಚ್ ನೌಕಾದಳಗಳು ತಟಸ್ಥ ರಾಷ್ಟ್ರಗಳ ವ್ಯಾಪಾರಿ ಹಡಗುಗಳ ಮೇಲೆ ದಾಳಿಯನ್ನು ಹೆಚ್ಚಿಸಿದವು. ೧೮೦೩ರಿಂದ ೧೮೦೭ರ ಅವಧಿಯಲ್ಲಿ ಬ್ರಿಟಿಷರು ೫೦೦ ವ್ಯಾಪಾರಿ ಹಡಗುಗಳನ್ನು ವಶಪಡಿಸಿಕೊಂಡಿದ್ದರು. ನೆಪೋಲಿಯನ್ ೨೦೦ ಹಡಗುಗಳನ್ನು ವಶಪಡಿಸಿಕೊಂಡಿದ್ದನು. ಇಷ್ಟಾದರೂ ಅಮೆರಿಕನ್ ಸರ್ಕಾರ ಏನೂ ಮಾಡಲಾರದೆ ಹೋಯಿತು. ಜೆಫರ್‌ಸನ್ ತನ್ನ ತಟಸ್ಥ ನೀತಿಯನ್ನು ಸಮರ್ಥಿಸಿಕೊಂಡನು. ೧೮೦೭ರಲ್ಲಿ ಅಮೆರಿಕದ ಸೆನೆಟ್, ಬ್ರಿಟಿಷರು ಅಮೆರಿಕ ವ್ಯಾಪಾರಿ ಹಡಗುಗಳನ್ನು ವಶಪಡಿಸಿಕೊಳ್ಳುವುದು 'ಪ್ರಚೋದನೆ ಇಲ್ಲದ ಅತಿಕ್ರಮಣ' ಮತ್ತು 'ತಟಸ್ಥ ನೀತಿಯ ಉಲ್ಲಂಘನೆ' ಎಂದು ಘೋಷಿಸಿತು. ಕಾಂಗ್ರೆಸ್ ಮೊದಲ ಬಾರಿಗೆ ಬ್ರಿಟಿಷ್ ವಸ್ತುಗಳನ್ನು ಆಮದು ಮಾಡಿಕೊಳ್ಳುವುದನ್ನು ರದ್ದುಗೊಳಿಸುವ ಕಾಯಿದೆಯನ್ನು ಜಾರಿಗೆ ತಂದಿತು. ಅಂತಿಮವಾಗಿ, ಜೂನ್ ೨೨, ೧೮೦೭ರಲ್ಲಿ ನಡೆದ ಘಟನೆ ಅಮೆರಿಕನ್ನರನ್ನು ರೊಚ್ಚಿಗೇಳುವಂತೆ ಮಾಡಿತು. ಬ್ರಿಟಿಷ್ ಯುದ್ಧ ನೌಕೆ 'ಲೆಪರ್ಡ್' ದರ್ಪದಿಂದ ಅಮೆರಿಕನ್ ಯುದ್ಧ ನೌಕೆ 'ಚೆಸಪೀಕ್'ನ್ನು ಬಲಾತ್ಕಾರದಿಂದ ತಡೆದು ನಿಲ್ಲಿಸಿ ಬ್ರಿಟಿಷ್ ನೌಕಾದಳವನ್ನು ಬಿಟ್ಟು ಓಡಿಹೋದ ನಾಲ್ವರು

ನಾವಿಕರನ್ನು ಹುಡುಕಲು ಅಮೆರಿಕ ಯುದ್ಧ ನೌಕೆಯನ್ನು ಶೋಧಿಸಲು ಅವಕಾಶ ಕೊಡಬೇಕೆಂದು ಬ್ರಿಟಿಷ್ ನೌಕಾಧಿಪತಿ ಸ್ಯಾಲ್ಸ್‌ಬರಿ ಹಂಫ್ರಿಸ್ (Salsbury Humphreys) ಹುಕುಂ ಚಲಾಯಿಸಿದನು. ಅಮೆರಿಕನ್ ನೌಕಾಧಿಪತಿ ಜೇಮ್ಸ್ ಬ್ಯಾರನ್ (James Barron) ಅದಕ್ಕೆ ಒಪ್ಪಿಗೆ ಕೊಡಲಿಲ್ಲ. ಆಗ ಬ್ರಿಟಿಷ್ ಯುದ್ಧ ನೌಕೆ ಅಮೆರಿಕನ್ ಯುದ್ಧ ನೌಕೆಯ ಮೇಲೆ ಫಿರಂಗಿ ದಾಳಿ ನಡೆಸಿತು. ಈ ದಾಳಿಯಲ್ಲಿ ಕೆಲವು ಅಮೆರಿಕನ್ನರು ಸಾವಿಗೀಡಾದರು. ಅನಿರೀಕ್ಷಿತವಾದ ದಾಳಿಯಿಂದ ಅಧೀರರಾದ ಅಮೆರಿಕನ್ ನಾವಿಕರು ಶರಣಾಗತರಾದರು. ಬ್ರಿಟಿಷ್ ನೌಕಾದಳ ಬಿಟ್ಟು ಓಡಿದವರೆನ್ನಲಾದ ನಾಲ್ವರನ್ನು ವಶಕ್ಕೆ ತೆಗೆದುಕೊಂಡು ಜಖಂ ಆಗಿದ್ದ ಅಮೆರಿಕನ್ ಯುದ್ಧನೌಕೆಯನ್ನು ವಾಪಸ್ಸು ಹೋಗಲು ಬಿಟ್ಟರು.

ರೊಚ್ಚಿಗೆದ್ದ ಅಮೆರಿಕನ್ ಪ್ರಜೆಗಳು ಇಂಗ್ಲೆಂಡ್ ಮೇಲೆ ಯುದ್ಧ ಸಾರಬೇಕೆಂದು ಗಲಭೆ ಎಬ್ಬಿಸಿದರು. ದೇಶ ಅಂಥ ಯುದ್ಧಕ್ಕೆ ಸಿದ್ಧವಾಗಿಲ್ಲ ಎನ್ನುವುದನ್ನು ಅರಿತಿದ್ದ ಜೆಫರ್‌ಸನ್ ಬ್ರಿಟಿಷ್ ಹಡಗುಗಳನ್ನು ಅಮೆರಿಕನ್ ಸಮುದ್ರ ಗಡಿಪ್ರದೇಶದಿಂದ ಆಚೆ ಇರಬೇಕೆಂದು ಆಜ್ಞೆ ಹೊರಡಿಸಿ ಸಮಾಧಾನ ಪಟ್ಟುಕೊಂಡನು. ಇಂಗ್ಲೆಂಡ್ ಮತ್ತು ಫ್ರಾನ್ಸ್ ಮಾಡಿದ ಅವಮಾನಕರವಾದ ಕೃತ್ಯಗಳನ್ನು ನಿಲ್ಲಿಸಲು ದೃಢ ನಿಶ್ಚಯ ಮಾಡಿ ಜೆಫರ್‌ಸನ್ ವ್ಯಾಪಾರ ನಿಷೇಧ ಕಾಯಿದೆ (embargo act) ಯನ್ನು ಕಾಂಗ್ರೆಸ್ ಮೂಲಕ ಜಾರಿಗೆ ತಂದನು.

ಸರಳವಾಗಿ ಹೇಳಬೇಕೆಂದರೆ ಈ ವ್ಯಾಪಾರ ನಿಷೇಧ ಕಾಯಿದೆ ಅಮೆರಿಕ ವಸ್ತುಗಳು/ ಸರಕುಗಳು ರಫ್ತಾಗುವುದನ್ನು ರದ್ದುಗೊಳಿಸಿತು. ಅಮೆರಿಕ ವ್ಯಾಪಾರಿ ಹಡಗುಗಳು ಸರಕುಗಳನ್ನು ವಿದೇಶಿ ಬಂದರುಗಳಿಗೆ ಸಾಗಿಸುವುದನ್ನು ನಿಲ್ಲಿಸಲಾಯಿತು; ಸರಕುಗಳನ್ನು ಆಮದು ಮಾಡಿಕೊಳ್ಳುವುದನ್ನು ನಿಷೇಧಿಸಲಿಲ್ಲ. ಆದರೆ ವಿದೇಶಿ ಹಡಗುಗಳು ಸರಕುಗಳನ್ನು ಅಮೆರಿಕನ್ ಬಂದರುಗಳಿಗೆ ಹೊತ್ತು ತಂದು ಖಾಲಿಯಾಗಿ ವಾಪಸ್ಸು ಹೋಗಲು ತಯಾರಿರಲಿಲ್ಲ. ಹೀಗಾಗಿ ಆಮದು ಕಡಿಮೆಯಾಗುತ್ತ ಹೋಯಿತು. ವ್ಯಾಪಾರ ನಿಷೇಧ ಕಾಯಿದೆ ಎರಡು ರೀತಿಯಲ್ಲಿ ಪರಿಣಾಮಕಾರಿಯಾಗುತ್ತದೆ ಎಂದು ಜೆಫರ್‌ಸನ್ ಲೆಕ್ಕ ಹಾಕಿದ್ದನು. ಮೊದಲನೆಯದಾಗಿ: ಅಮೆರಿಕನ್ ಹಡಗುಗಳು ಸಮುದ್ರಯಾನದಲ್ಲಿ ದಾಳಿಗೆ ಈಡಾಗುವುದನ್ನು ತಪ್ಪಿಸಬಹುದು; ಇದರಿಂದ ರಾಷ್ಟ್ರದ ಘನತೆಯೂ ಉಳಿಯುತ್ತದೆ. ಎರಡನೆಯದಾಗಿ: ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳಿಗೆ ಅಮೆರಿಕನ್ ಮಾರುಕಟ್ಟೆಗೆ ಪ್ರವೇಶ ದೊರೆಯದಂತಾಗುತ್ತದೆ ಮತ್ತು ಈ ಎರಡು ದೇಶಗಳಿಗೂ ಅಗತ್ಯವಾಗಿ ಬೇಕಾಗಿರುವ ಅಮೆರಿಕನ್ ಸಾಮಗ್ರಿಗಳು ದೊರಕದೆ ಹೋಗಿ ಕಷ್ಟದ ಪರಿಸ್ಥಿತಿ ಉಂಟಾಗಿ ಆ ದೇಶಗಳ ಪ್ರಜೆಗಳು ತಮ್ಮ ಸರ್ಕಾರಗಳ ಮೇಲೆ ಅಮೆರಿಕ ನೌಕಾ ವ್ಯಾಪಾರ ಧೋರಣೆ/ನಿಲುವನ್ನು ಸುಧಾರಿಸುವಂತೆ ಒತ್ತಾಯ ತರುತ್ತಾರೆ ಎಂದು ಜೆಫರ್‌ಸನ್ ನಿಜವಾಗಿ ನಂಬಿದ್ದನು.

ಜೆಫರ್‌ಸನ್ ಊಹಿಸಿದಂತೆ ಯಾವುದೂ ನಡೆಯಲಿಲ್ಲ. ವ್ಯಾಪಾರ ನಿಷೇಧ ಕಾಯಿದೆ

ದೇಶಕ್ಕೆ ವಿಪತ್ಕಾರಕವಾಯಿತು. ೧೮೦೭ರಲ್ಲಿ ೧೦೮ ಮಿಲಿಯನ್ ಡಾಲರ್ ಗಳಿಸಿದ್ದ ರಫ್ತು ವ್ಯಾಪಾರ ಒಂದೇ ವರ್ಷದಲ್ಲಿ ೨೨ ಮಿಲಿಯನ್ ಡಾಲರ್‌ಗೆ ಕುಸಿಯಿತು. ವ್ಯವಸಾಯ ಮತ್ತು ಕೈಗಾರಿಕಾ ಉತ್ಪನ್ನಗಳಿಗೂ ಪೆಟ್ಟು ಬಿತ್ತು. ನಾವಿಕರು ಕೆಲಸ ಕಳೆದುಕೊಂಡರು. ವರ್ತಕರು ತಾವು ಬೆಳೆಸಿದ ಉದ್ಯಮ ಮುರಿದು ಬೀಳುವುದನ್ನು ನಿಸ್ಸಹಾಯಕರಾಗಿ ನೋಡಬೇಕಾಗಿ ಬಂತು. ವ್ಯಾಪಾರ ನಿಷೇಧ ಕಾಯಿದೆಯನ್ನು ಉಲ್ಲಂಘಿಸಿ ಕಳ್ಳ ವ್ಯಾಪಾರ ಕೆನಡಾ ಗಡಿಪ್ರದೇಶದಲ್ಲಿ ಪ್ರವಾಹದಂತೆ ಭರದಿಂದ ನಡೆಯತೊಡಗಿತು. ಕಾಯಿದೆ ಉಲ್ಲಂಘಿಸಿದವರನ್ನು ಹಿಡಿದು ಶಿಕ್ಷಿಸುವುದು ದುಸ್ಸಾಧ್ಯವಾಗಿತ್ತು. ಅಪರಾಧಿಗಳನ್ನು ವಿಚಾರಣೆಗೆ ಗುರಿಪಡಿಸಿದರೆ ಜ್ಯೂರಿಗಳು ಮತ್ತು ನ್ಯಾಯಾಧೀಶರು ಸರ್ಕಾರದೊಡನೆ ಸಹಕರಿಸುತ್ತಿರಲಿಲ್ಲ. ಒಟ್ಟಿನಲ್ಲಿ ವ್ಯಾಪಾರ ನಿಷೇಧ ಕಾಯಿದೆ ಜಾರಿಗೆ ತಂದದ್ದು ಬಹಳ ದೊಡ್ಡ ತಪ್ಪಾಯಿತು. ಜೆಫರ್‌ಸನ್ ಲಾಭ ಗಳಿಸುವ ಉದ್ದೇಶದಿಂದ ಆಂಗ್ಲರ ಮತ್ತು ಫ್ರೆಂಚರ ಉಪಟಳ ಸಹಿಸಿಕೊಂಡಿರಬಹುದಿತ್ತು ಅಥವಾ ಸೈನ್ಯ ಮತ್ತು ನೌಕಾದಳಗಳನ್ನು ವಿಸ್ತರಿಸಿ, ಬಲಪಡಿಸಿ ಉಪದ್ರ ಕೊಡುತ್ತಿದ್ದವರನ್ನು ಎದುರಿಸಬಹುದಿತ್ತು. ಮೊದಲನೆಯ ವಿಧಾನ ಅನುಸರಿಸಲು ಅವನ ಆತ್ಮಾಭಿಮಾನ ಅಡ್ಡಬಂತು; ಎರಡನೆಯ ವಿಧಾನ ಅನುಸರಿಸಲು ಅವನ ಜುಗ್ಗತನ ಅಡ್ಡಿ ಬಂತು! ಈ ವಿಧಾನಗಳನ್ನು ಅನುಸರಿಸದೆ ಪರಿಸ್ಥಿತಿಯನ್ನು ಹತೋಟಿಗೆ ತರುವ ಉದ್ದೇಶದಿಂದ ಹೆಚ್ಚು ಕಠಿಣವಾದ ನಿರ್ಬಂಧಗಳನ್ನು ಜಾರಿಗೆ ತರಲು ಪ್ರಾರಂಭಿಸಿದನು. ಕೆನಡಾ ಗಡಿಪ್ರದೇಶದಲ್ಲಿ ಕಳ್ಳಸಾಗಾಣಿಕೆ ನಿಲ್ಲಿಸಲು ಸೈನ್ಯದ ಕಾವಲು ಹೆಚ್ಚಿಸಿದನು. ಸುಂಕದ ಅಧಿಕಾರಿಗಳು ನ್ಯಾಯಾಲಯದ ಅನುಮತಿ ಇಲ್ಲದೇ ವರ್ತಕರ ಮಳಿಗೆಗಳನ್ನು ಹೊಕ್ಕು ಕಳ್ಳ ಸಾಗಾಣಿಕೆ ವಸ್ತುಗಳ ಶೋಧನೆ ಮಾಡುವಂತೆ ಆಜ್ಞಾಪಿಸಿದನು. ಈ ನಿರ್ಬಂಧಗಳು ಕಳ್ಳ ವ್ಯಾಪಾರವನ್ನು ನಿಲ್ಲಿಸುವುದರಲ್ಲಿ ವಿಫಲವಾದವು. ಜೆಫರ್‌ಸನ್ ತನ್ನ ಅಧ್ಯಕ್ಷತೆಯ ಕೊನೆಯ ತಿಂಗಳಲ್ಲಿ ಏನೂ ಮಾಡಲು ತಿಳಿಯದೆ ಕೈ ಚೆಲ್ಲಿ ಕುಳಿತನು. ಅವನ ಅಧ್ಯಕ್ಷತೆಯ ಕಡೆಯ ವಾರದಲ್ಲಿ ಕಾಂಗ್ರೆಸ್ ಆ ಕಾಯಿದೆಯನ್ನು ರದ್ದುಗೊಳಿಸಿತು. ಅದರ ಬದಲು ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳೊಡನೆ ಮಾತ್ರ ವ್ಯಾಪಾರ ನಿಷೇಧಿಸಿ ಉಳಿದ ಎಲ್ಲ ದೇಶಗಳೊಡನೆ ವ್ಯಾಪಾರ ವ್ಯವಹಾರ ಎಂದಿನಂತೆ ನಡೆಸಿಕೊಂಡು ಹೋಗಲು ಅನುಮತಿ ನೀಡುವ ಕಾಯಿದೆಯನ್ನು ಜಾರಿಗೆ ತಂದಿತು. ಆ ಎರಡು ದೇಶಗಳ ನಡುವೆ ವ್ಯಾಪಾರ ನಿಷೇಧಿಸಿದ್ದರೂ ಕೂಡ ಮುಂದೆ ಅವು ತಮ್ಮ ಧೋರಣೆಯನ್ನು ತಿದ್ದಿಕೊಂಡು ಅಮೆರಿಕನ್ನರ ಹಕ್ಕುಗಳನ್ನು ಉಲ್ಲಂಘನೆ ಮಾಡುವುದನ್ನು ನಿಲ್ಲಿಸಿದರೆ ನಿಷೇಧಾಜ್ಞೆಯನ್ನು ರಾಷ್ಟ್ರಾಧ್ಯಕ್ಷನು ರದ್ದು ಮಾಡಬಹುದೆಂದು ಆ ಕಾಯಿದೆಯಲ್ಲಿ ನಿರೂಪಿಸಲಾಗಿತ್ತು.

❑

ಅಧ್ಯಾಯ – ೬

ವ್ಯಾಡಿಸನ್‌ನಿಂದ ಹ್ಯಾರಿಸನ್‌ವರೆಗೆ

ವ್ಯಾಪಾರ ನಿಷೇಧ ಕಾಯದೆ (The Embargo Act) ವಿಫಲವಾದರೂ ೧೮೦೮ರಲ್ಲಿ ನಡೆದ ಚುನಾವಣೆಯಲ್ಲಿ ರಿಪಬ್ಲಿಕನ್ನರೇ ಬಹುಮತ ಗಳಿಸಿದರು. ಒಟ್ಟು ೧೭೫ ಎಲೆಕ್ಟರಲ್ ಮತಗಳಲ್ಲಿ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದ್ದ ರಿಪಬ್ಲಿಕನ್ ಅಭ್ಯರ್ಥಿ ಜೇಮ್ಸ್ ಮೆಡಿಸನ್ (James Madison) ೧೨೨ ಮತಗಳನ್ನು ಪಡೆದು ಅಧ್ಯಕ್ಷನಾಗಿ ಆಯ್ಕೆಗೊಂಡನು. ಕಾಂಗ್ರೆಸ್ ಮತ್ತು ಸೆನೆಟ್‌ಗಳಲ್ಲೂ ರಿಪಬ್ಲಿಕನ್ನರು ಬಹುಮತ ಗಳಿಸಿದರು.

ಮೆಡಿಸನ್‌ನ ಅಧ್ಯಕ್ಷತೆ[೧]

ಮೆಡಿಸನ್ ಅಷ್ಟೇನೂ ಎತ್ತರವಲ್ಲದ, ತೆಳ್ಳನೆಯ, ಬಲಹೀನನಂತೆ ಕಾಣುತ್ತಿದ್ದ, ಬೋಳೆ ಸ್ವಭಾವದ ವ್ಯಕ್ತಿಯಾಗಿದ್ದನು. ಆದರೂ ಅನೇಕ ವಿಧಗಳಲ್ಲಿ ಇವನು ಇತರರಿಗಿಂತ ಆಳವಾಗಿ ಚಿಂತಿಸುವ, ನ್ಯಾಯಬದ್ಧವಾಗಿ ಕರ್ತವ್ಯ ಮಾಡುವ ನಿಷ್ಠೆಯಿಂದ ತನ್ನ ತತ್ವಗಳನ್ನು ಪಾಲಿಸುವ ಗುಣಗಳನ್ನು ಹೊಂದಿದ್ದನು. ಅವನಿಗೂ ಸಹ ದೇಶದ ಆಗಿನ ಸಮಸ್ಯೆಗಳನ್ನು ಹೇಗೆ ಬಗೆಹರಿಸಬೇಕೆನ್ನುವುದು ಹೊಳೆಯಲಿಲ್ಲ. ೧೮೧೦ರಲ್ಲಿ ಅಧ್ಯಕ್ಷ ಮೆಡಿಸನ್ ನೆಪೋಲಿಯನ್ನನ ಕುಟಿಲಯುಕ್ತಿಗೆ ಸುಲಭವಾಗಿ ಮೋಸಹೋದನು. ಅಮೆರಿಕ ವ್ಯಾಪಾರಿ ನೌಕೆಗಳನ್ನು ವಶಪಡಿಸಿಕೊಂಡು, ಅಮೆರಿಕನ್ನರ ಹಕ್ಕುಗಳನ್ನು ಕಡೆಗಣಿಸುತ್ತಿದ್ದ ಶತ್ರುಗಳನ್ನು ಶಿಕ್ಷಿಸುವುದರಲ್ಲಿ ಪರಿಣಾಮಕಾರಿಯಾಗಿ, ಅಮೆರಿಕಕ್ಕೆ ಹೆಚ್ಚಿನ ಹಾನಿಯಾಗದಂಥ ಒಂದು ಕಾಯಿದೆಯನ್ನು ಕಾಂಗ್ರೆಸ್ ಅಂಗೀಕರಿಸಿತು. 'ಮೇಕನ್‌ನ ಎರಡನೆಯ ಕಾಯಿದೆ' (Macon's Bill Number 2) ಎಂದು ಕರೆಯಲ್ಪಟ್ಟ ಈ ಕಾಯಿದೆ ಇಂಗ್ಲೆಂಡನ್ನು ಪುನಃ ವ್ಯಾಪಾರ ನಿಷೇಧಕ್ಕೆ ಒಳಪಡಿಸಿ ಫ್ರಾನ್ಸ್‌ಗೆ ರಿಯಾಯಿತಿ ತೋರಿಸಿ ನಿಷೇಧಾಜ್ಞೆಯನ್ನು ರದ್ದುಗೊಳಿಸಿತು. ಇಂಗ್ಲೆಂಡ್ ಈ ಭೇದಭಾವದ ರಾಜಕೀಯವನ್ನು ಸಹಿಸಲಾರದೆ ಅಮೆರಿಕನ್ ವ್ಯಾಪಾರಿ ಹಡಗುಗಳ ಮೇಲೆ ದಾಳಿ ಪ್ರಾರಂಭಿಸಿತು.

ಅದೇ ಸಮಯದಲ್ಲಿ ಅಮೆರಿಕದ ವಾಯುವ್ಯ ಪ್ರಾಂತದಲ್ಲಿ ಶಾನೀ (Shawnee) ಇಂಡಿಯನ್ನರ ಮುಖ್ಯಸ್ಥನಾದ ಟೆಕ್ಯೂಮ್‌ಶ್ (Tecumesh) ನ ನಾಯಕತ್ವದಲ್ಲಿ ತಮ್ಮ ಭೂಮಿಯನ್ನು ಅತಿಕ್ರಮಿಸಿ ಆಕ್ರಮಿಸಿಕೊಳ್ಳುತ್ತಿದ್ದ ಬಿಳಿಯರ ವಿರುದ್ಧವಾಗಿ ಒಹಾಯೊ,

---

೧. ಜೇಮ್ಸ್ ಮೆಡಿಸನ್ ಅಮೆರಿಕದ ನಾಲ್ಕನೆಯ ಅಧ್ಯಕ್ಷ

ಇಂಡಿಯಾನ ಮತ್ತು ಮಿಚಿಗನ್ ಪ್ರದೇಶಗಳಲ್ಲಿ ಇಂಡಿಯನ್ನರು ದಂಗೆ ಎದ್ದರು. ೧೮೧೧ರಲ್ಲಿ ಇಂಡಿಯಾನ ಪ್ರದೇಶದ ಗವರ್ನರ್ ಆಗಿದ್ದ ವಿಲಿಯಂ ಹೆನ್ರಿ ಹ್ಯಾರಿಸನ್, ಟೆಕ್ಯುಮ್‌ಶ್‌ನನ್ನು (Tecumesh) ಎದುರಿಸಲು ಒಂದು ಸೈನ್ಯದ ತುಕಡಿಯನ್ನು ಕಳುಹಿಸಿದನು. ಟಿಪ್ಪೆಕನೊ (Tippecanoe) ಎಂಬ ಸ್ಥಳದಲ್ಲಿ ನಡೆದ ಈ ಕದನದಲ್ಲಿ ಹ್ಯಾರಿಸನ್ ಕಳುಹಿಸಿದ ಸೈನ್ಯ ಒಂದು ರೀತಿಯ ಅಪರಿಪೂರ್ಣ ವಿಜಯ ಗಳಿಸಿತು. ಹ್ಯಾರಿಸನ್ ಸೈನ್ಯದ ಮೇಲೆ ದುಡುಕಿ ದಾಳಿ ಮಾಡಿದವನು ಟೆಕ್ಯೂಮ್‌ಶ್‌ನ ತಮ್ಮ ಟೆನ್‌ಸ್ಕ್ವಾಟವ (Tenskwatwa) ಇವನಿಗೆ 'ಪ್ರವಾದಿ' ಎಂಬ ಅಡ್ಡ ಹೆಸರಿತ್ತು. ಈ ಹೆಸರಿಗೆ ಕಾರಣ ಅವನು ಬಿಳಿಯರ ಮೇಲೆ ಧರ್ಮಯುದ್ಧವನ್ನು ಸಾರಿ ತನ್ನ ಜನರಿಗೆ ಬಿಳಿಯರನ್ನು ಅನುಕರಣೆ ಮಾಡಬಾರದು, ಬಿಳಿಯರು ಒದಗಿಸುತ್ತಿದ್ದ ವ್ಹಿಸ್ಕಿ ಇತ್ಯಾದಿ ಮಾದಕ ವಸ್ತುಗಳನ್ನು ಸೇವಿಸಬಾರದು ಮತ್ತು ತಮ್ಮ ಸ್ವಂತ ಸಂಸ್ಕೃತಿಯನ್ನು ವೀರ್ಯವತ್ತಾಗಿ ಪುನರುತ್ಥಾನ ಮಾಡಬೇಕೆಂದು ಪ್ರಚಾರ ಮಾಡುತ್ತಿದ್ದನು. ದಾಳಿ ನಡೆದಾಗ ಅವನ ಅಣ್ಣ ಬೇರೆಲ್ಲೊ ಕೆಲಸದ ಮೇಲೆ ಹೋಗಿದ್ದರಿಂದ ಅಪಾಯದಿಂದ ಪಾರಾದನು. ಅವನ ತಮ್ಮನಿಗೆ ಹೋಲಿಸಿದರೆ ಟೆಕ್ಯೂಮ್‌ಶ್ ನಿಜಕ್ಕೂ ಪ್ರತಿಭಾಶಾಲಿ. ಉತ್ತಮ ವಾಗ್ಮಿಯೂ ಮತ್ತು ಮಹಾಸಂಘಟನಕಾರನೂ ಆಗಿದ್ದನು. ಅವನಿಗೆ ತನ್ನ ಜನರ ಅಂತರಾಳವನ್ನು ಹೊಕ್ಕು ಅವರ ಅಗತ್ಯಗಳನ್ನು, ಆಸೆ-ಆಕಾಂಕ್ಷೆಗಳನ್ನು ತಿಳಿದುಕೊಳ್ಳುವ ಶಕ್ತಿ ಇತ್ತು. ಈ ಅಣ್ಣ ತಮ್ಮಂದಿರ ಜೋಡಿ ಬಿಳಿಯರಲ್ಲಿ ಭಯ ಹುಟ್ಟಿಸುವಂತಿತ್ತು. ಇವರಿಬ್ಬರೂ ಕೂಡಿ ಅನೇಕ ಇಂಡಿಯನ್‌ರ ಬುಡಕಟ್ಟುಗಳನ್ನು ಒಂದುಗೂಡಿಸಿ ಒಗ್ಗಟ್ಟಿನಿಂದ ಹೋರಾಡಿ ತಮ್ಮ ಭೂಮಿಯನ್ನು ಅತಿಕ್ರಮಿಸಿದ ಬಿಳಿಯರನ್ನು ಹೊಡೆದೋಡಿಸಲು ಸಿದ್ಧತೆಗೊಳ್ಳುತ್ತಿದ್ದರು. ಭಯಗ್ರಸ್ತರಾದ ಬಿಳಿಯರು ಇಂಡಿಯನ್ನರ ಸಂಘಟನೆ ಬಲಿಷ್ಠಗೊಳ್ಳುವುದಕ್ಕೆ ಮುಂಚೆಯೆ ಅವರ ಮೇಲೆ ದಾಳಿ ಮಾಡಿ ಮೇಲೆ ಹೇಳಿದ ಟಿಪ್ಪೆಕನೊ ಕದನದಲ್ಲಿ ಬುಡಕಟ್ಟುಗಳ ಸಂಘಟನೆಯನ್ನು ಮುರಿದುಹಾಕಿದರು. ಹತಾಶರಾದ ಇಂಡಿಯನ್ನರು ಮೂರಾಬಟ್ಟೆಯಾಗಿ ಸಣ್ಣ ಸಣ್ಣ ಗುಂಪುಗಳು ಆಗಾಗ ಬಿಳಿಯರ ಮೇಲೆ ಬಿದ್ದು ಸಾವು ನೋವುಗಳನ್ನುಂಟುಮಾಡುತ್ತಿದ್ದರು. ಕಾಂಗ್ರೆಸ್ ಇಂಡಿಯನ್ನರ ದಾಳಿಗಳನ್ನು ಬ್ರಿಟಿಷರ ಪ್ರಚೋದನೆಯಿಂದ ಉಂಟಾದವು ಎಂದು ತಿಳಿದು ಇಂಗ್ಲೆಂಡಿನ ಮೇಲೆ ಯುದ್ಧ ಸಾರಬೇಕೆಂದು ಪ್ರಚಾರ ಮಾಡತೊಡಗಿತು. ಕಾಂಗ್ರೆಸ್‌ನಲ್ಲಿ 'ರಹದ್ದು'ಗಳೆಂದು (War Hawks) ಹೆಸರು ಪಡೆದಿದ್ದ ಕೆಲವು ಸದಸ್ಯರು ಮತ್ತು ಅವರ ನಾಯಕ ಪ್ರಜಾಪ್ರತಿನಿಧಿ ಸಭಾಧ್ಯಕ್ಷ ಹೆನ್ರಿ ಕ್ಲೇ ಸೈನ್ಯ ಮತ್ತು ನೌಕಾದಳವನ್ನು ವಿಸ್ತರಿಸಿ ಬಲಪಡಿಸಬೇಕೆಂದು ಅಧ್ಯಕ್ಷ ಮೆಡಿಸನ್‌ನ್ನು ಒತ್ತಾಯಿಸಿದರು. ದೇಶದ ರಕ್ಷಣಾಪಡೆಗಳನ್ನು ವಿಸ್ತರಿಸಿ, ಬಲಪಡಿಸಿ ಬ್ರಿಟಿಷರ ಮೇಲೆ ಯುದ್ಧ ಸಾರದೆ ಹೋದರೆ, ಮರುಚುನಾವಣೆಯಲ್ಲಿ ಅವನನ್ನು ವಿರೋಧಿಸುವುದಾಗಿ ಬೆದರಿಕೆ ಹಾಕಿದರು. ೧೮೧೨ರ ಜೂನ್ ತಿಂಗಳಲ್ಲಿ ಅಧ್ಯಕ್ಷ ಮೆಡಿಸನ್ ಅವರ ಒತ್ತಾಯಕ್ಕೆ ಮಣಿದು, ಬ್ರಿಟಿಷರು ನಡೆಸಿದ ಅಮೆರಿಕನ್ನರ

ಹಕ್ಕುಗಳ ಉಲ್ಲಂಘನೆ, ಸಮುದ್ರಮಾರ್ಗದಲ್ಲಿ ಅಮೆರಿಕನ್ ಹಡಗುಗಳನ್ನು ತಡೆದು ನಿಲ್ಲಿಸಿ ಶೋಧಿಸುವುದು ಮತ್ತು ಇಂಡಿಯನ್ನರನ್ನು ದಂಗೆ ಏಳುವಂತೆ ಪ್ರಚೋದಿಸುವುದು – ಈ ಕಾರಣಗಳಿಗಾಗಿ ಬ್ರಿಟಿಷರ ಮೇಲೆ ಯುದ್ಧ ಸಾರಬೇಕೆಂದು ಕಾಂಗ್ರೆಸ್‌ಗೆ ತಿಳಿಸಿದನು. ಹದಿನೆಂಟು ದಿನಗಳ ನಂತರ ಕಾಂಗ್ರೆಸ್ ಇಂಗ್ಲೆಂಡಿನ ಮೇಲೆ ಯುದ್ಧ ಸಾರಿತು.

ಅಮೆರಿಕದಿಂದ ಇಂಗ್ಲೆಂಡಿಗೆ ಮೂರು ಸಾವಿರ ಮೈಲಿ ದೂರ. ಅಮೆರಿಕ ಯುದ್ಧ ಸಾರಿದ ಸಮಯದಲ್ಲಿ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳ ನಡುವೆ ದೊಡ್ಡ ಯುದ್ಧ ನಡೆಯುತ್ತಿತ್ತು. ಬ್ರಿಟಿಷರ ವಶದಲ್ಲಿದ್ದ ಕೆನಡಾಕ್ಕಿಂತ ಅಮೆರಿಕದಲ್ಲಿ ಜನಸಂಖ್ಯೆ ಹೆಚ್ಚಾಗಿತ್ತು. ಆದರೂ ಅಮೆರಿಕದ ಸೈನ್ಯ ಚಿಕ್ಕದಾಗಿತ್ತು. ಸೈನ್ಯಕ್ಕೆ ಬೇಕಾಗುವಷ್ಟು ಯುದ್ಧ ಸಾಮಗ್ರಿಗಳು ಇರಲಿಲ್ಲ. ಮೇಲಾಗಿ, ಸೈನಿಕರಿಗೆ ಸರಿಯಾದ ತರಬೇತಿ ಇರಲಿಲ್ಲ. ಸಮರ್ಥನಾದ ಸೈನ್ಯಾಧಿಕಾರಿಯ ಕೊರತೆಯಿಂದ ಸೈನ್ಯ ಕಾರ್ಯಾಚರಣೆಗೆ ಖಚಿತವಾದ ಗೊತ್ತು ಗುರಿ ಇರಲಿಲ್ಲ. ಬ್ರಿಟಿಷರ ನೌಕಾದಳ ಬಹಳ ಶಕ್ತಿಯುತವಾಗಿತ್ತು. ಆರ್ಥಿಕವಾಗಿ ಆಗ ಅಮೆರಿಕ ಒಳ್ಳೆಯ ಸ್ಥಿತಿಯಲ್ಲಿರಲಿಲ್ಲ. ಯುದ್ಧದ ಬಗ್ಗೆ ಜನರಲ್ಲಿ ಭಿನ್ನಾಭಿಪ್ರಾಯವಿತ್ತು. ನ್ಯೂ ಇಂಗ್ಲೆಂಡ್ ಪ್ರಾಂತದವರು ಯುದ್ಧವನ್ನು ತೀವ್ರವಾಗಿ ವಿರೋಧಿಸಿದರು. ಈ ಯುದ್ಧಕ್ಕೆ ಅವರು 'ಮೆಡಿಸನ್ನನ ಯುದ್ಧ' (Madison's war) ಎಂಬ ಅಡ್ಡ ಹೆಸರಿಟ್ಟಿದ್ದರು.

ಶತ್ರುವಿನ ಮೇಲೆ ದಾಳಿ ಮಾಡುವುದಾದರೆ ಕೆನಡಾಕ್ಕೆ ಮುತ್ತಿಗೆ ಹಾಕಬೇಕು; ಕೆನಡಾ ಕೈವಶವಾದರೆ ಅಮೆರಿಕ ಬಹಳ ವಿಸ್ತಾರಗೊಳ್ಳುತ್ತದೆ ಎಂದು ಕಾಂಗ್ರೆಸ್ಸಿನ 'ರಣಹದ್ದು'ಗಳು ಹವಣಿಸಿದ್ದರು. ಆದರೆ ಸೈನ್ಯಾಧಿಕಾರಿಗಳಿಗೆ ಮತ್ತು ಸೈನಿಕರಿಗೆ ಕೆನಡಾವನ್ನು ವಶಪಡಿಸಿಕೊಳ್ಳುವ ಮನಸ್ಸಾಗಲೀ ಅಥವಾ ಸಾಮರ್ಥ್ಯವಾಗಲೀ ಇರಲಿಲ್ಲ. ಸೈನ್ಯದ ಈ ಪರಿಸ್ಥಿತಿಗೆ ಉದಾಹರಣೆ ೧೮೧೨ರಲ್ಲಿ ಕೆನಡಿಯನ್ನರು ಡೆಟ್ರಾಯಿಟ್ ಮೇಲೆ ದಾಳಿ ಮಾಡಿದಾಗ ಜನರಲ್ ವಿಲಿಯಂ ಹಲ್ (General William Hull)ನ ಸೈನ್ಯ ಒಂದು ಗುಂಡನ್ನೂ ಹಾರಿಸದೆ ಶರಣಾಗತವಾಯಿತು! ಅಮೆರಿಕನ್ ಸೈನ್ಯಾಧಿಕಾರಿಗಳು ಕೆನಡಾದ ಮಾಂಟ್ರಿಯಾಲ್ ಮೇಲೆ ದಾಳಿ ಮಾಡಲು ಸೈನ್ಯಕ್ಕೆ ಆಜ್ಞೆ ಮಾಡಿದಾಗ ನ್ಯೂಯಾರ್ಕ್ ಸೈನ್ಯದ ತುಕಡಿ ಕೆನಡಾ ಗಡಿಯನ್ನು ದಾಟಲು ನಿರಾಕರಿಸಿತು!

ಅಮೆರಿಕದ ನೈತಿಕ ಸ್ಥೈರ್ಯವನ್ನು ಆ ಸಂದಿಗ್ಧ ಸಮಯದಲ್ಲಿ ಕಾಪಾಡಿದ ಕೀರ್ತಿ ಫಿರಂಗಿಗಳನ್ನು ಜೋಡಿಸಿ ಮಾಡಿದ ಯುದ್ಧ ನಾವೆಗಳ ತಂಡಕ್ಕೆ ಸಲ್ಲಬೇಕು. ಈ ಚಿಕ್ಕ ನಾವೆಗಳು ಬ್ರಿಟಿಷ ನೌಕಾದಳಕ್ಕೆ ಸಾಕಷ್ಟು ಹಾನಿ ಮಾಡಿದವು. ಆದರೆ ಬ್ರಿಟಿಷ್ ನೌಕಾಪಡೆ ಅಮೆರಿಕದ ಬಂದರುಗಳಿಗೆ ತಡೆಯೊಡ್ಡಿ ವ್ಯಾಪಾರದ ಹಡಗುಗಳು ಹೊರಬಾರದಂತೆ ಮಾಡಿದ್ದನ್ನು ಭೇದಿಸಲು ಈ ಚಿಕ್ಕ ದೋಣಿಗಳಿಗೆ ಸಾಧ್ಯವಾಗಲಿಲ್ಲ. ಇದರಿಂದ ಅಮೆರಿಕದ ಕಡಲಾಚೆಯ ವ್ಯಾಪಾರ ವ್ಯವಹಾರಗಳು ನಿಂತುಹೋದವು.

೧೮೧೩ರಲ್ಲಿ ಅಮೆರಿಕದ ಪರಿಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿತು. ಈರಿ ಸರೋವರದಲ್ಲಿ (Lake Eriel) ಕಾವಲಿದ್ದ ಬ್ರಿಟಿಷ್ ನೌಕಾತಂಡವನ್ನು ಆಲಿವರ್ ಪೆರ್ರಿ (Oliver Perry) ಯ ನಾವೆಗಳು ಸೋಲಿಸಿದವು. ತಾನು ಬ್ರಿಟಿಷರನ್ನು ಸೋಲಿಸಿದ ಸುದ್ದಿ ತಿಳಿಸಲು ಅವನು ಕಳುಹಿಸಿದ ಸಂಕ್ಷಿಪ್ತ ಸಂದೇಶ ಪ್ರಖ್ಯಾತಿಯಾಗಿದೆ: 'ನಾವು ಶತ್ರುಗಳನ್ನು ಸಂಧಿಸಿದೆವು; ಅವರು ನಮ್ಮವರಾಗಿದ್ದಾರೆ!' ಥೇಮ್ಸ್ ಕದನದಲ್ಲಿ ವಿಲಿಯಂ ಹೆನ್ರಿ ಹ್ಯಾರಿಸನ್ (William Henry Harrison) ಬ್ರಿಟಿಷರು ಮತ್ತು ಅವರ ಜೊತೆ ಸೇರಿದ್ದ ಇಂಡಿಯನ್ನರ ನಾಯಕನಾಗಿದ್ದ ಟೆಕ್ಯೂಮ್‌ಶ್‌ನನ್ನು ಸೋಲಿಸಿದನು. ಈ ಕದನದಲ್ಲಿ ಇಂಡಿಯನ್ನರ ನಾಯಕನಾಗಿದ್ದ ಪ್ರತಿಭಾವಂತ ಟೆಕ್ಯೂಮ್‌ಶ್ ಮರಣ ಹೊಂದಿದನು. ಇದರಿಂದ ಅಮೆರಿಕ ವಾಯುವ್ಯ ಪ್ರದೇಶ ಬ್ರಿಟಿಷರ ದಾಳಿಯಿಂದ ಪಾರಾಯಿತು.

೧೮೧೪ರ ಆಗಸ್ಟ್ ತಿಂಗಳಲ್ಲಿ ನಾಲ್ಕು ಸಾವಿರ ನುರಿತ ಸೈನಿಕರ ಪಡೆ ಜನರಲ್ ರಾಬರ್ಟ್ ರಾಸ್ (General Robert Ross)ನ ಸೇನಾಧಿಪತ್ಯದಲ್ಲಿ ಬರ್ಮ್ಯುಡ (Bermuda)ದಿಂದ ಚೆಸಪೀಕ್ ಕೊಲ್ಲಿಗೆ ಬಂದು ಅಲ್ಲಿಂದ ಮೇರಿಲ್ಯಾಂಡ್‌ನಲ್ಲಿ ಪಾಟುಕ್ಸೆಂಟ್ ನದಿ (Patuxent river) ಮುಖಪ್ರದೇಶದಲ್ಲಿ ಬಂದಿಳಿಯಿತು. ಆ ನದಿ ಪ್ರದೇಶದಲ್ಲಿ ಕಾವಲಿದ್ದ ಅಮೆರಿಕನ್ ಫಿರಂಗಿ ದೋಣಿಗಳು (Gun boats) ಬ್ರಿಟಿಷರಿಂದ ತಪ್ಪಿಸಿಕೊಂಡು ನದಿಯ ಎದುರು ದಿಕ್ಕಿನಲ್ಲಿ ಮುಂದಕ್ಕೆ ಹೋದವು. ನಂತರ ಬೆನ್ನಟ್ಟಿ ಬರುತ್ತಿದ್ದ ಬ್ರಿಟಿಷ್ ಯುದ್ಧ ನೌಕೆಗಳಿಗೆ ವಶವಾಗುವುದನ್ನು ತಪ್ಪಿಸಲು ತಮ್ಮ ದೋಣಿಗಳಿಗೆ ಬೆಂಕಿಯಿಟ್ಟು ಆಸ್ಫೋಟಿಸಿದರು. ಬ್ರಿಟಿಷ್ ಸೇನಾಪಡೆ ಶೀಘ್ರಗತಿಯಿಂದ ಚಲಿಸಿ ರಾಜಧಾನಿ ವಾಷಿಂಗ್‌ಟನ್‌ಗೆ ಮುತ್ತಿಗೆ ಹಾಕಿತು. ಹೀಗೆ ವಾಷಿಂಗ್‌ಟನ್ ವಶಪಡಿಸಿಕೊಂಡ ಬ್ರಿಟಿಷ್ ಸೈನ್ಯ ಶ್ವೇತಭವನವೂ ಸೇರಿದಂತೆ ಎಲ್ಲ ಸರ್ಕಾರಿ ಕಟ್ಟಡಗಳಿಗೂ ಬೆಂಕಿಯಿಟ್ಟಿತು. ಬೆಂಕಿ ಬಿದ್ದ ಕಟ್ಟಡಗಳು ಉರಿದು ನೆಲಸಮವಾದವು. ಉರಿಯುತ್ತಿದ್ದ ಶ್ವೇತಭವನದಿಂದ ಅಧ್ಯಕ್ಷ ಮೆಡಿಸನ್ನನ ಹೆಂಡತಿ ಕಲಾವಿದ ಗಿಲ್ಬರ್ಟ್ ಸ್ಟೂವರ್ಟ್ (Gilbert Stuart) ರಚಿಸಿದ ಜಾರ್ಜ್ ವಾಷಿಂಗ್‌ಟನ್‌ನ ತೈಲವರ್ಣದ ಭಾವಚಿತ್ರವನ್ನು ಹೇಗೋ ಮಾಡಿ ಉಳಿಸಿ ಕೊಂಡಳು!

ಬ್ರಿಟಿಷರ ವಿಜಯದ ಸರಣಿ ಇಲ್ಲಿಗೆ ಮುಗಿಯಿತು. ಬ್ರಿಟಿಷ್ ಸೈನ್ಯ ಬಾಲ್ಟಿಮೋರನ್ನು ಮುತ್ತಿಗೆ ಹಾಕಿದಾಗ ಅಲ್ಲಿಯ ರಕ್ಷಣಾದಳದವರು ಅವರನ್ನು ಅಡ್ಡಗಟ್ಟಿ ಹೋರಾಡಿದರು. ಈ ಹೋರಾಟದಲ್ಲಿ ಜನರಲ್ ರಾಸ್ (Ross) ಮರಣ ಹೊಂದಿದನು. ಬಾಲ್ಟಿಮೋರನ್ನು ವಶಪಡಿಸಿಕೊಳ್ಳಲಾರದೆ ಬ್ರಿಟಿಷ್ ಸೈನ್ಯ ಪಟಾಪ್‌ಸ್ಕೊ ನದಿಯ ಮೇಲ್ಭಾಗದ ಪ್ರದೇಶವನ್ನು ಆಕ್ರಮಿಸಿ ಅಲ್ಲಿಂದ ಮೆಕ್‌ಹೆನ್ರಿ ಕೋಟೆ (Fort McHenry)ಯ ಮೇಲೆ ದಾಳಿ ನಡೆಸಿದರು. ಇಪ್ಪತ್ತನಾಲ್ಕು ಘಂಟೆಯ ಅವಧಿಯಲ್ಲಿ ಏನಿಲ್ಲವೆಂದರೂ ೧೮೦೦ ಬಾರಿ ಫಿರಂಗಿ ಗುಂಡು ಹಾರಿಸಿ ಆ ಕೋಟೆಯನ್ನು ಛಿದ್ರಗೊಳಿಸಲು ಪ್ರಯತ್ನ ಮಾಡಿದರು.

ಈ ಭಯಂಕರ ದಾಳಿ ನಡೆಯುತ್ತಿರುವಾಗಲೇ ತಾತ್ಕಾಲಿಕವಾಗಿ ಬ್ರಿಟಿಷರ ನೌಕೆಯಲ್ಲಿ ಬಂಧಿತನಾಗಿದ್ದ ಅಮೆರಿಕನ್ ಪ್ರಜೆ ಫ್ರಾನ್ಸಿಸ್ ಸ್ಕಾಟ್‌ಕೀ (Francis Scott Key) ರಾತ್ರಿ ಎಲ್ಲ ಎಚ್ಚರವಾಗಿದ್ದು ಜರುಗುತ್ತಿದ್ದ ಯುದ್ಧವನ್ನು ಆತಂಕದಿಂದ ವೀಕ್ಷಿಸುತ್ತಿದ್ದನು. ನಸುಕಿನಲ್ಲಿ ಅವನು ತನ್ನ ದುರ್ಬೀನಿನಿಂದ ನೋಡಿದಾಗ ಫಿರಂಗಿ ದಾಳಿಯಿಂದ ಜರ್ಝರಿತವಾಗಿದ್ದ ಮೆಕ್‌ಹೆನ್ರಿ ಕೋಟೆಯ ಬುರುಜಿನ ಮೇಲೆ ನಕ್ಷತ್ರಗಳು ಮತ್ತು ಕೆಂಪು ಹಾಗೂ ಬಿಳಿ ಪಟ್ಟೆಗಳಿಂದ ಶೋಭಿಸುತ್ತಿದ್ದ ಅಮೆರಿಕನ್ ರಾಷ್ಟ್ರಧ್ವಜ ಹೆಮ್ಮೆಯಿಂದ ಹಾರಾಡುತ್ತಿರುವುದನ್ನು ಕಂಡನು. ರಾತ್ರಿಯೆಲ್ಲ ಕಣ್ಣು ಕೋರೈಸುವಂತೆ ಆಕಾಶದಿಂದ ಎರಗುತ್ತಿದ್ದ ಕ್ಷಿಪಣಿಗಳು (rockets) ಮತ್ತು ಕಿವುಡಾಗಿಸುವಂತೆ ಶಬ್ದ ಮಾಡುತ್ತ ಆಸ್ಫೋಟಗೊಳ್ಳುತ್ತಿದ್ದ ಬಾಂಬುಗಳು ಅವನಿಗೆ ಕೋಟೆಯ ರಕ್ಷಣಾಪಡೆ ಶತ್ರು ವಶವಾಗದಂತೆ ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ ಎನ್ನುವುದಕ್ಕೆ ಸಾಕ್ಷಿಯಾಗಿದ್ದವು. ಬೆಳಗಾದ ಮೇಲೆ ಪುನಃ ಅವನು ಆಚೆ ನೋಡಿದಾಗ ಕೋಟೆಯ ಬುರುಜಿನ ಮೇಲೆ ಅಮೆರಿಕನ್ ಧ್ವಜ ಇನ್ನೂ ಹಾರಾಡುತ್ತಿರುವುದು ಕಂಡು ದೇಶಪ್ರೇಮ ಉಕ್ಕಿ ಬಂದು ಕೂಡಲೇ ತನ್ನ ಜೇಬಿನಲ್ಲಿದ್ದ ಹಳೆಯ ಕಾಗದವನ್ನು ತೆಗೆದು ಅದರ ಮೇಲೆ 'The Star Spangled Banner' ಎಂದು ಈಗ ಪ್ರಸಿದ್ಧವಾಗಿರುವ ಕವನವನ್ನು ರಚಿಸಿದನು. ಕಾಲ ಕ್ರಮದಲ್ಲಿ ಈ ಕವನ ಅಮೆರಿಕದ ರಾಷ್ಟ್ರಗೀತೆಯಾಗಿ ಅಂಗೀಕರಿಸಲ್ಪಟ್ಟಿತು.

ಬಾಲ್ಟಿಮೋರ್ ರಕ್ಷಣಾಪಡೆಯನ್ನು ಸೋಲಿಸಲಾರದೆ ಬ್ರಿಟಿಷ್ ಸೈನ್ಯ ಹಿಂದಿರುಗಿತು. ರಾಜಧಾನಿ ವಾಷಿಂಗ್‌ಟನ್ ಪಟ್ಟಣವನ್ನು ಬ್ರಿಟಿಷರು ಹಾಳುಗೆಡವಿದ್ದು ಅಮೆರಿಕದ ಪ್ರಜೆಗಳಿಗೆ ಆಘಾತ ಉಂಟುಮಾಡಿತ್ತು. ಬ್ರಿಟಿಷರ ವಿರುದ್ಧ ಹೋರಾಡುವ ಅವರ ನಿರ್ಧಾರ ಮತ್ತಷ್ಟು ದೃಢಪಟ್ಟಿತು. ಸಾವಿರಾರು ಜನ ಸೈನ್ಯಕ್ಕೆ ಸೇರಲು ಮುಂದೆ ಬಂದರು. ಅಮೆರಿಕದ ಉತ್ತರ ಯುದ್ಧ ಕ್ಷೇತ್ರದಲ್ಲಿ ಬ್ರಿಟಿಷ್ ಸೈನ್ಯ ಜನರಲ್ ಜಾರ್ಜ್ ಪ್ರಿವೋಸ್ಟ್ (general George Prevost) ಸೈನ್ಯಾಧಿಪತ್ಯದಲ್ಲಿ ಕಾರ್ಯಾಚರಣೆ ನಡೆಸಿತ್ತು. ಚಾಮ್‌ಪ್ಲೇನ್ ಸರೋವರದ (Lake Champlain) ಪಶ್ಚಿಮ ದಡದಲ್ಲಿದ್ದ ಪ್ಲಾಟ್ಸ್‌ಬರ್ಗ್ (Plattsburg) ಊರಿನ ಬಳಿ ಹನ್ನೊಂದು ಸಾವಿರ ಬ್ರಿಟಿಷ್ ಸೈನಿಕರನ್ನು ಜನರಲ್ ಅಲೆಕ್ಸಾಂಡರ್ ಮೆಕಾಂಬ್‌ನ (General Alexander Macomb) ಸೈನ್ಯಾಧಿಪತ್ಯದಲ್ಲಿ ೩೩೦೦ ಅಮೆರಿಕನ್ ಸೈನಿಕದಳ ಎದುರಿಸಿತು. ಆ ಹೊತ್ತಿಗೆ ಅಮೆರಿಕನ್ ಸೈನ್ಯ ರಕ್ಷಣಾಪಿಧಾನಗಳಲ್ಲಿ ಸುರಿತ ಸೈನಿಕರಿಂದ ಕೂಡಿತ್ತು. ಜನರಲ್ ಪ್ರಿವೋಸ್ಟ್ ಬ್ರಿಟಿಷ್ ನೌಕಾದಳದ ಸಹಾಯ ಕೋರಿದ್ದನು. ಅದರಂತೆ ನಾಲ್ಕು ಬ್ರಿಟಿಷ್ ಯುದ್ಧ ನೌಕೆಗಳು ಮತ್ತು ಹನ್ನೆರಡು ಫಿರಂಗಿ ದೋಣಿಗಳು ಅವನ ಸಹಾಯಕ್ಕೆ ಬಂದವು. ಆದರೆ ಕ್ಯಾಪ್ಟನ್ ಥಾಮಸ್ ಮ್ಯಾಕ್‌ಡನೋ (Captain Thomas MacDonough) ಕೈಕೆಳಗಿನ ಅಮೆರಿಕನ್ ನೌಕಾಪಡೆ ಬ್ರಿಟಿಷ್ ಯುದ್ಧನೌಕೆಗಳ ಮೇಲೆ ದಾಳಿ ಮಾಡಿ ಅವುಗಳನ್ನು ನಾಶಪಡಿಸಿ ಫಿರಂಗಿದೋಣಿಗಳನ್ನು ಹೊಡೆದೋಡಿಸಿದರು. ಆಗ ಜನರಲ್ ಪ್ರಿವೋಸ್ಟನು

ಅಮೆರಿಕನ್ನರ ದಾಳಿ ತನ್ನ ಸೈನ್ಯದ ಮೇಲೆ ತಿರುಗುತ್ತದೆ ಎಂದು ಹೆದರಿ ತನ್ನ ಸೈನ್ಯವನ್ನು ಕೆನಡಾಕ್ಕೆ ಹಿಮ್ಮೆಟ್ಟಿಸಿದನು.

೧೮೧೪ರ ಡಿಸೆಂಬರ್ ತಿಂಗಳಲ್ಲಿ ಅಮೆರಿಕನ್ ಮತ್ತು ಬ್ರಿಟಿಷ್ ಕಮಿಷನರುಗಳು ಬೆಲ್ಜಿಯನ್ ದೇಶದ ಘೆಂಟ್ (Ghent) ಎನ್ನುವ ಊರಿನಲ್ಲಿ ಸಭೆ ಸೇರಿ ಶಾಂತಿಸಂಧಾನದ ಕರಾರಿಗೆ ರುಜು ಮಾಡಿದರು. ಈ ಶಾಂತಿಸಂಧಾನದ ಸುದ್ದಿ ಅಟ್ಲಾಂಟಿಕ್ ಸಾಗರವನ್ನು ದಾಟಿ ಅಮೆರಿಕ ತಲುಪಬೇಕಾದರೆ ಬಹಳ ತಡವಾಯಿತು. ಆ ಸುದ್ದಿ ಮುಂಚೆಯೇ ಅಮೆರಿಕ ತಲುಪಿದ್ದರೆ ಕೆಲವು ದುರಂತ ಘಟನೆಗಳನ್ನು ತಪ್ಪಿಸಬಹುದಾಗಿತ್ತು. ಅಂಥ ದುರಂತ ಘಟನೆಗಳಲ್ಲಿ ಅತಿ ಮುಖ್ಯವಾದುದು ನ್ಯೂ ಆರ್ಲಿಯನ್ಸ್ ಕದನ. ೧೮೧೪ರ ನವೆಂಬರ್ ತಿಂಗಳಲ್ಲಿ ಐವತ್ತು ಬ್ರಿಟಿಷ್ ಯುದ್ಧನೌಕೆಗಳು ಜಮೈಕದಿಂದ ನ್ಯೂ ಆರ್ಲಿಯನ್ಸ್‌ಗೆ ಹೊರಟವು. ಅಮೆರಿಕನ್ನರು ನಿರೀಕ್ಷಿಸಿದಂತೆ ಬ್ರಿಟಿಷ್ ಸೈನ್ಯಾಧಿಪತಿ ಪಾಕನ್‌ಹಾಮ್ (Packenham) ನ ಸೈನ್ಯ ಮಿಸ್ಸಿಸ್ಸಿಪ್ಪಿ ನದಿಯಲ್ಲಿ ನೇರವಾಗಿ ನೌಕೆಗಳನ್ನು ಹಾಯಿಸಿ ನ್ಯೂ ಆರ್ಲಿಯನ್ಸ್ ತಲುಪದೆ ಸುತ್ತು ಬಳಸಿ ಬೊರ್‌ಗನಿ ಸರೋವರದ ಕಡೆಯಿಂದ ಜವುಗು ಮತ್ತು ಕೆಸರು ತುಂಬಿದ ಪ್ರದೇಶದ ಮೂಲಕವಾಗಿ ಪತ್ತೆಯಾಗದಂತೆ ನ್ಯೂ ಆರ್ಲಿಯನ್ಸ್ ನಗರದ ದ್ವಾರದ ಬಳಿ ಸೇರಿತು. ಡಿಸೆಂಬರ್ ೨೩ರ ಮಧ್ಯಾಹ್ನ ಬೇಹುಗಾರರು ಈ ಸುದ್ದಿಯನ್ನು ನ್ಯೂ ಆರ್ಲಿಯನ್ಸ್ ರಕ್ಷಣಾಪಡೆಯ ದಂಡನಾಯಕ ಜನರಲ್ ಆ್ಯಂಡ್ರೂ ಜಾಕ್‌ಸನ್ನನಿಗೆ ತಿಳಿಸಿದರು. ಪಾಕನ್‌ಹಾಮ್‌ನ ಗುರಿಯೇನು ಎಂದು ಆ್ಯಂಡ್ರೂ ಜಾಕ್‌ಸನ್ನನಿಗೆ ಮೊದಲು ಅಂದಾಜಾಗದಿದ್ದರೂ ಬ್ರಿಟಿಷ್ ಪಡೆಗಳನ್ನು ಎದುರಿಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದನು. ಬ್ರಿಟಿಷ್ ಸೈನ್ಯ ಹೆಚ್ಚಿನ ಸೈನ್ಯದ ತುಕಡಿಗಳ ಬರವನ್ನು ಕಾಯುತ್ತ ವಿಶ್ರಾಂತಿ ಪಡೆದು ಮಾರನೆಯ ದಿನ ದಾಳಿ ಮಾಡಲು ಸಿದ್ಧತೆ ನಡೆಸಿದ್ದಾಗ, ಜಾಕ್‌ಸನ್ ಆ ರಾತ್ರಿಯೆ ತನ್ನ ಸೈನ್ಯವನ್ನು ಶೀಘ್ರವಾಗಿ ನಡೆಸಿ ಬ್ರಿಟಿಷ್ ಸೈನ್ಯದ ಮೇಲೆ ಅನಿರೀಕ್ಷಿತವಾಗಿ ದಾಳಿ ಮಾಡಿದನು. ಅನಿರೀಕ್ಷಿತ ದಾಳಿಯಿಂದ ಬ್ರಿಟಿಷ್ ಸೈನಿಕರು ತೊಡಕಿನಲ್ಲಿ ಸಿಕ್ಕಿದರೂ ತಕ್ಷಣ ಚೇತರಿಸಿಕೊಂಡು ಜಾಕ್‌ಸನ್ನನ ಸೈನಿಕರನ್ನು ಎದುರಿಸಿ ಹೋರಾಡಿದರು. ಈ ಕಾಳಗದಲ್ಲಿ ಯಾವ ಕಡೆಯವರೂ ಗೆಲ್ಲಲಾರದೆ ಕದನ ಅನಿಶ್ಚಯವಾಗಿ ಕೊನೆಗಂಡಿತು. ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡ ಜಾಕ್‌ಸನ್ ತನ್ನ ಸೈನ್ಯವನ್ನು ಹಿಂದೆ ಸರಿಯುವಂತೆ ಆಜ್ಞಾಪಿಸಿ ನ್ಯೂ ಆರ್ಲಿಯನ್ಸ್ ಸಮೀಪ ಕಂದಕಗಳಲ್ಲಿ ಸೈನ್ಯವನ್ನು ಸ್ಥಾಪಿಸಿ ನಗರರಕ್ಷಣೆಗೆ ಸಿದ್ಧಗೊಳಿಸಿದನು.

ಎರಡು ವಾರಗಳ ಕಾಲ ಬ್ರಿಟಿಷ್ ಸೈನ್ಯಾದಿಪತಿ ಪಾಕನ್‌ಹಾಮ್ ದಾಳಿ ಮಾಡುವುದೋ ಬೇಡವೋ ಎಂದು ಶಂಕಿಸುತ್ತ, ಅಮೆರಿಕನ್ ರಕ್ಷಣಾವ್ಯವಸ್ಥೆಯ ಬಗ್ಗೆ ಹೆಚ್ಚು ತಿಳಿಯಲು ಪ್ರಯತ್ನಿಸಿದನು. ಆ ಸಮಯವನ್ನು ಉಪಯೋಗಿಸಿಕೊಂಡು ಜಾಕ್‌ಸನ್ ರಕ್ಷಣಾದಳವನ್ನು ಹೆಚ್ಚು ಬಲಪಡಿಸಿಕೊಂಡನು. ಅಂತಿಮವಾಗಿ, ೧೮೧೫ರ ಜನವರಿ ಎಂಟನೆಯ ತಾರೀಖು ಬೆಳಗಿನ ಜಾವ ೫,೩೦೦ ಬ್ರಿಟಿಷ್ ಸೈನಿಕರು ಮುನ್ನುಗ್ಗಿದರು.

ಜಾಕ್‌ಸನ್ನನ ಸೈನಿಕರು ಹಿಂಜರಿಯಲಿಲ್ಲ. ಮುನ್ನುಗ್ಗಿ ಬರುತ್ತಿದ್ದ ಬ್ರಿಟಿಷ್ ಸೈನಿಕರ ಮೇಲೆ ಅಮೆರಿಕನ್ನರು ಫಿರಂಗಿ ದಾಳಿ ಪ್ರಾರಂಭಿಸಿದರು. ಆದರೂ ಧೃತಿಗೆಡದೆ ಹತ್ತಿರ ಹತ್ತಿರ ಸಾಗುತ್ತಿದ್ದ ಬ್ರಿಟಿಷ್ ಸೈನಿಕರ ಮೇಲೆ ಅಮೆರಿಕನ್ನರು ಗುಂಡಿನ ಮಳೆಗರೆದರು. ಜನರಲ್ ಪಾಕನ್‌ಹಾಮ್ ಮರಣ ಹೊಂದಿದನು. ಸೈನ್ಯ ಹಿಂತಿರುಗಲು ಆಜ್ಞಾಪಿಸಲಾಯಿತು. ಕದನ ನಿಂತಾಗ ೨೧೦೦ ಬ್ರಿಟಿಷ್ ಸೈನಿಕರು ಸತ್ತು ೫೦೦ ಸೈನಿಕರು ಸೆರೆ ಸಿಕ್ಕಿದ್ದರು. ಅಮೆರಿಕನ್ ಸೈನ್ಯದಲ್ಲಿ ಎಂಟು ಸೈನಿಕರು ಸತ್ತು ಹದಿಮೂರು ಸೈನಿಕರು ಗಾಯಗೊಂಡಿದ್ದರು!

ಜಾಕ್‌ಸನ್ನನ ಅದ್ಭುತ 'ವಿಜಯವಾರ್ತೆ' ವಾಷಿಂಗ್‌ಟನ್ ತಲುಪುವುದಕ್ಕೂ ಘೆಂಟ್ (Ghent)ನಿಂದ ಶಾಂತಿಸಂಧಾನದ ಸುದ್ದಿ ಬರುವುದಕ್ಕೂ ತಾಳೆಯಾಯಿತು. ನ್ಯೂ ಆರ್ಲಿಯನ್ಸ್ ಕದನದಲ್ಲಿ ಯಾರೂ ಗೆಲ್ಲಲಿಲ್ಲ; ಎರಡೂ ಕಡೆಯವರು ಹಿಂದೆ ಸರಿದಿದ್ದರು (Retreat) ಅಷ್ಟೆ. ಆದರೂ ಜಾಕ್‌ಸನ್‌ನನ್ನು 'ನ್ಯೂ ಆರ್ಲಿಯನ್ಸ್ ವೀರ' (Hero of New Orleans) ಎಂದು ಕೊಂಡಾಡಿದರು. ಅವನು ಸಾಧಿಸಿದ 'ವಿಜಯ'ದಿಂದ ಇಡೀ ದೇಶ ಹರ್ಷಗೊಂಡಿತು. ಸೆನೆಟ್ ಘೆಂಟ್ ಒಪ್ಪಂದದ ಪ್ರಕಾರ ಶಾಂತಿಸಂಧಾನವನ್ನು ಒಮ್ಮತದಿಂದ ಅಂಗೀಕರಿಸಿತು. ಈ ಕದನ ಯೂರೋಪಿನ ಯಾವ ಸೈನ್ಯವನ್ನಾದರೂ ಅಮೆರಿಕ ಎದುರಿಸಬಲ್ಲದು ಎನ್ನುವುದನ್ನು ಸಾಬೀತುಗೊಳಿಸಿತು. ಈ ಕದನ ರಿಪಬ್ಲಿಕನ್ನರಿಗೆ ಕೇಂದ್ರ ಸರ್ಕಾರ ಎಷ್ಟು ಅಗತ್ಯವಾದುದು ಎನ್ನುವುದನ್ನು ಸ್ಪಷ್ಟ ಪಡಿಸಿ, ಅದುವರೆಗೂ ಕೇಂದ್ರಸರ್ಕಾರದ ಬಗ್ಗೆ ತಾವು ತಾಳಿದ ನಿಲುವು ಎಷ್ಟು ತಪ್ಪಾದುದು ಎನ್ನುವುದನ್ನು ತೋರಿಸಿಕೊಟ್ಟಿತು. ಸರಿಯಾದ ರಸ್ತೆಗಳಿಲ್ಲದೆ ಅಮೆರಿಕನ್ ಸೈನ್ಯದ ಕಾರ್ಯಾಚರಣೆಗೆ ಅಡಚಣೆ ಉಂಟಾಗಿತ್ತು. ಹಾಗೆಯೆ ಒಂದು ಕೇಂದ್ರ ಆರ್ಥಿಕ ಸಂಸ್ಥೆ (Central Bank)ಯ ಅಗತ್ಯದ ಅನುಭವವೂ ಆಯಿತು. ಅನೇಕ ಅಮೆರಿಕನ್ನರಿಗೆ ತಾವು ಇದುವರೆಗೂ ಕಡೆಗಣಿಸುತ್ತ ಬಂದಿದ್ದ ಕಾರ್ಯವಿಧಾನಗಳ (Policies) ಉಪಯುಕ್ತತೆಯನ್ನು ಮನಗಂಡರು.

೧೮೧೫ರ ಫೆಬ್ರವರಿ ೧೧ನೆಯ ತಾರೀಖು ಶಾಂತಿಸಂಧಾನದ ಕರಾರು ಅಮೆರಿಕ ತಲುಪಿತು. ಈ ಕರಾರು ತಟಸ್ಥ ರಾಷ್ಟ್ರಗಳ ಹಕ್ಕುಗಳನ್ನು, ಪಶ್ಚಿಮ ಪ್ರದೇಶದ ಇಂಡಿಯನ್ನರ ಸಮಸ್ಯೆಗಳು, ಗಡಿವಿವಾದಗಳು ಮುಂತಾದ ವಿಷಯಗಳನ್ನು ಕಡೆಗಣಿಸಿತ್ತು. ಅಮೆರಿಕನ್ನರು ಯಾವ ಸಮಸ್ಯೆಗಳ ಕಾರಣದಿಂದ ಯುದ್ಧಕ್ಕೆ ಇಳಿದಿದ್ದರೊ ಆ ಸಮಸ್ಯೆಗಳಿಗೆ ಈ ಕರಾರು ಯಾವ ಪರಿಹಾರವನ್ನೂ ಸೂಚಿಸಲಿಲ್ಲ. ಇಷ್ಟಾದರೂ ಎಲ್ಲರಿಗೂ ಶಾಂತಿ ಯುದ್ಧಕ್ಕಿಂತ ಆಪ್ಯಾಯಮಾನವಾಯಿತು. ಅಮೆರಿಕನ್ನರು ತಮ್ಮ ನಿತ್ಯ ಜೀವನವನ್ನು ಎಂದಿನಂತೆ ನೆಮ್ಮದಿಯಿಂದ ನಡೆಸಿಕೊಂಡು ಹೋಗುವುದು ಸಾಧ್ಯವಾಯಿತು; ಅವರ ರಾಷ್ಟ್ರೀಯ ಐಕ್ಯತೆ ಅಧಿಕಗೊಂಡು ತಮ್ಮ ರಾಷ್ಟ್ರದ ಭವಿಷ್ಯದ ಬಗ್ಗೆ ಭರವಸೆ ಮೂಡಿತು.

ಶುಭಕಾಮನೆಗಳ ಯುಗ

ನ್ಯೂ ಆರ್ಲಿಯನ್ಸ್ ಕದನಾನಂತರ ಜನರಲ್ಲಿ ಉಕ್ಕುತ್ತಿದ್ದ ರಾಷ್ಟ್ರೀಯ ಭಾವನೆ ಫೆಡರಲಿಸ್ಟ್ ಪಕ್ಷ ನಾಶಗೊಳ್ಳುವ ಸ್ಥಿತಿಗೆ ಬರುವಂತೆ ಮಾಡಿತು. ಅವರು ಬ್ರಿಟಿಷರ ಮೇಲೆ ಯುದ್ಧ ಮಾಡುವುದನ್ನು ವಿರೋಧಿಸಿ ಅಮೆರಿಕನ್ ಸರ್ಕಾರವನ್ನು ಖಂಡಿಸಿ ಪ್ರಚಾರ ಮಾಡಿದ್ದರು. ಫೆಡರಲಿಸ್ಟರ ಇಂಥ ಚಟುವಟಿಕೆಗಳನ್ನು ಜನರು ದೇಶದ್ರೋಹ ಕಾರ್ಯಗಳು ಎಂದು ಭಾವಿಸಿದ್ದರು. ಇದರಿಂದ ಫೆಡರಲಿಸ್ಟರ ಜನಬೆಂಬಲ ಕ್ಷೀಣಿಸುತ್ತ ಹೋಯಿತು. ರಿಪಬ್ಲಿಕನ್ನರು ಫೆಡರಲಿಸ್ಟರ ಸಲಹೆಗಳನ್ನು ಅಳವಡಿಸಿಕೊಂಡು ಅವುಗಳನ್ನು ಕಾರ್ಯಗತಗೊಳಿಸಲು ಉದ್ಯುಕ್ತರಾದರು. ೧೮೧೫ರ ಡಿಸೆಂಬರ್ ತಿಂಗಳಲ್ಲಿ ಅಧ್ಯಕ್ಷ ಮೆಡಿಸನ್ ಕಾಂಗ್ರೆಸ್‌ಗೆ ನೀಡಿದ ಸಂದೇಶದಲ್ಲಿ ರಸ್ತೆ ಮತ್ತು ಕಾಲುವೆಗಳನ್ನು ನಿರ್ಮಿಸಲು, ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಸುಂಕ ಹಾಕುವುದರ ಮೂಲಕ ಅಮೆರಿಕದ ಕೈಗಾರಿಕೆಗಳನ್ನು ಹೊರದೇಶಗಳ ಪೈಪೋಟಿಯಿಂದ ರಕ್ಷಿಸಲು ಮತ್ತು ವಾಷಿಂಗ್‌ಟನ್‌ನಲ್ಲಿ ರಾಷ್ಟ್ರೀಯ ವಿದ್ಯಾನಿಲಯವನ್ನು ಸ್ಥಾಪಿಸಲು ಕರೆಯಿತ್ತನು. ಈ ಸಲಹೆಗಳನ್ನು ಕಾರ್ಯಗತ ಗೊಳಿಸಲು ಕೇಂದ್ರ ಸರ್ಕಾರ ಒಂದು ಯೋಜನೆಯನ್ನು ತಯಾರಿಸುವಂತೆ ಆಜ್ಞಾಪಿಸಿದನು. ಅಧ್ಯಕ್ಷ ಮೆಡಿಸನ್ನನ ಆದೇಶದಂತೆ ಕಾಂಗ್ರೆಸ್ ಅಮೆರಿಕನ್ ಕೈಗಾರಿಕೆ ಮತ್ತು ಉದ್ಯಮಗಳನ್ನು ಬ್ರಿಟಿಷ್ ಪೈಪೋಟಿಯಿಂದ ರಕ್ಷಿಸುವ ಸಲುವಾಗಿ ಒಂದು ವಾಣಿಜ್ಯ ತೆರಿಗೆಯನ್ನು ಜಾರಿಗೆ ತಂದಿತು. ಹಾಗೆಯೇ ಸಂಯುಕ್ತ ಸಂಸ್ಥಾನಗಳ ಆರ್ಥಿಕ ಸಂಸ್ಥೆ (Bank of the United States)ಯನ್ನು ಸ್ಥಾಪಿಸುವ ಮಸೂದೆಯನ್ನು ಅಂಗೀಕರಿಸಿತು. ಈ ಬ್ಯಾಂಕಿನ ಉತ್ಪತ್ತಿಯನ್ನು ದೇಶದ ಅಭಿವೃದ್ಧಿಗೆ (Internal Development) ಉಪಯೋಗಿಸಬೇಕೆಂದು ಶಾಸಕ ಕಾಲ್‌ಹೂನ್ (Calhoun) ಮಂಡಿಸಿದ ಮಸೂದೆಯನ್ನು ಅಂಗೀಕರಿಸಲಾಯಿತು. ದೇಶದ ಅಭಿವೃದ್ಧಿ ಎಂದರೆ ರಸ್ತೆಗಳು, ಕಾಲುವೆಗಳು ಮತ್ತು ಇತರ ಯೋಜನೆಗಳನ್ನು ಕಾರ್ಯಗತ ಗೊಳಿಸಿ ದೇಶದ ಸಾರಿಗೆ ಸಂಪರ್ಕಗಳನ್ನು ಉತ್ತಮಗೊಳಿಸುವುದು.

೧೮೧೬ರಲ್ಲಿ ನಡೆದ ಚುನಾವಣೆಯಲ್ಲಿ ವರ್ಜೀನಿಯಾದ ಜೇಮ್ಸ್ ಮನ್ರೋ[೨] (James Monroe) ಅವನ ಪ್ರತಿಸ್ಪರ್ಧಿ ಫೆಡರಲಿಸ್ಟ್ ಪಕ್ಷದ ನ್ಯೂಯಾರ್ಕಿನವನಾದ ರೂಫಸ್ ಕಿಂಗ್ (Rufus King) ಮೇಲೆ ಅತ್ಯಧಿಕ ಮತಗಳಿಂದ ಆರಿಸಿಬಂದನು. ಕಿಂಗ್ ಗಳಿಸಿದ್ದು ಮೆಸಾಚ್ಯುಸೆಟ್ಸ್ (Massachusetts), ಕನೆಕ್ಟಿಕಟ್ (Connecticut) ಮತ್ತು ಡೆಲವೇರ್ (Delaware) ಎಲೆಕ್ಟರಲ್ ಕಾಲೇಜುಗಳ ಮತಗಳನ್ನು ಮಾತ್ರ. ೧೮೨೦ರ ಚುನಾವಣೆಯಲ್ಲಿ ಮನ್ರೋ ಯಾವ ಪ್ರತಿಸ್ಪರ್ಧಿಯೂ ಇಲ್ಲದೆ ಸುಲಭವಾಗಿ ಗೆದ್ದನು. ಫೆಡರಲಿಸ್ಟ್ ಪಕ್ಷ ಅಲ್ಲಿ ಇಲ್ಲಿ ಕೆಲವು ಕಡು ಸಂಪ್ರದಾಯಸ್ಥರನ್ನು ಬಿಟ್ಟರೆ, ತನ್ನ ಸತ್ವವನ್ನು ಕಳೆದುಕೊಂಡು ನಿಷ್ಪ್ರಯೋಜಕವಾಯಿತು. ರಾಷ್ಟ್ರದ ಪಕ್ಷವ್ಯವಸ್ಥೆಯ

೨. ಜೇಮ್ಸ್ ಮನ್ರೋ ಅಮೆರಿಕದ ಐದನೆಯ ಅಧ್ಯಕ್ಷ

ಕಾಲ ಮುಗಿದಂತೆ ಕಂಡುಬಂತು. ಪಕ್ಷವ್ಯವಸ್ಥೆ ಮುಗಿದರೂ ರಾಜಕೀಯ ಮುಗಿಯಲಿಲ್ಲ. ರಾಜಕೀಯ ವಾದ ವಿವಾದಗಳು, ಜಗಳ ಮತ್ತು ಗುಂಪುಗಾರಿಕೆ ಎಲ್ಲವೂ ಯಥಾಪ್ರಕಾರ ನಡೆಯುತ್ತಿದ್ದವು. ಸ್ವಂತ ಅನುಕೂಲತೆಗಳನ್ನು ಗಳಿಸಲು ಕುಯುಕ್ತಿ ಮತ್ತು ಅಧಿಕಾರ ಸ್ಥಾನಗಳಿಗೆ ಪೈಪೋಟಿ ಹಾಗೂ ಸರ್ಕಾರದ ವಿಭಾಗಗಳಲ್ಲಿ ಒಳಸಂಚು ಸಂಸ್ಥಾನಗಳಲ್ಲಿ ಮತ್ತು ಕೇಂದ್ರ ಸರ್ಕಾರದಲ್ಲಿ ಅವಿರತವಾಗಿ ನಡೆಯುತ್ತಿದ್ದವು. ಈ ರೀತಿಯ ರಾಜಕೀಯ, ಪಕ್ಷ ರಾಜಕೀಯ ಆಗಿರಲಿಲ್ಲ. ಚುನಾವಣೆಗಳಲ್ಲಿ ಮತದಾರರು ಪಕ್ಷದ ಒಳಪಂಗಡದ ಒತ್ತಾಯದಿಂದ ಅಥವಾ ಪ್ರಜಾಪ್ರತಿನಿಧಿ ಸಭೆಯ ಆದೇಶದಂತೆ ಅವರು ಹೇಳಿದ ಅಭ್ಯರ್ಥಿಗೆ ಮಾತ್ರ ಮತ ನೀಡುವ ಪರಿಸ್ಥಿತಿ ಇರಲಿಲ್ಲ. ಮನ್ರೋ ಕಾಲದಲ್ಲಿ ದೇಶದಲ್ಲಿ ಪಕ್ಷ ರಾಜಕೀಯ ಕೊನೆಗೊಂಡು ಜನರಲ್ಲಿ ಸೌಹಾರ್ದತೆ ನೆಲಸಿತ್ತು. ೧೮೧೭ರ ಹೊತ್ತಿಗೆ ಹಿಂದಿನ ಜಗಳಗಳೆಲ್ಲ ನಿಂತು ಜನ ನೆಮ್ಮದಿಯಿಂದ ಇದ್ದರು. ಅಧ್ಯಕ್ಷ ಮನ್ರೋ ಜನರು ಸೌಹಾರ್ದತೆಯಿಂದ ಇದ್ದಾರೆಂದು ಸ್ಪಷ್ಟಪಡಿಸಲು ಮತ್ತು ಅವರ ವಿಶ್ವಾಸ ಗಳಿಸಲು ನ್ಯೂ ಇಂಗ್ಲೆಂಡ್ ಪ್ರದೇಶದಲ್ಲೆಲ್ಲಾ ಪ್ರವಾಸ ಮಾಡಿದನು. ಅವನ ಪ್ರವಾಸ ಯಶಸ್ವಿಯಾಯಿತು. ಅವನು ಹೋದಲ್ಲೆಲ್ಲ ಜನರು ಅಮಿತ ಉತ್ಸಾಹದಿಂದ ಅವನನ್ನು ಎದುರುಗೊಂಡರು. ಮನ್ರೋ ಫೆಡರಲಿಸ್ಟರ ಕೇಂದ್ರವಾಗಿದ್ದ ಬಾಸ್ಟನ್ ಪಟ್ಟಣಕ್ಕೂ ಭೇಟಿ ಕೊಟ್ಟನು. ಆಗ ಜನರು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಅವನನ್ನು ಆದರದಿಂದ ಸ್ವಾಗತಿಸಿ ಗೌರವಿಸಿದ್ದನ್ನು ಕಂಡು ಫೆಡೆರಲಿಸ್ಟ್ ಪತ್ರಿಕಾಕರ್ತನೊಬ್ಬ ಅಂದಿನ ಕಾಲವನ್ನು 'ಶುಭ ಕಾಮನೆಗಳ ಯುಗ' (Era of good feelings) ಎಂದು ಕರೆದನು. ಈ ಯುಗದಲ್ಲಿ ರಾಷ್ಟ್ರೀಯ ಆಸಕ್ತಿಯೆಲ್ಲ ಪಶ್ಚಿಮ ಪ್ರದೇಶವನ್ನು ಬಿಳಿಯರ ವಾಸಕ್ಕೆ ಯೋಗ್ಯವಾಗಿ ಮಾಡುವುದರ ಮೇಲೆ ಕೇಂದ್ರೀಕರಿಸಲಾಗಿತ್ತು. ವಾಸಕ್ಕೆ ಯೋಗ್ಯ ಮಾಡುವುದೆಂದರೆ ಅಲ್ಲಿ ವಾಸಮಾಡುತ್ತಿದ್ದ ಇಂಡಿಯನ್ನರಿಂದ ಅವರ ಭೂಮಿಯನ್ನು ಕಿತ್ತುಕೊಂಡು ಅವರನ್ನು ಕಾಡುಪಾಲು ಮಾಡಿ ತಮ್ಮ ಸಮುದಾಯಗಳನ್ನು ಸ್ಥಾಪಿಸಿ ಬೆಳೆಸುವುದು! ಅಪಲೇಷಿಯನ್ ಪರ್ವತಗಳಾಚೆಯ ಪ್ರದೇಶಗಳಲ್ಲಿ ವಾಸವಾಗಿದ್ದ ಇಂಡಿಯನ್ ಬುಡಕಟ್ಟುಗಳನ್ನು ಅಮಾನುಷ ರೀತಿಯಲ್ಲಿ ಬುಡಮೇಲು ಮಾಡಿ, ವರ್ಣಿಸಲಾಗದ ಕ್ರೂರತನದಿಂದ ಅವರನ್ನು ಮಿಸ್ಸಿಸ್ಸಿಪ್ಪಿ ಪ್ರದೇಶದಿಂದ ಆಚೆಗೆ ರವಾನಿಸಿದ ಕೇಂದ್ರ ಸರ್ಕಾರದ ನೀತಿ ಕ್ರೌರ್ಯದ ಪರಮಾವಧಿಯಾಗಿತ್ತು. ಆಗಿನ ಸೈನ್ಯಾಧಿಕಾರಿಗಳ ಮೃಗೀಯ ವರ್ತನೆ ಮತ್ತು ಅವರು ನಡೆಸಿದ ಸ್ವಜನ ಹತ್ಯಾಕಾಂಡ (Genocide) ಪ್ರಪಂಚದ ಇತಿಹಾಸದಲ್ಲಿ ಅಸದೃಶವಾದುದು.

ಅಮೆರಿಕದ ಆಗ್ನೇಯ ಪ್ರದೇಶದಲ್ಲಿ ಹೆಚ್ಚು ಭೂಮಿಯನ್ನು ಅತಿಕ್ರಮಿಸುವುದು ಅಗತ್ಯವಾಯಿತು. ಇದಕ್ಕೆ ಕಾರಣ ಹತ್ತಿಯ ವ್ಯವಸಾಯ. ಎತ್ತರವಾಗಿ ಬೆಳೆಯದ ಕಾಂಡವುಳ್ಳ ಹತ್ತಿಯ ಬೆಳೆಯನ್ನು ಒಳನಾಡಿನಲ್ಲಿ ಬೆಳೆದು ಎಲಿ ವ್ಹಿಟ್‌ನಿ (Eli Whitney) ಕಂಡು ಹಿಡಿದ 'ಜಿನ್' (Gin) ಉಪಯೋಗಿಸಿ ಹತ್ತಿಯಿಂದ ಬೀಜಗಳನ್ನು ಸುಲಭವಾಗಿ

ಬೇರ್ಪಡಿಸುವುದು ಸಾಧ್ಯವಾಗಿ, ಹತ್ತಿಯ ಮಾರಾಟ ಬಹಳ ಲಾಭದಾಯಕವಾದ ಉದ್ಯಮವಾಯಿತು. ಹೀಗೆ ಹತ್ತಿಯ ವ್ಯವಸಾಯ ಕೊಲ್ಲಿ ಪ್ರದೇಶದ ಮೈದಾನ ಮತ್ತು ಮಿಸ್ಸಿಸ್ಸಿಪ್ಪಿ ಕಣಿವೆಯ ದಕ್ಷಿಣದ ಅರ್ಧಭಾಗವನ್ನೆಲ್ಲ ವ್ಯಾಪಕವಾಗಿ ಆವರಿಸಿಬಿಟ್ಟಿತು. ಹತ್ತಿಯ ಬೆಳೆಯಿಂದಾಗಿ ಈ ಪ್ರದೇಶ ರಾಷ್ಟ್ರದ ಅತ್ಯಂತ ಐಶ್ವರ್ಯವಂತ ಪ್ರದೇಶಗಳಲ್ಲಿ ಒಂದಾಯಿತು. ಹತ್ತಿ ಬೆಳೆಯಲು ಹೆಚ್ಚು ಕೆಲಸಗಾರರು ಬೇಕಾಗಿದ್ದರಿಂದ ಅದನ್ನು ಬೆಳೆಯುವ ಪ್ರದೇಶಗಳಲ್ಲಿ ಗುಲಾಮಗಿರಿ ಬೇರೂರಿ ಬೆಳೆಯಿತು.

೧೮೩೧-೩೨ರಲ್ಲಿ ಅಮೆರಿಕದ ಉತ್ತರದಲ್ಲಿ ನೆಲಸಿದ್ದ ಸಾವ್ಕ್ (Sauk) ಮತ್ತು ಫಾಕ್ಸ್ (Fox) ಇಂಡಿಯನ್ ಬುಡಕಟ್ಟಿನವರನ್ನು ಬ್ಲಾಕ್ ಹಾಕ್ (Black Hawk) ಕದನದಲ್ಲಿ ಸೋಲಿಸಿ, ಅವರ ಭೂಮಿಯನ್ನು (ಇಲಿನಾಯ್ ಮತ್ತು ವಿಸ್‌ಕಾನ್ಸಿನ್ ಪ್ರದೇಶಗಳು) ಬಿಳಿಯರು ಅತಿಕ್ರಮಿಸಿದ್ದಾಯಿತು. ದಕ್ಷಿಣದಲ್ಲಿ ಚೆರೊಕೀ (Cherokee), ಚಾಕ್‌ಟಾ (Choctaw), ಕ್ರೀಕ್ (Creek) ಮತ್ತು ಚಿಕ್‌ಸಾ (Chicksaw) ಇಂಡಿಯನ್ನರನ್ನು ಮೋಸ ಮತ್ತು ಬಲಾತ್ಕಾರದಿಂದ ಅವರ ಭೂಮಿಯಿಂದ ಉಚ್ಚಾಟನೆಗೊಳಿಸಲಾಯಿತು. ೧೮೩೮ರ ಚಳಿಗಾಲದಲ್ಲಿ ಅಮೆರಿಕನ್ ಸೈನಿಕರು ಚೆರೊಕೀ ಇಂಡಿಯನ್ನರನ್ನು ಪಶ್ಚಿಮ ಪ್ರದೇಶದ ಗುಡ್ಡಗಾಡಿಗೆ ಅಟ್ಟಿಸಿಕೊಂಡು ಹೋದರು. ಹಾದಿಯಲ್ಲಿ ಸಹಿಸಲಾರದ ಚಳಿಯಿಂದ ನೂರಾರು ಚೆರೊಕೀ ಇಂಡಿಯನ್ನರು ಸತ್ತರು. ಹೀಗೆ ಅಮಾನುಷ ರೀತಿಯಲ್ಲಿ ಚೆರೊಕೀಗಳನ್ನು ಜಾನುವಾರುಗಳನ್ನು ಅಟ್ಟಿಕೊಂಡು ಹೋಗುವಂತೆ ನಡೆಸಿಕೊಂಡು ಹೋದ ಹಾದಿಯನ್ನು 'ಕಣ್ಣೀರಿನ ಜಾಡು' (Trail of Tears) ಎಂದು ಇತಿಹಾಸಕಾರರು ಕರೆದಿದ್ದಾರೆ. ಫ್ಲಾರಿಡಾದಲ್ಲಿ ಸೆಮಿನೋಲ್ ಇಂಡಿಯನ್ನರು ಬಿಳಿಯರನ್ನು ಎದುರಿಸಿ ಹೋರಾಡಿದರು. ಅವರನ್ನು ಸೋಲಿಸಲು ಸೈನ್ಯಕ್ಕೆ ಅನೇಕ ವರ್ಷಗಳು ಹಿಡಿದವು. ಈ ಸೈನ್ಯ ಕಾರ್ಯಾಚರಣೆಗೆ ಅಪಾರ ಹಣ ಖರ್ಚಾಯಿತು.

ಇಂಡಿಯನ್ನರು ಹೋರಾಟ ನಡೆಸಿದರೂ ಬಿಳಿಯರ ಅತಿಕ್ರಮಣವನ್ನು ಬಹಳ ಕಾಲ ತಡೆಯಲಾಗಲಿಲ್ಲ. ಸಾವಿರಾರು ವಲಸೆಗಾರರು ಅಮೆರಿಕದ ವಾಯುವ್ಯ ಪ್ರಾಂತ ಮತ್ತು ನೈರುತ್ಯ ಪ್ರಾಂತಗಳನ್ನು ಅತಿಕ್ರಮಿಸಿಕೊಂಡು, ವ್ಯವಸಾಯ ಪ್ರಾರಂಭಿಸಿ ಪೇಟೆಪಟ್ಟಣಗಳನ್ನು ಕಟ್ಟಿಕೊಂಡು ಸಮೃದ್ಧಿಯ ಜೀವನ ನಡೆಸತೊಡಗಿದರು. ಜನಸಂಖ್ಯೆ ಹೆಚ್ಚುತ್ತ ಹೋಯಿತು. ೧೮೧೨ ಮತ್ತು ೧೮೩೭ರ ನಡುವಣ ಅಂತರದಲ್ಲಿ ಒಂಬತ್ತು ಹೊಸ ಪ್ರಾಂತ್ಯಗಳನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳ ಕೂಟಕ್ಕೆ ಸೇರಿಸಿಕೊಳ್ಳಲಾಯಿತು.

ಮಿಸ್ಸೋರಿ ಒಪ್ಪಂದ

ಲೂಯಿಸಿಯಾನ ಪ್ರದೇಶವನ್ನು ಕೊಂಡಾಗ ಮಿಸ್ಸೋರಿ ಅದರ ಒಂದು ಭಾಗವಾಗಿತ್ತು. ೧೮೧೯ರಲ್ಲಿ ಮಿಸ್ಸೋರಿ ಗುಲಾಮಗಿರಿಯನ್ನು ಮುಂದುವರಿಸುವ ಪ್ರತ್ಯೇಕ ಸಂಸ್ಥಾನವಾಗಿ ಪರಿಗಣಿಸಬೇಕೆಂದು ಕಾಂಗ್ರೆಸ್‌ಗೆ ಅರ್ಜಿ ಸಲ್ಲಿಸಿತು. ಅದೇ ಸಮಯದಲ್ಲಿ

ಮೆಸಾಚ್ಯುಸೆಟ್ಸ್‌ನ ಭಾಗವಾಗಿದ್ದ ಮೇಯ್ನ್ ಪ್ರತ್ಯೇಕ ಸಂಸ್ಥಾನವಾಗಲು ಹವಣಿಸುತ್ತಿತ್ತು. ೧೮೪೯ರಲ್ಲಿ ಮುಸ್ಸೋರಿ ಮತ್ತು ಮೇಯ್ನ್ ಎರಡು ಪ್ರಾಂತಗಳನ್ನು ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಳ್ಳುವ ಮಸೂದೆಯನ್ನು ಅಂಗೀಕರಿಸಿತು. ನ್ಯೂಯಾರ್ಕಿನ ಪ್ರತಿನಿಧಿ ಜೇಮ್ಸ್ ಟಾಲ್‌ಮೆಡ್ಜ್ (James Tallmadge) ಆ ಮಸೂದೆಗೆ ತಿದ್ದುಪಡಿಯನ್ನು ಸೂಚಿಸಿ ಮುಸ್ಸೋರಿ ಸಂಸ್ಥಾನ ಇನ್ನುಮುಂದೆ ಗುಲಾಮಗಿರಿಯನ್ನು ಮುಂದುವರಿಸಬಾರದು ಮತ್ತು ಪ್ರಸ್ತುತ ಗುಲಾಮರಾಗಿರುವವರನ್ನೆಲ್ಲ ಬಿಡುಗಡೆ ಮಾಡಬೇಕೆಂದು ಆಗ್ರಹಪಡಿಸಿದನು. ಔತ್ತರೇಯರು ಗುಲಾಮಗಿರಿಯನ್ನು ರದ್ದುಗೊಳಿಸದ ದಕ್ಷಿಣ ಪ್ರಾಂತಗಳನ್ನು ಸಂಯುಕ್ತ ಸಂಸ್ಥಾನಗಳ ಕೂಟಕ್ಕೆ ಸೇರಿಸುವುದನ್ನು ವಿರೋಧಿಸಿದರು. ಇದಕ್ಕೆ ಕಾರಣ ೩/೫ ಕರಾರಿನ ಪ್ರಕಾರ ದಕ್ಷಿಣ ಪ್ರಾಂತಗಳ ಪ್ರತಿನಿಧಿಗಳ ಸಂಖ್ಯೆ ಕಾಂಗ್ರೆಸ್ಸಿನಲ್ಲಿ ಹೆಚ್ಚಾಗುತ್ತದೆ ಎಂದು. ಏಕೆಂದರೆ ಜನಗಣತಿಯಲ್ಲಿ ಆ ಪ್ರಾಂತ ಶೇಕಡ ೬೦ ಗುಲಾಮರೂ ಸೇರುವುದರಿಂದ ಈ ಪ್ರಾಂತಗಳ ಪ್ರತಿನಿಧಿಗಳ ಸಂಖ್ಯೆ ಕಾಂಗ್ರೆಸ್ಸಿನಲ್ಲಿ ಹೆಚ್ಚುತ್ತದೆ. ಜನಸಂಖ್ಯೆಯ ಆಧಾರದ ಮೇಲೆ ಕಾಂಗ್ರೆಸ್ ಪ್ರತಿನಿಧಿಗಳ ಸಂಖ್ಯೆಯನ್ನು ನಿರ್ಧರಿಸುವುದರಿಂದ ಗುಲಾಮಗಿರಿಯನ್ನು ರದ್ದು ಮಾಡಿದ ಉತ್ತರ ಪ್ರಾಂತಗಳು ಗುಲಾಮಗಿರಿ ಮುಂದುವರಿಸಿರುವ ಪ್ರಾಂತಗಳೊಡನೆ ಪೈಪೋಟಿ ಮಾಡಲು ಹಿಂಜರಿದರು. ಆಗ ಗೊಂದಲದ ಪರಿಸ್ಥಿತಿ ಏರ್ಪಟ್ಟು ವಾದವಿವಾದಗಳು, ಜನರಲ್ಲಿ ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಲು ಗುಂಪುಗಾರಿಕೆ ಪ್ರಾರಂಭವಾದವು. ದಕ್ಷಿಣ ಪ್ರಾಂತಗಳು ಜನಸಂಖ್ಯೆಯಲ್ಲಿ ಉತ್ತರ ಪ್ರಾಂತಗಳಿಗಿಂತ ಹಿಂದೆ ಬಿದ್ದಿದ್ದವು. ಹೀಗಾದ್ದರಿಂದ ಕಾಂಗ್ರೆಸ್ಸಿನಲ್ಲಿ ಆ ಪ್ರಾಂತಗಳ ಸಂಖ್ಯೆ ಕಡಿಮೆಯಾಗಿತ್ತು. ಆದರೆ ಸೆನೆಟ್‌ನಲ್ಲಿ ದಕ್ಷಿಣ ಸಂಸ್ಥಾನಗಳ ಪ್ರತಿನಿಧಿಗಳ ಸಂಖ್ಯೆ ಬೇರೆ ಸಂಸ್ಥಾನಗಳ ಪ್ರತಿನಿಧಿಗಳ ಸಂಖ್ಯೆಗೆ ಸಮನಾಗಿತ್ತು. ಟಾಲ್‌ಮೆಡ್ಜನು ಮಂಡಿಸಿದ ತಿದ್ದುಪಡಿ ಅಂಗೀಕೃತವಾದರೆ ಕೇಂದ್ರದ ನ್ಯಾಯವಿಧಾಯಕ ಸಭೆಯಲ್ಲಿ ದಾಕ್ಷಿಣಾತ್ಯರು ಅಲ್ಪಸಂಖ್ಯಾತರಾಗಿಯೇ ಉಳಿಯಬೇಕಾಗುತ್ತಿತ್ತು. ಗುಲಾಮಗಿರಿ ರದ್ದು ಮಾಡುವುದನ್ನು ಸಂಯುಕ್ತ ಸಂಸ್ಥಾನಗಳ ಕೂಟವನ್ನು ಸೇರಲು ಅಗತ್ಯವಾದ ನಿಯಮವಾಗಿ ಮಾಡುವ ಹಕ್ಕು ಕಾಂಗ್ರೆಸ್ಸಿಗೆ ಇಲ್ಲವೆಂದು ದಾಕ್ಷಿಣಾತ್ಯರು ವಾದಿಸಿದರು. ಆದರೆ ಉತ್ತರ ಪ್ರಾಂತದವರು ಇದನ್ನು ವಿರೋಧಿಸಿ ಈ ನಿಯಮವನ್ನು ವಿಧಿಸುವ ಹಕ್ಕು ಕಾಂಗ್ರೆಸ್ಸಿಗೆ ಇರುವುದಲ್ಲದೆಯೆ ಗುಲಾಮಗಿರಿಯನ್ನು ಎಲ್ಲ ಸಂಸ್ಥಾನಗಳಲ್ಲೂ ರದ್ದು ಮಾಡುವುದು ಕಾಂಗ್ರೆಸ್ಸಿನ ಕರ್ತವ್ಯವೂ ಹೌದೆಂದು ಪ್ರತಿಪಾದಿಸಿದರು. ಈ ವಾದವಿವಾದಗಳ ಪರಿಣಾಮವೇ 'ಮುಸ್ಸೋರಿ ಒಪ್ಪಂದ'. ಈ ಒಪ್ಪಂದದ ಪ್ರಕಾರ ಸೆನೆಟ್‌ನ ಸಮತೋಲನವನ್ನು ಕಾಪಾಡಲು ಮೇಯ್ನ್ ಗುಲಾಮಗಿರಿಯನ್ನು ರದ್ದುಗೊಳಿಸಿದ ಸಂಸ್ಥಾನವಾಗಿ ಸಂಯುಕ್ತ ಸಂಸ್ಥಾನಗಳ ಕೂಟಕ್ಕೆ ಸೇರಿಸಿಕೊಳ್ಳಲಾಯಿತು. ಉಳಿದ ಲೂಯಿಸಿಯಾನ ಪ್ರಾಂತವನ್ನು ೩೬-೩೦ ಅಕ್ಷಾಂಶ ರೇಖೆಯನ್ನು ಅನುಸರಿಸಿ ವಿಭಾಗಮಾಡಿ ಈ ರೇಖೆಯ ಉತ್ತರಕ್ಕೆ ಗುಲಾಮಗಿರಿಯನ್ನು ರದ್ದುಗೊಳಿಸಿ, ಆ ರೇಖೆಯ ದಕ್ಷಿಣ ಪ್ರಾಂತದಲ್ಲಿ ಗುಲಾಮಗಿರಿಯನ್ನು ಮುಂದುವರಿಸಲು

ಅನುಮತಿ ನೀಡಲಾಯಿತು. ಇದರಿಂದಾಗಿ ಪ್ರಾಂತೀಯ ಕಲಹ ನಿಂತು ಶಾಂತಿಯನ್ನು ಉಳಿಸಲು ಸಾಧ್ಯವಾಯಿತು. ಸದ್ಯಕ್ಕೆ ಶಾಂತಿಸ್ಥಾಪನೆಯಾಗಿದ್ದರೂ ಒಳಗೊಳಗೆ ವಾಗ್ಯುದ್ಧ ಹೊಗೆಯಾಡುತ್ತಲೇ ಇತ್ತು. ಈ ಮುಸ್ಸೋರ ವಿವಾದದಿಂದ ಸಂಸ್ಥಾನಗಳ ಕೂಟಕ್ಕೆ ಮುಂದೆ ಭಾರಿ ವಿಪತ್ತು ಕಾದಿದೆ ಎಂದು ವಯೋವೃದ್ಧ ಜಫರ್‌ಸನ್ ಎಚ್ಚರಿಕೆ ನೀಡಿದನು.

ಸಂಚಾರ ಮತ್ತು ಸಾರಿಗೆಯ ಸಮಸ್ಯೆಗಳು

ಹತ್ತೊಂಬತ್ತನೆಯ ಶತಮಾನದ ಅಮೆರಿಕದಲ್ಲಿ ಪ್ರಯಾಣ ಮಾಡುವುದು ಸುಲಭವಾಗಿರಲಿಲ್ಲ. ಅಮೆರಿಕದ ಪೂರ್ವಭಾಗದಲ್ಲಿ ದೋಣಿ ಪ್ರಯಾಣ ಮಾಡಬಹುದಿತ್ತು. ಆದರೆ ತೀರ ಪ್ರದೇಶವನ್ನು ದಾಟಿ ಬಂದಮೇಲೆ ಅನೇಕ ಕ್ಲಿಷ್ಟ ಸಮಸ್ಯೆಗಳನ್ನು ಎದುರಿಸಬೇಕಾಗಿತ್ತು. ಸರಿಯಾದ ರಸ್ತೆಗಳು ಇಲ್ಲದೇ ಹೋದುದು ಆ ಸಮಸ್ಯೆಗಳಿಗೆ ಮುಖ್ಯ ಕಾರಣವಾಗಿತ್ತು. ಮಿಸ್ಸಿಸ್ಸಿಪ್ಪಿ ನದಿ ಮತ್ತು ಅದರ ಉಪನದಿಗಳು ಹರಿಯುವ ದಿಕ್ಕಿನಲ್ಲಿ ದೋಣಿ ಪ್ರಯಾಣಕ್ಕೆ ಅನುಕೂಲವಾಗಿದ್ದವು. ನದಿಗಳು ಹರಿಯುವ ದಿಕ್ಕಿನಲ್ಲಿ ಚಪ್ಪಟೆ ತಳದ ದೋಣಿಗಳಲ್ಲಿ ಮತ್ತು ತೆಪ್ಪಗಳಲ್ಲಿ ಸರಕುಗಳನ್ನು ತೀರ ಪ್ರದೇಶದ ಪಟ್ಟಣಗಳಿಗೆ ಮತ್ತು ಅಲ್ಲಿಂದಾಚೆ ಯೂರೋಪಿಗೂ ಕಳುಹಿಸಬಹುದಾಗಿತ್ತು; ಬಹಳ ಕಡಿಮೆ ವೆಚ್ಚದಲ್ಲಿ ಸರಕುಗಳನ್ನು ಸಾಗಿಸಬಹುದಿತ್ತು. ಆದರೆ ನದಿಗಳು ಹರಿಯುವ ಎದುರು ದಿಕ್ಕಿನಲ್ಲಿ ದೋಣಿಗಳಲ್ಲಿ ಸರಕುಗಳನ್ನು ಸಾಗಿಸುವುದು ಅಷ್ಟು ಸುಲಭವಾಗಿರಲಿಲ್ಲ. ಹಾಗೆ ಸರಕುಗಳನ್ನು ಕಳುಹಿಸಬೇಕಾದಲ್ಲಿ ಮೊದಲು ಸರಕುಗಳನ್ನು ನ್ಯೂ ಆರ್ಲಿಯನ್ಸ್‌ಗೆ ರವಾನಿಸಿ, ಅಲ್ಲಿಂದ ಚಪ್ಪಟೆ ತಳದ ದೋಣಿಗಳಲ್ಲಿ ಅಥವಾ ತೆಪ್ಪಗಳ ಮೇಲೆ ನದಿಯ ಪ್ರವಾಹಕ್ಕೆ ಎದುರಾಗಿ ಹುಟ್ಟುಹಾಕಿ ಅತಿಪ್ರಯಾಸದಿಂದ ಸಾಗಿಸಬೇಕಾಗಿತ್ತು. ಇದಕ್ಕೆ ಹೆಚ್ಚು ವೆಚ್ಚ ಮಾಡಬೇಕಾಗಿತ್ತು. ಆದ್ದರಿಂದ ಇದು ಲಾಭದಾಯಕವಾಗಿರಲಿಲ್ಲ.

ಈ ಸಮಸ್ಯೆಗೆ ಕಂಡುಹಿಡಿದ ಮೊದಲನೆಯ ಪರಿಹಾರ – ಸುಂಕದ ಹಾದಿಗಳು, ರಸ್ತೆಗಳು. ೧೮೦೮ರಲ್ಲಿ ಕೇಂದ್ರ ಸರ್ಕಾರ ಒಂದು ಮುಖ್ಯವಾದ ಹೆದ್ದಾರಿ ಯೋಜನೆಯನ್ನು ಜಾರಿಗೆ ತಂದಿತು. ಈ ಹೆದ್ದಾರಿ ಮೇರಿಲ್ಯಾಂಡಿನ ಕಂಬರ್‌ಲ್ಯಾಂಡ್ ಊರಿನಿಂದ ಪ್ರಾರಂಭವಾಗಿ ಇಲಿನಾಯ್ ಸಂಸ್ಥಾನದ ವಾನಾಡಾಲಿಯವನ್ನು ಸೇರುತ್ತಿತ್ತು. ಈ ಹೆದ್ದಾರಿ ೭೦೦ ಮೈಲಿಗಳಷ್ಟು ಉದ್ದವಾಗಿತ್ತು. ಇದನ್ನು ಪೂರೈಸಲು ೪೨ ವರ್ಷಗಳು ಹಿಡಿದವು ಎನ್ನುವುದು ಆಗಿನ ಯಂತ್ರೋಪಕರಣಗಳು ಮತ್ತು ಕೆಲಸಗಾರರ ಪರಿಸ್ಥಿತಿಯನ್ನು ವಿಶದಪಡಿಸುತ್ತದೆ. ಈ ಹೆದ್ದಾರಿ ಯೋಜನೆಯ ನಂತರ ಕಾಲುವೆಗಳ ನಿರ್ಮಾಣವನ್ನು ಕೈಗೊಳ್ಳಲಾಯಿತು. ಕಾಲುವೆ ನಿರ್ಮಾಣ ಯೋಜನೆಗೆ ಸ್ಫೂರ್ತಿ ಕೊಟ್ಟದ್ದು ೧೮೨೫ರಲ್ಲಿ ನ್ಯೂಯಾರ್ಕ್ ಸಂಸ್ಥಾನದ ಆಲ್ಬನಿ ಪ್ರಾಂತದ ಹಡ್ಸನ್ ನದಿಯನ್ನು ಈರಿ (Erie) ಸರೋವರದೊಂದಿಗೆ ಸೇರಿಸುವ ಕಾಲುವೆಯನ್ನು ನಿರ್ಮಿಸಿದ್ದು. ಈ ಕಾಲುವೆ ಸರಕುಗಳನ್ನು ಸಾಗಿಸುವ ವೆಚ್ಚವನ್ನು ಬಹಳ ಕಡಿಮೆ ಮಾಡಿ ನ್ಯೂಯಾರ್ಕ್ ನಗರವನ್ನು ತೀವ್ರ

ವೃದ್ಧಿಗೊಳ್ಳುವ ವ್ಯಾಪಾರಕೇಂದ್ರವನ್ನಾಗಿ ಮಾಡಿತು. ನ್ಯೂಯಾರ್ಕ್ ಯೂರೋಪಿನಲ್ಲಿ ತಯಾರಾದ ವಸ್ತುಗಳು ಮತ್ತು ಅಮೆರಿಕದ ಪಶ್ಚಿಮ ಪ್ರದೇಶಗಳಿಂದ ಸರಬರಾಜಾಗುತ್ತಿದ್ದ ದವಸ ಧಾನ್ಯಗಳು, ಹಂದಿ ಮತ್ತು ಜಾನುವಾರುಗಳ ಮಾಂಸವನ್ನು ಸಗಟು ವ್ಯಾಪಾರ ಮಾಡುವ ಬೃಹತ್ ಮಾರುಕಟ್ಟೆಯಾಯಿತು.

ನ್ಯೂಯಾರ್ಕ್ ವ್ಯಾಪಾರ ಕೇಂದ್ರವಾಗಿ ಯಶಸ್ವಿಯಾಗಿದ್ದು ಅಟ್ಲಾಂಟಿಕ್ ತೀರ ಪ್ರದೇಶದ ಇತರ ನಗರಗಳಲ್ಲಿ ಮತ್ತು ಪಶ್ಚಿಮ ಪ್ರಾಂತದ ವ್ಯವಸಾಯ ಪ್ರದೇಶಗಳಲ್ಲಿ ಕಾಲುವೆ ನಿರ್ಮಾಣ ಮಾಡುವ ಗೀಳು ಪ್ರಾರಂಭವಾಯಿತು. ಈ ಕಾಲುವೆಗಳಲ್ಲಿ ಕೆಲವು ಲಾಭದಾಯಕವಾಗಿರಲಿಲ್ಲ. ಆದರೂ ಸಹ ಹಬೆಯಂತ್ರಗಳನ್ನು ಜೋಡಿಸಿದ ದೋಣಿಗಳು ಮತ್ತು ಚಕ್ರಾಕಾರವಾಗಿ ಸುತ್ತುವ ಹುಟ್ಟುಗಳಿಂದ ಚಲಿಸುವ ನಾವೆಗಳು, ನದಿಗಳು ಹರಿಯುವ ದಿಕ್ಕಿಗೆ ವಿರುದ್ಧವಾಗಿ ಸರಕುಗಳನ್ನು ಕಡಿಮೆ ವೆಚ್ಚದಲ್ಲಿ ಸಾಗಿಸಲು ಸಹಾಯಕವಾದವು. ಈ ಸಾರಿಗೆ ದೋಣಿಗಳಲ್ಲಿ ನ್ಯೂಯಾರ್ಕ್ ನಗರದಿಂದ ಆಲ್ಬನಿ ಪಟ್ಟಣಕ್ಕೆ ಪ್ರಯಾಣ ಮಾಡಲು ಕೇವಲ ೬೨ ಘಂಟೆಗಳ ಕಾಲ ಹಿಡಿಯುತ್ತಿತ್ತು! ಸ್ವಲ್ಪ ಸಮಯದಲ್ಲೇ ಹಬೆದೋಣಿಗಳು ಮಿಸ್ಸಿಸ್ಸಿಪ್ಪಿ ನದಿಯಲ್ಲಿ ಮತ್ತು ದೋಣಿಗಳು ಹೋಗಬಹುದಾದ ಉಪನದಿಗಳಲ್ಲಿ ಸರಕು ಸಾಗಾಣಿಕೆಗೆ ತೊಡಗಿದವು. ಆದರೂ ಜಲಸಾರಿಗೆಯಲ್ಲಿ ಅನೇಕ ತೊಡಕುಗಳಿದ್ದವು. ಅಮೆರಿಕದ ಉತ್ತರ ಭಾಗದಲ್ಲಿ ನದಿಗಳು, ಉಪನದಿಗಳು ಮತ್ತು ಕಾಲುವೆಯಲ್ಲಿನ ನೀರು ಚಳಿಗಾಲದಲ್ಲಿ ಹೆಪ್ಪುಗಟ್ಟಿ ಹಿಮಗಡ್ಡೆಯಾಗಿ ದೋಣಿಗಳು ಹಾಯಲು ಅಸಾಧ್ಯವಾಗುತ್ತಿತ್ತು. ಬೇಸಿಗೆಯಲ್ಲಿ ನದಿಗಳ ನೀರಿನ ಮಟ್ಟ ಕಡಿಮೆಯಾಗಿ ಜಲಸಾರಿಗೆ ದುಸ್ಸಾಧ್ಯವಾಗುತ್ತಿತ್ತು. ಈ ಸಮಸ್ಯೆಗೆ ಪರಿಹಾರ ದೊರಕಿದ್ದು 'ಕಬ್ಬಿಣದ ಕುದುರೆ' (iron horse) ಎಂದು ಆಗ ಜನರು ಕರೆಯುತ್ತಿದ್ದ ಉಗಿಯಂತ್ರದಿಂದ (steam locomotive). ೧೮೩೦ನೆಯ ಇಸವಿಯ ಮೊದಲಲ್ಲಿ ಮೊಟ್ಟಮೊದಲಿನ ಉಗಿಬಂಡಿಗಳು ಚಾರ್ಲ್ಸ್‌ಟನ್, ಬಾಲ್ಟಿಮೋರ್ ಮತ್ತು ಬಾಸ್ಟನ್ ನಗರಗಳಿಂದ ಓಡಲು ಪ್ರಾರಂಭಿಸಿದವು. ೧೮೪೦ರ ಹೊತ್ತಿಗೆ ಅಮೆರಿಕದಲ್ಲಿ ೩೩೦೦ ಮೈಲಿಗಳಿಗೂ ಹೆಚ್ಚು ರೈಲುದಾರಿಯನ್ನು ರಚನೆ ಮಾಡಿದ್ದರು. ಮುಂದೆ ರೈಲುದಾರಿಗಳು ಅಪಾರವಾಗಿ ರಚನೆಗೊಳ್ಳುವ ಸಾಧ್ಯತೆ ಖಚಿತವಾಗಿ ತೋರಿಬರುತ್ತಿತ್ತು. ಆಗಲೇ ಅಮೆರಿಕ ತನ್ನ ಎಲ್ಲ ಸಂಸ್ಥಾನಗಳನ್ನು ಸಂಪರ್ಕಿಸುವ ಅಲ್ಪ ವೆಚ್ಚದ ಸಾರಿಗೆ ವ್ಯವಸ್ಥೆಯನ್ನು ನಿರ್ಮಿಸುವ ಹಾದಿಯಲ್ಲಿ ಎಲ್ಲ ದೇಶಗಳಿಗಿಂತ ಮುಂದುವರಿದಿತ್ತು.

ಕೈಗಾರಿಕಾ ಕ್ರಾಂತಿ

ಅಮೆರಿಕದಲ್ಲಿ ರಸ್ತೆಗಳು ಮತ್ತು ಕಾಲುವೆಗಳು ನಿರ್ಮಾಣವಾಗುತ್ತಿದ್ದ ಸಮಯದಲ್ಲೇ ಅತ್ಯಂತ ಮಹತ್ವವಾದ ಆರ್ಥಿಕ ಬದಲಾವಣೆಗಳು ಉಂಟಾದವು. ಈ ಬದಲಾವಣೆಗಳನ್ನು ತಂದಿದ್ದು ಯಂತ್ರಚಾಲಿತ ಕಾರ್ಖಾನೆಗಳು. ಮೊದಲು ಇಂಗ್ಲೆಂಡಿನಲ್ಲಿ ಉಗಿಯಂತ್ರಗಳು,

ವಿದ್ಯುಚ್ಛಕ್ತಿಯಿಂದ ನಡೆಯುತ್ತಿದ್ದ ನೇಯುವ ಯಂತ್ರಗಳು ಮತ್ತು ಸ್ವಯಂಚಾಲಿತ ನೂಲುವ ಯಂತ್ರಗಳನ್ನು ಒಂದೇ ಕಟ್ಟಡದಲ್ಲಿ ಸ್ಥಾಪಿಸಿ ಅಗ್ಗದ ಬೆಲೆಯ ಬಟ್ಟೆಯನ್ನು ತಯಾರಿಸುವುದು ಪ್ರಾರಂಭವಾಯಿತು. ಬ್ರಿಟಿಷರಿಗೆ ಈ ತಾಂತ್ರಿಕ ಕೌಶಲ್ಯ ಆರ್ಥಿಕ ಪ್ರಾಬಲ್ಯವನ್ನು ಗಳಿಸುವಂತೆ ಮಾಡಿ, ಅಪಾರ ಲಾಭ ಉತ್ಪತ್ತಿಯ ಸಾಧನವಾಗುತ್ತದೆ ಎಂದು ಖಚಿತವಾಗಿ ತಿಳಿದಿದ್ದರಿಂದ ಈ ಔದ್ಯೋಗಿಕ ಪರಿಜ್ಞಾನ ಮತ್ತು ಯಂತ್ರರಚನೆಯ ತತ್ವಗಳನು ಅತ್ಯಂತ ಗುಪ್ತವಾಗಿ ಕಾಪಾಡಿ ಬೇರೆ ದೇಶಗಳಿಗೆ ಅವು ಹರಡದಂತೆ ಜಾಗ್ರತೆ ವಹಿಸಿದ್ದರು. ಆದರೆ ೧೭೯೦ರಲ್ಲಿ ಬಟ್ಟೆ ತಯಾರಿಸುವ ಯಂತ್ರದ ಪರಿಜ್ಞಾನ ಪಡೆದಿದ್ದ ಬ್ರಿಟಿಷ್ ಮೆಕಾನಿಕ್ ಸ್ಯಾಮುಯಲ್ ಸ್ಲೇಟರ್ (Samuel Slater) ಎಂಬುವನು ಅಮೆರಿಕಕ್ಕೆ ವಲಸೆ ಬಂದು ರ್‍ಹೋಡ್ ಐಲೆಂಡಿನ ಪಾಟಕೆಟ್ (Pawtucket) ಎಂಬಲ್ಲಿ ಹತ್ತಿಯಿಂದ ನೂಲು ತೆಗೆಯುವ ಕಾರ್ಖಾನೆಯನ್ನು ಸ್ಥಾಪಿಸಿದನು. ಇದಾದ ಸ್ವಲ್ಪ ಸಮಯದ ನಂತರ ನ್ಯೂ ಇಂಗ್ಲೆಂಡ್ ಪ್ರಾಂತ್ಯದಲ್ಲಿ ಸ್ಲೇಟರನ ಉಗಿಯಿಂದ ಚಾಲನೆಗೊಳ್ಳುವ ನೂಲುವ ಯಂತ್ರಗಳ ಕಾರ್ಖಾನೆಗಳು ಅನೇಕ ಕಡೆಗಳಲ್ಲಿ ಸ್ಥಾಪಿತಗೊಂಡವು. ಹತ್ತಿಯಿಂದ ನೂಲು ತೆಗೆಯುವ ಈ ಕಾರ್ಖಾನೆಗಳಲ್ಲಿ ಕುಟುಂಬದ ಎಲ್ಲರಿಗೂ ಕೆಲಸ ದೊರೆಯುವಂತಾಯ್ತು. ಹತ್ತಿಯ ಗಿರಣಿಗಳಿಂದಾಗಿ ಕಾರ್ಮಿಕರ ಸಂಖ್ಯೆ ಹೆಚ್ಚಾಯಿತು. ನೂಲು ತೆಗೆಯುವ ಕಾರ್ಖಾನೆಗಳ ಸ್ಥಾಪನೆಯಾದ ಹಲವು ವರ್ಷಗಳ ಮೇಲೆ ಇಂಗ್ಲೆಂಡಿನಲ್ಲಿ ವಿದ್ಯುತ್‌ಚಾಲಿತ ನೇಯ್ಗೆ ಯಂತ್ರ ರಚನೆಯ ತತ್ವಗಳನ್ನು ಮನದಟ್ಟು ಮಾಡಿಕೊಂಡಿದ್ದ ಫ್ರಾನ್ಸಿಸ್ ಕಾಬೊಟ್ ಲೋವೆಲ್ (Francis Cabot Lowell) ಅಮೆರಿಕಕ್ಕೆ ಬಂದು ನ್ಯೂ ಇಂಗ್ಲೆಂಡಿನ ಇತರ ವರ್ತಕರೊಡನೆ ಸೇರಿಕೊಂಡು ಬಂಡವಾಳ ಹೂಡಿ, ಬಾಸ್ಟನ್ ಮ್ಯಾನುಫ್ಯಾಕ್ಚರಿಂಗ್ ಕಂಪನಿ (Boston Manufacturing Company)ಯನ್ನು ಮೆರ್ರಿಮ್ಯಾಕ್ ನದಿ (Merrimack river) ದಂಡೆಯ ಊರಿನಲ್ಲಿ ಸ್ಥಾಪನೆ ಮಾಡಿದನು. ಆ ಊರಿಗೆ ಅವನ ಹೆಸರನ್ನೇ ಇಡಲಾಯಿತು. ಈ ದೊಡ್ಡ ಕಾರ್ಖಾನೆ ಬೃಹತ್ ಪ್ರಮಾಣದಲ್ಲಿ ಹತ್ತಿಯ ಬಟ್ಟೆಯನ್ನು ತಯಾರಿಸಲು ಪ್ರಾರಂಭಿಸಿತು.

ಯಂತ್ರವಿಜ್ಞಾನ ಅಮೆರಿಕದ ಜನಜೀವನವನ್ನು ಉತ್ತಮಗೊಳಿಸುತ್ತ ಹೋಯಿತು. ದೇಶದಲ್ಲಿ ಸುಸ್ಥಿತಿ ಏರ್ಪಟ್ಟದ್ದರಿಂದ ಅಧ್ಯಕ್ಷ ಮನ್ರೋ ತನ್ನ ಅಧಿಕಾರಾವಧಿಯ ಕಾಲವನ್ನು ಹೆಚ್ಚಾಗಿ ವಿದೇಶದ ವ್ಯವಹಾರಗಳಲ್ಲಿ ವಿನಿಯೋಗಿಸಿದನು. ಮನ್ರೋ ಅಧ್ಯಕ್ಷನಾಗುವ ಮೊದಲೇ ವಿದೇಶ ವ್ಯವಹಾರಗಳ ಕಾರ್ಯದರ್ಶಿಯಾಗಿ ಅನುಭವ ಪಡೆದಿದ್ದನು. ಅವನು ಸ್ವದೇಶದ ಆಂತರಿಕ ರಾಜಕೀಯ ಒಳಜಗಳ ಜಂಜಾಟದಲ್ಲಿ ತೊಳಲಾಡುವುದಕ್ಕಿಂತಲೂ ವಿದೇಶ ವ್ಯವಹಾರಗಳಲ್ಲಿ ನಿರತನಾಗುವುದರಲ್ಲಿ ಹೆಚ್ಚು ಆಸಕ್ತಿ ತೋರಿಸಿದನು. ಅವನ ಸಾಧನೆಗಳೆಂದರೆ ಆತನು ಮಾಡಿಕೊಂಡ ಎರಡು ಒಪ್ಪಂದಗಳು: ಮೊದಲನೆಯದಾಗಿ ೧೮೧೭ರ ರಷ್-ಬಾಗೊಟ್ (The Rush-Bagot Agreement) ಒಪ್ಪಂದ; ಎರಡನೆಯದು ೧೮೧೯ರ ಸ್ಪೇನ್-ಅಮೆರಿಕ ಒಪ್ಪಂದ. ರಷ್-ಬಾಗೊಟ್ ಒಪ್ಪಂದದ ಪ್ರಕಾರ

ಮಹಾಸರೋವರ ಪ್ರದೇಶ (Great Lakes Region)ದಲ್ಲಿ ಸೈನ್ಯ ಕಾರ್ಯಾಚರಣೆಯನ್ನು ಪರಸ್ಪರವಾಗಿ ರದ್ದುಗೊಳಿಸಿ ಆ ಪ್ರದೇಶವನ್ನು ಶಸ್ತ್ರಾಸ್ತ್ರರಹಿತವನ್ನಾಗಿ ಮಾಡುವುದು. ಈ ಒಪ್ಪಂದದ ಅಂತಿಮ ಗುರಿ ಅಮೆರಿಕ ಮತ್ತು ಕೆನಡಾ ಗಡಿಪ್ರದೇಶವನ್ನು ಸೈನ್ಯ ರಹಿತವನ್ನಾಗಿ ಮಾಡುವುದು. ಹೀಗೆ ಮಾಡಿದ್ದರಿಂದ ಮುಂದೆ ಕೆನಡಾ ಪ್ರಜೆಗಳು ಅಗ್ಗದ ಬೆಲೆಗೆ ಬಟ್ಟೆ ಕೊಳ್ಳಲು ನ್ಯೂಯಾರ್ಕ್ ಸಂಸ್ಥಾನದ ಬಫೆಲೋ ನಗರಕ್ಕೆ ಮುತ್ತಿಗೆ ಹಾಕಲು ಅವಕಾಶ ಕಲ್ಪಿಸಿದಂತಾಯಿತು. ೧೮೧೮ರ ಒಪ್ಪಂದ ಅಮೆರಿಕದ ಗಡಿ ೪೯ನೆಯ ಸಮಾನಾಂತರ ರೇಖೆಯಗುಂಟ ಲೇಕ್ ಆಫ್ ದಿ ವುಡ್ಸ್ (Lake of the Woods) ನಿಂದ ರಾಕಿ ಪರ್ವತಗಳ (Rockey mountains) ಶಿಖರಗಳವರೆಗೆ ವಿಸ್ತರಿಸಲಾಯಿತು. ಅದರಿಂದ ಆಚೆ ಅಸ್ಪಷ್ಟವಾಗಿ ಮೂಡಿದ್ದ ಆರೆಗಾನ್ (Oregon) ಪ್ರದೇಶವನ್ನು ಹತ್ತು ವರ್ಷಗಳವರೆಗೆ ಆಂಗ್ಲ-ಅಮೆರಿಕನ್ ಜಂಟಿ ಅಧಿಪತ್ಯಕ್ಕೆ ಒಳಪಡಿಸಲಾಯಿತು. ೧೮೨೭ರಲ್ಲಿ ಈ ಜಂಟಿವ್ಯವಸ್ಥೆಯನ್ನು ಅನಿರ್ದಿಷ್ಟವಾಗಿ ಮುಂದುವರಿಸಲಾಯಿತು. ಒಪ್ಪಂದಕ್ಕೆ ಒಳಪಟ್ಟ ಎರಡು ದೇಶಗಳಲ್ಲಿ ಯಾವ ದೇಶ ಬೇಕಾದರೂ ಒಂದು ವರ್ಷ ಮುಂಚೆ ತಿಳಿಸಿ ಒಪ್ಪಂದ ವನ್ನು ಕೊನೆಗೊಳಿಸಬಹುದಾಗಿತ್ತು.

ಸ್ಪೇನ್ ಆಡಳಿತಕ್ಕೆ ಒಳಪಟ್ಟಿದ್ದ ಫ್ಲಾರಿಡಾ (Florida) ಪ್ರಾಂತವನ್ನು ವಶಪಡಿಸಿ ಕೊಳ್ಳಲು ಅಮೆರಿಕ ಅನೇಕ ವರ್ಷಗಳಿಂದ ಪ್ರಯತ್ನ ನಡೆಸಿತ್ತು. ಅದು ಅಮೆರಿಕನ್ ರಾಜನೀತಿಯ ಮುಖ್ಯಧ್ಯೇಯಗಳಲ್ಲಿ ಒಂದಾಗಿತ್ತು. ೧೮೧೦ರಲ್ಲಿ ಸ್ಪೇನ್ ಆಕ್ಷೇಪಣೆಯನ್ನು ಲೆಕ್ಕಿಸದೆ ಪಶ್ಚಿಮ ಫ್ಲಾರಿಡ ಪ್ರಾಂತವನ್ನು ಅಮೆರಿಕ ಸ್ವಾಧೀನಪಡಿಸಿಕೊಂಡಿತು. ಹೀಗೆ ಸ್ವಾಧೀನ ಪಡಿಸಿಕೊಂಡದ್ದನ್ನು ಸಮರ್ಥಿಸಲು, ಪಶ್ಚಿಮ ಫ್ಲಾರಿಡ, ಅಮೆರಿಕ ಫ್ರೆಂಚರಿಂದ ಕೊಂಡ ಲೂಯಿಸಿಯಾನ ಪ್ರಾಂತಕ್ಕೆ ಸೇರಿತ್ತು ಎನ್ನುವ ಕಾರಣವನ್ನು ಕೊಟ್ಟು ತಾವು ಮಾಡಿದ್ದು ನ್ಯಾಯಬದ್ಧವಾದುದೆಂದು ವಾದಿಸಿದರು. ಫ್ಲಾರಿಡಾದ ಪೂರ್ವಭಾಗ ಒಂದು ಕಠಿಣ ಸಮಸ್ಯೆಯಾಗಿ ಉಳಿಯಿತು. ಫ್ಲಾರಿಡಾದ ಪೂರ್ವಪ್ರಾಂತ ಬಿಳಿಯರ ದ್ವೇಷಿಗಳಾಗಿದ್ದ ಸೆಮಿನೋಲ್ ಇಂಡಿಯನ್ನರಿಗೂ (Seminole Indians) ಮತ್ತು ತಪ್ಪಿಸಿಕೊಂಡು ಬಂದ ಗುಲಾಮರಿಗೂ ಆಶ್ರಯವಾಗಿತ್ತು. ಅಮೆರಿಕನ್ ಸರ್ಕಾರ ಪೂರ್ವ ಫ್ಲಾರಿಡಾದಲ್ಲಿ ಸೇರಿಕೊಂಡಿದ್ದ ಈ ಎರಡು ದಂಗೆಕೋರ ಗುಂಪುಗಳು ಜಾರ್ಜಿಯ ಪ್ರಾಂತಕ್ಕೆ ಅಪಾಯಕಾರಿಯಾಗಿವೆ ಎಂದು ಪ್ರಚಾರ ಮಾಡಿತು. ಈ ಅಪಾಯವನ್ನು ತಪ್ಪಿಸಲು ೧೮೧೮ರಲ್ಲಿ ಆ್ಯಂಡ್ರೂ ಜಾಕ್‌ಸನ್ (Andrew Jackson) ಸೇನಾಧಿಪತ್ಯದಲ್ಲಿ ಅಮೆರಿಕನ್ ಸೈನ್ಯ ಫ್ಲಾರಿಡ ಗಡಿಯನ್ನು ದಾಟಿ ಮುನ್ನುಗ್ಗಿ ದಂಗೆಯನ್ನು ಪ್ರಚೋದಿಸು ತ್ತಿದ್ದರೆಂದು ಆಪಾದಿಸಲಾದ ಇಬ್ಬರು ಇಂಗ್ಲಿಷರನ್ನು ಸೆರೆಹಿಡಿದು ಗಲ್ಲಿಗೇರಿಸಿ, ಸ್ಪೇನಿನ ಸಾರ್ವಜನಿಕ ಪತ್ರಾಗಾರವನ್ನು (Spanish archives) ವಶಪಡಿಸಿಕೊಂಡಿತು. ಸ್ಪೇನ್ ಈ ದಾಳಿಯನ್ನು ಖಂಡಿಸಿ, ಪ್ರತಿಭಟನೆ ತೋರುವುದಕ್ಕಿಂತ ಹೆಚ್ಚಿಗೆ ಏನನ್ನೂ ಮಾಡ ಲಾಗಲಿಲ್ಲ.

೧೮೧೯ರಲ್ಲಿ ಸ್ಪೇನ್ ಮತ್ತು ಅಮೆರಿಕ ಆ್ಯಡಮ್ಸ್-ಆನಿಸ್ ಒಪ್ಪಂದ (Adams-Onis Treaty) ಎಂಬ ಹೆಸರಿನ ವ್ಯಾಪಕವಾದ ಕರಾರನ್ನು ಮಾಡಿಕೊಂಡವು. ಈ ಕರಾರಿನಂತೆ ಸ್ಪೇನ್ ಪಶ್ಚಿಮ ಫ್ಲಾರಿಡಾದ ತನ್ನ ಎಲ್ಲ ಹಕ್ಕುಗಳನ್ನೂ ಬಿಟ್ಟುಕೊಟ್ಟಿತು. ಸ್ಪೇನ್ ತನ್ನ ಪ್ರಜೆಗಳಿಗೆ ಕೊಡಬೇಕಾಗಿದ್ದ ಐದು ಮಿಲಿಯನ್ ಡಾಲರ್‌ಗಳ ಪರಿಹಾರ ಧನವನ್ನೂ ಅಮೆರಿಕ ವಹಿಸಿಕೊಂಡದ್ದರಿಂದ ಪೂರ್ವ ಫ್ಲಾರಿಡಾವನ್ನು ಅಮೆರಿಕಕ್ಕೆ ಸೇರಿಸಲು ಸ್ಪೇನ್ ಒಪ್ಪಿಗೆ ನೀಡಿತು. ಮೇಲಾಗಿ ಈ ಕರಾರಿನ ಪ್ರಕಾರ ಲೂಯಿಸಿಯಾನ ಪ್ರದೇಶದಿಂದ ಟೆಕ್ಸಾಸ್ ಪ್ರಾಂತವನ್ನು ಬೇರ್ಪಡಿಸಿ ಗಡಿಯನ್ನು ನಿರ್ಧರಿಸಲಾಯಿತು. ಕೊನೆಯದಾಗಿ ಸ್ಪೇನ್ ಆರೆಗಾನ್ ಪ್ರದೇಶದ (Oregon Country) ಮೇಲಿನ ತನ್ನ ಹಕ್ಕನ್ನು ತ್ಯಜಿಸಿ, ಅದರ ಒಡೆತನವನ್ನು ಅಮೆರಿಕ ಮತ್ತು ಇಂಗ್ಲೆಂಡ್ ಕೂಡಿ ಇತ್ಯರ್ಥ ಮಾಡಿಕೊಳ್ಳುವಂತೆ ನಿರ್ದೇಶಿಸಿತು.

ಮನ್ರೋ ಸಿದ್ಧಾಂತ

ನೆಪೋಲಿಯನ್ ಕಾಲದ ಯುದ್ಧಗಳಿಂದ ದುರ್ಬಲಗೊಂಡಿದ್ದ ಸ್ಪೇನ್ ೧೮೨೦-೨೧ರ ಹೊತ್ತಿಗೆ ತನ್ನ ವಿಶಾಲವಾದ ಅಮೆರಿಕನ್ ಚಕ್ರಾಧಿಪತ್ಯದ ಮೇಲೆ ನಿಯಂತ್ರಣ ಕಳೆದುಕೊಂಡಿತು. ಅಷ್ಟರಲ್ಲಿ ಸ್ಪೇನಿನ ಎಲ್ಲ ವಸಾಹತುಗಳು ಸ್ವಾತಂತ್ರ್ಯ ಪಡೆದುಕೊಂಡಿದ್ದವು. ಅಮೆರಿಕ ಲ್ಯಾಟಿನ್ ಅಮೆರಿಕ ಜನರ ಸ್ವಾತಂತ್ರ್ಯ ಹೋರಾಟಕ್ಕೆ ಸಹಾನುಭೂತಿ ತೋರಿ, ಪಶ್ಚಿಮ ಗೋಲಾರ್ಧದಿಂದ (Western hemisphere) ಯೂರೋಪಿಯನ್ ಪ್ರಾಬಲ್ಯ ಉಚ್ಚಾಟನೆಗೊಳ್ಳುವುದನ್ನು ಸ್ವಾಗತಿಸಿತು. ಆದರೆ ಯೂರೋಪ್ ಅಮೆರಿಕನ್ ವಿದ್ಯಮಾನಗಳಿಂದ ದೂರವಾಗಿರುತ್ತದೆ ಎನ್ನುವ ಭರವಸೆ ಇರಲಿಲ್ಲ. ೧೮೧೫ರಲ್ಲಿ ಯೂರೋಪಿನ ದೇಶಗಳು ಒಂದಾಗಿ ಕೂಡಿ 'ಪವಿತ್ರ ಒಪ್ಪಂದ' (Holy alliance) ಮಾಡಿಕೊಂಡು ಯೂರೋಪಿಯನ್ ರಾಷ್ಟ್ರಗಳ ಕೂಟವನ್ನು ಸ್ಥಾಪಿಸಿದವು. ಯೂರೋಪಿನ ರಾಜಕೀಯ ಪರಿಸ್ಥಿತಿಯನ್ನು ಬದಲಾಗದಂತೆ ನೋಡಿಕೊಂಡು, ಎಲ್ಲ ಕ್ರಾಂತಿಕಾರಕ ಬದಲಾವಣೆಗಳನ್ನು ತಡೆಗಟ್ಟುವುದೇ ಈ ಕೂಟದ ಮುಖ್ಯ ಉದ್ದೇಶವಾಗಿತ್ತು. ಯೂರೋಪಿಯನ್ ರಾಷ್ಟ್ರಗಳು ದಕ್ಷಿಣ ಅಮೆರಿಕ ದೇಶಗಳಲ್ಲಿ ಸ್ಪೇನಿನ ಆಡಳಿತವನ್ನು ಪುನಃ ಸ್ಥಾಪಿಸಬಹುದೆನ್ನುವ ಭಯ ಅಮೆರಿಕವನ್ನು ಕಾಡುತ್ತಿತ್ತು. ರಷ್ಯನ್ ಚಕ್ರಾಧಿಪತ್ಯ ತನ್ನ ಅಧಿಕಾರವನ್ನು ಅಲಾಸ್ಕದಿಂದ ಶಾಂತಸಾಗರದ ತೀರ ಪ್ರದೇಶದವರೆಗೆ ವಿಸ್ತರಿಸಲು ಪ್ರಯತ್ನಿಸುತ್ತಿರುವುದು ಅಮೆರಿಕಕ್ಕೆ ಕಳವಳಕಾರಿಯಾಗಿತ್ತು.

ಸ್ಪೇನ್ ಲ್ಯಾಟಿನ್ ಅಮೆರಿಕದ ಮೇಲೆ ಪುನಃ ಅಧಿಕಾರ ಸ್ಥಾಪನೆ ಮಾಡುವುದು ತನ್ನ ವ್ಯಾಪಾರಕ್ಕೆ ತೊಂದರೆಯಾಗುತ್ತದೆ ಎನ್ನುವ ಕಾರಣದಿಂದ ಇಂಗ್ಲೆಂಡ್ ಅದನ್ನು ವಿರೋಧಿಸಿತು. ಫ್ರೆಂಚರು ಲ್ಯಾಟಿನ್ ಅಮೆರಿಕದಲ್ಲಿ ತಮ್ಮ ಪ್ರಾಬಲ್ಯ ಬೆಳೆಸಬಹುದೆಂಬ ಭಯವೂ ಆ ವಿರೋಧದಲ್ಲಿ ಸೇರಿತ್ತು. ಇಂಗ್ಲೆಂಡ್ ಮತ್ತು ಅಮೆರಿಕ ತಮ್ಮ ವಿರೋಧವನ್ನು

ಒಂದು ಜಂಟಿಹೇಳಿಕೆಯಲ್ಲಿ ವ್ಯಕ್ತಪಡಿಸಬೇಕೆನ್ನುವ ಸಲಹೆಯನ್ನು ಅಮೆರಿಕ ತಿರಸ್ಕರಿಸಿತು. ಅಧ್ಯಕ್ಷ ಮನ್ರೋ ಡಿಸೆಂಬರ್ ೧೮೨೩ರಲ್ಲಿ ನೀಡಿದ ವಾರ್ಷಿಕ ಸಂದೇಶದಲ್ಲಿ ಪಶ್ಚಿಮ ಗೋಲಾರ್ಧದ ವ್ಯವಹಾರಗಳಲ್ಲಿ ಯೂರೋಪಿನ ರಾಷ್ಟ್ರಗಳು ಪ್ರವೇಶಿಸುವುದನ್ನು ಅಮೆರಿಕ ತಡೆಗಟ್ಟುತ್ತದೆ ಎಂದು ಪ್ರತಿಜ್ಞೆ ಮಾಡಿದನು. ಯೂರೋಪಿನ ಯುದ್ಧಗಳಲ್ಲಿ ಭಾಗ ವಹಿಸುವ ಅಥವಾ ಪಶ್ಚಿಮ ಗೋಲಾರ್ಧದಲ್ಲಿ ಉಳಿದಿರುವ ಯೂರೋಪಿನ ವಸಾಹತುಗಳ ವ್ಯವಹಾರಗಳಲ್ಲಿ ಪ್ರವೇಶಿಸುವ ಆಸಕ್ತಿ ಅಮೆರಿಕಕ್ಕೆ ಇಲ್ಲವೆಂದು ಸಾರಿದನು. ಈ ಸಂದೇಶವೇ 'ಮನ್ರೋ ಸಿದ್ಧಾಂತ'ವೆಂದು ಹೆಸರು ಪಡೆಯಿತು. ಯೂರೋಪಿನ ರಾಷ್ಟ್ರಗಳು ಈ ಸಿದ್ಧಾಂತ, ಈಗ ತಾನೆ ಕಣ್ಣುಬಿಡುತ್ತಿರುವ ದೇಶಾದ ಉದ್ಧಟತನವೆಂದು ಭಾವಿಸಿ ಅದನ್ನು ಕಡೆಗಣಿಸಿದವು. ಆದರೆ ಈ ಹೇಳಿಕೆ ಒಂದು ಮುಖ್ಯವಾದ ಮೇಲ್ಪಂಕ್ತಿಯನ್ನು ಹಾಕಿದಂತಾಯಿತು. ಅಮೆರಿಕದ ಪ್ರಾಬಲ್ಯ ಹೆಚ್ಚಿದಂತೆಲ್ಲ ಅದು ಲ್ಯಾಟಿನ್ ಅಮೆರಿಕ ದೇಶಗಳ ಸ್ವಾತಂತ್ರ್ಯವನ್ನು ರಕ್ಷಿಸುವ ಏಕೈಕ ಶಕ್ತಿಯಾಯಿತು. ಮನ್ರೋ ಸಿದ್ಧಾಂತದ ಪ್ರಕಾರ, ಲ್ಯಾಟಿನ್ ಅಮೆರಿಕದ ಯಾವ ಒಂದು ದೇಶವನ್ನಾಗಲಿ ಯೂರೋಪಿನ ಯಾವುದೇ ದೇಶ ಆಕ್ರಮಿಸಲು ಪ್ರಯತ್ನಿಸಿದರೆ, ಅಮೆರಿಕ ಆಕ್ರಮಣಕಾರಿ ದೇಶವನ್ನು ಎದುರಿಸುವ ಹೊಣೆಗಾರಿಕೆಗೆ ಬದ್ಧವಾಗಿರುತ್ತದೆ. ಈ ಸಿದ್ಧಾಂತ ದಕ್ಷಿಣ ಅಮೆರಿಕ ದೇಶಗಳ ಸ್ವಾತಂತ್ರ್ಯವನ್ನು ರಕ್ಷಿಸಲು ಅಮೆರಿಕಕ್ಕೆ ಅವಕಾಶ ಕಲ್ಪಿಸಿದಂತೆ ಅವುಗಳ ಆಂತರಿಕ ವ್ಯವಹಾರದಲ್ಲಿ ಪ್ರವೇಶಿಸಲು ಸುಲಭವಾಗುವಂತೆ ಮಾಡಿತು.

ಜಾನ್ ಕ್ವಿನ್ಸಿ ಆ್ಯಡಮ್ಸ್[೩]ನ ಅಧ್ಯಕ್ಷತೆ

೧೮೨೪ರ ಚುನಾವಣೆಯಲ್ಲಿ ಆಂಡ್ರೂ ಜಾಕ್‌ಸನ್ (Andrew Jackson), ಹೆನ್ರಿ ಕ್ಲೇ (Henry Clay), ಜಾನ್ ಕ್ವಿನ್ಸಿ ಆ್ಯಡಮ್ಸ್ ಮತ್ತು ವಿಲಿಯಮ್ ಕ್ರಾಫರ್ಡ್ (William Crawford) ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದರು. ಈ ಸ್ಪರ್ಧೆಯಲ್ಲಿ ಇವರು ತಮ್ಮ ಪಕ್ಷದ ಧ್ಯೇಯ ಮತ್ತು ಧೋರಣೆಗಳನ್ನು ಮತದಾರರಿಗೆ ಸ್ಪಷ್ಟಪಡಿಸದೆ, ಅಭ್ಯರ್ಥಿಯ ವೈಯಕ್ತಿಕ ಮತ್ತು ಖಾಸಗಿ ಜೀವನದ ಕುಂದುಕೊರತೆಗಳನ್ನು ಮತ್ತು ಅವನ ಬಗ್ಗೆ ಪ್ರಚಾರಗೊಂಡಿದ್ದ ಅಪನಿಂದನೆಗಳನ್ನು ಬಹಿರಂಗವಾಗಿ ಚರ್ಚಿಸುವುದು, ಅವನ ಚಾರಿತ್ರ್ಯ

೩. ಜಾನ್ ಕ್ವಿನ್ಸಿ ಆ್ಯಡಮ್ಸ್ ಅಮೆರಿಕದ ಆರನೆಯ ಅಧ್ಯಕ್ಷ ಮತ್ತು ಎರಡನೆಯ ಅಧ್ಯಕ್ಷ ಜಾನ್ ಆ್ಯಡಮ್ಸ್‌ನ ಮಗ. ಈತ ಸಮರ್ಥ ರಾಯಭಾರಿ. ಘೆಂಟ್ ಒಪ್ಪಂದ ಮತ್ತು ಸ್ಪೇನ್‌ನೊಡನೆ ಆ್ಯಡಮ್ಸ್–ಆನಿಸ್ ಒಪ್ಪಂದಗಳಿಗೆ ಕಾರಣನಾದವನು. ಆ್ಯಡಮ್ಸ್ ಸ್ಥೂಲಕಾಯದ, ಬೊಕ್ಕತಲೆಯ, ಗಂಭೀರಪ್ರಕೃತಿಯ ಕಾರ್ಯನಿರತನಾದ ವ್ಯಕ್ತಿಯಾಗಿದ್ದನು. ಧೀರ–ಧೀಮಂತನಾಗಿದ್ದರೂ ಇವನು ಸಂಶಯಪ್ರವೃತ್ತಿಯವನಾಗಿದ್ದು ಭವಿಷ್ಯದ ಬಗ್ಗೆ ಕಳವಳಗೊಂಡಿದ್ದನು. ಇವನು ಶ್ರೀಮಂತವರ್ಗದಲ್ಲಿ, ಕೈಗಾರಿಕೆ ಮತ್ತು ಉದ್ಯೋಗ ಉತ್ಪಾದನೆಗಳಲ್ಲಿ ದೇಶದ ಭವಿಷ್ಯವನ್ನು ರೂಪಿಸುವ ಶಕ್ತಿ ಅಡಗಿದೆ ಎಂದು ನಂಬಿದ್ದನು.

ವಧೆ ಮಾಡುವುದು, ಮುಂತಾದ ಕೀಳು ಚುನಾವಣೆ ಪ್ರಚಾರತಂತ್ರಗಳನ್ನು ಉಪಯೋಗಿಸಿದರು. ಈ ಚುನಾವಣೆಯಲ್ಲಿ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿಲ್ಲ. ಚುನಾವಣೆಯಲ್ಲಿ ಯಾವ ಅಭ್ಯರ್ಥಿಗೂ ಸಾರ್ವಜನಿಕ ಮತಗಳಲ್ಲಾಗಲೀ ಅಥವಾ ಎಲೆಕ್ಟರಲ್ ಮತಗಳಲ್ಲಾಗಲೀ ಬಹುಮತ ದೊರೆಯಲಿಲ್ಲ. ಆದ್ದರಿಂದ ಚುನಾವಣೆಯನ್ನು ಪ್ರಜಾಪ್ರತಿನಿಧಿ ಸಭೆಗೆ ವಹಿಸಲಾಯಿತು. ಈ ಸಭೆಯಲ್ಲಿ ಸಂಸ್ಥಾನಗಳು ಮತ ಚಲಾಯಿಸಿ ಜಾನ್ ಕ್ವಿನ್ಸಿ ಆ್ಯಡಮ್ಸ್‌ನನ್ನು ಅಧ್ಯಕ್ಷನನ್ನಾಗಿ ಆಯ್ಕೆಮಾಡಲಾಯಿತು. ನಾಲ್ಕು ಅಭ್ಯರ್ಥಿಗಳಲ್ಲಿ ಎಲ್ಲರಿಗಿಂತ ಹೆಚ್ಚು ಮತಗಳನ್ನು ಗಳಿಸಿದ್ದ ಜಾಕ್‌ಸನ್ ನ್ಯಾಯವಾಗಿ ತನಗೆ ಸಿಗಬೇಕಾಗಿದ್ದ ಅಧ್ಯಕ್ಷಪದವಿ, ಕ್ಲೇ ಮತ್ತು ಆ್ಯಡಮ್ಸ್‌ರ ಪಿತೂರಿಯಿಂದ ತಪ್ಪಿ ಹೋಯಿತೆಂದು ದೂಷಣೆ ಮಾಡಿದನು. ಆನಂತರ ಆ್ಯಡಮ್ಸ್ ಕ್ಲೇಯನ್ನು ವಿದೇಶ ವ್ಯವಹಾರಗಳ ಕಾರ್ಯದರ್ಶಿಯಾಗಿ ನೇಮಿಸಿದ್ದು ಅವರಿಬ್ಬರೂ ಸೇರಿ ನಡೆಸಿದ ಪಿತೂರಿಯನ್ನು ಸಾಬೀತುಗೊಳಿಸುತ್ತದೆ ಎಂದು ಜಾಕ್‌ಸನ್ ವಾದಿಸಿದನು.

೧೮೨೪ರ ಚುನಾವಣೆ 'ಎರಡು ಪಕ್ಷಗಳ ವ್ಯವಸ್ಥೆ' (the second party system)ಯ ಪ್ರಾರಂಭಕ್ಕೆ ಕಾರಣವಾಯಿತು. ಕ್ಲೇ ಮತ್ತು ಆ್ಯಡಮ್ಸ್ ಅವರ ಪಕ್ಷವನ್ನು 'ವಿಗ್ಸ್' (Wigs) ಎಂದು ಕರೆದರು. ಉತ್ತರದ ಕೈಗಾರಿಕೆಯ ಪ್ರಾಂತಗಳಲ್ಲಿ ಈ ಪಕ್ಷಕ್ಕೆ ಹೆಚ್ಚಿನ ಬೆಂಬಲ ದೊರೆಯಿತು. ಜಾಕ್‌ಸನ್ ಮತ್ತು ಅವನ ಅನುಯಾಯಿಗಳ ಪಕ್ಷವನ್ನು 'ಡೆಮೊಕ್ರಾಟಿಕ್ ರಿಪಬ್ಲಿಕನ್' (democratic republicans) ಎಂದು ಕರೆದರು. ಸ್ವಲ್ಪ ಕಾಲದ ನಂತರ 'ರಿಪಬ್ಲಿಕನ್' ಪದವನ್ನು ತೆಗೆದುಹಾಕಿ ಈ ಪಕ್ಷವನ್ನು 'ಡೆಮೊಕ್ರಾಟಿಕ್' ಪಕ್ಷವೆಂದು ಕರೆಯಲಾರಂಭಿಸಿದರು. ದಕ್ಷಿಣ ಮತ್ತು ಪಶ್ಚಿಮ ಪ್ರಾಂತಗಳ ಸಣ್ಣ ಹಿಡುವಳಿಗಾರರು ಈ ಪಕ್ಷದ ಪ್ರಧಾನ ಬೆಂಬಲಿಗರಾದರು. ೧೮೨೮ರಲ್ಲಿ ನಡೆದ ಚುನಾವಣೆಯಲ್ಲಿ ಆಂಡ್ರೂ ಜಾಕ್‌ಸನ್[೪] ಮತ್ತು ಅವನ ಡೆಮೊಕ್ರಾಟಿಕ್ ಪಕ್ಷ ಗೆದ್ದು ಜಾಕ್‌ಸನ್ ೭ನೆಯ ಅಧ್ಯಕ್ಷನಾಗಿ ಅಧಿಕಾರವಹಿಸಿಕೊಂಡನು. ಚುನಾವಣೆ ಪ್ರಚಾರ ಅಪನಿಂದೆಗಳಿಂದ, ವೈಯಕ್ತಿಕ ಆಪಾದನೆಗಳಿಂದ, ಟೀಕೆ ಮತ್ತು ಪರಸ್ಪರ ಮೂದಲಿಕೆಗಳಿಂದ ಕಲುಷಿತಗೊಂಡಿತ್ತು. ಜಾಕ್‌ಸನ್ ಆ್ಯಡಮ್ಸ್‌ನನ್ನು ತಲೆಹಿಡುಕ (pimp)ನೆಂದು ಜರಿದು, ಅವನು ದುಂದುಗಾರ ಹಣವಂತ ಮತ್ತು ನೀತಿಬಾಹಿರ ವ್ಯವಹಾರ ಮಾಡುವ ಭ್ರಷ್ಟಾಚಾರಿಯೆಂದು ನಿಂದಿಸಿದನು. ಆ್ಯಡಮ್ಸ್ ಸುಮ್ಮನಿರಲಿಲ್ಲ. ಜಾಕ್‌ಸನ್ ಬಗ್ಗೆ ಅಸಹ್ಯ ಮಾತುಗಳನ್ನಾಡಿದುದೆ ಅಲ್ಲದೆ ಅವನ ಹೆಂಡತಿ ತನ್ನ ಮೊದಲನೆಯ ಗಂಡನಿಂದ ವಿಚ್ಛೇದನ ಪಡೆಯದೆ ಇವನನ್ನು ಮದುವೆಯಾಗಿದ್ದಾಳೆಂದು ಆಪಾದಿಸಿದನು. ಆದರೂ ಸಹ ಈ ಚುನಾವಣೆಯಲ್ಲಿ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದುದರಿಂದ ಜಾಕ್‌ಸನ್ ಗೆಲ್ಲುವುದು ಸಾಧ್ಯವಾಯಿತು. ಅವನ ಅಧ್ಯಕ್ಷತೆಯಲ್ಲಿ ಅಮೆರಿಕ ಹೊಸ ರಾಜಕೀಯ ಯುಗಕ್ಕೆ ಕಾಲಿರಿಸಿತು.

---

೪. ಆ್ಯಂಡ್ರೂ ಜಾಕ್‌ಸನ್ ೧೮೨೮ರಲ್ಲಿ ಮತ್ತು ೧೮೩೨ರಲ್ಲಿ ಒಟ್ಟು ಎರಡು ಬಾರಿ ಅಧ್ಯಕ್ಷನಾಗಿ ಆಯ್ಕೆಗೊಂಡನು.

ರಾಜಕೀಯ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳು

ಅರ್ವಿನ್ ಅಂಗರ್ (Irwin Unger) ಮತ್ತು ಇತರ ಇತಿಹಾಸಕಾರರು ಆ್ಯಂಡ್ರೂ ಜಾಕ್‌ಸನ್ ಅಮೆರಿಕ ರಾಜಕೀಯ ಕ್ಷೇತ್ರದಲ್ಲಾದ ಮಹತ್ತರ ಬದಲಾವಣೆಗಳಿಗೆ ಸಂಕೇತವೂ ಕಾರಣಪುರುಷನೂ ಆಗಿದ್ದನೆಂದು ಅಭಿಪ್ರಾಯ ಪಟ್ಟಿದ್ದಾರೆ. ಆ್ಯಂಡ್ರೂ ಜಾಕ್‌ಸನ್ ಆಗರ್ಭ ಶ್ರೀಮಂತ ಹಾಗೂ ಗುಲಾಮರ ಒಡೆಯನಾಗಿದ್ದನು. ಪ್ರದರ್ಶನಾರ್ಹವಾದ ಆಕರ್ಷಣೀಯ ಪ್ಲಾಂಟೇಶನ್‌ನ ಮಾಲಿಕನಾಗಿದ್ದನು. ಈ ಹಳೆಯ ಕಾಲದ ದಕ್ಷಿಣ ಸಂಸ್ಕೃತಿಯ ಪ್ರತೀಕವಾದ ಪ್ಲಾಂಟೇಶನ್ ನ್ಯಾಷ್‌ವಿಲ್ (Nashville) ಬಳಿ ಇತ್ತು. ಅವನು ಸ್ವತಃ ದುಡಿದು ಅಭಿವೃದ್ಧಿಗೊಂಡವನು. ಅಷ್ಟೇನೂ ವಿದ್ಯಾವಂತನಲ್ಲ. ಅವನು ಅಂತಸ್ತು ಮತ್ತು ಸೌಲಭ್ಯಗಳಿಗೆ ಮನ್ನಣೆ ಕೊಡುತ್ತಿರಲಿಲ್ಲ. ಸ್ವತಃ ಆಗರ್ಭ ಶ್ರೀಮಂತ ನಾದರೂ ದೇಶದ ರಾಜಕೀಯ ಕ್ಷೇತ್ರದಲ್ಲಿ ಸಮಾನತೆ ಹಾಗೂ ಸಮತಾಭಾವವನ್ನು ಪರಿಪಾಲಿಸಿದನು. ಅವನ ಈ ನಡುವಳಿಕೆ ಪ್ರತಿಸ್ಪರ್ಧಿಗಳಲ್ಲಿ ಜಿಗುಪ್ಸೆ ಹುಟ್ಟಿಸಿ ಅವರು ಅವನನ್ನು ಒಬ್ಬ ಕೀಳು ಅಭಿರುಚಿಯ ಒರಟುತನದ ಅಪಾಯಕಾರಿ ವ್ಯಕ್ತಿಯೆಂದು ಭಾವಿಸಿದರು.

ಆದರೆ ಜಾಕ್‌ಸನ್ ರಾಜಕೀಯ ಕ್ಷೇತ್ರದಲ್ಲಿ ಬದಲಾವಣೆಗಳನ್ನು ಉಂಟುಮಾಡಿ, ಅವುಗಳಿಂದ ಪ್ರಯೋಜನ ಪಡೆದುಕೊಂಡ ಕುಶಲ ರಾಜಕಾರಣಿ ಆಗಿದ್ದನು. ೧೮೧೫ರ ನಂತರ ಸಂಸ್ಥಾನಗಳಲ್ಲಿ ವಿಶೇಷವಾಗಿ ಪಶ್ಚಿಮ ಪ್ರಾಂತದಲ್ಲಿ ಮತದಾರರ ಸಂಖ್ಯೆ ಹೆಚ್ಚುತ್ತ ಹೋಯಿತು. ಅದೇ ಸಮಯದಲ್ಲಿ ಸಂಸ್ಥಾನಗಳ ರಾಜ್ಯಾಂಗಗಳು ಅಧ್ಯಕ್ಷನನ್ನು ಚುನಾಯಿಸುವ ಹಕ್ಕನ್ನು ಶಾಸನಸಭೆಯಿಂದ ಮತದಾರರಿಗೆ ವರ್ಗಾಯಿಸಿದವು. ಇದು ಸರ್ಕಾರವನ್ನು ನಿಜವಾಗಿ ಪ್ರಜಾರಾಜ್ಯವನ್ನಾಗಿ ಮಾಡುವ ಪ್ರಯತ್ನವಾಯಿತು. ಅಧ್ಯಕ್ಷಸ್ಥಾನಕ್ಕೆ ಅಭ್ಯರ್ಥಿಗಳನ್ನು ನಾಮಕರಣ ಮಾಡುತ್ತಿದ್ದ ಪಕ್ಷಗಳ ಒಳಗುಂಪುಗಳ (party caucus) ಬದಲಿಗೆ ನಾಮಕರಣ ಅಧಿವೇಶನವನ್ನು ಜಾರಿಗೆ ತರಲಾಯಿತು. ೧೮೩೨ರಿಂದ ಎಲ್ಲ ರಾಜಕೀಯ ಪಕ್ಷಗಳೂ ತಮ್ಮ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ನಾಮಕರಣ ಅಧಿವೇಶನಗಳನ್ನು (nominating conventions) ಏರ್ಪಡಿಸತೊಡಗಿದವು.

ಅಧ್ಯಕ್ಷ ಜಾಕ್‌ಸನ್ ಕೆಲವರಿಗೆ ಮಾತ್ರ ಆರ್ಥಿಕ ಸೌಕರ್ಯ ಮತ್ತು ಸೌಲಭ್ಯಗಳು ದೊರೆಯುವುದನ್ನು ವಿರೋಧಿಸಿದನು. ವ್ಯಾಪಾರ ಮತ್ತು ಉದ್ಯಮಗಳಲ್ಲಿ ಪೈಪೋಟಿ ಮತ್ತು ಗಳಿಸಿದ ಸಂಪತ್ತನ್ನು (ಲಾಭ) ಉಳಿಸಿ ಮತ್ತೆ ಅದನ್ನು ಉದ್ಯಮದಲ್ಲಿ ಹೂಡಿ, ಅದನ್ನು ಬೆಳೆಸುತ್ತ ಹೋಗಬೇಕು ಎನ್ನುವುದು ಜಾಕ್‌ಸನ್‌ನ ಆರ್ಥಿಕ ನೀತಿಯಾಗಿತ್ತು. ಉದ್ಯಮಗಳಿಗಾಗಲೀ ಅಥವಾ ಕೈಗಾರಿಕೆಗಳಿಗಾಗಲೀ ಕೇಂದ್ರ ಸರ್ಕಾರ ಆರ್ಥಿಕ ನೆರವು ನೀಡುವುದನ್ನು ಅವನು ವಿರೋಧಿಸಿದನು. ವ್ಹಿಗ್ (Wig) ಪಕ್ಷದವರು ಕೇಂದ್ರ ಸರ್ಕಾರ ಹಾಗೆ ನೆರವು ನೀಡುವುದು ಅಗತ್ಯವಾದುದು ಎಂದು ವಾದಿಸಿದರು. ಸಮಾನತೆಯನ್ನು

ಪ್ರತಿಪಾದಿಸುತ್ತಿದ್ದ ಜಾಕ್‌ಸನ್ ದ್ವಿತೀಯ ಸಂಯುಕ್ತ ಸಂಸ್ಥಾನಗಳ ಬ್ಯಾಂಕ್‌ನ (Second bank of the United States) ವ್ಯವಹಾರಗಳನ್ನು ಖಂಡಿಸಿ ಆ ಬ್ಯಾಂಕನ್ನು 'ರಾಕ್ಷಸ ಸಂಸ್ಥೆ' (monster bank) ಎಂದು ಜರಿದು, ಅದು ಸರ್ಕಾರ ಮತ್ತು ಅಂತಸ್ತು ಹಾಗೂ ಸೌಲಭ್ಯವುಳ್ಳವರ ಕೂಟ ಎಂದು ನಂಬಿದ್ದನು. ೧೮೨೯ರಲ್ಲಿ ಸಂಯುಕ್ತ ಸಂಸ್ಥಾನಗಳ ಬ್ಯಾಂಕ್ ಅತಿ ದೊಡ್ಡ ಆರ್ಥಿಕ ಸಂಸ್ಥೆ ಆಗಿತ್ತು. ನಿಕೊಲಾಸ ಬಿಡ್ಡಲ್ ಎನ್ನುವ ಫಿಲಡೆಲ್ಫಿಯಾದ ದುರಹಂಕಾರಿ ಸಾಹುಕಾರ ಆ ಬ್ಯಾಂಕ್‌ನ ಅಧ್ಯಕ್ಷನಾಗಿದ್ದನು. ಅವನ ಆಡಳಿತದಲ್ಲಿ ಬ್ಯಾಂಕ್ ಯಶಸ್ವಿಯಾಯಿತು. ದೇಶದ ಎಲ್ಲಾ ಕಡೆಗಳಲ್ಲೂ ಶಾಖೆಗಳನ್ನು ಹೊಂದಿದ್ದ ಈ ಬ್ಯಾಂಕ್ ದೇಶದ 'ಕಾಗದ ಹಣ' (paper money)ವನ್ನು ಚಲಾವಣೆ ಮಾಡಿ ಆ ಹಣದ ಮೌಲ್ಯಕ್ಕೆ ಸಮನಾದ ಚಿನ್ನವನ್ನು ದಾಸ್ತಾನು ಮಾಡಿತ್ತು. ಈ ದೊಡ್ಡ ಬ್ಯಾಂಕ್ ಸಂಸ್ಥಾನಗಳ ಸಣ್ಣ ಬ್ಯಾಂಕ್‌ಗಳೊಡನೆ ಪೈಪೋಟಿ ನಡೆಸಿ ವ್ಯಾಪಾರಿಗಳಿಗೆ ಸಾಲ ಕೊಡುವುದು, ವಿದೇಶಿ ವಿನಿಮಯ ಒದಗಿಸುವುದು ಮತ್ತು ಇತರ ಅನೇಕ ಆರ್ಥಿಕ ವ್ಯವಹಾರಗಳನ್ನು ನಡೆಸುತ್ತಿತ್ತು. ಮೇಲಾಗಿ ಅದು ಕೇಂದ್ರ ಬ್ಯಾಂಕಿನಂತೆ ವ್ಯವಹರಿಸಿ ಅಗತ್ಯವಾದಾಗ ಹೆಚ್ಚಿನ ಕಾಗದದ ಹಣ ಅಚ್ಚು ಹಾಕಿಸುವುದು, ಕಷ್ಟ ಕಾಲದಲ್ಲಿ ಸಾಲ ಕೊಡುವುದು, ತನಗೆ ಸರಿಯೆಂದು ಕಂಡಾಗ ಹಣದ ಚಲಾವಣೆಯನ್ನು ಬಿಗಿಗೊಳಿಸುವುದು ಮತ್ತು ಸಾಲ ಕೊಡುವುದನ್ನು ಕಡಿಮೆ ಮಾಡುವುದರ ಮೂಲಕ ಸಟ್ಟಾ ವ್ಯವಹಾರ ಮತ್ತು ಹಣದುಬ್ಬರವನ್ನು ಹಿಡಿತದಲ್ಲಿರುವಂತೆ ಮಾಡುತ್ತಿತ್ತು.

ಸಂಯುಕ್ತ ಸಂಸ್ಥಾನಗಳ ಬ್ಯಾಂಕ್ ಎಷ್ಟೇ ಉಪಯುಕ್ತವಾಗಿದ್ದರೂ ಬಹುಮಂದಿ ಅದಕ್ಕೆ ಬದ್ಧ ವೈರಿಗಳಾಗಿದ್ದರು. ಸಂಸ್ಥಾನಗಳ ಸಣ್ಣ ಬ್ಯಾಂಕ್‌ಗಳು ಆ ಬೃಹತ್ ಆರ್ಥಿಕ ಸಂಸ್ಥೆಯ ಬಿಗುಮಾನದ ಮತ್ತು ದೃಢವಾದ ಹಣವ್ಯವಸ್ಥೆಯ ಧೋರಣೆಗಳು ತಮ್ಮ ಬೆಳವಣಿಗೆ ಮತ್ತು ಲಾಭಗಳಿಕೆಯನ್ನು ಕಡಿಮೆ ಮಾಡುತ್ತವೆ ಎಂದು ಆಪಾದಿಸಿದರು. ಅದಕ್ಕಿಂತಲೂ ಮುಖ್ಯವಾಗಿ ಇಂಥ ಬೃಹತ್ ಪ್ರಮಾಣದ ಸಂಸ್ಥೆಗಳು ಪ್ರಜಾಪ್ರಭುತ್ವಕ್ಕೆ ಅಪಾಯಕಾರಿ ಎಂದು ಬಹುಮಂದಿ ಅಮೆರಿಕನ್ನರು ಭಾವಿಸಿದ್ದರು. ಅಪಾರ ಹಣವಿರುವ ಬೃಹತ್ ಸಂಸ್ಥೆಗಳು ಭ್ರಷ್ಟಾಚಾರದಿಂದ ಸರ್ಕಾರವನ್ನು ಕಲುಷಿತಗೊಳಿಸುತ್ತವೆ ಎನ್ನುವ ಭಾವನೆ ಸರ್ವೇಸಾಮಾನ್ಯವಾಗಿತ್ತು. ಆ ಭಾವನೆ ಆಧಾರರಹಿತವಾಗಿರಲಿಲ್ಲ. ನಿಜವಾಗಿಯೂ ಕೆಲವು ಹೆಸರಾಂತ ರಾಜಕೀಯ ಧುರೀಣರು, ಹೆನ್ರಿ ಕ್ಲೇ ಮತ್ತು ಡೆನಿಯಲ್ ವೆಬ್‌ಸ್ಟರ್‌ಗಳು ಸೇರಿದಂತೆ, ಸಂಯುಕ್ತ ಸಂಸ್ಥಾನಗಳ ಬ್ಯಾಂಕ್‌ನಿಂದ ಖಾಯಂ ಆಗಿ ಕಳ್ಳಹಣ ಪಡೆಯುತ್ತಿದ್ದರು! ಇಂಥ ಭ್ರಷ್ಟ ರಾಜಕಾರಣಿಗಳು ವಸ್ತುನಿಷ್ಠೆಯಿಂದ ಸರ್ಕಾರ ನಡೆಸಲು ಅಸಮರ್ಥರಾಗಿದ್ದರು.

೧೮೩೨ರಲ್ಲಿ ಸರ್ಕಾರ ಶಾಸನಾಧಿಕಾರ (ಬ್ಯಾಂಕ್ ನಡೆಸಲು ಸರ್ಕಾರದಿಂದ ಪಡೆದ ಅಪ್ಪಣೆ)ದ ಅವಧಿ ಇನ್ನೂ ನಾಲ್ಕು ವರ್ಷಗಳಿರುವಂತೆಯೇ ಆ ಬ್ಯಾಂಕಿನಿಂದ ಸವಲತ್ತು

ಪಡೆದ ಶಾಸಕರು ಬ್ಯಾಂಕ್ ಮುಂದುವರಿಯುವುದನ್ನು ಖಚಿತ ಮಾಡಿಕೊಳ್ಳಲು, ಮುಂಚಿತವಾಗಿಯೇ ಒಂದು ಮಸೂದೆಯನ್ನು ಅವಸರದಿಂದ ಕಾಂಗ್ರೆಸ್‌ನಲ್ಲಿ ಮಂಡಿಸಿ ಅದನ್ನು ಅಂಗೀಕರಿಸುವಂತೆ ಒತ್ತಾಯ ಮಾಡಿದರು. ೧೮೩೨ರ ಜುಲೈ ಹತ್ತನೆಯ ತಾರೀಖು ಜಾಕ್‌ಸನ್ ಆ ಮಸೂದೆಯನ್ನು ಖಂಡಿಸಿ ತನ್ನ ವೀಟೊ (veto) ಅಧಿಕಾರವನ್ನು ಚಲಾಯಿಸಿ ಆ ಮಸೂದೆಯನ್ನು ತಳ್ಳಿಹಾಕಿದನು. ಆ ವರ್ಷ ನಡೆದ ಚುನಾವಣೆಯಲ್ಲಿ ಜಾಕ್‌ಸನ್ ಭಾರಿ ಬಹುಮತದಿಂದ ಆಯ್ಕೆಯಾದನು. ತಾವು ಗಳಿಸಿದ ಜಯ, ಬ್ಯಾಂಕಿನ ವಿರುದ್ಧ ಕ್ರಮ ತೆಗೆದುಕೊಂಡಿದ್ದನ್ನು ಜನರು ಅನುಮೋದಿಸಿದರು ಎಂದು ಅರ್ಥೈಸಿ ಕೊಂಡನು. ಆ ಬ್ಯಾಂಕನ್ನು ಮುಚ್ಚಿಸಲು, ಸರ್ಕಾರ ಅದರಲ್ಲಿ ಇಟ್ಟಿದ್ದ ಹಣವನ್ನು ತೆಗೆದು ಆ ಹಣವನ್ನು ತನಗೆ ಇಷ್ಟವಾದ ಸಂಸ್ಥಾನ ಬ್ಯಾಂಕುಗಳಲ್ಲಿ ಹಾಕಿದನು. ಆ ಬೃಹತ್ ಬ್ಯಾಂಕನ್ನು ಮುಚ್ಚಿದ್ದರಿಂದ ಅನುಕೂಲವಾಗುವುದರ ಬದಲು ಅಪಾರ ನಷ್ಟ ಅನುಭವಿಸಬೇಕಾಯಿತು. ಸರ್ಕಾರ ಹಣವನ್ನು ಇಟ್ಟ ಸಂಸ್ಥಾನ ಬ್ಯಾಂಕುಗಳು ಆರ್ಥಿಕ ಅಭಿವೃದ್ಧಿಗೆ ಕಾರಣವಾದರೂ ಅವುಗಳು ಎಲ್ಲ ಕಡೆ ಹರಡುತ್ತಿರುವುದು ಸರ್ಕಾರದ ಟ್ರೆಜರಿ ವಿಭಾಗಕ್ಕೆ ಆತಂಕ ಉಂಟುಮಾಡಿತು. ೧೮೩೬ರಲ್ಲಿ ಸರ್ಕಾರದ ಟ್ರೆಜರಿ ಸಾರ್ವಜನಿಕ ಭೂವ್ಯವಹಾರಗಳಲ್ಲಿ ಚಿನ್ನ ಮತ್ತು ಬೆಳ್ಳಿಯನ್ನು ಮಾತ್ರ ತೆಗೆದುಕೊಳ್ಳುವುದಾಗಿ ಪ್ರಕಟಣೆ ಮಾಡಿತು. ಇದು ಆರ್ಥಿಕ ಬೆಳವಣಿಗೆಯ ಗುಳ್ಳೆಗೆ ಸೂಜಿ ಚುಚ್ಚಿದಂತಾಯಿತು. ಜಾಕ್‌ಸನ್ ಅಧ್ಯಕ್ಷತೆಯ ಅವಧಿ ಮುಗಿಯುವ ಹೊತ್ತಿಗೆ ದೇಶದಲ್ಲಿ ಆರ್ಥಿಕ ದುಃಸ್ಥಿತಿ ಕಾಲಿರಿಸಿತು. ೧೮೩೬ರಲ್ಲಿನ ಆ ಪರಿಸ್ಥಿತಿಯಲ್ಲಿ ಅಧ್ಯಕ್ಷನಾದ ಮಾರ್ಟಿನ್ ವಾನ್ ಬ್ಯೂರೆನ್[೫] (Martin van Buren)ನ ಅಧ್ಯಕ್ಷತೆ ಒಂದೇ ಅವಧಿಗೆ ಮುಗಿಯಿತು. ೧೮೪೦ರಲ್ಲಿ ಅವನನ್ನು ಸೋಲಿಸಿ ವಿಲಿಯಂ ಹೆನ್ರಿ ಹ್ಯಾರಿಸನ್ (William Henry HArrison) ಅಧ್ಯಕ್ಷನಾಗಿ ಆಯ್ಕೆಯಾದನು.

ಅಮೆರಿಕ ಸ್ವತಂತ್ರ ರಿಪಬ್ಲಿಕ್ ಆದಾಗಿನಿಂದಲೂ ಅಮೆರಿಕನ್ನರಲ್ಲಿ ಸರ್ಕಾರದ ಪರ ಮತ್ತು ವಿರುದ್ಧ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಎರಡು ಗುಂಪುಗಳು ಉಳಿದುಬಂದಿವೆ. ೧೮೪೦ರಲ್ಲಿ ವಿಲಿಯಂ ಹೆನ್ರಿ ಹ್ಯಾರಿಸನ್ ಅಧ್ಯಕ್ಷನಾಗುವ ಹೊತ್ತಿಗೆ ಈ ಎರಡು ಗುಂಪುಗಳು ತಾತ್ವಿಕ ಭಿನ್ನಾಭಿಪ್ರಾಯ ಉಳ್ಳ ರಾಜಕೀಯ ಪಕ್ಷಗಳಾಗಿ ಮಾರ್ಪಾಡಾಗಿದ್ದವು. ಕೇಂದ್ರ ಸರ್ಕಾರ ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಕ್ರಿಯ ಪಾತ್ರ ವಹಿಸಬೇಕೆನ್ನುವ ತತ್ವ ಪಾಲಿಸುವವರು ವ್ಹಿಗ್ ಪಕ್ಷಕ್ಕೆ ಸೇರಿದವರಾಗಿದ್ದರು. ಆರ್ಥಿಕ ಅಭಿವೃದ್ಧಿಗೆ ಕಾರಣ ಖಾಸಗಿ ಉದ್ಯಮ. ಕೇಂದ್ರ ಸರ್ಕಾರ ಸಂಸ್ಥಾನಗಳ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಬಾರದು; ಉದ್ಯಮ ಮತ್ತು ವ್ಯಾಪಾರ ನಿಯಂತ್ರಣದಿಂದ ಮುಕ್ತವಾಗಿರಬೇಕು. ಈ ತತ್ವಗಳನ್ನು ಪರಿಪಾಲಿಸುವವರು ಪ್ರಜಾಪ್ರಭುತ್ವ ಪಕ್ಷಕ್ಕೆ ಸೇರಿದವರಾದರು. ೧೮೪೦ರ

೫. ಮಾರ್ಟಿನ್ ವಾನ್ ಬ್ಯೂರೆನ್ ಅಮೆರಿಕದ ಎಂಟನೆಯ ಅಧ್ಯಕ್ಷ

ಹೊತ್ತಿಗೆ ಈ ಎರಡು ಪಕ್ಷಗಳ ತಾತ್ವಿಕ ಭಿನ್ನತೆ ಖಚಿತವಾಗಿ ದೃಢಪಟ್ಟು ಅಂತರ್ಯುದ್ಧದ ವರೆಗೂ (civil war) ಮುಂದುವರಿಯಿತು. ಆನಂತರ ಈ ಎರಡು ಪಕ್ಷಗಳು ಕಾಲಕ್ಕೆ ತಕ್ಕಂತೆ ಪುನರ್‌ರಚನೆಗೊಂಡವು. ವಿಲಿಯಂ ಹೆನ್ರಿ ಹ್ಯಾರಿಸನ್ ಅಮೆರಿಕದ ಒಂಬತ್ತನೆಯ ಅಧ್ಯಕ್ಷ. ದುರದೃಷ್ಟವಶಾತ್ ಅವನು ಪ್ರಮಾಣ ಸ್ವೀಕರಿಸಿದ ಒಂದು ತಿಂಗಳಲ್ಲೇ ತೀರಿಕೊಂಡನು. ಅವನ ಮರಣಾಂತರ ೧೮೪೧ರಲ್ಲಿ ಉಪಾಧ್ಯಕ್ಷನಾಗಿದ್ದ ಜಾನ್ ಟೈಲರ್ ಅಧ್ಯಕ್ಷನಾದನು. ಆ ಸಮಯದಲ್ಲೇ ಅಮೆರಿಕದ ಉತ್ತರ ಮತ್ತು ದಕ್ಷಿಣ ಭಾಗಗಳ ಸಂಸ್ಕೃತಿ ಮತ್ತು ಸಮಾಜರಚನೆಗಳಲ್ಲಿ ಮೊದಲಿನಿಂದಲೂ ಇದ್ದ ವ್ಯತ್ಯಾಸಗಳು ಹೆಚ್ಚು ಸ್ಫುಟವಾಗಿ ತೋರಿಬಂದು ಔತ್ತರೇಯರು ಮತ್ತು ದಾಕ್ಷಿಣಾತ್ಯರು ಪರಸ್ಪರ ದೂರ ಸರಿಯುತ್ತ ಹೋದರು.

❑

ಅಧ್ಯಾಯ - ೭

ಅಂತರ್ಯುದ್ಧಕ್ಕೆ ಹಿನ್ನೆಲೆ

ಅಧ್ಯಕ್ಷ ಜಾನ್ ಟೈಲರ್‌ನ ಆಡಳಿತ

ಅಧ್ಯಕ್ಷ ಜಾನ್ ಹ್ಯಾರಿಸನ್‌ನ ಅಕಾಲಮರಣದಿಂದ ಜಾನ್ ಟೈಲರ್ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡನು. ಟೈಲರ್ ತೆಳ್ಳನೆಯ, ಮೃದುಶರೀರದ, ನೀಲ ನಯನಗಳ, ನೀಳಮೂಗಿನ, ವಿನಯಶೀಲ, ನಿಪುಣನಾದ, ಮೆದುಮಾತಿನ (ಜಾನ್ ಟೈಲರ್ ಅಮೆರಿಕದ ೧೦ನೆಯ ಅಧ್ಯಕ್ಷ) ವ್ಯಕ್ತಿಯಾಗಿದ್ದನು. ಅವನಿಗೆ ಆಗದವರು ಕುಚೋದ್ಯಕ್ಕಾಗಿ ಟೈಲರ್‌ನನ್ನು 'ಹಿಸ್ ಆ್ಯಕ್ಸಿಡೆನ್ಸಿ' (His Accidency) ಎಂದು ಕರೆಯುತ್ತಿದ್ದರು. ಅಧ್ಯಕ್ಷ ಟೈಲರ್‌ನ ಆಡಳಿತದಲ್ಲಿ ನಡೆದ ಮಹತ್ತಾದ ರಾಜಕಾರಣ ಕಾರ್ಯಾಚರಣೆಯೆಂದರೆ ಟೆಕ್ಸಾಸ್ ಗಣರಾಜ್ಯವನ್ನು ವಶಪಡಿಸಿಕೊಳ್ಳಲು ನಡೆಸಿದ ಪ್ರಯತ್ನಗಳು. ೧೮೧೯ರಲ್ಲಿ ಅಮೆರಿಕ ಸ್ಪೇನ್‌ನೊಡನೆ ಮಾಡಿಕೊಂಡ ಒಪ್ಪಂದದ ಪ್ರಕಾರ ಟೆಕ್ಸಾಸ್ ಪ್ರಾಂತ ಅಮೆರಿಕದ ಗಡಿ ಯೊಳಗೆ ಸೇರಿರಲಿಲ್ಲ. ಆ ಕರಾರರನ್ನು ಅಂಗೀಕರಿಸಿದ ಸ್ವಲ್ಪ ಸಮಯದಲ್ಲೇ ಫೆಬ್ರವರಿ ೧೮೨೧ರಲ್ಲಿ ಸ್ಟೀಫನ್ ಆಸ್ಟಿನ್‌ನ ನಾಯಕತ್ವದಲ್ಲಿ ಅಮೆರಿಕನ್ನರು ಮೆಕ್ಸಿಕೋಗೆ ಸೇರಿದ ಪ್ರಾಂತಗಳಲ್ಲಿ ನೆಲೆಸಲು ಪ್ರಾರಂಭಿಸಿದರು. ಟೆಕ್ಸಾಸ್ ಪ್ರಾಂತದ ಸಮತಟ್ಟಾದ ಮತ್ತು ಫಲವತ್ತಾದ ಭೂಮಿಯಲ್ಲಿ ಹತ್ತಿಯನ್ನು ಸಮೃದ್ಧಿಯಾಗಿ ಬೆಳೆಯಬಹುದಿತ್ತು. ಆದ್ದರಿಂದ ಮೆಕ್ಸಿಕನ್ ಅಧಿಕಾರಿಗಳು ವಲಸೆ ಬಂದು ನೆಲಸುವ ಸಮುದಾಯಗಳಿಗೆ ಭೂಮಿಯನ್ನು ಪುಕ್ಕಟ್ಟೆಯಾಗಿ ಕೊಡಲು ನಿರ್ಧರಿಸಿದರು. ಈ ಕಾರಣದಿಂದ ಅಮೆರಿಕನ್ ರೈತರು ಹೆಚ್ಚು ಸಂಖ್ಯೆಯಲ್ಲಿ ಟೆಕ್ಸಾಸ್ ಪ್ರಾಂತಕ್ಕೆ ಹೋಗಿ ನೆಲಸಿದರು. ೧೮೩೦ರ ಹೊತ್ತಿಗೆ ಟೆಕ್ಸಾಸ್ ಪ್ರಾಂತದಲ್ಲಿ ೨೦,೦೦೦ಕ್ಕೂ ಹೆಚ್ಚು ಅಮೆರಿಕನ್ ರೈತರು ನೆಲಸಿದ್ದರು. ಈ ರೈತರ ಜೊತೆಯಲ್ಲಿ ೨೦೦೦ ಗುಲಾಮರೂ ಸೇರಿದ್ದರು. ಆಗ ಟೆಕ್ಸಾಸ್ ಪ್ರಾಂತ ಮೆಕ್ಸಿಕನ್ ಗಣರಾಜ್ಯದ ಒಂದು ಭಾಗವಾಗಿತ್ತು.

ಟೆಕ್ಸಾಸ್ ಪ್ರಾಂತವನ್ನು ಕೊಂಡುಕೊಳ್ಳಲು ಅಮೆರಿಕನ್ನರು ಅನೇಕ ಪ್ರಯತ್ನಗಳನ್ನು ಮಾಡುತ್ತಲೇ ಬಂದಿದ್ದರು. ಅಧ್ಯಕ್ಷ ಜಾನ್ ಕ್ವಿನ್ಸಿ ಆ್ಯಡಮ್ಸ್ ಟೆಕ್ಸಾಸ್ ಪ್ರಾಂತವನ್ನು ಒಂದು ಮಿಲಿಯನ್ ಡಾಲರ್‌ಗಳಿಗೆ ಕೊಳ್ಳುವುದಾಗಿ ತಿಳಿಸಿದಾಗ, ಮತ್ತೆ ಜಾಕ್‌ಸನ್ ಐದು ಮಿಲಿಯನ್ ಡಾಲರ್ ಕೊಡಲು ಸಿದ್ಧನಿದ್ದಾಗ ಮೆಕ್ಸಿಕೊ ಟೆಕ್ಸಾಸ್ ಪ್ರಾಂತವನ್ನು ಮಾರಲು ಒಪ್ಪಲಿಲ್ಲ. ಕಾಲ ಸರಿದಂತೆ ವಲಸೆ ಬಂದು ನೆಲಸುವ ಅಮೆರಿಕನ್ನರ ಸಂಖ್ಯೆ

ಅಧಿಕವಾಗುತ್ತ ಹೋಯಿತು. ಟೆಕ್ಸಾಸ್‌ನಲ್ಲಿ ನೆಲಸಿದ ಅಮೆರಿಕನ್ನರು ಮೆಕ್ಸಿಕೊ ಸರ್ಕಾರಕ್ಕೆ ನಿಷ್ಠರಾಗಿರಲಿಲ್ಲ. ಅವರಲ್ಲಿ ಬಹುಸಂಖ್ಯಾತರು ಪ್ರಾಟೆಸ್ಟೆಂಟ್ ಮತದವರಾಗಿದ್ದರು. ಸ್ಪಾನಿಷ್ ಭಾಷೆ ಅಮೆರಿಕನ್ನರಿಗೆ ತಿಳಿದಿರಲಿಲ್ಲ. ಅವರು ನಾಲ್ಕಾರು ಸ್ಪಾನಿಷ್ ಪದಗಳನ್ನು ಬಿಟ್ಟು ಹೆಚ್ಚಿಗೆ ಕಲಿಯುವ ಕಷ್ಟ ತೆಗೆದುಕೊಳ್ಳಲಿಲ್ಲ. ಮೆಕ್ಸಿಕನ್ ಕಾಯಿದೆ ಪ್ರಕಾರ ಎಲ್ಲ ಪ್ರಜೆಗಳೂ ಕ್ಯಾಥೊಲಿಕರಾಗಿರಬೇಕಿತ್ತು. ಮೆಕ್ಸಿಕೊ ಗುಲಾಮಗಿರಿಯನ್ನು ರದ್ದುಗೊಳಿಸಿತ್ತು. ಈ ಕಾಯಿದೆಯಿಂದ ತಪ್ಪಿಸಿಕೊಳ್ಳಲು ಗುಲಾಮರನ್ನು ಇಟ್ಟುಕೊಂಡಿದ್ದ ಅಮೆರಿಕನ್ನರು ಅವರಿಗೆ ಸ್ವಾತಂತ್ರ್ಯ ಕೊಟ್ಟಂತೆ ಮಾಡಿ ಪುನಃ ಅವರಿಂದ ಕರಾರಿಗೆ ಸಹಿ ಹಾಕಿಸಿಕೊಂಡು ಜೀವನಪರ್ಯಂತ ಊಳಿಗ ಮಾಡಿಸಿಕೊಳ್ಳುತ್ತಿದ್ದರು. ಈ ಕಾರಣಕ್ಕಾಗಿ ೧೮೩೦ರಲ್ಲಿ ಮೆಕ್ಸಿಕೊ ಸರ್ಕಾರ ಅಮೆರಿಕದಿಂದ ವಲಸೆ ಬರುವುದನ್ನು ನಿಷೇಧಿಸಿತು. ಆದರೆ ಈ ನಿಷೇಧಾಜ್ಞೆಯನ್ನು ಜಾರಿಗೆ ತರುವುದು ಕಷ್ಟವಾಯಿತು.

ವಲಸೆಯನ್ನು ನಿಷೇಧಿಸಿದ ಕಾರಣ ಟೆಕ್ಸಾಸ್‌ನಲ್ಲಿ ನೆಲಸಿದ್ದ ಅಮೆರಿಕನ್ನರು ಸ್ವಾತಂತ್ರ್ಯಕ್ಕಾಗಿ ಆಂದೋಳನ ಪ್ರಾರಂಭಿಸಿದರು. ೧೮೩೫ರಲ್ಲಿ ಶಸ್ತ್ರಸಜ್ಜಿತರಾದ ಗುಂಪುಗಳ ನಡುವೆ ಹಲವಾರು ಘರ್ಷಣೆಗಳು ನಡೆದವು. ಈ ಘರ್ಷಣೆಗಳು ಶೀಘ್ರವಾಗಿ ಪೂರ್ಣಪ್ರಮಾಣದ ದಂಗೆಗಳಾಗಿ ಪರಿಣಮಿಸಿದವು. ಟೆಕ್ಸನ್ನರಿಗೆ ಅಮೆರಿಕ ಹಣಸಹಾಯ ಮತ್ತು 'ಸ್ವಯಂ ಸೇವಕರನ್ನು' ಒದಗಿಸಿತು. ಈ ದಂಗೆಯನ್ನು ಅಡಗಿಸಲು ಮೆಕ್ಸಿಕೊ ಅಧ್ಯಕ್ಷ ಆಂಟೋನಿಯೋ ಲೊಪೆಜ಼್ ಡಿ ಸಾಂತ ಆನ (Antonio Lopez de Santa Anna) ಆರು ಸಾವಿರ ಸೈನಿಕರೊಡನೆ ಟೆಕ್ಸಾಸ್ ಕಡೆ ಸಾಗಿ ಬಂದನು. ಫೆಬ್ರವರಿ ೧೮೩೬ರಲ್ಲಿ ಅವನ ಸೈನ್ಯ ಸ್ಯಾನ್ ಅಂಟೋನಿಯೊ ನಗರವನ್ನು ತಲುಪಿತು. ಅಲ್ಲಿ ಕರ್ನಲ್ ವಿಲಿಯಂ ಟ್ರಾವಿಸ್ (Colonel William Travis)ನ ಕೈಕೆಳಗಿನ ೧೮೭ ಜನರು ನಗರ ರಕ್ಷಣೆಗಾಗಿ ನಿಂತರು. ಶರಣಾಗತರಾಗಲು ನಿರಾಕರಿಸಿದ ಇವರು ಮತಪ್ರಚಾರಕರು ವಾಸಿಸುತ್ತಿದ್ದ ಆಲಮೊ (Alamo) ಎಂಬ ಹೆಸರಿನ ಕಟ್ಟಡದ ದಪ್ಪ ಗೋಡೆಗಳ ಹಿಂದೆ ಆಶ್ರಯಪಡೆದರು. ಹತ್ತು ದಿನಗಳು ಸತತವಾಗಿ ಹೋರಾಡಿ ಆಕ್ರಮಣಕಾರರನ್ನು ಹಿಮ್ಮೆಟ್ಟಿಸಿದರು. ಆಕ್ರಮಣಕಾರರಲ್ಲಿ ನೂರಾರು ಸೈನಿಕರು ಸತ್ತು ಸಾವಿರಾರು ಸೈನಿಕರು ಗಾಯಗೊಂಡರು. ಕೊನೆಗೆ ಸತತ ಪ್ರಯತ್ನದಿಂದ ಮೆಕ್ಸಿಕನ್ ಸೈನಿಕರು ಆಲಮೊದೊಳಗೆ ನುಗ್ಗಿ ಒಳಗಿದ್ದವರನ್ನೆಲ್ಲ ಕೊಂದು ಅವರ ಶವಗಳ ಮೇಲೆ ಎಣ್ಣೆ ಸುರಿದು ಬೆಂಕಿ ಹಚ್ಚಿದರು. ದಂತಕಥೆಯಾಗಿರುವ ಡೇವಿ ಕ್ರಾಕೆಟ್ (Davy Crockett) ಮತ್ತು ಜಿಮ್ ಬೊವಿ (Jim Bowie)ಯರು ಸತ್ತವರಲ್ಲಿ ಸೇರಿದ್ದರು.

೧೮೩೬ರ ಮಾರ್ಚಿ ೨ನೆಯ ತಾರೀಖು ದಂಗೆ ಎದ್ದ ಟೆಕ್ಸನ್ನರು ತಮ್ಮ ಸ್ವಾತಂತ್ರ್ಯವನ್ನು ಅಧಿಕೃತವಾಗಿ ಘೋಷಿಸಿದರು. ಟೆನ್ನಸ್ಸೀ ಸಂಸ್ಥಾನದ ಮಾಜಿ ಗವರ್ನರ್ ಮತ್ತು ಕಾಂಗ್ರೆಸ್ ಸದಸ್ಯನಾಗಿದ್ದು ಇಂಡಿಯನ್ನರೊಡನೆ ಯುದ್ಧದಲ್ಲಿ ಅನುಭವ ಪಡೆದಿದ್ದ ಸ್ಯಾಮ್ ಹ್ಯೂಸ್ಟನ್

(Sam Houston)ನನ್ನು ಟೆಕ್ಸನ್ನರ ಸೇನಾಧಿಪತಿಯನ್ನಾಗಿ ನೇಮಿಸಿದರು. ೧೮೩೬ರ ಏಪ್ರಿಲ್ ೨೧ನೆಯ ತಾರೀಖು ಅವನ ಸೈನಿಕರು 'ಆಲಮೊವನ್ನು ನೆನೆಯಿರಿ' ಎಂದು ಕೂಗುತ್ತ ಮೆಕ್ಸಿಕನ್ ಸೈನ್ಯದ ಮೇಲೆ ಎರಗಿ ಅವರನ್ನು ಸದೆಬಡಿದರು. ನಂತರ ಎಲ್ಲ ಮೆಕ್ಸಿಕನ್ನರನ್ನು ಗಡಿಪಾರು ಮಾಡಿದರು. ಆ ವರ್ಷ ಅಕ್ಟೋಬರ್ ತಿಂಗಳಲ್ಲಿ ಸ್ಯಾಮ್ ಹ್ಯೂಸ್ಟನ್‌ನನ್ನು ಟೆಕ್ಸಾಸ್ ಗಣರಾಜ್ಯದ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದರು. ಇದಾದ ಒಂದು ತಿಂಗಳೊಳಗೆ ಸಾರ್ವಜನಿಕ ಅಭಿಪ್ರಾಯದಂತೆ ಟೆಕ್ಸಾಸ್ ಸಂಯುಕ್ತ ಸಂಸ್ಥಾನಗಳನ್ನು ಸೇರುವ ನಿರ್ಧಾರ ಮಾಡಿತು.

ಅಧ್ಯಕ್ಷ ಜಾಕ್‌ಸನ್ ಟೆಕ್ಸಾಸ್ ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಳ್ಳಲು ಹಿಂದೆಮುಂದೆ ನೋಡಿದನು. ಟೆಕ್ಸಾಸ್ ಪ್ರಾಂತವನ್ನು ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಸೇರಿಸಿಕೊಂಡರೆ ಮೆಕ್ಸಿಕೊ ದೇಶದ ಮೇಲೆ ಯುದ್ಧ ಮಾಡಬೇಕಾಗುತ್ತದೆ ಮತ್ತು ಇದು ಸಂಸ್ಥಾನಗಳ ನಡುವೆ ಗುಲಾಮಗಿರಿಯ ಬಗ್ಗೆ ವಾದ ವಿವಾದ ಎಬ್ಬಿಸುತ್ತದೆ ಎಂದು ಸುಮ್ಮನಿದ್ದುಬಿಟ್ಟನು. ತಾನು ಅಧಿಕಾರ ಬಿಡುವ ಕೊನೆಯ ದಿನ ಟೆಕ್ಸಾಸ್ ಗಣರಾಜ್ಯವನ್ನು ಅಧಿಕೃತವಾಗಿ ಮನ್ನಣೆ ಮಾಡಿದನು. ಆದರೆ ಅದನ್ನು ಅಮೆರಿಕಕ್ಕೆ ಸೇರಿಸಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ಜಾಕ್‌ಸನ್ ನಂತರ ವಾನ್ ಬ್ಯೂರೆನ್ (van Buren) ಕೂಡ ಟೆಕ್ಸಾಸ್‌ನ್ನು ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಳ್ಳಲು ನಿರಾಕರಿಸಿದನು. ಟೆಕ್ಸಾಸ್ ಸಂಯುಕ್ತ ಸಂಸ್ಥಾನಗಳನ್ನು ಸೇರಿಕೊಳ್ಳಲು ೧೮೪೫ರವರೆಗೆ ಕಾಯಬೇಕಾಗಿ ಬಂತು!

ಜೇಮ್ಸ್ ಪೋಲ್ಕನ ಅಧ್ಯಕ್ಷತೆ

೧೮೪೪ರ ಚುನಾವಣೆಯಲ್ಲಿ ವ್ಹಿಗ್ಸ್ ಪಕ್ಷದವರು ಹೆನ್ರಿ ಕ್ಲೇಯನ್ನು ಅಧ್ಯಕ್ಷ ಸ್ಥಾನಕ್ಕೆ ನಾಮಕರಣ ಮಾಡಿದರು. ಆ ವರ್ಷದ ಮೇ ತಿಂಗಳಲ್ಲಿ ಬಾಲ್ಟಿಮೋರ್ ನಗರದಲ್ಲಿ ಸೇರಿದ ಡೆಮಾಕ್ರಾಟಿಕ್ ಪಕ್ಷದ ಸಭೆಯಲ್ಲಿ ವಾನ್ ಬ್ಯೂರೆನ್‌ನನ್ನು ಅಧ್ಯಕ್ಷಸ್ಥಾನಕ್ಕೆ ಅಭ್ಯರ್ಥಿಯಾಗಿ ಆಯ್ಕೆಯಾಗುವುದು ಖಚಿತಗೊಂಡಿತ್ತು. ಆಗ ನಡೆಯುತ್ತಿದ್ದ ಟೆಕ್ಸಾಸ್ ವಿವಾದವನ್ನು ವಾನ್ ಬ್ಯೂರೆನ್ ಕಡೆಗಣಿಸಿದ್ದರಿಂದ, ಟೆಕ್ಸಾಸ್ ಪ್ರಾಂತವನ್ನು ಪಡೆಯಲೇಬೇಕೆಂದು ದೃಢ ಮನಸ್ಸು ಮಾಡಿದ್ದ ದಾಕ್ಷಿಣಾತ್ಯರು ಜಾನ್ ಕಾಲ್‌ಹೂನ್ (John Calhoun)ನನ್ನು ಬೆಂಬಲಿಸಿದರು. ಕಾಲ್‌ಹೂನ್ ಟೆಕ್ಸಾಸ್ ಪ್ರಾಂತವನ್ನು ವಶಪಡಿಸಿಕೊಳ್ಳುವುದಲ್ಲದೆ ಅದನ್ನು ಗುಲಾಮಗಿರಿಯ ಆಶ್ರಯ ಪ್ರದೇಶವಾಗಿ ಕಾದಿರಿಸುತ್ತೇನೆ ಎಂದು ಭರವಸೆ ನೀಡಿದನು. ಟೆಕ್ಸಾಸ್ ಪ್ರಾಂತವನ್ನು ವಶಪಡಿಸಿಕೊಂಡು ದೇಶವನ್ನು ವಿಸ್ತರಿಸಬೇಕು ಎನ್ನುವ ಅಭಿಲಾಷೆ ಇದ್ದ ಕೆಲವು ಔತ್ತರೇಯರ ಸಹಾಯದಿಂದ ದಾಕ್ಷಿಣಾತ್ಯರು ಅಧ್ಯಕ್ಷಸ್ಥಾನಕ್ಕೆ ಆಯ್ಕೆಗೊಳ್ಳಲು ಅಭ್ಯರ್ಥಿ ೨/೩ರಷ್ಟು ಬಹುಮತ ಗಳಿಸಬೇಕೆಂಬ ನಿಯಮವನ್ನು ಕಾಂಗ್ರೆಸ್ ಅಂಗೀಕರಿಸುವಂತೆ ಮಾಡಿದರು. ಈ ನಿಯಮದ ಪ್ರಕಾರ ವಾನ್ ಬ್ಯುರೆನ್‌ಗೆ ೨/೩ರಷ್ಟು ಬಹುಮತ ಇರಲಿಲ್ಲ. ಇದಕ್ಕೆ ಅವನು ಟೆಕ್ಸಾಸ್

ಪ್ರಾಂತವನ್ನು ವಶಪಡಿಸಿಕೊಳ್ಳಲು ಆಸಕ್ತಿ ವಹಿಸದಿದ್ದುದೇ ಕಾರಣವಾಗಿತ್ತು. ಹೀಗೆ ಬಿಕ್ಕಟ್ಟಿನ ಪರಿಸ್ಥಿತಿ ಉಂಟಾಗಿ ನಂತರ ಅದುವರೆಗೆ ಯಾರಿಗೂ ಹೆಚ್ಚಿನ ಪರಿಚಯವಿಲ್ಲದ ಜೇಮ್ಸ್ ಪೋಲ್ಕ್ (James Polk)ನನ್ನು ಸಭೆ ಅಧ್ಯಕ್ಷನನ್ನಾಗಿ ಆಯ್ಕೆಮಾಡಿತು (೧೧ನೆಯ ಅಧ್ಯಕ್ಷ).

ಪೋಲ್ಕ್ ನಿಷ್ಠಾವಂತ ಡೆಮೊಕ್ರಾಟ್. ಅವನು ತೆರಿಗೆ ಏರಿಸುವುದನ್ನು ವಿರೋಧಿಸಿದನು. ಹಾಗೆಯೇ ಮತ್ತೊಂದು ರಾಷ್ಟ್ರೀಯ ಬ್ಯಾಂಕ್‌ನ ಸ್ಥಾಪನೆಗೆ ಕಡುವಿರೋಧಿಯಾಗಿದ್ದನು. ಟೆಕ್ಸಾಸ್ ಪ್ರಾಂತವನ್ನು ವಶಪಡಿಸಿಕೊಳ್ಳಲು ಮತ್ತೆ ದೇಶವನ್ನು ವಿಸ್ತಾರಗೊಳಿಸಲು ಅವನು ಸಮ್ಮತಿಸಿದನು. ಟೆಕ್ಸಾಸ್ ಪ್ರಾಂತ ಲೂಯಿಸಿಯಾನ ಪ್ರಾಂತದ ಒಂದು ಭಾಗವಾಗಿದ್ದು ಲೂಯಿಸಿಯಾನವನ್ನು ಕೊಂಡಾಗ ಟೆಕ್ಸಾಸ್ ಕೂಡ ಅದರಲ್ಲಿ ಸೇರಿತ್ತು ಎನ್ನುವ ಡೆಮೊಕ್ರಾಟಿಕ್ ಪಕ್ಷದ ವಾದವನ್ನು ಅವನು ಪ್ರತಿಪಾದಿಸಿದನು. ಈ ತರ್ಕವನ್ನೇ ಉಪಯೋಗಿಸಿ ೧೮೧೮ರಲ್ಲಿ ಬ್ರಿಟಿಷರೊಂದಿಗೆ ಮಾಡಿಕೊಂಡಿದ್ದ ಒಪ್ಪಂದವನ್ನು ಮುರಿದು ಇಡೀ ಆರೆಗಾನ್ ಪ್ರಾಂತವನ್ನು ಆಕ್ರಮಿಸಿಕೊಳ್ಳಬೇಕು ಎನ್ನುವ ಪಕ್ಷದ ಧೋರಣೆಯನ್ನು ಪಾಲಿಸಲು ಪಣ ತೊಟ್ಟನು. ದೇಶ ವಿಸ್ತರಿಸುವ ಯೋಜನೆ ಜನಾನುರಾಗಿಯಾಗುತ್ತಿರುವುದನ್ನು ಅವಲೋಕಿಸಿದ ವ್ಹಿಗ್ ಪಕ್ಷದ ಅಭ್ಯರ್ಥಿ ಕ್ಲೇ ಟೆಕ್ಸಾಸ್ ಮತ್ತು ಆರೆಗಾನ್ ಪ್ರಾಂತಗಳನ್ನು ವಶಪಡಿಸಿಕೊಳ್ಳಲು ತಾನು ವ್ಯಕ್ತಪಡಿಸಿದ ವಿರೋಧವನ್ನು ಮರೆಮಾಚಲು ಪ್ರಯತ್ನಿಸಿದನು. ಆದರೆ ಈ ಸಮಯಸಾಧಕ ನಡವಳಿಕೆಯಿಂದ ಗುಲಾಮಗಿರಿಗೆ ವಿರೋಧವಾಗಿದ್ದ ಉತ್ತರ ಪ್ರಾಂತಗಳಲ್ಲಿ ಮತದಾರರ ಬೆಂಬಲ ಕಳೆದುಕೊಂಡನು. ಇಷ್ಟಾದರೂ ಚುನಾವಣೆಯಲ್ಲಿ ಅಭ್ಯರ್ಥಿಗಳ ನಡುವಣ ಅಂತರ ಬಹಳ ಕಿರಿದಾಗಿತ್ತು. ಪೋಲ್ಕ್ ಗೆದ್ದಿದ್ದು ಕೇವಲ ೩೮೦೦೦ ಮತಗಳಿಂದ ಮಾತ್ರ. ಎಲೆಕ್ಟರಲ್ ಕಾಲೇಜಿನಲ್ಲಿ ಪೋಲ್ಕ್ ಗಳಿಸಿದ್ದು ೧೭೦ ಮತಗಳು; ಅವನ ಎದುರಾಳಿ ಗಳಿಸಿದ್ದು ೧೦೫ ಮತಗಳು. ಈ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದು ಸ್ವತಂತ್ರ ಪಕ್ಷ (Liberty party). ಈ ಪಕ್ಷ ೧೮೪೦ರಲ್ಲಿ ಗುಲಾಮಗಿರಿಯ ವಿರೋಧಿ ಒಳಗುಂಪಾಗಿ ಅಸ್ತಿತ್ವಕ್ಕೆ ಬಂತು. ಈ ಪಕ್ಷದ ಅಭ್ಯರ್ಥಿ ಜೇಮ್ಸ್ ಬರ್ನೀ (James Birney). ಅವನಿಗೆ ಚುನಾವಣೆಯಲ್ಲಿ ದೊರೆತ ಮತಗಳು ಕೇವಲ ೬೨೦೦೦ ಮಾತ್ರ. ಆ ಮತದಾರರಲ್ಲಿ ೧೬೦೦೦ ಜನ ವ್ಹಿಗ್ ಪಕ್ಷದ ಪ್ರಭಾವ ಹೆಚ್ಚಾಗಿದ್ದ ನ್ಯೂಯಾರ್ಕ್ ಸಂಸ್ಥಾನದ ಪಶ್ಚಿಮ ಭಾಗದಲ್ಲಿ ವಾಸವಾಗಿದ್ದರು. ಇದರಿಂದಾಗಿ ಕ್ಲೇ ನ್ಯೂಯಾರ್ಕಿನಲ್ಲಿ ಸೋತನು. ಅವನು ಅಲ್ಲಿ ಗೆದ್ದಿದ್ದರೆ ೩೬ ಎಲೆಕ್ಟರಲ್ ಮತಗಳು ಸಿಕ್ಕು, ೧೪೧-೧೩೪ ಅಂತರದಲ್ಲಿ ಆಯ್ಕೆಯಾಗುತ್ತಿದ್ದನು.

ಪೋಲ್ಕ್‌ನ ವಿಜಯ ರಾಷ್ಟ್ರ ವಿಸ್ತರಣೆಗೆ ಜನರು ನೀಡಿದ ಒಪ್ಪಿಗೆ ಎಂದು ಅರ್ಥೈಸಲಾಯಿತು. ಚುನಾವಣೆಯ ಫಲಿತಾಂಶವನ್ನು ನೆಪವಾಗಿಟ್ಟುಕೊಂಡು ಜಾನ್ ಟೈಲರ್ (John Tyler) ಟೆಕ್ಸಾಸ್ ಪ್ರಾಂತವನ್ನು ವಶಪಡಿಸಿಕೊಳ್ಳುವ ಜಂಟಿ ನಿರ್ಣಯವನ್ನು ಕಾಂಗ್ರೆಸ್ ಅನುಮೋದಿಸಬೇಕೆಂದು ಕರೆಕೊಟ್ಟನು. ಹೀಗೆ ಮಾಡುವುದರಿಂದ ಸೆನೆಟ್‌ನಲ್ಲಿ

೨/೩ ಬಹುಮತವನ್ನು ಪಡೆಯುವ ಅವಶ್ಯಕತೆಯನ್ನು ತಪ್ಪಿಸಬಹುದು ಎನ್ನುವ ಸುಲಭ ಮಾರ್ಗವನ್ನು ಸೂಚಿಸಿದನು. ಟೈಲರ್ ಮಂಡಿಸಿದ ನಿರ್ಣಯವನ್ನು ಅವನು ನಿವೃತ್ತನಾಗುವ ಕೆಲವು ದಿನಗಳ ಮುಂಚೆ ಕಾಂಗ್ರೆಸ್ ಅನುಮೋದಿಸಿತು. ಈ ನಿರ್ಣಯದ ಪ್ರಕಾರ ಟೆಕ್ಸಾಸ್ ಪ್ರಾಂತ ತನ್ನ ಗಡಿಯೊಳಗಣ ಎಲ್ಲ ಸಾರ್ವಜನಿಕ ಭೂಮಿಯ ಸ್ವಾಮ್ಯವನ್ನು ಪಡೆದಿತ್ತು. ಟೆಕ್ಸಾಸ್ ಸ್ವತಂತ್ರ ಗಣರಾಜ್ಯವಾಗಿದ್ದಾಗ ಮಾಡಿದ ಸಾಲವನ್ನು ತೀರಿಸುವ ಜವಾಬ್ದಾರಿಯನ್ನು ತಾನೇ ವಹಿಸಿಕೊಂಡಿತು. ೧೮೪೫ರ ಡಿಸೆಂಬರ್‌ನಲ್ಲಿ ಟೆಕ್ಸಾಸ್ ಒಂದು ಸಂಸ್ಥಾನವಾಗಿ ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನು ಸೇರಿಕೊಂಡಿತು.

ಅಧ್ಯಕ್ಷ ಪೋಲ್ಕ್ ಚುರುಕುಬುದ್ಧಿಯವನಲ್ಲ; ಭಾವನಾತ್ಮಕನೂ ಆಗಿರಲಿಲ್ಲ. ಅವನು ಬಿಗುಮಾನದ, ಲೆಕ್ಕಾಚಾರದ ವ್ಯಕ್ತಿಯಾಗಿದ್ದನು. ಆದರೆ ಅವನು ಸಮರ್ಥನಾದ, ಕಷ್ಟಪಟ್ಟು ಕೆಲಸ ಮಾಡುವವನಾಗಿ, ದೃಢಮನಸ್ಕ ಮತ್ತು ಇತರರ ಟೀಕೆಗಳನ್ನು ಮನಸ್ಸಿಗೆ ಹಚ್ಚಿಕೊಳ್ಳುವವನಾಗಿರಲಿಲ್ಲ. ಈ ಗುಣಗಳು ಅವನ ಅಧ್ಯಕ್ಷತೆಯಲ್ಲಿ ಬಹಳ ಸಹಕಾರಿ ಗಳಾದವು. ಪೋಲ್ಕ್ ಅಧ್ಯಕ್ಷನಾಗಿ ಅಸಾಮಾನ್ಯ ಯಶಸ್ಸು ಗಳಿಸಿದನು. ಅವನು ಸಾಧಿಸಬೇಕೆಂದು ನಿಶ್ಚಯಿಸಿದ್ದ ಗುರಿಗಳು ಚಿಕ್ಕ ಪುಟ್ಟ ಅರೆಮನಸ್ಸಿನ ಯೋಜನೆ ಗಳಾಗಿರಲಿಲ್ಲ. ೧೮೪೨ರಲ್ಲಿ ವ್ಹಿಗ್ ಪಕ್ಷದವರು ಹಾಕಿದ್ದ ತೆರಿಗೆಯನ್ನು ಕಡಿಮೆ ಮಾಡಿದನು ಮತ್ತು ಸ್ವತಂತ್ರವಾದ ಖಜಾನೆಯನ್ನು ಪುನಃ ಸ್ಥಾಪಿಸಿದನು. ಸಂಸ್ಥಾನಗಳ ಆಂತರಿಕ ಬೆಳವಣಿಗೆಯಲ್ಲಿ ಕೇಂದ್ರ ಸರ್ಕಾರದ ಕೈವಾಡವನ್ನು ತಡೆಗಟ್ಟಿದನು. ದೇಶ ವಿಸ್ತರಣೆಗೆ ಬೆಂಬಲ ನೀಡಿ ಟೆಕ್ಸಾಸ್ ಮತ್ತು ಆರೆಗಾನ್ ಪ್ರಾಂತಗಳನ್ನು ವಶಪಡಿಸಿಕೊಳ್ಳುವುದರಲ್ಲಿ ಸಫಲನಾದನು.

ರಾಜ್ಯ ವಿಸ್ತರಣೆ

ಪೋಲ್ಕ್ ಅಧ್ಯಕ್ಷನಾದ ಮೇಲೆ ಮಾಡಿದ ಮೊದಲನೆಯ ಕೆಲಸವೆಂದರೆ ಆರೆಗಾನ್ ಪ್ರಾಂತವನ್ನು ವಶಪಡಿಸಿಕೊಳ್ಳುವ ಸಮಸ್ಯೆಯನ್ನು ಪರಿಹರಿಸಲು ಮಾಡಿದ ಪ್ರಯತ್ನ. ಅಧ್ಯಕ್ಷನಾಗಿ ಪ್ರಮಾಣವಚನ ಸ್ವೀಕರಿಸುವ ಸಂದರ್ಭದಲ್ಲಿ ಮಾಡಿದ ಆರಂಭ ಭಾಷಣದಲ್ಲಿ ಇಡೀ ಆರೆಗಾನ್ ಪ್ರಾಂತ ಅಮೆರಿಕಕ್ಕೆ ಸೇರಬೇಕಾದುದು ಅಗತ್ಯವೆಂದು ಘೋಷಿಸಿದನು. ಆಗ ವಾಷಿಂಗ್‌ಟನ್‌ನಲ್ಲಿ ಇದ್ದ ಬ್ರಿಟಿಷ್ ಮಂತ್ರಿ ರಿಚರ್ಡ್ ಪಾಕೆನ್‌ಹಾಮ್ (Richard Packenham) ನಿಗೆ ೪೯ನೆಯ ಸಮಾನಾಂತರ ರೇಖೆಯನ್ನು ಅನುಸರಿಸಿ ಶಾಂತ ಸಾಗರ ಸೇರುವ ಗಡಿಯನ್ನು ಒಪ್ಪಿಕೊಳ್ಳುವುದಾಗಿ ತಿಳಿಸಿದನು. ಆದರೆ ಪಾಕೆನ್‌ಹಾಮ್ ಅವನ ಸಲಹೆಯನ್ನು ತಿರಸ್ಕರಿಸಿದನು. ೧೮೪೫ರ ಡಿಸೆಂಬರ್ ತಿಂಗಳಲ್ಲಿ ಸೇರಿದ ಕಾಂಗ್ರೆಸ್‌ನಲ್ಲಿ ಅಧ್ಯಕ್ಷ ಪೋಲ್ಕ್ ೧೮೧೮ರಲ್ಲಿ ಇಂಗ್ಲೆಂಡಿನೊಡನೆ ಮಾಡಿಕೊಂಡ ಒಪ್ಪಂದವನ್ನು ರದ್ದುಗೊಳಿಸಲು ಅವಶ್ಯಕವಾದ ಒಂದು ವರ್ಷದ ಮುನ್ಸೂಚನೆಯನ್ನು ಕೊಡಲು ಅನುಮತಿ ಕೋರಿದನು. ೧೮೪೬ರಲ್ಲಿ ಕಾಂಗ್ರೆಸ್ ಅನುಮತಿ ಪಡೆದು ಪೋಲ್ಕ್

ಆರೆಗಾನ್ ಪ್ರಾಂತದ ಮೇಲಿನ ಜಂಟಿ ಆಡಳಿತವನ್ನು ರದ್ದು ಮಾಡುವುದಾಗಿ ಇಂಗ್ಲೆಂಡಿಗೆ ಎಚ್ಚರಿಕೆ ನೀಡಿದನು. ಈ ಎಚ್ಚರಿಕೆಯಿಂದ ಕಳವಳಗೊಂಡ ಇಂಗ್ಲೆಂಡ್ ಸಂಧಾನ ಮಾಡಿಕೊಳ್ಳಲು ಕಾತುರತೆ ತೋರಿತು. ಇಂಗ್ಲೆಂಡಿನ ಕಳವಳಕ್ಕೆ ಕಾರಣ ೧೮೪೫ರ ವೇಳೆಗೆ ಆರೆಗಾನ್ ಪ್ರಾಂತದಲ್ಲಿ ಅಮೆರಿಕನರು ಹೆಚ್ಚಿನ ಸಂಖ್ಯೆಯಲ್ಲಿ ನೆಲಸಿದ್ದರು. ಆದರೆ ಕೊಲಂಬಿಯ ನದಿಯ ಉತ್ತರ ಪ್ರಾಂತದಲ್ಲಿ ನೆಲಸಿದ್ದ ಬ್ರಿಟಿಷ್ ಪ್ರಜೆಗಳ ಸಂಖ್ಯೆ ೭೫೦ಕ್ಕಿಂತ ಹೆಚ್ಚಿರಲಿಲ್ಲ. ಆದ್ದರಿಂದ ಅಮೆರಿಕನ್ನರೊಡನೆ ಕದನ ಅಪ್ರಾಪ್ತವೆಂದು ಅರಿತು ಸಂಧಾನಕ್ಕೆ ಸಿದ್ಧರಾದರು. ಬ್ರಿಟಿಷ್ ವಿದೇಶೀ ವ್ಯವಹಾರ ಸಚಿವನಾಗಿದ್ದ ಲಾರ್ಡ್ ಅಬರ್ಡೀನ್ (Lord Aberdeen) ಆರೆಗಾನ್ ಪ್ರಾಂತವನ್ನು ೪೯ನೆಯ ಸಮಾನಾಂತರ ರೇಖೆಯನ್ನು ಅನುಸರಿಸಿ ವಿಭಾಗ ಮಾಡಿಕೊಳ್ಳುವ ಸಲಹೆಯನ್ನು ಮಂಡಿಸಿದನು. ಅಧ್ಯಕ್ಷ ಪೋಲ್ಕ್ ಅತಿಕ್ರಮಣ ಮನೋಭಾವವನ್ನು ತ್ಯಜಿಸಿ ಆ ಸಲಹೆಗೆ ಒಪ್ಪಿಗೆ ನೀಡಿದನು. ಜೂನ್ ೧೮೪೬ರಲ್ಲಿ ಆ ಒಪ್ಪಂದವನ್ನು ಅಂಗೀಕರಿಸಲಾಯಿತು. ಬ್ರಿಟಿಷರಿಗೆ ಕೊಲಂಬಿಯ ನದಿಯನ್ನು ಉಪಯೋಗಿಸಲು ಅನುಮತಿ ನೀಡಲಾಯಿತು. ಇದರಿಂದ ಕೆಲವು 'ದೇಶ ವಿಸ್ತರಣೆಯ ಗೀಳು ಹಿಡಿದವರು' ಅಸಮಾಧಾನಗೊಂಡು (೫೦° ೪೦° ಅಕ್ಷಾಂಶದವರೆಗೆ ಅಮೆರಿಕದ ಗಡಿಯನ್ನು ವಿಸ್ತರಿಸದಿದ್ದಕ್ಕಾಗಿ) ಅಧ್ಯಕ್ಷ ಪೋಲ್ಕ್‌ನನ್ನು ವಿಶ್ವಾಸಘಾತುಕನೆಂದು ನಿಂದಿಸಿದರು. ದೇಶದ ಹಿತದೃಷ್ಟಿಯಿಂದ ಮಾಡಿಕೊಂಡ ಈ ಒಪ್ಪಂದವನ್ನು ಕಾಂಗ್ರೆಸ್ ಬಹುಮತದಿಂದ ಅಂಗೀಕರಿಸಿತು.

ಮೆಕ್ಸಿಕೊದೊಡನೆ ಯುದ್ಧ

ಆರೆಗಾನ್ ಒಪ್ಪಂದ ಮಾಡಿಕೊಂಡದ್ದಕ್ಕೆ ಒಂದು ಮುಖ್ಯ ಕಾರಣವೆಂದರೆ ಅಮೆರಿಕ ಮೆಕ್ಸಿಕೊದೊಡನೆ ಯುದ್ಧಮಾಡುವ ಪರಿಸ್ಥಿತಿ ಉಂಟಾಗಿತ್ತು. ಆದ್ದರಿಂದ ಇಂಗ್ಲೆಂಡಿನೊಡನೆ ಯುದ್ಧಕ್ಕೆ ಅಮೆರಿಕ ತಯಾರಿರಲಿಲ್ಲ. ಅಮೆರಿಕದ ದೇಶ ವಿಸ್ತರಣ ಧೋರಣೆಗೆ ದೇಶದ ಗಾತ್ರ ಮತ್ತು ಸಂಪತ್ತು ಮುಂತಾದ ಅಂಶಗಳು ಉತ್ತೇಜನ ನೀಡಿ ಮೆಕ್ಸಿಕೊ ದೇಶದ ಮೇಲೆ ಬಲಪ್ರಯೋಗ ಮಾಡಲು ಪ್ರಚೋದಿಸಿದವು. ಈ ಯುದ್ಧಕ್ಕೆ ಮೆಕ್ಸಿಕನ್ನರ ಮೊಂಡುತನ ಮತ್ತು ಉತ್ಪ್ರೇಕ್ಷೆಗೊಂಡ ಹೆಮ್ಮೆಯೂ ಬಹಳಮಟ್ಟಿಗೆ ಕಾರಣವಾಗಿದ್ದವು. ಟೆಕ್ಸಾಸ್ ಪ್ರಾಂತವು ಹತ್ತು ವರ್ಷಗಳಿಂದ ಪ್ರತ್ಯೇಕ ಗಣರಾಜ್ಯವಾಗಿತ್ತು. ಆ ಅವಧಿಯಲ್ಲಿ ಮೆಕ್ಸಿಕೊ ಆ ಪ್ರಾಂತವನ್ನು ತನ್ನ ಅಧೀನತೆಗೆ ಒಳಪಡಿಸಿಕೊಳ್ಳಲು ಪ್ರಯತ್ನ ಪಡಲಿಲ್ಲ. ಅಮೆರಿಕದ ಕಾಂಗ್ರೆಸ್ ಟೆಕ್ಸಾಸ್ ಪ್ರಾಂತವನ್ನು ವಶಪಡಿಸಿಕೊಳ್ಳಲು ಬಹುಮತದಿಂದ ನಿರ್ಧರಿಸಿದಾಗ ಮೆಕ್ಸಿಕೊ ಅಮೆರಿಕದೊಡನೆ ರಾಯಭಾರ ಸಂಬಂಧವನ್ನು ಕಡಿದುಕೊಂಡಿತು.

ಅಧ್ಯಕ್ಷ ಪೋಲ್ಕ್ ಗಡಿರಕ್ಷಣೆಗಾಗಿ ಜನರಲ್ ಜ಼ಾಕರಿ ಟೇಲರ್‌ನನ್ನು (Generala Zachary Taylor) ಸೈನ್ಯದೊಡನೆ ಕಳುಹಿಸಿದನು. ಗಡಿ ಎಲ್ಲಿದೆ ಎನ್ನುವುದು ವಿವಾದಾತ್ಮಕವಾಗಿದ್ದದರಿಂದ ಟೆಕ್ಸಾಸ್ ಮತ್ತು ಮೆಕ್ಸಿಕೊ ಬೇರೆ ಬೇರೆ ಗಡಿರೇಖೆಗಳನ್ನು

ಗುರುತಿಸಿದ್ದರು, ಟೆಕ್ಸಾಸ್ ತನ್ನ ಗಡಿಯನ್ನು ರಿಯೋ ಗ್ರಾಂಡೆ (Rio Grande) ನದಿ ಗುರುತಿಸುತ್ತದೆ ಎಂದು ಹೇಳಿದರೆ; ಮೆಕ್ಸಿಕೊ ೧೫೦ ಮೈಲಿ ಉತ್ತರಕ್ಕಿದ್ದ ನ್ಯೂಸೆಸ್ (Nueces) ಎಂಬ ಸಣ್ಣ ನದಿ ತಮ್ಮ ಗಡಿ ಎಂದು ವಾದಿಸಿತು. ಜುಲೈ ೧೮೪೫ರಲ್ಲಿ ಜನರಲ್ ಟೈಲರ್ ೧೫೦೦ ಸೈನಿಕರೊಡನೆ ನ್ಯೂಸೆಸ್ ನದಿಯನ್ನು ದಾಟಿ ಕಾರ್ಪಸ್ ಕ್ರಿಸ್ಟಿ (Corpus Christi)ಯ ದಕ್ಷಿಣ ದಂಡೆಯಲ್ಲಿ ಬೀಡುಬಿಟ್ಟನು. ರಿಯೊ ಗ್ರಾಂಡೆವರೆಗೆ ಸೈನ್ಯವನ್ನು ನಡೆಸಿ ಮೆಕ್ಸಿಕನ್ನರನ್ನು ಕೆರಳಿಸುವ ಗೊಡವೆಗೆ ಹೋಗಲಿಲ್ಲ.

ನವೆಂಬರ್ ೧೮೪೫ರಲ್ಲಿ ಅಧ್ಯಕ್ಷ ಪೋಲ್ಕ್ ರಾಯಭಾರಿ ಜಾನ್ ಸ್ಲೈಡೆಲ್ (John Slidell)ನನ್ನು ಗುಟ್ಟಾದ ರಾಜಕಾರ್ಯದ ಮೇಲೆ ಮೆಕ್ಸಿಕೊಗೆ ಕಳುಹಿಸಿ ಟೆಕ್ಸಾಸ್ ಪ್ರಾಂತ ವನ್ನು ಸಂಧಾನದ ಮೂಲಕ ಪಡೆಯಲು ಪ್ರಯತ್ನಿಸಿದನು. ಮೆಕ್ಸಿಕೊ ಅಮೆರಿಕದಿಂದ ಪಡೆದಿದ್ದ ಎರಡು ಮಿಲಿಯನ್ ಡಾಲರ್ ಸಾಲವನ್ನು ಮರುಪಾವತಿ ಮಾಡಿರಲಿಲ್ಲ. ಪೋಲ್ಕ್ ಆ ಸಾಲಕ್ಕೆ ಟೆಕ್ಸಾಸ್ ಪ್ರಾಂತದ ವಿನಿಮಯ ಮಾಡಿಕೊಳ್ಳುವಂತೆ ಮೆಕ್ಸಿಕೊವನ್ನು ಒಪ್ಪಿಸುವಂತೆ ಮನ ಒಲಿಸಲು ಸ್ಲೈಡೆಲ್‌ಗೆ ಅನುಮತಿ ನೀಡಿದನು. ಅದು ಸಾಧ್ಯವಾಗದಿದ್ದರೆ ಮೂವತ್ತು ಮಿಲಿಯನ್ ಡಾಲರ್‌ಗಳಿಗೆ ಕ್ಯಾಲಿಫೋರ್ನಿಯ ಪ್ರಾಂತ ಮತ್ತು ನ್ಯೂಮೆಕ್ಸಿಕೊದ ಕೆಲವು ಭಾಗಗಳನ್ನು ಕೊಂಡುಕೊಳ್ಳುವಂತೆ ನಿರ್ದೇಶಿಸಿದನು. ಮೆಕ್ಸಿಕನ್ನರು ಅಮೆರಿಕದೊಡನೆ ವ್ಯವಹಾರ ಮಾಡಲು ನಿರಾಕರಿಸಿದರು ಅಷ್ಟೇ ಅಲ್ಲ, ಮೆಕ್ಸಿಕನ್ ಸರ್ಕಾರದ ಅಧಿಕಾರಿಗಳು ಸ್ಲೈಡೆಲ್‌ನನ್ನು ಭೇಟಿಯಾಗಲು ಸಹ ಬಿಡಲಿಲ್ಲ. ಮೆಕ್ಸಿಕೊದ ಅಧ್ಯಕ್ಷನಾಗಿದ್ದ ಹೊಸೇ ಹರೇರಾ (Jose' Herrera)ನ ದಬ್ಬಾಳಿಕೆಯನ್ನು ಬಡತನದಿಂದ ನರಳುತ್ತಿದ್ದ ಪ್ರಜೆಗಳು ದ್ವೇಷಿಸುತ್ತಿದ್ದರು. ಅವನನ್ನು ಅಧಿಕಾರದಿಂದ ತೆಗೆದುಹಾಕಲು ಸಮಯ ಕಾಯುತ್ತಿದ್ದರು. ಅಮೆರಿಕದ ರಾಯಭಾರಿ ಸ್ಲೈಡೆಲ್ ಮೆಕ್ಸಿಕೊ ನಗರಕ್ಕೆ ಬಂದಿರುವ ಸುದ್ದಿ ಜನರನ್ನು ಜಾಗೃತಗೊಳಿಸಿತು. ಹೀಗೆ ಜಾಗೃತಗೊಂಡ ಜನರು ಅಧ್ಯಕ್ಷ ಹರೇರಾನನ್ನು ಅಧಿಕಾರದಿಂದ ಕಿತ್ತೊಗೆದರು.

ಹೊಸ ಅಧ್ಯಕ್ಷ ಜನರಲ್ ಮಾರಿಯಾನೊ ಪರೆದೆಸ್ (General Mariano Paredes) ಟೆಕ್ಸಾಸ್ ವಿಷಯವನ್ನು ರಾಯಭಾರಿ ಸ್ಲೈಡೆಲ್‌ನೊಡನೆ ಚರ್ಚಿಸಲು ನಿರಾಕರಿಸಿ, ಇಡೀ ಟೆಕ್ಸಾಸ್ ಪ್ರಾಂತದ ಮೇಲೆ ಮೆಕ್ಸಿಕೊಗೆ ಇರುವ ಹಕ್ಕನ್ನು ಪ್ರತಿಪಾದಿಸಿ ದನು. ೧೮೪೬ರ ಮಾರ್ಚ್ ತಿಂಗಳಲ್ಲಿ ಸ್ಲೈಡೆಲ್ ವಾಷಿಂಗ್‌ಟನ್‌ಗೆ ಹಿಂತಿರುಗಿದನು. ಬಲಪ್ರಯೋಗವಿಲ್ಲದೆ ಟೆಕ್ಸಾಸ್ ಪ್ರಾಂತವನ್ನು ಪಡೆಯುವುದು ಸಾಧ್ಯವಿಲ್ಲ ಎಂದು ಸ್ಲೈಡೆಲ್‌ಗೆ ಮನದಟ್ಟಾಯಿತು. ಅಧ್ಯಕ್ಷ ಪೋಲ್ಕ್ ಮೆಕ್ಸಿಕೊ ಮೇಲೆ ಯುದ್ಧಕ್ಕೆ ಹೋಗಲು ತೀರ್ಮಾನ ಮಾಡಿದನು. ಈ ನಿರ್ಧಾರಕ್ಕೆ ಮೆಕ್ಸಿಕನ್ ಸೈನ್ಯದ ತುಕಡಿಯೊಂದು ನದಿಯನ್ನು ದಾಟಿ ಬಂದು ಅಮೆರಿಕನ್ ಅಶ್ವಾರೋಹಿ ಕಾವಲು ದಳದ ಮೇಲೆ ದಾಳಿಮಾಡಿದ್ದು ಕಾರಣವಾಯಿತು. ಪೋಲ್ಕ್ ಕಾಂಗ್ರೆಸ್‌ಗೆ ನೀಡಿದ ಸಂದೇಶದಲ್ಲಿ ಯುದ್ಧ ಆಗಲೇ

ನಡೆಯುತ್ತಿದೆ ಎಂದು ಸಾರಿ ಹೇಳಿದನು. ೧೮೪೬ರ ಮೇ ೧೩ರಂದು ಕಾಂಗ್ರೆಸ್ ಮೆಕ್ಸಿಕೊ ಮೇಲೆ ಯುದ್ಧ ಸಾರಿತು. ಹಾಗೆಯೇ ೫೦೦೦೦ ಹೊಸ ಸೈನಿಕರನ್ನು ಸೇರಿಸಿಕೊಳ್ಳಲು ಮತ್ತು ಅಗತ್ಯವಾದ ಸಾಮಾನುಗಳನ್ನು ಹೊಂದಿಸಿಕೊಳ್ಳಲು ಅನುಮತಿ ನೀಡಿತು. ಮೆಕ್ಸಿಕನ್ ಸೈನ್ಯ ಅಮೆರಿಕನ್ ಸೈನ್ಯಕ್ಕೆ ಸಾಟಿಯಾಗಿರಲಿಲ್ಲ. ರಿಯೋ ಗ್ರಾಂಡೆ ನದಿಯ ಉತ್ತರದಲ್ಲಿ ಪಾಲೊ ಆಲ್ಟೊ (Palo Alto)ನಲ್ಲಿ ೨೩೦೦ ಅಮೆರಿಕನ್ ಸೈನಿಕರು ತಮಗಿಂತ ಎರಡರಷ್ಟು ದೊಡ್ಡದಾದ ಮೆಕ್ಸಿಕನ್ ಸೈನ್ಯವನ್ನು ಚದುರಿಸಿ ದಿಕ್ಕಾಪಾಲು ಓಡುವಂತೆ ಮಾಡಿದರು. ರೆಸಾಕ ಡಿ ಲ ಪಾಮ (Resaca de la Palma) ದಲ್ಲಿ ಕೇವಲ ೧೭೦೦ ಅಮೆರಿಕನ್ನು ೭೫೦೦ ಸೈನಿಕರಿಂದ ಕೂಡಿದ್ದ ಮೆಕ್ಸಿಕನ್ ಸೇನೆಯನ್ನು ಸದೆಬಡಿದರು. ಯುದ್ಧ ಪ್ರಾರಂಭವಾದ ಒಂದು ವಾರದೊಳಗೆ ಅಮೆರಿಕನ್ನರು ಮೆಕ್ಸಿಕೊ ಸೈನ್ಯವನ್ನು ರಿಯೋ ಗ್ರಾಂಡೆ ನದಿಯಿಂದಾಚೆಗೆ ಓಡಿಸಿ ಆ ನದಿಯ ದಕ್ಷಿಣ ದಡದ ಮೇಲೆ ಜನರಲ್ ಟೈಲರ್‌ನು ತನ್ನ ಸೈನ್ಯವನ್ನು ಭದ್ರವಾಗಿ ಸ್ಥಾಪಿಸಿ ಬೀಡುಬಿಟ್ಟನು.

ಪೋಲ್ಕ್‌ನ ವಿರೋಧಪಕ್ಷದವರು (Whigs) ಯುದ್ಧವನ್ನು ರಾಜಕೀಯಗೊಳಿಸಿ, ಯುದ್ಧಭೂಮಿಯಿಂದ ದೂರವಿದ್ದ ಅವರು ಯುದ್ಧವನ್ನು ವಿರೋಧಿಸಿ ಅದಕ್ಕೆ ಜನಬೆಂಬಲ ಕಡಿಮೆಯಾಗುವಂತೆ ಮಾಡಿದರು. ಈ ಯುದ್ಧವನ್ನು ವ್ಹಿಗ್ ಪಕ್ಷದವರು 'ಪೋಲ್ಕ್‌ನ ಕದನ'ವೆಂದು ಅಪಹಾಸ್ಯ ಮಾಡಿದರು. ಪೋಲ್ಕ್‌ನ ಯುದ್ಧಯೋಜನೆ ಮೂರು ಹಂತಗಳಲ್ಲಿ ಸಾಗಿತ್ತು. ಮೊದಲನೆಯದಾಗಿ, ಟೆಕ್ಸಾಸ್ ಪ್ರಾಂತದಿಂದ ಮೆಕ್ಸಿಕನ್ನರನ್ನು ಗಡೀಪಾರು ಮಾಡಿ, ಮೆಕ್ಸಿಕೊದ ಉತ್ತರ ಪ್ರಾಂತಗಳನ್ನು ಆಕ್ರಮಿಸಿಕೊಳ್ಳುವುದು. ಎರಡನೆಯದು ಕ್ಯಾಲಿಫೋರ್ನಿಯ ಮತ್ತು ನ್ಯೂ ಮೆಕ್ಸಿಕೊ ಪ್ರಾಂತಗಳನ್ನು ವಶಪಡಿಸಿಕೊಳ್ಳುವುದು. ಕೊನೆಯದಾಗಿ ಮೆಕ್ಸಿಕೊ ನಗರ (Mexico City)ದ ಮೇಲೆ ದಂಡೆತ್ತಿ ಹೋಗಿ ಮೆಕ್ಸಿಕನ್ ಸರ್ಕಾರ ಅಮೆರಿಕದ ಷರತ್ತುಗಳನ್ನು ಒಪ್ಪಿ ಸಂಧಾನ ಮಾಡಿಕೊಳ್ಳುವಂತೆ ಬಲಾತ್ಕಾರ ಮಾಡುವುದು. ಈ ಯುದ್ಧದಲ್ಲಿ ಅತ್ಯಂತ ಕಠಿಣವಾದ ಸೈನ್ಯ ಕಾರ್ಯಾಚರಣೆಯೆಂದರೆ ಮೆಕ್ಸಿಕೊ ನಗರದ ಮೇಲಿನ ದಾಳಿ. ಅಧ್ಯಕ್ಷ ಪೋಲ್ಕ್ ಮೆಕ್ಸಿಕೊ ನಗರದ ಮುತ್ತಿಗೆ ನಡೆಸಲು ವಿನ್‌ಫೀಲ್ಡ್ ಸ್ಕಾಟ್ (Winfield Scott) ನನ್ನು ಸೈನ್ಯಾಧಿಕಾರಿಯನ್ನಾಗಿ ನೇಮಿಸಿದನು. ಸ್ಕಾಟ್ ಆರೂವರೆ ಅಡಿಗಳ ಅಜಾನುಬಾಹು; ಮಿಲಿಟರಿ ಸಮವಸ್ತ್ರದಲ್ಲಿ ಅವನು ತನ್ನ ಸುತ್ತಲಿರುವವರನ್ನು ನೋಟದಿಂದಲೇ ಅಧೀನ ಮಾಡಿಕೊಳ್ಳುವ ವ್ಯಕ್ತಿತ್ವ ಪಡೆದಿದ್ದನು.

ಸ್ಕಾಟ್ ಯುದ್ಧಾಚರಣೆಯನ್ನು ಮೊದಲಿಂದ ಕೊನೆಯವರೆಗೆ ಅತ್ಯಂತ ಕುಶಲತೆಯಿಂದ ನಡೆಸಿದನು. ೧೮೪೭ರ ಮಾರ್ಚ್ ಒಂಬತ್ತರಂದು ಸ್ಕಾಟ್ ಮೆಕ್ಸಿಕೊ ದೇಶದ ವೆರಾಕ್ರೂಜ಼್ (Vera Cruz)ನಗರಕ್ಕೆ ಮುತ್ತಿಗೆ ಹಾಕಿದನು. ಮೂರುವಾರಗಳೊಳಗೆ ಆ ನಗರ ಅವನಿಗೆ ಶರಣಾಗತವಾಯಿತು. ಸ್ಕಾಟ್‌ನ ೧೦೦೦೦ ಸೈನಿಕರಲ್ಲಿ ಸತ್ತವರು ಬೆರಳೆಣಿಸುವಷ್ಟು ಮಾತ್ರ.

ಶತ್ರುವಿನ ದೇಶದಲ್ಲಿ ಪಶ್ಚಿಮ ಕಡೆಗೆ ತನ್ನ ಸೈನ್ಯವನ್ನು ನಡೆಸಿಕೊಂಡು ಹೋದನು. ಸ್ಕಾಟ್ ತನ್ನ ಸೈನಿಕರನ್ನು ಶಿಸ್ತಿನಿಂದ ಹದ್ದುಬಸ್ತಿನಲ್ಲಿಟ್ಟಿದ್ದನು. ಹಿಂಸಾಚಾರ, ಕೊಳ್ಳೆ ಹೊಡೆಯುವುದನ್ನು ನಿಷೇಧಿಸಿದನು. ಹಾಗೇನಾದರೂ ಮಾಡಿದ್ದರೆ ಹಳ್ಳಿಯ ಜನ ಅವನ ಮೇಲೆ ತಿರುಗಿ ಬೀಳುತ್ತಿದ್ದರು. ತನ್ನ ಸೈನ್ಯ ಶಿಸ್ತು ಪಾಲಿಸುವಂತೆ ಮಾಡಿ ಅಂಥ ಅನಾಹುತಗಳು ಆಗದಂತೆ ಸ್ಕಾಟ್ ನೋಡಿಕೊಂಡನು.

ಸಿರ್ರೋ ಗೋರ್ಡೋ ಎಂಬ ಸ್ಥಳದಲ್ಲಿ ಸ್ಕಾಟ್‌ನ ಸೈನ್ಯ ಮೆಕ್ಸಿಕನ್ ಸೈನ್ಯವನ್ನು ಸುಳಿವು ಕೊಡದಂತೆ ಸುತ್ತುವರಿದು ಸೋಲಿಸಿ, ಮೂರು ಸಾವಿರಕ್ಕೂ ಹೆಚ್ಚು ಶತ್ರು ಸೈನಿಕರನ್ನು ಸೆರೆಹಿಡಿಯಿತು. ಈ ಕಾರ್ಯಾಚರಣೆಯಲ್ಲಿ ಹೆಚ್ಚು ಶತ್ರುವಿನ ಶಸ್ತ್ರಾಸ್ತ್ರಗಳು ಕೈವಶವಾದವು. ಮೇ ತಿಂಗಳ ಮೂರನೆಯ ವಾರದಲ್ಲಿ ಅವನ ಸೈನ್ಯ ಮೆಕ್ಸಿಕೊ ನಗರಕ್ಕೆ ಎಂಬತ್ತು ಮೈಲಿ ದೂರದಲ್ಲಿ ಬೀಡು ಬಿಟ್ಟಿತು. ಆಗಸ್ಟ್ ತಿಂಗಳವರೆಗೆ ಹೆಚ್ಚಿನ ಸೈನ್ಯ ಬರುವವರೆಗೆ ಕಾದು, ನಂತರ ತ್ವರಿತಗತಿಯಲ್ಲಿ ಸೈನ್ಯವನ್ನು ನಗರದ ಹೊರವಲಯದ ಮೇಲೆ ನುಗ್ಗಿಸಿದನು. ಮೆಕ್ಸಿಕೊ ನಗರ ರಕ್ಷಣಾದಳದೊಂದಿಗೆ ನಡೆದ ಘೋರ ಕದನದಲ್ಲಿ ಜಯಗಳಿಸಿ ಸೆಪ್ಟೆಂಬರ್ ೧೪ರಂದು ಮೆಕ್ಸಿಕೊ ನಗರವನ್ನು ವಶಪಡಿಸಿಕೊಂಡನು.

ಗ್ವಾಡಲೂಪ್ ಹಿಡಾಲ್ಗೋ ಒಪ್ಪಂದ

ಮೆಕ್ಸಿಕನ್ನರು ಸೋತರೂ ಸೋಲನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳಲಿಲ್ಲ. ಸ್ಕಾಟ್‌ನ ವಿಜಯವಾರ್ತೆ ವಾಷಿಂಗ್‌ಟನ್ ತಲುಪಿದ ಕೂಡಲೇ ಅಧ್ಯಕ್ಷ ಪೋಲ್ಕ್ ಸಂಸ್ಥಾನಗಳ ಇಲಾಖೆಯ ಮುಖ್ಯಸ್ಥನಾಗಿದ್ದ ನಿಕೊಲಾಸ್ ಟ್ರಿಸ್ಟ್ (Nicolas Trist)ನನ್ನು ಶಾಂತಿ ದೂತನಾಗಿ ಸ್ಕಾಟ್‌ಗೆ ಸಹಾಯ ಮಾಡಿ, ಮೆಕ್ಸಿಕೊದೊಡನೆ ಶಾಂತಿಸಂಧಾನ ನಡೆಸಲು ರಭಸದಿಂದ ಪ್ರಯಾಣಿಸಿದರು. ಮೆಕ್ಸಿಕೊ ನಗರದ ಪತನವಾದ ಮೇಲೆ ಉಂಟಾದ ಗೊಂದಲ ಪರಿಸ್ಥಿತಿಯಿಂದಾಗಿ ಟ್ರಿಸ್ಟ್ ೧೮೪೮ರವರೆಗೂ ಮೆಕ್ಸಿಕೊದ ಶಾಂತಿಸಂಧಾನ ಸಮಿತಿಯ ಸದಸ್ಯರನ್ನು ಸಂಧಿಸಿ ಮಾತುಕತೆ ನಡೆಸಲು ಸಾಧ್ಯವಾಗಲಿಲ್ಲ. ಏತನ್ಮಧ್ಯೆ ಈ ವಿಳಂಬಕ್ಕೆ ಕಾರಣ ತಿಳಿಯದೆ ಅಧ್ಯಕ್ಷ ಪೋಲ್ಕ್ ತಾಳ್ಮೆ ಕಳೆದುಕೊಂಡನು. ಮೊದಲು ಅವನು ಮೂವತ್ತು ಮಿಲಿಯನ್ ಡಾಲರ್‌ಗಳಿಗೆ ನ್ಯೂ ಮೆಕ್ಸಿಕೊ ಮತ್ತು ಕ್ಯಾಲಿಫೋರ್ನಿಯ ಪ್ರಾಂತಗಳನ್ನು ಕೊಂಡುಕೊಳ್ಳಲು ಅನುಮತಿ ನೀಡಿದ್ದನು. ಆದರೆ ಈಗ ಮೆಕ್ಸಿಕೊದಲ್ಲಿ ಅರಾಜಕತೆ ಉಂಟಾಗಿರುವುದರ ಅನುಕೂಲ ಪಡೆಯಲು ೩೦ ಮಿಲಿಯನ್ ಡಾಲರ್ ಗಳಿಗಿಂತ ಕಡಿಮೆ ಹಣಕ್ಕೆ ಹೆಚ್ಚಿನ ಪ್ರದೇಶ ಪಡೆಯಲು ಆಸೆಪಟ್ಟನು. ಇದನ್ನು ತಿಳಿಸಲು ಟ್ರಿಸ್ಟ್‌ನನ್ನು ವಾಷಿಂಗ್‌ಟನ್‌ಗೆ ಬರಲು ಹೇಳಿದನು. ಆದರೆ ಟ್ರಿಸ್ಟ್‌ನು ಸ್ಕಾಟ್‌ನ ಸಲಹೆ ಯಂತೆ ಅಧ್ಯಕ್ಷನ ಆಜ್ಞೆಯನ್ನು ಕಡೆಗಣಿಸಿದನು. ಟ್ರಿಸ್ಟ್‌ನು ಮೆಕ್ಸಿಕೊದ ಆಗಿನ ಪರಿಸ್ಥಿತಿಯಲ್ಲಿ ಕೂಡಲೇ ಒಪ್ಪಂದ ಮಾಡಿಕೊಳ್ಳದೆ ಹೋದರೆ ಪರಿಸ್ಥಿತಿ ಮತ್ತೆ ಬಿಗಡಾಯಿಸಿ ನ್ಯೂ ಮೆಕ್ಸಿಕೊ ಮತ್ತು ಕ್ಯಾಲಿಫೋರ್ನಿಯ ಪ್ರಾಂತಗಳು ಕೈಬಿಟ್ಟು ಹೋಗಬಹುದೆಂದು ಬೆದರಿ

ದೊರೆತ ಅವಕಾಶ ಉಪಯೋಗಿಸಿಕೊಂಡು ಆದಷ್ಟು ಬೇಗ ಒಪ್ಪಂದವನ್ನು ಪೂರ್ತಿಗೊಳಿಸಲು ಕಾರ್ಯತತ್ಪರನಾದನು. ಅವನು ಮಾತುಕತೆ ಮುಂದುವರಿಸಿ ಗ್ವಾಡಲೂಪ್ ಹಿಡಾಲ್‌ಗೊ ಒಪ್ಪಂದವನ್ನು ಪೂರ್ಣಗೊಳಿಸಿದನು. ಈ ಒಪ್ಪಂದದ ಪ್ರಕಾರ ಮೆಕ್ಸಿಕೊ ಸರ್ಕಾರ ರಿಯೋ ಗ್ರಾಂಡೆ ನದಿಯನ್ನು ಟೆಕ್ಸಾಸ್ ಗಡಿಯಾಗಿ ಒಪ್ಪಿಕೊಂಡು, ನ್ಯೂ ಮೆಕ್ಸಿಕೊ ಮತ್ತು ಮೇಲಿನ ಕ್ಯಾಲಿಫೋರ್ನಿಯ (upper California)ವನ್ನು ಅಮೆರಿಕಕ್ಕೆ ಬಿಟ್ಟುಕೊಡಲು ಅಧಿಕೃತವಾಗಿ ಒಪ್ಪಿಕೊಂಡಿತು. ಇದಕ್ಕೆ ಪ್ರತಿಯಾಗಿ ಅಮೆರಿಕ ಮೆಕ್ಸಿಕೊಗೆ ೧೫ ಮಿಲಿಯನ್ ಡಾಲರ್ ಕೊಡಲು ಒಪ್ಪಿಕೊಂಡು, ಮೆಕ್ಸಿಕೊ ಅಮೆರಿಕ ಪ್ರಜೆಗಳಿಗೆ ಕೊಡಬೇಕಾಗಿದ್ದ ೩.೨೫ ಮಿಲಿಯನ್ ಡಾಲರ್‌ಗಳನ್ನು ವಹಿಸಿಕೊಳ್ಳಬೇಕಾಯಿತು.

ಟ್ರಿಸ್ಟ್ ಈ ಒಪ್ಪಂದವನ್ನು ನ್ಯೂ ಆರ್ಲಿಯನ್ಸ್‌ನ ಪತ್ರಿಕಾಕರ್ತನೊಡನೆ ಅಧ್ಯಕ್ಷ ಪೋಲ್ಕ್‌ನಿಗೆ ಕಳುಹಿಸಿಕೊಟ್ಟನು. ತನ್ನ ಆಜ್ಞೆಯನ್ನು ಉಲ್ಲಂಘಿಸಿದಕ್ಕಾಗಿ ಪೋಲ್ಕ್‌ನು ಟ್ರಿಸ್ಟ್ ಮೇಲೆ ಕೋಪಾವಿಷ್ಟನಾಗಿ, ಅವನನ್ನು ಅರ್ಹತೆಯಿಲ್ಲದ, ಅವಿಧೇಯನಾದ ದಗಾಕೋರನೆಂದು ಜರಿದನು. ಅವನನ್ನು ಕೆಲಸದಿಂದ ತೆಗೆದುಹಾಕಿ ಸೆರೆಯಲ್ಲಿ ಇರಿಸಿದನು. (ಟ್ರಿಸ್ಟ್‌ನು ಮೆಕ್ಸಿಕೊದಲ್ಲಿ ಮಾಡಿದ ಕೆಲಸಕ್ಕೆ ಕೂಡ ಯಾವ ಸಂಭಾವನೆಯನ್ನೂ ಕೊಡಲಿಲ್ಲ. ೧೮೭೦ರಲ್ಲಿ ಟ್ರಿಸ್ಟ್ ಮರಣಶಯ್ಯೆಯ ಮೇಲಿದ್ದಾಗ ಕಾಂಗ್ರೆಸ್ ಅಂತಿಮವಾಗಿ ಅವನಿಗೆ ೧೪,೫೯ ಡಾಲರ್‌ಗಳನ್ನು ನೀಡಿ ಗೌರವಿಸಿತು!) ಆದರೆ ಮೆಕ್ಸಿಕೊದೊಡನೆ ಮಾಡಿಕೊಂಡ ಒಪ್ಪಂದವನ್ನು ಅಧ್ಯಕ್ಷ ಪೋಲ್ಕ್ ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಯಿತು. ವಿಧಿಯಿಲ್ಲದೆ ಆ ಒಪ್ಪಂದವನ್ನು ಸೆನೆಟ್‌ಗೆ ಅಂಗೀಕರಿಸಲು ಕಳುಹಿಸಿದನು. ಸೆನೆಟ್‌ನಲ್ಲಿ ಚರ್ಚೆ ನಡೆದು ಈ ಕರಾರು ಒಪ್ಪಿಕೊಳ್ಳದಿದ್ದರೆ ಯುದ್ಧ ಮಾಡಬೇಕಾಗುತ್ತದೆ ಎಂದು ತಿಳಿದು, ೩೮-೧೪ ಮತಗಳಿಂದ ಗ್ವಾಡ ಲೂಪ ಹಿಡಾಲ್ಗೊ ಒಪ್ಪಂದವನ್ನು ಅಂಗೀಕರಿಸಿತು. ಈ ಒಪ್ಪಂದ ಅಮೆರಿಕಕ್ಕೆ ಅತ್ಯಂತ ವಿಸ್ತಾರವಾದ ಭೂಪ್ರದೇಶವನ್ನು ಅನಾಯಾಸವಾಗಿ ಒದಗಿಸಿಕೊಟ್ಟಿತು. ಅಮೆರಿಕದ ವಶಕ್ಕೆ ಬಂದ ಪ್ರಾಂತಗಳೆಂದರೆ ಇಡೀ ಟೆಕ್ಸಾಸ್ ಸಂಸ್ಥಾನ, ನ್ಯೂ ಮೆಕ್ಸಿಕೊ, ಈಗಿನ ಕ್ಯಾಲಿಫೋರ್ನಿಯ ಸಂಸ್ಥಾನ, ಅರಿಜೋನ, ಯೂಟ ಮತ್ತು ವಯೋಮಿಂಗ್ – ಎಲ್ಲವೂ ಸೇರಿ ೧.೨ ಮಿಲಿಯನ್ ಚದರ ಮೈಲಿ ಭೂಭಾಗವನ್ನು ಅಮೆರಿಕ ವಶಪಡಿಸಿಕೊಂಡಿತು. ಇಷ್ಟು ಅಗ್ಗದ ಬೆಲೆಗೆ ಈ ಭೂಮಿ ದೊರಕಿದ್ದರೂ ಕೆಲವು ಆಸೆಬುರುಕ ಕಾಂಗ್ರೆಸ್ ಸದಸ್ಯರು ಇದನ್ನು ದುಬಾರಿ ವ್ಯವಹಾರವೆಂದು ದೂರಿ, 'ನಾವು ಯುದ್ಧವನ್ನು ಗೆದ್ದಿದ್ದೇವೆ, ಆದ್ದರಿಂದ ಇಡೀ ಮೆಕ್ಸಿಕೊ ದೇಶವನ್ನೇಕೆ ವಶಪಡಿಸಿಕೊಳ್ಳಬಾರದು?' ಎಂದು ತಮ್ಮ ವಿಕೃತವಾದವನ್ನು ಮಂಡಿಸಿದರು. ಆದರೆ ಈ ಯೋಜನೆಯನ್ನು ಜಾರಿಗೆ ತರುವ ಸಾಹಸಕ್ಕೆ ಯಾರೂ ಹೋಗಲಿಲ್ಲ. ಹಾಗೆ ಮಾಡದಿರಲು ಅಮೆರಿಕನ್ನರ 'ವರ್ಣ ಪ್ರಜ್ಞೆ' (color consciousness) ಮುಖ್ಯ ಕಾರಣವಾಯಿತು. ಈ ಪ್ರಜ್ಞೆಯಿಂದ ಪೂರ್ವಾಗ್ರಹಪೀಡಿತರಾದ ಬಿಳಿಯರು ಮೆಕ್ಸಿಕೊದ ಅಪಾರ ಸಂಖ್ಯೆಯ ಕಂದು ಬಣ್ಣದ, ಅನ್ಯ ಭಾಷೆ ಮತ್ತು ಮತದ ಜನರನ್ನು ಅಮೆರಿಕಕ್ಕೆ

ಸೇರಿಸಿಕೊಂಡರೆ ವರ್ಣಸಂಕರವಾಗಿ ಬಿಳಿಯರ ಅಧೋಗತಿಗೆ ಕಾರಣವಾಗಬಹುದೆಂದು ಹೆದರಿ ಆ ಯೋಜನೆಯನ್ನು ಕೈಬಿಡಲಾಯಿತು.

ವಿಲ್‌ಮಾಂಟ್ ನಿಯಮ

ಮೆಕ್ಸಿಕನ್ ಯುದ್ಧದಲ್ಲಿ ಜಯಗಳಿಸಿ, ವಿಸ್ತಾರ ಭೂಮಿಯನ್ನು ವಶಪಡಿಸಿಕೊಂಡದ್ದು ಅಮೆರಿಕನ್ನರ ಬೃಹತ್ ಸಾಧನೆ ಎಂದು ಹೇಳಬಹುದು. ಆದರೆ ಈ ಸಾಧನೆ ಕೆಲವು ಹಾನಿಕರವಾದ ಸಮಸ್ಯೆಗಳನ್ನು ಹುಟ್ಟುಹಾಕಿತು. ೧೮೪೬ರ ಆಗಸ್ಟ್ ತಿಂಗಳಲ್ಲಿ ಮೆಕ್ಸಿಕೊ ಯುದ್ಧ ಇನ್ನೂ ನಡೆಯುತ್ತಿದ್ದಂತೆಯೇ ಪೆನ್ಸಿಲ್‌ವೇನಿಯಾ ಡೆಮೊಕ್ರಾಟಿಕ್ ಪಕ್ಷದ ಸದಸ್ಯನಾಗಿದ್ದ ಡೇವಿಡ್ ವಿಲ್‌ಮಾಂಟ್ (David Wilmont) ಕಾಂಗ್ರೆಸ್ ಚರ್ಚಿಸುತ್ತಿದ್ದ 'ವಶಪಡಿಸಿಕೊಳ್ಳುವ ಮಸೂದೆ'ಗೆ (apropriation bill) ಒಂದು ತಿದ್ದುಪಡಿಯನ್ನು ಮಂಡಿಸಿದನು. ಆ ತಿದ್ದುಪಡಿಯ ಪ್ರಕಾರ ಮೆಕ್ಸಿಕೊದಿಂದ ವಶ ಮಾಡಿಕೊಂಡ ಯಾವ ಪ್ರಾಂತವೇ ಆಗಿರಲಿ ಅದು ಗುಲಾಮಗಿರಿಯಿಂದ ಮುಕ್ತಗೊಂಡಿರಬೇಕು. ವಿಲ್‌ಮಾಂಟ್ ನಿಯಮವೆಂದು ಕರೆಯಲ್ಪಟ್ಟ ಈ ತಿದ್ದುಪಡಿ ಬಿರುಸಿನ ವಾದ ವಿವಾದಗಳಿಗೆ ಕಾರಣವಾಯಿತು. ಗುಲಾಮಗಿರಿಯ ವಿರೋಧಿಗಳಾಗಿದ್ದ ಔತ್ತರೇಯರು (northerners) ಮಾನವ ಹಕ್ಕುಗಳ ಆಧಾರದ ಮೇಲೆ ಮತ್ತು ಮುಕ್ತ ಬಿಳಿಯ ಕೆಲಸಗಾರರು ಗುಲಾಮಗಿರಿ ಭದ್ರವಾಗಿ ಸ್ಥಾಪಿತಗೊಂಡಿರುವ ಪ್ರಾಂತಗಳಲ್ಲಿ ಕೆಲಸ ಮಾಡಲು ನಿರಾಕರಿಸುವ ಹಕ್ಕನ್ನು ಸಮರ್ಥಿಸಿ ವಿಲ್‌ಮಾಂಟ್ ನಿಯಮಕ್ಕೆ ಬೆಂಬಲ ನೀಡಿದರು. ಈ ತಿದ್ದುಪಡಿಯನ್ನು ವಿರೋಧಿಸಿ ದಾಕ್ಷಿಣಾತ್ಯರ ನಾಯಕನಾದ ದಕ್ಷಿಣ ಕೆರೊಲಿನದ ಸೆನೆಟರ್ ಜಾನ್ ಕಾಲ್‌ಹೂನ್ (John Calhoun) ಅನೇಕ ನಿರ್ಣಯಗಳನ್ನು ಮಂಡಿಸಿದನು. ಯಾವ ಪ್ರಾಂತದಿಂದಲೂ ಗುಲಾಮಗಿರಿಯನ್ನು ರದ್ದುಗೊಳಿಸುವ ಹಕ್ಕು ಕಾಂಗ್ರೆಸ್ಸಿಗೆ ಇಲ್ಲವೆಂದು ಅವನು ವಾದಿಸಿದನು. ವಾದವನ್ನು ಮುಂದುವರಿಸಿ ಪ್ರಾಂತಗಳು ಎಲ್ಲ ಸಂಸ್ಥಾನಗಳಿಗೂ ಸಮವಾಗಿ ಸೇರಿರುವುದರಿಂದ ಅಲ್ಲಿ ನೆಲೆಸಲು ಸ್ವತಂತ್ರರಿಗೂ ಮತ್ತು ಗುಲಾಮರಿಗೂ ಸಮಾನ ಹಕ್ಕುಗಳಿರಬೇಕು. ಆದ್ದರಿಂದ ಗುಲಾಮರನ್ನು ಪಡೆದಿರುವ ಪ್ರಜೆಗಳು ತಮ್ಮ ಸ್ವತ್ತುಗಳನ್ನು ಪ್ರಾಂತದಿಂದ ಪ್ರಾಂತಕ್ಕೆ ಕೊಂಡೊಯ್ಯುವಂತೆ, ತಮ್ಮ ಗುಲಾಮರನ್ನು ಯಾವ ಪ್ರಾಂತಕ್ಕೆ ಬೇಕಾದರೂ ರವಾನಿಸುವ ಹಕ್ಕನ್ನು ಕಾಂಗ್ರೆಸ್ ಖಾತರಿಗೊಳಿಬೇಕಲ್ಲದೆ, ಗುಲಾಮರನ್ನು ತಂದ ಮೇಲೆ ಅವರನ್ನು ರಕ್ಷಿಸುವ ಕಾಯಿದೆಗಳನ್ನು ಜಾರಿಗೆ ತರಬೇಕೆಂದು ಕಾಲ್‌ಹೂನ್ ವಾದಿಸಿದನು. ವಿಲ್‌ಮಾಂಟ್ ತಿದ್ದುಪಡಿ ದಾಕ್ಷಿಣಾತ್ಯರಿಗೆ ಎಷ್ಟು ಅಸಹ್ಯಕರವಾಗಿತ್ತೋ ಅಷ್ಟೇ ಅಸಹ್ಯಕರವಾಗಿತ್ತು ಔತ್ತರೇಯರಿಗೆ ಈ ಕಾಲ್‌ಹೂನ್ ಮಂಡಿಸಿದ ನಿರ್ಣಯಗಳು! ಕಾಲ್‌ಹೂನ್ ನಿರ್ಣಯಗಳು ಔತ್ತರೇಯರ ಬಹುಮತವಿದ್ದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮನ್ನಣೆ ಪಡೆಯಲಾರದೆ ಹೋದವು. ವಿಲ್‌ಮಾಂಟ್‌ನ ತಿದ್ದುಪಡಿಗೆ ಸೆನೆಟ್‌ನ ಅನುಮೋದನೆ ದೊರೆಯಲಿಲ್ಲ. ಹೀಗೆ ಈ ಪ್ರಶ್ನೆ ಬಗೆಹರಿಯದೆ ಅಂತರಪ್ರಾಂತೀಯ ವಿವಾದಗಳಲ್ಲಿ ಮತ್ತೆ ಬಿಸಿ ಚರ್ಚೆಗಳಿಗೆ ಕಾರಣವಾಗುತ್ತಿತ್ತು.

೧೮೪೮ರಲ್ಲಿ ನಡೆದ ಅಧ್ಯಕ್ಷ ಚುನಾವಣೆಯಲ್ಲಿ ವ್ಹಿಗ್ ಪಕ್ಷ ಗೆದ್ದಿತು. ಆ ಪಕ್ಷದ ಅಭ್ಯರ್ಥಿಗಳಾಗಿದ್ದ ಜ಼ಾಕರೆ ಟೇಲರ್[೧] (Zachary Taylor) ಅಧ್ಯಕ್ಷನಾಗಿಯೂ ಮತ್ತು ಮಿಲ್ಲರ್ಡ್ ಫಿಲ್‌ಮೋರ್ (Millard Fillmore) ಉಪಾಧ್ಯಕ್ಷನಾಗಿಯೂ ಆಯ್ಕೆಗೊಂಡರು. ಈ ಹೊಸ ಅಧ್ಯಕ್ಷನನ್ನು ಪ್ರಾಂತಗಳ ಬಗ್ಗೆ ಎರಡು ಪ್ರಬಲ ರಾಜಕೀಯ ಪಕ್ಷಗಳು ಸೃಷ್ಟಿಸಿದ ಸಮಸ್ಯೆಗಳು ಅವನ ಅವಧಿ ಅಂತ್ಯದವರೆಗೂ ಕಾಡಿ, ಕೊನೆಗೆ ಸಂಯುಕ್ತ ಸಂಸ್ಥಾನಗಳ ಅಳಿವು-ಉಳಿವುಗಳನ್ನು ನಿರ್ಣಯಿಸುವ ಪ್ರಶ್ನೆಯಾಗಿ ಪರಿಣಮಿಸಿದವು. ದೇಶವನ್ನು ಇಬ್ಭಾಗ ಮಾಡುವಂಥ ಆಸ್ಫೋಟಕ ಸಮಸ್ಯೆಯಾಗಿತ್ತು, ಗುಲಾಮಗಿರಿ. ಆ ಸಮಸ್ಯೆ ದೇಶದಾದ್ಯಂತ ಸಾರ್ವಜನಿರನ್ನು ಕೆರಳಿಸಿ ಉದ್ವೇಗ ಪರಿಸ್ಥಿತಿ ಉಂಟಾಗುವಂತೆ ಮಾಡಿತ್ತು. ಅಧ್ಯಕ್ಷ ಜ಼ಾಕರೆ ಟೇಲರ್ ಕ್ಯಾಲಿಫೋರ್ನಿಯವನ್ನು ಸಂಯುಕ್ತ ಸಂಸ್ಥಾನಗಳಿಗೆ ನೇರವಾಗಿ ಸಂಸ್ಥಾನದ ಅಂತಸ್ತಿನ ಮೇಲೆ ಸೇರಿಸಿಕೊಳ್ಳಬೇಕೆಂದೂ ನಂತರ ಕ್ಯಾಲಿಫೋರ್ನಿಯ ಪ್ರಜೆಗಳೇ ಗುಲಾಮಗಿರಿಯ ಬಗ್ಗೆ ನಿರ್ಧಾರಕ್ಕೆ ಬರಬೇಕಾದುದು ನ್ಯಾಯಸಮ್ಮತವೆಂದು ಹೇಳಿಕೆ ನೀಡಿದನು.

ಈ ಎಲ್ಲ ಬದಲಾವಣೆಗಳಿಂದ ದಾಕ್ಷಿಣಾತ್ಯರು ತಮ್ಮ ಭವಿಷ್ಯದ ಬಗ್ಗೆ ಚಿಂತೆಗೀಡಾದರು. ಕ್ಯಾಲಿಫೋರ್ನಿಯವನ್ನು ಸಂಸ್ಥಾನವಾಗಿ ಪರಿಗಣಿಸಿ ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಳ್ಳುವುದರಿಂದ ಸೆನೆಟ್‌ನಲ್ಲಿ ಮುಕ್ತ ಸಂಸ್ಥಾನಗಳ ಮತ್ತು ಗುಲಾಮಗಿರಿ ಸಂಸ್ಥಾನಗಳ ನಡುವಣ ಸಮತೋಲನವನ್ನು ಕೆಡಿಸುವುದಲ್ಲದೆ ಎಲ್ಲ ಹೊಸ ಪ್ರಾಂತಗಳನ್ನೂ ಗುಲಾಮಗಿರಿಯಿಂದ ಮುಕ್ತಗೊಳಿಸುವುದರಿಂದ ದಕ್ಷಿಣದ ಗುಲಾಮಗಿರಿ ಸಂಸ್ಥಾನಗಳು ಮೂಲೆಗುಂಪಾಗುವುದು ಖಂಡಿತವೆಂದು ಅವರಿಗೆ ಮನವಟ್ಟಾಯಿತು. ಮುಕ್ತ ಸಂಸ್ಥಾನಗಳಿಂದ ಸುತ್ತುವರಿದ ದಕ್ಷಿಣ ಸಂಸ್ಥಾನಗಳಲ್ಲಿ ಗುಲಾಮಗಿರಿ ಹೆಚ್ಚು ಕಾಲ ಉಳಿಯಲಾರದು ಎಂದು ಅವರಿಗೆ ಸ್ಪಷ್ಟವಾಯಿತು.

೧೮೫೦ರ ರಾಜಿ – ಒಪ್ಪಂದ

ಹೀಗೆ ದಕ್ಷಿಣ ಸಂಸ್ಥಾನಗಳಲ್ಲಿ ಅಸ್ಥಿರತೆ ಮತ್ತು ಅನಿಶ್ಚಯತೆಗಳಿಂದಾಗಿ ಸಂಯುಕ್ತ ಸಂಸ್ಥಾನಗಳ ಭವಿಷ್ಯಕ್ಕೆ ಧಕ್ಕೆ ಉಂಟಾಗುವ ಪರಿಸ್ಥಿತಿ ಆಸ್ಫೋಟನಗೊಳ್ಳುವ ಹಂತ ತಲುಪಿತ್ತು. ಈ ಸಂದಿಗ್ಧ ಪರಿಸ್ಥಿತಿಯನ್ನು ಪರಿಹರಿಸಲು ಹೆನ್ರಿ ಕ್ಲೇ (Henry Clay) ಸಂಧಾನ ಏರ್ಪಡಿಸಲು ಕೆಲವು ಸೂಚನೆಗಳನ್ನು ಮುಂಡಿಸಿದನು. ಈ ದೀರ್ಘ ಸಲಹೆಗಳ ಸಾರಾಂಶವೆಂದರೆ – ಕ್ಯಾಲಿಫೋರ್ನಿಯ ಮುಕ್ತ ಸಂಸ್ಥಾನವಾಗಿ ಸಂಯುಕ್ತ ಸಂಸ್ಥಾನಗಳನ್ನು ಸೇರಿಕೊಳ್ಳಬೇಕು. ಇದಕ್ಕಾಗಿ ದಾಕ್ಷಿಣಾತ್ಯರಿಗೆ ಪರಿಹಾರ ಒದಗಿಸಬೇಕು. ಉಳಿದ ನೈರುತ್ಯ ಪ್ರಾಂತಗಳು ಗುಲಾಮಗಿರಿಯ ಬಗ್ಗೆ ತಟಸ್ಥವಾಗಿರುವಂತೆ ವ್ಯವಸ್ಥೆಗೊಳಿಸಬೇಕು. ದಾಕ್ಷಿಣಾತ್ಯರಿಗೆ ತಮ್ಮ ಗುಲಾಮರನ್ನು ಆ ಪ್ರಾಂತಗಳಿಗೆ ಕರೆದೊಯ್ಯುವ ಹಕ್ಕು ಇರಬೇಕು.

---

೧. ಜಾಕರೆ ಟೇಲರ್ ಅಮೆರಿಕದ ೧೨ನೆಯ ಅಧ್ಯಕ್ಷ

ಟೆಕ್ಸಾಸ್ ಗಡಿಪ್ರದೇಶದಲ್ಲಿ ವಿವಾದಕ್ಕೊಳಗಾಗಿರುವ ನ್ಯೂ ಮೆಕ್ಸಿಕೊ ಭೂಮಿಯನ್ನು ನ್ಯೂ ಮೆಕ್ಸಿಕೊ ಪ್ರಾಂತಕ್ಕೆ ಸೇರಿಸಬೇಕು. ಇದಕ್ಕೆ ಬದಲಾಗಿ ಟೆಕ್ಸಾಸ್ ಅಮೆರಿಕ ಸೇರುವುದಕ್ಕೆ ಮುಂಚೆ ಮಾಡಿದ್ದ ಸಾಲವನ್ನು ಸಂಯುಕ್ತ ಸಂಸ್ಥಾನಗಳ ಸರ್ಕಾರ ವಹಿಸಿಕೊಳ್ಳಬೇಕು. ಕೊಲಂಬಿಯ ಡಿಸ್ಟ್ರಿಕ್ಟ್ (District of Columbia)ನಲ್ಲಿ ಗುಲಾಮರ ಮಾರಾಟವನ್ನು (ಗುಲಾಮಗಿರಿಯನ್ನಲ್ಲ) ರದ್ದುಗೊಳಿಸಬೇಕು. ತಪ್ಪಿಸಿಕೊಂಡು ಪಲಾಯನ ಮಾಡುವ ಗುಲಾಮರ ಬಗ್ಗೆ ಕೇಂದ್ರ ಸರ್ಕಾರ ಹೆಚ್ಚು ಪರಿಣಾಮಕಾರಿಯಾದ ಕಾಯಿದೆಗಳನ್ನು ಜಾರಿಗೆ ತರಬೇಕು. ಉತ್ತರ ಪ್ರಾಂತಗಳಲ್ಲಿ ಆ ಕಾಯಿದೆಗಳನ್ನು ಕಡಾಖಂಡಿತವಾಗಿ ಚಲಾಯಿಸಬೇಕು – ಈ ಸಲಹೆಗಳು ಸೆನೆಟ್‌ನಲ್ಲಿ ಮಹತ್ವಪೂರ್ಣ ವಾಗ್ವಾದಗಳಿಗೆ ಕಾರಣವಾದವು. ಕಾಂಗ್ರೆಸ್‌ನಲ್ಲಿ ಬಹುಸಂಖ್ಯಾತ ಸದಸ್ಯರು ಯಾವ ರೀತಿಯ ಸಂಧಾನ ವನ್ನಾದರೂ ಒಪ್ಪಿಕೊಳ್ಳಲು ಸಿದ್ಧರಿದ್ದರು. ಆದರೆ ೧೮೫೦ರ ಜುಲೈ ಒಂಬತ್ತರಂದು ಅಧ್ಯಕ್ಷ ಟೇಲರ್ ನಿಧನ ಹೊಂದಿದನು. ಆದ್ದರಿಂದ ಕಾಂಗ್ರೆಸ್ ಯಾವ ನಿರ್ಧಾರಕ್ಕೂ ಬರಲು ಸಾಧ್ಯವಾಗಲಿಲ್ಲ. ಅಧ್ಯಕ್ಷ ಟೇಲರನ ಹಠಮಾರಿತನ ಮತ್ತು ಎಲ್ಲರೂ ತನಗಿಂತಲೂ ಕ್ಲೇನ ಮಾತುಗಳಿಗೆ ಹೆಚ್ಚು ಬೆಲೆಕೊಟ್ಟರು ಎನ್ನುವ ತೀವ್ರ ಅಸಮಾಧಾನ ಹಾಗೂ ಕೆಲವು ಪ್ರಮುಖ ಕಾಂಗ್ರೆಸ್ ಸದಸ್ಯರು ಅಧ್ಯಕ್ಷ ತಾನು ಹೇಳಿದ್ದೇ ನಡೆಯಬೇಕು ಎನ್ನುವ ನಿಲುವನ್ನು (ಕ್ಯಾಲಿಫೋರ್ನಿಯ ಮತ್ತು ನ್ಯೂ ಮೆಕ್ಸಿಕೊ ಪ್ರಾಂತಗಳನ್ನು ನೇರವಾಗಿ ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಳ್ಳಬೇಕು ಎನ್ನುವ ಅವನ ಯೋಜನೆ) ನಿರಾಕರಿಸಿದರು. ಆದ್ದರಿಂದ ಅಧ್ಯಕ್ಷ ಮತ್ತು ಕಾಂಗ್ರೆಸ್ ನಡುವೆ ಬಿಕ್ಕಟ್ಟು ಉಂಟಾಗಿತ್ತು.

ಉಪಾಧ್ಯಕ್ಷ ಮಿಲ್ಲರ್ಡ್ ಫಿಲ್‌ಮೋರ್[೨] (Millard Fillmore) ಅಧಿಕಾರ ವಹಿಸಿ ಕೊಂಡ ಮೇಲೆ ಆ ಬಿಕ್ಕಟ್ಟು ಸಡಿಲಗೊಂಡಿತು. ಆದರೆ ಹೆಚ್ಚಿನ ಕಾಂಗ್ರೆಸ್ ಸದಸ್ಯರು ಮೊಂಡುತನದಿಂದ ಸಣ್ಣ ವಿಷಯಗಳಿಗಾಗಿ ಇಡೀ ಯೋಜನೆಯನ್ನು ಬುಡಮೇಲು ಮಾಡಲು ಸಿದ್ಧರಾಗಿದ್ದುದರಿಂದ ಆ ಸಂಧಾನದ ಪ್ರತಿಯೊಂದು ಭಾಗವನ್ನು ಚರ್ಚೆಗೆ ಗುರಿಪಡಿಸಿ ಸದಸ್ಯರ ಬಹುಮತದಿಂದ ಅಂಗೀಕೃತವಾಗಬೇಕಿತ್ತು. ಈ ಎಲ್ಲ ಕಚ್ಚಾಟಗಳನ್ನು ಶಮನ ಗೊಳಿಸಿ ಸಂಧಾನವನ್ನು ಅಂಗೀಕರಿಸುವಂತೆ ಮಾಡುವುದು ವೃದ್ಧನಾದ ಕ್ಲೇಗೆ ಸಾಧ್ಯ ವಾಗಲಿಲ್ಲ. ಆದ್ದರಿಂದ ಕಾಂಗ್ರೆಸ್‌ನೊಡನೆ ವ್ಯವಹರಿಸುವ ಜವಾಬ್ದಾರಿಯನ್ನು ಇಲ್ಲಿನಾಯ್ ಸಂಸ್ಥಾನದವನಾದ ಸೆನೆಟರ್ ಸ್ಟೀಫನ್ ಡಗ್ಲಾಸ್‌ಗೆ ವಹಿಸಲಾಯಿತು. ಸದಸ್ಯರ ಸ್ವಾರ್ಥಪರ ಆರ್ಥಿಕ ಆಸಕ್ತಿಗಳು ಮತ್ತು ಅವರು ಗುಟ್ಟಾಗಿ ನಡೆಸುತ್ತಿದ್ದ ಪಾಲುಗಾರಿಕೆ ವ್ಯವಹಾರಗಳು ಡಗ್ಲಾಸನ ಸಮಸ್ಯೆಗಳನ್ನು ಸಂಕೀರ್ಣಗೊಳಿಸಿದವು. ಕ್ಲೇ ತನ್ನ ಸಂಧಾನವನ್ನು ಬೆಂಬಲಿಸಲು ವರ್ಜೀನಿಯಾದ ಪ್ರಮುಖ ಪತ್ರಕರ್ತನೊಬ್ಬನಿಗೆ ೧೦೦,೦೦೦ ಡಾಲರ್ ಅಚ್ಚು ಮಾಡುವ ಕೆಲಸದ ಕಾಂಟ್ರಾಕ್ಟ್ ಕೊಡಿಸುತ್ತೇನೆ ಎಂದು ವಾಗ್ದಾನ ಮಾಡಿದ್ದನು ಎನ್ನುವ ಸುದ್ದಿ ಬಹಳ ದಾಕ್ಷಿಣಾತ್ಯರನ್ನು ಕೋಪಾವಿಷ್ಟರನ್ನಾಗಿ ಮಾಡಿತು. ನ್ಯೂಯಾರ್ಕ್ ವರ್ತಕರು

---

೨. ೧೩ನೆಯ ಅಧ್ಯಕ್ಷ

ದಕ್ಷಿಣ ಸಂಸ್ಥಾನಗಳಲ್ಲಿ ತಮ್ಮ ವ್ಯಾಪಾರಕ್ಕೆ ನಷ್ಟ ಉಂಟಾಗುತ್ತದೆ ಎಂದು ಹೆದರಿ ೨೫,೦೦೦ ಜನರು ರುಜು ಮಾಡಿದ ಸಂಧಾನದ ಪರವಾಗಿ ಸಲ್ಲಿಸಿದ ಮನವಿ ದಾಕ್ಷಿಣಾತ್ಯರಿಗೆ ಮೆಚ್ಚುಗೆಯಾಯಿತು. ಕೇಂದ್ರ ಸರ್ಕಾರ ಟೆಕ್ಸಾಸ್ ಸಾಲವನ್ನು ತೀರಿಸುವ ಜವಾಬ್ದಾರಿ ವಹಿಸಿಕೊಂಡಿದೆ ಎಂದು ತಿಳಿದ ಸಂಧಾನದ ಬೆಂಬಲಿಗರು ಸಟ್ಟಾ ವ್ಯಾಪಾರ ಮಾಡ ತೊಡಗಿದರು. ಫೆಬ್ರುವರಿ ಮತ್ತು ಸೆಪ್ಟೆಂಬರ್ ತಿಂಗಳುಗಳ ಅಂತರದಲ್ಲಿ ಟೆಕ್ಸಾಸ್ ಬಾಂಡ್‌ಗಳ (bonds) ಬೆಲೆ ೨೯ರಿಂದ ೬೦ ಡಾಲರ್‌ಗಳ ಮೇಲೆ ಏರಿತು. ವಾಷಿಂಗ್‌ಟನ್ ಬ್ಯಾಂಕ್ (೪೦೦,೦೦೦ ಟೆಕ್ಸಾಸ್ ಬಾಂಡ್‌ಗಳು ಈ ಬ್ಯಾಂಕ್ ವಶದಲ್ಲಿತ್ತು)ನ ಅಧ್ಯಕ್ಷ ಕಾರ್‌ಕರಾನ್ (Corcoran) ಭೋಜನ ಕೂಟಗಳಿಂದ ಮತ್ತು ಮನರಂಜನಾ ಕಾರ್ಯಕ್ರಮ ಗಳಿಂದ ನ್ಯಾಯವಿಧಾಯಕ ಸಭೆಯ ಸದಸ್ಯರನ್ನು ಒಲಿಸಿಕೊಳ್ಳಲು ಪ್ರಯತ್ನಪಟ್ಟನು. ಸಂಧಾನದ ಬೆಂಬಲಿಗರಿಗೆ ಭಾರಿ ಮೊತ್ತದ ಹಣವನ್ನು ಹಂಚಿದನು.

ಕಾಂಗ್ರೆಸ್ ಮತ್ತು ಸೆನೆಟ್‌ನಲ್ಲಿ ಕ್ಲೇ ಮಾಡಿದ ಸಲಹೆಗಳನ್ನು ಒಂದೇ ಮಸೂದೆಯಾಗಿ ಮಂಡಿಸಿದಾಗ ಅದು ತಿರಸ್ಕೃತವಾಯಿತು. ಆದ್ದರಿಂದ ಸೆನೆಟರ್ ಡಗ್ಲಾಸ್ ಆ ಮಸೂದೆ ಯನ್ನು ಬೇರೆ ಬೇರೆ ಕಾಯಿದೆಗಳಾಗಿ ವಿಂಗಡಿಸಿ ಕ್ರಮೇಣವಾಗಿ ತಿದ್ದುಪಡಿ ಮಾಡಿದ ಮಸೂದೆಯನ್ನು ಸಿದ್ಧಪಡಿಸಿದನು. ಹೀಗೆ ಮಾರ್ಪಾಡಾದ ಮಸೂದೆ ಅಂಗೀಕೃತವಾಯಿತು. ಇದರ ಪರಿಣಾಮವಾಗಿ ಕ್ಯಾಲಿಫೋರ್ನಿಯ ೩೧ನೆಯ ಸಂಸ್ಥಾನವಾಗಿ ಸ್ಥಾಪಿತವಾಯಿತು. ಉಳಿದ ಮೆಕ್ಸಿಕನ್ ಪ್ರದೇಶವನ್ನು ನ್ಯೂ ಮೆಕ್ಸಿಕೊ ಮತ್ತು ಯೂಟಾ ಪ್ರಾಂತಗಳಾಗಿ ವಿಭಾಗಿಸಲಾಯಿತು. ಟೆಕ್ಸಾಸ್ ತನ್ನ ಸಾಲ ತೀರಿಸುವ ಸಲುವಾಗಿ ೧೦ ಮಿಲಿಯನ್ ಡಾಲರ್‌ಗಳನ್ನು ಪಡೆಯಿತು. ನ್ಯೂ ಮೆಕ್ಸಿಕೊ ಮತ್ತು ಯೂಟಾ ಪ್ರಾಂತಗಳು ಸಂಸ್ಥಾನಗಳ ಅಂತಸ್ತನ್ನು ಪಡೆದಾಗ ಅವುಗಳನ್ನು ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಳ್ಳಲು (ರಾಜ್ಯಾಂಗದ ಪ್ರಕಾರ ಮುಕ್ತ ಸಂಸ್ಥಾನಗಳಾಗಿ ಅಥವಾ ಗುಲಾಮಗಿರಿ ಸಂಸ್ಥಾನಗಳಾಗಿ) ನಿರ್ಧರಿಸಲಾಯಿತು. ಕೊಲಂಬಿಯ ಡಿಸ್ಟ್ರಿಕ್ಟ್‌ನಲ್ಲಿ ಗುಲಾಮರ ವ್ಯಾಪಾರವನ್ನು ರದ್ದುಗೊಳಿಸ ಲಾಯಿತು. ಪಲಾಯನ ಮಾಡುವ ಗುಲಾಮರ ಸಮಸ್ಯೆಯನ್ನು ಫೆಡರಲ್ ಕಮಿಷನರುಗಳಿಗೆ ವಹಿಸಲಾಯಿತು. ಈ ಕಮಿಷನರುಗಳಿಗೆ ಬಂಧಿಸಲು ಹುಕುಂ ಜಾರಿಮಾಡುವ, ಪಲಾಯನ ಮಾಡಿದ ಗುಲಾಮರ ಬೆನ್ನಟ್ಟಿ ಹೋಗುವ, ಪಡೆಯನ್ನು ಸೇರಿಸುವ ಮತ್ತು ಪಲಾಯನ ಮಾಡಿದ ಗುಲಾಮರಿಗೆ ಸಹಾಯ ಮಾಡುವ ನಾಗರಿಕರಿಗೆ ದಂಡ ವಿಧಿಸುವ ಅಧಿಕಾರಗಳನ್ನು ಕೊಡಲಾಗಿತ್ತು. ಪಲಾಯನ ಮಾಡಿದ ಗುಲಾಮರು ಸಿಕ್ಕಿಬಿದ್ದಾಗ ಅವರನ್ನು ನ್ಯಾಯಾಲಯ ದಲ್ಲಿ ವಿಚಾರಣೆ ಮಾಡದೆ ದಕ್ಷಿಣ ಸಂಸ್ಥಾನಗಳಿಗೆ ರವಾನಿಸಬೇಕಾಗಿತ್ತು. ಗುಲಾಮರಿಗೆ ತಮ್ಮ ಪರವಾಗಿ ವಾದಿಸುವ ಹಕ್ಕು ಇರಲಿಲ್ಲ.

ನಾಲ್ಕು ಜನ ಸೆನೆಟರುಗಳು ಮಾತ್ರ ಈ ಎಲ್ಲ ಕಾಯಿದೆಗಳ ಅನುಮೋದನೆಗೆ ಮತ ನೀಡಿದರು. ಹೆಚ್ಚಿನ ಕಾಂಗ್ರೆಸ್ ಸದಸ್ಯರು ತಮ್ಮ ಚುನಾವಣಾಕ್ಷೇತ್ರದಲ್ಲಿ

ಜನಪ್ರಿಯವಲ್ಲದ ವಿಷಯಗಳು ಚರ್ಚೆಗೆ ಬಂದಾಗ ಗೈರು ಹಾಜರಾಗುತ್ತಿದ್ದರು. ಈ ಪರಿಸ್ಥಿತಿಯಲ್ಲಿ ಸಂಧಾನ ಅಂಗೀಕೃತವಾಗಿದ್ದು ಆಶ್ಚರ್ಯ. ಇದಕ್ಕಾಗಿ ಹೆಚ್ಚಿನ ಪ್ರಶಂಸೆ ಕ್ಲೇಗೆ ಸಲ್ಲಬೇಕು; ಈ ಸಂಧಾನ ಅವನ ಮೆದುಳಿನ ಕೂಸು. ಮಾರ್ಪಾಡಾದ ಸಂಧಾನ ಅಂಗೀಕೃತವಾಗಿದ್ದು ಸಾಮಾನ್ಯ ನಾಗರಿಕರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಯಿತು. ಕಾಂಗ್ರೆಸ್ ಡಿಸೆಂಬರ್ ತಿಂಗಳಲ್ಲಿ ಮತ್ತೆ ಸೇರಿದಾಗ ಸದಸ್ಯರು ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತಿದ್ದರು. 'ನಾವು ಚಳುವಳಿ ಎಬ್ಬಿಸುವುದನ್ನು ಬಿಟ್ಟು, ಚರ್ಚೆ ಮಾಡುವುದನ್ನು ನಿಲ್ಲಿಸಿ, ಈ ವಿಷಯವನ್ನು ಕೈಬಿಡೋಣ. ನಾವು ಇಷ್ಟು ಮಾಡಿದರೆ ಸಂಧಾನವನ್ನು ಅಂತಿಮ ಪರಿಹಾರವಾಗಿ ಒಪ್ಪಿಕೊಳ್ಳಬಹುದು' ಎಂದು ಡಗ್ಲಾಸ್ ಹೇಳಿಕೆ ನೀಡಿದನು. ಆತ ಸೂಚಿಸಿದ ೫ ಕಾಯಿದೆಗಳನ್ನು (ಮಾರ್ಪಾಡಾದ ಕ್ಲೇ ಮಂಡಿಸಿದ ಮಸೂದೆ) – ಕಾಂಗ್ರೆಸ್ ಅಂಗೀಕರಿಸಿತು. ಈ ಐದು ಕಾಯಿದೆಗಳನ್ನು ೧೮೫೦ರ ಒಪ್ಪಂದ ಎಂದು ಕರೆಯಲಾಯಿತು.

ಸಂಸ್ಥಾನಗಳಲ್ಲಿ ಗುಲಾಮಗಿರಿಯನ್ನು ಉಳಿಸಿ, ವಿಸ್ತರಿಸುವ ಪ್ರಯತ್ನ ಯಾವ ರೀತಿಯಲ್ಲಿ ತೀರ್ಮಾನವಾಗುತ್ತದೆ ಎಂದು ಊಹಿಸುವುದು ಕಷ್ಟವಾಗಿತ್ತು. ಹಿಂದುಳಿದ ಪ್ರದೇಶಗಳಲ್ಲಿ ಸಹ ಗುಲಾಮಗಿರಿಗೆ ಬೆಂಬಲವಾಗಲೀ, ಅನುಕೂಲಕರವಾದ ಪರಿಸ್ಥಿತಿಯಾಗಲೀ ಇರಲಿಲ್ಲ. ಆದ್ದರಿಂದ ದಾಕ್ಷಿಣಾತ್ಯರ ಆಸಕ್ತಿ ಮಧ್ಯ ಅಮೆರಿಕ, ಕೆರಿಬಿಯನ್, ಕ್ಯೂಬ ಮುಂತಾದ ದೇಶಗಳ ಮೇಲೆ ತಿರುಗಿತು. ಈ ದೇಶಗಳಲ್ಲಿ ಗುಲಾಮಗಿರಿ ವೃದ್ಧಿಗೊಳ್ಳಲು ತಕ್ಕ ವಾತಾವರಣವಿರುವುದನ್ನು ಅವರು ಮನಗಂಡರು. ಅಮೆರಿಕನ್ ವಸಾಹತುಶಾಹಿಯನ್ನು ಈ ದೇಶಗಳಿಗೆ ವಿಸ್ತರಿಸಿದರೆ ಗುಲಾಮಗಿರಿಯನ್ನು ಉಳಿಸುವುದೇ ಅಲ್ಲದೆ ಹೊಸ ಸಂಸ್ಥಾನಗಳನ್ನು ಸ್ಥಾಪನೆ ಮಾಡುವುದರಿಂದ ದಾಕ್ಷಿಣಾತ್ಯರು ಉತ್ತರ ಸಂಸ್ಥಾನಗಳಲ್ಲಿ ಕಳೆದುಕೊಂಡಿರುವ ಪ್ರಾಬಲ್ಯವನ್ನು ಈ ಹೊಸ ಸಂಸ್ಥಾನಗಳ ಮೂಲಕ ಸರಿತೂಗಿಸಬಹುದೆಂದು ಲೆಕ್ಕ ಹಾಕಿದರು. ೧೮೫೦ರ ದಶಕದಲ್ಲಿ ದಾಕ್ಷಿಣಾತ್ಯ ವಸಾಹತುಕಾರರು ಮೆಕ್ಸಿಕೊದಿಂದ ಹೆಚ್ಚಿನ ಪ್ರದೇಶವನ್ನು ವಶಪಡಿಸಿಕೊಳ್ಳಲು ಮುನ್ನುಗ್ಗಿದರು. ೧೮೫೩ರಲ್ಲಿ ಅಮೆರಿಕನ್ನರು ದಕ್ಷಿಣ ಗಡಿಯ ಪಕ್ಕದ ಪ್ರದೇಶವನ್ನು ಹತ್ತು ಮಿಲಿಯನ್ ಡಾಲರ್‌ಗಳಿಗೆ ಖರೀದಿಸಿದರು. ಇದಕ್ಕೆ 'ಗ್ಯಾಡ್ಸ್‌ಡನ್ ಖರೀದಿ' (The Gadsden purchase) ಎಂದು ಹೆಸರು. ಮೇಲಾಗಿ ಅವರು ಅಮೆರಿಕ ಮತ್ತು ಮೆಕ್ಸಿಕೊ ಗಡಿಯನ್ನು ಉಲ್ಲಂಘಿಸಿ ಅತಿಕ್ರಮಣ ಮಾಡಿದರು. ೧೮೫೫ರಲ್ಲಿ ಟೆನ್ನಿಸ್ಸೀ ಪ್ರಾಂತದವನಾದ ವಿಲಿಯಂ ವಾಕರ್ (William Walker) ಎಂಬುವನು ನಿಕರಾಗುವ (Nicaragua) ದೇಶವನ್ನು ವಶಪಡಿಸಿಕೊಂಡು ಆ ಗಣರಾಜ್ಯದ ಅಧ್ಯಕ್ಷನೂ ಆಗಿಬಿಟ್ಟನು. ಆಗ ಅಮೆರಿಕದ ಅಧ್ಯಕ್ಷನಾಗಿದ್ದ ಫ್ರಾಂಕ್ಲಿನ್ ಪಿಯರ್ಸ್ (Franklin Pierce) ಆ ಗಣರಾಜ್ಯವನ್ನು ಅನುಮೋದಿಸಿದನು. ಆದರೆ ೧೮೫೭ರಲ್ಲಿ ಜನ ವಾಕರ್‌ನನ್ನು ಅಧಿಕಾರದಿಂದ ಕಿತ್ತೊಗೆದು ೧೮೬೦ರಲ್ಲಿ ಹಾಂಡುರಾಸ್ (Honduras)ನಲ್ಲಿ ಅವನನ್ನು ಗುಂಡಿಟ್ಟು ಸಾಯಿಸಿದರು.

ದಾಕ್ಷಿಣಾತ್ಯರ ಆಸಕ್ತಿಯೆಲ್ಲಾ ಕ್ಯೂಬವನ್ನು ವಶಪಡಿಸಿಕೊಳ್ಳುವುದರಲ್ಲಿ ನೆಲಸಿತ್ತು. ಆ ಕಾಲದಲ್ಲಿ ಕ್ಯೂಬ ಸ್ಪೇನಿನ ಒಂದು ಐಶ್ವರ್ಯವಂತ ವಸಾಹತುವಾಗಿತ್ತು. ಅಲ್ಲಿ ಗುಲಾಮರ ಶ್ರಮದಿಂದ ಅತ್ಯಂತ ಲಾಭದಾಯಕವಾಗಿ ನಡೆಯುತ್ತಿದ್ದ ಕಬ್ಬಿನ ಕೃಷಿ ಕ್ಷೇತ್ರಗಳ ಮೇಲೆ ಅಮೆರಿಕ ದಾಕ್ಷಿಣಾತ್ಯರ ಕಣ್ಣು ಬಿದ್ದಿತ್ತು. ಅವರು ಅಸಂತುಷ್ಟ ಕ್ಯೂಬನ್ನರು ದಂಗೆ ಏಳುವಂತೆ ಪ್ರಚೋದಿಸಿ ಆ ಸಂದರ್ಭವನ್ನು ಉಪಯೋಗಿಸಿಕೊಂಡು ದಾಳಿ ಮಾಡಿ ಕ್ಯೂಬವನ್ನು ವಶಪಡಿಸಿಕೊಳ್ಳಲು ಹವಣಿಸಿದ್ದರು. ಕಾಲ ಸರಿದಂತೆಲ್ಲ ಔತ್ತರೇಯರು ಮತ್ತು ದಾಕ್ಷಿಣಾತ್ಯರು ಪರಸ್ಪರವಾಗಿ ತಾವು ತಮ್ಮದೇ ಆದ ವಿಶಿಷ್ಟ ಮೌಲ್ಯಗಳು, ಸಂಪ್ರದಾಯಗಳು ಮತ್ತು ಸಾಮಾಜಿಕ ಸಂಘಗಳನ್ನು ಹೊಂದಿರುವ ಪರಸ್ಪರ ವಿರುದ್ಧ ಸಮಾಜಗಳು ಎನ್ನುವ ಭೇದ ಭಾವಗಳನ್ನು ಬೆಳೆಸಿಕೊಂಡರು. ಈ ಭೇದ ಭಾವಗಳು ಸಹಿಷ್ಣುತೆಯನ್ನು ನಾಶ ಮಾಡಿ ಸಂಧಾನದ ಸಾಧ್ಯತೆಯಿಲ್ಲದ ಆರೋಪಗಳು, ಕುಂದು ಕೊರತೆಗಳು ಮತ್ತು ದ್ವೇಷಾಸೂಯೆಗಳು ದಳ್ಳುರಿಯಂತೆ ಹಬ್ಬುವುದನ್ನು ಪ್ರೇರೇಪಿಸಿದವು.

ಔತ್ತರೇಯರ ಸಾಮಾಜಿಕ ಜೀವನ

ಅಂತರ್ಯುದ್ಧ ಪೂರ್ವದಲ್ಲಿ ಅಮೆರಿಕದ ಉತ್ತರ ಪ್ರಾಂತದ ಸಾಮಾಜಿಕ ಜೀವನ ಔದ್ಯೋಗೀಕರಣದಿಂದಾಗಿ ವೈವಿಧ್ಯತೆಯಿಂದ ಕೂಡಿ ತ್ವರಿತಗತಿಯಲ್ಲಿ ಬದಲಾಗುತ್ತ ಹೋಗುತ್ತಿತ್ತು. ಹೆಚ್ಚಿನ ಜನ ರೈತರಾಗಿದ್ದರೂ ಅವರಲ್ಲಿ ಬಹುಮಂದಿ ಪಶ್ಚಿಮ ಪ್ರಾಂತಕ್ಕೆ ಹೋಗಿ ನೆಲಸಿ ಅದು ವ್ಯವಸಾಯದ ಕೇಂದ್ರವಾಯಿತು. ಉತ್ತರದಿಂದ ಹೋದವರು ತಮ್ಮ ಸಂಪ್ರದಾಯಗಳನ್ನು, ಆಚಾರ-ವಿಚಾರ-ಗುಲಾಮಗಿರಿಯನ್ನು ವರ್ಜಿಸುವುದೂ ಸೇರಿ – ಮತ್ತು ಇತರ ಸಾಮಾಜಿಕ ಸಂಸ್ಥೆಗಳನ್ನು ತಾವು ನೆಲಸಿದ ಪ್ರಾಂತಗಳಲ್ಲಿ ಮುಂದುವರಿಸಿಕೊಂಡು ಹೋದರು. ೧೮೬೦ರ ಹೊತ್ತಿಗೆ ಅಮೆರಿಕದ ಆಧುನಿಕ ಕೈಗಾರಿಕೆಗಳು ಮತ್ತು ಉದ್ಯಮಗಳು, ಪ್ರಬಲ ಆರ್ಥಿಕ ಸಂಸ್ಥೆಗಳು (Banks), ಸಾಮುದಾಯಿಕ ಉದ್ಯಮ ಸಂಸ್ಥೆಗಳು (Corporations) ಮತ್ತು ಎಲ್ಲ ಸಮುದ್ರಯಾನ ನಿರ್ವಹಿಸುವ ಕಂಪನಿಗಳು ನ್ಯೂ ಇಂಗ್ಲೆಂಡ್ ಮತ್ತು ಮಧ್ಯ ಅಟ್ಲಾಂಟಿಕ್ ಸಂಸ್ಥಾನಗಳಲ್ಲಿ ಸ್ಥಾಪಿತವಾಗಿದ್ದವು. ಪಶ್ಚಿಮ ಪ್ರಾಂತದಲ್ಲಿ ಕೇಂದ್ರ ಸರ್ಕಾರದ ಉದಾರ ಭೂಪಿತರಣೆ ನೀತಿಯಿಂದಾಗಿ ಚಿಕ್ಕ ಹಿಡುವಳಿಗಾರರು ಅಭಿವೃದ್ಧಿಗೊಳ್ಳಲು ಸಾಧ್ಯವಾಯಿತು. ೧೮೬೪ರ ಭೂಕಾಯಿದೆಯ ನಂತರ ಕೇಂದ್ರ ಸರ್ಕಾರ ಜಾರಿಗೆ ತಂದ ಹಲವಾರು ಹಿಡುವಳಿ ಕಾಯಿದೆಗಳು ಸಾಮಾನ್ಯ ರೈತರಿಗೆ ಅನುಕೂಲವಾಗಿದ್ದವು. ಸಾಮಾನ್ಯ ರೈತನೊಬ್ಬ ಸಾಗುವಳಿ ಮಾಡುವಷ್ಟು ಜಮೀನು ಅವನಿಗೆ ಅಗ್ಗದ ಬೆಲೆಗೆ ಸಿಗುವಂತೆ ವ್ಯವಸ್ಥೆ ಮಾಡಲಾಯಿತು. ಅವನು ಸಾಲ ಪಡೆಯುವುದು ಸುಲಭವಾಯಿತು. ಸ್ವಂತ ಭೂಮಿ ಹೊಂದಿರದ ರೈತರು ವಲಸೆ ಬಂದು ಸಾಗುವಳಿಯಾಗದ, ಯಾರಿಗೋ ಸೇರಿದ್ದ ಅಥವಾ ಸರ್ಕಾರದ ಜಮೀನನ್ನು ಆಕ್ರಮಿಸಿ ತಳವೂರಿ (squatters) ರೈತಾಪಿ ಜೀವನ ನಡೆಸುತ್ತಿದ್ದರು. ಭೂಮಾಲೀಕರು ಬಂದು ಇವರನ್ನು ಅಲ್ಲಿಂದ ಉಚ್ಚಾಟನೆ ಮಾಡಿದರೆ

ಅವರು ಬೇರೆ ಸ್ಥಳಕ್ಕೆ ಹೋಗಿ ತಳವೂರುತ್ತಿದ್ದರು. ೧೮೩೦ರಲ್ಲಿ ಜಾರಿಗೆ ಬಂದ ಕಾಯಿದೆ ಪ್ರಕಾರ ಈ ಜನ ಸರ್ಕಾರದ ಭೂಮಿಯನ್ನು ಕೊಳ್ಳಲು ಅವಕಾಶ ಕೊಡಲಾಯಿತು. ಒಬ್ಬ ರೈತ ಎಕರೆಗೆ ೧.೨೫ ಡಾಲರಿನಂತೆ ೧೬೦ ಎಕರೆಯಷ್ಟು ಕೊಳ್ಳಬಹುದಿತ್ತು. ೧೮೫೪ರಲ್ಲಿ ಜಾರಿಗೆ ಬಂದ ಗ್ರಾಜುಯೇಷನ್ ಕಾಯಿದೆ (The Graduation Act) ಪ್ರಕಾರ ಹತ್ತು ವರ್ಷಗಳಿಂದ ಮಾರಾಟವಾಗದಿದ್ದ ಜಮೀನುಗಳ ಬೆಲೆಯನ್ನು ಕ್ರಮೇಣ ಇಳಿಸಲಾಯಿತು. ಆದರೆ ಪಾಶ್ಚಿಮಾತ್ಯರು ಮತ್ತು ಸಣ್ಣ ಹಿಡುವಳಿಗಾರರು ಬೆಲೆಯನ್ನು ಇನ್ನೂ ಕಡಿಮೆ ಮಾಡುವಂತೆ ಆಗ್ರಹಪಡಿಸಿದರು. ೧೮೫೦ರ ದಶಕದಲ್ಲಿ ಅವರ ಮುಂದಾಳುಗಳು 'ಹೋಮ್‌ಸ್ಟೆಡ್' (Homestead) ಕಾಯಿದೆಯನ್ನು ಜಾರಿ ಮಾಡುವಂತೆ ಒತ್ತಾಯ ಮಾಡಿದರು. ಈ ಕಾಯಿದೆಯ ಪ್ರಕಾರ ಒಡುವಳಿಗಾರರಿಗೆ ಜಮೀನು ಪುಕ್ಕಟ್ಟೆಯಾಗಿ ದೊರೆಯುವಂತೆ ಮಾಡಬೇಕಾಯಿತು.

ಇಂಥ ಉದಾರ ಭೂಕಾಯಿದೆಗಳಿಗೆ ಪೌರ್ವಾತ್ಯರು (Easterners) ತಮ್ಮ ವಿರೋಧ ವನ್ನು ವ್ಯಕ್ತಪಡಿಸಿದರು. ಈಶಾನ್ಯ ಪ್ರಾಂತದವರು ಈ ಉದಾರ ಭೂಕಾಯಿದೆಗಳಿಂದ ತಮ್ಮ ಕೆಲಸಕ್ಕೆ ಜನ ಸಿಗದೆ ಪೇಚಾಡಬೇಕಾದ ಪರಿಸ್ಥಿತಿ ಉಂಟಾಗುತ್ತವೆ ಎಂದು ಹೆದರಿದರು. ಏಕೆಂದರೆ ಜಮೀನಿಲ್ಲದ ಕೆಲಸಗಾರರು ಪಶ್ಚಿಮ ಪ್ರಾಂತಗಳಲ್ಲಿ ಅಗ್ಗದ ಬೆಲೆಗೆ ಭೂಮಿಯನ್ನು ಕೊಂಡು ಅಥವಾ ಅರ್ಹರಾದರೆ ಪುಕ್ಕಟ್ಟೆಯಾಗಿ ಪಡೆದು, ಸ್ವಂತ ಸಾಗುವಳಿ ಮಾಡುವ ಅವಕಾಶ ಪಡೆಯಲು ಪೂರ್ವ ಪ್ರಾಂತಗಳಿಂದ ಪಶ್ಚಿಮಕ್ಕೆ ಅಧಿಕ ಸಂಖ್ಯೆಯಲ್ಲಿ ವಲಸೆ ಹೋದರು. ಆಗ್ನೇಯ ಪ್ರಾಂತಗಳ ಮುಂದಾಳುಗಳು ಅಗ್ಗದ ಬೆಲೆಗೆ ಸಿಗುವ ಭೂಮಿಯಿಂದಾಗಿ ಎಲ್ಲ ಪ್ರಾಂತಗಳೂ ಗುಲಾಮಗಿರಿಯನ್ನು ಬಿಟ್ಟು ಮುಕ್ತಪ್ರಾಂತಗಳಾಗುತ್ತವೆಂದು ಪ್ರಲಾಪಿಸಿದರು. ಹೀಗೆ ತಾವಿದ್ದಲ್ಲಿ ಜಮೀನು ಕೊಳ್ಳಲಾಗದ ಜನ ಅಥವಾ ಪರ್ವತಗಳ ಆಚೆಯ ಫಲವತ್ತಾದ ಭೂಮಿಯಲ್ಲಿ ಬೇಸಾಯ ಮಾಡುವವರೊಡನೆ ಪೈಪೋಟಿ ಮಾಡಲಾರದವರು ಗಂಟು ಮೂಟೆಗಳನ್ನು ಕಟ್ಟಿಕೊಂಡು ಪಶ್ಚಿಮದಲ್ಲಿ ಸಿಗಬಹುದಾದ ಅಗ್ಗದ ಭೂಮಿಯ ಆಸೆಯಿಂದ ವಲಸೆ ಹೋದರು.

ನ್ಯೂ ಇಂಗ್ಲೆಂಡಿನಿಂದ ಭೂಮಾಲೀಕರಾಗುವ ಆಸೆಯಿಂದ ಹೊರಟ ಜನ ಮಹಾ ಸರೋವರಗಳ ದಕ್ಷಿಣ ಪ್ರದೇಶ ತಲುಪಿ ಮಧ್ಯ ಮತ್ತು ನಡುವಣ ನ್ಯೂಯಾರ್ಕ್, ಉತ್ತರ ಒಹಾಯೊ, ಇಂಡಿಯಾನ ಮತ್ತು ಇಲಿನಾಯ್ ಹಾಗೂ ದಕ್ಷಿಣ ಮಿಷಿಗನ್ ಪ್ರಾಂತಗಳಲ್ಲಿ ಬೇರೂರಿ ನೆಲಸಿದರು. ತಾವು ಹೋಗಿ ನೆಲಸಿದ ಪ್ರಾಂತಗಳಲ್ಲಿ ಅವರು ತಮ್ಮ ಸಂಪ್ರದಾಯ ಮತ್ತು ಸಂಸ್ಕೃತಿಗಳನ್ನು ರೂಢಿಸಿಕೊಂಡು ಹೋದರು. ಸಂಪ್ರದಾಯ ದಂತೆ ಅಚ್ಚುಕಟ್ಟಾದ ಸಣ್ಣ ಸಮುದಾಯಗಳು, ಪ್ಯೂರಿಟನ್ ಮೌಲ್ಯಗಳು, ವಿದ್ಯೆ ಮತ್ತು ದುಡಿಮೆಗಳಿಗೆ ಗೌರವಗಳು ಅವರ ಸಮಾಜದ ಲಕ್ಷಣಗಳಾಗಿದ್ದವು. ದಾಕ್ಷಿಣಾತ್ಯರು ಅಧಿಕ ಸಂಖ್ಯೆಯಲ್ಲಿ ದಕ್ಷಿಣ ಪ್ರಾಂತವನ್ನು ತೊರೆದು ಒಹಾಯೊ, ಇಂಡಿಯಾನ ಮತ್ತು

ಇಲಿನಾಯ್ ಪ್ರಾಂತಗಳಲ್ಲಿ ಹಿಡುವಳಿದಾರರಾಗಿ ನೆಲಸಿ, ಗುಲಾಮರ ಸಹಾಯವಿಲ್ಲದೆ ಸಾಗುವಳಿ ಮಾಡತೊಡಗಿದರು. ಇನ್ನು ಕೆಲವರು ಹೊಸದಾಗಿ ಅಂಗೀಕಾರವಾದ, ಗುಲಾಮಗಿರಿಯನ್ನು ಉಳಿಸಿಕೊಂಡ ನೈರುತ್ಯ ಪ್ರಾಂತಗಳಿಗೆ ತಮ್ಮ ಗುಲಾಮರ ಸಮೇತ ವಲಸೆಹೋದರು.

೧೮೫೦ರ ಹೊತ್ತಿಗೆ ಅಟ್ಲಾಂಟಿಕ್ ಸಾಗರ ತೀರಪ್ರದೇಶದಿಂದ ವಲಸೆಹೋದ ಸಹಸ್ರಾರು ಜನರು ಮುಸೋರಿ ನದಿಯವರೆಗೆ ಚಾಚಿದ್ದ ಮೂಲ ಸಂಸ್ಥಾನಗಳನ್ನು ಮುಕ್ತ ಸಂಸ್ಥಾನಗಳು ಮತ್ತು ಗುಲಾಮಗಿರಿಯನ್ನು ಅಳವಡಿಸಿಕೊಂಡ ಸಂಸ್ಥಾನಗಳು ಎಂದು ವಿಭಾಗ ಮಾಡಲು ಕಾರಣರಾದರು. ಮುಕ್ತ ಸಂಸ್ಥಾನಗಳ ಕೆಲಸಗಾರರಲ್ಲಿ ಬಹುಮಂದಿ ನಗರಗಳಲ್ಲಿ ಕಸಬುದಾರರಾಗಿದ್ದರು. ನಗರವಾಸಿಗಳಲ್ಲಿ ಅನೇಕರು ಅಮೆರಿಕದ ಈಶಾನ್ಯ ಭಾಗದಲ್ಲಿ ಹೊಸದಾಗಿ ಸ್ಥಾಪಿತಗೊಳ್ಳುತ್ತಿದ್ದ ಕಾರ್ಖಾನೆಗಳಲ್ಲಿ ಕೆಲಸಗಾರರಾಗಿದ್ದರು. ನ್ಯೂ ಇಂಗ್ಲೆಂಡಿನ ಬಟ್ಟೆ ಗಿರಣಿಗಳಲ್ಲಿ ಪ್ರಾಯದ ಹೆಂಗಸರು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸ ಮಾಡುತ್ತಿದ್ದರು. ಮತ್ತೆ ಕೆಲವು ನಗರವಾಸಿಗಳು ದೈನಂದಿನ ಕೆಲಸಗಾರರಾಗಿ ಅಗೆಯುವುದು, ಎತ್ತುವುದು, ಹೊರುವುದು, ಸಾಗಿಸುವುದು ಮುಂತಾದ ಕೆಲಸಗಳನ್ನು ಮಾಡಿ ಒಂದು ಡಾಲರ್ ಕೂಲಿ ಪಡೆಯುತ್ತಿದ್ದರು. ಜವಾನರ ಕೆಲಸ ಮಾಡುವ ಒಂದು ವರ್ಗದಲ್ಲಿ ಹೆಂಗಸರೇ ಹೆಚ್ಚಾಗಿದ್ದರು. ಇವರು ನಗರಗಳಲ್ಲಿನ ಮಧ್ಯಮವರ್ಗದ ನಿವಾಸಗಳಲ್ಲಿ ಮನೆಗೆಲಸ ಮಾಡಿಕೊಂಡಿರುತ್ತಿದ್ದರು. ಅಮೆರಿಕದ ಉತ್ತರದ ನಗರವಾಸಿಗಳಲ್ಲಿ ಕುಶಲಕರ್ಮಿಗಳು – ಮುದ್ರಣ ಮಾಡುವವರು, ಯಂತ್ರಕರ್ಮಿಗಳು, ಮರಗೆಲಸದವರು, ಕಮ್ಮಾರರು, ಕಾರಕೂನರು, ಗಾರೆ ಕೆಲಸದವರು, ಚಮ್ಮಾರರು ಮುಂತಾದವರು ಹೆಚ್ಚಾಗಿದ್ದರು. ಇವರಲ್ಲಿ ಗಂಡಸರೇ ಹೆಚ್ಚು. ಅವರು ಹೆಚ್ಚಿಗೆ ಸಂಭಾವನೆಯನ್ನು ಪಡೆಯುತ್ತಿದ್ದರು. ಕೊನೆಯದಾಗಿ ವರ್ತಕರು, ಉದ್ಯಮಿಗಳು, ವ್ಯವಸ್ಥಾಪಕರು, ಕಾರ್ಖಾನೆ ಸ್ಥಾಪಿಸುವವರು, ಕಛೇರಿಗಳಲ್ಲಿ ಕೆಲಸ ಮಾಡುವವರು ಮತ್ತು ಇತರ 'ಸ್ವಂತ ಸಂಪಾದನೆ' ಯುಳ್ಳವರಿಂದ ಕೂಡಿದ್ದ ಪ್ರತಿಷ್ಠಿತ (elite) ವರ್ಗ. ಈ ರೀತಿಯಾಗಿ ಪಟ್ಟಣವಾಸಿಗಳು ವರ್ಗೀಕರಣಗೊಂಡಿದ್ದರು.

೧೮೫೦ರ ದಶಕದಿಂದ ಅಂತರ್ಯುದ್ಧದ ಕಾಲದವರೆಗೆ ಹೊರದೇಶಗಳಿಂದ ಅಮೆರಿಕಕ್ಕೆ ವಲಸೆ ಬಂದವರ ಸಂಖ್ಯೆ ಅತ್ಯಂತ ಹೆಚ್ಚಾಗಿತ್ತು. ೧೮೬೦ರ ಹೊತ್ತಿಗೆ ಅಮೆರಿಕದ ಉತ್ತರ ಪ್ರಾಂತದ ಕೆಲಸಗಾರರಲ್ಲಿ ಬಹುತೇಕ ಮಂದಿ ಹೊರದೇಶಗಳಲ್ಲಿ ಹುಟ್ಟಿದವರಾಗಿದ್ದರು. ಈ ವಲಸೆಗಾರರು ತಮ್ಮ ತಾಯ್ನಾಡಿನ ಕಷ್ಟ ಕಾರ್ಪಣ್ಯಗಳು, ಬರಗಾಲ, ರಾಜಕೀಯ ದಬ್ಬಾಳಿಕೆಗಳನ್ನು ತಪ್ಪಿಸಿಕೊಳ್ಳಲು ಅಮೆರಿಕಕ್ಕೆ ಬಂದವರು. ವಲಸೆ ಬಂದು ನೆಲಸಿದ ದೇಶದಲ್ಲಿ ನೆಮ್ಮದಿಯಾಗಿ ಬಾಳುವ ಕನಸು ಕಂಡವರು. ಅಮೆರಿಕದ ಉತ್ತರ ಭಾಗದಲ್ಲಿ ನೆಲಸಿದ ಯೂರೋಪಿನ ವಲಸೆಗಾರರು ವೈವಿಧ್ಯ ಸಂಸ್ಕೃತಿಯನ್ನು ಸೃಷ್ಟಿಸಿದರು.

ಐರ್ಲೆಂಡ್ ಮತ್ತು ಜರ್ಮನಿಯಿಂದ ಬಂದ ವಲಸೆಗಾರರ ಪ್ರವಾಹ ಅಮೆರಿಕದಲ್ಲಿ ಮೊಟ್ಟಮೊದಲಿಗೆ ರೋಮನ್ ಕ್ಯಾಥಲಿಕ್ ಚರ್ಚಿನ ಪ್ರಭಾವ ಹೆಚ್ಚುವಂತೆ ಮಾಡಿತು. ಎಲ್ಲ ಅಮೆರಿಕನ್ನರು ವಲಸೆ ಬಂದ ಈ ಕ್ಯಾಥಲಿಕರನ್ನು ಸ್ವಾಗತಿಸಲು ತಯಾರಿರಲಿಲ್ಲ. ಪೂರ್ವಾಗ್ರಹಪೀಡಿತರಾದ ಅಮೆರಿಕನ್ನರು ಕ್ಯಾಥಲಿಕರು ವಾರದ ಪವಿತ್ರದಿನವನ್ನು (sabbath) ಕ್ರೀಡೆಗಳಲ್ಲಿ, ಮನರಂಜನೆಯಲ್ಲಿ, ವನವಿಹಾರದಲ್ಲಿ ಮಗ್ನರಾಗಿ ಅಪವಿತ್ರಗೊಳಿಸುತ್ತಾರೆ ಎಂದು ಆಪಾದಿಸಿದರು. ಮೇಲಾಗಿ ಕ್ಯಾಥಲಿಕರು ಪಾದ್ರಿಗಳ ಮತ್ತು ಚರ್ಚಿನ ಅಧಿಕಾರವರ್ಗದ ಅಧೀನತೆಗೆ ಒಳಪಟ್ಟಿರುತ್ತಾರೆ ಎಂದು ದೂರಿದರು. ಕ್ಯಾಥಲಿಕರ ವಿರುದ್ಧ ಮತ್ತು ಹೊಸ ವಲಸೆಗಾರರ ವಿರುದ್ಧ ಅಮೆರಿಕನ್ನರ ದ್ವೇಷಾಸೂಯೆಗಳು ವಿವಿಧ ರೂಪಗಳಲ್ಲಿ ವ್ಯಕ್ತಗೊಂಡವು. ಉದ್ಯಮೆಗಾರರು ಐರಿಷ್ ಮತ್ತು ಜರ್ಮನ್ ವಲಸೆಗಾರರಿಗೆ ಕೆಲಸ ಕೊಡಲು ನಿರಾಕರಿಸಿದರು. 'ಐರಿಷರು ಅರ್ಜಿ ಹಾಕಕೂಡದು' ಎನ್ನುವ ಸೂಚನೆ ಅಮೆರಿಕನ್ನರ ಆಗಿನ ಪಕ್ಷಪಾತ (discrimination) ಮನೋಭಾವವನ್ನು ತೋರಿಸುತ್ತದೆ. ಕೆಲವು ರಾಜಕಾರಿಣಿಗಳು ವಲಸೆ ಕಾಯಿದೆಗಳನ್ನು (immigration laws) ಹೆಚ್ಚು ಬಿಗಿಗೊಳಿಸಬೇಕೆಂದು ಆಗ್ರಹಪಡಿಸಿದರು. ಸಾರ್ವಜನಿಕ ಶಾಲೆಗಳಲ್ಲಿ ನಡೆಯುವ ಪಾಠ ಪ್ರವಚನಗಳನ್ನು ಕುರಿತ ಪ್ರಾಟೆಸ್ಟೆಂಟ್ ಅಮೆರಿಕನ್ನರ ಮತ್ತು ವಲಸೆಗಾರರ ನಡುವೆ ವಾಗ್ಯುದ್ಧಗಳು ನಡೆದವು. ಕೆಲವು ಪಟ್ಟಣಗಳಲ್ಲಿ ಕ್ಯಾಥಲಿಕರ ಮೇಲೆ ಹಲ್ಲೆ ನಡೆದು ಅವರ ಆಸ್ತಿ ಪಾಸ್ತಿಗಳಿಗೆ ನಷ್ಟ ಉಂಟಾಯಿತು. ಕೆಲವು ಸಮಯ ಹೊಡೆದಾಟ ಕೈಮೀರಿ ಹೋಗಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಸೈನ್ಯಪಡೆಯನ್ನು ಕರೆಸುವುದು ಅಗತ್ಯವಾಗುತ್ತಿತ್ತು.

ಆ ಸಮಯದಲ್ಲೇ ಪ್ರಾಟೆಸ್ಟೆಂಟ್ ಮತವನ್ನು ಪುನಃಶ್ಚೇತನಗೊಳಿಸಲು ಊರ ಹೊರಗೆ ಶಿಬಿರಗಳನ್ನೇರ್ಪಡಿಸಿ ಮೇಜು ಕುಟ್ಟಿ ಮೈಮೇಲೆ ಬಂದವರಂತೆ ಆವೇಶಪೂರ್ಣವಾಗಿ ಮಾತನಾಡುವ ಉಪದೇಶಿಗಳು ಕ್ಯಾಥಲಿಕರ ಪ್ರಭಾವವನ್ನು ಅಳಿಸಿಹಾಕುವ ಪ್ರಯತ್ನ ಮಾಡಿದರು. ಆಗಲೇ ಸೆವೆಂತ್ ಡೇ ಅಡ್ವೆಂಟಿಸಂ (Seventh Day Adventism) ಮತ್ತು ಮಾರ್ಮನ್ (Mormon) ಪಂಥಗಳು ಹುಟ್ಟಿದವು. ಮತಧರ್ಮದಿಂದ ಆವೇಶಗೊಂಡ ಅಮೆರಿಕನ್ನರು ಸಮಾಜವನ್ನು ಪುನರ್ರಚನೆ ಮಾಡಲು ಉತ್ಸುಕರಾದರು. ಅಮೆರಿಕದ ಉತ್ತರ ಪ್ರಾಂತದ ಎಲ್ಲಾ ಕಡೆಗಳಲ್ಲೂ ಮತಧರ್ಮ ಪ್ರಭಾವಿತರಾದ ಸುಧಾರಕರು ಸಮಾಜದ ಕುಂದುಕೊರತೆಗಳನ್ನು ಮತ್ತು ಸಮಸ್ಯೆಗಳನ್ನು ಕುರಿತು ಭಾಷಣ ಬಿಗಿಯುತ್ತಿದ್ದರು. ಮೆಸಾಚ್ಯುಸೆಟ್ಸ್‌ನಲ್ಲಿ ಮನೋರೋಗ ಪೀಡಿತರು, ಕೈದಿಗಳು ಮತ್ತು ಇತರ ಸಮಾಜಕಂಟಕರನ್ನು ಸುಧಾರಿಸುವ ಸವಾಲನ್ನು ಡೊರೋತಿಯ ಡಿಕ್ಸ್ (Dorothea Dix) ಎಂಬುವಳು ಎದುರಿಸಲು ಪ್ರಯತ್ನಪಟ್ಟಳು. ಅದೇ ನಗರದ ಅವನತಿಗೊಳ್ಳುತ್ತಿದ್ದ ಶಾಲಾ ವ್ಯವಸ್ಥೆಯನ್ನು ಪರಿಷ್ಕರಿಸಿ ಹಲವಾರು ಸರ್ಕಾರೀ ಪ್ರೌಢಶಾಲೆಗಳನ್ನು ಸ್ಥಾಪಿಸಿ, ಹೊಸ ಪಠ್ಯಕ್ರಮವನ್ನು (curriculum) ಜಾರಿಗೆ ತಂದು, ಮೊಟ್ಟಮೊದಲ ಉಪಾಧ್ಯಾಯ

ತರಬೇತಿ ಶಾಲೆಗಳನ್ನು ಸ್ಥಾಪಿಸಿದ ಕೀರ್ತಿ ಹೊರೆಸ್ ಮಾನ್ (Horace Mann)ಗೆ ಸಲ್ಲುತ್ತದೆ. ಅವನು ಮೆಸಾಚ್ಯುಸೆಟ್ಸ್ ಸಂಸ್ಥಾನದ ವಿದ್ಯಾಮಂಡಳಿಯ ಕಾರ್ಯದರ್ಶಿಯಾಗಿದ್ದನು. ಅವನು ಶುಲ್ಕವಿಲ್ಲದ ಸಾರ್ವಜನಿಕ ವಿದ್ಯಾಭ್ಯಾಸ ಚಳುವಳಿಯ ಹರಿಕಾರನಾಗಿದ್ದನು. ಮೇಯ್ನ್ ಪ್ರಾಂತದಲ್ಲಿ ೧೮೫೦ರಷ್ಟು ಹಿಂದೆಯೇ ಶಾಸನಸಭೆಯಲ್ಲಿ ಪ್ರಥಮವಾಗಿ ಪಾನನಿರೋಧ ಮಸೂದೆಯನ್ನು ಅಂಗೀಕರಿಸಬೇಕೆಂದು ಆಗ್ರಹಪಡಿಸಿದವನು ನೀಲ್ ಡೌ (Neal Dow). ಇವನು ಸಮಾಜಸುಧಾರಕ ಮನೋವೃತ್ತಿಯ ಧರ್ಮಯೋಧ (crusader) ನೆಂದು ಪ್ರಖ್ಯಾತನಾಗಿದ್ದನು.

ದಾಕ್ಷಿಣಾತ್ಯರ ಸಮಾಜವ್ಯವಸ್ಥೆ

ಅಮೆರಿಕದ ದಕ್ಷಿಣ ಪ್ರಾಂತದಲ್ಲಿ ಸಾಮಾಜಿಕ ಆಂದೋಳನ/ಪ್ರಯೋಗಗಳು ನಡೆಯಲಿಲ್ಲವೆಂದು ಹೇಳಬಹುದು. ದಾಕ್ಷಿಣಾತ್ಯರ ಸಮಾಜ ಹೆಚ್ಚು ಹೆಚ್ಚು ಸಾಂಪ್ರದಾಯಿಕವಾಗಿ ಗುಲಾಮಗಿರಿಯನ್ನು ಉಳಿಸಿ, ಮುಂದುವರಿಸಿಕೊಂಡು ಹೋಗಲು ಅನುಕೂಲವಾಗುವಂತೆ, ಸಾಮಾಜಿಕ ಬದಲಾವಣೆಯನ್ನು ತಡೆಗಟ್ಟಿ, ಸ್ವರಕ್ಷಣೆಯ (defensive) ಮಾರ್ಗವನ್ನು ಹಿಡಿಯಿತು. ಆ ಸಮಾಜದ ಆರ್ಥಿಕ ಸ್ತಂಭವಾಗಿತ್ತು – ಹತ್ತಿಯ ಬೆಳೆ. ಅದು ಲಾಭದಾಯಕ ಬೆಳೆಯೂ ಹೌದು. ಹತ್ತಿಯನ್ನು ಉಷ್ಣವಲಯದಲ್ಲಿ ಬೆಳೆಯಬಹುದೆ ಹೊರತು ಎಲ್ಲ ಜಾಗಗಳಲ್ಲಿ ಬೆಳೆಯಲಾಗದು. ೧೮೫೯ರಲ್ಲಿ ಹತ್ತಿಯನ್ನು ಮುಖ್ಯಬೆಳೆಯಾಗಿ ಬೆಳೆಯುತ್ತಿದ್ದ ಸಂಸ್ಥಾನಗಳಲ್ಲಿ ಮಿಸ್ಸಿಸ್ಸಿಪ್ಪಿ, ಅಲಬಾಮ, ಲೂಯಿಸಿಯಾನ, ಜಾರ್ಜಿಯ, ಟೆಕ್ಸಾಸ್, ಆರ್ಕನ್‌ಸಾ ಮತ್ತು ದಕ್ಷಿಣ ಕೆರೊಲಿನ ಹೆಸರುವಾಸಿಯಾಗಿದ್ದವು. ಹತ್ತಿಯ ವ್ಯವಸಾಯ ದೊಡ್ಡ ಪ್ಲಾನ್‌ಟೇಷನ್‌ಗಳಲ್ಲಿ ಹಲವಾರು ಗುಲಾಮರ ಶ್ರಮದಿಂದ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿತ್ತು. ಸಣ್ಣ ರೈತರು ತಮ್ಮ ಜಮೀನಿನಲ್ಲಿ ಹತ್ತಿ ಬೆಳೆಸುತ್ತಿದ್ದರು. ಆದರೆ ಲಾಭ ಗಳಿಸಲು ಕಡಿಮೆ ಎಂದರೆ ಇಪ್ಪತ್ತು ಗುಲಾಮರನ್ನು ಮಾಡಿಸುತ್ತಿದ್ದ ಹತ್ತಿಯ ಕೃಷಿ ಕ್ಷೇತ್ರಗಳು ಅನುಕೂಲಕರವಾಗಿದ್ದವು. ಅಧಿಕ ಪ್ರಮಾಣದಲ್ಲಿ ಹತ್ತಿ ಬೆಳೆಯುತ್ತಿದ್ದವರ ಮೇಲೆ ಅನೇಕ ಆಧಾರರಹಿತ ಸುದ್ದಿಗಳು ಹಬ್ಬಿದ್ದವು. ಅವರೆಲ್ಲರೂ ಲಾಭನಷ್ಟದ ಪರಿವೆಯಿಲ್ಲದ ವಿಲಾಸಜೀವನ ನಡೆಸುವ, ವ್ಯವಹಾರಜ್ಞಾನವಿಲ್ಲದ ಹಣವಂತರು ಎಂದು ಜನ ನಂಬಿದ್ದರು. ಕೆಲವರು ಹಾಗಿದ್ದಿರಬಹುದು. ಆದರೆ ಹೆಚ್ಚಿನ ಕೃಷಿಕ್ಷೇತ್ರಗಳು (farms/plantations) ಸುವ್ಯವಸ್ಥಿತವಾಗಿ ನಡೆಯುತ್ತಿದ್ದವು. ಆಗಿನ ಕಾಲದ ಉದ್ಯಮಗಳಲ್ಲಿ ಹತ್ತಿಯ ಕೃಷಿಕ್ಷೇತ್ರಗಳು (plantations) ಬಹಳ ದಕ್ಷತೆಯಿಂದ ನಿರ್ವಹಿಸಲ್ಪಡುತ್ತಿದ್ದ ಆರ್ಥಿಕ ಘಟಕಗಳಾಗಿದ್ದವು. ಅಮೆರಿಕ ಅಂತರ್ಯುದ್ಧದ ಮುಂಚಿನ ದಿನಗಳಲ್ಲಿ ಹತ್ತಿಯನ್ನು ಬೆಳೆಯುತ್ತಿದ್ದ ದಕ್ಷಿಣಪ್ರಾಂತ ಇಡೀ ದೇಶದಲ್ಲಿ ಅತ್ಯಂತ ಹೆಚ್ಚಿನ ಪ್ರತಿ ತಲೆಗಂದಾಯ (per capita) ಹೊಂದಿತ್ತು.

ಹತ್ತಿಯ ಬೆಳೆ ಬಿಳಿಯ ಪ್ಲಾಂಟರುಗಳಿಗೆ ಅತುಲೈಶ್ವರ್ಯ , ಸುಖ, ಅಂತಸ್ತು

ಮತ್ತು ಸೌಲಭ್ಯಗಳನ್ನು ಒದಗಿಸಿತು. ಆದರೆ ಆ ಐಶ್ವರ್ಯವನ್ನು ಉತ್ಪತ್ತಿ ಮಾಡಲು ತಮ್ಮ ಬೆವರು, ರಕ್ತ, ಕಣ್ಣೀರು ಹರಿಸಿ ದುಡಿದ ಗುಲಾಮರ ಕತೆ ಬೇರೆಯಾಗಿತ್ತು. ೧೮೬೦ರಲ್ಲಿ ಅಮೆರಿಕ ದಕ್ಷಿಣ ಪ್ರಾಂತದಲ್ಲಿ ೩.೯ ಮಿಲಿಯನ್ ಗುಲಾಮರು ಇದ್ದರು. ಅವರು ಆ ಪ್ರಾಂತದ ಒಟ್ಟು ಜನಸಂಖ್ಯೆಯಲ್ಲಿ ೧/೩ ಭಾಗವಾಗಿದ್ದರು. ಅಧಿಕ ಸಂಖ್ಯೆಯಲ್ಲಿ ಅವರು ಹತ್ತಿ ಮತ್ತು ಭತ್ತ ಬೆಳೆಯುವ ಪ್ರಾಂತಗಳಲ್ಲಿ ವಾಸಿಸುತ್ತಿದ್ದರು. ಎಲ್ಲಾ ಕರಿಯರು ಗುಲಾಮರಾಗಿರಲಿಲ್ಲ. ೧೮೯೦ರಲ್ಲಿ ಸುಮಾರು ೧/೪ ಮಿಲಿಯನ್ ಕರಿಯರು ಬಿಡುಗಡೆ ಪಡೆದಿದ್ದರು. ಬಿಡುಗಡೆ ಹೊಂದಿದ ಕರಿಯರು ಹೆಚ್ಚಿಗೆ ಮೇರಿಲ್ಯಾಂಡ್, ವರ್ಜೀನಿಯ, ಕೆಂಟಕಿ ಮತ್ತು ಮಿಸೋರ ಸಂಸ್ಥಾನಗಳಲ್ಲಿ ನೆಲಸಿದ್ದರು. ಇವು ಆಗಿನ ಕಾಲದಲ್ಲಿ 'ಗಡಿ ಸಂಸ್ಥಾನಗಳು' ಎಂದು ಹೆಸರು ಪಡೆದಿದ್ದವು. ಗುಲಾಮರ ಬದುಕು ಕಷ್ಟಕಾರ್ಪಣ್ಯಗಳ ಕತೆಯಾಗಿತ್ತು. ಬೆಳಗಿನ ಜಾವದಿಂದ ಸಂಜೆಗತ್ತಲವರೆಗೆ, ಮಧ್ಯಾಹ್ನ ಉಪಹಾರಕ್ಕೂ ಹೆಚ್ಚು ಸಮಯವಿಲ್ಲದ ನಿರಂತರ ದುಡಿತ. ಕೀಳು ದರ್ಜೆಯ ಊಟ-ವಸತಿಯ ವ್ಯವಸ್ಥೆ. ವಿನಾಕಾರಣ ಗುಲಾಮರನ್ನು ಶಿಕ್ಷಿಸುವುದು ಕಾಯಿದೆಗೆ ವಿರುದ್ಧವಾಗಿತ್ತು. ಆದರೆ ಆ ಕಾಯಿದೆಯನ್ನು ಕಾರ್ಯಗತಗೊಳಿಸುವುದು ಅಸಾಧ್ಯವಾಗಿತ್ತು. ಅವಿಧೇಯತೆಗೆ ದೇಹದಂಡನೆ ವಿಧಿಸುವುದಕ್ಕೆ ನಿರ್ಬಂಧವಿರಲಿಲ್ಲ. ಒಡೆಯನ ಆಣತಿಯನ್ನು ಅಲ್ಲಗಳೆದ ಗುಲಾಮನಿಗೆ ಛಡಿ ಏಟಿನ ಶಿಕ್ಷೆ ಸರ್ವೆಸಾಮಾನ್ಯವಾಗಿತ್ತು. ಅತ್ಯಂತ ಹೀನವಾದ ಪದ್ಧತಿ ಎಂದರೆ ಗುಲಾಮರನ್ನು ಮನುಷ್ಯರಲ್ಲವೆಂದು ಭಾವಿಸಿ ಅವರನ್ನು ಮೃಗಗಳಂತೆ ನಡೆಸಿಕೊಳ್ಳುತ್ತಿದ್ದ ರೀತಿ. ಒಡೆಯರು ಗುಲಾಮರನ್ನು ತಮ್ಮ ನ್ಯಾಯಬದ್ಧವಾದ ಆಸ್ತಿ ಎಂದು ಪರಿಗಣಿಸಿ, ಅವರನ್ನು ಜಾನುವಾರುಗಳಂತೆ ಮಾರುವುದು, ಕೊಳ್ಳುವುದು, ಪಾಲು ಮಾಡಿಕೊಳ್ಳುವುದು, ಗುಲಾಮರ ಒಡೆತನ ವಂಶಪಾರಂಪರ್ಯವಾಗಿ ಉತ್ತರಾಧಿಕಾರಿಗಳಿಗೆ ಸೇರುವುದು – ಈ ಅಮಾನುಷ ನಡೆವಳಿಕೆಗಳನ್ನು ಆಗಿನ ಸಮಾಜದಲ್ಲಿ ಸಾಮಾನ್ಯ ಆಗುಹೋಗುಗಳೆಂದು ಭಾವಿಸಲಾಗಿತ್ತು. ಒಡೆಯನ ಅನುಮತಿ ಇಲ್ಲದೆ ಗುಲಾಮರು ಎಲ್ಲಿಗೂ ಹೋಗುವ ಸ್ವಾತಂತ್ರ್ಯವಿರಲಿಲ್ಲ. ಗುಲಾಮರ ಮಕ್ಕಳನ್ನು ಅವರ ತಂದೆತಾಯಿಯ ರಿಂದ ಬೇರೆ ಮಾಡುವ ಹಕ್ಕು ಅವರ ಒಡೆಯನಿಗಿತ್ತು. ಗುಲಾಮರು ಓದು ಬರಹವನ್ನು ಕಲಿಯುವುದನ್ನು ನಿಷೇಧಿಸಲಾಗಿತ್ತು. ಇಂಥ ಕಷ್ಟದ ಪರಿಸ್ಥಿತಿಯಲ್ಲಿ ಕೂಡ ಕೆಲವು ಗುಲಾಮರು ಓದು ಬರಹ ಕಲಿತವರಾಗಿದ್ದರು. ಆದರೆ ಅಮೆರಿಕದ ದಕ್ಷಿಣ ಪ್ರಾಂತದಲ್ಲಿ ಗುಲಾಮರ ಪರಿಸ್ಥಿತಿ ವಿಷಾದಪೂರ್ಣವಾಗಿತ್ತು. ಅವರು ಮಕ್ಕಳ ಹಾಗೆ ನಿರಂತರವಾಗಿ ಪರಾಶ್ರಿತರಾಗಿರಬೇಕಾಗಿತ್ತು. ದಾಸ್ಯದಲ್ಲಿ ಹುಟ್ಟಿ ದಾಸ್ಯದಲ್ಲಿ ಅವಸಾನಗೊಳ್ಳುತ್ತಿದ್ದ ಬದುಕಿನ ವಿಷವೃತ್ತದಿಂದ ಅವರಿಗೆ ಬಿಡುಗಡೆ ಇರಲಿಲ್ಲ.

ಒಡೆಯರು ಮೃಗೀಯವಾಗಿ ವರ್ತಿಸಿ ದಾಸ್ಯದಲ್ಲಿ ಜೀವ ಸವೆಸುವಂತೆ ಮಾಡಿದರೂ ಗುಲಾಮರು ತಮ್ಮ ಮನುಷ್ಯತ್ವವನ್ನು ಉಳಿಸಿಕೊಂಡು, ಆಫ್ರಿಕ ಮತ್ತು ಯೂರೋಪಿನಲ್ಲಿ ರೂಢಿಸಿಕೊಂಡ ಸಂಪ್ರದಾಯಗಳಿಗೆ ತಮ್ಮ ಅಮೆರಿಕನ್ ಅನುಭವಗಳನ್ನು ಸೇರಿಸಿ ತಮ್ಮದೇ

ಆದ ಒಂದು ವಿಶಿಷ್ಟ ಸಂಸ್ಕೃತಿ ಮತ್ತು ಸಂಗೀತ, ನೃತ್ಯ ಮುಂತಾದ ಕಲೆಗಳನ್ನು ಬೆಳೆಸಿ ಕೊಂಡರು. ಅವರ ಸಂಗೀತ ಮತ್ತು ಮೌಖಿಕ ಸಾಹಿತ್ಯ (oral literature) ಅವರ ಎಲ್ಲ ಸಮುದಾಯಗಳಿಗೂ ಹಬ್ಬಿದ್ದಲ್ಲದೆ ಕೆಲವು ಸಹೃದಯ ಬಿಳಿಯರ ಗಮನ ಸೆಳೆದವು. ಗಾಢವಾದ ದೈವಭಕ್ತಿ ಆ ನೊಂದ ಜೀವಿಗಳಿಗೆ ನೆಮ್ಮದಿ ನೀಡಿತು. ಅವರ ಚರ್ಚುಗಳಲ್ಲಿ ಉಪದೇಶಿಗಳು ಅವರ ಬುಡಕಟ್ಟಿನವರೆ ಆಗಿರುತ್ತಿದ್ದರು. ಅವರು ಬೆಳೆಸಿದ ಕ್ರೈಸ್ತಮತ ಭಾವೋದ್ವೇಗದಿಂದ ಕೂಡಿತ್ತು. ಇದು ಅವರನ್ನು ತಮ್ಮ ಹೀನಪರಿಸ್ಥಿತಿಯನ್ನು ಮರೆಯುವಂತೆ ಮಾಡಿ ಸಾಂತ್ವನಗೊಳಿಸುತ್ತಿತ್ತು.

ಅಮೆರಿಕದ ದಕ್ಷಿಣ ಪ್ರಾಂತದಲ್ಲಿ ನೆಲೆಸಿದ್ದ ಎಲ್ಲ ಬಿಳಿಯರು ಒಂದೇ ತೆರನಾದ ಜೀವನ ನಡೆಸುತ್ತಿರಲಿಲ್ಲ. ಅವರಲ್ಲಿ ಒಂದು ರೀತಿಯ ವರ್ಗ ವ್ಯವಸ್ಥೆ ಏರ್ಪಟ್ಟಿತ್ತು. ಮೊದಲನೆಯ ವರ್ಗ ಶ್ರೀಮಂತ ಪ್ಲಾಂಟರುಗಳಾಗಿದ್ದರು. ಈ ವರ್ಗದ ಬಗ್ಗೆ ಕೆಲವರಿಗೆ ಮೆಚ್ಚುಗೆ, ಕೆಲವರಿಗೆ ಮಾತ್ಸರ್ಯ ಮತ್ತೆ ಕೆಲವರು ಅವರು ಹೇಳಿದಂತೆ ಕೇಳುವವ ರಾಗಿದ್ದರು. ಪ್ಲಾಂಟರುಗಳ ಸಂಖ್ಯೆ ಕಡಿಮೆ ಇದ್ದುದರಿಂದ ಈ ವರ್ಗ ಚಿಕ್ಕದಾಗಿತ್ತು. ಗುಲಾಮರನ್ನು ಇಟ್ಟುಕೊಂಡಿದ್ದ ಸಣ್ಣ ರೈತರು ಹೆಚ್ಚಾಗಿದ್ದರು. ಈ ರೈತರು ಗುಲಾಮರ ಒಡೆಯರಾಗಿದ್ದರೂ ಸಹ ಅವರ ಜೊತೆಯಲ್ಲಿ ತಾವೂ ಜಮೀನು ಕೆಲಸಗಳಲ್ಲಿ ಭಾಗವಹಿಸುತ್ತಿದ್ದರು. ಅವರು ಅರಮನೆಯಂಥ ಮನೆಯಲ್ಲಿ ವಾಸಮಾಡುತ್ತಿರಲಿಲ್ಲ; ಅದಕ್ಕೆ ಬದಲು ಮರದ ದಿಮ್ಮಿಗಳಿಂದ ಮಾಡಿದ ಪುಟ್ಟ ಮನೆಗಳಲ್ಲಿರುತ್ತಿದ್ದರು. ಇವರು ಪ್ಲಾಂಟರ್ ವರ್ಗದವರ ಅಂತಸ್ತು, ಅಧಿಕಾರ ಮತ್ತು ದರ್ಪವನ್ನು ದ್ವೇಷಿಸುತ್ತಿದ್ದರು. ಅಮೆರಿಕದ ದಕ್ಷಿಣ ಪ್ರಾಂತ ಹೆಚ್ಚು ಭಾಗ ಹಳ್ಳಿಗಾಡು ಪ್ರದೇಶವಾಗಿದ್ದು ಜನರು ಸಣ್ಣ ಹಿಡುವಳಿಗಾರರಾಗಿದ್ದರು. ಹಳ್ಳಿಗಳು ಮತ್ತು ಸಣ್ಣ ಊರುಗಳಲ್ಲಿ ಜನಸಂಖ್ಯೆಯ ಮುಕ್ಕಾಲು ಭಾಗ ನೆಲೆಸಿದ್ದರು. ನ್ಯೂ ಆರ್ಲಿಯನ್ಸ್ ಒಂದೇ ದೊಡ್ಡ ನಗರವಾಗಿತ್ತು. ಹೆಚ್ಚು ದಾಕ್ಷಿಣಾತ್ಯರು ಹತ್ತಿ ಬೆಳೆಯುವುದು ಮತ್ತು ಇತರ ವ್ಯವಸಾಯಗಳು ಉತ್ತರದವರ ಕೈಗಾರಿಕೆ ಮತ್ತು ವಾಣಿಜ್ಯ ವ್ಯವಹಾರಗಳಿಗಿಂತ ಶ್ರೇಷ್ಠವಾದವು ಎಂದು ಪರಿಗಣಿಸಿದ್ದರು. ಹತ್ತಿ ಬೆಳೆಯುವುದು ಲಾಭದಾಯಕ ವೃತ್ತಿ ಮತ್ತು ಅದು ದಾಕ್ಷಿಣಾತ್ಯರ ಮನೋಭಾವಕ್ಕೆ ಒಪ್ಪುವಂಥದಾಗಿತ್ತು. ಹತ್ತಿಯ ಬೆಳೆ ಮತ್ತು ಇತರ ಬೆಳೆಗಳ ವ್ಯವಸಾಯ ಅವರ ಸಮುದಾಯಕ್ಕೆ ಸ್ಥಿರತೆಯನ್ನು ತಂದಿದ್ದವು. ಗುಲಾಮರ ದುಡಿಮೆಯಿಂದ ನಡೆಯುತ್ತಿದ್ದ ಅವರ ಜೀವನಕ್ಕೆ ವ್ಯವಸಾಯ ಭದ್ರತೆ ಒದಗಿಸಿತ್ತು. ದಕ್ಷಿಣದ ಪತ್ರಕರ್ತರು ಮತ್ತು ರಾಜಕಾರಿಣಿಗಳು ಗುಲಾಮಗಿರಿಯನ್ನು ರದ್ದುಗೊಳಿಸಬೇಕೆಂದು ನಡೆಸುತ್ತಿದ್ದ ಆಂದೋಲನದ ಕುರಿತು 'ಗುಲಾಮರು ಇರುವ ಸಮಾಜ ಬಿಳಿಯರಿಗೆ ಮುಕ್ತ ಸಮಾಜಕ್ಕಿಂತ ಹೆಚ್ಚು ಅನುಕೂಲವಾದುದು ಮತ್ತು ಎಲ್ಲರ ಬಗ್ಗೆ ಹೆಚ್ಚು ಅನುಕಂಪವುಳ್ಳದ್ದು' ಎಂದು ವಾದಿಸಿದರು. ೧೮೪೦ರ ದಶಕದಲ್ಲಿ ದಕ್ಷಿಣ ಪ್ರಾಂತದ ಸಮಾಜವ್ಯವಸ್ಥೆ ಸಂಕುಚಿತ ಬುದ್ಧಿಯ, ಪ್ರಸ್ತುತ ಪದ್ಧತಿಗಳನ್ನು ಬಿಟ್ಟುಕೊಡದ ಮತ್ತು ತಮ್ಮ ನಂಬಿಕೆ ನಡವಳಿಕೆಗಳನ್ನು

ಪ್ರಶ್ನಿಸುವವರನ್ನು ನಿರ್ದಯವಾಗಿ ಹೊರಗಟ್ಟುವ ಪ್ರತಿಗಾಮಿ ಸಮಾಜವಾಗಿ ಪರಿವರ್ತನೆಗೊಳ್ಳುವ ಹಾದಿಯನ್ನು ಹಿಡಿದಿತ್ತು.

ಅಂತರ್ಯುದ್ಧದ ಕಾಲದ ಹೊತ್ತಿಗೆ ಸಂಯುಕ್ತ ಸಂಸ್ಥಾನಗಳು ಎರಡು ವಿಶಿಷ್ಟ ಸಮಾಜವ್ಯವಸ್ಥೆಗಳ ಕಡೆಗೆ ತ್ವರಿತಗತಿಯಿಂದ ಸಾಗುತ್ತಿದ್ದವು. ರಾಷ್ಟ್ರೀಯ ರಾಜಕೀಯ ಪಕ್ಷಗಳು, ದೇಶದಾದ್ಯಂತ ಸ್ಥಾಪಿತಗೊಂಡಿದ್ದ ಮತಧರ್ಮ ಪಂಥಗಳು ಮತ್ತು ಪರಸ್ಪರ ಹಂಚಿಕೊಳ್ಳಬಹುದಾದ ಐತಿಹಾಸಿಕ ಸ್ಮರಣೆಗಳು ಹಾಗೂ ವ್ಯಾಪಾರ ಸಂಬಂಧಗಳು ಅಮೆರಿಕ ಔತ್ತರೇಯರನ್ನು ಮತ್ತು ದಾಕ್ಷಿಣಾತ್ಯರನ್ನು ಒಟ್ಟಿಗೆ ಹಿಡಿದಿಟ್ಟಿದ್ದ ಸರಪಳಿಯ ಕೊಂಡಿಗಳಾಗಿದ್ದವು. ಕಾಲಸರಿದಂತೆಲ್ಲ ಈ ಕೊಂಡಿಗಳು ಶಿಥಿಲಗೊಂಡು ಮುಂದೆ ಬರಬಹುದಾದ ಅಸ್ಫೋಟನೆಯನ್ನು ತಡೆಯಲಾರದೆ ಹೋದವು. ತಮ್ಮ ಸರಹದ್ದನ್ನು ವಿಸ್ತಾರಗೊಳಿಸುವ ಅಕಾಂಕ್ಷೆಯಿಲ್ಲದೆ ಹೋಗಿದ್ದರೆ ಈ ಉತ್ತರ ಮತ್ತು ದಕ್ಷಿಣ ಬಣಗಳು ತಮ್ಮ ನಡುವೆ ಹಿರಿದಾಗುತ್ತ ಹೋಗುತ್ತಿದ್ದ ಮೌಲ್ಯಗಳ, ಆರ್ಥಿಕ ಆಸಕ್ತಿಗಳ, ಸಂಸ್ಕೃತಿಯ ಮತ್ತು ಸಂಸ್ಥೆಗಳ ಭಿನ್ನತೆಯ ಬಿರುಕನ್ನು ಮುಚ್ಚಿ ಹೊಂದಾಣಿಕೆಯನ್ನು ಸ್ಥಾಪಿಸ ಬಹುದಾಗಿತ್ತು. ಆದರೆ ೧೮೪೦ರ ದಶಕದಲ್ಲಿ ಒಂದು ಮಿಲಿಯನ್ ಚದರ ಮೈಲಿಗಳಷ್ಟು ಪ್ರದೇಶ ಸಂಯುಕ್ತ ಸಂಸ್ಥಾನಗಳ ಅಧೀನತೆಗೆ ಸೇರಿತ್ತು. ಹೀಗೆ ದೇಶ ವಿಸ್ತಾರಗೊಳ್ಳುತ್ತ ಹೋದಹಾಗೆ ಹೊಸ ಪ್ರಾಂತಗಳನ್ನು ವಲಸೆಗಾರರು ಅತಿಕ್ರಮಿಸಿ ತಳವೂರತೊಡಗಿದರು. ೧೮೪೦ರಲ್ಲಿ ಅಮೆರಿಕನ್ನರು ಆಗ ಮೆಕ್ಸಿಕೊ ದೇಶಕ್ಕೆ ಸೇರಿದ್ದ ಕ್ಯಾಲಿಫೋರ್ನಿಯ ಪ್ರಾಂತವನ್ನು ಅತಿಕ್ರಮಿಸಿದ್ದರು. ಹಾಗೆಯೇ ಅವರು ಆರೆಗಾನ್ ಪ್ರಾಂತವನ್ನು ಆಕ್ರಮಿಸಿಕೊಂಡಿದ್ದರು. ಆರೆಗಾನ್ ಪ್ರಾಂತದ ಮೇಲೆ ಬ್ರಿಟಿಷ್ ಮತ್ತು ಅಮೆರಿಕನ್ನರು ಇಬ್ಬರೂ ಹಕ್ಕನ್ನು ಸಾಧಿಸಲು ಪ್ರಯತ್ನ ಮಾಡುತ್ತಿದ್ದರು. ಸ್ಪಷ್ಟಗೊಂಡ ಭವಿಷ್ಯದ (manifest destiny) ಹುರುಪಿನಲ್ಲಿ ಅಮೆರಿಕನ್ನರಿಗೆ ಆರೆಗಾನ್ ಪ್ರದೇಶವನ್ನು ವಶಪಡಿಸಿಕೊಳ್ಳುವ ಗೀಳು ಹಿಡಿಯಿತು. ಅವರು ಮುಂಚೆ ನೆಲೆಸಿದ್ದ ಮುಸ್ಸೋರ ಪ್ರಾಂತದಿಂದ ಆರೆಗಾನ್ ಪ್ರಾಂತಕ್ಕೆ ೨೦೦೦ ಮೈಲಿಗಳು. ವಲಸೆಗಾರರು ಸ್ಪಷ್ಟಗೊಂಡ ಭವಿಷ್ಯದಿಂದ ಸ್ಫೂರ್ತಿ ಪಡೆದು ತಾವು ಮಾಡುತ್ತಿರುವುದು ಧರ್ಮಕ್ಕಾಗಿ (crusade) ಎಂಬ ನಂಬಿಕೆಯಿಂದ ೨೦೦೦ ಮೈಲಿ ಕಾಡುಮೇಡುಗಳನ್ನು ದಾಟಿ ಪ್ರಯಾಣ ಮಾಡಿ ಆರೆಗಾನ್ ಪ್ರಾಂತವನ್ನು ತಲುಪಿ ನೆಲೆನಿಂತರು. ಇದನ್ನು 'ಆರೆಗಾನ್ ಜಾಡು' (Oregon Trail) ಎಂದು ಕರೆಯುತ್ತಾರೆ. ೧೮೪೩ರಲ್ಲಿ ಈ ಜಾಡು ಹಿಡಿದು ಸಾವಿರಕ್ಕೂ ಹೆಚ್ಚು ವಲಸೆಗಾರರು ಆರೆಗಾನ್ ಸೇರಿದ್ದು ಅದ್ಭುತ ಸಾಹಸ ಎಂದು ಜನ ಮೆಚ್ಚಿ ಕೊಂಡಾಡಿದರು. ಇದರಿಂದಾಗಿ ಪಶ್ಚಿಮ ಪ್ರಾಂತದ ಮೇಲೆ ಜನರ ಆಸಕ್ತಿ ಹೆಚ್ಚಿತು.

ಫ್ರಾಂಕ್ಲಿನ್ ಪಿಯರ್ಸ್ (Franklin Pierce)ನ ಅಧ್ಯಕ್ಷತೆ (೧೪ನೆಯ ಅಧ್ಯಕ್ಷ)

೧೮೫೨ರ ಚುನಾವಣಾ ಪ್ರಚಾರದ ಸಮಯದಲ್ಲಿ ದೇಶ ಸುಭಿಕ್ಷವಾಗಿತ್ತು. ಸಾಮಾನ್ಯ ವಾಗಿ ಎಲ್ಲರೂ ತಮ್ಮ ಒಳಜಗಳಗಳನ್ನು ಬಿಟ್ಟು ನೆಮ್ಮದಿಯಿಂದಿರಲು ಬಯಸಿದ್ದರು.

ಡೆಮೊಕ್ರಾಟಿಕ್ ಪಕ್ಷದವರು ತಮ್ಮ ಅಭ್ಯರ್ಥಿಗಳ ಆಯ್ಕೆ ವಿಷಯದಲ್ಲಿ ಭಿನ್ನಾಭಿಪ್ರಾಯ ಗೊಂಡಿದ್ದು ಕಲಹದಲ್ಲಿ ತೊಡಗಿದ್ದರೂ ಸಹ ಅವುಗಳನ್ನು ಹಿಡಿತದಲ್ಲಿಟ್ಟು ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದರಲ್ಲಿ ಸಫಲರಾದರು. ಅಧ್ಯಕ್ಷ ಸ್ಥಾನಕ್ಕೆ ನ್ಯೂ ಹ್ಯಾಂಪ್‌ಷೈರ್‌ನ ಫ್ರಾಂಕ್ಲಿನ್ ಪಿಯರ್ಸ್‌ನನ್ನು ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಅಲಬಾಮ ಸಂಸ್ಥಾನದ ವಿಲಿಯಂ ಕಿಂಗ್‌ನನ್ನು ನಾಮಕರಣ ಮಾಡಿದರು. ೧೮೫೦ರ ರಾಜಿ-ಒಪ್ಪಂದವನ್ನು ಶ್ರದ್ಧೆಯಿಂದ ಜಾರಿಗೆ ತರುವುದಾಗಿ ಇವರು ಚುನಾವಣಾ ಪ್ರಚಾರದಲ್ಲಿ ವಾಗ್ದಾನ ಮಾಡಿದರು. ತಮ್ಮ ಪಕ್ಷಗಳ ಒಳಪಂಗಡಗಳನ್ನು ಇವರು ಆಶ್ಚರ್ಯಕರ ರೀತಿಯಲ್ಲಿ ಹೊಂದಿಕೊಂಡು ಹೋಗು ವಂತೆ ಮಾಡಿದರು. ಪಿಯರ್ಸ್ ದಕ್ಷಿಣ ಸಂಸ್ಥಾನಗಳ ಹಕ್ಕುಗಳನ್ನು ಪ್ರತಿಪಾದಿಸುವ ಮತ್ತು ಗುಲಾಮಗಿರಿಯ ವಿರೋಧಿಗಳ ಬೆಂಬಲ ಗಳಿಸಿದನು. ಇದರ ಪರಿಣಾಮವಾಗಿ ಮೂರನೆಯ ಪಕ್ಷ 'ಮುಕ್ತ ಮಣ್ಣಿನವರು' (The Free Soilers) ನಿಲ್ಲಿಸಿದ ಅಭ್ಯರ್ಥಿ ಜಾನ್ ಹೇಲ್ (John Hale) ಹೆಚ್ಚಿನ ಮತ ಗಳಿಸಲಾರದೆ ಹೋದನು.

ವ್ಹಿಗ್ ಪಕ್ಷದವರು ರಾಜಿ-ಒಪ್ಪಂದವನ್ನು ನಿಷ್ಠೆಯಿಂದ ಅನುಸರಿಸಿದ ಅಧ್ಯಕ್ಷ ಮಿಲ್ಲಾರ್ಡ್ ಫಿಲ್‌ಮೋರ್‌ನನ್ನು (೧೩ನೆಯ ಅಧ್ಯಕ್ಷ) ತೊರೆದು ವರ್ಜೀನಿಯಾದ ವಿನ್‌ಫೀಲ್ಡ್ ಸ್ಕಾಟ್‌ನನ್ನು ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮಕರಣ ಮಾಡಿದರು. ಇವನು ಸಮರ್ಥ ಸೇನಾನಾಯಕನಾಗಿದ್ದರೂ ರಾಜಕೀಯಕ್ಕೆ ನಾಲಾಯಕ್ಕಾಗಿದ್ದನು. ನೇಮಕ ಸಮಿತಿ ರಾಜಿ-ಒಪ್ಪಂದವನ್ನು ಅನುಮೋದಿಸಿತು. ಇದಕ್ಕೆ ಕೆಲವು ಔತ್ತರೇಯರು ವಿರೋಧ ವ್ಯಕ್ತಪಡಿಸಿದರು. ಸ್ಕಾಟ್ ಗುಲಾಮಗಿರಿಯ ವಿರೋಧಿಯಾದರೂ ಹುಟ್ಟಿನಿಂದ ಅಮೆರಿಕನ್ನ ರಾದವರ ಪರವಾಗಿದ್ದನು. ಈ ಪಕ್ಷಪಾತದಿಂದ ಅವನು ಜರ್ಮನ್ ಮತ್ತು ಐರಿಷ್ ಅಮೆರಿಕನ್ನರನ್ನು ಪರಕೀಯರಂತೆ ಕಂಡು ಅವರ ಬೆಂಬಲ ಕಳೆದುಕೊಂಡನು. ಚುನಾವಣೆ ಯಲ್ಲಿ ಸ್ಕಾಟ್ ಟೆನ್ನಸ್ಸೀ, ಕೆಂಟಕಿ, ಮೆಸಾಚ್ಯುಸೆಟ್ಸ್ ಮತ್ತು ವೆರ್‌ಮಾಂಟ್ ಸಂಸ್ಥಾನಗಳಲ್ಲಿ ಬಹುಮತ ಪಡೆದಿದ್ದನು. ಆದರ ಪಿಯರ್ಸ್‌ನು ಎಲೆಕ್ಟರಲ್ ಕಾಲೇಜಿನಲ್ಲಿ ಅತ್ಯಂತ ಹೆಚ್ಚಿನ ಅಂತರದಿಂದ (೨೫೪-೪೨) ಸ್ಕಾಟ್‌ನನ್ನು ಸೋಲಿಸಿದನು. ಪಿಯರ್ಸ್‌ನಲ್ಲಿ ಹೇಳಿ ಕೊಳ್ಳುವಂಥ ವೈಶಿಷ್ಟ್ಯವಿಲ್ಲದಿದ್ದರೂ ಅವನು ಸ್ಫುರದ್ರೂಪಿಯಾದ ಗಮನ ಸೆಳೆಯುವಂಥ ವ್ಯಕ್ತಿಯಾಗಿದ್ದನು. ಅವನು ಮಾಜಿ ಕಾಂಗ್ರೆಸ್ ಸದಸ್ಯ, ಸೆನೆಟರ್ ಮತ್ತು ಮೆಕ್ಸಿಕೊ ಯುದ್ಧದಲ್ಲಿ ಬ್ರಿಗೆಡಿಯರ್ ಆಗಿದ್ದವನು. ಆದರೂ ಮೃದು ಸ್ವಭಾವದವನಾದ ಇವನು ತನ್ನ ಪಕ್ಷದವರ ಒಳಜಗಳಗಳನ್ನು ನಿಯಂತ್ರಿಸಲಾರದೆ ಹೋದನು. ಎಲ್ಲರಿಗೂ ಒಳ್ಳೆಯವನಾಗಲು ಹೋಗಿ 'ದಾಕ್ಷಿಣಾತ್ಯರ ನಿಯಮಗಳನ್ನು ಪಾಲಿಸುವ ಉತ್ತರದವನು' ಎಂದು ಹೆಸರು ಪಡೆದನು.

ಈ ಸಮಯದಲ್ಲಿ ಅಮೆರಿಕನ್ನರು ತಮ್ಮ ಒಳಜಗಳಗಳನ್ನು ಅಷ್ಟಾಗಿ ಗಮನಿಸದೆ ಹೊರದೇಶಗಳ ಮೇಲೆ ಆಸಕ್ತಿ ವಹಿಸತೊಡಗಿದರು. (ದಾಕ್ಷಿಣಾತ್ಯರು ಕೆರೆಬಿಯನ್ ದ್ವೀಪಗಳು, ಮಧ್ಯ ಅಮೆರಿಕ ದೇಶಗಳು ಮತ್ತು ವಿಶೇಷವಾ. ಕ್ಯೂಬವನ್ನು ವಶಪಡಿಸಿ

ಕೊಳ್ಳಲು ಹವಣಿಸುತ್ತಿದ್ದುದರ ಬಗ್ಗೆ ಹಿಂದೆ ತಿಳಿಸಲಾಗಿದೆ.) ಮೆಕ್ಸಿಕೊ ಯುದ್ಧಾನಂತರ ಅಮೆರಿಕದ 'ಸ್ಪಷ್ಟಗೊಂಡ ಭವಿಷ್ಯ' (manifest destiny) ಅಸ್ಪಷ್ಟವಾದ ಸಾಮಾಜಿಕ ಚಳುವಳಿಯ ರೂಪ ತಾಳಿತು. ಈ ಚಳುವಳಿಯನ್ನು 'ತರುಣ ಅಮೆರಿಕ' (young America) ಎಂದು ಕರೆಯಲಾಯಿತು. ಇದು ಮಿತಿಮೀರಿದ ಹುಮ್ಮಸ್ಸಿನಿಂದ, ಆಶಾಭಾವನೆಯಿಂದ ಮತ್ತು ತಮ್ಮ ಸಮ ಯಾರೂ ಇಲ್ಲ ಎಂಬ ಹೆಮ್ಮೆಯಿಂದ ಪ್ರಭಾವಿತಗೊಂಡಿತ್ತು. ಈ ಹುಮ್ಮಸ್ಸು ಆರ್ಥಿಕ ಬೆಳವಣಿಗೆ ಮತ್ತು ದೇಶದ ಗಡಿಯನ್ನು ವಿಸ್ತರಿಸುವುದಕ್ಕೆ ಪ್ರಚೋದನೆ ನೀಡಿತು. ಅಮೆರಿಕನ್ ಸಂಘ-ಸಂಸ್ಥೆಗಳ ಕ್ರಿಯಾತ್ಮಕ ಶಕ್ತಿ ಪ್ರಪಂಚದ ಮೇಲೆ ಪ್ರಭಾವ ಬೀರಿ ಬದಲಾವಣೆಗಳನ್ನುಂಟುಮಾಡುತ್ತವೆ ಎಂದು ಅವರು ನಂಬಿದ್ದರು. ೧೮೪೮ರಲ್ಲಿ ಪ್ಯಾರಿಸ್‌ನಲ್ಲಿ ಪ್ರಗತಿಪರ ಆಂದೋಳನ ಆರಂಭವಾಗಿ ಇಡೀ ಯೂರೋಪಿನಾದ್ಯಂತ ಕಾಡ್ಗಿಚ್ಚಿನಂತೆ ಹಬ್ಬಿತು. ಈ ಆಂದೋಳನವನ್ನು ತರುಣ ಅಮೆರಿಕನ್ನರು ಸ್ವಾಗತಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಆದರೆ ಪ್ಯಾರಿಸ್ ಆಂದೋಳನ ಅವನತಿಗೊಂಡಾಗ ಅಮೆರಿಕನ್ನರಿಗೆ ಯೂರೋಪಿನ ಸಂಸ್ಕೃತಿ ಹಳತಾಗಿ ಕ್ಷೀಣಿಸುತ್ತ ವಿನಾಶದ ಹಾದಿ ಹಿಡಿದಿದೆ ಅನ್ನಿಸಿತು.

ಭಾವನಾ ಸ್ವಾತಂತ್ರ್ಯ ಯುಗ (The Romantic Age)

ಸಂಯುಕ್ತ ಸಂಸ್ಥಾನಗಳು ವಿಸ್ತಾರಗೊಂಡು ಬೆಳೆಯುತ್ತ ಅಭಿವೃದ್ಧಿಗೊಂಡು ಹೆಚ್ಚು ಶ್ರೀಮಂತವಾಗುತ್ತ ಹೋದವು. ಅವುಗಳ ಆಡಳಿತ ಹೆಚ್ಚು ಕೇಂದ್ರೀಕೃತವಾಯಿತು. ಸಂಯುಕ್ತ ಸಂಸ್ಥಾನಗಳು ತಮ್ಮದೇ ಆದ ಒಂದು ವಿಶಿಷ್ಟ ಸಂಸ್ಕೃತಿಯನ್ನು ಸೃಷ್ಟಿಸುವ ದಿಕ್ಕಿನಲ್ಲಿ ಬಹು ದೂರ ಸಾಗಿದ್ದವು. ಸಂಸ್ಕೃತಿ ಇತಿಹಾಸದ ದೃಷ್ಟಿಯಿಂದ ಅಮೆರಿಕ ಯೂರೋಪಿನ ಶಿಶು, ಅದರ ಅನುಕರಣೆ ಮಾತ್ರವೆಂದು ತಿಳಿಯುವುದು ತಪ್ಪು. ಜಫರ್‌ಸನ್‌ನ ಚಿಂತನೆ ಹದಿನೇಳನೆಯ ಶತಮಾನದ ಇಂಗ್ಲಿಷ್ ಚಿಂತನಕಾರರಿಂದ ಪ್ರಭಾವಿತಗೊಂಡಿತ್ತು. ಆದರೆ ಅಂಥ ಆಲೋಚನೆಗಳಿಗೆ ಜಫರ್‌ಸನ್ ಅಮೆರಿಕದ ಬಣ್ಣ ಲೇಪಿಸಿದನು. ವ್ಯಕ್ತಿಯ ಪರಭಾರೆ ಮಾಡಲಾರದ ಹಕ್ಕುಗಳನ್ನು ವಿವರಿಸುವಾಗ ಅವನು ಆಸ್ತಿಯ ಬದಲಾಗಿ ಚರ್ಚ್ ಮತ್ತು ಸರ್ಕಾರಗಳನ್ನು ಬೇರ್ಪಡಿಸುವುದು ಮತ್ತು ಸುಖಸಾಧನೆಯನ್ನು (pursuit of happiness) ಮುಖ್ಯ ಅಂಶಗಳಾಗಿ ಪರಿಗಣಿಸಿದನು. ರಾಲ್ಫ್ ವಾಲ್ಡೊ ಎಮರ್‌ಸನ್‌ನ ಅಭಿಪ್ರಾಯಗಳು ಜಫರ್‌ಸನ್‌ನ ಅಭಿಪ್ರಾಯಗಳಿಗಿಂತ ಅಷ್ಟೇನೂ ಬೇರೆ ತರವಾಗಿರಲಿಲ್ಲ. ಇವರಿಬ್ಬರೂ ಮುಂದಿನ ಪೀಳಿಗೆಯ ಪ್ರಗತಿಪರ (liberal) ಚಿಂತನಕಾರರ ಮೇಲೆ ಪ್ರಭಾವ ಬೀರಿದರು. ಎಮರ್‌ಸನ್ ಯೂರೋಪ್ ಮತ್ತು ಭಾರತಗಳ ತತ್ವಜ್ಞಾನದಿಂದ ಸ್ಫೂರ್ತಿಗೊಂಡಿದ್ದರೂ ಅವನು ಮುಖ್ಯವಾಗಿ 'ಅಮೆರಿಕನ್ ತತ್ವಜ್ಞಾನಿ' (philosopher) ಎನ್ನುವುದನ್ನು ಮರೆಯಬಾರದು.

ಪಾಶ್ಚಿಮಾತ್ಯ ಪ್ರಪಂಚದಲ್ಲಿ ಭಾವನಾ ಸ್ವಾತಂತ್ರ್ಯ ಚಿಂತನಧಾರೆ, ಸತ್ವಹೀನ, ಶುಷ್ಕ

ತರ್ಕಯುಗ(Age of reason)ದ ವಿರುದ್ಧ ಜರುಗಿದ ಕ್ರಾಂತಿ ಎನ್ನಬಹುದು. ಭಾವನಾ ಸ್ವಾತಂತ್ರ್ಯದ ಸೃಜನಶೀಲರು ಆಲೋಚನೆಗಿಂತಲೂ ಸಂವೇದನೆಗೆ ಮತ್ತು ಅಂತರ್ ದೃಷ್ಟಿ (intuition) ಗಳಿಗೆ ಹೆಚ್ಚು ಮಹತ್ವ ಕೊಟ್ಟರು. ವ್ಯಕ್ತಿ ಮತ್ತು ಸಮಾಜಗಳ ನಡುವಣ ವ್ಯತ್ಯಾಸಗಳನ್ನು ಅವರು ಎತ್ತಿ ತೋರಿಸಿದರು. ದೇಶಭಕ್ತಿ ಈ ಚಳುವಳಿಯ ವಿಶೇಷ ಗುಣವಾಗಿತ್ತು. ವ್ಯಕ್ತಿವೈಶಿಷ್ಟ್ಯ, ನಿಷ್ಕಪಟತೆ ಹಾಗೂ ಭಾವನೆಗಳು ಈ ಯುಗದ ನಾಣ್ಣುಡಿಗಳಾಗಿದ್ದವು. ನಾಗರಿಕತೆಯ ಸೋಂಕಿಲ್ಲದ ಪ್ರಕೃತಿಯಲ್ಲಿ ಮತ್ತು ಆದಿವಾಸಿಗಳ ಬಗ್ಗೆ ತೀವ್ರ ಆಸಕ್ತಿ, ಜನಪದ ಸಂಸ್ಕೃತಿಯ ಶ್ಲಾಘನೆ, ಬುದ್ಧಿಯನ್ನು ಭಾವನೆಗೆ ಶರಣು ಮಾಡುವುದು – ಇವು ಮೂಲವಾಗಿ ಭಾವನಾ ಸ್ವಾತಂತ್ರ್ಯದ ಚಿಂತನೆಗಳೆ? ಅಥವಾ ವಿಶಿಷ್ಟ ಅಮೆರಿಕನ್ ಆಲೋಚನೆಗಳೆ? ಜಾಕ್ಸನ್ ರೂಪಿಸಿದ ಪ್ರಜಾಪ್ರಭುತ್ವ ಪ್ರೇರೇಪಿಸಿದ ಸ್ವಾಭಿಮಾನ, ಅಜಾಗರೂಕತೆಯ ವ್ಯಯಗಾರಿಕೆ (careless prodigality), ವಿದ್ವತ್ತು ಹಾಗೂ ಪಾಂಡಿತ್ಯಗಳ ಬಗ್ಗೆ ಅಸಡ್ಡೆ ಮತ್ತು ಸಾಧಾರಣತೆಯನ್ನು (ordinary) ಶ್ಲಾಘಿಸುವುದು – ಇವೆಲ್ಲ ಅಮೆರಿಕನ್ನರ ಅನುಭವಗಳಿಂದ ಉತ್ಪಾದನೆಯಾದವೋ ಅಥವಾ ವಿಶಾಲ ಪ್ರಪಂಚ ದೃಷ್ಟಿಯ ಪ್ರತಿಬಿಂಬವೋ?

ಈ ಪ್ರಶ್ನೆಗಳಿಗೆ ನಿಖರವಾದ ಉತ್ತರ ಕೊಡುವುದು ಕಷ್ಟ. ಯಾವ ಕಾರಣದಿಂದಲೋ ಭಾವನಾಸ್ವಾತಂತ್ರ್ಯ ಅಮೆರಿಕದಲ್ಲಿ ಹಿತಕರವಾದ ಆಶ್ರಯ ಪಡೆಯಿತು. ಅಮೆರಿಕನ್ನರು ವಿವಿಧ ಕ್ಷೇತ್ರಗಳಲ್ಲಿ ಭಾವನಾಸ್ವಾತಂತ್ರ್ಯ(romantic)ವಾದ ಕೃತಿಗಳನ್ನು ರಚಿಸಿದರು. ಈ ಕೃತಿಗಳು ಭಾವನಾಸ್ವಾತಂತ್ರ್ಯವನ್ನು ಒಳಗೊಂಡಿದ್ದರೂ ಅವು ಮೂಲ ಹಾಗೂ ಅಪ್ಪಟ ಅಮೆರಿಕನ್ ಕೃತಿಗಳಾಗಿದ್ದವು. ೧೮೫೦-೧೮೫೫ರ ಅವಧಿಯಲ್ಲಿ ಪ್ರಕಟಣೆಯಾದ ಮಹತ್ವದ ಕೃತಿಗಳಲ್ಲಿ ಕೆಲವನ್ನು ಇಲ್ಲಿ ಉಲ್ಲೇಖಿಸಬಹುದು – ನೆಥೇನಿಯಲ್ ಹಾತಾರ್ನ್ (Nathaniel Hawthorne) ಬರೆದ 'ದಿ ಸ್ಕಾರ್ಲೆಟ್ ಲೆಟರ್' ಮತ್ತು ' ದಿ ಹೌಸ್ ಆಫ್ ಸೆವೆನ್ ಗೇಬಲ್ಸ್', ಹರ್ಮನ್ ಮೆಲ್ವಿಲ್‌ನ (Herman Melville) 'ಮಾಬಿ ಡಿಕ್', ಹೆನ್ರಿ ಡೇವಿಡ್ ಥೋರೊ (Henry David Thoreau) ಬರೆದ 'ವಾಲ್ಡೆನ್' ಮತ್ತು ವಾಲ್ಟ್ ವ್ಹಿಟ್‌ಮನ್ (Walt Whitman)ನ ಕೃತಿ 'ಲೀವ್ಸ್ ಆಫ್ ಗ್ರಾಸ್'. ಭಾವನಾಸ್ವಾತಂತ್ರ್ಯ ಚಳುವಳಿ ಈ ಎಲ್ಲ ಬರಹಗಾರರನ್ನು ಪ್ರಭಾವಿತಗೊಳಿಸಿತು. ಇವರು ತಮ್ಮ ಅಮೆರಿಕನ್ ಅನುಭಾವದ ಮೂಲಕ ಭಾವನಾಸ್ವಾತಂತ್ರ್ಯವನ್ನು ತಮ್ಮ ಕೃತಿಗಳಲ್ಲಿ ವ್ಯಕ್ತಪಡಿಸಿ ಅಮೆರಿಕದ ಸೃಜನಶೀಲ ಸಾಹಿತ್ಯದ ಹರಿಕಾರರಾದರು.

ಅನುಭವಾತೀತ ಆತ್ಮಜ್ಞಾನ

ಅಮೆರಿಕದಲ್ಲಿ ಭಾವನಾಸ್ವಾತಂತ್ರ್ಯ ಆಲೋಚನೆ ಮುಖ್ಯವಾಗಿ ಅನುಭವಾತೀತ ಚಿಂತನೆಯ ಮೂಲಕ ಅತ್ಯುತ್ತಮವಾಗಿ ಅಭಿವ್ಯಕ್ತಿಗೊಂಡಿತು. ಅನುಭವಾತೀತ ಚಿಂತನೆ ಯನ್ನು (transcendentalism), ಅಮೆರಿಕನ್ ಇತಿಹಾಸಕಾರರು ತಮ್ಮ ಪೂರ್ವಾಗ್ರಹ

ದಿಂದ (Prejudice) ಒಪ್ಪಿಕೊಳ್ಳದಿದ್ದರೂ, ನಿಜಕ್ಕೂ ಭಾರತೀಯ ವೇದಾಂತ ತತ್ವಜ್ಞಾನ ಮತ್ತು ಪಾಶ್ಚಿಮಾತ್ಯ ತತ್ವಜ್ಞಾನಗಳ ಸಂಗಮದಿಂದ ಉದ್ಭವಿಸಿದ ಚಿಂತನಧಾರೆಯಾಗಿದೆ. ಎಮರ್‌ಸನ್, ಥೋರೊ ಮತ್ತು ವ್ಹಿಟ್‌ಮನ್‌ರ ಕೃತಿಗಳ ಪರಿಚಯು ಇರುವವರಿಗೆ ಇದು ಸ್ಪಷ್ಟವಾಗುವುದರಲ್ಲಿ ಸಂದೇಹವಿಲ್ಲ. ಎಮರ್‌ಸನ್‌ನಂತೆ ಥೋರೊ ತನ್ನ ಕೃತಿಗಳಲ್ಲಿ ಭಾರತೀಯ ತತ್ವಜ್ಞಾನ ಹೇಗೆ ತನ್ನ ಮೇಲೆ ಪ್ರಭಾವ ಬೀರಿತು ಎನ್ನುವುದನ್ನು ಅಲ್ಲಲ್ಲಿ ವಿವರಿಸಿದ್ದಾನೆ. ಅನುಭವಾತೀತ ಆತ್ಮಜ್ಞಾನ ಎಂದರೇನು ಎನ್ನುವುದನ್ನು ವಿವರಿಸುವುದು ಕಷ್ಟ. ಏಕೆಂದರೆ ಅದು ನಿರೂಪಣೆ ಮಾಡಲಾಗದ, ತಿಳುವಳಿಕೆಗೆ ನಿಲುಕದ ಚಿಂತನೆ; ಇದು ಆಧ್ಯಾತ್ಮಿಕ ಹಾಗೂ ಅಂತಃಸ್ಫೂರ್ತಿಯ ಮೂಲಕ ಜೀವನವನ್ನು ನೋಡುವ ದೃಷ್ಟಿ. ವೇದಾಂತ ತತ್ವಜ್ಞಾನದ ಸ್ಥೂಲ ಪರಿಚಯುವಿರುವವರಿಗೆ ಅಮೆರಿಕದ ಈ ಅನುಭವಾತೀತ ಆತ್ಮಜ್ಞಾನದ ಮೂಲ ವೇದ ಮತ್ತು ಉಪನಿಷತ್ತುಗಳೆಂದು ಸ್ಪಷ್ಟ ಪಡುತ್ತದೆ. ಅಮೆರಿಕನ್ ಅನುಭವಾತೀತ ಆತ್ಮಜ್ಞಾನದ ಮೂಲತತ್ವಗಳು ಇದನ್ನು ವ್ಯಕ್ತಪಡಿಸುತ್ತವೆ. ಮಾನವ ಮೂಲತಃ ದೈವಾಂಶಸಂಭೂತನಾದವನು. ಅವನು ಪ್ರಕೃತಿಯ ಒಂದು ಭಾಗ; ದೈವಿಕ ಸತ್ವ ಪ್ರಕೃತಿಯಾಗಿ ಆವಿರ್ಭವಿಸುತ್ತದೆ. ಮಾನವನ ಅಂತಃಸತ್ವವನ್ನು ಬುದ್ಧಿಶಕ್ತಿಯಿಂದ ನಿರೂಪಣೆ ಮಾಡುವುದು ಅಸಾಧ್ಯ. ಏಕೆಂದರೆ ಅವನ ಅಂತಃಸತ್ವ ಆಲೋಚನೆಯನ್ನು ಮೀರಿ ಹೋಗಬಲ್ಲುದು. ಆದ್ದರಿಂದ ಅವನು ತನ್ನ ಅಂತರಂಗವನ್ನು ನಂಬುತ್ತಾನೆ ಮತ್ತು ಆ ನಂಬಿಕೆಯಿಂದ ಆನಂದ ಪಡೆಯುತ್ತಾನೆ. ತನ್ನ ಅಂತಃಸತ್ವದ ನಿಜಲಕ್ಷಣ ಆನಂದ ಎಂದು ಅರಿವಾಗುತ್ತದೆ. ತಾನು ಜಗತ್ತಿನ ಒಂದು ಅಂಗವಾಗಿರುವು ದರಿಂದ ಜಗತ್ತು ಆನಂದಮಯವಾದುದು ಎನ್ನುವ ಭಾವನೆಯ ಅನುಭವವಾಗುತ್ತದೆ.

ಇಂಥ ಅನುಭಾವಿಗಳು ವ್ಯಕ್ತಿವೈಶಿಷ್ಟ್ಯಕ್ಕೆ ಮಹತ್ವ ಕೊಡುತ್ತಾರೆ. ಅವರಿಗೆ ಸಮುದಾಯ ವ್ಯಕ್ತಿಗಳು ಕೂಡಿರುವ ಒಂದು ವ್ಯವಸ್ಥೆಯಲ್ಲದೆ ಬೇರೇನೂ ಅಲ್ಲ. ವ್ಯವಸ್ಥೆ ಗೊಂಡ ಮತಧರ್ಮ ಹಾಗೂ ಸಂಘ-ಸಂಸ್ಥೆಗಳು ಮುಖ್ಯವಲ್ಲ; ವ್ಯಕ್ತಿ ಮುಖ್ಯ. ಪ್ರತಿ ವ್ಯಕ್ತಿಯೂ ತನ್ನ ವ್ಯಕ್ತಿತ್ವವನ್ನು ತನ್ನ ಅಂತಃಶಕ್ತಿಯಿಂದ ಬೆಳೆಸಿಕೊಳ್ಳುತ್ತ ಹೋಗಬೇಕು. ಈ ಬೆಳವಣಿಗೆಗೆ ಮಿತಿಯಿಲ್ಲ. 'ಒಂದು ನಕ್ಷತ್ರಕ್ಕೆ ನಿನ್ನ ಸಾರೋಟನ್ನು ಹೂಡು' (Hitch your wagon to a star) ಎನ್ನುವುದು ಈ ಅನುಭಾವಿಗಳ ಸೂತ್ರವಾಗಿತ್ತು. ಈ ಅನುಭಾವಿ ಆಲೋಚನಾ ಪಥ ಹಿಡಿದವರೆಲ್ಲ ಒಂದು ' ಅನುಭವಾತೀತ ಚಿಂತನಸಭೆ' (transcendental club)ಯ ಸದಸ್ಯರಾಗಿದ್ದರು. ಇದು ಒಂದು ಅನೌಪಚಾರಿಕ ಚರ್ಚಾಕೂಟವಾಗಿತ್ತು. ಈ ಸಭೆ ೧೮೩೬ರಲ್ಲಿ ಬಾಸ್ಟನ್ ನಗರದ ಜಾರ್ಜ್ ರಿಪ್ಲಿ ಎಂಬ ಯೂನಿಟೇರಿಯನ್ ಪಾದ್ರಿಯ ಮನೆಯಲ್ಲಿ ಪ್ರಾರಂಭವಾಯಿತು. ಈ ಸಭೆಯ ಪ್ರತಿಷ್ಠಿತ ಸದಸ್ಯನಾಗಿದ್ದವನು ರಾಲ್ಫ್ ವಾಲ್ಡೊ ಎಮರ್‌ಸನ್ (Ralph Waldo Emerson). ಎಮರ್‌ಸನ್ ಸತ್ತುಹೋದಂತಿದ್ದ ಯೂನಿಟೇರಿಯನ್ ತತ್ವಕ್ಕೆ ಜೀವ ತುಂಬಿ ಅದರ ಧ್ಯೇಯೋದ್ದೇಶಗಳನ್ನು ವಿಶದಪಡಿಸಿದನು. (goal oriented) ಪ್ಯೂರಿಟನ್ನರು

ನಂಬಿದ್ದ ಮಾನವನ ಕರಾಳ ಭವಿಷ್ಯವನ್ನು ಎಮರ್‌ಸನ್ ಒಪ್ಪಲಿಲ್ಲ. ಅವನ ತತ್ವಜ್ಞಾನ ಆಶಾವಾದದಿಂದ, ಉಗ್ರ ವೈಚಾರಿಕತೆಯಿಂದ, ಆತ್ಮಾಭಿಮಾನದಿಂದ, ನ್ಯಾಯನಿಷ್ಠೆಯಿಂದ ಕೂಡಿ ಚೈತನ್ಯದಾಯಕವಾಗಿತ್ತು. ಅವನು ಬದಲಾವಣೆಯನ್ನು ಬಯಸಿ ಪ್ರಗತಿಯಲ್ಲಿ ನಂಬಿಕೆಯಿಟ್ಟಿದ್ದನು. 'ಮನುಷ್ಯ ಹುಟ್ಟಿರುವುದೇ ಸುಧಾರಣೆಗೊಳ್ಳುವುದಕ್ಕಾಗಿ' ಎಂದು ಅವನು ನಂಬಿದ್ದನು. ಸ್ವಾವಲಂಬನೆಯ ಮಹತ್ವವನ್ನು ಪ್ರತಿಪಾದಿಸಿ, ಸರ್ವಶಕ್ತವಾದ ಸರ್ಕಾರವನ್ನು – ಅದು ಯಾವ ಬಗೆಯದೇ ಆಗಿರಲಿ – ಅವನು ವಿರೋಧಿಸಿದನು. 'ನಮ್ಮ ಜೀವನದಲ್ಲಿ ಸರ್ಕಾರ ಎಷ್ಟು ಕಡಿಮೆಯಾದರೆ ಅಷ್ಟು ಒಳ್ಳೆಯದು' ಎಂದು ಅಭಿಪ್ರಾಯಪಟ್ಟಿದ್ದನು. ಎಮರ್‌ಸನ್ ತನ್ನ ಭಾಷಣಗಳಿಂದ ಗಳಿಸಿದ ಹಣದಿಂದ ಜೀವನ ನಡೆಸುತ್ತಿದ್ದನು. ದೇಶದಾದ್ಯಂತ ಬಿಡುವಿಲ್ಲದೆ ಪ್ರಯಾಣ ಮಾಡಿ ಎಲ್ಲ ರೀತಿಯ ಸಭಿಕರನ್ನುದ್ದೇಶಿಸಿ ಭಾಷಣ ಮಾಡುತ್ತಿದ್ದನು. ಪ್ರತಿ ಭಾಷಣಕ್ಕೆ ೫೦ ಡಾಲರ್‌ಗಳ ಸಂಭಾವನೆ ಸಿಗುತ್ತಿತ್ತು.

ಎಮರ್‌ಸನ್ ಮತ್ತು ಥೋರೋ ಕಾಂಕಾರ್ಡ್‌ನಲ್ಲಿ ನೆರೆಹೊರೆಯವರಾಗಿದ್ದರು. ಥೋರೋ ಅಚ್ಚರಿ ಹುಟ್ಟಿಸುವ ವ್ಯಕ್ತಿತ್ವ ಪಡೆದಿದ್ದನು. ಅವನು ವಿನಯಶೀಲ, ಕನಸುಗಾರ ಮತ್ತು ಪ್ರಕೃತಿ ಸೌಂದರ್ಯವನ್ನು ಅಂತಃದೃಷ್ಟಿಯಿಂದ ಆಸ್ವಾದಿಸಿ ಆನಂದ ಪಡುವವ ನಾಗಿದ್ದನು. ಅವನ ವ್ಯಕ್ತಿತ್ವದ ಇನ್ನೊಂದು ಮುಖವೆಂದರೆ, ದೃಢವಾದ ವ್ಯಕ್ತಿನಿಷ್ಠೆ ಮತ್ತು ಅಂತಃದೃಷ್ಟಿಯಿಂದ ಅರಿತ ಸತ್ಯ ಮೌಲ್ಯಗಳಲ್ಲಿ ಅವನಿಗಿದ್ದ ಅಚಲವಾದ ಶ್ರದ್ಧೆ. ತನ್ನ ಸುತ್ತಮುತ್ತಲೂ ಆಗ ಹಣಕ್ಕಾಗಿ ನಡೆಯುತ್ತಿದ್ದ ನೀತಿಗೆಟ್ಟ ಪರದಾಟ ಅವನಲ್ಲಿ ಅಸಹ್ಯ ಹುಟ್ಟಿಸಿತ್ತು. ಅವನಲ್ಲಿ ಕಳವಳವನ್ನೂ ಉಂಟುಮಾಡಿತ್ತು. ಏಕೆಂದರೆ ಈ ಹಣದ ದುರಾಸೆ ದೇಶದ ಪ್ರಕೃತಿ ಸಂಪತನ್ನು ಮತ್ತು ವ್ಯಕ್ತಿಗಳ ಅಂತಃಸತ್ವವನ್ನು ನಾಶಗೊಳಿಸುತ್ತದೆ. ಬಹುಸಂಖ್ಯಾತ ಜನರು ಕೃತ್ರಿಮ ಚಿಂತೆಯಲ್ಲಿ ಮತ್ತು ಜೀವನಕ್ಕೆ ಅನಾವಶ್ಯಕವಾದ ಕೆಲಸಗಳಲ್ಲಿ ನಿರತರಾಗಿ ಉತ್ಕೃಷ್ಟ ಫಲಗಳನ್ನು ಪಡೆಯದೆ ಹೋಗುತ್ತಾರೆ ಎಂದು ವಿಷಾದ ವ್ಯಕ್ತಪಡಿಸಿದನು. ಎಮರ್‌ಸನ್‌ನಂತೆಯೇ ಥೋರೋ ವ್ಯಕ್ತಿಯ ಮೇಲೆ ಸಮಾಜ ನಿರ್ಬಂಧಗಳನ್ನು ಹೊರಿಸುವುದನ್ನು ವಿರೋಧಿಸಿದನು. 'ಅಧಿಕಾರ ಚಲಾಯಿಸದ ಸರ್ಕಾರವೇ ಉತ್ಕೃಷ್ಟ ಸರ್ಕಾರ' ಎನ್ನುವ ಅವನ ಹೇಳಿಕೆ ಜನಪ್ರಿಯವಾಗಿದೆ. ವ್ಯಕ್ತಿವೈಶಿಷ್ಟ್ಯವನ್ನು ಥೋರೋ ಪರಮಾವಧಿಗೆ ಕೊಂಡೊಯ್ದು 'ನಾನೊಬ್ಬ ಬಹುಸಂಖ್ಯಾತ' (The majority of one) ಎಂಬ ದೃಷ್ಟಿಯನ್ನು ಬೆಳೆಸಿಕೊಂಡಿದ್ದನು. 'ಸಜ್ಜನರು ಮತ್ತು ಧೈರ್ಯಶಾಲಿಗಳು ಎಂದಾದರೂ ಬಹುಸಂಖ್ಯಾತರಾಗಿದ್ದರೆ?'. ಒಬ್ಬನು ಎಲ್ಲ ಜನರ ಹೆಜ್ಜೆಯ ಗತಿಗೆ ಹೆಜ್ಜೆ ಹಾಕದಿರಬಹುದು, ಇದಕ್ಕೆ ಬಹುಶಃ ಬೇರೆ ಮದ್ದಳೆಯವನ ತಾಳಕ್ಕೆ ಅವನು ಕಿವಿ ಕೊಟ್ಟಿರುವುದು ಕಾರಣವಿರಬಹುದು' – ಈ ಹೇಳಿಕೆಗಳಲ್ಲಿ ಥೋರೋನ ಉತ್ಕಟ ವ್ಯಕ್ತಿವೈಶಿಷ್ಟ್ಯ ಅಭಿವ್ಯಕ್ತಿಗೊಂಡಿದೆ.

೧೮೪೫ರಲ್ಲಿ ಥೋರೋ 'ಸಂತೃಪ್ತ ಜೀವನವನ್ನು ನಡೆಸಲು ವ್ಯಕ್ತಿ ಸಮಾಜವನ್ನು

ಅವಲಂಬಿಸಬೇಕಾಗಿಲ್ಲ' ಎನ್ನುವ ತತ್ವವನ್ನು ಅನುಷ್ಠಾನಕ್ಕೆ ತರಲು ವಾಲ್ಡೆನ್ ಕೊಳದ ತೀರದಲ್ಲಿ ಒಂದು ಕುಟೀರವನ್ನು ಕಟ್ಟಿಕೊಂಡು ಏಕಾಂಗಿಯಾಗಿ ಎರಡು ವರ್ಷಗಳ ಕಾಲ ವಾಸವಾಗಿದ್ದನು. ಈ ಪ್ರಯೋಗದಿಂದ ಅವನು – ಅಗತ್ಯ ಬಿದ್ದರೆ, ಒಬ್ಬ ವ್ಯಕ್ತಿ ನಾಗರಿಕತೆ ಉತ್ಪಾದಿಸಿದ ವಸ್ತುಗಳನ್ನು ಉಪಯೋಗಿಸದೆ ಬದುಕುವುದು ಸಾಧ್ಯ – ಎನ್ನುವುದನ್ನು ಸಾಬೀತುಗೊಳಿಸಿದನು. ವಾಲ್ಡೆನ್ ಕೊಳದ ತೀರದಲ್ಲಿ ಥೋರೊ ಸುತ್ತಮುತ್ತಣ ಪ್ರಕೃತಿಯನ್ನು ಅವಲೋಕಿಸಿ ಆನಂದಿಸುವುದರಲ್ಲಿ, ಆಳವಾದ ಚಿಂತನೆ ಮತ್ತು ಬರವಣಿಗೆಯಲ್ಲಿ ತನ್ನ ಕಾಲವನ್ನು ಕಳೆಯುತ್ತಿದ್ದನು. ಏಕಾಂತದಲ್ಲಿ ಕಳೆದ ಈ ಕಾಲಾವಧಿಯ ಪ್ರತಿಫಲವೆಂದರೆ ಅವನ ಉತ್ಕೃಷ್ಟ ಕೃತಿ 'ವಾಲ್ಡೆನ್' – ಅಮೆರಿಕದ ಸಾಹಿತ್ಯದಲ್ಲಿ ಅಸಾಧಾರಣ ಕೃತಿ ಎಂದು ಲೋಕವಿಖ್ಯಾತವಾಗಿದೆ. ಮೇಲ್ನೋಟಕ್ಕೆ 'ವಾಲ್ಡೆನ್' ಥೋರೊ ನಡೆಸಿದ 'ಪ್ರಯೋಗ'ದ ಹೃದಯಂಗಮವಾದ ಬರವಣಿಗೆ ಎನಿಸಿದರೂ ಅದು ಸಾಮಾನ್ಯಜನರ ವರ್ತನೆಯ ಕಟುಟೀಕೆಯನ್ನೊಳಗೊಂಡಿದೆ. ವೈಚಾರಿಕತೆಗೆ ಅವಕಾಶವಿಲ್ಲದ ಶ್ರದ್ಧೆ ಮತ್ತು ಸ್ವತಃ ನಿರ್ಧಾರ ಮಾಡದೆ ಗುಂಪು ನಿರ್ಧಾರಕ್ಕೆ ಶರಣು ಹೋಗುವ ಪ್ರವೃತ್ತಿಯನ್ನು ಥೋರೊ ತನ್ನ ಕೃತಿಗಳಲ್ಲಿ ವಿರೋಧಿಸಿ ವಾದ ಮಾಡಿದ್ದಾನೆ. ಅವನು ಅಮೆರಿಕ ಮತ್ತು ಮೆಕ್ಸಿಕೊ ನಡುವಣ ಯುದ್ಧ ಅನೀತಿಯುತ ವಾದುದು; ಏಕೆಂದರೆ ಅದು ಗುಲಾಮಗಿರಿಯನ್ನು ಸಕ್ರಿಯವಾಗಿ ಬೆಂಬಲಿಸಿ ಮುಂದು ವರಿಸುತ್ತದೆ ಎಂದು ಪ್ರತಿಪಾದಿಸಿ, ಮೆಸಾಚ್ಯುಸೆಟ್ಸ್ ಸಂಸ್ಥಾನಕ್ಕೆ ಕೊಡಬೇಕಾಗಿದ್ದ ತಲೆಗಂದಾಯವನ್ನು ಕೊಡಲು ನಿರಾಕರಿಸಿ ಸೆರೆಮನೆವಾಸ ಅನುಭವಿಸಿದನು. ನಂತರ ಥೋರೊ ಬರೆದ 'ನಾಗರಿಕ ಅವಿಧೇಯತೆ' (civil disobedience)ಪ್ರಬಂಧ ಅವನು ಸರ್ಕಾರಕ್ಕೆ ಹಾಕಿದ ಸವಾಲಿನಂತಿದೆ. ಈ ಪ್ರಬಂಧದಲ್ಲಿ ವ್ಯಕ್ತಿ ಮತ್ತು ಸರ್ಕಾರಗಳ ನಡುವಣ ಸಮಂಜಸವಾದ ಸಂಬಂಧ ಹೇಗಿರಬೇಕು ಎನ್ನುವುದನ್ನು ಥೋರೊ ತನ್ನ ದೃಷ್ಟಿಯಿಂದ ವಿವರಿಸಿದ್ದಾನೆ. ಎಮರ್‌ಸನ್‌ನಂತೆ ಇವನು ಯಾವ ಸುಧಾರಣಾ ಚಳುವಳಿ ಯಲ್ಲಿ ಭಾಗವಹಿಸಲಿಲ್ಲ.

ನೆಥೇನಿಯಲ್ ಹಾತಾರ್ನ್ (Nathaniel Hawthorne)

ಮೆಸಾಚ್ಯುಸೆಟ್ಸ್‌ನ ಸೇಲಂ ಊರಿನವನಾದ ನೆಥೇನಿಯಲ್ ಹಾತಾರ್ನ್ ಏಕಾಂಗಿ, ಅಂತರ್ಮುಖಿ, ಪುಸ್ತಕ ಪ್ರೇಮಿ ಮತ್ತು ಪ್ರತಿಭಾಶಾಲಿ. ಬೇಸಿಗೆಯ ಕಾಲದಲ್ಲಿ ಅವನು ನ್ಯೂ ಇಂಗ್ಲೆಂಡ್ ಪ್ರಾಂತದ ಎಲ್ಲ ಕಡೆ ಪ್ರಯಾಣ ಮಾಡಿ ಜಾನಪದ ಐತಿಹ್ಯವನ್ನು ಸಂಗ್ರಹಿಸಿದನು. ಅದರ ಆಧಾರದ ಮೇಲೆ ಅನೇಕ ಸಣ್ಣ ಕತೆಗಳನ್ನು ಬರೆದನು. ಇವನು ಆಗ ಪ್ರಚಲಿತವಾಗಿದ್ದ ಭಾವನಾಸ್ವಾತಂತ್ರ್ಯ ಚಿಂತನದಿಂದ ಪ್ರಭಾವಿತನಾಗಿದ್ದರೂ ಅವನಿಗೆ ಭಾವನಾಸ್ವಾತಂತ್ರ್ಯ ಚಿಂತನಕಾರರ ತೀವ್ರ ಸ್ವಾಭಿಮಾನ ಹಿಡಿಸಲಿಲ್ಲ. ಅವರ ನೀರಸ ಆಶಾವಾದವನ್ನು ಅವನು ನಿರಾಕರಿಸಿದನು. ಗತಕಾಲದ ಇತಿಹಾಸದ ಮೇಲೆ, ವಿಶೇಷವಾಗಿ ತನ್ನ ಪೀಳಿಗೆಯ ಜನರ ಮೇಲೆ ಪ್ರಭಾವ ಬೀರುತ್ತಿದ್ದ ಪ್ಯೂರಿಟನ್ ಸಂಪ್ರದಾಯದ

ಬಗ್ಗೆ ತೀವ್ರ ಆಸಕ್ತಿ ಬೆಳೆಸಿಕೊಂಡಿದ್ದನು. ಅವನು ಭಾವನಾತ್ಮಕ ಚಿಂತನಕಾರನಾಗಿದ್ದನು ಎನ್ನುವುದನ್ನು ಅವನ ಆಳವಾದ ಪ್ರಕೃತಿಪ್ರಿಯತೆಯಲ್ಲಿ ಮತ್ತು ಏಕಾಂತಪ್ರಿಯತೆಯಲ್ಲಿ ನಾವು ಕಾಣಬಹುದು. ಈ ಚಿಂತನೆಯ ಇನ್ನೊಂದು ನಿದರ್ಶನವೆಂದರೆ ಸಾಮಾನ್ಯ ಜನರಲ್ಲಿ ಅವನಿಗಿದ್ದ ಪ್ರೀತಿ. ಮೂರು ಡೆಮೊಕ್ರಾಟಿಕ್ ಅಧ್ಯಕ್ಷರು – ವಾನ್ ಬ್ಯೂರೆನ್, ಪೋಲ್ಕ್ ಮತ್ತು ಪಿಯರ್ಸನ್ – ಅವನಿಗೆ ಸರ್ಕಾರಿ ಕೆಲಸ ಕೊಟ್ಟಿದ್ದರು. ಬೊಡೊಯಿನ್ ಕಾಲೇಜಿನಲ್ಲಿ ಪಿಯ್ಸರಸ್ ಮತ್ತು ಹಾತಾರ್ನ್ ಸಹಪಾಠಿಗಳಾಗಿದ್ದರು.

ಹಾತಾರ್ನ್ ತನ್ನ ಮೊದಲಿನ ಕತೆಗಳಲ್ಲಿ ನ್ಯೂ ಇಂಗ್ಲೆಂಡ್ ಸಂಸ್ಕೃತಿ ಮತ್ತು ಇತಿಹಾಸಗಳನ್ನು ಹಿನ್ನೆಲೆಯಾಗಿ ಅತ್ಯುತ್ತಮವಾಗಿ ಬಳಸಿಕೊಂಡಿದ್ದಾನೆ. ಆದರೆ ಹೆಚ್ಚಿನ ಕತೆಗಳಲ್ಲಿ ನಮಗೆ ಕಂಡುಬರುವುದು ವ್ಯಕ್ತಿಗಳು ತಮ್ಮನ್ನು ತಾವೇ ವಿಮರ್ಶಿಸಿಕೊಂಡಾಗ ಉಂಟಾಗುವ ಪಾಪಪ್ರಜ್ಞೆ, ಪಶ್ಚಾತ್ತಾಪ, ಹೆಮ್ಮೆ ಮತ್ತು ಏಕಾಂಗಿತನಗಳು ಪ್ರಚೋದಿಸುವ ಒಳತೋಟಿ. ೧೮೪೮ರ ಚುನಾವಣೆಯಲ್ಲಿ ಜ಼ಾಕರೆ ಟೇಲರ್ ಅಧ್ಯಕ್ಷನಾದ ಮೇಲೆ ವ್ಹಿಗ್ ಪಕ್ಷದವರು ಹಾತಾರ್ನ್‌ನನ್ನು ಸರ್ಕಾರಿ ಕೆಲಸದಿಂದ ತೆಗೆದುಹಾಕಿದರು. ಕೆಲಸ ಕಳೆದುಕೊಂಡ ಸಮಯದಲ್ಲಿ ಅವನು ಎರಡು ಉತ್ಕೃಷ್ಟ ಕಾದಂಬರಿಗಳನ್ನು ಬರೆದ. ೧೮೫೦ರಲ್ಲಿ ಅವನ 'ದ ಸ್ಕಾರ್‌ಲೆಟ್ ಲೆಟರ್' ಕಾದಂಬರಿ ಪ್ರಕಟವಾಯಿತು. ಈ ಕಾದಂಬರಿಯ ಕಥಾವಸ್ತು ವ್ಯಭಿಚಾರ. ಈ ಕಠೋರ ಸಮಸ್ಯೆಯ ಸಹಾನುಭೂತಿ ವಿಶ್ಲೇಷಣೆ ಕಾದಂಬರಿಯ ತಿರುಳು. ಹಾತಾರ್ನ್ ವ್ಯಭಿಚಾರವನ್ನು ಖಂಡಿಸುವುದಿಲ್ಲ; ಒಬ್ಬಳನ್ನು 'ವ್ಯಭಿಚಾರಿಣಿ' ಎಂದು ತೀರ್ಮಾನಿಸುವ ಜವಾಬ್ದಾರಿಯನ್ನು ಹೊತ್ತ ಪಾದ್ರಿಗಳು ಮುಂತಾದ ಮಿಥ್ಯಾಚಾರಿಗಳನ್ನು ಕ್ರೂರವಾಗಿ ಖಂಡಿಸಿದ್ದಾನೆ. ೧೮೫೧ರಲ್ಲಿ ಅವನ ಎರಡನೆಯ ಕಾದಂಬರಿ 'ದಿ ಹೌಸ್ ಆಫ್ ದ ಸೆವೆನ್ ಗೇಬಲ್ಸ್' ಪ್ರಕಟವಾಯಿತು. ಈ ಕೃತಿಯಲ್ಲಿ ನ್ಯೂ ಇಂಗ್ಲೆಂಡ್ ಪ್ರಾಂತದ ಹಳೆಯ ಕುಟುಂಬವೊಂದರ ಅವನತಿಯನ್ನು ಹಾತಾರ್ನ್ ಮನಸೆಳೆಯುವ ಶೈಲಿಯಲ್ಲಿ ನಿರೂಪಣೆ ಮಾಡಿದ್ದಾನೆ. ಹಾತಾರ್ನ್‌ನಲ್ಲಿ ಮಾನವ ಜೀವನದ ದುರಂತದ ಬಗ್ಗೆ ತೀವ್ರ ಸಂವೇದನೆ ಇದ್ದರೂ ಕೂಡ ಅವನಲ್ಲಿ ಒಂದು ರೀತಿಯ ಗಡಸುತನವಿತ್ತು. ಸಾಧಾರಣತೆ/ಸಾಮಾನ್ಯತೆಯನ್ನು ಅವನು ಸಹಿಸುತ್ತಿರಲಿಲ್ಲ. ತನ್ನ ಕೃತಿಗಳಲ್ಲಿ ಒಂದು ಖಿನ್ನತೆಯ, ರಹಸ್ಯಗರ್ಭಿತವಾದ ಪ್ರಪಂಚವನ್ನು ಸೃಷ್ಟಿಸುವುದರಲ್ಲಿ ಯಶಸ್ಸು ಗಳಿಸಿದರೂ ಸಹ ಅಮೇರಿಕ ಅವನಿಗೆ ನೀರಸವಾದ, ಒಳ್ಳೆಯ ಸಾಹಿತ್ಯಕ್ಕೆ ಸ್ಫೂರ್ತಿ ನೀಡಲಾರದ ದೇಶವಾಗಿ ತೋರಿತು. ಅಮೇರಿಕವನ್ನು ಕುರಿತು 'ಇಲ್ಲಿ ನೆರಳಿಲ್ಲ, ಪ್ರಾಚೀನತೆಯಿಲ್ಲ, ರಹಸ್ಯವಿಲ್ಲ, ಮನಸೆಳೆಯುವ ಅಥವಾ ಖಿನ್ನತೆಗೊಳಿಸುವ ಕೆಡಕುಗಳಿಲ್ಲ, ಸಾಧಾರಣ ಸುಭಿಕ್ಷ ಒಂದಲ್ಲದೆ ಮತ್ತೇನೂ ಇಲ್ಲ!' ಎಂದು ಹೇಳಿದ್ದಾನೆ.

ಹರ್ಮನ್ ಮೆಲ್‌ವಿಲ್ (Herman Melville)

ಹಾತಾರ್ನ್ ಮತ್ತು ಮೆಲ್‌ವಿಲ್ ಗೆಳೆಯರಾಗಿದ್ದರು. ಅವರ ಪರಸ್ಪರ ಪರಿಚಯ

ವಾದದ್ದು ಹಾತಾರ್ನ್ ಪುಸ್ತಕ ಪ್ರಕಾಶಕರಿಂದ. ಆಗ ಮೆಲ್‌ವಿಲ್ ತನ್ನ ಮೊದಲನೆಯ ಕೃತಿ 'ಮಾಬಿ ಡಿಕ್'ನ್ನು ಅರ್ಧದವರೆಗೆ ಬರೆದಿದ್ದ. ಇಬ್ಬರ ಹಿನ್ನೆಲೆ ಬೇರೆಯಾಗಿದ್ದರೂ ಅವರಲ್ಲಿ ಬಹಳ ಹೊಂದಾಣಿಕೆ ಇತ್ತು. ಮೆಲ್‌ವಿಲ್ ೧೫ ವರ್ಷದವನಿದ್ದಾಗ ಶಾಲೆಯನ್ನು ಬಿಟ್ಟು ಸ್ವಲ್ಪಕಾಲ ಬ್ಯಾಂಕಿನಲ್ಲಿ ಕೆಲಸ ಮಾಡಿದ. ನಂತರ ೧೮೩೭ರಲ್ಲಿ ಸಮುದ್ರ ಪರ್ಯಟನೆಗೆ ಹೊರಟ. ಸುಮಾರು ಒಂದೂವರೆ ವರ್ಷ ತಿಮಿಂಗಿಲ (whale) ಬೇಟೆ ಯಾಡುವ ನೌಕೆಯಲ್ಲಿ ನಾವಿಕನಾಗಿ ಕೆಲಸ ಮಾಡಿದನು. ನಂತರ ನೌಕೆ ದಕ್ಷಿಣ ಸಾಗರ ತಲುಪಿದಾಗ ಇವನು ನೌಕೆಯಿಂದ ಹಾರಿ ತಪ್ಪಿಸಿಕೊಂಡು, ಅಲ್ಲಿನ ಮಾರ್ಕ್ವೀಸಾಸ್ ದ್ವೀಪದ ನರಭಕ್ಷಕ ಬುಡಕಟ್ಟಿನವರೊಡನೆ ಸ್ವಲ್ಪ ಕಾಲ ವಾಸ ಮಾಡಿದನು. ಆನಂತರ ಅಲ್ಲಿಂದ ತಹಿತಿ (Tahiti)ಗೆ ಹೋಗಿ ಅಲ್ಲಿ ಒಂದು ವರ್ಷ ಸಮುದ್ರ ತೀರದಲ್ಲಿ ಆಲಸ್ಯದಿಂದ ಕಾಲ ಕಳೆದನು. ೧೮೪೪ರಲ್ಲಿ ಅಮೆರಿಕಕ್ಕೆ ವಾಪಸ್ಸಾದ ನಂತರ ತನ್ನ ಸಾಹಸಗಳನ್ನು ಕುರಿತು ಬರೆಯಲು ಪ್ರಾರಂಭಿಸಿ ಎರಡು ವರ್ಷಗಳ ನಂತರ ಮಾರ್ ಕ್ವೀಸಾಸ್ ದ್ವೀಪದ ನರಭಕ್ಷಕರೊಡನೆ ತಾನು ಕಳೆದ ದಿನಗಳ ಬಗ್ಗೆ 'ಟೈಪೀ' (typee) ಎಂಬ ಹೆಸರಿನ ಕೃತಿಯನ್ನು ಪ್ರಕಟಿಸಿದನು. ಈ ಕೃತಿ ಅತ್ಯಂತ ಯಶಸ್ಸು ಪಡೆಯಿತು. ಏಕೆಂದರೆ ಮೆಲ್‌ವಿಲ್ ಬಿಳಿಯರು ಕಂಡು ಕೇಳರಿಯದ ಭೂಭಾಗಕ್ಕೆ ಹೋಗಿ, ಅಲ್ಲಿ ನೆಲಸಿ, ಅಲ್ಲಿನ ಆದಿವಾಸಿಗಳ ವಿಚಿತ್ರ ನಡೆವಳಿಕೆಗಳನ್ನು ಅವಲೋಕಿಸಿ ಬರೆದ ನಿರೂಪಣೆ ಆ ಕಾಲದಲ್ಲಿ ಪ್ರಚಲಿತವಾಗಿದ್ದ ಭಾವನಾಸ್ವಾತಂತ್ರ್ಯ ಮನೋಭಾವಕ್ಕೆ ತಕ್ಕದ್ದಾಗಿತ್ತು. ನರಭಕ್ಷಕರ ನಡುವೆ ಕೆಲವು ಕಾಲ ಜೀವಿಸಿ ಬಂದಿದ್ದ ಮೆಲ್‌ವಿಲ್ ಜನಪ್ರಿಯನಾಗಿಬಿಟ್ಟ. ಈ ಯಶಸ್ಸು ಅವನಿಗೆ ಸ್ಫೂರ್ತಿ ನೀಡಿ ತನ್ನ ಮೊದಲನೆಯ ಕೃತಿಗೆ ಉತ್ತರಾರ್ಧ (sequel) 'ಒಮೂ' (Omoo) ವನ್ನು ೧೮೪೭ರಲ್ಲಿ ಪ್ರಕಟಿಸಿದನು. ಇದಾದ ಮೇಲೆ ಇನ್ನೂ ಕೆಲವು ಕೃತಿಗಳನ್ನು ಪ್ರಕಟಿಸಿದನು.

ಮೆಲ್‌ವಿಲ್ ಎಮರ್‌ಸನ್‌ನನ್ನು ಮೆಚ್ಚಿಕೊಂಡಿದ್ದನು. ಆದರೆ ಎಮರ್‌ಸನ್‌ನ 'ಸಾಧನೆಯ ಮೂಲಕ ಸುಧಾರಣೆ' – ಅಂದರೆ ವ್ಯಕ್ತಿ ಸುಧಾರಣೆಗೊಳ್ಳುತ್ತ ಹೋಗಬೇಕು ಎನ್ನುವ ಹೇಳಿಕೆ ಹಿಡಿಸಲಿಲ್ಲ. 'ಮಾನವರು ಮೂಲತಃ ಒಳ್ಳೆಯವರು' ಎನ್ನುವ ಎಮರ್‌ಸನ್‌ನ ನಂಬಿಕೆ ಮೆಲ್‌ವಿಲ್‌ಗೆ ಅರ್ಥವಿಲ್ಲದ ಔಪಚಾರಿಕ ಹೇಳಿಕೆ ಎನಿಸಿತು. ಎಮರ್‌ಸನ್‌ನ ವ್ಯಕ್ತಿ ವೈಶಿಷ್ಟ್ಯ ಮೆಲ್‌ವಿಲ್‌ಗೆ ಮರೆಮಾಚಿದ ಸ್ವಪ್ರತಿಷ್ಠೆಯಾಗಿ ತೋರಿತು. ಆದರೂ ಮೆಲ್‌ವಿಲ್ ಎಲ್ಲವನ್ನೂ ತಿರಸ್ಕರಿಸುವ ಕಹಿಮನಸ್ಸಿನವನಾಗಿರಲಿಲ್ಲ. ಅವನ ಕೃತಿಗಳಲ್ಲಿ ಅಮೆರಿಕನ್ ಇಂಡಿಯನ್ನರ ದುಸ್ಥಿತಿಯ ಬಗ್ಗೆ, ಹಡಗುಗಳಲ್ಲಿ ಪ್ರಾಣಿಗಳಂತೆ ರವಾನಿಸಿ ತಂದ ವಲಸೆಗಾರರ ಬಗ್ಗೆ ಆಳವಾದ ಸಹಾನುಭೂತಿ ವ್ಯಕ್ತಪಡಿಸಿದ್ದಾನೆ. ಮೆಲ್‌ವಿಲ್ ಬರೆದ 'ದಿ ಟಾರ್ಟರಸ್ ಆಫ್ ಮೇಯ್ಡ್ಸ್' (The tartarus of Maids) ಎಂಬ ಪ್ರಬಂಧದಲ್ಲಿ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿದ್ದ ಹರೆಯದ ಹೆಣ್ಣುಮಕ್ಕಳ

ಶೋಚನೀಯ ಸ್ಥಿತಿಯನ್ನು ಹೃದಯಂಗಮವಾಗಿ ವಿವರಿಸಿ ಮನುಷ್ಯರನ್ನು ಯಂತ್ರಗಳ ಅಡಿಯಾಳುಗಳನ್ನಾಗಿ ಮಾಡುವ ಸಾಮಾಜಿಕ ವ್ಯವಸ್ಥೆಯನ್ನು ತೀವ್ರವಾಗಿ ಖಂಡಿಸಿದ್ದಾನೆ.

ಹಾತಾರ್ನ್‌ನಂತೆ ಮೆಲ್‌ವಿಲ್ ಕೂಡ 'ಮಾನವನ ಹುಟ್ಟುಗುಣ ಕೆಟ್ಟಗುಣ' (dark side of human nature) ಎಂದು ನಂಬಿದ್ದನು. ಆ ಸಮಯದಲ್ಲಿ ಅವನು ಬರೆಯುತ್ತಿದ್ದ 'ಮಾಬಿ ಡಿಕ್' ಕೃತಿಯನ್ನು ಬೇಗ ಬರೆದು ಮುಗಿಸುವಂತೆ ಹಾತಾರ್ನ್ ಹುಮ್ಮಸ್ಸು ನೀಡಿದನು. ಅದರಂತೆ ಮೆಲ್‌ವಿಲ್ ಆ ಹೆಸರಾಂತ ಕೃತಿಯನ್ನು ೧೮೫೧ರಲ್ಲಿ ಪ್ರಕಟಿಸಿದನು. ಈ ಕಾದಂಬರಿಗೆ ಹಿನ್ನೆಲೆ ತಿಮಿಂಗಿಲದ ಬೇಟೆ. ಈ ಬೇಟೆಯ ವಿವರ ಕೃತಿಯಲ್ಲಿ ನಿರೂಪಣೆಗೊಂಡ ರೀತಿ ಅಸಾದೃಶವಾದುದು. ಅವನು ಈ ಕೃತಿಯಲ್ಲಿ ಸೂಕ್ಷ್ಮವಾಗಿ, ಸಾಂಕೇತಿಕವಾಗಿ ಒಳ್ಳೆಯತನ ಮತ್ತು ದುಷ್ಟತನ, ಧೈರ್ಯ ಮತ್ತು ಹೇಡಿತನ, ನಂಬಿಕೆ, ಮೊಂಡುತನ ಮತ್ತು ಹೆಮ್ಮೆ – ಈ ಸಮಸ್ಯೆಗಳನ್ನು ವಿಶ್ಲೇಷಣೆ ಮಾಡಿದ್ದಾನೆ. ತನ್ನ ಕಾಲನ್ನು ಕಡಿದುಹಾಕಿದ ಮಹಾಗಾತ್ರದ ಬಿಳಿಯ ತಿಮಿಂಗಿಲವನ್ನು (Moby Dick) ರೊಚ್ಚಿನಿಂದ ನಿರಂತರವಾಗಿ ಬೆನ್ನಟ್ಟಿ ಹೋಗಿ ಬೇಟೆಯಾಡುವ ಕ್ಯಾಪ್ಟನ್ ಅಹಬ್ (Captain Ahab) ಸೃಜನಶೀಲ ಸಾಹಿತ್ಯದಲ್ಲಿ ಒಂದು ಅನನ್ಯವಾದ ಪಾತ್ರವಾಗಿದ್ದಾನೆ. ಈ ಕೃತಿ ಜಗತ್ತಿನ ಅತ್ಯುತ್ತಮ ಕಾದಂಬರಿಗಳ ಸಾಲಿಗೆ ಸೇರುವಂಥದು ಎಂದು ಸ್ಪಷ್ಟವಾಗಿ ಹೇಳಬಹುದು.

ವಾಲ್ಟ್ ವ್ಹಿಟ್‌ಮನ್ (Walt Whitman)

೧೮೫೫ರಲ್ಲಿ ಪ್ರಕಟವಾದ ವಾಲ್ಟ್ ವ್ಹಿಟ್‌ಮನ್‌ನ 'ಲೀವ್ಸ್ ಆಫ್ ಗ್ರಾಸ್' ಭಾವನಾಸ್ವಾತಂತ್ರ್ಯ ಯುಗದ ಸಾಹಿತ್ಯದ ಉತ್ಕೃಷ್ಟ ಕೃತಿಗಳಲ್ಲಿ ಕೊನೆಯದು. ಈ ಯುಗದ ಬರಹಗಾರರಲ್ಲಿ ಈತ ಸ್ವಭಾವಸಿದ್ಧ ಅಪ್ಪಟ ಅಮೆರಿಕನ್ ಸಾಹಿತಿಯಾಗಿದ್ದನು. ವ್ಹಿಟ್‌ಮನ್ ಸರಳಜೀವಿ, ಸಾಮಾನ್ಯಜನರೊಡನೆ ಸುಲಭವಾಗಿ ಹೊಂದಿಕೊಂಡು ಹೋಗುವ ಪ್ರವೃತ್ತಿಯವನು. ಎಮರ್‌ಸನ್‌ನ ಬರಹಗಳು ಅವನ ಮೇಲೆ ಪ್ರಭಾವ ಬೀರಿ ಅವನ ಆಲೋಚನೆಗಳನ್ನು ರೂಪಿಸಿದವು. 'ಭಾವನೆಗಳು ಒಳಗೊಳಗೆ ಕುದಿಯುತ್ತಿದ್ದವು, ಎಮರ್‌ಸನ್ ಅವು ಉಕ್ಕಿ ಹರಿಯುವಂತೆ ಮಾಡಿದ'ಎಂದು ಎಮರ್‌ಸನ್‌ನನ್ನು ಶ್ಲಾಘಿಸಿದ್ದಾನೆ. ಅನುಭವಾತೀತ ತತ್ವ ಪ್ರತಿಪಾದಿಸುವ 'ಸ್ಫೂರ್ತಿ ಮತ್ತು ಬಯಕೆ ಎಲ್ಲ ಸಾಧನೆಯ ತಳಹದಿ' ಎನ್ನುವ ಸೂಕ್ತಿ ಅವನ ಮನಸ್ಸಿಗೆ ಹಿಡಿಯಿತು. ಕವಿ ತನ್ನ ಸಹಜ ಪ್ರವೃತ್ತಿಯನ್ನು ಅವಲಂಬಿಸಿದರೆ ತನ್ನ ಭಾವನೆಗಳನ್ನು ಛಂದಸ್ಸು, ಅಂತ್ಯಪ್ರಾಸ ಮುಂತಾದ ನಿಯಮಗಳಿಂದ ಬಂಧಿಸದೆ ಅತ್ಯುತ್ತಮವಾಗಿ ವ್ಯಕ್ತಪಡಿಸಬಹುದು ಎಂದು ಅವನು ನಂಬಿದ್ದನು. ಅವನ 'ಲೀವ್ಸ್ ಆಫ್ ಗ್ರಾಸ್' ಕವನಸಂಕಲನಕ್ಕೆ ಎಮರ್‌ಸನ್ ಮುನ್ನುಡಿ ಬರೆದಿದ್ದಾನೆ. ಆ ಸಂಕಲನದಲ್ಲಿ ವ್ಹಿಟ್‌ಮನ್ 'ಐತಿಹಾಸಿಕವಾಗಿ ಎಲ್ಲಾ ಜನಾಂಗ ಗಳಿಗಿಂತಲೂ ಅಮೆರಿಕನ್ನರಿಗೆ ಹೆಚ್ಚಿನ ಕವಿತಾ ಪ್ರವೃತ್ತಿ ಇದೆ' ಎಂದು ಹೆಮ್ಮೆಯಿಂದ

ಹೇಳಿಕೊಂಡಿದ್ದಾನೆ. ಅವನ ಮುಕ್ತ ಛಂದಸ್ಸಿನ ವಿಚಿತ್ರ ಕವಿತೆಗಳು ಅನೇಕರಿಗೆ ಅಸಂಬದ್ಧ ಪ್ರಲಾಪವಾಗಿ, ಅಸಮಂಜಸ ಕಗ್ಗವಾಗಿ ಕಂಡುಬಂದವು. ವ್ಹಿಟ್‌ಮನ್ ತನ್ನ ಕವನಗಳಿಗೆ ಆರಿಸಿಕೊಂಡ ಅತಿಸಾಧಾರಣ ವಿಷಯಗಳು ಮತ್ತು ಅವನ ಒರಟಾದ ಮತ್ತು ನೀರಸವಾದ ಆಡುಮಾತಿನ ಶೈಲಿ ಓದುಗರ ಮನಸ್ಸಿಗೆ ಆಘಾತ ಉಂಟುಮಾಡಿದವು. ಅವನ ಕವನಗಳಿಗೆ ಕ್ರಮವಾಗಲೀ ಅರ್ಥವಾಗಲೀ ಇದ್ದಂತೆ ತೋರಲಿಲ್ಲ. ಇದರಿಂದಾಗಿ ಆ ಕವನಗಳಲ್ಲಿ ಅಲ್ಲಲ್ಲಿ ಹುದುಗಿರುವ ಅನೇಕ ಸುಂದರವಾದ ಮತ್ತು ಸ್ವಭಾವಸಿದ್ಧ (original) ಭಾಗಗಳು ಓದುಗರ ಕಣ್ಣಿಗೆ ಬೀಳದೆ ಹೋಗುತ್ತಿದ್ದವು.

ವ್ಹಿಟ್‌ಮನ್ ಸಮಸ್ಯೆಗಳು ಸ್ವಯಂಕೃತವಾದವು. ಅವನ ವ್ಯಕ್ತಿತ್ವದಲ್ಲಿ ನಾಟಕೀಯತೆಯೂ ಸೇರಿತ್ತು. ಅವನ ಕೆಲವು ಬರಹಗಳು ಕೃತಕವಾಗಿ ತೋರುತ್ತಿದ್ದವು. ತನ್ನ ಕವನಸಂಗ್ರಹದ ಮೂರು ಬೇಸರ ಬರಿಸುವ ವಿಮರ್ಶೆಗಳನ್ನು ತಾನೇ ಬರೆದು ತನ್ನ ಹೆಸರು ಹಾಕದೆ ಪ್ರಕಟಿಸಿದನು. ನಿಜವಾಗಿ ಅವನು ಸೂಕ್ಷ್ಮ ಮನಸ್ಸಿನ, ಕೋಮಲ ಸ್ವಭಾವದವನಾಗಿದ್ದರೂ ತಾನೊಬ್ಬ ಮಹಾ ಬಲಶಾಲಿಯಾದ ಒರಟು ಮನುಷ್ಯನಂತೆ ವರ್ತಿಸುತ್ತಿದ್ದನು. ಮೇಲಾಗಿ ಅನೈತಿಕ ಸಂಬಂಧಗಳಿಂದ ಆರು ಮಕ್ಕಳನ್ನು ಹುಟ್ಟಿಸಿದ್ದೇನೆ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದ! ಅವನು ಮದುವೆಯಾಗಿಲಿಲ್ಲದ್ದರೂ ಅದು ಸುಳ್ಳು ಎಂದು ಎಲ್ಲರಿಗೂ ಗೊತ್ತಿತ್ತು. ಅವನ ಕೃತಿಗಳಲ್ಲಿ ಹೆಂಗಸರಿಗಿಂತಲೂ ಗಂಡಸರೊಡನೆ ಅವನು ಅನ್ಯೋನ್ಯ ಸಂಬಂಧ ಹೊಂದಿದ್ದನೆಂಬುದು ವ್ಯಕ್ತಗೊಳ್ಳುತ್ತದೆ. ವ್ಹಿಟ್‌ಮನ್ ಅಮೆರಿಕನ್ನರ ಚಾಳಿಯಾದ ಆಡಂಬರಪ್ರಿಯತೆ. ತಾವೇ ಮಹಾ ಎಂದು ತೋರಿಸಿಕೊಳ್ಳುವ ಹಮ್ಮು-ಬಿಮ್ಮುಗಳಿಗೆ ಹೊರತಾಗಿರಲಿಲ್ಲ. ವ್ಹಿಟ್‌ಮನ್‌ಗೆ ಆಡುಮಾತನ್ನು, ಗ್ರಾಮ್ಯ ಭಾಷೆಯನ್ನು ಕಾವ್ಯರೂಪದಲ್ಲಿ ವ್ಯಕ್ತಪಡಿಸುವ ಮತ್ತು ಅಮೆರಿಕನ್ನರ ಆತುರ, ಅನೌಪಚಾರಿಕತೆಯನ್ನು ಗ್ರಹಿಸುವ ಕಲೆ ಕರಗತವಾಗಿತ್ತು. ಎಮರ್‌ಸನ್ ಮತ್ತು ಥೋರೊನಂಥ ಅತ್ಯುತ್ತಮ ಬರಹಗಾರರ ಚಿಂತನಧಾರೆ ಅಮೆರಿಕನ್ ಸಂಸ್ಕೃತಿಯ ವ್ಯಕ್ತಿವೈಶಿಷ್ಟ್ಯದ, ಸ್ವಾವಲಂಬನೆಯ ಮತ್ತು ಸಾಹಸದ – ಒಟ್ಟಿನಲ್ಲಿ, ಈ ನೂತನ ರಾಷ್ಟ್ರದ ಅಂತಃಸತ್ವವಾಗಿದೆ.

ವಿಮೋಚನಾ ಚಳುವಳಿಗಳು

ಅಂತರ್ಯುದ್ಧ ಪೂರ್ವದ ಅಮೆರಿಕದಲ್ಲಿ ಗುಲಾಮಗಿರಿಯನ್ನು ರದ್ದುಗೊಳಿಸುವುದು ಮತ್ತು ಮಹಿಳೆಯರ ಹಕ್ಕುಬಾಧ್ಯತೆಗಳಿಗಾಗಿ ಹೋರಾಟ, ಇವು ಅತ್ಯಂತ ಮುಖ್ಯವಾದ ಧ್ಯೇಯಗಳಾಗಿದ್ದವು. ೧೮೩೦ರ ದಶಕದಲ್ಲಿ ವಿಲಿಯಂ ಲಾಯ್ಡ್ ಗ್ಯಾರಿಸನ್ (William Lloyd Garrison) ಗುಲಾಮರ ಬಿಡುಗಡೆಗಾಗಿ ಹೋರಾಡಿದನು. ತನ್ನ ಬರವಣಿಗೆಯಲ್ಲಿ ಗುಲಾಮರ ಒಡೆಯರ ಮೇಲೆ ಬೆಂಕಿ ಕಾರುತ್ತಿದ್ದ ಈ ಪತ್ರಿಕಾ ಸಂಪಾದಕನನ್ನು ಹಿಡಿದು ನೇಣು ಹಾಕಬೇಕೆಂದು ಹವಣಿಸುತ್ತಿದ್ದ ಉದ್ರಿಕ್ತ ಜನರ ಗುಂಪಿನಿಂದ ಹಲವಾರು ಬಾರಿ

ರಕ್ಷಿಸಬೇಕಾಗಿ ಬಂತು. ಗ್ಯಾರಿಸನ್‌ನಂತೆ ಅತಿರೇಕಕ್ಕೆ ಹೋಗದ, ಮಧ್ಯಮಪರ ವ್ಯಕ್ತಿಗಳ ನಾಯಕತ್ವದಲ್ಲಿ ಈ ಗುಲಾಮ ವಿಮೋಚನಾ ಚಳುವಳಿ ಅಮೆರಿಕದ ಉತ್ತರ ಪ್ರಾಂತಗಳಲ್ಲಿ, ವಿಶೇಷವಾಗಿ ನ್ಯೂ ಇಂಗ್ಲೆಂಡ್ ಪ್ರಾಂತದಲ್ಲಿ ಹರಡಿಕೊಂಡಿತು. ಇಂಥ ವಿಮೋಚನಾ ಚಳುವಳಿಯಿಂದ ಹೆಂಗಸರ ಹಕ್ಕುಬಾಧ್ಯತೆಗಳ ಹೋರಾಟ ಸ್ಫೂರ್ತಿ ಪಡೆಯಿತು. ಆ ಕಾಲದಲ್ಲಿ ಹೆಂಗಸರು ಕಾನೂನಿನಂತೆ ಅವರ ಪಿತೃಗಳ, ಪತಿಯರ ಹಾಗೂ ಭ್ರಾತೃಗಳ ಅಧೀನದಲ್ಲಿ ಇರಬೇಕಾಗಿತ್ತು. ಅವರಿಗೆ ಆಸ್ತಿಯ ಮೇಲೆ ಹಾಗೂ ತಮ್ಮ ಮಕ್ಕಳ ಮೇಲೆ ಕೂಡ ಯಾವ ಹಕ್ಕೂ ಇರಲಿಲ್ಲ. ೧೮೩೦ರ ಹೊತ್ತಿಗೆ ಕೆಲವು ಹೆಂಗಸರು ಪರಾಧೀನತೆ ಯಿಂದ ಪಾರಾಗಿ ಉಪಾಧ್ಯಾಯ ವೃತ್ತಿಯಲ್ಲಿ, ಲೇಖಕಿಯರಾಗಿ ಮತ್ತು ಸಂಪಾದಕಿಯರಾಗಿ ಜೀವನ ನಡೆಸಲು ಸಮರ್ಥರಾದರು. ಆದರೂ ಸಹ ಮಹಿಳೆಯರಲ್ಲಿ ಬಹುಸಂಖ್ಯಾತರು ಸಂಪ್ರದಾಯಬದ್ಧರಾಗಿ ಸಂಸಾರದ ಸರಹದ್ದಿನೊಳಗೆ ಸತಿಯರಾಗಿ, ತಾಯಂದಿರಾಗಿ ಮನೆಗೆಲಸದಲ್ಲಿ ನಿರತರಾಗಿ ತಮ್ಮ ಬದುಕನ್ನು ಸವೆಸುತ್ತಿದ್ದರು.

ಸಮಾಜಸುಧಾರಣೆ ವಿದ್ಯಾವಂತ, ಮಧ್ಯಮವರ್ಗದ ಮಹಿಳೆಯರಿಗೆ ತಮ್ಮ ಕಾರ್ಯ ಕೌಶಲವನ್ನು ತೋರಿಸಲು ಹೊಸ ಕ್ಷೇತ್ರವನ್ನು ಸೃಷ್ಟಿಸಿತು. ಅವರು ಪ್ರಾಟೆಸ್ಟೆಂಟ್ ಮತಪ್ರಚಾರದಲ್ಲಿ ಮುಖ್ಯ ಪಾತ್ರ ವಹಿಸಿ ಪ್ರಾಟೆಸ್ಟೆಂಟ್ ಪಾದ್ರಿಗಳನ್ನು ಅಮೆರಿಕದ ಪಶ್ಚಿಮ ಪ್ರದೇಶಕ್ಕೆ ಮತ್ತು ವಿದೇಶಗಳಿಗೆ ಕಳುಹಿಸಲು ವ್ಯವಸ್ಥೆ ಮಾಡಿ ಕ್ರೈಸ್ತಮತ ಪ್ರಚಾರ ಕಾರ್ಯದಲ್ಲಿ ಸಹಾಯಕರಾಗಿದ್ದರು. ಮದ್ಯಪಾನ ನಿರೋಧ, ಬಡತನ ನಿವಾರಣೆ, ಕೈದಿಗಳ ಸುಧಾರಣೆ ಮತ್ತು ಮನೋರೋಗಿಗಳ ಶುಶ್ರೂಷೆ ಮುಂತಾದ ಕಾರ್ಯಗಳಲ್ಲಿ ನಿರತರಾಗಿದ್ದರು. ವಿಲಿಯಂ ಲಾಡ್ (William Ladd) ಮತ್ತು ಎಲಿಹು ಬರ್‍ರಿಟ್ (Elihu Burrit) ಪ್ರಾರಂಭಿಸಿದ ಶಾಂತಿಸ್ಥಾಪನಾ ಯೋಜನೆಯಲ್ಲಿ ಮಹಿಳೆಯರು ಸಕ್ರಿಯ ವಾಗಿ ಭಾಗವಹಿಸಿದ್ದರು. ಗಂಡಸರ ಮತ್ತು ಹೆಂಗಸರ ಲೈಂಗಿಕ ನಡವಳಿಕೆಗಳನ್ನು ನೀತಿಯುತ ವಾಗಿ ಮಾಡುವ ಕಾರ್ಯವನ್ನು ಕೈಗೊಂಡರು.

ಗುಲಾಮ ವಿಮೋಚನೆ ಅಮೆರಿಕ ಮಹಿಳೆಯರ ಪ್ರಥಮ ಧ್ಯೇಯವಾಗಿತ್ತು. ೧೮೪೦ರ ದಶಕದಲ್ಲಿ ಗುಲಾಮರ ಬಿಡುಗಡೆಗೆ ವಿರೋಧಿಗಳು ಮತ್ತು ಮಹಿಳೆಯರಿಗೆ ಸಮಾನಸ್ಥಾನ ನಿರಾಕರಿಸಿದ ನಾಯಕರನ್ನು ಎದುರಿಸಿ ಎಲಿಜ಼ಬೆತ್ ಸ್ಟಾಂಟನ್ (Elizabeth Stanton) ಲುಕ್ರಿಷಿಯಾ ಮಾಟ್ (Lucretia Mott) ಮತ್ತು ಎಂಜಲಿನ ಹಾಗೂ ಸಾರಾ ಗ್ರಿಮ್‌ಕೆ (Angelina and Sarah Grimke) ಮಹಿಳೆಯರ ಹಕ್ಕುಗಳ ಚಳುವಳಿಯನ್ನು ಪ್ರಾರಂಭಿಸಿದರು. ಮೇಲೆ ತಿಳಿಸಿದ ವಿಲಿಯಂ ಲಾಯ್ಡ್ ಗ್ಯಾರಿಸನ್ ಇವರ ಚಳುವಳಿಗೆ ಬೆಂಬಲ ನೀಡಿದನು. ಇವರು ಪ್ರಾರಂಭಿಸಿದ ಚಳುವಳಿ ೧೮೪೮ರಲ್ಲಿ ಸೆನೆಕಾ ಜಲಪಾತ (Seneca falls) ಸಮ್ಮೇಳನದಲ್ಲಿ ಉಚ್ಛ್ರಾಯ ಸ್ಥಿತಿಗೆ ತಲುಪಿತು. ಆ ಸಮ್ಮೇಳನದ ಸದಸ್ಯರು ಅಮೆರಿಕ ಸ್ವಾತಂತ್ರ್ಯ ಘೋಷಣೆಯನ್ನು ಅನುಸರಿಸಿ ಹನ್ನೆರಡು ಅಂಶಗಳ

ಅನಿಸಿಕೆ/ಮನೋಭಾವಗಳ (sentiments) ಘೋಷಣೆಯನ್ನು ಪ್ರಕಟಿಸಿದರು. ಗಂಡಸರು ಹೆಂಗಸರನ್ನು ಅಧೀನರನ್ನಾಗಿ ಮಾಡಿ ದಬ್ಬಾಳಿಕೆ ನಡೆಸುತ್ತಿದ್ದಾರೆ ಎಂದು ಆರೋಪಣೆ ಮಾಡಿ, ಹೆಂಗಸರನ್ನು ವ್ಯಾಪಾರ ಉದ್ಯಮಗಳಲ್ಲಿ ಮತ್ತು ವಾಣಿಜ್ಯ ವ್ಯವಹಾರಗಳಲ್ಲಿ ಭಾಗವಹಿಸದಂತೆ ಮಾಡಿರುವ ಪದ್ಧತಿಯನ್ನು ರದ್ದುಗೊಳಿಸಬೇಕೆಂದು ಆಗ್ರಹಪಡಿಸಿ, ಹಾಗೆಯೇ ಹೆಂಗಸರಿಗೆ ವಿದ್ಯಾಭ್ಯಾಸದ ಅವಕಾಶ ದೊರಕದಂತೆ ಮಾಡಿ, ಆಸ್ತಿಗೆ ಹಕ್ಕುದಾರರಾಗದಂತೆ ಮಾಡಿರುವ ಅನ್ಯಾಯವನ್ನು ಖಂಡಿಸಿ, ಪವಿತ್ರ ಮತದಾನದ ಹಕ್ಕನ್ನು ಮಹಿಳೆಯರಿಗೆ ನೀಡಲೇಬೇಕೆಂದು ತಮ್ಮ ಅಂತಿಮ ನಿರ್ಧಾರ (ultimatum)ವನ್ನು ಸಮ್ಮೇಳನದಲ್ಲಿ ಘೋಷಿಸಲಾಯಿತು.

ಮುಂದಿನ ಪೀಳಿಗೆಯಲ್ಲಿ ಹೆಂಗಸರ ಹಕ್ಕು ಬಾಧ್ಯತೆಗಳ ಚಳುವಳಿ ಅಮೆರಿಕದ ಉತ್ತರ ಪ್ರಾಂತಗಳಲ್ಲಿ ವಿಶಾಲವಾಗಿ ಹಬ್ಬಿ ವರ್ಷ ವರ್ಷವೂ ವೃದ್ಧಿಗೊಂಡು, ವಿಜಯಗಳಿಸಿತು. ಈ ಚಳುವಳಿ ಗಳಿಸಿದ ವಿಶಿಷ್ಟ ವಿಜಯವೆಂದರೆ ಹೆಂಗಸರು ಆಸ್ತಿಯ ಹಕ್ಕು ಅಥವಾ ಉತ್ತರಾಧಿಕಾರ (property rights) ಪಡೆದಿದ್ದಲ್ಲದೆ ಮತ್ತು ವಿವಾಹ ವಿಚ್ಛೇದನದ ನಂತರ ತಮ್ಮ ಮಕ್ಕಳನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಹಕ್ಕು (custody) ಪಡೆದಿದ್ದು. ಆಗಿನ ಪರಿಸ್ಥಿತಿಯಲ್ಲಿ ಈ ವಿಜಯ ಒಂದು ಅದ್ಭುತ ಸಾಧನೆಯಾಗಿತ್ತು. ಅದೇ ಸಮಯದಲ್ಲಿ ಉನ್ನತ ಆದರ್ಶಗಳಿಂದ ಸ್ಫೂರ್ತಿಗೊಂಡ ಸಾಮಾಜಿಕ ಬದಲಾವಣೆ ಕೆಲವು ಕಡೆಗಳಲ್ಲಿ ಪ್ರಾರಂಭವಾಗಿತ್ತು. ಅಮೆರಿಕದ ಉತ್ತರ ಪ್ರಾಂತಗಳಲ್ಲಿ ಜರುಗುತ್ತಿದ್ದ ವಿದ್ಯಮಾನಗಳು ಅನೇಕ ಜನರನ್ನು ಅಸಂತುಷ್ಟರನ್ನಾಗಿ ಮಾಡಿದ್ದವು; ತ್ವರಿತಗತಿಯಿಂದ ಬದಲಾಗುತ್ತಿದ್ದ ಜೀವನ ಶೈಲಿ, ವ್ಯಾಪಾರಿ ಮನೋಭಾವದಿಂದ ಪ್ರಭಾವಿತಗೊಂಡ, ಮಾನವೀಯತೆಯಿಲ್ಲದ ಸಾಮಾಜಿಕ ಸಂಬಂಧಗಳು, ವ್ಯಕ್ತಿ ಸಂಬಂಧವಿಲ್ಲದ ಅನೌಪಚಾರಿಕ ಸಂಘ ಸಂಸ್ಥೆಗಳು ಅನುಕೂಲಕರವಾಗಿದ್ದರೂ ಅತೃಪ್ತಿಗೆ ಕಾರಣವಾಗಿದ್ದವು. ಆದ್ದರಿಂದ ಅನೇಕರು ಅವುಗಳಿಂದ ಆದಷ್ಟು ದೂರವಿರಲು ಬೇರೆ ಜೀವನ ರೀತಿಗಳನ್ನು ಅನುಸರಿಸಿದರು. ಈ ಬೇರೆ ರೀತಿಯ ಸಾಮಾಜಿಕ ವ್ಯವಸ್ಥೆಗಳು ವ್ಯಾಪಾರೀ ಮನೋಭಾವಕ್ಕೆ ವಿರುದ್ಧವಾದ ಪರಸ್ಪರ ಸಹಾಯ, ಸಾಮಾಜಿಕ ನ್ಯಾಯ ಮತ್ತು ಸೌಹಾರ್ದತೆಗಳ ತಳಹದಿಯ ಮೇಲೆ ರಚನೆಗೊಂಡಿದ್ದವು. ಈ ಸಾಮಾಜಿಕ ವ್ಯವಸ್ಥೆಗಳು ಸಣ್ಣ ಸಮುದಾಯಗಳಾಗಿ ಬೆಳೆದವು. ಈ ಸಮುದಾಯಗಳಲ್ಲಿ 'ಜನರು ಸ್ವಭಾವತಃ ಉಪಕಾರಿಗಳು ಮತ್ತು ಉದಾರಿಗಳು' ಎನ್ನುವ ನಂಬಿಕೆ ಪ್ರಧಾನವಾಗಿತ್ತು. ಇದರ ಆಧಾರದ ಮೇಲೆ ಅನೇಕ ಪ್ರಾಯೋಗಿಕ (experimental)ಸಮುದಾಯಗಳು ಅಸ್ತಿತ್ವಕ್ಕೆ ಬಂದವು. ಷೇಕರ್ ಸಮುದಾಯಗಳು (Shaker communities), ಒನ್ಯೆಡ ಸಮುದಾಯ (Oneida communities) ಇವು ಕ್ರೈಸ್ತಮತದ ಆದರ್ಶದ ಆಧಾರದ ಮೇಲೆ ರಚನೆಗೊಂಡಿದ್ದವು. ಇನ್ನೂ ಕೆಲವು ಉದಾಹರಣೆಗಳು: 'ನ್ಯೂ ಹಾರ್ಮನಿ' (New Harmony) ಬ್ರೂಕ್ ಫಾರ್ಮ್ (Brook Farm) ಮತ್ತು ಹೊರೇಸ್ ಗ್ರೀಲಿ (Horace Greely) ಎಂಬ ಪತ್ರಕರ್ತನು

ಪ್ರಚುರಗೊಳಿಸಿದ 'ಸಾಮಾಜಿಕ ಸಮತಾವಾದ' ಆಧಾರಿತ ಫೌರೀಯಸ್ಟ್ ಫಲಾಂಕ್ಸ್‌ಸ್ (Fouriest Phalanxes) ಮುಂತಾದ ಲೌಕಿಕ ತತ್ವಗಳ ಆಧಾರದ ಮೇಲೆ ರಚನೆಗೊಂಡ ಸಂಘ ಸಂಸ್ಥೆಗಳು ಅಲ್ಲಲ್ಲಿ ಹುಟ್ಟಿಕೊಂಡವು. ಇವು ಬಹಳ ಕಾಲ ಉಳಿಯಲಿಲ್ಲ. ಧಾರ್ಮಿಕ ತತ್ವಗಳನ್ನು ಅನುಸರಿಸಿ ಕಾರ್ಯಾಚರಣೆ ಮಾಡುತ್ತಿದ್ದ ಕೆಲವು ಸಮುದಾಯಗಳು ಮತ್ತು ಸಂಸ್ಥೆಗಳು ಹೆಚ್ಚು ಕಾಲ ಉಳಿದುಕೊಂಡವು. ಅಳಿದುಳಿದ ಅಂಥ ಸಮುದಾಯಗಳನ್ನು ಅಮೆರಿಕದಲ್ಲಿ ಈಗಲೂ ಅಲ್ಲಲ್ಲಿ ಕಾಣಬಹುದು.

ಗುಲಾಮ ವಿಮೋಚನಾ ಚಳುವಳಿ

೧೮೧೦ರ ದಶಕದಲ್ಲಿ ಅನೇಕ ಸುಧಾರಣಾ ಆಂದೋಳನಗಳು ಜರುಗಿದವು. ಈ ಎಲ್ಲಾ ಆಂದೋಳನಗಳಲ್ಲಿ ಅತ್ಯಂತ ಆಸ್ಫೋಟನಕಾರಿಯಾದುದೆಂದರೆ ಗುಲಾಮ ವಿಮೋಚನಾ ಚಳುವಳಿ. ಲೋಕಾನುರಾಗಿಗಳಾದ ಜನರು ಮತ್ತು ನಾಯಕರು ಗುಲಾಮರ ದಾರುಣ ಸ್ಥಿತಿಗತಿಗಳ ಬಗ್ಗೆ ಮತ್ತು ಅವರ ಒಡೆಯರು ಗುಲಾಮರನ್ನು ಜಾನುವಾರುಗಳಂತೆ ಮಾರುವುದು ಮತ್ತು ಕೊಳ್ಳುವುದು – ಈ ಅಮಾನುಷ ಪದ್ಧತಿಗಳ ವಿರುದ್ಧವಾಗಿ ಸಿಡಿದೆದ್ದರು. ಗುಲಾಮರಿಗೆ ರಾಜಕೀಯ ಮತ್ತು ನಾಗರಿಕ ಹಕ್ಕುಗಳನ್ನು ನಿರಾಕರಿಸಿದ್ದು ಡೆಮೊಕ್ರಾಟಿಕ್ ಪಕ್ಷದವರಿಗೆ ಅನ್ಯಾಯದ ಪರಮಾವಧಿಯಾಗಿ ಕಂಡುಬಂತು. ಗುಲಾಮರಿಗೆ ತಮ್ಮ ಸ್ಥಿತಿಗಳನ್ನು ಉತ್ತಮ ಪಡಿಸಿಕೊಳ್ಳಲು ಯಾವ ಅವಕಾಶವನ್ನೂ ಕೊಡದಿರುವುದು ಅತ್ಯಂತ ಕ್ರೂರವಾದ ಹಿಂಸೆ ಎಂದು ಸಮಾಜಸುಧಾರಕರು ವಾದಿಸಿದರು. ಗುಲಾಮ ವಿಮೋಚನಾ ಚಳುವಳಿ ಬಹಳ ವರ್ಷಗಳವರೆಗೂ ಹೆಚ್ಚು ಬೆಂಬಲಿಗರನ್ನು ಆಕರ್ಷಿಸಲಿಲ್ಲ. ಅಮೆರಿಕದಲ್ಲಿ ಗುಲಾಮಗಿರಿಯನ್ನು ತೆಗೆದುಹಾಕಲು ಸಾಧ್ಯವೇ ಇಲ್ಲವೆಂದು ಜನರು ನಂಬಿದ್ದರು. ಆಳವಾಗಿ ಬೇರುಬಿಟ್ಟಿರುವ ಈ ಪದ್ಧತಿಯನ್ನು ತೆಗೆದುಹಾಕಲು ದೇಶದಾದ್ಯಂತ ದೊಡ್ಡ ಕ್ರಾಂತಿಯಾದರೆ ಮಾತ್ರ ಸಾಧ್ಯವಾಗಬಹುದೆಂದು ಜನರು ಅಭಿಪ್ರಾಯಪಟ್ಟಿದ್ದರು. ಗುಲಾಮಗಿರಿಯ ನಿಯಂತ್ರಣ ಕೇಂದ್ರ ಸರ್ಕಾರದ (federal) ಜವಾಬ್ದಾರಿಯಾಗಿರಲಿಲ್ಲ; ಗುಲಾಮಗಿರಿಗೆ ಆಯಾ ಸಂಸ್ಥಾನಗಳ ಕಾಯಿದೆಗಳು ಆಧಾರವಾಗಿದ್ದವು. ಈ ಪರಿಸ್ಥಿತಿಯಲ್ಲಿ ಬಲಪ್ರಯೋಗದಿಂದ ಗುಲಾಮಗಿರಿಯನ್ನು ತೊಡೆದುಹಾಕಬೇಕೆಂದು ವಾದಿಸುವುದು ಬೇಜವಾಬ್ದಾರಿತನವಾಗಿ ಜನರಿಗೆ ಕಾಣಿಸಿತು. ಗುಲಾಮಗಿರಿಯ ವಿರೋಧಿಗಳು ವಿಮೋಚನಾ ಚಳುವಳಿಯ ಆರಂಭದ ದಿನಗಳಲ್ಲಿ ಉಗ್ರಗಾಮಿಗಳಾಗಿ ವರ್ತಿಸದೆ ಗುಲಾಮರ ಒಡೆಯರಿಗೆ ಅವರನ್ನು ಕರುಣೆಯಿಂದ ಕಾಣುವಂತೆ ಆಗ್ರಹ ಪಡಿಸಿದರು. ಕೆಲವು ವಿಮೋಚನಾಕಾರರು ಗುಲಾಮರಿಗೆ ಇಂದಲ್ಲದಿದ್ದರೂ ಮುಂದೆ ಎಂದಾದರೊಂದು ದಿನ, ಅವರು ಪಟ್ಟ ವರ್ಣಿಸಲಸದಳವಾದ ಕಷ್ಟ ಕಾರ್ಪಣ್ಯಗಳು ಕೊನೆಗೊಂಡು, ಒಳ್ಳೆಯ ಕಾಲ ಬರಲಿದೆ, ಅದಕ್ಕಾಗಿ ಸಂಯಮದಿಂದ ವರ್ತಿಸಬೇಕಾದುದು ಅಗತ್ಯವೆಂದು ಒತ್ತಿ ಹೇಳಿದರು. ಈ ವಿಮೋಚನಾಕಾರರು ಗುಲಾಮಗಿರಿಯನ್ನು ತೊಲಗಿಸಲು ಸಾವಕಾಶವಾಗಿ ಸುವ್ಯವಸ್ಥೆಯಿಂದ ಪ್ರಜೆಗಳು ನಡೆಸುವ ಚಳುವಳಿಯಿಂದ ಮಾತ್ರ ಸಾಧ್ಯ; ಬಲಪ್ರದರ್ಶನ,

ಹೋರಾಟ ಮತ್ತು ಹಿಂಸಾಕೃತ್ಯಗಳು ಸಮಸ್ಯೆಯನ್ನು ಸಂಕೀರ್ಣಗೊಳಿಸಿ ದ್ವೇಷ, ಸೇಡು ತೀರಿಸಿಕೊಳ್ಳುವುದು ಮತ್ತು ಇತರ ನಿರರ್ಥಕವಾದ ಚಟುವಟಿಕೆಗಳಲ್ಲಿ ಕೊನೆಗೊಳ್ಳುತ್ತದೆ ಎಂದು ಎಚ್ಚರಿಕೆ ನೀಡಿದರು. ಆದರೆ ೧೮೩೦ರ ದಶಕದ ಉದ್ರೇಕ ಪರಿಸ್ಥಿತಿಯಲ್ಲಿ ವಿಮೋಚನಾವಾದಿ ಉಗ್ರಗಾಮಿಗಳು ಈ ಎಚ್ಚರಿಕೆಗೆ ಕಿವಿಗೊಡಲಿಲ್ಲ. ಇವರಲ್ಲಿ ಪ್ರಮುಖನಾಗಿದ್ದವನು ಮೆಸಾಚ್ಯುಸೆಟ್ಸ್‌ನ ವಿಲಿಯಂ ಲಾಯ್ಡ್ ಗ್ಯಾರಿಸನ್. ಈ ಉಗ್ರಗಾಮಿಯು ಗುಲಾಮರ ವಿಮೋಚನೆ ತಕ್ಷಣವೇ ಆಗಬೇಕೆಂದು ವಾದಿಸಿದನು. 'ನೀಗ್ರೊಗಳನ್ನು ಬಿಡುಗಡೆ ಮಾಡಬೇಕಾದುದು ಅನಿವಾರ್ಯ, ಬಿಡುಗಡೆಯಾದ ನೀಗ್ರೊಗಳನ್ನು ಬಿಳಿಯರು ಸಮಾನತೆಯಿಂದ ಕಾಣಬೇಕಾದುದು ಅನಿವಾರ್ಯ' ಎಂದು ಗ್ಯಾರಿಸನ್ ತನ್ನ ಅನುಯಾಯಿಗಳಿಗೆ ಬೋಧಿಸುತ್ತಿದ್ದನು. ೧೮೩೧ರಲ್ಲಿ ಗ್ಯಾರಿಸನ್, 'ದಿ ಲಿಬರೇಟರ್' ಎನ್ನುವ ತನ್ನ ಸ್ವಂತ ವೃತ್ತಪತ್ರಿಕೆಯನ್ನು ಪ್ರಾರಂಭಿಸಿದನು. ಮೇಲಾಗಿ ನ್ಯೂ ಇಂಗ್ಲೆಂಡ್ ಪ್ರಾಂತದಲ್ಲಿ 'ಗುಲಾಮಗಿರಿ ವಿರೋಧಿ ಸಂಘ'ವನ್ನು ಸ್ಥಾಪಿಸಿದನು; ಅದೇ ಸಮಯದಲ್ಲಿ ವಿಶಾಲವ್ಯಾಪ್ತಿಯುಳ್ಳ 'ಅಮೆರಿಕನ್ ಗುಲಾಮಗಿರಿ ವಿರೋಧಿ ಸಂಘ'ವನ್ನು ಹುಟ್ಟುಹಾಕಿದನು.

ಹೆಚ್ಚು ಬಿಳಿಯರು ಗ್ಯಾರಿಸನ್ ವಾದವನ್ನು ಒಪ್ಪಿಕೊಳ್ಳಲು ತಯಾರಿರಲಿಲ್ಲ. ಆದರೆ ತಿಯೊಡೊರ್ ಡ್ವೈಟ್ ವೆಲ್ಡ್ (Theodore Dwight Weld) ಎಂಬುವನು ಹೆಚ್ಚು ಅನುಯಾಯಿಗಳನ್ನು ಆಕರ್ಷಿಸಲು ಸಮರ್ಥನಾದನು. ವೆಲ್ಡ್ ಕ್ರಿಶ್ಚಿಯನ್ ಉಪದೇಶಿಗಳ ಮಾರ್ಗವನ್ನನುಸರಿಸಿ ಜನರ ಮೆಚ್ಚುಗೆ ಪಡೆದನು. ಅವನ ಗುಲಾಮಗಿರಿ ವಿರೋಧಿ ಸಭೆಗಳು ಅನೇಕ ದಿನಗಳವರೆಗೆ ನಿರಂತರವಾಗಿ ನಡೆಯುತ್ತಿದ್ದವು. ೧೮೫೦ರ ಹೊತ್ತಿಗೆ ವೆಲ್ಡ್‌ನ ಪರಿಣಾಮಕಾರಿಯಾದ ಭಾಷಣಗಳಿಂದ ಪ್ರಭಾವಿತರಾದ ಸುಮಾರು ೨೦೦,೦೦೦ ಅಮೆರಿಕನ್ನರು ಗುಲಾಮಗಿರಿ ವಿರೋಧಿ ಸಂಘಗಳನ್ನು ಸೇರಿದರು. ಈ ಮಧ್ಯೆ ಕರಿಯರು ಸುಮ್ಮನೆ ಕುಳಿತಿರಲಿಲ್ಲ. ಬಿಳಿಯರ ಗುಲಾಮಗಿರಿ ವಿರೋಧಿ ಚಳುವಳಿ ಪ್ರಾರಂಭವಾಗುವ ಮೊದಲೇ ವಿಮೋಚನಾ ಚಳುವಳಿಯಲ್ಲಿ ತೊಡಗಿದ್ದರು. ೧೮೩೦ರ ಹೊತ್ತಿಗೆ ಸುಮಾರು ೫೦ ಗುಲಾಮಗಿರಿ ವಿರೋಧಿ ಸಂಘಗಳು ಕರಿಯರ ಸಮುದಾಯಗಳಲ್ಲಿ ಕೆಲಸ ಮಾಡುತ್ತಿದ್ದವು. ಕರಿಯರ ಸಂಘಗಳು ಗ್ಯಾರಿಸನ್ ಸಂಘಗಳೊಡನೆ ಸೇರಿಕೊಂಡು ವಿಮೋಚನಾ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಿದ್ದವು. ಗುಲಾಮಗಿರಿಯ ವಿರೋಧಿಗಳಲ್ಲಿ ಅತ್ಯಂತ ಪರಿಣಾಮಕಾರಿಯಾದ ನಾಯಕನೆಂದರೆ ಫ್ರೆಡೆರಿಕ್ ಡಗ್ಲಾಸ್ (Frederick Douglas) ಇವನು ಕರಿಯನಾದರೂ ಆ ಪೀಳಿಗೆಯ ಅಸಾಮಾನ್ಯ ಅಮೆರಿಕನ್ನನಾಗಿದ್ದನು. ಗುಲಾಮನಾಗಿದ್ದ ಇವನು ಗುಲಾಮಗಿರಿಯಿಂದ ಪಾರಾಗಲು ೧೮೩೮ರಲ್ಲಿ ಮೇರಿಲ್ಯಾಂಡ್‌ನಿಂದ ಮೆಸಾಚ್ಯುಸೆಟ್ಸ್‌ಗೆ ಓಡಿಹೋಗಿ ನೆಲಸಿದನು. ಅಲ್ಲಿನ ವಿಮೋಚನಾಸಂಘದ ಪ್ರತಿನಿಧಿಯಾಗಿ ಕೆಲಸ ಮಾಡಿದನು. ಸ್ವಲ್ಪ ಸಮಯದಲ್ಲೇ ಡಗ್ಲಾಸ್ ಪ್ರತಿಭಾಶಾಲಿಯಾದ ವಾಗ್ಮಿ ಎಂದು ಹೆಸರುವಾಸಿಯಾದನು.

೧೮೪೫ರಲ್ಲಿ ಫೆಡರಿಕ್ ಡಗ್ಲಾಸ್ ತನ್ನ ಆತ್ಮಕಥೆಯನ್ನು ಪ್ರಕಟಿಸಿದನು. ಇದು

ಅಮೆರಿಕನ್ ಸಾಹಿತ್ಯದಲ್ಲಿ ಒಂದು ಅತ್ಯುತ್ತಮವಾದ ಕೃತಿ. ಇದು ಗುಲಾಮನೊಬ್ಬನ ಬದುಕಿನ ಹೃದಯವಿದ್ರಾವಕ ನಿರೂಪಣೆಯಾಗಿದೆ. ಈ ಪುಸ್ತಕ ಅಮೆರಿಕ ಮತ್ತು ಯೂರೋಪುಗಳಲ್ಲಿ ಅತ್ಯಂತ ಜನಪ್ರಿಯವಾಯಿತು. ಡಗ್ಲಾಸ್‌ನ ಅಭಿಪ್ರಾಯದಂತೆ ಗುಲಾಮರನ್ನು ಬರಿದೆ ಬಿಡುಗಡೆ ಮಾಡಿದರೆ ಸಾಲದು. ಬಿಡುಗಡೆಯಾದವರಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಾನತೆಗಳು ದೊರೆಯಬೇಕಾದುದು ಅಗತ್ಯ. ಸಮಾನತೆಯಿಲ್ಲದ ಸ್ವಾತಂತ್ರ್ಯ ಅರ್ಥಹೀನವಾದುದೆಂದು ಅವನು ವಾದಿಸಿದನು. ಈ ವಾದವನ್ನು ಒಪ್ಪಿಕೊಳ್ಳಲು ಬಿಳಿಯರು ತಯಾರಿರಲಿಲ್ಲ. ಆದರೆ ಡಗ್ಲಾಸ್‌ನ ಭಾಷಣ ಕೇಳಿದವರು ಮತ್ತು ಅವನ ಪುಸ್ತಕಗಳನ್ನು ಓದಿದವರು ಅವನ ಅಸಾಧಾರಣ ಪ್ರತಿಭೆಗೆ ಬೆರಗಾಗಿ ಕರಿಯರ ಬಗ್ಗೆ ತಮಗಿದ್ದ ಪೂರ್ವಾಗ್ರಹಗಳನ್ನು ಪ್ರಶ್ನಿಸುವಂತಾಯಿತು. ಮೊದಲು ಡಗ್ಲಾಸ್ ಗ್ಯಾರಿಸನ್‌ನಂತೆ ಉಗ್ರಗಾಮಿಯಾಗಿದ್ದನು. ನಂತರ ಅವನಿಗೆ ಉಗ್ರಗಾಮಿ ವಿಧಾನಗಳು ಘರ್ಷಣೆಯನ್ನು ಹೆಚ್ಚಿಸುತ್ತವೆ ಹೊರತು ಪರಿಹಾರ ದೊರಕಿಸುವುದಿಲ್ಲ ಎಂದು ಮನದಟ್ಟಾಗಿ ಉಗ್ರಗಾಮಿ ವಿಧಾನಗಳನ್ನು ತ್ಯಜಿಸಿ, ಸಮಾಜವ್ಯವಸ್ಥೆಯನ್ನು ಬುಡಮೇಲು ಮಾಡುವ ಬದಲು, ವ್ಯವಸ್ಥೆಯಲ್ಲಿ ಇದ್ದುಕೊಂಡು ಗುಲಾಮಗಿರಿಯ ವಿರುದ್ಧ ಹೋರಾಟ ಮುಂದುವರಿಸಲು ಮನಸ್ಸು ಮಾಡಿದನು. ಕಾಲ ಸರಿದಂತೆಲ್ಲ ಸಂಯಮದ ವರ್ತನೆ ಮತ್ತು ವ್ಯವಸ್ಥಿತ ಚಳುವಳಿಗಳು ಸಮಾಜ ಸುಧಾರಣೆ ಮಾಡಲು ವಿಫಲಗೊಂಡವು. ಈ ವಿಧಾನಗಳನ್ನು ಅನುಸರಿಸಿದವರನ್ನು ಜನರು ಅಲಕ್ಷ್ಯ ಮಾಡಿದರು. ಉತ್ತರ ಪ್ರಾಂತಗಳಲ್ಲಿ ವಿಮೋಚನಾಕಾರರನ್ನು ಅವಮಾನಗೊಳಿಸಿ, ಸೆರೆಮನೆಯಲ್ಲಿಟ್ಟು, ಅವರ ಮೇಲೆ ಹಲ್ಲೆ ನಡೆಸಿ ಅವರು ಸಭೆಗಳಲ್ಲಿ ಮಾತನಾಡದಂತೆ ತಡೆಯೊಡ್ಡುತ್ತಿದ್ದರು. ಈ ಕಾರಣಗಳಿಂದ ವಿಮೋಚನಾಕಾರರು ಸಂಯಮ ಕಳೆದುಕೊಂಡು ವ್ಯವಸ್ಥಿತ ಚಳುವಳಿ ಕೈಬಿಟ್ಟು ಉಗ್ರಗಾಮಿಗಳಾದರು.

ದಕ್ಷಿಣ ಪ್ರಾಂತಗಳಲ್ಲಿ ವಿಮೋಚನಾವಾದಿಗಳಿಗೆ ತೀವ್ರ ಅಪಾಯದ ಪರಿಸ್ಥಿತಿ ಉಂಟಾಗಿತ್ತು. ದಾಕ್ಷಿಣಾತ್ಯರು ತಮಗೆ ವಿರೋಧವಾದ ಅಭಿಪ್ರಾಯ ಉಳ್ಳವರನ್ನು ನಿರ್ದಯವಾಗಿ ಹತ್ತಿಕ್ಕುತ್ತಿದ್ದರು. ಗುಲಾಮಗಿರಿಯನ್ನು ವಿರೋಧಿಸುವ ಬರವಣಿಗೆಗಳನ್ನು ಅಂಚೆ ಕಛೇರಿಯವರು ವಿತರಣೆಗೆ ತೆಗೆದುಕೊಳ್ಳಬಾರದೆಂದು ಕಾಯಿದೆ ಜಾರಿಗೆ ತಂದರು. ೧೮೩೬ರಲ್ಲಿ ಸೇರಿದ ಪ್ರಜಾಪ್ರತಿನಿಧಿ ಸಭೆಯಲ್ಲಿ ವಿಮೋಚನಾವಾದಿಗಳ 'ಬಾಯಿ ಮುಚ್ಚಿಸುವ' (gag rule) ಮಸೂದೆಯನ್ನು ಅಂಗೀಕರಿಸಲಾಯಿತು. ಈ ಮಸೂದೆಯ ಪ್ರಕಾರ ಗುಲಾಮಗಿರಿ ವಿರೋಧಿಗಳು ಮಂಡಿಸಿದ ಮಸೂದೆಗಳನ್ನು ಮೇಜಿನ ಮೇಲೆ ರಾಶಿ ಹಾಕಿ ಅವುಗಳ ಬಗ್ಗೆ ಯಾವ ಕಾರ್ಯಕ್ರಮವಾಗಲಿ, ನಿರ್ಣಯವನ್ನಾಗಲೀ ತೆಗೆದುಕೊಳ್ಳುವ ಗೋಜಿಗೆ ಹೋಗುತ್ತಿರಲಿಲ್ಲ. ಪ್ರಜೆಗಳ ಮನವಿ ಸಲ್ಲಿಸುವ ಹಕ್ಕು ಹೀಗೆ ಉಲ್ಲಂಘನೆಯಾಗುತ್ತಿರುವುದನ್ನು ಆಗ ಮೆಸಾಚ್ಯುಸೆಟ್ಸ್‌ನಿಂದ ಕಾಂಗ್ರೆಸ್ ಸದಸ್ಯನಾಗಿ ಬಂದಿದ್ದ ಜಾನ್ ಕ್ವಿನ್ಸಿ ಆ್ಯಡಮ್ಸ್ ಸಹಿಸದಾದನು. ಅವನು ಈ 'ಬಾಯಿ ಮುಚ್ಚಿಸುವ'

ಕಾಯಿದೆಯ ವಿರುದ್ಧ ಉಗ್ರವಾದ ಹೋರಾಟ ನಡೆಸಿದನು. ಈ ಹೋರಾಟ ಔತ್ತರೇಯರನ್ನು ಕೆರಳಿಸಿ ಕ್ರಮ ತೆಗೆದುಕೊಳ್ಳುವಂತೆ ಮಾಡಿತು. ಕಾಂಗ್ರೆಸ್‌ಗೆ ಮನವಿಗಳ ಪ್ರವಾಹ ಸುರಿಯಿತು! ಕಾಂಗ್ರೆಸ್‌ನ ಒಂದು ಅವಧಿಯಲ್ಲೇ ೨೨೫,೦೦೦ ಮನವಿಗಳು ಬಂದು ಸೇರಿದವು. ೧೮೪೪ರಲ್ಲಿ ಈ ಕಾಯಿದೆಯನ್ನು ರದ್ದುಗೊಳಿಸಲಾಯಿತು. ಇದಕ್ಕಾಗಿ ನಡೆದ ದೀರ್ಘ ಹೋರಾಟ ದಾಕ್ಷಿಣಾತ್ಯರು ಕರಿಯರಲ್ಲದೆ ಬಿಳಿಯರ ವೈಯಕ್ತಿಕ ಸ್ವಾತಂತ್ರ್ಯವನ್ನು ಹತ್ತಿಕ್ಕಲು ನಿರ್ಧಾರ ಮಾಡಿರುವುದು ಸ್ಪಷ್ಟಗೊಂಡಿತು.

ದಕ್ಷಿಣ ಪ್ರಾಂತಗಳಲ್ಲಿ ಪರಿಸ್ಥಿತಿ ತೀರಾ ಹದಗೆಟ್ಟಿತು. ವಾಕ್ ಸ್ವಾತಂತ್ರ್ಯ ಅಂತರ್ಧಾನ ವಾಯಿತು. ಗುಲಾಮರಿಗೆ ಓದು ಬರಹ ಕಲಿಸುವುದು ಅಪರಾಧವೆಂದು ಪರಿಗಣಿಸ ಲಾಯಿತು! (ಮೇರಿಲ್ಯಾಂಡ್, ಕೆಂಟಕಿ ಮತ್ತು ಟೆನ್ನಿಸ್ಸಿಗಳನ್ನು ಬಿಟ್ಟು) ಬಿಳಿಯರ ವಿದ್ಯಾಭ್ಯಾಸವನ್ನು ಕೂಡ ಬಿಗಿಯಾಗಿ ನಿಯಂತ್ರಣಗೊಳಿಸಲಾಯಿತು. ಶಾಲೆಯ ಪುಸ್ತಕ ಗಳನ್ನು ಸೆನ್ಸಾರ್‌ಗೆ ಒಳಪಡಿಸಲಾಗುತ್ತಿತ್ತು. ವಿರೋಧ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಉಪಾಧ್ಯಾಯರನ್ನು ಕೆಲಸದಿಂದ ತೆಗೆದುಹಾಕುತ್ತಿದ್ದರು. ಸುಮಾರು ೧೮೩೦ರ ಹೊತ್ತಿಗೆ ದಾಕ್ಷಿಣಾತ್ಯರು ಯಾರಾದರೂ ಗುಲಾಮಗಿರಿಯ ವಿರುದ್ಧ ಮಾತನಾಡಿದರೆ ಅವರನ್ನು ಚಾಟಿ ಏಟುಗಳಿಗೆ ಗುರಿಪಡಿಸುತ್ತಿದ್ದರು; ಹೊಡೆದು ಪ್ರಾಂತದಿಂದ ಹೊರಗಟ್ಟುತ್ತಿದ್ದರು. ಉತ್ತರದ ವಿಮೋಚನಾವಾದಿಗಳು ಅಪ್ಪಿತಪ್ಪಿ ದಕ್ಷಿಣ ಪ್ರಾಂತವನ್ನು ಪ್ರವೇಶಿಸಿದರೆ ಅವರು ಜೀವಂತವಾಗಿ ವಾಪಸಾಗುವ ಭರವಸೆಯಿರಲಿಲ್ಲ.

೧೮೫೩ರಲ್ಲಿ ಹಲವಾರು ಲೇಖಕರು ಕೂಡಿ ಬರೆದ 'ಗುಲಾಮಗಿರಿಯ ಪರವಾದ ಚರ್ಚೆ' (The Pro-Slavery Argument) ದಾಕ್ಷಿಣಾತ್ಯರ ನಂಬಿಕೆಗಳು, ನಡವಳಿಕೆಗಳು, ಲೋಕವನ್ನು ನೋಡುವ ರೀತಿ ಎಲ್ಲಕ್ಕೂ ಹಿಡಿದ ಕನ್ನಡಿಯಾಗಿದೆ. ಈ ಪುಸ್ತಕದಲ್ಲಿ ವಿವರಣೆಗೊಂಡಿರುವ ದಾಕ್ಷಿಣಾತ್ಯರ ಆಲೋಚನೆಗಳ ಸಾರಾಂಶ ಇಷ್ಟೆ: ಜೆಫರ್‌ಸನ್ ಪ್ರತಿಪಾದಿಸಿದ ತತ್ವ 'ಎಲ್ಲಾ ಮಾನವರೂ ಸಮಾನರಾಗಿ ಸೃಷ್ಟಿಗೊಂಡರು' ಎನ್ನುವುದು ಪ್ರಯೋಗಸಿದ್ಧವಲ್ಲದ ಅಪಾಯಕಾರಿ ಆಲೋಚನೆ. ಮಾನವರಲ್ಲಿ ಪ್ರಕೃತಿದತ್ತವಾದ ಭಿನ್ನತೆಗಳು ಬೇಕಾದಷ್ಟಿವೆ – ಶಕ್ತಿಯಲ್ಲಿ, ಬುದ್ಧಿವಂತಿಕೆಯಲ್ಲಿ ಮತ್ತು ಬುಡಕಟ್ಟುಗಳ ಹುಟ್ಟುಗುಣಗಳಲ್ಲಿ – ಸಾಬೀತುಗೊಳಿಸಬಹುದಾದ ಸಹಜವಾದ ವ್ಯತ್ಯಾಸಗಳು ಕಂಡು ಬರುತ್ತವೆ. ಶ್ರೇಷ್ಠ ನಾಗರಿಕತೆ ಸಾಮಾಜಿಕ ವರ್ಗಗಳ ಮೇಲೆ ಆಧಾರಗೊಂಡಿರುತ್ತದೆ. ಈ ಸಾಮಾಜಿಕ ವರ್ಗಗಳು ಮಾನವರ ಸಹಜ ವ್ಯತ್ಯಾಸಗಳನ್ನು ಸೂಚಿಸುತ್ತವೆ. ಸಮಾನತೆ ಕೃತಕವಾದುದು. ಕೆಲವು ಲೇಖಕರು (George Fitzhugh and William Grayson) ಇನ್ನೂ ಮುಂದುವರಿದು ಕೆಲಸಗಾರರಿಗೆ ಸ್ವಾತಂತ್ರ್ಯಕ್ಕಿಂತಲೂ ಗುಲಾಮಗಿರಿಯೇ ಮೇಲು ಎಂದಿದ್ದಾರೆ. ಉತ್ತರದ ಕಾರ್ಖಾನೆಗಳಲ್ಲಿ ದುಡಿಯುವ 'ಸಂಬಳದ ಗುಲಾಮರು' (wage slaves) ದಕ್ಷಿಣದ ಗುಲಾಮರಿಗಿಂತ ಆರ್ಥಿಕವಾಗಿ ಮತ್ತು ಮಾನಸಿಕವಾಗಿ ಹೆಚ್ಚು

ಕಷ್ಟನಷ್ಟಗಳನ್ನು ಅನುಭವಿಸುತ್ತಾರೆ. ಸ್ವಾತಂತ್ರ್ಯ ಮತ್ತು ಸಮಾನತೆ ಅಶಕ್ತರ ಮೇಲೆ ಹೆಚ್ಚಿನ ಹೊರೆ ಬೀಳುವಂತೆ ಮಾಡುತ್ತವೆ – ಇದು ಅವರ ಬರಹಗಳ ಮುಖ್ಯ ವಿಷಯ.

ಕೆಲವು ಪ್ರಚಾರಕರು ಸುಳ್ಳು ವೈಜ್ಞಾನಿಕ ಪದಗಳನ್ನು ಮನಬಂದಂತೆ ಉಪಯೋಗಿಸಿ ಜನರ ಅಭಿಪ್ರಾಯಗಳ ಮೇಲೆ ಪ್ರಭಾವ ಬೀರುತ್ತಿದ್ದರು. ಅವರ ಹೇಳಿಕೆಗಳು ಹೀಗಿದ್ದವು – ನಿಗ್ರೋಗಳು ಹುಟ್ಟಿನಿಂದಲೆ ಕೀಳು ಮಾನವ ಬುಡಕಟ್ಟಿನವರು (inferior race) ಅವರ ನರಮಂಡಲ (nervous system) ಒರಾಂಗಟಾನ್ (Ourangoutan) ಕಪಿಗಳ ನರಮಂಡಲವನ್ನು ಹೋಲುತ್ತದೆ. ಈ ಅಭಿಪ್ರಾಯಗಳನ್ನು ಬೆಂಬಲಿಸುವುದಕ್ಕಾಗಿ ಬಿಳಿಯ ಪಾದ್ರಿಗಳು ಬೈಬಲ್‌ನ್ನು ಆಧಾರವಾಗಿಟ್ಟುಕೊಂಡರು – 'ಗುಲಾಮರು – ಸ್ತ್ರೀಯರಾಗಲಿ, ಪುರುಷರಾಗಲಿ, ನಿಮ್ಮ ಸ್ವತ್ತು ಎಂದು ಭಾವಿಸತಕ್ಕದ್ದು' ಇದು ಗುಲಾಮಗಿರಿ ದೈವದತ್ತವಾದುದು ಎಂದು ಸ್ಪಷ್ಟಪಡಿಸುತ್ತದೆ ಎಂದು ತಮ್ಮ ಉಪದೇಶಗಳಲ್ಲಿ ಹೇಳುತ್ತಿದ್ದರು. ಬಹುಸಂಖ್ಯಾತ ಔತ್ತರೇಯರು ಮತ್ತು ದಾಕ್ಷಿಣಾತ್ಯರು ಗುಲಾಮಗಿರಿ ವಿರೋಧಿಗಳ ಮತ್ತು ಅದರ ರಕ್ಷಕರ ವಾದಗಳನ್ನು ನಿರಾಕರಿಸಿದರೂ ಎರಡು ಪಂಗಡಗಳಲ್ಲೂ ಹಲವರು ತಮ್ಮ ನಂಬಿಕೆಗಳನ್ನು ಅತಿರೇಕಕ್ಕೆ ಕೊಂಡೊಯ್ದರು. ವಿಮೋಚನಾವಾದಿಗಳ ಉತ್ಪ್ರೇಕ್ಷೆಗಳು ಮಧ್ಯವರ್ತಿಗಳಾದ (Moderates) ದಾಕ್ಷಿಣಾತ್ಯರನ್ನು ಕೆರಳಿಸಿ ಹಿಂಸಾಚಾರಿಗಳನ್ನಾಗಿ ಮಾಡಿದವು. ತಪ್ಪಿಸಿಕೊಂಡು ಓಡಿ ಹೋದ ಗುಲಾಮರನ್ನು ಬೇಟೆ ನಾಯಿಗಳಂತೆ ಬೆನ್ನಟ್ಟಿ ಹೋಗಿ ಹಿಡಿದು ತಂದು (ಇದನ್ನೇ ವೃತ್ತಿಯನ್ನಾಗಿ ಮಾಡಿಕೊಂಡವರೂ ಇದ್ದರು) ಹಿಂಸಿಸುವ ದಾರುಣ ಕತೆಗಳನ್ನು ಕೇಳಿ ಅನೇಕ ಸೌಮ್ಯ ಪ್ರವೃತ್ತಿಯ ಔತ್ತರೇಯರೂ ಕೂಡ ಉಗ್ರಗಾಮಿಗಳಾಗಿ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿದರು. ಹೆಸರಾಂತ 'ಅಂತರ್ಗತ ರೈಲುರಸ್ತೆ' (the underground railroad) ಓಡಿಹೋಗುವ ಗುಲಾಮರನ್ನು ರಕ್ಷಿಸಿ ಅವರು ಕ್ಷೇಮವಾಗಿ ಬದುಕಬಹುದಾದ ಉತ್ತರ ಪ್ರಾಂತಗಳಿಗೋ ಅಥವಾ ಕೆನಡ ದೇಶಕ್ಕೋ ಹೋಗಿ ಸೇರಲು ಸಹಾಯ ಮಾಡುವ ಸಂಘವಾಗಿತ್ತು. ಈ ಸಂಘದ ಉತ್ಪ್ರೇಕ್ಷೆಗೊಂಡ ವರದಿಗಳು ಜನಪ್ರಿಯವಾದವು. ವಾಸ್ತವವಾಗಿ ಈ ಸಂಘ ಅಷ್ಟೇನೂ ವ್ಯವಸ್ಥಿತವಾಗಿರಲಿಲ್ಲ. ಕರುಣಾಮಯರಾದ ಕೆಲವು ವ್ಯಕ್ತಿಗಳು ತಮ್ಮ ಸ್ವಇಚ್ಛೆಯಿಂದ, ತಪ್ಪಿಸಿಕೊಂಡು ಹೋಗುವ ಗುಲಾಮರನ್ನು ಕಂಡರೂ ಕಾಣದ ಹಾಗೆ ಇದ್ದುಬಿಡುತ್ತಿದ್ದರು. ರೈಲಿನಲ್ಲಿ ಕುಳಿತು ತಪ್ಪಿಸಿಕೊಂಡು ಹೋಗುವ ಗುಲಾಮರನ್ನು ಹಿಡಿದು ಕೊಡುವ ಗೋಜಿಗೆ ರೈಲ್ವೆ ಕಂಡಕ್ಟರುಗಳು ಹೋಗುತ್ತಿರಲಿಲ್ಲ.

೧೮೪೨ರಲ್ಲಿ ನಡೆದ ಕಟ್ಟಳೆಯಲ್ಲಿ ಶ್ರೇಷ್ಠ ನ್ಯಾಯಾಲಯ, ತಪ್ಪಿಸಿಕೊಂಡು ಓಡುವ ಗುಲಾಮರನ್ನು ಹಿಡಿದುಕೊಡಬೇಕಾದ ಕಾಯಿದೆಯನ್ನು ಸಂಸ್ಥಾನಗಳು ಜಾರಿಗೆ ತರುವ ಅಗತ್ಯವಿಲ್ಲ ಎಂದು ತೀರ್ಪುನೀಡಿತು. ಈ ತೀರ್ಪಿನ ಪ್ರಕಾರ ಉತ್ತರದ ಸಂಸ್ಥಾನಗಳು 'ವ್ಯಕ್ತಿ ಸ್ವಾತಂತ್ರ' (personal liberty) ಕಾಯಿದೆಯನ್ನು ಜಾರಿಗೆ ತಂದವು. ಈ

ಕಾಯಿದೆ ಪ್ರಕಾರ ಸರ್ಕಾರಿ ಅಧಿಕಾರಿಗಳು ತಪ್ಪಿಸಿಕೊಂಡು ಓಡುವ ಗುಲಾಮರನ್ನು ಹಿಡಿಯಲು ಸಹಾಯಮಾಡಬೇಕಾಗಿಲ್ಲ ಎನ್ನುವುದು ಖಚಿತವಾಯಿತು. ಈ ಕಾಯಿದೆಗಳಿಗೆ ದಾಕ್ಷಿಣಾತ್ಯರು ತೀವ್ರ ವಿರೋಧ ವ್ಯಕ್ತಪಡಿಸಿದರು. ಇದರ ಪರಿಣಾಮವಾಗಿ ೧೮೫೦ರ ಕಾಯಿದೆ (Act of 1950)ಯನ್ನು ಜಾರಿಗೆ ತರಲಾಯಿತು. ಇದು ಗುಲಾಮರ ಪರಿಸ್ಥಿತಿಯನ್ನು ಹೆಚ್ಚು ಕಠಿಣಗೊಳಿಸಿತು. ಇದಕ್ಕೆ ಪ್ರತಿಯಾಗಿ ಔತ್ತರೇಯರು ಹೆಚ್ಚಿನ ಸಂಖ್ಯೆಯಲ್ಲಿ ವಿಮೋಚನಾ ಚಳುವಳಿಯನ್ನು ಸೇರತೊಡಗಿದರು.

ಇಷ್ಟೆಲ್ಲ ಭಿನ್ನತೆ ಮತ್ತು ದ್ವೇಷಗಳಿದ್ದರೂ ವಿಶಾಲವಾದ ಸಾಮಾಜಿಕ ಸಂಘರ್ಷಣೆಗಳು ಮತ್ತು ಹೊಡೆದಾಟಗಳು ಜರುಗಲಿಲ್ಲ! ಪಶ್ಚಿಮ ಪ್ರಾಂತಗಳನ್ನು ಕುರಿತಾದ ಸೆಣಸಾಟಗಳು ಗುಲಾಮಗಿರಿಯನ್ನು ಮುಖ್ಯವಾದ ರಾಜಕೀಯ ವಿಷಯವಾಗಿ ಮಾಡದೇ ಹೋಗಿದ್ದರೆ, ವಿಮೋಚನಾ ಚಳುವಳಿ ಕೂಡ ಕಚ್ಚಾಟಗಳಿಗೆ ಕಾರಣವಾಗುತ್ತಿರಲಿಲ್ಲವೆಂದು ಇತಿಹಾಸ ಕಾರರು ಅಭಿಪ್ರಾಯಪಟ್ಟಿದ್ದಾರೆ.

ಕ್ಯೂಬ ಸಮಸ್ಯೆ

೧೮೫೦ರ ದಶಕದಲ್ಲಿ ಅಮೆರಿಕನ್ನರು ಕ್ಯೂಬವನ್ನು ವಶಪಡಿಸಿಕೊಳ್ಳಲು ಅನೇಕ ಪ್ರಯತ್ನಗಳನ್ನು ಮಾಡಿದ್ದರಿಂದ ಸ್ಪೇನ್ ಅಮೆರಿಕನ್ ಹಡಗುಗಳ ಮೇಲೆ ದಾಳಿ ಮಾಡಿತು. ಪರಿಣಾಮವಾಗಿ ಈ ಎರಡು ದೇಶಗಳ ನಡುವೆ ಸಂದಿಗ್ಧ ಪರಿಸ್ಥಿತಿ ಏರ್ಪಟ್ಟಿತು. ೧೮೫೪ರಲ್ಲಿ ಈ ಪರಿಸ್ಥಿತಿ ಅಂತಿಮವಾಗಿ 'ಆಸ್ಟೆಂಡ್ ಪ್ರಕಟಣೆ' (Ostend Manifesto) ಯಲ್ಲಿ ಪರ್ಯಾವಸಾನವಾಯಿತು. ಅದೇ ವರ್ಷ ಅಧ್ಯಕ್ಷ ಪಿಯರ್ಸ್ ಸ್ಪೇನಿನಲ್ಲಿ ಅಮೆರಿಕದ ಸಚಿವನಾಗಿದ್ದ ಪಿಯೆರೆ ಸೌಲೆ (Pierre Soul'e)ಗೆ ಸ್ಪೇನ್ ಸರ್ಕಾರಕ್ಕೆ ೧೩೦ ಮಿಲಿಯನ್ ಡಾಲರ್‌ಗಳನ್ನು ಕೊಟ್ಟು ಕ್ಯೂಬವನ್ನು ಖರೀದಿಸುವಂತೆ ನಿರ್ದೇಶಿಸಿದನು. ಸ್ಪೇನ್ ನಿರಾಕರಿಸಿದರೆ, ಬಲಾತ್ಕಾರದಿಂದ ವಶಪಡಿಸಿಕೊಳ್ಳುವುದಾಗಿ ಸ್ಪೇನ್ ಸರ್ಕಾರಕ್ಕೆ ತಿಳಿಸ ಬೇಕಾಗಿ ಆದೇಶವಿತ್ತನು. ಕ್ಯೂಬವನ್ನು ಮಾರಲು ಸ್ಪೇನ್ ನಿರಾಕರಿಸಿತು. ಮುಂದೇನು ಮಾಡಬೇಕೆಂದು ನಿರ್ಧರಿಸಲು ಸೌಲೆ ಪ್ಯಾರಿಸ್ ಮತ್ತು ಲಂಡನ್‌ಗಳಲ್ಲಿ ಅಮೆರಿಕ ಸಚಿವರಾಗಿದ್ದವರೊಡನೆ ಸಮಾಲೋಚನೆ ನಡೆಸಿದ ನಂತರ 'ಕ್ಯೂಬ ಸ್ಪೇನಿನ ಅಧೀನತೆ ಯಲ್ಲಿರುವುದು ಅಮೆರಿಕದ ಸ್ಥಿರತೆ ಮತ್ತು ಶಾಂತಿಗಳಿಗೆ ಅಪಾಯ ತರುವುದೆ ಅಲ್ಲದೆ ಅಮೆರಿಕದ ಇರವಿಗೆ ಕಂಟಕವಾಗಬಹುದು. ಆದ್ದರಿಂದ ಕ್ಯೂಬವನ್ನು ಸ್ಪೇನಿನಿಂದ ಅಮೆರಿಕ ಕಿತ್ತುಕೊಳ್ಳುವುದು ಇಹ ಪರಗಳೆರಡರಲ್ಲೂ ನ್ಯಾಯಬದ್ಧವಾಗಿದೆ' ಎಂದು ಹೇಳಿಕೆ ನೀಡಿದನು. ಈ ಹೇಳಿಕೆಯನ್ನು ಆಸ್ಟೆಂಡ್ ಪ್ರಕಟಣೆ ಎಂದು ಕರೆಯಲಾಯಿತು. ಇದು ಪತ್ರಿಕೆಗಳಲ್ಲಿ ಪ್ರಕಟವಾದ ದಾಕ್ಷಿಣಾತ್ಯರ ದುಷ್ಟ, ವಸಾಹತುಶಾಹಿ ಗುಲಾಮರ ಸೇವೆಯ ರುಚಿಯನ್ನು ಬಿಡಲಾರದ ಜನರ ಕೀಳು ವರ್ತನೆಗೆ ನಿದರ್ಶನವಾಗಿದೆ ಎಂದು ಔತ್ತರೇಯರು ಆಪಾದಿಸಿದರು.

ಕಾನ್ಸಾಸ್ (Kansas) ಮತ್ತು ನೆಬ್ರಾಸ್ಕ (Nebraska) ಘಟನೆಗಳು

ಸ್ಟೀಫನ್ ಡಗ್ಲಾಸ್‌ನ ಅಜಾಗೂರಕತೆಯಿಂದ ಜರುಗಿದ ಗುಂಪು ಜಗಳದ ನಡುವೆ ಆಸ್ಟೆಂಡ್ ಪ್ರಕಟಣೆ ಸಿಡಿಮದ್ದಿನಂತೆ ಆಸ್ಫೋಟನೆಗೊಂಡಿತು. ಡಗ್ಲಾಸ್ ಇಲಿನಾಯ್ ಸಂಸ್ಥಾನದ ಡೆಮೊಕ್ರಾಟಿಕ್ ಪಕ್ಷದವನು. ಅವನು ಮದುವೆಯಾಗಿದ್ದು ದಕ್ಷಿಣದ ಆಸ್ತಿವಂತಳಾದ ಗುಲಾಮರ ಒಡತಿಯನ್ನು. ಅವನು ಗುಲಾಮಗಿರಿಯನ್ನು ಉಪಯೋಗದ ದೃಷ್ಟಿಯಿಂದ ನೋಡಿದನೆ ಹೊರತು ನೈತಿಕ ಅಥವಾ ಮಾನವೀಯ ದೃಷ್ಟಿಯಿಂದ ನೋಡುವ ಗೋಜಿಗೆ ಹೋಗಲಿಲ್ಲ. ಗುಲಾಮಗಿರಿ ಜೀವನದ ಒಂದು ವಾಸ್ತವಾಂಶ. ಎಲ್ಲಿ ಜನರು ತಮ್ಮ ವೃತ್ತಿಯನ್ನು ನಡೆಸಲು ಗುಲಾಮರ ಶ್ರಮ ಅನಿವಾರ್ಯವೆಂದು ನಂಬಿದ್ದಾರೋ ಅಲ್ಲಿ ಗುಲಾಮಗಿರಿಯನ್ನು ಆ ಸಂಸ್ಥಾನದ ಕಾಯಿದೆಗಳು ಅನುಮೋದಿಸಬೇಕು. ಇದು ಸಂಯುಕ್ತ ಸಂಸ್ಥಾನಗಳ ಒಗ್ಗಟ್ಟನ್ನು ಉಳಿಸುತ್ತದೆ – ಎಂದು ಡಗ್ಲಾಸ್ ಅಭಿಪ್ರಾಯಪಟ್ಟನು. 'ಜನತಾ ಸಾರ್ವಭೌಮತ್ವ' (popular sovereignty)ದಿಂದ ಇದನ್ನು ಕಾರ್ಯಗತಗೊಳಿಸಲು ಸಾಧ್ಯ. ಹೇಗೆಂದರೆ, ಪ್ರಾಂತಗಳು ಸಂಸ್ಥಾನ (statehood) ಗಳಾಗುವುಧಕ್ಕೆ ಮುಂಚೆ ಅಲ್ಲಿನ ಜನರು ಗುಲಾಮಗಿರಿಯನ್ನು ಕಾಂಗ್ರೆಸ್ಸಿನ ಮಧ್ಯಸ್ಥಿಕೆಯಿಲ್ಲದೆ ಒಪ್ಪಿಕೊಳ್ಳಬಹುದು ಅಥವಾ ತೆಗೆದುಹಾಕಬಹುದು. ಈ ಸಲಹೆ ಜನಕ್ಕೆ ಹಿಡಿಸಿತು. ಹೀಗೆ ಮಾಡುವುದರಿಂದ ಗುಲಾಮಗಿರಿಯನ್ನು ಮುಂದುವರಿಸುವ ಬಗ್ಗೆ ವಾದ ವಿವಾದಗಳನ್ನು ಕಾಂಗ್ರೆಸ್ಸಿನಿಂದ ದೂರ ಮಾಡಿ ಅಲ್ಲಿ ನಡೆಯಬಹುದಾದ ಗುಂಪುಗಳ ಒಳಜಗಳಗಳನ್ನು ತಪ್ಪಿಸಬಹುದು ಎಂದು ಡಗ್ಲಾಸ್ ತೀರ್ಮಾನಿಸಿದನು.

ಡಗ್ಲಾಸನು ಪ್ರಾಂತಗಳ ಸೆನೆಟ್ ಸಮಿತಿಯ (senate committee on Territories) ಮುಖ್ಯಸ್ಥನಾಗಿದ್ದನು. ಅದಲ್ಲದೆ ತನ್ನ ಹುಟ್ಟೂರಾದ ಚಿಕಾಗೊ ನಗರದ ಅಭಿವೃದ್ಧಿ ಕಾರ್ಯದ ಮುಂಚೂಣಿಯಲ್ಲಿದ್ದನು. ಪಶ್ಚಿಮ ಪ್ರಾಂತಗಳ ಬೆಳವಣಿಗೆಯಲ್ಲಿ ಬಹಳ ಆಸಕ್ತಿಯನ್ನು ಹೊಂದಿದ್ದನು. ಕೇಂದ್ರ ರೈಲುದಾರಿಯ ನಿರ್ಮಾಣದಲ್ಲಿ ನಿರತನಾಗಿದ್ದನು. ಈ ಹಿತಾಸಕ್ತಿಗಳನ್ನು ಧ್ಯೇಯವಾಗಿಟ್ಟುಕೊಂಡು ಅದನ್ನು ಕಾರ್ಯಗತಗೊಳಿಸಲು ಗಲಚಿಳರಲ್ಲಿ ಒಂದು ಮಸೂದೆಯನ್ನು ಮಂಡಿಸಿದನು. ಆ ಪ್ರಕಾರ ಫ್ರಾನ್ಸಿನಿಂದ ಖರೀದಿಸಿದ ಲೂಯಿಸಿಯಾನ ಪ್ರಾಂತವನ್ನು ವಿಭಜಿಸಿ ಒಂದು ಭಾಗವನ್ನು ನೆಬ್ರಾಸ್ಕ ಪ್ರಾಂತವನ್ನಾಗಿ ರಚಿಸಿ ಅದನ್ನು ಮುಸ್ಸೋರಿ ಒಪ್ಪಂದದಂತೆ ಮುಕ್ತ ಪ್ರಾಂತವನ್ನಾಗಿ ಅಂಗೀಕರಿಸಿ, ಪ್ರಾಂತೀಯ ಸರ್ಕಾರ ರಚನೆಗೆ ಅನುಕೂಲ ಮಾಡಿಕೊಡುವುದು. ನೆಬ್ರಾಸ್ಕ ಪ್ರಾಂತೀಯ ಸರ್ಕಾರ ಫೆಸಿಫಿಕ್ ರೈಲುಮಾರ್ಗ ಅಮೆರಿಕದ ಮಧ್ಯಪ್ರಾಂತಗಳ ಮೂಲಕ ಹಾಯ್ದುಹೋಗುವ ನಿರ್ಧಾರವನ್ನು ತ್ವರಿತಗೊಳಿಸುತ್ತದೆ ಎಂದು ಡಗ್ಲಾಸ್ ಹವಣಿಸಿದ್ದನು. ಡಗ್ಲಾಸ್ ಮಂಡಿಸಿದ ಮಸೂದೆಯಲ್ಲಿ ಅಮೆರಿಕದ ನಡುವಣ ಪ್ರಸ್ಥಭೂಮಿಯಲ್ಲಿ ಇನ್ನು ಒಂದೋ ಅಥವಾ ಎರಡೋ ಮುಕ್ತ ಸಂಸ್ಥಾನಗಳ ಸ್ಥಾಪನೆ ಮಾಡುವ ಸಾಧ್ಯತೆ ಇರುವುದಾಗಿ ಸೂಚಿಸಿದ್ದನು. ಹೀಗೆ ಮುಕ್ತ ಪ್ರಾಂತಗಳ ಸಂಖ್ಯೆ ಹೆಚ್ಚಿದಂತೆಲ್ಲ

ಕಾಂಗ್ರೆಸ್‌ನಲ್ಲಿ ದಾಕ್ಷಿಣಾತ್ಯರ ಪ್ರಾಬಲ್ಯ ಕುಗ್ಗುವುದು ಖಂಡಿತವಾಗಿತ್ತು. ಗುಲಾಮಗಿರಿ ಸಂಸ್ಥಾನವಾದ (slave state) ಮುಸ್ಸೋರಿಯನ್ನು ಮುಕ್ತ ಸಂಸ್ಥಾನಗಳು ಸುತ್ತುವರಿಯುವ ಪರಿಸ್ಥಿತಿ ಉಂಟಾಗುತ್ತದೆ ಎಂದು ಗ್ರಹಿಸಿದ ದಕ್ಷಿಣದ ಸೆನೆಟರ್‌ಗಳ ಒಂದು ಪ್ರಭಾವಶಾಲಿಯಾದ ಗುಂಪು ಇದನ್ನು ಸಹಿಸಲಿಲ್ಲ. ಹೊಸ ಪ್ರಾಂತಗಳಿಗೆ ದಾಕ್ಷಿಣಾತ್ಯರು ತಮ್ಮ ಗುಲಾಮರನ್ನು ಕರೆತರಲು ಸಾಧ್ಯವಿಲ್ಲದಿದ್ದರೆ ತಾನು ಮಂಡಿಸಿದ ಮಸೂದೆಯನ್ನು ಮರೆತು ಬಿಡುವಂತೆ ಈ ಸೆನೆಟರ್‌ಗಳು ಡಗ್ಲಾಸನಿಗೆ ತಿಳಿಸಿದರು. ಇದಕ್ಕೆ ಪ್ರತಿಯಾಗಿ ಡಗ್ಲಾಸ ತನ್ನ ಮಸೂದೆಗೆ ಜನತಾ ಸಾರ್ವಭೌಮತ್ವದ ನಿಬಂಧನೆಯನ್ನು ಸೇರಿಸಿದನು. ಇದರ ಪ್ರಕಾರ ಆಯಾ ಪ್ರಾಂತದ ಜನರು ಗುಲಾಮಗಿರಿಯ ಸಮಸ್ಯೆಯನ್ನು ತಾವೇ ನಿರ್ಧರಿಸಬಹುದಾಗಿತ್ತು. ಈ ನಿಬಂಧನೆಯನ್ನು ದಕ್ಷಿಣದ ಪ್ರಮುಖರು ಒಪ್ಪಲಿಲ್ಲ. ಆಗ ಡಗ್ಲಾಸ ಅವರನ್ನು ಸಮಾಧಾನ ಪಡಿಸಲು ತನ್ನ ಮಸೂದೆಗೆ ಮುಸ್ಸೋರಿ ಒಪ್ಪಂದವನ್ನು ರದ್ದು ಮಾಡುವ ಸಲಹೆಯನ್ನು ಸೇರಿಸಿದನು. ಈ ಮಾರ್ಪಾಡಾದ ಮಸೂದೆಯನ್ನು ದಾಕ್ಷಿಣಾತ್ಯರು, ಡಗ್ಲಾಸ್‌ನ ಅನುಯಾಯಿಗಳು ಮತ್ತು ಅಧ್ಯಕ್ಷ ಪಿಯರ್ಸ್ ಎಲ್ಲರೂ ಸೇರಿ ಕಾಂಗ್ರೆಸ್ ಅನುಮೋದಿಸುವಂತೆ ಒತ್ತಾಯ ಮಾಡಿದರು. ೧೮೫೪ರ ಮೇ ತಿಂಗಳಲ್ಲಿ, ಮೂರು ತಿಂಗಳ ರೋಷಾವೇಶದ ಚರ್ಚೆಯ ನಂತರ, 'ಕಾನ್ಸಾಸ್-ನೆಬ್ರಾಸ್ಕ' ಕಾಯಿದೆಯನ್ನು ಅಂಗೀಕರಿಸಲಾಯಿತು.

ಕಾನ್ಸಾಸ್-ನೆಬ್ರಾಸ್ಕ ಕಾಯಿದೆ ಗುಲಾಮಗಿರಿಯನ್ನು ವಿರೋಧಿಸುತ್ತಿದ್ದ ಪ್ರಾಂತೀಯ ರಾಜಕೀಯ ರಿಪಬ್ಲಿಕನ್ ಪಕ್ಷವನ್ನು ಜಾಗೃತಿಗೊಳಿಸಿತು. ಈ ಕಾಯಿದೆಯಿಂದ ಉಂಟಾದ ಬಿಕ್ಕಟ್ಟು ವ್ಹಿಗ್ ಪಕ್ಷವನ್ನು ನಾಶಗೊಳಿಸಿತು. ಹೆಚ್ಚಿನ ಔತ್ತರೇಯರು ಸ್ವತಂತ್ರ ಡೆಮೊಕ್ರಾಟಿಕ್ ಪಕ್ಷವನ್ನು ಸೇರಿದರು. ಕೆಲವರು 'ಮುಕ್ತ ಮಣ್ಣಿನವರ' (free soilers)'ನೆಬ್ರಾಸ್ಕ ವಿರೋಧಿಗಳ', 'ಜನತಾ ಪಕ್ಷ' (people's party) ಮುಂತಾದ ಪಂಗಡಗಳನ್ನು ಸೇರಿದರು. ೧೮೫೪ರಲ್ಲಿ ಈ ಎಲ್ಲ ಗುಂಪುಗಳೂ ಒಂದಾಗಿ 'ರಿಪಬ್ಲಿಕನ್' ಪಕ್ಷ ಸ್ಥಾಪನೆಯಾಯಿತು. ಇವರು ಅನುಸರಿಸುತ್ತಿದ್ದ ಗುಲಾಮಗಿರಿ ವಿರೋಧಿ ಧೋರಣೆಯನ್ನು ದಾಕ್ಷಿಣಾತ್ಯರು ಬೆಂಬಲಿಸಲಿಲ್ಲ. ಉತ್ತರ ಸಂಸ್ಥಾನಗಳಲ್ಲಿ ಕೂಡ ಹೊಸ ರಿಪಬ್ಲಿಕನ್ ಪಕ್ಷ ಸರ್ವರ ಬೆಂಬಲ ಗಳಿಸಲಿಲ್ಲ. ಯಾಂಕಿಗಳು, ಕ್ಯಾಥಲಿಕರು, ಹೊಸದಾಗಿ ವಲಸೆ ಬಂದವರು ಮತ್ತು ಉತ್ತರಕ್ಕೆ ಬಂದು ತಲುಪಿದ ದಾಕ್ಷಿಣಾತ್ಯರು ಡೆಮೊಕ್ರಾಟಿಕ್ ಪಕ್ಷಕ್ಕೆ ದೃಢವಾದ ನೆರವು ನೀಡಿದರು. ಹೊಸ ರಿಪಬ್ಲಿಕನ್ ಪಕ್ಷ ಮೇಲಣ ಉತ್ತರ ಪ್ರಾಂತಗಳಲ್ಲಿ ಹೆಚ್ಚು ಜನಾದರಣೆ ಪಡೆಯಿತು. ಈ ಪ್ರಾಂತಗಳಲ್ಲಿ ನ್ಯೂ ಇಂಗ್ಲೆಂಡ್ ಪ್ರಾಂತದ ಪ್ರಾಟೆಸ್ಟೆಂಟ್ ವಂಶದವರು ನೆಲಸಿದ್ದರು. ಅವರು ಸಾರ್ವಜನಿಕ ಶಾಲೆಗಳನ್ನು ತೆರೆದು ಸರ್ವರಿಗೂ ವಿದ್ಯಾಭ್ಯಾಸದ ಅವಕಾಶವನ್ನು ಕಲ್ಪಿಸಿದ್ದರು. ಜನರ ನಡತೆಯನ್ನು ತಿದ್ದಲು 'ಸಂಯಮ ಸಂಘ' (Temperance societies)ಗಳನ್ನು ಸ್ಥಾಪಿಸಿದ್ದರು. ಇಲ್ಲಿ ರಿಪಬ್ಲಿಕನ್ ಪಕ್ಷ ಅಭಿವೃದ್ಧಿಗೊಂಡಿತು.

ಕಾನ್ಸಾಸ್‌ನಲ್ಲಿ ರಕ್ತಪಾತ

ಪ್ರಾಂತೀಯ ದ್ವೇಷ, ಗುಂಪುಗಳ ಒಳಜಗಳಗಳು ಹೆಚ್ಚಿದಂತೆಲ್ಲ ರಿಪಬ್ಲಿಕನ್ ಪಕ್ಷ ಪ್ರಬಲವಾಗುತ್ತ ಹೋಯಿತು. ಕಾನ್ಸಾಸ್-ನೆಬ್ರಾಸ್ಕ ಕಾಯಿದೆ ಅಂಗೀಕಾರವಾದ ಕೆಲವು ವಾರಗಳೊಳಗೆ ಆ ಕಾಯಿದೆ ತಿದ್ದುಪಡಿಯಾಗಿ ಕಾನ್ಸಾಸ್ ಪ್ರಾಂತ, ನೆಬ್ರಾಸ್ಕ ಪ್ರಾಂತದಿಂದ ಬೇರೆಯಾಯಿತು. ಹೀಗೆ ಬೇರೆಯಾದ ಕಾನ್ಸಾಸ್ ಪ್ರಾಂತ ಗುಲಾಮಗಿರಿ ಸಂಸ್ಥಾನಗಳ ಬೆಂಬಲಿಗರ ಮತ್ತು ಮುಕ್ತ ಸಂಸ್ಥಾನಗಳ ಪ್ರತಿಪಾದಕರ ಸಮರಭೂಮಿಯಾಯಿತು. ಒಂದು ಪಂಗಡದವರು ಇನ್ನೊಂದು ಪಂಗಡದ ಮೇಲೆ ತಮ್ಮ ಅಭಿಪ್ರಾಯಗಳನ್ನು ಹೇರಲು ದೃಢನಿಶ್ಚಯ ಮಾಡಿದ್ದರು. ಎರಡು ಪಂಗಡಗಳೂ ಹಿಂಸೆ, ಮೋಸ, ದಗಾ, ಬಲಾತ್ಕಾರ ಮುಂತಾದ ಹೀನಕೃತ್ಯಗಳಲ್ಲಿ ತೊಡಗಿದರು. ೧೮೫೪ರಲ್ಲಿ ಸಾವಿರಾರು ಶಸ್ತ್ರಸಜ್ಜಿತರಾದ ಮಿಸ್ಸೋರಿಯನ್ನರು ಕಾನ್ಸಾಸ್ ಗಡಿ ದಾಟಿ ಒಳನುಗ್ಗಿ ನೆಲಸಿದರು. ಕಾನ್ಸಾಸ್ ಪ್ರಾಂತದ ಮೊದಲನೆಯ ಗವರ್ನರ್ ಆ್ಯಂಡ್ರೂ ರೀಡರ್ (Andrew Reeder) ಕಾನ್ಸಾಸ್ ನ್ಯಾಯವಿಧಾಯಕ ಸಭೆಯನ್ನು ರಚಿಸಲು ೧೮೫೫ರ ಮಾರ್ಚ್ ತಿಂಗಳಲ್ಲಿ ಚುನಾವಣೆಯನ್ನು ಏರ್ಪಡಿಸಿದ್ದನು. ಈ ಚುನಾವಣೆಯಲ್ಲಿ ಮಿಸ್ಸೋರದಿಂದ ನುಗ್ಗಿ ಬಂದ ಗೂಂಡಾಗಳು ಮತ ನೀಡಿ ಗುಲಾಮಗಿರಿಯ ಪರವಾದ ಅಭ್ಯರ್ಥಿಗಳನ್ನು ಗೆಲ್ಲಿಸಿದರು. ಗವರ್ನರ್ ರೀಡರ್ ಈ ಮತದಾನ ಮೋಸ ಮತ್ತು ವಂಚನೆಯಿಂದ ಕಲುಷಿತಗೊಂಡಿದೆ ಎಂದು ಹೇಳಿಕೆ ನೀಡಿದನು. ಆದರೆ ಚುನಾವಣೆಯ ಫಲಿತಾಂಶವನ್ನು ಸರಿಪಡಿಸಲು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಹೀಗೆ ಮೋಸದಿಂದ ಚುನಾಯಿಸಿ ಬಂದ ಗುಲಾಮಗಿರಿಯ ಪರವಾದ ಸದಸ್ಯರು ನ್ಯಾಯವಿಧಾಯಕ ಸಭೆಯ ಗುಲಾಮಗಿರಿ ವಿರೋಧಿ ಸದಸ್ಯರನ್ನು ಹೊರಗಟ್ಟಿದರು. ಗುಲಾಮಗಿರಿಯನ್ನು ನ್ಯಾಯಬದ್ಧವಾಗಿಸುವ ಕಾಯಿದೆಯನ್ನೂ ಜಾರಿಗೆ ತಂದರು. ಪಲಾಯನ ಮಾಡುವ ಗುಲಾಮರಿಗೆ ಸಹಾಯ ಮಾಡುವುದನ್ನು ಮಹಾಪರಾಧವನ್ನಾಗಿ ಮಾಡಿದರು. ಗುಲಾಮಗಿರಿಯ ನ್ಯಾಯಬದ್ಧತೆಯನ್ನು ಪ್ರಶ್ನಿಸುವುದು ಕೂಡ ಅಪರಾಧವನ್ನಾಗಿ ಮಾಡುವ ಕಾಯಿದೆಗಳನ್ನು ಜಾರಿಗೆ ತಂದರು.

ಮುಕ್ತ ಸಂಸ್ಥಾನದ ಬೆಂಬಲಿಗರು ಈ ಮೋಸದ ಕಾಯಿದೆಗಳನ್ನು ಮತ್ತು ಅವುಗಳನ್ನು ಜಾರಿಗೆ ತಂದ ನ್ಯಾಯಸಮ್ಮತವಲ್ಲದ ಸರ್ಕಾರವನ್ನು ಧಿಕ್ಕರಿಸಿ ನೇರವಾಗಿ ಸಂಸ್ಥಾನ ಅಂತಸ್ತು (statehood)ಪಡೆಯಲು ಅರ್ಜಿ ಹಾಕಿದರು. ೧೮೫೫ರ ಅಕ್ಟೋಬರ್ ತಿಂಗಳಲ್ಲಿ ಟೊಪಿಕ, ಕಾನ್ಸಾಸ್‌ನಲ್ಲಿ ರಾಜ್ಯಾಂಗ ರಚನಾಸಭೆ ಸೇರಿತು. ಈ ಸಭೆಯಲ್ಲಿ ಬಹುಮತದಿಂದ ಗುಲಾಮಗಿರಿಯನ್ನು ಮತ್ತು ಮುಕ್ತರಾದ ಗುಲಾಮರನ್ನು ಕಾನ್ಸಾಸ್ ಸಂಸ್ಥಾನದಿಂದ ಉಚ್ಚಾಟನೆ ಮಾಡಲು ನಿರ್ಧರಿಸಿದರು. ಇದಲ್ಲದೆ ಸಂಯುಕ್ತ ಸಂಸ್ಥಾನಗಳನ್ನು ಸೇರಿಕೊಳ್ಳಲು ಅನುಮತಿ ಪಡೆಯಲು ಅರ್ಜಿ ಸಲ್ಲಿಸಿದರು. ೧೮೫೬ರ ಮಾರ್ಚ್ ತಿಂಗಳ ಹೊತ್ತಿಗೆ ಕಾನ್ಸಾಸ್‌ನಲ್ಲಿ ಮುಕ್ತ ಸಂಸ್ಥಾನ ಗವರ್ನರ್ ಮತ್ತು ನ್ಯಾಯವಿಧಾಯಕ ಸಭೆ

ಕಾರ್ಯನಿರತವಾಗಿದ್ದವು. ಆದರೆ ಸರ್ಕಾರ ತನ್ನ ಕಾಯಿದೆ ಮತ್ತು ಆಜ್ಞೆಗಳನ್ನು ಜಾರಿಗೆ ತರುವಷ್ಟು ಶಕ್ತಿಯುತವಾಗಿರಲಿಲ್ಲ. ಆದ್ದರಿಂದ ಎರಡು ಪಂಗಡದವರೂ ಹೋರಾಟಕ್ಕೆ ಸಿದ್ಧತೆ ಮಾಡಿಕೊಳ್ಳತೊಡಗಿದರು. ಕೊನೆಗೆ ಪಂಗಡಗಳು ಪರಸ್ಪರ ಬೆದರಿಕೆ ಹಾಕುವುದು ಸಂಘರ್ಷಣೆಯಾಗಿ ಪರಿಣಮಿಸಿತು. ೧೮೫೬ರ ಮೇ ತಿಂಗಳಲ್ಲಿ ಗುಲಾಮಗಿರಿಯ ಪರವಾದ ದಂಗೆಕೋರರ ಗುಂಪು ಮುಕ್ತ ಸಂಸ್ಥಾನದ ಲಾರೆನ್ಸ್ (Lawrence)ನಗರಕ್ಕೆ ನುಗ್ಗಿ ಆಸ್ತಿ ಪಾಸ್ತಿಗಳನ್ನು ಹಾಳು ಮಾಡಲಾರಂಭಿಸಿತು. ವಾರ್ತಾಪತ್ರಿಕೆಗಳ ಮುದ್ರಣಯಂತ್ರಗಳನ್ನು ನಾಶಮಾಡಿ ನದಿಯಲ್ಲಿ ಎಸೆಯಿತು. ಗವರ್ನರ್‌ನ ನಿವಾಸಕ್ಕೆ ಬೆಂಕಿಯಿಟ್ಟಿತು. ಹೊತ್ತು ಕೊಂಡು ಹೋಗಲು ಸಾಧ್ಯವಾದ ವಸ್ತುಗಳನ್ನೆಲ್ಲ ಕೊಳ್ಳೆ ಹೊಡೆಯಿತು. ದಂಗೆಕೋರರು ಹೋಟೆಲ್ ಒಂದನ್ನು ಫಿರಂಗಿಯಿಂದ ಉಡಾಯಿಸಿದರು.

ಲಾರೆನ್ಸ್ ನಗರದ ಮೇಲಿನ ದಾಳಿ ಜಾನ್ ಬ್ರೌನ್ ಎಂಬ (John Brown) ಗುಲಾಮಗಿರಿ ವಿರೋಧಿಯನ್ನು ಕೆರಳಿಸಿತು. ದಾಳಿ ನಡೆದ ಎರಡು ದಿನಗಳ ಮೇಲೆ ಜಾನ್ ಬ್ರೌನ್ ತನ್ನ ನಾಲ್ಕು ಗಂಡುಮಕ್ಕಳು ಮತ್ತು ಕೆಲವು ಅನುಯಾಯಿಗಳೊಡನೆ ಪೊಟಾವಾಟಾಮಿ ಹಳ್ಳದ (Pottawatomie Creek) ಬಳಿ ನೆಲಸಿದ್ದ ಗುಲಾಮಗಿರಿ ಪರವಾಗಿದ್ದ ಜನರ ಮೇಲೆ ದಾಳಿ ಮಾಡಿ ಅವರಲ್ಲಿ ಐದು ಜನರನ್ನು ಕೊಲೆ ಮಾಡಿದನು. 'ಪೊಟಾವಾಟಾಮಿ ಕಗ್ಗೊಲೆ' ಎಂದು ಹೆಸರು ಪಡೆದ ಈ ಘಟನೆ ಹಿಂಸಾಕೃತ್ಯಗಳು ಎಲ್ಲ ಕಡೆಗೂ ಹಬ್ಬಿ ಕೊಲೆ ಸುಲಿಗೆಗಳಿಗೆ ಕಾರಣವಾಯಿತು. ಈ ಹಿಂಸಾಕೃತ್ಯಗಳು ಹೊಸ ಗವರ್ನರ್ ಜಾನ್ ಗಿಯರ್ ಆಗಮಿಸಿ ಆಡಳಿತ ಪ್ರಾರಂಭಿಸುವವರೆಗೂ ನಡೆಯಿತು. ಹೊಸ ಗವರ್ನರ್ ಫೆಡರಲ್ ಸೈನಿಕರ (Federal soldiers)ಸಹಾಯದಿಂದ ಪರಿಸ್ಥಿತಿಯನ್ನು ಹತೋಟಿಗೆ ತಂದು, ನ್ಯಾಯ ಮತ್ತು ವ್ಯವಸ್ಥೆಗಳನ್ನು ಮಾಡಿದನು. ೧೮೫೬ರಲ್ಲಿ ಹಿಂಸಾಕೃತ್ಯಗಳು ಕೊನೆಗೊಂಡಾಗ ೨೦೦ ಜನ ಸತ್ತು ೨ ಮಿಲಿಯನ್ ಡಾಲರ್‌ಗಳಷ್ಟು ಆಸ್ತಿ ಪಾಸ್ತಿ ನಷ್ಟ ಉಂಟಾಗಿತ್ತು. ಈ ಹಿಂಸಾಕೃತ್ಯಗಳು ಕಾಂಗ್ರೆಸ್ ಸದಸ್ಯರ ಮೇಲೆ ಪರಿಣಾಮಬೀರಿ ಪರಸ್ಪರ ಬೈದಾಟ, ಹೊಡೆದಾಟಗಳಿಗೆ ಕಾರಣವಾಯಿತು. ೧೮೫೬ರ ಮೇ ೨೨ನೆಯ ತಾರೀಖು ಸೆನೆಟ್ ಸಭಾಂಗಣದಲ್ಲಿ ಇದ್ದಕ್ಕಿದ್ದಂತೆ ಹೊಡೆದಾಟ ಪ್ರಾರಂಭವಾಗಿ ದೇಶದಾದ್ಯಂತ ಜನರು ತಲ್ಲಣಗೊಂಡರು. ಮೆಸಾಚ್ಯುಸೆಟ್ಸ್ ಸೆನೆಟರ್ ಚಾರ್ಲ್ಸ್ ಸಮ್‌ನರ್ ಸೆನೆಟ್‌ನಲ್ಲಿ ಗುಲಾಮಗಿರಿಯನ್ನು ಖಂಡಿಸಿ ಭಾಷಣ ಮಾಡುತ್ತ ದಕ್ಷಿಣ ಕೆರೊಲಿನ ಸೆನೆಟರ್ ಎ. ಪಿ. ಬಟ್ಲರ್‌ನ ಮೇಲೆ ಬೈಗುಳ, ವ್ಯಂಗ್ಯೋಕ್ತಿ ಮತ್ತು ಕಟುಟೀಕೆಗಳ ಪ್ರವಾಹ ಹರಿಸಿದನು. ಸೆನೆಟರ್ ಸಮ್‌ನರ್‌ನ ಒರಟು ವರ್ತನೆಯನ್ನು ಕಾಂಗ್ರೆಸ್ ಸದಸ್ಯ ಪ್ರೆಸ್‌ಟನ್ ಬ್ರೂಕ್ಸ್ (Preston Brooks) ಸಹಿಸಲಿಲ್ಲ. ಸೆನೆಟರ್ ಬಟ್ಲರ್ ಬ್ರೂಕ್ಸ್‌ನ ಸಂಬಂಧಿ. ಅವನಿಗೆ ಸಮ್‌ನರ್ ಮಾಡಿದ ಅವಮಾನಕ್ಕಾಗಿ ಬ್ರೂಕ್ಸ್ ಸಿಟ್ಟಿನಿಂದ ಕುದಿಯಲಾರಂಭಿಸಿದನು. ಒಂದು ದಿನ ಬ್ರೂಕ್ಸ್ ಸಮ್‌ನರ್ ಸೆನೆಟ್‌ನಲ್ಲಿ ತನ್ನ ಸ್ಥಾನದಲ್ಲಿ ಕುಳಿತು ಏನೋ ಬರೆಯುತ್ತಿದ್ದುದನ್ನು ಕಂಡನು. ಕೂಡಲೇ ಬ್ರೂಕ್ಸ್‌ನ

ಕೋಪ ಉಕ್ಕಿ ಹರಿದು, ಹಠಾತ್ತನೆ ಸಮ್ನರ್ ಮೇಲೆ ಹಲ್ಲೆ ಮಾಡಿ, ಅವನ ತಲೆಯ ಮೇಲೆ ಬೆತ್ತದಿಂದ ಮತ್ತೆ ಮತ್ತೆ ಹೊಡೆಯತೊಡಗಿದನು. ಸಮ್ನರ್ ಏಳಲು ಪ್ರಯತ್ನಿಸಿ ಕುಸಿದುಬಿದ್ದನು. ಈ ಘಟನೆಯಿಂದ ಸಮ್ನರ್ ಗುಲಾಮರ ವಿಮೋಚನಾ ಚಳುವಳಿಯ 'ಹುತಾತ್ಮ' (martyr) ನೆಂದು ಹೆಸರು ಪಡೆದನು. ಬ್ರೂಕ್ಸ್‌ನ ವರ್ತನೆಯನ್ನು ಕಾಂಗ್ರೆಸ್ ಎಲ್ಲ ಸದಸ್ಯರ ಮುಂದೆ ಉಗ್ರವಾಗಿ ಖಂಡಿಸಿತು. ಇದರಿಂದ ಅವಮಾನಿತನಾದ ಬ್ರೂಕ್ಸ್ ರಾಜೀನಾಮೆ ಕೊಟ್ಟು ದಕ್ಷಿಣ ಕೆರೊಲಿನಕ್ಕೆ ವಾಪಸ್ಸಾದನು. ಸೆನೆಟರ್ ಗಾಯಗೊಂಡಿದ್ದರೂ ಪ್ರಾಣಾಪಾಯ ಇರಲಿಲ್ಲ. ಅವನು ಚೇತರಿಸಿಕೊಳ್ಳಲು ದೀರ್ಘಕಾಲ ಹಿಡಿದು, ಮಾನಸಿಕ ಆಘಾತಗಳಿಂದ ಮೊದಲಿನಂತೆ ಕಾರ್ಯಾಚರಣೆ ಮಾಡಲು ಅಸಮರ್ಥನಾದನು. ಕಾಲಾನಂತರದಲ್ಲಿ ಬ್ರೂಕ್ಸ್ ಪುನಃ ಆಯ್ಕೆಗೊಂಡು ಕಾಂಗ್ರೆಸ್ಸಿಗೆ ಹಿಂತಿರುಗಿದಾಗ ಅವನನ್ನು ಮೆಚ್ಚಿಕೊಂಡವರು ಬೆತ್ತಗಳನ್ನು (Canes) ಬಹುಮಾನವಾಗಿ ನೀಡಿ ಸತ್ಕರಿಸಿದರು. ದಾಕ್ಷಿಣಾತ್ಯರು ಅವನ ನಡವಳಿಕೆಯ ಬಗ್ಗೆ ಅನೇಕ ಸಬೂಬುಗಳನ್ನು ಹೇಳಿ ಅವನ ವರ್ತನೆಯನ್ನು ಸಮರ್ಥಿಸಿಕೊಂಡರು. ಸಮ್ನರ್‌ನ ಬೆಂಬಲಿಗರು ಅವನನ್ನು ಒಂದು ಮಹತ್ಕಾರ್ಯಕ್ಕೆ ತನ್ನನ್ನು ತಾನೇ ಸಮರ್ಪಿಸಿಕೊಂಡ ಧೀರನೆಂದು ಕೊಂಡಾಡಿದರು. ಹೀಗೆ ಎರಡು ಪಂಗಡಗಳು ದೂಷಣೆ ಮಾಡುತ್ತ ತಮ್ಮ ಪರಸ್ಪರ ದೂರ ಸರಿಯುತ್ತ ಹೋದರು (social distance). ಅಮೆರಿಕದ ಉತ್ತರ ಮತ್ತು ದಕ್ಷಿಣದಲ್ಲಿ ಎರಡು ವಿಭಿನ್ನವಾದ ಸಮಾಜ ಮತ್ತು ಸಂಸ್ಕೃತಿಗಳು ಸ್ಥಾಪಿತಗೊಂಡಂತೆ ಸ್ಪಷ್ಟವಾಗಿ ತೋರುತ್ತಿತ್ತು. ಈ ಅನಿಷ್ಟ ಬೆಳವಣಿಗೆಯನ್ನು ಅವಲೋಕಿಸಿದ ತತ್ವಜ್ಞಾನಿ ಎಮರ್‌ಸನ್ 'ಒಂದು ಮೃಗೀಯ ಸಮುದಾಯ ಮತ್ತು ಒಂದು ನಾಗರಿಕ ಸಮುದಾಯ ಒಟ್ಟಾಗಿ ಒಂದು ಸಂಸ್ಥಾನವಾಗುವುದು ಹೇಗೆ ಎಂದು ನನಗೆ ಕಂಡುಬರುತ್ತಿಲ್ಲ. ನಾವು ಗುಲಾಮಗಿರಿಯನ್ನು ತೊಲಗಿಸಬೇಕು ಅಥವಾ ಸ್ವಾತಂತ್ರ್ಯವನ್ನು ತೊರೆಯಬೇಕು' ಎಂದು ಉದ್ಗರಿಸಿದನು.

೧೮೫೬ರ ಚುನಾವಣೆ

ಈ ಚುನಾವಣೆಯ ಹೊತ್ತಿಗೆ ಎರಡು ಪಕ್ಷಗಳೂ ಗುಲಾಮಗಿರಿಯನ್ನು ಅಲಕ್ಷಿಸುವಂತಿರಲಿಲ್ಲ. ರಿಪಬ್ಲಿಕನ್ ಪಕ್ಷ ತನ್ನ ಮೊದಲನೆಯ ರಾಷ್ಟ್ರೀಯ ಸಮ್ಮೇಳನದಲ್ಲಿ ಮುಂದಾಳಾಗಿದ್ದ ವಿಲಿಯಂ ಸಿವಾರ್ಡ್ (William Seward)ನನ್ನು ಬಿಟ್ಟು, ವ್ಹಿಗ್ ಸಂಪ್ರದಾಯದಂತೆ ವೀರಸೇನಾನಿ ಎಂದು ಖ್ಯಾತಿ ಪಡೆದಿದ್ದ ಜಾನ್ ಫ್ರೀಮಾಂಟ್(John Fremont)ನನ್ನು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಆಯ್ಕೆ ಮಾಡಿದರು. ಇವನು ಕ್ಯಾಲಿಫೋರ್ನಿಯ ಪ್ರಾಂತವನ್ನು ವಶಪಡಿಸಿಕೊಳ್ಳುವುದರಲ್ಲಿ ಮುಖ್ಯ ಪಾತ್ರ ವಹಿಸಿದ್ದನು. ವ್ಹಿಗ್ ಪಕ್ಷ ರಿಪಬ್ಲಿಕನ್ನರಿಗೆ ಅನೇಕ ರೀತಿಯಲ್ಲಿ ನೆರವಾಗಿತ್ತು. ಆ ಪಕ್ಷ ಪ್ರಾಂತಗಳನ್ನು ಹಾದುಹೋಗುವ ರೈಲು ಮಾರ್ಗವನ್ನು ಬೆಂಬಲಿಸಿತು, ಮುಸ್ಸೋರಿ ಒಪ್ಪಂದವನ್ನು ರದ್ದುಗೊಳಿಸಿದ್ದನ್ನು ಮತ್ತು ಡೆಮೊಕ್ರಾಟಿಕ್ ಪಕ್ಷದ ಭೂವಿಸ್ತರಣಾಧೋರಣೆಯನ್ನು ಖಂಡಿಸಿತು. ಗುಲಾಮಗಿರಿ ಅನಾಗರಿಕ ಪದ್ಧತಿ ಎಂದು ಘೋಷಿಸಿ ಅದನ್ನು ರದ್ದುಗೊಳಿಸಲು

ಆಗ್ರಹ ಪಡಿಸಿತು. ರಾಷ್ಟ್ರದ ಒಂದು ಪ್ರಬಲ ರಾಜಕೀಯ ಪಕ್ಷ ಗುಲಾಮಗಿರಿಯನ್ನು ಚುನಾವಣೆಯಲ್ಲಿ ತನ್ನ ವಿಚಾರಮಂಚದಲ್ಲಿ (platform) ಸೇರಿಸಿಕೊಂಡದ್ದು ಇದೇ ಮೊದಲು.

ಡೆಮೊಕ್ರಾಟಿಕ್ ಪಕ್ಷದ ಸಮ್ಮೇಳನದಲ್ಲಿ ಸದಸ್ಯರು ಅಧ್ಯಕ್ಷ ಪಿಯರ್ಸ್‌ನನ್ನು ಪುನಃ ನಾಮಕರಣ ಮಾಡಲಿಲ್ಲ. ಪಿಯರ್ಸ್ ಅವನ ಅಧಿಕಾರದ ಅವಧಿಯಲ್ಲಿ ನಡೆದ ಹಿಂಸಾತ್ಮಕ ಆಂದೋಳನಕ್ಕೆ ಬಲಿಯಾದ ಅದೃಷ್ಟಹೀನ. ಡೆಮೊಕ್ರಾಟಿಕ್ ಪಕ್ಷದವರು ಕಾನ್ಸಾಸ್-ನೆಬ್ರಾಸ್ಕ ಕಾಯಿದೆಯ ಕರ್ತೃವಾದ ಡಗ್ಲಾಸ್‌ನನ್ನು ಕಡೆಗಣಿಸಿದರು. ಅಂತಿಮವಾಗಿ ಅವರು ಪೆನ್ಸಿಲ್‌ವೇನಿಯದ ಜೇಮ್ಸ್ ಬ್ಯುಕಾನನ್‌ನನ್ನು (James Buchanan) ಅಧ್ಯಕ್ಷಸ್ಥಾನಕ್ಕೆ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿದರು. ೧೮೫೬ರ ಚುನಾವಣೆಯಲ್ಲಿ ಬ್ಯುಕಾನನ್ (೧೫ನೆಯ ಅಧ್ಯಕ್ಷ) ಕಿರಿದಾದ ಅಂತರದಿಂದ ಫ್ರೀಮಾಂಟ್‌ನನ್ನು ಸೋಲಿಸಿದನು. ಬ್ಯುಕಾನನ್ ದೃಢ ಸಂಕಲ್ಪವಿಲ್ಲದ, ಗರ್ವಿಷ್ಠನಾದ, ಚಿಕ್ಕಪುಟ್ಟ ವಿಷಯಗಳಿಗೆ ಸಿಡಿಮಿಡಿಗೊಳ್ಳುವ, ಸಾಧಾರಣ ಬುದ್ಧಿಮಟ್ಟದ ಅವಿವಾಹಿತ ವಯೋವೃದ್ಧನಾಗಿದ್ದನು. ಅವನು ಪೆನ್ಸಿಲ್‌ವೇನಿಯದವನಾದರೂ ದಾಕ್ಷಿಣಾತ್ಯರ ಪರ ವಹಿಸಿದನು. ಅವನ ಆಡಳಿತ ಮಂಡಳ (cabinet)ಕ್ಕೆ ಅನೇಕ ದಾಕ್ಷಿಣಾತ್ಯರನ್ನು ಮತ್ತು ದಕ್ಷಿಣ ರಾಜಕೀಯ ತತ್ವಗಳನ್ನು ಪರಿಪಾಲಿಸುತ್ತಿದ್ದ ಔತ್ತರೇಯರನ್ನು ಕಾರ್ಯದರ್ಶಿಗಳಾಗಿ ನೇಮಿಸಿದನು. ಹೀಗೆ ದಾಕ್ಷಿಣಾತ್ಯರ ಪರ ವಹಿಸಿದ್ದು ಔತ್ತರೇಯರನ್ನು ಕೆರಳಿಸಿ ಕೋಪಾವಿಷ್ಟರನ್ನಾಗಿ ಮಾಡಿತು.

ಬ್ಯುಕಾನನ್ ಅಧ್ಯಕ್ಷತೆಯ ಮೊದಲ ದಿನಗಳಲ್ಲಿ ಕಾನ್ಸಾಸ್‌ನಲ್ಲಿ ಪರಿಸ್ಥಿತಿ ಹದಗೆಡುತ್ತಾ ಹೋಯಿತು. ೧೮೫೭ರಲ್ಲಿ ಗುಲಾಮಗಿರಿಯ ಪರವಾಗಿದ್ದ ಪ್ರಾಂತೀಯ ನ್ಯಾಯ ವಿಧಾಯಕ ಸಭೆ ಲೆಕಾಮ್‌ಟನ್ (Lecompton) ಊರಿನಲ್ಲಿ ಒಂದು ಸಮ್ಮೇಳನವನ್ನು ಏರ್ಪಡಿಸಿತು. ಸಂಸ್ಥಾನದ ರಾಜ್ಯಾಂಗವನ್ನು ರಚಿಸುವುದು ಮತ್ತು ಸಂಯುಕ್ತ ಸಂಸ್ಥಾನಗಳನ್ನು ಸೇರಲು ಅರ್ಜಿ ತಯಾರಿಸುವುದು ಈ ಸಮ್ಮೇಳನದ ಉದ್ದೇಶವಾಗಿತ್ತು. ಗುಲಾಮಗಿರಿಯ ಪರವಾಗಿದ್ದ ಪ್ರಾಂತೀಯ ಅಧಿಕಾರಿಗಳು ಅಭ್ಯರ್ಥಿಗಳ ಚುನಾವಣೆಯ ಕ್ಷೇತ್ರಗಳನ್ನು (election districts) ಗುಲಾಮಗಿರಿಯ ಪರವಾಗಿ ಬಹುಮತಗಳು ನಿಶ್ಚಯವಾಗಿ ಬರುವಂತೆ ಪುನರ್‌ರಚನೆ ಮಾಡಿದರು. 'ಮುಕ್ತ ಮಣ್ಣಿನ ' ಪಕ್ಷ (free soilers)ದವರು ಈ ಚುನಾವಣೆಯನ್ನು ಬಹಿಷ್ಕರಿಸಿದರು. ಎಲ್ಲ ವಿರೋಧಿಗಳನ್ನು ಕಡೆಗಣಿಸಿ ಕಾನ್ಸಾಸ್ ಸಂಸ್ಥಾನವನ್ನು ಸಮ್ಮೇಳನ ಅತ್ಯಂತ ಹೆಚ್ಚಿನ ಬಹುಮತದಿಂದ ಗುಲಾಮಗಿರಿ ಸಂಸ್ಥಾನವಾಗಿ (slave state) ಮಾರ್ಪಡಿಸಿತು! ಕಾಂಗ್ರೆಸ್ ಏನೂ ಮಾಡಲು ತಿಳಿಯದೆ ಗೊಂದಲದ ಪರಿಸ್ಥಿತಿ ಉಂಟಾಯಿತು. ರಿಪಬ್ಲಿಕನ್ನರು ಕಾನ್ಸಾಸ್ ಸಂಸ್ಥಾನದ ರಾಜ್ಯಾಂಗವನ್ನು ಕುಟಿಲತಂತ್ರವೆಂದು ದೂಷಿಸಿದರು. ಡಗ್ಲಾಸ್ 'ಈ ರಾಜ್ಯಾಂಗ ಪ್ರಜಾಪ್ರಭುತ್ವವನ್ನು ಅಲ್ಲಗಳೆಯುವ ಉಲ್ಲೇಖನವಾಗಿದೆ' ಎಂದು ಉದ್ಗರಿಸಿದನು. ಅವನ ಅಭಿಪ್ರಾಯದಂತೆ

ಪ್ರತಿಯೊಂದು ಪ್ರಾಂತವೂ ಸ್ವತಃ ತಾನಾಗಿ ಗುಲಾಮಗಿರಿ ಬೇಕೋ ಬೇಡವೋ ಎನ್ನುವುದನ್ನು ನಿರ್ಧರಿಸಬೇಕಾಗಿತ್ತು. ಆದರೆ ದಾಕ್ಷಿಣಾತ್ಯರು ಮತ್ತು ಬ್ಯೂಕಾನನ್ ಅವಸರದಲ್ಲಿ ಆ ರಾಜ್ಯಾಂಗವನ್ನು ಬೆಂಬಲಿಸಿದರು.

೧೮೫೮ರ ಮೊದಲಲ್ಲಿ ಪ್ರಾಂತೀಯತೆ ಪರಮಾವಧಿಯನ್ನು ಮುಟ್ಟಿತು. ದ್ವೇಷಾಸೂಯೆಗಳು ಎಷ್ಟು ಪ್ರಖರವಾಗಿದ್ದವೆಂದರೆ ಮೂವತ್ತು ಕಾಂಗ್ರೆಸ್ ಸದಸ್ಯರು – ರಿಪಬ್ಲಿಕನ್ನರು ಮತ್ತು ಡೆಮೊಕ್ರಾಟರು – ಕಾಂಗ್ರೆಸ್ ಸಭಾಂಗಣದಲ್ಲಿ ಕಾನ್‌ಸಾಸ್ ಸಂಸ್ಥಾನದ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ – ಪರಸ್ಪರ ಗುದ್ದಾಡತೊಡಗಿದ್ದರು! ಕೊನೆಯಲ್ಲಿ ಕಾನ್ಸಾಸ್ ಪ್ರಾಂತವನ್ನು ಸಂಸ್ಥಾನದ ಹಂತಕ್ಕೇರಿಸುವ ಕಾಯಿದೆ (Kansas statehood bill)ಯನ್ನು ಬಲಾತ್ಕಾರದಿಂದ ಸೆನೆಟ್ ಅಂಗೀಕರಿಸುವಂತೆ ಮಾಡಿದರು. ಆದರೆ ಕಾಂಗ್ರೆಸ್‌ನಲ್ಲಿ ಅದು ತಿರಸ್ಕೃತವಾಯಿತು. ಇವೆಲ್ಲದರ ಮಧ್ಯದಲ್ಲಿ ರಾಜಕೀಯ ಮತ್ತು ಪ್ರಾಂತೀಯ ದ್ವೇಷಾಸೂಯೆಗಳು ಆಸ್ಫೋಟಗೊಳ್ಳುವಂತೆ ಮಾಡಿದ ಘಟನೆಯೊಂದು ಸಂಭವಿಸಿತು. ತೊಂದರೆಗಳು ಒಂದೊಂದಾಗಿ ಬರುವುದಿಲ್ಲ, ಒಂದರ ಮೇಲೊಂದರಂತೆ ಬರುತ್ತವೆ ಎನ್ನುವ ಗಾದೆ ಮಾತಿನಂತೆ ೧೮೫೬ರಲ್ಲಿ ಲಾರೆನ್ಸ್ ಮೇಲೆ ದಾಳಿ, ಬ್ರೂಕ್ಸ್-ಸಮ್‌ನರ್ ಹಗರಣ ಮತ್ತು ಪೊಟ್ಟಾವಾಟಮಿ ಹತ್ಯಾಕಾಂಡಗಳು ಜರುಗಿದವು. ಅಧ್ಯಕ್ಷ ಬ್ಯೂಕಾನನ್ ಅಧಿಕಾರ ವಹಿಸಿಕೊಂಡ ಆರು ತಿಂಗಳಗಳೊಳಗೆ ಅವನು ಎದುರಿಸಬೇಕಾಗಿ ಬಂದ ಸಮಸ್ಯೆಗಳು – (ಅ) ಡ್ರೆಡ್ ಸ್ಕಾಟ್ ಕಟ್ಟಳೆ (ಆ) ಕಾನ್ಸಾಸ್‌ನಲ್ಲಿ ಗಲಭೆ ಮತ್ತು (ಇ) ಉದ್ಯೋಗ ಕ್ಷೇತ್ರದಲ್ಲಿ ಅನಿಶ್ಚಯತೆ ಮತ್ತು ಉದ್ಯಮಿಗಳ ದಿಗಿಲು (panic).

ಡ್ರೆಡ್ ಸ್ಕಾಟ್ ಹಗರಣ

ಮಾರ್ಚ್ ೬, ೧೮೫೭ರಲ್ಲಿ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರು ಬಹಳ ಸಮಯದಿಂದ ನಡೆಯುತ್ತಿದ್ದ ಡ್ರೆಡ್‌ಸ್ಕಾಟ್ ಕಟ್ಟಳೆ (The Dred Scott CAse) ಯ ತೀರ್ಪನ್ನು ನೀಡಿದರು. ೧೮೦೦ರ ಸಮಯದಲ್ಲಿ ವರ್ಜೀನಿಯಾ ಸಂಸ್ಥಾನದಲ್ಲಿ ಹುಟ್ಟಿನಿಂದ ಗುಲಾಮನಾಗಿದ್ದ ಡ್ರೆಡ್‌ಸ್ಕಾಟ್‌ನನ್ನು ಸೆಂಟ್ ಲೂಯಿಸ್ (St. Louis) ನಗರಕ್ಕೆ ಕರೆದೊಯ್ದು, ಸೈನ್ಯದಲ್ಲಿ ಶಸ್ತ್ರಚಿಕಿತ್ಸಕ (surgeon) ನಾಗಿದ್ದ ಡಾ. ಜಾನ್ ಎಮರ್‌ಸನ್‌ಗೆ (Dr. John Emerson) ಮಾರಿದರು. ೧೮೩೪ರಲ್ಲಿ ಡಾ. ಎಮರ್‌ಸನ್ ತನ್ನ ಖಾಸಗಿ ಸೇವಕನಾಗಿದ್ದ ಸ್ಕಾಟ್‌ನನ್ನು ಮೊದಲು ಇಲಿಯಾನ್ ಸಂಸ್ಥಾನದ ಫೋರ್ಟ್ ಆರ್‌ಮ್‌ಸ್ಟ್ರಾಂಗ್‌ಗೆ (Fort Armstrong) ಕರೆದೊಯ್ದು, ಅಲ್ಲಿಂದ ಮತ್ತೆ ವಿಸ್‌ಕಾನ್ಸಿನ್ ಪ್ರಾಂತದ (Wisconsin territory) ಫೋರ್ಟ್ ಸ್ನೆಲ್ಲಿಂಗ್‌ಗೆ (Fort Snelling) ಹೋಗಿ ನೆಲಸಿ ಅಂತಿಮವಾಗಿ ೧೮೩೮ರಲ್ಲಿ ಸೇಂಟ್ ಲೂಯಿಸ್‌ಗೆ ವಾಪಸ್ಸು ಬಂದರು. ೧೮೪೩ರಲ್ಲಿ ಡಾ. ಎಮರ್‌ಸನ್ ಮರಣಹೊಂದಿದನು. ನಂತರ ಸ್ಕಾಟ್ ಗುಲಾಮಗಿರಿಯಿಂದ ಬಿಡುಗಡೆ ಪಡೆಯಲು ಪ್ರಯತ್ನಿಸಿದನು. ೧೮೪೬ರಲ್ಲಿ ಸ್ಕಾಟ್ ಕೆಲವು ಸಹೃದಯ ಬಿಳಿಯರ

ಸಹಾಯದಿಂದ ಮುಸ್ಸೋರ ನ್ಯಾಯಲಯದಲ್ಲಿ ತಾನು ಇಲಿನಾಯ್ ಮತ್ತು ವಿಸ್‌ಕಾನ್ಸಿನ್ ಮುಕ್ತ ಸಂಸ್ಥಾನಗಳಲ್ಲಿ ವಾಸಿಸಿದ್ದರಿಂದ ತನ್ನನ್ನು ಗುಲಾಮಗಿರಿಯಿಂದ ಬಿಡುಗಡೆ ಮಾಡಬೇಕೆಂದು ಕಟ್ಟಳೆ ಹಾಕಿದನು. ಜ್ಯೂರಿ ಸ್ಕಾಟ್‌ನ ಪರವಾಗಿ ತೀರ್ಪಿತ್ತಿತು. ಆದರೆ ಸಂಸ್ಥಾನದ ಶ್ರೇಷ್ಠ ನ್ಯಾಯಾಲಯ ಅವನ ವಿರುದ್ಧವಾಗಿ ತೀರ್ಪು ನೀಡಿತು.

ಡ್ರೆಡ್ ಸ್ಕಾಟ್‌ನ ಕಟ್ಟಳೆ ಮೂರು ಮುಖ್ಯ ಪ್ರಶ್ನೆಗಳನ್ನು ಎಬ್ಬಿಸಿತು: ಮೊದಲನೆಯ ದಾಗಿ, ಮುಕ್ತ ಪ್ರಾಂತಗಳಲ್ಲಿ ಬಹಳ ಕಾಲ ವಾಸವಾಗಿದ್ದು ಸ್ಕಾಟ್‌ನಿಗೆ ಬಿಡುಗಡೆಯ ಅರ್ಹತೆಯನ್ನು ಅನುಗ್ರಹಿಸಿದಂತಾಗಲಿಲ್ಲವೆ? ಎರಡನೆಯದಾಗಿ, ಕರಿಯನೂ ಮತ್ತು ಹುಟ್ಟು ಗುಲಾಮನೂ ಆಗಿದ್ದ ಸ್ಕಾಟ್ ಪೌರನಾಗಲು ಸಾಧ್ಯವೆ? ಅವನು ಪೌರನಾಗಿದ್ದರೆ ಮಾತ್ರ ಫೆಡರಲ್ ನ್ಯಾಯಾಲಯದಲ್ಲಿ ಕಟ್ಟಳೆ ಹಾಕುವ ಹಕ್ಕು ಪಡೆದಿರುತ್ತಾನೆ. ಮೂರನೆಯದಾಗಿ, ಮುಸ್ಸೋರ ಒಪ್ಪಂದ ರಾಜ್ಯಾಂಗಬದ್ಧವಾದುದೆ? ಈ ಪ್ರಶ್ನೆಗಳಿಗೆ ನ್ಯಾಯಾಲಯುದಿಂದ ದೊರೆತ ತೀರ್ಪು ಪ್ರಜಾಪ್ರಭುತ್ವವಾದಿ (popular sovereignty)ಗಳು ಮತ್ತು 'ಮುಕ್ತ ಮಣ್ಣಿನ' ಪಕ್ಷದವರಿಗೆ ಆಘಾತ ಉಂಟುಮಾಡಿತು. ನ್ಯಾಯಾಲಯ ನೀಡಿದ ತೀರ್ಪಿನ ಸಾರಾಂಶ - (ಅ) ಡ್ರೆಡ್ ಸ್ಕಾಟ್ ಇನ್ನೂ ಗುಲಾಮನಾಗಿಯೇ ಇದ್ದಾನೆ (ಆ) ಸ್ಕಾಟ್ ಕರಿಯನಾದುದರಿಂದ ಮೇಲಾಗಿ ಗುಲಾಮನಾದುದರಿಂದ ಅವನು ಪೌರನಲ್ಲ. ಏಕೆಂದರೆ, ಕರಿಯರು ಕೀಳು ದರ್ಜೆಯ ಜೀವಿಗಳು, ಅವರಿಗೆ ಬಿಳಿಯರು ಗೌರವಿಸುವಂಥ ಯಾವ ಹಕ್ಕುಗಳೂ ಇಲ್ಲ (ಇ) ಸ್ಕಾಟ್ ವಿಸ್‌ಕಾನ್ಸಿನ್ ಪ್ರಾಂತದಲ್ಲಿ ವಾಸ ಮಾಡಿದ್ದ ಮಾತ್ರಕ್ಕೆ ಸ್ವತಂತ್ರನೆಂದು ಪರಿಗಣಿಸಲು ಸಾಧ್ಯವಿಲ್ಲ. ಏಕೆಂದರೆ, ರಾಜ್ಯಾಂಗದ ಪ್ರಕಾರ ಕಾಂಗ್ರೆಸ್ ಗುಲಾಮಗಿರಿ ಯನ್ನು ಒಂದು ಪ್ರಾಂತದಲ್ಲಿ ನಿಷೇಧಿಸುವುದು ಸಾಧ್ಯವಿಲ್ಲ - ಈ ತೀರ್ಮಾನ ದಾಕ್ಷಿಣಾತ್ಯರಿಗೆ ಸಂಪೂರ್ಣ ವಿಜಯ ಸಾಧಿಸಿಕೊಟ್ಟಿತು. ಇದರಿಂದಾಗಿ ರಿಪಬ್ಲಿಕನ್ನರು ಬಿಕ್ಕಟ್ಟಿನಲ್ಲಿ ಸಿಕ್ಕಿಕೊಂಡರು. ಅವರ ಪಕ್ಷದ ಪ್ರಮುಖ ವಿಚಾರವೇದಿಕೆ 'ಪ್ರಾಂತಗಳಿಂದ ಗುಲಾಮಗಿರಿಯನ್ನು ನಿಷೇಧಿಸುವ ಅಧಿಕಾರ ಕಾಂಗ್ರೆಸ್ಸಿಗೆ ಇದೆ' ಎನ್ನುವುದಕ್ಕೆ ನ್ಯಾಯಯುತ ಬೆಂಬಲ ಇಲ್ಲದಂತಾಯಿತು. ಇದು ತಮಗೆ ದೊರೆತ ದಿಗ್ವಿಜಯ ಎಂದು ದಾಕ್ಷಿಣಾತ್ಯರು ಮೆರೆದಾಡಿದರು.

ನ್ಯಾಯಾಲಯದ ತೀರ್ಪನ್ನು ಗುಲಾಮಗಿರಿಯ ಪರವಹಿಸಿದವರು ಸ್ವಾಗತಿಸಿ ಅದು ಎಲ್ಲಾ ಪ್ರಾಂತಗಳಿಗೂ ಅನ್ವಯಗೊಳ್ಳುತ್ತದೆ ಎಂದು ವ್ಯಾಖ್ಯಾನ ಮಾಡಿದರು. ಅವರು ಇನ್ನೂ ಮುಂದುವರಿದು ಗುಲಾಮಗಿರಿಯ ವಿಷಯದಲ್ಲಿ ಕೈಹಾಕುವ ಹಕ್ಕು ಕಾಂಗ್ರೆಸ್ಸಿಗೆ ಇಲ್ಲ, ಮೇಲಾಗಿ ನ್ಯಾಯಾಲಯದ ತೀರ್ಪಿನಂತೆ ಗುಲಾಮರ ಒಡೆಯರ ಆಸ್ತಿ ಪಾಸ್ತಿಗಳನ್ನು (ಗುಲಾಮರೂ ಸೇರಿದಂತೆ) ರಕ್ಷಿಸುವುದು ಕಾಂಗ್ರೆಸ್ಸಿನ ಕರ್ತವ್ಯ. ಆದ್ದರಿಂದ ಇದರ ಮುಂದಿನ ಹೆಜ್ಜೆ ಕಾಂಗ್ರೆಸ್ ಗುಲಾಮಗಿರಿ ಕಾಯಿದೆ (slave code)ಯನ್ನು ಜಾರಿಗೆ ತರುವುದು ಎಂದು ವಾದಿಸಿದರು. ಆ ಆಲೋಚನೆಯನ್ನು ಮೊದಲು ಅಲಬಾಮ ವಿಚಾರ

ವೇದಿಕೆಯಲ್ಲಿ ಮುಂದಿಟ್ಟವರು ಅಲಬಾಮ ಡೆಮೊಕ್ರಾಟಿಕ್ ಪಕ್ಷದವರು. ಶೀಘ್ರವಾಗಿ ಈ ಆಲೋಚನೆ ಎಲ್ಲಾ ದಾಕ್ಷಿಣಾತ್ಯರ ಮೂಲ ಮಂತ್ರವಾಯಿತು.

ಲೆಕಾಂಪ್ಟನ್ ರಾಜ್ಯಾಂಗ (The Lecompton Constitution)

ಅಧ್ಯಕ್ಷ ಬ್ಯೂಕಾನನ್ ಕಾನ್ಸಾಸ್ ಸಮಸ್ಯೆಗಳನ್ನು ಹತೋಟಿಗೆ ತರಲು ಮಿಸ್ಸಿಸ್ಸಿಪ್ಪಿ ಸಂಸ್ಥಾನದ ರಾಬರ್ಟ್ ವಾಕರ್‌ನನ್ನು (Robert Walker) ಕಾನ್ಸಾಸ್ ಗವರ್ನರ್ ಆಗಿ ನೇಮಿಸಿದನು. ವಾಕರ್ ದಾಕ್ಷಿಣಾತ್ಯನಾದರೂ ಕಾನ್‌ಸಾಸ್ ಪ್ರಜೆಗಳ ವಿರುದ್ಧವಾಗಿ ಗುಲಾಮಗಿರಿಯನ್ನು ಅವರ ಮೇಲೆ ಬಲಾತ್ಕಾರದಿಂದ ಹೇರಲು ತಯಾರಿರಲಿಲ್ಲ. ಆದರೆ ಗುಲಾಮಗಿರಿಯ ಬೆಂಬಲಿಗರು ರಾಜ್ಯಾಂಗ ರಚನೆ ಸಮ್ಮೇಳನವನ್ನು ಲೆಕಾಂಪ್ಟನ್ (Lecompton) ಎನ್ನುವ ಊರಿನಲ್ಲಿ ಏರ್ಪಡಿಸಿದರು. 'ಮುಕ್ತ ಮಣ್ಣಿನ' ಪಕ್ಷದವರು ಸಮ್ಮೇಳನದಲ್ಲಿ ಭಾಗವಹಿಸಲು ನಿರಾಕರಿಸಿದರು. ಇದನ್ನೆಲ್ಲ ಗಣನೆಗೆ ತೆಗೆದುಕೊಳ್ಳದೆ ಸಮ್ಮೇಳನದ ಸದಸ್ಯರು ಗುಲಾಮಗಿರಿಯ ಪರವಾದ ರಾಜ್ಯಾಂಗವನ್ನು ಸಿದ್ಧಪಡಿಸಿದರು. ಆದರೆ ಆ ರಾಜ್ಯಾಂಗವನ್ನು ಪ್ರಜೆಗಳ ಒಪ್ಪಿಗೆ ಪಡೆಯಲು ಪ್ರಜಾಭಿಪ್ರಾಯ ಸಂಗ್ರಹ ವ್ಯವಸ್ಥೆ ಮಾಡಲು ನಿರಾಕರಿಸಿದರು. ಗವರ್ನರ್ ವಾಕರ್ ಸಮ್ಮೇಳನದ ಕಾರ್ಯಕಲಾಪಗಳನ್ನು ಖಂಡಿಸಿ ಅಧ್ಯಕ್ಷ ಬ್ಯೂಕಾನನ್‌ಗೆ ಈ ವಿಷಯ ವರದಿ ಮಾಡಲು ರಾಜಧಾನಿ ವಾಷಿಂಗ್‌ಟನ್‌ಗೆ ಪ್ರಯಾಣ ಬೆಳೆಸಿದನು. ಬ್ಯೂಕಾನನ್ ನಿಜಸ್ಥಿತಿಯನ್ನು ಎದುರಿಸಲು ನಿರಾಕರಿಸಿದನು. ಗವರ್ನರ್ ವಾಕರ್‌ನನ್ನು ಬೆಂಬಲಿಸಿ ಲೆಕಾಂಪ್ಟನ್ ರಾಜ್ಯಾಂಗವನ್ನು ನಿರಾಕರಿಸುವುದರ ಬದಲು, ಬ್ಯೂಕಾನನ್ ಕಾನ್ಸಾಸ್‌ನ್ನು ಲೆಕಾಂಪ್ಟನ್ ರಾಜ್ಯಾಂಗದ ಆಧಾರದ ಮೇಲೆ ಸಂಯುಕ್ತ ಸಂಸ್ಥಾನಗಳನ್ನು ಸೇರಿಸುವಂತೆ ಕಾಂಗ್ರೆಸ್‌ನ್ನು ಕೇಳಿಕೊಳ್ಳಲು ನಿರ್ಧರಿಸಿದನು.

ಬ್ಯೂಕಾನನ್ ನಿರ್ಧಾರ ಅವನನ್ನು ಸ್ಟೀಫನ್ ಡಗ್ಲಾಸ್‌ನೊಡನೆ ಮುಖಾಮುಖಿ ವಾಗ್ಯುದ್ಧಕ್ಕೆ ಎಳೆಯಿತು. ಅವರಿಬ್ಬರ ಘರ್ಷಣೆ ಡೆಮೊಕ್ರಾಟಿಕ್ ಪಕ್ಷವನ್ನು ಒಡೆದು ಚೂರಾಗುವಂತೆ ಮಾಡಿತು. ತಾತ್ವಿಕ ಕಾರಣ ಮತ್ತು ಸ್ವಾರ್ಥಪರತೆ ಡಗ್ಲಾಸ್‌ನನ್ನು ತನ್ನ ಸ್ವಂತ ಪಕ್ಷದ ನಾಯಕನನ್ನೇ ವಿರೋಧಿಸುವಂತೆ ಪ್ರಚೋದಿಸಿದವು. ಕಾನ್ಸಾಸ್ ಪ್ರಾಂತವನ್ನು ಕಾಂಗ್ರೆಸ್ ಸಂಯುಕ್ತ ಸಂಸ್ಥಾನಕ್ಕೆ (ಲೆಕಾಂಪ್ಟನ್ ರಾಜ್ಯಾಂಗದ ಪ್ರಕಾರ) ಸೇರಿಸಿಕೊಳ್ಳುವುದನ್ನು ನೋಡಿಕೊಂಡು ಸುಮ್ಮನಿದ್ದಿದ್ದರೆ, ಪ್ರಜಾಪ್ರಭುತ್ವಕ್ಕೆ ಧಕ್ಕೆ ಉಂಟಾಗುವುದಲ್ಲದೆ ತನ್ನ ರಾಜಕೀಯ ಭವಿಷ್ಯಕ್ಕೆ ಹಾನಿ ಉಂಟಾಗುವುದನ್ನು ಡಗ್ಲಾಸ್ ಮನಗಂಡನು. ೧೮೫೮ರ ಸೆನೆಟ್ ಮರುಚುನಾವಣೆಗೆ ಡಗ್ಲಾಸ್ ತಯಾರಾಗಬೇಕಿತ್ತು. ಇಲಿನಾಯ್ ರಾಜ್ಯದ ೫೬ ವೃತ್ತಪತ್ರಿಕೆಗಳು ಲೆಕಾಂಪ್ಟನ್ ರಾಜ್ಯಾಂಗದ ವಿರುದ್ಧ ಸಂಪಾದಕೀಯಗಳನ್ನು ಬರೆದವು. ಈ ಪರಿಸ್ಥಿತಿಯಲ್ಲಿ ಡಗ್ಲಾಸ್ ಕಾಂಗ್ರೆಸ್ಸಿನ ಠರಾವನ್ನು ಒಪ್ಪಿದ್ದರೆ ಅವನು ಚುನಾವಣೆಯಲ್ಲಿ ಸೋಲುತ್ತಿದ್ದುದು ಖಂಡಿತ. ಆದ್ದರಿಂದ ಅವನು ರಿಪಬ್ಲಿಕನ್ ಪಕ್ಷದ ಜೊತೆ ಸೇರಿ

ಬಹಿರಂಗವಾಗಿ ಲೆಕಾಂಪ್ಟನ್ ರಾಜ್ಯಾಂಗದ ವಿರುದ್ಧ ಹೋರಾಟದಲ್ಲಿ ಭಾಗವಹಿಸಿದನು. ಕಾಂಗ್ರೆಸ್ ಕಾನ್ಸಾಸ್ ಸೇರಿಸಿಕೊಳ್ಳುವ ಮಸೂದೆಯನ್ನು ತಿರಸ್ಕರಿಸಿತು. ಈ ಮಧ್ಯೆ ಲೆಕಾಂಪ್ಟನ್‌ನಲ್ಲಿ ನಡೆದ ಮೋಸ ವಂಚನೆಗಳು ಸ್ಪಷ್ಟವಾಗಿ ತಿಳಿದುಬಂದವು. ೧೮೫೭ರ ಅಕ್ಟೋಬರ್ ತಿಂಗಳಲ್ಲಿ ಕಾನ್ಸಾಸ್‌ನಲ್ಲಿ ಹೊಸ ನ್ಯಾಯವಿಧಾಯಕ ಸಭೆ ಆಯ್ಕೆಗೊಂಡಿತ್ತು. ಈ ಸಭೆ ಲೆಕಾಂಪ್ಟನ್ ರಾಜ್ಯಾಂಗವನ್ನು ಪ್ರಜಾಭಿಪ್ರಾಯ ಸಂಗ್ರಹಕ್ಕೆ ಒಳಪಡಿಸಿತು. ಪರಿಣಾಮವಾಗಿ ಆ ರಾಜ್ಯಾಂಗವನ್ನು ಪ್ರಜೆಗಳು ಬಹುಮತದಿಂದ ತಿರಸ್ಕರಿಸಿದರು.

ಲಿಂಕನ್‌ನ ರಾಜಕೀಯ ರಂಗಪ್ರವೇಶ

೧೮೫೦ರ ದಶಕ ವರ್ಣದ್ವೇಷದ ಕಾರ್ಮೋಡಗಳು ರಾಷ್ಟ್ರದ ರಾಜಕೀಯ ದಿಗಂತದಲ್ಲಿ ದಟ್ಟೈಸುತ್ತ ಮುಂದೆ ಬರುವ ದುರಂತದ ಮುನ್ಸೂಚನೆಯಂತೆ ಅಲ್ಲಲ್ಲಿ ನಡೆಯುತ್ತಿದ್ದ ಘರ್ಷಣೆಗಳು, ಕೊಲೆ, ಹೊಡೆದಾಟಗಳ ಗುಡುಗು ಸಿಡಿಲುಗಳು ಮೊಳಗುತ್ತಿದ್ದ ಕರಾಳ ಕಾಲವಾಗಿತ್ತು. ಸಂಯುಕ್ತ ಸಂಸ್ಥಾನಗಳ ಒಗ್ಗಟ್ಟು ಮುರಿದುಬೀಳುವ ಸಾಧ್ಯತೆ ಹೆದರಿಕೆ ಹುಟ್ಟಿಸಿತ್ತು. ಈ ಒಗ್ಗಟ್ಟನ್ನು ಕಾಪಾಡುವುದು ಸ್ಟೀಫನ್ ಡಗ್ಲಾಸ್‌ನಿಂದ ಮಾತ್ರ ಸಾಧ್ಯ ಎಂದು ಜನರು ನಂಬಿದ್ದರು. ಅವನ ಕೆಟ್ಟಗುಣವಾದ ತಿರಸ್ಕಾರ ಪ್ರವೃತ್ತಿಯನ್ನು ಜನರು ಕ್ಷಮಿಸಲು ತಯಾರಿದ್ದರು. ಒಗ್ಗಟ್ಟು ಉಳಿಯುವುದು ಅವರಿಗೆ ಮುಖ್ಯವಾಗಿತ್ತು. ಆದ್ದರಿಂದ ೧೮೫೮ರ ಸೆನೆಟ್ ಚುನಾವಣೆಯಲ್ಲಿ ಡಗ್ಲಾಸ್‌ನ ಮರುಚುನಾವಣೆ ಜನರಲ್ಲಿ ಅತ್ಯಂತ ಆಸಕ್ತಿ ಉಂಟುಮಾಡಿತ್ತು. ಈ ಸ್ಪರ್ಧೆಯ ಮಹತ್ವ ಮತ್ತು ಡಗ್ಲಾಸ್‌ನ ರಾಷ್ಟ್ರಮಟ್ಟದ ಘನತೆ ಗೌರವಗಳು, ವಿರೋಧ ಪಕ್ಷದವರಿಗೆ ಡಗ್ಲಾಸ್‌ನಿಗೆ ಸಾಟಿಯಾದ ಪ್ರತಿಸ್ಪರ್ಧಿಯನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡುವ ಜವಾಬ್ದಾರಿ ಇಲಿನಾಯ್ ರಿಪಬ್ಲಿಕನ್ನರ ಮೇಲೆ ಬಿದ್ದಿತ್ತು. ಆ ಅಭ್ಯರ್ಥಿ ಡಗ್ಲಾಸ್‌ನ ಎದುರು ಉತ್ತಮವಾಗಿ ವಾದಿಸುವಂಥವನಾಗಿರ ಬೇಕಾಗಿತ್ತು. ಆಯ್ಕೆ ಮಾಡಿದ ಅಂಥ ವ್ಯಕ್ತಿಯೇ ಅಬ್ರಹಾಮ್ ಲಿಂಕನ್.

೧೮೫೮ರಲ್ಲಿ ಲಿಂಕನ್ ಅನಾಮಧೇಯನಾಗಿರದಿದ್ದರೂ ಅವನು ತನ್ನ ಉದ್ಯಮದಲ್ಲಿ, ಕಾನ್ಸಾಸ್ ಪ್ರಾಂತದ ಸಂದಿಗ್ಧ ಪರಿಸ್ಥಿತಿ ಆಸ್ಫೋಟನಗೊಳ್ಳುವವರೆಗೂ, ಹೇಳಿಕೊಳ್ಳುವಂಥ ಯಶಸ್ಸು ಗಳಿಸಿರಲಿಲ್ಲ. ಲಿಂಕನ್ ವ್ಹಿಗ್ ಅಭ್ಯರ್ಥಿಯಾಗಿ ಇಲಿನಾಯ್ ನ್ಯಾಯವಿಧಾಯಕ ಸಭೆಗೆ ಆಯ್ಕೆಗೊಂಡಾಗ ಅವನಿಗೆ ಇನ್ನೂ ೨೩ ವರ್ಷ ತುಂಬಿರಲಿಲ್ಲ. ಅವನು ನ್ಯಾಯಶಾಸ್ತ್ರವನ್ನು ಅಭ್ಯಾಸ ಮಾಡಿದ್ದನು ಮತ್ತು ೧೮೩೭ರಲ್ಲಿ ವಕೀಲರ ಸಂಘಕ್ಕೆ (Bar) ಪ್ರವೇಶ ದೊರಕಿಸಿಕೊಂಡಿದ್ದನು. ಡಗ್ಲಾಸ್‌ನಿಗೆ ಹೋಲಿಸಿದರೆ ಲಿಂಕನ್ ಸ್ಥಿತಿವಂತನಾಗಿರಲಿಲ್ಲ. ೧೮೪೨ರವರೆಗೂ ಅವನು ನ್ಯಾಯವಿಧಾಯಕ ಸಭೆಯಲ್ಲಿ ಸದಸ್ಯನಾಗಿದ್ದನು. ಆ ಸಭೆಯಲ್ಲಿ ಅವನು ಎಲ್ಲ ಮುಖ್ಯ ಅಂಶಗಳ ಚರ್ಚೆಯಲ್ಲಿ ವ್ಹಿಗ್ ಧೋರಣೆಯನ್ನು ಅನುಸರಿಸಿದನು. ೧೮೪೭ರಲ್ಲಿ ಲಿಂಕನ್ ಕಾಂಗ್ರೆಸ್ ಸದಸ್ಯನಾಗಿ ಆಯ್ಕೆಯಾದನು, ಆದರೆ ಒಂದು ಅವಧಿಗೆ ಮಾತ್ರ ೧೮೪೭ರ ನಂತರ ಅವನ ರಾಜಕೀಯ

ವೃತ್ತಿಜೀವನ ಊರ್ಜಿತಗೊಳ್ಳಲಿಲ್ಲ. ಈ ಪರಿಸ್ಥಿತಿಯಲ್ಲಿ ಲಿಂಕನ್ ಸಣ್ಣ ಊರಿನ ವಕೀಲನಾಗಿ ಉಳಿದುಬಿಡುವನೇನೋ ಎಂಬ ಅನುಮಾನ ಉಂಟಾಗಿತ್ತು. ಆ ಕಷ್ಟದ ದಿನಗಳಲ್ಲಿ ಕೂಡ ಲಿಂಕನ್ ಅಸಾಧಾರಣ ವ್ಯಕ್ತಿತ್ವ – ಲಕ್ಷಣಗಳನ್ನು ತೋರಿ ಜನರ ಗೌರವ ಸಂಪಾದಿಸಿದ್ದನು. ಲಿಂಕನ್ ವ್ಯಕ್ತಿತ್ವ ಅತ್ಯಂತ ಸಂಕೀರ್ಣವಾಗಿತ್ತು. ಅವನು ನೋಟಕ್ಕೆ ಒರಟನಾಗಿ ಕಾಣುತ್ತಿದ್ದನು. ಅವನ ಹಾಸ್ಯ ಪ್ರವೃತ್ತಿ ಅಶ್ಲೀಲತೆಗೆ ಹೊರತಾಗಿರಲಿಲ್ಲ. ಲಿಂಕನ್ ಕತೆ ಹೇಳುವುದರಲ್ಲಿ ನಿಸ್ಸೀಮನಾಗಿದ್ದನು. ಆ ಕತೆಗಳಲ್ಲಿ ಹೆಚ್ಚಿನವು ಉತ್ಪ್ರೇಕ್ಷೆಯಿಂದ ಕೂಡಿದ ಕಟ್ಟುಕತೆಗಳು. ಆದರೂ ಈ ಕತೆಗಳು ಅವನನ್ನು ಜನಪ್ರಿಯವಾಗಿ ಮಾಡಿದ್ದವು. ಹೀಗಿದ್ದರೂ ಲಿಂಕನ್ ಆಗಾಗ ಅತ್ಯಂತ ಆಳವಾದ ವ್ಯಾಕುಲತೆಯ ಕಂದರಕ್ಕೆ ಜಾರಿ ಬೀಳುತ್ತಿದ್ದನು. ಆಗಿನ ಕಾಲದಲ್ಲಿ ಕುಡಿತ ಸರ್ವೇ ಸಾಮಾನ್ಯವಾಗಿತ್ತು. ಅದರಲ್ಲೂ ಗಂಡಸರು ವಿಪರೀತ ಕುಡಿಯುವುದು ಪದ್ಧತಿಯಾಗಿತ್ತು. ಆಶ್ಚರ್ಯವೆಂದರೆ ಲಿಂಕನ್ ಯಾವ ರೀತಿಯ ಮಾದಕ ಪಾನೀಯಗಳನ್ನೂ ಮುಟ್ಟುತ್ತಿರಲಿಲ್ಲ. ಸದಾ ಶಾಂತಚಿತ್ತನಾದ ಆಧ್ಯಾತ್ಮಿಕ ಮನೋಭಾವದವನಾಗಿ ಸಂಪ್ರದಾಯಸ್ಥರ ದೃಷ್ಟಿಯಲ್ಲಿ ಅವನು ಯಾವುದನ್ನೂ ಸುಲಭವಾಗಿ ನಂಬದ, ಅನುಮಾನ ಸ್ವಭಾವದ ವ್ಯಕ್ತಿಯಾಗಿದ್ದನು. ಸದಾ ಕಾರ್ಯನಿರತನಾಗಿ ತನ್ನ ಪಕ್ಷಕ್ಕಾಗಿ ಗಾಣದೆತ್ತಿನಂತೆ ದುಡಿದನು ಮತ್ತು ಅದೇ ಸಮಯದಲ್ಲಿ ಪೌರಸಭೆಯ ವಕೀಲನೂ ಆಗಿದ್ದನು. ರೈಲು ರಸ್ತೆಯ ಪರವಾಗಿ ಶಾಸಕರ ಬೆಂಬಲ ಪಡೆಯಲು ಪ್ರಯತ್ನ ನಡೆಸಿದನು. ಅವನ ನಿಷ್ಠೆ ಮತ್ತು ಪ್ರಾಮಾಣಿಕತೆಗಳಿಂದ ಅವನ ಚಾರಿತ್ರ್ಯ ಕಳಂಕರಹಿತ ವಾಗಿದ್ದು ಅವನ ಘನತೆ ಗೌರವಗಳು ಹೆಚ್ಚಿದವು.

೧೮೫೪ರಲ್ಲಿ ಗುಲಾಮಗಿರಿಯ ವಾಗ್ವಾದ ಪುನಃ ತಲೆ ಎತ್ತಿದ್ದು ಲಿಂಕನ್ನನ ಅಂತಃಕರಣ ವನ್ನು ತೀವ್ರವಾಗಿ ಕದಡಿತು. ಆದರೆ ಅವನು ಗುಲಾಮ ವಿಮೋಚನಾ ತತ್ವವನ್ನು ಪ್ರತಿಪಾದಿಸಲಿಲ್ಲ. ಇದಕ್ಕೆ ಕಾರಣ ಅವನು ಗುಲಾಮಗಿರಿಯನ್ನು ವ್ಯಾವಹಾರಿಕ ದೃಷ್ಟಿಯಿಂದ ವಿಶ್ಲೇಷಣೆ ಮಾಡಿದ್ದು. ಕಾನ್ಸಾಸ್-ನೆಬ್ರಾಸ್ಕ ಕಾಯಿದೆ ಲಿಂಕನ್ ಗುಲಾಮಗಿರಿಯನ್ನು ನೈತಿಕ ದೃಷ್ಟಿಯಿಂದ ಅರ್ಥ ಮಾಡಿಕೊಳ್ಳುವಂತೆ ಮಾಡಿ ಅವನ ಅಭಿಪ್ರಾಯವನ್ನು ಬದಲಾಯಿಸುವಂತೆ ಮಾಡಿತು. 'ಗುಲಾಮಗಿರಿ ಅಪರಾಧವಲ್ಲ ಎನ್ನುವುದಾದರೆ ಯಾವ ಕೃತ್ಯವೂ ಅಪರಾಧವಲ್ಲ' ಎಂದು ಲಿಂಕನ್ ಉದ್ಗರಿಸಿದನು. ಕಾನ್ಸಾಸ್-ನೆಬ್ರಾಸ್ಕ ಪ್ರಾಂತದಲ್ಲಿ ಗುಲಾಮಗಿರಿಗೆ ಅವಕಾಶ ಕೊಡುವುದು ದೊಡ್ಡ ತಪ್ಪಾಗುತ್ತದೆ ಎಂದು ವಾದಿಸಿದನು. ಆದರೆ ಉತ್ತರದ 'ಮುಕ್ತ ಮಣ್ಣಿ'ನವರಂತೆ ಲಿಂಕನ್ ದಾಕ್ಷಿಣಾತ್ಯರು ಗುಲಾಮಗಿರಿಗೆ ಕಾರಣರು ಎಂದು ನಿಂದಿಸಲಿಲ್ಲ. 'ಅವರ ಪರಿಸ್ಥಿತಿಯಲ್ಲಿದ್ದರೆ ನಾವೂ ಹಾಗೆಯೇ ಮಾಡುತ್ತಿದ್ದೆವು' ಎಂದು ಒಪ್ಪಿಕೊಂಡಿದ್ದನು. ಲಿಂಕನ್‌ನ ನಿಷ್ಪಕ್ಷಪಾತ ಮತ್ತು ಸಂಯಮದಿಂದ ಕೂಡಿದ (moderation) ಧೋರಣೆ, ಜೊತೆಗೆ ಅವನ ನೀತಿಯುತ ನಡಾವಳಿಕೆಗಳು ಜನರ ಅಪಾರ ಪ್ರಶಂಸೆಗೆ ಪಾತ್ರವಾಗುವಂತೆ ಮಾಡಿದ್ದವು. ಆಗಿನ ಗೊಂದಲದ ಪರಿಸ್ಥಿತಿಯಲ್ಲಿ ಜನರು ಕರಿಯರ ಬಗ್ಗೆ ತಮಗಿದ್ದ ಕೀಳು ಅಭಿಪ್ರಾಯ,

ಸಂಯುಕ್ತ ಸಂಸ್ಥಾನಗಳು ಛಿದ್ರಗೊಳ್ಳದಂತೆ ಕಾಪಾಡುವ ದೇಶಭಕ್ತಿ ಮತ್ತು ಜನರ ಅಂತಃಕರಣದಲ್ಲಿ ಬೆಳೆಯುತ್ತಿದ್ದ ಗುಲಾಮಗಿರಿಯ ಬಗ್ಗೆ ಪಾಪಪ್ರಜ್ಞೆ – ಈ ಸಂಕೀರ್ಣ ಭಾವಗಳನ್ನು ಹೇಗೆ ಸಮನ್ವಯಗೊಳಿಸಬೇಕೆಂದು ತಿಳಿಯದೆ ತೊಳಲಾಡುತ್ತಿದ್ದರು. ಗುಲಾಮಗಿರಿಗೆ ಯಾವ ರೀತಿಯ ನೆರವು ನೀಡುವುದೂ ತಪ್ಪಾಗುತ್ತದೆ. ಆದರೆ ಈ ಪದ್ಧತಿಯನ್ನು ತಕ್ಷಣವೇ ಪರಿಹರಿಸಲು ಸಾಧ್ಯವಿಲ್ಲ. ಇದನ್ನು ನೆಪ ಮಾಡಿಕೊಂಡು ಹೊಸ ಪ್ರಾಂತಗಳನ್ನು ಗುಲಾಮಗಿರಿಗೆ ತೆರೆಯುವುದು ಆಫ್ರಿಕದ ಗುಲಾಮರ ಮಾರಾಟ ವನ್ನು ಪುನಃ ಪ್ರಾರಂಭಿಸಿದಂತಾಗುತ್ತದೆ ಎಂದು ಲಿಂಕನ್ ಅಭಿಪ್ರಾಯಪಟ್ಟನು. ಲಿಂಕನ್ ಗುಲಾಮರ ಕಷ್ಟಗಳನ್ನು ಕಡೆಗಣಿಸಲಿಲ್ಲ. ಆದರೆ ಗುಲಾಮಗಿರಿಯನ್ನು ರದ್ದು ಮಾಡಲು ಅವಸರದಲ್ಲಿ ತಯಾರಿಸಿದ ಪರಿಹಾರಗಳನ್ನು ಒಪ್ಪಿಕೊಳ್ಳಲೂ ಇಲ್ಲ. ಅವನು ಜನರಿಗೆ ರಾಷ್ಟ್ರದ ಭವಿಷ್ಯದ ಬಗ್ಗೆ ದೀರ್ಘಾಲೋಚನೆ ಮಾಡಬೇಕೆಂದು ಹೇಳಿ ಮುಂದೆ ಎಂದಾದರೊಂದು ದಿನ ಕಾನ್ಸಾಸ್ ಮಾತ್ರವಲ್ಲದೆ ಇಡೀ ದೇಶವೇ ಗುಲಾಮಗಿರಿಯಿಂದ ಬಿಡುಗಡೆಯಾಗುವುದನ್ನು ಎದುರುನೋಡಬೇಕೆಂದು ಜನರಿಗೆ ಮನವಿ ಮಾಡಿದನು.

ಲಿಂಕನ್ ಮತ್ತು ಡಗ್ಲಾಸ್ ವಾಗ್ವಾದ

ಜುಲೈ ೧೮೫೮ರಲ್ಲಿ ಲಿಂಕನ್ ಚರ್ಚಾಸರಣಿಯಲ್ಲಿ ಭಾಗವಹಿಸುವಂತೆ ಡಗ್ಲಾಸ್‌ನಿಗೆ ಸವಾಲು ಹಾಕಿದನು. ಈ ಚರ್ಚಾಕೂಟಗಳಲ್ಲಿ ಅಧಿಕಸಂಖ್ಯೆಯಲ್ಲಿ ಜನ ಹಾಜರಿದ್ದು, ಚರ್ಚೆಗಳಲ್ಲಿ ವಾಗ್ವಾದಗಳು ಸರಿಸಮವಾಗಿದ್ದು, ದೇಶಾದ್ಯಂತ ಪ್ರಸಾರಗೊಂಡವು. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಇಬ್ಬರು ಅಭ್ಯರ್ಥಿಗಳು ಮುಖಾಮುಖಿಯಾಗಿ ಚರ್ಚೆ ಮಾಡುವ ಸಂಗತಿ ಸಾವಿರಾರು ಜನರ ಮನಸೆಳೆದು ದೇಶದಾದ್ಯಂತ ಜನರ ಆಸಕ್ತಿಯನ್ನು ಕೆರಳಿಸಿತ್ತು. ಚರ್ಚೆಗೆ ಇಳಿದಿದ್ದ ಈ ರಾಜಕಾರಣಿಗಳು ಪರಸ್ಪರವಾಗಿ ಸಂಪೂರ್ಣ ವ್ಯತಿರಿಕ್ತವಾದ ರೀತಿ ನೀತಿಗಳನ್ನು ಹೊಂದಿದ್ದರು. ಆದ್ದರಿಂದ ಈ ವ್ಯತ್ಯಾಸಗಳು ಅವರಿಬ್ಬರ ವ್ಯಕ್ತಿತ್ವದ ಬಗ್ಗೆ ಜನರು ತಮ್ಮ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ಸಾಧ್ಯವಾಯಿತು. ಡಗ್ಲಾಸ್‌ನು ಸಾಮರ್ಥ್ಯ ಮತ್ತು ಯಶಸ್ಸು ಮೂರ್ತಿವೆತ್ತಂತಿದ್ದನು. ಅವನು ಸದಾ ನೂತನ ಮಾದರಿಯ, ಆಡಂಬರದ ಉಡುಪು ಧರಿಸಿ ತನ್ನ ಐಶ್ವರ್ಯ ಮತ್ತು ಅಧಿಕಾರಗಳನ್ನು ಮೆರೆಸುತ್ತಿದ್ದನು. ಅವನು ಕಾರ್ಯಕ್ರಮಕ್ಕೆ ಹಾಜರಾಗಬೇಕಾದಾಗ ತನ್ನ ಸ್ವಂತ ರೈಲುಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದ. ರೈಲಿನಿಂದ ಇಳಿದು ಚರ್ಚೆ ನಡೆಯುವ ಸ್ಥಳಕ್ಕೆ ಬಾಜಾಬಜಂತ್ರಿಯೊಡನೆ ಮೆರವಣಿಗೆಯಲ್ಲಿ ಹೋಗುತ್ತಿದ್ದ. ಇದಕ್ಕೆ ವ್ಯತಿರಿಕ್ತವಾಗಿ ಲಿಂಕನ್ ಚರ್ಚಾಕೂಟಕ್ಕೆ ಒಬ್ಬ ಸಾಮಾನ್ಯ ಪ್ರಜೆಯಂತೆ ಬರುತ್ತಿದ್ದ. ಅವನು ಅಳ್ಳಕವಾದ ಕಪ್ಪು ಸೂಟ್ ಧರಿಸಿ, ಹೊಗೆ ಕೊಳವೆಯಂಥ (stove pipe) ಹ್ಯಾಟ್ ಹಾಕಿಕೊಳ್ಳುತ್ತಿದ್ದ. ಆ ಹ್ಯಾಟ್‌ನಿಂದಾಗಿ ವಾಸ್ತವವಾಗಿ ಎತ್ತರವಾಗಿಯೆ ಇದ್ದ ಅವನು ಮತ್ತಷ್ಟು ಎತ್ತರವಾಗಿ ಕಾಣುತ್ತಿದ್ದ. ಆ ಎತ್ತರದ ಹ್ಯಾಟ್‌ನೊಳಗೆ ಅವನು ಕಾಗದಗಳು, ರಸೀದಿಗಳು, ಟಿಪ್ಪಣಿ ಬರೆದುಕೊಂಡ

ಕಾಗದದ ಚೂರುಗಳು ಮತ್ತು ಇತರೆ ಚಿಕ್ಕಪುಟ್ಟ ವಸ್ತುಗಳನ್ನು ತುಂಬಿಕೊಂಡಿರುತ್ತಿದ್ದನು. ಅವನ ಬಟ್ಟೆಗಳು ಯಾವಾಗಲೂ ಮುದುಡಿರುತ್ತಿದ್ದವು. ಏಕೆಂದರೆ ಅವನು ಜನಸಾಮಾನ್ಯರಂತೆ ಕುದುರೆ ಸಾರೋಟುಗಳಲ್ಲಿ ಪ್ರಯಾಣ ಮಾಡುತ್ತಿದ್ದನು. ಸ್ಥಳೀಯ ಧುರೀಣರು ಅವನನ್ನು ಸ್ವಾಗತಿಸಲು ಬಂದಿದ್ದರೆ ಅವರ ಜೊತೆಗೂಡಿ ನಡೆದುಕೊಂಡು ಚರ್ಚಾಕೂಟದ ಸ್ಥಳಕ್ಕೆ ಬರುತ್ತಿದ್ದನು.

ಲಿಂಕನ್ ಮತ್ತು ಡಗ್ಲಾಸ್ ಇಬ್ಬರೂ ಉತ್ತಮಮಟ್ಟದ ಪ್ರಬುದ್ಧವಾದ ಭಾಷಣಗಳನ್ನು ಮಾಡುತ್ತಿದ್ದರು. ಆದರೆ ಅವು ಪಾಂಡಿತ್ಯಪೂರ್ಣ ಭಾಷಣಗಳಾಗಿರದೆ, ರಾಜಕೀಯ ಭಾಷಣಗಳಾಗಿದ್ದವು. ಲಿಂಕನ್ ಭಾಷಣಗಳಲ್ಲಿ ಗುಲಾಮಗಿರಿ ಮತ್ತು ಸ್ವತಂತ್ರ ಪ್ರಜಾಪ್ರಭುತ್ವ ಒಟ್ಟಿಗೆ ಇರುವುದು ಸಾಧ್ಯವಿಲ್ಲ. ಇವು ಪರಸ್ಪರ ತದ್ವಿರುದ್ಧವಾದ ಸಾಮಾಜಿಕ ವ್ಯವಸ್ಥೆಗಳು. ಗುಲಾಮಗಿರಿ ದೇಶದ ಅವನತಿಗೆ ಕಾರಣವಾಗಬಹುದು ಎನ್ನುವ ಸಮಸ್ಯೆಯನ್ನು ಕುರಿತು ಮನಮುಟ್ಟುವ ರೀತಿಯಲ್ಲಿ ಹೇಳುತ್ತಿದ್ದನು. ಅವನ 'ಇಬ್ಭಾಗವಾದ ಮನೆ ಭದ್ರವಾಗಿರಲಾರದು, ರಾಷ್ಟ್ರದಲ್ಲಿ ಸಂಪೂರ್ಣ ಗುಲಾಮಗಿರಿ ಇರಬೇಕು ಅಥವಾ ಸಂಪೂರ್ಣ ಸ್ವಾತಂತ್ರ್ಯ ಇರಬೇಕು' ಎಂದು ಪ್ರಾರಂಭವಾಗುವ ಭಾಷಣ ಸುಪ್ರಸಿದ್ಧವಾಗಿದೆ. ಲಿಂಕನ್ ಮತ್ತು ಡಗ್ಲಾಸ್ ತಮ್ಮ ನಡುವಣ ಭಿನ್ನತೆ ವ್ಯತ್ಯಾಸಗಳನ್ನು ಉತ್ಪ್ರೇಕ್ಷೆ ಮಾಡಿ ಹೇಳುತ್ತಿದ್ದರು. ಆದರೆ ವಾಸ್ತವವಾಗಿ ಅವರಿಬ್ಬರ ನಡುವೆ ಹೆಚ್ಚಿನ ವ್ಯತ್ಯಾಸಗಳು ಇರಲಿಲ್ಲ. ಇಬ್ಬರೂ ಗುಲಾಮಗಿರಿಯನ್ನು ವಿರೋಧಿಸಿದರು ಮತ್ತು ಪ್ರಾಂತಗಳಲ್ಲಿ ಗುಲಾಮಗಿರಿ ಸ್ಥಾಪನೆಯಾಗದಂತೆ ನೋಡಿಕೊಳ್ಳಬೇಕು ಎಂದು ವಾದಿಸಿದರು. ಗುಲಾಮಗಿರಿ ಆರ್ಥಿಕವಾಗಿ ಹಾನಿಕರವಾದುದು ಎಂದು ಇಬ್ಬರೂ ಅಭಿಪ್ರಾಯಪಟ್ಟರೂ ಅದನ್ನು ರಾಜಕೀಯ ವಿಧಾನಗಳಿಂದ ಅಥವಾ ಬಲಪ್ರಯೋಗದಿಂದ ರದ್ದುಗೊಳಿಸಬೇಕೆಂದು ಒತ್ತಾಯ ಮಾಡಲಿಲ್ಲ. ಇಬ್ಬರೂ ಕರಿಯರು ಹುಟ್ಟಿನಿಂದಲೆ ಬಿಳಿಯರಿಗಿಂತ ಕೀಳಾದವರು ಎಂದು ನಂಬಿದ್ದರು!

ಡಗ್ಲಾಸ್‌ನ ಉಪಾಯವೆಂದರೆ ಲಿಂಕನ್‌ನನ್ನು ವಿಮೋಚನಾವಾದಿ (abolitionist) ಯಾಗಿ ತೋರುವಂತೆ ಮಾಡುವುದು. ರಿಪಬ್ಲಿಕನ್ನರು ಡ್ರೆಡ್ ಸ್ಕಾಟ್ ಕಟ್ಟಳೆಯಲ್ಲಿ ಶ್ರೇಷ್ಠ ನ್ಯಾಯಾಲಯ ನೀಡಿದ ತೀರ್ಪನ್ನು ತಿರಸ್ಕರಿಸಿ ಬಿಳಿಯರು ಮತ್ತು ಕರಿಯರ ಸಮಾನತೆಯನ್ನು ಸ್ಥಾಪಿಸಲು ಹೊರಟಿದ್ದಾರೆ ಎಂದು ಡಗ್ಲಾಸ್ ಆಪಾದಿಸಿದನು. ಲಿಂಕನ್ ಇದಕ್ಕೆ ಉತ್ತರವಾಗಿ ಡಗ್ಲಾಸ್‌ನು ಗುಲಾಮಗಿರಿಯನ್ನು ಬೆಂಬಲಿಸುವ ಮತ್ತು ಡ್ರೆಡ್ ಸ್ಕಾಟ್ ಕಟ್ಟಳೆಯ ತೀರ್ಮಾನವನ್ನು ರಕ್ಷಿಸಲು ಪಣ ತೊಟ್ಟವನು ಎಂದು ವಾದಿಸಿದನು. ಲಿಂಕನ್ ಅಂತಃಕರಣದಿಂದ ಹೇಳಿದ ಮಾತುಗಳ ಸಾರಾಂಶ – 'ಗುಲಾಮಗಿರಿ ಸ್ವಚ್ಛಂದವಾದ ದುಷ್ಕೃತ್ಯ. ಇದರ ದುಷ್ಪರಿಣಾಮ ನೀಗ್ರೋಗಳಿಗೆ ಮಾತ್ರವಲ್ಲದೆ ಬಿಳಿಯರಿಗೆ, ಭೂಮಿಗೆ ಮತ್ತು ರಾಜ್ಯಕ್ಕೆ ಹಾನಿ ಉಂಟುಮಾಡುತ್ತದೆ. 'ಯಾರಿಗೆ ಗುಲಾಮರ ಅಗತ್ಯವಿದೆಯೊ

ಅವರಿಗೆ ಗುಲಾಮರನ್ನು ಇಟ್ಟುಕೊಳ್ಳುವ ಹಕ್ಕಿದೆ' ಎನ್ನುವ ಹೇಳಿಕೆಯಿಂದ 'ಡಗ್ಲಾಸ್ ನಮ್ಮ ಸುತ್ತಲಿರುವ ನೀತಿಯ ದೀಪಗಳನ್ನು ನಂದಿಸುತ್ತಿದ್ದಾನೆ' ಎಂದು ಲಿಂಕನ್ ಮನಮುಟ್ಟುವಂತೆ ತಿಳಿಸಿದನು. ತಾನು ಉಗ್ರಗಾಮಿಯಲ್ಲ ಎಂದು ತೋರಿಸಿಕೊಳ್ಳುವ ಸಲುವಾಗಿ ಲಿಂಕನ್ 'ಕರಿಯರು ಮತ್ತು ಬಿಳಿಯರ ನಡುವೆ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಸಮಾನತೆಯನ್ನು ತರಬೇಕೆಂದು ನಾನು ಹೇಳುತ್ತಿಲ್ಲ, ಎಂದೂ ಹಾಗೆ ಹೇಳಿದವನಲ್ಲ' ಎಂದು ತನ್ನ ಧೋರಣೆಯನ್ನು ಸ್ಪಷ್ಟಪಡಿಸಿದನು. ಕೊಲಂಬಿಯ ಡಿಸ್ಟ್ರಿಕ್ಟ್ (The District of Columbia)ನಲ್ಲಿ ಗುಲಾಮಗಿರಿಯನ್ನು ರದ್ದುಗೊಳಿಸುವ ಬಗ್ಗೆ ಯಾವ ನಿರ್ಧಾರವನ್ನು ತೆಗೆದುಕೊಳ್ಳದೆ ಲಿಂಕನ್ ಬೇಲಿಯ ಮೇಲೆ ಕುಳಿತವನಂತೆ ಡೋಲಾಯಮಾನವಾಗಿದ್ದನು. ಆದರೆ ತಪ್ಪಿಸಿಕೊಂಡು ಹೋದ ಗುಲಾಮರ ಬಗ್ಗೆ ಜಾರಿಯಲ್ಲಿದ್ದ ಕಾಯಿದೆಯನ್ನು ಲಿಂಕನ್ ತಿರಸ್ಕರಿಸಿದನು.

ಚಿಕಾಗೊ ನಗರದ ವಾಯುವ್ಯಕ್ಕೆ ಮತ್ತು ವಿಸ್ಕಾನ್‌ಸಿನ್ ಪ್ರಾಂತದ ಗಡಿಯಲ್ಲಿರುವ ಫ್ರೀಪೋರ್ಟ್ ಎಂಬ ಪಟ್ಟಣದಲ್ಲಿ ನಡೆದ ಚರ್ಚೆಯಲ್ಲಿ ಲಿಂಕನ್ ಡಗ್ಲಾಸ್‌ನನ್ನು ಕುರಿತು – 'ಡ್ರೆಡ್ ಸ್ಕಾಟ್ ತೀರ್ಪಿನ ಆಧಾರದ ಮೇಲೆ ಒಂದು ಪ್ರಾಂತದ ಜನರು ಆ ಪ್ರಾಂತ 'ಸಂಸ್ಥಾನ' ಆಗುವ ಮೊದಲೇ ಗುಲಾಮಗಿರಿಯನ್ನು ನಿಷೇಧಿಸಬಹುದೆ?' ಎಂದು ಕೇಳಿದನು. 'ಹಾಗೆ ಮಾಡಬಹುದು', ಡಗ್ಲಾಸ್ ನಿಸ್ಸಂದೇಹವಾಗಿ ಹೇಳಿದನು. ಆದರೆ ಗುಲಾಮಗಿರಿಯನ್ನು ಅನುಮೋದಿಸುವ ಸ್ಥಳೀಯ ಕಾಯಿದೆಗಳನ್ನು ಜಾರಿಗೆ ತರಬಾರದು. ಹಾಗೆ ಮಾಡುವುದು ಬಿಡುವುದು ಜನರಿಗೆ ಸೇರಿದ್ದು; ಸ್ಥಳೀಯ ಪೊಲೀಸ್ ನಿಬಂಧನೆಗಳ ಸಹಾಯವಿಲ್ಲದೆ ಗುಲಾಮಗಿರಿ ಉಳಿಯಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದನು. ಈ ಹೇಳಿಕೆ ಡಗ್ಲಾಸ್‌ನನ್ನು ಇಲಿನಾಯ್ ಚುನಾವಣೆಯಲ್ಲಿ ಕಾಪಾಡಿತು. ಡೆಮೊಕ್ರಾಟರು ನ್ಯಾಯವಿಧಾಯಕ ಸಭೆಯ (Legislature) ಎರಡು ಮನೆಗಳನ್ನು (both Houses) ಗೆದ್ದುಕೊಂಡರು. ಡಗ್ಲಾಸ್ ಏನಾದರೂ ಡ್ರೆಡ್‌ಸ್ಕಾಟ್ ತೀರ್ಪನ್ನು ಒಪ್ಪಿಕೊಂಡಿದ್ದರೆ ಅವನ ವಿರೋಧಿಗಳಾದ ರಿಪಬ್ಲಿಕನ್ನರು ಖಂಡಿತವಾಗಿ ಗೆಲ್ಲುತ್ತಿದ್ದರು. ಲಿಂಕನ್ ಚುನಾವಣೆಯಲ್ಲಿ ಸೋತರೂ ಅವನ ರಾಜಕೀಯ ವೃತ್ತಿಗೆ ಹೆಚ್ಚು ಹಾನಿಯಾಗಲಿಲ್ಲ. ಚರ್ಚೆಯಲ್ಲಿ ಸೋಲಿಸಲು ಅಸಾಧ್ಯನೆನಿಸಿದ್ದ ಡಗ್ಲಾಸ್‌ನಿಗೆ ಸರಿಸಮನಾಗಿ ವಾದಿಸಿದ್ದ ಲಿಂಕನ್ ಖ್ಯಾತಿ ಹಬ್ಬಿತು. ಅವನ ವಿಶಿಷ್ಟ ವ್ಯಕ್ತಿತ್ವ ಮತ್ತು ರಾಜಕೀಯ ದೃಷ್ಟಿ ಸಾವಿರಾರು ಜನರನ್ನು ಪ್ರಭಾವಿತಗೊಳಿಸಿದವು. ಅವನ ರಾಜಕೀಯ ಚಟುವಟಿಕೆಗಳು ಹೊಸ ಚೇತನ ಪಡೆದವು.

ಉತ್ತರದ ಪ್ರಾಂತಗಳಲ್ಲಿ ಹೆಚ್ಚಾಗಿ ರಿಪಬ್ಲಿಕನ್ನರು ಚುನಾಯಿತರಾದರು. ೧೮೫೮ರಲ್ಲಿ ಸಂಯಮದಿಂದ ಇದ್ದ ದಾಕ್ಷಿಣಾತ್ಯರು ಕೂಡ ತಮ್ಮ ಭವಿಷ್ಯದ ಬಗ್ಗೆ ತಳಮಳಗೊಂಡಿದ್ದರು. ಉತ್ತರದಲ್ಲಿ ರಿಪಬ್ಲಿಕನ್ನರ ವಿಜಯ ಅವರನ್ನು ಮತ್ತೂ ಅಧೀರರನ್ನಾಗಿ ಮಾಡಿತು.

ತಮ್ಮ ಅಭ್ಯರ್ಥಿಗಳು ಕಾನ್ಸಾಸ್ ಪ್ರಾಂತದಲ್ಲಿ ಗೆಲ್ಲಲಾರದೆ ಹೋಗಿದ್ದು ಅವರನ್ನು ಉದ್ರೇಕಗೊಳಿಸಿತ್ತು. ಇದರಿಂದ ದಾಕ್ಷಿಣಾತ್ಯರು ೧೮೬೦ರಲ್ಲಿ ರಿಪಬ್ಲಿಕನ್ ಪಕ್ಷದವನು ಅಧ್ಯಕ್ಷನಾದರೆ ದಕ್ಷಿಣ ಪ್ರಾಂತಗಳು ಸಂಯುಕ್ತ ಸಂಸ್ಥಾನಗಳಿಂದ ಬೇರ್ಪಡುವುದು ಖಂಡಿತವೆಂದು ಬಹಿರಂಗಪಡಿಸಿದರು. ಅವರು ಗುಲಾಮಗಿರಿಯನ್ನು ಪ್ರಾಂತಗಳಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರದ ಕಾಯಿದೆ ಜಾರಿಗೆ ತರಬೇಕು, ಕ್ಯೂಬ ದ್ವೀಪವನ್ನು ವಶಪಡಿಸಿಕೊಳ್ಳಬೇಕು ಮತ್ತು ಆಫ್ರಿಕದ ಗುಲಾಮ ವ್ಯಾಪಾರವನ್ನು ಪುನಃ ಪ್ರಾರಂಭಿಸಬೇಕು ಎಂದು ಷರತ್ತು ಹಾಕಿದರು. ದಾಕ್ಷಿಣಾತ್ಯರ ಈ ಧೋರಣೆ ಉದ್ರೇಕ ಪರಿಸ್ಥಿತಿಯನ್ನು ಉಂಟುಮಾಡಿತು. ಜನರು ಕೂಗುತ್ತಿದ್ದ ಘೋಷಣೆಗಳು ಅವರ ಪೂರ್ವಾಗ್ರಹದ (prejudice)ಸಂಕೇತಗಳಾಗಿದ್ದವು. ಇವು ಜನರ ದ್ವೇಷಾಸೂಯೆಗಳನ್ನು ಉದ್ದೀಪನಗೊಳಿಸಿ ದೇಶದಾದ್ಯಂತ ದಂಗೆ ಹಬ್ಬುವಂತೆ ಅವಕಾಶ ಕಲ್ಪಿಸಿದವು.

ಜಾನ್ ಬ್ರೌನ್ (John Brown) ನಡೆಸಿದ ದಾಳಿ

ಅಕ್ಟೋಬರ್ ೧೮೫೯ರಲ್ಲಿ 'ಕಾನ್ಸಾಸ್ ಪಿಡುಗು' ಎಂದು ಕುಖ್ಯಾತನಾಗಿದ್ದ ಜಾನ್ ಬ್ರೌನ್, ದೇಶದ ಉದ್ರೇಕ ಪರಿಸ್ಥಿತಿಯ ಉಪಯೋಗ ಪಡೆಯಲು, ತನ್ನ ೧೮ ಆಪ್ತ ಅನುಯಾಯಿಗಳೊಂದಿಗೆ (ಅವರಲ್ಲಿ ಬಿಳಿಯರು ಮತ್ತು ಕರಿಯರು ಸೇರಿದ್ದರು) ಹೋಗಿ ವರ್ಜೀನಿಯ ಪ್ರಾಂತದ ಹಾರ್ಪರ್ಸ್ ಫೆರ್ರಿ (Harpers Ferry) ಎಂಬ ಊರಿನ ಮೇಲೆ ಹುಚ್ಚನಂತೆ ದಾಳಿ ಮಾಡಿದನು. ಅದು ವಿಫಲಗೊಂಡಿತು. ಫೆಡರಲ್ ಸೈನಿಕರು ಬ್ರೌನ್ ಮತ್ತು ಅವನ ಅನುಚರರನ್ನು ರೈಲು ರಸ್ತೆಗೆ ಸೇರಿದ್ದ ಒಂದು ಯಂತ್ರಾಗಾರದಲ್ಲಿ ಕೂಡಿಹಾಕಿದರು. ಅವರು ತಪ್ಪಿಸಿಕೊಳ್ಳದಂತೆ ಸೈನಿಕರು ಯಂತ್ರಾಗಾರವನ್ನು ಸುತ್ತುವರಿದಿದ್ದರು. ಎರಡು ದಿನಗಳು ನಡೆದ ಈ ಮುತ್ತಿಗೆಯಲ್ಲಿ ಹತ್ತು ಬ್ರೌನ್‌ನ ಅನುಚರರು ಸತ್ತರು. ನಂತರ ಬ್ರೌನ್‌ನನ್ನು ಸೆರೆಹಿಡಿದರು. ಬ್ರೌನ್ ನಡೆಸಿದ ಈ ದಾಳಿ ದೇಶದಾದ್ಯಂತ ಜನರ ಆವೇಶವನ್ನು ಕೆರಳಿಸಿತು. ಇಂಥ ದಾಳಿ ಬುದ್ಧಿಯಿಲ್ಲದ ಉದ್ರಿಕ್ತ ಜನರು ಮಾಡಬಹುದಾದ ಅಪಾರ ಹಾನಿಗೆ ನಿದರ್ಶನವಾಯಿತು. ಬ್ರೌನ್ ನಡೆಸಿದ ಪಾಟಾವಾಟಮಿ ಕಗ್ಗೊಲೆಗಳ (Pottawatomie) ವೃತ್ತಾಂತವನ್ನು ಹಿಂದೆ ತಿಳಿಸಲಾಗಿದೆ. ಹೀಗಿದ್ದರೂ ಉತ್ತರದ ಹಲವು ಬುದ್ಧಿವಂತ ಮತ್ತು ಉನ್ನತ ಮಟ್ಟದ ಚಿಂತನಕಾರರು, ಎಮರ್‌ಸನ್ ಮತ್ತು ಥೋರೊ ಇಬ್ಬರೂ ಸೇರಿದಂತೆ, ಬ್ರೌನ್‌ನ ಗುಲಾಮಗಿರಿ ವಿರುದ್ಧ ಚಟುವಟಿಕೆಗಳನ್ನು ಬೆಂಬಲಿಸಿದರು! ಬ್ರೌನ್‌ನನ್ನು ಗಲ್ಲಿಗೇರಿಸಿದ್ದನ್ನು ಥೋರೊ ಕ್ರಿಸ್ತನನ್ನು ಶಿಲುಬೆಗೇರಿಸಿದ್ದಕ್ಕೆ ಹೋಲಿಸಿದನು! ಎಮರ್‌ಸನ್ ತನ್ನ ಧೈರ್ಯ (Courage)ಎನ್ನುವ ಪ್ರಬಂಧದಲ್ಲಿ ಬ್ರೌನ್‌ನನ್ನು ಹುತಾತ್ಮ ಎಂದು ಕರೆದು 'ಅವನು ತನ್ನ ಗಲ್ಲಿನ ಕಂಬವನ್ನು ಶಿಲುಬೆಯಂತೆ ದಿವ್ಯಗೊಳಿಸುತ್ತಾನೆ' ಎಂದು ಹೊಗಳಿದ್ದಾನೆ!

ಬ್ರೌನ್ ಮಾಡಿದ ದಾಳಿಗೆ ಹಲವು ದಾಕ್ಷಿಣಾತ್ಯರು ಮುಂದಾಲೋಚನೆ ಮಾಡದೆ

ಬೇಜವಾಬ್ದಾರಿಯಿಂದ, ರೋಷಾವೇಶದಿಂದ ಪ್ರತಿಕ್ರಯಿಸಿದರು. ದಕ್ಷಿಣದಲ್ಲಿದ್ದ ನೂರಾರು ನತದೃಷ್ಟ ಔತ್ತರೇಯರನ್ನು (northerners) ಸೆರೆಹಿಡಿದು, ಹೊಡೆದು ಬಡಿದು, ಕೆಲವರನ್ನು ಗಡಿಪಾರು ಮಾಡಿದರು. ಹೀಗೆ ಒಬ್ಬ ತಲೆಕೆಟ್ಟವನು ಔತ್ತರೇಯರಿಗೆ ವೀರಪುರುಷನಾದನು! ದಾಕ್ಷಿಣಾತ್ಯರಿಗೆ ಬ್ರೌನ್ ಔತ್ತರೇಯರ ಯಾವುದಕ್ಕೂ ಹೇಸದ ಕ್ರೌರ್ಯದ ಸಂಕೇತವಾದನು.

೧೮೬೦ರ ಚುನಾವಣೆ

೧೮೬೦ರ ಹೊತ್ತಿಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳು ಛಿದ್ರಗೊಳ್ಳುವ ಮಜಲು ಮುಟ್ಟಿದ್ದವು. ಆ ವರ್ಷದ ಫೆಬ್ರವರಿ ತಿಂಗಳಲ್ಲಿ ಸೇರಿದ್ದ ಅಲಬಾಮ ಸಂಸ್ಥಾನದ ನ್ಯಾಯ ವಿಧಾಯಕ ಸಭೆ ನವೆಂಬರ್ ತಿಂಗಳಲ್ಲಿ ರಿಪಬ್ಲಿಕನ್ ಅಭ್ಯರ್ಥಿ ಅಧ್ಯಕ್ಷನಾಗಿ ಆಯ್ಕೆಯಾದರೆ ಸಂಯುಕ್ತ ಸಂಸ್ಥಾನಗಳಿಂದ ಬೇರ್ಪಟ್ಟು ಹೊರಬರಲು ಅಧಿಕೃತವಾಗಿ ನಿರ್ಣಯಿಸಿತ್ತು. ದಾಕ್ಷಿಣಾತ್ಯರು – ಶತ್ರುಗಳು ತಮ್ಮನ್ನು ಸುತ್ತುವರಿದಿದ್ದಾರೆ ಎನ್ನುವ ಭಾವನೆ ಬೆಳೆಸಿಕೊಂಡಿದ್ದರು. ಅಮೆರಿಕದ ಉತ್ತರ ಪ್ರಾಂತಗಳು ರಭಸದಿಂದ ಬೆಳೆಯುತ್ತಿದ್ದವು; ದಾಕ್ಷಿಣಾತ್ಯರು ಏನೂ ಮಾಡದೆ ಹೋದರೆ, ಹೆಚ್ಚಿನ ಸಂಖ್ಯೆಯಲ್ಲಿ ಮುಕ್ತ ಸಂಸ್ಥಾನಗಳು ಸ್ಥಾಪಿತಗೊಂಡು ರಾಜ್ಯಾಂಗವನ್ನು ತಿದ್ದುಪಡಿ ಮಾಡಲು ಸಾಮರ್ಥ್ಯ ಪಡೆಯುತ್ತವೆ. ರಾಜ್ಯಾಂಗದ ತಿದ್ದುಪಡಿಯಾದರೆ ಗುಲಾಮಗಿರಿ ರದ್ದಾಗಿ, ಗುಲಾಮರು ಬಿಡುಗಡೆ ಪಡೆಯುತ್ತಾರೆ. ಜಾನ್ ಬ್ರೌನ್‌ನ ದಾಳಿ ಕರಿಯರು ದಂಗೆ ಏಳಲು ಸ್ಫೂರ್ತಿ ಕೊಡಬಹುದು. ಈ ಎಲ್ಲ ಸಾಧ್ಯತೆಗಳು ದಾಕ್ಷಿಣಾತ್ಯರನ್ನು ದಿಕ್ಕುಗೆಡಿಸಿದವು. ಸಂಸ್ಥಾನಗಳ ಕೂಟದಿಂದ ಹೊರಬರುವುದು (secession) ಅವರ ಮನಸ್ಸಿಗೆ ನೆಮ್ಮದಿ ನೀಡಬಹುದೆಂದು ನಂಬಿದ್ದರು. ಈ ನಂಬಿಕೆಯ ಮೇಲೆ ದಕ್ಷಿಣ ಸಂಸ್ಥಾನಗಳು ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕಿದವು. ಗುಲಾಮರನ್ನು ಒಡೆಯರು ಬಿಡುಗಡೆ ಮಾಡುವುದನ್ನು ನ್ಯಾಯಬಾಹಿರವಾಗಿ ಮಾಡಿದರು. ಬಿಡುಗಡೆಯಾದ ಗುಲಾಮರನ್ನು ಗಡೀಪಾರು ಮಾಡಿದರು. ಇಂಥ ಇನ್ನೂ ಅನೇಕ ನಿರ್ಬಂಧಗಳನ್ನು ಜಾರಿಗೆ ತಂದರು. ಔತ್ತರೇಯರು ಈ ನಿರ್ಬಂಧಗಳನ್ನು ಪ್ರಚೋದನಕಾರಿಗಳೆಂದು ತಿಳಿದರು. ನಿರ್ಬಂಧಗಳ ಪರ ವಹಿಸಿದವರು ಅವು ಸಮಾಜದ ಯಥಾಸ್ಥಿತಿ (status quo)ಯನ್ನು ಕಾಪಾಡುತ್ತವೆ ಹೊರತು ಬೇರೇನೂ ಇಲ್ಲ ಎಂದು ತಮ್ಮ ನಿಲುವನ್ನು ಸಮರ್ಥಿಸಿಕೊಂಡರು.

ಉತ್ತರ ಮತ್ತು ದಕ್ಷಿಣ ಸಂಸ್ಥಾನಗಳು ಬೇರ್ಪಡುವುದನ್ನು ಸ್ಟೀಫನ್ ಡಗ್ಲಾಸ್ ತಪ್ಪಿಸಬಹುದೆಂದು ಜನ ಕಡೆಯ ಆಸೆ ಇಟ್ಟುಕೊಂಡಿದ್ದರು. ಆದರೆ ಏಪ್ರಿಲ್ ೧೮೬೦ರಲ್ಲಿ ದಕ್ಷಿಣ ಕೆರೊಲಿನಾದ ಚಾರ್ಲ್ಸ್‌ಟನ್‌ನಲ್ಲಿ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯನ್ನು ನಾಮಕರಣ ಮಾಡಲು ಸೇರಿದ್ದ ಡೆಮೊಕ್ರಾಟಿಕ್ ಪಕ್ಷದ ಅಧಿವೇಶನದಲ್ಲಿ ಸದಸ್ಯರು ಡಗ್ಲಾಸ್‌ನನ್ನು ನಾಮಕರಣ ಮಾಡಲು ನಿರಾಕರಿಸಿದರು. ತೀರ ದಕ್ಷಿಣ (deep south) ಸಂಸ್ಥಾನಗಳ ಸದಸ್ಯರಲ್ಲಿ ಬಹುಸಂಖ್ಯಾತರು ಸಭಾತ್ಯಾಗ ಮಾಡಿದರು. ಅವರ ಮತಗಳಿಲ್ಲದೆ ಡಗ್ಲಾಸ್

ಅನಿವಾರ್ಯವಾಗಿ ಪಡೆಯಬೇಕಾದ ೨/೩ ಬಹುಮತ ದೊರೆಯಲಿಲ್ಲ. ಯಾರನ್ನೂ ನಾಮಕರಣ ಮಾಡದೆ ಸಭೆಯನ್ನು ಮುಂದೆ ಹಾಕಲಾಯಿತು. ಆ ವರ್ಷ ಜೂನ್ ತಿಂಗಳಲ್ಲಿ ಡೆಮೊಕ್ರಾಟರು ಬಾಲ್ಟಿಮೋರ್ ನಗರದಲ್ಲಿ ಪುನಃ ಸಭೆ ಸೇರಿದರು. ಈ ಸಭೆಯಲ್ಲೂ ಅದೇ ಗತಿಯಾಯಿತು! ಡೆಮೊಕ್ರಾಟಿಕ್ ಪಕ್ಷದ ಎರಡು ಪಂಗಡಗಳು (ಉತ್ತರ ಮತ್ತು ದಕ್ಷಿಣ) ಬೇರೆ ಬೇರೆಯಾಗಿ ಸಭೆ ಸೇರಿದರು. ಉತ್ತರದ ಪಂಗಡ ಡಗ್ಲಾಸ್‌ನನ್ನೂ ದಕ್ಷಿಣದ ಪಂಗಡ ಕೆಂಟಕಿಯ ಜಾನ್ ಬ್ರೆಕಿನ್‌ರಿಡ್ಜ್‌ನನ್ನು ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಗಳಾಗಿ ನಾಮಕರಣ ಮಾಡಿದರು. ಬ್ರೆಕಿನ್‌ರಿಡ್ಜ್ ಬ್ಯೂಕಾನನ್ ಅಧ್ಯಕ್ಷತೆಯಲ್ಲಿ ಉಪಾಧ್ಯಕ್ಷ ನಾಗಿದ್ದನು. ಹೀಗೆ ಜಫರ್‌ಸನ್ ಮತ್ತು ಜಾಕ್‌ಸನ್‌ರು ಕಟ್ಟಿದ ಪಕ್ಷ ಇಬ್ಭಾಗವಾಯಿತು.

ಈ ಮಧ್ಯೆ ಮೇ ತಿಂಗಳ ಮಧ್ಯದಲ್ಲಿ ಚಿಕಾಗೊ ನಗರದಲ್ಲಿ ರಿಪಬ್ಲಿಕನ್ನರು ಅಧಿವೇಶನ ಏರ್ಪಡಿಸಿದ್ದರು. ಅವರು ಕುಶಲದಿಂದ ಪಕ್ಷದ ವಿಚಾರವೇದಿಕೆಯನ್ನು ಸಿದ್ಧಗೊಳಿಸಿದ್ದರು. ಈ ವೇದಿಕೆ ಉತ್ತರ ಮತ್ತು ದಕ್ಷಿಣ ಸಂಸ್ಥಾನಗಳ ಎಲ್ಲ ವರ್ಗದ ಜನರ ಹಿತಾಸಕ್ತಿಗಳನ್ನು ಒಳಗೊಂಡಿತ್ತು. ಕೈಗಾರಿಕಾ ಉದ್ಯಮಿಗಳಿಗೆ ಹಾಗೂ ಉತ್ಪನ್ನಕಾರರಿಗೆ ತೆರಿಗೆ ರಿಯಾಯಿತಿ, ರೈತರಿಗೆ ಹಿಡುವಳಿ ಕಾಯಿದೆ (Home Stead law) ಜಾರಿಗೆ ತಂದು ಲಾಗಾಯ್ತಿನಿಂದ ರೈತರಾಗಿ ನೆಲಸಿದವರಿಗೆ ಹಣ ತೆಗೆದುಕೊಳ್ಳದೆ ಭೂಮಿಯನ್ನು ಹಂಚುವುದು, ರಾಷ್ಟ್ರಮಟ್ಟದಲ್ಲಿ ಒಳಾಂತರ ವ್ಯವಸ್ಥೆಗಳ ಅಭಿವೃದ್ಧಿ, ಗಮನಾರ್ಹವಾಗಿ, ಶಾಂತಸಾಗರ ತೀರದವರೆಗೆ ರೈಲುಮಾರ್ಗ ರಚನೆಗೆ ಕೇಂದ್ರ ಸರ್ಕಾರದ ಹಣಸಹಾಯ. ಹೊರದೇಶ ಗಳಿಂದ ಬರುವ ವಲಸೆಗಾರರ ಮೇಲಿನ ನಿರ್ಬಂಧ ತೆಗೆದುಹಾಕುವುದು. ಪ್ರಾಂತಗಳಲ್ಲಿ ಗುಲಾಮಗಿರಿಯ ಬಗ್ಗೆ ಸಂಶಯಕ್ಕೆ ಎಡೆಯಿಲ್ಲದಂತೆ 'ಪ್ರಾಂತಗಳು ಸಹಜವಾಗಿ ಗುಲಾಮಗಿರಿಯಿಂದ ಮುಕ್ತವಾಗಿರುತ್ತವೆ' ಎಂದು ಭರವಸೆ ನೀಡಿದರು. ಕಾಂಗ್ರೆಸ್ ಆಗಲಿ ಅಥವಾ ಪ್ರಾಂತೀಯ ನ್ಯಾಯವಿಧಾಯಕ ಸಭೆಯಾಗಲಿ ಗುಲಾಮಗಿರಿಯನ್ನು ಯಾವ ಪ್ರಾಂತದಲ್ಲೂ ಸ್ಥಾಪಿಸಲು ಸಾಧ್ಯವಿಲ್ಲದಂತೆ ಮಾಡಲು ವಾಗ್ದಾನ ಮಾಡಿದರು.

ಚಿಕಾಗೊ ರಿಪಬ್ಲಿಕನ್ ಅಧಿವೇಶನ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯನ್ನು ನಾಮಕರಣ ಮಾಡುವುದರಲ್ಲಿ ನಿಪುಣ ರಾಜಕೀಯ ನಿರ್ಣಯವನ್ನು ಮಾಡಿದರು. ಈ ನಿರ್ಣಯವೆಂದರೆ ಅಬ್ರಹಾಮ್ ಲಿಂಕನ್‌ನ ನಾಮಕರಣ! ಲಿಂಕನ್ನನ ಆಲೋಚನಾಪೂರ್ಣ ಮತ್ತು ಸಂಯಮ ದಿಂದ ಕೂಡಿದ ಧೋರಣೆ, ಆ ಕಾಲದ ಅತಿಮುಖ್ಯ ಸಮಸ್ಯೆಗಳ ಬಗ್ಗೆ ಅವನಿಗಿದ್ದ ಪರಿಜ್ಞಾನ ಮತ್ತು ಅವುಗಳ ಪರಿಹಾರಕ್ಕೆ ಅವನು ಸೂಚಿಸಿದ ಸಮತೋಲನದ, ಪರಿಮಿತವಾದ ವ್ಯಾವಹಾರಿಕ ವಿಧಾನಗಳು ಜನರ ಮೆಚ್ಚುಗೆಗಳಿಸಿದ್ದವು. ರಾಜಕಾರಣಿಯಾಗಿ ಅವನ ಘನತೆ ಗೌರವಗಳು ಹೆಚ್ಚುತ್ತ ಹೋದವು. ಅವನ ಹೆಸರಿಗೆ ಅನೇಕ ವಿಶೇಷಣಗಳು ಸೇರಿಕೊಂಡಿದ್ದವು. – 'ಪ್ರಾಮಾಣಿಕ ಏಬ್' (Honest Abe), 'ದೀನನಾಗಿ ಹುಟ್ಟಿದ ಮನುಷ್ಯ' (a man of humble origins)'ಸ್ವತಃ ಕಲಿತು ವಿದ್ಯಾವಂತನಾದವನು',

'ಸ್ವಪ್ರಯತ್ನದಿಂದ ಮುಂದೆ ಬಂದ ಸಾಮಾನ್ಯ ಪ್ರಜೆ, ಆದರೆ ಯಾವ ವಿಧದಲ್ಲೂ ಸಾಧಾರಣ ಮನುಷ್ಯನಲ್ಲ'. ಈ ವಿಶೇಷಣಗಳು ಲಿಂಕನ್ ವ್ಯಕ್ತಿತ್ವಕ್ಕೆ ಕಳೆ ಕಟ್ಟಿದವು.

ಚಿಕಾಗೋ ಅಧಿವೇಶನಕ್ಕೆ ಹಲವು ದಿನಗಳ ಹಿಂದೆ ಹಠಮಾರಿಗಳಾದ ವ್ಹಿಗ್ ಸದಸ್ಯರು ಅಳಿದುಳಿದ 'ಏನೂ ಗೊತ್ತಿಲ್ಲದವರ ಸಂಘ'[೩] (Know-nothing Organization) ದವರೊಡನೆ ಸೇರಿ 'ರಾಜ್ಯಾಂಗ ಒಗ್ಗಟ್ಟಿನ ಪಕ್ಷ' (Constitutional Union Party)ವನ್ನು ಕಟ್ಟಿಕೊಂಡು ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ಟೆನೆಸ್ಸೀ ಪ್ರಾಂತದ ಜಾನ್ ಬೆಲ್ (John Bell)ನನ್ನು ನಾಮಕರಣ ಮಾಡಿದರು. ದೇಶದ ರಾಜ್ಯಾಂಗದ ರಕ್ಷಣೆ, ಸಂಸ್ಥಾನಗಳ ಒಗ್ಗಟ್ಟು ರಕ್ಷಿಸಲು, ಕಾಯಿದೆಗಳನ್ನು ಜಾರಿಗೆ ತರುವುದು – ಇವರ ಉದ್ದೇಶವಾಗಿತ್ತು. ಇವರು ದೇಶದ ತುರ್ತು ಪರಿಸ್ಥಿತಿಯನ್ನು ಅಸಡ್ಡೆ ಮಾಡಿದರು. ಚುನಾವಣೆಯಲ್ಲಿ ಇವರ ಪ್ರಭಾವ ಪ್ರಾಂತಗಳ ಗಡಿಪ್ರದೇಶಗಳಲ್ಲಿ ಅಲ್ಪ ಸ್ವಲ್ಪ ಕಂಡುಬರುತ್ತಿತ್ತು. ನಾಲ್ಕು ಅಭ್ಯರ್ಥಿಗಳು (ಡಗ್ಲಾಸ್, ಲಿಂಕನ್, ಬ್ರೆಕಿನ್‌ರಿಡ್ಜ್ ಮತ್ತು ಬೆಲ್) ಸ್ಪರ್ಧಿಸಿದ ಈ ಚುನಾವಣೆಯಲ್ಲಿ ಯಾವ ಒಬ್ಬ ಅಭ್ಯರ್ಥಿಗೂ ಪ್ರಜೆಗಳ ಬಹುಮತ ದೊರೆಯುವುದು ದುಸ್ಸಾಧ್ಯವಾಗಿತ್ತು. ಆದರೆ ಚುನಾವಣೆ ಮುಂದುವರಿದಂತೆ ಲಿಂಕನ್ ಗೆಲ್ಲುವುದು ಸ್ಪಷ್ಟವಾಗುತ್ತ ಬಂತು. ಬ್ರೆಕಿನ್‌ರಿಡ್ಜ್ ಗುಲಾಮಗಿರಿಯ ಪರವಾದ ಸಂಸ್ಥಾನಗಳಲ್ಲಿ ಹೆಚ್ಚು ಮತಗಳನ್ನು ಪಡೆದಿದ್ದನು. ಬೆಲ್ ಗಡಿಪ್ರದೇಶಗಳಲ್ಲಿ ಹೆಚ್ಚು ಮತಗಳನ್ನು ಗಳಿಸಿದ್ದನು. ಆದರೆ ಹೆಚ್ಚಿನ ಜನಸಂಖ್ಯೆಯ ಉತ್ತರ ಮತ್ತು ಪಶ್ಚಿಮ ಸಂಸ್ಥಾನಗಳಲ್ಲಿ ಎಲೆಕ್ಟರಲ್ ಮತಗಳು (Electoral votes) ಹೆಚ್ಚಾಗಿದ್ದವು. ಚುನಾವಣೆಯ ಮತಗಳನ್ನು ಎಣಿಸಿದಾಗ ಲಿಂಕನ್ ಗಳಿಸಿದ್ದು ೧,೮೬೬,೦೦೦ ಮತಗಳನ್ನು ಮಾತ್ರ. ಈ ಮತಗಳು ಅವನ ಮೂರು ವಿರೋಧಿಗಳು ಪಡೆದ ಒಟ್ಟು ಮತಗಳಿಗಿಂತ ಒಂದು ಮಿಲಿಯನ್ ಮತಗಳಷ್ಟು ಕಡಿಮೆಯಾಗಿದ್ದವು. ಆದರೆ ಅವನು ಉತ್ತರ ಮತ್ತು ಪಶ್ಚಿಮ ಸಂಸ್ಥಾನಗಳಲ್ಲಿ ಅತ್ಯಂತ ಹೆಚ್ಚಿನ ಮತಗಳನ್ನು ಪಡೆದಿದ್ದರಿಂದ ಅವನಿಗೆ ೧೮೦ ಎಲೆಕ್ಟರಲ್ ಮತಗಳು ದೊರೆತು ಅಧ್ಯಕ್ಷನಾಗಿ ಆಯ್ಕೆಯಾದನು. ವಾಸ್ತವವಾಗಿ ಲಿಂಕನ್ ಬಹುಮತ ಗಳಿಸದ ಅಧ್ಯಕ್ಷ ನಾಗಿದ್ದನು. ಆದರೆ ಅಧ್ಯಕ್ಷನಾಗಲು ಆವನ ಅರ್ಹತೆಯನ್ನು ಯಾರೂ ಪ್ರಶ್ನಿಸುವಂತೆ ಇರಲಿಲ್ಲ.

ಸಂಯುಕ್ತ ಸಂಸ್ಥಾನಗಳ ಸಂದಿಗ್ಧ ಸಮಯ

ಅಬ್ರಹಾಮ್ ಲಿಂಕನ್ ಅಧ್ಯಕ್ಷನಾದ ನಂತರ ಕೆಲವು ದಿನಗಳ ಮೇಲೆ ದಕ್ಷಿಣ

೩. 'ಏನೂ ಗೊತ್ತಿಲ್ಲದವರ ಸಂಘ' ವಾಸ್ತವವಾಗಿ ಒಂದು ರಾಜಕೀಯ ಪಕ್ಷ. ಈ ಪಕ್ಷದ ಸದಸ್ಯರು ಹೊರದೇಶದಲ್ಲಿ ಹುಟ್ಟಿದ ಅಮೆರಿಕನ್ನರಿಗೆ ಮತ್ತು ಕ್ಯಾಥೊಲಿಕರಿಗೆ ಮತ ಹಾಕುವುದಿಲ್ಲ ಎಂದು ಪ್ರತಿಜ್ಞೆ ಮಾಡಬೇಕಾಗಿತ್ತು. ಯಾರಾದರೂ ಅವರ ಪಕ್ಷದ ಬಗ್ಗೆ ವಿಚಾರಿಸಿದಾಗ 'ಏನೂ ಗೊತ್ತಿಲ್ಲ' ಎಂದು ಉತ್ತರ ಕೊಡುತ್ತಿದ್ದರು.

ಕರೋಲಿನ ಸಂಸ್ಥಾನದ ನ್ಯಾಯವಿಧಾಯಕ ಸಭೆ ಕೆಲವು ಪ್ರತಿನಿಧಿಗಳನ್ನು ಚುನಾಯಿಸಿ ಸಂಸ್ಥಾನದ ಭವಿಷ್ಯವನ್ನು ನಿರ್ಧರಿಸಲು ಸೇರಲಿದ್ದ ಸಮ್ಮೇಳನಕ್ಕೆ ಕಳುಹಿಸಿತು. ೧೮೬೦ ಡಿಸೆಂಬರ್ ೨೦ರಂದು ಸೇರಿದ ಸಮ್ಮೇಳನದಲ್ಲಿ ಪ್ರತಿನಿಧಿಗಳು ಒಮ್ಮತದಿಂದ ದಕ್ಷಿಣ ಕರೋಲಿನ ಸಂಸ್ಥಾನ ಸಂಯುಕ್ತ ಸಂಸ್ಥಾನಗಳ ಕೂಟವನ್ನು ತ್ಯಜಿಸುವಂತೆ ತೀರ್ಮಾನಿಸಿದರು. ಫೆಬ್ರವರಿ ೧೮೬೧ರ ಹೊತ್ತಿಗೆ ತೀರ ದಕ್ಷಿಣದ ಎಲ್ಲ ಸಂಸ್ಥಾನಗಳು ಸಂಯುಕ್ತ ಸಂಸ್ಥಾನಗಳ ಕೂಟವನ್ನು ತ್ಯಜಿಸಿ ಹೊರಬಂದವು. ಇದಾದ ಒಂದು ವಾರದ ಮೇಲೆ ಅಲಬಾಮ ಸಂಸ್ಥಾನದ ಮಾಂಟ್ಗೋಮರಿ ಊರಿನಲ್ಲಿ 'ಅಮೆರಿಕ ಸಂಸ್ಥಾನಗಳ ಸಂಘಟನೆ' (Confederate States of America) ಸ್ಥಾಪನೆಗೊಂಡು, ಒಂದು ತಾತ್ಕಾಲಿಕ ಸರ್ಕಾರ ರಚನೆಗೊಂಡಿತು. ತಮ್ಮ ಪಿತೃಗಳು ಬೆವರು, ರಕ್ತ ಹರಿಸಿ ಕಟ್ಟಿದ ಸಂಯುಕ್ತ ಸಂಸ್ಥಾನಗಳ ಕೂಟವನ್ನು ದಾಕ್ಷಿಣಾತ್ಯರು ಕೆಡವಿ ಹಾಳು ಮಾಡಲು ಮನಸ್ಸು ಮಾಡಿದ್ದು ಏಕೆ? ಈ ಪ್ರಶ್ನೆಗೆ ಸರಳವಾದ ಉತ್ತರ ಕೊಡುವುದು ಕಷ್ಟ.

ತ್ವರಿತಗತಿಯಲ್ಲಿ ಪ್ರಗತಿ ಹೊಂದಿ ವಿಸ್ತಾರಗೊಳ್ಳುತ್ತಿದ್ದ ಉತ್ತರ ಸಂಸ್ಥಾನಗಳು ತಮ್ಮನ್ನು ಅಧೀನರನ್ನಾಗಿ ಮಾಡಿಕೊಂಡು ಅಧಿಕಾರ ಚಲಾಯಿಸಬಹುದೆಂಬ ಭಯ ದಾಕ್ಷಿಣಾತ್ಯರನ್ನು ಕಾಡುತ್ತಿತ್ತು. ಇದು ಆಧಾರರಹಿತವಾಗಿತ್ತು. ಅಧ್ಯಕ್ಷ ಲಿಂಕನ್ ಗುಲಾಮಗಿರಿ ಸಂಸ್ಥಾನಗಳನ್ನು ತಮ್ಮ ಪಾಡಿಗೆ ತಾವಿರುವಂತೆ ಅವಕಾಶ ಕೊಡುವುದಾಗಿ ಭರವಸೆ ನೀಡಿದ್ದನು. ದಾಕ್ಷಿಣಾತ್ಯರು ಹೆಚ್ಚಾಗಿದ್ದ ಡೆಮೊಕ್ರಾಟಿಕ್ ಪಕ್ಷ ಕಾಂಗ್ರೆಸ್‌ನಲ್ಲಿ ಬಹುಮತ ಪಡೆದಿತ್ತು. ಆದ್ದರಿಂದ ಕಾಂಗ್ರೆಸ್ ಅವರ ನಿಯಂತ್ರಣಕ್ಕೆ ಒಳಗಾಗಿತ್ತು. ಶ್ರೇಷ್ಠ ನ್ಯಾಯಾಲಯ ಕೂಡ ಅವರ ಕೈವಶವಾಗಿತ್ತು. ಈ ಪರಿಸ್ಥಿತಿಯಲ್ಲಿ ಯಾವ ಭಯ ಅವರನ್ನು ಕಾಡುತ್ತಿತ್ತು ಎನ್ನುವುದು ಸ್ಪಷ್ಟಗೊಂಡಿಲ್ಲ. ಇತಿಹಾಸಕಾರರು ಎರಡು ಮುಖ್ಯ ಕಾರಣಗಳನ್ನು ಕೊಟ್ಟಿದ್ದಾರೆ. ಮೊದಲನೆಯದು ಆರ್ಥಿಕ ಕಾರಣ; ಎರಡನೆಯದು ಭಾವನಾತ್ಮಕವಾದುದು. ಉತ್ತರ ಸಂಸ್ಥಾನಗಳ ಅದ್ಭುತ ಆರ್ಥಿಕ ಬೆಳವಣಿಗೆ ತಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ತರಬಹುದೆಂದು ದಾಕ್ಷಿಣಾತ್ಯರು ಹೆದರಿದ್ದರು. ಉತ್ತರದಲ್ಲಿ ಉತ್ಪಾದನೆಯಾದ ವಸ್ತುಗಳ ಮೇಲೆ ದಕ್ಷಿಣ ಸಂಸ್ಥಾನಗಳು ಅವಲಂಬನೆಗೊಂಡಿರುವುದು ಅವರಲ್ಲಿ ಅನಿಶ್ಚಯತೆಯನ್ನುಂಟುಮಾಡಿತ್ತು. ಸಂಯುಕ್ತ ಸಂಸ್ಥಾನಗಳನ್ನು ತ್ಯಜಿಸಿ ಹೊರಬಂದಿರುವುದರಿಂದ ನಾವು ಔತ್ತರೇಯರಿಂದ ಬಿಡುಗಡೆಯಾಗಿ ನಮಗೆ ಬೇಕಾದ ವಸ್ತುಗಳನ್ನು ನಾವೇ ಉತ್ಪಾದಿಸುವಂತೆ ನಮ್ಮ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಿ ಕೊಳ್ಳಬೇಕು. ಅವರಂತೆ ತಾವೂ ಸಮತೋಲ ಆರ್ಥಿಕ ವ್ಯವಸ್ಥೆಯನ್ನು (balanced economy) ಬೆಳೆಸಿ ಯಶಸ್ಸು ಗಳಿಸಬೇಕೆಂದು ದಾಕ್ಷಿಣಾತ್ಯರು ದೃಢ ನಿರ್ಧಾರ ಮಾಡಿದ್ದರು.

ದಾಕ್ಷಿಣಾತ್ಯರನ್ನು ಬಾಧಿಸುತ್ತಿದ್ದ ಭಾವನಾತ್ಮಕ ಅಂಶಗಳೆಂದರೆ – ಪ್ರಾಂತೀಯ

ಕಲಹಗಳು, ಔತ್ತರೇಯರು ಗುಲಾಮಗಿರಿಯನ್ನು ಕಟುವಾಗಿ ಟೀಕಿಸುವುದು, ಈ ಟೀಕೆಗಳು ನಿಜವೆಂದು ಒಳಮನಸ್ಸಿಗೆ ಅನ್ನಿಸಿ ದಾಕ್ಷಿಣಾತ್ಯರು ಅಪರಾಧ ಭಾವದಿಂದ ಪರಿತಪಿಸುತ್ತಿದ್ದರು. ದಕ್ಷಿಣ ಸಂಸ್ಥಾನಗಳು ಬೇರೆಯಾಗಿದ್ದು ತಾತ್ಕಾಲಿಕವಾಗಿ ಮಾತ್ರ. ಅವು ಶಾಶ್ವತವಾಗಿ ಬೇರೆಯಾಗಿರುವುದು ಸಾಧ್ಯವೇ ಇಲ್ಲವೆಂದು ಔತ್ತರೇಯರು ನಂಬಿದ್ದರು. ಅವರ ನಂಬಿಕೆ ಸುಳ್ಳಾಯಿತು. ಅದೇ ರೀತಿ ದಕ್ಷಿಣ ಸಂಸ್ಥಾನಗಳು ಬೇರ್ಪಡುವುದನ್ನು ತಡೆಯಲು ಔತ್ತರೇಯರು ಬಲಪ್ರಯೋಗ ಮಾಡಲಾರರು ಎಂದು ದಾಕ್ಷಿಣಾತ್ಯರು ನಂಬಿದ್ದರು. ಅಧ್ಯಕ್ಷ ಲಿಂಕನ್ ಕೂಡ ದಕ್ಷಿಣ ಸಂಸ್ಥಾನಗಳು ಬೇರೆಯಾಗುತ್ತೇವೆ ಎಂದು ಬೆದರಿಕೆ ಹಾಕಿ, ತಮ್ಮ ಬೇಡಿಕೆಗಳು ಕೈಗೂಡುವಂತೆ ಮಾಡುವ ಚಮತ್ಕಾರವೆಂದು ಭಾವಿಸಿದ್ದನು. ಲಿಂಕನ್ ಮುಂದೆ ತಾನು ಜಾರಿಗೆ ತರಲಿರುವ ಕ್ರಮಗಳನ್ನು, ತನ್ನ ನಿಲುವು ಮತ್ತು ಧೋರಣೆಗಳನ್ನು ಮುಂಚಿತವಾಗಿ ತಿಳಿಸದೆ ಇದ್ದದ್ದು ತಪ್ಪಾಯಿತು. ಅವನು ಮಾಡಿದ ಮತ್ತೊಂದು ತಪ್ಪು ಅಧಿಕಾರ ಬಿಟ್ಟು ಹೋಗಲಿದ್ದ ಬ್ಯೂಕಾನನ್ ಆಡಳಿತದೊಡನೆ ಸಹಕರಿಸದೆ ಹೋದುದು. ಆ ವರ್ಷದ ಕೊನೆಯವರೆಗೆ ಅಧಿಕಾರದಲ್ಲಿದ್ದ ಬ್ಯೂಕಾನನ್ ದಕ್ಷಿಣ ಪ್ರಾಂತಗಳು ಬೇರ್ಪಟ್ಟಿದ್ದನ್ನು ಖಂಡಿಸಿದನೇ ಹೊರತು ಅದನ್ನು ತಡೆಗಟ್ಟುವುದು ತನ್ನ ಶಕ್ತಿಗೆ ಮೀರಿದುದು ಎಂದು ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿದನು.

ಒಳ್ಳೆಯದು ಮಾಡುವ ಉದ್ದೇಶದಿಂದ ಕೆಲವರು ದೂರ ಸರಿದು ಹೋದ ದಾಕ್ಷಿಣಾತ್ಯರನ್ನು ಸಂತೈಸಿ ಸಂಧಾನ ಏರ್ಪಡಿಸಲು ಪ್ರಯತ್ನಿಸಿದರು. ಮತ್ತೆ ಕೆಲವರು ಬಲಪ್ರಯೋಗ ಮಾಡಿ ಸಂಸ್ಥಾನಗಳ ಕೂಟ (union) ಉಳಿಸಬೇಕೆಂದು ಕೂಗಾಡಿದರೆ ಹೊರತು ಕಾರ್ಯಾಚರಣೆ ಮಾಡಲು ಹಿಂಜರಿದರು. ಮಧ್ಯಮಮಾರ್ಗಿಗಳು (moderates) ಕೆಲವರು ಕೆಂಟಕಿಯ ಸೆನೆಟರ್ ಜಾನ್ ಕ್ರಿಟ್ಟೆನ್‌ಡೆನ್ (John Crittenden)ನ ನಾಯಕತ್ವದಲ್ಲಿ ರಾಜ್ಯಾಂಗದ ತಿದ್ದುಪಡಿಯನ್ನು ಮಂಡಿಸಿದರು. ಈ ತಿದ್ದುಪಡಿಯ ಪ್ರಕಾರ ೩೦° ೩೦' ಅಕ್ಷಾಂಶ ರೇಖೆಯ ದಕ್ಷಿಣಕ್ಕಿರುವ ಎಲ್ಲ ಪ್ರಾಂತಗಳನ್ನು ಗುಲಾಮಗಿಯನ್ನು ಉಳಿಸಿಕೊಂಡಿರುವ ಸಂಸ್ಥಾನಗಳು ಎಂದು ಗುರುತಿಸಬೇಕು. ಮುಂದೆ ಬರಬಹುದಾದ ರಾಜ್ಯಾಂಗದ ಯಾವ ತಿದ್ದುಪಡಿಗಳೂ ಆ ಸಂಸ್ಥಾನಗಳಲ್ಲಿ ಗುಲಾಮಗಿರಿಯನ್ನು ರದ್ದುಗೊಳಿಸುವ ಮಸೂದೆಯನ್ನು ಅಂಗೀಕರಿಸಕೂಡದು ಎನ್ನುವ ಆಶ್ವಾಸನೆಗಳನ್ನು ನೀಡಿ ದಕ್ಷಿಣ ಸಂಸ್ಥಾನಗಳ ಮನ ಒಲಿಸಲು ಪ್ರಯತ್ನಿಸಿದರು. ಆದರೆ ಲಿಂಕನ್ ಹೊಸ ಪ್ರಾಂತಗಳಲ್ಲಿ ಗುಲಾಮಗಿರಿ ಹಬ್ಬಲು ಅವಕಾಶ ಮಾಡಿಕೊಡಬಹುದಾದ ಎಲ್ಲ ವ್ಯವಸ್ಥೆಗಳನ್ನೂ ತಿರಸ್ಕರಿಸಿದನು. ಆದ್ದರಿಂದ ಕ್ರಿಟ್ಟೆನ್‌ಡೆನ್ ಸಂಧಾನ ವಿಫಲಗೊಂಡಿತು. ಈ ಸಮಯದಲ್ಲಿ ದಕ್ಷಿಣ ಸಂಸ್ಥಾನಗಳ ಸಂಘಟನೆ ತಮ್ಮ ಹೊಸ ರಾಜ್ಯಾಂಗ ರಚನೆಯನ್ನು ಭರದಿಂದ ನಡೆಸಿದ್ದರು. ಅವರು ಜಫರ್‌ಸನ್ ಡೇವಿಸ್‌ನನ್ನು (Jefferson Davis) ತಾತ್ಕಾಲಿಕ ಅಧ್ಯಕ್ಷನನ್ನಾಗಿ ನೇಮಿಸಿದರು. ದಕ್ಷಿಣ ಸಂಸ್ಥಾನಗಳ ಗಡಿಯೊಳಗಿದ್ದ ಫೆಡರಲ್ ಸರ್ಕಾರಕ್ಕೆ ಸೇರಿದ

ಎಲ್ಲ ಶಸ್ತ್ರಾಸ್ತ್ರಗಳು ಮತ್ತು ಆಸ್ತಿ ಪಾಸ್ತಿಗಳನ್ನು ವಶಪಡಿಸಿಕೊಂಡರು. ಹೊರದೇಶಗಳ ಅನುಮೋದನೆ ಪಡೆಯಲು ರಾಯಭಾರಿಗಳನ್ನು ಕಳುಹಿಸುವ ತಯಾರಿ ನಡೆಸಿದ್ದರು. ಈ ಎಲ್ಲ ಕಾರಬಾರಗಳು ನಡೆಯುತ್ತಿದ್ದುದನ್ನು ವಾಷಿಂಗ್‌ಟನ್‌ನಲ್ಲಿ ಇನ್ನೂ ಅಧಿಕಾರ ದಲ್ಲಿದ್ದ ಅಧ್ಯಕ್ಷ ಬ್ಯೂಕಾನನ್ ತಿಳಿದಿದ್ದರೂ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಅತ್ತ ಇಲಿನಾಯ್‌ನಲ್ಲಿ ಅಬ್ರಹಾಮ್ ಲಿಂಕನ್ ತನ್ನ ಆಡಳಿತ ಮಂಡಳಿಯ ಸಚಿವರಾಗಿ ಯಾರನ್ನು ಆಯ್ಕೆ ಮಾಡುವುದು, ಯಾರನ್ನು ಬಿಡುವುದು ಎಂದು ದೀರ್ಘಾಲೋಚನೆ ಮಾಡಿ ನಿರ್ಧಾರಕ್ಕೆ ಬರುವಷ್ಟರಲ್ಲಿ ಅವನ ಗಡ್ಡ ಟಗರಿನ ಗಡ್ಡದಂತೆ ಬೆಳೆದಿತ್ತು! ರಾಷ್ಟ್ರದ ಭವಿಷ್ಯದ ಬಗ್ಗೆ ಸದಾ ಚಿಂತಿಸಿ[೪], ನಿದ್ದೆಯಿಲ್ಲದ ಕಣ್ಣುಗಳು ಗುಳಿಬಿದ್ದು ಮುಖ ನಿಸ್ತೇಜವಾಗಿತು!

❑

೪. 'I believe this government can not endure, permanently half slave and half free. I do not expect the Union to be dissolved - I do not expect the house to fall - but I do expect it will cease to be divided. It will become all one thing, or all the other. Either opponents of slavery will arrest further speed of it and place it where the public mindshall rest in the belief that it is in the course of ultimate extinction; or its advocates will push it forward, till it shall become alike in all states, old as well as new- North as well as South'

- ***Abraham Lincoln***

ಅಧ್ಯಾಯ - ೮

ಅಬ್ರಹಾವ್ ಲಿಂಕನ್ ಮತ್ತು ಅಂತರ್ಯುದ್ಧ

ಸಂಯುಕ್ತ ಸಂಸ್ಥಾನಗಳನ್ನು ಸಂರಕ್ಷಿಸಿದ ಸಮರ

ಮಾರ್ಚ್ ೪, ೧೮೬೧ ಲಿಂಕನ್ ಅಧ್ಯಕ್ಷನಾಗಿ ಪ್ರಮಾಣವಚನ ಸ್ವೀಕರಿಸಿದ ದಿನ. ಅಂದಿನ ಬೆಳಿಗ್ಗೆ ನೀಲಾಕಾಶ ಪ್ರಕಾಶಮಾನವಾಗಿದ್ದು ಗಾಳಿ ಜೋರಾಗಿ ಬೀಸುತ್ತಿತ್ತು. ಅಧ್ಯಕ್ಷ ಸ್ಥಾನದಿಂದ ನಿವೃತ್ತಿಗೊಳ್ಳಲಿದ್ದ ಬ್ಯೂಕಾನನ್ ವಿಲ್ಲರ್ಡ್ ಹೋಟೆಲಿಗೆ ಬರುವಂತೆ ಲಿಂಕನ್‌ನಿಗೆ ಕರೆ ಕಳುಹಿಸಿದನು. ಅಲ್ಲಿಂದ ಅವರಿಬ್ಬರೂ ಕೂಡಿ ಕಮಾನಿಲ್ಲದ ಕುದುರೆ ಸಾರೋಟಿನಲ್ಲಿ ಕ್ಯಾಪಿಟಲ್ ಭವನಕ್ಕೆ ಪ್ರಯಾಣ ಬೆಳೆಸಿದರು. ಆ ಭವನದಲ್ಲಿ ಶ್ರೇಷ್ಠ ನ್ಯಾಯಾಧೀಶನಾಗಿದ್ದ ರಾಜರ್ ಟಾನೀ (Roger Taney) ಸಮ್ಮುಖದಲ್ಲಿ ಲಿಂಕನ್ ಅಮೆರಿಕದ ಹದಿನಾರನೆಯ ಅಧ್ಯಕ್ಷನಾಗಿ ಪ್ರಮಾಣವಚನ ಸ್ವೀಕರಿಸಿದನು. ಆ ಸಮಯದಲ್ಲಿ ಅವನ ಪ್ರತಿಸ್ಪರ್ಧಿಯಾಗಿದ್ದ ಡಗ್ಲಾಸ್‌ನು ಕೈಚಾಚಿ ಲಿಂಕನ್‌ನ ಹ್ಯಾಟ್‌ನ್ನು ಹಿಡಿದುಕೊಂಡನು. ಡಗ್ಲಾಸ್ ಹೀಗೆ ಮಾಡಿದ್ದು ಒಗ್ಗಟ್ಟಿನ ಸಂಕೇತವಾಗಿತ್ತು. ಲಿಂಕನ್ ತನ್ನ ಆರಂಭ ಭಾಷಣದಲ್ಲಿ 'ಗುಲಾಮಗಿರಿ ಸಂಸ್ಥಾನಗಳ ವ್ಯವಹಾರದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಮಧ್ಯೆ ಪ್ರವೇಶಿಸುವುದು ನನ್ನ ಉದ್ದೇಶವಲ್ಲ. ಹಾಗೆ ಮಾಡಲು ನ್ಯಾಯಬದ್ಧವಾದ ಹಕ್ಕು ನನಗಿಲ್ಲವೆಂದು ಗೊತ್ತಿದೆ. ಹಾಗೆ ಮಾಡುವ ಇಚ್ಛೆಯೂ ನನಗಿಲ್ಲ' ಎಂದು ನುಡಿದನು. ನಂತರ ಲಿಂಕನ್ ದಕ್ಷಿಣ ಸಂಸ್ಥಾನಗಳು ಸಂಯುಕ್ತ ಸಂಸ್ಥಾನಗಳ ಸಂಘಟನೆಯಿಂದ ಕಳಚಿಕೊಂಡು ದೂರ ಸರಿಯುತ್ತಿರುವ ಸಮಸ್ಯೆಯೆನ್ನು ಪ್ರಸ್ತಾಪಿಸುತ್ತ – 'ಸಂಸ್ಥಾನಗಳ ಒಗ್ಗಟ್ಟು ನಿರಂತರವಾದುದು. ಯಾವ ಸಂಸ್ಥಾನವೂ ತನ್ನ ಇಚ್ಛೆಯಂತೆ ಸಂಯುಕ್ತ ಸಂಸ್ಥಾನಗಳನ್ನು ಬಿಟ್ಟುಹೋಗುವುದು ಸಾಧ್ಯವೇ ಇಲ್ಲ' ಎಂದು ಸಾರಿ ಹೇಳಿದನು. ಕೇಂದ್ರ ಸರ್ಕಾರಕ್ಕೆ ಸೇರಿದ ಪ್ರಾಂತಗಳಲ್ಲಿ ಜಾರಿಯಲ್ಲಿರುವ ಕಾಯಿದೆ ಪ್ರಕಾರ ಆಡಳಿತ ನಡೆಸಿ, ತೆರಿಗೆ ವಸೂಲು ಮಾಡುವುದು, ಅಂಚೆ ಮೂಲಕ ಕಾಗದ ಪತ್ರಗಳ ವಿತರಣೆ ಎಲ್ಲವನ್ನು ಎಂದಿನಂತೆ ಮುಂದುವರಿಸಿಕೊಂಡು ಹೋಗುವುದಾಗಿ ಭರವಸೆ ನೀಡಿದನು. ಜನಗಳ ಮೇಲೆ ಅತಿಕ್ರಮಣ ಮಾಡುವುದಾಗಲಿ ಅಥವಾ ಬಲಪ್ರಯೋಗ ಮಾಡುವುದಾಗಲಿ ನಡೆಯದಂತೆ ತಕ್ಕ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಒತ್ತಿ ಹೇಳಿದನು. ಕಡೆಯಲ್ಲಿ 'ನಾವು ವೈರಿಗಳಲ್ಲ, ಗೆಳೆಯರು; ನಾವು ವೈರಿಗಳಾಗಬಾರದು. ಕೋಪದಿಂದ ನಮ್ಮ ಮನಸ್ಸಿನಲ್ಲಿ ಬಿಗುಮಾನ ಉಂಟಾಗಿದೆ. ಆದರೆ ಅದು ನಮ್ಮ ಪ್ರೀತಿಯ ಬಂಧನವನ್ನು ಮುರಿಯಲು ಬಿಡಬಾರದು' ಎಂದು ಕಳಕಳಿಯಿಂದ ಭಿನ್ನವಿಸಿಕೊಂಡನು.

ಸಮ್‌ಟರ್ ಕೋಟೆಯ ಸಮರ

ದಕ್ಷಿಣ ಸಂಸ್ಥಾನಗಳು ಸಂಯುಕ್ತ ಸಂಸ್ಥಾನಗಳ ಸಂಘಟನೆಯನ್ನು ತ್ಯಜಿಸುವುದು ನ್ಯಾಯಬದ್ಧವಾದುದಲ್ಲ ಎಂದು ಎಚ್ಚರಿಸಿದರೂ ಲಿಂಕನ್ ದಾಕ್ಷಿಣಾತ್ಯರ ಬಗ್ಗೆ ಸಂಯಮದ ನಿಲುವು ತಾಳಿದ್ದನು. ಸ್ವಲ್ಪ ಕಾಲಾವಕಾಶ ಕೊಟ್ಟರೆ ಎಲ್ಲ ಸರಿಹೋಗಬಹುದೆಂದು ಅವನು ನಂಬಿದ್ದನು. ಆದರೆ ಅವನು ಎಣಿಸಿದಂತೆ ಯಾವುದೂ ನಡೆಯಲಿಲ್ಲ. ದಕ್ಷಿಣ ಸಂಸ್ಥಾನಗಳು ಕೇಂದ್ರ ಸರ್ಕಾರದ ಆಸ್ತಿ ಪಾಸ್ತಿಗಳನ್ನು ಆಗಲೇ ವಶಪಡಿಸಿಕೊಂಡಾಗಿತ್ತು. ಅವನ್ನು ಮರಳಿ ಪಡೆಯುವ ಪ್ರಯತ್ನ ಮಾಡುವುದಿಲ್ಲ ಎಂದು ಲಿಂಕನ್ ನಿರ್ಧರಿಸಿದನು. ಆದರೆ ಎರಡು ಮುಖ್ಯ ತಾಣಗಳು, ಒಂದು ಚಾರ್ಲ್ಸ್‌ಟನ್ ಬಂದರಿನ ದ್ವೀಪವೊಂದರ ಮೇಲಿನ ಸಮ್‌ಟರ್ ಕೋಟೆ (Fort Sumter), ಎರಡನೆಯದು ಫ್ಲಾರಿಡಾ ಪ್ರಾಂತದ ಪೆನ್ಸಕೋಲಾ (pensacola)ದಲ್ಲಿದ್ದ ಪಿಕೆನ್ಸ್ ಕೋಟೆ (Fort Pickens) – ಇವು ದಾಕ್ಷಿಣಾತ್ಯರ ಸೈನ್ಯ ಸುತ್ತಿವರಿದಿದ್ದರೂ ಅವರ ವಶವಾಗಿರಲಿಲ್ಲ. ಲಿಂಕನ್‌ಗೆ ಅವುಗಳನ್ನು ಬಿಟ್ಟುಕೊಡುವ ಇಷ್ಟವಿರಲಿಲ್ಲ. ಆ ಕೋಟೆಗಳನ್ನು ರಕ್ಷಿಸುತ್ತಿದ್ದವರಿಗೆ ನೆರವು ನೀಡುವುದು ಅಗತ್ಯವಾಗಿತ್ತು. ಹೆಚ್ಚಿನ ಸೈನ್ಯ ಕಳುಹಿಸುವುದು ಬಹಳ ಮುಖ್ಯವಾಗಿತ್ತು. ಅದನ್ನು ದಾಕ್ಷಿಣಾತ್ಯರು ಅತಿಕ್ರಮಣವೆಂದು ಭಾವಿಸಿ ದಾಳಿ ಮಾಡಿ ಸಾವು ನೋವುಗಳಿಗೆ ಕಾರಣವಾಗಿ ಸಂಧಾನಕ್ಕೆ ಅವಕಾಶವೇ ಇಲ್ಲದಂತಾಗಬಹುದು ಎಂದು ಲಿಂಕನ್ ಯೋಚಿಸಿದನು. ಈ ಅನಿಶ್ಚಯತೆ ಯಲ್ಲಿ ಕೆಲವು ವಾರಗಳು ಕಳೆದ ನಂತರ ಏಪ್ರಿಲ್ ೪, ೧೮೬೧ರಲ್ಲಿ ಪಿಕೆನ್ಸ್ ಕೋಟೆಗೆ ಹೆಚ್ಚಿನ ಸೈನ್ಯ ಕಳುಹಿಸಲು ಮತ್ತು ಸಮ್‌ಟರ್ ಕೋಟೆಗೆ ಅಗತ್ಯವಾಗಿ ಬೇಕಾಗಿದ್ದ ಆಹಾರ ಮತ್ತು ಇತರ ಸಾಮಗ್ರಿಗಳನ್ನು ಕಳುಹಿಸಲು ಲಿಂಕನ್ ನಿರ್ಧರಿಸಿದನು. ಆ ಪ್ರಕಾರವಾಗಿ ಏಪ್ರಿಲ್ ೬ರಂದು ದಕ್ಷಿಣ ಕೆರೊಲಿನ ಗವರ್ನರ್‌ಗೆ 'ಸಮ್‌ಟರ್ ಕೋಟೆಗೆ ಆಹಾರ ಸಾಮಗ್ರಿಗಳನ್ನು ಮಾತ್ರ ಸರಬರಾಜು ಮಾಡಲು ಹಡಗು ಕಳುಹಿಸುತ್ತಿದ್ದೇನೆ' ಎಂದು ಸಂದೇಶವನ್ನು ಕಳುಹಿಸಿದನು. ಏಪ್ರಿಲ್ ೯ರಂದು ದಕ್ಷಿಣ ಸಂಸ್ಥಾನಗಳ ಅಧ್ಯಕ್ಷ ಜಫರ್‌ಸನ್ ಡೇವಿಸ್ ಮತ್ತು ಅವನ ಸಚಿವರು ಮಾಂಟ್ಗೋಮರಿಯಲ್ಲಿ ಸೇರಿ ಲಿಂಕನ್ ಆ ಎರಡು ತಾಣಗಳನ್ನು ಭದ್ರಪಡಿಸಲು ಬಿಡಬಾರದು ಎಂದು ತೀರ್ಮಾನಿಸಿದರು. ಏಪ್ರಿಲ್ ೧೧ರಂದು ಕಾನ್‌ಫೆಡರೇಟ್ (confederate) ಸೇನಾನಾಯಕ ಪಿಯರ್ರೆ ಬ್ಯೂರೆಗಾರ್ಡ್ (Pierre Beauregard) ಸಮ್‌ಟರ್ ಕೋಟೆಯನ್ನು ಕೂಡಲೇ ಶರಣಾಗತವಾಗಬೇಕೆಂದು ಆಜ್ಞಾಪಿಸಿದನು. ಆದರೆ ಆ ಕೋಟೆಯ ರಕ್ಷಣೆ ಮಾಡುತ್ತಿದ್ದ ಮೇಜರ್ ಆ್ಯಂಡರ್‌ಸನ್ (major Andreson) ತಾನು ಮತ್ತು ತನ್ನ ಸೈನಿಕರು ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ ಎಂದು ಗೊತ್ತಿದ್ದರೂ ಶರಣಾಗತನಾಗಲು ನಿರಾಕರಿಸಿದನು. ಅವರ ಆಹಾರ ದಾಸ್ತಾನು ಇನ್ನು ಮೂರು ದಿನಗಳಿಗೆ ಆಗುವಷ್ಟು ಮಾತ್ರ ಇತ್ತು. ಪರಿಹಾರ ತರುವ ಹಡಗುಗಳು ಬರುತ್ತವೆ ಎನ್ನುವ ಭರವಸೆಯಿಂದ ಕೋಟೆಯನ್ನು ಬಿಟ್ಟುಕೊಡಲು ಒಪ್ಪಲಿಲ್ಲ. ಏಪ್ರಿಲ್ ೧೨, ೧೮೬೧ ಅಮೆರಿಕದಲ್ಲಿ

ಅಂತರ್ಯುದ್ಧ (Civilwar) ಪ್ರಾರಂಭವಾದ ಕರಾಳ ದಿನ. ಅಂದು ಮುಂಜಾನೆ ಕಾನ್‌ಫೆಡರೇಟ್ ಪಡೆಗಳು ಸಮ್‌ಟರ್ ಕೋಟೆಯ ಮೇಲೆ ಗುಂಡಿನ ದಾಳಿ ನಡೆಸಿದವು. ಆ್ಯಂಡರ್‌ಸನ್ ದಳ ೩೪ ಘಂಟೆಗಳ ಕಾಲ ಸತತವಾಗಿ ಹೋರಾಡಿ, ಮದ್ದು ಗುಂಡುಗಳು ಮುಗಿದಿದ್ದರಿಂದ ಶರಣಾಗತವಾಗಬೇಕಾಗಿ ಬಂತು.

ಸಮ್‌ಟರ್ ಕೋಟೆಯ ಮೇಲೆ ನಡೆದ ದಾಳಿ ಮತ್ತು ಆ್ಯಂಡರ್‌ಸನ್ ದಳದ ಶರಣಾಗತಿ ಉತ್ತರದ ಪ್ರಾಂತಗಳಲ್ಲಿ ದೇಶಪ್ರೇಮಿಗಳ ಕೋಪ ಉಕ್ಕಿ ಹರಿಯುವಂತೆ ಮಾಡಿತು. ಅಧ್ಯಕ್ಷ ಲಿಂಕನ್ ಕೂಡಲೇ ೭೫೦೦೦ ಸ್ವಯಂಸೇವಕರಿಗೆ ಸೈನ್ಯಕ್ಕೆ ಸೇರಿಕೊಳ್ಳಲು ಕರೆಯಿತ್ತನು. ಲಿಂಕನ್ ಸೈನ್ಯ ಜಮಾಯಿಸುವುದನ್ನು ಸೈರಿಸಲಾರದೆ ವರ್ಜೀನಿಯ, ಉತ್ತರ ಕೆರೊಲಿನ, ಆರ್‌ಕಾನ್‌ಸಾ ಮತ್ತು ಟೆನಸ್ಸೀ ಸಂಸ್ಥಾನಗಳು ಸಂಯುಕ್ತ ಸಂಸ್ಥಾನಗಳ ಸಂಬಂಧ ಕಡಿದುಕೊಂಡು ಬೇರೆಯಾದವು. ದಾಕ್ಷಿಣಾತ್ಯರು 'ಲಿಂಕನ್ ಜನರನ್ನು ಸೈನ್ಯಕ್ಕೆ ಸೇರಲು ಕರೆಕೊಟ್ಟದ್ದು ಕ್ರೂರ ಅತಿಕ್ರಮಣವಲ್ಲದೆ ಬೇರೇನೂ ಅಲ್ಲ; ದಕ್ಷಿಣ ಸಂಸ್ಥಾನಗಳು ತಮ್ಮ ಸ್ವಾಯತ್ತತೆಯ ಹಕ್ಕನ್ನು ಚಲಾಯಿಸುವುದು ತಪ್ಪಲ್ಲ. ಪ್ರಜಾಪ್ರಭುತ್ವ ಮತ್ತು ಇಚ್ಛಾಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಉತ್ತರ ಸಂಸ್ಥಾನಗಳು ಏಕೆ ಆ ಸ್ವಾತಂತ್ರ್ಯವನ್ನು ದಕ್ಷಿಣ ಸಂಸ್ಥಾನಗಳಿಗೆ ನಿರಾಕರಿಸಬೇಕು? ದಕ್ಷಿಣ ಸಂಸ್ಥಾನಗಳು ಪ್ರಜೆಗಳ ಬಹುಮತದ ಅಭಿಪ್ರಾಯದಂತೆ ಸಂಯುಕ್ತ ಸಂಸ್ಥಾನಗಳ ಸಂಘಟನೆಯನ್ನು ತ್ಯಜಿಸಿ ಹೊರಬರುವ ಹಕ್ಕನ್ನು ಚಲಾಯಿಸಿದರೆ ಅದು ನ್ಯಾಯಬಾಹಿರವಾದುದಲ್ಲ' ಎಂದು ವಾದಿಸಿದರು. ಅದಕ್ಕೆ ಪ್ರತ್ಯುತ್ತರವಾಗಿ 'ಸಂಯುಕ್ತ ಸಂಸ್ಥಾನಗಳನ್ನು ತ್ಯಜಿಸುವುದು ಪ್ರಜಾಪ್ರಭುತ್ವವನ್ನು ತ್ಯಜಿಸಿದಂತೆ. ದಕ್ಷಿಣ ಸಂಸ್ಥಾನಗಳು ಸ್ವಇಚ್ಛೆಯಿಂದ ಭಾಗವಹಿಸಿದ ಚುನಾವಣೆಯ ಫಲಿತಾಂಶವನ್ನು ಒಪ್ಪಿಕೊಳ್ಳದಿದ್ದರೆ ಆಗ ರಾಜಪ್ರಭುತ್ವ ಪ್ರತಿಪಾದಕರು ಮತ್ತು ಇತರ ಸಂಪ್ರದಾಯಸ್ಥರ 'ರಿಪಬ್ಲಿಕನ್ ಮಾದರಿಯ ಸರ್ಕಾರ ದೃಢವಾಗಿರಲು ಸಾಧ್ಯವಿಲ್ಲ' ಎನ್ನುವ ಅಭಿಪ್ರಾಯ ಸಾಬೀತುಗೊಂಡಂತಾಗುತ್ತದೆ' ಎಂದು ಲಿಂಕನ್ ಹೇಳಿದನು. ಲಿಂಕನ್ ತಳೆದ ಈ ಧೋರಣೆಗಳು ನೈತಿಕವಾಗಿ ಮತ್ತು ರಾಜಕೀಯವಾಗಿ ಸಮಂಜಸವಾಗಿದ್ದವು. ಗುಲಾಮರ ವಿಮೋಚನೆ ಪ್ರಸ್ತುತವಾಗಿ ಅವನ ಮುಖ್ಯ ಗುರಿಯಾಗಿರಲಿಲ್ಲ. ಅವನು ಎದುರಿಸಬೇಕಾಗಿದ್ದ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಗುಲಾಮಗಿರಿಯ ಪ್ರಶ್ನೆ ಮುಖ್ಯವೆಂದು ಅವನಿಗೆ ಅನಿಸಲಿಲ್ಲ; ಬಹುಸಂಖ್ಯಾತ ಔತ್ತರೇಯರು ಗುಲಾಮರ ವಿಮೋಚನೆಗಾಗಿ ಯುದ್ಧ ಮಾಡಲು ಸಿದ್ಧರಿರಲಿಲ್ಲ. ದಕ್ಷಿಣ ಸಂಸ್ಥಾನಗಳು ಸಂಯುಕ್ತ ಸಂಸ್ಥಾನಗಳನ್ನು ತ್ಯಜಿಸಿ ಹೊರಬಂದಿದ್ದಕ್ಕೆ ಮೂಲಕಾರಣ ಗುಲಾಮಗಿರಿ. ಆದರೆ ಉತ್ತರ ಸಂಸ್ಥಾನಗಳು ಯುದ್ಧಕ್ಕೆ ಇಳಿದಿದ್ದು ಸಂಯುಕ್ತ ಸಂಸ್ಥಾನಗಳ ಒಗ್ಗಟ್ಟನ್ನು ಉಳಿಸಬೇಕೆಂಬ ದೇಶಾಭಿಮಾನ ದಿಂದ. ಅಮೆರಿಕದ ಅಂತರ್ಯುದ್ಧದ ಅನೇಕ ಪರಿಣಾಮಗಳಲ್ಲಿ ಗುಲಾಮರ ವಿಮೋಚನೆಯೂ ಒಂದು. ರಾಷ್ಟ್ರವನ್ನು ಒಂದುಗೂಡಿಸುವುದು ಯುದ್ಧದ ಮುಖ್ಯ ಉದ್ದೇಶ ವಾಗಿತ್ತೇ ಹೊರತು ಗುಲಾಮರ ವಿಮೋಚನೆಯಲ್ಲ.

ಯುದ್ಧಕಾಲೇ ಶಸ್ತ್ರಾಭ್ಯಾಸ

ದಕ್ಷಿಣದ ಹನ್ನೊಂದು ಕಾನ್‌ಫೆಡರೆಸಿ (Confederacy) ಸಂಸ್ಥಾನಗಳನ್ನು ಉತ್ತರದ ಸಂಸ್ಥಾನಗಳೊಂದಿಗೆ ಹೋಲಿಸಿದರೆ, ಉತ್ತರದ ಸಂಸ್ಥಾನಗಳು ಬಹಳ ಉತ್ತಮ ಪರಿಸ್ಥಿತಿಯಲ್ಲಿದ್ದು ಅನೇಕ ಅನುಕೂಲತೆಗಳನ್ನು ಪಡೆದಿದ್ದವು. ಜನಸಂಖ್ಯೆಯನ್ನು ಗಮನಿಸಿದರೆ ಉತ್ತರ ಸಂಸ್ಥಾನಗಳಲ್ಲಿ ೨೦.೭ ಮಿಲಿಯನ್ ಜನರಿದ್ದರೆ, ದಕ್ಷಿಣ ಸಂಸ್ಥಾನಗಳಲ್ಲಿ ಕೇವಲ ೯ ಮಿಲಿಯನ್ ಜನರಿದ್ದು ಅವರಲ್ಲಿ ೩.೫ ಮಿಲಿಯನ್ ಗುಲಾಮರಾಗಿದ್ದರು. ಗುಲಾಮರ ಕೈಗೆ ಶಸ್ತ್ರಾಸ್ತ್ರ ಕೊಡಲು ದಕ್ಷಿಣದ ಬಿಳಿಯರಿಗೆ ಭಯ, ಎಲ್ಲಿ ತಮ್ಮ ಮೇಲೆ ತಿರುಗಿ ಬೀಳುತ್ತಾರೋ ಎಂದು. ಉತ್ತರ ಸಂಸ್ಥಾನಗಳ ಯುದ್ಧ ನಡೆಸಲು ಬೇಕಾದ ಆರ್ಥಿಕ ಸಾಮರ್ಥ್ಯ ದಕ್ಷಿಣ ಸಂಸ್ಥಾನಗಳಿಗಿಂತ ಅತ್ಯಂತ ಅಧಿಕವಾಗಿತ್ತು. ಇದಕ್ಕೆ ಕಾರಣ ಉತ್ತರ ಸಂಸ್ಥಾನಗಳ ಕೈಗಾರಿಕಾ ಉತ್ಪಾದನೆ ದಕ್ಷಿಣ ಸಂಸ್ಥಾನಗಳಿಗಿಂತ ಏಳು ಪಟ್ಟು ಹೆಚ್ಚಾಗಿತ್ತು. ಉತ್ತರ ಸಂಸ್ಥಾನಗಳ ರೈಲು ವ್ಯವಸ್ಥೆ ವಿಸ್ತಾರವಾಗಿದ್ದು ಸಮರ್ಪಕವಾಗಿ ನಡೆಯುತ್ತಿತ್ತು. ಉತ್ತರ ಸಂಸ್ಥಾನಗಳು ವ್ಯಾಪಾರಿ ಹಡಗುಗಳ ಮೇಲೆ ಪರಿಣಾಮಕಾರಿಯಾದ ನಿಯಂತ್ರಣ ಹಾಕಿದ್ದಲ್ಲದೆ ನೌಕಾದಾಳದವರು ಕಾನ್‌ಫೆಡರಸಿ ಹಡಗುಗಳನ್ನು ತಡೆ ಹಾಕಿದರು. ಇದರಿಂದ ಪರದೇಶಗಳ ವ್ಯಾಪಾರದ ಮೇಲೆ ಅವಲಂಬಿಸಿದ ದಕ್ಷಿಣ ಸಂಸ್ಥಾನಗಳಿಗೆ ಇದು ತಮ್ಮ ಉಳಿವಿನ ಪ್ರಶ್ನೆಯಾಯಿತು.

ಉತ್ತರ ಸಂಸ್ಥಾನಗಳ ಅನುಕೂಲಗಳು ಮತ್ತು ಆರ್ಥಿಕ ಸುಭದ್ರತೆಯನ್ನು ಕಡೆಗಣಿಸಿ ದಾಕ್ಷಿಣಾತ್ಯರು ತಮ್ಮ ಮೇಲೆ ಬಲಪ್ರಯೋಗ ಮಾಡಲು ಜನಾಭಿಪ್ರಾಯ ತಡೆಯೊಡ್ಡುತ್ತದೆ ಎಂದು ತಿಳಿದಿದ್ದರು. ಉತ್ತರ ಸಂಸ್ಥಾನಗಳ ಕೈಗಾರಿಕೆಗಳು ದಕ್ಷಿಣದ ಮಾರುಕಟ್ಟೆಗಳನ್ನು ಅವಲಂಬಿಸಿದ್ದವು. ಅದೇ ರೀತಿ ಉತ್ತರದ ವ್ಯಾಪಾರಿಗಳು ದಕ್ಷಿಣದ ಗಿರಾಕಿಗಳನ್ನು ಅವಲಂಬಿಸಿದ್ದರು. ಪಶ್ಚಿಮ ಪ್ರದೇಶಗಳ ರೈತರು ತಾವು ಬೆಳೆದುದನ್ನು ಮಿಸ್ಸಿಸ್ಸಿಪ್ಪಿ ನದಿಯ ಮೇಲೆ ದೋಣಿಗಳಲ್ಲಿ ವ್ಯಾಪಾರ ಕೇಂದ್ರಗಳಿಗೆ ಕಳುಹಿಸುತ್ತಿದ್ದರು. ಈ ಎಲ್ಲಾ ಸಮುದಾಯಗಳ ಜೀವನೋಪಾಯಕ್ಕೆ ಧಕ್ಕೆಯಾಗುವುದರಿಂದ ಯುದ್ಧ ಅಸಂಭವ ಎಂದು ದಾಕ್ಷಿಣಾತ್ಯರು ನಿರ್ಧರಿಸಿದ್ದರು. ಉತ್ತರ ಸಂಸ್ಥಾನಗಳು ಯೂರೋಪಿನ ವ್ಯಾಪಾರ ಕೇಂದ್ರಗಳಿಗೆ ದಕ್ಷಿಣ ಸಂಸ್ಥಾನಗಳಲ್ಲಿ ಬೆಳೆದ ಹತ್ತಿ ರಫ್ತಾಗುವುದನ್ನು ನಿಲ್ಲಿಸಿದರೆ ಯೂರೋಪ್ ಮತ್ತು ಇಂಗ್ಲೆಂಡ್ ತಮ್ಮ ಪ್ರಬಲ ನೌಕಾದಳಗಳನ್ನು ಕಳುಹಿಸಿ ಉತ್ತರ ಸಂಸ್ಥಾನಗಳ ನೌಕಾದಳವನ್ನು ನಾಶಪಡಿಸಿ, ಕಾನ್‌ಫೆಡರಸಿ ನೆರವಿಗೆ ನಿಲ್ಲುತ್ತಾರೆ ಎಂದೂ ನಂಬಿದ್ದರು!

ಕಾನ್‌ಫೆಡರಸಿಯವರು ಕೆಲವು ಮಿಲಿಟರಿ ಅನುಕೂಲಗಳನ್ನು ಅಂದಾಜು ಮಾಡಿದ್ದರು. ತಮ್ಮ ಹೊಸದೇಶವನ್ನು ರಕ್ಷಣೆ ಮಾಡುವುದು ಮಾತ್ರ ತಮ್ಮ ಮುಖ್ಯ ಕರ್ತವ್ಯ. ತಮ್ಮ ಸ್ವರಕ್ಷಣೆಗಾಗಿ ಮಾತ್ರ ಯುದ್ಧ ಮಾಡುವುದು ಆಕ್ರಮಣಕಾರಿ ಯುದ್ಧಕ್ಕಿಂತ ಕಡಿಮೆ ವೆಚ್ಚದ ಕಾರ್ಯಾಚರಣೆ. ಇಂಥ ಯುದ್ಧದಲ್ಲಿ ಸಾವು-ನೋವು, ಆಸ್ತಿ ಪಾಸ್ತಿಗಳ ನಷ್ಟ

ಹೆಚ್ಚಾಗಿರುವುದಿಲ್ಲ. ತಾವು ತಮ್ಮ ಸೈನಿಕರ ನೈತಿಕ ಸ್ಥೈರ್ಯವನ್ನು ಉಳಿಸಿ ಹೊರಗಿನವರ ಸಹಾನುಭೂತಿಯನ್ನು ಗಳಿಸಬಹುದು ಎಂದು ನಂಬಿದ್ದರು. ದಾಕ್ಷಿಣಾತ್ಯರು ಯುದ್ಧ ಮಾಡುವುದು ತಮ್ಮ ಸಂಪ್ರದಾಯ ಮತ್ತು ನಂಬಿಕೆ ಹಾಗೂ ನಡವಳಿಕೆಗಳನ್ನು ರಕ್ಷಿಸುವ ಸಲುವಾಗಿ ಮಾತ್ರವಲ್ಲದೆ; ತಮ್ಮ ಮನೆ ಮಠಗಳು ಮತ್ತು ಕುಟುಂಬಗಳನ್ನು ಕಾಪಾಡುವುದಕ್ಕಾಗಿ ಎಂದು ನಂಬಿದ್ದರು. ಅದೃಷ್ಟವಶಾತ್ ದಕ್ಷಿಣ ಸಂಸ್ಥಾನಗಳ ಸೈನ್ಯಾಧಿಕಾರಿಗಳು ಉನ್ನತ ಮಟ್ಟದವರಾಗಿದ್ದರು. ಮೇಲಾಗಿ ದಾಕ್ಷಿಣಾತ್ಯರಲ್ಲಿ ಸೈನಿಕ ಸಂಪ್ರದಾಯ ಪ್ರಬಲವಾಗಿತ್ತು. ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಸೈನಿಕ ಶಾಲೆಗಳಲ್ಲಿ ತರಬೇತಿ ಪಡೆದಿದ್ದರು. ಕಾನ್‌ಫೆಡರಸಿಗೆ ಕೂಡಲೆ ಒಬ್ಬ ಮಹಾದಂಡನಾಯಕನೂ ದೊರೆತನು. ಆದರೆ ಯುದ್ಧದ ಪ್ರಾರಂಭದ ದಿನಗಳಲ್ಲಿ ಉತ್ತರ ಸಂಸ್ಥಾನಗಳ ಉನ್ನತ ಸೈನ್ಯಾಧಿಕಾರಿಗಳು ಅನಿಶ್ಚಯದಿಂದ ತೊಳಲುವ ಅಥವಾ ಸರಿಯಾದ ನಿರ್ಧಾರ ಮಾಡಲಾರದ ಅಸಮರ್ಥರಾಗಿದ್ದರು. ಆದ್ದರಿಂದ ಒಂದಾದ ಮೇಲೊಂದರಂತೆ ಕದನಗಳಲ್ಲಿ ಉತ್ತರದ ಸೈನ್ಯಗಳು ಸೋಲುತ್ತ ಹೋದವು.

ಎರಡು ಕಡೆಯವರು ಯುದ್ಧದ ಸಿದ್ಧತೆಯಲ್ಲಿ ತೊಡಗಿದಾಗ ಬೆಟ್ಟದಂಥ ಕಷ್ಟಗಳನ್ನು ಎದುರಿಸಬೇಕಾಯಿತು. ಉತ್ತರ ಸಂಸ್ಥಾನಗಳ ಸೈನ್ಯದಲ್ಲಿ ೧೩,೦೦೦ ಆಫೀಸರ್‌ಗಳು ಮತ್ತು ಸೈನಿಕರು ಮಾತ್ರ ಇದ್ದರು. ಇವರಲ್ಲಿ ಹೆಚ್ಚಿನವರಿಗೆ ಸೈನಿಕ ತರಬೇತಿ ಇರಲಿಲ್ಲ. ಅವಸರದಲ್ಲಿ ಕೂಡಿಸಿದ ಈ ಸೈನ್ಯಕ್ಕೆ ದಂಡನಾಯಕನಾಗಿದ್ದವನು ವಯಸ್ಸಾದ ವಿನ್‌ಫೀಲ್ಡ್ ಸ್ಕಾಟ್ (Winfield Scott) ಇವನು ಒಟ್ಟು ಸೈನ್ಯದ ಕಾರ್ಯಾಚರಣೆಯ ಬಗ್ಗೆ ಕೊನೆಯಿಲ್ಲದ ಚರ್ಚೆ ನಡೆಸುತ್ತಿದ್ದನು. ಸೈನ್ಯ ತುಕಡಿ ನಾಯಕರ (Regimental commanders) ಬಳಿ ವರ್ಜೀನಿಯಾದ ಸರಿಯಾದ ಭೂಪಟಗಳು ಸಹ ಇರಲಿಲ್ಲ! ಕ್ರಮೇಣ ಈ ಹರಕು ಮುರುಕು ಸೈನ್ಯ ತುಕಡಿಗಳು ಕವಾಯತು ಮತ್ತು ಶಿಸ್ತನ್ನು ಕಲಿತರು. ಆದರೆ ಅವರಿಗೆ ಪರಿಣಾಮಕಾರಿಯಾದ ಯುದ್ಧರಂಗದ ತರಬೇತಿ ದೊರೆಯಲಿಲ್ಲ. ಕೇಂದ್ರ ಸರ್ಕಾರ ಆರ್ಥಿಕ ಮತ್ತು ಆಡಳಿತ ಸಾಧನಗಳನ್ನು ಸಾವಧಾನವಾಗಿ ಒಟ್ಟುಗೂಡಿಸುವುದನ್ನು ನಡೆಸಿತ್ತು. ಈ ನಿಧಾನಕ್ಕೆ ಕಾರಣ ಸರ್ಕಾರಕ್ಕೆ ಯುದ್ಧದ ಸಿದ್ಧತೆ ಮತ್ತು ಕಾರ್ಯಾಚರಣೆಯಲ್ಲಿ ಅನುಭವವಿರಲಿಲ್ಲ; ಅದರಲ್ಲೂ ಅದು ಅಂತರ್ಯುದ್ಧವನ್ನು ಅಸಂಭವವೆಂದೇ ಊಹಿಸಿತ್ತು. ಯುದ್ಧದ ಸಿದ್ಧತೆಗಳು ಸಮಯಕ್ಕೆ ಸರಿಯಾಗಿ ನಡೆಯದಿರಲು ಲಿಂಕನ್ ಪಾತ್ರವೂ ಇತ್ತೆಂದು ಹೇಳಬಹುದು. ಅವನು ಕಾಂಗ್ರೆಸನ್ನಾಗಲೀ ಅಥವಾ ತನ್ನ ಆಡಳಿತ ಮಂಡಳಿಯನ್ನಾಗಲೀ, ಹಿಂದಿನ ಅಧ್ಯಕ್ಷರಾಗಿದ್ದ ಜಾಕ್‌ಸನ್ ಅಥವಾ ಪೋಲ್ಕ್‌ರಂತೆ, ಬಿಗಿಯಾಗಿ ನಿಯಂತ್ರಿಸಲಾರದೆ ಹೋದನು. ದಕ್ಷರಾದ ಸಲಹೆಗಾರರನ್ನಾಗಲೀ, ಸುದ್ದಿ ಸಂಗ್ರಹ ಮಾಡುವ ಸಮಿತಿಯನ್ನಾಗಲೀ ಅವನು ಸ್ಥಾಪಿಸಲಿಲ್ಲ. ಸರ್ಕಾರದ ವಿವಿಧ ಇಲಾಖೆಗಳನ್ನು ಸಂಘಟಿಸಿ ಪರಸ್ಪರ ಸಹಕಾರದಿಂದ ಸರ್ಕಾರೀ ಕೆಲಸವನ್ನು ಸಮರ್ಪಕವಾಗಿ ನಡೆಯುವಂತೆ ಮಾಡಲಿಲ್ಲ. ಯುದ್ಧದ ಮೊದಲ ಹಂತಗಳಲ್ಲಿ ಕಾಂಗ್ರೆಸ್ ಲಿಂಕನ್‌ನೊಡನೆ

ಸಹಕರಿಸಿತು. ಡಗ್ಲಾಸ್ ಲಿಂಕನ್‌ನನ್ನು ಟೀಕಿಸಿದರೂ ಸಮ್‌ಟರ್ ದಾಳಿ ನಡೆದ ನಂತರ ಎಲ್ಲ ಡೆಮೊಕ್ರಾಟರನ್ನು ಒಂದುಗೂಡಿಸಿ ಯುದ್ಧಕ್ಕೆ ಬೆಂಬಲ ನೀಡುವಂತೆ ಮಾಡಿದನು. ೧೮೬೧ರ ಜೂನ್ ತಿಂಗಳಲ್ಲಿ ಡಗ್ಲಾಸ್ ಮರಣ ಹೊಂದಿದನು. ಇದು ದೇಶಕ್ಕೆ ತುಂಬಲಾರದ ನಷ್ಟವಾಯಿತು.

ಯುದ್ಧದ ಮೊದಲ ದಿನಗಳಲ್ಲಿ ಲಿಂಕನ್ ಚುರುಕಿನ ನಾಯಕತ್ವ ತೋರದಿದ್ದರೂ ಅತ್ಯಂತ ಗಹನವಾದ ಜವಾಬ್ದಾರಿಗಳನ್ನು ಕಾರ್ಯಗತಗೊಳಿಸಬಲ್ಲ ಸಾಮರ್ಥ್ಯವುಳ್ಳವ ನೆಂದು ಸಾಬೀತುಗೊಳಿಸಿದನು. ಯುದ್ಧಾರಂಭದಿಂದ ಕೊನೆಯವರೆಗೂ ಲಿಂಕನ್‌ನ ಚೈತನ್ಯ ಸಮಸ್ಯೆಗಳನ್ನು ಕುರಿತು ಆಳವಾಗಿ ಆಲೋಚಿಸುವ, ಅವು ಉಂಟುಮಾಡಬಹುದಾದ ತೊಡಕುಗಳನ್ನು ತಿಳಿದುಕೊಳ್ಳುವ, ನಂತರ ದೃಢನಿಶ್ಚಯದಿಂದ ಯಾವುದಕ್ಕೂ ಹಿಂಜರಿಯದೆ ತನ್ನ ನಿರ್ಧಾರವನ್ನು ಜಾರಿಗೆ ತರುವ ಅವನ ಸಾಮರ್ಥ್ಯದಲ್ಲಿ ಅಡಗಿತ್ತು. ಅವನು ದೇಶದ ತುರ್ತು ಪರಿಸ್ಥಿತಿಯಲ್ಲಿ ಧೈರ್ಯವಾಗಿ ಅಧ್ಯಕ್ಷಸ್ಥಾನದ ಮಿತಿಯನ್ನು ಮೀರಿ ಕಾಂಗ್ರೆಸ್ ಒಪ್ಪಿಗೆ ಪಡೆಯದೆ ಸೈನ್ಯವನ್ನು ಬಹಳವಾಗಿ ವಿಸ್ತರಿಸಿದನು. ಸಂಶಯದ ಮೇಲೆ ಸೆರೆ ಹಿಡಿದವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಬೇಕೆಂಬ ನಿಬಂಧನೆ ಯನ್ನು (Writ of Habeas Corpus) ತಾತ್ಕಾಲಿಕವಾಗಿ ತೆಗೆದು ಹಾಕಿದನು. ಸೈನ್ಯದ ಅವಶ್ಯಕತೆಗಾಗಿ ಗುಲಾಮರನ್ನು ಬಿಡುಗಡೆ ಮಾಡಿದನು. ಯುದ್ಧದ ಪ್ರಕ್ಷುಬ್ಧ ಪರಿಸ್ಥಿತಿ ಯಲ್ಲೂ ಲಿಂಕನ್ ಶಾಂತಚಿತ್ತನಾಗಿ ಘನತೆ ಗಾಂಭೀರ್ಯಗಳು ಮೂರ್ತಿವೆತ್ತಂತೆ ಇದ್ದನು. ಅತ್ಯುನ್ನತ ಸ್ಥಾನದಲ್ಲಿದ್ದರೂ ಕೂಡ ಲಿಂಕನ್ ತನ್ನ ಕೈಕೆಳಗಿನವರ ಬೈಗುಳ ಮತ್ತು ಅವಮಾನಗಳನ್ನು ಸಂಯಮದಿಂದ ಸಹಿಸಿಕೊಂಡಿರುತ್ತಿದ್ದನು. ಆದರೆ ಅವನು ಯಾವ ರೀತಿಯಲ್ಲೂ ಬಲಹೀನನಾಗಿರಲಿಲ್ಲ. ಯುದ್ಧದ ಎಲ್ಲ ಆಗುಹೋಗುಗಳನ್ನು ಕೂಲಂಕಷ ವಾಗಿ ಪರಿಶೀಲಿಸುತ್ತಿದ್ದನು. ಯುದ್ಧ ಅವನ ಎಲ್ಲ ವೇಳೆಯನ್ನು ತೆಗೆದುಕೊಳ್ಳುತ್ತಿತ್ತು. ಆದರೂ ಅವನು ಒಬ್ಬನೆ ಕುಳಿತು ಶಾಂತಚಿತ್ತದಿಂದ ದೀರ್ಘಾಲೋಚನೆ ಮಾಡಲು ಹೇಗಾದರೂ ಸಮಯ ಹೊಂದಿಸಿಕೊಳ್ಳುತ್ತಿದ್ದನು. ಲಿಂಕನ್ ಕೆಲವು ಸಮಯ ಒಬ್ಬನೆ ಕಡೆದ ಶಿಲಾಮೂರ್ತಿಯಂತೆ ಕುಳಿತು, ಸಮಯದ ಪರಿವೆಯಿಲ್ಲದೆ ಆಳವಾದ ಚಿಂತನೆಯಲ್ಲಿ ಮೈಮರೆಯುತ್ತಿದ್ದನು ಎಂದು ಅವನ ಕಾರ್ಯದರ್ಶಿಯಾಗಿದ್ದ ಜಾನ್ ನಿಕೊಲೈ (John Nicolay)ಹೇಳಿದ್ದಾನೆ.

ದಕ್ಷಿಣ ಸಂಸ್ಥಾನಗಳು ಉತ್ತರ ಸಂಸ್ಥಾನಗಳಿಗಿಂತ ಹೆಚ್ಚು ಸಮಸ್ಯೆಗಳನ್ನು ಎದುರಿಸ ಬೇಕಾಗಿ ಬಂತು. ಏಕೆಂದರೆ ಯುದ್ಧದ ತುರ್ತುಪರಿಸ್ಥಿತಿಯಲ್ಲಿ ಅವರು ಹೊಸ ಆಡಳಿತ ವ್ಯವಸ್ಥೆಯನ್ನು ಸೃಷ್ಟಿಸಬೇಕಾಗಿತ್ತು. ಕಾನ್‌ಫೆಡರೇಟ್ ರಾಜ್ಯಾಂಗ ಸಂಸ್ಥಾನಗಳ ಸ್ವಯಂ ಪ್ರಭುತ್ವವನ್ನು ಅನುಮೋದಿಸಿದ್ದಿತೇ ಹೊರತು ಸರ್ವರಿಗೂ ಅನ್ವಯಿಸುವಂಥ, ಸರ್ವರ ಕ್ಷೇಮಾಭಿವೃದ್ಧಿಯನ್ನು ಹೆಚ್ಚಿಸುವಂಥ ಶಾಸನಗಳನ್ನು ಜಾರಿಗೆ ತರಲಿಲ್ಲ. ಆದ್ದರಿಂದ

ಸಂಸ್ಥಾನ ಸರ್ಕಾರಗಳು ಪದೇ ಪದೇ ಕೇಂದ್ರ ಸರ್ಕಾರದ (ರಾಜಧಾನಿ: ರಿಚ್‌ಮಂಡ್, ವರ್ಜೀನಿಯ) ಆಜ್ಞೆಗಳನ್ನು, ಸೈನ್ಯಕ್ಕೆ ಸಂಬಂಧಪಟ್ಟವುಗಳನ್ನು ಕೂಡ ತಿರಸ್ಕರಿಸುತ್ತಿದ್ದರು. ಕಾನ್‌ಫೆಡರೇಟ್ ಸರ್ಕಾರ ಹಿಂದಿನ ಫೆಡರಲ್ ಕಾಯಿದೆಗಳನ್ನೇ ಕಾನ್‌ಫೆಡರೇಟ್ ಕಾಂಗ್ರೆಸ್ ರಚನೆಗೊಳ್ಳುವವರೆಗೂ ಜಾರಿಯಲ್ಲಿರುವಂತೆ ಮಾಡಿತ್ತು. ಫೆಡರಲ್ ಸರ್ಕಾರಿ ನೌಕರರನ್ನು ಹಾಗೆಯೇ ಕೆಲಸ ಮುಂದುವರಿಸಿಕೊಂಡು ಹೋಗಲು ಅವಕಾಶಕೊಟ್ಟರು. ಕಾನ್‌ಫೆಡರಸಿ ಕೊಟ್ಟ ಸೈನ್ಯದ ಕರೆಗೆ ಅಧಿಕ ಸಂಖ್ಯೆಯಲ್ಲಿ ಜನ ಬಂದು ಸೇರಿದ್ದರು. ಜುಲೈ ೧೮೬೧ರ ಹೊತ್ತಿಗೆ ಕಾನ್‌ಫೆಡರೇಟ್ ಸೈನ್ಯ ೧೧೨೦೦೦ವನ್ನೂ ಮೀರಿತ್ತು. ಎಲ್ಲ ತರದ ಜನರೂ ಸೈನ್ಯವನ್ನು ಸೇರಿದ್ದರು. ಅವರ ನೈತಿಕ ಸ್ಥೈರ್ಯದ ಮಟ್ಟವೂ ಹೆಚ್ಚಿತ್ತು.

ಅಧ್ಯಕ್ಷ ಜಫರ್‌ಸನ್ ಡೇವಿಸ್ ದಕ್ಷಿಣದ ಗುಲಾಮರ ಒಡೆಯರಿಗೆ ಮಾದರಿಯಾಗಿದ್ದನು. ವೆಸ್ಟ್ ಪಾಯಿಂಟ್ ಪದವೀಧರನಾದ ಈತ ಒಳ್ಳೆಯ ಯೋಧನೂ ಯಶಸ್ವಿಯಾದ ಪ್ಲಾಂಟರನೂ ಆಗಿದ್ದನು. ಗುಲಾಮರನ್ನು ಕರುಣೆಯಿಂದ ಪೋಷಿಸಿ, ಮಾನವೀಯತೆಯಿಂದ ಪಾಲಿಸುತ್ತಿದ್ದನು. ಡೇವಿಸ್ ತೆಳ್ಳನೆಯ, ನೇರ ನಿಲುವಿನ ಸ್ಫುರದ್ರೂಪಿಯಾಗಿದ್ದನು. ಜೊತೆಗೆ ಧೈರ್ಯಶಾಲಿ. ಸದಾ ಕಾರ್ಯನಿರತನಾದ ಧೀಮಂತ ವ್ಯಕ್ತಿಯಾಗಿದ್ದನು. ಆದರೆ ತೀರ ಗಂಭೀರ ಪ್ರವೃತ್ತಿಯವನೂ ತನ್ನ ಅಭಿಪ್ರಾಯವೇ ಸರಿ ಎನ್ನುವ ಹಠಮಾರಿಯೂ ಆಗಿದ್ದನು. ಈ ಎರಡು ಗುಣಗಳಿಂದಾಗಿ ಅವನು ಉತ್ತಮ ರಾಜಕಾರಣಿ ಅಥವಾ ಜನಪ್ರಿಯ ನಾಯಕನಾಗಲು ಸಾಧ್ಯವಾಗಲಿಲ್ಲ. ಅಧ್ಯಕ್ಷನಾಗಿ ಪ್ರತಿಯೊಂದನ್ನು ತೀವ್ರ ಪರಿಶೀಲನೆ ಮಾಡದೆ ಒಪ್ಪಿಕೊಳ್ಳುತ್ತಿರಲಿಲ್ಲ. ಇದರಿಂದ ಸಮಯ ಹಾಳಾಗುತ್ತದೆ ಎನ್ನುವ ಪರಿವೆ ಅವನಿಗಿರಲಿಲ್ಲ. ತಾನೇ ಎಲ್ಲದನ್ನೂ ಮಾಡಬೇಕು ಎನ್ನುವ ಧೋರಣೆಯಿಂದ ಇತರರಿಗೆ ಅಧಿಕಾರ ಸಮರ್ಪಕವಾಗಿ ಹಂಚಿಕೊಡಲಿಲ್ಲ. ತಾನೊಬ್ಬ ಸಮರಧುರೀಣನೆಂಬ ಹೆಮ್ಮೆಯಿಂದ ಬೀಗುತ್ತಿದ್ದನು. ಆದ್ದರಿಂದ ಕೆಲವು ಸಮಯ ತುರ್ತು ರಾಜಕೀಯ ಸಮಸ್ಯೆಗಳಿಗೆ ಗಮನಕೊಡದೆ ಸೈನಿಕ ಕಾರ್ಯಾಚರಣೆಯ ಬಗ್ಗೆ ತನ್ನ ಪರಿಣತಿ ತೋರಿಸಲು ಸೈನ್ಯಾಧಿಕಾರಿಗಳಿಗೆ ಸಲಹೆ ಕೊಡುವುದರಲ್ಲಿ ಮಗ್ನನಾಗುತ್ತಿದ್ದನು. ಲಿಂಕನ್‌ನಂತಲ್ಲದೆ ಡೇವಿಸ್ ತನ್ನ ಕೈಕೆಳಗಿನವರೊಡನೆ ಜಗಳವಾಡುತ್ತಿದ್ದನು ಮತ್ತು ಜಿದ್ದು ಸಾಧಿಸುತ್ತಿದ್ದನು. ಅತ್ಯಂತ ಮುಖ್ಯವಾದ ವಿಷಯಗಳ ಬಗ್ಗೆ ನಿರ್ಧಾರ ಮಾಡುವಾಗ ಅವನ ಸ್ವಂತ ಭಾವನೆಗಳು ಆ ನಿರ್ಧಾರಗಳನ್ನು ಪ್ರಭಾವಿತಗೊಳಿಸುತ್ತಿದ್ದವು. ಇವುಗಳ ದುಷ್ಪರಿಣಾಮಗಳಿಗೆ ದಕ್ಷಿಣ ಸಂಸ್ಥಾನಗಳು ಗುರಿಯಾಗುತ್ತಿದ್ದವು.

ಬಲಪರೀಕ್ಷೆ

ಬೇಸಿಗೆ ಕಾಲ ಹತ್ತಿರವಾಗುತ್ತಿದ್ದಂತೆ ಉತ್ತರ ಮತ್ತು ದಕ್ಷಿಣ ಸಂಸ್ಥಾನಗಳು ಯುದ್ಧಕ್ಕೆ ಸಿದ್ಧವಾದವು. ಕಾನ್‌ಫೆಡರೇಟ್ ಸೈನಿಕರು ಹೆಮ್ಮೆ ಮತ್ತು ಉತ್ಸಾಹಗಳಿಂದ ಉನ್ಮತ್ತರಾಗಿ ಜರುಗಲಿದ್ದ ದುರಂತ ಸಂಘರ್ಷಣೆಯ ಅಪಾರ ಸಾವು ನೋವುಗಳ ಅರಿವಿಲ್ಲದೆ,

ಅಹಂಕಾರದ ವ್ಯರ್ಥ ಘೋಷಣೆಗಳನ್ನು ('Forward to Richmond and On to Washington')ಕೂಗುತ್ತ ಸರಿಯಾದ ತರಬೇತಿ ಇಲ್ಲದಿದ್ದರೂ ರಣರಂಗಕ್ಕೆ ಮುನ್ನುಗ್ಗಿದರು. ಜುಲೈ ೨೧, ೧೮೬೧ ವಾಷಿಂಗ್‌ಟನ್ (ರಾಜಧಾನಿ)ನಿಂದ ೨೦ ಮೈಲಿ ದೂರದ ವರ್ಜೀನಿಯ ಸಂಸ್ಥಾನಕ್ಕೆ ಸೇರಿದ್ದ ಮನಸ್ಸಾಸ್ ಜಂಕ್ಷನ್ (Manassas junction) ಎನ್ನುವ ಸ್ಥಳದಲ್ಲಿ ಪೊಟೊಮ್ಯಾಕ್ ನದಿಯ ಬುಲ್ ರನ್ (Bull Run) ಎನ್ನುವ ಉಪನದಿಯ ತೀರದಲ್ಲಿ ಜನರಲ್ ಅರ್ವಿನ್ ಮ್ಯಾಕ್‌ಡೋವೆಲ್ (General Irwin McDowell) ಕೈಕೆಳಗಿನ ೩೦೦೦೦ ಸೈನಿಕರು ಪಿಯರ್ರೆ ಬ್ಯೂರೆಗಾರ್ಡ್ (Pierre Beauregard)ನ ಸೇನಾಧಿಪತ್ಯ ವಹಿಸಿದ್ದ ಕಾನ್‌ಫೆಡರೇಟ್ ಸೈನ್ಯದ ಮೇಲೆ ದಾಳಿ ಮಾಡಿದರು. ಮ್ಯಾಕ್‌ಡೋವೆಲ್‌ನ ಸೈನಿಕರು ಕಾನ್‌ಫೆಡರೇಟ್ ಸೈನ್ಯದ ಎಡಪಾರ್ಶ್ವವನ್ನು (left flank) ಸೋಲಿಸಿ ಹಿಮ್ಮೆಟ್ಟಿಸಿದರು. ಜಯಗಳಿಸುವುದು ಖಚಿತವೆಂದು ತೋರಿತು. ಆದರೆ ಮುನ್ನುಗ್ಗುವುದಕ್ಕೆ ತಡೆ ಉಂಟಾಯಿತು. ವೈರಿಗಳು ಪ್ರತಿ ದಾಳಿ ಮಾಡಿ ಫೆಡರಲ್ ಸೈನಿಕರನ್ನು ಹಿಮ್ಮೆಟ್ಟಿಸಿದರು. ತರಬೇತಿಯಿಲ್ಲದ ಸೈನಿಕರು ಹಿಮ್ಮೆಟ್ಟುವ ಬದಲು ದಿಕ್ಕೆಟ್ಟು ಪಲಾಯನ ಮಾಡಿದರು. ರಾಜಧಾನಿ ವಾಷಿಂಗ್‌ಟನ್‌ನಲ್ಲಿ ಗಾಬರಿ ಪರಿಸ್ಥಿತಿ ಉಂಟಾಯಿತು. ದಕ್ಷಿಣ ಸಂಸ್ಥಾನಗಳಲ್ಲಿ ಹಿಗ್ಗು ಮೇರೆ ಮೀರಿತು! ಇನ್ನು ಕೆಲವು ಘಂಟೆಗಳಲ್ಲಿ ವಾಷಿಂಗ್‌ಟನ್ ಪತನವಾಗುತ್ತದೆ ಎಂದು ಎಲ್ಲ ನಿರೀಕ್ಷಿಸಿದ್ದರು. ವಾಸ್ತವವಾಗಿ, ಅನುಭವವಿಲ್ಲದ ಕಾನ್‌ಫೆಡರೇಟ್ ಸೈನಿಕರು ಸುವ್ಯವಸ್ಥಿತರಾಗಿಲ್ಲದ್ದಿದ್ದುದರಿಂದ, ಅನುಕೂಲ ಪರಿಸ್ಥಿತಿಯನ್ನು ಉಪಯೋಗಿಸಿಕೊಳ್ಳಲಾರದೆ ಅವರಿಗೆ ಜಯ ಲಭಿಸದೆ ಹೋಯಿತು. ಎರಡು ಕಡೆಗಳಲ್ಲೂ ಸಾವು-ನೋವು ಕಡಿಮೆಯಾಗಿದ್ದವು. ಈ ಕದನ ನೈತಿಕ ಸ್ಫೂರ್ತಿಯ ಮೇಲೆ ನೇರ ಪರಿಣಾಮ ಬೀರಿತು. ದಕ್ಷಿಣ ಸಂಸ್ಥಾನಗಳ ದೃಢ ವಿಶ್ವಾಸ ಹೆಚ್ಚಿತು, ಆದರೆ ಉತ್ತರ ಸಂಸ್ಥಾನಗಳ ಜನರಿಗೆ ಕಾನ್‌ಫೆಡರಸಿಯನ್ನು ನಿಗ್ರಹಿಸುವುದು ಎಂಥ ಮಹತ್ಕಾರ್ಯ ಎನ್ನುವುದರ ಅರಿವಾಗತೊಡಗಿತು.

ಬುಲ್‌ರನ್ ಕದನಾನಂತರ ಲಿಂಕನ್ ಯುದ್ಧವನ್ನು ಗೆಲ್ಲಲು ಒಂದು ಹೊಸದಾದ, ಹೆಚ್ಚು ವಿಸ್ತಾರವಾದ, ವ್ಯವಸ್ಥಿತವಾದ ಸೈನಿಕ ಕಾರ್ಯಾಚರಣೆಯನ್ನು ಜಾರಿಗೆ ತಂದನು. ಮೊದಲು ದಕ್ಷಿಣ ಸಂಸ್ಥಾನಗಳ ಎಲ್ಲ ಬಂದರುಗಳನ್ನು ಬಿಗಿಯಾದ ಕಾವಲಿನಲ್ಲಿರಿಸಿದನು. ಮಿಸ್ಸಿಸ್ಸಿಪ್ಪಿ ನದಿಯನ್ನು ಸೈನ್ಯದ ನಿಯಂತ್ರಣಕ್ಕೆ ಒಳಪಡಿಸಿದನು. ಅತಿ ಮುಖ್ಯವಾಗಿ, ವರ್ಜೀನಿಯ ಸಂಸ್ಥಾನದ ಮೇಲೆ ಆಕ್ರಮಣ ನಡೆಸಲು ರಾಜಧಾನಿ ವಾಷಿಂಗ್‌ಟನ್‌ನಲ್ಲಿ ತರಬೇತಾದ ಹೊಸ ಸೈನ್ಯವನ್ನು ಜಮಾವಣೆ ಮಾಡಿದನು. ಈ ಸೈನ್ಯವನ್ನು ನಡೆಸಲು ಮತ್ತು ಎಲ್ಲ ಫೆಡರಲ್ ಸೈನ್ಯಗಳನ್ನು ಆಜ್ಞಾಪಿಸಲು ಲಿಂಕನ್ ೨೪ ವರ್ಷಗಳ ಮೇಜರ್ ಜನರಲ್ ಜಾರ್ಜ್ ಮೆಕ್‌ಲೆಲ್ಲನ್‌ನನ್ನು ನೇಮಿಸಿದನು. ತನ್ನ ಆಜ್ಞಾಧಾರಣೆಗೆ ಒಳಪಟ್ಟ ಹೊಸ ಸೈನ್ಯಕ್ಕೆ ಮೆಕ್‌ಲೆಲ್ಲನ್ ಸೈನಿಕರಲ್ಲಿ ಒಳ್ಳೆಯ ಶಿಸ್ತು, ಸ್ಫೂರ್ತಿ ಮತ್ತು ತಮ್ಮ ಹೆಚ್ಚುಗಾರಿಕೆಯನ್ನು ಪ್ರದರ್ಶಿಸುವ ಕಾತುರವನ್ನು ಬೆಳೆಸಿದನು. ಸೈನ್ಯವನ್ನು

ವ್ಯವಸ್ಥೆಗೊಳಿಸುವುದರಲ್ಲಿ, ಆಡಳಿತ ನಡೆಸುವುದರಲ್ಲಿ ಅವನು ಶ್ಲಾಘನೀಯ ಪ್ರತಿಭೆ ಪಡೆದಿದ್ದನು ಮತ್ತು ತನ್ನ ಭವಿಷ್ಯದ ಬಗ್ಗೆ ಉನ್ನತ ಭರವಸೆ ಹೊಂದಿದ್ದನು. ಪೌರುಷಪೂರ್ಣ ಯೋಜನೆಗಳನ್ನು ಕಲ್ಪಿಸಿಕೊಳ್ಳುವುದು ಅವನಿಗೆ ಬಹಳ ಇಷ್ಟವಾಗಿತ್ತು. ಕಾನ್‌ಫೆಡರಸಿಯ ಹೃದಯದಂತಿದ್ದ ರಿಚ್‌ಮಂಡ್ ಮೇಲೆ ಮಿಂಚಿನ ದಾಳಿ ಮಾಡಿ ವಶಪಡಿಸಿಕೊಳ್ಳುವ ಮತ್ತು ಮುಂದುವರಿದು ನ್ಯಾಶ್‌ವಿಲ್ (Nashville) ಮತ್ತು ನ್ಯೂ ಆರ್ಲಿಯನ್ಸ್ (New Orleans) ಕೂಡ ಆಕ್ರಮಣ ಮಾಡುವ ಕನಸು ಕಾಣುತ್ತಿದ್ದನು. ಆದರೆ ವಾಸ್ತವವಾಗಿ ಅವನು ಬಯಸುತ್ತಿದ್ದುದು ತನ್ನ ಸೈನ್ಯಕ್ಕೆ ಹೆಚ್ಚಿನ ತರಬೇತಿ, ಸಪ್ಲೈ, ಮತ್ತು ಸರಬರಾಜು, ಕಠಿಣ ಶಿಸ್ತುಗಾರಿಕೆ ಮತ್ತು ಸೈನ್ಯ ನಡೆಸುವ ಮುನ್ನ ಎಲ್ಲ ವ್ಯವಸ್ಥೆಗಳನ್ನು ಸಮರ್ಪಕವಾಗಿ ಏರ್ಪಡಿಸುವ ಸಿಬ್ಬಂದಿ.

ರಣರಂಗದ ತೆರೆಯ ಮರೆಯಲ್ಲಿ ನಡೆದ ತಯಾರಿ

ಲಿಂಕನ್ ಜಾರಿಗೆ ತಂದ ಸುಧಾರಣೆಗಳು ಸಮರ್ಪಕವಾಗಿದ್ದವು. ಆ ವರ್ಷದ ಚಳಿಗಾಲದ ಹೊತ್ತಿಗೆ ಉತ್ತಮ ತರಬೇತಿ ಪಡೆದ ಸೈನ್ಯ ಸಿದ್ಧವಾಗಿತ್ತು. ಈ ಸೈನ್ಯ ಶಿಸ್ತು ಮತ್ತು ಭರವಸೆಗಳನ್ನು ಮೈಗೂಡಿಸಿಕೊಂಡು ಸುಸಜ್ಜಿತವಾಗಿತ್ತು. ಉತ್ತರ ಸಂಸ್ಥಾನಗಳ ಎಲ್ಲ ಕಡೆಗಳಲ್ಲೂ ಅಂಗಡಿ ಮತ್ತು ಕಾರ್ಖಾನೆಗಳು ಬಂದೂಕುಗಳನ್ನು, ಮದ್ದು ಗುಂಡುಗಳನ್ನು, ಸಾರಿಗೆ ಸಾರೋಟುಗಳನ್ನು, ಸಮವಸ್ತ್ರಗಳನ್ನು, ಷೂಗಳನ್ನು ಮತ್ತು ಯುದ್ಧಕ್ಕೆ ಬೇಕಾದ ಇತರ ವಸ್ತುಗಳನ್ನು ಉತ್ಪನ್ನ ಮಾಡುತ್ತಿದ್ದವು. ಯುದ್ಧದ ಪ್ರಾರಂಭದ ಹಂತದಲ್ಲಿ ಖಜಾನೆ ಕಾರ್ಯದರ್ಶಿಯಾಗಿದ್ದ ಸಾಲ್‌ಮನ್ ಚೇಸ್ (Salmon Chase)ನಿಗೆ ತುರ್ತು ಪರಿಸ್ಥಿತಿಯಲ್ಲಿ ಆರ್ಥಿಕ ಸಮಸ್ಯೆಗಳನ್ನು ನಿಭಾಯಿಸುವುದು ತಿಳಿಯದೆ ಸರ್ಕಾರದ ಆರ್ಥಿಕ ಅಗತ್ಯಗಳು ಮತ್ತು ಯುದ್ಧದ ಕಾಲಾವಧಿಯನ್ನು ಸರಿಯಾಗಿ ಅಂದಾಜು ಮಾಡಲಾಗದೆ ಹೋದನು. ಯುದ್ಧ ನಡೆಸಲು ಬೇಕಾಗುವಷ್ಟು ಹಣವನ್ನು ಅವನು ಕಾಂಗ್ರೆಸ್‌ನಿಂದ ಪಡೆಯಲಿಲ್ಲ. ಸರ್ಕಾರಕ್ಕೆ ಹಣದ ಕೊರತೆ ಉಂಟಾಗಿ ೧೮೬೧ರ ಆಗಸ್ಟ್ ತಿಂಗಳಲ್ಲಿ ಆದಾಯ ತೆರಿಗೆ ಕಾಯಿದೆಯನ್ನು ಜಾರಿಗೆ ತಂದಿತು – ೮೦೦ ಡಾಲರ್ ಮೇಲಿನ ಆದಾಯಗಳಿಗೆ ಶೇಕಡಾ ಮೂರು ಡಾಲರ್ ತೆರಿಗೆ ವಿಧಿಸಲಾಯಿತು. ೧೦೦೦೦ಕ್ಕಿಂತ ಹೆಚ್ಚಿನ ಆದಾಯಗಳ ಮೇಲೆ ಶೇಕಡಾ ಹತ್ತು ಡಾಲರ್ ತೆರಿಗೆ ವಿಧಿಸಲಾಯಿತು. ಕಾಂಗ್ರೆಸ್ ೧೫೦ ಮಿಲಿಯನ್ ಡಾಲರ್ ಸಾಲ ಎತ್ತುವ ಮಸೂದೆಯನ್ನು ಅಂಗೀಕರಿಸಿತು. ಯುದ್ಧ ಮುಂದುವರಿದು ಖರ್ಚು ವೆಚ್ಚಗಳು ಹೆಚ್ಚಿದಂತೆಲ್ಲ ಎಲ್ಲ ಉತ್ಪಾದಿಸಿದ ವಸ್ತು ಮತ್ತು ಸೇವೆಗಳ (products and services) ಮೇಲೆ ಸುಂಕ ಹಾಕಲಾಯಿತು.

ಕೆಲವು ವ್ಯವಹಾರ ನಡೆಸಲು ಕಾಗದದ ಹಣವನ್ನು ಅಚ್ಚು ಹಾಕಬೇಕಾಯಿತು. ಹಸಿರು ಬಣ್ಣದ ಈ ಕಾಗದದ ಹಣವನ್ನು ನಾಣ್ಯಗಳಿಗೆ ಪರಿವರ್ತಿಸಲು ಸಾಧ್ಯವಿರಲಿಲ್ಲ. ಯುದ್ಧದ ಅವಧಿಯಲ್ಲಿ ೪೩೧ ಮಿಲಿಯನ್ ಡಾಲರ್ ಮೊತ್ತದ ಹಣವನ್ನು ಈ 'ಗ್ರೀನ್

ಬ್ಯಾಕ್' (Green Back) ಕಾಗದಹಣದ ರೂಪದಲ್ಲಿ ಉಪಯೋಗಿಸಲಾಯಿತು. ನಾಣ್ಯಗಳಿಗೆ ಪರಿವರ್ತಿಸಬಹುದಾದ ಹಳದಿ ಬಣ್ಣದ ಕಾಗದಹಣವನ್ನು ಹೆಚ್ಚಿನ ಪ್ರಮಾಣದಲ್ಲಿ ಅಚ್ಚು ಹಾಕಿ ಯುದ್ಧ ನಡೆಯುತ್ತಿದ್ದ ಅವಧಿಯಲ್ಲಿ ಚಲಾವಣೆಗೆ ತರಲಾಯಿತು. ಈ ಹಣದ ಚಲಾವಣೆಯಿಂದ ಹಣದುಬ್ಬರ ಹೆಚ್ಚಿತಾದರೂ ಅವುಗಳ ಚಲಾವಣೆ ಅನಿವಾರ್ಯವಾಗಿತ್ತು. ಯುದ್ಧದ ಅವಧಿಯಲ್ಲಿ ಫೆಡರಲ್ ಸರ್ಕಾರ ೨.೨ ಬಿಲಿಯನ್ ಡಾಲರ್‌ಗಳ ಸಾಲ ಎತ್ತಿತು. ಮೇಲಾಗಿ ೬೬೭ ಮಿಲಿಯನ್ ಡಾಲರ್‌ಗಳನ್ನು ತೆರಿಗೆಯ ರೂಪದಲ್ಲಿ ಸರ್ಕಾರ ಪಡೆಯಿತು. ಒಟ್ಟಿನಲ್ಲಿ ಅಪಾರ ಮೊತ್ತದ ಸಾಲ ಮತ್ತು ಹಣದುಬ್ಬರ ದುಬಾರಿ ಬೆಲೆಗೆ ಕಾರಣವಾದರೂ ಆ ಸಂದರ್ಭದಲ್ಲಿ ಇದು ಬೇಜವಾಬ್ದಾರಿ ವ್ಯವಸ್ಥೆಯಾಗಿರಲಿಲ್ಲ. ದೇಶ ಮುಖ್ಯವಾಗಿ ವ್ಯವಸಾಯದ ಮೇಲೆ ಅವಲಂಬಿಸಿತ್ತು. ಜನರ ನಗದು ಹಣ ಸಂಪಾದನೆ ಕೆಳಮಟ್ಟದಲ್ಲಿತ್ತು. ಆದ್ದರಿಂದ ಜನರು ಹೆಚ್ಚಿನ ತೆರಿಗೆ ಹೊರುವುದು ಸಾಧ್ಯವಿರಲಿಲ್ಲ. ಮುಂದಿನ ಪೀಳಿಗೆಯ ಅಮೆರಿಕನ್ನರು ಯುದ್ಧದ ಖರ್ಚು ವೆಚ್ಚಗಳನ್ನು ತುಂಬಿಸುವ ಜವಾಬ್ದಾರಿಯನ್ನು ಹೊರಬೇಕಾದುದು ನ್ಯಾಯಬದ್ಧವಾದುದು ಎಂದು ಯುದ್ಧದಲ್ಲಿ ಹೋರಾಡಿ, ಸಾವು-ನೋವು ಅನುಭವಿಸಿದ ಅಮೆರಿಕನ್ನರು ವಾದಿಸಿದರು.

ಪಕ್ಷ ರಾಜಕೀಯ ಯುದ್ಧದ ಕಾಲದಲ್ಲಿ ಬದಲಾಯಿತು. ಕಾಂಗ್ರೆಸ್‌ನ ಎರಡು ಮನೆಗಳು ರಿಪಬ್ಲಿಕನ್ ಪಕ್ಷದ ಪ್ರಭಾವಕ್ಕೊಳಗಾಗಿದ್ದವು. ಡೆಮೊಕ್ರಾಟಿಕ್ ಅಲ್ಪಸಂಖ್ಯಾತರು ಯುದ್ಧವನ್ನು ಬೆಂಬಲಿಸಿದರು. ಗುಲಾಮಗಿರಿ ಮತ್ತು ಬಿಳಿಯರ-ಕರಿಯರ ಸಮಸ್ಯೆಗಳು ಚರ್ಚೆಗೆ ಬಂದಾಗ ಮಾತ್ರ ಎರಡು ಪಕ್ಷಗಳ ನಡುವೆ ಚಕಮಕಿ ಉಂಟಾಗುತ್ತಿತ್ತು. ಡೆಮೊಕ್ರಾಟರು ಸಂಪ್ರದಾಯಸ್ಥ ನಿಲುವು ತಳೆಯುತ್ತಿದ್ದರು; ರಿಪಬ್ಲಿಕನ್ನರು ಕೆಲವರು ಮಧ್ಯವರ್ತಿಗಳ (moderates) ಮತ್ತು ಇತರರು ತೀವ್ರಗಾಮಿಗಳ (radicals) ಗುಂಪುಗಳಿಗೆ ಸೇರಿದ್ದರು. ಯುದ್ಧ ಮುಂದುವರಿದಂತೆ ತೀವ್ರಗಾಮಿಗಳ ತಂಡದ ಪ್ರಭಾವ ಹೆಚ್ಚುತ್ತ ಹೋಯಿತು. ೧೮೬೧ರಲ್ಲಿ ಚಾರ್ಲ್ಸ್ ಸಮ್ನರ್ (Charles Sumner) ಪ್ರಮುಖ ಸೆನೆಟರ್ ಆಗಿದ್ದನು. ಇವನು ಗುಲಾಮರ ಒಡೆಯರನ್ನು ಕಂಡರೆ ವಿಷ ಕಾರುತ್ತಿದ್ದನು. ಕಾಂಗ್ರೆಸ್‌ನಲ್ಲಿ ಪೆನ್ಸಿಲ್‌ವೇನಿಯಾದ ಥಾಡ್ಡಿಯಸ್ ಸ್ಟೀವನ್ಸ್ ಉದಯೋನ್ಮುಖ ಪ್ರಭಾವಶಾಲಿ ವ್ಯಕ್ತಿಯಾಗಿದ್ದನು. ಸಮ್ನರ್ ಮತ್ತು ಸ್ಟೀವನ್ಸ್ ಗುಲಾಮರ ಸಮಸ್ಯೆಯ ಬಗ್ಗೆ ತೀವ್ರ ವಾಮಪಂಥೀಯ ಅಭಿಪ್ರಾಯಗಳನ್ನು ಹೊಂದಿದ್ದರು. ಅವರು ಗುಲಾಮರ ವಿಮೋಚನೆ ಮಾತ್ರವಲ್ಲ; ಅವರಿಗೆ ಪೂರ್ಣ ರಾಜಕೀಯ ಮತ್ತು ನಾಗರಿಕ ಹಕ್ಕುಗಳನ್ನು ಕೊಡಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಮಧ್ಯಮವರ್ತಿಗಳಾಗಿದ್ದ ರಿಪಬ್ಲಿಕನ್ನರು ಕರಿಯರನ್ನು ಸಮಾನರಂತೆ ನಡೆಸಿಕೊಳ್ಳುವುದನ್ನು ಮತ್ತು ಗುಲಾಮರ ವಿಮೋಚನೆಯನ್ನು ಯುದ್ಧದ ಮುಖ್ಯ ಉದ್ದೇಶವನ್ನಾಗಿ ಮಾಡುವುದನ್ನು ಆವೇಶಪೂರ್ಣವಾಗಿ ನಿರಾಕರಿಸಿದರು. ತೀವ್ರಗಾಮಿಗಳಲ್ಲಿ ಕೆಲವರು ಕರಿಯರ ಮತ್ತು

ಬಿಳಿಯರ ಸಮಸ್ಯೆಗಳ ಬಗ್ಗೆ ಸಮ್‌ನರ್ ಮತ್ತು ಸ್ಟೀವನ್ಸ್‌ರ ಅಭಿಪ್ರಾಯಗಳನ್ನು ತಿರಸ್ಕರಿಸಿದರು.

ಒಹಾಯೊ ಸೆನೆಟರ್ ಬೆಂಜಮಿನ್ ವೇಡ್ (Benjamin Wade)ಗುಲಾಮಗಿರಿಯನ್ನು ವಿರೋಧಿಸಿದರೂ ಕರಿಯರ ಬಗ್ಗೆ ಪೂರ್ವಾಗ್ರಹಪೀಡಿತನಾಗಿದ್ದನು. ಅವನು ಕರಿಯರನ್ನು ತಿರಸ್ಕಾರ ಭಾವದಿಂದ 'ನಿಗ್ಗರ್ಸ್' (niggers) ಎಂದೇ ಕರೆಯುತ್ತಿದ್ದ. ಇವನ ವಕ್ರ ಮನೋಭಾವವನ್ನು ಅವನ ಹೇಳಿಕೆ ಸ್ಪಷ್ಟ ಪಡಿಸುತ್ತದೆ: 'ನೀಗ್ರೋಗಳು ವಿಶಿಷ್ಟವಾದ ದುರ್ನಾತ ಹೊಂದಿರುವುದರಿಂದ ವೈಯಕ್ತಿಕವಾಗಿ ನಾನು ಅವರಿಂದ ಆದಷ್ಟು ದೂರವಿರಲು ಬಯಸುತ್ತೇನೆ'. ಈ ಮನೋಭಾವ ಆಗ ಬಿಳಿಯರಲ್ಲಿ ಸರ್ವೇಸಾಮಾನ್ಯವಾಗಿತ್ತು. ಹೀಗಿದ್ದರೂ ವೇಡ್ 'ಇತರರಿಗೆ ಅನ್ಯಾಯಮಾಡುವ ಹಕ್ಕು ಯಾರಿಗೂ ಇಲ್ಲ, ನೀಗ್ರೋಗಳು ಬಿಳಿಯರಷ್ಟೇ ಬುದ್ಧವಂತರು, ಆದ್ದರಿಂದ ಅವರನ್ನು ವಿಮೋಚನೆ ಮಾಡುವುದಲ್ಲದೆ ಅವರಿಗೆ ಪೂರ್ಣ ರಾಜಕೀಯ ಸಮಾನತೆ ಕೊಡಬೇಕು' ಎಂದು ಒತ್ತಿ ಹೇಳಿದನು. ಈ ಎಲ್ಲ ಅಭಿಪ್ರಾಯಗಳಿಗೂ ತೀರ ವ್ಯತಿರಿಕ್ತವಾದ, ಅತಿರೇಕದ ಅಂಚಿಗೆ ಸೇರಿದ್ದ 'ಶಾಂತಿ ಪಕ್ಷ'ದಲ್ಲಿ ಡೆಮೊಕ್ರಾಟರು ಹೆಚ್ಚಾಗಿದ್ದು, ಗಡಿ ಪ್ರದೇಶ ಸಂಸ್ಥಾನಗಳಾದ ಒಹಾಯೊ, ಇಂಡಿಯಾನ ಮತ್ತು ಇಲಿನಾಯ್ ಡೆಮೊಕ್ರಾಟರ ಪ್ರಾಭಾವಕ್ಕೆ ಒಳಗಾಗಿದ್ದವು. ಈ ಡೆಮೊಕ್ರಾಟರನ್ನು ವಿಷದ ಹಾವುಗಳಿಗೆ ಹೋಲಿಸಿ 'ಕಾಪರ್ ಹೆಡ್ಸ್' (copper heads) ಎಂದು ಕರೆಯುತ್ತಿದ್ದರು. ಇದಕ್ಕೆ ಕಾರಣ ಇವರು ಯುದ್ಧಕ್ಕೆ ಯಾವ ರೀತಿಯ ಬೆಂಬಲ ವನ್ನೂ ಕೊಡದೆ, ಯುದ್ಧದ ಅವಶ್ಯಕತೆಯನ್ನು ನಿರಾಕರಿಸಿದರು. ಆದರೂ ಇವರು ವಿಶ್ವಾಸಘಾತುಕರಾಗಿರಲಿಲ್ಲ. ಯುದ್ಧದಲ್ಲಿ ಸಾವಿರಾರು ಜನರು ತಮ್ಮ ಪ್ರಾಣ ಒತ್ತೆಯಿಟ್ಟು ಹೋರಾಡುತ್ತಿರುವಾಗ ಈ ಶಾಂತಿ ಪಕ್ಷದವರ ಚಟುವಟಿಕೆಗಳು ಔತ್ತರೇಯರನ್ನು (northerners) ಕೋಪೋದ್ರಿಕ್ತರನ್ನಾಗಿ ಮಾಡಿದವು.

ಯುದ್ಧ ವಿರೋಧಿಗಳನ್ನು (dissenters)ಲಿಂಕನ್ ಕೆಲವು ಬಾರಿ ಕಠಿಣವಾಗಿ ಶಿಕ್ಷಿಸುತ್ತಿ ದ್ದನು. ಮತ್ತೆ ಕೆಲವು ಬಾರಿ ಅವರ ಬಗ್ಗೆ ತಾಳ್ಮೆಯಿಂದಿರುತ್ತಿದ್ದನು. ಆಪತ್ತು ಸಂಭವಿಸ ಬಹುದಾದ ಪ್ರದೇಶದಲ್ಲಿ ಅವನು ಪ್ರಜೆಗಳ ಹಕ್ಕನ್ನು ತಾತ್ಕಾಲಿಕವಾಗಿ ತೆಗೆದುಹಾಕಿ, ಯುದ್ಧೋಚಿತ ಕಾಯಿದೆ (martial law)ಯನ್ನು ಜಾರಿಗೆ ತಂದನು. ಲಿಂಕನ್ ಹೇಳಿದಂತೆ 'ನನ್ನ ಉದ್ದೇಶ ಶಿಕ್ಷಿಸುವುದಲ್ಲ, ಆಗಬಹುದಾದ ಅನಾಹುತವನ್ನು ತಪ್ಪಿಸಿವುದು.' ಈ ಹೇಳಿಕೆಯಂತೆ ಜನರನ್ನು ರಾಜಕೀಯ ಕಾರಣಗಳಿಗಾಗಿ ಮನಸ್ಸಿಗೆ ಬಂದಂತೆ ದಸ್ತಗಿರಿ ಮಾಡುತ್ತಿರಲಿಲ್ಲ. ಯುದ್ಧ ಕಾಲದಲ್ಲಿ ಕೂಡ ಚುನಾವಣೆಗಳು ಮುಕ್ತ ತಾವರಣದಲ್ಲಿ ನಡೆಯುತ್ತಿದ್ದವು. ಇದೇ ಸಮಯದಲ್ಲಿ ಸರ್ಕಾರದ ಶತ್ರುವಾಗಿದ್ದ ವ್ಯಕ್ತಿ ಎಂದರೆ ಕುಖ್ಯಾತನಾಗಿದ್ದ ಒಹಾಯೊ ನಿವಾಸಿ ಕ್ಲೆಮೆಂಟ್ ವಾಲ್ಲಾನ್‌ಡಿಗ್‌ಹ್ಯಾಮ್ (Clement Vallandigham) ೧೮೬೨ರಲ್ಲಿ ಅವನು ಯುದ್ಧವನ್ನು ಸಂಧಾನದ ಮೂಲಕ ಕೂಡಲೆ

ನಿಲ್ಲಿಸಬೇಕೆಂದು ಭಾಷಣ ಮಾಡಿದ್ದಕ್ಕಾಗಿ ಸೈನಿಕರು ಅವನನ್ನು ಹಿಡಿದು ಸೆರೆಯಲ್ಲಿಟ್ಟಿದ್ದರು. ಅವನ ಬೆಂಬಲಿಗರು ಆತನ ಬಿಡುಗಡೆಗಾಗಿ ಪ್ರದರ್ಶನ ನಡೆಸಿದರು. ಲಿಂಕನ್ ಅವರನ್ನು ಸೆರೆಯಿಂದ ಬಿಡಿಸಿ ಕಾನ್‌ಫೆಡರೇಟ್ ಸಂಸ್ಥಾನಕ್ಕೆ ಗಡೀಪಾರು ಮಾಡಿದನು. ನಂತರ ಇವನು ದಕ್ಷಿಣದಿಂದ ಉತ್ತರ ಸಂಸ್ಥಾನಕ್ಕೆ ನುಸುಳಿ ಬಂದು ೧೮೬೪ರ ಚುನಾವಣೆಯಲ್ಲಿ ಲಿಂಕನ್ ವಿರುದ್ಧವಾಗಿ ಪ್ರಚಾರ ಮಾಡಿದನು.

ದಕ್ಷಿಣ ಸಂಸ್ಥಾನಗಳು ತಮ್ಮ ಯುದ್ಧದ ಕಾರ್ಯಾಚರಣೆಗಳನ್ನು ಬುಲ್ ರನ್ ಕದನಾನಂತರ ಪರಿಷ್ಕರಿಸಿದರು. ಅಧ್ಯಕ್ಷ ಡೇವಿಸ್ ಮುಖ್ಯವಾಗಿ ರಕ್ಷಣೆಯ ಮೇಲೆ ಅವಲಂಬಿಸಿದ್ದನು. ದಾಳಿ ಮಾಡುವ ಸೈನ್ಯವನ್ನು ತಡೆಗಟ್ಟಿ ಮುಂದುವರಿಯಲು ಬಿಡದೆ ಆಕ್ರಮಣಕಾರರ ಯುದ್ಧ ಮಾಡುವ ಸ್ಫೂರ್ತಿಯನ್ನು ಕ್ಷೀಣಿಸುವಂತೆ ಮಾಡುವುದು ಅವನ ಯುದ್ಧ ಕೌಶಲ್ಯವಾಗಿತ್ತು. ಕಾನ್‌ಫೆಡರಸಿ ಎರಡು ರಾಜಕೀಯ ಪಕ್ಷಗಳನ್ನು ಹೊಂದಿರದೆ ಹೋದರೂ ಅವರಲ್ಲಿ ಬೇಕಾದಷ್ಟು ಒಳಜಗಳ, ರಾಜಕೀಯ ಭಿನ್ನಾಭಿಪ್ರಾಯ ಮತ್ತು ವಾದವಿವಾದಗಳು ಡೇವಿಸ್‌ನ ಅಧಿಕಾರದ ಅವಧಿಯಲ್ಲಿ ನಡೆಯುತ್ತಲೇ ಇದ್ದವು. ಡೇವಿಸ್ ಸುಲಭವಲ್ಲಿ ಜನರನ್ನು ಎದುರು ಹಾಕಿಕೊಳ್ಳುತ್ತಿದ್ದನು. ಸಂಸ್ಥಾನಗಳ ಸ್ವಾಯತ್ತತೆ ಮತ್ತು ಹಕ್ಕುಗಳು ಹಾಗೂ ವ್ಯಕ್ತಿ ಸ್ವಾತಂತ್ರ್ಯ, ಕೊನೆಯಿಲ್ಲದ ತೊಂದರೆಗಳನ್ನು ತಂದೊಡ್ಡಿದವು. ಅವನು ಕೆಲವು ಕಡೆಗಳಲ್ಲಿ ಜನರ ಹಕ್ಕುಗಳನ್ನು ತಾತ್ಕಾಲಿಕವಾಗಿ ತೆಗೆದುಹಾಕಲು ಪ್ರಯತ್ನಿಸಿದಾಗ ಪ್ರಬಲವಾದ ವಿರೋಧವನ್ನು ಎದುರಿಸಬೇಕಾಯಿತು. ಯುದ್ಧಕ್ಕೆ ಹಣ ಹೊಂದಿಸುವುದು ಕಾನ್‌ಫೆಡರಸಿಯನ್ನು ಕಡೆಯ ತನಕ ತೀವ್ರವಾಗಿ ಕಾಡುತ್ತಿದ್ದ ಸಮಸ್ಯೆಯಾಗಿತ್ತು. ಫೆಡರಲ್ ನೌಕಾದಳ ಎಲ್ಲ ಬಂದರುಗಳನ್ನು ಸುತ್ತುವರಿದು ಅಡ್ಡಗಟ್ಟಿರುವುದರಿಂದ ಹೊರದೇಶಗಳೊಡನೆ ವ್ಯಾಪಾರ ನಿಂತುಹೋಗಿ ಸುಂಕದಿಂದ ಬರುತ್ತಿದ್ದ ಆದಾಯ ಬತ್ತಿಹೋಯಿತು. ಕಾನ್‌ಫೆಡರೇಟ್ ಕಾಂಗ್ರೆಸ್ ಆಗ ಒಂದು ಆದಾಯ ತೆರಿಗೆಯ ಜೊತೆಗೆ ಅನೇಕ ತರದ ಸುಂಕಗಳನ್ನು ಜಾರಿಗೆ ತಂದಿತು. ಆದರೆ ಬಹಳ ಪರಿಣಾಮಕಾರಿಯಾದ ತೆರಿಗೆ ಎಂದರೆ ರೈತರ ಬೆಳೆಯ ಮೇಲೆ ವಿಧಿಸಿದ್ದು. ಪ್ರತಿಯೊಬ್ಬ ರೈತನೂ ತನ್ನ ಬೆಳೆಯ ೧/೧೦ ಭಾಗವನ್ನು ತೆರಿಗೆಯ ರೂಪದಲ್ಲಿ ಕೊಡಬೇಕಾಗಿತ್ತು. ದಕ್ಷಿಣ ಸಂಸ್ಥಾನಗಳು ಸಾಲ ಸಿಗಬಹುದಾದ ಕಡೆಗಳಲ್ಲೆಲ್ಲ ಸಾಲ ಮಾಡಿದವು. ಸಾಲದ ಒಟ್ಟು ಮೊತ್ತ ೭೧೨ ಮಿಲಿಯನ್ ಡಾಲರ್‌ಗಳು. ಬಂದರುಗಳಿಗೆ ತಡೆಹಾಕಿದುದರಿಂದ ರಫ್ತು ಮಾಡಲಾಗದ ಹತ್ತಿಯನ್ನು ಅಡವಿಟ್ಟು ಯೂರೋಪಿಯನ್ ದೇಶಗಳಿಂದ ಸಾಲ ಪಡೆದರು. ಎಲ್ಲಾ ವ್ಯವಹಾರಗಳು ಮುಖ್ಯವಾಗಿ ಉಪಯೋಗಿಸುತ್ತಿದ್ದುದು ಕಾಗದದ ಹಣ. ಅವರು,ಅಚ್ಚು ಹಾಕಿದ್ದ ಕಾಗದದ ಹಣ ೧.೫ ಬಿಲಿಯನ್ ಡಾಲರ್‌ಗಳಷ್ಟಾಗಿತ್ತು. ಕಾನ್‌ಫೆಡರಸಿ ಸೈನ್ಯ ಸೋಲು ಅನುಭವಿಸುತ್ತ ಬಂದಂತೆಲ್ಲ ಆರ್ಥಿಕ ವ್ಯವಸ್ಥೆಗಳ ತಳ ಕಳಚಿಬಿದ್ದು ಕಾನ್‌ಫೆಡರೇಟ್ ಡಾಲರಿನ ಬೆಲೆ ಪಾತಾಳಕ್ಕಿಳಿಯಿತು. ಯುದ್ಧಕ್ಕೆ ಬೇಕಾದ ಸಾಮಾನು ಸರಂಜಾಮುಗಳನ್ನು ತಾವೇ ಉತ್ಪಾದನೆ ಮಾಡಲು ಅಗತ್ಯವಾದ ಕೈಗಾರಿಕೆಗಳ

ಕೊರತೆಯಿಂದಾಗಿ ಸೈನ್ಯಕ್ಕೆ ಬೇಕಾದ ವಸ್ತುಗಳನ್ನು ಒದಗಿಸುವುದರಲ್ಲಿ ದಕ್ಷಿಣದ ಎಲ್ಲಾ ಸಂಪತ್ತು ಮುಗಿಯುವ ಹಂತ ಮುಟ್ಟಿತ್ತು. ಬಂದೂಕು ಮತ್ತು ಇತರ ಆಯುಧಗಳನ್ನು ಯೂರೋಪಿನಿಂದ ಕಳ್ಳತನದಲ್ಲಿ ತರಿಸಿಕೊಳ್ಳುತ್ತಿದ್ದರು. ಬಂದರುಗಳ ಮೇಲೆ ಕಾವಲು ಬಿಗಿಯಾದಂತೆ ಯೂರೋಪಿನಿಂದ ಯುದ್ಧ ಸಾಮಗ್ರಿಗಳನ್ನು ತರಿಸಿಕೊಳ್ಳುವುದು ಕಷ್ಟವಾಗುತ್ತ ಬಂತು. ಕಾನ್‌ಫೆಡರೇಟರು ಕೆಲವು ಮದ್ದುಗುಂಡುಗಳನ್ನು ತಯಾರಿಸುವ ಕೇಂದ್ರಗಳನ್ನು ಸ್ಥಾಪಿಸಿದರು. ಉತ್ತರದವರ ಸೈನ್ಯಕ್ಕೆ ಸೇರಿದ ಆಯುಧ ದಾಸ್ತಾನುಗಳನ್ನು ಕಾನ್‌ಫೆಡರೇಟರು ವಶಪಡಿಸಿಕೊಂಡರು. ಆದ್ದರಿಂದ ಕಾನ್‌ಫೆಡರೇಟರುಗಳಿಗೆ ಮದ್ದುಗುಂಡುಗಳ, ಬಂದೂಕುಗಳ ಮತ್ತು ಸರಕು ಸಾಮಗ್ರಿಗಳ ಕೊರತೆ ಇರಲಿಲ್ಲ. ಅವರಿಗೆ ಇದ್ದ ದೊಡ್ಡ ಕೊರತೆ ಎಂದರೆ ಸಮವಸ್ತ್ರ ಮತ್ತು ಷೂಗಳದ್ದು!

ಹೊರದೇಶಗಳೊಡನೆ ಸಂಪರ್ಕ ಮತ್ತು ವ್ಯವಹಾರಗಳು ಕಾನ್‌ಫೆಡರೇಟರುಗಳಿಗೆ ಬಹಳ ಮುಖ್ಯವಾಗಿತ್ತು. ಹತ್ತಿಯ ಅಗತ್ಯದಿಂದ ಹೊರದೇಶಗಳು ಕಾನ್‌ಫೆಡರೇಟರುಗಳಿಗೆ ಸ್ನೇಹ ಹಸ್ತ ನೀಡುತ್ತಾರೆ ಎಂದು ನಂಬಿದ್ದು ಸುಳ್ಳಾಯಿತು. ಅಮೆರಿಕ ಛಿದ್ರಗೊಂಡು ಅವಸಾನಗೊಳ್ಳುವುದನ್ನು ಕೆಲವು ದೇಶಗಳು ಬಯಸಿದ್ದರೂ ಯಾವ ದೇಶವೂ ಕಾನ್‌ಫೆಡರಸಿಯನ್ನು ಅನುಮೋದಿಸಿ ಬೆಂಬಲಿಸಲು ತಯಾರಿರಲಿಲ್ಲ. ಹತ್ತಿಯ ರಫ್ತು ನಿಂತುಹೋದುದರಿಂದ ಇಂಗ್ಲೆಂಡ್ ಕಾನ್‌ಫೆಡರಸಿಯ ಯುದ್ಧದಲ್ಲಿ ಭಾಗವಹಿಸಬಹುದು ಎಂದು ಊಹಿಸಿದ್ದು ಬರಿ ಊಹೆಯಾಗಿಯೇ ಉಳಿಯಿತು. ಇಂಗ್ಲೆಂಡ್‌ಗೆ ಕಾನ್‌ಫೆಡರಸಿಗೆ ಸಹಾಯ ಮಾಡುವ ಮನಸ್ಸಿದ್ದರೂ ಅದರ ಪರಿಣಾಮದ ಭೀಕರತೆಯ ಅರಿವಾಗಿ ಬೇರೆ ಮಾರ್ಗವಿಲ್ಲದೆ ತಟಸ್ಥ ನೀತಿಯನ್ನು ಅನುಸರಿಸಿತು. ಉತ್ತರದ ನೌಕಾದಳ ಬಂದರುಗಳನ್ನು ತಡೆಗಟ್ಟಿದ್ದನ್ನು ಬ್ರಿಟಿಷ್ ನೌಕಾದಳ [illegible] ವ್ಯಾಪಾರ ನೌಕೆಗಳು ಅಡೆತಡೆಯಿಲ್ಲದೆ ದಕ್ಷಿಣದ ಬಂದರುಗಳಿಗೆ ಬಂದು ಹೋಗಬಹುದು ಎಂದು ಯೋಚಿಸಿದ್ದು ಕೈಗೂಡಲಿಲ್ಲ. ಆ ವರ್ಷ ಇಂಗ್ಲೆಂಡಿನಲ್ಲಿ ಗೋಧಿ ಬೆಳೆ ನಾಶವಾದದ್ದರಿಂದ ಅಮೆರಿಕದ ಉತ್ತರ ಸಂಸ್ಥಾನಗಳಿಂದ ಗೋಧಿಯನ್ನು ಆಮದು ಮಾಡಿಕೊಂಡರು. ಅಂತರ್ಯುದ್ಧದ ಅವಧಿಯಲ್ಲಿ ಅನೇಕ ಸಂದರ್ಭಗಳು ಇಂಗ್ಲೆಂಡ್ ಮತ್ತು ಉತ್ತರ ಸಂಸ್ಥಾನಗಳ ನಡುವೆ ಸಂಘರ್ಷಣೆ ಉಂಟಾಗುವ ಪರಿಸ್ಥಿತಿಯನ್ನು ಸೃಷ್ಟಿಸಿದ್ದವು. ಲಿಂಕನ್ ಕುಶಲತೆಯಿಂದ ಅವುಗಳನ್ನು ಪರಿಹರಿಸಿದ್ದನು. ಇಂಗ್ಲೆಂಡಿನೊಡನೆ ಯುದ್ಧವಾಗುವ ಸಾಧ್ಯತೆಯನ್ನು ಸಮಯೋಚಿತವಾಗಿ ಲಿಂಕನ್ ತಪ್ಪಿಸಿದನು. ನವೆಂಬರ್ ೧೮೬೧ರಲ್ಲಿ ಅಮೆರಿಕನ್ ಯುದ್ಧ ನೌಕೆ 'ಸಾನ್ ಹೆಸಿಂಟೋ' (San Jacinto) ಬ್ರಿಟಿಷ್ ಹಡಗು 'ಟ್ರೆಂಟ್' (Trent)ನ್ನು ಸಮುದ್ರ ಮಾರ್ಗದಲ್ಲಿ ತಡೆದು ನಿಲ್ಲಿಸಿ ಅದರಲ್ಲಿ ಪ್ರಯಾಣ ಮಾಡುತ್ತಿದ್ದ ಕಾನ್‌ಫೆಡರೇಟ್ ರಾಯಭಾರಿಗಳಾದ ಜೇಮ್ಸ್ ಮೇಸನ್ (James Mason) ಮತ್ತು ಜಾನ್ ಸ್ಲೈಡೆಲ್ (John Slidell)ಇಬ್ಬರನ್ನೂ ಬಲತ್ಕಾರವಾಗಿ ವಶಕ್ಕೆ ತೆಗೆದುಕೊಂಡರು. ಈ ಕೃತ್ಯ ಅಂತರರಾಷ್ಟ್ರೀಯ ಕಾಯಿದೆಗೆ ವಿರುದ್ಧವಾಗಿದ್ದು ಯುದ್ಧಕ್ಕೆ ಕಾರಣವಾಗುವ

ದರಲ್ಲಿತ್ತು, ಅಷ್ಟರಲ್ಲಿ ಲಿಂಕನ್ ಅವರಿಬ್ಬರನ್ನು ಬಿಡುಗಡೆ ಮಾಡಿ ಸಂಘರ್ಷಣೆಯಾಗುವು ದನ್ನು ತಪ್ಪಿಸಿದನು. ೧೮೬೨ರಲ್ಲಿ ಇಂಗ್ಲೆಂಡ್ ಕಂಪನಿಯವರು ಖಾಸಗಿಯಾಗಿ ಎರಡು ಯುದ್ಧ ನೌಕೆಗಳನ್ನು ಕಾನ್‌ಫೆಡರೆಸಿಗಾಗಿ ತಯಾರಿಸಿದರು. ಇಂಗ್ಲೆಂಡಿನಿಂದ ಅವುಗಳನ್ನು ರವಾನಿಸುವ ಸಿದ್ಧತೆಗಳು ಪೂರ್ಣಗೊಂಡವು. ಆಗ ಲಿಂಕನ್ ಆ ನೌಕೆಗಳನ್ನು ಕಾನ್‌ಫೆಡರೆಸಿ ಯವರಿಗೆ ತಲುಪಿಸಿದರೆ ಇಂಗ್ಲೆಂಡ್ ಮೇಲೆ ಯುದ್ಧ ಸಾರುವುದಾಗಿ ಎಚ್ಚರಿಕೆ ನೀಡಿದನು. ಬ್ರಿಟಿಷ್ ಸರ್ಕಾರ ಆ ನೌಕೆಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದರಿಂದ ಆ ಹಗರಣ ಅಲ್ಲಿಗೆ ಮುಕ್ತಾಯವಾಯಿತು. ಅಂತರ್ಯುದ್ಧದಲ್ಲಿ ಉತ್ತರ ಸಂಸ್ಥಾನಗಳು ಗೆಲ್ಲುವುದು ಖಚಿತಗೊಂಡಾಗ ಗೆದ್ದೆತ್ತಿನ ಬಾಲ ಹಿಡಿಯುವವರಂತೆ ಬ್ರಿಟಿಷರು ಉತ್ತರದವರ ಕಡೆ ವಾಲಿದರು.

ಅಮೆರಿಕ ಪಶ್ಚಿಮ ಪ್ರಾಂತಕ್ಕೆ ಅಂತರ್ಯುದ್ಧದ ಅಗ್ನಿಸ್ಪರ್ಶ

ಬುಲ್ ರನ್ ಕದನಾನಂತರ ೧೮೬೨ರವರೆಗೂ ಯಾವ ದೊಡ್ಡ ಕಾಳಗವೂ ನಡೆಯಲಿಲ್ಲ. ಈ ಕಡೆ ರಾಜಧಾನಿಯ ಸಮೀಪದಲ್ಲಿ ಮೆಕ್‌ಲೆಲ್ಲನ್ (McClellan) ರಿಚ್‌ಮಂಡ್ ಮೇಲೆ ದಾಳಿ ಮಾಡಲು ಸನ್ನದ್ಧನಾಗುತ್ತಿದ್ದ ಸಮಯದಲ್ಲಿ ಆ ಕಡೆ ಪಶ್ಚಿಮ ಪ್ರಾಂತದಲ್ಲಿ ಫೆಡರಲ್ ಸೈನ್ಯದ ಕಾರ್ಯಾಚರಣೆಯನ್ನು ನಿರ್ದೇಶಿಸುತ್ತಿದ್ದವನು ಅಸ್ತವ್ಯಸ್ತ ಉಡುಪಿನ, ಚುಟ್ಟಾ ಸೇದುವ, ವೆಸ್ಟ್ ಪಾಯಿಂಟಿಗನಾದ ಯೂಲಿಸೆಸ್ ಗ್ರಾಂಟ್. (Ulysses Grant) ಅವನು ತನ್ನ ಸೈನ್ಯದ ನೆಲೆಯಾಗಿದ್ದ ಇಲಿನಾಯ್ ಸಂಸ್ಥಾನದ ಕೈರೊನಿಂದ ಹೊರಟು ಟೆನ್ನಸ್ಸೀ ಮೇಲೆ ದಾಳಿ ಮಾಡಿದನು. ಅವನು ಉತ್ತರ ಟೆನ್ನಸ್ಸೀಯ ಹೆನ್ರಿ ಮತ್ತು ಡಾನೆಲ್‌ಸನ್ ಕೋಟೆಗಳನ್ನು ವಶಪಡಿಸಿಕೊಂಡನು. ಈ ಕೋಟೆಗಳು ಟೆನ್ನಸ್ಸೀ ಮತ್ತು ಕಂಬರ್‌ಲ್ಯಾಂಡ್ ನದಿಗಳ ಪ್ರದೇಶದ ಅತ್ಯಂತ ಪ್ರಬಲ ಸ್ಥಾನಗಳಾಗಿದ್ದವು. ನಂತರ ಅವನು ತನ್ನ ಸೈನ್ಯವನ್ನು ಮಿಸ್ಸಿಸ್ಸಿಪ್ಪಿ ಪ್ರಾಂತದ ಕಾರಿಂತ್ (Corinth)ಊರಿನ ಕಡೆಗೆ ನಡೆಸಿಕೊಂಡು ಹೋದನು. ಆಗ ಕಾರಿಂತ್ ಮುಖ್ಯ ರೈಲ್ವೆ ರಸ್ತೆಗಳು ಕೂಡುವ ಒಂದು ಮುಖ್ಯ ನಿಲ್ದಾಣವಾಗಿತ್ತು. ಗ್ರಾಂಟ್‌ನ ಸೈನ್ಯದ ಆಕ್ರಮಣವನ್ನು ತಡೆಯಲು ಕಾನ್‌ಫೆಡರೇಟರು ಆಲ್ಬರ್ಟ್ ಜಾನ್‌ಸ್ಟನ್ ಕೈಕೆಳಗೆ ೪೦,೦೦೦ ಸೈನಿಕರನ್ನು ಕಳುಹಿಸಿದರು. ೧೮೬೨ರ ಏಪ್ರಿಲ್ ೬ ರಂದು ಕಾರಿಂತ್‌ನಿಂದ ೨೦ ಮೈಲಿ ಉತ್ತರಕ್ಕಿದ್ದ ಶಿಲೋಹ್ (Shiloh)ಎನ್ನುವ ಹಳ್ಳಿಯ ಚರ್ಚಿನ ಬಳಿ ಜಾನ್‌ಸ್ಟನ್ ಗ್ರಾಂಟ್‌ನ ಸೈನ್ಯದ ಮೇಲೆ ಅನಿರೀಕ್ಷಿತವಾದ ದಾಳಿ ಮಾಡಿದನು. ಗ್ರಾಂಟ್‌ನ ಸೈನ್ಯ ಹಿಂಜರಿಯದೆ ಹೋರಾಡಿತು. ಕದನದ ಎರಡನೆಯ ದಿನ ಗ್ರಾಂಟ್‌ನ ಸೈನ್ಯದ ಕೈ ಮೇಲಾಯಿತು. ಕಾನ್‌ಫೆಡರೇಟ್ ಸೈನ್ಯ ಶಕ್ತಿಗುಂದಿ, ಬಸವಳಿದು, ನೈತಿಕ ಸ್ಥೈರ್ಯ ಕಳೆದುಕೊಂಡು ಕಾರಿಂತ್ ಕಡೆಗೆ ಹಿಮ್ಮೆಟ್ಟಿತು. ಕದನದಲ್ಲಿ ಜಯಗಳಿಸಿದರೂ ಗ್ರಾಂಟ್ ಅನಿರೀಕ್ಷಿತವಾದ ದಾಳಿಯಿಂದ ಅಧೀರನಾದನು. ತನ್ನ ಸೈನ್ಯ ಅನುಭವಿಸಿದ ಅಪಾರ ನಷ್ಟದಿಂದ ಅವನು ಎದೆಗುಂದಿದನು. ಈ ಸ್ಥಿತಿಯಲ್ಲಿ ಅವನು ಶತ್ರು ಸೈನ್ಯ ತಪ್ಪಿಸಿಕೊಳ್ಳಲು ಬಿಟ್ಟನು. ಲಿಂಕನ್ ಗ್ರಾಂಟ್‌ನನ್ನು

ಸೈನ್ಯಾಧಿಪತ್ಯದಿಂದ ತೆಗೆದುಹಾಕಿ ಅವನ ಸ್ಥಾನದಲ್ಲಿ ಹೆನ್ರಿ ಹಾಲೆಕ್ (Henry Halleck) ನನ್ನು ನೇಮಿಸಿದನು. ಅವನು ಗ್ರಾಂಟ್‌ನ ಸುಸಜ್ಜಿತವಾದ, ನುರಿತ ಸೈನ್ಯವನ್ನು ವಿಂಗಡಿಸಿ, ಸಣ್ಣ ತುಕಡಿಗಳಾನ್ನಾಗಿ ಮಾಡಿ ಅವುಗಳನ್ನು ಬೇರೆ ಬೇರೆ ಸೈನ್ಯಾಚರಣೆಯಲ್ಲಿ ತೊಡಗಿಸಿದನು. ಗ್ರಾಂಟ್ ಒಂದು ಅತಿ ಮಹತ್ತಾದ ಅವಕಾಶ ಕಳೆದುಕೊಂಡನು.

ಶಿಲೋಹ್ ಬಳಿ ನಡೆದ ಕದನದ ಪರಿಣಾಮಗಳು ಹಲವಾರು. ಬುದ್ಧಿ-ಭಾವಗಳು ತತ್ತರಿಸುವ ಪ್ರಮಾಣದ ಸಾವು-ನೋವುಗಳು ಎರಡು ಕಡೆಯವರ ಭರವಸೆಗಳನ್ನು ಬುಡಮೇಲು ಮಾಡಿದವು. ಇಲ್ಲಿ ಮಡಿದ ಅಮೆರಿಕನ್ನರ ಸಂಖ್ಯೆ, ಸ್ವಾತಂತ್ರ್ಯ ಸಮರದ ಎಲ್ಲ ಕದನಗಳಲ್ಲಿ – ೧೮೧೨ರ ಯುದ್ಧದಲ್ಲಿ ಮತ್ತು ಮೆಕ್ಸಿಕೊಯುದ್ಧಗಳಲ್ಲಿ ಮಡಿದವರ ಸಂಖ್ಯೆಗಿಂತಲೂ ಹೆಚ್ಚಾಗಿತ್ತು. ೬೩,೦೦೦ ಫೆಡರಲ್ ಸೈನಿಕರಲ್ಲಿ ೧೩,೦೦೦ ಜನ ಸಾವಿಗೀಡಾಗಿದ್ದರು. ಕಾನ್‌ಫೆಡರೇಟರು ೧೦೬೯೯ ಸೈನಿಕರನ್ನು ಕಳೆದುಕೊಂಡಿದ್ದರು. ಅವರಲ್ಲಿ ಜನರಲ್ ಜಾನ್‌ಸ್ಟನ್‌ನೂ ಸೇರಿದ್ದನು. ನಂತರ ಸೈನ್ಯಾಧಿಕಾರಿಗಳು ಬೇರೆ ಯುದ್ಧ ವಿಧಾನಗಳನ್ನು ಅಳವಡಿಸಿಕೊಂಡರು. ರಕ್ಷಣಾವಿಧಾನಗಳಿಗೆ ಹೆಚ್ಚು ಮಹತ್ವ ಕೊಟ್ಟರು. ಒಟ್ಟಿನಲ್ಲಿ ಎಲ್ಲ ಅಮೆರಿಕನ್ನರು ಯುದ್ಧದ ನಿಜಸ್ಥಿತಿಯನ್ನು ಅರಿತುಕೊಂಡರು. ಯುದ್ಧಕ್ಕೆ ಮುಂಚೆ ಇದ್ದ ಹೆಮ್ಮೆ, ಹುಮ್ಮಸ್ಸು ಮತ್ತು ಸಾಹಸಗಳಿಂದ ತುಂಬಿದ ರೋಮಾಂಚಕಾರಿ ಚಿತ್ರ ಮರೆಯಾಗಿ, ಯುದ್ಧದ ಯಥಾವತ್ತಾದ ಕರಾಳ, ಬೀಭತ್ಸ ಸಾವು-ನೋವುಗಳ ದುರಂತ ಚಿತ್ರ ಜನರ ಮನಸ್ಸನ್ನು ಆವರಿಸಿತು. ಎರಡು ಕಡೆಯವರು ಪರಸ್ಪರ ಹೊಸ ಗೌರವ ಮತ್ತು ಹೊಸ ದ್ವೇಷಗಳನ್ನು ಬೆಳೆಸಿಕೊಂಡರು!

ಮೆಕ್‌ಲೆಲ್ಲನ್ ಮತ್ತು ರಾಬರ್ಟ್ ಲೀ ಮುಖಾಮುಖಿ

ಇವೆಲ್ಲ ಆಗುಹೋಗುಗಳ ನಡುವೆ ವರ್ಜೀನಿಯ ಯುದ್ಧರಂಗದಲ್ಲಿ ಗಮನಾರ್ಹವಾದ ಕಾರ್ಯಾಚರಣೆಗೆ ಸಿದ್ಧತೆ ನಡೆಯುತ್ತಿತ್ತು. ಅಲ್ಲಿ ಜನರಲ್ ಮೆಕ್‌ಲೆಲ್ಲನ್ ರಿಚ್‌ಮಂಡ್ ಮೇಲೆ ದಾಳಿ ನಡೆಸಲು ಸಿದ್ಧನಾಗಿ ಕಾಯುತ್ತಿದ್ದವನು ಈಗ ಸೈನ್ಯವನ್ನು ಮುಂದೆ ನಡೆಸಲು ನಿರ್ಧರಿಸಿ, ದುರ್ಗಮವಾದ ಉತ್ತರ ವರ್ಜೀನಿಯ ಪ್ರದೇಶದ ಮೂಲಕ ಹೋಗುವ ಬದಲು, ಇಡೀ ಸೈನ್ಯವನ್ನು ದೋಣಿಗಳಲ್ಲಿ ಯಾರ್ಕ್ ಮತ್ತು ಜೇಮ್ಸ್ ನದಿಗಳು ನಿರ್ಮಿಸಿದ ಪರ್ಯಾಯ ದ್ವೀಪದ ಕೊನೆಯವರೆಗೂ ಸಾಗಿಸಿ, ಅಲ್ಲಿಂದ ರಿಚ್‌ಮಂಡ್ ನಗರದ ಮೇಳೆ ದಾಳಿ ಮಾಡುವ ಯೋಜನೆ ಹಾಕಿಕೊಂಡಿದ್ದನು. ಈ ನದಿಗಳು ಉತ್ತರದ ಸೈನ್ಯದ ಹತೋಟಿಯಲ್ಲಿದ್ದುದರಿಂದ ಹಠಾತ್ತನೆ ದಾಳಿಯ ಸಾಧ್ಯತೆ ಇರಲಿಲ್ಲ ಮತ್ತು ಉತ್ತರದ ಸೈನ್ಯಕ್ಕೆ ಬೇಕಾದುದನ್ನು ಸರಬರಾಜು ಮಾಡಲು ಯಾವ ಅಡ್ಡಿಯೂ ಇರಲಿಲ್ಲ. ಮೆಕ್‌ಲೆಲ್ಲನ್ ಯೋಜನೆಗೆ ಅನೇಕ ಕಾಂಗ್ರೆಸ್ ಸದಸ್ಯರು ತಮ್ಮ ಭಯವನ್ನು ವ್ಯಕ್ತಪಡಿಸಿದರು. ಏಕೆಂದರೆ, ಅವನ ಯೋಜನೆಯಲ್ಲಿ ರಾಜಧಾನಿ ವಾಷಿಂಗ್‌ಟನ್ ಶತ್ರುಗಳ ದಾಳಿಗೆ ಗುರಿಯಾದ ಪಕ್ಷದಲ್ಲಿ ಅದನ್ನು ರಕ್ಷಿಸಲು ತಕ್ಕಷ್ಟು ಸೈನಿಕ ವ್ಯವಸ್ಥೆ ಇರಲಿಲ್ಲ. ಕಾಲಕ್ರಮದಲ್ಲಿ

ಮೆಕ್‌ಲೆಲ್ಲನ್‌ನಲ್ಲಿ ಕೆಲವು ಕುಂದುಕೊರತೆಗಳು ಕಂಡುಬಂದವು. ಇವು ಅಂತಿಮವಾಗಿ ಅವನ ಸೈನಿಕ ವೃತ್ತಿಯನ್ನು ಹಾಳುಗೆಡಿಸಿದವು. ಮೆಕ್‌ಲೆಲ್ಲನ್‌ಗೆ ಅಂತರ್ಯುದ್ಧ ಇಡೀ ದೇಶದ ಜನಸಾಮಾನ್ಯ ಜೀವನದ ಆಧಾರಭೂತವಾದ ನಂಬಿಕೆಗಳ ಅಳಿವು ಉಳಿವುಗಳಿಗಾಗಿ ನಡೆಯುತ್ತಿರುವ ಮಹತ್ತಾದ ಹೋರಾಟವಾಗಿ ಕಂಡುಬರಲಿಲ್ಲ. ಅವನ ದೃಷ್ಟಿಯಲ್ಲಿ ಈ ಯುದ್ಧ ಸೈನ್ಯದ ಉನ್ನತ ಅಧಿಕಾರಿಗಳು ಸಣ್ಣ ಪಣ ಒಡ್ಡಿ, ವಿರಾಮವಾಗಿ ಆಡುವ ಸಂಕೀರ್ಣ ಪಂದ್ಯವಾಗಿತ್ತು. ಅವನಿಗೆ ದಕ್ಷಿಣದ ರಾಜಧಾನಿಯಾದ ರಿಚ್‌ಮಂಡ್ ವಶಮಾಡಿ ಕೊಳ್ಳುವುದು, ವೈರಿಗಳನ್ನು ನಾಶ ಮಾಡುವುದಕ್ಕಿಂತ ಮುಖ್ಯವಾಗಿತ್ತು. ದಕ್ಷಿಣ ಸಂಸ್ಥಾನಗಳನ್ನು ತುಳಿದು ಪುಡಿ ಮಾಡುವುದು ತಲೆ ಕೆಟ್ಟವರ ಯೋಚನೆಯಾಗಿ, ಅನಾಗರಿಕ ಕೆಲಸವಾಗಿ ಅವನಿಗೆ ಕಂಡುಬಂತು. ಮೇಲಾಗಿ, ಮೆಕ್‌ಲೆಲ್ಲನ್‌ನ ಮನೋವೃತ್ತಿಗೂ ಗುರುತರ ಹೊಣೆಗಾರಿಕೆಯ ಅವನ ಹುದ್ದೆಗೂ ಪರಸ್ಪರ ಹೊಂದಾಣಿಕೆ ಇರಲಿಲ್ಲ. ಮೇಲ್ನೋಟಕ್ಕೆ ಅವನು ಬಡಾಯಿ ಕೊಚ್ಚುವ ಮನರಂಜಕ ವ್ಯಕ್ತಿಯಾಗಿ ಕಂಡುಬಂದರೂ ಅಂತರಂಗದಲ್ಲಿ ಅವನು ಅಗಾಧ ಅಭದ್ರತೆಯಿಂದ ತೊಳಲುತ್ತಿದ್ದನು. ಅವನು ನೆಪೋಲಿಯನ್ನನಂತೆ ಮಾತನಾಡಿದರೂ ಅವನಂತೆ ಯುದ್ಧ ಮಾಡಲು ಇಷ್ಟ ಪಡುತ್ತಿರಲಿಲ್ಲ. ಸೈನ್ಯವನ್ನು ಸಿದ್ಧ ಪಡಿಸುವುದರಲ್ಲಿ ನಿಪುಣನಾದರೂ ತನ್ನ ಮನಸ್ಸನ್ನು ಸಿದ್ಧ ಪಡಿಸುವುದನ್ನು ಕಲಿತಿರಲಿಲ್ಲ.

ಮೆಕ್‌ಲೆಲ್ಲನ್ ೧೧೨೦೦೦ ಸೈನಿಕರ ಬೃಹತ್ ಸೇನೆಯನ್ನು ಪೊಟೊಮಾಕ್ (Potomac) ನದಿಯ ಮೂಲಕ ದೋಣಿಗಳಲ್ಲಿ ರವಾನಿಸಿ ರಿಚ್‌ಮಂಡ್‌ಗೆ ೨೫ ಮೈಲಿ ದೂರದಲ್ಲಿ ನಿಲ್ಲಿಸಿದನು. ಒಂದು ಮಿಂಚಿನ ದಾಳಿಯಿಂದ ಯುದ್ಧವನ್ನು ಬೇಗನೆ ಮುಗಿಸಬಹುದಿತ್ತು. ಆದರೆ ಅವನು ತಡಮಾಡಿ, ನಂತರ ತನ್ನ ಪಡೆಗಳನ್ನು ಮುನ್ನುಗ್ಗಿಸಿದನು. ಆ ಸೈನ್ಯ ಪ್ರವಾಹ ಬಂದಿದ್ದ ಚಿಕಹಾಮಿನಿ (Chickahominy) ನದಿಯನ್ನು ದಾಟುತ್ತಿದ್ದಾಗ, ಅರ್ಧ ಸೈನ್ಯ ನದಿಯನ್ನು ದಾಟಿ, ಹಿಂದುಳಿದ ಅರ್ಧ ಸೈನ್ಯದ ಮೇಲೆ ಕಾನ್‌ಫೆಡರೇಟ್ ಸೈನ್ಯ ದಾಳಿ ಮಾಡಿತು. 'ಸೆವೆನ್ ಪೈನ್ಸ್' (Seven Pines) ಕದನವೆಂದು ಕರೆಯಲಾದ ಈ ಕದನದಲ್ಲಿ ಯಾವ ಕಡೆಯವರಿಗೂ ನಿರ್ಣಾಯಕವಾದ ಜಯ ದೊರೆಯಲಿಲ್ಲ. ಆದರೆ ಪರಿಣಾಮ ಮಾತ್ರ: ಹತ್ತು ಸಾವಿರ ಸಾವು-ನೋವುಗಳು. ಇದೇ ಕದನದಲ್ಲಿ ಕಾನ್‌ಫೆಡರೇಟ್ ಸೇನಾನಾಯಕ ಜನರಲ್ ಜೋಸೆಫ್ ಜಾನ್‌ಸ್ಟನ್ ತೀವ್ರವಾಗಿ ಗಾಯಗೊಂಡನು; ಕಾನ್‌ಫೆಡರೇಟ್ ಸೈನ್ಯದ ನಾಯಕತ್ವವನ್ನು ರಾಬರ್ಟ್ ಲೀ (Robert Lee)ವಹಿಸಿಕೊಂಡನು. ಸೇನಾನಾಯಕನಾಗಿ ಲೀ ಮೆಕ್‌ಲೆಲ್ಲನ್‌ನ ತದ್ವಿರುದ್ಧವಾಗಿದ್ದನು. ಲೀ ಉತ್ಕೃಷ್ಟ ಯೋಧ. ನಮ್ರತೆ, ಗಾಂಭೀರ್ಯ, ನಿಪುಣತೆ – ಇವು ಲೀಯ ವಿಶಿಷ್ಟ ಗುಣಗಳಾಗಿದ್ದವು. ಅವನು ಉತ್ತರದ ಪ್ರತಿ ಸೇನಾನಿಯ ಬಗ್ಗೆ ಮಾಹಿತಿ ಪಡೆದು, ಅವನು ಎದುರಿಸಬೇಕಾದ ಸೇನಾನಿಯ ಬಲಾಬಲಗಳಿಗೆ ತಕ್ಕಂತೆ ತನ್ನ ಸೈನ್ಯ ಕಾರ್ಯಾಚರಣೆಯನ್ನು ಯೋಜಿಸುತ್ತಿದ್ದನು. ಇವನಿಗೆ ಹೋಲಿಸಿದರೆ ಮೆಕ್‌ಲೆಲ್ಲನ್‌ನನ್ನು

ಸುಲಭವಾಗಿ ಅರ್ಥ ಮಾಡಿಕೊಳ್ಳಲು ಕಷ್ಟವಾಯಿತು. ಅವನಿಗೆ ಪ್ರಜೆಗಳ ಹಿತಸಾಧನೆಗಿಂತ ಸ್ವಾರ್ಥ ಸಾಧನೆ ಮುಖ್ಯವಾಗಿತ್ತು. ದೃಢಚಿತ್ತನಲ್ಲದ ಇವನು ಕೆಲವು ಸಮಯ ತನ್ನ ಮನಸ್ಸಿನ ಸಮತೋಲನವನ್ನು ಕಳೆದುಕೊಳ್ಳುತ್ತಿದ್ದನು. ಲೀ ವ್ಯಕ್ತಿತ್ವದಲ್ಲಿ ನ್ಯೂನತೆಗಳಿರಲಿಲ್ಲ. ಆದರೂ ರಣರಂಗದಲ್ಲಿ ಅವನ ಪೌರುಷ ಹುಚ್ಚು ಸಾಹಸವಾಗಿ ಪರಿಣಮಿಸುತ್ತಿತ್ತು. ಲೀ ತನ್ನ ಅದ್ಭುತ ಕಲ್ಪನಾಶಕ್ತಿಯನ್ನು ಉಪಯೋಗಿಸಿ ಯುದ್ಧಭೂಮಿಯಲ್ಲಿ ಭೇದಿಸಲಾರದಂಥ ವ್ಯೂಹ ರಚನೆ ಮಾಡಿ ಶತ್ರುಗಳನ್ನು ಮುಂದುವರಿಯದಂತೆ ಮಾಡುತ್ತಿದ್ದನು. ಯುದ್ಧದಲ್ಲಿ ಅವನು ತೋರುತ್ತಿದ್ದ ಗುಣಗಳು – ಕುಟಿಲತೆ, ದೃಢ ನಿರ್ಧಾರ ಮತ್ತು ನಿರ್ದಯತೆ.

ರಿಚ್‌ಮಂಡ್ ಮೇಲೆ ಮೆಕ್‌ಲೆಲ್ಲನ್ ದಾಳಿಯನ್ನು ಎದುರಿಸಲು ಪ್ರತಿಭಾವಂತ ಲೀ ಒಂದು ನಿಪುಣ ಯುದ್ಧ ಕೌಶಲವನ್ನು (strategy) ಯೋಜಿಸಿದನು. ಇದರ ಪ್ರಕಾರ ಲೀ ಜನರಲ್ 'ಸ್ಟೋನ್ ವಾಲ್' (Stone Wall) ಜಾಕ್ಸನ್‌ನ್ನು ಅವನ ಸೈನ್ಯದೊಡನೆ ರಿಚ್‌ಮಂಡ್‌ನ ಪಶ್ಚಿಮದಲ್ಲಿದ್ದ ಶಿನಾನ್‌ಡೊವ ಕಣಿವೆಯ ಮೂಲಕ ಬಂದು ಮೆಕ್‌ಲೆಲ್ಲನ್ ಸೈನ್ಯವನ್ನು ಹಿಂದುಗಡೆಯಿಂದ ಸುತ್ತುವರಿದು ದಾಳಿ ಮಾಡುವಂತೆ ಕಳುಹಿಸಿದನು. ಜಾಕ್ಸನ್ ಸೈನ್ಯವನ್ನು ತಡೆಗಟ್ಟಲು ಲಿಂಕನ್ ೨೦೦೦೦ ಸೈನಿಕರನ್ನು ಶಿನಾನ್‌ಡೊವ ಕಣಿವೆಗೆ ರವಾನಿಸಿದನು. ಲಿಂಕನ್ ಹೀಗೆ ಮಾಡಿದ್ದು ಮೆಕ್‌ಲೆಲ್ಲನ್‌ನನ್ನು ಗಾಬರಿಗೊಳಿಸಿತು. ಏಕೆಂದರೆ ಅವನು ಆ ಸೈನಿಕರನ್ನು ರಿಚ್‌ಮಂಡ್ ಮೇಲೆ ಉತ್ತರದಿಂದ ದಾಳಿ ಮಾಡಲು ಉಪಯೋಗಿಸಬೇಕೆಂದು ಲೆಕ್ಕ ಹಾಕಿದ್ದನು. ಲಿಂಕನ್ ಕಳುಹಿಸಿದ ಸೈನ್ಯ ಶಿನಾನ್‌ಡೊವ ಕಣಿವೆಯ ಕಡೆಗೆ ಧಾವಿಸುತ್ತಿದ್ದಾಗ ಜಾಕ್ಸನ್ ತನ್ನ ಸೈನ್ಯದೊಂದಿಗೆ ಶತ್ರು ಸೈನ್ಯಕ್ಕೆ ಸುಳಿವು ಸಿಗದಂತೆ ರಿಚ್‌ಮಂಡ್‌ಗೆ ನುಸುಳಿ ಹೋಗಿ ಲೀಯನ್ನು ಕೂಡಿಕೊಂಡನು. ಜೂನ್ ೨೬ ರಂದು ಲೀ ಮೆಕ್‌ಲೆಲ್ಲನ್ ಸೈನ್ಯದ ಮೇಲೆ ಅನಿರೀಕ್ಷಿತವಾಗಿ ಘೋರವಾದ ದಾಳಿ ನಡೆಸಿದನು. ಏಳು ದಿನಗಳು ಸತತವಾಗಿ ಕದನ ನಡೆಯಿತು. ಮೆಕ್‌ಲೆಲ್ಲನ್ ಸೈನ್ಯ ಹಿಮ್ಮೆಟ್ಟಿದರೂ ಚದುರಿಹೋಗದೆ ಲೀ ಸೈನ್ಯವನ್ನು ಎದುರಿಸಿ ಹೋರಾಡಿ ಅಪಾರ ಸಾವು ನೋವುಗಳನ್ನು ಉಂಟುಮಾಡಿತು. ಈ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಮೆಕ್‌ಲೆಲ್ಲನ್ ತನ್ನ ಸೈನ್ಯವನ್ನು ಜೇಮ್ಸ್ ನದಿಯ ಹ್ಯಾರಿಸನ್ ತಂಗುದಾಣಕ್ಕೆ ರವಾನಿಸುವುದರಲ್ಲಿ ಯಶಸ್ವಿಯಾದನು. ಮೆಕ್‌ಲೆಲ್ಲನ್ ಸೈನ್ಯದಲ್ಲಿ ಸಾವು-ನೋವುಗಳ ಸಂಖ್ಯೆ ೧೫೮೦೦ನ್ನು ಮುಟ್ಟಿತ್ತು. ಕಾನ್‌ಫೆಡರೇಟ್ ಸೈನ್ಯದ ಸಾವು-ನೋವಿನ ಸಂಖ್ಯೆ ೨೦೦೦೦ಕ್ಕೆ ಏರಿತ್ತು.

ಲೀ ನಡೆಸಿದ ಪ್ರತಿದಾಳಿ

ಮೆಕ್‌ಲೆಲ್ಲನ್ ಸೈನ್ಯ ಹಿಮ್ಮೆಟ್ಟಿದರೂ ಮತ್ತೊಮ್ಮೆ ರಿಚ್‌ಮಂಡ್ ಮೇಲೆ ದಾಳಿ ಮಾಡಬಹುದಾದಷ್ಟು ಸಮೀಪದಲ್ಲೇ ಬೀಡುಬಿಟ್ಟಿತ್ತು. ಅವನ ಸೈನ್ಯ ಶತ್ರುಗಳು ಭೇದಿಸಲಾರದ ಸುರಕ್ಷಿತವಾದ ಸ್ಥಳದಲ್ಲಿತ್ತು. ಸೈನ್ಯಕ್ಕೆ ಬೇಕಾದ ಸರಬರಾಜು ಯಾವ

ಅಡಚಣೆಯಿಲ್ಲದೆ ಬಂದು ತಲುಪುತ್ತಿತ್ತು. ಮೇಲಾಗಿ ೮೬,೦೦೦ ಸೈನಿಕರು ಯುದ್ಧ ಸನ್ನದ್ಧರಾಗಿ ನಿಂತಿದ್ದರು. ಆದರೂ ಸಹ ಮೆಕ್‌ಲೆಲ್ಲನ್ ಸುಲಭದಲ್ಲಿ ವಿಜಯ ಸಾಧಿಸ ಬಹುದಾಗಿದ್ದ ಅವಕಾಶ ಕಳೆದುಕೊಂಡಿದ್ದರಿಂದ ಅವನ ಮೇಲೆ ಲಿಂಕನ್ ಕೋಪ ಕೆರಳಿತು. ಆದ್ದರಿಂದ ಲಿಂಕನ್ ಮೆಕ್‌ಲೆಲ್ಲನ್‌ನ ಅಧಿಕಾರವನ್ನು ಕಡಿಮೆಮಾಡಿ ಅವನನ್ನು ಜನರಲ್ ಹಾಲೆಕ್ (General Halleck)ನ ಮೇಲ್ವಿಚಾರಣೆಗೆ ಒಳಪಡಿಸಿದನು. ಹಾಲೆಕ್, ಯಾರ್ಕ್ ಮತ್ತು ಜೇಮ್ಸ್ ನದಿಗಳಿಂದಾದ ಪರ್ಯಾಯ ದ್ವೀಪದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ಮೆಕ್‌ಲೆಲ್ಲನ್ ಸೈನ್ಯವನ್ನು ಪೊಟೊಮಾಕ್ ನದಿತೀರಕ್ಕೆ ನಡೆಸಿಕೊಂಡು ಹೋಗಲು ಅಪ್ಪಣೆ ಮಾಡಿದನು. ಈ ಸೈನ್ಯ ಅಲ್ಲಿ ಜನರಲ್ ಜಾನ್ ಪೋಪ್ (John Pope)ನ ಸೈನ್ಯದೊಡನೆ ಸೇರಿಕೊಳ್ಳಬೇಕಾಗಿತ್ತು. ಜನರಲ್ ಪೋಪ್ ರಿಚ್‌ಮಂಡ್ ದಾಳಿಗಾಗಿ ಒಂದು ಹೊಸ ಸೈನ್ಯವನ್ನು ತಯಾರು ಮಾಡುತ್ತಿದ್ದನು.

ಲಿಂಕನ್ ಮೆಕ್‌ಲೆಲ್ಲನ್ ಮೇಲೆ ವಿಶ್ವಾಸ ಕಳೆದುಕೊಂಡಿದ್ದು ಸರಿ, ಆದರೆ ಜನರಲ್ ಹಾಲೆಕ್ ಸೈನ್ಯವನ್ನು ಹಿಂದೆ ಸರಿಸಲು ಬಿಟ್ಟಿದ್ದು ದೊಡ್ಡ ತಪ್ಪಾಯಿತು. ಬಹುಶಃ ಇದು ಲಿಂಕನ್ ಮಾಡಿದ ಅತ್ಯಂತ ದೊಡ್ಡ ತಪ್ಪು ಎಂದು ಹೇಳಬಹುದು. ಹ್ಯಾರಿಸನ್ ತಂಗುದಾಣದಲ್ಲಿ ಯುದ್ಧ ಸನ್ನದ್ಧವಾಗಿದ್ದ ಫೆಡರಲ್ ಸೈನ್ಯವನ್ನು ಮುನ್ನುಗ್ಗಿಸಿದ್ದರೆ, ಲೀ ಸೈನ್ಯ ರಿಚ್‌ಮಂಡ್ ರಕ್ಷಣೆಯನ್ನು ಬಿಟ್ಟು ಬರುತ್ತಿರಲಿಲ್ಲ. ಫೆಡರಲ್ ಸೈನ್ಯ ಹಿಂದೆ ಸರಿದ ಕೂಡಲೇ ಲೀ ಆ ಸದವಕಾಶವನ್ನು ಉಪಯೋಗಿಸಿಕೊಂಡು ಧೈರ್ಯ ಮತ್ತು ದೃಢ ನಿಶ್ಚಯದಿಂದ ಉತ್ತರದಲ್ಲಿ ಜಮಾಯಿಸಿದ್ದ ಜನರಲ್ ಪೋಪ್‌ನ ಸೈನ್ಯದ ಮೇಲೆ ದಾಳಿ ಮಾಡಲು ಕಾನ್‌ಫೆಡರೇಟ್ ಸೈನ್ಯವನ್ನು ತ್ವರಿತಗತಿಯಿಂದ ನಡೆಸಿಕೊಂಡು ಹೋದನು. ೧೮೬೨ ಆಗಸ್ಟ್ ಕೊನೆಯಲ್ಲಿ ಅನೇಕ ಸಂಕೀರ್ಣ ಸೈನ್ಯ ಚಲನ ವಲನಗಳ ಮೂಲಕ ಕಾನ್‌ಫೆಡರೇಟ್ ಸೈನ್ಯ ಪೋಪ್‌ನ ಗೊಂದಲ ಪರಿಸ್ಥಿತಿಯಲ್ಲಿದ್ದ ಸೈನ್ಯವನ್ನು ಯುದ್ಧಭೂಮಿಯಿಂದ ಹೊಡೆದೋಡಿಸಿತು. ಆ ಸ್ಥಳದಲ್ಲಿಯೇ ಉತ್ತರ ಮತ್ತು ದಕ್ಷಿಣ ಸೇನೆಗಳ ಪ್ರಥಮ ಸಂಘರ್ಷಣೆ ನಡೆದಿದ್ದು! ಆ ಸ್ಥಳದ ಹೆಸರು ಬುಲ್ ರನ್!

ಫೆಡರಲ್ ಸೈನ್ಯಗಳು ಬುಲ್ ರನ್‌ನಲ್ಲಿ ಪ್ರಥಮ ಸೋಲನನುಭವಿಸಿ ಹದಿಮೂರು ತಿಂಗಳು ಮುಗಿದಿದ್ದವು. ಅಪಾರ ಹಣ ವೆಚ್ಚವಾಗಿ ಸಾವಿರಗಟ್ಟಲೆ ಸಾವು-ನೋವುಗಳು ಮತ್ತು ಸೈನ್ಯಕ್ಕಾಗಿ ನೂರಾರು ಮಿಲಿಯನ್ ಡಾಲರ್ ಖರ್ಚಾಗುತ್ತಿದ್ದರೂ ರಿಚ್‌ಮಂಡ್ ವಶವಾಗದೆ ಉಳಿದಿತ್ತು. ಜನರಲ್ ಪೋಪ್‌ನ ಅನರ್ಹತೆಯಿಂದ ಕೆರಳಿದ ಲಿಂಕನ್ ಪುನಃ ಮೆಕ್‌ಲೆಲ್ಲನ್‌ಗೆ ಅಧಿಕಾರ ವಹಿಸಿದನು. ಅವನು ಅಧೀರತೆಯಿಂದ ತತ್ತರಿಸುತ್ತಿದ್ದ ಸೈನ್ಯವನ್ನು ಹುರಿದುಂಬಿಸಿ ಒಗ್ಗಟ್ಟು ಉಂಟುಮಾಡಿದನು. ಆದರೆ ಲೀಯ ಕಲ್ಪನಾಶಕ್ತಿಗೆ ಹೊಳೆದ ವಿಚಾರವೆಂದರೆ – ದಕ್ಷಿಣದವರು ಎಷ್ಟೇ ಚಿಕ್ಕ ಪುಟ್ಟ ಕದನಗಳನ್ನು ಗೆದ್ದರೂ ಉತ್ತರದವರ ಅಪಾರ ಸಾಧನ ಸಂಪತ್ತುಗಳನ್ನು ನಾಶಗೊಳಿಸುವುದು ಸಾಧ್ಯವಿಲ್ಲ.

ಚೇತರಿಸಿಕೊಳ್ಳಲಾರದಂಥ, ಭಯಂಕರ ಹೊಡೆತವೇನಾದರೂ ಬಿದ್ದಲ್ಲಿ ಮಾತ್ರ ಉತ್ತರದವರಿಗೆ ಯುದ್ಧದಲ್ಲಿ ಜಯಗಳಿಸಲು ಸಾಧ್ಯವಿಲ್ಲ ಎನ್ನುವ ಅನುಮಾನ ಹುಟ್ಟ ಬಹುದು. ಇಲ್ಲದೆ ಹೋದರೆ ಕಾಲ ಸರಿದಂತೆಲ್ಲ ಉತ್ತರದವರು ತಮ್ಮ ಸಾಧನ ಸಂಪತ್ತುಗಳ ಬಲದಿಂದ ದಕ್ಷಿಣದವರನ್ನು ತುಳಿದು ಹಾಕುವುದು ಖಂಡಿತವೆಂದು ಅವನು ಮನಗಂಡಿದ್ದನು. ಅಂಥ ಭಯಂಕರವಾದ ಹೊಡೆತ ಕೊಡಲು ನಿರ್ಧರಿಸಿದ ಲೀ ತನ್ನ ಸೈನ್ಯವನ್ನು ವಾಯುವ್ಯ ದಿಕ್ಕಿನ ಕಡೆಗೆ ರಾಜಧಾನಿ ವಾಷಿಂಗ್‌ಟನ್ ರಕ್ಷಣಾದಳವನ್ನು ಸುತ್ತುವರಿಯಲು ದೌಡಾಯಿಸಿಕೊಂಡು ಹೋದನು.

ಲೀ ಹುಚ್ಚು ಧೈರ್ಯದಿಂದ ಹೊಸ ಯುದ್ಧಕೌಶಲವನ್ನು ಯೋಜಿಸಿದನು. ತನ್ನ ಕೈಕೆಳಗಿನ ೬೦೦೦೦ ಸೈನ್ಯವನ್ನು ಹಲವಾರು ತುಕಡಿಗಳನ್ನಾಗಿ ವಿಂಗಡಿಸಿದನು. ಒಂದು ತುಕಡಿ 'ಸ್ಟೋನ್ ವಾಲ್' ಜಾಕ್ಸನ್ ಕೈಕೆಳಗೆ ಬಲವಾದ ರಕ್ಷಣೆ ಇರದಿದ್ದ ಹಾರ್ಪರ್ಸ್ ಫೆರ್ರಿ (Harpers Ferry)ಯ ಮೇಲೆ ದಾಳಿ ಮಾಡಿ ೧೧೦೦೦ ಫೆಡರಲ್ ಸೈನಿಕರನ್ನು ಸೆರೆಹಿಡಿದರು. ಇನ್ನೊಂದು ತುಕಡಿ ಉತ್ತರ ದಿಕ್ಕಿನಲ್ಲಿ ಮುನ್ನುಗ್ಗಿ ಮೇರಿ ಲ್ಯಾಂಡ್‌ನ ಹೇಗರ್ಸ್‌ಟೌನ್ (Hagerstown)ದಾಟಿ ಪೆನ್ಸಿಲ್‌ವೇನಿಯಾ ಗಡಿಯುವರೆಗೂ ಮುಂದುವರಿಯಿತು. ಮೆಕ್‌ಲೆಲ್ಲನ್ ಯಥಾಪ್ರಕಾರ ಸಾವಕಾಶವಾಗಿ ಮುಂದುವರಿಯು ತ್ತಿರುವಾಗ ಅವನ ಕೈವಶವಾದ ಲೀ ಕಳುಹಿಸಿದ ಗುಪ್ತ ಸಮಾಚಾರದ ಚೀಟಿಯಿಂದ ಲೀಯ ಯೋಜನೆಯ ವಿವರಗಳನ್ನು ತಿಳಿದುಕೊಂಡನು. ನಂತರ ರಭಸದಿಂದ ಸೈನ್ಯವನ್ನು ನಡೆಸಿಕೊಂಡು ಹೋಗಿ ಮೇರಿಲ್ಯಾಂಡ್‌ನ ಶಾರ್ಪ್ಸ್ ಬರ್ಗ್ (Sharpsburg) ಎಂಬಲ್ಲಿ ಸೆಪ್ಟೆಂಬರ್ ೧೭, ೧೮೬೨ರಂದು ಲೀ ಸೈನ್ಯವನ್ನು ತಡೆಗಟ್ಟಿದನು. ಶಾರ್ಪ್ಸ್ ಬರ್ಗ್ ಇದ್ದದ್ದು ಪೊಟೊಮಾಕ್ ನದಿ ಮತ್ತು ಆನ್‌ಟೈಟಾಮ್ (Antietam)ಹಳ್ಳಗಳ ನಡುವೆ. ಸೈನ್ಯಗಳು ಸಂಧಿಸಿದ್ದು ಒಂದು ಮೈದಾನದಲ್ಲಿ. ಅದು ಸೈನ್ಯದ ಚಲನವಲನಗಳಿಗೆ ಅನುಕೂಲಕರವಾಗಿರಲಿಲ್ಲ. ಆ ಸಣ್ಣ ಮೈದಾನದಲ್ಲಿ ೭೦೦೦೦ಫೆಡರಲ್ ಸೈನಿಕರು ೪೦೦೦೦ ಕಾನ್‌ಫೆಡರೇಟ್ ಸೈನಿಕರೊಡನೆ ಕಾಳಗ ನಡೆಸಿದರು. ರಾತ್ರಿಯ ಹೊತ್ತಿಗೆ ಎರಡು ಕಡೆಗಳ ಒಟ್ಟು ೨೨೦೦೦ಕ್ಕಿಂತಲೂ ಹೆಚ್ಚು ಸೈನಿಕರು ಸತ್ತು ಅಥವಾ ಗಾಯಗೊಂಡು ಬಿದ್ದಿದ್ದರು. ಶವಗಳು ಮೈದಾನದ ಎಲ್ಲ ಕಡೆ ಹರಡಿ ಬಿದ್ದಿದ್ದವು. ರಣರಂಗ ಅವರ ರಕ್ತದಿಂದ ಕೆಂಪಾಗಿತ್ತು. ಇಷ್ಟಾದರೂ ಕಾನ್‌ಫೆಡರೇಟ್ ಸೈನ್ಯ ಹಿಮ್ಮೆಟ್ಟದೆ ಆಕ್ರಮಿಸಿದ ಜಾಗ ಬಿಡದೆ ನಿಂತು ಹೋರಾಡಿದರು. ಲೀ ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲಿ ಸಿಕ್ಕಿಹಾಕಿಕೊಂಡಿದ್ದನು. ಮೆಕ್‌ಲೆಲ್ಲನ್‌ಗೆ ಇದು ಗೊತ್ತಿದ್ದರೂ ಏನೂ ಮಾಡದೆ ಸುಮ್ಮ ನಿದ್ದನು. ಒಂದು ದಿನವಿಡೀ ಲೀ ಫೆಡರಲ್ ಸೈನ್ಯದಲ್ಲಿ ದುರ್ಬಲತೆ ಏನಾದರೂ ಇರಬಹು ದೆಂದು ಆ ಮೈದಾನವನ್ನು ಕಣ್ಣಿನ ಮೇಲೆ ಕಣ್ಣಿಟ್ಟು ಹುಡುಕಿದನು. ಮೆಕ್‌ಲೆಲ್ಲನ್ ಸೈನ್ಯ ಗುಂಡು ಹಾರಿಸಲಿಲ್ಲ. ರಾತ್ರಿ ಕಾನ್‌ಫೆಡರೇಟ್ ಸೈನ್ಯ ಪೊಟೊಮಾಕ್ ನದಿಯನ್ನು ದಾಟಿ ವರ್ಜೀನಿಯ ಸಂಸ್ಥಾನದೊಳಗೆ ನುಸುಳಿಕೊಂಡಿತು.

ಲೀ ನಡೆಸಿದ ಆಕ್ರಮಣ ಫಲಿಸಲಿಲ್ಲ. ಅವನ ಸೈನ್ಯ ಹೊಡೆತ ತಿಂದು ನಜ್ಜುಗುಜ್ಜಾಗಿತ್ತು. ಉತ್ತರ ಸಂಸ್ಥಾನಗಳು ಅತ್ಯಂತ ಗುರುತರವಾದ ಅಪಾಯದಿಂದ ಪಾರಾಗಿದ್ದವು; ಅವುಗಳನ್ನು ಛಿದ್ರಗೊಳಿಸುವಂಥ ದಾಳಿಯನ್ನು ತಡೆಯಲು ಯಶಸ್ವಿಯಾದ ಮೆಕ್‌ಲೆಲ್ಲನ್ ವಿಜಯ ಸಾಧಿಸುವ ಅವಕಾಶವನ್ನು ಉಪಯೋಗಿಸಿಕೊಳ್ಳದೆ, ಲೀಯನ್ನು ತಪ್ಪಿಸಿಕೊಂಡು ಹೋಗಲು ಬಿಟ್ಟು ದೊಡ್ಡ ತಪ್ಪು ಮಾಡಿದನು. ರಿಚ್‌ಮಂಡ್‌ನನ್ನು ಸೇರಿದ ಲೀ ತನ್ನ ಸೈನ್ಯವನ್ನು ಮತ್ತೆ ಸುವ್ಯವಸ್ಥಿತಗೊಳಿಸಿ ಬಲಪಡಿಸಲು ಎಲ್ಲ ವ್ಯವಸ್ಥೆ ಮಾಡಿದನು. ಅಂತಿಮವಾಗಿ ಲಿಂಕನ್ ಮೆಕ್‌ಲೆಲ್ಲನ್‌ನನ್ನು ಸೇನಾಪತಿಯ ಸ್ಥಾನದಿಂದ ತೆಗೆದುಹಾಕಿದನು.

ಗುಲಾಮ ವಿಮೋಚನಾ ಘೋಷಣೆ

ಆನ್‌ಟೈಟಾಮ್ ಕದನ ಲಿಂಕನ್ ತನ್ನ ಧೋರಣೆಯನ್ನು ಬದಲಾಯಿಸಲು ಅವಕಾಶ ಒದಗಿಸಿತು. ಬದಲಾದ ಧೋರಣೆಯನ್ನು ಅನುಸರಿಸಿ ಲಿಂಕನ್ ಇಟ್ಟ ಹೆಜ್ಜೆ ಇಡೀ ಯುದ್ಧದ ಲಕ್ಷಣವನ್ನು ಬದಲಾಯಿಸಿತು. ಗುಲಾಮಗಿರಿ ಸಮಸ್ಯೆಯನ್ನು ದಕ್ಷಿಣ ಸಂಸ್ಥಾನಗಳು ಕಾಯಿದೆಗಳ ಮೂಲಕ ನಿವಾರಿಸಿ, ಗುಲಾಮರ ಒಡೆಯರಿಗೆ ಪರಿಹಾರ ನೀಡಿ ಅವರನ್ನು ಸುಮ್ಮನಿರಿಸಬಹುದು, ಬಿಡುಗಡೆಯಾದ ಗುಲಾಮರು ಅಮೆರಿಕ ಬಿಟ್ಟುಹೋಗಲು ಫೆಡರಲ್ ಸರ್ಕಾರ ಅವರಿಗೆ ಹಣಸಹಾಯ ಮಾಡಬಹುದು ಎಂದು ಲಿಂಕನ್ ಲೆಕ್ಕ ಹಾಕಿದ್ದನು. ಈ ಯೋಜನೆಯನ್ನು ಜಾರಿಗೆ ತರುವಂತೆ ದಕ್ಷಿಣ ಸಂಸ್ಥಾನಗಳಿಗೆ ಎಷ್ಟು ಬಾರಿ ಕೇಳಿಕೊಂಡರೂ ಪ್ರಯೋಜನವಾಗಲಿಲ್ಲ. ೧೮೬೨ರ ಬೇಸಿಗೆಯ ಹೊತ್ತಿಗೆ ಯುದ್ಧದಲ್ಲಿ [illegible] ಮತ್ತು ಯೂರೋಪ್ ದೇಶಗಳ ಬೆಂಬಲ ಪಡೆಯಲು ಫೆಡರಲ್ ಸರ್ಕಾರ ಗುಲಾಮಗಿರಿಯನ್ನು ರದ್ದುಗೊಳಿಸುವ ಧೋರಣೆಯನ್ನು ಪಾಲಿಸಬೇಕಾದ ಅಗತ್ಯವನ್ನು ಲಿಂಕನ್ ಮನಗಂಡನು. ಆದರೆ ಫೆಡರಲ್ ಸೈನ್ಯ ಸೋಲಿನ ಮೇಲೆ ಸೋಲು ಅನುಭವಿಸುತ್ತಿರುವಾಗ ಗುಲಾಮ ವಿಮೋಚನೆ ಮಾಡಿದರೆ ಅದನ್ನು ಉತ್ತರ ಸಂಸ್ಥಾನಗಳ ದುರ್ಬಲತೆಯ ದ್ಯೋತಕವೆಂದು ದಾಕ್ಷಿಣಾತ್ಯರು ತಿಳಿಯಬಹುದು ಎಂದು ಸರಿಯಾದ ಅವಕಾಶಕ್ಕಾಗಿ ಲಿಂಕನ್ ಕಾಯುತ್ತಿದ್ದನು. ಆನ್‌ಟೈಟಾಮ್ ಕದನ ಅಂಥ ಅವಕಾಶ ಒದಗಿಸಿಕೊಟ್ಟಿತು. ೧೮೬೨ರ ಸೆಪ್ಟೆಂಬರ್ ೨೨ರಂದು ಲಿಂಕನ್ ಗುಲಾಮ ವಿಮೋಚನಾ ಘೋಷಣೆಯನ್ನು ಬಹಿರಂಗಪಡಿಸಿದನು. ಆ ಘೋಷಣೆಯ ಸಾರಾಂಶ ಇಷ್ಟು: '೧೮೬೩ನೆಯ ಇಸವಿ ಜನವರಿ ಒಂದನೆಯ ತಾರೀಖಿನಿಂದ ಸಂಯುಕ್ತ ಸಂಸ್ಥಾನಗಳ ಮೇಲೆ ದಂಗೆ ಎದ್ದಿರುವ ಪ್ರಾಂತಗಳ ಎಲ್ಲ ಗುಲಾಮರು ಅಂದಿನಿಂದ, ಅಲ್ಲಿಂದಾಚೆ ಎಂದೆಂದಿಗೂ ಸ್ವತಂತ್ರರು'. ಈ ಘೋಷಣೆ ಕರಿಯರ ಜೀವನದಲ್ಲಿ ಒಂದು ಮಹತ್ತಾದ ಮೈಲಿಗಲ್ಲು.

ಲಿಂಕನ್ ಘೋಷಣೆ ಮಾಡಿದ ಮಾತ್ರಕ್ಕೆ ಯಾರೂ ಗುಲಾಮರನ್ನು ಬಿಡುಗಡೆ ಮಾಡಲಿಲ್ಲ. ಈ ಘೋಷಣೆ ಗಡಿ ಪ್ರಾಂತಗಳಿಗಾಗಲೀ ಅಥವಾ ಕಾನ್‌ಫೆಡರಸಿಯ

ಭಾಗಗಳಾಗಿದ್ದ ನ್ಯೂ ಆರ್ಲಿಯನ್ಸ್ ಮತ್ತು ವರ್ಜೀನಿಯ ಪ್ರದೇಶದ ನಾರ್‌ಫೋಕ್ (Norfolk)ಗಾಗಲೀ ಅನ್ವಯವಾಗಲಿಲ್ಲ. ಏಕೆಂದರೆ ಅವು ಫೆಡರಲ್ ಸೈನ್ಯದ ನಿಯಂತ್ರಣಕ್ಕೆ ಒಳಗಾಗಿದ್ದವು. ಇದು ಮೊದಲ ಹೆಜ್ಜೆ ಎಂದು ಲಿಂಕನ್ ಭಾವಿಸಿದ್ದನು. ಇಲ್ಲಿಂದ ಮುಂದೆ ಫೆಡರಲ್ ಸೈನ್ಯದ ಪ್ರತಿಯೊಂದು ವಿಜಯ ಗುಲಾಮಗಿರಿಯ ವಿನಾಶ ವನ್ನು ತ್ವರಿತಗೊಳಿಸುತ್ತದೆ ಎಂದು ಲಿಂಕನ್ ನಂಬಿದ್ದನು. ಕೆಲವು ಸಲಹೆಗಾರರು ಲಿಂಕನ್ ಗುಲಾಮ ವಿಮೋಚನೆ ಆ ಸಂದರ್ಭದಲ್ಲಿ ಅಸಂಗತವಾಗಿತ್ತು ಎಂದರೆ ಇನ್ನು ಕೆಲವರು ಅದು ನ್ಯಾಯಬಾಹಿರವಾದುದು ಎಂದು ಅಭಿಪ್ರಾಯಪಟ್ಟರು. ಆದರೆ ಲಿಂಕನ್ ವಿಮೋಚನಾ ಘೋಷಣೆ ಶತ್ರುವನ್ನು ಶಕ್ತಿಗುಂದುವಂತೆ ಮಾಡುವ ನ್ಯಾಯಬದ್ಧ ವಿಧಾನ ಎಂದು ನಂಬಿದ್ದನು. ದಾಕ್ಷಿಣಾತ್ಯರು ಸಹಜವಾಗಿ, ವಿಮೋಚನಾ ಘೋಷಣೆ ಗುಲಾಮರನ್ನು ದಂಗೆ ಏಳುವಂತೆ ಉದ್ರೇಕಿಸುವ ಕುತಂತ್ರ ಎಂದು ನಿರ್ಧರಿಸಿ ಹೋರಾಟವನ್ನು ಉಗ್ರ ಗೊಳಿಸಿದರು. ಗುಲಾಮಗಿರಿಯ ವಿರೋಧಿಗಳು ಘೋಷಣೆ ಮಾಡಿದ್ದೇನೋ ಸರಿ ಆದರೆ ಅದು ಸಾಧಿಸಿದ್ದು ಅತ್ಯಲ್ಪ ಎಂದು ಟೀಕಿಸಿದರು. ಲಿಂಕನ್ ಊಹಿಸಿದಂತೆ ಘೋಷಣೆ ಅಮೆರಿಕನ್ನರ ಮೇಲೆ ಸೂಕ್ಷ್ಮವಾದರೂ ಅವಿಚ್ಛಿನ್ನವಾದ ಪ್ರಭಾವವನ್ನು ಬೀರತೊಡಗಿತ್ತು. ಘೋಷಣೆಯ ತಕ್ಷಣದ ಪರಿಣಾಮವೆಂದರೆ ಕರಿಯರ ಮತ್ತು ಬಿಳಿಯರ ಪರಸ್ಪರ ಪೂರ್ವಾಗ್ರಹಗಳನ್ನು ಕೆರಳಿಸಿದ್ದು. ಬಹುಸಂಖ್ಯಾತ ಬಿಳಿಯ ಅಮೆರಿಕನ್ನರು ಗುಲಾಮಗಿರಿ ಯನ್ನು ವಿರೋಧಿಸಿದರೂ ಕರಿಯರು ತಮ್ಮ ಸಮಾನರು ಎಂದು ಒಪ್ಪಿಕೊಳ್ಳಲು ತಯಾರಿರಲಿಲ್ಲ. ಇನ್ನು ಕೆಲವರಿಗೆ ಗುಲಾಮ ವಿಮೋಚನೆ ಉತ್ತರ ಸಂಸ್ಥಾನಗಳನ್ನು ಅವರ ದಾಳಿಗೆ ಗುರಿಪಡಿಸಿದಂತಾಗುತ್ತದೆ ಎಂದು ಭಾವಿಸಿದ್ದರು. ಬಿಡುಗಡೆಯಾದ ಕರಿಯರು ತಮ್ಮೊಡನೆ ಕೆಲಸಗಳಿಗೆ ಸ್ಪರ್ಧಿಸುತ್ತಾರೆ, ಸಂಬಳ-ಸವಲತ್ತುಗಳನ್ನು ಕಡಿಮೆ ಯಾಗುವಂತೆ ಮಾಡುತ್ತಾರೆ, ಕಾಯಿಲೆಗಳನ್ನು ಹೆಚ್ಚಿಸುತ್ತಾರೆ, ಕೊನೆಗೆ ಬಿಳಿಯ ಜನರ ಬುಡಕಟ್ಟು ಕುಲ ಮಿಶ್ರಣದಿಂದ 'ತನ್ನ ಪವಿತ್ರತೆ'ಯನ್ನು ಕಳೆದುಕೊಂಡು ಕಾಲಕ್ರಮದಲ್ಲಿ ಅವಸಾನಗೊಳ್ಳುತ್ತದೆ ಎಂದು ನಂಬಿದ್ದರು.

ವಿಮೋಚನಾ ಘೋಷಣೆಯ ಪ್ರಕಾರ ಗುಲಾಮರು ಬಿಡುಗಡೆ ಹೊಂದಿದಾಗ ಬಹುಸಂಖ್ಯಾತ ಜನರ ಅಭಿಪ್ರಾಯವನ್ನು ಅನುಸರಿಸಿ ಫೆಡರಲ್ ಸರ್ಕಾರ 'ನಿಗ್ರಹ ನಿಬಂಧನೆ' (policy of containment)ಯನ್ನು ಜಾರಿಗೆ ತಂದಿತು. ಈ ನಿಬಂಧನೆ ಬಿಡುಗಡೆಯಾದ ಗುಲಾಮರು ದಕ್ಷಿಣ ಸಂಸ್ಥಾನಗಳಿಂದ ಉತ್ತರಕ್ಕೆ ವಲಸೆ ಬರುವುದನ್ನು ತಡೆಗಟ್ಟಿತು. ಕರಿಯರ ವಲಸೆ ಪ್ರವಾಹದಲ್ಲಿ ತಾವು ಕೊಚ್ಚಿಹೋಗಬಹುದೆಂದು ಕಳವಳ ಗೊಂಡಿದ್ದ ಔತ್ತರೇಯರನ್ನು ಈ ನಿಬಂಧನೆ ಸಮಾಧಾನಪಡಿಸಿತು. ಗುಲಾಮರ ವಿಮೋಚನೆಗೆ ಉತ್ತರ ಸಂಸ್ಥಾನಗಳಲ್ಲಿ ಬಿಳಿಯರು ವಿರೋಧ ವ್ಯಕ್ತಪಡಿಸುತ್ತಿದ್ದುದು ಸುತ್ತಲೂ ರಭಸದಿಂದ ಜರುಗುತ್ತಿದ್ದ ಬದಲಾವಣೆಗಳು ತಮ್ಮ ಬದುಕನ್ನು ಬುಡಮೇಲು ಮಾಡಬಹುದೆಂಬ ಭಯದಿಂದ, ಕರಿಯರ ಮೇಲನ ದ್ವೇಷದಿಂದಲ್ಲ. ಆದರೆ ಕರಿಯರು

ತಮಗಿಂತ ಕೀಳಾದವರು ಎನ್ನುವ ಭಾವನೆ ಬಿಳಿಯರಲ್ಲಿ ಬೇರೂರಿ ಬೆಳೆದಿತ್ತು. ಇದಕ್ಕೆ ಲಿಂಕನ್‌ನೂ ಹೊರತಾಗಿರಲಿಲ್ಲ. ಆದರೆ ಲಿಂಕನ್ ಅಂತರಂಗದಲ್ಲಿ ಪರಿವರ್ತನೆ ಗೊಳ್ಳುತ್ತಿದ್ದನು. ಬಿಡುಗಡೆಯಾದ ಗುಲಾಮರನ್ನು ಹಡಗಿನಲ್ಲಿ ದೂರ ದ್ವೀಪಗಳಿಗೆ ರವಾನಿಸಲು ಯೋಚಿಸಿದ್ದ. ಆದರೆ ಹಾಗೆ ಮಾಡಲಿಲ್ಲ. ಕರಿಯರ ನಾಯಕರನ್ನು ಲಿಂಕನ್ ಶ್ವೇತಭವನಕ್ಕೆ ಆಹ್ವಾನಿಸಲು ಪ್ರಾರಂಭಿಸಿದನು. ಶ್ವೇತಭವನದ ಸುತ್ತಣ ಜಾಗದಲ್ಲಿ ಕರಿಯರು ಸಭೆ ಸೇರಲು ಅವಕಾಶ ಮಾಡಿಕೊಟ್ಟನು. ೧೮೬೪ರಲ್ಲಿ ಕರಿಯ ತೀವ್ರಗಾಮಿ ನಾಯಕ ಫ್ರೆಡೆರಿಕ್ ಡಗ್ಲಾಸ್‌ನು ಲಿಂಕನ್‌ನನ್ನು ಭೇಟಿ ಮಾಡಿ ಮಾತುಕತೆ ನಡೆಸಿ ಹೊರಬಂದಾಗ ಅವನು ಉದ್ಗರಿಸಿದ 'ಲಿಂಕನ್ ನನ್ನನ್ನು ಮನುಷ್ಯನಂತೆ ಕಂಡು ಉಪಚರಿಸಿ ದನು' ಎನ್ನುವ ಹೇಳಿಕೆ ಜನಪ್ರಿಯವಾಯಿತು.

ಕ್ರಮೇಣವಾಗಿ ಬಿಳಿಯರು ತಮಗರಿಯದಂತೆ ಬದಲಾಗುತ್ತ ಹೋದರು. ಬಿಳಿಯರ ಆಲೋಚನೆಯಲ್ಲಿ ಉಂಟಾದ ಕ್ರಾಂತಿಕಾರಕ ಬದಲಾವಣೆಗೆ ಉದಾಹರಣೆ 'ಕರಿಯರನ್ನು ಯಾಕೆ ಸೈನಿಕರನ್ನಾಗಿ ಯುದ್ಧದಲ್ಲಿ ಉಪಯೋಗಿಸಿಕೊಳ್ಳಬಾರದು?' ಎನ್ನುವ ಪ್ರಶ್ನೆ. ಅಮೆರಿಕನ್ ಕ್ರಾಂತಿಯಲ್ಲಿ ಕರಿಯ ಸೈನಿಕರು ಬ್ರಿಟಿಷರ ಮೇಲೆ ಯುದ್ಧ ಮಾಡಿದ್ದರು. ೧೮೧೨ರಲ್ಲಿ ನಡೆದ ಯುದ್ಧದಲ್ಲಿ ಕರಿಯ ಸೈನಿಕರು ನ್ಯೂ ಆರ್ಲಿಯನ್ಸ್ ಕದನದಲ್ಲಿ ಭಾಗವಹಿಸಿದ್ದರು. ೧೭೯೨ರಲ್ಲಿ ಜಾರಿಗೆ ಬಂದಿದ್ದ ಒಂದು ಕಾಯಿದೆ ಪ್ರಕಾರ ಕರಿಯರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುತ್ತಿರಲಿಲ್ಲ. ಅಂತರ್ಯುದ್ಧದ ಪ್ರಾರಂಭದಲ್ಲಿ ಈ ಕಾಯಿದೆ ಸೈನ್ಯಕ್ಕೆ ಸೇರಲು ಉತ್ಸುಕರಾಗಿದ್ದ ಸಾವಿರಾರು ಕರಿಯ ಯುವಕರನ್ನು ನಿರಾಕರಿಸುವಂತೆ ಮಾಡಿತು. ೧೮೬೨ರ ಹೊತ್ತಿಗೆ ಸೈನಿಕರ ಸಂಖ್ಯೆಯನ್ನು ಹೆಚ್ಚಿಸುವುದು ಅನಿವಾರ್ಯವಾಗಿ ಬಿಳಿಯರು ತಮ್ಮ ಅಭಿಪ್ರಾಯವನ್ನು ಬದಲಿಸಬೇಕಾಗಿ ಬಂತು. ಬಹುಸಂಖ್ಯಾತ ಬಿಳಿಯರು ಕರಿಯರನ್ನು ಸೈನ್ಯಕ್ಕೆ ಸೇರಿಸುವುದರ ಬಗ್ಗೆ ಆಕ್ಷೇಪಣೆ ಮಾಡಲಿಲ್ಲ. ಸರ್ಕಾರ ಒಪ್ಪಿಗೆ ಕೊಟ್ಟಿತು. ಆಗಸ್ಟ್ ೧೮೬೨ರಲ್ಲಿ ಯುದ್ಧ ಕಾರ್ಯದರ್ಶಿಯಾಗಿದ್ದ ಎಡ್ವಿನ್ ಸ್ಟಾನ್‌ಟನ್ (Edwin Stanton)ದಕ್ಷಿಣ ಕೆರೊಲಿನ ಕಡಲಿನ ದ್ವೀಪಗಳನ್ನು ವಶಪಡಿಸಿಕೊಂಡು ಅಧಿಕಾರ ನಡೆಸುತ್ತಿದ್ದ ಫೆಡರಲ್ ಸೈನ್ಯದ ಮುಖ್ಯಾಧಿಕಾರಿಗೆ ಆ ದ್ವೀಪಗಳಲ್ಲಿದ್ದ ಕರಿಯ ಯುವಕರನ್ನು ಸೈನ್ಯ ಸೇರಿಕೊಳ್ಳುವಂತೆ ಆದೇಶ ನೀಡಿದನು. ಜನವರಿ ೧೮೬೨ರಲ್ಲಿ ಮೆಸಾಚ್ಯುಸೆಟ್ಸ್ ಗವರ್ನರ್ ಕರಿಯ ಸೈನಿಕರ ದಳವನ್ನು ಸೇರಿಸಿ ತರಬೇತಿ ಕೊಡಲು ಸ್ಟಾನ್‌ಟನ್ ಒಪ್ಪಿಗೆ ನೀಡಿದನು. ನಂತರ ಈ ಕರಿಯ ಸೈನಿಕರ ತುಕಡಿ 'ಮೆಸಾಚ್ಯುಸೆಟ್ಸ್ ೫೪' (Massachusetts 54th) ಎಂದು ಹೆಸರುವಾಸಿಯಾಯಿತು. ಇದಾದ ನಂತರ ಇತರ ಸಂಸ್ಥಾನಗಳು ಕರಿಯ ಸೈನಿಕರನ್ನು ಸೇರಿಸಿಕೊಂಡು ತರಬೇತಿ ಕೊಡಲು ಪ್ರಾರಂಭಿಸಿದವು. ಮೇ ೧೮೬೩ರಲ್ಲಿ ಫೆಡರಲ್ ಸರ್ಕಾರ 'ಕರಿಯ ಸೈನಿಕರ ವಿಭಾಗ' (Bureau of Colored Troops)ವನ್ನು ಸ್ಥಾಪಿಸಿ, ಕರಿಯ ಯುವಕರನ್ನು ಸೈನ್ಯಕ್ಕೆ ನೋಂದಾಯಿಸುವ ಜವಾಬ್ದಾರಿ ಯನ್ನು ಆ ವಿಭಾಗಾಧಿಕಾರಿಗಳಿಗೆ ವಹಿಸಿತು. ಅಂತರ್ಯುದ್ಧದ ಅಂತಿಮ ಘಟ್ಟದಲ್ಲಿ

ಸೈನ್ಯ ೮:೧ (ಎಂಟು ಬಿಳಿಯರಿಗೆ ಒಬ್ಬ ಕರಿಯ) ಎಂದು ವ್ಯವಸ್ಥೆಗೊಂಡಿತ್ತು. ಕರಿಯರ ಮತ್ತು ಬಿಳಿಯರ ಸೈನ್ಯಗಳನ್ನು ಬೇರೆ ಮಾಡಿ, ಎರಡು ಸೈನ್ಯಗಳನ್ನು ಬಿಳಿಯ ಸೈನ್ಯಾಧಿಕಾರಿಗಳ ಆಜ್ಞೆಗೆ ಒಳಪಡಿಸಿದರು. ಕರಿಯರ ಸೈನ್ಯ ಯುದ್ಧದಲ್ಲಿ ವೀರಾವೇಶದಿಂದ ಹೋರಾಡಿ ಹೆಸರು ಗಳಿಸಿತು. ೩೮೦೦೦ ಕರಿಯ ಸೈನಿಕರು ಸಾವಿಗೀಡಾದರು. ಯುದ್ಧರಂಗದಲ್ಲಿ ಶತ್ರು ಗುಂಡಿನ ಮಳೆಗರೆದರೂ ಲೆಕ್ಕಿಸದೆ ಧೈರ್ಯದಿಂದ ಮತ್ತು ದೃಢನಿಶ್ಚಯದಿಂದ ಹೋರಾಡಿದ ಕರಿಯ ಸೈನಿಕರು ಪೂರ್ವಾಗ್ರಹದಿಂದ ಮುಚ್ಚಿದ್ದ ಬಿಳಿಯ ಸೈನಿಕರ ಕಣ್ಣುಗಳನ್ನು ತೆರೆಯುವಂತೆ ಮಾಡಿದರು. ಲಾಗಾಯ್ತಿನಿಂದ ರೂಢಿಸಿಕೊಂಡು ಬಂದ ನಂಬಿಕೆಗಳು – 'ಕರಿಯರು ಕೆಲಸಕ್ಕೆ ಬಾರದವರು, ಅವರು ಸ್ವಭಾವತಃ ಹೇಡಿಗಳು' ಎನ್ನುವುದೆಲ್ಲ ಸುಳ್ಳು ಎನ್ನುವುದು ಸಾಬೀತಾಯಿತು. ಲಿಂಕನ್ ನಂಬಿದ್ದಂತೆ ಹಂತ ಹಂತವಾಗಿ ಬಿಳಿಯರ ಹೃದಯ ಪರಿವರ್ತನೆಗೊಳ್ಳುತ್ತಿತ್ತು. ಒಟ್ಟಿನಲ್ಲಿ ಕರಿಯರಿಗೆ, ಗುಲಾಮರಾಗಲಿ ಅಥವಾ ಬಿಡುಗಡೆ ಪಡೆದವರಾಗಲಿ, ವಿಮೋಚನಾ ಘೋಷಣೆ ಕತ್ತಲೆಯಿಂದಾಚೆ ಕರೆದೊಯ್ಯುವ ದಾರಿದೀಪವಾಗಿ ತೋರಿತು. ಪಕ್ಕನೆ ಎಲ್ಲ ಗುಲಾಮರ ಬಿಡುಗಡೆ ಆಗದಿರಬಹುದು, ಬಿಳಿಯರ ಪೂರ್ವಾಗ್ರಹ ವಿಚಾರ ಕಡಿಮೆಯಾಗದಿರಬಹುದು. ಆದರೆ ವಿಮೋಚನಾ ಘೋಷಣೆ ಕರಿಯರಿಗೆ ಮುಂದೆ ಬರಬಹುದಾದ ಒಳ್ಳೆಯ ದಿನಗಳ ಸಂಕೇತವಾಯಿತು. ಆಧುನಿಕರ ದೃಷ್ಟಿಯಲ್ಲಿ ಲಿಂಕನ್ 'ವರ್ಣ ದ್ವೇಷಿ' (racist)ಯಾಗಿದ್ದನು ಎನ್ನಬಹುದು. ಆದರೆ ಅವನ ಸಮಕಾಲೀನರಾದ ತೀವ್ರಗಾಮಿ ಕರಿಯರು ಅವನನ್ನು ಬಹಳವಾಗಿ ಗೌರವಿಸುತ್ತಿದ್ದರು. ದಿ ಆ್ಯಂಗ್ಲೋ-ಆಫ್ರಿಕನ್ (The Anglo-African) ಎಂಬ ಕ್ರಾಂತಿಕಾರಿ ಕರಿಯರ ವೃತ್ತ ಪತ್ರಿಕೆ ೧೮೬೪ರಲ್ಲಿ 'ಲಿಂಕನ್‌ನ ಉದಾತ್ತ ಕಾರ್ಯ'ಗಳನ್ನು ಶ್ಲಾಘಿಸಿದುದೆ ಅಲ್ಲದೆ ಅವನ ಮರುಚುನಾವಣೆಯನ್ನು ಬೆಂಬಲಿಸಿತು. ಫ್ರೆಡೆರಿಕ್ ಡಗ್ಲಾಸ್ ಲಿಂಕನ್ ಕುರಿತು 'ನಾನು ಯಾವ ಅನುಮಾನವಿಲ್ಲದೆ, ಏನನ್ನೂ ಮರೆಮಾಚದೆ ಪ್ರೀತಿಸಿ, ಗೌರವಿಸಿ, ನಂಬುವ ವ್ಯಕ್ತಿ' ಎಂದು ಹೇಳಿದ್ದಾನೆ.

ಜನವರಿ ೧, ೧೮೬೩ರ ನಂತರ ಫೆಡರಲ್ ಸೈನ್ಯಕ್ಕೆ 'ಸ್ವಾತಂತ್ರ್ಯ ಸೇನೆ' (Army of Freedom) ಎಂಬ ಅಡ್ಡ ಹೆಸರಿಟ್ಟರು. ಈ ಸೇನೆಯನ್ನು ನಡೆಸಿಕೊಂಡು (marching) ಹೋದಲ್ಲಿ ಗುಲಾಮರಿಗೆ ಸ್ವಾತಂತ್ರ್ಯದ ಅವಕಾಶ ತೆರೆದುಕೊಳ್ಳುತ್ತಿತ್ತು. ಕೆಲಸ ಮಾಡುತ್ತಿದ್ದ ಗುಲಾಮರು ಕೆಲಸದ ಸಲಕರಣೆಗಳನ್ನು ಎಸೆದು ಓಡಿಹೋಗಿ ತಮ್ಮ ಒಡೆಯರಿಂದ ತಪ್ಪಿಸಿಕೊಳ್ಳುತ್ತಿದ್ದರು. ಹೀಗೆ, ಫೆಡರಲ್ ಸೈನ್ಯ ಪರೋಕ್ಷವಾಗಿ ಗುಲಾಮ ವಿಮೋಚನೆಯ ಸಾಧನವಾಗಿ ಪರಿಣಮಿಸಿತು.

ಆನ್‌ಟೈಟಾಮ್‌ನಿಂದ ಗೆಟ್ಟಿಸ್‌ಬರ್ಗ್‌ಗೆ

ಜನರಲ್ ಮೆಕ್‌ಲೆಲ್ಲನ್‌ನನ್ನು ತೆಗೆದುಹಾಕಿ ಲಿಂಕನ್ ಜನರಲ್ ಆ್ಯಂಬ್ರೋಸ್

ಬರ್ನ್‌ಸೈಡ್ (General Ambrose Burnside)ನನ್ನು ನೇಮಿಸಿದನು. ತಲೆಗೂದಲು ಎರಡೂ ಕೆನ್ನೆಗಳ ಮೇಲೆ, ಕಿವಿಗಳನ್ನು ದಾಟಿ, ಮೀಸೆಗಳಂತೆ ಉದ್ದವಾಗಿ ಬೆಳೆಸುವುದಕ್ಕೆ ಬರ್ನ್‌ಸೈಡ್ ಪ್ರಸಿದ್ಧಿಯಾಗಿದ್ದನು. ಈ ವಿಶಿಷ್ಟ ಕೇಶಾಲಂಕಾರವನ್ನು ಕ್ರಮೇಣ ಜನ ಸಾಮಾನ್ಯರು ಸೈಡ್ ಬರ್ನ್ಸ್(Side- burns) ಎಂದು ಕರೆದರು. ಅಂದಿನಿಂದ ಆ ಹೆಸರು ಆಡುಮಾತಿನಲ್ಲಿ ಸೇರಿಹೋಗಿ ಈಗಲೂ ಬಳಕೆಯಲ್ಲಿದೆ. ಬರ್ನ್ ಸೈಡ್ ಆಕ್ರಮಣಕಾರಿ ಮನೋಭಾವದವನಾಗಿದ್ದನು. ರಿಚ್‌ಮಂಡ್ ವಶ ಪಡಿಸಿಕೊಳ್ಳುವ ಉದ್ದೇಶದಿಂದ ಆವನು ರಾಪ್ಪಾಹನ್ನೋಕ್ (Rappahannock)ನದಿ ಹಾದು ಫ್ರೆಡ್ರಿಕ್ ಬರ್ಗ್‌ನ್ನು ಆಕ್ರಮಿಸಿ ಕೊಳ್ಳಲು ತನ್ನ ಸೈನ್ಯವನ್ನು ನಡೆಸಿಕೊಂಡು ಹೋದನು. ಜನರಲ್ ಲೀ ತನ್ನ ಇಡೀ ಸೈನ್ಯವನ್ನು ಫ್ರೆಡ್ರಿಕ್ ಬರ್ಗ್ ಹಿಂದೆ ದುರ್ಗಮವಾದ ಸ್ಥಳಗಳಲ್ಲಿ ಯುದ್ಧಸನ್ನದ್ಧವಾಗಿ ನಿಲ್ಲಿಸಿದ್ದನು. ಜನರಲ್ ಲೀ ಸೈನ್ಯದ ಅನುಕೂಲಗಳನ್ನು ಅರ್ಥ ಮಾಡಿಕೊಂಡ ಬರ್ನ್ ಸೈಡ್ ಬುದ್ಧಿವಂತನಾಗಿದ್ದರೆ ತನ್ನ ಸೈನ್ಯಕ್ಕೆ ಹಿಂದೆ ಸರಿಯಲು ಹೇಳುತ್ತಿದ್ದ. ಆದರೆ ಶತ್ರುವಿನ ಅನುಕೂಲತೆಯನ್ನು ಲಕ್ಷಿಸದೆ ಬರ್ನ್ ಸೈಡ್ ತನ್ನ ಸೈನ್ಯ ಮುನ್ನುಗ್ಗಲು ಅಪ್ಪಣೆ ಮಾಡಿದನು. ತೆಪ್ಪಗಳನ್ನು ಕೂಡಿಸಿ ಮಾಡಿದ ಸೇತುವೆ ಮೇಲೆ ನದಿಯನ್ನು ದಾಟಿ ಸೈನ್ಯ ಫ್ರೆಡ್ರಿಕ್ ಬರ್ಗ್ ನಗರವನ್ನು ವಶ ಪಡಿಸಿಕೊಂಡಿತು. ನಂತರ ಲೀಯ ರಕ್ಷಣಾದಳ (defense line)ವನ್ನು ಮುರಿದು ಮುನ್ನುಗ್ಗುವ ಸಲುವಾಗಿ ಬರ್ನ್ ಸೈಡ್‌ನ ಸೈನ್ಯ ಅಲೆ ಅಲೆಯಾಗಿ ಶತ್ರುಸೈನ್ಯದ ಮೇಲೆ ಎರಗಿದರು. 'ಮೇರಿಸ್ ಹೈಟ್ಸ್' (Marye's Heights)ಎಂಬ ದಿಬ್ಬದ ಮೇಲಿಂದ ಲೀ ಸೈನ್ಯ ಫಿರಂಗಿ ಗುಂಡುಗಳಿಂದ ಫೆಡರಲ್ ಸೈನ್ಯವನ್ನು ಉಡಾಯಿಸಿದರು. ಭಯಂಕರ ಸಾವು ನೋವುಗಳನ್ನು ಅನುಭವಿಸಿದ ಬರ್ನ್ ಸೈಡ್ ಸೈನ್ಯ ಮುಂದುವರಿಯುವುದು ಸಾಧ್ಯವಾಗದೆ ಹೋಯಿತು. ೧೮೬೨ ಡಿಸೆಂಬರ್ ೧೪, ದಾಳಿ ವಿಫಲವಾದ ಮಾರನೆಯ ದಿನ, ಬರ್ನ್ ಸೈಡ್ ಕಣ್ಣೀರು ಸುರಿಸುತ್ತ ಫ್ರೆಡ್ರಿಕ್ ಬರ್ಗ್‌ನ್ನು ಖಾಲಿ ಮಾಡುವಂತೆ ತನ್ನ ಸೈನ್ಯಕ್ಕೆ ಆಜ್ಞಾಪಿಸಿದನು. ಇದಾದ ಸ್ವಲ್ಪ ಸಮಯದಲ್ಲಿ ಬರ್ನ್ ಸೈಡ್ ಜಾಗಕ್ಕೆ ಜನರಲ್ ಜೋಸೆಫ್ ಹೂಕರ್ (General Joseph Hooker)ನನ್ನು ನೇಮಕ ಮಾಡಲಾಯಿತು.

ದುರದೃಷ್ಟವೆಂದರೆ ಹೂಕರ್ ಬರ್ನ್ ಸೈಡ್‌ಗಿಂತ ಉತ್ತಮನಾಗಿರಲಿಲ್ಲ. ಮಾರ್ಚ್ ೧೮೬೩ರ ಹೊತ್ತಿಗೆ ಜನರಲ್ ಹೂಕರ್ ೧೨೫೦೦೦ ಸೈನಿಕರನ್ನು ಸುಸಜ್ಜಿತಗೊಳಿಸಿ ಯುದ್ಧಕ್ಕೆ ತಯಾರಿರುವಂತೆ ಮಾಡಿದನು. ಏಪ್ರಿಲ್ ತಿಂಗಳ ಕೊನೆಯಲ್ಲಿ ಆವನ ಸೈನ್ಯ ರಾಪ್ಪಾಹನ್ನೋಕ್ ನದಿಯನ್ನು ದಾಟಿ ಹೋಗಿ ಚಾನ್ಸಲರಸ್ ವಿಲ್ಲ್ ಎಂಬಲ್ಲಿ ಬೀಡು ಬಿಟ್ಟಿತು. ಈ ಊರು ಫ್ರೆಡ್ರಿಕ್ ಬರ್ಗ್‌ನಿಂದ ಪಶ್ಚಿಮಕ್ಕೆ ಸುಮಾರು ಹತ್ತು ಮೈಲಿ ದೂರದಲ್ಲಿತ್ತು. ಜನರಲ್ ಹೂಕರ್‌ನ ಸೈನ್ಯ ಕಾನ್‌ಫೆಡರೇಟ್ ಸೈನ್ಯಕ್ಕಿಂತಲೂ ಎರಡು ಪಟ್ಟು ದೊಡ್ಡದಾಗಿತ್ತು. ಅವನು ಕೂಡಲೇ ಕದನ ಪ್ರಾರಂಭಿಸಬೇಕಿತ್ತು, ಅದಕ್ಕೆ ಬದಲಾಗಿ ಅವನು ತಡ ಮಾಡಿದನು. ಜನರಲ್ ಲೀ ಧೈರ್ಯವಾಗಿ ಕಾರ್ಯ ಕೈಗೊಂಡು 'ಸ್ಟೋನ್

ವಾಲ್' ಜಾಕ್ಸನ್ ಕೈಕೆಳಗೆ ೨೮೦೦೦ ಸೈನಿಕರನ್ನು ಗಿಡ ಮರ ಬಳ್ಳಿಗಳಿಂದ ದಟ್ಟವಾಗಿ ದುಸ್ತರವಾಗಿದ್ದ ಹಳ್ಳಿಗಾಡಿನ ಆಚೆ ಸುಳಿವು ಕೊಡದಂತೆ ನುಸುಳಿ ಹೋಗಿ, ಆಯಕಟ್ಟಿನ ಜಾಗದಲ್ಲಿ ಒಟ್ಟಾಗಿ, ಫೆಡರಲ್ ಸೈನ್ಯದ ಬಲಪಾರ್ಶ್ವವನ್ನು ಅಡ್ಡಗಟ್ಟಿ, ಅನಿರೀಕ್ಷಿತವಾಗಿ ದಾಳಿ ನಡೆಸಲು ತಯರಾಗಿರುವಂತೆ ಆಜ್ಞಾಪಿಸಿದನು. ಮೇ ತಿಂಗಳ ೨ನೆಯ ತಾರೀಖಿನ ಸಂಜೆ ಜಾಕ್ಸನ್ ದಳ ಫೆಡರಲ್ ಸೈನ್ಯದ ಬಲಪಾರ್ಶ್ವದ ಮೇಲೆ ಭಯಂಕರವಾಗಿ ದಾಳಿ ನಡೆಸಿತು. ಅನಿರೀಕ್ಷಿತವಾದ ಈ ದಾಳಿಯಿಂದ ಫೆಡರಲ್ ಸೈನ್ಯ ತತ್ತರಿಸಿಹೋಯಿತು. ಕದನ ಮುಂಚಿತವಾಗಿ ನಡೆದಿದ್ದರೆ ಕಾನ್‌ಪೆಡರೇಟ್ ಸೈನ್ಯ ನಿರ್ಣಾಯಕ ವಿಜಯ ಸಾಧಿಸಬಹುದಿತ್ತು. ರಾತ್ರಿಯಾದುದರಿಂದ ಕದನ ನಿಂತಿತು. ಮಾರನೆಯ ದಿನ ಬೆಳಗ್ಗೆ ಫೆಡರಲ್ ಸೈನ್ಯ ಒಟ್ಟಾಗಿ ನಿಂತ ಜಾಗದಿಂದ ಕದಲದೆ ವೈರಿಗಳನ್ನು ಎದುರಿಸಿತು. ಘೋರ ಕಾಳಗ ಜರುಗಿ, ಮೇ ತಿಂಗಳ ೫ನೆಯ ತಾರೀಖಿನವರೆಗೆ ಮುಂದುವರಿಯಿತು. ನಂತರ ಹೂಕರನ ಸೈನ್ಯ ವ್ಯವಸ್ಥಿತವಾಗಿ ಹಿಮ್ಮೆಟ್ಟುತ್ತ ರಾಪ್ಪಾಹನ್ನೋಕ್ ನದಿಯ ಹಿಂಭಾಗವನ್ನು ತಲುಪಿತು.

ಈ ಕದನದಲ್ಲಿ ಕಾನ್‌ಫೆಡರೇಟ್ ಸೈನ್ಯ ಅತ್ಯಂತ ಹೆಚ್ಚಿನ ಸಾವು ನೋವುಗಳನ್ನು ಅನುಭವಿಸಿತು. ೧೨ ಸಾವಿರಕ್ಕೂ ಮಿಗಿಲಾಗಿ ಸೈನಿಕರು ಮರಣಹೊಂದಿದರು. ಫೆಡರಲ್ ಸೈನ್ಯದಲ್ಲೂ ಅಷ್ಟೆ ಸಾವು-ನೋವುಗಳಾಗಿದ್ದವು. ಆದರೆ ಕಾನ್‌ಫೆಡರೇಟ್ ಸೈನ್ಯದಲ್ಲಿ ಸತ್ತವರ ಸ್ಥಾನಕ್ಕೆ ಬೇರೆಯವರನ್ನು ತರುವುದು ಕಠಿಣ ಸಮಸ್ಯೆಯಾಗಿತ್ತು. ಅಲ್ಲದೆ ಕಾನ್‌ಫೆಡರೇಟ್ ಸೈನ್ಯ 'ಸ್ಟೋನ್ ವಾಲ್' ಜಾಕ್ಸನ್‌ನನ್ನು ಕಳೆದುಕೊಂಡಿತು. ಯುದ್ಧರಂಗದ ಪರಿಸ್ಥಿತಿಯನ್ನು ಪರಿಶೀಲನೆ ಮಾಡಿ ವಾಪಸ್ಸು ಬರುತ್ತಿದ್ದ ಅವನನ್ನು ಅವನ ಸೈನಿಕರೆ ವೈರಿ ಎಂದು ತಪ್ಪಾಗಿ ತಿಳಿದು ಗುಂಡು ಹಾರಿಸಿ ಕೊಂದರು. ಈ ದುರ್ಘಟನೆಯ ನಂತರ ಜನರಲ್ ಲೀ ಆಕ್ರಮಣ ಮಾಡಲು ನಿರ್ಧರಿಸಿದನು. ೭೫ ಸಾವಿರ ಸೈನಿಕರೊಡನೆ ಅವನು ಪುನಃ ಪೊಟೊಮಾಕ್ ನದಿಯನ್ನು ದಾಟಿ ತನ್ನ ಸೈನ್ಯದ ಬಲಪಾರ್ಶ್ವವನ್ನು ಬೆನ್ನಟ್ಟಿ ಬರುತ್ತಿದ್ದ ದೊಡ್ಡ ಫೆಡರಲ್ ಸೈನ್ಯವನ್ನು ಕಡೆಗಣಿಸಿ ಮುಂದುವರಿದು ಜೂನ್ ತಿಂಗಳ ಕೊನೆಯಲ್ಲಿ ದಕ್ಷಿಣ ಪೆನ್ಸಿಲ್‌ವೇನಿಯವನ್ನು ತಲುಪಿದನು. ಅವನು ತಲುಪಿದ ಜಾಗ ಬಾಲ್ಟಿಮೋರ್ ನಗರದ ವಾಯುವ್ಯ ದಿಕ್ಕಿನಲ್ಲಿ ೫೦ ಮೈಲಿ ದೂರದಲ್ಲಿತ್ತು. ಆ ಜಾಗದಿಂದ ಹ್ಯಾರಿಸ್‌ಬರ್ಗ್ ಊರಿಗೆ ಹತ್ತು ಮೈಲಿ. ೧೮೬೩ 'ಜುಲೈ ೧ನೆಯ ತಾರೀಖು ಗೆಟ್ಟಿಸ್‌ಬರ್ಗ್ (Gettysburg)ಊರಿನಲ್ಲಿ ಕಾನ್‌ಫೆಡರೇಟ್ ಸೈನಿಕರು ಖರೀದಿಸಲು ಷೂ ಹುಡುಕುತ್ತಿದ್ದಾಗ ಆ ಊರಿನಲ್ಲಿ ಬೀಡು ಬಿಟ್ಟಿದ್ದ ಫೆಡರಲ್ ಸೈನ್ಯದ ಅಶ್ವದಳ ದೊಂದಿಗೆ ಘರ್ಷಣೆ ನಡೆಯಿತು. ಎರಡು ಕಡೆಯವರು ಹೆಚ್ಚಿನ ಸೈನ್ಯವನ್ನು ಸಹಾಯಕ್ಕೆ ಬರುವಂತೆ ಹೇಳಿಕಳುಹಿಸಿದರು. ಪ್ರವಾಹ ಉಕ್ಕಿ ಹರಿಯುವ ಎರಡು ನದಿಗಳು ಸಂಗಮ ದಲ್ಲಿ ಸೇರುವಂತೆ, ಫೆಡರಲ್ ಮತ್ತು ಕಾನ್‌ಫೆಡರೇಟ್ ಸೈನ್ಯಗಳು ಗೆಟ್ಟಿಸ್‌ಬರ್ಗ್ ಊರಿನಲ್ಲಿ ಬಂದು ಜಮಾಯಿಸಿದವು.

ಅದೇ ದಿನ ಕಾನ್‌ಫೆಡರೇಟ್ ಸೈನ್ಯ ಗೆಟ್ಟಿಸ್‌ಬರ್ಗ್ ಊರನ್ನು ತನ್ನ ಹತೋಟಿಗೆ ಒಳಪಡಿಸಿಕೊಂಡಿತು. ಫೆಡರಲ್ ಸೈನ್ಯ ಆಗ ಜನರಲ್ ಜಾರ್ಜ್ ಮೀಡ್ (General George Meade)ನ ಕೈಕೆಳಗಿತ್ತು. ಜನರಲ್ ಮೀಡ್ ತನ್ನ ಸೈನ್ಯವನ್ನು ಊರಿನ ದಕ್ಷಿಣದಲ್ಲಿದ್ದ ಒಂದು ಸಮಾಧಿಯ ಬದುವಿನ (cemetary ridge) ಮರೆಯಲ್ಲಿ ಯುದ್ಧ ಸನ್ನದ್ಧವಾಗಿ ನಿಲ್ಲಿಸಿದನು. ಜನರಲ್ ಲೀ ತನ್ನ ಸೈನ್ಯವನ್ನು ಫೆಡರಲ್ ಸೈನ್ಯ ಸಜ್ಜಾಗಿ ನಿಂತಿದ್ದ ಸಮಾಧಿ ಬದುವಿಗೆ ಸಮಾನಾಂತರವಾಗಿದ್ದ ಕ್ರೈಸ್ತ ಸನ್ಯಾಸಿಗಳ ಮಠದ ದಿಣ್ಣೆಗಳ ಸಾಲನ್ನು (seminary ridge) ಆಶ್ರಯಿಸಿ ಯುದ್ಧಕ್ಕೆ ಸಿದ್ಧಪಡಿಸಿ ನಿಲ್ಲಿಸಿದ್ದನು. ಫೆಡರಲ್ ಸೈನ್ಯ ಹುದುಗಿ ನಿಂತಿದ್ದ ಬದುವಿಗೂ ಕಾನ್‌ಫೆಡರೇಟ್ ಸೈನ್ಯ ಆಶ್ರಯಿಸಿದ್ದ ದಿಣ್ಣೆಗಳ ಸಾಲಿಗೂ ಮಧ್ಯೆ ಇದ್ದ ಮೈದಾನದಲ್ಲಿ ಸಂಯುಕ್ತ ಸಂಸ್ಥಾನಗಳ ಭವಿಷ್ಯ ನಿರ್ಧಾರವಾಗುವ ಸಂದರ್ಭ ಒದಗಿ ಬಂದಿತ್ತು! ಕಾನ್‌ಫೆಡರೇಟ್ ಸೈನ್ಯ ಎರಡು ದಿನಗಳು ಎಡೆಬಿಡದೆ ಸಮಾಧಿ ಬದುವಿನ ಮರೆಯಲ್ಲಿದ್ದ ಫೆಡರಲ್ ಸೈನ್ಯಗಳ ಮೇಲೆ ದಾಳಿ ನಡೆಸಿತು. ಕಾನ್‌ಫೆಡರೇಟ್ ಜನರಲ್ ಜಾರ್ಜ್ ಪಿಕೆಟ್ (General George Pickett)ನ ಕೈಕೆಳಗಿನ ೧೫೦೦೦ ಸೈನಿಕರು ಮಿಂಚಿನಂತೆ ವೇಗವಾಗಿ ಮುನ್ನುಗ್ಗಿ ಮೈದಾನವನ್ನು ದಾಟಲು ಪ್ರಯತ್ನಿಸಿದರು. ಅವರ ಪ್ರಯತ್ನ ಹುಚ್ಚು ಸಾಹಸವಾಯಿತು. ಫೆಡರಲ್ ಸೈನ್ಯ ಮುನ್ನುಗ್ಗಿ ಬರುತ್ತಿದ್ದ ಪಿಕೆಟ್‌ನ ಸೈನಿಕರನ್ನು ಗುಂಡಿನ ಮಳೆಗರೆದು ಕೊಚ್ಚಿಹಾಕಿದರು. ೧೫೦೦೦ಸೈನಿಕರಲ್ಲಿ ಕೇವಲ ೫೦೦೦ ಮಾತ್ರ ಮೈದಾನವನ್ನು ದಾಟಿ ಬದುವನ್ನು ತಲುಪಿದರು. ಆಗ ನಡೆದ ಕೈ ಕೈ ಸೆಣಸಾಟದಲ್ಲಿ ಫೆಡರಲ್ ಸೈನಿಕರು ಅವರನ್ನು ಸೋಲಿಸಿ ಸೆರೆ ಹಿಡಿದರು. ಸೂರ್ಯ ಮುಳುಗುವ ಹೊತ್ತಿಗೆ ಕಾನ್‌ಫೆಡರೇಟ್ ಸೈನ್ಯ ಸೋತು, ಸೊರಗಿ ರಕ್ತದಲ್ಲಿ ತೊಯ್ದುಹೋಗಿತ್ತು. ಫೆಡರಲ್ ಸೈನ್ಯವನ್ನು ಚದುರಿಸಲು ಶತ್ರುಸೈನ್ಯಕ್ಕೆ ಸಾಧ್ಯವಾಗಲಿಲ್ಲ. ಜನರಲ್ ಲೀ ರಣರಂಗದಲ್ಲಿ ಸೋಲನ್ನು ಅನುಭವಿಸಿದ್ದು ಇದೇ ಮೊದಲು. ಗೆಟ್ಟಿಸ್‌ಬರ್ಗ್ ಕದನ ಅಂತರ್ಯುದ್ಧದ ಗತಿಯನ್ನು ಬದಲಾಯಿಸಿತು. ಈ ಕದನದಲ್ಲಿ ಸಾವನ್ನಪ್ಪಿದ ಸೈನಿಕರು ಹುತಾತ್ಮರಾದರು. ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದ ಅಬ್ರಹಾಮ್ ಲಿಂಕನ್ ಆ ರಣರಂಗದಲ್ಲಿ ನಿಂತು ನವೆಂಬರ್ ೧೯, ೧೮೬೩ರಲ್ಲಿ ಮಾಡಿದ ಭಾಷಣ ಅಮೆರಿಕನ್ ಸಾಹಿತ್ಯದ ಅಣಿಮುತ್ತುಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ.

ಅಬ್ರಹಾಂ ಲಿಂಕನ್ ಗೆಟ್ಟಿಸ್‌ಬರ್ಗ್ ಭಾಷಣ
ನವೆಂಬರ್ ೧೯, ೧೮೬೩

'ಎಂಟು ದಶಕ ಮತ್ತು ಏಳು ವರ್ಷಗಳ ಹಿಂದೆ ನಮ್ಮ ಪಿತೃಗಳು ಸ್ವಾತಂತ್ರ್ಯ ಕಲ್ಪನೆಯಿಂದ ಜನಿಸಿದ ಮತ್ತು ಸಕಲ ಮಾನವರೂ ಸಮಾನರಾಗಿ ಸೃಷ್ಟಿಯಾದವರು ಎನ್ನುವ ಸೂಕ್ತಿಗೆ ಬದ್ಧವಾದ, ಹೊಸ ರಾಷ್ಟ್ರವೊಂದನ್ನು ಈ ಭೂಖಂಡದ ಮೇಲೆ ಹುಟ್ಟುಹಾಕಿದರು. ಈಗ ನಾವು ಅಪಾರವಾದ ಅಂತರ್ಯುದ್ಧದಲ್ಲಿ ತೊಡಗಿ, ಆ ರಾಷ್ಟ್ರ

ಅಥವಾ ಅದರಂತೆ ಹುಟ್ಟಿ, ಅದರಂತೆ ಬದ್ಧವಾದ ಬೇರೆ ಯಾವ ರಾಷ್ಟ್ರವಾಗಲಿ ಎಷ್ಟು ದೀರ್ಘಕಾಲ ಉಳಿಯಬಲ್ಲುದು ಎನ್ನುವುದನ್ನು ಪರೀಕ್ಷಿಸಲು ಹೊರಟಿದ್ದೇವೆ. ಆ ಯುದ್ಧದ ಮಹಾರಣರಂಗದಲ್ಲಿ ನಾವು ನೆರೆದಿದ್ದೇವೆ. ಆ ರಣರಂಗದ ಒಂದು ಭಾಗವನ್ನು ರಾಷ್ಟ್ರವನ್ನು ಉಳಿಸಲು ತಮ್ಮ ಪ್ರಾಣವನ್ನು ನೀಡಿದ ಹುತಾತ್ಮರಿಗೆ ಅಂತಿಮವಾಗಿ ನೆಲೆಯಾಗಿ ಅರ್ಪಿಸಲು ಬಂದಿದ್ದೇವೆ. ಹಾಗೆ ಮಾಡುವುದು ಅತ್ಯಂತ ಯೋಗ್ಯವಾದುದು ಮತ್ತು ಯುಕ್ತವಾದುದು. ಆದರೆ ವಿಶಾಲ ಅರ್ಥದಲ್ಲಿ ನಾವು ಈ ಭೂಮಿಯನ್ನು ನಿವೇದಿಸುವುದಾಗಲೀ, ಪವಿತ್ರಗೊಳಿಸುವುದಾಗಲೀ, ಸಂಸ್ಕರಿಸುವುದಾಗಲೀ ಸಾಧ್ಯವಿಲ್ಲ. ಇಲ್ಲಿ ಹೋರಾಡಿ ಉಳಿದ ಮತ್ತು ಅಳಿದ ಧೀರರು ಅದನ್ನು ಪವಿತ್ರಗೊಳಿಸಿದ್ದಾರೆ. ಅದನ್ನು ಹೆಚ್ಚಿಸುವುದಾಗಲೀ ಅಥವಾ ಕಡಿಮೆಗೊಳಿಸುವುದಾಗಲೀ ನಮ್ಮ ಶಕ್ತಿಗೆ ಮೀರಿದುದು. ಇಲ್ಲಿ ನಾವು ಹೇಳುವುದನ್ನು ಲೋಕ ಗಮನಿಸದಿರಬಹುದು, ಅದು ಜನರ ನೆನಪಿನಲ್ಲಿ ಬಹಳ ಕಾಲ ನಿಲ್ಲಲಾರದು. ಆದರೆ ಇಲ್ಲಿ ಮಡಿದವರು ಏನು ಮಾಡಿದರು ಎನ್ನುವುದನ್ನು ಲೋಕ ಎಂದಿಗೂ ಮರೆಯಲಾರದು. ಇಲ್ಲಿ ಹೋರಾಡಿದವರು ಇದುವರೆಗೆ ಮಹತ್ತರವಾಗಿ ಮುಂದುವರಿಸಿಯೂ ಮುಗಿಯದ ಕಾರ್ಯವನ್ನು ಪೂರೈಸಲು ಬದುಕಿ ಉಳಿದಿರುವ ನಾವು ನಮ್ಮನ್ನು ಅರ್ಪಿಸಿಕೊಳ್ಳಬೇಕಾಗಿದೆ. ಇಲ್ಲಿ ಮರಣಹೊಂದಿದ ಮಹಾನುಭಾವರು ಯಾವ ಕಾರಣಕ್ಕಾಗಿ ತಮ್ಮ ಸರ್ವಸ್ವವನ್ನು ನೀಡಿದರೋ ಆ ಕಾರಣಕ್ಕೆ ನಾವು ಹೆಚ್ಚಿನ ಶ್ರದ್ಧೆಯಿಂದ ನಮ್ಮನ್ನು ನಾವೇ ನಿವೇದಿಸಿಕೊಳ್ಳಬೇಕಾಗಿದೆ. ಇಲ್ಲಿ ಮಡಿದವರ ಮರಣ ವ್ಯರ್ಥವಲ್ಲ. ದೇವರ ಕೈಕೆಳಗಿರುವ ಈ ರಾಷ್ಟ್ರದಲ್ಲಿ ಹೊಸ ಸ್ವಾತಂತ್ರ್ಯ ಹುಟ್ಟಿ, ಜನರಿಂದ, ಜನರಿಗಾಗಿ, ಜನರೇ ನಿರ್ವಹಿಸುವ ಸರ್ಕಾರ ಈ ಭೂಮಿಯಿಂದ ನಾಶವಾಗದಂತೆ ಇಲ್ಲಿ ನೆರೆದಿರುವ ನಾವು ಮಹತ್ತರವಾದ ನಿರ್ಧಾರ ಕೈಗೊಳ್ಳಬೇಕಾಗಿದೆ'.

ವಿಕ್ಸ್‌ಬರ್ಗ್ ಕದನ ಮತ್ತು ಜನರಲ್ ಗ್ರಾಂಟ್

ಶಿಲೋಹ್ ಕದನಾನಂತರ ಲಿಂಕನ್ ಜನರಲ್ ಗ್ರಾಂಟ್‌ನನ್ನು ತೆಗೆದುಹಾಕಿ ಅವನ ಜಾಗದಲ್ಲಿ ಜನರಲ್ ಹಾಲೆಕ್‌ನನ್ನು ನೇಮಿಸಿದ್ದನ್ನು ಹಿಂದೆ ತಿಳಿಸಲಾಗಿದೆ. ೧೮೬೨ರ ಜುಲೈ ತಿಂಗಳಲ್ಲಿ ಜನರಲ್ ಹಾಲೆಕ್‌ನನ್ನು ಪೂರ್ವಸಂಸ್ಥಾನಕ್ಕೆ ವರ್ಗಾಯಿಸಲಾಯಿತು. ಆಗ ಪುನಃ ಯೂಲಿಸಿಸ್ ಗ್ರಾಂಟ್ ಫೆಡರಲ್ ಸೈನ್ಯಗಳ ಸೇನಾಧಿಪತ್ಯವನ್ನು ವಹಿಸಿಕೊಂಡನು. ಫೆಡರಲ್ ಸೈನ್ಯಾಧಿಕಾರಿಗಳಲ್ಲಿ ಜನರಲ್ ಯೂಲಿಸಿಸ್ ಗ್ರಾಂಟ್ ಅತ್ಯಂತ ವಾದಗ್ರಸ್ಥ ವ್ಯಕ್ತಿಯಾಗಿದ್ದನು. ವೆಸ್ಟ್ ಪಾಯಿಂಟ್ ಪದವೀಧರನಾದರೂ ಅವನ ದಾಖಲೆಯಲ್ಲಿ ಹೇಳಿಕೊಳ್ಳುವಂತದು ಏನೂ ಇರಲಿಲ್ಲ. ಮೆಕ್ಸಿಕೊ ಯುದ್ಧದಲ್ಲಿ ಸಮರ್ಪಕವಾಗಿ ಸೇವೆ ಸಲ್ಲಿಸಿದ್ದನು. ಆದರೆ ಅವನನ್ನು ಆರೆಗಾನ್ ಪ್ರಾಂತದ ಮೂಲೆಯ ಸೈನ್ಯದ ಠಾಣ್ಯಕ್ಕೆ ವರ್ಗ ಮಾಡಿದರು. ಅಲ್ಲಿ ಜನವಸತಿ ಇರಲಿಲ್ಲ. ಒಂಟಿತನ ಗ್ರಾಂಟ್‌ನನ್ನು ಕುಡಿತಕ್ಕೆ ಎಳೆಯಿತು. ವಿಪರೀತ ಕುಡಿತದ ಕಾರಣ ಮೇಲಧಿಕಾರಿಗಳ ಒತ್ತಾಯದಿಂದ ಸೈನ್ಯದ ಹುದ್ದೆಗೆ ರಾಜಿನಾಮೆ ಕೊಡಬೇಕಾಯಿತು. ನಂತರ ಅವನು ಅನೇಕ ಕೆಲಸಗಳನ್ನು

ಹಿಡಿದರೂ ಯಾವುದರಲ್ಲಿಯೂ ಯಶಸ್ವಿಯಾಗಲಿಲ್ಲ. ಅಷ್ಟರಲ್ಲಿ ಅಂತರ್ಯುದ್ಧ ಪ್ರಾರಂಭವಾಗಿ ಗ್ರಾಂಟ್ ಸೈನ್ಯ ಸೇರಲು ಎರಡನೆಯ ಅವಕಾಶ ದೊರೆಯಿತು. ಗ್ರಾಂಟನ ಅಪಖ್ಯಾತಿ 'ಎಂದಿಗೂ ಯಾವುದನ್ನೂ ಚೆನ್ನಾಗಿ ಮಾಡಲಾರದವನು' ಎಂಬುದು ಮತ್ತು ಸೈನ್ಯಾಧಿಕಾರಿ ಎಂದು ಗುರುತಿಸುವುದು ಕಷ್ಟವಾಗಿದ್ದ ಅವನ 'ಬೈರೂಪ', ಮೇಲಾಗಿ ಶಿಲೋಹ್ ಕದನದಲ್ಲಾದ ಭಾರಿ ಸಾವು ನೋವು – ಎಲ್ಲವೂ ಅವನಿಗೆ ವಿರುದ್ಧವಾಗಿದ್ದವು. ಆದರೆ ಅವನು ದೊಡ್ಡ ಸೈನ್ಯವನ್ನು ನಿರ್ವಹಿಸುವ ಅರ್ಹತೆ ಉಳ್ಳವನು ಮತ್ತು ವಿಜಯ ಸಾಧಿಸಲು ಅವಶ್ಯವಾದ ಯುದ್ಧಕೌಶಲ್ಯವುಳ್ಳವನು ಎಂದು ಲಿಂಕನ್ ತಿಳಿದಿದ್ದನು.

ಗ್ರಾಂಟ್‌ನ ಅತಿಮುಖ್ಯವಾದ ಧ್ಯೇಯ ವಿಕ್ಸ್‌ಬರ್ಗ್‌ನ್ನು ವಶಪಡಿಸಿಕೊಳ್ಳುವುದು. ಯುದ್ಧದ ದೃಷ್ಟಿಯಿಂದ ವಿಕ್ಸ್‌ಬರ್ಗ್ ಅನೇಕ ಅನುಕೂಲಗಳನ್ನು ಪಡೆದಿತ್ತು. ಅದು ಕಾನ್‌ಫೆಡರಸಿಯ ವಶದಲ್ಲಿದ್ದರೆ ಮಿಸ್ಸಿಸ್ಸಿಪ್ಪಿ ನದಿಯ ಮಾರ್ಗವಾಗಿ ಸೈನಿಕರನ್ನು ಮತ್ತು ಸರಬರಾಜನ್ನು ಸುಲಭವಾಗಿ ಕಾನ್‌ಫೆಡರಸಿಯ ಎಲ್ಲಾ ಕಡೆಗಳಿಗೂ ಕಳುಹಿಸಬಹುದಾಗಿತ್ತು. ವಿಕ್ಸ್‌ಬರ್ಗ್ ಇರುವುದು ಎತ್ತರವಾದ ಕಡಿದಾದ ದಿಣ್ಣೆಯ ಮೇಲೆ. ಆ ಎತ್ತರದಿಂದ ಬಾಗಿ ಹರಿಯುವ ಮಿಸ್ಸಿಸ್ಸಿಪ್ಪಿ ನದಿಯ ನೋಟ ಬಹುದೂರದವರೆಗೆ ಕಾಣಬಹುದು. ವಿಕ್ಸ್‌ಬರ್ಗ್‌ನ್ನು ಪಶ್ಚಿಮ ಕಡೆಯಿಂದಾಗಲಿ ಉತ್ತರದ ಕಡೆಯಿಂದಾಗಲಿ ಮುತ್ತಿಗೆ ಹಾಕುವುದು ಸಾಧ್ಯವಿಲ್ಲವೆಂದು ಖಚಿತವಾದ ಮೇಲೆ, ಗ್ರಾಂಟ್ ತನ್ನ ಸೈನ್ಯದೊಡನೆ ನದಿಯ ಪಶ್ಚಿಮ ತೀರವನ್ನು ಸೇರಿ ದಕ್ಷಿಣದ ಕಡೆಗೆ ನುಸುಳಿ ಹೋದನು. ವಿಕ್ಸ್‌ಬರ್ಗ್‌ನಿಂದ ಕೆಳಗೆ ಬಹುದೂರದಲ್ಲಿ ನದಿಯನ್ನು ಪುನಃ ದಾಟಿ, ಇತರ ಫೆಡರಲ್ ಸೈನ್ಯದ ಸಂಪರ್ಕ ಮತ್ತು ಸರಬರಾಜುಗಳನ್ನು ಕಳೆದುಕೊಂಡರೂ ಲೆಕ್ಕಿಸದೆ ರಭಸದಿಂದ ಒಂದಾದಮೇಲೊಂದರಂತೆ ಶತ್ರು ಸೈನ್ಯ ತುಕಡಿಗಳ ಮೇಲೆ ದಾಳಿ ಮಾಡಿ ಜಾಕ್ಸನ್ ಊರನ್ನು ವಶಪಡಿಸಿಕೊಂಡು, ವಿಕ್ಸ್‌ಬರ್ಗ್ ರಕ್ಷಣೆ ಮಾಡುತ್ತಿದ್ದ ಜನರಲ್ ಜಾನ್ ಪೆಮಬರ್‌ಟನ್ ವಿಕ್ಸ್‌ಬರ್ಗ್ (General John Pemberton) ಸೈನ್ಯವನ್ನು ಕಾನ್ ಫೆಡರೇಟ್ ಸೈನ್ಯದ ಇತರ ತುಕಡಿಗಳೊಂದಿಗೆ ಸಂಪರ್ಕಿಸದಂತೆ ಮಾಡಿ, ವಿಕ್ಸ್‌ಬರ್ಗ್‌ನ್ನು ಬೇರ್ಪಡಿಸಿ, ಹೊರಗಿನಿಂದ ಸಹಾಯ ಬಾರದಂತೆ ಮಾಡಿ, ಪೆಂಬರ್‌ಟನ್ ಸೈನ್ಯದ ಮೇಲೆ ದಾಳಿ ಮಾಡಿದನು. ಗ್ರಾಂಟ್‌ನ ಸೈನ್ಯ ಪೆಂಬರ್‌ಟನ್ ಸೈನ್ಯವನ್ನು ಎರಡು ಕದನಗಳಲ್ಲಿ ಸೋಲಿಸಿದಾಗ ಸೋತ ಸೈನಿಕರು ಕೋಟೆಯೊಳಗೆ ಹೋಗಿ ಸೇರಿಕೊಂಡರು. ಗ್ರಾಂಟ್ ಸೈನ್ಯ ವಿಕ್ಸ್‌ಬರ್ಗ್‌ನ್ನು ಸುತ್ತುವರಿದು ಮುತ್ತಿಗೆ ಹಾಕಿತು. ಸಹಾಯ ಮತ್ತು ಸರಬರಾಜು ಇಲ್ಲದೆ ಕಂಗೆಟ್ಟ ಪೆಂಬರ್‌ಟನ್ ಮತ್ತು ಅವನ ಸೈನಿಕರು ಜುಲೈ ೪ನೆಯ ತಾರೀಖು ಶರಣಾಗತರಾದರು. ವಿಕ್ಸ್‌ಬರ್ಗ್ ಕೈವಶವಾದ ಮೇಲೆ ಫೆಡರಲ್ ಫಿರಂಗಿ ದೋಣಿಗಳು ಅಡೆತಡೆಯಿಲ್ಲದೆ ಮಿಸ್ಸಿಸ್ಸಿಪ್ಪಿ ನದಿಯ ಉದ್ದಕೂ ಹೋಗಿ ಬರುವುದು ಸಾಧ್ಯವಾಯಿತು. ಟೆಕ್ಸಾಸ್ ಮತ್ತು ಆರ್‌ಕನ್‌ಸಾ ಸಂಸ್ಥಾನಗಳೂ ಸಂಪರ್ಕ ಕಡಿದುಕೊಂಡು ಕಾನ್‌ಫೆಡರಸಿಯ ಕೈಬಿಟ್ಟು ಹೋಗಿದ್ದವು.

ಗ್ರ್ಯಾಂಟ್‌ನ ವಿಜಯದಿಂದ ಸಂತುಷ್ಟನಾದ ಲಿಂಕನ್ ಅವನನ್ನು ಅಪಲೇಷಿಯನ್ ಪರ್ವತಶ್ರೇಣಿಯ ಪಶ್ಚಿಮದಲ್ಲಿ ಕಾರ್ಯಾಚರಣೆಯಲ್ಲಿದ್ದ ಎಲ್ಲಾ ಫೆಡರಲ್ ಸೇನೆಗಳ ಮಹಾಸೇನಾಧಿಪತಿಯನ್ನಾಗಿ ನೇಮಿಸಿದನು. ಗ್ರ್ಯಾಂಟ್ ಕೂಡಲೆ ಟೆನ್ನಸ್ಸಿಯಲ್ಲಿ ನಡೆಯುತ್ತಿದ್ದ ಕದನದ ಜವಾಬ್ದಾರಿ ವಹಿಸಿಕೊಂಡನು, ಆತ ಸೈನ್ಯ ತುಕಡಿಗಳನ್ನು ವ್ಯವಸ್ಥೆಗೊಳಿಸಿ ಅಧಿಕಾರಿಗಳನ್ನು ಬದಲಾಯಿಸಿ, ಹೊಸ ತುಕಡಿಗಳನ್ನು ಕರೆಸಿ ಕದನವನ್ನು ಕಟ್ಟುಗ್ರಗೊಳಿಸಿ, ಜಯಸಾಧಿಸಿ ಚಟ್ಟನೂಗ ಪಟ್ಟಣವನ್ನು ವಶಪಡಿಸಿಕೊಂಡು ಜಾರ್ಜಿಯ ಸಂಸ್ಥಾನದ ಮೇಲೆ ದಂಡೆತ್ತಿ ಹೋಗಲು ದಾರಿಯನ್ನು ಸುಲಭ ಮಾಡಿಕೊಂಡನು. ದಿಢೀರನೆ ಈ ಉಡುಗೆ ತೊಡುಗೆಗಳಲ್ಲಿ, ಒಪ್ಪ ಓರಣವಿಲ್ಲದ , ಕೆದರಿದ ತಲೆಗೂದಲಿನ, ಗಿಡ್ಡ ದೇಹದ ಸಣ್ಣ ಮನುಷ್ಯ, ನೋಡುವವರಿಗೆ ಸೇನಾಧಿಪತಿಯಂತೆ ತೋರದೆ ಯಾರೋ ತಿರುಕನಂತೆ ತೋರುತ್ತಿದ್ದ ಯೂಲಿಸಿಸ್ ಗ್ರ್ಯಾಂಟ್, ಮಹಾದಂಡನಾಯಕನಾಗಿ ಮಾರ್ಪಾಡಾಗಿದ್ದನು. ಉತ್ತರ ಸಂಸ್ಥಾನಗಳು ಉತ್ಕಟ ಬಯಕೆಯಿಂದ ಹುಡುಕುತ್ತಿದ್ದ ನಿಪುಣ ಸೇನಾನಾಯಕ ಈಗ ಸಿಕ್ಕಿದನು. ೧೮೬೪ನೆಯ ಮಾರ್ಚ್ ತಿಂಗಳಲ್ಲಿ ಲಿಂಕನ್ ಗ್ರ್ಯಾಂಟ್‌ನನ್ನು ರಾಜಧಾನಿ ವಾಷಿಂಗ್‌ಟನ್‌ಗೆ ಬರಮಾಡಿಕೊಂಡು ಅವನನ್ನು ಲೆಫ್ಟಿನೆಂಟ್ ಜನರಲ್ ಆಗಿ ನೇಮಕ ಮಾಡಿ ಸಂಯುಕ್ತ ಸಂಸ್ಥಾನಗಳ ಎಲ್ಲ ಸೈನ್ಯಗಳ ಮೇಲಿನ ಅಧಿಕಾರವನ್ನು ವಹಿಸಿಕೊಟ್ಟನು.

ಕಾನ್‌ಫೆಡರಸಿಯ ಕೊನೆಗಾಲ

ಶ್ರೇಷ್ಠ ದಂಡನಾಯಕನಾದ ಗ್ರ್ಯಾಂಟ್‌ನ ಸೈನ್ಯ ಕಾರ್ಯಾಚರನೆಯ ಯೋಜನೆ ಸರಳವಾಗಿ, ತರ್ಕಬದ್ಧವಾಗಿ ಮತ್ತು ದೃಢ ನಿಷ್ಠುರತೆಯಿಂದ ಕೂಡಿತ್ತು. ಈ ಯೋಜನೆಯ ಪ್ರಕಾರ ಗ್ರ್ಯಾಂಟ್ ಲೀ ಸೈನ್ಯದ ಮೇಲೆ ದಾಳಿ ಮಾಡಿ, ರಿಚ್‌ಮಂಡ್‌ನ್ನು ವಶ ಪಡಿಸಿ ಕೊಳ್ಳುವುದು; ಅದೇ ಸಮಯದಲ್ಲಿ ಜನರಲ್ ವಿಲಿಯಮ್ ಶರ್‌ಮನ್ (General William Sherman) ತನ್ನ ಸೈನ್ಯದೊಡನೆ ಚಟ್ಟನೂಗದಿಂದ ಅಟ್ಲಾಂಟದ ಕಡೆಗೆ ಮುನ್ನುಗ್ಗಿ ಹೋಗಬೇಕು. ಹೀಗೆ ತಮ್ಮ ಎರಡು ದೊಡ್ಡ ಸೈನ್ಯಗಳು ದೈತ್ಯ ಇಕ್ಕಳದ ದವಡೆಗಳ ಮಧ್ಯೆ ಸಿಕ್ಕಿದ ಪದಾರ್ಥವನ್ನು ಒಡೆದು ಚೂರು ಮಾಡುವಂತೆ ಎಲ್ಲ ಶತ್ರುಪಡೆಗಳನ್ನು ಛಿದ್ರಗೊಳಿಸಬಹುದು ಎಂದು ಗ್ರ್ಯಾಂಟ್ ನಂಬಿದ್ದನು. ಅದೇ ರೀತಿ ೧೮೬೪ರ ಮೇ ತಿಂಗಳಲ್ಲಿ ಗ್ರ್ಯಾಂಟ್ ಮತ್ತು ಶರ್‌ಮನ್ ತಮ್ಮ ಸೈನಿಕ ಕಾರ್ಯಾಚರಣೆ ಗಳನ್ನು ಪ್ರಾರಂಭಿಸಿದರು. ಗ್ರ್ಯಾಂಟ್ ಸೈನ್ಯದಲ್ಲಿ ೧೦೦೦೦೦ ಸೈನಿಕರಿದ್ದರು. ಶರ್‌ಮನ್ ಸೈನ್ಯವೂ ಅಷ್ಟೇ ದೊಡ್ಡದಾಗಿತ್ತು. ಗ್ರ್ಯಾಂಟ್ ತನ್ನ ಸೈನ್ಯವನ್ನು ಪೊಟೊಮಾಕ್ ನದಿ ತೀರದಿಂದ ನೇರವಾಗಿ ರಪ್ಪಾಹನ್ನಾಕ್ ನದಿಯ ದಕ್ಷಿಣಾದಲ್ಲಿದ್ದ ಪ್ರದೇಶಕ್ಕೆ ನಡೆಸಿಕೊಂಡು ಹೋದನು. ಆ ದುರ್ಗಮವಾದ ಪ್ರದೇಶದಲ್ಲಿ ಗ್ರ್ಯಾಂಟ್ ಸೈನ್ಯವನ್ನು ತಡೆದು ಮಾಡಲೇ ಬೇಕಾದ ಪರಿಸ್ಥಿತಿಯನ್ನು ಕಾನ್‌ಫೆಡರೇಟ್ ಸೇನಾನಾಯಕ ಲೀ ಉಂಟುಮಾಡಿದನು. ಲೀ ಕೈಕೆಳಗಿನ ಸೈನ್ಯದಲ್ಲಿ ೬೦೦೦೦ ಸೈನಿಕರಿದ್ದರು. ಆ ದುರ್ಗಮವಾದ ಪ್ರದೇಶದಲ್ಲಿ ತನ್ನ ದೊಡ್ಡ ಸೈನ್ಯವನ್ನು ಗ್ರ್ಯಾಂಟ್ ಪರಿಣಾಮಕಾರಿಯಾಗಿ ಉಪಯೋಗಿಸಲು

ಸಾಧ್ಯವಾಗಲಿಲ್ಲ. ಎರಡು ದಿನಗಳು ಸತತವಾಗಿ ಈ ಕಾಡಿನ ಕದನ ನಡೆಯಿತು. ಕಾಡಿಗೆ ಬೆಂಕಿಬಿದ್ದು ಉರಿಯತೊಡಗಿ, ದಟ್ಟವಾದ ಹೊಗೆಯಿಂದ ಸೈನಿಕರು ಕಂಗಾಲಾದರು. ಅತ್ಯಂತ ಗೊಂದಲಮಯವಾದ ಈ ಕದನ ಮುಗಿದಾಗ ಗ್ರಾಂಟ್ ಸೈನ್ಯದಲ್ಲಿ ೧೮೦೦೦ ಸಾವು-ನೋವುಗಳುಂಟಾಗಿದ್ದವು. ಇತರ ಫೆಡರಲ್ ಸೇನಾನಿಗಳಾಗಿದ್ದರೆ ಇಷ್ಟೊಂದು ಸಾವು-ನೋವು ಅನುಭವಿಸಿದ ಸೈನ್ಯವನ್ನು ಹಿಂದಕ್ಕೆ ಸರಿಸಿ ಸುಧಾರಿಸಿಕೊಳ್ಳಲು ಸ್ವಲ್ಪ ಸಮಯ ಕೊಡುತ್ತಿದ್ದರು. ಗ್ರಾಂಟ್ ಹಾಗೆ ಮಾಡಲಿಲ್ಲ. ಅದಕ್ಕೆ ಬದಲಾಗಿ ತನ್ನ ಸೈನ್ಯವನ್ನು ಆಗ್ನೇಯ ದಿಕ್ಕಿನಲ್ಲಿ ರಭಸದಿಂದ ಮುನ್ನುಗ್ಗಿಸಿ ಕಾನ್‌ಫೆಡರೇಟ್ ಸೈನ್ಯವನ್ನು ಸುತ್ತುವರಿಯುವ ಸಾಹಸ ಮಾಡಿದನು. ಜನರಲ್ ಲೀ ತನ್ನ ಸೈನ್ಯವನ್ನು ಅದೇ ದಿಕ್ಕಿನಲ್ಲಿ ನಡೆಸಿಕೊಂಡು ಹೋಗಿ ಸ್ಪಾಟ್ಸಿಲ್‌ವೇನಿಯ (Spotsylvania) ನ್ಯಾಯಾಲಯದ ಸುತ್ತ ಅವಸರದಲ್ಲಿ ಅಗೆದು ಮಾಡಿದ ಕಂದಕಗಳಲ್ಲಿ ಸೈನಿಕರನ್ನು ಹುದುಗಿಸಿದನು. ಈ ಕಂದಕಗಳು ಆಯಕಟ್ಟಿನ ಸ್ಥಳದಲ್ಲಿದ್ದು ಲೀ ಸೈನಿಕರಿಗೆ ಹೆಚ್ಚು ಅನುಕೂಲವಿದೆ ಎಂದು ಗೊತ್ತಿದ್ದೂ ಗ್ರಾಂಟ್ ದಾಳಿ ನಡೆಸಿದನು. ಐದು ದಿನಗಳು ನಡೆದ ಈ ಕದನ ನಿಂತಾಗ ಗ್ರಾಂಟ್ ಸೈನ್ಯದ ೧೨೦೦೦ ಸೈನಿಕರು ಸಾವಿಗೀಡಾಗಿದ್ದರು. ಕಾನ್‌ಫೆಡರೇಟ್ ಸೈನ್ಯಕ್ಕೆ ಹೆಚ್ಚಿನ ನಷ್ಟವಾಗದಿದ್ದುದರಿಂದ ಸೈನಿಕರು ಚದುರಿಹೋಗದೆ ದೃಢವಾಗಿ ಇದ್ದಲ್ಲಿಯೆ ಇದ್ದರು.

ಭಾರಿ ಪ್ರಮಾಣದ ಸಾವು ನೋವುಗಳಾದರೂ ಗ್ರಾಂಟ್ ಎದೆಗುಂದಲಿಲ್ಲ. ಉತ್ತರ ಸಂಸ್ಥಾನಗಳ ಸಂಖ್ಯಾಬಲದಿಂದ ಕಾನ್‌ಫೆಡರೇಟ್ ಸೈನ್ಯವನ್ನು ಈಗಲ್ಲದಿದ್ದರೂ ಇನ್ನು ಸ್ವಲ್ಪ ಸಮಯದಲ್ಲಿ ಸೋಲಿಸುವುದು ಖಚಿತವೆಂದು ಗ್ರಾಂಟ್ ಮನಗಂಡಿದ್ದನು. ಫೆಡರಲ್ ಸೈನ್ಯದ ನಷ್ಟವನ್ನು – ಸತ್ತ ಸೈನಿಕರ ಜಾಗಕ್ಕೆ ಬೇರೆ ಸೈನಿಕರನ್ನು, ಯುದ್ಧ ಸಲಕರಣೆಗಳು ನಷ್ಟವಾದರೆ ಹೊಸ ಸಲಕರಣೆಗಳನ್ನು – ತುಂಬಿಸಬಹುದು, ಆದರೆ ಲೀಗೆ ಅಂಥ ಅನುಕೂಲಗಳಿಲ್ಲವೆಂಬ ಸತ್ಯ ಗ್ರಾಂಟ್‌ಗೆ ಸ್ಪಷ್ಟವಾಗಿತ್ತು. ಹೆಚ್ಚಿನ ಸಾವು-ನೋವುಗಳನ್ನು ಖಂಡಿಸಿ ಗ್ರಾಂಟ್‌ನನ್ನು ಕಟುವಾಗಿ ಟೀಕಿಸಿದವರಿಗೆ ತಾನು ಇದೇ ರೀತಿಯಲ್ಲಿ ಯುದ್ಧ ಮುಂದುವರಿಸಲು ಮನಸ್ಸು ಮಾಡಿರುವುದಾಗಿಯೂ ಬೇಸಿಗೆ ಕಾಲವೆಲ್ಲ ಯುದ್ಧ ಮಾಡಬೇಕಾಗಿ ಬಂದರೆ ಅದಕ್ಕೆ ಸಿದ್ಧನಾಗಿರುವುದಾಗಿಯೂ ದೃಢವಾಗಿ ಉತ್ತರ ಕೊಡುತ್ತಿದ್ದನು. ಗ್ರಾಂಟ್ ಪುನಃ ತನ್ನ ಸೈನ್ಯವನ್ನು ದಕ್ಷಿಣ ದಿಕ್ಕಿನಲ್ಲಿ ಮುನ್ನುಗ್ಗಿಸಿದನು. ಅವನ ಉದ್ದೇಶ ಶತ್ರು ಸೈನ್ಯವನ್ನು ಸುತ್ತುವರಿಯುವುದಾಗಿತ್ತು. ರಿಚ್‌ಮಂಡ್‌ಗೆ ಕೇವಲ ಒಂಬತ್ತು ಮೈಲಿ ದೂರದಲ್ಲಿದ್ದ ಕೋಲ್ಡ್ ಹಾರ್‌ಬರ್‌ನಲ್ಲಿ ಕಾನ್‌ಫೆಡರೇಟ್ ಸೈನ್ಯ ಬಲವಾದ ರಕ್ಷಣಾವ್ಯವಸ್ಥೆ ಮಾಡಿಕೊಂಡು ಸಿದ್ಧರಾಗಿದ್ದರು. ಇದನ್ನು ಲೆಕ್ಕಿಸದೆ ಗ್ರಾಂಟ್ ತನ್ನ ಸೈನ್ಯಕ್ಕೆ ಮುನ್ನುಗ್ಗಿ ದಾಳಿ ಮಾಡಲು ಆಜ್ಞೆ ನೀಡಿದನು. ಈ ದಾಳಿಯ ಪರಿಣಾಮ ಫೆಡರಲ್ ಸೈನ್ಯದಲ್ಲಾದ ಭಯಂಕರ ಸಾವು ನೋವುಗಳು! – ಒಂದು ತಿಂಗಳೊಳಗೆ ೬೦೦೦೦ಕ್ಕೂ ಮಿಗಿಲಾದ ಸಾವು ನೋವುಗಳು! – ಈ ಸುದ್ದಿ ಉತ್ತರ ಸಂಸ್ಥಾನಗಳಲ್ಲಿ ಭೀತಿ ಸಂಚರಿಸುವಂತೆ ಮಾಡಿತು. ಕೆಲವರು ಗ್ರಾಂಟ್‌ನನ್ನು 'ಕರುಣೆಯಿಲ್ಲದ ಕಟುಕ'ನೆಂದು

ಖಂಡಿಸಿ ಅವನನ್ನು ತೆಗೆದುಹಾಕಲು ಆಗ್ರಹ ಪಡಿಸಿದರು. ಲಿಂಕನ್ ದೃಢಚಿತ್ತದಿಂದ ಗ್ರಾಂಟ್‌ನನ್ನು ಬೆಂಬಲಿಸಿದನು. ನಷ್ಟಗಳು ಭಯ ಹುಟ್ಟಿಸುವಷ್ಟು ಹೆಚ್ಚಾಗಿದ್ದರೂ ಗ್ರಾಂಟ್ ತನ್ನ ಉದ್ದೇಶವನ್ನು ಪೂರೈಸುವುದರಲ್ಲಿ ಗಣನೀಯವಾಗಿ ಮುಂದುವರಿಯುತ್ತಿದ್ದನು. ಕೋಲ್ಡ್ ಹಾರ್‌ಬರ್ ಕದನದಲ್ಲಿ ಲೀಯ ಸಣ್ಣ ಸೈನ್ಯದಲ್ಲಿ ಸೊರಗಿದ ಸೈನಿಕರಿಗೆ ಬಿಡುವು ಮಾಡಿಕೊಡುವ 'ಕಾಯ್ದಿಟ್ಟ ಸೈನ್ಯ' ಇಲ್ಲವೆಂದು ಗ್ರಾಂಟ್‌ಗೆ ಗೊತ್ತಿತ್ತು. ಆದರೆ ಗ್ರಾಂಟ್‌ನ ಬೃಹತ್ ಸೈನ್ಯಕ್ಕೆ ಆ ತೊಂದರೆ ಇರಲಿಲ್ಲ. ಗ್ರಾಂಟ್ ತನ್ನ ಸೈನ್ಯವನ್ನು ತಿರುಗಿಸಿ ಜೇಮ್ಸ್ ನದಿಯನ್ನು ತೆಪ್ಪಗಳಿಂದ ಮಾಡಿದ ಸೇತುವೆ ಮೇಲಿಂದ ದಾಟಿ ಪೀಟರ್ಸ್‌ಬರ್ಗ್ (Petersburg) ಕಡೆಗೆ ನುಗ್ಗಿದಾಗ ಲೀ ತನ್ನ ಸೈನ್ಯವನ್ನು ಲಗುಬಗೆಯಿಂದ ಓಡಿಸಿ ಪೀಟರ್ಸ್‌ಬರ್ಗ್ ಊರನ್ನು ಹೊಕ್ಕು, ಹುದುಗಿ ಕುಳಿತು, ಹೋರಾಡಲು ಸಿದ್ಧರಾಗುವಂತೆ ಮಾಡಿದನು. ಗ್ರಾಂಟ್‌ನ ಸೈನ್ಯ ಪೀಟರ್ಸ್‌ಬರ್ಗ್‌ನ್ನು ಸುತ್ತುವರಿದು ಮುತ್ತಿಗೆ ಹಾಕಿತು. ಫೆಡರಲ್ ಸೈನ್ಯ ವ್ಯವಸ್ಥಿತವಾಗಿ ನಿಯಂತ್ರಣವನ್ನು ವಿಸ್ತರಿಸುತ್ತ ಹೋಗಿ ಶತ್ರು ಸೈನ್ಯವನ್ನು ನಿತ್ರಾಣಗೊಳಿಸಲು ರೈಲು ಸಂಪರ್ಕವನ್ನು ಕಡಿದುಹಾಕಿ, ಲೀ ಸೈನ್ಯಕ್ಕೆ ಮತ್ತು ರಿಚ್‌ಮಂಡ್‌ಗೆ ಅಗತ್ಯವಾದ ಸರಕು ಸಾಮಗ್ರಿಗಳನ್ನು ತಲುಪದಂತೆ ಮಾಡಿತು. ಇದು ಜನರಲ್ ಲೀಗೆ ದಿಗ್ಬಂಧನ ಹಾಕಿದಂತಾಯಿತು. ಅಲ್ಲಿಂದ ಸೈನ್ಯವನ್ನು ಬೇರೆ ಕಡೆಗೆ ರವಾನಿಸಲು ಪ್ರಯತ್ನ ಮಾಡಬಹುದಿತ್ತು. ಆದರೆ ಹಾಗೆ ಮಾಡಿದರೆ ಲೀ ರಿಚ್‌ಮಂಡ್‌ನ್ನು ಕೈಬಿಡಬೇಕಾಗಿತ್ತು. ರಿಚ್‌ಮಂಡ್ ಶತ್ರು ವಶವಾದರೆ, ದಾಕ್ಷಿಣಾತ್ಯರ ದೃಷ್ಟಿಯಲ್ಲಿ ಅದು ಶರಣಾಗತಿಗೆ ಸಮಾನ ಎಂಬ ಭಾವನೆ ಇತ್ತು.

೧೮೬೪ರ ಬೇಸಿಗೆಯ ಕಾಲದಲ್ಲಿ ಉತ್ತರ ಸಂಸ್ಥಾನಗಳ ಮೇಲೆ ನಿರಾಶೆಯ ಮೋಡ ಕವಿದಿತ್ತು. ಫೆಡರಲ್ ಸೈನ್ಯ ಜನರಲ್ ಲೀಯನ್ನು ದಿಗ್ಬಂಧನದಲ್ಲಿಟ್ಟಿದ್ದರೂ ಅವನನ್ನು ಸೋಲಿಸಲು ಸಾಧ್ಯವಾಗಿರಲಿಲ್ಲ. ಅತ್ತ ಜಾರ್ಜಿಯಾದಲ್ಲಿ ಜನರಲ್ ಶರ್‌ಮನ್‌ನ ಸೈನ್ಯ ವ್ಯವಸ್ಥಿತವಾಗಿ ಆದರೆ ಆಮೆಯ ಗತಿಯಲ್ಲಿ, ಕಾನ್‌ಫೆಡರೇಟ್ ಸೈನ್ಯದ ಕುಟಿಲೋಪಾಯ ನಿಪುಣ ಸೇನಾನಿ ಜೋಸೆಫ್ ಜಾನ್‌ಸ್ಟನ್‌ನ್ನು ಎದುರಿಸಲು ಸಾಗಿತ್ತು. ಆದರೆ ಜೂನ್ ೨೭ರಂದು ಶರ್‌ಮನ್ ಕೆನ್ನಿಸಾ ಪರ್ವತಪ್ರದೇಶದಲ್ಲಿ (Kennesaw mountain) ಶತ್ರು ಸೈನ್ಯದ ಮೇಲೆ ನೇರವಾಗಿ ದಾಳಿ ಮಾಡಲು ಪ್ರಯತ್ನಿಸಿದಾಗ ಹೆಚ್ಚಿನ ಸಾವು-ನೋವುಗಳನ್ನು ಅನುಭವಿಸಿ ಹಿಮ್ಮೆಟ್ಟಬೇಕಾಯಿತು. ಅಪಾರ ನಷ್ಟ ಮತ್ತು ನಿರ್ಣಯವಾದ ವಿಜಯವನ್ನು ಸಾಧಿಸಲಾಗದಿದ್ದುದರಿಂದ ಯುದ್ಧವನ್ನು ಮುಂದುವರಿಸಲು ಬೇಕಾದ ನೈತಿಕ ಸ್ಥೈರ್ಯ ಔತ್ತರೇಯರಲ್ಲಿ ಕಡಿಮೆಯಾಗುತ್ತ ಬಂತು.

೧೮೬೪ರ ಜೂನ್ ತಿಂಗಳಲ್ಲಿ ಲಿಂಕನ್‌ನನ್ನು ಮರುಚುನಾವಣೆಗೆ ರಾಷ್ಟ್ರೀಯ ಒಗ್ಗಟ್ಟಿನ ಪಕ್ಷದ ಅಭ್ಯರ್ಥಿಯಾಗಿ (National Union) ನಾಮಪತ್ರ ಸಲ್ಲಿಸಲಾಯಿತು. ಉಪಾಧ್ಯಕ್ಷ ಸ್ಥಾನಕ್ಕೆ ಉಗ್ರ ರಾಷ್ಟ್ರೀಯವಾದಿ ಮತ್ತು ಮಾಜಿ ಡೆಮೊಕ್ರಾಟ್ ಆಗಿದ್ದ ಟೆನ್ನೆಸ್ಸೀ ಸಂಸ್ಥಾನದ ಆ್ಯಂಡ್ರೂ ಜಾನ್‌ಸನ್‌ನನ್ನು ನೇಮಕ ಮಾಡಿದರು. ಜಾನ್‌ಸನ್ ನೇಮಕವನ್ನು

ಡೆಮೊಕ್ರಾಟರು ಮತ್ತು ತೀವ್ರಗಾಮಿ ರಿಪಬ್ಲಿಕನ್ನರು ಒಟ್ಟಿಗೆ ಖಂಡಿಸಿದರು. ಡೆಮೊಕ್ರಾಟರು ಜಾರ್ಜ್ ಮೆಕ್‌ಲೆಲ್ಲನ್‌ನನ್ನು ನೇಮಕ ಮಾಡಿದರು. ಏಕೆಂದರೆ ಅವನು ಯುದ್ಧ ನಿಲ್ಲಿಸಲು ಏನು ಬೇಕಾದರೂ ಮಾಡಲು ತಯಾರಿದ್ದನು. ತೀವ್ರಗಾಮಿ ರಿಪಬ್ಲಿಕನ್ನರು ಜಾನ್‌ಸನ್ ಬದಲಿಗೆ ಟ್ರೆಷರಿ ಕಾರ್ಯದರ್ಶಿಯಾಗಿದ್ದ ಸಾಲ್‌ಮನ್ ಚೇಸ್‌ನನ್ನು ನಾಮಕರಣ ಮಾಡಬೇಕೆಂದಿದ್ದರು. ಈ ರಾಜಕೀಯ ನಡೆಯುತ್ತಿರುವಾಗ ದೂರದ ದಕ್ಷಿಣ ಸಂಸ್ಥಾನದಲ್ಲಿ ಜರುಗಿದ ಘಟನೆ ರಾಷ್ಟ್ರದ ಪರಿಸ್ಥಿತಿಯನ್ನು ಬದಲಾಯಿಸಿತು. ೧೮೬೪ರ ಸೆಪ್ಟೆಂಬರ್ ೨ನೆಯ ತಾರೀಖು ಜನರಲ್ ಶರ್‌ಮನ್‌ನ ಸೈನ್ಯ ಕಾನ್‌ಫೆಡರೇಟ್ ಸೈನ್ಯ ರಕ್ಷಣೆಯನ್ನು ಮುರಿದು ಅಟ್ಲಾಂಟ ನಗರದೊಳಗೆ ನುಗ್ಗಿತು. ಕಾನ್‌ಫೆಡರೇಟ್ ಸೈನ್ಯ ಉತ್ತರ ದಿಕ್ಕಿನಿಂದ ಅಂದರೆ, ಟೆನ್ನೆಸ್ಸೀ ಪ್ರಾಂತದ ಕಡೆಯಿಂದ ದಾಳಿ ಪ್ರಾರಂಭಿಸಿತು. ಶರ್‌ಮನ್ ಆ ಸೈನ್ಯವನ್ನು ಬೆನ್ನಟ್ಟಿ ಹೋಗಲಿಲ್ಲ. ಅದಕ್ಕೆ ಬದಲು ಅವನು ಚಟ್ಟನೂಗದೊಡನೆ ಸಂಪರ್ಕ ಕಡಿದು ಕೊಂಡು ಜಾರ್ಜಿಯ ಸಂಸ್ಥಾನದ ಮೂಲಕ ಅಡೆತಡೆಯಿಲ್ಲದೆ ತನ್ನ ಸೈನ್ಯವನ್ನು ನಡೆಸಿ ಕೊಂಡು ಹೋದನು. 'ಅಟ್ಲಾಂಟದಿಂದ ಸಮುದ್ರತೀರದವರೆಗೆ!' ಎನ್ನುವ ಅವನ ಹೇಳಿಕೆ ಪ್ರಸಿದ್ಧವಾಗಿದೆ. ಶರ್‌ಮನ್‌ನ ಯುದ್ಧನೀತಿ ಎಂದರೆ 'ಸಂಪೂರ್ಣ ಸಮರ'. ಶತ್ರುವಿಗೆ ಅಗತ್ಯವಾದ ಅಥವಾ ಉಪಯೋಗಕ್ಕೆ ಬರುವಂಥ ಎಲ್ಲ ವಸ್ತುಗಳನ್ನು ವಶಪಡಿಸಿ ಕೊಳ್ಳುವುದು ಅಥವಾ ನಾಶ ಮಾಡುವುದು 'ಸಂಪೂರ್ಣ ಸಮರ'ದ ಮುಖ್ಯ ಗುರಿ. ೧೮೬೪ರ ನವೆಂಬರ್ ೧೫ರಂದು ಶರ್‌ಮನ್ ಸೈನ್ಯ ಅಟ್ಲಾಂಟದ ದಾಸ್ತಾನು ಮಳಿಗೆಗಳಿಗೆ ಮತ್ತು ರೈಲು ನಿಲ್ದಾಣದಲ್ಲಿದ್ದ ಸರಕು ಸಾಮಗ್ರಿಗಳಿಗೆ ಬೆಂಕಿಯಿಟ್ಟರು. ಈ ಬೆಂಕಿಯ ಜ್ವಾಲೆ ಭರದಿಂದ ಹಬ್ಬಿ ಅಟ್ಲಾಂಟ ನಗರದ ಮುಕ್ಕಾಲು ಭಾಗ ಭಸ್ಮವಾಯಿತು. ಫೆಡರಲ್ ಸೈನ್ಯವನ್ನು ಶರ್‌ಮನ್ ನಾಲ್ಕು ದಳಗಳಾಗಿ (columns) ಮುಂದುವರಿಯುವಂತೆ ವ್ಯವಸ್ಥೆ ಮಾಡಿದನು. ಪೆಡರಲ್ ಸೈನಿಕರು ತಮ್ಮ ಆಹಾರವನ್ನು ದಾರಿಯಲ್ಲಿ ಸಿಗುವ ಊರುಗಳಲ್ಲಿ ಕೊಳ್ಳೆ ಹೊಡೆದು ಸಂಗ್ರಹಿಸುತ್ತಿದ್ದರು. ಕಾನ್‌ಫೆಡರೇಟ್ ಸೈನ್ಯಕ್ಕೆ ಸಹಾಯ ಒದಗಿಸ ಬಹುದು ಎಂದು ಅನುಮಾನಕ್ಕೊಳಗಾದ ಅಂಗಡಿಗಳನ್ನು ಮತ್ತು ಆಹಾರ ಪದಾರ್ಥ ದಾಸ್ತಾನುಗಳನ್ನು ನಾಶ ಮಾಡಿದರು. ಹೀಗೆ ಮುಂದುವರಿದ ಶರ್‌ಮನ್ ಸೈನ್ಯ ಸವನ್ನಾ (Savannah) ತಲುಪಿತು. ಈ ಸೈನ್ಯ ಅಟ್ಲಾಂಟದಿಂದ ಸವನ್ನಾವರೆಗೆ (೨೫೦ ಮೈಲಿ) ಸಿಕ್ಕಿದ ಹಳ್ಳಿಗಳನ್ನು ಹಾಳುಗೆಡವಿ, ಊರುಗಳನ್ನು ಸೂರೆ ಮಾಡಿ, ಪಟ್ಟಣಗಳನ್ನು ಫಿರಂಗಿಗಳಿಂದ ಉಡಾಯಿಸಿ ವರ್ಣಿಸಲಾರದ ಹಾನಿ ಮಾಡಿತು. ಶರ್‌ಮನ್‌ನ ವಿಜಯ ಕಾನ್‌ಫೆಡರಸಿಯನ್ನು ತತ್ತರಿಸುವಂತೆ ಮಾಡಿದುದಲ್ಲದೆ ಉತ್ತರ ಸಂಸ್ಥಾನಗಳಲ್ಲಿ ಲಿಂಕನ್ ವಿರೋಧಿಗಳ ಬಾಯಿ ಮುಚ್ಚಿಸಿತು. ೧೮೬೪ರ ನವೆಂಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಲಿಂಕನ್ ಮತ್ತೊಮ್ಮೆ ಅಧ್ಯಕ್ಷನಾಗಿ ಆಯ್ಕೆಗೊಂಡನು.

ಉತ್ತರ ಸಂಸ್ಥಾನಗಳು ಯುದ್ಧ ನಿರ್ಣಾಯಕವಾಗಿ ಕೊನೆಗೊಳ್ಳುವವರೆಗೂ ಮುಂದುವರಿಸುವ ದೃಢ ನಿರ್ಧಾರ ಕೈಗೊಂಡಿರುವುದು ದಾಕ್ಷಿಣಾತ್ಯರನ್ನು ಧೃತಿಗೆಡಿಸಿತು.

ಜಾರ್ಜಿಯ ಸಂಸ್ಥಾನದಲ್ಲಿ ಹಾವಳಿ ಮಾಡಿ ಅಪಾರ ಹಾನಿ ಉಂಟುಮಾಡಿದ ಶರ್‌ಮನ್ ೧೮೬೫ರ ಜನವರಿ ತಿಂಗಳಲ್ಲಿ ತನ್ನ ಸೈನ್ಯವನ್ನು ಉತ್ತರ ದಿಕ್ಕಿಗೆ ನಡೆಸಿಕೊಂಡು ಹೋದನು. ಫೆಬ್ರುವರಿ ತಿಂಗಳಲ್ಲಿ ಫೆಡರಲ್ ಸೈನ್ಯ ದಕ್ಷಿಣ ಕೆರೊಲಿನ ಸಂಸ್ಥಾನದ ಕೊಲಂಬಿಯ ನಗರವನ್ನು ವಶಪಡಿಸಿಕೊಂಡಿತು. ಸಂಯುಕ್ತ ಸಂಸ್ಥಾನಗಳನ್ನು ತ್ಯಜಿಸಿದ ಅಂತರ್ಯುದ್ಧಕ್ಕೆ ನಾಂದಿಯಾಗಿದ್ದ ದಕ್ಷಿಣ ಕೆರೊಲಿನ ಸಂಸ್ಥಾನದಲ್ಲಿ ಫೆಡರಲ್ ಸೈನ್ಯ ಜಾರ್ಜಿಯಗಿಂತ ಹೆಚ್ಚು ಹಾನಿ ಉಂಟುಮಾಡಿತು. ಹನ್ನೆರಡಕ್ಕೂ ಹೆಚ್ಚಿನ ನಗರಗಳನ್ನು ಅಗ್ನಿಗೆ ಆಹುತಿ ಮಾಡಿದರು, ಸಂಸ್ಥಾನದ ರಾಜಧಾನಿ ಕೊಲಂಬಿಯಕ್ಕೂ ಕೊಳ್ಳಿಯಿಟ್ಟು ಸುಟ್ಟರು. ಕೊಲಂಬಿಯ ಫೆಡರಲ್ ಸೈನಿಕರ ಕೈವಶವಾದ ದಿನವೇ ಚಾರ್ಲ್ಸ್‌ಟನ್ ನಗರದ ರಕ್ಷಣೆಗಾಗಿ ಇದ್ದ ಸೈನ್ಯ ಆ ನಗರವನ್ನು ತೊರೆದು ಉತ್ತರದಲ್ಲಿ ಸೈನಿಕ ಕಾರ್ಯಾಚರಣೆ ನಡೆಸುತ್ತಿದ್ದ ಜನರಲ್ ಜೋಸೆಫ್ ಜಾನ್‌ಸ್ಟನ್‌ನ ಸೈನ್ಯವನ್ನು ಸೇರಲು ದೌಡಾಯಿಸಿದರು. ಜಾನ್‌ಸ್ಟನ್ ಬೆನ್‌ಟನ್‌ವಿಲ್ (Bentonville) ಎಂಬಲ್ಲಿ ಶರ್‌ಮನ್ ಸೈನ್ಯದ ಎಡಪಾರ್ಶ್ವದ ಮೇಲೆ ದಾಳಿ ಮಾಡಿದನು. ಅದು ಅವನ ಕಡೆಯ ದಾಳಿಯಾಯಿತು. ಆ ಸಮಯದಲ್ಲಿ ಗ್ರಾಂಟ್ ಪೀಟರ್ಸ್‌ಬರ್ಗ್ ಮೇಲಿನ ದಾಳಿಯನ್ನು ಮುಂದುವರಿಸಿ ರಕ್ಷಣಾದಳವನ್ನು ಮುರಿಯಲು ಪ್ರಯತ್ನಿಸಿದನು. ಫೆಡರಲ್ ಸೈನ್ಯದ ತುಕಡಿಯ ಸೇನಾನಾಯಕ ಫಿಲಿಪ್ ಷರಿಡನ್ (Philip Sheridan)ನ ದಾಳಿಯಿಂದ ಶೆನಾನ್‌ಡೋ ಕಣಿವೆಯ (Shenandoah valley) ಸಾಗುವಳಿ ಪ್ರದೇಶದ ಬೆಳೆಯನ್ನು ನಾಶ ಮಾಡಿದ್ದರಿಂದ, ಆ ಚಳಿಗಾಲದಲ್ಲಿ ಲೀ ಸೈನಿಕರಿಗೆ ಆಹಾರ ಕಡಿಮೆಯಾಗುತ್ತ ಬಂದು ಸೈನಿಕರ ನೈತಿಕ ಸ್ಥೈರ್ಯ ಕುಗ್ಗಿಸಿತು. ಜೊತೆಗೆ ಶರ್‌ಮನ್‌ನ ಸೈನ್ಯ ತಮ್ಮ ಕಡೆಗೆ ಮುಂದುವರಿಯುತ್ತಿರುವ ಸುದ್ದಿ ಕಾನ್‌ಫೆಡರೇಟ್ ಸೈನಿಕರಲ್ಲಿ ವಿಷಣ್ಣತೆಯನ್ನು ಮೂಡಿಸಿ ಸೈನ್ಯವನ್ನು ತ್ಯಜಿಸಿ ಓಡಿಹೋಗುವ ಪ್ರೇರಣೆ ಹೆಚ್ಚುತ್ತ ಹೋಯಿತು.

೧೮೬೫ರ ಮಾರ್ಚ್ ತಿಂಗಳ ಹೊತ್ತಿಗೆ ಕಾನ್‌ಫೆಡರೇಟ್ ಸೈನಿಕರ ಸಂಖ್ಯೆ ಕ್ಷೀಣಿಸುತ್ತ ಹೋಯಿತು. ಜನರಲ್ ಲೀ ತಪ್ಪಿಸಿಕೊಂಡು ಹೋಗಿ ಉತ್ತರ ಕೆರೊಲಿನದಲ್ಲಿದ್ದ ಕಾನ್‌ಫೆಡರೇಟ್ ಸೈನ್ಯದ ಜನರಲ್ ಜಾನ್‌ಸ್ಟನ್‌ನನ್ನು ಸೇರಿಕೊಳ್ಳಲು ಸಿದ್ಧತೆ ಮಾಡಿಕೊಳ್ಳ ತೊಡಗಿದನು. ೧೮೬೫ರ ಏಪ್ರಿಲ್ ೧ನೆಯ ತಾರೀಖು ಜನರಲ್ ಗ್ರಾಂಟ್‌ನ ಸೈನ್ಯ ಫೈವ್ ಫೋರ್ಕ್ಸ್ (Five Forks) ಎಂಬಲ್ಲಿ ಪೀಟರ್ಸ್‌ಬರ್ಗ್‌ಗೆ ಹೋಗುವ ರೈಲು ಮಾರ್ಗವನ್ನು ತುಂಡರಿಸಿತು. ಮಾರನೆಯ ದಿನ ಲೀ ರಿಚ್‌ಮಂಡ್ ಮತ್ತು ಪೀಟರ್ಸ್‌ಬರ್ಗ್‌ಗಳನ್ನು ತೊರೆದು ಅಪಾಯವನ್ನೂ ಲಕ್ಷಿಸದೆ ಲಿಂಚ್‌ಬರ್ಗ್ (Lynchburg) ಕಡೆಗೆ ಧಾವಿಸಿದನು. ಕಾನ್‌ಫೆಡರಸಿಯ ಅಧ್ಯಕ್ಷ ಡೇವಿಸ್ ಕೈಗೆ ಸಿಕ್ಕಿದ ಅಮೂಲ್ಯ ವಸ್ತುಗಳನ್ನು ಶೇಖರಿಸಿಕೊಂಡು ಫೆಡರಲ್ ಸೈನ್ಯ ಬರುವುದಕ್ಕೆ ಮುಂಚೆ ರೈಲು ಹತ್ತಿ ದಕ್ಷಿಣಕ್ಕೆ ಪ್ರಯಾಣ ಮಾಡಿದನು. ಮೇ ೧೦ನೆಯ ತಾರೀಖು ಜಾರ್ಜಿಯ ಪ್ರಾಂತದ ಅರ್ವಿನ್‌ಟನ್ (Irwinton)ನಲ್ಲಿ ಡೇವಿಸ್‌ನನ್ನು ಫೆಡರಲ್ ಸೈನ್ಯದ ಅಶ್ವದಳದ (cavalry) ನಾಯಕ

ಜೇಮ್ಸ್ ವಿಲ್‌ಸನ್ (James Wilson) ಸೆರೆಹಿಡಿದನು. ಆ [illegible] ಕಾನ್‌ಫೆಡರಸಿಯ ಕತೆ ಮುಗಿದಿತ್ತು. ಲೀ ಲಿಂಚ್‌ಬರ್ಗ್ ಕಡೆಗೆ ಧಾವಿಸಿದಾಗ ಗ್ರಾಂಟ್ ಅವನ ಬೆನ್ನು ಹತ್ತಿದನು. ತಪ್ಪಿಸಿಕೊಂಡು ಹೋಗುವ ಎಲ್ಲಾ ದಾರಿಗಳು ಶರ್‌ಮನ್ ಪಾಳೆಯಿಂದ ಮುಚ್ಚಿಹೋಗಿರುವುದು ಲೀಗೆ ಗೊತ್ತಾಯಿತು. ಇನ್ನು ಉಳಿದಿದ್ದು ಶರಣಾಗತಿ ಮಾತ್ರ. ೧೮೬೫ರ ಏಪ್ರಿಲ್ ೯ನೆಯ ತಾರೀಖು ಮೊದಲೆ ಏರ್ಪಾಡು ಮಾಡಿಕೊಂಡಂತೆ ಜನರಲ್ ಲೀ ಮತ್ತು ಜನರಲ್ ಗ್ರಾಂಟ್ ಅಪ್ಪೊಮಟೊಕ್ಸ್ (Appomattox) ನ್ಯಾಯಾಲಯದಲ್ಲಿ ಪರಸ್ಪರ ಭೇಟಿಯಾದರು. ಆ ದೃಶ್ಯ ಮೈ ನವಿರೇಳಿಸುವಂತಿದ್ದರೂ ಕರುಣಾಜನಕವಾಗಿತ್ತು. ಜನರಲ್ ಲೀ ಸೋಲಿನಲ್ಲಿಯೂ ಉದಾತ್ತನಾಗಿದ್ದನು. ಗ್ರಾಂಟ್ ಮೇಲ್ನೋಟಕ್ಕೆ ಒರಟನಾಗಿ ಕಂಡರೂ ಗೆದ್ದ ಹೆಮ್ಮೆಯಿಂದ ಮೆರೆಯದೆ ಸೂಕ್ಷ್ಮತೆಯಿಂದ ವರ್ತಿಸಿ ಔದಾರ್ಯ ತೋರಿದನು. ಲಿಂಕನ್ ಸೂಚಿಸಿದಂತೆ ಗ್ರಾಂಟ್ ತನ್ನ ಶರತ್ತುಗಳನ್ನು ಸಂಕ್ಷಿಪ್ತವಾಗಿ ತಿಳಿಸಿದನು – 'ಕಾನ್‌ಫೆಡರೇಟ್ ಸೈನಿಕರು ತಮ್ಮ ಎಲ್ಲ ಆಯುಧಗಳನ್ನು ಕೆಳಗಿಟ್ಟು ನಿರಾಯುಧರಾಗಬೇಕು. ಅವರು ಶಾಂತಿಯಿಂದ ತಮ್ಮ ಮನೆಗಳಿಗೆ ಹಿಂತಿರುಗಿ ಹೋಗಬಹುದು. ಜನರಲ್ ಲೀ ತನ್ನ ಸೈನಿಕರಿಗೆ ಅವರ ಕುದುರೆಗಳನ್ನು ಜೊತೆಗೆ ಕೊಂಡೊಯ್ಯಲು ಅವಕಾಶ ಕೊಟ್ಟರೆ ಅವರಿಗೆ ಉಪಕಾರ ಮಾಡಿದಂತಾಗುತ್ತದೆ' ಎಂದು ಗ್ರಾಂಟ್‌ಗೆ ಸೂಚಿಸಿದನು. ಗ್ರಾಂಟ್ ಉದಾರ ಮನಸ್ಸಿನಿಂದ ಅದಕ್ಕೆ ಯಾವ ಅಭ್ಯಂತರವೂ ಇಲ್ಲವೆಂದು ಹೇಳಿದನು.

೧೮೬೫ರ ಏಪ್ರಿಲ್ ೧೮ನೆಯ ತಾರೀಖು ಜಾನ್ಸ್‌ಟನ್ ತನ್ನ ಸೈನ್ಯ ಸಮೇತ ಶರ್‌ಮನ್‌ಗೆ ಶರಣಾಗತನಾದನು. ಮೇ ತಿಂಗಳ ೪ನೆಯ ತಾರೀಖು ಅಲಬಾಮ ಪ್ರಾಂತದ ಸಿಟ್ರೊನೆಲ್ (Citronelle) ಎಂಬಲ್ಲಿ ಕಾನ್‌ಫೆಡರೇಟ್ ಸೈನ್ಯದ ಜನರಲ್ ಟೇಲರ್ ತನ್ನ ಸೈನ್ಯದೊಡನೆ ಜನರಲ್ ಕಾನ್‌ಬಿ (General Canby)ಗೆ ಶರಣಾಗತನಾದನು. ಇನ್ನು ಉಳಿದ ಕಾನ್‌ಫೆಡರೇಟ್ ಸೈನ್ಯವೆಂದರೆ ಎಡ್ಮಂಡ್ ಕರ್ಬಿ ಸ್ಮಿತ್ (Edmund Kirby Smith)ನ ಕೈಕೆಳಗಿನ ಸೈನ್ಯ. ಮೇ ೨೬ನೆಯ ತಾರೀಖು ಕರ್ಬಿ ಸ್ಮಿತ್‌ನ ಸೈನ್ಯ ನ್ಯೂ ಆರ್ಲಿಯನ್ಸ್ ಬಳಿ ಜನರಲ್ ಕಾನ್‌ಬಿ ಸೈನ್ಯಕ್ಕೆ ಸೋತು ಶರಣಾಯಿತು. ದಕ್ಷಿಣ ಕೆರೊಲಿನ ಪ್ರಾಂತದ ಚಾರ್ಲ್ಸ್‌ಟನ್, ಕಾನ್ಫೆಡರೇಟರ ಕಾರಸ್ಥಾನವಾಗಿದ್ದ ಪಟ್ಟಣ. ಅದನ್ನು ಆಕ್ರಮಣ ಮಾಡಿದ ಫೆಡರಲ್ ಸೈನ್ಯದ ಮುಂಚೂಣಿಯಲ್ಲಿದ್ದವರು ಕರಿಯ ಸೈನಿಕರ ತುಕಡಿಗಳು! ಆಕ್ರಮಣ ಮಾಡಿಕೊಂಡ ನಂತರ ಫೆಡರಲ್ ಸರ್ಕಾರದ ಯುದ್ಧ ಇಲಾಖೆ ಸಂಟರ್ ಕೋಟೆ (Fort Sumter)ಯ (ಅಂತರ್ಯುದ್ಧ ಪ್ರಾರಂಭವಾದ ಸ್ಥಳ) ಪತನದ ನಾಲ್ಕನೆಯ ವಾರ್ಷಿಕದ ಸಲುವಾಗಿ ದೊಡ್ಡ ಸಮಾರಂಭ ಏರ್ಪಡಿಸುವ ವ್ಯವಸ್ಥೆ ಮಾಡತೊಡಗಿತು. ೧೮೬೫ರ ಏಪ್ರಿಲ್ ತಿಂಗಳ ೧೪ನೆಯ ತಾರೀಖು ನಡೆದ ಸಮಾರಂಭದಲ್ಲಿ ಮೇಜರ್ ಆ್ಯಂಡರ್‌ಸನ್ ನಾಲ್ಕು ವರ್ಷಗಳ ಹಿಂದೆ ಕೆಳಗಿಳಿಸಲ್ಪಟ್ಟಿದ್ದ ಸಂಯುಕ್ತ ಸಂಸ್ಥಾನದ ಧ್ವಜವನ್ನು ಪುನಃ ಏರಿಸಿದನು. ಧ್ವಜಕ್ಕೆ ಗೌರವ ಸಲ್ಲಿಸಲು ಬಂದರಿನಲ್ಲಿದ್ದ ಹಡಗುಗಳಿಂದ ಮತ್ತು ಸುತ್ತ ಮುತ್ತಲಿನ ಬತ್ತೇರಿಗಳಿಂದ ಫಿರಂಗಿ

ಗುಂಡುಗಳ ಶಬ್ದ ಮೊಳಗಿತು. ಆ ದಿನ ಸಾಯಂಕಾಲ ಅಧ್ಯಕ್ಷ ಲಿಂಕನ್ ತನ್ನ ಆಡಳಿತ ಮಂಡಲದ ಸಚಿವರೊಡನೆ ಯುದ್ಧಾನಂತರದ ಸಮಸ್ಯೆಗಳನ್ನು ಮತ್ತು ಪರಿಹಾರಗಳನ್ನು ಚರ್ಚಿಸಿದನು. ಅಂದಿನ ರಾತ್ರಿ ಲಿಂಕನ್ ತನ್ನ ಪತ್ನಿಯೊಡನೆ ರಂಗಮಂದಿರಕ್ಕೆ ತೆರಳಿದನು.

ಯುದ್ಧ ಮುಗಿಯಿತು, ಮುಂದೇನು?

ಯದ್ಧ ಮುಗಿಯಿತು! ಈ ಯುದ್ಧಕ್ಕಾಗಿ ದೇಶ ತೆತ್ತ ಬೆಲೆ ಅಪಾರವಾದುದು. ಸತ್ತವರ ಸಂಖ್ಯೆ ೬೦೦೦೦೦ಕ್ಕೂ ಮೀರಿತ್ತು. ಎಷ್ಟು ಹಣ ಖರ್ಚಾಯಿತು ಎಂದು ಊಹಿಸುವುದು ಕಷ್ಟ. ಎಲ್ಲಾ ನಷ್ಟಗಳು – ಆಸ್ತಿಪಾಸ್ತಿಗೆ ಹಾನಿ, ಪುನರ್ನಿರ್ಮಾಣದ ಖರ್ಚು ಲೆಕ್ಕ ಹಾಕಿದರೆ ಹತ್ತಾರು ಬಿಲಿಯನ್ ಡಾಲರುಗಳಾಗಬಹುದೆಂದು ಅಂದಾಜು ಮಾಡಬಹುದು. (ಒಂದು ಬಿಲಿಯನ್ ಅಂದರೆ ಒಂದರ ಮುಂದೆ ಹತ್ತು ಸೊನ್ನೆಗಳು – ೧೦೦೦೦೦೦೦೦೦೦ – ಈ ವಿವರಗಳನ್ನು ಕೊಟ್ಟಿರುವ ಉದ್ದೇಶವೆಂದರೆ, ಅಷ್ಟೊಂದು ಹಣವನ್ನು ಅನಾವಶ್ಯಕವಾಗಿ ಖರ್ಚು ಮಾಡಿದ ಮೂರ್ಖತನವನ್ನು ಮನದಟ್ಟು ಮಾಡುವುದಕ್ಕೆ.) ಯುದ್ಧದಿಂದಾದ ಮಾನಸಿಕ ನಷ್ಟವನ್ನು ಅಳೆಯುವುದು ಮತ್ತೂ ಕ್ಲಿಷ್ಟವಾದುದು. ಮಾನಸಿಕ ನಷ್ಟ ಅಪಾರವಾದುದು ಎಂದು ಹೇಳಿದರೆ ಅದರ ಆಳ ಅಗಲಗಳು ನಮಗೆ ಅರಿವಾಗುವುದಿಲ್ಲ. ಯುದ್ಧದಲ್ಲಿ ಮಡಿದವರ, ಗಾಯಗೊಂಡವರ ಮತ್ತು ಕೈ ಕಾಲು ಕಣ್ಣುಗಳನ್ನು ಕಳೆದುಕೊಂಡವರ ಮತ್ತು ಅವರ ಬಂಧು ಬಳಗದವರ ದುಃಖ ದುಮ್ಮಾನಗಳು ಹೃದಯವಿದ್ರಾವಕವಾದುದು. ಇದಕ್ಕಿಂತ ಹೆಚ್ಚಿನ ಹಾನಿ ಎಂದರೆ ಯುದ್ಧ ಸಾಮಾನ್ಯ ಜನರ ಮನಸ್ಸಿನಲ್ಲಿ ಉದ್ರೇಕಿಸಿದ, ಗೆದ್ದಲಿನಂತೆ ಒಳಗಿನಿಂದ ಸಮಾಜವನ್ನು ಕೊರೆದು ನಾಶ ಮಾಡುತ್ತಿರುವ ದ್ವೇಷ ಮತ್ತು ಕಹಿ ಭಾವನೆಗಳು. ಅಪಾರ ಬೆಲೆ ತೆತ್ತು ಪಡೆದುದಾದರೂ ಏನು? ಮೊದಲನೆಯದಾಗಿ, ಗುಲಾಮವಿಮೋಚನೆ. ಎರಡನೆಯದು, ಸಂಯುಕ್ತ ಸಂಸ್ಥಾನಗಳ ಒಗ್ಗಟ್ಟು ಚಿರಂತನವಾದುದು ಎಂದು ಸಾಬೀತುಗೊಂಡದ್ದು. ಲಿಂಕನ್ ಪರಿಣಾಮಕಾರಿಯಾಗಿ ಹೇಳಿದ 'ಜನರು, ಜನರಿಗಾಗಿ, ಜನರಿಂದ ನಿರ್ವಹಿಸಲ್ಪಡುವ ಸರ್ಕಾರ' ಇತರ ದೇಶಗಳಿಗೆ ಆದರ್ಶವಾಯಿತು. ಮೂರನೆಯದಾಗಿ, ಇಂಥ ದುರಂತ ಮತ್ತೆ ಎಂದೂ ಸಂಭವಿಸದಂತೆ ಅಮೆರಿಕನ್ನರಲ್ಲಿ ಹೆಚ್ಚಿನ ಸಮನ್ವಯ ಮತ್ತು ಸಮ್ಮತ ಉಂಟಾದವು. ಯುದ್ಧದ ಪರಿಣಾಮಗಳು ಕೆಲವು ಪ್ರಶ್ನೆಗಳನ್ನು ಎಬ್ಬಿಸಿದವು – ಯುದ್ಧ ಒದಗಿಸಿಕೊಟ್ಟ ಅವಕಾಶಗಳಾನ್ನು ದೇಶದ ಒಳಿತಿಗಾಗಿ ಉಪಯೋಗಿಸಲಾಗುವುದೆ? ಕರಿಯರು ತಮ್ಮ ಸ್ವಾತಂತ್ರ್ಯದಿಂದ ಏನು ಸಾಧಿಸಬಲ್ಲರು? ಬಿಳಿಯರು ಕರಿಯರ ವಿಮೋಚನೆಗೆ ಯಾವ ರೀತಿಯಲ್ಲಿ ಪ್ರತಿಕ್ರಿಯೆ ತೋರಿಸುತ್ತಾರೆ? ಹೊಸ ತಾಂತ್ರಿಕ ಕುಶಲತೆ ಮತ್ತು ಸಾಮಾಜಿಕ ಸಮ್ಮತವನ್ನು ಹೇಗೆ ನಿರ್ದೇಶಿಸಲಾಗುತ್ತದೆ? ಕಡೆಯದಾಗಿ ಜನಸಾಮಾನ್ಯರು ಸ್ವಲ್ಪ ಕಾಲದ ಹಿಂದೆ ಜರುಗಿದ ದುರಂತ ಘಟನೆಗಳನ್ನು ಮರೆಯಬಲ್ಲರೆ? ಜನರು ಹಾಗೆ ಮರೆತು ಯುದ್ಧದಲ್ಲಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದ ಧೀರರ ಆಸೆ ಆಕಾಂಕ್ಷೆಗಳನ್ನು ಪೂರೈಸಬಲ್ಲರೆ? □

<u>ಅಧ್ಯಾಯ – ೬</u>

ಪುನರ್ ನಿರ್ಮಾಣ ಯೋಜನೆಗಳು

ಉತ್ತರ ಸಂಸ್ಥಾನಗಳ ಪುನರ್‌ನಿರ್ಮಾಣ

ಅಮೆರಿಕದ ಅಂತರ್ಯುದ್ಧವನ್ನು ಎರಡನೆಯ ಮಹಾಕ್ರಾಂತಿ ಎಂದು ಹೇಳಬಹುದು. ಅಮೆರಿಕದ ಸ್ವಾತಂತ್ರ್ಯ ಸಮರಕ್ಕೆ ಹೋಲಿಸಿದರೆ ಅಂತರ್ಯುದ್ಧ ನಿಜಕ್ಕೂ ಒಂದು ಮಹಾ ಸಾಮಾಜಿಕ ಕ್ರಾಂತಿ ಎನ್ನುವುದು ಅದರ ಪರಿಣಾಮಗಳಿಂದ ಖಚಿತವಾಗುತ್ತದೆ. ಈ ಸಾಮಾಜಿಕ ಕ್ರಾಂತಿ ದೊಡ್ಡ ಪ್ಲಾಂಟರ್‌ಗಳ ಪ್ರಭಾವವನ್ನು ಕುಗ್ಗಿಸಿ, ಕೈಗಾರಿಕೆ ಮತ್ತು ಉದ್ಯಮ ಕ್ಷೇತ್ರದ ನಾಯಕರನ್ನು ಮೇಲೆ ಬರಲು ಅವಕಾಶ ಮಾಡಿಕೊಟ್ಟಿತು. ಇದು ಈಶಾನ್ಯ ಪ್ರಾಂತಗಳ ಕೈಗಾರಿಕೋದ್ಯಮಿಗಳ ಮತ್ತು ಪಶ್ಚಿಮ ಪ್ರಾಂತಗಳ ರೈತರ ಪರಸ್ಪರ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಿತು.

ದಕ್ಷಿಣ ಪ್ರಾಂತಗಳ ಗೈರುಹಾಜರಿಯಲ್ಲಿ ಕಾಂಗ್ರೆಸ್ ೧೮೬೧ರ ಮೊರ್ರಿಲ್ ತೆರಿಗೆ (Morrill Tariff)ಯನ್ನು ಜಾರಿಗೆ ತಂದಿತು. ಈ ತೆರಿಗೆ ಕೆಲವು ತಿದ್ದುಪಡಿಗಳೊಡನೆ ಅಂತರ್ಯುದ್ಧ ಪ್ರಾರಂಭಿಸುವ ಮುಂಚೆ ಇದ್ದ ಎರಡು ಪಟ್ಟು ಹೆಚ್ಚು ಏರಿತು. ೧೮೬೩ರ ರಾಷ್ಟ್ರೀಯ ಕಾಯಿದೆಯನ್ನು ೧೮೬೪ರಲ್ಲಿ ಪುನರ್‌ವ್ಯವಸ್ಥೆ ಜಾರಿಗೆ ತಂದು ರಾಷ್ಟ್ರದಾದ್ಯಂತ ಒಂದೇ ರೀತಿಯ ಬ್ಯಾಂಕ್ ವ್ಯವಸ್ಥೆ ಮತ್ತು ಕಾಗದದ ಹಣವನ್ನು ಚಲಾವಣೆಗೆ ತಂದರು. ೧೮೬೪ರಲ್ಲಿ ಅಮೆರಿಕದ ಪೂರ್ವದಿಂದ ಪಶ್ಚಿಮದವರೆಗೂ ರೈಲು ರಸ್ತೆಯ ನಿರ್ಮಾಣವನ್ನು ಕಾಂಗ್ರೆಸ್ ಅನುಮೋದಿಸಿತು ಮತ್ತು ಆ ನಿರ್ಮಾಣಕ್ಕೆ ಅಗತ್ಯವಾದ ಸಾರ್ವಜನಿಕ ಭೂಮಿಯನ್ನು ದೇಣಿಗೆ ಕೊಟ್ಟು ಸಾರ್ವಜನಿಕ ಬಾಂಡ್‌ಗಳ (bond) ಮೂಲಕ ಹಣ ಒದಗಿಸಿಕೊಟ್ಟಿತು. ೧೮೬೨ರ ಹಿಡುವಳಿ ಕಾಯಿದೆ (Homestead act) ಪ್ರಕಾರ ಹಿಡುವಳಿದಾರರಿಗೆ ಭೂಮಿಯನ್ನು ದೇಣಿಗೆ ಕೊಡಲಾಯಿತು. ಅದೇ ವರ್ಷ ಜಾರಿಗೆ ಬಂದ ಮೊರ್ರಿಲ್ ಭೂವಿತರಣೆ ಕಾಯಿದೆ (Morrill Land Grant) ಪ್ರಕಾರ ಎಲ್ಲ ಸಂಸ್ಥಾನಗಳಿಗೂ ಪ್ರತಿ ಕಾಂಗ್ರೆಸ್ ಪ್ರತಿನಿಧಿಗೆ ೩೦೦೦೦ ಎಕರೆಯಂತೆ ಭೂಮಿಯನ್ನು ಕೊಡಲಾಯಿತು. ಸಂಸ್ಥಾನದ ಸರ್ಕಾರ ಈ ಭೂಮಿಯನ್ನು ಮಾರಿ ಬಂದ ಹಣವನ್ನು ವ್ಯವಸಾಯ ಮತ್ತು ಯಂತ್ರ ಕುಶಲತೆ ಕಾಲೇಜುಗಳ (Colleges of Agriculture and Mechanc Arts) ಸ್ಥಾಪನೆಗೆ ವಿನಿಯೋಗಿಸಿತು.

ಹಾಳು ಬಿದ್ದ ದಕ್ಷಿಣ ಸಂಸ್ಥಾನಗಳು

ಅಂತರ್ಯುದ್ಧದ ಹೆಚ್ಚಿನ ಕದನಗಳು ನಡೆದಿದ್ದು ದಕ್ಷಿಣ ಸಂಸ್ಥಾನಗಳಲ್ಲಿ. ಆದ್ದರಿಂದ ಈ ಸಂಸ್ಥಾನಗಳನ್ನು ಉತ್ತರ ಸಂಸ್ಥಾನಗಳೊಡನೆ ಹೋಲಿಸಿದರೆ ಅಪಾರ ವ್ಯತ್ಯಾಸ ಕಂಡುಬರುತ್ತದೆ. ಜನರಲ್ ಶರ್‌ಮನ್‌ನ ಸೈನ್ಯ ಹಾದು ಹೋದ ಪಥದಲ್ಲಿ ಮನೆ ಮಠಗಳನ್ನು ಕುಟ್ಟಿ ಕೆಡವಿ, ಬೆಂಕಿಯಿಟ್ಟು ಎಲ್ಲವನ್ನು ಸುಟ್ಟು, ಮೈಲಿಗಟ್ಟಲೆ ಪ್ರದೇಶವನ್ನು ನಿರ್ಜನವಾಗಿ ಹಾಳು ಬೀಳುವಂತೆ ಮಾಡಿತ್ತು. ದಕ್ಷಿಣ ಕೆರೊಲಿನ ರಾಜಧಾನಿ ಕೊಲಂಬಿಯವನ್ನು ಶರ್‌ಮನ್ ಸೈನ್ಯ ನಾಶಮಾಡಿತ್ತು. ಚಾರ್ಲ್ಸ್‌ಟನ್ ಪಟ್ಟಣವು ದುಸ್ಥಿತಿಯ ಪರಮಾವಧಿಯನ್ನು ಮುಟ್ಟಿತ್ತು – ಖಾಲಿಯಾದ ಮನೆಗಳು, ನಿರ್ಗತಿಕರಾದ ವಿಧವೆಯರು, ಲೂಟಿಯಾದ ಉಗ್ರಾಣದ ಮನೆಗಳು, ಕಳೆ ಬೆಳೆದು ನಿಂತ ಹೂದೋಟಗಳು, ಹುಲ್ಲು ಬೆಳೆದು ನಿಂತ ಹೆದ್ದಾರಿಗಳು, ಎಕರೆಗಟ್ಟಲೆ ಬಿಕೋ ಎನ್ನುವ ಸಾಗುವಳಿಯಿಲ್ಲದ ಜಮೀನು – ಒಟ್ಟಿನಲ್ಲಿ ಹೃದಯವಿದ್ರಾವಕ ದೃಶ್ಯಗಳಾಗಿದ್ದವು. ಟೆನ್ನೆಸ್ಸೀ ಕಣಿವೆ ಪ್ರದೇಶವೂ ಶರ್‌ಮನ್ ಸೈನ್ಯದ ದಾಳಿಯಿಂದ ತತ್ತರಿಸಿದ್ದು ಸೈನ್ಯ ಬಿಟ್ಟುಹೋದ ಕುರುಹುಗಳಿಂದಾದ – ಬೆಂಕಿ ಬಿದ್ದು ಸುಟ್ಟುಹೋದ ಮದ್ಯ ತಯಾರಿಸುವ ಗೃಹಗಳು, ನಾಶವಾದ ಸೇತುವೆಗಳು, ಗಿರಣಿಗಳು ಮತ್ತು ಕಾರ್ಖಾನೆಗಳು – ಅಪಾರ ಹಾನಿಯನ್ನು ಊಹಿಸಿಕೊಳ್ಳಬಹುದು. ಗಡಿಪ್ರದೇಶದ ಸಂಸ್ಥಾನಗಳಾದ ಮಿಸ್ಸೋರಿ ಮತ್ತು ಕೆಂಟಕಿಗಳಲ್ಲಿ ಕದ್ದು ಮುಚ್ಚಿ ದಾಳಿ ಮಾಡುವ ತಂಡಗಳ ಘರ್ಷಣೆಗಳಿಂದಾಗಿ ಅರಾಜಕತೆ ಉಂಟಾಗಿತ್ತು. ಅನಾಮತ್ತು ದಾಳಿ ಮಾಡುವ ಭಯೋತ್ಪಾದಕರು, ಜನರನ್ನು ವಾಹನಗಳನ್ನು ದರೋಡೆ ಮಾಡುವ ಹಗಲುಗಳ್ಳರು ಮತ್ತು ಬ್ಯಾಂಕ್[illegible]ನ್ನು [illegible] ಹೊಡೆಯುವ ದರೋಡೆಕೋರರು – ಇವರ ಹಾವಳಿ ಈ ಸಂಸ್ಥಾನಗಳಲ್ಲಿ ಮೇರೆ ಮೀರಿತ್ತು. ಇದಲ್ಲದೆ ಆಸ್ತಿ ಪಾಸ್ತಿಗಳ ಬೆಲೆ ಕುಸಿದುಹೋಗಿತ್ತು. ಕಾನ್‌ಫೆಡರೇಟ್ ಹಣ ಮತ್ತು ಬಾಂಡುಗಳು ಬೆಲೆಯಿಲ್ಲದಾದುವು. ರೈಲು ರಸ್ತೆಗಳು ಹಾಳು ಬಿದ್ದಿದ್ದವು. ಹಾಳಾಗದೆ ಉಳಿದಿದ್ದ ಹತ್ತಿಯ ದಾಸ್ತಾನು ಮಳಿಗೆಗಳನ್ನು ಕಾನ್‌ಫೆಡರೇಟ್ ಸರ್ಕಾರ ಕೊಡಬೇಕಾಗಿದ್ದ ಫೆಡರಲ್ ತೆರಿಗೆಗಾಗಿ ಮುಟ್ಟುಗೋಲು ಹಾಕಿಕೊಳ್ಳಲಾಯಿತು. ಗುಲಾಮರ ವಿಮೋಚನೆ ಅವರನ್ನು ಕೊಂಡಿದ್ದ ಒಡೆಯರಿಗೆ ನಾಲ್ಕು ಬಿಲಿಯನ್ ಡಾಲರ್ ನಷ್ಟ ಉಂಟುಮಾಡಿ ಕೆಲಸ ಕಾರ್ಯಗಳನ್ನು ಅಸ್ತವ್ಯಸ್ತಗೊಳಿಸಿತು. ಹತ್ತಿಯ ಮಾರುಕಟ್ಟೆ ವಿಸ್ತಾರಗೊಳ್ಳುವುದು ನಿಂತು ಹತ್ತಿ ಅತ್ಯುತ್ತಮ ಲಾಭದಾಯಕವಾಗಿದ್ದ ಕಾಲ ಮುಗಿದು ಆದರ ಪ್ರಾಬಲ್ಯ ಕ್ಷೀಣಿಸುತ್ತ ಹೋಯಿತು. ೧೮೭೯ರವರೆಗೆ ಹತ್ತಿಯ ಬೆಳೆಯ ಪ್ರಮಾಣ ಅಂತರ್ಯುದ್ಧದ ಮುಂಚಿನ ಮಟ್ಟಕ್ಕೆ ಏರಲು ಸಾಧ್ಯವಾಗಲಿಲ್ಲ. ಹೊಗೆ ಸೊಪ್ಪಿನ ಬೆಳೆ ೧೮೮೦ರವರೆಗೂ ಅಂತರ್ಯುದ್ಧದ ಹಿಂದಿನ ಉತ್ಪಾದನೆಯ ಮಟ್ಟಕ್ಕೆ ಏರಲಾಗಲಿಲ್ಲ. ಕಬ್ಬಿನ ಬೆಳೆಗೆ ೧೮೯೩ರವರೆಗೂ ಉತ್ಪಾದನೆ ಹೆಚ್ಚಿಸಲು ಆಗಲಿಲ್ಲ. ಭತ್ತದ ಬೆಳೆಯಂತೂ ಊರ್ಜಿತವಾಗದೆ ಹೋಯಿತು. ಇದು ದಕ್ಷಿಣ ಸಂಸ್ಥಾನಗಳ ಸರ್ವೇಸಾಮಾನ್ಯ ಪರಿಸ್ಥಿತಿಯಾಗಿತ್ತು.

ವಿಮೋಚನೆಗೊಂಡ ಗುಲಾಮರು: ನ್ಯಾಯಬದ್ಧವಾಗಿ ಸ್ವತಂತ್ರರು, ಸಾಮಾಜಿಕವಾಗಿ ಅತಂತ್ರರು

ಎಲ್ಲರಿಗಿಂತಲೂ ಹೆಚ್ಚಿನ ಕಷ್ಟ ಕಾರ್ಪಣ್ಯಗಳಿಗೆ ಗುರಿಯಾದವರೆಂದರೆ ವಿಮೋಚನೆಗೊಂಡ ಗುಲಾಮರು. ವಿಮೋಚನಾ ಚಳುವಳಿಯ ಮುಂಚೂಣಿಯಲ್ಲಿದ್ದ ಪ್ರಭಾವಶಾಲೀ ನಾಯಕನಾಗಿದ್ದ ಫ್ರೆಡೆರಿಕ್ ಡಗ್ಲಾಸ್ ಹೇಳಿದಂತೆ: 'ಗುಲಾಮ ತನ್ನ ಒಡೆಯನಿಂದ ಬಿಡುಗಡೆ ಪಡೆದರೂ ಸಮಾಜದ ಗುಲಾಮನಾಗಿದ್ದನು'. ಬಿಡುಗಡೆಯಾದ ಗುಲಾಮರಲ್ಲಿ ಹಣವಾಗಲೀ, ಆಸ್ತಿಯಾಗಲೀ ಇರಲಿಲ್ಲ. ಅವರನ್ನು ಸ್ನೇಹದಿಂದ ಕಾಣುವವರೂ ಇರಲಿಲ್ಲ. ಹಿಂದಿನ ಪ್ಲಾಂಟೇಷನ್ ಜೀವನದಿಂದ ಅವರಿಗೆ ಬಿಡುಗಡೆ ದೊರಕಿತ್ತು, ಆದರೆ ಈಗ ಅವರು ದಿಕ್ಕಿಲ್ಲದವರಾಗಿದ್ದರು. ಹಿಂದೆ ಅವರಿಗೆ ವಸತಿ ದೊರಕಿತ್ತು, ಆದರೆ ಈಗ ಬೀದಿ ಪಾಲಾಗಿದ್ದರು. ವಿಮೋಚನಾ ಚಳುವಳಿಗಾರರೂ ಕೂಡ ಬಿಡುಗಡೆಯಾದ ಗುಲಾಮರಿಗೆ ಅನುಕೂಲವಾಗುವ ಭೂಸುಧಾರಣೆಯನ್ನು ಜಾರಿಗೆ ತರಲು ಪ್ರಯತ್ನಿಸಲಿಲ್ಲ.

೧೮೬೫ರಲ್ಲಿ ಕಾಂಗ್ರೆಸ್ ಯುದ್ಧ ಇಲಾಖೆಯ ಆಶ್ರಯದಲ್ಲಿ 'ನಿರಾಶ್ರಿತರ ಸೇವಾ ಸಮಿತಿ'ಯನ್ನು (Bureau of Refugees) ಸ್ಥಾಪಿಸಿತು. ಸರ್ಕಾರ ಮುಟ್ಟಗೋಲು ಹಾಕಿಕೊಂಡ ಜಮೀನುಗಳನ್ನು ಮತ್ತು ಮಾಲೀಕರು ಬಿಟ್ಟುಹೋದ ಜಮೀನುಗಳನ್ನು ಈ ಸಮಿತಿ ತನ್ನ ಆಡಳಿತಕ್ಕೆ ಒಳಪಡಿಸಿಕೊಂಡು ಆ ಜಮೀನುಗಳನ್ನು ನಂಬಿಕಸ್ತರಾದ ಮತ್ತು ಜವಾಬ್ದಾರಿಯಿಂದ ಸಾಗುವಳಿ ಮಾಡುವಂಥ ಬಿಡುಗಡೆಯಾದ ಗುಲಾಮರಿಗೆ ಹಂಚುವ ವ್ಯವಸ್ಥೆಯನ್ನು ಜಾರಿಗೆ ತಂದಿತು. ಮೇಲಾಗಿ ಈ ಸಮಿತಿ ನಿರಾಶ್ರಿತರಿಗೆ ಬೇಕಾದ ಆಹಾರ ಪದಾರ್ಥಗಳು, ಬಟ್ಟೆ ಬರೆ ಇತ್ಯಾದಿಗಳನ್ನು ಹಂಚುವ ವ್ಯವಸ್ಥೆ ಮಾಡಿತು. ಖಾಸಗಿ ಸಂಸ್ಥೆಗಳು ಔಷಧ ವಿತರಣೆ, ವಿದ್ಯಾಭ್ಯಾಸ ವ್ಯವಸ್ಥೆ ಮುಂತಾದ ಸೇವಾಕಾರ್ಯಗಳನ್ನು ಕೈಗೊಂಡವು. ಕಾಂಗ್ರೆಸ್ ಇದಕ್ಕಿಂತ ಹೆಚ್ಚಿನ ಕಾರ್ಯಕ್ರಮಗಳನ್ನು ಜಾರಿಗೆ ತರಲಿಲ್ಲ. ಬಿಡುಗಡೆಯಾದ ಗುಲಾಮರ ಹಕ್ಕು ಬಾಧ್ಯತೆಗಳನ್ನು ಬೆಂಬಲಿಸುವುದನ್ನು ಮತ್ತು ಕಾಂಗ್ರೆಸ್‌ನ ಕೆಲವು ತಾತ್ಕಾಲಿಕ ಪುನರ್‌ವ್ಯವಸ್ಥೆಯ ಕಾರ್ಯಕ್ರಮಗಳನ್ನು ಬಿಟ್ಟರೆ ಸ್ಥಿರವಾದ ಮತ್ತು ಮಾಜಿ ಗುಲಾಮರು ಸ್ವತಂತ್ರವಾಗಿ ತಮ್ಮ ಕಾಲ ಮೇಲೆ ನಿಲ್ಲಲು ಸಹಾಯವಾಗುವಂಥ ಯೋಜನೆಗಳನ್ನು ಜಾರಿಗೆ ತರಲಿಲ್ಲ.

ಪುನರ್‌ನಿರ್ಮಾಣದ ಕಾರ್ಯ ಅಂತರ್ಯುದ್ಧದ ಮೊದಲ ದಿನಗಳಲ್ಲೇ ಪ್ರಾರಂಭವಾಗಿತ್ತು. ವರ್ಜೀನಿಯ ಸಂಸ್ಥಾನದ ಪಶ್ಚಿಮ ಪ್ರದೇಶ ಕಾನ್‌ಫೆಡರಸಿಗೆ ಸೇರಲು ನಿರಾಕರಿಸಿತ್ತು. ಆದ್ದರಿಂದ ೧೮೬೧ರಲ್ಲಿ ಫೆಡರಲ್ ಸರ್ಕಾರಕ್ಕೆ ನಿಷ್ಠೆಯುಳ್ಳ ಪ್ರಾಂತೀಯ ಸರ್ಕಾರವನ್ನು ವ್ಹೀಲಿಂಗ್ (Wheeling) ಎಂಬ ಊರಿನಲ್ಲಿ ಘೋಷಿಸಲಾಯಿತು. ಈ ಪ್ರಾಂತವನ್ನು ೧೮೬೩ರಲ್ಲಿ ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಳ್ಳಲಾಯಿತು. ಈ ಸಂಸ್ಥಾನಕ್ಕೆ ಪಶ್ಚಿಮ ವರ್ಜೀನಿಯ ಎಂದು ಹೆಸರಿಟ್ಟರು. ಇದರ ಗವರ್ನರ್ ಫ್ರಾನ್ಸಿಸ್

ಪಿಯೆರ್‌ಪಾಂಟ್ (Francis Pierpont) ಅಲೆಕ್ಸಾಂಡ್ರಿಯ (Alexandria) ಊರಿನಿದ ರಾಜ್ಯವಾಳುತ್ತಿದ್ದನು. ಫೆಡರಲ್ ಸೈನ್ಯಗಳು ದಕ್ಷಿಣ ಸಂಸ್ಥಾನಗಳನ್ನು ಆಕ್ರಮಿಸಿ ಮುಂದುವರೆದಂತೆಲ್ಲ ಅಧ್ಯಕ್ಷ ಲಿಂಕನ್ ಟೆನ್ನೆಸ್ಸೀ, ಆರ್‌ಕನ್‌ಸಾ ಮತ್ತು ಲೂಯಿಸಿಯಾನ ಸಂಸ್ಥಾನಗಳಿಗೆ ಮಿಲಿಟರಿ ಗವರ್ನರ್‌ಗಳನ್ನು ನೇಮಿಸಿದನು. ಮಾರನೆಯ ವರ್ಷದ ಕೊನೆಯಲ್ಲಿ ಲಿಂಕನ್ ಆ ಸಂಸ್ಥಾನಗಳಲ್ಲಿ ಜನತಾ ಸರ್ಕಾರಗಳನ್ನು ಸ್ಥಾಪಿಸುವ ಯೋಜನೆಯನ್ನು ಹಾಕಿದ್ದನು.

ಲಿಂಕನ್ ಅಧ್ಯಕ್ಷನಾಗಿ ತನಗಿದ್ದ ಕ್ಷಮಾಪಣೆ ನೀಡುವ ಅಧಿಕಾರವನ್ನು ಚಲಾಯಿಸಿ ೧೮೬೩ರ ಡಿಸೆಂಬರ್ ೮ನೆಯ ತಾರೀಖಿನಂದು ರಾಜದ್ರೋಹ ಕ್ಷಮಾಪಣೆ (amnesty) ಮತ್ತು ಪುನರ್‌ನಿರ್ಮಾಣ ಪ್ರಕಟಣೆಯನ್ನು ಹೊರಡಿಸಿದನು. ಈ ಪ್ರಕಟಣೆಯ ಪ್ರಕಾರ ದಂಗೆ ಎದ್ದ ಯಾವ ಸಂಸ್ಥಾನವಾದರೂ ಅದರ ಪ್ರಜಾಸಂಖ್ಯೆ, ೧೮೬೦ರ ಚುನಾವಣೆಯಲ್ಲಿ ಭಾಗವಹಿಸಿದವರ ಸಂಖ್ಯೆಯ ಸರಾಸರಿ ಹತ್ತು ಭಾಗದಷ್ಟು ಇದ್ದು, ರಾಜ್ಯಾಂಗ ಮತ್ತು ಸಂಯುಕ್ತ ಸಂಸ್ಥಾನಗಳ ಒಗ್ಗಟ್ಟನ್ನು ಎತ್ತಿಹಿಡಿಯುತ್ತೇನೆ ಎಂದು ಪ್ರಮಾಣ ಮಾಡಿದರೆ ಆ ಸಂಸ್ಥಾನದ ದಂಗೆಕೋರತನ ಮತ್ತಿತರ ದೇಶದ್ರೋಹಗಳನ್ನು ಮನ್ನಿಸಿ ಅಧ್ಯಕ್ಷನ ಕ್ಷಮಾಪಣೆ ದೊರೆಯುತ್ತಿತ್ತು. ಕ್ಷಮಾಪಣೆ ದೊರೆಯಲು ಸಂಸ್ಥಾನಗಳು ಗುಲಾಮ ವಿಮೋಚನಾ ಕಾಯಿದೆಗಳನ್ನು ಅನುಮೋದಿಸುವುದು ಅನಿವಾರ್ಯವಾಗಿತ್ತು. ಅಧ್ಯಕ್ಷನ ಕ್ಷಮಾಪಣೆಗೆ ಅರ್ಹರಲ್ಲದ ಕೆಲವು ಗುಂಪುಗಳೆಂದರೆ – ಕಾನ್‌ಫೆಡರಸಿಯ ಕೆಲವು ಅಧಿಕಾರವರ್ಗದವರು, ಕಾನ್‌ಫೆಡರೇಟ್ ಸೈನ್ಯ ಮತ್ತು ನೌಕಾದಾಳದ ಉನ್ನತ ಅಧಿಕಾರಿಗಳು, ದಂಗೆಕೋರರಿಗೆ ಸಹಾಯ ಮಾಡಿದ ಸಂಯುಕ್ತ ಸಂಸ್ಥಾನಗಳ ಕಾಂಗ್ರೆಸ್ ಸದಸ್ಯರು, ನ್ಯಾಯಾಧೀಶರು ಮತ್ತು ಸೈನ್ಯಾಧಿಕಾರಿಗಳು, ಸೆರೆಸಿಕ್ಕಿದ ಕರಿಯ ಸೈನಿಕರನ್ನು ಮತ್ತು ಅಧಿಕಾರಿಗಳನ್ನು ನ್ಯಾಯಬದ್ಧವಾಗಿ ಯುದ್ಧ ಕೈದಿಗಳಂತೆ ನೋಡಿಕೊಳ್ಳದೆ ಹೋದವರು. ಲಿಂಕನ್ ಯೋಜನೆಯ ಪ್ರಕಾರ ಫೆಡರಲ್ ಸರ್ಕಾರಕ್ಕೆ ನಿಷ್ಠೆಯಿಂದ ನಡೆದುಕೊಳ್ಳುವ ಸರ್ಕಾರಗಳು ಟೆನ್ನೆಸ್ಸೀ, ಆರ್‌ಕನ್‌ಸಾ ಮತ್ತು ಲೂಯಿಸಿಯಾನಗಳಲ್ಲಿ ಸ್ಥಾಪಿತಗೊಂಡವು. ಆದರೆ ಈ ಸರ್ಕಾರಗಳನ್ನು ಕಾಂಗ್ರೆಸ್ ಅನುಮೋದಿಸಲಿಲ್ಲ, ಏಕೆಂದರೆ ರಾಜ್ಯಾಂಗದಲ್ಲಿ ದಂಗೆಕೋರ ಸರ್ಕಾರಗಳ ಪುನರ್‌ವ್ಯವಸ್ಥೆಯ ಬಗ್ಗೆ ಖಚಿತವಾದ ನಿಬಂಧನೆಗಳು ಇಲ್ಲದೆ ಹೋಗಿ ಇತ್ಯರ್ಥಕ್ಕೆ ಬರಲು ಸಾಧ್ಯವಾಗಲಿಲ್ಲ.

ವೇಡ್-ಡೇವಿಸ್ ಕಾಯಿದೆ ಪುನರ್‌ರಚನೆಯ ಬಗ್ಗೆ ಸಲಹೆಗಳನ್ನು ಖಚಿತಗೊಳಿಸಿದ ಮೇಲೆ ಕಾಂಗ್ರೆಸ್ ಒಂದು ಪುನರ್‌ನಿರ್ಮಾಣದ ಯೋಜನೆಯನ್ನು ತಯಾರಿಸಿತು. ವೇಡ್-ಡೇವಿಸ್ ಕಾಯಿದೆ ಪ್ರಕಾರ ಬಹುಸಂಖ್ಯಾತ ಬಿಳಿಯರು (ಗಂಡಸರು ಮಾತ್ರ) ಫೆಡರಲ್ ಸರ್ಕಾರಕ್ಕೆ ನಿಷ್ಠೆಯಿಂದಿರುವುದಾಗಿ ಪ್ರಮಾಣ ಮಾಡಬೇಕು ಮತ್ತು ಅಧಿಕಾರಿಗಳು ಉಗ್ರನಿಷ್ಠೆ (iron-clad oath)ಯನ್ನು ತೋರುವ ಪ್ರಮಾಣ ಮಾಡಬೇಕಾದುದು ಅನಿವಾರ್ಯವಾಗಿತ್ತು. ಇಂಥ ಪ್ರಮಾಣವಚನ ಮಾಡಿದವರು ಸಂಸ್ಥಾನಗಳ ಪ್ರತಿನಿಧಿ

ಸಭೆಗಳಲ್ಲಿ ಭಾಗವಹಿಸುವ ಅರ್ಹತೆಯನ್ನು ಮತ್ತು ಮತ ನೀಡುವ ಹಕ್ಕನ್ನು ಪಡೆಯುತ್ತಿದ್ದರು. ಈ ಸಭೆಗಳು ಕೂಡ ಗುಲಾಮ ವಿಮೋಚನಾ ಕಾಯಿದೆಗಳನ್ನು ಅನುಮೋದಿಸಬೇಕಿತ್ತು. ಪಿತೂರಿ ನಡೆಸಿದ ಕಾನ್‌ಫೆಡರೇಟ್ ಅಧಿಕಾರಿಗಳಿಗೆ ಈ ಸವಲತ್ತುಗಳನ್ನು ನಿರಾಕರಿಸಬೇಕಾಗಿತ್ತು. ಈ ಶರತ್ತುಗಳಿಗೆ ವೇಡ್-ಡೇವಿಸ್ ಕಾಯಿದೆ ಕಾಂಗ್ರೆಸ್ಸಿನ ಕಡೆಯ ಸಮಾವೇಶದಲ್ಲಿ ಅನುಮೋದನೆ ಪಡೆಯಿತು. ಆದರೆ ಲಿಂಕನ್ ಆ ಕಾಯಿದೆಯನ್ನು 'ವೀಟೊ' ಮಾಡಿದನು. ಇದರಿಂದಾಗಿ ಅವನ ಮೇಲೆ ತನ್ನ ಮರುಚುನಾವಣೆಗೆ ಬೆಂಬಲ ನೀಡುವಂತೆ ಹೊಸದಾಗಿ ಸಂಯುಕ್ತ ಸಂಸ್ಥಾನಗಳನ್ನು ಸೇರಿದ ಪ್ರಾಂತಗಳ ಮೇಲೆ ಒತ್ತಾಯ ತರಲು ಹವಣಿಸಿರುವುದಾಗಿ ಆಪಾದಿಸಿದರು.

ಲಿಂಕನ್ ಪುನರ್‌ನಿರ್ಮಾಣ ಯೋಜನೆಯ ಮೇಲಿನ ಅಭಿಪ್ರಾಯಗಳನ್ನು ತನ್ನ ಕೊನೆಯ ಸಾರ್ವಜನಿಕ ಭಾಷಣದಲ್ಲಿ (ಏಪ್ರಿಲ್ ೧೧, ೧೮೬೫) ವ್ಯಕ್ತಪಡಿಸಿದನು. ಶ್ವೇತಭವನದ ಬಾಲ್ಕನಿಯಿಂದ ಮಾಡಿದ ಈ ಭಾಷಣದಲ್ಲಿ 'ಕಾನ್‌ಫೆಡರೇಟ್ ಸಂಸ್ಥಾನಗಳು ಸಂಯುಕ್ತ ಸಂಸ್ಥಾನಗಳಿಗೆ ಸೇರಿದ್ದವೆ ಎನ್ನುವುದು ಶುಷ್ಕ ತಾತ್ವಿಕ ಚರ್ಚೆ; ಇದು ವಾಗ್ವಾದಕ್ಕೆ ಕೆಟ್ಟ ತಳಹದಿ ಮತ್ತು ಕೆಲಸಕ್ಕೆ ಬಾರದ್ದು. ಕಾನ್‌ಫೆಡರೇಟ್ ಸಂಸ್ಥಾನಗಳು ಸಂಯುಕ್ತ ಸಂಸ್ಥಾನಗಳೊಡನೆ ವ್ಯಾವಹಾರಿಕವಾಗಿ ಸಂಬಂಧ ಕಡಿದುಕೊಂಡವಷ್ಟೆ, ನಮ್ಮ ಉದ್ದೇಶ ಅವುಗಳೊಡನೆ ವ್ಯಾವಹಾರಿಕ ಸಂಬಂಧಗಳನ್ನು ಸ್ಥಾಪಿಸಿ ಕುದುರಿಸುವುದು.' ೧೮೬೫ರ ಏಪ್ರಿಲ್ ೧೪ರಂದು ಸಚಿವಮಂಡಳಿಯ ಸಭೆಯಲ್ಲಿ ಸಂಸ್ಥಾನ ಸರ್ಕಾರಗಳು ಡಿಸೆಂಬರ್ ತಿಂಗಳಲ್ಲಿ ಕಾಂಗ್ರೆಸ್ ಸಭೆ ಸೇರುವ ಮೊದಲೇ ಕಾರ್ಯಾಚರಣೆ ಮಾಡುವಂತೆ ವ್ಯವಸ್ಥೆಗೊಳ್ಳಬೇಕು ಎನ್ನುವ ವಿಷಯವನ್ನು ಪರ್ಯಾಲೋಚನೆಗಾಗಿ ಸಚಿವರ ಮುಂದಿಟ್ಟನು. ನಂತರ ಲಿಂಕನ್ ಅವನ ಕಾರ್ಯದರ್ಶಿ ಗಿಡ್ಡಿಯನ್ ವೆಲ್ಸ್ (Gideon Wells)ಗೆ ಹೇಳಿದ ಕಡೆಯ ಮಾತುಗಳು – 'ಕಾಂಗ್ರೆಸ್ಸಿನಲ್ಲಿರುವ ಕೆಲವರ ಉದ್ದೇಶ ಒಳ್ಳೆಯದಿರಬಹುದು, ಆದರೂ ಸಹ ಅವು ವ್ಯಾವಹಾರಿಕವಾಗಿರಲಿಲ್ಲ. ಮೇಲಾಗಿ ಅವರ ದ್ವೇಷ ಮತ್ತು ಪ್ರತೀಕಾರ ಮನೋಭಾವ ನನಗೆ ಹಿಡಿಸದು, ನಾನು ಅದರಲ್ಲಿ ಭಾಗವಹಿಸಲಾರೆ; ಯಾರನ್ನಾದರೂ ಪೀಡಿಸುವುದಾಗಲೀ ಕೆಟ್ಟದ್ದು ಮಾಡುವುದಾಗಲೀ ನನಗೆ ಬೇಡ'.

ಅಮರನಾದ ಅಬ್ರಹಾಂ ಲಿಂಕನ್

೧೮೬೫ರ ಏಪ್ರಿಲ್ ೫ರಂದು ಅಧ್ಯಕ್ಷ ಲಿಂಕನ್ ಅವನ ಹಿತೈಷಿಗಳು ಪ್ರಾಣಾಪಾಯದ ಕಾರಣ ಹೋಗುವುದು ಬೇಡವೆಂದರೂ ಕೇಳದೆ ಕಾನ್‌ಫೆಡರೇಟರ ರಾಜಧಾನಿಯಾಗಿದ್ದ ರಿಚ್‌ಮಂಡ್ (Richmond)ಗೆ ಭೇಟಿಕೊಟ್ಟು ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸಿದನು. ನಗರದ ಮಧ್ಯಭಾಗವನ್ನು ಫೆಡರಲ್ ಸೈನಿಕರು ಹಾಳುಗೆಡವಿದ್ದರು, ಇನ್ನು ಕೆಲವು ಭಾಗಗಳು ಸುಟ್ಟು ಕರಟಿ ನಿಂತಿದ್ದವು. ಲಿಂಕನ್ ಯಾವ ತೊಂದರೆ ಇಲ್ಲದೆ ತಿರುಗಾಡಿದನು. ರಿಚ್‌ಮಂಡ್ ಪ್ರಜೆಗಳು ತಮ್ಮ ಸೋಲನ್ನು ಒಪ್ಪಿಕೊಂಡು ಸುಮ್ಮನಿದ್ದರು. ವಾಷಿಂಗ್‌ಟನ್‌ಗೆ ಹಿಂದುರಿಗಿದ ಕೆಲವು ದಿನಗಳ ನಂತರ ಲಿಂಕನ್ ಪುನರ್‌ನಿರ್ಮಾಣವನ್ನು

ಕುರಿತ ಒಂದು ಮಹತ್ತರವಾದ ಭಾಷಣ ಮಾಡಿದನು. ಆ ಭಾಷಣದಲ್ಲಿ ಭವಿಷ್ಯವನ್ನು ಬಿಚ್ಚುಮನಸ್ಸಿನಿಂದ ಮತ್ತು ಸಹಾನುಭೂತಿಯಿಂದ ಪರಿಶೀಲಿಸಬೇಕಾದ ಅಗತ್ಯವನ್ನು ಒತ್ತಿ ಹೇಳಿದನು. (ಈ ಭಾಷಣದ ಸಂಕ್ಷಿಪ್ತ ವಿವರಣೆಯನ್ನು ಹಿಂದೆ ತಿಳಿಸಲಾಗಿದೆ.)

೧೮೬೫ರ ಏಪ್ರಿಲ್ ತಿಂಗಳ ೧೪ನೆಯ ತಾರೀಖು ಸಾಯಂಕಾಲ ಸಚಿವ ಮಂಡಲಿಯ ಸಭೆ ಮುಗಿಸಿಕೊಂಡು ರಾತ್ರಿ ಫೋರ್ಡ್ ರಂಗಮಂದಿರಕ್ಕೆ (Ford's theater) ನಾಟಕ ನೋಡಲು ಲಿಂಕನ್ ಹೋದನು. ಅಲ್ಲಿ ವಿಧಿ ಅವನಿಗೆ ಕಾದಿತ್ತು. ನಾಟಕ ನಡೆಯುತ್ತಿರುವಾಗ ಗುಂಡು ಹಾರಿಸಿದ ಶಬ್ದ ಕೇಳಿಬಂತು! ಜಾನ್ ವಿಲ್‌ಕಿಸ್ ಬೂತ್ (John Wilkes Booth) ಎನ್ನುವ ನಟ ಹಾಗೂ ಕಾನ್‌ಫೆಡರೇಟ್ ದೇಶಭಕ್ತ ಮೇಲಿಂದ ರಂಗವೇದಿಕೆಗೆ ಹಾರಿ, ವರ್ಜೀನಿಯ ಸಂಸ್ಥಾನದ ಆದರ್ಶವನ್ನು (motto) – 'ಪ್ರಜಾಹಿಂಸಕರಿಗೆ ಇದೇ ಗತಿ!' (Thus always to tyrants) ಎಂದು ಘೋಷಣೆ ಮಾಡಿ ಅಲ್ಲಿಂದ ಓಡಿ ಕತ್ತಲಲ್ಲಿ ಕರಗಿಹೋದನು. ಗುಂಡಿನೇಟು ಬಿದ್ದು ಪ್ರಜ್ಞೆ ತಪ್ಪಿದ ಲಿಂಕನ್ ಎಷ್ಟು ಶುಶ್ರೂಷೆ ಮಾಡಿದರೂ ಎಚ್ಚರಗೊಳಲಿಲ್ಲ. ಬೆಳಗಿನ ಜಾವ ಅವನು ಅವಸಾನ ಹೊಂದಿದನು. ಕೊಲೆಗಾರರು ಉಪಾಧ್ಯಕ್ಷ ಜಾನ್‌ಸನ್ ಮತ್ತು ರಾಜ್ಯ ಕಾರ್ಯದರ್ಶಿ ಸೆವಾರ್ಡ್ ಮತ್ತು ನಾಲ್ಕು ಜನರನ್ನು ಕೊಲ್ಲಲು ಪಿತೂರಿ ನಡೆಸಿದ್ದರು. ಸೆವಾರ್ಡ್ ಮತ್ತು ಅವನ ಮಗ ಹಾಗೂ ನಾಲ್ವರಿಗೆ ೞರಿತದ ಗಾಯಗಳಾದರೂ ಪ್ರಾಣಾಪಾಯವಾಗದೆ ಉಳಿದುಕೊಂಡರು. ಜಾನ್‌ಸನ್ನನನ್ನು ಕೊಲ್ಲಲು ನೇಮಿಸಿದ್ದ ಕೊಲೆಗಾರ ಕೊನೆಗಳಿಗೆಯಲ್ಲಿ ಎದೆಗುಂದಿ ಹಿಂಜರಿದನು. ಹೀಗಾಗಿ ಜಾನ್‌ಸನ್ ಉಳಿದುಕೊಂಡನು. ಅಂತರ್ಯುದ್ಧದ ಅತ್ಯಂತ ಸಂದಿಗ್ಧ ಸಮಯದಲ್ಲಿ ನಾಯಕತ್ವ ವಹಿಸಿಕೊಂಡು, ಯಾವ ಸಂದರ್ಭದಲ್ಲಿಯೂ ಎದೆಗುಂದದೆ ಸದಾ ಶಾಂತಚಿತ್ತನಾಗಿ ರಾಷ್ಟ್ರದ ಹಿತವನ್ನು ಹಗಲಿರುಳು ಯೋಚಿಸುತ್ತ, ಕದನಗಳಲ್ಲಿ ಸೋತರೂ ಧ್ಯೇಯದಿಂದ ವಿಚಲಿತನಾಗದೆ, ಸರ್ವರ ಅಭ್ಯುದಯ ಸಾಧಿಸುವ ಮಾರ್ಗದಲ್ಲಿ ದೃಢ ನಿಶ್ಚಯದಿಂದ ಸಾಗಿ, ಮಹಾಯುದ್ಧದಲ್ಲಿ ಜಯಗಳಿಸಿ, ಸಂಯುಕ್ತ ಸಂಸ್ಥಾನಗಳನ್ನು ಉಳಿಸಿದ ಮಹಾನುಭಾವ ಲಿಂಕನ್! ಮತಿಗೆಟ್ಟ ನಟನೊಬ್ಬನ ಗುಂಡಿಗೆ ಆಹುತಿಯಾಗಿ ಅಮರತ್ವ ಪಡೆದ! ತಾನು ಅಳಿದು ಗಣರಾಜ್ಯವನ್ನು (Republic) ಉಳಿಸಿದ ಲಿಂಕನ್ ದಂತಕತೆಯಾಗಿದ್ದಾನೆ. ಅಬ್ರಹಾಮ್ ಲಿಂಕನ್‌ನ ದುರಂತ ಮರಣ ರಾಷ್ಟ್ರವನ್ನು ಶೋಕಸಾಗರದಲ್ಲಿ ಮುಳುಗಿಸಿತು. ಕವಿ ವಾಲ್ಟ್ ವ್ಹಿಟ್‌ಮನ್ ಲಿಂಕನ್‌ನನ್ನು ಬಹಳವಾಗಿ ಮೆಚ್ಚಿಕೊಂಡಿದ್ದನು. ಅವನ ಸಾವಿನಿಂದ ಶೋಕತಪ್ತವಾದ ರಾಷ್ಟ್ರದ ದುಃಖವನ್ನು ತನ್ನ ಕವನದಲ್ಲಿ ಅಭಿವ್ಯಕ್ತಿಗೊಳಿಸಿದನು. ಆ ಕವನದ ಕೆಲವು ಸಾಲು ಇಲ್ಲಿ ಕೊಡಲಾಗಿದೆ:

O Captain! My Captain! Our fearful trip is done,
The ship has weathered every wreck, the prize we sought is won,
The port is near, the bells I hear, the people all exulting,
While follow wyes the steady keel, the vessel grim and daring;

But O heart! heart! heart!
O the bleeding drops of red,
Where on the deck my captain lies,
Fallen cold and dead.

ಲಿಂಕನ್‌ನನ್ನು ಕೊಂದ ಕೊಲೆಗಾರ ಬೂತ್ ಎರಡು ವಾರಗಳು ತಲೆಮರೆಸಿಕೊಂಡಿದ್ದ. ಆದರೆ ಅವನನ್ನು ಬೆನ್ನಟ್ಟಿ ಹೋಗಿದ್ದ ಫೆಡರಲ್ ಸೈನಿಕರಿಗೆ ಬೆಂಕಿ ಹತ್ತಿ ಉರಿಯುತ್ತಿದ್ದ ಉಗ್ರಾಣದಲ್ಲಿ ಸಿಕ್ಕಿಬಿದ್ದನು. ಸೈನಿಕರು ಅವನನ್ನು ಗುಂಡಿಟ್ಟು ಕೊಂದರು. ಬೂತ್‌ನ ಜೊತೆ ಸೇರಿ ಪಿತೂರಿ ನಡೆಸಿದ್ದ ಅವಮಾನಕ್ಕೆ ಹಲವಾರು ಜನರನ್ನು ಸೆರೆ ಹಿಡಿದರು. ಅವರಲ್ಲಿ ನಾಲ್ಕು ಜನರನ್ನು ನೇಣುಗಂಬಕ್ಕೇರಿಸಿ ಕೊಂದರು. ಹೀಗೆ ಅಂತರ್ಯುದ್ಧದ ಮಹಾ ಹತ್ಯಾಕಾಂಡ ಕೊನೆಗೊಂಡಿದ್ದು ರಾಷ್ಟ್ರದ ಶ್ರೇಷ್ಠ ದಂಡನಾಯಕ (The Commander in Chief) ಲಿಂಕನ್‌ನ ಕೊಲೆಯ ದುರಂತದಲ್ಲಿ.

ಆ್ಯಂಡ್ರೂ ಜಾನ್‌ಸನ್‌ನ ಆಡಳಿತ

ಫೋರ್ಡ್ ರಂಗಮಂದಿರದಲ್ಲಿ ಸಂಭವಿಸಿದ ದುರಂತ ಉಪಾಧ್ಯಕ್ಷನಾಗಿದ್ದ ಆ್ಯಂಡ್ರೂ ಜಾನ್‌ಸನ್‌ನನ್ನು ಅಧ್ಯಕ್ಷ ಸ್ಥಾನಕ್ಕೆ ಏರುವಂತೆ ಮಾಡಿತು. ನಾಲ್ಕು ವರ್ಷಗಳ ಕಾಲ ಅಂತರ್ಯುದ್ಧ ಮುಗಿದು ಛಿದ್ರಗೊಂಡಿದ್ದ ದೇಶವನ್ನು ಒಂದುಗೂಡಿಸುವ ಮಹತ್ಕಾರ್ಯ ಮತ್ತು ಯುದ್ಧ ಹಾಳುಗೆಡವಿದ ಹೊಲ, ಮನೆ-ಮಠಗಳು ಮತ್ತು ಪೇಟೆ-ಪಟ್ಟಣಗಳನ್ನು ಪುನರ್‌ನಿರ್ಮಾಣಗೊಳಿಸುವ ಮಹತ್ತರವಾದ ಜವಾಬ್ದಾರಿ ಜಾನ್‌ಸನ್ ಮೇಲೆ ಬಿತ್ತು. ಜಾನ್‌ಸನ್ ದಕ್ಷಿಣದವನು. ಪೂರ್ವ ಟೆನ್ನೆಸ್ಸೀಯ ಬೆಟ್ಟ ಪ್ರದೇಶಗಳಲ್ಲಿ ಬೆಳೆದವನು. ಅಲ್ಲಿ ಪ್ಲಾಂಟೇಷನ್‌ಗಳಾಗಲೀ ಗುಲಾಮರಾಗಲೀ ಇರಲಿಲ್ಲ. ಅಲ್ಲಿನ ಜನ ಸಂಯುಕ್ತ ಸಂಸ್ಥಾನಗಳ ಒಗ್ಗಟ್ಟಿನಲ್ಲಿ ನಂಬಿಕೆ ಉಳ್ಳವರಾಗಿ ಟೆನ್ನೆಸ್ಸೀ ಸಂಸ್ಥಾನದ ಇತರ ಪ್ರಾಂತಗಳಂತೆ ಕಾನ್‌ಫೆಡರಸಿಯನ್ನು ಸೇರಲು ನಿರಾಕರಿಸಿದ್ದರು. ಸಂಸ್ಥಾನಗಳ ಒಗ್ಗಟ್ಟನ್ನು ಉಗ್ರವಾಗಿ ಪ್ರತಿಪಾದಿಸುತ್ತಿದ್ದ ಇವನು ಟೆನ್ನೆಸ್ಸೀ ಸಂಸ್ಥಾನ ಕಾನ್‌ಫೆಡರಸಿ ಸೇರಿದ ಮೇಲೂ ಸೆನೆಟರನಾಗಿ ಉಳಿದುಕೊಂಡ ಏಕಮಾತ್ರ ದಾಕ್ಷಿಣಾತ್ಯ. ಜಾನ್‌ಸನ್ ನಿಲುವನ್ನು ಮೆಚ್ಚಿದ ರಿಪಬ್ಲಿಕನ್ನರು ಅವನನ್ನು ೧೮೬೪ರ ಚುನಾವಣೆಯಲ್ಲಿ ಲಿಂಕನ್‌ನ ಉಪಾಧ್ಯಕ್ಷನನ್ನಾಗಿ ಆಯ್ಕೆ ಮಾಡಿ ನಾಮಪತ್ರ ಸಲ್ಲಿಸಿದ್ದರು. ವಿಧಿ ಲೀಲೆ ಎಂದರೆ ಇದು. ಲಿಂಕನ್‌ನ ಮೃತದೇಹವನ್ನು ಹೂಳಲು ತಯಾರಿ ನಡೆಯುತ್ತಿದ್ದ ಸಮಯದಲ್ಲಿ ಜಾನ್‌ಸನ್ ಅಧ್ಯಕ್ಷನಾಗಿ ಪ್ರಮಾಣವಚನ ಸ್ವೀಕರಿಸಿದನು.

ಜಾನ್‌ಸನ್ ಓದು ಬರಹ ಬಾರದ ದರ್ಜಿಯಾಗಿ ಕೆಲಸ ಪ್ರಾರಂಭಿಸಿದನು. ಕ್ರಮೇಣ ಅವನ ಹೆಂಡತಿ ಅವನಿಗೆ ಓದು ಬರಹ ಕಲಿಸಿದಳು. ಅವನು ತನ್ನ ಬಾಲ್ಯದ ಬಗ್ಗೆ ಮುಜುಗರಗೊಳ್ಳುತ್ತಿದ್ದ. ಐಶ್ವರ್ಯವಂತರನ್ನು, ಪ್ರಭಾವಶಾಲಿಗಳಾದ ಪ್ಲಾಂಟರ್‌ಗಳನ್ನು, ಒಟ್ಟಿನಲ್ಲಿ ಶ್ರೀಮಂತರನ್ನು ದ್ವೇಷಿಸುತ್ತಿದ್ದನು. ಕರಿಯರ ಬಗ್ಗೆ ಎಲ್ಲ ಬಿಳಿಯರಂತೆ

ಪೂರ್ವಾಗ್ರಹಪೀಡಿತನಾಗಿದ್ದನು. ಕರಿಯರು ಬಿಡುಗಡೆ ಪಡೆದ ಮಾತ್ರಕ್ಕೆ ಬಿಳಿಯರಿಗೆ ಸಮಾನರು ಎಂದು ಅರ್ಥ ಮಾಡಿಕೊಳ್ಳಲಾಗದು. ಕರಿಯರು ಹುಟ್ಟಿನಿಂದ ಕೀಳು ಜೀವಿಗಳು (lesser beings) ಎಂದು ಅವನು ನಂಬಿದ್ದನು. ಪ್ಲಾಂಟರ್‌ಗಳ ವಿರುದ್ಧ, ಕಾನ್‌ಫೆಡರೇಟರ ವಿರುದ್ಧ ಅವನ ಭಾವನೆಗಳು ಅವನ ಪುನರ್‌ನಿರ್ಮಾಣದ ಕಾರ್ಯಕ್ರಮಗಳಲ್ಲಿ ವ್ಯಕ್ತ ಗೊಂಡವು. ಫೆಡರಲ್ ಸರ್ಕಾರ ಮತ್ತು ಸಂಯುಕ್ತ ಸಂಸ್ಥಾನಗಳ ರಾಜ್ಯಾಂಗಕ್ಕೆ ನಿಷ್ಠೆಯಿಂದ ಇರುವುದಾಗಿ ಪ್ರಮಾಣ ಮಾಡಿದ ಕಾನ್‌ಫೆಡರೇಟ್ ಸೈನಿಕರಿಗೆ ಕ್ಷಮಾಪಣೆ ಮಾಡಿದನು. ಆದಾಯ ೨೦೦೦೦ ಅಥವಾ ಹೆಚ್ಚು ಇದ್ದವರಿಗೆ ಇದು ಅನ್ವಯವಾಗುತ್ತಿರಲಿಲ್ಲ. ಏಳು ದಕ್ಷಿಣ ಸಂಸ್ಥಾನಗಳಿಗೆ ತಾತ್ಕಾಲಿಕ ಗವರ್ನರುಗಳನ್ನು ನೇಮಿಸಿ ಅವರಿಗೆ ನಿಷ್ಠಾವಂತ ಪ್ರಜೆಗಳ ಸಭೆ ಸೇರಿಸುವ ಅಧಿಕಾರ ಕೊಟ್ಟನು, ಆ ಸಭೆಗಳಲ್ಲಿ ಸಂಸ್ಥಾನದ ರಾಜ್ಯಾಂಗವನ್ನು ತಿದ್ದುವ ಸಲಹೆ ಮಾಡಿ, ಅವು ಗುಲಾಮಗಿರಿಯನ್ನು ನಿಷೇಧಿಸುವ ಮತ್ತು ಸಂಯುಕ್ತ ಸಂಸ್ಥಾನಗಳನ್ನು ತ್ಯಜಿಸುವ ನಿರ್ಣಯಗಳನ್ನು ರದ್ದುಗೊಳಿಸುವ ಕಾಯಿದೆಗಳನ್ನು ಅಳವಡಿಸಿ ಕೊಳ್ಳುವಂತೆ ಮಾಡಿದನು. ಕಾನ್‌ಫೆಡರಸಿಯು ಕೊಡಬೇಕಾಗಿದ್ದ ಸಾಲವನ್ನು ವಜಾ ಮಾಡಿದನು. ದಕ್ಷಿಣ ಸಂಸ್ಥಾನಗಳು ಬಿಡುಗಡೆಯಾದ ಗುಲಾಮರಿಗೆ ಮತದಾನದ ಹಕ್ಕನ್ನು ಕೊಡುವ ಬಗ್ಗೆ ಜಾನ್‌ಸನ್ ಯಾವ ಸಲಹೆಯನ್ನೂ ಕೊಡಲಿಲ್ಲ. ಅಂತರ್ಯುದ್ಧ ಪ್ರಾರಂಭಿಸಿದ್ದಕ್ಕಾಗಿ ಕಾನ್‌ಫೆಡರೇಟರು ವಿಷಾದ ವ್ಯಕ್ತ ಪಡಿಸಬೇಕಾದ ಅಗತ್ಯವೂ ಅವನಿಗೆ ಕಂಡುಬರಲಿಲ್ಲ.

ಜಾನ್‌ಸನ್ ಯೋಜನೆಯ ನೆರವಿನಿಂದ ಸ್ಥಾಪಿಸಲಾದ ಸಂಸ್ಥಾನದ ಹೊಸ ಸರ್ಕಾರ ಗಳು ಔತ್ತರೇಯರಿಗೆ ಅಪಮಾನ ಮಾಡಿದಂತಾಯಿತು. ದಕ್ಷಿಣ ಸಂಸ್ಥಾನಗಳಲ್ಲಿ ಹೊಸದಾಗಿ ಆಯ್ಕೆಗೊಂಡಿದ್ದ ಕಾಂಗ್ರೆಸ್ ಮತ್ತು ಸೆನೆಟ್ ಪ್ರತಿನಿಧಿಗಳು ಕಾಂಗ್ರೆಸ್ ಅಧಿಕೃತವಾಗಿ ತಮ್ಮನ್ನು ಸೇರಿಸಿಕೊಳ್ಳುವುದನ್ನು ಕಾಯುತ್ತಿದ್ದರು. ಆ ಸಮಯದಲ್ಲಿ ಕೆಲವು 'ಕಪ್ಪು ಕಾಯಿದೆ'ಗಳನ್ನು ಸಂಸ್ಥಾನ ಸಭೆಗಳಲ್ಲಿ ಅಂಗೀಕರಿಸಿ ಅನುಷ್ಠಾನಕ್ಕೆ ತರಲಾಯಿತು. ದ್ವೇಷಪೂರಿತವಾದ ಈ ಕಾಯಿದೆಗಳು ಕರಿಯರ ಮತದಾನದ ಹಕ್ಕನ್ನು ಕಿತ್ತುಕೊಂಡು ಅವರ ಮೇಲೆ ಕಠೋರ ನಿಬಂಧನೆಗಳನ್ನು ಹೇರಿದವು – ಕರಿಯರು 'ಜ್ಯೂರಿ'ಗಳಾಗುವುದನ್ನು ನಿರಾಕರಿಸಿದವು. ಕರಿಯರು ಸಾರ್ವಜನಿಕ ಸ್ಥಳಗಳನ್ನು ಬಿಳಿಯರೊಡನೆ ಉಪಯೋಗಿಸುವು ದನ್ನು ನಿಷೇಧಿಸಿದರು. ಅಲೆಮಾರಿತನವನ್ನು ನಿಬಂಧಿಸುವ ಕಾಯಿದೆಯನ್ನು ಜಾರಿಗೆ ತಂದು ಕೆಲಸವಿಲ್ಲದ ಕರಿಯರನ್ನು ಬಲಾತ್ಕಾರವಾಗಿ ಉದ್ಯೋಗಿಗಳ ಕೈಕೆಳಗೆ ಕಡ್ಡಾಯವಾಗಿ ಸೇರಿಸುತ್ತಿದ್ದರು. ದಾಕ್ಷಿಣಾತ್ಯರ ಈ ಎಲ್ಲ ಕಾಯಿದೆ/ನಿಬಂಧನೆಗಳು ಗುಲಾಮಗಿರಿಯನ್ನು, ಅಂತರ್ಯುದ್ಧದ ಪರಿಣಾಮಗಳನ್ನು ಅಲಕ್ಷಿಸಿ ಪುನರುತ್ಥಾನಗೊಳಿಸುವ ಪ್ರಯತ್ನವಾಗಿ ಉತ್ತರದವರಿಗೆ ಖಚಿತವಾಯಿತು. ಮಿಸ್ಸಿಸ್ಸಿಪ್ಪಿ ಸಂಸ್ಥಾನದ 'ಕಪ್ಪು ಕಾಯಿದೆಗಳು' ಎಷ್ಟು ಕಠೋರವಾಗಿದ್ದುವೆಂದರೆ ಅವುಗಳನ್ನು ಖಂಡಿಸಿ 'ಚಿಕಾಗೊ ಟ್ರಿಬ್ಯೂನ್' (Chicago Tribune) ಪತ್ರಿಕೆಯ ಸಂಪಾದಕರು ನೀಡಿದ ಎಚ್ಚರಿಕೆ – 'ಮಿಸ್ಸಿಸ್ಸಿಪ್ಪಿ ಸಂಸ್ಥಾನ ಈ

ಕಪ್ಪು ಕಾಯಿದೆಗಳಿಂದ ನಮ್ಮ ಯೋಧರು ಚಿರನಿದ್ರೆಯಲ್ಲಿ ಮಲಗಿರುವ ಮತ್ತು ಸ್ವಾತಂತ್ರ್ಯದ ಧ್ವಜ ಹಾರುತ್ತಿರುವ ಆ ನೆಲದ ಒಂದಡಿಯನ್ನು ಅಪವಿತ್ರಗೊಳಿಸುವ ಮೊದಲೆ – ನಾವು ಉತ್ತರೇಯರು ಆ ಸಂಸ್ಥಾನವನ್ನು ಕಪ್ಪೆಯ ಹೊಂಡವನ್ನಾಗಿ ಮಾಡಿ ಬಿಡುತ್ತೇವೆ' ಇದು ಬರಿಯ ಎಚ್ಚರಿಕೆ ಆಗಿರದೆ ಅದನ್ನು ಕಾರ್ಯಗತ ಮಾಡಲು ಕೊಟ್ಟ ಕರೆಯೂ ಆಗಿತ್ತು.

ಜಾನ್‌ಸನ್‌ನನ್ನು ಉಗ್ರಗಾಮಿ ರಿಪಬ್ಲಿಕನ್ನರು ತೀವ್ರವಾಗಿ ವಿರೋಧಿಸುತ್ತಿದ್ದರು. ಕಾಂಗ್ರೆಸ್ ರಿಪಬ್ಲಿಕನ್ನರ ಹಿಡಿತದಲ್ಲಿತ್ತು. 'ರಿಪಬ್ಲಿಕನ್' ಎನ್ನುವ ಹೆಸರು ಫ್ರಾನ್ಸ್ ದೇಶದ ಮಾದರಿಯ ಸಮತಾವಾದ ಸೂಚಕವಾಗಿ ತೋರಿದರೂ ಅವರು ತಾತ್ವಿಕವಾಗಿ ವಿದೇಶಿ ವಸ್ತುಗಳ ಮೇಲೆ ತೆರಿಗೆ, ಸ್ಥಿರವಾದ ಹಣ (sound dollar) ರೈಲುಮಾರ್ಗಗಳನ್ನು ರಚಿಸಲು ಸರ್ಕಾರದ ಹಣಸಹಾಯ, ಕೇಂದ್ರ ಸರ್ಕಾರ (federal Government) ನಿರ್ದಿಷ್ಟವಾದ ಹಣವನ್ನು ತೆಗೆದಿಟ್ಟು ಅದನ್ನು ನದಿಗಳನ್ನು ನಾವೆಗಳ ಸಂಚಾರಕ್ಕೆ ಅನುಕೂಲವಾಗುವಂತೆ ಮಾಡುವುದು ಮತ್ತು ಬಂದರುಗಳ ಅಭಿವೃದ್ಧಿಗಾಗಿ ವಿನಿಯೋಗಿಸುವುದು – ಇಂಥ ಉದ್ಯೋಗ-ವ್ಯಾಪಾರವರ್ಗದ ಏಳಿಗೆಗೆ ಒತ್ತುಕೊಡುವ ಮಸೂದೆಗಳನ್ನು ಅನುಮೋದಿಸುತ್ತಿದ್ದರು. ವರ್ಣದ್ವೇಷದ ಬಗ್ಗೆ ಮಾತ್ರ ಅವರು ಉಗ್ರವಿರೋಧಿಗಳಾಗಿದ್ದರು. ಅಧ್ಯಕ್ಷ ಜಾನ್‌ಸನ್ ಮತ್ತು ರಿಪಬ್ಲಿಕನ್ನರ ನಡುವೆ ಸಂಘರ್ಷಣೆ ಸಾಮಾನ್ಯ ಸಂಗತಿಯಾಗಿತ್ತು. ಇದಕ್ಕೆ ಮುಖ್ಯ ಕಾರಣ ರಿಪಬ್ಲಿಕನ್ನರ ಎಲ್ಲ ವಿಷಯಗಳಲ್ಲಿ ಕೈಹಾಕುವ ದೊಡ್ಡ ಸರ್ಕಾರ (Big government) ಮತ್ತು ಉದ್ಯೋಗ/ವ್ಯಾಪಾರೀವರ್ಗದ ಪರವಾದ ಧೋರಣೆಗಳನ್ನು ಜಾನ್‌ಸನ್ ದ್ವೇಷಿಸುತ್ತಿದ್ದನು. ಉಗ್ರವಾದಿ ರಿಪಬ್ಲಿಕನ್ನರ ಮುಖ್ಯಸ್ಥನಾಗಿದ್ದವನು ಥಾಡ್ಡಿಯಸ್ ಸ್ಟೀವನ್ಸ್ (Thaddeus Stevens). ಇವನು ಪೆನ್ಸಿಲ್‌ವೇನಿಯ ಪ್ರಾಂತದವನು. ಇವನ ಕಬ್ಬಿಣದ ಉತ್ಪಾದನಾ ಗಿರಣಿಯನ್ನು ೧೮೬೩ರಲ್ಲಿ ಕಾನ್‌ಫೆಡರೇಟ್ ಸೇನಾನಾಯಕ ಜನರಲ್ ಲೀ ಕೈಕೆಳಗಿನ ಸೈನ್ಯ ಹಾಳುಗೆಡವಿದ ಕಾರಣಕ್ಕಾಗಿ ಸ್ಟೀವನ್ಸ್ ಕಾನ್‌ಫೆಡರೇಟರ ಕಡುವಿರೋಧಿಯಾದನು. ಹಾಗೆ ತನ್ನ ಗಿರಣಿಗೆ ಬೆಂಕಿ ಹಾಕಿ ಭಸ್ಮಮಾಡಿದ್ದು ಅವನನ್ನು ಕೆರಳಿಸಿದ್ದರೂ ಅವನು ದಕ್ಷಿಣದ ಬಿಳಿಯರನ್ನು ದ್ವೇಷಿಸಲು ಮುಖ್ಯ ಕಾರಣ ಅವರು ವರ್ಣದ್ವೇಷದ ಆಧಾರದ ಮೇಲೆ ಜಾರಿಗೆ ತಂದ ಪಕ್ಷಪಾತ (discrimination)ವನ್ನು ಪೋಷಿಸುವ ಸಮಾಜ ವ್ಯವಸ್ಥೆ. ಸ್ಟೀವನ್ಸ್ ಬಿಳಿಯರು ಮತ್ತು ಕರಿಯರ ಸಮಾನತೆಯನ್ನು ಪಾಲಿಸುತ್ತಿದ್ದ ಆದರ್ಶವಾದಿ. ಅವನು ದಕ್ಷಿಣ ಸಂಸ್ಥಾನಗಳಲ್ಲಿ ಬಿಡುಗಡೆಯಾದ ಕರಿಯರಿಗೆ ಪೂರ್ಣ ಪೌರತ್ವ (full citizenship) ಕೊಡಬೇಕೆಂದು ಪ್ರತಿಪಾದಿಸಿದನು. ಅಷ್ಟೇ ಅಲ್ಲ, ಅವರಿಗೆ ಮತದಾನದ ಹಕ್ಕನ್ನು ನೀಡುವುದಲ್ಲದೆ ದಕ್ಷಿಣದ ದೊಡ್ಡ ಆಸ್ತಿ (estates) ಗಳನ್ನು ಫೆಡರಲ್ ಸರ್ಕಾರ ವಶಪಡಿಸಿಕೊಂಡು ಪ್ರತಿಯೊಂದು ಕರಿಯರ ಕುಟುಂಬಕ್ಕೂ ೪೦ ಎಕರೆ ಭೂಮಿಯನ್ನು ದೇಣಿಗೆ ಕೊಡಬೇಕೆಂದು ಆಗ್ರಹಪಡಿಸಿದನು. ಹೀಗೆ ಮಾಡಿದರೆ ಕರಿಯರನ್ನು ಗುಲಾಮರನ್ನಾಗಿ ಮಾಡಿ ವರ್ಷಾನುಗಟ್ಟಲೆ

ಪ್ರಾಣಿಗಳಂತೆ ದುಡಿಸಿಕೊಂಡಿದ್ದಕ್ಕಾಗಿ ಪರಿಹಾರ ನೀಡಿದಂತಾಗುತ್ತದೆ ಮತ್ತು ಗರ್ವಿಷ್ಠರಾದ ದೇಶದ್ರೋಹಿಗಳ ಸೊಕ್ಕು ಅಡಗಿಸಬಹುದು ಎಂದು ವಾದಿಸಿದನು.

ಕರಿಯರಲ್ಲೂ ಉಗ್ರವಾದಿಗಳಿದ್ದರು. ಉತ್ತರ ಸಂಸ್ಥಾನಗಳಲ್ಲಿ ವಿದ್ಯಾವಂತ ಕರಿಯ ನಾಯಕರು ಮತದಾನ ಮಾಡುವ ಹಕ್ಕು ಸಮಾಜ ತಮಗೆ ಮರುಪಾವತಿ ಮಾಡಬೇಕಾದ ಸಾಲವೆಂದು ಭಾವಿಸಿದ್ದರು. ಅವರ ಅತ್ಯಂತ ಪ್ರಭಾವಶಾಲಿ ನಾಯಕನಾಗಿದ್ದ ಫ್ರೆಡ್ರಿಕ್ ಡಗ್ಲಾಸ್‌ನು ೧೮೬೬ರಲ್ಲಿ ಕರಿಯರ ಪ್ರತಿನಿಧಿಗಳ ನಿಯೋಗವನ್ನು ಶ್ವೇತಭವನಕ್ಕೆ ಕರೆದೊಯ್ದು ಅಧ್ಯಕ್ಷ ಜಾನ್‌ಸನ್‌ನನ್ನು ಕಂಡು ಕರಿಯರ ಮತ ನೀಡುವ ಹಕ್ಕನ್ನು ಪುನರ್ ನಿರ್ಮಾಣದ ಒಂದು ಅಗತ್ಯವಾದ ಅಂಶವನ್ನಾಗಿ ಮಾಡುವಂತೆ ಆಗ್ರಹಪಡಿಸಿದನು. ಜಾನ್‌ಸನ್ ಅವನೊಡನೆ ಮಾತುಕತೆ ನಡೆಸಿ ಅವನು ಹೋದ ನಂತರ ತಿರಸ್ಕಾರ ಭಾವದಿಂದ 'ಎಲ್ಲ ನಿಗ್ಗರ್ಸ್‌ಗಳಂತೆ ಇವನೂ ಒಬ್ಬ, ಸಮಯ ಸಿಕ್ಕ ಕೂಡಲೇ ಬಿಳಿಯನ ಕತ್ತು ಕೊಯ್ಯದೆ ಬಿಟ್ಟಾನೆ ನಿಗ್ಗರ್ಸ್' ಎಂದು ಉದ್ಗರಿಸಿದನು. ದಕ್ಷಿಣ ಸಂಸ್ಥಾನಗಳಲ್ಲಿ ಬಿಡುಗಡೆಯಾದ ಕರಿಯರು 'ಕಪ್ಪು ಕಾಯಿದೆ'ಯ ಕಷ್ಟದ ದಿನಗಳಲ್ಲೂ ತಮ್ಮ ಭವಿಷ್ಯ ಉತ್ತಮವಾಗಬಹುದೆಂಬ ಆಸೆ ಇಟ್ಟುಕೊಂಡಿದ್ದರು. ಸ್ಟೀವನ್ಸ್‌ನಂಥ ಸಹೃದಯರ ಸಹಾಯದಿಂದ ತಾವು ಒಂದಲ್ಲ ಒಂದು ದಿನ ಭೂಮಾಲೀಕರಾಗುವ ಕನಸು ಕಾಣುತ್ತಿದ್ದರು. ಅಂತರ್ಯುದ್ಧ ಮುಗಿದ ನಂತರದ ದಿನಗಳಲ್ಲಿ ಫೆಡರಲ್ ಸರ್ಕಾರ ಪ್ರತಿ ಕರಿಯರ ಕುಟುಂಬಕ್ಕೆ ೪೦ ಎಕರೆ ಮತ್ತು ಒಂದು ಹೇಸರಗತ್ತೆ ದೇಣಿಗೆ ಕೊಡುತ್ತದೆ ಎಂಬ ವದಂತಿ ಹರಡಿತ್ತು!

ತೀವ್ರಗಾಮಿಗಳಿಗೆ ಜಾನ್‌ಸನ್ ಅಲ್ಲದೆ ಅನೇಕ ಶತ್ರುಗಳಿದ್ದರು. ಬಹಳಷ್ಟು ಔತ್ತರೇಯರು ಜಾನ್‌ಸನ್ ಬೆಂಬಲಿಗರಾಗಿದ್ದರು. ಬಹುಸಂಖ್ಯಾತ ಡೆಮೊಕ್ರಾಟರು ತೀವ್ರಗಾಮಿಗಳನ್ನು ದ್ವೇಷಿಸುತ್ತಿದ್ದರು. ಅವರು ತೀವ್ರಗಾಮಿಗಳು ದಾಕ್ಷಿಣಾತ್ಯರ ಮೇಲೆ ಸೇಡು ತೀರಿಸಿಕೊಳ್ಳಲು ಸಂಕಲ್ಪ ಮಾಡಿದ್ದಾರೆ ಎಂದು ಆಪಾದಿಸಿದರು; ಅವರನ್ನು 'ಕರಿಯ ಪ್ರಿಯ'ರೆಂದು ಕರೆದು ಹೀಯಾಳಿಸಿದರು. ಹಲವಾರು ಉತ್ತರ ಸಂಸ್ಥಾನಗಳು ಕರಿಯರಿಗೆ ಮತ ನೀಡುವ ಹಕ್ಕನ್ನು ಅಂಗೀಕರಿಸಿದವು. ಡೆಮೊಕ್ರಾಟರು ಬಹುಮತದಿಂದ ಅದನ್ನು ವಿರೋಧಿಸಿದರು. ಹೆಚ್ಚು ರಿಪಬ್ಲಿಕನ್ನರು ಕರಿಯರಿಗೆ ಮತ ನೀಡುವ ಹಕ್ಕನ್ನು ಪ್ರತಿಪಾದಿಸುವ ಮಸೂದೆಯನ್ನು ಬೆಂಬಲಿಸದೆ ಹೋದರು. ಗುಲಾಮಗಿರಿಯನ್ನು ತೆಗೆದು ಹಾಕಿದ ಔತ್ತರೇಯರು ವರ್ಣದ್ವೇಷವನ್ನು ಉಳಿಸಿಕೊಂಡಿದ್ದರು. ಕರಿಯರಿಗೆ ಭೂವಿತರಣೆ ಮಾಡುವ ಯೋಜನೆಗೂ ಹೆಚ್ಚಿನ ಬೆಂಬಲ ದೊರೆಯದೆ ಅದು ಕೈಗೂಡದೆ ಹೋಯಿತು. ಕರಿಯರು ಸ್ವತಂತ್ರರಾಗಿರುವುದರಿಂದ ಎಲ್ಲರಂತೆ ಅವರು ತಮ್ಮ ಸ್ವಪ್ರಯತ್ನದಿಂದ ಆಸ್ತಿ ಸಂಪಾದಿಸಬೇಕೆಂದು ಮಸೂದೆಯ ವಿರೋಧಿಗಳು ವಾದಿಸಿದರು.

ಲಿಂಕನ್ ಕೊಲೆಯಾದಾಗ ಕಾಂಗ್ರೆಸ್ ರಜೆಯಲ್ಲಿತ್ತು. ಆದ್ದರಿಂದ ಜಾನ್‌ಸನ್ ತನ್ನ ಇಷ್ಟ ಬಂದುದನ್ನು ಮಾಡಬಹುದಿತ್ತು. ಆದರೆ ಅವನು ೧೮೬೫ರ ಡಿಸೆಂಬರಿನಲ್ಲಿ ಕಾಂಗ್ರೆಸ್

ಸಭೆ ಸೇರಿದಾಗ ಜಾನ್‌ಸನ್ ಜಾರಿಗೆ ತಂದ ಕಾನ್‌ಫೆಡರಸಿಯವರಿಗೆ ಅನುಕೂಲವಾಗುವಂಥ ಬದಲಾವಣೆಗಳನ್ನು ಕಾಂಗ್ರೆಸ್ ಸದಸ್ಯರು ಕಟುವಾಗಿ ವಿರೋಧಿಸಿದರು. ಜಾನ್‌ಸನ್ ಮಾಜಿ ದಂಗೆಕೋರರಿಗೆ ತೋರಿದ ಉದಾರತೆಯಿಂದಾದ ದುಷ್ಪರಿಣಾಮಗಳಲ್ಲಿ ಅತಿ ಮುಖ್ಯವಾದವು – 'ಕಪ್ಪು ಕಾಯಿದೆಗಳು', ನ್ಯೂ ಆರ್ಲಿಯನ್ಸ್ ಮತ್ತು ಮೆಂಫಿಸ್‌ಗಳಲ್ಲಿ ಗಲಭೆ ಕಾಂಗ್ರೆಸ್‌ಗೆ ಪ್ರವೇಶ ದೊರಕಿಸಿಕೊಳ್ಳಲು ಅರ್ಜಿ ಹಾಕಿದ ದಾಕ್ಷಿಣಾತ್ಯರದು ದೊಡ್ಡ ಗುಂಪು – ಅದರಲ್ಲಿ ಮಾಜಿ ಕಾನ್‌ಫೆಡರಸಿಯ ಕಾಂಗ್ರೆಸ್ ಸದಸ್ಯರು, ನಾಲ್ಕು ಮಾಜಿ ಕಾನ್‌ಫೆಡರೇಟ್ ಜನರಲ್‌ಗಳು ಮತ್ತು ಕಾನ್‌ಫೆಡರೇಟ್‌ನ ಉಪಾಧ್ಯಕ್ಷ ಅಲೆಕ್ಸಾಂಡರ್ ಸ್ಟೀಫನ್ಸ್ (Alexander Stephens) ಸೇರಿದ್ದರು. ಎಂಥ ಕ್ರೂರ ವಿಪರ್ಯಾಸ! ಕಾಂಗ್ರೆಸ್ ಅವರನ್ನೆಲ್ಲ ನಿರ್ದಾಕ್ಷಿಣ್ಯವಾಗಿ ಮನೆಗೆ ಕಳುಹಿಸಿ ಅವರ ಸ್ಥಾನದಲ್ಲಿ ಒಂದು ಜಂಟಿ ಕಮಿಟಿ (Joint commitee)ಯನ್ನು ಪುನರ್‌ನಿರ್ಮಾಣ ಕಾರ್ಯಗಳನ್ನು ನಿರ್ವಹಿಸಲು ನೇಮಕಮಾಡಿತು. ಹೀಗೆ ಕಾಂಗ್ರೆಸ್ ಮತ್ತು ಜಾನ್‌ಸನ್ ತದ್ವಿರುದ್ಧ ಧೋರಣೆಗಳನ್ನು ಜಾರಿಗೆ ತರುವ ಪ್ರಯತ್ನ ಮಾಡುತ್ತಿದ್ದುದರಿಂದ ಸರ್ಕಾರದ ಎರಡು ಮುಖ್ಯ ಅಂಗಗಳು ಸಂಘರ್ಷಣೆಯ ಹಾದಿ ಹಿಡಿದಿದ್ದವು. ೧೮೬೬ರಲ್ಲಿ ಮೊದಲನೆಯ ಸಂಘರ್ಷಣೆ ನಡೆಯಿತು. ಮಾಜಿ ಗುಲಾಮರ ಹಕ್ಕು ಬಾಧ್ಯತೆಗಳನ್ನು ಉಲ್ಲಂಘಿಸಿದವರನ್ನು ವಿಚಾರಣೆಗೆ ಗುರಿಪಡಿಸುವ ಅಧಿಕಾರವನ್ನು 'ಬಿಡುಗಡೆಯಾದವರ ಸಮಿತಿ'ಗೆ ಒಪ್ಪಿಸುವ ಮಸೂದೆಯನ್ನು ಅಧ್ಯಕ್ಷ ಜಾನ್‌ಸನ್ 'ವೀಟೊ' ಮಾಡಿದನು. ಈ ಸಮಿತಿ ಅಂತರ್ಯುದ್ಧದ ಕಾಲದಲ್ಲಿ ರಚಿತವಾಗಿತ್ತು. ಅದರ ಮುಖ್ಯ ಉದ್ದೇಶ ನಿರಾಶ್ರಿತರಿಗೆ ಸಹಾಯ ಮಾಡುವುದು ಮತ್ತು ವಾರಸುದಾರರಲ್ಲದ ಜಮೀನುಗಳ ನಿರ್ವಹಣೆ. ಮೇಲಾಗಿ ಈ ಸಮಿತಿ ಬಹಳವಾಗಿ ಮಾಜಿ ಗುಲಾಮರಿಗೆ ಸಹಾಯ ಒದಗಿಸಿತ್ತು. ಆದ್ದರಿಂದ ಈ ಸಮಿತಿಯ ಮೇಲೆ ಸಂಪ್ರದಾಯಸ್ಥ ಬಿಳಿಯರು ಕಣ್ಣಿಟ್ಟಿದ್ದರು. ಕಾಂಗ್ರೆಸ್ ಕಡೆಯಲ್ಲಿ ಜಾನ್‌ಸನ್‌ನ 'ವೀಟೊ' ನಿರ್ಲಕ್ಷಿಸಿ ಮಸೂದೆಯನ್ನು ಅಂಗೀಕರಿಸಿತು. ದಕ್ಷಿಣ ಸಂಸ್ಥಾನಗಳು ಕರಿಯರಿಗೆ ಪೌರತ್ವ ಮತ್ತು ಇತರ ಹಕ್ಕುಗಳನ್ನು ನೀಡಿದ್ದ 'ಪೌರತ್ವ ಹಕ್ಕುಗಳ ಕಾಯಿದೆ' (Civil Rights Act)ಯನ್ನು ಜಾರಿಗೆ ತರಲಿಲ್ಲ. ಜಾನ್‌ಸನ್ ಈ ಕಾಯಿದೆಯನ್ನೂ 'ವೀಟೊ' ಮಾಡಿದನು. ಕಾಂಗ್ರೆಸ್ ಪುನಃ ಅಧ್ಯಕ್ಷನ 'ವೀಟೊ'ವನ್ನು ತಳ್ಳಿಹಾಕಿತು!

'ಪೌರತ್ವ ಹಕ್ಕುಗಳ ಕಾಯಿದೆ' ರಾಜ್ಯಾಂಗ ಬದ್ಧವಾದುದು ಎನ್ನುವುದನ್ನು ಸ್ಥಾಪಿಸಲು ಮತ್ತು ಮುಂದೆ ಈ ವಿಷಯದಲ್ಲಿ ಯಾವ ಅನುಮಾನವೂ ಬಾರದಂತೆ ಮಾಡಲು ಜಂಟಿ ಸಮಿತಿಯು ಒಂದು ಹೊಸ ತಿದ್ದುಪಡಿಯನ್ನು ಮಂಡಿಸಿತು. ೧೮೬೬ರ ಜೂನ್ ೧೬ರಂದು ಕಾಂಗ್ರೆಸ್ ಈ ತಿದ್ದುಪಡಿಯನ್ನು ಅನುಮೋದಿಸಿ, ೧೮೬೮ರ ಜುಲೈ ೨೮ರಂದು ಅಂಗೀಕರಿಸಿತು. ಎಲ್ಲ ಸಂಸ್ಥಾನಗಳ ಒಪ್ಪಿಗೆಯನ್ನೂ ಪಡೆಯಿತು. ಇದು ರಾಜ್ಯಾಂಗದ ೧೪ನೆಯ ತಿದ್ದುಪಡಿಯಾಯಿತು. ಈ ತಿದ್ದುಪಡಿ 'ಪೌರತ್ವ ಹಕ್ಕುಗಳ ಕಾಯಿದೆ'ಗಿಂತಲೂ ವಿಶಾಲವಾಗಿತ್ತು. ೧೪ನೆಯ ತಿದ್ದುಪಡಿ ಕರಿಯರನ್ನು ಅಮೆರಿಕದ ಪ್ರಜೆಗಳು ಎಂದು

ಸಾಧಾರಪಡಿಸಿದ್ದಲ್ಲದೆ ಸಂಸ್ಥಾನಗಳು ಯಾವ ವ್ಯಕ್ತಿಯ ಜೀವ, ಸ್ವಾತಂತ್ರ್ಯ ಮತ್ತು ಆಸ್ತಿಯನ್ನು ನ್ಯಾಯಮಾರ್ಗ ಅನುಸರಿಸದೆ ಕಿತ್ತುಕೊಳ್ಳಬಾರದು. ಹಾಗೆಯೇ ಯಾವ ವ್ಯಕ್ತಿಗೆ ಆಗಲಿ ಕಾಯಿದೆಗಳ ಸಮಾನ ರಕ್ಷಣೆ (Equal Protection Law)ಯನ್ನು ನಿರಾಕರಿಸಬಾರದು. ಅದು ಇನ್ನೂ ಮುಂದೆ ಹೋಗಿ ಕರಿಯರಿಗೆ ಮತ ನೀಡುವ ಹಕ್ಕನ್ನು ನಿರಾಕರಿಸಿದರೆ ಆ ಸಂಸ್ಥಾನ ಕರಿಯರ ಮತಗಳನ್ನು ನಿರಾಕರಿಸಿದ ಪ್ರಮಾಣಕ್ಕೆ ತಕ್ಕಂತೆ ಕಾಂಗ್ರೆಸ್ಸಿನಲ್ಲಿ ತನ್ನ ಪ್ರತಿನಿಧಿಗಳನ್ನು ಕಳೆದುಕೊಳ್ಳುತ್ತದೆ ಎಂಬ ನಿಬಂಧನೆಯನ್ನು ಜಾರಿಗೆ ತಂದಿತು. ೧೮೭೦ರಲ್ಲಿ ಕರಿಯರ ಮತದಾನದ ಹಕ್ಕುಗಳನ್ನು ಈ ಸುತ್ತು ಬಳಸು ವಿಧಾನದಿಂದ ಜಾರಿಗೆ ತರುವ ಬದಲು, ವರ್ಣದ್ವೇಷದ ಮೇಲೆ ಮತ ನೀಡುವ ಹಕ್ಕನ್ನು ನಿರಾಕರಿಸುವುದನ್ನು ನೇರವಾಗಿ ನಿಷೇಧಿಸಲಾಯಿತು.

೧೮೬೬ರ ಜೂನ್ ತಿಂಗಳಲ್ಲಿ ಕಾಂಗ್ರೆಸ್ ಮತ್ತು ಅಧ್ಯಕ್ಷ ಜಾನ್‌ಸನ್‌ನ ನಡುವಣ ಸಂಬಂಧಗಳು ಮುರಿದು ಬೀಳುವ ಹಂತವನ್ನು ಮುಟ್ಟಿದ್ದವು. ಜಾನ್‌ಸನ್ ಎರಡು ಪಕ್ಷಗಳ ಸಂಪ್ರದಾಯಸ್ಥರನ್ನು ಸೇರಿಸಿಕೊಂಡು ಸಮ್ಮಿಶ್ರಣ ಪಕ್ಷವನ್ನು ಕಟ್ಟಿ ಅದನ್ನು ತೀವ್ರಗಾಮಿ ರಿಪಬ್ಲಿಕನ್ನರ ವಿರುದ್ಧ ಉಪಯೋಗಿಸಲು ಪ್ರಯತ್ನಪಟ್ಟನು. ಆಗಸ್ಟ್ ತಿಂಗಳಲ್ಲಿ ಕಾಂಗ್ರೆಸ್ ಚುನಾವಣೆಗಳಲ್ಲಿ ತೀವ್ರಗಾಮಿ ರಿಪಬ್ಲಿಕನ್ನರ ವಿರುದ್ಧ ಚುನಾವಣಾ ಪ್ರಚಾರ ದಲ್ಲಿ ಭಾಗವಹಿಸಿದನು. ಒಂದು ಚುನಾವಣಾ ಪ್ರಚಾರದಲ್ಲಿ 'ಥಾಡ್ ಸ್ಟೀವನ್ಸ್ (Thad Stevens)ನನ್ನು ಯಾಕೆ ಗಲ್ಲಿಗೇರಿಸಬಾರದು?' ಎಂದು ಕೂಗಿದನು. ಇನ್ನೊಂದು ಕಡೆ ಭಾಷಣ ಮಾಡುತ್ತ ತನ್ನನ್ನು ಕ್ರಿಸ್ತನಿಗೆ ಹೋಲಿಸಿಕೊಂಡು ಕಣ್ಣೀರು ಹಾಕಿದನು. ತಾನು ದಾಕ್ಷಿಣಾತ್ಯರ ಕ್ಷಮಾಪಣೆಯನ್ನು ಬೆಂಬಲಿಸಿದರೂ ತನ್ನ ಮೇಲೆ ಆಪಾದನೆಗಳನ್ನು ಹೊರಿಸಿದ್ದಾರೆ ಎಂದು ಪ್ರಲಾಪಿಸಿದನು. ಈ ಪ್ರಯತ್ನಗಳು ಅವನು ಬಯಸಿದ್ದರ ವಿರುದ್ಧ ಪರಿಣಾಮಗಳನ್ನುಂಟುಮಾಡಿದವು. ಚುನಾವಣೆಯಲ್ಲಿ ರಿಪಬ್ಲಿಕನ್ನರು ಅದ್ಭುತ ವಿಜಯ ಸಾಧಿಸಿದರು. ಕಾಂಗ್ರೆಸ್ ಮತ್ತು ಸೆನೆಟ್ ಎರಡರಲ್ಲೂ ರಿಪಬ್ಲಿಕನ್ನರು ಬಹುಮತ ಗಳಿಸಿದರು.

ಕಾಂಗ್ರೆಸ್ ಅಧಿವೇಶನ ಪ್ರಾರಂಭವಾದಾಗ ಪುನರ್‌ನಿರ್ಮಾಣ ಕಾಯಿದೆಯನ್ನು ಜಾರಿಗೆ ತಂದು ಅಧ್ಯಕ್ಷ ಜಾನ್‌ಸನ್ ಮಾಡಿದ್ದ ಬದಲಾವಣೆಗಳನ್ನೆಲ್ಲ ರದ್ದುಗೊಳಿಸಿತು. ೧೮೬೭ರ ಕಾಯಿದೆ ದಕ್ಷಿಣ ಸಂಸ್ಥಾನಗಳನ್ನು ೫ ಸೈನಿಕ ಜಿಲ್ಲೆಗಳಾಗಿ (military districts) ವಿಂಗಡಿಸಿ, ಆ ಜಿಲ್ಲೆಗಳನ್ನು ಫೆಡರಲ್ ಸೈನ್ಯಾಧಿಕಾರಿಗಳ ನಿಯಂತ್ರಣಕ್ಕೆ ಒಪ್ಪಿಸಿತು. ಪ್ರತಿ ಸಂಸ್ಥಾನ ಪ್ರಜೆಗಳಿಂದ ಆಯ್ಕೆಯಾದ, ಎಂದರೆ ಮತ ನೀಡುವ ವಯಸ್ಸಿನ ಎಲ್ಲ ಗಂಡಸರೂ ಮತದಾನದಲ್ಲಿ ಭಾಗವಹಿಸಿ ಆಯ್ಕೆ ಮಾಡಿದ ರಾಜ್ಯಾಂಗ ರಚನಾಸಮಿತಿಯನ್ನು ಸ್ಥಾಪಿಸಬೇಕು. ಆ ಸಮಿತಿ ಸಂಸ್ಥಾನದ ರಾಜ್ಯಾಂಗವನ್ನು ಕರಿಯರಿಗೂ ಮತ ನೀಡುವ ಹಕ್ಕನ್ನು ಒಳಗೊಂಡಂತೆ ರಚಿಸಬೇಕು. ಸಂಸ್ಥಾನ ೧೪ನೆಯ ತಿದ್ದುಪಡಿಯನ್ನು ಅಂಗೀಕರಿಸ ಬೇಕು. ಅಂದರೆ, ನ್ಯಾಯವನ್ನು ಎಲ್ಲರಿಗೂ ಸಮನಾಗಿ ವಿತರಣೆಯಾಗುವಂತೆ ಮಾಡಬೇಕು.

ಯಾವ ಸಂಸ್ಥಾನ ಈ ಎಲ್ಲ ಷರತ್ತುಗಳನ್ನು ಜಾರಿಗೆ ತಂದು ವ್ಯವಸ್ಥಿತವಾಗಿ ಆಡಳಿತ ನಡೆಸಿಕೊಂಡು ಹೋಗುವಂತಾದಾಗ ಮಾತ್ರ ಆ ಸಂಸ್ಥಾನದ ಪ್ರತಿನಿಧಿಗಳು ಮತ್ತು ಸೆನೆಟರ್‌ಗಳನ್ನು ಕಾಂಗ್ರೆಸ್ಸಿಗೆ ಪುನಃ ಸೇರಿಸಿಕೊಳ್ಳಬಹುದೆಂದು ನಿರ್ಧರಿಸಲಾಯಿತು. ೧೮೬೭ರಲ್ಲಿ ಕಾಂಗ್ರೆಸ್ ಜಾರಿಗೆ ತಂದ 'ಪುನರ್‌ನಿರ್ಮಾಣ ಕಾಯಿದೆ'ಯನ್ನು ಅಧ್ಯಕ್ಷ ಜಾನ್‌ಸನ್ 'ವೀಟೊ' ಮಾಡಿದನು. ಪ್ರತಿಯಾಗಿ ಕಾಂಗ್ರೆಸ್ ಅವನ 'ವೀಟೊ'ವನ್ನು ತಳ್ಳಿಹಾಕಿ ಅಂಗೀಕೃತವಾದ ಕಾಯಿದೆಯನ್ನು ಮುಂದುವರಿಸಿತು. ಅಂದರೆ ಅಧ್ಯಕ್ಷನ ಅಪ್ಪಣೆಯನ್ನು ಮೀರಿ ಕಾಯಿದೆಯನ್ನು ಜಾರಿಗೆ ತಂದಿತು.

ಅಧ್ಯಕ್ಷ ಜಾನ್‌ಸನ್ ಮೇಲೆ ಶಿಕ್ಷಾರ್ಹವಾದ ದೋಷಾರೋಪಣೆ

ಉಗ್ರಗಾಮಿ ರಿಪಬ್ಲಿಕನ್ನರು ತಮ್ಮ ಪುನರ್‌ನಿರ್ಮಾಣ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕಾದರೆ ಅದಕ್ಕೆ ಅಡಚಣೆಯನ್ನುಂಟುಮಾಡುತ್ತಿದ್ದ ಅಧ್ಯಕ್ಷ ಜಾನ್‌ಸನ್‌ನನ್ನು ಪದಚ್ಯುತಿಗೊಳಿಸುವುದೊಂದೆ ಮಾರ್ಗ ಎಂದು ತೀರ್ಮಾನಿಸಿದರು. ಇದು ಅಸಾಧಾರಣ ವಾದ ಮತ್ತು ಅತ್ಯುಗ್ರವಾದ ವಿಧಾನ. ಈ ವಿಧಾನವನ್ನು ಅಪರೂಪವಾಗಿ ಫೆಡರಲ್ ಅಧಿಕಾರಿಗಳನ್ನು ಅವರ ಹುದ್ದೆಗಳಿಂದ ತೆಗೆದುಹಾಕಲು ಉಪಯೋಗಿಸಿದ್ದರೂ ರಾಷ್ಟ್ರದ ಅಧ್ಯಕ್ಷನ ವಿರುದ್ಧವಾಗಿ ಎಂದೂ ಉಪಯೋಗಿಸಿರಲಿಲ್ಲ. ೧೮೬೭ರ ಮೊದಲ ದಿನಗಳಲ್ಲಿ ಜಾನ್‌ಸನ್ ವಿರುದ್ಧ ಶಿಕ್ಷಾರ್ಹ ಆಪಾದನೆಗಳನ್ನು ಮಂಡಿಸುವ ಪ್ರಯತ್ನ ಮಧ್ಯವರ್ತಿ ರಿಪಬ್ಲಿಕನ್ನರ ಅಸಹಕಾರದಿಂದ ವಿಫಲವಾಯಿತು. ಆದರೆ ೧೮೬೭ರ ಮಧ್ಯಂತರದಲ್ಲಿ ಜಾನ್‌ಸನ್ ಯುದ್ಧಕಾರ್ಯದರ್ಶಿಯಾಗಿದ್ದ ಎಡ್ವಿನ್ ಸ್ಟಾಂಟನ್ (Edwin Stanton)ನನ್ನು ಕೆಲಸದಿಂದ ತೆಗೆದುಹಾಕಲು ಪ್ರಯತ್ನಪಟ್ಟಾಗ ಅದು ನ್ಯಾಯವಿರುದ್ಧವಾಗಿದ್ದು ಉಗ್ರಗಾಮಿ ರಿಪಬ್ಲಿಕನ್ನರಿಗೆ ಅಧ್ಯಕ್ಷನ ಮೇಲೆ ಪ್ರಬಲವಾದ ಆಪಾದನೆ ಹೊರಿಸಲು ಅವಕಾಶ ಮಾಡಿಕೊಟ್ಟಿತು: ಸ್ಟಾಂಟನ್‌ನನ್ನು ತೆಗೆದುಹಾಕಿದ್ದು 'ಅಧಿಕಾರ ಅವಧಿಯ ಕಾಯಿದೆ' (tenure of office)ಯನ್ನು ಉಲ್ಲಂಘನೆ ಮಾಡಿತ್ತು. ಈ ಕಾಯಿದೆಯ ಉಲ್ಲಂಘನೆ ಅಧಿಕಾರದ ದುರುಪಯೋಗವನ್ನು ಸಾಬೀತುಗೊಳಿಸಿದ್ದರಿಂದ ಅಧ್ಯಕ್ಷನ ಮೇಲೆ ಶಿಕ್ಷಾರ್ಹ ಆಪಾದನೆಯನ್ನು ಮಂಡಿಸಲು ಅನುಕೂಲವಾಯಿತು. ಜಾನ್‌ಸನ್ ಈ ಆಪಾದನೆಯನ್ನು ತಪ್ಪಿಸಿಕೊಳ್ಳಲು ಸ್ಟಾಂಟನ್ ಸ್ಥಾನದಲ್ಲಿ ಜನರಲ್ ಗ್ರಾಂಟ್‌ನನ್ನು ನೇಮಿಸಿದನು. ಆದರೆ ಸೆನೆಟ್ ಗ್ರಾಂಟ್‌ನ ನೇಮಕವನ್ನು ನಿರಾಕರಿಸಿತು. ನಂತರ ಜಾನ್‌ಸನ್ ಜನರಲ್ ವಿಲಿಯಮ್ ಶರ್‌ಮನ್‌ನನ್ನು ನೇಮಕ ಮಾಡಲು ಪ್ರಯತ್ನಿಸಿದ್ದು ವಿಫಲಗೊಂಡಿತು. ಕಡೆಗೆ ಜನರಲ್ ಲೊರೆಂಜ಼ೊ ಥಾಮಸ್ (Lorenzo Thomas)ನನ್ನು ಯುದ್ಧ ಕಾರ್ಯದರ್ಶಿಯಾಗಿ ನೇಮಿಸಿದನು. ಇದಾದ ಮೂರು ದಿನಗಳ ಮೇಲೆ ೧೮೬೮ರ ಫೆಬ್ರುವರಿ ೨೪ರಂದು ಕಾಂಗ್ರೆಸ್ ಬಹುಮತದಿಂದ ಅಧ್ಯಕ್ಷ ಜಾನ್‌ಸನ್‌ನನ್ನು ಶಿಕ್ಷಾರ್ಹ ಆಪಾದನೆಯ ವಿಚಾರಣೆಗೆ ಗುರಿಪಡಿಸಲು ನಿರ್ಧರಿಸಿತು. ಆಪಾದನೆಗಳನ್ನು ಪಟ್ಟಿಮಾಡಿ ಸೆನೆಟ್‌ಗೆ ಕಳುಹಿಸಿತು.

ಸೆನೆಟ್ ವಿಚಾರಣೆ ಮಾರ್ಚ್ ೫ರಲ್ಲಿ ಪ್ರಾರಂಭವಾಗಿ ಮೇ ೨೬ರ ತನಕ ನಡೆಯಿತು. ಶ್ರೇಷ್ಠ ನ್ಯಾಯಾಧೀಶ ಸಾಲ್‌ಮನ್ ಚೇಸ್ (Salmon Chase) ಅಧ್ಯಕ್ಷತೆಯಲ್ಲಿ ವಿಚಾರಣೆ ನಡೆಯಿತು. ಥಾಡ್ಡಿಯಸ್ ಸ್ಟೀವನ್ಸ್ ಮತ್ತು ಬೆಂಜಮಿನ್ ಬಟ್ಲರ್ ಸೇರಿದಂತೆ ಏಳು ಕಾಂಗ್ರೆಸ್ ವ್ಯವಸ್ಥಾಪಕರು ಆರೋಪಗಳ ವಿಚಾರಣೆಯನ್ನು ನಿರ್ವಹಿಸಿದರು. ಅಧ್ಯಕ್ಷ ಖುದ್ದಾಗಿ ಬಂದು ವಿಚಾರಣೆಗೆ ಗುರಿಯಾಗಬೇಕಾದ ಅವಮಾನಕರ ಪ್ರಸಂಗ ತಪ್ಪಿತು. ಏಕೆಂದರೆ ಅಟಾರ್ನಿ ಜನರಲ್ ಹೆನ್ರಿ ಸ್ಟಾನೆಬೆರಿ (Attorney General Henry Stanbery) ಮತ್ತು ಅವನ ಸಹಾಯಕರು ಜಾನ್‌ಸನ್ ಪರವಾಗಿ ಕುಶಲತೆಯಿಂದ ವಾದ ಮಾಡಿದರು. ಕಕ್ಷಿದಾರ ಜಾನ್‌ಸನ್ ಪರವಾಗಿ ವಾದಿಸಿದ ವಕೀಲರು ಅವನ ಮೇಲಿನ ಆಪಾದನೆಗಳನ್ನು ಜಾಣತನದಿಂದ ಕೇವಲ 'ಶಿಕ್ಷಾರ್ಹ ಅಪರಾಧ' (indictable offenses) ಗಳಿಗೆ ನಿಯಮಿತಗೊಳಿಸಿ ಬೇರೆ ಆಪಾದನೆಗಳ ಮೇಲೆ ಪ್ರಶ್ನೆ ಕೇಳದಂತೆ ಮಾಡಿದರು. ಅವು ರಾಜಕೀಯ ಆಪಾದನೆಗಳು. ಶಿಕ್ಷಾರ್ಹ ಅಪರಾಧ ತಮ್ಮ ಕಕ್ಷಿದಾರ ಮಾಡಿಲ್ಲವೆಂದು ಜಾನ್‌ಸನ್ ವಕೀಲರು ವಾದಿಸಿದರು. ಕಡೆಯಲ್ಲಿ ಸಾಕಷ್ಟು ರಿಪಬ್ಲಿಕನ್ನರು ಜಾನ್‌ಸನ್ ಪರವಾಗಿದ್ದ ಸೆನೆಟರ್‌ಗಳೊಡನೆ ಸೇರಿದ್ದುದರಿಂದ ಜಾನ್‌ಸನ್ ಶಿಕ್ಷೆಗೆ ಒಳಗಾಗುವುದು ತಪ್ಪಿತು. ಈ ಹಗರಣದಿಂದ ಜಾನ್‌ಸನ್ ಎಚ್ಚೆತ್ತುಕೊಂಡು ಅಲ್ಲಿಂದಾಚೆಗೆ ಪುನರ್‌ನಿರ್ಮಾಣದ ಕಾರ್ಯದಲ್ಲಿ ಕೈ ಹಾಕಲಿಲ್ಲ. ಉಗ್ರಗಾಮಿ ರಿಪಬ್ಲಿಕನ್ನರು ತಮ್ಮ ಯೋಜನೆಯನ್ನು ಜಾರಿಗೆ ತಂದ ದಕ್ಷಿಣ ಸಂಸ್ಥಾನಗಳನ್ನು ಒಂದೊಂದಾಗಿ ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಂಡರು.

೧೮೬೮ರ ಅಧ್ಯಕ್ಷ ಚುನಾವಣೆಯಲ್ಲಿ ಡೆಮೊಕ್ರಾಟರು ನ್ಯೂಯಾರ್ಕಿನ ಹೊರೆಷಿಯೊ ಸೆಯ್‌ಮರ್ (Horatio Seymour)ನನ್ನು ಅಭ್ಯರ್ಥಿಯಾಗಿ ನಾಮಕರಣ ಮಾಡಿದರು. ಇವರ ಚುನಾವಣಾ ವೇದಿಕೆ ರಿಪಬ್ಲಿಕನ್ನರ ಪುನರ್‌ನಿರ್ಮಾಣ ಯೋಜನೆಯನ್ನು 'ಅಧಿಕಾರದ ದುರುಪಯೋಗ, ರಾಜ್ಯಾಂಗ ವಿರುದ್ಧವಾದುದು, ಕ್ರಾಂತಿಕಾರಕವಾದುದು ಆದ್ದರಿಂದ ರದ್ದುಗೊಳಿಸಬೇಕಾದುದು' ಎಂದು ಪ್ರಚಾರ ಮಾಡಿದರು. ರಿಪಬ್ಲಿಕನ್ನರು ಅಂತರ್ಯುದ್ಧದಲ್ಲಿ ಕೀರ್ತಿ ಗಳಿಸಿದ್ದ ಜನರಲ್ ಗ್ರಾಂಟ್‌ನನ್ನು ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಿಲ್ಲಿಸಿದರು. ಗ್ರಾಂಟ್ ದೇಶದಲ್ಲಿ ಜರುಗುತ್ತಿದ್ದ ವಿದ್ಯಮಾನಗಳ ಬಗ್ಗೆ ಸಾರ್ವಜನಿಕರ ಅಸಮಾಧಾನ ಮತ್ತು ರೇಜಿಗೆಯನ್ನು ಮನಗಂಡು 'ಶಾಂತಿಸ್ಥಾಪನೆ ಮಾಡೋಣ' ಎಂದು ದೇಶಕ್ಕೆ ಕರೆಕೊಟ್ಟನು. ಚುನಾವಣೆಯಲ್ಲಿ ಜನರಲ್ ಗ್ರಾಂಟ್ ಆಯ್ಕೆಯಾದನು. ಆಶ್ಚರ್ಯವೆಂದರೆ ಮಾಜಿ ಕಾನ್‌ಫೆಡರಸಿಯ ಹೆಚ್ಚು ಸಂಸ್ಥಾನಗಳು ಗ್ರಾಂಟ್‌ನನ್ನು ಬೆಂಬಲಿಸಿದ್ದರು. ಉತ್ತರದಲ್ಲಿ ಮೂರು ಸಂಸ್ಥಾನಗಳನ್ನು ಬಿಟ್ಟು ಬಾಕಿ ಎಲ್ಲ ಸಂಸ್ಥಾನಗಳು ಗ್ರಾಂಟ್‌ನನ್ನು ಆಯ್ಕೆ ಮಾಡಿದ್ದವು. ಸಾರ್ವಜನಿಕರ ಮತಗಳಲ್ಲಿ ಗ್ರಾಂಟ್ ಮತ್ತು ಅವನ ವಿರೋಧಿ ಸೆಯ್‌ಮರ್ ನಡುವಣ ಅಂತರ ಅಷ್ಟೇನೂ ಹೆಚ್ಚಾಗಿರಲಿಲ್ಲ. ಆದರೆ ಎಲೆಕ್ಟರಲ್ ಕಾಲೇಜಿನಲ್ಲಿ ಗ್ರಾಂಟ್ ೨೧೪-೮೦ ಮತಗಳ ಅಂತರದಿಂದ ಸುಲಭವಾಗಿ ಗೆದ್ದನು. ❑

ಅಧ್ಯಾಯ – ೧೦

ಗಿಲಿಟಿನ ಯುಗದಲ್ಲಿ ಅಮೆರಿಕ

ಗಿಲಿಟಿನ ಯುಗದ ಅರ್ಥ ಮತ್ತು ಲಕ್ಷಣಗಳು

೧೮೬೫-೧೯೦೦ ಕಾಲಕ್ಕೆ 'ಗಿಲೀಟು ಕಾಲ' (Gilded Age) ಎಂದು ಹೆಸರಿಟ್ಟವರು ಮಾರ್ಕ್ ಟ್ವೇನ್ ಮತ್ತು ಚಾರ್ಲ್ಸ್ ವಾರ್ನರ್. ೧೮೭೩ರಲ್ಲಿ ಇವರಿಬ್ಬರೂ ಸೇರಿ ಇದೇ ಹೆಸರಿನ ಒಂದು ಕಾದಂಬರಿಯನ್ನು ಪ್ರಕಟಿಸಿದರು. ಆ ಕಾದಂಬರಿಯಲ್ಲಿ ವರ್ಣಿಸಿರುವ 'ಗಿಲೀಟು ಕಾಲ'ದ ಲಕ್ಷಣಗಳು: ಲಂಚ, ಲಾಭಕೋರತನ ಮತ್ತು ಗಿಲೀಟು. ಇವು ಹತ್ತೊಂಬತ್ತನೆಯ ಶತಮಾನದ ಔದ್ಯೋಗೀಕರಣ ಸೃಷ್ಟಿಸಿದ ಸಮಸ್ಯೆಗಳು. ಇವು ಪರಿಹಾರವಾಗದೆ ಉಳಿದುಕೊಂಡದ್ದಕ್ಕೆ ಕಾರಣ ವ್ಯಾಪಾರ/ಉದ್ಯಮಗಳನ್ನು ಸರ್ಕಾರ ನಿಯಂತ್ರಿಸುವುದನ್ನು ಯಾವ ರಾಜಕಾರಣಿಯೂ ಬೆಂಬಲಿಸಲಿಲ್ಲ. ಮಹತ್ತರವಾದ ಸಾಮಾಜಿಕ ಸುಧಾರಣೆಗಳಾಗುತ್ತಿದ್ದರೂ ಸಹ ರಾಜಕೀಯ ಪ್ರಕ್ರಿಯೆ ಅವುಗಳಿಗೆ ಗಮನ ಕೊಡಲಿಲ್ಲ. ಔದ್ಯೋಗೀಕರಣ ಹೊಸ ಆರ್ಥಿಕ ವ್ಯವಸ್ಥೆಯನ್ನು ಸೃಷ್ಟಿಸಿತ್ತು. ಇದರಲ್ಲಿ ವ್ಯಾಪಾರ/ವಾಣಿಜ್ಯ ಮತ್ತು ಉದ್ದಿಮೆಗಾರರ ಪ್ರಾಬಲ್ಯ ಮತ್ತು ಪ್ರಭಾವ ಹಿಂದೆ ಎಂದೂ ಇರದಷ್ಟು ಹೆಚ್ಚಾಗಿತ್ತು. ಅವರ ಪ್ರಾಬಲ್ಯ ರಾಜಕೀಯಕ್ಕೂ ಹಬ್ಬಿ ಹೊಸತರದ ರಾಜಕೀಯ ಸೃಷ್ಟಿಗೊಂಡಿತು. ಹಣಸಹಾಯಕ್ಕಾಗಿ ಎರಡು ರಾಜಕೀಯ ಪಕ್ಷಗಳು ವ್ಯಾಪಾರ/ಉದ್ಯಮ ಕ್ಷೇತ್ರದ ನಾಯಕರನ್ನು ಅವಲಂಬಿಸಿದ್ದರು. ೧೮೮೦ರ ದಶಕದಲ್ಲಿ ಅನೇಕ ಉದ್ಯಮಕಾರರು ತಮ್ಮ ಸ್ವಂತ ಪ್ರಾಬಲ್ಯ ಮತ್ತು ಸಂಪತ್ತನ್ನು ಹೆಚ್ಚಿಸಿಕೊಳ್ಳಲು ರಾಜಕೀಯ ರಂಗ ಪ್ರವೇಶ ಮಾಡಿದರು. ಮಿಕ್ಕ ರಾಜಕಾರಣಿಗಳು ವಿವಾದಾತ್ಮಕ ವಿಷಯಗಳನ್ನು ಉದ್ಯಮ/ವ್ಯಾಪಾರಗಳ ಪಟ್ಟಭದ್ರ ಹಿತಾಸಕ್ತಿಗಳನ್ನು ಎದುರುಹಾಕಿಕೊಳ್ಳಲು ಹೆದರಿ ಅಂಥ ವಿಷಯಗಳನ್ನು ಕಡೆಗಣಿಸಿದರು.

ರೈತರು, ಕಾರ್ಮಿಕರು ಮತ್ತು ಇತರ ಸಮಾಜಸುಧಾರಕರು ಅನೇಕವೇಳೆ ವ್ಯಾಪಾರ/ಉದ್ಯಮಗಳು ರಾಜಕೀಯದ ಮೇಲೆ ಪ್ರಾಬಲ್ಯ ಬೀರುವುದನ್ನು ವಿರೋಧಿಸಿದರೂ ಬದಲಾವಣೆಗಳನ್ನು ತರುವಷ್ಟು ಶಕ್ತಿ ಅವರಿಗಿರಲಿಲ್ಲ. ಆ ಶತಮಾನದ ಕೊನೆಯವರೆಗೂ ಅಂಥ ಬದಲಾವಣೆಗಳ ಅಗತ್ಯ ಕಂಡುಬರಲಿಲ್ಲ. ನಂತರ ಜನರಲ್ಲಿ ತಮ್ಮ ಸಮಸ್ಯೆಗಳ ಬಗ್ಗೆ ಅರಿವು ಮೂಡಿ ಸರ್ಕಾರದ ನಿಯಂತ್ರಣ ಒಪ್ಪಿಕೊಳ್ಳುವ ಸ್ಥಿತಿಗೆ ಬಂದಿದ್ದರು. ಹತ್ತೊಂಬತ್ತನೆಯ ಶತಮಾನದ ರಾಜಕೀಯ ರಂಗದಲ್ಲಿ ಎರಡು ಪಕ್ಷಗಳಿದ್ದರೂ

ಅವುಗಳಲ್ಲಿ ಹೆಚ್ಚಿನ ವ್ಯತ್ಯಾಸವಿರಲಿಲ್ಲ. ಪಕ್ಷ ರಾಜಕೀಯ ಸಾಮಾನ್ಯವಾಗಿ ವ್ಯಕ್ತಿಗಳ ಮೇಲೆ ಆಧಾರಿತವಾಗಿತ್ತು; ಧ್ಯೇಯ ಧೋರಣೆಗಳ ಮೇಲಲ್ಲ. ೧೮೯೦ರ ದಶಕದವರೆಗೂ ರಾಜಕೀಯದಲ್ಲಿ ಸೂಕ್ಷ್ಮ ಸಮತೋಲನವಿತ್ತು. ರಿಪಬ್ಲಿಕನ್ ಅಧಿಕಾರಿಗಳು ಡೆಮೊಕ್ರಾಟರಿಗಿಂತ ಅಧಿಕ ಸಂಖ್ಯೆಯಲ್ಲಿದ್ದರು. ಆದರೆ ಡೆಮೊಕ್ರಾಟರು ದಕ್ಷಿಣ ಸಂಸ್ಥಾನಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು. ಉತ್ತರದಲ್ಲೂ ಅವರು ಪ್ರಬಲರಾಗಿದ್ದರು. ಆದ್ದರಿಂದ ಡೆಮೊಕ್ರಾಟ್ ಪಕ್ಷ ೧೮೯೪ರವರೆಗೂ ಬಹುಸಂಖ್ಯಾತ ಪಕ್ಷವಾಗಿತ್ತು. ಮತದಾರರು ಇಷ್ಟಪಡದಿರುವ ಧೋರಣೆ ತಳೆಯಲು ರಾಜಕಾರಣಿಗಳು ಹಿಂಜರಿಯುತ್ತಿದ್ದರು. ಆದ್ದರಿಂದ ಪಕ್ಷದ ಸದಸ್ಯತ್ವ ಗುಂಪುಗಾರಿಕೆ, ವಂಶಾವಳಿ, ಸ್ಥಳೀಯ ಸಮಸ್ಯೆಗಳು, ಮತಧರ್ಮ ಮತ್ತು ವರ್ಣಸಾಮ್ಯತೆ (ಬಿಳಿಯ, ಕರಿಯ ಮತ್ತು ಇತರ ಜನ) ಈ ಮುಖ್ಯ ಅಂಶಗಳ ಮೇಲೆ ನಿರ್ಧಾರವಾಗುತ್ತಿತ್ತು.

ರಿಪಬ್ಲಿಕನ್ನರು ಮಧ್ಯ ಪಶ್ಚಿಮ, ದೂರ ಪಶ್ಚಿಮ ಪ್ರಾಂತಗಳಲ್ಲಿ ಮತ್ತು ಪೆನ್ಸಿಲ್‌ವೇನಿಯ ಹಾಗೂ ನ್ಯೂ ಇಂಗ್ಲೆಂಡ್‌ಗಳಲ್ಲಿ ಬಹುಮತ ಪಡೆದಿದ್ದರು. ಈ ಪ್ರಾಂತಗಳ ರಾಜಕಾರಣಿಗಳಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಅಂತರ್ಯುದ್ಧದಲ್ಲಿ ಸಂಯುಕ್ತ ಸಂಸ್ಥಾನಗಳ ಒಕ್ಕೂಟವನ್ನು ರಕ್ಷಿಸಲು ಹೋರಾಡಿದ ನೆನಪುಗಳು ಅವರ ಪಕ್ಷವನ್ನು ಒಂದುಗೂಡಿಸಿತ್ತು. ಪಕ್ಷದ ಒಗ್ಗಟ್ಟನ್ನು ರಕ್ಷಿಸಲು ಮತ್ತು ಸದಸ್ಯರು ನಿಷ್ಠಾವಂತರಾಗಿರುವಂತೆ ಮಾಡಲು ಡೆಮೊಕ್ರಾಟಿಕ್ ಪಕ್ಷವನ್ನು ಅಂತರ್ಯುದ್ಧಕ್ಕೆ ಕಾರಣವಾದ ಬಂಡಾಯಗಾರರ ಪಕ್ಷವೆಂದು ಪ್ರಚಾರ ನಡೆಸಿದ್ದರು. ಮಾಜಿ ಒಕ್ಕೂಟದ (union/federal) ಸೈನಿಕರ ನಿವೃತ್ತಿ ವೇತನವನ್ನು ಹೆಚ್ಚಿಸಿದರು. ಆದರೆ ಈ ಪಕ್ಷ ದಕ್ಷಿಣ ಸಂಸ್ಥಾನಗಳ ಕರಿಯ ಮತದಾರರನ್ನು ಒಲಿಸಿಕೊಳ್ಳುವ ಪ್ರಯತ್ನವನ್ನು ಕೈಬಿಟ್ಟಿತು. ರಿಪಬ್ಲಿಕನ್ ಪಕ್ಷದೊಳಗಿನ ಭಿನ್ನಾಭಿಪ್ರಾಯಗಳಿಂದಾಗಿ ಏನಾದರೂ ಮುಖ್ಯ ಸಮಸ್ಯೆ ತಲೆದೋರಿದಾಗ ಪಕ್ಷದ ಒಗ್ಗಟ್ಟಿಗೆ ಧಕ್ಕೆ ಉಂಟಾಗುವ ಸಂಭವ ಹೆಚ್ಚಾಗಿತ್ತು. ಈ ಪಕ್ಷ ಎದುರಿಸಬೇಕಾಗಿದ್ದ ಅತ್ಯಂತ ಗಂಭೀರ ಪರಿಸ್ಥಿತಿ ಎಂದರೆ ಅಮೆರಿಕ ಪೂರ್ವತೀರದ ವಾಣಿಜ್ಯೋದ್ಯಮಿಗಳ ಮತ್ತು ಪಶ್ಚಿಮ ಪ್ರಾಂತಗಳ ರೈತರ ನಡುವಣ ಘರ್ಷಣೆ. ವಾಣಿಜ್ಯೋದ್ಯಮಿಗಳು ಸಂಪೂರ್ಣ ಬಂಗಾರ ಬೆಂಬಲದ ಹಣವನ್ನು ಸರ್ಕಾರ ಚಲಾವಣೆಗೆ ತರಬೇಕು, ಕೈಗಾರಿಕೆಗಳಿಗೆ ಮತ್ತು ರೈಲುಮಾರ್ಗಗಳಿಗೆ ಸರ್ಕಾರದ ನೆರವು ಅಗತ್ಯ ಎಂಬ ಬೇಡಿಕೆಗಳನ್ನು ಮಂಡಿಸಿದರು. ರೈತರು ಹಣವನ್ನು ಬಂಗಾರದಿಂದ ಬೆಂಬಲಿಸುವುದನ್ನು ಮತ್ತು ಸುಂಕ ಏರಿಕೆಯನ್ನು ನಿರಾಕರಿಸಿದರು. ಇದಕ್ಕೆ ಕಾರಣ: ಈ ಬಂಗಾರದ ಬೆಂಬಲ ವಾಣಿಜ್ಯೋದ್ಯಮಿಗಳನ್ನು ಶ್ರೀಮಂತರನ್ನಾಗಿ ಮಾಡಿ, ಬಡ ರೈತರನ್ನು ಹೆಚ್ಚು ಬಡವರನ್ನಾಗಿ ಮಾಡುತ್ತದೆ. ರೈತರು ರೈಲುಮಾರ್ಗಗಳ ಸರಕು ಸಾಗಿಗೆ ದರವನ್ನು ಹೆಚ್ಚಿಸಿದುದಕ್ಕಾಗಿ ಮತ್ತು ರಾಜಕಾರಣಿಗಳ ಮೇಲೆ ತನ್ನ ಪ್ರಭಾವ ಬೀರುತ್ತಿದ್ದುದಕ್ಕಾಗಿ ರೈಲ್ವೆ ಅಧಿಕಾರಿಗಳನ್ನು ದ್ವೇಷಿಸುತ್ತಿದ್ದರು.

ಪಕ್ಷದ ನಾಯಕರು ಈ ಭಿನ್ನಾಭಿಪ್ರಾಯಗಳನ್ನು ಕಡೆಗಣಿಸಿ ಪಕ್ಷದೊಳಗಿನ ಪಟ್ಟಭದ್ರ ಹಿತಾಸಕ್ತಿಗಳು ಪಕ್ಷವನ್ನು ಛಿದ್ರಗೊಳಿಸದಂತೆ ಹಿಡಿದಿಡಲು ಪ್ರಯತ್ನಿಸಿದರು.

ಡೆಮೊಕ್ರಾಟಿಕ್ ಪಕ್ಷ ದಕ್ಷಿಣದಲ್ಲಿ ಮತ್ತು ಈಶಾನ್ಯ ಪ್ರಾಂತಗಳಲ್ಲಿ ತನ್ನ ಪ್ರಾಬಲ್ಯವನ್ನು ಬೆಳೆಸಿಕೊಂಡಿತ್ತು. ಅಂತರ್ಯುದ್ಧದ ಕಾಲದಿಂದಲೂ ದಕ್ಷಿಣ ಸಂಸ್ಥಾನಗಳು ಡೆಮೊಕ್ರಾಟಿಕ್ ಪಕ್ಷದ ಪರವಾಗಿದ್ದವು. ಬಡತನದಲ್ಲಿ ತೊಳಲುತ್ತಿದ್ದ ಬಿಳಿಯರು ದಕ್ಷಿಣ ಸಂಸ್ಥಾನಗಳಲ್ಲಿ ದಬ್ಬಾಳಿಕೆ ನಡೆಸುತ್ತಿದ್ದ ಬರ್‌ಬಾನ್ (Bourbon) ನಾಯಕರಿಗೆ ಹೆದರಿ ತಮ್ಮ ರಕ್ಷಣೆಗಾಗಿ ಮತ್ತು ರಿಪಬ್ಲಿಕನ್ ಪಕ್ಷ ಮತ್ತು ಕರಿಯರು ಅಧಿಕಾರಕ್ಕೆ ಬರಬಹುದೆಂಬ ಭಯದಿಂದ ಡೆಮೊಕ್ರಾಟಿಕ್ ಪಕ್ಷಕ್ಕೆ ನಿಷ್ಠೆಯಿಂದಿದ್ದರು. ಈಶಾನ್ಯ ಪ್ರಾಂತಗಳಲ್ಲಿ ಕಾರ್ಮಿಕ ವರ್ಗದವರು, ಮುಖ್ಯವಾಗಿ, ಕ್ಯಾಥೊಲಿಕರು ಡೆಮೊಕ್ರಾಟಿಕ್ ಪಕ್ಷದ ನಿಷ್ಠಾವಂತ ಬೆಂಬಲಿಗರಾಗಿದ್ದರು.

ವಿವಿಧ ಮತಧರ್ಮಗಳು ಯಾರು ಯಾವ ರಾಜಕೀಯ ಪಕ್ಷದ ಸದಸ್ಯರಾಗುತ್ತಾರೆ ಎನ್ನುವುದನ್ನು ನಿರ್ಧರಿಸುತ್ತಿತ್ತು. ಎಪಿಸ್ಕೊಪಲ್ ಪಂಥದವರು ಮತ್ತು ಕ್ಯಾಥೊಲಿಕರು ಅಧಿಕ ಸಂಖ್ಯೆಯಲ್ಲಿ ಡೆಮೊಕ್ರಾಟಿಕ್ ಪಕ್ಷದ ಸದಸ್ಯರಾಗಿದ್ದರು. ಬಹುತೇಕ ಮೆಥಡಿಸ್ಟರು, ಕ್ವೇಕರ್ ಪಂಥದವರು, ಪ್ರೆಸ್ಬಿಟೇರಿಯನ್ನರು, ಬ್ಯಾಪ್ಟಿಸ್ಟರು, ಲೂದರನ್ನರು ಮುಂತಾದವರು ರಿಪಬ್ಲಿಕನ್ ಪಕ್ಷದ ಸದಸ್ಯರಾಗಿದ್ದರು.

ಅಧ್ಯಕ್ಷ ಸ್ಥಾನದ ಅವನತಿ

ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಅಮೆರಿಕ ಅಧ್ಯಕ್ಷಸ್ಥಾನದ ಅಧಿಕಾರ ಮತ್ತು ಘನತೆ ಗೌರವಗಳು ಅವನತಿಗೊಂಡು, ಕಾಂಗ್ರೆಸ್ ಸರ್ಕಾರದ ಅತ್ಯಂತ ಪ್ರಭಾವ ಶಾಲಿ ಶಾಖೆಯಾಗಿ ಬೆಳೆಯಿತು. ಅಂತರ್ಯುದ್ಧದ ನಂತರದ ಪುನರ್‌ನಿರ್ಮಾಣ ಸಮಯ ದಲ್ಲಿ ಕಾಗ್ರೆಸ್ ತನ್ನ ಅಧಿಕಾರವನ್ನು ಹೆಚ್ಚಿಸಿಕೊಂಡು ಸರ್ಕಾರದ ಸಮತೋಲನ ತಪ್ಪಿ ಹೋಯಿತು. ಅಧ್ಯಕ್ಷ ಆ್ಯಂಡ್ರೂ ಜಾನ್‌ಸನ್ ಮೇಲೆ ಅಪವಾದಗಳನ್ನು ಹೊರಿಸಿ ವಿಚಾರಣೆಗೆ ಗುರಿಪಡಿಸಿದ್ದು ಕಾರ್ಯಾಂಗವನ್ನು ಬಲಹೀನಗೊಳಿಸಿತು. ಅಧ್ಯಕ್ಷ ಗ್ರಾಂಟ್‌ನ ಅಸಮರ್ಥ ಆಡಳಿತದಲ್ಲಿ ಕಾಂಗ್ರೆಸ್ ಮತ್ತಷ್ಟು ಬಲಶಾಲಿಯಾದ ಶಾಖೆಯಾಯಿತು. ಅಧ್ಯಕ್ಷ ಹೇಯ್ಸ್ ತನ್ನ ಅಧಿಕಾರ ಚಲಾಯಿಸಲು ಪ್ರಯತ್ನಿಸಿದಾಗ ಅವನು ಪ್ರಭಾವಶಾಲಿ ಕಾಂಗ್ರೆಸ್ ನಾಯಕರನ್ನು ಎದುರಿಸಬೇಕಾಯಿತು. ಪರರಾಷ್ಟ್ರಗಳ ಬಗ್ಗೆ ಅಮೆರಿಕ ತಳೆದ ಧೋರಣೆ: ಪ್ರತ್ಯೇಕತೆ (isolationism). ಇದರಿಂದಾಗಿ ಅಧ್ಯಕ್ಷ ಪರರಾಷ್ಟ್ರಗಳೊಡನೆ ರಾಯಭಾರ ನಡೆಸುವಲ್ಲಿ ನಾಯಕತ್ವ ವಹಿಸುವ ಅವಕಾಶಗಳು ಕಡಿಮೆಯಾದವು. ಈ ಅವಧಿಯಲ್ಲಿ ಯಾವ ಅಧ್ಯಕ್ಷನೂ ಕಾಂಗ್ರೆಸ್ಸಿನ ಎರಡು ಮನೆಗಳಲ್ಲೂ (both Houses of Congress) ಬಹುಮತ ಪಡೆಯುದೆ ಹೋದರು. ರಿಪಬ್ಲಿಕನ್ನರು ಸೆನೆಟ್‌ನಲ್ಲಿ ಮತ್ತು ಡೆಮೊಕ್ರಾಟರು ಪ್ರಜಾಪ್ರತಿನಿಧಿ ಸಭೆಯಲ್ಲಿ ಬಹುಮತ ಗಳಿಸಿದ್ದರು. ಆದ್ದರಿಂದ ಅಧ್ಯಕ್ಷ ನಾದವನಿಗೆ ಯಾವ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಬೆಂಬಲ ದೊರೆಯುತ್ತಿರಲಿಲ್ಲ.

ಕೊನೆಯದಾಗಿ, ಆಗ ಪ್ರಚಲಿತವಾಗಿದ್ದ ರಾಜ್ಯಾಂಗದ ಪ್ರಕಾರ ಕಾಂಗ್ರೆಸ್ ಕಾಯಿದೆಗಳನ್ನು ಮಾಡುವ ಶಾಖೆ – ಆ ಕಾಯಿದೆಗಳನ್ನು ಜಾರಿಗೆ ತರುವುದು ಅಧ್ಯಕ್ಷನ ಜವಾಬ್ದಾರಿ. ಹೀಗೆ ಅಧ್ಯಕ್ಷನಾದವನು ಆಳ್ವಿದೆಯವನಲ್ಲದಿದ್ದರೂ, ತನ್ನ ಇತಿ ಮಿತಿಗಳನ್ನು ತಿಳಿದು ವರ್ತಿಸಬೇಕಾಗಿತ್ತು.

ಗಿಲಿಟಿನ ಯುಗದಲ್ಲಿ ರಾಜಕೀಯ

ಗ್ರ್ಯಾಂಟ್‌ನ ಅಧ್ಯಕ್ಷತೆ

ಮಾಜಿ ಮಹಾದಂಡನಾಯಕನಾಗಿದ್ದ ಗ್ರ್ಯಾಂಟ್‌ನಿಗೆ ರಾಜಕೀಯ ಅನುಭವ ಇರಲಿಲ್ಲ. ಕಾಂಗ್ರೆಸ್ ಇಚ್ಛೆಯನ್ನು ಈಡೇರಿಸುವುದೇ ಅಧ್ಯಕ್ಷನ ಪ್ರಥಮ ಕರ್ತವ್ಯವೆಂದು ಆತ ನಂಬಿದ್ದನು. ಅಲ್ಲದೆ ಹೊಗಳಿಕೆಗೆ ಅವನು ಮಾರುಹೋಗುತ್ತಿದ್ದನು. ಅವನ ಈ ದುರ್ಬಲತೆಯನ್ನು ರಾಜಕಾರಣಿಗಳು ಮತ್ತು ವರ್ತಕರು ಸ್ವಾರ್ಥಸಾಧನೆಗೆ ಬಳಸಿಕೊಂಡರು. ಇತರರ ಮಾತನ್ನು ಸುಲಭವಾಗಿ ನಂಬುತ್ತಿದ್ದ ಈತನ ಸ್ವಭಾವದ ಪ್ರಯೋಜನ ಪಡೆದವರು ಹೆಚ್ಚಿಗೆ ಅವನ ಸುತ್ತ ಮುತ್ತಲಿದ್ದ ಸಹಚರರು, ಶ್ವೇತಭವನದ ಸಿಬ್ಬಂದಿ ಮತ್ತು ಸಲಹೆಗಾರರು, ಸೈನ್ಯದಲ್ಲಿ ಅವನೊಡನಿದ್ದ ಸಹೋದ್ಯೋಗಿಗಳು. ಫೆಡರಲ್ ಸರ್ಕಾರದ ಹುದ್ದೆಗಳಿಗೆ ಆಯ್ಕೆ ಮಾಡುವುದು ಇವರ ಕೈಯಲ್ಲಿತ್ತು. ಒಳ್ಳೆಯ ಹುದ್ದೆಗಳನ್ನು ತಮ್ಮ ಬಂಧು ಬಳಗದವರಿಗೆ, ಸ್ನೇಹಿತರಿಗೆ ಮತ್ತು ಲಂಚ ಕೊಟ್ಟವರಿಗೆ ಮೀಸಲಾಗಿಟ್ಟಿದ್ದರು.

ಗ್ರ್ಯಾಂಟ್ ಎದುರಿಸಬೇಕಾಗಿದ್ದ ಮುಖ್ಯ ಆರ್ಥಿಕ ಸಮಸ್ಯೆ ಕಾಗದ ಹಣವನ್ನು ವ್ಯವಸ್ಥೆಗೊಳಿಸುವುದಕ್ಕೆ ಸಂಬಂಧಿಸಿತ್ತು. ಅಂತರ್ಯುದ್ಧದ ಸಮಯದಲ್ಲಿ ಕಾಂಗ್ರೆಸ್ ಅಗಾಧ ಪ್ರಮಾಣದ ಕಾಗದ ಹಣವನ್ನು ಚಲಾವಣೆಗೆ ತಂದಿತ್ತು. ಈ ಹಣಕ್ಕೆ 'ಗ್ರೀನ್ ಬ್ಯಾಕ್ಸ್' (Green backs) ಎಂದು ಅಡ್ಡ ಹೆಸರಿತ್ತು. ಇದಕ್ಕೆ ಚಿನ್ನದ ಬೆಂಬಲವಿರಲಿಲ್ಲ. ಯುದ್ಧಾನಂತರ ಕಾಂಗ್ರೆಸ್ ಈ ಹಣವನ್ನು ಚಲಾವಣೆಯಿಂದ ತೆಗೆಯಲು ಪ್ರಾರಂಭಿಸಿತು. ಇದು ಸಾಲ ಪಡೆದವರಿಗೆ – ಪಶ್ಚಿಮ ಸಂಸ್ಥಾನಗಳ ಬ್ಯಾಂಕುಗಳು, ರೈತರು, ರೈಲುಮಾರ್ಗ ನಿರ್ಮಾಣ ಮಾಡುತ್ತಿದ್ದ ಕಂಪನಿಗಳಿಗೆ – ಇಷ್ಟವಾಗಲಿಲ್ಲ. ಏಕೆಂದರೆ ಅವರು ತಮ್ಮ ಸಾಲವನ್ನು ಈ ಕಾಗದದ ಹಣದಿಂದಲೇ ಮರುಪಾವತಿ ಮಾಡಬೇಕೆಂದಿದ್ದರು. ಆದರೆ ಸಾಲ ಕೊಟ್ಟವರು – ಮುಖ್ಯವಾಗಿ ಪೂರ್ವಸಂಸ್ಥಾನಗಳ ಬ್ಯಾಂಕಿನವರು, ಹಣಕಾಸಿನ ವ್ಯವಹಾರ ಮಾಡುವವರು – ತಾವು ಕೊಟ್ಟ ಹಣದ ಪೂರ್ಣ ಬೆಲೆಯನ್ನು ಪಡೆಯಲು ಇಚ್ಛಿಸಿ ಕಡಿಮೆ ಬೆಲೆಯ ಕಾಗದದ ಹಣವನ್ನು ಚಲಾವಣೆಯಿಂದ ತೆಗೆದುಹಾಕಲು ಒತ್ತಾಯಪಡಿಸಿದರು. ಗ್ರ್ಯಾಂಟ್ ಚುನಾವಣೆಯಲ್ಲಿ ತನಗೆ ಬೆಂಬಲ ನೀಡಿದ್ದ ಪೂರ್ವಸಂಸ್ಥಾನಗಳ ಹಣವಂತರನ್ನು ಸಂತುಷ್ಟಗೊಳಿಸಲು ಆಸೆ ಇದ್ದರೂ 'ಗ್ರೀನ್ ಬ್ಯಾಕ್' ಹಣದ ಚಲಾವಣೆಯನ್ನು ರದ್ದು ಮಾಡಿದರೆ ಸಾಲ ಪಡೆದವರ ದ್ವೇಷ ಕಟ್ಟಿಕೊಳ್ಳಬೇಕಾಗುತ್ತದೆ ಎಂದು ಹೆದರಿದನು. ಕಡೆಗೆ ಒಂದು ಸಂಧಾನವನ್ನು ಏರ್ಪಡಿಸಿ ಅದರ

ಪ್ರಕಾರ ಗ್ರೀನ್ ಬ್ಯಾಕ್ ಹಣದ ಚಲಾವಣೆಯನ್ನು ನಿಲ್ಲಿಸದೆ ಮುಂದೆ ಈ ಹಣವನ್ನು ಚಿನ್ನದಿಂದ ಬೆಂಬಲಿಸುವ ವ್ಯವಸ್ಥೆ ಮಾಡಿದನು.

ಮತ್ತೊಂದು ಮುಖ್ಯ ಆರ್ಥಿಕ ಸಮಸ್ಯೆ ಅಧಿಕ ಪ್ರಮಾಣದ ಸುಂಕವನ್ನು ಕುರಿತದ್ದಾಗಿತ್ತು. ಯುದ್ಧ ಕಾಲದ ತುರ್ತು ಪರಿಸ್ಥಿತಿಯನ್ನು ಎದುರಿಸಲು ಅಧಿಕ ಪ್ರಮಾಣದ ಸುಂಕವನ್ನು ಕಾಂಗ್ರೆಸ್ ಜಾರಿಗೆ ತಂದಿತ್ತು. ಯುದ್ಧ ಮುಗಿದ ಮೇಲೂ ಸುಂಕವನ್ನು ಅದೇ ರೀತಿಯಲ್ಲಿ ಮುಂದುವರಿಸುವಂತೆ ಕೈಗಾರಿಕೆ ಮತ್ತು ಉತ್ಪಾದನಾ ಸಂಸ್ಥೆಗಳು ಒತ್ತಾಯಪಡಿಸಿದವು. ಏಕೆಂದರೆ ಹೆಚ್ಚು ಸುಂಕವಿದ್ದರೆ ಬೇರೆ ದೇಶಗಳ ವಸ್ತುಗಳು ಆಮದು ಆಗುವುದು ಕಡಿಮೆಯಾಗಿ ತಾವು ಉತ್ಪಾದಿಸುವ ವಸ್ತುಗಳಿಗೆ ಬೇಡಿಕೆ ಹೆಚ್ಚಿ ಅದರಿಂದ ಲಾಭ ಪಡೆಯಬಹುದೆಂದು ವರ್ತಕರ ಅಭಿಪ್ರಾಯ. ಈ ಶ್ರೀಮಂತವರ್ಗದವರು ಚುನಾವಣೆಯಲ್ಲಿ ಗ್ರ್ಯಾಂಟ್‌ನನ್ನು ಬೆಂಬಲಿಸಿದ್ದರು. ಅವರ ಉಪಕಾರ ತೀರಿಸಲು ವರ್ತಕರ ಅಭಿಪ್ರಾಯದಂತೆ, ಇತರರ ಆಕ್ಷೇಪಣೆಗಳನ್ನು – ಮುಖ್ಯವಾಗಿ ಪಶ್ಚಿಮ ಪ್ರಾಂತಗಳ ರೈತರದ್ದು – ಕಡೆಗಣಿಸಿ ಸುಂಕವನ್ನು ಕಡಿಮೆ ಮಾಡದೆ, ೧೮೭೦ರಲ್ಲಿ ಇನ್ನೂ ಕೆಲವು ಉತ್ಪಾದನಾ ವಸ್ತುಗಳ ಮೇಲೆ ಸುಂಕವನ್ನು ಏರಿಸಲಾಯಿತು.

ಅಧ್ಯಕ್ಷ ಗ್ರ್ಯಾಂಟ್‌ನ ಆಡಳಿತದ ನ್ಯೂನತೆಯೆಂದರೆ ಫೆಡರಲ್ ಸರ್ಕಾರದಲ್ಲಿ ನಡೆಯುತ್ತಿದ್ದ ದುರಾಚಾರಗಳು. ಅವನ ಎಂಟು ವರ್ಷಗಳ ಆಡಳಿತದ ಅವಧಿಯಲ್ಲಿ ಉನ್ನತ ಅಧಿಕಾರ ಸ್ಥಾನಗಳಲ್ಲಿದ್ದವರು ತಮ್ಮ ಅಧಿಕಾರ ಮತ್ತು ಪ್ರಭಾವಗಳನ್ನು ತಮ್ಮ ಸಂಪತ್ತನ್ನು ಹೆಚ್ಚಿಸುವುದಕ್ಕಾಗಿ ಉಪಯೋಗಿಸಿಕೊಂಡರು. ವರ್ತಕರು ಮತ್ತು ಉದ್ಯಮಕಾರರು ಸರ್ಕಾರೀ ಅಧಿಕಾರಿಗಳನ್ನು ತಮ್ಮ ಸ್ವಂತ ಹಿತ ಸಾಧಿಸಿಕೊಳ್ಳಲು ಶೋಷಣೆ ಮಾಡುತ್ತಿದ್ದರು. ಲಂಚ ರುಷುವತ್ತುಗಳು ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಹಾಸು ಹೊಕ್ಕಾಗಿದ್ದವು. ಇದರ ಪರಿಣಾಮವಾಗಿ ಜನರು ಸರ್ಕಾರದಲ್ಲಿ ಭರವಸೆ ಕಳೆದುಕೊಂಡರು. ಗ್ರ್ಯಾಂಟ್‌ನ ಅಧಿಕಾರದ ಅವಧಿಯಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರ ಅಂತರ್ಯುದ್ಧದ ನಂತರ ನೀತಿನಿಯಮಗಳು ಸಡಿಲಗೊಂಡಿದ್ದರಿಂದ ಉಂಟಾದ ಪರಿಸ್ಥಿತಿ, ಔದ್ಯೋಗೀಕರಣ ಮತ್ತು ಶ್ರೀಮಂತ ವರ್ಗದ ಏಳಿಗೆಗೆ ಕಾರಣವಾದವು. ಎಂದೂ ಇಲ್ಲದ ರೀತಿಯಲ್ಲಿ ಅಮೆರಿಕನ್ನರು ಹಣದ ಆರಾಧಕರಾದರು. ಜನಗಳಿಗೆ ಪ್ರಾಪಂಚಿಕ ವಸ್ತುಗಳನ್ನು ಶೇಖರಿಸುವ ಹುಚ್ಚು ಹಿಡಿಯಿತು. ಇಂಥ ವಾತಾವರಣದಲ್ಲಿ ರಾಜಕಾರಣಿಗಳು ಲಂಚ ರುಷುವತ್ತುಗಳ ಆಮಿಷಕ್ಕೆ ಒಳಗಾದರು. ಇನ್ನು ಕೆಲವರು, ಗ್ರ್ಯಾಂಟ್‌ನೂ ಸೇರಿದಂತೆ, ತಮ್ಮ ಅಧಿಕಾರವನ್ನು ದುರುಪಯೋಗ ಮಾಡದೆ, ಭ್ರಷ್ಟಾಚಾರದಿಂದ ಹಣಗಳಿಸದೆ ಹೋದರೂ ಅವರಿಗೆ ಗೊತ್ತಿಲ್ಲದಂತೆ, ತಮ್ಮ ಸರಳ ಸ್ವಭಾವದಿಂದ ಮತ್ತು ಅಜಾಗರೂಕತೆಯಿಂದ ಇನ್ನೊಬ್ಬರ ದುರಾಚಾರ, ಅಪನಿಂದೆ ಮತ್ತು ಇತರ ನ್ಯಾಯಬಾಹಿರ ವ್ಯವಹಾರಗಳಲ್ಲಿ ಪರೋಕ್ಷವಾಗಿ ಭಾಗವಹಿಸಿ ಅಪಕೀರ್ತಿಗೆ ಗುರಿಯಾಗುತ್ತಿದ್ದರು.

ಗ್ರಾಂಟ್‌ನ ಅಧಿಕಾರದ ಅವಧಿಯಲ್ಲಿ ಜರುಗಿದ ಅತ್ಯಂತ ದೊಡ್ಡ ಭ್ರಷ್ಟಾಚಾರದ ಸಂಗತಿಯೆಂದರೆ 'ಫಿಸ್ಕ್-ಗೌಲ್ಡ್' (Fisk-Gould) ಹಗರಣ ಸಟ್ಟಾ ವ್ಯಾಪಾರಿಗಳಾಗಿದ್ದ ಜೇ ಗೌಲ್ಡ್ ಮತ್ತು ಜಿಮ್ ಫಿಸ್ಕ್ ಇಬ್ಬರೂ ಕೂಡಿ ರಾಷ್ಟ್ರದ ಒಟ್ಟು ಚಿನ್ನದ ಸಂಗ್ರಹವನ್ನು ತಮ್ಮ ನಿಯಂತ್ರಣಕ್ಕೆ ಒಳಪಡುವಂತೆ ಮಾಡುವ ಒಂದು ಒಳಸಂಚು ಹೂಡಿದರು. ಇಬ್ಬರೂ ಕೂಡಿ ಸಿಗಬಹುದಾದ ಎಲ್ಲ ಚಿನ್ನವನ್ನೂ ಕೊಂಡು ದಾಸ್ತಾನು ಮಾಡಿ, ಆ ಚಿನ್ನವನ್ನು ಬೆಲೆ ಏರುವ ತನಕ ಹಿಡಿದಿಟ್ಟುಕೊಂಡು, ಅತಿ ಹೆಚ್ಚಿನ ಬೆಲೆ ಬಂದಾಗ ಮಾರಿ ಅಪಾರ ಲಾಭ ಗಳಿಸುತ್ತಿದ್ದರು. ಅಧ್ಯಕ್ಷ ಗ್ರಾಂಟ್‌ನ ಭಾವಮೈದುನನ ಮುಖಾಂತರ ಗ್ರಾಂಟ್‌ನ ಮೇಲೆ ಪ್ರಭಾವ ಬೀರಿ ಅವನು ಸರ್ಕಾರದ ವಶದಲ್ಲಿದ್ದ ಚಿನ್ನವನ್ನು ಮಾರದೆ ದಾಸ್ತಾನು ಮಾಡಿ ಇಟ್ಟುಕೊಳ್ಳುವಂತೆ ಇವರು ಮಾಡಿದ ಸಲಹೆಯನ್ನು ಒಪ್ಪಿಕೊಳ್ಳುವಂತೆ ಮಾಡಿದರು. ಗ್ರಾಂಟ್‌ಗೆ ಇವರ ಹುನ್ನಾರು ತಿಳಿಯದೆ ಅದರಂತೆ ನಡೆದುಕೊಂಡನು. ೧೮೬೯ರ ಸೆಪ್ಟೆಂಬರ್ ತಿಂಗಳಲ್ಲಿ ಫಿಸ್ಕ್-ಗೌಲ್ಡ್‌ರ ಬೃಹತ್ ಪ್ರಮಾಣದ ವಂಚನೆ ಬಯಲಾಯಿತು. ಆ ದಿನವನ್ನು 'ಕಪ್ಪು ಶುಕ್ರವಾರ' (Black Friday) ಎಂದು ಕರೆಯಲಾಯಿತು. ಆ ದಿನ ನ್ಯೂಯಾರ್ಕಿನ ಸಟ್ಟಾ ಮಾರುಕಟ್ಟೆಯಲ್ಲಿ ಬಂಗಾರ ಬೆಲೆ ಏರಿಕೆಯಿಂದಾಗಿ ಸಾರ್ವತ್ರಿಕ ದಿಗಿಲು ಪ್ರಾರಂಭವಾಗಿ ಆರ್ಥಿಕ ಪರಿಸ್ಥಿತಿ ಅವ್ಯವಸ್ಥೆಗೊಳ್ಳುವ ಹಂತಕ್ಕೆ ತಲುಪಿತ್ತು. ಕಡೆಗೆ ಗ್ರಾಂಟ್‌ನಿಗೆ ಫಿಸ್ಕ್-ಗೌಲ್ಡ್‌ರ ಒಳಸಂಚಿನ ಅರಿವಾಗಿ ತಕ್ಷಣವೇ ೪ ಮಿಲಿಯನ್ ಡಾಲರ್ ಮೊತ್ತದ ಚಿನ್ನವನ್ನು ಸರ್ಕಾರದ ದಾಸ್ತಾನಿನಿಂದ ಬಿಡುಗಡೆ ಮಾಡಿ ಮಾರುಕಟ್ಟೆಯನ್ನು ಭದ್ರಗೊಳಿಸಿದನು. ಆದರೆ ಅಷ್ಟರೊಳಗಾಗಿ ವರ್ತಕರಿಗೆ ಮತ್ತು ಉದ್ಯಮಗಾರರಿಗೆ ಬಹಳ ಹಾನಿಯುಂಟಾಗಿತ್ತು.

೧೮೭೨ರ ಚುನಾವಣೆ: ಹೊಸ ಪಕ್ಷದ ಉದಯ

ಗ್ರಾಂಟ್‌ನ ಪುನರಾಗಮನ

ಅಧ್ಯಕ್ಷ ಗ್ರಾಂಟ್‌ನ ಅಧಿಕಾರದ ಮೊದಲನೆಯ ಅವಧಿಯ ಕೊನೆಯ ಹಂತದಲ್ಲಿ ಅಸಂತುಷ್ಟರಾದ ಮತ್ತು ಗ್ರಾಂಟ್ ಮೇಲಿನ ನಂಬಿಕೆ ಕಳೆದುಕೊಂಡ ಕೆಲವು ರಿಪಬ್ಲಿಕನ್ನರು ಮತ್ತು ಡೆಮೊಕ್ರಾಟರು ಕೂಡ ಒಂದು ಹೊಸ ರಾಜಕೀಯ ಪಕ್ಷವನ್ನು ಹುಟ್ಟುಹಾಕಿದರು. ಆ ಪಕ್ಷವನ್ನು 'ಲಿಬರಲ್ ರಿಪಬ್ಲಿಕನ್ ಪಕ್ಷ' (Liberal Republican Party) ಎಂದು ಕರೆದರು. ಅಧ್ಯಕ್ಷ ಗ್ರಾಂಟ್‌ನು ಆಡಳಿತವನ್ನು ಸುವ್ಯವಸ್ಥಿತಗೊಳಿಸುವುದರ ಬಗ್ಗೆ ಆಸಕ್ತಿ ವಹಿಸದೆ ಹೋದುದು, ತೀವ್ರಗಾಮಿ ಪುನರ್‌ನಿರ್ಮಾಣ ಯೋಜನೆಗಳು, ಅಪನಿಂದೆಗಳು ಮತ್ತು ಭ್ರಷ್ಟಾಚಾರಗಳಿಂದ ರೋಸಿ ಹೋಗಿದ್ದ ರಿಪಬ್ಲಿಕನ್ನರು, ಡೆಮೊಕ್ರಾಟರು ಮತ್ತು ಸುಧಾರಕರು ಹೆಚ್ಚಾಗಿ ಈ ಹೊಸಪಕ್ಷವನ್ನು ಸೇರಿದರು. ಇವರ ಸದಸ್ಯರು ಒಮ್ಮತದಿಂದ ಗ್ರಾಂಟ್‌ನನ್ನು ವಿರೋಧಿಸಿದರು. ಆದರೆ ಇತರ ವಿಷಯಗಳಲ್ಲಿ ಅವರು ಒಗ್ಗಟ್ಟು ತೋರಲಿಲ್ಲ. ಕೆಲವರು ಸುಂಕ ಕಡಿಮೆ ಮಾಡಬೇಕೆಂದರೆ ಇನ್ನು ಕೆಲವರು ತಮ್ಮ ಸ್ವಂತ ಕೈಗಾರಿಕೆ/ಉದ್ಯಮಗಳ ರಕ್ಷಣೆ ಮುಖ್ಯವಾದುದು ಎಂದು ವಾದಿಸಿದರು. 'ಗ್ರೀನ್ ಬ್ಯಾಕ್'

ಕಾಗದದ ಹಣದ ಚಲಾವಣೆಯನ್ನು ಹೆಚ್ಚಿಸಬೇಕೆಂದು ಕೆಲವರು ವಾದಿಸಿದರೆ ಮತ್ತೆ ಕೆಲವರು ಆ ಹಣವನ್ನು ಸಂಪೂರ್ಣವಾಗಿ ರದ್ದು ಮಾಡಬೇಕೆಂದು ಆಗ್ರಹ ಪಡಿಸಿದರು. ಹೀಗೆ ಅನೇಕ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ಹೊಸ ಪಕ್ಷ ಹುಟ್ಟುತ್ತಲೇ ನಿತ್ರಾಣದಿಂದ ನರಳಿತು.

೧೮೭೨ರ ಚುನಾವಣೆಯಲ್ಲಿ ಲಿಬರಲ್ ರಿಪಬ್ಲಿಕನ್ ಪಕ್ಷದವರು ಅಧ್ಯಕ್ಷ ಸ್ಥಾನಕ್ಕೆ ಹೊರೇಸ್ ಗ್ರೀಲಿ (Horace Greely)ಯನ್ನು ಗ್ರಾಂಟ್‌ನ ಎದುರಾಳಿಯಾಗಿ ಸ್ಪರ್ಧಿಸಲು ನಿಲ್ಲಿಸಿದರು. ಗ್ರೀಲಿ ಹೆಸರಾಂತ ವೃತ್ತಪತ್ರಿಕಾ ಸಂಪಾದಕ ಮತ್ತು ಗುಲಾಮಗಿರಿಯನ್ನು ರದ್ದುಗೊಳಿಸುವುದರಲ್ಲಿ ಮಹತ್ತರ ಪಾತ್ರ ವಹಿಸಿದ್ದನು. ಆದರೆ ಸ್ವಭಾವತಃ ಅತಿರೇಕದ ವರ್ತನೆಯವನಾಗಿದ್ದನು. ಇವನನ್ನು ಬಿಟ್ಟರೆ ಗ್ರಾಂಟ್‌ನನ್ನು ಎದುರಿಸುವ ಸಾಮರ್ಥ್ಯವುಳ್ಳ ಬೇರೆ ಅಭ್ಯರ್ಥಿ ಇಲ್ಲವಾದ್ದರಿಂದ ಡೆಮೊಕ್ರಾಟರು ಲಿಬರಲ್ ರಿಪಬ್ಲಿಕನ್ನರೊಡನೆ ಸೇರಿ ಗ್ರೀಲಿಯನ್ನು ಬೆಂಬಲಿಸಿದರು. ಲಿಬರಲ್ ರಿಪಬ್ಲಿಕನ್ನರು ಮತ್ತು ಡೆಮೊಕ್ರಾಟರ ಗೊಂದಲ ಪರಿಸ್ಥಿತಿಗೆ ಹೋಲಿಸಿದರೆ ಮೂಲ ರಿಪಬ್ಲಿಕನ್ ಪಕ್ಷ ತನ್ನ ಉದ್ದೇಶಗಳನ್ನು – ಹೆಚ್ಚು ಪ್ರಮಾಣದ ಸುಂಕ ಮತ್ತು ತೀವ್ರಗಾಮಿ ಪುನರ್‌ನಿರ್ಮಾಣ – ಪ್ರತಿಪಾದಿಸಿ ಶ್ರೀಮಂತ ವರ್ಗದ ಬೆಂಬಲ ಪಡೆದರು. ಉದ್ಯೋಗಸ್ಥರು ಮತ್ತು ಬ್ಯಾಂಕರುಗಳು ಗ್ರಾಂಟ್‌ನ ಚುನಾವಣಾ ಪ್ರಚಾರಕ್ಕೆ ಅಪಾರ ಹಣವನ್ನು ಸುರಿದರು. ಚುನಾವಣೆಯಲ್ಲಿ ಗ್ರಾಂಟ್ ತನ್ನ ಎದುರಾಳಿಯನ್ನು ತನ್ನ ಮೊದಲ ಚುನಾವಣೆಗಿಂತಲೂ ಹೆಚ್ಚಿನ ಮತಗಳ ಅಂತರದಿಂದ ಸೋಲಿಸಿ, ಎರಡನೆಯ ಬಾರಿಗೆ ಅಧ್ಯಕ್ಷನಾದನು. ಸೋಲನ್ನು ಅನುಭವಿಸಿದ ಲಿಬರಲ್ ರಿಪಬ್ಲಿಕನ್ ಪಕ್ಷ ಚದುರಿ ಅವಸಾನಗೊಂಡಿತು.

ಗ್ರಾಂಟ್‌ನ ಅಧಿಕಾರದ ಎರಡನೆಯ ಅವಧಿಯಲ್ಲಿ ಸರ್ಕಾರದಲ್ಲಿ ಇನ್ನೂ ಹೆಚ್ಚಿನ ದುರಾಚಾರ ಮತ್ತು ಅಪನಿಂದೆಗಳು ಬೆಳಕಿಗೆ ಬಂದವು. ಇಂಡಿಯನ್ ವ್ಯವಹಾರಗಳ ಆಡಳಿತ ಕೇಂದ್ರ (Bureau of Indian Affairs)ದಲ್ಲಿ ಭ್ರಷ್ಟಾಚಾರ ತುಂಬಿತ್ತು ಮತ್ತು ಆದಾಯ ತೆರಿಗೆಯ ಅಧಿಕಾರಿಗಳು ಲಂಚ ತೆಗೆದುಕೊಳ್ಳುವುದನ್ನು ಪತ್ತೆ ಹಚ್ಚಲಾಯಿತು. ಆಗ ನಡೆದ ಅತಿ ದೊಡ್ಡ ಭ್ರಷ್ಟಾಚಾರದ ಪ್ರಕರಣವೆಂದರೆ 'ಕ್ರೆಡಿಟ್ ಮೊಬೈಲಿಯರ್' ಹಗರಣ. ಟ್ರಾನ್ಸ್‌ಕಾಂಟಿನೆಂಟಲ್ ರೈಲ್ವೆ ಮಾರ್ಗವನ್ನು ನಿರ್ಮಾಣ ಮಾಡುತ್ತಿದ್ದ ಕಂಪನಿ ಕಾಂಗ್ರೆಸ್ ಸದಸ್ಯರು ಮತ್ತು ಇತರ ಉನ್ನತ ಅಧಿಕಾರಿಗಳಿಗೆ ಲಂಚ ಕೊಟ್ಟು ತನ್ನ ಲಾಭದ ಹಣ ಯಾವ ರೀತಿಯಲ್ಲಿ ಉಪಯೋಗಿಸಲ್ಪಡುತ್ತಿದೆ ಎನ್ನುವುದನ್ನು ತನಿಖೆ ಮಾಡುವುದನ್ನು ತಪ್ಪಿಸಿದರು. ಲಂಚ ಪಡೆದವರಲ್ಲಿ ಗ್ರಾಂಟ್‌ನ ಆಡಳಿತದ ಎರಡು ಅವಧಿಯ ಉಪಾಧ್ಯಕ್ಷರುಗಳು (ಸೆಯ್‌ಮರ್ ಮತ್ತು ಗ್ರಿಸ್ಲಿ) ಸೇರಿದ್ದರು! ಭ್ರಷ್ಟಾಚಾರ ಫೆಡರಲ್ ಸರ್ಕಾರಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಮಹಾನಗರಗಳ ರಾಜಕೀಯ 'ರಾಜಕೀಯ ಯಂತ್ರ'ಗಳೆಂದು ಕುಖ್ಯಾತಿ ಪಡೆದಿದ್ದ ಪ್ರಬಲ ಗುಂಪುಗಳ ಸರ್ವಾಧಿಕಾರಕ್ಕೆ

ಒಳಪಟ್ಟಿತ್ತು. ಈ ಗುಂಪುಗಳು ಲಂಚ ರುಷುವತ್ತುಗಳಿಂದ ತಮ್ಮ ಅಧಿಕಾರವನ್ನು ಬಲಪಡಿಸಿಕೊಂಡಿದ್ದವು. ಅತಿ ಕುಖ್ಯಾತಿ ಪಡೆದಿದ್ದ ರಾಜಕೀಯ ಗುಂಪು ಎಂದರೆ ನ್ಯೂಯಾರ್ಕಿನ 'ಟ್ವೀಡ್ ರಿಂಗ್' (Tweed Ring) ಎನ್ನುವ ಭ್ರಷ್ಟಾಚಾರಿಗಳ ಗುಂಪು. ಅದರ ನಾಯಕ ವಿಲಿಯಂ ಟ್ವೀಡ್ (William Tweed). ಇವನು 'ಡೆಮೊಕ್ರಾಟಿಕ್ ಟಮ್ಮಾನಿ ಹಾಲ್ ಯಂತ್ರ' (Democratic Tommany Hall Machine)ದ ಯಜಮಾನನಾಗಿದ್ದನು. ಈ ಗುಂಪು ಲಂಚ ರುಷುವತ್ತು ಮತ್ತು ಭಯೋತ್ಪಾದಕ ವಿಧಾನಗಳಿಂದ ಸರ್ವಾಧಿಕಾರವನ್ನು ನಡೆಸಿತ್ತು. ೧೮೭೧ರಲ್ಲಿ ಈ ಗುಂಪನ್ನು ವಿಚಾರಣೆಗೆ ಗುರಿ ಮಾಡಿ, ದುಷ್ಕೃತ್ಯಗಳನ್ನು ಬಯಲಿಗೆಳೆದು, ವಿಲಿಯಂ ಟ್ವೀಡ್ ಮತ್ತು ಇತರ ತಪ್ಪಿತಸ್ಥರನ್ನು ಕಾರಾಗೃಹಕ್ಕೆ ಕಳುಹಿಸಲಾಯಿತು.

ಅಧ್ಯಕ್ಷ ಗ್ರಾಂಟ್‌ನ ಅಧಿಕಾರದ ಎರಡನೆಯ ಅವಧಿಯಲ್ಲಿ ರಾಷ್ಟ್ರವು ವಿಪತ್ಕಾರಕ ಆರ್ಥಿಕ ದುರವಸ್ಥೆಗೆ ಗುರಿಯಾಯಿತು. ೧೮೫೦ರಿಂದ ಉತ್ತರ ಮತ್ತು ಪಶ್ಚಿಮ ಸಂಸ್ಥಾನಗಳಲ್ಲಿ ಆರ್ಥಿಕ ಅಭಿವೃದ್ಧಿ ಏಕಪ್ರಕಾರವಾಗಿ ಸಾಗಿತ್ತು. ಅಂತರ್ಯುದ್ಧಾನಂತರ ಆರ್ಥಿಕ ಸಮೃದ್ಧಿಯ ಕಾಲದಲ್ಲಿ ಬೆಳವಣಿಗೆ ತ್ವರಿತಗತಿಯಲ್ಲಿ ಮುಂದುವರಿಯಿತು. ಸಾವಿರಾರು ಹೊಸ ಉದ್ಯಮಗಳು ಪ್ರಾರಂಭವಾದವು. ರೈಲುಮಾರ್ಗಗಳು ನಿರ್ಮಿತವಾಗಿ ದೇಶದ ವಿವಿಧ ಪ್ರಾಂತಗಳ ನಡುವೆ ಸಂಪರ್ಕ ಏರ್ಪಟ್ಟು ಆರ್ಥಿಕ ವ್ಯವಸ್ಥೆ ವಿಶಾಲಗೊಂಡಿತು. ಆದರೆ ೧೮೭೧ರ ಹೊತ್ತಿಗೆ ಮಾರುಕಟ್ಟೆಗಳ ಕೊರತೆಯಿಂದಾಗಿ ಇವುಗಳ ನಿರ್ವಹಣೆ ಕಷ್ಟವಾಗುತ್ತಾ ಹೋಯಿತು. ವ್ಯಾಪಾರದಲ್ಲಿ ರಫ್ತು ಮಾಡುವುದಕ್ಕಿಂತ ಆಮದು ಮಾಡಿಕೊಳ್ಳುವುದು ಹೆಚ್ಚಾಗಿ ರಾಷ್ಟ್ರದ ಚಿನ್ನದ ದಾಸ್ತಾನು ಕರಗುತ್ತ ಹೋಯಿತು. ೧೮೭೩ರ ಸೆಪ್ಟೆಂಬರ್ ತಿಂಗಳಲ್ಲಿ ರಾಷ್ಟ್ರದ ಪ್ರಮುಖ ಬ್ಯಾಂಕ್ 'ಜೆ ಕೂಕ್ ಮತ್ತು ಕಂಪನಿ' (Jay Cooke and company) ದಿವಾಳಿ ಎದ್ದಿತು. ಆ ಪ್ರಬಲ ಆರ್ಥಿಕ ಸಂಸ್ಥೆಯ ಅಧಃಪತನ ಇತರ ಉದ್ಯಮಗಳ ಅಧೋಗತಿಗೆ ಕಾರಣವಾಯಿತು. ಐದು ನೂರು ಸಾವಿರ ಜನರು ಕೆಲಸ ಕಳೆದುಕೊಂಡರು. ಹೀಗೆ ೧೮೭೩ರಲ್ಲಿ ಪ್ರಾರಂಭವಾದ ಆರ್ಥಿಕ ದುಸ್ಥಿತಿ ಆ ದಶಕದ ಕೊನೆಯವರೆಗೂ ಮುಂದುವರಿಯಿತು.

೧೮೭೬ರ ಚುನಾವಣೆ

ಗ್ರಾಂಟ್‌ನ ಆಡಳಿತ ಕಾಲದ ಅಪನಿಂದೆಗಳು ಮತ್ತು ಭ್ರಷ್ಟಾಚಾರಗಳ ಪರಿಣಾಮವಾಗಿ ೧೮೭೪ರ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷ ಕಾಂಗ್ರೆಸ್ ಮೇಲಿನ ನಿಯಂತ್ರಣವನ್ನು ಕಳೆದುಕೊಂಡಿತು. ಅಧ್ಯಕ್ಷ ಗ್ರಾಂಟ್‌ನ ಪ್ರತಿಷ್ಠೆ ಗೌರವಗಳು ಇದರಿಂದಾಗಿ ಕ್ಷೀಣಿಸುತ್ತ ಹೋದವು. ಅವನ ಆಡಳಿತಕಾಲದ ಭ್ರಷ್ಟಾಚಾರಗಳಿಗೆ 'ಗ್ರಾಂಟಿಸಮ್' (Grantism) ಎಂದು ಹೆಸರಿಟ್ಟಿದ್ದರು. ಇಷ್ಟಾದರೂ ರಿಪಬ್ಲಿಕನ್ನರು ಅವನನ್ನು ೧೮೭೬ರ ಚುನಾವಣೆಯಲ್ಲಿ ಮೂರನೆಯ ಬಾರಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವಂತೆ ಸೂಚಿಸಿದ್ದರು. ಕಡೆಗೆ

ಅಪಪ್ರಚಾರವನ್ನು ತಪ್ಪಿಸಿಕೊಳ್ಳಲು ಯಾವ ಅಪವಾದಗಳು ಇಲ್ಲದ ರುದರ್‌ಫೋರ್ಡ್ ಹೇಯ್ಸ್ (Rutherford Hayes)ನನ್ನು ಅಧ್ಯಕ್ಷಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮಕರಣ ಮಾಡಿದರು. ಹೇಯ್ಸ್ ಒಹಾಯೊ ಸಂಸ್ಥಾನದಲ್ಲಿ ಮೂರು ಬಾರಿ ಗವರ್ನರ್ ಆಗಿದ್ದನು. ಡೆಮೊಕ್ರಾಟರು ಕೂಡ ಭ್ರಷ್ಟಾಚಾರ ಮತ್ತು ಅಪನಿಂದೆಗಳಿಂದ ದೂರವಿದ್ದು, ಸಚ್ಚಾರಿತ್ರ್ಯವುಳ್ಳ ಅಭ್ಯರ್ಥಿ ನ್ಯೂಯಾರ್ಕಿನ ಗವರ್ನರ್ ಸಾಮ್ಯುಯಲ್ ಟಿಲ್‌ಡನ್ (Samuel Tilden)ನನ್ನು ನೇಮಿಸಿದರು. ಟಿಲ್‌ಡನ್ ೧೮೭೧ರಲ್ಲಿ ಟ್ವೀಡ್‌ನ ಗೂಂಡಾಗಿರಿಯನ್ನು ಹತ್ತಿಕ್ಕುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದನು. ಈ ಚುನಾವಣೆಯ ವಿಶಿಷ್ಟತೆ ಎಂದರೆ ಎರಡು ಪಕ್ಷಗಳ ಅಭ್ಯರ್ಥಿಗಳಲ್ಲಿ ಪರಸ್ಪರವಾಗಿ ಅವರ ಧ್ಯೇಯ ಮತ್ತು ಧೋರಣೆಗಳಲ್ಲಿ ಹೆಚ್ಚಿನ ವ್ಯತ್ಯಾಸಗಳೇನೂ ಇರಲಿಲ್ಲ. ಇವರಿಬ್ಬರೂ ಪುನರ್‌ನಿರ್ಮಾಣ ಕಾರ್ಯವನ್ನು ನಿಲ್ಲಿಸಲು ಕರೆಕೊಟ್ಟರು. ಸುಂಕದ ಸಮಸ್ಯೆಯ ಬಗ್ಗೆ ಇಬ್ಬರೂ ಯಾವ ನಿರ್ದಿಷ್ಟ ಅಭಿಪ್ರಾಯ ನೀಡಲಿಲ್ಲ. ಇಬ್ಬರೂ ಸರ್ಕಾರಿ ಇಲಾಖೆಗಳನ್ನು ಸುಧಾರಣೆಗೊಳಿಸಿ, ಅಧಿಕಾರಿಗಳ ಭ್ರಷ್ಟಾಚಾರ ನಿಲ್ಲಿಸಿ ಸರ್ಕಾರವನ್ನು ಹೆಚ್ಚು ದಕ್ಷತೆಯಿಂದ ಕೆಲಸ ಮಾಡುವಂತೆ ಮಾಡುವುದಾಗಿ ಭರವಸೆ ನೀಡಿದರು.

ಚುನಾವಣೆಯಲ್ಲಿ ಹೇಯ್ಸ್ ಮತ್ತು ಟಿಲ್‌ಡನ್ ಇಬ್ಬರಿಗೂ ಮತಗಳ ಸಂಖ್ಯೆಯ ಅಂತರ ಅತಿ ಕಿರಿದಾಗಿತ್ತು. ಹಾಗಾಗಿ ಚುನಾವಣೆಯ ಫಲಿತಾಂಶ ನಿರ್ಣಯವಾಗಲಿಲ್ಲ. ಟಿಲ್‌ಡನ್‌ಗೆ ಹೆಚ್ಚಿನ ಮತಗಳು ದೊರಕಿದ್ದು, ಹೆಚ್ಚು ಸಂಸ್ಥಾನಗಳು ಅವನ ಪರವಾಗಿದ್ದರೂ, ೨೦ ಎಲೆಕ್ಟರಲ್ ಮತಗಳ ಬಗ್ಗೆ ವಿವಾದ ನಡೆದಿತ್ತು. ಟಿಲ್‌ಡನ್‌ಗೆ ಗೆಲ್ಲಲು ಆ ೨೦ ಮತಗಳಲ್ಲಿ ಒಂದೇ ಒಂದು ಮತ ಬೇಕಾಗಿತ್ತು. ಅವನೇ ಗೆಲ್ಲುತ್ತಾನೆಂದು ಎಲ್ಲರೂ ಊಹಿಸಿದ್ದರು. ಈ ಪೇಚಿನ ಸಮಸ್ಯೆಯನ್ನು ಸುಧಾರಿಸಲು ಕಾಂಗ್ರೆಸ್ ಒಂದು ಸಮಿತಿಯನ್ನು ನೇಮಕ ಮಾಡಿತು. ಈ ಸಮಿತಿ ವಿವಾದಕ್ಕೊಳಗಾಗಿದ್ದ ಎಲ್ಲ ಮತಗಳನ್ನೂ ಪರಿಶೀಲಿಸಿ ಆ ಮತಗಳನ್ನು ನ್ಯಾಯಬದ್ಧವಾಗಿ ಯಾರಿಗೆ ಸೇರಬೇಕೋ ಆ ಅಭ್ಯರ್ಥಿಗೆ ಸೇರಿಸಬೇಕಾಗಿತ್ತು. ಆ ಸಮಿತಿ ಪ್ರಾರಂಭದಲ್ಲಿ ಏಳು ಡೆಮೊಕ್ರಾಟರು ಮತ್ತು ಏಳು ರಿಪಬ್ಲಿಕನ್ನರು ಹಾಗೂ ಒಬ್ಬ ಸ್ವತಂತ್ರ ಸದಸ್ಯನಿಂದ ಕೂಡಿತ್ತು. ಆದರೆ ಕಡೆಯ ಘಳಿಗೆಯಲ್ಲಿ ಸ್ವತಂತ್ರ ಸದಸ್ಯನನ್ನು ತೆಗೆದುಹಾಕಿ, ಅವನ ಜಾಗಕ್ಕೆ ಒಬ್ಬ ರಿಪಬ್ಲಿಕನ್ ಸದಸ್ಯನನ್ನು ಸೇರಿಸಿದರು. ಪಕ್ಷದ ಪರವಾಗಿ ನೇರ ಮತದಾನ ನಡೆದಾಗ ಸಮಿತಿ ವಿವಾದಕ್ಕೆ ಒಳಗಾಗಿದ್ದ ಎಲ್ಲ ಮತಗಳನ್ನೂ ಹೇಯ್ಸ್‌ನಿಗೆ ನೀಡಿತು. ಆದ್ದರಿಂದ ಹೇಯ್ಸ್ ಅಧ್ಯಕ್ಷನಾಗಿ ಆಯ್ಕೆಗೊಂಡನು. ಡೆಮೊಕ್ರಾಟಿಕ್ ಉಗ್ರಗಾಮಿಗಳು ತಮ್ಮ ಅಭ್ಯರ್ಥಿಯಾದ ಟಿಲ್‌ಡನ್‌ಗೆ ಮೋಸ ಮಾಡಿ ಚುನಾವಣೆ ಕದ್ದರೆ ಹಿಂಸಾಕೃತ್ಯಗಳನ್ನು ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು! ಹೆನ್ರಿ ಪಾಟರ್‌ಸನ್ ಎನ್ನುವ ಪತ್ರಿಕಾ ಸಂಪಾದಕ ರಾಜಧಾನಿಯಲ್ಲಿ ೧೦೦,೦೦೦ ಡೆಮೊಕ್ರಾಟರ ಪ್ರತಿಘಟನಾ ಮೆರವಣಿಗೆ ಮಾಡಬೇಕೆಂದು ಕರೆಕೊಟ್ಟನು. ಕಾಂಗ್ರೆಸ್ಸಿನಲ್ಲಿ ಡೆಮೊಕ್ರಾಟಿಕ್ ಸದಸ್ಯರು ಸಮಿತಿಯ ವರದಿಯನ್ನು ತಡೆಗಟ್ಟಿ (filibuster) ಹೇಯ್ಸನು

ಅಧಿಕಾರ ಸ್ವೀಕರಿಸದಂತೆ ಮಾಡಿ ಅಧ್ಯಕ್ಷ ಚುನಾವಣೆಯನ್ನು ಕಾಂಗ್ರೆಸ್ಸಿಗೆ ಬಿಡುವುದಾಗಿ ಬೆದರಿಕೆ ಹಾಕಿದನು. ಹೇಯ್ಸ್ ಅಧಿಕಾರ ವಹಿಸಿಕೊಳ್ಳುವುದರ ಬಗ್ಗೆ ದೀರ್ಘವಾದ ಸಂಧಾನ, ಮಾತುಕತೆ ನಡೆಯಿತು. ಡೆಮೊಕ್ರಾಟರು ಕೆಲವು ಷರತ್ತುಗಳನ್ನು ಹಾಕಿದರು. ದಕ್ಷಿಣ ಸಂಸ್ಥಾನಗಳಲ್ಲಿ ಇನ್ನೂ ಉಳಿದುಕೊಂಡಿರುವ ಫೆಡರಲ್ ಸೈನ್ಯದ ತುಕಡಿಗಳನ್ನು ವಾಪಸು ಕರೆಸಿಕೊಳ್ಳುವ ಭರವಸೆಯನ್ನು ಕೊಡಬೇಕೆಂದು ಡೆಮೊಕ್ರಾಟರು ರಿಪಬ್ಲಿಕನ್ನರನ್ನು ಆಗ್ರಹಪಡಿಸಿದರು. ಪುನರ್‌ನಿರ್ಮಾಣಗೊಂಡ ದಕ್ಷಿಣ ಸಂಸ್ಥಾನಗಳ ಸರ್ಕಾರಗಳು ಉರುಳಿದಂತೆಲ್ಲ ತಾವು ಕರಿಯರ ಮತಗಳನ್ನು ಪಡೆಯುವುದು ಕಷ್ಟವಾಗುತ್ತದೆ ಎಂದು ರಿಪಬ್ಲಿಕನ್ನರು ತಿಳಿದಿದ್ದರು. ಆ ಸಂಸ್ಥಾನಗಳಲ್ಲಿ ಡೆಮೊಕ್ರಾಟರ ಪ್ರಭಾವ ಹೆಚ್ಚುತ್ತದೆ ಎಂದೂ ರಿಪಬ್ಲಿಕನ್ನರಿಗೆ ಮನದಟ್ಟಾಗಿತ್ತು. ಆದ್ದರಿಂದ ಬಿಡುಗಡೆಯಾದ ಗುಲಾಮರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವ ಪ್ರಯತ್ನವನ್ನು ರಿಪಬ್ಲಿಕನ್ನರು ಮಾಡಲಿಲ್ಲ. ಅದರ ಬದಲು ದಕ್ಷಿಣದ ಬಿಳಿಯರನ್ನು ಒಲಿಸಿಕೊಳ್ಳಲು ಪ್ರಯತ್ನ ಮಾಡಿದರು. ದಕ್ಷಿಣದ ಬಿಳಿಯರಿಗೆ ರಿಪಬ್ಲಿಕನ್ನರು ಫೆಡರಲ್ ಸೈನ್ಯಾಡಳಿತವನ್ನು ಕೊನೆಗೊಳಿಸುವುದಾಗಿಯೂ, ಫೆಡರಲ್ ನಿಯಂತ್ರಣವನ್ನು ತಪ್ಪಿಸಿ ಸ್ವತಾಡಳಿತಕ್ಕೆ ಅವಕಾಶ ಮಾಡಿಕೊಡುವುದಾಗಿಯೂ ಮತ್ತು ದಕ್ಷಿಣ ಸಂಸ್ಥಾನಗಳ ಆಂತರಿಕ ಅಭಿವೃದ್ಧಿಗೆ ಸಹಾಯ ನೀಡುವುದಾಗಿಯೂ ಮೇಲಾಗಿ ಹೇಯ್ಸ್‌ನ ಆಡಳಿತ ಮಂಡಳಿಯಲ್ಲಿ ಕಡೆಯ ಪಕ್ಷ ಒಬ್ಬ ದಕ್ಷಿಣದವನನ್ನು ಸೇರಿಸಿ ಕೊಳ್ಳುವುದಾಗಿ ಭರವಸೆ ನೀಡಿದರು. ಇದರಿಂದಾಗಿ ಹೇಯ್ಸ್‌ನು ಅವಿರೋಧವಾಗಿ ಶ್ವೇತ ಭವನವನ್ನು ಪ್ರವೇಶಿಸಲು ಸಾಧ್ಯವಾಯಿತು. ಮಾತು ಕೊಟ್ಟಂತೆ ೧೮೭೭ರ ಏಪ್ರಿಲ್ ತಿಂಗಳಲ್ಲಿ ದಕ್ಷಿಣ ಸಂಸ್ಥಾನಗಳಲ್ಲಿದ್ದ ಎಲ್ಲ ಫೆಡರಲ್ ಸೈನ್ಯ ತುಕಡಿಗಳನ್ನು ವಾಪಸು ಕರೆಸಿಕೊಳ್ಳಲಾಯಿತು.

೧೮೭೭ರಲ್ಲಿ ರುದರ್‌ಫೊರ್ಡ್ ಹೇಯ್ಸ್[೧] (Rutherford Hayes) ಅಧ್ಯಕ್ಷನಾಗಿದ್ದ ಕಾಲದಲ್ಲಿ ಅಮೆರಿಕದಲ್ಲಿ ತೀವ್ರ ಆರ್ಥಿಕ ಮುಗ್ಗಟ್ಟು ಉಂಟಾಗಿತ್ತು. ರಾಜಕೀಯದ ಅಧಿಕಾರದಲ್ಲಿರುವವರು ಸಾರ್ವಜನಿಕ ಹಣವನ್ನು ಸ್ವಂತ ಉಪಯೋಗಕ್ಕೆ ಯಾವ ನಿರ್ಬಂಧವೂ ಇಲ್ಲದೆ ಉಪಯೋಗಿಸಿಕೊಳ್ಳುವುದು ಪದ್ಧತಿಯಾಗಿತ್ತು (spoils system). ಒಟ್ಟಿನಲ್ಲಿ ಪರಿಸ್ಥಿತಿ ಕನ್ನಡ ಗಾದೆಯಂತೆ 'ಹುಚ್ಚರ ಮದುವೆಯಲ್ಲಿ ಉಂಡವನೆ ಜಾಣ' ಎನ್ನುವ ಅಧೋಗತಿ ಉಂಟಾಗಿತ್ತು. ಹೇಯ್ಸ್ ಒಹಾಯೊ ಸಂಸ್ಥಾನದ ಗವರ್ನರ್ ಆಗಿ ಸಮರ್ಥ ಆಡಳಿತಗಾರ ಮತ್ತು ಆಡಳಿತದಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದ ಶುದ್ಧ ಹಸ್ತನೆಂದು ಪ್ರಸಿದ್ಧಿ ಪಡೆದಿದ್ದನು. ಆದರೆ ಅಧ್ಯಕ್ಷನಾದಾಗ ಅವನು ತನ್ನ ಪಕ್ಷದ ಧುರೀಣರ ವಿರೋಧವನ್ನು ಎದುರಿಸಬೇಕಾಯಿತು. ಆದರೂ ಸುಧಾರಣೆಗಳನ್ನು ತರಲು ನಿರ್ಧರಿಸಿದ್ದ ಹೇಯ್ಸ್ ತನ್ನ ಆಡಳಿತ ಮಂಡಳಿಗೆ ಬರಿ ಪಕ್ಷನಿಷ್ಠೆ ತೋರಿದವರನ್ನು

---

೧. ರುದರ್‌ಫೊರ್ಡ್ ಹೇಯ್ಸ್ ಅಮೆರಿಕದ ೧೯ನೆಯ ಅಧ್ಯಕ್ಷ

ಬಿಟ್ಟು ಸಮರ್ಥರಾದವರನ್ನು ಮಾತ್ರ ಆಯ್ಕೆಮಾಡಿಕೊಂಡನು. ನ್ಯೂಯಾರ್ಕ್ ರಾಜಕಾರಣಿಗಳ ಪಂಗಡದ ಬಲಿಷ್ಠ ನಾಯಕ ಮತ್ತು ಸೆನೆಟರ್ ರಾಸ್ಕೊ ಕಾಂಕ್ಲಿಂಗ್‌ನ ನೇತೃತ್ವದಲ್ಲಿ ಪಕ್ಷದ ನಾಯಕರು ಸೆನೆಟ್ ಹೇಯ್ಸ್ ತನ್ನ ಆಡಳಿತ ಮಂಡಳಿಗೆ ಆಯ್ಕೆ ಮಾಡಿಕೊಂಡವರನ್ನು ಅನುಮೋದಿಸದಂತೆ ಆಗ್ರಹಪಡಿಸಿದರು. ಆದರೆ ಸ್ವಲ್ಪ ಕಾಲದಲ್ಲೇ ಸಾರ್ವಜನಿಕರ ಕ್ರೋಧವನ್ನು ಎದುರಿಸಲಾರದೆ ಸೆನೆಟರುಗಳು ಹೇಯ್ಸ್ ಆಯ್ಕೆ ಮಾಡಿದವರನ್ನು ಅನುಮೋದಿಸಿದರು.

ಎಷ್ಟು ವಿರೋಧ ಬಂದರೂ ವಿಚಲಿತನಾಗದೆ ಸುಧಾರಣೆಗಳನ್ನು ಅನುಷ್ಠಾನಗೊಳಿಸುತ್ತ ಹೋದಂತೆಲ್ಲ ಪಕ್ಷದವರ ವಿರೋಧ ಹೆಚ್ಚುತ್ತ ಹೋಗಿ ಕಾಂಕ್ಲಿಂಗ್-ಹೇಯ್ಸ್‌ರ ಮುಖಾಮುಖಿಯಲ್ಲಿ ಪರ್ಯವಸಾನವಾಯಿತು. ಇದಕ್ಕೆ ಕಾರಣ ನ್ಯೂಯಾರ್ಕಿನ ಸುಂಕದ ಕಛೇರಿ. ಈ ಕಛೇರಿ ಲಾಗಾಯತ್ತಿನಿಂದ ಲಂಚ ರುಷುವತ್ತುಗಳ ತವರುಮನೆಯಾಗಿತ್ತು. ಈ ಲಂಚಾಗಾರದ ನಿಯಂತ್ರಣ ಕಾಂಕ್ಲಿಂಗ್‌ನ ಕೈಯಲ್ಲಿತ್ತು. ಇಡೀ ರಾಷ್ಟ್ರದ ೨/೩ ಭಾಗದಷ್ಟು ಸುಂಕದ ಹಣ ಈ ಕಛೇರಿಯ ಮೂಲಕ ಬರುತ್ತಿತ್ತು. ಇಂಥ ಅಪಾರ ಮೊತ್ತದ ಹಣದಲ್ಲಿ ತಮ್ಮ ಮನಸ್ಸಿಗೆ ಬಂದಷ್ಟನ್ನು ತಿಂದುಹಾಕುವುದು ಅಧಿಕಾರಿಗಳಿಗೆ ಮಾಮೂಲು ಪದ್ಧತಿಯಾಗಿತ್ತು. ಈ ಭ್ರಷ್ಟಾಚಾರವನ್ನು ನಿಲ್ಲಿಸಲು ದೃಢಮನಸ್ಸು ಮಾಡಿದ್ದ ಹೇಯ್ಸ್ ಕಾಂಕ್ಲಿಂಗ್ ನೇಮಿಸಿದ್ದ ಇಬ್ಬರು ಅಧಿಕಾರಿಗಳಿಗೆ ರಾಜೀನಾಮೆ ಕೊಡುವಂತೆ ಕುಮ್ಮಕ್ಕು ಮಾಡಿದನು. ಈ ಅಧಿಕಾರಿಗಳನ್ನು ಕೆಲಸದಿಂದ ತೆಗೆದುಹಾಕಿದ್ದನ್ನು ಕುರಿತು ಕಾಂಕ್ಲಿಂಗ್ ಸೆನೆಟ್‌ನಲ್ಲಿ ವಾಗ್ವಾದ ಪ್ರಾರಂಭಿಸಿ ಅಧ್ಯಕ್ಷ ಹೇಯ್ಸ್‌ನ ವಿರೋಧವಾಗಿ ತೀರ್ಮಾನ ನೀಡುವಂತೆ ಸೆನೆಟರ್‌ಗಳನ್ನು ಆಗ್ರಹಪಡಿಸಿದನು. ಆದರೆ ಅಧ್ಯಕ್ಷ ಹೇಯ್ಸ್‌ನು ಅಧಿಕಾರಿಗಳ ಭ್ರಷ್ಟಾಚಾರವನ್ನು ಸಾಕ್ಷಿಗಳ ಮೂಲಕ ಸಾಬೀತುಪಡಿಸಿ ಜಯಪ್ರದನಾದನು. ಸುಂಕದ ಕಛೇರಿಯ ಭ್ರಷ್ಟಾಚಾರ ಸರ್ವರಿಗೆ ತಿಳಿದ ಮೇಲೂ ಮಾಮೂಲು ಪದ್ಧತಿಯನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ. ೧೮೮೧ರಲ್ಲಿ ಹೇಯ್ಸ್‌ನ ಆಡಳಿತದ ಅವಧಿ ಮುಗಿದರೂ ಭ್ರಷ್ಟಾಚಾರ ವ್ಯಾಪಕವಾಗಿ ಮುಂದುವರಿಯಿತು.

೧೮೭೩ರಲ್ಲಿ ಪ್ರಾರಂಭವಾದ ಆರ್ಥಿಕ ಮುಗ್ಗಟ್ಟು ಆ ದಶಕ ಮುಗಿಯುವ ಹೊತ್ತಿಗೆ ಮತ್ತಷ್ಟು ಹದಗೆಟ್ಟಿತು. ಬಹುತೇಕ ಕಾರ್ಮಿಕರು ಕೆಲಸ ಕಳೆದುಕೊಂಡರು. ಕಾರ್ಮಿಕರ ಒಕ್ಕೂಟಗಳು ಏನೂ ಮಾಡಲಾರದೆ ಹೋದವು. ಕಾರ್ಖಾನೆಗಳ ಮಾಲೀಕರು ತೊಂದರೆ ಕೊಡುವ ಕಾರ್ಮಿಕರನ್ನು ಸುಲಭವಾಗಿ ಕೆಲಸದಿಂದ ತೆಗೆದುಹಾಕಿ ಅವರ ಜಾಗಕ್ಕೆ ಬೇರೆಯವರನ್ನು ನೇಮಿಸಿಕೊಳ್ಳುತ್ತಿದ್ದರು. ಅಧ್ಯಕ್ಷ ಹೇಯ್ಸ್‌ನಿಗೆ ಕಾರ್ಮಿಕರ ಮೇಲೆ ಸಹಾನುಭೂತಿ ಇದ್ದರೂ ಸಹ ತನ್ನ ಸಾಂಪ್ರದಾಯಕ ತತ್ವವನ್ನು ತ್ಯಜಿಸಲಾರದೆ ಮಾಲೀಕರ ಪರ ವಹಿಸಬೇಕಾಯಿತು. ೧೮೭೭ರಲ್ಲಿ ರೈಲ್ವೆ ಕಾರ್ಮಿಕರು ವೇತನದಲ್ಲಿ ಕಡಿತ ಮಾಡಿದ್ದನ್ನು ವಿರೋಧಿಸಲು ಮುಷ್ಕರ ಹೂಡಿದಾಗ ಅಧ್ಯಕ್ಷ ಹೇಯ್ಸ್ ಫೆಡರಲ್ ಸೈನ್ಯವನ್ನು ರವಾನಿಸಿ ಪರಿಸ್ಥಿತಿಯನ್ನು ಹತೋಟಿಗೆ ತಂದನು.

ಚೀನಿ ವಲಸೆಗಾರರ ಸಮಸ್ಯೆ ಉಂಟುಮಾಡಿದ ಸಂದಿಗ್ಧ ಪರಿಸ್ಥಿತಿ ಅಧ್ಯಕ್ಷ ಹೇಯ್ಸ್‌ನನ್ನು ಇಕ್ಕಟ್ಟಿನಲ್ಲಿ ಸಿಲುಕಿಸಿತು. ೧೮೬೮ರಲ್ಲಿ ಜಾರಿಗೆ ಬಂದ ನಿಯಮದ ಪ್ರಕಾರವಾಗಿ ಅಮೆರಿಕಕ್ಕೆ ವಲಸೆ ಬರುವ ಚೀನೀಯರ ಸಂಖ್ಯೆಗೆ ಯಾವ ಮಿತಿಯನ್ನೂ ವಿಧಿಸಿರಲಿಲ್ಲ. ಕಾರ್ಖಾನೆಯ ಮಾಲೀಕರು ಚೀನೀಯರ ಅನಿರ್ಬಂಧಿತ ವಲಸೆಯನ್ನು ಹಾರ್ದಿಕವಾಗಿ ಸ್ವಾಗತಿಸಿದರು. ಆದರೆ ಅಮೆರಿಕನ್ ಕಾರ್ಮಿಕರು ತಮ್ಮ ಕೆಲಸಗಳಿಗೆ ಸಂಚಕಾರ ಬರಬಹುದೆಂದು ಭಯಗ್ರಸ್ತರಾದರು. ಆರ್ಥಿಕ ಮುಗ್ಗಟ್ಟು ಮುಂದುವರಿದಂತೆ ಕೆಲಸ ಸಿಗುವ ಅವಕಾಶಗಳು ಕಡಿಮೆಯಾಗುತ್ತಾ ಹೋದವು. ಅಮೆರಿಕನ್ನರು ತಮ್ಮ ನಿರುದ್ಯೋಗಕ್ಕೆ ಚೀನೀಯರು ಕಾರಣರೆಂದು ಆರೋಪಿಸಿ ಅವರ ವಲಸೆಗೆ ವಿರುದ್ಧವಾಗಿ ಪ್ರತಿಭಟನೆ ಪ್ರಾರಂಭಿಸಿದರು. ೧೮೭೯ರಲ್ಲಿ ಕಾಂಗ್ರೆಸ್ ಚೀನೀಯರ ವಲಸೆಯನ್ನು ನಿರ್ಬಂಧಿಸುವ ಕಾಯಿದೆಯನ್ನು ಅಂಗೀಕರಿಸಿತು. ಆದರೆ ಅಧ್ಯಕ್ಷ ಹೇಯ್ಸ್ ಆ ಕಾಯಿದೆಯನ್ನು ರದ್ದುಗೊಳಿಸಿದನು. ಚೀನಾದೇಶದೊಡನೆ ಮಾಡಿಕೊಂಡ ಒಪ್ಪಂದಕ್ಕೆ ವ್ಯತಿರಿಕ್ತವಾಗಿದ್ದರಿಂದ ಹಾಗೆ ಮಾಡಬೇಕಾಯಿತೆಂದು ವಿಶದಪಡಿಸಿದನು. ನಂತರ ಚೀನಾದೇಶದೊಡನೆ ಹೊಸ ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಇದರ ಪ್ರಕಾರ ಅಮೆರಿಕ ಸರ್ಕಾರ ಚೀನೀಯ ವಲಸೆಗಾರರ ಸಂಖ್ಯೆಯನ್ನು ಮಿತಿಗೊಳಿಸಲು ಚೀನಾ ಸರ್ಕಾರ ಒಪ್ಪಿಗೆ ನೀಡಿತ್ತು. ಆದರೂ ಸಹ ಅಮೆರಿಕನ್ನರು ಅಧ್ಯಕ್ಷ ಹೇಯ್ಸ್ ಕಾಂಗ್ರೆಸ್ ಜಾರಿಗೆ ತಂದಿದ್ದ ಕಾಯಿದೆಯನ್ನು ರದ್ದುಗೊಳಿಸಿದ್ದನ್ನು ಮನ್ನಿಸಲಾರದೆ ಹೋದರು. ಇದರಿಂದಾಗಿ ಹೇಯ್ಸ್‌ನ ಜನಪ್ರಿಯತೆಗೆ ಧಕ್ಕೆಯುಂಟಾಯಿತು.

೧೮೮೦ರ ಚುನಾವಣೆ

ಹೇಯ್ಸ್ ಅಧ್ಯಕ್ಷಸ್ಥಾನಕ್ಕೆ ಎರಡನೆಯ ಬಾರಿ ಸ್ಪರ್ಧಿಸಲು ನಿರಾಕರಿಸಿದನು. ರಿಪಬ್ಲಿಕನ್ ಪಕ್ಷದಲ್ಲಿ ಯಾರನ್ನು ಈ ಸ್ಥಾನಕ್ಕೆ ನಾಮಕರಣ ಮಾಡಬೇಕು ಎನ್ನುವುದರ ಬಗ್ಗೆ ಪಕ್ಷದ ಎರಡು ಬಣಗಳ ನಡುವೆ ಸಂಘರ್ಷಣೆ ಉಂಟಾಯಿತು. ರಾಸ್ಕೊ ಕಾಂಕ್ಲಿಂಗ್ ನೇತೃತ್ವ ವಹಿಸಿದ್ದ ಬಣದ ಸದಸ್ಯರನ್ನು 'ಕಟ್ಟಾಳುಗಳು' ಎಂದು ಕರೆಯುತ್ತಿದ್ದರು. ಇವರು ಲಂಚ ರುಷುವತ್ತುಗಳ ಮಾಮೂಲನ್ನು ಮುಂದುವರಿಸುವುದರ ಪರವಾಗಿದ್ದರು. ಈ ಕಟ್ಟಾಳುಗಳು ಜನರಲ್ ಗ್ರಾಂಟ್‌ನನ್ನು ಪುನಃ ನಾಮಕರಣ ಮಾಡಲು ಪ್ರಯತ್ನಿಸಿದರು. ರಿಪಬ್ಲಿಕನ್ ಪಕ್ಷವನ್ನು ಸುಧಾರಣೆ ಮಾಡಲು ಪ್ರಯತ್ನಿಸುವವರನ್ನು 'ಬೆರಕೆಯವರು' ಎಂದು ಕರೆಯುತ್ತಿದ್ದರು. ಹೀಗೆ ಕಟ್ಟಾಳುಗಳು ಮತ್ತು ಬೆರಕೆಯವರ ನಡುವೆ ಅಧಿಕಾರಕ್ಕಾಗಿ ಸೆಣಸಾಟ ನಡೆಯಿತು. ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಆಯ್ಕೆ ಮಾಡಲು ಸೇರಿದ್ದ ಅಧಿವೇಶನದಲ್ಲಿ ಎರಡು ಬಣಗಳ ನಡುವಣ ಬಗೆಹರಿಯಲಾರದ ಬಿಕ್ಕಟ್ಟು 'ಸಂಧಾನ ಅಭ್ಯರ್ಥಿ'ಯ ಆಯ್ಕೆಗೆ ಕಾರಣವಾಯಿತು. ಈ ಅಭ್ಯರ್ಥಿಯ ಹೆಸರು ಜೇಮ್ಸ್ ಗಾರ್‌ಫೀಲ್ಡ್ (James Garfield). ಗಾರ್‌ಫೀಲ್ಡ್ ಬೆರಕೆಯವರ ಬಗ್ಗೆ ಸಹಾನುಭೂತಿ ಹೊಂದಿದ್ದು ಪಕ್ಷದ ಒಡಕನ್ನು ಕೂಡಿಸಲು ಕಾತರನಾಗಿದ್ದನು. ಆದ್ದರಿಂದ ಗಾರ್‌ಫೀಲ್ಡ್ ಉಪಾಧ್ಯಕ್ಷ

ಸ್ಥಾನಕ್ಕೆ ಚೆಸ್ಟರ್ ಆರ್ಥರ್ (Chester Arthur)ನನ್ನು ಆರಿಸಿಕೊಂಡನು. ಈ ಆರ್ಥರ್ ಮಹಾಶಯ ಸುಂಕದ ಕಟ್ಟೆಯಿಂದ ತೆಗೆದು ಹಾಕಿ ಭ್ರಷ್ಟ ಅಧಿಕಾರಿಗಳಲ್ಲಿ ಒಬ್ಬನಾಗಿದ್ದನು (ಅಧ್ಯಕ್ಷ ಹೇಯ್ಸ್ ಸುಂಕದ ಕಛೇರಿಯ ಇಬ್ಬರು ಭ್ರಷ್ಟ ಅಧಿಕಾರಿಗಳನ್ನು ಕೆಲಸದಿಂದ ತೆಗೆದುಹಾಕಿದ್ದನ್ನು ಹಿಂದೆ ತಿಳಿಸಲಾಗಿದೆ).

ಚುನಾವಣಾ ಪ್ರಚಾರ ಪಕ್ಷಗಳ ಧ್ಯೇಯ ಧೋರಣೆಗಳ ಮೇಲಾಗಲೀ ಮುಖ್ಯ ವಿಷಯಗಳ ಮೇಲಾಗಲೀ ನಡೆಯಲಿಲ್ಲ. ಚಿಲ್ಲರೆ ವಿಷಯಗಳನ್ನು ಮತ್ತು ಅಪನಿಂದೆಗಳನ್ನು ದೊಡ್ಡದು ಮಾಡಿ ಅಭ್ಯರ್ಥಿಗಳು ಪರಸ್ಪರ ಚಾರಿತ್ಯ್ರವಧೆಯಲ್ಲಿ ತೊಡಗಿದ್ದರು. ಡೆಮೊಕ್ರಾಟರು ಮಾಜಿ ಸೇನಾಧಿಪತಿ ವಿನ್‌ಫೀಲ್ಡ್ ಹ್ಯಾನ್‌ಕಾಕ್‌ನನ್ನು ಅಭ್ಯರ್ಥಿಯಾಗಿ ನಾಮಕರಣ ಮಾಡಿದ್ದರು. ಚುನಾವಣೆ ಪ್ರಚಾರದಲ್ಲಿ ಡೆಮೊಕ್ರಾಟರು ರಿಪಬ್ಲಿಕನ್ನರು ೧೮೭೬ರ ಚುನಾವಣೆಯಲ್ಲಿ ಮಾಡಿದ್ದರೆನ್ನಲಾದ ವಂಚನೆಯ ಪ್ರಸ್ತಾಪ ಮಾಡಿ ಕ್ರೆಡಿಟ್ ಮೊಬೈಲರ್ ಹಗರಣ (credit mobiler scandal)ದಲ್ಲಿ ಗಾರ್‌ಫೀಲ್ಡನು ಅಪರಾಧಿಯಾಗಿದ್ದನೆಂದು ಅಪಪ್ರಚಾರ ಮಾಡಿದರು. ವಾಸ್ತವ ಸಂಗತಿ ಎಂದರೆ ಅವನ ಮೇಲೆ ಆಪಾದನೆ ಇದ್ದುದು ನಿಜ, ಆದರೆ ನಂತರ ಆ ಆಪಾದನೆಗಳು ನಿರಾಧಾರವಾದುವು ಎಂದು ತಳ್ಳಿ ಹಾಕಿದ್ದರು. ಆದರೂ ಡೆಮೊಕ್ರಾಟರು ಆ ಸಂದರ್ಭದ ಪ್ರಯೋಜನ ಪಡೆಯಲು ಪ್ರಯತ್ನಿಸಿದರು. ರಿಪಬ್ಲಿಕನ್ನರು ತಾವು ಆರ್ಥಿಕ ಮುಗ್ಗಟ್ಟನ್ನು ಪರಿಹರಿಸಿ ರಾಷ್ಟ್ರದ ಅಭಿವೃದ್ಧಿಗೆ ಕಾರಣರಾಗಿದ್ದೇವೆ ಎಂದು ಹೇಳಿಕೊಂಡು ಡೆಮೊಕ್ರಾಟರ ನಿಂದೆಗಳನ್ನು ಅಲ್ಲಗಳೆದರು. ಚುನಾವಣೆಯಲ್ಲಿ ಎರಡು ಪಕ್ಷದ ಅಭ್ಯರ್ಥಿಗಳು ಪಡೆದ ಮತಗಳ ಅಂತರ ಹೆಚ್ಚಿಗೆ ಇರಲಿಲ್ಲ. ಗಾರ್‌ಫೀಲ್ಡನು ಅಧ್ಯಕ್ಷನಾಗಿ ಆಯ್ಕೆಗೊಂಡನು.[೨] ರಿಪಬ್ಲಿಕನ್ನರು ಕಾಂಗ್ರೆಸ್ಸಿನ ಎರಡು ಮನೆಗಳ ಮೇಲೂ (both Houses of Congress) ನಿಯಂತ್ರಣ ಹೊಂದಿದರು.

ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಿದ ಮೇಲೆ ಗಾರ್‌ಫೀಲ್ಡನು ಅವರಿವರ ಮಾತು ಕೇಳದೆ ಸ್ವತಂತ್ರವಾಗಿ ನಿರ್ಣಯಗಳನ್ನು ಕೈಗೊಂಡು ಪ್ರಮುಖ ಅಧಿಕಾರಸ್ಥಾನಗಳಿಗೆ ಸಮರ್ಥರಾದವರನ್ನು ನೇಮಕ ಮಾಡಿದನು. ಕೆಲವು ಬೆರಕೆಯುವರನ್ನೂ ಅವರು ಸಮರ್ಥರಾಗಿದ್ದರಿಂದ ಅಧಿಕಾರಿಗಳಾಗಿ ನೇಮಕ ಮಾಡಿದನು. ಅಧ್ಯಕ್ಷನ ಈ ಕೃತ್ಯ ಕಟ್ಟಾಳುಗಳನ್ನು ಕೆರಳಿಸಿತು. ಇದು ಗಾರ್‌ಫೀಲ್ಡ್ ಮತ್ತು ಕಾಂಕ್ಲಿಂಗ್‌ರ ಸಂಘರ್ಷಣೆಗೆ ಕಾರಣವಾಯಿತು. ಈ ಘರ್ಷಣೆ ಪಕ್ಷದ ಎರಡು ಬಣಗಳ ನಡುವೆ ದ್ವೇಷಾಸೂಯೆಗಳಿಗೆ ಎಡೆ ಮಾಡಿಕೊಟ್ಟಿತು. ಚಾರ್ಲ್ಸ್ ಗೈಟೊ (Charles Guiteau) ಎಂಬ ಕಟ್ಟಾಳು ರಾಯಭಾರ ಹುದ್ದೆ ಪಡೆಯಲು ಪ್ರಯತ್ನಿಸಿ ಅಧ್ಯಕ್ಷ ಗಾರ್‌ಫೀಲ್ಡನು ಅನುಮೋದಿಸದೆ ಹೋದುದರಿಂದ ಹತಾಶನಾಗಿ ಮುಯ್ಯಿ ತೀರಿಸಲು ಸಮಯ ಕಾಯುತ್ತಿದ್ದು ೧೮೮೧ರ ಜುಲೈ ೨ನೆಯ ತಾರೀಖು

೨. ಜೇಮ್ಸ್ ಅಬ್ರಹಾಂ ಗಾರ್‌ಫೀಲ್ಡ್ ಅಮೆರಿಕದ ೨೦ನೆಯ ಅಧ್ಯಕ್ಷ

ರಾಜಧಾನಿ ವಾಷಿಂಗ್‌ಟನ್‌ನಲ್ಲಿ ರೈಲುನಿಲ್ದಾಣದಲ್ಲಿ ಅಧ್ಯಕ್ಷ ಗಾರ್‌ಫೀಲ್ಡ್‌ನನ್ನು ಗುಂಡಿಕ್ಕಿ ಕೊಲೆ ಮಾಡಿದನು. ಕೊಲೆಗಾರನನ್ನು ಸೆರೆ ಹಿಡಿದಾಗ ಅವನು 'ನಾನೊಬ್ಬ ಕಟ್ಟಾಳು. ಆರ್ಥರ್ (Arthur) ಈಗ ಅಧ್ಯಕ್ಷ' ಎಂದು ಅರಚಿಕೊಂಡನಂತೆ. ಗಾರ್‌ಫಿಲ್ಡನು ಅಧ್ಯಕ್ಷನಾಗಿದ್ದುದು ನಾಲ್ಕು ತಿಂಗಳು ಮಾತ್ರ.

ಅಧ್ಯಕ್ಷ ಆರ್ಥರ್‌ನ ಆಡಳಿತ

ಚೆಸ್ಟರ್ ಆರ್ಥರ್[೩] (Chester Arthur) ಯಾವ ಚುನಾಯಿತ ಹುದ್ದೆಯನ್ನೂ ಅಲಂಕರಿಸಿದವನಲ್ಲ. ಅವನಿಗೆ ಆಡಳಿತದ ಅನುಭವ ಸ್ವಲ್ಪವೂ ಇರಲಿಲ್ಲ. ಆದರೂ ಸಹ ಕಾಲಕ್ರಮದಲ್ಲಿ ಅವನು ಎಲ್ಲರೂ ಊಹಿಸಿದಂತೆ ಪಕ್ಷದ ಕಟ್ಟಾಳುಗಳ ಬರಿಯ ಬಾಯಿಬಡುಕನಲ್ಲ, ಸ್ವತಂತ್ರವಾಗಿ ನಿರ್ಧಾರ ಕೈಗೊಳ್ಳಬಲ್ಲ ಎಂದು ತೋರಿಸಿದನು. ಅಧ್ಯಕ್ಷ ಗಾರ್‌ಫೀಲ್ಡ್‌ನ ಕೊಲೆ ಅವನಿಗೆ ಆಘಾತ ಉಂಟುಮಾಡಿತ್ತು. ಈ ದುರಂತ ಅವನ ಕಣ್ಣು ತೆರೆಸಿತು; ಅಧ್ಯಕ್ಷ ಸ್ಥಾನದ ನೈತಿಕ ಮತ್ತು ರಾಜಕೀಯ ಹೊಣೆಗಾರಿಕೆಯ ಅರಿವಾಯಿತು. ಅವನು ಪಕ್ಷದ ಕಟ್ಟಾಳುಗಳನ್ನು ಕಡೆಗಣಿಸಿ ಗಾರ್‌ಫೀಲ್ಡನು ನೇಮಿಸಿದ್ದ ಬೆರಕೆ ಅಧಿಕಾರಿಗಳನ್ನು ವಜಾ ಮಾಡಲು ನಿರಾಕರಿಸಿದನು. ಅವನು ಕೆಲಸಕ್ಕೆ ಬಾರದ, ಕಾಂಗ್ರೆಸ್ ಸದಸ್ಯರು ಮತ್ತು ಸೆನೆಟರ್‌ಗಳು ತಮ್ಮ ಚುನಾವಣಾಕ್ಷೇತ್ರಗಳಿಗೆ ಸ್ಥಳೀಯ ಯೋಜನೆಗಳಿಗಾಗಿ ಫೆಡರಲ್ ಹಣವನ್ನು ಒದಗಿಸಲು ಕಾಂಗ್ರೆಸ್ಸಿನಲ್ಲಿ ಕೆಲಸಕ್ಕೆ ಬಾರದ ಕಾಯಿದೆಗಳನ್ನು – ಈ ಕಾಯಿದೆಗಳನ್ನು 'ಹಂದಿ ಮಾಂಸದ ಪೀಪಾಯಿ' (pork barrel legislature)ಗಳೆಂದು ಕರೆಯುತ್ತಿದ್ದರು – ರದ್ದುಗೊಳಿಸಿದನು ಮತ್ತು ಸರ್ಕಾರದ ಆಡಳಿತದಲ್ಲಿ ಸುಧಾರಣೆಗಳನ್ನು ಜಾರಿಗೆ ತಂದನು.

ಗಾರ್‌ಫೀಲ್ಡನ ಕೊಲೆಯಾದ ನಂತರ ಆಡಳಿತದಲ್ಲಿ ಸುಧಾರಣೆಗಳಾಗಬೇಕೆಂದು ಕೂಗು ಎದ್ದಿತು. ಕಾಂಗ್ರೆಸ್ ನಿರ್ವಾಹವಿಲ್ಲದೆ ಪೆಂಡಲ್‌ಟನ್ ಕಾಯಿದೆ (Pendleton Act) ಅಥವಾ ಪೌರಸೇವಾ ಸುಧಾರಣಾ ಶಾಸನ (civil service reform act) ವನ್ನು ೧೮೮೩ರಲ್ಲಿ ಜಾರಿಗೆ ತಂದಿತು. ಈ ಶಾಸನ ಒಂದು ಪೌರ ಸೇವಾಸಮಿತಿಯನ್ನು ರಚಿಸಿ ಅರ್ಹತೆಯ ಆಧಾರದ ಮೇಲೆ ಅಧಿಕಾರಿಗಳನ್ನು ಸಾರ್ವಜನಿಕ ಹುದ್ದೆಗಳಿಗೆ (public offices) ಆಯ್ಕೆ ಮಾಡುವ ಜವಾಬ್ದಾರಿಯನ್ನು ಆ ಸಮಿತಿಗೆ ಒಪ್ಪಿಸಲಾಯಿತು. ಪರೀಕ್ಷೆಗಳ ಆಧಾರದ ಮೇಲೆ ಅರ್ಹತೆಯನ್ನು ನಿರ್ಧರಿಸಲಾಗುತ್ತಿತ್ತು. ಪಕ್ಷಗಳು ಹಣ ತೆಗೆದುಕೊಂಡು ಹುದ್ದೆಗಳನ್ನು ಹಂಚುವುದು ಮತ್ತು ಕೆಲಸದಲ್ಲಿದ್ದವರನ್ನು ರಾಜಕೀಯ ಕಾರಣಗಳಿಗಾಗಿ ಕೆಲಸದಿಂದ ತೆಗೆದುಹಾಕುವುದು ಮುಂತಾದ ಪದ್ಧತಿಗಳನ್ನು ರದ್ದುಗೊಳಿಸಲಾಯಿತು. ಪ್ರಾರಂಭದಲ್ಲಿ ಈ ಸಮಿತಿಯ ಕಾರ್ಯವ್ಯಾಪ್ತಿ ಕೇವಲ ಶೇಕಡಾಹತ್ತು ಭಾಗ ಫೆಡರಲ್ ಅಧಿಕಾರಿಗಳಿಗೆ ಸೀಮಿತವಾಗಿತ್ತು. ಕ್ರಮೇಣ ಆ ಕಾರ್ಯವ್ಯಾಪ್ತಿ ಹೆಚ್ಚಿ ೧೯೫೦ರ ಹೊತ್ತಿಗೆ

೩. ಚೆಸ್ಟರ್ ಅಲೆನ್ ಆರ್ಥರ್ ಅಮೆರಿಕದ ೨೧ನೆಯ ಅಧ್ಯಕ್ಷ

ಫೆಡರಲ್ ಅಧಿಕಾರಿಗಳಲ್ಲಿ ಶೇಕಡಾ ೯೦ರಷ್ಟು ಜನ ಅರ್ಹತೆಯ ಮೇಲೆ ಅಧಿಕಾರಕ್ಕೆ ಬರುವಂತಾಯಿತು.

ಪೆಂಡಲ್‌ಟನ್ ಸಾರ್ವಜನಿಕ ಸೇವಾಸುಧಾರಣಾ ಕಾಯಿದೆ ಶಿಫಾರಸ್ಸಿನ ಮೇಲೆ ಸರ್ಕಾರದ ಕೆಲಸಗಳನ್ನು ತಮಗೆ ಬೇಕಾದವರಿಗೆ ಹಂಚುವ ಪದ್ಧತಿಯನ್ನು ಸ್ವಲ್ಪ ಕಡಿಮೆ ಮಾಡಿದರೂ ಅದನ್ನು ಸಂಪೂರ್ಣವಾಗಿ ನಾಶಗೊಳಿಸಲಾಗಲಿಲ್ಲ. ಮಹಾನಗರಗಳ ರಾಜಕೀಯ ಯಂತ್ರಗಳ ಒಡೆಯರು (bosses) ರಾಷ್ಟ್ರೀಯ ಪಕ್ಷಗಳ ನಿರ್ವಾಹಕರು ಮತ್ತು ಕಾಂಗ್ರೆಸ್ ಸದಸ್ಯರು ಹುದ್ದೆಗಳನ್ನು ಹಂಚುವುದನ್ನು ಮುಂದುವರಿಸಿಕೊಂಡು ಹೋದರು. ಇವರೆಲ್ಲರೂ ತಮ್ಮ ಪ್ರಭಾವವನ್ನು ಉಪಯೋಗಿಸಿ ದೊಡ್ಡ ಉದ್ಯಮಿಗಳಿಗೆ ಮತ್ತು ಬೃಹತ್ ಕೈಗಾರಿಕೆಗಳಿಗೆ ಅನುಕೂಲಗಳನ್ನು ಕಲ್ಪಿಸಿಕೊಡುತ್ತಿದ್ದರು. ಇದಕ್ಕೆ ಪ್ರತಿಯಾಗಿ ಅಪಾರ ಹಣ (ಲಂಚ) ಪಡೆಯುತ್ತಿದ್ದರು.

ಅಧ್ಯಕ್ಷ ಆರ್ಥರ್‌ನನ್ನು ಕಾಡುತ್ತಿದ್ದ ಇನ್ನೊಂದು ಸಮಸ್ಯೆಯೆಂದರೆ ಸರ್ಕಾರದ ಖಜಾನೆಯಲ್ಲಿ ಅಧಿಕವಾಗಿದ್ದ ಹಣ (treasury surplus). ರಿಪಬ್ಲಿಕನ್ನರು ಆರ್ಥಿಕ ಅಭಿವೃದ್ಧಿ ಗಳಿಸಲು ಹೆಚ್ಚಿನ ಸುಂಕ ಹೇರುವುದನ್ನು ಬೆಂಬಲಿಸುತ್ತ ಬಂದಿದ್ದರು. ಆದ್ದರಿಂದ ಖಜಾನೆಯಲ್ಲಿ ಹಣ ಶೇಖರವಾಗುತ್ತ ಹೋಯಿತು. ಸರ್ಕಾರ ಖರ್ಚು ಮಾಡುವುದ ಕ್ಕಿಂತಲೂ ವೇಗವಾಗಿ ಸುಂಕದ ಹಣ ಬಂದು ಖಜಾನೆ ಸೇರತೊಡಗಿತು. ಅನೇಕರು ಆ ಹೆಚ್ಚಿನ ಹಣವನ್ನು ಚಲಾವಣೆ ಮಾಡಬೇಕೆಂದು ಒತ್ತಾಯ ಮಾಡಿದರು. ಹಾಗೆ ಮಾಡುವು ದರಿಂದ ಆರ್ಥಿಕ ಚಟುವಟಿಕೆಗಳು ಹೆಚ್ಚುತ್ತವೆ ಎನ್ನುವುದು ಅವರ ನಂಬಿಕೆ. ಆದರೆ ಡೆಮೊಕ್ರಾಟರು ಖಜಾನೆಯಲ್ಲಿರುವ ಅಧಿಕ ಹಣ ದೊಡ್ಡ ಉದ್ಯಮಗಳನ್ನು ಮತ್ತು ಕೈಗಾರಿಕೆಗಳನ್ನು ಬಳಕೆದಾರರು (consumers) ತೆತ್ತ ದುಬಾರಿ ಬೆಲೆಗಳಿಂದ ಉಂಟಾದು ದೆಂದು ವಾದಿಸಿದರು. ಅಧ್ಯಕ್ಷ ಆರ್ಥರ್ ಈ ಸಮಸ್ಯೆಯನ್ನು ಬಗೆಹರಿಸಲು ಎರಡು ಕಾರ್ಯಕ್ರಮಗಳನ್ನು ಜಾರಿಗೆ ತಂದನು. ಮೊದಲನೆಯದಾಗಿ ಎಲ್ಲಾ ವ್ಯಾಪಾರಗಳಿಗೂ ಅನ್ವಯಿಸುವಂತೆ ಶೇಕಡಾ ೨೦ರಷ್ಟು ಸುಂಕ ಕಡಿಮೆ ಮಾಡುವುದು. ಆದರೆ ಉದ್ದಿಮೆಗಾರರ ಒತ್ತಾಯಕ್ಕೆ ಒಳಗಾದ ಕಾಂಗ್ರೆಸ್ 'ಮಿಶ್ರಣ ಸುಂಕ' (mongrel tariff) ವನ್ನು ಅನುಮೋದಿಸಿತು. ಮಿಶ್ರಣ ಸುಂಕ ಮೊದಲಿದ್ದ ಸುಂಕಕ್ಕಿಂತಲೂ ಹೆಚ್ಚಾಗಿತ್ತು. ಅಧ್ಯಕ್ಷ ಆರ್ಥರ್ ಅರೆಮನಸ್ಸಿನಿಂದ ಅದನ್ನು ಒಪ್ಪಿಕೊಂಡು ರುಜು ಮಾಡಿದನು. ಆರ್ಥರ್‌ನ ಎರಡನೆಯ ಯೋಜನೆ ಖಜಾನೆಯಲ್ಲಿ ಅಧಿಕವಾಗಿರುವ ಹಣ ನೌಕಾಪಡೆಯನ್ನು ನವೀನಗೊಳಿಸಲು ಉಪಯೋಗಿಸಿ ಆ ಮೂಲಕ ರಾಷ್ಟ್ರದ ಆರ್ಥಿಕ ಅಭಿವೃದ್ಧಿ ಮತ್ತು ರಕ್ಷಣೆಯನ್ನು ಸಾಧಿಸುವುದು. ಈ ಮಸೂದೆಯನ್ನು ಕಾಂಗ್ರೆಸ್ ಅನುಮೋದಿಸಿತು. ಕೂಡಲೇ ಈ ಕೆಲಸವನ್ನು ಪ್ರಾರಂಭಿಸಿ ಹಂತ ಹಂತವಾಗಿ ಮುಂದುವರಿದು ಕ್ರಮೇಣ ವಿಸ್ತಾರಗೊಂಡು ಶತಮಾನದ ಕೊನೆಯಲ್ಲಿ ಅಮೆರಿಕ ಪ್ರಪಂಚದಲ್ಲಿ ಅತಿಪ್ರಬಲವಾದ ನೌಕಾಶಕ್ತಿಯಾಗಿ ಮುಂದುವರಿಯಿತು.

೧೮೮೪ರ ಚುನಾವಣೆ

ಅಧ್ಯಕ್ಷ ಆರ್ಥರ್ ಅವನ ಪಕ್ಷದ ಕಟ್ಟಾಳುಗಳನ್ನು ಕಡೆಗಣಿಸಿ ಸ್ವತಂತ್ರನಾಗಿ ನಿರ್ಧಾರಗಳನ್ನು ತೆಗೆದುಕೊಂಡು ಅರ್ಹತೆಯ ಆಧಾರದ ಮೇಲೆ ಹುದ್ದೆಗಳನ್ನು ಭರ್ತಿ ಮಾಡತೊಡಗಿದಾಗ ಪಕ್ಷದ ಸದಸ್ಯರ ವೈರ ಕಟ್ಟಿಕೊಂಡನು. ಅವನ ಮೇಲೆ ತಮ್ಮ ವೈರ ಸಾಧಿಸಲು ರಿಪಬ್ಲಿಕನ್ ಪಕ್ಷದ ನಾಯಕರು ಅಧ್ಯಕ್ಷ ಆರ್ಥರ್‌ನನ್ನು ಎರಡನೆಯ ಬಾರಿ ಅಧ್ಯಕ್ಷಸ್ಥಾನಕ್ಕೆ ನಾಮಕರಣ ಮಾಡಲು ನಿರಾಕರಿಸಿದರು. ಅವನ ಬದಲಿಗೆ ರಿಪಬ್ಲಿಕನ್ ಪಕ್ಷ ಜೇಮ್ಸ್ ಬ್ಲೇಯ್ನ್ (James Blaine)ನನ್ನು ನಾಮಕರಣ ಮಾಡಿತು. ಬ್ಲೇಯ್ನ್ ಆಕರ್ಷಣೀಯ ವ್ಯಕ್ತಿತ್ವದವನಾಗಿದ್ದು, ನಿಷ್ಠಾವಂತ ಅನುಯಾಯಿಗಳನ್ನು ಪಡೆದಿದ್ದನು. ಆದರೆ ವಾಣಿಜ್ಯೋದ್ಯಮಿಗಳ ನಿಕಟವರ್ತಿಯಾಗಿದ್ದು, 'ಕ್ರೆಡಿಟ್ ಮೊಬೈಲಿಯರ್' ಹಗರಣದಲ್ಲಿ ಅವನು ಭಾಗವಹಿಸಿದ್ದನೆಂಬ ಆಪಾದನೆ ಇನ್ನೂ ನಿರ್ಣಯವಾಗಿರಲಿಲ್ಲ. ಆದ್ದರಿಂದ ಪೂರ್ವ ಸಂಸ್ಥಾನಗಳಲ್ಲಿನ ಕೆಲವು ಸುಧಾರಕರು ಇವನ ನಾಮಕರಣಕ್ಕೆ ಜಿಗುಪ್ಸೆ ಪಟ್ಟು ಪಕ್ಷವನ್ನು ತ್ಯಜಿಸಿದರು.

ಅಂತರ್ಯುದ್ಧದ ನಂತರ ಮೊದಲ ಬಾರಿಗೆ ಚುನಾವಣೆಯಲ್ಲಿ ಗೆಲ್ಲುವ ಅವಕಾಶ ತೆರೆದುಕೊಂಡಿದೆ ಎನ್ನುವ ಭರವಸೆ ಡೆಮೊಕ್ರಾಟರಲ್ಲಿ ಮೂಡಿತು. ಡೆಮೊಕ್ರಾಟ್ ಪಕ್ಷ ವ್ಯಾಪಾರವರ್ಗದೊಂದಿಗೆ ನಿಕಟಸಂಪರ್ಕ ಹೊಂದಿದ್ದು, ಪಕ್ಷಸುಧಾರಕನೆಂದು ಹೆಸರು ಪಡೆದಿದ್ದ ಗ್ರೋವರ್ ಕ್ಲೀವ್‌ಲ್ಯಾಂಡ್, ಬಫಾಲೊ ನಗರಾಧ್ಯಕ್ಷನಾಗಿದ್ದಾಗ ಪ್ರಾಮಾಣಿಕ ನೆಂದು ಖ್ಯಾತಿ ಪಡೆದಿದ್ದನು. ನಗರದ ಚರಂಡಿಗಳನ್ನು ಮತ್ತು ಬೀದಿಗಳನ್ನು ನಿರ್ವಹಣೆ ಮಾಡುತ್ತಿದ್ದ ಅಧಿಕಾರಿಗಳಲ್ಲಿ ಬೇರೂರಿ ಬೆಳೆದಿದ್ದ ಭ್ರಷ್ಟಾಚಾರವನ್ನು ಹತ್ತಿಕ್ಕಿದ ಕೀರ್ತಿ ಇವನದಾಗಿತ್ತು. ಇವನು ನ್ಯೂಯಾರ್ಕಿನ ಗವರ್ನರ್ ಆಗಿದ್ದಾಗ ವ್ಯಾಪಾರ ಮತ್ತು ಉದ್ದಿಮೆ ಗಳ ಕಾಂಟ್ರಾಕ್ಟ್ ಹಕ್ಕುಗಳನ್ನು ಎತ್ತಿಹಿಡಿದು ಆ ವರ್ಗದವರ ಮೆಚ್ಚುಗೆಗೆ ಪಾತ್ರನಾಗಿದ್ದನು.

೧೮೮೪ರ ಚುನಾವಣೆ ಅಮೆರಿಕದ ಇತಿಹಾಸದಲ್ಲಿ ಅತಿಹುಮ್ಮಸ್ಸಿನಿಂದ ಕೂಡಿದ್ದ ಚುನಾವಣೆಗಳಲ್ಲಿ ಒಂದು ಎಂದು ಹೇಳಬಹುದು. ಈ ಚುನಾವಣೆಯ ಪ್ರಚಾರದಲ್ಲಿ ಪಕ್ಷಗಳ ಧ್ಯೇಯ ಧೋರಣೆಗಳನ್ನು ಚರ್ಚಿಸುವುದು ಬಿಟ್ಟು ಅಭ್ಯರ್ಥಿಗಳ ಅನೀತಿಯುತ ನಡವಳಿಕೆಗಳ ಬಗ್ಗೆ ಹಬ್ಬಿದ ವದಂತಿಗಳನ್ನು ಕುರಿತು ಚರ್ಚೆ ನಡೆಯಿತು. ಪ್ರಚಾರದ ಪ್ರಾರಂಭದಲ್ಲಿ ಅವಿವಾಹಿತನಾಗಿದ್ದ ಕ್ಲೀವ್‌ಲ್ಯಾಂಡ್ ಅನೈತಿಕ ಸಂಬಂಧದಿಂದ ಹುಟ್ಟಿದ ಮಗುವನ್ನು ಸಾಕುವ ಹೊಣೆ ಹೊತ್ತಿದ್ದಾನೆಂದು ತಿಳಿದು ಗುಲ್ಲೆದ್ದಿತು. ಆ ಮಗುವಿನ ತಂದೆ ನಿಜವಾಗಿಯೂ ಕ್ಲೀವ್‌ಲ್ಯಾಂಡನೇ ಎನ್ನುವುದು ಸಾಬೀತಾಗಿಲ್ಲದಿದ್ದರೂ ಅದನ್ನು ಸಾಕುವ ಜವಾಬ್ದಾರಿಯನ್ನು ಅವನು ಹೊತ್ತಿದ್ದನು. ಅದೇ ಸಮಯದಲ್ಲಿ ಪ್ರಕಟವಾದ ಮಲ್ಲಿಗನ್ ಪತ್ರಗಳಲ್ಲಿ 'ಕ್ರೆಡಿಟ್ ಮೊಬೈಲಿಯರ್' ಹಗರಣದಲ್ಲಿ ಕ್ಲೀವ್‌ಲ್ಯಾಂಡ್‌ನ ಕೈವಾಡವಿತ್ತೆಂದು ಆಪಾದಿಸಲಾಗಿತ್ತು. ಚುನಾವಣೆಯಲ್ಲಿ ಅಭ್ಯರ್ಥಿಗಳ ನಡುವೆ ಮತಗಳ

ಅಂತರ ಬಹಳ ಕಡಿಮೆ ಇತ್ತು. ಡೆಮೊಕ್ರಾಟಿಕ್ ಪಕ್ಷ ಪ್ರಜಾಪ್ರತಿನಿಧಿ ಸಭೆಯಲ್ಲಿ ಬಹುಮತ ಗಳಿಸಿತು. ರಿಪಬ್ಲಿಕನ್ನರು ಸೆನೆಟ್‌ನಲ್ಲಿ ಬಹುಮತ ಪಡೆದರು. ಮಗ್‌ವುಂಪ್ಸ್ (mug wumps) ಎಂದು ಕರೆಯಲ್ಪಡುತ್ತಿದ್ದ 'ಲಿಬರಲ್ ರಿಪಬ್ಲಿಕನ್ನರು' ಕ್ಲೀವ್‌ಲ್ಯಾಂಡ್‌ನನ್ನು ಬೆಂಬಲಿಸಿದರು. ಕ್ಲೀವ್‌ಲ್ಯಾಂಡ್‌ನು ಕೇವಲ ೨೯೦೦೦ ಮತಗಳಿಂದ ಗೆದ್ದನು.

ಅಧ್ಯಕ್ಷ ಕ್ಲೀವ್‌ಲ್ಯಾಂಡ್‌ನ ಆಡಳಿತ (೨೨ನೆಯ ಅಧ್ಯಕ್ಷ)

ಅಧ್ಯಕ್ಷ ಕ್ಲೀವ್‌ಲ್ಯಾಂಡ್‌ನು ಅಧಿಕಾರ ಸ್ವೀಕರಿಸಿದ ಸ್ವಲ್ಪ ಸಮಯದಲ್ಲೇ ಮೂರು ಮುಖ್ಯ ಸಮಸ್ಯೆಗಳನ್ನು ಎದುರಿಸಬೇಕಾಯಿತು: ಉತ್ತರ ಮತ್ತು ದಕ್ಷಿಣ ಸಂಸ್ಥಾನಗಳ ಸಂಬಂಧಗಳು ಕೂಡಲೇ ಕೈಗೊಳ್ಳಬೇಕಾಗಿದ್ದ ಸುಧಾರಣೆಗಳು ಮತ್ತು ಸುಂಕದ ಸಮಸ್ಯೆಗಳು. ತನ್ನ ಪಕ್ಷದ ಧೋರಣೆಯನ್ನನುಸರಿಸಿ ಕ್ಲೀವ್‌ಲ್ಯಾಂಡ್ ದಕ್ಷಿಣ ಸಂಸ್ಥಾನಗಳನ್ನು ರಾಷ್ಟ್ರದೊಳಗೆ ಸಂಪೂರ್ಣವಾಗಿ ಅನುಕಲನಗೊಳಿಸಬೇಕೆಂದು ಇಚ್ಛೆಪಟ್ಟನು. ಈ ಉದ್ದೇಶದಿಂದ ಅವನು ಇಬ್ಬರು ಮಾಜಿ ಕಾನ್‌ಫೆಡರೇಟ್ ಸೈನ್ಯಾಧಿಪತಿಗಳನ್ನು ತನ್ನ ಆಡಳಿತ ಮಂಡಳಿಗೆ ಸೇರಿಸಿಕೊಂಡಾಗಿನಿಂದ ಅವನ ಸಮಸ್ಯೆಗಳು ಪ್ರಾರಂಭವಾದವು. ಅಂತರ್ಯುದ್ಧದಲ್ಲಿ ವಶಪಡಿಸಿಕೊಂಡಿದ್ದ ಕಾನ್‌ಫೆಡರೇಟ್ ಧ್ವಜಗಳನ್ನು ದಕ್ಷಿಣ ಸಂಸ್ಥಾನಗಳಿಗೆ ವಾಪಸ್ಸು ಮಾಡಿದಾಗ ಸಮಸ್ಯೆ ಉಲ್ಬಣಗೊಂಡಿತು. ೧೮೮೭ರಲ್ಲಿ ಅಧ್ಯಕ್ಷ ಕ್ಲೀವ್‌ಲ್ಯಾಂಡ್ 'ಆಶ್ರಿತರ ನಿವೃತ್ತಿವೇತನ ಮಸೂದೆ'ಯನ್ನು ರದ್ದುಗೊಳಿಸಿದನು. ಈ ಮಸೂದೆ ಅಂಗೀಕೃತವಾಗಿ ಕಾಯಿದೆ ರೂಪದಲ್ಲಿ ಜಾರಿಗೆ ಬಂದಿದ್ದರೆ ಒಕ್ಕೂಟದ (ಫೆಡರಲ್) ನಿವೃತ್ತ ಸೈನಿಕರಿಗೆ ಅಪಾರಮೊತ್ತದ ಹಣ ದೊರೆಯುತ್ತಿತ್ತು. ಕ್ಲೀವ್‌ಲ್ಯಾಂಡ್ ಈ ಮಸೂದೆಯನ್ನು 'ವೀಟೊ' ಮಾಡಿದ್ದಕ್ಕೆ ನಿವೃತ್ತ ಸೈನಿಕರು ಕೋಪಗೊಂಡರು. ಹೀಗೆ ಮಾಡಿದ್ದು ಅವನು ದಕ್ಷಿಣ ಸಂಸ್ಥಾನಗಳ ಪರ ವಹಿಸುತ್ತಾನೆ ಎನ್ನುವ ಅನುಮಾನ ಅನೇಕರಿಗೆ ಉಂಟಾಯಿತು.

ಸರ್ಕಾರಿ ಹುದ್ದೆಗಳಿಗೆ ಅಧಿಕಾರಿಗಳನ್ನು ನೇಮಿಸುವ ವಿಧಾನದಲ್ಲಿ ಸುಧಾರಣೆಗಳನ್ನು ಜಾರಿಗೆ ತರುವುದರಲ್ಲಿ ಅಧ್ಯಕ್ಷ ಕ್ಲೀವ್‌ಲ್ಯಾಂಡ್‌ನು ಮಧ್ಯಮ ಮಾರ್ಗವನ್ನು ಅನುಸರಿಸಿದನು. ಸುಧಾರಣೆ ಮಾಡಬೇಕೆಂದು ದೃಢನಿಶ್ಚಯ ಮಾಡಿಕೊಂಡಿದ್ದರೂ ಪಕ್ಷನಿಷ್ಠೆ ತೋರಿಸಲು, ರಿಪಬ್ಲಿಕನ್ ಪಕ್ಷದ ಶಿಫಾರಸ್ಸಿನ ಮೇಲೆ ಹುದ್ದೆಗಳಿಗೆ ನೇಮಕಗೊಂಡು ಬಹಳ ಕಾಲದಿಂದ ಅಧಿಕಾರ ಚಲಾಯಿಸುತ್ತಿದ್ದ ಸರ್ಕಾರಿ ನೌಕರರನ್ನು ಕೆಲಸದಿಂದ ತೆಗೆದುಹಾಕಿ ಅವರ ಜಾಗಕ್ಕೆ ಡೆಮೊಕ್ರಾಟಿಕ್ ಪಕ್ಷಕ್ಕೆ ನಿಷ್ಠೆಯುಳ್ಳ ನೌಕರರನ್ನು ನೇಮಿಸಲು ನಿರ್ಧರಿಸಿದನು. ಅದರಂತೆ ೪೦೦೦೦ ರಿಪಬ್ಲಿಕನ್ ಪೋಸ್ಟ್‌ಮಾಸ್ಟರ್‌ಗಳನ್ನು ಕೆಲಸದಿಂದ ತೆಗೆದುಹಾಕಿ ಅವರ ಬದಲಿಗೆ ಡೆಮೊಕ್ರಾಟರನ್ನು ನೇಮಿಸಿದನು. ಇದರಿಂದ ಡೆಮೊಕ್ರಾಟಿಕ್ ಪಕ್ಷಕ್ಕೆ ತೃಪ್ತಿಯಾಗಲಿಲ್ಲ. ಆದರೆ ಅವನನ್ನು ಬೆಂಬಲಿಸಿದ್ದ ಸುಧಾರಕರಿಗೆ (mug wumps) ಅದು ಅತಿರೇಕವಾಗಿ ಕಾಣಿಸಿತು. ಹೀಗೆ ಅಧ್ಯಕ್ಷ ಕ್ಲೀವ್‌ಲ್ಯಾಂಡ್‌ನು ಮಧ್ಯಮಮಾರ್ಗ

ಹಿಡಿಯಲು ಹೋಗಿ ಸುಧಾರಕರ ಮತ್ತು ಸಾಮಾನ್ಯ ಡೆಮೊಕ್ರಾಟರ ಪರಕೀಯತೆಗೆ ಗುರಿಯಾದನು.

ಕೈಗಾರಿಕೋದ್ಯಮಿಗಳು ಮತ್ತು ಶ್ರೀಮಂತ ವ್ಯಾಪಾರಿಗಳು ಸರ್ಕಾರದ ಮೇಲೆ ಪ್ರಭಾವ ಬೀರುವುದನ್ನು ತಪ್ಪಿಸಲು ಕಾರ್ಯಕ್ರಮ ಕೈಗೊಂಡ ಅಧ್ಯಕ್ಷರಲ್ಲಿ ಕ್ಲೀವ್‌ಲ್ಯಾಂಡ್ ಮೊದಲಿಗನು. ಇವನು ರೈಲ್ವೆ ಕಂಪನಿಗಳ, ನಾಟಾ ಕಂಪನಿಗಳ ಮತ್ತು ತುರುಮಂದೆಗಳ ಮಾಲೀಕರ ವ್ಯವಹಾರಗಳನ್ನು ತನಿಖೆಗೆ ಒಳಪಡಿಸಿದನು. ಅಂತರ ಸಂಸ್ಥಾನಗಳ ವಾಣಿಜ್ಯ ಕಾಯಿದೆಯನ್ನು (interstate commerce act) ಅನುಮೋದಿಸಿದನು. ಸುಂಕದ ದರವನ್ನು ಕಡಿಮೆ ಮಾಡುವುದರ ಮೂಲಕ ಖಜಾನೆಯಲ್ಲಿ ಹಣ ಶೇಖರಗೊಂಡು ವೃದ್ಧಿಸುವುದನ್ನು ತಪ್ಪಿಸಿ ಅದರ ಪರಿಣಾಮವಾಗಿ ಭ್ರಷ್ಟಾಚಾರ ಕಡಿಮೆಯಾಗುವಂತೆ ಮಾಡಿದನು. ಸುಂಕದ ದರ ಇಳಿಸಲು ಇನ್ನೊಂದು ಕಾರಣವೆಂದರೆ ಅದು ಪದಾರ್ಥಗಳ ಕೃತಕ ಬೆಲೆ ಏರಿಕೆಗೆ ಕಾರಣವಾಗುತ್ತದೆ; ಈ ಬೆಲೆ ಏರಿಕೆ ಹೆಚ್ಚಿನ ಆದಾಯವಿಲ್ಲದವರಿಗೆ, ಬಡ ಬಗ್ಗರಿಗೆ ಹಾಗೂ ನಿರುದ್ಯೋಗಿಗಳಿಗೆ ಹೊರಲಾರದ ಭಾರವಾಗುತ್ತದೆ ಎನ್ನುವ ಅನುಕಂಪ. ಕ್ಲೀವ್‌ಲ್ಯಾಂಡ್ ಒತ್ತಾಯದ ಮೇರೆಗೆ ಸುಂಕದ ದರವನ್ನು ಕಡಿಮೆ ಮಾಡುವ ಮಸೂದೆಯನ್ನು ಕಾಂಗ್ರೆಸ್ಸಿನಲ್ಲಿ ಮಂಡಿಸಲಾಯಿತು. ಆದರೆ ಸೆನೆಟ್‌ನಲ್ಲಿ ಬಹುಸಂಖ್ಯಾತರಾಗಿದ್ದ ರಿಪಬ್ಲಿಕನ್ನರು ಅದು ಅಂಗೀಕೃತವಾಗದಂತೆ ತಡೆದರು. ಈ ಸುಂಕದ ಸಮಸ್ಯೆ ೧೮೮೮ರ ಚುನಾವಣಾ ವೇದಿಕೆಯ ಪ್ರಮುಖ ವಿವಾದಾತ್ಮಕ ವಿಷಯವಾಯಿತು.

೧೮೮೮ರ ಚುನಾವಣೆ

ಅಧ್ಯಕ್ಷ ಕ್ಲೀವ್‌ಲ್ಯಾಂಡ್‌ನು ಸುಂಕದ ದರವನ್ನು ಕಡಿಮೆ ಮಾಡುವ ಧೋರಣೆಯನ್ನು ಕೆಲವು ಡೆಮೊಕ್ರಾಟರು ಒಪ್ಪದಿದ್ದರೂ ಅವನನ್ನೇ ಪುನಃ ೧೮೮೮ನೆಯ ಚುನಾವಣೆಯಲ್ಲಿ ಡೆಮೊಕ್ರಾಟಿಕ್ ಪಕ್ಷ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ಆರಿಸಿತು. ರಿಪಬ್ಲಿಕನ್ನರು ಫೆಡರಲ್ ಸೈನ್ಯದ ಮಾಜಿ ಅಧಿಕಾರಿಯಾಗಿದ್ದ ಇಂಡಿಯಾನಾ ಸಂಸ್ಥಾನದ ಸೆನೆಟರ್ ಬೆಂಜಮಿನ್ ಹ್ಯಾರಿಸನ್ (Banjamin Harrison)ನನ್ನು ಅಭ್ಯರ್ಥಿಯಾಗಿ ನಾಮಕರಣ ಮಾಡಿದರು. ಹ್ಯಾರಿಸನ್ ಸೈನಿಕರ ನಿವೃತ್ತಿ ವೇತನದ ಮಸೂದೆಯನ್ನು ಅಧ್ಯಕ್ಷ ಕ್ಲೀವ್‌ಲ್ಯಾಂಡ್ ವೀಟೊ ಮಾಡಿದ್ದನ್ನು ಚುನಾವಣಾ ಪ್ರಚಾರದ ಪ್ರಮುಖ ವಿಷಯವನ್ನಾಗಿ ಮಾಡಿಕೊಂಡು ಪರಿಣಾಮಕಾರಿಯಾಗಿ ಉಪಯೋಗಿಸಿದನು. ಕ್ಲೀವ್‌ಲ್ಯಾಂಡ್ ಸುಂಕದ ದರವನ್ನು ತನ್ನ ಚುನಾವಣಾ ಪ್ರಚಾರದ ಪ್ರಧಾನ ವಿಷಯವಾಗಿ ಬಳಸಿಕೊಂಡನು. ಹ್ಯಾರಿಸನ್ ಸುಂಕದ ದರ ಏರಿಕೆಯನ್ನು ಬೆಂಬಲಿಸಿದನು. ಚುನಾವಣಾ ಸಮಿತಿ ಸುಂಕದ ದರ ಏರಿಕೆಯನ್ನು ಬಯಸುತ್ತಿದ್ದ ಕೈಗಾರಿಕೋದ್ಯಮಿಗಳಿಂದ ಮತ್ತು ವ್ಯಾಪಾರಿಗಳಿಂದ ಹ್ಯಾರಿಸನ್ ಚುನಾವಣಾ ನಿಧಿಯನ್ನು ಶೇಖರಿಸಿದನು. ಚುನಾವಣೆಗಾಗಿ ಇಷ್ಟು ಅಪಾರಮೊತ್ತದ ಹಣ (೪ ಮಿಲಿಯನ್ ಡಾಲರ್‌ಗಳು) ಶೇಖರವಾಗಿದ್ದು ಅದೇ ಮೊದಲು. ಈ ಹಣ ರಿಪಬ್ಲಿಕನ್ ಪಕ್ಷಕ್ಕೆ ಬಹಳ

ಸಹಾಯಕಾರಿಯಾಯಿತು. ಯಾವ ಪ್ರಾಂತಗಳಲ್ಲಿ ಎರಡು ಪಕ್ಷಗಳು ಸಮಾನ ಬಲವುಳ್ಳವುಗಳಾಗಿ ಯಾವ ಒಂದು ಪಕ್ಷ ಬಹುಮತ ಗಳಿಸಲಾರದ ಸಂದರ್ಭಗಳಲ್ಲಿ ರಿಪಬ್ಲಿಕನ್ನರು ಹಣವನ್ನು ಹಂಚಿ ಮತಗಳನ್ನು ಕೊಂಡುಕೊಳ್ಳುತ್ತಿದ್ದರು.

ಕ್ಲೀವ್‌ಲ್ಯಾಂಡ್ ತಾನೇ ಮುಂದಾಗಿ ಜನರ ಸಂಪರ್ಕ ಬೆಳೆಸಿಕೊಳ್ಳುವ ಉತ್ಸಾಹ ಪ್ರವೃತ್ತಿಯವನು. ಆದರೆ ಹ್ಯಾರಿಸನ್ ಸಂಕೋಚ ಸ್ವಭಾವದ ಮಿತಭಾಷಿಯಾಗಿದ್ದನು. ಕ್ಲೀವ್‌ಲ್ಯಾಂಡ್ ಚುನಾವಣಾ ಪ್ರಚಾರದಲ್ಲಿ ಭಾಗವಹಿಸುವುದು ತನ್ನ ಘನತೆಗೆ ತಕ್ಕುದಲ್ಲವೆಂದು ಪ್ರಚಾರವೇದಿಕೆಗಳಲ್ಲಿ ಭಾಗವಹಿಸಿ ತನ್ನ ಧೋರಣೆಗಳನ್ನು ಮತದಾರರಿಗೆ ಸ್ಪಷ್ಟಪಡಿಸಲು ನಿರಾಕರಿಸಿದನು. ಇದಕ್ಕೆ ವ್ಯತಿರಿಕ್ತವಾಗಿ ಹ್ಯಾರಿಸನ್ ತನ್ನ ಮನೆಯ ಅಂಗಳದಿಂದಲೇ ಯಶಸ್ವಿಯಾಗಿ ಚುನಾವಣೆ ಪ್ರಚಾರ ಭಾಷಣಗಳನ್ನು – ಎಂಬತ್ತಕ್ಕೂ ಹೆಚ್ಚು – ಮಾಡಿ ಮತದಾರರ ಮನ ಒಲಿಸಿಕೊಂಡನು. ಪ್ರಚಾರದ ಕೊನೆಯ ದಿನಗಳಲ್ಲಿ ಕ್ಲೀವ್‌ಲ್ಯಾಂಡ್ ಐರಿಷ್ ಮತದಾರರ ಬೆಂಬಲ ಕಳೆದುಕೊಂಡನು. ಈ ಮತಗಳು ನಿರ್ಣಾಯಕವಾಗಿದ್ದವು. ಐರಿಷ್ ಮತದಾರರು ಕ್ಲೀವ್‌ಲ್ಯಾಂಡ್‌ನಿಗೆ ವಿರೋಧಿಗಳಾಗಿದ್ದಕ್ಕೆ ಕಾರಣ ಬ್ರಿಟಿಷ್ ರಾಯಭಾರಿ ಕ್ಲೀವ್‌ಲ್ಯಾಂಡ್‌ನನ್ನು ಬೆಂಬಲಿಸಿ ಬರೆದ ಪತ್ರದಿಂದಾಗಿ. ಇಂಗ್ಲೆಂಡಿನಿಂದ ಸ್ವಾತಂತ್ರ್ಯವನ್ನು ಪಡೆಯಲು ಹೋರಾಟ ನಡೆಸಿದ್ದ ಐರಿಷರು ಬ್ರಿಟಿಷರನ್ನು ದ್ವೇಷಿಸುತ್ತಿದ್ದರು. ಆದ್ದರಿಂದ ಐರಿಷರು ಹ್ಯಾರಿಸನ್‌ಗೆ ಮತ ನೀಡಲು ನಿರ್ಧರಿಸಿದರು. ಆದಾಗ್ಯೂ ಚುನಾವಣೆಯಲ್ಲಿ ಕ್ಲೀವ್‌ಲ್ಯಾಂಡ್ ಹ್ಯಾರಿಸನ್‌ಗಿಂತ ಹೆಚ್ಚಿಗೆ ಸಾರ್ವಜನಿಕರ ಮತ ಪಡೆದಿದ್ದನು. ಆದಾಗ್ಯೂ, ಎಲೆಕ್ಟರಲ್ ಕಾಲೇಜಿನಲ್ಲಿ ಹ್ಯಾರಿಸನ್‌ಗೆ ೨೩೩ ಅಂತ್ತು ಕ್ಲೀವ್‌ಲ್ಯಾಂಡ್‌ಗೆ ೧೬೦ ಮತಗಳು ಸಿಕ್ಕಿದ್ದರಿಂದ ಹ್ಯಾರಿಸನ್ ಅಧ್ಯಕ್ಷನಾಗಿ ಆಯ್ಕೆಯಾದನು.

ಅಧ್ಯಕ್ಷ ಹ್ಯಾರಿಸನ್‌ನ ಆಡಳಿತ

ಬೆಂಜಮಿನ್ ಹ್ಯಾರಿಸನ್ ಅಮೆರಿಕದ ೨೩ನೆಯ ಅಧ್ಯಕ್ಷ. ಇವನು ಅಧ್ಯಕ್ಷನಾದ ಸ್ವಲ್ಪ ಕಾಲದಲ್ಲಿಯೇ ಅವನು ಚುನಾವಣೆಯ ಪ್ರಚಾರದಲ್ಲಿ ಮಾಡಿದ್ದ ವಾಗ್ದಾನಗಳು – ಸಾರ್ವಜನಿಕ ಸೇವಾವ್ಯವಸ್ಥೆ ಮತ್ತು ಚುನಾವಣೆ ವಿಧಾನಗಳ ಸುಧಾರಣೆಗಳು – ಬರಿ ಮಾತಾಗಿಯೇ ಉಳಿಯುತ್ತವೆ ಎನ್ನುವುದು ಎಲ್ಲರಿಗೂ ಸ್ಪಷ್ಟವಾಯಿತು. ರಿಪಬ್ಲಿಕನ್ ರಾಜಕಾರಣಿಗಳು ಸಿಕ್ಕಿದ ಅವಕಾಶವನ್ನು ತಮ್ಮ ಸ್ವಾರ್ಥಸಾಧನೆಗೆ ಬಳಸಿಕೊಳ್ಳಲು ತಡಮಾಡಲಿಲ್ಲ. ಯುವಕನಾಗಿದ್ದ ಥಿಯೊಡೊರ್ ರೂಸ್‌ವೆಲ್ಟ್ (Theodore Roosevelt)ನನ್ನು ಸಾರ್ವಜನಿಕ ಸೇವಾಸಮಿತಿಗೆ (Civil Rights Commission) ನೇಮಿಸಿದರು. ರೂಸ್‌ವೆಲ್ಟ್ ಸಾರ್ವಜನಿಕ ಕ್ಷೇತ್ರದಲ್ಲಿ ತೀವ್ರ ಸುಧಾರಣೆ ಮಾಡಲು ನಿರ್ಧರಿಸಿದ್ದನು. ಆದರೆ ಅಧ್ಯಕ್ಷನ ಬೆಂಬಲವಿಲ್ಲದೆ ಅವನಿಗೆ ಹೆಚ್ಚಿನ ಸುಧಾರಣೆಗಳನ್ನು ಮಾಡಲು ಅವಕಾಶ ದೊರೆಯದೆ ಹತಾಶನಾದನು. ಅಧ್ಯಕ್ಷ ಹ್ಯಾರಿಸನ್‌ನ ಆಡಳಿತ ವೈಖರಿ ರೂಸವೆಲ್ಟ್‌ಗೆ ಮುಜುಗರ ಹುಟ್ಟಿಸಿತು.

ರಿಪಬ್ಲಿಕನ್ನರು ತಮ್ಮ ಚುನಾವಣಾ ವಾಗ್ದಾನದಂತೆ ಮಾಜಿ ಸೈನಿಕರ ಆಶ್ರಿತ ನಿವೃತ್ತಿವೇತನ ಮಸೂದೆಯನ್ನು ಅಂಗೀಕರಿಸಿ ಜಾರಿಗೆ ತಂದರು. ಇದೇ ರೀತಿ ೧೮೯೦ರ ಮೆಕಿನ್ಲೆ ಸುಂಕವನ್ನೂ (McKinley Tariff) ಜಾರಿಗೆ ತಂದರು. ಮೆಕಿನ್ಲಿ ಸುಂಕದ ದರ ಅಮೆರಿಕದ ಇತಿಹಾಸದಲ್ಲಿ ಶಾಂತಿಕಾಲದ ಸುಂಕದ ದರಗಳಲ್ಲಿ ಅತ್ಯಂತ ಹೆಚ್ಚಿನದು. ಸಕ್ಕರೆ, ಕಾಫಿ ಮತ್ತು ಟೀಗಳನ್ನು ಸುಂಕದ ಪಟ್ಟಿಗೆ ಸೇರಿಸಿರಲಿಲ್ಲ. ಆದರೂ ಸಹ ತಮ್ಮ ಹಿತಾಸಕ್ತಿಗಳನ್ನು ಉಳಿಸಲು ರಿಪಬ್ಲಿಕನ್ ಪಕ್ಷದ ರಕ್ಷಣಾಕಾರರು (protectionists) ಪಶ್ಚಿಮ ಪ್ರಾಂತಗಳ ರಿಪಬ್ಲಿಕನ್ನರಿಗೆ ಅನೇಕ ರಿಯಾಯಿತಿಗಳನ್ನು ಮಾಡಿಕೊಟ್ಟು ತಮ್ಮ ಸುಂಕದ ಮಸೂದೆಯನ್ನು ಬೆಂಬಲಿಸುವಂತೆ ಮಾಡಿದರು.

೧೮೮೯ ಮತ್ತು ೧೮೯೦ರ ಅವಧಿಯಲ್ಲಿ ಆರು ಪಶ್ಚಿಮ ಪ್ರಾಂತಗಳು ಸಂಯುಕ್ತ ಸಂಸ್ಥಾನಗಳ ಒಕ್ಕೂಟವನ್ನು ಸೇರಿದ್ದು ಪಶ್ಚಿಮ ಪ್ರಾಂತಗಳ ರಿಪಬ್ಲಿಕನ್ನರು ಬಲಶಾಲಿಗಳಾಗಲು ಕಾರಣವಾಯಿತು. ಇದೇ ಪ್ರಾಂತಗಳ ರೈತರು ಸುಂಕ ಏರಿಕೆಯನ್ನು ವಿರೋಧಿಸಿದರೂ ಅವರ ಪ್ರತಿನಿಧಿಗಳು ಮೆಕಿನ್ಲೆ ಸುಂಕದ ಮಸೂದೆಯನ್ನು ಮನ್ನಿಸಿ ತಮ್ಮ ಮತ ನೀಡಿದ್ದು ಒಂದು ಷರತ್ತಿನ ಮೇಲೆ. ಅದೇನೆಂದರೆ, ತಮ್ಮ ಕೆಲವು ಕೃಷಿಸಾಮಗ್ರಿಗಳನ್ನು ಮತ್ತು ಉತ್ಪನ್ನಗಳನ್ನು ಮೆಕಿನ್ಲಿ ಸುಂಕದ ರಕ್ಷಣಾಪಟ್ಟಿಯಲ್ಲಿ ಸೇರಿಸಬೇಕೆಂದು ಮತ್ತು ಸುಂಕದ ಮಸೂದೆಯ ಬೆಂಬಲಿಗರೆಲ್ಲ 'ಶರ್‌ಮನ್ ಬೆಳ್ಳಿ ಖರೀದಿಸುವ ಕಾಯಿದೆ' (The Sherman Silver Purchase Act)ಯ ಪರವಾಗಿ ಮತ ನೀಡಬೇಕೆಂದು ಆಗ್ರಹ ಪಡಿಸಿದರು. ಶರ್‌ಮನ್ ಕಾಯಿದೆಯ ಪ್ರಕಾರ ಫೆಡರಲ್ ಸರ್ಕಾರ ನಾಲ್ಕೂವರೆ ಮಿಲಿಯನ್ ಔನ್ಸ್ (ounces) ಬೆಳ್ಳಿಯನ್ನು ಪ್ರತಿ ತಿಂಗಳೂ ಕೊಳ್ಳಬೇಕೆಂದು ಒತ್ತಾಯ ಮಾಡಿದರು. ಬೆಳ್ಳಿ ನಾಣ್ಯಗಳ ಚಲಾವಣೆಯನ್ನು ವಿಸ್ತಾರಗೊಳಿಸುವುದು ಅವರ ಉದ್ದೇಶವಾಗಿತ್ತು. ಸುಂಕದಿಂದ ರಕ್ಷಣೆ ಪಡೆದರೂ ಸಹ ರೈತರ ಕೃಷಿ ಉತ್ಪನ್ನಗಳ ಬೆಲೆ ಇಳಿಯುತ್ತ ಹೋಯಿತು. ಶರ್‌ಮನ್ ಕಾಯಿದೆ ಹೆಚ್ಚು ಹಣ ಚಲಾವಣೆಯಾಗುವಂತೆ ಮಾಡುವುದರಲ್ಲಿ ವಿಫಲಗೊಂಡಿತು.

ಅಮೆರಿಕದ ಪಶ್ಚಿಮ ಪ್ರಾಂತದ ಆಕ್ರಮಣ

ಮೇರೆಯಿಲ್ಲದಂತೆ ಮೈಚಾಚಿಕೊಂಡಿದ್ದ ಪಶ್ಚಿಮದ ಮೈದಾನಗಳು ಮತ್ತು ರಾಕಿ ಪರ್ವತಗಳಾಚೆ ಇದ್ದ ಪ್ರದೇಶಗಳಲ್ಲಿ ಜನವಸತಿ ಬಹಳ ಕಡಿಮೆಯಾಗಿತ್ತು. ೧೮೫೦ರ ದಶಕದಲ್ಲಿ ಈ ಪ್ರಾಂತ ವನ್ಯಮೃಗಗಳಿಂದ – ಜಿಂಕೆಗಳು, ದೊಡ್ಡ ಗಾತ್ರದ ಮೊಲಗಳು, ನರಿ, ತೋಳಗಳು, ಹಕ್ಕಲು ನಾಯಿಗಳು ಮತ್ತು ಮಿಲಿಯಗಟ್ಟಲೆ ಕಾಡು ಕೋಣಗಳು – ಮತ್ತು ಆದಿವಾಸಿಗಳಾದ ನೂರಾರು ಸಾವಿರ ಇಂಡಿಯನ್ನರ ಬುಡಕಟ್ಟುಗಳಿಂದ ಕೂಡಿ ಪ್ರಕೃತಿ ಸಂಪತ್ತಿನಿಂದ ಸಮೃದ್ಧವಾಗಿತ್ತು. ೧೮೭೦ರ ಹೊತ್ತಿಗಾಗಲೇ ಪಶ್ಚಿಮ ಪ್ರಾಂತದಲ್ಲಿ ಆರು ಮಿಲಿಯನ್ ಬಿಳಿಯರು ವಲಸೆ ಬಂದು ನೆಲಸಿದ್ದರು. ೧೮೯೦ನೆಯ ಇಸವಿ

ತಲುಪುವುದರೊಳಗೆ 'ಕಡೆಯ ಗಡಿನಾಡು' (last frontier) ಇಲ್ಲವಾಗಿತ್ತು. ಈ ವಿಶಾಲ ಪ್ರಾಂತವನ್ನು ಸಂಸ್ಥಾನಗಳಾಗಿ, ಸಣ್ಣ ಪ್ರಾಂತಗಳಾಗಿ ವಿಂಗಡನೆ ಮಾಡಿ ಜನವಸತಿಗೆ ಅನುಕೂಲ ಮಾಡಿಕೊಡಲಾಯಿತು. ಬೇರೆ ದೇಶಗಳಿಂದ ಅತಿ ಹೆಚ್ಚು ಸಂಖ್ಯೆಯಲ್ಲಿ ಅಮೆರಿಕಕ್ಕೆ ಬಂದ ವಲಸೆಗಾರರು ಪಶ್ಚಿಮದಲ್ಲಿ ಹೆಚ್ಚು ಅವಕಾಶಗಳಿದದ್ದರಿಂದ ಅವರ ಪ್ರವಾಹ ಪಶ್ಚಿಮಕ್ಕೆ ಹರಿಯತೊಡಗಿ ಜನಸಂಖ್ಯೆ ೧೬ ಮಿಲಿಯನ್ ಮುಟ್ಟಿತು.

೧೯೧೨ನೆಯ ಇಸವಿಯ ಹೊತ್ತಿಗೆ ಅಮೆರಿಕ ಭೂಖಂಡದ ಮೇಲೆ ಸಂಯುಕ್ತ ಸಂಸ್ಥಾನಗಳು ಸ್ಥಾಪನೆಗೊಂಡಿದ್ದವು. ಪೂರ್ವತೀರದಲ್ಲಿ ಮೊದಲು ಸ್ಥಾಪನೆಗೊಂಡ ಸಂಸ್ಥಾನಗಳಿಗೂ ಮತ್ತು ಪಶ್ಚಿಮ ತೀರ ಪ್ರದೇಶಕ್ಕೂ ನಡುವಣ ವಿಶಾಲಪ್ರದೇಶವನ್ನು ಸಂಯುಕ್ತ ಸಂಸ್ಥಾನಗಳ ಕೂಟಕ್ಕೆ ಸೇರಿಸಿಕೊಳ್ಳುವ ಕಾರ್ಯ ಕಾನ್ಸಾಸ್ ಪ್ರಾಂತದಿಂದ ಪ್ರಾರಂಭವಾಯಿತು. ಕಾನ್ಸಾಸ್ ಪ್ರಾಂತ ಸಂಯುಕ್ತ ಸಂಸ್ಥಾನಕ್ಕೆ ಸೇರಿದ್ದು ೧೮೬೧ರಲ್ಲಿ. ಇದಾದ ಮೂರು ವರ್ಷಗಳ ಮೇಲೆ ಗಣಿ ಕೆಲಸಗಾರರ ವಲಸೆಯಿಂದ ಜನಭರಿತವಾದ, ಖನಿಜ ಸಂಪತ್ತಿನಿಂದ ಕೂಡಿದ ನೆವಾಡ ಪ್ರಾಂತ ಸಂಯುಕ್ತ ಸಂಸ್ಥಾನಗಳನ್ನು ಸೇರಿಕೊಂಡಿತು. ೧೮೬೭ರಲ್ಲಿ ನೆಬ್ರಾಸ್ಕ ಮತ್ತು ೧೮೭೬ರಲ್ಲಿ ಕೊಲರಾಡೊ ಪ್ರಾಂತಗಳನ್ನು ಸೇರಿಸಿಕೊಂಡ ಬಳಿಕ ೧೮೮೯ರವರೆಗೆ ಮತ್ತೆ ಯಾವ ಹೊಸ ಸಂಸ್ಥಾನಗಳನ್ನೂ ರಚನೆ ಮಾಡಲಿಲ್ಲ. ೧೮೮೯ರಲ್ಲಿ ರಿಪಬ್ಲಿಕನ್ ಪಕ್ಷದ ನಿಯಂತ್ರಣದಲ್ಲಿದ್ದ ಕಾಂಗ್ರೆಸ್ ಅವಸರದಿಂದ ಉತ್ತರ ಡಕೋಟ, ದಕ್ಷಿಣ ಡಕೋಟ ಮತ್ತು ವಾಷಿಂಗಟನ್ ಪ್ರಾಂತಗಳನ್ನು ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಂಡಿತು. ಹೀಗೆ ಮಾಡಿದ್ದರಿಂದ ರಿಪಬ್ಲಿಕನ್ ಪಕ್ಷದ ಪ್ರಭಾವ ಈ ಸಂಸ್ಥಾನಗಳಲ್ಲಿ ಹೆಚ್ಚುತ್ತದೆ ಎಂದು ನಂಬಿದ್ದರು. ಇದೇ ಕಾರಣಕ್ಕಾಗಿ ಮಾರನೆಯ ವರ್ಷ ವಯೋಮಿಂಗ್ (Wyoming) ಮತ್ತು ಐಡಾಹೊ (Idaho) ಪ್ರಾಂತಗಳನ್ನು ಸೇರಿಸಿಕೊಳ್ಳಲಾಯಿತು. ಯೂಟ (Utah) ಪ್ರಾಂತದ ಮಾರ್ಮನ್ ಜನಾಂಗ (Mormons) ಬಹುಪತ್ನಿತ್ವವನ್ನು ತ್ಯಜಿಸಿದ ಮೇಲೆ ೧೮೯೬ರಲ್ಲಿ ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಳ್ಳಲಾಯಿತು. ೧೮೮೯ರಲ್ಲಿ ಫೆಡರಲ್ ಸರ್ಕಾರ ಓಕ್ಲಹೋಮ ದಲ್ಲಿ ಇಂಡಿಯನ್ನರಿಗೆ ಮೀಸಲಾಗಿಟ್ಟಿದ್ದ (reservation) ಪ್ರದೇಶದ ಒಂದು ಭಾಗವನ್ನು ಬಿಳಿಯರ ವಸತಿಗಾಗಿ ತೆರೆಯಲಾಯಿತು. ಆ ಪ್ರದೇಶದ ಫಲವತ್ತಾದ ಭೂಮಿ ಮತ್ತು ತೈಲಶೋಧನೆಯ ಅನುಕೂಲ ಹತ್ತು ತಿಂಗಳೊಳಗೆ ೬೦೦೦೦ ಜನರನ್ನು ಆಕರ್ಷಿಸಿತು. ೧೯೦೭ರಲ್ಲಿ ಓಕ್ಲಹೋಮ ಪ್ರಾಂತ ತನ್ನ ಅರ್ಧ ಮಿಲಿಯನ್ ಜನಸಂಖ್ಯೆಯೊಡನೆ ಸಂಯುಕ್ತ ಸಂಸ್ಥಾನಗಳನ್ನು ಸೇರಿಕೊಂಡಿತು.

ಗ್ವಾಡಲೂಪೆ ಹಿಡಾಲ್ಗೊ (Guadalupe Hidalgo) ಒಪ್ಪಂದ ಮೆಕ್ಸಿಕನ್-ಅಮೆರಿಕನ್ನರಿಗೆ ಆಸ್ತಿಯನ್ನು ಹೊಂದಿರಲು ಹಕ್ಕು ಮತ್ತು ಸಮಾನಪೌರತ್ವದ ಹಕ್ಕನ್ನು ಕೊಟ್ಟಿದ್ದರೂ ಸಹ ಅವರಿಗೂ ಮತ್ತು ನೈರುತ್ಯ ಪ್ರಾಂತದಲ್ಲಿ ನೆಲಸಿದ್ದ ಆ್ಯಂಗ್ಲೋ-

ಅಮೆರಿಕನ್ನರಿಗೂ ಭೂಮಿಯ ಒಡೆತನ ಮತ್ತು ಆರ್ಥಿಕ ಅವಕಾಶಗಳ ಬಗ್ಗೆ ಸಂಘರ್ಷಣೆ ಉಂಟಾಯಿತು. ಕೆಲವು ಶ್ರೀಮಂತ ವರ್ತಕರು ಮತ್ತು ಜಮೀನುದಾರರನ್ನು ಬಿಟ್ಟರೆ ಮಿಕ್ಕ ಸ್ಪಾನಿಷ್ ಮಾತಾಡುವ ಜನರಿಗೆ ಅಮೆರಿಕನ್ನರ ಸರ್ಕಾರ, ತೆರಿಗೆ ಮತ್ತು ಭೂ ಸ್ವಾಮಿತ್ವದ ಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗಿತ್ತು. ೧೮೭೦ರ ದಶಕದಲ್ಲಿ ಟ್ರಾನ್ಸ್-ಕಾಂಟಿನೆಂಟಲ್ ರೈಲುರಸ್ತೆಯ ನಿರ್ಮಾಣವಾದ ಮೇಲೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಆ್ಯಂಗ್ಲೊ-ಅಮೆರಿಕನ್ನರು ಪಶ್ಚಿಮ ಪ್ರದೇಶಕ್ಕೆ ಬರತೊಡಗಿದರು. ಹೀಗೆ ಬಂದು ನೆಲಸಿದವರು ಶ್ರೀಮಂತರಾಗುವ ಕನಸು ಹೊತ್ತು ಬಂದವರು. ಅವರು ಅನೇಕ ಉದ್ಯಮಗಳಲ್ಲಿ ಹಣ ಹೂಡಿದರು – ಕಾಡಿನಿಂದ ನಾಟ ಸಾಗಿಸುವುದು, ದನಕರುಗಳನ್ನು ಸಾಕುವುದು, ಖನಿಜಗಳ ಗಣಿಗಳು ಮತ್ತು ಹತ್ತಿಯ ಬೆಳೆ – ಈ ಉದ್ಯಮಗಳಲ್ಲಿ ಕೆಲಸ ಮಾಡುತ್ತಿದ್ದವರು ಹೆಚ್ಚಾಗಿ ಮೆಕ್ಸಿಕನ್ ಅಮೆರಿಕನ್ನರು. ಇವರ ಜನಸಂಖ್ಯೆಯ ಬಲದ ಮೇಲೆ ಇವರ ಹಿಸ್ಪಾನಿಕ್ ಸಂಸ್ಕೃತಿಯ ಪರಂಪರೆಯನ್ನು ನ್ಯೂಮೆಕ್ಸಿಕೊ ಸಂಸ್ಥಾನದ ರಾಜ್ಯಾಂಗದಲ್ಲಿ ಸೇರಿಸಲಾಯಿತು. ನಂತರ ೧೯೧೨ರಲ್ಲಿ ನ್ಯೂಮೆಕ್ಸಿಕೊ ಮತ್ತು ಆ್ಯರಿಝೋನ (Arizona) ಪ್ರಾಂತಗಳು ಸಂಯುಕ್ತ ಸಂಸ್ಥಾನಗಳನ್ನು ಸೇರಿಕೊಂಡವು. ಪಶ್ಚಿಮ ಪ್ರದೇಶದ ಖನಿಜ ಸಂಪತ್ತು ಮತ್ತು ರೈಲು ಪ್ರಯಾಣ ಸೌಕರ್ಯ ವಲಸೆಗಾರರ ಪ್ರವಾಹ ಪಶ್ಚಿಮದ ಕಡೆಗೆ ಹರಿಯುವಂತೆ ಮಾಡಿದವು. ಮೊದಲು ವಲಸೆ ಬಂದವರು ಗಣಿ ಕೆಲಸಗಾರರು, ನಂತರ ಪಶುಪಾಲನೆ ಮಾಡುವವರು ಮತ್ತು ಕುರುಬರು; ಕೊನೆಗೆ ಬಂದವರು ರೈತರು. ವಲಸೆ ಬಂದ ಪ್ರತಿಯೊಬ್ಬನೂ ಆರ್ಥಿಕ ಅಭಿವೃದ್ಧಿಯ 'ಅಮೆರಿಕನ್ ಕನಸನ್ನು' ಕಾರ್ಯಗತ ಗೊಳಿಸಲು ಬಂದಿದ್ದರೂ ಅನೇಕರ ಕನಸು ನನಸಾಗದೆ, ಐಶ್ವರ್ಯ ಮತ್ತು ಅದರಿಂದ ವ್ಯಕ್ತಿ ಅನುಭವಿಸಬಹುದಾದ ನಿಜವಾದ ಸ್ವಾತಂತ್ರ್ಯ ಬಹಳ ವಲಸೆಗಾರರಿಗೆ ಕನ್ನಡಿಯ ಗಂಟಾಗಿಯೇ ಉಳಿಯಿತು.

ಬಿಳಿಯ ವಲಸೆಗಾರರು ತಾವು ನೆಲಸಿದ ಪ್ರದೇಶದಲ್ಲಿ ಕಠಿಣ ಪರಿಸ್ಥಿತಿಯನ್ನು ಎದುರಿಸಿ ಹೋರಾಡುವ ಪ್ರಯತ್ನದಲ್ಲಿ ಅವರಿಗಿಂತ ಮೊದಲು ಅಲ್ಲಿ ನೆಲಸಿದ್ದ ಆದಿವಾಸಿಗಳ ಸ್ವಾತಂತ್ರ್ಯವನ್ನು ನಾಶಮಾಡಿದರು. ಬಿಳಿಯರಿಗೂ ಮತ್ತು ಬಯಲು ಸೀಮೆಯ ಇಂಡಿಯನ್ನರಿಗೂ ನಡೆದ ಘೋರ ಕದನಗಳು ಯೂರೋಪಿಯನ್ನರು ಮೊದಲು ಅಮೆರಿಕಕ್ಕೆ ಕಾಲಿರಿಸಿದಾಗಿನಿಂದ ನಡೆದು ಬಂದ ಸಂಘರ್ಷಣೆಗಳ ಕೊನೆಯ ಘಟ್ಟ. ಈ ಘರ್ಷಣೆಗಳಲ್ಲಿ ನಡೆದ ಅಮಾನುಷ ಕೃತ್ಯಗಳು ಅಮೆರಿಕದ ಇತಿಹಾಸದಲ್ಲಿ ಎಣೆ ಇಲ್ಲದವು! ಅಮೆರಿಕದ ಆದಿವಾಸಿಗಳಾದ ಇಂಡಿಯನ್ನರನ್ನು 'ಅಮೆರಿಕರಣ'ಗೊಳಿಸಿ ಅಮೆರಿಕದ ಸಮಾಜದಲ್ಲಿ ಅವರನ್ನು ವಿಲೀನಗೊಳಿಸುವ ಪ್ರಯತ್ನದಲ್ಲಿ ಫೆಡರಲ್ ಸರ್ಕಾರ ಆದಿವಾಸಿಗಳ – ಬುಡಕಟ್ಟುಗಳ ಜೀವನ ರೀತಿ, ದೃಢತೆ ಮತ್ತು ಹೆಮ್ಮೆಗಳನ್ನು ಕಡೆಗಣಿಸಿ ಅವುಗಳ ಅವನತಿಗೆ ಕಾರಣವಾಯಿತು.

ಆದಿವಾಸಿಗಳ ಅವನತಿ

ಅಮೆರಿಕದ ಆದಿವಾಸಿಗಳು ರಾಷ್ಟ್ರದ ರಾಜ್ಯಾಂಗ ವ್ಯವಸ್ಥೆಗೆ ಒಳಪಟ್ಟಿರಲಿಲ್ಲ. ಅವರನ್ನು ರಾಷ್ಟ್ರದ ಪ್ರಜೆಗಳೆಂದು ಪರಿಗಣಿಸಿರಲಿಲ್ಲ; ಅವರು ತೆರಿಗೆ ಕೊಡುತ್ತಿರಲಿಲ್ಲ ಮತ್ತು ಪ್ರಜಾಪ್ರತಿನಿಧಿಗಳ ಸಂಖ್ಯೆಯನ್ನು ನಿರ್ಧರಿಸುವಾಗ ಆದಿವಾಸಿಗಳನ್ನು ಎಣಿಕೆಗೆ ತೆಗೆದು ಕೊಳ್ಳುತ್ತಿರಲಿಲ್ಲ. ಆದಾಗ್ಯೂ ರಾಷ್ಟ್ರದ ರಾಜ್ಯಾಂಗ ಕಾಂಗ್ರೆಸ್ಸಿಗೆ ಆದಿವಾಸಿ ಬುಡಕಟ್ಟು ಗಳೊಡನೆ ಬಿಳಿಯರು ನಡೆಸುತ್ತಿದ್ದ ವ್ಯಾಪಾರವನ್ನು ನಿಯಂತ್ರಿಸುವ ಅಧಿಕಾರವನ್ನು ಕೊಟ್ಟಿತ್ತು. ಸರ್ಕಾರ ಈ ಬುಡಕಟ್ಟುಗಳನ್ನು ಸ್ವಾಯತ್ತತೆ ಹೊಂದಿರುವ ರಾಷ್ಟ್ರಗಳಾಗಿ ಪರಿಗಣಿಸಿ ಅವುಗಳೊಡನೆ ಸಂಧಾನ ಮಾಡಿಕೊಳ್ಳುವ ಅಧಿಕಾರ ಹೊಂದಿತ್ತು. ಆದಿವಾಸಿ ಬುಡಕಟ್ಟುಗಳು ತಮ್ಮನ್ನು ಸಾರ್ವಭೌಮ ರಾಷ್ಟ್ರಗಳೆಂದು ತಿಳಿದುಕೊಂಡಿದ್ದರೂ ೧೮೩೧-೩೨ರಲ್ಲಿ ಶ್ರೇಷ್ಠ ನ್ಯಾಯಾಲಯದ ಎರಡು ಕಟ್ಟಳೆಗಳಲ್ಲಿ ನೀಡಿದ ತೀರ್ಪುಗಳಲ್ಲಿ ಬುಡಕಟ್ಟು ಗಳನ್ನು ನ್ಯಾಯಾಧೀಶರು 'ಸ್ವದೇಶದ ಆಶ್ರಿತ ರಾಷ್ಟ್ರಗಳು' (domestic dependant nations) ಎಂದು ನಿರೂಪಿಸಿ ಅವುಗಳು ಸಂಯುಕ್ತ ಸಂಸ್ಥಾನಗಳ ಸಾರ್ವಭೌಮತ್ವ ಮತ್ತು ಆಳ್ವಿಕೆಗೆ ಒಳಪಟ್ಟಿರುತ್ತವೆ ಎಂದು ಸ್ಪಷ್ಟಪಡಿಸಿ ಈ ಬುಡಕಟ್ಟುಗಳಿಗೆ ನಿರ್ದಿಷ್ಟವಾದ ಪ್ರಾದೇಶಿಕ ಸರಹದ್ದು/ಗಡಿಗಳನ್ನು ನಿರ್ಧರಿಸಿದರು. ಈ ಗಡಿಗಳನ್ನು ಯಾವ ಖಾಸಗಿ ಸಂಸ್ಥೆಯಾಗಲಿ, ಸರ್ಕಾರವಾಗಲಿ ಉಲ್ಲಂಘಿಸಬಾರದು ಎಂದು ಸ್ಪಷ್ಟಪಡಿಸಿದರು. ಆದರೆ ಅಧ್ಯಕ್ಷ ಜಾಕ್‌ಸನ್ ನಿರ್ದಿಷ್ಟ ಗಡಿ ಇರುವುದನ್ನು ಒಪ್ಪಲಿಲ್ಲ. ಅವನು ಆದಿವಾಸಿ ಬುಡಕಟ್ಟುಗಳನ್ನು ಆಶ್ರಿತ ರಾಷ್ಟ್ರಗಳಂತೆ ಕಂಡು ಅವುಗಳೊಡನೆ ಸಂಧಾನ ಮಾಡಿ ಕೊಂಡನು. ಈ ಸಂಧಾನಗಳು ಕ್ರಮೇಣ ಆದಿವಾಸಿಗಳು ಭೂಮಿಯ ಒಡೆತನ ಕಳೆದು ಕೊಂಡು ಫೆಡರಲ್ ಸರ್ಕಾರ ಅವರನ್ನು ಪಶ್ಚಿಮ ಪ್ರಾಂತಕ್ಕೆ ಮರುವಸತಿ ಮಾಡಲು ಅವಕಾಶ ಮಾಡಿಕೊಟ್ಟವು. ಚಿಕ್ಕ ಪುಟ್ಟ ಬುಡಕಟ್ಟುಗಳು ದಂಗೆ ಏಳುವ ಪ್ರವೃತ್ತಿ ಯಿಲ್ಲದವುಗಳನ್ನು ಮಾತ್ರ ಮಿಸ್ಸಿಸ್ಸಿಪ್ಪಿ ನದಿಯ ಪೂರ್ವ ಪ್ರಾಂತದಲ್ಲಿ ನೆಲಸಲು ಅವಕಾಶ ಮಾಡಿಕೊಡಲಾಯಿತು.

೧೮೩೦ರಲ್ಲಿ ಜಾರಿಗೆ ಬಂದ ಕಾಯಿದೆ ಪ್ರಕಾರ ಅಮೆರಿಕದ ಆಗ್ನೇಯ ಪ್ರದೇಶದಲ್ಲಿ ವಾಸವಾಗಿದ್ದ ಆದಿವಾಸಿಗಳನ್ನು ಈಗಿನ ಒಕ್ಲಹೋಮ ಪ್ರಾಂತಕ್ಕೆ ಮರುವಸತಿ ಮಾಡಲಾಗಿತ್ತು. ಬಿಳಿಯರೊಡನೆ ಆದಿವಾಸಿಗಳ ಸಂಘರ್ಷಣೆ ತಪ್ಪಿಸಲು ಈ ರೀತಿ ಮಾಡಲಾಯಿತು ಎಂದು ಫೆಡರಲ್ ಸರ್ಕಾರ ಈ ಅಮಾನುಷ ಕೃತ್ಯವನ್ನು ಸಮರ್ಥಿಸಿ ಕೊಂಡಿತು. ಆದಿವಾಸಿಗಳೊಡನೆ ವ್ಯಾಪಾರ ನಡೆಸುವ ವರ್ತಕರು ಸರ್ಕಾರದ ಅನುಮತಿ ಪಡೆಯಬೇಕಿತ್ತು. ಸರ್ಕಾರ ಅವರ ವ್ಯಾಪಾರ ವ್ಯವಹಾರಗಳನ್ನು ಬಿಗಿಯಾಗಿ ನಿಯಂತ್ರಣ ಮಾಡುವ ಭರವಸೆ ನೀಡಿತ್ತು. ಆದಿವಾಸಿಗಳು ನೆಲಸಿದ್ದ ಪ್ರಾಂತಗಳಿಂದ ಬಿಳಿಯರನ್ನು ಹೊರಗಿಡುವುದಾಗಿ ಸರ್ಕಾರ ಹೇಳಿಕೆ ನೀಡಿತು. ಸರ್ಕಾರ ಈ ಎಲ್ಲ ನಿರ್ಬಂಧಗಳನ್ನು ಜಾರಿಗೆ ತಂದಿದ್ದರೂ ಕೂಡ ೧೮೪೦ರ ದಶಕದಲ್ಲಿ ಬಿಳಿಯರು ಅವುಗಳನ್ನು ನಿರ್ಲಕ್ಷಿಸಿ

ಆದಿವಾಸಿಗಳ ಪ್ರಾಂತದ ಮೂಲಕ ಹಾದುಹೋಗಿ ಪಶ್ಚಿಮ ಪ್ರಾಂತದ ಕೊನೆಯಲ್ಲಿ ನೆಲಸುವುದನ್ನು ನಿಲ್ಲಿಸಲೇ ಇಲ್ಲ. ಈ ಪ್ರಾಂತದಲ್ಲಿ ಬಿಳಿಯರು ಬರುವುದಕ್ಕಿಂತ ಸಾವಿರಾರು ವರ್ಷಗಳ ಮುಂಚೆ ಅಲ್ಲಿ ಅನೇಕ ಆದಿವಾಸಿ ಬುಡಕಟ್ಟುಗಳು ನೆಲಸಿದ್ದವು. ನೈರುತ್ಯ ಪ್ರಾಂತದಲ್ಲಿ ಶಾಂತಪ್ರವೃತ್ತಿಯ ವ್ಯವಸಾಯಗಾರರಾಗಿದ್ದ ಹೋಪಿ (Hopi), ಝೂಮಿ (Zuni), ಪೆಬ್ಲೋಸ್ (Pueblos) ಬುಡಕಟ್ಟುಗಳು ನೆಲಸಿದ್ದವು. ಯೂಟಿ (Ute), ನೆಝ್‌ಪರ್‌ಸಿ (Nezperce) ಮತ್ತು ಷೊಷೋನಿ (Shoshoni) ಬುಡಕಟ್ಟುಗಳು ಮತ್ತು ಬಯಲುಸೀಮೆ ಇಂಡಿಯನ್ನರು (plains Indians) ಎಂದು ಸಾಮೂಹಿಕವಾಗಿ ಕರೆಯಲ್ಪಡುತ್ತಿದ್ದ ಬೆಟ್ಟಗಳಲ್ಲಿ ವಾಸಿಸುತ್ತಿದ್ದ ಇತರ ಬುಡಕಟ್ಟುಗಳು. ಇವುಗಳಲ್ಲಿ ಕೆಲವು ಅತ್ಯಂತ ಕದನಕೋರರಾಗಿದ್ದುವು. ವಲಸೆಬಂದ ಬಿಳಿಯರಿಗೆ ಈ ಬುಡಕಟ್ಟುಗಳಿಂದ ಭೂಮಿಯನ್ನು ಬಿಡಿಸಿಕೊಳ್ಳಲು ಸೈನ್ಯದ ಸಹಾಯವಿದ್ದರೂ ಸುಲಭ ಸಾಧ್ಯವಲ್ಲ ಎನ್ನುವುದು ಮನದಟ್ಟಾಯಿತು. ೧೮೬೯ರಿಂದ ೧೮೭೮ರವರೆಗೆ ಫೆಡರಲ್ ಸೈನ್ಯ ಮತ್ತು ಆದಿವಾಸಿಗಳ ನಡುವೆ ೨೦೦ ಘೋರ ಕದನಗಳು ನಡೆದವು. ೧೮೬೦ರ ದಶಕದಲ್ಲಿ ನಡೆದ ಕೇವಲ ಮೂರು ಯುದ್ಧಗಳಿಂದ ಅಮೆರಿಕನ್ ಸರ್ಕಾರಕ್ಕೆ ತಗುಲಿದ ವೆಚ್ಚ ೧೦೦ ಮಿಲಿಯನ್ ಡಾಲರ್‌ಗಿಂತಲೂ ಮಿಗಿಲಾಗಿತ್ತು.

ಅಮೆರಿಕದ ಬಯಲುಸೀಮೆಯ ಆದಿವಾಸಿಗಳ ಸಂಸ್ಕೃತಿ

ಬಯಲುಸೀಮೆಯ ಪ್ರಮುಖ ಬುಡಕಟ್ಟುಗಳು: ಡಕೋಟ (dakota) ಪ್ರದೇಶದ 'ಸೂ' (Sioux) ಇಂಡಿಯನ್ನರು, ಐಡಾಹೊ (Idaho) ಮತ್ತು ಪಶ್ಚಿಮ ಮಾನ್‌ಟಾನ (Montana) ಪ್ರದೇಶಗಳ ಬ್ಲಾಕ್‌ಫುಟ್ ಇಂಡಿಯನ್ನರು – ಈ ಬುಡಕಟ್ಟುಗಳ ಆದಿವಾಸಿಗಳು ಅರಿಭಯಂಕರರಾಗಿದ್ದರು. ದಕ್ಷಿಣ ಮಾನ್‌ಟಾನ ಪ್ರದೇಶದ ಕ್ರೋ (Crow) ಇಂಡಿಯನ್ನರು – ಇವರು ಸ್ನೇಹಪರರಾಗಿದ್ದರು. ಇನ್ನೂ ಅನೇಕ ಬುಡಕಟ್ಟುಗಳಿದ್ದವು – ಶಯೇನ್ (Cheyenne) ಮತ್ತು ಅರಾಪಹೊ (Arapaho), ಬಯಲುಸೀಮೆಯ ಮಧ್ಯಪ್ರಾಂತದವರು. ಪಶ್ಚಿಮ ನೆಬ್ರಾಸ್ಕ ಪ್ರಾಂತದ ಪಾನೀ (Pawnee) ಮತ್ತು ದಾಳಿ ಮಾಡುವ ಪ್ರವೃತ್ತಿಯ ಟೆಕ್ಸಾಸ್ ಪ್ರಾಂತದ ಅಪಾಚಿ (Apache) ಮತ್ತು ನ್ಯೂಮೆಕ್ಸಿಕೊ ಪ್ರಾಂತದ ಕಮಾನ್‌ಚೆ (Comanche) ಬುಡಕಟ್ಟುಗಳು.

ಈ ಎಲ್ಲ ಬುಡಕಟ್ಟಿನವರು ಬೇರೆ ಬೇರೆ ಭಾಷೆಗಳನ್ನಾಡುತ್ತಿದ್ದರೂ ಸಹ ಪರಸ್ಪರವಾಗಿ ಅರ್ಥಮಾಡಿಕೊಳ್ಳಲು ಒಂದು ಸಂಕೀರ್ಣವಾದ ಸಾಂಕೇತಿಕ ಭಾಷೆ (sign language) ಯನ್ನು ಬಳಸುತ್ತಿದ್ದರು. ಆದಿವಾಸಿಗಳ ಸಮಾಜದಲ್ಲಿ ಪರಾಕ್ರಮಕ್ಕೆ ಪ್ರಮುಖ ಸ್ಥಾನವಿತ್ತು. ಬಾಲ್ಯದಿಂದಲೇ ಹುಡುಗರಿಗೆ ರಣರಂಗದಲ್ಲಿ ಹೋರಾಡುತ್ತ ಸಾಯುವುದು ಮುಪ್ಪಿನಲ್ಲಿ ಶಾಂತವಾಗಿ ಸಾಯುವುದಕ್ಕಿಂತ ಶೋಭಾಯಮಾನವಾದುದೆಂದು ಉಪದೇಶಿಸಲಾಗುತ್ತಿತ್ತು. ಯುದ್ಧ ತರಬೇತಿ ಮತ್ತು ವಿವಿಧ ಶಿಕ್ಷಾವಿಧಾನಗಳು ನಿತ್ಯಜೀವನದ ಸಾಮಾನ್ಯ ಅಂಶ

ಗಳಾಗಿದ್ದರೂ ಈ ಬಯಲುಸೀಮೆಯ ಬುಡಕಟ್ಟುಗಳ ನಡುವೆ ದೀರ್ಘಕಾಲದ ಅಂತರ್ಯುದ್ಧಗಳು ನಡೆಯುತ್ತಿರಲಿಲ್ಲ. ಬಿಳಿಯರನ್ನು ತಡೆಗಟ್ಟುವುದನ್ನು ಬಿಟ್ಟರೆ, ಬುಡಕಟ್ಟುಗಳ ನಡುವೆ ಸಂಘರ್ಷಣೆಗೆ ಮುಖ್ಯಕಾರಣಗಳೆಂದರೆ ಮುಯ್ಯಿ ತೀರಿಸಿಕೊಳ್ಳು ವುದು ಅಥವಾ ಅಶ್ವಾಪಹರಣ. ಆದಿವಾಸಿಗಳಲ್ಲಿ ಪರಾಕ್ರಮದಷ್ಟೇ ಶೋಭಾಯಮಾನ ವಾದ ಮತ್ತೊಂದು ಸಾಮಾಜಿಕ ಮೌಲ್ಯ – ಔದಾರ್ಯ (generosity). ಅಂದರೆ ಬಂಧುಮಿತ್ರರಿಗೆ ಕೊಡುಗೆ (gift) ನೀಡುವುದು. ಆದಿವಾಸಿಗಳಲ್ಲಿ ಬಡವರಿಗೆ ಹೆಚ್ಚು ದಾನ ಮಾಡಿದವರು ಹಾಗೂ ಅತಿಥಿಗಳಿಗೆ ಹಲವಾರು ಬಾರಿ ಔತಣ ನೀಡಿ ಸಂತೃಪ್ತಿ ಗೊಳಿಸಿದವರು ಮತ್ತು ಹೆಚ್ಚು ಶತ್ರುಗಳನ್ನು ನಾಶ ಮಾಡಿ ಕುದುರೆಗಳನ್ನು ಹಿಡಿದು ತಂದವರು, ಆದಿವಾಸಿಗಳ ಘನತೆ ಗೌರವಗಳಿಗೆ ಪಾತ್ರರಾಗುತ್ತಿದ್ದರು.

ಒಂದಾನೊಂದು ಕಾಲದಲ್ಲಿ ಬಯಲುಸೀಮೆಯ ಆದಿವಾಸಿಗಳು ಜೋಳವನ್ನು ಬೆಳೆಯುವುದರಿಂದ ಮತ್ತು ಹುಲ್ಲುಗಾವಲಿನಲ್ಲಿ ಸಹಜವಾಗಿ ಬೆಳೆಯುತ್ತಿದ್ದ ಭತ್ತ (wild rice)ವನ್ನು ಸಂಗ್ರಹಿಸುವುದರಿಂದ ಜೀವನ ನಡೆಸಿದ್ದರು. ಆದರೆ ಯೂರೋಪಿಯನ್ನರ ಸಂಪರ್ಕದಿಂದ ಅವರ ಜೀವನ ಶೈಲಿ ಬದಲಾಯಿತು. ಸ್ಪಾನಿಷ್‌ರಿಂದ ಕುದುರೆಗಳನ್ನು ಮತ್ತು ಫ್ರೆಂಚರಿಂದ ಮತ್ತು ಇಂಗ್ಲಿಷ್ ಜನರಿಂದ ಬಂದೂಕುಗಳನ್ನು ಪಡೆದ ಆದಿವಾಸಿಗಳು ೧೮ನೆಯ ಶತಮಾನದ ಹೊತ್ತಿಗೆ ವ್ಯವಸಾಯವನ್ನು ತ್ಯಜಿಸಿ ಅಲೆಮಾರಿ ಬೇಟೆಗಾರರಾಗಿ ಪರಿವರ್ತನೆಗೊಂಡಿದ್ದರು. ಕುದುರೆಗಳ ಮತ್ತು ಬಂದೂಕುಗಳ ಸಹಾಯದಿಂದ ಆದಿವಾಸಿಗಳಿಗೆ ಕಾಡುಕೋಣಗಳನ್ನು ಕೊಲ್ಲುವುದು ಸುಲಭವಾಯಿತು. ಈ ಬೃಹತ್ ಪ್ರಮಾಣದ ಪ್ರಾಣಿಗಳನ್ನು ಆದಿವಾಸಿಗಳು ಕೆಲವು ಸಮಯ ವಿನೋದಕ್ಕಾಗಿ ಅಥವಾ ಮಾರಾಟಕ್ಕಾಗಿ ಕೊಲ್ಲುತ್ತಿದ್ದರು. ಆದರೆ ಅವರು ಸಾಮಾನ್ಯವಾಗಿ ಬೇಟೆಯಾಡುತ್ತಿದ್ದುದು ಆಹಾರಕ್ಕಾಗಿ ಮಾತ್ರ. ಕಾಡುಕೋಣ ಅವರ ಆಹಾರದ ಅತಿಮುಖ್ಯ ಅಂಶವಾಗಿತ್ತು. ಅಲ್ಲದೆ ವಿವಿಧ ಉಪಯುಕ್ತತೆಯ ಪ್ರಾಣಿಯೂ ಆಗಿತ್ತು – ಭಾರತದಲ್ಲಿ ಗೋವಿನಂತೆ! ಈ ಪ್ರಾಣಿ ಅವರಿಗೆ ಆಹಾರ ಒದಗಿಸುತ್ತಿದ್ದುದೆ ಅಲ್ಲದೆ, ಅದರ ಚರ್ಮದಿಂದ ಗಾಳಿ ಮಳೆಗಳಿಂದ ರಕ್ಷಿಸುವ ಗುಡಾರ ಅಥವಾ ಡೇರೆ (tepee)ಗಳನ್ನು ರಚಿಸಲು, ಬಟ್ಟೆಗಳನ್ನು ಹೊಲಿಯುವುದಕ್ಕೆ ಮತ್ತು ಪಾದಗಳನ್ನು ಚಳಿ ಮತ್ತು ಹಿಮದಿಂದ ರಕ್ಷಿಸುವ ಜೋಡುಗಳನ್ನು (moccasins) ಮಾಡಲು ಮತ್ತು ಹೊದೆಯಲು ದುಪ್ಪಟಿಗಳನ್ನು ಹಾಗೂ ನಿಲುವಂಗಿ ಗಳನ್ನು ಮಾಡುವುದಕ್ಕಾಗಿ ಉಪಯೋಗಿಸುತ್ತಿದ್ದರು. ಕೋಣದ ಚರ್ಮದಿಂದ ಜೋಳಿಗೆ ಗಳನ್ನು, ಕೆಲಸದ ಸಲಕರಣೆಗಳನ್ನು ಕೊಂಡೊಯ್ಯಲು ಉಪಯೋಗಿಸುವ ಚೀಲಗಳನ್ನು ಮತ್ತು ಮಹಿಳೆಯರ ಅಲಂಕಾರ ಕೈಚೀಲಗಳನ್ನು ತಯಾರಿಸುತ್ತಿದ್ದರು. ಆ ಪ್ರಾಣಿಗಳ ಮೂಳೆಗಳಿಂದ ಚಾಕು ಚೂರಿಗಳನ್ನು ಮತ್ತು ಕೋಡು ಗೊರಸುಗಳಿಂದ ಗೋಂದನ್ನು ತಯಾರಿಸುತ್ತಿದ್ದರು. ಕೋಣದ ನರಗಳಿಂದ ಬಿಲ್ಲಿನ ಹೆದೆ ಏರಿಸುವ ಹಗ್ಗ ತಯಾರಿಸು ತ್ತಿದ್ದರು. ಚರ್ಮದ ಪಟ್ಟಿಗಳಿಂದ ಕುದುರೆಗಳನ್ನು ಮತ್ತು ಇತರ ಪ್ರಾಣಿಗಳನ್ನು ಕಟ್ಟಿಹಾಕುವ

ಕಣ್ಣೆಗಳನ್ನು ತಯಾರಿಸುತ್ತಿದ್ದರು. ಅವುಗಳ ಒಣಗಿದ ಸಗಣಿಯನ್ನು ಒಲೆಯನ್ನು ಉರಿಸಲು ಉಪಯೋಗಿಸುತ್ತಿದ್ದರು. ಇದರಿಂದಾಗಿ ಬಯಲುಸೀಮೆಯ ಇಂಡಿಯನ್ನರು ಕಾಡುಕೋಣಗಳ ಹಿಂಡು ಹೋದಲ್ಲಿ ಹಿಂಬಾಲಿಸಬೇಕಾಗಿತ್ತು. ಆದ್ದರಿಂದ ಪ್ರತಿ ಬುಡಕಟ್ಟಿನ ಜನಸಂಖ್ಯೆ ೧೮೫೦ರ ದಶಕದಲ್ಲಿ ೩೦೦೦-೪೦೦೦ಕ್ಕಿಂತ ಹೆಚ್ಚಾಗಿ ಇರುತ್ತಿರಲಿಲ್ಲ. ಗಂಡಸರು ಬೇಟೆಯಾಡಿ ಆಹಾರಕ್ಕಾಗಿ ಮಾಂಸ ಒದಗಿಸುತ್ತಿದ್ದರು. ಹೆಂಗಸರು ಕಾಯಿಪಲ್ಲೆ, ಹಣ್ಣು ಹಂಪಲು ಮತ್ತು ಗಡ್ಡೆ ಗೆಣಸುಗಳನ್ನು ಬೆಳೆದೋ ಅಥವಾ ಕಾಡುಮೇಡುಗಳಿಂದ ಆಯ್ದು ತರುತ್ತಿದ್ದರು.

ಫೆಡರಲ್ ಸರ್ಕಾರ ಈ ಬುಡಕಟ್ಟುಗಳೊಡನೆ ವ್ಯವಹರಿಸುವಾಗ ಅನೇಕ ತಪ್ಪುಗಳನ್ನು ಮಾಡಿತ್ತು. ಆದಿವಾಸಿಗಳ ಸಂಸ್ಕೃತಿಯನ್ನು ಬಿಳಿಯರು ಅರ್ಥ ಮಾಡಿಕೊಳ್ಳದೆ ಹೋದುದು ಈ ತಪ್ಪುಗಳಿಗೆ ಕಾರಣವಾಯಿತು. ಉದಾಹರಣೆಗೆ ಆದಿವಾಸಿ ಗಂಡಸರನ್ನು ಬೇಸಾಯ ಮಾಡುವಂತೆ ಬಲಾತ್ಕಾರ ಮಾಡಿದ್ದು ದೊಡ್ಡ ತಪ್ಪು. ಇದು ಆದಿವಾಸಿಗಳ ಸಾಂಪ್ರದಾಯಿಕ ಕಾರ್ಯವಿಭಜನೆಗೆ ವಿರುದ್ಧವಾಗಿತ್ತು. ಆದಿವಾಸಿಗಳಲ್ಲಿ ಹೆಂಗಸರು ಬೇಸಾಯ ಮಾಡುವುದು ಪದ್ಧತಿ. ಬೇಸಾಯ ಮಾಡುವ ಗಂಡಸು ಹಾಸ್ಯ ಕುಚೋದ್ಯಗಳಿಗೆ ಗುರಿಯಾಗುತ್ತಿದ್ದನು. ಬಿಳಿಯರ ವ್ಯವಸಾಯ ಪದ್ಧತಿ ಆದಿವಾಸಿಗಳ ಔದಾರ್ಯ ನೀತಿಗೆ ವ್ಯತಿರಿಕ್ತವಾಗಿತ್ತು. ಆದಿವಾಸಿ ರೈತ ತಾನು ಬೆಳೆದಿದ್ದರಲ್ಲಿ ಹೆಚ್ಚು ಭಾಗವನ್ನು ಬೇರೆಯವರಿಗೆ ಹಂಚಬೇಕಾಗಿದ್ದು ತನ್ನ ಕರ್ತವ್ಯವೆಂದು ತಿಳಿದಿದ್ದನೇ ಹೊರತು ಅದರಿಂದ ಲಾಭ ಪಡೆಯಬೇಕೆಂಬ ಉದ್ದೇಶ ಇರಲಿಲ್ಲ.

ಆರೆಗಾನ್, ಟೆಕ್ಸಾಸ್, ಕ್ಯಾಲಿಫೋರ್ನಿಯ ಮತ್ತು ನೈರುತ್ಯ ಪ್ರಾಂತಗಳನ್ನು ಫೆಡರಲ್ ಸರ್ಕಾರ ತನ್ನ ಅಧೀನತೆಗೆ ಒಳಪಡಿಸಿಕೊಂಡ ಮೇಲೆ ಅದು ಆದಿವಾಸಿಗಳ ವ್ಯವಹಾರದಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸುತ್ತ ಬಂದಿತು. ಮೊದಲನೆಯ ಹಂತದಲ್ಲಿ ಸರ್ಕಾರ ಕಾರ್ಯಗತಗೊಳಿಸಿದ್ದು ಆದಿವಾಸಿಗಳನ್ನು ಪ್ರತ್ಯೇಕವಾಗಿ ಕಾದಿರಿಸಿದ ಪ್ರದೇಶಗಳಲ್ಲಿ (reservations) ಸೇರಿಸಿ, ಸರ್ಕಾರದ ಬಿಗಿಯಾದ ನಿಯಂತ್ರಣಕ್ಕೆ ಒಳಪಡಿಸುವುದಾಗಿತ್ತು. ಹೀಗೆ ಮಾಡುವುದರ ಉದ್ದೇಶ ಬಿಳಿಯ ವಲಸೆಗಾರರು ಅಡೆತಡೆಗಳಿಲ್ಲದೆ ಪಶ್ಚಿಮ ಪ್ರಾಂತಗಳಿಗೆ ವಲಸೆ ಹೋಗಲು ಅನುಕೂಲ ಮಾಡಿಕೊಡುವುದಾಗಿತ್ತು. ಆದರೆ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವುದು ಸುಲಭವಾಗಿರಲಿಲ್ಲ. ೧೮೪೮ ಮತ್ತು ೧೮೫೫ರ ನಡುವೆ ಫೆಡರಲ್ ಸರ್ಕಾರ ಪಶ್ಚಿಮ ಪ್ರಾಂತದ ಅನೇಕ ಬುಡಕಟ್ಟುಗಳೊಡನೆ ಹಲವಾರು ಒಪ್ಪಂದಗಳನ್ನು ಮಾಡಿಕೊಂಡಿತು. ಈ ಒಪ್ಪಂದಗಳ ಪ್ರಕಾರ ಸರ್ಕಾರ ಆದಿವಾಸಿಗಳನ್ನು ನಿರ್ದಿಷ್ಟ ಗಡಿಗಳನ್ನು ಹೊಂದಿರುವ – ಕಾದಿರಿಸಿದ ಪ್ರದೇಶಗಳಲ್ಲಿ ನೆಲಸಲು ವ್ಯವಸ್ಥೆ ಮಾಡಿಕೊಟ್ಟಿತು. ಈ ಶತಮಾನದ ಮೊದಲ ಭಾಗದಲ್ಲಿ ಮಿಸ್ಸಿಸ್ಸಿಪ್ಪಿ ನದಿಯ ಪೂರ್ವ ಪ್ರಾಂತದ ಆದಿವಾಸಿಗಳು ಟೆಕ್ಯೂಮೆಷ್ (Tecumesh)ನ ನೇತೃತ್ವದಲ್ಲಿ ಒಗ್ಗಟ್ಟಾಗಿ ಬಿಳಿಯ ವಲಸೆಗಾರರಿಗೆ ಕಂಟಕಪ್ರಾಯರಾಗಿದ್ದುದನ್ನು ಮರುಕಳಿಸದಂತೆ ಮಾಡಲು ಸರ್ಕಾರ

ನಿರ್ಧರಿಸಿತ್ತು. ಸರ್ಕಾರದ ಈ ಹೊಸ ನಿಲುವಿನ ಪ್ರಕಾರ ಬಯಲುಸೀಮೆಯ ಆದಿವಾಸಿಗಳಿಗೆ ಸರ್ಕಾರ ಅವರು ಪರಸ್ಪರವಾಗಿ ತಮ್ಮ ಬೇಟೆಯಾಡುವ ಜಾಗಗಳ ಸರಹದ್ದನ್ನು ನಿರ್ದಿಷ್ಟವಾಗಿ ಒಪ್ಪಿಕೊಂಡರೆ ಅವರಿಗೆ ಹಣ ಮತ್ತು ಇತರ ಕೊಡುಗೆಗಳನ್ನು ನೀಡುವುದಾಗಿ ಭರವಸೆ ನೀಡಿತ್ತು. ಪ್ರತಿ ಬುಡಕಟ್ಟು ತನ್ನ ಸರಹದ್ದಿನೊಳಗೆ ಇರುವುದಾದರೆ ಸರ್ಕಾರ ಆದರೊಡನೆ ವ್ಯವಹಾರ ನಡೆಸಲು ಸುಲಭವಾಗುತ್ತದೆ ಎಂದು ಎಣಿಸಿತ್ತು. ಆದರೆ ಸರಹದ್ದುಗಳ ಗಡಿಗಳನ್ನು ಎಲ್ಲರಿಗೂ ಒಪ್ಪಿಗೆಯಾಗುವಂತೆ ನಿರ್ಧರಿಸುವುದು ಸಾಧ್ಯವಾಗಲಿಲ್ಲ.

ಸರ್ಕಾರದ ನಿರ್ಬಂಧಗಳನ್ನು ಮೀರಿ ಗಣಿ ಕೆಲಸದವರು ಮತ್ತು ವಲಸೆಗಾರರು ಆದಿವಾಸಿಗಳ ಭೂಮಿಯನ್ನು ಆಕ್ರಮಣ ಮಾಡಲು ಆರಂಭಿಸಿದರು. ಇದರಿಂದ ಹಲವಾರು ಕಡೆಗಳಲ್ಲಿ ಘರ್ಷಣೆಗಳು ನಡೆದವು. ಕೊಲರಾಡೊದಲ್ಲಿ ಶಯನ್ ಮತ್ತು ಅರಾಪಹೋ ಆದಿವಾಸಿಗಳಿಗೆ ಅವರ ಭೂಮಿಯ ಒಡೆತನವನ್ನು ಪರಂಪರಾನುಗತವಾಗಿ ಅನುಭವಿಸುವಂತೆ ಸರ್ಕಾರ ಆಜ್ಞೆ ಮಾಡಿದ್ದರೂ ಸಹ ೧೮೫೮ರಲ್ಲಿ ಆ ಪ್ರಾಂತದಲ್ಲಿ ಚಿನ್ನ ಶೋಧನೆಯಾದ ಸುದ್ದಿ ಸಾವಿರಾರು ಜನರನ್ನು ಆಕರ್ಷಿಸಿತು. ೧೮೬೧ರಲ್ಲಿ ಆದಿವಾಸಿಗಳಿಗೆ ಒಡೆತನವನ್ನು ಕೊಟ್ಟಿದ್ದ ಸರ್ಕಾರವೇ ಅವರಿಂದ ಕೊಲರಾಡೊ ಪ್ರಾಂತದ ಹೆಚ್ಚು ಭಾಗವನ್ನು ಕೊಂಡುಕೊಂಡಿತು. ಆದಿವಾಸಿಗಳು ತಾವು ಮಾರಿದ ಭೂಮಿಯನ್ನು ಬಿಟ್ಟು ಕೊಲರಾಡೊದ ಆಗ್ನೇಯದಲ್ಲಿನ ಬಂಜರು ಪ್ರದೇಶಕ್ಕೆ ಹೋಗಿ ನೆಲಸಬೇಕಾಗಿ ಬಂತು. ಅಲ್ಲಿಗೆ ಹೋದ ಕೆಲವು ದಿನಗಳಲ್ಲಿಯೆ ಅಲ್ಲಿನ ದಾರುಣ ಪರಿಸ್ಥಿತಿಯನ್ನು ತಾಳಲಾರದೆ ಆದಿವಾಸಿಗಳು ದಂಗೆ ಎದ್ದರು. ಅವರು ನೆಲಸಿದ ಭೂಮಿಯಲ್ಲಿ ನೀರಿನ ಪಸೆ ಕೂಡ ಇರಲಿಲ್ಲ! ಸರ್ಕಾರ ಅವರಿಗೆ ಮಾತುಕೊಟ್ಟಂತೆ ವ್ಯವಸಾಯದ ಸಲಕರಣೆಗಳನ್ನು ಒದಗಿಸಲಿಲ್ಲ. ಹಸಿವಿನಿಂದ ಕಂಗೆಟ್ಟ ಆದಿವಾಸಿಗಳು ತಮ್ಮ ಸಿಟ್ಟನ್ನು ವಲಸೆಗಾರರ ಸರಕು ಸಾಮಗ್ರಿಗಳನ್ನು ಸಾಗಿಸುತ್ತಿದ್ದ ಕಮಾನು ಬಂಡಿಗಳ ಮತ್ತು ಕುದುರೆ ಸಾರೋಟುಗಳ ಮೇಲೆ ದಾಳಿ ಮಾಡಿ ಲೂಟಿ ಹೊಡೆದು ತೀರಿಸಿಕೊಳ್ಳುತ್ತಿದ್ದರು. ಈ ದಾಳಿಗಳನ್ನು ಫೆಡರಲ್ ಸೈನ್ಯಗಳು ಎದುರಿಸಿ ಹೋರಾಡಿದವು. ಇದನ್ನು ನಿಲ್ಲಿಸುವ ಸಲುವಾಗಿ ಗವರ್ನರ್ ಶಾಂತಿಯನ್ನು ಬಯಸುವ ಎಲ್ಲ ಆದಿವಾಸಿಗಳು ಸೈನ್ಯದ ಬೀಡಿನಲ್ಲಿ ಆಶ್ರಯ ಪಡೆಯಬಹುದು ಎಂದು ಪ್ರಚಾರಪಡಿಸಿದನು. ಸರ್ಕಾರದ ರಕ್ಷಣೆ ಸಿಗುತ್ತದೆ ಎಂದು ನಂಬಿ ಶಯನ್ ಮತ್ತು ಅರಾಪಹೋ ಆದಿವಾಸಿಗಳ ಒಂದು ಗುಂಪು ಬ್ಲಾಕ್ ಕೆಟಲ್ (Black Kettle) ಎನ್ನುವವನ ನಾಯಕತ್ವದಲ್ಲಿ ಬಂದು ಸ್ಯಾಂಡ್ ಕ್ರೀಕ್ (Sand Creek) ಎಂಬಲ್ಲಿ ಬೀಡುಬಿಟ್ಟಿತ್ತು.

ಬ್ಲಾಕ್ ಕೆಟಲ್‌ನ ಗುಂಪನ್ನು ಸೈನ್ಯದ ಅಣತಿಯಂತೆ ಪತ್ತೆ ಹಚ್ಚಲು ಪ್ರಯತ್ನಿಸುತ್ತಿದ್ದ ಕರ್ನಲ್ ಚಿವಿಂಗ್‌ಟನ್ (Colonel Chivington) ತನ್ನ ೭೦೦ ಸೈನಿಕರ ತುಕಡಿಯೊಂದಿಗೆ

ಲಿಯೋನ್ ಕೋಟೆಗೆ (Fort Lyon) ಆಗಮಿಸಿದನು. ಆ ಕೋಟೆಯ ಸೈನ್ಯಾಧಿಕಾರಿ ತಾನು ಬ್ಲಾಕ್ ಕೆಟಲ್‌ಗೆ ಇನ್ನೂ ರಕ್ಷಣೆ ಕೊಟ್ಟಿಲ್ಲವೆಂದು ತಿಳಿಸಿ ಕೂಡಲೇ ಹೋಗಿ ಅವನ ಶಿಬಿರದ ಮೇಲೆ ದಾಳಿ ಮಾಡುವಂತೆ ಚಿವಿಂಗ್‌ಟನ್‌ನನ್ನು ಆಗ್ರಹಪಡಿಸಿದನು. ಪೂರ್ವಾಗ್ರಹಪೀಡಿತನಾದ ಚಿವಿಂಗ್‌ಟನ್ 'ಆದಿವಾಸಿಗಳು ನಾಗರಿಕತೆಯ ಮುನ್ನಡೆಗೆ ವಿಘ್ನಕಾರಿಗಳೆಂದೂ ಅವರ ಕುಲವನ್ನೇ ನಾಶಗೊಳಿಸುವುದು ಅಗತ್ಯ'ವೆಂದು ನಂಬಿದ್ದನು. ಆ ಅವಕಾಶ ಅನಾಯಾಸವಾಗಿ ದೊರೆತದ್ದರಿಂದ ತನ್ನ ಸೈನಿಕರಿಗೆ ಕೂಡಲೇ ಬ್ಲಾಕ್ ಕೆಟಲ್‌ನ ಶಿಬಿರದ ಮೇಲೆ ದಾಳಿ ಮಾಡಲು ಆಜ್ಞೆ ಮಾಡಿದನು. ಹಠಾತ್ತನೆ ನಡೆದ ಈ ದಾಳಿಯಿಂದ ಧೃತಿಗೆಡದೆ ಬ್ಲಾಕ್ ಕೆಟಲ್ ತನ್ನವರನ್ನು ರಕ್ಷಣೆ ಮಾಡಲು ಪ್ರಯತ್ನಿಸಿದರೂ ಸಹ ಸೈನಿಕರು ನಿರಾಯುಧರಾದ, ಯಾವ ತಪ್ಪನ್ನೂ ಮಾಡದ ಆದಿವಾಸಿಗಳನ್ನು – ಹೆಂಗಸರು, ಮಕ್ಕಳು ಮತ್ತು ಮುದುಕರು – ಎಲ್ಲರನ್ನೂ ಕಗ್ಗೊಲೆ ಮಾಡಿದರು. ಈ ಅಮಾನುಷ ಹತ್ಯಾಕಾಂಡ ನಡೆಸಿದ ಚಿವಿಂಗ್‌ಟನ್‌ನನ್ನು ಬಿಳಿಯ ಗಣಿ ಕೆಲಸಗಾರರು ಅಭಿನಂದಿಸಿದರು. ಆದರೆ ಪೂರ್ವ ಸಂಸ್ಥಾನಗಳ ಅಮೆರಿಕನ್ನರು ಅವನ ಹೀನ ದುಷ್ಕೃತ್ಯ ವನ್ನು ತೀವ್ರವಾಗಿ ಖಂಡಿಸಿದರು. ಆದಿವಾಸಿಗಳ ವ್ಯವಹಾರಗಳ ಕಮಿಷನರ್ ಆ ಹತ್ಯಾಕಾಂಡವನ್ನು ಕಗ್ಗೊಲೆ ಎಂದು ಕರೆದು ಚಿವಿಂಗ್‌ಟನ್‌ನನ್ನು ದಯೆಯಿಲ್ಲದ ದಾನವನೆಂದು ಜರಿದನು. ೧೮೬೫ರಲ್ಲಿ ಕಾಂಗ್ರೆಸ್ ಒಂದು ಸಮಿತಿಯನ್ನು ಸ್ಥಾಪಿಸಿ ವಿಚಾರಣೆ ನಡೆಸಿತು. ಈ ಫಲವಾಗಿ ಹೊಸ ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಅದರಲ್ಲಿ ಚಿವಿಂಗ್‌ಟನ್ ದಾಳಿಯನ್ನು ಬೀಭತ್ಸವಾದ ಅತ್ಯಾಚಾರವೆಂದು ಖಂಡನೆ ಮಾಡಿ ದಾಳಿಯಲ್ಲಿ ಹೇಗೋ ಉಳಿದುಕೊಂಡವರಿಗೆ, ವಿಧವೆಯರಿಗೆ ಮತ್ತು ಮಕ್ಕಳಿಗೆ ಪರಿಹಾರ ನೀಡಬೇಕೆಂದು ಆಜ್ಞೆ ಮಾಡಲಾಯಿತು. ಈ ವಿಚಾರಣೆಯ ಪರಿಹಾಸವೆಂದರೆ ಕಗ್ಗೊಲೆ ನಡೆಸಿದ ಯಾರಿಗೂ ಶಿಕ್ಷೆ ವಿಧಿಸಲಿಲ್ಲ!

ಈ ಹತ್ಯಾಕಾಂಡ ನಡೆದ ಹಲವಾರು ವರ್ಷಗಳ ನಂತರ ಮಾನ್‌ಟಾನ (Montana) ಪ್ರಾಂತದಲ್ಲಿ ಮತ್ತೊಂದು ಹತ್ಯಾಕಾಂಡ ಜರುಗಿತು. ಇದರಲ್ಲಿ ಹತರಾದವರು ಬಿಳಿಯರು. ೧೮೬೦ರ ದಶಕದಲ್ಲಿ ಮಾನ್‌ಟಾನ ಪ್ರಾಂತದಲ್ಲಿ ಚಿನ್ನದ ಶೋಧನೆಯಾದ ನಂತರ ಆ ಪ್ರಾಂತಕ್ಕೆ ಗಣಿ ಕೆಲಸಗಾರರು ಹೆಚ್ಚು ಸಂಖ್ಯೆಯಲ್ಲಿ ಬರಲಾರಂಭಿಸಿದರು. ಈ ಕೆಲಸಗಾರರು ಆದಿವಾಸಿಗಳೊಡನೆ ಸರ್ಕಾರ ಮಾಡಿಕೊಂಡ ಒಪ್ಪಂದವನ್ನು ಅಲಕ್ಷಿಸಿ ಗಣಿಗಳಿಗೆ ಹೋಗಿ ಬರಲು 'ಸೂ' ಇಂಡಿಯನ್ನರಿಗೆ ಸೇರಿದ ಬಿಗ್ ಹಾರ್ನ್ ಬೆಟ್ಟ (Big Horn mountain) ಪ್ರದೇಶದಲ್ಲಿ ದಾರಿ ಮಾಡಿಕೊಂಡರು. ಇವರ ದಾಷ್ಟ್ರೀಕತೆಗೆ ಪ್ರತಿಕ್ರಿಯೆ ತೋರಿಸಲು 'ಸೂ' ಬುಡಕಟ್ಟಿನ ಮುಖ್ಯಸ್ಥ ರೆಡ್ ಕ್ಲೌಡ್ (Chief red Cloud)ನ ನಾಯಕತ್ವದಲ್ಲಿ ೨೦೦೦ ಸೂ ಸೈನಿಕರು ಕರ್ನಲ್ ವಿಲಿಯಮ್ ಫೆಟರ್‌ಮ್ಯಾನ್ (Colonel William Fetterman) ಕೈಕೆಳಗಿನ ೮೧ ಸೈನಿಕರ ಮೇಲೆ ಅನಿರೀಕ್ಷಿತ ದಾಳಿ ಮಾಡಿ ಆ ಸೈನ್ಯ ತುಕಡಿಯನ್ನು ತುಂಡರಿಸಿದರು.

ಆದಿವಾಸಿಗಳ ಒಡೆತನಕ್ಕೆ ಸೇರಿದ ಪ್ರದೇಶಗಳ ಮೂಲಕ ರಸ್ತೆಗಳನ್ನು ನಿರ್ಮಿಸಲು ಮತ್ತು ರೈಲುಮಾರ್ಗಗಳನ್ನು ರಚಿಸಲು ಕಾತರವಾಗಿದ್ದ ಸರ್ಕಾರ ಬುಡಕಟ್ಟುಗಳ ಮುಖಂಡರ ಒಪ್ಪಿಗೆ ಪಡೆಯಲು 'ಇಂಡಿಯನ್ ವ್ಯವಹಾರ ಇಲಾಖೆ' (Bureau of Indian Affairs) ಅವರಿಗೆ ರೈಫಲ್‌ಗಳನ್ನು ಮತ್ತು ಮದ್ದುಗುಂಡುಗಳನ್ನು ವಿತರಣೆ ಮಾಡುತ್ತಿತ್ತು. ಈ ಆಯುಧಗಳನ್ನು ಆದಿವಾಸಿಗಳು ತಮ್ಮ ಭೂಮಿಯನ್ನು ರಕ್ಷಿಸಲು ಬಹಳ ಪರಿಣಾಮಕಾರಿಯಾಗಿ ಉಪಯೋಗಿಸತೊಡಗಿದರು. ಅವರಿಗೆ ತಮ್ಮ ಪ್ರದೇಶದ ಪ್ರತಿ ಅಂಗುಲದ ಪರಿಚಯವಿದ್ದುದರಿಂದ ಮತ್ತು ಅತ್ಯುತ್ತಮ ಗುರಿಕಾರರೂ ಅಶ್ವಾರೋಹಿಗಳು ಆಗಿದ್ದರಿಂದ ಅವರ ಚಿಕ್ಕ ಪಂಗಡಗಳೂ ಸಹ ಕದನ ಕೌಶಲ ಪರಿಣತರಾಗಿದ್ದರು. ಜನರಲ್ ಶರ್‌ಮನ್ ಅಭಿಪ್ರಾಯಪಟ್ಟಂತೆ ೫೦ ಜನ ಆದಿವಾಸಿಗಳು ೫೦೦೦ ಸೈನಿಕರನ್ನು ಸುಲಭವಾಗಿ ತಡೆದು ನಿಲ್ಲಿಸಬಲ್ಲವರಾಗಿದ್ದರು. ಫೆಡರಲ್ ಸೈನ್ಯಕ್ಕೆ ಹೆಚ್ಚು ಅನುಕೂಲತೆಗಳಿದ್ದವು. ಮೊದಲನೆಯದಾಗಿ ಸಂಖ್ಯಾಬಲ. ಎರಡನೆಯದಾಗಿ ಸಾರಿಗೆ ಸಂಪರ್ಕ ವ್ಯವಸ್ಥೆ. ಸುದ್ದಿ ಸಮಾಚಾರಗಳನ್ನು ಟೆಲಿಗ್ರಾಫ್ ಮೂಲಕ ಶೀಘ್ರವಾಗಿ ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಕಳುಹಿಸಬಹುದಾಗಿತ್ತು. ಸೈನ್ಯದ ತುಕಡಿಗಳನ್ನು ರೈಲುಬಂಡಿಗಳಲ್ಲಿ ಅತಿ ದೂರದ ಪ್ರಾಂತಗಳಿಗೆ ಸ್ವಲ್ಪ ಸಮಯದಲ್ಲಿ ರವಾನಿಸಬಹುದಾಗಿತ್ತು. ಇವು ಸೈನ್ಯದ ಪಡೆಗಳು ಆದಿವಾಸಿಗಳನ್ನು ಹತ್ತಿಕ್ಕಲು ಸಹಾಯ ಮಾಡಿದವು.

ಆದಿವಾಸಿಗಳನ್ನು ಕಾದಿರಿಸಿದ ಪ್ರದೇಶಗಳಲ್ಲಿ ಕೂಡಿ ಹಾಕುವ ಸರ್ಕಾರದ ನಿಬಂಧಗಳು ನಿರುಪಯುಕ್ತವಾಗಿದ್ದನ್ನು ಮನಗಂಡ ಸರ್ಕಾರ ಆದಿವಾಸಿಗಳ ಬಗ್ಗೆ ತನ್ನ ಧೋರಣೆಗಳನ್ನು ಪುನರ್‌ವಿಶ್ಲೇಷಣೆ ಮಾಡಬೇಕಾಗಿ ಬಂತು. ೧೮೬೭ರಲ್ಲಿ ಕಾಂಗ್ರೆಸ್ ಸ್ಥಾಪಿಸಿದ ವಿಚಾರಣಾಸಮಿತಿಯ ವರದಿಯಂತೆ ಘರ್ಷಣೆ ಮತ್ತು ಹತ್ಯಾಕಾಂಡಗಳಿಗೆ ಗಣಿ ಕೆಲಸಗಾರರು ಕಾರಣ. ಅವರು ಚಿನ್ನ ಹುಡುಕಲು ಆದಿವಾಸಿಗಳ ಪ್ರದೇಶಗಳನ್ನು ಅತಿಕ್ರಮಿಸಿ ಅವರನ್ನು ಕೆರಳಿಸಿ ಕದನಕ್ಕೆ ಕಾರಣರಾಗುತ್ತಿದ್ದರು. ಈ ಸಂಘರ್ಷಣೆಗಳ ಹಿನ್ನೆಲೆಯನ್ನು ಪರಿಶೀಲಿಸಿ ಅವು ಇನ್ನು ಮುಂದೆ ಆಗದಂತೆ ಮಾಡಲು ಪರಿಹಾರಗಳನ್ನು ಸೂಚಿಸುವ ಸಲುವಾಗಿ 'ಆದಿವಾಸಿಗಳ ಶಾಂತಿ ಸಮಿತಿ' (Indian Peace Commission)ಯನ್ನು ಸ್ಥಾಪಿಸಲಾಯಿತು. ಈ ಸಮಿತಿ ಬಯಲುಸೀಮೆಯ ಆದಿವಾಸಿಗಳನ್ನು ಎರಡು ವಿಶಾಲವಾಗಿ ಕಾದಿರಿಸಿದ ಪ್ರದೇಶಗಳಲ್ಲಿ (reservations) – ಉತ್ತರದಲ್ಲಿ ಡಕೋಟ ಪ್ರಾಂತದ ಬ್ಲಾಕ್ ಹಿಲ್ ಪ್ರದೇಶದಲ್ಲಿ ಮತ್ತು ದಕ್ಷಿಣದಲ್ಲಿ ಓಕ್ಲಹೋಮ ಪ್ರಾಂತದಲ್ಲಿ – ಮರುವಸತಿಗೊಳಿಸಬೇಕೆಂದು ತೀರ್ಮಾನಿಸಿತು. ಅದರಂತೆ ೧೮೬೭-೬೮ರಲ್ಲಿ ಆದಿವಾಸಿ ಬುಡಕಟ್ಟುಗಳ ಮುಖ್ಯಸ್ಥರು ತಮ್ಮ ಬೇಟೆಗಾರಿಕೆಯ ಅಲೆಮಾರಿ ಜೀವನವನ್ನು ತ್ಯಜಿಸಿ ಈ ಕಾದಿರಿಸಿದ ಪ್ರದೇಶಗಳಲ್ಲಿ ನೆಲಸಿ ಶಾಂತಿಯುತವಾದ ರೈತಾಪಿ ಜೀವನ ನಡೆಸುವುದಾಗಿ ಒಪ್ಪಿಕೊಂಡರು. ಆದಿವಾಸಿಗಳ ಶಾಂತಿ ಸಮಿತಿಯ ಸಲಹೆಗಳು ಆದಿವಾಸಿಯ

ಸಂಸ್ಕೃತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳದವರು ಮಾಡಿದವುಗಳಾದ್ದರಿಂದ ಅವು ಪರಿಣಾಮಕಾರಿಯಾಗಲಿಲ್ಲ. ಸಮಿತಿಯ ಸದಸ್ಯರಿಗೆ ಬುಡಕಟ್ಟುಗಳ ಮುಖ್ಯಸ್ಥರ ಪಾತ್ರದ ಬಗ್ಗೆ ತಪ್ಪು ತಿಳುವಳಿಕೆ ಇತ್ತು. ಮುಖ್ಯಸ್ಥನನ್ನು ಒಲಿಸಿಕೊಂಡು ಅವನ ರುಜು ಹಾಕಿಸಿ ಕೊಂಡರೆ ಭೂಮಿಯ ಮಾರಾಟವಾದಂತೆಯೆ ಸರಿ ಎಂದು ಅವರು ನಂಬಿದ್ದರು. ಆದರೆ ನಿಜಸ್ಥಿತಿ ಬೇರೆಯಾಗಿತ್ತು. ಬುಡಕಟ್ಟಿನ ಎಲ್ಲ ಸದಸ್ಯರ ಒಪ್ಪಿಗೆ ಪಡೆಯದೆ ಮುಖ್ಯಸ್ಥನಿಗೆ ಭೂಮಿ ಮಾರುವ ಹಕ್ಕು ಇರಲಿಲ್ಲ. ಎಲ್ಲವನ್ನೂ ಸಾಮೂಹಿಕವಾಗಿ ಅನುಭವಿಸುತ್ತಿದ್ದ ಆದಿವಾಸಿಗಳಿಗೆ ಖಾಸಗಿ ಆಸ್ತಿ ವ್ಯವಸ್ಥೆ ಅರ್ಥವಾಗಲಿಲ್ಲ. ಸೈನ್ಯ ಆದಿವಾಸಿಗಳನ್ನು ಅವರಿಗೆ ಕಾದಿರಿಸಿದ ಪ್ರದೇಶಕ್ಕೆ ಸೇರಿಸಿ ಹೊರಟುಹೋಗುತ್ತಿತ್ತು. ಸೈನ್ಯ ಹಿಂದಿರುಗಿದ ತಕ್ಷಣ ಆದಿವಾಸಿಗಳು ಆ ಪ್ರದೇಶದಿಂದ ಹೊರಬಂದು ತಮ್ಮ ಇಷ್ಟ ಬಂದಂತೆ ವಿಶಾಲವಾಗಿ ತೆರೆದುಕೊಂಡಿದ್ದ ಬಯಲು ಪ್ರದೇಶದಲ್ಲಿ ಮನ ಬಂದಲ್ಲಿ ಬೀಡು ಬಿಡುತ್ತಿದ್ದರು. ಆದಿವಾಸಿಗಳು ಸಹಕರಿಸಿದ ಪಕ್ಷದಲ್ಲಿ ಅವರಿಗೆ ಬೇಕಾದ ಸರಕು ಸಾಮಗ್ರಿಗಳನ್ನು ಒದಗಿಸಲಾಗುವುದೆಂದು ಸರ್ಕಾರ ಕೊಟ್ಟ ಭಾಷೆಗೆ ತಕ್ಕಂತೆ ನಡೆದುಕೊಳ್ಳಲಿಲ್ಲ. 'ಇಂಡಿಯನ್ ವ್ಯವಹಾರ ಇಲಾಖೆ'ಯ ಅಸಮರ್ಪಕ ಕಾರ್ಯ ಮತ್ತು ಭ್ರಷ್ಟಾಚಾರ ಆದಿವಾಸಿಗಳನ್ನು ಮತ್ತಷ್ಟು ಕೆರಳಿಸಿತು.

೧೮೭೧ರಲ್ಲಿ ಕಾಂಗ್ರೆಸ್ ಆದಿವಾಸಿಗಳನ್ನು ಆಶ್ರಿತರಂತೆ ಪರಿಗಣಿಸಿ ಅವರನ್ನು ಸಾಕುವ ಹೊಣೆ ಹೊತ್ತಿತು. ಈ ಯೋಜನೆಯ ಪ್ರಕಾರ ಆದಿವಾಸಿಗಳಿಗೆ ನಿತ್ಯ ಜೀವನಕ್ಕೆ ಬೇಕಾದ ಎಲ್ಲ ಸರಕು ಸಾಮಗ್ರಿಗಳನ್ನು ಒದಗಿಸುವುದೆ ಅಲ್ಲದೆ ವರ್ಷಾಸನಗಳನ್ನು ನೀಡಿ, ಕಾದಿರಿಸಿದ ಪ್ರದೇಶದಲ್ಲಿ ಅವರಿಗೆ ವ್ಯವಸಾಯದಲ್ಲಿ ತರಬೇತಿ ಕೊಡುವ ಜವಾಬ್ದಾರಿಯನ್ನು ಸರ್ಕಾರ ವಹಿಸಿಕೊಂಡಿತು. ಇದರ ಉದ್ದೇಶ ಆದಿವಾಸಿಗಳನ್ನು ಅಮೆರಿಕನ್ ಸಮಾಜದಲ್ಲಿ ವಿಲೀನಗೊಳ್ಳುವಂತೆ ಮಾಡುವುದಾಗಿತ್ತು. ಅಧಿಕಾರ ಧೋರಣೆಗಳಲ್ಲಿ ಇಷ್ಟೆಲ್ಲ ಬದಲಾವಣೆಗಳಾದರೂ ಒಪ್ಪಂದಗಳನ್ನು ಜಾರಿಗೆ ತರಲು ಸೈನ್ಯದ ಬಲವನ್ನು ಉಪಯೋಗಿಸುವುದು ನಿಲ್ಲಲಿಲ್ಲ. ಇಂಡಿಯನ್ ವ್ಯವಹಾರ ಇಲಾಖೆ ಆದಿವಾಸಿಗಳಿಗೆ ಸಹಾಯ ಮಾಡುವ ಬದಲು ಅವರ ಜೀವನವನ್ನು ಹದಗೆಡಿಸಿತು. ಫೆಡರಲ್ ಏಜೆಂಟರು ಆದಿವಾಸಿಗಳಿಗೆ ಕಡಿಮೆ ಬೆಲೆಯ, ಹುಳ ಕಡಿದು ತೂತಾದ ಹೊದಿಕೆಗಳನ್ನು ಮತ್ತು ಹಳಸಿದ ದನದ ಮಾಂಸವನ್ನು ಹಂಚುತ್ತಿದ್ದರು. ಉಳಿದ ಹಣವನ್ನು ತಮ್ಮ ಜೇಬಿಗೆ ಸೇರಿಸುತ್ತಿದ್ದರು. ಈ ಭ್ರಷ್ಟಾಚಾರವನ್ನು ತಡೆಗಟ್ಟಲು ಫೆಡರಲ್ ಸರ್ಕಾರ ಪ್ರಮುಖ ಚರ್ಚುಗಳಿಗೆ ಏಜೆಂಟರುಗಳನ್ನು ಆಯ್ಕೆ ಮಾಡುವ ಮತ್ತು ಆದಿವಾಸಿಗಳಿಗೆ ವಿದ್ಯಾಭ್ಯಾಸ ನೀಡುವ ಅಧಿಕಾರವನ್ನು ವಹಿಸಿಕೊಟ್ಟಿತ್ತು. ಸೈನ್ಯದ ಆಡಳಿತಕ್ಕಿಂತ ಚರ್ಚುಗಳ ಆಡಳಿತ ಆದಿವಾಸಿಗಳ ಹಿತಾಸಕ್ತಿಗಳನ್ನು ಕಾಪಾಡುತ್ತದೆ ಎಂದು ನಂಬಿದ್ದರು. ಆದರೆ ಈ ಯೋಜನೆಯೂ ಸಫಲವಾಗಲಿಲ್ಲ. ಚರ್ಚುಗಳು ಆದಿವಾಸಿಗಳ ನಿರ್ವಹಣೆಯ ಅಧಿಕಾರ ಕ್ಕಾಗಿ ಪರಸ್ಪರ ಜಗಳವಾಡುತ್ತಿದ್ದವು; ಯೋಜನೆಯನ್ನು ಆಸಕ್ತಿ ವಹಿಸಿ ಅನುಷ್ಠಾನಕ್ಕೆ

ತರಲಿಲ್ಲ. ಚರ್ಚಿನ ಏಜೆಂಟರು ಹಿಂದಿನವರಂತೆಯೆ ಆದಿವಾಸಿಗಳ ಯೋಗಕ್ಷೇಮಗಳ ಬಗ್ಗೆ ಅನಾಸಕ್ತರಾಗಿದ್ದು ಅವರಷ್ಟೇ ಭ್ರಷ್ಟಾಚಾರಿಗಳಾಗಿದ್ದರು. ಆದ್ದರಿಂದ ೧೮೭೦ರ ದಶಕದ ಕೊನೆಯಲ್ಲಿ ಈ ಯೋಜನೆಯನ್ನೂ ಕೈಬಿಡಲಾಯಿತು.

೧೮೭೪ರಲ್ಲಿ ಡಕೋಟ ಪ್ರಾಂತದ ಬ್ಲಾಕ್ ಹಿಲ್ (Black Hill) ಪ್ರದೇಶಕ್ಕೆ ಚಿನ್ನದ ಆಸೆಯಿಂದ ಸಾವಿರಾರು ಬಿಳಿಯರು ಧಾವಿಸಿದರು. ಈ ಪ್ರದೇಶ ಸೂ ಇಂಡಿಯನ್ನರ ಕಾದಿರಿಸಿದ ಪ್ರದೇಶದ ಒಂದು ಭಾಗವಾಗಿತ್ತು. ಫೆಡರಲ್ ಸೈನ್ಯ ಬಿಳಿಯರನ್ನು ತಡೆಯಲು ಪ್ರಯತ್ನಪಟ್ಟು ಸಾಧ್ಯವಾಗದೆ ಅದನ್ನು ನಿಲ್ಲಿಸಿತು. ಚಿನ್ನ ಹುಡುಕಲು ಬಂದ ಜನಸಮೂಹ ಮತ್ತು ಉತ್ತರ ಪೆಸಿಫಿಕ್ ರೈಲುಮಾರ್ಗವನ್ನು ನಿರ್ಮಾಣ ಮಾಡುತ್ತಿದ್ದ ಕೆಲಸಗಾರರ ತಂಡಗಳು ತಮ್ಮ ನೆಲವನ್ನು ಆಕ್ರಮಿಸಿದ್ದನ್ನು ಸಹಿಸಲಾರದೆ ಸೂ ಇಂಡಿಯನ್ನರು ದಕ್ಷಿಣ ಮಾನ್‌ಟಾನ ಪ್ರಾಂತದ ಬಿಗ್ ಹಾರ್ನ್ (Big Horn River) ನದಿಯ ದಂಡೆಯಗುಂಟ ಬಿಳಿಯರ ಮೇಲೆ ದಾಳಿ ಮಾಡಿದರು. ಸರ್ಕಾರ ಅವರನ್ನು ತಮ್ಮ ಕಾಯ್ದಿರಿಸಿದ ಪ್ರದೇಶಕ್ಕೆ ವಾಪಸ್ಸಾಗುವಂತೆ ಆಜ್ಞಾಪಿಸಿತು. ಆದರೆ ಸೂ ಇಂಡಿಯನ್ನರು ಆಜ್ಞೆಯನ್ನು ಅಲಕ್ಷಿಸಿ ಕದನ ಮುಂದುವರಿಸಿ ಕೆಲವು ಕಡೆಗಳಲ್ಲಿ ಸೈನ್ಯದ ಮೇಲೆ ಜಯ ಗಳಿಸಿದರು. ೧೮೭೬ರ ಬೇಸಿಗೆಯ ದಿನಗಳಲ್ಲಿ ಮೂರು ಫೆಡರಲ್ ಸೈನ್ಯ ತುಕಡಿಗಳು, ಆದಿವಾಸಿಗಳ ಮುಖ್ಯಸ್ಥರಾಗಿದ್ದ ಕ್ರೇಜ಼ಿ ಹಾರ್ಸ್ (Crazy Horse) ಮತ್ತು ಸಿಟ್ಟಿಂಗ್ ಬುಲ್ (Sitting Bull) ನಾಯಕತ್ವದಲ್ಲಿ ದಾಳಿ ಮಾಡುತ್ತಿದ್ದ ಇಂಡಿಯನ್ನರನ್ನು ಬೆನ್ನಟ್ಟಿದವು. ಕರ್ನಲ್ ಜಾರ್ಜ್ ಕಸ್ಟರ್ (George Custer) ಎಂಬ ಯುವ ಸೈನ್ಯಾಧಿಕಾರಿ ತಾನೊಬ್ಬ ಇಂಡಿಯನ್ನರ ದಂಗೆ ಅಡಗಿಸಿದ ಮಹಾಶೂರನೆಂದು ಕೀರ್ತಿಗಳಿಸುವ ಮಹತ್ವಾಕಾಂಕ್ಷೆ ಉಳ್ಳವನಾಗಿದ್ದನು. ಕರ್ನಲ್ ಕಸ್ಟರ್ ಯುದ್ಧ ಇಲಾಖೆಯಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರ ಬೆಳಕಿಗೆ ತಂದಿದ್ದರಿಂದ ಅಧ್ಯಕ್ಷ ಗ್ರಾಂಟ್‌ನ ವಿರೋಧಿಗಳ ಪಟ್ಟಿಯಲ್ಲಿ ಸೇರಿಹೋಗಿದ್ದನು. ಒಂದು ಮಹಾ ಸಾಹಸ ಮಾಡಿ ಅಧ್ಯಕ್ಷನ ವಿಶ್ವಾಸಕ್ಕೆ ಪಾತ್ರನಾಗಲು ಪ್ರಯತ್ನಪಡುತ್ತಿದ್ದವನು. ಇದೇ ಹುಮ್ಮಸ್ಸಿನಲ್ಲಿ ಎಚ್ಚರಿಕೆಯನ್ನೂ ಗಾಳಿಗೆ ತೂರಿ, ಆಜ್ಞೆಗಳನ್ನು ಉಲ್ಲಂಘಿಸಿ ಸೂ ಇಂಡಿಯನ್ನರನ್ನು ಬೆನ್ನಟ್ಟಿಹೋದನು. ಹೀಗೆ ಬರುತ್ತಿದ್ದ ಕಸ್ಟರ್‌ನನ್ನು ಸೂ ಇಂಡಿಯನ್ನರು, ಮಾಂಸದಾಸೆ ತೋರಿಸಿ ಬೋನಿಗೆ ಪ್ರಾಣಿಯನ್ನು ಆಕರ್ಷಿಸುವಂತೆ, ದೂರ ದೂರ ಕರೆದೊಯ್ದು ಕಡೆಯಲ್ಲಿ ಮಾನ್‌ಟಾನದ ಲಿಟ್ಲ್ ಬಿಗ್ ಹಾರ್ನ್ ನದಿ (Little Big Horn river)ಯ ತಟದಲ್ಲಿ ಕಸ್ಟರ್‌ನನ್ನು ೨೬೪ ಅಶ್ವಾರೋಹಿಗಳ ಸಮೇತ ತುಂಡರಿಸಿದರು.

ಇಷ್ಟಕ್ಕೆ ಆದಿವಾಸಿಗಳು ತಮ್ಮ ಹೋರಾಟವನ್ನು ನಿಲ್ಲಿಸಲಿಲ್ಲ. ಫೆಡರಲ್ ಸೈನ್ಯಕ್ಕೆ ಅವರನ್ನು ಸಂಪೂರ್ಣವಾಗಿ ಸೋಲಿಸಲು ಸಾಧ್ಯವಾಗಲಿಲ್ಲ. ಆದಿವಾಸಿಗಳ ಮುಖ್ಯ ಆಧಾರವಾಗಿದ್ದ ಕಾಡುಕೋಣಗಳ ಹಿಂಡುಗಳು ನಿರ್ಮೂಲಗೊಂಡಿದ್ದು ಅವರ ಅವನತಿಗೆ ಮುಖ್ಯ

ಕಾರಣವಾಯಿತು. ಬಿಳಿಯ ಬೇಟೆಗಾರರು ಆದಿವಾಸಿಗಳಿಗೆ ಕಾಡುಕೋಣಗಳ ಅವಶ್ಯಕತೆಯನ್ನು ಅರಿತುಕೊಂಡು, ಕೋಣಗಳ ನಿರ್ಮೂಲನ ಕೊನೆಯಲ್ಲಿ ಆದಿವಾಸಿಗಳ ನಿರ್ಮೂಲನದಲ್ಲಿ ಪರ್ಯವಸಾನಗೊಳ್ಳುವುದು ಖಂಡಿತ ಎಂದು ನಿರ್ಧರಿಸಿ, ಕಾಡುಕೋಣಗಳನ್ನು ಸಾವಿರಗಟ್ಟಲೆ ಸಂಖ್ಯೆಯಲ್ಲಿ ಕೊಲ್ಲತೊಡಗಿದರು. 'ಬಫೆಲೋ ಬಿಲ್' (Buffalo Bill) ಎಂದು ಕುಖ್ಯಾತನಾಗಿದ್ದ ವಿಲಿಯಮ್ ಕೋಡಿ (William Cody) ಎಂಬ ಬಿಳಿಯ ಬೇಟೆಗಾರನು ೧೮ ತಿಂಗಳ ಅವಧಿಯಲ್ಲಿ ೪೩೮೦ ಕಾಡುಕೋಣಗಳನ್ನು ಕೊಂದಿದ್ದನು. ಈ ಕೃತ್ಯವೂ ಸಹ ಆದಿವಾಸಿಗಳನ್ನು ಸಂಯುಕ್ತ ಸಂಸ್ಥಾನಗಳ ಅಧಿಕಾರವನ್ನು ಒಪ್ಪಿಕೊಳ್ಳುವಂತೆ ಮಾಡಲು ಸಾಧ್ಯವಾಗಲಿಲ್ಲ. ಅಪಾಚೆ (Apache) ಬುಡಕಟ್ಟಿನವರ ಮುಖ್ಯಸ್ಥ ಜೆರಾನಿಮೊ (Geronimo)ನ ನಾಯಕತ್ವದಲ್ಲಿ ೧೮೮೬ರವೆಗೂ ಹೋರಾಟವನ್ನು ಮುಂದುವರಿಸಿದರು. ನಂತರ ಜೆರಾನಿಮೊ ಸೆರೆಸಿಕ್ಕನು. ಅವನನ್ನು ಫ್ಲಾರಿಡಾ ಪ್ರಾಂತಕ್ಕೆ ಗಡೀಪಾರು ಮಾಡಲಾಯಿತು.

ಈ ಎಲ್ಲ ಆಗುಹೋಗುಗಳಿಂದ ಅವಮಾನಿತರಾಗಿ ಕಂಗೆಟ್ಟ ಸೂ ಇಂಡಿಯನ್ನರು ತಮ್ಮ ಪರಂಪರೆಯನ್ನು, ಸಂಸ್ಕೃತಿಯನ್ನು ಉಳಿಸಿಕೊಳ್ಳುವ ಕಡೆಯ ಪ್ರಯತ್ನವಾಗಿ ಒಂದು ಹೊಸ ಮತಧರ್ಮ ಪಾಲಿಸಲು ಪ್ರಾರಂಭಿಸಿದರು. ಈ ಮತಧರ್ಮ ಜಗದೋದ್ಧಾರಕನೊಬ್ಬನು (messiah) ಹುಟ್ಟಿ ತಮ್ಮನ್ನು ಬಿಳಿಯರ ಬಂಧನದಿಂದ ಮುಕ್ತಗೊಳಿಸುತ್ತಾನೆ ಎಂದು ಭರವಸೆ ನೀಡಿ, ಅವರ ಕ್ಷೀಣಿಸುತ್ತಿದ್ದ ಸ್ವಾಭಿಮಾನವನ್ನು ಉಜ್ವಲಗೊಳಿಸಿತು. ಅಷ್ಟೆ ಅಲ್ಲ ಅವರಿಗೆ ನವಚೇತನ ನೀಡಿ ಅವರ ಕೆಚ್ಚನ್ನು ಹೆಚ್ಚಿಸ ಬಹುದೆಂದು ಹೆದರಿದ ಫೆಡರಲ್ ಸರ್ಕಾರ ಆ ಹೊಸ ಪಂಥವನ್ನು ಮತ್ತು ಅದರ ಅಂಗವಾಗಿದ್ದ ಶಾಸ್ತ್ರವಿಧಿಗಳನ್ನು ನಿಷೇಧಿಸಿ, ಆ ನಿಷೇಧಾಜ್ಞೆಯನ್ನು ಬಲಾತ್ಕಾರದಿಂದ ಜಾರಿಗೆ ತರಲು ಸೈನ್ಯವನ್ನು ಕಳುಹಿಸಿತು. ಡಿಸೆಂಬರ್ ೧೮೯೦ರಲ್ಲಿ ನಡೆದ ಸೈನ್ಯದ ಕಾರ್ಯಾಚರಣೆಯಲ್ಲಿ ದಕ್ಷಿಣ ಡಕೋಟ ಪ್ರಾಂತದ 'ವೂಂಡೆಡ್ ನೀ' (Wounded Knee) ಎಂಬಲ್ಲಿ ನೂರಾರು ಸೂ ಇಂಡಿಯನ್ನರು ಸಾವನ್ನಪ್ಪಿದರು. ನಂತರ ಅಳಿದುಳಿದ ಸೂ ಬುಡಕಟ್ಟಿನವರು ಶರಣಾಗತರಾದರು.

ಡಾವ್ಸ್ ಕಾಯಿದೆ

೧೮೮೭ರಲ್ಲಿ ಜಾರಿಗೆ ಬಂದ ಡಾವ್ಸ್ ಕಾಯಿದೆ (Dawes Act) ಮುಚ್ಚುಮರೆಯಿಲ್ಲದೆ ಆದಿವಾಸಿಗಳ ಸ್ವಾತಂತ್ರ್ಯ ಮತ್ತು ಒಗ್ಗಟ್ಟನ್ನು ಕೊನೆಗಾಣಿಸುವ ಕೊಡಲಿ ಪೆಟ್ಟಾಯಿತು. ಮೊದಲು ಸರ್ಕಾರ ಪ್ರತಿಯೊಂದು ಬುಡಕಟ್ಟಿನೊಡನೆ ಪ್ರತ್ಯೇಕವಾಗಿ ವ್ಯವಹರಿಸುತ್ತಿತ್ತು. ಡಾವ್ಸ್ ಕಾಯಿದೆ ಬುಡಕಟ್ಟುಗಳನ್ನು ಸಾಮೂಹಿಕವಾಗಿ ಒಂದೇ ಸಮುದಾಯ ಎಂದು ಪರಿಗಣಿಸಿ, ಎಲ್ಲ ಬುಡಕಟ್ಟುಗಳನ್ನೂ ಒಂದೇ ಅಧಿಕಾರವ್ಯಾಪ್ತಿಗೆ ಒಳಪಡುವಂತೆ ಮಾಡಿತು. ಕಾಯ್ದಿರಿಸಿದ ಪ್ರದೇಶಗಳನ್ನು ೧೬೦ ಎಕರೆ ಸಾಗುವಳಿ ಜಮೀನುಗಳಾಗಿ

ವಿಂಗಡಿಸಿ ಪ್ರತಿಯೊಂದು ಕುಟುಂಬಕ್ಕೂ ಕೊಡಲಾಯಿತು. ಅವಿವಾಹಿತರಿಗೆ, ತಬ್ಬಲಿಗಳಿಗೆ ಮತ್ತು ಆಶ್ರಿತ ಮಕ್ಕಳಿಗೆ ಕಡಿಮೆ ಭೂಮಿಯನ್ನು ಹಂಚಲಾಯಿತು. ಕಾಯ್ದಿರಿಸಿದ ಜಾಗದ ಒಟ್ಟು ೧೩೭ ಮಿಲಿಯನ್ ಎಕರೆಗಳಲ್ಲಿ ೪೭ ಮಿಲಿಯನ್ ಎಕರೆಗಳನ್ನು ಮಾತ್ರ ಆದಿವಾಸಿಗಳ ಸಾಗುವಳಿಗೆ ಬಿಟ್ಟುಕೊಟ್ಟು ಉಳಿದ ೯೦ ಮಿಲಿಯನ್ ಎಕರೆ ಭೂಮಿಯನ್ನು ವಲಸೆ ಬಂದು ನೆಲಸಿದ ಬಿಳಿಯರಿಗೆ ಬಿಟ್ಟು ಕೊಡಲಾಯಿತು. ಅಂದರೆ ಸುಲಭವಾದ ಬೆಲೆಗೆ ಮಾರಲಾಯಿತು. ಹೀಗೆ ಮಾಡಿದ್ದರಿಂದ ಬಂದ ಆದಾಯವನ್ನು ಆದಿವಾಸಿಗಳ ವಿದ್ಯಾಭ್ಯಾಸಕ್ಕೆ, ವಿಶಿಷ್ಟವಾಗಿ ಕಸಬುಗಳ ತರಬೇತು ಮತ್ತು ಯಾಂತ್ರಿಕ ಶಿಕ್ಷಣಕ್ಕೆ ಮೀಸಲಾಗಿಡಲಾಯಿತು.

ಆದಿವಾಸಿಗಳ ಆಸ್ತಿಯನ್ನು ಮೋಸಗಾರರು ಅಪಹರಿಸದಂತೆ ಮಾಡಲು ಡಾವ್ಸ್ ಕಾಯಿದೆ ೨೫ ವರ್ಷಗಳ ಕಾಲ ಆಸ್ತಿಯನ್ನು ಮಾರುವುದನ್ನು ನಿಷೇಧಿಸಿತು. ಆದಾಗ್ಯೂ ೧೯೩೦ರ ದಶಕದ ಹೊತ್ತಿಗೆ ಡಾವ್ಸ್ ಕಾಯಿದೆಯ ಪ್ರಕಾರ ಪಡೆದಿದ್ದ ಭೂಮಿಯಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗವನ್ನು ಕಾಯಿದೆಯನ್ನು ಕುಯುಕ್ತಿಯಲ್ಲಿ ನಿಪುಣರಾದ ಹಣವಂತರಿಂದ ಮೋಸಹೋಗಿ ಕಳೆದುಕೊಂಡಿದ್ದರು. ಡಾವ್ಸ್ ಕಾಯಿದೆ ಆದಿವಾಸಿಗಳನ್ನು ಅಧಿಕೃತವಾಗಿ ಅಮೆರಿಕದ ಪ್ರಜೆಗಳೆಂದು ಪರಿಗ್ರಹಿಸಿತ್ತು. ಆದರೆ ಕಾಯಿದೆಯ ಈ ಮುಖ್ಯ ಅಂಶವನ್ನು ೧೯೨೪ರ ತನಕ ಜಾರಿಗೆ ತರಲಿಲ್ಲ. ಅಮೆರಿಕ ರಾಜ್ಯಾಂಗದ ೪ನೆಯ ತಿದ್ದುಪಡಿಯನ್ನು ೧೮೬೮ರಲ್ಲಿ ಅಂಗೀಕರಿಸಲಾಯಿತು. ಈ ತಿದ್ದುಪಡಿ 'ಸಂಯುಕ್ತ ಸಂಸ್ಥಾನಗಳಲ್ಲಿ ಹುಟ್ಟಿದ ಅಥವಾ ನ್ಯಾಯಬದ್ಧವಾಗಿ ಪೌರತ್ವವನ್ನು ಪಡೆದ ಎಲ್ಲರೂ ಸಮಾನ ಹಕ್ಕುಗಳಿಗೆ ಬಾಧ್ಯರಾಗಿರುತ್ತಾರೆ' ಎಂದು ಭರವಸೆ ನೀಡಿದ್ದರೂ ಸಹ ಫೆಡರಲ್ ಮತ್ತು ಸಂಸ್ಥಾನ ಸರ್ಕಾರಗಳು ಆದಿವಾಸಿಗಳಿಗೆ ಪ್ರಾಥಮಿಕ ಪೌರತ್ವದ ಹಕ್ಕುಗಳನ್ನು ನಿಷೇಧಿಸಿ ಅವರ ನಂಬಿಕೆ, ಪದ್ಧತಿ, ಸಮಾಜವ್ಯವಸ್ಥೆಯನ್ನು ಹಾಗು ಅವರ ಭಾಷೆಗಳನ್ನು ಹೀಗಳೆದು ಹತ್ತಿಕ್ಕಲು ಎಲ್ಲ ಪ್ರಯತ್ನಗಳನ್ನು ಮಾಡಿದವು.

'ಆದಿವಾಸಿ ಸಮಸ್ಯೆ'ಗೆ ಇಪ್ಪತ್ತನೆಯ ಶತಮಾನದ ಮಧ್ಯಭಾಗದವರೆಗೆ ಸರ್ಕಾರ ಕೈಗೊಂಡ ಪರಿಹಾರ 'ವಿಲೀನೀಕರಣ' ಹಿಂದೆ ಉಪಯೋಗಿಸಲ್ಪಟ್ಟ ಬಲಾತ್ಕಾರ, ಭಯೋತ್ಪಾದನೆ ಮುಂತಾದ 'ಪರಿಹಾರ'ಗಳಂತೆ ಅನುಚಿತ ಮತ್ತು ರಾಜ್ಯಾಂಗ ವಿರುದ್ಧವಾದುದು. ಕೆಲವು ಆದಿವಾಸಿಗಳು ಬಿಳಿಯರ ಪದ್ಧತಿಗಳನ್ನು ಅನುಸರಿಸಿದರು. ಆದರೆ ಬಹುಸಂಖ್ಯಾತ ಆದಿವಾಸಿಗಳು ತಮ್ಮ ಬುಡಕಟ್ಟು ವ್ಯವಸ್ಥೆಯನ್ನು ಬಿಟ್ಟುಕೊಡಲು ಭೂಮಿಯ ಸಾಮೂಹಿಕ ಒಡೆತನವನ್ನು ಉಳಿಸಿಕೊಂಡುಹೋಗಲು ನಿರ್ಧರಿಸಿದ್ದರು. ಆದಿವಾಸಿಗಳ ಬಗ್ಗೆ ಆಧುನಿಕ ಅಮೆರಿಕನ್ನರ ಅಭಿಪ್ರಾಯಗಳು ಬದಲಾಗಿವೆ. ಅವರು 'ವಿಲೀನೀಕರಣ'ವನ್ನು ತ್ಯಜಿಸಿ, ಆದಿವಾಸಿಗಳ ಸಂಸ್ಕೃತಿ ಅಮೆರಿಕದ ರಾಷ್ಟ್ರೀಯ ಸಂಸ್ಕೃತಿಯ ವೈವಿಧ್ಯತೆಗೆ ಕೊಟ್ಟಿರುವ ಕೊಡುಗೆಯೆಂದು ಗ್ರಹಿಸಿ ಶ್ಲಾಘಿಸುವ ಹಂತವನ್ನು ತಲುಪಿದ್ದಾರೆ ಎಂದರೆ ತಪ್ಪಾಗಲಾರದು.

ಚಿನ್ನದ ಗಿರ !

ಅಮೆರಿಕದ ಪಶ್ಚಿಮ ಪ್ರಾಂತದ ಆದಿವಾಸಿ ಪ್ರದೇಶಗಳಿಗೆ ಮೊದಲು ಪ್ರವೇಶಿಸಿ ಆಕ್ರಮಣ ಮಾಡಿ, ಅವರ ಜೀವನರೀತಿಯನ್ನು ಹತ್ತಿಕ್ಕಲು ಪ್ರಯತ್ನಿಸಿದವರು ಗಣಿ ಕೆಲಸಗಾರರು. ಎಲ್ಲೆಲ್ಲಿ ಭೂಮಿಯಲ್ಲಿ ಚಿನ್ನದ ಎಳೆಗಳು ಕಂಡು ಬಂದವೋ ಅಲ್ಲಿಗೆ ಚಿನ್ನವನ್ನು ಹುಡುಕಿ ತೆಗೆಯುವ ನಿರೀಕ್ಷಣಾಕಾರರು (prospectors) ದಾಳಿಯಿಟ್ಟರು – ತಮ್ಮ ಹಾರೆ, ಗುದ್ದಲಿ, ಸನಿಕೆ ಮತ್ತು ಬಾಂಡಲಿಗಳನ್ನು ಹಿಡಿದು ಭೂಮಿಯ ಮೇಲ್ಪದರ ದಲ್ಲಿರುವ ಮರಳು, ಮಣ್ಣು ಅಥವಾ ಜಲ್ಲಿಯಲ್ಲಿ ಇರಬಹುದಾದ ಚಿನ್ನದ ರೇಕುಗಳನ್ನು ಹುಡುಕಿ ತೆಗೆದು ಸಂಗ್ರಹಿಸಿ ಸಾಹುಕಾರರಾಗುವ ಆಸೆಯಿಂದ. ೧೮೪೮ರಿಂದ ೧೮೫೮ರವರೆಗೆ ಪಶ್ಚಿಮ ಪ್ರಾಂತಗಳಿಂದ ೫೦೦ ಮಿಲಿಯನ್ ಡಾಲರ್‌ಗಳಿಗೂ ಮಿಗಿಲಾದ ಮೊತ್ತದ ಚಿನ್ನವನ್ನು ಹೊರತೆಗೆದು ಮಾರಲಾಯಿತು. ಚಿನ್ನದ ಮಾರಾಟದಿಂದ ಬಂದ ಲಾಭ ಅಮೆರಿಕದ ಪೂರ್ವಪ್ರಾಂತಗಳ ಐಶ್ವರ್ಯವಂತ ಹಣಕಾಸಿನ ವ್ಯವಹಾರಸ್ಥರ ಖಜಾನೆ ಸೇರಿತು. ಇವರೇ ದೊಡ್ಡ ಚಿನ್ನದ ಗಣಿಗಳಿಗೆ ಸಾಲ ಕೊಟ್ಟು ಬೆಂಬಲಿಸಿದವರು. ಚಿನ್ನದ ಗಿರ ಹಿಡಿದ ಸಾವಿರಾರು ಜನ ಚಿನ್ನ ಶೋಧಿಸಿ, ಸಂಗ್ರಹಿಸಿ, ಮಾರಿ, ಶ್ರೀಮಂತ ರಾಗುವ ಹೊಂಗನಸ ಬೆನ್ನೇರಿ ಬಂದವರು, ತಾವು ತಂದಿದ್ದ ಹಣವನ್ನೆಲ್ಲ ಕಳೆದುಕೊಂಡು ನಿರ್ಗತಿಕರಾದರು. ಅವರ ಪಾಲಿಗೆ ಚಿನ್ನದ ಗಿರ ತಿರುಕನ ಕನಸಾಯಿತು.

ಭೂಮಿಯ ಮೇಲ್ಪದರದಲ್ಲಿ ಶೋಧಿಸಬಹುದಾದ ಚಿನ್ನದ ರೇಕುಗಳನ್ನು ಹುಡುಕಿ ಶುದ್ಧವಾದ ಚಿನ್ನವನ್ನು ಮಾಡುವ ಕೆಲಸ ಕೊನೆಗೊಳ್ಳಲು ಬಹಳ ಕಾಲ ಬೇಕಾಗಲಿಲ್ಲ. ಮಿಕ್ಕ ಚಿನ್ನದ ಅದಿರು ಭೂಗರ್ಭದಲ್ಲಿ ಸ್ಫಟಿಕದ ಹಳಕುಗಳಲ್ಲಿ ಹುದುಗಿಕೊಂಡಿತ್ತು. ಅದನ್ನು ಹೊರತೆಗೆಯಲು ಭಾರಿ ಬೆಲೆಯ ಯಂತ್ರೋಪಕರಣಗಳು ಬೇಕಾಗಿದ್ದವು. ಬೃಹತ್ ಕಂಪನಿಗಳು ಮಾತ್ರ ಭಾರಿ ಮೊತ್ತದ ಹಣವನ್ನು ಹೂಡಲು ಸಮರ್ಥವಾಗಿದ್ದವು. ಚಿನ್ನದ ಗಿರ ಹಿಡಿದ ಶ್ರೀಮಂತರು ಕಂಪನಿಗಳನ್ನು ಸ್ಥಾಪಿಸಿ ಚಿನ್ನದ ಗಣಿಗಳನ್ನು ಕಟ್ಟಿ, ಚಿನ್ನದ ಅದಿರನ್ನು ಹೊರತೆಗೆದು, ಹಳಕುಗಳನ್ನು ಹುಡಿ ಮಾಡಿ, ಮೂಸೆಯಲ್ಲಿ ಅಗ್ನಿ ಪರಿಷ್ಕಾರ ಮಾಡಿ, ಅಪ್ಪಟ ಬಂಗಾರ ತಯಾರಿಸಿ, ಐಶ್ವರ್ಯವನ್ನು ಸೂರೆಗೊಂಡರು. ಕನಸು ನನಸಾಗದೆ ನಿರ್ಗತಿಕರಾದವರು ಅಲ್ಲೇ ನೆಲೆನಿಂತು ಕಂಪನಿಗಳಲ್ಲಿ ಸಂಬಳಕ್ಕಾಗಿ ಕೆಲಸ ಮಾಡ ತೊಡಗಿದರು. ಚಿನ್ನದ ಗಿರ ಬಿಡದ ಇನ್ನೂ ಕೆಲವರು ಹೊನ್ನು ಹುಡುಕಲು ಹೊಸ ಜಾಗಗಳಿಗೆ ಹೊರಟು ಹೋದರು. ಅಂತಿಮವಾಗಿ, ಭೂಗರ್ಭದಲ್ಲಿ ಹುದುಗಿದ್ದ ಹೊನ್ನು ಬರಿದಾಗುತ್ತ ಬಂದು ಗಣಿಗಳು ಮುಚ್ಚಿದವು. ಆಗ ಅನೇಕ ಗಣಿ ಕೆಲಸಗಾರರು ಬೇಸಾಯ ಮಾಡಲು ಪ್ರಾರಂಭಿಸಿದರು. ಮತ್ತೆ ಕೆಲವರು ಪಶುಪಾಲನೆಯನ್ನು ಕೈಗೊಂಡರು. ಈ ಪಶುಪಾಲನೆಯ ಮುಖ್ಯ ಉದ್ದೇಶ ದೇಶದಲ್ಲಿ ಬೇಡಿಕೆಯಿದ್ದ ಗೋಮಾಂಸವನ್ನು ಒದಗಿಸುವುದಾಗಿತ್ತು.

ಕೊಲರಾಡೊ ಪ್ರಾಂತದಲ್ಲಿ ಅರ್ಧ ಶತಮಾನದವರೆಗೆ ಗಣಿ ಉದ್ಯಮ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಜುಲೈ ೧೮೫೮ರಲ್ಲಿ ಈಗಿನ ಡೆನ್‌ವರ್ (Denver) ನಗರದ ಸಮೀಪ ಬತ್ತಿದ ತೊರೆಯ ತಟದಲ್ಲಿ ಚಿನ್ನದ ರೇಕುಗಳನ್ನು ಶೋಧಿಸಲಾಯಿತು. ಸುತ್ತಮುತ್ತಲ ಬೆಟ್ಟ ಗುಡ್ಡಗಳಲ್ಲಿ ಚಿನ್ನದ ಅದಿರು ಇರುವುದನ್ನು ಪತ್ತೆ ಮಾಡಿದರು. ನಂತರ ಬಂಗಾರದ ಅದಿರಿನ ಜೊತೆಗೆ ಬೆಳ್ಳಿಯ ಅದಿರು ದೊರೆತು, ಬಂಗಾರ ಮತ್ತು ಬೆಳ್ಳಿಯ ಗಣಿಗಳು ಕೊಲರಾಡೊ ಪ್ರಾಂತವನ್ನು ಶ್ರೀಮಂತಗೊಳಿಸಿದವು. ಇವುಗಳ ಅದಿರು ಬರಿದಾಗುತ್ತ ಬಂದಂತೆ ಕೊಲರಾಡೊ ಸಂಸ್ಥಾನದ ಆರ್ಥಿಕ ವ್ಯವಸ್ಥೆ ಕೃಷಿ ಮತ್ತು ಪಶುಪಾಲನೆಯ ಮೇಲೆ ಆಧಾರಿತವಾಯಿತು. ೧೮೫೯ರಲ್ಲಿ ಪಶ್ಚಿಮ ನೆವಾಡ ಪ್ರಾಂತದ ಕಾಮ್‌ಸ್ಟಾಕ್ ಎಂಬಲ್ಲಿ ಬೃಹತ್ ಪ್ರಮಾಣದ ಬೆಳ್ಳಿಯ ಅದಿರು ಪತ್ತೆಯಾಯಿತು. ಇಂಥ ಪ್ರಮಾಣದಲ್ಲಿ ಬೆಳ್ಳಿ ಇನ್ನೆಲ್ಲೂ ದೊರಕಿರಲಿಲ್ಲ. ಇದರಿಂದ ನೆವಾಡ ಸಂಸ್ಥಾನದ ಬೆಳ್ಳಿಯ ಉತ್ಪಾದನೆ ಉಳಿದ ಎಲ್ಲ ಸಂಸ್ಥಾನಗಳ ಒಟ್ಟು ಉತ್ಪಾದನೆಗಿಂತಲೂ ಹೆಚ್ಚಾಗಿತ್ತು. ಗಣಿ ಉದ್ಯಮ ಐಡಾಹೊ, ಮಾನ್‌ಟಾನ, ಉತ್ತರ ಮತ್ತು ದಕ್ಷಿಣ ಡಕೋಟ ಹಾಗೂ ಅರಿಝೋನ ಸಂಸ್ಥಾನಗಳಿಗೂ ವಿಸ್ತರಿಸಿತು. ೧೮೬೮ರಲ್ಲಿ ಮಾನ್‌ಟಾನ ಸಂಸ್ಥಾನದಲ್ಲಿ ಚಿನ್ನದ ಶೋಧನೆ ಮುಗಿಯಿತು. ೧೮೭೪ರಲ್ಲಿ ಸೂ ಇಂಡಿಯನ್ನರಿಗೆ ಕಾದಿರಿಸಿದ ಡಕೋಟ ಪ್ರಾಂತದ ಭಾಗವಾಗಿದ್ದ ಬ್ಲಾಕ್ ಹಿಲ್ ಪ್ರದೇಶದಲ್ಲಿ ಚಿನ್ನ ಹುಡುಕುವವರ ಪರದಾಟ ಕೊನೆಗೊಂಡಿತು. ೧೮೮೦ರಿಂದ ೧೯೦೦ರವರೆಗೆ ಅರಿಝೋನ ಸಂಸ್ಥಾನದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ದೊಡ್ಡ ಪಟ್ಟಣದ ಹೆಸರು 'ಟೂಂಬ್ ಸ್ಟೋನ್' (Tombstone). ೧೮೮೦ರ ದಶಕದಲ್ಲಿ ಈ ಪಟ್ಟಣ ಮಿಲಿಯಗಟ್ಟಲೆ ಡಾಲರ್ ಮೌಲ್ಯದ ಬೆಳ್ಳಿಯನ್ನು ಉತ್ಪಾದಿಸಿತು.

ಗಣಿಪಟ್ಟಣಗಳಾಗಿದ್ದ ನೆವಾಡ ಸಂಸ್ಥಾನದ ವರ್ಜೀನಿಯ ಸಿಟಿ, ದಕ್ಷಿಣ ಡಕೋಟ ಸಂಸ್ಥಾನದ ಡೆಡ್ ಉಡ್ (Dead Wood) ಮತ್ತು ಅರಿಝೋನ ಸಂಸ್ಥಾನದ ಟೂಂಬ್ ಸ್ಟೋನ್ – ಇವು ಯಾವಾಗಲೂ ಜೂಜಾಡುವವರಿಂದ ಮತ್ತು ನ್ಯಾಯಬಾಹಿರರಿಂದ (outlaws) ತುಂಬಿ ಗುಜುಗುಟ್ಟುತ್ತಿದ್ದವು. ವರ್ಜೀನಿಯ ಸಿಟಿಯ ಜನಸಂಖ್ಯೆ ೪೦೦೦ವನ್ನೂ ಮುಟ್ಟಿರಲಿಲ್ಲ. ಆದರೂ ಅಲ್ಲಿ ೨೫ ಸಲೂನ್‌ಗಳಿದ್ದವು. ಡೆಡ್ ಉಡ್ ಪಟ್ಟಣದಲ್ಲಿ ತಮ್ಮ ಅಲೆಮಾರಿತನದಿಂದ ಮತ್ತು ಬೇಜವಾಬ್ದಾರಿ ವರ್ತನೆಯಿಂದ ಕುಖ್ಯಾತರಾಗಿದ್ದ ವೈಲ್ಡ್ ಬಿಲ್ ಹಿಕಾಕ್ (Wild Bill Hikok), ಡೆಡ್ ಉಡ್ ಡಿಕ್ (Dead Wood Dick) ನ್ಯಾಟ್ ಲೌವ್ (Nat Love) ಎಂಬ ಹೆಸರಿನ ಕರಿಯ ದನಗಾಹಿ ಮತ್ತು 'ಕೆಲಾಮಿಟಿ ಜೇನ್' ಎಂದು ಕರೆಯಲ್ಪಡುತ್ತಿದ್ದ, ಒರಟರಲ್ಲಿ ಒರಟಳಾಗಿದ್ದ ಮಹಿಳೆ – ಇಂಥ ವ್ಯಕ್ತಿಗಳು ಸೇರಿಕೊಂಡಿದ್ದರು. ಪಟ್ಟಣಿಗರ ಜಾಗೃತಿ ತಂಡಗಳು ಮತ್ತು ಷರೀಫ್ (Sheriff) ಎಂದು ಕರೆಯಲ್ಪಡುತ್ತಿದ್ದ ಪೊಲೀಸ್ ಅಧಿಕಾರಿಗಳು ಸೇರಿ ಹೇಗೋ ನ್ಯಾಯವ್ಯವಸ್ಥೆಯನ್ನು ನಿರ್ವಹಿಸಿಕೊಂಡು ಹೋಗುತ್ತಿದ್ದರು. ಈ ಷರೀಫರುಗಳಲ್ಲಿ ಕೆಲವರು ಸ್ವತಃ ಕುಖ್ಯಾತ ಬಂದೂಕುಧಾರಿಗಳಾಗಿದ್ದರು. ಇವರು ತಲೆಮರೆಸಿಕೊಂಡಿರುವ ತಪ್ಪಿತಸ್ಥ

ರನ್ನು ಮತ್ತು ಅಪಾಯಕಾರಿ ಅಪರಾಧಿಗಳನ್ನು ಬಹುಮಾನದ ಆಸೆಯಿಂದ ಬೆನ್ನಟ್ಟಿ ಹೋಗಿ ಅವರನ್ನು ಜೀವಸಹಿತ ಅಥವಾ ಜೀವರಹಿತ (dead or alive) ಹಿಡಿದು ತಂದು ಅಧಿಕಾರಿಗಳಿಗೆ ಒಪ್ಪಿಸಿ ಬಹುಮಾನದ ಹಣ ಪಡೆಯುತ್ತಿದ್ದರು. ಟೂಂಬ್ ಸ್ಟೋನ್‌ನ ಡೆಪ್ಯೂಟಿ ಮಾರ್ಷಲ್ ವಯಟ್ ಅರ್ಪ್ (Wyatt Earp) ಓ.ಕೆ. ಕೊರಲ್ (O.K. Corral) ಎಂಬ ಹೆಸರಿನ ಕುದುರೆ ಲಾಯದಲ್ಲಿ ನಡೆದ ಭಯಂಕರ ಗುಂಡಿನ ಕಾಳಗದಲ್ಲಿ ಭಾಗವಹಿಸಿ ಪ್ರಸಿದ್ಧಿ ಪಡೆದು ಪಶ್ಚಿಮ ಪ್ರಾಂತದ ಜನರ ಬಾಯಲ್ಲಿ ದಂತಕತೆಯಾಗಿದ್ದಾನೆ.

ಗಣಿಯ ಆಸ್ತಿ, ಸಲಕರಣೆಗಳು ಇತ್ಯಾದಿಗಳನ್ನು ಗಣಿ ಕೆಲಸಗಾರರ ಸಂಘ ನಿರ್ವಹಿಸುತ್ತಿತ್ತು. ಈ ಸಂಘ ನೀರಿನ ಬಳಕೆ, ಗೇಣಿ ಜಮೀನುಗಳ ನಿರ್ವಹಣೆ ಮತ್ತು ಭೂಮಿಯ ಒಡೆತನ ಮುಂತಾದ ವಿಷಯಗಳಲ್ಲಿ ಮಧ್ಯಸ್ತಿಕೆ ವಹಿಸಿ ನಿರ್ಣಯ ಕೈಗೊಳ್ಳುತ್ತಿತ್ತು. ಜನಸಂಖ್ಯೆ ಹೆಚ್ಚಿದಂತೆ ಈ ಸಂಘಗಳ ಬದಲು ಸರ್ಕಾರದ ಇಲಾಖೆಗಳು ಈ ಕರ್ತವ್ಯಗಳನ್ನು ವಹಿಸಿಕೊಂಡವು.

ರೈಲುಮಾರ್ಗಗಳು ನಿರ್ಮಾಣವಾಗುವ ಮುಂಚೆ ಊರಿಂದೂರಿಗೆ ಹೋಗಲು ಕುದುರೆ ಸಾರೋಟುಗಳಿದ್ದವು. ಸರಕು ಸಾಮಗ್ರಿಗಳನ್ನು ಸಾರೋಟುಗಳಲ್ಲಿ ರವಾನಿಸುತ್ತಿದ್ದರು. ೧೮೬೬ರಲ್ಲಿ 'ವೆಲ್ಸ್ ಫಾರ್‌ಗೋ ಮತ್ತು ಕಂಪನಿ' ಬಹು ದೊಡ್ಡ ಸಾರೋಟಿನ ಮತ್ತು ಸಾರಿಗೆ ಸಂಸ್ಥೆಯಾಗಿತ್ತು. ೧೮೬೦ರಲ್ಲಿ ಅಂಚೆಯನ್ನು 'ಪೋನಿ ಎಕ್ಸ್‌ಪ್ರೆಸ್' (pony express) ಮೂಲಕ ವಿತರಣೆ ಮಾಡುತ್ತಿದ್ದರು. ಸಾನ್ ಫ್ರಾನ್ಸಿಸ್ಕೊ ನಗರದಿಂದ ಮಿಸ್ಸೋರ ಸಂಸ್ಥಾನದ ಸೆಂಟ್ ಜೋಸೆಫ್ ಎಂಬ ಊರಿಗೆ ಎಂಟು ದಿನಗಳ ಒಳಗೆ ಅಂಚೆ ತಲುಪುತ್ತಿತ್ತು. ಸರಿಯಾದ ರಸ್ತೆಗಳಿಲ್ಲದ ಆ ಕಾಲದಲ್ಲಿ ಕಳ್ಳ ಕಾಕರ ಭಯವನ್ನು ಎದುರಿಸಿ ಎಂಟು ದಿನಗಳಲ್ಲಿ ಅಷ್ಟು ದೂರದ ಊರುಗಳಿಗೆ ಅಂಚೆ ತಲುಪಿಸುತ್ತಿದ್ದುದು ಅದ್ಭುತವೇ ಸರಿ. ಅಕ್ಟೋಬರ್ ೧೮೬೧ರಲ್ಲಿ ದೇಶದಾದ್ಯಂತ ಟೆಲಿಗ್ರಾಫ್ ಸಂಪರ್ಕ ಪ್ರಾರಂಭವಾಗಿ ಪೋನಿ ಎಕ್ಸ್‌ಪ್ರೆಸ್ ಕೊನೆಗೊಂಡಿತು. ಅದೇ ರೀತಿ ರೈಲುಮಾರ್ಗಗಳ ನಿರ್ಮಾಣವಾಗಿ ೧೮೬೯ರ ಹೊತ್ತಿಗೆ ವೆಲ್ಸ್ ಫಾರ್ಗೊ ಸಾರಿಗೆ ಸಂಸ್ಥೆಯೂ ಕೊನೆ ಗೊಂಡಿತು. ಆದರೆ ಹಳ್ಳಿಗಾಡಿನ ಪ್ರದೇಶದಲ್ಲಿ ಕುದುರೆ ಗಾಡಿಗಳನ್ನು ಬಹಳ ಕಾಲದವರೆಗೂ ಉಪಯೋಗಿಸುತ್ತಿದ್ದರು.

ಅಮೆರಿಕನ್ನರಿಗೆ ಹಿಡಿದ ಗೋವಿನ ಗಿರ

೧೮೬೦ರ ದಶಕದಲ್ಲಿ ಅಮೆರಿಕದ ಪಶ್ಚಿಮ ಪ್ರಾಂತದ ಬೆಟ್ಟ ಪ್ರದೇಶದಲ್ಲಿ ಗಣಿ ನಗರಗಳು ಉಚ್ಛ್ರಾಯ ಸ್ಥಿತಿಯಲ್ಲಿದ್ದವು. ಆದರೆ ವಿಶಾಲವಾದ ಬಯಲು ಸೀಮೆಯ ಬಂಜರು ಭೂಮಿ ಆದಿವಾಸಿಗಳ ದಾಳಿಗೆ ತೆರವಾಗಿದ್ದ ಅಪಾಯಕಾರಿ ಪ್ರದೇಶವಾಗಿತ್ತು. ಇಂಥ ಬಂಜರುಭೂಮಿಯಲ್ಲೂ ಪ್ರಕೃತಿದತ್ತವಾದ ಒಂದು ಸಂಪನ್ಮೂಲವನ್ನು ಶೋಧಿಸ

ಲಾಯಿತು. ಅದೇ 'ಕೋಣನ ಹುಲ್ಲು' (Buffalo grass). ಇದು ಆ ಬಯಲು ಸೀಮೆಯ ದನಕರುಗಳಿಗೆ ಪುಷ್ಟಿಕರವಾದ ಆಹಾರವನ್ನು ಸದಾಕಾಲ ಒದಗಿಸಬಲ್ಲುದು ಎಂದು ದೃಢಪಟ್ಟಿತು. ಹಿಂದೆ ಮಿಲಿಯಗಟ್ಟಲೆ ಕಾಡುಕೋಣಗಳಿಗೆ ಸದಾಕಾಲ ಆಹಾರ ಒದಗಿಸಿದ ಉದಾಹರಣೆ ಉದ್ಯಮಿಗಳಿಗೆ ಪಶುಸಂಗೋಪನೆಯಲ್ಲಿ ಹಣ ಹೂಡುವ ಧೈರ್ಯ ನೀಡಿತು. ಕೋಣನ ಹುಲ್ಲಿನ ಶೋಧನೆ ಸ್ವಲ್ಪ ಕಾಲದಲ್ಲಿಯೆ ಗೋಸಂಪತ್ತಿನ ಆಧಾರದ ಮೇಲೆ ನಿರ್ಮಿತವಾದ ಪ್ರಪಂಚದಲ್ಲೇ ಅಸದೃಶವಾದ, ಅತಿ ವಿಶಾಲವಾದ 'ಗೋವಿನ ರಾಜ್ಯ'ದ ಸ್ಥಾಪನೆಯಾಯಿತು. ಈ ರಾಜ್ಯ ಅಮೆರಿಕದ ಟೆಕ್ಸಾಸ್ ಪ್ರಾಂತದ ವಿಸ್ತಾರವಾದ ಬಯಲು ಸೀಮೆಯಿಂದ ಕೆನಡಾ ಗಡಿಯವರೆಗೆ ಮತ್ತು ಪಶ್ಚಿಮದ ರಾಕಿ ಪರ್ವತ ಪ್ರದೇಶದಿಂದ ಪೂರ್ವದ ಕಾನ್ಸಾಸ್ ಪ್ರಾಂತದವರೆಗೆ ಹಬ್ಬಿತ್ತು. ೧೮೬೫ರಿಂದ ಮುಂದಿನ ೨೦ ವರ್ಷಗಳವರೆಗೆ ಗೋಸಂಗೋಪನೆ ಈ ರಾಜ್ಯದ ಮುಖ್ಯ ಕಸುಬಾಯಿತು. ರೈಲುಮಾರ್ಗ ಗಳ ನಿರ್ಮಾಣ ಮತ್ತು ರೈಲುಗಾಡಿಗಳನ್ನು ಶೀತಲಗೊಳಿಸುವ ತಂತ್ರದ (refrigeration) ಸಂಶೋಧನೆ ಗೋಮಾಂಸವನ್ನು ಚಿಕಾಗೋ ಮತ್ತು ಕಾನ್ಸಾಸ್ ಸಿಟಿಗಳ ನಡುವೆ ಕಸಾಯಿಖಾನೆಗಳಿಂದ ಪೂರ್ವದ ಮಹಾನಗರಗಳಿಗೆ ಸಾಗಿಸುವುದು ಸಾಧ್ಯವಾಯಿತು. ಈ ನಗರಗಳಲ್ಲಿ ಆಗತಾನೆ ಹಸಿಗೆ ಮಾಡಿದ ಗೋಮಾಂಸಕ್ಕೆ ಅಪಾರ ಬೇಡಿಕೆಯಿತ್ತು. ರೈಲು ಸಂಸ್ಥೆಗಳು ಚಲಿಸುವ ಶೈತ್ಯಾಗಾರಗಳನ್ನು ನಿರ್ಮಿಸಿ ಈ ಬೇಡಿಕೆಯನ್ನು ಪೂರೈಸಲು ನೆರವಾದವು. ವಿಶಾಲ ಗೋಮಾಳ (ranch) ಗಳ ಒಡೆಯರು ಅಗರ್ಭ ಶ್ರೀಮಂತರೂ ಮತ್ತು ರಾಜಕೀಯದಲ್ಲಿ ಅತ್ಯಂತ ಪ್ರಭಾವಶಾಲಿಗಳಾಗಿದ್ದರು. ಜನರು ಅವರನ್ನು ಕ್ಯಾಟಲ್ ಬ್ಯಾರನ್ 'ಗೋ ಸಾಮ್ರಾಟರು' ಎಂದು ಕರೆಯುತ್ತಿದ್ದರು.

೧೮೬೬ ಮತ್ತು ೧೮೬೭ರಲ್ಲಿ ಟೆಕ್ಸಾಸ್‌ನಲ್ಲಿ ದನಕರುಗಳನ್ನು ಬಹುದೂರ ಅಟ್ಟಿಕೊಂಡು ಹೋಗುವ ಪದ್ಧತಿ ಪ್ರಾರಂಭವಾಯಿತು. ಹೋರಿಗಳನ್ನು ಅವು ಹುಟ್ಟಿ ಬೆಳೆದ ಹುಲ್ಲುಗಾವಲುಗಳಿಂದ ಪ್ರಾಣಿಗಳಿಗೆ ಅಪಾಯವಿಲ್ಲದಂತೆ ಅಟ್ಟಿಕೊಂಡು ಹೋಗಿ ದೂರದ ಸಾರಿಗೆ ಸ್ಥಾನಗಳಿಗೆ ಮುಟ್ಟಿಸಬಹುದು ಎನ್ನುವುದನ್ನು ತಿಳಿದುಕೊಂಡರು. ಈ ಸಾರಿಗೆ ಸ್ಥಾನಗಳು (shipping points) ಕಾನ್ಸಾಸ್, ನೆಬ್ರಾಸ್ಕ ಅಥವಾ ವಯೋಮಿಂಗ್ ಪ್ರಾಂತಗಳಲ್ಲಿ ಇದ್ದವು. ಆಗ ಬಯಲುಸೀಮೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ನೆಲಸಿರಲಿಲ್ಲ. ೧೮೬೭ರ ನಂತರ ಆದಿವಾಸಿಗಳನ್ನು ಅವರ ಕಾದಿರಿಸಿರುವ ಪ್ರದೇಶಗಳಲ್ಲಿ ಬಿಗಿಯಾಗಿ ನಿಯಂತ್ರಿಸಿಡಲಾಗಿತ್ತು. ಮೇಲಾಗಿ ಕಾಡುಕೋಣಗಳ ಸಂಖ್ಯೆ ಕ್ಷೀಣಿಸಿ ದನಕರು ಗಳು ಆಹಾರಕ್ಕಾಗಿ ಕಾಡುಕೋಣಗಳೊಡನೆ ಸ್ಪರ್ಧಿಸಬೇಕಾಗಿರಲಿಲ್ಲ. ಆದ್ದರಿಂದ ದನಗಾಹಿ ಗಳಿಗೆ (cowboys) ತಮ್ಮ ಮಂದೆಗಳನ್ನು ಮೇಯಿಸಲು ಮಿಲಿಯಗಟ್ಟಲೆ ಎಕರೆ ಹುಲ್ಲುಗಾವಲು ಯಾವ ಖರ್ಚೂ ಇಲ್ಲದೆ ದೊರೆಯಿತು.

ಹೋರಿಗಳನ್ನು ಬಹುದೂರ ಅಟ್ಟಿಕೊಂಡು ಹೋಗಲು ಜವಾಬ್ದಾರಿ ವಹಿಸಿಕೊಂಡ

ದನಗಾಹಿಗಳು ಸಂಬಳಕ್ಕಾಗಿ ಕೆಲಸ ಮಾಡುವವರಾಗಿದ್ದರು. ದೊಡ್ಡ ಮಂದೆಗಳನ್ನು ಸಾವಿರ ಮೈಲಿಗಳಷ್ಟು ದೂರ ಅಟ್ಟಿಕೊಂಡು ಹೋಗುವ ಇವರ ಸಾಹಸ ಕಟ್ಟುಕತೆಗಳ ಮೂಲಕ ಅಮೆರಿಕನ್ನರ ಕಲ್ಪನಾಶಕ್ತಿಯನ್ನು ಉದ್ದೀಪನಗೊಳಿಸಿ ದನಗಾಹಿಗಳು ರಾಷ್ಟ್ರದ ಜಾನಪದ ವೀರರೆನಿಸಿಕೊಂಡರು. ಉತ್ಪ್ರೇಕ್ಷೆಯಿಂದ ದನಗಾಹಿಗಳ ಜೀವನ ಸಾಹಸಮಯ ವಾಗಿ ಕುತೂಹಲಕರವಾಗಿ ಕಂಡುಬಂದರೂ ವಾಸ್ತವವಾಗಿ ಅವರು ಕಡುಕಷ್ಟಪಟ್ಟು ಕಡಿಮೆ ಸಂಬಳ ಪಡೆದು, ಒಂಟಿ ಜೀವನ ನಡೆಸುತ್ತಿದ್ದರು. ಚಳಿಗಾಲ ಮುಗಿದ ಮೇಲೆ ದನಗಾಹಿಗಳು ಹೊಸ ಕರುಗಳನ್ನು ತರುಬಿ ಅವುಗಳನ್ನು ಗುರುತಿಸಲು ಆಯಾ ಗೋಮಾಳಗಳ ಲಾಂಛನ ಲಗತ್ತಿಸಿರುವ ಕಬ್ಬಿಣದ ಸರಳುಗಳನ್ನು ಕಾಯಿಸಿ ಬರೆ ಹಾಕು ತ್ತಿದ್ದರು. ಹತ್ತು ಹದಿನೈದು ದನಗಾಹಿಗಳು ೨೦೦೦-೫೦೦೦ ಹೋರಿಗಳನ್ನು ಮಾರುಕಟ್ಟೆಗಳಿಗೆ ಅಟ್ಟಿಕೊಂಡು ಹೋಗುತ್ತಿದ್ದರು. ಮಂದೆಯನ್ನು ದಿನಕ್ಕೆ ೧೫ ಮೈಲಿ ನಡೆಸಿ ಬೆಳಿಗ್ಗೆ ಒಂದೆರಡು ಘಂಟೆ ಮೇಯಲು ಬಿಟ್ಟು ನಂತರ ಮಧ್ಯಾಹ್ನ ಮತ್ತೆ ಮೇಯಲು ಬಿಟ್ಟು, ಹೀಗೆ ಸಾಗುತ್ತ ೧೨೦೦-೧೫೦೦ ಮೈಲಿಗಳಷ್ಟು ನಡೆಸಿಕೊಂಡು ಹೋಗಿ ಮಾರುಕಟ್ಟೆಗಳಿರುವ ಊರುಗಳಿಗೆ ಮುಟ್ಟಿಸುತ್ತಿದ್ದರು. ಆ ಊರುಗಳಿಂದ ಹೋರಿಗಳನ್ನು ರೈಲುಗಾಡಿಗಳಲ್ಲಿ ದೂರದ ಪಟ್ಟಣಗಳಿಗೆ ಸಾಗಿಸುತ್ತಿದ್ದರು.

ವಿಶಾಲವಾದ ಹುಲ್ಲುಗಾವಲು ತೆರವಾಗಿದ್ದಷ್ಟು ಕಾಲ ದನಗಾಹಿಗಳು ಯಾವ ತೊಂದರೆ ಇಲ್ಲದೆ ಹೋರಿಗಳ ಹಿಂಡುಗಳನ್ನು ಮಾರುಕಟ್ಟೆಗಳಿಗೆ ಮುಟ್ಟಿಸುವುದು ಸಾಧ್ಯವಾಗಿತ್ತು. ೧೮೮೦ರಲ್ಲಿ ಈ ಕಾರ್ಯಕ್ಕೆ ಅಡಚಣೆ ಉಂಟಾಗತೊಡಗಿತು. ಟೆಕ್ಸಾಸ್‌ನಿಂದ ಉತ್ತರ ಪ್ರಾಂತಗಳಿಗೆ ರವಾನಿಸಲಾಗುತ್ತಿದ್ದ ಜಾನುವಾರುಗಳಲ್ಲಿ 'ಟೆಕ್ಸಾಸ್ ಜ್ವರ' ಎನ್ನುವ ಕಾಯಿಲೆ ಕಾಣಿಸಿಕೊಂಡಿತು. ಭೂಮಾಲೀಕರು ಜಾನುವಾರು ಮೇಯುವ ಜಾಗಗಳ ಮೇಲೆ ಮತ್ತು ಅವು ನೀರು ಕುಡಿಯುವ ಜಾಗಗಳ ಮೇಲೆ ವಿಶಿಷ್ಟ ಹಕ್ಕನ್ನು ಚಲಾಯಿಸತೊಡಗಿದರು. ಹಿಡುವಳಿದಾರರು ತಮ್ಮ ಜಮೀನುಗಳನ್ನು ಮುಳ್ಳುತಂತಿಯ ಬೇಲಿಗಳಿಂದ ಯಾರೂ ಅತಿಕ್ರಮಿಸದಂತೆ ಭದ್ರಪಡಿಸಿಕೊಂಡರು. ೧೮೭೪ರಲ್ಲಿ ಜೋಸೆಫ್ ಗ್ಲಿಡೆನ್ (Joseph Glidden) ಎಂಬುವವನು ಮುಳ್ಳುತಂತಿಯನ್ನು ತಯಾರಿಸಿದನು. ನಂತರ ೧೮೮೩ರಲ್ಲಿ ಅಮೆರಿಕನ್ ಸ್ಟೀಲ್ ಎಂಡ್ ವೈರ್ ಕಂಪನಿ (American Steel and Wire company) ಮುಳ್ಳುತಂತಿಯನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡತೊಡಗಿತು. ಮುಳ್ಳುತಂತಿ ಹಿಡುವಳಿದಾರರಿಗೆ ವರಪ್ರಸಾದವಾಯಿತು. ಕೊನೆ ಕೊನೆಗೆ ತಮ್ಮ ತುರುಮಂದೆಗಳನ್ನು ಹುಲ್ಲುಗಾವಲಿನಲ್ಲಿ ಮೇಯಿಸಲು ದನಗಾಹಿಗಳಿಗೆ ಕಷ್ಟವಾಗುತ್ತ ಬಂತು. ಇದಕ್ಕಾಗಿ ಕುರಿಹಿಂಡುಗಳನ್ನು ತಂದು ಮೇಯಿಸುವ ಕುರುಬರೊಡನೆ ದನಗಾಹಿಗಳು ಕಾದಾಡಬೇಕಾಯಿತು. ಕುರಿ ಮೇಯುವಲ್ಲಿ ದನಕರುಗಳಿಗೆ ಮೇವು ಸಿಗುವುದಿಲ್ಲ ಏಕೆಂದರೆ ಕುರಿಗಳು ಹುಲ್ಲನ್ನು ಬೇರಿನ ಸಮೇತ ತಿನ್ನುತ್ತವೆ. ಕುರಿಗಳು ಕುಡಿಯುವ ನೀರನ್ನು ಕಲುಷಿತಗೊಳಿಸಿತ್ತವೆ.

ಕಸಾಯಿಖಾನೆಗಳು ಹೆಚ್ಚು ಪ್ರಮಾಣದಲ್ಲಿ ಗೋಮಾಂಸವನ್ನು ಉತ್ಪಾದನೆ ಮಾಡಿದ್ದರಿಂದ ಬೆಲೆ ಕಡಿಮೆಯಾಗಿ ದನಕರುಗಳನ್ನು ಸಾಕುವ ವೆಚ್ಚ ಹೆಚ್ಚುತ್ತ ಹೋಯಿತು. ೧೮೮೬ರ ಬೇಸಿಗೆಯಲ್ಲಿ ಬಯಲುಸೀಮೆ ಅನಾವೃಷ್ಟಿಯಿಂದ (drought) ತತ್ತರಿಸಿತು. ತುರುಮಂದೆಗಳಿಗೆ ಮೇವು ದೊರೆಯುವುದು ದುಸ್ತರವಾಯಿತು. ಆಹಾರವಿಲ್ಲದೆ ದನಕರುಗಳು ಬಡಕಲಾಗಿ ನಿತ್ರಾಣಗೊಂಡವು. ೧೮೮೬-೮೭ರ ಚಳಿಗಾಲ ಅತ್ಯಂತ ಕಠೋರವಾಗಿತ್ತು. ಚಳಿಗಾಲ ಮುಗಿಯುವುದರೊಳಗೆ ತುರುಮಂದೆಗಳಲ್ಲಿ ಮುಕ್ಕಾಲು ಭಾಗ ಖಾಲಿಯಾಗಿದ್ದವು. ಈ ವಿಪತ್ಕಾಲದ ನಂತರ ಅನೇಕ ಚಿಕ್ಕ ಗೋಮಾಳಗಳ ಒಡೆಯರು ತಮ್ಮ ಗೋಮಾಳಗಳನ್ನು ದೊಡ್ಡ ಕಾರ್ಪೊರೇಷನ್‌ಗಳಿಗೆ ಮಾರುವುದು ಅನಿವಾರ್ಯವಾಯಿತು. ಪಶುಪಾಲನೆ ಗಣಿ ಉದ್ಯಮದಂತೆ ಉತ್ಸಾಹಿ ವ್ಯಕ್ತಿಯೋರ್ವನು ಸ್ಥಾಪಿಸಿ ವಿಸ್ತರಿಸಿ ಬೆಳೆಸುವ ವೈಯಕ್ತಿಕ ದಂಧೆಯಾಗಿ ಉಳಿಯದೆ, ವ್ಯವಸ್ಥಿತವಾಗಿ ನಿರ್ವಹಣೆಗೊಂಡ ಉದ್ಯೋಗವಾಗಿ ಪರಿವರ್ತನೆಗೊಂಡಿತು. ಉತ್ತಮ ತಳಿಯ ಗೂಳಿಗಳನ್ನು ತಂದು ಕಡಸುಗಳಿಗೆ ಕೂಡಿಸಿ ಮಿಶ್ರಣ ತಳಿಯ ಮಂದೆಗಳನ್ನು ವೈಜ್ಞಾನಿಕವಾಗಿ ಬೆಳೆಸುವುದು ಪ್ರಾರಂಭವಾಯಿತು. ರೈಲುಮಾರ್ಗಗಳು ನೈರುತ್ಯ ಪ್ರಾಂತಗಳಲ್ಲೂ ರಚನೆಗೊಂಡಿದ್ದರಿಂದ ದನಗಾಹಿಗಳು ತಮ್ಮ ಮಂದೆಗಳನ್ನು ಮಾರಾಟಕ್ಕಾಗಿ ದೂರದ ಮಾರುಕಟ್ಟೆಗಳಿಗೆ ಹೊಡೆದುಕೊಂಡು ಹೋಗುವುದು ನಿಂತಿತು. ರೈಲುಗಾಡಿಗಳು ಬೇಕಾದ ಕಡೆಗಳಿಗೆ ಮೇವು ತಂದು ಅಲ್ಲಿಂದ ಹೊಸದಾಗಿ ಹಸಿಗೆ ಮಾಡಿದ ಗೋಮಾಂಸವನ್ನು ದೂರದ ಪೇಟೆ ಪಟ್ಟಣಗಳಿಗೆ ಒದಗಿಸುತ್ತಿದ್ದವು.

ಕಡೆಯ ಗಡಿನಾಡಿನ ರೈತರು

ಪಶ್ಚಿಮ ಪ್ರಾಂತಕ್ಕೆ ವ್ಯವಸಾಯ ಆಕರ್ಷಿಸಿದಷ್ಟು ಹೆಚ್ಚು ಸಂಖ್ಯೆಯಲ್ಲಿ ಜನರನ್ನು ಗಣಿ ಉದ್ಯಮವಾಗಲಿ ಅಥವಾ ಪಶುಪಾಲನೆಯಾಗಲಿ ಆಕರ್ಷಿಸಲಿಲ್ಲ. ವ್ಯವಸಾಯ ಪಶ್ಚಿಮ ಪ್ರಾಂತದ ಜನಸಂಖ್ಯೆಯನ್ನು ೧೮೭೦ರಿಂದ ೧೮೯೦ರ ಅವಧಿಯಲ್ಲಿ ಮೂರು ಪಟ್ಟು ಹೆಚ್ಚಿಸಿತು. ಈ ಗಡಿನಾಡಿಗೆ ಹೊಂದಿಕೊಳ್ಳುವುದು ರೈತರಿಗೆ ಸುಲಭವಾಗಿರಲಿಲ್ಲ. ವಿಶಾಲವಾದ ಬಯಲುಸೀಮೆಯಲ್ಲಿ ಬೇಸಾಯ ಯಾವಾಗಲೂ ದುಬಾರಿಯಾದ ಮತ್ತು ಗಂಡಾಂತರದ ಕಸುಬು. ಚಳಿಗಾಲದಲ್ಲಿ ಹಿಮದ ಬಿರುಗಾಳಿಗಳು ಬೀಸಿ ಉಷ್ಣಾಂಶ ಸೊನ್ನೆ ಡಿಗ್ರಿ (ಫ್ಯಾರನ್‌ಹೈಟ್)ಗಿಂತಲೂ ೬೦-೭೦ ಡಿಗ್ರಿ ಕೆಳಗೆ ಹೋಗಿ ಪ್ರಕೃತಿ ನಿಶ್ಚೇಷ್ಟವಾಗಿ ಯಾವ ಕೆಲಸವೂ ನಡೆಯುತ್ತಿರಲಿಲ್ಲ. ಬೇಸಿಗೆಯಲ್ಲಿ ಮಳೆಯಿಲ್ಲದೆ ಬೆಳೆ ನಾಶವಾಗುತ್ತಿತ್ತು. ಇದ್ದಕ್ಕಿದ್ದಹಾಗೆ ಭಯಂಕರ ಸುಂಟರಗಾಳಿ ಎದ್ದು ಎಲ್ಲವನ್ನೂ ನೆಲಸಮ ಮಾಡಿ ಪ್ರಾಣಹಾನಿ ಹಾಗೂ ಆಸ್ತಿ ಪಾಸ್ತಿಗಳಿಗೆ ಅಪಾರ ನಷ್ಟ ಉಂಟುಮಾಡುತ್ತಿತ್ತು. ೧೮೭೪ರ ಬೇಸಿಗೆಯಲ್ಲಿ ಮಿಡತೆಗಳ ಹಾವಳಿ ಸಸ್ಯಸಮೂಹವನ್ನೇ ನಾಶಗೊಳಿಸಿದವು. ಇದಲ್ಲದೆ ರೈತರು ತಾವು ಬೆಳೆದುದನ್ನು ಮಾರಲು ಮತ್ತು ತಮಗೆ ಬೇಕಾದ ಸರಕು

ಸಾಮಗ್ರಿಗಳನ್ನು ತರಿಸಿಕೊಳ್ಳಲು ರೈಲು ಸಾರಿಗೆಯನ್ನು ಅವಲಂಬಿಸಬೇಕಾಯಿತು. ಈ ಸಾರಿಗೆ ವೆಚ್ಚ ಕೂಡ ದುಬಾರಿಯಾಗಿತ್ತು.

೧೮೬೨ರ ಭೂಹಿಡುವಳಿ ಕಾಯಿದೆಯ ಪ್ರಕಾರ ಯಾರಿಗೆ ೧೬೦ ಎಕರೆ ಜಮೀನು ಬೇಕೋ ಅವರು ಐದು ವರ್ಷ ಅಲ್ಲಿ ವಾಸವಿದ್ದು ಜಮೀನನ್ನು ಉತ್ತಮಗೊಳಿಸಿ ಹತ್ತು ಡಾಲರ್ ಫೀಸು ಕೊಟ್ಟರೆ ಸಾಕಾಗಿತ್ತು. ಹೆಚ್ಚಿನ ಹಣವಿಲ್ಲದವರಿಗೆ ಸಹಾಯ ಮಾಡಿ ಅಮೆರಿಕವನ್ನು ಸ್ವಂತ ಆಸ್ತಿವಂತರಾದ ಸಣ್ಣ ಹಿಡುವಳಿಗಾರರ ದೇಶವನ್ನಾಗಿ ಮಾಡುವುದು ಈ ಕಾಯಿದೆಯ ಉದ್ದೇಶವಾಗಿತ್ತು. ಅಂದರೆ ಒಂದು ರೀತಿಯ ಆರ್ಥಿಕ ಪ್ರಜಾರಾಜ್ಯವನ್ನು ಸ್ಥಾಪಿಸುವ ಆದರ್ಶವಿಟ್ಟುಕೊಂಡು ಈ ಕಾಯಿದೆಯನ್ನು ಜಾರಿ ಮಾಡಲಾಗಿತ್ತು. ಆದರೆ ಅದು ಫಲದಾಯಕವಾಗಲಿಲ್ಲ.

ಬಹಳ ಮಂದಿ ಬಡರೈತರಿಗೆ ತಮ್ಮ ಸಂಸಾರ ಮತ್ತು ವ್ಯವಸಾಯದ ಉಪಕರಣಗಳನ್ನು ತಾವು ಇರುವ ಸ್ಥಳದಿಂದ ಪಶ್ಚಿಮ ಬಯಲುಸೀಮೆಗೆ ರವಾನಿಸಲು ರೈಲು ಸಾರಿಗೆಗೆ ತಗಲುವ ಹಣ ಕೊಡುವುದು ದುಸ್ಸಾಧ್ಯವಾಗಿತ್ತು. ಮೇಲಾಗಿ, ಪಶ್ಚಿಮ ಪ್ರಾಂತದ ಹವಾಮಾನ ಮತ್ತು ನೆಲದ ಬಗ್ಗೆ ಬೇರೆ ಪ್ರಾಂತದವರಿಗೆ ಹೆಚ್ಚಿನ ಮಾಹಿತಿ ಮತ್ತು ಅನುಭವವಿರಲಿಲ್ಲ. ಕಾಯಿದೆ ದೇಣಿಗೆ ಕೊಡುತ್ತಿದ್ದ ೧೬೦ ಎಕರೆ ಜಮೀನು ವಿತರಣಾವ್ಯವಸ್ಥೆ ನ್ಯೂನತೆಗಳಿಂದ ಕೂಡಿತ್ತು. ಪಶ್ಚಿಮ ಪ್ರಾಂತದಲ್ಲಿ ನೀರಿನ ಅಭಾವ ಇದ್ದುದರಿಂದ ೧೬೦ ಎಕರೆ ಜಮೀನನ್ನು ನೀರಾವರಿ ಪ್ರದೇಶವಾಗಿ ಮಾಡಿ ತರಕಾರಿ ಮತ್ತು ಇತರ ಬೆಳೆಗಳನ್ನು ತೆಗೆಯಲು ತುಂಬಾ ದೊಡ್ಡದಾಗಿ, ಗೋಮಾಳಗಳನ್ನು ನಡೆಸಲು ಬಹಳ ಚಿಕ್ಕದಾಗಿ ರೈತರು ಸಮಸ್ಯೆಗೀಡಾದರು. ಇದಕ್ಕೆ ಒಂದು ಪರಿಹಾರ ಶುಷ್ಕ ಬೇಸಾಯ: ವಿಶಿಷ್ಟ ಯಂತ್ರೋಪಕರಣಗಳನ್ನು ಉಪಯೋಗಿಸಿ ಭೂಮಿಯನ್ನು ಉತ್ತು ಹೊಳಕೆ ಹೊಡೆದು ಬೀಜವನ್ನು ಸಾಲು ಹಿಡಿದು ಬಿತ್ತಿ ಹೊಳಕೆಯನ್ನು ಮುಚ್ಚುವುದರಿಂದ ಸಾಲಿನಲ್ಲಿ ಹುದುಗಿದ ಬೀಜಕ್ಕೆ ಬಿಸಿಲಿನಿಂದ ರಕ್ಷಣೆ ಸಿಗುವುದೆ ಅಲ್ಲದೆ ಮಣ್ಣಿನ ಹೊಳಕೆ ಮುಚ್ಚುವುದರಿಂದ ಸಾಲಿನಲ್ಲಿ ನೀರಿನ ಪಸೆ ಆರುವುದಿಲ್ಲ. ಇದರಿಂದ ಬೀಜ ಮೊಳಕೆಯೊಡೆದು ಸಸಿಗಳಾಗಿ, ಬೇರೆ ಯಾವ ಹಾನಿ ಉಂಟಾಗದಿದ್ದರೆ, ತಕ್ಕಷ್ಟು ಬೆಳೆ ತೆಗೆಯಲು ಸಾಧ್ಯವಾಗುತ್ತದೆ. ಆದರೆ ಈ ಬೇಸಾಯಕ್ಕೆ ಬೇಕಾಗುವ ಯಂತ್ರೋಪಕರಣಗಳಿಗೆ ಬಹಳ ಬೆಲೆ ತಗಲುತ್ತಿದ್ದುದರಿಂದ ದೊಡ್ಡ ಜಮೀನುದಾರರು, ಅಂದರೆ, ಸಾವಿರಾರು ಎಕರೆ ಉಳ್ಳವರು ಮಾತ್ರ ತಾವು ಈ ಉಪಕರಣಗಳ ಮೇಲೆ ಹೂಡಿದ ಹಣವನ್ನು ವಾಪಸು ಪಡೆದು ಸ್ವಲ್ಪ ಲಾಭ ಗಳಿಸಬಹುದಾಗಿತ್ತು.

ಭ್ರಷ್ಟಾಚಾರ, ಹಿಡುವಳಿ ಕಾಯಿದೆಯ ಆದರ್ಶಕ್ಕೆ ಮಾರಕವಾಯಿತು. ಹಣವಂತ ಸಟ್ಟಾ ವ್ಯಾಪಾರಿಗಳು ಬಡವರಿಗೆ ಲಂಚ ಕೊಟ್ಟು ಭೂಮಿಗೆ ದರಖಾಸ್ತು ಹಾಕಿಸಿ, ಭೂಮಿ ಅವರ ಹೆಸರಿಗೆ ಮಂಜೂರಾದ ನಂತರ ಹಣ ಕೊಟ್ಟವರು ತಮ್ಮ ಹೆಸರಿಗೆ ಬರೆಸಿ

ಕೊಳ್ಳುತ್ತಿದ್ದರು. ಈ ರೀತಿಯ ಮೋಸ ಮತ್ತು ವಂಚನೆಗಳ ವಿರುದ್ಧ ಜನರು ಪ್ರತಿಭಟಿಸಿದರು. ಆಗ ಕಾಂಗ್ರೆಸ್ ಕೆಲವು ನಿಬಂಧನೆಗಳನ್ನು ಜಾರಿಗೆ ತಂದಿತು. ಆದರೆ ಅವುಗಳಿಂದ ಕೂಡ ಸಣ್ಣ ಹಿಡುವಳಿಗಾರರಿಗೆ ಯಾವ ಪ್ರಯೋಜನವೂ ಆಗಲಿಲ್ಲ. ೧೮೭೩ರಲ್ಲಿ ಜಾರಿಗೆ ಬಂದ ಟಿಂಬರ್ ಕಲ್ಚರ್ ಆ್ಯಕ್ಟ್ (Timber Culture Act) ಪ್ರಕಾರವಾಗಿ ಒಬ್ಬ ಹಿಡುವಳಿಗಾರನು ಕೊನೆಯ ಪಕ್ಷ ೪೦ ಎಕರೆಗಳಲ್ಲಿ ಮರಗಳನ್ನು ಬೆಳೆಸಿದರೆ ಅವನಿಗೆ ಮತ್ತೆ ೧೬೦ ಎಕರೆ ಜಮೀನನ್ನು ಮಂಜೂರು ಮಾಡುತ್ತಿದ್ದರು. ಈ ಕಾಯಿದೆಯನ್ನು ಕಾರ್ಯಾಚರಣೆಗೆ ತರಲು ಸಾಧ್ಯವಾಗಲಿಲ್ಲ. ಏಕೆಂದರೆ ನೀರಿಲ್ಲದ ಬರಡು ಪ್ರದೇಶಗಳಲ್ಲಿ ಮರಗಳು ಬೆಳೆಯುತ್ತಿರಲಿಲ್ಲ. ಸ್ವಲ್ಪ ಕಾಲದ ನಂತರ ಈ ಕಾಯಿದೆಯನ್ನು ಹಿಂದೆಗೆಯಲಾಯಿತು. ೧೮೭೭ರ ಮರುಭೂಮಿ ಕಾಯಿದೆ ಪ್ರಕಾರ ಒಬ್ಬ ರೈತ ತಾತ್ಕಾಲಿಕವಾಗಿ ೬೪೦ ಎಕರೆಗಳನ್ನು ಕೇವಲ ೧೬೦ ಡಾಲರ್‌ಗಳಿಗೆ ಮಂಜೂರು ಮಾಡಿಸಿಕೊಳ್ಳಬಹುದಿತ್ತು. ಮೂರು ವರ್ಷಗಳಾದ ಮೇಲೆ ಆ ಭೂಮಿಯನ್ನು ತನ್ನ ಹೆಸರಿಗೆ ಖಾಯಂ ಮಾಡಿಕೊಳ್ಳಬಹುದಿತ್ತು. ಖಾಯಂ ಮಂಜೂರಾತಿಗೆ ತಗಲುತ್ತಿದ್ದ ಹಣ ೬೪೦ ಡಾಲರ್‌ಗಳು. ಆದರೆ ಒಂದು ಷರತ್ತು – ಎಂದರೆ ಆ ರೈತ ೬೪೦ ಎಕರೆಯ ೧/೮ ಭಾಗವನ್ನು ನೀರಾವರಿ ಬೇಸಾಯಕ್ಕೆ ತಯಾರು ಮಾಡಿ ತೋರಿಸಬೇಕಿತ್ತು. ಮರುಭೂಮಿಗೆ ನೀರು ಹಾಯಿಸಿ ವ್ಯವಸಾಯ ಮಾಡುವ ಶಕ್ತಿ ರೈತರಿಗೆ ಇರಲಿಲ್ಲ. ಇದು ಗೋಮಾಳದ ಒಡೆಯರಿಗೆ ಅನುಕೂಲವಾಯಿತು. ಅವರು ತಮ್ಮ ತುರುಮಂದೆಗಳನ್ನು ಮೇಯಿಸಲು ಹೆಚ್ಚು ಹೆಚ್ಚು ಭೂಮಿಯನ್ನು ಕೊಳ್ಳುತ್ತ ಹೋದರು.

ಭೂ ಹಿಡುವಳಿ ಕಾಯಿದೆಯನ್ನು ಮೂರನೆಯ ಬಾರಿಗೆ ಪರಿಷ್ಕರಿಸುವ ಪ್ರಯತ್ನ ಮಾಡಲಾಯಿತು. ೧೮೭೮ರಲ್ಲಿ ಟಿಂಬರ್ ಎಂಡ್ ಸ್ಟೋನ್ ನಿಬಂಧನೆಯನ್ನು ಜಾರಿಗೆ ತರಲಾಯಿತು. ಇದು ಜಾರಿಗೆ ತಂದ ಕಾರ್ಯಕ್ರಮವೆಂದರೆ ಎಕರೆಗೆ ೨.೫೦ ಡಾಲರಿನಂತೆ ೧೬೦ ಎಕರೆ ಕಾಡನ್ನು ಒಬ್ಬನು ಕೊಳ್ಳಬಹುದಿತ್ತು. ಈ ಕಾರ್ಯಕ್ರಮ ಕೂಡ ಸಣ್ಣ ರೈತರಿಗೆ ಪ್ರಯೋಜನವಾಗಲಿಲ್ಲ. ತಮ್ಮ ಸ್ವಂತಕ್ಕೆ ಕೊಳ್ಳುವವರಂತೆ ನಟಿಸುವ ವ್ಯಕ್ತಿಗಳನ್ನು ತಮ್ಮ ಹೆಸರಿನಲ್ಲಿ ದರಖಾಸ್ತು ಹಾಕಿ ಕಾಡನ್ನು ಕೊಳ್ಳುವಂತೆ ದೊಡ್ಡ ಕಾರ್ಪೊರೇಷನ್‌ಗಳು ಅವರಿಗೆ ಹಣ ಒದಗಿಸುತ್ತಿದ್ದವು. ನಂತರ ಆ ವ್ಯಕ್ತಿಗಳಿಂದ ಕಾಡು ಕಾರ್ಪೊರೇಷನ್ ಕೈ ಸೇರುತ್ತಿತ್ತು. ಹೀಗೆ ಕುಟಿಲೋಪಾಯದಿಂದ ಎಲ್ಲ ಒಳ್ಳೆಯ ಕಾಡುಭೂಮಿಯನ್ನು ಕಾರ್ಪೊರೇಷನ್‌ಗಳು ಕೊಂಡು ಮುಗಿಸಿದವು. ಕೇವಲ ಕೆಲವು ದೊಡ್ಡ ನಾಟಾ ಕಂಪನಿಗಳು ರಾಕಿ ಪರ್ವತ ಮತ್ತು ಸಿಯೆರಾ ಪರ್ವತ ಪ್ರದೇಶದ ಕಾಡುಗಳನ್ನು ಬಹಳ ಸುಲಭ ಬೆಲೆಗೆ ಕೊಂಡು ತಮ್ಮ ನಿಯಂತ್ರಣಕ್ಕೆ ಒಳಪಡಿಸಿಕೊಂಡವು.

ಪಶ್ಚಿಮ ಬಯಲುಸೀಮೆಯ ಬೇಸಾಯಗಾರರ ಬದುಕು ಕಷ್ಟ ಕಾರ್ಪಣ್ಯಗಳಿಂದ ದುಸ್ತರವಾಗಿತ್ತು. ಒಳ್ಳೆಯ ಭೂಮಿ ಎಲ್ಲ ಭ್ರಷ್ಟಾಚಾರಿಗಳಾದ ಸಟ್ಟಾ ವ್ಯಾಪಾರಿಗಳ

ಕೈವಶವಾಗಿತ್ತು. ಇಂಥ ಪರಿಸ್ಥಿತಿಯಲ್ಲಿ ಕೂಡ ೧೮೬೫ರಿಂದ ೧೮೯೦ರ ಅವಧಿಯಲ್ಲಿ ಪಶ್ಚಿಮ ಪ್ರಾಂತಗಳ ಜನಸಂಖ್ಯೆ ಹೆಚ್ಚುತ್ತ ಹೋಯಿತು. ವಾಯುವ್ಯ ಪ್ರಾಂತಕ್ಕೆ ಸ್ಕಾಂಡಿನೇವಿಯಾದ ಸ್ವಂತ ಜಮೀನಿಲ್ಲದ ರೈತರು ಮಹಾಪೂರದಂತೆ ಬಂದು ನೆಲಸತೊಡಗಿದರು. ೧೮೭೦ರ ದಶಕದಲ್ಲಿ ಐರಿಷ್, ಸ್ಕಾಟಿಷ್, ಇಂಗ್ಲಿಷ್, ಜರ್ಮನ್ ಮತ್ತು ರಷ್ಯನ್ನರು ವಲಸೆ ಬಂದು ಬಯಲುಸೀಮೆಯಲ್ಲಿ ನೆಲಸಿದರು. ಈ ವಲಸೆಗಾರರಲ್ಲಿ ಕೆಲವರು ಸೈನ್ಯಕ್ಕೆ ಸೇರುವುದನ್ನು ತಪ್ಪಿಸಿಕೊಳ್ಳಲು ಬಂದವರು; ಇನ್ನು ಕೆಲವರು ರೈಲುಮಾರ್ಗ ನಿರ್ಮಾಣಕ್ಕೆ ಕೆಲಸಗಾರರನ್ನು ಹುಡುಕಿ ತರುವ ಏಜೆಂಟರ ಸವಿಮಾತಿಗೆ ಮರುಳಾಗಿ ಬಂದವರು; ಮತ್ತೆ ಕೆಲವರು ೧೮೭೦ರ ದಶಕದಲ್ಲಿ ಯುರೋಪಿನಲ್ಲಿ ಕ್ಷೀಣಿಸುತ್ತ ಹೋಗುತ್ತಿದ್ದ ಗೋಧಿ ಬೆಳೆಯಿಂದ ನಷ್ಟ ಅನುಭವಿಸಿ ಅದರಿಂದ ತಪ್ಪಿಸಿಕೊಳ್ಳಲು ಬಂದವರು. ಈ ಹೊರದೇಶದಿಂದ ಬಂದವರಲ್ಲದೆ ಅಮೆರಿಕದ ಬಡರೈತರು ಕೂಡ ಅಧಿಕ ಸಂಖ್ಯೆಯಲ್ಲಿ ಹೊಸ ಅವಕಾಶಗಳನ್ನು ಹುಡುಕಿಕೊಂಡು ಪಶ್ಚಿಮ ಪ್ರಾಂತಗಳಿಗೆ ಹೊರಟು ಬಂದಿದ್ದರು. ಇವರನ್ನು ಸದಾ ಕಾಡುತ್ತಿದ್ದ ಸಮಸ್ಯೆ ಎಂದರೆ ನೀರಿನ ಕೊರತೆ. ಪಶ್ಚಿಮ ಪ್ರಾಂತಗಳಲ್ಲಿ ಯಂತ್ರದಿಂದ ಕೊರೆದು ಮಾಡಿದ ಬಾವಿಗಳಿಂದ ನೀರನ್ನು ಗಾಳಿ ಗಿರಗಟ್ಟೆಗಳ ಸಹಾಯದಿಂದ ಮೇಲೆತ್ತಬೇಕಾಗಿತ್ತು. ೧೮೭೦ರ ದಶಕದಲ್ಲಿ ಇವುಗಳನ್ನು ಪಶ್ಚಿಮ ಪ್ರಾಂತಗಳಲ್ಲಿ ಉಪಯೋಗಿಸುತ್ತ ಬಂದಿದ್ದರೂ ಅವು ಬಹಳ ದುಬಾರಿ ಯಾಗಿದ್ದುದರಿಂದ ಸಾರ್ವಜನಿಕರಿಗೆ ಅವುಗಳ ಪ್ರಯೋಜನ ದೊರಕಲಿಲ್ಲ. ೧೮೮೦ರ ದಶಕದಲ್ಲಿ ಇವು ವ್ಯಾಪಕವಾಗಿ ಬಳಕೆಗೆ ಬಂದವು. ಆ ದಶಕ ಮುಗಿಯುವಷ್ಟರಲ್ಲಿ ಹೆಚ್ಚು ಕಡಿಮೆ ಎಲ್ಲ ಹಿಡುವಳಿಗಾರರು ತಮ್ಮ ಜಮೀನಿನಲ್ಲಿ ಗಾಳಿ ಗಿರಗಟ್ಟೆಗಳನ್ನು ಸ್ಥಾಪಿಸಿಕೊಂಡಿದ್ದರು. ಹೀಗೆ ಮಾಡಿದ್ದರೂ ಹೆಚ್ಚು ನೀರು ದೊರೆಯದೆ ಹೋಯಿತು. ಇಪ್ಪತ್ತನೆಯ ಶತಮಾನದಲ್ಲಿ ಫೆಡರಲ್ ಸರ್ಕಾರ ಅಣೆಕಟ್ಟುಗಳನ್ನು ನಿರ್ಮಿಸಿ ಕಾಲುವೆಗಳ ಮೂಲಕ ರೈತರ ಜಮೀನುಗಳಿಗೆ ತಲುಪುವಂತೆ ಮಾಡುವವರೆಗೂ ನೀರಿನ ಕೊರತೆ ನಿವಾರಣೆಯಾಗಲಿಲ್ಲ. ಈ ನೀರಾವರಿ ವ್ಯವಸ್ಥೆ ಬರುವುದಕ್ಕೆ ಮುಂಚೆ ಚಳಿ ಮತ್ತು ನೀರಿನ ಅಭಾವವನ್ನು ತಡೆದುಕೊಳ್ಳುವಂಥ ಗೋಧಿಯ ತಳಿಯನ್ನು ರಷ್ಯದಿಂದ ತರಿಸಿಕೊಂಡು ಆ ತಳಿಯ ಗೋಧಿಯನ್ನು ಬೆಳೆಯಲಾರಂಭಿಸಿದರು. ಅವರು ಅನುಸರಿಸಿದ ಇನ್ನೊಂದು ವಿಧಾನವೆಂದರೆ ಜಮೀನಿನ ಭಾಗಗಳನ್ನು ವರ್ಷ ಬಿಟ್ಟು ವರ್ಷ ವ್ಯವಸಾಯ ಮಾಡುವುದು.

ಪಶ್ಚಿಮ ಪ್ರಾಂತದ ರೈತರ ವಿಶಿಷ್ಟ ಸಮಸ್ಯೆಗಳನ್ನು ನಿವಾರಿಸಲು ಹೊಸ ಸಲಕರಣೆ ಗಳನ್ನು ಉತ್ಪಾದಿಸಿ ಉಪಯೋಗಿಸತೊಡಗಿದರು. ಬಯಲುಸೀಮೆಯ ಗಟ್ಟಿ ನೆಲವನ್ನು ಸಾಧಾರಣ ನೇಗಿಲಿನಿಂದ ಉಳುವುದು ಕಷ್ಟವಾಗಿತ್ತು. ೧೮೬೯ರಲ್ಲಿ ಇಂಡಿಯಾನ ಸಂಸ್ಥಾನದ ಸೌತ್ ಬೆಂಡ್‌ನ ಜೇಮ್ಸ್ ಆಲಿವರ್ ಎನ್ನುವವನು ಅತ್ಯಂತ ಹರಿತವಾದ ಕಬ್ಬಿಣದ ನೇಗಿಲನ್ನು ಕಂಡುಹಿಡಿದನು. ಈ ವಿಶಿಷ್ಟ ತರದ ನೇಗಿಲಿಗೆ ಅನೇಕ ಕುಳಗಳನ್ನು

ಜೋಡಿಸಬಹುದಾಗಿತ್ತು ಮತ್ತು ನೇಗಿಲನ್ನು ಉಪಯೋಗಿಸುವ ರೈತನು ಕುಳಿತುಕೊಳ್ಳ ಬಹುದಾಗಿದ್ದ ಚಕ್ರಗಳಿರುವ ಕೂರುಮಣೆ (sulky) ಯನ್ನು ಒಂದು ಜೊತೆ ಕುದುರೆಗಳು ಸಲೀಸಾಗಿ ಎಳೆದುಕೊಂಡು ಹೋಗಬಹುದಿತ್ತು. ಈ ನೇಗಿಲಿನಿಂದ ರೈತನು ಒಂದೇ ಬಾರಿಗೆ ಅನೇಕ ಸಾಲುಗಳ ಹೊಳಕೆ ಹೊಡೆಯಬಹುದಾಗಿತ್ತು. ೧೮೭೦ರಲ್ಲಿ ಜಾನ್ ಆ್ಯಪಲ್‌ಬೀ (John Appleby) ಎನ್ನುವವನು ಟ್ವಿನ್ ಬೈಂಡರ್ ಎನ್ನುವ ಕಟಾವು ಯಂತ್ರವನ್ನು ಕಂಡುಹಿಡಿದನು. ಈ ಯಂತ್ರ ಪೈರನ್ನು ಕೊಯ್ಲು ಮಾಡುವುದನ್ನು ಸುಲಭವಾಗಿಸಿತು. ಈ ಯಂತ್ರ ಉಪಯೋಗಿಸಿ ಹವಾಮಾನದ ವೈಪರೀತ್ಯಕ್ಕೆ ಸಿಕ್ಕು ಪೈರು ನಾಶವಾಗದಂತೆ ಸಮಯಕ್ಕೆ ಸರಿಯಾಗಿ ಕೊಯ್ಲು ಮುಗಿಸಿ ಆಗಬಹುದಾಗಿದ್ದ ನಷ್ಟವನ್ನು ತಪ್ಪಿಸಿಕೊಳ್ಳಲು ಸಾಧ್ಯವಾಯಿತು. ೧೮೮೦ರಲ್ಲಿ ದೊಡ್ಡ ಜಮೀನುದಾರರು ಅನೇಕ ಕೆಲಸಗಳನ್ನು ಒಟ್ಟಿಗೆ ಮಾಡುವ ಕಟಾವು ಯಂತ್ರಗಳನ್ನು ಉಪಯೋಗಿಸ ತೊಡಗಿದರು. ಈ ಯಂತ್ರವನ್ನು ೨೦ರಿಂದ ೪೦ ಕುದುರೆಗಳು ಎಳೆಯಬೇಕಿತ್ತು. ಇದು ಕೊಯ್ಲು ಮಾಡುವುದು, ಒಕ್ಕುವುದು ಮತ್ತು ಧಾನ್ಯವನ್ನು ಚೀಲಗಳಿಗೆ ತುಂಬುವುದು, ಎಲ್ಲ ಕೆಲಸಗಳನ್ನು ಒಟ್ಟಿಗೆ ಮಾಡಿ ಮುಗಿಸುತ್ತಿತ್ತು.

ಈ ಎಲ್ಲ ಯಂತ್ರೋಪಕರಣಗಳು ಬಹಳ ಬೆಲೆ ಬಾಳುವಂಥವು. ಅವನ್ನು ಕೊಳ್ಳಲು ಅಪಾರ ಹಣ ಹೂಡಬೇಕಿತ್ತು. ಇದು ಸಾವಿರಾರು ಎಕರೆ ಜಮೀನಿನ ಮಾಲೀಕರಿಗೆ ಮಾತ್ರ ಸಾಧ್ಯವಾಗಿತ್ತು. ಆದ್ದರಿಂದ ೧೮೯೦ರ ವೇಳೆಗೆ ಸಣ್ಣ ಹಿಡುವಳಿಗಳು ಹೋಗಿ ಸಾವಿರಾರು ಎಕರೆ ಸಾಗುವಳಿಯ ಕೃಷಿ ಕ್ಷೇತ್ರಗಳು ಅಸ್ತಿತ್ವಕ್ಕೆ ಬಂದವು. ಇವು ಸ್ವಾವಲಂಬನೆಗಾಗಿ ಸಣ್ಣ ಹಿಡುವಳಿಗಾರರಂತೆ ಅನೇಕ ಬೆಳೆಗಳನ್ನು ಬೆಳೆಯುವ ಪದ್ಧತಿಯನ್ನು ಬಿಟ್ಟು ಒಂದೇ ಒಂದು ಫಸಲನ್ನು ಬೃಹತ್ ಪ್ರಮಾಣದಲ್ಲಿ ಬೆಳೆಯಲು ಪ್ರಾರಂಭಿಸಿದವು. ಮುಖ್ಯವಾಗಿ ಅವು ಬೆಳೆಯುತ್ತಿದ್ದುದು ಗೋಧಿಯನ್ನು. ಆ ಅಗಾಧ ಪ್ರಮಾಣದ ಗೋಧಿಯನ್ನು ಮಾರಲು ಕ್ಷೇತ್ರದ ಮಾಲೀಕರು ಅಂತರರಾಷ್ಟ್ರೀಯ ಮಾರುಕಟ್ಟೆಗಳನ್ನು ಹುಡುಕಿಕೊಂಡು ಹೋಗಬೇಕಾಯಿತು. ಈ ಮಾರುಕಟ್ಟೆಗಳಲ್ಲಿ ಅವರು ಇತರ ಅಮೆರಿಕನ್ ಗೋಧಿ ಬೆಳೆಗಾರರೊಡನೆ ಅಲ್ಲದೆ ರಷ್ಯಾ, ಅರ್ಜೆಂಟಿನಾ ಮುಂತಾದ ದೇಶಗಳ ಗೋಧಿ ಬೆಳೆಗಾರರೊಡನೆ ಸ್ಪರ್ಧಿಸಬೇಕಾಗಿ ಬಂತು. ಮೊದಮೊದಲು ಒಳ್ಳೆಯ ಬೆಲೆ ಸಿಕ್ಕಿ ಬೆಳೆಗಾರರು ಉತ್ತೇಜನಗೊಂಡರು. ಕಾಲಾನುಕ್ರಮದಲ್ಲಿ ಅಧಿಕ ಉತ್ಪಾದನೆಯಿಂದಾಗಿ ೧೮೮೦ರ ದಶಕದಲ್ಲಿ ಗೋಧಿ ಬೆಳೆಗಾರರಿಗೆ ಭವಿಷ್ಯ ಚೆನ್ನಾಗಿಲ್ಲವೆಂಬ ಅನುಮಾನ ಹೆಚ್ಚುತ್ತ ಹೋಯಿತು.

❑

ಅಧ್ಯಾಯ – ೧೧

ಗಿಲಿಟಿನ ಯುಗದ ಕೈಗಾರಿಕಾ ಕ್ರಾಂತಿ

ಅಮೆರಿಕದಲ್ಲಿ ಔದ್ಯೋಗೀಕರಣ

ಅಂತರ್ಯುದ್ಧದ ಪೂರ್ವದಲ್ಲಿ ಅಮೆರಿಕ ವ್ಯವಸಾಯಗಾರರ ರಾಷ್ಟ್ರವಾಗಿತ್ತು. ಸ್ವಂತ ಸಾಗುವಳಿ ಮಾಡುವವರು ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮಾರುಕಟ್ಟೆಗಳಿಗಾಗಿ ನಗದು ಹಣ ತರುವಂಥ ಫಸಲನ್ನು ಬೆಳೆಸುತ್ತಿದ್ದರು. ಔದ್ಯೋಗೀಕರಣ ಪ್ರಾರಂಭ ವಾಗಿದ್ದರೂ ಮತ್ತು ವ್ಯವಸಾಯ ದೊಡ್ಡ ಉದ್ದಿಮೆಯಾಗಿದ್ದರೂ ಅಮೆರಿಕ ಜಫರ್‌ಸನ್ ಆದರ್ಶದ ಬೇಸಾಯಗಾರರ ಸಮಾಜವಾಗಿತ್ತು. ಜನರು ಸಣ್ಣ ಸಮುದಾಯಗಳಲ್ಲಿ 'ಮಣ್ಣಿನ ಮಕ್ಕಳಾಗಿ' ಪಟ್ಟಣದ ಕೆಟ್ಟ ದಾರಿಗೆಳೆವ ಆಮಿಷಗಳಿಂದ ದೂರವಿರುತ್ತಿದ್ದರು. ಅಂತರ್ಯುದ್ಧದ ನಂತರ ಆರ್ಥಿಕ ವ್ಯವಸ್ಥೆಯಲ್ಲಿ ಬದಲಾವಣೆಗಳಾಗಿ ವ್ಯವಸಾಯಕ್ಕಿದ್ದ ಉನ್ನತ ಸ್ಥಾನವನ್ನು ಕೈಗಾರಿಕೆ ಮತ್ತು ಉದ್ದಿಮೆಗಳು ಆಕ್ರಮಿಸಿಕೊಂಡವು. ಕಾರ್ಖಾನೆಗಳು ಮತ್ತು ಯಂತ್ರಗಳು ಅಮೆರಿಕ ಜೀವನದ ಸಂಕೇತಗಳಾದವು. ೧೯೧೦ರ ವೇಳೆಗೆ ಯಂತ್ರಗಳಿಂದ ಉತ್ಪಾದನೆಯಾದ ಸರಕು ಮತ್ತು ಸೇವೆಗಳ (goods and services) ಮೊತ್ತದ ಮೌಲ್ಯ ೪೦ ಬಿಲಿಯನ್ ಡಾಲರ್‌ಗಳನ್ನು ಮುಟ್ಟಿತ್ತು. ಒಟ್ಟು ಜನಸಂಖ್ಯೆಯಲ್ಲಿ ಪ್ರತಿಯೊಬ್ಬನಿಗೂ ದೊರೆಯಬಹುದಾದ ಉತ್ಪಾದನ ವಸ್ತುಗಳನ್ನು ಗಣನೆಗೆ ತೆಗೆದು ಕೊಂಡರೆ ಅಮೆರಿಕ ಸಂಯುಕ್ತ ಸಂಸ್ಥಾನಗಳು ಜರ್ಮನಿ ಮತ್ತು ಸ್ವೀಡನ್ ದೇಶಗಳಿಗಿಂತ ಹಿಂದೆ ಇದ್ದರೂ ರಾಷ್ಟ್ರದ ಉತ್ಪಾದನಾ ವಸ್ತುಗಳ ಮೊತ್ತದ ದೃಷ್ಟಿಯಿಂದ ಆಗಿನ ಕಾಲದಲ್ಲಿ ಕೈಗಾರಿಕೆ ಮತ್ತು ಯಂತ್ರ ಉತ್ಪಾದನೆಯ ರಾಷ್ಟ್ರಗಳ ಮುಂಚೂಣಿಯಲ್ಲಿತ್ತು.

ಅಮೆರಿಕನ್ನರ ಉದ್ಯಮಶೀಲ ಪ್ರವೃತ್ತಿ ರಾಷ್ಟ್ರದ ಔದ್ಯೋಗೀಕರಣದ ಅತ್ಯಂತ ಪ್ರಮುಖ ಲಕ್ಷಣವಾದ ನಗದು ಹಣದ ಕೇಂದ್ರೀಕರಣಕ್ಕೆ ಕಾರಣವಾಗಿತ್ತು. ನಗದು ಹಣ ಬೃಹತ್ ಕಾರ್ಖಾನೆಗಳನ್ನು ಸ್ಥಾಪಿಸಲು ಅತ್ಯಂತ ಅಗತ್ಯವಾಗಿತ್ತು. ಕೈಗಾರಿಕಾ ಉತ್ಪನ್ನ ವಸ್ತುಗಳ ಮಾರಾಟ ಹೆಚ್ಚಿದಂತೆಲ್ಲ ನಗದು ಹಣ ಕೇಂದ್ರೀಕರಣ ಹೆಚ್ಚುತ್ತ ಹೋಯಿತು. ೧೮೪೦ರ ದಶಕದಲ್ಲಿ 'ಅಮೆರಿಕನ್ ಮಿಲಿಯನೇರ್' ಎನ್ನುವ ಪದ ಬಳಕೆಗೆ ಬಂತು. ಏಕೆಂದರೆ ೪೦೦೦ಕ್ಕೂ ಹೆಚ್ಚು ಅಮೆರಿಕನ್ನರು ತಮ್ಮ ಸಂಪಾದನೆಯನ್ನು ಏಳು ಸಂಖ್ಯೆಗಳಿಂದ ಸೂಚಿಸುತ್ತಿದ್ದರು. ಕೈಗಾರಿಕೆ, ವ್ಯಾಪಾರ, ರೈಲುಮಾರ್ಗಗಳು, ಬ್ಯಾಂಕ್ ಉದ್ಯಮ – ವಾಸ್ತವವಾಗಿ ಯಾವ ವಸ್ತುವಿಗೆ ಅಥವಾ ಸೇವೆಗೆ ಹೆಚ್ಚಿನ ಬೇಡಿಕೆ ಇತ್ತೋ

ಅವುಗಳಲ್ಲಿ ಹಣ ಹೂಡಿ ಅವರು ತಮ್ಮ ಅಪಾರ ಐಶ್ವರ್ಯವನ್ನು ಗಳಿಸಿದ್ದರು. ಲೋಕದ ಇತಿಹಾಸದಲ್ಲಿ ಇಷ್ಟು ಹೆಚ್ಚು ಜನರು ಇಷ್ಟು ಶೀಘ್ರವಾಗಿ ಅಪಾರ ಮೊತ್ತದ ಹಣವನ್ನು ಗಳಿಸಿದ್ದು ಇದೇ ಮೊದಲು.

ಐಶ್ವರ್ಯದಿಂದ ಪ್ರಗತಿ ಎನ್ನುವ ನಂಬಿಕೆ ಆಗಿನ ಕಾಲದ ಸ್ಫೂರ್ತಿಯ ಸೆಲೆಯಾಗಿತ್ತು. ಹಣ ಮತ್ತು ಐಶ್ವರ್ಯ ಪ್ರದರ್ಶನ ಯಶಸ್ಸಿನ ಶ್ರೇಷ್ಠ ಸಂಕೇತವಾಗಿತ್ತು. ಕನ್ನಡ ಗಾದೆ 'ದುಡ್ಡೇ ದೊಡ್ಡಪ್ಪ' ಎನ್ನುವ ಮನೋಭಾವ ಮತ್ತು ದುಡ್ಡಿನ ದುರಾಸೆ ಅಮೆರಿಕನ್ನರಿಗೆ ಆಪ್ಯಾಯಮಾನವಾಗಿತ್ತು. ಹಾಗೆಯೇ ಪೈಪೋಟಿ ಸಮಾಜದ ಆರ್ಥಿಕ ಅಭಿವೃದ್ಧಿಗೆ ಅಗತ್ಯವೆಂದು ಅವರಿಗೆ ಮನದಟ್ಟಾಗಿತ್ತು. ಆದರೆ ಈ ಮಿತಿಯಿಲ್ಲದ ಹಣದಾಸೆ ಕೇವಲ ಕೆಲವು ಪ್ರಭಾವಶಾಲಿಗಳು ಅಪಾರ ಹಣ ಶೇಖರಿಸಲು ಉತ್ತೇಜನ ನೀಡಿತು. ಹೀಗೆ ಕೆಲವೇ ಹಣವಂತರು ಇತರ ಅಮೆರಿಕನ್ನರ ಅವಕಾಶಗಳನ್ನು ಮೊಟಕುಗೊಳಿಸಿದರು. ಆಗತಾನೆ ಅಭಿವೃದ್ಧಿಗೊಳ್ಳುತ್ತಿದ್ದ ಕೈಗಾರಿಕೆಗಳ ನಡುವೆ ತೀವ್ರ ಪೈಪೋಟಿಯ ಪರಿಣಾಮವಾಗಿ ಏಕಸ್ವಾಮ್ಯತೆಗಳು ಬೆಳೆದು ಸಣ್ಣ ಉದ್ಯಮಗಾರರನ್ನು, ವರ್ತಕರನ್ನು ದಿವಾಳಿ ಎಬ್ಬಿಸಿದವು. ಫೆಡರಲ್ ಸರ್ಕಾರ ಕೈಗಾರಿಕೆ ಮತ್ತು ಉದ್ಯಮಗಳನ್ನು ನಿಯಂತ್ರಣ ಮಾಡಲು ನಿರಾಕರಿಸಿತು. ಆದರೆ ಏಕಸ್ವಾಮ್ಯತೆಗಳ ಮೇಲೆ ಜನರ ಪ್ರತಿಭಟನೆ ಮತ್ತು ಒತ್ತಾಯದಿಂದ ಫೆಡರಲ್ ಸರ್ಕಾರ ಅನಿರ್ಬಂಧಿತ ಪೈಪೋಟಿಯನ್ನು ಹತೋಟಿಗೆ ತರಲು ನ್ಯಾಯಾಲಯಗಳ ಮೂಲಕ ಮಾಡಿದ ಮೊದಲನೆಯ ಪ್ರಯತ್ನಗಳಿಂದ ಯಾವ ಪ್ರಯೋಜನವೂ ಆಗಲಿಲ್ಲ. ಕಾರಣ ಕಾಂಗ್ರೆಸ್ ಸದಸ್ಯರು ಮತ್ತು ನ್ಯಾಯಾಧೀಶರು ಖಾಸಗಿ ಉದ್ಯೋಗಗಳನ್ನು ನಿಯಂತ್ರಿಸುವುದು ವ್ಯಕ್ತಿ ಸ್ವಾತಂತ್ರ್ಯವನ್ನು ಉಲ್ಲಂಘಿಸಿದಂತೆ ಎನ್ನುವ ಅಭಿಪ್ರಾಯ ಹೊಂದಿದ್ದರು.

ಔದ್ಯೋಗಿಕ ಬೆಳವಣಿಗೆಗೆ ಬೇಕಾಗುವ ಪ್ರಕೃತಿದತ್ತವಾದ ಸಂಪನ್ಮೂಲಗಳು ಅಮೆರಿಕದಲ್ಲಿ ಅಪಾರವಾಗಿದ್ದವು. ಅವುಗಳನ್ನು ಕೈಗಾರಿಕೆಗಳು ಸುಲಭವಾಗಿ ಶೋಷಣೆ ಮಾಡಿ ಶೀಘ್ರವಾಗಿ ಅಭಿವೃದ್ಧಿಗೊಂಡವು. ಪೆನ್ಸಿಲ್‌ವೇನಿಯಾದ ಕಲ್ಲಿದ್ದಲು ಮತ್ತು ಭೂಗತ ತೈಲ ಸಂಗ್ರಹಗಳು ಪೂರ್ವತೀರದ ಕಾರ್ಖಾನೆಗಳಿಗೆ ಹತ್ತಿರದಲ್ಲಿದ್ದವು. ಟೆಕ್ಸಾಸ್ ಪ್ರಾಂತದಲ್ಲಿ ಹುದುಗಿದ್ದ ಅಪಾರ ತೈಲ ಸಂಪತ್ತನ್ನು ಹೊರತೆಗೆದು ರೈಲುಮಾರ್ಗವಾಗಿ ಮಾರುಕಟ್ಟೆಗಳಿಗೆ ಸಾಗಿಸಬಹುದಾಗಿತ್ತು. ಮಿನೆಸೋಟ ಪ್ರಾಂತದ ವಿಶಾಲ ಮೆಸಬಿ ಶ್ರೇಣಿಯಲ್ಲಿ ಸಿಗುತ್ತಿದ್ದ ಕಬ್ಬಿಣದ ಅದಿರನ್ನು ಗಣಿಗಳು ಹೊರತೆಗೆದು ಮಹಾಸರೋವರಗಳ ತೀರಕ್ಕೆ ಸಾಗಿಸಿ, ಅಲ್ಲಿಂದ ಚಪ್ಪಟೆ ತಳದ ದೊಡ್ಡ ದೋಣಿಗಳಲ್ಲಿ ಪಟ್ಟಣಕ್ಕೆ ಸಾಗಿಸಿ, ನಂತರ ರೈಲುಬಂಡಿಗಳಲ್ಲಿ ಪೂರ್ವತೀರದ ಉಕ್ಕಿನ ಕಾರ್ಖಾನೆಗಳಿಗೆ ರವಾನಿಸಲಾಗುತ್ತಿತ್ತು. ರಾಕಿ ಮತ್ತು ಸಿಯೆರಾ ಪರ್ವತಶ್ರೇಣಿಗಳ ಭೂಗರ್ಭದಲ್ಲಿ ಹೆಚ್ಚು ಪ್ರಮಾಣದಲ್ಲಿ ಚಿನ್ನ ಮತ್ತು ಬೆಳ್ಳಿಯ ರೇಕುಗಳಿದ್ದ ಶಿಲಾಪದರಗಳಲ್ಲದೆ; ಸೀಸ, ಸತು ಮತ್ತು ತಾಮ್ರದ

ಅದಿರುಗಳು ಹುದುಗಿರುವುದು ಪತ್ತೆಯಾಯಿತು. ಈ ಲೋಹಗಳು ಅನೇಕ ಕೈಗಾರಿಕೆಗಳಲ್ಲಿ ಉಪಯುಕ್ತವಾಗಿದ್ದವು.

ಅಮೆರಿಕದ ಆರ್ಥಿಕ ವ್ಯವಸ್ಥೆಯನ್ನು ಪರಿವರ್ತಿಸುವುದರಲ್ಲಿ ಬಂಡವಾಳ ಮತ್ತು ತಂತ್ರಜ್ಞಾನಗಳು ಮಹತ್ವದ ಪಾತ್ರ ವಹಿಸಿದ್ದವು. ಉಗಿಯಂತ್ರ ತನ್ನ ಉಪಯುಕ್ತತೆಯ ಪರಮಾವಧಿಯನ್ನು ಮುಟ್ಟಿತ್ತು. ಅಮೆರಿಕನ್ ಕೆಲಸಗಾರರ ವೇತನವನ್ನು ಕಡಿಮೆ ಮಾಡದೆಯೇ ಯೂರೋಪಿನ ಕೆಲಸಗಾರರೊಡನೆ ಸ್ಪರ್ಧಿಸಲು ಅಮೆರಿಕನ್ ಉತ್ಪಾದನಾ ಕಾರರು ತ್ವರಿತ ಗತಿಯಲ್ಲಿ ಯಂತ್ರಗಳನ್ನು ಕಾರ್ಖಾನೆಗಳಲ್ಲಿ ಅಳವಡಿಸಿ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಿದರು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಬಂದ ಕುಶಲತೆಯಿಲ್ಲದ ಕಾರ್ಮಿಕರು ಯಂತ್ರೋಪಕರಣಗಳನ್ನು ಹೆಚ್ಚಾಗಿ ಬಳಸಲು ನೆಪ ಒದಗಿಸಿದರು. ಕೆಲಸಗಾರರ ಬದಲಿಗೆ ಯಂತ್ರಗಳನ್ನು ಉಪಯೋಗಿಸಿದಾಗ ವಸ್ತುಗಳ ಉತ್ಪಾದನೆ ಹೆಚ್ಚಾದುದೆ ಅಲ್ಲದೆ ಕಾರ್ಯದಕ್ಷತೆಯೂ ಹೆಚ್ಚಿತು. ಬಳಕೆಯಲ್ಲಿದ್ದ ಉಪಕರಣಕ್ಕಿಂತ ಉತ್ತಮವಾದುದನ್ನು ಕಂಡುಹಿಡಿದವರು ಅಥವಾ ಹೊಸ ಉಪಕರಣವನ್ನು ಸೃಷ್ಟಿಸಿದವನು ಅದರ ಮಾರಾಟದಿಂದ ಹಣವಂತ ನಾಗಲು ಹಂಬಲಿಸಿ ತಾನು ಕಂಡುಹಿಡಿದದ್ದನ್ನು ರಕ್ಷಿಸಲು ಆ ಉಪಕರಣದ ಮೇಲೆ ವಿಶಿಷ್ಟ ಹಕ್ಕು ಪಡೆಯಲು ಸ್ವಾಮ್ಯದ ಸನ್ನದು (patent) ಪಡೆಯಲು ಪ್ರಯತ್ನಿಸುತ್ತಿದ್ದರು. ಇದು ಸಾಮೂಹಿಕ ಹವ್ಯಾಸವಾಯಿತು. ೧೮೬೦ರಿಂದ ೧೮೯೦ರ ಅವಧಿಯಲ್ಲಿ ಅಮೆರಿಕನ್ನರು ೫೦೦೦೦೦ ಸನ್ನದುಗಳನ್ನು ಪಡೆದರು. ಕೆಲವು ಸಂಶೋಧನೆಗಳು ಹೊಸ ಉದ್ಯಮಗಳನ್ನು ಸ್ಥಾಪಿಸಲು ಕಾರಣವಾದವು. ಕ್ರಿಸ್ಟೊಫರ್ ಶೋಲ್ಸ್ ಎನ್ನುವವನು ಬೆರಳಚ್ಚಿನ ಯಂತ್ರ (typewriter)ವನ್ನು ಕಂಡುಹಿಡಿದನು. ಅಲೆಗ್ಸಾಂಡರ್ ಬೆಲ್ ದೂರವಾಣಿಯನ್ನು, ವಿಲಿಯಂ ಬರೋಸ್ (William Burroughs) ಗಣಕಯಂತ್ರ (adding machine)ವನ್ನು, ಫ್ರೆಡ್ರಿಕ್ ಟೇಲರ್ (Frederick Taylor) ವಿದ್ಯುತ್ ಚಾಲಿತ ಯಂತ್ರೋಪಕರಣಗಳನ್ನು (power driven machine tools) ಕಂಡುಹಿಡಿದರು. ಥಾಮಸ್ ಆಲ್ವ ಎಡಿಸನ್ (Thomas Alva Edison) ಎಲ್ಲರಿಗಿಂತಲೂ ಹೆಚ್ಚಿನ ಉಪಕರಣಗಳನ್ನು ಸೃಷ್ಟಿ ಮಾಡಿದ್ದನು. ಅವನು ಒಂದು ಸಾವಿರಕ್ಕೂ ಹೆಚ್ಚಿನ ಉಪಕರಣಗಳ ಮೇಲೆ ಸನ್ನದು ಪಡೆದಿದ್ದನು. ಅವನು ಸೃಷ್ಟಿಸಿದ ಕೆಲವು ಮುಖ್ಯ ಉಪಕರಣಗಳು – ಬ್ಯಾಟರಿ, ವಿದ್ಯುತ್ ದೀಪದ ಬುರುಡೆ (electric light bulb), ಫೋನೋಗ್ರಾಫ್ ಮತ್ತು ಚಿತ್ರ ತೆಗೆಯುವ ಕ್ಯಾಮೆರ.

ಯೂರೋಪಿನ ವೈಜ್ಞಾನಿಕ ಮುನ್ನಡೆ ಅಮೆರಿಕದ ಔದ್ಯೋಗಿಕ ವಿಸ್ತರಣೆಗೆ ವರಪ್ರಸಾದವಾಯಿತು. ಇಂಗ್ಲಿಷ್ ವಿಜ್ಞಾನಿ ಮೈಕೆಲ್ ಫಾರಡೆ (Michael Faraday) ವಿದ್ಯುತ್ ಚಾಲಿತ ಅಯಸ್ಕಾಂತ (electromagnetism) ತತ್ವವನ್ನು ವಿವರಿಸಿದ ಮೇಲೆ

ಥಾಮಸ್ ಆಲ್ವ ಎಡಿಸನ್ ವಿದ್ಯುಚ್ಛಕ್ತಿ ಸಂಗ್ರಹಿಸಿಡಬಹುದಾದ ಬ್ಯಾಟರಿಯನ್ನು ಪರಿಪೂರ್ಣಗೊಳಿಸಲು ಸಾಧ್ಯವಾಯಿತು. ಇಂಥ 'ಅಮೆರಿಕನ್ ಚಾತುರ್ಯ' ರಾಷ್ಟ್ರದ ಚಾರಿತ್ರ್ಯದ ಬಹುಮುಖ್ಯ ಲಕ್ಷಣವೆಂದು ಶ್ಲಾಘಿಸಲಾಯಿತು. ಈ ಔದ್ಯೋಗೀಕರಣದ ಪ್ರಚಂಡ ವಿಸ್ತರಣೆಯನ್ನು ಸಾಧ್ಯಗೊಳಿಸಲು ಇನ್ನೂ ಕೆಲವು ಅಂಗಗಳು ಸಹಾಯ ಮಾಡಿದವು. ಸಂಯುಕ್ತ ಸಂಸ್ಥಾನಗಳನ್ನು ತ್ಯಜಿಸಿ ಬಂದ ವ್ಯವಸಾಯ ಪ್ರಧಾನವಾದ ದಕ್ಷಿಣ ಸಂಸ್ಥಾನಗಳು ರಾಷ್ಟ್ರದ ರಾಜಕೀಯದಲ್ಲಿ ಭಾಗವಹಿಸಲು ನಿರಾಕರಿಸಿದವು. ಆದ್ದರಿಂದ ಕೈಗಾರಿಕಾ ಪ್ರಧಾನವಾದ ಉತ್ತರ ಸಂಸ್ಥಾನಗಳು ತಮ್ಮ ಯೋಜನೆಗಳಿಗೆ ಫೆಡರಲ್ ಸರ್ಕಾರದ ಸಹಾಯ ಪಡೆದುಕೊಂಡವು. ಜನಸಂಖ್ಯೆ ಹೆಚ್ಚಾಗುತ್ತ ಹೋದಂತೆ ಉತ್ತರ ಸಂಸ್ಥಾನಗಳಲ್ಲಿ ತಯಾರಿಸಿದ ವಸ್ತುಗಳಿಗೆ ಬೇಡಿಕೆ ಹೆಚ್ಚಾಗಿ ಬೇರೆ ಮಾರುಕಟ್ಟೆಗಳನ್ನು ಹುಡುಕಿಕೊಂಡು ಹೋಗಬೇಕಾಗಿರಲಿಲ್ಲ. ಸಂಯುಕ್ತ ಸಂಸ್ಥಾನಗಳಲ್ಲಿ ಯೂರೋಪಿನ ರಾಷ್ಟ್ರಗಳು ಹಣ ಹೂಡಬಹುದಾಗಿತ್ತು. ೧೯೦೦ರಲ್ಲಿ ಹೊರದೇಶಗಳು ಮುಖ್ಯವಾಗಿ, ಇಂಗ್ಲೆಂಡ್ ರೈಲುಮಾರ್ಗಗಳಲ್ಲಿ, ಗಣಿಗಳಲ್ಲಿ, ಮತ್ತು ಮುನಿಸಿಪಲ್ ಬಾಂಡ್ (municipal bond)ಗಳಲ್ಲಿ ಹಣ ಹೂಡಿದ್ದವು. ಅವುಗಳ ಮೊತ್ತ ಮೂರೂವರೆ ಬಿಲಿಯನ್ ಡಾಲರ್‌ಗಳು. ಅಮೆರಿಕನ್ ಹಣವನ್ನು ಉತ್ಪಾದನೆಯನ್ನು ಹೆಚ್ಚಿಸಲು ಉಪಯೋಗಿಸಲಾಯಿತು.

ಔದ್ಯೋಗೀಕರಣ ಮತ್ತು ಕ್ರೋಡೀಕರಣ

ಹತ್ತೊಂಬತ್ತನೆಯ ಶತಮಾನದಲ್ಲಿ ಕಾರ್ಖಾನೆ ವ್ಯವಸ್ಥೆ ಮತ್ತು ಯಂತ್ರ ಸಾರಿಗೆ ಅಮೆರಿಕದಲ್ಲಿ ಎಲ್ಲ ಕಡೆ ಶೀಘ್ರವಾಗಿ ಮತ್ತು ಸತತವಾಗಿ ಹಬ್ಬತೊಡಗಿದವು. ೧೮೯೦ರ ದಶಕದಲ್ಲಿ ಯಂತ್ರ ನಾಗರಿಕತೆಯಿಂದ ಪ್ರಭಾವಿತಗೊಳ್ಳದ ಅಮೆರಿಕನ್ನರು ಯಾರೂ ಇರಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ೧೮೫೦ರ ದಶಕದಲ್ಲೇ ಈ ಬದಲಾವಣೆಗಳು ಪ್ರಾರಂಭವಾಗಿದ್ದವು. ಆಗಲೇ ನ್ಯೂಯಾರ್ಕ್ ಮತ್ತು ಪೆನ್ಸಿಲ್‌ವೇನಿಯಾಗಳು ದೊಡ್ಡ ಉತ್ಪಾದನಾ ಕೇಂದ್ರಗಳಾಗಿ ಅಭಿವೃದ್ಧಿಗೊಂಡು ನ್ಯೂ ಇಂಗ್ಲೆಂಡ್ ಪ್ರದೇಶವನ್ನು ಹಿಂದೆ ಹಾಕಿದ್ದವು. ಅಂತರ್ಯುದ್ಧದ ಕಾಲದಲ್ಲಿ ದೇಶದ ಒಟ್ಟು ಕೈಗಾರಿಕಾ ಉತ್ಪಾದನೆ ಹೆಚ್ಚಾಗಿದ್ದರೂ, ೧೮೬೦ರ ದಶಕದಲ್ಲಿ ಕಬ್ಬಿಣ, ಹತ್ತಿ ಬಟ್ಟೆಗಳು ಮತ್ತು ರೈಲುಮಾರ್ಗಗಳ ಉದ್ಯಮಗಳು ಅಭಿವೃದ್ಧಿ ಹೊಂದಲಿಲ್ಲ. ಆದರೆ ಕಲ್ಲಿದ್ದಲ ಉತ್ಪಾದನೆ ಮತ್ತು ಉಣ್ಣೆಯಿಂದ ಮಾಡಿದ ವಸ್ತುಗಳ ಉತ್ಪಾದನೆ ಹೆಚ್ಚುತ್ತ ಹೋಗಿ ಆ ಉದ್ಯಮಗಳು ಅಭಿವೃದ್ಧಿಗೊಂಡವು. ಕಾರ್ಪೊರೇಷನ್‌ಗಳ ಸಂಖ್ಯೆ ಹೆಚ್ಚಾಯಿತು. ಅಂತರ್ಯುದ್ಧ ವಸ್ತುಗಳ ಉತ್ಪಾದನೆಯನ್ನು ಸೈನ್ಯದ ಅಗತ್ಯಗಳಿಗೆ ತಕ್ಕಂತೆ ಪ್ರಮಾಣಬದ್ಧವಾಗಿ ಮಾಡಲು ಸಾಧ್ಯವಾಯಿತು. ಫೆಡರಲ್ ಸರ್ಕಾರದ ಖರ್ಚು ವೆಚ್ಚಗಳು ಯುದ್ಧಕಾಲದಲ್ಲಿ ಹೆಚ್ಚಾಗುತ್ತ ಹೋಗಿ ಯುದ್ಧಪೂರ್ವ ದಿನಗಳ ಮಟ್ಟಕ್ಕೆ ಮರಳಿ ಬರಲಿಲ್ಲ. ಈ ಪರಿಸ್ಥಿತಿ ಆರ್ಥಿಕ ಬೆಳವಣಿಗೆಗೆ ಸಹಾಯಕವಾಯಿತು.

ಅಮೆರಿಕದ ಆರ್ಥಿಕ ಅಭಿವೃದ್ಧಿಗೆ ಅನಿವಾರ್ಯ ನೆರವು ನೀಡಿದವರು ಕೆಲವು ವ್ಯವಹಾರ ಚತುರರೂ, ದೂರದೃಷ್ಟಿಯುಳ್ಳವರೂ ಮತ್ತು ಮುಂದುವರಿಯಬೇಕೆಂಬ ಆಕಾಂಕ್ಷೆಯುಳ್ಳ ವಿಶಿಷ್ಟ ವ್ಯಕ್ತಿಗಳು. ಅವರು ಸಣ್ಣ ಉದ್ಯಮಗಳನ್ನು ಕ್ರೋಢೀಕರಿಸಿ ಲಾಭದಾಯಕವಾಗಿ ಮಾಡಿದರು. ಈ ವ್ಯಕ್ತಿಗಳು ಉಕ್ಕಿನ ಉತ್ಪಾದನೆ, ತೈಲ ಉತ್ಪಾದನೆ ಮತ್ತು ಬ್ಯಾಂಕುಗಳ ನಿರ್ವಹಣೆ – ಈ ಕ್ಷೇತ್ರಗಳಲ್ಲಿ ಮುಂದಾಳುಗಳಾಗಿದ್ದರು. ೧೮೫೯ರಲ್ಲಿ ಪೆನ್ಸಿಲ್‌ವೇನಿಯಾದಲ್ಲಿ ಭೂಗತವಾಗಿದ್ದ ಅಪಾರ ತೈಲ ಸಂಗ್ರಹ ಪತ್ತೆಯಾದ ಸಂಗತಿ ಕೇಳಿ ಸಾವಿರಾರು ಉದ್ಯಮಿಗಳು ಪೆನ್ಸಿಲ್‌ವೇನಿಯಾದ ಭೂಗತ ತೈಲ ಪ್ರದೇಶಗಳಿಗೆ ದಿಢೀರನೆ ಹಣವಂತರಾಗುವ ಆಸೆಯಿಂದ ಧಾವಿಸಿದರು. ಹಾಗೆ ಬಂದವರಲ್ಲಿ ಒಬ್ಬ ಜಾನ್ ಡಿ. ರಾಕ್‌ಫೆಲರ್ (John D. Rockefeller) ತೈಲವನ್ನು ಭೂಗರ್ಭದಿಂದ ಹೊರತಂದು, ಕಚ್ಚಾ ತೈಲವನ್ನು ಶುದ್ಧಿಗೊಳಿಸುವ ಉದ್ಯಮ ಆಗತಾನೆ ಪ್ರಾರಂಭವಾಗಿದ್ದು ಬಹಳ ಅಸ್ಥಿರವಾಗಿತ್ತು. ಭೂಗರ್ಭಶಾಸ್ತ್ರ ವಿಜ್ಞಾನಿಗಳ ವರದಿಯನ್ನು ಓದಿದ್ದ ರಾಕ್‌ಫೆಲರ್‌ಗೆ ಆ ಪ್ರದೇಶದ ಭೂಗರ್ಭದಲ್ಲಿ ಅಗಾಧ ಪ್ರಮಾಣದ ತೈಲ ಸಂಗ್ರಹ ಇರುವುದು ಮನದಟ್ಟಾಯಿತು. ಅವನು ಕ್ಲಿವ್‌ಲ್ಯಾಂಡ್‌ನ ತನ್ನ ಮನೆಗೆ ವಾಪಸಾದವನು. ತೈಲ ಸಂಗ್ರಹದ ಬಗ್ಗೆ ಯೋಚಿಸಿ, ಅಲ್ಲಿ ಹೊಸ ಉದ್ಯಮ ಸ್ಥಾಪಿಸಲು ಅತ್ಯುತ್ತಮ ಅವಕಾಶವಿದೆ ಎಂದು ಖಚಿತ ಮಾಡಿಕೊಂಡನು. ಆಗಲೇ ಅವನು ತನ್ನ ವ್ಯವಸಾಯೋತ್ಪನ್ನ ಉದ್ಯಮದಲ್ಲಿ ಒಳ್ಳೆಯ ಲಾಭ ಪಡೆಯುತ್ತಿದ್ದನು. ರಾಕ್‌ಫೆಲರ್ ತನ್ನ ಇಬ್ಬರು ಪಾಲುಗಾರರನ್ನು ತಾನು ಯೋಚಿಸಿರುವ ಉದ್ಯಮದಲ್ಲಿ ಬಂಡವಾಳ ಹೂಡುವಂತೆ ಆಗ್ರಹಪಡಿಸಿದನು. ಹೀಗೆ ೧೮೭೦ರಲ್ಲಿ ಅವರು ಸ್ಟಾಂಡರ್ಡ್ ಆಯಿಲ್ ಆಫ್ ಒಹಾಓ (Standard Oil of Ohio) ಎನ್ನುವ ತೈಲ ಶುದ್ಧೀಕರಣ ಉದ್ಯಮವನ್ನು ಪ್ರಾರಂಭಿಸಿದರು.

ಉದ್ಯಮದಲ್ಲಿ ತನ್ನ ಪ್ರತಿಸ್ಪರ್ಧಿಗಳನ್ನು ಸೋಲಿಸುವ ಸಲುವಾಗಿ ರಾಕ್‌ಫೆಲರ್ ಸದಾಕಾಲ ಉಪಯೋಗಕ್ಕೆ ಬರುವಂಥ ದೊಡ್ಡ ಪ್ರಮಾಣದಲ್ಲಿ ನಗದು ಹಣವನ್ನು ಪ್ರತ್ಯೇಕವಾಗಿ ಕಾದಿರಿಸಿರುತ್ತಿದ್ದನು. ಯಾವುದಾದರೂ ತೈಲ ಕಂಪನಿ ತನ್ನ ತೈಲ ಬಾವಿಗಳನ್ನು ಮಾರಲು ಇಚ್ಛಿಸಿದರೆ ಆ ಬಾವಿಗಳನ್ನು ರಾಕ್‌ಫೆಲರ್ ತಾನು ಕಾದಿರಿಸಿದ್ದ ಹಣದಿಂದ ಕೊಳ್ಳುತ್ತಿದ್ದ ಅವನ ಈ ಯೋಜನೆ ಆಶ್ಚರ್ಯಕರವಾದ ರೀತಿಯಲ್ಲಿ ಯಶಸ್ವಿಯಾಯಿತು. ಬಲಹೀನವಾದ ಕಂಪನಿಗಳನ್ನು ರಾಕ್‌ಫೆಲರ್ ವ್ಯವಹಾರ ಚಾತುರ್ಯದಿಂದ ಉದ್ಯಮವನ್ನು ತ್ಯಜಿಸಿಹೋಗುವಂತೆ ಮಾಡುತ್ತಿದ್ದನು. ರೈಲು ಮಾರ್ಗಗಳು ಕೊಡುತ್ತಿದ್ದ ರಿಯಾಯಿತಿಯನ್ನು ಯಥೇಚ್ಛವಾಗಿ ಬಳಸಿಕೊಂಡು ಅದರ ಪೂರ್ಣ ಉಪಯೋಗ ಪಡೆದನು. ರೈಲ್ವೆ ಕಂಪನಿಗಳು ರಾಕ್‌ಫೆಲರ್ ಕಂಪನಿಗೆ ಕಚ್ಚಾ ತೈಲವನ್ನು ಕಡಿಮೆ ದರದಲ್ಲಿ ರವಾನಿಸುತ್ತಿದ್ದವು. ಬೇರೆ ಕಂಪನಿಗಳು ಹೆಚ್ಚಿನ ದರ ಕೊಡಬೇಕಾಗಿತ್ತು. ಇದರಿಂದಾಗಿ ನಷ್ಟ ಅನುಭವಿಸಿದ ಕಂಪನಿಗಳು ತಮ್ಮ ತೈಲಬಾವಿಗಳನ್ನು ಮಾರಬೇಕಾಗಿ

ಬರುತ್ತಿತ್ತು. ಇಂಥ ಅವಕಾಶಗಳನ್ನು ರಾಕ್‌ಫೆಲರ್ ಉಪಯೋಗಿಸಿಕೊಂಡು ತೈಲಬಾವಿಗಳನ್ನು ತನ್ನದಾಗಿ ಮಾಡಿಕೊಳ್ಳುತ್ತಿದ್ದ. ಹೀಗೆ ಮಾಡಿ ಸ್ವಲ್ಪ ಕಾಲದಲ್ಲಿಯೆ ಕ್ಲಿವ್‌ಲ್ಯಾಂಡ್ ಪ್ರದೇಶದ ಎಲ್ಲ ತೈಲ ಉದ್ಯಮಗಳನ್ನಲ್ಲದೆ ಬೇರೆ ಪ್ರಾಂತಗಳಲ್ಲೂ ಹೆಚ್ಚಿನ ವ್ಯಾಪಾರವನ್ನು ಕೈವಶ ಮಾಡಿಕೊಂಡನು. ಮೇಲಾಗಿ ಅವನು ತನ್ನ ಉದ್ಯಮಕ್ಕೆ ಬೆಂಬಲವಾಗಿದ್ದ ಎಲ್ಲದರ ಮೇಲೂ, ತೈಲ ಕೊಂಡೊಯ್ಯುವ ಪೈಪ್ ಲೈನ್‌ಗಳೂ ಸೇರಿದಂತೆ, ನಿಯಂತ್ರಣ ಹೊಂದಿದ್ದನು.

ರಾಕ್‌ಫೆಲರ್ ತಾನು ನಿರ್ಮಿಸಿದ ಆರ್ಥಿಕ ಚಕ್ರಾಧಿಪತ್ಯಕ್ಕೆ ಮಣಿಮುಕುಟ ತೊಡಿಸುವಂತೆ ೧೮೮೨ರಲ್ಲಿ 'ಸ್ಟಾಂಡರ್ಡ್ ಆಯಿಲ್ ಟ್ರಸ್ಟ್' ಎನ್ನುವ ಪಾರುಪತ್ತೆಗಾರಿಕೆ ಅಥವಾ ಟ್ರಸ್ಟ್ ಸ್ಥಾಪಿಸಿದನು. ಇದು ಒಂದು ಠೇವಣಿ ಸಂಸ್ಥೆ. ಇತರ ಅನೇಕ ಕಂಪನಿಗಳ ಷೇರುದಾರರು (shareholders) ತಮ್ಮ ಪಾಲುಪತ್ರಗಳನ್ನು (shares) ಟ್ರಸ್ಟಿಗಳ (Board of Trustees) ವಶಕ್ಕೆ ಹಿಂದಿರುಗಿಸಿ ಅವುಗಳ ಬದಲು ಠೇವಣಿ ಪತ್ರಗಳನ್ನು ಪಡೆಯುತ್ತಿದ್ದರು. ಈ ಠೇವಣಿ ಪತ್ರಗಳಿಗೆ ಲಾಭಾಂಶ (dividends) ದೊರೆಯುತ್ತಿತ್ತು. ಪಾರುಪತ್ತೇಗಾರರಿಗೆ ಎಲ್ಲ ಪಾಲುಪತ್ರಗಳ ಮೇಲೆ ಮತ ನೀಡುವ ಅಧಿಕಾರವಿದ್ದುದರಿಂದ ಅವರು ಇಡೀ ತೈಲ ಚಕ್ರಾಧಿಪತ್ಯವನ್ನು ನಿರ್ದೇಶಿಸುವ ಸಾಮರ್ಥ್ಯ ಪಡೆದಿದ್ದರು. ಇದು ಇಡೀ ರಾಷ್ಟ್ರದ ತೈಲ ಉದ್ಯಮದ ಶೇಕಡಾ ೯೫ ಭಾಗವನ್ನು ಒಳಗೊಂಡಿತ್ತು. ಹೀಗೆ ರಾಕ್‌ಫೆಲರ್ ತನ್ನ ವ್ಯವಹಾರ ಚತುರತೆಯಿಂದ ತನ್ನ ಧ್ಯೇಯವನ್ನು ಸಾಧಿಸಿ, ತನ್ನ ಪ್ರತಿಸ್ಪರ್ಧಿಗಳನ್ನೆಲ್ಲ ನಾಶ ಮಾಡಿದ್ದ. ವ್ಯಾಪಾರದಲ್ಲಿ ಪೈಪೋಟಿ ಅಥವಾ ಸ್ಪರ್ಧೆ ವ್ಯರ್ಥವಾದುದು, ಸ್ಪರ್ಧೆ ದಕ್ಷತೆಯನ್ನು ಕಡಿಮೆ ಮಾಡುತ್ತದೆ ಮತ್ತು ಬೆಲೆ ಏರಿಕೆಗೆ ಕಾರಣವಾಗುತ್ತದೆ ಎಂದು ಅವನು ನಂಬಿದ್ದನು. ತೈಲ ಉದ್ಯಮದಲ್ಲಿ ಸ್ಪರ್ಧೆಯನ್ನು ಅಳಿಸಿಹಾಕಿದ್ದರಿಂದ ಉದ್ಯಮ ವ್ಯವಸ್ಥಿತಗೊಂಡು ದೃಢಗೊಂಡಿತು. ಹೀಗಾಗಿ ತೈಲ ಉದ್ಯಮ ಕ್ರೋಢೀಕರಣದಿಂದ ಅತ್ಯಂತ ಲಾಭದಾಯಕವಾಯಿತು. ಆದರೆ ಸ್ಟಾಂಡರ್ಡ್ ಆಯಿಲ್ ಕಂಪನಿ ಪೆಟ್ರೋಲಿಯಂ ಉತ್ಪಾದನೆಯಲ್ಲಿ ಯಾವ ಮುಖ್ಯವಾದ ತಾಂತ್ರಿಕ ಸುಧಾರಣೆಗಳನ್ನೂ ಮಾಡಲಿಲ್ಲ.

ಕ್ರೋಢೀಕರಣ ಇತರ ಉದ್ಯಮಗಳಿಗೂ ಹಬ್ಬಿತು. ೧೯೦೦ರ ವೇಳೆಗೆ ಬೃಹತ್ ಕಾರ್ಪೊರೇಷನ್‌ಗಳು ಅಮೆರಿಕದ ಉದ್ಯಮಗಳ ಮೇಲೆ ಪ್ರಭುತ್ವ ಹೊಂದಿದ್ದವು. ರಾಷ್ಟ್ರದಲ್ಲಿ ಉತ್ಪಾದನೆಗೊಂಡ ಎಲ್ಲ ವಸ್ತುಗಳಲ್ಲಿ ೨/೩ ಭಾಗ ದೈತ್ಯ ಕಂಪನಿಗಳಲ್ಲಿ ತಯಾರಾಗುತ್ತಿದ್ದವು. ಅನೇಕ ಕಂಪನಿಗಳು ಕಚ್ಚಾ ಪದಾರ್ಥಗಳು ದೊರೆಯುವ ಸ್ಥಳಗಳ ಮೇಲೆ ಸ್ವಾಮ್ಯತೆ ಪಡೆದಿದ್ದವು. ಹಾಗೆಯೇ ಸಾರಿಗೆ ವ್ಯವಸ್ಥೆ ಮತ್ತು ಮಾರಾಟ ಸೌಕರ್ಯಗಳನ್ನು ಕಂಪನಿಗಳೇ ನಿರ್ವಹಿಸುತ್ತಿದ್ದವು. ಉದ್ಯಮಗಳು ಕ್ರೋಢೀಕರಣದ ಹಾದಿ ಹಿಡಿಯಲು ಕಾರಣ ಅದರಿಂದ ರೈಲುಮಾರ್ಗಗಳು ತೆರೆದ ವಿಸ್ತಾರವಾದ

ಮಾರುಕಟ್ಟೆಗಳ ಪೂರ್ಣ ಪ್ರಯೋಜನ ಪಡೆಯಬಹುದಾಗಿತ್ತು. ಕ್ರೋಢೀಕರಣ ಪೈಪೋಟಿಯನ್ನು ಹತ್ತಿಕ್ಕಿ, ಉದ್ಯಮವನ್ನು ಹೆಚ್ಚು ದಕ್ಷತೆಯಿಂದ ನಿರ್ವಹಿಸಲು ಸಾಧ್ಯವಾಗುವಂತೆ ಮಾಡಿತು.

ಉಕ್ಕಿನ ಪ್ರಭುತ್ವ

ಮಾರ್ಗನ್ ಇಡೀ ರಾಷ್ಟ್ರದಲ್ಲಿ ಪ್ರಬಲನಾದ ಬ್ಯಾಂಕರ್ ಆಗುತ್ತಿರುವಾಗ ಮತ್ತು ರಾಕ್‌ಫೆಲರ್ ತೈಲ ಉದ್ಯಮವನ್ನು ಕೈವಶ ಮಾಡಿಕೊಳ್ಳುತ್ತಿರುವಾಗ, ಸ್ಕಾಟ್‌ಲೆಂಡಿನಿಂದ (Scotland) ವಲಸೆ ಬಂದ ಆ್ಯಂಡ್ರೂ ಕಾರ್ನೆಗಿ (Andrew Carnegie) ಎಂಬುವನು ಉಕ್ಕಿನ ಉದ್ಯಮದ ಮೇಲೆ ಅದೇ ರೀತಿಯ ಪ್ರಭಾವ ಬೀರತೊಡಗಿದನು. ೧೮೭೩ರಲ್ಲಿ ಕಾರ್ನೆಗಿ ತನ್ನ ಮೊದಲನೆಯ ಉಕ್ಕಿನ ಕಾರ್ಖಾನೆಯನ್ನು ಪೆನ್ಸಿಲ್‌ವೇನಿಯದಲ್ಲಿ ಪ್ರಾರಂಭಿಸಿದನು. ರಾಕ್‌ಫೆಲರ್‌ನಂತೆಯೇ ಇವನು ರೈಲುಮಾರ್ಗಗಳ ರಿಯಾಯಿತಿ ಪಡೆದುಕೊಂಡು ಮತ್ತು ಖರ್ಚು ಕಡಿಮೆ ಮಾಡಿ, ಹಣ ಕೂಡಿಸಿ, ಕ್ರಮೇಣ ಆರ್ಥಿಕವಾಗಿ ಕ್ಷೀಣಿಸುತ್ತಿದ್ದ ಎಂಟು ಉಕ್ಕಿನ ಕಾರ್ಖಾನೆಗಳನ್ನು ಕೊಂಡನು. ತನ್ನ ಎಲ್ಲ ಉಕ್ಕಿನ ಕಾರ್ಖಾನೆಗಳನ್ನು ಕ್ರೋಢೀಕರಿಸಿ (consolidate) 'ಕಾರ್ನೆಗಿ ಉಕ್ಕಿನ ಕಂಪನಿ'ಯನ್ನು ಸ್ಥಾಪಿಸಿದನು. ಗಣಿಯಿಂದ ಕಬ್ಬಿಣದ ಅದಿರು ತೆಗೆಯುವುದರಿಂದ ಹಿಡಿದು ಉತ್ಪಾದನೆಯಾದ ಉಕ್ಕನ್ನು ಮಾರುವವರೆಗಿನ ಉದ್ಯಮದ ಎಲ್ಲ ಸ್ತರಗಳ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿದ್ದನು. ಇದರಿಂದಾಗಿ ಅವನು ಉಕ್ಕಿನ ಉತ್ಪಾದನೆಯ ಮೇಲೆ ಪ್ರಭುತ್ವ ಸ್ಥಾಪಿಸಿ ಅತ್ಯಂತ ಪ್ರಭಾವಶಾಲಿಗಳಾದ ಉದ್ಯಮಿಗಳಲ್ಲಿ ಒಬ್ಬನಾದನು. ಕಾರ್ನೆಗಿ ಕಬ್ಬಿಣದ ಅದಿರು ಸಮೃದ್ಧಿಯಾಗಿದ್ದ ಮೆಸಾಬಿ ಶ್ರೇಣಿ (Mesabi range)ಯ ಒಂದು ಭಾಗವನ್ನು ಗುತ್ತಿಗೆ ಪಡೆದನು ಮತ್ತು ಕಲ್ಲಿದ್ದಲ ಪ್ರದೇಶ, ರೈಲುಮಾರ್ಗಗಳು ಮತ್ತು ಉಗಿಯಂತ್ರ ಜೋಡಿಸಿದ ದೋಣಿಗಳನ್ನು ಕೊಂಡನು. ಹೀಗೆ ವ್ಯವಸ್ಥಿತಗೊಂಡು ಮಿನೆಸೋಟದಿಂದ ಕಬ್ಬಿಣದ ಅದಿರನ್ನು ತನ್ನ ಪೆನ್ಸಿಲ್‌ವೇನಿಯ ಉಕ್ಕಿನ ಕಾರ್ಖಾನೆಗಳಿಗೆ ಸಾಗಿಸುತ್ತಿದ್ದನು. ಆಗ ಉಚ್ಛ್ರಾಯಗೊಳ್ಳುತ್ತಿದ್ದ ಉಕ್ಕಿನ ಕ್ಷೇತ್ರದಲ್ಲಿ ಕಾರ್ನೆಗಿ ಸಂಸ್ಥೆ ಅತ್ಯಂತ ದೊಡ್ಡದಾದ ಮತ್ತು ಶ್ರೀಮಂತವಾದ ಸಂಸ್ಥೆಯಾಗಿತ್ತು.

೧೯೦೧ರಲ್ಲಿ ೬೫ ವರ್ಷ ಪ್ರಾಯದ ಆ್ಯಂಡ್ರೂ ಕಾರ್ನೆಗಿ ನಿವೃತ್ತನಾಗಲು ನಿರ್ಧರಿಸಿದನು. ಜೆ.ಪಿ. ಮಾರ್ಗನ್‌ನೊಡನೆ ವ್ಯಾಪ್ಹಾರ ಕುದುರಿಸಿ ತನ್ನ ಉಕ್ಕಿನ ಕಾರ್ಖಾನೆ ಮತ್ತು ಇತರ ಸ್ಥಿರ ಸ್ವತ್ತುಗಳನ್ನು ಅವನಿಗೆ ಮಾರಿ ಅಪಾರ ಲಾಭ ಗಳಿಸಿದನು. ನಂತರ ಕಾರ್ನೆಗಿ ಸ್ಕಾಟ್‌ಲೆಂಡ್‌ಗೆ ಹಿಂತಿರುಗಿ ಅಲ್ಲೇ ನೆಲಸಿದನು. ತನ್ನ ನಿವೃತ್ತಿ ಕಾಲವನ್ನು ದಾನ ಧರ್ಮ ಕಾರ್ಯಗಳಿಗೆ ಮೀಸಲಾಗಿಟ್ಟನು. ಅವನ ಆಸ್ತಿಯನ್ನು ಕೊಂಡ ಮಾರ್ಗನ್ ಕಾರ್ನೆಗಿ ಉಕ್ಕಿನ ಕಂಪನಿಯನ್ನು 'ಸಂಯುಕ್ತ ಸಂಸ್ಥಾನಗಳ ಉಕ್ಕಿನ ಕಾರ್ಪೊರೇಷನ್' (United States Steel Corporation) ಎನ್ನುವ ಬೃಹತ್ ಸಂಸ್ಥೆಯಲ್ಲಿ

ಕ್ರೋಢೀಕರಿಸಿದನು. ಈ ಸಂಸ್ಥೆಯೊಂದಿಗೆ ಅವನ ಬ್ಯಾಂಕಿನ ವ್ಯವಹಾರ ಮತ್ತು ರೈಲುಮಾರ್ಗಗಳ ನಿರ್ವಹಣೆ – ಈ ಎಲ್ಲ ಉದ್ಯಮಗಳಿಂದ ಮಾರ್ಗನ್ ಅಪಾರವಾದ ಹಣ ಗಳಿಸಿದನು. ಇಡೀ ರಾಷ್ಟ್ರದ ಉಕ್ಕು ಉತ್ಪಾದನೆಯಲ್ಲಿ ಶೇಕಡಾ ೭೦ ಭಾಗ ಮಾರ್ಗನ್‌ಗೆ ಸೇರಿತ್ತು. ಕಾರ್ನೆಗಿಯಂಥ ಪ್ರತಿಸ್ಪರ್ಧಿಗಳಿಲ್ಲದೆ ಮಾರ್ಗನ್ ಅಮೆರಿಕದ ಸಟ್ಟಾ ವ್ಯಾಪಾರ ಕೇಂದ್ರದ ಮೇಲೆ ಪ್ರಭುತ್ವ ಸ್ಥಾಪಿಸಿ ಅದರ ಮೂಲಕ ಇಡೀ ರಾಷ್ಟ್ರದ ವಾಣಿಜ್ಯ ವ್ಯಾಪಾರಗಳ ಮೇಲೂ ಪ್ರಭುತ್ವ ಸಾಧಿಸಿದನು. ಇಂಥ ಅದ್ಭುತ ಸಾಧನೆಯನ್ನು ಹಿಂದೆ ಯಾರೂ ಮಾಡಿರಲಿಲ್ಲ.

ಆ್ಯಂಡ್ರೂ ಕಾರ್ನೆಗಿಯ ಅರ್ಥಶಾಸ್ತ್ರ

೧೯ನೆಯ ಶತಮಾನದ ಕೊನೆಯಲ್ಲಿ ಅಮೆರಿಕದಲ್ಲಿ ಬಡವ ಮತ್ತು ಬಲ್ಲಿದರ ನಡುವೆ ಅಂತರ ಹೆಚ್ಚಾಗುತ್ತ ಹೋಯಿತು. ಕೇವಲ ಕೆಲವು ವ್ಯಕ್ತಿಗಳು ಅಪಾರ ಐಶ್ವರ್ಯವನ್ನು ಗಳಿಸಿ ಇಡೀ ರಾಷ್ಟ್ರದ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗಳ ಮೇಲೆ ತಮ್ಮ ಪ್ರಭಾವ ಬೀರಿದ್ದರು. ಇವರ ಅತುಲೈಶ್ವರ್ಯವನ್ನು ಕಂಡು ಕರುಬುವವರಿಗೇನೂ ಕಡಿಮೆಯಿರಲಿಲ್ಲ. ಅಸೂಯಾಪರರು ಐಶ್ವರ್ಯವಂತರ ಮೇಲೆ ಅಪನಿಂದೆಗಳನ್ನು, ಅಪಪ್ರಚಾರ ಮತ್ತು ದಂತಕತೆಗಳನ್ನು ಹಬ್ಬಿಸುತ್ತಿದ್ದರು. ಇಂಥ ಅಪಪ್ರಚಾರವನ್ನು ತಡೆಗಟ್ಟಿ ತಮ್ಮ ಐಶ್ವರ್ಯ ಮತ್ತು ಅಂತಸ್ತುಗಳನ್ನು ಸಮರ್ಥಿಸಿಕೊಳ್ಳಲು ಮಿಲಿಯನಾಧಿಪತಿಗಳು ಪ್ರಯತ್ನಪಟ್ಟರು. ೧೯೦೦ರಲ್ಲಿ ಆ್ಯಂಡ್ರೂ ಕಾರ್ನೆಗಿ ತನ್ನ ತತ್ವವಿಚಾರಗಳನ್ನು ಕುರಿತು 'ಸಿರಿ ಸಂಪದ ವೇದ' (The Gospel of Wealth) ಎನ್ನುವ ಪುಸ್ತಕವನ್ನು ಪ್ರಕಟಿಸಿದನು. ಅದರಲ್ಲಿ ಅವನು ಮಿಲಿಯನಾಧಿಪತಿಗಳ ಹಕ್ಕು ಬಾಧ್ಯತೆಗಳು ಮತ್ತು ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ವಿಶದೀಕರಿಸಿದನು. ಕಾರ್ನೆಗಿಯ ವೇದವಾಕ್ಯಗಳು: ಐಶ್ವರ್ಯ ಗಳಿಸುವುದು ಅಮೆರಿಕನ್ ಸಂಪ್ರದಾಯದ ಒಂದು ನೈತಿಕ ಮೌಲ್ಯ. ಸ್ವಾತಂತ್ರ್ಯವೆಂದರೆ ಕಷ್ಟಪಟ್ಟು ದುಡಿದು, ಮಿತವ್ಯಯದಿಂದ, ಮಿತಿಯಿಲ್ಲದ ಹಣವನ್ನು ಶೇಖರಿಸುವ ಹಕ್ಕು. ಸಮಾನತೆ ಎಂದರೆ ಹಣ ಗಳಿಸಲು ಸಮಾನ ಅವಕಾಶ. ಸರ್ಕಾರ ಆರ್ಥಿಕ ಪ್ರಭುತ್ವ (economic monopoly)ವನ್ನು ಹತ್ತಿಕ್ಕಲು ಪ್ರಯತ್ನಿಸಬಾರದು. ಪ್ರಗತಿ ಎಂದರೆ ನಿರಂತರ ಉತ್ಪಾದನೆ ಮತ್ತು ನಿರಂತರವಾಗಿ ವೃದ್ಧಿಗೊಳ್ಳುವ ಐಶ್ವರ್ಯ. ಬೃಹತ್ ಕಂಪನಿಗಳು ಮತ್ತು ಕಾರ್ಪೊರೇಷನ್‌ಗಳು ರಾಷ್ಟ್ರದ ಕ್ಷೇಮಾಭ್ಯುದಯಗಳನ್ನು ಹೆಚ್ಚಿಸಿವೆ. ಹಣವಂತ ತನ್ನ ಸಾಮಾಜಿಕ ಋಣ ತೀರಿಸಬೇಕು. ಅವನಿಗೆ ಹಕ್ಕು ಬಾಧ್ಯತೆಗಳು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ಕರ್ತವ್ಯ ಮತ್ತು ಜವಾಬ್ದಾರಿಗಳು. ಆಗರ್ಭ ಶ್ರೀಮಂತ ಸರಳ ಜೀವನ ನಡೆಸಿ, ಜನರಿಗೆ ಮಾದರಿಯಾಗಬೇಕು. ತನ್ನನ್ನು ಅವಲಂಬಿಸಿರುವವರನ್ನು ಪೋಷಿಸಬೇಕು. ತನ್ನ ಐಶ್ವರ್ಯವನ್ನು ಸಮುದಾಯದ ಅಭಿವೃದ್ಧಿಗಾಗಿ ವಿನಿಯೋಗಿಸಬೇಕು. ಇದು ಅವನ ಪುಸ್ತಕದ ಸಾರಾಂಶ.

ಕಾರ್ನೆಗಿ ನಿವೃತ್ತಿಯಾದ ಮೇಲೆ ಸ್ಕಾಟ್‌ಲೆಂಡಿನಲ್ಲಿ ವಾಸಮಾಡತೊಡಗಿದನು. ಅವನು ತನ್ನ ಪುಸ್ತಕದಲ್ಲಿ ಹೇಳಿದ 'ಮಾನವರ ಅಭ್ಯುದಯಕ್ಕೆ ಉಪಯೋಗಿಸದ ಹಣ ನಿರರ್ಥಕವಾದುದು' ಎನ್ನುವ ತತ್ವಕ್ಕೆ ತಕ್ಕಂತೆ ನಡೆದುಕೊಂಡನು. ಅವನ ಅಂದಾಜು ಉಳಿತಾಯ ೪೦೦ಕ್ಕೂ ಹೆಚ್ಚು ಮಿಲಿಯನ್ ಡಾಲರ್‌ಗಳನ್ನು ದಾನ ಧರ್ಮಕಾರ್ಯಗಳಿಗೆ, ಮುಖ್ಯವಾಗಿ, ಗ್ರಂಥಭಂಡಾರಗಳಿಗೆ, ವಿಶ್ವವಿದ್ಯಾನಿಲಯಗಳಿಗೆ ದಾನ ಮಾಡಿದನು. ಲೆಕ್ಕವಿಲ್ಲದಷ್ಟು ಸಣ್ಣ ಮತ್ತು ದೊಡ್ಡ ದತ್ತಿ (foundations)ಗಳನ್ನು ಹಾಗೂ ಲೋಕೋಪಕಾರಿ ಸಂಸ್ಥೆಗಳನ್ನು ಸ್ಥಾಪಿಸಿದನು. ಕಾರ್ನೆಗಿಯ ಸಿರಿ-ಸಂಪದ ವೇದವನ್ನು ಆಗಿನ ಅನೇಕ ಹಣವಂತರು ಮೆಚ್ಚಿ ಅನುಸರಿಸತೊಡಗಿದರು. ಅವನ ಕಾಲದಲ್ಲಿ ಪ್ರಾರಂಭವಾದ ಖಾಸಗಿ ಲೋಕಸಂಗ್ರಹ ಸಂಸ್ಥೆಗಳು ಮತ್ತು ಅವನ ನಂತರ ಸ್ಥಾಪನೆಯಾದ ದಾನ ಧರ್ಮ ಸಂಸ್ಥೆಗಳು ಮತ್ತು ದತ್ತಿಗಳು ಕಾರ್ನೆಗಿಯ ತತ್ವ ಚಿಂತನೆಯಿಂದ ಪ್ರಭಾವಿತಗೊಂಡವು ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು.

ಜೆ. ಪಿ. ಮಾರ್ಗನ್‌ನ ಪ್ರಭಾವ

ರಾಕ್‌ಫೆಲರ್‌ನ ಆರ್ಥಿಕ ಸ್ವಾವಲಂಬನೆ ಬೃಹತ್ ವಾಣಿಜ್ಯ ವ್ಯಾಪಾರ ಪ್ರಪಂಚದಲ್ಲಿ ಬಹಳ ಅಪರೂಪ. ಅಧಿಕ ನಗದು ಹಣದ ಅವಶ್ಯಕತೆಯನ್ನು ಎದುರಿಸಬೇಕಾದ ರೈಲುಮಾರ್ಗ ನಿರ್ಮಾಣ, ಔದ್ಯೋಗಿಕ ವಿಸ್ತರಣೆಗಳಂಥ ಉದ್ಯಮಗಳು ನಗದು ಹಣ ಪಡೆಯಲು ಬೇರೆ ಹೆಚ್ಚಿನ ವೈವಿಧ್ಯ ಇರುವ ವಿಧಾನಗಳನ್ನು ಬಳಸಬೇಕಾಯಿತು. ಅನೇಕ ಉದ್ಯಮಗಳು ತಮ್ಮ ಪಾಲುಪಟ್ಟಿಗಳನ್ನು ಅಥವಾ ಭರವಸೆ ಪತ್ರಗಳನ್ನು (securities) ಮಾರಲು ಬ್ಯಾಂಕುಗಳನ್ನು ಅವಲಂಬಿಸಿದ್ದರು. ೧೯೦೦ರ ಹೊತ್ತಿಗೆ ಹನ್ನೆರಡಕ್ಕೂ ಹೆಚ್ಚಿನ ಬಂಡವಾಳ ಹೂಡುವ ಬ್ಯಾಂಕ್ ಸಂಸ್ಥೆಗಳು ಅಮೆರಿಕದ ಆರ್ಥಿಕ ವ್ಯವಸ್ಥೆಯ ಮೇಲೆ ಪ್ರಭುತ್ವ ಸ್ಥಾಪಿಸಿದ್ದವು.

೧೮೯೦ರ ದಶಕದಲ್ಲಿ ಜೆ.ಪಿ. ಮಾರ್ಗನ್ ರಾಷ್ಟ್ರದ ಪ್ರಾಥಮಿಕ ಉದ್ಯಮಗಳಿಗೆ ಮತ್ತು ಸಾರ್ವಜನಿಕ ಅಗತ್ಯಗಳನ್ನು ಪೂರೈಸುವ ಸಂಸ್ಥೆಗಳಿಗೆ (public utilities) ನಗದು ಹಣ (finance capital) ಹೊಂದಿಸಿಕೊಡುವ ಹರಿಕಾರನಾದನು. ಮಾರ್ಗನ್ ಪಾಲುಪತ್ರ (shares) ಮತ್ತು ಕರಾರುಪತ್ರಗಳನ್ನು (bonds) ಮಾರುವುದೆ ಅಲ್ಲದೆ ತನ್ನ ಗಿರಾಕಿಗಳ ಉದ್ಯಮಗಳನ್ನು ನಿರ್ವಹಿಸಲು ನೆರವು ನೀಡುತ್ತಿದ್ದನು. ಮಾರುಕಟ್ಟೆಯ ಭದ್ರತೆಗೆ ಉದ್ಯಮ ಕ್ರೋಡೀಕರಣ ಅಗತ್ಯವೆಂದು ಅವನು ಸಲಹೆ ನೀಡುತ್ತಿದ್ದನು. ಕ್ರೋಡೀಕರಣ ಉದ್ಯಮವನ್ನು ಸಮರ್ಥಗೊಳಿಸುತ್ತದೆ ಎಂದು ಅವನು ನಂಬಿದ್ದನು. ಈ ನಂಬಿಕೆಗಳು ಅವನನ್ನು ತೀರ ಸ್ಪರ್ಧೆಗೊಳಗಾಗಿದ್ದ ರೈಲುಮಾರ್ಗ ನಿರ್ಮಾಣದ ಉದ್ಯಮವನ್ನು ಪ್ರವೇಶಿಸುವಂತೆ ಮಾಡಿದವು. ಕೆಲವು ಸಣ್ಣ, ದಿವಾಳಿಯಾಗಿದ್ದ ರೈಲುಮಾರ್ಗಗಳನ್ನು ಕೊಂಡುಕೊಳ್ಳುವುದರಿಂದ ಪ್ರಾರಂಭಿಸಿ ಕ್ರಮೇಣ ಅವನು

ರೈಲುಮಾರ್ಗಗಳನ್ನು ಪರಸ್ಪರ ಸಹಕರಿಸುವಂತೆ ಮಾಡಲು ಮರುವ್ಯವಸ್ಥೆ ಮಾಡಿದನು. ಇದರಿಂದಾಗಿ ರೈಲುಮಾರ್ಗಗಳಿಗೆ ಮಾರಕವಾಗಿದ್ದ ತೀವ್ರ ಸ್ಪರ್ಧೆ ನಿಂತಿತು.

೧೮೬೯ರಲ್ಲಿ ಮಾರ್ಗನ್ ರೈಲು ಕಂಪನಿಗಳ ಪ್ರಮುಖವಾದ ಸಭೆಯನ್ನು ನ್ಯೂಯಾರ್ಕಿನಲ್ಲಿ ಸೇರಿಸಿದನು. ಆ ಸಭಾಸದರಿಗೆ ತಮ್ಮ ಪರಸ್ಪರ ವ್ಯವಹಾರವನ್ನು ನಿರ್ವಹಿಸುವ ಸಲುವಾಗಿ ಒಂದು ಸಮಿತಿಯನ್ನು ರಚಿಸುವಂತೆ ಮಾಡಿದನು. ಕಂಪನಿಗಳ ವ್ಯವಹಾರವನ್ನು ವ್ಯವಸ್ಥೆಗೊಳಿಸಿ ಅವುಗಳ ಕಾರ್ಯದಕ್ಷತೆಯನ್ನು ಹೆಚ್ಚಿಸುವುದು ಈ ಸಮಿತಿಯ ಮುಖ್ಯ ಧ್ಯೇಯವಾಗಿತ್ತು. ಸಮಿತಿಯ ನಿರ್ಧಾರಗಳನ್ನು ಉಲ್ಲಂಘಿಸಿದ ರೈಲುಮಾರ್ಗ/ಕಂಪನಿಗೆ ಬ್ಯಾಂಕುಗಳು ಸಾಲ ಕೊಡುವುದನ್ನು ನಿಲ್ಲಿಸುವ ಬೆದರಿಕೆ ಹಾಕಲಾಯಿತು. ಆಗ ಬ್ಯಾಂಕುಗಳೆಲ್ಲ ಮಾರ್ಗನ್ ಸಂಸ್ಥೆಗೆ ಸೇರಿದವು. ಮಾರ್ಗನ್ ಸಂಸ್ಥೆ ರೈಲುಮಾರ್ಗಗಳನ್ನು ವಶಪಡಿಸಿಕೊಳ್ಳಲಿಲ್ಲ. ಆದರೆ ಆ ಸಂಸ್ಥೆಯ ಸದಸ್ಯರು ಆ ಉದ್ಯಮದ ಮೇಲೆ ನಿಯಂತ್ರಣ ತರುವಷ್ಟುಮಟ್ಟಿಗೆ ರೈಲುಮಾರ್ಗಗಳ ಮೇಲೆ ಸ್ವಾಮ್ಯತೆ ಹೊಂದಿದ್ದರು. ಈ ನಿಯಂತ್ರಣ ಇಡೀ ರೈಲು ಸಾರಿಗೆ ವ್ಯವಸ್ಥೆಯನ್ನು ಭದ್ರಪಡಿಸಿತು. ಬ್ಯಾಂಕರುಗಳ ರೈಲು ಸಾರಿಗೆ ಉದ್ಯಮದ ನಿರ್ದೇಶಕರ ಸಮಿತಿ (Board of Directors) ಸದಸ್ಯರಾದ ಮೇಲೆ ರೈಲು ಸಾರಿಗೆ ಬಹಳವಾಗಿ ಸುಧಾರಣೆಗೊಂಡಿತು. ನಿರ್ದೇಶಕರ ಸಮಿತಿಯ ಸದಸ್ಯರು ರೈಲುಮಾರ್ಗಗಳನ್ನು, ಉತ್ತಮ ಆರ್ಥಿಕ ವಿಧಾನಗಳನ್ನು ಅನುಸರಿಸಿ, ಲಾಭದಾಯಕವಾಗಿ ಮಾಡುವ ಧ್ಯೇಯ ಉಳ್ಳವರಾಗಿದ್ದರು. ಈ ಸುಧಾರಣೆಗಳಿಂದಾಗಿ ಪ್ರಯಾಣಿಕರ ಸೌಕರ್ಯ ಹೆಚ್ಚಿತು. ಸರಕು ರವಾನಿಸುವವರಿಗೆ ನಿಗದಿಯಾದ ಸಾರಿಗೆ ದರ ಮತ್ತು ಸಮಯಕ್ಕೆ ಸರಿಯಾಗಿ ರೈಲುಗಳು ಓಡಾಡುವಂತಾಯಿತು. ಸರ್ಕಾರ ಸಾಧಿಸಲಾಗದ ಸುಧಾರಣೆಗಳನ್ನು ಬ್ಯಾಂಕರುಗಳ ನಿರ್ದೇಶನದಲ್ಲಿ ರೈಲು ಸಾರಿಗೆ ಉದ್ಯಮ ಸ್ವತಃ ಸುಧಾರಣೆಗೊಂಡಿತು.

ಈ ಪ್ರಮುಖ ಬಂಡವಾಳಗಾರರ ಅಗಾಧವಾದ ಆರ್ಥಿಕ ಮತ್ತು ರಾಜಕೀಯ ಪ್ರಭಾವ ಜನರಲ್ಲಿ ದಿಗಿಲು ಹುಟ್ಟಿಸಿತು. ಮಾರ್ಗನ್, ರಾಕ್‌ಫೆಲರ್ ಮತ್ತು ಇತರ ಬೃಹತ್ ಬಂಡವಾಳ ಸಂಸ್ಥೆಗಳ ನಿರ್ದೇಶಕರು ಎಲ್ಲ ಕಂಪನಿಗಳ ಸಮಿತಿಗಳಲ್ಲಿ ಭಾಗವಹಿಸುತ್ತಿದ್ದರು. ಇದರಿಂದಾಗಿ ನಿರ್ದೇಶಕರ ಪರಸ್ಪರ ಸಂಬಂಧಗಳ ಆಧಾರದ ಮೇಲೆ ವ್ಯವಸ್ಥೆಗೊಂಡ, ಒಂದಕ್ಕೊಂದು ಹೆಣೆದುಕೊಂಡ ನಿರ್ದೇಶಕ ಸಮಿತಿಗಳು (interlocking directorates) ಮತ್ತು ಪಾಲುಪತ್ರಗಳ ನಿಯಂತ್ರಣದಿಂದ ಉಂಟಾದ ಸಂಕೀರ್ಣವಾಗಿ ರಚನೆಗೊಂಡ ಕೇಂದ್ರೀಕೃತವಾದ ಆರ್ಥಿಕ ಶಕ್ತಿ ಒಂದು ಸಮಸ್ಯೆಯಾಗಿ ಪರಿಣಮಿಸಿತು. ಈ ಬೆಳವಣಿಗೆಗಳು ಹಣದ ನಿಕ್ಷೇಪಗಳ (money trusts) ಬಗ್ಗೆ ಜನರಲ್ಲಿ ಅನುಮಾನ ಉಂಟುಮಾಡಿ ೧೯೧೨ರಲ್ಲಿ ಕಾಂಗ್ರೆಸ್ ಈ ನಿಕ್ಷೇಪಗಳ/ಠೇವಣಾತಿಗಳ ವ್ಯವಹಾರಗಳನ್ನು ವಿಚಾರಣೆಗೆ ಗುರಿಪಡಿಸಿತು.

ಮಿಲಿಯನಾಧಿಪತಿಗಳ ತರ್ಕ

ಅಮೆರಿಕನ್ನರು ಅಧಿಕ ಸಂಖ್ಯೆಯಲ್ಲಿ ಉದ್ಯಮಗಳಲ್ಲಿ, ರೈಲುಮಾರ್ಗಗಳಲ್ಲಿ ಹಣ ತೊಡಗಿಸಿದರೂ ಬೃಹತ್ ವ್ಯಾಪಾರ ಸಂಸ್ಥೆಗಳನ್ನು ನಡೆಸುತ್ತಿದ್ದ ಮಿಲಿಯನಾಧಿಪತಿಗಳನ್ನು ನಂಬುತ್ತಿರಲಿಲ್ಲ. ಆರ್ಥಿಕ ಪ್ರಭುತ್ವಗಳನ್ನು (economic monopolies) ಸ್ಥಾಪಿಸಿದ ಇವರನ್ನು ಜನರು ನಿರ್ದಯ ಶೋಷಣಕಾರರೆಂದು ತಿಳಿದಿದ್ದರು. ಕುಟಿಲತೆಯಿಂದ ಪ್ರತಿಸ್ಪರ್ಧಿಗಳನ್ನು ಹತ್ತಿಕ್ಕಿ ಸ್ಪರ್ಧೆಯನ್ನು ನಾಶಗೊಳಿಸಿದರು ಎಂದು ಜನರು ನಂಬಿದ್ದರು. ಇವರು ಒಂದು ರೀತಿಯಲ್ಲಿ ನಮ್ಮ ಹಿಂದಿನ ಪಾಳೆಯಗಾರರನ್ನು ಹೋಲುತ್ತಿದ್ದರು. ಈ ಹೇಳಿಕೆಯನ್ನು ಮಿಲಿಯನಾಧಿಪತಿಗಳಿಗಿದ್ದ ಅಡ್ಡ ಹೆಸರು – 'ದರೋಡೆಕೋರ ಜಹಗೀರುದಾರರು' (Robber Barons). ಇವರು ತಮ್ಮ ಮೇಲಿನ ಆಪಾದನೆಗಳನ್ನು ಅಲ್ಲಗಳೆದರು. ಅವರಿಗೆ ವ್ಯಕ್ತಿಸ್ವಾತಂತ್ರ್ಯ ಮತ್ತು ವ್ಯಕ್ತಿಯ ಮೌಲ್ಯಗಳು, ಆಸೆ ಆಕಾಂಕ್ಷೆಗಳು ಮುಖ್ಯವಾಗಿದ್ದವು. ವ್ಯಕ್ತಿಯ ಉದ್ಯಮಶೀಲತೆ ಮತ್ತು ಸಾಹಸಪ್ರವೃತ್ತಿಗಳು ಆರ್ಥಿಕ ಅಭಿವೃದ್ಧಿಗೆ ಕಾರಣವಾಗುತ್ತವೆ. ಸಾಮಾಜಿಕ ನಿರ್ಬಂಧಗಳು ವ್ಯಕ್ತಿಗಳ ಬೆಳವಣಿಗೆಯನ್ನು ಕುಂಠಿತಗೊಳಿಸಿ ಆರ್ಥಿಕ ಹಾನಿ ಉಂಟುಮಾಡುತ್ತವೆ ಎಂದು ಅವರು ನಂಬಿದ್ದರು. ತಾವು ಸ್ವಾರ್ಥಪರರಲ್ಲ, ಹಣ ಸಂಗ್ರಹಿಸುವುದು ದುರಾಸೆಯಿಂದಲ್ಲ; ವೈಯಕ್ತಿಕ ಹಾಗೂ ಸಾಮಾಜಿಕ ಪ್ರಗತಿಗಾಗಿ ಎಂದು ಅವರು ವಾದಿಸಿದರು.

ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಆರ್ಥಿಕ ಪರಿಸ್ಥಿತಿಗಳು ಬಂಡವಾಳಗಾರರ ಪ್ರಭುತ್ವಕ್ಕೆ ಅನುಕೂಲವಾಗಿದ್ದವು. ಮಿತಿಮೀರಿದ ಪೈಪೋಟಿ ಉದ್ಯಮಗಳನ್ನು ಹಾಳುಗೆಡವುತ್ತಿತ್ತು. ದರ (rate)ಗಳ ಜಗಳದಲ್ಲಿ ರೈಲುಮಾರ್ಗಗಳು ಬಡವಾಗಿ ಕಂಪನಿಗಳು ದಿವಾಳಿ ಎದ್ದವು. ಯಂತ್ರೋಪಕರಣಗಳ ಬೆಲೆ ಏರಿಕೆ, ದೊಡ್ಡ ಪ್ರಮಾಣದ ಉತ್ಪಾದನೆಗೆ ಬೇಕಾದ ಕಾರ್ಖಾನೆಗಳನ್ನು ಸ್ಥಾಪಿಸಲು ಬೇಕಾದ ಅಪಾರ ಬಂಡವಾಳ – ಇವು ಸಣ್ಣ ಉದ್ಯಮಗಳ ಶಕ್ತಿ ಮೀರಿದ ಸಾಹಸಗಳಾಗಿದ್ದವು. ಉತ್ಪಾದನೆಯಾದ ವಸ್ತುಗಳನ್ನು ಮಾರಲು ಮಾರಾಟಗಾರರಿಗೆ ಕೊಡಬೇಕಾದ ಹಣ, ಜಾಹೀರಾತುಗಳಿಗೆ ತಗಲುವ ವೆಚ್ಚ ಇವನ್ನೆಲ್ಲ ದೊಡ್ಡ ಕಂಪನಿಗಳು/ಕಾರ್ಪೊರೇಷನ್‌ಗಳು ಭರಿಸಬಲ್ಲವೆ ಹೊರತು ಸಣ್ಣ ವ್ಯಾಪಾರಸ್ಥರಿಂದ ಸಾಧ್ಯವಿರಲಿಲ್ಲ. ಇದು 'ಪ್ರಭುತ್ವ'ದ ಪರವಾಗಿ ಮಿಲಿಯನಾಧಿಪತಿಗಳು ಮಂಡಿಸಿದ ತರ್ಕ.

ಪುನರ್‌ನಿರ್ಮಾಣದ ನಂತರದ ದಕ್ಷಿಣ ಸಂಸ್ಥಾನಗಳು

ಪುನರ್‌ನಿರ್ಮಾಣ ಕೊನೆಗೊಂಡ ಬಳಿಕ ದಕ್ಷಿಣ ಸಂಸ್ಥಾನಗಳ ರಾಜಕೀಯ ಯಥಾ ಪ್ರಕಾರ ಹಳೆಯ ಪ್ಲಾಟರ್ ಶ್ರೀಮಂತವರ್ಗದ ಕೈವಶವಾಯಿತು. ಇವರೊಡನೆ ಅವರಷ್ಟೆ ಸಂಪ್ರದಾಯಸ್ಥರಾದ, ಸುಧಾರಣಾವಿರೋಧಿಗಳಾದ ಹೊಸ ವರ್ತಕವರ್ಗ (business class) ರಾಜಕೀಯದಲ್ಲಿ ತಮ್ಮ ಪ್ರಭಾವ ಬೀರತೊಡಗಿದರು. ಈ ಹೊಸವರ್ಗದ

ಹೆಸರು 'ಬರ್‌ಬನ್ಸ್' (Bourbons) ಎಂಬುದಾಗಿತ್ತು. ಆಡಳಿತ ಈ ಮೇಲ್ವರ್ಗದವರ ಕೈ ಸೇರಿದ ಕೂಡಲೆ ಅವರು ತಮ್ಮ ಅಧಿಕಾರ ಭದ್ರಪಡಿಸಿಕೊಳ್ಳಲು ತಕ್ಕ ವ್ಯವಸ್ಥೆ ಮಾಡಿಕೊಂಡರು. ಬಿಳಿಯರೊಡನೆ ಫೆಡರಲ್ ಸರ್ಕಾರ ಸಂಧಾನ ಮಾಡಿಕೊಂಡದ್ದಕ್ಕೆ ಕರಿಯರು ಕಷ್ಟಕಾರ್ಪಣ್ಯಗಳ ರೂಪದಲ್ಲಿ ಬೆಲೆ ತೆರಬೇಕಾಯಿತು. ರಾಷ್ಟ್ರದ ಶ್ರೇಷ್ಠ ನ್ಯಾಯಾಲಯವೂ ಕೂಡ ಈ ಪ್ರಕ್ರಿಯೆಯಲ್ಲಿ ಬಿಳಿಯರ ಪರವಾಗಿ ಧೋರಣೆ ತಳೆಯಿತು. ೧೮೮೩ರಲ್ಲಿ ಶ್ರೇಷ್ಠ ನ್ಯಾಯಾಲಯವು ೧೮೭೫ರ 'ಪೌರ ಹಕ್ಕು ಬಾಧ್ಯತೆಗಳ ಕಾಯಿದೆ' (Civil Rights Act)ಯನ್ನು ರಾಜ್ಯಾಂಗ ವಿರುದ್ಧವಾದುದು (unconstitutional) ಎಂದು ತೀರ್ಮಾನಿಸಿತು. ಈ ಕಾಯಿದೆ ಪ್ರಕಾರ ಎಲ್ಲ ಪೌರರಿಗೂ ಸಾರ್ವಜನಿಕ ಸ್ಥಳಗಳನ್ನು ಉಪಯೋಗಿಸುವ ಪೂರ್ಣ ಹಾಗೂ ಸಮಾನವಾದ ಹಕ್ಕು ಇತ್ತು. ಆದರೆ ಶ್ರೇಷ್ಠ ನ್ಯಾಯಾಲಯದ ತೀರ್ಪಿನಲ್ಲಿ ಖಾಸಗಿ ಸಂಘ-ಸಂಸ್ಥೆಗಳಲ್ಲಿ ಖಾಸಗಿ ವ್ಯಕ್ತಿಗಳ ಪಕ್ಷಪಾತ (discrimination)ದ ಮೇಲೆ ನಿಯಂತ್ರಣ ಮಾಡುವುದು ಕಾಂಗ್ರೆಸ್ಸಿನ ಅಧಿಕಾರ ವ್ಯಾಪ್ತಿಗೆ ಸೇರಿದ್ದಲ್ಲ ಎಂದು ವ್ಯಾಖ್ಯಾನ ಮಾಡಲಾಯಿತು.

ಪ್ಲಾಂಟರುಗಳು ಮತ್ತು ಬರ್‌ಬನ್ಸ್ ಅಂದರೆ ವರ್ತಕವರ್ಗದ ಶ್ರೀಮಂತರು ಕರಿಯರನ್ನು ಕೀಳುಜೀವಿಗಳೆಂದು ತಿಳಿದಿದ್ದರೂ ಅವರ ಮತದಾನದ ಹಕ್ಕನ್ನು ಕೂಡಲೇ ರದ್ದು ಮಾಡಲಿಲ್ಲ – ಕರಿಯರ ಮತಗಳು ತಮಗೆ ದೊರಕುತ್ತವೆ ಎನ್ನುವ ಆಸೆಯಿಂದ. ಬರ್‌ಬನ್ಸ್‌ರು ಜಾಣತನದಿಂದ ಕರಿಯರನ್ನು ಒಲಿಸಿಕೊಂಡು ಇವರ ಮತಗಳ ಬಲದಿಂದ ತಮ್ಮ ಅಧಿಕಾರಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದ ಕೆಳವರ್ಗದ ಬಿಳಿಯರನ್ನು ಹತೋಟಿಗೆ ತರಬಹುದೆಂದು ಯೋಚಿಸಿದ್ದರು. ೧೮೮೦ ಮತ್ತು ೧೮೯೦ರ ದಶಕಗಳಲ್ಲಿ ಉಂಟಾದ ವ್ಯವಸಾಯ ಉತ್ಪನ್ನಗಳ ಕುಸಿತ (depression) ಬರ್‌ಬನ್ಸ್‌ರ ಯೋಜನೆಯನ್ನು ಬದಲಾಯಿಸುವಂತೆ ಮಾಡಿತು. ಈ ಕುಸಿತ ಒಂದು ಹೊಸ ರಾಜಕೀಯ ಚಳುವಳಿಯನ್ನು ಹುಟ್ಟುಹಾಕಿತು. ಕೆಳವರ್ಗದ ಬಿಳಿಯರು ಬಡ ಕರಿಯರಂತೆ ಶೋಷಣೆಗೆ ಒಳಗಾಗಿರುವುದನ್ನು ಅರಿತು ಅವರು ಕರಿಯರೊಡನೆ ಕೂಡಿ ತಮ್ಮದೇ ಲಾಂಛನದಡಿಯಲ್ಲಿ 'ಪಾಪ್ಯುಲಿಸ್ಟ್ ಪಕ್ಷ'ವನ್ನು ದಕ್ಷಿಣದ ಎಲ್ಲ ಸಂಸ್ಥಾನಗಳಲ್ಲಿ ಸಂಘಟಿಸಿದರು. ಈ ಹೊಸಪಕ್ಷದ ಬೆಳವಣಿಗೆ ದಕ್ಷಿಣ ಸಂಸ್ಥಾನಗಳಲ್ಲಿನ ಸಂಪ್ರದಾಯಸ್ಥ ಡೆಮೊಕ್ರಾಟರಲ್ಲಿ ಗಾಬರಿ ಉಂಟುಮಾಡಿತು. ತಮ್ಮ ಸರ್ವಾಧಿಕಾರಕ್ಕೆ ಸಂಚಕಾರ ಬರಬಹುದೆಂದು ಅಂಜಿದರು. ಆದ್ದರಿಂದ ಬರ್‌ಬನ್ಸ್ ಮತ್ತು ಪ್ಲಾಂಟರುಗಳು ಸೇರಿ ಕೆಳವರ್ಗದ ಬಿಳಿಯರನ್ನು ಒಲಿಸಿಕೊಳ್ಳಲು ವರ್ಣದ್ವೇಷವನ್ನು ಪ್ರಚೋದಿಸಿದರು. ಕೆಳವರ್ಗದ ಬಿಳಿಯರು ಇದರಿಂದ ಪ್ರಚೋದಿತರಾಗಿ ಬರ್‌ಬನ್ಸ್‌ರೊಡನೆ ಒಪ್ಪಂದ ಮಾಡಿಕೊಳ್ಳಲು ಬಿಳಿಯ ವರ್ಣದವರ ಶ್ರೇಷ್ಠತೆಯನ್ನು ಎತ್ತಿ ಹಿಡಿಯಲು ಕಂಕಣಬದ್ಧರಾಗಿ ಒಂದು ಹೊಸ ಸಮ್ಮಿಶ್ರ ರಾಜಕೀಯ ಪಕ್ಷ – ಕೆಳವರ್ಗದ ಬಿಳಿಯರು ಮತ್ತು ಬರ್‌ಬನ್ಸ್ – ಕೂಡಿದ ವಿಚಿತ್ರ ಮಿಶ್ರಣದ, ಉಗ್ರಸಂಪ್ರದಾಯಸ್ಥ (ultra conservative) ಮತ್ತು ವರ್ಣದ್ವೇಷ ಆಧಾರಿತವಾದ ಪಕ್ಷ ದಕ್ಷಿಣ ಸಂಸ್ಥಾನಗಳಲ್ಲಿ

ಹಬ್ಬಿ ಬೆಳೆಯತೊಡಗಿತು. ಈ ಪಕ್ಷದ ಒಂದು ಮುಖ್ಯವಾದ ಕವಲು ಕುಖ್ಯಾತಿಯ 'ಕು ಕ್ಲಕ್ಸ್ ಕ್ಲಾನ್' (Ku Klux Klan).

ಕು ಕ್ಲಕ್ಸ್ ಕ್ಲಾನ್ ಒಂದು ಉಗ್ರಸಂಪ್ರದಾಯಸ್ಥ ಬಿಳಿಯರ ರಹಸ್ಯ ಸಂಘಟನೆ. ೧೮೬೬ರಲ್ಲಿ ಮಾಜಿ ಕಾನ್‌ಫೆಡರೇಟ್ ಸೇನಾಧಿಕಾರಿಗಳು ಹುಟ್ಟುಹಾಕಿದ, ಬಿಳಿಯರ ಭ್ರಾತೃತ್ವದ ಆಧಾರದ ಮೇಲೆ ರಚಿತವಾದ ಪಂಥ (fraternal order). ಇದು ಬಿಳಿಯರ ಶ್ರೇಷ್ಠತೆಯನ್ನು ರಕ್ಷಿಸುವ ಪಣತೊಟ್ಟ, ಶಸ್ತ್ರಧಾರಿ ಭಯೋತ್ಪಾದಕರ ಸಂಘವಾಗಿ ಬೆಳೆಯಿತು. ಈ ಸಂಘದ ಸದಸ್ಯರು ತಮ್ಮ ಗುರುತು ಮರೆಸಲು ಬಿಳಿಯ ನಿಲುವಂಗಿ ಮತ್ತು ಮುಖವಾಡಗಳನ್ನು ಧರಿಸುತ್ತಿದ್ದರು. ಕಡಿಮೆ ಸಂಬಳದ ಬಗ್ಗೆ ಆಕ್ಷೇಪಣೆ ಎತ್ತಿದ ಅಥವಾ ಅವಿಧೇಯ ಕರಿಯರ ಮೇಲೆ ಹಲ್ಲೆ ಮಾಡಿ ಶಿಕ್ಷಿಸುತ್ತಿದ್ದರು. ಬಿಡುಗಡೆಯಾದ ಕರಿಯರ ಶಾಲೆಗಳಲ್ಲಿ ಪಾಠ ಹೇಳುವ 'ಯಾಂಕಿ' (ಉತ್ತರದವನು) ಉಪಾಧ್ಯಾಯರುಗಳನ್ನು ಚಾವಟಿ ಏಟಿನಿಂದ ಹಿಂಸಿಸುತ್ತಿದ್ದರು. ಕರಿಯರ ಶಾಲೆಗಳನ್ನು ಸುಟ್ಟುಹಾಕಿದರು. ರಿಪಬ್ಲಿಕನ್ ಪಕ್ಷದ ನಾಯಕನನ್ನು ಕೊಲೆ ಮಾಡಿದರು. ದಕ್ಷಿಣ ಸಂಸ್ಥಾನಗಳಲ್ಲಿ ಸಂಪ್ರದಾಯಸ್ಥ ಬಿಳಿಯರ ಅಧಿಕಾರವನ್ನು ಭದ್ರಗೊಳಿಸಲು 'ಕ್ಲಾನ್' ಸಹಾಯ ಮಾಡಿತು. ಸಂಸ್ಥಾನಗಳ ರಕ್ಷಣಾಪಡೆಗಳು 'ಕ್ಲಾನ್' ನ ಹಿಂಸಾಕೃತ್ಯಗಳನ್ನು ಹತ್ತಿಕ್ಕಲು ಸಾಧ್ಯವಾಗದೆ ಕಾಂಗ್ರೆಸ್ ಮಧ್ಯೆ ಪ್ರವೇಶಿಸಿ ವ್ಯಕ್ತಿಯ ರಾಜಕೀಯ ಮತ್ತು ಪೌರಹಕ್ಕುಗಳನ್ನು ಉಲ್ಲಂಘಿಸುವುದು ಫೆಡರಲ್ ಅಪರಾಧವಾಗುತ್ತದೆ ಎಂದು ಎಚ್ಚರಿಸಿದ ಮೇಲೆ, ಸುಮಾರು ೧೮೭೦ರಲ್ಲಿ 'ಕ್ಲಾನ್' ತನ್ನ ಮಧ್ಯರಾತ್ರಿಯ ದಾಳಿಗಳನ್ನು, ಶಿಲುಬೆಗೆ ಬೆಂಕಿ ಹಚ್ಚುವುದನ್ನು ಮತ್ತು ತಮ್ಮ ಮುಖವಾಡ-ನಿಲುವಂಗಿಗಳಲ್ಲಿ ಮೆರವಣಿಗೆ ಮಾಡುವುದನ್ನು ನಿಲ್ಲಿಸಿದರು.

ಕೆಳವರ್ಗದ ಬಿಳಿಯರನ್ನು ವರ್ಣಪ್ರಜ್ಞೆಯ ಮೂಲಕ ಒಲಿಸಿಕೊಂಡ ಪ್ಲಾಂಟರುಗಳು ಮತ್ತು ಬರ್‌ಬನ್ಸ್ ತಮ್ಮ ಗುಲಾಮರಾಗಿದ್ದ ಕರಿಯರಿಗೆ ಮತದಾನದ ಹಕ್ಕನ್ನು ನಿರಾಕರಿಸಿ, ಅವರನ್ನು ಪ್ರತ್ಯೇಕಗೊಳಿಸಲು (segregation) ಕಾರ್ಯಕ್ರಮ ಕೈಗೊಂಡರು. ರಾಜ್ಯಾಂಗದ ೫ನೆಯ ತಿದ್ದುಪಡಿಯನ್ನು ಉಲ್ಲಂಘಿಸದೆ ಇರುವಂಥ ಕೆಲವು ವಿಧಾನಗಳನ್ನು ಅನುಸರಿಸಿ ಕರಿಯರಿಗೆ ಮತ ನೀಡಲು ಸಾಧ್ಯವಾಗದಂತೆ ಮಾಡಿದರು. ದಕ್ಷಿಣ ಸಂಸ್ಥಾನಗಳ ನ್ಯಾಯವಿಧಾಯಕ ಸಭೆಗಳು ಕರಿಯರು ಮತದಾನ ಮಾಡಲು ಕೆಲವು ತಾಂತ್ರಿಕ (technical) ಅರ್ಹತೆಗಳನ್ನು ಹೊಂದಿರಬೇಕೆಂಬ ನಿಬಂಧನೆಗಳನ್ನು ಜಾರಿ ಮಾಡಿದರು. ೧೮೯೦ರ ದಶಕದಲ್ಲಿ ದಕ್ಷಿಣ ಸಂಸ್ಥಾನಗಳು ಒಂದೊಂದಾಗಿ ಕರಿಯರ ಮೇಲೆ – ತಲೆಗಂದಾಯ (poll tax), ವಿದ್ಯೆಗೆ ಸಂಬಂಧಪಟ್ಟ ಪರೀಕ್ಷೆಗಳು ಮತ್ತು ವಾಸಸ್ಥಾನ (residency) ಎಂದರೆ, ಮತ ನೀಡುವ ವ್ಯಕ್ತಿ ಆ ಊರಿನಲ್ಲಿ ಪ್ರಾಂತದಲ್ಲಿ ನಿಗದಿ ಮಾಡಿದಷ್ಟು ಕಾಲ ವಾಸವಾಗಿರಬೇಕು – ಈ ಎಲ್ಲ ಅಡೆತಡೆಗಳನ್ನು ಒಡ್ಡಿ ಕರಿಯರು ಮತದಾನ ಮಾಡಲು ಸಾಧ್ಯವಾಗದಂತೆ ಮಾಡಿದರು. ರಾಷ್ಟ್ರದ ಶ್ರೇಷ್ಠ ನ್ಯಾಯಾಲಯ

ಈ ನಿಬಂಧನೆಗಳನ್ನು ನ್ಯಾಯಬದ್ಧವಾಗಿವೆ ಎಂದು ಎತ್ತಿ ಹಿಡಿಯಿತು. ಇದಕ್ಕೆ ನ್ಯಾಯಾಧೀಶರು ಕೊಟ್ಟ ಸಮರ್ಥನೆ: 'ಈ ನಿಬಂಧನೆಗಳು ವರ್ಣದ ಆಧಾರದ ಮೇಲೆ ಪಕ್ಷಪಾತ ಮಾಡುವುದಿಲ್ಲ; ಅವು ೧೪ನೆಯ ತಿದ್ದುಪಡಿಯನ್ನು ಉಲ್ಲಂಘಿಸುವುದಿಲ್ಲ! ೧೮೯೬ರ ಪ್ಲೆಸ್ಸಿ ಮತ್ತು ಫರ್‌ಗ್ಯೂಸನ್ ನಡುವಣ ಕಟ್ಟಳೆಯಲ್ಲಿ ಬಿಳಿಯರಿಗೆ ಮತ್ತು ಕರಿಯರಿಗೆ ಪ್ರತ್ಯೇಕ ರೈಲುಗಾಡಿಗಳಿರುವುದು ನ್ಯಾಯಬಾಹಿರವಲ್ಲ; ಕರಿಯರಿಗೆ 'ಪ್ರತ್ಯೇಕ ಆದರೆ ಸಮಾನ ಸೌಕರ್ಯ' (separate but equal facilities)ಗಳನ್ನು ಒದಗಿಸಿವುದು ನ್ಯಾಯಬದ್ಧವಾಗಿದೆ' ಶ್ರೇಷ್ಠ ನ್ಯಾಯಾಲಯದ ಈ ತೀರ್ಪು ಕರಿಯರಿಗೆ ಪ್ರತ್ಯೇಕ ಶಾಲೆಗಳನ್ನು ತೆರೆಯಲು ಸಂವಿಧಾನ ಒಪ್ಪಿಗೆ ಕೊಟ್ಟಂತಾಯಿತು. ಮುಂದಿನ ೫೦ ವರ್ಷ ಗಳವರೆಗೆ ಪ್ರತ್ಯೇಕ ಶಾಲಾವ್ಯವಸ್ಥೆ ಜಾರಿಯಲ್ಲಿತ್ತು.

ಈ ಹೊಸ ಪ್ರತ್ಯೇಕತಾವ್ಯವಸ್ಥೆ ಚೆನ್ನಾಗಿ ನಡೆದುಕೊಂಡು ಹೋಯಿತು. ಬರ್‌ಬನ್ಸ್‌ರು ಕೆಳವರ್ಗದ ಬಿಳಿಯರನ್ನು ತಮ್ಮ ಗುಂಪಿಗೆ ಸೇರಿಸಿಕೊಳ್ಳುವುದರಲ್ಲಿ ಯಶಸ್ವಿಗಳಾದರು. ಇದಕ್ಕೆ ವಿರೋಧ ವ್ಯಕ್ತಪಡಿಸಿದ ಬಿಳಿಯರಿಗೂ ಮತದಾನ ಮಾಡಲು ಸಾಧ್ಯವಾಗದಂತೆ ಮಾಡಲು ಕರಿಯರಿಗೆ ಉಪಯೋಗಿಸಿದ ನಿಬಂಧನೆಗಳನ್ನು ಅನ್ವಯಿಸಿದರು. ಇದರ ಪರಿಣಾಮವಾಗಿ 'ಜನಪದ ಚಳುವಳಿ' (populist movement) ಅವಸಾನ ಹೊಂದಿತು. ಬರ್‌ಬನ್ಸ್‌ರ ಮತ್ತು ಕೆಳವರ್ಗದ ಬಿಳಿಯರ ಸಮ್ಮಿಶ್ರ ರಾಜಕೀಯ ಪಕ್ಷ ದಕ್ಷಿಣ ರಾಜ್ಯಗಳ ಚುನಾವಣೆಗಳ ಫಲಿತಾಂಶಗಳು ಹೊಸ ಸಮ್ಮಿಶ್ರ ಪಕ್ಷದ ಪರವಾಗಿರುವಂತೆ ಖಚಿತ ಗೊಳಿಸುವುದರಲ್ಲಿ ಯಶಸ್ವಿಯಾಯಿತು. ಈ ಪರಿಸ್ಥಿತಿ ಬಹಳ ವರ್ಷಗಳವರೆಗೆ ನಡೆಯಿತು. ಕರಿಯರ ಆರ್ಥಿಕ ಪರಿಸ್ಥಿತಿ ಅವರ ರಾಜಕೀಯ ಪರಿಸ್ಥಿತಿಗಿಂತ ಮೇಲಾಗಿರಲಿಲ್ಲ. ಪುನರ್‌ನಿರ್ಮಾಣದ ಸಮಯದಲ್ಲಿ ಪ್ಲಾಂಟೇಷನ್ ಒಡೆಯರಲ್ಲಿ ಹಣವಿರಲಿಲ್ಲ. ಆದ್ದರಿಂದ ಹೊಸದಾಗಿ ಸ್ವಾತಂತ್ರ್ಯ ಪಡೆದ ಕರಿಯರಿಗೆ ಸಂಬಳ ಕೊಡಲಾರದೆ ಹೋದರು. ಬಡವರಾದ ಕರಿಯರು ಹಳೆಯ ಪ್ಲಾಂಟೇಷನ್‌ಗಳನ್ನು ವಿಂಗಡಿಸಿ ಮಾಡಿದ ಸಣ್ಣ ಹಿಡುವಳಿಗಳನ್ನು ಗೇಣಿಗೆ ಪಡೆದು ಗೇಣಿದಾರರಾದರು (share croppers). ಪ್ಲಾಂಟೇಷನ್ ಮಾಲೀಕ ಗೇಣಿದಾರನಿಗೆ ಬೇಕಾದ ಆಹಾರ, ಬಿತ್ತನೆ ಬೀಜ, ವ್ಯವಸಾಯದ ಸಲಕರಣೆಗಳು ಮತ್ತು ಜಾನುವಾರುಗಳನ್ನು ಒದಗಿಸುತ್ತಿದ್ದನು. ಜಮೀನುದಾರ ಮತ್ತು ಗೇಣಿದಾರ ಇಬ್ಬರೂ ಮುಂಬರುವ ಬೆಳೆಯನ್ನು ಒಂದು ಒಪ್ಪಿಗೆಯಾದ ಪ್ರಮಾಣದಲ್ಲಿ ಹಂಚಿಕೊಳ್ಳುವ ಪರಸ್ಪರ ಒಪ್ಪಂದವನ್ನು ಮಾಡಿಕೊಳ್ಳುತ್ತಿದ್ದರು.

ಅದು ಆರ್ಥಿಕ ದುಸ್ಥಿತಿಯ ಕಾಲ. ಹೆಚ್ಚು ಪ್ಲಾಂಟೇಷನ್ ಮಾಲೀಕರು ಯುದ್ಧದಿಂದಾಗಿ ಹಣದ ಮುಗ್ಗಟ್ಟಿನಿಂದ ಕಂಗಾಲಾಗಿದ್ದರು. ಅವರಿಗೆ ತಮ್ಮ ಗೇಣಿದಾರನಿಗೆ ಬೇಕಾಗಿದ್ದ ಸಲಕರಣೆಗಳನ್ನು ಒದಗಿಸಲಾರದ ಸ್ಥಿತಿಯಲ್ಲಿದ್ದರು. ಆ ಪರಿಸ್ಥಿತಿಯಲ್ಲಿ ವಿಧಿಯಿಲ್ಲದೆ ಸ್ಥಳೀಯ ವರ್ತಕನಲ್ಲಿ ಸಾಲ ಪಡೆಯಬೇಕಾಗಿತ್ತು. ಕೆಲವು ಸಮಯ ಜಮೀನುದಾರ

ಮತ್ತು ಗೇಣಿದಾರ ಇಬ್ಬರೂ ಅದೇ ವರ್ತಕನ ಸಾಲಗಾರರಾಗಿರುತ್ತಿದ್ದರು. ಸಾಲ ಕೊಟ್ಟ ವರ್ತಕನು ಹೆಚ್ಚಿನ ಲಾಭ ಗಳಿಸುವಂಥ ಬೆಳೆಯನ್ನು ಅಂದರೆ, ಹತ್ತಿಯನ್ನು ಬೆಳೆಯುವಂತೆ ಒತ್ತಾಯ ಮಾಡುತ್ತಿದ್ದನು. ಹತ್ತಿಯ ಬೆಳೆಯಿಂದ ದಕ್ಷಿಣದ ಸಂಸ್ಥಾನಗಳು ಅನುಕೂಲ ಪಡೆದರೂ ಕೂಡ ಈ ಪದ್ಧತಿಯಿಂದ ಆ ಸಂಸ್ಥಾನಗಳು ಒಂದೇ ಬೆಳೆಯ (ಹತ್ತಿ) ಆರ್ಥಿಕ ವ್ಯವಸ್ಥೆಗಳಾಗಿ ಉಳಿದುಕೊಂಡವು. ಇದು ವ್ಯವಸಾಯದಲ್ಲಿ ಹೊಸ ವಿಧಾನಗಳನ್ನು ಉಪಯೋಗಿಸಿ ಪ್ರಗತಿ ಸಾಧಿಸಲು ತಡೆಯೊಡ್ಡಿತು. ಇದಲ್ಲದೆ ಈ ಪದ್ಧತಿಯ ಹಾನಿಕಾರಕ ಪರಿಣಾಮವೆಂದರೆ ಸಾವಿರಾರು ಗೇಣಿದಾರರು ಸರಿಯಾಗಿ ಹೊಟ್ಟೆ ಬಟ್ಟೆಗೆ ಗತಿಯಿಲ್ಲದ ಬಡತನದಲ್ಲಿ ಹೇಗೋ ಜೀವಿಸಬೇಕಾದ ಆರ್ಥಿಕ ದುಸ್ಥಿತಿ ಉಂಟಾಯಿತು. ಶೇಕಡಾ ೭೫ ಮಂದಿ ಗೇಣಿದಾರರ ಸ್ಥಿತಿ ಅವರು ಗುಲಾಮರಾಗಿದ್ದಕ್ಕಿಂತ ಉತ್ತಮವಾಗಿರಲಿಲ್ಲ.

ಈ ಎಲ್ಲ ಪರಿಸ್ಥಿತಿಗಳ ಪರಿಣಾಮವಾಗಿ ಕರಿಯರಿಗೆ ರಾಜಕೀಯ ಸಮಾನತೆಗಿಂತ ಆರ್ಥಿಕ ಭದ್ರತೆ ಮುಖ್ಯವಾದುದು ಎನ್ನುವುದರ ಅರಿವಾಯಿತು. ಆದ್ದರಿಂದ ಅವರು ದೈಹಿಕ ಶ್ರಮ, ವೃತ್ತಿ ಶಿಕ್ಷಣ ಮತ್ತು ಜೀವನಾಧಾರವಾಗಬಲ್ಲ ವ್ಯವಸಾಯ ತಮಗೆ ಅವಶ್ಯಕವಾಗಿ ದೊರೆಯುವಂತೆ ವ್ಯವಸ್ಥೆ ಮಾಡಲು ಸರ್ಕಾರವನ್ನು ಆಗ್ರಹಪಡಿಸಿದರು. ೧೮೯೫ರಲ್ಲಿ ಹೆಸರುವಾಸಿಯಾದ ಕರಿಯ ಶಿಕ್ಷಣತಜ್ಞ ಬೂಕರ್ ಟಿ. ವಾಷಿಂಗ್‌ಟನ್ ಅಟ್ಲಾಂಟದಲ್ಲಿ ಮಾಡಿದ ಭಾಷಣ 'ಅಟ್ಲಾಂಟ ಒಪ್ಪಂದ' (Atlanta Compromise) ಎಂಬ ಹೆಸರು ಪಡೆಯಿತು. ಇವನು ಮಾಡಿದ ಭಾಷಣದ ಸಾರಾಂಶ: 'ಸಾಮಾಜಿಕ ಸಮಾನತೆಯ ಪ್ರಶ್ನೆಗಳಿಂದ ಉಂಟಾಗುವ ಆಂದೋಳನ ಅವಿವೇಕದ ಪರಮಾವಧಿ ಎನ್ನುವುದು ನನ್ನ ಬುಡಕಟ್ಟಿನ ಬುದ್ಧಿವಂತರಿಗೆ ಆಗಲೇ ಮನದಟ್ಟಾಗಿದೆ. ಕಾಯಿದೆಯಿಂದ ಲಭಿಸುವ ಹಕ್ಕು, ಸೌಲಭ್ಯ, ಸವಲತ್ತುಗಳು ನಮಗೆ ಸಿಗಬೇಕೆನ್ನುವುದು ಅತಿಮುಖ್ಯ ಮತ್ತು ನ್ಯಾಯವಾದುದು. ಆದರೆ ಈ ಹಕ್ಕುಗಳನ್ನು ಚಲಾಯಿಸುವುದಕ್ಕೆ ಮತ್ತು ಸವಲತ್ತುಗಳನ್ನು ನಾವು ಬಳಸಿಕೊಳ್ಳಲು ಅರ್ಹರಾಗಿರಬೇಕಾದುದು ಅದಕ್ಕಿಂತ ಮುಖ್ಯ. ಕಾರ್ಖಾನೆಯಲ್ಲಿ ಒಂದು ಡಾಲರ್ ಗಳಿಸುವ ಅವಕಾಶ, ಈಗಿನ ಪರಿಸ್ಥಿತಿಯಲ್ಲಿ ಅತ್ಯಂತ ಅಮೂಲ್ಯವಾದುದು'. ಅಟ್ಲಾಂಟ ಒಪ್ಪಂದವನ್ನು ಬಿಳಿಯರು ಶ್ಲಾಘನೆ ಮಾಡಿ ತಮ್ಮ ಬೆಂಬಲ ನೀಡಿದರು. ಹೀಗಿದ್ದರೂ ಕೂಡ ಬಹಳ ಮಂದಿ ಕರಿಯರು ಆರ್ಥಿಕ ಭದ್ರತೆ ಪಡೆದ ನಂತರ ರಾಜಕೀಯ ಸಮಾನತೆ ಪಡೆಯುವಷ್ಟು ಸಹನೆ ತೋರಲಿಲ್ಲ. ಅವರಲ್ಲಿ ಅನೇಕರು ಇವೆರಡರಲ್ಲಿ ಒಂದನ್ನು ಬಿಟ್ಟು ಇನ್ನೊಂದನ್ನು ಸಾಧಿಸಲು ಸಾಧ್ಯವಿಲ್ಲ ಎಂದು ವಾದಿಸಿದರು. ಹಾರ್ವರ್ಡ್ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಗಳಿಸಿದ ಕರಿಯರಲ್ಲಿ ಮೊದಲನೆಯವನಾದ ಡಬ್ಲ್ಯೂ.ಇ.ಬಿ. ಡುಬಾಯ್ (W.E.B. DuBois)ನು ವಿದ್ಯಾವಂತರಾದ ಕರಿಯರು ರಾಜಕೀಯದಲ್ಲಿ ಆಸಕ್ತಿ ವಹಿಸಬೇಕೆಂದು ಆಗ್ರಹಪಡಿಸಿದನು. ಅದು ಅವರ ಹಕ್ಕು. ಆ ಹಕ್ಕನ್ನು ಉಳಿಸಿಕೊಳ್ಳಲು ಹೋರಾಟ ನಡೆಸಬೇಕು. ಕಾಯಿದೆ

ಮತ್ತು ನ್ಯಾಯ ಕರಿಯರ ರಕ್ಷಣೆಯ ಸಾಧನಗಳಲ್ಲಿ, ಕರಿಯರ ಮೇಲೆ ದಬ್ಬಾಳಿಕೆ ಮತ್ತು ಅವರನ್ನು ಅವಮಾನಗೊಳಿಸುವ ವ್ಯವಸ್ಥೆಗಳಾಗಿವೆ ಎಂದು ಅಭಿಪ್ರಾಯಪಟ್ಟನು.

ದಕ್ಷಿಣ ಸಂಸ್ಥಾನಗಳಲ್ಲಿ ಔದ್ಯೋಗೀಕರಣ

ಅಮೆರಿಕದ ಉತ್ತರ ಸಂಸ್ಥಾನಗಳಲ್ಲಿ ಉದ್ದಿಮೆಗಾರರ ಪ್ರಭಾವ ಮಿತಿ ಮೀರಿ ಬೆಳೆದು ಅದನ್ನು ನಿಯಂತ್ರಿಸುವ ಪ್ರಯತ್ನಗಳು ನಡೆಯುತ್ತಿದ್ದಾಗ ಇತ್ತ ದಕ್ಷಿಣದಲ್ಲಿ ಜನರು ಆಗತಾನೆ ಮುಗಿದಿದ್ದ ಅಂತರ್ಯುದ್ಧದಿಂದ ಚೇತರಿಸಿಕೊಳ್ಳುತ್ತಿದ್ದರು. ಆರ್ಥಿಕ ಪರಿಸ್ಥಿತಿಗಳು ಉತ್ತಮಗೊಳ್ಳುವ ಚಿಹ್ನೆ ತೋರಿಬರುತ್ತಿತ್ತು. ಆದರೆ ಅರಮನೆಗಳಂಥ ಆನ್‌ಟೆಬೆಲ್ಲಮ್ (antebellum) ಮನೆಗಳಲ್ಲಿ ಅದ್ದೂರಿ ಜೀವನ ನಡೆಸುತ್ತಿದ್ದ ಪ್ಲಾನ್‌ಟರುಗಳು ದಕ್ಷಿಣ ಸಂಸ್ಥಾನಗಳಲ್ಲಿ ಔದ್ಯೋಗೀಕರಣ ತಮ್ಮ ಜೀವನ ಶೈಲಿಯನ್ನು ನಾಶಗೊಳಿಸುತ್ತದೆ ಎನ್ನುವ ಕಾರಣದಿಂದ ಅದನ್ನು ನಿರಾಕರಿಸಿದರು. ಆದರೆ ಯುದ್ಧಾನಂತರ ಅಧಿಕಾರ 'ಬರ್‌ಬನ್ ಡೆಮೊಕ್ರಾಟ' (Bourbon Democrats)ರ ಕೈಯಲ್ಲಿತ್ತು. ಅವರು ವ್ಯವಸಾಯಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದರೂ ಕೈಗಾರಿಕೆಯ ಅನುಕೂಲಗಳನ್ನು ಮನಗಂಡು ಉದ್ಯಮಗಳು ಬೆಳೆಯಲು ಅವಕಾಶವಿತ್ತರು.

ದಕ್ಷಿಣ ಸಂಸ್ಥಾನಗಳಲ್ಲಿ ಕಚ್ಚಾ ಪದಾರ್ಥಗಳು ಯಥೇಚ್ಛವಾಗಿದ್ದರೂ ಅವುಗಳ ಉಪಯೋಗ ಪಡೆಯುವ ಉದ್ಯಮಗಳು ಬೆಳೆಯಲಿಲ್ಲ. ಯುದ್ಧಾನಂತರ ಪ್ರಕೃತಿ ಸಂಪತ್ತನ್ನು ಬಳಸಿಕೊಳ್ಳುವ ಪ್ರಯತ್ನಗಳು ನಡೆದವು. ಅಪ್ಪಲೇಷಿಯನ್ ಪರ್ವತಾರಣ್ಯ ಪ್ರದೇಶದ ಅಪಾರ ವೃಕ್ಷಸಂಪತ್ತನ್ನು ಉಪಯೋಗಿಸಿ ಲಾಭ ಪಡೆಯಲು ದೊಡ್ಡ ನಾಟಾ ಸಾಗಿಸುವ ಕಂಪನಿಗಳನ್ನು ಮತ್ತು ಟೆನ್ನೆಸ್ಸೀ ಹಾಗೂ ಕೆರೊಲಿನ ಪ್ರಾಂತಗಳ ನದಿಗಳಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವ ಕಂಪನಿಗಳನ್ನು ಸ್ಥಾಪಿಸುವ ಯೋಜನೆಗಳನ್ನು ಹಾಕತೊಡಗಿದರು. ಭೂಗರ್ಭ ವಿಜ್ಞಾನಿಗಳು ಅಲಬಾಮ ಪ್ರಾಂತದಲ್ಲಿ ಕಲ್ಲಿದ್ದಲು ಮತ್ತು ಕಬ್ಬಿಣದ ಅದಿರು ಹೇರಳವಾಗಿ ದೊರೆಯುವ ಸಾಧ್ಯತೆಯನ್ನು ಖಚಿತಪಡಿಸಿದರು. ಈ ಪ್ರಕೃತಿ ಸಂಪತ್ತನ್ನು ಬಳಸಿಕೊಂಡು ದಕ್ಷಿಣ ಸಂಸ್ಥಾನಗಳ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ನಿರ್ಧರಿಸಲಾಯಿತು.

ಔದ್ಯೋಗಿಕ ಬೆಳವಣಿಗೆಯ ಸಾಧ್ಯತೆಯನ್ನು ಅರಿತಿದ್ದರೂ ದಕ್ಷಿಣ ಸಂಸ್ಥಾನಗಳಲ್ಲಿ ವ್ಯವಸಾಯದ ಪ್ರಗತಿಗೆ ಪ್ರಾಧಾನ್ಯ ಕೊಡಲಾಯಿತು. ವ್ಯವಸಾಯದ ಉತ್ಪನ್ನವನ್ನು ಯುದ್ಧಪೂರ್ವದ ಮಟ್ಟಕ್ಕೆ ತರಲಾಯಿತು. ಹತ್ತಿಯ ಬೆಳೆ ಹಿಂದಿನಂತೆ ದಕ್ಷಿಣ ಸಂಸ್ಥಾನಗಳ ಆರ್ಥಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿರಲಿಲ್ಲ. ಆದರೆ ವ್ಯವಸಾಯ ಚೆನ್ನಾಗಿ ನಡೆಯುತ್ತಿದ್ದುದರಿಂದ ಹತ್ತಿಯನ್ನು ಅವಲಂಬಿಸಿದ ಕೈಗಾರಿಕೆಗಳು ಸ್ಥಾಪಿತ ವಾದವು. ಹಿಂದೆ ಸುಮ್ಮನೆ ಎಸೆಯುತ್ತಿದ್ದ ಹತ್ತಿಬೀಜದಿಂದ ಎಣ್ಣೆ ಮತ್ತು ಗೊಬ್ಬರ ತಯಾರಿಸುವ ಉದ್ಯಮಗಳು ಹುಟ್ಟಿಕೊಂಡು ಲಾಭ ಗಳಿಸತೊಡಗಿದವು. ೧೮೮೦ರ

ದಶಕದಲ್ಲಿ (ದಕ್ಷಿಣದ) ಹತ್ತಿಗಿರಣಿಗಳ ಸಂಖ್ಯೆ ಹೆಚ್ಚಾಯಿತು. ಹಾಗೆ ಉತ್ಪಾದನೆಯಾದ ಹತ್ತಿಯ ಬಟ್ಟೆ ನ್ಯೂ ಇಂಗ್ಲೆಂಡಿನ ಹತ್ತಿಗಿರಣಿಗಳು ಎದುರಿಸಬೇಕಾದ ಸವಾಲಾಯಿತು.

ಹೊಗೆಸೊಪ್ಪಿನ ಉದ್ಯಮ ಅದ್ಭುತವಾಗಿ ಅಭಿವೃದ್ಧಿಗೊಂಡಿತು. ಇದಕ್ಕೆ ಕಾರಣರಾದ ವಿಶಿಷ್ಟ ಉದ್ದಿಮೆಗಾರರಲ್ಲಿ ಅತ್ಯಂತ ಹೆಸರುವಾಸಿಯಾದ ಉತ್ತರ ಕೆರೊಲಿನದ ಡುರ್‌ಹ್ಯಾಮ್ (Durham) ನಗರದ ಜೇಮ್ಸ್ ಡ್ಯೂಕ್ ಎಂಬ ಕುಶಾಗ್ರಮತಿ. ಇವನು ರಾಕ್‌ಫೆಲರ್, ಮಾರ್ಗನ್ ಮತ್ತಿತರರು ಸ್ಥಾಪಿಸಿದ ನಿಕ್ಷೇಪ ವಿಧಾನವನ್ನು ಬುದ್ಧಿವಂತಿಕೆಯಿಂದ ಬಳಸಿಕೊಂಡು ಹೊಗೆಸೊಪ್ಪಿನ ಉದ್ಯಮದ ಮೇಲೆ ಸ್ವಾಯತ್ತನ್ನು ಸಾಧಿಸಿದನು. ಹೊಗೆಸೊಪ್ಪಿನ ಬೆಳೆಯ ಮೇಲೆಯೂ ಏಕಸ್ವಾಮ್ಯತೆ (monopoly) ಹೊಂದಿದ್ದಲ್ಲದೆ ನ್ಯೂಯಾರ್ಕ್ ನಗರದಲ್ಲಿ ಒಂದು ಮಳಗಿಯನ್ನು ತೆರೆದು ಹೊಗೆಸೊಪ್ಪಿನಿಂದ ಹಿಡಿದು ಸಿಗರೇಟ್, ಚುಟ್ಟಾ, ಸೇದುವ ಕೊಳವೆ, ಅಗಿಯುವ ಹೊಗೆಸೊಪ್ಪಿನ (chewing tobacco)ವರೆಗೆ ಎಲ್ಲವನ್ನೂ ಮಾರುವ ಏರ್ಪಾಡು ಮಾಡಿ ಅಪಾರ ಲಾಭ ಗಳಿಸಿದನು. ಡ್ಯೂಕ್, ಮಾರ್ಗನ್ ಮುಂತಾದವರ ಹೆಜ್ಜೆಯನ್ನು ಅನುಸರಿಸಿ ನಿಕ್ಷೇಪ ಮತ್ತು ಏಕಸ್ವಾಮ್ಯತೆಗಳ ಪೂರ್ಣ ಪ್ರಯೋಜನ ಪಡೆದನು. ಇದು ಫೆಡರಲ್ ಸರ್ಕಾರದ ಗಮನ ಸೆಳೆಯಿತು. ೧೯೧೧ರಲ್ಲಿ ಡ್ಯೂಕ್‌ನ ಅಮೆರಿಕನ್ ಟುಬ್ಯಾಕೊ ಕಂಪನಿಯನ್ನು ನಿಕ್ಷೇಪ ನಿರೋಧ ಕಾಯಿದೆಯ ಉಲ್ಲಂಘನೆಯ ಆಪಾದನೆಗಾಗಿ ವಿಚಾರಣೆಗೆ ಗುರಿಪಡಿಸಿತು. ಇದರ ಪರಿಣಾಮವಾಗಿ ಡ್ಯೂಕ್‌ನ ಪ್ರಭುತ್ವಕ್ಕೆ ಒಳಗಾಗಿದ್ದ ರೈನಾಲ್ಡ್ ಮತ್ತು ಲೋರಿಲ್ಲಾರ್ಡ್ ಎಂಬ ಸಹಉದ್ಯಮ (subsidiaries) ಕಂಪನಿಗಳು ವಿಮೋಚನೆ ಪಡೆದವು.

ದಕ್ಷಿಣ ಸಂಸ್ಥಾನಗಳಲ್ಲಿ ಗಣಿ ಉದ್ಯಮ ಸಾಕಷ್ಟು ಪ್ರಾಮುಖ್ಯ ಪಡೆಯಿತು. ಅಪ್ಪಲೇಷಿಯನ್ ಪರ್ವತಶ್ರೇಣಿಯ ಮತ್ತು ಅಲಬಾಮ ಪ್ರಾಂತದ ಗಣಿಗಳಿಂದ ಉತ್ಪತ್ತಿಯಾದ ಕಲ್ಲಿದ್ದಲು ರಾಷ್ಟ್ರದ ಒಟ್ಟು ಕಲ್ಲಿದ್ದಲ ಉತ್ಪಾದನೆಯ ೧/೮ ಭಾಗವಾಗಿತ್ತು. ವರ್ಷಕ್ಕೆ ೨೫ ಮಿಲಿಯನ್ ಡಾಲರ್ ಬೆಲೆಯ ಕಬ್ಬಿಣವನ್ನು ೨೦೦ ಕುಲುಮೆ (foundry)ಗಳು ಉತ್ಪಾದಿಸುತ್ತಿದ್ದವು. ೧೮೭೦ರಲ್ಲಿ ಹಾಳು ಬಿದ್ದ ಪ್ರದೇಶವಾಗಿದ್ದ ಬರ್ಮಿಂಗ್‌ಹ್ಯಾಮ್, ಅಲಬಾಮ ಎರಡು ದಶಕಗಳಲ್ಲಿಯೇ 'ದಕ್ಷಿಣದ ಪಿಟ್ಸ್‌ಬರ್ಗ್' ಎಂದು ಹೆಸರುವಾಸಿಯಾಯಿತು.

ಔದ್ಯೋಗೀಕರಣಕ್ಕೆ ರೈಲುಮಾರ್ಗಗಳು ಅತ್ಯಗತ್ಯ. ಲೂಯಿವಿಲ್-ನ್ಯಾಷ್‌ವಿಲ್ ರೈಲುಮಾರ್ಗ ಮತ್ತು ಇತರ ರೈಲುಮಾರ್ಗಗಳು ಇಲ್ಲದೆ ಹೋಗಿದ್ದರೆ ಅಲಬಾಮದ ಕಬ್ಬಿಣ ಉದ್ಯಮ ಅಷ್ಟು ಶೀಘ್ರವಾಗಿ ವಿಸ್ತಾರಗೊಳ್ಳುತ್ತಿರಲಿಲ್ಲ. ಅಂತರ್ಯುದ್ಧದಲ್ಲಿ ಉತ್ತರದ ಸೈನ್ಯಗಳು ಹಾಳುಗೆಡವಿದ ರೈಲುಮಾರ್ಗಗಳು ಪುನರ್‌ನಿರ್ಮಾಣಗೊಳ್ಳದೆ ಹೋಗಿದ್ದರೆ ಜಾರ್ಜಿಯಾ ಸಂಸ್ಥಾನದ ಹತ್ತಿಯ ಉತ್ಪಾದನೆಯ ಉದ್ಯಮ ಊರ್ಜಿತ

ವಾಗುತ್ತಿರಲಿಲ್ಲ. ೧೮೬೫ ಮತ್ತು ೧೮೮೦ರ ಅವಧಿಯಲ್ಲಿ ದಕ್ಷಿಣ ರೈಲ್ವೆ ಮಾರ್ಗಗಳು ಕ್ರಮಿಸುತ್ತಿದ್ದ ಮೈಲಿಗಳ ಸಂಖ್ಯೆ ದ್ವಿಗುಣಗೊಂಡು ಮತ್ತೆ ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಮತ್ತೊಮ್ಮೆ ದ್ವಿಗುಣಗೊಂಡಿತು. ಹೀಗೆ ದಕ್ಷಿಣ ಸಂಸ್ಥಾನಗಳಲ್ಲಿ ಆರ್ಥಿಕ ಅಭಿವೃದ್ಧಿ ಕಂಡುಬರುತ್ತಿದ್ದರೂ ದೇಶದ ಇತರ ಸಂಸ್ಥಾನಗಳಿಗೆ ಹೋಲಿಸಿದಾಗ ದಕ್ಷಿಣ ಸಂಸ್ಥಾನಗಳು ಆರ್ಥಿಕವಾಗಿ ಬಹಳ ಹಿಂದುಳಿದಿದ್ದವು. ಈ ಸಂಸ್ಥಾನಗಳ ಆಂತರ್ಯ ಸಮಸ್ಯೆಗಳು ಗುಪ್ತರೋಗದಂತೆ ದಾಕ್ಷಿಣಾತ್ಯರ ಸಮಾಜವನ್ನು ಶಿಥಿಲಗೊಳಿಸಿದ್ದವು. ಈ ಸಮಾಜದ ಆರ್ಥಿಕ ದುಸ್ಥಿತಿಗೆ ಗೇಣಿ ಅಥವಾ ಗುತ್ತಿಗೆ ವ್ಯವಸಾಯ (sharecropping system) ಪದ್ಧತಿ ಮುಖ್ಯ ಕಾರಣವಾಗಿತ್ತು. ಬೆಳೆದು ನಿಂತ ಫಸಲನ್ನು ಮುಂಗಡವಾಗಿ ಪಡೆದ ಹಣಕ್ಕೆ ಒತ್ತೆಯಿಟ್ಟು, ಗೇಣಿದಾರ ಪಡೆದ ಸಾಲವನ್ನು ಎಂದಿಗೂ ತೀರಿಸಲಾರದೆ ತನ್ನ ಸ್ವಂತ ಜಮೀನನ್ನು ಸಾಗುವಳಿ ಮಾಡಲು ಹಣ ಉಳಿಸಲಾರದೆ, ಸದಾ ಅಡಿಯಾಳಾಗಿ ದುಡಿಯುವ ಬಡರೈತರೇ ಹೆಚ್ಚಾಗಿದ್ದ ಸಮಾಜ ಪ್ರಬಲ ಉದ್ಯಮಗಳನ್ನು, ಕೈಗಾರಿಕೆಗಳನ್ನು ಬೆಳೆಸಲಾರದೆ ಹೋಯಿತು.

ದಕ್ಷಿಣ ಸಂಸ್ಥಾನಗಳಲ್ಲಿ ಸ್ಥಾಪನೆಯಾದ ಉದ್ಯಮಗಳು ಗಳಿಸಿದ ಹಣದ ಹೆಚ್ಚು ಭಾಗ ಬಂಡವಾಳ ಹೂಡಿದ ಉತ್ತರದ ಮತ್ತು ಇಂಗ್ಲೆಂಡಿನ ಬಂಡವಾಳಗಾರರಿಗೆ ಸೇರುತ್ತಿತ್ತು. ಮೇಲಾಗಿ, ಯುದ್ಧಾನಂತರದ ಪುನರ್‌ನಿರ್ಮಾಣದ ಸಮಯದಲ್ಲಿ ದಕ್ಷಿಣದ ಫೆಡರಲ್ ಸರ್ಕಾರಕ್ಕೆ ಸೇರಿದ ವಿಸ್ತಾರವಾದ ಭೂಪ್ರದೇಶಗಳನ್ನು ಉತ್ತರದ ಉದ್ಯಮಿಗಳಿಗೆ ಮಾರಿದ್ದಾಗಿತ್ತು. ಆನಂತರವೂ ದಕ್ಷಿಣ ಸಂಸ್ಥಾನಗಳು ನಗದು ಹಣದ ಕೊರತೆಯಿಂದಾಗಿ ಭೂಮಿಯನ್ನು ಸಗಟು ವ್ಯಾಪಾರ (wholesale)ದ ದರದಲ್ಲಿ ನಾಟಾ ವ್ಯಾಪಾರದ ಮೇಲೆ ಪ್ರಭುತ್ವ ಹೊಂದಿದ್ದ ಸಂಸ್ಥೆಗಳಿಗೆ ಮತ್ತು ಸಗಟು ವ್ಯಾಪಾರಿಗಳಿಗೆ ಮಾರುವುದನ್ನು ಮುಂದುವರಿಸಿದವು. ಉತ್ತರದ ಬಂಡವಾಳಗಾರರು ದಕ್ಷಿಣದ ಉದ್ಯಮಗಳಲ್ಲಿ ಹಣ ಹೂಡಿದ್ದು ತಾತ್ಕಾಲಿಕವಾಗಿ ಉತ್ಪತ್ತಿ ಪಡೆಯಲು ಸಹಾಯಕವಾದರೂ ಕಾಲಕ್ರಮದಲ್ಲಿ ಜಟಿಲ ಸಮಸ್ಯೆಗಳು ತಲೆದೋರಿದವು. ಹೆಚ್ಚು ಕಡಿಮೆ ಎಲ್ಲಾ ರೈಲುಮಾರ್ಗಗಳು, ಉದ್ಯಮಗಳು ಮತ್ತು ಬ್ಯಾಂಕ್‌ಗಳು ಸ್ಥಳೀಯರಲ್ಲದ ಗೈರುಹಾಜರಿ ಮಾಲೀಕರಿಗೆ (absentee owners) ಸೇರಿದ್ದವು. ಈ ಮಾಲೀಕರಿಗೆ ಲಾಭಗಳಿಸುವುದು ಮುಖ್ಯವಾಗಿತ್ತೇ ವಿನಃ ಸ್ಥಳೀಯ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಾಗಿರಲಿಲ್ಲ. ದಕ್ಷಿಣ ಉದ್ಯಮಗಳ ಕಾರ್ಯ ಕಚ್ಚಾ ಪದಾರ್ಥಗಳನ್ನು ಸಂಗ್ರಹಿಸಿ ರವಾನಿಸುವುದಕ್ಕೆ ಸೀಮಿತವಾಗಿತ್ತು. ಮುಂದಿನ ಉತ್ಪಾದನಾ ಹಂತಗಳನ್ನು ಉತ್ತರದ ಕಾರ್ಖಾನೆಗಳಲ್ಲಿ ಪೂರೈಸಲಾಗುತ್ತಿತ್ತು. ದಕ್ಷಿಣದ ಉದ್ಯಮಗಳು ತಾವೇ ವಸ್ತುಗಳನ್ನು ತಯಾರಿಸಲು ಪ್ರಯತ್ನಿಸಿದರೆ ಆ ಉದ್ಯಮಿಗಳಿಗೆ ಬ್ಯಾಂಕ್‌ಗಳಿಂದ ಹಣ ದೊರೆಯುವುದು ಕಷ್ಟವಾಗುತ್ತಿತ್ತು.

ದಕ್ಷಿಣ ಸಂಸ್ಥಾನಗಳ ರೈಲುಮಾರ್ಗಗಳು ತಮ್ಮ ಸಂಸ್ಥಾನಕ್ಕೆ ಅನುಕೂಲವಾಗುವಂಥ

ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾರದೆ ಹೋದವು. ಇದಕ್ಕೆ ಕಾರಣ ದಕ್ಷಿಣದ ರೈಲ್ವೆ ಕಂಪನಿಗಳು ಉತ್ತರದ ಬಂಡವಾಳಗಾರರನ್ನು ಅವಲಂಬಿಸಬೇಕಾಗಿತ್ತು ಮತ್ತು ಕಂಪನಿಯ ಡೈರೆಕ್ಟರುಗಳು ಉತ್ತರದವರಾಗಿದ್ದು – ಅವರ ನಿರ್ದೇಶನದಂತೆ ಎಲ್ಲ ನಡೆಯಬೇಕಾಗಿತ್ತು. ರೈಲು, ಸಾರಿಗೆ ದರಗಳನ್ನು ನಿರ್ಧರಿಸುವುದರಲ್ಲಿ ಪಕ್ಷಪಾತ ತೋರಿಸುತ್ತಿದ್ದರು. ಕಚ್ಚಾ ಪದಾರ್ಥಗಳನ್ನು ರವಾನಿಸುವವರಿಗೆ ಕಡಿಮೆ ದರ ಸಿಗುತ್ತಿತ್ತು, ತಾವು ಉತ್ಪಾದಿಸಿದ ವಸ್ತುಗಳನ್ನು ಮಾರಾಟಕ್ಕಾಗಿ ರವಾನಿಸಲು ಹೆಚ್ಚು ದರ ತೆರಬೇಕಾಗಿತ್ತು. ಪಶ್ಚಿಮ ಸಂಸ್ಥಾನಗಳಲ್ಲಿ ಔದ್ಯೋಗೀಕರಣ ಪ್ರಾರಂಭವಾಗಿದ್ದು ಬಹಳ ತಡವಾಗಿ. ಅಷ್ಟರಲ್ಲಿ ರಾಷ್ಟ್ರದ ಆರ್ಥಿಕ ವ್ಯವಸ್ಥೆ ಉತ್ತರಾರ್ಧ ದೊಡ್ಡ ಉದ್ಯಮಗಳಿಂದ ನಿಯಂತ್ರಣಗೊಂಡಿತ್ತು. ಆದ್ದರಿಂದ ದಕ್ಷಿಣ ಸಂಸ್ಥಾನಗಳು ಬಹಳ ಅನಾನುಕೂಲಗಳನ್ನು ಅನುಭವಿಸಬೇಕಾಗಿ ಬಂತು. ಬಾಸ್ಟನ್, ನ್ಯೂಯಾರ್ಕ್, ಫಿಲಡೆಲ್ಫಿಯ, ಕ್ಲೀವ್‌ಲ್ಯಾಂಡ್ ಮತ್ತು ಚಿಕಾಗೋ ನಗರಗಳು ಯುದ್ಧಪೂರ್ವದಲ್ಲಿಯೇ ಕೈಗಾರಿಕಾಕೇಂದ್ರಗಳಾಗಿದ್ದವು. ಯುದ್ಧಾನಂತರ ಈ ಕೇಂದ್ರಗಳು ತ್ವರಿತಗತಿಯಲ್ಲಿ ವಿಸ್ತಾರಗೊಂಡವು. ಆದರೆ ದಕ್ಷಿಣದ ಉದ್ಯಮಗಳನ್ನು ಹೊಸದಾಗಿ ಸ್ಥಾಪಿಸಬೇಕಿತ್ತು. ಅಥವಾ ಹಾಳುಬಿದ್ದವುಗಳನ್ನು ಪುನರ್‌ನಿರ್ಮಾಣ ಗೊಳಿಸಬೇಕಾಗಿತ್ತು. ಅಲಬಾಮದ ಉಕ್ಕಿನ ಕಂಪನಿ, ಆ್ಯಂಡ್ರೂ ಕಾರ್ನೆಗಿಯ ನಿಯಂತ್ರಣ ಕ್ಕೊಳಗಾಗಿದ್ದ ರಾಷ್ಟ್ರದ ಉಕ್ಕಿನ ಮಾರುಕಟ್ಟೆಯಲ್ಲಿ ವ್ಯವಹಾರ ಮಾಡಿ ಲಾಭ ಪಡೆಯುವುದು ದುಸ್ಸಾಧ್ಯವಾಗಿತ್ತು. ಉದಾಹರಣೆಗೆ, ಲೂಯಿಸಿಯಾನದ ಒಂದು ಬ್ಯಾಂಕ್ ಜೆ.ಪಿ. ಮಾರ್ಗನ್ ಪ್ರಭುತ್ವದೊಡನೆ ಪೈಪೋಟಿ ಮಾಡುವುದು ವ್ಯರ್ಥ ಸಾಹಸ ವಾಗುತ್ತಿತ್ತು.

೧೯೦೦ರ ದಶಕದಲ್ಲಿ ದಕ್ಷಿಣ ಸಂಸ್ಥಾನಗಳು ಆರ್ಥಿಕವಾಗಿ ವ್ಯವಸಾಯದ ಹಂತದಲ್ಲಿದ್ದವು. ಈ ಸಂಸ್ಥಾನಗಳ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ ೧೦ಕ್ಕಿಂತಲೂ ಕಡಿಮೆ ನಗರಪ್ರದೇಶಗಳಲ್ಲಿ ವಾಸ ಮಾಡುತ್ತಿದ್ದರು. ಆದರೂ ಹೊಸಪಟ್ಟಣಗಳು ಹಬ್ಬಿಕೊಂಡವು. ಯುದ್ಧದಲ್ಲಿ ಹಾಳುಗೆಡವಿದವುಗಳನ್ನು ಪುನರ್‌ನಿರ್ಮಾಣಗೊಳಿಸಿದರು. ಯುದ್ಧಾನಂತರ ಹತ್ತಿ ಗಿರಣಿಗಳನ್ನು ಹತ್ತಿ ಬೆಳೆಯುವ ಪ್ರದೇಶದಲ್ಲಿ ಸ್ಥಾಪಿಸಲಾಯಿತು. ಇದರಿಂದ ಆ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಿದವು. ಜನರು ಸಂಸಾರ ಸಮೇತ ಪಟ್ಟಣಗಳಿಗೆ ಕೆಲಸ ಹುಡುಕಿಕೊಂಡು ಬರತೊಡಗಿದರು. ಗಂಡಸರು ಭಾರವಾದ ವಸ್ತುಗಳನ್ನು ಎತ್ತುವ ಕೆಲಸಗಳನ್ನು – ಹತ್ತಿಯನ್ನು ತುಂಬಿದ ಭಾರದ ಮೂಟೆಗಳನ್ನು ರೈಲುಬಂಡಿಗಳಿಗೆ ಹೊತ್ತು ಸಾಗಿಸುವುದು ಇತ್ಯಾದಿ. ಹೆಂಗಸರಿಗೆ ಮಗ್ಗಗಳಲ್ಲಿ ನೇಯ್ಗೆಯ ಕೆಲಸ, ಮಕ್ಕಳು ಚಿಕ್ಕ ಪುಟ್ಟ ಕೆಲಸಗಳನ್ನು ದಿನಗೂಲಿ ಹತ್ತು ಸೆಂಟುಗಳಿಗೆ ಮಾಡುತ್ತಿದ್ದರು. ಕಡುಬಡವರಿಗೆ ವಾರಕ್ಕೆ ಎಪ್ಪತ್ತು ಘಂಟೆಗಳಷ್ಟು ಕಷ್ಟದ ದುಡಿತ ಅರೆಹೊಟ್ಟೆಯ ಅಲೆಮಾರಿ ಜೀವನಕ್ಕಿಂತ ಎಷ್ಟೋ ವಾಸಿಯಾಗಿತ್ತು.

ದಕ್ಷಿಣ ಸಂಸ್ಥಾನಗಳಲ್ಲಿ ಆಗರ್ಭ ಶ್ರೀಮಂತರಾದವರು ಬಹಳ ಕಡಿಮೆ. ಆದರೆ ಕೆಲವು ದಾಕ್ಷಿಣಾತ್ಯರು ಉತ್ತರದ ಆರ್ಥಿಕ ಕೇಂದ್ರಗಳಿಗೆ ಹೋದವರು ಹಣವಂತರಾದರು. ಇಂಥ ಅದೃಷ್ಟವಂತರು ಬೆರಳೆಣಿಸುವಷ್ಟು ಜನ, ಅವರಲ್ಲಿ ಇಬ್ಬರನ್ನು ಉಲ್ಲೇಖಿಸಬಹುದು: ಜಾನ್ ಇನ್‌ಮನ್ – ಈತ ಟೆನ್ನೆಸ್ಸೀ ಪ್ರಾಂತದವನು ಮತ್ತು ಮಾಜಿ ಕಾನ್‌ಫೆಡರೇಟ್ ಸೈನಿಕ. ಇವನು ನ್ಯೂಯಾರ್ಕಿನ ಸಟ್ಟಾ ಮಾರುಕಟ್ಟೆಯ ಒಳಹೊಕ್ಕು ಸಟ್ಟಾ ವ್ಯಾಪಾರವನ್ನು ಕಲಿತು ತನ್ನ ೩೫ನೆಯ ವಯಸ್ಸಿನಲ್ಲಿ ಒಂದೂವರೆ ಮಿಲಿಯನ್ ಡಾಲರ್ ಸಂಪಾದಿಸಿದ್ದನು. ಅಡಾಲ್ಫ್ ಆಕ್ಸ್ (Adloph Ochs) ಎಂಬ ಟೆನ್ನೆಸ್ಸಿ ಸಂಸ್ಥಾನದ ಚಟ್ಟನೂಗವಾಸಿ ಪತ್ರಕರ್ತ ನ್ಯೂಯಾರ್ಕಿಗೆ ವಲಸೆಹೋಗಿ ನ್ಯೂಯಾರ್ಕ್ ಟೈಂಸ್ ಪತ್ರಿಕೆಯನ್ನು ಸೇರಿ ಕ್ರಮೇಣ ಆ ಪತ್ರಿಕೆ ರಾಷ್ಟ್ರದ ಅತ್ಯಂತ ಪ್ರಮುಖ ವಾರ್ತಾಪತ್ರಿಕೆಯಾಗಿ ಬೆಳೆಯಲು ಕಾರಣ ಕರ್ತನಾದನು.

ಔದ್ಯೋಗೀಕರಣಕ್ಕೆ ಸಾಮಾಜಿಕ ಮತ್ತು ಆರ್ಥಿಕ ಪ್ರತಿಕ್ರಿಯೆಗಳು

ಔದ್ಯೋಗಿಕ ಬೆಳವಣಿಗೆ ಶೂನ್ಯದಲ್ಲಿ ಜರುಗುವ ಪ್ರಕ್ರಿಯೆಯಲ್ಲ. ಹೊಸ ಸಾಮಾಜಿಕ ಮತ್ತು ಆರ್ಥಿಕ ರೀತಿ ನೀತಿಗಳು ರಾಷ್ಟ್ರದಲ್ಲಿ ಬೆಳೆಯುತ್ತಿರುವ ಕೈಗಾರಿಕೆಗಳೊಡನೆ ಪರಸ್ಪರ ಕಲೆತು ಬದಲಾಗುತ್ತ ಹೋಗುತ್ತವೆ. ಪ್ರಪಂಚದ ನಾನಾ ಕಡೆಗಳಿಂದ ಕಷ್ಟ ಕಾರ್ಪಣ್ಯಗಳಿಂದ ಕಂಗಾಲಾಗಿ ಬಡವರು, ಮತದ್ವೇಷದ ಹಿಂಸೆಗೊಳಗಾದವರು ಅಮೆರಿಕಕ್ಕೆ ವಲಸೆ ಬರತೊಡಗಿದರು. ಮೊದಲು ವಲಸೆಗಾರರ ಸಂಖ್ಯೆ ಸಣ್ಣ ತೊರೆಯಂತೆ ಹರಿದುಬರುತ್ತಿತ್ತು. ಅಂತರ್ಯುದ್ಧಾನಂತರ ವಲಸೆಗಾರರು ಮಹಾಪೂರದಂತೆ ಧಾವಿಸಿ ಬರತೊಡಗಿದರು. ಕಾರ್ಮಿಕ ವರ್ಗ ತಮಗೂ ಮತ್ತು ತಮಗೆ ಕೆಲಸ ಕೊಡುವ ಶ್ರೀಮಂತವರ್ಗಕ್ಕೂ ನಡುವೆ ಇರುವ, ದಾಟಲು ದುಸ್ಸಾಧ್ಯವಾದ ಅಂತರವಿದ್ದರೂ, ತಮ್ಮ ಜೀವನಮಟ್ಟವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ, ಚೌಕಸಿ ಮಾಡುವ ಶಕ್ತಿಯನ್ನು (bargaining power) ಹೆಚ್ಚಿಸುವ ಹಾದಿಗಳನ್ನು ಹುಡುಕತೊಡಗಿದರು. ಒಟ್ಟು ಜನಸಂಖ್ಯೆಯಲ್ಲಿ – ಅಮೆರಿಕದಲ್ಲಿ ಹುಟ್ಟಿ ಬೆಳೆದವರದೆ ಒಂದು ವರ್ಗ. ಇವರಿಗೆ ತಾವು ದೇಶೀಯರು/ನಾಡಿಗರು (native born) ಎಂಬ ಹೆಮ್ಮೆ, ವಲಸೆ ಬಂದವರ ಬಗ್ಗೆ ಪೂರ್ವಾಗ್ರಹಪೀಡಿತರು. ತಮ್ಮ ಕೆಲಸಕ್ಕೆ ಎಲ್ಲಿ ಸಂಚಕಾರ ತರುತ್ತಾರೋ ಎನ್ನುವ ಅನುಮಾನ. ವಲಸೆಗಾರರು ಹಳ್ಳಿಗಳಲ್ಲಿ ನೆಲಸಲು ಪ್ರಾರಂಭಿಸಿದ ಮೇಲೆ ದೇಶೀಯರು ಹಳ್ಳಿಗಳಿಂದ ಪೇಟೆ ಪಟ್ಟಣಗಳಿಗೆ ಹೋಗಿ ನೆಲಸತೊಡಗಿದರು. ಈ ಎಲ್ಲ ಬದಲಾವಣೆಗಳು ಅಮೆರಿಕನ್ನರ ಜೀವನದಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸಿದವು, ಹಾಗೆಯೇ ಹೊಸ ಸಮಸ್ಯೆಗಳನ್ನೂ ಹುಟ್ಟು ಹಾಕಿದವು.

೧೮೬೦ರ ದಶಕದಲ್ಲಿ ಅಮೆರಿಕಕ್ಕೆ ವಲಸೆ ಬಂದವರಲ್ಲಿ ಶೇಕಡಾ ೮೦ ಭಾಗ ಇಂಗ್ಲೆಂಡ್, ಜರ್ಮನಿ, ಐರ್‌ಲ್ಯಾಂಡ್ ಮತ್ತು ಸ್ಕಾಂಡಿನೇವಿಯ ದೇಶದವರಾಗಿದ್ದರು.

ಅವರಲ್ಲಿ ಹೆಚ್ಚು ಮಂದಿ ಅಮೆರಿಕನ್ ಪಶ್ಚಿಮ ಪ್ರಾಂತದಲ್ಲಿ ಸಾಗುವಳಿ ಭೂಮಿ ಸಿಗುತ್ತದೆ ಎನ್ನುವ ಆಸೆಯಿಂದ ಬಂದವರು. ಈ ಉತ್ತರ ಯೂರೋಪಿಯನ್ನರು ಸವರ್ಣೀಯರೂ ಮತ್ತು ಸಹ ಸಂಸ್ಕೃತಿಯ ಹಿನ್ನೆಲೆ ಉಳ್ಳವರೂ ಆಗಿದ್ದರಿಂದ ಅವರಿಗೆ ಅಮೆರಿಕನ್ ಜೀವನಕ್ಕೆ ಹೊಂದಿಕೊಳ್ಳಲು ಬೇರೆ ವರ್ಣದ, ಭಿನ್ನ ಸಂಸ್ಕೃತಿಯ ವಲಸೆಗಾರರಿಗಿಂತ ಹೆಚ್ಚು ಕಷ್ಟವಾಗಲಿಲ್ಲ. ೧೮೮೦ರ ದಶಕದ ಮೊದಲಲ್ಲಿ ವಲಸೆಗಾರರ ಹಿನ್ನೆಲೆ ಬದಲಾಗುತ್ತ ಹೋಯಿತು. ಯೂರೋಪಿನ ಪಶ್ಚಿಮ ಮತ್ತು ಉತ್ತರದೇಶಗಳಲ್ಲಿ ಔದ್ಯೋಗೀಕರಣ ಪ್ರಾರಂಭವಾಯಿತು. ಔದ್ಯೋಗೀಕರಣದೊಂದಿಗೆ ಇನ್ನೂ ಎರಡು ಕಾರಣಗಳು ಸೇರಿದವು – ಕ್ಷೀಣಿಸುತ್ತಿರುವ ಜನನ ಪ್ರಮಾಣ (birth rate) ಮತ್ತು ತಾವಿರುವೆಡೆಯಲ್ಲೇ ಕೆಲಸಗಳು ದೊರೆಯುವ ಸಾಧ್ಯತೆ ಹೆಚ್ಚುತ್ತ ಹೋಯಿತು. ಈ ಕಾರಣಗಳಿಂದ ಯೂರೋಪಿನ ಪಶ್ಚಿಮ ಮತ್ತು ಉತ್ತರದಿಂದ ವಲಸೆಗಾರರು ಬರುವುದು ಕಡಿಮೆ ಯಾಯಿತು. ಅದೇ ಸಮಯದಲ್ಲಿ ಯೂರೋಪಿನ ದಕ್ಷಿಣ ಮತ್ತು ಪೂರ್ವ ದೇಶಗಳಲ್ಲಿನ ಪರಿಸ್ಥಿತಿಗಳು ಹದಗೆಟ್ಟು ಅಲ್ಲಿಂದ ವಲಸೆಗಾರಕ ಪ್ರವಾಹ ಅಮೆರಿಕಕ್ಕೆ ಹರಿಯತೊಡಗಿತು. ಈ ಪ್ರವಾಹಕ್ಕೆ ಅನೇಕ ದೇಶಗಳ ವಲಸೆಗಾರರ ಹಳ್ಳಗಳು ಬಂದು ಕೂಡಿದವು – ಇಟಲಿ, ಆಸ್ಟ್ರಿಯ, ಹಂಗೆರಿ, ರಷ್ಯಾ, ಫಿನ್‌ಲ್ಯಾಂಡ್, ಬಾಲ್ಕನ್ ದೇಶಗಳು, ಟರ್ಕಿ, ಗ್ರೀಸ್ ಮತ್ತು ಪೋರ್ಚುಗಲ್ ಮುಂತಾದ ದೇಶಗಳಿಂದ ವಲಸೆಗಾರಕ ಹಳ್ಳಗಳು ಹರಿದು ಬಂದವು. ಹೀಗೆ ಬಂದವರು ಕಡು ಬಡವರಾಗಿದ್ದರು ಮತ್ತು ಕೆಲಸಕ್ಕಾಗಿ ಹಾತೊರೆಯುತ್ತಿದ್ದರು. ಕೆಲಸ ಎನ್ನುವುದು ಈ ವಲಸೆಗಾರರ ಅಳಿವು ಉಳಿವಿನ ಪ್ರಶ್ನೆಯಾಗಿತ್ತು. ಆದರೆ ಇದು ಅಮೆರಿಕದ ಕಾರ್ಮಿಕರಲ್ಲಿ ಅಸಮಾಧಾನ ಉಂಟುಮಾಡಿತು. ಮೇಲಾಗಿ ಈಚೆಗೆ ಬಂದ ವಲಸೆಗಾರರಲ್ಲಿ ಬಹು ಸಂಖ್ಯಾತರು ಕ್ಯಾಥೊಲಿಕರು ಮತ್ತು ಯಹೂದ್ಯರು. ಪರಮತ ಸಹಿಷ್ಣುತೆ ಇಲ್ಲದ ಅಮೆರಿಕನ್ನರು ಈ ವಲಸೆಗಾರರನ್ನು ಸ್ವಾಗತಿಸಲು ತಯಾರಿರಲಿಲ್ಲ. ವರ್ಷ ವರ್ಷ ಫಸಲು ನಾಶ, ಕಡಿಮೆ ಬೆಲೆಗಳು ಮತ್ತು ಆರ್ಥಿಕ ಮುಗ್ಗಟ್ಟು, ಈ ಕಾರಣಗಳಿಂದಾಗಿ ಇಂಗ್ಲೆಂಡ್, ಐರ್‌ಲ್ಯಾಂಡ್ ಮತ್ತು ಇತರೆ ಪಶ್ಚಿಮ ಹಾಗೂ ಉತ್ತರ ಯೂರೋಪಿನ ರೈತರು, ರೈತಾಪಿ ಕೆಲಸಗಾರರು ಅಮೆರಿಕಕ್ಕೆ ವಲಸೆ ಬಂದರು. ಇದು ವಲಸೆಯ ಮೊದಲನೆಯ ಅಲೆ. ಇದನ್ನು ಹಿಂಬಾಲಿಸಿ ನಿಸ್ಸಾರವಾದ ಭೂಮಿ, ಹೊರಲಾರದ ತೆರಿಗೆ, ವಿದ್ಯಾಭ್ಯಾಸಕ್ಕೆ ಅವಕಾಶಗಳ ಅಭಾವ ಮತ್ತು ಭೂಸ್ವಾಮ್ಯತೆ ಪಡೆಯಲು ಅವಕಾಶವಿಲ್ಲದಿರುವುದು – ಈ ಕಾರಣಗಳಿಂದ ಇಟಲಿಯ ರೈತರು ಮತ್ತು ರೈತಾಪಿ ಕೆಲಸಗಾರರು, ಆಸ್ಟ್ರೊ-ಹಂಗೇರಿಯನ್ನರು ಮತ್ತು ಮತದ್ವೇಷದ ದಳ್ಳುರಿಯಲ್ಲಿ ಜೀವಿಸುವುದು ದುಸ್ತರವಾದ ರಷ್ಯಾದ ಯಹೂದ್ಯರು ಅಮೆರಿಕಕ್ಕೆ ವಲಸೆ ಬಂದರು. ಇದು ವಲಸೆಯ ಎರಡನೆಯ ಅಲೆ. ಅಮೆರಿಕದ ಇತಿಹಾಸದುದ್ದಕ್ಕೂ ವಲಸೆ ಗಾರರ ಅಲೆಗಳು ನಿರಂತರವಾಗಿ ಬಂದು ದಡ ಸೇರುವುದು ದೈನಂದಿನ ಸಾಮಾನ್ಯ

ಸಂಗತಿಯಾಗಿದೆ. ವಲಸೆಗಾರರನ್ನು ಹುಟ್ಟಿದ ದೇಶದಿಂದ ಕೆಲವು ಸನ್ನಿವೇಶಗಳು ಒಟ್ಟಾಗಿ ಅವರನ್ನು ಹೊರದೂಡಿದವು.

ಬೇರೆ ದೇಶಗಳಿಂದ ಅಮೆರಿಕಕ್ಕೆ ಯಾಕೆ ಜನ ವಲಸೆ ಬರುತ್ತಾರೆ? ಈ ಪ್ರಶ್ನೆಗೆ ನಾವು ಉತ್ತರ ಹುಡುಕಬೇಕಾದುದು ಅದರ ಆಕರ್ಷಕ ಸನ್ನಿವೇಶಗಳಲ್ಲಿ. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಅಮೆರಿಕದಲ್ಲಿ ವಿಸ್ತಾರಗೊಂಡು ಎಲ್ಲ ಕಡೆಗಳಿಗೂ ಹಬ್ಬುತ್ತಿದ್ದ ಕೈಗಾರಿಕೆಗಳು/ಉದ್ಯಮಗಳು, ಬೇರೆ ಬೇರೆ ಕ್ಷೇತ್ರಗಳಲ್ಲಿ – ವ್ಯವಸಾಯ, ಗಣಿ ಉದ್ಯಮ, ವಸ್ತುಗಳನ್ನು ತಯಾರಿಸುವುದು ರೈಲುಮಾರ್ಗಗಳು ಇತ್ಯಾದಿ ಉದ್ಯಮಗಳಲ್ಲಿ – ಕೆಲಸಗಾರರಿಗೆ ಬೇಡಿಕೆ ಅಪಾರವಾಗಿತ್ತು. ರೈಲುಮಾರ್ಗಗಳು ತಮ್ಮ ಅಕ್ಕ ಪಕ್ಕದ ಭೂಮಿಯನ್ನು ಮಾರಲು ಹವಣಿಸುತ್ತಿದ್ದವು. ಅವುಗಳ ಉದ್ದಕ್ಕೂ ಅಲ್ಲಲ್ಲಿ ಜನವಸತಿ ಯಾಗುವಂತೆ ಮಾಡುವುದು ರೈಲ್ವೆ ಕಂಪನಿಗಳ ಉದ್ದೇಶ. ಇದರಿಂದ ಅವರಿಗೆ ಎರಡು ರೀತಿಯ ಲಾಭವಿತ್ತು – ಭೂಮಿಯನ್ನು ಲಾಭದ ಬೆಲೆಗೆ ಮಾರುವುದು; ಆ ಭೂಮಿಯನ್ನು ಕೊಂಡ ಜನ ಅಲ್ಲಿ ನೆಲಸಿ ಪೇಟೆ ಪಟ್ಟಣಗಳು ಹುಟ್ಟಿಕೊಂಡು ರೈಲು ಸಾರಿಗೆಗೆ ಹೆಚ್ಚು ಗಿರಾಕಿಗಳು ಒದಗುವಂತಾಗುತ್ತದೆ ಎನ್ನುವ ಅವರ ದೂರಾಲೋಚನೆ. ಈ ಕೈಗಾರಿಕೋದ್ಯಮಗಳು ಮತ್ತು ವಲಸೆ ನಿರ್ವಹಣಾ ಇಲಾಖೆ ಸೇರಿ ವಲಸೆ ಬರುವಂತೆ ಆಹ್ವಾನಿಸುವ ಜಾಹೀರಾತುಗಳನ್ನು ಯೂರೋಪಿನ ದೇಶಗಳಲ್ಲಿ ಪ್ರಚಾರ ಮಾಡಿದರು. ಅಮೆರಿಕನ್ ಉಗಿ ಹಡಗುಗಳ ಕಂಪನಿಗಳು ಜಾಹೀರಾತು ಕಂಪನಿಗಳೊಡನೆ ಸಹಕರಿಸಿ ಅಮೆರಿಕದಿಂದ ರಫ್ತಾಗುವ ಸರಕುಗಳನ್ನು ಯೂರೋಪಿನ ಬಂದರುಗಳಲ್ಲಿ ಇಳಿಸಿ ವಾಪಸು ಖಾಲಿ ಬರುವುದರ ಬದಲು ವಲಸೆಗಾರರನ್ನು ತುಂಬಿಕೊಂಡು ಬರುತ್ತಿದ್ದವು. ಕೆಲವು ಕೆಲಸಗಾರರಿಗೆ ಕಂಪನಿಗಳೇ ಪ್ರಯಾಣದ ಹಣವನ್ನು ಮುಂಗಡವಾಗಿ ಕೊಟ್ಟು ಕರೆಸಿ, ನಂತರ ಅವರ ಸಂಬಳದಲ್ಲಿ ಕಂತಿನಲ್ಲಿ ಕೊಟ್ಟು ತೀರಿಸುವ ಅವಕಾಶ ಕೊಟ್ಟಿದ್ದರು. ಈ ಪದ್ಧತಿಯನ್ನು ೧೮೮೫ರಲ್ಲಿ ಸರ್ಕಾರ ರದ್ದುಗೊಳಿಸಿತು. ವಲಸೆಗಾರರಲ್ಲಿ ಬಹುಸಂಖ್ಯಾತರು ವಿಧಿಯಿಲ್ಲದೆ ಕಡಿಮೆ ಸಂಬಳಕ್ಕೆ ದುಡಿಯಬೇಕಾಯಿತು. ಅವರಲ್ಲಿ ಬಹಳ ಜನರ ಜೀವನಮಟ್ಟ ಉತ್ತಮಗೊಳ್ಳಲಿಲ್ಲ. ಕಾರ್ಯಕ್ಷೇತ್ರದಲ್ಲಿ ಪೂರ್ವಾಗ್ರಹ, ಶೋಷಣೆಗಳಿಗೆ ಗುರಿಯಾದರು. ಜೀವನದಲ್ಲಿ ಕಠಿಣ ಪರಿಸ್ಥಿತಿಗಳನ್ನು ಎದುರಿಸಬೇಕಾಯಿತು. ಹರಕು ಮುರುಕು ವಸತಿಗಳಲ್ಲಿ ವಾಸಮಾಡಬೇಕಾಗಿ ಬಂದವರು ತಮ್ಮೊಳಗೆ ಐಕ್ಯತೆ ಬೆಳೆಸಿ ಕೊಂಡರು. ಒಂದೇ ಸಂಸ್ಕೃತಿಯ ಹಿನ್ನೆಲೆ ಮತ್ತು ಒಂದೇ ಭಾಷೆಯಾಡುವ ಜನರು ಕೊಳಚೆ ಪ್ರದೇಶಗಳಲ್ಲಿ ಒಟ್ಟಾಗಿ ಜೀವಿಸುತ್ತಿದ್ದರು.

ಬಹುತೇಕ ವಲಸೆಗಾರರು ಹಳ್ಳಿಗಳಿಂದ ಬಂದವರು. ಆದರೆ ಅವರು ಅಮೆರಿಕದಲ್ಲಿ ಪಟ್ಟಣವಾಸಿಗಳಾದರು. ಏಕೆಂದರೆ ಕೆಲಸಗಳಿದ್ದುದು ಪೇಟೆ ಪಟ್ಟಣಗಳಲ್ಲಿ. ರಷ್ಯಾದಿಂದ ಬಂದವರು ಮಾತ್ರ ಹೆಚ್ಚಾಗಿ ನೆಬ್ರಾಸ್ಕ, ಕಾನ್ಸಾಸ್ ಮತ್ತು ಡಕೋಟ ಪ್ರಾಂತಗಳಲ್ಲಿ

ನೆಲಸಿದರು. ಹೊಸತಾಗಿ ಬಂದವರಲ್ಲಿ ವ್ಯವಸಾಯದ ಭೂಮಿ ಕೊಳ್ಳಲು ಹಣವಿರಲಿಲ್ಲ. ಭೂಮಿಯ ಬೆಲೆಯೂ ಹೆಚ್ಚಿತ್ತು. ಇಪ್ಪತ್ತನೆಯ ಶತಮಾನ ಕಾಲಿಡುವ ಸಮಯದಲ್ಲಿ ಹೊಸದಾಗಿ ಬಂದ ವಲಸೆಗಾರರು ಎಲ್ಲ ಕ್ಷೇತ್ರಗಳಲ್ಲಿ – ಹತ್ತಿಯ ಗಿರಣಿಗಳಲ್ಲಿ, ಉಕ್ಕಿನ ಕಾರ್ಖಾನೆಗಳಲ್ಲಿ, ಗಣಿಗಳಲ್ಲಿ, ತೈಲಶುದ್ಧೀಕರಣ ಉದ್ಯಮದಲ್ಲಿ ಮತ್ತು ಉತ್ಪಾದನಾ ಕೇಂದ್ರಗಳಲ್ಲಿ – ಎಲ್ಲಿ ಕೆಲಸ ಸಿಗುತ್ತದೆಯೋ ಅಲ್ಲಿ ದುಡಿಯತೊಡಗಿದರು. ಈ ಕ್ಷೇತ್ರಗಳಲ್ಲಿ ಕೆಲಸ ಸಿಗದವರು ಹಣವಂತರ ಮನೆಗಳಲ್ಲಿ ಆಳುಗಳಾಗಿ ಕೆಲಸ ಮಾಡತೊಡಗಿದರು.

ನೆರೆಯ ದೇಶವಾದ ಮೆಕ್ಸಿಕೊದಿಂದಲೂ ಹೆಚ್ಚು ವಲಸೆಗಾರರು ಬರಲಾರಂಭಿಸಿದರು. ಇವರಲ್ಲಿ ದನಗಾಹಿಗಳು, ಕುರಿ ಕಾಯುವವರು, ರೈತಾಪಿ ಕೆಲಸಗಾರರೂ ಇದ್ದರು. ಆಗ ಮೆಕ್ಸಿಕೊದಲ್ಲಿ ಪರ್‌ಫಿರಿಯೋ ಡಿಯಾಜ್ (Porfirio Diaz) ನ ದಬ್ಬಾಳಿಕೆ ನಡೆದಿತ್ತು. ರೈತರು ಮತ್ತು ಇಂಡಿಯನ್ನರ ಬಗ್ಗೆ ದ್ವೇಷ ಬೆಳೆಸಿಕೊಂಡಿದ್ದ ಈತ ಅವರಿಗೆ ಅಪಾರ ಕಷ್ಟಗಳನ್ನು ತಂದೊಡ್ಡಿದನು. ಆರ್ಥಿಕ ಮತ್ತು ವರ್ಣ ಪಕ್ಷಪಾತಕ್ಕೆ ಗುರಿಯಾದ ಇವರು ಹಿಂಸೆ ತಾಳಲಾರದೆ ಸಾವಿರಗಟ್ಟಲೆ ಜನ ಅಮೆರಿಕದ ಪಶ್ಚಿಮ ಪ್ರಾಂತಗಳಿಗೆ ವಲಸೆ ಬಂದರು. ಹೀಗೆ ಬಂದವರಲ್ಲಿ ಕೆಲವರು ಕ್ರಾಂತಿಕಾರರು ಸರ್ವಾಧಿಕಾರಿ ಡಿಯಾಜ್‌ನನ್ನು ಪದಚ್ಯುತಿಗೊಳಿಸಲು ಅಮೆರಿಕದಲ್ಲಿದ್ದುಕೊಂಡು ಮೆಕ್ಸಿಕೊದ ಜನ ದಂಗೆ ಏಳುವಂತೆ ಮಾಡಲು ಪ್ರಯತ್ನಿಸುತ್ತಿದ್ದರು. ಹಿಂಸೆ ಮತ್ತು ರಕ್ತಪಾತವನ್ನು ತಪ್ಪಿಸಿಕೊಳ್ಳಲು ಸುಮಾರು ಒಂದು ಮಿಲಿಯನ್ ಮೆಕ್ಸಿಕನ್ನರು ದೇಶ ಬಿಟ್ಟು ಓಡಿ ಬಂದು ಹತ್ತಿಯ ಹೊಲಗಳಲ್ಲಿ, ಕಬ್ಬಿನ ಗದ್ದೆಗಳಲ್ಲಿ ಮತ್ತು ಇತರ ಕೃಷಿ ಕ್ಷೇತ್ರಗಳಲ್ಲಿ ಆಳುಗಳಾಗಿ ಕೆಲಸ ಮಾಡತೊಡಗಿದರು.

೧೮೪೦ರ ದಶಕದಲ್ಲಿ ವಲಸೆಗಾರರ ವಿರುದ್ಧ ಭಾವನೆಗಳು ಅತಿರೇಕದ ಮಟ್ಟಕ್ಕೇರಿದವು. ಯುದ್ಧ ಪೂರ್ವದಲ್ಲಿ ದೇಶೀಯತೆಗೆ ಹಲವು ಕಾರಣಗಳಿದ್ದವು. ಇಂಗ್ಲಿಷ್ ಪ್ರಾಟೆಸ್ಟೆಂಟ್ ವಂಶಸ್ಥರಾದ ಅಮೆರಿಕನ್ನರ ಅಂತರಂಗದಲ್ಲಿ ರೋಮನ್ ಕ್ಯಾಥೊಲಿಕರ ಬಗ್ಗೆ ಒಂದು ರೀತಿಯ ಭಯ ಆಳವಾಗಿ ಬೇರೂರಿತ್ತು. ರೋಮನ್ ಕ್ಯಾಥೊಲಿಕರ ಪಾರಮಾರ್ಥಿಕ ನಂಬಿಕೆಗಳು ಅಮೆರಿಕನ್ನರ ವ್ಯಕ್ತಿಸ್ವಾತಂತ್ರ್ಯಕ್ಕೆ ವಿರುದ್ಧವಾದುದರಿಂದ ಕ್ಯಾಥೊಲಿಕರ ಸಂಖ್ಯೆ ಹೆಚ್ಚಿದರೆ ಸಮಾಜ ಮುಂದುವರಿಯುವ ಬದಲು ಹಿಂದೆ ಸರಿದು ಹಳೆಯ ಸಂಪ್ರದಾಯಗಳಿಗೆ ಶರಣಾಗಿ, ವ್ಯಕ್ತಿಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಸಂಭವ ಅಮೆರಿಕನ್ನರಿಗೆ ದಿಗಿಲು ಹುಟ್ಟಿಸಿತ್ತು. ಅನೇಕ ವಲಸೆಗಾರರು ಯೂರೋಪಿನಲ್ಲಿ ನಡೆದ ರಾಜಕೀಯ ಕ್ರಾಂತಿಯಲ್ಲಿ ಭಾಗವಹಿಸಿದ್ದರು. ಆದ್ದರಿಂದ ಅವರು ಅಮೆರಿಕದಲ್ಲಿ ಅರಾಜಕತೆ ಉಂಟುಮಾಡಬಹುದೆಂದು ಗುಮಾನಿಪಟ್ಟಿದ್ದರು. ಹೀಗೆ ಕಾರಣ ಇದ್ದೋ ಇಲ್ಲದೆಯೋ ವಲಸೆಗಾರರನ್ನು ಪೂರ್ವಾಗ್ರಹ ಮತ್ತು ದ್ವೇಷಾಸೂಯೆಗಳಿಗೆ ಗುರಿ ಮಾಡಿದ್ದರು. ಇದೇ ದಶಕದಲ್ಲಿ

ಬಂದ ವಲಸೆಗಾರರು ಅಮೆರಿಕನ್ನರಲ್ಲಿ ಇನ್ನೂ ಹೆಚ್ಚಿನ ಭಯ ಮತ್ತು ಹಿಂಸಾಪ್ರವೃತ್ತಿಯನ್ನು ಪ್ರೇರೇಪಿಸಿದರು. ವಲಸೆಗಾರರು ಅನಕ್ಷರಸ್ಥರು, ಕೊಳಕರು, ಬಡವರು ಎಂದು ಹೀಗಳೆದು, ಹಳೆಯ ಅಪರಿಚಿತ ಪದ್ಧತಿಗಳಿಗೆ ಅಂಟಿಕೊಂಡ ಅನಾಗರಿಕರು ಎಂದು ಆಪಾದಿಸಿದರು. ವಲಸೆಗಾರರಲ್ಲಿ ಹೆಚ್ಚಿನ ಜನನ ಪ್ರಮಾಣ ಕೆಲವು ಅಮೆರಿಕನ್ನರಲ್ಲಿ ಭಯ ಹುಟ್ಟಿಸಿತು. ಇದೇ ರೀತಿ ಮುಂದುವರಿದರೆ ವಲಸೆಗಾರರ ಜನಸಂಖ್ಯೆ ಹೆಚ್ಚಾಗಿ ಬಿಳಿಯ ಆ್ಯಂಗ್ಲೊ ಸಾಕ್ಸನ್ ಪ್ರಾಟೆಸ್ಟೆಂಟರು ಅಲ್ಪಸಂಖ್ಯಾತರಾಗಿ, ಅಧಿಕಾರ ಕಳೆದುಕೊಂಡು, ವರ್ಣಸಂಕರ ದಿಂದ ವಲಸೆಗಾರರ 'ಕೀಳು ರಕ್ತ' (inferior blood) ಹಂಚಿಕೊಂಡು ಬೆರಕೆ ಕುಲದವರಾಗುತ್ತೇವೆ ಎನ್ನುವ ಭಯ ಅವರನ್ನು ಕಾಡುತ್ತಿತ್ತು. ಅಂತಿಮವಾಗಿ ದೇಶೀಯರು ವಲಸೆಗಾರರು ತಮ್ಮ ದೇಶಗಳಿಂದ ತಂದ ಕ್ರಾಂತಿಕಾರಕ ತತ್ವಗಳಾದ ಸಮಾಜವಾದ, ಸಮತಾವಾದ, ಅನಾಯಕತ್ವಗಳನ್ನು ಅಮೆರಿಕದಲ್ಲಿ ಪ್ರಚಾರ ಮಾಡಿ, ಅಮೆರಿಕದ ಪ್ರಜಾರಾಜ್ಯವನ್ನು ಕಡೆಗಣಿಸಿ ಅರಾಜಕತೆಯನ್ನುಂಟುಮಾಡುತ್ತಾರೆ ಎಂದು ಆಪಾದಿಸಿದರು. ಹೀಗೆ ವಲಸೆಗಾರರನ್ನು ಪಿತೂರಿಗಾರರು ಎಂದು ಆಪಾದಿಸಿದ ಅಮೆರಿಕನ್ ಬಂಡವಾಳ ಗಾರರೆ ಕಾರ್ಮಿಕ ಮುಷ್ಕರಗಳನ್ನು ಹತ್ತಿಕ್ಕಲು ಆ ವಲಸೆಗಾರರನ್ನೇ ಮುಷ್ಕರ ಹೂಡಿದ ಕಾರ್ಮಿಕರ ಸ್ಥಾನಗಳಿಗೆ ನೇಮಿಸುತ್ತಿದ್ದರು!

ಅಮೆರಿಕನ್ ಕಾರ್ಮಿಕರು ಹೊಸ ವಲಸೆಗಾರರ ಆಗಮನವನ್ನು ವಿರೋಧಿಸುತ್ತಿದ್ದರು. ಅವರು ಹೆಚ್ಚಿನ ವೇತನಗಳಿಗಾಗಿ ಹೋರಾಡುತ್ತಿರುವಾಗ ಈ ಹೊಸಬರು ಬಂದು ಕೆಲಸ ಸಿಕ್ಕರೆ ಸಾಕೆಂದು ಎಷ್ಟು ವೇತನ ಕೊಡುತ್ತಾರೋ ಅಷ್ಟೆ ಸಾಕೆಂದು ಕೆಲಸಕ್ಕೆ ಸೇರುತ್ತಿದ್ದರು. ಇದು ಕಾರ್ಮಿಕರ ಜೀವನ ಮಟ್ಟವನ್ನು ಉತ್ತಮಗೊಳಿಸಲು ಶ್ರಮಿಸುತ್ತಿದ್ದ ಕಾರ್ಮಿಕರ ಸಂಘಗಳಿಗೆ ದೊಡ್ಡ ಸಮಸ್ಯೆಯಾಯಿತು. ಹೊಸ ವಲಸೆಗಾರರನ್ನು ಸಂಘಟಿಸುವುದು ಕಷ್ಟವಾಯಿತು. ಏಕೆಂದರೆ ಅವರಲ್ಲಿ ಹೆಚ್ಚು ಜನಕ್ಕೆ ಇಂಗ್ಲಿಷ್ ಮಾತನಾಡಲು ಬರುತ್ತಿರಲಿಲ್ಲ. ಕ್ರಮೇಣ ಹೊಸಬರು ಹಳಬರಿಂದ ಕಲಿತು ತಮ್ಮ ಹಿತಸಾಧನೆಗಾಗಿ ಕಾರ್ಮಿಕರ ಸಂಘಗಳನ್ನು ಸೇರತೊಡಗಿದರು.

ಪೌರಾತ್ಯ (Eastren) ವಲಸೆಗಾರರು ಎಲ್ಲರಿಗಿಂತ ಹೆಚ್ಚು ವರ್ಣದ್ವೇಷಕ್ಕೆ ಗುರಿಯಾಗಿ ಭೇದ ಭಾವ/ಪಕ್ಷಪಾತಗಳಿಗೆ ಬಲಿಯಾದರು. ಚೀನೀಯರು, ಜಪಾನೀಯರು ಮತ್ತು ಇತರ ಪೌರ್ವಾತ್ಯರು ವರ್ಣದ್ವೇಷಿಗಳ ಹಿಂಸಾಚಾರಗಳಿಗೆ ಗುರಿಯಾದರು. ಇವರ ಮೇಲೆ ಹಲ್ಲೆಗಳು ಹೆಚ್ಚುತ್ತಾ ಹೋಗಿ ಕಡೆಗೆ ವಲಸೆ ಬರುವುದನ್ನು ನಿಲ್ಲಿಸಬೇಕೆಂಬ ಸಾರ್ವಜನಿಕ ಅಭಿಪ್ರಾಯದ ಒತ್ತಾಯದಿಂದ ಕಾಂಗ್ರೆಸ್ ಒಂದು ವಿಚಾರಣಾಸಮಿತಿಯನ್ನು ಸ್ಥಾಪಿಸಿತು. ಈ ಸಮಿತಿ ತನ್ನ ಫಲಿತಾಂಶಗಳನ್ನು ೧೯೧೦ರಲ್ಲಿ 'ಡಿಲ್ಲಿಂಗ್‌ಹ್ಯಾಮ್ ಸಮಿತಿಯ ವರದಿ' (The Dillingham Commission Report) ಯಲ್ಲಿ ಪ್ರಕಟಿಸಿತು. ಆದರೆ ಈ ವರದಿ ವಲಸೆಗಾರರನ್ನು ಕುರಿತ ಊಹಾಪೋಹಗಳ ಆಧಾರಿತವಾದ, ವರ್ಣದ್ವೇಷ ಮತ್ತು ಪಕ್ಷಪಾತದಿಂದ ಕೂಡಿದ ಜನಪ್ರಿಯ ಅಭಿಪ್ರಾಯಗಳ ಅಧಿಕೃತ ಪಟ್ಟಿಯಾಗಿತ್ತು.

ಅಮೆರಿಕ ಸಂಯುಕ್ತ ಸಂಸ್ಥಾನಗಳು ನಿರ್ಮಿತಗೊಂಡಿದ್ದು ವಲಸೆಗಾರರಿಂದ, ವಲಸೆಗಾರರಿಗಾಗಿ. ಆದಾಗ್ಯೂ ೧೮೮೦ರ ದಶಕದಲ್ಲಿ ವಲಸೆಯನ್ನು ನಿಯಂತ್ರಿಸಬೇಕೆಂದು ಅಮೆರಿಕನ್ನರು ಸರ್ಕಾರವನ್ನು ಒತ್ತಾಯಿಸಿದರು. ಡೆನ್ನಿಸ್ ಕೀಯರ್ನಿ (Dennis Kearney) ಮತ್ತು ಅವನ 'ಕಾರ್ಮಿಕ ಪಕ್ಷ' ಚೀನೀಯ ವಲಸೆಗಾರರ ವಿರುದ್ಧ ಪ್ರಚಾರ ಮಾಡತೊಡಗಿದರು. ಚೀನೀಯರು ನೀತಿಗೆಟ್ಟವರು ಮತ್ತು ಅತಿಕಡಿಮೆ ಸಂಬಳಕ್ಕೆ ಕೆಲಸ ಮಾಡುವಂಥ ಹೀನಸ್ಥಿತಿಗೆ ಇಳಿದಿರುವವರು ಎಂದು ಖಂಡಿಸಿದರು. ಅವರ ಪ್ರಚಾರದ ಪರಿಣಾಮವಾಗಿ ೧೮೮೨ರಲ್ಲಿ 'ಚೀನೀಯರ ಬಹಿಷ್ಕಾರ ಕಾಯಿದೆ' (Chinese Exclusion Act)ಯನ್ನು ಜಾರಿಗೆ ತಂದರು. ಅದೇ ಸಮಯದಲ್ಲಿ ಕಾಂಗ್ರೆಸ್ ಯಾರಿಗೂ ಬೇಡವಾದ, 'ಯಾರೂ ಅಪೇಕ್ಷೆ ಪಡದ' ಜನರು ಅಮೆರಿಕವನ್ನು ಪ್ರವೇಶಿಸುವುದನ್ನು ನಿಷೇಧಿಸಿತು. ಅಮೆರಿಕ ಪ್ರವೇಶಿಸಿದ ವಲಸೆಗಾರರ ಮೇಲೆ ತಲಾ ೫೦ ಸೆಂಟ್ ತಲೆಗಂದಾಯವನ್ನು ವಿಧಿಸಿತು. ವಲಸೆ ಬರುವುದನ್ನು ತೀವ್ರವಾಗಿ ವಿರೋಧಿಸಿದವರು ಅಮೆರಿಕ ಪ್ರವೇಶಿಸಲು ಇಚ್ಛಿಸುವವರು ಅರ್ಹತೆ ಪಡೆದಿರಬೇಕು ಎಂದು ವಾದಿಸಿದರು. ಈ ಅರ್ಹತೆಯನ್ನು ನಿರ್ಧರಿಸಲು ಒಂದು ಪರೀಕ್ಷೆ ತೆಗೆದುಕೊಳ್ಳುವಂತೆ ಮಾಡಿದರು. ಇದು ಅನಕ್ಷರಸ್ಥರಿಗೆ ಪ್ರವೇಶ ನಿಷೇಧಿಸುವ ಸಾಧನವಾಗಿತ್ತು. ೧೮೯೭ರಲ್ಲಿ ಕಾಂಗ್ರೆಸ್ ಈ ಪರೀಕ್ಷೆಗೆ ಒಪ್ಪಿಗೆ ನೀಡಿತು. ಆದರೆ ಅಧ್ಯಕ್ಷ ಮೆಕಿನ್‌ಲಿ (McKinley) ಅದನ್ನು 'ವೀಟೋ'ದಿಂದ ರದ್ದುಗೊಳಿಸಿದನು. ಆದರೂ ವಿದ್ಯಾರ್ಹತೆಯ ಪರೀಕ್ಷೆಯ ಪರವಾಗಿ ಜನರ ಒತ್ತಾಯ ಹೆಚ್ಚುತ್ತ ಹೋಯಿತು. ಇದಕ್ಕೆ ಮಣಿದು ಕಾಂಗ್ರೆಸ್ ೧೯೧೭ರಲ್ಲಿ 'ಹದಿನಾರು ವರ್ಷದ ಅನಕ್ಷರಸ್ಥರಿಗೆ ಪ್ರವೇಶ ನಿಷೇಧಿಸುವ ಕಾಯಿದೆ'ಯನ್ನು ಜಾರಿಗೆ ತಂದಿತು. ಈ ಕಾಯಿದೆ ವಲಸೆಗಾರರ ಪ್ರವಾಹವನ್ನು ತಡೆಗಟ್ಟುವ ದಿಕ್ಕಿನಲ್ಲಿ ಸರ್ಕಾರ ಇಟ್ಟ ಮೊಟ್ಟ ಮೊದಲ ದಿಟ್ಟ ಹೆಜ್ಜೆ.

ಅಮೆರಿಕದಲ್ಲಿ ನಗರೀಕರಣ

ಅಂತರ್ಯುದ್ಧದಿಂದ ಒಂದನೆಯ ಜಾಗತಿಕ ಯುದ್ಧದವರೆಗಿನ ಅವಧಿಯಲ್ಲಿ ತಂತ್ರಜ್ಞಾನದ ಹಾದಿಯಲ್ಲಿ ಅಮೆರಿಕ ದೈತ್ಯ ಹೆಜ್ಜೆಗಳನ್ನಿಟ್ಟು ಕೈಗಾರಿಕಾ ಪ್ರಪಂಚದ ನಾಯಕತ್ವದ ಪಟ್ಟಕ್ಕೇರಿತು. ವಲಸೆಗಾರರ ಸಂಖ್ಯೆಯಲ್ಲಿ ಹೆಚ್ಚಳ ಮತ್ತು ಹಳ್ಳಿಯ ಜನ ಬೇಸಾಯವನ್ನು ಬಿಟ್ಟು ಕಾರಕೂನ ಮತ್ತು ಕರಣಿಕ ಕೆಲಸಗಳನ್ನು ಹುಡುಕಿಕೊಂಡು ಅಧಿಕ ಸಂಖ್ಯೆಗಳಲ್ಲಿ ಪೇಟೆ ಪಟ್ಟಣಗಳನ್ನು ಸೇರತೊಡಗಿದರು. ಈ ಎರಡು ಸಂಗತಿಗಳು ಅಮೆರಿಕದ ಅಭಿವೃದ್ಧಿ ಪ್ರಕ್ರಿಯೆಯ ಪ್ರಮುಖ ಅಂಶಗಳು. ೧೭೯೦ರಲ್ಲಿ ಅಮೆರಿಕದ ಮೊದಲನೆಯ ಜನಗಣತಿ ಜರುಗಿತು. ಅದರ ಅಂಕಿ ಅಂಶಗಳಿಂದ ೮೦೦೦ ಅಥವಾ ಹೆಚ್ಚಿನ ಜನಸಂಖ್ಯೆಯಿದ್ದ ಊರುಗಳಲ್ಲಿ ವಾಸ ಮಾಡುತ್ತಿದ್ದವರು ದೇಶದ ಜನಸಂಖ್ಯೆಯ ಶೇಕಡಾ ಮೂರರಷ್ಟು ಮಾತ್ರ ಎಂದು ತಿಳಿದುಬರುತ್ತದೆ. ೧೮೯೦ರಲ್ಲಿ ಶೇಕಡಾ ೮೦ರಷ್ಟು ಜನ ಇನ್ನೂ ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದರು. ೧೮೯೦ರ ಹೊತ್ತಿಗೆ ಅಮೆರಿಕದಲ್ಲಿ

೮೦೦೦೦ಕ್ಕಿಂತ ಹೆಚ್ಚು ಜನವಸತಿ ಇದ್ದ ೪೪೦ ಪಟ್ಟಣಗಳಿದ್ದವು. ೧೯೦೦ರ ಹೊತ್ತಿಗೆ ದೇಶದ ಜನಸಂಖ್ಯೆಯ ಶೇಕಡಾ ೪೦ ಭಾಗ ನಗರವಾಸಿಗಳಾಗಿದ್ದರು. ನ್ಯೂಯಾರ್ಕ್ ನಗರ ಹಿಂದೆಂದೂ ಇರದಷ್ಟು ತೀವ್ರಗತಿಯಲ್ಲಿ ಬೆಳೆಯತೊಡಗಿತು. ಹೆಚ್ಚಿನ ಬೆಳವಣಿಗೆ ಹೊಂದುತ್ತಿದ್ದ ಇತರ ನಗರಗಳೆಂದರೆ, ಬಫಲೋ, ಡೆಟ್ರಾಯಿಟ್, ಮಿಲ್‌ವಾಕಿ, ಚಿಕಾಗೊ, ಸೇಂಟ್ ಪಾಲ್ ಮತ್ತು ಡೆನ್‌ವರ್.

ನಗರೀಕರಣ ಮತ್ತು ಹಳ್ಳಿಗಳ ನಿರ್ವಸತಿ ದೇಶದ ಎಲ್ಲಾ ಕಡೆ ಒಂದೇ ರೀತಿಯಲ್ಲಿ ನಡೆಯಲಿಲ್ಲ. ಉತ್ತರ ಅಟ್ಲಾಂಟಿಕ್ ಸಂಸ್ಥಾನಗಳಲ್ಲಿ ಮತ್ತು ಮಹಾಸರೋವರಗಳ ಪ್ರಾಂತದಲ್ಲಿ ಹಳ್ಳಿಯಿಂದ ಪಟ್ಟಣಗಳಿಗೆ ವಲಸೆ ಹೋಗುವವರ ಸಂಖ್ಯೆ ಅಧಿಕವಾಗಿತ್ತು. ಶಾಂತಮಹಾಸಾಗರ ಪ್ರದೇಶ ಕೂಡ ತೀವ್ರಗತಿಯ ನಗರೀಕರಣಕ್ಕೆ ಒಳಗಾಯಿತು. ನಗರೀಕರಣದಲ್ಲಿ ದಕ್ಷಿಣ ಸಂಸ್ಥಾನಗಳು ಹಿಂದೆ ಬಿದ್ದವು. ೧೯೧೦ರಲ್ಲಿ ದಕ್ಷಿಣದ ಜನಸಂಖ್ಯೆಯಲ್ಲಿ ಶೇಕಡಾ ೨೦ ಭಾಗ ಮಾತ್ರ ಪಟ್ಟಣವಾಸಿಗಳಾಗಿದ್ದರು. ಪಶ್ಚಿಮ ಪರ್ವತಪ್ರದೇಶ ಮತ್ತು ಬಯಲು ಸೀಮೆಗಳಲ್ಲಿ ಅಲ್ಲೊಂದು ಇಲ್ಲೊಂದು ಪಟ್ಟಣಗಳನ್ನು ಕಾಣಬಹುದಿತ್ತು. ನಗರಗಳು ಜನಗಳಿಗೆ ಪ್ರಬಲವಾದ ಆರ್ಥಿಕ ಆಕರ್ಷಣೆ ಕೇಂದ್ರಗಳಾಗಿದ್ದವು. ಉದ್ಯಮಗಳಲ್ಲಿ ಊರ್ಧ್ವಮುಖ ಚಲನೆಯ ಅವಕಾಶಗಳು ಜನರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದ್ದವು. ಕೈಗಾರಿಕೆಗಳಲ್ಲಿ ಯಂತ್ರೀಕರಣದಿಂದಾದ ಕಾರ್ಯ ವೈವಿಧ್ಯತೆಯನ್ನು ವ್ಯವಸಾಯಕ್ಕೆ ಹೋಲಿಸಿದರೆ ವ್ಯವಸಾಯ ವೈವಿಧ್ಯತೆ ಇಲ್ಲದ, ರೇಜಿಗೆ ಹಿಡಿಸುವ ಉದ್ಯಮವಾಗಿ ತೋರಿಬಂತು. ಮೇಲಾಗಿ ವ್ಯವಸಾಯ ಕ್ಷೇತ್ರ ಹತ್ತೊಂಬತ್ತನೆಯ ಶತಮಾನದ ಕಡೆಯ ಇಪ್ಪತ್ತು ವರ್ಷಗಳಲ್ಲಿ ಆರ್ಥಿಕ ಮುಗ್ಗಟ್ಟಿಗೆ ಒಳಗಾಗಿತ್ತು. ಕಡಿಮೆ ಫಸಲು, ರೈತರಿಗೆ ಜಮೀನು ಅಡಮಾನದ ಕಂತುಗಳನ್ನು ಕಟ್ಟುವುದೆ ಕಷ್ಟವಾಗಿತ್ತು. ನ್ಯೂ ಇಂಗ್ಲೆಂಡ್ ಪ್ರಾಂತದಲ್ಲಿ ನಡುಪಶ್ಚಿಮ ಪ್ರಾಂತಗಳಲ್ಲಿ ರೈತರು ಅಧಿಕ ಸಂಖ್ಯೆಯಲ್ಲಿ ವ್ಯವಸಾಯವನ್ನು ತ್ಯಜಿಸಿ ಪಟ್ಟಣವಾಸಿಗಳಾದರು. ಆ ಚಾರಿತ್ರಿಕ ಅವಧಿಯಲ್ಲಿ ಇಡೀ ಹಳ್ಳಿಗಳೇ ನಿರ್ಜನವಾದ ನಿದರ್ಶನಗಳು ಬೇಕಾದಷ್ಟು ಕಂಡುಬರುತ್ತವೆ. ಬಡವ ಬಲ್ಲಿದನಾದ ದಂತಕತೆಗಳು ಜನಪದ ಸಾಹಿತ್ಯದಲ್ಲಿ ಸಾಕಷ್ಟು ಸೇರಿಕೊಂಡು ಜನರ ಕುತೂಹಲವನ್ನು ಕೆರಳಿಸಿದ್ದವು. ಬಹಳ ಜನ ಮುಂದೆ ಸಿರಿವಂತರಾಗುವ ಸಿಹಿ ಸ್ವಪ್ನದ ಬೆನ್ನೇರಿ ಬಂದು ನಗರ ಸೇರಿದರು. ಇವರಲ್ಲಿ ಬಹುಸಂಖ್ಯಾತರ ಸ್ವಪ್ನ ಕನ್ನಡಿಯಲ್ಲಿ ಕಂಡ ಗಂಟಾಯಿತು. ಅಮೆರಿಕಕ್ಕೆ ಹೊಸದಾಗಿ ವಲಸೆ ಬಂದವರು ಕಡುಬಡವರು. ಅವರಿಗೆ ತಕ್ಷಣ ಹಣದ ಅವಶ್ಯಕತೆ ಇದ್ದುದರಿಂದ ಮತ್ತು ನಗರದಲ್ಲಿ ಕೆಲಸ ದೊರೆಯುವ ಅವಕಾಶಗಳು ಹೆಚ್ಚಾಗಿದ್ದುದರಿಂದ, ಅವರು ನಗರವಾಸಿಗಳಾಗುವುದು ಅನಿವಾರ್ಯವಾಗಿತ್ತು. ೧೮೯೦ರಲ್ಲಿ ನ್ಯೂಯಾರ್ಕ್ ನಗರದ ಐದು ನಗರವಾಸಿಗಳಲ್ಲಿ ಒಬ್ಬ ಹೊರದೇಶದಲ್ಲಿ ಹುಟ್ಟಿದವನು ಅಥವಾ ವಲಸೆ ಬಂದು ನೆಲಸಿದವರ ಸಂತತಿಯವನಾಗಿದ್ದನು.

ತಂತ್ರಜ್ಞಾನ ನಗರಜೀವನವನ್ನು ಅನುಕೂಲಕರವಾಗಿ ಮಾಡಿತು. ವಿಜ್ಞಾನದ ಸಂಶೋಧನೆಗಳು ನಗರವಾಸಿಗಳಿಗೆ ಹಿಂದೆ ಎಂದೂ ಇರದಂಥ ಸೌಕರ್ಯಗಳನ್ನು – ಬೆಚ್ಚನೆಯ ಮನೆ, ನಳಗಳ ಮೂಲಕ ಮನೆಗಳ ಒಳಗಡೆ ನೀರಿನ ವ್ಯವಸ್ಥೆ – ಇವು ಹಳ್ಳಿಗಳಲ್ಲಿ ಆಗ ದೊರೆಯದ ಸೌಕರ್ಯಗಳಾಗಿದ್ದವು. ಥಾಮಸ್ ಎಡಿಸನ್ ಸಂಶೋಧಿಸಿದ ದೀಪದ ಬುರುಡೆಗಳು ಆಗಲೇ ಉತ್ಪಾದನೆಯಾಗುತ್ತಿದ್ದ ವಿದ್ಯುಚ್ಛಕ್ತಿಯನ್ನು ಬಳಸಿಕೊಂಡು ರಾತ್ರಿಯಲ್ಲಿ ನಗರಗಳು ಜಗಜಗಿಸುವಂತೆ ಮಾಡಿದವು. ೧೮೭೬ರಲ್ಲಿ ಅಲೆಕ್ಸಾಂಡರ್ ಬೆಲ್ ದೂರವಾಣಿಯನ್ನು ಕಂಡುಹಿಡಿದನು. ೧೮೮೦ರ ಹೊತ್ತಿಗೆ ೮೫ ಅಮೆರಿಕನ್ ನಗರಗಳಲ್ಲಿ ದೂರವಾಣಿ ವಿನಿಮಯ ಕೇಂದ್ರಗಳು ಸ್ಥಾಪಿತಗೊಂಡಿದ್ದವು. ೧೯೦೦ರ ಹೊತ್ತಿಗೆ ದೇಶದ ಬಹು ಭಾಗ ದೂರವಾಣಿ ತಂತಿಗಳ ಜಾಲದಿಂದ ಆವೃತಗೊಂಡಿತ್ತು.

ನಗರಗಳಲ್ಲಿ ಜನಸಂಖ್ಯೆ ಹೆಚ್ಚಾದಂತೆ ಸಾರಿಗೆ ವ್ಯವಸ್ಥೆಯನ್ನು ಉತ್ತಮಗೊಳಿಸುವುದು ಅಗತ್ಯವಾಯಿತು. ಮಹಾನಗರಗಳಲ್ಲಿ ರಸ್ತೆ ರೈಲುಗಳು ಓಡಾಡಲು ಪ್ರಾರಂಭಿಸಿದವು. ಆದರೆ ಅವು ಬಹು ನಿಧಾನವಾಗಿ ಚಲಿಸುತ್ತಿದ್ದವು. ೧೮೮೭ರಲ್ಲಿ ವರ್ಜೀನಿಯಾ ಪ್ರಾಂತದ ರಿಚ್‌ಮಂಡ್ ನಗರದಲ್ಲಿ ವಿದ್ಯುಚ್ಛಕ್ತಿ ಚಾಲಿತ ಟ್ರಾಲಿ/ಟ್ರಾಮ್ ಗಾಡಿಗಳು ಬಳಕೆಗೆ ಬಂದವು. ಇವುಗಳಿಂದ ಸಾರಿಗೆ ಸಮಸ್ಯೆಯನ್ನು ಸ್ವಲ್ಪಮಟ್ಟಿಗೆ ಪರಿಹರಿಸಲು ಸಾಧ್ಯವಾಯಿತು. ಈ ಟ್ರಾಲಿ ಸಾರಿಗೆ ಇತರ ನಗರಗಳಿಗೆ ಶೀಘ್ರವಾಗಿ ಹಬ್ಬಿ, ರಸ್ತೆಗಳ ಮೇಲ್ಗಡೆ ಹಾಯ್ದು ಹೋಗುವ ಸೇತುವೆಗಳ ಮೇಲೆ ಹರಿದಾಡುವ ರೈಲುಗಳು ಮತ್ತು ಭೂಗತ ಸುರಂಗಗಳಲ್ಲಿ ಹರಿದಾಡುವ ರೈಲುಸಾರಿಗೆ ವ್ಯವಸ್ಥೆಗೊಂಡವು.

ಜನರನ್ನು ನಗರಗಳಿಗೆ ಸೆಳೆಯುವುದರಲ್ಲಿ ಸಾಂಸ್ಕೃತಿಕ ಅಂಶಗಳು ಮುಖ್ಯ ಪಾತ್ರ ವಹಿಸಿದ್ದವು. ನಗರಗಳಲ್ಲಿ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅವಕಾಶಗಳು ದೊರಕುತ್ತಿದ್ದವು. ೧೮೭೦ರಷ್ಟು ಹಿಂದೆಯೇ ನಗರಗಳಲ್ಲಿ ಪ್ರೌಢ ವಿದ್ಯಾಭ್ಯಾಸ ವ್ಯಾಪಕವಾಗಿ ಹರಡಿತ್ತು. ಆಗಲೇ ಕೆಲವು ನಗರಗಳಲ್ಲಿ ಕಾಲೇಜುಗಳು ಸ್ಥಾಪನೆಗೊಂಡವು. ನಗರಜೀವನ ಕುಟುಂಬ ರಚನೆಯ ಮೇಲೆ ಮತ್ತು ಮನೆಯ ವಾತಾವರಣದ ಮೇಲೆ ದೀರ್ಘ ಪರಿಣಾಮ ಬೀರಿತು. ಸ್ತ್ರೀಯರಿಗೆ ಅನೇಕ ಸೌಕರ್ಯಗಳು ಒದಗಿಬಂದು ಅವರ ಮನೆಗೆಲಸದ ಅವಧಿಯನ್ನು ಕಡಿಮೆ ಮಾಡಿದವು. ಆದ್ದರಿಂದ ಅನೇಕ ಸ್ತ್ರೀಯರು ಮನೆಯಾಚೆ ಹೋಗಿ ಕೈಗಾರಿಕಾ ಕ್ಷೇತ್ರದಲ್ಲಿ ಮತ್ತು ಕಛೇರಿಗಳಲ್ಲಿ ಗುಮಾಸ್ತಗಿರಿ ಇತ್ಯಾದಿ ವೃತ್ತಿಗಳನ್ನು ಕೈಗೊಳ್ಳಲು ಸಾಧ್ಯವಾಯಿತು. ಹೀಗೆ ಕೆಲಸಕ್ಕೆ ಸೇರಿಕೊಂಡ ಸ್ತ್ರೀಯರಲ್ಲಿ ಒಂದು ಹೊಸ ಸ್ವಾತಂತ್ರ್ಯಪ್ರಜ್ಞೆ ಬೆಳೆಯಿತು. ನಗರಗಳಲ್ಲಿ ಎಷ್ಟು ಅನುಕೂಲಗಳಿವೆಯೋ ಅಷ್ಟೇ ಅನಾನುಕೂಲಗಳಿರುವುದು ನಗರವಾಸಿಗಳಿಗೆ ಸ್ವಲ್ಪ ಕಾಲದಲ್ಲಿಯೇ ಮನದಟ್ಟಾಯಿತು. ಅಸಮರ್ಪಕವಾದ ನೀರು ಸರಬರಾಜು, ನಗರದ ಕಸ ಕೊಳಚೆಗಳನ್ನು ನಗರದ ಸರಹದ್ದಿನೊಳಗೆ ಗುಂಡಿಯಲ್ಲಿ ಹುಗಿಯುತ್ತಿದ್ದರು ಅಥವಾ ಹತ್ತಿರದ ನದಿಯಲ್ಲಿ ಸುರಿಯುತ್ತಿದ್ದರು. ಇದರಿಂದಾಗಿ

ರೋಗರುಜಿನಗಳು ಹರಡಲು ಕಾರಣವಾದವು. ಜನಸಾಂದ್ರತೆ ಹೆಚ್ಚಾಗಿದ್ದ ಕೊಳಚೆ ಪ್ರದೇಶಗಳಲ್ಲಿ ರೋಗಗಳು ಬಹುಬೇಗ ಹಬ್ಬುತ್ತಿದ್ದವು.

ಅನೇಕ ನಗರಗಳು ಬಹುಬೇಗನೆ ಬೆಳೆದವು. ಆದರೆ ಈ ಬೆಳವಣಿಗೆ ವ್ಯವಸ್ಥಿತ ವಾಗಿರಲಿಲ್ಲ. ಹಣವಂತರು ಪ್ರಶಸ್ತವಾದ ಸ್ಥಳಗಳಲ್ಲಿ ತಮ್ಮ ವಿಶಾಲದ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದರು. ಬಡವರು ಮತ್ತು ಹೊಸದಾಗಿ ವಲಸೆಬಂದವರು ಇಕ್ಕಟ್ಟಾದ ವಠಾರಗಳಲ್ಲಿ ಕೂಡಿಕೊಂಡು ವಾಸಿಸುತ್ತಿದ್ದರು. ೧೮೮೦ರ ದಶಕದಲ್ಲಿ ಇಂಥ ವಠಾರಗಳನ್ನು ಅಧಿಕ ಸಂಖ್ಯೆಯಲ್ಲಿ ಕಟ್ಟಿದರು. ಇವು ವಾಸಿಸುವವರ ಅನುಕೂಲತೆಗೆ ಕಟ್ಟಿದವಲ್ಲ; ಅವುಗಳನ್ನು ಕಟ್ಟಲು ಹಣ ಹೂಡಿದ ಶ್ರೀಮಂತರಿಗೆ ಹೆಚ್ಚಿನ ಲಾಭ ಬರುವಂತೆ ಮಾಡಲು ಕಟ್ಟಿದವು. ವಠಾರದ ಮನೆಗಳು ಎತ್ತರದ ೩-೪ ಮಹಡಿ ಮನೆಗಳು. ಬರಿ ಮರದ ತೊಲೆ, ಕಂಬ, ಹಲಗೆಗಳನ್ನು ಉಪಯೋಗಿಸಿ ಕಟ್ಟಿದವು. ಒಂದೊಂದು ಮಹಡಿಯಲ್ಲೂ ೨-೩ ಗಾಳಿ ಬೆಳಕು ಬಾರದ ಕೋಣೆಗಳನ್ನು ಒಂದು ಕುಟುಂಬಕ್ಕೆ ಬಾಡಿಗೆ ಕೊಡಲಾಗು ತ್ತಿತ್ತು. ಒಂದು ವಠಾರದಲ್ಲಿ ಇಂಥ ನಾಲ್ಕೈದು ಮಹಡಿ ಮನೆಗಳು ಇರುತ್ತಿದ್ದವು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ನ್ಯೂಯಾರ್ಕ್ ನಗರದಲ್ಲಿ ಇಂಥ ೪೩೦೦೦೦ ವಠಾರಗಳಿದ್ದವು. ಎರಡು ಮಿಲಿಯನ್‌ಗಿಂತ ಹೆಚ್ಚು ಜನ ಈ ವಠಾರಗಳಲ್ಲಿ ವಾಸಿಸುತ್ತಿದ್ದರು. ನಗರಾಡಳಿತ ಅಧಿಕಾರಿಗಳು ಈ ವಠಾರಗಳನ್ನು ಗೃಹನಿರ್ಮಾಣ ಕಾಯಿದೆಯನ್ನು ಜಾರಿ ಮಾಡಿ ನಿಯಂತ್ರಿಸಲು ಮಾಡಿದ ಪ್ರಯತ್ನಗಳು ಪ್ರಯೋಜನಕಾರಿ ಯಾಗಲಿಲ್ಲ. ಮರದಿಂದ ಮಾಡಿದ ಈ ಮನೆಗಳು ಬೆಂಕಿಯ ಆಕಸ್ಮಿಕಕ್ಕೆ ಆಹುತಿಯಾಗುವ ಸಾಧ್ಯತೆ ಅಲ್ಲಿಯ ನಿವಾಸಿಗಳನ್ನು ಪ್ರತಿನಿತ್ಯವೂ ಕಾಡುತ್ತಿತ್ತು. ವಠಾರದ ನಿವಾಸಿಗಳಿಗೆ ಯಾವ ರೀತಿಯ ಮನರಂಜನೆಗೂ ಅವಕಾಶವಿರಲಿಲ್ಲ.

ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಅಮೆರಿಕದ ಮಹಾನಗರಗಳಲ್ಲಿ ಕಳ್ಳತನ, ಕೊಲೆ, ಸುಲಿಗೆ, ದರೋಡೆ ಅಪಹರಣ ಮುಂತಾದ ಅಪರಾಧಗಳು ಭಯಂಕರ ಸಮಸ್ಯೆಗಳಾಗಿದ್ದವು. ೧೮೮೦ ಮತ್ತು ೧೯೦೦ರ ಅವಧಿಯಲ್ಲಿ ಅಪರಾಧಗಳ ಸಂಖ್ಯೆ ವಿಪರೀತ ಏರಿತ್ತು. ನಗರಾಡಳಿತ ಮಂಡಳಿ ಮನೆ ಮಠ ಇಲ್ಲದವರನ್ನು, ಅಲೆಮಾರಿಗಳನ್ನು ಕೆಲಸವಿಲ್ಲದೆ ಬೀದಿ ಪಾಲಾದವರನ್ನು ನಿಯಂತ್ರಿಸಲು ಕಾಯಿದೆಗಳನ್ನು ಜಾರಿ ಮಾಡಿ ಅವರನ್ನು ಸೆರೆಹಿಡಿದು ಬೇರೆ ಕಡೆಗಳಿಗೆ ರವಾನಿಸುವ ಮೂಲಕ ಅವರ ಸಂಖ್ಯೆಯನ್ನು ಕಡಿಮೆ ಮಾಡುವ ಪ್ರಯತ್ನ ನಡೆಯಿತು. ಆದರೆ ನಿರಂತರವಾಗಿ ನಡೆಯುತ್ತಿದ್ದ ಪುಂಡರ ಗುಂಪುಗಳ ನಡುವಣ ಘರ್ಷಣೆಗಳನ್ನು, ವೇಶ್ಯೆಯರನ್ನು, ಜೂಜುಕೋರರನ್ನು ಮತ್ತು ಮಾದಕ ಪಾನೀಯದ ಕಳ್ಳ ವ್ಯಾಪಾರಿಗಳನ್ನು ಹತ್ತಿಕ್ಕಲು ನಗರಾಡಳಿತದವರಿಗೆ ಸಾಧ್ಯವಾಗಿರಲಿಲ್ಲ. ಇದಲ್ಲದೆ ನಗರಾಡಳಿತ ಪೊಲೀಸ್ ಇಲಾಖೆಗಳಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿತ್ತು. ನಗರಗಳು ಬೆಳೆದಂತೆಲ್ಲ ನಗರಾಡಳಿತ ವ್ಯವಸ್ಥೆ ಅವನತಿ

ಹೊಂದುತ್ತಾ ಹೋಯಿತು. ರಾಜಕೀಯ ಪ್ರಬಲರಾದ ಪುಢಾರಿಗಳ ಯಂತ್ರದ ಪ್ರಭಾವಕ್ಕೆ ನಗರಾಡಳಿತ ಒಳಗಾಗಿತ್ತು. ನಗರ ವ್ಯಾಪಾರಿಗಳು ಸಾರ್ವಜನಿಕ ಉಪಯುಕ್ತ ವಸ್ತುಗಳನ್ನು ಉಪಯೋಗಿಸಲು ಅಥವಾ ಕಟ್ಟಡಗಳನ್ನು ಕಟ್ಟಲು ಪರವಾನಿಗೆ ಪಡೆಯಲು ಈ ರಾಜಕೀಯ ಯಂತ್ರಕ್ಕೆ ಸೇರಿದ ರಾಜಕಾರಣಿಗಳಿಗೆ ಅಪಾರ ಹಣ ತೆರಬೇಕಾಗಿತ್ತು. ನಗರದ ಬಡಾವಣೆಗಳು 'ಬಡಾವಣೆ ಒಡೆಯರ' ಪ್ರಭಾವಕ್ಕೆ ಒಳಪಟ್ಟಿರುತ್ತಿದ್ದವು. ಇವರು ಹೊಸದಾಗಿ ಬಂದ ವಲಸೆಗಾರರ ಸ್ನೇಹಿತರಂತೆ ವರ್ತಿಸಿ ಅವರಿಗೆ ಕೆಲಸ ಹುಡುಕಲು ಸಹಾಯ ಮಾಡುವುದು, ದಿನಸಿ ಪದಾರ್ಥಗಳನ್ನು ಒದಗಿಸುವುದು ಮುಂತಾದ ಕುಯುಕ್ತಿಗಳಿಂದ ಅವರ ಮತಗಳನ್ನು ಗಿಟ್ಟಿಸುತ್ತಿದ್ದರು.

ಸಾಮಾಜಿಕ ರೋಗರುಜಿನಗಳು[೧]

ನಗರಗಳ ಸಾಮಾಜಿಕ ರೋಗಗಳನ್ನು ತಡೆಗಟ್ಟಿ ನಗರವಾಸಿಗಳ ಜೀವನವನ್ನು ಉತ್ತಮಗೊಳಿಸಲು ಚರ್ಚುಗಳು, ಸಮಾಜಕಾರ್ಯ ಸಂಘಗಳು ಪ್ರಯತ್ನಪಟ್ಟವು. ಈ ದಿಕ್ಕಿನಲ್ಲಿ ಹಲವು ಸುಧಾರಣೆಗಳನ್ನೂ ಜಾರಿಗೆ ತರಲಾಯಿತು. ನಾಗರಿಕ ಒಕ್ಕೂಟಗಳನ್ನು ಸ್ಥಾಪಿಸಿ ಅವುಗಳ ಮೂಲಕ ನಗರಾಡಳಿತ ಅಧಿಕಾರಿಗಳ ಆಯ್ಕೆಗಾಗಿ ನಗರ ಸೇವಾ ಪರಿಜ್ಞಾನದ ಪರೀಕ್ಷೆಗಳನ್ನು ಜಾರಿಗೆ ತಂದರು. ಈ ಪರೀಕ್ಷೆಗಳು ನಗರಾಡಳಿತ ಮಂಡಳಿಗಳಿಗೆ ಅವಿದ್ಯಾವಂತರೂ ಅಸಮರ್ಥರೂ ಸೇರದಂತೆ ಮಾಡುವ ಸಾಧನಗಳಾದವು. ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ನಗರವಾಸಿಗಳ ಹಿತಾಸಕ್ತಿ ಮತ್ತು ಕ್ಷೇಮಗಳನ್ನು ರಕ್ಷಿಸುವ ಕಾರ್ಯಗಳಲ್ಲಿ ತೊಡಗಿದ್ದ ಖಾಸಗಿ ದಾನ-ಧರ್ಮ ಸಂಸ್ಥೆಗಳ ಜೊತೆಗೆ ಚರ್ಚುಗಳು ಸೇರಿಕೊಂಡವು. ಕಾರ್ಮಿಕರು ಚರ್ಚುಗಳಿಂದ ದೂರ ಸರಿದಂತೆಲ್ಲ ಚರ್ಚಿನ ಅಧಿಕಾರಿಗಳು ಕ್ರೈಸ್ತಮತವನ್ನು ಹೊಸದೃಷ್ಟಿಯಿಂದ ನೋಡಿ, ಹೊಸವಿಧಾನಗಳನ್ನು ಅಳವಡಿಸಿಕೊಂಡು ಸಮಾಜಕಾರ್ಯ ಪ್ರವರ್ತಕರಾದರು. 'ಸೋಷಿಯಲ್ ಗಾಸ್ಪೆಲ್' (social gospel) ಎಂದು ಕರೆಯಲ್ಪಟ್ಟ ಈ ಸಮಾಜ ಕಾರ್ಯಯೋಜನೆ ಲೋಕಸಂಗ್ರಹ ಕಾರ್ಯಗಳಿಗೆ ಪ್ರಾಮುಖ್ಯತೆ ನೀಡಿ ರಚನಾತ್ಮಕ ಕಾರ್ಯಗಳಿಂದ ಸಮಾಜ ಸುಧಾರಣೆ ಮಾಡುವ ಪ್ರಯತ್ನ ಮಾಡಿತು. ಈ ಸಮಾಜಸುಧಾರಣಾ ಚಳುವಳಿಯ ಪ್ರಮುಖ ನಾಯಕರಲ್ಲೊಬ್ಬನಾದ ವಾಷಿಂಗ್‌ಟನ್ ಗ್ಲಾಡೆನ್ (Washington Gladden) ಬರೆದ 'ಕಾರ್ಯಗತ ಕ್ರೈಸ್ತ ಮತ' ಎಂಬ ಪುಸ್ತಕ ೧೮೯೦ರ ದಶಕದಲ್ಲಿ ಪ್ರಾಟೆಸ್ಟಂಟ್ ಪಂಥದ ಚರ್ಚುಗಳ ಮೇಲೆ ಅತ್ಯಂತ ಪ್ರಭಾವ ಬೀರಿತು. ನಗರದ ಕಾರ್ಮಿಕರಲ್ಲಿ ಬಹುಸಂಖ್ಯಾತರು ಕ್ಯಾಥೊಲಿಕರು. ಇವರು ತಮ್ಮ ಕಾರ್ಯಾಚರಣೆ ಸಹಾಯಕ್ಕಾಗಿ ತಮ್ಮ ಚರ್ಚುಗಳನ್ನು ಅವಲಂಬಿಸಿದ್ದರು. ಕ್ಯಾಥೊಲಿಕ್ ಚರ್ಚು ಬಡ ಬಗ್ಗರ ಅಗತ್ಯಗಳಿಗೆ ಯಾವಾಗಲೂ

೧ ಈ ಪದವನ್ನು ಜೀವಶಾಸ್ತ್ರಜ್ಞರು ತೆಗೆದುಕೊಂಡಿದ್ದು. ಜೀವಿಗಳಿಗೆ ರೋಗರುಜಿನಗಳು ಬರುವಂತೆ ಸಮಾಜದಲ್ಲಿ ಅವ್ಯಸ್ಥೆಗೊಳಿಸುವ ಸಮಸ್ಯೆಗಳು 'ಸಾಮಾಜಿಕ ರೋಗಗಳು'.

ಸಹಾನುಭೂತಿ ತೋರುತ್ತಿತ್ತು. ಕ್ಯಾಥೊಲಿಕ್ ಅದು ತನ್ನ ಆಶ್ರಯದಲ್ಲಿ ದಾನ-ಧರ್ಮ ಸಂಸ್ಥೆಗಳನ್ನು ಸ್ಥಾಪಿಸಿತ್ತು. ಬಡವರ ಮಕ್ಕಳಿಗಾಗಿ ಶಾಲೆಗಳನ್ನು ನಡೆಸುತ್ತಿದ್ದರು. ಈ ಚರ್ಚುಗಳ ನಾಯಕರು ಪ್ರಾಟೆಸ್ಟಂಟರೊಡಗೂಡಿ ಲೋಕಸಂಗ್ರಹ ಕಾರ್ಯ ನಡೆಸಿದರು. ಇದರಿಂದ ಕ್ರೈಸ್ತಮತದ ಈ ಎರಡು ಪಂಥಗಳ ನಡುವಣ ವೈಷಮ್ಯಗಳನ್ನು ಮರೆಸಲು ಸಾಧ್ಯವಾಯಿತು. ಕ್ರೈಸ್ತಮತದ ಮೌಲ್ಯಗಳಾದ ಸಹಾನುಭೂತಿ, ಸಹಾಯ ಮತ್ತು ಕರ್ತವ್ಯಪಾಲನೆಗಳನ್ನು ಕಾರ್ಯಗತಗೊಳಿಸಿದ್ದು 'ಮುಕ್ತಿಸೇನೆ' (Salvation Army) ಮತ್ತು 'ಕ್ರೈಸ್ತ ವಿಜ್ಞಾನದ ಚರ್ಚು' (Christian Science Churches)ಗಳು. ೧೮೭೯ರಲ್ಲಿ ಮುಕ್ತಿಸೇನೆ ಅಮೆರಿಕದಲ್ಲಿ ಕಾರ್ಯಾರಂಭ ಮಾಡಿತು. ಕ್ರೈಸ್ತಮತದಲ್ಲಿ ನಂಬಿಕೆ ಕಳೆದುಕೊಂಡವರನ್ನು ಪುನರುತ್ಥಾನಗೊಳಿಸಿ ಕ್ರೈಸ್ತ ಮತಾನುಯಾಯಿಗಳಾಗಿ ಮಾಡುವುದು ಮತ್ತು ಅವರಿಂದ ವಾಸ್ತವಿಕವಾಗಿ ಬಡಬಗ್ಗರ ಸೇವಾಕಾರ್ಯಗಳನ್ನು ಮಾಡಿಸುವುದು ಇದರ ಗುರಿಯಾಗಿತ್ತು.

೧೮೭೯ರಲ್ಲಿ ಮೇರಿ ಬೇಕರ್ ಎಡ್ಡಿ (Mary Baker Eddy) ಎನ್ನುವ ಮಹಿಳೆ 'ಕ್ರೈಸ್ತ ವಿಜ್ಞಾನ ಆಂದೋಳನ' (Christian science movement)ವನ್ನು ಪ್ರಾರಂಭಿಸಿದಳು. ಇದು ನಗರವಾಸಿಗಳ ಗಮನ ಸೆಳೆಯಿತು. ಕ್ರೈಸ್ತ ವಿಜ್ಞಾನ ಅನುಭವಾತೀತವಾದ ಆಧ್ಯಾತ್ಮ ಚಿಂತನೆಯನ್ನು ಹೋಲುತ್ತಿತ್ತು. ಈ ಚಿಂತನೆ ಸರ್ವಾಂತರ್ಯಾಮಿ ಮತ್ತು ಸರ್ವಶಕ್ತನಾದ ಭಗವಂತನಲ್ಲಿ ಭಕ್ತಿ, ಕಾರ್ಯರೂಪಕ್ಕೆ ತರಬಹುದಾದ ತತ್ವ ವಿಚಾರಗಳು ಮತ್ತು ದೈವಜ್ಞಾನ ನಿಜವಾಗಬೇಕಾದರೆ ಅವು ಕೈಗೂಡುವಂತಿರಬೇಕು ಎನ್ನುವ ಸೂತ್ರಗಳನ್ನು ಅವಲಂಬಿಸಿತ್ತು. ಕ್ರೈಸ್ತ ವಿಜ್ಞಾನದ ವೈಶಿಷ್ಟ್ಯವೆಂದರೆ ರೋಗ ರುಜಿನಗಳು ಮತ್ತು ಮಾನವರ ಇತರ ಸಮಸ್ಯೆಗಳು ಸರ್ವಶಕ್ತನಾದ ಭಗವಂತನಲ್ಲಿ ಸಂಪೂರ್ಣ ನಂಬಿಕೆ (absolute trust)ಯಿಂದ ಪರಿಹಾರಗೊಳ್ಳುತ್ತವೆ ಎನ್ನುವ ದೃಢನಿಶ್ಚಯ. ಕ್ರೈಸ್ತ ವಿಜ್ಞಾನದ ಅನುಯಾಯಿಗಳು ಆಧುನಿಕ ಔಷಧಗಳನ್ನು, ಶಸ್ತ್ರಚಿಕಿತ್ಸೆ ಮುಂತಾದ ವೈದ್ಯಕೀಯ ಶುಷ್ರೂಷೆಗಳನ್ನು ನಿರಾಕರಿಸುವುದು ಈ ಕಾರಣಕ್ಕಾಗಿ.

ಇದೇ ಸಮಯದಲ್ಲಿ ಪೂರ್ವ ಯೂರೋಪ್ ಮತ್ತು ರಷ್ಯಾ ದೇಶಗಳಿಂದ ವಲಸೆ ಬಂದ ಯಹೂದ್ಯರ ಗುಂಪು ಅನ್ಯಮತದ ಅಲ್ಪಸಂಖ್ಯಾತ ಸಮುದಾಯವಾಗಿ ಅತಿ ಪ್ರಭಾವಶಾಲಿಯಾಗಿ ಬೆಳೆಯಿತು. ಪ್ರಾಟೆಸ್ಟಂಟ್ ಮತ್ತು ಕ್ಯಾಥೊಲಿಕ್ ಪಂಥಗಳಂತೆ ಯಹೂದ್ಯರು ಕೂಡ ಕಷ್ಟ ಪರಿಸ್ಥಿತಿಯಲ್ಲಿರುವ ಯಹೂದ್ಯರಿಗೆ ಸಹಾಯ ನೀಡಲು ಕ್ಷೇಮಾಭ್ಯುದಯ ಸಂಸ್ಥೆಗಳನ್ನು ಸ್ಥಾಪಿಸಿದರು.

ರೈಲುಮಾರ್ಗಗಳ ಯುಗ

ಅಮೆರಿಕದ ಕೈಗಾರಿಕೆ ಅಭಿವೃದ್ಧಿಯ ಬಾಗಿಲನ್ನು ತೆರೆದ ಕೀಲಿಕೈ ಎಂದರೆ ರೈಲು ಮಾರ್ಗಗಳ ಪ್ರಚಂಡ ಬೆಳವಣಿಗೆ. ಅಂತರ್ಯುದ್ಧ ಪ್ರಾರಂಭವಾದಾಗ ಸಂಯುಕ್ತ

ಸಂಸ್ಥಾನಗಳಲ್ಲಿ ೩೦೦೦೦ ಮೈಲಿ ರೈಲುಮಾರ್ಗವಿತ್ತು. ೧೮೮೦ರ ಹೊತ್ತಿಗೆ ಈ ಸಂಖ್ಯೆ ಮೂರು ಪಟ್ಟು ಹೆಚ್ಚಿತ್ತು. ೧೮೯೦ರಲ್ಲಿ ಅಮೆರಿಕದಲ್ಲಿ ಯೂರೋಪ್ ಮತ್ತು ರಷ್ಯಾಗಳನ್ನು ಕೂಡಿಸಿದ್ದಕ್ಕಿಂತಲೂ ಹೆಚ್ಚು ರೈಲುಮಾರ್ಗಗಳಿದ್ದವು. ೧೮೬೫ರಿಂದ ೧೯೧೪ರ ಅವಧಿಯಲ್ಲಿ ರೈಲುಮಾರ್ಗ ಅಮೆರಿಕನ್ ಸಾರಿಗೆಯ ವ್ಯವಸ್ಥೆಯ ಮೇಲೆ ಪ್ರಭುತ್ವ ಹೊಂದಿತ್ತು. ಈ ಅವಧಿಯಲ್ಲಿ ರೈಲುಮಾರ್ಗ ಅಮೆರಿಕನ್ ಸಾಮಾಜಿಕ ಜೀವನದಲ್ಲಿ ಮಹತ್ತರ ಬದಲಾವಣೆಗಳನ್ನು ಉಂಟುಮಾಡಿತು. ಪ್ರಯಾಣಕ್ಕೆ ಹಿಡಿಸುತ್ತಿದ್ದ ಕಾಲವನ್ನು ರೈಲುಮಾರ್ಗಗಳು ಬಹಳವಾಗಿ ಕಡಿಮೆ ಮಾಡಿದವು. ಮೊದಲು ವಾರಗಟ್ಟಲೆ ಅಥವಾ ತಿಂಗಳುಗಟ್ಟಲೆ ಹಿಡಿಯುತ್ತಿದ್ದ ಪ್ರಯಾಣ ರೈಲುಮಾರ್ಗ ಕೆಲವು ಘಂಟೆಗಳಿಗೆ ಅಥವಾ ದಿನಗಳಿಗೆ ಇಳಿಯಿತು. ಮೇಲಾಗಿ ಅಂಚೆ ವಿತರಣೆಗೆ ಹಿಡಿಯುತ್ತಿದ್ದ ಕಾಲ ಕಡಿಮೆಯಾಗಿ ಜನಗಳು ಕಾಗದ ಪತ್ರಗಳನ್ನು ಬೇಗನೆ ವಿನಿಮಯ ಮಾಡಿಕೊಳ್ಳಲು ಸಾಧ್ಯವಾಯಿತು. ಹಾಗೆಯೇ ವ್ಯಾಪಾರಿಗಳಿಗೆ ತಮಗೆ ಬೇಕಾದ ಸರಕು ಸಾಮಗ್ರಿಗಳನ್ನು ಸ್ವಲ್ಪ ಸಮಯದಲ್ಲೇ ತರಿಸಿಕೊಳ್ಳುವುದು ಸಾಧ್ಯವಾಯಿತು. ಮುಖ್ಯವಾಗಿ ಪ್ರಯಾಣ, ಅಂಚೆವಿತರಣೆ ಮತ್ತು ಸರಕು ಸಾಗಾಣಿಕೆಗಳಿಗೆ ತಗಲುತ್ತಿದ್ದ ವೆಚ್ಚ ಕಡಿಮೆಯಾಯಿತು. ರೈಲುಮಾರ್ಗಗಳ ಜೊತೆಯಲ್ಲಿ ಟೆಲಿಗ್ರಾಫ್ ವ್ಯವಸ್ಥೆ ವಿಸ್ತಾರಗೊಂಡು ಸಂಪರ್ಕ ವ್ಯವಸ್ಥೆ ಶೀಘ್ರವೂ ಸಮರ್ಪಕವೂ ಆಯಿತು.

ರೈಲುಮಾರ್ಗ ನಿರ್ವಹಣೆ ಒಂದು ಬೃಹತ್ ಉದ್ಯಮವೇ ಆಯಿತು. ಅದು ಸಹಸ್ರಾರು ಜನರಿಗೆ ಕೆಲಸ ದೊರಕಿಸಿಕೊಟ್ಟಿತು. ರೈಲುಮಾರ್ಗಗಳಲ್ಲಿ ಸಿಗುವ ಪೇಟೆ ಪಟ್ಟಣಗಳ ಸ್ಥಳೀಯ ವರ್ತಕರ ವ್ಯಾಪಾರ ಕುದುರಿ ಲಾಭದಾಯಕವಾದವು. ರೈಲು ಹಳಿಗಳು, ಬಂಡಿಗಳು, ಇಂಧನ ಮತ್ತು ಉಗಿಯಂತ್ರಗಳಿಗೆ ಬೇಡಿಕೆ ಹೆಚ್ಚಿ ಅವುಗಳನ್ನು ಉತ್ಪಾದಿಸಲು ಉಕ್ಕಿನ, ತಾಮ್ರದ, ಮರಮಟ್ಟುಗಳ ಮತ್ತು ಕಲ್ಲಿದ್ದಲಿನ ಉತ್ಪಾದನೆಗಾಗಿ ಬೃಹತ್ ಕಾರ್ಖಾನೆಗಳು ಸ್ಥಾಪಿತವಾದವು. ರೈಲುಮಾರ್ಗಗಳಲ್ಲಿ ಅಲ್ಲಲ್ಲಿ ರೈಲುಬಂಡಿಗಳ ಭಾರ ತಡೆಯುವಂಥ ಭದ್ರವಾದ ಸೇತುವೆಗಳನ್ನು ಕಟ್ಟುವುದು ಒಂದು ದೊಡ್ಡ ಉದ್ಯಮವೇ ಆಯಿತು. ಅದರಂತೆ ಪ್ರಯಾಣಿಕರು ನಿದ್ರಿಸಲು ಅನುಕೂಲವಿರುವಂಥ ಚಲಿಸುವ ಶಯ್ಯಾಗಾರಗಳನ್ನು ನಿರ್ಮಿಸುವುದು ಕೂಡ ಒಂದು ದೊಡ್ಡ ದಂಧೆಯಾಯಿತು. ರೈಲು ಮಾರ್ಗಗಳು ಅಗಾಧ ಪ್ರಮಾಣದ ಉತ್ಪತ್ತಿಗೆ ಕಾರಣವಾದವು. ವ್ಯಾಪಾರವು ಸ್ಥಳೀಯ ಗಿರಾಕಿಗಳಿಗೆ ಮಾತ್ರ ಸೀಮಿತವಾಗದೆ, ಒಂದು ಪ್ರಾಂತದಲ್ಲಿ ಬೆಳೆದಿದ್ದನ್ನು ದೂರದ ಇನ್ನೊಂದು ಪ್ರಾಂತದಲ್ಲಿ ಮಾರುವುದು ಸುಲಭವಾಯಿತು. ಆರಕನ್‌ಸಾದಲ್ಲಿ ಹಸಿಗೆಯಾದ ಹಂದಿ ಮಾಂಸವನ್ನು ಕ್ಲೀವ್‌ಲ್ಯಾಂಡ್‌ನಲ್ಲಿ, ಮಿಲ್‌ವಾಕಿಯ 'ಬಿಯರ್' ಡೆನ್‌ವರ್‌ನಲ್ಲಿ ಮಾರುವುದು ಸಾಧ್ಯವಾಗಿ ಜನರು ಬೇರೆ ಬೇರೆ ಬಾಯಿರುಚಿಗಳನ್ನು ಕಲಿತು ಬೇರೆ ಪ್ರಾಂತಗಳಲ್ಲಿ ತಯಾರಾದ ವಸ್ತುಗಳನ್ನುಕೊಳ್ಳುವುದು ಹೆಚ್ಚಾಯಿತು. ಇದರ ಪರಿಣಾಮ ವಾಗಿ ಬೇಡಿಕೆಯಿದ್ದ ವಸ್ತುಗಳ ಉತ್ಪಾದನೆ ಹೆಚ್ಚುತ್ತ ಹೋಯಿತು.

ರೈಲುಮಾರ್ಗಗಳು ರಾಷ್ಟ್ರವನ್ನು ಆರ್ಥಿಕವಾಗಿ ಒಂದುಗೂಡಿಸಿದವು. ೧೮೮೦ರ ವೇಳೆಗೆ ರಾಷ್ಟ್ರದಾದ್ಯಂತ ರೈಲುಮಾರ್ಗಗಳು ನಿರ್ಮಿತವಾಗಿ ಪರಸ್ಪರ ಸಂಪರ್ಕ ಏರ್ಪಟ್ಟಿತು. ಸಾರಿಗೆ ವೆಚ್ಚ ಕಡಿಮೆಯಾಯಿತು. ದೂರದ ಊರುಗಳು ಸಹ ಒಂದೇ ಉದ್ಯೋಗವನ್ನು ಅವಲಂಬಿಸಿಕೊಂಡಿರುವುದು ಸಾಧ್ಯವಾಯಿತು. ಪಿಟ್ಸ್‌ಬರ್ಗ್‌ನ ಉಕ್ಕಿನ ಕಾರ್ಖಾನೆಗಳು ಮೆಸಬಿ ಶ್ರೇಣಿಯ ಕಬ್ಬಿಣದ ಅದಿರನ್ನು ಅವಲಂಬಿಸಿದ್ದವು. ಅದೇ ರೀತಿ ಮಿನೆಸೋಟದ ಆರ್ಥಿಕ ವ್ಯವಸ್ಥೆ ಪಿಟ್ಸ್‌ಬರ್ಗ್‌ನ್ನು ಅವಲಂಬಿಸಿತ್ತು. ಪ್ರಕೃತಿ ಸಂಪದ್ಭರಿತ ಪ್ರಾಂತಗಳ ಅಭಿವೃದ್ಧಿ ರೈಲುಮಾರ್ಗಗಳಿಲ್ಲದೆ ಹೋಗಿದ್ದರೆ ಸಾಧ್ಯವಾಗುತ್ತಿರಲಿಲ್ಲ. ಫೆಡರಲ್ ಸರ್ಕಾರದ ದೀರ್ಘಾವಧಿ ಸಾಲದ ಸೌಲಭ್ಯ ಉಪಯೋಗಿಸಿಕೊಂಡ ಯೂನಿಯನ್ ಪೆಸಿಫಿಕ್ ಕಂಪನಿಯ ಕೆಲಸಗಾರರು ನೆಬ್ರಾಸ್ಕ ಪ್ರಾಂತದ ಒಮಾಹ (Omaha) ದಿಂದ ಪಶ್ಚಿಮದ ಕಡೆಗೆ ರೈಲುಮಾರ್ಗ ನಿರ್ಮಿಸಲು ಪ್ರಾರಂಭಿಸಿದರು. ಹಾಗೆಯೇ ಸೆಂಟ್ರಲ್ ಪೆಸಿಫಿಕ್ ಕಂಪನಿಯ ಕೆಲಸಗಾರರು ಸ್ಯಾನ್ ಫ್ರಾನ್ಸಿಸ್ಕೊ ನಗರದಿಂದ ಪೂರ್ವದಿಕ್ಕಿನಲ್ಲಿ ರೈಲುಮಾರ್ಗ ನಿರ್ಮಿಸಲು ಆರಂಭಿಸಿದರು. ಈ ಎರಡು ಕಂಪನಿಗಳ ಉದ್ದೇಶ – ಎರಡು ರೈಲುಮಾರ್ಗಗಳನ್ನು ರಾಕಿ ಪರ್ವತಗಳ ಪಶ್ಚಿಮ ತಾಣದಲ್ಲಿ ಜಂಟಿ ಮಾಡುವುದಾಗಿತ್ತು. ರೈಲುಮಾರ್ಗಗಳ ನಿರ್ಮಾಪಕರು ದುಸ್ಸಾಧ್ಯ ಅಡೆ ತಡೆಗಳನ್ನು ಎದುರಿಸಬೇಕಾಗಿ ಬಂತು. ನಿರಂತರ ಹೆಚ್ಚುತ್ತ ಹೋಗುತ್ತಿದ್ದ ಖರ್ಚು ವೆಚ್ಚಗಳು, ಅತ್ಯಂತ ದುರ್ಗಮವಾದ ಭೂಭಾಗಗಳು, ಹವಾಗುಣದ ವಿಪರೀತಗಳು ಮತ್ತು ಆದಿವಾಸಿಗಳ ಅನಿರೀಕ್ಷಿತ ದಾಳಿಗಳು – ಇಂಥ ಗಂಡಾಂತರಗಳನ್ನೆಲ್ಲ ನಿಭಾಯಿಸಿ ರೈಲುಮಾರ್ಗಗಳ ನಿರ್ಮಾಣವಾಯಿತು. ಸ್ಪರ್ಧೆಯಿಂದ ಸ್ಫೂರ್ತಿಗೊಂಡು ಯೂನಿಯನ್ ಪೆಸಿಫಿಕ್ ಕಂಪನಿಯಿಂದ ವಲಸೆ ಬಂದ ಐರಿಷ್ ಕಾರ್ಮಿಕರು ಮತ್ತು ಸೆಂಟ್ರಲ್ ಪೆಸಿಫಿಕ್ ಕಂಪನಿಯವರು ಆಮದು ಮಾಡಿಕೊಂಡ ಚೀನಾ ದೇಶದ ಕೆಲಸಗಾರರು ಪೈಪೋಟಿಯಿಂದ ತ್ವರಿತಗತಿಯಲ್ಲಿ ಕೆಲಸಮಾಡಿ ಎರಡು ರೈಲುಮಾರ್ಗಗಳು ಪರಸ್ಪರ ಸಂಧಿಸುವ ಜಾಗವನ್ನು ಮುಟ್ಟುವಂತೆ ಮಾಡಿದರು. ೧೮೬೯ನೆಯ ಮೇ ತಿಂಗಳ ೧೦ನೆಯ ತಾರೀಖು ಯೂಟ ಪ್ರಾಂತದ ಪ್ರೊಮಾನ್‌ಟರಿ ಎಂಬಲ್ಲಿ ಎರಡು ರೈಲುಮಾರ್ಗಗಳ ಹಳಿಗಳನ್ನು ಜಂಟಿ ಮಾಡಲಾಯಿತು. ಈ ಸಂದರ್ಭವನ್ನು ಆಚರಿಸಲು ದೊಡ್ಡ ಸಮಾರಂಭ ಏರ್ಪಡಿಸಿದ್ದರು. ಸೆಂಟ್ರಲ್ ಪೆಸಿಫಿಕ್ ಕಂಪನಿಯ ನಿರ್ದೇಶಕರಲ್ಲಿ ಒಬ್ಬನಾದ ಲೀಲ್ಯಾಂಡ್ ಸ್ಟಾನ್‌ಫರ್ಡ್ (Leland Stanford) ಈ ಸುಮುಹೂರ್ತದ ಸಂಕೇತವಾಗಿ ಬಂಗಾರದ ಮೊಳೆಯನ್ನು ಸ್ಲೀಪರ್‌ಗೆ ಹೊಡೆದು ಸಮಾರಂಭದ ಉದ್ಘಾಟನೆ ಮಾಡಿದನು. ವರ್ಣದ್ವೇಷಪೀಡಿತರಾದ ಕಂಪನಿಯ ಮಾಲೀಕರು, ತಮ್ಮ ಜೀವದ ಹಂಗು ತೊರೆದು, ಬೆವರು ರಕ್ತ ಸುರಿಸಿ ರೈಲುಮಾರ್ಗವನ್ನು ನಿರ್ಮಿಸಿದ ಚೀನೀಯ ಕಾರ್ಮಿಕರನ್ನು ಸಮಾರಂಭಕ್ಕೆ ಬಾರದಂತೆ ತಡೆಗಟ್ಟಿದರು.

ರೈಲುಮಾರ್ಗಗಳ ನಿರ್ಮಾಣಕ್ಕೆ ಅಪಾರ ಮೊತ್ತದ ಹಣ ಬೇಕಾಗುತ್ತಿತ್ತು.

ನಿರ್ಮಾಣಕಾಲದಲ್ಲಿ ತಿಂಗಳಾನುಗಟ್ಟಲೆ ಯಾವ ಉತ್ಪತ್ತಿಯೂ ಇರುತ್ತಿರಲಿಲ್ಲ. ರೈಲುಮಾರ್ಗ ಪೂರ್ಣಗೊಂಡು ಆ ಮಾರ್ಗದಲ್ಲಿ ರೈಲು ಗಾಡಿಗಳನ್ನು ಓಡಾಡಿಸಲು ಬಹಳ ಹಣ ಬೇಕಾಗಿತ್ತು. ಬೃಹತ್ ರೈಲ್ವೆ ಉದ್ಯಮಕ್ಕೆ ಬೇಕಾಗುವ ಹಣವನ್ನು ಹೊಂದಿಸಲು ಕಂಪನಿಗಳು ಖಾಸಗಿ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ಷೇರುಗಳನ್ನು ಮಾರುತ್ತಿದ್ದರು. ಹೀಗೆ ಮಾಡುವುದರಿಂದ ಅಗಾಧ ಹಣ ಸಂಗ್ರಹಿಸಲು ಸಾಧ್ಯವಾಗುತ್ತಿತ್ತು. ಹೊರದೇಶಗಳ ಹಣವಂತರು ಅಮೆರಿಕ ರೈಲ್ವೆ ಕಂಪನಿಗಳಲ್ಲಿ ಬಂಡವಾಳ ಹೂಡಿದ್ದರು. ೧೯೦೭ರ ಹೊತ್ತಿಗೆ ರೈಲುಮಾರ್ಗಗಳ ಮೌಲ್ಯದ ಪೂರ್ಣ ಮೊತ್ತದಲ್ಲಿ ೧/೪ ಭಾಗಕ್ಕಿಂತ ಹೆಚ್ಚು ಯೂರೋಪಿಯನ್ನರ – ಮುಖ್ಯವಾಗಿ, ಬ್ರಿಟಿಷರ ಕೈವಶವಾಗಿತ್ತು.

ರೈಲುಮಾರ್ಗಗಳ ನಿರ್ಮಾಣದಲ್ಲಿ ಸರ್ಕಾರ ಮುಖ್ಯ ಪಾತ್ರ ವಹಿಸಿತು. ಸಂಸ್ಥಾನ ಸರ್ಕಾರದ ಶಾಸನಾಧಿಕಾರ ಪಡೆದ ರೈಲುಮಾರ್ಗಗಳು ಹಣ, ಭೂಮಿ ಮತ್ತು ತೆರಿಗೆ ರಿಯಾಯಿತಿ ಮುಂತಾದ ಸವಲತ್ತುಗಳನ್ನು ಸರ್ಕಾರದಿಂದ ಪಡೆದುಕೊಂಡು ಅದಕ್ಕೆ ಪ್ರತಿಯಾಗಿ ಸರ್ಕಾರದ ಆಡಳಿತ ಕೇಂದ್ರಗಳನ್ನು ಪ್ರಮುಖ ರೈಲುಮಾರ್ಗಗಳು ಸಂಪರ್ಕಿಸುವಂತೆ ನಿರ್ಮಾಣ ಮಾಡಬೇಕಾಗಿತ್ತು. ರೈಲುಮಾರ್ಗ ನಿರ್ಮಾಣಕಾರರು ಫೆಡರಲ್ ಸರ್ಕಾರದಿಂದ ಮಿಲಿಯಗಟ್ಟಲೆ ಡಾಲರುಗಳ ಬಡ್ಡಿರಹಿತ ಸಾಲವನ್ನು ಪಡೆಯುತ್ತಿದ್ದವು. ಮೇಲಾಗಿ ೧೩೫ ಮಿಲಿಯನ್ ಎಕರೆ ಭೂಮಿಯನ್ನು ಫೆಡರಲ್ ಸರ್ಕಾರದಿಂದ ದೇಣಿಗೆ ಪಡೆದುಕೊಂಡಿದ್ದವು. ರೈಲುಮಾರ್ಗ ಕಂಪನಿಗಳು ರೈಲುಮಾರ್ಗ ನಿರ್ಮಾಣವಲ್ಲದೆ ತಮ್ಮ ವಶಕ್ಕೆ ಬಂದ ಮಿಲಿಯಗಟ್ಟಲೆ ಎಕರೆ ಕಾಡುಗಳ ಮರಗಳನ್ನು ಕಡಿದು ದಿಮ್ಮಿಗಳ ವ್ಯಾಪಾರ ಮಾಡಿ ಮತ್ತು ತಮಗೆ ಉಪಯೋಗಕ್ಕೆ ಬಾರದ ಭೂಮಿಯನ್ನು ಮಾರಿ ಅಧಿಕ ಲಾಭ ಗಳಿಸುತ್ತಿದ್ದರು. ಹೀಗೆ ಹಣ ಗಳಿಸುವ ಅವಕಾಶಗಳಿರುವ ಈ ಉದ್ಯಮ ಜನರನ್ನು ಆಕರ್ಷಿಸಿತು. ಕೆಲವು ಮಹತ್ವಾಕಾಂಕ್ಷೆಯುಳ್ಳ ಉದ್ಯಮಶೀಲರು, ಇನ್ನು ಕೆಲವರು ಯಾವ ವಿಧಾನದಿಂದಲಾದರೂ ಹಣಗಳಿಸಲು ಹೇಸದವರು, ರೈಲುಮಾರ್ಗ ನಿರ್ವಹಣೆಯಲ್ಲಿ ಅಪಾರ ಹಣ ಸಂಪಾದಿಸುವ ಅವಕಾಶಗಳಿಂದ ಆಕರ್ಷಿತರಾಗಿ ಬಂದ ಜನ, ರೈಲುಮಾರ್ಗ ನಿರ್ವಹಣೆ ಮಾಡುತ್ತಿದ್ದ ಕಂಪನಿಗಳ ಪ್ರಮುಖ ಅಧಿಕಾರಸ್ಥಾನಗಳನ್ನು ಆಕ್ರಮಿಸಿಕೊಂಡು ಇಡೀ ಉದ್ಯಮದ ಮೇಲೆ ಪ್ರಭುತ್ವ ಸ್ಥಾಪಿಸಿಕೊಂಡರು. ಜೇ ಗೌಲ್ಡ್ ಎನ್ನುವ ಸಟ್ಟಾ ವ್ಯಾಪಾರಸ್ಥ ರೈಲುಮಾರ್ಗಗಳನ್ನು ಉಪಯೋಗಿಸಿಕೊಂಡು ಯಾವ ಯಾವ ತರದಲ್ಲಿ ಹಣ ಮಾಡಿಕೊಳ್ಳಬಹುದೋ ಆ ರೀತಿಯಲ್ಲಿ ಗಳಿಸಿ ಶ್ರೀಮಂತನಾದನು. ಗೌಲ್ಡ್ ಮತ್ತು ಅವನ ಪಾಲುಗಾರರು ವ್ಯಾಂಡರ್ ಬಿಲ್ಟ್ ಈರಿ ರೈಲುಮಾರ್ಗಗಳನ್ನು ವಶಪಡಿಸಿಕೊಳ್ಳುವುದನ್ನು ಕುಟಿಲ ಯುಕ್ತಿಯಿಂದ ತಪ್ಪಿಸಿದರು. ಇವರು ಮಾಡಿದ ಮೋಸವೆಂದರೆ ಅಗಾಧಪ್ರಮಾನದಲ್ಲಿ ಷೇರುಗಳನ್ನು ಅಚ್ಚುಹಾಕಿಸಿದ್ದು. ಆಗರ್ಭ ಶ್ರೀಮಂತನಾದ ವ್ಯಾಂಡರ್‌ಬಿಲ್ಟ್ ಕೂಡ ಎಲ್ಲ ಷೇರುಗಳನ್ನು ಕೊಳ್ಳಲು ಸಾಧ್ಯವಾಗಲಿಲ್ಲ. ಹೀಗೆಯೇ ಗೌಲ್ಡ್ ನೈರುತ್ಯ ಪ್ರಾಂತದ ಪ್ರಭಾವಶಾಲೀ

ಹಣವಂತರನ್ನು ಕುಯುಕ್ತಿಗಳಿಂದ ಗೆದ್ದು, ಟೆಕ್ಸಾಸ್‌ನ್ನು ಕ್ಯಾಲಿಫೋರ್ನಿಯದೊಡನೆ ಕೂಡಿಸುವ ಅತ್ಯಂತ ದೀರ್ಘವಾದ ರೈಲುಮಾರ್ಗದ ಮೇಲೆ ಪ್ರಭುತ್ವ ಸ್ಥಾಪಿಸಿ ಅಪಾರ ಹಣ ಗಳಿಸಿದನು.

ಲೋಕೋಪಯೋಗಿ ಮನೋಭಾವದ ರೈಲುಮಾರ್ಗ ನಿರ್ಮಾಣಕಾರರೂ ಇದ್ದರು. ಜೇಮ್ಸ್ ಹಿಲ್ ಅಂತಹ ಜನೋಪಕಾರಿ ಉದ್ಯಮಗಾರನಾಗಿದ್ದನು. ಅವನು ತನ್ನ ದೀರ್ಘವಾದ ಉತ್ತರ ರೈಲುಮಾರ್ಗವನ್ನು ಮಿನೆಸೋಟದಿಂದ ಪಶ್ಚಿಮದ ಕಡಲ ತಡಿಯವರೆಗೆ ವಿಸ್ತರಿಸಿದನು. ಈ ಮಹಾ ರೈಲುಮಾರ್ಗದ ಉದ್ದಕ್ಕೂ ಹಳ್ಳಿಗಳಲ್ಲಿ ಮತ್ತು ಸಣ್ಣ ಊರುಗಳಲ್ಲಿ ವಾಸವಾಗಿದ್ದ ಜನರ ಅಭ್ಯುದಯದ ಬಗ್ಗೆ ಜೇಮ್ಸ್ ಹಿಲ್ ಕಾಳಜಿ ವಹಿಸಿದನು. ಅಲ್ಲದೆ ಬಡರೈತರಿಗೆ ಸಾಲದ ಹಣವನ್ನೂ ಒದಗಿಸಿದನು. ಸ್ಥಳೀಯ ಹಸುಗಳ ತಳಿಯನ್ನು ಉತ್ತಮಗೊಳಿಸಲು ಇಂಗ್ಲೆಂಡಿನಿಂದ ಗೂಳಿಗಳನ್ನು ತರಿಸಿ ರೈತರಿಗೆ ಹಂಚಿದನು. ವ್ಯವಸಾಯ ಕ್ಷೇತ್ರದ ತಜ್ಞರನ್ನು ಕರೆಸಿ ಹೊಸ ವ್ಯವಸಾಯ ಪದ್ಧತಿಗಳ ಬಗ್ಗೆ ರೈತರಿಗೆ ಮಾಹಿತಿ ಒದಗಿಸುವುದೆ ಅಲ್ಲದೆ ಮಾದರಿ ಹಿಡುವಳಿಗಳಲ್ಲಿ ಹೊಸ ಪದ್ಧತಿಗಳನ್ನು ರೈತರ ಕಣ್ಣ ಮುಂದೆ ಅನುಷ್ಠಾನಕ್ಕೆ ತಂದು ಅವುಗಳಿಂದ ಆಗುವ ಅನುಕೂಲಗಳನ್ನು ಅವರಿಗೆ ತೋರಿಸಿಕೊಟ್ಟನು. ಹಿಲ್ ಪ್ರಾಮಾಣಿಕನಾಗಿದ್ದು ಲೋಕಸಂಗ್ರಹ ಕಾರ್ಯಗಳಲ್ಲಿ ನಿರತನಾಗಿದ್ದ ಸದ್ಗುಣಿಯಾಗಿದ್ದರೂ ನಿಯಂತ್ರಣವಿಲ್ಲದ ಪೈಪೋಟಿಯಿಂದಾಗಿ ಹಿಂಸಾಕೃತ್ಯಗಳನ್ನು ಸಹಿಸಿಕೊಂಡು ಹೋಗುವ ಮನೋಭಾವ ಬೆಳೆಸಿಕೊಳ್ಳಬೇಕಾಯಿತು. ಎಡ್ವರ್ಡ್ ಹ್ಯಾರಿಮನ್ ಎನ್ನುವ ಪ್ರತಿಸ್ಪರ್ಧಿಯೊಡನೆ ಕೊಲಂಬಿಯ ನದಿಯಗುಂಟ ರೈಲುಮಾರ್ಗ ನಿರ್ಮಿಸುವ ವಿಷಯದಲ್ಲಿ ಮೈಮನಸ್ಸು ಉಂಟಾಗಿ ಪರಸ್ಪರ ಹಕ್ಕುಗಳನ್ನು ಚಲಾಯಿಸಲು ನ್ಯಾಯಾಲಯದ ಸಮ್ಮತಿಗಾಗಿ ಕಟ್ಟಳೆ ನಡೆಸಬೇಕಾಯಿತು. ಅಷ್ಟರಲ್ಲಿ ಹ್ಯಾರಿಮನ್ ಕೆಲಸಗಾರರು ರೈಲುಮಾರ್ಗದ ಕೆಲಸ ಪ್ರಾರಂಭಿಸಲು ಯತ್ನಿಸಿದರು. ಆಗ ಹಿಲ್ ತನ್ನ ಕೆಲಸಗಾರರಿಗೆ ಮತ್ತು ವಕೀಲರಿಗೆ ಹ್ಯಾರಿಮನ್ ಕಡೆಯವರನ್ನು ಹೇಗಾದರೂ ಮಾಡಿ ತಡೆಯುವಂತೆ ಆಜ್ಞಾಪಿಸಿದನು. ಆಗ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದು ಹಿಂಸಾಚಾರಗಳು ಬಹಳ ಸಮಯದವರೆಗೂ ಮುಂದುವರಿದು, ಕೊನೆಯಲ್ಲಿ ನ್ಯಾಯಾಲಯ ಹಿಲ್‌ನ ಪರವಾಗಿ ತೀರ್ಪು ನೀಡಿದ ನಂತರ ಹಿಂಸಾಕೃತ್ಯಗಳು ಕ್ರಮೇಣ' ನಿಂತುಹೋದವು.

ರೈಲುಮಾರ್ಗಗಳ ದುರುಪಯೋಗ

ಹಿಲ್ ಮತ್ತು ಹ್ಯಾರಿಮನ್ ನಡುವಣ ಸಂಘರ್ಷಣೆಗಳು ಆ ಯುಗದ ಮುಖ್ಯ ಸಮಸ್ಯೆಯನ್ನು ಪ್ರತಿನಿಧಿಸುತ್ತವೆ. ಅಧಿಕ ಸಂಖ್ಯೆಯಲ್ಲಿ ರೈಲುಮಾರ್ಗಗಳು ನಿರ್ಮಾಣ ಗೊಂಡು ಪೈಪೋಟಿ ವಿಪರೀತಕ್ಕೆ ಹೋಯಿತು. ಹಲವು ರೈಲುಮಾರ್ಗಗಳು ಒಂದೇ ಉದ್ಯಮದ ಸರಕು ಸಾಗಿಸಲು ತೀವ್ರ ಪೈಪೋಟಿ ನಡೆಸುವಷ್ಟು ಪರಿಸ್ಥಿತಿ ಹದಗೆಟ್ಟಿತ್ತು.

ವ್ಯವಸ್ಥಿತವಾಗಿ ನಿರ್ವಹಿಸಲು ಸಾಧ್ಯವಾಗದಷ್ಟು ವಿಸ್ತಾರಗೊಂಡ ರೈಲುಮಾರ್ಗಗಳಿಂದ ಅನೇಕ ರೈಲ್ವೆ ಕಂಪನಿಗಳು ದಿವಾಳಿ ಎದ್ದವು. ೧೮೭೦ರ ದಶಕದಲ್ಲಿ ೪೫೦ ಉದ್ಯಮಗಳು ನಷ್ಟ ಅನುಭವಿಸಿ ನಾಶವಾದವು. ಈ ಉದ್ಯಮಗಳ ನಾಶದಿಂದ ಉಂಟಾದ ಆರ್ಥಿಕ ಅನಾಹುತಗಳು ರೈಲುಮಾರ್ಗಗಳ ಕಂಪನಿ ಮಾಲೀಕರು, ಬಂಡವಾಳ ಹೂಡಿದವರು ಮಾತ್ರವಲ್ಲದೆ ರೈಲ್ವೆ ಕೆಲಸಗಾರರು, ವ್ಯಾಪಾರಿಗಳು ಮತ್ತು ರೈತರು ಎಲ್ಲರನ್ನು ವಿಪತ್ತಿಗೆ ಗುರಿ ಮಾಡಿತು. ಉದ್ಯಮಿಗಳಿಂದ ತುಂಬಿದ್ದ ರೈಲುಮಾರ್ಗಗಳ ದಂಧೆಯಲ್ಲಿ ಹೇಗಾದರೂ ಮಾಡಿ ಉಳಿದುಕೊಳ್ಳಬೇಕೆಂದು ನಿರ್ಧರಿಸಿದ ರೈಲುಮಾರ್ಗಗಳ ಕಂಪನಿಗಳ ನಿರ್ದೇಶಕರು ಪಕ್ಷಪಾತದ ಕುತಂತ್ರಗಳನ್ನು ಉಪಯೋಗಿಸತೊಡಗಿದರು. ಅತಿ ಪ್ರಸಿದ್ಧ ಕುತಂತ್ರವೆಂದರೆ ರಿಯಾಯಿತಿ ಕೊಡುವ ಪದ್ಧತಿ. ಇದರ ಪ್ರಕಾರ ಒಂದು ಬೃಹತ್ ಕೈಗಾರಿಕೆಯೋ ಕಂಪನಿಯೋ ತನ್ನ ಉತ್ಪನ್ನ ವಸ್ತುಗಳನ್ನು ರೈಲುಸಾರಿಗೆಯ ಮೂಲಕ ರವಾನಿಸಲು ತಗಲುವ ಹಣದ ಮೊತ್ತದಲ್ಲಿ ಒಂದು ಭಾಗವನ್ನು ಕಂಪನಿಯವರಿಗೆ ಬಿಟ್ಟುಕೊಡುವುದು (ರಿಯಾಯಿತಿ). ಇದಕ್ಕೆ ಪ್ರತಿಯಾಗಿ ಕಂಪನಿಯವರು ತಮ್ಮ ಎಲ್ಲ ಸರಕುಗಳನ್ನು ರಿಯಾಯಿತಿ ಕೊಟ್ಟ ರೈಲುಮಾರ್ಗದಲ್ಲಿ ಮಾತ್ರ ಸಾಗಿಸಬೇಕಿತ್ತು. ೧೮೬೯ರಲ್ಲಿ ಲೇಕ್ ಷೋರ್ ರೈಲುಮಾರ್ಗದ ಜಾನ್ ಡಿ. ರಾಕ್‌ಫೆಲರ್ ಅಪಾರ ತೈಲಸಂಗ್ರಹವನ್ನು ರೈಲುಗಾಡಿಗಳಲ್ಲಿ ಕ್ಲೀವ್‌ಲ್ಯಾಂಡ್‌ಗೆ ರವಾನಿಸಲು ಒಪ್ಪಿಗೆ ಕೊಟ್ಟದ್ದರಿಂದ ರಾಕ್‌ಫೆಲರ್‌ಗೆ ಪ್ರತಿಸಲ ರವಾನಿಸುವಾಗಲೂ ರಿಯಾಯಿತಿ ಕೊಡುತ್ತಿತ್ತು. ಹೀಗೆ ತೈಲ ರವಾನಿಸುವುದರ ಮೇಲೆ ಏಕಸ್ವಾಮ್ಯತೆ ಪಡೆದ ಲೇಕ್ ಷೋರ್ ರೈಲ್ವೆ ಕಂಪನಿ ಅಭಿವೃದ್ಧಿಗೊಳ್ಳುತ್ತ ಹೋಯಿತು. ರಾಕ್‌ಫೆಲರ್‌ನೊಡನೆ ಸ್ಪರ್ಧಿಸುತ್ತಿದ್ದ ಕ್ಲೀವ್‌ಲ್ಯಾಂಡ್‌ನ ಇತರ ತೈಲ ಶುದ್ಧೀಕರಣ ಕೇಂದ್ರಗಳು ಆರ್ಥಿಕವಾಗಿ ಕ್ಷೀಣಿಸುತ್ತ ಹೋದವು. ದೇಶದ ಎಲ್ಲ ಕಡೆ ಇತರ ಉದ್ಯಮಗಳು ಈ ರಿಯಾಯಿತಿ ಪದ್ಧತಿಯನ್ನು ಅನುಸರಿಸತೊಡಗಿದವು.

ದೇಶದ ಕೆಲವು ಕಡೆಗಳಲ್ಲಿ ಒಂದೇ ಒಂದು ರೈಲುಮಾರ್ಗವಿದ್ದು ಆ ಪ್ರದೇಶದಲ್ಲಿ ಎಲ್ಲರೂ ಅದನ್ನು ಅವಲಂಬಿಸುವುದು ಅನಿವಾರ್ಯವಾಗುತ್ತಿತ್ತು. ಆ ಸಂದರ್ಭದಲ್ಲಿ ರೈಲ್ವೆ ಕಂಪನಿಯವರು ಸಾರಿಗೆಯ ದರವನ್ನು ಗಗನಕ್ಕೇರಿಸುತ್ತಿದ್ದರು. ಸರಕುಗಳನ್ನು ಮತ್ತು ಪ್ರಯಾಣಿಕರನ್ನು ಹತ್ತಿರದ ಊರಿಗೇ ರವಾನಿಸಲು ಹೆಚ್ಚು ಹಣಕೊಡಬೇಕಾಗಿತ್ತು. ರೈಲ್ವೆ ಕಂಪನಿಗಳಲ್ಲಿ ಮತ್ತು ರೈಲುಮಾರ್ಗಗಳ ನಿರ್ವಹಣೆಯಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿತ್ತು. ರೈಲುಮಾರ್ಗ ನಿರ್ಮಾಣ ಮಾಡುತ್ತಿದ್ದ ಕಂಪನಿಯ ಆಡಳಿತ ಮಂಡಳಿಯೇ ರೈಲು ಸಾರಿಗೆಯನ್ನು ನಿರ್ವಹಿಸುತ್ತಿದ್ದುದರಿಂದ ದೊಡ್ಡ ಕಾಂಟ್ರಾಕ್ಟ್‌ಗಳು ತಮಗೆ ದೊರೆಯುವಂತೆ ಮಾಡಿಕೊಳ್ಳುತ್ತಿದ್ದರು. ಈ ಕಾರಣದಿಂದ ಕೆಲವು ರೈಲ್ವೆ ಕಂಪನಿಗಳು ಸಾಲ ಮಾಡಬೇಕಾಗಿ ಬಂದು ಕಡೆಯಲ್ಲಿ ದಿವಾಳಿ ಎದ್ದು ಹೋಗುತ್ತಿದ್ದವು. ಭ್ರಷ್ಟಾಚಾರ ರೈಲ್ವೆ ಕಂಪನಿಗಳನ್ನಲ್ಲದೆ ಸಾರ್ವಜನಿಕರ ಜೀವನವನ್ನೂ ಕಲುಷಿತಗೊಳಿಸಿತ್ತು. ನ್ಯಾಯ ಬಾಹಿರವಾದ ವ್ಯವಹಾರಗಳನ್ನು ನೋಡಿದರೂ ನೋಡದಂತೆ ಇರಲು ಅಧಿಕಾರಿಗಳಿಗೆ

ಲಂಚ ಕೊಡುವುದು ಪದ್ಧತಿಯಾಗಿತ್ತು. ಆರ್ಥಿಕ ಅಥವಾ ರಾಜಕೀಯ ಪ್ರಭಾವವುಳ್ಳ ವ್ಯಕ್ತಿಗಳಿಗೆ ಪುಕ್ಕಟ್ಟೆ ಪ್ರಯಾಣ ಮಾಡಲು ಪಾಸ್‌ಗಳನ್ನು ಕೊಡುತ್ತಿದ್ದರು. ಭ್ರಷ್ಟಾಚಾರ ಮಿತಿಮೀರಿ ಸಾಮನ್ಯ ಜನರು ತಾಳ್ಮೆ ಕಳೆದುಕೊಂಡರು. ಸಾರಿಗೆ ಸೌಕರ್ಯವನ್ನು ಉಪಯೋಗಿಸುತ್ತಿದ್ದ ವರ್ತಕರು ದರಗಳ ವೈಪರೀತ್ಯದ ಬಗ್ಗೆ – ಹತ್ತಿರದ ಊರುಗಳಿಗೆ ಹೆಚ್ಚಿನ ದರ, ದೂರದ ಊರುಗಳಿಗೆ ಕಡಿಮೆಯ ದರ – ಮತ್ತು ರಿಯಾಯಿತಿಗಳ ಬಗ್ಗೆ ವಿರೋಧ ವ್ಯಕ್ತಪಡಿಸಿದರು. ಏಕಸ್ವಾಮ್ಯತೆ ಇರುವ ರೈಲುಮಾರ್ಗಗಳು ಅವುಗಳನ್ನು ಅವಲಂಬಿಸಿರುವ ಬಡರೈತರನ್ನು ಶೋಷಣೆ ಮಾಡುವುದನ್ನು ಪ್ರತಿಭಟಿಸಿದರು. ೧೮೭೦ರ ಹೊತ್ತಿಗೆ ರೈತಸಂಘ (the Grange)ರೈಲುಮಾರ್ಗಗಳಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರವನ್ನು ಪ್ರತಿಭಟಿಸಲು ರೈತರನ್ನು ಸಂಘಟಿಸಿತು. ರೈತಸಂಘ ಸಾರಿಗೆ ದರಗಳ ಪಟ್ಟಿಯನ್ನು ತಯಾರಿಸುವಂತೆ, ಹತ್ತಿರದ ಜಾಗಗಳಿಗೆ ಸಾಗಿಸಲು ಹೆಚ್ಚು ಹಣ ವಸೂಲು ಮಾಡುವುದನ್ನು ನಿಲ್ಲಿಸುವಂತೆ, ಒಂದು ಊರಿಗೆ ಎರಡು ರೈಲುಮಾರ್ಗಗಳಿದ್ದರೆ ರೈಲ್ವೆ ಕಂಪನಿಗಳು ಅವುಗಳ ನಡುವೆ ಸ್ಪರ್ಧೆ ತಪ್ಪಿಸಲು ಅವುಗಳನ್ನು ಒಂದುಗೂಡಿಸಿ ಒಂದೇ ರೀತಿಯ ಸಾರಿಗೆ ದರವನ್ನು ಹೇರಿ ಹೆಚ್ಚಿಗೆ ಹಣ ಮಾಡಿಕೊಳ್ಳುವುದನ್ನು ನಿಲ್ಲಿಸುವಂತೆ ಮತ್ತು ಸರ್ಕಾರಿ ಅಧಿಕಾರಿಗಳಿಗೆ ಮತ್ತು ಪ್ರತಿಷ್ಠಿತ ವ್ಯಕ್ತಿಗಳಿಗೆ ಕೊಡಲಾಗುತ್ತಿದ್ದ ಪುಕ್ಕಟ್ಟೆ ರಹದಾರಿಗಳನ್ನು ತೆಗೆದುಹಾಕುವಂತೆ ಸರ್ಕಾರವನ್ನು ಒತ್ತಾಯ ಮಾಡಿತು. ಈ ಸುಧಾರಣೆಗಳನ್ನು ಬೆಂಬಲಿಸುವ ಅಭ್ಯರ್ಥಿಗಳನ್ನು ಆರಿಸುವ ಸಲುವಾಗಿ ಚುನಾವಣೆಯ ಸಮಯದಲ್ಲಿ ರೈತರು ಭಾರಿ ಸಂಖ್ಯೆಯಲ್ಲಿ ಸೇರಿ ಮತ ಚಲಾಯಿಸುತ್ತಿದ್ದರು. ಈ ಚಳುವಳಿಯಿಂದಾಗಿ ಇಲಿನಾಯ್, ವಿಸ್‌ಕಾನ್ಸಿನ್, ಮಿನೆಸೋಟ ಮತ್ತು ಅಯೋವ 'ಗ್ರೇನ್‌ಜರ್ ಕಾಯಿದೆ' ಗಳನ್ನು ಜನರ ಹಿತರಕ್ಷಣೆಗಾಗಿ ಜಾರಿಗೆ ತಂದವು.

ಗ್ರೇನ್‌ಜರ್ ಕಾಯಿದೆಗಳ ವಿರುದ್ಧವಾಗಿ ರೈಲ್ವೆ ಕಂಪನಿಗಳು ನ್ಯಾಯಾಲಯದಲ್ಲಿ ಕಟ್ಟಳೆ ಹೂಡಿದವು. ಕೆಲವು ಕಟ್ಟಳೆಗಳು ಶ್ರೇಷ್ಠ ನ್ಯಾಯಾಲಯದವರೆಗೂ ಹೋದವು. ನ್ಯಾಯಾಲಯಗಳು ಮೊದಲು ಗ್ರೇನ್‌ಜರ್ ಕಾಯಿದೆಗಳನ್ನು ಎತ್ತಿ ಹಿಡಿದವು. ಆದರೆ ಒಂದು ದಶಕ ಕಳೆಯುವುದರಲ್ಲಿ ನ್ಯಾಯಾಲಯಗಳಲ್ಲಿ ಖಾಸಗಿ ಉದ್ಯಮಗಳಲ್ಲಿ ಸರ್ಕಾರ ಕೈಹಾಕಬಾರದೆಂಬ ಧೋರಣೆಯನ್ನು ಬೆಂಬಲಿಸುವ ನ್ಯಾಯಾಧೀಶರುಗಳ ಸಂಖ್ಯೆ ಹೆಚ್ಚಾಗಿ ೧೮೮೬ರಲ್ಲಿ ನ್ಯಾಯಾಲಯ ತನ್ನ ಮೊದಲಿನ ತೀರ್ಪನ್ನು ಹಿಂತೆಗೆದುಕೊಂಡು ರೈಲು ಸಾರಿಗೆಯ ದರವನ್ನು ನಿಯಂತ್ರಿಸುವ ಅಧಿಕಾರ ಸಂಸ್ಥಾನ ಸರ್ಕಾರಕ್ಕೆ ಇಲ್ಲ. ಸಂಸ್ಥಾನಗಳ ನಡುವಣ ವಾಣಿಜ್ಯ ವ್ಯವಹಾರಗಳನ್ನು ಫೆಡರಲ್ ಸರ್ಕಾರ ಮಾತ್ರ ನಿಯಂತ್ರಿಸುವ ಅಧಿಕಾರ ಪಡೆದಿದೆ ಎಂದು ತೀರ್ಮಾನ ನೀಡಿತು. ಈ ತೀರ್ಪು ಸರ್ಕಾರ ಖಾಸಗಿ ಉದ್ಯಮಗಳನ್ನು ನಿಯಂತ್ರಿಸುವುದನ್ನು ತಡೆಗಟ್ಟಿತು ಮತ್ತು ರಾಜ್ಯಾಂಗದ ೧೪ನೆಯ ತಿದ್ದುಪಡಿಯನ್ನು ವಿಸ್ತರಿಸಿ ಕಂಪನಿ ಮತ್ತು ಕಾರ್ಪೊರೇಷನ್‌ಗಳನ್ನು 'ವ್ಯಕ್ತಿ'ಗಳಾಗಿ ಪರಿಗಣಿಸಿ ಅವುಗಳ ಸ್ವತ್ತನ್ನು ಯಾರೂ ನ್ಯಾಯಾಲಯದ ಒಪ್ಪಿಗೆಯಿಲ್ಲದೆ ಕಸಿದುಕೊಳ್ಳುವಂತಿಲ್ಲ

ಎನ್ನುವುದನ್ನು ಸ್ಪಷ್ಟಪಡಿಸಿತು. ಶ್ರೇಷ್ಠ ನ್ಯಾಯಾಲಯುಗಳು ರೈಲ್ವೆ ಕಂಪನಿಗಳಿಗೆ ಅನುಕೂಲವಾಗುವಂತೆ ತೀರ್ಪು ನೀಡಿದ್ದರೂ ರೈಲುಮಾರ್ಗಗಳನ್ನು ನಿಯಂತ್ರಿಸಲು ರಾಷ್ಟ್ರಮಟ್ಟದ ಮೇಲ್ವಿಚಾರಣೆ ಅಗತ್ಯವೆಂದು ಫೆಡರಲ್ ಸರ್ಕಾರಕ್ಕೆ ಸಾರ್ವಜನಿಕರು ಮನವಿ ಮಾಡಿದರು. ಹೀಗೆ ಸಾರ್ವಜನಿಕರ ಒತ್ತಾಯದಿಂದ ೧೮೮೭ರಲ್ಲಿ ಕಾಂಗ್ರೆಸ್ 'ಅಂತರ ಸಂಸ್ಥಾನಗಳ ವಾಣಿಜ್ಯ ಕಾಯಿದೆ' (Inter State Commerce Act) ಯನ್ನು ಜಾರಿಗೆ ತಂದಿತು. ಇದರ ಪ್ರಕಾರ – ಎಲ್ಲ ಸಾರಿಗೆಯ ದರಗಳು ಯುಕ್ತವಾಗಿರಬೇಕು ಮತ್ತು ಒಂದು ಸಂಸ್ಥಾನದಿಂದ ಇನ್ನೊಂದು ಸಂಸ್ಥಾನಕ್ಕೆ ಹೋಗುವ ರೈಲುಗಳಲ್ಲಿ ರಿಯಾಯಿತಿ ಕೊಡುವುದನ್ನು ನಿಲ್ಲಿಸಬೇಕು, ಹತ್ತಿರದ ಜಾಗಗಳಿಗೆ ಸರಕು ಸಾಗಾಣಿಕೆ ದರ ಹೆಚ್ಚಿಸಬಾರದು, ಅನೇಕ ಕಂಪನಿಗಳು ಒಟ್ಟು ಸೇರಿ (pooling) ವ್ಯವಹಾರ ನಡೆಸಕೂಡದು – ಈ ಎಲ್ಲ ನಿರ್ಬಂಧಗಳನ್ನು ಜಾರಿಗೆ ತರುವ ಅಧಿಕಾರವನ್ನು ಐದು ಸದಸ್ಯರಿಂದ ಕೂಡಿದ 'ಅಂತರ ಸಂಸ್ಥಾನಗಳ ವಾಣಿಜ್ಯ ನಿಯೋಗ ' (Inter State Commerce Commission) ಕ್ಕೆ ಒಪ್ಪಿಸಲಾಯಿತು. ಖಾಸಗಿ ಉದ್ಯಮಗಳನ್ನು ಫೆಡರಲ್ ಸರ್ಕಾರ ನಿಯಂತ್ರಿಸಲು ಪ್ರಯತ್ನ ಮಾಡಿದ್ದು ಇದೇ ಮೊದಲು. ಆದರೆ ಈ ಎಲ್ಲ ನಿರ್ಬಂಧಗಳನ್ನು ವಿಮರ್ಶಿಸುವ ಅಧಿಕಾರ ನ್ಯಾಯಾಲಯಗಳಿಗೆ ಇದ್ದುದರಿಂದ ಈ ಕಾಯಿದೆಗಳನ್ನು ಪ್ರತಿಭಟಿಸಿ ಶ್ರೇಷ್ಠ ನ್ಯಾಯಾಲಯದಲ್ಲಿ ಹೂಡಿದ ಮೊದಲ ೧೬ ಕಟ್ಟಳೆಗಳಲ್ಲಿ ೧೫ ಕಟ್ಟಳೆಗಳು ರೈಲ್ವೆ ಕಂಪನಿಯವರಿಗೆ ಅನುಕೂಲವಾಗುವಂತೆ ತೀರ್ಮಾನವಾದವು.

ಔದ್ಯೋಗೀಕರಣಕ್ಕೆ ತಾತ್ವಿಕ ಪ್ರತಿಕ್ರಿಯೆ

'ಬಲ್ಲಿದರು ಬದುಕಿನ ಹೋರಾಟದಲ್ಲಿ ಗೆಲ್ಲುವರು' ಎನ್ನುವ 'ಸಾಮಾಜಿಕ ಡಾರ್ವಿನ್ ತತ್ವ' (Social Darvinism)ದಲ್ಲಿ ಜನರಿಗೆ ದೃಢವಾದ ನಂಬಿಕೆ ಇರುವವರೆಗೂ ಔದ್ಯೋಗೀಕರಣದ ಆನುಷಂಗಿಕ ಪರಿಣಾಮಗಳಾದ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡಲು ಸಂದರ್ಭ ಅನುಕೂಲವಾಗಿರಲಿಲ್ಲ. ಹಣವಂತರಾದ ಉದ್ಯಮಿಗಳಿಗೆ ಮತ್ತು ವರ್ತಕರಿಗೆ ಸಾಮಾಜಿಕ ಡಾರ್ವಿನ್ ತತ್ವ ವೇದವಾಕ್ಯವಾಗಿತ್ತು. ಆದರೆ ಕ್ರಮೇಣ ಈ ತತ್ವ ವಿಮರ್ಶಕರ ವಿಶ್ಲೇಷಣೆಗೆ ಗುರಿಯಾಗಿ ಅದರ ನ್ಯೂನತೆಗಳು ಸ್ಪಷ್ಟವಾಗತೊಡಗಿದವು. ಈ ತತ್ವ ವ್ಯಕ್ತಿಸ್ವಾತಂತ್ರ್ಯ ಮತ್ತು ಸಮಾನ ಅವಕಾಶಗಳನ್ನು ನಾಶಗೊಳಿಸುತ್ತದೆ ಎಂದು ವಿಮರ್ಶಕರು ತಿಳಿಸಿದರು. ಸಮಾಜದಲ್ಲಿ ತ್ವರಿತಗತಿಯಲ್ಲಿ ಬದಲಾವಣೆಗಳಾಗುತ್ತಿದ್ದವು. ಕೆಲಸ ಕಳೆದುಕೊಂಡ ಕಾರ್ಮಿಕರು ಪ್ರತಿಭಟನೆ ನಡೆಸಿದ್ದರು. ಗಿರಾಕಿಗಳು ಕೃತಕ ಅಭಾವ ಸೃಷ್ಟಿಸಿ ಬೆಲೆ ಹೆಚ್ಚಿಸುತ್ತಿದ್ದ ವರ್ತಕರನ್ನು ಖಂಡಿಸುತ್ತಿದ್ದರು. ಕಾರ್ಖಾನೆಗಳ ಪ್ರಬಲ ಮಾಲೀಕರು ಮತ್ತು ಉದ್ಯಮಿಗಳು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ರಾಜಕಾರಣಿಗಳಿಗೆ ಮತ್ತು ನ್ಯಾಯಾಧೀಶರಿಗೆ ಲಂಚ ರುಷುವತ್ತುಗಳನ್ನು ಕೊಡುತ್ತಿದ್ದುದನ್ನು ತಿಳಿದ ಜನರು ಕೋಪಗೊಂಡಿದ್ದರು. ಸಮಾಜದಲ್ಲಿ ನಡೆಯುತ್ತಿದ್ದ ಅನ್ಯಾಯಗಳು ಅಸಮಾನತೆಗೆ ಕಾರಣವಾಗಿದ್ದವು. ಇದನ್ನು ತಡೆಗಟ್ಟಲು ಮುಕ್ತ ವ್ಯಾಪಾರ/

ಮಾರುಕಟ್ಟೆ ಎಂದರೆ, ಅನಿಯಂತ್ರಿತ ಆರ್ಥಿಕ ವ್ಯವಸ್ಥೆಯ ಮೂಲತತ್ವಗಳನ್ನು ಪ್ರಶ್ನಿಸಿ ಅವುಗಳ ತಪ್ಪುಗಳನ್ನು ಎತ್ತಿ ತೋರಿಸಬೇಕಾದುದು ಅಗತ್ಯವಾಗಿತ್ತು. ಹಾಗೆಯೇ ಸಾಮಾಜಿಕ ಡಾರ್ವಿನ್ ತತ್ವವನ್ನೂ ನಿರಾಕರಿಸುವುದು ಅಗತ್ಯವಾಗಿತ್ತು. ಅದರಂತೆ ಸಮಾಜ ಸುಧಾರಣೆಯಲ್ಲಿ ಆಸಕ್ತಿಯಿದ್ದ ತತ್ವಜ್ಞಾನಿಗಳು 'ಸಮಾಜದಲ್ಲಿ ಸಂಪೂರ್ಣವಾದ ಸ್ವತಂತ್ರವಾದ ಅನಿಯಂತ್ರಿತವಾದ ಸ್ಪರ್ಧೆ ಪ್ರಕೃತಿ ನಿಯಮ; ಬಲ್ಲಿದರು ಪ್ರಕೃತಿ ನಿಯಮದಂತೆ ಗೆಲ್ಲುತ್ತಾರೆ, ನಿರ್ಬಲರು ನಾಶಗೊಳ್ಳುತ್ತಾರೆ, ಈ ಪ್ರಕ್ರಿಯೆಯಲ್ಲಿ ಸರ್ಕಾರ ಅಥವಾ ಖಾಸಗಿ ಸಂಸ್ಥೆಗಳು ಮಧ್ಯೆ ಪ್ರವೇಶಿಸಬಾರದು' ಎನ್ನುವ ವಾದವನ್ನು ನಿರಾಕರಿಸಿದರು.

ವಾಸ್ತವ ವ್ಯಾವಹಾರಿಕ ತತ್ವ (The Philosophy of Pragmatism)

ಅಮೆರಿಕದಲ್ಲಿ ಅಂತರ್ಯುದ್ಧಾನಂತರದ ಕಾಲದಲ್ಲಿ ಹಲವಾರು ತತ್ವಚಿಂತನ ಪಂಥಗಳು ಜನತೆಯ ಮನ ಒಲಿಸಲು ಪರಸ್ಪರ ಸ್ಪರ್ಧೆ ನಡೆಸಿದ್ದವು. ಆ ಸಮಯದಲ್ಲಿ ಅಪೂರ್ವ ಮತ್ತು ಅಪ್ಪಟ ಅಮೆರಿಕನ್ ತತ್ವಜ್ಞಾನ ಸೃಷ್ಟಿಗೊಂಡಿತು. ಈ ತತ್ವಜ್ಞಾನ ಸಾಮಾಜಿಕ ಡಾರ್ವಿನ್ ವಾದವನ್ನು ಎಲ್ಲಾ ರೀತಿಯ ಟೀಕೆಗಳಿಗೆ ಗುರಿಮಾಡಿ ಅದೊಂದು ಗೊಡ್ಡುವಾದ ಎನ್ನುವ ಅಭಿಪ್ರಾಯ ಮೂಡಿಸಿತು. ಅಂತರ್ಯುದ್ಧದ ಕೊನೆಯಲ್ಲಿ ಅಮೆರಿಕನ್ ವಿಶ್ವವಿದ್ಯಾನಿಲಯಗಳಲ್ಲಿ ಸ್ಕಾಟಿಷ್ (Scottish) ಅಥವಾ ಸಾಮಾನ್ಯ ತಿಳುವಳಿಕೆ (common sense) ಯ ವಾಸ್ತವಿಕ ತತ್ವ (Realism) ಪ್ರಮುಖವಾಗಿತ್ತು. ಈ ಸಾಮಾನ್ಯ ತಿಳುವಳಿಕೆಯ ಪಂಥವನ್ನು ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯದ ಅಧ್ಯಕ್ಷ ಜೇಮ್ಸ್ ಮೆಕಾಶ್ (James McCosh) ಪ್ರತಿಪಾದಿಸುತ್ತಿದ್ದನು. ಮಾನವರು ಪ್ರಕೃತಿದತ್ತವಾದ ಸಾಮಾನ್ಯ ತಿಳುವಳಿಕೆಯ ಮೂಲಕ ಸತ್ಯವನ್ನು ಅರಿತುಕೊಳ್ಳಬಲ್ಲರು ಎಂದು ಅವನು ನಂಬಿದ್ದನು. ಅನೇಕ ಚಿಂತನಕಾರರಿಗೆ ಈ ತತ್ವ ನೀರಸವಾಗಿ ಮತ್ತು ಅಸಮರ್ಪಕವಾಗಿ ತೋರಿತು. ಆದ್ದರಿಂದ ಅವರು ಹೆಗೆಲ್ ತತ್ವಜ್ಞಾನದ ಕಡೆಗೆ ತಿರುಗಿದರು. ಹೆಗೆಲ್ ಆದರ್ಶವಾದಿ (idealist). ಅವನು ಪ್ರಪಂಚದ ಆಗುಹೋಗುಗಳನ್ನು ಅವು ಬದಲಾವಣೆ ಹೊಂದುವ ರೀತಿ (pattern) ಮತ್ತು ಅನುಸರಿಸುವ ನೀತಿ (principles)ಗಳ ಮೂಲಕ ವಿವರಿಸುತ್ತಿದ್ದನು. ಇತಿಹಾಸ ಬದಲಾವಣೆಯ ಸಹಜ ನಿಯಮಗಳಿಂದ ಸೃಷ್ಟಿಗೊಳ್ಳುತ್ತದೆ ಎಂದು ಅವನ ಅಭಿಪ್ರಾಯ.

ಈ ಬದಲಾವಣೆಗಳ ಸಾಮಾನ್ಯ ನಿಯಮಗಳು ಕಲ್ಪನೆಯನ್ನು ಆಧರಿಸಿರುತ್ತವೆ. ಕಲ್ಪನೆ ಅನಿವಾರ್ಯವಾಗಿ ಅದರ ತದ್ವಿರುದ್ಧ ಭಾವನೆಯಾಗಿ ಮಾರ್ಪಾಡುಗುತ್ತದೆ; ಕ್ರಮೇಣ ಮೂಲಕಲ್ಪನೆ ಮತ್ತು ಅದರ ತದ್ವಿರುದ್ಧ ಭಾವನೆಗಳು ಪರಸ್ಪರ ಕಲೆತು ಉಂಟಾಗುವ ಪ್ರಕ್ರಿಯೆಯಲ್ಲಿ ಆ ಎರಡು ಅಂಶಗಳು ಸಂಯೋಗಗೊಂಡಿರುತ್ತವೆ ಎನ್ನುವುದು ಹೆಗೆಲ್‌ನ ಮೂಲತತ್ವ. ಹೆಗೆಲಿಯನ್ನರು ಈ ತಾತ್ವಿಕ ಭಾವನೆಯನ್ನು ಆಗ

ನಡೆಯುತ್ತಿದ್ದ ಅಂತರ್ಯುದ್ಧದ ಘಟನೆಗಳಿಗೆ ಅನ್ವಯಿಸಿದರು. ಉತ್ತರ ಸಂಸ್ಥಾನಗಳು (ಕಲ್ಪನೆ–thesis) ತಮಗೆ ತದ್ವಿರುದ್ಧವಾಗಿದ್ದ ದಕ್ಷಿಣ ಸಂಸ್ಥಾನಗಳ (antithesis) ಮೇಲೆ ಯುದ್ಧ ಮಾಡಿದವು. ಇದರ ಪರಿಣಾಮ ಹೊಸ ಒಕ್ಕೂಟ (Union) ರಚನೆಗೊಂಡು ಪ್ರಬಲವಾದ ಹೊಸರಾಷ್ಟ್ರ ಅಮೆರಿಕ ಸಂಯುಕ್ತ ಸಂಸ್ಥಾನಗಳು (ಸಂಕಲನ–synthesis) ಉದಯವಾಯಿತು. ಈ ರೀತಿ ಅಮೆರಿಕದ ಇತಿಹಾಸದ ಕೆಲವು ನಿರ್ಣಾಯಕ ಘಟನೆಗಳನ್ನು ಹೆಗೆಲಿಯನ್ನರು ಅವನ ತತ್ವದ ಮೂಲಕ ವಿವರಿಸಿದರು. ಹಾಬ್ಸ್‌ನಂತೆಯೇ ಹರ್ಬರ್ಟ್ ಸ್ಪೆನ್ಸರ್ (Herbert Spencer) ನ ಕೃತಿಗಳು ಆಗ ಜನಪ್ರಿಯವಾಗಿದ್ದವು. ಸ್ಪೆನ್ಸರ್‌ನ ಅನುಯಾಯಿ ಜಾನ್ ಫಿಸ್ಕ್ (John Fiske) ಮಾನವನ ಬೆಳವಣಿಗೆ, ನೀತಿ ನಿಯಮಗಳು, ರಾಜಕೀಯ ಚಟುವಟಿಕೆಗಳು ಮತ್ತು ಸಾಮಾಜಿಕ ನಿರ್ಬಂಧಗಳು ಎಲ್ಲವೂ ನಿರಂತರವಾಗಿ ವಿಕಾಸಗೊಳ್ಳುತ್ತವೆ ಎಂದು ಪ್ರತಿಪಾದಿಸಿದನು. ಸ್ಪೆನ್ಸರ್‌ನ ವಾದವನ್ನು ನಿರಾಕರಿಸಿದ ಅಮೆರಿಕನ್ ಚಿಂತನಕಾರರು ನಿರಂತರವಾಗಿ ಬದಲಾಗುತ್ತಿರುವ ಸಮಾಜವನ್ನು ಚಿರಂತನವಾದ ನಿಯಮಗಳಿಂದ ವಿವರಿಸುವುದು ಅಸಂಗತವಾದ ಆಲೋಚನೆಯೇ ಹೊರತು ತರ್ಕಬದ್ಧವಾದ ವಿವರಣೆಯಲ್ಲ ಎಂದು ಟೀಕಿಸಿದರು. ಕ್ರಮೇಣವಾಗಿ ಅಮೆರಿಕನ್ ತತ್ವಜ್ಞಾನಿಗಳು 'ವಾಸ್ತವಿಕ ವ್ಯವಹಾರಿಕ ತತ್ವ' (the philosophy of pragmatism) ವನ್ನು ಪ್ರತಿಪಾದಿಸಿದರು. ಈ ತತ್ವ ಎಲ್ಲ ಚಿಂತನನಿಯಮಗಳನ್ನು ಮತ್ತು ಆದರ್ಶ ವ್ಯವಸ್ಥೆಗಳನ್ನು ನಿರಾಕರಿಸಿ, ಕಲ್ಪನೆಗಳನ್ನು (ideas) ಅವುಗಳ ಪರಿಣಾಮದಿಂದ ಮೌಲ್ಯಮಾಪನ (evaluation) ಮಾಡಬೇಕೆಂದು ವಿಶದಪಡಿಸಿತು. ಕಲ್ಪನೆ ಮತ್ತೇನೂ ಅಲ್ಲ, ಅದರ ಪರಿಣಾಮಗಳ ಮೊತ್ತ (an idea is nothing more than the sum of its consequences); ಕಲ್ಪನೆ ಮತ್ತು ಸಿದ್ಧಾಂತಗಳು ವಾಸ್ತವಿಕ ಸಂಗತಿಗಳನ್ನು ಒಳಗೊಂಡಿರದೆ ಹೋದರೆ ಅವು ನಿಷ್ಪ್ರಯೋಜಕವಾಗುತ್ತವೆ. ಹೀಗೆ ಈ ತತ್ವ ವಾಸ್ತವಿಕತೆ ಮತ್ತು ಉಪಯುಕ್ತತೆಗಳನ್ನು ಅತಿ ಮುಖ್ಯವಾದ ಅಂಶಗಳೆಂದು ಪರಿಗಣಿಸಿತು.

ವಾಸ್ತವಿಕ ವ್ಯವಹಾರಿಕ ತತ್ವವನ್ನು ವಿಸ್ತರಿಸಿ ಹೆಚ್ಚು ಜನರಿಗೆ ಅನ್ವಯಿಸುವಂತೆ ಮಾಡಿದವನು ವಿಲಿಯಂ ಜೇಮ್ಸ್ (William James). ಇವನು ಮೊದಲು ಕಲಾ ವಿದ್ಯಾರ್ಥಿಯಾಗಿದ್ದು ನಂತರ ವೈದ್ಯಕೀಯ ಪದವೀಧರನಾಗಿ, ಮನಶ್ಶಾಸ್ತ್ರದಲ್ಲಿ ವಿಶಿಷ್ಟ ಪರಿಣತಿ ಪಡೆದು, ಅಂತಿಮವಾಗಿ ತತ್ವಜ್ಞಾನಿಯಾಗಿ ಪ್ರಸಿದ್ಧಿ ಪಡೆದನು. ೧೮೯೦ರಲ್ಲಿ ಅವನ ಮೊದಲನೆಯ ಹಾಗೂ ಅತಿಮುಖ್ಯವಾದ ಕೃತಿ 'ಮನಶ್ಶಾಸ್ತ್ರದ ಮೂಲತತ್ವಗಳು' ಪ್ರಕಟಣೆಯಾಯಿತು. ಇದು ಮನಶ್ಶಾಸ್ತ್ರವನ್ನು ತತ್ವಜ್ಞಾನದಿಂದ ಬೇರ್ಪಡಿಸಿ ಒಂದು ಸ್ವತಂತ್ರವಾದ ವಿಜ್ಞಾನಶಾಖೆಯಾಗಿ ಸ್ಥಾಪಿಸಲು ಕಾರಣವಾಯಿತು. ಇದಾದ ಮೇಲೆ ಅವನ ಆಸಕ್ತಿ ತತ್ವಜ್ಞಾನ ಮತ್ತು ಮತಧರ್ಮಗಳ ಕಡೆಗೆ ತಿರುಗಿತು. ಮತಧರ್ಮವನ್ನು ಕುರಿತ ಬರೆದ ಸುಪ್ರಸಿದ್ಧ ಕೃತಿ 'ಮತಧರ್ಮ ಅನುಭವದ ವಿವಿಧತೆ' (the varieties

of religious experience) – ಇದರಲ್ಲಿ ಮತಧರ್ಮ ನಂಬಿಕೆಯನ್ನು ಬಾಹ್ಯಜಗತ್ತಿನ ಬಗ್ಗೆ ಸಂಗ್ರಹವಾದ ಹೊಸ ತಿಳುವಳಿಕೆಯೊಂದಿಗೆ ಹೊಂದಿಕೆಯಾಗುವಂತೆ ಮಾಡಲು ಪ್ರಯತ್ನಪಟ್ಟನು. ವಿಲಿಯಂ ಜೇಮ್ಸ್‌ನ ವಾಸ್ತವಿಕ ವ್ಯವಹಾರಿಕ ತತ್ವ ನಿಜವನ್ನು ಕಂಡು ಹಿಡಿಯುವ ಒಂದು ವಿಧಾನವಾಗಿತ್ತು. ಈ ಸಲುವಾಗಿ ನಡೆಸುವ ಪರೀಕ್ಷೆಯನ್ನು ಅವನು 'ನಗದು ಮೌಲ್ಯ' (cash value) ಎಂದು ಕರೆದನು. ಒಂದು ಕಲ್ಪನೆ ಅಥವಾ ಯೋಚನೆ ಕಾರ್ಯಗತವಾದಾಗ ಅಥವಾ ಫಲಿತಾಂಶ ನೀಡಿದಾಗ ಮಾತ್ರ ಅದಕ್ಕೆ 'ನಗದು ಮೌಲ್ಯ'ವಿರುತ್ತದೆ. ಜೇಮ್ಸ್‌ನ ಪ್ರಕಾರ ಸತ್ಯ ಬರಿಯ ಅವಲೋಕಿಸಿದ ಅಂಶಗಳಲ್ಲ. ಅದು ಒಬ್ಬ ವ್ಯಕ್ತಿಯು ಅವಲೋಕಿಸಿದ ಅಂಶಗಳ ಬಗ್ಗೆ ಅವನ ನಂಬಿಕೆಗಳನ್ನು ಒಳಗೊಂಡಿರುತ್ತದೆ. 'ಇಚ್ಛೆ ಪಟ್ಟು ನಂಬುವುದು' (the will to believe) ಸಂಗತಿಗಳ ಪರಿಣಾಮದ ಮೇಲೆ ಪ್ರಭಾವ ಬೀರುತ್ತದೆ. ಒಂದು ಕಲ್ಪನೆಯು ಹೆಚ್ಚು ಪರಿಣಾಮಕಾರಿ ಯಾಗಬೇಕಾದರೆ ಅದು ಸಫಲವಾಗುತ್ತದೆ ಎಂದು ನಂಬಬೇಕು. ಅನುಮಾನಪಟ್ಟರೆ ಸೋಲುಂಟಾಗುತ್ತದೆ. ಆದ್ದರಿಂದ ದೇವರಲ್ಲಿ ನಂಬಿಕೆ ಇಟ್ಟವನ ಜೀವನ ಅವನಿಗೆ ಅರ್ಥ ಪೂರ್ಣವಾಗಿ ಕಂಡರೆ ಆಗ ಅವನ ಪಾಲಿಗೆ ದೇವರ ಇರುವಿಕೆ ನಿಜವಾಗುತ್ತದೆ. ಮಾನವನ ಮನಸ್ಸಿನ ಕಲ್ಪನೆಗಳು ವಾಸ್ತವಿಕವಾದವು ಎನ್ನುವುದನ್ನು ವೈಜ್ಞಾನಿಕವಾಗಿ ರುಜುವಾತು ಪಡಿಸಬೇಕಾಗಿಲ್ಲ. ಕಲ್ಪನೆಗಳು ಮಾನಸಿಕ ವಾಸ್ತವತೆ ಪಡೆಯಬಲ್ಲವು. ಹೀಗೆ ವಾಸ್ತವಿಕ ವ್ಯವಹಾರಿಕ ತತ್ವ ಮಾನವನ ಇಚ್ಛಾಶಕ್ತಿಯ ಪ್ರಾಮುಖ್ಯತೆಯನ್ನು ಮತ್ತು ಇತರ ಕ್ರಿಯಾತ್ಮಕ ಪ್ರವೃತ್ತಿಗಳ ಮಹತ್ವವನ್ನು ಒತ್ತಿ ಹೇಳಿರುವುದು ಹತ್ತೊಂಬತ್ತನೆಯ ಮತ್ತು ಇಪ್ಪತ್ತನೆಯ ಶತಮಾನಗಳಲ್ಲಿ ಜನರ ಸುಧಾರಣೆಯ ಮನೋಭಾವಕ್ಕೆ ಸ್ಫೂರ್ತಿದಾಯಕ ವಾಗಿತ್ತು. ವಾಸ್ತವಿಕ ವ್ಯಾವಹಾರಿಕ ಚಿಂತನೆ ಜನರಲ್ಲಿ ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಬಹುದು ಎನ್ನುವ ನಂಬಿಕೆ ಹುಟ್ಟಿಸಿತು. ಸಮಾಜದ ಸ್ಥಿತಿಗತಿಗಳ ಬಗ್ಗೆ ಅಸಮಾಧಾನಗೊಂಡವರು ಸಮಾಜ ಸುಧಾರಣೆಯನ್ನು ಕೈಗೊಳ್ಳಲು ಉತ್ತೇಜನ ನೀಡಿತು. ಈ ತತ್ವ ಶಾಶ್ವತವಾದ ಮೌಲ್ಯಗಳ ಹುಡುಕಾಟವನ್ನು ನಿಲ್ಲಿಸಿತು. ಇದರಿಂದ ಉದ್ಭವಿಸಿದ ಪ್ರಶ್ನೆ: ಶಾಶ್ವತವಾದ ಮತಧರ್ಮ ತತ್ವಗಳಲ್ಲಿ ಮತ್ತು ಪ್ರಕೃತಿನಿಯಮಗಳಲ್ಲಿ ನಂಬಿಕೆ ಯಿಲ್ಲದೆ, ಪ್ರಕೃತಿದತ್ತವಾದ ಹಕ್ಕುಗಳ ಕಲ್ಪನೆ ಹಾಗೂ ಪ್ರಜಾಪ್ರಭುತ್ವವನ್ನು ಅಮೆರಿಕನ್ನರು ಸಮರ್ಥಿಸಿಕೊಳ್ಳುವುದಾದರೂ ಹೇಗೆ?

ಸಾಮಾಜಿಕ ಡಾರ್ವಿನ್ ತತ್ವ

೧೮೫೦ರಲ್ಲಿ ಡಾರ್ವಿನ್ ವಿಕಾಸವಾದ ವಿಜ್ಞಾನ ತತ್ವಗಳ ಮುಂಚೂಣಿಯಲ್ಲಿತ್ತು. ಈ ವಾದದ ಪ್ರಕಾರ ಪ್ರಾಣಿಗಳು ಪ್ರಕೃತಿ ಆಯ್ಕೆ (natural selection)ಯ ನಿಯಮ ದಂತೆ ತಮ್ಮ ಪರಿಸರಕ್ಕೆ ಹೊಂದಿಕೊಂಡು ಬದುಕುತ್ತವೆ. ಹೀಗೆ ಹೊಂದಿಕೊಳ್ಳುವ ಪೈಪೋಟಿಯಲ್ಲಿ ಬಲಿಷ್ಠವಾದವು ಬದುಕಿ ಬಲಹೀನವಾದವು ಅವಸಾನಗೊಳ್ಳುತ್ತವೆ ಎಂದು ಡಾರ್ವಿನ್ ವಿಶದೀಕರಿಸಿದನು. ಇಂಗ್ಲಿಷ್ ಸಾಮಾಜಿಕ ತತ್ವಜ್ಞಾನಿ ಹರ್‌ಬರ್ಟ್

ಸ್ಪೆನ್ಸರ್ (Herbert Spencer) ಜೈವಿಕ ವಿಕಾಸವಾದವನ್ನು ಮಾನವ ಸಮಾಜಕ್ಕೆ ಅಳವಡಿಸಿ ಪ್ರಕೃತಿ ಬಲಿಷ್ಠ ಜೀವಿಗಳನ್ನು ಉಳಿಸಿ ಬಲಹೀನ ಜೀವಿಗಳನ್ನು ಅಳಿಸಿಹಾಕುವಂತೆ ಮಾನವ ಸಮಾಜದಲ್ಲಿ ಪೈಪೋಟಿ ಅಥವಾ ಸ್ಪರ್ಧೆ ಬಡವ ಮತ್ತು ಬಲ್ಲಿದರ ನಡುವಣ ವ್ಯತ್ಯಾಸಕ್ಕೆ ಕಾರಣವಾಗುತ್ತದೆ. ಬಲ್ಲಿದರು ಉಳಿದು ವೃದ್ಧಿಸುತ್ತ ಹೋದರೆ ಬಡವರು ಬಡವರಾಗುತ್ತಾ ಹೋಗಿ ನಿರ್ಗತಿಕರಾಗಿ ನಾಶ ಹೊಂದುತ್ತಾರೆ. ಜೀವ ಜಂತುಗಳ ಸಹಜ ನಿಯಮದಂತೆ ಸ್ಪರ್ಧೆ ಮಾನವ ಸಮಾಜದ ಸಹಜ ನಿಯಮ. ಸರ್ಕಾರ ತನ್ನ ಯೋಜನೆಗಳಿಂದ ಸ್ಪರ್ಧೆಯಲ್ಲಿ ಊರ್ಜಿತರಾಗದವರನ್ನು ಸುಧಾರಣೆಯ ಊರುಗೋಲಿನಿಂದ ಉಳಿಸಿ ಅವರ ಸಂಖ್ಯೆಯನ್ನು ಹೆಚ್ಚಿಸುವುದು ಪ್ರಕೃತಿ ನಿಯಮದ ಉಲ್ಲಂಘನೆ ಎಂದು ಸ್ಪೆನ್ಸರ್ ವಾದಿಸಿದನು. ಸರ್ಕಾರದ ಕರ್ತವ್ಯ ಸಮಾಜ್ದ ರಚನಾವ್ಯವಸ್ಥೆಯನ್ನು ಕಾಪಾಡುವುದು ಮತ್ತು ಖಾಸಗಿ ಆಸ್ತಿಯನ್ನು ರಕ್ಷಿಸುವುದು.

ಯೇಲ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ವಿಲಿಯಂ ಗ್ರಹಾಮ್ ಸಮ್ನರ್ (William Graham Sumner) ಡಾರ್ವಿನ್ ಮತ್ತು ಸ್ಪೆನ್ಸರ್ ತತ್ವಗಳನ್ನು ಕ್ರೋಢೀಕರಿಸಿ 'ಸಾಮಾಜಿಕ ಡಾರ್ವಿನ್ ತತ್ವ' ದ ಪ್ರಮುಖ ಪ್ರತಿಪಾದಕನಾದನು. ಸಮ್ನರ್ ಚಿಂತನೆಯ ಸಂಕ್ಷಿಪ್ತ ಸಾರಾಂಶ: ಸಾಮಾಜಿಕ ಬಲಹೀನರನ್ನು ಅಥವಾ ಬಡಬಗ್ಗರನ್ನು ಅವರ ಬಡತನದ ಪರಿಣಾಮವಾದ ಕಷ್ಟ ಕಾರ್ಪಣ್ಯಗಳಿಂದ ಸರ್ಕಾರ ರಕ್ಷಿಸುವ ಪ್ರಯತ್ನ ಮಾಡಬಾರದು. ಅವನು ಕಾರ್ಖಾನೆಗಳನ್ನು ಸರ್ಕಾರ ನಿಯಂತ್ರಿಸುವುದನ್ನು ವಿರೋಧಿಸಿದನು. ಮಕ್ಕಳನ್ನು ದುಡಿಮೆಗೆ ಹಚ್ಚುವುದನ್ನು ನಿಷೇಧಿಸಕೂಡದು ಎಂದು ವಾದಿಸಿದನು. ಸುಧಾರಣೆಯ ಪ್ರಯತ್ನಗಳೆಲ್ಲ ಕೃತಕವಾದವು ಮತ್ತು ಪ್ರಕೃತಿಯ ನಿಯಮಕ್ಕೆ ವಿರುದ್ಧವಾದವು. ಬಲಶಾಲಿಗಳು, ಸ್ವಾವಲಂಬಿಗಳು ಬದುಕಿನ ಹೋರಾಟದಲ್ಲಿ ನಡೆಯುವ ಪೈಪೋಟಿಯಲ್ಲಿ ವಿಜಯಿಗಳಾಗಿ ಜೀವಿಸಲು ಅರ್ಹರಾಗುತ್ತಾರೆ. ಮಿಲಿಯನಾಧಿಪತಿಗಳು ಪ್ರಕೃತಿ ಆಯ್ಕೆ ಮಾಡಿದ ಬಲಾಢ್ಯರು. ನಿಕ್ಷೇಪಗಳು (trusts) ವ್ಯಾಪಾರ ಮತ್ತು ವಾಣಿಜ್ಯ ಪ್ರಪಂಚದ ವಿಕಾಸಗೊಂಡ ಬೆಳವಣಿಗೆಗಳು. ಈ ಸಂಸ್ಥೆಗಳ ವ್ಯವಹಾರಗಳಲ್ಲಿ ಸರ್ಕಾರ ಕೈಹಾಕಿ ಅವುಗಳನ್ನು ಕುಂಠಿತಗೊಳಿಸದೆ ಹೋದರೆ ಅವು ಸಮಾಜವನ್ನು ಪರಿಪೂರ್ಣತೆಯೆಡೆಗೆ ಕೊಡೊಯ್ಯುತ್ತವೆ. ಸಮ್ನರನವಾದ ದೊಡ್ಡ ಉದ್ಯಮಿಗಳಿಗೆ, ವರ್ತಕರಿಗೆ ಮತ್ತು ಕಾರ್ಖಾನೆಗಳ ಮಾಲೀಕರಿಗೆ ಕರ್ಣಾಮೃತವಾಯಿತು.

ಶರ್‌ಮನ್ ನಿಕ್ಷೇಪ ವಿರೋಧಿ ಶಾಸನ

ಕೇವಲ ಕೆಲವು ವ್ಯಕ್ತಿಗಳು ದೇಶದ ಸಂಪತ್ತಿನ ಬಹುಭಾಗಕ್ಕೆ ಒಡೆಯರಾಗುವುದನ್ನು ಸಾರ್ವಜನಿಕರು ವಿರೋಧಿಸಿ ಪ್ರತಿಭಟನೆ ಮಾಡಲಾರಂಭಿಸಿದರು. ಸಂಸ್ಥಾನ ಸರ್ಕಾರಗಳ ಪ್ರಭುತ್ವ ನಿರೋಧ ನಿಬಂಧನೆಗಳು ನಿರುಪಯುಕ್ತವಾಗಿರುವುದು ಫೆಡರಲ್ ಸರ್ಕಾರಕ್ಕೆ ಮನದಟ್ಟಾಗಿ, ೧೮೯೦ರಲ್ಲಿ ಕಾಂಗ್ರೆಸ್ 'ಶರ್‌ಮನ್ ನಿಕ್ಷೇಪ ವಿರೋಧಿ ಶಾಸನ' (The

Sherman Anti-trust Act) ಜಾರಿಗೆ ತಂದಿತು. ಈ ಶಾಸನದ ಪ್ರಕಾರ 'ಪ್ರತಿಯೊಂದು ಕರಾರು ಇತರ ಕರಾರುಗಳನ್ನು ಕೂಡಿಕೊಂಡು ನಿಕ್ಷೇಪ ಅಥವಾ ಠೇವಣಿ ಸಂಸ್ಥೆಗಳು ಮತ್ತು ಪ್ರಭುತ್ವ ಅಥವಾ ಒಳಸಂಚುಗಳ ರೂಪದಲ್ಲಿ ಅಂತರಸಂಸ್ಥಾನಗಳ ಮತ್ತು ಅಂತರರಾಷ್ಟ್ರೀಯ ವಾಣಿಜ್ಯ ಮತ್ತು ವ್ಯಾಪಾರ ವ್ಯವಹಾರಗಳನ್ನು ಹಿಡಿತದಲ್ಲಿಡಲು ಪ್ರಯತ್ನಿಸುವುದು ಶಿಕ್ಷಾರ್ಹವಾದ ಅಪರಾಧವೆಂದು ಪರಿಗಣಿಸಲಾಯಿತು. ಈ ಶಾಸನ ನಿಕ್ಷೇಪದಿಂದ ನಷ್ಟ ಅನುಭವಿಸಿದವರು ಪರಿಹಾರ ಪಡೆಯಲು ನ್ಯಾಯಾಲಯಗಳಿಗೆ ಮನವಿ ಸಲ್ಲಿಸಲು ಒಪ್ಪಿಗೆ ನೀಡಿತು. ಈ ಶಾಸನವನ್ನು ಉಲ್ಲೇಖಿಸಿದ್ದು ಸ್ಪಷ್ಟವಾಗಿರಲಿಲ್ಲ. ಆದ್ದರಿಂದ ಪದಗಳನ್ನು ಹೇಗೆ ಬೇಕಾದರೂ ಹಾಗೆ ವ್ಯಾಖ್ಯಾನ ಮಾಡಬಹುದಿತ್ತು. ಈ ನ್ಯೂನ್ಯತೆಯಿಂದಾಗಿ ಶಾಸನ ಪರಿಣಾಮಕಾರಿಯಾಗಲಿಲ್ಲ. ಕಂಪನಿ/ಕಾರ್ಪೊರೇಷನ್‌ಗಳ ವಕೀಲರು 'ವ್ಯಾಪಾರವನ್ನು ಹಿಡಿತದಲ್ಲಿಡುವುದು' (restraint of trade) ಎನ್ನುವ ಪದವನ್ನು ತಮ್ಮ ಕಕ್ಷಿದಾರರಾದ ಕಂಪನಿಗಳಿಗೆ ಅನುಕೂಲವಾಗುವಂತೆ ದೊಡ್ಡ ಉದ್ಯಮಗಳ ಪರವಾಗಿದ್ದ ನ್ಯಾಯಾಧೀಶರ ಮುಂದೆ ವ್ಯಾಖ್ಯಾನ ಮಾಡುತ್ತಿದ್ದರು.

೧೮೯೫ರಲ್ಲಿ ಕೆ.ಸಿ.ನೈಟ್ (K.C. Knight) ನಿಕ್ಷೇಪ ವಿರೋಧಿ ಶಾಸನದ ಮೇರೆಗೆ ತನ್ನ ಕಂಪನಿಯ ಮೇಲೆ ಹೊರಿಸಿದ ಅಪವಾದವನ್ನು ರದ್ದುಗೊಳಿಸುವಂತೆ ರಾಷ್ಟ್ರದ ಶ್ರೇಷ್ಠ ನ್ಯಾಯಾಲಯದಲ್ಲಿ ಕಟ್ಟಳೆ ಹೂಡಿದನು. ನ್ಯಾಯಾಧೀಶರು ನೈಟ್‌ನ ಪರವಾಗಿ ತೀರ್ಪು ನೀಡಿ, ನೈಟ್ ಕಂಪನಿಯು ಸಕ್ಕರೆ ಉತ್ಪಾದನೆಯ ಮೇಲೆ ಪ್ರಭುತ್ವ ಪಡೆದಿದ್ದರೂ ಅದು ವಾಣಿಜ್ಯ ವ್ಯವಹಾರಗಳ ಮೇಲೆ ನೇರ ಪರಿಣಾಮ ಉಂಟುಮಾಡದೆ ಇರುವುದರಿಂದ ಕಂಪನಿಯನ್ನು ನಿಯಂತ್ರಿಸಲು ಸರ್ಕಾರಕ್ಕೆ ಅಧಿಕಾರವಿಲ್ಲವೆಂದು ತೀರ್ಪು ನೀಡಿದರು. ಆದರೆ ೧೮೯೭ರಲ್ಲಿ ಶ್ರೇಷ್ಠ ನ್ಯಾಯಾಲಯ ರೈಲ್ವೆ ಕಂಪನಿಗಳು ಒಂದುಗೂಡಿ ಪ್ರಯಾಣ ಮತ್ತು ಸರಕು ಸಾಗಾಣಿಕೆಯ ದರಗಳನ್ನು ಹೆಚ್ಚಿಸುವುದು ನ್ಯಾಯಬಾಹಿರವಾದುದು ಎಂದು ತೀರ್ಪು ನೀಡಿದರು. ಈ ನ್ಯಾಯಾಲಯ ತನ್ನ ಹಿಂದಿನ ತೀರ್ಪನ್ನು ತಾನೇ ತಿರಸ್ಕರಿಸಿದ್ದು ಹಣವಂತರಿಗೆ ನ್ಯಾಯಾಧೀಶರು ಸರ್ಕಾರವನ್ನು ಮೆಚ್ಚಿಸಲು ಹಾಕಿದ ತಿಪ್ಪರಲಾಗದಂತೆ ತೋರಿತು. ನೈಟ್ ಕಟ್ಟಳೆಯ ತೀರ್ಪಿನ ಪರಿಣಾಮವಾಗಿ ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರಗಳಲ್ಲಿ ಏಕಸ್ವಾಮ್ಯತೆ ಸ್ಥಾಪಿಸುವ ಪ್ರವೃತ್ತಿ ಯಾವ ನಿರ್ಬಂಧವಿಲ್ಲದೆ ಮುಂದುವರಿಯಿತು. ೧೮೯೭ರಲ್ಲಿ ಒಹಾಯೊ ನ್ಯಾಯಾಲಯ 'ಸ್ಟಾಂಡರ್ಡ್ ತೈಲ ನಿಕ್ಷೇಪ' (Standard Oil Trust) ವನ್ನು ವಿಕೇಂದ್ರೀಕರಿಸಿತು. ಈ ಧೋರಣೆ ನಿಕ್ಷೇಪ ಸ್ಥಾಪಿಸಲು ಪವಣಿಸುತ್ತಿದ್ದವರ ಹುಮ್ಮಸ್ಸನ್ನು ಕುಗ್ಗಿಸಿತು. ಬೃಹತ್ ಉದ್ಯಮಗಳು ತಮ್ಮ ಪ್ರಭುತ್ವ ಉಳಿಸಿಕೊಳ್ಳಲು ಹೊಸ ವಿಧಾನಗಳನ್ನು ಬಳಸಲು ಪ್ರಾರಂಭಿಸಿ ಇದೆಂದರೆ 'ಹಿಡಿದಿಟ್ಟು ಕೊಳ್ಳುವ ಕಂಪನಿ' (the holding company) ತನ್ನ ಉಪಶಾಖೆಗಳ ಸ್ವಾಮ್ಯತೆ ಹೊಂದಿರದೆ ಅವುಗಳ ಷೇರುಗಳನ್ನು ಮಾತ್ರ ತನ್ನ ಸ್ವಾಧೀನದಲ್ಲಿಟ್ಟುಕೊಂಡು ಪರೋಕ್ಷವಾಗಿ ಉಪಶಾಖೆಗಳ/ಸಹ ಉದ್ಯಮಗಳ ಕಾರ್ಯಗಳನ್ನು ನಿಯಂತ್ರಿಸುತ್ತಿತ್ತು.

ರಾಕಫೆಲರ್ ಸ್ಟಾಂಡರ್ಡ್ ತೈಲ ಕಂಪನಿ ಹಿಡಿದಿಡುವ ಕಂಪನಿಯಾಗಿ ಪರಿವರ್ತಿತ ವಾಯಿತು. ಇದರಿಂದಾಗಿ ರಾಕಫೆಲರ್‌ನಿಗೆ ತನ್ನ ಮಾಜಿ ಉಪಶಾಖೆಗಳ ಕಾರ್ಯಕಾರಿ ಸಮಿತಿಯ ನಿರ್ಧಾರಗಳು ತನಗೆ ಅನುಕೂಲವಾಗುವಂತೆ ಮಾಡಲು ಸಾಧ್ಯವಾಯಿತು. ೧೮೯೨ರ ನಂತರ ೨೦೦ಕ್ಕೂ ಮೀರಿದ ಹಿಡಿದಿಡುವ ಕಂಪನಿಗಳು ಅಸ್ತಿತ್ವಕ್ಕೆ ಬಂದವು.

ಕಾರ್ಮಿಕರ ಸ್ಥಿತಿ–ಗತಿಗಳು

ವಲಸೆಗಾರರು, ರೈತರು ಮತ್ತು ರೈತಾಪಿ ಕೆಲಸಗಾರರು ಪೇಟೆ ಪಟ್ಟಣಗಳನ್ನು ಸೇರಿದಂತೆಲ್ಲ ರಾಷ್ಟ್ರದ ಕಾರ್ಮಿಕದಳ ಬೆಳೆಯುತ್ತ ಹೋಯಿತು. ಸಣ್ಣ ರೈತರ ಖಾಸಗಿ ಹಿಡುವಳಿಗಳ ಕಾಲ ಮುಗಿದು, ಯಂತ್ರೋಪಕರಣಗಳ ನೆರವಿನಿಂದ ನಡೆಸುವ ವಿಶಾಲವಾದ ವ್ಯವಸಾಯ ಕ್ಷೇತ್ರಗಳು ರಾಷ್ಟ್ರದ ಎಲ್ಲ ಕಡೆಗಳಲ್ಲಿ ಹಬ್ಬತೊಡಗಿದವು. ಯಂತ್ರೋಪಕರಣಗಳು ವ್ಯವಸಾಯದಲ್ಲಿ ಕಾರ್ಮಿಕರ ಅವಶ್ಯಕತೆಯನ್ನು ಕಡಿಮೆ ಮಾಡಿದವು. ಆದ್ದರಿಂದ ರೈತಾಪಿ ಕೆಲಸ ಮಾಡುತ್ತಿರುವವರು ಬೇರೆ ಕೆಲಸಗಳನ್ನು ಹುಡುಕಿಕೊಂಡು ಪಟ್ಟಣಗಳನ್ನು ಸೇರಬೇಕಾಯಿತು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ರಾಷ್ಟ್ರದ ಒಟ್ಟು ಕಾರ್ಮಿಕರಲ್ಲಿ ಕೇವಲ ೧/೩ರಷ್ಟು ಮಾತ್ರ ವ್ಯವಸಾಯ ಉದ್ಯಮಗಳಲ್ಲಿ ಉಳಿದಿದ್ದರು. ಕಾರ್ಮಿಕ ವರ್ಗದಲ್ಲಿ ಹೆಂಗಸರು ಮತ್ತು ಮಕ್ಕಳ ಸಂಖ್ಯೆ ಹಿಂದೆ ಎಂದೂ ಇರದಷ್ಟರಮಟ್ಟಿಗೆ ಹೆಚ್ಚಿತು. ಹೆಂಗಸರಿಗೆ ಕಾರ್ಖಾನೆಗಳಲ್ಲಿ, ಕಛೇರಿಗಳಲ್ಲಿ ಕೆಲಸ ಮಾಡುವ ಅವಕಾಶಗಳು ದೊರೆತವು. ೧೫ ವರ್ಷಗಳಿಗಿಂತ ಕೆಳಗಿನ ಮಕ್ಕಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬಟ್ಟೆ ಗಿರಣಿಗಳಲ್ಲಿ, ಕಲ್ಲಿದ್ದಲ ಗಣಿಗಳಲ್ಲಿ ಮತ್ತು ಕಸಾಯಿಖಾನೆಗಳಲ್ಲಿ ಕೆಲಸಕ್ಕೆ ಸೇರಿಸಿ ಕೊಳ್ಳುತ್ತಿದ್ದರು.

ಬೃಹತ್ ಕಾರ್ಪೊರೇಷನ್‌ಗಳು ಯಂತ್ರೀಕರಣಗೊಂಡಂತೆಲ್ಲ ಕಾರ್ಮಿಕರ ಬೇಡಿಕೆಗಳು – ಹೆಚ್ಚು ವೇತನ, ಕೆಲಸದ ಅವಧಿ ಕಡಿಮೆ ಮಾಡುವುದು, ಕೆಲಸ ಮಾಡುವ ಜಾಗಗಳಲ್ಲಿ ಸುರಕ್ಷಣೆ ಮತ್ತು ಅನುಕಂಪದ ವಾತಾವರಣ – ಕೈಗೂಡುವುದು ಹೆಚ್ಚು ಕಷ್ಟವಾಗುತ್ತ ಬಂತು. ಒಬ್ಬ ಕಾರ್ಮಿಕನು ಕಾರ್ಖಾನೆಯ ಮಾಲೀಕನನ್ನು ಕಂಡು ತನ್ನ ಸ್ಥಿತಿಗತಿಗಳನ್ನು ತಿಳಿಸಿ ಪರಿಹಾರ ಕೇಳುವ ಕಾಲ ಎಂದೋ ಮುಗಿದುಹೋಗಿತ್ತು. ಈ ಪರಿಸ್ಥಿತಿಯಲ್ಲಿ ಕಾರ್ಮಿಕರು ಪರಸ್ಪರ ಸಹಕಾರ-ಸಹಾಯದಿಂದ ಮಾತ್ರ ತಮ್ಮ ಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲು ಸಾಧ್ಯ ಎನ್ನುವುದನ್ನು ಅನುಭವದಿಂದ ಅರಿತು, ಒಕ್ಕೂಟಗಳನ್ನು ಸ್ಥಾಪಿಸಲು ಪ್ರಾರಂಭಿಸಿದರು. ಕಾರ್ಮಿಕರ ಒಕ್ಕೂಟಗಳು ಮುಷ್ಕರ, ಬಹಿಷ್ಕಾರ ಮುಂತಾದ ವಿಧಾನಗಳಿಂದ ಪ್ರಬಲರಾದ ಮಾಲೀಕರನ್ನು ಎದುರಿಸಿ ತಮ್ಮ ಬೇಡಿಕೆಗಳನ್ನು ಪೂರೈಸುವಂತೆ ಮಾಡಲು ಮಾತುಕತೆ ನಡೆಸಲು ಸಾಧ್ಯವಾಯಿತು. ಹಾಗೆಯೇ ಕಾರ್ಮಿಕರ ಒಕ್ಕೂಟಗಳು ನ್ಯಾಯವಿಧಾಯಕ ಸಭೆಯ ಸದಸ್ಯರನ್ನು ಒತ್ತಾಯಿಸಿ ಕಾರ್ಮಿಕರಿಗೆ ಅನುಕೂಲವಾಗುವಂಥ ಕಾಯಿದೆಗಳನ್ನು ಜಾರಿಗೆ ತರುವಂತೆ ಮಾಡಲು ಸಾಧ್ಯವಾಯಿತು.

ಇಪ್ಪತ್ತನೆಯ ಶತಮಾನದ ಹೊತ್ತಿಗೆ ಕಾರ್ಮಿಕರ ಸ್ಥಿತಿ-ಗತಿಗಳು ತಕ್ಕಮಟ್ಟಿಗೆ ಉತ್ತಮಗೊಂಡಿದ್ದವು.

ಉದ್ಯಮಗಳ/ಕೈಗಾರಿಕೆಗಳ ಮಾಲೀಕರು ಕಾರ್ಮಿಕರನ್ನು ಬೇಕಾದ ಹಾಗೆ ಉಪಯೋಗಿಸುವ ಹಕ್ಕು ತಮಗಿದೆ ಎಂದು ನಂಬಿದ್ದರು. ಮಾಲೀಕರ ಅಭಿಪ್ರಾಯದಲ್ಲಿ ಕಾರ್ಮಿಕರ ಶ್ರಮ ಮಾರಾಟಕ್ಕಿರುವ ಒಂದು ವಸ್ತು (commodity), ಆದ್ದರಿಂದ ವ್ಯಾಪಾರದಲ್ಲಿ ಸಹಜವಾಗಿ ನಡೆಯುವಂತೆ ವಸ್ತುಗಳನ್ನು ಆದಷ್ಟು ಕಡಿಮೆ ಬೆಲೆಗೆ ಕೊಂಡು, ಅವುಗಳನ್ನು ಹೆಚ್ಚು ಖರ್ಚಿಲ್ಲದಂತೆ ನಿರ್ವಹಿಸಿಕೊಂಡು ಹೋದಾಗ ಮಾತ್ರ ಉದ್ಯಮ ಲಾಭದಾಯಕವಾಗಿ ಬೆಳೆಯುತ್ತ ಹೋಗುತ್ತದೆ. ಸ್ವಾತಂತ್ರ್ಯ ಮತ್ತು ಸ್ಪರ್ಧೆಗಳ ಆಧಾರದ ಮೇಲೆ ರಚಿತವಾದ ಆರ್ಥಿಕ ವ್ಯವಸ್ಥೆಯ ವ್ಯವಹಾರಗಳಲ್ಲಿ ಕಾರ್ಮಿಕರ ಒಕ್ಕೂಟ ಮತ್ತು ಸರ್ಕಾರದ ನಿಬಂಧನೆಗಳು ಮಧ್ಯೆ ಪ್ರವೇಶಿಸಿ ಆರ್ಥಿಕ ವ್ಯವಸ್ಥೆಯ ಕಾರ್ಯಾಚರಣೆಗೆ ತಡೆಯೊಡ್ಡುತ್ತವೆ ಎಂದು ಉದ್ಯಮಿಗಳು ಮತ್ತು ವ್ಯಾಪಾರಿಗಳು ಆಪಾದಿಸಿದರು. ಕಾರ್ಮಿಕರ ಒಕ್ಕೂಟಗಳು ಸದಸ್ಯರ ಅತಿಮುಖ್ಯ ಸಮಸ್ಯೆಗಳಾದ ಕಡಿಮೆ ವೇತನ, ದೀರ್ಘಾವಧಿ ಕೆಲಸದ ದಿನಗಳು ಮತ್ತು ಕ್ಷೇಮಕರವಲ್ಲದ ಕೆಲಸದ ಪರಿಸರ – ಇವುಗಳನ್ನು ಪರಿಹರಿಸಲು ಪ್ರಯತ್ನಪಟ್ಟವು. ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಕಾರ್ಮಿಕರ ವೇತನಗಳು ಏರಲು ಬಹಳ ಕಾಲ ಹಿಡಿಯುತ್ತಿತ್ತು. ಕಡಿಮೆ ವೇತನದಲ್ಲಿ ಉಳಿತಾಯ ಮಾಡುವುದು ದುಸ್ಸಾಧ್ಯವಾಯಿತು. ನಿವೃತ್ತಿ ವೇತನ ಅಪರೂಪವಾಗಿತ್ತು. ಕೆಲವು ಕಂಪನಿಗಳು ಕಾರ್ಮಿಕರು ನಿವೃತ್ತಿವೇತನಕ್ಕೆ ಅರ್ಹರಾಗಲು ಇನ್ನೇನು ಕೆಲವು ವಾರಗಳಿದ್ದಂತೆ ಅವರನ್ನು ಕೆಲಸದಿಂದ ತೆಗೆದುಹಾಕುತ್ತಿದ್ದರು.

೧೮೬೦ರಲ್ಲಿ ಕಾರ್ಮಿಕರು ವಾರಕ್ಕೆ ೬೬ ಘಂಟೆಗಳು ಕೆಲಸ ಮಾಡಬೇಕಿತ್ತು. ೧೯೧೦ರಲ್ಲಿ ಅದು ೫೫ ಘಂಟೆಗಳಿಗೆ ಇಳಿಯಿತು. ಆದರೆ ಅನೇಕ ಕಾರ್ಖಾನೆಗಳಲ್ಲಿ ಕಾರ್ಮಿಕರು ವಾರಕ್ಕೆ ೭೦ ಘಂಟೆಗಳು ಕೆಲಸ ಮಾಡಬೇಕಾಗಿತ್ತು. ಮೇಲಾಗಿ, ಹೊಸ ಯಂತ್ರಗಳು ಅಪಾಯಕಾರಿಯಾಗಿದ್ದವು. ಆಕಸ್ಮಿಕವೇನಾದರೂ ಸಂಭವಿಸಿದರೆ ಕಾರ್ಮಿಕನ ಕತೆ ಮುಗಿದಂತೆಯೆ. 'ಆಕಸ್ಮಿಕ ಪರಿಹಾರ' ಆಗ ಅಪರೂಪವಾಗಿತ್ತು. ಲಾಭಗಳಿಕೆಯೇ ಸರ್ವಸ್ವವೆಂದು ತಿಳಿದಿದ್ದ ಮಾಲೀಕರು ಕಾರ್ಮಿಕರ ಕುಂದು ಕೊರತೆಗಳಿಗೆ ಕಿವುಡಾಗಿದ್ದರು. ಆದ್ದರಿಂದ ಕಾರ್ಮಿಕರು ತಮ್ಮ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳಬೇಕಾದ ಅಗತ್ಯವನ್ನು ಮನಗಂಡರು. ಹೀಗಾಗಿ ಕಾರ್ಮಿಕರ ಒಕ್ಕೂಟಗಳು ಸ್ಥಾಪಿತಗೊಂಡವು. ಪ್ರಾರಂಭದಲ್ಲಿ ಈ ಒಕ್ಕೂಟಗಳಲ್ಲಿ ಒಗ್ಗಟ್ಟಿರಲಿಲ್ಲ. ಅವುಗಳ ಧ್ಯೇಯಗಳ ಬಗ್ಗೆ ಮತ್ತು ಅವುಗಳನ್ನು ಸಾಧಿಸುವುದರ ಬಗ್ಗೆ ವಾದ ವಿವಾದಗಳು ನಡೆಯುತ್ತಿದ್ದವು. ಕ್ರಮೇಣ ಕಾರ್ಮಿಕರು ತಮ್ಮ ಅನುಭವದಿಂದ 'ಒಗ್ಗಟ್ಟಿನಲ್ಲಿ ಶಕ್ತಿಯಿದೆ' ಎಂದು ತಿಳಿದರು. ಆದ್ದರಿಂದ ಎಲ್ಲ ಕಾರ್ಮಿಕರು ಒಕ್ಕೂಟಕ್ಕೆ ಸೇರದೆಹೋದರೂ ಸೇರುವವರ ಸಂಖ್ಯೆ ಹೆಚ್ಚುತ್ತ

ಹೋಯಿತು. ಮಹಾನಗರಗಳಲ್ಲಿ ಉದ್ಯಮಿಗಳು, ವ್ಯಾಪಾರಿಗಳು ಮತ್ತು ಸಾರ್ವಜನಿಕರು ಒಕ್ಕೂಟಗಳಿಗೆ ವಿರೋಧ ವ್ಯಕ್ತಪಡಿಸಿದರು. ಸಣ್ಣ ಊರುಗಳಲ್ಲಿ ಕಾರ್ಮಿಕರು ಸಾರ್ವಜನಿಕರಿಗೆ ಮತ್ತು ಪತ್ರಿಕಾಕರ್ತರಿಗೆ ಪರಿಚಯದವರು. ಆದ್ದರಿಂದ ಕಾರ್ಮಿಕರ ಕಷ್ಟ ಕಾರ್ಪಣ್ಯಗಳಿಗೆ ಅವರು ಅನುಕಂಪ ತೋರುತ್ತಿದ್ದರು. ನಗರಗಳಲ್ಲಿ ಕಾರ್ಮಿಕರು ಅನಾಮಧೇಯರು, ಆದ್ದರಿಂದ ಸಾರ್ವಜನಿಕರಿಗೆ ಕಾರ್ಮಿಕರ ಮುಷ್ಕರ ಇತ್ಯಾದಿಗಳು ತಮ್ಮ ನಿತ್ಯಜೀವನವನ್ನು ಅವ್ಯವಸ್ಥೆಗೊಳಿಸಿ ಅದರಿಂದ ಲಾಭ ಪಡೆಯುವ ಹುನ್ನಾರುಗಳಾಗಿ ಕಂಡುಬಂದವು. ವರ್ತಕರು ಕಾರ್ಮಿಕರ ಒಕ್ಕೂಟಗಳು ಮುಕ್ತ ವ್ಯಾಪಾರ (laissez-faire) ಮತ್ತು ಉತ್ಪಾದನೆಗಳನ್ನು ಕುಂಠಿತಗೊಳಿಸಿ ಆರ್ಥಿಕ ಅಭಿವೃದ್ಧಿಗೆ ಅಡ್ಡಬರುತ್ತವೆ ಎಂದು ಆಪಾದಿಸಿದರು. ಕಾರ್ಮಿಕರ ಮುಷ್ಕರ, ಬಹಿಷ್ಕಾರ ಮತ್ತು ಹಿಂಸಾಕೃತ್ಯಗಳನ್ನು ನ್ಯಾಯಬಾಹಿರವಾದ ಕಾರ್ಯಗಳೆಂದು ಆಪಾದಿಸಿ ಬಂಡವಾಳಗಾರರು (ವರ್ತಕರು, ಮಾಲೀಕರು ಇತ್ಯಾದಿ) ಕಾರ್ಮಿಕರ ಮೇಲೆ ಕಟ್ಟಳೆಗಳನ್ನು ಹಾಕುತ್ತಿದ್ದರು. ಮುಕ್ತ ವ್ಯಾಪಾರವನ್ನು ಅನುಮೋದಿಸುವ ನ್ಯಾಯಾಧೀಶರು ಕಾರ್ಮಿಕರ ಒಕ್ಕೂಟಗಳಿಗೆ ಶರ್‌ಮನ್ ನಿಕ್ಷೇಪ ನಿರೋಧ ಕಾಯಿದೆಯನ್ನು ಅನ್ವಯಿಸಿ ಒಕ್ಕೂಟಗಳು ಏಕಸ್ವಾಮ್ಯ ಸಂಸ್ಥೆಗಳೆಂದು ನಿರ್ಧರಿಸಿ ಅವುಗಳ ಚಟುವಟಿಕೆಗಳು ನ್ಯಾಯಬಾಹಿರವೆಂದು ತೀರ್ಪು ನೀಡುತ್ತಿದ್ದರು.

೧೮೬೭ರಲ್ಲಿ ರಾಷ್ಟ್ರೀಯ ಕಾರ್ಖಾನೆ ಕಾರ್ಮಿಕ ಒಕ್ಕೂಟ ಮೊದಲು ರಚಿತಗೊಂಡಿತು. ರಾಷ್ಟ್ರೀಯ ಕಾರ್ಮಿಕರ ಒಕ್ಕೂಟ – ರಾಷ್ಟ್ರದ ವಿವಿಧ ಕಾರ್ಮಿಕರ ಒಕ್ಕೂಟಗಳನ್ನು ಸೇರಿಸಿ ಒಂದು ಬೃಹತ್ತಾದ ಕಾರ್ಮಿಕರ ಸಂಘಟನೆಯನ್ನು ರಚಿಸಿತು. ೧೮೭೦ರ ದಶಕದಲ್ಲಿ ಈ ರಾಷ್ಟ್ರೀಯ ಒಕ್ಕೂಟ ૩೦೦೦೦೦ ಸದಸ್ಯರನ್ನು ಹೊಂದಿತ್ತು. ಈ ಸಂಘಟನೆಯ ಮುಖ್ಯ ಉದ್ದೇಶಗಳೆಂದರೆ – ದಿನಕ್ಕೆ ಎಂಟು ಘಂಟೆಗಳ ಕೆಲಸ ನಿಗದಿ ಮಾಡುವುದು, ಹಣದುಬ್ಬರವನ್ನು ನಿಭಾಯಿಸಲು ಕಾರ್ಮಿಕರಿಗೆ ಕಡಿಮೆ ಬಡ್ಡಿ ದರದ ಸಾಲ ಒದಗಿಸುವುದು, ವಿದ್ಯಾಭ್ಯಾಸದ ಮೂಲಕ ಕಾರ್ಮಿಕರ ಸಮುದಾಯಗಳನ್ನು ಉತ್ತಮಗೊಳಿಸಿವುದು, ಮದ್ಯಪಾನ ಕಡಿಮೆ ಮಾಡುವುದು ಮತ್ತು ಮಹಿಳೆಯರ ಹಕ್ಕುಗಳನ್ನು ಸ್ಥಾಪಿಸುವುದು. ಈ ಸಂಘಟನೆ ಕರಿಯ ಕಾರ್ಮಿಕರನ್ನು ಸದಸ್ಯರಾಗಿ ಸೇರಿಸಿಕೊಳ್ಳಲು ಪ್ರಯತ್ನಿಸಿತು. ಆದರೆ ಬಿಳಿಯ ಕಾರ್ಮಿಕರು ತೀವ್ರವಾಗಿ ವಿರೋಧಿಸಿದುದರಿಂದ ಆ ಪ್ರಯತ್ನವನ್ನು ನಿಲ್ಲಿಸಲಾಯಿತು. ಇದಕ್ಕೆ ಪ್ರತಿಯಾಗಿ ಕರಿಯರು 'ಕರಿಯರ ರಾಷ್ಟ್ರೀಯ ಕಾರ್ಮಿಕರ ಸಮಿತಿ'ಯನ್ನು ಸ್ಥಾಪಿಸಿತು.

ಈ ಸಂಘಟನೆಗಳು ಕಾರ್ಮಿಕರಲ್ಲಿ ಸಂಪೂರ್ಣ ಒಗ್ಗಟ್ಟು ಬೆಳೆಸುವುದರಲ್ಲಿ ಸಫಲವಾಗಲಿಲ್ಲ. ಇದರ ಆಶ್ರಯದಲ್ಲಿ ಸಹಕಾರ ಅಂಗಡಿಗಳನ್ನು ನಡೆಸುವ ಪ್ರಯತ್ನಗಳೂ ಸಫಲವಾಗಲಿಲ್ಲ. ೧೮೭೨ರಲ್ಲಿ ರಾಷ್ಟ್ರೀಯ ಕಾರ್ಮಿಕರ ಸಂಘಟನೆ, 'ರಾಷ್ಟ್ರೀಯ ಕಾರ್ಮಿಕರ ಸುಧಾರಣಾ ಪಕ್ಷ' (The National Labor Reform Party) ಎಂಬ

ಹೆಸರಿನಿಂದ ರಾಜಕೀಯಕ್ಕೆ ಇಳಿಯಿತು. ಆದರೆ ಈ ಪಕ್ಷ ಸರ್ಕಾರದ ಆಡಳಿತವನ್ನು ಸುಧಾರಿಸುವ ಪ್ರಯತ್ನದಲ್ಲಿ ಯಶಸ್ವಿಯಾಗಲಿಲ್ಲ. ಅಲ್ಲದೆ ಕಾರ್ಮಿಕರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಒದಗಿಸಲು ಮಾಡಿದ ಪ್ರಯತ್ನಗಳು ಫಲದಾಯಕವಾಗಲಿಲ್ಲ. ೧೮೭೦ರ ದಶಕದ ಆರ್ಥಿಕ ಮುಗ್ಗಟ್ಟಿನ ಸಂದಿಗ್ಧ ಸಮಯದಲ್ಲಿ ಈ ಕಾರ್ಮಿಕ ಸಂಘಟನೆ ಅವಸಾನಗೊಂಡಿತು. ಅದೇ ಅವಧಿಯಲ್ಲಿ ಒಂದು ಕಾರ್ಖಾನೆ ಊರುಗಳಲ್ಲಿ, ಒಂದು ಗಣಿಯ ಪಟ್ಟಣಗಳಲ್ಲಿ (ಅಂದರೆ ಒಂದೇ ಒಂದು ಕಾರ್ಖಾನೆ/ಉದ್ಯಮದ ಮೇಲೆ ಅವಲಂಬಿಸಿದ) ಕಾರ್ಖಾನೆಗಳು ಮತ್ತು ಗಣಿಗಳು ಮುಚ್ಚಿದ್ದಾಗ, ಇಡೀ ಸಮುದಾಯಗಳು ಕೆಲಸ ಕಳೆದುಕೊಳ್ಳುತ್ತಿದ್ದುದು ಆರ್ಥಿಕ ಮುಗ್ಗಟ್ಟಿನ ಆ ದಿನಗಳಲ್ಲಿ ಸರ್ವೇಸಾಮಾನ್ಯವಾಗಿತ್ತು. ಕಾರ್ಮಿಕರ ಚಿಂತಾಜನಕ ಸ್ಥಿತಿ ಅವರನ್ನು ಒಂದುಗೂಡಿಸಿ ಪರಿಹಾರ ಪಡೆಯಲು ಪ್ರಯತ್ನಿಸುವಂತೆ ಮಾಡಿತು.

೧೮೭೭ರಲ್ಲಿ ರೈಲ್ವೆ ಕಾರ್ಮಿಕರು ರೈಲ್ವೆ ಕಂಪನಿಗಳಲ್ಲಿ ನಡೆಯುತ್ತಿದ್ದ ಅವ್ಯವಹಾರಗಳ ವಿರುದ್ಧ ದೀರ್ಘಾವಧಿ ಚಳುವಳಿ ನಡೆಸಿದರು. ಈ ಚಳುವಳಿ ಕಾರ್ಮಿಕರು ತಾವಾಗಿಯೇ ಸ್ವಯಂಸ್ಫೂರ್ತಿಯಿಂದ, ಕಾರ್ಮಿಕ ಒಕ್ಕೂಟದ ಪ್ರೇರೇಪಣೆ ಇಲ್ಲದಯೇ, ಪ್ರಾರಂಭಿಸಿ, ಎಲ್ಲಾ ಕಡೆಗಳಿಗೆ ಹಬ್ಬುವಂತೆ ಮಾಡಿದರು. ಇದರಿಂದಾಗಿ ರಾಷ್ಟ್ರದ ರೈಲುಮಾರ್ಗಗಳಲ್ಲಿ ೨/೩ ಭಾಗ ನಿಂತುಹೋದವು. ಅಲ್ಲದೆ ಈ ಸಮಯದ ಹಿಂಸೆಯಿಂದ ಕೂಡಿದ ಚಳುವಳಿಗಳು ಅಮೆರಿಕದ ಇತಿಹಾಸದಲ್ಲಿ ಹಿಂದೆ ಎಂದೂ ಆಗಿರಲಿಲ್ಲ. ಚಳುವಳಿಯಿಂದ ಕಷ್ಟಕ್ಕೀಡಾದ ಸಂಸ್ಥಾನಗಳ ಗವರ್ನರುಗಳು ಫೆಡರಲ್ ಸರ್ಕಾರದ ಸಹಕಾರ ಕೋರಿದರು. ಅಧ್ಯಕ್ಷ ಹೇಯ್ಸ್ (Hayes) ಫೆಡರಲ್ ಸೈನ್ಯ ತುಕಡಿಗಳನ್ನು ಚಳುವಳಿ ಪ್ರದೇಶಗಳಿಗೆ ಪರಿಸ್ಥಿತಿಯನ್ನು ಹತೋಟಿಗೆ ತರಲು ರವಾನಿಸಿದನು. ಈ ಸೈನ್ಯವನ್ನು ಎದುರಿಸಬೇಕಾಗಿ ಬಂದುದರಿಂದ ಚಳುವಳಿಗಳು ಕ್ರಮೇಣ ನಿಂತುಹೋದವು.

೧೮೮೦ರಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಿಸಿತು. ಮತ್ತೆ ಕಾರ್ಮಿಕರು ಒಕ್ಕೂಟಗಳನ್ನು ಸೇರಲಾರಂಭಿಸಿದರು. 'ಕರ್ಮವೀರರು' (Knights of Labor) ಎನ್ನುವ ಒಂದು ಗುಪ್ತ ಸಂಘ ಎಲ್ಲ ಕಾರ್ಮಿಕರನ್ನು ಒಂದು ಮಹಾಸಂಘಕ್ಕೆ ಸೇರಿಸಬೇಕು ಎನ್ನುವ ಉದ್ದೇಶದಿಂದ ೧೮೬೯ರಲ್ಲಿ ರಚಿತಗೊಂಡಿತು. ಮೊದಲು ಕುಶಲ ಕಾರ್ಮಿಕರನ್ನು ಮಾತ್ರ ಸದಸ್ಯರನ್ನಾಗಿ ತೆಗೆದುಕೊಳ್ಳುತ್ತಿದ್ದ ಈ ಸಂಘ ನಂತರ ಎಲ್ಲ ಕಾರ್ಮಿಕರನ್ನೂ ಸೇರಿಸಿಕೊಳ್ಳತೊಡಗಿತು. ಕೆಲಸ ಮಾಡಿ ಸಂಬಳ ಪಡೆಯುವವರೆಲ್ಲರೂ ಸದಸ್ಯರಾಗಬಹುದಿತ್ತು. ವಕೀಲರು, ವ್ಹಿಸ್ಕಿ ಮುಂತಾದುವನ್ನು ಮಾರುವವರು ಮತ್ತು ಜೂಜಾಟದ ವೃತ್ತಿಯಲ್ಲಿರುವವರಿಗೆ ಪ್ರವೇಶವಿರಲಿಲ್ಲ. ಕರಿಯ ಕಾರ್ಮಿಕರನ್ನೂ ಸದಸ್ಯರನ್ನಾಗಿ ಮಾಡಲು ಬಹಳ ಪ್ರಯತ್ನ ನಡೆಯಿತು. 'ಕರ್ಮವೀರರ' ಸಂಘಟನೆಯ ಸಂಕಲ್ಪಗಳು: ಕಾರ್ಮಿಕರ ಚಳುವಳಿಯ ಬಗ್ಗೆ ಸಾರ್ವಜನಿಕರಲ್ಲಿ ಸದಭಿಪ್ರಾಯ ಮೂಡಿಸುವುದರ ಮೂಲಕ ಕಾರ್ಮಿಕರ ಜೀವನವನ್ನು ಉತ್ತಮ

ಗೊಳಿಸುವ ಕಾರ್ಯಕ್ರಮಗಳಿಗೆ ಸಾರ್ವಜನಿಕರ ಬೆಂಬಲ ದೊರಕಿಸಿಕೊಳ್ಳುವುದು; ಕಾರ್ಮಿಕರ ಸಹಕಾರ ಸಂಘಗಳನ್ನು ಸ್ಥಾಪಿಸುವುದು, ದಿನಕ್ಕೆ ಎಂಟು ಘಂಟೆಗಳ ಕೆಲಸದ ನಿಬಂಧನೆಯನ್ನು ಜಾರಿಗೆ ತರುವುದು, ಕಾರ್ಮಿಕರ ಅಂಕೆ ಸಂಖ್ಯೆಗಳನ್ನು ಸಂಗ್ರಹಿಸಲು ಮತ್ತು ಇತರ ಸಮಸ್ಯೆಗಳನ್ನು ಪರಿಹರಿಸಲು ಫೆಡರಲ್ ಸರ್ಕಾರದ ಇಲಾಖೆಯನ್ನು (Federal Bureau of Labor Statistics) ಸ್ಥಾಪಿಸುವುದು. ಸರ್ಕಾರದ ಭೂಮಿಯನ್ನು ಸಾಗುವಳಿ ಮಾಡಲು ಇಷ್ಟಪಡುವ ಕಾರ್ಮಿಕರಿಗೆ ದೇಣಿಗೆ ಕೊಡಬೇಕು. ಈ ಬೇಡಿಕೆಗಳನ್ನು ಕಾರ್ಯಗತಗೊಳಿಸಲು 'ಕರ್ಮವೀರ'ದಂಥ ಕಾರ್ಮಿಕ ಸಂಘಟನೆಗಳು ಪ್ರಯತ್ನ ನಡೆಸಿದವು.

೧೮೭೯ರಲ್ಲಿ ಟೆರೆನ್ಸ್ ಪೌಡರ್ಲಿ (Terence Powderly) ಕರ್ಮವೀರರ ಸಂಘಟನೆಯ ನಾಯಕತ್ವ ವಹಿಸಿಕೊಂಡನು. ಅವನ ನಾಯಕತ್ವದಲ್ಲಿ ಕರ್ಮವೀರರು ಹೆಚ್ಚು ದಿಟ್ಟತನದ ಮತ್ತು ಹೋರಾಟದ ಹೊಸ ದಾರಿಯನ್ನು ಹಿಡಿದರು. ೧೮೮೪ರಿಂದ ಅವರು ಅನೇಕ ರೈಲುಮಾರ್ಗಗಳ ಮೇಲೆ ಮುಷ್ಕರ ಹೂಡಿ ಯಶಸ್ವಿಯಾದರು. ಇದರಿಂದಾಗಿ ಒಕ್ಕೂಟದ ಸದಸ್ಯತ್ವ ಹೆಚ್ಚುತ್ತ ಹೋಯಿತು. ೧೮೮೬ರಲ್ಲಿ ಜೇ ಗೌಲ್ಡ್‌ನ (Jay Gould) ನೈರುತ್ಯ ರೈಲುಮಾರ್ಗಗಳ ಮೇಲೆ ಹೂಡಿದ ಮುಷ್ಕರ ಯಶಸ್ವಿ ಯಾಗಲಿಲ್ಲ. ಕಾರ್ಮಿಕರ ಸೋಲು ಕಂಪನಿಯ ನಿರ್ವಹಣಾ ಮಂಡಳಿಯ ಪ್ರಾಬಲ್ಯವನ್ನು ಸಾಬೀತುಗೊಳಿಸಿತು. ಗೌಲ್ಡ್ ಕಾರ್ಮಿಕರೊಡನೆ ಮಾತುಕತೆ ನಡೆಸಲು ನಿರಾಕರಿಸಿದನು. ಗೌಲ್ಡ್ 'ಮುಷ್ಕರ ಮುರಿಯುವ' ತಂಡವನ್ನು ಕಾರ್ಮಿಕರ ದಂಗೆಯನ್ನು ಹತ್ತಿಕ್ಕಲು ಕರೆಸಿದನು. ಮುಷ್ಕರದ ಪರಿಣಾಮವಾಗಿ ರಾಷ್ಟ್ರದಾದ್ಯಂತ ಆಹಾರ ಪದಾರ್ಥಗಳ ಕೊರತೆ ಉಂಟಾಗಿ ಸಾರ್ವಜನಿಕರು ಕಾರ್ಮಿಕರ ವಿರುದ್ಧ ಪ್ರದರ್ಶನ ನಡೆಸಿದರು. ಸಾರ್ವಜನಿಕರನ್ನು ಎದುರು ಹಾಕಿಕೊಳ್ಳಲು ಹಿಂಜರಿದು ಕಾರ್ಮಿಕರು ಮುಷ್ಕರ ನಿಲ್ಲಿಸಿ ಕೆಲಸಕ್ಕೆ ಹಿಂತಿರುಗಿದರು. ನಿರ್ವಹಣಾ ಮಂಡಳಿಯ ದಿಟ್ಟತನ ಮತ್ತು ಬಲಪ್ರಯೋಗಕ್ಕೆ ಬಗ್ಗದ ಮನೋಭಾವ ಕಾರ್ಮಿಕರನ್ನು ಧೃತಿಗೆಡಿಸಲಿಲ್ಲ. ಕಾರ್ಮಿಕ ಸಹಕಾರ ಸಂಘಗಳು ಎಲ್ಲ ಕಡೆ ಸ್ಥಾಪಿತ ವಾದವು. ಆದರೆ ಹಿಂದಿನ ಸಹಕಾರ ಸಂಘಗಳಂತೆ ಇವು ಬಹಳ ಕಾಲ ಉಳಿಯಲಿಲ್ಲ. ಸಹಕಾರ ಸಂಘಗಳ ಹಣದ ಕೊರತೆ ಮತ್ತು ಅಸಮರ್ಥ ನಿರ್ವಹಣೆ, ಅವುಗಳ ವಿಫಲತೆಗೆ ಕಾರಣವಾಗಿ ಕ್ರಮೇಣ ಅವು ಮತ್ತೆ ತಲೆ ಎತ್ತದಂತಾದವು. ೧೮೮೫-೧೮೯೦ರ ನಡುವಣ ಅವಧಿಯಲ್ಲಿ ಕರ್ಮವೀರರ ಸಂಘದ ಸದಸ್ಯರ ಸಂಖ್ಯೆ ಕುಸಿಯುತ್ತ ಹೋಯಿತು. ಕುಶಲ ಕಾರ್ಮಿಕರು ಮೊದಲಿನಿಂದಲೂ ಕರ್ಮವೀರರನ್ನು ಬೆಂಬಲಿಸಲಿಲ್ಲ. ನೈರುತ್ಯ ರೈಲು ಮಾರ್ಗಗಳ ವಿರುದ್ಧ ನಡೆದ ಮುಷ್ಕರದ ವಿಫಲತೆ ಮತ್ತು ಚಿಕಾಗೋ ನಗರದಲ್ಲಿ ನಡೆದ 'ಹೇ ಮಾರುಕಟ್ಟೆಯ ದಂಗೆ' ಯಲ್ಲಿ ಕರ್ಮವೀರರ ಕೈವಾಡವಿದೆ ಎಂಬ ವದಂತಿ ಕಾರ್ಮಿಕ ಸಂಘದ ಅವನತಿಗೆ ಕಾರಣವಾಯಿತು.

೧೮೮೬ರ ಮೇ ತಿಂಗಳಲ್ಲಿ ಸುಮಾರು ೨೦೦೦೦೦ ಕಾರ್ಮಿಕರು 'ದಿನಕ್ಕೆ ಎಂಟು

ಘಂಟೆ ಕೆಲಸ' ಬೇಡಿಕೆಯನ್ನು ಬೆಂಬಲಿಸಲು ದೇಶದ ನಾನಾ ಭಾಗಗಳಲ್ಲಿ ಮುಷ್ಕರ ನಡೆಸಿದ್ದರು. ಚಿಕಾಗೊ ನಗರ ಈ ಚಳುವಳಿಯ ಒಂದು ಪ್ರಮುಖ ಕೇಂದ್ರವಾಗಿತ್ತು. ಇಲ್ಲಿ ಅರಾಜಕತೆಯನ್ನು ಪ್ರತಿಪಾದಿಸುವವರ ಒಂದು ಗುಂಪು ಚಳುವಳಿಗಾರರನ್ನು ಕೂಡಿಕೊಂಡರು. ಇವರು ಕಾರ್ಮಿಕರಲ್ಲಿ ತೀವ್ರಗಾಮಿ ಮನೋಭಾವನೆಯನ್ನು ಉದ್ರೇಕಿಸಿದರು. ಮೆಕಾರ್ಮಿಕ್ ಹಾರ್ವೆಸ್ಟರ್ ಕಂಪನಿಯ ಆವರಣದಲ್ಲಿ ನಡೆದ ಜಗಳದಲ್ಲಿ ಆಕಸ್ಮಿಕವಾಗಿ ಕಾರ್ಮಿಕನೊಬ್ಬ ಮರಣಹೊಂದಿದನು. ಸತ್ತ ಕಾರ್ಮಿಕನಿಗೆ ಸಂತಾಪ ಸೂಚಿಸಲು ಅರಾಜಕತೆ ಪ್ರತಿಪಾದಕರು 'ಹೇ ಮಾರ್ಕೆಟ್' ಚೌಕದಲ್ಲಿ ಸಭೆ ಸೇರುವಂತೆ ಕಾರ್ಮಿಕರಿಗೆ ಕರೆಕೊಟ್ಟರು. ಸಭೆಯನ್ನು ಚದುರಿಸಲು ಪೊಲೀಸರು ಬಂದರು. ಆ ಸಮಯಕ್ಕೆ ಸರಿಯಾಗಿ ಯಾರೋ ಒಬ್ಬ ಒಂದು ಬಾಂಬ್ ಪೊಲೀಸರ ಮೇಲೆ ಎಸೆದನು. ಬಾಂಬ್ ಆಸ್ಫೋಟನೆಯಲ್ಲಿ ಏಳು ಜನ ಪೊಲೀಸರು ಸತ್ತು, ಕಂಗಾಲಾದ ಜನರ ನೂಕುನುಗ್ಗಲಿನಲ್ಲಿ ಅನೇಕರು ಗಾಯಗೊಂಡರು. ಪೊಲೀಸರು ಮುಯ್ಯಿ ತೀರಿಸಲು ಅರಾಜಕತೆಯ ಪ್ರತಿಪಾದಕರನ್ನು ಅಟ್ಟಿಸಿಕೊಂಡು ಹೋಗಿ ಹಿಡಿದು, ಬಡಿದು, ಎಳೆತಂದು ಕೊಲೆಯ ಆಪಾದನೆ ಹೊರಿಸಿದರು. ಅವರಲ್ಲಿ ಕೆಲವರಿಗೆ ದೀರ್ಘಾವಧಿ ಸೆರೆಮನೆ ಶಿಕ್ಷೆ ವಿಧಿಸಿ ಮತ್ತೆ ಕೆಲವರನ್ನು ಗಲ್ಲಿಗೇರಿಸಲಾಯಿತು. ಕರ್ಮವೀರರು ಈ ದಂಗೆಯಲ್ಲಿ ಭಾಗವಹಿಸಿದ್ದರೆಂದೂ ಆಪಾದಿಸಲಾಯಿತು. ಅವರು ಈ ಆಪಾದನೆಗಳನ್ನು ಅಲ್ಲಗಳೆದರೂ, ಅರಾಜಕತೆಯ ಪ್ರತಿಪಾದಕರನ್ನು ಖಂಡಿಸಿದರೂ ಹಿಂಸೆ ಮತ್ತು ಪಿತೂರಿಯ ಕಳಂಕ ಅವರಿಗೆ ಅಳಿಸಲಾರದಂತೆ ಅಂಟಿಕೊಂಡಿತು.

ಕರ್ಮವೀರರು ಪ್ರಾರಂಭಿಸಿದ ಚಳುವಳಿ ನಿಷ್ಪ್ರಯೋಜಕವಾಯಿತು ಎಂದು ಹೇಳುವಂತಿಲ್ಲ. ಅದ್ಭುತ ಸಾಧನೆಗಳನ್ನು ಮಾಡದೆಹೋದರೂ, ಕೆಲವು ಮುಖ್ಯ ಸುಧಾರಣೆಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಯಿತು. ಅವರ ಪ್ರಯತ್ನದಿಂದ ೧೮೮೪ರಲ್ಲಿ ಫೆಡರಲ್ ಸರ್ಕಾರದ ಕಾರ್ಮಿಕರ ಅಂಕೆ ಅಂಶಗಳ ಇಲಾಖೆ (Federal Bureau of Labor Statistics) ಸ್ಥಾಪಿತಗೊಂಡಿತು. ೧೮೮೫ರಲ್ಲಿ ಕಾಂಗ್ರೆಸ್ 'ಕರಾರು ದುಡಿಮೆ'ಯನ್ನು ರದ್ದುಗೊಳಿಸಿತು.

ಅಮೆರಿಕನ್ ಕಾರ್ಮಿಕರ ಸಂಘಟನೆ

ಕಾಲಕ್ರಮದಲ್ಲಿ ಕರ್ಮವೀರರು ಕಳೆಗುಂದಿದಂತೆ ಹೊಸ ಮಾದರಿಯ ರಾಷ್ಟ್ರೀಯ ಕಾರ್ಮಿಕರ ಆಂದೋಳನ ಪ್ರಾರಂಭವಾಯಿತು. ಚುಟ್ಟಾ ತಯಾರಿಸುವವರ ಒಕ್ಕೂಟಕ್ಕೆ ಸೇರಿದ್ದ ಸಾಮ್ಯುಯಲ್ ಗಾಂಪರ್ಸ್ ಮತ್ತು ಅಡಾಲ್ಫ್ ಸ್ಟ್ರಾಸ್ಸರ್ ರಾಷ್ಟ್ರೀಯ ಕಾರ್ಮಿಕರ ಆಂದೋಳನದ ನಾಯಕರಾದರು. ಅವರು ನಿರ್ದೇಶಿಸಿದಂತೆ ಸಂಘಟನೆಯ ಮೊದಲ ಹೆಜ್ಜೆ, ವಿವಿಧ ಕಸುಬುಗಳಲ್ಲಿ ನಿರತರಾದ ಕೆಲಸಗಾರರು ಆಯಾಯಾ ಕಸುಬಿನವರನ್ನು ಕೂಡಿಸಿ ಸ್ವಯಂ ಆಡಳಿತ ಘಟಕಗಳಾದ 'ಕಸುಬು ಒಕ್ಕೂಟ' (Trade Unions)ಗಳನ್ನು

ರಾಷ್ಟ್ರೀಯ ಕಾರ್ಮಿಕರ ಆಂದೋಳನದ ಆಶ್ರಯದಲ್ಲಿ ರಚಿಸಿಕೊಳ್ಳುವುದು. ಗಾಂಪರ್ಸ್ ಮತ್ತು ಸ್ಟ್ರಾಸ್ಸರ್ ಸಂಘಟನೆಯ ಆಶ್ರಯದಲ್ಲಿ ರಾಜಕೀಯಕ್ಕೆ ಇಳಿಯಬಾರದು ಎಂದು ನಿರ್ಧರಿಸಿದರು. ಅಲ್ಲದೆ ಹಿಂದೆ ಕರ್ಮವೀರರು ಮಾಡಿದಂತೆ, ವಿವೇಚನೆಯಿಲ್ಲದೆ, ಎಲ್ಲಾ ಕಸುಬು ಗೊತ್ತಿಲ್ಲದ ಕೆಲಸಗಾರರನ್ನು ಒಕ್ಕೂಟಕ್ಕೆ ಸೇರಿಸಿಕೊಳ್ಳುವುದನ್ನು ನಿಲ್ಲಿಸಿದರು. ಸಹಕಾರಿ ಸಂಸ್ಥೆಗಳು ಮತ್ತು ಸಮಾಜವಾದಿ ಸುಧಾರಣೆಗಳನ್ನು ನಿರಾಕರಿಸಿದರು. ತಮ್ಮ ಕಸುಬುಗಳ ಒಕ್ಕೂಟಗಳನ್ನು ಬಲಪಡಿಸುವುದರ ಮೂಲಕ ಬಂಡವಾಳ ವ್ಯವಸ್ಥೆ ಯೊಳಗಿನಿಂದಲೇ ಕಾರ್ಮಿಕರು ತಮ್ಮ ಕರಾರು ಮಾಡಿಕೊಳ್ಳುವ ಶಕ್ತಿ (bargaining power)ಯನ್ನು ಹೆಚ್ಚಿಸಿಕೊಳ್ಳಬೇಕೆಂದು ಗಾಂಪರ್ಸ್ ಮತ್ತು ಸ್ಟ್ರಾಸ್ಸರ್ ನಿರ್ದೇಶಿಸಿದರು. ೧೮೮೬ರ ಡಿಸೆಂಬರ್ ತಿಂಗಳಲ್ಲಿ ಕಸುಬು ಒಕ್ಕೂಟಗಳ ೩೦೦೦೦ ಪ್ರತಿನಿಧಿಗಳು ಒಹಾಯೊ ಸಂಸ್ಥಾನದ ಕೊಲಂಬಸ್ ನಗರದಲ್ಲಿ ಸಭೆ ಸೇರಿದರು. ಈ ಸಭೆಯ ಕಾರ್ಯಕಲಾಪಗಳು ಅಮೆರಿಕನ್ ಕಾರ್ಮಿಕರ ಮಹಾಸಂಘ (The American Federation of Labor) ವನ್ನು ಸ್ಥಾಪಿಸಿದವು. ಈ ಸಂಘದ ಹೆಸರಿನ ಮೊದಲಕ್ಷರಗಳನ್ನು ಕೂಡಿಸಿ A F of L ಎಂದು ಕರೆಯುವುದು ವಾಡಿಕೆಯಾಯಿತು. ಈ ಮಹಾಸಂಘದಲ್ಲಿ ಸಾಮ್ಯುಯಲ್ ಗಾಂಪರ್ಸ್‌ನನ್ನು ಮೊದಲನೆಯ ಅಧ್ಯಕ್ಷನನ್ನಾಗಿ ಚುನಾಯಿಸಲಾಯಿತು.

ಗಾಂಪರ್ಸ್ ಈ ಸಂಘದ ಚೇತನ ಶಕ್ತಿಯಾಗಿ ಅದರ ಬೆಳವಣಿಗೆಗೆ ಕಾರಣನಾದನು. ಅವನ ನಾಯಕತ್ವದಲ್ಲಿ A F of L ಕಾರ್ಮಿಕರ ಆಧುನಿಕ ಆಂದೋಳನದ ನಾಂದಿಯಾಯಿತು. ಅವನು ಕಾರ್ಮಿಕರ ಪ್ರಥಮ ಅಗತ್ಯಗಳನ್ನು – ವೇತನ ಹೆಚ್ಚಳ, ಕೆಲಸದ ಅವಧಿ ಕಡಿಮೆ ಮಾಡುವುದು, ಕೆಲಸ ನಡೆಯುವ ಸ್ಥಳಗಳನ್ನು ಉತ್ತಮಗೊಳಿಸಿ ಸುರಕ್ಷಿತವಾಗಿರಿಸುವುದು, ಕೊನೆಯದಾಗಿ, ಮುಷ್ಕರವನ್ನು ಕಾರ್ಮಿಕರ ಅತ್ಯಂತ ಶಕ್ತಿಯುತವಾದ ಆಯುಧವನ್ನಾಗಿ ಮಾಡುವುದು – ಇವನ್ನು ಜಾರಿಗೆ ತರಲು ತಾನು ಜೀವಿಸಿರುವವರೆಗೂ ಶ್ರಮಿಸಿದನು. ಅಮೆರಿಕದ ಕಾರ್ಮಿಕರ ಆಂದೋಳನದ ಹರಿಕಾರನಾದ ಗಾಂಪರ್ಸ್ ೧೯೨೪ರಲ್ಲಿ ತೀರಿಕೊಂಡನು.

A F of L ರಾಜಕೀಯ ಪಕ್ಷಗಳೊಡನೆ ಒಪ್ಪಂದ ಮಾಡಿಕೊಳ್ಳಲು ನಿರಾಕರಿಸಿದರೂ ಕಾರ್ಮಿಕರ ಬೇಡಿಕೆಗಳ ಪೂರೈಕೆಗೆ ರಾಜಕೀಯ ಪ್ರಭಾವ ಬಳಸುವುದನ್ನು ಬಿಡಲಿಲ್ಲ. ಏಕೆಂದರೆ, ರಾಜಕಾರಣಿಗಳು ಕಾಲ ಕಾಲಕ್ಕೆ ಜಾರಿ ಮಾಡುವ ಕಾಯಿದೆಗಳು ಮತ್ತು ನಿಬಂಧನೆಗಳು ಕಾರ್ಮಿಕರಿಗೆ ಅನುಕೂಲಕರವಾಗಿರುವಂತೆ ಮಾಡಲು, ತಮ್ಮ ಬೇಡಿಕೆ ಗಳನ್ನು ಬೆಂಬಲಿಸುವ ಕಾಂಗ್ರೆಸ್ ಮತ್ತು ಸೆನೆಟ್ ಅಭ್ಯರ್ಥಿಗಳು ಆರಿಸಿ ಬರುವಂತೆ ಮಾಡಲು, ಕಾರ್ಮಿಕರು ಹೆಚ್ಚು ಸಂಖ್ಯೆಗಳಲ್ಲಿ ಚುನಾವಣೆಗಳಲ್ಲಿ ಭಾಗವಹಿಸುವಂತೆ ಆಗ್ರಹ ಪಡಿಸುವುದು – ಇವೆಲ್ಲವೂ ಕಾರ್ಮಿಕ ಮಹಾಸಂಘದ ಗುರಿಗಳಾಗಿದ್ದವು. A F of L ಹೊಸ ಸದಸ್ಯರನ್ನು ಸೇರಿಸಿಕೊಳ್ಳುವಾಗ ಬಹಳ ಎಚ್ಚರಿಕೆ ವಹಿಸಿತು. ಪ್ರಾರಂಭದ

ದಿನಗಳಲ್ಲಿ ಈ ಕಾರ್ಮಿಕರ ಸಂಘ ಉಪಶಾಖೆಗಳಲ್ಲಿ ಕರಿಯ ಕಾರ್ಮಿಕರನ್ನು ಭೇದಭಾವ ಅಥವಾ ಪಕ್ಷಪಾತಗಳಿಗೆ ಒಳಪಡಿಸುವುದನ್ನು ನಿಷೇಧಿಸಿತ್ತು. ಆದರೆ ಕ್ರಮೇಣ ಭೇದಭಾವ ತೋರಿಸುವ ಉಪಶಾಖೆಗಳನ್ನು ಸಹ ಸಂಘಟನೆಗೆ ಸೇರಿಸಿಕೊಳ್ಳತೊಡಗಿದರು. ಸ್ತ್ರೀಯರನ್ನು ಸೇರಿಸಿಕೊಳ್ಳಲು ಈ ಸಂಘ ಹೆಚ್ಚಿನ ಪ್ರಯತ್ನ ಮಾಡಲಿಲ್ಲ. ಸ್ತ್ರೀಯರನ್ನು ಕಡೆಗಣಿಸಿದ್ದರೂ ಅವರು ಕಸುಬುಗಳ ಒಕ್ಕೂಟಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಸಕ್ರಿಯವಾಗಿ ಪಾತ್ರ ವಹಿಸಿದ್ದರು. ಕೆಲವು ಸಂದರ್ಭಗಳಲ್ಲಿ ಸ್ತ್ರೀಯರೇ ಸೇರಿ ಮುಷ್ಕರ ಹೂಡುತ್ತಿದ್ದರು. ಉಡುಪು ತಯಾರಿಕೆ, ಹೊಗೆಸೊಪ್ಪನ್ನು ಹದಗೊಳಿಸುವುದು ಮತ್ತೆ ಬಟ್ಟೆ ಒಗೆದು ಮಡಿ ಮಾಡುವುದು – ಈ ಕಸುಬುಗಳ ಕಾರ್ಮಿಕ ಒಕ್ಕೂಟಗಳಲ್ಲಿ ಸ್ತ್ರೀಯರದೇ ಮೇಲುಗೈ ಯಾಗಿತ್ತು.

ಇಪ್ಪತ್ತನೆಯ ಶತಮಾನದ ಹೊತ್ತಿಗೆ ಕಾರ್ಮಿಕರ ಸಂಘಟನೆಯ ಸದಸ್ಯರ ಸಂಖ್ಯೆ ಒಂದು ಮಿಲಿಯನ್‌ಗಿಂತಲೂ ಹೆಚ್ಚಾಗಿತ್ತು. ಕಾರ್ಮಿಕರ ಆಂದೋಳನದ ನಾಯಕರು ಕಾರ್ಮಿಕರಲ್ಲಿ ಒಡಕು ಹುಟ್ಟಿಸಬಹುದಾದ ಅಥವಾ ಕಲಹಕ್ಕೆ ಕಾರಣವಾಗಬಹುದಾದ ಜನಗಳನ್ನು ಮತ್ತು ವಿಷಯಗಳನ್ನು ಸಂಘಟನೆಯಿಂದ ಹೊರಗೆ ಹಾಕಿ ಅದನ್ನು ಭದ್ರಗೊಳಿಸಿದರು. ರಾಷ್ಟ್ರೀಯ ಕಾರ್ಮಿಕರ ಸಂಘಟನೆಯ ಪ್ರಯತ್ನದಿಂದ ಅನೇಕ ಸಂಸ್ಥಾನಗಳಲ್ಲಿ ಕಾರ್ಮಿಕರ ಅಂಕಿ ಅಂಶಗಳ ಇಲಾಖೆಗಳು ಸ್ಥಾಪಿತಗೊಂಡವು. ೧೯೦೩ರಲ್ಲಿ ವಾಣಿಜ್ಯ ಮತ್ತು ಕಾರ್ಮಿಕರ ಇಲಾಖೆಯನ್ನು (Bureau of Labor Statistics) ಕಾಂಗ್ರೆಸ್ ಸ್ಥಾಪಿಸಿತು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಕಾರ್ಮಿಕರ ಸಂಘಟನೆಯ ಬೆಳವಣಿಗೆ ಮತ್ತು ಕಾರ್ಮಿಕರ ಪ್ರಬಲ ಅಸ್ತ್ರವಾದ ಮುಷ್ಕರವನ್ನು ಹೂಡುವ ಪ್ರವೃತ್ತಿಯಿಂದಾಗಿ ಆಗಾಗ ಹೊಡೆದಾಟ ಬಡಿದಾಟಗಳು ನಡೆದು ರಕ್ತ ಚೆಲ್ಲಾಡಿತು. ೧೮೯೨ರಲ್ಲಿ ಉಕ್ಕಿನ ಉದ್ಯಮವನ್ನು ಹೆಚ್ಚು ಯಂತ್ರೀಕರಣ (mechanization) ಗೊಳಿಸಿದ್ದಕ್ಕಾಗಿ ಪಿಟ್ಸ್‌ಬರ್ಗ್ ಸಮೀಪದಲ್ಲಿದ್ದ ಆ್ಯಂಡ್ರೂ ಕಾರ್ನೆಗಿಗೆ ಸೇರಿದ್ದ ಕಾರ್ಖಾನೆ ಯೊಂದರಲ್ಲಿ ಕಾರ್ಮಿಕರ ಮುಷ್ಕರ ಪ್ರಾರಂಭವಾಯಿತು. ಇದಕ್ಕೆ ಕಾರಣ ಯಂತ್ರಗಳ ಉಪಯೋಗದಿಂದ ಉಂಟಾದ ಲಾಭದಲ್ಲಿ ತಮಗೂ ಒಂದು ಪಾಲು ಕೊಡಬೇಕೆಂದು ಕಾರ್ಮಿಕರು ಒತ್ತಾಯಪಡಿಸಿದ್ದು. ಆದರೆ ಕಾರ್ಖಾನೆಯ ನಿರ್ವಹಣಕಾರರು ಕಾರ್ಮಿಕರು ಉದ್ಯಮದ ಪ್ರಗತಿಯನ್ನು ತಡೆಗಟ್ಟಿ ಬದಲಾವಣೆಗಳನ್ನು ನಿರಾಕರಿಸುತ್ತಿದ್ದಾರೆಂದು ಆಪಾದಿಸಿದರು. ಮುಷ್ಕರವನ್ನು ನಿಲ್ಲಿಸಲು ಮುಷ್ಕರ ಮುರಿಯುವವರನ್ನು ಕಾರ್ಖಾನೆ ಯವರು ಕರೆಸಿದರು. ಇವರು 'ಪಿಂಕರ್‌ಟನ್ ರಕ್ಷಕರು' (Pinkerton Guards) ಎಂಬ ಖಾಸಗಿ ಸಂಸ್ಥೆಗೆ ಸೇರಿದ್ದರು. ಮುಷ್ಕರದ ೫ನೆಯ ತಿಂಗಳಲ್ಲಿ ಈ ರಕ್ಷಕರ ಮೇಲೆ ಹಲ್ಲೆ ನಡೆಸಿ ಕೆಲವರನ್ನು ಕೊಂದರು. ಉಳಿದ ರಕ್ಷಕರು ಶರಣಾಗತರಾಗಿ ಚದುರಿಹೋದರು. 'ಹೇ ಮಾರುಕಟ್ಟೆ'ಯ (Hay market) ದಂಗೆಯಲ್ಲಿ ಆದಂತೆಯೇ ಈ ಮುಷ್ಕರವೂ ಸಾರ್ವಜನಿಕರಲ್ಲಿ ಕಾರ್ಮಿಕರ ಬಗ್ಗೆ ಕಹಿಭಾವನೆಗಳನ್ನು ಉಂಟಾಗಿಸಿ – ವಿಶಿಷ್ಟವಾಗಿ,

ಕಾರ್ಖಾನೆಯ ನಿರ್ವಹಣಕಾರ (plant manager) ಹೆನ್ರಿ ಕ್ಲೇ ಫ್ರಿಕ್ (Henry Clay Frick)ನನ್ನು ಕೊಲೆ ಮಾಡಲು ಕಾರ್ಮಿಕರು ಪ್ರಯತ್ನಿಸಿದ್ದು – ಕಾರ್ಮಿಕರು ಸಾರ್ವಜನಿಕರ ಸಹಾನುಭೂತಿಯನ್ನು ಕಳೆದುಕೊಂಡರು. ಪರಿಸ್ಥಿತಿಯನ್ನು ಹತೋಟಿಗೆ ತರಲು ಸಂಸ್ಥಾನದ ಸೈನ್ಯವನ್ನು ಕರೆಸಬೇಕಾಯಿತು. ಮುಷ್ಕರ ಕಂಪನಿಯ ಷರತ್ತಿನ ಮೇಲೆ ಕೊನೆಗೊಂಡಿತು.

೧೮೯೪ರಲ್ಲಿ ಪುಲ್‌ಮನ್ ಕಂಪನಿ (Pullman company) ಆರ್ಥಿಕ ಮುಗ್ಗಟ್ಟಿನಿಂದಾಗಿ ಕಾರ್ಮಿಕರಿಗೆ ಮುಂಚಿತವಾಗಿ ತಿಳಿಸದೆಯೆ ವೇತನಗಳಲ್ಲಿ ಕಡಿತ ಮಾಡಿತು. ಸ್ಥಳೀಯ ಕಾರ್ಮಿಕ ಒಕ್ಕೂಟಗಳು ಮುಷ್ಕರ ಹೂಡಲು ಬಹುಮತದಿಂದ ನಿರ್ಧರಿಸಿದರು. ಇದಾದ ಸ್ವಲ್ಪ ಸಮಯದಲ್ಲಿ ಅಮೆರಿಕನ್ ರೈಲ್ವೆ ಒಕ್ಕೂಟ (American Railway Union) ಯೂಜೀನ್ ಡೆಬ್ಸ್‌ನ ನಾಯಕತ್ವದಲ್ಲಿ ಪುಲ್‌ಮನ್ ಕಂಪನಿಯ ಸರಕುಗಳನ್ನು ಸಾಗಿಸಲು ನಿರಾಕರಿಸಿದರು. ಪುಲ್‌ಮನ್ ಕಂಪನಿ ಮುಷ್ಕರ ಹೂಡಿದ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿತು. ಕೆಲಸ ಸಹಾನುಭೂತಿ ತೋರಿಸಲು ಎಲ್ಲಾ ರೈಲು ಯಂತ್ರ ಚಾಲಕರು ಕೆಲಸಕ್ಕೆ ಗೈರುಹಾಜರಾದರು. ರೈಲು ಸಾರಿಗೆ ಸ್ಥಗಿತಗೊಂಡು ಅಮೆರಿಕದ ಮಧ್ಯಪ್ರಾಂತಗಳಲ್ಲಿ ಕಷ್ಟ ನಷ್ಟಗಳುಂಟಾದವು. ಮುಷ್ಕರ ಮುರಿಯುವವರನ್ನು ಕರೆಸಲಾಯಿತು. ಎರಡು ದಿನ ಮಾರಾಮಾರಿ ಹೊಡೆದಾಟವಾಗಿ ರೈಲ್ವೆ ಅಧಿಕಾರಿಗಳು ವಿಧಿಯಿಲ್ಲದೆ ಕಾರ್ಮಿಕರ ಮೇಲೆ ಫೆಡರಲ್ ಡಿಸ್ಟ್ರಿಕ್ಟ್ ಕೋರ್ಟಿನ ಆಜ್ಞೆಯನ್ನು ಜಾರಿ ಮಾಡಿಸಿದರು. ಈ ಆಜ್ಞೆ ಮುಷ್ಕರ ನ್ಯಾಯಬಾಹಿರವಾದುದು ಎಂದು ವ್ಯಾಖ್ಯಾನ ಮಾಡಿತು. ಶರ್‌ಮನ್ ನಿಕ್ಷೇಪ ವಿರೋಧ ಕಾಯಿದೆ ಪ್ರಕಾರ ಈ ಮುಷ್ಕರ 'ವ್ಯಾಪಾರಕ್ಕೆ ಅಡ್ಡಿ ಉಂಟುಮಾಡುವ ಉದ್ದೇಶದಿಂದ ನಡೆಯುತ್ತಿರುವ ಕಾರ್ಮಿಕರ ಒಕ್ಕೂಟಗಳ ಸಂಘಟನೆ ಮುಷ್ಕರ ಅಂಚೆವಿತರಣೆಗೆ ಅಡ್ಡಿ ಉಂಟುಮಾಡಿ, ಅಂತರ ಸಂಸ್ಥಾನಗಳ ವಾಣಿಜ್ಯ ವ್ಯವಹಾರಗಳಲ್ಲಿ ಮಧ್ಯೆ ಪ್ರವೇಶಿಸಿದ್ದು ಕಾಯಿದೆ ವಿರೋಧವಾದುದು ಎಂದು ತೀರ್ಮಾನಿಸಲಾಯಿತು. ಆದ್ದರಿಂದ ಈ ಮುಷ್ಕರವನ್ನು ಹತ್ತಿಕ್ಕಲು ಅಧ್ಯಕ್ಷ ಕ್ಲೀವ್‌ಲ್ಯಾಂಡ್‌ಮ್ ಫೆಡರಲ್ ಸೈನ್ಯವನ್ನು ರವಾನಿಸಿದನು. ಸೈನ್ಯ ಮುಷ್ಕರವನ್ನು ಸಂಪೂರ್ಣವಾಗಿ ಹತ್ತಿಕ್ಕಿತು. ಮುಷ್ಕರದ ನಾಯಕನಾಗಿದ್ದ ಡೆಬ್ಸ್‌ನ ಮೇಲೆ ಆಪಾದನೆಗಳನ್ನು ಹೊರಿಸಿ, ನ್ಯಾಯಾಲಯದಲ್ಲಿ ವಿಚಾರಣೆ ನಡೆದು ಅವನು ತಪ್ಪಿತಸ್ಥನೆಂದು ಸಾಬೀತಾಗಿ ಆತನಿಗೆ ಆರು ತಿಂಗಳ ಜೈಲುವಾಸದ ಶಿಕ್ಷೆ ವಿಧಿಸಲಾಯಿತು.

ಕೃಷಿಕ್ಷೇತ್ರದಲ್ಲಿ ರಾಜಕೀಯ

ಅಮೆರಿಕ ಹೆಚ್ಚು ಔದ್ಯೋಗೀಕರಣಗೊಂಡಂತೆಲ್ಲ ರೈತಾಪಿ ಜನರು ಪೇಟೆ ಪಟ್ಟಣಗಳನ್ನು ಸೇರತೊಡಗಿದರು. ಉಳಿದ ಅಲ್ಪಸಂಖ್ಯಾತ ರೈತರು ನಗರವಾಸಿಗಳಿಗೆ ಆಹಾರ ಉತ್ಪನ್ನ ಮಾಡಬೇಕಾಯಿತು. ಸ್ವಂತ ಸಾಗುವಳಿಯಿಂದ ನಗರಗಳ ಆಹಾರ ಪೂರೈಕೆ ದುಸ್ಸಾಧ್ಯವಾದುದರಿಂದ ವಾಣಿಜ್ಯ ವ್ಯವಸಾಯ ಪದ್ಧತಿ ಪ್ರಾರಂಭವಾಯಿತು.

ಈ ವ್ಯವಸಾಯ ವಿಧಾನದ ಗುರಿ ಇಡೀ ರಾಷ್ಟ್ರದ ಆಹಾರ ಪೂರೈಕೆ, ಹಲಕೆಲವು ಕುಟುಂಬಗಳ ಆಹಾರ ಪೂರೈಕೆಯಲ್ಲ. ಅಮೆರಿಕದ ಪಶ್ಚಿಮ ಪ್ರಸ್ಥಭೂಮಿಯನ್ನು ವ್ಯವಸಾಯಯೋಗ್ಯವಾಗಿ ಮಾಡಿದ ಮೇಲೆ ಔದ್ಯೋಗಿಕ ಮತ್ತು ವೈಜ್ಞಾನಿಕ ತತ್ವಗಳನ್ನು ಅಳವಡಿಸಿಕೊಂಡ ವ್ಯವಸಾಯದಿಂದ ಉಂಟಾದ ಅಧಿಕ ಉತ್ಪನ್ನ ಅಮೆರಿಕದ ಅಗತ್ಯಗಳಿಗಿಂತಲೂ ಮಿಗಿಲಾಗಿತ್ತು. ಈ ಹೆಚ್ಚಿನ ಉತ್ಪನ್ನವನ್ನು ಬೇರೆ ದೇಶಗಳಿಗೆ ರಫ್ತು ಮಾಡಬಹುದು, ಅಲ್ಲಿನ ಮಾರುಕಟ್ಟೆಗಳಲ್ಲಿ ಹೆಚ್ಚಿನ ಬೇಡಿಕೆ ಇರಬಹುದು ಎಂದು ಊಹಿಸಿದ್ದು ತಪ್ಪಾಯಿತು. ಹೊರದೇಶಗಳಲ್ಲಿ ವ್ಯವಸಾಯ ಉತ್ಪನ್ನ ಹೆಚ್ಚುತ್ತ ಹೋಗಿತ್ತು. ಹೀಗಾಗಿ ಅಮೆರಿಕನ್ ರೈತರು ಹೊರದೇಶಗಳಿಂದ ಆಮದು ಮಾಡಿಕೊಳ್ಳುತ್ತಿದ್ದ ವ್ಯವಸಾಯ ಉತ್ಪನ್ನಗಳೊಡನೆ ಸ್ಪರ್ಧಿಸುವುದಲ್ಲದೆ ಹೊರದೇಶಗಳ ಮಾರುಕಟ್ಟೆಗಳಲ್ಲೂ ಬೇರೆ ದೇಶಗಳ ಉತ್ಪನ್ನಗಳೊಡನೆ ಪೈಪೋಟಿ ನಡೆಸಬೇಕಾಗಿ ಬಂತು. ಕೈಗಾರಿಕಾ ಉತ್ಪನ್ನ ವಸ್ತುಗಳ ಮೇಲೆ ಹೆಚ್ಚಿನ ಸುಂಕ ಹಾಕಿದ್ದರಿಂದ ಅಮೆರಿಕನ್ ರೈತರು ತಮಗೆ ಬೇಕಾದ ವ್ಯವಸಾಯ ಸಲಕರಣೆಗಳಿಗೆ ಮತ್ತು ಇತರ ಸರಕುಗಳಿಗೆ ಹೊರದೇಶದ ರೈತರಿಗಿಂತ ಹೆಚ್ಚು ಸುಂಕವನ್ನು ತೆರಬೇಕಾಯಿತು. ಹೀಗೆ ಅವರು ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದ್ದರು. ತಾವು ಬೆಳೆದಿದ್ದಕ್ಕೆ ಖರ್ಚು ಕಳೆದು ಕೊಂಚ ಲಾಭ ಬರುವಂತೆ ಬೆಲೆ ನಿಗದಿ ಮಾಡಿದರೆ ಗಿರಾಕಿಗಳು ಅದಕ್ಕಿಂತ ಕಡಿಮೆ ಬೆಲೆಗೆ ಸಿಗುವ ಬೇರೆ ದೇಶಗಳ ವಸ್ತುಗಳನ್ನು ಕೊಳ್ಳುತ್ತಿದ್ದರು. ಅವರೊಂದಿಗೆ ಸ್ಪರ್ಧಿಸಲು ಬೆಲೆ ಕಡಿಮೆಯಾದರೆ ಬರುವ ಆದಾಯದಲ್ಲಿ ಜೀವನ ಮಾಡುವುದು ಕಷ್ಟವಾಗುತ್ತಿತ್ತು.

೧೮೮೭ ಮತ್ತು ೧೮೯೩ರ ಅವಧಿಯಲ್ಲಿ ಗೋಧಿಯ ಬೆಲೆ ಬುಷಲ್ ಒಂದಕ್ಕೆ ಒಂದು ಡಾಲರ್ ಇದ್ದದ್ದು ಕೇವಲ ೫೬ ಸೆಂಟುಗಳಿಗೆ ಇಳಿಯಿತು. ಇದೇ ಸಮಯದಲ್ಲಿ ಅನಾವೃಷ್ಟಿಯಿಂದಾಗಿ ಪಶ್ಚಿಮದ ಬಯಲುಸೀಮೆಯ ಬೆಳೆಗಳು ನಾಶವಾದವು. ಇದರಿಂದಾಗಿ ಉತ್ಪನ್ನ ಕಡಿಮೆಯಾದರೂ ರೈತರು ಬೆಳೆದಿದ್ದಕ್ಕೆ ಬೆಲೆ ಏರಲಿಲ್ಲ. ಕಾರಣ ಜಾಗತಿಕ ಆಹಾರ ಉತ್ಪಾದನೆ (world food production) ಎಲ್ಲ ಮಾರುಕಟ್ಟೆಗಳ ಬೇಡಿಕೆಗಳನ್ನು ಪೂರೈಸಿ ಮಿಗುವಷ್ಟಿತ್ತು. ಹೀಗಾಗಿ ಅಮೆರಿಕದ ರೈತರು ತಮ್ಮ ಭೂಮಿ ಕಾಣಿಗಳನ್ನು ಒತ್ತೆ ಇಡುವ ಪರಿಸ್ಥಿತಿ ಉಂಟಾಯಿತು. ಇನ್ನು ಕೆಲವು ರೈತರು ಸ್ವಂತ ಜಮೀನು ಕಳೆದುಕೊಂಡು ಗೇಣಿದಾರರಾಗಬೇಕಾಗಿ ಬಂತು. ರೈತರ ಅಭಿಪ್ರಾಯದಲ್ಲಿ ಅವರ ಕಣ್ಣ ಮುಂದಿನ ಶತ್ರುಗಳಾಗಿದ್ದವರು ರೈಲುಮಾರ್ಗಗಳ ಕಂಪನಿಗಳು. ಈ ಕಂಪನಿಗಳು ಸರ್ಕಾರದಿಂದ ದೇಣಿಗೆ ಪಡೆದಿದ್ದ ೧೩೫ ಮಿಲಿಯನ್ ಎಕರೆ ಸಾರ್ವಜನಿಕ ಭೂಮಿಯನ್ನು ರೈತರಿಗೆ ದೀರ್ಘಾವಧಿ ಸಾಲದ ಮೇಲೆ ಗೇಣಿಗೆ ಕೊಟ್ಟಿದ್ದರು. ಸಾಲ ದೀರ್ಘಾವಧಿಯದಾದರೂ ಕಂತುಗಳು ಸುಲಭವಾಗಿರಲಿಲ್ಲ. ಹತ್ತೊಂಬತ್ತನೆಯ ಶತಮಾನದ ಕೊನೆಯ ಕಾಲು ಭಾಗದಲ್ಲಿ ಪಶ್ಚಿಮ ಪ್ರಾಂತಗಳ ರೈತರು ರೈಲ್ವೆ ಕಂಪನಿಗಳ ಸಾಲದಲ್ಲಿ ಮುಳುಗಿಹೋಗಿದ್ದರು. ಈ ಸಾಲ ಬರೀ ಭೂಮಿಗೆ ಸಂಬಂಧಪಟ್ಟದ್ದಲ್ಲ,

ರೈಲ್ವೆ ಕಂಪನಿಗಳ ಏಕಸ್ವಾಮ್ಯತೆ ಸಾರಿಗೆ ದರಗಳನ್ನು ಏರಿಸಲು ಅನುಕೂಲವಾಗಿತ್ತು. ತಮ್ಮ ದುಃಸ್ಥಿತಿಗೆ ರೈತರು ಪೂರ್ವ ಪ್ರಾಂತಗಳ ಶ್ರೀಮಂತ ಉದ್ದಿಮೆಗಾರರು ಜಾರಿಗೆ ತಂದ ಹೆಚ್ಚಿನ ಸುಂಕದ ದರಗಳು ಕಾರಣವೆಂದು ನಂಬಿದ್ದರು. ಏರಿಸಿದ ಸುಂಕದ ದರ ಒಂದೇ ಅಲ್ಲ, ರೈತರು ಇನ್ನೂ ಹಲವಾರು ಬಗೆಗಳಲ್ಲಿ ಶೋಷಣೆಗೆ ಒಳಗಾಗಿದ್ದರು. ಉದ್ದಿಮೆಗಾರರು ಮತ್ತು ರೈಲ್ವೆ ಕಂಪನಿಗಳು ತಮ್ಮ ನಿಜವಾದ ಆದಾಯವನ್ನು ಮರೆಮಾಚಿ ತಮ್ಮ ತೆರಿಗೆಯನ್ನು ಕಡಿಮೆ ಮಾಡಿಕೊಳ್ಳುತ್ತಿದ್ದರು. ಆದರೆ ರೈತರು ಹಾಗೆ ಮಾಡಲು ಸಾಧ್ಯವಿರಲಿಲ್ಲ. ತಮ್ಮ ಸ್ವಾಧೀನದಲ್ಲಿರುವ ಭೂಮಿಯನ್ನು ಬಚ್ಚಿಡಲು ಸಾಧ್ಯವಿಲ್ಲದೆ ತಮ್ಮ ಒಟ್ಟು ಜಮೀನಿನ ಮೇಲೆ ತೆರಿಗೆ ಕೊಡಬೇಕಾಗಿತ್ತು. ಈ ತೆರಿಗೆ ಹೋಗಿ ಸೇರುತ್ತಿದ್ದುದು ತಮ್ಮ ಸಾಲಗಾರರಾಗಿದ್ದ ರೈಲ್ವೆ ಕಂಪನಿಗಳನ್ನು ಅಥವಾ ಗೈರುಹಾಜರಿ ಮಾಲೀಕನನ್ನು.

ಇವೆಲ್ಲ ಕಷ್ಟಗಳು ಸಾಲದೆಂಬಂತೆ ರೈತರ ಜೀವನ ನಗರ ಜೀವನಕ್ಕಿಂತ ಬಹಳ ಕೆಳಮಟ್ಟದಲ್ಲಿತ್ತು. ಹಳ್ಳಿಯ ಶಾಲೆಗಳು, ರಸ್ತೆಗಳು, ನೈರ್ಮಲ್ಯ ಮತ್ತು ಆರೋಗ್ಯ ರಕ್ಷಣೆ ಎಲ್ಲ ಅಸಮರ್ಪಕವಾಗಿದ್ದವು. ೧೮೯೦ರವರೆಗೂ ಹಳ್ಳಿಗಳಿಗೆ ಅಂಚೆವ್ಯವಸ್ಥೆ ಇರಲಿಲ್ಲ. ರೈತರು ತಾವು ಪ್ರಾಮಾಣಿಕರು, ಕಷ್ಟಪಟ್ಟು ದುಡಿದು ರಾಷ್ಟ್ರಕ್ಕೆ ಅನ್ನ ನೀಡುವವರು ಎಂದು ನಂಬಿದ್ದರು. ಆದರೂ ಪೂರ್ವಪ್ರಾಂತಗಳ ಉದ್ದಿಮೆಗಾರರು, ವ್ಯಾಪಾರಿಗಳು, ರೈಲ್ವೆ ಕಂಪನಿಗಳು ಮತ್ತು ಬ್ಯಾಂಕ್ ಉದ್ಯಮದವರು ತಮ್ಮನ್ನು ಶೋಷಣೆ ಮಾಡುತ್ತಿದ್ದಾರೆ ಎನ್ನುವ ರೋಷ, ಪರ್ವತದ ಗರ್ಭದಲ್ಲಿ ಹುದುಗಿ ಹೊಗೆಯಾಡುತ್ತಿರುವ ಅಗ್ನಿಯಂತೆ ರೈತರ ಅಂತರಾಳದಲ್ಲಿ ಸುಪ್ತವಾಗಿ ಕುದಿಯುತ್ತಿತ್ತು.

ರೈತರ ಹಿತಸಂರಕ್ಷಣಾ ಪಕ್ಷ (The Populist Party)

ಅಮೆರಿಕದ ರೈತರ ಪ್ರಥಮ ರಾಜಕೀಯ ಸಂಸ್ಥೆ 'ನ್ಯಾಷನಲ್ ಗ್ರೇಂಜ್' (the National Grange). ೧೮೬೦ರ ದಶಕದಲ್ಲಿ ಬಡ ರೈತರನ್ನು ಮತ್ತು ರೈತಾಪಿ ಕೆಲಸ ಮಾಡುವ ಜನರನ್ನು ಒಂದುಗೂಡಿಸಿ ಅವರಲ್ಲಿ ಸಮುದಾಯ ಭಾವನೆಯನ್ನು ಮೂಡಿಸಿ ಅವರಿಗೆ ಓದು ಬರಹ ಕಲಿಸಲು ಸ್ಥಾಪಿತವಾದ ಸಂಸ್ಥೆ ಈ-'ಗ್ರೇಂಜ್'. ಈ ಸಂಸ್ಥೆಯಲ್ಲಿ ಮಹಿಳೆಯರಿಗೂ ಸಮಾನಸ್ಥಾನ ದೊರಕಿತ್ತು. ರೈತರ ಹಿತಾಸಕ್ತಿಗಳನ್ನು ರಕ್ಷಿಸುವ ಸಲುವಾಗಿ ಸಾರ್ವಜನಿಕರಲ್ಲಿ ರೈತಾಪಿ ಜೀವನದ ಬಗ್ಗೆ ತಿಳುವಳಿಕೆ ಮೂಡಿಸಲು ಈ ಸಂಸ್ಥೆ ಮೇಳಗಳನ್ನು. ಸಂತೋಷ ಕೂಟಗಳನ್ನು ಮತ್ತು ವಿಚಾರ ವಿನಿಮಯ ವೇದಿಕೆಗಳನ್ನು ಏರ್ಪಡಿಸುತ್ತಿತ್ತು. ವ್ಯವಸಾಯವನ್ನು ಕುರಿತ ಪುಸ್ತಕಗಳನ್ನು ನಿಯತಕಾಲ ಪತ್ರಿಕೆಗಳನ್ನು ಸಾರ್ವಜನಿಕರಿಗೆ ಹಂಚುತ್ತಿದ್ದರು.

೧೮೭೦ರ ದಶಕದಲ್ಲಿ ಆರ್ಥಿಕ ಮುಗ್ಗಟ್ಟು ಪ್ರಾರಂಭವಾಗಿ ಕೃಷಿ ಉತ್ಪನ್ನಗಳ ಬೆಲೆ ಕುಸಿದು ರೈತರ ಕಷ್ಟಕಾರ್ಪಣ್ಯಗಳು ಹೆಚ್ಚಿದಂತೆಲ್ಲ 'ಗ್ರೇಂಜ್' ರಾಜಕೀಯ ಚಟುವಟಿಕೆ

ಗಳಲ್ಲಿ ಸಕ್ರಿಯ ಪಾತ್ರ ವಹಿಸುತ್ತ ಹೋಯಿತು. ೧೮೭೪ರ ಹೊತ್ತಿಗೆ ಗ್ರೇಮ್ಜರ್‌ಗಳು (the grangers) ಸಾರಿಗೆ ದರಗಳನ್ನು, ಬಡ್ಡಿ ದರವನ್ನು ಕಡಿಮೆ ಮಾಡುವುದು, ಏಕಸ್ವಾಮ್ಯ ಉದ್ಯಮಗಳ ಮೇಲೆ ಸರ್ಕಾರದ ನಿಯಂತ್ರಣ – ಈ ಬೇಡಿಕೆಗಳನ್ನು ಅನುಮೋದಿಸಿ ಜಾರಿಗೆ ತಂದು ಫೆಡರಲ್ ಸರ್ಕಾರವನ್ನು ಒತ್ತಾಯಪಡಿಸಿದವು. ಗ್ರೇಂಜರರು ಮಧ್ಯ ಪಶ್ಚಿಮ ಪ್ರಾಂತಗಳಲ್ಲಿ ಪ್ರಬಲರಾಗಿದ್ದರು. ದಕ್ಷಿಣ ಸಂಸ್ಥಾನಗಳಲ್ಲಿ ಅವರು ಮಿತವಾದ ಯಶಸ್ಸುಗಳಿಸಿದ್ದರು. ಇಲಿನಾಯ್ ಸಂಸ್ಥಾನ ರೈಲುಸಾರಿಗೆ ಮತ್ತು ದಾಸ್ತಾನು ಮಳಿಗೆಗಳ ದರಗಳ ಪರಮಾವಧಿಯನ್ನು ನಿಗದಿ ಮಾಡಿದಾಗ (ಅಂದರೆ ದರಗಳು ಆ ಪರಮಾವಧಿ ಯನ್ನು ಮೀರದಂತೆ ತಡೆಯುವುದು) ಆ ಸಂಸ್ಥಾನದ ಉಚ್ಚ ನ್ಯಾಯಾಲಯ ಹಾಗೆ ದರ ನಿಗದಿ ಮಾಡುವುದು ರಾಜ್ಯಾಂಗಬಾಹಿರವಾದುದು (unconstitutional) ಎಂದು ನಿರ್ಣಯಿಸಿದಾಗ, ಗ್ರೇಂಜರು ಆ ತೀರ್ಪು ನೀಡಿದ ನ್ಯಾಯಾಧೀಶನನ್ನು ತೆಗೆದು ಹಾಕಿ ಹೊಸ ನ್ಯಾಯಾಧೀಶನನ್ನು ಅಧಿಕ ಮತಗಳಿಂದ ಆಯ್ಕೆ ಮಾಡುವಷ್ಟು ಬಲಯುತ ವಾಗಿದ್ದರು. ಗ್ರೇಂಜರು ಸ್ಥಾಪಿಸಿದ ಅತ್ಯಂತ ಚತುರ ವ್ಯವಸ್ಥೆ ಎಂದರೆ 'ಸಹಕಾರ ಸಂಘಗಳು'. ಇವು ಸಗಟು ವ್ಯಾಪಾರಿಗಳಿಂದ ಸರಕುಗಳನ್ನು ದೊಡ್ಡ ಪ್ರಮಾಣದಲ್ಲಿ ಕೊಂಡು ಸಹಕಾರ ಸಂಘಗಳ ಮೂಲಕ ಗ್ರೇಂಜ್ ಸದಸ್ಯರಿಗೆ ಕಡಿಮೆ ದರದಲ್ಲಿ ಮಾರುತ್ತಿದ್ದರು. ಆದರೆ ೧೮೭೦ರ ದಶಕದ ಕೊನೆಯಲ್ಲಿ ಈ ಗ್ರೇಮ್ಜರ್ ಆಂದೋಳನ ಅವನತಿಗೊಂಡಿತು.

೧೮೮೦ರ ದಶಕದ ಅಂತ್ಯದಲ್ಲಿ ರೈತರ ಅಸಂತುಷ್ಟಿ ಮತ್ತೆ ತಲೆ ಎತ್ತಿತು. ಇದರ ಪರಿಣಾಮವಾಗಿ ದಕ್ಷಿಣ ಹಾಗೂ ಬಯಲುಸೀಮೆಯ ರೈತರ ಸಂಘಟನೆ ಸ್ಥಾಪಿತವಾಯಿತು. ವಾಯುವ್ಯ ಪ್ರಾಂತಗಳ ರೈತರ ಸಂಘಟನೆ ಒಂದು ಪ್ರಬಲ ರಾಜಕೀಯ ಘಟಕವಾಗಿತ್ತು. ಬಯಲುಸೀಮೆಯ ರೈತರು ಇದರ ಪ್ರಭಾವಕ್ಕೆ ಒಳಗಾಗಿದ್ದರು. ದಕ್ಷಿಣ ಪ್ರಾಂತದ ರೈತರ ಸಂಘಟನೆಯ ಪ್ರಭಾವ ನೈರುತ್ಯ ಪ್ರಾಂತಗಳಿಗೆ ಹಬ್ಬಿ ೧೮೮೮ರ ಹೊತ್ತಿಗೆ ಆ ಸಂಘಟನೆಯ ಸದಸ್ಯತ್ವ ೫೦೦೦೦೦ಕ್ಕೆ ಮುಟ್ಟಿತ್ತು. ದಕ್ಷಿಣ ಸಂಸ್ಥಾನದ ರೈತರ ಸಂಘ 'ಕರಿಯ ರೈತರ ಕೂಟ'ದೊಡನೆ ಸಂಪರ್ಕ ಬೆಳೆಸಿತ್ತು.

ರೈತರ ಸಂಘಗಳು ಶಿಕ್ಷಣ ಮತ್ತು ಇತರ ಸಾಮಾಜಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರೂ ಅವುಗಳ ಆಸಕ್ತಿ ಆರ್ಥಿಕ ಮತ್ತು ರಾಜಕೀಯ ವಿಷಯಗಳ ಮೇಲೆ ಕೇಂದ್ರೀಕೃತವಾಗಿತ್ತು. ರೈತರ ಸಂಘಗಳ ಸಹಕಾರ ಸಂಘಗಳು ಧಾನ್ಯ ಮೇಲೆತ್ತುವ ಯಂತ್ರಗಳು (grain elevators) ಮಾರುಕಟ್ಟೆ ಸಂಸ್ಥೆಗಳು (market associations), ಚಿಲ್ಲರೆ ಅಂಗಡಿಗಳು ಮುಂತಾದುವುಗಳ ಮೂಲಕ ಪ್ರತಿವರ್ಷ ಮಿಲಿಯನ್‌ಗಟ್ಟಲೆ ವ್ಯವಹಾರ ನಡೆಸುತ್ತಿದ್ದವು. ರೈತ ಸಂಘಗಳ ರಾಜಕೀಯ ವೇದಿಕೆ, ಉದ್ಯಮಗಳಲ್ಲಿ ಏಕಸ್ವಾಮ್ಯತ್ವವನ್ನು ಮತ್ತು ಅಸಮಾನ ತೆರಿಗೆ ವ್ಯವಸ್ಥೆಯನ್ನು ವಿರೋಧಿಸಿತು. ಹೆಚ್ಚು ಹಣದ ಚಲಾವಣೆ, ಸುಂಕದ ದರ ಇಳಿಸುವುದು, ಸಾಲ ಸುಲಭವಾಗಿ ದೊರೆಯುವಂತೆ

ಮಾಡುವುದು ಮತ್ತು ರೈಲುಮಾರ್ಗಗಳ ರಾಷ್ಟ್ರೀಕರಣ – ಈ ಬೇಡಿಕೆಗಳನ್ನು ಅನುಮೋದಿಸಿ ಜಾರಿಗೆ ತರುವಂತೆ ಕರೆ ನೀಡಿತು.

ರೈತಸಂಘಗಳಲ್ಲಿ ಪರಸ್ಪರವಾಗಿ ಧ್ಯೇಯ ಧೋರಣೆಗಳಲ್ಲಿ ಒಪ್ಪಿಗೆ ಇದ್ದರೂ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವ ವಿಧಾನಗಳ ಬಗ್ಗೆ ಭಿನ್ನಾಭಿಪ್ರಾಯವಿತ್ತು. ವಾಯುವ್ಯ ಪ್ರಾಂತ ಸಂಘಗಳ ಸದಸ್ಯರು ರಿಪಬ್ಲಿಕನ್ ಮತ್ತು ಡೆಮೊಕ್ರಾಟಿಕ್ ಪಕ್ಷಗಳನ್ನು ವಿರೋಧಿಸಲು ಸ್ವತಂತ್ರವಾದ ಮೂರನೆಯ ರಾಜಕೀಯ ಪಕ್ಷವನ್ನು ರಚಿಸಬೇಕೆಂದು ಅಭಿಪ್ರಾಯಪಟ್ಟರು. ದಕ್ಷಿಣ ಪ್ರಾಂತಗಳ ಸಂಘಗಳು ಅದನ್ನು ವಿರೋಧಿಸಿದವು. ದಕ್ಷಿಣದಲ್ಲಿ ಪ್ರಬಲವಾಗಿದ್ದ ಡೆಮೊಕ್ರಾಟಿಕ್ ಪಕ್ಷದ ನಾಯಕತ್ವವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬೇಕೆಂಬುದು ಅವರ ಗುರಿಯಾಗಿತ್ತು. ಅದು ಅವರಿಗೆ ತರ್ಕಬದ್ಧವಾಗಿ ತೋರಿತು. ಬಿಳಿಯ ಮತ್ತು ಕರಿಯ ರೈತರನ್ನು ಕೂಡಿಸಿ ರಚಿತಗೊಳ್ಳುವ ಮೂರನೆಯ ಪಕ್ಷ ದಕ್ಷಿಣದ ರಾಜಕೀಯ ವ್ಯವಸ್ಥೆಯನ್ನು ಕೆಡಿಸುವುದೇ ಅಲ್ಲದೆ ಬಿಳಿಯರ ಶ್ರೇಷ್ಠತೆಯನ್ನು ನಾಶಗೊಳಿಸುತ್ತದೆ ಎಂಬ ಭಯ ಅವರನ್ನು ಕಾಡುತ್ತಿತ್ತು. ಹೀಗಿದ್ದರೂ ೧೮೯೦ರಲ್ಲಿ ಬಯಲುಸೀಮೆ ಪ್ರಾಂತಗಳಲ್ಲಿ ಮತ್ತು ಮಧ್ಯ ಪಶ್ಚಿಮ ಪ್ರಾಂತಗಳಲ್ಲಿ ಮೂರನೆಯ ರಾಜಕೀಯ ಪಕ್ಷಗಳು ಹುಟ್ಟಿಕೊಂಡವು. ೧೮೯೦ರ ಚುನಾವಣೆಯಲ್ಲಿ ರೈತಸಂಘದ ಅಭ್ಯರ್ಥಿಗಳು ಆಶ್ಚರ್ಯಕರವಾದ ರೀತಿಯಲ್ಲಿ ಜಯಶೀಲರಾದರು. ಬಯಲುಸೀಮೆಯ ಬಹಳಷ್ಟು ರಿಪಬ್ಲಿಕನ್ ಪಕ್ಷದವರು ರೈತರ ಪರವಾಗಿ ಮತ ನೀಡಿದ್ದರು. ದಕ್ಷಿಣ ಪ್ರಾಂತಗಳಲ್ಲಿ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಗಳು ರೈತ ಸಂಘಗಳ ಸಹಾಯದಿಂದ ಚುನಾಯಿತರಾಗಿದ್ದರು. ಈ ಚುನಾವಣೆಯಲ್ಲಿ ಯಶಸ್ಸು ಗಳಿಸಿದ್ದರೂ ರೈತರ ಆಂದೋಳನ ರಾಷ್ಟ್ರೀಯ ಮಟ್ಟದಲ್ಲಿ ವ್ಯವಸ್ಥೆಗೊಂಡಿರಲಿಲ್ಲ. 'ಜನತಾ ಪಕ್ಷದ' (Peoples Party) ಸಹಾಯದಿಂದ ಹಲವಾರು ಅಭ್ಯರ್ಥಿಗಳು ಚುನಾವಣೆಯಲ್ಲಿ ಗೆದ್ದಿದ್ದರು. ಈ 'ಜನತಾ ಪಕ್ಷ' ಪ್ರತಿಸಂಸ್ಥಾನದಲ್ಲಿ ಸ್ಥಾಪಿತಗೊಂಡ ಬೇರೆ ಬೇರೆ ಹೆಸರಿನ ಸ್ವತಂತ್ರ ಪಕ್ಷಗಳು ಕೂಡಿ ಆದ ಹೆಚ್ಚಿನ ಒಗ್ಗಟ್ಟಿಲ್ಲದ ಒಂದು 'ಮಿಶ್ರಣ ಪಕ್ಷ' (coalition)ವಾಗಿತ್ತು. ಸಕಲ ಸ್ವತಂತ್ರ ಪಕ್ಷಗಳನ್ನು ಒಂದುಗೂಡಿಸಿ ರಾಷ್ಟ್ರೀಯ ಜನತಾಪಕ್ಷವನ್ನು ರಚಿಸುವ ಪ್ರಯತ್ನ ಸಫಲವಾಗಲಿಲ್ಲ. ಇದಕ್ಕೆ ಕಾರಣ ದಕ್ಷಿಣ ಸಂಸ್ಥಾನಗಳ ರೈತರು ಡೆಮೊಕ್ರಾಟಿಕ್ ಪಕ್ಷದೊಡನೆ ಸೇರಿಕೊಂಡಿದ್ದು. ಹದಗೆಡುತ್ತ ಹೋಗುತ್ತಿದ್ದ ಆರ್ಥಿಕ ಪರಿಸ್ಥಿತಿ ರೈತರಲ್ಲಿ ಒಗ್ಗಟ್ಟನ್ನು ಮೂಡಿಸಿ ತೀವ್ರಗಾಮಿಗಳಾಗಿ ವರ್ತಿಸುವಂತೆ ಪ್ರೇರೇಪಿಸಿತು. ೧೮೯೨ರಲ್ಲಿ ರೈತರು ತಮ್ಮ ತೀವ್ರಗಾಮಿ ಮನೋಭಾವವನ್ನು ಪ್ರತಿನಿಧಿಸುವ ಪಕ್ಷವನ್ನು ಸ್ಥಾಪಿಸಿದರು. ಇದೇ 'ಪಾಪ್ಯುಲಿಸ್ಟ್ ಪಕ್ಷ' (Populist Party). ಈ ಪಕ್ಷ ನೆಬ್ರಾಸ್ಕ ಸಂಸ್ಥಾನದ ಓಮಾಹದಲ್ಲಿ ಸಭೆ ಸೇರಿ ಮಾಜಿ ಫೆಡರಲ್ ಸೈನ್ಯದ ಜನರಲ್ ಆಗಿದ್ದ ಜೇಮ್ಸ್ ವ್ಹೀವರ್ (james Weaver)ನನ್ನು ಪಕ್ಷದ ಅಧ್ಯಕ್ಷನಾನ್ನಾಗಿ ಆಯ್ಕೆ ಮಾಡಿತು. ವ್ಹೀವರ್ ಅಯೋವಾ (Iowa) ಸಂಸ್ಥಾನದವನು. ಈ ಪಕ್ಷದ ವಿಚಾರವೇದಿಕೆಯನ್ನು ಸೃಷ್ಟಿಸಿದವನು

ಇಗ್ನೇಷಿಯಸ್ ಡಾನೆಲ್ಲಿ (Ignatius Donnelly). ಈತ ಪ್ರತಿಭಾವಂತ ಮತ್ತು ನಿರ್ದಾಕ್ಷಿಣ್ಯವುಳ್ಳ ಪತ್ರಿಕಾಕರ್ತನಾಗಿದ್ದನು. ಪಾಪ್ಯುಲಿಸ್ಟ್ ಪಕ್ಷದ ಸದಸ್ಯರು ತಮ್ಮ ವಿಚಾರವೇದಿಕೆಯಿಂದ 'ಅಮೆರಿಕ ನೈತಿಕ, ರಾಜಕೀಯ ಮತ್ತು ಆರ್ಥಿಕ ಅವ್ಯವಸ್ಥೆಯ ತುತ್ತತುದಿಯನ್ನು ಮುಟ್ಟಿ ಅಧಃಪತನದ ಅಂಚಿನಲ್ಲಿ ನಿಂತಿದೆ. ಸಮಗ್ರವಾದ ತೀವ್ರತರ ಬದಲಾವಣೆಯಿಂದ ಮಾತ್ರ ಅದನ್ನು ತಡೆಯಲು ಸಾಧ್ಯ' ಎಂದು ಘೋಷಿಸಿದರು.

ರಿಪಬ್ಲಿಕನ್ ಮತ್ತು ಡೆಮೊಕ್ರಾಟಿಕ್ ಪಕ್ಷಗಳು ದುರಾಸೆ, ಭ್ರಷ್ಟಾಚಾರ ಮತ್ತು ಹಣದ ಮದದಿಂದ ಕೂಡಿವೆ ಎಂದು ಟೀಕಿಸಿ ತಮ್ಮ ಪಾಪ್ಯುಲಿಸ್ಟ್ ಪಕ್ಷದ ವೇದಿಕೆ ಅವಶ್ಯಕವಾದ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದು ರೈತರ ಮತ್ತು ಕಾರ್ಮಿಕರ ಅಭ್ಯುದಯವನ್ನು ಸಾಧಿಸುತ್ತದೆ ಎಂದು ಭರವಸೆ ನೀಡಿದರು. ಈ ಪಕ್ಷ ಸೂಚಿಸಿದ ಆರ್ಥಿಕ ಸುಧಾರಣೆಗಳು – ಹೆಚ್ಚು ಹಣದ ಚಲಾವಣೆ, ಬೆಳ್ಳಿಯ ಅಥವಾ ಕಾಗದದ ಹಣದ ನಿಯಂತ್ರಣ ಖಾಸಗಿ ಬ್ಯಾಂಕುಗಳ ಬದಲಾಗಿ ಫೆಡರಲ್ ಸರ್ಕಾರ ವಹಿಸಿಕೊಳ್ಳು ವುದು, ಅಮೆರಿಕನ್ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸಲು ವಲಸೆಗಾರರ ಸಂಖ್ಯೆಯನ್ನು ಹಿಡಿತದಲ್ಲಿಡುವುದು, ದೂರವಾಣಿ ಮತ್ತು ತಂತಿ ವ್ಯವಸ್ಥೆ ಹಾಗೂ ರೈಲುಮಾರ್ಗಗಳನ್ನು ರಾಷ್ಟ್ರೀಕರಣಗೊಳಿಸುವುದು, ಆದಾಯ ತೆರಿಗೆಯನ್ನು ವರ್ಗೀಕರಣಗೊಳಿಸುವುದು (graduation of income tax); ಕೊನೆಯದಾಗಿ ಕಾರ್ಮಿಕರ ಕೆಲಸದ ಅವಧಿಯನ್ನು ಕಡಿಮೆ ಮಾಡುವುದು – ಇವುಗಳ ಜೊತೆಯಲ್ಲೇ ರಾಜಕೀಯ ಸುಧಾರಣೆಗಳನ್ನೂ ವಿಶದ ಪಡಿಸಿದರು. ಅವು – ಭ್ರಷ್ಟಾಚಾರ ನಿರ್ಮೂಲನ, ಸರ್ಕಾರವನ್ನು ಹೆಚ್ಚು ಪ್ರಜಾರಾಜ್ಯ ವನ್ನಾಗಿ ಮಾಡುವುದಕ್ಕಾಗಿ ಗುಪ್ತ ಮತದಾನವನ್ನು ಎಲ್ಲ ಚುನಾವಣೆಗಳಲ್ಲಿ ಜಾರಿಗೆ ತರುವುದು, ಸರ್ಕಾರಿ ಅಧಿಕಾರಿಗಳು ಸಾರ್ವಜನಿಕರನ್ನು ಹೆಚ್ಚು ಜವಾಬ್ದಾರಿಯಿಂದ ನೋಡಿ ಕೊಳ್ಳುವಂತೆ ಮಾಡುವುದು, ಸೆನೆಟರ್‌ಗಳನ್ನು ನೇರವಾಗಿ ಚುನಾಯಿಸುವುದು ಮತ್ತು ಅಧ್ಯಕ್ಷಸ್ಥಾನವನ್ನು ಒಂದೇ ಅವಧಿಗೆ ಸೀಮಿತಗೊಳಿಸುವುದು – ಈ ರಾಜಕೀಯ ಬದಲಾವಣೆಗಳಿಂದ ರಾಷ್ಟ್ರವನ್ನು ಬಲಿಷ್ಠಗೊಳಿಸಬಹುದೆಂದು ಅವರು ನಂಬಿದ್ದರು.

ಪಾಪ್ಯುಲಿಸ್ಟ್ ಪಕ್ಷದ ಧೋರಣೆಗಳು ಸಂಪ್ರದಾಯಸ್ಥರಿಗೆ ಮತ್ತು ಮಧ್ಯಮ ಮಾರ್ಗಿಗಳಿಗೆ ತೀವ್ರಗಾಮಿ ಯೋಜನೆಗಳಾಗಿ ತೋರಿದವು. ಅವರಿಗೆ ಹೆಚ್ಚಿನ ಭಯ ಹುಟ್ಟಿಸಿದ್ದು ಜನರ ಯೋಗಕ್ಷೇಮವನ್ನು ಸರ್ಕಾರ ವಹಿಸಿಕೊಳ್ಳಬೇಕೆಂಬ ಧೋರಣೆ. ಎಲ್ಲ ಬಡಜನರನ್ನು ತುಳಿದು ಶೋಷಣೆ ಮಾಡುತ್ತಿರುವವರು ಒಂದೇ ವರ್ಗದ ಜನ – ಶ್ರೀಮಂತರು. ಆದ್ದರಿಂದ ಪಾಪ್ಯುಲಿಸ್ಟ್ ಪಕ್ಷದವರು ರೈತರು ಮಾತ್ರವಲ್ಲದೆ ಕೈಗಾರಿಕೆ ಮತ್ತು ಉದ್ದಿಮೆಗಳಲ್ಲಿ ದುಡಿಯುತ್ತಿರುವ ಎಲ್ಲ ಕಾರ್ಮಿಕರು ಒಟ್ಟಾಗಿ ರೈತ-ಕಾರ್ಮಿಕ ಒಕ್ಕೂಟ ರಚಿಸಲು ಕರೆಕೊಟ್ಟರು. ದಕ್ಷಿಣ ಸಂಸ್ಥಾನಗಳಲ್ಲಿ ಕೆಲವು ಪಾಪ್ಯುಲಿಸ್ಟರು ಬಿಳಿಯ ಮತ್ತು ಕರಿಯ ರೈತರ ನಡುವೆ ಸೌಹಾರ್ದತೆ ಏರ್ಪಡಿಸಲು ಪ್ರಯತ್ನಿಸಿ ವಿಫಲರಾದರು.

ಅಮೆರಿಕದ ಅಂತರ್ಯುದ್ಧದ ನಂತರ ನಡೆದ ಚುನಾವಣೆಗಳಲ್ಲಿ ಮೂರನೆಯ ರಾಜಕೀಯ ಪಕ್ಷ (ಪಾಪ್ಯುಲಿಸ್ಟ್ ಪಕ್ಷ) ಭಾಗವಹಿಸಿದ್ದು ಇದೇ ಮೊದಲು. ಈ ಪಕ್ಷದ ಅಧ್ಯಕ್ಷ ಪದವಿಯ ಅಭ್ಯರ್ಥಿ ಜೇಮ್ಸ್ ವ್ಹೀವರ್ ೧೮೯೨ರ ಚುನಾವಣೆಯಲ್ಲಿ ಜನ ಸಾಮಾನ್ಯರ ಹೆಚ್ಚಿನ ಮತಗಳನ್ನು (ಒಂದು ಮಿಲಿಯನ್) ಪಡೆದುದೆ ಅಲ್ಲದೆ ಎಲೆಕ್ಟರಲ್ ಕಾಲೇಜಿನಲ್ಲಿ ಅನೇಕ ಮತಗಳನ್ನು ಗಳಿಸಿ ಎಲ್ಲರನ್ನೂ ಚಕಿತಗೊಳಿಸಿದನು. ಕೆಲವು ಪಾಪ್ಯುಲಿಸ್ಟ್ ಕಾಂಗ್ರೆಸ್ ಸದಸ್ಯರು ಮತ್ತು ಸೆನೆಟರ್‌ಗಳು ಚುನಾವಣೆಯಲ್ಲಿ ಗೆದ್ದರು. ಆದರೂ ಪಕ್ಷದ ಬಲ ವೃದ್ಧಿಸಲಿಲ್ಲ. ದಕ್ಷಿಣ ಪ್ರಾಂತದ ಪಾಪ್ಯುಲಿಸ್ಟ್ ಸದಸ್ಯರು ಡೆಮೊಕ್ರಾಟಿಕ್ ಪಕ್ಷದ ಮೂಲಕ ತಮ್ಮ ರಾಜಕೀಯ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಕಾರ್ಮಿಕರು ಮತ್ತು ಮಧ್ಯಮವರ್ಗದವರು ಈ ಪಕ್ಷವನ್ನು ಬೆಂಬಲಿಸಲಿಲ್ಲ. ಆದ್ದರಿಂದ ಈ ಪಕ್ಷ ಊರ್ಜಿತಗೊಳ್ಳಲಿಲ್ಲ.[೪]

ಕೆಲವು ಇತಿಹಾಸಕಾರರು ಪಾಪ್ಯುಲಿಸ್ಟರ ಆಂದೋಳನ ನಿಜಕ್ಕೂ ಜನಸಾಮಾನ್ಯರ ಪ್ರಗತಿಶೀಲ ಚಳುವಳಿ. ಇದು ಅಸಮಾನತೆ ಮತ್ತು ಅನ್ಯಾಯಗಳನ್ನು ಪರಿಹರಿಸಲು ಮಾಡಿದ ಗಂಭೀರ ಪ್ರಯತ್ನ ಎಂದು ವಾದಿಸಿದ್ದಾರೆ. ಮತ್ತೆ ಕೆಲವರು ಈ ಪಕ್ಷ ನಿಜಕ್ಕೂ ಒಂದು ಸಂಪ್ರದಾಯಸ್ಥ ಆಂದೋಳನ. ಇದು ಹಿಂದೋಳನ (retrogressional) ಚಳುವಳಿ. ಔದ್ಯೋಗೀಕರಣದ ಪರಿಣಾಮವಾಗಿ ಸಮಾಜದಲ್ಲಿ ಉಂಟಾದ ಅವ್ಯವಸ್ಥೆಯನ್ನು ಸರಿಪಡಿಸುವ ಪ್ರಯತ್ನವೆಂದು ವಾದಿಸಿದರು. ರಾಷ್ಟ್ರದ ದುಃಸ್ಥಿತಿಗೆ ಯಹೂದ್ಯರು, ಕರಿಯರು ಮತ್ತು ವಲಸೆಗಾರರು ಕಾರಣವೆಂದು ಪ್ರತಿಪಾದಿಸಿದರು. ಬಹುತೇಕ ಪಾಪ್ಯುಲಿಸ್ಟರಿಗೆ ವರ್ಣಸಮಾನತೆಯ ಬಗ್ಗೆ ನಂಬಿಕೆ ಇರಲಿಲ್ಲ.

೧೮೯೨ರ ಚುನಾವಣೆ

ಅಧ್ಯಕ್ಷ ಕ್ಲೀವ್‌ಲ್ಯಾಂಡ್‌ನ ನಾಲ್ಕು ವರ್ಷದ ಅವಧಿ ಮುಗಿದಿದ್ದರೂ ಕೂಡ ಡೆಮೊಕ್ರಾಟಿಕ್ ಪಕ್ಷ ಪುನಃ ಅವನನ್ನು ಅಧ್ಯಕ್ಷಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮಕರಣ ಮಾಡಿತು. ಅವನಿಗೆ ಪ್ರತಿಸ್ಪರ್ಧಿಯಾಗಿದ್ದವನು ಬೆಂಜಮಿನ್ ಹ್ಯಾರಿಸನ್. ಕ್ಲೀವ್‌ಲ್ಯಾಂಡ್‌ನ ಜನಪ್ರಿಯತೆ ನಾಲ್ಕು ವರ್ಷಗಳ ಅವಧಿಯಲ್ಲಿ ಹೆಚ್ಚಾಯಿತು. ಆದರೆ ಹ್ಯಾರಿಸನ್ ಕಾರ್ಮಿಕರನ್ನೂ ಮತ್ತೆ ಪಶ್ಚಿಮ ಪ್ರಾಂತಗಳ ರಿಪಬ್ಲಿಕನ್ನರನ್ನೂ ಎದುರುಹಾಕಿಕೊಂಡಿದ್ದನು. ಬೆಳ್ಳಿ ನಾಣ್ಯಗಳ ಚಲಾವಣೆಯನ್ನು ಹೆಚ್ಚಿಸಲು ನಿರಾಕರಿಸಿ ಹ್ಯಾರಿಸನ್ ಅವರ ಕೋಪಕ್ಕೆ ತುತ್ತಾಗಿದ್ದನು. ಚುನಾವಣೆಯಲ್ಲಿ ಯಾವ ಪಕ್ಷವೂ ಧ್ಯೇಯ ಧೋರಣೆಗಳನ್ನು ಕುರಿತು ತಮ್ಮ ಪ್ರಚಾರದಲ್ಲಿ ವಿಶದಪಡಿಸಲಿಲ್ಲ. ಬೆಳ್ಳಿ ನಾಣ್ಯ ಚಲಾವಣೆ ವಿಷಯ ಯಾರೂ

೪. ಅಮೆರಿಕದ 'ದ್ವಿಪಕ್ಷ' (Two party Politics) ಕುರಿತ ಒಂದು 'ಅಮೆರಿಕನ್ನಡ ಗಾದೆ' ಹೀಗಿದೆ : 'ಅಮೆರಿಕದಲ್ಲಿ ಆನೆಗೊಂದು ಕಾಲ, ಕತ್ತೆಗೊಂದು ಕಾಲ; ಜನ ಹಿಡಿಯಲೆಬೇಕು ಒಂದಲ್ಲ ಒಂದರ ಬಾಲ!'

ಎತ್ತಲಿಲ್ಲ. 'ಮೆಕಿನ್ಲೆ ಸುಂಕ'ದ ದರ ಏರಿಕೆ ಬಗ್ಗೆ ಮಾತ್ರ ಚರ್ಚೆ ನಡೆಯಿತು. ಹ್ಯಾರಿಸನ್ ಮತ್ತು ರಿಪಬ್ಲಿಕನ್ನರು ಉದ್ಯೋಗ ವರ್ಗ ಮತ್ತು ಕಾರ್ಮಿಕ ವರ್ಗಗಳ ಬೆಂಬಲ ಕಳೆದುಕೊಂಡ ಕಾರಣದಿಂದ ಚುನಾವಣೆಯಲ್ಲಿ ಭಾರಿ ಸೋಲನ್ನು ಅನುಭವಿಸಿದರು. ಎಲೆಕ್ಟರಲ್ ಕಾಲೇಜಿನ ೨೭೧ ಮತಗಳು ಕ್ಲೀವ್‌ಲ್ಯಾಂಡ್‌ನಿಗೆ ಮತ್ತು ಕೇವಲ ೧೪೫ ಮತಗಳು ಹ್ಯಾರಿಸನ್‌ಗೆ ದೊರಕಿದ್ದವು.

ಅಧ್ಯಕ್ಷ ಕ್ಲೀವ್‌ಲ್ಯಾಂಡ್‌ನು ಎರಡನೆಯ ಬಾರಿ ಅಧಿಕಾರ ವಹಿಸಿಕೊಂಡ ಕೆಲವು ತಿಂಗಳಲ್ಲಿಯೇ ಸಾರ್ವಜನಿಕರಲ್ಲಿ ಸುಪ್ತವಾಗಿದ್ದ ಆರ್ಥಿಕ ಅಸ್ಥಿರತೆ ಮತ್ತು ಅಸ್ಪಷ್ಟವಾದ ಶಂಕೆ ಗಾಬರಿಯಾಗಿ ಪರಿಣಮಿಸಿತು. ಈ ಪರಿಸ್ಥಿತಿಯಲ್ಲಿ ಡೆಮೊಕ್ರಾಟಿಕ್ ಮಿಶ್ರಣ ಪಕ್ಷದಲ್ಲಿ ಒಗ್ಗಟ್ಟು ಕಡಿಮೆಯಾಗಿ ಪಕ್ಷ ಒಡೆದುಹೋಗುವ ಸಂಭವ ಉಂಟಾಯಿತು. ೧೮೯೩ರ ಬೇಸಿಗೆಯಲ್ಲಿ ರೈಲುಮಾರ್ಗಗಳು ಒಂದಾದ ಮೇಲೊಂದರಂತೆ ದಿವಾಳಿ ಏಳತೊಡಗಿದವು. ೧೮೯೪ರ ಅಂತ್ಯದಲ್ಲಿ ೧೬೦ ರೈಲುಮಾರ್ಗಗಳು, ಹತ್ತಾರು ಸಾವಿರ ಉದ್ಯಮಗಳು ಮತ್ತು ಲೆಕ್ಕವಿಲ್ಲದಷ್ಟು ಬ್ಯಾಂಕ್‌ಗಳು ಕುಸಿದುಬಿದ್ದವು. ೧೮೯೩ರ ಆರ್ಥಿಕ ಅಸ್ಥಿರತೆ ಜನರನ್ನು ತೀವ್ರ ಗಾಬರಿಗೊಳಿಸಿ ರಾಷ್ಟ್ರ ಹಿಂದೆಂದೂ ಅನುಭವಿಸದಿದ್ದಂಥ ಆರ್ಥಿಕ ಮುಗ್ಗಟ್ಟಿನಲ್ಲಿ ಸಿಕ್ಕಿಕೊಂಡಿತು. ಈ ದುಃಸ್ಥಿತಿಯ ಪರಿಣಾಮಗಳು ೧೮೯೭ರವರೆಗೂ ಮುಂದುವರಿದವು. ಈ ಮುಗ್ಗಟ್ಟಿಗೆ ಕಾರಣಗಳು ಹಲವಾರು. ಅವು ಸುಲಭವಾಗಿ ಪರಿಹರಿಸಲಾಗದಂಥ ಸಂಕೀರ್ಣ ಕಾರಣಗಳು. ೧೮೯೦ರ ದಶಕದಲ್ಲಿ ಯೂರೋಪ್ ಮತ್ತು ಆಸ್ಟ್ರೇಲಿಯಾಗಳ ಆರ್ಥಿಕ ಮುಗ್ಗಟ್ಟು ಅಮೆರಿಕದ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಅಪಾರ ಧಕ್ಕೆ ಉಂಟುಮಾಡಿತು. ಶರ್‌ಮನ್ ಬೆಳ್ಳಿ ಖರೀದಿಸುವ ಕಾಯಿದೆ (The Sherman Silver Purchase Act) ಹೊರದೇಶದ ಬಂಡವಾಳ ಹೂಡುವವರನ್ನು ಗೊಂದಲಕ್ಕೀಡುಮಾಡಿ ಅವರಲ್ಲಿ ಬಹುತೇಕ ಸಟ್ಟಾ ವ್ಯಾಪಾರಸ್ಥರು ತಮ್ಮ ಷೇರುಗಳನ್ನು ಮಾರಲು ಪ್ರಾರಂಭಿಸಿದರು. ವ್ಯವಸಾಯ ಕ್ಷೇತ್ರದಲ್ಲಿ ಉತ್ಪನ್ನ ಕ್ಷೀಣಿಸುತ್ತ ಹೋಯಿತು. ಇದರಿಂದಾಗಿ ರೈತರ ಕೊಳ್ಳುವ ಶಕ್ತಿ ಕಡಿಮೆಯಾಯಿತು. ರೈಲ್ವೆ ಕಂಪನಿಗಳ ಅಸ್ಥಿರತೆ ಆರ್ಥಿಕ ಅವ್ಯವಸ್ಥೆಯನ್ನು ಅಧಿಕಗೊಳಿಸಿತು. ಕಾರ್ಮಿಕರ ಮುಷ್ಕರ ಸರಣಿ ಉತ್ಪಾದನೆಯನ್ನು ಸ್ಥಗಿತಗೊಳಿಸಿ ಸಾರ್ವಜನಿಕರು ಆರ್ಥಿಕ ವ್ಯವಸ್ಥೆಯ ಮೇಲೆ ಇಟ್ಟಿದ್ದ ಭರವಸೆ ಕುಸಿಯಿತು.

ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಕಾರ್ಮಿಕ ವರ್ಗದಲ್ಲಿ ಶೇಕಡಾ ೨೫ ಭಾಗ ಕಾರ್ಮಿಕರು ನಿರುದ್ಯೋಗಿಗಳಾಗಿದ್ದರು. ಇವರ ಕಷ್ಟ ನಿವಾರಿಸಲು ಅನೇಕ ಪ್ರಯತ್ನಗಳನ್ನು ಮಾಡಲಾಯಿತು. ಆದರೆ ಖಾಸಗಿ ಸೇವಾ ಸಂಸ್ಥೆಗಳು ನೀಡುತ್ತಿದ್ದ ಪರಿಹಾರ ಅಸಮರ್ಪಕ ವಾಗಿತ್ತು. ಯಾವ ಕಡೆಯಿಂದಲೂ ಸಹಾಯ ದೊರೆಯದೆ ಹೋಗಿ ಕೆಲಸ ಕಳೆದು ಕೊಂಡವರು ಕೂಡಿ 'ನಿರುದ್ಯೋಗಿಗಳ ಸೇನೆ'ಗಳನ್ನು ಸ್ಥಾಪಿಸಿಕೊಂಡರು. ಈ ಸೇನೆಗಳ ಧ್ಯೇಯ ಪರಸ್ಪರ ಸಹಾಯ ಮತ್ತು ನಿರುದ್ಯೋಗಿಗಳಿಗೆ ಕೆಲಸ ಹುಡುಕುವುದರಲ್ಲಿ ನೆರವು

ನೀಡುವುದು. ಕೆಲವು ಸಂದರ್ಭಗಳಲ್ಲಿ ಈ ಸೇನೆಗಳು ಭಿಕ್ಷೆ ಬೇಡಿ ಸಂಗ್ರಹಿಸಿದ ಆಹಾರ ಪದಾರ್ಥಗಳನ್ನು ತಮ್ಮೊಳಗೆ ಹಂಚಿಕೊಳ್ಳುತ್ತಿದ್ದರು. ಈ ನಿರುದ್ಯೋಗಿ ಸೇನೆಗಳ ಚಟುವಟಿಕೆಗಳು 'ಕಾಕ್ಸೀಸನ ಸೇನೆ' (Coxey's Army) ಅಸ್ತಿತ್ವದಲ್ಲಿ ಪರ್ಯವಸಾನ ಗೊಂಡವು.

ಜೇಕಬ್ ಕಾಕ್ಸೀ (Jacob Coxey) ಒಬ್ಬ ಶ್ರೀಮಂತ. ಈತ ಕಾರ್ಮಿಕನಾಗಿ ದುಡಿದು ಹಣಗಳಿಸಿ ಶ್ರೀಮಂತನಾದವನು. ಅವನು ಒಂದು ಯೋಜನೆಯನ್ನು ತಯಾರಿಸಿ ಅದನ್ನು ಜಾರಿಗೆ ತರಬೇಕೆಂದು ಫೆಡರಲ್ ಸರ್ಕಾರಕ್ಕೆ ಮನವಿ ಮಾಡಿಕೊಂಡನು. ಆ ಯೋಜನೆಯ ಪ್ರಕಾರ ರಸ್ತೆ ನಿರ್ಮಾಣಕ್ಕಾಗಿ ಸರ್ಕಾರ ೫೦೦ ಮಿಲಿಯನ್ ಡಾಲರುಗಳನ್ನು ಕೊಡ ಬೇಕಾಗಿತ್ತು. ಸರ್ಕಾರ ಇದಕ್ಕೆ ಹಣ ನೀಡಿದರೆ ನಿರುದ್ಯೋಗವನ್ನು ಕಡಿಮೆಮಾಡಬಹುದು ಎಂದು ಅವನು ನಿರೀಕ್ಷಿಸಿದ್ದನು. ಆದರೆ ಕಾಂಗ್ರೆಸ್ ಅವನ ಯೋಜನೆಯ ಬಗ್ಗೆ ಆಸಕ್ತಿ ತೋರಲಿಲ್ಲ. ಇದರಿಂದ ಕೆರಳಿದ ಕಾಕ್ಸೀ ನಿರುದ್ಯೋಗಿಗಳ ಸೇನೆಯನ್ನು ವಾಷಿಂಗ್‌ಟನ್‌ಗೆ ಕಳುಹಿಸುವ ನಿರ್ಧಾರ ಮಾಡಿದನು. ೧೮೯೪ರ ವಸಂತಕಾಲದಲ್ಲಿ ಒಂದು ನೂರು ನಿರುದ್ಯೋಗಿಗಳು ಒಹಾಯೊ ಪ್ರಾಂತದಿಂದ ಪಾದಯಾತ್ರೆ ಪ್ರಾರಂಭಿಸಿದರು. ಈ ಗುಂಪು ವಾಷಿಂಗ್‌ಟನ್ ತಲುಪುವುದರಲ್ಲಿ ಪಾದಯಾತ್ರಿಗಳ ಸಂಖ್ಯೆ ೫೦೦ಕ್ಕೆ ಏರಿತ್ತು. ಇವರು ವಾಷಿಂಗ್‌ಟನ್ ಪ್ರವೇಶಿಸಿದೊಡನೆ ಫೆಡರಲ್ ಸೈನಿಕರು ಮತ್ತು ಪೊಲೀಸರು ಅವರನ್ನು ಸೆರೆಹಿಡಿದು ಉಳಿದವರನ್ನು ಚದುರಿಸಿದರು. ಹೀಗೆ ಅವರ ಪಾದಯಾತ್ರೆ ಜನರ ಅಪಹಾಸ್ಯಕ್ಕೊಳಗಾಯಿತು. ವಿಪರ್ಯಾಸವೆಂದರೆ ಅಪಹಾಸ್ಯಕ್ಕೊಳಗಾಗಿದ್ದ ಇದೇ ಯೋಜನೆಯನ್ನು ನಲವತ್ತು ವರ್ಷಗಳ ಮೇಲೆ ಮತ್ತೊಂದು ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ಫೆಡರಲ್ ಸರ್ಕಾರ ಜಾರಿಗೆ ತಂದಿತು.

'ಶರ್‌ಮನ್ ಬೆಳ್ಳಿ ಖರೀದಿಸುವ ಕಾಯಿದೆ' ಆರ್ಥಿಕ ಮುಗ್ಗಟ್ಟಿಗೆ ಕಾರಣವೆಂದು ಅಧ್ಯಕ್ಷ ಕ್ಲೀವ್‌ಲ್ಯಾಂಡ್‌ನು ಶರ್‌ಮನ್ ಕಾಯಿದೆಯನ್ನು ರದ್ದುಗೊಳಿಸುವಂತೆ ಕಾಂಗ್ರೆಸ್ಸಿಗೆ ಕರೆ ನೀಡಿದನು. ಕ್ಲೀವ್‌ಲ್ಯಾಂಡ್‌ನ ಅಭಿಪ್ರಾಯದಲ್ಲಿ ಬೆಳ್ಳಿಯನ್ನು ಕೊಳ್ಳಲು ಫೆಡರಲ್ ಸರ್ಕಾರ ಚಿನ್ನದ ಸಂಗ್ರಹದಿಂದ ಚಿನ್ನವನ್ನು ಉಪಯೋಗಿಸಿದ್ದರಿಂದ ಸರ್ಕಾರದ ಚಿನ್ನದ ಸಂಗ್ರಹ ಕ್ಷೀಣಿಸುತ್ತ ಹೋಗಿ ಆರ್ಥಿಕ ಅವ್ಯವಸ್ಥೆಗೆ ಕಾರಣವಾಯಿತು. ಕ್ಲೀವ್‌ಲ್ಯಾಂಡ್ ಮಂಡಿಸಿದ ಮಸೂದೆಯನ್ನು ಡೆಮೊಕ್ರಾಟಿಕ್ ಪಕ್ಷದ ಬೆಳ್ಳಿಯ ಬೆಂಬಲಿಗರು ತೀವ್ರವಾಗಿ ವಿರೋಧಿಸಿದರು. ಆದರೆ ಅಂತಿಮವಾಗಿ ಕ್ಲೀವ್‌ಲ್ಯಾಂಡ್ ಜಯಗಳಿಸಿದನು. ಇದರಿಂದ ಪಕ್ಷದಲ್ಲಿ ಒಡಕು ಉಂಟಾಯಿತು.

ನಂತರ ಅಧ್ಯಕ್ಷ ಕ್ಲೀವ್‌ಲ್ಯಾಂಡ್‌ನು ಸುಂಕದ ದರವನ್ನು ಇಳಿಸಲು ಕಾಂಗ್ರೆಸ್ಸಿನ ಒಪ್ಪಿಗೆ ಕೇಳಿದನು. ಜಾರಿಯಲ್ಲಿದ್ದ ಮೆಕಿನ್ಲೆ ಸುಂಕದ ದರ ವಿಪರೀತ ಹೆಚ್ಚಾದುದರಿಂದ ಹೊರದೇಶದ ಸರಕು ಸಾಮಗ್ರಿಗಳು ಬರುವುದು ಕಡಿಮೆಯಾಗಿ ಸುಂಕದ ಆದಾಯದಲ್ಲಿ

ಭಾರಿ ಖೋತ ಉಂಟಾಗಿತ್ತು. ಇವುಗಳ ಜೊತೆಗೆ ಸೈನಿಕರ ನಿವೃತ್ತಿವೇತನವನ್ನು ಹೆಚ್ಚಿಸಿದ್ದು ಸೇರಿ ೧೮೮೪ರ ಹೊತ್ತಿಗೆ ಫೆಡರಲ್ ಸರ್ಕಾರದ ಖಜಾನೆಯಿಂದ ೬೦ ಮಿಲಿಯನ್ ಡಾಲರ್ ಖೋತವಾಗಿತ್ತು. ಕಡೆಯಲ್ಲಿ ವಿಲ್ಸನ್ ಮತ್ತು ಗೋರ್‌ಮನ್ ಸುಂಕ ಜಾರಿಗೆ ಬಂತು. ಆದರೆ ಅದು ಸುಂಕದ ದರದಲ್ಲಿ ಕೇವಲ ಶೇಕಡಾ ೮ರಷ್ಟು ಕಡಿಮೆ ಮಾಡಿತು.

ಬಂಗಾರವೊ? ಬೆಳ್ಳಿಯೊ? ಅಥವಾ ಬರಿ ಕಾಗದದ ಹಣವೊ?

೧೮೯೦ರ ದಶಕದ ಅತ್ಯಂತ ವಾಗ್ವಾದಕ್ಕೊಳಗಾದ ವಿಷಯವೆಂದರೆ ಬೆಳ್ಳಿ ನಾಣ್ಯ ಚಲಾವಣೆಯನ್ನು ಕುರಿತಾದದ್ದು. ಈ ವಾಗ್ವಾದಕ್ಕೆ ಎಡೆಮಾಡಿಕೊಟ್ಟ ಹಣಕಾಸಿನ ತಾತ್ವಿಕ ಭಿನ್ನಾಭಿಪ್ರಾಯಗಳು ಇಂದಿಗೂ ಬಗೆಹರಿದಿಲ್ಲ. ಬಂಗಾರ ಅಂತರರಾಷ್ಟ್ರೀಯ ಹಣದ ಅಳತೆಗೋಲಾಗಿರುವುದರಿಂದ ಚಲಾವಣೆಯಲ್ಲಿರುವ ಹಣದ ಮೊತ್ತ ರಾಷ್ಟ್ರದ ಚಿನ್ನ ಸಂಗ್ರಹ ಪ್ರಮಾಣಕ್ಕೆ ಲಗತ್ತಾಗಿರಬೇಕೆಂದು ಸಂಪ್ರದಾಯಸ್ಥರು ವಾದಿಸಿದರು. ಚಲಾವಣೆಯಲ್ಲಿರುವ ಹಣಕ್ಕೆ ಚಿನ್ನದ ಬೆಂಬಲವಿದ್ದರೆ ಅದು ನಿಜವಾದ ಬೆಲೆಯುಳ್ಳ ಹಣವೆಂದು ಪರಿಗಣಿಸಲ್ಪಟ್ಟು ದೇಶ ಪರದೇಶಗಳಲ್ಲಿ ಮಾನ್ಯತೆ ಪಡೆಯುತ್ತದೆ. ಇದಕ್ಕಾಗಿ ಸರ್ಕಾರ ಬಂಗಾರದ ದಾಸ್ತಾನು ಇದ್ದಷ್ಟು ಮಾತ್ರ ಕಾಗದದ ಹಣವನ್ನು ಮುದ್ರಿಸಬೇಕೆಂದು ಆಗ್ರಹಪಡಿಸಿದರು.

ಬಡರೈತರು, ಗಣಿ ಕಾರ್ಮಿಕರು ಮತ್ತು ಇತರ ಸಾಲ ಮಾಡಿದವರು ಹಣವನ್ನು ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಂಡಿದ್ದರು. ಅವರ ದೃಷ್ಟಿಯಲ್ಲಿ ಹಣ ಒಂದು ರೀತಿಯ ಉದ್ದರಿ (credit). ಒಂದು ಸಮಾಜದ ಜನಸಂಖ್ಯೆ ಮತ್ತು ಆ ಸಮಾಜದಲ್ಲಿ ದೊರೆಯಬಹುದಾದ ಸರಕು ಸರಂಜಾಮುಗಳ ಪ್ರಮಾಣವನ್ನು ಚಲಾವಣೆಯಲ್ಲಿರುವ ಹಣ ಪ್ರತಿನಿಧಿಸಬೇಕು ಎನ್ನುವ ಅಭಿಪ್ರಾಯ ಅವರದು. ಆದ್ದರಿಂದ ಚಲಾವಣೆಯಲ್ಲಿರುವ ಹಣವನ್ನು ಖಜಾನೆಯಲ್ಲಿರುವ ಬಂಗಾರದ ಪ್ರಮಾಣಕ್ಕನುಗುಣವಾಗಿ ನಿಯಮಿತ ಗೊಳಿಸಬಾರದು. ಉತ್ಪನ್ನ ಮತ್ತು ಜನಸಂಖ್ಯೆ ಹೆಚ್ಚಿದಂತೆಲ್ಲ ಹಣದ ಚಲಾವಣೆ ಹೆಚ್ಚಬೇಕು. ಹಾಗೆ ಆಗದಿದ್ದುದು ಆರ್ಥಿಕ ಅವ್ಯವಸ್ಥೆ ಮತ್ತು ಸಮಸ್ಯೆಗಳಿಗೆ ಪ್ರಮುಖ ಕಾರಣವಾಯಿತು. ಹಣದ ಪ್ರಮಾಣವನ್ನು ಹೆಚ್ಚಿಸದೆ ಹೋದುದರಿಂದ ಕಾರ್ಮಿಕರಿಗೆ ವೇತನ ಕೊಡಲು ಮತ್ತು ಸಾಮಾನು ಸರಂಜಾಮುಗಳನ್ನು ಕೊಳ್ಳಲು ಹಣವಿಲ್ಲದಂಥ ಪರಿಸ್ಥಿತಿ ಉಂಟಾಯಿತು. ಜನಸಾಮಾನ್ಯರ ಜೀವನವನ್ನು ಉತ್ತಮಗೊಳಿಸಲು ಸರ್ಕಾರ ಹಣದ ಚಲಾವಣೆಯನ್ನು ಹೆಚ್ಚಿಸಬೇಕೆಂದು ಅವರು ವಾದಿಸಿದರು. ಈ ಸಮಸ್ಯೆಯನ್ನು ಪರಿಹರಿಸಲು ಬೆಳ್ಳಿ ಮತ್ತು ಚಿನ್ನ ಎರಡನ್ನೂ ಹಣದ ಬೆಂಬಲಕ್ಕಾಗಿ ಬಿಡುವುದು ಒಂದು ಮಾರ್ಗ. ಮತ್ತೊಂದು ಮಾರ್ಗವೆಂದರೆ ಅಂತರ್ಯುದ್ಧದ ಕಾಲದಲ್ಲಿ ಚಲಾವಣೆಯಲ್ಲಿದ್ದ 'ಗ್ರೀನ್ ಬ್ಯಾಕ್' (Green Back) ಹಣವನ್ನು ಪುನಃ ಚಲಾವಣೆಗೆ ತರುವುದು. ಈ ಗ್ರೀನ್‌ಬ್ಯಾಕ್‌ಗಳನ್ನು ಚಿನ್ನದಿಂದ ಪೂರ್ಣವಾಗಿ ಬೆಂಬಲಿಸದೆ ಹೋದರೂ ಅಡ್ಡಿಯಿಲ್ಲ.

೧೮೭೩ರವರೆಗೆ ಬೆಳ್ಳಿಯನ್ನು ಹಣದ ಅಳತೆಗೋಲಾಗಿ ಉಪಯೋಗಿಸುತ್ತಿದ್ದರು. ನಂತರ ನಾಣ್ಯದ ನಿಬಂಧನೆ (coin act) ಬೆಳ್ಳಿಯ ಪರಿಮಾಣವನ್ನು ರದ್ದುಗೊಳಿಸಿತು (demonetized). ಆದರೆ ಕೆಲವು ವರ್ಷಗಳೊಳಗೆ ಬೆಳ್ಳಿಯ ಉತ್ಪಾದನೆ ಅಧಿಕವಾಗಿ ಅದರ ಬೆಲೆ ಕಡಿಮೆಯಾಯಿತು. ಬೆಳ್ಳಿಯ ಬೆಂಬಲಿಗರು (Silverites) ಬೆಳ್ಳಿ ನಾಣ್ಯಗಳನ್ನು ಮಿತಿಯಿಲ್ಲದಂತೆ ಉತ್ಪಾದಿಸಿ ಚಲಾವಣೆಗೆ ತರಬೇಕೆಂದು ಒತ್ತಾಯ ಮಾಡತೊಡಗಿದರು. ನಂತರ ೧೮೭೫ರಲ್ಲಿ ಚಿನ್ನವನ್ನು ಬೆಂಬಲಿಸುವವರು ಮಂಡಿಸಿದ 'ಸ್ಪಿಸೀ ರಿಸಂಪಷನ್ ಮಸೂದೆ'(Specie Resumption Act) ಯನ್ನು ಕಾಂಗ್ರೆಸ್ ಅನುಮೋದಿಸಿತು. ಈ ಮಸೂದೆಯ ಪ್ರಕಾರ ಎಲ್ಲ ರೀತಿಯ ಹಣವನ್ನು ಚಿನ್ನಕ್ಕೆ ಪರಿವರ್ತಿಸಲು ಸಾಧ್ಯವಾಗುವಂತೆ ಮಾಡಬೇಕೆಂದು ನಿರ್ದೇಶಿಸಲಾಯಿತು. ಹಾಗೆ ಪರಿವರ್ತಿಸುವುದನ್ನು ೧೮೭೯ರೊಳಗೆ ಪೂರೈಸಬೇಕೆಂದು ನಿಗದಿ ಮಾಡಲಾಯಿತು. 'ಗ್ರೀನ್ ಬ್ಯಾಕ್' ಹಣ ಇನ್ನೂ ಚಲಾವಣೆಯಲ್ಲಿದ್ದರೂ ಆ ಹಣ ಕೂಡ ಚಿನ್ನದ ಬೆಂಬಲ ಪಡೆದಿತ್ತು. ಹೀಗೆ ಮಾಡಿದುದರಿಂದ ಹಣದುಬ್ಬರ ಉಂಟಾಗಲಿಲ್ಲ.

೧೮೭೦ರ ದಶಕದ ಆರ್ಥಿಕ ಮುಗ್ಗಟ್ಟು ಮುಂದುವರಿದಂತೆಲ್ಲ ರೈತರು ಮತ್ತು ಕಾರ್ಮಿಕರು ಪುನಃ ಬೆಳ್ಳಿ ಹಣದ ಅನಿಯಮಿತ ಚಲಾವಣೆಯನ್ನು ಜಾರಿಗೆ ತರಬೇಕೆಂದು ಒತ್ತಾಯ ಪ್ರಾರಂಭಿಸಿದರು. ೧೮೭೮ರಲ್ಲಿ ಹಣಕಾಸಿನ ಮೇಲೆ ಬಿಗಿಯಾದ ಹಿಡಿತವಿರಬೇಕೆಂಬ ಸಂಪ್ರದಾಯಸ್ಥರು ಮತ್ತು ಬೆಳ್ಳಿಯ ಬೆಂಬಲಿಗರು (Silverites) ಕೂಡಿ ಒಂದು ಮಸೂದೆ – ಬ್ಲ್ಯಾಂಡ್ ಆ್ಯಲಿಸನ್ ನಿಬಂಧನೆ (Bland-Allison Act) ಯನ್ನು ಕಾಂಗ್ರೆಸ್ಸಿನ ಅನುಮೋದನೆ ಪಡೆದು ಜಾರಿಗೆ ತಂದರು. ಇದು ನಾನಾ ರಾಜಕೀಯ ಗುಂಪುಗಳ ಬೇಡಿಕೆಗಳನ್ನು ಪೂರೈಸುವ ರಾಜಿ ಒಪ್ಪಂದವಾಗಿತ್ತು. ಈ ನಿಬಂಧನೆಯ ಪ್ರಕಾರ ಫೆಡರಲ್ ಸರ್ಕಾರ ೨ರಿಂದ ೪ ಮಿಲಿಯನ್ ಡಾಲರ್‌ಗಳಷ್ಟು ಬೆಳ್ಳಿಯನ್ನು ಪ್ರತಿತಿಂಗಳು ಕೊಳ್ಳಬೇಕು ಮತ್ತು ಬೆಳ್ಳಿಯ ನಾಣ್ಯಕ್ಕೆ ಚಿನ್ನದ ನಾಣ್ಯದಂತೆ ೧೬ ಪಟ್ಟು ಹೆಚ್ಚು ಬೆಳ್ಳಿಯನ್ನು ಸೇರಿಸಬೇಕು. ಈ ನಿಬಂಧನೆ ಅನಿಯಮಿತ ಚಲಾವಣೆಯನ್ನು ಒಳಗೊಂಡಿರಲಿಲ್ಲವಾಗಿ, ಚಲಾವಣೆಯಲ್ಲಿರುವ ಬೆಳ್ಳಿ ನಾಣ್ಯಗಳ ಸಂಖ್ಯೆ ಹೆಚ್ಚಲಿಲ್ಲ. ಆದ್ದರಿಂದ ಡಾಲರ್ ಚಿನ್ನದ ಬೆಂಬಲವನ್ನೇ ಅವಲಂಬಿಸಿತ್ತು. ನಂತರ ೧೮೯೦ರ 'ಶರ್ಮನ್ ಬೆಳ್ಳಿ ಖರೀದಿಸುವ ಕಾಯಿದೆ' ಸರ್ಕಾರ ಪ್ರತಿತಿಂಗಳು ಖರೀದಿಸುವ ಬೆಳ್ಳಿಯ ಪ್ರಮಾಣವನ್ನು ಹೆಚ್ಚಿಸಿತ್ತು. ಆದರೆ ಅನಿಯಮಿತ ಬೆಳ್ಳಿ ನಾಣ್ಯ ಚಲಾವಣೆಯನ್ನು ಅನುಮೋದಿಸಲಿಲ್ಲ. ಆದ್ದರಿಂದ ಬೆಲೆಗಳು ಹೆಚ್ಚಲಿಲ್ಲ.

೧೮೯೩ರಲ್ಲಿ ಶರ್ಮನ್ ಬೆಳ್ಳಿ ಖರೀದಿಸುವ ಕಾಯಿದೆಯನ್ನು ರದ್ದು ಮಾಡಲಾಯಿತು. ಇದರಿಂದಾಗಿ ಬೆಳ್ಳಿಯ ಪರಿಮಾಣ (silver standard) ಕೊನೆಗೊಂಡು ಬೆಳ್ಳಿಯ ಬೆಂಬಲಿಗರನ್ನು ಕೆರಳಿಸಿತು. ಇವರು ಪೂರ್ವ ಪ್ರಾಂತಗಳ ಕೈಗಾರಿಕೆ ಮತ್ತು ಬ್ಯಾಂಕ್

ಉದ್ಯಮಿಗಳು ತಮ್ಮ ಲಾಭವನ್ನು ಹೆಚ್ಚಿಗೆ ಮಾಡಲು ಹಣದ ಚಲಾವಣೆಯನ್ನು ಕಡಿಮೆ ಮಾಡಿ ಬಡರೈತರನ್ನು ಮತ್ತು ಕಾರ್ಮಿಕರನ್ನು ಶೋಷಣೆ ಮಾಡುತ್ತಿದ್ದಾರೆಂದು ಆಪಾದಿಸಿದರು. ೧೮೯೦ರ ದಶಕದ ಹಣದ ಮುಗ್ಗಟ್ಟು ಮುಂದುವರಿದಂತೆಲ್ಲ ಮತ್ತೆ ಬೆಳ್ಳಿ ನಾಣ್ಯಗಳು ಅನಿಯಮಿತ ಚಲಾವಣೆಗೆ ಬೆಂಬಲ ಹೆಚ್ಚುತ್ತ ಹೋಯಿತು. ಇದು ರಾಜಕೀಯ ರಂಗದಲ್ಲಿ ಪ್ರಮುಖ ವಾಗ್ವಾದದ ವಿಷಯವಾಯಿತು.

ಅಧ್ಯಕ್ಷ ಕ್ಲೀವ್‌ಲ್ಯಾಂಡ್‌ನು ಶರ್‌ಮನ್ ಬೆಳ್ಳಿ ಕಾಯಿದೆಯನ್ನು ರದ್ದುಗೊಳಿಸಿದ್ದು ಕುಸಿಯುತ್ತಿದ್ದ ಆರ್ಥಿಕ ವ್ಯವಸ್ಥೆಯನ್ನು ಚೇತನಗೊಳಿಸಿ ಖಜಾನೆಯಲ್ಲಿ ಚಿನ್ನದ ಸಂಗ್ರಹವನ್ನು ಹೆಚ್ಚಿಸುತ್ತದೆ ಎಂದು ಹಾರೈಸಿದ್ದನು. ಆದರೆ ಪರಿಣಾಮ ಅವನ ಹಾರೈಕೆಗೆ ವ್ಯತಿರಿಕ್ತ ವಾಗಿತ್ತು. ಬೆಳ್ಳಿ ಬೆಂಬಲಿಸಿದ ಹಣವನ್ನು ಚಲಾವಣೆಯಿಂದ ಹಿಂತೆಗೆಯಲು ಸರ್ಕಾರ ಆ ಹಣದ ಮೊತ್ತಕ್ಕೆ ಸಮನಾದ ಚಿನ್ನವನ್ನು ಖಜಾನೆಯಿಂದ ತೆಗೆಯಬೇಕಾಗಿ ಬಂತು. ಖಜಾನೆಯ ಚಿನ್ನದ ಸಂಗ್ರಹ ಕ್ಷೀಣಿಸಿತು. ಮೇಲಾಗಿ ದೀರ್ಘಾವಧಿ ಸಾಲ ಪಡೆದು ಚಿನ್ನದ ಸಂಗ್ರಹವನ್ನು ಹೆಚ್ಚಿಸಲು ಅಧ್ಯಕ್ಷನಿಗೆ ಅಧಿಕಾರ ನೀಡಲು ಕಾಂಗ್ರೆಸ್ ನಿರಾಕರಿಸಿತು. ಸಮಸ್ಯೆಯನ್ನು ಬಗೆಹರಿಸುವುದು ಅಧ್ಯಕ್ಷನಿಗೆ ಮತ್ತು ಆಡಳಿತ ಮಂಡಳಿಯ ಜವಾಬ್ದಾರಿ ಯಾಯಿತು. ೧೮೯೪ರಲ್ಲಿ ಆಡಳಿತ ಮಂಡಳಿ ಸಾರ್ವಜನಿಕ ಕರಾರುಪತ್ರಗಳ (bonds) ಮೂಲಕ ಹಣಸಂಗ್ರಹಣೆ ಮಾಡಲು ನಿರ್ಧರಿಸಿ ಕರಾರುಪತ್ರಗಳನ್ನು ಬಿಡುಗಡೆ ಮಾಡಿತು. ಸಾರ್ವಜನಿಕರಿಗೆ ಸರ್ಕಾರದಲ್ಲಿ ನಂಬಿಕೆ ಎಷ್ಟು ಕಡಿಮೆಯಾಗಿತ್ತೆಂದರೆ ಶೇಕಡಾ ೧೧ ಕರಾರುಪತ್ರಗಳನ್ನು ಮಾರುವುದೂ ಕೂಡ ಕಷ್ಟವಾಯಿತು. ಹತಾಶೆಗೊಂಡ ಆಡಳಿತ ಮಂಡಳಿ ಅಂತಿಮವಾಗಿ ಒಂದು ಒಪ್ಪಂದ ಮಾಡಿಕೊಳ್ಳಲು ನಿರ್ಧರಿಸಿತು. ಜೆ.ಪಿ. ಮಾರ್ಗನ್ (J.P. Morgan) ನಾಯಕತ್ವದಲ್ಲಿ ಒಂದು ಬ್ಯಾಂಕರ್‌ಗಳ ಸಂಸ್ಥೆ ಸರ್ಕಾರದ ಖಜಾನೆಗೆ ಚಿನ್ನವನ್ನು ಒದಗಿಸಲು ಒಪ್ಪಿಕೊಂಡಿತು. ಈ ವ್ಯವಹಾರದಿಂದ ಸರ್ಕಾರದ ಖಜಾನೆಯ ಚಿನ್ನದ ಸಂಗ್ರಹ ಸ್ಥಿರಗೊಂಡಿತು. ಆದರೆ ಬೆಳ್ಳಿಯ ಬೆಂಬಲಿಗರು ಮಾರ್ಗನ್ ಸಂಸ್ಥೆಯವರು ಈ ವ್ಯವಹಾರದಿಂದ ಗಳಿಸಿದ ಅಪಾರ ಲಾಭವನ್ನು (೧.೫ ಮಿಲಿಯನ್‌ನಿಂದ ೨ ಮಿಲಿಯನ್ ಡಾಲರ್‌ಗಳವರೆಗೆ) ಪೂರ್ವಪ್ರಾಂತಗಳ ಹಣವಂತರು ಸರ್ಕಾರದ ಸಹಕಾರದಿಂದ ಜನಸಾಮಾನ್ಯರನ್ನು ಶೋಷಣೆ ಮಾಡಿ ಲಾಭ ಗಳಿಸುತ್ತಿರುವುದಕ್ಕೆ ಸಾಕ್ಷಿಯಾಗಿದೆ ಎಂದು ಆಪಾದಿಸಿದರು.

೧೮೯೫ರ ಹೊತ್ತಿಗೆ "ಬೆಳ್ಳಿಯ ಗಿರ" (silver craze) ಒಂದು ಧರ್ಮಯುದ್ಧದ ರೂಪ ತಳೆಯಿತು. ಈ ಯುದ್ಧದ ಉದ್ದೇಶ – ಹಣದ ಮುಗ್ಗಟ್ಟನ್ನು ಪರಿಹರಿಸಿ, ಹಣವಂತರು ಬಡವರನ್ನು ಶೋಷಣೆ ಮಾಡುವುದನ್ನು ಕೊನೆಗೊಳಿಸುವುದು. ಡೆಮೊಕ್ರಾಟ್ ಮತ್ತು ರಿಪಬ್ಲಿಕನ್ ಪಕ್ಷಗಳು ಎರಡೂ ಚಿನ್ನದ ಪರಿಮಾಣಕ್ಕೆ (gold standard) ಬದ್ಧವಾಗಿದ್ದುದರಿಂದ ಬೆಳ್ಳಿಯ ಬೆಂಬಲಿಗರಿಗೆ ರಾಜಕೀಯ ಪಕ್ಷವಿಲ್ಲದಂತಾಯಿತು. ಆರ್ಥಿಕ

ಮುಗ್ಗಟ್ಟು ಮುಂದುವರಿದಂತೆಲ್ಲ ಅಧ್ಯಕ್ಷ ಕ್ಲೀವ್‌ಲ್ಯಾಂಡ್‌ನ ಧೋರಣೆಗಳ ಜನಪ್ರಿಯತೆ ಕಡಿಮೆಯಾಗುತ್ತ ಹೋಯಿತು. ತನ್ನ ಪಕ್ಷದ ಬಹುತೇಕ ಸದಸ್ಯರ ಬೆಂಬಲವನ್ನು ಸಹ ಕಳೆದುಕೊಂಡನು. ಕ್ಲೀವ್‌ಲ್ಯಾಂಡ್‌ನ ನಿಸ್ಸಹಾಯ ಸ್ಥಿತಿಯನ್ನು ಮನಗಂಡು ಬೆಳ್ಳಿಯ ಬೆಂಬಲಿಗರು ತಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಪಕ್ಷಾಂತರ ಮಾಡಿ ಪಾಪ್ಯುಲಿಸ್ಟರ ಪಕ್ಷ ಸೇರುವುದಾಗಿ ಬೆದರಿಕೆ ಹಾಕಿದರು.

ಡೆಮೊಕ್ರಾಟಿಕ್ ಪಕ್ಷದ ಅಧಿವೇಶನದಲ್ಲಿ ಪ್ರಸ್ತುತ ಅಧ್ಯಕ್ಷನ ಧೋರಣೆಗಳನ್ನು ವಿರೋಧಿಸಿ ಬಹಿರಂಗವಾಗಿ ಖಂಡಿಸಲಾಯಿತು. ಬೆಳ್ಳಿಯ ವಿಷಯ ಕುರಿತು ನಡೆಯುತ್ತಿದ್ದ ಚರ್ಚೆಯ ಕೊನೆಯ ಹಂತದಲ್ಲಿ ನೆಬ್ರಾಸ್ಕ ಸಂಸ್ಥಾನದ ೩೬ ವರ್ಷ ಪ್ರಾಯದ ಕೋಪಿಷ್ಠನಾದ ಸದಸ್ಯ ವಿಲಿಯಂ ಜೆನ್ನಿಂಗ್ಸ್ ಬ್ರೈಯನ್ (William Jennings Bryan) ಸಭೆಯನ್ನುದ್ದೇಶಿಸಿ ಭಾಷಣ ಮಾಡಿ ಬೆಳ್ಳಿಯ ಬೆಂಬಲಿಗರ ಧೋರಣೆಯನ್ನು ಪರಿಣಾಮ ಕಾರಿಯಾಗಿ ವಿವರಿಸಿದನು. ಭಾಷಣದ ಮೊದಲಿನಲ್ಲಿ ಕ್ಲೀವ್‌ಲ್ಯಾಂಡ್‌ನನ್ನು ಟೀಕಿಸಲಿಲ್ಲ. ಬಡಬಗ್ಗರನ್ನು ಹೊಗಳಿ, ರೈತರನ್ನು ವಿಶೇಷವಾಗಿ ಶ್ಲಾಘಿಸಿ ಅದನ್ನು ದೇಶದ ಬೆನ್ನುಮೂಳೆ ಮತ್ತು ಅಮೆರಿಕವನ್ನು ಜೀವಂತವಾಗಿಟ್ಟಿರಲು ಅಗತ್ಯವಾದ ರಕ್ತಸಂಚಾಲನೆಗೆ ಹೋಲಿಸಿ ಆವೇಶಪೂರ್ಣವಾಗಿ ಮಾತನಾಡಿದನು. ಭಾಷಣ ಮುಗಿಸಿದಾಗ ಸಭೆ ಸದ್ದಿಲ್ಲದೆ ಇದ್ದು ಸ್ವಲ್ಪ ಕಾಲಾನಂತರ ಗದ್ದಲ ಕೂಗಾಟಗಳಿಂದ ಅಸ್ತವ್ಯಸ್ತವಾಯಿತು. ಬೆಳ್ಳಿಯ ಬೆಂಬಲಿಗರು ಬ್ರೈಯನ್ ಪರವಾಗಿ ಪ್ರದರ್ಶನ ನಡೆಸಿದಾಗ ಸಂಪ್ರದಾಯಸ್ಥ ಡೆಮೊಕ್ರಾಟರು ಅವನನ್ನು 'ಮಾತುಗಾರ ಮಲ್ಲ'ನೆಂದು ಹೀಗಳೆದು ಪಕ್ಷಾಂತರ ಮಾಡಿದರು. ಇದರ ಪರಿಣಾಮವಾಗಿ ಬೆಳ್ಳಿ ಬೆಂಬಲಿಗರ ಪಕ್ಷ ಹುಟ್ಟಿಕೊಂಡಿತು. ಪಕ್ಷದ ಧೋರಣೆ ಮತ್ತು ಧ್ಯೇಯಗಳನ್ನು ವಿಶದೀಕರಿಸುವ ವಾಗ್ಮಿ ದೊರಕಿದನು. ರಾಷ್ಟ್ರದ ಅಧ್ಯಕ್ಷ ಪದವಿಗೆ ಅರ್ಹವಾದ ಅಭ್ಯರ್ಥಿಯೂ ದೊರೆತನು! ತನ್ನ ಬಂಗಾರ ವಿರೋಧಿ ಭಾಷಣದಿಂದ ಬ್ರೈಯನ್‌ನನ್ನು ಅಧ್ಯಕ್ಷಪದವಿಗೆ ಸ್ಪರ್ಧಿಸಲು ಡೆಮೊಕ್ರಟಿಕ್ ಪಕ್ಷ ನಾಮಕರಣ ಮಾಡಿತು.

ಈ ಘಟನೆಗಳು ಪಾಪ್ಯುಲಿಸ್ಟರನ್ನು ಪೇಚಿಗೆ ಸಿಕ್ಕಿಸಿದವು. ಯಾರು ಬೆಳ್ಳಿಯನ್ನು ಚುನಾವಣಾ ಪ್ರಚಾರದ ಮುಖ್ಯ ವಿಷಯವಾಗಿ ಮಾಡಬೇಕೆನ್ನುತ್ತಿದ್ದರೋ ಅವರು ಡೆಮೊಕ್ರಾಟಿಕ್ ಪಕ್ಷದೊಡನೆ ಒಂದಾಗಲು ಕರೆ ನೀಡಿದರು. ಕೆಲವು ತೀವ್ರಗಾಮಿಗಳಾದ ರೈತರು ಯಾರ ಜೊತೆಗೂ ಸೇರದೆ ರೈತರ ಸರ್ವತೋಮುಖ ಸುಧಾರಣೆಗೆ ಶ್ರಮಿಸು ವವರಾಗಿ ಉಳಿದುಕೊಂಡರು. ಸೇಂಟ್ ಲೂಯಿಸ್‌ನಲ್ಲಿ ನಡೆದ ಪಾಪ್ಯುಲಿಸ್ಟರ ಸಮ್ಮೇಳನ ದಲ್ಲಿ ಡೆಮೊಕ್ರಾಟಿಕ್ ಪಕ್ಷದಲ್ಲಿ ವಿಲೀನಗೊಳ್ಳಬೇಕೆನ್ನುವವರ ಸಂಖ್ಯೆ ಹೆಚ್ಚಾಗಿದ್ದು ಅವರು ಬ್ರೈಯನ್‌ನನ್ನು ಅಭ್ಯರ್ಥಿಯಾಗಿ ಅನುಮೋದಿಸಿದರು. ಕೆಲವು ಹಳೆಯ ಸಮಾಜ ಸುಧಾರಕರು ಪಾಪ್ಯುಲಿಸ್ಟ್ ಪಕ್ಷವು ತನ್ನ ಅಂತ್ಯವನ್ನು ತಾನೇ ತಂದುಕೊಂಡಿತೆಂದು ಹೇಳಿ ಸಮಾರಂಭವನ್ನು ತ್ಯಜಿಸಿ ಹೋದರು.

೧೮೯೬ರ ಚುನಾವಣೆಯಲ್ಲಿ ಬ್ರೈಯನ್‌ನನ್ನು ಎದುರಿಸಲು ರಿಪಬ್ಲಿಕನ್ನರು ಒಹಾಯೊ (Ohio) ಸಂಸ್ಥಾನದ ಗವರ್ನರ್ ಆಗಿದ್ದ ವಿಲಿಯಂ ಮೆಕಿನ್ಲೆ (William McKinley) ಯನ್ನು ಅಭ್ಯರ್ಥಿಯಾಗಿ ನಾಮಕರಣ ಮಾಡಿದರು. ಇವನು 'ಮೆಕಿನ್ಲೆ ಸುಂಕ' (McKinley tariff) ವನ್ನು ಕಾಂಗ್ರೆಸ್ಸಿನಲ್ಲಿ ಮಂಡಿಸಿದ್ದನು. ಮಾರ್ಕಸ್ ಅಲೊಂಜೊ ಹಾನ (Marcus Alonzo Hanna) ಎಂಬ ಶ್ರೀಮಂತ ವ್ಯಾಪಾರಿ ಮೆಕಿನ್ಲೆಯ ನೇಮಕದಲ್ಲಿ ಪ್ರಬಲ ಪಾತ್ರ ವಹಿಸಿದ್ದನು. ಮೆಕಿನ್ಲೆ ನೋಡಲು ಲಕ್ಷಣವಾಗಿದ್ದ ಚತುರ ರಾಜಕಾರಣಿಯಾಗಿದ್ದನು. ಅವನು ಕೈಗಾರಿಕೋದ್ಯಮಿಗಳ ಸಮೀಪವರ್ತಿಯಾಗಿದ್ದರೂ ಕಾರ್ಮಿಕರ ಬೇಡಿಕೆಗಳ ಬಗ್ಗೆ ಸಹಾನುಭೂತಿ ಇದ್ದವನು. ಹಣದ ಬಗ್ಗೆ ನಡೆಯುತ್ತಿದ್ದ ವಾಗ್ವಾದ ಪ್ರಸ್ತುತ ಸಮಾರಂಭದಲ್ಲಿ ಚರ್ಚೆಗೆ ಬಾರದಂತೆ ಹಾನ ವ್ಯವಸ್ಥೆ ಮಾಡಿದ್ದನು. ಆದರೂ ಸಹ ಆ ವಿಷಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲು ಸಾಧ್ಯವಾಗಲಿಲ್ಲ. ಅಭ್ಯರ್ಥಿ ಯಾದ ಮೆಕಿನ್ಲೆ ಈ ವಿಷಯ ಕುರಿತು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಲೇಬೇಕಾಯಿತು. ಮೆಕಿನ್ಲೆ ಚಿನ್ನದ ಪರಿಮಾಣವನ್ನು ಬೆಂಬಲಿಸುವುದಾಗಿ ಹೇಳಿದಾಗ ಬೆಳ್ಳಿ ಬೆಂಬಲಿಗರ ಗುಂಪು ಸಭಾತ್ಯಾಗ ಮಾಡಿತು.

೧೮೯೬ರ ಚುನಾವಣೆ

೧೮೯೬ರ ಚುನಾವಣೆ ಬಗೆಹರಿಯದ ಬೆಳ್ಳಿಯ ವಾಗ್ವಾದದಿಂದ ಪ್ರಭಾವಿತವಾಗಿ ಚಿತ್ತೋದ್ರೇಕ ಸ್ಥಿತಿಯನ್ನು ತಲುಪಿತ್ತು. ಬ್ರೈಯನ್ ಚುನಾವಣೆಯಲ್ಲಿ ಗೆದ್ದರೆ ಪೂರ್ವ ಸಂಸ್ಥಾನಗಳು ಸಂಯುಕ್ತ ಸಂಸ್ಥಾನಗಳ ಒಕ್ಕೂಟವನ್ನು ಬಿಟ್ಟು ಹೋಗುತ್ತವೆ ಎನ್ನುವ ವದಂತಿ ಜನಜನಿತವಾಗಿತ್ತು. ಸಂಪ್ರದಾಯಸ್ಥ ಪಾದ್ರಿಯೊಬ್ಬನು ಚುನಾವಣೆಯ ವೇದಿಕೆ ನರಕದಲ್ಲಿ ತಯಾರಾಗಿದ್ದು ಎಂದು ಉದ್ಗರಿಸಿದನು. ಬ್ರೈಯನ್ ಮತ್ತು ಮೆಕಿನ್ಲೆ ಚುನಾವಣೆ ಪ್ರಚಾರ ರೀತಿಗಳು ಬೆಳ್ಳಿಯ ಬಗ್ಗೆ ಅವರಿಬ್ಬರಲ್ಲಿ ಎಷ್ಟು ಭಿನ್ನಾಭಿಪ್ರಾಯಗಳಿದ್ದವೋ ಅಷ್ಟೇ ವೈಪರೀತ್ಯಗಳಿಂದ ಕೂಡಿದ್ದವು. ತರುಣನೂ ಉತ್ಸಾಹಭರಿತನೂ ಸಮಾಜ ಸುಧಾರಣೆಗೆ ಆವೇಶಪೂರ್ಣನಾಗಿ ತೊಡಗಿಸಿಕೊಂಡವನೂ ಆದ ಬ್ರೈಯನ್ ೨೦೦೦೦ ಮೈಲಿಗಳ ಮೇಲೆ ಪ್ರಯಾಣ ಮಾಡಿ, ೬೦೦ಕ್ಕೂ ಹೆಚ್ಚು ಭಾಷಣ ಮಾಡಿದನು. ತನ್ನ ಧ್ಯೇಯ ಧೋರಣೆಗಳನ್ನು ಅಸಂಖ್ಯಾತ ಅಮೆರಿಕನ್ನರ ಮುಂದೆ ನೈತಿಕ ತುರ್ತು ಪರಿಸ್ಥಿತಿ ಉಂಟಾಗಿದೆ ಎನ್ನುವ ಧಾಟಿಯಲ್ಲಿ ತನ್ನ ಅಹವಾಲನ್ನು ಮಂಡಿಸಿದನು. ಮೆಕಿನ್ಲೆ ಹಾನ ರಚಿಸಿದ ಚುನಾವಣಾ ಕೌಶಲದಂತೆ ಶಾಂತಚಿತ್ತನಾಗಿ, ಎಚ್ಚರಿಕೆಯಿಂದ ಹೆಚ್ಚಿನ ಸದ್ದುಗದ್ದಲವಿಲ್ಲದ ತನ್ನ ಮನೆಯ ಮುಂದಣ ವೇದಿಕೆಯಿಂದಲೇ ಪ್ರಚಾರ ನಡೆಸಿದನು. ಹಾನ ಮುಖ್ಯವಾಗಿ ಕಾರ್ಮಿಕರ ಮತ ಪಡೆಯಲು ಎಲ್ಲ ಪ್ರಯತ್ನಗಳನ್ನೂ ಮಾಡಿದನು. ಕಾರ್ಮಿಕರಿಗೆ ಬೆಳ್ಳಿಯ ಪರಿಮಾಣ (silver standard)ದ ಕುಂದುಕೊರತೆಗಳನ್ನು ತನ್ನ ಭಾಷಣಗಳಲ್ಲಿ ವಿವರಿಸುತ್ತ ಅದರಿಂದ ಹಣದುಬ್ಬರವಾಗಿ ಅವರ ವೇತನದ ನಿಜವಾದ ಮೌಲ್ಯ ಕಡಿಮೆಯಾಗುತ್ತದೆ ಎಂದು ಎಚ್ಚರಿಸುತ್ತಿದ್ದನು. 'ಮೆಕಿನ್ಲೆಗೆ ಓಟು, ಊಟ ತುಂಬಿದ

ತಾಟು' (McKinley and the full dinner pail) ಎನ್ನುವುದು ರಿಪಬ್ಲಿಕನ್ನರ ಘೋಷಣೆಯಾಗಿತ್ತು. ಹಾನ ಕಡೆಘಳಿಗೆಯಲ್ಲಿ ಬ್ರೈಯನ್ ಅರಾಜಕತೆಯ ಹರಿಕಾರನೆಂದು ಜನ ನಂಬುವಂತೆ ಪ್ರಚಾರ ಮಾಡುತ್ತ ಬಂದನು. ರಿಪಬ್ಲಿಕನ್ ಪಕ್ಷ ಭಾಷಣಕಾರರನ್ನು, ಮೆಕಿನ್ಲೆಗೆ ಮತ ನೀಡುವಂತೆ ಜನರನ್ನು ವಿನಂತಿಸುವ ಕರಪತ್ರಗಳನ್ನು ದೇಶದಾದ್ಯಂತ ಕಳುಹಿಸಿತು. ಹಾಗೆ ಕಳುಹಿಸಲ್ಪಟ್ಟ ಭಾಷಣಕಾರರು ಮತ್ತು ಹಂಚಿದ ಕರಪತ್ರಗಳಲ್ಲಿ ಸುಂಕದ ಏರಿಕೆ ಮತ್ತು ಚಿನ್ನದ ಪರಿಮಾಣದ ಅನುಕೂಲಗಳನ್ನು ವಿವರಿಸಲಾಗುತ್ತಿತ್ತು. ಇಷ್ಟೆಲ್ಲ ಸಾಧ್ಯವಾಗಿದ್ದು ಏಳು ಮಿಲಿಯನ್ ಡಾಲರ್ ಪ್ರಚಾರದ ಹಣದಿಂದಾಗಿ. ಈ ಭಾರಿ ಮೊತ್ತದ ಹಣವನ್ನು ಬ್ರೈಯನ್ ಆಯ್ಕೆಯಾದರೆ ಬೆಳ್ಳಿಯ ಪರಿಮಾಣ ಬಂದು ಹಣ ಕಳೆದು ಕೊಳ್ಳಬೇಕಾದೀತೆಂದು ವ್ಯಾಪಾರಿಗಳನ್ನು ಹೆದರಿಸಿ ಸಂಗ್ರಹಿಸಿದ್ದು.

ಚುನಾವಣೆ ಮುಗಿದು ಮತಗಳ ಎಣಿಕೆ ಪೂರೈಸಿದ ಮೇಲೆ ಮೆಕಿನ್ಲೆ ೬೦೦೦೦೦ ಸಾಮಾನ್ಯ ಪ್ರಜೆಗಳ ಮತಗಳಿಂದ ಮತ್ತು ೧೦೦ ಎಲೆಕ್ಟರಲ್ ಮತಗಳಿಂದ ಬ್ರೈಯನ್‌ನನ್ನು ಸೋಲಿಸಿದ್ದು ತಿಳಿಯಿತು. ಬ್ರೈಯನ್ ದಕ್ಷಿಣದ ಎಲ್ಲ ಸಂಸ್ಥಾನಗಳಲ್ಲೂ ಗೆದ್ದಿದ್ದನು. ತೀರ ಪಶ್ಚಿಮ ಪ್ರಾಂತಗಳಲ್ಲಿ ಆರೆಗಾನ್ ಮತ್ತು ಕ್ಯಾಲಿಫೋರ್ನಿಯಗಳನ್ನು ಬಿಟ್ಟು, ಹೆಚ್ಚಿನ ಮತ ಗಳಿಸಿದ್ದನು. ಆದರೆ ಮೆಕಿನ್ಲೆ ಹೆಚ್ಚು ಜನವಸತಿ ಇರುವ ಸಂಸ್ಥಾನಗಳಲ್ಲಿ (ಮಧ್ಯ ಪಶ್ಚಿಮ ಮತ್ತು ಈಶಾನ್ಯ ಸಂಸ್ಥಾನಗಳಲ್ಲಿ) ಜಯಗಳಿಸಿದನು. ಹೊಸದಾಗಿ ಬೆಳೆಯುತ್ತಿದ್ದ ನಗರ ಪ್ರಾಂತಗಳ ಪ್ರಾಮುಖ್ಯತೆಯನ್ನು ಮನಗಂಡ ರಿಪಬ್ಲಿಕನ್ನರು ಮಧ್ಯಮವರ್ಗದವರ ಮತ್ತು ನಗರಸಮೀಪದ ಕೃಷಿಕ್ಷೇತ್ರಗಳ ರೈತರನ್ನಲ್ಲದೆ ನಗರಗಳ ಕಾರ್ಮಿಕರ ಮತಗಳನ್ನು ಪಡೆಯುವ ಮಾರ್ಗಗಳನ್ನು ಅನುಸರಿಸಿ ಒಟ್ಟಿನಲ್ಲಿ ಹೆಚ್ಚುಮತ ಗಳನ್ನು ಗಳಿಸಿ ಮೊದಲಬಾರಿಗೆ ರಿಪಬ್ಲಿಕನ್ ಪಕ್ಷ ಬಹುಸಂಖ್ಯಾತರ ಪಕ್ಷವಾಗಿ ಸ್ಥಾಪಿತ ಗೊಳ್ಳುವಂತೆ ಮಾಡಿದರು.

ರೈತರ ಹಾಗೂ ರೈತಾಪಿ ಕೆಲಸಗಾರರ ಮತ್ತು ಕೈಗಾರಿಕೋದ್ಯಮಗಳ ಕಾರ್ಮಿಕರ ಮಿಶ್ರಣ ಪಕ್ಷವನ್ನು ಕಟ್ಟಬೇಕೆಂದು ಬ್ರೈಯನ್ ಎಣಿಸಿದ್ದು ತಪ್ಪಾಯಿತು. ಏಕೆಂದರೆ ಮಧ್ಯ ಪಶ್ಚಿಮ ಪ್ರಾಂತಗಳ ರೈತರು ಸಾಮಾನ್ಯವಾಗಿ ಸ್ವಯಂಪೂರ್ಣರಾಗಿದ್ದರು. ಅವರು ತಮ್ಮ ಶೋಷಣೆಗೆ ಒಳಗಾದ ವರ್ಗದವರೆಂದು ಭಾವಿಸಿರಲಿಲ್ಲ. ನಗರ ಪ್ರಾಂತಗಳ ಕಾರ್ಮಿಕರು ಬೆಳ್ಳಿಯ ಪರಿಮಾಣ ಜಾರಿಗೆ ಬಂದರೆ ಖರ್ಚು ವೆಚ್ಚಗಳು ಹೆಚ್ಚಿ ತಮಗೆ ಸಿಗುವ ನಿಗದಿ ವರಮಾನದಲ್ಲಿ ಬದುಕುವುದು ಕಷ್ಟವಾಗುತ್ತದೆ ಎಂದು ಹೆದರಿದ್ದರು. ಬಿಳಿಯ ಕತ್ತಿನ ಪಟ್ಟಿಯ ಕೆಲಸಗಾರರು (white collar workers) ಮತ್ತು ವೃತ್ತಿಪರರು (professionals) ಬೆಳ್ಳಿಯ ಪರಿಮಾಣ ತಾವು ಸಾಲ ಕೊಟ್ಟಿರುವ ಹಣದ ಮೌಲ್ಯವನ್ನು ಕಡಿಮೆ ಮಾಡಿ ನಷ್ಟ ಉಂಟುಮಾಡುತ್ತದೆ ಎಂದು ಬೆಳ್ಳಿ ನಾಣ್ಯಗಳ ಅನಿಯಮಿತ ಚಲಾವಣೆ ಯನ್ನು ವಿರೋಧಿಸಿದರು.

ರಿಪಬ್ಲಿಕನ್ನರು ರೈತರನ್ನು ಮತ್ತು ಕಾರ್ಮಿಕರನ್ನು ರಾಷ್ಟ್ರದ ಸಮೃದ್ಧಿಯ ರಕ್ಷಕರು ಮತ್ತು ಸರ್ಕಾರದ ಅಧಿಕಾರವನ್ನು ಮಿತಗೊಳಿಸುವವರು ಎಂದು ಹೊಗಳಿ ತಮ್ಮ ಪಕ್ಷವನ್ನು ಬೆಂಬಲಿಸುವಂತೆ ಮಾಡಿದ್ದರು. ಕೆಲವು ಸಮಾಜ ಸುಧಾರಕರು ರಿಪಬ್ಲಿಕನ್ ಪಕ್ಷವನ್ನು ತ್ಯಜಿಸಿ ಬ್ರೈಯನ್‌ನ ಸರ್ಕಾರಿ ಕಾಯಿದೆಗಳ ಮೂಲಕ ಸಮಾಜ ಸುಧಾರಣೆ ಮಾಡುವ ಚಳುವಳಿಯನ್ನು ಸೇರಿಕೊಂಡರು. ಆದರೆ ರಿಪಬ್ಲಿಕನ್ನರು ಸಮಾಜದ ನಾನಾ ಸಂಸ್ಕೃತಿಯ ಜನರ ಆರ್ಥಿಕ ಆಸಕ್ತಿಗಳಿಗೆ ಅವಕಾಶ ಮಾಡಿಕೊಟ್ಟು ಅವರ ಬೆಂಬಲದಿಂದ ರಿಪಬ್ಲಿಕನ್ ಪಕ್ಷ ೧೯೩೦ರ ದಶಕದವರೆಗೂ ಬಹುಸಂಖ್ಯಾತ ಪಕ್ಷವಾಗಿ ಉಳಿಯುವಂತೆ ಮಾಡಿದರು. ೧೮೯೭ರಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡು ರೈತರ ರಾಜಕೀಯ ಚಟುವಟಿಕೆಗಳು ಕಡಿಮೆಯಾಗಿ, ಬೆಳ್ಳಿ ಪರಿಮಾಣದ ವಿಷಯ ಮೂಲೆಗುಂಪಾಯಿತು. ಯೂರೋಪಿನಲ್ಲಿ ಗೋಧಿಗೆ ಬೇಡಿಕೆ ಹೆಚ್ಚಾಗಿ ಗೋಧಿಯ ಧಾರಣೆ ಏರಿ ರೈತರ ಆರ್ಥಿಕ ಮುಗ್ಗಟ್ಟು ಕೊನೆಗೊಂಡಿತು. ರೈತರು ಗೋಧಿಯ ಧಾರಣೆ ಏರಿದ್ದನ್ನು ಕಂಡಿದ್ದು ಒಂದು ತಲೆಮಾರಿನ ನಂತರ ಇದೇ ಮೊದಲು. ಬೆಳ್ಳಿಯ ಪರಿಮಾಣ ಜಾರಿಗೆ ತರುವ ಚಳುವಳಿ, ಅಲಾಸ್ಕ ಮತ್ತು ಇತರ ಪ್ರಾಂತಗಳಲ್ಲಿ ಚಿನ್ನದ ಸಂಶೋಧನೆಯಿಂದಾಗಿ ಅಸಂಗತವಾಯಿತು. ಚಿನ್ನದ ಉತ್ಪನ್ನ ಹೆಚ್ಚಾದುದರಿಂದ ಚಿನ್ನ ಬೆಂಬಲಿಸುವ ಹಣದ ಅನಿಯಮಿತ ಚಲಾವಣೆ ಸಾಧ್ಯವಾಯಿತು. ೧೯೦೦ರಲ್ಲಿ ಚಿನ್ನ ಪರಿಮಾಣ ಕಾಯಿದೆಯ (gold standard act) ಮೂಲಕ ಅಮೆರಿಕದಲ್ಲಿ ಚಿನ್ನದ ಪರಿಮಾಣವನ್ನು ಅಧಿಕೃತವಾಗಿ ಅಂಗೀಕರಿಸಿದಾಗ ಯಾರೂ ವಿರೋಧ ವ್ಯಕ್ತಪಡಿಸಲಿಲ್ಲ.

❑

ಅಧ್ಯಾಯ - ೧೨

ಗಿಲಿಟಿನ ಯುಗದ ಸಾಮಾಜಿಕ ಪರಿವರ್ತನೆಗಳು

ಸಮಾಜ ವಿಜ್ಞಾನಿಗಳು ಹಿಡಿದ ಹೊಸ ಹಾದಿಗಳು

ಸಾಮಾಜಿಕ ಬದಲಾವಣೆಗೆ ಮೇರೆಯಿಲ್ಲದ ಅವಕಾಶಗಳನ್ನು ಕಲ್ಪಿಸಿದ ವಾಸ್ತವಿಕ ವ್ಯವಹಾರ ತತ್ವ ಸನಾತನ ಶೃಂಖಲೆಗಳಿಂದ ಬಿಡುಗಡೆ ಹೊಂದಿದ ಸೃಜನಾತ್ಮಕವಾದ ಹೊಸ ದೃಷ್ಟಿಯಾಗಿತ್ತು. ಮೇಲಾಗಿ ಈ ತತ್ವ ಅಮೆರಿಕನ್ ಸಮಾಜವನ್ನು ಸಾದ್ಯಂತವಾಗಿ ಸುಧಾರಿಸಲು ಸಾಧ್ಯ ಎಂಬ ನಂಬಿಕೆಯನ್ನು ಬೆಳೆಸಿಕೊಳ್ಳುವಂತೆ ಸಮಾಜವಿಜ್ಞಾನಿಗಳಿಗೆ ಸ್ಫೂರ್ತಿ ನೀಡಿತು. ಸಾಮಾಜಿಕ ಮತ್ತು ರಾಜಕೀಯ ಸುಧಾರಣೆಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸುವವರು ಅದೇ ಸಮಯದಲ್ಲಿ ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮಾನ ಅವಕಾಶಗಳ ಮೌಲ್ಯಗಳನ್ನು ಉಳಿಸಿಕೊಳ್ಳಲು ನೆರವಾಗುವ ಮಾನಸಿಕ ಚೌಕಟ್ಟನ್ನು ವಾಸ್ತವಿಕ ವ್ಯವಹಾರ ತತ್ವ ಒದಗಿಸಿಕೊಟ್ಟಿತು. ಲೆಸ್ಟರ್ ಫ್ರಾಂಕ್ ವಾರ್ಡ್ (Lester Frank Ward) ಎಂಬುವನು ಅಮೆರಿಕದ ಸಮಾಜಶಾಸ್ತ್ರದ ಜನಕನೆಂದು ಪರಿಗಣಿಸಲ್ಪಟ್ಟಿದ್ದಾನೆ. ವಾರ್ಡ್ ಸಾಮಾಜಿಕ ಡಾರ್ವಿನ್ ವಾದವನ್ನು ವಿರೋಧಿಸಿ ತನ್ನ ಎರಡು ಮುಖ್ಯ ಕೃತಿಗಳಾದ - ಡೈನಾಮಿಕ್ ಸೋಷಿಯಾಲಜಿ (dynamic sociology) ಮತ್ತು ಅಪ್ಲೈಡ್ ಸೋಷಿಯಾಲಜಿ (applied sociology) - ಇವುಗಳಲ್ಲಿ ಸುಧಾರಣಾ ಡಾರ್ವಿನ್ ತತ್ವ (reformed darvinism)ವನ್ನು ಪ್ರತಿಪಾದಿಸಿದನು. ಪ್ರಕೃತಿಯಲ್ಲಿ ಪೈಪೋಟಿಯ ಮತ್ತು ಸಹಕಾರಗಳ ಅನೇಕ ಉದಾಹರಣೆಗಳನ್ನು ನಾವು ಕಾಣಬಹುದು. ಪ್ರಕೃತಿನಿಯಮಗಳು ಸಾಮಾಜಿಕ ಬದಲಾವಣೆ ಮಾಡಲಿ ಎಂದು ನಾವು ಕಾಯಬೇಕಾಗಿಲ್ಲ. ವಾಸ್ತವಿಕ ವ್ಯವಹಾರ ತತ್ವದಿಂದ ಪ್ರಭಾವಿತನಾಗಿದ್ದ ವಾರ್ಡ್, ಮಾನವ ಬುದ್ಧಿ ಉಪಯೋಗಿಸಿ ಬದಲಾವಣೆಯನ್ನು ತ್ವರಿತಗೊಳಿಸಬಹುದು, ಮಾನವರು ಪ್ರಕೃತಿಯ ಅಂಗವಾಗಿ ತಮ್ಮ ಬೆಳವಣಿಗೆಯಲ್ಲಿ ಭಾಗವಹಿಸಬಹುದು, ಕೃತಕ ವಿಧಾನಗಳಿಂದ ಪ್ರಕೃತಿಯ ಸಹಜ ಪ್ರಕ್ರಿಯೆಗಳನ್ನು ಚುರುಕುಗೊಳಿಸಬಹುದು ಎಂದು ಪ್ರತಿಪಾದಿಸಿದನು. ಅಲ್ಲದೆ ವೈಜ್ಞಾನಿಕ ತಿಳುವಳಿಕೆ ಮಾನವನ ಬದುಕನ್ನು ನಿರ್ದೇಶಿಸಬಲ್ಲುದು. ಸಾಮಾಜಿಕ ಬದಲಾವಣೆಯಲ್ಲಿ ವಿದ್ಯೆ ಮಹತ್ತಾದ ಪಾತ್ರ ವಹಿಸುತ್ತದೆ. ಸರ್ಕಾರ ವಿದ್ಯಾಭ್ಯಾಸಕ್ಕೆ ಸಹಕಾರ ನೀಡಿ ಮಾರ್ಗದರ್ಶನ ಮಾಡುವುದು ತಪ್ಪೇನಲ್ಲ ಎಂದು ವಾದಿಸಿದನು. ವಾರ್ಡ್ ಕಂಡ ಭವಿಷ್ಯದ ದರ್ಶನ (vision)ವನ್ನು ಅವನು 'ಸೋಷಿಯಾಕ್ರಸಿ' (sociocracy)

ಎಂದು ಕರೆದನು. ಇದೊಂದು ಆದರ್ಶ ಸಾಮಾಜಿಕ ವ್ಯವಸ್ಥೆ. ಇದು ಸಮಾಜವನ್ನು ವೈಜ್ಞಾನಿಕವಾಗಿ ನಿರ್ಧರಿಸಿದ ಗುರಿಗಳತ್ತ ಸಾಗಿಸಿಕೊಂಡು ಹೋಗುತ್ತದೆ. ಸಾಮಾಜಿಕ ಯೋಜನೆಗಳ ಮೂಲಕ ಸಮಾಜ ತನ್ನ ಗುರಿಗಳನ್ನು ಸಾಧಿಸಬಹುದು ಎನ್ನುವುದು ಅವನ ಮಂತ್ರವಾಗಿತ್ತು.

ಅನಿಯಂತ್ರಿತ ಉದ್ಯಮ, ಮುಕ್ತ ಆರ್ಥಿಕ ವ್ಯವಸ್ಥೆ (free economy) ಮತ್ತು ಬಲಹೀನರ ಅವಸಾನ ಪ್ರಕೃತಿ ನಿಯಮದಂತೆ ಸಾಗುವ ಪ್ರಕ್ರಿಯೆ – ಈ ತತ್ವಗಳನ್ನು ವಾರ್ಡ್ ತೀವ್ರವಾಗಿ ವಿರೋಧಿಸಿದನು. ಅವನ ವಿರೋಧವನ್ನು ಅನುಮೋದಿಸಿ ಅವನಿಗೆ ಬೆಂಬಲ ನೀಡಿದವನು ಸಮಾಜ ಸುಧಾರಕ ಚಳುವಳಿಯ ಜನಪ್ರಿಯ ಮುಖಂಡನಾಗಿದ್ದ ಹೆನ್ರಿ ಜಾರ್ಜ್ (Henry George). ಸಾಮಾಜಿಕ ಡಾರ್ವಿನ್ ವಾದದಲ್ಲಿ ಅಡಕವಾಗಿರುವ 'ಅದೃಷ್ಟ'ವನ್ನು ಜಾರ್ಜ್ ನಿರಾಕರಿಸಿದನು. ಎಲ್ಲ ಆಗು ಹೋಗುಗಳನ್ನು ಅದೃಷ್ಟ ಅಥವಾ ಹಣೆಬರಹಗಳು ಮೊದಲೇ ನಿರ್ಧರಿಸಿರುವುದರಿಂದ ಸುಧಾರಣೆ ಸಾಧ್ಯವಿಲ್ಲ ಎನ್ನುವ ವಾದವನ್ನು ಜಾರ್ಜ್ ತಳ್ಳಿಹಾಕಿದನು. ಅವನ ಅಭಿಪ್ರಾಯದಲ್ಲಿ ಅಮೆರಿಕದ ಮೂಲ ಸಮಸ್ಯೆಯೆಂದರೆ 'ಅಸಮಾನತೆ' (inequality). ಇದನ್ನು ಕುರಿತು ೧೮೭೯ರಲ್ಲಿ ಪ್ರಕಟವಾದ 'ಪ್ರಗತಿ ಮತ್ತು ಬಡತನ' (Progress and Poverty) ಎನ್ನುವ ಕೃತಿಯಲ್ಲಿ ಕೂಲಂಕಷವಾಗಿ ಚರ್ಚಿಸಿದ್ದಾನೆ.

ಅಮೆರಿಕದ ಪೂರ್ವಪ್ರಾಂತಗಳ ಪಟ್ಟಣಗಳಲ್ಲಿ ಬಡಬಗ್ಗರ ಶೋಚನೀಯ ಸ್ಥಿತಿ ಮತ್ತು ಫೆಡರಲ್ ಸರ್ಕಾರ ಸೆಂಟ್ರಲ್ ಪೆಸಿಫಿಕ್ ರೈಲುಮಾರ್ಗಕ್ಕೆ ಸಹಸ್ರಾರು ಎಕರೆ ಭೂಮಿಯನ್ನು ದೇಣಿಗೆ ಕೊಟ್ಟದ್ದು ಜಾರ್ಜ್‌ನ ಮನಸ್ಸಿನಲ್ಲಿ ಭೂವಿತರಣದ ಬಗ್ಗೆ ಪ್ರಶ್ನೆಗಳೇಳುವಂತೆ ಮಾಡಿದವು. ರಾಷ್ಟ್ರ ತೀವ್ರಗತಿಯಲ್ಲಿ ಆರ್ಥಿಕ ಅಭಿವೃದ್ಧಿ ಹೊಂದುತ್ತಿರುವಾಗ ಜೊತೆಯಲ್ಲಿ ಜನರ ಬಡತನವೂ ಹೆಚ್ಚುತ್ತ ಹೋಗುವುದು ಹೇಗೆ ಎನ್ನುವ ಪ್ರಶ್ನೆಗೆ ಅವನಿಗೆ ಹೊಳೆದ ಉತ್ತರ – ಆಗ ಜಾರಿಯಲ್ಲಿದ್ದ ಭೂಸ್ವಾಮ್ಯ ವ್ಯವಸ್ಥೆ! ಅದರಲ್ಲಿ ಪ್ರಗತಿ ಮತ್ತು ಬಡತನ ಒಟ್ಟಿಗೆ ಇರುವಂತೆ ಏರ್ಪಾಡು ಮಾಡಲಾಗಿದೆ ಎಂದು ಅವನು ವ್ಯಾಖ್ಯಾನ ಮಾಡಿದನು. ಆರ್ಥಿಕ ಅಭಿವೃದ್ಧಿ ಭೂಮಿಯ ಉತ್ಪಾದನೆ ಹೆಚ್ಚುವಂತೆ ಮಾಡುವುದರ ಮೇಲೆ ಅವಲಂಬಿಸಿದೆ. ಭೂಮಿಯ ಬೆಲೆ ಹೆಚ್ಚು ಕಡಿಮೆಯಾಗುತ್ತಲೇ ಇರುತ್ತದೆ. ಜಾರ್ಜ್ ಅವಲೋಕಿಸಿದಂತೆ ಅಸಮಾನತೆಗೆ ಕಾರಣ ವ್ಯವಸಾಯಯೋಗ್ಯವಾದ ಎಲ್ಲ ಭೂಮಿ ಕೇವಲ ಕೆಲವು ಭೂಮಾಲೀಕರ ಕೈಯಲ್ಲಿದ್ದುದಾಗಿತ್ತು. ತಮ್ಮ ಭೂಮಿಯನ್ನು ಉಪಯೋಗಿಸುವ ಜನರಿಂದ ಭೂಮಾಲೀಕರು ಬಾಡಿಗೆ ಪಡೆಯುತ್ತಿದ್ದರು. ಇದರ ಅರ್ಥ, ಮಾಲೀಕರಿಗೆ ಸೇರಿದ್ದ ಎಲ್ಲಾ ಭೂಮಿ – ಕಲ್ಲಿದ್ದಲ ಗಣಿಗಳು, ತೈಲ ಸಿಗುವ ಪ್ರದೇಶಗಳು ಮತ್ತು ನಗರಗಳ ಬಡಾವಣೆಗಳು – ಎಲ್ಲವುಗಳಿಂದ ಬಾಡಿಗೆ ಹಣ ಬರುತ್ತಿತ್ತು. ಈ ಹಣ ದುಡಿತದ ಹಣವಲ್ಲ. ಮಾಲೀಕನ ಭೂಮಿಯಲ್ಲಿ

ರೈಲು ರಸ್ತೆ ನಿರ್ಮಿತವಾದರೆ, ಅವನ ಭೂಮಿಯ ಬೆಲೆ ಅನೇಕ ಪಟ್ಟು ಹೆಚ್ಚುತ್ತದೆ. ಆದರೆ ಆ ಅಪಾರವೊತ್ತದ ಹಣ ಗಳಿಸಲು ಭೂಮಾಲೀಕ ಮೈಮುರಿಯುವಂತೆ ದುಡಿಯುವ ಅವಶ್ಯಕತೆ ಇರಲಿಲ್ಲ. ಆದ್ದರಿಂದ ಆ ಹೆಚ್ಚು ಹಣ ಅವನ ದುಡಿತದ ಹಣವಲ್ಲ. ಜಾರ್ಜ್‌ನ ಮುಂದಿನ ಪ್ರಶ್ನೆ – ತಮ್ಮ ದುಡಿಮೆಯಿಂದ ಭೂಮಿಯ ಬೆಲೆಯನ್ನು ಹೆಚ್ಚಿಸಿದವರ ಗತಿ ಏನು? ಅವನು ಅವಲೋಕಿಸಿದಂತೆ ಅವರ ಗತಿ ಸಾಮೂಹಿಕವಾಗಿ ಅಧೋಗತಿ! ಕೆಲಸಗಾರರ ಸಂಖ್ಯೆ ಹೆಚ್ಚಿ, ಕೆಲಸಗಳು ಕಡಿಮೆಯಾಗಿ, ವೇತನದಲ್ಲಿ ಕಡಿತ ಉಂಟಾಗಿ ನಿರುದ್ಯೋಗ ಹೆಚ್ಚಿತು. ಆದರೆ ಬಾಡಿಗೆ ಕೊಡಬೇಕಾದವರು ತಾವು ದುಡಿದುದನ್ನು ಸ್ವತಃ ದುಡಿಯದೆ ಇರುವ ಮಾಲೀಕರಿಗೆ ಒಪ್ಪಿಸಬೇಕು. ಹೀಗೆ ದುಡಿಯದ ಮಾಲೀಕ ಪ್ರಗತಿ ಹೊಂದಿ ದುಡಿಯುವ ಬಾಡಿಗೆದಾರ ಬಡವನಾದ ವಿರೋಧಾಭಾಸ ಸಮಾಜದಲ್ಲಿ ಉಂಟಾಯಿತು.

ಈ ಸಮಸ್ಯೆಗೆ ಜಾರ್ಜ್ ಸೂಚಿಸಿದ ಪರಿಹಾರವೆಂದರೆ ಭೂಮಾಲೀಕರು ದುಡಿಯದೆ ಪಡೆದ ಲಾಭದ ಮೇಲೆ ತೆರಿಗೆ ಹಾಕುವುದು. ಈ ತೆರಿಗೆ ಜಾರಿಗೆ ತಂದರೆ ಬೇರೆ ಯಾವ ತೆರಿಗೆಯ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ಭೂಕಂದಾಯದಿಂದ ಬಂದ ಹಣ ಸರ್ಕಾರದ ಎಲ್ಲ ಅಗತ್ಯಗಳನ್ನು ಪೂರೈಸಲು ಸಾಕಾಗುತ್ತದೆ. ಅಸಮಾನತೆ ಸಮಸ್ಯೆಯನ್ನು ಪರಿಹರಿಸಬೇಕಾದರೆ ಭೂಮಿಯನ್ನು ಪಾಳು ಬಿಡಬಾರದು. ಭೂಹಿಡುವಳಿಯ ಗಾತ್ರವನ್ನು ಕಡಿಮೆ ಮಾಡಬೇಕು. ಸಣ್ಣ ಹಿಡುವಳಿಗಳನ್ನು ಹೆಚ್ಚಿಸಬೇಕು. ಹೀಗೆ ಮಾಡುವುದರಿಂದ ಭೂಮಾಲೀಕರ ಸಂಖ್ಯೆಯನ್ನು ಹೆಚ್ಚಿಸಿ ಸಮಾಜದಲ್ಲಿ ಅತುಲೈಶ್ವರ್ಯ ಒಂದು ಕಡೆ ಯಾದರೆ ಇನ್ನೊಂದು ಕಡೆ ಕಡುಬಡತನ ಒಟ್ಟಿಗೆ ಇರುವ ವಿಪರ್ಯಾಸವನ್ನು ಕೊನೆಗಾಣಿಸ ಬಹುದು ಎಂದು ಜಾರ್ಜ್ ನಂಬಿದ್ದನು. ಪ್ರಕೃತಿದತ್ತವಾದ ಭೂಮಿ ಸಮಾಜವ್ಯವಸ್ಥೆಯ ಮೇಲೆ ನಿರ್ಣಾಯಕ ಪರಿಣಾಮ ಬೀರುತ್ತದೆ. ಆದ್ದರಿಂದ ಭೂಮಿಯಿಂದ ಉತ್ಪತ್ತಿಯಾದ ಸಂಪತ್ತನ್ನು ಸಾರ್ವಜನಿಕರು ಅನುಭವಿಸಲು ಅವಕಾಶ ಮಾಡಿಕೊಡಬೇಕು. ಈ ದೃಷ್ಟಿಯಲ್ಲಿ ಜಾರ್ಜ್ ಪ್ರತಿಪಾದಿಸಿದ ಅಭಿಪ್ರಾಯಗಳು 'ಸಾಮಾಜಿಕ ನ್ಯಾಯ'ವನ್ನು ಅನುಷ್ಠಾನಕ್ಕೆ ತರುವ ಪ್ರಯತ್ನ ಎಂದು ಹೇಳಬಹುದು. ಸಾಮಾಜಿಕ ನ್ಯಾಯ ಉತ್ತಮ ಸಮಾಜವನ್ನು ಸೃಷ್ಟಿಸಬಲ್ಲದು ಎಂದು ಅವನು ನಂಬಿದ್ದನು. ಜಾರ್ಜ್‌ನ ಅಭಿಪ್ರಾಯಗಳು ಅಮೆರಿಕದ ಭೂಕಂದಾಯ ಕಾಯಿದೆಗಳ ಮೇಲೆ ಇಪ್ಪತ್ತನೆಯ ಶತಮಾನದ ಆದಿಯವರೆಗೂ ಪ್ರಭಾವ ಬೀರಿದ್ದವು.

ಎಡ್ವರ್ಡ್ ಬೆಲ್ಲಮಿ

ಹೆನ್ರಿ ಜಾರ್ಜ್‌ನ ಆಸಕ್ತಿ ಎಲ್ಲ ಭೂಸ್ವಾಮ್ಯತೆ ಮತ್ತು ಭೂವಿತರಣೆಯ ಮೇಲೆ ಕೇಂದ್ರೀಕೃತವಾಗಿತ್ತು. ಅವನ ಸಮಕಾಲೀನ ಎಡ್ವರ್ಡ್ ಬೆಲ್ಲಮಿ (Edward Bellamy) ಭೂಸ್ವಾಮ್ಯತೆಗಿಂತ ವಿಶಾಲವಾದ ವಿಷಯ 'ಅನಿರ್ಬಂಧ ಬಂಡವಾಳಶಾಹಿ' (unre-

stricted capitalism) ವ್ಯವಸ್ಥೆಯ ಅಧ್ಯಯನದಲ್ಲಿ ನಿರತನಾದನು. ಬೆಲ್ಲಮಿಯ 'ಹಿನ್ನೋಟ ೨೦೦೦-೧೮೮೭' (Looking Backward 2000-1887) ಎಂಬ ಜನಪ್ರಿಯ ಕಾದಂಬರಿಯಲ್ಲಿ ಸಮಾಜ ಮತ್ತು ಸರ್ಕಾರಗಳ ನೈತಿಕ ಸುಧಾರಣೆಯಾಗಬೇಕೆಂದು ಪ್ರತಿಪಾದಿಸಿದನು. ಸರ್ವರ ಏಳಿಗೆಗಾಗಿ ಸಮಾಜದ ಎಲ್ಲ ವರ್ಗದವರೂ ಒಂದಾಗಿ ಶ್ರಮಿಸಬೇಕೆಂದು ಅವನು ಆಗ್ರಹಪಡಿಸಿದನು. ಕಾಲಕ್ರಮದಲ್ಲಿ ಜನರು ಇದನ್ನು ಸಾಧಿಸುತ್ತಾರೆ, ಏಕೆಂದರೆ ಸ್ವಾಭಾವಿಕವಾಗಿ ಜನರು ಒಳ್ಳೆಯವರು. ಪ್ರಸ್ತುತದಲ್ಲಿ ಜನರು ಕಷ್ಟ ಕಾರ್ಪಣ್ಯಗಳಿಗೆ ಒಳಗಾಗಿರುವುದಕ್ಕೆ ಕಾರಣ ಅವರಲ್ಲಿ ಪೈಪೋಟಿಯನ್ನು ಪ್ರಚೋದಿಸುವ ಕೃತಕ ಆರ್ಥಿಕ ವ್ಯವಸ್ಥೆ. ಆ ಕಾಲದ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಅವನು ಸೂಚಿಸಿದ ಪರಿಹಾರವೆಂದರೆ ಸ್ಪರ್ಧೆಯಿಂದ ಉದ್ರೇಕಗೊಳ್ಳದ ಶಾಸನಬದ್ಧವಾದ ಕಾರ್ಮಿಕ ವರ್ಗ.

ಬೆಲ್ಲಮಿಯ ಕಾದಂಬರಿಯ ಕಥಾನಾಯಕ ೧೮೮೭ರಲ್ಲಿ ಗಾಢ ನಿದ್ದೆಗೊಳಗಾಗಿ ಇಸವಿ ೨೦೦೦ದಲ್ಲಿ ಎಚ್ಚರಗೊಳ್ಳುತ್ತಾನೆ. ಇಪ್ಪತ್ತೊಂದನೆಯ ಶತಮಾನದ ಬದಲಾವಣೆಗಳನ್ನು ಅವಲೋಕಿಸುತ್ತಾನೆ. ಅವನು ಕಂಡ ಸಮಾಜದಲ್ಲಿ ಆಗರ್ಭ ಶ್ರೀಮಂತರಾಗಲೀ ಅಥವಾ ಕಡುಬಡವರಾಗಲೀ ಇರಲಿಲ್ಲ. ಎಲ್ಲರಿಗೂ ಮರ್ಯಾದೆಯಿಂದ ಬದುಕಲು ಬೇಕಾದ ಅಗತ್ಯಗಳು ದೊರಕಿದ್ದವು. ಸಮಾಜವ್ಯವಸ್ಥೆಯಲ್ಲಿ ಅಂತಸ್ತನ್ನು ಗಳಿಸಲು ಲಾಭ, ಪ್ರಲೋಭನವನ್ನು ತೆಗೆದುಹಾಕಿ ಅದರ ಸ್ಥಾನದಲ್ಲಿ ದೇಶ ಮತ್ತು ಸಮಾಜ ಸೇವೆಯಿಂದ ಗಳಿಸಬಹುದಾದ ಘನತೆ ಗೌರವಗಳನ್ನು ಸೇರಿಸಲಾಗಿತ್ತು. ಬೆಲ್ಲಮಿಯ ಆದರ್ಶ ರಾಜ್ಯದಲ್ಲಿ ಸರ್ಕಾರದ ಪಾತ್ರ ಗೌಣವಾಗಿತ್ತು. ಅಧಿಕಾರಿಗಳ ಸಂಖ್ಯೆ ಕಡಿಮೆಯಾಗಿತ್ತು. ಜನರು ಹೊಡೆದಾಟ, ಯುದ್ಧ ಮುಂತಾದ ಹಿಂಸಾಕೃತ್ಯಗಳನ್ನು ತ್ಯಜಿಸಿದ್ದರಿಂದ ಪೊಲೀಸ್ ಮತ್ತು ಸೈನ್ಯಪಡೆಗಳ ಅಗತ್ಯವಿರಲಿಲ್ಲ. ಬೆಲ್ಲಮಿ ತನ್ನ ಆದರ್ಶರಾಜ್ಯದ ಕಲ್ಪನೆಗಳನ್ನು ಸಮರ್ಥಿಸಿಕೊಳ್ಳಲು ಮತ್ತು ಆಗಿನ ಅಮೆರಿಕನ್ ಸಮಾಜದ ಸ್ಥಿತಿಗತಿಗಳನ್ನು ಟೀಕಿಸಲು ೧೮೯೭ರಲ್ಲಿ 'ಸಮಾನತೆ' (Equality) ಎನ್ನುವ ಕೃತಿಯನ್ನು ಪ್ರಕಟಿಸಿದನು. ಇದರಲ್ಲಿ ಆದರ್ಶರಾಜ್ಯದ ತತ್ವಗಳನ್ನು 'ರಾಷ್ಟ್ರೀಯತೆ' (nationalism)ಯ ಮೂಲಕ ಕಾರ್ಯಗತಗೊಳಿಸಬಹುದೆಂದು ಪ್ರತಿಪಾದಿಸಿದನು. ಅವನ ಅನುಯಾಯಿಗಳು ರಾಷ್ಟ್ರದಾದ್ಯಂತ 'ರಾಷ್ಟ್ರೀಯ ಸಂಘ'ಗಳನ್ನು ಕಟ್ಟಿ ಬೆಲ್ಲಮಿಯ ತತ್ವಗಳನ್ನು ಅನುಸರಿಸುವಂತೆ ಜನರನ್ನು ಒತ್ತಾಯಪಡಿಸಿದರು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಜನಪ್ರಿಯವಾಗಿದ್ದ ಬೆಲ್ಲಮಿಯ ತತ್ವಗಳು ತಮ್ಮ ಸತ್ವ ಕಳೆದುಕೊಂಡು ಜನರ ಮನಸ್ಸಿನಿಂದ ಮರೆಯಾಗಿ ಹೋದವು.

ಥೋರ್‌ಸ್ಟೈನ್ ವೆಬ್ಲನ್ (Thorstein Veblen)

೧೮೯೯ರಲ್ಲಿ ಪ್ರಕಟವಾದ ವೆಬ್ಲನ್‌ನ ಕೃತಿ 'ವಿರಾಮವರ್ಗದ ಸಿದ್ಧಾಂತ' (The

theory of Leisure Class) ವಾಗ್ವಾದದ ಬಿರುಗಾಳಿಯನ್ನೇ ಎಬ್ಬಿಸಿತು. ಈ ಕೃತಿಯಲ್ಲಿ ವೆಬ್ಲನ್ ಐಶ್ವರ್ಯವಂತ ಔದ್ಯೋಗಿಕ ವರ್ಗದ ನಡವಳಿಕೆಯ ಮೇಲೆ ತನ್ನ ಕಟುಟೀಕೆಯನ್ನು ಕೇಂದ್ರೀಕರಿಸಿದನು. ೧೯೦೪ರಲ್ಲಿ ಪ್ರಕಟವಾದ ತನ್ನ ಎರಡನೆಯ ಕೃತಿ 'ವ್ಯವಹಾರ ಸಾಹಸ ಸಿದ್ಧಾಂತ' (The theory of Business Enterprise)ದಲ್ಲಿ ಕೈಗಾರಿಕೆ ಮತ್ತು ಉದ್ಯೋಗ/ವ್ಯವಹಾರಗಳ ನಡುವಣ ವೈರತ್ವವನ್ನು ವಿಶದಪಡಿಸಿದನು. ವೆಬ್ಲನ್ ಯಶಸ್ಸು ಗಳಿಸಿದ್ದು ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ. ಚಿಕಾಗೋ ಅನೇಕ ಉದ್ಯಮಗಳ – ಬೃಹತ್ ರೈಲುಮಾರ್ಗಗಳ ಕೂಡುದಾಣವಾಗಿತ್ತು. ಅತಿ ದೊಡ್ಡ ಕಸಾಯಿಖಾನೆಗಳಲ್ಲಿ ಹಸಿಗೆಯಾದ ಮಾಂಸವನ್ನು ಕಂತೆ ಕಟ್ಟಿ ನಾನಾ ಕಡೆಗಳಿಗೆ ಕಳುಹಿಸುವ ಕೇಂದ್ರವಾಗಿತ್ತು. ಮಿಲಿಯನಾಧಿಪತಿಗಳು ನೆಲಸಿದ್ದ ಮಹಾನಗರವಾಗಿತ್ತು. ಇಂಥ ನಗರದ ನಿವಾಸಿಗಳಾದ ವಿರಾಮವರ್ಗದವರ ನಡವಳಿಕೆಗಳನ್ನು ನಿಕಟದಿಂದ ವೀಕ್ಷಿಸಲು ಅವಕಾಶ ಮಾಡಿಕೊಟ್ಟ ಚಿಕಾಗೋ ವೆಬ್ಲನ್‌ನ ಪ್ರಯೋಗಶಾಲೆಯಾಯಿತು. ಅವನ ಅಭಿಪ್ರಾಯದಲ್ಲಿ ದುಡಿದು ಹಣಗಳಿಸಿದರೆ ಆ ದುಡಿಮೆಗೆ ಘನತೆ ಇರುತ್ತದೆ. ವಿರಾಮವರ್ಗದವರು ಕೂಡಿ ಹಾಕಿದ್ದು ಘನತೆ ಇಲ್ಲದ ದುಡಿಮೆ. ಅಗತ್ಯವಿರದಿದ್ದರೂ ತೋರಿಕೆಯ ಸಲುವಾಗಿ ವಸ್ತುಗಳನ್ನು ಕೊಳ್ಳುವುದು ವಿರಾಮವರ್ಗದ ವೈಶಿಷ್ಟ್ಯ. ಅದ್ಧೂರಿಯಾಗಿ ವೆಚ್ಚ ಮಾಡಿ ತಮ್ಮ ಐಶ್ವರ್ಯವನ್ನು ಮೆರೆಸುವುದು ಅವರ ಕೀಳು ಅಭಿರುಚಿಯ ದ್ಯೋತಕ. ವೆಬ್ಲನ್ ಅಭಿಪ್ರಾಯದಲ್ಲಿ ಈ ಸಾಹುಕಾರರು ಸಮಾಜದಲ್ಲಿ ಉಪಯೋಗಕ್ಕೆ ಬಾರದವರು; ಪ್ರಕೃತಿನಿಯಮದಂತೆ ಬದುಕಿನ ಹೋರಾಟದಲ್ಲಿ ಗೆದ್ದು ಬಂದ ಬಲಿಷ್ಠರೂ ಅಲ್ಲ. ಇವರು ಪರೋಪಜೀವಿಗಳು (parasites).

ವೆಬ್ಲನ್ ಬೆಲ್ಲಮಿ ಬರಹಗಳಿಂದ ಪ್ರಭಾವಿತನಾಗಿದ್ದನು. ಬೆಲ್ಲಮಿಯ ಆದರ್ಶ ರಾಜ್ಯ ಆಗರ್ಭ ಶ್ರೀಮಂತರು ಮತ್ತು ಕಡುಬಡವರು ಇಲ್ಲದ, ರಾಷ್ಟ್ರದ ಸಂಪತ್ತು ಸಮಾನವಾಗಿ ವಿತರಣೆಗೊಂಡು ಜನರು ನೆಮ್ಮದಿಯಿಂದ ಬದುಕುವ ಭವಿಷ್ಯದ ಚಿತ್ರಣ ವೆಬ್ಲನ್ ಮನಸ್ಸನ್ನು ಆವರಿಸಿತ್ತು. ಅವನ ಅಭಿಪ್ರಾಯದಲ್ಲಿ ಕೈಗಾರಿಕೆಗಳಿಗೂ ವ್ಯಾಪಾರ/ವ್ಯವಹಾರಗಳಿಗೂ ಇರುವ ಸಂಬಂಧ ಸಹಕಾರವಲ್ಲ, ವೈಷಮ್ಯ! ವ್ಯಾಪಾರಿಗಳು ಮತ್ತು ವಾಣಿಜ್ಯೋದ್ಯಮಿಗಳಿಗೆ ಕೈಗಾರಿಕೆಗಳ ಸ್ಥಿತಿಗತಿಗಳ ಬಗ್ಗೆ ನಿಜವಾದ ಕಾಳಜಿ ಇಲ್ಲ ಎನ್ನುವುದು ಜೇ ಗೌಲ್ಡ್ (Jay Gould)ನು ತನ್ನ ಒಡೆತನದಲ್ಲಿದ್ದ ಈರಿ ರೈಲುಮಾರ್ಗವನ್ನು, (Erie railroad) ತನ್ನ ಸ್ವಂತ ಲಾಭಕ್ಕಾಗಿ ನಾಶ ಮಾಡಿದ್ದು ಸಾಬೀತುಗೊಳಿಸುತ್ತದೆ ಎಂದು ವಾದಿಸಿದನು. ವೆಬ್ಲನ್ ಪ್ರಕಾರ ಈರಿ ರೈಲುಮಾರ್ಗವನ್ನು ಅದನ್ನು ನಡೆಸಿಕೊಂಡು ಹೋಗುತ್ತಿದ್ದ ಎಂಜನಿಯರುಗಳು ಮತ್ತು ಇತರ ತಾಂತ್ರಿಕ ಆಡಳಿತಕ್ಕೆ ಒಪ್ಪಿಸಬೇಕಾಗಿತ್ತು. ಅವರು ಅದನ್ನು ಹೆಮ್ಮೆಯಿಂದ ನಿರ್ವಹಿಸಿಕೊಂಡು ಹೋಗುತ್ತಿದ್ದರು. ವೆಬ್ಲನ್ ಊಹಿಸಿದ ಭವಿಷ್ಯದಲ್ಲಿ ವ್ಯಾಪಾರಿಗಳನ್ನು ಮತ್ತು ವಾಣಿಜ್ಯೋದ್ಯಮಿಗಳನ್ನು ನಾಯಕತ್ವದಿಂದ

ತೆಗೆದುಹಾಕಿ ತಂತ್ರಜ್ಞರು ಆ ಆಡಳಿತವನ್ನು ವಹಿಸಿಕೊಳ್ಳುವುದರಿಂದ ಸಮಾಜದ ಹಿತವನ್ನು ಸಾಧಿಸಬಹುದು ಎಂದು ಪ್ರತಿಪಾದಿಸಿದ್ದಾನೆ.

ಇತಿಹಾಸಕಾರರು

ಅಮೆರಿಕದ ಸಮಾಜಸುಧಾರಕರು ತಮ್ಮ ಸುತ್ತಲಿನ ಸಾಮಾಜಿಕ ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳಲು ಅವುಗಳ ಹಿನ್ನೆಲೆಯನ್ನು ತಿಳಿದುಕೊಳ್ಳುವುದು ಅಗತ್ಯವಾಗಿತ್ತು. ಆದ್ದರಿಂದ ಅವರು ಇತಿಹಾಸಕಾರರ ಸಹಾಯ ಪಡೆಯಬೇಕಾಯಿತು. ಆ ಸಮಯದಲ್ಲಿ ಐತಿಹಾಸಿಕ ಪ್ರಕ್ರಿಯೆಗಳ ಪುನರ್ವಿಮರ್ಶೆ ಕೈಗೊಂಡಿದ್ದ ಜಾನ್ ಫಿಸ್ಕ್‌ನ (John Fiske) ಕೃತಿಗಳು ಎಲ್ಲರ ಗಮನ ಸೆಳೆದಿದ್ದವು. ಫಿಸ್ಕ್ ಅಮೆರಿಕದ ರಾಜಕೀಯ ಸಂಸ್ಥೆಗಳ (political institutions) ಉಗಮ ಪ್ರಾಚೀನ ಕಾಲದ ಜರ್ಮನ್ ಬುಡಕಟ್ಟುಗಳಲ್ಲಿ (German tribes) ಉಂಟಾಯಿತು ಎನ್ನುವ ತೀರ್ಮಾನಕ್ಕೆ ಬಂದಿದ್ದನು. ಈ ಜರ್ಮನ್ ಬುಡಕಟ್ಟುಗಳು ರೋಮನ್ ಚಕ್ರಾಧಿಪತ್ಯವನ್ನು ಉರುಳಿಸಿ ಪ್ರಾಬಲ್ಯ ಗಳಿಸಿದ್ದವು. ಫಿಸ್ಕ್‌ನ ಐತಿಹಾಸಿಕ ಚಿಂತನೆಗಳು 'ಬೀಜ ಸಿದ್ಧಾಂತ' (germ theory) ವೆಂದು ಪ್ರಚುರಗೊಂಡಿತ್ತು. ಈ ಸಿದ್ಧಾಂತದ ಪ್ರಕಾರ ಪ್ರಾಚೀನ ಜರ್ಮನ್ ಬುಡಕಟ್ಟುಗಳು ಹುಟ್ಟುಹಾಕಿದ 'ಬೀಜಗಳು' ಮೊದಲು ಇಂಗ್ಲೆಂಡಿನಲ್ಲಿ ಆನಂತರ ಅಮೆರಿಕದಲ್ಲಿ ಸ್ವತಂತ್ರ ಸಂಸ್ಥೆಗಳಾಗಿ ಅರಳಿದವು. ಜೀವಶಾಸ್ತ್ರದ ವಿಕಾಸವಾದವನ್ನು ಅನುಸರಿಸಿ ಫಿಸ್ಕ್ ರಾಜಕೀಯ ಸಂಸ್ಥೆಗಳ ಬೆಳವಣಿಗೆಯನ್ನು ವಿವರಿಸಿದ್ದಾನೆ.

ಹರ್ಬರ್ಟ್ ಬಾಕ್ಸ್‌ಟರ್ ಆ್ಯಡಮ್ಸ್ (Herbert Baxter Adams) ಫಿಸ್ಕ್‌ನ ಬೀಜ ಸಿದ್ಧಾಂತವನ್ನು ಇನ್ನೂ ಹೆಚ್ಚಿಗೆ ವಿಸ್ತರಿಸಿದನು. ಆ್ಯಡಮ್ಸ್‌ನ ಅಭಿಪ್ರಾಯದಲ್ಲಿ ಆ್ಯಂಗ್ಲೊ-ಸಾಕ್ಸನ್ (Anglo-Saxon) ಜನಾಂಗಗಳಿಗೆ ಸ್ವಾತಂತ್ರ್ಯ ಪ್ರಕೃತಿದತ್ತವಾದ ಪ್ರವೃತ್ತಿ. ಹಾಗೆಯೇ ದಬ್ಬಾಳಿಕೆಯನ್ನು ವಿರೋಧಿಸುವುದೂ ಅವರಿಗೆ ಹುಟ್ಟಿನಿಂದಲೆ ಬಂದ ಸಹಜಗುಣ. ಆದ್ದರಿಂದ ಆ್ಯಂಗ್ಲೊ-ಸಾಕ್ಸನ್ ಜನರ ಪ್ರಭಾವಕ್ಕೆ ಒಳಗಾಗಿರುವ ಎಲ್ಲ ಕಡೆಗಳಲ್ಲಿ ಸ್ವಾತಂತ್ರ್ಯವನ್ನು ಬೆಳೆಸುವ ಸಾಮಾಜಿಕ ಸಂಸ್ಥೆಗಳು ಸಹಜವಾಗಿ ಹುಟ್ಟಿಕೊಳ್ಳುತ್ತವೆ ಎಂದು ಆ್ಯಡಮ್ಸ್ ಅಭಿಪ್ರಾಯಪಟ್ಟಿದ್ದಾನೆ.

ಫ್ರೆಡರಿಕ್ ಜಾಕ್ಸನ್ ಟರ್ನರ್ ರಾಜಕೀಯ ಸಂಸ್ಥೆಗಳ ಐತಿಹಾಸಿಕ ಬೆಳವಣಿಗೆಯನ್ನು ಒಪ್ಪಿಕೊಂಡರೂ, ಬೀಜ ಸಿದ್ಧಾಂತದ ಮೂಲತತ್ವವನ್ನು ಪ್ರಶ್ನಿಸಿ, ಅದರ ನ್ಯೂನತೆಯನ್ನು ವಿಶದಪಡಿಸಿದನು. ಈ ಸಿದ್ಧಾಂತ ಜರ್ಮನ್ ಮೂಲಕ್ಕೆ ಪ್ರಾಮುಖ್ಯತೆ ಕೊಟ್ಟು ಅಮೆರಿಕನ್ ಸಮಾಜವನ್ನು ರೂಪಿಸಿದ ಐತಿಹಾಸಿಕ ಪ್ರಕ್ರಿಯೆಗಳನ್ನು ಕಡೆಗಣಿಸಿದೆ ಎಂದು ವಾದಿಸಿದನು. ಟರ್ನರ್ ಅಭಿಪ್ರಾಯದಲ್ಲಿ ಅಮೆರಿಕದ ಗಡಿನಾಡು ಪ್ರಾಂತ್ಯ ವಲಸೆಗಾರರ ಅಮೆರಿಕರಣದಲ್ಲಿ ಪ್ರಮುಖ ಪಾತ್ರ ವಹಿಸಿದೆ. ಗಡಿನಾಡಿನ ಗುಡ್ಡಗಾಡುಗಳು ಕಾಲಕ್ರಮದಲ್ಲಿ ವಲಸೆಬಂದು ನೆಲಸಿದವರನ್ನು ಪರಿವರ್ತನೆಗೊಳಿಸಿದವು. ಇದು ಅವರನ್ನು ಯೂರೋಪಿ

ಯನ್ನರಾಗಿ ಮಾಡಲಿಲ್ಲ, ಒಂದು ಹೊಸ ಜನಾಂಗವಾಗಿ – ಅಮೆರಿಕನ್ನರಾಗಿ, ಪರಿವರ್ತನೆ ಗೊಂಡಿದ್ದರು. ಗಡಿನಾಡಿನ ಜೀವನ ಅಪ್ಪಟವಾದ ಅಮೆರಿಕನ್ ನಡವಳಿಕೆಗಳು, ಕಟ್ಟು ಕಟ್ಟಳೆಗಳು ಮತ್ತು ಸಾಮಾಜಿಕ ಸಂಸ್ಥೆಗಳ ಬೆಳವಣಿಗೆ ಕಾರಣವಾಯಿತು ಎಂದು ಪ್ರತಿಪಾದಿಸಿದ್ದಾನೆ.

ಕೊಲಂಬಿಯ ವಿಶ್ವವಿದ್ಯಾನಿಲಯದ ಜೇಮ್ಸ್ ಹಾರ್ವಿ ರಾಬಿನ್‌ಸನ್ (James Harvey Robinson) ಸಾಮಾನ್ಯ ಜನರು ಐತಿಹಾಸಿಕ ಪ್ರಕ್ರಿಯೆಯಲ್ಲಿ ಭಾಗವಹಿಸುವು ದರಿಂದ ಅವರು ಇತಿಹಾಸವನ್ನು ವ್ಯಾಖ್ಯಾನ ಮಾಡುವ ಬಗೆ ಸಾಮಾಜಿಕ ಬದಲಾವಣೆ ಗಳನ್ನುಂಟುಮಾಡಬಹುದು. ರಾಬಿನ್‌ಸನ್ ಅಭಿಪ್ರಾಯದಲ್ಲಿ ಇತಿಹಾಸ ಸಾಮಾಜಿಕ ಬೆಳವಣಿಗೆಯಲ್ಲಿ ಸಾಮಾನ್ಯ ಜನರ ಪಾತ್ರವನ್ನು ವಿಶದಗೊಳಿಸಬೇಕು; ಅದು ಬರಿಯ ರಾಜ ರಾಣಿಯರ ಆಳ್ವಿಕೆಯ ಮತ್ತು ಮಹಾದಂಡನಾಯಕರು ನಡೆಸಿದ ಯುದ್ಧಗಳ ನಿರೂಪಣೆಯಲ್ಲ. ಸಾಮಾನ್ಯ ಜನರು ಸಾಮಾಜಿಕ ಬದಲಾವಣೆಯ ಕಾರಣಕರ್ತರು ಎಂದು ರಾಬಿನ್‌ಸನ್ ನಂಬಿದ್ದನು.

ಇಪ್ಪತ್ತನೆಯ ಶತಮಾನದ ಇಬ್ಬರು ಇತಿಹಾಸಕಾರರು – ಚಾರ್ಲ್ಸ್ ಬಿಯರ್ಡ್ (Charles Beard) ಮತ್ತು ಕಾರ್ಲ್ ಬೆಕರ್ (Carl Becker) ಸಮಕಾಲೀನ ಸಮಾಜದ ಅಗತ್ಯಗಳನ್ನು ಅರಿತುಕೊಳ್ಳಲು ಇತಿಹಾಸದ ಅಧ್ಯಯನ ಅಗತ್ಯವಾದುದು ಎನ್ನುವುದನ್ನು ಮನಗಂಡರು. ಬಿಯರ್ಡ್ ರಾಬಿನ್‌ಸನ್‌ನ ಐತಿಹಾಸಿಕ ದೃಷ್ಟಿಯನ್ನು ಅನುಮೋದಿಸಿ, ಇತಿಹಾಸ ಸಮಾಜ ಸುಧಾರಣೆಯ ಸಲಕರಣೆಯಾಗಿ ಉಪಯೋಗಿಸಬಹುದು ಎಂದು ಪ್ರತಿಪಾದಿಸಿದನು. ಅವನು ತನ್ನ 'ರಾಜ್ಯಾಂಗದ ಅರ್ಥಶಾಸ್ತ್ರೀಯ ವಿಶ್ಲೇಷಣೆ' (An Economic Interpretation of the Constitution) ಕೃತಿಯಲ್ಲಿ ಅಮೆರಿಕದ ರಾಷ್ಟ್ರಪಿತರಲ್ಲಿ (founding fathers) ಅನೇಕರು ರಾಜ್ಯಾಂಗವನ್ನು ಅನುಮೋದಿಸಿದ್ದು ತಮ್ಮ ಸ್ವಂತ ಆರ್ಥಿಕ ಅನುಕೂಲಗಳಿಗಾಗಿ ಎಂದು ವಾದಿಸಿದನು. ೧೯೧೩ರಲ್ಲಿ ಈ ಕೃತಿ ಪ್ರಕಟವಾದಾಗ ಅನೇಕ ಪ್ರಗತಿಶೀಲ ಸಮಾಜ ಸುಧಾರಕರು ಬಿಯರ್ಡ್‌ನ ವಾದ[illegible] ಉಪಯೋಗಿಸಿಕೊಂಡು ಸರ್ಕಾರದ ಮೇಲೆ ವ್ಯವಹಾರ ಸಂಸ್ಥೆಗಳು ಒತ್ತಾಯ ಹೇರುವುದನ್ನು ನಿಲ್ಲಿಸಲು ಪ್ರಯತ್ನಿಸಿದರು.

ಬೆಕರ್ (Becker) ನಿರಂತರ ವಿಕಾಸಗೊಳ್ಳುತ್ತಿರುವ ಪ್ರಕೃತಿ ಮತ್ತು ಮಾನವರು ಪರಸ್ಪರ ಕಲೆತು ಮಾರ್ಪಾಡಾಗುವ ಪ್ರಕ್ರಿಯೆಯ ಅಧ್ಯಯನದಲ್ಲಿ ನಿರತನಾಗಿದ್ದನು. ವಿಕಾಸ ನಿರಂತರವಾದುದರಿಂದ ಶಾಶ್ವತವಾದ ಮೌಲ್ಯಗಳು ಈ ಜಗತ್ತಿನಲ್ಲಿ ಇರುವುದು ಸಾಧ್ಯವಿಲ್ಲ. ಹಿಂದಿನ ಕಾಲದಲ್ಲಿ ಆಗಿಹೋದ ಸಂಗತಿಗಳ ಸತ್ಯಾಸತ್ಯಗಳನ್ನು ನಿರ್ಧರಿಸು ವುದು ದುಸ್ಸಾಧ್ಯ. ಆದ್ದರಿಂದ ಗತಕಾಲದ ಘಟನೆಗಳ ವಸ್ತುನಿಷ್ಠ ವಿವರಣೆ ಎಂದಿಗೂ ಸಾಧ್ಯವಾಗಲಾರದು. ಇತಿಹಾಸಕಾರರ ಹಿನ್ನೋಟ ಅವರ ವರ್ತಮಾನದ ಪ್ರಾಪಂಚಿಕ ದೃಷ್ಟಿಯಿಂದ ಪ್ರಭಾವಿತಗೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾನೆ.

ವಿಕಾಸವಾದ ಮತ್ತು ಕಾನೂನು

ಡಾರ್ವಿನ್‌ನ ವಿಕಾಸವಾದ ಕಾಯಿದೆ/ಕಾನೂನುಗಳ ಮೂಲತತ್ವಗಳು ಶಾಶ್ವತವಾದವು ಎನ್ನುವ ನಂಬಿಕೆಯನ್ನು ನಿರಾಕರಿಸುವಂತೆ ಮಾಡಿತು. ಆಲಿವರ್ ವೆನ್‌ಡೆಲ್ ಹೋಮ್ಸ್ ವಿಕಾಸವಾದವನ್ನು ಕಾಯಿದೆ/ಕಾನೂನುಗಳ ಅಧ್ಯಯನಕ್ಕೆ ಅನ್ವಯಿಸಿದನು. ಕಾಯಿದೆ/ ಕಾನೂನುಗಳು ಸಮಾಜಪ್ರಕ್ರಿಯೆಯ ಒಂದು ಭಾಗ ಮಾತ್ರ ಎಂದು ಹೋಮ್ಸ್ ಅಭಿಪ್ರಾಯಪಟ್ಟನು. ಕಾನೂನುಗಳು ಮತ್ತು ನ್ಯಾಯಾಲಯ ವ್ಯವಸ್ಥೆ ಸಾಮಾಜಿಕ-ಆರ್ಥಿಕ ವ್ಯವಸ್ಥೆಗಳಿಗೆ ಪರಸ್ಪರ ಪೂರಕವಾಗಿರುವ, ಸದಾ ಪರಿವರ್ತನೆಗೊಳ್ಳುತ್ತಿರುವ ಅಂಗವೆಂದು ನಿರೂಪಿಸಿದನು. ವಾಸ್ತವಿಕ ವ್ಯವಹಾರಿಕ ತತ್ವ (pragmatic philosophy) ವನ್ನು ಅನುಸರಿಸಿ 'ಕಾಯಿದೆ/ಕಾನೂನುಗಳ ಪರಿವರ್ತನೆಗಳು ವಾಸ್ತವಿಕ ಅಗತ್ಯಗಳ ಪ್ರಕ್ರಿಯೆಗಳೆಂದು' ವಾದಿಸಿದನು. ರಾಜ್ಯಾಂಗ ಯಾವ ಶಾಶ್ವತವಾದ ಆರ್ಥಿಕ ತತ್ವದ ಮೇಲೂ ಆಧಾರಿತವಾಗಿಲ್ಲ; ಅದು ಸದಾ ಪರಿವರ್ತನೆಗೊಳ್ಳುತ್ತಿರುವ ಒಂದು ಸಾಧನ (instrument)ವಾಗಿದೆ; ಅದರ ಅರ್ಥ ನ್ಯಾಯಾಧೀಶರ ವ್ಯಾಖ್ಯಾನದ ಮೇಲೆ ನಿಂತಿರುತ್ತದೆ. ಹತ್ತೊಂಬತ್ತನೆಯ ಶತಮಾನದಲ್ಲಿ ಅಮೆರಿಕನ್ ನ್ಯಾಯಾಂಗ ತನ್ನ ಪ್ರಮುಖ ಕರ್ತವ್ಯ, ವ್ಯಾಪಾರ ವ್ಯವಹಾರಗಳನ್ನು ಸರ್ಕಾರದ ನಿಯಂತ್ರಣದಿಂದ ರಕ್ಷಿಸುವುದು ಎಂದು ತಿಳಿದಿತ್ತು. ಸರ್ಕಾರದ ಆರ್ಥಿಕ ನಿಯಂತ್ರಣಗಳನ್ನು ವಿನಾಕಾರಣ ನಿರಾಕರಿಸ ಬಾರದು, ಆ ನಿಯಂತ್ರಣಗಳು ರಾಜ್ಯಾಂಗವಿರುದ್ಧವಾಗಿದ್ದರೆ ಮಾತ್ರ ನಿರಾಕರಿಸಬಹುದು ಎನ್ನುವ ಹೋಮ್ಸ್‌ನ ಅಭಿಪ್ರಾಯವನ್ನು ನ್ಯಾಯಾಂಗ ಒಪ್ಪಿಕೊಳ್ಳಲು ಅನೇಕ ವರ್ಷಗಳೇ ಹಿಡಿದವು.

ವಿಕಾಸವಾದ ಮತ್ತು ಶಿಕ್ಷಣ

ವಿಕಾಸವಾದಿಗಳು ವಿದ್ಯಾಕ್ಷೇತ್ರದಲ್ಲೂ ತಮ್ಮ ಪ್ರಭಾವ ಬೀರಿ ಸದಾ ಪರಿವರ್ತನ ಗೊಳ್ಳುತ್ತಿರುವ ಪರಿಸರಕ್ಕೆ ಹೊಂದಿಕೊಳ್ಳುವಂತೆ ಮಾರ್ಗ ತೋರುವ ವಿದ್ಯಾಭ್ಯಾಸವನ್ನು ಅನುಷ್ಠಾನಕ್ಕೆ ತರಬೇಕೆಂದು ಕರೆ ನೀಡಿದರು. ಕ್ರಮೇಣವಾಗಿ ಜನರು ಶಿಕ್ಷಣಕ್ರಮದಲ್ಲಿ ಸುಧಾರಣೆ ಇಡೀ ಸಮಾಜದ ಸುಧಾರಣೆಗೆ ಕಾರಣವಾಗುತ್ತದೆ ಎನ್ನುವುದನ್ನು ಮನಗಂಡರು. ಅಮೆರಿಕದ ಶಿಕ್ಷಣಕ್ಷೇತ್ರದಲ್ಲಿ ಅತ್ಯಂತ ಗಣನೀಯನಾಗಿದ್ದವನು ವಾಸ್ತವಿಕ ವ್ಯವಹಾರ ತತ್ವವಾದಿ ಮತ್ತು ವಿಲಿಯಂ ಜೇಮ್ಸ್‌ನ ಅನುಯಾಯಿಯಾಗಿದ್ದ ಜಾನ್ ಡ್ಯೂಯಿ (John Dewey). ೧೮೯೬ರಲ್ಲಿ ಡ್ಯೂಯಿ ಮತ್ತು ಅವನ ಪತ್ನಿ ಚಿಕಾಗೋ ನಗರದಲ್ಲಿ 'ಪ್ರಾಯೋಗಿಕ ಪಾಠಶಾಲೆ' (Laboratory School)ಯನ್ನು ಸ್ಥಾಪಿಸಿದರು. ಈ ಪಾಠಶಾಲೆ ಯಲ್ಲಿ ಅವರು ತಮ್ಮ ಹೊಸ ಶಿಕ್ಷಣ ವಿಧಾನಗಳನ್ನು ಮತ್ತು ಸಿದ್ಧಾಂತಗಳನ್ನು ಪರೀಕ್ಷಿಸಿ ಅನುಷ್ಠಾನಕ್ಕೆ ತರಲು ಯೋಜನೆ ಹಾಕಿದ್ದರು. ಮೂರು ವರ್ಷಗಳ ನಂತರ ಡ್ಯೂಯಿ ತನ್ನ ಹೊಸ ವಿಧಾನಗಳನ್ನು ವಿವರಿಸಿ ಅವುಗಳ ಮಹತ್ವವನ್ನು ಸಮರ್ಥಿಸಿಕೊಳ್ಳಲು 'ಪಾಠಶಾಲೆ ಮತ್ತು ಸಮಾಜ' (The School and the Society) ಎನ್ನುವ ಪುಸ್ತಕವನ್ನು

ಬರೆದನು. ಆ ಪುಸ್ತಕ ಜನಪ್ರಿಯತೆ ಗಳಿಸಿ ಅವನನ್ನು ಶಿಕ್ಷಣ ಸುಧಾರಣೆ ಚಳುವಳಿಯ ಮುಂಚೂಣಿಯನ್ನು ಸೇರುವಂತೆ ಮಾಡಿತು. ನಂತರ ಈ ಚಳುವಳಿ 'ಪ್ರಗತಿಶೀಲ ಶಿಕ್ಷಣ' (progressive education) ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆಯಿತು.

ವಿಲಿಯಂ ಜೇಮ್ಸ್‌ನ 'ತೆರೆದ ಜಗತ್ತು' (open universe) ಕಲ್ಪನೆಯನ್ನು ಡ್ಯೂಯಿ ಒಪ್ಪಿಕೊಂಡು ತನ್ನ ಸಿದ್ಧಾಂತದಲ್ಲಿ ಅಳವಡಿಸಿಕೊಂಡನು. ತೆರೆದ ಜಗತ್ತು ಯಾವ ಶಾಶ್ವತವಾದ ನಿಯಮಗಳಿಗಾಗಲಿ ಅಥವಾ ಶಾಶ್ವತವಾದ ಮೌಲ್ಯಗಳಿಗಾಗಲಿ ಒಳಪಟ್ಟಿರುವುದಿಲ್ಲ. ಈ ತೆರೆದ ಜಗತ್ತಿನಲ್ಲಿ ವಾಸಿಸುವ ಜನರು ನಿರಂತರ ಬದಲಾಗುತ್ತಿರುವ ಪ್ರಕ್ರಿಯೆಯಿಂದ ಆವೃತಗೊಂಡಿರುತ್ತಾರೆ. ಅನುಭವ ಮತ್ತು ಶಿಕ್ಷಣ ಜನರಿಗೆ ಬದಲಾಗುತ್ತಿರುವ ಪ್ರಕ್ರಿಯೆಯನ್ನು ಹೇಗೆ ನಿಭಾಯಿಸಬೇಕೆನ್ನುವುದನ್ನು ಕಲಿಸುತ್ತದೆ. ಮಾನವನ ಮನಸ್ಸು ಜಗತ್ತಿನ ಇತರ ಎಲ್ಲ ವಸ್ತುಗಳಂತೆ ನಿರಂತರವಾಗಿ ವಿಕಾಸಗೊಳ್ಳುತ್ತಿದೆ. ಈ ಮನಸ್ಸು ಮತ್ತು ಪರಿಸರಗಳ ನಡುವೆ ಜರುಗುವ ಪರಸ್ಪರ ಒಡನಾಟಗಳು ಸಮಾಜವನ್ನು ಮುಂದುವರಿಯುವಂತೆ ಮಾಡಿ ಅದರ ಗೊತ್ತು ಗುರಿಗಳನ್ನು ರೂಪಿಸುತ್ತವೆ. ಮೇಲಾಗಿ ತತ್ವಜ್ಞಾನದ ಮೂಲಕ ಜನರು ತಮ್ಮ ಹಿಂದಿನ ಅನುಭವಗಳನ್ನು ಜ್ಞಾಪಿಸಿಕೊಂಡು ತಮ್ಮ ಬದುಕಿನಲ್ಲಿ ಮುಖ್ಯವಾದ ಮೌಲಿಕ ನಿರ್ಣಯಗಳನ್ನು ಮಾಡಬೇಕಾಗುತ್ತದೆ. ತಮ್ಮ ಮುಂದೆ ತೆರೆದುಕೊಳ್ಳುವ ಅವಕಾಶಗಳಲ್ಲಿ ತಮ್ಮ ಅಭ್ಯುದಯಕ್ಕೆ ಕಾರಣವಾಗಬಲ್ಲವುಗಳನ್ನು ಆಯ್ಕೆ ಮಾಡಬೇಕಾಗುತ್ತದೆ. ಡ್ಯೂಯಿ ಆಶಾವಾದಿ. ಪರಿಸರವನ್ನು ಬದಲಿಸುವ ಶಕ್ತಿ ಮಾನವನಿಗೆ ಇದೆ ಎಂದು ನಂಬಿದ್ದನು.

ಬದುಕಿನಲ್ಲಿ ಒದಗಿಬರುವ ಅವಕಾಶಗಳಲ್ಲಿ ಮನೆಯಲ್ಲಿ ಹಿರಿಯರು ತಮಗೆ ಬೇಕಾದುವನ್ನು ಬುದ್ಧಿವಂತಿಕೆಯಿಂದ ಆಯ್ಕೆ ಮಾಡಬೇಕು. ಹಾಗೆ ಮಾಡಲು ಅವರು ವಿದ್ಯಾವಂತರಾಗಿರಬೇಕು. ಆದ್ದರಿಂದ ವಿದ್ಯೆ ಎಲ್ಲರಿಗೂ ಅಗತ್ಯವಾದುದು. ಪ್ರಗತಿಶೀಲ ಶಿಕ್ಷಣವಿಧಾನಗಳಿಂದಾಗಿ ಡ್ಯೂಯಿ ಸ್ಥಾಪಿಸಿದ ಪ್ರಾಯೋಗಿಕ ಪಾಠಶಾಲೆ ಪ್ರಸಿದ್ಧಿ ಪಡೆಯಿತು. ಈ ಪಾಠಶಾಲೆಯಲ್ಲಿ ಮಕ್ಕಳು ಸುಮ್ಮನೆ ಕುಳಿತು ಉಪಾಧ್ಯಾಯರು ಹೇಳಿದ್ದನ್ನು ಕೇಳಿ ಜ್ಞಾಪಕದಲ್ಲಿಟ್ಟುಕೊಳ್ಳಲು ಬಾಯಿಪಾಠ ಮಾಡುವ ಪದ್ಧತಿಯನ್ನು ಕೈಬಿಟ್ಟು, ಮಕ್ಕಳು ಸ್ವತಃ ಭಾಗವಹಿಸಿ ತಮ್ಮ ಕೈಗಳಿಂದ ವಸ್ತುಗಳನ್ನು ತಯಾರಿಸುವುದರ ಮೂಲಕ ಹೊಸ ವಿಷಯಗಳನ್ನು ತಮ್ಮ ಅನುಭವದಿಂದ ಕಲಿತುಕೊಳ್ಳುತ್ತಿದ್ದರು[೧]. ಸಾಂಪ್ರದಾಯಿಕ

[೧] ವಿದ್ಯಾರ್ಥಿಗಳು ಸ್ವಂತ ಅನುಭವದಿಂದ ಕಲಿತುಕೊಳ್ಳುವ ವಿಧಾನ ಅಮೆರಿಕದ ಶಿಕ್ಷಣದ ಎಲ್ಲ ಹಂತಗಳಲ್ಲೂ ಪ್ರಾಧಾನ್ಯತೆ ಪಡೆದಿದೆ. ವಿಶ್ವವಿದ್ಯಾನಿಲಯಗಳ ತರಗತಿಗಳಲ್ಲಿ ಪ್ರಾಧ್ಯಾಪಕರು ಸದಾ ಪಾಠ ಹೇಳುವುದಿಲ್ಲ. ವಿದ್ಯಾರ್ಥಿಗಳು ತಾವೇ ಓದಿಕೊಂಡು ವಿಚಾರವಿನಿಮಯಕ್ಕೆ ಸಿದ್ಧರಾಗಿ ತರಗತಿಗೆ ಬರಬೇಕು. ಹಾಗೆಯೇ ತಾವು ಆರಿಸಿಕೊಂಡ ವಿಷಯಗಳ ಮತ್ತು ಯೋಜನೆಗಳ ಮೇಲೆ ವರದಿ ತಯಾರಿಸುವುದು ವಿದ್ಯಾರ್ಥಿಗಳ ಜವಾಬ್ದಾರಿ. ಭಾರತದಿಂದ ಬರುವ ವಿದ್ಯಾರ್ಥಿಗಳಿಗೆ ಈ ಪದ್ಧತಿಗೆ ಹೊಂದಿಕೊಳ್ಳಲು ಸ್ವಲ್ಪ ಸಮಯ ಹಿಡಿಯುತ್ತದೆ.

ವಿದ್ಯಾಧಿಕಾರಿಗಳು ಡ್ಯೂಯಿಯ ವಿಧಾನಗಳು ಮಕ್ಕಳಿಗೆ ಮಿತಿಮೀರಿದ ಸ್ವಾತಂತ್ರ್ಯ ಕೊಡುವುದರಿಂದ ಅಶಿಸ್ತು ಬೆಳೆಯಲು ಅವಕಾಶ ಉಂಟಾಗುತ್ತದೆ ಎಂದು ಟೀಕಿಸಿದರು. ಈ ಟೀಕೆಗಳಿಗೆ ಡ್ಯೂಯಿ, ತಾನು ವಿದ್ಯಾರ್ಥಿಗಳನ್ನು ಉತ್ತಮ ಪ್ರಜೆಗಳನ್ನಾಗಿ ಮಾಡುವುದರಲ್ಲಿ ನಿರತನಾಗಿರುವುದಾಗಿಯೂ ಮತ್ತು ಉತ್ತಮ ಪ್ರಜೆಗಳಿಂದ ಪ್ರಜಾರಾಜ್ಯದ ಪ್ರಗತಿಯಾಗುತ್ತದೆ ಎಂದು ಉತ್ತರಿಸಿದನು. ಡ್ಯೂಯಿ ವಿದ್ಯೆಗೆ ಎಷ್ಟು ಪ್ರಾಮುಖ್ಯತೆ ಕೊಟ್ಟಿದ್ದನೋ ಅಷ್ಟೇ ಪ್ರಾಮುಖ್ಯತೆಯನ್ನು ಮಕ್ಕಳು ಚಾರಿತ್ರ್ಯ ಬೆಳೆಸಿಕೊಳ್ಳುವುದಕ್ಕೆ ಕೊಟ್ಟಿದ್ದನು. ಮಕ್ಕಳು ಬರಿ ವಿದ್ಯೆ ಕಲಿತರೆ ಸಾಲದು, ಅವರು ಸತ್ಪ್ರಜೆಗಳಾಗಿ ಸದಾಚಾರವನ್ನು ಬೆಳೆಸಿಕೊಳ್ಳಬೇಕು ಎನ್ನುವುದು ಡ್ಯೂಯಿಯ ಶಿಕ್ಷಣ ತತ್ವವಾಗಿತ್ತು.

ಸಾರ್ವಜನಿಕ ಶಿಕ್ಷಣ ವ್ಯವಸ್ಥೆ

ಅಮೆರಿಕದ ಅಂತರ್ಯುದ್ಧದನಂತರ ತ್ವರಿತಗತಿಯಲ್ಲಿ ಜರುಗಿದ ನಗರೀಕರಣದಿಂದಾಗಿ ಸಾರ್ವಜನಿಕ ಶಿಕ್ಷಣ ಹೆಚ್ಚಿನ ಖರ್ಚಿಲ್ಲದೆಯೆ ಎಲ್ಲರಿಗೂ ದೊರೆಯುವಂತಾಯಿತು. ಉದ್ಯಮಗಳು ವಿಸ್ತಾರಗೊಂಡು ಲಾಭದಾಯಕವಾದವು. ಆ ಲಾಭದ ಒಂದು ನಿಗದಿ ಮಾಡಿದ ಅಂಶವನ್ನು ವಿದ್ಯಾಭ್ಯಾಸಕ್ಕೆ ಮೀಸಲಾಗಿಟ್ಟಿದ್ದರಿಂದ ಸಾರ್ವಜನಿಕ ವಿದ್ಯಾಭ್ಯಾಸವನ್ನು ವಿಸ್ತರಿಸಿ ಬೆಳೆಸಲು ಸಾಧ್ಯವಾಯಿತು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಅಮೆರಿಕದಲ್ಲಿ ಆರು ಸಾವಿರಕ್ಕೂ ಹೆಚ್ಚು ಪ್ರೌಢಶಾಲೆಗಳಿದ್ದವು. ಅಂತರ್ಯುದ್ಧದ ಕೊನೆಯಲ್ಲಿ ಹಲವು ನೂರು ಅಂಥ ಶಾಲೆಗಳು ಇದ್ದವು ಎಂದರೆ ಪ್ರೌಢ ವಿದ್ಯಾಭ್ಯಾಸದ ತ್ವರಿತ ಬೆಳವಣಿಗೆ ಸ್ಪಷ್ಟಗೊಳ್ಳುತ್ತದೆ. ವಿದ್ಯಾರ್ಥಿಗಳ ಸಂಖ್ಯೆ ಒಂದು ನೂರು ಸಾವಿರದಿಂದ ಐದು ನೂರು ಸಾವಿರಕ್ಕಿಂತಲೂ ಹೆಚ್ಚಾಯಿತು.

ಸಾರ್ವಜನಿಕ ಶಾಲೆಗಳ ಬೆಳವಣಿಗೆಗೆ ಕಾರಣ ತಂದೆ ತಾಯಿಗಳು, ಪೊಲೀಸರು ಮತ್ತು ಪಾದ್ರಿಗಳು ಮಾಡಬೇಕಾದ ಕರ್ತವ್ಯಗಳನ್ನು ಅವರ ಬದಲು ನೆರವೇರಿಸಲು ಸಾಮರ್ಥ್ಯವುಳ್ಳ ಸಂಸ್ಥೆ ಎನ್ನುವ ನಂಬಿಕೆ. ಮೇಲಾಗಿ ಹೊಸದಾಗಿ ಬಂದು ನೆಲಸಿದ ವಲಸೆಗಾರರನ್ನು 'ಅಮೆರಿಕರಣಗೊಳಿಸುವ' (americanizing) ಕಾರ್ಯವನ್ನು ಯಶಸ್ವಿಯಾಗಿ ಮಾಡುವ ಸಂಸ್ಥೆ ಎಂಬ ಭರವಸೆ. ಈ ಕಾರಣಗಳಿಂದಾಗಿ ಶಿಕ್ಷಣದ ವೆಚ್ಚ ೧೮೭೦-೧೯೦೦ ನಡುವಣ ಅವಧಿಯಲ್ಲಿ ನಾಲ್ಕು ಪಟ್ಟು ಹೆಚ್ಚಾಯಿತು. ಅದೇ ಸಮಯದಲ್ಲಿ ರಾಷ್ಟ್ರದ ಅನಕ್ಷರತೆಯನ್ನು ಅರ್ಧದಷ್ಟು ಕಡಿಮೆ ಮಾಡಲಾಯಿತು. ಇನ್ನೊಂದು ಮುಖ್ಯ ಬೆಳವಣಿಗೆಯೆಂದರೆ, ದಕ್ಷಿಣದ ಎರಡು ಸಂಸ್ಥಾನಗಳ ಹೊರತು ಮಿಕ್ಕ ಎಲ್ಲಾ ಸಂಸ್ಥಾನಗಳಲ್ಲಿ ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಕಡ್ಡಾಯ ಶಿಕ್ಷಣ ಕಾಯಿದೆಗಳು ಜಾರಿಗೆ ಬಂದಿದ್ದವು.

ದಕ್ಷಿಣ ಸಂಸ್ಥಾನಗಳು ಬಹುತೇಕ ಹಳ್ಳಿಗಾಡು ಪ್ರದೇಶಗಳಾಗಿದ್ದು ಬಡಜನರು ಹೆಚ್ಚಾಗಿದ್ದುದರಿಂದ ಶಿಕ್ಷಣದಲ್ಲಿ ಹಿಂದೆ ಬಿದ್ದವು. ಅಂತರ್ಯುದ್ಧದನಂತರ ಹಲವಾರು

ಖಾಸಗಿ ವೃತ್ತಿ ಶಿಕ್ಷಣ ಶಾಲೆಗಳು (vocational schools) ಮತ್ತು ಸಾಮಾನ್ಯ ಶಿಕ್ಷಣ ಶಾಲೆಗಳು (normal schools) ಮುಖ್ಯವಾಗಿ ಕರಿಯ ಯುವಕರ ವಿದ್ಯಾಭ್ಯಾಸಕ್ಕಾಗಿ ತೆರೆಯಲ್ಪಟ್ಟವು. ದಾಕ್ಷಿಣಾತ್ಯ ಬಹುತೇಕ ಬಿಳಿಯರು ಕರಿಯರಿಗೆ ವಿದ್ಯಾಭ್ಯಾಸ ಅನಗತ್ಯ ವೆಂದು ನಂಬಿದ್ದರು. ಹೇಗಿದ್ದರೂ ಕರಿಯರು ಊಳಿಗ ಮಾಡುವವರು, ಅವರಿಗೇಕೆ ಪೂರ್ಣ ವಿದ್ಯಾಭ್ಯಾಸ ಎನ್ನುವ ಧೋರಣೆ ತಾಳಿದ್ದರು. ೧೮೭೬ರ ನಂತರ ಕೆಲವು ಉತ್ತರದ ಲೋಕೋಪಕಾರಿಗಳು ಕರಿಯರ ಕೆಲವು ವಿದ್ಯಾಸಂಸ್ಥೆಗಳಿಗೆ ಸಹಾಯ ನೀಡಿದರು. ಈ ವಿದ್ಯಾಸಂಸ್ಥೆಗಳಲ್ಲಿ ಬೂಕರ್ ಟಿ. ವಾಷಿಂಗ್‌ಟನ್ ಸ್ಥಾಪಿಸಿದ ಟಸ್ಕಗೀ ಇನ್‌ಸ್ಟಿಟ್ಯೂಟ್ (Tuskegee Institute) ಪ್ರಸಿದ್ಧವಾಗಿತ್ತು. ಕರಿಯರಿಗಾಗಿ ಸ್ಥಾಪಿತವಾದ ಈ ವಿದ್ಯಾ ಸಂಸ್ಥೆಗಳ ಗುರಿ 'ಹೊಂದಿಕೊಂಡು ಹೋಗುವುದನ್ನು' ಕಲಿಸುವುದಾಗಿತ್ತು. ಅಂಥ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ವ್ಯವಸಾಯ ಅಥವಾ ಬೇರೆ ಯಾವುದಾದರೂ ಕಸುಬು ಕಲಿಸಿ ಅವರನ್ನು 'ಎರಡನೆಯ ದರ್ಜೆಯ ಪ್ರಜೆ'ಗಳಾಗಲು ತಯಾರಿ ಕೊಡುತ್ತಿದ್ದರು. ಪಾಂಡಿತ್ಯಪೂರ್ಣ ವಿದ್ಯಾಭ್ಯಾಸವನ್ನು ಕರಿಯರಿಗೆ ಕೊಡದೆಹೋದುದಕ್ಕೆ ಕಾರಣ ಅಂಥ ವಿದ್ಯಾಭ್ಯಾಸ ಕರಿಯರ ಕೀಳರಿಮೆಯನ್ನು ತೊಡೆದು ಹಾಕಬಹುದು ಎನ್ನುವ ಬಿಳಿಯರ ಭಯ! ಕರಿಯರು ಕೀಳುದರ್ಜೆಯವರಾಗಿ ಉಳಿಯುವುದು ಬಿಳಿಯರಿಗೆ ಲಾಭದಾಯಕವಾಗಿತ್ತು. ೧೮೮೧ರಲ್ಲಿ ಬೂಕರ್ ಟಿ. ವಾಷಿಂಗ್‌ಟನ್ ಟಸ್ಕಗೀ ಸಂಸ್ಥೆ ಸ್ಥಾಪಿಸಿದಾಗ ಅವನ ಧ್ಯೇಯ 'ಸದ್ಯಕ್ಕೆ ಕರಿಯರಿಗೆ ವ್ಯವಸಾಯ ಮತ್ತು ವೃತ್ತಿ ಶಿಕ್ಷಣ ಮುಖ್ಯವಾದುದು' ಎನ್ನುವುದಾಗಿತ್ತು. ಕೀಳರಿಮೆಯನ್ನು ಬೆಳೆಸುವ ಈ ಧ್ಯೇಯವನ್ನು ತೀವ್ರಗಾಮಿ ಕರಿಯ ನಾಯಕರು ಕಟುವಾಗಿ ಟೀಕಿಸಿದರು.

ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಜಾರಿಯಲ್ಲಿದ್ದ ಶಿಕ್ಷಣಪದ್ಧತಿಗಳೆಂದರೆ, ಕಂಠಪಾಠ ಮತ್ತು ಶಿಸ್ತು ಪರಿಪಾಲನೆ. ೧೯೦೦ರ ಹೊತ್ತಿಗೆ ಶಿಕ್ಷಣಪದ್ಧತಿಗಳು ಕ್ರಮೇಣ ಬದಲಾಗಿ ಜಾನ್ ಡ್ಯೂಯಿಯ ಶಿಕ್ಷಣವಿಧಾನಗಳನ್ನು ಅಳವಡಿಸಿಕೊಳ್ಳುವ ಪರಿಸ್ಥಿತಿ ಉಂಟಾಗಿತ್ತು. ಶಾಲೆಗಳಲ್ಲಿ ನಗರೀಕರಣ ಯುಗಕ್ಕೆ ತಕ್ಕ ವಿಷಯಗಳನ್ನು ಬೋಧಿಸಲು ಪ್ರಾರಂಭಿಸಿದ್ದರು. ಡ್ಯೂಯಿಯ ಅಭಿಪ್ರಾಯದಲ್ಲಿ ಶಾಲೆ ನಗರ ಸಮುದಾಯದ ಪುಟ್ಟ ಮಾದರಿಯಂತಿರಬೇಕು (miniature model). ಅವನು ತನ್ನ ಧ್ಯೇಯಗಳನ್ನು, ಯೂರೋಪಿನಲ್ಲಿ ಉಪಯೋಗಿಸುತ್ತಿದ್ದ ಮುಂದುವರಿದ ವಿಧಾನಗಳನ್ನು ಅನುಸರಿಸಿ ಉತ್ತಮಪಡಿಸಿಕೊಂಡನು. ಜರ್ಮನ್ ಶಿಕ್ಷಣತಜ್ಞ ಯೋಹಾನ್ ಹರ್ಬಾರ್ಟ್ ಮಕ್ಕಳಿಗೆ ಅವರ ಸಹಜ ಆಸಕ್ತಿಗಳಿಗೆ ತಕ್ಕಂಥ ಶಿಕ್ಷಣ ನೀಡಬೇಕೆಂದು ಸಲಹೆ ನೀಡಿದನು. ಹೊಸ ವಿಷಯಗಳನ್ನು ಮಕ್ಕಳು ಆಗಲೇ ತಿಳಿದುಕೊಂಡಿರುವ ವಿಷಯಗಳಿಗೆ ಹೊಂದಿಸಬೇಕು ಎಂದೂ ತಿಳಿಸಿದನು. ಈ ಅವಧಿಯಲ್ಲೇ ಯೋಹಾನ್ ಪೆಸ್ಟಲೋಜ್ಜಿ (Johann Pestalozzi) ಎಂಬ ಸ್ವಿಸ್ (Swiss) ಶಿಕ್ಷಣತಜ್ಞನ ನೂತನ ವಿಧಾನ 'ಆಬ್ಜೆಕ್ಟ್ ಶಿಕ್ಷಣ' (Object teaching) ವನ್ನು ಸೇರಿಸಿಕೊಳ್ಳಲಾಯಿತು. ಈ ವಿಧಾನದ ಪ್ರಕಾರ ದೈಹಿಕ

ಚಟುವಟಿಕೆಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡಲಾಯಿತು. ಗಣಿತವನ್ನು ಮಕ್ಕಳಿಗೆ ಆಟಿಕೆಗಳನ್ನು ಉಪಯೋಗಿಸುವುದರ ಮೂಲಕ ಹೇಳಿಕೊಡಲಾಯಿತು. ಇದು ಮಕ್ಕಳು ಸಂಖ್ಯೆಗಳನ್ನು ಬರೆದುಕೊಂಡು ನಂತರ ಕೂಡಿ ಕಳೆಯುವುದು ಮುಂತಾದ ಗಣಕ ಕ್ರಮಗಳನ್ನು ಮಾಡುವುದಕ್ಕಿಂತ ಉತ್ತಮ ಎಂದು ತಿಳಿದುಬಂತು. ಕ್ರಮೇಣ ಹಳೆಯ ಸಾಂಪ್ರದಾಯಿಕ ವಿಧಾನಗಳನ್ನು ಬಿಟ್ಟು ಹೊಸ ವಿಧಾನಗಳನ್ನು ಜಾರಿಗೆ ತಂದರು. 'ಕಾಯಕದಿಂದ ಕಲಿಯುವಿಕೆ' ಶಿಕ್ಷಣ ವಿಧಾನ ಕಂಠಪಾಠ ಮುಂತಾದ ಹಳೆಯ ಪದ್ಧತಿಗಳ ಸ್ಥಾನವನ್ನೂ ಆಕ್ರಮಿಸಿ ಹಬ್ಬುತ್ತ ಹೋಯಿತು.

ಉನ್ನತ ಶಿಕ್ಷಣ

ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಉಂಟಾದ ಸಾರ್ವಜನಿಕ ವಿದ್ಯಾಭ್ಯಾಸದ ಬೆಳವಣಿಗೆ ಮತ್ತು ಯಂತ್ರ ನಾಗರಿಕತೆಯ ಸಂಕೀರ್ಣ ಸಮಾಜದ ಸವಾಲುಗಳನ್ನು ಎದುರಿಸುವ ಸಲುವಾಗಿ ಅಮೆರಿಕನ್ ಉನ್ನತ ವಿದ್ಯಾಭ್ಯಾಸ ಹೆಚ್ಚು ಪ್ರಾಮುಖ್ಯತೆ ಪಡೆಯಿತು. ಆದ್ದರಿಂದ ಆ ಕ್ಷೇತ್ರದಲ್ಲಿ ಶಿಕ್ಷಣ ಉತ್ತಮಗೊಳ್ಳುತ್ತಾ ಹೋಯಿತು. ಅಂತಯುರ್ದ್ಧದ ಕರಾಳ ದಿನಗಳಲ್ಲಿ ಉನ್ನತ ಶಿಕ್ಷಣದ ಮಹತ್ವವನ್ನು ಮನಗಂಡ ರಾಜಕಾರಣಿಗಳು 'ಮೊರ್ರಿಲ್ಲ್ ಕಾಯಿದೆ' (Morrill act) ಜಾರಿಗೆ ತಂದರು. ಈ ಕಾಯಿದೆ ಪ್ರಕಾರ ೧೬೦೦೦ ಚದುರ ಮೈಲಿಗಳಷ್ಟು ಭೂಮಿಯನ್ನು ವ್ಯವಸಾಯ ಮತ್ತು ವೃತ್ತಿ ಶಿಕ್ಷಣಶಾಲೆಗಳಿಗಾಗಿ ಸರ್ಕಾರ ಕಾದಿರಿಸಿತು. ಅನೇಕ ಸಂಸ್ಥಾನಗಳು ಈ ಕಾಯಿದೆಯ ಪ್ರಯೋಜನ ಪಡೆದು ಅಮೆರಿಕದ ಕೆಲವು ಅತ್ಯುತ್ತಮ ಸಂಸ್ಥಾನ ವಿಶ್ವವಿದ್ಯಾನಿಲಯಗಳನ್ನು (state universities) ಅಸ್ತಿತ್ವಕ್ಕೆ ತಂದವು. ಇದೇ ಸಮಯದಲ್ಲಿ ಖಾಸಗಿ ವಿಶ್ವ ವಿದ್ಯಾನಿಲಯಗಳೂ ಅಭಿವೃದ್ಧಿಗೊಂಡವು – ಚಿಕಾಗೋ , ಕಾರ್ನೆಲ್ (Cornell), ವ್ಯಾಂಡರ್‌ಬಿಲ್ಟ್ (Vanderbilt), ಸ್ಟಾನ್‌ಫೊರ್ಡ್ (Stanford), ಜಾನ್ ಹಾಪ್ಕಿನ್ಸ್ (John Hopkins) ಮತ್ತು ಕಾರ್ನೆಗಿ ಸಂಸ್ಥೆ (Carnegie Institute) – ಇಂಥ ನೂತನ ವಿದ್ಯಾಸಂಸ್ಥೆಗಳನ್ನು ಶ್ರೀಮಂತ ಉದ್ದಿಮೆಗಾರರು ಸ್ಥಾಪಿಸಿದರು.

ಖಾಸಗಿ ಹಾಗೂ ಭೂದೇಣಿಗೆ ವಿಶ್ವವಿದ್ಯಾನಿಲಯಗಳು (land grant universities) ನವೀನ ಮತ್ತು ವ್ಯಾಪಕವಾದ ಪಠ್ಯಕ್ರಮಗಳನ್ನು ಅಳವಡಿಸಿಕೊಂಡು ಪ್ರಯೋಗ ಮಾಡತೊಡಗಿದುವು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಇಂಗ್ಲಿಷ್, ಆಧುನಿಕ ಭಾಷೆಗಳು, ಪ್ರಕೃತಿ ವಿಜ್ಞಾನಗಳು (natural sciences) ಮತ್ತು ಸಾಮಾಜಿಕ ವಿಜ್ಞಾನಗಳು ವ್ಯಾಪಕವಾದ ಕಲಾವಿಭಾಗದ (liberal arts) ಪಠ್ಯಕ್ರಮದಲ್ಲಿ ಸೇರಿದ್ದವು. ೧೯೦೦ರ ಹೊತ್ತಿಗೆ ಇತಿಹಾಸ, ರಾಜಕೀಯ ಶಾಸ್ತ್ರ, ಅರ್ಥಶಾಸ್ತ್ರಗಳು ಪಠ್ಯಕ್ರಮದಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಂಡಿದ್ದವು. ಸಮಾಜಶಾಸ್ತ್ರ ಕೂಡ ಆ ಗುಂಪಿಗೆ ಪ್ರವೇಶಿಸುವ ಹಂತದಲ್ಲಿತ್ತು. ವಿಲಿಯಂ ಜೇಮ್ಸ್‌ನ ಪ್ರಯತ್ನದಿಂದ ಮನಃಶಾಸ್ತ್ರ ತತ್ವಜ್ಞಾನದಿಂದ

ಬೇರೆಯಾಗಿ ಸ್ವತಂತ್ರ ಅಂತಸ್ತನ್ನು ಪಡೆಯಿತು. ರಸಾಯನಿಕ ಶಾಸ್ತ್ರ ಮತ್ತು ಭೌತಶಾಸ್ತ್ರಗಳಲ್ಲಿ ಪ್ರಯೋಗ ಕಡ್ಡಾಯ ಮಾಡಲಾಯಿತು. ಭೂಗರ್ಭಶಾಸ್ತ್ರದಲ್ಲಿ ಕ್ಷೇತ್ರಯಾತ್ರೆಗಳು ಪಠ್ಯಕ್ರಮದ ಅವಿಭಾಜ್ಯ ಅಂಗಗಳಾದವು. ಕಾಲಕ್ರಮದಲ್ಲಿ ಶಿಕ್ಷಣವೇ ಅಧ್ಯಯನ ಕ್ಷೇತ್ರವಾಯಿತು. ೧೯೧೧ರ ಹೊತ್ತಿಗೆ ಬಹುತೇಕ ಸಂಸ್ಥಾನಗಳಲ್ಲಿ ಶಿಕ್ಷಕರು ಯೋಗ್ಯತಾಪತ್ರ ಪಡೆಯುವುದನ್ನು ಕಡ್ಡಾಯ ಮಾಡಲಾಯಿತು.

೧೮೭೬ರಲ್ಲಿ ಜಾನ್ ಹಾಪ್ಕಿನ್ಸ್ (John Hopkins) ವಿಶ್ವವಿದ್ಯಾನಿಲಯ ಅಮೆರಿಕದ ಮೊದಲನೆಯ ಸ್ನಾತಕೋತ್ತರ ವಿದ್ಯಾಸಂಸ್ಥೆಯಾಯಿತು. ಸ್ನಾತಕೋತ್ತರ ಶಿಕ್ಷಣಸಂಸ್ಥೆಯಲ್ಲಿ ವಿಷಯವನ್ನು ಕುರಿತು ವಿಶಿಷ್ಟ ಮತ್ತು ಆಳವಾದ ಪರಿಜ್ಞಾನ ಪಡೆಯುವಂತೆ ವ್ಯವಸ್ಥೆಗೊಳಿಸಲಾಗಿತ್ತು. ಅಂತರ್ಯುದ್ಧ ಪೂರ್ವದಲ್ಲಿ ಅಮೆರಿಕನ್ನರು ಉನ್ನತ ಶಿಕ್ಷಣಕ್ಕಾಗಿ ಯೂರೋಪಿಗೆ, ಮುಖ್ಯವಾಗಿ ಜರ್ಮನಿಗೆ ಹೋಗುವುದು ಅಗತ್ಯವಾಗಿತ್ತು. ಜಾನ್ ಹಾಪ್ಕಿನ್ಸ್ ಸ್ನಾತಕೋತ್ತರ ಕೇಂದ್ರ ಕೆಲವು ಶ್ರೀಮಂತರ ಗಮನ ಸೆಳೆದು ಅವರು ಇತರ ವಿಶ್ವವಿದ್ಯಾನಿಲಯಗಳಲ್ಲೂ ಉನ್ನತ ಶಿಕ್ಷಣ ಕೇಂದ್ರಗಳನ್ನು ತೆರೆಯಲು ಹಣ ಸಹಾಯ ಮಾಡಿದರು. ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಅಮೆರಿಕ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಶಿಕ್ಷಣದ ಮಟ್ಟ ಯೂರೋಪಿನ ಅತ್ಯುತ್ತಮ ವಿಶ್ವವಿದ್ಯಾನಿಲಯಗಳ ಮಟ್ಟಕ್ಕೆ ಸರಿಸಮನಾಗಿತ್ತು.

ಜಾನಪದ ಸಂಸ್ಕೃತಿ ಮತ್ತು ಕಲೆ

ಅಮೆರಿಕದ ಅಂತರ್ಯುದ್ಧ ಸಮಾಜದ ಎಲ್ಲ ಸ್ತರಗಳನ್ನೂ ಛಿದ್ರಗೊಳಿಸಿದ್ದರ ಪರಿಣಾಮವಾಗಿ ೧೮೬೫ರ ನಂತರ ನಾಡಿನ ಸಂಸ್ಕೃತಿ ಮತ್ತು ಕಲೆ ಹೊಸರೀತಿಯಲ್ಲಿ ಅಭಿವ್ಯಕ್ತಿಗೊಂಡವು. ಈ ಬದಲಾವಣೆಯ ಒಂದು ಮುಖ ಆ ಕಾಲದ ಜಾನಪದ ಸಂಸ್ಕೃತಿಯಲ್ಲಿ ಪ್ರತಿಫಲಿತವಾಗಿದೆ. ಬದಲಾವಣೆ ವ್ಯಕ್ತಿಯ ಸ್ವಯಂ ಅಭಿವೃದ್ಧಿಯ ಆಸಕ್ತಿಯಲ್ಲಿ, ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಂಡವನು ಎನ್ನುವ ಭಾವನೆಯನ್ನು ಬೆಳೆಸಿಕೊಳ್ಳುವುದರಲ್ಲಿ ಅಭಿವ್ಯಕ್ತಿಗೊಂಡಿತು. ಚಿಕ್ಕಂದಿನಲ್ಲಿ ತಾವು ಪಡೆದ ವಿದ್ಯಾಭ್ಯಾಸದ ಅಸಮರ್ಪಕತೆ ಜನರಲ್ಲಿ ಹೆಚ್ಚಿನ ಜ್ಞಾನದಾಹ ಉಂಟುಮಾಡಿತ್ತು. ಇದನ್ನು ತಣಿಸಲು ಸಾಮಾನ್ಯ ಜನರ ತಿಳುವಳಿಕೆಯ ಮಟ್ಟಕ್ಕೆ ಬರೆದ ಪುಸ್ತಕಗಳು, ವಾರಪತ್ರಿಕೆಗಳು, ಮಾಸಿಕಗಳು ಮತ್ತು ಭಾಷಣಗಳಿಗೆ ಅಪಾರ ಬೇಡಿಕೆ ಉಂಟಾಗಿ ಅವುಗಳ ಪೂರೈಕೆಗೆ ಜನತಾ ಮಾರುಕಟ್ಟೆಗಳು ಸೃಷ್ಟಿಗೊಂಡವು.

ಜನರ ಸ್ವಯಂ ಅಭಿವೃದ್ಧಿಯನ್ನು ಧ್ಯೇಯವಾಗಿರಿಸಿಕೊಂಡ ಸಾರ್ವಜನಿಕ ಪುಸ್ತಕ ಭಂಡಾರಗಳು ಸಾರ್ವಜನಿಕರ ಶಿಕ್ಷಣ ಅಭಿವೃದ್ಧಿಗೊಳ್ಳುವುದರಲ್ಲಿ ಮುಖ್ಯ ಪಾತ್ರ ವಹಿಸಿದವು. ೧೮೭೬ರಲ್ಲಿ ಅಮೆರಿಕನ್ ಪುಸ್ತಕ ಭಂಡಾರ ಸಂಸ್ಥೆ ಸ್ಥಾಪಿತವಾಯಿತು. ಸ್ವಲ್ಪ ಸಮಯದ ನಂತರ ಆ್ಯಂಡ್ರೂ ಕಾರ್ನೆಗಿ (Andrew Carnegie) ನೀಡಿದ ಬೃಹತ್

ಪ್ರಮಾಣದ ಹಣದಿಂದ ಕಾರ್ನೆಗಿ ಪುಸ್ತಕ ಭಂಡಾರ ವ್ಯವಸ್ಥೆ (system of Carnegie libraries) ಅಸ್ತಿತ್ವಕ್ಕೆ ಬಂತು. ಹತ್ತೊಂಬತ್ತನೆಯ ಶತಮಾನ ಮುಗಿಯುವ ಸಮಯದಲ್ಲಿ ಅಮೆರಿಕದಲ್ಲಿ ೯೦೦೦ಕ್ಕೂ ಹೆಚ್ಚು ಪುಸ್ತಕ ಭಂಡಾರಗಳಿದ್ದವು. ಇವುಗಳಲ್ಲಿ ಶೇಖರವಾಗಿದ್ದ ಪುಸ್ತಕಗಳ ಸಂಖ್ಯೆ ೪೫ ಮಿಲಿಯನ್‌ಗಿಂತ ಮಿಗಿಲಾಗಿತ್ತು.

ಚೊಟೊಕ್ವಾ ಚಳುವಳಿ (Chautauqua movement) ಕೂಡ ಜನರ ಜ್ಞಾನ ಪಿಪಾಸೆಗೆ ನಿದರ್ಶನವಾಗಿದೆ. ೧೮೭೪ರಲ್ಲಿ ಪಶ್ಚಿಮ ನ್ಯೂಯಾರ್ಕಿನ ಚೊಟೊಕ್ವಾ ಸರೋವರ ತೀರದಲ್ಲಿ ಈ ಚಳುವಳಿ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಅದು ಬರಿ ಭಾನುವಾರ ಉಪದೇಶಿಗಳ ಶಾಲೆ (Sunday school teachers)ಯಾಗಿತ್ತು. ಆದರೆ ಕ್ರಮೇಣ ಈ ಶಾಲೆಗಳ ಕಾರ್ಯಕ್ರಮ ವಿಸ್ತಾರಗೊಂಡು ಸಾಹಿತ್ಯ, ವಿಜ್ಞಾನ ಮತ್ತು ಅರ್ಥಶಾಸ್ತ್ರ ಮುಂತಾದ ವಿಷಯಗಳಲ್ಲಿ ಸಾವಿರಾರು ಜನರಿಗೆ ಶಿಕ್ಷಣ ದೊರೆಯು ವಂತಾಯಿತು. ಇದರ ಯಶಸ್ಸಿನಿಂದ ದೇಶದ ನಾನಾ ಕಡೆಗಳಲ್ಲಿ ಅದನ್ನು ಹೋಲುವ ಚಳುವಳಿಗಳು ಹುಟ್ಟಿಕೊಂಡವು. ೧೯೦೦ರ ಹೊತ್ತಿಗೆ ಚೊಟೊಕ್ವಾ ಮಾದರಿಯ ಇನ್ನೂರಕ್ಕೂ ಹೆಚ್ಚಿನ ಸಂಸ್ಥೆಗಳು ದೇಶದಾದ್ಯಂತ ಹುಟ್ಟಿಕೊಂಡಿದ್ದವು. ಆದರೆ ಈ ಸಂಸ್ಥೆಗಳು ನೀಡುತ್ತಿದ್ದ ಶಿಕ್ಷಣದಲ್ಲಿ ಬುದ್ಧಿಪ್ರಧಾನವಾದ ಕಾರ್ಯಕ್ರಮಗಳಿಗಿಂತ ಮನರಂಜನಾ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಿದ್ದರು. ಆದಾಗ್ಯೂ ಈ ಸಂಸ್ಥೆಗಳು ಮಿಲಿಯನ್‌ಗಟ್ಟಲೆ ಅಮೆರಿಕನ್ನರಿಗೆ ವಿದ್ಯಾವಂತರಾಗುವ ಅವಕಾಶಗಳನ್ನು ಕಲ್ಪಿಸಿಕೊಟ್ಟು ಅವರ ಸ್ವಯಂ ಅಭಿವೃದ್ಧಿಗೆ ಕಾರಣವಾದವು.

ವೃತ್ತಪತ್ರಿಕೆಗಳು

ಜನರ ಆಸಕ್ತಿ ಕೆರಳಿಸಿ ಅವರ ಅಭಿಪ್ರಾಯಗಳನ್ನು ರೂಪಿಸುವುದರಲ್ಲಿ ವೃತ್ತಪತ್ರಿಕೆಗಳು ಅಸಾದೃಶವಾದವು. ಯಂತ್ರವಿಜ್ಞಾನ ಅಭಿವೃದ್ಧಿಗೊಂಡಂತೆ ಪತ್ರಿಕೋದ್ಯಮ ಬೆಳೆಯುತ್ತ ಹೋಯಿತು. ವೆಬ್ ಪ್ರೆಸ್ (Web press) ಪತ್ರಿಕೆ ಪುಟದ ಎರಡು ಕಡೆಗಳ ಮೇಲೆ ಒಂದೇ ಸಮಯದಲ್ಲಿ ಅಚ್ಚು ಹಾಕಬಲ್ಲ ಯಂತ್ರ. ಇನ್ನೊಂದು ಯಂತ್ರ ಇದು ಅಚ್ಚಿನ ಯಂತ್ರಕ್ಕೆ ಲಗತ್ತಾಗಿರುತ್ತದೆ. ಈ ಯಂತ್ರ ವೃತ್ತಪತ್ರಿಕೆಯ ಒಂದು ಆವೃತ್ತಿಯ (edition) ಎಲ್ಲ ಪ್ರತಿಗಳನ್ನು ಒಟ್ಟು ಮಾಡುವುದು, ಪುಟಗಳನ್ನು ಮಡಿಸುವುದು, ಕತ್ತರಿಸು ವುದು, ಇವೆಲ್ಲವನ್ನೂ ಮಾಡಬಲ್ಲುದಾಗಿತ್ತು. ಮರದ ತಿರುಳಿನಿಂದ (wood pulp) ಕಾಗದ ತಯಾರಿಸುವ ಯಂತ್ರ ವೃತ್ತಪತ್ರಿಕೆಯನ್ನು ಪ್ರಕಟಿಸಲು ತಗಲುವ ವೆಚ್ಚವನ್ನು ಕಡಿಮೆ ಮಾಡಿತು. ಈ ನವೀನ ಯಂತ್ರಗಳಿಗೆ ಕಿರೀಟವಿಟ್ಟಂತೆ ಇದ್ದ ಸಾಧನೆ ಎಂದರೆ 'ಲಿನೋ ಟೈಪ್' (lino type) ಯಂತ್ರವನ್ನು ಕಂಡುಹಿಡಿದದ್ದು. ಇದು ಅಚ್ಚಿನ ಮೊಳೆ ಗಳನ್ನು ಸಾಲುಸಾಲಾಗಿ ಒಂದೆ ಬಾರಿಗೆ ಜೋಡಿಸುವುದನ್ನು ವೇಗವಾಗಿ, ಸಮರ್ಪಕವಾಗಿ ಮಾಡುತ್ತಿತ್ತು. ಇದು ಕೈಯಿಂದ ಅಚ್ಚುಮೊಳೆ ಜೋಡಿಸುವ ರೇಜಿಗೆಯ ಕೆಲಸವನ್ನು

ತಪ್ಪಿಸಿತು. ಕೀ ಬೋರ್ಡ್ (key board)ನ ಸಹಾಯದಿಂದ ಒಬ್ಬ ಕೆಲಸಗಾರ ಅಗಾಧ ಪ್ರಮಾಣದಲ್ಲಿ ಶೀಘ್ರವಾಗಿ ಅಚ್ಚು ಹಾಕಲು ಸಾಧ್ಯವಾಯಿತು.

ಇತರ ಯಂತ್ರೋಪಕರಣಗಳೂ ಪತ್ರಿಕೋದ್ಯಮವನ್ನು ಪರಿವರ್ತನಗೊಳಿಸಿದವು. ಟೆಲಿಫೋನ್, ಟೆಲಿಗ್ರಾಫ್ ವ್ಯವಸ್ಥೆ ಮತ್ತು ದೇಶವಿದೇಶಗಳನ್ನು ಸಂಪರ್ಕಿಸಲು ಸಮುದ್ರದೊಳಗಿಂದ ಹಾಕಿದ ತಂತಿಗಳು (cables) – ಇವೆಲ್ಲ ಸುದ್ದಿಸಮಾಚಾರಗಳನ್ನು ಸಂಗ್ರಹಿಸಿ ಶೀಘ್ರವಾಗಿ ವಿದೇಶಗಳಿಗೆ ಬಿತ್ತರಿಸುವ ಪ್ರಮಾಣವನ್ನು ಹೆಚ್ಚಿಸಿದವು. ಪತ್ರಕರ್ತರ ಸಂಸ್ಥೆಗಳು ಏಳಿಗೆ ಹೊಂದಿದವು. ಹೊಸ ರೀತಿಯ ಪತ್ರಿಕೋದ್ಯಮ 'ಸಿಂಡಿಕೇಟೆಡ್ ಆರ್ಟಿಕಲ್' ಪ್ರಾರಂಭವಾಯಿತು. ವೃತ್ತಪತ್ರಿಕೆಗಳು ಪ್ರಮಾಣಬದ್ಧವಾಗಿ ಸುದ್ದಿಯನ್ನು ಕ್ರೋಢೀಕರಿಸಿ ದೇಶದ ನಾನಾಭಾಗಗಳಲ್ಲಿ ಸುದ್ದಿ ಒಂದೇ ತೆರನಾಗಿ ಪ್ರಸಾರ ವಾಗುವಂತೆ ವ್ಯವಸ್ಥಿತಗೊಳಿಸಲಾಯಿತು. ಇವು ರಾಷ್ಟ್ರದ ಐಕ್ಯತೆಯನ್ನು ಹೆಚ್ಚಿಸಿದವು. ಜಾಹೀರಾತುಗಳು ಪತ್ರಿಕೋದ್ಯಮದ ಒಂದು ಮುಖ್ಯ ಭಾಗವಾಯಿತು. ಇವುಗಳಿಂದ ಹೆಚ್ಚು ಹಣವೂ ಬರಲಾರಂಭಿಸಿತು. ಪತ್ರಿಕೆಗಳ ಸಂಪಾದಕರು ಜಾಹೀರಾತುದಾರರ ಬಗ್ಗೆ ಬರೆಯುವಾಗ ಬಹಳ ಎಚ್ಚರ ವಹಿಸಬೇಕಾಯಿತು.

ಜೋಸೆಫ್ ಪ್ಯುಲಿಟ್ಜರ್ ಎಂಬ ಹಂಗೆರಿಯಿಂದ ಬಂದ ವಲಸೆಗಾರ ಅಮೆರಿಕದ ಪತ್ರಿಕೋದ್ಯಮದಲ್ಲಿ ನವಯುಗದ ಹರಿಕಾರನಾದನು. ಪತ್ರಿಕೆಗಳಲ್ಲಿ ಅಚ್ಚಾಗುವ ವಿಷಯಗಳ ಗುಣಮಟ್ಟಕ್ಕೆ ಪ್ಯುಲಿಟ್ಜರ್ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟನು. ೧೮೮೭ರಲ್ಲಿ ಅವನು ನ್ಯೂಯಾರ್ಕಿನಿಂದ ಪ್ರಕಟವಾಗುತ್ತಿದ್ದ 'ಪ್ರಪಂಚ' (World) ಪತ್ರಿಕೆಯ ಆಡಳಿತವನ್ನು ವಹಿಸಿಕೊಂಡನು. ಪ್ಯುಲಿಟ್ಜರ್ ಸತತ ಪ್ರಯತ್ನದಿಂದ ಪತ್ರಿಕೋದ್ಯಮದಲ್ಲಿ ಕ್ರಾಂತಿ ಎಬ್ಬಿಸಿದನು. ಅವನ ಪತ್ರಿಕೆ ಅಪಾರ ಜನಸಮೂಹವನ್ನು ತಲುಪುವಂತಾಯಿತು. ಅಂತರ್ಯುದ್ಧದ ಪೂರ್ವದಲ್ಲಿ ಯಾವ ಪತ್ರಿಕೆಯೂ ೫೦೦೦೦ ಪ್ರತಿಗಳ ಮೇಲೆ ಖರ್ಚಾಗುತ್ತಿರಲಿಲ್ಲ. ೧೮೮೪ರಲ್ಲಿ ಪ್ಯುಲಿಟ್ಜರ್‌ನ 'ಪ್ರಪಂಚ' ಪತ್ರಿಕೆ ೧೦೦೦೦೦ ಪ್ರತಿಗಳು ಪ್ರತಿದಿನ ಮಾರಾಟವಾಗುತ್ತಿದ್ದವು; ೧೮೯೮ರ ಹೊತ್ತಿಗೆ 'ಪ್ರಪಂಚ' ಪ್ರತಿದಿನ ಒಂದು ಮಿಲಿಯನ್ ಪ್ರತಿಗಳಷ್ಟು ಮಾರಾಟವಾಗುತ್ತಿದ್ದವು. ಪ್ಯುಲಿಟ್ಜರ್ ನ್ಯೂಯಾರ್ಕ್ ನಗರದ ಅಪಾರ ಜನಸಮೂಹದ – ವಿವಿಧ ರೀತಿಯ ಜನರಿಗೆ ಹಿಡಿಸುವಂಥ ಏನಾದರೂ ವಿಷಯವನ್ನು – ಮನ ಸೆಳೆಯುವಂಥ ಸಂಗತಿಗಳು, ಕಟುವಾದ ಸಂಪಾದಕೀಯಗಳು, ಧಾರ್ಮಿಕ ವಿಷಯಗಳು, ಸಚಿತ್ರ ನಿರೂಪಣೆಗಳು ಮತ್ತು ಬಣ್ಣದ ವ್ಯಂಗ್ಯ ಚಿತ್ರಗಳು – ಪ್ರಕಟಿಸಿ ಜನರು ದುಂಬಾಲು ಬಿದ್ದು ಪತ್ರಿಕೆ ಕೊಳ್ಳುವಂತೆ ಮಾಡಿದ್ದನು.

೧೮೯೫ರಲ್ಲಿ ವಿಲಿಯಂ ರಾನ್‌ಡಾಲ್ಫ್ ಹರ್ಸ್ಟ್ (William Randolph Hearst) ನ್ಯೂಯಾರ್ಕಿನ 'ದಿನಚರಿ' (Journal) ಪತ್ರಿಕೆಯನ್ನು ಕೊಂಡು ಪ್ಯುಲಿಟ್ಜರ್ ಜೊತೆ ಪೈಪೋಟಿ ಪ್ರಾರಂಭಿಸಿದನು. ಹರ್ಸ್ಟ್ ನಡೆಸುತ್ತಿದ್ದ ಪತ್ರಿಕೆಯಲ್ಲಿ ಕೆಲವು ಸಮಯ

ಆಧಾರರಹಿತ ಅಪನಿಂದೆಗಳು, ಬೊಗಳೆ ಸುದ್ದಿಗಳು ಮತ್ತು ಜನರ ಕುತೂಹಲ ಕೆರಳಿಸುವ ಸಂಗತಿಗಳನ್ನು ಸೇರಿಸುತ್ತಿದ್ದನು. ಹರ್ಸ್ಟ್‌ನ ಮಾದರಿಯ ಪತ್ರಿಕೋದ್ಯಮ 'ಹಳದಿ ಪತ್ರಿಕೋದ್ಯಮ' (yellow journalism) ಎಂದು ಹೆಸರು ಪಡೆಯಿತು. ಕುತೂಹಲಕಾರಿ ಸಮಾಚಾರ, ಅವಹೇಳನ ಮುಂತಾದ ಮನರಂಜನೆಯ ವಿಷಯಗಳನ್ನು ಪ್ರಕಟಿಸುತ್ತಿದ್ದ 'ದಿನಚರಿ' ಪ್ಯುಲಿಟ್ಜರ್‌ನ 'ಪ್ರಪಂಚ' ಪತ್ರಿಕೆಯನ್ನು ಮಾರಾಟದಲ್ಲಿ ಹಿಂದೆ ಹಾಕಿತು. ಆದರೆ ಪ್ಯುಲಿಟ್ಜರ್‌ನಂತೆ ನೈಜಮತಿ (originality) ಮತ್ತು ಕೀಳು ಅಭಿರುಚಿಯ ಸುದ್ದಿ ಸಮಾಚಾರಗಳನ್ನು ಪ್ರಕಟಿಸದೆ ಜನಪ್ರಿಯತೆ ಗಳಿಸಿದ ಪತ್ರಿಕೋದ್ಯಮಿಗಳು ಬೇರೆ ಯಾರೂ ಇರಲಿಲ್ಲ.

ಸುದ್ದಿಗಳಿಗೆ ಹಾತೊರೆಯುತ್ತಿದ್ದ ಜನಸಾಮಾನ್ಯರ ಓದುವ ಹವ್ಯಾಸವನ್ನು ಪೂರೈಸಲು ಅನೇಕ ನಿಯತಕಾಲಕ ಪತ್ರಿಕೆಗಳು (magazines) ಪ್ರಕಟಣೆಯಾದವು. ಇವು ಸಮಾಜ ಸುಧಾರಕರ ಬರವಣಿಗೆಗಳನ್ನು ಸಾರ್ವಜನಿಕರಿಗೆ ತಲುಪಿಸುವ ಸಾಧನಗಳಾದವು. ಆ ಕಾಲದ ನಿಯತಕಾಲಿಕೆಗಳಲ್ಲಿ ಅತ್ಯಂತ ಪ್ರಭಾವಶಾಲಿಯಾಗಿದ್ದುದೆಂದರೆ 'ರಾಷ್ಟ್ರ' (Nation). ಇದು ಅಧ್ಯಕ್ಷ ಗ್ರ್ಯಾಂಟ್‌ನ ಆಡಳಿತದಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರ ಮತ್ತು ರಾಜಧಾನಿ ವಾಷಿಂಗ್‌ಟನ್‌ನಲ್ಲಿ ನಡೆಯುತ್ತಿದ್ದ ಕೀಳು ರಾಜಕೀಯ ಚಟುವಟಿಕೆಗಳನ್ನು ಬಯಲಿಗೆಳೆಯುವುದರಲ್ಲಿ ಯಶಸ್ವಿಯಾಯಿತು. 'ಪರಿಶೋಧನಾ ಪತ್ರಿಕೋದ್ಯಮ' (investigative journalism) ಮತ್ತು ಚಾಣಾಕ್ಷ ರಾಜಕೀಯ ವ್ಯಂಗ್ಯ ಚಿತ್ರಕಾರರ ಪರಿಶ್ರಮದಿಂದಾಗಿ ಪತ್ರಿಕೋದ್ಯಮ ತ್ವರಿತಗತಿಯಲ್ಲಿ ಬೆಳೆಯಿತು. ಹಾರ್ಪರ್ಸ್ ನಿಯತ ಕಾಲಿಕದಲ್ಲು ಪ್ರಕಟಣೆಗೊಳ್ಳುತ್ತಿದ್ದ ಥಾಮಸ್ ನ್ಯಾಸ್ಟ್‌ನ ಬರಹಗಳು ಕುಖ್ಯಾತ ಟಾಮ್ಮೆನಿ ಹಾಲ್ ಗೂಂಡಾಗಳ ಗುರು ಟ್ವೀಡ್ (Tweed)ನ ಅಧಃಪತನಕ್ಕೆ ಕಾರಣವಾದವು. ಜೋಸೆಫ್ ಕೆಪ್ಲರ್ (Joseph Keppler) ರಾಜಕಾರಣಿಗಳ ಮತ್ತು ಏಕಸ್ವಾಮ್ಯದ ಉದ್ಯಮಗಳ ವ್ಯಂಗ್ಯ ಚಿತ್ರಗಳಿಂದ 'ಪಕ್' (Puck) ಎಂಬ (ನಮ್ಮ ಕನ್ನಡದ 'ಕೊರವಂಜಿ' ಯಂಥ) ವಿಡಂಬನ ನಿಯತಕಾಲಿಕವನ್ನು ಹತ್ತೊಂಬತ್ತನೆಯ ಶತಮಾನದ ಅತ್ಯುತ್ತಮ ವಿಡಂಬನ ಪ್ರಕಟಣೆಯಾಗಿ ಮಾಡಿದನು. ಇತರ ನಿಯತಕಾಲಿಕೆಗಳು ಕಟು ಟೀಕೆಗಳು, ಅನುಷ್ಠಾನಕ್ಕೆ ತರಬಹುದಾದಂಥ ಬುದ್ಧಿವಾದಗಳ ಅಂಕಣಗಳು (columns), ವಿಶಿಷ್ಟ ಲೇಖನಗಳು ಮತ್ತು ಸಮಕಾಲೀನ ಅತ್ಯುತ್ತಮ ಬರಹಗಾರರ ಕತೆಗಳು ಎಲ್ಲವನ್ನೂ ಕೂಡಿಸಿ ಪ್ರಕಟಣೆಗೊಳ್ಳುತ್ತಿದ್ದುದರಿಂದ ಬಹುತೇಕ ಜನಸಾಮಾನ್ಯರು ಅವನ್ನು ಕೊಂಡು ಓದುತ್ತಿದ್ದರು. 'ಮಹಿಳೆಯರ ಮನೆಯ ದಿನಚರಿ' (The Ladies Home Journal), 'ಹಿತವಾದ ಗೃಹಕೃತ್ಯ' (Good Housekeeping) ಮತ್ತು 'ವಿಶ್ವಮಾನವ' (Cosmopolitan) – ಈ ಒಂದೊಂದು ನಿಯತಕಾಲಿಕೆಗಳು ಮಿಲಿಯಗಟ್ಟಲೆ ಮಾರಾಟ ವಾಗುತ್ತಿದ್ದವು.

ಸಾಹಿತ್ಯ

ಅಮೆರಿಕದ ಅಂತರ್ಯುದ್ಧಾನಂತರದ ಸಾಹಿತ್ಯ ಕೃತಿಗಳು ಸಾಹಸ ಮನೋಭಾವದಿಂದ (romaticism), ಭಾವನಾಸ್ವಾತಂತ್ರ್ಯದಿಂದ ಕೂಡಿದ್ದವು. ೧೮೭೦ರ ದಶಕದಲ್ಲಿ ಈ ಮನೋಭಾವ ಕ್ರಮೇಣ ಬದಲಾಗುತ್ತಾ ಬಂದು ೧೮೮೦ರ ದಶಕದಲ್ಲಿ 'ವಾಸ್ತವಿಕತೆ' (realism) ಸಾಹಿತ್ಯದ ಧೋರಣೆಯಾಯಿತು. ವಾಸ್ತವಿಕತೆ ಬೆಳೆಯಲು ಔದ್ಯೋಗೀಕರಣದಿಂದ ಸಂಕೀರ್ಣತೆಗಳು, ವಿಕಾಸವಾದದಿಂದ ಪ್ರೇರಿತವಾದ ಮಾನವನ ಬೆಳವಣಿಗೆಯಲ್ಲಿ ಮಹತ್ತರ ಪ್ರಭಾವ ಬೀರುವ ಪರಿಸರದ ಪ್ರಜ್ಞೆ ಮತ್ತು ವಾಸ್ತವ ವ್ಯವಹಾರ ತತ್ವ (pragmatism)ದ ಮೂಲನಿಯಮಗಳಾದ ಸಾಪೇಕ್ಷತೆ (relativity) ಮತ್ತು ಮೌಲ್ಯ ಪರಿವರ್ತನೆ (alterability of value) ಇವುಗಳು ಕಾರಣವಾದವು. ವಾಸ್ತವಿಕ ಸಾಹಿತ್ಯದ ಒಂದು ಶಾಖೆ ಪ್ರಾದೇಶಿಕ ಸಾಹಿತ್ಯ. ಪ್ರಾದೇಶಿಕ ಸಾಹಿತಿಗಳು ತಮಗೆ ಚೆನ್ನಾಗಿ ಪರಿಚಯ ಇರುವ ಪ್ರದೇಶದ ಸನ್ನಿವೇಶಗಳನ್ನು ತಮ್ಮ ಕೃತಿಗಳಲ್ಲಿ ಬಳಸಿಕೊಂಡು ಪರಿಣಾಮಕಾರಿಯಾಗಿ ಕೃತಿರಚನೆ ಮಾಡುವುದು ಬಳಕೆಗೆ ಬಂತು. ಬರ್ಟ್ ಹಾರ್ಟ್ (Bert Harte) ತನ್ನ ಕತೆಗಳಿಗೆ ತಾನು ಹುಟ್ಟಿ ಬೆಳೆದ ಕ್ಯಾಲಿಫೋರ್ನಿಯದ ಹಿನ್ನೆಲೆಯನ್ನು ಉಪಯೋಗಿಸಿಕೊಂಡನು. ಹಾರ್ಟ್ ಅವಲೋಕಿಸಿದ ಸ್ಥಳೀಯ ರಂಗುಗಳು, ಕೇಳಿದ ಗಣಿ ಕೆಲಸಗಾರರ ಮತ್ತು ಬಂದರುಗಳ ಕೆಲಸಗಾರರ ಆಡುನುಡಿಗಳು ಮತ್ತು ಮನ ಸೆಳೆಯುವ ಸಂದರ್ಭಗಳು – ಇವುಗಳನ್ನು ತನ್ನ ವಿಶಿಷ್ಟ ಶೈಲಿಯಲ್ಲಿ ಬರೆದು ಜನಪ್ರಿಯ ಲೇಖಕನಾದನು.

ಪಶ್ಚಿಮ ಪ್ರದೇಶದ ಪ್ರಮುಖ ಸಾಹಿತಿ ಮಾರ್ಕ್ ಟ್ವೇನ್ (Mark Twain) ಅಮೆರಿಕದ ವಾಸ್ತವಿಕ ಶೈಲಿಯ ಬರಹಗಾರರ ಸಾಲಿನಲ್ಲಿ ಎದ್ದು ತೋರುವವನು. ಇವನ ಹುಟ್ಟು ಹೆಸರು ಸಾಮ್ಯುಯಲ್ ಲಾಂಗ್‌ಹಾರ್ನ್ ಕ್ಲೆಮೆನ್ಸ್. ಟ್ವೇನ್ ಬೆಳೆದದ್ದು ಮಿಸ್ಸಿಸ್ಸಿಪ್ಪಿ ದಂಡೆಯ ಹಾನಿಬಾಲ್ ಎಂಬ ಊರಿನಲ್ಲಿ. ಈ ಊರು ಮುಸ್ಸೋರ (Missouri) ಪ್ರಾಂತಕ್ಕೆ ಸೇರಿತ್ತು. ಅವನ ಎಲ್ಲ ಕೃತಿಗಳು – 'ಮಿಸ್ಸಿಸ್ಸಿಪ್ಪಿ ದಂಡೆಯ ಗುಂಟದ ಜೀವನ' (Life on the Mississippi), 'ಆರ್ಥರ್ ರಾಜನ ಆಸ್ಥಾನದಲ್ಲಿ ಕನೆಕ್ಟಿಕಟ್ ಯಾಂಕಿ' (A Connecticut Yankee at King Arthur's Court), ಟಾಂ ಸಾಯರ್ (Tom Sawyer) ಮತ್ತು 'ಹಕ್ಕಲ್‌ಬೆರಿ ಫಿನ್' (Huckleberry Finn). ಈ ಎಲ್ಲ ಕೃತಿಗಳಲ್ಲೂ ತನ್ನ ಸ್ವಂತ ಭಾವನೆಗಳನ್ನು ಮತ್ತು ಅನುಭವಗಳನ್ನು ನಿರೂಪಿಸಿದ್ದಾನೆ. 'ಹಕ್ಕಲ್‌ಬೆರಿ ಫಿನ್' ಟ್ವೇನ್‌ನ ಮೇರುಕೃತಿ. ವ್ಯಕ್ತಿಚಿತ್ರಣ ಮತ್ತು ಪಾತ್ರರಚನೆಗೆ ಈ ಕೃತಿ ಲೋಕಪ್ರಸಿದ್ಧವಾಗಿದೆ. ಹಾಸ್ಯದೊಂದಿಗೆ ಗಾಢಚಿಂತನೆ ಸೇರಿಕೊಂಡು ಈ ಕೃತಿ ಅನನ್ಯವಾಗಿದೆ. ಸಮಾಜದ ಆಡಂಬರ, ವಸ್ತ್ರಾಲಂಕಾರ ಮುಂತಾದ ಬಂಧನಗಳಿಂದ ಮುಕ್ತರಾದ ಮುಗ್ಧ ಜೀವಿಗಳ ಬದುಕಿನ ಚಿತ್ರಣ ಮತ್ತು ಸಮಾಜದಲ್ಲಿ ಕಂಡುಬರುತ್ತಿದ್ದ ಬೂಟಾಟಿಕೆ ಹಾಗೂ

ಹಣವಂತರ ದರ್ಪಗಳ ಕಟುಟೀಕೆ ಈ ಕೃತಿಯು ತಿರುಳಾಗಿದೆ. ಟ್ವೇನ್‌ನ ಆಡುಭಾಷೆಯ ಬಳಕೆ ಅಮೆರಿಕನ್ ಗದ್ಯ ಬರವಣಿಗೆ ಶೈಲಿಯಲ್ಲಿ ಕ್ರಾಂತಿಕಾರಕ ಬದಲಾವಣೆ ಮಾಡಿತು.

ವಿಲಿಯಂ ಡೀನ್ ಹಾವೆಲ್ಸ್ (William Dean Howells) ಆ ಕಾಲದ ವಾಸ್ತವಿಕತೆಯನ್ನು ಅಳವಡಿಸಿಕೊಂಡ ಇನ್ನೊಬ್ಬ ಬರಹಗಾರ. ಈತ ತನಗೆ ನಿಕಟ ಪರಿಚಯವಿದ್ದ ಮಧ್ಯಮವರ್ಗದವರ ಸಂತೃಪ್ತಿ ಜೀವನವನ್ನು ಕುರಿತು ಬರೆಯಲು ಪ್ರಾರಂಭಿಸಿ ಕ್ರಮೇಣ ಔದ್ಯೋಗೀಕರಣದ ಪರಿಣಾಮವಾಗಿ ಮಧ್ಯಮವರ್ಗದಲ್ಲಿ ಉಂಟಾದ ಸಮಸ್ಯೆಗಳನ್ನು ಅಭಿವ್ಯಕ್ತಿಗೊಳಿಸುವ ಕೃತಿಗಳನ್ನು ರಚಿಸಿದನು. ಹಾವೆಲ್ಲನ ಜನಪ್ರಿಯ ಕಾದಂಬರಿ 'ದಿ ರೈಸ್ ಆಫ್ ಸಿಲಾಸ್ ಲಾಪ್‌ಹ್ಯಾಮ್' (The Rise of Silas Lapham) ಸ್ವಂತ ದುಡಿಮೆಯಿಂದ ಮೇಲಕ್ಕೆ ಬಂದ ಒಬ್ಬನು ಬಾಸ್ಟನ್ ನಗರದ ಬೆಡಗಿನ ಸಮಾಜಜೀವನಕ್ಕೆ ಹೊಂದಿಕೊಳ್ಳಲು ಮಾಡುವ ಪ್ರಯತ್ನಗಳ ಕತೆಯಾಗಿದೆ. ಹೆನ್ರಿ ಜೇಮ್ಸ್ ಮಹಾ ಕಾದಂಬರಿಕಾರನೆಂದು ಪ್ರಸಿದ್ಧಿ ಪಡೆದಿದ್ದನು. ಇವನು ತತ್ವಜ್ಞಾನಿ ವಿಲಿಯಂ ಜೇಮ್ಸ್‌ನ ತಮ್ಮ. ವಾಸ್ತವ ಬರವಣಿಗೆ ಶೈಲಿಯಲ್ಲಿ ಮೇಲಿನ ವರ್ಗದ ಮಹನೀಯರು ಮತ್ತು ಮಹಿಳೆಯರ ವ್ಯಕ್ತಿತ್ವ ವರ್ಣನೆಗಳು ಮತ್ತು ಉನ್ನತ ವರ್ಗದವರ ನಡವಳಿಕೆಗಳು ಮತ್ತು ನೈತಿಕ ಪೇಚಿನ ಪರಿಸ್ಥಿತಿಗಳ ವಿಶ್ಲೇಷಣೆಗಳು ಇವನ ಬರವಣಿಗೆಯ ವಿಷಯಗಳಾಗಿದ್ದವು.

ಅಮೆರಿಕನ್ ಬರಹಗಾರರ ಒಂದು ಗುಂಪು ವಾಸ್ತವಿಕ ಶೈಲಿಗಿಂತಲೂ ಮುಂದೆ ಹೋಗಿ ನೈಸರ್ಗಿಕತ್ವ (naturalism)ದ ಆಧಾರದ ಮೇಲೆ ರಚಿತವಾದ ಸಾಹಿತ್ಯವನ್ನು ಪ್ರಾರಂಭಿಸಿದರು. ಡಾರ್ವಿನ್‌ನ ವಿಕಾಸವಾದವನ್ನು ಒಪ್ಪಿಕೊಂಡ ಇವರು ಮಾನವನ ಭವಿಷ್ಯವನ್ನು ನಿರ್ದಯವಾದ ನಿಸರ್ಗ ನಿರ್ಧರಿಸುತ್ತದೆ ಎಂದು ನಂಬಿದ್ದರು. ಆದ್ದರಿಂದ ಈ ಪಂಥದ ಲೇಖಕರು ಹಿಂಸೆ, ದುಷ್ಟತನ, ಅಪರಾಧ ಮತ್ತು ಅವನತಿಗಳ ಮೇಲೆ ತಮ್ಮ ಆಸಕ್ತಿಯನ್ನು ಕೇಂದ್ರೀಕರಿಸಿದರು. 'ಬೀದಿಯ ಹುಡುಗಿ ಮ್ಯಾಗ್ಗೀ' (Maggie, A Girl of the Streets) ಎನ್ನುವ ಕೃತಿಯಲ್ಲಿ ಸ್ಟೀಫನ್ ಕ್ರೇನ್ (Stephen Crane) ಬಡತನದ ದುಷ್ಪರಿಣಾಮಗಳನ್ನು ವರ್ಣಿಸಿದ್ದಾನೆ. ಆತನ ಇನ್ನೊಂದು ಪ್ರಸಿದ್ಧ ಕೃತಿ 'ಧೈರ್ಯದ ಕೆಂಪು ಲಾಂಛನ' (The Red Badge of Courage). ಈ ಕೃತಿಯಲ್ಲಿ ಯುದ್ಧದ ಭಯಾನಕತೆಯನ್ನು ನಿರೂಪಿಸಿದ್ದಾನೆ. ಫ್ರಾಂಕ್ ನಾರಿಸ್ (Frank Norris) ಬರೆದ ಎರಡು ಕಾದಂಬರಿಗಳಲ್ಲಿ – 'ದಿ ಆಕ್ಟೋಪಸ್' (The Octopus) ಮತ್ತು 'ದಿ ಪಿಟ್' (The Pit) ವ್ಯಾಪಾರ-ವಾಣಿಜ್ಯ ಪ್ರಪಂಚದ ಪ್ರಭಾವ, ಮೋಸ, ದಗಾಕೋರತನ ಮತ್ತು ಶೋಷಣೆಗಳನ್ನು ಕಟುವಾಗಿ ಟೀಕಿಸಿದ್ದಾನೆ. ನೈಸರ್ಗಿಕ ಪಥದ ಸಾಹಿತಿಗಳಲ್ಲಿ ಅಗ್ರಗಣ್ಯನೆನಿಸಿದ್ದ ಥಿಯೊಡೋರ್ ಡ್ರೀಯ್‌ಸರ್ (Theodore Dreiser) ೧೯೨೫ರಲ್ಲಿ ತನ್ನ ಅತಿಮುಖ್ಯವಾದ ಕೃತಿ 'ಒಂದು ಅಮೆರಿಕನ್ ದುರಂತ' (An American Tragedy)ವನ್ನು ಪ್ರಕಟಿಸಿದನು. ಇದಕ್ಕೆ ಹಿಂದೆ ಬರೆದಿದ್ದ ಕೃತಿ 'ಸೋದರಿ ಕ್ಯಾರ್ರೀ' (Sister Carrie) ನೀತಿಬಾಹಿರವಾದುದು ಎಂದು ಪರಿಗಣಿಸಲಾಗಿತ್ತು. ಈ ಆರೋಪಣೆ

ಯಿಂದ ಪಾರಾಗಲು ಅವನಿಗೆ ಬಹಳ ಸಮಯ ಹಿಡಿಯಿತು. 'ಒಂದು ಅಮೆರಿಕನ್ ದುರಂತ' [illegible]ಸನ್ನು ಪುನಃ ಉತ್ತಮ ಸಾಹಿತಿಗಳ ಸಾಲಿಗೆ ಸೇರುವಂತೆ ಮಾಡಿತು. ಜಾಕ್ ಲಂಡನ್ (Jack London) ಒಬ್ಬ ಸಾಹಸಿಗ. ತನ್ನ ಸಾಹಸದ ಅನುಭವಗಳನ್ನು ಅವನು ಅನೇಕ ಸಣ್ಣ ಕತೆಗಳಲ್ಲಿ ವರ್ಣರಂಜಿತವಾಗಿ ಹೇಳಿದ್ದಾನೆ. ಪ್ರಕೃತಿ ನಾಗರಿಕ ಸಮಾಜದ ಮೇಲೆ ಶಾಶ್ವತ ಪ್ರಭಾವ ಬೀರುತ್ತದೆ ಎಂದು ನಂಬಿದ್ದ ಇವನು ಆ ನಂಬಿಕೆಯ ಆಧಾರದಿಂದ ಅನೇಕ ಸಣ್ಣ ಕತೆ, ಕಾದಂಬರಿಗಳನ್ನು ಬರೆದಿದ್ದಾನೆ – 'ದಿ ಸೀ ಉಲ್ಫ್' (The Sea Wolf) ಸಮುದ್ರಯಾನದ ಯಾತನೆಗಳನ್ನು ವರ್ಣಿಸುತ್ತದೆ; 'ಕಾಡಿನ ಕರೆ' (The Call of the Wild) ಹಿಮವತ್ ಪ್ರದೇಶದಲ್ಲಿ ಜಾರುಬಂಡಿಯನ್ನು ಎಳೆಯಲು ಹೂಡುವ ಶುನಕತಂಡದ ಒಂದು ನಾಯಿ ನರರ ಸಹವಾಸವನ್ನು ನಿರಾಕರಿಸಿ ಮರಳಿ ಪ್ರಕೃತಿಯ ಮಡಿಲಿಗೆ ಹಿಂತಿರುಗುವ ಮನೋಜ್ಞವಾದ ಕತೆ.

ಹತ್ತೊಂಬತ್ತನೆಯ ಶತಮಾನದ ಕೊನೆ ಮತ್ತು ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಓದುಗರು ಮೆಚ್ಚುತ್ತಿದ್ದುದು ಭಾವಾತಿರೇಕವುಳ್ಳ (sentimental) ಕೃತಿಗಳನ್ನು. ೧೯೦೦ರ ಹೊತ್ತಿಗೆ ಶೇಕಡಾ ೯೦ ಭಾಗ ಅಮೆರಿಕನ್ನರು ಓದುಬಲ್ಲವರಾಗಿದ್ದರು. ಆದರೆ ಅವರು ಬದುಕಿನ ವಾಸ್ತವಿಕ ವರ್ಣನೆಗಳನ್ನು ಓದುವ ಅಭಿರುಚಿ ಬೆಳೆಸಿಕೊಂಡಿರಲಿಲ್ಲ. ಮಧ್ಯಮವರ್ಗದವರು ಉತ್ಪ್ರೇಕ್ಷೆಗೊಂಡ ಸಾಹಸ ಕಥನಗಳು, ಪ್ರಣಯ ಪ್ರಸಂಗಗಳು ಮತ್ತು ದೂರದೇಶಗಳ ರಹಸ್ಯಗರ್ಭಿತವಾದ ಸಂಗತಿಗಳು ಇಂಥ ಕಥಾವಸ್ತುಗಳನ್ನೊಳಗೊಂಡ ಕೃತಿಗಳನ್ನು ಇಷ್ಟಪಡುತ್ತಿದ್ದರು. ಕಾರ್ಮಿಕವರ್ಗದವರಿಗೆ ಹಿಡಿಸುತ್ತಿದ್ದುದು ಹೊರೇಷಿಯೊ ಆಲ್ಗರ್‌ನ (Horatio Alger) ಕತೆಗಳು, ಭಾವಾತಿರೇಕದಿಂದ ಕೂಡಿದ ಪ್ರಣಯಪ್ರಸಂಗಗಳ ನಾಟಕಗಳು, ಇವೆಲ್ಲಕಿಂತಲೂ ಹೆಚ್ಚಾಗಿ ಅಮೆರಿಕದ ಪಶ್ಚಿಮ ಗಡಿನಾಡಿನ ಸಾಹಸದ ಕತೆಗಳು. ಹೊಸಯಂತ್ರಗಳನ್ನು ಬಳಸಿ ಹತ್ತು-ಇಪ್ಪತ್ತು ಸೆಂಟಿನ ಖುಷಿ ಕೊಡುವ ಕತೆಗಳನ್ನು ಅಚ್ಚುಹಾಕಿ ಮಿಲಿಯನ್‌ಗಟ್ಟಲೆ ಪ್ರತಿಗಳನ್ನು ಮಾರಾಟಮಾಡುತ್ತಿದ್ದರು. ಈ ಪುಸ್ತಕಗಳು ನಾಲ್ಕು ಮಾರಾಟವಾದಲ್ಲಿ ವಾಸ್ತವಿಕ ಕಾಂಬರಿಗಳಲ್ಲಿ ಒಂದು ಮಾರಾಟವಾದರೆ ಹೆಚ್ಚು ಎನ್ನುವ ಪರಿಸ್ಥಿತಿ ಉಂಟಾಯಿತು. ಹತ್ತೊಂಬತ್ತನೆಯ ಶತಮಾನದ ಕೊನೆಯ ದಿನಗಳಲ್ಲಿ ವಾಸ್ತವಿಕತೆ ಸಾಹಿತಿಗಳ ಮತ್ತು ಭಾವುಕತೆ (romanticists) ಸಾಹಿತಿಗಳ ನಡುವೆ ವಾಗ್ಯುದ್ಧ ನಡೆದು, ವಾಸ್ತವಿಕತೆ ಗುಂಪು ಅಮೆರಿಕ ಜೀವನದ ಯಥಾವತ್ತು ಸ್ಥಿತಿಗತಿಗಳನ್ನು ವರ್ಣಿಸಿದರೆ, ಭಾವುಕತೆ ಗುಂಪಿನವರು ವಾಸ್ತವಿಕ ಸ್ಥಿತಿಗಳಿಗೆ ಮೆರಗು ಕೊಟ್ಟು ಮನಸ್ಸಿಗೆ ಹಿಡಿಯುವಂತೆ ವರ್ಣಿಸುತ್ತಿದ್ದರು.

ಕಲೆ ಮತ್ತು ವಾಸ್ತುಶಿಲ್ಪ

ಅಮೆರಿಕದಲ್ಲಿ ಲಲಿತಕಲೆ (fine arts) ಸಾಹಿತ್ಯದಂತೆಯೇ ಪರಿವರ್ತನೆಗೊಂಡಿತು.

ಸ್ಥಳೀಯ ವರ್ಣಚಿತ್ರಕಾರರು ಪ್ರಾಂತೀಯ ಲೇಖಕರಂತೆ ತಮ್ಮ ಸುತ್ತಮುತ್ತಲಿನ ಪರಿಸರದ ಚಿತ್ರಗಳನ್ನು ಕುಂಚದಿಂದ ಕ್ಯಾನ್ವಾಸ್ (canvas) ಮೇಲೆ ಮೂಡಿಸುತ್ತಿದ್ದರು. ವಿನ್‌ಸ್ಲೊ ಹೋಮರ್ (Winslow Homer) ತಾನು ಹುಟ್ಟಿ ಬೆಳೆದ ನ್ಯೂ ಇಂಗ್ಲೆಂಡ್ ಪ್ರಕೃತಿ ಸೌಂದರ್ಯವನ್ನು, ವಿಶಿಷ್ಟವಾಗಿ, ಕಲ್ಲು ಬಂಡೆಗಳಿಂದ ಕೂಡಿದ ಕಡಲತೀರವನ್ನು ಮತ್ತು ಬಂಡೆಗಳಿಗೆ ಬಂದು ಅಪ್ಪಳಿಸುತ್ತಿದ್ದ ಅಲೆಗಳನ್ನು ಕುಂಚಗಳಿಂದ ಚಿತ್ರಿಸಿದನು. ಹೋಮರ್ ತನ್ನ ಚಿತ್ರಗಳಲ್ಲಿ ಎದ್ದು ಕಾಣುವ ಬಣ್ಣಗಳನ್ನು ಉಪಯೋಗಿಸುತ್ತಿದ್ದನು. ಅವು ಚಲನೆಯ ಭ್ರಮೆಯಸ್ನು ಹುಟ್ಟಿಸುತ್ತಿದ್ದವು. ತನ್ನ ಚಿತ್ರಗಳಿಗೆ ಕೊಡುವ ಹೆಸರುಗಳೂ ಚಲನೆಯ ಅನುಭವ ಹುಟ್ಟಿಸುತ್ತಿದ್ದವು – ಉದಾಹರಣೆಗೆ 'ಚಂಡಮಾರುತ' (The Hurricane), 'ಬರಲಿದೆ ಬಿರುಗಾಳಿ' (Breaking Storm). ಫ್ರೆಡರಿಕ್ ರೆಮಿಂಗ್‌ಟನ್ (Frederic Remington) ಇನ್ನೊಬ್ಬ ಪ್ರಾದೇಶಿಕ ಚಿತ್ರಕಾರ. ಇವನು ದನಗಾಹಿಗಳ (cowboys) ಜೀವನ, ಹುಲ್ಲುಗಾವಲಿನ ಇಂಡಿಯನ್ನರು ಮತ್ತು ಪರ್ವತಶ್ರೇಣಿಗಳನ್ನು ಚಿತ್ರಿಸಿದನು. ಚಾರ್ಲ್ಸ್ ಮೇರಿಯನ್ (Charles Marion) ಪಶ್ಚಿಮ ಗಡಿನಾಡಿನ ವಿಶೇಷ ಲಕ್ಷಣಗಳನ್ನು ಮತ್ತು ಅಲ್ಲಿನ ಜೀವನರೀತಿಯನ್ನು ಚಿತ್ರಿಸಿದನು.

ಚಿತ್ರಕಲೆಯಲ್ಲಿ ವಾಸ್ತವಿಕತೆಯನ್ನು ಉಪಯೋಗಿಸಿದವನು ಥಾಮಸ್ ಈಕಿನ್ಸ್ (Thomas Eakins). ಇವನನ್ನು ಅಮೆರಿಕದ ಶ್ರೇಷ್ಠ ವರ್ಣಚಿತ್ರಕಾರನೆಂದು ಪರಿಗಣಿಸಲಾಗಿದೆ. ವಾಸ್ತವಿಕತೆಯನ್ನು ಕಟ್ಟುನಿಟ್ಟಿನಿಂದ ಪಾಲಿಸುತ್ತಿದ್ದ ಇವನು ಚಿತ್ರಿಸಿದ ಅಧ್ಯಕ್ಷ ಹೇಯ್ಸ್ (Hayes) ಶರಟಿನ ತೋಳುಗಳನ್ನು ಮಡಚಿಕೊಂಡು ಕೆಲಸ ಮಾಡುತ್ತಿದ್ದ ಭಾವಚಿತ್ರ ಅಮೆರಿಕನ್ನರನ್ನು ದಿಗ್ಭ್ರಮೆಗೊಳಿಸಿತ್ತು. ತಾನು ಕಂಡದ್ದನ್ನು ಯಥಾವತ್ತಾಗಿ ಚಿತ್ರಿಸುವ ಗೀಳು ಹಿಡಿದ ಈ ಕಲಾಕಾರನನ್ನು ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳು ಕಂಡದ್ದನ್ನು ಕಂಡಹಾಗೆ ಚಿತ್ರಿಸಲು ಆಹ್ವಾನಿಸುತ್ತಿದ್ದರು. ಈಕಿನ್ಸ್ ವಾಸ್ತವಿಕತೆಯನ್ನು ಮೀರಿಸಿದ ಕಲಾವಿದರು ಆಶ್ಚನ್ ಸಂಪ್ರದಾಯ (Ashcan school)ಕ್ಕೆ ಸೇರಿದವರು. ಇವರು ಸಹಜತೆಯ ತತ್ವ (naturalism) ಪಾಲಿಸುವವರಾಗಿದ್ದರು. ಜಾನ್ ಸೋಲಾನ್ ಈ ಸಂಪ್ರದಾಯದ ಪ್ರಮುಖ ಕಲಾವಿದ. ಈ ಸಂಪ್ರದಾಯ ಜೀವನದ ಓರೆಕೋರೆಗಳನ್ನು, ನಗರದ ಹೊಲಸು ಕೊಳಚೆಯನ್ನು, ಜನರ ಕುರೂಪ ಮುಂತಾದ ಮುಜುಗರ ಹುಟ್ಟಿಸುವ ವಸ್ತುಗಳನ್ನು, ಅತಿಸಾಮಾನ್ಯವೆಂದೆನಿಸುವ ದೃಶ್ಯಗಳನ್ನು ಚಿತ್ರಿಸುತ್ತಿದ್ದರು. ಇವರು ಚಿತ್ರಿಸುತ್ತಿದ್ದ ಕೆಲವು ದೃಶ್ಯಗಳು – ಬಾಕ್ಸಿಂಗ್ ಪಟುಗಳು (prize fighters), ಚರ್ಚಿನಲ್ಲಿ ವೃಂದಗಾನ ಹಾಡುವ ಹುಡುಗಿಯರು, ಮದ್ಯಪಾನ ಗೃಹಗಳು, ಕತ್ತಲು ಕವಿದ ಕಿರು ಓಣಿಗಳು, ಬೀದಿಯ ಬದಿಯಲ್ಲಿರುವ ಕಸ ತುಂಬುವ ಡಬ್ಬಿ ಮುಂತಾದವು. ಈ ಕಲಾವಿದರ ಕೃತಿಗಳನ್ನು ಸ್ಟೀಫನ್ ಕ್ರೇನ್ ಮತ್ತು ಡ್ರೀಯ್‌ಸರ್ ಅವರ ಸಾಹಿತ್ಯ ಕೃತಿಗಳಿಗೆ ಹೋಲಿಸಬಹುದು. ಈ ಕಲಾಸಂಪ್ರದಾಯಗಳು ಮೊದಲನೆಯ ಮಹಾಯುದ್ಧದವರೆಗೆ ಕಲಾಪ್ರಪಂಚದಲ್ಲಿ ಪ್ರಮುಖವಾಗಿದ್ದವು.

ಲಲಿತಕಲೆಯಲ್ಲಿ ಉಂಟಾದ ತೀವ್ರತರ ಬದಲಾವಣೆಗಳಂತೆ ಅಮೆರಿಕದ ವಾಸ್ತುಶಿಲ್ಪದಲ್ಲೂ ಹೊಸ ಧೋರಣೆಗಳು (new trends) ಹುಟ್ಟಿಕೊಂಡವು. ಹಾಗಾಗಿ ವಾಸ್ತುಶಿಲ್ಪ ಹಳೆಯ ಸಂಪ್ರದಾಯಗಳ ಸಂಪರ್ಕ ಕಳೆದುಕೊಂಡಿತು. ಈ ಅವಧಿಯಲ್ಲಿ ಆಧುನಿಕ ವಾಸ್ತುಶಿಲ್ಪದ ಮೂಲತತ್ವ: 'ಕಟ್ಟಡದ ಸ್ವರೂಪ ಅಲ್ಲಿ ನಡೆಯುವ ಕಾಯಕವನ್ನು ಅನುಸರಿಸುತ್ತದೆ' (form follows function) ಹೀಗೆ ಹೇಳಿದವನು ಅಮೆರಿಕನ್ ವಾಸ್ತುಶಿಲ್ಪಿ ಲೂಯಿ ಸಲ್ಲಿವನ್ (Louis Sullivan). ಅವನ ಹೇಳಿಕೆ – ವಾಸ್ತುಶಿಲ್ಪ ಆಡಂಬರ ಪ್ರದರ್ಶನ ಶೈಲಿಯನ್ನು ತ್ಯಜಿಸಿ, ಕಟ್ಟಡ ಕಟ್ಟುವ ಮೊದಲು ಆ ಕಟ್ಟಡದ ಕಾಯಕ/ಉಪಯೋಗವೇನು ಎನ್ನುವುದನ್ನು ನಿರ್ಧರಿಸಿ ಆನಂತರ ಕಟ್ಟಡದ ಸ್ವರೂಪ (form)ವನ್ನು ರೂಪಿಸಬೇಕು – ಎನ್ನುವ ಸಲಹೆಯಾಗಿತ್ತು. ಗಗನಚುಂಬಿ ಕಟ್ಟಡ (sky scraper) ಮಾದರಿಯನ್ನು ತಯಾರಿಸಿದವನು ಲೂಯಿ ಸಲ್ಲಿವನ್. ಗಗನಚುಂಬಿ ಕಟ್ಟಡ ಅಮೆರಿಕನ್ನರ ಸಾಹಸಪ್ರವೃತ್ತಿಯ ಸಂಕೇತವಾಗಿತ್ತು.

ಸಲ್ಲಿವನ್‌ನ ಶಿಷ್ಯ ಫ್ರಾಂಕ್ ಲಾಯ್ಡ್ ರೈಟ್ (Frank Lloyd Wright) ಅಮೆರಿಕನ್ ವಾಸ್ತುಶಿಲ್ಪದ ಮೇಲೆ ಬೀರಿದ ಮಹತ್ತರ ಪ್ರಭಾವ ಅನನ್ಯವಾದುದು. ರೈಟ್ ತನ್ನ ವಾಸ್ತುಶಿಲ್ಪ ಶೈಲಿಯನ್ನು 'ಆರ್ಗಾನಿಕ್ ಆರ್ಕಿಟೆಕ್ಚರ್' (Organic architecture) ಎಂದು ಕರೆದನು. ಅವನು ಕಟ್ಟುತ್ತಿದ್ದ ಕಟ್ಟಡಗಳು ತಮ್ಮ ಸುತ್ತಲಿನ ಪ್ರದೇಶದಿಂದ ಸಹಜವಾಗಿ ಮೂಡಿಬಂದಿವೆಯೋ ಎನ್ನುವಂತಿದ್ದವು. ೧೮೬೯ರಲ್ಲಿ ಹುಟ್ಟಿದ ರೈಟ್ ೧೯೫೯ರವರೆಗೆ ಅಮೆರಿಕ ವಾಸ್ತುಶಿಲ್ಪದ ಮೇಲೆ ತನ್ನ ಪ್ರಭಾವ ಬೀರಿದ್ದನು. ಇತರ ಎಲ್ಲ ವಿಜ್ಞಾನಗಳು ಹಳೆಯ ಕಲ್ಪನೆಗಳನ್ನು ಕೈಬಿಟ್ಟು ಹೊಸ ಆಲೋಚನೆ, ಚಿಂತನಗಳನ್ನು ಮೈಗೂಡಿಸಿಕೊಂಡಂತೆ ವಾಸ್ತುಶಿಲ್ಪವೂ ಕಾಲಧರ್ಮಕ್ಕೆ ತಕ್ಕಂತೆ ಪರಿವರ್ತನೆಗೊಂಡಿತು.

ಸಮಾಜಕಾರ್ಯ ಚಳುವಳಿ:

ನಿರ್ಮಲ ಸಮುದಾಯ ಯೋಜನೆಗಳು

ಸಮಾಜ ಕಾರ್ಯಕರ್ತರು ನಗರಗಳಲ್ಲಿ ಸೇವಾಕೇಂದ್ರಗಳನ್ನು ಸ್ಥಾಪಿಸಿ ಅವುಗಳ ಮೂಲಕ ಲೋಕಸಂಗ್ರಹ ಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಇವರು ಸಮಸ್ಯೆಗೀಡಾಗಿ ನರಳುತ್ತಿರುವವರಿಗೆ – ಬಡವರು, ಕೆಲಸ ಕಳೆದುಕೊಂಡವರು, ವಾಸಕ್ಕೆ ಮನೆಯಿಲ್ಲದವರು, ಕುಡುಕರು ಮುಂತಾದವರಿಗೆ – ಸಲಹೆ, ಸಹಾಯ ಮತ್ತು ಸ್ಫೂರ್ತಿ ನೀಡಿ ಅವರ ಜೀವನವನ್ನು ಸಹನೀಯವಾಗಿ ಮಾಡಲು ಪ್ರಯತ್ನಿಸುತ್ತಿದ್ದರು. ೧೮೯೦ರಲ್ಲಿ ಅಮೆರಿಕನ್ ನಗರಗಳಲ್ಲಿ ೫೦ಕ್ಕಿಂತಲೂ ಹೆಚ್ಚು ಸಮಾಜ ಕಾರ್ಯಕೇಂದ್ರಗಳು ಕೆಲಸ ಮಾಡುತ್ತಿದ್ದವು. ಕೆಲವು ನಗರಗಳಲ್ಲಿ ಈ ಕೇಂದ್ರಗಳು ಶಿಶುವಿಹಾರ, ಆಟದ ಮೈದಾನ, ಪುಸ್ತಕ ಭಂಡಾರ ಮುಂತಾದ ಸೌಕರ್ಯಗಳನ್ನೂ ಒದಗಿಸುತ್ತಿದ್ದವು. ೧೮೮೦ರ ದಶಕದಲ್ಲಿ ಲಂಡನ್‌ನಲ್ಲಿ ಸ್ಥಾಪಿತವಾದ 'ಟಾಯ್ನ್‌ಬೀ ಹಾಲ್' ನೋಡಿಕೊಂಡು ಬಂದ ಜೇನ್ ಆ್ಯಡಮ್ಸ್ ಅದರಿಂದ

ಸ್ಫೂರ್ತಿ ಪಡೆದು ಚಿಕಾಗೊ ನಗರದಲ್ಲಿ 'ಹಲ್ ಹೌಸ್' ಎನ್ನುವ ಸಮಾಜಸೇವಾಸಂಸ್ಥೆಯನ್ನು ಸ್ಥಾಪಿಸಿದಳು. ಈ ಸಂಸ್ಥೆ ಸಂಗೀತ ಪಾಠಗಳು, ಚಿತ್ರಕಲಾ ತರಬೇತಿ, ನಾಟಕ ನಿರ್ದೇಶನ, ವ್ಯಾಯಾಮಶಾಲೆ ಮತ್ತು ಶಿಶುಪಾಲನಾಕೇಂದ್ರ ಮುಂತಾದ ಕಾರ್ಯಗಳನ್ನು ಕೈಗೊಂಡಿತ್ತು. ಜೇನ್ ಆ್ಯಡಮ್ಸ್ ರಾಜಕೀಯ ಧುರೀಣರ ಸಹಾಯದಿಂದ ಸಾರ್ವಜನಿಕರ ಸೌಕರ್ಯಗಳನ್ನು ಉತ್ತಮಪಡಿಸಲು ಪ್ರಯತ್ನಿಸಿದಳು. ಅಲ್ಲದೆ ಸಮಾಜದ ಅಭಿವೃದ್ಧಿಗೆ ಸಹಾಯಕವಾಗುವ ಕಾಯಿದೆಗಳನ್ನು ಜಾರಿಗೆ ತರುವಂತೆ ರಾಜಕೀಯ ನಾಯಕರನ್ನು ಒತ್ತಾಯಪಡಿಸಿದಳು. ಆ ಪ್ರಭಾವ ಉಪಯೋಗಿಸಿ ತನ್ನ ಬಡಾವಣೆಯ ಕಸ-ಕೊಳಚೆ ಎತ್ತುವವರ ಮೇಲ್ವಿಚಾರಣಾಧಿಕಾರಿಯಾಗಿ ನೇಮಕವಾದಳು. ತನ್ನ ಅಧಿಕಾರವನ್ನು ಅವಳು ತನ್ನ ಬಡಾವಣೆಯನ್ನು ಸ್ವಚ್ಛವಾಗಿಡಲು ಮನೆ ಒಡೆಯರ ಮೇಲೆ ಮತ್ತು ಕಸ ಎತ್ತುವವರ ಮೇಲೆ ಒತ್ತಾಯ ಹಾಕಿ ಕಾರ್ಯ ಸಾಧಿಸುತ್ತಿದ್ದಳು.

ಲಿಲ್ಲಿಯನ್ ವಾರ್ಡ್ ಎನ್ನುವವಳು ನ್ಯೂಯಾರ್ಕ್ ನಗರದ ಹೆನ್ರಿ ರಸ್ತೆಯಲ್ಲಿ ಒಂದು ಸಮಾಜಸೇವಾಸಂಸ್ಥೆಯನ್ನು ಸ್ಥಾಪಿಸಿದಳು. ಈ ಸಂಸ್ಥೆ ಚಿಕಾಗೊ 'ಹಲ್ ಹೌಸ್' ನಂತೆ ಹೆಸರುವಾಸಿಯಾಯಿತು. ಇವಳು ಮಕ್ಕಳ ಕ್ಷೇಮಾಭ್ಯುದಯಕ್ಕಾಗಿ ಫೆಡರಲ್ ಸರ್ಕಾರ ಒಂದು ಪ್ರತ್ಯೇಕ ಇಲಾಖೆಯನ್ನು ತೆರೆಯಬೇಕೆಂದು ಸರ್ಕಾರಕ್ಕೆ ಸಲಹೆ ಮಾಡಿದ ಮೊಟ್ಟ ಮೊದಲನೆಯ ಸಮಾಜಕಾರ್ಯಕರ್ತಳು. ತನ್ನ ಸೇವಾಸಂಸ್ಥೆಯ ಕಾರ್ಯಕರ್ತರಿಗೆ ಅವಳು – 'ನಾವು ಸಮುದಾಯದಲ್ಲಿ ನೆಲಸಿ ಅದನ್ನು ನಮ್ಮದು ಎನ್ನುವ ಮನೋಭಾವ ಬೆಳೆಸಿಕೊಳ್ಳ ಬೇಕು. ನಮ್ಮ ನಾಗರಿಕ ಕರ್ತವ್ಯಗಳನ್ನು ನಿಷ್ಠೆಯಿಂದ ಪಾಲಿಸಬೇಕು' – ಎಂದು ನಿರ್ದೇಶಿಸಿದ್ದಳು.

ಹೀಗೆ ಚರ್ಚುಗಳು, ಸಮಾಜ ಕಾರ್ಯಕರ್ತರು ಮತ್ತು ಕಾರ್ಮಿಕರ ಒಕ್ಕೂಟಗಳು ಅಮೆರಿಕದಲ್ಲಿ ಜರುಗಿದ್ದ ಔದ್ಯೋಗೀಕರಣದ ದುಷ್ಪರಿಣಾಮಗಳನ್ನು ನಿಯಂತ್ರಿಸಲು ಪರಸ್ಪರ ಕಲೆತು ಒಂದಾಗಿ ಸಮಾಜ ಸುಧಾರಣಾ ಕಾರ್ಯವನ್ನು ಮುಂದುವರೆಸಿಕೊಂಡು ಹೋದವು. ಇದೇ ಸಮಯದಲ್ಲಿ ಔದ್ಯೋಗೀಕರಣದ ಪರಿಣಾಮಗಳಾದ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಅಮೆರಿಕದ ವಿಶ್ವವಿದ್ಯಾನಿಲಯಗಳ ಗಮನ ಸೆಳೆದವು.

❑

ಅಧ್ಯಾಯ – ೧೩

ಜಾಗತಿಕ ಶಕ್ತಿಯಾಗಿ ಅಮೆರಿಕ

ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಅಮೆರಿಕ ಅಂತರರಾಷ್ಟ್ರೀಯ ಆರ್ಥಿಕ ಸಂಬಂಧಗಳನ್ನು ಬೆಳೆಸಿಕೊಂಡಿತ್ತು. ಅಮೆರಿಕದ ವ್ಯವಸಾಯದ ಉತ್ಪನ್ನಗಳಿಗೆ ಯೂರೋಪ್ ಬೃಹತ್ ಮಾರುಕಟ್ಟೆಯಾಗಿತ್ತು. ದೂರ ಪ್ರಾಚ್ಯದಲ್ಲಿ ಮತ್ತು ದಕ್ಷಿಣ ಅಮೆರಿಕ ದೇಶಗಳಲ್ಲಿ ಅಮೆರಿಕನ್ ವರ್ತಕರು ಹೆಚ್ಚು ವ್ಯಾಪಾರ ವ್ಯವಹಾರ ನಡೆಸಿದ್ದರು. ಮೇಲಾಗಿ 'ಮನ್ರೋ ಸಿದ್ಧಾಂತ' ಅಮೆರಿಕ ಸಂಯುಕ್ತ ಸಂಸ್ಥಾನಗಳನ್ನು ಪಶ್ಚಿಮ ಗೋಲಾರ್ಧದ ರಕ್ಷಣೆಗೆ ಬದ್ಧವನ್ನಾಗಿ ಮಾಡಿತ್ತು. ಅಂತರ್ಯುದ್ಧದನಂತರದ ಕೆಲವು ದಶಕಗಳಲ್ಲಿ ಅಮೆರಿಕದ ಉತ್ಪಾದನೆಗಳನ್ನು ಮಾರಾಟಮಾಡಲು ಹೊಸ ಮಾರುಕಟ್ಟೆಗಳನ್ನು ಹುಡುಕುವ ಆಸಕ್ತಿ ಮತ್ತು ಶ್ರಮಗಳನ್ನು ಯುದ್ಧಾನಂತರದ ರಾಷ್ಟ್ರ ಪುನರ್‌ನಿರ್ಮಾಣ, ಪಶ್ಚಿಮ ಪ್ರಾಂತಗಳನ್ನು ನೆಲೆಗೊಳಿಸುವುದು, ಕೈಗಾರಿಕೆ ಮತ್ತು ವ್ಯವಸಾಯಗಳನ್ನು ಉತ್ತಮಪಡಿಸವುದರಲ್ಲಿ ವಿನಿಯೋಗಿಸಲಾಯಿತು. ದಕ್ಷಿಣ ಅಮೆರಿಕ ಮತ್ತು ದೂರಪ್ರಾಚ್ಯ ದೇಶಗಳು ಅಮೆರಿಕದ ವ್ಯವಸಾಯೋತ್ಪನ್ನಗಳಿಗೆ ಮಾರಾಟದ ವಿಶಾಲ ಕ್ಷೇತ್ರಗಳಾಗಿದ್ದವು. ೧೮೪೪ರಷ್ಟು ಹಿಂದೆಯೇ ಅಮೆರಿಕ ಮತ್ತು ಚೀನಾ ದೇಶಗಳು ವ್ಯಾಪಾರ ಒಪ್ಪಂದ ಮಾಡಿಕೊಂಡಿದ್ದವು. ಇದಾದ ಹತ್ತು ವರ್ಷಗಳ ನಂತರ ಕಾಮಡೋರ್ ಪೆರ್ರಿ (Commodore Perry) ಜಪಾನಿನ ಆರ್ಥಿಕ ಪ್ರತ್ಯೇಕತೆ (economic isolation)ಯನ್ನು ಭೇದಿಸಿ ವ್ಯವಹಾರ ನಡೆಸುವುದರಲ್ಲಿ ಯಶಸ್ವಿಯಾದನು.

ಯೂರೋಪಿನ ಬಗ್ಗೆ ಅಮೆರಿಕ ಅತಿ ಜಾಗರೂಕತೆಯಿಂದ ವ್ಯವಹರಿಸಬೇಕಾಗಿತ್ತು. ಅಮೆರಿಕ ಸ್ವತಂತ್ರ ರಾಷ್ಟ್ರವಾದಾಗಿನಿಂದ ಯೂರೋಪಿನೊಡನೆ ರಾಜಕೀಯ ಸಂಬಂಧ ಬೆಳೆಸುವುದನ್ನು ತೊರೆದಿತ್ತು. ಇಂಗ್ಲೆಂಡ್ ಮೇಲಿನ ದ್ವೇಷ ಇನ್ನೂ ಹೊಗೆಯಾಡುತ್ತಿತ್ತು. ಅದೇ ಸಮಯದಲ್ಲಿ ಫ್ರಾನ್ಸ್ ಮೆಕ್ಸಿಕೊದಲ್ಲಿ ರಾಜಾಡಳಿತವನ್ನು ಸ್ಥಾಪಿಸಿತ್ತು. ಈ ರಾಜಕೀಯ ಚಟುವಟಿಕೆಗಳು ಅಮೆರಿಕ ಯೂರೋಪಿನಿಂದ ಪಶ್ಚಿಮ ಗೋಲಾರ್ಧವನ್ನು ಪ್ರತ್ಯೇಕಿಸುವ ಧೋರಣೆ ತಳೆಯಲು ಕಾರಣವಾದವು. ಹತ್ತೊಂಬತ್ತನೆಯ ಶತಮಾನದ ಕೊನೆಯವರೆಗೂ ಅಮೆರಿಕದ ರಾಜಕಾರಣಿಗಳಿಗೆ ಮತ್ತು ಪತ್ರಕರ್ತರಿಗೆ ಇಂಗ್ಲೆಂಡಿನ ಮೇಲೆ ದ್ವೇಷ ಕಾರುವುದು ಜನಪ್ರಿಯತೆ ಗಳಿಸುವ ಸುಲಭೋಪಾಯವಾಗಿತ್ತು. ಇಂಗ್ಲೆಂಡ್ ಚಿನ್ನದ ಪರಿಮಾಣ (gold standard)ವನ್ನು ಬೆಂಬಲಿಸುವ ಪ್ರಭಾವಶಾಲಿ ಬ್ಯಾಂಕ್‌ಗಳಿಂದ

ಕೂಡಿದ್ದ ದೇಶವಾಗಿದ್ದರಿಂದ ಅಮೆರಿಕದ ಬೆಳ್ಳಿಯ ಬೆಂಬಲಿಗರು ಅದನ್ನು ಸದಾ ಅನುಮಾನದಿಂದ ಕಾಣುತ್ತಿದ್ದರು. ಅಮೆರಿಕನ್ನರು ವಿವಿಧ ಭಾಷೆ ಮತ್ತು ಸಂಸ್ಕೃತಿಗಳ ಹಿನ್ನೆಲೆ ಪಡೆದವರಾಗಿದ್ದರಿಂದ ಅವರಲ್ಲಿ ಇಂಗ್ಲೆಂಡ್ ಮೇಲಿನ ದ್ವೇಷ ಜಾಗೃತವಾಗಿತ್ತು. ಪಾಪ್ಯುಲಿಸ್ಟ್ ಪಕ್ಷಕ್ಕೆ ಸೇರಿದ್ದ ರೈತರು ಜರ್ಮನ್, ಸ್ಕ್ಯಾಂಡಿನೇವಿಯಾ ಮತ್ತು ಡಚ್ ಹಿನ್ನೆಲೆಯವರಾಗಿದ್ದರು. ಐರ್‌ಲೆಂಡಿನಿಂದ ಬಂದವರು ಮೊದಲಿನಿಂದಲೂ ಇಂಗ್ಲೆಂಡ್ ದ್ವೇಷಿಗಳಾಗಿದ್ದರು. (ಫೀನಿಯನ್ (The Fenians) ಎಂಬ ಐರಿಷ್ ಅಮೆರಿಕನ್ ಸಂಗಡ ಐರ್ಲೆಂಡಿನ ಸ್ವಾತಂತ್ರ್ಯವನ್ನು ಬೆಂಬಲಿಸುತ್ತಿದ್ದುದರಿಂದ ಸಹಜವಾಗಿ ಇಂಗ್ಲೆಂಡ್ ದ್ವೇಷಿಗಳಾಗಿದ್ದರು.) ಫೀನಿಯನ್ನರು ೧೮೬೬-೧೮೭೧ರ ನಡುವೆ ಹಲವಾರು ಬಾರಿ ಕೆನಡಾ ದೇಶದ ಮೇಲೆ ದಾಳಿ ನಡೆಸಿದ್ದರು.

ಪರಿಹಾಸವೆಂದರೆ, ಅಮೆರಿಕನ್ನರು ದ್ವೇಷಿಸುತ್ತಿದ್ದರೂ ಸಹ ಇಂಗ್ಲೆಂಡ್ ತನ್ನ ಸ್ನೇಹಹಸ್ತ ನೀಡಲು ಪ್ರಯತ್ನಿಸುತ್ತಿತ್ತು. ೧೮೬೦ರ ವೇಳೆಗೆ ಅಮೆರಿಕ ಯೂರೋಪಿನ ರಾಜಕೀಯದಲ್ಲಿ ಕೈಹಾಕದೆ ತಟಸ್ಥವಾಗಿರುವುದು ತಮ್ಮ ಭದ್ರತೆಗೆ ಒಳ್ಳೆಯದೆಂದು ಬ್ರಿಟಿಷರು ಮನಗಂಡಿದ್ದರು. ೧೮೬೯ರಲ್ಲಿ ಇಂಗ್ಲೆಂಡ್ ಅಮೆರಿಕದೊಡನೆ ಅಂತರ್ಯುದ್ಧ ಸಮಯದಲ್ಲಿ ನಡೆದ ಘಟನೆಗಳ ಬಗ್ಗೆ ಸಮಾಲೋಚನೆ ನಡೆಸಲು ಸಮ್ಮತಿಸಿತು. ಆದರೆ ಸೆನೆಟ್ ಮೊದಲಬಾರಿಗೆ ನಡೆದ ಒಪ್ಪಂದವನ್ನು ನಿರಾಕರಿಸಿತು. ಏಕೆಂದರೆ ಕಾನ್‌ಫೆಡರೇಟ್ ಸೈನ್ಯಕ್ಕೆ ಸಹಾಯ ಒದಗಿಸಿ ಯುದ್ಧ ಮುಂದುವರಿಯುವಂತೆ ಮಾಡಿದ್ದು ನಿಜವೆಂದು ಒಪ್ಪಿಕೊಳ್ಳಲು ಇಂಗ್ಲೆಂಡ್ ಸಮ್ಮತಿಸದಿದ್ದುದು. ಹಾಗೇನಾದರೂ ಒಪ್ಪಿಕೊಂಡಿದ್ದರೆ ಇಂಗ್ಲೆಂಡ್ ಅಮೆರಿಕಕ್ಕೆ ಅಪಾರ ಮೊತ್ತದ ಹಣ ತೆರಬೇಕಾಗುತ್ತಿತ್ತು; ಅಮೆರಿಕದ ಅಂತರ್ಯುದ್ಧವನ್ನು ಮುಂದುವರಿಸಲು ಸಹಾಯ ಮಾಡಿದ್ದರಿಂದ ಉಂಟಾದ ಪ್ರಾಣಹಾನಿ ಮತ್ತು ಆಸ್ತಿ ಪಾಸ್ತಿಗಳ ನಷ್ಟವನ್ನು ತುಂಬಿಸಲು 'ದಂಡ' ಕೊಡಬೇಕಾಗಿತ್ತು. ಆದ್ದರಿಂದ ಇಂಗ್ಲೆಂಡ್ ಇದರ ಬಗ್ಗೆ ಏನೂ ಹೇಳದೆ ತನ್ನ ಜವಾಬ್ದಾರಿಯನ್ನು ತಪ್ಪಿಸಿಕೊಂಡಿತು. ಹೀಗಿದ್ದರೂ ಈ ಎರಡು ದೇಶಗಳು ಸ್ವಲ್ಪ ಕಾಲದಲ್ಲಿಯೇ ಒಂದು ಅತಿಮುಖ್ಯವಾದ ಒಪ್ಪಂದವನ್ನು ಮಾಡಿಕೊಂಡವು. ಇದಕ್ಕೆ 'ವಾಷಿಂಗ್‌ಟನ್ ಒಪ್ಪಂದ' ಎಂದು ಹೆಸರು. ಇದರ ಪ್ರಕಾರ ಇಂಗ್ಲೆಂಡ್ ತಾನು ಕಾನ್‌ಫೆಡರೇಟ್ ನೌಕಾದಳಕ್ಕೆ ತಯಾರಿಸಿಕೊಟ್ಟ 'ಅಲಬಾಮ' ಎಂಬ ಹೆಸರಿನ ಯುದ್ಧನೌಕೆ ಮಾಡಿದ ಅಪಾರ ಹಾನಿಗೆ ವಿಷಾದ ವ್ಯಕ್ತಪಡಿಸಿ ಕ್ಷಮಾಪಣೆ ಕೇಳಬೇಕಾಯಿತು. ಈ ಎರಡು ದೇಶಗಳ ನಡುವೆ ರಾಜಿ ಮಾಡಿಸಲು ರಚನೆಗೊಂಡ ಸಮಿತಿ ಇಂಗ್ಲೆಂಡ್ ಅಮೆರಿಕಕ್ಕೆ ೧೫ ಮಿಲಿಯನ್ ಡಾಲರ್‌ಗಳನ್ನು ಮತ್ತು ವಿವಾದ ಕ್ಕೊಳಗಾಗಿದ್ದ ಸ್ಯಾನ್ ಹುವಾನ್ ದ್ವೀಪಗಳನ್ನು (San Juan islands) ಕೊಡುವಂತೆ ತೀರ್ಪು ನೀಡಿತು. ಇದಕ್ಕೆ ಪ್ರತಿಯಾಗಿ ಅಮೆರಿಕ ಅಂತರ್ಯುದ್ಧದ ಸಮಯದಲ್ಲಿ ಬ್ರಿಟಿಷ್ ನೌಕೆಗಳ ಮೇಲೆ ದಾಳಿ ನಡೆಸಿ ನಷ್ಟ ಉಂಟುಮಾಡಿದ್ದಕ್ಕಾಗಿ ಸೂಕ್ತ ಪರಿಹಾರ ನೀಡ ಬೇಕೆಂದು ಮತ್ತು ಕೆನಡಾ ಸಮೀಪದ ಸಮುದ್ರದಲ್ಲಿ ಬ್ರಿಟಿಷರಿಗೆ ಮೀನು ಹಿಡಿಯುವ

ಹಕ್ಕು ಕೊಡಬೇಕೆಂದು ತೀರ್ಮಾನಿಸಲಾಯಿತು. ತಮ್ಮ ಮಿತ್ರ ರಾಷ್ಟ್ರಗಳ ಮೇಲೆ ಉಪಯೋಗಿಸಬಹುದಾದ ಶಸ್ತ್ರಾಸ್ತ್ರಗಳನ್ನಾಗಲೀ ಅಥವಾ ನೌಕೆಗಳನ್ನಾಗಲೀ ತಟಸ್ಥ ರಾಷ್ಟ್ರಗಳು ಉತ್ಪಾದನೆ ಮಾಡಲು ಬಿಡಬಾರದಾಗಿ ಎರಡು ರಾಷ್ಟ್ರಗಳು (ಇಂಗ್ಲೆಂಡ್ ಮತ್ತು ಅಮೆರಿಕ) ಒಪ್ಪಿಕೊಂಡವು. ಈ ರೀತಿಯಲ್ಲಿ ಅಮೆರಿಕ ಮತ್ತು ಇಂಗ್ಲೆಂಡ್‌ಗಳ ನಡುವಣ ಒಪ್ಪಂದ ಭವಿಷ್ಯದಲ್ಲಿ ಪ್ರಪಂಚದ ರಾಜಕೀಯದಲ್ಲಿ ಅಮೆರಿಕದ ಮಹತ್ವವನ್ನು ತೋರುವ ಮುನ್ಸೂಚನೆಯಾಯಿತು.

ಇದೇ ಸಮಯದಲ್ಲಿ ಅಮೆರಿಕ ಫ್ರಾನ್ಸ್ ದೇಶದ ಮೇಲೂ ಅನೇಕ ಆರೋಪಣೆಗಳನ್ನು ಹೊರಿಸಿತ್ತು. ಅಂತರ್ಯುದ್ಧದ ಸಮಯದಲ್ಲಿ ಮೂರನೆಯ ನೆಪೋಲಿಯನ್ನನು ಮೆಕ್ಸಿಕೊ ದೇಶದ ಮೇಲೆ ಸಾಲ ತೀರಿಸಲಿಲ್ಲವೆಂಬ ನೆಪದ ಮೇಲೆ ದಾಳಿ ಮಾಡಿದ್ದನು. ಅವನು ಆ ದೇಶವನ್ನು ಆಕ್ರಮಿಸಿಕೊಂಡು ಅದನ್ನು ಆಸ್ಟ್ರಿಯಾ ದೇಶದ ಫರ್ಡಿನೆಂಡ್ ಮಾಕ್ಸ್‌ಮಿಲಿಯನ್ (Ferdinand Maxmilian) ಗೆ ಅರ್ಪಿಸಿದನು. ಅಮೆರಿಕ ಇವನ ಕಾರ್ಯಾಚರಣೆಯನ್ನು ಅಧಿಕೃತವಾಗಿ ವಿರೋಧಿಸಲಿಲ್ಲ. ಆದರೆ ಬೆನಿಟೊ ಹುವಾರೆಜ್ (Benito Juarez) ಎಂಬ ಮೆಕ್ಸಿಕನ್ ನಾಯಕನನ್ನು ಅಧಿಕೃತ ಆಡಳಿತಗಾರನೆಂದು ಅನುಮೋದಿಸಿತು. ಅಂತರ್ಯುದ್ಧ ಮುಗಿದೊಡನೆಯೆ ಅಮೆರಿಕ ಫ್ರೆಂಚರು ಮೆಕ್ಸಿಕೊ ಬಿಟ್ಟುಹೋಗಬೇಕೆಂದು ರಾಯಭಾರಿಯ ಮೂಲಕ ಪ್ರಯತ್ನಿಸಿತು. ಫ್ರೆಂಚರು ಅಮೆರಿಕದ ಯುದ್ಧ ಸಿದ್ಧತೆಯನ್ನು, ಸೈನ್ಯಬಲ ಮತ್ತು ಸಾಮರ್ಥ್ಯಗಳನ್ನು ಅರಿತಿದ್ದರು. ಮೇಲಾಗಿ ಫ್ರಾನ್ಸ್ ಪ್ರಸ್ತುತವಾಗಿ ಪ್ರಶ್ಯಿಯನ್ (prussian) ದಾಳಿಯನ್ನು ಎದುರಿಸಬೇಕಾದ ಪರಿಸ್ಥಿತಿ ಉಂಟಾಗಿತ್ತು. ಆದ್ದರಿಂದ ಮೆಕ್ಸಿಕೊದಲ್ಲಿ ಫ್ರೆಂಚರು ಹಿಂಜರಿದು ಮಾಕ್ಸ್‌ಮಿಲಿಯನ್‌ನನ್ನು ತೊರೆದು ಹೊರಟುಹೋದರು.

೧೮೬೧ರಿಂದ ೧೮೬೯ರ ಅವಧಿಯಲ್ಲಿ ವಿದೇಶಾಂಗ ಕಾರ್ಯದರ್ಶಿ (secretary of state)ಯಾಗಿದ್ದ ವಿಲಿಯಂ ಹೆನ್ರಿ ಸೆವಾರ್ಡ್ ಅಮೆರಿಕದ ಆರ್ಥಿಕ ಅಭಿವೃದ್ಧಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಗಳ ಅಗತ್ಯವನ್ನು ಮನಗಂಡಿದ್ದನು. ಅಂತರ್ಯುದ್ಧ ಪ್ರಾರಂಭವಾಗುವುದಕ್ಕೆ ಎರಡು ದಶಕಗಳ ಮುಂಚೆಯೇ ವ್ಯವಸಾಯ ಮತ್ತು ವಾಣಿಜ್ಯಗಳ ಅಭಿವೃದ್ಧಿಯ ದೃಷ್ಟಿಯಿಂದ ಅವನು ಅಮೆರಿಕ ಆರ್ಥಿಕವಾಗಿ ಮತ್ತು ಭೌಗೋಳಿಕವಾಗಿ ವಿಸ್ತರಿಸುವುದು ಅಗತ್ಯವೆಂದು ಪ್ರತಿಪಾದಿಸಿದ್ದನು. ಅವನ ನಂತರ ಬಂದ ವಿಸ್ತರಣವಾದಿಗಳಂತೆ (expansionists) ಸೆವಾರ್ಡ್ ಅಮೆರಿಕ ಕೆರಿಬ್ಬಿಯನ್ (Caribbean) ಮತ್ತು ಶಾಂತಮಹಾಸಾಗರಗಳ ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿರಬೇಕೆಂದು ಅಭಿಪ್ರಾಯಪಟ್ಟನು. ರಷ್ಯಾದಿಂದ ಅಲಾಸ್ಕವನ್ನು ಕೊಂಡಿದ್ದು ಸೆವಾರ್ಡ್‌ನ ಅತ್ಯುನ್ನತವಾದ ಸಾಧನೆ. ಈ ವಿಸ್ತಾರವಾದ ಭೂಭಾಗವನ್ನು 'ರಷ್ಯನ್ ಅಮೆರಿಕ'ವೆಂದು ಕರೆಯುತ್ತಿದ್ದರು. ಅಲಾಸ್ಕದಲ್ಲಿ ಮೃದುರೋಮ ಚರ್ಮದ ವ್ಯಾಪಾರ, ಮೀನುಗಾರಿಕೆ ವ್ಯಾಪಕ ಧಂಧೆ

ಗಳಾಗಿದ್ದವು; ಆ ನೆಲದ ಒಳಪದರಗಳಲ್ಲಿ ಚಿನ್ನದ ಸೆಳಕುಗಳು ಹುದುಗಿವೆ ಎಂಬ ವದಂತಿ ಹಬ್ಬಿತ್ತು. ಆದರೆ ಈ ಭೂಭಾಗದ ಸಂರಕ್ಷಣೆ ಮತ್ತು ನಿರ್ವಹಣೆಗಳಿಗೆ ಅಪಾರ ವೆಚ್ಚ ತಗಲುತ್ತಿತ್ತು. ಆಗ ರಷ್ಯಾದೇಶವನ್ನು ಆಳುತ್ತಿದ್ದ 'ಜ಼ಾರ್' ಅಲಾಸ್ಕ ಅಮೆರಿಕದ ವಶದಲ್ಲಿದ್ದರೆ ಬ್ರಿಟಿಷರು ಆ ಕಡೆಯಿಂದ ಅತಿಕ್ರಮಿಸುವುದನ್ನು ತಡೆಗಟ್ಟಬಹುದೆಂದು ಎಣಿಸಿ ರಷ್ಯಾದ ರಾಯಭಾರಿಯ ಮೂಲಕ ಅಲಾಸ್ಕವನ್ನು ಕೊಂಡುಕೊಳ್ಳಬಹುದೆಂದು ಸೂಚನೆ ಕೊಟ್ಟನು.

ಸೆವಾರ್ಡ್‌ನು ಈ ವ್ಯವಹಾರವನ್ನು ಮುಗಿಸುವ ತರಾತುರಿಯಲ್ಲಿ ರಾತ್ರೋರಾತ್ರಿ ಒಪ್ಪಂದವನ್ನು ತಯಾರಿಸಿ ಏಳು ಮಿಲಿಯನ್ ಡಾಲರ್‌ಗಳಿಗೆ ಅಲಾಸ್ಕವನ್ನು ಕೊಳ್ಳುವ ನಿರ್ಧಾರವನ್ನು ತಿಳಿಸಿದನು. ಈ ಸುದ್ದಿ ಅಮೆರಿಕ ತಲುಪಿದಾಗ ದೇಶದಿಂದ ದೂರವಾಗಿ ಪ್ರತ್ಯೇಕವಾದ, ಸದಾ ಮಂಜಿನಿಂದ ಆವೃತಗೊಂಡ 'ಮಂಜಿನ ಪೆಟ್ಟಿಗೆ' (ice box) [illegible] ನಿಜದ ಪ್ರಯೋಜನಕ್ಕೆ ಬಾರದ ಭೂಮಿಗೆ ಅಷ್ಟೊಂದು ಹಣ ಕೊಟ್ಟು ಕೊಂಡಿದ್ದು ಬಹುಪಾಲು ಜನರಿಗೆ ಸಖೇದಾಶ್ಚರ್ಯವಾಯಿತು. ಮತ್ತೆ ಕೆಲವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ತಾನು ನಿರ್ಧರಿಸಿದ ಒಪ್ಪಂದವನ್ನು ಅನುಮೋದಿಸುವಂತೆ ಮಾಡಲು ಸೆವಾರ್ಡ್ ಸತತವಾಗಿ ಪ್ರಯತ್ನ ಪಡಬೇಕಾಯಿತು. ಒಪ್ಪಂದದ ಅನುಕೂಲಗಳನ್ನು – ರಷ್ಯಾ, ಅಮೆರಿಕಗಳ ಮೈತ್ರಿ, ಅಲಾಸ್ಕದ ಪ್ರಕೃತಿ ಸಂಪತ್ತು, ದೂರಪ್ರಾಚ್ಯ ದೇಶಗಳೊಡನೆ ವ್ಯಾಪಾರ ನಡೆಸಲು ಈ ಭೂಭಾಗ ಸುಲಭ ಮಾರ್ಗ ಏರ್ಪಡಿಸುವುದು ಮತ್ತು ಬ್ರಿಟಿಷರ ಆಕ್ರಮಣವನ್ನು ತಡೆಯಲು ಸೈನಿಕ ಕಾರ್ಯಾಚರಣೆಗೆ ತಕ್ಕುದಾದ ಪ್ರದೇಶ – ಎಂದು ಪ್ರತಿಪಾದಿಸಿ, ಕೊನೆಗೆ ಪ್ರಬಲ ಸೆನೆಟರ್ ಚಾರ್ಲ್ಸ್ ಸಮ್ನರ್ (Charles Sumner) ಬೆಂಬಲದಿಂದ ೧೮೬೭ರಲ್ಲಿ ಒಪ್ಪಂದವನ್ನು ಅಂಗೀಕರಿಸಲಾಯಿತು. ಅಲಾಸ್ಕ ಕೊಂಡಿದ್ದು ಅಮೆರಿಕನ್ನರ ಹೊಸಜಾಗಗಳನ್ನು ಹುಡುಕಿ ಪರಿಶೋಧನೆ ಮಾಡುವ ಪ್ರವೃತ್ತಿಯನ್ನು ಜಾಗೃತಗೊಳಿಸಿತು.

ಸೆವಾರ್ಡ್ ಮತ್ತು ಅಧ್ಯಕ್ಷ ಗ್ರ್ಯಾಂಟ್ ಇಬ್ಬರೂ ಕೆರಿಬ್ಬಿಯನ್ ದ್ವೀಪಗಳನ್ನು ಅಮೆರಿಕದ ಪ್ರಭಾವವಲಯಕ್ಕೆ ಸೇರಿಸಲು ಆಸಕ್ತಿ ವಹಿಸಿದರು. ಮುಖ್ಯವಾಗಿ ಸಾಂಟೊ ಡೊಮಿಂಗೊ (Santo Domingo) ದ್ವೀಪವನ್ನು ವಶಪಡಿಸಿಕೊಳ್ಳಲು ಅಧ್ಯಕ್ಷ ಗ್ರ್ಯಾಂಟ್ ಕಾತುರನಾಗಿದ್ದನು. ಈ ದ್ವೀಪ ಸೈನಿಕ ಕಾರ್ಯಾಚರಣೆ ದೃಷ್ಟಿಯಿಂದ ಮತ್ತು ವಾಣಿಜ್ಯ ವ್ಯವಹಾರಗಳ ದೃಷ್ಟಿಯಿಂದ ಅಮೆರಿಕಕ್ಕೆ ಅಗತ್ಯವಾಗಿದೆ ಎಂದು ಅವನು ನಂಬಿದ್ದನು. ತನ್ನ ಯೋಜನೆಯನ್ನು ಕಾರ್ಯಗತಗೊಳಿಸಲು ಆ ದ್ವೀಪವನ್ನು ಆಕ್ರಮಣ ಮಾಡಬೇಕೆಂದು ನಿರ್ಧರಿಸಿದ ಕೆಲವು ಪ್ರಬಲ ಅಮೆರಿಕನ್ನರ ಒಂದು ಪಂಗಡವನ್ನು ಬೆಂಬಲಿಸಿದನು. ಆದರೆ ಈ ಯೋಜನೆಯನ್ನು ಸಮ್ನರ್ ವಿರೋಧಿಸಿ ಸೆನೆಟ್ ಅದನ್ನು ನಿರಾಕರಿಸುವಂತೆ ಮಾಡಿದನು.

ಸೆವಾರ್ಡ್ ಮತ್ತು ಗ್ರ್ಯಾಂಟ್ ಪಶ್ಚಿಮ ಗೋಲಾರ್ಧದಲ್ಲಿ ಅಮೆರಿಕದ ವ್ಯಾಪಾರ

ವ್ಯವಹಾರಗಳು ವಿಶಾಲಗೊಂಡು ಎಲ್ಲ ಮಾರುಕಟ್ಟೆಗಳನ್ನು ನಿಯಂತ್ರಿಸುವಂತೆ ಮಾಡುವ ಯೋಜನೆಯನ್ನು ಅವರ ನಂತರ ಅಧಿಕಾರಕ್ಕೆ ಬಂದವರು ಮುಂದುವರಿಸಿಕೊಂಡು ಹೋದರು. ೧೮೮೦ರ ದಶಕದ ಕೊನೆಯಲ್ಲಿ ವಿಸ್ತರಣವಾದದ ಜೊತೆಗೆ ದಕ್ಷಿಣ ಅಮೆರಿಕದ ರಾಷ್ಟ್ರಗಳೊಡನೆ ಉತ್ತಮ ಸಂಬಂಧಗಳನ್ನು ಬೆಳೆಸಿಕೊಳ್ಳುವ ಪ್ರಯತ್ನ ಮಾಡಲಾಯಿತು. ೧೮೮೯ರಲ್ಲಿ ವಿದೇಶಾಂಗ ಸಚಿವನಾಗಿದ್ದ ಜೇಮ್ಸ್ ಬ್ಲೇಯ್ನ್ (James Blain) ಹದಿನೇಳು ರಾಷ್ಟ್ರಗಳ ಸಮ್ಮೇಳನವನ್ನು ಏರ್ಪಡಿಸಿದ್ದನು. ಇದರಿಂದ 'ವಿಶಾಲ ಅಮೆರಿಕದ ಒಕ್ಕೂಟ' (Pan American Union) ಬೆಳೆಯಿತು. ಈ ಒಕ್ಕೂಟದ ಮುಖ್ಯ ಉದ್ದೇಶ: ಒಕ್ಕೂಟದ ರಾಷ್ಟ್ರಗಳ ನಡುವೆ ಪರಸ್ಪರ ವಿಚಾರ ವಿನಿಯೋಗ ನಡೆಯುವಂತೆ ಮಾಡುವುದಾಗಿತ್ತು. ಅದಕ್ಕಿಂತ ಹೆಚ್ಚಾಗಿ, ಅಮೆರಿಕ ಜಾಗತಿಕ ಶಕ್ತಿಯಾಗಿ ವೃದ್ಧಿಗೊಂಡಿರುವುದನ್ನು, ಪಶ್ಚಿಮ ಗೋಲಾರ್ಧದ ರಕ್ಷಣೆಯನ್ನು ಏಕೈಕವಾಗಿ ನಿರ್ವಹಿಸಬಲ್ಲ ಬಲಿಷ್ಠ ರಾಷ್ಟ್ರವೆಂದು ಲೋಕಕ್ಕೆ ಸಾರಿ ಹೇಳುವ ಅವಕಾಶ ಈ ಒಕ್ಕೂಟ ಒದಗಿಸಿಕೊಟ್ಟಿತು.

೧೮೯೦ರ ದಶಕದ ಅಮೆರಿಕನ್ ಸಾಮ್ರಾಜ್ಯಶಾಹಿ ಧೋರಣೆ

'ಅಮೆರಿಕದ ಹೊಸಪೀಳಿಗೆಯ ರೈತರು ಬರಿ ವ್ಯವಸಾಯಗಾರರಲ್ಲ, ಅವರು ಉದ್ಯಮಿಗಳೂ ಹೌದು' ಎಂದು ವಿಲಿಯಂ ಜೆನ್ನಿಂಗ್ ಬ್ರೈಯನ್ ವರ್ಣಿಸಿದ್ದನು. ಅವರು ಉದ್ಯಮಗಾರರಾದುದರಿಂದ ಅವರಿಗೆ ಮಾರುಕಟ್ಟೆಗಳ ಅವಶ್ಯಕತೆ ಇದ್ದು, ರೈತರು ಕೈಗಾರಿಕೋದ್ಯಮಿಗಳಿಗಿಂತ ಮುಂಚೆ ಹೊಸಮಾರುಕಟ್ಟೆಗಳನ್ನು ವಶಪಡಿಸಿಕೊಳ್ಳುವ ಆಸಕ್ತಿ ಬೆಳೆಸಿಕೊಂಡಿದ್ದರು. ಕೈಗಾರಿಕೋದ್ಯಮಿಗಳು ತಮ್ಮ ಉತ್ಪನ್ನಗಳನ್ನು ಸ್ಥಳೀಯ ಬಳಕೆದಾರರಿಗೆ ಮಾರುತ್ತಿದ್ದರು; ಸರ್ಕಾರದ ರಕ್ಷಣೆಯಿಂದ ಅವರಿಗೆ ಬೇರೆ ದೇಶಗಳೊಡನೆ ಸ್ಪರ್ಧಿಸಬೇಕೆಂಬ ಭಯವಿರಲಿಲ್ಲ. ಆದರೆ ವ್ಯವಸಾಯ ಉತ್ಪನ್ನಗಳು ದೇಶದ ಅಗತ್ಯಗಳನ್ನು ಪೂರೈಸಿಯೂ ಅಧಿಕ ಪ್ರಮಾಣ ಮಿಕ್ಕಿ ಉಳಿಯುತ್ತಿತ್ತು. ಈ ಹೆಚ್ಚುವರಿ ಉತ್ಪನ್ನಗಳನ್ನು ಮಾರಲು ಪರದೇಶಗಳ ಮಾರುಕಟ್ಟೆಗಳು ಅವರಿಗೆ ಅವಶ್ಯಕವಾಗಿದ್ದವು. ಆಗ ಅಮೆರಿಕದಲ್ಲಿ ರೈತರು ಬಹುಸಂಖ್ಯಾತರಾಗಿದ್ದರು. ಅವರು ಶಾಂತಸಾಗರದಲ್ಲಿನ ದ್ವೀಪಗಳನ್ನು ಅಮೆರಿಕ ಆಕ್ರಮಿಸಿಕೊಳ್ಳಬೇಕೆಂಬ ಧೋರಣೆ ತಳೆದಿದ್ದರು. ಸರ್ಕಾರ ಆಕ್ರಮಣಶೀಲತೆಯನ್ನು ಪ್ರದರ್ಶಿಸಿ ಹೊಸ ಮಾರುಕಟ್ಟೆಗಳನ್ನು ವಶಪಡಿಸಿಕೊಳ್ಳಬೇಕೆಂದು ಅವರು ಒತ್ತಾಯ ಮಾಡಿದರು.

೧೮೭೦ರಿಂದ ೧೯೦೦ರವರೆಗಿನ ಅವಧಿಯಲ್ಲಿ ಅಮೆರಿಕದ ಕೈಗಾರಿಕೋದ್ಯಮಗಳು ಕೂಡ ರಫ್ತು ವ್ಯಾಪಾರ ಹೆಚ್ಚಿಸಿದವು. ರಫ್ತಾದ ಒಟ್ಟು ಸರಕುಗಳ ಮೌಲ್ಯ ೩೭೨ ಮಿಲಿಯನ್ ಡಾಲರ್‌ಗಳಿಂದ ೧೩೯೪ ಮಿಲಿಯನ್ ಡಾಲರ್‌ಗಳಿಗೆ ಏರಿತು. ಪ್ರಾರಂಭದಲ್ಲಿ ರಫ್ತಾಗುತ್ತಿದ್ದ ಒಟ್ಟು ಸರಕುಗಳಲ್ಲಿ ೨/೩ ಭಾಗಕ್ಕಿಂತ ಹೆಚ್ಚು ವ್ಯವಸಾಯ ಉತ್ಪನ್ನಗಳಾಗಿದ್ದವು; ೧೯೦೦ರ ಹೊತ್ತಿಗೆ ಕೈಗಾರಿಕಾ ಉತ್ಪನ್ನ ವಸ್ತುಗಳು ರಫ್ತಾಗುತ್ತಿದ್ದ

ಸರಕುಗಳ ಅರ್ಧಭಾಗಕ್ಕಿಂತಲೂ ಹೆಚ್ಚಾಗಿದ್ದವು. ಮಾರುಕಟ್ಟೆಗಳಿಗಾಗಿ ಹುಡುಕಾಟ ೧೮೯೦ರ ದಶಕದ ಅಮೆರಿಕದ ಸಾಮ್ರಾಜ್ಯಶಾಹಿ ಪ್ರವೃತ್ತಿಯ ಪೂರ್ಣ ಚಿತ್ರ ಒದಗಿಸುವುದಿಲ್ಲ. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಈ ಪ್ರವೃತ್ತಿಯ ಮುಖ್ಯ ಧ್ಯೇಯ ವ್ಯಾಪಾರ ಮಾತ್ರವಾಗಿರಲಿಲ್ಲ; ಹೆಚ್ಚಿನ ಭೂಭಾಗವನ್ನು ವಶಪಡಿಸಿಕೊಳ್ಳುವುದು ಅಥವಾ ಆ ಪ್ರದೇಶಗಳ ಮೇಲೆ ಹೆಚ್ಚಿನ ಪ್ರಭಾವ ಬೀರಿ ಆರ್ಥಿಕವಾಗಿ ತನ್ನ ಅಧೀನತೆ ಯಲ್ಲಿಟ್ಟುಕೊಳ್ಳುವುದು ಮುಖ್ಯವಾಗಿತ್ತು.

೧೮೯೦ರ ದಶಕ ಆಂದೋಳನ, ಅಸ್ಥಿರತೆ ಮತ್ತು ಆತಂಕಗಳ ಕಾಲವಾಗಿತ್ತು. ೧೮೯೩ರಲ್ಲಿ ಆರ್ಥಿಕ ಮುಗ್ಗಟ್ಟಿನ ಭೀತಿ ಮತ್ತು ಭವಿಷ್ಯದ ಬಗ್ಗೆ ಅನಿಶ್ಚಯತೆ ಅಮೆರಿಕನ್ನರನ್ನು ಕಾಡುತ್ತಿದ್ದವು. ಇವುಗಳ ಜೊತೆಗೆ ಪಾಪ್ಯುಲಿಸ್ಟರ[೧] ಪ್ರಭಾವ, ಖಾಸಗಿ ನಿಧಿ-ನಿಕ್ಷೇಪಗಳ ಬಗ್ಗೆ ಆತಂಕ, ಏಕಸ್ವಾಮ್ಯತೆಗಳ ಬೆಳವಣಿಗೆ, ಗಡಿನಾಡು ವಿಸ್ತರಣೆಯ ಅಂತ್ಯ, ಮುಷ್ಕರಗಳು ಮತ್ತು ಅಧಿಕ ಸಂಖ್ಯೆಯಲ್ಲಿ ಅನ್ಯದೇಶಗಳ ವಲಸೆಗಾರರ ಆಗಮನ – ಇವು ಅಮೆರಿಕನ್ನರಲ್ಲಿ ಆತಂಕ ಹುಟ್ಟಿಸಿದ್ದವು. ಈ ಆಂತರಿಕ ಸಮಸ್ಯೆಗಳಿಂದ ಜನರ ಮನಸ್ಸನ್ನು ಬೇರೆ ಕಡೆ ತಿರುಗಿಸಲು ಕೆಲವು ಪ್ರಮುಖ ರಾಜಕಾರಣಿಗಳು ಅಮೆರಿಕ ಆಕ್ರಮಣಕಾರಿ ಧೋರಣೆಯನ್ನು ತಳೆದು ಹೊಸಪ್ರದೇಶಗಳನ್ನು ತನ್ನ ಪ್ರಭಾವ ವಲಯದೊಳಗೆ ತೆಗೆದುಕೊಳ್ಳಬೇಕಾದ ಅಗತ್ಯವನ್ನು ಪ್ರತಿಪಾದಿಸಿದರು.

೧೮೯೦ರ ದಶಕದ ಸಾಮ್ರಾಜ್ಯಶಾಹಿ ಧೋರಣೆ ಹರ್ಬರ್ಟ್ ಸ್ಪೆನ್ಸರ್ (Herbert Spencer)ನ 'ಸಾಮಾಜಿಕ ಡಾರ್ವಿನ್ ತತ್ವ'ದ (Social Darwinism) ಮೇಲೆ ಆಧಾರ ವಾಗಿತ್ತು. ಜನಪ್ರಿಯ ಬರಹಗಾರ ಮತ್ತು ಇತಿಹಾಸಕಾರನಾದ ಜಾನ್ ಫಿಸ್ಕ್ (John Fiske) ಆ್ಯಂಗ್ಲೊ ಸಾಕ್ಸನ್ ಜನಾಂಗ ಇತರ ಎಲ್ಲ ಜನಾಂಗಗಳಿಗಿಂತ ಶ್ರೇಷ್ಠವಾದುದು ಎಂದು ಪ್ರಚುರ ಪಡಿಸಿದನು. ಅದೇ ಸಮಯದಲ್ಲಿ ರೆವೆರಂಡ್ ಜೋಸಯ ಸ್ಟ್ರಾಂಗ್ (Reverand Josiah Strong) ಬುಡಕಟ್ಟುಗಳ ಪೈಪೋಟಿಯಲ್ಲಿ ಅಂತಿಮವಾಗಿ ಗೆಲ್ಲುವುದು ಆ್ಯಂಗ್ಲೊ ಸಾಕ್ಸನರು ಮಾತ್ರ' ಎಂದು ಭವಿಷ್ಯ ನುಡಿದುದೇ ಅಲ್ಲದೆ ಅವರು ಜನಪ್ರಿಯರಾಗಲು ಕಾರಣ ಅವರು ನಾಗರಿಕ ಸ್ವಾತಂತ್ರ್ಯ ಮತ್ತು ಕ್ರೈಸ್ತಮತದ ಆಧ್ಯಾತ್ಮದ ಪ್ರತಿನಿಧಿಗಳಾಗಿದ್ದರಿಂದ ಎಂದು ವಾದಿಸುತ್ತಿದ್ದನು. ಕೆಲವು ಪ್ರಾಟೆಸ್ಟಂಟ್ ಮತ್ತು ಕ್ಯಾಥೊಲಿಕ್ ಮತ ಪ್ರಚಾರಕರು ಫಿಸ್ಕ್ ಮತ್ತು ಸ್ಟ್ರಾಂಗ್ ಅವರ ಆವೇಶಪೂರ್ಣ ಆದೇಶಗಳನ್ನು ಉಪಯೋಗಿಸಿಕೊಂಡು ಹೊಸಜಾಗಗಳಲ್ಲಿ ತಮ್ಮ ಮತಪ್ರಚಾರ ಮಾಡಿ, ಅಲ್ಲಿನ ಜನರನ್ನು ಮತಾಂತರಗೊಳಿಸಿ, ಆ ಮೂಲಕ ಅವರ ಜಾಗಗಳನ್ನು ಅಮೆರಿಕದ ಪ್ರಭಾವವಲಯದೊಳಗೆ ಸೇರುವಂತೆ ಮಾಡುತ್ತಿದ್ದರು. ಮತಪ್ರಚಾರಕರ ಈ ವಿಧಾನಗಳನ್ನು 'ಧರ್ಮ ಸಾಮ್ರಾಜ್ಯಶಾಹಿ' (Imperialism of Righteousness)

೧. ಸಾಮಾನ್ಯರೈತರ ಮನೋಭಾವದ ವ್ಯಕ್ತಿಗಳು

ಎಂದು ಕರೆಯಲಾಯಿತು. ಅನೇಕ ಚಿಂತನಕಾರರು ಆ್ಯಂಗ್ಲೊ ಸಾಕ್ಸನ್ ಶ್ರೇಷ್ಠತೆಯನ್ನು ಬೆಂಬಲಿಸಿ ಹೇಳಿಕೆ ನೀಡಿದರು. ಇತಿಹಾಸಕಾರ ಜಾನ್ ಬರ್ಗೆಸ್ (John Burgess) ನು 'ಅನೇಕ ದೇಶಗಳನ್ನು ಬಲಾತ್ಕಾರದಿಂದ ನಾಗರಿಕವಾಗಿ (ಅಂದರೆ ಕ್ರೈಸ್ತಮತದವರಾಗಿ) ಪರಿವರ್ತನಗೊಳಿಸುವುದು ನಾಗರಿಕ ದೇಶಗಳ ಜವಾಬ್ದಾರಿ' ಎಂದು ಪ್ರತಿಪಾದಿಸಿದನು.

ಯೂರೋಪಿಯನ್ ದೇಶಗಳೊಡನೆ ಸ್ಪರ್ಧಿಸಿ ಹೊಸಪ್ರದೇಶಗಳನ್ನು ಆಕ್ರಮಿಸಲು ಅಥವಾ ತಮ್ಮ ಪ್ರಭಾವವಲಯದೊಳಗೆ ಸೇರಿಸಿಕೊಳ್ಳಲು ಅಮೆರಿಕ ಸಾಮರ್ಥ್ಯ ಪಡೆದಿದೆಯೇ ಎಂದು ವಿಶ್ಲೇಷಣೆ ಮಾಡಿ ತನ್ನ ಪರಿಶೋಧನೆಗಳನ್ನು ಪ್ರಕಟಗೊಳಿಸಿದವನು ಅಡ್ಮಿರಲ್ ಆಲ್‌ಫ್ರೆಡ್ ಥೇಯರ್ ಮಹಾನ್ (Alfred Thayer Mahan). ಅವನು ತನ್ನ ಬರಹದಲ್ಲಿ ಪ್ರಬಲ ರಾಷ್ಟ್ರಗಳ ಮತ್ತು ಚಕ್ರಾಧಿಪತ್ಯಗಳ ಬೆಳವಣಿಗೆಯಲ್ಲಿ ನೌಕಾಪಡೆಯ ಪ್ರಮುಖ ಪಾತ್ರವನ್ನು ಐತಿಹಾಸಿಕವಾಗಿ ಗುರುತಿಸಿ, ಅಮೆರಿಕ ಆಧುನಿಕವಾದ ಮತ್ತು ಅತ್ಯಂತ ಬಲಯುತವಾದ ನೌಕಾಪಡೆಯನ್ನು ಸ್ಥಾಪಿಸುವ ಅನಿವಾರ್ಯ ಅಗತ್ಯವನ್ನು ಪರಿಣಾಮಕಾರಿಯಾಗಿ ವಿವರಿಸಿದನು. ಅವನ ಸೂಚನೆಗಳನ್ನು ಅನುಮೋದಿಸಿ ಕಾಂಗ್ರೆಸ್ ಆಧುನಿಕ ಹಾಗೂ ಬೃಹತ್ ನೌಕೆಗಳ ನಿರ್ಮಾಣಕ್ಕೆ ಅಪಾರ ಮೊತ್ತದ ಹಣವನ್ನು ಒದಗಿಸಿತು.

ಮಹಾನನ (Mahan) ಕೃತಿ ಜನಪ್ರಿಯವಾದ ನಂಬಿಕೆಗಳಾದ ಆ್ಯಂಗ್ಲೊ ಸಾಕ್ಸನ್ ಶ್ರೇಷ್ಠತೆ, ನೈತಿಕ ಹೊಣೆಗಾರಿಕೆ (ತಮ್ಮ ನೈತಿಕ ಮೌಲ್ಯಗಳನ್ನು ಇತರರ ಮೇಲೆ ಬಲಾತ್ಕಾರದಿಂದ ಹೇರುವುದು) ಮತ್ತು ಅಮೆರಿಕದ ಸ್ವಾರ್ಥ ಸಾಧನೆಗಳನ್ನು ಸಮ್ಮಿಲನಗೊಳಿಸಿ ಜನರಿಗೆ ಸ್ಪಷ್ಟವಾಗುವಂತೆ ವಿಶದಪಡಿಸಿತು. ಈ ಹೊಸ 'ನೈತಿಕ ಸಾಮ್ರಾಜ್ಯಶಾಹಿ ತತ್ವ' ಕೆಲವು ಪ್ರಮುಖ ರಾಜಕಾರಣಿಗಳ ಮತ್ತು ಪ್ರತಿಷ್ಠಿತರಾದ ವ್ಯಕ್ತಿಗಳ ಬೆಂಬಲ ಪಡೆಯಿತು. ಈ ತತ್ವದಿಂದ ಪ್ರಭಾವಿತರಾದವರಲ್ಲಿ ಥಿಯೊಡೊರ್ ರೂಸ್‌ವೆಲ್ಟ್, ಸೆನೆಟರ್ ಹೆನ್ರಿ ಕ್ಯಾಬಟ್ ಲಾಡ್ಜ್, ಆಲ್ಬರ್ಟ್ ಬೆವರಿಡ್ಜ್ ಮುಂತಾದ ರಾಜಕಾರಣಿಗಳು, ಪತ್ರಿಕಾ ಪ್ರಕಾಶಕರಾದ ವೈಟ್‌ಲಾ ರೀಡ್ ಮತ್ತು ವಾಲ್ಟರ್ ಪೇಜ್ ಮತ್ತು ಸಾಹಿತಿಗಳಾದ ಹೆನ್ರಿ ಆ್ಯಡಮ್ಸ್ ಮತ್ತು ಬ್ರೂಕ್ ಆ್ಯಡಮ್ಸ್ ಸೇರಿದ್ದರು. ಈ ತತ್ವದ ಆರ್ಥಿಕ ಪರಿಣಾಮಗಳನ್ನು ಮತ್ತು ಹೇಗಾದರೂ ಮಾಡಿ ಹಣ ಗಳಿಸುವ ದುರಾಸೆಯ ಕೈಗಾರಿಕೋದ್ಯಮಿಗಳು ಇದರಿಂದ ಪ್ರಯೋಜನ ಪಡೆಯಬಹುದು ಎಂಬ ನಿಜಾಂಶಗಳನ್ನು ಕಡೆಗಣಿಸಿ, ಮೇಲೆ ತಿಳಿಸಿದ ಪ್ರತಿಷ್ಠಿತ ವ್ಯಕ್ತಿಗಳು ಅಮೆರಿಕ ತನ್ನ ಕ್ಷಿತಿಜವನ್ನು ಕರೆಕೊಟ್ಟು, ಉದಾತ್ತ ಧ್ಯೇಯಗಳನ್ನು, ಪರಾಕ್ರಮವನ್ನು ಮತ್ತು ಧೈರ್ಯವನ್ನು ಅಮೆರಿಕನ್ನರು ಮೈಗೂಡಿಸಿಕೊಂಡು ತಮ್ಮ ರಾಷ್ಟ್ರದ ಘನತೆ ಗೌರವಗಳನ್ನು ಹೆಚ್ಚಿಸಬೇಕೆಂದು ಜನರನ್ನು ಹುರಿದುಂಬಿಸಿದರು.

೧೮೯೦ರ ದಶಕದಲ್ಲಿ ಅಮೆರಿಕ ಹವಾಯಿ ದ್ವೀಪಗಳ (Hawaiian Islands)

ಆಂತರಿಕ ವ್ಯವಹಾರಗಳಲ್ಲಿ ಕೈಹಾಕಿದ್ದು ಸಾಗರದಾಚೆಯ (Overseas possessions) ಭೂಭಾಗಗಳನ್ನು ವಶಪಡಿಸಿಕೊಳ್ಳುವ ಆಸಕ್ತಿಯನ್ನು ದೃಷ್ಟಾಂತಗೊಳಿಸುತ್ತದೆ. ಈ ದ್ವೀಪಗಳಲ್ಲಿ ೧೯ನೆಯ ಶತಮಾನದ ಪ್ರಾರಂಭದಲ್ಲಿಯೇ ಅಮೆರಿಕನ್ ಕ್ರೈಸ್ತಮತ ಪ್ರಚಾರಕರು ಮತಾಂತರಗೊಳಿಸುವ ಕಾರ್ಯವನ್ನು ವ್ಯಾಪಕವಾಗಿ ನಡೆಸಿದ್ದರು. ೧೮೯೦ರ ಹೊತ್ತಿಗೆ ಅಮೆರಿಕನ್ನರು – ಭೂಮಾಲೀಕರು, ಸಕ್ಕರೆ ಉತ್ಪಾದನೆಯಲ್ಲಿ ಹಣಹೂಡಿದ ಬಂಡವಾಳಗಾರರು – ಹವಾಯಿ ದ್ವೀಪಗಳಲ್ಲಿ ಪ್ರಬಲರಾಗಿದ್ದರು. ಈ ದ್ವೀಪಗಳು ಆಮದು ಮಾಡಿಕೊಳ್ಳುತ್ತಿದ್ದ ಸರಕು ಸಾಮಗ್ರಿಗಳ ೩/೪ ಭಾಗ ಅಮೆರಿಕದಿಂದ ರಫ್ತಾಗಿ ಬರುತ್ತಿದ್ದವು. ಹವಾಯಿ ದ್ವೀಪಗಳು ರಫ್ತು ಮಾಡುತ್ತಿದ್ದ ಎಲ್ಲ ಉತ್ಪನ್ನಗಳನ್ನು ಅಮೆರಿಕ ಕೊಳ್ಳುತ್ತಿತ್ತು. ವ್ಯಾಪಾರ ಮೆಕಿನ್ಲೆ ಸುಂಕ ಜಾರಿಗೆ ಬರುವವರೆಗೂ ಚನ್ನಾಗಿ ನಡೆಯುತ್ತಿತ್ತು. ಮೆಕಿನ್ಲೆ ಸುಂಕ ಅಮೆರಿಕದ ಸಕ್ಕರೆ ಬೆಳೆಗಾರರ ಹಿತಾಸಕ್ತಿಗಳನ್ನು ಕಾಪಾಡಲು ಆಮದು ಮಾಡಿಕೊಳ್ಳುತ್ತಿದ್ದ ಸಕ್ಕರೆಯ ಮೇಲೆ ಒಂದು ಪೌಂಡಿಗೆ ತಲಾ ಎರಡು ಸೆಂಟ್‌ಗಳ ಸುಂಕ ವಿಧಿಸಿದರು. ಇದರಿಂದಾಗಿ ಹವಾಯಿ ದ್ವೀಪದ ಸಕ್ಕರೆ ಉತ್ಪನ್ನ ಕುಸಿಯಿತು, ಆಸ್ತಿ ಪಾಸ್ತಿಗಳ ಬೆಲೆ ಕಡಿಮೆಯಾಯಿತು. ಮತ್ತು ಕಾರ್ಮಿಕರು ನಿರುದ್ಯೋಗಿಗಳಾದರು. ಅಮೆರಿಕನ್ ಪ್ಲಾಂಟರುಗಳು ಮತ್ತು ಹವಾಯಿ ಸಕ್ಕರೆಯ ಉತ್ಪಾದನೆಯಲ್ಲಿ ಬಂಡವಾಳ ಹೂಡಿದವರು ಆ ದ್ವೀಪಗಳನ್ನು ವಶಪಡಿಸಿಕೊಳ್ಳುವಂತೆ ಫೆಡರಲ್ ಸರ್ಕಾರವನ್ನು ಒತ್ತಾಯಮಾಡಿದರು. ಅಧ್ಯಕ್ಷ ಹ್ಯಾರಿಸನ್ ಆಡಳಿತ ಅವರ ಬೇಡಿಕೆಗಳನ್ನು ಬೆಂಬಲಿಸಿತು.

೧೮೯೧ರಲ್ಲಿ ಹವಾಯಿ ದ್ವೀಪಗಳ ರಾಜನಾಗಿದ್ದ ರಾಜ ಕಲಕಾವುವ (King Kalakaua) ಮರಣಾನಂತರ ಅವನ ತಂಗಿ ರಾಣಿ ಲಿಲಿಯುವೊಕಲಾನಿ (Queen Liliuokalani) ಪಟ್ಟಕ್ಕೆ ಬಂದಳು. ಅವಳು 'ಹವಾಯಿ ಹವಾಯಿನ್ನರಿಗೆ ಮಾತ್ರ' ಎನ್ನುವ ಧೋರಣೆಯನ್ನು ತಳೆದಳು. ಅವಳ ಪ್ರಮುಖ ವಿರೋಧಿ ಹೊನಲುಲು ಪಟ್ಟಣದಲ್ಲಿದ್ದ ಅಮೆರಿಕದ ವಿದೇಶಾಂಗ ಸಚಿವನಾಗಿದ್ದ ಜಾನ್ ಸ್ಟೀವನ್ಸ್ (John Stevens). ಇವನು ಕಡು ವಿಸ್ತರಣಾವಾದಿಯಾಗಿದ್ದನು (expansionist) ಮತ್ತು ಹವಾಯಿ ದ್ವೀಪಗಳನ್ನು ಆಕ್ರಮಣ ಮಾಡಲು ಅವಕಾಶಕ್ಕಾಗಿ ಕಾಯುತ್ತಿದ್ದನು. ೧೮೯೩ರಲ್ಲಿ ಅಮೆರಿಕನ್ ಪ್ಲಾಂಟರುಗಳು ರಾಣಿಯನ್ನು ಪದಚ್ಯುತಿಗೊಳಿಸಲು ಒಳಸಂಚು ಹೂಡಿ ಸ್ಟೀವನ್ಸ್‌ನ ಸಹಾಯ ಕೋರಿದರು. ಸ್ಟೀವನ್ಸ್ ಅಮೆರಿಕನ್ನರ ಜೀವ ಮತ್ತು ಆಸ್ತಿ ಪಾಸ್ತಿಗಳಿಗೆ ಅಪಾಯ ಉಂಟಾಗಿದೆ ಎನ್ನುವ ನೆವದ ಮೇಲೆ ಅಮೆರಿಕದ ಸೈನ್ಯವನ್ನು ಕರೆಸಿದನು. ಸೈನ್ಯದ ಕಾರ್ಯಾಚರಣೆ ಯಶಸ್ವಿಯಾಯಿತು. ರಾಣೀ ಲಿಲಿಯುವೊಕಲಾನಿಯನ್ನು ಅಧಿಕಾರದಿಂದ ತೆಗೆದು ಹಾಕಿ ಅಮೆರಿಕನ್ ಪ್ಲಾಂಟರ್‌ಗಳಿಂದ ಕೂಡಿದ ಹೊಸ ಸರ್ಕಾರವನ್ನು ರಚಿಸಲಾಯಿತು. ಸ್ಟೀವನ್ಸ್, ಹವಾಯಿ ದ್ವೀಪಗಳು ಅಮೆರಿಕದ ಆಶ್ರಿತ ಸಂಸ್ಥಾನವೆಂದು ಘೋಷಿಸಿದನು. ಹೀಗೆ ಹವಾಯಿ ಅಮೆರಿಕದ ವಿಸ್ತಾರಗೊಂಡ ಭೂಪ್ರದೇಶವಾಯಿತು.

ಹೆಚ್ಚಿನ ವಿವರಗಳಿಲ್ಲದ ಒಡಂಬಡಿಕೆಯನ್ನು ತಯಾರಿಸಿ ಹವಾಯಿ ದ್ವೀಪಗಳನ್ನು ವಶಪಡಿಸಿಕೊಂಡಿದ್ದನ್ನು ಅಧಿಕೃತವಾಗಿ ಅಂಗೀಕರಿಸುವಂತೆ ಸೆನೆಟ್‌ಗೆ ಕಳುಹಿಸಲಾಯಿತು. ಅಮೆರಿಕ ಈ ದ್ವೀಪಗಳನ್ನು ವಶಪಡಿಸಿಕೊಳ್ಳದಿದ್ದರೆ ಜಪಾನೀಯರ ವಶವಾಗುತ್ತವೆ ಎನ್ನುವುದನ್ನು ಮನಗಂಡ ರಿಪಬ್ಲಿಕನ್ನರು ಆ ಒಡಂಬಡಿಕೆಯನ್ನು ಬೆಂಬಲಿಸಿದರು. ಡೆಮೊಕ್ರಾಟರು ಸಾಮ್ರಾಜ್ಯಶಾಹಿಯ ವಿರೋಧಿಗಳಾಗಿದ್ದರು. ಯಾವ ಭೂಪ್ರದೇಶವನ್ನು ಸಂಯುಕ್ತ ಸಂಸ್ಥಾನಗಳಲ್ಲಿ ವಿಲೀನಗೊಳಿಸಲು ಸಾಧ್ಯವಿಲ್ಲವೋ ಆ ಪ್ರದೇಶವನ್ನು ಆಳುವ ಹಕ್ಕನ್ನು ಅಮೆರಿಕಕ್ಕೆ ಇಲ್ಲವೆಂದು ಒಡಂಬಡಿಕೆಗೆ ಒಪ್ಪಿಗೆ ನೀಡಲಿಲ್ಲ. ಅದನ್ನು ನಿರಾಕರಿಸಲು ಮತ್ತೊಂದು ಕಾರಣ – ಅದು ರಿಪಬ್ಲಿಕನ್ನರು ಮಂಡಿಸಿದ ಒಡಂಬಡಿಕೆ. ಆದ್ದರಿಂದ ರಾಜಕೀಯವಾಗಿ ವಿರೋಧಪಕ್ಷ ಅದನ್ನು ನಿರಾಕರಿಸುವುದು ತರ್ಕಬದ್ಧವಾಗಿ ತೋರಿತು.

ಕ್ಲೀವ್‌ಲ್ಯಾಂಡ್ ಸಾಮ್ರಾಜ್ಯಶಾಹಿಯ ಕಡುವಿರೋಧಿಯಾಗಿದ್ದನು. ಅವನು ಎರಡನೆಯ ಬಾರಿ ಅಧ್ಯಕ್ಷನಾಗಿದ್ದ ಕಾಲದಲ್ಲಿ ಹವಾಯಿ ವಶಪಡಿಸಿಕೊಂಡ ಒಡಂಬಡಿಕೆಯನ್ನು ಹಿಂತೆಗೆದುಕೊಂಡು ಅಮೆರಿಕದ ಪ್ರತಿನಿಧಿಯಾಗಿ ಜೇಮ್ಸ್ ಬ್ಲೌಂಟ್ (James Blount) ನನ್ನು ಹವಾಯಿ ದ್ವೀಪ ನಿವಾಸಿಗಳ ಮನೋಗತವನ್ನು ತಿಳಿದುಕೊಂಡು ಬರಲು ಕಳುಹಿಸಿದನು. ಹವಾಯಿ ನಿವಾಸಿಗಳು ಅಮೆರಿಕದ ಆಕ್ರಮಣದ ವಿರುದ್ಧವಾಗಿರುವುದನ್ನು ತಿಳಿದು ಬ್ಲೌಂಟ್ ಅಮೆರಿಕದ ಸೈನ್ಯವನ್ನು ವಾಪಸು ಹೋಗುವಂತೆ ಆಜ್ಞೆ ಮಾಡಿದನು. ಆದರೆ ಒಳಸಂಚು ಮಾಡಿದ ನಾಯಕರು ರಾಣಿಯನ್ನು ಮತ್ತೆ ಅಧಿಕಾರಕ್ಕೆ ಬಾರದಂತೆ ಮಾಡಿ ಹವಾಯಿ ದ್ವೀಪಗಳನ್ನು ಸ್ವತಂತ್ರ ಪ್ರಜಾಪ್ರಭುತ್ವವಾಗಿ (Independent Republik) ಘೋಷಿಸಿದರು. ಆನಂತರ ಸತತವಾಗಿ ನಾಲ್ಕು ವರ್ಷಗಳ ಕಾಲ ಹವಾಯಿ ದ್ವೀಪಗಳನ್ನು ವಿಶಾಲ ಅಮೆರಿಕದ ಅಂಗವಾಗಿ ಮಾಡಲು ಶ್ರಮಿಸಿದರು. ೧೮೯೮ರ ಜುಲೈ ತಿಂಗಳಲ್ಲಿ ಅಮೆರಿಕನ್ನರಲಿ ಆಕ್ರಮಣ ಮನೋಭಾವ ನೆತ್ತಿಗೇರಿದ್ದ ಸಮಯದಲ್ಲಿ ಕಾಂಗ್ರೆಸ್ ಆ ದ್ವೀಪಗಳನ್ನು ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಳ್ಳುವ ಮಸೂದೆಯನ್ನು ಅಂಗೀಕರಿಸಿ ಆ ದ್ವೀಪಗಳು ಅಮೆರಿಕಕ್ಕೆ ಸೇರಿದವೆಂದು ಅಧಿಕೃತವಾಗಿ ಪ್ರಕಟಿಸಲಾಯಿತು.

ಸಂಯುಕ್ತ ಸಂಸ್ಥಾನಗಳ ದಕ್ಷಿಣ ಅಮೆರಿಕ ಧೋರಣೆಗಳು

ಚಿಲಿ (Chile): ಸಂಯುಕ್ತ ಸಂಸ್ಥಾನಗಳು ಆಕ್ರಮಣಕಾರಿ ವಿದೇಶಾಂಗ ನೀತಿಯ ಕಾರ್ಯಾಚರಣೆಯನ್ನು ದಕ್ಷಿಣ ಅಮೆರಿಕ ದೇಶಗಳಲ್ಲೂ ಪಾಲಿಸಿಕೊಂಡು ಹೋದವು. ಚಿಲಿ ಮತ್ತು ಸಂಯುಕ್ತ ಸಂಸ್ಥಾನಗಳ ನಡುವೆ ಸೌಹಾರ್ದ ಸಂಬಂಧ ಇರಲಿಲ್ಲ. ಚಿಲಿ ಮತ್ತು ಪೆರು (Peru) ಹಿಂದಿನಕಾಲದಿಂದಲೂ ಬದ್ಧ ದ್ವೇಷಿಗಳು. ಪೆರುವಿನೊಡನೆ ಸ್ನೇಹ ಬೆಳೆಸಿದ್ದರಿಂದ ಸಂಯುಕ್ತ ಸಂಸ್ಥಾನಗಳ ಮೇಲೆ ಚಿಲಿ ಅಸಮಾಧಾನಗೊಂಡಿತು. ಚಿಲಿಯ ವಾಲ್ಪರೈಸೊ ನಗರದಲ್ಲಿ ಕುಡಿದು ನೆತ್ತಿಗೇರಿದ್ದ ಚಿಲಿಯನ್ನರಿಗೂ ಮತ್ತು ಅಮೆರಿಕನ್ನರಿಗೂ ನಡೆದ ಹೊಡೆದಾಟದ ಪರಿಣಾಮವಾಗಿ ಇಬ್ಬರು ಅಮೆರಿಕನ್ ನಾವಿಕರು

ಸತ್ತು ಸುಮಾರು ಇಪ್ಪತ್ತು ಜನರಿಗೆ ಗಾಯಗಳಾದವು. ಈ ಹಗರಣ ಎರಡು ರಾಷ್ಟ್ರಗಳ ನಡುವೆ ಉದ್ವೇಗಕಾರಿ ಪರಿಸ್ಥಿತಿಯನ್ನು ಉಂಟುಮಾಡಿತು. ಚಿಲಿ ಯುದ್ಧಕ್ಕಿಳಿಯಲು ಸಿದ್ಧವಾಗಿ ಅಮೆರಿಕನ್ ರಾಯಭಾರಿಯನ್ನು ವಾಪಸು ಕರೆಸಿಕೊಳ್ಳುವಂತೆ ಒತ್ತಾಯ ಮಾಡಿತು. ಈ ಎರಡು ರಾಷ್ಟ್ರಗಳು ಯುದ್ಧ ಪ್ರಾರಂಭಿಸುವುದು ಖಚಿತವೆಂಬಂತೆ ಸಿದ್ಧತೆ ಮಾಡಿಕೊಳ್ಳತೊಡಗಿದರು. ಕೊನೆಯಲ್ಲಿ ಚಿಲಿ ಸಂಯುಕ್ತ ಸಂಸ್ಥಾನಗಳ ಸೈನ್ಯವನ್ನು ಮುಖಾಮುಖಿಯಾಗಿ ಎದುರಿಸಲು ಹಿಂಜರಿಯಿತು. ಸಂಯುಕ್ತ ಸಂಸ್ಥಾನಗಳಿಗೆ ಆದ ನಷ್ಟಕ್ಕೆ ಪರಿಹಾರವಾಗಿ ಚಿಲಿ ೭೦ ಸಾವಿರ ಡಾಲರ್‌ಗಳನ್ನು ಕೊಡಬೇಕಾಯಿತು.

ವೆನಿಝೂವೇಲ (Venezuela): ೧೮೪೦ರ ದಶಕದಲ್ಲಿ ವೆನಿಝೂವೇಲ ಮತ್ತು ಬ್ರಿಟಿಷ್ ಗಯಾನಗಳ ನಡುವಣ ಗಡಿ ಖಚಿತವಾಗಿ ನಿರ್ಧಾರವಾಗದೆ ಸಂದಿಗ್ಧ ಪರಿಸ್ಥಿತಿ ಉಂಟಾಗಿತ್ತು. ಈ ವಿವಾದಕ್ಕೊಳಪಟ್ಟಿದ್ದ ಗಡಿ ಪ್ರದೇಶದಲ್ಲಿ ಚಿನ್ನ ದೊರಕುತ್ತದೆ ಎಂದು ತಿಳಿದ ಮೇಲೆ ಪರಿಸ್ಥಿತಿ ಇನ್ನೂ ಬಿಗಡಾಯಿಸಿತು. ಆಗ ವೆನಿಝೂವೇಲ ಮನ್ರೋ ಸಿದ್ಧಾಂತವನ್ನು ಅನುಸರಿಸಿ ವಿವಾದವನ್ನು ಪರಿಹರಿಸಲು ಮಧ್ಯಸ್ಥಿಕೆಯನ್ನು ವಹಿಸಬೇಕೆಂದು ಅಮೆರಿಕಕ್ಕೆ ಅರಿಕೆ ಮಾಡಿಕೊಂಡಿತು. ವೆನಿಝೂವೇಲದಲ್ಲಿದ್ದ ಅಮೆರಿಕದ ವಿದೇಶಾಂಗ ಸಚಿವ ರಿಚರ್ಡ್ ಓಲ್‌ನೆ (Richard Olney) ವೆನಿಝೂವೇಲದ ಪರವಾಗಿ ಒಂದು ಕರಪತ್ರವನ್ನು[೨] ಬರೆದು ಅದರ ಪ್ರತಿಗಳನ್ನು ಅಮೆರಿಕದಾದ್ಯಂತ ಹಂಚಿದನು. ಇದರ ಪರಿಣಾಮವಾಗಿ ಕಾಂಗ್ರೆಸ್ 'ಅಮೆರಿಕ ಮಧ್ಯಸ್ಥಿಕೆ ವಹಿಸಿ ವಿವಾದವನ್ನು ಪರಿಹರಿಸ ಬೇಕಾಗಿದೆ' ಎನ್ನುವ ಮಸೂದೆಯನ್ನು ಅಂಗೀಕರಿಸಿತು. ಅಧ್ಯಕ್ಷ ಕ್ಲೀವ್‌ಲ್ಯಾಂಡ್‌ನು ಕದನ ವಿರೋಧಿ ಪಂಗಡ ಮತ್ತು ಬ್ರಿಟಿಷ್ ವಿರೋಧಿ ಪಂಗಡಗಳ ನಡುವೆ ಸಿಕ್ಕಿ ಗೊಂದಲ ಕ್ಕೀಡಾದನು. ಬ್ರಿಟಿಷ್ ವಿರೋಧಿಗಳು ಮನ್ರೋ ಸಿದ್ಧಾಂತವನ್ನು ಪರೀಕ್ಷಿಸಲು ಈ ಗಡಿ ವಿವಾದದಲ್ಲಿ ಬ್ರಿಟಿಷರು ಅತಿರೇಕದ ಬೇಡಿಕೆಗಳನ್ನು ಮತ್ತು ಷರತ್ತುಗಳನ್ನು ಮುಂದಿಟ್ಟಿದ್ದಾರೆ ಎಂದು ವಾದಿಸಿದರು.

ಅಧ್ಯಕ್ಷ ಕ್ಲೀವ್‌ಲ್ಯಾಂಡ್ ಸಾಮ್ರಾಜ್ಯಶಾಹಿಯ ವಿರೋಧಿಯಾದರೂ ಪ್ರಬಲ ರಾಷ್ಟ್ರೀಯವಾದಿಯಾಗಿದ್ದನು. ಮನ್ರೋ ಸಿದ್ಧಾಂತವನ್ನು ಪರಿಶೀಲಿಸದೆ ಹೋದರೆ ಮುಂದೆ ರಾಜಕಾರಣದ ತೊಂದರೆಗಳಿಗೀಡಾಗಬೇಕಾಗುತ್ತದೆ ಮತ್ತು ದಕ್ಷಿಣ ಅಮೆರಿಕ ದೇಶ ಗಳೊಡನೆ ಅಡೆ ತಡೆಗಳಿಲ್ಲದೆ ವ್ಯಾಪಾರ ವ್ಯವಹಾರಗಳನ್ನು ನಡೆಸಲು ಬ್ರಿಟಿಷರಿಗೆ

---

೨. Today the United States is practically sovereign on this continent and its ????? is law upon the subjects to which it confines its interposition. Why? . . . . It is because, in addition to all other grounds, its infinite resources combined with its isolated position ??????? it. The master of the situation and practically invulnerable as against any or all other powers.

ರಹದಾರಿ ಕೊಟ್ಟಂತೆ ಆಗುತ್ತದೆ ಎನ್ನುವುದನ್ನು ಮನಗಂಡನು. ಆದ್ದರಿಂದ ಅವನು ಮನ್ರೋ ಸಿದ್ಧಾಂತವನ್ನು ಅನುಷ್ಠಾನಕ್ಕೆ ತರಲು ನಿರ್ಧರಿಸಿ ಬ್ರಿಟಿಷರಿಗೆ ಎಚ್ಚರಿಕೆ ನೀಡಿದನು. ಬ್ರಿಟಿಷರು ಅಮೆರಿಕದೊಡನೆ ಸಂಗ್ರಾಮ ನಡೆಸುವ ಪರಿಸ್ಥಿತಿ ಉಂಟಾಗದಂತೆ ಮಾಡಲು ರಾಜಿ ಮಾಡಿಕೊಳ್ಳಲು ಸಿದ್ಧರಾಗಿ, ಗಡಿವಿವಾದವನ್ನು ಮಧ್ಯಸ್ಥಿಕೆಗೆ ಒಪ್ಪಿಸಿದರು. ಆ ತೀರ್ಮಾನದ ಪ್ರಕಾರ ಬ್ರಿಟಿಷರು ತಮಗೆ ಸೇರಿದ್ದು ಎಂದು ಪ್ರತಿಪಾದಿಸಿದ ಭೂಪ್ರದೇಶದ ಶೇಕಡಾ ೯೦ ಭಾಗವನ್ನು ಪಡೆದುಕೊಂಡರು. ಬ್ರಿಟಿಷರ ಬೇಡಿಕೆಯನ್ನು ಅತಿರೇಕವೆಂದು ಖಂಡಿಸಿದ ಸಾಮ್ರಾಜ್ಯವಾದಿಗಳೇ ಈ ತೀರ್ಮಾನ ಮನ್ರೋ ಸಿದ್ಧಾಂತದ ಗೆಲವು ಎಂದು ವ್ಯಾಖ್ಯಾನ ಮಾಡಿದರು. ವಾಸ್ತವವಾಗಿ ಈ ವ್ಯಾಖ್ಯಾನ ಮನ್ರೋ ಸಿದ್ಧಾಂತಕ್ಕೆ ಹೊಸ ತಿರುವು ಕೊಟ್ಟು ಪಶ್ಚಿಮ ಗೋಲಾರ್ಧ (western hemisphere)ದಲ್ಲಿ ಸಂಭವಿಸ ಬಹುದಾದ ಎಲ್ಲಾ ಗಡಿವಿವಾದಗಳಲ್ಲಿ ಸಂಯುಕ್ತ ಸಂಸ್ಥಾನಗಳು ಮಧ್ಯೆ ಪ್ರವೇಶಿಸುವ ಹಕ್ಕು ಪಡೆದಿದೆ ಎನ್ನುವ ಅರ್ಥ ಬರುವಂತೆ ಮಾಡಲಾಯಿತು. ರಾಜಿ ತೀರ್ಮಾನವಾದ ಮೇಲೆ ಇಂಗ್ಲೆಂಡ್ ಮತ್ತು ಅಮೆರಿಕ ನಿಕಟವರ್ತಿಗಳಾಗಿ ಸಂಬಂಧಗಳು ಉತ್ತಮಗೊಂಡವು. ಆದರೆ ಸಂಯುಕ್ತ ಸಂಸ್ಥಾನಗಳ ಹೇಳಿಕೆಗಳು ಮತ್ತು ವ್ಯಾಖ್ಯಾನಗಳು (ಚಿಲಿ ಮತ್ತು ವೆನಿಝೂವೇಲ ಪ್ರಕರಣಗಳಲ್ಲಿ ನಡೆದಂತೆ) ದಕ್ಷಿಣ ಅಮೆರಿಕ ದೇಶಗಳಲ್ಲಿ ಭಯ ಹುಟ್ಟಿಸಿದವು.

ಸಮರದ ಸುಳಿಯಲ್ಲಿ ಸ್ಪೇನ್ ಮತ್ತು ಅಮೆರಿಕ

ಹತ್ತೊಂಬತ್ತನೆಯ ಶತಮಾನದ ಕೊನೆಯ ವರ್ಷಗಳಲ್ಲಿ 'ಕೂಬ ಲಿಬ್ರೆ' (Free Cuba) – 'ಸ್ವತಂತ್ರ ಕೂಬ' ಎಂಬ ಆಂದೋಳನ ಪ್ರವರ್ಧಮಾನಕ್ಕೆ ಬಂದಿತ್ತು. ೧೮೬೮ರಿಂದ ೧೮೭೮ರವರೆಗೆ ಕ್ಯೂಬದ ಬಂಡಾಯಕಾರರು ಸ್ಪೇನ್‌ನಿಂದ ಸ್ವಾತಂತ್ರ್ಯ ಪಡೆಯಲು ಘೋರ ಯುದ್ಧವನ್ನು ನಡೆಸಿದ್ದರು. ತನ್ನ ಆಂತರಿಕ ಸಮಸ್ಯೆಗಳಲ್ಲಿ ಮುಳುಗಿದ್ದ ಅಮೆರಿಕ ಕ್ಯೂಬದಲ್ಲಿ ನಡೆಯುತ್ತಿದ್ದ ಕದನದ ಬಗ್ಗೆ ಹೆಚ್ಚಿನ ಗಮನ ಕೊಡಲಿಲ್ಲ. ಸ್ಪೇನ್ ಬಂಡಾಯಕಾರರನ್ನು ಹತ್ತಿಕ್ಕಿತು, ಆದರೆ ಅವರ ಪರವಾಗಿ ಗಡಿಯಾಚೆಯ ಸರ್ಕಾರ (Government-in-exile)ವನ್ನು ನ್ಯೂಯಾರ್ಕ್‌ನಲ್ಲಿ ಸ್ಥಾಪಿಸಲಾಯಿತು. ಇದು ಕ್ಯೂಬದ ಸ್ವಾತಂತ್ರ್ಯ ಸಾಧಿಸುವವರ ಮುಖ್ಯ ಕಛೇರಿಯಾಯಿತು. ಇಲ್ಲಿಂದ ಕ್ಯೂಬದ ಪತ್ರಿಕಾಕರ್ತರು ಸ್ವಾತಂತ್ರ್ಯ ಚಳುವಳಿಯ ಧ್ಯೇಯ ಧೋರಣೆಗಳನ್ನು ಪ್ರಚಾರ ಮಾಡತೊಡಗಿದರು. ಇದೇ ಸಮಯದಲ್ಲಿ ಕ್ಯೂಬ ಮತ್ತು ಅಮೆರಿಕಗಳ ನಡುವೆ ವಾಣಿಜ್ಯ ವ್ಯವಹಾರಗಳು ಹೆಚ್ಚುತ್ತ ಹೋದವು. ಇದು ಯಾವ ಮಟ್ಟ ಮುಟ್ಟಿತ್ತೆಂದರೆ ಕ್ಯೂಬದ ಹೊಗೆಸೊಪ್ಪು ಮತ್ತು ಸಕ್ಕರೆ ಅಮೆರಿಕಕ್ಕೆ ರಫ್ತು ಮಾಡುವುದೆ ಕ್ಯೂಬದ ಆರ್ಥಿಕ ವ್ಯವಸ್ಥೆಯ ಅಡಿಗಲ್ಲಾಯಿತು. ೧೮೯೩ರಲ್ಲಿ ಅಮೆರಿಕದಲ್ಲಿ ಆರ್ಥಿಕ ಮುಗ್ಗಟ್ಟು ಆರ್ಥಿಕ ವ್ಯವಸ್ಥೆಯನ್ನು ಹಾಳುಗೆಡವಿತು. ಸರ್ಕಾರಕ್ಕೆ ಹಣದ ಅಗತ್ಯವಿದ್ದುದರಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ವಿಲ್ಸನ್-ಗೋರ್‌ಮನ್ ಸುಂಕ (Wilson-Gorman tariff)ವನ್ನು

ವಿಧಿಸಲಾಯಿತು. ಇದರ ಪರಿಣಾಮವಾಗಿ ಅಮೆರಿಕ ಮತ್ತು ಕ್ಯೂಬಗಳ ನಡುವೆ ಏರ್ಪಟ್ಟಿದ್ದ ಸಕ್ಕರೆ ಮಾರಾಟದ ವಿಶಿಷ್ಟ ಒಪ್ಪಂದವನ್ನು ರದ್ದುಗೊಳಿಸಲಾಯಿತು. ಕ್ಯೂಬದ ಆರ್ಥಿಕ ವ್ಯವಸ್ಥೆಯ ಅಡಿಗಲ್ಲು ಮುರಿದು ಬಿದ್ದು ಆರ್ಥಿಕ ಮುಗ್ಗಟ್ಟಿನ ಕಂದರಕ್ಕೆ ಕುಸಿಯಿತು.

೧೮೯೫ರಲ್ಲಿ ಕ್ಯೂಬದಲ್ಲಿ ಒಂದು ಹೊಸ ರೀತಿಯ ಕ್ರಾಂತಿ ಪ್ರಾರಂಭವಾಯಿತು. ಯುದ್ಧ ಕಾಲದಲ್ಲಿ ಸೈನ್ಯಗಳು ವೈರಿಗಳಿಗೆ ಉಪಯುಕ್ತವಾಗಬಹುದಾದಂಥ ಯಾವ ವಸ್ತುಗಳನ್ನೂ ಬಿಡದೆ ಸುಟ್ಟು ಬೂದಿ ಮಾಡುವ ಕೆಲಸಕ್ಕೆ 'ನೆಲ ಸುಡುವ ನಿಪುಣತೆ' (scorched earth tactic) ಎಂದು ಹೆಸರು. ಕ್ಯೂಬದ ಸ್ವಾತಂತ್ರ್ಯ ಸಾಧಕರು ಈ ನಿಪುಣತೆಯನ್ನು ಉಪಯೋಗಿಸಿ ಸ್ಪೇನಿಗೆ ಹಾನಿಯಾಗುವಂತೆ ಮಾಡಿದರು. ಇದಕ್ಕೆ ಪ್ರತಿಯಾಗಿ ಸ್ಪಾನಿಷರು ಕ್ಯೂಬದ ಪ್ರಜೆಗಳನ್ನು ಅವರವರ ಊರುಗಳಿಂದ ಹೊರಡಿಸಿ ಬೇರೆ ಕಡೆಗಳಿಗೆ ರವಾನಿಸಿ ಶಿಬಿರಗಳಲ್ಲಿ ವಾಸಿಸುವಂತೆ ಮಾಡಿದರು. ಕ್ಯೂಬ ದ್ವೀಪ ದಾದ್ಯಂತ ಈ ಶಿಬಿರಗಳು ಹರಡಿದ್ದವು. ಹೀಗೆ ಪುನರ್ವಸತಿಗೊಂಡ ಜನರು ಕ್ರಾಂತಿಕಾರಿಗಳಿಂದ ಬೇರ್ಪಟ್ಟು ಅವರಿಗೆ ಆಸರೆ ನೀಡಿ ಬೆಂಬಲಿಸುವುದು ದುಸ್ಸಾಧ್ಯ ವಾಯಿತು. ಕ್ರಾಂತಿಕಾರಿಗಳಿಗೆ ಆಹಾರ ದೊರೆಯದಂತೆ ಮಾಡಲು ಕೈಗೊಂಡ ಕಾರ್ಯಕ್ರಮ ಅವರನ್ನು ಹೊಟ್ಟೆಗಿಲ್ಲದೆ ಸಾಯಿಸುವ ಬದಲು ಶಿಬಿರವಾಸಿಗಳಾದ ಜನರು ಹೊಟ್ಟೆಗಿಲ್ಲದೆ ಸಾಯುವಂತಹ ಪರಿಸ್ಥಿತಿಯನ್ನು ಉಂಟುಮಾಡಿದವು. ಹವಾನಾ ಪ್ರಾಂತ (Havana province) ಒಂದರಲ್ಲೇ ಸುಮಾರು ೫೦೦೦೦ ಹೆಂಗಸರು ಮತ್ತು ಮಕ್ಕಳು ಹೊಟ್ಟೆಗಿಲ್ಲದೆ ಸತ್ತರು.

ಇದೇ ವರ್ಷದಲ್ಲಿ ಅಧ್ಯಕ್ಷ ಕ್ಲೀವ್‌ಲ್ಯಾಂಡ್‌ನು ಅಮೆರಿಕವನ್ನು ಯುದ್ಧದಲ್ಲಿ ತೊಡಗಿಸಬಾರದು ಎಂದು ನಿರ್ಧರಿಸಿ ತಟಸ್ಥ ರಾಜನೀತಿಯನ್ನು ಅನುಸರಿಸಿದನು. ಆದರೆ ಕ್ಯೂಬದಲ್ಲಿ ನಡೆಯುತ್ತಿದ್ದ ಘಟನೆಗಳ ಬಗ್ಗೆ ಅಮೆರಿಕನ್ನರಿಗೆ ತೀವ್ರ ಆಸಕ್ತಿ ಇತ್ತು. ಭೌಗೋಳಿಕವಾಗಿ ಕ್ಯೂಬ ಅಮೆರಿಕಕ್ಕೆ ಅತಿ ಸಮೀಪದ ದ್ವೀಪ; ವ್ಯಾಪಾರದ ದೃಷ್ಟಿಯಿಂದ ಅಮೆರಿಕನ್ ವ್ಯಾಪಾರಿಗಳಿಗೆ ಅತಿಮುಖ್ಯವಾದ ಮಾರುಕಟ್ಟೆಗಳಲ್ಲಿ ಒಂದಾಗಿತ್ತು. ಕ್ಯೂಬದಲ್ಲಿ ಸ್ಪೇನ್ ರಾಜನ ದಬ್ಬಾಳಿಕೆ ಪ್ರಜಾರಾಜ್ಯ ತತ್ವವನ್ನನುಸರಿಸುವ ಅಮೆರಿಕನ್ ಪ್ರಜೆಗಳಿಗೆ ಅವಮಾನ ಮಾಡಿದಂತೆ ಎಂದು ಭಾವಿಸಲಾಯಿತು. ೧೮೯೬ರಲ್ಲಿ ಕಾಂಗ್ರೆಸ್ ಎರಡು ಮಡೂದೆಗಳನ್ನು ಅಂಗೀಕರಿಸಿತು: ಅಮೆರಿಕ ಮತ್ತು ಸ್ಪೇನ್ ದೇಶಗಳ ನಡುವೆ ಯುದ್ಧ ಪರಿಸ್ಥಿತಿ ಏರ್ಪಟ್ಟಿದೆ ಎಂದು ಅಧಿಕೃತವಾಗಿ ತಿಳಿಸುವುದು ಮತ್ತು ವಿದೇಶಾಂಗ ಸಚಿವ ಓಲ್‌ನೆ ಎರಡು ದೇಶಗಳನ್ನು ಒಪ್ಪಂದ ಮಾಡಿಕೊಂಡು ಸಮಸ್ಯೆಯನ್ನು ಬಗೆಹರಿಸಲು ಮಧ್ಯಸ್ಥಿಕೆ ನಡೆಸುವುದು. ೧೮೯೬ರ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷ ಗೆದ್ದು ಅಧಿಕಾರ ವಹಿಸಿಕೊಂಡಿತು. ಅಧ್ಯಕ್ಷ ಮೆಕಿನ್ಲೆ (William McKinley) ಸಾಮ್ರಾಜ್ಯಶಾಹಿ ಪ್ರವೃತ್ತಿಯನ್ನು ನಿರಾಕರಿಸಿದರೂ ರಿಪಬ್ಲಿಕನ್ ಪಕ್ಷ ಆಕ್ರಮಣಕಾರಿ ಮನೋವೃತ್ತಿ ಮತ್ತು ಕಡಲಾಚೆಯ ಭೂಪ್ರದೇಶಗಳನ್ನು ವಶಪಡಿಸಿಕೊಳ್ಳುವ ಧೋರಣೆ

ಯನ್ನು ಮುಂದುವರಿಸಿತು. ಜನರನ್ನು ಭಾವೋದ್ರೇಕಗೊಳಿಸಿ ಲಾಭ ಗಳಿಸುವ ಪತ್ರಿಕೆಗಳು – ಹರ್ಸ್ಟ್ (Hearst) ನ 'ನ್ಯೂಯಾರ್ಕ್ ಜರ್ನಲ್' ಮತ್ತು ಪ್ಯುಲಿಟ್ಜರ್ (Pulitzer) ಸಂಪಾದಿಸುತ್ತಿದ್ದ 'ನ್ಯೂಯಾರ್ಕ್ ವರ್ಲ್ಡ್' (New York World) – ಇವು ಸ್ಪಾನಿಷರ ಕ್ರೌರ್ಯ ಮತ್ತು ಹಿಂಸೆಗಳನ್ನು ಉತ್ಪ್ರೇಕ್ಷೆ ಮಾಡಿದ ವರದಿಗಳನ್ನು ಪ್ರಕಟಿಸಿ ಕ್ಯೂಬದ ಜನರ ಬಗ್ಗೆ ಅಮೆರಿಕನ್ನರಲ್ಲಿ ಅನುಕಂಪ ಮತ್ತು ಸಹಾನುಭೂತಿಗಳು ಬೆಳೆಯುವಂತೆ ಮಾಡಿದವು.

೧೮೯೭ರ ಕೊನೆಯಲ್ಲಿ ಸ್ಪೇನ್ ಕ್ಯೂಬದ ಸ್ವಾತಂತ್ರ್ಯ ಚಳುವಳಿಯನ್ನು ಸಂಪೂರ್ಣವಾಗಿ ಅಡಗಿಸುವ ಸ್ಥಿತಿಯಲ್ಲಿತ್ತು. ಆದರೆ ೧೮೯೮ರಲ್ಲಿ ಸಂಭವಿಸಿದ ಎರಡು ಘಟನೆಗಳಿಂದ ಅಮೆರಿಕನ್ನರು ಕ್ಯೂಬದ ಪರವಾಗಿ ಯುದ್ಧ ಮಾಡಲು ಸಿದ್ಧರಾಗುವಂತೆ ಮಾಡಿದವು. ಅಮೆರಿಕನ್ನರ ಈ ಕ್ರೋಧಕ್ಕೆ ಕಾರಣ: ಮೊದಲನೆಯದಾಗಿ ರಾಜಧಾನಿ ವಾಷಿಂಗ್‌ಟನ್‌ನಿಂದ ಸ್ಪೇನ್‌ನ ವಿದೇಶಾಂಗ ಸಚಿವ ಡಿ ಲೋಮ್ (De Lome) ಅಧ್ಯಕ್ಷ ಮೆಕಿನ್ಲೆಯನ್ನು 'ಬೆನ್ನು ಮೂಳೆಯಿಲ್ಲದ ಮನುಷ್ಯ'ನೆಂದು ಹೀಯಾಳಿಸಿ ಬರೆದ ಪತ್ರ ಹೇಗೋ ಪತ್ರಕರ್ತರ ಕೈಗೆ ಸಿಕ್ಕಿ ಪ್ರಕಟಗೊಂಡುದು. ಎರಡನೆಯದಾಗಿ ಅಮೆರಿಕದ ಯುದ್ಧ ನೌಕೆ ಹವಾನಾ ಬಂದರಿನಲ್ಲಿ ಆಸ್ಫೋಟನೆಯಿಂದ ನಾಶಗೊಂಡಿದ್ದು ಅಮೆರಿಕ ಯುದ್ಧಕ್ಕೆ ಇಳಿಯಲು ತಕ್ಷಣದ ಕಾರಣವಾಯಿತು. ಆ ಯುದ್ಧ ನೌಕೆಯ ಹೆಸರು 'ಮೇಯ್ನ್' (Maine). ಈ ನೌಕೆಯೊಡನೆ ೨೬೦ ನಾವಿಕರು ಜಲಸಮಾಧಿ ಹೊಂದಿದರು. ಇದರಿಂದಾಗಿ 'ಮೇಯ್ನ್ ನೆನೆಯಿರಿ' (Remember Maine) ಎನ್ನುವುದು ಅಮೆರಿಕನ್ನರ 'ಕದನದ ಕರೆ' (battle cry)ಯಾಯಿತು. ಆ ವರ್ಷದ ಏಪ್ರಿಲ್ ತಿಂಗಳಲ್ಲಿ ಸ್ಪೇನ್ ಕದನವಿರಾಮಕ್ಕೆ ಒಪ್ಪಿಕೊಂಡು ಕ್ಯೂಬದ ಪ್ರಜೆಗಳನ್ನು ಶಿಬಿರಗಳಲ್ಲಿ ವಾಸ ಮಾಡುವಂತೆ ಬಲಾತ್ಕಾರ ಮಾಡುವುದನ್ನು ನಿಲ್ಲಿಸುವುದಾಗಿ ಭರವಸೆ ನೀಡಿತು. ಆದರೆ ಕ್ಯೂಬಕ್ಕೆ ಸ್ವಾತಂತ್ರ್ಯ ಕೊಡುವುದರ ಬಗ್ಗೆ ಮಾತುಕತೆ ನಡೆಸಲು ನಿರಾಕರಿಸಿತು. ವಿಧಿಯಿಲ್ಲದೆ ೧೮೯೮ ಏಪ್ರಿಲ್ ೧೧ರಂದು ಅಧ್ಯಕ್ಷ ಮೆಕಿನ್ಲೆ ಕ್ಯೂಬದ ಮೇಲೆ ಸ್ಪೇನಿನ ದಬ್ಬಾಳಿಕೆಯನ್ನು ಕೊನೆಗಾಣಿಸಲು ಅಮೆರಿಕದ ಸೈನ್ಯ ಮತ್ತು ನೌಕಾಪಡೆಗಳನ್ನು ರವಾನಿಸಲು ಕಾಂಗ್ರೆಸ್ಸಿನ ಒಪ್ಪಿಗೆ ಪಡೆದನು. ಇದಕ್ಕೆ ಕಾಂಗ್ರೆಸ್ ಒಪ್ಪಿಗೆ ನೀಡಿತೇ ವಿನಃ ಕ್ಯೂಬವನ್ನು ವಶಪಡಿಸಿಕೊಂಡು ಸಂಯುಕ್ತ ಸಂಸ್ಥಾನಗಳಿಗೆ ಸೇರಿಸಿಕೊಳ್ಳುವುದಕ್ಕಲ್ಲ. ಕ್ಯೂಬವನ್ನು ತಮ್ಮದಾಗಿ ಮಾಡಿಕೊಳ್ಳಬೇಕೆಂಬ ಮಹದಾಸೆ ಅಮೆರಿಕನ್ನರಿಗೆ ಇದ್ದರೂ ಕೂಡ ಸ್ಪೇನಿನ ಮೇಲೆ ಯುದ್ಧ ಸಾರುವ ಮಸೂದೆಯನ್ನು 'ಟೆಲ್ಲರ್ ತಿದ್ದುಪಡಿ' (Teller Amendement) ಯೊಂದಿಗೆ ಕಾಂಗ್ರೆಸ್ ಅಂಗೀಕರಿಸಿತು. ಈ ತಿದ್ದುಪಡಿಯ ಪ್ರಕಾರ ಕ್ಯೂಬವನ್ನು ವಶಪಡಿಸಿಕೊಳ್ಳುವುದು ಅಮೆರಿಕದ ಗುರಿಯಲ್ಲ; ಈ ಯುದ್ಧ ಕ್ಯೂಬದ ಬಿಡುಗಡೆಗಾಗಿ ಮಾತ್ರ. ಅಮೆರಿಕನ್ ಸೇನಾಪಡೆಗಳು ಆ ಗುರಿ ಸಾಧಿಸುವವರೆಗೆ ಆ ದ್ವೀಪದಲ್ಲಿದ್ದು ಶಾಂತಿಸ್ಥಾಪನೆಯಾದ ಕೂಡಲೇ ವಾಪಸಾಗಬೇಕೆಂದು ಸ್ಪಷ್ಟಪಡಿಸಲಾಯಿತು.

ಯುದ್ಧದ ಸಿದ್ಧತೆಗಳು ಭರದಿಂದ ಸಾಗಿದವು. ಅಮೆರಿಕದ ನೌಕಾಪಡೆ ಉತ್ತಮ ತರಬೇತಿ ಪಡೆದು ಯುದ್ಧಕ್ಕೆ ಸಿದ್ಧವಾಗಿತ್ತು. ಆ ಕಾಲದಲ್ಲಿ ಅದು ಜಗತ್ತಿನ ಸಮರ್ಥ ನೌಕಾಪಡೆಗಳಲ್ಲಿ ಮೂರನೆಯ ಸ್ಥಾನದಲ್ಲಿತ್ತು. ಅಧ್ಯಕ್ಷ ಚೆಸ್ಟರ್ ಆರ್ಥರ್ (Chester Aurthur)ನ ಆಡಳಿತದಲ್ಲಿಯೆ ಖಜಾನೆಯಲ್ಲಿ ಉಳಿದ ಹೆಚ್ಚುವರಿ (surplus) ಹಣವನ್ನು ಉಕ್ಕಿನ ನೌಕೆಗಳ ನಿರ್ಮಾಣಕ್ಕೆ ವಿನಿಯೋಗಿಸಲಾಗಿತ್ತು. ಹಿಂದೆ ತಿಳಿಸಿದಂತೆ ಅಮೆರಿಕದ ನೌಕಾದಳದ ಬೆಳವಣಿಗೆಗೆ ಆಲ್ಬರ್ಟ್ ಮಹಾನ್ ಬರೆದ 'ಇತಿಹಾಸದ ಮೇಲೆ ನೌಕಾದಳದ ಪ್ರಭಾವ' (The Influence of Sea Power upon History) ಮಹತ್ತರ ಬೆಂಬಲ ನೀಡಿತು. ಪ್ರಬಲ ನೌಕಾಪಡೆಯ ಪರವಾಗಿ ವಾದಿಸಿದ ಮತ್ತೊಬ್ಬ ಪ್ರತಿಷ್ಠಿತ ವ್ಯಕ್ತಿಯೆಂದರೆ ಆಗ ನೌಕಾಪಡೆಯ ಸಹಕಾರ್ಯದರ್ಶಿಯಾಗಿದ್ದ (Assistant Secretary of the Navy) ಥಿಯೊಡೊರ್ ರೂಸ್‌ವೆಲ್ಟ್ (Theodore Roosevelt). ಇವನು ಬರೆದ '೧೮೧೨ರ ನೌಕಾಯುದ್ಧ' (The Naval War of 1812) ಎನ್ನುವ ಪುಸ್ತಕದಲ್ಲಿ ಅಮೆರಿಕದ ನೌಕಾದಳದ ಸಾಹಸವನ್ನು ಭವ್ಯವಾಗಿ ವರ್ಣಿಸಿದ್ದಾನೆ. ಅಮೆರಿಕದ ದೂರಪ್ರಾಚ್ಯ ನೌಕಾದಳದ ನಾಯಕನಾಗಿದ್ದ ಜಾರ್ಜ್ ಡ್ಯೂಯಿಗೆ ತನ್ನ ನೌಕಾದಳವನ್ನು ಹಾಂಕಾಂಗ್ ಬಂದರಿನಲ್ಲಿ ನಿಲ್ಲಿಸಿಕೊಂಡಿರಬೇಕೆಂದೂ, ಯುದ್ಧ ಪ್ರಾರಂಭವಾದರೆ ಅದನ್ನು ತ್ವರಿತಗತಿಯಿಂದ ಸಾಗಿಸಿ ಫಿಲಿಪ್ಪೈನ್ಸ್‌ನಲ್ಲಿ ಆಡಳಿತ ನಡೆಸುತ್ತಿದ್ದ ಸ್ಪಾನಿಷರ ನೌಕಾದಳದ ಮೇಲೆ ಅನಿರೀಕ್ಷಿತ ದಾಳಿ ನಡೆಸಿ ಫಿಲಿಪ್ಪೈನ್ಸ್ ವಶ ಪಡಿಸಿಕೊಳ್ಳಬೇಕೆಂದೂ ನಿರ್ದೇಶಿಸಿದ್ದನು.

ಅಮೆರಿಕ ಸ್ಪೇನ್ ಮೇಲೆ ಯುದ್ಧ ಸಾರಿದ ತಕ್ಷಣವೇ ಹಾಂಕಾಂಗ್ ಬಂದರಿನಲ್ಲಿ ಕಾದಿದ್ದ ಜಾರ್ಜ್ ಡ್ಯೂಯಿ ರೂಸ್‌ವೆಲ್ಟ್‌ನ ಆದೇಶದಂತೆ ತನ್ನ ನೌಕಾದಳವನ್ನು ಅತಿವೇಗದಿಂದ ಸಾಗಿಸಿಕೊಂಡು ಹೋಗಿ ಮನಿಲ ಕೊಲ್ಲಿ (Manila Bay) ತಲುಪಿ ಅಲ್ಲಿ ತಂಗಿದ್ದ ಸ್ಪಾನಿಷ್ ಯುದ್ಧ ನೌಕೆಗಳನ್ನು ನಾಶ ಮಾಡಿದನು. ಆದರೆ ಹೆಚ್ಚಿನ ಸೈನ್ಯ ಸಹಾಯ ಬರುವವರೆಗೂ ಕಾದು ನಿಂತು, ಸೈನ್ಯ ತುಕಡಿಗಳು ಬಂದು ಸೇರಿ ತಮ್ಮ ಬಲ ವೃದ್ಧಿಪಡಿಸಿತೆಂದು ಖಚಿತ ಮಾಡಿಕೊಂಡು ಮನಿಲಾ ನಗರದ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡನು. ಈ ಸೈನಿಕ ಕಾರ್ಯಾಚರಣೆಯಲ್ಲಿ ಫಿಲಿಪೈನ್ ಬಂಡಾಯಗಾರರ ನಾಯಕನಾಗಿದ್ದ ಎಮಿಲಿಯೊ ಅಗ್ವಿನಾಲ್ಡೊ (Emilio Aguinaldo) ಅಮೆರಿಕನ್ನರಿಗೆ ಸಹಾಯ ಮಾಡಿದನು. ಮನಿಲ ಕೊಲ್ಲಿಯಲ್ಲಿ ಐದು ಸುಸಜ್ಜಿತವಾದ ಜರ್ಮನ್ ಯುದ್ಧ ನೌಕೆಗಳು ಲಂಗರು ಹಾಕಿ ಸನ್ನದ್ಧವಾಗಿ ನಿಂತಿದ್ದವು. ಜರ್ಮನ್ ನೌಕಾದಳ ತನ್ನ ನೌಕಾದಳಕ್ಕಿಂತ ಹೆಚ್ಚು ಶಕ್ತಿಯುತವಾದುದು ಎಂದು ಅರಿತಿದ್ದ ಜಾರ್ಜ್ ಡ್ಯೂಯಿ ಜರ್ಮನರ ಮೇಲೆ ಕೋಪಾವಿಷ್ಟನಾಗಿ ಅವರ ನೌಕಾಪಡೆ ಮನಿಲ ಕೊಲ್ಲಿಯನ್ನು ಬಿಟ್ಟು ಹೋಗುವಂತೆ ಮಾಡಲು ಏನು ಮಾಡಬೇಕೆಂದು ಯೋಚಿಸುತ್ತಿರುವಾಗ, ಆ ಸಮಯದಲ್ಲಿ ಮನಿಲ ಕೊಲ್ಲಿಯ ಮತ್ತೊಂದು ಕಡೆಯಲ್ಲಿ ಲಂಗರು ಹಾಕಿ ನಿಂತಿದ್ದ ಬ್ರಿಟಿಷ್ ನೌಕಾದಳದ ನಾಯಕ ಅನಿರೀಕ್ಷಿತವಾಗಿ ಡ್ಯೂಯಿಗೆ ಸ್ನೇಹಹಸ್ತವನ್ನು ನೀಡಿ

ಅಮೆರಿಕನ್ ನೌಕಾದಳದ ಸಹಾಯಕ್ಕೆ ಬಂದನು. ಬ್ರಿಟಿಷರು ಮತ್ತು ಅಮೆರಿಕನ್ನರು ಒಟ್ಟಾಗಿದ್ದು ಜರ್ಮನರನ್ನು ಅಧೀರಗೊಳಿಸಿತು. ಅವರು ಅಮೆರಿಕನ್ನರನ್ನು ಎದುರಿಸುವ ಗೋಜಿಗೆ ಹೋಗಲಿಲ್ಲ. ಬ್ರಿಟಿಷ್ ನೌಕಾದಳ ಸಕಾಲದಲ್ಲಿ ಸಹಾಯ ಒದಗಿಸಿದ್ದು ಇಂಗ್ಲೆಂಡ್ ಮತ್ತು ಅಮೆರಿಕಗಳ ನಡುವಣ ಮೈತ್ರಿಯನ್ನು ಹೆಚ್ಚಿಸಿ ದೃಢಪಡಿಸಿತು.

ಇತ್ತ ಕ್ಯೂಬದಲ್ಲಿ ಅಮೆರಿಕನ್ ನೌಕಾದಳದ ಕಾರ್ಯಾಚರಣೆ ಅಸಮರ್ಪಕವಾಗಿತ್ತು. ಹಾಕಿದ್ದ ಯೋಜನೆಯಂತೆ ಅಮೆರಿಕನ್ ನೌಕಾದಳ ಕ್ಯೂಬವನ್ನು ಸುತ್ತುವರಿದು ಎಲ್ಲಾ ಬಂದರುಗಳನ್ನು ಮುಚ್ಚಿ, ಸ್ಪೇನ್‌ನಿಂದ ಹೆಚ್ಚಿನ ಸೈನ್ಯ ಬಂದು ಸೇರದಂತೆ ಮಾಡಬೇಕಾಗಿತ್ತು. ಆದರೆ ಅಮೆರಿಕದ ನೌಕಾಪಡೆ ಹಾಗೆ ಮಾಡಲಾರದೆ ಹೋಯಿತು. ಸ್ಪೇನಿನ ನೌಕಾದಳದ ಅಡ್ಮಿರಲ್ ಸರ್‌ವೇರ (Admiral Cervera) ಅಮೆರಿಕದ ದಿಗ್ಬಂಧನವನ್ನು ಮುರಿದು ಸಾಂಟಿಯಾಗೊ (Santiago) ತನ್ನ ನೌಕಾದಳವನ್ನು ಬಂದರಿಗೆ ತಂದು ನಿಲ್ಲಿಸಿದನು. ಅಲ್ಲಿ ಅಮೆರಿಕದ ನೌಕಾದಳದ ನಾಯಕನಾಗಿದ್ದ ಲೆಫ್ಟಿನೆಂಟ್ ಹಾಬ್ಸನ್ (Hobson) ಬಂದರಿನ ಕಿರಿದಾದ ಪ್ರವೇಶ ದ್ವಾರದಲ್ಲಿ ಲಂಗರು ಹಾಕಿ ನಿಂತ ಸ್ಪೇನಿನ ಹಳೆಯ ಯುದ್ಧನೌಕೆಯನ್ನು ಫಿರಂಗಿಯಿಂದ ಉಡಾಯಿಸಿ ಮುಳುಗಿಸಲಾರದೆ ಹೋದನು. ಹಾಗೆ ಮಾಡಿದ್ದರೆ ಅಡ್ಮಿರಲ್ ಸರ್‌ವೇರನ ನೌಕಾದಳ ಸಾಂಟಿಯಾಗೊ ಬಂದರಿನೊಳಕ್ಕೆ ಬರಲು ಸಾಧ್ಯವಾಗುತ್ತಿರಲಿಲ್ಲ. ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವಂತೆ ಹಾಬ್ಸನ್‌ನ ಅಸಮರ್ಥನೆಯನ್ನು ಕಡೆಗಣಿಸಿ ಅವನ ಪ್ರಯತ್ನವನ್ನು ಅಮೆರಿಕದ ಪತ್ರಿಕೆಗಳು ಉತ್ಪ್ರೇಕ್ಷೆ ಮಾಡಿ ಹಾಡಿ ಹೊಗಳಿದವು.

ಸ್ಪೇನಿನ ಸೈನ್ಯ ಕೂಡ ಕಳಪೆಯಾಗಿತ್ತು. ಅಮೆರಿಕದ ನೌಕಾದಳದ ಸಹಾಯಕ್ಕೆ ಸೈನ್ಯ ಬಂದು ಸೇರಿದ ಮೇಲೆ ಸಾಂಟಿಯಾಗೊ ಸುತ್ತಲಿನ ಎತ್ತರದ ಪ್ರದೇಶವನ್ನು ಅಮೆರಿಕದ ಸೈನ್ಯ ವಶಪಡಿಸಿಕೊಂಡು ಆ ಎತ್ತರದ ಆಯಕಟ್ಟಿನ ಸ್ಥಳದಿಂದ ಸಾಂಟಿಯಾಗೊ ಪಟ್ಟಣದ ಯಾವ ಭಾಗವನ್ನು ಬೇಕಾದರೂ ಫಿರಂಗಿ ದಾಳಿಗೆ ಗುರಿಮಾಡಬಹುದಾಗಿತ್ತು. ಸ್ಪೇನಿನ ಸೈನ್ಯ ಮತ್ತು ನೌಕಾದಳಗಳು ಪೇಚಿನ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದ್ದವು. ಹತಾಶನಾದ ಸ್ಪೇನಿನ ನೌಕಾದಳದ ನಾಯಕ ಅಡ್ಮಿರಲ್ ಸರ್‌ವೇರ ತನ್ನ ನೌಕಾದಳದೊಂದಿಗೆ ತಪ್ಪಿಸಿಕೊಂಡು ಹೋಗಲು ಕಡೆಯ ಪ್ರಯತ್ನ ಮಾಡಿದನು. ಅಮೆರಿಕನ್ ನೌಕಾಪಡೆ ಅವನ ನೌಕಾಪಡೆಯನ್ನು ಅಟ್ಟಿಸಿಕೊಂಡು ಹೋಯಿತು. ಕ್ಯೂಬದ ದಕ್ಷಿಣ ಸಮುದ್ರದಲ್ಲಿ ಓಡುತ್ತಲೆ ನಡೆದ ನೌಕಾ ಸಮರದಲ್ಲಿ ಸ್ಪೇನಿನ ನೌಕಾದಳದ ಎಲ್ಲ ನೌಕೆಗಳನ್ನೂ ಅಮೆರಿಕನ್ ನೌಕಾದಳ ಛಿದ್ರಗೊಳಿಸಿ ಮುಳುಗಿಸಿತು. ಈ ಸಮರದಲ್ಲಿ ಒಬ್ಬ ಅಮೆರಿಕನ್ ನಾವಿಕ ಸತ್ತು ಹದಿನಾರು ನಾವಿಕರಿಗೆ ಗಾಯಗಳಾಗಿದ್ದುಬಿಟ್ಟರೆ ಹೆಚ್ಚಿನ ಯಾವ ನಷ್ಟವೂ ಆಗಲಿಲ್ಲ.

ಅಮೆರಿಕನ್ ನೌಕಾದಳಕ್ಕೆ ಹೋಲಿಸಿದರೆ ಅಮೆರಿಕನ್ ಸೈನ್ಯದ ಸ್ಥಿತಿ ಚಿಂತಾಜನಕ ವಾಗಿತ್ತು ಎಂದರೆ ಉತ್ಪ್ರೇಕ್ಷೆಯಾಗಲಾರದು. ಅಂತರ್ಯುದ್ಧದನಂತರ ಸೈನ್ಯಕ್ಕೆ ಯಾರೂ

ಹೆಚ್ಚಿನ ಗಮನ ಕೊಡಲಿಲ್ಲ. ಅದರ ದುಷ್ಪರಿಣಾಮವನ್ನು ಈ ಯುದ್ಧದಲ್ಲಿ ಅನುಭವಿಸ ಬೇಕಾಯಿತು. ಉತ್ತಮಮಟ್ಟದ ಸಮರ್ಥ ಸೇನಾಧಿಪತಿಗಳಲ್ಲದೆ, ಸೈನಿಕರಿಗೆ ಸರಿಯಾದ ತರಬೇತಿಯಿಲ್ಲದೆ ಸ್ಪೇನಿನೊಡನೆ ನಡೆಸಿದ ಯುದ್ಧದಲ್ಲಿ ಅಮೆರಿಕನ್ ಸೈನ್ಯದಲ್ಲಿ ಗೊಂದಲ ಪರಿಸ್ಥಿತಿ ಉಂಟಾಗಿ ಅನೇಕ ಸೈನಿಕರು ಅನಾವಶ್ಯಕವಾಗಿ ಸತ್ತರು. ವಿಪರ್ಯಾಸವೆಂದರೆ – ಸೇನಾಧಿಕಾರಿಗಳು ಸೈನಿಕ ಶಿಕ್ಷಣ ಪಡೆಯದ, ರಾಜಕಾರಣಿಗಳ ಶಿಫಾರಸ್ಸಿನಿಂದ ಅಧಿಕಾರಕ್ಕೆ ಬಂದವರು ಮತ್ತು ಎಲ್ಲರೂ ಹೆಚ್ಚು ವಯಸ್ಸಾದವರು. ಕ್ಯೂಬ ಆಕ್ರಮಣ ಮಾಡಲು ಹೊರಟ ಸೈನ್ಯದ ಸೇನಾಧಿಪತಿ ವಿಲಿಯಂ ಶಾಫ್ಟರ್ (William Shafter) ಎನ್ನುವ ಮುನ್ನೂರು ಪೌಂಡ್ ತೂಕದ ಧಡೂತಿ ಮನುಷ್ಯ. ಇವನನ್ನು ಎತ್ತಿಕೊಂಡು ಹೋಗಿ ಕುದುರೆಯ ಮೇಲೆ ಕೂರಿಸಬೇಕಾಗಿತ್ತು. ಇವನು ತನ್ನ ಕೈಕೆಳಗಿನ ಸೈನ್ಯದ ದುರವಸ್ಥೆಗೆ ಸಂಕೇತವಾಗಿದ್ದನು. ಯುದ್ಧಕಾಲದಲ್ಲಿ ಇದ್ದಕ್ಕಿದ್ದ ಹಾಗೆ ಸೈನಿಕರ ಸಂಖ್ಯೆಯನ್ನು ಹೆಚ್ಚಿಸಿದುದರಿಂದ ಫ್ಲಾರಿಡಾದಲ್ಲಿ ಸೇರಿದ್ದ ಕ್ಯೂಬಕ್ಕೆ ಹಡಗಿನಲ್ಲಿ ರವಾನಿಸಲ್ಪಡಬೇಕಾಗಿದ್ದ ಅತಿದೊಡ್ಡ ಸೈನ್ಯದಲ್ಲಿ ನಂಬಲಾರದ ಅವ್ಯವಸ್ಥೆ ಮತ್ತು ಗೊಂದಲ ಉಂಟಾದವು.

ಕಾಂಗ್ರೆಸ್ ಫೆಡರಲ್ ಸೈನ್ಯಕ್ಕೆ ಹೆಚ್ಚು ಸೈನಿಕರನ್ನು ಸೇರಿಸಿಕೊಳ್ಳಲು ಅನುಮತಿ ನೀಡಿದುದೆ ಅಲ್ಲದೆ ೧೨೫೦೦೦ ಸ್ವಯಂ ಸೇವಕರ ನೇಮಕವನ್ನು ಅನುಮೋದಿಸಿತು. ಅಶ್ವಾರೋಹಿ ಸೈನಿಕರ ಮೂರು ತುಕಡಿಗಳನ್ನು ಥಿಯೊಡೊರ್ ರೂಸ್‌ವೆಲ್ಟ್‌ನ ಕೈಕೆಳಗೆ ಇರುವಂತೆ ವಿಶಿಷ್ಟ ವ್ಯವಸ್ಥೆ ಮಾಡಲಾಯಿತು. ನೌಕಾದಳದ ಉಪಕಾರ್ಯದರ್ಶಿಯಾಗಿದ್ದ ಅವನು ಆ ಹುದ್ದೆಗೆ ರಾಜೀನಾಮೆ ಕೊಟ್ಟು ತನ್ನ ಕೈಕೆಳಗಿನ ಅಶ್ವಾರೋಹಿ ಸೈನಿಕರನ್ನು ತರಬೇತಿ ಮಾಡಿ ಅವರನ್ನು 'ಒರಟು ಸವಾರರನ್ನಾಗಿ' (rough riders) ಮಾರ್ಪಡಿಸುವು ದರಲ್ಲಿ ನಿರತನಾದನು. ಕ್ಯೂಬವನ್ನು ಆಕ್ರಮಣ ಮಾಡಿ ಸ್ಪಾನಿಷರಿಂದ ಬಿಡುಗಡೆ ಮಾಡಲು ಹೊರಟ ಅಮೆರಿಕದ ಅಪಾರ ಸೈನ್ಯವನ್ನು ಫ್ಲಾರಿಡಾದ ಟಾಂಪಾ (Tampa)ದಲ್ಲಿ ಹಡಗು ಹತ್ತಿಸಿ ರವಾನಿಸಬೇಕಾಗಿತ್ತು. ಸೈನ್ಯ ಅಪಾರವಾದರೂ ಅಶಿಸ್ತು, ಅವ್ಯವಸ್ಥೆ ಮತ್ತು ಅನಿಶ್ಚಯಗಳಿಂದ ಪರಿಸ್ಥಿತಿ ಗೊಂದಲಮಯವಾಗಿತ್ತು. ರೂಸ್‌ವೆಲ್ಟ್‌ನ 'ಒರಟು ಸವಾರರು' ಕ್ಯೂಬದ ಮೇಲೆ ದಾಳಿ ಮಾಡುವ ಸಾಹಸ ಎಲ್ಲಿ ತಪ್ಪಿ ಹೋಗುತ್ತದೆಯೋ ಎಂದು ಸೈನ್ಯ ಸಾಗಿಸುವ ಒಂದು ರೈಲುಬಂಡಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅದನ್ನು 'ಒರಟು ಸವಾರರಿಗಾಗಿ' ಕಾದಿರಿಸಿದರು. ಸವಾರರು ರೈಲುಬಂಡಿಯಲ್ಲಿ ಪ್ರಯಾಣ ಮಾಡಿ ಹಡಗು ಲಂಗರು ಹಾಕಿದ್ದ ಸ್ಥಾನದಲ್ಲಿ ಹಡಗು ಹತ್ತಿ ಪ್ರಯಾಣಿಸಿ ಕ್ಯೂಬ ಸೇರಬೇಕಾಗಿತ್ತು. ಆದರೆ ಗೊಂದಲದಲ್ಲಿ ಒಂದು ಅಚಾತುರ್ಯ ನಡೆದುಹೋಗಿತ್ತು. ಸವಾರರು ತಮ್ಮ ಕುದುರೆಗಳನ್ನು ಜೊತೆಯಲ್ಲಿ ತರಲಾಗಲಿಲ್ಲ. ಹಾಗಾಗಿ ಇವರು ಕುದುರೆಗಳಿಲ್ಲದ ಸವಾರರಾದರು! ಚಳಿಗಾಲಕ್ಕೆ ತಕ್ಕುದಾದ ದಪ್ಪ ಸಮವಸ್ತ್ರಗಳನ್ನು ಧರಿಸಿದ ಈ ಯೋಧರು ಬಿಸಿಲಿನ ತಾಪ ತಾಳಲಾರದೆ ಬಸವಳಿದರು. ಸೈನಿಕರಿಗೆ ಸರಬರಾಜಾಗುತ್ತಿದ್ದ ಆಹಾರ ಮನುಷ್ಯರು ತಿನ್ನುವಂತಿರಲಿಲ್ಲ. ಹಳಸಿದ ಆಹಾರ, ಹಾಳಾದ ದನದ ಮಾಂಸವನ್ನು

'embalm' ಮಾಡಿ ಸೈನಿಕರಿಗೆ ಹಾಕುತ್ತಿದ್ದರು. ಸೈನಿಕರ ಶಿಬಿರಗಳಲ್ಲಿ ನೈರ್ಮಲ್ಯದ ಕೊರತೆಯಿಂದಾಗಿ ರೋಗ-ರುಜಿನಗಳಿಂದ ೫೦೦೦ಕ್ಕೂ ಹೆಚ್ಚು ಸೈನಿಕರು ಸಾವಿಗೀಡಾದರು. ಯದ್ಧದಲ್ಲಿ ಮಡಿದ ಸೈನಿಕರ ಸಂಖ್ಯೆ ೪೦೦ಕ್ಕಿಂತ ಕಡಿಮೆ.

ಅಂತೂ ಇಂತೂ ಅಮೆರಿಕನ್ ಸೈನ್ಯ ಸಾಂಟಿಯಾಗೊ ಸಮೀಪದಲ್ಲಿ ಬಂದಿಳಿಯಿತು. ಅವರು ಎದುರಿಸಬೇಕಾದ್ದ ಸ್ಪೇನ್‌ನ ಸೈನ್ಯ ಅವರಿಗಿಂತಲೂ ಅಸಮರ್ಥವಾಗಿತ್ತು. ಸಾಂಟಿಯಾಗೊ ಮುತ್ತಿಗೆ ಹಾಕುವ ಹಾದಿಯಲ್ಲಿ ನಡೆದ ಎರಡು ಮುಖ್ಯ ಕದನಗಳಲ್ಲಿ – ಎಲ್ ಕಾನೆ (El Caney) ಮತ್ತು ಸಾನ್ ಹುವಾನ್ ಗುಡ್ಡದ (San Juan hills) ಕದನಗಳಲ್ಲಿ – ಅಮೆರಿಕನ್ ಸೈನ್ಯ ಜಯಗಳಿಸಿದ ನಂತರ ನೌಕಾದಳದ ಸಹಾಯದಿಂದ ಸಾಂಟಿಯಾಗೊ ಸುತ್ತಣ ಎತ್ತರ ಪ್ರದೇಶವನ್ನು ಆಕ್ರಮಿಸಿಕೊಂಡಾಗ ಸ್ಪೇನಿನ ಸೈನ್ಯ ಮತ್ತು ನೌಕಾದಳ ವಿಧಿಯಿಲ್ಲದೆ ತಪ್ಪಿಸಿಕೊಂಡು ಓಡಿಹೋಗಲು ಪ್ರಯತ್ನಿಸಿದವು. ಈ ನೌಕಾದಳವನ್ನು ಅಮೆರಿಕನ್ ನೌಕೆಗಳು ನಾಶ ಮಾಡಿದ್ದನ್ನು ಹಿಂದೆ ತಿಳಿಸಲಾಗಿದೆ. ಈ ಸಮಯದಲ್ಲಿ ಅಮೆರಿಕನ್ ಸೇನಾಧಿಪತಿ ನೆಲ್‌ಸನ್ (Nelson) ತನ್ನ ಸೈನ್ಯವನ್ನು ವೇಗವಾಗಿ ಸಾಗಿಸಿಕೊಂಡು ಹೋಗಿ, ಕದನ ವಿರಾಮಕ್ಕೆ ಮುಂಚೆಯೆ, ಪೋರ್ಟೋ ರಿಕೊ (Puerto Rico) ದ್ವೀಪವನ್ನು ವಶಪಡಿಸಿಕೊಂಡನು. ಆಗಸ್ಟ್ ೧೨, ೧೮೯೮ರಲ್ಲಿ ಎರಡು ಸೈನ್ಯಗಳು ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಶಾಂತಿಸಂಧಾನಕ್ಕೆ (armistice) ಸಹಿ ಹಾಕಿದವು. ಸ್ಪೇನ್-ಅಮೆರಿಕನ್ ಯುದ್ಧವನ್ನು ಇತಿಹಾಸಕಾರರು 'ಚಿಕ್ಕದಾದರೂ ಮಹತ್ವದ ಕದನ' (little but glorious war) ಎಂದು ಕರೆದಿದ್ದಾರೆ. ಯುದ್ಧ ಪ್ರಾರಂಭವಾಗಿ ನಾಲ್ಕು ತಿಂಗಳಲ್ಲೇ ಮುಗಿದುಹೋಯಿತು.

೧೮೯೮ರ ಪ್ಯಾರಿಸ್ ಒಪ್ಪಂದ

ಸ್ಪೇನ್ ಮತ್ತು ಅಮೆರಿಕ ಪ್ರತಿನಿಧಿಗಳು ಪ್ಯಾರಿಸ್‌ನಲ್ಲಿ ೧೮೯೮ರ ಅಕ್ಟೋಬರ್ ತಿಂಗಳಲ್ಲಿ ಸೇರಿ ಶಾಂತಿಸಂಧಾನದ ಷರತ್ತುಗಳನ್ನು (Terms of the Treaty) ತಯಾರಿಸಿದರು. ಅಧ್ಯಕ್ಷ ಮೆಕಿನ್ಲೆ ಮುಂದಾಲೋಚನೆಯಿಂದ ಮೂವರು ಸೆನೆಟರುಗಳನ್ನು ಪ್ರತಿನಿಧಿಗಳನ್ನಾಗಿ ಕಳುಹಿಸಿದ್ದನು. ಏಕೆಂದರೆ ಅವನು ಮಾಡಿಕೊಂಡ ಒಪ್ಪಂದವನ್ನು ನಂತರ ಸೆನೆಟ್ ಅಧಿಕೃತವಾಗಿ ಅಂಗೀಕರಿಸಬೇಕಾದುದರಿಂದ.

ಪ್ಯಾರಿಸ್ ಒಪ್ಪಂದದ ಷರತ್ತುಗಳು: ಕ್ಯೂಬ ಸ್ವತಂತ್ರ ರಾಷ್ಟ್ರವೆಂದು ಒಪ್ಪಿಕೊಳ್ಳಲಾಯಿತು. ಸ್ಪೇನ್ ಕ್ಯೂಬ ಕೊಡಬೇಕಾಗಿದ್ದ ಅಗಾಧ ಮೊತ್ತದ ಸಾಲವನ್ನು ಉಳಿಸಿಕೊಂಡಿತು. ಪೋರ್ಟೋ ರಿಕೊ, ಗುವಾಮ್ (Guam) ಮತ್ತು ಫಿಲಿಪ್ಪೈನ್ಸ್ ಸ್ಪೇನ್‌ನಿಂದ ಬಿಡುಗಡೆ ಹೊಂದಿ ಅಮೆರಿಕಕ್ಕೆ ಸೇರ್ಪಡೆಯಾದವು. ಅಮೆರಿಕ ಫಿಲಿಪ್ಪೈನ್ಸ್‌ಗೆ ೨೦ ಮಿಲಿಯನ್ ಡಾಲರ್‌ಗಳನ್ನು ಕೊಡಬೇಕೆಂದು ನಿರ್ಧರಿಸಲಾಯಿತು. ಈ ಒಪ್ಪಂದದ ಪರಿಣಾಮವಾಗಿ ಸಂಯುಕ್ತ ಸಂಸ್ಥಾನಗಳು ಕಡಲಾಚೆಯ ಸಾಮ್ರಾಜ್ಯವನ್ನು ಪಡೆದು

ಭಿನ್ನ ಸಂಸ್ಕೃತಿಯ ಜನರ ಆಡಳಿತದ ಹೊರೆಯನ್ನು ಹೊರಬೇಕಾಯಿತು. ಅಮೆರಿಕ ಫಿಲಿಪ್ಪೈನ್ಸ್‌ನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳಲು ಕೆಲವು ಮುಖ್ಯ ಕಾರಣಗಳಿದ್ದವು: ಅಮೆರಿಕನ್ನರಲ್ಲಿ ಸಾಮ್ರಾಜ್ಯಶಾಹಿ ಮನೋಭಾವ ಹೆಚ್ಚಾಗಿದ್ದುದರಿಂದ ಅಧ್ಯಕ್ಷ ಮೆಕಿನ್ಲೆ ಅರೆ ಮನಸ್ಸಿನಿಂದ ಜನರ ಇಚ್ಛೆಯನ್ನು ಪೂರೈಸಲು ಈ ಸೇರ್ಪಡೆಗೆ ಮುಂದಾದನು. ಅಮೆರಿಕ ಈ ರೀತಿ ಕಬಳಿಸಿದ್ದನ್ನು ಸಮರ್ಥಿಸಲು ಕೊಟ್ಟ ವಿವರಣೆ: ಫಿಲಿಪ್ಪೈನ್ಸ್ ನಿವಾಸಿಗಳನ್ನು ನಾಗರಿಕರನ್ನಾಗಿ ಮಾಡಲು ಕ್ರೈಸ್ತರನ್ನಾಗಿ ಪರಿವರ್ತಿಸುವ ಹೊಣೆಗಾರಿಕೆ ಅಮೆರಿಕದ್ದು! ಅಮೆರಿಕನ್ ವ್ಯಾಪಾರಿಗಳು ಫಿಲಿಪ್ಪೈನ್ಸ್‌ನಲ್ಲಿ ಬಂಡವಾಳ ಹೂಡಿ ಬಡ್ಡಿಗೆ ಸಾಲ ಕೊಡುವುದು, ಕಚ್ಚಾ ಪದಾರ್ಥಗಳನ್ನು ಶೋಧಿಸಿ ಕೈಗಾರಿಕೆಗಳನ್ನು ಸ್ಥಾಪಿಸುವುದು, ಅಮೆರಿಕದ ಉತ್ಪನ್ನಗಳನ್ನು ಫಿಲಿಪ್ಪೈನ್ಸ್ ಮಾರುಕಟ್ಟೆಗೆ ರಫ್ತು ಮಾಡುವುದು – ಈ ಎಲ್ಲ ವ್ಯವಹಾರಗಳಿಂದ ಅಪಾರ ಲಾಭಗಳಿಸಲು ಅಮೆರಿಕನ್ನರು ಹವಣಿಸಿದ್ದರೂ ಫಿಲಿಪ್ಪೈನ್ಸ್ ಅಮೆರಿಕ ದೂರ ಪ್ರಾಚ್ಯ ದೇಶಗಳೊಡನೆ ನಡೆಸುವ ಬೃಹತ್ ಪ್ರಮಾಣದ ವಾಣಿಜ್ಯ ವ್ಯವಹಾರಗಳ ನೆಲೆಯಾಗಲು ಅನುಕೂಲವಾಗಿತ್ತು. ಕೊನೆಯದಾಗಿ, ಅಮೆರಿಕ ಫಿಲಿಪ್ಪೈನ್ಸ್ ದ್ವೀಪಗಳನ್ನು ವಶಪಡಿಸಿಕೊಳ್ಳದೆ ಹೋದರೆ ಅವು ಜರ್ಮನರ ಅಥವಾ ಜಪಾನೀಯರ ವಶವಾಗುವುದು ಖಂಡಿತವೆಂದು ಅಮೆರಿಕನ್ನರು ನಂಬಿದ್ದರು.

ಸೆನೆಟ್‌ನಲ್ಲಿ ಕೆಲವು ರಿಪಬ್ಲಿಕನ್ನರು ಮತ್ತು ಅನೇಕ ಡೆಮೊಕ್ರಾಟರು ಅನ್ಯದೇಶದ ಜನರನ್ನು ಆಶ್ರಿತರನ್ನಾಗಿ ಮಾಡಿಕೊಳ್ಳುವುದನ್ನು ವಿರೋಧಿಸಿದರು. ವಿಲಿಯಂ ಜೆನ್ನಿಂಗ್ಸ್ ಬ್ರೈಯನ್ ಪ್ರಭಾವದಿಂದ ಡೆಮೊಕ್ರಾಟರು ಪ್ಯಾರಿಸ್ ಒಪ್ಪಂದದ ಪರವಾಗಿ ಮತ ನೀಡಿ ಕೇವಲ ಎರಡು ಮತಗಳಿಂದ ಅಂಗೀಕೃತವಾಗುವಂತೆ ಮಾಡಿದರು – ಎಂದರೆ ಅಗತ್ಯವಾಗಿದ್ದ ೨/೩ ಬಹುಮತಕ್ಕಿಂತ ಎರಡು ಮತಗಳು ಹೆಚ್ಚಿಗೆ ಒಪ್ಪಂದದ ಪರವಾಗಿದ್ದು ಅದು ಅಂಗೀಕೃತವಾಯಿತು. ಬ್ರೈಯನ್ ಸಾಮ್ರಾಜ್ಯಶಾಹಿ ವಿರೋಧಿ. ಆದರೂ ಅವನು ಕೆಲವು ಡೆಮೊಕ್ರಾಟ್ ಸೆನೆಟರುಗಳು ಒಪ್ಪಂದದ ಪರವಾಗಿ ಮತ ನೀಡುವಂತೆ ಒತ್ತಾಯ ಮಾಡಿದ್ದಕ್ಕೆ ಅವನ ಮುಂದಾಲೋಚನೆ ಕಾರಣ. ಸೆನೆಟ್ ಪ್ರಸ್ತುತ ಒಪ್ಪಂದವನ್ನು ಅಂಗೀಕರಿಸಿದರೆ ಅದನ್ನು ೧೯೦೦ರ ಚುನಾವಣೆಯಲ್ಲಿ (ರಿಪಬ್ಲಿಕನ್ನರನ್ನು ಆಕ್ರಮಣಕಾರರು, ಸಾಮ್ರಾಜ್ಯಶಾಹಿಗಳು ಎಂದು ಖಂಡಿಸಿ) ಮುಖ್ಯ ವಿಷಯವನ್ನಾಗಿ ಮಾಡಿಕೊಂಡು ಪರಿಣಾಮಕಾರಿಯಾಗಿ ಅವರ ವಿರುದ್ಧ ಪ್ರಚಾರ ಮಾಡಲು ಅನುಕೂಲವಾಗುತ್ತದೆ ಎಂದು ಯೋಚಿಸಿದ್ದನು.

ಈ 'ಚಿಕ್ಕದಾದರೂ ಮಹತ್ತರವಾದ ಕದನ' ಅದು ಅಷ್ಟೇ ಮಹತ್ತರವಾದ ಪರಿಣಾಮಗಳನ್ನೇ ಉಂಟುಮಾಡಿತು. ಕೊಲಂಬಸ್‌ನ ಕಾಲದಿಂದಲೂ ಪ್ರಬಲ ಮತ್ತು ಅತ್ಯಂತ ವಿಶಾಲವಾದ ಸ್ಪೇನ್‌ನ ಅಮೆರಿಕನ್ ಸಾಮ್ರಾಜ್ಯ ಅವನತಿ ಹೊಂದಿತು. ಅಮೆರಿಕ ಶಾಂತಿಸಾಗರದ ಮುಖ್ಯ ದ್ವೀಪಗಳನ್ನು ವಶಪಡಿಸಿಕೊಂಡಿದ್ದರಿಂದ ದೂರಪ್ರಾಚ್ಯಗಳೊಂದಿಗೆ

ವ್ಯವಹಾರ ಮಾಡುವುದು ಅಗತ್ಯವಾಯಿತು. ಇತರ ಪ್ರಬಲ ರಾಷ್ಟ್ರಗಳೊಡನೆ ಅಮೆರಿಕ ರಾಯಭಾರ ನಡೆಸುವುದು ಅನಿವಾರ್ಯವಾದುದರಿಂದ ಅದು ತನ್ನ 'ಪ್ರತ್ಯೇಕತೆ'ಯ (isolationism) ಧೋರಣೆಯನ್ನು ಬಿಡಬೇಕಾಯಿತು. ಅಮೆರಿಕ ಸಂಯುಕ್ತ ಸಂಸ್ಥಾನಗಳು 'ಜಾಗತಿಕ ಶಕ್ತಿ' (world power) ಎಂದು ಪರಿಗಣಿಸಲಾಯಿತು. ಸ್ಪೇನ್-ಅಮೆರಿಕ ಕದನದಲ್ಲಿ ಅಮೆರಿಕನ್ನರು ತಮ್ಮೊಳಗಿನ ಉತ್ತರ-ದಕ್ಷಿಣ ಭೇದ ಭಾವ ಮತ್ತು ದ್ವೇಷಗಳನ್ನು ಮರೆತು ಒಂದಾಗಿ ಯುದ್ಧ ಮಾಡಿದರು. ಅಂತರ್ಯುದ್ಧದ ಗಾಯಗಳು ಈ ಯುದ್ಧ ಕಾಲದಲ್ಲಿ ಮಾಸಿ ಹೋದಂತಾದುವು.

ಕ್ಯೂಬ ಸ್ವತಂತ್ರ ಗಣರಾಜ್ಯವಾಯಿತು. ಯುದ್ಧ ಮುಗಿದು ಶಾಂತಿ ಸ್ಥಾಪನೆಯಾದ ಕೂಡಲೇ ಅಮೆರಿಕನ್ ಸೈನ್ಯ ವಾಪಸ್ಸಾಯಿತು. ಅದು ಕ್ಯೂಬದಲ್ಲಿದ್ದಾಗ ನಿರ್ಮಲೀಕರಣ ಯೋಜನೆಯನ್ನು ಕೈಗೊಂಡಿತು. 'ಹಳದಿ ಜ್ವರ' (yellow fever)ದಿಂದ ಸಾವಿರಾರು ಕ್ಯೂಬನ್ನರು ಪ್ರತಿವರ್ಷ ಸಾಯುತ್ತಿದ್ದರು. ಅಮೆರಿಕದ ವೈದ್ಯ ವಾಲ್ಟರ್ ರೀಡ್ (Walter reed) ಈ ಜ್ವರ ಹಬ್ಬಲು ಕಾರಣವಾದ ಸೊಳ್ಳೆಯನ್ನು ಪತ್ತೆ ಮಾಡಿದನು. ಈ ಸೊಳ್ಳೆಗಳ ನಿರ್ಮೂಲನ ಮಾಡಿ ಹಳದಿ ಜ್ವರವನ್ನು ಹದ್ದುಬಸ್ತಿಗೆ ತರಲಾಯಿತು. ಸ್ವತಂತ್ರ ರಾಷ್ಟ್ರವಾದರೂ ಕ್ಯೂಬ ಅಮೆರಿಕವನ್ನು ಅವಲಂಬಿಸಿತ್ತು; ಅದು ಆಶ್ರಿತ ರಾಷ್ಟ್ರವಾಗಿಯೇ ಉಳಿಯಿತು. ೧೯೦೧ರಲ್ಲಿ ರಾಜ್ಯಾಂಗದಲ್ಲಿ ಪ್ಲಾಟ್ ತಿದ್ದುಪಡಿ (The Platt amendment)ಯನ್ನು ಮಾಡಲಾಯಿತು. ಈ ತಿದ್ದುಪಡಿ ಕೆಲವು ಷರತ್ತುಗಳನ್ನೊಳಗೊಂಡಿತ್ತು: ಅಮೆರಿಕದ ಒಪ್ಪಿಗೆ ಇಲ್ಲದೆ ಕ್ಯೂಬ ತನ್ನ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತಹ ಅಂತರರಾಷ್ಟ್ರೀಯ ಒಪ್ಪಂದಗಳನ್ನು ಮಾಡಿಕೊಳ್ಳಬಾರದು. ತೀರಿಸಲು ಅಸಾಧ್ಯವಾದ ಅಪಾರ ಮೊತ್ತದ ಹಣವನ್ನು ಸಾಲ ತಂದು ಆ ಸಾಲಗಾರ ದೇಶಗಳು ಅದನ್ನು ನೆವ ಮಾಡಿಕೊಂಡು ಕ್ಯೂಬದ ಮೇಲೆ ದಾಳಿ ಮಾಡುವಂತಹ ಅವಕಾಶ ಕಲ್ಪಿಸಿಕೊಡಬಾರದು. ಸಂಯುಕ್ತ ಸಂಸ್ಥಾನಗಳು ಕ್ಯೂಬದ ಸ್ವಾತಂತ್ರ್ಯ ಮತ್ತು ರಾಜಕೀಯ ಭದ್ರತೆಯನ್ನು ಕಾಪಾಡಲು ಅಗತ್ಯಬಿದ್ದಾಗ ಮಧ್ಯೆ ಪ್ರವೇಶಿಸಬಹುದು. ಕ್ಯೂಬದಲ್ಲಿ ಅಮೆರಿಕನ್ ನೌಕಾದಳದ ಎರಡು ನೆಲೆಗಳನ್ನು ಸ್ಥಾಪಿಸಲು ಅವಕಾಶವಿರಬೇಕು.

ಪ್ಲಾಟ್ ತಿದ್ದುಪಡಿ ಸಂಯುಕ್ತ ಸಂಸ್ಥಾನಗಳಿಗೆ ಕ್ಯೂಬದ ವ್ಯವಹಾರಗಳಲ್ಲಿ ಕೈಹಾಕಲು ಪರವಾನಗಿ ಕೊಟ್ಟಂತಾಯಿತು. ಅಮೆರಿಕ ಅನೇಕ ಬಾರಿ – ೧೯೦೬, ೧೯೧೨ ಮತ್ತು ೧೯೧೭ರಲ್ಲಿ – ಕ್ಯೂಬದ ವ್ಯವಹಾರಗಳಲ್ಲಿ ಮಧ್ಯಪ್ರವೇಶ ಮಾಡಿದೆ. ಹಾಗೆಂದರೆ ಸೈನ್ಯ ಕಳುಹಿಸುವುದು ಅಥವಾ ರಾಯಭಾರ ತಂತ್ರಗಳನ್ನು ಉಪಯೋಗಿಸಿ ತಮ್ಮ ಇಚ್ಛಾನುಸಾರ ಕ್ಯೂಬ ನಡೆದುಕೊಳ್ಳುವಂತೆ ಮಾಡುವುದು. ಅಮೆರಿಕನ್ ಉದ್ಯಮಿಗಳು ಹೂಡಿದ ಅಪಾರ ಬಂಡವಾಳದಿಂದ ಕ್ಯೂಬ ಆರ್ಥಿಕವಾಗಿ ಅಮೆರಿಕದ ಕೈಕೆಳಗೆ ಇರುವಂತಾಯಿತು. ಅಮೆರಿಕ ಕ್ಯೂಬದಲ್ಲಿ ಸ್ಥಾಪಿಸಿದ ಎರಡು ನೌಕಾನೆಲೆಗಳಲ್ಲಿ ಒಂದು

ಮಾತ್ರ – ಗ್ವಾಂಟನಮೊ ಕೊಲ್ಲಿ (Guantanamo Bay) – ಈಗಲೂ ಅಮೆರಿಕದ ವಶದಲ್ಲಿದೆ.

ಪೋರ್ಟೊ ರಿಕೊ (Puerto Rico) ದ್ವೀಪವನ್ನು ಅಮೆರಿಕ ಸುಲಭವಾಗಿ ವಶಪಡಿಸಿಕೊಳ್ಳಲು ಸಾಧ್ಯವಾಯಿತು. ಈ ದ್ವೀಪವನ್ನು ಆಕ್ರಮಿಸಲು ಅಮೆರಿಕ ಯುದ್ಧ ಮಾಡಬೇಕಾಗಲಿಲ್ಲ. ರಕ್ತ ಚೆಲ್ಲದೆ ಆಕ್ರಮಣ (bloodless occupation) ನಡೆಯಿತು ಎಂದರೆ ಉತ್ಪ್ರೇಕ್ಷೆಯಾಗಲಾರದು. ಅಮೆರಿಕನ್ ಸೈನ್ಯದ ಉಸ್ತುವಾರಿಯಲ್ಲಿ ಪೋರ್ಟೊ ರಿಕೊದ ಬೆಳವಣಿಗೆ ಭರದಿಂದ ಸಾಗಿತು. ಸೈನ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಹಳ್ಳಿ ಪಟ್ಟಣಗಳ ನೈರ್ಮಲ್ಯ, ರಸ್ತೆಗಳ ನಿರ್ಮಾಣ ಮತ್ತು ಹಣಕಾಸಿನ ವ್ಯವಹಾರಗಳು ತ್ವರಿತಗತಿಯಿಂದ ನಡೆದು ದ್ವೀಪದ ಆರ್ಥಿಕ ಪ್ರಗತಿಗೆ ಕಾರಣವಾದವು. ೧೯೦೦ರಲ್ಲಿ ಜಾರಿಗೆ ತಂದ ಫೊರೆಕರ್ ಮಸೂದೆ (The Foraker Act) ಪ್ರಕಾರವಾಗಿ ಅಮೆರಿಕನ್ ಕಾಂಗ್ರೆಸ್ ಪೋರ್ಟೊ ರಿಕೊದಲ್ಲಿ ನಾಗರಿಕರ ಸರ್ಕಾರವನ್ನು ಸ್ಥಾಪಿಸಿತು. ಅಮೆರಿಕ ಹೊಸದಾಗಿ ವಶಪಡಿಸಿಕೊಂಡ ಪ್ರದೇಶಗಳಲ್ಲೆಲ್ಲ ಮೊಟ್ಟಮೊದಲು ಚುನಾಯಿತ ಪ್ರಜಾಪ್ರತಿನಿಧಿ ಸಭೆ ಸ್ಥಾಪಿತವಾಗಿದ್ದು ಈ ದ್ವೀಪದಲ್ಲಿ. ಫೊರೆಕರ್ ಮಸೂದೆ ಪೋರ್ಟೊ ರಿಕೊ ಮಾದರಿಯ ಬೆಳವಣಿಗೆಯನ್ನು ತಮ್ಮ ವಶದಲ್ಲಿರುವ ಎಲ್ಲ ಪ್ರದೇಶಗಳಲ್ಲಿ ಅನುಷ್ಠಾನಕ್ಕೆ ತರಲು ಅಮೆರಿಕ ಉದ್ದೇಶಿಸಿತು.

ಅಮೆರಿಕ ಹೊಸದಾಗಿ ವಶಪಡಿಸಿಕೊಂಡ ದ್ವೀಪಗಳಲ್ಲಿ ರಚನೆಗೊಂಡ ಸರ್ಕಾರಗಳು ಕಾಂಗ್ರೆಸ್ ಹಿಂದೆ ವಸಾಹತುಗಳಲ್ಲಿ (mainland territories) ಸ್ಥಾಪಿಸಿದ ಸರ್ಕಾರಗಳನ್ನು ಹೋಲುತ್ತಿದ್ದವು. ೧೯೦೦ರ ದಶಕದಲ್ಲಿ ಉಂಟಾದ ಕೆಲವು ಸಂದರ್ಭಗಳಲ್ಲಿ ಅಮೆರಿಕದ ಶ್ರೇಷ್ಠ ನ್ಯಾಯಾಲಯ (The US Supreme Court) ಈ ದ್ವೀಪಗಳ ಸ್ಥಾನಮಾನಗಳನ್ನು ನಿರ್ಧರಿಸಬೇಕಾಗಿ ಬಂತು. ಈ ನ್ಯಾಯಾಲಯದ ತೀರ್ಪು: 'ಈ ದ್ವೀಪಗಳು ಸಂಪೂರ್ಣವಾಗಿ ಕಾಂಗ್ರೆಸ್ ಅಧೀನವಾದವು' ಎಂಬುದು. ಆದ್ದರಿಂದ ದ್ವೀಪವಾಸಿಗಳು ಪೂರ್ಣಪ್ರಜೆಗಳಲ್ಲವಾದ್ದರಿಂದ ಅವರಿಗೆ ರಾಜ್ಯಾಂಗದತ್ತ ಹಕ್ಕುಗಳು ಅನ್ವಯಿಸುವುದಿಲ್ಲವೆಂದು ತೀರ್ಮಾನಿಸಲಾಯಿತು. ಹೀಗಾಗಿ ಪೋರ್ಟೊ ರಿಕೊದ ಪ್ರಜೆಗಳನ್ನು ೧೯೧೭ರವರೆಗೂ ಅಮೆರಿಕದ ಪ್ರಜೆಗಳೆಂದು ಪರಿಗಣಿಸಿರಲಿಲ್ಲ. ಫಿಲಿಪ್ಪೈನ್ಸ್ ದ್ವೀಪವಾಸಿಗಳು ಇಂದಿಗೂ ಅಮೆರಿಕನ್ ಪ್ರಜೆಗಳಲ್ಲ; ಅವರು ಅಮೆರಿಕನ್ ರಾಷ್ಟ್ರೀಯರಾಗಿ ಉಳಿದಿದ್ದಾರೆ.

೧೮೯೯–೧೯೦೨ರ ಅವಧಿಯಲ್ಲಿ ನಡೆದ ಫಿಲಿಪ್ಪೈನ್ಸ್ ಆಂದೋಳನ

ಕ್ಯೂಬಕ್ಕೆ ಸ್ವಾತಂತ್ರ್ಯ ಕೊಟ್ಟಂತೆ ಅಮೆರಿಕ ತಮಗೆ ಸ್ವಾತಂತ್ರ್ಯ ಕೊಡಲಿಲ್ಲ ಎಂದು ಫಿಲಿಪ್ಪೈನ್ಸ್ ಪ್ರಜೆಗಳು ಕೋಪಾವಿಷ್ಟರಾಗಿದ್ದರು. ಬಹಳ ಕಾಲ ಸ್ಪೇನ್‌ನೊಡನೆ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಾಯಿತು. ಸ್ಪೇನ್ ಸಾಮ್ರಾಜ್ಯ ಮುಳುಗಿದ ಮೇಲೆ ತಮಗೆ ಸ್ವಾತಂತ್ರ್ಯ ಲಭಿಸಬಹುದೆಂದು ಆಶಿಸಿದ ಫಿಲಿಪ್ಪೈನ್ಸ್ ಜನರ ತಲೆಯ ಮೇಲೆ ಸ್ಪೇನಿಗಿಂತ

ಬಲಿಷ್ಠವಾದ ಅಮೆರಿಕ ಬಂದು ಕುಳಿತುಬಿಟ್ಟಿತಲ್ಲ ಎಂದು ಹತಾಶರಾದರು. ಫಿಲಿಪ್ಪೈನ್ಸ್ ಜನ ಒಟ್ಟಾಗಿ ಎಮಿಲಿಯೋ ಅಗ್ವಿನಾಲ್ಡೊನ (Emilio Aguinaldo) ನಾಯಕತ್ವದಲ್ಲಿ ಹೋರಾಟ ನಡೆಸಿದರು. ಈ ಹೋರಾಟ ಕೆಲವು ಸಮಯ ಕ್ರೂರ ಕದನವಾಗಿ ಪರಿಣಮಿಸಿ ರಕ್ತ ಚೆಲ್ಲಾಡುತ್ತಿತ್ತು. ಕೊನೆಗೆ ಜನರಲ್ ಫನ್‌ಸ್ಟನ್ (General Funston) ಮತ್ತು ಅವನ ಸೈನಿಕರು ವೇಶ ಮರೆಸಿಕೊಂಡು ಅಗ್ವಿನಾಲ್ಡೊ ಶಿಬಿರದಲ್ಲಿ ಇತರರೊಡನೆ ಕೂಡಿಕೊಂಡು ಅವನನ್ನು ಸೆರೆ ಹಿಡಿದರು. ನಾಯಕನಿಲ್ಲದೆ ಹೋರಾಟ ಕ್ರಮೇಣ ನಿಂತುಹೋಯಿತು.

ಸ್ಪೇನ್‌ನೊಡನೆ ಅಮೆರಿಕ ನಡೆಸಿದ ಯುದ್ಧವನ್ನು ಅಗ್ವಿನಾಡೊ ನಾಯಕತ್ವದ ಆಂದೋಳನಕ್ಕೆ ಹೋಲಿಸಿದರೆ, ಸ್ಪೇನ್-ಅಮೆರಿಕ ಸಂಘರ್ಷಣೆಯನ್ನು 'ಯುದ್ಧ' ಎಂದು ಕರೆಯುವುದು ತಪ್ಪಾಗುತ್ತದೆ. ಅಗ್ವಿನಾಲ್ಡೊ ಆಂದೋಳನ ಬಹಳ ವ್ಯಾಪಕವಾಗಿ ಹಬ್ಬಿತ್ತು ಮತ್ತು ರೊಚ್ಚಿಗೆದ್ದ ಜನ ಜೀವದ ಹಂಗು ತೊರೆದು ಹೋರಾಡಿ ಸಾಯುತ್ತಿದ್ದರು. ಆದ್ದರಿಂದ ಈ ಆಂದೋಳನ ಅಮೆರಿಕನ್ನರಿಗೆ ಅತಿಶಯವಾದ ಕಷ್ಟ ನಷ್ಟ ಮತ್ತು ಸಾವು ನೋವುಗಳನ್ನುಂಟುಮಾಡಿತು. ಅಗ್ವಿನಾಲ್ಡೊ ಕೈಕೆಳಗೆ ಎಪ್ಪತ್ತು ಸಾವಿರ ಹೋರಾಟಗಾರರಿದ್ದರು. ಸ್ಪಾನಿಷರೊಂದಿಗೆ ನಡೆದ ಕದನದಂತೆ ಇದು ಚುಟುಕದಲ್ಲಿ ಮುಗಿಯಲಿಲ್ಲ. ಫಿಲಿಪ್ಪೈನ್ಸ್ ಆಂದೋಳನ ದೀರ್ಘಕಾಲ ನಡೆಯಿತು – ೧೮೯೯ರಿಂದ ೧೯೦೨ರವರೆಗೆ. ಆದರೆ ಇದರ ಅಂತರರಾಷ್ಟ್ರೀಯ ಪರಿಣಾಮಗಳು ಗೌಣವಾದವು. ಸ್ಪೇನ್‌ನ ಅಮೆರಿಕ ಸಾಮ್ರಾಜ್ಯ ಅವಸಾನಗೊಂಡಾಗ ಉಂಟಾದ ವ್ಯಾಪಕವಾದ ಬದಲಾವಣೆಗಳು ಅಗ್ವಿನಾಲ್ಡೊ ಆಂದೋಳನದ ಅವಸಾನದಿಂದ ಉಂಟಾಗಲಿಲ್ಲ.

ರಿಪಬ್ಲಿಕನ್ ಮತ್ತು ಡೆಮೊಕ್ರಾಟ್ ಪಕ್ಷಗಳೆರಡೂ ಫಿಲಿಪ್ಪೈನ್ಸ್‌ಗೆ ಸ್ವಾತಂತ್ರ್ಯ ಕೊಡಬೇಕೆನ್ನುವ ನಿಲುವನ್ನು ಬೆಂಬಲಿಸಿದವು. ಆದರೆ ಫಿಲಿಪ್ಪೈನ್ಸ್ ಜನರಿಗೆ ಎಷ್ಟು ಬೇಗ ಸ್ವಯಂ ಆಡಳಿತದ ಅನುಭವ ಮಾಡಿಸಿ ಸ್ವಾತಂತ್ರ್ಯಕ್ಕೆ ಅರ್ಹರನ್ನಾಗಿ ಮಾಡಬೇಕೆನ್ನುವುದರ ಬಗ್ಗೆ ಎರಡು ಪಕ್ಷಗಳಲ್ಲಿ ತೀವ್ರ ಭಿನ್ನಾಭಿಪ್ರಾಯಗಳು ವ್ಯಕ್ತಗೊಂಡವು. ಡೆಮೊಕಾಟರು ಅವರ ಸ್ವಾತಂತ್ರ್ಯಾಕಾಂಕ್ಷೆಯ ಬಗ್ಗೆ ಹೆಚ್ಚು ಸಹಾನುಭೂತಿ ತೋರಿದರು. ೧೯೦೦ರಲ್ಲಿ ಫಿಲಿಪ್ಪೈನ್ಸ್‌ನಲ್ಲಿ ನಾಗರಿಕ ಸರ್ಕಾರವನ್ನು ಸ್ಥಾಪಿಸುವ ಸಲುವಾಗಿ ಒಂದು ಸಮಿತಿಯನ್ನು ರಚಿಸಲಾಯಿತು. ಆ ಸಮಿತಿಗೆ ಅಧ್ಯಕ್ಷನಾಗಿದ್ದ ವಿಲಿಯಂ ಹಾವರ್ಡ್ ಟಾಫ್ಟ್ (William Howard Taft) ಕೆಲವು ಫಿಲಿಪ್ಪೈನ್ಸ್ ಸದಸ್ಯರ ಸಹಾಯದಿಂದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಕೆಲಸ ನಿರ್ವಹಿಸುತ್ತ ಬಂದನು. ೧೯೦೭ರಲ್ಲಿ ಫಿಲಿಪ್ಪೈನ್ಸ್ ಪ್ರಜಾಪ್ರತಿನಿಧಿ ಸಭೆ ಮೊಟ್ಟ ಮೊದಲ ಬಾರಿಗೆ ಸೇರಿತು. ಈ ಸಂದರ್ಭದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಶಾಲೆಗಳನ್ನು ತೆರೆದು, ಪಾಠ ಹೇಳಲು ಅಮೆರಿಕದಿಂದ ಅಧ್ಯಾಪಕರನ್ನು ಕರೆಸಿದರು. ೧೯೧೬ರ ಜೋನ್ಸ್ ಮಸೂದೆ (Jones Act) ಫಿಲಿಪ್ಪೈನ್ಸ್‌ರನ್ನು ಹೆಚ್ಚು

ಹೆಚ್ಚು ನ್ಯಾಯಾಂಗದಲ್ಲಿ ಭಾಗವಹಿಸಲು ಸಾಧ್ಯವಾಗುವಂತೆ ಪ್ರಜಾಪ್ರತಿನಿಧಿಸಭೆಯನ್ನು ವಿಸ್ತರಿಸಿ ಸೆನೆಟ್‌ನ್ನು ಸೇರಿಸಲಾಯಿತು. ೧೯೨೧ರಲ್ಲಿ ಲಿಯೊನಾರ್ಡೊ ಉಡ್ಸ್ (Leonardo Woods) ಗವರ್ನರ್ ಜನರಲ್ ಆಗಿ ನೇಮಕಗೊಂಡನು. ಇವನು ಫಿಲಿಪ್ಪೈನ್ಸ್ ನ್ಯಾಯವಿಧಾಯಕ ಸಭೆಯೊಂದಿಗೆ ವಿವಾದಕ್ಕೊಳಗಾದನು. ೧೯೨೮ರ ನಂತರ ಬಂದ ಗವರ್ನರ್‌ಗಳು ಸೌಹಾರ್ದತೆ ಮತ್ತು ಸಹಕಾರ ಬೆಳೆಸಲು ಪ್ರಯತ್ನಿಸಿದರು.

ಪನಾಮ ಕಾಲುವೆ

ಸ್ಪೇನ್-ಅಮೆರಿಕ ಯುದ್ಧ ನಡೆಯುತ್ತಿದ್ದಾಗ ಅಮೆರಿಕದ ಯುದ್ಧ ನೌಕೆ 'ಆರೆಗಾನ್' ಶಾಂತಸಾಗರದ ತೀರದಿಂದ ಹೊರಟು ದಕ್ಷಿಣ ಅಮೆರಿಕ ಖಂಡವನ್ನು ಬಳಸಿ ಕ್ಯೂಬವನ್ನು ತಲುಪಬೇಕಾದರೆ ಬಹಳ ಸಮಯ ಹಿಡಿಯುತ್ತಿತ್ತು. ಯುದ್ಧಕಾಲದ ತುರ್ತುಪರಿಸ್ಥಿತಿಯಲ್ಲಿ ಇದು ಯುದ್ಧದ ಸೋಲು ಗೆಲುವುಗಳನ್ನು ನಿರ್ಧರಿಸುವ ಮುಖ್ಯ ಕಾರಣವಾಗಿತ್ತು. ಈ ಸುತ್ತುಬಳಸಿನ ಸಮುದ್ರಯಾನದಿಂದ ಕಾಲ, ಹಣ ವ್ಯರ್ಥ ಮತ್ತು ಪ್ರಯಾಸಕರ ಹಾಗೂ ಅಪಾಯಕರ ಸಾಹಸವಾಗಿತ್ತು. ಆದ್ದರಿಂದ ಉತ್ತರ ಮತ್ತು ದಕ್ಷಿಣ ಅಮೆರಿಕ ಖಂಡಗಳು ಸಂಧಿಸುವಲ್ಲಿ ಸಮುದ್ರಯಾನಕ್ಕೆ ಅಡ್ಡಿಯುಂಟುಮಾಡುತ್ತಿದ್ದ ಭೂಶಿರ (Isthmus) ವನ್ನು ಕೊರೆದು ಕಾಲುವೆ ಮಾಡುವುದು ಅಗತ್ಯವಾಗಿತ್ತು. ಇದರ ನಿರ್ಮಾಣಕ್ಕಾಗಿ ಅಮೆರಿಕದ ಪ್ರಜೆಗಳು ಮತ್ತು ಸೈನ್ಯ ಹಾಗೂ ನೌಕಾಪಡೆಗಳು ಸರ್ಕಾರವನ್ನು ಒತ್ತಾಯಪಡಿಸಿದವು. ಈ ಕಾಲುವೆಯನ್ನು ಯಾರು ನಿರ್ಮಿಸಬೇಕು ಎನ್ನುವುದು ವಾದಗ್ರಸ್ತವಾಗಿತ್ತು. ಹಿಂದಿನ ಕ್ಲೇಟನ್-ಬುಲ್‌ವರ್ (Clayton-Bulwer) ಒಪ್ಪಂದದ ಪ್ರಕಾರ ಇಂಗ್ಲೆಂಡ್ ಆಗಲಿ ಅಥವಾ ಅಮೆರಿಕ ಆಗಲಿ ಕಾಲುವೆ ತೋಡಲು ಪನಾಮದ ಮೇಲೆ ಪ್ರತ್ಯೇಕ ನಿಯಂತ್ರಣ ಹೊಂದಿರಲಿಲ್ಲ. ೧೯೦೧ರಲ್ಲಿ ಯೂರೋಪಿನಲ್ಲಿ ಜರ್ಮನಿಯ ಪ್ರಾಬಲ್ಯ ಹೆಚ್ಚುತ್ತಿದ್ದುದರಿಂದ ಕ್ಲೇಟನ್-ಬುಲ್‌ವರ್ ಒಪ್ಪಂದವನ್ನು ರದ್ದುಗೊಳಿಸಲು ಇಂಗ್ಲೆಂಡ್ ಸಿದ್ಧವಾಗಿತ್ತು.

೧೮೭೯ರಲ್ಲಿ ಸೂಯೆಜ್ ಕಾಲುವೆ ನಿರ್ಮಾಣದಲ್ಲಿ ಭಾಗವಹಿಸಿದ್ದ ಫರ್ಡಿನಂಡ್ ಡಿ ಲೆಸ್ಸೆಪ್ಸ್ ಎಂಬ ಎಂಜಿನಿಯರ್ ಕೈಕೆಳಗಿನ ಕಂಪನಿ ಪನಾಮಾ ಕಾಲುವೆಯನ್ನು ತೋಡಲು ಪ್ರಾರಂಭಿಸಿತು. ಆದರೆ ಅನಿರೀಕ್ಷಿತವಾಗಿ ಎದುರಿಸಬೇಕಾಗಿ ಬಂದ ತಾಂತ್ರಿಕ ತೊಂದರೆಗಳಿಂದ ಮತ್ತು ಸೊಳ್ಳೆಗಳು ಹರಡುತ್ತಿದ್ದ ರೋಗಗಳ ದೆಸೆಯಿಂದ ಆ ಕಂಪನಿ ಕಾಲುವೆ ಕೆಲಸ ಮುಂದುವರಿಸಲಾರದೆ ಹೋಯಿತು. ೧೯೦೧ರಲ್ಲಿ ಅಮೆರಿಕ ಇಂಗ್ಲೆಂಡಿನೊಡನೆ ಮಾಡಿಕೊಂಡ ಹೇ-ಪಾನ್ಸ್‌ಫುಟ್ (Hay-Pauncefote) ಕರಾರು ಕ್ಲೇಟನ್-ಬುಲ್‌ವರ್ ಒಪ್ಪಂದದ ಷರತ್ತುಗಳಿಂದ ಅಮೆರಿಕನ್ನರನ್ನು ಬಿಡುಗಡೆ ಮಾಡಿತು. ೧೯೦೧ರ ಕರಾರು, ಕಾಲುವೆ ತೋಡುವ, ಅದರ ಆಡಳಿತವನ್ನು ನಿರ್ವಹಿಸುವ ಮತ್ತು ಕಾಲುವೆಯ ರಕ್ಷಣೆ ಈ ಎಲ್ಲ ಜವಾಬ್ದಾರಿಗಳನ್ನು ಅಮೆರಿಕಕ್ಕೆ ವಹಿಸಿಕೊಟ್ಟಿತು. ಕಾಲುವೆ ಎಲ್ಲ ದೇಶಗಳಿಗೂ ತಾರತಮ್ಯವಿಲ್ಲದೆ ತೆರೆದಿರಬೇಕು ಎಂದು ಕರಾರು ಸ್ಪಷ್ಟಪಡಿಸಿತು.

ಹೊಸ ಪನಾಮ ಕಾಲುವೆ ಕಂಪನಿಯ ಏಜೆಂಟನಾಗಿದ್ದ ಫಿಲಿಪ್ಪೆ ಬ್ಯೂನೋವರಿಲ್ಲ ಕಾಲುವೆಯನ್ನು ಅಮೆರಿಕಕ್ಕೆ ಮಾರಿಬಿಡಲು ಪ್ರಯತ್ನಿಸಿದನು. ಕಾಲುವೆ ತೋಡಲು ಹೋಗಿ ಅವನಿಗುಂಟಾದ ಅಪಾರ ನಷ್ಟವೇ ಇದಕ್ಕೆ ಕಾರಣ. ಇವನ ಪ್ರಯತ್ನಗಳಿಗೂ ಮುಂಚೆ ಕಾಂಗ್ರೆಸ್ ಕಾಲುವೆಯನ್ನು ನಿಕಾರಗುವ (Nicaragua) ಮಾರ್ಗವಾಗಿ ತೋಡಬೇಕೆಂದು ನಿರ್ಧರಿಸಿತ್ತು. ಆದರೆ ೧೯೦೨ರಲ್ಲಿ ಮಾರ್ಟಿನಿಕ್ (Martinique) ಊರಿನಲ್ಲಿ ಅಗ್ನಿಪರ್ವತ ಆಸ್ಫೋಟನೆಗೊಂಡು ೩೦೦೦೦ ಜನರು ಸತ್ತ ಸುದ್ದಿಯನ್ನು ಪನಾಮದವರು ತಮ್ಮ ಅನುಕೂಲಕ್ಕೆ ಉಪಯೋಗಿಸಿಕೊಂಡು ನಿಕಾರಗುವದಲ್ಲಿ ಕಾಲುವೆ ತೋಡುವುದು ಅಪಾಯ ಎಂದು ವಾದಿಸಿದರು. ತಮ್ಮ ವಾದವನ್ನು ಸಮರ್ಥಿಸಲು ಒಂದು ಅಂಚೆ ಚೀಟಿಯನ್ನು ಸಾಕ್ಷಿಯಾಗಿ ಬಳಸಿಕೊಂಡರು. ನಿಕಾರಗುವ ಅಂಚೆ ಇಲಾಖೆಯವರು ಅಗ್ನಿಪರ್ವತ ಆಸ್ಫೋಟವಾದ ರುದ್ರ ರಮಣೀಯ ದೃಶ್ಯವನ್ನು ಅಂಚೆ ಚೀಟಿಯ ಮೇಲೆ ಮುದ್ರಿಸಿದ್ದರು. ಈ ಒಂದು ಅಂಚೆ ಚೀಟಿ ಒಂದು ದೇಶದ ಚರಿತ್ರೆಯನ್ನೇ ಬದಲಾಯಿಸಿತು. ಸಂಯುಕ್ತ ಸಂಸ್ಥಾನಗಳ ಕಾಂಗ್ರೆಸ್ ನಿಕಾರಗುವದ ಮೂಲಕ ಕಾಲುವೆ ತೋಡುವುದನ್ನು ನಿರಾಕರಿಸಿ ಪನಾಮ ಮೂಲಕ ಕಾಲುವೆ ನಿರ್ಮಾಣ ಮಾಡಲು ನಿರ್ಧರಿಸಿತು. ಪನಾಮ ಕೊಲಂಬಿಯದ ಆಶ್ರಿತ ದೇಶವಾಗಿತ್ತು. ಆದ್ದರಿಂದ ಕೊಲಂಬಿಯ ಮತ್ತು ಸಂಯುಕ್ತ ಸಂಸ್ಥಾನಗಳು ಒಪ್ಪಂದ ಮಾಡಿಕೊಂಡು ಆದರಂತೆ ಪನಾಮ ಕಾಲುವೆ ಪ್ರದೇಶವನ್ನು ಒಂದು ನೂರು ವರ್ಷಗಳವರೆಗೆ ಅಮೆರಿಕಕ್ಕೆ ಗುತ್ತಿಗೆ ಕೊಡಲಾಯಿತು. ಹೀಗೆ ಗುತ್ತಿಗೆ ಕೊಟ್ಟದ್ದು ತಮ್ಮ ರಾಷ್ಟ್ರದ ಸ್ವಾಯತ್ತತೆಗೆ ಧಕ್ಕೆ ತಂದಿತೆಂದು ಕೊಲಂಬಿಯದ ನ್ಯಾಯವಿಧಾಯಕ ಸಭೆ ಒಪ್ಪಂದವನ್ನು ಅಂಗೀಕರಿಸಲಿಲ್ಲ. ಆಗ ಅಮೆರಿಕದ ಅಧ್ಯಕ್ಷನಾಗಿದ್ದ ಥಿಯೊಡೊರ್ ರೂಸ್‌ವೆಲ್ಟ್‌ನು ಕಾಲುವೆ ತೋಡುವುದು ತಡವಾಗುತ್ತಿರುವುದನ್ನು ಸಹಿಸಲಾರದೆ ಕೊಲಂಬಿಯದ ವರ್ತನೆ ನಾಗರಿಕತೆಯ ಮುನ್ನಡೆಯನ್ನು ತಡೆಯುವ ಮೂರ್ಖತನವೆಂದು ಖಂಡಿಸಿ ಹಾಗೆಯೇ ಕೊಲಂಬಿಯಾದವರನ್ನು ಕಡೆಗಣಿಸಿ ಕಾಲುವೆ ನಿರ್ಮಾಣ ಮಾಡುವ ಪರಿಸ್ಥಿತಿ ಬಂದಿದೆ ಎಂದು ಎಚ್ಚರಿಸಿದನು. ಈ ನಿರ್ಮಾಣ ರೂಸ್‌ವೆಲ್ಟ್‌ನ ರಾಜಕೀಯ ಗುರಿ ಸಾಧಿಸಲು ಅಗತ್ಯವಾಗಿತ್ತು.

ಸಂಯುಕ್ತ ಸಂಸ್ಥಾನಗಳು ತಮ್ಮನ್ನು ಬೆಂಬಲಿಸುವುದು ಖಂಡಿತವೆಂದು ನಂಬಿದ್ದ ಹೊಸ ಪನಾಮ ಕಾಲುವೆ ಕಂಪನಿ ಕೊಲಂಬಿಯದ ವಿರುದ್ಧ ದಂಗೆ ಏಳಲು ಸಿದ್ಧರಾಗಿ ಸೂಕ್ತ ಸಮಯಕ್ಕಾಗಿ ಕಾಯುತ್ತಿದ್ದರು. ಅಮೆರಿಕ ಯುದ್ಧ ನೌಕೆ 'ನ್ಯಾಶ್‌ವಿಲ್' ಅಧ್ಯಕ್ಷ ರೂಸ್‌ವೆಲ್ಟ್‌ನ ಆಜ್ಞೆಯ ಮೇರೆಗೆ ನವೆಂಬರ್ ೧೯೦೩ರಲ್ಲಿ ಪನಾಮ ತಲುಪಿದಾಗ ಅವರಿಗೆ ಆ ಅವಕಾಶ ಒದಗಿಬಂತು. ಅಮೆರಿಕನ್ ಸೈನಿಕರು ಪನಾಮ ರೈಲುಮಾರ್ಗಗಳನ್ನು ವಶಪಡಿಸಿಕೊಂಡರು. ಇದರಿಂದಾಗಿ ಕೊಲಂಬಿಯ ಸೈನಿಕರು ಪನಾಮ ಭೂಶಿರವನ್ನು ತಲುಪುವುದು ಸಾಧ್ಯವಾಗಲಿಲ್ಲ. ಹೊಸ ಪನಾಮ ಕಾಲುವೆ ಕಂಪನಿ ಸ್ಥಾಪಿಸಿದ ಹೊಸ ಸರ್ಕಾರವನ್ನು ಅಮೆರಿಕ ಅಂಗೀಕರಿಸಿತು. ಈ ಅಂಗೀಕಾರವನ್ನು ಪ್ರಪಂಚದಾದ್ಯಂತ

ವೃತ್ತಪತ್ರಿಕೆಗಳು ಖಂಡಿಸಿದವು. ದಕ್ಷಿಣ ಅಮೆರಿಕನ್ನರು ಇದು 'ಯಾಂಕಿ ಸಾಮ್ರಾಜ್ಯಶಾಹಿ'ಯ (Yankee Imperialism) ಸ್ಪಷ್ಟ ನಿದರ್ಶನ ಎಂದು ಟೀಕಿಸಿದರು.

ಈ ಎಲ್ಲ ಟೀಕೆ, ಖಂಡನೆಗಳಿಗೆ ಗಮನ ಕೊಡದ ಅಮೆರಿಕ, ಪನಾಮ ಹೊಸ ಸರ್ಕಾರದೊಡನೆ ಹೇ-ಬ್ಯೂನ್-ವರಿಲ್ಲ (Hay-banau-Varilla) ಒಪ್ಪಂದ ಮಾಡಿಕೊಂಡಿತು. ಇದರಂತೆ ಪನಾಮ ಭೂಶಿರದ ಹತ್ತು ಮೈಲಿ ಪ್ರದೇಶವನ್ನು ಅನಿರ್ದಿಷ್ಟ ಕಾಲದವರೆಗೆ ಅಮೆರಿಕಕ್ಕೆ ಗುತ್ತಿಗೆ ಕೊಡಲಾಯಿತು. ಅಮೆರಿಕ ಪನಾಮದ ಸ್ವಾತಂತ್ರ್ಯ ರಕ್ಷಿಸುವ ಭರವಸೆ ನೀಡಿತು. ಫೆಬ್ರುವರಿ ೧೯೦೪ರಲ್ಲಿ ಈ ಒಪ್ಪಂದವನ್ನು ಸಂಯುಕ್ತ ಸಂಸ್ಥಾನಗಳಲ್ಲಿ ಅಂಗೀಕರಿಸಲಾಯಿತು. ಅಧ್ಯಕ್ಷ ರೂಸ್‌ವೆಲ್ಟ್ ತನ್ನ ಪನಾಮ ನೀತಿಯನ್ನು ಮತ್ತು ಕೈಗೊಂಡ ಸೈನಿಕ ಕಾರ್ಯಾಚರಣೆಯನ್ನು 'ಈ ವಿಧಾನಗಳನ್ನು ಅನುಸರಿಸದೆ ಹೋಗಿದ್ದರೆ ಕಾಲುವೆ ನಿರ್ಮಾಣವಾಗುತ್ತಿರಲಿಲ್ಲ' ಎಂದು ಹೇಳಿ ಸಮರ್ಥಿಸಿಕೊಂಡನು. ೧೯೧೪ರ ಆಗಸ್ಟ್ ತಿಂಗಳಲ್ಲಿ ಪನಾಮ ಕಾಲುವೆಯನ್ನು ಅಧಿಕೃತವಾಗಿ ತೆರೆಯಲಾಯಿತು.

ಮೆಕಿನ್ಲೆ ಮರುಚುನಾವಣೆ

೧೯೦೦ರಲ್ಲಿ ನಡೆದ ರಿಪಬ್ಲಿಕನ್ ಪಕ್ಷದ ಸಮಾವೇಶ ಕೈಗಾರಿಕೋದ್ಯಮಿ ಸೆನೆಟರ್ ಮಾರ್ಕಸ್ ಹಾನನ ನಿರ್ದೇಶನದಲ್ಲಿ ಸರಾಗವಾಗಿ ನಡೆಯಿತು. ಮೆಕಿನ್ಲೆಯನ್ನು ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯನ್ನಾಗಿ ಪುನಃ ನಾಮಕರಣ ಮಾಡಿದರು. ರೂಸ್‌ವೆಲ್ಟ್‌ವನ್ನು ಕ್ಯೂಬದಲ್ಲಿ ಪಡೆದ ಖ್ಯಾತಿಯಿಂದ ಉಪಾಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮಕರಣ ಮಾಡಿದರು. ರೂಸ್‌ವೆಲ್ಟ್‌ನ ಸ್ನೇಹಿತರು ಮತ್ತು ಅಭಿಮಾನಿಗಳು ಉಪಾಧ್ಯಕ್ಷ ಸ್ಥಾನಕ್ಕೆ ಅರ್ಹನಾದವನು ಎಂದು ಖುಷಿಪಟ್ಟರು. ಅವನನ್ನು ಕಂಡರೆ ಆಗದವರು ಕೆಲಸವಿಲ್ಲದ ಸ್ಥಾನ (do-nothing-position)ಕ್ಕೆ ಅವನು ನಾಮಕರಣಗೊಂಡದ್ದು ಕೇಳಿ ಸಂತೋಷಪಟ್ಟರು! ರಿಪಬ್ಲಿಕನ್ ಪಕ್ಷ ಚಿನ್ನದ ಪರಿಮಾಣ ಮತ್ತು ಸುಂಕದ ಬಗ್ಗೆ ತನ್ನ ಹಿಂದಿನ ಧೋರಣೆಗಳನ್ನು ಬಿಡಲಿಲ್ಲ. ಫಿಲಿಪ್ಪೈನ್ಸ್ ವಿಷಯದಲ್ಲಿ ರಿಪಬ್ಲಿಕನ್ನರು ಅಗ್ವಿನಾಲ್ಡೊ ಆಂದೋಳನವನ್ನು ಹತ್ತಿಕ್ಕಿ ಆ ದ್ವೀಪವನ್ನು ವಶಪಡಿಸಿಕೊಳ್ಳಬೇಕೆಂದು ತೀರ್ಮಾನಿಸಿದರು.

ಡೆಮೊಕ್ರಾಟರು ಬ್ರೈಯನ್‌ನನ್ನು ಪುನಃ ಅಭ್ಯರ್ಥಿಯಾಗಿ ನಿಲ್ಲಿಸಿದರು. ಉಪಾಧ್ಯಕ್ಷ ಸ್ಥಾನಕ್ಕೆ ಅಡ್ಲೈ ಸ್ಟೀವನ್‌ಸನ್‌ನನ್ನು ನಾಮಕರಣ ಮಾಡಿದರು. ಬೆಳ್ಳಿ ನಾಣ್ಯದ ಅನಿರ್ಬಂಧ ಚಲಾವಣೆಯನ್ನು ಪ್ರತಿಪಾದಿಸಿದ್ದು ಇವನ ಚುನಾವಣೆಯ ವೇದಿಕೆಯ ಮುಖ್ಯ ವಿಷಯ: ರಿಪಬ್ಲಿಕನ್ನರ ಸಾಮ್ರಾಜ್ಯಶಾಹಿ ಧೋರಣೆ ಮತ್ತು ಫಿಲಿಪ್ಪೈನ್ಸ್ ದ್ವೀಪಗಳ ಆಕ್ರಮಣವನ್ನು ಖಂಡಿಸುವುದು ಹಾಗು ಡೆಮೊಕ್ರಾಟಿಕ್ ಪಕ್ಷ ತಮ್ಮ ಎದುರಾಳಿಗಳ ಕೆಲವು ನಿಯಂತ್ರಣ ವಿಧಾನಗಳನ್ನು ರದ್ದುಗೊಳಿಸಬೇಕೆಂದು ಕರೆಕೊಟ್ಟರು. ಈ ವಿಧಾನಗಳ ಗುರಿ ಜನರನ್ನು ಮತ್ತು ಆರ್ಥಿಕ ವ್ಯವಸ್ಥೆಯನ್ನು ರಿಪಬ್ಲಿಕನ್ನರ ಹತೋಟಿಯಲ್ಲಿಡುವುದು ಎಂದು ದೂರಿದರು.

ಡೆಮೊಕ್ರಾಟರು ರದ್ದುಗೊಳಿಸಲು ಒತ್ತಾಯ ಮಾಡಿದ ಅಂಶಗಳು: ಕಾರ್ಮಿಕ ನಾಯಕರನ್ನು 'ಕಪ್ಪು ಪಟ್ಟಿಯಲ್ಲಿ' ಸೇರಿಸಿ ಅವರ ಮೇಲೆ ಕಣ್ಣಿಟ್ಟು ಕಿರುಕುಳ ಕೊಡುವುದು, ಕಾರ್ಮಿಕರ ಚಟುವಟಿಕೆಗಳ ಮೇಲೆ ಪ್ರತಿಬಂಧಕಾಜ್ಞೆ ಮತ್ತು ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರಗಳಲ್ಲಿ ಏಕಸ್ವಾಮ್ಯತೆ. ದೇಶದಲ್ಲಿ ಸುಭಿಕ್ಷ ಮರಳಿತ್ತು. ರಿಪಬ್ಲಿಕನ್ ಪಕ್ಷ ಅಧಿಕ ಮತ ಗಳಿಸಿ ಜಯಪ್ರದವಾಗಿತ್ತು. ೧೯೦೧ರ ಸೆಪ್ಟೆಂಬರ್‌ನಲ್ಲಿ ಮೆಕಿನ್ಲೆ ಎರಡನೆಯ ಬಾರಿಗೆ ಅಧ್ಯಕ್ಷನಾದನು; ಥಿಯೊಡೊರ್ ರೂಸ್‌ವೆಲ್ಟ್ ಉಪಾಧ್ಯಕ್ಷನಾಗಿ ಚುನಾಯಿತನಾದನು. ಆ ವರ್ಷದ ಸೆಪ್ಟೆಂಬರ್ ೬ನೆಯ ತಾರೀಖು ಅಮೆರಿಕದ ಇತಿಹಾಸದ ದುರ್ದಿನಗಳಲ್ಲಿ ಒಂದಾಗಿದೆ. ಅಂದು ಬಫಾಲೊ (Buffalo) ನಗರದಲ್ಲಿ ನಡೆದ 'ವಿಶಾಲ ಅಮೆರಿಕ ಪ್ರದರ್ಶನ' (Pan-American Exposition)ದ ಸ್ವಾಗತ ಸಮಾರಂಭಕ್ಕೆ ಅಧ್ಯಕ್ಷ ಮೆಕಿನ್ಲೆ ಹೋಗಿದ್ದಾಗ ಅಲ್ಲಿ ಅವನ ಮೃತ್ಯು ಕಾದಿತ್ತು. ಅರಾಜಕತೆಯ (anarchy) ಅಂಧಾಭಿಮಾನಿಯೊಬ್ಬ ಮೆಕಿನ್ಲೆಯ ಸಮೀಪ ಹೋಗಿ ತನ್ನ ಕೈಗೆ ಸುತ್ತಿಕೊಂಡಿದ್ದ ಬಟ್ಟೆಯೊಳಗೆ ಹುದುಗಿಸಿಕೊಂಡಿದ್ದ ಪಿಸ್ತೂಲಿನಿಂದ ಗುಂಡು ಹಾರಿಸಿದನು. ಮರಣಾಂತಕ ವಾಗಿ ಗಾಯಗೊಂಡ ಮೆಕಿನ್ಲೆ ಆರು ದಿನಗಳ ನಂತರ ಅಸು ನೀಗಿದನು. ಆಗ ಉಪಾಧ್ಯಕ್ಷನಾಗಿದ್ದ ಥಿಯೊಡೊರ್ ರೂಸ್‌ವೆಲ್ಟ್ ಅಧ್ಯಕ್ಷ ಪದವಿಗೇರಿದನು. ಇವನು ಅಮೆರಿಕದ ೨೬ನೆಯ ಅಧ್ಯಕ್ಷ. ಫೇರ್‌ಬ್ಯಾಂಕ್ಸ್ (Chas W. Fairbanks) ಉಪಾಧ್ಯಕ್ಷನಾಗಿ ನೇಮಕಗೊಂಡನು.

ಥಿಯೊಡೊರ್ ರೂಸ್‌ವೆಲ್ಟ್‌ನ ವ್ಯಕ್ತಿತ್ವ

ರೂಸ್‌ವೆಲ್ಟ್‌ನದು ವರ್ಣರಂಜಿತ ವ್ಯಕ್ತಿತ್ವ. ಮೆಕಿನ್ಲೆಯ ಚುನಾವಣೆಯ ಮೇಲ್ವಿಚಾರಕನಾಗಿದ್ದ ಮಾರ್ಕ್ ಹಾನ ರೂಸ್‌ವೆಲ್ಟ್ ಅಧ್ಯಕ್ಷ ಸ್ಥಾನಕ್ಕೆ ಏರಿದ್ದು ಸಹಿಸಲಾರದೆ 'ಆ ಅನಿಷ್ಟ ದನ ಕಾಯುವ ಹುಡುಗ ('that damned cowboy') ಅಮೆರಿಕದ ಅಧ್ಯಕ್ಷನಾಗಿಬಿಟ್ಟನಲ್ಲ!' ಎಂದು ಉದ್ಗಾರ ಹೊರಡಿಸಿದನಂತೆ. ರೂಸ್‌ವೆಲ್ಟ್‌ಗೆ ಇನ್ನೂ ೪೩ ವರ್ಷಗಳೂ ತುಂಬಿರಲಿಲ್ಲ. ಅವನು ಅಮೆರಿಕದ ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ ಅತ್ಯಂತ ಕಿರಿಯ ವಯಸ್ಸಿನವನಾಗಿದ್ದನು. ರೂಸ್‌ವೆಲ್ಟ್ ನ್ಯೂಯಾರ್ಕಿನ ಶ್ರೀಮಂತ ಹಾಗೂ ಪ್ರತಿಷ್ಠಿತ ಕುಟುಂಬಕ್ಕೆ ಸೇರಿದವನು. ವ್ಯಾಪಾರಿಯ ಮಗನಾದ ಈತ ಸುಖ ಸಂತೋಷ ಮತ್ತು ಸುಸಂಸ್ಕೃತ ವಾತಾವರಣದಲ್ಲಿ ಬೆಳೆದ. ಚಿಕ್ಕಂದಿನಲ್ಲಿಯೇ ಯೂರೋಪಿಗೆ ಭೇಟಿ ಕೊಟ್ಟಿದ್ದ; ಜರ್ಮನ್ ಭಾಷೆಯಲ್ಲಿ ನಿರರ್ಗಳವಾಗಿ ಮಾತಾಡಬಲ್ಲವನಾಗಿದ್ದ. ೧೮೮೦ರಲ್ಲೇ ಹಾರ್ವರ್ಡ್ (Harvard) ವಿದ್ಯಾಭ್ಯಾಸವನ್ನು ಮುಗಿಸಿದ್ದ. ಬಾಲ್ಯದಲ್ಲಿ ಸದಾ ಕಾಯಿಲೆ – ಗೂರಲು ರೋಗದ ಸಮದೃಷ್ಟಿಯ (squint eye) ಮಗುವಾಗಿದ್ದ. ಆದರೆ ದೃಢ ಮನಸ್ಸಿನಿಂದ ಅಂಗಸಾಧನೆ ಮತ್ತು ಬಿಡುವಿಲ್ಲದ ಅಧ್ಯಯನಗಳಿಂದ ಮೈ ಮನಸ್ಸುಗಳನ್ನು ಬೆಳೆಸಿಕೊಂಡು ಶಕ್ತಿವಂತನಾದ ವ್ಯಕ್ತಿಯಾಗಿ ಮಾರ್ಪಾಡಾಗಿದ್ದನು. ಶ್ರಮ ಜೀವನ ಮತ್ತು ಸಾಹಸ ಇವನ ಜೀವನಪರ್ಯಂತ ಆಸಕ್ತಿಗಳಾಗಿದ್ದವು.

ಎಲ್ಲ ವಿಷಯಗಳ ಮೇಲೆ ತನ್ನ ಸ್ವಂತ ಅಭಿಪ್ರಾಯಗಳನ್ನು ನಿರ್ದಾಕ್ಷಿಣ್ಯವಾಗಿ ಹೇಳಬಲ್ಲವನಾಗಿದ್ದನು.

ಹಾರ್ವರ್ಡ್ ವಿದ್ಯಾಭ್ಯಾಸ ಮುಗಿಸಿದ ಮೇಲೆ ರೂಸ್‌ವೆಲ್ಟ್ ಸ್ವಲ್ಪ ಕಾಲ ನ್ಯಾಯಶಾಸ್ತ್ರವನ್ನು ಅಭ್ಯಾಸ ಮಾಡುವುದರಲ್ಲಿ ಕಳೆದನು. ಪದವೀಧರನಾದ ಎರಡು ವರ್ಷಗಳ ಒಳಗೆ ನ್ಯೂಯಾರ್ಕಿನ್ ನ್ಯಾಯವಿಧಾಯಕ ಸಭೆಯ ಚುನಾವಣೆಯಲ್ಲಿ ಗೆದ್ದನು. ಅದೇ ಸಮಯದಲ್ಲಿ '೧೮೧೨ರ ನೌಕಾಯುದ್ಧ' (The Naval War of 1812) ಎನ್ನುವ ಕೃತಿಯನ್ನು ಪ್ರಕಟಿಸಿದನು. ನಂತರ ಐತಿಹಾಸಿಕ ಲೇಖನಗಳು, ಜೀವನ ಚರಿತ್ರೆ ಮತ್ತು ಇತರ ಬರಹಗಳನ್ನು ಪ್ರಕಟಿಸಿದನು. ಅವನ ಮೊದಲನೆಯ ಹೆಂಡತಿಯ ಅಕಾಲ ಮರಣದ ನಂತರ ಅವನು ಅಮೆರಿಕದ ಪಶ್ಚಿಮ ಪ್ರಾಂತಕ್ಕೆ ಹೋಗಿ ಡಕೋಟದ ಗಡಿನಾಡಿನಲ್ಲಿ ತುರುಮಂದೆಯನ್ನು ಬೆಳೆಸಿ ನಂತರ ಮಾರಾಟ ಮಾಡುವ ವೃತ್ತಿಯನ್ನು ಕೈಗೊಂಡನು. ಈ ಕಾರಬಾರು ನಡೆಸಿದ್ದು ಸ್ವಲ್ಪ ಕಾಲ ಮಾತ್ರ. ನಂತರ ನ್ಯೂಯಾರ್ಕಿಗೆ ವಾಪಸ್ಸಾದನು. ದನಕರುಗಳನ್ನು ಬೆಳೆಸುವ ಕೆಲಸವನ್ನು ಅವನು ಬಿಟ್ಟರೂ 'ದನಗಾಹಿ ಪ್ರವೃತ್ತಿ' (cow-boy nature) ಅವನನ್ನು ಬಿಡಲಿಲ್ಲ. ಆದರೂ ನ್ಯೂಯಾರ್ಕಿನ ನಗರಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದನು, ಇವನು ಕೈಗೊಂಡ ವೃತ್ತಿಗಳು – ಸಾರ್ವಜನಿಕ ಸೇವಾ ಮುಖ್ಯಾಧಿಕಾರಿ, ನ್ಯೂಯಾರ್ಕ್ ನಗರದ ಪೊಲೀಸ್ ಮುಖ್ಯಾಧಿಕಾರಿ, ನೌಕಾದಳದ ಸಚಿವ, 'ಒರಟು ಸವಾರರ' (rough riders) ಸೇನಾಧಿಕಾರಿ ಮತ್ತು ನ್ಯೂಯಾರ್ಕ್ ಸಂಸ್ಥಾನದ ಗವರ್ನರ್ – ಇವು ಇವನ ಸಂಕೀರ್ಣ ವ್ಯಕ್ತಿತ್ವದ ಸಂಕೇತಗಳಾಗಿವೆ.

'ಟೆಡ್ಡಿ' (Teddy) ರೂಸ್‌ವೆಲ್ಟ್‌ನನ್ನು 'ಅಥೆಂಟಿಕ್ ಅಮೆರಿಕನ್' – ಯಥಾರ್ಥ ಅಮೆರಿಕನ್ – ಎಂದು ಪರಿಗಣಿಸಲಾಗಿತ್ತು. ಅವನು ಹಾಕಿಕೊಳ್ಳುತ್ತಿದ್ದ ಹೊಳೆಯುತ್ತಿದ್ದ ಕನ್ನಡಕ, ಬಿಳಿಯ ಹಲ್ಲಿನ ಸಾಲು ಮತ್ತು ಪುಟಿಯುವ ಉತ್ಸಾಹ ನೋಡಿದವರ ಮನಸ್ಸಿನಲ್ಲಿ ನಿಲ್ಲುವಂತಿದ್ದ ಲಕ್ಷಣಗಳು. ಅವನ ಲೋಕವಿಖ್ಯಾತ ಉದ್ಗಾರ – 'ಮಾತು ಮೆದುವಾಗಿರಲಿ, ದೊಡ್ಡ ದೊಣ್ಣೆ ಕೈಯಲ್ಲಿರಲಿ' (Speak softly and carry a big stick) – ಅವನ ಮನೋಭಾವವನ್ನು ಅಂದರೆ ಬಲಪ್ರಯೋಗದಲ್ಲಿ ಅವನಿಗಿದ್ದ ನಂಬಿಕೆಯನ್ನು ಸ್ಪಷ್ಟಪಡಿಸುತ್ತದೆ. ತನ್ನ ಅಂತರರಾಷ್ಟ್ರೀಯ ಧೋರಣೆಯನ್ನು ಪ್ರತಿಪಾದಿಸುತ್ತ ಅವನು ಹೇಳಿದ ಮಾತುಗಳು ಈ ನಂಬಿಕೆಯನ್ನು ಮತ್ತಷ್ಟು ಬಲಪಡಿಸುತ್ತದೆ – (I am assured that I shall be able eventually to carry out my will by force) – 'ನನ್ನ ಸಂಕಲ್ಪವನ್ನು ನಾನು ಅಂತಿಮವಾಗಿ ಬಲಪ್ರಯೋಗದಿಂದ ಸಾಧಿಸಬಲ್ಲೆ ಎನ್ನುವ ಭರವಸೆ ನನಗಿದೆ'.

❑

ಅಧ್ಯಾಯ - ೧೪

ಪ್ರಗತಿಪರ ಕಾಲ

ಥಿಯೊಡೊರ್ ರೂಸ್‌ವೆಲ್ಟ್‌ನ ಸಾಧನೆಗಳು

ಅಮೆರಿಕದ ಅಧ್ಯಕ್ಷತೆ ವಹಿಸಿಕೊಂಡ ಮಾರ್ಕ್ ಹಾನನ ಮಾತುಗಳಲ್ಲಿ ಹೇಳುವುದಾದರೆ, 'ಈ ಅನಿಷ್ಟ ದನ ಕಾಯುವ ಹುಡುಗ' ತನ್ನ ಸಂಪ್ರದಾಯಸ್ಥ ಪಕ್ಷವನ್ನು ಸಂಪ್ರದಾಯಕ್ಕೆ ಧಕ್ಕೆಯಾಗದಂತೆ ಜಾಣತನ ಮತ್ತು ಸಂಯಮದಿಂದ ನಿರ್ವಹಿಸುವುದಾಗಿ ಭರವಸೆ ನೀಡಿದರೂ, ತಾನು ಯಾವ ಯಾವ ಬದಲಾವಣೆಗಳನ್ನು ಮಾಡಲಿಚ್ಛಿಸುತ್ತೇನೆ ಎನ್ನುವುದನ್ನು ಸ್ಪಷ್ಟಪಡಿಸಿದನು. ತಾನು ಮಾಡಲಿರುವ ಮೊದಲ ಕಾರ್ಯವೆಂದರೆ ದೇಶದ ವಿವಾದಗ್ರಸ್ತ ಸಮಸ್ಯೆಗಳನ್ನು ನಿವಾರಿಸಲು ಪಣ ತೊಟ್ಟಿರುವುದಾಗಿ ಹೇಳಿಕೆ ನೀಡಿ, ಅಧ್ಯಕ್ಷನಾಗಿ ತಾನು ಶಕ್ತಿಯುತವಾದ ನಾಯಕತ್ವವನ್ನು ಪಾಲಿಸಿವುದಾಗಿ ಭರವಸೆ ನೀಡಿದನು. ನ್ಯಾಯಾಂಗ ಮತ್ತು ಶಾಸಕಾಂಗಗಳ ಪಾತ್ರಗಳ ಬಗ್ಗೆ ಅವನು ಹೆಚ್ಚಿಗೆ ಆಸಕ್ತಿ ತೋರಲಿಲ್ಲ. ಹಿಂದಿನ ಅಧ್ಯಕ್ಷರು ಪ್ರಯತ್ನಿಸಿ ವಿಫಲರಾದ ಸಮಸ್ಯೆ - ಏಕಸ್ವಾಮ್ಯತೆಯನ್ನು ಹತ್ತಿಕ್ಕುವುದು ಮತ್ತು ವ್ಯಾಪಾರ ವ್ಯವಹಾರಗಳನ್ನು ನಿಯಂತ್ರಿಸುವುದು - ಇದನ್ನು ರೂಸ್‌ವೆಲ್ಟ್‌ನು ಫೆಡರಲ್ ಸರ್ಕಾರದ ಅಧಿಕಾರ ಬಲದಿಂದ ಬಗೆಹರಿಸಿದನು. ಆರ್ಥಿಕ ತತ್ವಗಳ ಅರಿವಿಗಿಂತ ಅವನಲ್ಲಿ ರಾಜಕೀಯ ನಾಯಕತ್ವ ಪ್ರಧಾನವಾಗಿತ್ತು.

ಬೃಹತ್ ಉದ್ದಿಮೆಗಳ ದುರಾಚಾರಗಳನ್ನು ಸರಿಪಡಿಸಲು ರೂಸ್‌ವೆಲ್ಟ್‌ನಿಗೆ ಅನೇಕ ಸಂಘ ಸಂಸ್ಥೆಗಳ ಬೆಂಬಲ ದೊರೆಯಿತು. ಅವರಲ್ಲಿ ಮೊದಲಿಗರು ಬುದ್ಧಿಜೀವಿಗಳು. ಥೋರ್‌ಸ್ಟೀನ್ ವೆಬ್ಲನ್ (Thorstine Veblen) ಕೈಗಾರಿಕೋದ್ಯಮಿಗಳ 'ದುಡಿಯದೆ ಸಂಗ್ರಹಿಸಿದ ಸಂಪತ್ತನ್ನು' (predatory wealth) ವಿರೋಧಿಸಿದ್ದನ್ನು ರೂಸ್‌ವೆಲ್ಟ್ ಒಪ್ಪಿದನು. ಮಾನವ ತನ್ನ ವಾತಾವರಣವನ್ನು ರೂಪಿಸುವುದರಲ್ಲಿ ಬುದ್ಧಿವಂತಿಕೆಯಿಂದ ಯೋಜನೆ ತಯಾರಿಸಿ ಅದನ್ನು ಕಾರ್ಯಗತಗೊಳಿಸಬೇಕೆಂಬ ಜಾನ್ ಡ್ಯೂಯಿಯ (ತತ್ವಜ್ಞಾನಿ ಮತ್ತು ಶಿಕ್ಷಣತಜ್ಞ) ತತ್ವ ರೂಸ್‌ವೆಲ್ಟ್‌ನಿಗೆ ಹಿಡಿಸಿತು. ಈ ಬುದ್ಧಿಜೀವಿಗಳು ರಾಜಕೀಯದಲ್ಲಿ ಪ್ರಗತಿಶೀಲ ಚಿಂತನೆಗೆ (progressivism) ತಾತ್ವಿಕ ತಳಹದಿಯನ್ನೊದಗಿಸಿದರು. ಇವನ ಇನ್ನೊಂದು ರೀತಿಯ ಬೆಂಬಲಿಗರಿಗೆ 'ಕಸ ಕೆದರುವವರು' (muck rakers) ಎಂದು ಹೆಸರು. ಇವರು ಪತ್ರಿಕಾಕರ್ತರು. ವ್ಯಾಪಾರ ಮತ್ತು ವಾಣಿಜ್ಯ ಪ್ರಪಂಚದ ದುಷ್ಕೃತ್ಯಗಳನ್ನು ಬಯಲಿಗೆಳೆದು ಪತ್ರಿಕೆಗಳ ವರದಿ ಅಥವಾ ಲೇಖನಗಳ

ಮೂಲಕ ಸಾರ್ವಜನಿಕರಿಗೆ ಬಹಿರಂಗಪಡಿಸುತ್ತಿದ್ದರು. ಈ ಪತ್ರಿಕಾಕರ್ತರ ನಾಯಕರಲ್ಲಿ ಒಬ್ಬನಾದ ಐಡ ಟಾರ್‌ಬೆಲ್ (Ida Tarbell) ಎಂಬುವನು ಜಾನ್ ಡಿ. ರಾಕ್‌ಫೆಲರ್ (John D. Rockefeller) ತನ್ನ ಸ್ಟಾಂಡರ್ಡ್ ಆಯಿಲ್ ಕಂಪನಿಯನ್ನು ಬೆಳೆಸಲು ಮಾಡಿದ ಭ್ರಷ್ಟಾಚಾರಗಳನ್ನು ಬಯಲಿಗೆಳೆದನು. ಕಸ ಕೆದರುವವರಲ್ಲಿ ಅತಿರಥನೆನಿಸಿ ಕೊಂಡಿದ್ದ ಲಿಂಕನ್ ಸ್ಟೆಫೆನ್ಸ್ (Lincoln Steffens) ರಾಜಕಾರಣಿಗಳ ಭ್ರಷ್ಟಾಚಾರಕ್ಕೆ ರಾಜಕೀಯದ ಜೊತೆಗೆ ಅವರು ಸ್ವಂತ ಉದ್ದಿಮೆ ಅಥವಾ ವ್ಯಾಪಾರ ಮಾಡುವುದು ಕಾರಣವೆಂದು ತಿಳಿಸಿ, ನಗರಗಳ ರಾಜಕೀಯವನ್ನು ಕಲುಷಿತಗೊಳಿಸಿದ 'ಮೆಷಿನ್'ಗಳ ಸೂತ್ರಧಾರರು ಯಾರು ಎನ್ನುವುದನ್ನು ಬಹಿರಂಗ ಪಡಿಸಿದನು. ಸಮಾಜ ಸುಧಾರಣೆಯನ್ನು ತನ್ನ ಜೀವಿತದ ಗುರಿಯಾಗಿಸಿಕೊಂಡಿದ್ದ ಕಾದಂಬರಿಕಾರ ಅಪ್‌ಟನ್ ಸಿಂಕ್ಲೇರ್ (Upton Sinclair) 'ಕಾಡು' (The Jungle) ಎನ್ನುವ ಕೃತಿಯಲ್ಲಿ ಕಸಾಯಿಖಾನೆಗಳಲ್ಲಿ ಮತ್ತು ಪ್ರಾಣಿಮಾಂಸವನ್ನು ಹಸುಗೆ ಮಾಡಿ ಪೊಟ್ಟಣಕಟ್ಟಿ (meat packing) ಬೇರೆ ಪ್ರಾಂತಗಳಿಗೆ ಕಳುಹಿಸುವ ಕಾರ್ಖಾನೆಗಳ ಹೇಳಲಾಗದ ಗಲೀಜು ಮತ್ತು ಕಾಯಿಲೆಯಿಂದ ಸತ್ತ ಪ್ರಾಣಿಗಳ ಮಾಂಸವನ್ನು ಮೋಸದಿಂದ ಮಾರಾಟ ಮಾಡುವುದು ಮುಂತಾದ ಅನಾಚಾರ ಗಳನ್ನು ಬೆಳಕಿಗೆ ತಂದನು.

ಕಾರ್ಮಿಕರ ಒಕ್ಕೂಟಗಳು ಮತ್ತು ಸಮಾಜವಾದಿ ನಾಯಕರು ಅತಿಕ್ರಮಣ ಧೋರಣೆ ಯನ್ನು ತಳೆದು ರಾಜಕೀಯದಲ್ಲಿ ಪ್ರಬಲ ಪಾತ್ರ ವಹಿಸಿದರು. ಅಲ್ಲದೆ ಶೋಷಣೆಯ ವಿರುದ್ಧ ಪ್ರತಿಭಟನೆ ಮಾಡುವಂತೆ ಕಾರ್ಮಿಕರನ್ನು ಹುರಿದುಂಬಿಸಿದರು. ಯೂಜೀನ್ ಡೆಬ್ಸ್ (Eugene Debs)ನ ನಾಯಕತ್ವದಲ್ಲಿ ಸಮಾಜವಾದಿ ಪಕ್ಷ ಸಾಕಷ್ಟು ಪ್ರಾಬಲ್ಯ ಗಳಿಸಿತು. ಅಮೆರಿಕನ್ ಕಾರ್ಮಿಕರ ಫೆಡರೇಷನ್ (American Federation of Labor) ಕಡೆಗಣಿಸಿದ 'ಕಸುಬು ಬಾರದ ಕೆಲಸಗಾರರು' (unskilled workers) ಬಿಗ್ ಬಿಲ್ ಹೇವುಡ್ಡನ ನಾಯಕತ್ವದಲ್ಲಿ ಕೈಗಾರಿಕಾ ಕಾರ್ಮಿಕರ ವಿಶ್ವ ಕಾರ್ಮಿಕ ಸಂಘ (Industrial Workers of the World)ವನ್ನು ಸೇರಿಕೊಂಡರು. ಈ ಸಂಘ ದೊಂಬಿ ಎಬ್ಬಿಸುವ, ಜಗಳವಾಡುವ ಮತ್ತು ಅಶಿಸ್ತಿನ ಜನರಿಂದ ಕೂಡಿದ್ದು; ಗಣಿ ಕೆಲಸಗಾರರು, ನಾಟಾ ಕಡಿಯುವವರು ಮತ್ತು ರೈತಾಪಿ ಕೆಲಸಗಾರರೊಡನೆ ಸೇರಿ ಆಂದೋಳನ ನಡೆಸುತ್ತಿ ದ್ದರು. ಅಮೆರಿಕದ ಪಶ್ಚಿಮ ಪ್ರಾಂತಗಳಲ್ಲಿ ಇವರು ಹೆಚ್ಚು ಪ್ರಭಾವ ಹೊಂದಿದ್ದರು. ಈ ಸಂಘದವರು ಕಾರ್ಮಿಕ ವರ್ಗ ಹೆಚ್ಚಿನ ಅನುಕೂಲತೆಗಳನ್ನು ಪಡೆದು ಜೀವನಮಟ್ಟವನ್ನು ಉತ್ತಮಪಡಿಸಿಕೊಳ್ಳಲು ಹಿಂಸಾಕೃತ್ಯಗಳನ್ನು ಕೈಗೊಂಡು ತೀವ್ರಗಾಮಿ ಧೋರಣೆಯನ್ನು ಅನುಸರಿಸಬೇಕೆಂದು ಪ್ರಚಾರ ಮಾಡಿದರು.

೧೯೦೨ರಲ್ಲಿ ಪೆನ್ಸಿಲ್‌ವೇನಿಯಾದಲ್ಲಿ ನಡೆದ ಆ್ಯಂತ್ರಸೈಟ್ (Anthracite) ಕಲ್ಲಿದ್ದಲು ಗಣಿ ಕೆಲಸಗಾರರ ಮುಷ್ಕರದ ಸಮಯದಲ್ಲಿ ರೂಸ್‌ವೆಲ್ಟ್‌ನು ಅಧ್ಯಕ್ಷನ ಅಧಿಕಾರದಿಂದ ಇದನ್ನೆಲ್ಲ ನಿಭಾಯಿಸಬಲ್ಲೆ ಎನ್ನುವ ಭರವಸೆಯಿಂದ ತನ್ನ ದಕ್ಷತೆ ಮತ್ತು ಬಲಪ್ರಯೋಗ

ಮಾಡುವ ಸಾಧ್ಯತೆಯನ್ನು ಪ್ರದರ್ಶಿಸಿ ಪರಿಸ್ಥಿತಿ ಹತೋಟಿಗೆ ಬರುವಂತೆ ಮಾಡಿದನು. ಗಣಿ ಕಾರ್ಮಿಕರು ಮತ್ತು ಮಾಲೀಕರ ನಡುವೆ ರೂಸ್‌ವೆಲ್ಟ್ ಏರ್ಪಡಿಸಿದ ಒಪ್ಪಂದ ಎರಡು ಕಡೆಯವರಿಗೂ ಅನ್ಯಾಯವಾಗದಂತೆ ರಚನೆಗೊಂಡಿತ್ತು. ಕಾರ್ಮಿಕರ ಮತ್ತು ಬಂಡವಾಳಗಾರರ ನಡುವಣ ಸಂಘರ್ಷಣೆಯಲ್ಲಿ ಅಧ್ಯಕ್ಷ ಯಾರ ಪಕ್ಷವನ್ನೂ ವಹಿಸದೆ ನ್ಯಾಯಬದ್ಧವಾಗಿ ಒಪ್ಪಂದ ಮಾಡಿಸಿದ್ದರಿಂದ ಇದನ್ನು 'ಪ್ರಾಮಾಣಿಕ ವ್ಯವಹಾರ' ಎಂದು ಪರಿಗಣಿಸಲಾಯಿತು.

ಮುಷ್ಕರಗಳಿಗೆ ಕಾರಣ ಆಗಿನ ಪರಿಸ್ಥಿತಿಗಳಿಗೆ ತಕ್ಕುದಾಗಿದ್ದವು. ಗಣಿ ಕೆಲಸಗಾರರ ಒಕ್ಕೂಟ ಕೆಲಸಗಾರರು ಶೋಷಣೆಗೆ ಒಳಗಾಗದಂತೆ ರಕ್ಷಿಸಲು ವ್ಯವಸ್ಥಿತವಾದ ಮುಂದಾಳುತನವನ್ನು ಬೆಳೆಸಲು ಪ್ರಯತ್ನಿಸಿತು. ಗಣಿ ಕೆಲಸಗಾರರ ಬೇಡಿಕೆಗಳು – ಕೆಲಸದ ಅವಧಿಯನ್ನು ಕಡಿಮೆ ಮಾಡುವುದು, ವೇತನ ಹೆಚ್ಚಿಸುವುದು ಮತ್ತು ತಮ್ಮ ಒಕ್ಕೂಟವನ್ನು ಒಪ್ಪಿಕೊಂಡು ಅಂಗೀಕರಿಸುವುದು. ಕಂಪನಿಯವರು ಕಟ್ಟಿದ ವಸತಿಗಳಲ್ಲಿ ಅವರು ಕೇಳಿದಷ್ಟು ಬಾಡಿಗೆ ಕೊಟ್ಟು ಇರಬೇಕಾದ ಸಮಸ್ಯೆ ಮತ್ತು ಕಂಪನಿಯವರ ಅಂಗಡಿಯಲ್ಲೇ ತಮಗೆ ಬೇಕಾದ ಸಾಮಾನು ಸರಂಜಾಮುಗಳನ್ನು ಕೊಳ್ಳುವ ಅಗತ್ಯ – ಇವೆಲ್ಲ ನಿವಾರಣೆಯಾಗಬೇಕೆಂದು ಕಾರ್ಮಿಕರು ತಮ್ಮ ಮುಂದಿಟ್ಟ ಬೇಡಿಕೆಗಳನ್ನು ಗಣಿ ಮಾಲೀಕರು ನಿರಾಕರಿಸಿದರು. ಅದರ ಪರಿಣಾಮವಾಗಿ ಕಾರ್ಮಿಕರು ಮುಷ್ಕರ ಹೂಡಿದರು. ಅಧ್ಯಕ್ಷ ರೂಸ್‌ವೆಲ್ಟ್‌ನು ಮಧ್ಯೆ ಪ್ರವೇಶಿಸಿ ಸಾರ್ವಜನಿಕರ ಪರವಾಗಿ ಒಪ್ಪಂದವನ್ನು ಏರ್ಪಡಿಸಲು ಶ್ವೇತಭವನದಲ್ಲಿ ಸಭೆ ಸೇರಿಸಲು ಪ್ರಯತ್ನಿಸಿದನು. ಗಣಿ ಮಾಲೀಕರು ಮಧ್ಯಸ್ಥಿಕೆ ಪಂಚಾಯಿತಿಗೆ ಒಪ್ಪಲಿಲ್ಲ. ಆಗ ರೂಸ್‌ವೆಲ್ಟ್ ಫೆಡರಲ್ ಸೈನ್ಯವನ್ನು ಕಳುಹಿಸಿ ಗಣಿಗಳನ್ನು ಬಲಾತ್ಕಾರದಿಂದ ತೆರೆಯುವಂತೆ ಮಾಡುತ್ತೇನೆ ಎಂದು ಹೆದರಿಸಿದ ಮೇಲೆ ಈ ವಿವಾದವನ್ನು ಅಧ್ಯಕ್ಷ ನೇಮಕ ಮಾಡಿದ ಸಂಧಾನ ಸಮಿತಿಗೆ ಒಪ್ಪಿಸಲು ಮಾಲೀಕರು ಸಮ್ಮತಿಸಿದರು. ವಿಚಾರಣೆ ನಡೆಸಿ ಕಾರ್ಮಿಕರ ವೇತನ ಹೆಚ್ಚಿಸಬೇಕೆಂದು ಮತ್ತು ಅವರ ದಿನದ ಕೆಲಸದ ಅವಧಿ ಒಂಬತ್ತು ಗಂಟೆಗಳಿರಬೇಕೆಂದು ಶಿಫಾರಸ್ಸು ಮಾಡಿತು. ಕಾರ್ಮಿಕರ ಒಕ್ಕೂಟಕ್ಕೆ ಮನ್ನಣೆ ನೀಡಲು ನಿರಾಕರಿಸಿತು.

ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಹೆಂಗಸರು ಮತ್ತು ಮಕ್ಕಳಿಗೆ ಫೆಡರಲ್ ಸರ್ಕಾರ ರಕ್ಷಣೆ ನೀಡಬೇಕೆಂದು ಮತ್ತು ಪ್ರತಿಬಂಧಕಾಜ್ಞೆಗಳನ್ನು ಉಪಯೋಗಿಸುವುದನ್ನು ಕಡಿಮೆ ಮಾಡಬೇಕೆಂದು ರೂಸ್‌ವೆಲ್ಟ್‌ನು ಕಾಂಗ್ರೆಸ್ಸಿಗೆ ಶಿಫಾರಸ್ಸು ಮಾಡಿದ್ದರೂ ಕೂಡ ಆ ಬಗ್ಗೆ ಯಾವ ಮಸೂದೆಯನ್ನೂ ಅಂಗೀಕರಿಸಲಿಲ್ಲ. ಆದರೆ ರೈಲುಮಾರ್ಗಗಳಲ್ಲಿ ಕೆಲಸ ಮಾಡುವಾಗ ಗಾಯಗೊಂಡ ಕಾರ್ಮಿಕರಿಗೆ ಪರಿಹಾರ ಕೊಡಬೇಕೆಂಬ (Employers' Liability Law) ಕೆಲಸ ಕೊಟ್ಟವರ/ಮಾಲೀಕರ ಜವಾಬ್ದಾರಿ/ಹೊಣೆಗಾರಿಕೆ ಕಾಯಿದೆಯನ್ನು ಜಾರಿಗೆ ತರುವುದರಲ್ಲಿ ಯಶಸ್ವಿಯಾದರು.

ನಂತರ ರೂಸ್‌ವೆಲ್ಟ್‌ನ ಗಮನ ಸೆಳೆದ ಸಮಸ್ಯೆ ಎಂದರೆ ಏಕಸ್ವಾಮ್ಯತೆ (monopoly) ಮತ್ತು ಅದರ ಪರಿಣಾಮವಾದ ಭ್ರಷ್ಟಾಚಾರ. ಏಕಸ್ವಾಮ್ಯತೆಯನ್ನು ಹತ್ತಿಕ್ಕಲು ಇವನು ಇಟ್ಟ ಮೊದಲ ಹೆಜ್ಜೆ ಎಂದರೆ ತನ್ನ ಆಡಳಿತ ಮಂಡಳಿಯ ನ್ಯಾಯಾಂಗ ಸಚಿವನಿಗೆ (Attorney General) 'ನಾರ್ದರ್ನ್ ಸೆಕ್ಯೂರಿಟಿ ಕಂಪನಿಯ' (Northern Securities Company) ಮೇಲೆ ದಾವಾ (law suit) ಹಾಕುವಂತೆ ನಿರ್ದೇಶಿಸಿದ್ದು. ಈ ಸಂಸ್ಥೆಯಲ್ಲಿ ಅನೇಕ ಕಂಪನಿಗಳು ವಿಲೀನಗೊಂಡಿದ್ದವು. ವಾಸ್ತವವಾಗಿ ಈ ಕಂಪನಿ ಒಂದು 'ಹಿಡಿತದಲ್ಲಿರುವ ಕಂಪನಿ' (holding company)ಯಾಗಿತ್ತು. ಅಂದರೆ, ಅದು ಇತರ ಎಲ್ಲಾ ಕಂಪನಿಗಳ ಭಾಗಶಃ ಸ್ವಾಮ್ಯತೆ ಅಥವಾ ಪೂರ್ಣ ಸ್ವಾಮ್ಯತೆ ಪಡೆದು ಅವುಗಳನ್ನು ನಿಯಂತ್ರಿಸುವ ಕಂಪನಿಯಾಗಿತ್ತು. ಇದರಲ್ಲಿ ಗ್ರೇಟ್ ನಾರ್ದರ್ನ್, ನಾರ್ದರ್ನ್ ಪೆಸಿಫಿಕ್ ಮತ್ತು ಬರ್ಲಿಂಗ್‌ಟನ್ ಕಂಪನಿಗಳು ವಿಲೀನಗೊಂಡಿದ್ದವು. ಆದ್ದರಿಂದ ಮೇಲ್ನೋಟಕ್ಕೆ ಅವು ಬೇರೆ ಬೇರೆ ಕಂಪನಿಗಳಾಗಿ ಕಂಡುಬಂದರೂ ವಾಸ್ತವವಾಗಿ ಅವು ಒಂದೇ ವ್ಯವಸ್ಥೆಗೆ ಒಳಪಟ್ಟಿದ್ದವು. ೧೯೦೪ರಲ್ಲಿ ನಾರ್ದರ್ನ್ ಸೆಕ್ಯೂರಿಟೀಸ್ ಮೇಲೆ ಹಾಕಿದ ದಾವಾ ಶ್ರೇಷ್ಠ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟು ತೀರ್ಪು ನೀಡಲಾಯಿತು. ಈ ತೀರ್ಪಿನ ಪ್ರಕಾರ ಕಂಪನಿಗಳು ವಿಲೀನಗೊಂಡಿದ್ದು ಶರ್‌ಮನ್ ನಿಕ್ಷೇಪ ವಿರೋಧಿ ಮಸೂದೆಯನ್ನು (Sherman Anti-trust Act) ಉಲ್ಲಂಘಿಸಿದೆ; ಆದ್ದರಿಂದ 'ಹಿಡಿತದಲ್ಲಿರುವ ಕಂಪನಿ' ಯನ್ನು ರದ್ದು ಮಾಡುವಂತೆ ಆಜ್ಞಾಪಿಸಲಾಯಿತು. ರೂಸ್‌ವೆಲ್ಟ್ ತನ್ನ ಅಧಿಕಾರದ ಅವಧಿಯಲ್ಲಿ ೨೫ ನಿಕ್ಷೇಪಗಳ ಮೇಲೆ ದೋಷಾರೋಪಣೆ ಮಾಡಿ ದಾವಾ ಹಾಕಿದನು. ಆದರೆ ಅವುಗಳಲ್ಲಿ ಇವನು ಗೆದ್ದ ಸಂಖ್ಯೆಗಿಂತ ಸೋತವುಗಳೇ ಹೆಚ್ಚಾಗಿದ್ದವು. ರೂಸ್‌ವೆಲ್ಟ್ ಬೃಹತ್ ಕೈಗಾರಿಕೆ ಮತ್ತು ಉದ್ಯಮಗಳನ್ನು ನಾಶಪಡಿಸಲು ಪ್ರಯತ್ನಪಟ್ಟವನಲ್ಲ. ಅವುಗಳ ದುರುಪಯೋಗವಾಗುವುದು ಮತ್ತು ಅವುಗಳಿಂದ ನಡೆಯುತ್ತಿದ್ದ ಭ್ರಷ್ಟಾಚಾರವನ್ನು ನಾಶಪಡಿಸುವುದು ಅವನ ಉದ್ದೇಶವಾಗಿತ್ತು. ಅವನ ಅಭಿಪ್ರಾಯದಲ್ಲಿ 'ದೊಡ್ಡ ಉದ್ದಿಮೆಗಳು ಮೂಲತಃ ಕೆಟ್ಟವೇನಲ್ಲ'. ಈ ಅಭಿಪ್ರಾಯವನ್ನೇ ನಂತರ ಶ್ರೇಷ್ಠ ನ್ಯಾಯಾಲಯ ವಿವೇಕಯುತ ನಿಯಮ (rule of reason)ವೆಂದು ಒಪ್ಪಿಕೊಂಡಿತು.

ರೈಲುಮಾರ್ಗಗಳನ್ನು ಸುವ್ಯವಸ್ಥಿತಗೊಳಿಸಲು ಅಂತರಸಂಸ್ಥಾನ ವಾಣಿಜ್ಯ ಸಮಿತಿಯ (Interstate Commerce Commission) ಅಧಿಕಾರವನ್ನು ವಿಸ್ತರಿಸಿದನು. ೧೯೦೩ರಲ್ಲಿ ಜಾರಿಗೆ ಬಂದ ಎಲ್ಕಿನ್ಸ್ ಮಸೂದೆಯ (Elkin's Act) ಪ್ರಕಾರ ಕಂಪನಿಗಳು ರಿಯಾಯಿತಿ ಪಡೆಯುವುದು ಶಿಕ್ಷಾರ್ಹವಾದ ಅಪರಾಧ. ಹಾಗೆಯೇ ರಿಯಾಯಿತಿ ಕೊಡುವುದು ಕೂಡ ಅಪರಾಧವಾಗಿತ್ತು. ೧೯೦೬ರಲ್ಲಿ ಹೆಪ್‌ಬರ್ನ್ ಮಸೂದೆ (Hepburn Act) ಅಂತರ ಸಂಸ್ಥಾನ ವಾಣಿಜ್ಯ ಸಮಿತಿಯ ನಿಯಂತ್ರಣ ಅಧಿಕಾರವನ್ನು ಹೆಚ್ಚಿಸಿತು.

ಪ್ರಕೃತಿ ಸಂಪತ್ತನ್ನು ಉಳಿಸಿ ರಕ್ಷಿಸುವುದರಲ್ಲಿ ರೂಸ್‌ವೆಲ್ಟ್‌ನಿಗೆ ತೀವ್ರ ಆಸಕ್ತಿ ಇದ್ದಿತ್ತು. ಸಾರ್ವಜನಿಕರಿಗೆ ಸೇರಿದ (ಸರ್ಕಾರದ) ಭೂಮಿಯನ್ನು ಖಾಸಗಿ ಉದ್ಯಮಗಳಿಗೆ ಮತ್ತು ಇತರ ಉಪಯೋಗಗಳಿಗಾಗಿ ವಶಪಡಿಸಿಕೊಂಡು ಪ್ರಕೃತಿ ಸಂಪತ್ತು ಕ್ಷೀಣಿಸುತ್ತ ಹೋಯಿತು. ತಮ್ಮ ಕಣ್ಣ ಮುಂದೆ ನಡೆಯುತ್ತಿದ್ದ ಈ ಸಂಪತ್ತಿನ ನಾಶ ಜನ ಜಾಗೃತಿ ಗೊಳ್ಳುವಂತೆ ಮಾಡಿತು. ಇದನ್ನು ತಡೆಗಟ್ಟಲು ತಕ್ಕ ಕ್ರಮ ಕೈಗೊಳ್ಳಬೇಕೆಂದು ಜನರು ಆಗ್ರಹ ಪಡಿಸಿದರು. ೧೮೯೧ರಲ್ಲಿಯೆ ಅಧ್ಯಕ್ಷ ಹ್ಯಾರಿಸನ್ ಪ್ರಕೃತಿ ಸಂಪತ್ತನ್ನು ಕಾಪಾಡುವ ಸಲುವಾಗಿ ಕಾಡುನೆಲವನ್ನು (forest land) ಮೀಸಲಾಗಿಡಬೇಕೆಂದು ಮಾಡಿದ ಸಲಹೆಯನ್ನು ಕಾಂಗ್ರೆಸ್ ಅಂಗೀಕರಿಸಿತು. ಅಂದಿನಿಂದ ಕಾಡುನೆಲವನ್ನು ಮೀಸಲಾಗಿಡುವ ಅಧಿಕಾರ ಅಧ್ಯಕ್ಷನಾದವನಿಗೆ ದೊರೆಯಿತು. ಈ ಅಧಿಕಾರ ಚಲಾಯಿಸಿ ಹ್ಯಾರಿಸನ್, ಕ್ಲೀವ್‌ಲ್ಯಾಂಡ್ ಮತ್ತು ಮೆಕಿನ್ಲೆ ತಮ್ಮ ಅಧಿಕಾರದ ಅವಧಿಯಲ್ಲಿ ವಿಶಾಲವಾದ ಕಾಡುಪ್ರದೇಶಗಳನ್ನು ಮೀಸಲಾಗಿಟ್ಟರು. ರೂಸ್‌ವೆಲ್ಟ್‌ನು ೧೨೫ ಮಿಲಿಯನ್ ಎಕರೆ ಕಾಡುನೆಲವನ್ನು ಮೀಸಲಾಗಿರಿಸಿದನು. ಇದು ಅವನ ಹಿಂದಿನ ಅಧ್ಯಕ್ಷರು ಮೀಸಲಾಗಿಟ್ಟ ಕಾಡುನೆಲದ ಮೂರುಪಟ್ಟು ಹೆಚ್ಚಾಗಿತ್ತು.

೧೮೯೪ರಲ್ಲಿ ಜಾರಿಗೆ ಬಂದ ಕ್ಯಾರಿ ಕಾಯಿದೆ (Carey Act) ಪ್ರಕಾರ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಂಸ್ಥಾನಗಳಿಗೆ ಕಾಂಗ್ರೆಸ್ ಉತ್ತೇಜನ ನೀಡಿತು. ಈ ಯೋಜನೆಗಳನ್ನು ಪೂರೈಸಿದ್ದರೆ ಮರಳ್ಗಾಡು ಪ್ರದೇಶಗಳನ್ನು ವ್ಯವಸಾಯಯೋಗ್ಯವಾಗಿ ಮಾಡಬಹುದಿತ್ತು. ಆದರೆ ಅದು ಯಶಸ್ವಿಯಾಗಲಿಲ್ಲ. ೧೯೦೨ರಲ್ಲಿ ರೂಸ್‌ವೆಲ್ಟ್‌ನು ಹೊಸಭೂಮಿಯನ್ನು ಸಾಗುವಳಿಗೆ ಯೋಗ್ಯ ಮಾಡುವ ಮಸೂದೆಯನ್ನು (New lands Reclamation Act) ಮಂಡಿಸಿ ಕಾಂಗ್ರೆಸ್ಸಿನ ಒಪ್ಪಿಗೆ ಪಡೆದನು. ಈ ಕಾಯಿದೆಯ ಪ್ರಕಾರ ಫೆಡರಲ್ ಸರ್ಕಾರಕ್ಕೆ ಸೇರಿದ ಭೂಮಿಯನ್ನು ಮಾರಾಟ ಮಾಡಿದಾಗ ಸಿಗುವ ಹಣವನ್ನು 'ಹಣ ಹೂಡುವುದನ್ನು – ಮರಳಿ ಪಡೆಯುವುದನ್ನು ಮಾಡಬಹುದಾದಂತಹ' ನಿಧಿ (revolving fund)ಯಲ್ಲಿ ಇಟ್ಟು ಆ ಹಣದಿಂದ ನೀರಾವರಿ ಯೋಜನೆಗಳನ್ನು ಪೂರೈಸಿ, ನೀರಿಲ್ಲದೆ ಒಣಗಿದ ಪ್ರದೇಶಗಳನ್ನು ಸಾಗುವಳಿಗೆ ಯೋಗ್ಯ ಮಾಡುವ ಕಾರ್ಯ ಪ್ರಾರಂಭವಾಯಿತು. ಅಷ್ಟರಲ್ಲಿ ಅವನು ೧೯೦೪ರ ಚುನಾವಣೆಯನ್ನು ಎದುರಿಸ ಬೇಕಾಯಿತು.

ರೂಸ್‌ವೆಲ್ಟ್‌ನ ಜನಪ್ರಿಯತೆ ಆತನ ಪಕ್ಷ ಅವನನ್ನು ಎರಡನೆಯ ಬಾರಿ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯನ್ನಾಗಿ ನೇಮಿಸುವುದನ್ನು ಅನಿವಾರ್ಯವಾಗಿ ಮಾಡಿತು. ೧೯೦೪ರ ಆರಂಭದಲ್ಲಿ ರೂಸ್‌ವೆಲ್ಟ್‌ನ ಪ್ರತಿಸ್ಪರ್ಧಿ ಮತ್ತು ಅವನ ಮರುಚುನಾವಣೆಯಲ್ಲಿ ಅಡಚಣೆ ಮಾಡಬಹುದಾಗಿದ್ದಂತಹ ಮಾರ್ಕ್ ಹಾನ್ನ ಮರಣ ಹೊಂದಿದ್ದನು. ಡೆಮೊಕ್ರಾಟರು ಸಂಪ್ರದಾಯಸ್ಥ ಧೋರಣೆ ತಳೆದು, ಶುದ್ಧ ಚಾರಿತ್ರ್ಯದ ನ್ಯೂಯಾರ್ಕಿನ ನ್ಯಾಯವಾದಿ

ಆಲ್ಟನ್ ಪಾರ್ಕರ್ (Alton Parker)ನನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಿದರು. ಚುನಾವಣಾ ಪ್ರಚಾರದಲ್ಲಿ ಬಿಸಿ ಇರದೆ ಯಾವ ಮುಖ್ಯ ಘಟನೆಗಳೂ ಜರುಗಲಿಲ್ಲ. ರೂಸ್‌ವೆಲ್ಟ್‌ನು ೧೮೭೨ರಿಂದ ಯಾವ ಅಧ್ಯಕ್ಷನೂ ಪಡೆಯಲಾರದೆ ಹೋದ ಅತ್ಯಂತ ಅಧಿಕಸಂಖ್ಯೆಯ ಮತ ಪಡೆದು ದಿಗ್ವಿಜಯ ಸಾಧಿಸಿದನು. ಇದರ ಉದ್ವೇಗಪೂರ್ಣ ವಾತಾವರಣದಿಂದ ಪ್ರಭವಿತನಾದ ರೂಸ್‌ವೆಲ್ಟ್‌ನು ಅಧ್ಯಕ್ಷ ಪದವಿಗೆ ಮತ್ತೆ ಸ್ಪರ್ಧಿಸುವುದಿಲ್ಲವೆಂದು ಹೇಳಿಕೆ ನೀಡಿದನು[೧].

ರೂಸ್‌ವೆಲ್ಟ್‌ನ ಅಧಿಕಾರದ ಅವಧಿಯಲ್ಲಿ ಜಾರಿಗೆ ಬಂದ ಅತಿಮುಖ್ಯವಾದ ಎರಡು ಮಸೂದೆಗಳೆಂದರೆ – ಶುದ್ಧ ಆಹಾರ ಮತ್ತು ಔಷಧಿಗಳ ಕಾಯಿದೆ (Pure Food and Drug Act). ೧೯೦೬ರಲ್ಲಿ ಇದು ಕಾಂಗ್ರೆಸ್ಸಿನಲ್ಲಿ ಅಂಗೀಕೃತವಾಗಿ ಜಾರಿಗೆ ಬಂತು. ಎರಡನೆಯದು ಮಾಂಸ ಪರೀಕ್ಷಣ ಮಸೂದೆ (Meat inspecting Act). ಇದು 'ಕಸ ಕೆದರುವ' ಪತ್ರಿಕಾಕರ್ತರು ಕಸಾಯಿಖಾನೆಗಳ ಮತ್ತು ಮಾಂಸವನ್ನು ಹಸುಗೆ ಮಾಡಿ ಪೊಟ್ಟಣ ಕಟ್ಟುವ ಕೇಂದ್ರಗಳ ಕೊಳಕನ್ನು ಬೆಳಕಿಗೆ ತಂದಿದ್ದರ ಪರಿಣಾಮ. ಶುದ್ಧ ಆಹಾರ ಮಸೂದೆ ಅಪಾಯಕಾರಿ ಔಷಧಗಳ, ರಾಸಾಯನಿಕಗಳ ಮತ್ತು ಆಹಾರ ಕೆಡದಂತೆ ಮಾಡಲು ಉಪಯೋಗಿಸುವ 'ರಕ್ಷಣಾ ಸಾಧಕಗಳ' (preservatives) ಬಳಕೆಯನ್ನು ನಿಷೇಧಿಸಿತು. ೧೯೧೧ರಲ್ಲಿ ಈ ಮಸೂದೆಯನ್ನು ತಿದ್ದುಪಡಿ ಮಾಡಿ ಉತ್ಪನ್ನವಾದ ವಸ್ತುಗಳ ಮೇಲೆ ಉತ್ಪ್ರೇಕ್ಷೆಯ ವಿವರಣಾ ಚೀಟಿ (labels) ಗಳನ್ನು ಅಂಟಿಸುವುದನ್ನು ರದ್ದುಗೊಳಿಸಲಾಯಿತು.

೧೮೯೦ರ ದಶಕದಲ್ಲಿ ಪ್ರಾರಂಭವಾದ ಸಮೃದ್ಧ ಸ್ಥಿತಿ ೧೯೦೭ರಲ್ಲಿ ಹಣದ ಕೊರತೆಯ ನಿಷ್ಕಾರಣ ಭೀತಿಗೆ (panic) ಒಳಗಾಯಿತು. ಸಂಪ್ರದಾಯಸ್ಥರು ಕೂಡಲೇ ಕೊರತೆ ರೂಸ್‌ವೆಲ್ಟ್‌ನ ಆರ್ಥಿಕ ಧೋರಣೆಯಿಂದ ಉಂಟಾಯಿತು; ಅವನು ಜಾರಿಗೆ ತಂದ ಆರ್ಥಿಕ ಸುಧಾರಣೆಗಳು ವ್ಯಾಪಾರ ಮತ್ತು ವಾಣಿಜ್ಯ ವ್ಯವಹಾರಗಳಲ್ಲಿ ಜನರಿಗೆ ಭರವಸೆ ಇಲ್ಲದಂತೆ ಮಾಡಿದವು ಎಂದು ದೂರಿದರು. ಈ ಹಣದ ಕೊರತೆ ಉಂಟಾಗಿದ್ದು ಭಾಗಶಃ ಒಂದರೊಡನೆ ಇನ್ನೊಂದು ವಿಲೀನಗೊಂಡಿದ್ದ ಕಾರ್ಪೊರೇಷನ್‌ಗಳು ಆರ್ಥಿಕ ಬಲವಿಲ್ಲದ ತಮ್ಮ ಪಾಲುಪತ್ರಗಳನ್ನು (shares) ವಿತರಣೆ ಮಾಡತೊಡಗಿದ್ದರಿಂದ. ಹೀಗೆ ಉಂಟಾದ ಗಾಬರಿ ಪರಿಸ್ಥಿತಿ ರಾಷ್ಟ್ರದಲ್ಲಿ ಚಲಾವಣೆಯಲ್ಲಿರುವ ಹಣದ ದುರ್ಬಲ ಸ್ಥಿತಿಯನ್ನು (weakness of the currency) ವ್ಯಕ್ತಪಡಿಸಿತ್ತು. ಈ ಸಂದಿಗ್ಧ ಪರಿಸ್ಥಿತಿಯನ್ನು ಅನಿಯಂತ್ರಿತ ಬ್ಯಾಂಕ್ ವ್ಯವಸ್ಥೆ ಮತ್ತಷ್ಟು ಹದಗೆಡಿಸಿತು. ಪರಿಣಾಮವಾಗಿ ೧೯೦೮ರಲ್ಲಿ ಆಲ್ಡ್ರಿಚ್ ವ್ರೀಲ್ಯಾಂಡ್ ಮಸೂದೆ (the Aldrich Vreeland Act) ಯನ್ನು ಕಾಂಗ್ರೆಸ್ ಜಾರಿಗೆ ತಂದು, ರಾಷ್ಟ್ರೀಯ ಹಣಕಾಸಿನ ಸಮಿತಿ (The National Monetary

೧. ಆವೇಶದ ಭರದಲ್ಲಿ ನೀಡಿದ ಈ ಹೇಳಿಕೆಗಾಗಿ ನಂತರ ಅವನು ಪಶ್ಚಾತ್ತಾಪ ಪಡಬೇಕಾಯಿತು.

Commission) ರಚನೆಗೊಂಡಿತು. ರಾಷ್ಟ್ರದ ಹಣಕಾಸಿನ ಮತ್ತು ಬ್ಯಾಂಕ್‌ಗಳ ವ್ಯವಸ್ಥೆಯನ್ನು ಕೂಲಂಕಷವಾಗಿ ಪರೀಕ್ಷಿಸಿ ಅವುಗಳನ್ನು ಸುಧಾರಣೆ ಮಾಡಲು ಸಲಹೆ ನೀಡುವುದು ಈ ಸಮಿತಿಯ ಜವಾಬ್ದಾರಿಯಾಗಿತ್ತು.

ಬೇರೆ ಅಧ್ಯಕ್ಷರಂತಲ್ಲದೆ ರೂಸ್‌ವೆಲ್ಟ್ ಅತ್ಯಂತ ಜನಪ್ರಿಯ ಹಾಗೂ ಪ್ರಭಾವಶಾಲಿ ಅಧ್ಯಕ್ಷನಾಗಿದ್ದನು. ಆದರಿಂದ ತನ್ನ ಆಡಳಿತದ ಅವಧಿ ಮುಗಿದ ಮೇಲೆ ತನ್ನ ಸ್ಥಾನಕ್ಕೆ ಯಾರು ಬರಬೇಕೆನ್ನುವುದನ್ನು ಅವನೇ ನಿರ್ಧರಿಸಿದನು. ಯುದ್ಧ ಸಚಿವನಾಗಿದ್ದ ವಿಲಿಯಂ ಟಾಫ್ಟ್ (William Taft) ನನ್ನು ಅಧ್ಯಕ್ಷಸ್ಥಾನಕ್ಕೆ ನೇಮಿಸಿದನು. ರಿಪಬ್ಲಿಕನ್ ಪಕ್ಷ ರೂಸ್‌ವೆಲ್ಟ್‌ನ ಆಯ್ಕೆಯನ್ನು ಅನುಮೋದಿಸಿತು. ೧೯೦೦ಳರಲ್ಲಿ ಸಾಂಪ್ರದಾಯಕ ಧೋರಣೆ ತಳೆದು ಚುನಾವಣೆಯನ್ನು ಕಳೆದುಕೊಂಡ ಡೆಮೊಕ್ರಾಟರು ವಿಲಿಯಂ ಬ್ರೈಯನ್‌ನನ್ನು ಮತ್ತೊಮ್ಮೆ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮಕರನ ಮಾಡಿದರು. ರಿಪಬ್ಲಿಕನ್ ಪಕ್ಷದವರು ರೂಸ್‌ವೆಲ್ಟ್‌ನ ಧೋರಣೆಗಳನ್ನು ಮುಂದುವರಿಸುವುದಾಗಿ ಘೋಷಿಸಿದರು. ಮುಖ್ಯವಾಗಿ ಪ್ರಕೃತಿ ಸಂಪತ್ತಿನ ರಕ್ಷಣೆ ಮತ್ತು ಅಂತರ ಸಂಸ್ಥಾನಗಳ ವ್ಯಾಪಾರ/ವಾಣಿಜ್ಯ ಸಮಿತಿಯನ್ನು ಮತ್ತಷ್ಟು ಬಲಪಡಿಸುವುದು ಅವರ ಚುನಾವಣೆಯ ವಿಷಯಗಳಾಗಿದ್ದವು. ಡೆಮೊಕ್ರಾಟರ ಚುನಾವಣೆಯ ವೇದಿಕೆ – ಸುಂಕ ಕಡಿಮೆ ಮಾಡುವುದು, ಕಾರ್ಮಿಕರ ಚಟುವಟಿಗಳನ್ನು ನ್ಯಾಯಾಲಯ ನಿರ್ಬಂಧಿಸುವುದನ್ನು ವಿರೋಧಿಸುವುದು – ಈ ವಿಷಯಗಳನ್ನು ಒಳಗೊಂಡಿತ್ತು. ಬ್ರೈಯನ್ ಇನ್ನೂ ಮುಂದುವರಿದು ಸಂಸ್ಥಾನಗಲ ನಡುವಣ ವ್ಯಾಪಾರ ವ್ಯವಹಾರಗಳನ್ನು ನಡೆಸುವುದು ಫೆಡರಲ್ ಸರ್ಕಾರಕ್ಕೆ ಸೇರಬೇಕೆಂದು ಮತ್ತು ರೈಲುಮಾರ್ಗಗಳು ಸರ್ಕಾರದ ಸ್ವಾಮ್ಯತೆಗೆ ಒಳಪಡಬೇಕೆಂದು ವಾದಿಸಿದನು. ಮತದಾರರು ಇವನ ವಾದಗಳಿಗೆ ಹೆಚ್ಚಿನ ಗಮನ ಕೊಡಲಿಲ್ಲ. ಅವರು ರೂಸ್‌ವೆಲ್ಟ್‌ನಿಂದ ಪ್ರಚೋದಿತರಾಗಿ ಅವನು ಆಯ್ಕೆ ಮಾಡಿದ ವಿಲಿಯಂ ಟಾಫ್ಟ್‌ನನ್ನು ಬೆಂಬಲಿಸಿದರು. ಚುನಾವಣೆಯ ಎಲೆಕ್ಟರಲ್ ಕಾಲೇಜಿನಲ್ಲಿ ಟಾಫ್ಟ್ ಬಹಳ ದೊಡ್ಡ ಅಂತರದಿಂದ (೩೨೧-೧೬೨) ಬ್ರೈಯನ್‌ನನ್ನು ಸೋಲಿಸಿ ಅಮೆರಿಕದ ೨೩ನೆಯ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡನು.

ಅಧ್ಯಕ್ಷ ಸ್ಥಾನದಿಂದ ನಿವೃತ್ತನಾದ ರೂಸ್‌ವೆಲ್ಟ್‌ನಿಗೆ ಇನ್ನೂ ಐವತ್ತು ವರ್ಷ ಪ್ರಾಯ. ಸದಾ ಉತ್ಸಾಹದಿಂದ ಪುಟಿಯುತ್ತಿದ್ದ ಅವನು ನಿವೃತ್ತನಾದೊಡನೆ ಆಫ್ರಿಕಾಕ್ಕೆ ದೊಡ್ಡ ಪ್ರಾಣಿಗಳ ಬೇಟೆಯಾಡಲು ಹೋದನು. ಅಲ್ಲಿಂದ ಯೂರೋಪಿನ ಪ್ರವಾಸ ಕೈಗೊಂಡನು. ಜನಪ್ರಿಯನಾದ ಕಾರಣ ಹೋದಲ್ಲೆಲ್ಲ ಅದ್ದೂರಿಯ ಸ್ವಾಗತ ಕಾದಿರುತ್ತಿತ್ತು. ವಿಲಿಯಂ ಟಾಫ್ಟ್ ರೂಸ್‌ವೆಲ್ಟ್‌ನಿಗೆ ತದ್ವಿರುದ್ಧನಾಗಿದ್ದವನು. ಅವನಿಗೆ ರಾಜಕೀಯದಲ್ಲಿ ಆಸಕ್ತಿ ಇರಲಿಲ್ಲ. ಒಹಾಯೊ ಪ್ರಾಂತದ ಸಿನ್‌ಸಿನಾಟಿ (Cincinnati) ನಗರದ ಒಬ್ಬ ಪ್ರತಿಷ್ಠಿತ ಕುಟುಂಬಕ್ಕೆ ಸೇರಿದವನಾದ ಈತನ ತಂದೆ ಜನರಲ್ ಗ್ರಾಂಟ್‌ನ ಅಧ್ಯಕ್ಷತೆಯಲ್ಲಿ

ನ್ಯಾಯಾಂಗ ಸಚಿವನಾಗಿದ್ದನು. ಟಾಫ್ಟ್ ಅನೇಕ ಹುದ್ದೆಗಳಿಗೆ ನೇಮಕಗೊಂಡು ಮೇಲೆ ಬಂದವನು. ಅಧ್ಯಕ್ಷ ಸ್ಥಾನ ಒಂದೇ ಅವನ ಜೀವಿತದಲ್ಲಿ ಚುನಾಯಿತನಾಗಿ ಪಡೆದು ಕೊಂಡಿದ್ದು. ಮುನ್ನೂರು ಪೌಂಡ್ ತೂಕದ ಟಾಫ್ಟ್‌ನಿಗೆ ಕಛೇರಿಯಲ್ಲಿ ಕುಳಿತು ಮಾಡುವ ಕೆಲಸ ಇಷ್ಟ. ಸದಾಕಾಲ ಅಲ್ಲಿ ಇಲ್ಲಿ ಸುತ್ತುತ್ತ ಜನರೊಡನೆ ಕೊನೆಯಿಲ್ಲದ ಮಾತುಕತೆ ನಡೆಸಬೇಕಾಗಿದ್ದ ರಾಜಕೀಯ ಕಸುಬು ಅವನಿಗೆ ಬೇಡವಾಗಿತ್ತು. ಆದರೆ ಅವನ ಹೆಂಡತಿಗೆ ರಾಜಕೀಯದಲ್ಲಿ ಬಹಳ ಆಸಕ್ತಿ ಇದ್ದಿತ್ತು. ಶ್ವೇತಭವನದಲ್ಲಿ ನೆಲಸುವ ಅವಕಾಶಕ್ಕಾಗಿ ಅವಳು ಹಾತೊರೆಯುತ್ತಿದ್ದಳು. ದುರದೃಷ್ಟವಶಾತ್ ಶ್ವೇತಭವನ ಹೊಕ್ಕ ಸ್ವಲ್ಪ ಸಮಯದಲ್ಲೇ ಅವಳು ಕಾಯಿಲೆಗೀಡಾದಳು. ಟಾಫ್ಟ್ ಅಧಿಕಾರದ ಅವಧಿ ಮುಗಿಯು ವವರೆಗೂ ಅವಳು ಚೇತರಿಸಿಕೊಳ್ಳಲಾಗಲಿಲ್ಲ.

ಪ್ರಗತಿಪರ ಯುಗದ ಸಾಧನೆಗಳು[೨]

ಪ್ರಗತಿಪರರು (Progressives) ರೂಸ್‌ವೆಲ್ಟ್‌ನ ಅಧಿಕಾರದ ಅವಧಿಯಲ್ಲಿ ಪ್ರಾಮುಖ್ಯತೆ ಪಡೆದು ಪ್ರಗತಿಪರ ಆಂದೋಳನವನ್ನು ತ್ವರಿತಗೊಳಿಸಿದರು. ರೂಸ್‌ವೆಲ್ಟ್ ರಾಜ್ಯ ಮತ್ತು ಸ್ಥಳೀಯ (local) ಸರ್ಕಾರಗಳನ್ನು ಪಟ್ಟಭದ್ರ ಹಿತಾಸಕ್ತಿಗಳ ಹಿಡಿತದಿಂದ ಬಿಡಿಸಿ ಪ್ರಜೆಗಳ ಆಳ್ವಿಕೆಗೆ ಒಳಪಡಿಸಿದನು. ಇವರಲ್ಲಿ ಶ್ರೇಷ್ಠನಾದವನು ಸುಧಾರಣೆಯ ಪಣ ತೊಟ್ಟ ವಿಸ್ಕಾನ್‌ಸಿನ್ ರಾಜ್ಯದ ಗವರ್ನರ್ ರಾಬರ್ಟ್ ಲಾ ಫೊಲ್ಲೆಟ್ (Robert La Follette). ಅವನು ಕಾರ್ಪೊರೇಷನ್‌ಗಳನ್ನು ನಿಯಂತ್ರಿಸಲು ಮತ್ತು ವ್ಯಾಪಾರಿಗಳ ಪ್ರಾಬಲ್ಯಕ್ಕೆ ಒಳಗಾಗದಂತಹ ದಕ್ಷ ಸರ್ಕಾರವನ್ನು ರಚಿಸಲು ಅನುಕೂಲವಾಗುವ ಮಸೂದೆ ಗಳನ್ನು ನ್ಯಾಯವಿಧಾಯಕ ಸಭೆ ಅಂಗೀಕರಿಸುವಂತೆ ಒತ್ತಾಯಿಸಿದನು. ೧೯೦೬ ರಿಂದ ೧೯೨೫ರವರೆಗೆ ವಿಸ್ಕಾನ್‌ಸಿನ್ ಸೆನೆಟರ್ ಆಗಿದ್ದ ಸಮಯದಲ್ಲಿ ಅವನು ಅನೇಕ ಪ್ರಗತಿಪರ ಯೋಜನೆಗಳನ್ನು ಜಾರಿಗೆ ತರಲು ಸೆನೆಟ್‌ನಲ್ಲಿ ಹೋರಾಟ ನಡೆಸಿದ್ದನು. ಪ್ರಗತಿಪರ ಆಂದೋಳನ ಇನ್ನೂ ಅನೇಕ ನಾಯಕರನ್ನು ಪ್ರಾಮುಖ್ಯತೆಗೆ ತಂದಿತು. ನ್ಯೂಯಾರ್ಕಿನಲ್ಲಿ ಚಾರ್ಲ್ಸ್ ಹ್ಯೂಸ್ (Charles Hughes) ಎಂಬುವನು ಜೀವವಿಮಾ ಕಂಪನಿಗಳ ದುಷ್ಕರ್ಮಗಳನ್ನು ಬಯಲಿಗೆಳೆದನು. ೧೯೧೧ರಲ್ಲಿ ಕ್ಯಾಲಿಫೋರ್ನಿಯಾದ ಗವರ್ನರ್ ಆಗಿ ಆಯ್ಕೆಗೊಂಡ ಹೈರಾಮ್ ಜಾನ್ಸನ್ (Hiram Johnson) ಕ್ಯಾಲಿಫೋರ್ನಿಯಾದ

೨. ೧೯೦೧ರಿಂದ ೧೯೧೪ರವರೆಗಿನ ಕಾಲವನ್ನು ಪ್ರಗತಿಪರ ಯುಗವೆಂದು ಕರೆಯಲು ಕಾರಣ: ಆ ಕಾಲಾವಧಿಯಲ್ಲಿ ಜಾರಿಗೆ ಬಂದ ಕೆಲವು ಸಮಾಜ ಸುಧಾರಣೆಗಳು. ಬುದ್ಧಿಜೀವಿಗಳು, ಪತ್ರಿಕಾಕರ್ತರು ಮತ್ತು ಚಿಂತನಕಾರರು ಜನ ಜಾಗೃತಿಗೊಳಿಸಿ ಸಮಾಜದ ಕೊಳೆಯನ್ನು ತೊಳೆಯುವ ಪ್ರಯತ್ನ ಮಾಡಿದರು. ಪ್ರಗತಿಪರರ ಮುಖ್ಯ ಧ್ಯೇಯಗಳು: ಪ್ರಜಾಪ್ರಭುತ್ವ ಹೆಚ್ಚಿಸುವುದು, ಸಮರ್ಥ ಸರ್ಕಾರ, ವ್ಯಾಪಾರ ವಾಣಿಜ್ಯಗಳನ್ನು ನಿಯಂತ್ರಿಸುವುದು, ಸಾಮಾಜಿಕ ನ್ಯಾಯ ಮತ್ತು ಸಾರ್ವಜನಿಕ ಸೇವೆ. ಪ್ರಗತಿಪರರು ಜನಪ್ರಿಯತೆ ಗಳಿಸಿದ್ದರಿಂದ ಅಧ್ಯಕ್ಷನಾದವನು ಅವರ ಬೆಂಬಲ ಪಡೆದು, ಅವರ ಬೇಡಿಕೆಗಳನ್ನು ನೆರವೇರಿಸಬೇಕಾಯಿತು.

ರಾಜಕೀಯದಲ್ಲಿ ದಕ್ಷಿಣ ಪೆಸಿಫಿಕ್ ರೈಲ್ವೆ ಕಂಪನಿಯ ಪ್ರಾಬಲ್ಯವನ್ನು ಕೊನೆಗಾಣಿಸಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದನು.

ಹಾಗೆಯೇ ರಾಜ್ಯಗಳಲ್ಲಿ ಮತ್ತು ನಗರಗಳಲ್ಲಿ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರಲಾಯಿತು. ಅವರು ಜಾರಿಗೆ ತಂದ ಸುಧಾರಣೆಗಳು ಪಾಪ್ಯುಲಿಸ್ಟರಿಂದ ಮತ್ತು ಇತರ ಆಂದೋಳನಗಳಿಂದ ಪ್ರಭಾವಿತಗೊಂಡಿದ್ದವು. ಕೆಲವು ಸುಧಾರಣೆಗಳು ೧೮೭೦ರಷ್ಟು ಹಿಂದೆಯೇ ಪ್ರಾರಂಭವಾಗಿದ್ದವು: ನೇರ ಪ್ರಾಥಮಿಕ ಚುನಾವಣಾ ಕಾಯಿದೆ (Direct Primary Election Laws)ಗಳು ಪಕ್ಷದ ಅಭ್ಯರ್ಥಿಗಳನ್ನು ನೇಮಿಸುವ ಕಾರ್ಯವನ್ನು ವಹಿಸಿಕೊಂಡು ರಾಜಕೀಯ ಪುಢಾರಿಗಳ ಮತ್ತು ಪಂಗಡಗಳ ಒಡೆಯರುಗಳ (bosses) ಪ್ರಾಬಲ್ಯವನ್ನು ಹತ್ತಿಕ್ಕಿದವು. ಈ ಸುಧಾರಣೆಯಿಂದಾಗಿ ಪ್ರಗತಿಪರರು ರಾಜ್ಯಸರ್ಕಾರದ (State Government) ಮೇಲೆ ನಿಯಂತ್ರಣ ಹೊಂದಲು ಸಾಧ್ಯವಾಯಿತು. ಯಾವ ಸಮಸ್ಯೆಯನ್ನಾದರೂ ಬಗೆಹರಿಸಲು ಪ್ರಜೆಗಳೇ ಮೊದಲು ಕ್ರಮ ತೆಗೆದುಕೊಂಡು ಸರ್ಕಾರದ ಮೇಲೆ ಒತ್ತಾಯ ಹಾಕುವುದು ಮತ್ತು ಪ್ರಜಾಭಿಪ್ರಾಯ ಸಂಗ್ರಹಿಸುವುದು ಅತಿಮುಖ್ಯವೆಂದು ನ್ಯಾಯಾಲಯಗಳು ಗುರುತಿಸಿ ಪ್ರಜಾರಂಭ – ಪ್ರಜೆಗಳು ಪ್ರಾರಂಭಿಸುವ – ಮತ್ತು ಪ್ರಜಾಭಿಪ್ರಾಯ ಸಂಗ್ರಹ ಕಾಯಿದೆಯನ್ನು ಜಾರಿಗೆ ತರಲಾಯಿತು (The Initiative and Referendum Law). ಇದು ಪ್ರಜೆಗಳು ತಮ್ಮ ಅಗತ್ಯಗಳನ್ನು ಪೂರೈಸುವಂತೆ ತಿಳಿಸುವ ಅರ್ಜಿಗಳ ಮೂಲಕ ಕಾಯಿದೆ ರೂಪುಗೊಳಿಸುವ ವಿಧಾನ. ಈ ಕಾರ್ಯಗಳು ಪ್ರಜೆಗಳೇ ನೇರವಾಗಿ ನ್ಯಾಯವಿತರಣೆ ಮಾಡಲು ನೆರವಾಗುತ್ತವೆ. ನ್ಯಾಯವಿಧಾಯಕ ಸಭೆ ತಮ್ಮ ಬೇಡಿಕೆಗಳಿಗೆ ಗಮನ ಕೊಡದೆಹೋದರೆ, ಪ್ರಜೆಗಳು ತಾವೇ ಆಸಕ್ತಿ ವಹಿಸಿ ಅರ್ಜಿ ತಯಾರಿಸಿ, ಅದರಲ್ಲಿ ನಮೂದಿಸಿರುವ ಬೇಡಿಕೆಗಳನ್ನು ಪ್ರಜೆಗಳು ಬಹುಮತದಿಂದ ಅಂಗೀಕರಿಸಿದರೆ ಅದು ಕಾಯಿದೆಯಾಗಿ ಜಾರಿಗೆ ಬರುವಂತೆ ಮಾಡಲಾಯಿತು. ಇದು ನ್ಯಾಯಾಲಯದ ಪ್ರಗತಿಯಲ್ಲಿ ಒಂದು ಮುಖ್ಯವಾದ ಮಜಲು. ತಾವು ಚುನಾಯಿಸಿದ ಅಭ್ಯರ್ಥಿಯಾಗಲೀ ಅಥವಾ ಅಧಿಕಾರಿಯಾಗಿರಲಿ ಅವರು ಅಸಮರ್ಥರು ಎಂದು ಸಾಬೀತಾದರೆ ಅವರನ್ನು ವಾಪಸ್ಸು ಕರೆಸಿಕೊಳ್ಳುವ (recall) ಅಧಿಕಾರವನ್ನು ಪ್ರಜೆಗಳಿಗೆ ಕೊಡಲಾಯಿತು. ಹಾಗೆಯೇ ವಾಪಸ್ಸು ಕರೆಸಿಕೊಂಡವನ ಜಾಗಕ್ಕೆ ಬೇರೊಬ್ಬನನ್ನು ಚುನಾಯಿಸುವ ಅಧಿಕಾರವನ್ನು ಪ್ರಜೆಗಳು ಹೊಂದಿದ್ದರು. ಸಂಯುಕ್ತ ಸಂಸ್ಥಾನಗಳ ಒಕ್ಕೂಟದ ಸೆನೆಟರ್‌ಗಳನ್ನು ನೇರ ಚುನಾವಣೆಯಲ್ಲಿ ಆಯ್ಕೆ ಮಾಡಬೇಕೆಂದು ಪ್ರಗತಿಪರರು ಆಗ್ರಹ ಪಡಿಸಿದರು. ನ್ಯಾಯವಿಧಾಯಕ ಸಭೆಗಳ ಸುಧಾರಣೆಯಲ್ಲಿ ಇದು ಅತಿಮುಖ್ಯವಾದ ಬೆಳವಣಿಗೆ. ೧೯೧೩ರಲ್ಲಿ ಪ್ರಗತಿಪರರು ಮಂಡಿಸಿದ ರಾಜ್ಯಾಂಗದ ೧೭ನೆಯ ತಿದ್ದುಪಡಿಯು ಅಂಗೀಕೃತವಾದ ಮೇಲೆ ಸೆನೆಟರ್‌ಗಳ ನೇರ ಚುನಾವಣೆ ಜಾರಿಗೆ ಬಂತು. ೧೯೧೩ಕ್ಕೆ ಮುಂಚೆ ಸೆನೆಟರ್‌ಗಳನ್ನು ಸಂಸ್ಥಾನಗಳ ನ್ಯಾಯವಿಧಾಯಕ ಸಭೆಗಳು ಆಯ್ಕೆ ಮಾಡುತ್ತಿದ್ದವು. ಕೆಲವು ಸಂದರ್ಭಗಳಲ್ಲಿ ದೊಡ್ಡ

ಕಂಪನಿಗಳು ಈ ಸಭೆಗಳ ಸದಸ್ಯರಿಗೆ ಲಂಚ ಕೊಟ್ಟು ತಮಗೆ ಬೇಕಾದವರನ್ನು ಸೆನೆಟರ್‌ಗಳಾಗಿ ಆಯ್ಕೆಗೊಳ್ಳುವಂತೆ ಮಾಡುತ್ತಿದ್ದವು. ನೇರ ಚುನಾವಣೆ ಈ ಭ್ರಷ್ಟಾಚಾರವನ್ನು ಕೊನೆಗೊಳಿಸಿತು. ನಗರಾಡಳಿತದಲ್ಲಿ ಕೂಡ ಇದೇ ರೀತಿಯ ಸುಧಾರಣೆಗಳನ್ನು ಜಾರಿಗೆ ತರಲಾಯಿತು.

ನಗರಾಡಳಿತ ನಡೆಸಲು ಚುನಾಯಿತ ಸದಸ್ಯರಿಂದ ಕೂಡಿದ ಒಂದು ಸಮಿತಿ (elected commission) ರಚನೆ ಮಾಡಿ ಈ ಸಮಿತಿ ಒಬ್ಬ ನಗರಾಡಳಿತ ನಿರ್ವಾಹಕನನ್ನು (City manager) ಚುನಾಯಿಸುವಂತೆ ವ್ಯವಸ್ಥೆ ಮಾಡಲಾಯಿತು. ಕಾರ್ಖಾನೆಗಳ ಮಾಲೀಕರ ಮತ್ತು ಉದ್ಯಮಿಗಳ ಜವಾಬ್ದಾರಿ (employer's liability) ಅಥವಾ ಕಾರ್ಮಿಕರ ಪರಿಹಾರ (workers' compensation) ಕಾಯಿದೆಗಳನ್ನು ರಾಜ್ಯ ಸರ್ಕಾರಗಳು ಜಾರಿಗೆ ತಂದವು. ೧೯೦೨ರಲ್ಲಿ ಈ ಕಾಯಿದೆಯನ್ನು ಮೊದಲು ಜಾರಿಗೆ ತಂದ ರಾಜ್ಯ ಮೇರಿಲ್ಯಾಂಡ್. ತಪ್ಪು ಯಾರದು ಎಂದು ನಿರ್ಧರಿಸಲು ಸಾಕ್ಷ್ಯಾಧಾರ ಒದಗಿಸುವ ಹೊರೆಯನ್ನು (the burden of proof) ಈ ಕಾಯಿದೆ ಮಾಲೀಕರ/ ಉದ್ಯಮಿಗಳ ಮೇಲೆ ಹೊರಿಸಿತು. ಇದರ ಪರಿಣಾಮವಾಗಿ ಮಾಲೀಕರು/ಉದ್ಯಮಿಗಳು ತಮ್ಮ ಮೇಲೆ ಬರಬಹುದಾದ ದಾವಾಗಳಿಂದ ರಕ್ಷಣೆ ಪಡೆಯಲು ತಮ್ಮ ಕಾರ್ಮಿಕರ ಮೇಲೆ ವಿಮೆ (insurance) ತೆಗೆದುಕೊಳ್ಳುವ ಪದ್ಧತಿ ಜಾರಿಗೆ ಬಂತು. ಎಲ್ಲ ರಾಜ್ಯಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಕೆಲಸಗಳನ್ನು ನಿಯಂತ್ರಿಸುವ ಕಾಯಿದೆಗಳು ಜಾರಿಗೆ ಬಂದವು. ಪ್ರಗತಿಪರ ಯುಗದಲ್ಲಿ ಜಾರಿಗೆ ಬಂದ ಈ ಬದಲಾವಣೆಗಳು ಆಗಿನ ಕಾಲಕ್ಕೆ ಕ್ರಾಂತಿಕಾರಕ ಬದಲಾವಣೆಗಳು. ಬೇರೆ ಯಾವ ದೇಶದಲ್ಲೂ ಪ್ರಜೆಗಳಿಗೆ ಇಷ್ಟು ವ್ಯಾಪಕವಾದ ಅಧಿಕಾರ ವಿರಲಿಲ್ಲ.

ಪ್ರಗತಿಪರ ಯುಗದಲ್ಲಿ ಪ್ರಾರಂಭವಾದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಬುಡಮಟ್ಟದ ಬದಲಾವಣೆಗಳು ಕಾಲಾಂತರದಲ್ಲಿ ಅಮೆರಿಕವನ್ನು ಈಗಿನ ಉಚ್ಛ್ರಾಯ ಸ್ಥಿತಿಗೆ ತಂದು ನಿಲ್ಲಿಸಿವೆ ಎಂದು ಹೇಳಲು ಹೇರಳವಾದ ಐತಿಹಾಸಿಕ ಪುರಾವೆಗಳು ದೊರೆಯುತ್ತವೆ. ಅಮೆರಿಕನ್ ಸಮಾಜದಲ್ಲಿ ರಾಷ್ಟ್ರದ ರಾಜ್ಯಾಂಗದಲ್ಲಿ ಘೋಷಿಸಿದ 'ಎಲ್ಲ ಮಾನವರೂ ಸಮಾನರಾಗಿ ಸೃಷ್ಟಿಗೊಂಡವರು' ಎನ್ನುವ ತತ್ವವನ್ನು ಅನುಷ್ಠಾನಕ್ಕೆ ತರುವ ಗಂಭೀರ ಪ್ರಯತ್ನ ನಡೆದಿದ್ದು ಪ್ರಗತಿಪರ ಯುಗದಲ್ಲಿ. ಇಪ್ಪತ್ತನೆಯ ಶತಮಾನದ ಆರಂಭದ ದಿನಗಳಲ್ಲಿ ಅಮೆರಿಕ ಸುಭಿಕ್ಷವಾಗಿತ್ತು. ಧನ, ಧಾನ್ಯ ಮತ್ತು ಕೈಗಾರಿಕಾ ಉತ್ಪನ್ನಗಳಿಂದ ತುಂಬಿ ಸಮೃದ್ಧವಾಗಿತ್ತು. ಹೀಗಿದ್ದರೂ ಜನ ೧೮೯೦ರ ದಶಕದ ದುಃಸ್ಥಿತಿ, ಆರ್ಥಿಕ ಮುಗ್ಗಟ್ಟು, ಬಡತನ-ಸಿರಿತನಗಳ ತಾರತಮ್ಯ – ಇವುಗಳನ್ನು ಮರೆತಿರಲಿಲ್ಲ. ಬಡವರ ಮತ್ತು ಶ್ರೀಮಂತರ ನಡುವಣ ಕಂದರ ಹಿರಿದಾಗುತ್ತಾ ಹೋಗಲು ಮುಖ್ಯ ಕಾರಣ ಉದ್ಯಮಗಳ ಹಾಗೂ ಕೈಗಾರಿಕೆಗಳ (business and industries)

ವಿಲೀನೀಕರಣ (merging process). ಸಣ್ಣ ಮೀನುಗಳನ್ನು ದೊಡ್ಡ ಮೀನುಗಳು ಕಬಳಿಸಿದಂತೆ ದೊಡ್ಡ ಕಂಪನಿಗಳು ಸಣ್ಣವನ್ನು ಕಬಳಿಸಿ ಬೃಹತ್ ಕಂಪನಿಗಳಾಗಿ ಬೆಳೆದು ಏಕಸ್ವಾಮ್ಯ ಸಂಸ್ಥೆ (monopolistic corporations)ಗಳಾಗಿ ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದವು. ಇಂಥ ಬೃಹತ್ ಸಂಸ್ಥೆಗಳ ಸಂಖ್ಯೆ ಬೆರಳೆಣಿಸುವಷ್ಟು. ಇವುಗಳನ್ನು ನಿರ್ವಹಿಸುವವರು ಕೇವಲ ಕೆಲವು ಬ್ಯಾಂಕರುಗಳು ಮತ್ತು ಕೈಗಾರಿಕೋದ್ಯಮಿಗಳು. ಈ ಏಕಸ್ವಾಮ್ಯತೆಗಳು (monopolies) ೧೮೮೭ರಿಂದ ೧೯೧೩ರವರೆಗೆ ಅಗತ್ಯ ವಸ್ತುಗಳ ಬೆಲೆ ಏರಿಸುತ್ತಾ ಹೋಗಿ ಬಡವ ಮತ್ತು ಮಧ್ಯಮ ವರ್ಗದವರ ಕೊಳ್ಳುವ ಶಕ್ತಿ (buying power) ಕಡಿಮೆಯಾಗುತ್ತಾ ಹೋಗುವಂತೆ ಮಾಡಿದ್ದವು. ಬಡವ-ಶ್ರೀಮಂತರ ನಡುವಣ ತಾರತಮ್ಯದ ಹೃದಯ ವಿದ್ರಾವಕ ದೃಶ್ಯಗಳು ನಗರಗಳಲ್ಲಿ ಕಂಡುಬರುತ್ತಿದ್ದವು.

ನಗರಗಳಲ್ಲಿ ಬಡಬಗ್ಗರ ಕೊಳಚೆ ಪ್ರದೇಶಗಳ ಕಷ್ಟ ಕಾರ್ಪಣ್ಯಗಳಿಗೂ ಮತ್ತು ಮೇಲ್ವರ್ಗದವರ ಮೋಜಿನ ಜೀವನಕ್ಕೂ ಇರುವ ತಾರತಮ್ಯ ಪ್ರಗತಿಪರರಲ್ಲಿ ಕೋಪವನ್ನು ಕೆರಳಿಸಿತು. ಕಾರ್ಖಾನೆಗಳಲ್ಲಿ ಅತಿ ಕಡಿಮೆ ವೇತನಕ್ಕೆ ದಿನಂಪ್ರತಿ ಹದಿನಾರು ಗಂಟೆಗಳ ಕಾಲ ದುಡಿಯುತ್ತಿದ್ದ ಹೆಂಗಸರು ಮತ್ತು ಮಕ್ಕಳ ಪಾಡು ಪ್ರಗತಿಪರರಲ್ಲಿ ರೋಷಾವೇಶಗಳು ಉಕ್ಕುವಂತೆ ಮಾಡಿದವು. ೧೯೧೧ರ ಮಾರ್ಚ್ ತಿಂಗಳಲ್ಲಿ ನ್ಯೂಯಾರ್ಕ್ ನಗರದ 'ಟ್ರೈಯಾಂಗಲ್ ಷರ್ಟ್‌ಲೆಸ್ 'ಕಂಪನಿ'ಯಲ್ಲಿ (Triangle Shirt Waist Company) ಸಂಭವಿಸಿದ ಅಗ್ನಿ ಆಕಸ್ಮಿಕದಲ್ಲಿ ಸಿಕ್ಕಿಕೊಂಡ ಕೆಲವು ಹೆಂಗಸರು ತಪ್ಪಿಸಿಕೊಂಡು ಹೋಗಲು ದಾರಿ ಕಾಣದೆ ಅಗ್ನಿಗೆ ಆಹುತಿಯಾದರು. ಮತ್ತೆ ಕೆಲವರು ಗಾಬರಿಯಲ್ಲಿ ಕಿಟಕಿಗಳಿಂದ ನೂರಾರು ಅಡಿ ಕೆಳಕ್ಕೆ ಧುಮುಕಿ ಸತ್ತರು. ಈ ದುರಂತದಲ್ಲಿ ಮಡಿದ ಮಹಿಳೆಯರ ಸಂಖ್ಯೆ ೧೪೬. ಇದು ಕಾರ್ಮಿಕರು ಕೆಲಸ ಮಾಡುವ ಜಾಗಗಳಲ್ಲಿ ರಕ್ಷಣಾವ್ಯವಸ್ಥೆಗಳ ಕೊರತೆಯನ್ನು ಮನಕರಗುವಂತೆ ದೃಷ್ಟಾಂತಗೊಳಿಸಿತು. ಈ ಬೆಂಕಿಯ ದುರಂತ ಕ್ಷೇಮಕರವಲ್ಲದ ಕೆಲಸ ಮಾಡುವ ಜಾಗಗಳ ವಿರುದ್ಧ ಮತ್ತು ಆಕಸ್ಮಿಕ ಬೆಂಕಿಯಿಂದ ರಕ್ಷಣೆಯಿಲ್ಲದ ಕಾರ್ಮಿಕರ ವಾಸಸ್ಥಳಗಳ ವಿರುದ್ಧ ಆಂದೋಳನಕ್ಕೆ ನಾಂದಿಯಾಯಿತು. ಜೇನ್ ಆ್ಯಡಮ್ಸ್ (Jane Addams) ಮತ್ತು ಫ್ಲಾರೆನ್ಸ್ ಕೆಲ್ಲಿ (Florence kelley) ಇವರು ಚಿಕಾಗೊದಲ್ಲಿ ನಡೆಸುತ್ತಿದ್ದ 'ಹಬ್ ಹೌಸ್' (Hub House) ಸಂಸ್ಥೆ ಮತ್ತು ಲಿಲಿಯನ್ ವಾಲ್ಡ್ (Lillian Wald) ನ್ಯೂಯಾರ್ಕಿನಲ್ಲಿ ನಡೆಸುತ್ತಿದ್ದ 'ಹೆನ್ರಿ ಸ್ಟ್ರೀಟ್ ಸೆಟ್ಲ್‌ಮೆಂಟ್' (Henry street settlement) ಸಂಸ್ಥೆಗಳು ಕೂಡಿ ಬಹಳ ಜಾಗರೂಕತೆಯಿಂದ ಅಲ್ಲಿ ನೆಲಸಿದವರಲ್ಲಿ ಬಡತನ ಯಾವ ಮಟ್ಟದ್ದು ಎನ್ನುವುದನ್ನು ಕೂಲಂಕಷವಾಗಿ ಅಭ್ಯಾಸ ಮಾಡಿ ಅದನ್ನು ಹೋಗಲಾಡಿಸುವ ವಿಧಾನಗಳನ್ನು ಸೂಚಿಸಿದರು. ಸರ್ಕಾರ, ಮಕ್ಕಳು ಕಾರ್ಖಾನೆಗಳಲ್ಲಿ ಮತ್ತು ಇತರ ಉತ್ಪಾದನಾ ಕೇಂದ್ರಗಳಲ್ಲಿ ಕೆಲಸ ಮಾಡುವುದನ್ನು ರದ್ದುಗೊಳಿಸಬೇಕೆಂದೂ, ಕೆಲಸ ಮಾಡುವ ಹೆಂಗಸರಿಗೆ ಕೆಲಸ ಮಾಡುವಲ್ಲಿ ಹೆಚ್ಚಿನ ಕ್ಷೇಮಕರ ವಾತಾವರಣ

ಮತ್ತು ರಕ್ಷಣೆ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡಿದರು. ಅವರ ಇನ್ನೊಂದು ಮುಖ್ಯವಾದ ಬೇಡಿಕೆ ಎಂದರೆ ಸಾರ್ವಜನಿಕ ವಿದ್ಯಾಭ್ಯಾಸ (public education). ಇದನ್ನು ಉತ್ತಮಗೊಳಿಸುವುದು ಮತ್ತು ಎಲ್ಲ ಕಾರ್ಮಿಕರಿಗೆ ಆಕಸ್ಮಿಕ ವಿಮೆ (accident insurance) ಕಡ್ಡಾಯವಾಗಿ ಕೊಡಬೇಕು ಎನ್ನುವುದು. ಈ ಸುಧಾರಣೆಗಳು ಆಗುವವರೆಗೂ ಆಂದೋಳನ ನಿಲ್ಲುವುದಿಲ್ಲವೆಂದು ಹೆಂಗಸರು ತಮ್ಮ ದೃಢನಿಶ್ಚಯವನ್ನು ತಿಳಿಸಿದರು.

ಪ್ರಗತಿಪರರಲ್ಲಿ ಅನೇಕರು ನಗರಾಧ್ಯಕ್ಷರಾಗಿ ಚುನಾಯಿತರಾದರು. ಇವರು ಶಿಕ್ಷಣ ಯೋಜನೆಗಳ ಮೂಲಕ ಪ್ರಜೆಗಳ ಕರ್ತವ್ಯ ಮತ್ತು ನಾಗರಿಕ ಪ್ರಜ್ಞೆ (civic sense) ಗಳ ಬಗ್ಗೆ ಜನಸಾಮಾನ್ಯರಿಗೆ ತಿಳುವಳಿಕೆ ನೀಡುವ ವ್ಯವಸ್ಥೆ ಮಾಡಿದರು. ಸಾರ್ವಜನಿಕ ಭಾಷಣಗಳು ಮತ್ತು ಪತ್ರಿಕೆಗಳಲ್ಲಿ ಲೇಖನಗಳು ಜನಸಾಮಾನ್ಯರಲ್ಲಿ ನಾಗರಿಕ ಪ್ರಜ್ಞೆ ಮೂಡಿಸುವುದರಲ್ಲಿ ಸಹಾಯಕವಾದವು. 'ನಾಗರಿಕ ಪ್ರಜ್ಞೆ' ಎಂದರೆ ನಗರವಾಸಿಗಳು ತಮ್ಮ ನಗರದ ನೈರ್ಮಲ್ಯ, ಸೌಂದರ್ಯ ಮತ್ತು ನಯವಿನಯದ ನಡವಳಿಕೆಗಳಿಂದ ನಗರದ ಪ್ರತಿಷ್ಠೆಯನ್ನು ಹೆಚ್ಚಿಸಿ ಅದರ ಬಗ್ಗೆ ಹೆಮ್ಮೆ ಬೆಳೆಸಿಕೊಳ್ಳುವುದು. ಈ ಪ್ರಜ್ಞೆ ಇಲ್ಲದಿದ್ದಾಗ ನಗರ ಕೊಳಚೆ ಪ್ರದೇಶವಾಗುವುದಕ್ಕೆ ಹೆಚ್ಚು ಕಾಲ ಬೇಕಾಗುವುದಿಲ್ಲ. ಪ್ರಗತಿಪರ ಯುಗದಲ್ಲಿ ಅಮೆರಿಕ ರಾಷ್ಟ್ರದಾದ್ಯಂತ ನಗರಗಳು ಸ್ವಚ್ಛತೆ, ಸೌಂದರ್ಯ ಮತ್ತು ಸೌಜನ್ಯಗಳನ್ನು ಮೈಗೂಡಿಸಿಕೊಂಡು ಬೆಳೆಯುವಂತೆ ನಗರಾಧಿಕಾರಿಗಳು ಶ್ರಮಿಸಿದರು. ನಗರಗಳಲ್ಲಿ ಹೂದೋಟಗಳು, ನಗರದ ಸೌಂದರ್ಯವನ್ನು ಹೆಚ್ಚಿಸಲು ಮರ ಗಿಡಗಳು ಮತ್ತು ಪೊದೆಗಳನ್ನು ಬೆಳೆಸುವುದು ಮತ್ತು ನಗರವಾಸಿಗಳ ಜೀವನದ ಗುಣಮಟ್ಟ (quality of life) ಹೆಚ್ಚಿಸಲು ಬೇಕಾದ ಆಡಳಿತ ವ್ಯವಸ್ಥೆ ಮತ್ತು ಸೌಲಭ್ಯಗಳು – ಪ್ರಗತಿಪರ ವಿದ್ಯಾಸಂಸ್ಥೆಗಳು, ನ್ಯಾಯಾಲಯಗಳು, ಸ್ಥಳೀಯ ತೆರಿಗೆಯನ್ನು ಕಾಲಕಾಲಕ್ಕೆ ಸುಧಾರಿಸುವುದು, ದಕ್ಷರಲ್ಲದ ಅಧಿಕಾರಿಗಳನ್ನು ವಾಪಸ್ಸು ಕರೆಸಿಕೊಳ್ಳುವುದು (recalling officials), ವಿದ್ಯುಚ್ಛಕ್ತಿ ಮತ್ತು ನಗರ ಸಾರಿಗೆ ವ್ಯವಸ್ಥೆ ಮುಂತಾದ ಸಾರ್ವಜನಿಕ ಸೇವೆಗಳ ನಿಯಂತ್ರಣಗಳನ್ನು ಪ್ರಜೆಗಳೇ ನಿರ್ವಹಿಸುವುದು. ಈ ಎಲ್ಲ ಪ್ರಗತಿಪರ ಕಾರ್ಯಕ್ರಮಗಳಿಂದ ನಗರಗಳು ಮತ್ತು ಚಿಕ್ಕ ಪಟ್ಟಣಗಳು ಹಾಗೂ ಹಳ್ಳಿಗಳಲ್ಲಿ ಕೂಡ ಜನಜಾಗೃತಿ ಉಂಟಾಗಿ 'ಅಮೆರಿಕವನ್ನು ಸುಂದರವಾಗಿಡಿ' (Keep America Beautiful) ಎನ್ನುವುದು ನಾಣ್ಣುಡಿಯಾಯಿತು.

ಪಾನನಿರೋಧ

ಮತ್ತು ಬರಿಸುವ ಪಾನೀಯಗಳ ವಿರುದ್ಧ ಚಟುವಟಿಕೆಗಳು ೧೯ನೆಯ ಶತಮಾನದ ಆರಂಭದಲ್ಲಿಯೇ ರಾಷ್ಟ್ರದ ಅನೇಕ ಕಡೆಗಳಲ್ಲಿ ಭರದಿಂದ ನಡೆದು ಕಾಲಾಂತರದಲ್ಲಿ ಸ್ಥಗಿತಗೊಂಡಿದ್ದವು. ಅವುಗಳಿಗೆ ಪ್ರಗತಿಪರ ಯುಗದಲ್ಲಿ ಪುನರ್ಜನ್ಮ ಬಂದಂತಾಗಿ

ಪಾನನಿರೋಧ ಚಳುವಳಿ ಪುನರಾರಂಭವಾಯಿತು. ೧೮೭೩ರಷ್ಟು ಹಿಂದೆಯೇ ಎಲೈಜ಼ ಥಾಮ್‌ಸನ್ (Eliza Trimble Thompson) ಎಂಬಾಕೆ ಕುಡಿತವನ್ನು ಕಡಿಮೆ ಮಾಡಬೇಕೆನ್ನುವ ಧ್ಯೇಯ ಇಟ್ಟುಕೊಂಡ 'ಮಿತವಾಗಿ ಕುಡಿಯಬೇಕು' ಎನ್ನುವ ಚಳುವಳಿಯ ಮುಂದಾಳತ್ವ ವಹಿಸಿ ಒಹಾಯೊ ಸಂಸ್ಥಾನದ ಹಿಲ್ಸ್ ಬರೋ (Hillsboro) ಎಂಬಲ್ಲಿ ಮದ್ಯದಂಗಡಿಯ ಮುಂದೆ ತನ್ನ ಅನುಯಾಯಿಗಳೊಡನೆ ಪ್ರತಿಭಟನೆ ನಡೆಸಿ 'ಕುಡಿತದ ಮೇಲೆ ಹಿಡಿತ' (the Temperence Movement) ಚಳುವಳಿಯನ್ನು ಚೇತನಗೊಳಿಸಿದಳು. ೧೮೭೪ರಲ್ಲಿ ಹದಿನೇಳು ಸಂಸ್ಥಾನಗಳ ಮಹಿಳಾ ಪ್ರತಿನಿಧಿಗಳು ಕ್ಲೀವ್‌ಲ್ಯಾಂಡ್‌ನಲ್ಲಿ ಸಭೆ ಸೇರಿ 'ಕ್ರೈಸ್ತ ಮಹಿಳೆಯರ ಮದ್ಯಪಾನ ಮಿತಗೊಳಿಸುವ ಒಕ್ಕೂಟ' (Women's Christian Temperence Movement) ವನ್ನು ಸ್ಥಾಪಿಸಿದರು. ಮಹಿಳಾ ಜಾಗೃತಿಯಿಂದಾಗಿ 'ಸೆಲೂನ್ ವಿರೋಧ ಸಂಸ್ಥೆ' (Anti-saloon League) ಸ್ಥಾಪಿತವಾದವು. ಈ ಸೆಲೂನ್‌ಗಳು ಮದ್ಯ ಮಾರುವುದರ ಜೊತೆಗೆ ವೇಶ್ಯಾವೃತ್ತಿ ನಡೆಸುವ ಸ್ಥಳಗಳೂ ಆಗಿದ್ದವು. ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಮಿತವಾಗಿ ಕುಡಿಯಬೇಕೆನ್ನುವ ಚಳುವಳಿ ಮದ್ಯಪಾನ ನಿರೋಧ ಚಳುವಳಿಯಾಗಿ ಮಾರ್ಪಾಡಾಯಿತು. ಮೊದಲನೆಯ ಜಾಗತಿಕ ಯುದ್ಧದ ಕಾಲದಲ್ಲಿ ಗಡಸು ಮದ್ಯಗಳನ್ನು (hard liquor) ಮಾರುವುದನ್ನು ನಿಲ್ಲಿಸಲಾಯಿತು. ಮಹಿಳಾ ಸಂಸ್ಥೆಗಳು ಈ ಅವಕಾಶವನ್ನು ಉಪಯೋಗಿಸಿ ಕೊಂಡು ಪಾನನಿರೋಧ ಕಾಯಿದೆಯನ್ನು ಜಾರಿಗೆ ತರುವಂತೆ ಒತ್ತಾಯ ಮಾಡಿದವು. ೧೯೧೯ರಲ್ಲಿ ರಾಜ್ಯಾಂಗದ ೧೮ನೆಯ ತಿದ್ದುಪಡಿಯನ್ನು ಕಾಂಗ್ರೆಸ್ಸಿನಲ್ಲಿ ಅನುಮೋದಿಸಲಾಗಿ ಸೆನೆಟ್‌ನಲ್ಲಿ ಅಂಗೀಕೃತವಾಯಿತು. ೧೯೨೦ರಲ್ಲಿ ಪಾನನಿರೋಧ ಜಾರಿಗೆ ಬಂದು ಮದ್ಯ ತಯಾರಿಸುವುದು, ರವಾನಿಸುವುದು ಮತ್ತು ಮಾರುವುದು ಎಲ್ಲವನ್ನೂ ರದ್ದುಗೊಳಿಸ ಲಾಯಿತು.

ಒಳ್ಳೆಯ ಉದ್ದೇಶದಿಂದ ಜಾರಿಗೆ ತಂದ ಈ ಕಾಯಿದೆಯಿಂದ ಸಮಾಜ ಸುಧಾರಣೆ ಯಾಗುವ ಬದಲು, ಕಳ್ಳತನದಲ್ಲಿ ಮದ್ಯ ತಯಾರಿಸಿ ಮಾರುವ ಗೂಂಡಾಗಳ ತಂಡಗಳು ಅಪಾರ ಹಣ ಗಳಿಸಿ, ಕೊಲೆ, ಸುಲಿಗೆ, ಭ್ರಷ್ಟಾಚಾರಗಳಿಂದ ಸಮಾಜವನ್ನು ಕಲುಷಿತಗೊಳಿಸಿ ಅಪಾರ ಹಾನಿ ಉಂಟುಮಾಡಿದವು. ಪಾನನಿರೋಧ ಜಾರಿಗೆ ತಂದ 'ವೋಲ್‌ಸ್ಟೆಡ್ ಕಾಯಿದೆ' (Volstead Act) ನಿಷ್ಪ್ರಯೋಜಕವಾಗಿ ರಾಷ್ಟ್ರದಲ್ಲಿ ವ್ಯಾಪಕವಾಗಿ ಸಾರಾಯಿ ಯನ್ನು ಕಳ್ಳತನದಲ್ಲಿ ತಯಾರಿಸಿ ಭ್ರಷ್ಟಾಚಾರದ ಮೂಲಕ ಅಧಿಕಾರಿಗಳನ್ನು ಒಲಿಸಿಕೊಂಡು ತಮ್ಮ ದುಷ್ಟ ಸಾಮ್ರಾಜ್ಯವನ್ನು ಸ್ಥಾಪಿಸಿದ್ದ ಧೂರ್ತ ಕುಟುಂಬಗಳ (crime families) ನಾಶಕ್ಕೆ ಉಳಿದಿದ್ದ ಒಂದೇ ಮಾರ್ಗವೆಂದರೆ ವೋಲ್‌ಸ್ಟೆಡ್ ಮಸೂದೆಯನ್ನು ಹಿಂತೆಗೆದುಕೊಂಡು ಪಾನನಿರೋಧವನ್ನು ರದ್ದುಗೊಳಿಸುವುದು. ಹೀಗೆ ೧೯೩೩ರಲ್ಲಿ ಪಾನನಿರೋಧವನ್ನು ರದ್ದುಗೊಳಿಸುವುದು ಅನಿವಾರ್ಯವಾಯಿತು.

ಮಹಿಳೆಯರ ಮತದಾನದ ಹಕ್ಕು

ಅಮೆರಿಕದ ರಾಜ್ಯಾಂಗ 'ಎಲ್ಲ ಮಾನವರೂ ಸಮಾನರಾಗಿ ಸೃಷ್ಟಿಗೊಂಡವರು' ಎಂದು ಘೋಷಿಸಿದರೂ ಆ ಘೋಷಣೆ ಮಹಿಳೆಯರಿಗೆ ಮತ್ತು ಬಣ್ಣದ ತೊಗಲಿನವರಿಗೆ (colored people) ಅನ್ವಯಿಸಲಿಲ್ಲ. ಮಹಿಳೆಯರು ಬಹಳ ಕಾಲದವರೆಗೆ ಬಿಳಿಯ ಗಂಡಸರ ಅಧೀನತೆಯಲ್ಲಿ ಎರಡನೆಯ ದರ್ಜೆಯ ಪ್ರಜೆಗಳಾಗಿ ಪರಾವಲಂಬಿಗಳಾಗಿ ಬದುಕಬೇಕಾಗಿ ಬಂತು. ಮಹಿಳೆಯರು ತಮ್ಮ ಬಿಡುಗಡೆಗಾಗಿ ಪ್ರಗತಿಪರ ಯುಗದವರೆಗೆ ಕಾಯಬೇಕಾಯಿತು.

ರಷ್ಯಾ ದೇಶದಲ್ಲಿ ಕ್ರಾಂತಿಯಾಗಿ ಜ಼ಾರ್ ಪ್ರಭುತ್ವ ಕೊನೆಗೊಂಡು ಕಮ್ಯೂನಿಸ್ಟರು ಅಧಿಕಾರಕ್ಕೆ ಬಂದ ಮೇಲೆ ಆ ದೇಶದ ಮಹಿಳೆಯರಿಗೆ ಸಮಾನ ಸ್ಥಾನ ಮಾನಗಳು ಮತ್ತು ಸೌಲಭ್ಯಗಳು ದೊರೆತವು. ಆದರೆ ಪ್ರಜಾರಾಜ್ಯವೆನ್ನಿಸಿಕೊಂಡ ಅಮೆರಿಕದಲ್ಲಿ ಮಹಿಳೆಯರಿಗೆ ಮತ್ತು ಕರಿಯರಿಗೆ ಮತದಾನದ ಹಕ್ಕು ಇರಲಿಲ್ಲ. ಆದ್ದರಿಂದ ೧೯೧೭ರಲ್ಲಿ ಸೋವಿಯೆಟ್ ಒಕ್ಕೂಟದ ರಾಯಭಾರಿ ಅಮೆರಿಕಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಅಮೆರಿಕನ್ ಮಹಿಳೆಯರು ರಾಯಭಾರಿಯ ಸ್ವಾಗತ ಸಮಾರಂಭದಲ್ಲಿ ಭಿತ್ತಿಫಲಕಗಳ ಮೇಲೆ 'ನಾವು ಅಮೆರಿಕನ್ ಮಹಿಳೆಯರು ಹೇಳುವುದೇನೆಂದರೆ – ಅಮೆರಿಕ ಪ್ರಜಾಪ್ರಭುತ್ವವಲ್ಲ! ಇಪ್ಪತ್ತು ಮಿಲಿಯನ್ ಮಹಿಳೆಯರಿಗೆ ಇಲ್ಲಿ ಮತದಾನದ ಹಕ್ಕಿಲ್ಲ!' ಎನ್ನುವ ಘೋಷಣೆಯನ್ನು ಬರೆದು ಪ್ರದರ್ಶನ ನಡೆಸಿದರು. ಹೀಗೆ ಪ್ರದರ್ಶನ ನಡೆಸಿದವರು 'ಸಫ್ರಾಜಿಸ್ಟ್' (Suffragists), ಮಹಿಳೆಯರ ಮತದಾನದ ಹಕ್ಕಿಗೆ ಹೋರಾಟ ನಡೆಸುವವರು. ಇದು ಪ್ರಾರಂಭವಾಗಿದ್ದು ೧೮೪೮ರಲ್ಲಿ. 'ಮಹಿಳಾ ಮತದಾನದ ಹಕ್ಕಿನ ಸಭೆ' (Women's Rights Commission) ಮೊದಲಬಾರಿಗೆ ನ್ಯೂಯಾರ್ಕ್ ಸಂಸ್ಥಾನದ ಸೆನೆಕ ಫಾಲ್ಸ್ (Seneca Falls) ಎಂಬಲ್ಲಿ ಸೇರಿ ಕಾರ್ಯಕಲಾಪಗಳನ್ನು ನಡೆಸಿತು. ೧೮೬೯ರಲ್ಲಿ ಸೂಸನ್ ಆ್ಯಂತನಿ (Susan Anthony) 'ರಾಷ್ಟ್ರೀಯ ಮಹಿಳಾ ಮತದಾನ ಹಕ್ಕು ಹೋರಾಟ ಸಂಸ್ಥೆ' (National Women's Suffrage Association) ಯನ್ನು ಸ್ಥಾಪಿಸಿದಳು. ಅವಳ ಜೊತೆಗೂಡಿದ ಎಲಿಜ಼ಬೆತ್ ಕ್ಯಾಡಿ ಸ್ಟಾಂಟನ್ (Elizabeth Cady Stanton) ಸಮಾಜದ ಎಲ್ಲ ವರ್ಗಗಳ ಮಹಿಳೆಯರನ್ನು ಸಂಸ್ಥೆಯ ಸದಸ್ಯರನ್ನಾಗಿ ಮಾಡಿದರು. ಈ ಸಂಸ್ಥೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು. ಈ ಹಕ್ಕನ್ನು ನಿರ್ಧರಿಸುವುದು ಸಂಸ್ಥಾನದ ನ್ಯಾಯವಿಧಾಯಕ ಸಭೆಗಳೋ ಅಥವಾ ರಾಷ್ಟ್ರಮಟ್ಟದಲ್ಲಿ ರಾಜ್ಯಾಂಗ ತಿದ್ದುಪಡಿಯ ಮೂಲಕ ಕಾಂಗ್ರೆಸ್ ಮಾಡಬೇಕಾದ ಕಾರ್ಯವೋ ಎನ್ನುವುದು ಖಚಿತವಾಗದೆ ಸ್ವಲ್ಪ ಸಮಯ ಕಳೆಯಿತು. ಮಹಿಳೆಯರಿಗೆ ಮತದಾನದ ಹಕ್ಕನ್ನು ಮದ್ಯ ತಯ್ಯಾರಿಕೆಯ ಉದ್ಯಮದವರು ತೀವ್ರವಾಗಿ ವಿರೋಧಿಸಿದರು. ಅಪಾರ ಹಣ ಗಳಿಸಿದ್ದ ಈ ಉದ್ಯಮಿಗಳು ರಾಜಕಾರಣಿಗಳನ್ನು ಲಂಚ ರುಷುವತ್ತುಗಳಿಂದ ಒಲಿಸಿಕೊಂಡು ಬಲಿಷ್ಠರಾಗಿ ಬೆಳೆದು ರಾಜಕೀಯ ಕ್ಷೇತ್ರವನ್ನು ನಿಯಂತ್ರಿಸುವ ಸಾಮರ್ಥ್ಯ ಪಡೆದಿದ್ದರು.

ಮಹಿಳೆಯರ ಸಂಘ ಸಂಸ್ಥೆಗಳು ಪಾನನಿರೋಧ ಕಾಯಿದೆ ಜಾರಿಗೆ ಬರಲು ಕಾರಣರು ಎಂದು ಮದ್ಯ ತಯಾರಕರು ದೂಷಿಸಿ ಅವರಿಗೆ ಮತದಾನದ ಹಕ್ಕು ದೊರೆಯದಂತೆ ಮಾಡಲು ಎಲ್ಲ ರೀತಿಯಿಂದ ಪ್ರಯತ್ನಿಸುತ್ತಿದ್ದರು. ಮಹಿಳೆಯರ ಚಳುವಳಿ ಗಂಡಸರ ಅಪಹಾಸ್ಯ, ನಿಂದೆ ಮತ್ತು ಕೋಪಕ್ಕೆ ಗುರಿಯಾಗಿತ್ತು. ಬಹಳ ಜನ ಹೆಂಗಸರೇ ಈ ಚಳುವಳಿಯ ಬಗ್ಗೆ ಅನಾಸಕ್ತರಾಗಿದ್ದರು.

೧೯೦೦ರಲ್ಲಿ ಕ್ಯಾರ್ರಿ ಚಾಪ್‌ಮನ್ ಕೇಟ್ (Carrie Chapman Cait) ಎಂಬುವಳು ರಾಷ್ಟ್ರೀಯ ಮಹಿಳಾಸಂಸ್ಥೆಯ ಅಧ್ಯಕ್ಷಿಣಿಯಾದ ಮೇಲೆ ಫೆಡರಲ್ ಸಂಸ್ಥೆಗಳಿಂದ ತಮ್ಮ ಗುರಿಸಾಧನೆ ಮಾಡಬಹುದು ಎಂದು ತಿಳಿದು ಮಹಿಳೆಯರ ಹಕ್ಕನ್ನು ಬೆಂಬಲಿಸುವ ಮಸೂದೆಯನ್ನು ಕಾಂಗ್ರೆಸ್ಸಿನಲ್ಲಿ ಮಂಡಿಸುವಂತೆ ಒತ್ತಾಯ ಹಾಕಲಾಯಿತು. ಈ ಪ್ರಯತ್ನ ದಲ್ಲಿ ಇನ್ನೊಂದು ಪ್ರಬಲವಾದ ಮಹಿಳೆಯರ ಹಕ್ಕನ್ನು ಪ್ರತಿಪಾದಿಸುವ – 'ಕಾಂಗ್ರೆಸ್ಸಿಗೆ ಸೇರಿದ ಒಕ್ಕೂಟ' (congressional union) ಎನ್ನುವ ಸಂಸ್ಥೆಯ ಬೆಂಬಲ ದೊರೆಯಿತು. ಈ ಸಂಸ್ಥೆ ರಾಷ್ಟ್ರೀಯ ಸಂಸ್ಥೆಗಿಂತಲೂ ಉದ್ವೇಗಪೂರಿತ ಹಾಗೂ ಹಠ ಸಾಧಿಸುವ ಸದಸ್ಯರಿಂದ ಕೂಡಿತ್ತು. ಇದನ್ನು ಅಸ್ತಿತ್ವಕ್ಕೆ ತಂದವರು ಆ್ಯಲಿಸ್ ಪಾಲ್ (Alice Paul) ಮತ್ತು ಲೂಸಿ ಬರ್ನ್ಸ್ (Lucy Burns) ಎಂಬ ಮಹಿಳಾ ನಾಯಕಿಯರು. ಇವರು ತಮ್ಮ ಧ್ಯೇಯ ಸಾಧಿಸಲು ಶ್ವೇತಭವನವನ್ನು ಸುತ್ತುವರಿದು ಸಂಪು ಹೂಡಲೂ ಹೆದರಲಿಲ್ಲ. ಇಂಥ ತೀವ್ರಗಾಮಿ ವಿಧಾನಗಳನ್ನು ರಾಷ್ಟ್ರೀಯ ಮಹಿಳಾಸಂಸ್ಥೆ ಒಪ್ಪಲಿಲ್ಲ. ಅವರು ಸಂಸ್ಥಾನದ ಮಟ್ಟದಲ್ಲಿ ಮೊದಲು ಮಹಿಳೆಯರ ಮತದಾನದ ಹಕ್ಕು ಜಾರಿಗೆ ಬರಬೇಕು, ನಂತರ ರಾಷ್ಟ್ರಮಟ್ಟದಲ್ಲಿ ಅದನ್ನು ಜಾರಿಗೆ ತರುವುದು ಕಷ್ಟವಾಗುವುದಿಲ್ಲ ಎನ್ನುವ ಧೋರಣೆ ತಳೆದಿದ್ದರು. ಹೀಗೆ ಮಹಿಳೆಯರ ಮತದಾನ ಚಳುವಳಿಯಲ್ಲಿ ಕಾರ್ಯಾಚರಣೆಯ ಬಗ್ಗೆ ಒಮ್ಮತವಿರಲಿಲ್ಲ. ಆದರೂ ಚಳುವಳಿ ಯಶಸ್ವಿಯಾಗುವ ಚಿಹ್ನೆಗಳು ತೋರಿಬಂದು ಮಹಿಳೆಯರಲ್ಲಿ ಭರವಸೆ ಮೂಡಿಸಿದವು.

೧೯೧೨ರ ಚುನಾವಣೆಯಲ್ಲಿ ಪ್ರಗತಿಪರ ಪಕ್ಷದ ಚುನಾವಣೆ ಪ್ರಚಾರವೇದಿಕೆಯಲ್ಲಿ ಮಹಿಳೆಯರ ಮತದಾನದ ಹಕ್ಕನ್ನು ಒಂದು ಮುಖ್ಯ ಸಮಸ್ಯೆ ಎಂದು ಪರಿಗಣಿಸಿ ವೇದಿಕೆಯಲ್ಲಿ ತಮ್ಮ ಬೇಡಿಕೆಗಳನ್ನು ಮಂಡಿಸಲು ಮಹಿಳಾನಾಯಕಿಯರಿಗೆ ಅವಕಾಶ ಕೊಡಲಾಯಿತು. ೧೯೧೮ರಲ್ಲಿ ಮಹಿಳಾ ಮತದಾನ ಹಕ್ಕಿನ ಚಳುವಳಿ ಮೊದಲಿನ ಹಾಗೂ ಮುಖ್ಯವಾದ ಜಯ ಗಳಿಸಿತು. ಅಧ್ಯಕ್ಷ ಉಡ್ರೋ ವಿಲ್‌ಸನ್ (Woodrow Wilson) 'ಆ್ಯಂತನಿ ತಿದ್ದುಪಡಿ' (Anthony Amendment)ಯನ್ನು ಬೆಂಬಲಿಸಿ ಕಾಂಗ್ರೆಸ್ ಈ ತಿದ್ದುಪಡಿಯನ್ನು ಅಂಗೀಕರಿಸುವಂತೆ ಮಾಡಿದನು. ಈ ತಿದ್ದುಪಡಿಯ ಪ್ರಕಾರ 'ಸಂಯುಕ್ತ ಸಂಸ್ಥಾನಗಳ ಪ್ರಜೆಗಳ ಮತದಾನದ ಹಕ್ಕನ್ನು ಲಿಂಗಭೇದ ಕಾರಣದಿಂದ ಫೆಡರಲ್ ಅಥವಾ ಸಂಸ್ಥಾನಗಳ ಸರ್ಕಾರಗಳು ನಿರಾಕರಿಸುವುದಾಗಲಿ ಅಥವಾ ಮೊಟಕುಗೊಳಿಸುವು ದಾಗಲಿ ಮಾಡಕೂಡದು'. ಇದು ಕಾಂಗ್ರೆಸ್ಸಿನಲ್ಲಿ ಅಂಗೀಕೃತವಾದರೂ ಅದನ್ನು ಎಲ್ಲ

ಸಂಸ್ಥಾನಗಳು ಅನುಮೋದಿಸಿ ಜಾರಿಗೆ ತರಲು, ಮಹಿಳೆಯರು ಮೊದಲನೆಯ ಜಾಗತಿಕ ಯುದ್ಧದಲ್ಲಿ ವ್ಯಾಪಕವಾಗಿ ಭಾಗವಹಿಸಿ ತಾವು ಮತ ನೀಡಲು ಗಂಡಸರಷ್ಟೇ ಸಮರ್ಥರು ಎನ್ನುವುದನ್ನು ಸಾಬೀತುಗೊಳಿಸಬೇಕಾಯಿತು. ೧೯೨೦ರಲ್ಲಿ ಟ್ಯಂತನಿ ತಿದ್ದುಪಡಿ ಅಂತಿಮ ವಾಗಿ ಎಲ್ಲ ಸಂಸ್ಥಾನಗಳ ಅನುಮೋದನೆ ಪಡೆದು ಕಾಯಿದೆ ರೂಪದಲ್ಲಿ ಜಾರಿಗೆ ಬಂತು.

ಕರಿಯರ ಸ್ಥಿತಿಗತಿಗಳು

ಪ್ರಗತಿಪರ ಯುಗದಲ್ಲಿ ಬಿಳಿಯರ ಮತ್ತು ಕರಿಯರ ನಡುವೆ ಪರಸ್ಪರ ತಿಳುವಳಿಕೆ ಹೆಚ್ಚಿ, ಸಮಾನತೆಯನ್ನು ಉಂಟು ಮಾಡುವ ಪ್ರಯತ್ನಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಿತು. ಈ ಪ್ರಯತ್ನಗಳು ಒಂದು ಆಂದೋಳನದ ರೂಪ ತಾಳಿ ವ್ಯಾಪಕವಾಗಿ ಹರಡುತ್ತ ಹೋಯಿತು. ಇದರ ನಿರ್ದೇಶಕನಾಗಿದ್ದವನು ಹಾರ್ವರ್ಡ್ ವಿಶ್ವವಿದ್ಯಾನಿಲಯದ ಪದವೀಧರ ಮತ್ತು ಕಾಲೇಜು ಪ್ರಾಧ್ಯಾಪಕನಾಗಿದ್ದ ಡಬ್ಲ್ಯೂ.ಇ.ಬಿ. ಡುಬಾಯ್ (W.E.B. DuBois). ಇವನು ೧೯೦೩ರಲ್ಲಿ ಪ್ರಸಿದ್ಧಿ ಪಡೆದಿದ್ದ 'ಕರಿಯ ಜನರ ಆತ್ಮಗಳು' (The Souls of the Black Folk) ಎಂಬ ಪುಸ್ತಕದ ಲೇಖಕನಾಗಿದ್ದನು. ಡುಬಾಯ್ ತನ್ನ ಸಮಕಾಲೀನ ಕರಿಯರ ನಾಯಕ ಬೂಕರ್ ಟಿ. ವಾಷಿಂಗ್‌ಟನ್ ಕರಿಯರ ಅಭ್ಯುದಯದ ಬಗ್ಗೆ ಹೊಂದಿದ್ದ ಅಭಿಪ್ರಾಯಗಳನ್ನು ಕಟುವಾಗಿ ಟೀಕಿಸಿದನು. ವಾಷಿಂಗ್‌ಟನ್ ಪ್ರಕಾರ ಕರಿಯರು ಮೊದಲು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬೇಕು. ಇದಕ್ಕಾಗಿ ಅವರು ವ್ಯವಸಾಯ ಮತ್ತು ಇತರ ಕುಶಲ ಕಸುಬುಗಳನ್ನು ಕಲಿತು ಹಣ ಸಂಪಾದನೆ ಮಾಡಬೇಕು. ಆರ್ಥಿಕ ಅಭಿವೃದ್ಧಿಯ ಫಲವಾಗಿ ಇತರೆ ಸೌಲಭ್ಯಗಳನ್ನು ಸುಲಭವಾಗಿ ಸಾಧಿಸಬಹುದು ಎನ್ನುವುದು ವಾಷಿಂಗ್‌ಟನ್‌ನ ನಂಬಿಕೆ. ಡುಬಾಯ್ ಈ ಆರ್ಥಿಕ ಸ್ವಾವಲಂಬನೆಯನ್ನು ಒಪ್ಪಿಕೊಂಡರೂ ಅವನ 'ಕ್ರಮೇಣ ಅಭಿವೃದ್ಧಿ' (gradu-alism)ಯನ್ನು ನಿರಾಕರಿಸಿದನು. ಹಾಗೆಯೇ ಕರಿಯರು ರಾಜಕೀಯ ಚಟುವಟಿಕೆಗಳಿಂದ ದೂರವಾಗಿರಬೇಕು ಎನ್ನುವ ವಾಷಿಂಗ್‌ಟನ್‌ನ ಧೋರಣೆಯನ್ನು ಖಂಡಿಸಿದನು.

ಡುಬಾಯ್ ತನ್ನ ಯೋಜನೆಯನ್ನು ವಿದ್ಯಾವಂತರೂ ಮತ್ತು ಸ್ಥಿತಿವಂತರೂ ಆದ ಕರಿಯ ಜನಾಂಗದ 'ಹತ್ತನೆಯ ಅಂಶ' (talented tenth) ಬುದ್ಧಿಜೀವಿಗಳ ನಾಯಕತ್ವದ ಆಧಾರದ ಮೇಲೆ ರಚಿಸಿದನು. ಈ ಸ್ಥಿತಿವಂತ ಬುದ್ಧಿಜೀವಿಗಳು ತಮ್ಮ ಸಮುದಾಯದ ಅಭಿವೃದ್ಧಿ ಯೋಜನೆಯ ನಾಯಕತ್ವ ವಹಿಸಿಕೊಳ್ಳಬೇಕು. ೧೯೦೫ರಲ್ಲಿ ಡುಬಾಯ್ 'ನಯಾಗರ ಚಳುವಳಿ' (Niagara Movement)ಯನ್ನು ಪ್ರಾರಂಭಿಸಿದನು. ಈ ಚಳುವಳಿಯ ಉದ್ದೇಶಗಳು ಮುಖ್ಯವಾಗಿ: ಶಾಲೆಗಳ ಪ್ರತ್ಯೇಕತೆಯನ್ನು (school seg-regation) ವಿರೋಧಿಸುವುದು, ವರ್ಣ ಪಕ್ಷಪಾತ (racial discrimination) ದ ಹೊಣೆಗಾರಿಕೆಯನ್ನು ಬಿಳಿಯರ ಮೇಲೆ ಹೊರಿಸುವುದು. ಕರಿಯರಿಗೆ ಉನ್ನತ ಶಿಕ್ಷಣ ಅವಶ್ಯಕವಲ್ಲ ಎಂದು ಹೇಳಿದ ವಾಷಿಂಗ್‌ಟನ್‌ನ ವಿರೋಧವಾಗಿ, ಡುಬಾಯ್ ಕರಿಯರು ಉನ್ನತ ಶಿಕ್ಷಣ ಪಡೆಯಬೇಕೆಂದು ಆಗ್ರಹಪಡಿಸಿದನು. ಇದಲ್ಲದೆ ಹಣ ಮತ್ತು ಅಂತಸ್ತು

(status) ಹೆಚ್ಚಿಸುವ ವೃತ್ತಿಗಳನ್ನು (professions) ಕೈಗೊಳ್ಳಬೇಕು ಮತ್ತು ಕರಿಯರಿಗೆ ಪೂರ್ಣ ರಾಜಕೀಯ ಹಕ್ಕುಗಳು (full political rights) ದೊರೆಯಬೇಕು. ಆದರೆ ನಯಾಗರ ಚಳುವಳಿಯ ಕಸುವು ಕಡಿಮೆಯಾಗುತ್ತಾ ಹೋದಂತೆ ಆ ಚಳುವಳಿಯು ಸೃಷ್ಟಿಸಿದ ಚೈತನ್ಯ ಹಲವು ಪ್ರಗತಿಪರರನ್ನು ಕಾರ್ಯನಿರತರಾಗುವಂತೆ ಮಾಡಿತು. ೧೯೦೯ರಲ್ಲಿ ಆಸ್ವಾಲ್ಡ್ ವಿಲ್ಲರ್ಡ್, ಜಾನ್ ಡ್ಯೂಯಿ, ಜೇನ್ ಆ್ಯಡಮ್ಸ್ ಮತ್ತು ಇತರರು ನಯಾಗರ ಚಳುವಳಿಯ ಸದಸ್ಯರನ್ನು ಕೂಡಿಕೊಂಡು ಕರಿಯ ಅಮೆರಿಕನ್ನರು ರಾಜಕೀಯ ಮತ್ತು ಸಾಮಾಜಿಕ ಸಮಾನತೆಯನ್ನು ಸಾಧಿಸಲು ನೆರವಾಗುವ ಒಂದು ಶಾಶ್ವತವಾದ ಸಂಸ್ಥೆಯನ್ನು ಸ್ಥಾಪಿಸಿದರು. ೧೯೧೦ರಲ್ಲಿ ರಚಿತಗೊಂಡ ಈ ಸಂಸ್ಥೆಯ ಹೆಸರು: 'ವರ್ಣಜನಾಂಗದ ಅಭಿವೃದ್ಧಿಯ ರಾಷ್ಟ್ರೀಯ ಸಂಸ್ಥೆ' (The National Association for the Advancement of Colored Peoples- NAACP).

NAACP ಸಂಸ್ಥೆ ತ್ವರಿತಗತಿಯಲ್ಲಿ ಬೆಳೆದು ತನ್ನ ಕಾರ್ಯಾಚರಣೆಯನ್ನು ವಿಸ್ತಾರಗೊಳಿಸಿತು. ಈ ಸಂಸ್ಥೆ ಕೈಗೊಂಡ ಮೊದಲಿನ ಕಾರ್ಯಕ್ರಮವೆಂದರೆ ಕರಿಯರನ್ನು ಬಿಳಿಯರು ನ್ಯಾಯವಿಚಾರಣೆಯಿಲ್ಲದೆ ನೇಣು ಹಾಕುವುದನ್ನು (lynching) ನಿಲ್ಲಿಸುವುದು. ಹಾಗೆ ಮಾಡಿದವರ ಮೇಲೆ ಈ ಸಂಸ್ಥೆ ನ್ಯಾಯಾಲಯಗಳಲ್ಲಿ ದಾವಾ ಹಾಕಿ, ಶ್ರೇಷ್ಠ ನ್ಯಾಯಾಲಯದವರೆಗೂ ಕೊಂಡು ಹೋಗಿ ಅನೇಕ ಮುಖ್ಯ ದಾವಾಗಳಲ್ಲಿ ಜಯಗಳಿಸಿದರು. NAACP ಅಮೆರಿಕನ್ ಸಮಾಜದ ಅನುಕಲನಕ್ಕೆ (integration) ಕರೆ ನೀಡಿತು. ೧೯೨೧ರ ಹೊತ್ತಿಗೆ ದೇಶದಾದ್ಯಂತ ಈ ಸಂಸ್ಥೆಯ ೪೦೦ ಶಾಖೆಗಳು ಸ್ಥಾಪಿಸಲ್ಪಟ್ಟವು.

೧೯೧೧ರಲ್ಲಿ ನಗರವಾಸಿಗಳಾದ ಕರಿಯರು ಅಲ್ಲಿನ ಜೀವನಕ್ಕೆ ಹೊಂದಿಕೊಳ್ಳಲು ಮತ್ತು ಕೆಲಸ ಹುಡುಕಿಕೊಳ್ಳಲು ಸಹಾಯ ಒದಗಿಸಲು 'ನಗರಮಂಡಲಿ' (Urban League) ಸ್ಥಾಪನೆಗೊಂಡಿತು. ಮೊದಲನೆಯ ಜಾಗತಿಕ ಯುದ್ಧದ ಸಮಯದಲ್ಲಿ ಅಮೆರಿಕದ ದಕ್ಷಿಣ ಪ್ರಾಂತಗಳ ಕರಿಯರು ಬೂಕರ್ ಟಿ. ವಾಷಿಂಗ್‌ಟನ್‌ನ ಬೋಧನೆಗೆ ಕಿವಿಗೊಡದೆ ಉತ್ತರ ಪ್ರಾಂತಗಳ ನಗರಗಳಿಗೆ ಅಧಿಕ ಸಂಖ್ಯೆಯಲ್ಲಿ ವಲಸೆ ಹೋದರು. ಹೀಗೆ ವಲಸೆ ಹೋದ ಕರಿಯರ ರಾಜಕೀಯ ಮತ್ತು ಆರ್ಥಿಕ ಅಂತಸ್ತು ಬದಲಾವಣೆ ಹೊಂದಿದವು. ನಗರಗಳಲ್ಲಿ ಕರಿಯ ಜನದಟ್ಟಣೆಯ ಭಾಗಗಳು (Black urban ghettos) ಹುಟ್ಟಿಕೊಂಡು ಕರಿಯರೆ ನಿರ್ವಹಣೆ ಮಾಡುವ ಬ್ಯಾಂಕ್‌ಗಳು, ಅಂಗಡಿಗಳು ಮತ್ತು ವೃತ್ತಪತ್ರಿಕೆಗಳು ವೃದ್ಧಿಗೊಳ್ಳುತ್ತ ಬಂದವು.

ಅಧ್ಯಕ್ಷ ಟಾಫ್ಟ್‌ನ ಆಡಳಿತ

ಅಧ್ಯಕ್ಷ ರೂಸ್‌ವೆಲ್ಟ್‌ನು ತನ್ನ ಉತ್ತರಾಧಿಕಾರಿಯಾಗಿ ಒಹಾಯೊ ಸಂಸ್ಥಾನದ ವಿಲಿಯಂ ಹಾವರ್ಡ್ ಟಾಫ್ಟ್‌ನನ್ನು ನೇಮಿಸಿದ್ದನ್ನು ಹಿಂದೆ ತಿಳಿಸಲಾಗಿದೆ. ಡೆಮೊಕ್ರಾಟಿಕ್

ಪಕ್ಷದವರು ವಿಲಿಯಂ ಬ್ರೈಯನ್‌ನನ್ನು ಮೂರನೆಯ ಬಾರಿಗೆ ಅಧಕ್ಷಸ್ಥಾನಕ್ಕೆ ಅಭ್ಯರ್ಥಿಯಾಗಿ ನಿಲ್ಲಿಸಿದರು. ಡೆಮೊಕ್ರಾಟರ ಚುನಾವಣಾ ವೇದಿಕೆ ರಿಪಬ್ಲಿಕನ್ನರ ವೇದಿಕೆಗಿಂತಲೂ ಪ್ರಗತಿಪರವಾಗಿತ್ತು. ನಿಕ್ಷೇಪಗಳನ್ನು ಹತ್ತಿಕ್ಕುವುದು ಮತ್ತು ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವುದು ಡೆಮೊಕ್ರಾಟರ ಚುನಾವಣಾ ಪ್ರಚಾರದ ಮುಖ್ಯ ವಿಷಯಗಳಾಗಿದ್ದವು. ಇಷ್ಟೆಲ್ಲ ಪ್ರಯತ್ನ ಪಟ್ಟರೂ ಬ್ರೈಯನ್ ಒಂದು ಮಿಲಿಯನ್‌ಗಿಂತ ಹೆಚ್ಚಿನ ಮತಗಳಿಂದ ಸೋತನು. ಹೊಸದಾಗಿ ಆಡಳಿತ ವಹಿಸಿಕೊಂಡ ಟಾಫ್ಟನು (೨೭ನೆಯ ಅಧ್ಯಕ್ಷ) ಒಂದು ವಿಶಿಷ್ಟ ಸಮಸ್ಯೆಯನ್ನು ಎದುರಿಸಬೇಕಾಯಿತು. ಇವನು ರೂಸ್‌ವೆಲ್ಟ್‌ನ ಬೆಂಬಲದಿಂದ ಅಧಿಕಾರಕ್ಕೆ ಬಂದವನೆಂದು ಎಲ್ಲರಿಗೂ ತಿಳಿದ ವಿಷಯವಾಗಿತ್ತು. ಆದ್ದರಿಂದ ರೂಸ್‌ವೆಲ್ಟ್‌ನ ಅನುಯಾಯಿಗಳು – ಟಾಫ್ಟ್ ರೂಸ್‌ವೆಲ್ಟ್‌ನ ಹೆಜ್ಜೆಗಳನ್ನೇ ಹಿಂಬಾಲಿಸಬೇಕೆಂದು ಅಪೇಕ್ಷಿಸಿದರು. ಕೆಲವು ವಿಷಯಗಳಲ್ಲಿ ಟಾಫ್ಟ್ ರೂಸ್‌ವೆಲ್ಟ್‌ನ ಧೋರಣೆಗಳನ್ನೇ ಅನುಸರಿಸಿದನು. (ಟಾಫ್ಟ್‌ನ ನಿಕ್ಷೇಪ ವಿರೋಧ ಕಾರ್ಯಾಚರಣೆಗಳು ಇದಕ್ಕೆ ನಿದರ್ಶನಗಳಾಗಿವೆ.) ಆದರೆ ಅಂತಿಮವಾಗಿ ಕೆಲವು ವಿವಾದಾಂಶಗಳನ್ನು ತಾನು ಕಂಡು ಅರ್ಥಮಾಡಿಕೊಂಡ ಹಾಗೆ ನಿರ್ಧರಿಸಬೇಕಾಯಿತು. ಎಲ್ಲ ವಿಷಯಗಳನ್ನೂ ರೂಸ್‌ವೆಲ್ಟ್‌ನ ದೃಷ್ಟಿಯಿಂದಲೇ ಕಾಣುವುದು ಕಷ್ಟವಾಯಿತು.

ಟಾಫ್ಟ್ ತಾನು ಹೇಳಿದ್ದೇ ಆಗಬೇಕು ಎನ್ನುವ ಜಿಗುಟು ಸ್ವಭಾವದವನಲ್ಲ. ಆಕ್ರಮಣ ಶೀಲತೆಯವನಲ್ಲದ ಈತ ಒಳಸರಿಯುವ (retiring) ಪ್ರಕೃತಿಯವನು. ಅಧ್ಯಕ್ಷನಾಗಿ ಆಕ್ರಮಣ ಧೋರಣೆಯನ್ನು ತಳೆಯುವ ಅವಶ್ಯಕತೆ ಅವನಿಗೆ ಕಂಡುಬರಲಿಲ್ಲ. ಆದರೆ ಆಗಿನ ಪರಿಸ್ಥಿತಿಯಲ್ಲಿ ಬಲಿಷ್ಠ ನಾಯಕತ್ವದ ಅಗತ್ಯವಿತ್ತು. ಪ್ರಗತಿಶೀಲತೆ ಎರಡು ಪಕ್ಷಗಳೂ ಅಂಗೀಕರಿಸಿದ ಆಂದೋಳನವಾಗಿತ್ತು. ಈ ಆಂದೋಳನ ಹೆಚ್ಚು ಕ್ರಿಯಾತ್ಮಕವಾಗಿ ರೂಪುಗೊಳ್ಳುತ್ತಿತ್ತು. ಟಾಫ್ಟನ ಮಂದಗತಿಯ ಧೋರಣೆ ಪ್ರಗತಿಪರರಿಗೆ ಹಿಡಿಸಲಿಲ್ಲ. ೧೯೧೦ರ ಹೊತ್ತಿಗೆ ಟಾಫ್ಟ್‌ನು ಪ್ರಗತಿಪರರ ಬೆಂಬಲ ಕಳೆದುಕೊಳ್ಳುತ್ತಾ ಹೋದನು. ಸುಂಕದ ಬಗ್ಗೆ ನಡೆದ ವಾದ ವಿವಾದಗಳು ಟಾಫ್ಟ್ ಮತ್ತು ಪ್ರಗತಿಪರರ ನಡುವೆ ಕಂದಕ ಏರ್ಪಡಿಸಿ ಎರಡು ಕಡೆಯವರು ಪರಸ್ಪರ ದೂರ ಸರಿಯುವಂತೆ ಮಾಡಿತು. ಪ್ರಗತಿಪರರು ಹೊರದೇಶಗಳಿಂದ ಆಮದಾಗುವ ಸರಕುಗಳ ಮೇಲೆ ಸುಂಕ ಕಡಿಮೆ ಮಾಡಬೇಕೆಂದು ಆಗ್ರಹಪಡಿಸಿದರು. ಹೀಗೆ ಮಾಡುವುದರಿಂದ ಆಮದಾಗುವ ಸರಕುಗಳೆಲ್ಲ ಅಮೆರಿಕದಲ್ಲಿ ತಯಾರಾಗುವ ಸರಕುಗಳಿಗಿಂತ ಕಡಿಮೆ ಬೆಲೆಗೆ ದೊರಕುವಂತಾಗಬೇಕೆಂಬುದು ಅವರ ಧೋರಣೆ. ಇದರಿಂದ ಅಮೆರಿಕದ ಸಮಾಜವನ್ನು ಉದ್ಯಮಗಾರರ ಹಿಡಿತದಿಂದ ತಪ್ಪಿಸಬಹುದು ಎನ್ನುವುದು ಅವರ ಅಭಿಪ್ರಾಯ. ಚುನಾವಣೆ ಪ್ರಚಾರದ ಸಮಯದಲ್ಲಿ ಟಾಫ್ಟನು ಪ್ರಗತಿಪರರನ್ನು ಒಲಿಸಿಕೊಳ್ಳಲು ಸುಂಕದ ಕಾಯಿದೆಯನ್ನು ಪುನರ್ವಿಮರ್ಶೆ ಮಾಡಬೇಕೆಂದು ಕರೆಕೊಟ್ಟಿದ್ದನು. ಆದ್ದರಿಂದ ಅವನು ಅಧಿಕಾರಕ್ಕೆ ಬಂದ ಮೇಲೆ ಸುಂಕ ವ್ಯವಸ್ಥೆಯ ಸುಧಾರಣೆ ಕೈಗೊಳ್ಳುತ್ತಾನೆಂದು ಪಕ್ಷದ ಪ್ರಗತಿಪರರು

ನಂಬಿದ್ದರು. ಆಗ ಜಾರಿಯಲ್ಲಿದ್ದ ಪೇನ್-ಆಲ್ಡ್ರಿಚ್ ಸುಂಕ (Payne-Aldrich Tariff) ವನ್ನು ಟಾಫ್ಟ್ ರದ್ದುಗೊಳಿಸುತ್ತಾನೆ ಎಂದು ಆಶಿಸಿದ್ದರು. ಏಕೆಂದರೆ ಈ ಸುಂಕ ಅಮೆರಿಕನ್ ಉತ್ಪಾದನೆಗಳಿಗೆ ಬಲವಾದ ರಕ್ಷಣೆ ನೀಡಿತ್ತು. ಆದರೆ ಟಾಫ್ಟ್ ಸುಂಕದ ಮಸೂದೆಗೆ ಯಾವ ಹೆಚ್ಚಿನ ಬದಲಾವಣೆ ಮಾಡದೆ ಒಪ್ಪಿಗೆ ನೀಡಿ ರುಜು ಮಾಡಿದನು. ಇದರಿಂದಾಗಿ ಅವನ ಪಕ್ಷದಲ್ಲಿ ಮೊದಲನೆಯ ಬಿರುಕು ಉಂಟುಮಾಡಿತು. ಈ ಬಿರುಕು ದೊಡ್ಡದಾಗುತ್ತ ಹೋಗಿ ಪ್ರಗತಿಪರ ಸದಸ್ಯರ ಪರಕೀಯತೆಗೆ ಗುರಿಯಾದನು.

ರೈಲುಮಾರ್ಗಗಳನ್ನು ಹೆಚ್ಚಿನ ನಿಯಂತ್ರಣಕ್ಕೆ ಒಳಪಡಿಸಬೇಕೆಂದು ಸಾರ್ವಜನಿಕರು ಒತ್ತಾಯ ಮಾಡತೊಡಗಿದರು. ಅವರನ್ನು ಸಂತೋಷಪಡಿಸಲು ೧೯೧೦ರಲ್ಲಿ ಟಾಫ್ಟ್ 'ಮಾನ್-ಎಲ್ಕಿನ್ಸ್ ಕಾಯಿದೆ' (Mann-Elkins Act)ಯನ್ನು ಜಾರಿಗೆ ತಂದನು. ಈ ಮಸೂದೆ ಅಂತರಸಂಸ್ಥಾನ ವಾಣಿಜ್ಯ ಸಮಿತಿ (Interstate Commerce Commission)ಗೆ ಹೆಚ್ಚಿನ ಅಧಿಕಾರ ಕೊಟ್ಟು ಅದನ್ನು ಬಲಿಷ್ಠ ಸಮಿತಿಯನ್ನಾಗಿ ಮಾಡಿತು. ಈ ಸಮಿತಿ ರೈಲು ಸಾರಿಗೆ ದರವನ್ನು ಹೆಚ್ಚಿಸುವುದನ್ನು ತನಿಖೆ ಮುಗಿಯುವವರೆಗೂ ತಡೆಹಿಡಿಯಿತು. ಸಂಪರ್ಕ ಸಾಧನಗಳಾದ ಟೆಲಿಫೋನ್, ಟೆಲಿಗ್ರಾಫ್ ಮತ್ತು ಕೇಬಲ್‌ಗಳನ್ನು ಈ ಸಮಿತಿಯ ಅಧಿಕಾರವ್ಯಾಪ್ತಿಗೆ ಒಳಪಡಿಸಲಾಯಿತು. ಟಾಫ್ಟ್ ಪ್ರಗತಿಪರರ ಬೆಂಬಲವನ್ನು ಮತ್ತಷ್ಟು ಕಳೆದುಕೊಳ್ಳುವಂತೆ ಮಾಡಿದ ಘಟನೆ: ಗಿಫರ್ಡ್ ಪಿನ್‌ಚಾಟ್ (Gifford Pinchot) ನನ್ನು ಅಧಿಕಾರದಿಂದ ತೆಗೆದುಹಾಕಿದ್ದು. ಪಿನ್‌ಚಾಟ್ ಅರಣ್ಯ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದನು. ಇವನು ಆಗ ಒಳಾಡಳಿತ ಕಾರ್ಯದರ್ಶಿ (Secretary of the Interior) ರಿಚರ್ಡ್ ಬ್ಯಾಲಿನ್‌ಜರ್ ರೂಸ್‌ವೆಲ್ಟ್‌ನ ಸಂರಕ್ಷಣಾ ಧೋರಣೆಗಳನ್ನು ಕಡೆಗಣಿಸಿ ಖಾಸಗಿ ಸಂಸ್ಥೆಗಳಿಗೆ ಅಲಾಸ್ಕದ ಕಲ್ಲಿದ್ದಲು ಮತ್ತು ನಾಟಾಗಳನ್ನು ವಹಿಸಿಕೊಟ್ಟು ತನ್ನ ಮುಖ್ಯ ಕರ್ತವ್ಯವಾದ ಪ್ರಕೃತಿ ಸಂಪತ್ತಿನ ರಕ್ಷಣೆಯನ್ನು ಮಾಡದೆ ಭ್ರಷ್ಟನಾಗಿದ್ದಾನೆ ಎಂದು ಆಪಾದಿಸಿ ಪತ್ರಿಕೆಗಳಲ್ಲಿ ಲೇಖನಗಳನ್ನು ಪ್ರಕಟಿಸಿದನು. ಪಿನ್‌ಚಾಟ್ ಬ್ಯಾಲಿನ್‌ಜರ್‌ನ ಕೈಕೆಳಗಿನ ಅಧಿಕಾರಿ. ತನ್ನ ಮೇಲಿನ ಅಧಿಕಾರಿಯನ್ನು ಹೀಗೆ ಬಹಿರಂಗವಾಗಿ ದೂಷಣೆ ಮಾಡಿದ್ದು ಅಧ್ಯಕ್ಷ ಟಾಫ್ಟ್‌ನಿಗೆ ಅವಿಧೇಯ ವರ್ತನೆಯಾಗಿ ತೋರಿತು. ಪಿನ್‌ಚಾಟ್ ವರ್ತನೆಯನ್ನು ತರ್ಕಬದ್ಧವಾಗಿ ಯೋಚಿಸಿದ ಟಾಫ್ಟ್‌ನಿಗೆ ಅವನ ವರ್ತನೆ ಶಿಕ್ಷಾರ್ಹವಾದುದೆಂದು ಖಚಿತವಾಯಿತು. ಇದನ್ನು ಪ್ರಗತಿಪರರು ಟಾಫ್ಟ್‌ನ ಸಂರಕ್ಷಣ ವಿರೋಧ ನೀತಿಗೆ ಸಾಕ್ಷಿ ಎಂದು ವಾದಿಸಿದರು. ಅವರು ಅಧ್ಯಕ್ಷ ಟಾಫ್ಟ್ ಪಟ್ಟಭದ್ರ ಹಿತಾಸಕ್ತಿಗಳ ಕೈಗೊಂಬೆಯಾಗಿದ್ದಾನೆಂದು ಪ್ರಚಾರ ಮಾಡತೊಡಗಿದರು. ಟಾಫ್ಟ್‌ನ ಅಸಮಂಜಸ ರಾಜಕೀಯವೆಂದರೆ ತನ್ನ ಪಕ್ಷದ ಧೋರಣೆಗೆ ಸಮಂಜಸವಲ್ಲದ ರೀತಿಯಲ್ಲಿ ನಡೆದುಕೊಳ್ಳುವುದು. ಇವನ ಅಧಿಕಾರದ ಅವಧಿಯಲ್ಲಿ ಪ್ರಜಾಪ್ರತಿನಿಧಿ ಸಭೆಯ ಅಧ್ಯಕ್ಷ (Speaker of the House)ನಾಗಿದ್ದವನು ಕಡು ಸಂಪ್ರದಾಯಸ್ಥನಾಗಿದ್ದ ಜೋಸೆಫ್ ಕ್ಯಾನನ್ (Joseph Cannon) ಅತ್ಯಂತ ಪ್ರಭಾವಶಾಲಿಯಾದ ಸ್ಥಾನದಲ್ಲಿದ್ದು

ಕೊಂಡು ಪ್ರಗತಿಪರವಾದ ಮಸೂದೆಗಳು ಪ್ರಜಾಪ್ರತಿನಿಧಿಸಭೆಯಲ್ಲಿ ಅನುಮೋದನೆಯಾಗದಂತೆ ಅಡ್ಡಗಟ್ಟುತ್ತಿದ್ದನು. ನೆಬ್ರಾಸ್ಕ ಸಂಸ್ಥಾನದ ಜಾರ್ಜ್ ನಾರಿಸ್ (George Norris)ನ ನೇತೃತ್ವದಲ್ಲಿ ರಿಪಬ್ಲಿಕನ್ ಸಂಪ್ರದಾಯಸ್ಥ ಸದಸ್ಯರು ಡೆಮೊಕ್ರಾಟರೊಡನೆ ಸೇರಿಕೊಂಡು ಸಭಾಧ್ಯಕ್ಷ ಸ್ಥಾನದ ಅಧಿಕಾರವನ್ನು ಕಡಿಮೆ ಮಾಡಬೇಕೆಂದು ಆಂದೋಳನ ಆರಂಭಿಸಿದರು. ವಿವಿಧ ಸಮಿತಿಗಳಿಗೆ ಸದಸ್ಯರನ್ನು ನೇಮಿಸುವ ಅಧಿಕಾರ ಸಭಾಧ್ಯಕ್ಷನಿಗಿತ್ತು. ಈ ಆಂದೋಳನ ಸಭಾಧ್ಯಕ್ಷನ ಅಧಿಕಾರವನ್ನು ನಿಯಮಿತಗೊಳಿಸುವುದರಲ್ಲಿ ಯಶಸ್ವಿಯಾಯಿತು. ಪ್ರಜಾಪ್ರತಿನಿಧಿ ಸಭೆಯ ಸದಸ್ಯರನ್ನು ಪಕ್ಷದ ಕಟ್ಟುನಿಟ್ಟಿನ ನಿಯಂತ್ರಣದಿಂದ ಬಹುಮಟ್ಟಿಗೆ ಬಿಡುಗಡೆ ಮಾಡಲು ಈ ಆಂದೋಳನ ಕಾರಣವಾಯಿತು. ಈ ಸಂದರ್ಭದಲ್ಲಿ ಕೂಡ ಅಧ್ಯಕ್ಷ ಟಾಫ್ಟ್ ಆಂದೋಳನಕಾರರ ಪರ ವಹಿಸಲು ನಿರಾಕರಿಸಿದನು. ಇದರಿಂದಾಗಿ ಅವನ ಜನಪ್ರಿಯತೆ ಇನ್ನಷ್ಟು ಕುಸಿಯಿತು. ಪರಿಣಾಮವಾಗಿ ೧೯೧೦ರ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷ ಭಾರಿ ಸೋಲನ್ನು ಅನುಭವಿಸಬೇಕಾಯಿತು. ಡೆಮೊಕ್ರಾಟರು ಅತ್ಯಂತ ಹೆಚ್ಚಿನ ಬಹುಮತದಿಂದ ಕಾಂಗ್ರೆಸ್‌ನ್ನು ಕೈವಶ ಮಾಡಿಕೊಂಡರು.

ಅಧ್ಯಕ್ಷ ಟಾಫ್ಟ್‌ನ ಸಾಧನೆಗಳು

ಅಧ್ಯಕ್ಷ ಟಾಫ್ಟ್ ಕೆಲವು ಸ್ಥಿರವಾಗಿ ಉಳಿಯಬಲ್ಲ ಆದರೆ ಮೇಲ್ನೋಟಕ್ಕೆ ಸಾಮಾನ್ಯವಾಗಿ ಕಾಣುವ ಯೋಜನೆಗಳನ್ನು ಜಾರಿಗೆ ತಂದನು. ಅವನ ಪಕ್ಷದವರು ಈತನ ಸಾಧನೆಗಳನ್ನು ಕಡೆಗಣಿಸಿದರು, ಏಕೆಂದರೆ ಪಕ್ಷದ ಪ್ರಗತಿಪರ ಸದಸ್ಯರು ಟಾಫ್ಟ್‌ನ ರಾಜಕಾರಣ ತಮ್ಮ ಧ್ಯೇಯ-ಧೋರಣೆಗಳಿಗೆ ಅಸಮಂಜಸವಾದುದು ಎಂದು ಭಾವಿಸಿದ್ದರು.

ಟಾಫ್ಟ್ ತೈಲ ಸಮೃದ್ಧಿಯಾದ ಪ್ರದೇಶಗಳಿಗೆ ಸಾರ್ವಜನಿಕರ ಪ್ರವೇಶವನ್ನು ನಿಷೇಧಿಸಿದನು ಮತ್ತು ಕಾಡು ಭೂಮಿ (forest lands) ಯನ್ನು ಖಾಸಗಿ ಕಂಪನಿಗಳಿಂದ ಫೆಡರಲ್ ಸರ್ಕಾರ ತಿರುಗಿ ಕೊಂಡು ಆ ಭೂಮಿಯನ್ನು ಸಂರಕ್ಷಿತ ಪ್ರದೇಶವನ್ನಾಗಿ ಪರಿವರ್ತಿಸಿದನು. ಸಾರ್ವಜನಿಕರ ಭೂಮಿಗೆ ಸಂಬಂಧಿಸಿದ ಕಾಯಿದೆಗಳನ್ನು ಸುಧಾರಿಸಿದನು. ಏಕಸ್ವಾಮ್ಯ ಉದ್ಯಮಗಳನ್ನು (monopolies) ಹತ್ತಿಕ್ಕಲು ಟಾಫ್ಟ್ ರೂಸ್‌ವೆಲ್ಟ್‌ನಿಗಿಂತ ಎರಡು ಪಟ್ಟು ಹೆಚ್ಚಿನ ದಾವಾಗಳನ್ನು ಉದ್ಯಮಿಗಳ ಮೇಲೆ ಹಾಕಿ, ಅವುಗಳನ್ನು ನ್ಯಾಯವಿಚಾರಣೆಗೆ ಒಳಪಡಿಸಿದನು. ಇದರ ಪರಿಣಾಮವಾಗಿ ಅಮೆರಿಕನ್ ಹೊಗೆಸೊಪ್ಪಿನ ಕಂಪನಿ ಮತ್ತು ಸ್ಟಾಂಡರ್ಡ್ ಆಯಿಲ್ ಕಂಪನಿಗಳನ್ನು ಶ್ರೇಷ್ಠ ನ್ಯಾಯಾಲಯ ವಿಲೀನಗೊಳಿಸಿತು.

ಟಾಫ್ಟ್‌ನ ಅಧಿಕಾರದ ಅವಧಿಯಲ್ಲಿ ಅಂಚೆ ಕಛೇರಿಗಳಲ್ಲಿ ಸಣ್ಣ ಪ್ರಮಾಣದ ಉಳಿತಾಯ ವ್ಯವಸ್ಥೆಯನ್ನು ಮೊದಲ ಬಾರಿಗೆ ಸ್ಥಾಪಿಸಲಾಯಿತು. ಇದು ಸಾಮಾನ್ಯ ಜನರಿಗೆ, ವಿಶೇಷವಾಗಿ ಬ್ಯಾಂಕ್‌ಗಳು ಇಲ್ಲದ ಕಡೆಗಳಲ್ಲಿ, ತಾವು ಉಳಿಸಿದ ಹಣವನ್ನು ಅಂಚೆ ಕಛೇರಿಗಳ ಉಳಿತಾಯ ಯೋಜನೆಯಲ್ಲಿ ಹಾಕಿ ಸಣ್ಣ ಪ್ರಮಾಣದ ಬಡ್ಡಿ ಪಡೆಯಲು

ಸಾಧ್ಯವಾಯಿತು. ಬಡ್ಡಿಯ ಪ್ರಮಾಣ ಚಿಕ್ಕದಾದರೂ ಹಣ ಕಳೆದುಕೊಳ್ಳುವ ಆತಂಕ ವಿರಲಿಲ್ಲ. ಪಿಂಡಿ ಕಟ್ಟಿದ ಸರಕು ಅಂಚೆ (parcel post) ಯನ್ನು ವಿಸ್ತಾರಗೊಳಿಸಿ ಕಟ್ಟುಪಾಡುಗಳನ್ನು ಸರಳಗೊಳಿಸಲಾಯಿತು. ಇದರಿಂದಾಗಿ ಹಳ್ಳಿಗಳಿಗೂ ಈ ರೀತಿಯ ಅಂಚೆಯ ಅನುಕೂಲ ದೊರೆಯುವಂತಾಯಿತು. ಈ ವ್ಯವಸ್ಥೆಯಿಂದಾಗಿ ಸಣ್ಣ ಊರುಗಳಲ್ಲಿ ಏಕಸ್ವಾಮ್ಯತೆ ಸ್ಥಾಪಿಸಿ ರೈತರನ್ನು ಶೋಷಣೆ ಮಾಡುತ್ತಿದ್ದ ಸ್ಥಳೀಯ ವರ್ತಕರನ್ನು ನಿವಾರಿಸಿ, ಅಂಚೆ ಮೂಲಕ ಬಳಕೆದಾರರಿಗೆ ಅವರು ಬರೆದು ಕಳುಹಿಸಿದ ವಸ್ತುಗಳನ್ನು ನೇರವಾಗಿ ತಲುಪಿಸುವ 'ಅಂಚೆ ವ್ಯಾಪಾರ ಅಂಗಡಿಗಳು' (mail order stores) ಅಸ್ತಿತ್ವಕ್ಕೆ ಬಂದು ಅಭಿವೃದ್ಧಿಗೊಂಡವು. ಈ ಅಂಗಡಿಗಳು ತಮ್ಮಲ್ಲಿ ದೊರೆಯುವ ವಸ್ತುಗಳ ಪಟ್ಟಿಯನ್ನೊಳಗೊಂಡ ಕೈಪಿಡಿ (catalogue) ಯನ್ನು ಪ್ರಕಟಿಸಿ ತಮ್ಮ ಬಳಕೆದಾರರಿಗೆ ಕಳುಹಿಸುತ್ತಿದ್ದರು. ಹೀಗಾಗಿ ಬಳಕೆದಾರರು ತಮಗೆ ಬೇಕಾದ ಹೊಲೆದು ಸಿದ್ಧಪಡಿಸಿದ ಬಟ್ಟೆಗಳು, ಮನೆ ಬಳಕೆಯ ಸಾಧನ ಸಾಮಗ್ರಿಗಳು ಮತ್ತು ಗಿಲೀಟು ಒಡವೆಗಳನ್ನು (costume jewellary) ಆರಿಸಿಕೊಂಡು ತಮ್ಮ ಆಯ್ಕೆಯನ್ನು ಅಂಗಡಿಗಳಿಗೆ ತಿಳಿಸಿ ಅಂಚೆಯ ಮೂಲಕ ನೇರವಾಗಿ ತರಿಸಿಕೊಳ್ಳುತ್ತಿದ್ದರು. ಈಗಿನಂತೆ ವಾಹನ ಸೌಕರ್ಯಗಳಿಲ್ಲದಿದ್ದ ಆಗಿನ ಕಾಲದಲ್ಲಿ ಅಂಚೆಯ ಮೂಲಕ ವ್ಯಾಪಾರ ಅಮೆರಿಕದ ಹಳ್ಳಿಗಳಲ್ಲಿ ಮತ್ತು ಸಣ್ಣ ಪಟ್ಟಣಗಳಲ್ಲಿ ವಾಸ ಮಾಡುತ್ತಿದ್ದವರಿಗೆ ಒಂದು ವರಪ್ರಸಾದವಾಗಿತ್ತು.

ಟಾಫ್ಟನ ನಿರ್ದೇಶನದಂತೆ ಕಾರ್ಮಿಕ ಇಲಾಖೆ (Department of Labor) ಮತ್ತು ವಾಣಿಜ್ಯ ಇಲಾಖೆ (Department of Commerce)ಗಳನ್ನು ಬೇರ್ಪಡಿಸಿ ಪ್ರತ್ಯೇಕ ಇಲಾಖೆಗಳಾಗಿ ಮಾಡಲಾಯಿತು. ಫೆಡರಲ್ ಸರ್ಕಾರದ ಕೆಲಸವನ್ನು ಗುತ್ತಿಗೆ ಪಡೆದು ಕೆಲಸ ಮಾಡುವ ಕಾರ್ಮಿಕರಿಗೆ ದಿನದ ಕೆಲಸದ ಅವಧಿಯನ್ನು ಎಂಟು ಘಂಟೆಗಳಿಗೆ ಇಳಿಸಲಾಯಿತು. ರಾಜ್ಯಾಂಗದ ೧೬ನೆಯ ತಿದ್ದುಪಡಿಯನ್ನು ಅಂಗೀಕರಿಸುವುದರ ಮೂಲಕ ಆದಾಯ ತೆರಿಗೆಯನ್ನು ಅಧಿಕೃತಗೊಳಿಸಲಾಯಿತು. ೧೭ನೆಯ ತಿದ್ದುಪಡಿಯನ್ನು ಅಂಗೀಕರಿಸುವುದರ ಮೂಲಕ ಮತದಾರರು ಸೆನೆಟರ್‌ಗಳನ್ನು ನೇರವಾಗಿ ಚುನಾಯಿಸುವ ಪದ್ಧತಿ ಜಾರಿಗೆ ಬಂದಿತು.

೧೯೧೨ರ ಚುನಾವಣೆ

೧೯೧೨ರ ಚುನಾವಣೆ ಅನೇಕ ವಿಧಗಳಲ್ಲಿ ಮಹತ್ವಪೂರ್ಣವಾದುದು ಮತ್ತು ಹಿಂದಿನ ಅನೇಕ ಚುನಾವಣೆಗಳಿಗಿಂತ ಹೆಚ್ಚು ಚರಿತ್ರಾರ್ಹವಾದುದು. ಈ ಚುನಾವಣೆಯ ಮಹತ್ವ ಅಭ್ಯರ್ಥಿಗಳ ವ್ಯಕ್ತಿತ್ವ, ಚುನಾವಣೆಯಲ್ಲಿ ಸ್ಪರ್ಧಿಸಿದ ಪಕ್ಷಗಳು ಮತ್ತು ಚಕಿತಗೊಳಿಸುವ ಫಲಿತಾಂಶಗಳಲ್ಲಿ ಅಡಗಿದೆ. ಆ ವರ್ಷ ರಿಪಬ್ಲಿಕನ್ ಪಕ್ಷದ ನಾಮಕರಣ ಸಮಾವೇಶಗಳು ಸೇರುವ ಮುಂಚೆಯೇ ರಾಬರ್ಟ್ ಲಾಫೊಲಿಯೆ ನಾಯಕತ್ವದಲ್ಲಿ ಪಕ್ಷದ ಪ್ರಗತಿಪರರು ಒಟ್ಟಾಗಿ 'ರಾಷ್ಟ್ರೀಯ ಪ್ರಗತಿಪರ ರಿಪಬ್ಲಿಕನ್ ಒಕ್ಕೂಟ' (National Progressive

Republikan League) ಎನ್ನುವ ರಾಜಕೀಯ ಪಕ್ಷವನ್ನು ರಚಿಸಿದರು. ಈ ಪಕ್ಷ ರೈತರು, ಕಾರ್ಮಿಕರು ಮತ್ತು ಸಣ್ಣ ಪುಟ್ಟ ವ್ಯಾಪಾರಿಗಳನ್ನು ಪ್ರತಿನಿಧಿಸುವ ಧ್ಯೇಯವುಳ್ಳದಾಗಿತ್ತು. ಇವರು ರಾಜಕೀಯ ಸುಧಾರಣೆಗಳನ್ನು ಜಾರಿಗೆ ತರುವುದರ ಮೂಲಕ ರಾಜಕೀಯವನ್ನು ಬಲಿಷ್ಠ ನಾಯಕರ (political bosses) ಬಿಗಿಮುಷ್ಠಿಯಿಂದ ಬಿಡಿಸಿ ಪ್ರಜೆಗಳಿಗೆ ಸರ್ಕಾರದ ನಿಯಂತ್ರಣವನ್ನು ಹಿಂದಿರುಗಿಸುವಂತೆ ಮಾಡುವುದಾಗಿ ಚುನಾವಣಾ ವಾಗ್ದಾನ ಮಾಡಿದರು. ಆಫ್ರಿಕ ಪ್ರವಾಸದಿಂದ ಹಿಂತಿರುಗಿದ ಮೇಲೆ ರೂಸ್‌ವೆಲ್ಟ್‌ನು ರಿಪಬ್ಲಿಕನ್ ಪಕ್ಷದ ಟಾಫ್ಟ್ ವಿರೋಧಿಗಳನ್ನು ಬೆಂಬಲಿಸಿದನು. ಆದರೆ ಲಾಫೊಲಿಯೆ ಪ್ರಾರಂಭಿಸಿದ ಪ್ರಗತಿಪರ ಒಕ್ಕೂಟದೊಡನೆ ಸಹಕರಿಸಲು ನಿರಾಕರಿಸಿದನು. ಆಶ್ಚರ್ಯವೆಂದರೆ, ರೂಸ್‌ವೆಲ್ಟ್ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿ ಚುನಾವಣೆಗೆ ನಿಲ್ಲಲು ನಿರ್ಧರಿಸಿರುವುದಾಗಿ ಘೋಷಿಸಿದನು.

ನಾಮಕರಣ ಸಮಾವೇಶಕ್ಕೆ ರಿಪಬ್ಲಿಕನ್ ಪಕ್ಷ ಟಾಫ್ಟ್‌ನ ಪ್ರತಿನಿಧಿಗಳನ್ನು ಕಳುಹಿಸಿತು. ಕೆಲವು ಸಂಸ್ಥಾನಗಳು ರೂಸ್‌ವೆಲ್ಟ್‌ನ ಪರವಾದ ಪ್ರತಿನಿಧಿಗಳನ್ನು ಕಳುಹಿಸಿದವು. ರೂಸ್‌ವೆಲ್ಟ್ ಚುನಾವಣೆಯಲ್ಲಿ ಸ್ಪರ್ಧಿಸಲು ಬಹಳ ತಡವಾಗಿ ನಿರ್ಧರಿಸಿದ ಕಾರಣ ಅವನ ಚುನಾವಣಾ ಪ್ರಚಾರ ಪರಿಣಾಮಕಾರಿಯಾಗಿರಲಿಲ್ಲ. ಹೀಗಾಗಿ ರಿಪಬ್ಲಿಕನ್ ಪಕ್ಷ ಮೊದಲ ಸುತ್ತಿನ ಮತದಾನದಲ್ಲಿ ಟಾಫ್ಟ್‌ನನ್ನೂ ಎರಡನೆಯ ಬಾರಿ ಅಭ್ಯರ್ಥಿಯಾಗಿ ನಾಮಕರಣ ಮಾಡಿತು. ಪಕ್ಷದ ಸದಸ್ಯರ ಮೇಲೆ ಟಾಫ್ಟ್‌ನು ತನ್ನ ಅಧ್ಯಕ್ಷ ಪದವಿಯ ಪ್ರಭಾವವನ್ನು ಉಪಯೋಗಿಸಿದ್ದು ಅವನು ಗೆಲ್ಲಲು ಕಾರಣವಾಯಿತು. ತಮ್ಮ ಪಕ್ಷದ ಪ್ರತಿನಿಧಿಯನ್ನು ನಾಮಕರಣ ಮಾಡಲು ಪ್ರಯತ್ನಿಸಿ ವಿಫಲರಾದ ಪ್ರಗತಿಪರರು ಲಾಫೊಲಿಯೆ ಕಟ್ಟಿದ ರಾಷ್ಟ್ರೀಯ ಪ್ರಗತಿಪರ ರಿಪಬ್ಲಿಕನ್ ಒಕ್ಕೂಟವನ್ನು ಬಿಟ್ಟು 'ಪ್ರಗತಿಶೀಲ ಪಕ್ಷ' ಎನ್ನುವ ಹೊಸಪಕ್ಷವನ್ನು ರಚಿಸಿ ರೂಸ್‌ವೆಲ್ಟ್‌ನ ನಾಮಕರಣವನ್ನು ಬೆಂಬಲಿಸಿದರು. ಈ ಹೊಸ ಪಕ್ಷಕ್ಕೆ 'ಗೂಳಿ ಕಡವೆ' (Bull Moose Party) ಪಕ್ಷ ಎಂದು ಅಡ್ಡಹೆಸರು. ಈ ಹೆಸರು ಇಡಲು ಕಾರಣ ನಾಮಕರಣ ಸಮಾವೇಶದಲ್ಲಿ ರೂಸ್‌ವೆಲ್ಟ್‌ನು ತನ್ನ ದೇಹಸ್ಥಿತಿಯನ್ನು ಕುರಿತು ಮಾತನಾಡುತ್ತ 'ನನಗೇನಾಗಿದೆ? ಗಟ್ಟಿಮುಟ್ಟಾಗಿ ನಾನು 'ಗೂಳಿ ಕಡವೆ' ಹಾಗಿದ್ದೇನೆ' ಎಂದು ಉದ್ಗರಿಸಿದ್ದರಿಂದ! ರೂಸ್‌ವೆಲ್ಟ್ ತನ್ನ ಚುನಾವಣೆ ವೇದಿಕೆಯನ್ನು 'ನವರಾಷ್ಟ್ರೀಯತೆ' (New Nationalism) ಎಂದು ಕರೆದನು. ಅವನು ರಾಷ್ಟ್ರೀಯ ಸರ್ಕಾರವನ್ನು ಶಕ್ತಿಯುತವಾಗಿ ಮಾಡಿ ಪ್ರಜೆಗಳನ್ನು 'ದುರುದ್ದೇಶದ ಧನವಂತರಿಂದ' ಕಾಪಾಡಲು ಕರೆ ನೀಡಿದನು. ನ್ಯಾಯಾಲಯಗಳ ಸುಧಾರಣೆ ಆಗಬೇಕೆಂದು ಆಗ್ರಹಪಡಿಸಿದನು. ಏಕೆಂದರೆ ನ್ಯಾಯಾಲಯಗಳು ಹೆಚ್ಚಾಗಿ ಏಕಸ್ವಾಮ್ಯತೆಯ ಪರವಾಗಿ ತೀರ್ಪು ನೀಡುತ್ತಿದ್ದುದರಿಂದ. 'ಆಸ್ತಿಯ ಹಕ್ಕು'ಗಳಿಗಿಂತ 'ಮಾನವೀಯ ಹಕ್ಕುಗಳು' (human rights) ಅತಿ ಮುಖ್ಯವಾದುವೆಂದು ಅವನು ವಾದಿಸಿದನು. ರೂಸ್‌ವೆಲ್ಟ್‌ನನ್ನು ಅಭ್ಯರ್ಥಿಯಾಗಿ ಮಾಡಿದ 'ಪ್ರಗತಿಶೀಲ ಪಕ್ಷ'ದ ಪ್ರಥಮ ಗುರಿ: ವಿಶಾಲ ಸಾಮಾಜಿಕ

ಸುಧಾರಣೆಗಳು. ಇವನ್ನು ತಮ್ಮ ಪಕ್ಷ 'ಜನರೊಡನೆ ಮಾಡಿಕೊಂಡ ಒಪ್ಪಂದ' (A Contract with People) ಎಂದು ಪ್ರಚಾರ ಮಾಡಿದರು. ಈ ಒಪ್ಪಂದದ ಕೆಲವು ಮುಖ್ಯ ಅಂಶಗಳೆಂದರೆ: ಆಕಸ್ಮಿಕದ ಪರಿಣಾಮವಾಗಿ ಊನಗೊಂಡ ಕಾರ್ಮಿಕರಿಗೆ ಪರಿಹಾರ, ಕನಿಷ್ಠ ವೇತನ ಪರಿಮಾಣಗಳು, ಸೆನೆಟರುಗಳ ನೇರ ಚುನಾವಣೆ, ಮಹಿಳೆಯರ ಮತದಾನದ ಹಕ್ಕು, ನ್ಯಾಯಾಲಯಗಳು ಅನ್ಯಾಯ ನಿರ್ಣಯಗಳನ್ನು ಹಿಂತೆಗೆದು ಕೊಳ್ಳುವುದು, ಮಕ್ಕಳ ದುಡಿತವನ್ನು ರದ್ದುಗೊಳಿಸುವುದು, ನಿಕ್ಷೇಪಗಳ ನಿಯಂತ್ರಣ ಮತ್ತು ಸುಂಕದ ದರವನ್ನು ಇಳಿಸುವುದು – ಈ ಸುಧಾರಣೆಗಳನ್ನು ರೂಸ್‌ವೆಲ್ಟ್ ಬೆಂಬಲಿಸಿದನು.

ರಿಪಬ್ಲಿಕನ್ ಪಕ್ಷ ಮೂರಾಬಟ್ಟೆಯಾಗಿದ್ದು ಡೆಮೊಕ್ರಾಟರಿಗೆ ತಾವು ಚುನಾವಣೆಯಲ್ಲಿ ಗೆಲ್ಲುತ್ತೇವೆ ಎಂಬ ಭರವಸೆ ಹುಟ್ಟಿಸಿತು. ಇದು ಡೆಮೊಕ್ರಾಟಿಕ್ ಪಕ್ಷದ ಸಮಾವೇಶದ ಅಭ್ಯರ್ಥಿಗಳಲ್ಲಿ ನಾಮಕರಣಕ್ಕಾಗಿ ತೀವ್ರ ಸ್ಪರ್ಧೆಗೆ ಕಾರಣವಾಯಿತು. ವಿಲಿಯಂ ಬ್ರೈಯನ್ ತನ್ನ ಅನುಯಾಯಿಗಳೊಡನೆ ವುಡ್ರೋ ವಿಲ್ಸನ್ (Woodrow Wilson) ನಾಮಕರಣವನ್ನು ಬೆಂಬಲಿಸಿದ ಪರಿಣಾಮವಾಗಿ ವಿಲ್ಸನ್ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಯಾಗಿ ಆಯ್ಕೆಗೊಂಡನು. ೧೯೧೨ರ ಚುನಾವಣೆಗೆ ಮೂರು ರಾಜಕೀಯ ಪಕ್ಷಗಳು, ಮೂರು ಪರಸ್ಪರ ವಿಭಿನ್ನ ವ್ಯಕ್ತಿತ್ವದ ಅಭ್ಯರ್ಥಿಗಳ ಸ್ಪರ್ಧೆಯಿಂದ ಕಳೆ ಏರಿತ್ತು. ಹೆಸರಿಗೆ ಮೂರು ಪಕ್ಷಗಳ ಅಭ್ಯರ್ಥಿಗಳಿದ್ದರೂ ನಿಜವಾಗಿ ಸ್ಪರ್ಧೆ ನಡೆಯುತ್ತಿದ್ದುದು ಡೆಮೊಕ್ರಾಟಿಕ್ ಪಕ್ಷದ ವುಡ್ರೋ ವಿಲ್ಸನ್ ಮತ್ತು 'ಪ್ರಗತಿಶೀಲ' ಪಕ್ಷದ ರೂಸ್‌ವೆಲ್ಟ್‌ರ ನಡುವೆ. ಇವರಿಬ್ಬರೂ ಪ್ರಗತಿಪರರ ಮತಗಳನ್ನು ಪಡೆಯಲು ಎಲ್ಲಾ ಪ್ರಯತ್ನಗಳನ್ನು ಕೈಗೊಂಡಿದ್ದರು. ಇವರಿಬ್ಬರ ಚುನಾವಣಾ ವೇದಿಕೆಯ ಧ್ಯೇಯ ಧೋರಣೆಗಳಲ್ಲಿ ಕೆಲವು ಮುಖ್ಯ ವ್ಯತ್ಯಾಸಗಳಿದ್ದವು: ರೂಸ್‌ವೆಲ್ಟ್‌ನ 'ನವರಾಷ್ಟ್ರೀಯತೆ' ಪ್ರಬಲವಾದ ಕೇಂದ್ರ ಸರ್ಕಾರದ ಅಗತ್ಯವನ್ನು ಪ್ರತಿಪಾದಿಸಿತು. ವಿಲ್ಸನ್‌ನ ಧ್ಯೇಯ 'ನವ್ಯ ಸ್ವಾತಂತ್ರ್ಯ' – ಸಂಸ್ಥಾನಗಳ ಸ್ವಾಯತ್ತತೆಯನ್ನು ಮತ್ತು ಕಾರ್ಮಿಕರ ಮತ್ತು ರೈತರ ಹಿತಾಸಕ್ತಿಗಳನ್ನು ಪೂರೈಸುವುದು ಪ್ರಥಮ ಅಗತ್ಯವೆಂದು ಪರಿಗಣಿಸಿತ್ತು. ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಲ್ಲಿ ಕ್ರೋಢೀಕರಣ (consolidated economic system) ಸ್ಥಿರವಾಗಿ ಮುಂದುವರಿಯುತ್ತದೆ, ಅದನ್ನು ನಿಯಮಬದ್ಧವಾಗಿ ನಡೆಸಿಕೊಂಡು ಹೋಗಲು ಶಕ್ತಿಯುತವಾದ ಕೇಂದ್ರ ಸರ್ಕಾರದ ಅಗತ್ಯವಿದೆ ಎಂದು ರೂಸ್‌ವೆಲ್ಟ್‌ನು ನಂಬಿದ್ದನು. ರಾಷ್ಟ್ರದ ಹಿತಕ್ಕಾಗಿ ಕೇಂದ್ರ ಸರ್ಕಾರದ ಯೋಜನೆ ಅಗತ್ಯವೆಂದು ಪ್ರತಿಪಾದಿಸಿದನು.

ವುಡ್ರೋ ವಿಲ್ಸನ್ ನಿಯಂತ್ರಣರಹಿತ ಪೈಪೋಟಿ/ಸ್ಪರ್ಧೆ ಆಧಾರಿತ ಮತ್ತು ಅನಿಯಂತ್ರಿತ ಮಾರುಕಟ್ಟೆಗಳು ದೇಶವನ್ನು ಅಭಿವೃದ್ಧಿಗೊಳಿಸುತ್ತವೆ ಎಂದು ವಾದಿಸಿದನು. ಏಕಸ್ವಾಮ್ಯ ಉದ್ಯಮಗಳು ಅನಿಯಂತ್ರಿತ ಆರ್ಥಿಕ ವ್ಯವಸ್ಥೆಯನ್ನು ಅವಸಾನಗೊಳಿಸುತ್ತವೆ

ಎಂದು ವಿಲ್ಸನ್ ಸಾರಿ ಹೇಳಿದನು. ಏಕಸ್ವಾಮ್ಯತೆಗಳನ್ನು ವಿಭಜನೆಗೊಳಿಸಿ ವಿಕೇಂದ್ರೀಕರಣ ದಿಂದ ಉದ್ಯಮಗಳು ಪರಸ್ಪರ ಸ್ಪರ್ಧಿಸುವಂತೆ ಮಾಡುವುದು ವಿಲ್ಸನ್‌ನ ಗುರಿಯಾಗಿತ್ತು.

ಚುನಾವಣೆಯಲ್ಲಿ ಮೂರನೆಯದಾದ ಸೋಷಿಯಲಿಸ್ಟ್ ಪಕ್ಷಕ್ಕೆ ಹೆಚ್ಚಿನ ಭವಿಷ್ಯ ವಿರಲಿಲ್ಲ. ಆರ್ಥಿಕ ವ್ಯವಸ್ಥೆಯನ್ನು ಸರ್ಕಾರದ ನಿಯಂತ್ರಣಕ್ಕೆ ಒಪ್ಪಿಸುವುದನ್ನು ಅಮೆರಿಕನ್ನರು ತೀವ್ರವಾಗಿ ವಿರೋಧಿಸಿದರು. ಸಮಾಜವಾದ ರಾಜಕೀಯ ಸ್ವಾತಂತ್ರ್ಯ ಮತ್ತು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಗೆ ವಿರುದ್ಧವಾದುದರಿಂದ ಅದನ್ನೂ ಅಮೆರಿಕನ್ನರು ನಿರಾಕರಿಸಿದರು. ವರ್ಗ ಕಲಹ (class struggle), ದೇಶಪ್ರೇಮ ಮತ್ತು ಮತನಿಷ್ಠೆಗಳಿ ಗಿಂತಲೂ ಮಹತ್ತಾದುದು ಎನ್ನುವ ಸಮಾಜವಾದಿಗಳ ನಂಬಿಕೆ ಅಮೆರಿಕನ್ ನೈತಿಕ ಮೌಲ್ಯಗಳಿಗೆ ತದ್ವಿರುದ್ಧವಾಗಿದ್ದರಿಂದ ಆ ಪಕ್ಷಕ್ಕೆ ಬೆಂಬಲ ದೊರೆಯಲಿಲ್ಲ.

೧೯೧೨ರ ಚುನಾವಣೆ ಫಲಿತಾಂಶ ಜನರು ಊಹಿಸಿದಂತೆಯೆ ಆಯಿತು. ಇಬ್ಬರ ಜಗಳ ಮೂರನೆಯವನಿಗೆ ಲಾಭ ಎನ್ನುವ ಗಾದೆಯಂತೆ ಟಾಫ್ಟ್ ಮತ್ತು ರೂಸ್‌ವೆಲ್ಟ್‌ರ ನಡೆದ ಸೆಣಸಾಟ ವುಡ್ರೋ ವಿಲ್ಸನ್‌ಗೆ ಅನುಕೂಲವಾಯಿತು. ರಿಪಬ್ಲಿಕನ್ ಪಕ್ಷದ ಮತಗಳು ಟಾಫ್ಟ್, ರೂಸ್‌ವೆಲ್ಟ್ ಮತ್ತು ಇತರ ಅಭ್ಯರ್ಥಿಗಳಿಗೆ ಹಂಚಿಕೆಯಾದವು. ಅವರಲ್ಲಿ ಹೆಚ್ಚು ಮತ ಗಳಿಸಿದವನು ರೂಸ್‌ವೆಲ್ಟ್. ವುಡ್ರೋ ವಿಲ್ಸನ್ ಶೇಕಡಾ ೪೧ ಸಾರ್ವಜನಿಕ ಮತ ಗಳಿಸಿದ್ದನು. ಆದರೆ ಎಲೆಕ್ಟರಲ್ ಮತಗಳಲ್ಲಿ (electoral votes) ಅವನು ನಿರ್ಣಾಯಕ ವಿಜಯ ಗಳಿಸಿದ್ದನು. ಆ ಚುನಾವಣೆಯಲ್ಲಿ ಪ್ರಜಾಪ್ರತಿನಿಧಿ ಸಭೆ (House of Representatives) ಮತ್ತು ಸೆನೆಟ್ ಎರಡೂ ಡೆಮೊಕ್ರಾಟಿಕ್ ವಶವಾದವು. ಈ ಚುನಾವಣೆಯ ವೈಶಿಷ್ಟ್ಯವೆಂದರೆ ೧೮೬೦ರಿಂದ ೧೯೧೨ರ ನಡುವೆ ಅಧ್ಯಕ್ಷರಾದ ಡೆಮೊಕ್ರಾಟರಲ್ಲಿ ವುಡ್ರೋ ವಿಲ್ಸನ್ ಎರಡನೆಯವನು. (ಗ್ರೋವರ್ ಕ್ಲೀವ್‌ಲ್ಯಾಂಡ್ ಮೊದಲನೆಯವನು) ಈ ಚುನಾವಣೆಯಲ್ಲಿ 'ಅಧ್ಯಕ್ಷ ಸ್ಥಾನ ಎರಡು ಅವಧಿಗಳಿಗೆ ಸೀಮಿತ' ಎನ್ನುವ ನಿಯಮವನ್ನು ಉಲ್ಲಂಘಿಸಿ ಬಹುಸಂಖ್ಯಾತ ರಿಪಬ್ಲಿಕನ್ನರು ರೂಸ್‌ವೆಲ್ಟ್ ಮೂರನೆಯ ಬಾರಿಗೆ ಅಧ್ಯಕ್ಷನಾಗುವುದನ್ನು ಬಯಸಿ ಬೆಂಬಲಿಸಿದರು.

ವುಡ್ರೋ ವಿಲ್ಸನ್‌ನ (೨೮ನೆಯ ಅಧ್ಯಕ್ಷ) ಅಧ್ಯಕ್ಷತೆ

ವರ್ಜೀನಿಯಾ ಪ್ರಾಂತದ ಪ್ರೆಸ್ಬಿಟೇರಿಯನ್ (Presbytarian) ಕುಟುಂಬ ಒಂದರಲ್ಲಿ ಜನಿಸಿದ ವುಡ್ರೋ ವಿಲ್ಸನ್ ದಾಕ್ಷಿಣಾತ್ಯರಲ್ಲಿ ಅಂತರ್ಯುದ್ಧದನಂತರ ಅಧ್ಯಕ್ಷರಾದವರಲ್ಲಿ ಮೊದಲನೆಯವನು. ರಾಜಕೀಯಕ್ಕೆ ಇಳಿಯುವ ಮೊದಲು ವಿಲ್ಸನ್ ಪ್ರಿನ್ಸ್‌ಟನ್ ವಿಶ್ವವಿದ್ಯಾ ನಿಲಯದಲ್ಲಿ ಪ್ರಾಧ್ಯಾಪಕನಾಗಿದ್ದನು. ನಂತರ ಆ ವಿಶ್ವವಿದ್ಯಾನಿಲಯದ ಅಧ್ಯಕ್ಷನಾಗಿ ಕೆಲವು ವರ್ಷಗಳ ಕಾಲ ಅಧಿಕಾರ ನಿರ್ವಹಿಸಿದನು. ಇದಾದ ನಂತರ ನ್ಯೂಜರ್ಸಿ ಸಂಸ್ಥಾನದ (New Jersey) ಗವರ್ನರ ಆಗಿ ಆಯ್ಕೆಗೊಂಡನು. ಆ ಸಮಯದಲ್ಲಿ ಜನಪ್ರಿಯ ಸುಧಾರಣೆಗಳ ಕಾಯಿದೆ (Popular Reform Legislation) ಜಾರಿಗೆ ತರುವಂತೆ

ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯನ್ನು ಒತ್ತಾಯಿಸಿದನು. ಇದರಿಂದಾಗಿ ಅವನನ್ನು ಡೆಮೊಕ್ರಾಟಿಕ್ ಪಕ್ಷ ೧೯೧೨ರ ಚುನಾವಣೆಗೆ ನಿಲ್ಲಲು ನಾಮಕರಣ ಮಾಡಿತು. ವಿಲ್ಸನ್ ಚುನಾವಣೆಯಲ್ಲಿ ಗೆದ್ದು ಅಧ್ಯಕ್ಷನಾದನು. ಡಾಕ್ಟರೇಟ್ ಪದವಿ ಗಳಿಸಿದ ಮೊದಲನೆಯ ಹಾಗೂ ಒಬ್ಬನೇ ಅಧ್ಯಕ್ಷನೆಂದರೆ ವುಡ್ರೋ ವಿಲ್ಸನ್.

ವಿಲ್ಸನ್‌ನ ತಂದೆ ಪ್ರೆಸ್ಬಿಟೇರಿಯನ್ ಪಾದ್ರಿ. ಪಾದ್ರಿಯ ಕುಟುಂಬದಲ್ಲಿ ಬೆಳೆದಿದ್ದರಿಂದ ವಿಲ್ಸನ್ ಅತ್ಯಂತ ಮತಧರ್ಮನಿಷ್ಠೆಯುಳ್ಳ ಅಧ್ಯಕ್ಷನಾಗಿದ್ದನು. ಅವನ ಭಾಷೆ ಮತ್ತು ನಿಲುವುಗಳು ಅವನು ಬೆಳೆದ ಮತಧರ್ಮದ ವಾತಾವರಣವನ್ನು ಪ್ರತಿಫಲಿಸುತ್ತಿದ್ದವು. ಅತ್ಯಂತ ಮೇಧಾವಿಯಾದ ಈತನಿಗೆ ಬುದ್ಧಿವಂತರಲ್ಲದವರ ಬಗ್ಗೆ ಅಸಡ್ಡೆ. ಹಾಗಾಗಿ ಇವನು ಸ್ನೇಹಪರನಾಗಿರಲಿಲ್ಲ. ಅಲ್ಲದೆ ತಾನು ಎಲ್ಲರಿಗಿಂತ ಮೇಲಾದ ನೀತಿವಂತನೆಂಬ ಭಾವನೆಯನ್ನು ಬೆಳೆಸಿಕೊಂಡಿದ್ದನು. ಆದ್ದರಿಂದ ಇವನಿಗೆ ಇತರರೊಡನೆ ಸಂಪರ್ಕ ಬೆಳೆಸಿಕೊಳ್ಳಲು ಕಷ್ಟವಾಗಿತ್ತು. ಅವನು ಜನರನ್ನು ಒಟ್ಟಾಗಿ ಪ್ರೀತಿಸುತ್ತಿದ್ದನೇ ಹೊರತು ವ್ಯಕ್ತಿಗಳನ್ನಲ್ಲ. ಸಭೆಗಳಲ್ಲಿ ಮತ್ತು ಗುಂಪುಗಳಲ್ಲಿ ಸ್ನೇಹಪರನಾಗಿ ಸೌಹಾರ್ದತೆಯಿಂದ ವರ್ತಿಸುತ್ತಿದ್ದನು. ಆದರೆ ವ್ಯಕ್ತಿಗಳೊಡನೆ ಪರಸ್ಪರವಾಗಿ ವ್ಯವಹರಿಸುವುಧು ಅವನಿಗೆ ಹಿಡಿಸುತ್ತಿರಲಿಲ್ಲ. ಹೀಗಾಗಿ ಅವನು ತನ್ನ ಆಪ್ತ ಸ್ನೇಹಿತರಿಗೂ ಪರಕೀಯನಾಗಿ ಉಳಿದನು.

ವಿಲ್ಸನ್ ರಾಷ್ಟ್ರದ ಕೆಲವು ಆಂತರಿಕ ನ್ಯೂನತೆಗಳನ್ನು ಸರಿಪಡಿಸಿ, ಸರ್ಕಾರವನ್ನು ಉತ್ತಮಗೊಳಿಸಿ ಎಲ್ಲರಿಗೂ ಸಮಾನ ಅವಕಾಶ ದೊರಕುವಂತೆ ಮಾಡಿದನು. ಈತ ಚುನಾವಣೆಯಲ್ಲಿ ಗೆಲ್ಲಲು ಸಹಾಯ ಮಾಡಿದ ಬ್ರೈಯನ್‌ಗೆ ಕೃತಜ್ಞತೆ ತೋರಿಸಲು ಅವನನ್ನು ವಿದೇಶಾಂಗ ಸಚಿವನಾಗಿ ನೇಮಿಸಿದನು. ಇದನ್ನು ಕರ್ತವ್ಯ ದೃಷ್ಟಿಯಿಂದ ಮಾಡಿದನೇ ಹೊರತು ಅವನ ಮೇಲಿನ ಪ್ರೀತಿಯಿಂದಲ್ಲ. ವಾಸ್ತವವಾಗಿ ಬ್ರೈಯನ್ ಕಂಡರೆ ಅವನಿಗೆ ಆಗುತ್ತಿರಲಿಲ್ಲ. ವಿದೇಶಾಂಗ ಸಚಿವನಾಗಿ ಬ್ರೈಯನ್ ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಿನ ಕಾರ್ಯಗಳನ್ನು ಸಾಧಿಸಿದನು. ಅವುಗಳಲ್ಲಿನ ಮಹತ್ಕಾರ್ಯವೆಂದರೆ ಮೂವತ್ತು 'ಸಂಯಮ ಕರಾರು'ಗಳನ್ನು ಮೂವತ್ತು ದೇಶಗಳಿಂದ ಪಡೆದಿದ್ದು. ಈ ಕರಾರುಗಳ ಪ್ರಕಾರ ಕರಾರಿಗೆ ರುಜು ಹಾಕಿದ ದೇಶಗಳು (signatory nations) ಯುದ್ಧ ಮುಂತಾದ ಸಂದಿಗ್ಧ ಸಂದರ್ಭಗಳಲ್ಲಿ ಕೂಡಲೇ ಹೊಡೆದಾಟಕ್ಕೆ ಇಳಿಯದೆ 'ಸಂಯಮ'ದಿಂದ ವರ್ತಿಸಬೇಕು. ಈ ಕರಾರನ್ನು ಮೂವತ್ತು ದೇಶಗಳು ಒಪ್ಪಿಕೊಳ್ಳುವಂತೆ ಮಾಡಿದ್ದು ಬ್ರೈಯನ್‌ನ ದೊಡ್ಡ ಸಾಧನೆ. ಸ್ವಲ್ಪ ಕಾಲಾನಂತರ ವಿಲ್ಸನ್‌ನ ಯುದ್ಧ ನೀತಿಯನ್ನು ಪ್ರತಿಭಟಿಸಿ ತನ್ನ ಹುದ್ದೆಗೆ ರಾಜೀನಾಮೆ ಕೊಟ್ಟನು.

ವಿಲ್ಸನ್‌ನ ಸಚಿವ ಮಂಡಳಿಯ ಇತರ ಸದಸ್ಯರು: ವಿಲಿಯಂ ಮಾಕ್‌ಆ್ಯಡೂ (William McAdoo) ಖಜಾನೆ ಸಚಿವನಾಗಿದ್ದನು. ಈ ಮಂಡಳಿಯಲ್ಲಿ ಐದು ದಾಕ್ಷಿಣಾತ್ಯರಿದ್ದರು. ಎಡ್ವರ್ಡ್ ಹೌಸ್ (Edward House) ವಿಲ್ಸನ್‌ನ ಸಲಹೆಗಾರ ಮತ್ತು

ನಿಕಟವರ್ತಿಯಾಗಿದ್ದನು. ಇವನಿಗೆ ಆಡಳಿತ ನಿರ್ವಹಣೆಯ ಅನುಭವ ಸ್ವಲ್ಪವೂ ಇರಲಿಲ್ಲ. ಹೀಗಿದ್ದರೂ ವಿಲ್ಸನ್, ಜಾಕ್ಸನ್ ಮತ್ತು ರೂಸ್‌ವೆಲ್ಟ್‌ರಂತೆ ಸಮರ್ಥ ನಾಯಕನಾಗಿದ್ದನು. ತನ್ನ ಪ್ರಭಾವದಿಂದ ಅನೇಕ ಸುಧಾರಣೆಗಳನ್ನು ಮತ್ತು ಅಧಿಕ ಸಂಖ್ಯೆಯ ಕಾಯಿದೆಗಳನ್ನು ಜಾರಿಗೆ ತರುವುದರಲ್ಲಿ ಯಶಸ್ವಿಯಾದನು.

ವಿಲ್ಸನ್ ಅಧಿಕಾರ ವಹಿಸಿಕೊಂಡ ಸ್ವಲ್ಪ ಸಮಯದಲ್ಲೇ ಕಾಂಗ್ರೆಸ್ಸಿನ ವಿಶೇಷ ಅಧಿವೇಶನಕ್ಕೆ ಕರೆಕೊಟ್ಟನು. ಸುಂಕದ ದರಗಳನ್ನು ಇಳಿಸುವ ವಿಷಯ ಚರ್ಚಿಸಿ ನಿರ್ಣಯಿಸುವುದು ಇದರ ಗುರಿಯಾಗಿತ್ತು. ವಿಲ್ಸನ್ ಖುದ್ದಾಗಿ ಕಾಂಗ್ರೆಸ್‌ನಲ್ಲಿ ಈ ವಿಷಯ ಕುರಿತು ಭಾಷಣ ಮಾಡಿದನು. ಜಾನ್ ಆ್ಯಡಮ್ಸ್ ನಂತರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಣ ಮಾಡಿದ ಅಧ್ಯಕ್ಷನೆಂದರೆ ವಿಲ್ಸನ್ ಒಬ್ಬನೇ. ಭಾಷಣದಲ್ಲಿ ಸುಂಕದ ದರಗಳನ್ನು ಇಳಿಸುವ ಅಗತ್ಯವನ್ನು ವಿಶದಪಡಿಸಿದನು. ಆದರೆ ಇದಕ್ಕೆ ಪಟ್ಟಭದ್ರ ಹಿತಾಸಕ್ತಿಗಳು ವಿರೋಧ ವ್ಯಕ್ತಪಡಿಸಿ ಈ ಸುಂಕ ಸುಧಾರಣೆಯನ್ನು ಜಾರಿಗೆ ತರದಂತೆ ಮಾಡಲು ಎಲ್ಲ ರೀತಿಯ ಪ್ರಯತ್ನ ಮಾಡಿದರು. ಇದಕ್ಕೆ ಪ್ರತಿಯಾಗಿ ವಿಲ್ಸನ್ ಮತ್ತು ಅವನ ಅನುಯಾಯಿಗಳು ಪಟ್ಟಭದ್ರ ಹಿತಾಸಕ್ತಿಗಳ ಅನಾಚಾರಗಳನ್ನು ಬಯಲಿಗೆಳೆದು ಕಾನೂನು ವಿರುದ್ಧ ವ್ಯವಹಾರಗಳ ಶಿಕ್ಷಾರ್ಹ ಆಪಾದನೆಯ ಮೇಲೆ ಕಟ್ಟಳೆಯನ್ನು ತರುವುದಾಗಿ ಹೆದರಿಸಿ ಅವರನ್ನು ನಿವಾರಿಸಿದರು.

೧೯೧೩ರ ಅಂಡರ್‌ವುಡ್ ಸುಂಕ ಜಾರಿಗೆ ಬಂದಮೇಲೆ ಸುಂಕದ ದರಗಳನ್ನು ಬಹಳ ಕಡಿಮೆ ಮಾಡಲಾಯಿತು. ಆದ್ದರಿಂದ ಸರ್ಕಾರದ ಆದಾಯ ಕಳೆದುಕೊಳ್ಳಬೇಕಾಯಿತು. ಕಳೆದುಕೊಂಡ ಆದಾಯವನ್ನು ವರ್ಗೀಕರಿಸಿದ ಆದಾಯ ತೆರಿಗೆಯನ್ನು ಜಾರಿಗೆ ತರುವುದರ ಮೂಲಕ (graduated income tax) ತುಂಬಿಸಲಾಯಿತು. ರಾಜ್ಯಾಂಗದ ೧೬ನೆಯ ತಿದ್ದುಪಡಿಯನ್ನು ಅಂಗೀಕರಿಸುವುದರ ಮೂಲಕ ವರ್ಗೀಕರಿಸಿದ ಆದಾಯ ತೆರಿಗೆಯನ್ನು ಅಧಿಕೃತಗೊಳಿಸಿದರು.

೧೯೧೩ರ ಫೆಡರಲ್ ರಿಸರ್ವ್ ಕಾಯಿದೆ

ವಿಲ್ಸನ್ ಕೈಗೊಂಡ ಎರಡನೆಯ ಸುಧಾರಣೆ ಹಣಕಾಸು ಮತ್ತು ಬ್ಯಾಂಕ್ ವ್ಯವಸ್ಥೆಗೆ ಸಂಬಂಧಪಟ್ಟಿತ್ತು. ೧೯೦೭ರಲ್ಲಿ ಹದಗೆಟ್ಟ ಆರ್ಥಿಕ ವ್ಯವಸ್ಥೆ ಜನರನ್ನು ತಲ್ಲಣಗೊಳಿಸಿದ್ದು ಅವರು ಮರೆತಿರಲಿಲ್ಲ. ಅದರಿಂದ ಕಲಿತ ಪಾಠವೆಂದರೆ ಹಣಕಾಸಿನ ವ್ಯವಸ್ಥೆಯನ್ನು ಸಂದರ್ಭಕ್ಕೆ ಅನುಗುಣವಾಗಿ ಹಿಗ್ಗಿಸುವ ಅಥವಾ ಕುಗ್ಗಿಸುವ ಹಾಗೆ ರಚನೆ ಮಾಡಬೇಕಾಗುವ ಅಗತ್ಯ. 'ಸ್ಥಿತಿಸ್ಥಾಪಕ' ಹಣಕಾಸಿನ ವ್ಯವಸ್ಥೆ (Elastic Monetary System) ಯಲ್ಲಿ ಸಾಲ ಕೊಡುವುದು ಮತ್ತು ಹಣ ಒದಗಿಸುವುದನ್ನು ದೇಶದ ಆಯಾಯ ಪ್ರದೇಶಗಳ ವ್ಯಾಪಾರ ವ್ಯವಹಾರಗಳ ಅಗತ್ಯಗಳಿಗೆ ತಕ್ಕಂತೆ ವಿಸ್ತರಿಸುವುದಾಗಲಿ ಅಥವಾ ಕಡಿಮೆ ಮಾಡುವುದಾಗಲಿ ಸಾಧ್ಯ. ರಿಪಬ್ಲಿಕನ್ ಪಕ್ಷ ರಚಿಸಿದ್ದ 'ರಾಷ್ಟ್ರೀಯ ಹಣಕಾಸು ಸಮಿತಿ'

(National Monetary Commission) ಈ ವಿಷಯ ಕುರಿತು ತನಿಖೆ ನಡೆಸಿತ್ತು. ವಿಲ್ಸನ್ ಆಡಳಿತದಲ್ಲಿ ಡೆಮೊಕ್ರಾಟಿಕ್ ನಿಯಂತ್ರಣಕ್ಕೊಳಗಾದ 'ಪ್ಯೂಜೊ ಸಮಿತಿ' (Pujo Committee)ಗೆ ನಡೆಯುತ್ತಿರುವ ತನಿಖಾ ಪ್ರಕ್ರಿಯೆಯಲ್ಲಿ (investigation process) ಭಾಗವಹಿಸಲು ಅವಕಾಶ ಕೊಡಲಾಯಿತು. ಪ್ಯೂಜೊ ಸಮಿತಿಯ ತನಿಖೆ ವಾಲ್ ಸ್ಟ್ರೀಟ್ (Wall street money trust) ಹಣದ ನಿಕ್ಷೇಪದ ಕಾರ್ಯಾಚರಣೆಯನ್ನು ಬಯಲು ಮಾಡಿತು. ಈ ನಿಕ್ಷೇಪ ದೇಶದ ಎಲ್ಲ ಪ್ರಮುಖ ವ್ಯಾಪಾರ ವ್ಯವಹಾರ ಸಂಸ್ಥೆಗಳೊಡನೆ ಸಂಬಂಧ ಹೊಂದಿರುವುದು ಬೆಳಕಿಗೆ ಬಂತು. ಈ ತನಿಖಾ ಸಮಿತಿಗಳು ಕಂಡುಹಿಡಿದ ನ್ಯೂನತೆಗಳನ್ನು ಪರಿಹರಿಸಿ ಹಲವು ವಿದೇಶಗಳಲ್ಲಿ ಕಂಡುಬಂದಂತಹ ಮುಂದುವರಿದ ಕೇಂದ್ರ ಬ್ಯಾಂಕ್ ವ್ಯವಸ್ಥೆ (Central Banking System) ಗಳ ರಚನೆ ಮತ್ತು ಕಾರ್ಯಾಚರಣೆಯನ್ನು ಅವಲೋಕಿಸಿ ಅಧ್ಯಯನ ಮಾಡುವಂತೆ ಸಲಹೆ ನೀಡಿದವು.

ಫೆಡರಲ್ ರಿಸರ್ವ್ ವ್ಯವಸ್ಥೆ (Federal Reserve)ಯ ಸ್ಥಾಪನೆಗೆ ಕಾರಣನಾದವನು ವರ್ಜೀನಿಯದ ಸೆನೆಟರ್ ಕಾರ್ಟರ್ ಗ್ಲಾಸ್ (Carter Glass). ಇವನು ಬ್ಯಾಂಕ್ ಕಾಯಿದೆಗಳಲ್ಲಿ ಪರಿಣತನಾಗಿದ್ದನು. ಫೆಡರಲ್ ರಿಸರ್ವ್ ಮಸೂದೆಯ ಮುಖ್ಯ ಅಂಶಗಳು: ಈ ಮಸೂದೆ ಹನ್ನೆರಡು ಪ್ರಾಂತೀಯ ರಿಸರ್ವ್ ಬ್ಯಾಂಕ್‌ಗಳನ್ನು (ಆರ್ಥಿಕ ಮತ್ತು ಭೌಗೋಳಿಕ ಅಂಶಗಳನ್ನು ಗಣನೆಗೆ ತೆಗೆದುಕೊಂಡು) ಸ್ಥಾಪಿಸಲಾಯಿತು. ಈ ಬ್ಯಾಂಕ್‌ಗಳು ತೀವ್ರ ಕೇಂದ್ರೀಕರಣದ ಅಪಾಯವನ್ನು ನಿವಾರಿಸಿದವು. ಫೆಡರಲ್ ರಿಸರ್ವ್ ಬ್ಯಾಂಕ್‌ಗಳು 'ಬ್ಯಾಂಕ್‌ಗಳಿಗೆ ಸಾಲ ಕೊಡುವ ಬ್ಯಾಂಕ್‌ಗಳು'. ಖಾಸಗಿ ಬ್ಯಾಂಕರುಗಳು ಪಾಲುಪತ್ರಗಳನ್ನು (stock) ಕೊಳ್ಳುವುದರ ಮೂಲಕ ಈ ರಿಸರ್ವ್ ಬ್ಯಾಂಕ್‌ಗಳನ್ನು ಸ್ಥಾಪಿಸಿದವು. ರಿಸರ್ವ್ ಬ್ಯಾಂಕ್‌ಗಳ ಸೇವೆ ಸವಲತ್ತುಗಳು ಲಭಿಸುತ್ತಿದ್ದುದು ಇತರ ಬ್ಯಾಂಕ್‌ಗಳಿಗೆ ಮಾತ್ರ, ಖಾಸಗಿ ವ್ಯಕ್ತಿಗಳಿಗಲ್ಲ. ಈ ವ್ಯವಸ್ಥೆಯ ನಿಯಂತ್ರಣವನ್ನು ಗವರ್ನರ್‌ಗಳ ಸಮಿತಿಗೆ ವಹಿಸಲಾಯಿತು. ಇವರಲ್ಲಿ ಕೆಲವರನ್ನು ಸದಸ್ಯ ಬ್ಯಾಂಕ್‌ಗಳು ಆಯ್ಕೆ ಮಾಡುತ್ತಿದ್ದವು; ಮಿಕ್ಕವರನ್ನು ರಾಷ್ಟ್ರದ ಅಧ್ಯಕ್ಷ ನೇಮಕ ಮಾಡುತ್ತಿದ್ದನು. ಫೆಡರಲ್ ರಿಸರ್ವ್ ಬ್ಯಾಂಕ್‌ಗಳು ಹೊಸ ಏಕಸಾಮ್ಯ (uniform) ನೋಟುಗಳನ್ನು ಚಲಾವಣೆಗೆ ತಂದವು. ಸದಸ್ಯ ಬ್ಯಾಂಕ್‌ಗಳು ರಿಸರ್ವ್ ಬ್ಯಾಂಕ್‌ಗಳಿಂದ ಸಾಲ ಪಡೆದಾಗ ಫೆಡರಲ್ ರಿಸರ್ವ್ ನೋಟುಗಳು ಚಲಾವಣೆಗೆ ಬಂದವು. ಕಾಲಕ್ರಮದಲ್ಲಿ ಈ ನೋಟುಗಳು ರಾಷ್ಟ್ರೀಯ ಬ್ಯಾಂಕ್ ನೋಟುಗಳನ್ನು ಸ್ಥಾನಪಲ್ಲಟ ಮಾಡಿ ರಾಷ್ಟ್ರದ ಏಕಸಾಮ್ಯ ಹಣವೆಂದು (uniform currency) ಪರಿಗಣಿಸಲಾಯಿತು. ಈ ಸುಧಾರಣೆಗಳಿಂದ ಹಣವನ್ನು ಅಗತ್ಯಗಳಿಗೆ ತಕ್ಕಂತೆ ವಿಸ್ತರಿಸುವುದು ಸಾಧ್ಯವಾಯಿತು. ಸಾಲ ಪಡೆದಾಗ ಹಣ ವಿಸ್ತಾರಗೊಳ್ಳುತ್ತಿತ್ತು. ಸಾಲ ಮರುಪಾವತಿಯಾದಾಗ ಹಣ ಕುಗ್ಗುತ್ತಿತ್ತು. ಆದ್ದರಿಂದ ಇದು ಸ್ಥಿತಿಸ್ಥಾಪಕ ವ್ಯವಸ್ಥೆ ಎನಿಸಿಕೊಂಡಿತು. ಈ ರಿಸರ್ವ್ ಬ್ಯಾಂಕ್‌ಗಳು ರಾಷ್ಟ್ರೀಯ ಬ್ಯಾಂಕ್‌ಗಳಿಗೆ ಮತ್ತು ಫೆಡರಲ್ ಸರ್ಕಾರದ ಇಲಾಖೆಗಳಿಗೆ ಅನೇಕ ಸೇವೆ ಸವಲತ್ತುಗಳನ್ನು ಒದಗಿಸುತ್ತಿದ್ದವು.

೧೯೧೬ರಲ್ಲಿ ಕೇಂದ್ರ ಕೃಷಿ ಕ್ಷೇತ್ರ ಸಾಲದ ಕಾಯಿದೆಯನ್ನು (The Federal Farm Loan Act) ಜಾರಿಗೆ ತಂದಿತು. ಈ ಕಾಯಿದೆ ೧೨ ಫೆಡರಲ್ ಜಮೀನು ಅಡಮಾನ ಬ್ಯಾಂಕ್‌ಗಳನ್ನು ಸ್ಥಾಪಿಸಲು ಕಾರಣವಾಯಿತು. ಇವು ಫೆಡರಲ್ ರಿಸರ್ವ್ ಬ್ಯಾಂಕ್‌ಗಳಂತೆ ವ್ಯವಸ್ಥೆಗೊಂಡಿದ್ದವು. ಈ ಬ್ಯಾಂಕ್‌ಗಳಲ್ಲಿ ಜಮೀನು ಅಡವಿಟ್ಟು ಕಡಿಮೆ ಬಡ್ಡಿಯ ದೀರ್ಘಾವಧಿ ಸಾಲವನ್ನು ಪಡೆಯಬಹುದಿತ್ತು. ರೈತರಿಗೆ ಈ ಸಾಲದ ಸೌಲಭ್ಯ ಸಹಕಾರ ಸಂಘಗಳ ಮೂಲಕ ದೊರೆಯುವಂತೆ ಮಾಡಲಾಯಿತು. ಕೃಷಿ ಸಾಲ ವಿತರಣೆಯಲ್ಲಿ ಫೆಡರಲ್ ಸರ್ಕಾರ ಭಾಗವಹಿಸಿದ್ದು ಇದೇ ಮೊದಲು. ಖಾಸಗಿ ಸಾಲಿಗರು ಹಣ ಒದಗಿಸದೆ ಹೋದುದರಿಂದ ಫೆಡರಲ್ ಸರ್ಕಾರ ಬ್ಯಾಂಕ್‌ಗಳ ಮೂಲಕ ರೈತರಿಗೆ ಸಾಲದ ಸೌಲಭ್ಯ ಒದಗಿಸಬೇಕಾಯಿತು.

೧೯೧೪ರ ಕ್ಲೇಟನ್ ನಿಕ್ಷೇಪ ನಿರೋಧ ಕಾಯಿದೆ (The Clayton Anti-trust Act) ಪ್ರಕಾರ ಉದ್ಯೋಗ/ವ್ಯವಹಾರಗಳಲ್ಲಿ 'ಅಪ್ರಾಮಾಣಿಕ ನಡವಳಿಕೆ' ಎಂದರೆ ಏನು ಎನ್ನುವುದನ್ನು ವಿವರವಾಗಿ ನಿರೂಪಣೆ ಮಾಡಲಾಯಿತು. ಈ ನಿರೂಪಣೆಯ ಪ್ರಕಾರ ಉದ್ಯಮಗಳು ಒಂದರೊಳಗೊಂದು ಸೇರಿಕೊಂಡು (interlocking) ವ್ಯವಹರಿಸುವುದು ಮತ್ತು 'ಹಿಡಿದಿಡುವ ಕಂಪನಿಗಳು' (holding companies)ನ್ಯಾಯಬಾಹಿರವೆಂದು ನಿರ್ಧರಿಸಿ ಅವುಗಳನ್ನು ನಿಷೇಧಿಸಲಾಯಿತು. ಕಾರ್ಮಿಕರ ಒಕ್ಕೂಟಗಳಿಗೆ ನಿಕ್ಷೇಪ ನಿರೋಧ ಕಾಯಿದೆ ಅನ್ವಯವಾಗುವುದಿಲ್ಲ ಮತ್ತು ಕಾರ್ಮಿಕರ ವಿವಾದಗಳಲ್ಲಿ ಪ್ರತಿಬಂಧಕಾಜ್ಞೆಯನ್ನು ಸೀಮಿತಗೊಳಿಸಬೇಕೆಂದು ನಿರ್ಧರಿಸಲಾಯಿತು. ಕ್ಲೇಟನ್ ನಿಕ್ಷೇಪ ನಿರೋಧ ಕಾಯಿದೆ ಶರ್‌ಮನ್ ನಿಕ್ಷೇಪ ನಿರೋಧ ಕಾಯಿದೆಗಿಂತಲೂ ಹೆಚ್ಚು ಸಮರ್ಪಕವಾದುದು ಮತ್ತು ವ್ಯಾಪಕವಾದುದು. ಅದೇ ವರ್ಷದಲ್ಲಿ ಕಾಂಗ್ರೆಸ್ 'ಕೇಂದ್ರ ವ್ಯಾಪಾರ ಸಮಿತಿ' (Federal Trade Commission)ಯನ್ನು ಕಾರ್ಯಾಚರಣೆಗೆ ತಂದಿತು. ಪ್ರಾಮಾಣಿಕವಾದ ವ್ಯಾಪಾರ ಪದ್ಧತಿಗಳನ್ನು ವ್ಯಾಪಾರಿಗಳು ಅನುಸರಿಸುವಂತೆ ಮಾಡಿ ಈ ಸಮಿತಿಗೆ ವಿಶೇಷವಾದ ಹಾಗೂ ವಿಶಾಲವಾದ ಅಧಿಕಾರ ಕೊಡಲಾಗಿತ್ತು. 'ತಡೆದು ನಿಲ್ಲಿಸುವ' (cease and desist) ಆಜ್ಞೆಗಳ ಮೂಲಕ ಪ್ರಾಮಾಣಿಕ ಸ್ಪರ್ಧೆ (fair competition)ಯನ್ನು ಉಲ್ಲಂಘಿಸುವ ಉದ್ಯಮಗಳನ್ನು ಮುಚ್ಚಿಸಿಬಿಡುವ ಅಧಿಕಾರ ಈ ಸಮಿತಿಗೆ ಇತ್ತು. ಈ ಸಮಿತಿಯ ಆಜ್ಞೆಯನ್ನು ಅಲಕ್ಷಿಸಿದ ವ್ಯಾಪಾರಿ/ಉದ್ಯಮಗಳನ್ನು ಫೆಡರಲ್ ನ್ಯಾಯಾಲಯಗಳು ಪ್ರತಿಬಂಧಕಾಜ್ಞೆಗೆ ಒಳಪಡಿಸುತ್ತಿದ್ದವು. ಈ ಆಜ್ಞೆಗೆ ಒಳಪಟ್ಟ ವ್ಯಾಪಾರಿ/ಉದ್ಯಮಗಳು ಸರ್‌ಕ್ಯೂಟ್ ಕೋರ್ಟುಗಳಿಗೆ (circuit courts of appeal) ತಮ್ಮ ಅಹವಾಲುಗಳನ್ನು ಕಳುಹಿಸಬಹುದಾಗಿತ್ತು.

೧೯೧೫ರ 'ಲಾಫೊಲಿಯೆ ನಾವಿಕರ ಕಾಯಿದೆ'ಯ (La Follette Seamen's Act) ಪ್ರಕಾರ ವ್ಯಾಪಾರಿ ನೌಕಾದಳದ ನಾವಿಕರಿಗೆ ಸಂಬಳ ಹೆಚ್ಚಿಸಿ, ಊಟ, ವಸತಿ,

ಮತ್ತು ಆರೈಕೆಗಳನ್ನು ಉತ್ತಮಗೊಳಿಸಲಾಯಿತು. ಹಾಗೆಯೇ ಆ್ಯಡಮ್‌ಸನ್ ಕಾಯಿದೆ (೧೯೧೬) ಮುಷ್ಕರ ಹೂಡುವ ಬೆದರಿಕೆ ಹಾಕುತ್ತಿದ್ದ ರೈಲ್ವೆ ಕೆಲಸಗಾರರಿಗೆ ಅನೇಕ ಅನುಕೂಲಗಳನ್ನು ಮಾಡಿಕೊಟ್ಟಿತು. ಆ ಅನುಕೂಲಗಳಲ್ಲಿ ಮುಖ್ಯವಾದುದು ಕೆಲಸವನ್ನು ದಿನಕ್ಕೆ ಎಂಟು ಗಂಟೆಗಳಿಗೆ ಸೀಮಿತಗೊಳಿಸಿದ್ದು. ಸ್ಮಿತ್-ಲೆವೆರ್ ಕಾಯಿದೆ (Smith-Lever Act)ಯ ಪ್ರಕಾರ ಕೇಂದ್ರ ಸರ್ಕಾರ ಸಂಸ್ಥಾನಗಳಿಗೆ ಡಾಲರಿಗೆ ಡಾಲರ್ ಸರಿಜೋಡಿ ಸಹಾಯಧನ (dollar matching funds)ವನ್ನು ವ್ಯವಸಾಯ ವಿಸ್ತರಣ ಕಾರ್ಯಗಳಿಗೆ (agricultural extension services) ಕೊಡಲಾಯಿತು. ಸ್ಮಿತ್-ಹ್ಯೂಸ್ ಕಾಯಿದೆ (the Smith-Hughes Act) ಸಾರ್ವಜನಿಕ ಶಾಲೆಗಳಲ್ಲಿ ವ್ಯವಸಾಯ, ಕೈಗಾರಿಕೆ ಮತ್ತು ಗೃಹ ನಿರ್ವಹಣೆಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಯೋಜನೆಗಳಿಗೆ ಸರ್ಕಾರ ಸಹಾಯಧನ ಒದಗಿಸುವಂತೆ ಮಾಡಿತು. ವಿಲ್ಸನ್ ಅಧಿಕಾರದ ಅವಧಿಯಲ್ಲಿ ಬಂದ ಈ ಕಾಯಿದೆಗಳು ಸಮಾಜ ಸುಧಾರಣೆ ತ್ವರಿತಗತಿಯಲ್ಲಿ ಸಾಗುತ್ತಿದ್ದುದಕ್ಕೆ ಸಾಕ್ಷಿಯಾಗಿವೆ.

ವಿಲ್ಸನ್‌ನ ವಿದೇಶಾಂಗ ನೀತಿ

ದಕ್ಷಿಣ ಅಮೆರಿಕ ದೇಶಗಳೊಡನೆ ಅಧ್ಯಕ್ಷ ವಿಲ್ಸನ್ ಅವನ ಹಿಂದಿನ ಅಧ್ಯಕ್ಷರು ಅನುಸರಿಸಿದ ಧೋರಣೆಯನ್ನೇ ಮುಂದುವರಿಸಿದನು. ಅಂದರೆ, ಅಗತ್ಯವಾದಾಗ ಅಮೆರಿಕನ್ನರ ಹಿತಾಸಕ್ತಿಗಳನ್ನು ರಕ್ಷಿಸಲು ದಕ್ಷಿಣ ಅಮೆರಿಕದ ಯಾವ ದೇಶದ ಆಂತರಿಕ ವ್ಯವಹಾರದಲ್ಲಿ ಮಧ್ಯೆ ಪ್ರವೇಶಿಸುವ ಹಕ್ಕು ಅಮೆರಿಕಕ್ಕೆ ಉಂಟು ಎನ್ನುವ ರಾಜಕಾರಣ ನೀತಿ ಇದಾಗಿತ್ತು. ೧೯೧೨ರಲ್ಲಿ ಪನಾಮಾ ಕಾಲುವೆ ಸುಂಕದ ಕಾಯಿದೆ ಜಾರಿಗೆ ಬಂತು. ಕಾಂಗ್ರೆಸ್ ಪನಾಮ ಕಾಲುವೆಯನ್ನು ಉಪಯೋಗಿಸುವ ಹಡಗುಗಳು ಕೊಡಬೇಕಾದ ಸುಂಕದ ದರಗಳ ಪಟ್ಟಿಯನ್ನು (schedule of tolls) ಅನುಮೋದಿಸಿತು. ಸಮುದ್ರತೀರದ ಉದ್ದಕ್ಕೂ ವ್ಯಾಪಾರ ನಡೆಸುತ್ತಿದ್ದ ಅಮೆರಿಕನ್ ಹಡಗುಗಳಿಗೆ ಸುಂಕ ಮಾಫಿ ಮಾಡಲಾಯಿತು. ಇದಕ್ಕೆ ಇಂಗ್ಲೆಂಡ್ ತೀವ್ರ ವಿರೋಧ ವ್ಯಕ್ತಪಡಿಸಿ ಸುಂಕ ಮಾಫಿ ಮಾಡುವುದು ಹೇ-ಪಾನ್ಸ್‌ಫೊಟ್ ಕರಾರಿನ (Hay-Pauncefote treaty) ಉಲ್ಲಂಘನೆ ಯಾಗುತ್ತದೆ ಎಂದು ಪ್ರತಿಪಾದಿಸಿತು. ಅಧ್ಯಕ್ಷ ವಿಲ್ಸನ್ ಕೂಡಲೇ ಕಾರ್ಯನಿರತನಾಗಿ ಸುಂಕ ಮಾಫಿ ಮಾಡಿದ್ದನ್ನು ರದ್ದುಗೊಳಿಸಬೇಕಾಗಿ ಕಾಂಗ್ರೆಸ್ಸಿಗೆ ಕೋರಿಕೆ ಸಲ್ಲಿಸಿದನು. ಕಾಂಗ್ರೆಸ್ ಒಪ್ಪಿಗೆ ನೀಡಿತು. ತನ್ನ ಕೋರಿಕೆಯನ್ನು ಮನ್ನಿಸಿದ್ದಕ್ಕಾಗಿ ಇಂಗ್ಲೆಂಡ್ ಅಮೆರಿಕದ ಮೆಕ್ಸಿಕೊ ಕ್ರಾಂತಿಯನ್ನು ಹತ್ತಿಕ್ಕುವ ರಾಜನೀತಿಯನ್ನು ಬೆಂಬಲಿಸಿತು. ಆಗ ಯೂರೋಪಿನಲ್ಲಿ ಜರುಗುತ್ತಿದ್ದ ಅಪಾಯಕಾರಿ ಘಟನೆಗಳ ಹಿನ್ನೆಲೆಯಲ್ಲಿ ಅಮೆರಿಕ-ಇಂಗ್ಲೆಂಡ್ ನಡುವಣ ಸ್ನೇಹ ಅಗತ್ಯವೆಂದು ವಿಲ್ಸನ್ ಮನಗಂಡನು.

೧೯೧೬ರಲ್ಲಿ ಸಾಂಟೊ ಡೊಮಿಂಗೊ ದಂಗೆಯನ್ನು ಅಡಗಿಸಿ ಆರ್ಥಿಕ ದುರವಸ್ಥೆಯನ್ನು

ತಡೆಗಟ್ಟಲು ಅಮೆರಿಕದ ನೌಕಾದಳವನ್ನು ರವಾನಿಸಲಾಯಿತು. ೧೯೨೪ರವರೆಗೂ ಅಮೆರಿಕನ್ ಸೈನ್ಯ ಅಲ್ಲಿ ಬೀಡುಬಿಟ್ಟಿತ್ತು. ಸೈನ್ಯ ವಾಪಸ್ಸಾದ ನಂತರವೂ ಸುಂಕದ ವಸೂಲಿ ಮೇಲೆ ಅಮೆರಿಕದ ನಿಯಂತ್ರಣ ಮುಂದುವರಿಯಿತು. ನಿಕರಾಗುವದಲ್ಲಿ ಟಾಫ್ಟ್ ಪ್ರಾರಂಭಿಸಿದ ನಿಯಂತ್ರಣಗಳನ್ನು ವಿಲ್ಸನ್ ಬಳಸಿಕೊಂಡನು. ೧೯೧೪ರಲ್ಲಿ ನಿಕರಾಗುವ ದೊಡನೆ ಮಾಡಿಕೊಂಡ ಒಪ್ಪಂದದ ಪ್ರಕಾರ ಅಲ್ಲಿಯೂ ಒಂದು ಕಾಲುವೆ ನಿರ್ಮಿಸುವ ಮತ್ತು ನೌಕಾನೆಲೆಗಳನ್ನು ಸ್ಥಾಪಿಸುವ ಹಕ್ಕುಗಳನ್ನು ಅಮೆರಿಕ ಪಡೆದುಕೊಂಡಿತು. ವಾಸ್ತವವಾಗಿ ನಿಕರಾಗುವ ಅಮೆರಿಕದ ಆಶ್ರಿತರಾಜ್ಯವಾಗಿತ್ತು.

೧೯೧೫ರಲ್ಲಿ ಹೈಟಿ (Haiti) ದ್ವೀಪವನ್ನು ಯೂರೋಪಿಯನ್ ರಾಷ್ಟ್ರಗಳ ವಶವಾಗದಂತೆ ತಡೆದು ಆರ್ಥಿಕ ವ್ಯವಸ್ಥೆ ಮುರಿದು ಬೀಳದಂತೆ ನೋಡಿಕೊಳ್ಳಲು ಅಮೆರಿಕ ಆ ದ್ವೀಪದ ಆಂತರಿಕ ವ್ಯವಹಾರಗಳಲ್ಲಿ ಮಧ್ಯಪ್ರವೇಶ ಮಾಡಿತು. ಕ್ಯೂಬ, ನಿಕರಾಗುವ ಮತ್ತು ಹೈಟಿಗಳಲ್ಲದೆ ಎಲ್ಲ ಲ್ಯಾಟಿನ್ ಅಮೆರಿಕನ್ ದೇಶಗಳು ಅಮೆರಿಕನ್ ಆಕ್ರಮಣವನ್ನು ವಿರೋಧಿಸಿದವು. ಅಮೆರಿಕದ ಉದ್ದೇಶ ಅಲ್ಲಿನ ಜನರಿಗೆ ಅನುಮಾನಾಸ್ಪದವಾಗಿ ಕಂಡುಬಂದಿತು.

ಕ್ರಾಂತಿಯ ಸುಳಿಯಲ್ಲಿ ಸಿಕ್ಕ ಮೆಕ್ಸಿಕೊ

೧೮೨೧ರಲ್ಲಿ ಮೆಕ್ಸಿಕೊ ಸ್ಪೇನ್‌ನಿಂದ ಸ್ವಾತಂತ್ರ್ಯ ಪಡೆದಂದಿನಿಂದಲೂ ಅಶಾಂತಿ ಮತ್ತು ಅಸ್ಥಿರತೆಗಳಿಂದ ಪರಿತಪಿಸುತ್ತಿತ್ತು. ೧೮೭೬ರಲ್ಲಿ ಪೊರ್ಫಿರಿಯೋ ಡಿಯಾಜ಼್ (Porfirio Diaz) ಸರ್ವಾಧಿಕಾರಿಯಾಗಿ ರಾಜ್ಯಭಾರ ವಹಿಸಿಕೊಂಡನು. ೧೯೧೦ರವರೆಗೂ ಅವನ ಸರ್ವಾಧಿಕಾರ ನಡೆಯಿತು. ಡಿಯಾಜ಼್ ವಿದೇಶಿಯರು ಹೂಡಿದ ಬಂಡವಾಳ ಮತ್ತು ಅವರು ಮಾಡಿಕೊಂಡ ಅಪಾರ ಚಿರಸ್ವತ್ತುಗಳನ್ನು ಮತ್ತು ಮೆಕ್ಸಿಕನ್ ಆಗರ್ಭ ಶ್ರೀಮಂತರ ಆಸ್ತಿ ಪಾಸ್ತಿಗಳನ್ನು ರಕ್ಷಿಸುವುದರ ಮೂಲಕ ಅವರ ಕೃಪೆಗೆ ಪಾತ್ರನಾಗಿದ್ದನು. ಅವರ ಅನವರತ ಬೆಂಬಲವೂ ಅವನಿಗಿದ್ದಿತ್ತು.

೧೯೧೦ರಲ್ಲಿ ಉದಾರನೀತಿಯ ಆದರ್ಶವಾದಿ ತರುಣ ಫ್ರಾನ್ಸಿಸ್ಕೊ ಮದೇರೋ (Francisco Madero) ನಾಯಕತ್ವದಲ್ಲಿ ಜನರು ಡಿಯಾಜ಼್‌ನ ವಿರುದ್ಧ ದಂಗೆಯೆದ್ದು ಅವನನ್ನು ಅಧಿಕಾರದಿಂದ ಕಿತ್ತುಹಾಕಿ ಅವನು ದೇಶ ಬಿಟ್ಟು ಓಡಿಹೋಗುವ ಹಾಗೆ ಮಾಡಿದರು. ಮದೇರೋ ಜಾರಿಗೆ ತಂದ ಅನೇಕ ಸುಧಾರಣೆಗಳಲ್ಲಿ ಭೂಸುಧಾರಣೆ ಅತ್ಯಂತ ಪ್ರಮುಖವಾದುದು. ಕೇವಲ ಕೆಲವು ಶ್ರೀಮಂತರ ಸ್ವಾಮ್ಯದಲ್ಲಿದ್ದ ಬೃಹತ್ ಎಸ್ಟೇಟ್‌ಗಳನ್ನು ವಿಂಗಡಿಸಿ, ಭೂಮಿ ಇಲ್ಲದ ಬಡವರಿಗೆ ಹಂಚಿದನು. ಒಳ್ಳೆಯವರು ಅಲ್ಪಾಯುಷ್ಯರು ಎನ್ನುವ ಗಾದೆಯಂತೆ ೧೯೧೩ರಲ್ಲಿ ಜನರಲ್ ವಿಕ್ಟೋರಿಯಾನೊ ಹುಯೆರ್ತ (Victoriano Huerta) ಶ್ರೀಮಂತ ಜಮೀನುದಾರರ ಬೆಂಬಲದಿಂದ ಪ್ರತಿಗಾಮಿ ದಂಗೆ ಎಬ್ಬಿಸಿ, ಮದೇರೊನನ್ನು ಕೊಲೆ ಮಾಡಿ, ಅಧಿಕಾರ ವಹಿಸಿಕೊಂಡನು.

ಹುಯೆರ್ತನು ಅನೇಕ ವಿದೇಶಗಳೊಡನೆ ಸ್ನೇಹ ಬೆಳೆಸಿಕೊಂಡು ಮೆಕ್ಸಿಕೊದಲ್ಲಿ ಆ ವಿದೇಶಗಳ ಹಿತಾಸಕ್ತಿಗಳನ್ನು ರಕ್ಷಿಸುತ್ತಿದ್ದುದರಿಂದ ಸುಮಾರು ೨೫ ದೇಶಗಳು ಅವನ ಅಧಿಕಾರವನ್ನು ಒಪ್ಪಿಕೊಂಡು ಮನ್ನಣೆ ನೀಡಿದವು. ಆದರೆ ವಿಲ್ಸನ್ ಹುಯೆರ್ತನನ್ನು ಕೊಲೆಗಾರನೆಂದು ಜರಿದು ಅವನ ಸರ್ಕಾರವನ್ನು ಮನ್ನಣೆ ಮಾಡಲು ನಿರಾಕರಿಸಿದನು. ಹುಯೆರ್ತನು ಸಾಮಾನ್ಯ ಮೆಕ್ಸಿಕನ್ನರ ಕ್ಷೇಮಾಭ್ಯುದಯಗಳಿಗೆ ಲಕ್ಷ್ಯ ಕೊಡದೆ ಬಂಡವಾಳ ಗಾರರ ಮತ್ತು ಶ್ರೀಮಂತ ಜಮೀನುದಾರರ ರಕ್ಷಕನಂತೆ ರಾಜ್ಯವಾಳುತ್ತಿದ್ದನು.

ಹುಯೆರ್ತನು ಅಮೆರಿಕನ್ನರ ಮೇಲೆ ಪ್ರತೀಕಾರ ತೀರಿಸಿಕೊಳ್ಳಲು ೧೯೧೪ರಲ್ಲಿ ಟಾಮ್‌ಪಿಕೊ (Tampico) ಎನ್ನುವ ಊರಿನಲ್ಲಿ ಕೆಲವು ಅಮೆರಿಕನ್ ನಾವಿಕರನ್ನು ಸೆರೆಹಿಡಿದನು. ಅಧ್ಯಕ್ಷ ವಿಲ್ಸನ್ ತಪ್ಪು ಒಪ್ಪಿಕೊಂಡು ಕ್ಷಮಾಯಾಚನೆ ಕೇಳುವಂತೆ ಹುಯೆರ್ತನಿಗೆ ಕಟುವಾಗಿ ಹೇಳಿದನು. ನಂತರ ಅಮೆರಿಕನ್ ಸೈನ್ಯವನ್ನು ನುಗ್ಗಿಸಿ ವೆರಕ್ರೂಜ಼್ (Veracruz) ನಗರವನ್ನು ವಶಪಡಿಸಿಕೊಂಡನು. ಹೀಗೆ ಮಾಡಿದುದರಿಂದ ಜರ್ಮನಿಯಿಂದ ಶಸ್ತ್ರಾಸ್ತ್ರಗಳು ಮೆಕ್ಸಿಕೊ ತಲುಪದಂತೆ ಮಾಡಲು ಸಾಧ್ಯವಾಯಿತು. ಅಮೆರಿಕನ್ ಸೈನಿಕ ಕಾರ್ಯಾಚರಣೆಯಿಂದಾಗಿ ಮೆಕ್ಸಿಕೊ ಮತ್ತೆ ಅಮೆರಿಕ ನಡುವೆ ಯುದ್ಧ ಸಂಭವಿಸುವುದು ಖಚಿತವೆಂದು ಅನೇಕ ಲ್ಯಾಟಿನ್ ಅಮೆರಿಕ ದೇಶಗಳು ಆತಂಕಗೊಂಡವು. ಯುದ್ಧವನ್ನು ತಪ್ಪಿಸಲು ದಕ್ಷಿಣ ಅಮೆರಿಕದ 'ಎ ಬಿ ಸಿ' ಶಕ್ತಿಗಳೆನಿಸಿದ್ದ (A B C powers) ಅರ್ಜೆಂಟೈನಾ (Argentina), ಬ್ರೆಜ಼ಿಲ್ (Brazil) ಮತ್ತು ಚಿಲಿ (Chile) ರಾಷ್ಟ್ರಗಳು ರಾಜಿ ಒಪ್ಪಂದ ಮಾಡಿಸಲು ಮಧ್ಯಸ್ಥಿಕೆ ವಹಿಸುವುದಾಗಿ ಮುಂದೆ ಬಂದವು. ಇದನ್ನು ವಿಲ್ಸನ್ ಒಪ್ಪಿಕೊಂಡರೂ ಹುಯೆರ್ತ ನಿರಾಕರಿಸಿದನು. ಅಷ್ಟರೊಳಗಾಗಿ ಜನರು ಹುಯೆರ್ತನಲ್ಲಿ ನಂಬಿಕೆ ಕಳೆದುಕೊಂಡು ಅವನ ವಿರುದ್ಧ ಆಂದೋಳನ ಪ್ರಾರಂಭಿಸಿದ್ದರು. ಹುಯೆರ್ತನು ಅಪಾಯದಿಂದ ಪಾರಾಗಲು ಮೆಕ್ಸಿಕೊದಿಂದ ತಲೆಮರೆಸಿಕೊಂಡು ಓಡಿಹೋದನು.

ಹುಯೆರ್ತನ ಆಡಳಿತವನ್ನು ವಿರೋಧಿಸಿ ದಂಗೆ ಏಳುವಂತೆ ಜನರನ್ನು ಪ್ರಚೋದಿಸಿ ಹೋರಾಟದ ಮುಂದಾಳತ್ವವನ್ನು ವಹಿಸಿದವನು ಕರ್‍ರನ್‌ಜ಼ಾ (Carranza). ೧೯೧೪ರ ಆಗಸ್ಟ್ ತಿಂಗಳಲ್ಲಿ ಕರ್‍ರನ್‌ಜ಼ಾ ತನ್ನ ಅನುಯಾಯಿಗಳೊಡನೆ ಮೆಕ್ಸಿಕೊ ನಗರವನ್ನು ಪ್ರವೇಶಿಸಿದನು. ನವೆಂಬರ್ ತಿಂಗಳಲ್ಲಿ ಅಮೆರಿಕನ್ ಸೈನ್ಯ ವೆರಕ್ರೂಜ಼್‌ನಿಂದ ವಾಪಸ್ಸಾ ಯಿತು. ೧೯೧೫ರ ಅಕ್ಟೋಬರ್ ತಿಂಗಳಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳು ಮತ್ತು ಕೆಲವು ಲ್ಯಾಟಿನ್ ಅಮೆರಿಕ ರಾಷ್ಟ್ರಗಳು ಕರ್‍ರನ್‌ಜ಼ಾ ಮೆಕ್ಸಿಕೊ ಅಧ್ಯಕ್ಷನೆಂದು ಒಪ್ಪಿಕೊಂಡು ಅವನ ಅಧಿಕಾರವನ್ನು ಅಂಗೀಕರಿಸಿದವು. ಇಷ್ಟಾದರೂ ಕರ್‍ರನ್‌ಜ಼ಾ ಮೆಕ್ಸಿಕೊ ದೇಶವನ್ನು ಸಂಪೂರ್ಣ ಹತೋಟಿಯಲ್ಲಿಡಲು ಸಾಧ್ಯವಾಗದೆ ಹೋಯಿತು. ಹಿಂದೆ ಅವನ ಜೊತೆಗಾರ ನಾಗಿದ್ದ ಫ್ರಾನ್ಸಿಸ್ಕೊ ವಿಲ್ಲ (Francisco Villa) ಕರ್‍ರನ್‌ಜ಼ಾಗೆ ಅವಿಧೇಯನಾಗಿ ಉತ್ತರ ಮೆಕ್ಸಿಕೊ ಪ್ರಾಂತದಲ್ಲಿ ಉಪಟಳ ಕೊಡಲು ಪ್ರಾರಂಭಿಸಿದನು. ಅವನು ಅಮೆರಿಕನ್ನರನ್ನೂ

ಸೇರಿದಂತೆ ಎಲ್ಲ ವಿದೇಶಿಯರ ಮೇಲೆ ಹಲ್ಲೆ ಮಾಡಲಾರಂಭಿಸಿದನು. ಅಮೆರಿಕ ಕರ್‍ರನ್‌ಜ಼ಾನನ್ನು ಅಧ್ಯಕ್ಷನಾಗಿ ಅಂಗೀಕರಿದ್ದನ್ನು ಸಹಿಸಲಾರದೆ ಪ್ರತೀಕಾರಕ್ಕಾಗಿ ವಿಲ್ಲ ತನ್ನ ತಂಡದೊಡನೆ ಗಡಿ ದಾಟಿ ಬಂದು ನ್ಯೂ ಮೆಕ್ಸಿಕೊ ಸಂಸ್ಥಾನದ ಕೊಲಂಬಸ್ ಪಟ್ಟಣದಲ್ಲಿ ಹದಿನೇಳು ಜನರನ್ನು ಕೊಲೆ ಮಾಡಿದನು. ಕೂಡಲೆ ಅಧ್ಯಕ್ಷ ವಿಲ್ಸನ್ ಮೆಕ್ಸಿಕೊ ಸರ್ಕಾರದ ಅನುಮತಿ ಪಡೆದು, ಜನರಲ್ ಜಾನ್ ಪರ್ಶಿಂಗ್ (John Pershing) ಸೇನಾಧಿಪತ್ಯದಲ್ಲಿ ಸೈನ್ಯದ ಆಕ್ರಮಣಕಾರಿ ತುಕಡಿಯನ್ನು (invading force) ವಿಲ್ಲನನ್ನು ಸೆರೆಹಿಡಿದು ತರಲು ಕಳುಹಿಸಿದನು. ಈ ಸೇನಾಕಾರ್ಯಾಚರಣೆಯನ್ನು ಬಹುತೇಕ ಮೆಕ್ಸಿಕನ್ನರು ಅತಿಕ್ರಮಣವೆಂದು ಭಾವಿಸಿ ಅಸಮಾಧಾನ ವ್ಯಕ್ತಪಡಿಸಿದರು. ಅಷ್ಟರಲ್ಲಿ ಮೊದಲನೆಯ ಜಾಗತಿಕ ಯುದ್ಧ ಪ್ರಾರಂಭವಾಗಿದ್ದರಿಂದ ವಿಲ್ಸನ್ ಅಮೆರಿಕದ ಸೈನ್ಯವನ್ನು ವಾಪಸ್ಸು ಕರೆಸಿಕೊಂಡನು.

೧೯೧೭ರಲ್ಲಿ ಮೆಕ್ಸಿಕೊ ರಾಜ್ಯಾಂಗ ಜಾರಿಗೆ ಬಂತು. ಇದು ಮೆಕ್ಸಿಕೊ ದೇಶದ ಇತಿಹಾಸದಲ್ಲಿ ಅತಿ ಮಹತ್ವದ ಘಟನೆ. ರಾಜ್ಯಾಂಗ ಜಾರಿಗೆ ಬಂದ ಕೆಲವು ವರ್ಷಗಳಲ್ಲಿ ಮೆಕ್ಸಿಕೊ ದೇಶದಲ್ಲಿ ಶಾಂತಿ ನೆಲೆಸಿತು. ರಾಜ್ಯಾಂಗ ಪ್ರಜೆಗಳ ಅಂತಿಮ ವಿಜಯದ ಸಂಕೇತವಾಯಿತು. ಇದರ ಕೆಲವು ಮುಖ್ಯಾಂಶಗಳು: ಕಾರ್ಮಿಕರ ಮತ್ತು ರೈತರ ಹಿತಾಸಕ್ತಿಗಳನ್ನು ಪೂರೈಸುವುದು ಪ್ರಥಮ ಧ್ಯೇಯ. ದೇಶದ ಖನಿಜ ಸಂಪತ್ತನ್ನು ಕಾಲಕ್ರಮೇಣ ವ್ಯವಸ್ಥಿತವಾಗಿ ವಿನಿಯೋಗಿಸುವುದು. ಬೃಹತ್ ಪ್ರಮಾಣದ ಎಸ್ಟೇಟ್‌ಗಳನ್ನು ವಿಂಗಡಿಸಿ ಹಂಚುವುದು. ಈ ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಪ್ರಯತ್ನದಲ್ಲಿ ಮೆಕ್ಸಿಕೊ ಮತ್ತು ಅಮೆರಿಕಗಳ ನಡುವೆ ಘರ್ಷಣೆ ಉಂಟಾಯಿತು. ಇದಕ್ಕೆ ಕಾರಣ ಅಮೆರಿಕನ್ನರು ಮೆಕ್ಸಿಕೊದಲ್ಲಿ ಹೂಡಿದ ಬಂಡವಾಳ ಮತ್ತು ಗಳಿಸಿದ್ದ ಆಸ್ತಿ ಪಾಸ್ತಿಗಳು. ಆದರೆ ಮೆಕ್ಸಿಕೊ ಸರ್ಕಾರ ಅಮೆರಿಕನ್ನರಿಗೆ ಪರಿಹಾರ ನೀಡಿ ಈ ಸಮಸ್ಯೆಯನ್ನು ಬಗೆಹರಿಸಿತು. ಇದು ಎರಡು ದೇಶಗಳ ನಡುವೆ ಸೌಹಾರ್ದತೆ ಬೆಳೆಯಲು ಪ್ರೋತ್ಸಾಹ ನೀಡಿತು.

❑

ಅಧ್ಯಾಯ - ೧೫

ಮೊದಲನೆಯ ಮಹಾಯುದ್ಧದಲ್ಲಿ ಅಮೆರಿಕ

ನೆಪೋಲಿಯನ್‌ನನ್ನು ಯುದ್ಧದಲ್ಲಿ ಸೋಲಿಸಿದಾಗಿನಿಂದಲೂ ಇಂಗ್ಲೆಂಡ್ ಇಡೀ ಪ್ರಪಂಚದಲ್ಲಿ ಅತ್ಯಂತ ಬಲಿಷ್ಠ ರಾಷ್ಟ್ರವಾಗಿ ಮೆರೆಯುತ್ತಿತ್ತು. ಇಂಗ್ಲೆಂಡಿಗೆ ಸವಾಲು ಹಾಕುವಂಥ ಸೇನಾಬಲವುಳ್ಳ ದೇಶ ಯಾವುದೂ ಇರಲಿಲ್ಲ. ಬಿಸ್‌ಮಾರ್ಕನ (Bismark) ನೇತೃತ್ವದಲ್ಲಿ ಸಾಧಿಸಿದ ಜರ್ಮನಿಯ ಏಕೀಕರಣ (unification) ಒಂದು ಹೊಸದಾದ ಬಲಿಷ್ಠ ಸಾಮ್ರಾಜ್ಯವನ್ನು ಸೃಷ್ಟಿಸಿತು. ಈ ಸಾಮ್ರಾಜ್ಯ ಅಂತರರಾಷ್ಟ್ರೀಯ ರಾಜಕೀಯದಲ್ಲಿ ಮತ್ತು ವ್ಯಾಪಾರ ವ್ಯವಹಾರಗಳಲ್ಲಿ ಇಂಗ್ಲೆಂಡಿಗೆ ಸವಾಲು ಹಾಕುವ ಸಾಮರ್ಥ್ಯ ಪಡೆದಿತ್ತು. ೧೯೦೦ರ ನಂತರ ಬಹುತೇಕ ಯೂರೋಪಿಯನ್ ರಾಷ್ಟ್ರಗಳು ಪರಸ್ಪರ ವಿರೋಧಿಗಳಾದ ಎರಡು ಬಣಗಳಲ್ಲಿ ಒಂದನ್ನು ಸೇರಿಕೊಳ್ಳತೊಡಗಿದ್ದವು. ಮೊದಲನೆಯ ಬಣ 'ಮೂರು ರಾಷ್ಟ್ರಗಳ ಒಕ್ಕೂಟ' (Triple Alliance) – ಈ ಒಕ್ಕೂಟ ೧೮೮೨ರಲ್ಲೇ ಅಸ್ತಿತ್ವಕ್ಕೆ ಬಂದಿತ್ತು – ಜರ್ಮನಿ, ಆಸ್ಟ್ರಿಯ-ಹಂಗೇರಿ ಮತ್ತು ಇಟಲಿ. ಎರಡನೆಯ ಬಣ ಮೂರು ಮಿತ್ರ ರಾಷ್ಟ್ರಗಳ (Triple Entities) ಒಕ್ಕೂಟವಾಗಿತ್ತು. ೧೮೯೪ರಲ್ಲಿ ಅಸ್ತಿತ್ವಕ್ಕೆ ಬಂದ ಈ ಒಕ್ಕೂಟದಲ್ಲಿ ಫ್ರಾನ್ಸ್ ಮತ್ತು ರಷ್ಯಾ ದೇಶಗಳು ಮಾತ್ರ ಸೇರಿದ್ದವು. ೧೯೦೭ರಲ್ಲಿ ಈ ಒಕ್ಕೂಟವನ್ನು ವಿಸ್ತರಿಸಿ ಇಂಗ್ಲೆಂಡನ್ನು ಸೇರಿಸಿಕೊಳ್ಳಲಾಯಿತು. ಹೀಗೆ ಫ್ರಾನ್ಸ್, ಇಂಗ್ಲೆಂಡ್ ಮತ್ತು ರಷ್ಯಾ ದೇಶಗಳು ಸೇರಿ ಮೂರು ಮಿತ್ರ ರಾಷ್ಟ್ರಗಳ ಒಕ್ಕೂಟ ಸ್ಥಾಪನೆಗೊಂಡಿತು. ಈ ಎರಡೂ ಬಣಗಳು ಮಾರಕಾಸ್ತ್ರಗಳ ತಯಾರಿಕೆಯಲ್ಲಿ ಪರಸ್ಪರ ಸ್ಪರ್ಧೆ ನಡೆಸಿದ್ದವು. ಘಟನೆಗಳ ಮೇಲೆ ಘಟನೆಗಳು ಸಂಭವಿಸಿ ಯಾವ ಘಳಿಗೆಯಲ್ಲಾದರೂ ಕಿಡಿ ಹಾರಿ ಮಹಾಯುದ್ಧದ ದಳ್ಳುರಿ ಇಡೀ ಜಗತ್ತನ್ನು ಆವರಿಸುವ ಸಾಧ್ಯತೆ ಹೆಚ್ಚುತ್ತ ಹೋಯಿತು. ಬಾಲ್ಕನ್ ರಾಜ್ಯಗಳಲ್ಲಿ (Balkan states) ರಾಜಕೀಯ ಪರಿಸ್ಥಿತಿ ಹದಗೆಟ್ಟು ಜನರು ಉದ್ರೇಕಗೊಂಡಿದ್ದರು. ರಷ್ಯಾ ಮತ್ತು ಆಸ್ಟ್ರಿಯ-ಹಂಗೇರಿ ರಾಷ್ಟ್ರಗಳು ಬಾಲ್ಕನ್ ರಾಜ್ಯಗಳನ್ನು ವಶಪಡಿಸಿಕೊಳ್ಳಲು ಹವಣಿಸುತ್ತಿದ್ದವು. ಮುಖ್ಯವಾಗಿ ಸರ್ಬಿಯಾ (Serbia) ಆಸ್ಟ್ರಿಯದ ಮೇಲೆ ದ್ವೇಷ ಕಾರುತ್ತಿತ್ತು. ಸರ್ಬಿಯಾದ ಒಂದು ಗುಪ್ತ ಸಂಗದ ಸದಸ್ಯರು ಆಸ್ಟ್ರಿಯ ಸಿಂಹಾಸನಕ್ಕೆ ಉತ್ತರಾಧಿಕಾರಿಯಾಗಿದ್ದ ಆರ್ಚ್ ಡ್ಯೂಕ್ ಫ್ರಾನ್ಸಿಸ್ ಫರ್ಡಿನಾಂಡ್‌ನನ್ನು (Archduke Francis Ferdinand) ಕೊಲೆ ಮಾಡಲು ಪಿತೂರಿ ನಡೆಸಿದ್ದರು. ಸಮಯ ಕಾಯುತ್ತಿದ್ದ ಈ ಗುಪ್ತ ಸಂಘದ ಸದಸ್ಯನೊಬ್ಬ ೧೯೧೪ರ ಜೂನ್ ತಿಂಗಳಲ್ಲಿ ಆರ್ಚ್ ಡ್ಯೂಕ್‌ನನ್ನು ಸಾರಯೆವೊ (Sarajevo) ದಲ್ಲಿ ಕೊಲೆ ಮಾಡಿದನು.

ಈ ಕೊಲೆಯ ಸೇಡು ತೀರಿಸಿಕೊಳ್ಳಲು ಆಸ್ಟ್ರಿಯ-ಹಂಗೆರಿ ರಾಜ್ಯಗಳು ಸರ್ಬಿಯಾವನ್ನು ಆಕ್ರಮಣ ಆಡಲು ಸಿದ್ಧವಾಗಿದ್ದವು. ಸರ್ಬಿಯಾದ ಸಹಾಯಕ್ಕೆ ರಷ್ಯಾ ತನ್ನ ಸೇನಾಪಡೆಗಳನ್ನು ಕಳುಹಿಸಿತು. ಇದು ಯೂರೋಪಿನ ಎರಡು ಬಣಗಳನ್ನು ಪರಸ್ಪರ ಸಂಘರ್ಷಣೆಗೆ ಪ್ರಚೋದಿಸಿತು. ಸೈನ್ಯ ಜಮಾವಣೆ ಮಾಡಕೂಡದು ಎಂದು ಜರ್ಮನಿ ರಷ್ಯಾಕ್ಕೆ ಎಚ್ಚರಿಕೆ ನೀಡಿತು. ಅದಕ್ಕೆ ಸೊಪ್ಪು ಹಾಕದೆ ರಷ್ಯಾ ಸೈನ್ಯ ಜಮಾವಣೆಯನ್ನು ಮುಂದುವರಿಸಿತು. ರಷ್ಯಾದ ದಾಷ್ಟೀಕ ನಡತೆಯನ್ನು ದಮನಗೊಳಿಸಲು ಜರ್ಮನಿ ೧೯೧೪ರ ಆಗಸ್ಟ್ ಒಂದರಂದು ರಷ್ಯಾದ ಮೇಲೆ ಯುದ್ಧ ಸಾರಿತು. ನಂತರ ಎರಡು ದಿನಗಳ ಮೇಲೆ ರಷ್ಯಾದ ಮಿತ್ರ ರಾಷ್ಟ್ರವಾದ ಫ್ರಾನ್ಸ್ ಮೇಲೆ ಜರ್ಮನಿ ಯುದ್ಧ ಸಾರಿತು. ಫ್ರಾನ್ಸ್ ಮೇಲೆ ದಾಳಿ ನಡೆಸಲು ಬೆಲ್ಜಿಯಂ ಮೂಲಕ ಜರ್ಮನ್ ಸೈನ್ಯ ಹೋಗಬೇಕಾಗಿದ್ದರಿಂದ ಮೊದಲು ಬೆಲ್ಜಿಯಂನ್ನು ಆಕ್ರಮಣ ಮಾಡಿತು. ಮೂರು ಮಿತ್ರ ರಾಷ್ಟ್ರಗಳಲ್ಲಿ ಒಂದಾದ ಫ್ರಾನ್ಸ್ ಪರವಾಗಿ ಇಂಗ್ಲೆಂಡ್ ಯುದ್ಧಕ್ಕಿಳಿಯಬೇಕಾಯಿತು. ಶಾಂತಸಾಗರದಲ್ಲಿ ಜರ್ಮನ್ ಆಡಳಿತಕ್ಕೆ ಒಳಪಟ್ಟಿದ್ದ ಪ್ರದೇಶಗಳನ್ನು ವಶಪಡಿಸಿಕೊಳ್ಳುವ ಸಲುವಾಗಿ ಜಪಾನ್ ಯುದ್ಧ ಸಾರಿತು. ಇಟಲಿ ಸಮಯ ಕಾದು ೧೯೧೫ರಲ್ಲಿ ಮಿತ್ರ ರಾಷ್ಟ್ರಗಳ ಒಕ್ಕೂಟವನ್ನು ಸೇರಿಕೊಂಡಿತು.

ಯೂರೋಪಿನಲ್ಲಿ ಎಲ್ಲ ರಾಷ್ಟ್ರಗಳೂ ಯುದ್ಧದ ದಾವಾಗ್ನಿಯಲ್ಲಿ ಬೆಂದು ಬಸವಳಿಯುತ್ತಿದ್ದ ಕಾಲದಲ್ಲಿ ಯುದ್ಧರಂಗದಿಂದ ಮೂರು ಸಾವಿರ ಮೈಲಿ ದೂರವಿದ್ದ ಅಮೆರಿಕಕ್ಕೆ ಆ ದಾವಾಗ್ನಿಯ ಬಿಸಿ ಕೂಡ ಮುಟ್ಟಿರಲಿಲ್ಲ. ಅಮೆರಿಕಕ್ಕೆ ಯುದ್ಧದ ಅಗ್ನಿಸ್ಪರ್ಶವಾಗದಿರುವಂತೆ ಅಧ್ಯಕ್ಷ ವಿಲ್ಸನ್ ತಟಸ್ಥ ನೀತಿಯನ್ನು ಅನುಸರಿಸಿದನು. ಹೆಸರಿಗೆ ಮಾತ್ರವಲ್ಲದೆ ನಿಜಕ್ಕೂ ನಡೆ-ನುಡಿಯಲ್ಲಿ ಅಮೆರಿಕ ತಟಸ್ಥವಾಗಿರಬೇಕೆಂದು ವಿಲ್ಸನ್ ರಾಷ್ಟ್ರಕ್ಕೆ ಕರೆಕೊಟ್ಟನು. ಹೀಗೆ ಅಮೆರಿಕ ಸುಮ್ಮನಿದ್ದರೂ ಪ್ರಬಲ ನೌಕಾಪಡೆಗಳನ್ನು ಪಡೆದಿದ್ದ ಜರ್ಮನಿ ಮತ್ತು ಇಂಗ್ಲೆಂಡ್ ದೇಶಗಳು ಪರಸ್ಪರ ವಿದೇಶ ವ್ಯಾಪಾರವನ್ನು ನಾಶಗೊಳಿಸಲು ನೌಕಾಯುದ್ಧದಲ್ಲಿ ತೊಡಗಿದ್ದವು. ಈ ಎರಡು ರಾಷ್ಟ್ರಗಳು ತಟಸ್ಥ ರಾಷ್ಟ್ರಗಳ ಸಮುದ್ರಯಾನದ ಹಕ್ಕುಗಳನ್ನು ನಿರ್ಲಕ್ಷಿಸಿದವು. ಅಮೆರಿಕ ತನ್ನ ಹಕ್ಕುಗಳನ್ನು ಎತ್ತಿ ಹಿಡಿಯಲು ಜರ್ಮನಿ ಮತ್ತು ಇಂಗ್ಲೆಂಡ್‌ಗಳೊಡನೆ ರಾಜಕಾರಣ ನಡೆಸುವುದು ಅನಿವಾರ್ಯವಾಯಿತು.

ಇಂಗ್ಲೆಂಡ್ ಅಂತರರಾಷ್ಟ್ರೀಯ ಕಾಯಿದೆಯನ್ನು ತನಗೆ ಅನುಕೂಲವಾಗುವಂತೆ ವ್ಯಾಖ್ಯಾನ ಮಾಡಿ ಜರ್ಮನಿಯ ಹಡಗುಗಳು ಸಮುದ್ರಯಾನ ಮಾಡದಂತೆ ನಿರ್ಬಂಧ ಹಾಕಿತು. ೧೯೦೯ರಲ್ಲಿ ಹೊರಡಿಸಿದ 'ಲಂಡನ್ ಪ್ರಣಾಳಿಕೆ' (Declaration of London) ಯ ನಿರ್ಬಂಧಗಳನ್ನು ಎಲ್ಲ ದೇಶಗಳೂ ಗೌರವಿಸಬೇಕೆಂದು ವಿಲ್ಸನ್ ಕೇಳಿಕೊಂಡನು. ಇಂಗ್ಲೆಂಡ್ ಆ ಪ್ರಣಾಳಿಕೆಗೆ ರುಜು ಮಾಡಿರಲಿಲ್ಲ. ಹಾಗಾಗಿ ಅದು ಹೆಚ್ಚು ಆಕ್ರಮಣಕಾರಿ ನಿಲುವು ತಾಳಿ, ಕಾಲ್ಕೆರೆದು ಜಗಳಕ್ಕೆ ಬರುವವರಂತೆ, ಅಮೆರಿಕವನ್ನು ಕೆಣಕುವಂತಹ

ಕುಹಕ ಕೃತ್ಯಗಳನ್ನು ಮಾಡತೊಡಗಿತು. ಇವುಗಳಲ್ಲಿ ಕೆಲವು: ಹಡಗುಗಳಲ್ಲಿ ರವಾನಿಸಬಾರದೆಂದು ನಿಷಿದ್ಧಪಡಿಸಿದ ಸರಕು ಸಾಮಗ್ರಿಗಳ ಪಟ್ಟಿಗೆ ಆಹಾರ ಪದಾರ್ಥಗಳನ್ನು ಮತ್ತು ಸ್ವಲ್ಪ ಕಾಲದ ಹಿಂದೆ ನ್ಯಾಯಬದ್ಧವಾಗಿ ಸಾಗಿಸಬಹುದಾಗಿದ್ದ ವಸ್ತುಗಳನ್ನು ಪ್ರಸ್ತುತವಾಗಿ ನಿಷಿದ್ಧಪಡಿಸಿದ ವಸ್ತುಗಳೆಂದು ಪರಿಗಣಿಸಿ, ಅವುಗಳನ್ನು ರವಾನಿಸುವುದು ಅಪರಾಧವೆಂದು ನಿರ್ಣಯಿಸಿ, ಹಾಗೆ ರವಾನಿಸುವ ಯಾವ ದೇಶದ ಹಡಗನ್ನಾಗಲಿ ತಡೆಗಟ್ಟಿ ಶೋಧಿಸುವ ಹಕ್ಕು ತಮಗಿದೆ ಎಂದು ಬ್ರಿಟಿಷ್ ಸರ್ಕಾರ ಎಚ್ಚರಿಕೆ ನೀಡಿತು. ಇಂಗ್ಲೆಂಡ್ 'ಅನವರತ ಸಮುದ್ರಯಾನ ನಿಯಮ'ವನ್ನು (the Doctrine of continuous Voyage) ಕಟ್ಟುನಿಟ್ಟಿನಿಂದ ಜಾರಿಗೆ ತಂದಿತು. 'ಅನವರತ ಯಾನ'ವೆಂದರೆ ಅಮೆರಿಕದ ಸರಕು ಸಾಮಗ್ರಿಗಳನ್ನು ಹಡಗುಗಳಲ್ಲಿ ಜರ್ಮನಿಯ ಅಕ್ಕಪಕ್ಕದ ತಟಸ್ಥ ರಾಷ್ಟ್ರಗಳಿಗೆ ರವಾನಿಸದಂತೆ ಮಾಡಲು ಆ ಹಡಗುಗಳನ್ನು ಜರ್ಮನಿಯ ಅಕ್ಕಪಕ್ಕದ ಬಂದರುಗಳಲ್ಲಿ ನಿಲಲು ಅವಕಾಶ ಕೊಡದೆ ಅವು ಹೋಗಬೇಕಾದ ದೂರದೇಶಗಳಿಗೆ ನೇರವಾಗಿ ಹೋಗುವಂತೆ ಬಲಾತ್ಕಾರ ಮಾಡುವುದು. ಆಜ್ಞೆಯನ್ನು ಉಲ್ಲಂಘಿಸಿದ ಹಡಗುಗಳನ್ನು ಮುಳುಗಿಸುವುದು ಅಥವಾ ವಶಪಡಿಸಿಕೊಳ್ಳುವುದು ಕಾರ್ಯಾಚರಣೆಯ ಒಂದು ಮುಖ್ಯ ಅಂಶವಾಗಿತ್ತು. ಇಂಗ್ಲೆಂಡ್ ಹೀಗೆ ಮಾಡಿದ್ದು ಪ್ರಪಂಚದ ಎಲ್ಲ ಕಡೆ, ಎಲ್ಲ ದೇಶದ ಹಡಗುಗಳನ್ನು ನಿಲ್ಲಿಸಿ ಶೋಧಿಸುವ ದಿಟ್ಟತನವನ್ನು ಬೆಳೆಸಿಕೊಂಡಿತು. ಇವೆಲ್ಲ ನಿರ್ಬಂಧಗಳು ಸಾಲದೆಂದು, ಜರ್ಮನಿಯೊಡನೆ ವ್ಯಾಪಾರ ವ್ಯವಹಾರ ನಡೆಸುತ್ತಿದ್ದ ಅಮೆರಿಕನ್ ಕಂಪನಿಗಳ 'ಕಪ್ಪುಪಟ್ಟಿ' (black list) ಯನ್ನು ತಯಾರಿಸಿ ಆ ಕಂಪನಿಗಳ ಹಡಗುಗಳಿಗೆ ಸಮುದ್ರಯಾನ ದುಸ್ಸಾಧ್ಯವಾಗುವಂತೆ ದಿಗ್ಬಂಧನ ಹಾಕಿತು ಈ ಎಲ್ಲ ಕುಹಕ ಕೃತ್ಯಗಳಿಂದ ಅಮೆರಿಕನ್ನರು ಕೆರಳಿದರೂ ಇಂಗ್ಲೆಂಡಿನ ವರ್ತನೆಯನ್ನು ಸಹಿಸಿಕೊಂಡು ಸುಮ್ಮನಿದ್ದರು. ಅಧ್ಯಕ್ಷ ವಿಲ್ಸನ್ ಅಧಿಕೃತ ಪ್ರತಿಭಟನೆಗಳನ್ನು ಕಳುಹಿಸುವುದನ್ನು ಬಿಟ್ಟು ಹೆಚ್ಚಿನದೇನೂ ಮಾಡಲು ಹೋಗಲಿಲ್ಲ. ಏಕೆಂದರೆ ಈ ಯುದ್ಧದಲ್ಲಿ ಬ್ರಿಟಿಷರು ಗೆಲ್ಲುವುದು ಅಮೆರಿಕನ್ನರಿಗೆ ಬೇಕಾಗಿತ್ತು. ಅದಲ್ಲದೆ ಅಮೆರಿಕ ಉತ್ಪಾದಿಸಿದ ವಸ್ತುಗಳಿಗೆ ಮಿತ್ರ ರಾಷ್ಟ್ರಗಳಲ್ಲಿ ಹೆಚ್ಚಿನ ಬೇಡಿಕೆ ಇದ್ದು ಉದ್ಯಮಿಗಳು/ವರ್ತಕರು ಲಾಭಗಳಿಸಿ ಸಂತುಷ್ಟರಾಗಿದ್ದರು.

ಇಂಗ್ಲೆಂಡ್ ಜರ್ಮನಿಗಿಂತ ಹೆಚ್ಚು ನೌಕೆಗಳನ್ನು ಹೊಂದಿತ್ತು. ಆದ್ದರಿಂದ ಜರ್ಮನಿ ಹೊಸದಾಗಿ ನಿರ್ಮಿಸಿದ ಜಲಾಂತರ್ಗಾಮಿ ನೌಕೆ (submarine)ಗಳನ್ನು ಬ್ರಿಟಿಷ್ ದ್ವೀಪಗಳನ್ನು ಸುತ್ತುವರಿದು ದಿಗ್ಬಂಧನ ಹಾಕುವುದಕ್ಕೆ ಮತ್ತು ಬ್ರಿಟಿಷರು ಜರ್ಮನಿಯ ಸುತ್ತ ಹಾಕಿರುವ ದಿಗ್ಬಂಧನವನ್ನು ಛಿದ್ರಗೊಳಿಸಲು ಪರಿಣಾಮಕಾರಿಯಾಗಿ ಉಪಯೋಗಿಸಿತು. ೧೯೧೫ರ ಫೆಬ್ರುವರಿ ತಿಂಗಳಲ್ಲಿ ಬ್ರಿಟಿಷ್ ದ್ವೀಪಗಳ ಸುತ್ತಮುತ್ತಲಿನ ಸಮುದ್ರದಲ್ಲಿ ಕಾರ್ಯಾಚರಣೆ ನಡೆಸಿರುವ ಎಲ್ಲ ಶತ್ರು ನೌಕೆಗಳನ್ನೂ ಕಂಡಲ್ಲಿ ಮುಳುಗಿಸುವುದಾಗಿ ಜರ್ಮನಿ ಘೋಷಿಸಿತು ಮತ್ತು ತಟಸ್ಥ ರಾಷ್ಟ್ರಗಳ ನೌಕೆಗಳು ಬ್ರಿಟಿಷ್ ದ್ವೀಪಗಳ ಬಳಿಗೆ

ಬಾರದಂತೆ ಎಚ್ಚರಿಕೆ ನೀಡಿತು. ತಟಸ್ಥ ರಾಷ್ಟ್ರಗಳ ಪ್ರಜೆಗಳು ಮಿತ್ರ ರಾಷ್ಟ್ರಗಳ ಹಡಗುಗಳಲ್ಲಿ ಪ್ರಯಾಣ ಮಾಡಬಾರದು ಎಂದೂ ತಾಕೀತು ಮಾಡಿತು. ಹಡಗುಗಳನ್ನು ಮುಳುಗಿಸುವ ಮೊದಲು ಅವುಗಳನ್ನು ತಡೆದು ನಿಲ್ಲಿಸಿ ಶೋಧನೆ ಮಾಡಿ ಅವು ನಿಯಮ ಉಲ್ಲಂಘನೆ ಮಾಡಿದ್ದ ಪಕ್ಷದಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಅಮೆರಿಕ ಆಗ್ರಹ ಪಡಿಸಿತು. ಅದಕ್ಕೆ ಉತ್ತರವಾಗಿ ಜರ್ಮನಿ – ಅಮೆರಿಕವು ಬ್ರಿಟಿಷರು 'ಲಂಡನ್ ಪ್ರಣಾಳಿಕೆ' ಯನ್ನು ಪಾಲಿಸುವಂತೆ ಮಾಡುವುದಾದರೆ ತಾನು ಕಂಡ ಹಡಗುಗಳ ಮೇಲೆ ದಿಢೀರನೆ ದಾಳಿ ಮಾಡುವುದನ್ನು ನಿಲ್ಲಿಸುತ್ತೇನೆ ಎಂದು ಹೇಳಿಕೆ ನೀಡಿತು.

೧೯೧೫ರಲ್ಲಿ ಜರ್ಮನಿ 'ಲೂಸಿಟೇನಿಯಾ' (Lusitania) ಎಂಬ ಬ್ರಿಟಿಷ್ ನೌಕೆಯನ್ನು ಐರ್ಲೆಂಡ್ ಬಳಿ 'ಟಾರ್ಪೆಡೋ' (tarpedo) ದಾಳಿಯಿಂದ ಮುಳುಗಿಸಿತು. ಹೀಗಾದಾಗ ಸತ್ತವರಲ್ಲಿ ನೂರಕ್ಕೂ ಹೆಚ್ಚು ಅಮೆರಿಕನ್ನರಿದ್ದರು. ಜರ್ಮನಿಯ ಈ ದುಷ್ಕೃತ್ಯವನ್ನು ಖಂಡಿಸಿ ಅಧ್ಯಕ್ಷ ವಿಲ್ಸನ್ ಇಚ್ಛೆ ಬಂದಂತೆ ವಿನಾಕಾರಣ ಹಡಗುಗಳ ಮೇಲೆ ದಾಳಿ ಮಾಡಿ ಮುಳುಗಿಸುವುದನ್ನು ನಿಲ್ಲಿಸದೆ ಹೋದರೆ ಮುಂದೆ ವಿಪತ್ತನ್ನು ಎದುರಿಸಬೇಕಾಗುತ್ತದೆ ಎಂಬ ಅರ್ಥ ಬರುವಂತಹ ಎಚ್ಚರಿಕೆ ಪತ್ರಗಳನ್ನು ಬರೆದನು. ಇದು ವಿದೇಶಾಂಗ ಸಚಿವನಾಗಿದ್ದ ಬ್ರೈಯನ್‌ಗೆ ಸರಿತೋರಲಿಲ್ಲ. ಎಚ್ಚರಿಕೆ ನೀಡುವುದರಿಂದ ಪರಿಸ್ಥಿತಿ ಹದಗೆಟ್ಟು ಅಮೆರಿಕವನ್ನು ಯುದ್ಧಕ್ಕೆ ಎಳೆಯುತ್ತದೆ ಎಂದು ಬ್ರೈಯನ್ ಭಯಪಟ್ಟಿದ್ದ. ವಿಲ್ಸನ್ ಅಮೆರಿಕವನ್ನು ಯುದ್ಧದ ಹಾದಿಯಲ್ಲಿ ಕೊಂಡೊಯ್ಯುತ್ತಿದ್ದಾನೆ ಎಂಬ ಅವನ ಧೋರಣೆಗೆ ವಿರೋಧ ವ್ಯಕ್ತಪಡಿಸಲು ಬ್ರೈಯನ್ ತನ್ನ ಕೆಲಸಕ್ಕೆ ರಾಜಿನಾಮೆ ಕೊಟ್ಟನು. ಅಧ್ಯಕ್ಷ ವಿಲ್ಸನ್ ರಾಬರ್ಟ್ ಲ್ಯಾನ್ಸಿಂಗ್ (Robert Lansing) ನನ್ನು ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಿಸಿದನು. ೧೯೧೫ರಲ್ಲಿ ಜರ್ಮನಿ ಇನ್ನೊಂದು 'ಅರಬಿಕ್' (Arabic) ಎನ್ನುವ ಇಂಗ್ಲೆಂಡಿನ ಹಡಗನ್ನು ಮುಳುಗಿಸಿತು. ಆಗ ವಿಲ್ಸನ್ ತೀಕ್ಷ್ಣವಾದ ಪ್ರತಿಭಟನಾ ಪತ್ರವನ್ನು ಜರ್ಮನಿಗೆ ಬರೆದು ಬೆದರಿಕೆ ಹಾಕಿದಾಗ ಅದು ಪರಿಣಾಮಕಾರಿಯಾಯಿತು. ಜರ್ಮನಿ ವಿನಾ ಕಾರಣ ಕಂಡ ಹಡಗುಗಳನ್ನೆಲ್ಲ ಮುಳುಗಿಸುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿತು.

೧೯೧೬ರ ಮಾರ್ಚ್ ತಿಂಗಳಲ್ಲಿ 'ಸಸ್ಸೆಕ್ಸ್' (Sussex) ಎಂಬ ಫ್ರೆಂಚ್ ಹಡಗನ್ನು ಜರ್ಮನಿ ಮುಳುಗಿಸಿತು. ಆ ಹಡಗಿನಲ್ಲಿ ಪ್ರಯಾಣಿಸುತ್ತಿದ್ದ ಇಬ್ಬರು ಅಮೆರಿಕನ್ನರು ಸತ್ತರು. ಈ ಬಾರಿ ಅಧ್ಯಕ್ಷ ವಿಲ್ಸನ್ ಜರ್ಮನಿಗೆ ಅಂತಿಮ ಎಚ್ಚರಿಕೆ ನೀಡಿದನು. ಇದರಿಂದ ಆತಂಕಗೊಂಡ ಜರ್ಮನಿ ಅಮೆರಿಕದೊಡನೆ ಯುದ್ಧ ತಪ್ಪಿಸಲು 'ಸಸ್ಸೆಕ್ಸ್ ಪ್ರತಿಜ್ಞೆ'ಯನ್ನು (the Sussex Pledge) ಮಾಡಿತು. ಇದರ ಪ್ರಕಾರ ಜರ್ಮನಿ ವ್ಯಾಪಾರ ನೌಕೆಗಳನ್ನು ಪ್ರಯಾಣಿಕರನ್ನು ಖಾಲಿ ಮಾಡದೆ ಮುಳುಗಿಸುವುದಿಲ್ಲ ಎಂಬ ಕೊಟ್ಟ ಮಾತಿಗೆ ತಪ್ಪದೆ ನಡೆದುಕೊಂಡಿತು. ಯುದ್ಧದ ಬಗ್ಗೆ ಅಮೆರಿಕದ ಸಾರ್ವಜನಿಕರ ಅಭಿಪ್ರಾಯದಲ್ಲಿ

ಒಮ್ಮತವಿರಲಿಲ್ಲ. ಅಮೆರಿಕ ಇಂಗ್ಲೆಂಡನ್ನು ಹತೋಟಿಯಲ್ಲಿಡಲು ಪ್ರಯತ್ನಪಡುವ ಸಾಧ್ಯತೆ ಇಲ್ಲ ಎಂದು ಜನರು ತಿಳಿದಿದ್ದರು. ಜರ್ಮನ್-ಅಮೆರಿಕನ್ನರು ತಟಸ್ಥರಾಗಿದ್ದು ಶಾಂತಿಯನ್ನು ಬಯಸಿದರು. ಮಿಲಿಟರಿ ವಿರೋಧಿಗಳು ಮತ್ತು ಶಾಂತಿಸ್ಥಾಪನೆ ಗುರಿಯಾಗಿಟ್ಟುಕೊಂಡ ಗುಂಪುಗಳು ಅಮೆರಿಕ ಯುದ್ಧಕ್ಕೆ ಇಳಿಯಬಾರದು ಎಂದು ನಿರ್ಧರಿಸಿ ಫೆಡರಲ್ ಸರ್ಕಾರದ ಧೋರಣೆಯನ್ನು ವಿರೋಧಿಸಿ ಪ್ರದರ್ಶನ ನಡೆಸಿದರು.

ಇನ್ನೂ ಕೆಲವು ಸಂಘ-ಸಂಸ್ಥೆಗಳು ಮತ್ತು ಥಿಯೊಡೊರ್ ರೂಸ್‌ವೆಲ್ಟ್ ಮತ್ತು ಜನರಲ್ ಲಿಯೊನಾರ್ಡ್ ವುಡ್‌ನಂತಹ ಪ್ರತಿಷ್ಠಿತ ವ್ಯಕ್ತಿಗಳು ಸೈನ್ಯ ಜಮಾವಣೆ ಮತ್ತು ತರಬೇತಿ ಮಾಡಬೇಕಾದುದು ಅತ್ಯಗತ್ಯವೆಂದು ಒತ್ತಾಯಪಡಿಸಿದರು. ಅಧ್ಯಕ್ಷ ವಿಲ್ಸನ್ ಮೊದಲು ಯುದ್ಧದ ತಯಾರಿಕೆಗೆ ಹೆಚ್ಚಿನ ಗಮನ ಕೊಟ್ಟಿರಲಿಲ್ಲ. ಯುದ್ಧ ಮುಂದುವರಿದಂತೆ ಅವನು ಯುದ್ಧ ಸಿದ್ಧತೆಯ ಅಗತ್ಯವನ್ನು ಮನಗಂಡು ಸೈನ್ಯದ ತರಬೇತಿ ಮತ್ತು ಯುದ್ಧದ ಸಿದ್ಧತೆಗಳಿಗೆ ಅನುಕೂಲವಾಗುವಂತಹ ಮತ್ತು ದೇಶರಕ್ಷಣೆಗೆ ಅಗತ್ಯವಾದ ಕೆಲವು ಯೋಜನೆಗಳನ್ನು ಜಾರಿಗೆ ತರಲು ಕಾಂಗ್ರೆಸ್‌ನ ಒಪ್ಪಿಗೆ ಪಡೆದನು.

೧೯೧೬ರಲ್ಲಿ ಕಾಂಗ್ರೆಸ್ ರಾಷ್ಟ್ರರಕ್ಷಣಾ ಕಾಯಿದೆಯನ್ನು ಜಾರಿಗೆ ತಂದಿತು. ಇದು ಅನೇಕ ಯೋಜನೆಗಳನ್ನು ಕಾರ್ಯಗತಗೊಳಿಸಿತು. ಸೈನಿಕರ ಸಂಖ್ಯೆಯನ್ನು ಹೆಚ್ಚಿಸಿ, ಸಂಸ್ಥಾನಗಳ ರಕ್ಷಣಾದಳಗಳನ್ನು ಫೆಡರಲ್ ಸರ್ಕಾರದ ಆಡಳಿತಕ್ಕೆ ಒಳಪಡಿಸಲಾಯಿತು. ಯುದ್ಧನೌಕೆಗಳನ್ನು ಮತ್ತು ಇತರ ಕಡಲ ಕದನಕ್ಕೆ ನೆರವಾಗುವ ದೋಣಿಗಳನ್ನು ನಿರ್ಮಾಣ ಮಾಡಲು ಕಾಂಗ್ರೆಸ್ ಹಣ ಒದಗಿಸಿತು. ಆ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ ಸಂಯುಕ್ತ ಸಂಸ್ಥಾನಗಳ ನೌಕಾಮಂಡಳಿಯನ್ನು ಸ್ಥಾಪಿಸಲಾಯಿತು. ವ್ಯಾಪಾರ ನೌಕೆಗಳನ್ನು ಕೊಳ್ಳುವುದು ಮತ್ತು ನಿರ್ಮಾಣ ಮಾಡುವುದಕ್ಕೆ ಧನ ಸಹಾಯ ಮಾಡುವುದು ಮತ್ತು ಅವುಗಳ ಕಾರ್ಯನಿರ್ವಹಣೆ ಮಾಡುವುದು ನೌಕಾಮಂಡಳಿಯ ಜವಾಬ್ದಾರಿಯಾಗಿತ್ತು. ಯುದ್ಧ ಸಂಭವಿಸಿದಾಗ ರಾಷ್ಟ್ರದ ಸಂಪತ್ತನ್ನು ಕ್ರೋಢೀಕರಿಸಲು ಯೋಜನೆಗಳನ್ನು ಸಿದ್ಧಗೊಳಿಸಲು ವಿಲ್ಸನ್ 'ರಾಷ್ಟ್ರೀಯ ರಕ್ಷಣಾಸಮಿತಿ'ಯನ್ನು ರಚಿಸಿದನು. ೧೯೧೬ರಲ್ಲಿ ಅಧ್ಯಕ್ಷ ವಿಲ್ಸನ್ ತನ್ನ ಸ್ವಂತ ಏಜೆಂಟನಾಗಿದ್ದ ಕರ್ನಲ್ ಹೌಸ್ (Colonel House) ನನ್ನು ಯೂರೋಪಿಗೆ ಕಳುಹಿಸಿ ಶಾಂತಿ ಸಂಧಾನ ಮಾಡಲು ಪ್ರಯತ್ನಿಸಿದನು. ಇಂಗ್ಲೆಂಡ್, ಫ್ರಾನ್ಸ್ ಮತ್ತು ಶಾಂತಿ ಸಂಧಾನದ ಬಗ್ಗೆ ಆಸಕ್ತಿ ತೋರಿಸಲಿಲ್ಲ.

೧೯೧೬ರ ಚುನಾವಣೆ

೧೯೧೬ರ ಚುನಾವಣೆಯಲ್ಲಿ ನಿರ್ಧಾರವಾಗಬೇಕಿದ್ದ ಅತ್ಯಂತ ತುರ್ತಿನ ಹಾಗೂ ಮಹತ್ತರವಾದ ವಿಷಯ: ಯೂರೋಪಿನಲ್ಲಿ ನಡೆಯುತ್ತಿರುವ ಯುದ್ಧದಲ್ಲಿ ಅಮೆರಿಕ ಭಾಗವಹಿಸಬೇಕೆ ಅಥವಾ ಬೇಡವೆ ಎನ್ನುವುದು. ಡೆಮೊಕ್ರಾಟರು ವಿಲ್ಸನ್‌ನನ್ನು ಅಭ್ಯರ್ಥಿಯಾಗಿ ನಾಮಕರಣ ಮಾಡಿದರು. ಹೀಗೆ ವಿಲ್ಸನ್ ಎರಡನೆಯ ಬಾರಿ

ಚುನಾವಣೆಯಲ್ಲಿ ಸ್ಪರ್ಧಿಸಬೇಕಾಯಿತು. ಡೆಮೊಕ್ರಾಟಿಕ್ ಪಕ್ಷದ ಚುನಾವಣಾ ಘೋಷಣೆ: 'ಅವನು ನಮ್ಮನ್ನು ಯುದ್ಧದಿಂದ ಹೊರಗಿರಿಸಿದ್ದಾನೆ!' (He kept us out of war) ಎನ್ನುವುದಾಗಿತ್ತು. ಇದು ಜನರಲ್ಲಿ ಅಮೆರಿಕ ತಟಸ್ಥವಾಗಿ ಉಳಿಯುತ್ತದೆ ಎನ್ನುವ ಮನೋಭಾವವನ್ನು ಬೆಳೆಸಿತು.

ರಿಪಬ್ಲಿಕನ್ನರು ಶ್ರೇಷ್ಠ ನ್ಯಾಯಾಧೀಶನಾಗಿದ್ದ ಚಾರ್ಲ್ಸ್ ಹ್ಯೂಸ್ (Charles Hughes)ನನ್ನು ಅಭ್ಯರ್ಥಿಯಾಗಿ ನಾಮಕರಣ ಮಾಡಿದರು. ಪ್ರಗತಿಪರರು ಪುನಃ ಥಿಯೊಡೊರ್ ರೂಸ್‌ವೆಲ್ಟ್‌ನನ್ನು ನಾಮಕರಣ ಮಾಡಿದರು. ಆದರೆ ಅವನು ತನ್ನ ನಾಮಕರಣವನ್ನು ನಿರಾಕರಿಸಿ ತನ್ನ ಬೆಂಬಲಿಗರಿಗೆ ರಿಪಬ್ಲಿಕನ್ ಪಕ್ಷವನ್ನು ಸೇರಿಕೊಳ್ಳುವಂತೆ ಹೇಳಿದನು. ಆದರೆ ಅವರು ವಿಲ್ಸನ್, ಹ್ಯೂಸ್‌ನಿಗಿಂತಲೂ ಹೆಚ್ಚು ಪ್ರಗತಿಪರನಾಗಿದ್ದರಿಂದ ವಿಲ್ಸನ್‌ನನ್ನು ಬೆಂಬಲಿಸಿದರು. ಚುನಾವಣಾ ಪ್ರಚಾರದಲ್ಲಿ ಹ್ಯೂಸ್ ಯುದ್ಧದ ವಿಷಯ ಎತ್ತಲಿಲ್ಲ. ಏಕೆಂದರೆ ರಿಪಬ್ಲಿಕನ್ ಪಕ್ಷದಲ್ಲಿ ಈ ವಿಷಯ ಎರಡು ಪರಸ್ಪರ ವಿರೋಧವಾದ ಗುಂಪುಗಳಿಗೆ ಕಾರಣವಾಗಿತ್ತು. ಒಂದು ಗುಂಪು ಶಾಂತಿಪರರು (pacifists), ಇನ್ನೊಂದು ಗುಂಪು ಅತಿಕ್ರಮಣಕಾರರು (interventionists) – ಇವರು ಅಮೆರಿಕ ತನ್ನ ತಟಸ್ಥ ನೀತಿಯನ್ನು ತೊರೆದು ಯುದ್ಧದಲ್ಲಿ ಭಾಗವಹಿಸಬೇಕೆಂದು ಆಗ್ರಹಪಡಿಸುತ್ತಿದ್ದರು.

ಚುನಾವಣೆಯಲ್ಲಿ ವಿಲ್ಸನ್ ವಿಜೇತನಾದರೂ ಹೆಚ್ಚಿನ ಮತಗಳ ಅಂತರದಿಂದಲ್ಲ. ಸಾರ್ವಜನಿಕ ಮತಗಳಲ್ಲಿ ಮತ್ತು ಎಲೆಕ್ಟರಲ್ ಮತಗಳಲ್ಲಿ ವಿಲ್ಸನ್ ಮತ್ತು ಹ್ಯೂಸ್ ನಡುವಣ ಅಂತರ ಕಿರಿದಾಗಿತ್ತು. ಹೀಗೆ ಅಧ್ಯಕ್ಷ ವುಡ್ರೋ ವಿಲ್ಸನ್ ಎರಡನೆಯ ಬಾರಿ ರಾಷ್ಟ್ರಾಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ನಂತರ ಪುನಃ ಶಾಂತಿಸಂಧಾನ ಏರ್ಪಡಿಸಲು ಪ್ರಯತ್ನಿಸಿದನು. ಯುದ್ಧದಲ್ಲಿ ತೊಡಗಿದ್ದ ರಾಷ್ಟ್ರಗಳಿಗೆ ಅವು ಯಾವ ಷರತ್ತಿನ ಮೇಲೆ ಯುದ್ಧ ನಿಲ್ಲಿಸಲು ಒಪ್ಪುತ್ತವೆ ಎನ್ನುವುದನ್ನು ತಿಳಿಯಲು ರಾಯಭಾರಿಗಳನ್ನು ಕಳುಹಿಸಿದನು. ಆದರೆ ಯುದ್ಧ ಮಾಡುತ್ತಿದ್ದ ಶತ್ರು ರಾಷ್ಟ್ರಗಳು (axis states) ಮುಂದಿಟ್ಟ ಷರತ್ತುಗಳನ್ನು ಮಿತ್ರ ರಾಷ್ಟ್ರಗಳು (allied states) ಒಪ್ಪಿಕೊಳ್ಳಲಿಲ್ಲ. ಅವು ತಮ್ಮ ನಡುವಣ ಭಿನ್ನಾಭಿಪ್ರಾಯಗಳು ಎಂದಿಗೂ ರಾಜಿಯಾಗದಂತಹವು ಎಂದು ತಿಳಿಸಿದವು. ವಿಲ್ಸನ್ ತನ್ನ ಸೂತ್ರ 'ವಿಜಯವಿಲ್ಲದ ಶಾಂತಿ' (peace without victory)ಯನ್ನು ಒಪ್ಪಿಕೊಳ್ಳುವಂತೆ ಎರಡೂ ಕಡೆಯವರಿಗೆ ಮನವಿ ಮಾಡಿಕೊಂಡನು. ಆದರೆ ಯುದ್ಧಮಗ್ನ ರಾಷ್ಟ್ರಗಳು 'ವಿನಾಶಕಾಲೇ ವಿಪರೀತ ಬುದ್ಧಿ' ಎನ್ನುವ ಗಾದೆಯಂತೆ ವಿಲ್ಸನ್ ಮನವಿಯನ್ನು ಅಸಡ್ಡೆ ಮಾಡಿ ತಮ್ಮ ಯುದ್ಧಕೌಶಲ ಪ್ರದರ್ಶನವನ್ನು ಮುಂದುವರಿಸಿದರು. ಶಾಂತಿಸ್ಥಾಪನೆಗಾಗಿ ಹೃದಯಪೂರ್ವಕವಾಗಿ ಪ್ರಯತಿಸಿದ ವಿಲ್ಸನ್ ಕಡೆಯಲ್ಲಿ ವಿಫಲನಾದನು. ಅವನ ಕೈಮೀರಿದ ಸಾಮಾಜಿಕ ಪ್ರಕ್ರಿಯೆಗಳು ಅಮೆರಿಕ ಯುದ್ಧದಲ್ಲಿ ಭಾಗವಹಿಸುವುದನ್ನು ಅನಿವಾರ್ಯವಾಗಿಸಿದವು.

ಅಮೆರಿಕ ಮಿತ್ರರಾಷ್ಟ್ರಗಳ (allied nations) ಪರವಾಗಿ ಯುದ್ಧಕ್ಕೆ ಹೋಗಲು ಕಾರಣಗಳು ಸ್ಪಷ್ಟವಾಗಿರಲಿಲ್ಲ. ಮುಖ್ಯವಾಗಿ ಬಹುಸಂಖ್ಯಾತ ಅಮೆರಿಕನ್ನರು ಬ್ರಿಟಿಷ್ ಸಂಪ್ರದಾಯದಲ್ಲಿ ಬೆಳೆದವರು ಮತ್ತು ಇಂಗ್ಲಿಷ್ ಸಂಸ್ಕೃತಿಯನ್ನು ಮೈಗೂಡಿಸಿ ಕೊಂಡವರು. ಇವರು ಬ್ರಿಟಿಷರೊಡನೆ ಭಾಷೆ, ಸಾಹಿತ್ಯ, ಕಾನೂನು ಮತ್ತು ಸಾಂಸ್ಕೃತಿಕ ಅಂಶಗಳನ್ನು ಹಂಚಿಕೊಂಡವರು. ಬ್ರಿಟಿಷರು ಅಮೆರಿಕನ್ನರಿಗೆ ಕೊಡಬೇಕಾಗಿದ್ದ ಅಪಾರ ಮೊತ್ತದ ಸಾಲ ಇನ್ನೊಂದು ಪ್ರಬಲ ಕಾರಣವಾಗಿತ್ತು. ಅಮೆರಿಕನ್ನರ ಹಣ ವಾಪಸ್ಸು ಬರುವುದು ಬ್ರಿಟಿಷರು ಯುದ್ಧದಲ್ಲಿ ಗೆಲ್ಲುವುದರ ಮೇಲೆ ಆಧಾರಿತವಾಗಿತ್ತು. ಯುದ್ಧವನ್ನು ಕುರಿತು ಬ್ರಿಟಿಷರು ಪ್ರಚಾರ ಮಾಡುತ್ತಿದ್ದ ಭಾವೋದ್ರೇಕ ಸುದ್ದಿ ಪ್ರಸರಣ ಅಮೆರಿಕನ್ನರನ್ನು ಕೆರಳಿಸಿ ಯುದ್ಧಕ್ಕೆ ಸಿದ್ಧರಾಗುವಂತೆ ಮಾಡಿತು. ಸುದ್ದಿಯನ್ನು ಪ್ರಸರಿಸುವ ತಂತಿಗಳು (cables) ಮತ್ತು ಇತರ ಉಪಕರಣಗಳು ಬ್ರಿಟಿಷರ ನಿಯಂತ್ರಣದಲ್ಲಿದ್ದುದರಿಂದ ಅಮೆರಿಕನ್ನರನ್ನು ತಮ್ಮ ಪರವಾಗಿ ಯುದ್ಧಕ್ಕೆ ಬರುವಂತೆ ಮಾಡಲು ಜರ್ಮನರ ವಿರುದ್ಧ ಉತ್ಪ್ರೇಕ್ಷೆ ಮಾಡಿದ ಸಮಾಚಾರವನ್ನು (propaganda) ಪ್ರಚಾರ ಮಾಡುತ್ತಿದ್ದರು. ಬೆಲ್ಜಿಯಂ ರಾಷ್ಟ್ರವನ್ನು ಜರ್ಮನರು ಆಕ್ರಮಿಸಿದಾಗ ನಡೆದ ಹತ್ಯಾಕಾಂಡವನ್ನು ಅಮೆರಿಕನ್ನರ ಮನಕರಗುವಂತೆ ಪ್ರಸಾರ ಮಾಡಿದುದು ಅತ್ಯಂತ ಪರಿಣಾಮಕಾರಿಯಾಗಿತ್ತು. ಜರ್ಮನರ ಯುದ್ಧಪ್ರಿಯತೆ, ಅವರ ಶಸ್ತ್ರಾಸ್ತ್ರಗಳ ಶ್ರೇಷ್ಠತೆಯ ಬಗ್ಗೆ ಅವರಿಗಿದ್ದ ಹೆಮ್ಮೆ ಮತ್ತು ವಸಾಹತುಗಳನ್ನು ಸ್ಥಾಪಿಸುವುದರಲ್ಲಿ ಪ್ರತಿಸ್ಪರ್ಧಿಗಳಾಗಿರುವುದು – ಈ ಎಲ್ಲ ಕಾರಣಗಳಿಂದ ಜರ್ಮನರು ಜಯಗಳಿಸಿದರೆ ಅಮೆರಿಕನ್ನರ ಹಿತಾಸಕ್ತಿಗಳಿಗೆ ಧಕ್ಕೆ ಉಂಟಾಗುವುದು ಖಂಡಿತವೆಂದು ಅಮೆರಿಕನ್ನರಿಗೆ ಖಚಿತವಾಯಿತು.

ಅಮೆರಿಕನ್ನರ ಮನಸ್ಥಿತಿ ಹೀಗಿರುವಾಗ ಕೆಲವು ಘಟನೆಗಳು ಜರುಗಿ ಅಮೆರಿಕ ಯುದ್ಧದಲ್ಲಿ ಭಾಗವಹಿಸುವುದು ಅನಿವಾರ್ಯವಾಯಿತು. ೧೯೧೭ರಲ್ಲಿ ಜರ್ಮನಿ, ಬ್ರಿಟಿಷ್ ದ್ವೀಪಗಳ ಸುತ್ತ ಮುತ್ತಲಿನ ಎಲ್ಲ ಹಡಗುಗಳನ್ನು ಮುಳುಗಿಸುವುದಾಗಿ ಬೆದರಿಕೆ ಹಾಕಿತು. ಜಲಾಂತರ್ಗಾಮಿ ದೋಣಿಗಳ (submarines) ದಾಳಿಯನ್ನು ಪುನಃ ಪ್ರಾರಂಭಿಸಿ ಎಲ್ಲ ದೇಶಗಳ ಹಡಗುಗಳನ್ನು 'ಕಂಡಲ್ಲಿ ಮುಳುಗಿಸುವ' (sink-on-sight) ಧೋರಣೆಯನ್ನು ಜಾರಿಗೆ ತಂದಿತು. ಇದರ ಪರಿಣಾಮವಾಗಿ ಅಧ್ಯಕ್ಷ ವಿಲ್ಸನ್ ಜರ್ಮನಿ ಯೊಡನೆ ರಾಜಕಾರಣ ಸಂಬಂಧವನ್ನು ರದ್ದುಮಾಡಿದನು. ವ್ಯಾಪಾರದ ಹಡಗುಗಳನ್ನು ಶಸ್ತ್ರಸಜ್ಜಿತವಾಗಿ ಮಾಡಬೇಕೆಂದು ಕೋರಿ ವಿಲ್ಸನ್ ಸಲ್ಲಿಸಿದ ಮಸೂದೆಯನ್ನು ಲಾಫೊಲಿಯೆ ಮತ್ತು ಸಂಗಡಿಗರು ಸೆನೆಟ್ ನಿರಾಕರಿಸುವಂತೆ ಮಾಡಿದರು. ಆಗ ವಿಲ್ಸನ್ (ಅಧ್ಯಕ್ಷನಾದವನು ಸೇನಾಪಡೆಗಳ ಮಹಾದಂಡನಾಯಕ – The Supreme Commander) ತನ್ನ ಅಧ್ಯಕ್ಷ ಪದವಿಯ ಅಧಿಕಾರ ಚಲಾಯಿಸಿ ವ್ಯಾಪಾರಿ ನೌಕೆಗಳನ್ನು ಶಸ್ತ್ರಸಜ್ಜಿತಗೊಳಿಸಿದನು. ಜರ್ಮನಿ ಎಂಟು ಅಮೆರಿಕನ್ ಹಡಗುಗಳನ್ನು ಮುಳುಗಿಸಿದುದು ಕಾಂಗ್ರೆಸ್‌ನ ತುರ್ತು ಅಧಿವೇಶನವನ್ನು ಕರೆಯಲು ವಿಲ್ಸನ್‌ಗೆ ಸಂದರ್ಭವನ್ನು ಒದಗಿಸಿತು.

ಈ ಅಧಿವೇಶನದಲ್ಲಿ ವಿಲ್ಸನ್ ಅಮೆರಿಕ ಜರ್ಮನಿಯ ವಿರುದ್ಧ ಯುದ್ಧ ಸಾರಲು ಕಾಂಗ್ರೆಸ್‌ನ ಒಪ್ಪಿಗೆ ಪಡೆದುಕೊಂಡನು. ಇದಕ್ಕೆ ಸೆನೆಟ್‌ನ ಅನುಮೋದನೆ ಪಡೆಯ ಬೇಕಾಗಿತ್ತು. ಅಲ್ಲಿ ಯುದ್ಧ ವಿರೋಧಿಗಳು ಪ್ರಬಲರಾಗಿದ್ದರು. ಆ ಸಮಯದಲ್ಲಿ ಸಂಭವಿಸಿದ ಘಟನೆಗಳು ಶಾಂತಿ ಸಂಧಾನದ ಆಸೆ ಇಟ್ಟುಕೊಂಡು ಅಮೆರಿಕವನ್ನು ಯುದ್ಧದಿಂದ ದೂರವಾಗಿಡಲು ಪ್ರಯತ್ನಿಸಿದವರು ಕೂಡ ಮನಸ್ಸು ಬದಲಾಯಿಸುವಂತೆ ಮಾಡಿದವು. ೧೯೧೭ರಲ್ಲಿ ಜರ್ಮನ್ ಸರ್ಕಾರದ ನಿರ್ದೇಶನದಂತೆ ಮೆಕ್ಸಿಕೊ ಸರ್ಕಾರಕ್ಕೆ ಜರ್ಮನ್ ವಿದೇಶಾಂಗ ಸಚಿವ ಝಿಮರ್‌ಮನ್ (Zimmerman) ಕಳುಹಿಸಿದ ಅಧಿಕೃತ ಪತ್ರ ಆಕಸ್ಮಿಕವಾಗಿ ಬ್ರಿಟಿಷರ ಕೈಸೇರಿ, ಅದನ್ನು ಅವರು ಅಮೆರಿಕನ್ ಸರ್ಕಾರಕ್ಕೆ ಒಪ್ಪಿಸಿದರು.

ಝಿಮರ್‌ಮನ್ ಕಳುಹಿಸಿದ ಗುಪ್ತ ಸಂದೇಶದಲ್ಲಿ ಜರ್ಮನಿ ಮತ್ತು ಮೆಕ್ಸಿಕೊಗಳ ನಡುವೆ ಗುಟ್ಟಾದ ಒಕ್ಕೂಟವನ್ನು ರಚಿಸಲು ಒಳಸಂಚು ನಡೆಯುತ್ತಿರುವುದು ತಿಳಿದು ಬಂತು. ಅಮೆರಿಕ ಮಿತ್ರ ರಾಷ್ಟ್ರಗಳ ಪರವಾಗಿ ಯುದ್ಧಕ್ಕೆ ಸೇರಿದರೆ ಮೆಕ್ಸಿಕೊ ಅಮೆರಿಕದ ಮೇಲೆ ದಾಳಿ ಮಾಡಬೇಕೆಂದು ಸೂಚಿಸಿತ್ತು. ಹೀಗೆ ಯುದ್ಧ ಮಾಡಲು ಜರ್ಮನಿ ಮೆಕ್ಸಿಕೊಗೆ ಸಹಾಯ ಮಾಡುವುದಾಗಿ ಭರವಸೆ ನೀಡಿತ್ತು. ಮೆಕ್ಸಿಕೊ ಕಳೆದುಕೊಂಡಿದ್ದ ಟೆಕ್ಸಾಸ್, ನ್ಯೂ ಮೆಕ್ಸಿಕೊ ಮತ್ತು ಆರಿಜ಼ೋನಾ ಪ್ರಾಂತಗಳನ್ನು ವಾಪಸ್ಸು ಪಡೆಯಲು ಜರ್ಮನಿ ಸಹಾಯ ಮಾಡುವುದಾಗಿಯೂ ವಾಗ್ದಾನ ಮಾಡಿತ್ತು. ಈ ಪತ್ರವನ್ನು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಿದಾಗ ಅಮೆರಿಕ ಅಲ್ಲೋಲಕಲ್ಲೋಲವಾಯಿತು. ಮೊದಲಿಂದಲೂ ಯುದ್ಧವನ್ನು ವಿರೋಧಿಸುತ್ತಿದ್ದ ಪ್ರಾಂತಗಳ ಜನರೂ ಕೂಡ ಪಿತೂರಿ ನಡೆಸಿದ್ದ ಜರ್ಮನಿಯ ಮೇಲೆ ಯುದ್ಧ ಸಾರಲು ಸಿದ್ಧರಾದರು. ಝಿಮರ್‌ಮನ್ ಪ್ರಕರಣ ಅಮೆರಿಕ ಮಿತ್ರ ರಾಷ್ಟ್ರಗಳೊಡನೆ ಸೇರಿ ಜರ್ಮನಿಯ ಮೇಲೆ ಯುದ್ಧ ನಡೆಸಲು ಯಾವ ವಿರೋಧವೂ ಇಲ್ಲದಂತೆ ಮಾಡಿತು. ೧೯೧೭ರ ಮಾರ್ಚ್ ತಿಂಗಳಲ್ಲಿ ರಷ್ಯಾ ದೇಶದಲ್ಲಿ ಕ್ರಾಂತಿಯಾಗಿ ಝಾರ್ ದೊರೆಗಳ ಪ್ರಭುತ್ವ ಕೊನೆಗೊಂಡು ತಾತ್ಕಾಲಿಕವಾದ ಪ್ರಜಾಪ್ರಭುತ್ವ ಜಾರಿಗೆ ಬಂದಿದ್ದು ಅಮೆರಿಕನ್ನರಿಗೆ ರಷ್ಯಾದ ದುಃಸ್ಥಿತಿಗೆ ಕಾರಣವಾಗಿದ್ದ ರಾಜಪ್ರಭುತ್ವದೊಡನೆ ಸೇರಿಕೊಳ್ಳುವ ಮುಜಗರ ಇಲ್ಲದಂತಾಯಿತು.

೧೯೧೭ರ ಏಪ್ರಿಲ್ ೨ರಂದು ಅಧ್ಯಕ್ಷ ವಿಲ್ಸನ್ ಕಾಂಗ್ರೆಸ್‌ನ್ನು ಉದ್ದೇಶಿಸಿ ಭಾಷಣ ಮಾಡುತ್ತ 'ಅಮೆರಿಕ ಮತ್ತು ಜರ್ಮನಿಯ ನಡುವೆ ಯುದ್ಧ ಅನಧಿಕೃತವಾಗಿ ಎಷ್ಟೋ ಕಾಲದಿಂದ ನಡೆಯುತ್ತಿದೆ. ಇದು ಜರ್ಮನಿಯ ದುಷ್ಕೃತ್ಯಗಳ ಪರಿಣಾಮ. ಜರ್ಮನ್ ಸರ್ಕಾರ ಎಲ್ಲ ಮಾನವೀಯ ವಿವೇಕವನ್ನು ತೊರೆದು ನಿಂತಿದೆ. ಜರ್ಮನಿಯ ಪ್ರಜೆಗಳಿಗೆ ನಮ್ಮ ಸಹಾನುಭೂತಿ ಇದೆ, ಅವರ ಮೇಲೆ ನಮಗೆ ವೈರತ್ವವಿಲ್ಲ. ಅವರಿಗಾಗಿ ಮತ್ತು ಎಲ್ಲ ಜನರಿಗಾಗಿ 'ಪ್ರಪಂಚದಲ್ಲಿ ಪ್ರಜಾರಾಜ್ಯ ಸುರಕ್ಷಿತವಾಗಿರುವಂತೆ ಮಾಡಬೇಕು'

(The world must be made safe for democracy)' ಎಂದು ಮನೋಜ್ಞವಾಗಿ ಮಾತನಾಡಿದನು. ಅದರ ಪರಿಣಾಮವಾಗಿ ೧೯೧೭ರ ಏಪ್ರಿಲ್ ೬ರಂದು ಸೆನೆಟ್ ೮೨-೬ ಮತಗಳಿಂದ ಮತ್ತು ಕಾಂಗ್ರೆಸ್ ೩೭೩-೫೦ ಮತಗಳಿಂದ ಜರ್ಮನಿಯ ಮೇಲೆ ಯುದ್ಧ ಸಾರುವ ಮಸೂದೆಯನ್ನು ಅಂಗೀಕರಿಸಿದವು.

ಮೊದಲನೆಯ ಜಾಗತಿಕ ಸಂಗ್ರಾಮದ ಸೆಳವಿನಲ್ಲಿ ಸಿಕ್ಕ ಸಂಯುಕ್ತ ಸಂಸ್ಥಾನಗಳು

ಸಂಗ್ರಾಮಕ್ಕೆ ಸಿದ್ಧತೆಗೊಳ್ಳುತ್ತಿದ್ದ ಸಂಯುಕ್ತ ಸಂಸ್ಥಾನಗಳು ಎದಿರಿಸಿದ ಮೊದಲಿನ ಸಮಸ್ಯೆ – ಸೈನ್ಯಕ್ಕೆ ಜನರನ್ನು ಜಮಾಯಿಸುವುದು. ೧೯೧೭ರ ಮೇ ತಿಂಗಳಲ್ಲಿ ಕಾಂಗ್ರೆಸ್ ಸೇವೆಗಾಗಿ ಆಯ್ಕೆ ಮಾಡುವ ಕಾಯಿದೆಯನ್ನು (Selective Services Act) ಜಾರಿಗೆ ತಂದಿತು. ಈ ಕಾಯಿದೆ ಪ್ರಕಾರ ೧೮-೪೫ ವರ್ಷ ಪ್ರಾಯದ ಪುರುಷರೆಲ್ಲರೂ ಸೈನ್ಯಕ್ಕೆ ಸೇರಲು ತಮ್ಮ ಹೆಸರುಗಳನ್ನು ಕಡ್ಡಾಯವಾಗಿ ನೋಂದಣಿ (register) ಮಾಡಬೇಕಿತ್ತು. ಈ ಕಡ್ಡಾಯ ನೋಂದಣಿ ಕಾಯಿದೆಗೆ ಜನರು ತೀವ್ರ ವಿರೋಧ ವ್ಯಕ್ತಪಡಿಸಿದರು. ಏಕೆಂದರೆ ಅದುವರೆಗೂ ಅಮೆರಿಕನ್ ಸೈನ್ಯ ಸ್ವಇಚ್ಛೆಯಿಂದ ಸೇರಿಕೊಂಡವರಿಂದ ರಚನೆಗೊಂಡಿತ್ತು. ಕಡ್ಡಾಯ ನೋಂದಣಿ, ಅಧ್ಯಕ್ಷ ವಿಲ್ಸನ್ ಸೇರಿದಂತೆ – ಸರ್ವರಿಗೂ ಸಮ್ಮತವಿರಲಿಲ್ಲ. ಆದರೆ ಶೀಘ್ರಗತಿಯಲ್ಲಿ ಸೈನ್ಯ ಸೇರಿಸುವುದು ಅಗತ್ಯವಾಗಿದ್ದುದರಿಂದ ಕಡ್ಡಾಯದ ಮಾರ್ಗ ಬಿಟ್ಟು ಬೇರೆ ದಾರಿಯಿರಲಿಲ್ಲ. ನೋಂದಣಿಸಿದ ಒಟ್ಟು ೨೪ ಮಿಲಿಯನ್ ಜನರಲ್ಲಿ ೨.೮ ಮಿಲಿಯನ್ ಜನರನ್ನು ದೇಶದಾದ್ಯಂತ ನಡೆದ ಲಾಟರಿ ವಿಧಾನದಿಂದ ಆಯ್ಕೆ ಮಾಡಲಾಯಿತು. ಮೇಲಾಗಿ ೨ ಮಿಲಿಯನ್ ಜನರು ಸ್ವಇಚ್ಛೆಯಿಂದ ಸೈನ್ಯಕ್ಕೆ ಸೇರಿಕೊಂಡರು.

ಯುದ್ಧಸಿದ್ಧತೆಯನ್ನು ನಿರ್ವಹಿಸಲು 'ಕದನ ಕೈಗಾರಿಕೆ ಸಮಿತಿ' (The War Industries Board)ಯನ್ನು ಸ್ಥಾಪಿಸಲಾಯಿತು. ಯುದ್ಧಸಾಮಗ್ರಿಗಳ ಉತ್ಪಾದನೆಯನ್ನು ನಿಯಂತ್ರಿಸುವುದು ಈ ಸಮಿತಿಯ ಕಾರ್ಯವಾಗಿತ್ತು. ಸೈನಿಕರನ್ನು ಮತ್ತು ಸರಕು ಸಾಮಗ್ರಿಗಳನ್ನು ಸಾಗಿಸಲು ಅಗತ್ಯವಾದ ನೌಕೆಗಳ ನಿರ್ಮಾಣ ಕಾರ್ಯವನ್ನು ನಿರ್ವಹಿಸಲು 'ನೌಕಾನಿರ್ಮಾಣ ಸಮಿತಿ'ಯನ್ನು ಸ್ಥಾಪಿಸಿ, ಬೃಹತ್ ಪ್ರಮಾಣದಲ್ಲಿ ನೌಕಾನಿರ್ಮಾಣ ಕಾರ್ಯವನ್ನು ಆರಂಭಿಸಿದರು.

ರೈಲುಮಾರ್ಗಗಳ ನಿರ್ವಹಣೆಯನ್ನು ಫೆಡರಲ್ ಸರ್ಕಾರವೇ ವಹಿಸಿಕೊಂಡು ಸೈನ್ಯ ಮತ್ತು ಸರಕು ಸಾಮಗ್ರಿಗಳ ಸಾಗಾಣಿಕೆ ಸರಾಗವಾಗಿ ನಡೆಯುವಂತೆ ವ್ಯವಸ್ಥೆ ಮಾಡಿತು. ಇಂಧನಗಳ ಬಳಕೆಯನ್ನು ನಿಯಂತ್ರಿಸುವುದು ಅತಿಮುಖ್ಯವಾಗಿತ್ತು. ಕಲ್ಲಿದ್ದಲು ಮತ್ತು ತೈಲಗಳ ಬಳಕೆಯನ್ನು ಕಡಿಮೆ ಮಾಡಿ ಅವುಗಳ ಉತ್ಪಾದನೆ ಹೆಚ್ಚಿಸಲು 'ಇಂಧನ ನಿಯಂತ್ರಣ ಸಮಿತಿ' ಉಳಿತಾಯ ಕಾರ್ಯಕ್ರಮಗಳನ್ನು ಜಾರಿಗೆ ತಂದಿತು. ವಿದ್ಯುಚ್ಛಕ್ತಿಯನ್ನು

ಉಳಿಸುವುದಕ್ಕಾಗಿ 'ದಿನದ ಬೆಳಕನ್ನು ಉಳಿಸುವ' (daylight saving time) ಪದ್ಧತಿಯನ್ನು ಜಾರಿಗೆ ತರಲಾಯಿತು. ಮಾಂಸ ಮತ್ತು ಗೋಧಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಉಳಿಸಿ ದೂರ ದೇಶಗಳಲ್ಲಿದ್ದ ಸೈನಿಕರಿಗೆ ರವಾನಿಸಲಾಗುತ್ತಿತ್ತು. ಆಹಾರ ನಿರ್ವಹಣೆಯನ್ನು ಹರ್ಬರ್ಟ್ ಹೂವರ್ (Herbert Hoover) ನಿಗೆ ವಹಿಸಿದರು. ಉತ್ಪಾದನೆ ಹೆಚ್ಚಿಸಲು, ರೈತರಿಗೆ ಪ್ರೋತ್ಸಾಹ ಕೊಡಲು ಆಹಾರ ಸಾಮಗ್ರಿಗಳ ಬೆಲೆಯನ್ನು ಏರಿಸಿದರು.

ಯುದ್ಧಸಿದ್ಧತೆಗಾಗಿ ಮತ್ತು ಅದರ ಮುಂದುವರಿಕೆಗಾಗಿ ಜನರ ಬೆಂಬಲ ಬೇಕೇ ಬೇಕು. ಆದ್ದರಿಂದ ಫೆಡರಲ್ ಸರ್ಕಾರ ಜನರನ್ನು ಒಲಿಸಿಕೊಳ್ಳಲು ಚತುರೋಪಾಯಗಳನ್ನು ಉಪಯೋಗಿಸಬೇಕಾಯಿತು. ಯುದ್ಧದ ಪರವಾಗಿ ಇರುವವರನ್ನು ಹೊಗಳಿ, ವಿರೋಧಿಸುವವರನ್ನು ಹತ್ತಿಕ್ಕಲು ಕಾಂಗ್ರೆಸ್ 'ಸಾರ್ವಜನಿಕ ಸಮಾಚಾರ ಸಮಿತಿ' (Committee on Public Information)ಯನ್ನು ಸ್ಥಾಪಿಸಿತು. ಸಮರ್ಥ ಪತ್ರಕರ್ತನಾಗಿದ್ದ ಜಾರ್ಜ್ ಕ್ರೀಲ್ (George Creel)ನನ್ನು ಈ ಸಮಿತಿಯ ಮುಖ್ಯ ಅಧಿಕಾರಿಯಾಗಿ ನೇಮಿಸಲಾಯಿತು. ಈ ಸಮಿತಿಯ ಕಾರ್ಯಾಚರಣೆ ವಿಶಾಲವಾಗಿತ್ತು: ಪುಸ್ತಕಗಳನ್ನು ಅಚ್ಚು ಹಾಕುವುದು, ಪತ್ರಿಕೆಗಳಲ್ಲಿ ಸಂಪಾದಕೀಯ ಅಂಕಣದಲ್ಲಿ ಬರೆಯುವುದು, ಚಲನಚಿತ್ರ ತಯಾರಿಸುವುದು, ದೈನಿಕ ಅಧಿಕೃತ ಸುದ್ದಿ ಪ್ರಕಟಣೆ ಹೊರಡಿಸುವುದು ಮತ್ತು ಭಿತ್ತಿಫಲಕಗಳನ್ನು ಎಲ್ಲ ಕಡೆಗಳಲ್ಲಿ ಪ್ರದರ್ಶಿಸುವುದು – ಈ ಎಲ್ಲ ಸಾಧನಗಳ ಮೂಲಕ ಜನರಲ್ಲಿ ಈ ಯುದ್ಧ 'ಧರ್ಮಯುದ್ಧ' (crusade) ಕ್ಕೆ ಸಮನಾದುದು ಎನ್ನುವ ಅಭಿಪ್ರಾಯವನ್ನು ಮೂಡಿಸಲು ಸಾಧ್ಯವಾಯಿತು. ಸಾರ್ವಜನಿಕರಿಗೆ ಮನದಟ್ಟಾಗುವಂತೆ ಘೋಷಣೆ (slogans)ಗಳು – 'ಈ ಯುದ್ಧ ಯುದ್ಧವನ್ನು ಕೊನೆಗಾಣಿಸುವ ಯುದ್ಧ' (a war to end war), 'ಜಗತ್ತನ್ನು ಪ್ರಜಾಪ್ರಭುತ್ವಕ್ಕೆ ಕ್ಷೇಮಕರವಾಗಿರಿಸಲು ಕೈಗೊಂಡ ಕದನ' (A war to make the world safe for democracy) – ಪ್ರಜಾಭಿಪ್ರಾಯವನ್ನು ಯುದ್ಧದ ಪರವಾಗಿ ರೂಪಿಸುವುದರಲ್ಲಿ ಯಶಸ್ವಿಯಾದವು.

ಬಹುತೇಕ ಅಮೆರಿಕನ್ನರು ಸರ್ಕಾರಕ್ಕೆ ವಿಧೇಯರಾಗಿದ್ದರು. ಆದರೆ ಕೆಲವು ಸಮಾಜವಾದಿಗಳು ಇದು 'ಬಂಡವಾಳಗಾರರ ಯುದ್ಧ'ವೆಂದು ಟೀಕಿಸಿದರು. ಯುದ್ಧಕಾಲದಲ್ಲಿ ಪ್ರಸಾರವಾಗುತ್ತಿದ್ದ ಉತ್ಪ್ರೇಕ್ಷೆಯಿಂದ ಕೂಡಿದ ವರದಿಗಳು ಜನರನ್ನು ಉನ್ಮಾದ ಗೊಳಿಸಿ ಜರ್ಮನರ ಬಗ್ಗೆ ಮತ್ತು ಜರ್ಮನಿ ಉತ್ಪಾದಿಸಿದ ವಸ್ತುಗಳ ಬಗ್ಗೆ ಬದ್ಧದ್ವೇಷ ಬೆಳೆಸಿಕೊಳ್ಳುವಂತೆ ಪ್ರೇರೇಪಿಸಿದವು. ೧೯೧೭ರಲ್ಲಿ ಕಾಂಗ್ರೆಸ್ 'ಗುಪ್ತಾಚಾರ ಕಾಯಿದೆ'ಯನ್ನು (Espionage Act), ೧೯೧೮ರಲ್ಲಿ 'ರಾಜ್ಯದ್ರೋಹ ಕಾಯಿದೆ' ಜಾರಿಗೆ ತಂದಿತು. ಯುದ್ಧಕ್ಕೆ ಯಾವ ಅಡ್ಡಿ ಬಾರದಂತೆ ಎಲ್ಲ ವ್ಯವಸ್ಥಿತವಾಗಿ ನಡೆದುಕೊಂಡು ಹೋಗುವಂತೆ ಮಾಡುವುದು ಈ ಕಾಯಿದೆಗಳ ಗುರಿಯಾಗಿತ್ತು.

ಮೊದಲನೆಯ ಜಾಗತಿಕ ಯುದ್ಧದಲ್ಲಿ ಮಿತ್ರರಾಷ್ಟ್ರಗಳು ಗೆಲ್ಲಲು ಸಾಧ್ಯವಾಗುವಂತೆ

ಮಾಡಿದ್ದು ಅಮೆರಿಕ ಹಣಸಹಾಯ ಮತ್ತು ಅಗತ್ಯವಾದ ಸರಕು ಸಾಮಗ್ರಿಗಳನ್ನು ಒದಗಿಸಿದ್ದು. ಅಮೆರಿಕ ಸಾಲ ರೂಪದಲ್ಲಿ ಹಣ ಒದಗಿಸದೆ ಹೋಗಿದ್ದರೆ ಯುದ್ಧದಿಂದ ಬೊಕ್ಕಸ ಬರಿದುಮಾಡಿಕೊಂಡಿದ್ದ ಮಿತ್ರರಾಷ್ಟ್ರಗಳು ಸೋತು ಶರಣಾಗತರಾಗಬೇಕಿತ್ತು. ಅಮೆರಿಕದಲ್ಲಿ ಅಪಾರ ಮೊತ್ತದ ಹಣವನ್ನು ಕೂಡಿಸಿದ್ದು ತೆರಿಗೆಗಳ ಮೂಲಕವಲ್ಲ, ಕರಾರು ಪತ್ರಗಳ (bonds) ಮಾರಾಟದಿಂದ. 'ಸ್ವತಂತ್ರ' (Liberty) ಮತ್ತು 'ವಿಜಯ' (Victory) ಕರಾರು ಪತ್ರಗಳನ್ನು ಪ್ರಜೆಗಳ ಬೃಹತ್ ಸಭೆಗಳನ್ನು ಸೇರಿಸಿ ಅಧಿಕ ಸಂಖ್ಯೆಯಲ್ಲಿ ಮಾರುತ್ತಿದ್ದರು. ಬಡ ರೈತರು ತಮ್ಮ ದೇಶಾಭಿಮಾನ ತೋರಿಸಲು ಹೆಚ್ಚು ಬಡ್ಡಿಯ ಸಾಲ ಪಡೆದು ಕರಾರು ಪತ್ರಗಳನ್ನು ಕೊಳ್ಳುತ್ತಿದ್ದರು. ವ್ಯಕ್ತಿಗಳ ಮತ್ತು ಕಾರ್ಪೊರೇಷನ್‌ಗಳ ವರಮಾನ ತೆರಿಗೆಯನ್ನು ಹೆಚ್ಚಿಸಲಾಯಿತು. ಒಂದು ಕಾರ್ಪೊರೇಷನ್ ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಲಾಭ ಗಳಿಸಿದರೆ ಅದರ ಮೇಲೆ (ನಿರೀಕ್ಷಿಸಿದ ಲಾಭದ ಮೇಲೆ ಮೊದಲು ತೆರಿಗೆ ಕೊಟ್ಟಾಗಿದ್ದರೂ) ಮತ್ತೆ ತೆರಿಗೆ ವಿಧಿಸುತ್ತಿದ್ದರು. ಸುಂಕದ ದರಗಳನ್ನೂ ಏರಿಸಿದರು. ಯುದ್ಧದ ಒಟ್ಟಾರೆ ಖರ್ಚು ೩೫ ಬಿಲಿಯನ್ ಡಾಲರ್‌ಗಳು; ೧೦ ಬಿಲಿಯನ್ ಡಾಲರ್‌ಗಳನ್ನು ಮಿತ್ರರಾಷ್ಟ್ರಗಳಿಗೆ ಸಾಲವಾಗಿ ಕೊಡಲಾಯಿತು.

ಅಡ್ಮಿರಲ್ ವಿಲಿಯಂ ಸಿಮ್ಸ್‌ನ ಆಜ್ಞೆಗೆ ಒಳಪಟ್ಟಿದ್ದ ಅಮೆರಿಕದ ನೌಕಾದಳ ಮೊದಲು ಯುದ್ಧ ಪ್ರಾರಂಭಿಸಿತು. ಇದು ನಾಲ್ಕು ಮುಖ್ಯ ಕಾರ್ಯಾಚರಣೆಗಳನ್ನು ನಡೆಸಿ ಅಂತಿಮವಾಗಿ ಮಿತ್ರರಾಷ್ಟ್ರಗಳ ವಿಜಯಕ್ಕೆ ಕಾರಣವಾಯಿತು. ಅಮೆರಿಕನ್ ನೌಕಾದಳ ಜರ್ಮನಿಯ ಜಲಾಂತರ್ಗಾಮಿ ನಾವೆಗಳನ್ನು ನಾಶ ಮಾಡುತ್ತ ಹೋಯಿತು. ಸೈನಿಕರನ್ನು ಸಾಗಿಸುವ ಹಡಗುಗಳಿಗೆ ಅಮೆರಿಕನ್ ನೌಕಾದಳ ರಕ್ಷಣೆ ನೀಡಿತು. ಉತ್ತರ ಸಾಗರದಲ್ಲಿ (North sea) ವಿಸ್ತಾರವಾಗಿ ಎಪ್ಪತ್ತು ಸಾವಿರಕ್ಕೂ ಮಿಗಿಲಾದ ಸಂಖ್ಯೆಯ ಸಿಡಿಮದ್ದು ಹುದುಗಿಸಿಟ್ಟು (laying of mines) ಜರ್ಮನ್ ಜಲಾಂತರ್ಗಾಮಿ ನಾವೆಗಳು ಉತ್ತರ ಸಾಗರದಲ್ಲಿ ಸ್ಕಾಟ್ ಲ್ಯಾಂಡ್ ಮತ್ತು ನಾರ್ವೆಗಳ ನಡುವಣ ಸಮುದ್ರಕ್ಕೆ ಬಾರದಿರುವಂತೆ ಅಮೆರಿಕನ್ ನೌಕಾಪಡೆ ತಡೆಗಟ್ಟಿತು. ಜರ್ಮನಿಯ ಹಡಗುಗಳು ಬಂದರುಗಳಿಂದ ಹೊರಗೆ ಬಾರದಂತೆ ಅಮೆರಿಕನ್ ನೌಕಾದಳ ದಿಗ್ಬಂಧನ ಹಾಕಿತು. ಯುದ್ಧದಲ್ಲಿ ಭಾಗವಹಿಸಿದ ಎಲ್ಲ ಅಮೆರಿಕನ್ ನೌಕೆಗಳು ಸುರಕ್ಷಿತವಾಗಿದ್ದವು. (ಯುದ್ಧಾನಂತರ ಯುದ್ಧಕಾಲದಲ್ಲಿ ಹುದುಗಿಸಿಟ್ಟ ಸಿಡಿಮದ್ದುಗಳನ್ನು ತೆಗೆಯಲು ಹೋದ ಎರಡು ನೌಕೆಗಳು ಆಸ್ಫೋಟನೆಗೊಂಡು ಜಲಸಮಾಧಿ ಹೊಂದಿದವು.)

ಇದೇ ಜಾಗತಿಕ ಯುದ್ಧದಲ್ಲಿ ಮೊದಲ ಬಾರಿಗೆ ವಿಮಾನಗಳನ್ನು ಕೊಲ್ಲುವ ಯಂತ್ರಗಳನ್ನಾಗಿ (killer machines) ಉಪಯೋಗಿಸಲಾಯಿತು. ವಿಮಾನಗಳಿಗೆ ಮೆಷಿನ್ ಗನ್‌ಗಳನ್ನು ಜೋಡಿಸಿಕೊಂಡು ಜರ್ಮನ್ ಸೈನ್ಯದ ನೆಲೆಗಳ ಮೇಲೆ ಮಿತ್ರರಾಷ್ಟ್ರಗಳ ವೈಮಾನಿಕರು ದಾಳಿ ಮಾಡಿದರು. ವಿಮಾನ ದಾಳಿ ಪರಿಣಾಮಕಾರಿಯಾಗಿದ್ದರೂ ಸಹ

ಹೆಚ್ಚು ಸಂಖ್ಯೆಗಳಲ್ಲಿ ವಿಮಾನಗಳನ್ನು ಯುದ್ಧಕ್ಕೆ ಉಪಯೋಗಿಸಲಿಲ್ಲ. ಯುದ್ಧರಂಗದಲ್ಲಿ ಸೈನ್ಯಗಳ ಕಾರ್ಯಾಚರಣೆಗೆ ಹೆಚ್ಚಿನ ಮಹತ್ವ ಕೊಟ್ಟಿದ್ದರು.

ಫ್ರಾನ್ಸ್ ಯುದ್ಧರಂಗಕ್ಕೆ ರವಾನಿಸಲಾದ ಅಮೆರಿಕದ ಕ್ಷಿಪ್ರ ಪಡೆಗಳ (expeditionary force) ಸೈನ್ಯಾಧಿಕಾರಿಯಾಗಿ ಜಾನ್ ಪರ್‌ಷಿಂಗ್ (John Pershing) ನೇಮಕಗೊಂಡಿದ್ದನು. ಯುದ್ಧ ಪ್ರಾರಂಭವಾಗಿ ಏಳು ತಿಂಗಳ ಮೇಲೆ ಅಮೆರಿಕನ್ ಸೈನ್ಯ ಕಾರ್ಯಾಚರಣೆಯಲ್ಲಿ ತೊಡಗಿತು. ಅಮೆರಿಕನ್ ಸೈನಿಕರನ್ನು ಜರ್ಮನರು ವ್ಯಂಗ್ಯವಾಗಿ 'ಹಿಟ್ಟಿನ ಹುಡುಗರು' (dough boys) ಎಂದು ಕರೆಯುತ್ತಿದ್ದರು. 'ಹಿಟ್ಟಿನ ಹುಡುಗರು' ದಾಳಿ ಮಾಡಲು ಧಾವಿಸುವ ಮುಂಚೆ ಯುದ್ಧವನ್ನು ಮುಗಿಸಲು ಜರ್ಮನರು ಆಶಿಸಿದ್ದರು. ಅಮೆರಿಕನ್ ಸೈನ್ಯ ಬಂದಿಳಿಯುತ್ತಿದ್ದಂತೆ ಇಟಲಿ ಮತ್ತು ರಷ್ಯಾಗಳಲ್ಲಿ ಸಂಭವಿಸಿದ ಘಟನೆಗಳು ಜರ್ಮನರಿಗೆ ಬಹಳ ಅನುಕೂಲಕರವಾಗಿದ್ದವು. ಇಟಲಿ ಯುದ್ಧಪೂರ್ವದಲ್ಲಿ ಜರ್ಮನಿಯೊಡನೆ ಮಾಡಿಕೊಂಡ ಕರಾರನ್ನು ರದ್ದುಗೊಳಿಸಿ ಮಿತ್ರರಾಷ್ಟ್ರಗಳ ಸಂಘವನ್ನು ಸೇರಬಯಸಿತು. ಆದರೆ ಆಸ್ಟ್ರಿಯದ ಸೈನ್ಯ ಇಟಲಿಯ ಸೈನ್ಯವನ್ನು ಛಿದ್ರಗೊಳಿಸಿತು. ಇಟಲಿಯ ರಕ್ಷಣೆಗಾಗಿ ಮಿತ್ರರಾಷ್ಟ್ರಗಳ ಸೈನ್ಯದ ಒಂದು ಭಾಗವನ್ನು ಪಶ್ಚಿಮ ಯುದ್ಧರಂಗದಿಂದ (western front) ಇಟಲಿಗೆ ಕಳುಹಿಸಬೇಕಾಯಿತು. ಪೂರ್ವ ಯುದ್ಧರಂಗದಲ್ಲಿ (eastern front) ರಷ್ಯಾದಲ್ಲಿ ಜರುಗಿದ ಕ್ರಾಂತಿಯಿಂದಾಗಿ ರಷ್ಯಾದ ಪಡೆಗಳನ್ನು ವಾಪಸ್ಸು ಕರೆಸಿಕೊಳ್ಳಲಾಯಿತು. ನವೆಂಬರ್ ೧೯೧೭ರಲ್ಲಿ ನಡೆದ ಈ ಕ್ರಾಂತಿಯ ಪರಿಣಾಮವಾಗಿ ಬೊಲ್‌ಷೆವಿಕರು ಅಧಿಕಾರಕ್ಕೆ ಬಂದರು. ೧೯೧೮ರ ಮಾರ್ಚ್ ತಿಂಗಳಲ್ಲಿ ಬೊಲ್‌ಷೆವಿಕ್ ಸರ್ಕಾರ ಜರ್ಮನಿಯೊಡನೆ ಏಕಪಕ್ಷೀಯ (one-sided) ಶಾಂತಿಕರಾರನ್ನು ಮಾಡಿಕೊಂಡಿತು. ರಷ್ಯಾ ಯುದ್ಧದಿಂದ ಪಾರಾಗಲು ಅನೇಕ ಷರತ್ತುಗಳಿಗೆ ಒಪ್ಪಿಕೊಂಡಿತು. ಅದರಂತೆ ರಷ್ಯಾ, ಫಿನ್‌ಲ್ಯಾಂಡ್, ಪೋಲೆಂಡ್, ಯುಕ್ರೇನ್ ಮತ್ತು ಬಾಲ್ಟಿಕ್ ಸಂಸ್ಥಾನಗಳ ಮೇಲಿನ ಹಕ್ಕನ್ನು ಬಿಟ್ಟುಕೊಟ್ಟಿತು.

ಹೀಗೆ ಇಟಲಿಯನ್ನು ಸೋಲಿಸಿ, ರಷ್ಯಾವನ್ನು ತಟಸ್ಥಗೊಳಿಸಿದ ನುರಿತ ಜರ್ಮನ್ ಸೇನೆ ಪೂರ್ವರಂಗದಿಂದ ಪಶ್ಚಿಮ ರಂಗಕ್ಕೆ ರವಾನಿಸಲ್ಪಟ್ಟಿತು. ಬ್ರಿಟಿಷ್ ಮತ್ತು ಫ್ರೆಂಚ್ ಪಡೆಗಳನ್ನು ಇಟಲಿ-ಆಸ್ಟ್ರಿಯ ರಂಗಕ್ಕೆ ಕಳುಹಿಸಿದ್ದರಿಂದ ಪಶ್ಚಿಮ ರಂಗದಲ್ಲಿ ಮಿತ್ರಪಡೆಗಳ ಶಕ್ತಿ ಕುಂದಿತ್ತು. ಪೂರ್ವರಂಗದಿಂದ ಹೆಚ್ಚು ಜರ್ಮನ್ ಸೈನ್ಯ ಬರುವವರೆಗೂ ಪಶ್ಚಿಮ ರಂಗದಲ್ಲಿ ಯುದ್ಧ ಮಂದಗತಿಯಲ್ಲಿ ಸಾಗಿತ್ತು. ಜರ್ಮನ್ ಸೈನ್ಯ ಬಂದು ಸೇರಿದೊಡನೆ ಯುದ್ಧ ಆಸ್ಫೋಟನೆಗೊಂಡಂತೆ ಭೀಕರವಾಯಿತು. ನುರಿತ ಜರ್ಮನ್ ಸೈನ್ಯ ಪಶ್ಚಿಮ ರಂಗವನ್ನು ಭೇದಿಸಿ ನುಗ್ಗಿ ಮಿತ್ರರಾಷ್ಟ್ರ ಪಡೆಗಳನ್ನು ಛಿದ್ರಗೊಳಿಸಿ ಪ್ಯಾರಿಸ್ ನಗರವನ್ನು ಆಕ್ರಮಣ ಮಾಡಿ ವಿಜಯ ಸಾಧಿಸಬೇಕೆಂದು ದೃಢ ನಿಶ್ಚಯ ಮಾಡಿತ್ತು. ಆ ಸಮಯಕ್ಕೆ ಸರಿಯಾಗಿ ಅಮೆರಿಕನ್ ಸೈನ್ಯ ಪಶ್ಚಿಮ ರಂಗದಲ್ಲಿ ದೀರ್ಘಕಾಲ ಯುದ್ಧ ಮಾಡಿ ದಣಿದು

ಸೊರಗಿದ ಮಿತ್ರರಾಷ್ಟ್ರ ಪಡೆಗಳ ಸಹಾಯಕ್ಕೆ ಬಂದು ಜರ್ಮನಿ ಯುದ್ಧದಲ್ಲಿ ಗೆಲ್ಲುವುದನ್ನು ತಪ್ಪಿಸಿತು.

೧೯೧೮ರ ಮೇ ತಿಂಗಳಲ್ಲಿ ಅಮೆರಿಕನ್ ಸೈನ್ಯ ಅತಿಮುಖ್ಯವಾದ ಕಾರ್ಯಾಚರಣೆಯನ್ನು ಕೈಗೊಂಡಿತು. ಆಕ್ರಮಣಕಾರಿ ಜರ್ಮನ್ ಸೈನ್ಯ ಮುನ್ನುಗ್ಗುತ್ತ ಪ್ಯಾರಿಸ್ ನಗರಕ್ಕೆ ಕೇವಲ ೫೦ ಮೈಲಿ ದೂರದಲ್ಲಿದ್ದ ಮಾರ್ನೆ ನದಿಯ (Marne river) ಪಶ್ಚಿಮ ದಂಡೆಯನ್ನು ತಲುಪಿತ್ತು. ಅಲ್ಲಿ ಅಮೆರಿಕನ್ ಸೈನ್ಯ ಜರ್ಮನ್ ಸೈನ್ಯದ ಮೇಲೆ ನಾಲ್ಕು ದಿನಗಳು ಭೀಕರ ದಾಳಿ ನಡೆಸಿತು. ಈ ದಾಳಿಯಿಂದ ತತ್ತರಿಸಿದ ಜರ್ಮನ್ ಸೈನ್ಯ ನದಿಯ ಪೂರ್ವದಂಡೆಗೆ ಹಿಮ್ಮೆಟ್ಟಿತು. ನಂತರ ಅಮೆರಿಕನ್ ಮರೀನ್ ದಳ (marines) ಪ್ಯಾರಿಸ್ ನಗರಕ್ಕೆ ಹೋಗುವ ಹೆದ್ದಾರಿಯ ಒಂದು ಆಯಕಟ್ಟಿನ ತಾಣವನ್ನು ಆಕ್ರಮಿಸಿಕೊಂಡಿದ್ದ ಜರ್ಮನ್ ಸೈನ್ಯದ ಮೇಲೆ ಭೀಕರವಾಗಿ ದಾಳಿ ಮಾಡಿ ಜರ್ಮನ್ ಪಡೆಗಳನ್ನು ಆ ತಾಣದಿಂದ ಹಿಮ್ಮೆಟ್ಟುವಂತೆ ಮಾಡಿತು. ಈ ಯುದ್ಧ ಹಲವು ವಾರಗಳವರೆಗೆ ನಡೆಯಿತು. ಅಮೆರಿಕನ್ ಸೈನ್ಯ ಅಧಿಕವಾಗಿ ಸಾವು ನೋವುಗಳನ್ನು ಅನುಭವಿಸಿತು. ಅಮೆರಿಕನ್ನರ ಈ ಯುದ್ಧಕೌಶಲ ಜರ್ಮನ್ ಸೈನ್ಯವನ್ನು ಬೆರಗುಗೊಳಿಸಿತು.

೧೯೧೮ರ ಜುಲೈ ೧೫ರಂದು ಜರ್ಮನ್ ಸೈನ್ಯ ಕಡೆಯ ಬಾರಿಗೆ ಪ್ಯಾರಿಸ್ ನಗರವನ್ನು ಆಕ್ರಮಣ ಮಾಡಲು ನಿಶ್ಚಯಿಸಿ ಮುನ್ನುಗ್ಗಿತು. ಇದು ಜರ್ಮನ್ ಸೈನ್ಯದ ಅಂತಿಮ ಹಾಗೂ ಅತ್ಯಂತ ಭೀಕರವಾದ ದಾಳಿಯಾಗಿತ್ತು. ಈ ಸೈನ್ಯದ ಮುಂಚೂಣಿ ಪಡೆಗಳು ಪ್ಯಾರಿಸ್ ನಗರದ ಹೊರವಲಯದವರೆಗೂ ಹೋಗಿದ್ದವು. ಆದರೆ ಜರ್ಮನ್ ಸೈನ್ಯದ ಒಂದು ಭಾಗ ಅಮೆರಿಕನ್ ಸೈನ್ಯದ ದಾಳಿಗೆ ಸಿಕ್ಕಿ ತತ್ತರಿಸಿತು. ಮೂರು ದಿನಗಳ ನಂತರ ಅಮೆರಿಕನ್ ಸೈನ್ಯ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳೊಡನೆ ಸೇರಿ ಜರ್ಮನ್ ಸೈನ್ಯದ ಮೇಲೆ ಅತ್ಯಂತ ಭೀಕರವಾದ ಪ್ರತಿದಾಳಿ (conter attack) ನಡೆಸಿತು. ಇದು ಮೊದಲನೆಯ ಜಾಗತಿಕ ಯುದ್ಧದ ದಿಕ್ಕನ್ನು ಬದಲಾಯಿಸಿತು. ಜುಲೈ ೧೫ರಂದು ಮಿತ್ರರಾಷ್ಟ್ರಗಳು ರಾಜಿ ಮಾಡಿಕೊಳ್ಳಲು ಕರೆ ನೀಡುತ್ತವೆ ಎನ್ನುವ ಭರವಸೆ ಜರ್ಮನಿ ಹೊಂದಿತ್ತು. ಆದರೆ ಅದೇ ದಿನದಂದು 'ನಾವು ಎಲ್ಲವನ್ನು ಕಳೆದುಕೊಂಡೆವು ಎನ್ನುವುದು ಎಂಥ ಆಶಾವಾದಿಗೂ ಗೊತ್ತು. ನಮ್ಮ ಜಾಗತಿಕ ಆಕ್ರಮಣ ಮೂರು ದಿನಗಳಲ್ಲಿ ಕೊನೆಗೊಂಡಿತು!' ಎಂದು ಜರ್ಮನ್ ಚಾನ್ಸಲರ್ ಸೋಲನ್ನು ಒಪ್ಪಿಕೊಳ್ಳುತ್ತ ಉದ್ಗರಿಸಿದನು.

ಮಿತ್ರರಾಷ್ಟ್ರಗಳ ಸೈನ್ಯಗಳೊಡನೆ ಕೂಡಿಕೊಂಡು ಅಮೆರಿಕನ್ ಸೈನ್ಯ ತೋರಿದ ಪರಾಕ್ರಮ ಮತ್ತು ಯುದ್ಧಕೌಶಲವನ್ನು ಮೆಚ್ಚಿಕೊಂಡ ಮಿತ್ರರಾಷ್ಟ್ರಗಳ ಸೇನಾಪಡೆಗಳ ಮಹಾ ದಂಡನಾಯಕ (Supreme Commander) ಫ್ರಾನ್ಸ್ ದೇಶದ ಮಾರ್ಷಲ್ ಫೋಕ್ (Marshall Foc) ಅಮೆರಿಕನ್ ಸೈನ್ಯವನ್ನು ಬೇರೆ ದೇಶಗಳ ಸೈನ್ಯಗಳಿಂದ

ಬೇರ್ಪಡಿಸಿ ಪ್ರತ್ಯೇಕವಾಗಿ ಯುದ್ಧಮಾಡಲು ಅನುಮತಿ ನೀಡಿದನು. ಅಮೆರಿಕನ್ ಸೈನ್ಯಕ್ಕೆ ವಹಿಸಿದ ಮೊದಲನೆಯ ಕಾರ್ಯ ಸೆಂಟ್ ಮೈಹಿಯೆಲ್ (St. Mihiel) ಎನ್ನುವ ಆಯಕಟ್ಟಿನ ರೈಲುಮಾರ್ಗಗಳ ಕೂಡುದಾಣ (junction)ದಲ್ಲಿ. ಕಂದಕಗಳ ಕೋಟೆಗಳಲ್ಲಿ ಹುದುಗಿ ಭೀಕರ ಹೋರಾಟ ನಡೆಸಿದ್ದ ಜರ್ಮನ್ ಪಡೆಗಳ ಮೇಲೆ ದಾಳಿ ಮಾಡಿ ಅವುಗಳನ್ನು ನಾಶಗೊಳಿಸುವುದು. ಯುದ್ಧದ ಆರಂಭದಲ್ಲಿಯೇ ಈ ಸ್ಥಳವನ್ನು ಆಕ್ರಮಿಸಿಕೊಂಡ ಜರ್ಮನರನ್ನು ಮಿತ್ರರಾಷ್ಟ್ರಗಳ ಸೈನ್ಯಗಳು ಹಿಮ್ಮೆಟ್ಟಿಸಲು ಸಾಧ್ಯವಾಗಿರಲಿಲ್ಲ. ೧೯೧೮ರ ಸೆಪ್ಟೆಂಬರ್ ತಿಂಗಳಲ್ಲಿ ಅಮೆರಿಕನ್ ಸೈನ್ಯ ಕಂದಕಗಳಲ್ಲಿ ಅಡಗಿ ಹೋರಾಡುತ್ತಿದ್ದ ಜರ್ಮನ್ ಸೇನೆಯ ಮೇಲೆ ಮೃತ್ಯುವಿನಂತೆ ಎರಗಿ ಎರಡೇ ದಿನಗಳ ದಾಳಿಯಲ್ಲಿ ಆ ಕಂದಕ-ಕೋಟೆಗಳನ್ನು ವಶಪಡಿಸಿಕೊಂಡಿತು.

ಇದಾದ ನಂತರ ಅಮೆರಿಕನ್ ಸೈನ್ಯ ಮಿತ್ರರಾಷ್ಟ್ರಗಳನ್ನು ಕೂಡಿಕೊಂಡು ಉತ್ತರದ ಯುದ್ಧರಂಗದಲ್ಲಿದ್ದ ಜರ್ಮನ್ ಸೈನ್ಯದ ಮೇಲೆ ಅತ್ಯಂತ ಕ್ರೂರವಾದ ದಾಳಿ ಮಾಡಿತು. ಮೊದಲನೆಯ ಜಾಗತಿಕ ಯುದ್ಧದಲ್ಲಿ ಅಮೆರಿಕನ್ ಸೈನ್ಯ ಮಾಡಿದ ಎಲ್ಲ ಕದನಗಳಿಗಿಂತ ಇದು ಅತ್ಯಂತ ಭೀಕರ ಕದನವಾಗಿತ್ತು. ಒಂದು ಮಿಲಿಯನ್‌ಗಿಂತಲೂ ಹೆಚ್ಚು ಅಮೆರಿಕನ್ ಸೈನಿಕರು ಸಾಲಾಗಿ ಮುಂದುವರಿಯುತ್ತ, ವೈರಿಗಳ ಗುಂಡಿನ ಏಟುಗಳನ್ನು ಲೆಕ್ಕಿಸದೆ, ಆರ್‌ಗಾನ್ ಅರಣ್ಯವನ್ನು (Argonne Forests) ಸೇರಿದರು. ಆ ಸೈನ್ಯದ ಸಾಲು ೨೪ ಮೈಲಿ ಉದ್ದವಾಗಿತ್ತು! ಧಾರಾಕಾರವಾದ ಮಳೆಯಿಂದ ಸೈನ್ಯ ಮಂದಗತಿಯಲ್ಲಿ ಸಾಗಿದರೂ ಕೆಲವು ಅಮೆರಿಕನ್ ತುಕಡಿಗಳು ಪ್ರತ್ಯೇಕವಾಗಿ ದಾಳಿ ಮಾಡಿ ಜರ್ಮನ್ ಸೈನಿಕರು ಗುಂಡು ಹಾರಿಸುತ್ತಿದ್ದ ಆಯಕಟ್ಟಿನ ಸ್ಥಳಗಳನ್ನು ವಶಪಡಿಸಿಕೊಂಡವು. ಈ ಘೋರ ಕದನ ೪೭ ದಿನಗಳು ಸತತವಾಗಿ ನಡೆಯಿತು. ಕೊನೆಯಲ್ಲಿ ಮಿತ್ರರಾಷ್ಟ್ರಗಳ ಸೈನ್ಯಗಳು ಒಟ್ಟಾಗಿ ಆರ್‌ಗಾನ್ ಅರಣ್ಯದ ಮೂಲಕ ಸಾಗಿ ಹಿಂಡನ್‌ಬರ್ಗ್‌ನ ರಕ್ಷಣಾದಳವನ್ನು ಛಿದ್ರಗೊಳಿಸಿದವು. ಈ ದಳ ಜರ್ಮನ್ ಸೈನ್ಯದ ಪಶ್ಚಿಮ ರಣರಂಗದ ಅತ್ಯಂತ ಪ್ರಬಲವಾದ ಸೈನ್ಯವಾಗಿತ್ತು. ೧೯೧೮ರ ನವೆಂಬರ್ ೭ರಂದು ಫ್ರೆಂಚ್ ಮತ್ತು ಬ್ರಿಟಿಷ್ ಸೈನ್ಯಗಳು ನುಗ್ಗಿ ರಾಜಧಾನಿಯ ಕಡೆ ಬರುತ್ತಿದ್ದಂತೆ ಜರ್ಮನಿ ಶಾಂತಿಸಂಧಾನಕ್ಕೆ ಒಪ್ಪಿ ಸಂಧಾನಪತ್ರಕ್ಕೆ ರುಜು ಹಾಕಿತು. ಜಾಗತಿಕ ಯುದ್ಧ ಎಷ್ಟು ರಭಸದಿಂದ ಆರಂಭವಾಯಿತೋ ಅಷ್ಟೇ ತ್ವರಿತವಾಗಿ ಕೊನೆಗೊಂಡಿತು!

ಮೊದಲನೆಯ ಜಾಗತಿಕ ಯುದ್ಧವನ್ನು ರಾಜಕಾರಣಿಗಳು ವಿವಿಧ ರೀತಿಯಲ್ಲಿ ವರ್ಣಿಸಿದ್ದಾರೆ. ಆದರೆ ಯಾವ ದೃಷ್ಟಿಯಿಂದ ನೋಡಿದರೂ ಅದು ಜಾಗತಿಕ ಮಟ್ಟದ ನರ ಹತ್ಯಾಕಾಂಡವಲ್ಲದೆ ಬೇರೇನೂ ಅಲ್ಲ. ಯುದ್ಧದಲ್ಲಿ ಭಾಗಹಿಸಿದ ಮಿಲಿಯನ್‌ಗಟ್ಟಲೆ ಸೈನಿಕರಲ್ಲಿ ಅರ್ಧಭಾಗಕ್ಕೂ ಹೆಚ್ಚು ಸೈನಿಕರು ಸತ್ತರು, ಗಾಯಗೊಂಡರು, ಸೆರೆಹಿಡಿಯಲ್ಪಟ್ಟರು ಅಥವಾ ಕಾರ್ಯಾಚರಣೆಯಲ್ಲಿ ಕಳೆದುಹೋದರು (missing in action). ಯುದ್ಧದಲ್ಲಿ ಸತ್ತವರ ಒಟ್ಟುಸಂಖ್ಯೆ ೬.೪ ಮಿಲಿಯನ್. ಇದರಲ್ಲಿ ಫ್ರಾನ್ಸ್‌ನ

ಜನಸಂಖ್ಯೆಯಲ್ಲಿ ಪ್ರತಿ ೨೮ ಜನರಲ್ಲಿ ಒಬ್ಬನಂತೆ, ಜರ್ಮನಿಯ ಪ್ರತಿ ೩೨ ಜನರಲ್ಲಿ ಒಬ್ಬನಂತೆ, ಇಂಗ್ಲೆಂಡಿನ ಪ್ರತಿ ೫೭ ಜನರಲ್ಲಿ ಒಬ್ಬನಂತೆ ಮತ್ತು ರಷ್ಯಾದ ಪ್ರತಿ ೧೦೭ ಜನರಲ್ಲಿ ಒಬ್ಬನಂತೆ ಸಾವಿಗೀಡಾದರು. ಅಮೆರಿಕನ್ನರು ಯುದ್ಧ ಆರಂಭವಾದ ಆರು ತಿಂಗಳಾದ ಮೇಲೆ ಭಾಗವಹಿಸಿದ್ದರೂ ಅವರಲ್ಲಿ ಸಾವು-ನೋವು ಅನುಭವಿಸಿದವರ ಸಂಖ್ಯೆ: ೫೦೦೦೦ ಜನ ಯುದ್ಧದಲ್ಲಿ ಮಡಿದವರು, ೬೩೦೦೦ ಸೈನಿಕರು ಕಾಯಿಲೆಯಿಂದ ಸತ್ತರು. ೧೯೧೮ರಲ್ಲಿ ಇನ್‌ಫ್ಲುಯೆಂಜ಼ (influenza)ದಿಂದ ಪ್ರಪಂಚದಾದ್ಯಂತ ಲೆಕ್ಕವಿಲ್ಲದಷ್ಟು ಜನ ಸತ್ತರು. ಈ ಕಾಯಿಲೆಗೆ ಸಾವಿರಾರು ಸೈನಿಕರೂ ತುತ್ತಾದರು. ೨೨೦೦ ಸೈನಿಕರು ಪತ್ತೆಯಿಲ್ಲದಂತಾದರು ಮತ್ತು ೨೦೬೦೦೦ ಗಾಯಾಳುಗಳು ಜೀವ ಹಿಡಿದುಕೊಂಡಿದ್ದರು. ಈ ಮಹಾಯುದ್ಧದ ಪರಿಣಾಮ – ಅಪಾರ ಪ್ರಾಣಹಾನಿ, ಮನೆ ಮಠ, ಆಸ್ತಿ ಪಾಸ್ತಿ ನಷ್ಟದಿಂದಾಗಿ ನಿರ್ಗತಿಕರು, ನಿರಾಶ್ರಿತರು. ಇದು ಬಿಟ್ಟರೆ ಈ ಯುದ್ಧ ಸಾಧಿಸಿದ್ದೇನು? ಇಲ್ಲಿ R. South ನ ಕವನದ ಕೆಲವು ಸಾಲುಗಳು ಯಥೋಚಿತ ವಾಗಿ ತೋರುತ್ತವೆ:

'But what good came of it at last?'
Qouth little Peterkin.
'Why that I cannot tell' said he,
But, 'it was a famous victory'.

ಪ್ಯಾರಿಸ್ ಶಾಂತಿಸಮ್ಮೇಳನ

ಮೊದಲನೆಯ ಜಾಗತಿಕ ಯುದ್ಧದ ಹತ್ಯಾಕಾಂಡಕ್ಕೆ ಎಷ್ಟೋ ಸಮಯದ ಹಿಂದೆ ಅಧ್ಯಕ್ಷ ವಿಲ್ಸನ್ ತನ್ನ ಯುದ್ಧಪೂರ್ವ ಅಭಿಲಾಷೆಯನ್ನು ಕೈಗೂಡಿಸಲು ಪ್ರಯತ್ನಪಟ್ಟಿದ್ದನು. ಯೂರೋಪಿನ ಎಲ್ಲಾ ದೇಶಗಳಲ್ಲಿ ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯವನ್ನು ಹರಡುವಂತೆ ಮಾಡಬೇಕೆನ್ನುವುದು ಅವನ ಮಹತ್ವಾಕಾಂಕ್ಷೆಯಾಗಿತ್ತು. ಈ ಮತಪ್ರಚಾರಕ ರಾಜಕಾರಣ (missionary diplomacy) ಅವನಿಗೆ ಅತ್ಯಂತ ಆಪ್ಯಾಯಮಾನವಾಗಿತ್ತು. ಅಮೆರಿಕ ಪ್ರಜಾಪ್ರಭುತ್ವದ ಮಾದರಿಯಾಗಿದ್ದರೆ ಮಾತ್ರ ಸಾಲದು, ಪ್ರಜಾಪ್ರಭುತ್ವವನ್ನು ಎಲ್ಲ ಕಡೆಗಳಿಗೆ ಕೊಂಡೊಯ್ಯಬೇಕು ಎನ್ನುವುದು ಮೊದಲಿನಿಂದಲೂ ಅಮೆರಿಕದ ಧ್ಯೇಯ ವಾಗಿತ್ತು. ಆದರೆ ಆ ಧ್ಯೇಯವನ್ನು ಕೈಗೂಡಿಸುವ ಪ್ರಯತ್ನ ನಡೆದಿರಲಿಲ್ಲ. ಈಗ ಅಧ್ಯಕ್ಷ ವಿಲ್ಸನ್‌ಗೆ ಆ ಅವಕಾಶ ಒದಗಿಬಂದಿತ್ತು. ಹೀಗಾಗಿ ಅವನು ತನ್ನ ಮನಸ್ಸಿನಲ್ಲಿ ಮುಂಬರುವ ಜಗತ್ತನ್ನು ರೂಪಿಸಿಕೊಂಡಿದ್ದನು. ಆ ಜಗತ್ತಿನಲ್ಲಿ ಪ್ರಜಾಪ್ರಭುತ್ವ ಸುರಕ್ಷಿತವಾಗಿತ್ತು, (A world safe for democracy)ಯುದ್ಧಕ್ಕೆ ಅವಕಾಶವಿರಲಿಲ್ಲ ಮತ್ತು ಉದ್ಯಮಗಳು ನಿಯಂತ್ರಣರಹಿತವಾಗಿದ್ದವು (free enterprise). ೧೯೧೮ರ ಜನವರಿ ತಿಂಗಳಲ್ಲಿ, ಯುದ್ಧ ಮುಗಿಯುವುದಕ್ಕೆ ಹತ್ತು ತಿಂಗಳು ಮುಂಚೆಯೇ, ಕಾಂಗ್ರೆಸ್ಸನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ತಾನು ಕಂಡ ಯುದ್ಧಾನಂತರದ ಜಗತ್ತಿನ ದರ್ಶನವನ್ನು

ವರ್ಣಿಸಿದ್ದನು. ಈ ದರ್ಶನವನ್ನು 'ಹದಿನಾಲ್ಕು ಅಂಶಗಳು' ಎಂದು ಕರೆದನು. ಈ ಅಂಶಗಳ ಯೋಜನೆ ಮಾತ್ರವೆ ಜಗತ್ತಿನಲ್ಲಿ ಶಾಶ್ವತವಾದ ಶಾಂತಿಸ್ಥಾಪನೆ ಮಾಡಬಲ್ಲುದು, ಬೇರೆ ಯಾವ ದಾರಿಯೂ ಇಲ್ಲ ಎಂದು ವಿಲ್ಸನ್ ನಂಬಿದ್ದನು.

'ಹದಿನಾಲ್ಕು ಅಂಶಗಳ' ಸಂಕ್ಷಿಪ್ತ ಸಾರಾಂಶ: ಗುಟ್ಟಿನ ರಾಜಕಾರಣವನ್ನು ರದ್ದುಗೊಳಿಸುವುದು, ಸಮುದ್ರಮಾರ್ಗಗಳನ್ನು ಎಲ್ಲ ದೇಶಗಳಿಗೂ ತೆರವಾಗಿರಿಸುವುದು, ರಾಷ್ಟ್ರಗಳು ಸ್ವತಂತ್ರವಾಗಿ ಪರಸ್ಪರ ವ್ಯಾಪಾರ ಮಾಡುವುದು, ಶಸ್ತ್ರಾಸ್ತ್ರಗಳ ಉತ್ಪಾದನೆ ಕಡಿಮೆ ಮಾಡುವುದು, ಯುದ್ಧದಲ್ಲಿ ಸೋತ ರಾಷ್ಟ್ರಗಳ ವಸಾಹತುಗಳನ್ನು ಸ್ವತಂತ್ರಗೊಳಿಸಿ ಅಲ್ಲಿನ ಪ್ರಜೆಗಳ ವಶಕ್ಕೆ ಬಿಡುವುದು ಮತ್ತು ರಾಷ್ಟ್ರಗಳ ಒಕ್ಕೂಟವನ್ನು ಸ್ಥಾಪಿಸುವುದು (The League of Nations). ಮಿಕ್ಕ ಅಂಶಗಳಲ್ಲಿ ಕೆಲವು ರಾಷ್ಟ್ರಗಳ ಆಕಾಂಕ್ಷೆಗಳಿಗೆ ಸಂಬಂಧಪಟ್ಟವು, ಇನ್ನು ಕೆಲವು ರಾಷ್ಟ್ರಗಳ ಗಡಿ ನಿರ್ಧಾರ ಸಮಸ್ಯೆಗಳಿಗೆ ಸಂಬಂಧಪಟ್ಟವು.

ಜರ್ಮನಿಯ ಪ್ರಜೆಗಳಿಗೆ ಈ ಹದಿನಾಲ್ಕು ಅಂಶಗಳ ವಿವರಣೆಯುಳ್ಳ ಸುತ್ತೋಲೆಯನ್ನು ಹಂಚಿ ಅವರಲ್ಲಿ ಈ ಅಂಶಗಳ ಆಧಾರದ ಮೇಲೆ ಶಾಂತಿಸ್ಥಾಪನೆಯಾಗುತ್ತದೆ ಎನ್ನುವ ಹುಟ್ಟಿತ್ತು. ಕರಾರಿನಲ್ಲಿ ನಮೂದಿಸಿದ ಷರತ್ತುಗಳು ಜನರಿಗೆ ತರ್ಕಬದ್ಧವಾಗಿ ತೋರಿದವು. ಯುದ್ಧದಲ್ಲಿ ಸೋತು ಸೊರಗಿದ ಜನ ಈ ಷರತ್ತುಗಳನ್ನು ಒಪ್ಪಿಕೊಳ್ಳುವಂತೆ ಒತ್ತಾಯ ಮಾಡಿದರು. ಇದಕ್ಕೆ ತಡೆಯೊಡ್ಡಿದ ಕೈಸರ್‌ನನ್ನು (Kaiser) ಹಾಲೆಂಡಿಗೆ ಓಡಿಸಿದರು. ಆನಂತರ ಪಾರ್ಲಿಮೆಂಟ್ ಸರ್ಕಾರವನ್ನು ಸ್ಥಾಪಿಸಿದರು. ಮಿತ್ರ ರಾಷ್ಟ್ರಗಳ ದಾಳಿಯ ಜೊತೆಗೆ ಈ ಹದಿನಾಲ್ಕು ಅಂಶಗಳ ಆಶ್ವಾಸನೆಗಳು ಸೇರಿ ಜರ್ಮನರ ಶರಣಾಗತಿಗೆ ಕಾರಣವಾಯಿತು. ಇನ್ನೊಂದೆಡೆ ಯುದ್ಧದ ಪರಿಣಾಮದಿಂದ ಉಂಟಾದ ಅಪಾರ ಪ್ರಾಣಹಾನಿ ಮತ್ತು ಆಸ್ತಿ ಪಾಸ್ತಿಗಳ ನಷ್ಟ ಮತ್ತು ಜನರು ಮಾಡಬೇಕಾಗಿದ್ದ ತ್ಯಾಗ ಹಾಗು ಅನುಭವಿಸಿದ ಕಷ್ಟ ಕಾರ್ಪಣ್ಯಗಳು ಅಮೆರಿಕ ಮತ್ತು ಯೂರೋಪಿನ ಪ್ರಜೆಗಳಲ್ಲಿ ತೀವ್ರವಾದ ಅಸಮಾಧಾನ ಉಂಟುಮಾಡಿದ್ದವು.

೧೯೧೮ರ ನವೆಂಬರ್ ತಿಂಗಳಲ್ಲಿ ನಡೆದ ಚುನಾವಣೆಯಲ್ಲಿ ರಿಪಬ್ಲಿಕನ್ನರು ಕಾಂಗ್ರೆಸ್ ಮತ್ತು ಸೆನೆಟ್ ಎರಡರಲ್ಲೂ ಬಹುಮತ ಗಳಿಸಿದರು. ಈ ಚುನಾವಣೆಯ ಫಲಿತಾಂಶ ಅಧ್ಯಕ್ಷ ವಿಲ್ಸನ್‌ನ ಆಡಳಿತ ಮತ್ತು ಧೋರಣೆಗಳನ್ನು ಪ್ರಜೆಗಳು ನಿರಾಕರಿಸಿದುದರ ದ್ಯೋತಕವಾಗಿತ್ತು. ಯುದ್ಧಕಾಲದ ಆಡಳಿತವನ್ನು ಯುದ್ಧಾನಂತರ ನಿರಾಕರಿಸಿದ್ದು ಅಮೆರಿಕ ಇತಿಹಾಸದಲ್ಲಿ ಇದೇ ಮೊದಲು. ಇದಕ್ಕೆ ಕಾರಣ ಜನಗಳಿಗೆ ಯುದ್ಧ ರೇಜಿಗೆ ಹಿಡಿಸಿತ್ತು ಮತ್ತು ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿ ಅವರಿಗೆ ಸಾಕಾಗಿ ಹೋಗಿತ್ತು. ಚುನಾವಣೆಯಲ್ಲಿ ಅವನ ಪಕ್ಷ ಸೋತಿದ್ದರೂ ಕೂಡ ವಿಲ್ಸನ್ ೧೯೧೯ರ ಜನವರಿ ತಿಂಗಳಲ್ಲಿ ವರ್‌ಸಾಯ್ (Versailles) ಯಲ್ಲಿ ನಡೆಯಲಿದ್ದ ಶಾಂತಿಸಂಧಾನದ ಸಭೆಗೆ ಅಮೆರಿಕದ ಪ್ರತಿನಿಧಿಯಾಗಿ ಹೋದನು. ಅವನು ತನ್ನ ಜೊತೆಯಲ್ಲಿ ರಿಪಬ್ಲಿಕನ್ ಸಲಹೆಗಾರರನ್ನು ಕರೆದೊಯ್ಯಲಿಲ್ಲ; ಹಾಗೆಯೇ ಯಾವ ಸೆನೆಟರ್‌ಗಳನ್ನು ಜೊತೆ ಸೇರಿಸಿಕೊಳ್ಳಲಿಲ್ಲ.

ವಿಲ್ಸನ್ ವಾಗ್ದಾನ ಮಾಡಿದ ಹದಿನಾಲ್ಕು ಅಂಶಗಳ ಯೋಜನೆ, ಮಿತ್ರ ರಾಷ್ಟ್ರಗಳು ಯುದ್ಧಾನಂತರ ಯೂರೋಪಿನ ಪ್ರಾಂತಗಳನ್ನು ತಮ್ಮೊಳಗೆ ಹಂಚಿಕೊಳ್ಳಲು ಗುಟ್ಟಾಗಿ ಮಾಡಿಕೊಂಡ ಕರಾರಿಗೆ ವಿರೋಧವಾಗಿತ್ತು. ವಿಚಾರ ವಿನಿಮಯದ ಮೂಲಕ ಇದನ್ನು ಬಗೆಹರಿಸಿ ತನ್ನ ವಾಗ್ದಾನಗಳನ್ನು ಕೈಗೂಡಿಸುವುದು ಸಾಧ್ಯವೆಂದು ವಿಲ್ಸನ್ ನಂಬಿದ್ದನು. ಆದರೆ ಯುದ್ಧಾನಂತರ ಅಧಿಕಾರಕ್ಕೆ ಬಂದ ಬ್ರಿಟಿಷ್ ಮತ್ತು ಫ್ರೆಂಚ್ ನಾಯಕರು ಯುದ್ಧದ ನರಹತ್ಯಾಕಂಡಕ್ಕೆ ಕಾರಣರಾದ ಜರ್ಮನರ ಮೇಲೆ ಸೇಡು ತೀರಿಸಿಕೊಳ್ಳಲು ತವಕದಿಂದಿದ್ದರು. ಸೋತ ರಾಷ್ಟ್ರಗಳ ಮೇಲೆ ಅತ್ಯಂತ ಕಠಿಣ ಷರತ್ತುಗಳನ್ನು ಹೇರಲು ಮಿತ್ರ ರಾಷ್ಟ್ರಗಳು ಹವಣಿಸುತ್ತಿದ್ದವು. ಕಮ್ಯೂನಿಸಂ ಯೂರೋಪಿನಾದ್ಯಂತ ಹಬ್ಬಬಹುದು ಎಂಬ ಹೆದರಿಕೆಯಿಂದ ವಿಲ್ಸನ್ ಮಿತ್ರ ರಾಷ್ಟ್ರಗಳೊಡನೆ ತನ್ನ ಇಷ್ಟಕ್ಕೆ ವಿರೋಧವಾದ ಅಂಶಗಳನ್ನು ಒಪ್ಪಿಕೊಂಡು ಹೊಂದಾಣಿಕೆ ಮಾಡಿಕೊಳ್ಳಬೇಕಾಯಿತು.

ವರ್‌ಸಾಯ್ ಕರಾರು

ಶಾಂತಿ ಸಮ್ಮೇಳನದ ಮೇಲೆ ನಾಲ್ಕು ಪ್ರಬಲ ನಾಯಕರು ತಮ್ಮ ವರ್ಚಸ್ಸನ್ನು ಬೀರಿದ್ದರು: ವುಡ್ರೋ ವಿಲ್ಸನ್, ಡೇವಿಡ್ ಲಾಯ್ಡ್ ಜಾರ್ಜ್ (ಇಂಗ್ಲೆಂಡ್), ಜಾರ್ಜ್ ಕ್ಲೆಮಾನ್ಸೂ (ಫ್ರಾನ್ಸ್) ಮತ್ತು ವಿಟ್ಟೋರಿಯೊ ಆರ್ಲೆಂಡೋ (ಇಟಲಿ). ಅಧ್ಯಕ್ಷ ವಿಲ್ಸನ್ ಮಿತ್ರ ರಾಷ್ಟ್ರಗಳು ಜರ್ಮನಿಯ ಮೇಲೆ ಹೇರುತ್ತಿದ್ದ ಕಠಿಣ ಷರತ್ತುಗಳನ್ನು ತಿದ್ದಲು ಮತ್ತು ತನ್ನ ಹದಿನಾಲ್ಕು ಅಂಶಗಳ ಯೋಜನೆಯನ್ನು ಅವು ಒಪ್ಪಿಕೊಳ್ಳುವಂತೆ ಮಾಡುವ ಆಸೆಯಿಟ್ಟುಕೊಂಡಿದ್ದನು. ಈ ರಾಜಕಾರಣಿಗಳೊಡನೆ ವ್ಯವಹಾರ ನಡೆಸುವಾಗ ವಿಲ್ಸನ್ ಶಾಂತಿ ಸಂಧಾನದಲ್ಲಿ ಸೇರಿಸಬೇಕೆಂದಿದ್ದ ತನ್ನ ಹದಿನಾಲ್ಕು ಅಂಶಗಳಲ್ಲಿ ಅನೇಕವನ್ನು ಬಿಡಬೇಕಾಯಿತು. ಬಹುತೇಕ ವಿಷಯಗಳಲ್ಲಿ ಅವನು ಮಿತ್ರ ರಾಷ್ಟ್ರಗಳು ಹೇಳಿದಂತೆ ಮಾಡಬೇಕಾಯಿತು.

ವರ್‌ಸಾಯ್ ಕರಾರಿನ ಪ್ರಕಾರ ಜರ್ಮನಿಯ ಎಲ್ಲ ವಸಾಹತುಗಳನ್ನು ಬಿಡುಗಡೆ ಮಾಡಲಾಯಿತು. ಅಲ್ಸಾಸ್-ಲೊರೇನ್ (Alsace-Lorraine) ಮತ್ತು ಇತರ ಗಡಿಪ್ರಾಂತಗಳನ್ನು ಪೋಲೆಂಡ್, ಬೆಲ್ಜಿಯಂ ಮತ್ತು ಡೆನ್ಮಾರ್ಕ್ ದೇಶಗಳಿಗೆ ಹಂಚಲಾಯಿತು. ಯುದ್ಧವನ್ನು ಪ್ರಾರಂಭಿಸಿದ ಅಪರಾಧವನ್ನು ಒಪ್ಪಿಕೊಳ್ಳುವಂತೆ ಜರ್ಮನಿಯನ್ನು ಒತ್ತಾಯಪಡಿಸಿದರು. ಹಾಗೆ ಮಾಡಿದರೆ ಜರ್ಮನಿ ಯುದ್ಧದಿಂದ ಆದ ಸಾವು, ಕಷ್ಟ ನಷ್ಟಗಳಿಗೆ ಸಂಪೂರ್ಣ ಪರಿಹಾರ ಕೊಡಬೇಕೆಂದು ನಿರ್ಧರಿಸಿದರು. ಜರ್ಮನಿಯನ್ನು ಸಂಪೂರ್ಣವಾಗಿ ನಿಶಸ್ತ್ರಗೊಳಿಸಬೇಕೆಂದು (completely disarmed) ನಿರ್ಧರಿಸಿದರು. ಮಿತ್ರ ರಾಷ್ಟ್ರಗಳೂ ಕೂಡ ನಿಶಸ್ತ್ರಗೊಳ್ಳುವ ಕಾರ್ಯವನ್ನು ತಾವಾಗಿಯೇ ಪ್ರಾರಂಭಿಸಬೇಕೆಂದು ನಿರ್ದೇಶಿಸಲಾಯಿತು. ಕೊನೆಯಲ್ಲಿ ವುಡ್ರೋ ವಿಲ್ಸನ್ 'ರಾಷ್ಟ್ರಗಳ ಒಕ್ಕೂಟ' (League of Nations) ಸಂಸ್ಥೆಯನ್ನು ಒಪ್ಪಿಕೊಳ್ಳುವಂತೆ ಪ್ರೇರೇಪಿಸಿದನು.

ವರ್‌ಸಾಯ್ ಒಪ್ಪಂದದಿಂದಾದ ಅನ್ಯಾಯದಿಂದ ಉಂಟಾಗಬಹುದಾದ ಅಸಮಾಧಾನ ಮತ್ತು ತಿಕ್ಕಾಟಗಳನ್ನು ಶಾಂತರೀತಿಯಿಂದ ಒಕ್ಕೂಟ ಪರಿಹರಿಸುತ್ತದೆ ಎಂದು ವಿಲ್ಸನ್ ಯೋಚಿಸಿದ್ದನು.

ರಾಷ್ಟ್ರಗಳ ಒಕ್ಕೂಟದ ರಚನೆ

ಒಕ್ಕೂಟದ ಕರಾರುಪತ್ರ ವಿಶದಪಡಿಸಿದಂತೆ ಈ ಸಂಸ್ಥೆ ಒಂಬತ್ತು ಸದಸ್ಯರ ಮಂತ್ರಾಲೋಚನೆ ಮಂಡಲವನ್ನು ಹೊಂದಿತ್ತು. ಐದು ಪ್ರಬಲ ರಾಷ್ಟ್ರಗಳನ್ನು ಸಂಯುಕ್ತ ಸಂಸ್ಥಾನಗಳು, ಫ್ರಾನ್ಸ್, ಬ್ರಿಟನ್, ಇಟಲಿ ಮತ್ತು ಜಪಾನ್ ಮತ್ತು ನಾಲ್ಕು ಇತರ ರಾಷ್ಟ್ರಗಳನ್ನು ಸರ್ವಸದಸ್ಯರ ಸಭೆಯಲ್ಲಿ ಚುನಾವಣೆಯಲ್ಲಿ ಆಯ್ಕೆ ಮಾಡಿ ನೇಮಕಗೊಳ್ಳುತ್ತಿದ್ದವು. ಒಕ್ಕೂಟದ ಇನ್ನೊಂದು ಪ್ರಮುಖ ರಚನಾತ್ಮಕ ಸಂಸ್ಥೆ ಎಂದರೆ 'ಸರ್ವಸದಸ್ಯರ ಸಭೆ' ಎಲ್ಲ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡಿರುವ ಸಭೆ. ಒಕ್ಕೂಟದ ಪ್ರತಿನಿತ್ಯದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವ ಶಾಶ್ವತ ಕಾರ್ಯಾಲಯ (permanent Secretariat) ವನ್ನು ಜಿನೀವಾದಲ್ಲಿ ಸ್ಥಾಪಿಸಲಾಯಿತು.

ಸದಸ್ಯ ರಾಷ್ಟ್ರಗಳ ಗೌರವವನ್ನು ರಕ್ಷಿಸಿ, ಅವುಗಳ ಗಡಿಗಳನ್ನು ಮತ್ತು ಸ್ವಾತಂತ್ರ್ಯವನ್ನು ಉಳಿಸುವುದು. ಯುದ್ಧಕ್ಕೆ ಕಾರಣವಾಗಬಹುದಾದ ವಾದಗ್ರಸ್ಥ ಸಮಸ್ಯೆಗಳನ್ನು ವಿವೇಚಿಸಿ ಪರಿಹಾರ ಸೂಚಿಸುವುದು. ಆಕ್ರಮಣಕಾರಿ ರಾಷ್ಟ್ರದ ಮೇಲೆ ಮಿಲಿಟರಿ ಮತ್ತು ಆರ್ಥಿಕ ನಿರ್ಬಂಧಗಳನ್ನು ವಿಧಿಸುವುದು, ಶಸ್ತ್ರಾಸ್ತ್ರಗಳನ್ನು ಕಡಿಮೆ ಮಾಡುವ ಯೋಜನೆಗಳನ್ನು ಜಾರಿಗೆ ತರುವುದು ಮತ್ತು ಶಾಶ್ವತವಾದ ಅಂತರರಾಷ್ಟ್ರೀಯ ನ್ಯಾಯಾಲಯ (Court of International Justice) ಸ್ಥಾಪಿಸುವುದು – ಇವು ಒಕ್ಕೂಟದ ಮುಖ್ಯ ಧ್ಯೇಯಗಳಾಗಿದ್ದವು.

ವುಡ್ರೋ ವಿಲ್ಸನ್ ಮಿತ್ರ ರಾಷ್ಟ್ರಗಳ ನಾಯಕರೊಂದಿಗೆ ಸೇರಿ ಮಾಡಿಕೊಂಡ ವರ್‌ಸಾಯ್ ಒಪ್ಪಂದವನ್ನು ರಿಪಬ್ಲಿಕನ್ ಬಹುಮತವಿದ್ದ ಸೆನೆಟ್ ಸದಸ್ಯರು ನಿರಾಕರಿಸಲು ನಿರ್ಧರಿಸಿದರು. ಸೆನೆಟ್‌ನ ಬಹುಮತದ ನಾಯಕ (Senate majority leader) ಹೆನ್ರಿ ಕೆಬಟ್ ಲಾಡ್ಜ್‌ನಿಗೆ ವೈಯಕ್ತಿಕವಾಗಿ ವಿಲ್ಸನ್ ಕಂಡರೆ ಆಗುತ್ತಿರಲಿಲ್ಲ; ಇನ್ನು ಕೆಲವು ಸೆನೆಟರುಗಳು ವರ್‌ಸಾಯ್ ಕರಾರನ್ನು ತಯಾರಿಸುತ್ತಿದ್ದಾಗ ವಿಲ್ಸನ್ ಸೆನೆಟ್‌ನ ಅಭಿಪ್ರಾಯವನ್ನು ಕೇಳಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇನ್ನು ಕೆಲವರು ಮಿತ್ರ ರಾಷ್ಟ್ರಗಳ ಸ್ವಾರ್ಥ ಸಾಧನೆಗೆ ರಿಯಾಯಿತಿ ತೋರಿಸಿದ್ದನ್ನು ವಿರೋಧಿಸಿದರು. ಮತ್ತೆ ಕೆಲವರು ಮುಂದೆ ಹೋಗಿ, ರಾಷ್ಟ್ರಗಳ ಒಕ್ಕೂಟಕ್ಕೆ ಅಮೆರಿಕ ಸೇರುವುದನ್ನು ವಿರೋಧಿಸಿದರು. ಯೂರೋಪಿಯನ್ ರಾಷ್ಟ್ರಗಳನ್ನು ಪುನರ್‌ನಿರ್ಮಾಣ ಮಾಡಲು ಅಮೆರಿಕ ಹೋಗಬಾರದೆಂದು ಒತ್ತಾಯ ಮಾಡಿದರು. ಅಮೆರಿಕ ರಾಷ್ಟ್ರಗಳ ಒಕ್ಕೂಟವನ್ನು ಸೇರಿದರೆ – ಮತ್ತೆ ಸದಸ್ಯ ರಾಷ್ಟ್ರಗಳಲ್ಲಿ ಯುದ್ಧ ಪ್ರಾರಂಭವಾದರೆ, ಆ ಗೋಜಲಿನಲ್ಲಿ

ಅಮೆರಿಕ ಸಿಕ್ಕಿಕೊಂಡು ನರಳಬೇಕಾಗುತ್ತದೆ ಎಂದು ವಾದಿಸಿದರು. ಸಾಮಾನ್ಯ ಪ್ರಜೆಗಳ ಅನುಮಾನ ಮತ್ತು ಆತಂಕಗಳನ್ನು ರಿಪಬ್ಲಿಕನ್ನರು ತಮ್ಮ ರಾಜಕೀಯ ಅನುಕೂಲಕ್ಕೆ ಉಪಯೋಗಿಸಿಕೊಂಡರು.

ವರ್‌ಸಾಯ್ ಕರಾರನ್ನು ಅಂಗೀಕರಿಸದಂತೆ ಮಾಡಲು ಎರಡು ಪಂಗಡಗಳು ಕಾರಣ: 'ರಾಜಿ ಮಾಡಿಕೊಳ್ಳಲಾರದವರು' (the Irreconcilables). ಈ ಪಂಗಡದಲ್ಲಿ ಮುಖ್ಯರಾದವರು – ಹೈರಾಂ ಜಾನ್‌ಸನ್, ವಿಲಿಯಂ ಬೋರ (William Borah) ಮತ್ತು ಲಾಫೊಲಿಯೆ (La Follette). ಇವರು ವರ್‌ಸಾಯ್ ಕರಾರನ್ನು ಸಂಪೂರ್ಣವಾಗಿ ನಿರಾಕರಿಸಿದರು. 'ಪರಿಮಿತಿಯವರು' (the Reservationists) – ಈ ಪಂಗಡ ಹೆನ್ರಿ ಕೆಬಟ್ ಲಾಡ್ಜ್‌ನ ಅನುಯಾಯಿಗಳಿಂದ ಕೂಡಿತ್ತು. ಇವರು ಮೂಲ ಕರಾರನ್ನು ತಿದ್ದುಪಡಿ ಮಾಡಿ ಷರತ್ತುಗಳನ್ನು ಮಿತಗೊಳಿಸಿದರು.

ಸೆನೆಟ್ ಮೂಲಕ ಕರಾರನ್ನು ತಿದ್ದಿ ತನ್ನ ನಿಯಮಗಳಿಗೆ ವಿರುದ್ಧವಾದ ಅಂಶಗಳನ್ನು ಸೇರಿಸಿ ಷರತ್ತುಗಳನ್ನು ಮಿತಗೊಳಿಸಿದ್ದನ್ನು ವಿಲ್ಸನ್ ಸಹಿಸದಾದನು. ಈ ತಿದ್ದುಪಡಿಗಳಿಂದ ತೀವ್ರ ಅಸಮಾಧಾನಗೊಂಡ ಅವನು ತಿದ್ದುಪಡಿಯಾದ ಕರಾರಿನ ವಿರುದ್ಧವಾಗಿ ಮತ ಚಲಾಯಿಸುವಂತೆ ತನ್ನ ಅನುಯಾಯಿಗಳಿಗೆ ನಿರ್ದೇಶಿಸಿದನು. ವಿಲ್ಸನ್ ತನ್ನ ಧ್ಯೇಯ ಮತ್ತು ಧೋರಣೆಗಳಿಗಾಗಿ ಹೋರಾಟ ನಡೆಸಲು ನಿರ್ಧರಿಸಿ ನೇರವಾಗಿ ಪ್ರಜೆಗಳನ್ನು ಸಂಪರ್ಕಿಸಿ ಅವರಿಗೆ ತನ್ನ ಹೋರಾಟವನ್ನು ಮನದಟ್ಟುಮಾಡುವ ಪರಿಶ್ರಮದ ಕಾರ್ಯವನ್ನು ಕೈಗೊಂಡನು. ಇದರಿಂದಾಗಿ ಅವನ ದೇಹಸ್ಥಿತಿ ತೀವ್ರವಾಗಿ ಕ್ಷೀಣಿಸಿತು. ೧೯೧೯ರ ಸೆಪ್ಟೆಂಬರ್ ೨೫ರಂದು ಕೊಲರಾಡೋ ಸಂಸ್ಥಾನದ ಪುಬ್ಲೊ (Pueblo) ಎಂಬಲ್ಲಿ ವಿಲ್ಸನ್ ಭಾಷಣ ಮಾಡಿದ ನಂತರ ಕುಸಿದು ಬಿದ್ದನು. ತಕ್ಷಣ ಅವನನ್ನು ವಾಷಿಂಗ್‌ಟನ್‌ಗೆ ಸಾಗಿಸಲಾಯಿತು. ಕೆಲವು ದಿನಗಳ ನಂತರ ಅವನಿಗೆ ಲಕ್ವ ಹೊಡೆದು ದೇಹದ ಎಡಭಾಗ ನಿಶ್ಚೇಷ್ಟವಾಯಿತು. ಎರಡು ವಾರಗಳವರೆಗೆ ಅವನು ಸಾವಿನ ಅಂಚಿನಲ್ಲಿದ್ದನು. ಆರು ತಿಂಗಳ ಕಾಲ ಏಕಾಂತದಲ್ಲಿದ್ದಾಗ ಅವನಿಗೆ ಯಾರ ಸಂಪರ್ಕವೂ ಇರಲಿಲ್ಲ. ಈ ಅವಕಾಶವನ್ನು ಉಪಯೋಗಿಸಿಕೊಂಡು ಹೆನ್ರಿ ಕೆಬಟ್ ಲಾಡ್ಜ್‌ನು ಮೂಲ ಕರಾರಿಗೆ ತಾನು ಮಾಡಿದ ಪರಿಮಿತಿಗಳನ್ನು ಸೆನೆಟ್ ಅಂಗೀಕರಿಸುವಂತೆ ಮಾಡಿದನು.

೧೯೨೧ರಲ್ಲಿ ಅಮೆರಿಕ ಜರ್ಮನಿಯೊಡನೆ ಶಾಂತಿ ಕರಾರನ್ನು ಮಾಡಿಕೊಂಡಿತು. ಈ ಮಸೂದೆಯನ್ನು ಕಾಂಗ್ರೆಸ್ ಮತ್ತು ಸೆನೆಟ್ ಜಂಟಿ ನಿರ್ಣಯದಿಂದ ಅಂಗೀಕರಿಸಿದವು. ನಂತರ ಅಮೆರಿಕ ಆಸ್ಟ್ರಿಯ ಮತ್ತು ಹಂಗೆರಿ ರಾಷ್ಟ್ರಗಳೊಡನೆ ಪ್ರತ್ಯೇಕ ಶಾಂತಿ ಕರಾರುಗಳನ್ನು ಮಾಡಿಕೊಂಡಿತು. ಇದನ್ನು ರಿಪಬ್ಲಿಕನ್ ಪಕ್ಷದ ಬಹುಮತವಿರುವ ಸೆನೆಟ್ ಸುಲಭವಾಗಿ ಅಂಗೀಕರಿಸಿತು. ❑

ಅಧ್ಯಾಯ – ೧೬

ಅಮೆರಿಕ–ಎರಡು ಮಹಾಯುದ್ಧಗಳ ನಡುವೆ

ಯುದ್ಧಾನಂತರದ ಅಮೆರಿಕ: ಅಸ್ಥಿರತೆ ಮತ್ತು ಆರ್ಥಿಕ ಸಮಸ್ಯೆಗಳು

ಜಾಗತಿಕ ಯುದ್ಧ ಮುಗಿದ ಮೇಲೆ ಅಮೆರಿಕದ ಪ್ರಜೆಗಳು ಸರ್ಕಾರದ ಹಿಡಿತದಿಂದ ತಪ್ಪಿಸಿಕೊಳ್ಳಲು ಹವಣಿಸುತ್ತಿದ್ದರು. ಯುದ್ಧಕಾಲದಲ್ಲಿ ಎಲ್ಲ ರೀತಿಯ ನಿರ್ಬಂಧಗಳನ್ನು ಅನುಭವಿಸಿ ಆ ಕಟ್ಟುನಿಟ್ಟು ಜೀವನದಿಂದ ಬಿಡುಗಡೆ ಹೊಂದಲು ಹಾತೊರೆಯುತ್ತಿದ್ದರು. ವರ್‌ಸಾಯ್ ಕರಾರು ಮತ್ತು ರಾಷ್ಟ್ರಗಳ ಒಕ್ಕೂಟ ಸ್ಥಾಪನೆಗೆ ನಡೆದ ವಾಗ್ವಾದ – ಇವೆಲ್ಲ ಅಮೆರಿಕನ್ನರಿಗೆ ಭ್ರಮನಿರಸನಗೊಳಿಸಿದ್ದವು. ಪ್ರಪಂಚದ ಉಸ್ತುವಾರಿಯನ್ನು ಅಮೆರಿಕ ವಹಿಸಿಕೊಳ್ಳುವುದನ್ನು ಜನ ಸಹಿಸಲಿಲ್ಲ. ಪರಿಣಾಮವಾಗಿ ಅಂತರರಾಷ್ಟ್ರೀಯ ರಾಜಕೀಯದಲ್ಲಿ ವಿಲ್ಸನ್‌ನ ಆದರ್ಶವಾದಿ ತತ್ವ ಮತ್ತು ಅಮೆರಿಕದ ಆಂತರಿಕ ಸಮಸ್ಯೆಗಳಿಗೆ ಪ್ರಗತಿಶೀಲ ಪರಿಹಾರಗಳ ಬಗ್ಗೆ ವ್ಯಾಪಕವಾದ ವಿರೋಧ ತೋರಿಬಂತು. ಬಹುತೇಕ ಅಮೆರಿಕನ್ನರು ಹಿಂದಿನ ಕಾಲದ ಆರ್ಥಿಕ ವ್ಯವಸ್ಥೆಗೆ – ಅನಿಯಂತ್ರಿತ ಉದ್ಯಮಕ್ಕೆ (free enterprise) – ಹಿಂತಿರುಗಲು ಹಾತೊರೆದರು.

ಜನರ ಇಂಗಿತವನ್ನು ಅರಿತ ಸರ್ಕಾರ ಯುದ್ಧಕಾಲದಲ್ಲಿ ಜಾರಿಗೆ ತಂದಿದ್ದ ಎಲ್ಲ ಯೋಜನೆಗಳನ್ನು ಇದ್ದಕ್ಕಿದ್ದ ಹಾಗೆ ರದ್ದುಗೊಳಿಸಿತು. ಶಾಂತಿ ಸ್ಥಾಪನೆಯಾಗಿ ವರ್ಷ ಮುಗಿಯುವುದರೊಳಗೆ ಯೂರೋಪಿನಲ್ಲಿದ್ದ ಎಲ್ಲ ಸೈನ್ಯವನ್ನು ವಾಪಸ್ಸು ಕರೆಸಿಕೊಂಡು ಸೈನಿಕರನ್ನು ಅವರವರ ಹುದ್ದೆಗಳಿಂದ ವಜಾ ಮಾಡಲಾಯಿತು. ಯುದ್ಧಕಾಲದಲ್ಲಿ ಜಾರಿಯಲ್ಲಿದ್ದ ಎಲ್ಲ ನಿಯಂತ್ರಣಗಳನ್ನೂ ತೆಗೆದುಹಾಕಲಾಯಿತು. ಬದಲಾದ ಪರಿಸ್ಥಿತಿಗೆ ಖಾಸಗಿ ಉದ್ಯಮಗಳು ಸುಲಭವಾಗಿ ಹೊಂದಿಕೊಳ್ಳುತ್ತವೆ ಎನ್ನುವ ಭರವಸೆಯಿಂದ ಸರ್ಕಾರ ಯುದ್ಧಕಾಲದಲ್ಲಿ ಗುತ್ತಿಗೆ ಕೊಟ್ಟ ಕೆಲಸಗಳನ್ನೆಲ್ಲ ನಿಲ್ಲಿಸಲಾಯಿತು. ಹಾಗೆ ಮಾಡುವ ಮೊದಲು ಯುದ್ಧಕಾಲದ ಕಾರ್ಖಾನೆಗಳನ್ನು ಬೇರೆ ವಸ್ತುಗಳ ಉತ್ಪಾದನೆಗೆ ತಕ್ಕಂತೆ ಮಾರ್ಪಾಡು ಮಾಡಲಿಲ್ಲ. ಆ ಕಾರ್ಖಾನೆಗಳ ಕೆಲಸಗಾರರು ನಿರುದ್ಯೋಗಿಗಳಾದರು. ಯುದ್ಧದಿಂದ ಹಿಂತಿರುಗಿದ ಸೈನಿಕರನ್ನು ಸಾರ್ವಜನಿಕ ಯೋಜನೆಗಳಲ್ಲಿ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ವಿಲ್ಸನ್ ಮಂಡಿಸಿದ ಮಸೂದೆಯನ್ನು ಕಾಂಗ್ರೆಸ್ ನಿರಾಕರಿಸಿತು. ಅಮೆರಿಕದ ಪಶ್ಚಿಮ ಪ್ರದೇಶಗಳಲ್ಲಿ ಕಾಡುಮೇಡುಗಳನ್ನು ಸಾಗುವಳಿಗೆ ಯೋಗ್ಯ ಮಾಡುವ ಯೋಜನೆಯಲ್ಲಿ ಯುದ್ಧದಿಂದ ಹಿಂದಿರುಗಿದ ಯೋಧರಿಗೆ ಉದ್ಯೋಗ

ಅವಕಾಶಗಳನ್ನು ಕಲ್ಪಿಸಿಕೊಡಬೇಕು ಎನ್ನುವ ಯೋಜನೆಯನ್ನೊಳಗೊಂಡ ವಿಲ್ಸನ್ ಮಂಡಿಸಿದ ಮಸೂದೆಯನ್ನು ಕಾಂಗ್ರೆಸ್‌ನಲ್ಲಿ ಸೋಲಿಸಲಾಯಿತು.

ಯುದ್ಧದಿಂದ ಅಮೆರಿಕನ್ ಉದ್ದಿಮೆಗಾರರು ಅಪಾರ ಲಾಭ ಗಳಿಸಿದ್ದರು. ತಾಂತ್ರಿಕ ಪ್ರಗತಿಯಿಂದಾಗಿ ಉತ್ಪಾದನೆ ಹೆಚ್ಚಿತ್ತು. ಇದು ಖಾಸಗಿ ಉದ್ಯಮಗಳ ಹೆಚ್ಚಳಕ್ಕೆ ಕಾರಣ ವಾಗಿತ್ತು. ಇದರಿಂದ ಸರ್ಕಾರದ ನಿಯಂತ್ರಣಗಳಲ್ಲಿ ಜನರಿಗೆ ನಂಬಿಕೆ ಇಲ್ಲ ದಂತಾಯಿತು. ಯುದ್ಧಕಾಲದಲ್ಲಿ ವಿಜ್ಞಾನ ಮತ್ತು ಯಂತ್ರಜ್ಞಾನ/ವಿದ್ಯೆ (technology) ತೀವ್ರಗತಿಯಲ್ಲಿ ಮುಂದುವರೆದವು. ಅವು ಸೃಷ್ಟಿಸಿದ ಅದ್ಭುತ ಆಯುಧಗಳು, ವಾಹನಗಳು ಮತ್ತು ಸಂಪರ್ಕ ವ್ಯವಸ್ಥೆ ಜನರನ್ನು ಬೆರಗುಗೊಳಿಸಿದವು. ಕೈಗಾರಿಕೋದ್ಯಮಿಗಳು ಜನರ ಗೌರವಕ್ಕೆ ಪಾತ್ರರಾದರು. ಉದ್ದಿಮೆಗಾರರು ರಾಷ್ಟ್ರವೀರರೆನಿಸಿಕೊಂಡರು. ಆರ್ಥಿಕ ಯಶಸ್ಸನ್ನು ಜನರು ಹೊಗಳಿ ಕೊಂಡಾಡಿದರು.

ರೈಲ್ವೆ ಮಾರ್ಗಗಳ ನಿಯಂತ್ರಣವನ್ನು ಸರ್ಕಾರ ಮುಂದುವರಿಸಿಕೊಂಡು ಹೋಗುವು ದರ ಬಗ್ಗೆ ಚರ್ಚೆ ನಡೆಯಿತು. ರೈಲ್ವೆ ಕಂಪನಿಗಳು ಖಾಸಗಿ ನಿಯಂತ್ರಣಕ್ಕಾಗಿ ಒತ್ತಾಯ ಪಡಿಸಿದವು. ಆದರೆ ರೈಲ್ವೆ ಕಾರ್ಮಿಕರು ಸರ್ಕಾರಿ ನಿಯಂತ್ರಣ ಯುದ್ಧಕಾಲದಲ್ಲಿದ್ದಂತೆಯೆ ಮುಂದುವರಿಯುವಂತೆ ಆಗ್ರಹ ಪಡಿಸಿದರು. ೧೯೨೦ರಲ್ಲಿ ಕಾಂಗ್ರೆಸ್ 'ಎಸ್ಚ್-ಕಮ್ಮಿನ್ಸ್ ಸಾರಿಗೆ ಕಾಯಿದೆ ' (Esch-Cummins Act) ಮೂಲಕ ರೈಲ್ವೆ ಮಾರ್ಗಗಳನ್ನು ಖಾಸಗಿ ನಿಯಂತ್ರಣಕ್ಕೆ ಒಪ್ಪಿಸಿತು. ಆದರೆ ಸರ್ಕಾರ ಖಾಸಗಿ ಕಂಪನಿಯ ವ್ಯವಹಾರಗಳ ಮೇಲ್ವಿಚಾರಣೆಯನ್ನು ಬಿಗಿಗೊಳಿಸಿತು. ಮುಂದಾಲೋಚನೆಯಿಲ್ಲದೆ ಜಾರಿಗೆ ತಂದ ಈ ಎಲ್ಲ ಬದಲಾವಣೆಗಳು ರಾಷ್ಟ್ರದ ಆರ್ಥಿಕ ಪರಿಸ್ಥಿತಿಯನ್ನು ಹದಗೆಡಿಸಿದವು. ೧೯೧೯ರ ಪ್ರಾರಂಭದಲ್ಲಿ ಆರ್ಥಿಕ ಮುಗ್ಗಟ್ಟು ತಲೆದೋರಿತು. ಯುದ್ಧಕಾಲದಲ್ಲಿ ತೆರೆದ ಕೈಗಾರಿಕೆಗಳನ್ನು ಯುದ್ಧಾನಂತರ ಇದ್ದಕ್ಕಿದ್ದಂತೆ ಮುಚ್ಚಿದ್ದರಿಂದ ಮತ್ತು ಯುದ್ಧರಂಗದಿಂದ ವಾಪಸ್ಸಾದ ಸೈನಿಕರು ಬೇರೆ ಕೆಲಸಗಳನ್ನು ಹುಡುಕಬೇಕಾಗಿದ್ದರಿಂದ ವ್ಯಾಪಕವಾದ ನಿರುದ್ಯೋಗ ಸಮಸ್ಯೆ ಉಂಟಾಯಿತು. ಯುದ್ಧಕಾಲದಲ್ಲಿ ಜಾರಿಗೆ ತಂದ ಅಗತ್ಯವಸ್ತುಗಳ ಮೇಲಿನ ನಿಯಂತ್ರಣವನ್ನು ಇದ್ದಕ್ಕಿದ್ದಂತೆ ತೆಗೆದುಹಾಕಿದ್ದರಿಂದ ವಸ್ತುಗಳ ಬೆಲೆ ವಿಪರೀತ ಏರಿತು. ಇದು ಸಾರ್ವಜನಿಕರನ್ನು ಕಷ್ಟಗಳಿಗೆ ಗುರಿ ಮಾಡಿದುದೆ ಅಲ್ಲದೆ ಮಧ್ಯಮವರ್ಗದ ಜನರು ಹೆಚ್ಚಿನ ವೇತನಕ್ಕಾಗಿ ಮುಷ್ಕರ ಹೂಡಿದ್ದ ಕಾರ್ಮಿಕರನ್ನು ವಿರೋಧಿಸುವಂತೆ ಮಾಡಿತು.

೧೯೧೯ರಲ್ಲಿ ದೇಶದಾದ್ಯಂತ ಕಾರ್ಮಿಕರ ಮುಷ್ಕರ ಜನರನ್ನು ಕೆರಳಿಸಿ, ಕಾರ್ಮಿಕರ ಮೇಲೆ ಹಲ್ಲೆ ಮಾಡಲು ಪ್ರಚೋದನೆ ನೀಡಿತು. ಬಹುತೇಕ ಅಮೆರಿಕನ್ನರು ಮುಷ್ಕರಗಳನ್ನು ವಿನಾಶಕಾರಿ ಕೃತ್ಯಗಳೆಂದು ಭಾವಿಸಿದ್ದರು. ಇದಕ್ಕೆ ಕಾರಣ ಆ ವರ್ಷದ ಫೆಬ್ರವರಿ ತಿಂಗಳಲ್ಲಿ ಸಿಯಾಟ್ಲ್ (Seattle) ನಗರದಲ್ಲಿ ನಡೆದ ಮುಷ್ಕರ ಕಮ್ಯೂನಿಸ್ಟರಿಂದ

ಪ್ರಭಾವಿತಗೊಂಡಿತ್ತು ಎನ್ನುವ ಸುದ್ದಿ ಜನಜನಿತವಾಗಿತ್ತು. ಸೆಪ್ಟೆಂಬರ್ ತಿಂಗಳಲ್ಲಿ ಉಕ್ಕಿನ ಕಾರ್ಖಾನೆ ಕೆಲಸಗಾರರು ಮುಷ್ಕರ ಹೂಡಿದರು. ಎಂಟು ಗಂಟೆಗಳ ಕೆಲಸದ ಅವಧಿ, ವಾರಕ್ಕೆ ಆರು ಕೆಲಸದ ದಿನಗಳು, ಉತ್ತಮಮಟ್ಟದ ಜೀವನ ನಡೆಸಲು ಸಾಧ್ಯವಾಗುವಂತಹ ವೇತನ ಮತ್ತು ಕಾರ್ಮಿಕ ಒಕ್ಕೂಟವನ್ನು ಕಾರ್ಮಿಕರ ಪ್ರತಿನಿಧಿ ಎಂದು ಮನ್ನಣೆ ನೀಡುವುದು – ಇವು ಮುಷ್ಕರ ಹೂಡಿದ ಕಾರ್ಮಿಕರ ಬೇಡಿಕೆಗಳಾಗಿದ್ದವು. ಆದರೆ ಸಂಯುಕ್ತ ಸಂಸ್ಥಾನಗಳ ಉಕ್ಕಿನ ಕಂಪನಿ (US Steel) ಕಾರ್ಮಿಕರ ಒಕ್ಕೂಟದೊಡನೆ ಸಂಧಾನ ನಡೆಸಲು ನಿರಾಕರಿಸಿತು. ಇದು ಇಂಡಿಯಾನ ಸಂಸ್ಥಾನದ ಗ್ಯಾರಿ (Gary) ಎಂಬಲ್ಲಿ ಹಿಂಸಾಚಾರಗಳು ನಡೆಯಲು ಕಾರಣವಾಯಿತು. ಹಿಂಸಾಚಾರಕ್ಕೆ ಕಮ್ಯೂನಿಸ್ಟ್ ಪ್ರಚೋದಕರೇ ಕಾರಣ ಎಂದು ಸುದ್ದಿ ಹಬ್ಬಿಸಿದರು.

ಕಾರ್ಮಿಕರ ಒಕ್ಕೂಟದ ಧ್ಯೇಯಕ್ಕೆ ಧಕ್ಕೆ ತಂದ ಘಟನೆ ಎಂದರೆ ೧೯೧೯ರ 'ಬಾಸ್ಟನ್ ಪೊಲೀಸ್ ಮುಷ್ಕರ'. ಪೊಲೀಸ್ ಕಮಿಷನರ್ ಪೊಲೀಸರನ್ನು ಅಮೆರಿಕದ ಕಾರ್ಮಿಕರ ಒಕ್ಕೂಟ (American Federation of Labor- A F of L) ಸೇರುವುದನ್ನು ಬಹಿಷ್ಕರಿಸಿದ್ದನ್ನು ಪೊಲೀಸರು ವಿರೋಧಿಸಿದರು. ಇದಕ್ಕಾಗಿ ಕಮಿಷನರ್ ಅವರಲ್ಲಿ ೧೯ ಜನರನ್ನು ತಾತ್ಕಾಲಿಕವಾಗಿ ಕೆಲಸದಿಂದ ವಜಾ ಮಾಡಿದನು. ಕೂಡಲೆ ಪೂರ್ತಿ ಪೊಲೀಸ್ ಪಡೆ ಮುಷ್ಕರ ಹೂಡಿತು. ಇದರಿಂದಾಗಿ ನಗರ ಜೀವನ ಅಸ್ತವ್ಯಸ್ತಗೊಳ್ಳುತ್ತದೆ ಎಂದು ಬಾಸ್ಟನ್ ನಾಗರಿಕರು ಗಾಬರಿಗೊಂಡರು. ಪತ್ರಿಕೆಗಳು ಈ ಮುಷ್ಕರ ಕಮ್ಯೂನಿಸ್ಟರು ಪ್ರಚೋದಿಸಿದ್ದು ಎಂಬ ಸುಳ್ಳನ್ನು ಪ್ರಚಾರಮಾಡಿದರು. ನಗರಪಾಲಕ (Mayor) ಸಂಸ್ಥಾನದ ಸೇನಾಪಡೆಗಳನ್ನು ಕರೆಸಿ ಮುಷ್ಕರವನ್ನು ಮೂರು ದಿನಗಳಲ್ಲಿ ಹತ್ತಿಕ್ಕಿದನು. ನಂತರ ನಗರಪಾಲಕ ಮತ್ತಷ್ಟು ಸೈನ್ಯವನ್ನು ಕರೆಸಿ ಕಾರ್ಮಿಕರ ನಾಯಕ ಸಾಮ್ಯುಯಲ್ ಗಾಂಪರ್ಸ್ (Samuel Gompers) ನಿಗೆ 'ಪ್ರಜಾಹಿತಕ್ಕೆ ವಿರುದ್ಧವಾಗಿ ಮುಷ್ಕರ ಹೂಡುವ ಹಕ್ಕು ಯಾರಿಗೂ, ಎಲ್ಲಿಯೂ, ಯಾವಕಾಲದಲ್ಲಿಯೂ ಇಲ್ಲ' ಎಂದು ಸಂದೇಶ ಕಳುಹಿಸಿ ಎಚ್ಚರಿಕೆ ನೀಡಿದನು.

ಯುದ್ಧಾನಂತರ ಸಾಮಾಜಿಕ ಭದ್ರತೆಯನ್ನು ನಿರೀಕ್ಷಿಸಿದ್ದ ನಾಗರಿಕರು ಈ ಮುಷ್ಕರಗಳಿಂದ ಅಧೀರರಾಗಿ ಪರಕೀಯತೆ ಬೆಳೆಸಿಕೊಂಡರು. ಔದ್ಯೋಗಿಕ ನಿರ್ವಹಣಕಾರರು (industrial management)ವಸ್ತುಗಳ ವಿಪರೀತ ಬೆಲೆ ಏರಿಕೆ ಕಾರ್ಮಿಕರ ಕನಿಷ್ಠ ವೇತನದ (minimum wage) ಹೆಚ್ಚಳದಿಂದ ಉಂಟಾಯಿತೆಂದು ಪ್ರಚಾರ ಮಾಡಿದರು. ಅಮೆರಿಕದ ಆದರ್ಶ ವ್ಯಕ್ತಿಸ್ವಾತಂತ್ರ್ಯವೇ ಹೊರತು ಒಕ್ಕೂಟವಲ್ಲ ಎಂದು ಪ್ರತಿಪಾದಿಸಿದರು. ಇನ್ನೂ ಮುಂದುವರಿದು ಒಕ್ಕೂಟದ ಬೇಡಿಕೆಗಳಲ್ಲಿ ಕಾರ್ಮಿಕರ ಒಕ್ಕೂಟವನ್ನು ಹೊಕ್ಕ ಹೊರದೇಶಗಳ ಉಗ್ರಗಾಮಿಗಳ ಕೈವಾಡವಿದೆ ಎಂದು ಪ್ರಚುರ ಪಡಿಸಿದರು. ಇದು ಜನರ ಮನಸ್ಸಿಗೆ ನಾಟಿತು, ಏಕೆಂದರೆ ರಷ್ಯಾದಲ್ಲಿ ಕ್ರಾಂತಿ ನಡೆಸಿದ

ಬೊಲ್‌ಷೆವಿಕರು ಕಮ್ಯೂನಿಸಂ ಜಗಜ್ಜೇತವಾಗುತ್ತದೆ ಎಂದು ಘೋಷಿಸಿದ್ದರು. ಆದ್ದರಿಂದ ಆ ಭಯ ಅಮೆರಿಕನ್ನರನ್ನು ಆವರಿಸಿಕೊಂಡು ಸ್ವರಕ್ಷಣೆಗಾಗಿ ಯಾವ ಸಾಮಾಜಿಕ ಮತ್ತು ಆರ್ಥಿಕ ಸುಧಾರಣಾ ಆಂದೋಳನವನ್ನಾಗಲಿ ಅದು ಅಂತರರಾಷ್ಟ್ರೀಯ ಕಮ್ಯೂನಿಸ್ಟರಿಂದ ಪ್ರಭಾವಿತಗೊಂಡಿರಬಹುದೆಂದು ಅನುಮಾನ ಪಡತೊಡಗಿದರು. ವಾಸ್ತವವಾಗಿ ಅಮೆರಿಕನ್ ಕಾರ್ಮಿಕರ ಒಕ್ಕೂಟ ೧೯೧೯ರಲ್ಲಿ ರಚಿತವಾದ ಅಮೆರಿಕನ್ ಕಮ್ಯೂನಿಸ್ಟ್ ಪಕ್ಷಕ್ಕೆ ತೀವ್ರ ವಿರೋಧಿಯಾಗಿತ್ತು. ಬಂಡವಾಳಶಾಹಿ ಸರ್ಕಾರವನ್ನು ಮತ್ತು ವ್ಯವಸ್ಥೆಯನ್ನು ಬಲಪ್ರಯೋಗದಿಂದ ಉಚ್ಚಾಟನೆ ಮಾಡಲು ಕಮ್ಯೂನಿಸ್ಟರು ಕರೆಕೊಟ್ಟರು. ಜಗತ್ತಿನ ಉಗ್ರಗಾಮಿ ಕಾರ್ಮಿಕರು ಮಾತ್ರ ಕಮ್ಯೂನಿಸ್ಟರಾದರು. ೧೯೦೫ರಲ್ಲಿ ಸ್ಥಾಪನೆಯಾದ ಜಾಗತಿಕ ಔದ್ಯೋಗಿಕ ಕಾರ್ಮಿಕರ ಪಕ್ಷಕ್ಕೆ (industrial workers of the world)ಪಶ್ಚಿಮ ಪ್ರಾಂತಗಳ ಗಣಿ ಕೆಲಸಗಾರರು, ನಾಟಾ ಕಡಿಯುವವರು, ಕೆಲಸದಿಂದ ಕೆಲಸಕ್ಕೆ ಹೋಗುವ ವಲಸೆ ವೃತ್ತಿಯವರು ಮತ್ತು ಕಸುಬು/ಕೌಶಲವಿಲ್ಲದವರು ಈ ಜಾಗತಿಕ ಪಕ್ಷದ ಸದಸ್ಯರಾಗಿದ್ದರು. ಕಾಲಕಾಲಕ್ಕೆ ಹಿಂಸಾಚಾರ, ಯಂತ್ರೋಪಕರಣಗಳನ್ನು ನಾಶಗೊಳಿಸುವುದು ಮುಂತಾದ ಕೃತ್ಯಗಳನ್ನೆಸಗಿದ ಈ ಪಕ್ಷ ಅಮೆರಿಕನ್ನರ ಆಕ್ರೋಶಕ್ಕೆ ಗುರಿಯಾಯಿತು.

ಉಗ್ರವಾದಿಗಳ ಭಯ ಆವರಿಸಿ ಅಮೆರಿಕನ್ನರು ಎಲ್ಲರನ್ನೂ ಅನುಮಾನಿಸ ತೊಡಗಿದರು. ಶಾಲಾ ಅಧ್ಯಾಪಕರು ತಾವು ರಾಷ್ಟ್ರನಿಷ್ಠೆಯುಳ್ಳವರು ಎಂದು ಪ್ರಮಾಣಪತ್ರಕ್ಕೆ ರುಜು ಹಾಕಬೇಕಾಗಿತ್ತು. ಅನುಮಾನಕ್ಕೊಳಗಾದ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕರನ್ನು ಕೆಲಸದಿಂದ ತೆಗೆದುಹಾಕುತ್ತಿದ್ದರು. ಪಠ್ಯಪುಸ್ತಕಗಳನ್ನು ದೋಷ ವಿಮರ್ಶೆಗೆ (censorship)ಒಳಪಡಿಸಿದರು. ಸಾಂಪ್ರದಾಯಿಕ ಆರ್ಥಿಕ ಅಭಿಪ್ರಾಯಗಳಿಗಿಂತ ಭಿನ್ನವಾದ ಅಭಿಪ್ರಾಯ ಹೊಂದಿದ್ದವರಿಗೆ ಕಿರುಕುಳ ಕೊಡುತ್ತಿದ್ದರು ಅಥವಾ ಕೆಲಸದಿಂದ ತೆಗೆದುಹಾಕುತ್ತಿದ್ದರು. ಕೆಲವು ಸಂಸ್ಥಾನಗಳಲ್ಲಿ ಉಗ್ರಗಾಮಿಗಳ ವಿರುದ್ಧ ಕಾಯಿದೆಗಳನ್ನು ಜಾರಿಗೆ ತರಲಾಯಿತು; ಕೆಂಪು ಧ್ವಜ ಹಾರಿಸುವುದನ್ನು ಅಪರಾಧವೆಂದು ಪರಿಗಣಿಸಲಾಯಿತು. ನ್ಯೂಯಾರ್ಕ್ ಸಂಸ್ಥಾನದ ನ್ಯಾಯವಿಧಾಯಕ ಸಭೆಯ ಐದು ಸಮಾಜವಾದಿ ಸದಸ್ಯರನ್ನು ಯಾವ ದೋಷರೋಪಣೆ ಇಲ್ಲದಿದ್ದರೂ ಸಹ ಸಭೆಯಿಂದ ಉಚ್ಚಾಟನೆ ಮಾಡಿದರು. ಸಮಾಜವಾದಿ ಪಕ್ಷವನ್ನು ನ್ಯಾಯಾಲಯ ಅಂಗೀಕರಿಸಿತ್ತು ಎನ್ನುವ ಅಂಶವನ್ನು ಕಡೆಗಣಿಸಲಾಯಿತು.

೧೯೧೯ರ ಏಪ್ರಿಲ್ ತಿಂಗಳಲ್ಲಿ ಅನೇಕ ಪ್ರಮುಖ ಅಮೆರಿಕನ್ ಪ್ರಜೆಗಳಿಗೆ – ಜಾನ್ ರಾಕ್‌ಫೆಲರ್, ನ್ಯಾಯಾಧೀಶ ಆಲಿವರ್ ವೆಂಡೆಲ್ ಹೋಮ್ಸ್ ಮುಂತಾದವರಿಗೆ – ಅಂಚೆಯ ಮೂಲಕ ಅಸ್ಫೋಟಕಗಳನ್ನು ಕಳುಹಿಸಿದ ಸುದ್ದಿ, ಮೊದಲೇ ಗಾಬರಿಗೊಂಡಿದ್ದ ಜನರಲ್ಲಿ ಮತ್ತಷ್ಟು ಭಯ ಹೆಚ್ಚಿಸಿತು. ಅಂಚೆ ಇಲಾಖೆಯವರು ಒಂದನ್ನು ಬಿಟ್ಟು ಬಾಕಿ ಎಲ್ಲ ಅಸ್ಫೋಟಕಗಳನ್ನು ಮಧ್ಯದಲ್ಲಿಯೆ ಪತ್ತೆ ಹಚ್ಚಿ ನಿಷ್ಕ್ರಿಯಗೊಳಿಸಿದರು.

ಇವರ ಶೋಧನೆಗೆ ಸಿಕ್ಕದೆ ಹೋದ ಒಂದು ಆಸ್ಫೋಟಕ ವಸ್ತು ಅಮೆರಿಕದ ವಾಣಿಜ್ಯ ಕೇಂದ್ರವಾದ ವಾಲ್‌ಸ್ಟ್ರೀಟ್ ಸಂಸ್ಥೆಯೊಂದರಲ್ಲಿ ಸಿಡಿದು ೨೮ ಜನರು ಸತ್ತು ಎರಡು ಮಿಲಿಯನ್‌ಗಳಿಗಿಂತ ಹೆಚ್ಚು ನಷ್ಟ ಉಂಟುಮಾಡಿತು. ಇದರ ಪರಿಣಾಮವಾಗಿ ಬಹುತೇಕ ಅಮೆರಿಕನ್ನರು ಹೊರದೇಶದ ಎಲ್ಲರನ್ನೂ ಮತ್ತು ಎಲ್ಲವನ್ನೂ ತೀವ್ರಗಾಮಿಗಳೆಂದು ಅನುಮಾನಪಡುವಂತಾಯಿತು. ಅನ್ಯದೇಶೀಯರನ್ನು ವಿನಾಕಾರಣ ಸೆರೆಹಿಡಿಯುವುದು, ದೇಶದಿಂದ ಉಚ್ಚಾಟನೆ ಮಾಡುವುದು, ಬೆದರಿಕೆ ಹಾಕುವುದನ್ನು ಅನೇಕ ಸಂಸ್ಥಾನ ಸರ್ಕಾರಗಳೇ ಜಾರಿಗೆ ತಂದವು. ಫೆಡರಲ್ ಸರ್ಕಾರ ಕೂಡ ನ್ಯಾಯಾಂಗ ಸಚಿವನಾದ ಮಿಚ್ಚೆಲ್ ಪಾಮರ್‌ನ ನಿರ್ದೇಶನದಂತೆ ಅನ್ಯದೇಶೀಯರನ್ನು ಈ ಅನ್ಯಾಯಗಳಿಗೆ ಗುರಿಯಾಗಿಸಿತು.

ಅದೇ ವರ್ಷ ಜೆ.ಎಡ್ಗರ್ ಹೂವರ್ 'ಫೆಡರಲ್ ಬ್ಯೂರೊ ಆಫ್ ಇನ್‌ವೆಸ್ಟಿಗೇಷನ್' (F B I) ಸಂಸ್ಥೆಯ ನಿರ್ದೇಶಕನಾಗಿ ನೇಮಕಗೊಂಡನು. ಪಾಮರ್ ಮತ್ತು ಹೂವರ್ ಜೊತೆಗೂಡಿ ತೀವ್ರಗಾಮಿಗಳೆಂದು ಪರಿಗಣಿಸಲಾದ ಜನರ ಸಭೆಗಳ ಮೇಲೆ ಮತ್ತು ಅವರ ಮನೆಗಳ ಮೇಲೆ ದಾಳಿ ನಡೆಸಿದರು. ೧೯೨೦ರ ಜನವರಿ ತಿಂಗಳಲ್ಲಿ ನಡೆಸಿದ ದೊಡ್ಡ ಪ್ರಮಾಣದ ದಾಳಿಯಲ್ಲಿ ೪೦೦೦ ಜನರನ್ನು ೩೩ ಪಟ್ಟಣಗಳಲ್ಲಿ ಸೆರೆಹಿಡಿಯ ಲಾಯಿತು. ಹೀಗಾದವರಲ್ಲಿ ಬಹುಮಂದಿಯನ್ನು ಅವರವರ ಮನೆಗಳಲ್ಲೇ ನ್ಯಾಯಾಲಯುದ ಯಾವ ಹುಕುಂ (warrant) ಇಲ್ಲದೆ ಸೆರೆಹಿಡಿದು ತಂದು ಬಂದೀಖಾನೆಗಳಲ್ಲಿ ಕೂಡಿದರು. ಅವರಲ್ಲಿ ಕೆಲವು ನತದೃಷ್ಟರನ್ನು ದೇಶದಿಂದ ಉಚ್ಚಾಟನೆ (deportation) ಮಾಡಿದರು. ಮಿಕ್ಕವರ ಮೇಲಿನ ಆಪಾದನೆಗಳಿಗೆ ಯಾವ ಪುರಾವೆಗಳೂ ಇಲ್ಲದಿದ್ದ ಕಾರಣ ಅಧಿಕಾರಿಗಳು ಏನೂ ಮಾಡಲಾಗಲಿಲ್ಲ. ಕೊನೆ ಕೊನೆಗೆ ಪಾಮರ್‌ನ ಕಾರ್ಯಾಚರಣೆಗಳು ವಿಪರೀತಕ್ಕೆ ತಲುಪಿದವು. ೧೯೨೦ರ 'ಮೇ ದಿನಾಚರಣೆ'ಯ ದಿನ ಅಮೆರಿಕ ಸಂಯುಕ್ತ ಸಂಸ್ಥಾನಗಳ ಸರ್ಕಾರವನ್ನು ಉರುಳಿಸುವ ಪಿತೂರಿಯನ್ನು ಉಗ್ರಗಾಮಿ ಗಳು ಕೈಗೊಳ್ಳಲಿದ್ದಾರೆ ಎಂಬ ಎಚ್ಚರಿಕೆಯನ್ನು ಪಾಮರ್ ಪ್ರಚುರಪಡಿಸಿದನು. ಅದನ್ನು ತಪ್ಪಿಸಲು ರಾಷ್ಟ್ರರಕ್ಷಣಾದಳಗಳನ್ನು ಕರೆಸಲಾಯಿತು. ಆದರೆ ಅಂದು ಯಾವ ಘಟನೆಗಳು – ಆಸ್ಫೋಟನೆ, ಗುಂಡು ಹಾರಿಸುವುದು ಇತ್ಯಾದಿ – ನಡೆಯಲಿಲ್ಲ. ಪಾಮರನ ವರ್ತನೆ ಇದರಿಂದಾಗಿ ಹಾಸ್ಯಾಸ್ಪದವಾಗಿ ಕಂಡಿತು.

೧೯೨೦ರಲ್ಲಿ ಕಮ್ಯೂನಿಸ್ಟರ ಭಯ ಕಡಿಮೆಯಾಯಿತು. ಆದರೆ ತೀವ್ರಗಾಮಿ ತತ್ವಗಳ ಬಗ್ಗೆ ಅಸಹಿಷ್ಣುತೆ ೧೯೨೦ರ ದಶಕದ ಕೊನೆಯವರೆಗೂ ಮುಂದುವರಿಯಿತು. 'ಅಚ್ಚ ಅಮೆರಿಕನ್ ತತ್ವ' (nativism) ತಲೆ ಎತ್ತಿತು. ಅಚ್ಚ ಅಥವಾ ಅಪ್ಪಟ ಅಮೆರಿಕನ್ನರಲ್ಲ ದವರನ್ನು ಪಕ್ಷಪಾತ ವರ್ತನೆಗೆ ಗುರಿಪಡಿಸಿದರು. ಈ ತತ್ವದ ಆಧಾರದ ಮೇಲೆ ಹೊರದೇಶದಿಂದ ಬರುವ ವಲಸೆಗಾರರ ಸಂಖ್ಯೆಯನ್ನು ನಿಯಂತ್ರಿಸಿದರು. ೧೯೨೦ಕ್ಕೆ

ಮುಂಚೆ ಪೂರ್ವದೇಶೀಯರಿಗೆ (orientals) – ಹುಚ್ಚರು ಮತ್ತು ಕೈದಿಗಳಾಗಿದ್ದವರನ್ನು ಬಿಟ್ಟು – ಮತ್ತು ಇತರ ದೇಶಗಳ ವಲಸೆಗಾರರಿಗೆ ಪ್ರವೇಶ ದೊರೆಯುತ್ತಿತ್ತು. ವಲಸೆ ಬರುವವರ ಸಂಖ್ಯೆಯನ್ನು ಮಿತಗೊಳಿಸದೆ ಹೋದರೆ ತಮ್ಮ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದಿಲ್ಲವೆಂದು ಕಾರ್ಮಿಕ ಮುಖಂಡರು ಆರೋಪಿಸಿದರು. ಇದನ್ನು ಇತರ ಗುಂಪುಗಳೂ ಬೆಂಬಲಿಸಿದವು. ಆದ್ದರಿಂದ ಕಾಂಗ್ರೆಸ್ ೧೯೨೧ರಲ್ಲಿ ತುರ್ತು ಸಂಖ್ಯೆ ನಿಗದು ವ್ಯವಸ್ಥೆಯ ಕಾಯಿದೆಯನ್ನು (Emergency Quota Act) ಜಾರಿಗೆ ತಂದಿತು. ಈ ಕಾಯಿದೆ ಒಂದು ವರ್ಷದಲ್ಲಿ ಒಂದು ರಾಷ್ಟ್ರದಿಂದ ಬರುವ ವಲಸೆಗಾರರ ಸಂಖ್ಯೆಯನ್ನು ಆ ರಾಷ್ಟ್ರದಿಂದ ಹಿಂದೆ ೧೯೧೦ರಿಂದ ಬಂದು ಇಲ್ಲೇ ನೆಲಸಿರುವವರ ಸಂಖ್ಯೆಯ ಶೇಕಡಾ ಮೂರು ಭಾಗಕ್ಕೆ ಮಿತಗೊಳಿಸಿದರು. ೧೯೨೪ರಲ್ಲಿ ಜಾರಿಗೆ ಬಂದ 'ಹುಟ್ಟಿನ ದೇಶ ಆಧಾರಿತ ವಲಸೆ ನಿಯಂತ್ರಣ ಕಾಯಿದೆ' ಪ್ರತಿದೇಶದಿಂದ ಬರುವ ವಲಸೆಗಾರರ ಸಂಖ್ಯೆಯನ್ನು ಆ ದೇಶದಿಂದ ಬಂದು ೧೮೯೦ರಿಂದ ಇಲ್ಲೇ ನೆಲೆಸಿರುವವರ ಸಂಖ್ಯೆಯ ಶೇಕಡಾ ಎರಡು ಭಾಗಕ್ಕೆ ಮಿತಗೊಳಿಸಲಾಯಿತು. ೧೮೯೦ರ ದಶಕದಲ್ಲಿ ದಕ್ಷಿಣ ಮತ್ತು ಪೂರ್ವ ಯೂರೋಪಿಯನ್ ವಲಸೆಗಾರರ ಸಂಖ್ಯೆ ಬಹಳ ಕಡಿಮೆ ಇದ್ದುದರಿಂದ ೧೯೦೪ರ ಕಾಯಿದೆ ಜರ್ಮನಿ, ಸ್ಕಾಂಡಿನೇವಿಯ, ಐರ್ಲೆಂಡ್ ಮತ್ತು ಇಂಗ್ಲೆಂಡ್ ದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನ ಬರುವುದಕ್ಕೆ ಅವಕಾಶ ಮಾಡಿಕೊಟ್ಟಿತು. ಆ ದೇಶಗಳ ಜನಗಣತಿಯಲ್ಲಿ ಬಿಳಿಯರನ್ನು ಮಾತ್ರ ಸೇರಿಸಿದ್ದರಿಂದ ಏಷ್ಯಾ ಮತ್ತು ಆಫ್ರಿಕಾ ಖಂಡಗಳನ್ನು ಸಂಖ್ಯಾ ನಿಗದಿ ವ್ಯವಸ್ಥೆ (quota) ಗೆ ಸೇರಿಸಲಿಲ್ಲ.

ಅಮೆರಿಕದಲ್ಲಿ ಆಗುತ್ತಿದ್ದ ಮುಷ್ಕರಗಳು, ಆಸ್ಫೋಟನೆಗಳು, ಕಮ್ಯೂನಿಸಂ ಹರಡಬಹುದೆಂಬ ಭಯ, ವರ್ಣದ್ವೇಷ ಪ್ರಚೋದಿತ ಹಿಂಸಾಕೃತ್ಯಗಳು ಇವೆಲ್ಲ ದೇಶ ಒಂದು ಹೊಸಮಾರ್ಗ ಹಿಡಿದು ಹೋಗುತ್ತಿರುವಂತೆ ಮಾಡಿದವು. ಈ ಹೊಸಮಾರ್ಗ ಹಿಡಿದರೆ ಹಳೆಯ ಸಂಪ್ರದಾಯಸ್ಥ ವರ್ಗದವರಿಗೆ ಮಾರಕವಾಗಬಹುದೆಂಬ ಹೆದರಿಕೆ ಉಂಟಾಯಿತು. ವೈವಿಧ್ಯತೆ ಮತ್ತು ಬದಲಾವಣೆಗಳು ಬೇರೆ ಬೇರೆ ಭಾಷೆಗಳನ್ನಾಡುವ ವಲಸೆಗಾರರಿಂದ ತುಂಬಿರುವ ನಗರಗಳಲ್ಲಿ ಹುಟ್ಟಿ, ಇತರ ಕಡೆಗಳಿಗೆ ಹರಡಿಕೊಳ್ಳುತ್ತವೆ. ೧೯೨೦ರ ದಶಕದಲ್ಲಿ ಅವು ಹರಡದಂತೆ ತಡೆಹಿಡಿದು ಹಳೆಯ ಸಂಪ್ರದಾಯವನ್ನು ರಕ್ಷಿಸುವ ಸಲುವಾಗಿ ಜನರು ಅಮೆರಿಕನ್ ರಾಷ್ಟ್ರೀಯತೆಯನ್ನು 'ಅಪ್ಪಟ ಅಮೆರಿಕನ್ ತತ್ವ', ವರ್ಣದ್ವೇಷ ಮತ್ತು ಉಗ್ರ ಪ್ರಾಟೆಸ್ಟಂಟ್ ಮತಧರ್ಮಗಳೊಡನೆ ಸೇರಿಸಿ ಒಂದು ಮಾಡಿದರು. ಇದರಿಂದಾಗಿ ರಾಷ್ಟ್ರೀಯತೆಯ ಹೆಸರಿನಲ್ಲಿ ಯಾವ ದುಷ್ಕೃತ್ಯ ಮಾಡಿದರೂ ಅಡ್ಡಿಯಿಲ್ಲ ಎನ್ನುವ ಮನೋಭಾವ ಜನರಲ್ಲಿ ಬೆಳೆದಿತ್ತು. (ಇದನ್ನೇ ನೆಪ ಮಾಡಿಕೊಂಡು ಹೊರದೇಶಗಳಿಂದ ಬರುವ ವಲಸೆಗಾರರ ಸಂಖ್ಯೆಯಲ್ಲಿ ಖೋತಾ ಮಾಡಿದ್ದನ್ನು ಹಿಂದೆ ತಿಳಿಸಿದೆ.) ಹಳೆಯ ಸಂಪ್ರದಾಯ ಉಳಿಸಲು ಮತ್ತು ಗುಲಾಮಗಿರಿಯನ್ನು ಮುಂದುವರಿಸಲು ಹಾಗೂ ತಮ್ಮ ವರ್ಣಶ್ರೇಷ್ಠತೆಯನ್ನು ಎತ್ತಿಹಿಡಿಯಲು ರಾಷ್ಟ್ರೀಯತೆಯ ಸೋಗು

ಹಾಕಿಕೊಂಡು ಹುಟ್ಟಿದ ಪ್ರತಿಗಾಮಿ ಬಿಳಿಯರ ಕೂಟ ಕು ಕ್ಲಕ್ಸ್ ಕ್ಲಾನ್ (Ku Klux Klan). ಈ ಕ್ಲಾನ್ 'ಅಪ್ಪಟ ಅಮೆರಿಕನ್ ತತ್ವದ' ಇನ್ನೊಂದು ಮುಖ. ಈ ಕೂಟದ ಬೀಜಾಂಕುರವಾಗಿದ್ದು ಅಂತರ್ಯುದ್ಧದನಂತರದ ಪುನರ್‌ನಿರ್ಮಾಣದ ಕಾಲದಲ್ಲಿ. ಆ ಕೂಟದ ಮಾದರಿಯನ್ನು ಅನುಸರಿಸಿ ಕ್ಲಾನ್ ರಚನೆಗೊಂಡಿತ್ತಾದರೂ ಹಿಂದಿನ ಕೂಟ ಮತ್ತು ಪುನರುತ್ಥಾನಗೊಂಡ ಕ್ಲಾನ್‌ಗಳ ನಡುವೆ ಅನೇಕ ವ್ಯತ್ಯಾಸಗಳು ಕಂಡುಬರುತ್ತವೆ. ಹಿಂದೆ ಅದು ಬರಿ ಬಿಳಿಯರನ್ನು ಒಂದುಗೂಡಿಸುವ ಕೂಟವಾಗಿತ್ತು. ಅದರ ಹೊಸ ಅವತಾರವಾದ ಕ್ಲಾನ್ ನೂರಕ್ಕೆ ನೂರು (೧೦೦%) ಪರಿಶುದ್ಧ ಅಮೆರಿಕನತ್ವಕ್ಕೆ (Americanism) ಮೀಸಲಾದ ಬಿಳಿಯರ ತಂಡವಾಗಿತ್ತು. ಈ ತಂಡದ ಸದಸ್ಯತ್ವ ಅಮೆರಿಕದಲ್ಲಿ ಹುಟ್ಟಿ ಬೆಳೆದ ಬಿಳಿಯ ಪ್ರಾಟೆಸ್ಟಂಟರಿಗೆ ಮಾತ್ರ ಮೀಸಲಾಗಿತ್ತು. ಕ್ಲಾನ್ ಸ್ಥಾಪಕ ವಿಲಿಯಂ ಸೈಮನ್ಸ್ ಕೊಟ್ಟ ಎಚ್ಚರಿಕೆ: 'ಅಮೆರಿಕ ನಾನಾ ತರದ ಜನರ ಮತ್ತು ಸಂಸ್ಕೃತಿಗಳ ಕರಗುವ ಕಡಾಯಿಯಲ್ಲ (no melting pot); ಅದೊಂದು ಕಸದ ತೊಟ್ಟಿ. . .ಯಾವಾಗ ಪರದೇಶದಿಂದ ಬಂದವರ ಪ್ರವಾಹ ಮತದಾನ ಪೆಟ್ಟಿಗೆಗೆ ಹರಿದು ಅವರ ಮತಗಳು ನಮ್ಮ ಮತಗಳಿಂದ ಹೆಚ್ಚಾಗುತ್ತವೆಯೋ ಆಗ ನಿಮ್ಮ ಕುತ್ತಿಗೆಗಳು ಅವರ ಹಿಡಿತ ದಲ್ಲಿರುತ್ತವೆ.'

ಭ್ರಾತೃ ಸಂಘಗಳನ್ನು (Fraternities) ಸೇರಿ ಅವುಗಳನ್ನು ಪ್ರಚುರಗೊಳಿಸುವುದು ಸೈಮನ್ಸ್‌ನ ಹವ್ಯಾಸವಾಗಿತ್ತು. ಅವನು ಗುರುತು ಮರೆಮಾಚಲು ಬಿಳಿಯ ಮುಖವಾಡ ಮತ್ತು ನಿಲುವಂಗಿಗಳನ್ನು ತೊಟ್ಟವರ ಗುಂಪನ್ನು ೧೯೧೫ರ ಧನ್ಯವಾದ ಸಮರ್ಪಣದ ದಿನ (Thanksgiving Day) ಸಾಯಂಕಾಲ ಅಟ್ಲಾಂಟ ನಗರದ ಸಮೀಪದಲ್ಲಿರುವ ಕಲ್ಲು ಪರ್ವತ (Stone Mountain)ದ ನೆತ್ತಿಯ ಮೇಲೆ ಸೇರಿಸಿದ್ದನು. ಅಲ್ಲಿ ಪ್ರಜ್ವಲಿಸುತ್ತಿದ್ದ ಶಿಲುಬೆಯ ಬೆಳಕಿನಲ್ಲಿ ಅಗೋಚರ ಸಾಮ್ರಾಜ್ಯವನ್ನು (invisible empire) ಅರ್ಧ ಶತಮಾನದ ನಿದ್ರೆಯಿಂದ ಎಚ್ಚರಿಸಿ ಹೊಸ ಕಾರ್ಯ ಕೈಗೊಳ್ಳುವಂತೆ ಕರೆ ನೀಡಿದನು. ಕ್ಲಾನ್ ಹಳೆಯ ಕೂಟಕ್ಕೆ ಸ್ಮಾರಕದಂತಿದ್ದರೂ ಭ್ರಾತೃತ್ವದ ಸಂಘವಾಗಿ ಮಾರ್ಪಾಡು ಹೊಂದಿ, ದೀರ್ಘ ಆಚರಣೆಗಳು ಮತ್ತು ಗುಪ್ತ ಸಂಕೇತ ಪದ (pass-words) ಇವೆಲ್ಲದರ ಮೇಲಿನ ಹಕ್ಕನ್ನು ಸೈಮನ್ಸ್ ತನ್ನ ಹೆಸರಿನಲ್ಲಿ ಅಧಿಕೃತವಾಗಿ ಕಾಯ್ದಿರಿಸಿದನು.

೧೯೨೦ರ ಮುಂಚೆ ಕ್ಲಾನ್ ಯಶಸ್ಸು ಗಳಿಸಿರಲಿಲ್ಲ. ಎಡ್ವರ್ಡ್ ಯಂಗ್ ಕ್ಲಾರ್ಕ್ ಮತ್ತು ಎಲಿಜ಼ಬೆತ್ ಟೇಲರ್ ಎಂಬ ಉದ್ದಿಮೆ ಅಭಿವೃದ್ಧಿಕಾರರು ಕ್ಲಾನ್ ಪ್ರಚಾರ ಪಡಿಸಲು ವಿಶಿಷ್ಟ ಹಕ್ಕು ಪಡೆದಿದ್ದರು. ದೇಶದಾದ್ಯಂತ ಕ್ಲಾನ್ ಬಗ್ಗೆ ಪ್ರಚಾರ ಮಾಡಲು ಸದಸ್ಯತ್ವ ಪಡೆಯಲು ಕೊಡಬೇಕಾಗಿದ್ದ ಹತ್ತು ಡಾಲರ್ ಶುಲ್ಕದಲ್ಲಿ ಎಂಟು ಡಾಲರ್‌ಗಳು ಉದ್ದಿಮೆ ಅಭಿವೃದ್ಧಿಕಾರರಿಗೆ ಸೇರುತ್ತಿದ್ದವು. ಜಾಣತನದಿಂದ ಇವರು ಕ್ಲಾನ್ ಸದಸ್ಯರ

ಅಂಧಶ್ರದ್ಧೆಯನ್ನು ದೊಡ್ಡ ಉದ್ಯಮವಾಗಿ ಪರಿವರ್ತಿಸಿದರು. ಕ್ಲಾನ್ ಭಯೋತ್ಪಾದಕರ ಗುಂಪು, ಅವರು ಹಣ ಸಂಪಾದನೆ ಮಾಡುತ್ತಿದ್ದುದು ದರೋಡೆ, ಸುಲಿಗೆ, ಕೊಲೆ ಮಂತಾದ ಹಿಂಸಾಕೃತ್ಯಗಳಿಂದ. ಕ್ಲಾನ್ ಸದಸ್ಯರು ಮುಖವಾಡ, ಗೋಪುರದಂತಹ ಉದ್ದ ಬಿಳಿಯ ಟೋಪಿ ಮತ್ತು ಗುಡಾಣದಂತಿರುವ ಬಿಳಿಯ ನಿಲುವಂಗಿ ತೊಡುತ್ತಿದ್ದರು. ಅವುಗಳನ್ನು ತಯಾರಿಸಲು ಬೇಕಾದ 'ಬೆಡ್ ಷೀಟ್'ನಂತಹ ಬಿಳಿಯ ಬಟ್ಟೆಯನ್ನು ಕ್ಲಾನ್‌ನವರೇ ಕೊಂಡು ತಂದು ಆ ಬೆಡ್ ಷೀಟ್‌ಗಳನ್ನು ಮಾರಿ ಲಾಭ ಗಳಿಸುತ್ತಿದ್ದರು.

೧೯೨೧ರಲ್ಲಿ ಕ್ಲಾನ್ ಚಟುವಟಿಕೆಗಳನ್ನು ಕಾಂಗ್ರೆಸ್ ವಿಚಾರಣೆಗೆ ಗುರಿಪಡಿಸಿತು. ಆ ವಿಚಾರಣೆ ಕುರಿತು ಪತ್ರಿಕಾಕರ್ತರು ಬರೆದ ವರದಿಗಳು ಈ ಪ್ರತಿಗಾಮಿ ಗುಂಪಿಗೆ ಅನಾಯಾಸವಾಗಿ ವಿಶಾಲ ಪ್ರಚಾರ ನೀಡಿದವು. ಇಂತಹ ಪ್ರಚಾರಗಳಿಂದಾಗಿಯೆ ಕ್ಲಾನ್ ಹೆಚ್ಚು ಜನರಿಗೆ ತಿಳಿಯುವಂತಾಯಿತು. ಅದು ಹೆಚ್ಚಾಗಿ ನಗರಗಳಿಗೆ ವಲಸೆ ಬಂದ, ನೆಲೆಯಿಲ್ಲದವರು ಮತ್ತು ತಮ್ಮ ಭವಿಷ್ಯದ ಬಗ್ಗೆ ಕಳವಳ ಪಡುತ್ತಿದ್ದವರ ಸ್ಥಿತಿಯನ್ನು ತನ್ನ ಅನುಕೂಲಕ್ಕೆ ಉಪಯೋಗಿಸಿಕೊಂಡಿತು. ಬಡವರಾದ ಮತ್ತು ಸಮುದಾಯದಲ್ಲಿ ಬೇರೂರಿ ನಿಲ್ಲಲಾರದ ಬಿಳಿಯರಿಗೆ ಕ್ಲಾನ್ ವರ್ಣಶ್ರೇಷ್ಠತೆಯ ಮಹತ್ವವನ್ನು ತಿಳಿಸಿ ಅವರ ಬೆಂಬಲ ಪಡೆಯುತ್ತಿತ್ತು. ಬೇರಿಲ್ಲದ ಬಿಳಿಯರನ್ನು ವರ್ಣದ್ವೇಷ ಒಂದುಗೂಡಿಸುವ ಸಾಧನವಾಯಿತು. ಪರಕೀಯತೆ ಬೆಳೆಸಿಕೊಕೊಂಡಿದ್ದ ಇವರಿಗೆ ಕ್ಲಾನ್ ತೊಡುವ ನಿಲುವಂಗಿ ಮತ್ತು ಬೆಂಕಿಯಂತೆ ಪ್ರಜ್ವಲಿಸುವ ಶಿಲುಬೆ ಮುಂತಾದ ಆಚಾರ ವಿಧಿಗಳನ್ನು ಒದಗಿಸಿ ಆ ವರ್ಗದವರಲ್ಲಿ ಸ್ವಕೀಯ ಪ್ರಜ್ಞೆಯನ್ನು ಬೆಳೆಸಿತು. ಪ್ರಗತಿಪರ ಯೋಜನೆಗಳ ಮತ್ತು ಕಾರ್ಯಕ್ರಮಗಳ ಪರಿಣಾಮವಾಗಿ ಸಮಾಜದಲ್ಲಿ ಉಂಟಾಗಿರುವ ಭ್ರಷ್ಟಾಚಾರ, ಸ್ವೇಚ್ಛಾಪ್ರವೃತ್ತಿ ಮತ್ತು ನೈತಿಕ ಅಧಃಪತನಗಳನ್ನು ತಡೆದು ಸಮಾಜವನ್ನು ಶುದ್ಧಗೊಳಿಸುವ 'ಧರ್ಮಯುದ್ಧ'ದ ಸೋಗು ಹಾಕಿಕೊಂಡು ಕ್ಲಾನ್ ಬೋಳೆ ಸ್ವಭಾವದ ಜನರನ್ನು ಆಕರ್ಷಿಸಿತು. ಸಮಾಜವನ್ನು ಶುದ್ಧಗೊಳಿಸಲು ಕ್ಲಾನ್ ಅನುಸರಿಸಿದ ವಿಧಾನಗಳು: ನಡುರಾತ್ರಿಯಲ್ಲಿ ದಾಳಿ ಮಾಡುವುದು, ಛಡಿ ಏಟಿನ ಶಿಕ್ಷೆ ವಿಧಿಸುವುದು, ತಮ್ಮ ವಿರೋಧಿಗಳನ್ನು, ಕರಿಯರನ್ನು ಮತ್ತು ಇತರ ಅಲ್ಪಸಂಖ್ಯಾತರನ್ನು ವಿಚಾರಣೆಯಿಲ್ಲದೆ ನೇಣು ಹಾಕುವುದು – ಇಂಥ ಕ್ರೂರಕೃತ್ಯಗಳಿಂದ ಕ್ಲಾನ್ ಕುಖ್ಯಾತಿ ಪಡೆಯಿತು.

೧೯೨೨ರಲ್ಲಿ ಈ ಭಯೋತ್ಪಾದಕರ ಗುಂಪಿನಲ್ಲಿ ನಡೆದ ಒಳಜಗಳದಿಂದ ಸೈಮನ್ಸ್‌ನನ್ನು ನಾಯಕತ್ವದಿಂದ ಕಿತ್ತುಹಾಕಿ 'ಅಗೋಚರ ಚಕ್ರಾಧಿಪತ್ಯದ' ಆಡಳಿತವನ್ನು ಡಲ್ಲಾಸ್ (Dallas) ನಗರದ ದಂತವೈದ್ಯ ಹೈರಾಂ ವೆಸ್ಲಿ ಇವಾನ್ಸ್‌ಗೆ ಒಪ್ಪಿಸಲಾಯಿತು. ಕ್ರಮೇಣ ಕ್ಲಾನ್ ಸಣ್ಣ ಪುಟ್ಟ ಊರುಗಳಲ್ಲಿ ರಾಜಕೀಯ ಪ್ರಾಬಲ್ಯವನ್ನು ಗಳಿಸಿತು. ಆದರೆ ರಾಜಕೀಯ ಕ್ಷೇತ್ರದಲ್ಲಿ ಅದು ಹೆಚ್ಚಿಗೆ ಏನನ್ನೂ ಸಾಧಿಸಲಿಲ್ಲ. ಅದಕ್ಕೆ ಒಂದು ರಾಜಕೀಯ ಕಾರ್ಯಕ್ರಮವಾಗಲಿ ಅಥವಾ ಸಮರ್ಥ ನಾಯಕನಾಗಲಿ ಇರಲಿಲ್ಲ. ಅದರ ಉತ್ಕರ್ಷ

ಕಾಲದಲ್ಲಿ ಸದಸ್ಯರ ಸಂಖ್ಯೆ ಸುಮಾರು ಮೂರರಿಂದ ಎಂಟು ಮಿಲಿಯನ್ ಇದ್ದಿರಬಹುದೆಂದು ಅಂದಾಜು ಮಾಡಲಾಗಿದೆ. ಆದರೆ ಒಳಜಗಳ, ಹಿಂಸಾಕೃತ್ಯಗಳ ಆರೋಪಣೆ ಮತ್ತು ಇಂಡಿಯಾನದ ಕ್ಲಾನ್ ನಾಯಕ ಡೇವಿಡ್ ಸ್ಟೀವನ್‌ಸನ್‌ನ ಮೇಲಿನ ಅಪನಿಂದೆ ಇವುಗಳಿಂದಾಗಿ ಸದಸ್ಯರ ಸಂಖ್ಯೆ ಕಡಿಮೆಯಾಗುತ್ತ ಹೋಯಿತು. ಡೇವಿಡ್ ಸ್ಟೀವನ್‌ಸನ್ ರಿಪಬ್ಲಿಕನ್ ಪಕ್ಷದ ಮೇಲೆ ನಿಯಂತ್ರಣ ಹೊಂದಿದ್ದ ಕಾರಣದಿಂದ ಸಂಸ್ಥಾನದ ರಾಜಕೀಯದಲ್ಲಿ ಪ್ರಬಲನಾಗಿದ್ದನು. ೧೯೨೫ರಲ್ಲಿ ಅವನು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಕಾರ್ಯದರ್ಶಿಣಿಯ ಮೇಲೆ ಪ್ರಾಣಾಂತಕ ಹಲ್ಲೆ ನಡೆಸಿದ್ದರಿಂದ ಅವನಿಗೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ಸಂಸ್ಥಾನದ ಗವರ್ನರ್ ಅವನಿಗೆ ಕ್ಷಮಾಪಣೆ ನೀಡಲು ನಿರಾಕರಿಸಿದಾಗ ಅವನು ಕ್ಲಾನ್ ಕಾರ್ಯಾಚರಣೆಯಲ್ಲಿ ಭಾಗವಹಿಸಿ ಹಣ ಸಂಪಾದನೆ ಮಾಡಿದ ಕಾಂಗ್ರೆಸ್ ಸದಸ್ಯ ಮತ್ತು ಕೆಲವು ಅಧಿಕಾರಿಗಳ ಭ್ರಷ್ಟಾಚಾರವನ್ನು ಬಯಲು ಮಾಡಿ ಅವರು ಬಂದೀಖಾನೆಯನ್ನು ಸೇರುವಂತೆ ಮಾಡಿದನು. ಗವರ್ನರ್ ಭ್ರಷ್ಟಾಚಾರದ ಆಪಾದನೆಯಿಂದ ಹೇಗೋ ತಪ್ಪಿಸಿಕೊಂಡನು. ಬಹುತೇಕ ಸಣ್ಣ ಪಟ್ಟಣಗಳ ಪ್ರತಿಷ್ಠಿತ ವ್ಯಕ್ತಿಗಳು ಕ್ಲಾನ್ ಸದಸ್ಯರಾಗಿದ್ದರು. ಅದು ಸಮಾಜ ಸುಧಾರಣೆ ಮಾಡುವ ಒಂದು ಸಂಸ್ಥೆ ಎಂದು ಅವರು ಭಾವಿಸಿದ್ದರು. ಕ್ಲಾನ್‌ದ ನಿಜರೂಪ ಮತ್ತು ಹಿಂಸಾಕೃತ್ಯಗಳು ಬಯಲಾದ ನಂತರ ಅವರು ತಮ್ಮ ಸದಸ್ಯತ್ವವನ್ನು ರದ್ದುಗೊಳಿಸಿ ಸಂಪರ್ಕ ಕಡಿದುಕೊಂಡರು. ಇದರಿಂದಾಗಿ ಕ್ಲಾನ್ ಕ್ಷೀಣಿಸುತ್ತ ಹೋಗಿ ತನ್ನ ರಾಜಕೀಯ ಪ್ರಭಾವವನ್ನು ಕಳೆದುಕೊಂಡು ಬರಿಯ ಭಯೋತ್ಪಾದಕರ ಗುಂಪಾಗಿ ಉಳಿಯಿತು.

ಮೂಲತತ್ವ ಆಧಾರಿತ ಪಂಥ (Fundamentalism)

ಕ್ಲಾನ್ ಅನುಯಾಯಿಗಳಿಗೆ ಹೊರದೇಶದಿಂದ ಬಂದ ವಲಸೆಗಾರರು ವಿಪತ್ಕಾರಿಗಳಂತೆ ಕಂಡುಬಂದರು; ಹಳೆಯ ಕಾಲದ ಮತಧರ್ಮದ ಅನುಯಾಯಿಗಳಿಗೆ ನವೀನತೆಯನ್ನು ಅಳವಡಿಸಿಕೊಂಡ ಚರ್ಚುಗಳು ಅಮೆರಿಕಕ್ಕೆ ಅಪಾಯಕಾರಿಗಳಾಗಿ ತೋರಿದವು. ಬೈಬಲ್‌ನ್ನು ಹೊಸಜ್ಞಾನದ ಬೆಳಕಿನಲ್ಲಿ ನೋಡಿ ಅಧ್ಯಯನ ಮಾಡಬೇಕು ಅಥವಾ ಅದನ್ನು ವಿಕಾಸವಾದಕ್ಕೆ (evolution) ಹೊಂದಿಸಿಕೊಳ್ಳಬೇಕು ಎನ್ನುವ ನವೀನ ಆಲೋಚನೆಗಳು ಸಂಪ್ರದಾಯಕ್ಕೆ ಅಪಾಯ ತರುತ್ತವೆ ಎಂದು ಈ ಮತಧರ್ಮಿಗಳು ನಂಬಿದ್ದರು. ಈ ಅಲೋಚನೆಗಳು ಶಾಲೆಗಳನ್ನು ಮತ್ತು ಚರ್ಚುಗಳನ್ನು ಕಲುಷಿತಗೊಳಿಸಿವೆ ಎಂದು ನಿರ್ಧರಿಸಿದ ಕಡುಸಂಪ್ರದಾಯಸ್ಥರು (orthodoxy) ತಮ್ಮ ವಿರೋಧವನ್ನು ಆಧಾರಭೂತ ನಂಬಿಕೆಗಳ ಆಚರಣೆಯ ಮೂಲಕ ವ್ಯಕ್ತಪಡಿಸಿದರು. ಮೂಲಭೂತ ಆಚರಣೆಗಳು ನವ್ಯತೆಯನ್ನು ಹತ್ತಿಕ್ಕಲು ಹುಟ್ಟಿದ ಆಂದೋಳನದ ರೂಪ ತಾಳಿತು. 'ಪಂಚತತ್ವ' (five points) ಗಳ ಮೇಲೆ ಆಧಾರಿತವಾದ ಈ ಆಂದೋಳನದ ಪ್ರಧಾನ ನಂಬಿಕೆಗಳು: ಬೈಬಲ್ ಎಂದಿಗೂ ತಪ್ಪಾಗಲಾರದು, ಕನ್ಯಾವಸ್ಥೆಯಲ್ಲಿ ಜನನ (virgin birth), ಬೇರೆಯವರು ಅನುಭವಿಸಿದ ಕಷ್ಟದಿಂದ ಇತರರಿಗೆ ದೊರಕುವ ಪ್ರಾಯಶ್ಚಿತ್ತ

(vicarious atonement), ಪುನರುತ್ಥಾನ ಮತ್ತು ಕ್ರಿಸ್ತನ ಪುನರಾಗಮನ – ಇವು ಆಧಾರಭೂತ ನಂಬಿಕೆಯ ಪಂಥದ ಅಡಿಗಲ್ಲಾದವು. ಪರಮತದ್ವೇಷ ಈ ಪಂಥದ ಹೆಗ್ಗುರುತಾಯಿತು.

ಈ ಆಂದೋಳನದ ನಾಯಕರಲ್ಲಿ ವಿಲಿಯಂ ಜೆನ್ನಿಂಗ್ಸ್ ಬ್ರೈಯನ್ ಒಳ್ಳೆಯ ಭಾಷಣಕಾರನಾಗಿದ್ದರಿಂದ ಹೆಚ್ಚು ಜನ ಅವನ ಅನುಯಾಯಿಗಳಾದರು. ಇವನ ವಾಕ್ಚತುರತೆ ಈ ಆಂದೋಳನವನ್ನು ಜನಪ್ರಿಯ ಧರ್ಮಯುದ್ಧ (crusade) ವಾಗಿ ಪರಿವರ್ತನೆಗೊಳಿಸಿತ್ತು. ೧೯೨೧ರಲ್ಲಿ ಅವನು ವಿಕಾಸವಾದವನ್ನು ಶಾಲೆಗಳಲ್ಲಿ ಬೋಧಿಸುವುದನ್ನು ರದ್ದುಗೊಳಿಸುವ ಕಾಯಿದೆಯನ್ನು ಜಾರಿಗೆ ತರುವ ಪ್ರಯತ್ನ ಮಾಡಿದನು. ಬ್ರೈಯನ್ ಡಾರ್ವಿನ್‌ನನ್ನು ಖಂಡಿಸಿ 'ಆಧ್ಯಾತ್ಮಿಕ ಪುನರುಜ್ಜೀವನದ ಅವಶ್ಯಕತೆ ಅಥವಾ ಸಾಧ್ಯತೆಯನ್ನು ಅಲ್ಲಗಳೆಯುವುದರಿಂದ ವಿಕಾಸವಾದವು ಸುಧಾರಣೆಗಳನ್ನೂ ನಿರಾಕರಿಸುತ್ತದೆ. ಸುಧಾರಣೆ ವ್ಯಕ್ತಿಯ ಪುನರುಜ್ಜೀವನವನ್ನು ಅವಲಂಬಿಸಿರುತ್ತದೆ' ಎಂದು ವಾದಿಸಿದನು. ವಿಕಾಸವಾದವನ್ನು ವಿರೋಧಿಸುವ ಕಾಯಿದೆಗಳನ್ನು ಕೆಲವು ಸಂಸ್ಥಾನಗಳಲ್ಲಿ, ಹೆಚ್ಚಾಗಿ ದಕ್ಷಿಣ ಸಂಸ್ಥಾನಗಳಲ್ಲಿ, ಜಾರಿಗೆ ತರಲಾಯಿತು. ಕೆಲವು ಅಧಿಕಾರಿಗಳು ತಾವೇ ನೇರವಾಗಿ ನಿರ್ಧರಿಸಿ ವಿಕಾಸವಾದವನ್ನು ರದ್ದುಮಾಡುವ ಯೋಜನೆಯನ್ನು ಕೈಗೊಂಡರು. ಟೆಕ್ಸಾಸ್‌ನ ಗವರ್ನರ ಆಗಿದ್ದ ಮಿರಿಯಮ್ ಫರ್ಗ್ಯೂಸ್ ವಿಕಾಸವಾದವನ್ನೊಳಗೊಂಡ ಪಠ್ಯಪುಸ್ತಕಗಳನ್ನು ಸರ್ಕಾರಿ ಶಾಲೆಗಳಿಂದ ತೆಗೆದುಹಾಕಲು ಆಜ್ಞೆ ಮಾಡಿದಳು. 'ಇಂತಹ 'ಕೊಳಕು', ಟೆಕ್ಸಾಸ್ ಶಾಲೆಗಳ ಪಠ್ಯಪುಸ್ತಕಗಳಲ್ಲಿ ಇರಲು ನಾನು ಬಿಡುವುದಿಲ್ಲ' ಎಂದು ದೃಢವಾದ ಹೇಳಿಕೆ ನೀಡಿದಳು.

೧೯೨೫ರಲ್ಲಿ ವಿಕಾಸವಾದದ ಬಗ್ಗೆ ನಡೆದಿದ್ದ ಚರ್ಚೆ ಪರಾಕಾಷ್ಠೆ ಮುಟ್ಟಿತು. ಟೆನೆಸ್ಸೀಯ ನ್ಯಾಯವಿಧಾಯಕ ಸಭೆಯ ಸದಸ್ಯ ಜಾನ್ ವಾಷಿಂಗ್‌ಟನ್ ಬಟ್ಲರ್ ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ವಿಕಾಸವಾದವನ್ನು ಬೋಧಿಸುವುದನ್ನು ನಿಷೇಧಿಸುವ ಮಸೂದೆಯನ್ನು ಸಭೆಯಲ್ಲಿ ಮಂಡಿಸಿ ಅದನ್ನು ಅನುಮೋದಿಸುವಂತೆ ಕರೆ ನೀಡಿದನು. ಸಭೆ ಬಹುಮತದಿಂದ ಅದನ್ನು ಅನುಮೋದಿಸಿತು. ಗವರ್ನರ್ ಬಹುಶಃ ಅದು ಜಾರಿಗೆ ಬರಲಾರದು ಎಂದು ಊಹಿಸಿ ಅದಕ್ಕೆ ಸಹಿ ಹಾಕಿದನು. ಶಾಲೆಗಳಲ್ಲಿ ವಿಕಾಸವಾದವನ್ನು ಬೋದಿಸುವುದನ್ನು ನಿಷೇಧಿಸುವ ಕಾಯಿದೆಗಳನ್ನು ವಿರೋಧಿಸಲು ಅಮೆರಿಕನ್ ನಾಗರಿಕ ಸ್ವಾತಂತ್ರ್ಯ ಒಕ್ಕೂಟ (American Civil Liberties Union) ಒಹಾಯೊ (Ohio) ಸಂಸ್ಥಾನದ ಡೇಟನ್ (Dayton) ಎಂಬ ಊರಿನಲ್ಲಿ ಶಾಲಾ ಉಪಾಧ್ಯಾಯ ಜಾನ್ ಸ್ಕೋಪ್ಸ್ (John Scopes)ನನ್ನು ಕಾಯಿದೆ ಭಂಗ ಮಾಡಲು ಒಪ್ಪಿಸಿತು. ತನ್ನ ತರಗತಿಯಲ್ಲಿ ವಿಕಾಸವಾದವನ್ನು ಬೋಧಿಸಿದ್ದಕ್ಕಾಗಿ ಅವನ ಮೇಲೆ ಕಾಯಿದೆ ಭಂಗ ಆಪಾದನೆ ಹೊರಿಸಿ ನ್ಯಾಯಾಲಯದ ವಿಚಾರಣೆಗೆ ಗುರಿಪಡಿಸಿದರು. ೧೯೨೫ರ ಜುಲೈ

೧೩ರಂದು ಪ್ರಾರಂಭವಾದ ಈ ವಿಚಾರಣೆ 'ಕೋತಿಯ ಕಟ್ಟಳೆ' (monkey trial) ಎಂದು ದೇಶವಿದೇಶಗಳಲ್ಲಿ ಪ್ರಸಿದ್ಧಿ ಪಡೆಯಿತು. ದಾವಾ ಹಾಕಿದವರ (prosecution) ಪರವಾಗಿ ವಾದಿಸಲು ಬ್ರೈಯನ್ ತಾನಾಗಿ ಮುಂದೆ ಬಂದನು. ಆಪಾದಿತನ ಪರವಾಗಿ ವಾದಿಸಲು ಚಿಕಾಗೊ ನಗರದ ಹೆಸರಾಂತ ವಕೀಲ ಕ್ಲಾರೆನ್ಸ್ ಡ್ಯಾರೋ (Clarence Darrow) ಒಪ್ಪಿಕೊಂಡು ಬಂದಿದ್ದನು. ಡ್ಯಾರೊ ತಾನು ನಿರೀಶ್ವರವಾದಿ (agnostic) ಎಂದು ಹೇಳಿಕೊಂಡಿದ್ದನು. ಈ ಇಬ್ಬರು ಘಟಾನುಘಟಿಗಳ ನಡುವೆ ವಾಗ್ವಾದ ಕೇಳಲು ಡೇಟನ್‌ನಲ್ಲಿ ಜನ ಕಿಕ್ಕಿರಿದು ನೆರೆದಿದ್ದರು. ಆ ಚಿಕ್ಕ ಊರಿನಲ್ಲಿ ದೊಡ್ಡ ಜಾತ್ರೆಯ ವಾತಾವರಣ ಏರ್ಪಟ್ಟಿತ್ತು. ನ್ಯಾಯಾಧೀಶ ಜಾನ್ ರಾಲುಲ್‌ಸ್ಟನ್ (John Raulston)ವಿಕಾಸವಾದಕ್ಕೆ ವೈಜ್ಞಾನಿಕ ಸಾಕ್ಷ್ಯಾಧಾರಗಳನ್ನು ಚರ್ಚಿಸಲು ಒಪ್ಪಿಗೆ ಕೊಡಲಿಲ್ಲ. ಡ್ಯಾರೊ, ಬೈಬಲ್ ಅಧ್ಯಯನದಲ್ಲಿ ವಿಶಿಷ್ಟ ಪರಿಣತಿ ಪಡೆದಿದ್ದ ಬ್ರೈಯನ್‌ನನ್ನು ಜೀವೋತ್ಪತ್ತಿಯ ಬಗ್ಗೆ ಬೈಬಲ್ ವ್ಯಾಖ್ಯಾನವನ್ನು ಸಾಕ್ಷ್ಯಾಧಾರವಾಗಿ ತಿಳಿಸುವಂತೆ ಕೇಳಿಕೊಂಡನು. ಬ್ರೈಯನ್ ವಿಕಾಸವಾದಕ್ಕೆ ವಿರುದ್ಧವಾಗಿ ಬೈಬಲ್ ಸಾಕ್ಷ್ಯಾಧಾರಗಳನ್ನು ವಿಶದಪಡಿಸುವ ಪ್ರಯತ್ನದಲ್ಲಿ ಪದೇ ಪದೇ ಬೈಬಲ್‌ನ ಅಕ್ಷರಶಃ ವ್ಯಾಖ್ಯಾನ ಮಾಡಲು ಹೋಗಿ ವಿಶಾಲ ಮನೋಭಾವದ ಡ್ಯಾರೊನ ಪ್ರಶ್ನೆಗಳಿಗೆ ಉತ್ತರ ನೀಡುವಾಗ ಸಂದಿಗ್ಧ ಪರಿಸ್ಥಿತಿಗೆ ಸಿಕ್ಕಿಕೊಂಡನು. ಬ್ರೈಯನ್ ಬೈಬಲ್‌ನಲ್ಲಿ ಹೇಳಿರುವ ಅನೇಕ ಸಂಗತಿಗಳನ್ನು ನಿಜವಾಗಿ ನಡೆದ ಸಂಗತಿಗಳೆಂದು ವಾದಿಸಿ ಡ್ಯಾರೊನ ವ್ಯಂಗ್ಯ ವಾಗ್ಝರಿಗೆ ಗುರಿಯಾದನು.

ಬೈಬಲ್‌ನಲ್ಲಿ ಬರುವ ಕತೆಗಳು ಮಹಾಮತ್ಸ್ಯ ಜೋನಾ (Jonah) ನನ್ನು ನುಂಗಿದ್ದು, ಜೋಷುಆ (Joshua) ಸೂರ್ಯನನ್ನು ತನ್ನ ಪಥದಲ್ಲಿ ಮುಂದುವರಿಯದಂತೆ ಹಿಡಿದು ನಿಲ್ಲಿಸಿದ್ದು ಮತ್ತು ಜಗತ್ತು ಕ್ರಿ.ಪೂ. ೪೦೦೪ರಲ್ಲಿ ಸೃಷ್ಟಿಗೊಂಡಿತು – ಇವೆಲ್ಲ ನಿಜವಾಗಿ ನಡೆದ ಸಂಗತಿಗಳೆಂದು ಬ್ರೈಯನ್ ವಾದಿಸಿದಾಗ, ಡ್ಯಾರೋ ಪ್ರತಿವಾದಿಸಿ 'ಇವೆಲ್ಲ ಬುದ್ಧಿಯಿಲ್ಲದವರ ನಂಬಿಕೆಗಳು, ಇಡೀ ಪ್ರಪಂಚದಲ್ಲಿ ಬುದ್ಧಿವಂತರಾದ ಕ್ರೈಸ್ತಮತದವರು ಯಾರೂ ಇವನ್ನು ನಂಬಲಾರರು' ಎಂದು ಬ್ರೈಯನ್‌ನ ಹೇಳಿಕೆಗಳು ಹಾಸ್ಯಾಸ್ಪದವಾದುವು ಎಂದು ತೋರಿಸಿಕೊಟ್ಟನು. ನ್ಯಾಯಾಧೀಶನ ಮುಂದೆ ಇದ್ದ ವಿಷಯ – ಸ್ಕೋಪ್ಸ್ ಕಾಯಿದೆ ವಿರುದ್ಧ ವಿಕಾಸವಾದವನ್ನು ತರಗತಿಗಳಲ್ಲಿ ಬೋಧಿಸಿದನೆ ಇಲ್ಲವೆ ಎನ್ನುವುದು. ಅವನು ಕಾಯಿದೆ ವಿರುದ್ಧವಾಗಿ ಬೋಧಿಸಿದ್ದು ಸಾಬೀತಾಗಿ ಅವನಿಗೆ ನೂರು ಡಾಲರ್ ಜುಲ್ಮಾನೆ ವಿಧಿಸಲಾಯಿತು. ಟೆನ್ನೆಸ್ಸಿ ಶ್ರೇಷ್ಠ ನ್ಯಾಯಾಲಯ ಸ್ಕೋಪ್ಸ್ ಕಾನೂನುಭಂಗ ಮಾಡಿದ್ದನ್ನು ಅಪರಾಧವೆಂದು ತೀರ್ಮಾನಿಸಿದರೂ ಅವನಿಗೆ ಹಾಕಿದ ಜುಲ್ಮಾನೆಯನ್ನು ಕೆಲವು ಪಾರಿಭಾಷಿಕ ಅಂಶಗಳ ಆಧಾರದ ಮೇಲೆ ರದ್ದುಗೊಳಿಸಿತು ಮತ್ತು ಈ ವಿಚಿತ್ರ ಕಟ್ಟಳೆಯನ್ನು ಇಲ್ಲಿಗೆ ನಿಲ್ಲಿಸಬೇಕೆಂದು ಆದೇಶ ನೀಡಿತು. ಈ ಕಟ್ಟಳೆಯನ್ನು 'ಸಾಯುವ ತನಕ ಹೋರಾಟ' ಎಂದು ಸಾರಿದ್ದ ಬ್ರೈಯನ್, 'ಕೋತಿ ಕಟ್ಟಳೆ' ಮುಗಿದ ಕೆಲವು ದಿನಗಳಲ್ಲೆ ಶೆಕೆ ಮತ್ತು ಬಳಲಿಕೆಗಳಿಂದ ಉಲ್ಬಣಗೊಂಡ

ಹೃದ್ರೋಗದಿಂದಾಗಿ ಅನಿರೀಕ್ಷಿತ ಮರಣ ಹೊಂದಿದನು. ಡೇಟನ್‌ನಲ್ಲಿ ನಡೆದ ವಾಗ್ವಾದದ ನಂತರ ಅದರ ಬಗ್ಗೆ ಆಸಕ್ತಿ ಕುಂದುತ್ತ ಹೋಯಿತು. ಮಿಸ್ಸಿಸ್ಸಿಪ್ಪಿ ಮತ್ತು ಆರ್‌ಕನ್ಸಾಸ ಸಂಸ್ಥಾನಗಳಲ್ಲಿ ಕಡುಸಂಪ್ರದಾಯಸ್ಥರು ಈ ವಾಗ್ವಾದವನ್ನು ಮುಂದುವರಿಸಿಕೊಂಡು ಹೋದುದನ್ನು ಬಿಟ್ಟರೆ ಮಿಕ್ಕ ಎಲ್ಲ ಕಡೆಗಳಲ್ಲೂ ಅವರ ಪ್ರಭಾವ ಕಡಿಮೆಯಾಗುತ್ತ ಹೋಯಿತು. ಸಂಪ್ರದಾಯಸ್ಥರ ಪ್ರಯತ್ನಗಳು ವ್ಯತಿರಿಕ್ತ ಪರಿಣಾಮಗಳಲ್ಲಿ ಪರ್ಯಾವಸಾನಗೊಂಡವು. ಎಂದರೆ ವಿಜ್ಞಾನಕ್ಕೆ ಬೆಂಬಲ ಹೆಚ್ಚುತ್ತ ಹೋಯಿತು.

ಆರ್ಭಟಿಸಿದ ಇಪ್ಪತ್ತರ ದಶಕ (The Roaring Twenties)

೧೯೨೦ರ ದಶಕದಲ್ಲಿ ಸ್ವರಕ್ಷಣಾ ಮನೋಭಾವದಿಂದಾಗಿ ಅನೇಕ ಪ್ರತಿಗಾಮಿ ಮತ್ತು ದಮನಕಾರಿ ಚಳುವಳಿಗಳು ಹುಟ್ಟಿಕೊಂಡು ಅವು ಆ ಕಾಲದ ಮನೋಧರ್ಮವಾಗಿ ತೋರಿಬಂದವು. ಆ ಮನೋಧರ್ಮದ ಅಂತರಾಳದಲ್ಲಿ ಅದಕ್ಕೆ ವಿರುದ್ಧವಾದ ಮಾನಸಿಕ ಮತ್ತು ಸಾಮಾಜಿಕ ಕ್ರಾಂತಿಯ ಅಲೆಗಳು ಮೇಲೇರಲು ಅವಕಾಶಕ್ಕಾಗಿ ಕಾಯುತ್ತಿದ್ದವು. ಇಪ್ಪತ್ತರ ದಶಕದಲ್ಲಿ ಆ ಅಲೆಗಳು ಮೇಲೆದ್ದು ಇಡೀ ದೇಶವನ್ನು ಸಂಪ್ರದಾಯದ ಸರಪಳಿಯಿಂದ ಬಿಡಿಸಿ ಬೇರೆ ದಿಕ್ಕಿನಲ್ಲಿ ಕರೆದೊಯ್ಯುವಂತೆ ಕಂಡುಬಂತು. ಈ ಬದಲಾವಣೆಗಳು ನಡೆಯುತ್ತಿದ್ದ ಕಾಲಾವಧಿಯನ್ನು ಇತಿಹಾಸಕಾರರು ವಿವಿಧ ಹೆಸರುಗಳಿಂದ ಕರೆದರು: ಅತಿರೇಕದ ಯುಗ, ಜಾಜ್ ಸಂಗೀತದ ಯುಗ (The Jazz Age), ಅದ್ಭುತ ಅರ್ಥಹೀನ ಯುಗ (the era of wonderful nonsense), ಆರ್ಭಟಿಸುವ ಇಪ್ಪತ್ತರ ದಶಕ (the roaring twenties), ಗದ್ದಲದ ವರ್ಷಗಳು (the ballyhoo years), ಆಸ್ಪಿರಿನ್ ಯುಗ (Aspirin age), ಇತ್ಯಾದಿ. ಆ ವರ್ಷಗಳಲ್ಲಿ ನವೀನ ಅಮೆರಿಕ ಮತ್ತು ಹಳೆಯ ಅಮೆರಿಕಗಳ ಮುಖಾಮುಖಿಯಾಗಿ, ಎರಡು ಸಂಸ್ಕೃತಿಗಳ ಘರ್ಷಣೆ ಹೊಸ ಮಜಲು ಮುಟ್ಟಿತು.

ನಗರ ಸಂಸ್ಕೃತಿಯ ಕೇಂದ್ರಗಳಲ್ಲಿ ಹಳೆಯ ಸಂಪ್ರದಾಯ ಮತ್ತು ಸಣ್ಣ ಊರುಗಳ ಮೌಲ್ಯಗಳನ್ನು ಕೀಳಾಗಿ ಕಾಣುವ ಪ್ರವೃತ್ತಿ ಜನರಲ್ಲಿ ಬೆಳೆದವು. ಇದು ಆಗಿನ ಸಾಹಿತ್ಯಕೃತಿಗಳಲ್ಲಿ ಪ್ರತಿಬಿಂಬಗೊಂಡಿವೆ. ಸಿಂಕ್ಲೇರ್ ಲೂಯಿಸ್‌ನ (Sinclair Lewis) ಕಾದಂಬರಿ 'ಮುಖ್ಯ ರಸ್ತೆ' (Main Street)ನಲ್ಲಿ ಹುಲ್ಲುಗಾವಲಿನ (prairies) ಸಣ್ಣ ಊರಿನ ಉಸಿರುಗಟ್ಟಿಸುವ, ನೀಚತನದ ಮತ್ತು ಕಿಷ್ಕಿಂದ ಜೀವನವನ್ನು ಚಿತ್ರಿಸಿದ್ದಾನೆ. ಥಾಮಸ್ ವುಲ್ಫ್ (Thomas Wolfe) ತನ್ನ ಹುಟ್ಟು ಊರಾದ ಆ್ಯಷ್‌ವಿಲ್‌ಅನ್ನು (Ashville) ತನ್ನ ಕಾದಂಬರಿ 'Look Homeward, Angel'ನಲ್ಲಿ ಅಪನಿಂದೆಗೊಳಗಾಗುವಂತೆ ಚಿತ್ರಿಸಿದ್ದಾನೆ. ಗುಡ್ಡಬೆಟ್ಟಗಳಿಂದ ಸುತ್ತುವರಿದ ಆ್ಯಷ್‌ವಿಲ್‌ನ ಸರಹದ್ದನ್ನು ದಾಟಿ ಹೋಗುವ ತನ್ನ ಮನಸ್ಸಿನ ತುಮುಲವನ್ನು ಇದರಲ್ಲಿ ತೋಡಿಕೊಂಡಿದ್ದಾನೆ. ಸಣ್ಣ ಊರುಗಳ ನಿಸ್ಸಾರವಾದ ಜೀವನ ಆ ಕಾಲದ ಸಾಹಿತ್ಯಕೃತಿಗಳ

ಮೂಲದ್ರವ್ಯವಾಗಿತ್ತು. ಒಳನಾಡಿನ ಹಳ್ಳಿಗಳ ಮತ್ತು ಸಣ್ಣ ಪಟ್ಟಣಗಳ ನಿವಾಸಿಗಳು ಮಹಾನಗರಗಳಲ್ಲಿ ವಾಸಿಸುವವರು ಅನುಭವಿಸುವ ಪರಕೀಯತೆ, ಆ ನಗರಗಳಲ್ಲಿ ಬಹುತೇಕ ಜನರ ಕೀಳು ಜೀವನ, ಅಪರಾಧಗಳು, ಪರದೇಶೀಯರು ಮತ್ತು ಸರ್ವೆ ಸಾಮಾನ್ಯವಾದ ಭ್ರಷ್ಟಾಚಾರ ಇವುಗಳನ್ನು ಎತ್ತಿ ತೋರಿಸಿ ಗಿಲೀಟು ಜೀವನವನ್ನು ಜರಿದು ಮುಯ್ಯಿ ತೀರಿಸಿಕೊಂಡರು.

ಎಲ್ಲ ಜನರ, ವಿಶಿಷ್ಟವಾಗಿ, ಯುವಜನರ ನಡವಳಿಕೆಗಳಲ್ಲಿ ಮತ್ತು ನೀತಿ ನಿಯಮಗಳಲ್ಲಿ ಆಗಿದ್ದ ಕ್ರಾಂತಿಕಾರಕ ಬದಲಾವಣೆಗಳು ಹಳಬರಿಗೆ ಮತ್ತು ಸಂಪ್ರದಾಯಸ್ಥರಿಗೆ ಆಘಾತ ಉಂಟುಮಾಡಿದವು. ಸ್ಕಾಟ್ ಫಿಟ್ಜ್‌ಜೆರಾಲ್ಡ್ (Scott Fitzgerald) ತನ್ನ ಕಾದಂಬರಿ 'ದಿಸ್ ಸೈಡ್ ಆಫ್ ಪಾರಡೈಸ್' (This Side of Paradise)ನಲ್ಲಿ ಪ್ರಿನ್ಸ್‌ಟನ್ (Princeton) ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಜೀವನವನ್ನು ವರ್ಣಿಸಿದ್ದಾನೆ. ಯುವಜನಾಂಗದಲ್ಲಿ ಹರಡುತ್ತಿದ್ದ ಆಧುನಿಕತೆ, ಲೈಂಗಿಕ ಸ್ವಾತಂತ್ರ್ಯ ಮತ್ತು ಪ್ರಣಯ ಪ್ರದರ್ಶನಗಳು ಸಾಮ್ಯುಯಲ್ ಹಾಪ್ಕಿನ್ಸ್ ಆ್ಯಡಮ್ಸ್, ವಾರ್ನರ್ ಫೇಬಿಯನ್ ಎಂಬ ಅಡ್ಡಹೆಸರಿನಲ್ಲಿ ಬರೆದ 'ಫ್ಲೇಮಿಂಗ್ ಯೂತ್' (Flaming Youth) ಕಾದಂಬರಿಯಲ್ಲಿ ಪರಿಣಾಮಕಾರಿಯಾಗಿ ವಿವರಿಸಿದ್ದಾನೆ. ಇಂತಹ ಕಾದಂಬರಿ ಗಳಿಂದ ಜನರು 'ಯೌವನಕ್ಕೆ ಒತ್ತುಕೊಡುವುದು' (accent on Youth), 'ಸ್ವೇಚ್ಛಾಚಾರ ಸಂತೋಷಕೂಟಗಳು' (wild parties) 'ಲೈಂಗಿಕ ಸ್ವೇಚ್ಛಾಚಾರ' (promiscuity), ಬೀದಿಮನೆಗಳು (road houses) ಅಂದರೆ ವೇಶ್ಯಾಗೃಹಗಳು, ಕಾಮೋದ್ರೇಕಗೊಳಿಸುವಂತೆ ಅಂಗಾಂಗಗಳನ್ನು ಕುಣಿಸುವ ನೃತ್ಯಗಾತಿಯರು – ಈ ಎಲ್ಲ ಹೊಸ ಬದಲಾವಣೆಗಳು ಜನರಿಗೆ ಪರಿಚಯವಾಗಿದ್ದು ಸಾಹಿತ್ಯ ಕೃತಿಗಳಿಂದ.

ಹೊಸ ನಮೂನೆಯ ಉಡುಗೆ ತೊಡುಗೆಗಳು, ಕೇಶಾಲಂಕಾರ ಇತ್ಯಾದಿ ಎಲ್ಲವೂ ಸಮಾಜ ತೀವ್ರಗತಿಯಲ್ಲಿ ಪರಿವರ್ತಿತಗೊಳ್ಳುತ್ತಿದ್ದರ ಸಂಕೇತಗಳಾಗಿದ್ದವು. ಸೌಂದರ್ಯ ಸಾಧನಗಳ ಉತ್ಪಾದನೆ ಬೃಹತ್ ಕೈಗಾರಿಕೆಯಾಗಿ ಬೆಳೆಯಿತು. ಜನರು ಲೈಂಗಿಕ ವಿಷಯಗಳನ್ನು ಮುಜಗರವಿಲ್ಲದೆ ಬಹಿರಂಗವಾಗಿ ಚರ್ಚಿಸುತ್ತಿದ್ದರು. ಇದು ಹಳೆಯ ತಲೆಮಾರಿನವರಿಗೆ ಹಿಂದೆಂದೂ ಕಂಡು ಕೇಳರಿಯದ ವಿಷಯವಾಗಿತ್ತು. ಲೈಂಗಿಕ ಪ್ರಜ್ಞೆ ಜನರಲ್ಲಿ ಮೂಡಿಸಿ ಅದರ ಬಗ್ಗೆ ಬಹಿರಂಗವಾಗಿ ಮಾತನಾಡಲು ಸ್ಫೂರ್ತಿ ನೀಡಿದ್ದು ಸಿಗ್ಮಂಡ್ ಫ್ರಾಯ್ಡ್ (Sigmund Freud) ನ ಕೃತಿಗಳು. ಇವನ ಸಂಭಾಷಣೆ ಮತ್ತು ಬರಹಗಳಲ್ಲಿ ಸೃಷ್ಟಿಸಿದ ಪಾರಿಭಾಷಿಕ ಪದಗಳು – ಕಾಮ (libido), ಮಾನಸಿಕ ಅಡೆತಡೆಗಳು (inhibitions), ಈಡಿಪಸ್ ಕಾಂಪ್ಲೆಕ್ಸ್ (Oedipus complex), ಸ್ಥಾನಾಂತರ (transference), ಉದಾತ್ತಗೊಳಿಸುವುದು (sublimation) ಮತ್ತು ದಮನಗೊಳಿಸುವುದು (repression) – ಇವೆಲ್ಲ ವ್ಯಾಪಕವಾಗಿ ಬಳಕೆಗೆ ಬಂದವು.

ಇದರಿಂದಾಗಿ ಲೈಂಗಿಕ ವಿಷಯಾಸಕ್ತಿ ಸಾಹಿತ್ಯ ಮತ್ತು ಇತರ ಮಾಧ್ಯಮಗಳಲ್ಲಿ ಕೇಂದ್ರ ವಿಷಯವಾಯಿತು. ಯೂಜೀನ್ ಓ ನೀಲ್ (Eugene O'Neill) ತನ್ನ ಕೃತಿಗಳಲ್ಲಿ ಫ್ರಾಯ್ಡ್‌ನ ಆಲೋಚನೆಗಳನ್ನು ಅಳವಡಿಸಿಕೊಂಡನು. ಲೈಂಗಿಕ ವಿಷಯಗಳು ಟ್ಯಾಬ್ಲಾಯ್ಡ್ (tabloid) ಮಾದರಿಯ ರೋಮಾಂಚಕಾರಿ ಸುದ್ದಿಪತ್ರಿಕೆಗಳ ಮಾರಾಟ ಹೆಚ್ಚಿಸಲು ಕಾರಣವಾಯಿತು. 'ಪಲ್ಪ್' (ಉದ್ರೇಕಗೊಳಿಸುವ ಸಂಗತಿಗಳ) ನಿಯತಕಾಲಿಕ ಪತ್ರಿಕೆಗಳ ಪ್ರಸಾರ ಹೆಚ್ಚಿ ಅತ್ಯಂತ ಲಾಭದಾಯಕ ಉದ್ಯಮವಾಯಿತು.

೧೯೩೦ರ ದಶಕದಲ್ಲಿ ಯುವಕ ಯುವತಿಯರು ಮದುವೆಗೆ ಮುಂಚೆ ಲೈಂಗಿಕ ಸಂಬಂಧ ಬೆಳೆಸುವುದು ಸಾಮಾನ್ಯ ಸಂಗತಿಯಾಯಿತು. ಕಾಲೇಜು ಯುವತಿಯರಲ್ಲಿ ಈ ಹವ್ಯಾಸ ವ್ಯಾಪಕವಾಗಿ ಹಬ್ಬಿತ್ತು. ಈ ಹೊಸ ನಡವಳಿಕೆಗಳು ವಿವಾಹದ ಬಗ್ಗೆ ಜನರ ಅಭಿಪ್ರಾಯಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಉಂಟುಮಾಡಿದವು. ಹಳೆಯ ವಿಕ್ಟೋರಿಯ ಯುಗದ ನಿಯಮಗಳ ಪ್ರಕಾರ ಗಂಡ ಮನೆಯ ಮುಖ್ಯಸ್ಥ ಮತ್ತು ಯಜಮಾನ. ಕುಟುಂಬ ನಿರ್ವಹಣೆ ಅವನ ಜವಾಬ್ದಾರಿ. ಹೆಂಡತಿಯ ಪಾತ್ರ ಮನೆಗೆಲಸ ಮತ್ತು ಮಕ್ಕಳನ್ನು ಸಾಕುವುದಕ್ಕೆ ಸೀಮಿತವಾಗಿತ್ತು. ಮಕ್ಕಳು ತಂದೆ ತಾಯಿಯರಿಗೆ ವಿಧೇಯರಾಗಿರಬೇಕಿತ್ತು. ೧೯೩೦ರ ಹೊತ್ತಿಗೆ ವಿವಾಹ ಸಂಬಂಧಗಳನ್ನು 'ಭಾವನಾ ಸ್ವಾತಂತ್ರ್ಯ ಪ್ರಣಯ' (romantic love)ದ ಆಧಾರದ ಮೇಲೆ ನಿರ್ಧರಿಸಲಾಗುತ್ತಿತ್ತು. ಲೈಂಗಿಕ ಸಂಬಂಧಗಳ ಮೇಲಿನ ಅನೇಕ ನಿಯಂತ್ರಣಗಳನ್ನು ಸಡಿಲಗೊಳಿಸಿ ಕೆಲವನ್ನು ರದ್ದು ಮಾಡಲಾಯಿತು. ಕುಟುಂಬದ ಅನೇಕ ಕಾಯಕಗಳನ್ನು ಇತರ ಸಂಸ್ಥೆಗಳು ವಹಿಸಿಕೊಂಡವು. ವಿವಾಹ ವಿಚ್ಛೇದನ ಸುಲಭವಾಗಿ ದೊರಕುವಂತಾಗಿ ಮುರಿದ ಮದುವೆಗಳ ಸಂಖ್ಯೆ ಹೆಚ್ಚಾಗುತ್ತ ಹೋಯಿತು.

ಅಮೆರಿಕನ್ ಮಹಿಳೆಯರು ಸಮಾನ ಹಕ್ಕುಬಾಧ್ಯತೆಗಳಿಗಾಗಿ ನಡೆಸಿದ ಆಂದೋಳನ ಕುರಿತು ಹಿಂದೆ ತಿಳಿಸಲಾಗಿದೆ ('ಪ್ರಗತಿಪರ ಯುಗ'). ೧೯೧೯ರ ಜೂನ್ ೪ರಂದು ರಾಜ್ಯಾಂಗದ ೧೯ನೆಯ ತಿದ್ದುಪಡಿಯನ್ನು ಸೆನೆಟ್ ಅನುಮೋದಿಸಿತು. ಈ ತಿದ್ದುಪಡಿಯನ್ನು ಎಲ್ಲ ಸಂಸ್ಥಾನಗಳು ಅಂಗೀಕರಿಸಬೇಕಾದರೆ ೧೪ ತಿಂಗಳು ಹಿಡಿಯಿತು. ಟೆನ್ನಸ್ಸೀ ಸಂಸ್ಥಾನದ ನ್ಯಾಯವಿಧಾಯಕ ಸಭೆ ಅಂಗೀಕರಿಸುವ ಕಾರ್ಯವನ್ನು ೧೯೨೦ರ ಆಗಸ್ಟ್ ೨೧ರಂದು ಪೂರ್ಣಗೊಳಿಸಿತು. ಇದು ಪ್ರಗತಿಪರ ಯುಗದ ಅತ್ಯುನ್ನತ ಸಾಧನೆಗಳಲ್ಲಿ ಒಂದು ಎಂದು ಖಚಿತವಾಗಿ ಹೇಳಬಹುದು. ಇದಾದ ನಂತರ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ರಾಜಕೀಯ ಪ್ರವೇಶ ಮಾಡಿದರು. ಹೀಗಾದ ಮಾತ್ರಕ್ಕೆ ಅವರ ಮೇಲಿನ ಸಂಪ್ರದಾಯ ಮತ್ತು ಕಾನೂನಿನ ನಿರ್ಬಂಧಗಳು ನಿವಾರಣೆಯಾಗಲಿಲ್ಲ. ಆದ್ದರಿಂದ ಮಹಿಳೆಯರ ಒಂದು ಪಂಗಡ ಸಮಾನತೆಯನ್ನು ಆದಷ್ಟು ಬೇಗ ಸಾಧಿಸಬೇಕೆಂದು ಬಯಸಿ, ಮಹಿಳಾಪಕ್ಷದ (Women's Party) ಆ್ಯಲಿಸ್ ಪಾಲ್ (Alice Paul) ಎಂಬುವಳು

೧೯೨೩ರಲ್ಲಿ 'ಸಮಾನ ಹಕ್ಕು ತಿದ್ದುಪಡಿ' (Equal Rights Amendment) ಯನ್ನು ಕಾಂಗ್ರೆಸ್ಸಿನಲ್ಲಿ ಮಂಡಿಸಿದಳು. ಇದು ಹೆಂಗಸರು ಮತ್ತು ಗಂಡಸರ ನಡುವೆ ಉಳಿದು ಬಂದಿದ್ದ ಅಸಮಾನತೆಗಳನ್ನು ತೊಡೆದುಹಾಕುತ್ತದೆ ಎಂದು ಆಸೆಪಟ್ಟಿದ್ದರು. ಆದರೆ ಈ ತಿದ್ದುಪಡಿಯನ್ನು ಅಂಗೀಕರಿಸಲು ಐವತ್ತು ವರ್ಷಗಳೇ ಕಾಯಬೇಕಾಯಿತು. ಅಂತಿಮವಾಗಿ ೧೯೭೭ರಲ್ಲಿ ಕಾಂಗ್ರೆಸ್ ಆ್ಯಲಿಸ್ ಪಾಲ್ ಮಂಡಿಸಿದ ತಿದ್ದುಪಡಿಯನ್ನು ಅಂಗೀಕರಿಸಿತು. ತನ್ನ ಪರಿಶ್ರಮ ಫಲಿಸಿದ್ದನ್ನು ನೋಡಲು ಆಕೆ ಇರಲಿಲ್ಲ ಎನ್ನುವುದು ಇತಿಹಾಸದ ವಿಪರ್ಯಾಸ!

ಮೊದಲನೆಯ ಜಾಗತಿಕ ಯುದ್ಧದ ಕಾಲದಲ್ಲಿ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಕೆಲಸ ಮಾಡಲು ಪ್ರಾರಂಭಿಸಿದ್ದು ಆ ಪರಿಸ್ಥಿತಿಯಲ್ಲಿ ಅಗತ್ಯವಾಗಿತ್ತು. ಯುದ್ಧಾನಂತರ ಹೆಂಗಸರಿಗೆ ಅವಕಾಶಗಳು ಕಡಿಮೆಯಾಗುತ್ತ ಹೋದವು. ೧೯೨೦ರ ದಶಕದಲ್ಲಿ ಹೆಂಗಸರಿಗೆ ಉದ್ಯೋಗಾವಕಾಶಗಳು ಹೆಚ್ಚಿದವು. ೧೯೩೦ರ ದಶಕದ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಕೂಡ ಹೆಂಗಸರಿಗೆ ಉದ್ಯೋಗಾವಕಾಶಗಳು ಕಡಿಮೆಯಾಗಲಿಲ್ಲ. ಇವರು ಮಾಡುತ್ತಿದ್ದ ಕೆಲಸಗಳು ಲಾಗಾಯ್ತಿನಿಂದ ಹೆಂಗಸರಿಗೆ ಮೀಸಲಾಗಿದ್ದ ಕ್ಷೇತ್ರಗಳಿಗೆ ಸೀಮಿತವಾಗಿದ್ದವು – ಮನೆಗೆಲಸ, ಕಛೇರಿಗಳಲ್ಲಿ ಕೆಲಸ, ಉಪಾಧ್ಯಾಯ ವೃತ್ತಿ, ಗುಮಾಸ್ತೆ ಕೆಲಸ, ಬಟ್ಟೆ ಹೊಲಿಯುವುದು ಇತ್ಯಾದಿ. ಎರಡನೆಯ ಜಾಗತಿಕ ಯುದ್ಧದ ಪ್ರಾರಂಭದಲ್ಲಿ ಹೆಂಗಸರ ಕೆಲಸಗಳಲ್ಲಿ ಹೆಚ್ಚಿನ ವೈವಿಧ್ಯತೆಗಳು ಕಂಡುಬಂದವು. ೧೯೪೦ರ ಹೊತ್ತಿಗೆ ಹೆಂಗಸರ ಕಾರ್ಯಗಳಲ್ಲಿ ಮಹತ್ತರವಾದ ಬದಲಾವಣೆಗಳಾದವು.

ನವ ನೀಗ್ರೋಗಳು (The New Negro)

೧೯೨೦ರ ದಶಕದಲ್ಲಿ ಅಮೆರಿಕದ ಕರಿಯರ ಜೀವನದಲ್ಲಿ ಆದ ಮಹತ್ವದ ಬದಲಾವಣೆಯೆಂದರೆ ಬೃಹತ್ ಪ್ರಮಾಣದಲ್ಲಿ ಕರಿಯರು ವಲಸೆ ಹೋದುದು. ೧೯೧೫-೧೬ರ ಅವಧಿಯಲ್ಲಿ ಕಾರ್ಖಾನೆಗಳ ಕಾರ್ಮಿಕರು ಅಧಿಕ ಸಂಖ್ಯೆಯಲ್ಲಿ ಸೈನ್ಯಕ್ಕೆ ಸೇರಿದ್ದರಿಂದ ಮತ್ತು ತೆರವಾದ ಅವರ ಜಾಗಗಳಿಗೆ ಹೊರದೇಶದ ವಲಸೆಗಾರರನ್ನು ನೇಮಕ ಮಾಡಲು ಯುದ್ಧ ಅಡ್ಡಿ ಬಂದಿದ್ದರಿಂದ, ಮೇಲಾಗಿ ೧೯೨೦ರ ದಶಕದಲ್ಲಿ ಹೊರದೇಶದ ವಲಸೆಗಾರರ ಸಂಖ್ಯೆಯನ್ನು ಕಾನೂನಿನ ಪ್ರಕಾರ ಕಡಿಮೆ ಮಾಡಲಾಗಿದ್ದುದರಿಂದ ಉತ್ತರದ ಔದ್ಯೋಗಿಕ ಕೇಂದ್ರಗಳಲ್ಲಿ ಕಾರ್ಮಿಕರ ಕೊರತೆ ಉಂಟಾಯಿತು. ಇದು ಕರಿಯರಿಗೆ ಅದೃಷ್ಟದ ಬಾಗಿಲು ತೆರೆದಂತಾಯಿತು. ದಕ್ಷಿಣ ಸಂಸ್ಥಾನಗಳಿಂದ ಕರಿಯ ವಲಸೆಗಾರರ ಪ್ರವಾಹ ಉತ್ತರದ ನಗರಗಳ ಕಡೆಗೆ ಹರಿಯತೊಡಗಿತು. ವಲಸೆ ಬಂದ ಕರಿಯರು ಎಲೆಕ್ಟರಲ್ ಮತಗಳು (elctoral votes) ಹೆಚ್ಚಾಗಿರುವ ಮಹಾನಗರಗಳಲ್ಲಿ ನೆಲಸಿದರು. ಇಲ್ಲಿ ಅವರಿಗೆ ವ್ಯಕ್ತಿಸ್ವಾತಂತ್ರ್ಯ ಮತ್ತು ವಾಕ್ ಸ್ವಾತಂತ್ರ್ಯ ದೊರಕಿದುದೆ ಅಲ್ಲದೆ ಅವರ ಸಂಖ್ಯಾಬಲದ ಆಧಾರದ ಮೇಲೆ ಅವರ ರಾಜಕೀಯ ಪ್ರಭಾವವೂ ಹೆಚ್ಚುತ್ತ ಹೋಯಿತು.

ಕರಿಯರು ರಾಜಕೀಯ ಪ್ರಭಾವದ ದೆಸೆಯಿಂದ ಅನ್ಯಾಯವನ್ನು ಅಂಜದೆ ಎದುರಿಸಿ ನಿಲ್ಲುವ ಸ್ಫೂರ್ತಿಯನ್ನೂ ಪಡೆದುಕೊಂಡರು. ತಮ್ಮನ್ನು ಗುಲಾಮಗಿರಿಯಲ್ಲಿಯೇ ಇರಿಸಲು ಪ್ರಯತ್ನಿಸುತ್ತಿದ್ದ ಪ್ರತಿಗಾಮಿ ಶಕ್ತಿಗಳನ್ನು ಎದುರಿಸಿ ಹೋರಾಡುವ ಹುರುಪು ಸಂಸ್ಕೃತಿಯ ರೂಪ ತಳೆದು ಸಾಹಿತ್ಯ ಮತ್ತು ಇತರ ಸೃಜನಾತ್ಮಕ ಕಲೆಗಳಾಗಿ ಆವಿಷ್ಕಾರಗೊಂಡಿತು. ಕರಿಯರ ಸಾಹಿತ್ಯ ಮತ್ತು ಕಲೆಯ ಬೆಳವಣಿಗೆಯನ್ನು 'ಹಾರ್ಲೆಮ್ ಪುನರುತ್ಥಾನ' (Harlem Renaissance) ಎಂದು ಕರೆದರು. ಈ ಪುನರುತ್ಥಾನದ ಪ್ರಥಮ ಸಾಹಿತಿ ಜಮೈಕದಿಂದ ವಲಸೆ ಬಂದಿದ್ದ ಕ್ಲಾಡ್ ಮೆಕೇ (Claude McKay). ಇವನ ಕೃತಿಗಳು ಕರಿಯರ ಜಾನಪದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಅವನ ಕವನ ಸಂಕಲನ 'ಹಾರ್ಲೆಮ್ ನೆರಳುಗಳು' (Harlem Shadows) ಪ್ರತಿಗಾಮಿ ಶಕ್ತಿಗಳಿಗೆ ಅವನ ತೀವ್ರವಿರೋಧವನ್ನು ವ್ಯಕ್ತಪಡಿಸುತ್ತದೆ. ಈ ಭಾವನೆಗಳೇ ಹೆಚ್ಚಾಗಿ – ಹರಿತವಾಗಿ 'ನಾವು ಸಾಯಬೇಕಾಗಿ ಬಂದಾಗ' (If We Must Die) ಮತ್ತು 'ಬಿಳಿಯ ಗೆಳೆಯರಿಗೆ' (To the White Friends) ಕೃತಿಗಳಲ್ಲಿ ವ್ಯಕ್ತಗೊಂಡಿವೆ. ಉದಯೋನ್ಮುಖ ಬರಹಗಾರರಲ್ಲಿ ಪರಿವರ್ತನ ಕಾರ ಹಾಗೂ ಬಹುಮುಖ ಪ್ರತಿಭೆಯ ಕವಿ, ಕಾದಂಬರಿಕಾರ ಮತ್ತು ಅಂಕಣ ಬರಹಗಾರ ಲ್ಯಾಂಗ್‌ಸ್ಟನ್ ಹ್ಯೂಸ್ (Langston Hughes); ಜಾನಪದ ಸಂಗ್ರಹಕಾರ ಮತ್ತು ಕಾದಂಬರಿಕಾರ ಝೋರಾ ನೀಲ್ ಹರ್ಸ್‌ಟನ್ (Zora Neal Hurston); ಕವಿ ಮತ್ತು ಕಾದಂಬರಿಕಾರ ಕೌಂಟಿ ಕಲ್ಲನ್ (Countee Cullen); ಹೆಸರಾಂತ ಕೃತಿ 'ಕಪ್ಪು ಮನ್‌ಹಾಟನ್' (Black Manhattan) ರಚನೆಕಾರ ಜೇಮ್ಸ್ ವೆಲ್‌ಡನ್ ಜಾನ್ಸನ್ (James Weldon Johnson). ಆ ಕಾಲದ ಅತ್ಯುತ್ತಮ ಕೃತಿ ಎನ್ನಬಹುದಾದ ಕಾದಂಬರಿ 'ಕೇನ್' (Cane) ಬರೆದ ಜೀನ್ ಟೂಮರ್ (Jean Toomer) ಜಾರ್ಜಿಯದ ಕರಿಯರು ಅಧಿಕ ಸಂಖ್ಯೆಯಲ್ಲಿ ನೆಲಸಿರುವ ಪ್ರಾಂತದಲ್ಲಿ ಸಾಮಾನ್ಯರ ಜೀವನ ಮತ್ತು ವಾಷಿಂಗ್‌ಟನ್ ಬಳಿಯಲ್ಲಿ ಹೆಚ್ಚಾಗಿ ಕಂಡುಬರುವ ಕಂದುಬಣ್ಣದವರ ವೈವಿಧ್ಯತೆಯ ಜೀವನವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ. ಯೂಜೀನ್ ಓ ನೀಲ್, ಡು ಬೋಸ್ ಹೇವಾರ್ಡ್, ಜೂಲಿಯ ಪೀಟರ್ ಕಿನ್ ಮತ್ತು ಶೆರ್‌ವುಡ್ ಆ್ಯಂಡರ್‌ಸನ್ – ಇವರೇ ಮೊದಲಾದ ಬಿಳಿಯ ಬರಹಗಾರರು ಆ ಕಾಲದಲ್ಲಿ ಸೃಜನಶೀಲ ಸಾಹಿತ್ಯದ ಮೂಲದ್ರವ್ಯ ವಾಗಿದ್ದ ವಿಷಯ 'ನವೀನ ನೀಗ್ರೋ' (the new Negro) ವನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸಲು ಯತ್ನಿಸಿದ್ದರೂ ಕೂಡ ಅವರ ಪ್ರಯತ್ನ ಸಫಲವಾಗಲಿಲ್ಲ. ಕಾರಣ ಅವರ ಕೃತಿಗಳಲ್ಲಿ ಬಿಳಿಯರು ನೀಗ್ರೋಗಳ ಬಗ್ಗೆ ಬೆಳೆಸಿಕೊಂಡಿದ್ದ ರೂಢಿಬದ್ಧ 'ಕರಿಮೂತಿ ಯವರು' (darkies) ಎನ್ನುವ ಕಲ್ಪನೆಯ ಬದಲಿಗೆ 'ಪಳಗಿಸಿದ ಪರದೇಶದ ಪ್ರಾಚೀನ ಮಾನವ' ಎನ್ನುವ ಹೊಸದೊಂದು ಕಲ್ಪನೆಯನ್ನು ಸೃಷ್ಟಿಸಿದರು.

'ನವೀನ ನೀಗ್ರೋ'ಗಳು 'ನೀಗ್ರೋ ರಾಷ್ಟ್ರೀಯತೆ'ಯನ್ನು ಬೆಳೆಸಿಕೊಂಡರು. ಇದು ನೀಗ್ರೋತನದ ಶ್ರೇಷ್ಠತೆಯನ್ನು ಎತ್ತಿಹಿಡಿದು ನೀಗ್ರೊ ಪ್ರತ್ಯೇಕತೆಯನ್ನು ಪ್ರಚೋದಿಸಿತು.

ಅದು ಅವರದೇ ಆದ ಸಂಸ್ಕೃತಿಯ ಮೂಲಕ ನೀಗ್ರೊ ಸಾಹಿತ್ಯ, ಸಂಗೀತ ಚಿತ್ರಕಲೆಗಳ ಮಾಧ್ಯಮದಲ್ಲಿ ವ್ಯಕ್ತಗೊಂಡಿತು.

೧೯೧೬ರಲ್ಲಿ ಮಾರ್ಕಸ್ ಗ್ರೇವಿ (Markus Gravey) 'ನೀಗ್ರೋ ಅಭಿವೃದ್ಧಿ ಒಕ್ಕೂಟ ಸಂಸ್ಥೆ' (United Negro Improvement Association)ಯನ್ನು ನ್ಯೂಯಾರ್ಕ್ ನಗರದಲ್ಲಿ ಸ್ಥಾಪಿಸಿದನು. ವರ್ಣದ್ವೇಷ ಬಿಳಿಯರಲ್ಲಿ ಮೈಗೂಡಿ ಹೋಗಿರುವುದರಿಂದ ಅವರಿಂದ ನ್ಯಾಯ ಬಯಸುವುದು ವ್ಯರ್ಥ. ಕರಿಯರಿಗೆ ಉಳಿದಿರುವ ಒಂದೇ ಮಾರ್ಗವೆಂದರೆ ಅಮೆರಿಕವನ್ನು ಬಿಟ್ಟು ಆಫ್ರಿಕಕ್ಕೆ ಹೋಗಿ ನೆಲಸಿ ಅಲ್ಲಿ ನೀಗ್ರೊ ಗಣರಾಜ್ಯವನ್ನು ಸ್ಥಾಪಿಸುವುದು ಎಂದು ಗ್ರೇವಿ ನಂಬಿದ್ದನು. ಈ ಯೋಜನೆಯನ್ನು ಕೈಗೂಡಿಸಲು ಹಲವಾರು ಸಂಸ್ಥೆಗಳನ್ನು ಸ್ಥಾಪಿಸಿದನು. ೧೯೨೩ರ ಹೊತ್ತಿಗೆ ಅವನ ಸಂಸ್ಥೆಯ ಸದಸ್ಯರ ಸಂಖ್ಯೆ ಆರು ಮಿಲಿಯನ್ ಮುಟ್ಟಿತ್ತು. ಆ ಸಮಯದಲ್ಲಿ ಅವನ ಮೇಲೆ ತನ್ನ ಸಂಸ್ಥೆಗೆ ಹಣ ಕೂಡಿಸಲು ಅಂಚೆ ವ್ಯವಸ್ಥೆಯನ್ನು ದುರುಪಯೋಗ ಪಡಿಸಿಕೊಂಡ ಆಪಾದನೆಯನ್ನು ಹೊರಿಸಿದರು. ಅದು ಸಾಬೀತಾಗಿ ೧೯೨೭ಗವರೆಗೂ ಅಟ್ಲಾಂಟ ಜೈಲಿನಲ್ಲಿದ್ದ ಇವನಿಗೆ ಅಧ್ಯಕ್ಷ ಕೂಲಿಡ್ಜ್ ಕ್ಷಮಾಪಣೆ ನೀಡಿದ ನಂತರ ಜಮೈಕಾಗೆ ಗಡೀಪಾರು ಮಾಡಲಾಯಿತು. ಗ್ರೇವಿ ತನ್ನ ಗುರಿ ಸಾಧಿಸಲಾರದೆ ಹೋದರೂ ಅವನು ಹುಟ್ಟು ಹಾಕಿದ ನೀಗ್ರೋ ಅಭಿವೃದ್ಧಿ ಆಂದೋಳನ ಕರಿಯ ಜನಾಂಗದಲ್ಲಿ ಅಂತರ್ಗತವಾಗಿದ್ದು ಕಾಲಾನಂತರದಲ್ಲಿ 'ಕಪ್ಪು ಶಕ್ತಿ' (Black Power) ಎನ್ನುವ ಘೋಷಣೆಯ ಮೂಲಕ ಪುನರುತ್ಥಾನ ಪಡೆಯಿತು.

೧೯೧೫ರಲ್ಲಿ ಬೂಕರ್ ಟಿ. ವಾಷಿಂಗ್‌ಟನ್ ಕಾಲವಾದನು. ಅವನ ನಂತರ ನೀಗ್ರೊ ಜನದ ನಾಯಕತ್ವ ಯಾವ ಒಂದು ವ್ಯಕ್ತಿಯ ಮೇಲೂ ಆಧಾರಿತವಾಗಿರದೆ, ಅದರ ಹೊಣೆಗಾರಿಕೆಯನ್ನು ಒಂದು ಸಂಸ್ಥೆ ವಹಿಸಿಕೊಂಡಿತು. ಈ ಸಂಸ್ಥೆಯೇ 'ವರ್ಣಜನಾಂಗದ ಅಭಿವೃದ್ಧಿಯ ರಾಷ್ಟ್ರೀಯ ಸಂಸ್ಥೆ' (NAACP). (ಈ ಸಂಸ್ಥೆಯ ಬಗ್ಗೆ ವಿವರಗಳನ್ನು ಹಿಂದೆ ತಿಳಿಸಲಾಗಿದೆ.) ನೀಗ್ರೊ ಅಭಿವೃದ್ಧಿ ಆಂದೋಳನ ಪುನರುತ್ಥಾನವಾಗಿದ್ದನ್ನು ಎರಡು ಘಟನೆಗಳು ಸಾಬೀತುಗೊಳಿಸಿದವು: ೧೯೨೮ರಲ್ಲಿ ಚಿಕಾಗೊ ಮತದಾನ ಪ್ರಾಂತವೊಂದರಿಂದ ಆಸ್ಕರ್ ಡಿಪ್ರೀಸ್ಟ್ (Oscar Depriest) ಕಾಂಗ್ರೆಸ್ ಸದಸ್ಯನಾಗಿ ಚುನಾಯಿತನಾದನು. (೧೯೦೧ರಿಂದ ಕರಿಯರು ಯಾರೂ ಕಾಂಗ್ರೆಸ್ಸಿಗೆ ಚುನಾಯಿತರಾಗಿರಲಿಲ್ಲ.) ಡಿಪ್ರೀಸ್ಟ್ ಮೊದಲನೆಯ ಕರಿಯ ಕಾಂಗ್ರೆಸ್ ಸದಸ್ಯ ಹಾಗೂ ಉತ್ತರ ಸಂಸ್ಥಾನಗಳಿಂದ ಚುನಾಯಿತರಾದ ಕರಿಯರಲ್ಲಿ ಇವನೇ ಮೊಟ್ಟ ಮೊದಲಿನವನು.

ಎರಡನೆಯ ಘಟನೆ ೧೯೩೦ರಲ್ಲಿ ನಡೆದದ್ದು: ನ್ಯಾಯಾಧೀಶ ಜಾನ್ ಪಾರ್ಕರ್‌ನನ್ನು ಶ್ರೇಷ್ಠ ನ್ಯಾಯಾಲಯಕ್ಕೆ (Supreme Court) ಅಧ್ಯಕ್ಷ ಹೂವರ್ (Hoover) ನಾಮಕರಣ ಮಾಡಿದ್ದನ್ನು NAACP ತೀವ್ರವಾಗಿ ವಿರೋಧಿಸಿತು. ಪಾರ್ಕರ್ ಉತ್ತರ ಕೆರೊಲಿನದ

ಗವರ್ನರ ಆಗಿದ್ದಾಗ 'ನೀಗ್ರೊಗಳಿಗೆ ಮತದಾನದ ಹಕ್ಕನ್ನು ನೀಡುವುದರಿಂದ ಅಪಾಯ ಮತ್ತು ದುಷ್ಕೃತ್ಯಗಳಿಗೆ ದಾರಿಯಾಗುತ್ತದೆ' ಎಂದು ಘೋಷಿಸಿದ್ದನು. ಇವನ ನಾಮಕರಣ ವಿರುದ್ಧವಾಗಿ NAACP ಸಂಸ್ಥೆ ದೃಢ ನಿಶ್ಚಯದಿಂದ ಮತ್ತು ಜಾಣತನದಿಂದ ಹಿಂದೆಂದೂ ಇರದ ಒಗ್ಗಟ್ಟಿನಿಂದ ಕಾರ್ಯಾಚರಣೆ ನಡೆಸಿತು. ಪಾರ್ಕರ್‌ನ ನಾಮಕರಣವನ್ನು ಸೆನೆಟ್ ೪೧-೩೯ ಮತಗಳ ಅಂತರದಿಂದ ನಿರಾಕರಿಸಿತು. ಪಾರ್ಕರ್‌ನ ಸೋಲು ಕರಿಯ ಮತದಾರರ ಪ್ರಭಾವವನ್ನು ಸ್ಪಷ್ಟಪಡಿಸಿತು.

೧೯೩೦ರ ದಶಕದಲ್ಲಿ NAACP ಸಂಸ್ಥೆ ರಾಷ್ಟ್ರದ ನ್ಯಾಯವ್ಯವಸ್ಥೆಯ ನ್ಯೂನತೆಗಳನ್ನು ಸುಧಾರಿಸಲು ನಡೆಸಿದ ಕಾರ್ಯಾಚರಣೆ ಭರದಿಂದ ಸಾಗಿತು. ಸಂಸ್ಥಾನದ ಉಚ್ಚ ನ್ಯಾಯಾಲಯದ ತೀರ್ಪುಗಳು ನ್ಯಾಯವಿತರಣೆಯಲ್ಲಿ ಸುಧಾರಣೆಗಳು ಜಾರಿಗೆ ಬರಲು ಕಾರಣವಾದವು. ಆಪಾದಿತನನ್ನು ನ್ಯಾಯಸಮ್ಮತವಾದ ವಿಚಾರಣೆಗೆ ಒಳಪಡಿಸದೆ (without due process of Law) ಶಿಕ್ಷೆ ವಿಧಿಸುವುದು ರಾಜ್ಯಾಂಗಕ್ಕೆ ವಿರೋಧವಾದುದು ಎನ್ನುವ ತೀರ್ಪು ಬಿಳಿಯರು ಕರಿಯರನ್ನು ವಿಚಾರಣೆಗೆ ಒಳಪಡಿಸದೆ ಶಿಕ್ಷಿಸುವುದು ಮತ್ತು ಕೆಲವು ಸಂದರ್ಭಗಳಲ್ಲಿ ಉದ್ರಿಕ್ತ ಗುಂಪು ಆಪಾದಿತನನ್ನು ಹಿಡಿದು ತಂದು, ವಿಚಾರಣೆ ಇಲ್ಲದೆ ನೇಣು ಹಾಕುವುದು ಎಲ್ಲವೂ ನ್ಯಾಯಬಾಹಿರ ಹಾಗೂ ಶಿಕ್ಷಾರ್ಹ ಅಪರಾಧಗಳೆಂದು ಪರಿಗಣಿಸುವಂತಾಯಿತು. ಇದರಿಂದಾಗಿ ಕರಿಯರ ಮೇಲೆ ಹಲ್ಲೆ ನಡೆಸುವುದು ಮತ್ತು ಇತರ ಹಿಂಸಾಕೃತ್ಯಗಳು ಕಡಿಮೆಯಾಗುತ್ತ ಹೋದವು. ಹೀಗೆಯೇ ಇನ್ನೊಂದು ತೀರ್ಪು ಅಲಬಾಮ ಸಂಸ್ಥಾನದಲ್ಲಿ ಕರಿಯರನ್ನು ವ್ಯವಸ್ಥಿತವಾಗಿ ಜ್ಯೂರಿ ಕರ್ತವ್ಯದಿಂದ ವಂಚಿತರಾಗುವಂತೆ ಮಾಡುವುದು ರಾಜ್ಯಾಂಗಕ್ಕೆ ವ್ಯತಿರಿಕ್ತವಾದುದು ಎನ್ನುವುದನ್ನು ಸ್ಪಷ್ಟಪಡಿಸಿತು. ಈ ತೀರ್ಪು ಸಂಸ್ಥಾನದ ನ್ಯಾಯಾಲಯಗಳಲ್ಲಿ (state courts) ವಿಸ್ತಾರವಾದ ಸುಧಾರಣೆಗಳನ್ನು ಉಂಟುಮಾಡಿತು. ಈ ಕಾರ್ಯಗಳಲ್ಲಿ NAACP ಸಂಸ್ಥೆ ಮಹತ್ತರ ಪಾತ್ರ ವಹಿಸಿತು.

ಆಧುನಿಕತೆಯ ಸಂಸ್ಕೃತಿ (The Culture of Modernism)

ಇಪ್ಪತ್ತನೆಯ ಶತಮಾನ ಮುಂದುವರಿದಂತೆಲ್ಲ ಪ್ರಗತಿಯಲ್ಲಿ ನಂಬಿಕೆ ಇಟ್ಟಿದ್ದ ಉದಾರಮನಸ್ಸಿನ ಜನರು ಮತ್ತು ಸಾಮಾಜಿಕ ಭವಿಷ್ಯಕಾರರು ನಿರಾಸೆಗಳ ಸರಣಿಯನ್ನು ಅನುಭವಿಸಬೇಕಾಯಿತು. ಅವರು ಆಗುವುದಿಲ್ಲ ಎಂದು ಊಹಿಸಿದ್ದ ಘಟನೆಗಳು ಆಗಿಯೇಬಿಟ್ಟವು – ಮೊದಲನೆಯ ಜಾಗತಿಕ ಯುದ್ಧ, ರಾಷ್ಟ್ರಗಳ ಒಕ್ಕೂಟದ ವಿಫಲತೆ, ಮಹಾ ಆರ್ಥಿಕ ಮುಗ್ಗಟ್ಟು, ಕಮ್ಯೂನಿಸ್ಟ್ ಮತ್ತು ಫಾಸಿಸ್ಟ್ ಸರ್ವಾಧಿಕಾರಿಗಳ ಏಳಿಗೆ ಮತ್ತು ಪ್ರಪಂಚದಾದ್ಯಂತ ಉಂಟಾಗಿದ್ದ ಸಂದಿಗ್ಧ ಪರಿಸ್ಥಿತಿ – ಇವೆಲ್ಲ ಜನರಲ್ಲಿ ನಿರಾಸೆ ಮತ್ತು ಅಸ್ಥಿರತೆಯನ್ನು ಉಂಟುಮಾಡಿದವು. ವಿಜ್ಞಾನ ಮತ್ತು ಸಾಮಾಜಿಕ ಚಿಂತನಗಳಲ್ಲಿ ಹೊಸ ಆಲೋಚನಾತರಂಗಗಳು, ಜಗತ್ತನ್ನು ಬುದ್ಧಿಯಿಂದ ಅರಿತುಕೊಂಡು ಅದರ

ನ್ಯೂನತೆಗಳನ್ನು ಸುಧಾರಣೆ ಮಾಡಬಹುದು ಎಂದು ಸುಲಭವಾಗಿ ನಂಬಿದ್ದವರಿಗೆ ಆಘಾತ ಉಂಟುಮಾಡಿದವು. ಡಾರ್ವಿನ್‌ನ ತತ್ವ ಮಾನವರನ್ನು ದೇವತೆಗಳಿಗಿಂತ ಕಪಿಗಳಿಗೆ ಹತ್ತಿರದವರು ಎಂದು ಸಾಕ್ಷ್ಯಾಧಾರಗಳಿಂದ ತೋರಿಸಿಕೊಟ್ಟು ಪುರಾತನ ನಂಬಿಕೆಗಳನ್ನು ಬುಡಮೇಲು ಮಾಡಿತು. ಕಾರ್ಲ್ ಮಾರ್ಕ್ಸ್ – ಬಂಡವಾಳಶಾಹಿ ಸಮಾಜದಲ್ಲಿ ಜನರು ಸಂಪೂರ್ಣ ಸ್ವತಂತ್ರರು ಎನ್ನುವುದು ಒಂದು ಭ್ರಮೆ; ವ್ಯಕ್ತಿಸಂಬಂಧವಿಲ್ಲದ ಆರ್ಥಿಕ ಶಕ್ತಿಗಳು ಅವರ ಜೀವನವನ್ನು ನಿಯಂತ್ರಿಸುತ್ತವೆ; ಈ ಆರ್ಥಿಕ ಶಕ್ತಿಗಳ ಅಧೀನತೆಯಲ್ಲಿರುವವರು ಸ್ವತಂತ್ರರಾಗಿರಲು ಸಾಧ್ಯವಿಲ್ಲ ಎನ್ನುವ ಅಭಿಪ್ರಾಯಗಳನ್ನು ಕಮ್ಯೂನಿಸಂ ವಿರೋಧಿಗಳು ಕೂಡ ನಿರಾಕರಿಸುವುದು ಕಷ್ಟವಾಯಿತು. ಫ್ರಾಯ್ಡ್‌ನ ಮನಃಶಾಸ್ತ್ರದ ಪ್ರಕಾರ ಮತಿವಂತನಾದ ಮಾನವ ತನ್ನ ಭವಿಷ್ಯ ತಾನೇ ರೂಪಿಸಿಕೊಳ್ಳಬಲ್ಲ ಸರ್ವಶಕ್ತನಲ್ಲ; ಅವನಿಗೆ ಅರಿವಿಲ್ಲದಂತೆ ಅವನ ಅನಭಿಜ್ಞ (unconscious) ಅಭಿಲಾಷೆಗಳು ಅವನ ವರ್ತನೆಯನ್ನು ನಿರ್ದೇಶಿಸುತ್ತವೆ.

ಡಾರ್ವಿನ್, ಮಾರ್ಕ್ಸ್ ಮತ್ತು ಫ್ರಾಯ್ಡ್ ಮಾನವ ಸಂಪೂರ್ಣ ಸ್ವತಂತ್ರನಲ್ಲ ಎಂದು ಪ್ರತಿಪಾದಿಸಿದ್ದು ಸಂಪ್ರದಾಯಸ್ಥರಿಗೆ ಆಘಾತ ಉಂಟುಮಾಡಿತು. ಭೌತಶಾಸ್ತ್ರದ ಹೊಸಶೋಧನೆಗಳು ಅವರಿಗೆ ಇನ್ನೂ ಹೆಚ್ಚಿನ ಆಘಾತ ಮಾಡಿದವು. ಈ ಶೋಧನೆಗಳು ಅಮೆರಿಕನ್ನರ ಅಲೋಚನೆಗಳನ್ನು ಮತ್ತು ಬದುಕನ್ನು ಬುಡಸಮೇತ ಅಲ್ಲಾಡಿಸಿಬಿಟ್ಟವು. ೧೯೧೯ರ ಮೇ ತಿಂಗಳ ೨೯ರಂದು ಸೂರ್ಯಗ್ರಹಣ ಸಮಯದಲ್ಲಿ ತೆಗೆದ ಚಿತ್ರಗಳು ಆಲ್ಬರ್ಟ್ ಐನ್‌ಸ್ಟೈನ್‌ನ ಸಾಪೇಕ್ಷ ತತ್ವ (Theory of Relativity)ವನ್ನು ಸಾಬೀತುಗೊಳಿಸಿದವು. ಸೂರ್ಯನ ಗುರುತ್ವಾಕರ್ಷಣೆ (gravitational pull) ದೂರದ ನಕ್ಷತ್ರಗಳಿಂದ ಬರುವ ಕಿರಣಗಳನ್ನು ಬಗ್ಗಿಸುತ್ತದೆ ಎನ್ನುವುದನ್ನು ಆ ಚಿತ್ರಗಳು ಖಚಿತಪಡಿಸಿದವು. ಈ ಹೊಸ ಶೋಧನೆ ಅದುವರೆಗೆ ಇದ್ದ ವಿಶ್ವದ ಕಲ್ಪನೆಯನ್ನು ನಂಬಿಕೆಗೆ ನಿಲುಕಲಾರದ ರೀತಿಯಲ್ಲಿ ಬದಲಾಯಿಸಿತು. ಐಸಾಕ್ ನ್ಯೂಟನ್‌ನ ತತ್ವದ ಆಧಾರದ ಮೇಲೆ ರೂಪಿಸಿಕೊಂಡಿದ್ದ ವಿಶ್ವದ ಕಲ್ಪನೆಯ ತಳಹದಿ ಕಳಚಿಬಿದ್ದಿತು. ನ್ಯೂಟನ್ ವಿಶ್ವ ಖಚಿತವಾದ ಪ್ರಕೃತಿ ನಿಯಮಗಳಿಗೆ ಅನುಗುಣವಾಗಿ ನಡೆದುಕೊಳ್ಳುತ್ತದೆ, ಈ ನಿಯಮಗಳನ್ನು ವಿಜ್ಞಾನ ವಿಧಾನದಿಂದ ತಿಳಿದುಕೊಳ್ಳಬಹುದು ಎಂದು ಪರಿಗಣಿಸಿದ್ದನು. 'ಈ ಜಗತ್ತು ಒಂದು ಯಂತ್ರ; ಇದರ ಕಾರ್ಯಾಚರಣೆಯಲ್ಲಿ ಅನಿಶ್ಚಯವಾಗಲಿ ರಹಸ್ಯವಾಗಲಿ ಇಲ್ಲ' ಎಂದು ಒಬ್ಬ ವಿಜ್ಞಾನಿ ಅಭಿಪ್ರಾಯಪಟ್ಟಿದ್ದನು. ಇಂಥ ನಿಶ್ಚಯ ಜಗತ್ತಿನಲ್ಲಿ ಮಾನವನ ತಿಳುವಳಿಕೆ ನಿರಂತರವಾಗಿ ಪ್ರಗತಿ ಹೊಂದುವುದು ಸಾಧ್ಯ ಎನ್ನುವ ಆಶಾಭಾವನೆಯನ್ನು ವಿಜ್ಞಾನಿಗಳು ಬೆಳೆಸಿಕೊಂಡಿದ್ದರು.

ಆಲ್ಬರ್ಟ್ ಐನ್‌ಸ್ಟೈನ್ 'ಕಾಲ (time), ದೇಶ/ಅಂತರ/ಜಾಗ (space) ಮತ್ತು ಗಾತ್ರ (mass) – ಇವು ನಿರಾವಲಂಬಿ (absolute)ಗಳಲ್ಲ, ಇವು ಅವಲೋಕಿಸುವವನು

ಇರುವ ಜಾಗ ಮತ್ತು ಚಲನೆ (motion)ಗಳಿಗೆ ಸಾಪೇಕ್ಷವಾಗಿರುತ್ತವೆ' ಎನ್ನುವ ಸಾಪೇಕ್ಷವಾದವನ್ನು ಮಂಡಿಸಿದಾಗ ನ್ಯೂಟನ್ ಕಲ್ಪಿಸಿಕೊಂಡ 'ನಿಶ್ಚಯ ಜಗತ್ತು' ಕುಸಿದುಬಿತ್ತು. ಐನ್‌ಸ್ಟೈನ್ ಅಭಿಪ್ರಾಯದಲ್ಲಿ ನ್ಯೂಟನ್ ಮೆಕ್ಯಾನಿಕ್ಸ್ (mechanics) ಕಡಿಮೆ ವೇಗ ಪರಿಸ್ಥಿತಿಗೆ ಅನ್ವಯಿಸಬಹುದು. ಆದರೆ ವೇಗ ಬೆಳಕಿನ ವೇಗವನ್ನು ಸಮೀಪಿಸಿದಾಗ ಎಲ್ಲ ಅಳತೆ ಉಪಕರಣಗಳು ಅದಕ್ಕೆ ತಕ್ಕಂತೆ ಬದಲಾಗುತ್ತವೆ. ಬೇರೆ ಗ್ರಹವಾಸಿಗೆ ಅದರ ಚಲಿಸುವ ವೇಗಕ್ಕನುಗುಣವಾಗಿ ನಮಗೆ ಕಾಣುವ ಜಗತ್ತಿಗಿಂತಲೂ ಭಿನ್ನವಾದ ವಿಶ್ವ ಕಾಣಿಸುತ್ತದೆ, ನಂಬಲು ಕಷ್ಟವಾದ ಸಂಗತಿ ಎಂದರೆ ಬಾಹ್ಯಾಕಾಶ ನಾವೆಯಲ್ಲಿ ಅತ್ಯಂತ ವೇಗವಾಗಿ ಪ್ರಯಾಣ ಮಾಡುವವನಿಗೆ ಭೂಮಿಯ ಕಾಲಕ್ಕೆ ಸಾಪೇಕ್ಷವಾಗಿ ಅವನು ಪ್ರಯಾಣಿಸುತ್ತಿರುವ ವೇಗ ಕಾಲವನ್ನು ನಿಧಾನಗೊಳಿಸುತ್ತದೆ. ಅವನು ಭೂಮಿಗೆ ಹಿಂತಿರುಗಿ ಬಂದಾಗ ಅವನಿಲ್ಲದ ಸಮಯದಲ್ಲಿ ಶತಮಾನಗಳು ಉರುಳಿಹೋಗಿರುವುದು ಅವನನ್ನು ದಿಗ್ಭ್ರಮೆಗೊಳಿಸುತ್ತದೆ.

ವಿಶಾಲ ವಿಶ್ವದ ಒಳಹೊಕ್ಕು ಹೋದಂತೆಲ್ಲ ನಿಶ್ಚಯತೆ (certainty) ನಿರ್ನಾಮಗೊಳ್ಳುತ್ತದೆ. ಅದೇ ರೀತಿಯಲ್ಲಿ 'ಅಣು' (atom) ವಿನ ಅತ್ಯಂತ ಚಿಕ್ಕಪ್ರಪಂಚದ ಒಳಹೊಕ್ಕು ನೋಡಿದಾಗ ಅನಿಶ್ಚಯದ ಅರಿವಾಗುತ್ತದೆ. ೧೮೯೦ರ ದಶಕದಲ್ಲಿ ರೇಡಿಯೊ ವಿಕಿರಣ (radioactivity) ದ ಸಂಶೋಧನೆಯಿಂದ 'ಅಣು'ಗಳು ಜಡವಸ್ತುವಿನ (matter) ಅವಿಭಾಜ್ಯ (irreducible) ಘಟಕಗಳಲ್ಲ, ಅವುಗಳಲ್ಲಿ ಕೆಲವು 'ಚೈತನ್ಯ' (energy) ಕಣಗಳನ್ನು (particles) ಹೊರಸೂಸುತ್ತವೆ ಎನ್ನುವುದು ತಿಳಿಯಿತು. ಇದರಿಂದ ಐನ್‌ಸ್ಟೈನ್ ಜಡವಸ್ತು ಮತ್ತು ಚೈತನ್ಯ ಬೇರೆ ಬೇರೆ ವಸ್ತುಗಳಲ್ಲ; ಅವು ಪರಸ್ಪರವಾಗಿ ಪರಿವರ್ತನೆಗೊಳ್ಳಬಲ್ಲವು ಎಂದು ನಿರ್ಧರಿಸಿದನು. ೧೯೦೭ರಲ್ಲಿ ಐನ್‌ಸ್ಟೈನ್ ಜಡವಸ್ತು ಮತ್ತು ಚೈತನ್ಯಗಳ ಸಂಬಂಧವನ್ನು ಅವುಗಳ ಪ್ರಮಾಣವನ್ನು ಅಳತೆ ಮಾಡುವುದರ ಮೂಲಕ ಸರಳ ಹಾಗೂ ಸಾಮಾನ್ಯವಾಗಿ ತೋರುವ ಸೂತ್ರರೂಪದಲ್ಲಿ ವಿವರಿಸಿದನು. ಇದೇ ಲೋಕವಿಖ್ಯಾತವಾದ $E=mc^2$ ಸೂತ್ರ: ಚೈತನ್ಯವನ್ನು ಜಡವಸ್ತುವಿಗೆ ಸಮನಾಗಿಸಲು ಅವುಗಳನ್ನು ಬೆಳಕಿನ ವೇಗದ ದ್ವಿಘಾತದಿಂದ (squared) ಗುಣಿಸಬೇಕು (energy equals mass times the speed of light squared) ಈ ಸೂತ್ರವನ್ನು ಐನ್‌ಸ್ಟೈನ್ ಪ್ರತಿಪಾದಿಸಿದ ಸಮಯದಲ್ಲೇ ಜರ್ಮನಿಯ ಬರ್ಲಿನ್ ನಗರದ ಸಂಶೋಧಕ ಮಾಕ್ಸ್ ಪ್ಲಾಂಕ್ (Max Planck) ವಿದ್ಯುತ್ ಅಯಸ್ಕಾಂತ ಚೈತನ್ಯ (electromagnetic energy) ವಿದುಚ್ಛಕ್ತಿಯಾಗಿ ಅಥವಾ ಬೆಳಕಾಗಿ ಹೊರಸೂಸುವುದು ಪುಟ್ಟ 'ಗಂಟು' ಅಥವಾ 'ಮೂಟೆ'ಗಳ ರೂಪದಲ್ಲಿ ಎನ್ನುವುದನ್ನು ಶೋಧಿಸಿದನು. ಈ 'ಪುಟ್ಟಮೂಟೆ' ಗಳನ್ನು (little bundles) ಅವನು 'ಕ್ವಾಂಟ' (quanta) ಎಂದು ಕರೆದನು. ಇದು ಭೌತಶಾಸ್ತ್ರದಲ್ಲಿ ಕ್ವಾಟಂ ತತ್ವವಾಗಿ (quantum theory) ಬೆಳೆಯಿತು. ಅಣುಗಳು ಅತಿ ಸಂಕೀರ್ಣವಾದುವು ಮತ್ತು ವರ್ಣಸಲಸದಳವಾದವು ಎಂದು ವಿಜ್ಞಾನಿಗಳು

ಮನಗಂಡರು. ಹೈಸೆನ್‌ಬರ್ಗ್ (Werner Heisenberg) ಎಂಬ ಜರ್ಮನ್ ಭೌತಶಾಸ್ತ್ರಜ್ಞ ಅಣುವಿನಲ್ಲಿ ಎಲೆಕ್ಟ್ರಾನ್ ನೆಲೆ ಮತ್ತು ವೇಗ ಎರಡನ್ನೂ ತಿಳಿಯುವುದು ಸಾಧ್ಯವಿಲ್ಲ ಎಂದು ತಿಳಿಸಿದನು. ಹೈಸೆನ್‌ಬರ್ಗ್ ತತ್ವದ ಅರ್ಥ: ಒಂದು ನಿರ್ದಿಷ್ಟ ಮಟ್ಟದವರೆಗೆ ಮಾತ್ರ ನಾವು ವಸ್ತುಗಳನ್ನು ಅಳೆಯಬಹುದು. ಅದರಾಚೆಗೆ ಅವು ಅಳತೆಗೆ ಸಿಗಲಾರವು ಎನ್ನುವ ಅಭಿಪ್ರಾಯ.

ವಿಶ್ವದ ಹೊಸ ಪರಿಕಲ್ಪನೆಯನ್ನು ಪರಿಶೀಲಿಸಿದ ಹಾರ್ವಾರ್ಡ್ ವಿಶ್ವವಿದ್ಯಾನಿಲಯದ ಗಣಿತಶಾಸ್ತ್ರಜ್ಞನೊಬ್ಬ 'ನಾನು ನನ್ನ ದೃಢ ನಿಶ್ಚಯಗಳನ್ನು ಮತ್ತು ನಂಬಿಕೆಗಳನ್ನು ಬಿಡಬೇಕಾಗಿ ಬಂತು. ಈ ಜಗತ್ತು ತರ್ಕಬದ್ಧವಾದುದಲ್ಲ. ಇದು ಮನುಷ್ಯನ ಬುದ್ಧಿಶಕ್ತಿಗೆ ಮೀರಿದುದು. ನಾವು ವಿಶ್ವದ ಒಳಹೊಕ್ಕು ಹೋದಂತೆಲ್ಲ ಕಾರ್ಯಕಾರಣ ಸಂಬಂಧಗಳು ಅರ್ಥವಿಹೀನವಾಗುತ್ತವೆ' ಎಂದು ತನ್ನ ಮನಸ್ಸಿನ ತೊಯ್ದಾಟವನ್ನು ತೋಡಿಕೊಂಡಿದ್ದಾನೆ. ಈ ಗಹನವಾದ ವಿಷಯಗಳು ಸಾಮಾನ್ಯ ಜನರು ಗ್ರಹಿಸುವುದು ಕಷ್ಟವಾಯಿತು. ಈ ಶೋಧನೆಯ ಕೆಲವು ಅಂಶಗಳನ್ನು ಐನ್‌ಸ್ಟೈನ್ ಕೂಡ ಗ್ರಹಿಸಲಾರದೆ ಅವನ ಬದುಕಿನ ಉಳಿದ ಕಾಲವನ್ನು ವಿಶ್ವದ ಈ ರಹಸ್ಯಗಳನ್ನು ವಿವರಿಸುವ ಒಂದು ತತ್ವವನ್ನು ಪ್ರತಿಪಾದಿಸಲು ಮೀಸಲಾಗಿಟ್ಟನು. ಈ ತತ್ವವೇ ಹೆಸರಾಂತ 'ಕ್ಷೇತ್ರಗಳ ಏಕೀಕರಣ ಸಿದ್ಧಾಂತ' (Unified Field Theory). ಈ ಸಿದ್ಧಾಂತ ವಿದ್ಯುತ್ ಅಯಸ್ಕಾಂತದ ಜೊತೆಗೆ ಗುರುತ್ವಾಕರ್ಷಣವನ್ನು ಸೇರಿಸಿ, ಸಾಪೇಕ್ಷ ಮತ್ತು ಕ್ವಾಂಟಮ್ ತತ್ವಗಳನ್ನು ಒಂದುಗೂಡಿಸುತ್ತದೆ.

ಐನ್‌ಸ್ಟೈನ್‌ನ ಸಾಪೇಕ್ಷವಾದ ಅನೇಕ ಜನರಿಗೆ ಅರ್ಥವಾಗದಿದ್ದರೂ ಅದು ಸಾರ್ವಜನಿಕರ ಕುತೂಹಲವನ್ನು ಕೆರಳಿಸಿತು. ಬೇರೆ ಬೇರೆ ಸ್ಥಳಗಳಲ್ಲಿ ನಿಂತು ಅವಲೋಕಿಸುವವರಿಗೆ ವಸ್ತುಗಳು ಬೇರೆ ಬೇರೆ ತರವಾಗಿ ಕಾಣುತ್ತವೆ ಎನ್ನುವ ಸಂಗತಿ ಜನಸಾಮಾನ್ಯರು ಅರ್ಥ ಮಾಡಿಕೊಂಡರು. ಎರಡು ಶತಮಾನಗಳ ಹಿಂದೆ ಜ್ಞಾನೋದಯ (enlightenment) ಕಾಲದ ಚಿಂತನಕಾರರು ಸಮಾಜವನ್ನು ನಿಯಂತ್ರಿಸುವ ನಿಯಮಗಳನ್ನು ನ್ಯೂಟನ್‌ನ ಗುರುತ್ವಾಕರ್ಷಣ ತತ್ವದ ಆಧಾರದ ಮೇಲೆ ರಚನೆ ಮಾಡಿದಂತೆ, ಇಪ್ಪತ್ತನೆಯ ಶತಮಾನದಲ್ಲಿ 'ಸಾಪೇಕ್ಷ' ಮತ್ತು 'ಅನಿಶ್ಚಯತೆ'ಗಳನ್ನು ಸಮಾಜಕ್ಕೆ ಅನ್ವಯಿಸಲಾಯಿತು. ಇದರ ಪರಿಣಾಮವಾಗಿ ಸಮಾಜದ ಯಾವ ಸ್ತರಗಳಲ್ಲೂ ಪರಿಪೂರ್ಣ ಸಾಮಾಜಿಕ ಮೌಲ್ಯಗಳು (absolute values) ಇರಲು ಸಾಧ್ಯವಿಲ್ಲ ಎಂದು ನಿರ್ಧರಿಸಲಾಯಿತು. ಹಾಗೆಯೇ ಸಮಾಜದಲ್ಲಿ ಪರಿಪೂರ್ಣ ಪರಿಮಾಣಗಳು (absolute standards) ಇರುವ ಸಾಧ್ಯತೆಯನ್ನು ನಿರಾಕರಿಸಲಾಯಿತು. ಮಾನವಶಾಸ್ತ್ರಜ್ಞರು 'ಸಂಸ್ಕೃತಿ' ಪಾರಿಭಾಷಿಕ ಪದವನ್ನು ವಿಶಾಲವಾದ ಅರ್ಥದಲ್ಲಿ ಬಳಸಿಕೊಂಡರು. ಸಂಸ್ಕೃತಿಯನ್ನು ಸಾಪೇಕ್ಷ ತತ್ವದ ಚೌಕಟ್ಟಿನಲ್ಲಿ ವಿವರಿಸಿದಾಗ ಅದರ ಸಂಕುಚಿತ ನಿರೂಪಣೆಗೆ

(ಉತ್ತಮ ಅಭಿರುಚಿ, ಸಂಪನ್ನತೆ ಇತ್ಯಾದಿ) ಬದಲಾಗಿ, ಆಯಾಯ ಸಮಾಜಗಳಲ್ಲಿ ಜನರು ಉಪಯೋಗಿಸುವ ಸಮಗ್ರ ಭೌತಿಕ (material) ವಸ್ತುಗಳು ಮತ್ತು ಅವರ ಅಭೌತಿಕ (non-material) ಸೃಷ್ಟಿಗಳನ್ನು (creations) ಒಳಗೊಂಡ ನಿರೂಪಣೆಯನ್ನು ಉಪಯೋಗಿಸಲು ಪ್ರಾರಂಭಿಸಿದರು. ಸಾಪೇಕ್ಷ ದೃಷ್ಟಿಯಲ್ಲಿ ಅತ್ಯಂತ ಹಿಂದುಳಿದ ಬುಡಕಟ್ಟುಗಳು (races) ಕೂಡ ಅವರದೇ ಆದ ಸಂಸ್ಕೃತಿಯನ್ನು ಹೊಂದಿರುತ್ತವೆ. ಒಂದು ಸಂಸ್ಕೃತಿಯ ಮೌಲ್ಯಗಳಿಂದ ಇನ್ನೊಂದು ಸಂಸ್ಕೃತಿಯನ್ನು ವಿಮರ್ಶಿಸುವುದು ತಪ್ಪಾಗುತ್ತದೆ ಎನ್ನುವುದನ್ನು ಸಮಾಜವಿಜ್ಞಾನಿಗಳು ಸ್ಪಷ್ಟಪಡಿಸಿದರು. ಈ ಅಧ್ಯಯನ ವಿಧಾನವನ್ನು 'ಸಾಪೇಕ್ಷ ಸಾಂಸ್ಕೃತಿಕ ತತ್ವ' (cultural relativism) ಎಂದು ಕರೆಯುತ್ತಾರೆ.

ನವ್ಯ ಸಾಹಿತ್ಯ

ಡಾರ್ವಿನ್ ಮತ್ತು ಐನ್‌ಸ್ಟೈನ್‌ರು ವ್ಯಕ್ತಪಡಿಸಿದ ವೈಜ್ಞಾನಿಕ ವಿಚಾರಗಳು ಬುದ್ಧಿಜೀವಿಗಳ ಮತ್ತು ಸೃಜನಶೀಲ ಕಲಾವಂತರ ಮನಸ್ಸಿನಲ್ಲಿ ಒಂದು ಕ್ರಾಂತಿಯನ್ನೇ ಪ್ರಚೋದಿಸಿದವು. ಈ ಕ್ರಾಂತಿ ನವ್ಯತೆ (modernism)ಯ ರೂಪದಲ್ಲಿ ಅಭಿವ್ಯಕ್ತಿಗೊಂಡಿತು. ಈ ನವ್ಯ ಚಿಂತನದ ಮಹಾಪೂರವನ್ನು ಜ್ಞಾನೋದಯ (enlighten-ment) ಕಾಲಕ್ಕೆ ಹೋಲಿಸಿದ್ದಾರೆ. ಇದರ ಮೂಲ ಚಿಂತನೆಗಳು: ಮನಸ್ಸಿನ ಒಳಹೊಕ್ಕು ಪರಿಶೋಧಿಸಿ ಮಾನವನ ವಿವೇಕ ಹೇಗೆ ಅವನ ಮನಸ್ಸಿನ ಒಂದು ಮುಖ್ಯಭಾಗವೋ ಹಾಗೆಯೇ ಅವಿವೇಕವೂ ಒಂದು ಮುಖ್ಯ ಭಾಗವೆಂದು ಅದನ್ನು ಪರಿಶೋಧಿಸುವುದು; ಈ ಜಗತ್ತು ವಿಪ್ಲವಗಳಿಂದ ಕೂಡಿದ್ದು ಅದರ ಭವಿಷ್ಯ ಊಹಾತೀತವಾದುದು; ಅನಿಶ್ಚಯತೆ ಅಗತ್ಯವಾದುದು; ಹಳೆಯ ಆದರ್ಶಗಳಾದ 'ಶಾಂತಿ' 'ಆನಂದ' ಮುಂತಾದುವುಗಳ ಬದಲಿಗೆ 'ಘರ್ಷಣೆ' ಅನಿವಾರ್ಯ ಮತ್ತು ಉಪಯುಕ್ತವಾದುದು (functional) ಎನ್ನುವ ನಂಬಿಕೆ; ಸಂಪ್ರದಾಯ ಮತ್ತು ಸದಾಚಾರಗಳಿಗೆ ಒಳಗಾಗದ, ವಾಸ್ತವವನ್ನು ಅದು ಎಷ್ಟೇ ಕೆಟ್ಟ ಅಭಿರುಚಿಯದಾದರೂ ಹುಡುಕಿಕೊಂಡು ಹೋಗುವ ವಿಮರ್ಶಾತ್ಮಕ ಮನೋಭಾವ – ಇವೇ ಮುಖ್ಯ ಅಂಶಗಳು.

ಈ ನವ್ಯ ಚಿಂತನೆಗಳು ವಿವಿಧ ಸೃಜನಾತ್ಮಕ ಕ್ರಿಯೆಗಳಲ್ಲಿ ಅಭಿವ್ಯಕ್ತಿಗೊಂಡವು: ವಸ್ತುಗಳನ್ನು ವಾಸ್ತವವಾಗಿ ಚಿತ್ರಿಸುವ ಬದಲು ಅಂತರಂಗದ ಭಾವನೆಗಳನ್ನು ವ್ಯಕ್ತಪಡಿಸುವ ಗಹನವಾದ (abstract) ವರ್ಣಚಿತ್ರ ಕಲೆ; ಕವನಗಳು ಪ್ರಾಸಬದ್ಧವಾಗಿರಬೇಕಿಲ್ಲವೆಂದು ನವ್ಯ ಕಾವ್ಯ ಅನಿಯಂತ್ರಿತವಾಯಿತು, ಈ ರೀತಿಯ ಕವನಗಳನ್ನು 'ಮುಕ್ತ ಕವನ' (free verse) ಅಥವಾ 'ಸರಳ ರಗಳೆ' (blank verse) ಎಂದು ಕರೆದರು. ಕಥನ (narrative) ಚಿಂತನದ ಹೊನಲು ಹರಿದಂತೆ ಆಖ್ಯಾಯಿಕೆ ರೂಪ ಪಡೆಯಿತು. ಕತೆ ಮತ್ತು ಕಾದಂಬರಿಗಳ ಮಧ್ಯದಲ್ಲಿ ಸ್ವಗತ ಚಿಂತನಗಳ ಉಪಯೋಗ. ಈ ನವ್ಯ ಪ್ರಯೋಗಗಳಿಂದ ಬರಹಗಾರರು ತಾವು ಹಿಂದಿನ ಕಾಲದವರಿಗಿಂತ ಎಲ್ಲ ವಿಧಗಳಲ್ಲಿ

ಭಿನ್ನರಾದವರು ಎನ್ನುವ ಮನೋಭಾವ ಬೆಳೆಸಿಕೊಂಡರು; ನೂತನ ಶೈಲಿಯ ಭಾಷೆಯನ್ನು ಬೆಳೆಸಿ ಹಳೆಯದನ್ನು ಕಡೆಗಣಿಸಿ, ಓದುಗರಿಗೆ ಆಘಾತ ಉಂಟುಮಾಡುವ ಪದಗುಚ್ಛಗಳನ್ನು ಬಳಕೆಗೆ ತಂದರು.

೧೯೧೩ರಲ್ಲಿನ್ಯೂಯಾರ್ಕ್ ನಗರದಲ್ಲಿ ಏರ್ಪಡಿಸಿದ್ದ ಕಲಾಪ್ರದರ್ಶನದಲ್ಲಿ ಮೊದಲ ಬಾರಿಗೆ ಪ್ರದರ್ಶನಗೊಂಡ ಪ್ರಾಯೋಗಿಕ ಕಲೆ (experimental art) ಮತ್ತು ಅಪ್ರಾತಿನಿಧಿಕ ಕಲೆ (non-representational art) ಇವುಗಳ ವಿವಿಧ ಪ್ರಕಾರಗಳಾದ – ಭಾವೋತ್ಪಾದಕ (impressionist), ಅಭಿವ್ಯಕ್ತ (expressionist), ಆದಿವಾಸಿ (primitive) ಮತ್ತು ಘನಾಕೃತಿ (cubist) – ಇವೆಲ್ಲವೂ ಪ್ರದರ್ಶಿಸಲ್ಪಟ್ಟವು. ಪಾಬ್ಲೊ ಪಿಕಾಸೋನ ಕೃತಿಗಳು ಮೊದಲಬಾರಿಗೆ ಪ್ರದರ್ಶನಗೊಂಡಿದ್ದು ಇಲ್ಲಿಯೇ. ಈ ಎಲ್ಲ ನವ್ಯತೆಯ ಪ್ರದರ್ಶನ ಸಂಪ್ರದಾಯಸ್ಥರು ಮೂಗುಮುರಿಯುವಂತಾಯಿತು. ಇದಾದ ನಂತರ ಎಲ್ಲೆಲ್ಲೂ ಮತ್ತು ಎಲ್ಲದರಲ್ಲೂ ನವ್ಯತೆ ತಲೆ ಎತ್ತಿತು – 'ನವ ಸ್ವಾತಂತ್ರ್ಯ', 'ನವ ದೇಶಪ್ರೇಮ', 'ನವ್ಯ ಕಾವ್ಯ', 'ನವ್ಯ ಕಲೆ' 'ನವ್ಯ ನೀತಿ' (new ethics), ನವ್ಯ ವಿವಾಹ (new marriage) ಇತ್ಯಾದಿ. ಆ ಸಮಯದಲ್ಲೇ ಕೊಲಂಬಿಯ ವಿಶ್ವವಿದ್ಯಾನಿಲಯದ ಜೇಮ್ಸ್ ಹಾರ್ವಿ ರಾಬಿನ್‌ಸನ್ ತನ್ನ ಕೃತಿ 'ನವ್ಯ ಇತಿಹಾಸ'ವನ್ನು ಪ್ರಕಟಿಸಿದನು. ಇತಿಹಾಸ, ವರ್ತಮಾನಕಾಲದ ವಿದ್ಯಮಾನಗಳನ್ನು ಯಥಾಸ್ಥಿತಿಯಲ್ಲಿ ವರದಿ ಮಾಡುವ 'ವಿಜ್ಞಾನ'ವಾಗಬೇಕು ಎನ್ನುವುದು ಆತನ ಉದ್ದೇಶವಾಗಿತ್ತು. ಇವನ ಸಹೋದ್ಯೋಗಿಯಾಗಿದ್ದ ಚಾರ್ಲ್ಸ್ ಬಿಯರ್ಡ್ 'ರಾಜ್ಯಾಂಗದ ಆರ್ಥಿಕ ವಿವರಣೆ/ ವ್ಯಾಖ್ಯಾನ' ಎಂಬ ವಿವಾದಾತ್ಮಕ ಪುಸ್ತಕ ಬರೆದು ದೇಶದಾದ್ಯಂತ ಅಲ್ಲೋಲ ಕಲ್ಲೋಲ ಪರಿಸ್ಥಿತಿ ಉಂಟುಮಾಡಿದನು.

ನಿಯತಕಾಲ ಪತ್ರಿಕೆಗಳು ಅಣಬೆಗಳಂತೆ ಎಲ್ಲಾ ಕಡೆಗಳಲ್ಲಿ ಹುಟ್ಟಿಕೊಂಡವು. ಆಗಿನ ಕಾಲದ ಕೆಲವು ಪ್ರಕಟಣೆಗಳು: – 'ಏಳು ಕಲೆಗಳು' (Seven Arts), 'ಪುಟ್ಟ ವಿಮರ್ಶೆ' (Little Review), 'ಬೊಹೀಮಿಯನ್' (Bohemian) ಮತ್ತು 'ಪ್ರಮಾಣಗಳು' (Criterion). ಇವು ಜನರಲ್ಲಿ ಓದುವ ಅಭ್ಯಾಸವನ್ನು ಹೆಚ್ಚಿಸಿದವು.

ಚಿಕಾಗೊ ನಗರದಲ್ಲಿ ಹ್ಯಾರಿಯಟ್ ಮನ್ರೋ ಕವಿಗಳಿಗೆ ಆಶ್ರಯ ನೀಡಿ ಪೋಷಿಸಿದಳು. ೧೯೧೨ರಲ್ಲಿ ಅವಳು 'ಕವಿತೆ: ಕವಿತೆಗಳಿಗೆ ಮೀಸಲಾದ ನಿಯತಕಾಲ ಪತ್ರಿಕೆ' (Poetry: A Magazine of Verse) ಯನ್ನು ಸ್ಥಾಪಿಸಿದಳು. ಆಗ ಅವಳ ವಯಸ್ಸು ಐವತ್ತು ಮೀರಿತ್ತು. ಆದರೂ ಕೆಲವು ವರ್ಷಗಳೊಳಗೆ ಅವಳು ಹನ್ನೆರಡಕ್ಕೂ ಹೆಚ್ಚಿನ ಕವಿಗಳನ್ನು ಬೆಳಕಿಗೆ ತಂದಳು. ಚಿಕಾಗೋ ನಗರವನ್ನುದ್ದೇಶಿಸಿ ಕವನ ರಚಿಸಿದ ಕಾರ್ಲ್ ಸ್ಯಾಂಡ್‌ಬರ್ಗ್ (Carl Sandburg); ಅಲೆಮಾರಿ ಕವಿ ವಾಚೆಲ್ ಲಿಂಡ್ಸೇ (Vachel Lindsay) – ಇವನು ಪ್ರಾಚೀನ ಹಾಡುಗಾರಿಕೆಯನ್ನು 'ಕಾಂಗೊ' (The

Congo) ಮುಂತಾದ ಕವನಗಳಲ್ಲಿ ಪುನರುತ್ಥಾನಗೊಳಿಸಲು ಪ್ರಯತ್ನಿಸಿದನು; ಭಾವಗೀತೆಗಳನ್ನು (lyrics) ರಚಿಸಿದ ಸಾರಾ ಟೀಸ್‌ಡೇಲ್ (Sara Teasdale), ಎಲಿನಾರ್ ವೈಲಿ (Eleanor Wylie) ಮತ್ತು ಎಡ್ನಾ ಸೆಂಟ್ ವಿನ್ಸೆಂಟ್ ಮಿಲೇ (Edna St. Vincent Millay); ನಿರಾಸೆ ಮತ್ತು ದುರಂತಗಳಿಗೆ ಧ್ವನಿ ಕೊಟ್ಟ ಕವಿ ರಾಬಿನ್‌ಸನ್ ಜೆಫರ್ಸ್ (Robinson Jeffers); ಉಪಮಾನಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡ (imagist) ಕವಿಗಳಾದ ಎಮಿ ಲೊವೆಲ್ (Amy Lowell), ಕಾನ್ರಾಡ್ ಐಕೆನ್ (Conrad Aiken) ಮತ್ತು ವಿಲಿಯಂ ಕಾರ್ಲೋಸ್ ವಿಲಿಯಮ್ಸ್ (William Carlos Williams) ಇವರೆಲ್ಲರಿಗೂ ಆಶ್ರಯ ನೀಡಿ ಮುಂದೆ ತಂದವಳು ಹ್ಯಾರಿಯಟ್ ಮನ್ರೋ.

ನವ್ಯಸಾಹಿತ್ಯದ ಪ್ರವಾದಿಗಳು ನ್ಯೂಯಾರ್ಕ್ ಅಥವಾ ಚಿಕಾಗೊ ನಗರಗಳಿಂದ ಬಂದವರಲ್ಲ. ಈ ಸಾಹಿತ್ಯಪ್ರಬೇಧದ ಹರಿಕಾರರು ಹೆಸರಾಂತ ಕವಿಗಳಾದ – ಎಜ಼್ರಾ ಪೌಂಡ್ ಮತ್ತು ಟಿ.ಎಸ್. ಎಲಿಯಟ್ ಲಂಡನ್‌ನವರು; ಮತ್ತು ಯೂರೋಪಿನ (ಪ್ಯಾರಿಸ್) ನವ್ಯ ಕವಯಿತ್ರಿ ಗೆರ್ಟ್ರೂಡ್ ಸ್ಟೈನ್. ಇವರೆಲ್ಲರೂ ಸಾಹಿತ್ಯದ ಕ್ಲಿಷ್ಟ ಶೈಲಿಯ ಸೃಷ್ಟಿಕರ್ತರು. ಹ್ಯಾರಿಯಟ್ ಮನ್ರೊ ಪ್ರಕಟಿಸುತ್ತಿದ್ದ 'ಕವಿತೆ' ನಿಯತಕಾಲಿಕದ ಹೊರದೇಶದ ಸಂಪಾದಕನಾಗಿದ್ದ ಎಜ಼್ರಾ ಪೌಂಡ್ ಅನೇಕ ಅಮೆರಿಕನ್ ಮತ್ತು ಇಂಗ್ಲೆಂಡಿನ ಕವಿಗಳ ಕವನಗಳನ್ನು ಪ್ರಕಟಿಸಲು ಸಹಾಯ ಮಾಡಿದನು. ಇದಲ್ಲದೆ ಅವನು ಉಪಮೆ ಕಾವ್ಯ (imagist) ಶೈಲಿಯ ಮುಂದಾಳಾಗಿದ್ದನು. ಈ ಹೊಸ ಶೈಲಿ ಹಿಂದಿನ ವಿಕ್ಟೋರಿಯ ಕಾಲದ ಶಬ್ದಾಲಂಕಾರ (ornamental verbosity) ಶೈಲಿಯನ್ನು ವಿರೋಧಿಸಿ ಅದರ ಸ್ಥಳವನ್ನು ಆಕ್ರಮಿಸಿತು. ಹಳೆಯ ಶೈಲಿಯ ಹುರುಳಿಲ್ಲದ, ಅನಾವಶ್ಯಕ ಪದಗಳಿಗೆ ಬದಲಾಗಿ ಸುಲಭವಾಗಿ ಗ್ರಹಿಸಬಹುದಾದ ಉಪಮೆಗಳನ್ನು ಬಳಸುವುದು ಈ ನವ್ಯ ಶೈಲಿಯ ವಿಶಿಷ್ಟ ಗುಣ. ಪೌಂಡ್ ತನ್ನ ದೀರ್ಘಾವಧಿ ಬದುಕಿನಲ್ಲಿ ಅನೇಕ ಆಸಕ್ತಿಗಳನ್ನು ಮತ್ತು ಧ್ಯೇಯಗಳನ್ನು ಹಮ್ಮಿಕೊಂಡಿದ್ದನು. ಅವನು ಪ್ಯಾರಿಸ್ ಮತ್ತು ಇಟಲಿಯಲ್ಲಿ ವಾಸವಾಗಿದ್ದ ಸಮಯದಲ್ಲಿ ಉದಯೋನ್ಮುಖ ಲೇಖಕರಿಗೆ ಉತ್ತೇಜನ ನೀಡಿದನು. ಅಲ್ಲದೆ ಕ್ಲಿಷ್ಟ ಹಾಗೂ ಅಸ್ಪಷ್ಟವಾದ ಕಾವ್ಯಸರ್ಗ (cantos)ಗಳ ದೀರ್ಘ ಸರಣಿಯನ್ನು ರಚಿಸಿದನು.

ಪೌಂಡ್‌ನ ಶಿಷ್ಯರಲ್ಲಿ ಅಗ್ರಗಣ್ಯನಾದವನು ಟಿ. ಎಸ್. ಎಲಿಯಟ್. ೧೯೧೫ರಲ್ಲಿ ಇವನು ತನ್ನ ಮೊದಲನೆಯ ಪ್ರಧಾನವಾದ ಕವನವನ್ನು 'ಕವಿತೆ' ಪತ್ರಿಕೆಯಲ್ಲಿ ಪ್ರಕಟಿಸಿದನು. ೧೯೨೨ರಲ್ಲಿ ಎಲಿಯಟ್‌ನ 'ಬೀಳು ಭೂಮಿ' (the Waste Land) ಪ್ರಕಟವಾಯಿತು. ಈ ಕವನ ರಹಸ್ಯ ಉಲ್ಲೇಖಗಳಿಂದ, ಅನಿರೀಕ್ಷಿತ ರೂಪಕಗಳ ಜೋಡಣೆಯಿಂದ, ಮೊದಲ ಜಾಗತಿಕ ಯುದ್ಧದಿಂದ ಉಂಟಾದ ಭ್ರಮನಿರಸನ ಮತ್ತು ವ್ಯಾಕುಲತೆ ಹಾಗೂ ಯುದ್ಧದ ಬೆಂಕಿ ಬಿದ್ದು ಸುಟ್ಟು ಪಶ್ಚಿಮದ ನಾಗರಿಕತೆಯ

ಸೂಚನೆಯಿಂದ ಕೂಡಿ, ಒಂದು ತಲೆಮಾರಿನ ನವ್ಯಪ್ರಜ್ಞೆಗೇ ಒರೆಗಲ್ಲಾಯಿತು. ಅದೇ ಸಮಯದಲ್ಲಿ ಐರಿಷ್ ಲೇಖಕ ಜೇಮ್ಸ್ ಜಾಯ್ಸ್ (James Joyce)ನ ಅನವರತ ಹರಿಯುವ ಪ್ರಜ್ಞೆಯ (stream of consciousness) ಕಾದಂಬರಿ 'ಯೂಲಿಸಿಸ್' (Ulyses) ಕೂಡ ಎಲಿಯಟ್‌ನ ಕವನದಂತೆ ನವ್ಯಪ್ರಜ್ಞೆಯ ಸಂಕೇತವಾಯಿತು. ೧೯೨೨ರಲ್ಲಿ ಎಲಿಯಟ್ 'ದಿ ಕ್ರೈಟೀರಿಯನ್' (The Criterion) ನಿಯತಕಾಲಿಕ ಪತ್ರಿಕೆಯನ್ನು ಆರಂಭಿಸಿದನು. ಈ ಪತ್ರಿಕೆಯ ಮೂಲಕ ಅವನು ಇಂಗ್ಲೆಂಡ್ ಮತ್ತು ಅಮೆರಿಕನ್ ಸಾಹಿತ್ಯಗಳಲ್ಲಿ ನವ್ಯ ಅಭಿರುಚಿಯನ್ನು ಬೆಳೆಸಿದ ನವ್ಯತೆಯ ವಕ್ತಾರನಾದನು.

ಗರ್ಟ್ರೂಡ್ ಸ್ಟೈನ್ ಮೊದಲಿನಿಂದಲೂ ನವ್ಯಕಲೆಯ ಬೆಂಬಲಿಗಳಾಗಿದ್ದಳು. ನವ್ಯತೆಯ ಪಾರಂಭದ ದಿನಗಳಲ್ಲಿ ಸಿಜ಼ಾನ್ (Cezannes), ಮಟೀಸ್ (Matisses) , ಮತ್ತು ಪಿಕಾಸೊ (Picasso) ಮುಂತಾದ ಕಲಾವಿದರ ಕೃತಿಗಳನ್ನು ಸಂಪಾದಿಸಿ, ಸಂಗ್ರಹಿಸಿ ಇಟ್ಟಿದ್ದಳು. ವಿಲಕ್ಷಣ ಸಾಹಿತಿ ಎಂದು ಹೆಸರು ಪಡೆದಿದ್ದ ಇವಳು ನವ್ಯ ಸಾಹಿತ್ಯ ಶೈಲಿಯನ್ನು ಆರಂಭಿಸಿ ಅಭಿವೃದ್ಧಿಗೊಳಿಸಿದವರಲ್ಲಿ ಪ್ರಮುಖಳು. ನವ್ಯಶೈಲಿ ೧೯೦೮ರಲ್ಲಿ ಗೆರ್ಟ್ರೂಡ್ ಸ್ಟೈನ್ ಬರೆದ 'ಮೂರು ಜೀವಗಳು' (Three Lives) ಎಂಬ ಪುಸ್ತಕದಿಂದ ಪ್ರಾರಂಭವಾಯಿತು ಎನ್ನಬಹುದು. ಈ ಕೃತಿಯ ವೈಶಿಷ್ಟ್ಯವೆಂದರೆ ಅದು ಬಿಳಿಯ ಬರಹಗಾರ್ತಿ ಬರೆದ ಕರಿಯ ವ್ಯಕ್ತಿಯ ಮೊಟ್ಟ ಮೊದಲ ವಾಸ್ತವ ಚಿತ್ರಣ. ಮನಶಾಸ್ತ್ರಜ್ಞ ವಿಲಿಯಮ್ ಜೇಮ್ಸ್‌ನ ವಿದ್ಯಾರ್ಥಿಯಾಗಿದ್ದ ಇವಳು ಅಪ್ರಾತಿನಿಧಿಕ ಚಿತ್ರಕಲೆ (non-representational painting) ಯ ವಿಧಾನನವನ್ನು ಸಾಹಿತ್ಯದಲ್ಲಿ ಅನುಷ್ಠಾನಕ್ಕೆ ತಂದಳು. ಅವಳ 'ನಿರ್ಮಾಣಗೊಂಡ ಅಮೆರಿಕ' (The making of American) ಮತ್ತು 'ಮೆದು ಗುಂಡಿಗಳು' (Tender Buttons) ಕೃತಿಗಳಲ್ಲಿ ವ್ಯಕ್ತಿಗಳ ಅಂತರಾಳದ ಮನಃಸ್ಥಿತಿಯನ್ನು ವರ್ಣಿಸಿದ್ದಾಳೆ.

ಗೆರ್ಟ್ರೂಡ್ ಸ್ಟೈನ್ ಬಹಳ ಕಾಲದಿಂದ ಹೊರದೇಶಗಳಲ್ಲಿ ವಾಸಿಸುತ್ತಿದ್ದ ಅಮೆರಿಕನ್ ಬರಹಗಾರರು – ಮುಖ್ಯವಾಗಿ ಶೆರ್‌ವುಡ್ ಆ್ಯಂಡರ್‌ಸನ್ (Sherwood Anderson) ಮತ್ತು ಅರ್ನೆಸ್ಟ್ ಹೆಮಿಂಗ್‌ವೇ (Ernest Hemingway) ಮೇಲೆ ಪ್ರಭಾವ ಬೀರಿದ್ದಳು. ಅವಳು ಹೆಮಿಂಗ್‌ವೇ ಕುರಿತು 'ಯುವಕರಾದ ನೀವೆಲ್ಲ ಯುದ್ಧದಲ್ಲಿ ಭಾಗವಹಿಸಿದವರು. ನೀವು ದಿಕ್ಕುತಪ್ಪಿದ ತಲೆಮಾರಿನವರು (lost generation)' ಎಂದು ಉದ್ಗರಿಸಿದ್ದು ಪ್ರಸಿದ್ಧಿ ಪಡೆಯಿತು. ಆ್ಯಂಡರ್‌ಸನ್ ಮತ್ತು ಹೆಮಿಂಗ್‌ವೇ ಅವರ ಸಮಕಾಲೀನ ಸ್ಕಾಟ್ ಫಿಟ್‌ಜರಾಲ್ಡ್ (Scott Fitzgerald) ಸಾಹಿತ್ಯ ಕ್ಷೇತ್ರದಲ್ಲಿ ಉಲ್ಕೆಯಂತೆ ಬೆಳಗಿ ಮರೆಯಾದನು. ಅವನ ಉತ್ಕೃಷ್ಟ ಕೃತಿ 'ದಿ ಗ್ರೇಟ್ ಗ್ಯಾಟ್ಸ್‌ಬಿ' (The Great Gatsby) ಯಲ್ಲಿ ಬರುವ ಒಬ್ಬ ವ್ಯಕ್ತಿಯ ಪಾತ್ರ ಪ್ರಧಾನಗುಣ ಸಭ್ಯತೆ. ಸಮಾಜದಲ್ಲಿ ಆಗ ಮೇಲ್ನೋಟಕ್ಕೆ ಕಂಡುಬರುತ್ತಿದ್ದ ಉಲ್ಲಾಸ ಮತ್ತು ಹತ್ತಿರ

ಸರಿದುಬರುತ್ತಿದ್ದ ಅಧಃಪತನ ಇವೆಲ್ಲವೂ ಅತ್ಯಂತ ಪರಿಣಾಮಕಾರಿಯಾಗಿ ಈ ಕಾದಂಬರಿಯಲ್ಲಿ ಅಭಿವ್ಯಕ್ತಿಗೊಂಡಿವೆ.

ಹೆಮಿಂಗ್‌ವೇ ಬರೆದ ಮೊದಲನೆಯ ಕಾದಂಬರಿ 'ಸೂರ್ಯನೂ ಉದಯಿಸುತ್ತಾನೆ' (The Sun also Rises)ಯಲ್ಲಿ ಬದುಕಿನ ಅರ್ಥ ಹುಡುಕಿಕೊಂಡು ಪ್ಯಾರಿಸ್‌ನ ಸಣ್ಣ ಪುಟ್ಟ ಮದ್ಯದಂಗಡಿಗಳು, ಊಟ ವಸತಿಗೃಹಗಳಿಂದ ಸ್ಪೇನಿನ ಗೂಳಿ ಕಾಳಗದ ವೃತ್ತಾಕಾರದ ಕ್ರೀಡಾಂಗಣಗಳವರೆಗೆ ಯಾವುದೋ ಅಸ್ಪಷ್ಟ ಚಿಂತನಗಳನ್ನು ಹಿಂಬಾಲಿಸಿ ಹೋಗುವ, ಸ್ವದೇಶ ಬಿಟ್ಟು ಬಂದ ಸಾಹಿತಿಗಳ ನಿತ್ಯ ಜೀವನ ಚಿತ್ರಿತವಾಗಿದೆ. ಯುದ್ಧದಲ್ಲಿ ಗಾಯಗೊಂಡು ನಪುಂಸಕನಾಗಿದ್ದ ಯುವಕ ಜೇಕ್ ಬಾರ್ನ್ಸ್ ತಾನು ಪ್ರೀತಿಸುತ್ತಿದ್ದ ಬ್ರೆಟ್ ಆ್ಯಶ್‌ಲಿಯನ್ನು ಮದುವೆಯಾಗಲಾರ. ಕೊನೆಯಲ್ಲಿ ಬರುವ ಮನಕರಗುವ ಸನ್ನಿವೇಶದಲ್ಲಿ ಅವಳು 'ಓ ಜೇಕ್, ನಾವಿಬ್ಬರೂ ಕೂಡಿ ಸಂತೋಷವಾಗಿರಬಹುದಿತ್ತು!' ಎಂದಾಗ ಅವನು 'ಹೌದು, ಅದನ್ನು ಕುರಿತು ಯೋಚಿಸುವುದೆ ಒಂದು ಸುಂದರ ಅನುಭವ ಅಲ್ಲವೇ?' ಎಂದು ಉತ್ತರಿಸುತ್ತಾನೆ. ಹೆಮಿಂಗ್‌ವೇಯ ಎರಡನೆಯ ಕಾದಂಬರಿ 'ಅಸ್ತ್ರಗಳಿಗೆ ವಿದಾಯ' (A Farewell to Arms)ದಲ್ಲಿ ಚಿತ್ರಿತವಾಗಿರುವುದು ದಗ್ಧ ಪ್ರೇಮ; ಹೆಮಿಂಗ್‌ವೇ ಯುದ್ಧಕಾಲದಲ್ಲಿ ಆ್ಯಂಬುಲೆನ್ಸ್ ಪಡೆಯಲ್ಲಿದ್ದಾಗಿನ ಅನುಭವಗಳ ಕಥನ. ಯುದ್ಧದಲ್ಲಿ ಅವನ ಎರಡೂ ಕಾಲುಗಳು ಗಾಯಗೊಂಡು ಕಾಪರೆಟ್ಟೊ ಎನ್ನುವ ಸ್ಥಳದಿಂದ ಹಿಮ್ಮೆಟ್ಟಿ ಹೋಗುವಾಗ ಒಬ್ಬ ವಾಹನ ಚಾಲಕ ಮತ್ತು ನರ್ಸ್‌ರ ಪ್ರಣಯ ಪ್ರಸಂಗವನ್ನು ಈ ಕಾದಂಬರಿಯಲ್ಲಿ ವರ್ಣಿಸಿದ್ದಾನೆ. ಪ್ರಣಯಿಗಳು ಯುದ್ಧಕ್ಕೆ ವಿದಾಯ ಹೇಳಿ ಸ್ವಿಟ್ಜರ್‌ಲ್ಯಾಂಡಿಗೆ ಪಲಾಯನ ಮಾಡುತ್ತಾರೆ. ಅಲ್ಲಿ ಆ ಯುವತಿ ಹೆರಿಗೆಯಾಗುವಾಗ ಸಾವನ್ನಪ್ಪುತ್ತಾಳೆ.

ಹೆಮಿಂಗ್‌ವೇ ಬರೆದ ಕಾದಂಬರಿಗಳಲ್ಲಿ ಜೀವಕಳೆ ತುಂಬಿದ, ಆವೇಶಪೂರ್ಣ ಸಾಹಸಗಳು. ಕ್ರೀಡಾಪಟುವಿನ ಶಕ್ತಿಯುತ ಪುರುಷತ್ವ ಹೊಂದಿರುವ ಪಾತ್ರಗಳನ್ನು ಸೃಷ್ಟಿಸಿದ್ದಾನೆ. ವಾಸ್ತವವಾಗಿ ಈ ಪಾತ್ರಗಳು ಹೆಮಿಂಗ್‌ವೇಯ ಪ್ರತಿರೂಪಗಳಾಗಿದ್ದವು. ಇಂಥ ಪಾತ್ರರಚನೆಗೆ ಹೆಸರಾಗಿರುವ ಇವನ ಇತರ ಪ್ರಸಿದ್ಧಕೃತಿಗಳು – 'ಮಧ್ಯಾಹ್ನದಲ್ಲಿ ಮರಣ' (Death in the Aftrenoon), 'ಪಡೆದಿರುವುದು ಮತ್ತು ಪಡೆಯದಿರುವುದು' (To Have and Have not), 'ಯಾರಿಗಾಗಿ ಘಂಟಾನಾದವಾಗುತ್ತಿದೆ' (For Whom the Bell Tolls), 'ಮುಪ್ಪಿನ ಮನುಷ್ಯ ಮತ್ತು ಸಮುದ್ರ' (The Old Man and the Sea). ನೂರಾರು ಲೇಖಕರು ಹೆಮಿಂಗ್‌ವೇಯ ಸರಳ ಸಂಕ್ಷೇಪ (terse) ಶೈಲಿಯನ್ನು ಅನುಕರಣೆ ಮಾಡಲು ಹೋಗಿ ಸೋತಿದ್ದಾರೆ. ಅವನ ಬರವಣಿಗೆಯಲ್ಲಿ ಅವನು ಏನು ಹೇಳಬೇಕೆಂದು ಹೊರಟಿದ್ದನೋ ಅದಕ್ಕಿಂತ ಅವನು ಅದನ್ನು ಹೇಳುವ ರೀತಿ ಅನನ್ಯವಾದುದು.

೧೯೨೦ರ ದಶಕದಲ್ಲಿ ಬಳಿ ಸಾರುತ್ತಿದ್ದ ಆರ್ಥಿಕ ಮುಗ್ಗಟ್ಟು ಸಾಹಿತಿಗಳಲ್ಲಿ ಪರಕೀಯತೆ (alienation) ಬೆಳೆಸಿ ಅವರನ್ನು ಇನ್ನೂ ಹೆಚ್ಚು ಹತಾಶರನ್ನಾಗಿ ಮಾಡಬಹುದು ಎಂದು ಎಣಿಸಿದ್ದು ತಪ್ಪಾಯಿತು. ನಿರಾಶೆಯ ಬದಲು ಅವರು ಹೊಸ ಆದರ್ಶದಿಂದ ಆಕರ್ಶಿತರಾಗಿ ಅದನ್ನು ಕೈಗೂಡಿಸಲು ಬದ್ಧರಾದರು. ೧೯೩೦ರ ದಶಕದಲ್ಲಿ ಅವರ ಆದರ್ಶ ಅವರನ್ನು ಕ್ರಾಂತಿಯ ಸೆಳವಿಗೆ ಸಿಗುವಂತೆ ಮಾಡಿತು. ಸಾಹಿತ್ಯ ವೃತ್ತಗಳಲ್ಲಿ ವಾಮಪಂಥದ ರಾಜಕೀಯ ಮತ್ತು ವಾಗ್ವಾದಗಳು ಪ್ರಭಾವ ಬೀರಿದ್ದವು. ೧೯೩೨ರ ಸೆಪ್ಟೆಂಬರ್ ತಿಂಗಳಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿ ವಿಲಿಯಂ ಫಾಸ್ಟರ್‌ನನ್ನು ಬೆಂಬಲಿಸಿ ೫೩ ಜನ ಕಲಾವಿದರು ಮತ್ತು ಬುದ್ಧಿಜೀವಿಗಳು ಮನವಿಪತ್ರಕ್ಕೆ ರುಜು ಮಾಡಿದರು. ಅನೇಕ ಲೇಖಕರು ಜಾನ್ ರೀಡ್‌ನ (John Reed) ಕಮ್ಯೂನಿಸ್ಟ್ ಕೂಟಗಳನ್ನು ಸೇರಿಕೊಂಡರು. ಜಾನ್ ರೀಡ್ ಪತ್ರಕರ್ತ. ಇವನು ಬೋಲ್‌ಷೆವಿಕ್ (Bolshevik) ಕ್ರಾಂತಿಯನ್ನು ಕಣ್ಣಾರೆ ಕಂಡು ಆ ಕ್ರಾಂತಿಯನ್ನು ಕುರಿತು ವಿಪುಲವಾಗಿ ಬರೆದಿದ್ದನು.

೧೯೩೫ರಲ್ಲಿ ಸೋವಿಯೆಟ್ ಒಕ್ಕೂಟದ ಸರ್ವಾಧಿಕಾರಿ ಸ್ಟಾಲಿನ್‌ನ ನಿರ್ದೇಶನದಂತೆ ಅಮೆರಿಕನ್ ಕಮ್ಯೂನಿಸ್ಟ್ ಪಕ್ಷ ಬೇರೆ ಯಾವ ಪಕ್ಷದ ಜೊತೆಗೂ ಸೇರದೆ ಪ್ರತ್ಯೇಕತೆಯನ್ನು ಉಳಿಸಿಕೊಂಡಿತು. ಇದು ಬುದ್ಧಿಜೀವಿಗಳಿಗೆ ಒಪ್ಪಿಗೆಯಾಗದೆ ಡೆಮೊಕ್ರಾಟಿಕ್ ಪಕ್ಷ, ಸಮತಾವಾದಿ ಪಕ್ಷ ಮುಂತಾದವುಗಳಿಂದ ಕೂಡಿದ್ದ ವಿಶಾಲವಾದ ಜನಪ್ರಿಯ ಎದುರಾಳಿಗಳ ಪಕ್ಷ (Popular Front) ವನ್ನು ಸೇರಿದರು. ಈ ಎದುರಾಳಿಗಳು ಫಾಸಿಸಂ (Fascism) ವಿರೋಧಿಗಳಾಗಿದ್ದರು. ೧೯೩೩ರಲ್ಲಿ ಜಾನ್ ರೀಡ್ ಕೂಟಗಳು ವಿಶಾಲ ದೃಷ್ಟಿಯ ಅಮೆರಿಕನ್ ಬರಹಗಾರರ ಒಕ್ಕೂಟಕ್ಕೆ (The League of American Writers) ದಾರಿ ಮಾಡಿಕೊಟ್ಟವು. ಈ ಒಕ್ಕೂಟ ಅಮೆರಿಕನ್ ಬರಹಗಾರರ ಕಾಂಗ್ರೆಸ್ (American Writers' Congress) ಸಂಸ್ಥೆಯ ವಾರ್ಷಿಕ ಸಭೆಯನ್ನು ಬಹಳ ವರ್ಷಗಳವರೆಗೆ ಮುಂದುವರಿಸಿತು. ಬರಹಗಾರರ ಕಾಂಗ್ರೆಸ್‌ನ ಧ್ಯೇಯೋದ್ದೇಶಗಳು ಇತರ ಜನಪ್ರಿಯ ವಿರೋಧಗುಂಪುಗಳ ಧ್ಯೇಯೋದ್ದೇಶಗಳಿಗೆ ಸಮಾನಾಂತರವಾಗಿದ್ದವು. ಆ ಗುಂಪುಗಳಲ್ಲಿ ಕೆಲವನ್ನು ಉಲ್ಲೇಖಿಸಬಹುದು: ಅಮೆರಿಕನ್ ಯುವಜನ ಕಾಂಗ್ರೆಸ್, ಅಮೆರಿಕನ್ ನೀಗ್ರೋ ಕಾಂಗ್ರೆಸ್, ಮತ್ತು ಶಾಂತಿ ಮತ್ತು ಪ್ರಜಾಪ್ರಭುತ್ವಗಳಿಗಾಗಿ ಸ್ಥಾಪಿತಗೊಂಡ ಅಮೆರಿಕನ್ ಒಕ್ಕೂಟ. ಈ ಸಂಸ್ಥೆಯ ಕಾರ್ಯಾಚರಣೆಯಲ್ಲಿ ಆ ಕಾಲದ ಪ್ರಸಿದ್ಧ ಸಾಹಿತಿಗಳು – ಹೆಮಿಂಗ್‌ವೇ, ಅರ್‌ಸ್ಕೈನ್ ಕಾಲ್ಡ್‌ವೆಲ್, ವಾಲ್ಡೊ ಫ್ರಾಂಕ್, ಆರ್ಚಿಬಾಲ್ಡ್ ಮ್ಯಾಕ್‌ಲಿಷ್, ರಿಚರ್ಡ್ ರೈಟ್, ಜಾನ್ ಡಾಸ್ ಪಾಸ್ಸೊಸ್, ಥಿಯೊಡೊರ್ ಡ್ರೆಸ್ಸಿಯರ್, ಜಾನ್ ಸ್ಟೈನ್‌ಬೆಕ್ ಮತ್ತು ಲ್ಯಾಂಗ್‌ಸ್ಟನ್ ಹ್ಯೂಸ್. ಸ್ವತಂತ್ರ ಪ್ರವೃತ್ತಿಯವರಾದ ಇವರು ಈ ಸಂಘ-ಸಂಸ್ಥೆಗಳಲ್ಲಿ ಬಹಳ ಕಾಲ ಇರಲಿಲ್ಲ.

ಈ ಸಮಯದಲ್ಲಿ ಸೋವಿಯೆತ್ ಒಕ್ಕೂಟದಲ್ಲಿ ಸರ್ವಾಧಿಕಾರಿ ಸ್ಟಾಲಿನ್ ದಬ್ಬಾಳಿಕೆ, ಝಾರ್ ದೊರೆಗಳಿಗಿಂತಲೂ ಕ್ರೂರವಾಗಿದ್ದು ರಕ್ತಪಾತವಾಗುತ್ತಿದೆ ಎಂಬ ವರದಿಗಳು ಬರತೊಡಗಿದಾಗ ಬುದ್ಧಿಜೀವಿಗಳು ಕಮ್ಯೂನಿಸ್ಟ್ ಸಂಘ ಸಂಸ್ಥೆಗಳಿಂದ ದೂರವಾಗ ತೊಡಗಿದರು. ಇವರು ಸಂಪೂರ್ಣ ಕಮ್ಯೂನಿಸ್ಟ್ ವಿರೋಧಿಗಳಾಗುವಂತೆ ಮಾಡಿದ್ದ ಮೊದಲನೆಯದಾಗಿ – ೧೯೩೬ರಲ್ಲಿ ಸ್ಟಾಲಿನ್ ತನ್ನ ವಿರೋಧಿಗಳನ್ನು ದೇಶದ್ರೋಹದ ನೆಪದಿಂದ ನ್ಯಾಯವಿಚಾರಣೆಯ ನಾಟಕವಾಡಿ ಅವರನ್ನು ಮರಣದಂಡನೆಗೆ ಗುರಿಮಾಡಿದ್ದು; ಎರಡನೆಯದಾಗಿ – ೧೯೩೯ರಲ್ಲಿ ಸ್ಟಾಲಿನ್ ಹಿಟ್ಲರನೊಡನೆ ಪರಸ್ಪರ ಅತಿಕ್ರಮಣ ಮಾಡದಂತೆ ಕರಾರು ಮಾಡಿಕೊಂಡಿದ್ದು. ಈ ಕರಾರು ಎರಡನೆಯ ಜಾಗತಿಕ ಯುದ್ಧಕ್ಕೆ ದಾರಿ ಮಾಡಿಕೊಟ್ಟಿತು.

೧೯೩೦ರ ದಶಕವನ್ನು 'ಕೆಂಪು ದಶಕ' (Red Decade) ಎಂದು ಕರೆಯುತ್ತಿದ್ದರು. ಆಗ 'ಶ್ರಮಜೀವಿಗಳ ಸಾಹಿತ್ಯ' (proletarian literature) ಬಗ್ಗೆ ಬಹಳ ಚರ್ಚೆ ನಡೆದಿತ್ತು. ಆದರೆ ವಾಮಪಂಥದ ಸಾಂಸ್ಕೃತಿಕ ಆಂದೋಳನದಿಂದಾದ ಉಪಯುಕ್ತ ಬೆಳವಣಿಗೆ ಎಂದರೆ ೧೯೩೪ರಲ್ಲಿ ಸ್ಥಾಪಿತವಾದ 'ಪಕ್ಷ ವಿಮರ್ಶೆ' (Partisan Review) ಪತ್ರಿಕೆ. ಇದು ಜಾನ್ ರೀಡ್ ಕೂಟದ ಒಂದು ಅಂಗವಾಗಿತ್ತು. ನಂತರ ೧೯೩೬-೩೭ರ ಅವಧಿಯಲ್ಲಿ ಈ ಪತ್ರಿಕೆ ಸ್ಟಾಲಿನ್ ವಿರುದ್ಧ ಬರಹಗಳನ್ನು ಪ್ರಕಟಿಸುವ ಸಾಹಿತ್ಯ ಸಂಚಿಕೆಯಾಗಿ ಪರಿವರ್ತಿಸಲಾಯಿತು. ಈ ಸಂಚಿಕೆಗೆ ತಮ್ಮ ಲೇಖನಗಳನ್ನು ಕಳುಹಿಸುತ್ತಿದ್ದವರಲ್ಲಿ ಪ್ರಮುಖರಾದವರು – ಜಾನ್ ಡಾಸ್ ಪಾಸ್ಸೋಸ್ (John Dos Passos), ಜಾನ್ ಸ್ಟೈನ್‌ಬೆಕ್ (John Steinbeck) ಮತ್ತು ರಿಚರ್ಡ್ ರೈಟ್ (Richard Wright). ಈ ಮೂವರೂ ಹೆಸರಾಂತ ಕಾದಂಬರಿಗಾರರಾಗಿದ್ದರು. ಜಾನ್ ಡಾಸ್ ಪಾಸ್ಸೋಸ್ ಹಾರ್ವರ್ಡ್ ವಿದ್ಯಾಭ್ಯಾಸ ಮುಗಿಸಿ ಮೊದಲನೆಯ ಜಾಗತಿಕ ಯುದ್ಧದಲ್ಲಿ ಫ್ರಾನ್ಸ್ ಮತ್ತು ಇಟಲಿ ದೇಶಗಳಲ್ಲಿ ಆ್ಯಂಬ್ಯೂಲೆನ್ಸ್ ಚಾಲಕನಾಗಿ ಸೇವೆ ಸಲ್ಲಿಸಿದನು. ಅವನು ಪ್ರಸಿದ್ಧಿಗೆ ಬಂದಿದ್ದು ಅವನ ಮೊದಲನೆಯ ಕಾದಂಬರಿ 'ಮೂವರು ಸೈನಿಕರು' (Three Soldiers) ಮೂಲಕವಾಗಿ. ಇದು ಯುದ್ಧದ ನೀಚತನ, ಮೃಗೀಯತೆ ಮತ್ತು ರಕ್ತಪಾತಗಳಿಂದ ಕೂಡಿ ಹೃದಯವಿದ್ರಾವಕವಾಗಿದೆ. ಅವನ ಪ್ರಖ್ಯಾತವಾದ ಕೃತಿ 'ಮನ್‌ಹಾಟನ್ ಸ್ಥಳಾಂತರ' (Manhattan Transfer) ಆಧುನಿಕ ನಗರ ಜೀವನದ ವರ್ಣನೆಯನ್ನೊಳಗೊಂಡ, ೧೯೦೦ರಿಂದ ೧೯೩೦ರವರೆಗಿನ ಅಮೆರಿಕನ್ ಸಮಾಜ ನಡೆದುಬಂದ ದಾರಿಯ ಸರ್ವತೋಮುಖ ಚಿತ್ರಣವನ್ನು ನೀಡುವ ಮೂರು ಸಂಪುಟಗಳ ಕೃತಿ. ಮೊದಲನೆಯ ಸಂಪುಟ 'ಮನ್‌ಹಾಟನ್ ಸ್ಥಳಾಂತರ'ದ ನಂತರ ಎರಡನೆಯ ಸಂಪುಟ 'ನಲವತ್ತೆರಡನೆಯ ಸಮಾನಾಂತರ' (The Forty Second Parallel)ಮತ್ತು 'ದುಡ್ಡೇ ದೊಡ್ಡಪ್ಪ' ಎಂಬ ಅರ್ಥದ ಕಾದಂಬರಿ (Big Money). ಈ ಮೂರು ಸಂಪುಟಗಳಲ್ಲಿ ಮೂಡಿಬಂದಿರುವುದು ಅಮೆರಿಕದಲ್ಲಿ ಕಂಡುಬಂದ 'ಎರಡು ರಾಷ್ಟ್ರಗಳ'

ಚಿತ್ರ. ಇದು ಈ ಸಂಪುಟಗಳ ಕಡೆಯಲ್ಲಿ ವರ್ಣಿಸಿರುವ ಪರಸ್ಪರ ಅಸಂಗತವಾದ ಜೀವನಶೈಲಿಗಳಲ್ಲಿ ವ್ಯಕ್ತಗೊಳ್ಳುತ್ತದೆ. ಈ ಎರಡು ಪ್ರಪಂಚಗಳು – ಮೊದಲನೆಯದು, ಕೊಳಕು, ಹಸಿವು ಮತ್ತು ರೋಗರುಜಿನಗಳ ಪ್ರಪಂಚ; ಎರಡನೆಯದು. ಶ್ರೀಮಂತರ ಹೊಟ್ಟೆತುಂಬಿದ ಮತ್ತು ದೇಶವಿದೇಶ ಪ್ರವಾಸ ಮಾಡುವವರ ಪ್ರಪಂಚ. ಈ ಕೃತಿಯ ಮೇಲೆ ಕಮ್ಯೂನಿಸ್ಟ್ ಪಕ್ಷದ ಪ್ರಭಾವ ಸ್ಪಷ್ಟವಾಗಿದೆ.

೧೯೨೦ರ ದಶಕ ಹಾಗೂ ೧೯೩೦ರ ಪ್ರಾರಂಭದವರೆಗೂ ಅಮೆರಿಕನ್ನರಿಗೆ ಕಮ್ಯೂನಿಸಂ ಬಗ್ಗೆ ಇದ್ದ ಅಸ್ಪಷ್ಟವಾದ ಆಕರ್ಷಣೆ – ಕಮ್ಯೂನಿಸ್ಟರು ಅವರ ವಿರೋಧಿಗಳನ್ನು ಹಿಂಸಿಸಿ ಕೊನೆಗಾಣಿಸುವುದರ ಪುರಾವೆಗಳು ದೊರಕಿ ಅವುಗಳ ಆಧಾರದ ಮೇಲೆ 'ಇಸಂ'ನ ಆಕರ್ಷಣೆ ಭ್ರಮೆನಿರಸನದಲ್ಲಿ ಕೊನೆಗೊಂಡಿತು.

೧೯೩೦ರ ದಶಕದ ಹಣದ ಮುಗ್ಗಟ್ಟಿನ ಕಾಲದ ಜನರ ಕಷ್ಟ ಕಾರ್ಪಣ್ಯಗಳ ದಾರುಣ ಬದುಕು ಜಾನ್ ಸ್ಟೈನ್‌ಬೆಕ್‌ನ 'ರೋಷಾವಿಷ್ಟ ದ್ರಾಕ್ಷಿಗಳು' (The Grapes of Wrath) ಕೃತಿಯಲ್ಲಿ ಮನಮುಟ್ಟುವಂತೆ ವರ್ಣನೆಗೊಂಡಿದೆ. ಸ್ಟೈನ್‌ಬೆಕ್ ಕ್ಯಾಲಿಫೋರ್ನಿಯ ಪ್ರಾಂತದವನು. ಅಲ್ಲಿನ ಜನಜೀವನ ಕುರಿತು ವಿಪುಲವಾಗಿ ಬರೆದಿದ್ದಾನೆ. ಅವನ 'ಕೆಂಪು ಕುದುರೆ ಮರಿ' (The Red Pony) ಕಾದಂಬರಿಯಲ್ಲಿ ಬದುಕಿನ ದುರಂತ ಸನ್ನಿವೇಶಗಳ ಅನುಭವಗಳ ಮೂಲಕ ಹುಡುಗನೊಬ್ಬನ ಬೆಳವಣಿಗೆಯನ್ನು ವರ್ಣಿಸಲಾಗಿದೆ. ಇವನ 'ಟೋರ್ಟಿಯ್ಯ ಫ್ಲಾಟ್' (Tortilla Flat) ಮತ್ತು 'ಕ್ಯಾನೆರಿ ರೋ' (Cannery Row) ಮಿಶ್ರರಕ್ತದ ರೈತರ ಮತ್ತು ಹಡಗುನಿಲ್ದಾಣಗಳಲ್ಲಿ ಕಾಲ ಕಳೆಯುತ್ತಿದ್ದ ಅಲೆಮಾರಿಗಳ ಜೀವನವನ್ನು ಚಿತ್ರಿಸಿದ್ದಾನೆ. ಅವನಿಗೆ ಹೆಚ್ಚಿನ ಕೀರ್ತಿ ತಂದ ಪುಸ್ತಕ: 'ಸಂದೇಹಾಸ್ಪದ ಕದನ' (In Dubious Battle). ಇದರಲ್ಲಿ ಅಧಿಕಾರಕ್ಕಾಗಿ ಹಾತೊರೆಯುತ್ತಿದ್ದ ಕಮ್ಯೂನಿಸ್ಟ್ ನಾಯಕರು ಮತ್ತು ದುರಾಸೆಯ ಭೂಮಾಲೀಕರು ಮುಷ್ಕರ ಹೂಡಿದ್ದ ಹಣ್ಣಿನ ತೋಟದ ಕೆಲಸಗಾರರನ್ನು ಶೋಷಣೆ ಮಾಡುವುದನ್ನು ಆವೇಶಪೂರ್ಣವಾಗಿ ಬಣ್ಣಿಸಿದ್ದಾನೆ. ಇವನದೆ ಇನ್ನೊಂದು ಸುಪ್ರಸಿದ್ಧ ಕೃತಿ 'ಮೂಷಿಕಗಳು ಮತ್ತು ಮಾನವರು' (Of Mice and Men) ಕಾದಂಬರಿಯಲ್ಲಿ ಇಬ್ಬರು ರೈತಾಪಿ ಕೆಲಸಗಾರರ ದುರಂತಕಥೆಯನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾನೆ. ಸ್ಟೈನ್‌ಬೆಕ್ ೧೯೬೦ರ ದಶಕದವರೆಗೂ ತನ್ನ ಬರವಣಿಗೆಯನ್ನು ಮುಂದುವರಿಸಿದನು. ಆದರೆ ಅವನ 'ರೋಷಾವೇಶ ದ್ರಾಕ್ಷಿಗಳು' ಇಂದಿಗೂ ಅತ್ಯುತ್ತಮವಾದ ಕಾದಂಬರಿಯಾಗಿ ಉಳಿದಿದೆ.

ಕರಿಯ ಕಾದಂಬರಿಗಾರರಲ್ಲಿ ಮಹಾಮೇಧಾವಿ ಎನ್ನಿಸಿದವನು ರಿಚರ್ಡ್ ರೈಟ್ (Richard Wright). ಅವನು ಹುಟ್ಟಿದ್ದು ಮಿಸ್ಸಿಸ್ಸಿಪ್ಪಿ ಸಂಸ್ಥಾನದ ನಾಚೆಜ಼್ (Natchez) ಎನ್ನುವಲ್ಲಿನ ಬಿಳಿಯ ಪ್ಲಾಂಟೇಷನ್‌ನಲ್ಲಿ. ಅವನ ತಂದೆ ಈತ ಹುಟ್ಟುವ ಮೊದಲೇ ಮನೆ ಬಿಟ್ಟು ಹೋದುದರಿಂದ ಅವನ ತಾಯಿಯೇ ಅವನನ್ನು ಸಾಕಿದ್ದಳು. ತಾಯಿಯ

ಜೊತೆ ಅವನು ಊರಿಂದ ಊರಿಗೆ ಅಲೆಯುತ್ತ ಬೆಳೆದನು. ಅವನ ವಿದ್ಯಾಭ್ಯಾಸ ಒಂಬತ್ತನೆಯ ತರಗತಿಯಲ್ಲಿಯೇ ನಿಂತುಹೋಯಿತು. ನಂತರ ಅವನು ಟೆನ್ನೆಸ್ಸೀ ಪ್ರಾಂತದ ಮೆಂಫಿಸ್ ನಗರದಲ್ಲಿ ಕೆಲಸ ಪ್ರಾರಂಭಿಸಿದನು. ಆ ಕಾಲದಲ್ಲಿ ಕೈಗೆ ಸಿಕ್ಕ ಎಲ್ಲ ಪುಸ್ತಕಗಳನ್ನೂ ತೀವ್ರ ಆಸಕ್ತಿಯಿಂದ ಓದಿದ್ದನು. ಬಿಳಿಯ ಸ್ನೇಹಿತನ ಹೆಸರಿನಲ್ಲಿ ಪುಸ್ತಕ ಭಂಡಾರದಿಂದ ಪುಸ್ತಕಗಳನ್ನು ಪಡೆದು ಮನ ತೃಪ್ತಿಯಾಗುವವರೆಗೂ ಓದುತ್ತಿದ್ದನು. ಚಿಕಾಗೊ ನಗರಕ್ಕೆ ಹೋಗಿ ವಿದ್ಯಾಭ್ಯಾಸ ಮುಂದುವರಿಸುವ ಸಲುವಾಗಿ ದುಡಿದ ಹಣವನ್ನು ಖರ್ಚು ಮಾಡದೆ ಉಳಿಸಿಕೊಂಡು ಅಲ್ಲಿ ಬಂದು ಸೇರಿದಾಗ ದೇಶದಲ್ಲಿ ಆರ್ಥಿಕ ಮುಗ್ಗಟ್ಟು ಆರಂಭವಾಗಿತ್ತು.

ಫೆಡರಲ್ ಬರಹಗಾರರ ಯೋಜನೆ (Federal Writers Project) ರಿಚರ್ಡ್ ರೈಟ್‌ನಿಗೆ ತನ್ನ ಬರವಣಿಗೆಯನ್ನು ಉತ್ಕೃಷ್ಟ ಮಟ್ಟಕ್ಕೆ ಕೊಂಡೊಯ್ಯಲು ನೆರವು ನೀಡಿತು. ೧೯೩೪ರಿಂದ ೧೯೪೪ರವರೆಗಿನ ಅವಧಿಯಲ್ಲಿ ರೈಟ್ ಕಮ್ಯೂನಿಸ್ಟ್ ತತ್ವಗಳಿಗೆ ಮಾರುಹೋಗಿದ್ದನು. ಕಮ್ಯೂನಿಸ್ಟ್ ಸಾಹಿತ್ಯ ಓದಿ ಅವನ ಚಿಂತನ ಮತ್ತಷ್ಟು ತೀಕ್ಷ್ಣವಾಯಿತು. ಆದರೆ ಕಮ್ಯೂನಿಸಂ ತನ್ನ ವ್ಯಕ್ತಿಸ್ವಾತಂತ್ರ್ಯವನ್ನು ತುಳಿಯದಂತೆ ಎಚ್ಚರಿಕೆ ವಹಿಸಿದನು. ೧೯೩೮ರಲ್ಲಿ ಅವನ ಮೊದಲನೆಯ ಪುಸ್ತಕ 'ಅಂಕಲ್ ಟಾಮ್ ಚಿಲ್ಡ್ರನ್' (Uncle Tom's Children) ಪ್ರಕಟವಾಯಿತು. ಅವನ ಆತ್ಮಕಥಾರೂಪದ ಕಾದಂಬರಿ 'ಬ್ಲಾಕ್ ಬಾಯ್' (Black Boy) ೧೯೪೫ರಲ್ಲಿ ಪ್ರಕಟವಾಯಿತು. ಈ ಎರಡು ಕಾದಂಬರಿಗಳಲ್ಲಿ ರೈಟ್ ವರ್ಣದ್ವೇಷದ ಅಮಾನುಷತೆ ಮತ್ತು ಅನ್ಯಾಯಗಳನ್ನು ಖಂಡಿಸಿ ವರ್ಣನೀತಿಯನ್ನು ವಿರೋಧಿಸಲು ಕ್ರಾಂತಿಯ ಮನೋಭಾವವನ್ನು ಬೆಳೆಸಿಕೊಂಡನು.

ರೈಟ್ ತನ್ನ ಚಿಕಾಗೋ ದಿನಗಳಲ್ಲಿ ಬರೆದ 'ಮಣ್ಣಿನ ಮಗ' (Native Son) ಅವನ ಅತ್ಯುತ್ತಮ ಕೃತಿ ಎಂದು ಪರಿಗಣಿಸಲಾಗಿದೆ. ಈ ಕಾದಂಬರಿ 'ಬಿಗ್ ಥಾಮಸ್'ನ (Bigger Thomas) ಕಥೆ. ಕರಿಯ ಜನರು ಕಿಕ್ಕಿರಿದು ನೆಲಸಿದ್ದ ಕೊಳಚೆ ಪ್ರದೇಶದಲ್ಲಿ ಹುಟ್ಟಿ ಬೆಳೆದ ಈತ ವಾತಾವರಣದ ಒತ್ತಡಕ್ಕೆ ಸಿಕ್ಕಿ ನಿಸ್ಸಹಾಯಕನಾಗಿ, ಬದುಕಿನಲ್ಲಿ ಉಳಿಯಲು ಅನಿವಾರ್ಯವಾಗಿ ಕೊಲೆ ಮಾಡಬೇಕಾಗುತ್ತದೆ. ನಂತರ ವರ್ಣನೀತಿಗೆ ಹೊಂದಿಕೊಂಡು ಬದುಕಲು ಕಲಿಯುತ್ತಾನೆ.(The Ethics of Living Jim Crow). ಅಮೆರಿಕದಲ್ಲಿ ಕರಿಯ ಜನರ ಜೀವನಾನುಭವ – ಭೂತಕಾಲದಲ್ಲಿ ದುರಂತದಿಂದ ಕೂಡಿದ್ದು, ವರ್ತಮಾನದಲ್ಲಿ ದಬ್ಬಾಳಿಕೆಯ ದರ್ಪಕಾಲಿನಡಿ ಕುಬ್ಜ ಕರಿನೆರಳ ಛಾಯೆಯಂತೆ ಬದುಕಬೇಕಾಗಿದೆ – ಎಂದು ರೈಟ್ ವಿಷಾದ ವ್ಯಕ್ತಪಡಿಸಿದನು.

ದಕ್ಷಿಣ ಸಂಸ್ಥಾನಗಳಲ್ಲಾದ ಪುನರುತ್ಥಾನ

ದಕ್ಷಿಣ ಸಂಸ್ಥಾನದ ಕರಿಯರಂತೆ ಬಿಳಿಯರೂ ಕೂಡ ಬೇರೆ ರೀತಿಯಲ್ಲಿ ಭೂತಕಾಲದ ದುರಂತದಲ್ಲಿ ಪಾಲ್ಗೊಂಡಿದ್ದರು. ಆ ದುರಂತದ ನೆನಪಿನಾಳದಿಂದ ಮತ್ತು ವರ್ತಮಾನ

ಕಾಲದಲ್ಲಿ ಅವರ ಸುತ್ತಲೂ ಜರುಗುತ್ತಿದ್ದ ಬದಲಾವಣೆಗಳಿಂದ ಸ್ಫೂರ್ತಿ ಪಡೆದ ದಾಕ್ಷಿಣಾತ್ಯ ಬರಹಗಾರರು, ಒಂದು ಶತಮಾನದ ಹಿಂದೆ ನ್ಯೂ ಇಂಗ್ಲೆಂಡ್ ಪ್ರಾಂತದಲ್ಲಿ ಅರಳಿದ ಸಾಹಿತ್ಯಸುಮಕ್ಕೆ ಸಮನಾದ ಸೃಜನಾತ್ಮಕ ಸಾಹಿತ್ಯವನ್ನು ಸಮೃದ್ಧವಾಗಿ ಬೆಳೆಸಿದರು.

೧೯೨೦ರಲ್ಲಿ ಎಚ್.ಎಲ್. ಮೆನೆಕೆನ್ (H.L. Meneken) ತನ್ನ 'ಪೂರ್ವಾಗ್ರಹಗಳು' (Prejudices) ಎಂಬ ಪ್ರಬಂಧ ಸಂಕಲನದ 'ಬೊಝಾರ್ಟ್ ಎಂಬ ಸಹಾರ' (The Sahara of Bozart) ಎನ್ನುವ ಪ್ರಬಂಧದಲ್ಲಿ ದಾಕ್ಷಿಣಾತ್ಯ ಸಂಸ್ಕೃತಿಯನ್ನು ಮೈಗೂಡಿಸಿ ಕೊಂಡ ಅಮೆರಿಕದ ಈ ಭೂಭಾಗವನ್ನು 'ಬಂಜರು ಬಿದ್ದ ಪಾಳುಭೂಮಿ' ಎಂದು ಕರೆದು, 'ನಾಗರಿಕತೆಯ ಪಸೆ ಸಂಪೂರ್ಣವಾಗಿ ಇಂಗಿಹೋದ ಈ ಸಮಾಜಕ್ಕೆ ಸಮನಾದ ನಿದರ್ಶನ ಇತಿಹಾಸದಲ್ಲಿ ದೊರಕಲಾರದು' ಎಂದು ಕಟುವಾಗಿ ಟೀಕಿಸಿದ್ದನು. ಹೀಗೆ ಟೀಕಿಸುವಾಗ ಅವನಿಗೆ ಅರಿವಿಲ್ಲದಂತೆ ದಕ್ಷಿಣದಲ್ಲಿ ನವೋದಯದ ನಸುಕು ಹರಿದಿತ್ತು. ಮೆನೆಕೆನ್ ದಾಕ್ಷಿಣಾತ್ಯರ ಸಂಸ್ಕೃತಿಯನ್ನು ಟೀಕಿಸಿವಾಗ ಅವನಿಗೆ ರಿಚ್‌ಮಂಡ್‌ನಲ್ಲಿ ವಾಸಿಸುತ್ತಿದ್ದ ಬರಹಗಾರ್ತಿ ಎಲನ್ ಗ್ಲಾಸ್ಗೋ (Ellen Glasgow) ಬಗ್ಗೆ ತಿಳಿದಿರಲಿಲ್ಲ. ಅವಳು ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲು ಏಕೈಕವಾಗಿ ದಾಕ್ಷಿಣಾತ್ಯರ ಸಂಸ್ಕೃತಿಯನ್ನು ಪ್ರತಿನಿಧಿಸುವ ಸಾಹಿತ್ಯದಲ್ಲಿ ಸಾಂಪ್ರದಾಯಿಕವಾಗಿ ಬೆಳೆದು ಬಂದಿದ್ದ ಕಂತೆಪುರಾಣ ಮತ್ತು ಒನಪು ವೈಯ್ಯಾರಗಳ ವಿರುದ್ಧವಾಗಿ ಆಂದೋಳನ ನಡೆಸಿದಳು. ಅವಳ ಕೃತಿ 'ಕಾಮನ್‌ವೆಲ್ತ್ ಕುರಿತ ಕಾದಂಬರಿ' (Novel of the Commonwealth) ಯಲ್ಲಿ ಅಂತರ್ಯುದ್ಧದ ಕಾಲದಿಂದ ಅವಳ ಜೀವಿತ ಕಾಲದವರೆಗಿನ ವರ್ಜೀನಿಯಾ ಪ್ರಾಂತದ ವಾಸ್ತವ ಸಾಮಾಜಿಕ ಚರಿತ್ರೆ (Social history)ಯನ್ನು ವರ್ಣಿಸಿದ್ದಾಳೆ. ೧೯೨೫ರಲ್ಲಿ ಪ್ರಕಟವಾದ 'ಗೊಡ್ಡು ಭೂಮಿ' (Barren Ground) ಕಾದಂಬರಿಯಲ್ಲಿ ಅವಳು ಕಷ್ಟಸಹಿಷ್ಣುವಾದ ಧೀರ ಮಹಿಳೆಯೊಬ್ಬಳ ಹೋರಾಟದ ಬದುಕನ್ನು ಚಿತ್ರಿಸಿದ್ದಾಳೆ. ಇದರಿಂದಾಗಿ ಅವಳು ಸಾಹಿತಿಗಳ ವೃತ್ತದಲ್ಲಿ ಹೆಸರು ಗಳಿಸಿದಳು.

ಮೆನೆಕೆನ್ ಗಣನೆಗೆ ತಂದುಕೊಳ್ಳದ ಇನ್ನೊಂದು ವಿಷಯವೆಂದರೆ ದಕ್ಷಿಣ ಸಂಸ್ಥಾನಗಳು ಎರಡು ಪ್ರಪಂಚಗಳ ನಡುವೆ ನಿಂತಿದ್ದವು ಎನ್ನುವುದು: ಹಳೆಯ ಅವಸಾನಗೊಳ್ಳುತ್ತಿದ್ದ ಸಾಂಪ್ರದಾಯಿಕ ಜಗತ್ತು ಮತ್ತು ಆಗತಾನೆ ಹುಟ್ಟಲು ಹವಣಿಸುತ್ತಿದ್ದ ವಾಣಿಜ್ಯ-ವ್ಯಾಪಾರ ವ್ಯವಹಾರಗಳ ಹೊಸಜಗತ್ತು. ಈ ಎರಡು ಜಗತ್ತುಗಳ ನಡುವಣ ಘರ್ಷಣೆ ದಾಕ್ಷಿಣಾತ್ಯರು ಅನುಭವಿಸಿದಷ್ಟು ಆಳವಾಗಿ ಮತ್ತು ತೀಕ್ಷ್ಣವಾಗಿ ಉತ್ತರ ಸಂಸ್ಥಾನದವರು ಅನುಭವಿಸಲಿಲ್ಲ. ಈ ಘರ್ಷಣೆ ಮಿಶ್ರ ಪರಿಣಾಮ ಉಂಟುಮಾಡಿತು – ಹಳಬರು ಮೂಲಭೂತ ಮೌಲ್ಯಗಳಿಗೆ (fundamentalist values) ಶರಣು ಹೋಗಿ, ಕು ಕ್ಲಕ್ಸ್ ಕ್ಲಾನ್‌ನಂಥ ಪ್ರತಿಗಾಮಿ ಪಂಥಗಳ ಪ್ರಭಾವಕ್ಕೊಳಗಾದರು. ಆದರೆ ಅದೇ ಘರ್ಷಣೆ ದಕ್ಷಿಣದ ತರುಣ ಸಾಹಿತಿಗಳ ಮೇಲೆ ಬೇರೆ ರೀತಿಯ ಪರಿಣಾಮ ಬೀರಿತು.

ಅಲನ್ ಟೇಟ್ (Allen Tate) ಎಂಬ ಪ್ರತಿಭಾಶಾಲಿ ತರುಣ ಕವಿ, ಕಾದಂಬರಿಕಾರ ಹಾಗೂ ವಿಮರ್ಶಕ 'ದಕ್ಷಿಣ ಸಂಸ್ಥಾನಗಳಲ್ಲಿ ಜರುಗುತ್ತಿದ್ದ 'ಜ್ಞಾನೋದಯ' ಚಿಕ್ಕ ಪ್ರಮಾಣದ್ದಾಗಿರದೆ, ಇಂಗ್ಲೆಂಡಿನಲ್ಲಿ ಔದ್ಯೋಗಿಕ ಕ್ರಾಂತಿ ವ್ಯವಸಾಯವನ್ನು ಅವಲಂಬಿಸಿದ್ದ ಜಾಗೀರದಾರಿ ಪದ್ಧತಿ (feudalism)ಯನ್ನು ತುಳಿದು ಪ್ರಬುದ್ಧಮಾನಕ್ಕೆ ಬಂದ ಬೃಹತ್ ಪ್ರಮಾಣದ ಬದಲಾವಣೆಗೆ ಸರಿಸಮನಾಗಿದೆ' ಎಂದು ಅಭಿಪ್ರಾಯಪಟ್ಟನು. ಮೆಕೆನ್‌ನ ಟೀಕೆ ದಾಕ್ಷಿಣಾತ್ಯರ ಸ್ವಾಭಿಮಾನವನ್ನು ಚುಚ್ಚಿತ್ತು ಎನ್ನುವುದು ದಕ್ಷಿಣದ ಸಾಹಿತಿಗಳ ವೃತ್ತಗಳಲ್ಲಿ ಅವನ ಬಗ್ಗೆ ಪದೇ ಪದೇ ಚರ್ಚೆ ನಡೆಯುವುದರಿಂದ ಮತ್ತು ಅವನು 'ಮರುಭೂಮಿ' ಎಂದು ಕರೆದಿದ್ದ ನೆಲದಲ್ಲಿ ಆಗತಾನೆ ಹುಟ್ಟಿಕೊಂಡ ಚಿಕ್ಕ ನಿಯತ ಕಾಲಪತ್ರಿಕೆಗಳಲ್ಲಿ ಅವನ ಬಗ್ಗೆ ಪ್ರಕಟಗೊಳ್ಳುತ್ತಿದ್ದ ಬರಹಗಳು ಖಚಿತಪಡಿಸಿದವು. ದಕ್ಷಿಣ ಕೆರೊಲಿನ ಕವಿಗೋಷ್ಠಿ ೧೯೨೧ರಲ್ಲಿ ಪ್ರಕಟಿಸಿದ ಸಂಚಿಕೆಯಲ್ಲಿ 'ಮೆನೆಕೆನ್‌ನ ಮರುಭೂಮಿಯಲ್ಲಿ ಆಗಲೇ ಒಯಸಿಸ್‌ಗಳು ನಿರ್ಮಾಣಗೊಂಡು ಅಲ್ಲಿ ಬೆಳೆದು ನಿಂತಿರುವ ಅಂಬೊರದ ಮರಗಳೆಲ್ಲವೂ ಬಂಜೆಯಾಗಿಲ್ಲ' ಎಂದು ಮೆನೆಕೆನ್‌ನನ್ನು ವ್ಯಂಗ್ಯವಾಗಿ ಟೀಕಿಸಿಮುಯ್ಯಿ ತೀರಿಸಿಕೊಂಡರು. ನ್ಯೂ ಆರ್ಲಿಯನ್ಸ್ (New Orleans) ನಗರದಿಂದ ಪ್ರಕಟವಾಗುತ್ತಿದ್ದ 'ದಿ ಡಬಲ್ ಡೀಲರ್' (The Double Dealer) ನಿಯತಕಾಲಿಕದಲ್ಲಿ ಶೆರ್‌ವುಡ್ ಆ್ಯಂಡರ್‌ಸನ್ ಮತ್ತು ವಿಲಿಯಮ್ ಫಾಕ್‌ನರ್‌ರ (William Faulkner) ಬರಹಗಳು ಪ್ರಕಟಗೊಂಡವು. ನ್ಯಾಷ್‌ವಿಲ್ ನಗರದಲ್ಲಿ 'ಫ್ಯೂಜಿಟಿವ್' (Fugitive) ಎಂಬ ಹೆಸರಿನ ನಿಯತಕಾಲಿಕ ಸಂಚಿಕೆಯಲ್ಲಿ ಆ ಕಾಲದ ಅತ್ಯುತ್ತಮ ಅಮೆರಿಕನ್ ಸಾಹಿತಿಗಳು ತಮ್ಮ ಕೃತಿಗಳನ್ನು ಪ್ರಕಟಿಸಿ ಅಭ್ಯುದಯಕ್ಕೆ ಬಂದರು.

೧೯೧೫ರಲ್ಲಿ 'ಫ್ಯೂಜಿಟಿವ್' ಕವಿಗಳು ವ್ಯಾಂಡರ್‌ಬಿಲ್ಟ್ (Vanderbilt) ವಿಶ್ವವಿದ್ಯಾನಿಲಯದಲ್ಲಿ ವಿಚಾರವಿನಿಮಯ ಮಾಡಿಕೊಳ್ಳಲು ಒಟ್ಟಿಗೆ ಸೇರುತ್ತಿದ್ದ ವಿದ್ಯಾರ್ಥಿಗಳ ಗುಂಪು. ಅಷ್ಟರಲ್ಲಿ ಮೊದಲನೆಯ ಜಾಗತಿಕ ಯುದ್ಧದ ದೆಸೆಯಿಂದ ವಿದ್ಯಾರ್ಥಿಗಳು ಹಾಗೆ ಸೇರುವುದು ನಿಂತುಹೋಗಿತ್ತು. ಯುದ್ಧ ಮುಗಿದ ಮೇಲೆ ಆ ಗುಂಪು ಪ್ರೊಫೆಸರ್ ಜಾನ್ ಕ್ರೋವ್ ರ್‍ಯಾನ್‌ಸಂನ ನಾಯಕತ್ತ್ವದಲ್ಲಿ ಪುನಃ ಸೇರಲಾರಂಭಿಸಿತು. ಈ ಗುಂಪಿನಲ್ಲಿ ನಾಲ್ಕು ಜನ ತಮ್ಮ ಬದುಕನ್ನು ಸಾಹಿತ್ಯಕ್ಕೆ ಮುಡಿಪಾಗಿಟ್ಟರು: ರ್‍ಯಾನ್‌ಸಮ್, ಡಾನಲ್ಡ್ ಡೇವಿಡ್‌ಸನ್, ಅಲೆನ್ ಟೇಟ್ ಮತ್ತು ರಾಬರ್ಟ್ ಪೆನ್ ವಾರೆನ್. ಈ 'ಫ್ಯೂಜಿಟಿವ್' ಸಾಹಿತಿಗಳು ಟಿ. ಎಸ್. ಎಲಿಯಟ್‌ನನ್ನು ಮೆಚ್ಚಿಕೊಂಡಿದ್ದರು. ಎಲಿಯಟ್‌ನಂತೆ ಇವರೂ ನವ್ಯಸಾಹಿತ್ಯಕ್ಕೆ ಬದ್ಧರಾಗಿದ್ದರು. ಆಗಿನ ಕಾಲದ ದಕ್ಷಿಣದ ಸಾಹಿತಿಗಳಲ್ಲಿ ಕಂಡುಬರುತ್ತಿದ್ದ ಸಾಂಪ್ರದಾಯಿಕ ಭಾವೋತ್ಕರ್ಷ ನಿರೂಪಣೆ (sentimental narration) ಮತ್ತು ವ್ಯಾಪಾರದ ದೃಷ್ಟಿಯಿಂದ ಸೃಷ್ಟಿಗೊಳ್ಳುತ್ತಿದ್ದ ಸಾಹಿತ್ಯ (commercial boosters) – ಇವುಗಳ ವಿರುದ್ಧ 'ಫ್ಯೂಜಿಟಿವ್' ಸಾಹಿತಿಗಳು ಆಂದೋಳನ ಪ್ರಾರಂಭಿಸಿದರು.

ಸ್ವಲ್ಪ ಕಾಲಾನಂತರದಲ್ಲಿ ಈ ಸಾಹಿತಿಗಳಿಗೆ ಸಂಸ್ಕೃತಿಯ ಬಗ್ಗೆ ತಾವೇ ತೋರಿಸುತ್ತಿದ್ದ ವಿರೋಧ ಅತಿಯಾಯಿತು ಎಂದೆನಿಸಿತು. ಈ ಭಾವನೆಗೆ ಇಂಬು ಕೊಟ್ಟದ್ದು ದಾಕ್ಷಿಣಾತ್ಯರ ಬಗ್ಗೆ ಬೇರೆ ಪ್ರಾಂತದ ಪತ್ರಿಕಾಕರ್ತರು ಮತ್ತು ಬರಹಗಾರರು ಮಾಡುತ್ತಿದ್ದ ಪರಿಹಾಸ ಅಂತ್ತು ವ್ಯಂಗ್ಯ ಉದ್ಗಾರಗಳು. ಇವು 'ಫ್ಯೂಜಿಟಿವ್' ಸಾಹಿತಿಗಳ ಸ್ವಾಭಿಮಾನಕ್ಕೆ ಧಕ್ಕೆ ಉಂಟುಮಾಡಿದವು. ಹೊರಪ್ರಾಂತದವರು 'ಬೈಬಲ್ ಪಟ್ಟೆ' (Bible belt) ಮತ್ತು 'ಅಜ್ಞಾನದ ಅಂಧಕಾರದಲ್ಲಿ ಮುಳುಗಿದ ದಕ್ಷಿಣ' (The Benighted South) ಎಂದು ಪರಿಹಾಸ ಮಾಡುತ್ತಿದ್ದುದನ್ನು 'ವ್ಯಾಂಡರ್‌ಬಿಲ್ಟ್ ಕೃಷಿಕರು' (Vanderbilt agrarians) ಎಂದು ಹೆಸರಾಂತ ಸಾಹಿತಿಗಳು ಎದುರಿಸಿ ಅದಕ್ಕೆ ವಿರುದ್ಧವಾಗಿ ಸಾಂಪ್ರದಾಯಿಕ ಸಮಾಜದ ಪರವಾಗಿ 'ಸಾಂಪ್ರದಾಯಿಕ ಸಮಾಜ ಸ್ಥಿರವಾದುದು, ಮತಧರ್ಮ ಆಧಾರಿತವಾದುದು, ಜನರ ಅಗತ್ಯಗಳನ್ನು ಕುಟುಂಬ, ಬಂಧು ಬಳಗ ಮತ್ತು ಸಮುದಾಯಗಳು ಪೂರೈಸುತ್ತವೆ. ಈ ಸಮಾಜ ಮೌಲ್ಯಪ್ರಧಾನವಾದುದು' ಎಂದು ತಮ್ಮ ಸಂಸ್ಕೃತಿಯನ್ನು ಸಮರ್ಥಿಸಿಕೊಂಡರು. ಕ್ರಮೇಣ ಈ ಕೃಷಿಕ ಮನೋಭಾವ ಸೃಜನಶೀಲ ಸಾಹಿತ್ಯಕ್ಕೆ ಸನ್ನಿವೇಶವನ್ನು ಒದಗಿಸಿಕೊಟ್ಟಿತು. ಅವರ ಮನಸ್ಸಿನಲ್ಲಿ ಉದ್ಭವಿಸಿದ ದಕ್ಷಿಣದ ಕೃಷಿಕ ಸಮಾಜದ ಕಲ್ಪನೆ (image) ಅವರಿಗೆ ಅಮೂಲ್ಯ ಹಾಗೂ ಸಂಕೀರ್ಣವಾದ ಉಪಮೆಯನ್ನು ಒದಗಿಸಿಕೊಟ್ಟಿತು. ಅದರ ಮೂಲಕ ಈ ಬರಹಗಾರರು ಆಧುನಿಕ ಜಗತ್ತಿನ ವಿಮರ್ಶೆ ಮಾಡಲು ಸಾಧ್ಯವಾಯಿತು. ಆಧುನಿಕ ಜೀವನದ ಆವೇಗ ಮತ್ತು ಕ್ಷೋಭೆಗಳನ್ನು ಎತ್ತಿತೋರಿಸಿ ಅದರ ನ್ಯೂನ್ಯತೆಯನ್ನು ಟೀಕಿಸಿದರು. ಕೃಷಿಕ ಜೀವನದ ಕಲ್ಪನೆ ಒಂದು ತಲೆಮಾರಿನ ಸಾಹಿತಿಗಳನ್ನು ಎಚ್ಚರಗೊಳಿಸಿದಂತೆ, ದಕ್ಷಿಣ ಪ್ರಾಂತೀಯತೆ ಒಂದು ತಲೆಮಾರಿನ ಸಮಾಜ ವಿಜ್ಞಾನಿಗಳನ್ನು ಎಚ್ಚರಿಸಿ ಅವರ ಕಲ್ಪನೆಯಲ್ಲಿ 'ಸಮಸ್ಯಾತ್ಮಕ ದಕ್ಷಿಣ' (problem south) ನಿಲ್ಲುವಂತೆ ಮಾಡಿತು. ದಕ್ಷಿಣ ಪ್ರಾಂತೀಯತೆಯನ್ನು ಅಭ್ಯಸಿಸುವ ವಿದ್ಯಾಸಂಸ್ಥೆಯನ್ನು ಉತ್ತರ ಕೆರೊಲಿನದ ಚಾಪೆಲ್ ಹಿಲ್ ಎಂಬಲ್ಲಿ ಸ್ಥಾಪಿಸಲಾಯಿತು. ಅದರ ನಿರ್ದೇಶಕರು ಹಾವರ್ಡ್ ಓಡನ್ (Howard Odon) ಮತ್ತು ರೂಪರ್ಟ್ ವಾನ್ಸ್ (Rupert Vance) ಎಂಬ ಇಬ್ಬರು ಸಮಾಜ ಶಾಸ್ತ್ರಜ್ಞರು. ಅವರು ಯಾವ ಒಂದು ವಿಶಿಷ್ಟ ಕಾರ್ಯಕ್ರಮವನ್ನೂ ಉತ್ತೇಜನ ಗೊಳಿಸಲಿಲ್ಲ. ಆದರೆ ಅವರು ಎರಡು ಮುಖ್ಯ ಕೃತಿಗಳನ್ನು ಪ್ರಕಟಿಸಿದರು: ವಾನ್ಸ್ ಬರೆದ 'ದಕ್ಷಿಣದ ಮಾನವಿಕ ಭೂಗೋಳ' (Human Geography of the South) ಮತ್ತು ಓಡನ್ ಬರೆದ 'ಸಂಯುಕ್ತ ಸಂಸ್ಥಾನಗಳ ದಕ್ಷಿಣ ಪ್ರಾಂತಗಳು'. ಓಡನ್ ತನ್ನ ಪುಸ್ತಕದಲ್ಲಿ ದಕ್ಷಿಣ ಪ್ರಾಂತ ಸಾಂಪ್ರದಾಯಸ್ಥ ಚಿಕ್ಕ ಸ್ಥಳೀಯ ವಿಭಾಗಗಳನ್ನು ನಿವಾರಿಸಿ ಪ್ರಾಂತೀಯ ವೈವಿಧ್ಯತೆಯನ್ನು ಬೆಳೆಸಿಕೊಳ್ಳುವುದು ರಾಷ್ಟ್ರವನ್ನು ಶಕ್ತಿಯುತವಾಗಿ ಮಾಡುತ್ತದೆ ಎಂದು ಪ್ರತಿಪಾದಿಸಿದನು. ಪ್ರಾಂತೀಯ ಯೋಜನೆಗಳನ್ನು ಜಾರಿಗೆ ತರುವುದರಿಂದ 'ಸಮಸ್ಯಾತ್ಮಕ ದಕ್ಷಿಣ'ದ ಸಮಸ್ಯೆಗಳನ್ನು ಪರಿಹರಿಸಿ ಈ ಪ್ರಾಂತದ ಅಮೂಲ್ಯ ಸಾಮರ್ಥ್ಯವನ್ನು ಅಭಿವೃದ್ಧಿಗೊಳಿಸಬಹುದು ಎಂದು ವಾದಿಸಿದನು.

೧೯೨೦ರಲ್ಲಿ ಮೆನೆಕೆನ್ ಯಾವ ಪ್ರಾಂತವನ್ನು 'ಸಂಸ್ಕೃತಿಯ ಮರುಭೂಮಿ' (Cultural Sahara) ಎಂದು ಕರೆದಿದ್ದನೋ ಆ ಮರುಭೂಮಿ ಸಮೃದ್ಧವಾದ ಅರಣ್ಯವಾಗಿ ದಟ್ಟವಾಗಿ ಬೆಳೆದ ಮರಗಿಡಗಳು ಹಾಡು ಹಕ್ಕಿಗಳಿಗೆ ಆಶ್ರಯ ನೀಡಿದೆ - ಎಂದು ವಿಮರ್ಶಕರು ದಕ್ಷಿಣ ಪ್ರಾಂತದ ಸಾಹಿತ್ಯದ ಉತ್ಕರ್ಷವನ್ನು ಶ್ಲಾಘಿಸಿದರು. ೧೯೩೦ರಲ್ಲಿ ವಿಮರ್ಶಕ ಹೊವರ್ಡ್ ಮಮ್‌ಫರ್ಡ್ ಜೋನ್ಸ್ (Howard Mumford Jones) ದಕ್ಷಿಣ ಪ್ರಾಂತದ ಸಾಹಿತ್ಯದ ಬಗ್ಗೆ 'ದಕ್ಷಿಣ ಪ್ರಾಂತ ಇಂದು ಸಾಹಿತ್ಯದ ಭವಿಷ್ಯದ ಭರವಸೆಯ ಬೀಡಾಗಿದೆ' ಎಂದು ಒಂದು ಸಂಚಿಕೆಯಲ್ಲಿ ಬರೆದನು. ಈ ವಿಮರ್ಶೆಗೆ ಸ್ವಲ್ಪ ಮುಂಚಿತವಾಗಿ ದಕ್ಷಿಣ ಪ್ರಾಂತದ ಸಾಹಿತ್ಯಕ್ಕೆ ಜೀವ ತುಂಬಿದ ಇಬ್ಬರು ಸಾಹಿತಿಗಳು ತಮ್ಮ ಕೃತಿಗಳನ್ನು ಪ್ರಕಟಿಸಿದ್ದರು. ಥಾಮಸ್ ವುಲ್ಫ್ (Thomas Wolfe) ನ 'ಲುಕ್ ಹೋಮ್‌ವರ್ಡ್, ಏಂಜಲ್' ಮತ್ತು ವಿಲಿಯಮ್ ಫಾಕ್‌ನರ್‌ನ ' ಸಾರ್ಟೊರಿಸ್' (Sartoris) ಮತ್ತು 'ಸೌಂಡ್ ಅಂಡ್ ದಿ ಫ್ಯೂರಿ' (Sound and the Fury) ಪ್ರಕಟಣೆಗೊಂಡವು. ವುಲ್ಫ್ ಮತ್ತು ಅವನು ಹುಟ್ಟಿದ ಊರು ಆ್ಯಷ್‌ವಿಲ್‌ನ ಪ್ರಖ್ಯಾತಿ ವ್ಯಾಪಕವಾಗಿ ಹಬ್ಬಿತು. ವುಲ್ಫ್ ೧೯೨೦ರ ದಶಕದ ವಿಕ್ಟೋರಿಯನ್ ಯುಗದ ನೀತಿ ನಡವಳಿಕೆಗಳನ್ನು, ದಕ್ಷಿಣದ ಶ್ರೀಮಂತ ಬರ್‌ಬನ್ ವರ್ಗದವರನ್ನು (Bourbon aristocracy) ತನ್ನ ಕೃತಿಯಲ್ಲಿ ತೀವ್ರವಾಗಿ ಖಂಡಿಸಿದ್ದನು. ಆ್ಯಷ್‌ವಿಲ್ ಸುತ್ತಮುತ್ತಲಿನ ಗುಡ್ಡಬೆಟ್ಟಗಳನ್ನು ದಾಟಿ ದೂರದ ನಗರಗಳ ಮುಕ್ತ ವಾತಾವರಣಕ್ಕೆ ಹೋಗುವ ಹಂಬಲವನ್ನು ತನ್ನ ಪುಸ್ತಕದಲ್ಲಿ ವ್ಯಕ್ತಪಡಿಸಿದ್ದನು. ವುಲ್ಫ್ ದಕ್ಷಿಣದೊಡನೆ ಸಂಪರ್ಕ ಸಂಪೂರ್ಣವಾಗಿ ಕಡಿದುಕೊಳ್ಳಲಿಲ್ಲ. ಅವನ ಮೊದಲ ಕೃತಿಯೇ ಅವನ ಅತ್ಯಂತ ಯಶಸ್ವಿಯಾದ ಕೃತಿಯಾಗಿ ಉಳಿಯಿತು. 'ಲುಕ್ ಹೋಮ್‌ವರ್ಡ್, ಏಂಜಲ್' ನ ಗದ್ಯ ಭಾವಗೀತೆಯ ಮೆರಗಿನಿಂದ ಸೊಗಯಿಸುತ್ತದೆ. ಅದು ಕಥಾನಾಯಕ ಯೂಜೀನ್ ಗ್ಯಾಂಟ್ (Eugene Gant)ನ ಹುಡುಕಾಟದ ಆತ್ಮಕತೆ. ವಾಸ್ತವವಾಗಿ ಗ್ಯಾಂಟ್ ಪಾತ್ರ ವುಲ್ಫ್‌ನನ್ನು ಪ್ರತಿನಿಧಿಸುತ್ತದೆ. ಕಾದಂಬರಿಯಲ್ಲಿ ಬರುವ ಗ್ಯಾಂಟ್ ಆಲ್ಟಮಾಂಟ್ ಊರಿನಲ್ಲಿ ಕಳೆದ ಯೌವನದ ದಿನಗಳು ಮತ್ತು ಪರ್‌ವಿಟ್ ಹಿಲ್‌ನಲ್ಲಿ ಅವನ ಕಾಲೇಜಿನ ದಿನಗಳು ಇವುಗಳ ಅನನ್ಯ ವರ್ಣನೆ ಅವನನ್ನು ಅಮೆರಿಕನ್ ಯುವಕ ಸಂವೇದನೆಯ ಸೃಜನ ಸಾಹಿತ್ಯದ ಅತ್ಯುನ್ನತ ಬರಹಗಾರರನೆಂದು ಖ್ಯಾತಿ ಪಡೆಯುವಂತೆ ಮಾಡಿತು.

ವಿಲಿಯಂ ಫಾಕ್‌ನರ್‌ನ ಸಾಹಿತ್ಯ ಅವನು ಹುಟ್ಟಿದ ಮಣ್ಣಿನಲ್ಲಿ ಬೇರೂರಿ ಬೆಳೆಯಿತು. ಅವನು ಹುಟ್ಟಿದ್ದು ಮಿಸ್ಸಿಸ್ಸಿಪ್ಪಿ ಸಂಸ್ಥಾನದ ಆಕ್ಸ್‌ಫರ್ಡ್ (Oxford) ಬಳಿಯ ಲಾಫಿಯೆಟ್ ತಾಲೂಕಿನಲ್ಲಿ (county). ತಾನು ಹುಟ್ಟಿದ ಊರಿನ ಹೆಸರನ್ನು ಬದಲಾಯಿಸಿ ತನ್ನ ಕೃತಿಗಳಲ್ಲಿ ಅವನು ಅದನ್ನು ತನ್ನ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡನು. ಸ್ವಲ್ಪ ಕಾಲ ರಾಯಲ್ ಕೆನಡಾದ ವಾಯುಪಡೆಯಲ್ಲಿ ಸೇವೆ ಸಲ್ಲಿಸಿ ಯುದ್ಧಾನಂತರದ ದಿನಗಳನ್ನು ಗೊತ್ತುಗುರಿಯಿಲ್ಲದ ಅಲೆಮಾರಿಯಂತೆ ಕಳೆದನು. ಸ್ವಲ್ಪ ಸಮಯ ಮಿಸ್ಸಿಸ್ಸಿಪ್ಪಿ

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯೂ ಆಗಿದ್ದನು. ನಂತರ ತಾತ್ಕಾಲಿಕವಾಗಿ ಸಿಕ್ಕ ಕೆಲಸಗಳನ್ನು ಮಾಡುತ್ತ ಕಾಲ ಕಳೆದನು. ಅದೇ ಸಮಯದಲ್ಲಿ ನ್ಯೂ ಆರ್ಲಿಯನ್ಸ್ ನಗರದಲ್ಲಿ ಕೆಲವು ಕಾಲ ತಂಗಿದ್ದು ತನ್ನ ಮೊದಲ ಕೃತಿ 'ಸೈನಿಕರ ಸಂಬಳ' (Soldiers' Pay) ಬರೆದನು. ಇದರಲ್ಲಿ ಫಾಕ್‌ನರ್ ಪೋಂಚಾರ್‌ಟ್ರೇನ್ ಸರೋವರದಲ್ಲಿ (Lake Pontchartrain) ಕ್ರೀಡಾನೌಕೆಗಳಲ್ಲಿ ವಿಹರಿಸುತ್ತಿದ್ದ ಸೋಮಾರಿ ಶ್ರೀಮಂತವರ್ಗವನ್ನು ಕುರಿತು ಬರೆದಿದ್ದಾನೆ. ನಂತರ ಅವನು ಯೂರೋಪಿಗೆ ಪ್ರಯಾಣ ಮಾಡಿ, ಎಲ್ಲ ಕಡೆ ಸುತ್ತಾಡಿ, ತನ್ನ ಸ್ವಂತ ಊರಾದ ಆಕ್ಸ್‌ಫರ್ಡ್‌ಗೆ ಹಿಂತಿರುಗಿ ಬಂದು ನೆಲಸಿದನು. ಅಲ್ಲಿ ತನ್ನ 'ಸಾರ್‌ಟೊರಿಸ್' (Sartoris) ಕಾದಂಬರಿ ಬರೆಯುತ್ತಿರುವಾಗ ತನ್ನ ಚಿಕ್ಕ ಊರನ್ನು ಕುರಿತು ಬರೆಯುವುದೇ ಬೇಕಾದಷ್ಟಿದೆ ಎಂದು ಹೊಳೆಯಿತು. ಅವನ ಕೃತಿಗಳಲ್ಲಿ ಹಳತು (ಸಾಂಪ್ರದಾಯಿಕ) ಮತ್ತು ಹೊಸತುಗಳ ನಡುವಣ ಘರ್ಷಣೆ ಮೂಲದ್ರವವಾಗಿ ಸ್ರವಿಸುತ್ತದೆ. ತನ್ನ ಕಲ್ಪನೆಯ ಯೋಕ್ನಪಟಾಪದ (Yoknapatawpha) ಇತಿಹಾಸ ರಚಿಸುವಾಗ ಫಾಕ್‌ನರ್ ನವ್ಯ ಸಾಹಿತ್ಯ ಶೈಲಿಯನ್ನು ತನ್ನ ಕಾದಂಬರಿಗಳಲ್ಲಿ ಅತ್ಯಂತ ಕುಶಲತೆಯಿಂದ ಅನನ್ಯ ರೀತಿಯಲ್ಲಿ ಸೃಷ್ಟಿಸಿದ್ದಾನೆ.

ಸಾಧಾರ ಅಭಿವ್ಯಕ್ತಿ ಸಾಹಿತ್ಯ (Documentary Expression in Literature)

೧೯೩೦ರ ದಶಕದಲ್ಲಿ ಸಾಮಾಜಿಕ ಶೋಧನೆ (social exploration) ಮತ್ತು ವಿವರವಾದ ಪತ್ರಿಕಾವರದಿ ಸೇರಿಕೊಂಡು ಸೃಷ್ಟಿಗೊಂಡ ಒಂದು ಸಾಹಿತ್ಯ ಪ್ರಭೇದ ದಕ್ಷಿಣ ಪ್ರಾಂತಗಳ ಬರಹಗಾರರ ಕೃತಿಗಳಲ್ಲಿ ಅಭಿವ್ಯಕ್ತಿಗೊಳ್ಳುತ್ತಿತ್ತು. ಇದು ಸಾಧಾರ ಪಡಿಸಿದ ಅಭಿವ್ಯಕ್ತಿ ಸಾಹಿತ್ಯವೆಂದು ಹೆಸರು ಗಳಿಸಿತು. ಫೆಡರಲ್ ಸರ್ಕಾರ 'ಹೊಸ ವ್ಯವಹಾರ' (New Deal) ಕಾರ್ಯಾಚರಣೆಯ ಅಂಗವಾಗಿ ರಚಿತವಾದ ಫೆಡರಲ್ ಬರಹಗಾರರ ಯೋಜನೆ ಅಪಾರ ಪ್ರಮಾಣದ ಸಾಬೀತಾದ ಸುದ್ದಿ, ಅಂಕಿ ಅಂಶಗಳ ಸಂಗ್ರಹಣಾಲಯವಾಯಿತು. ಇದರ ಶಾಖೆಗಳು ಪ್ರತಿಸಂಸ್ಥಾನದಲ್ಲಿ ಪ್ರಾದೇಶಿಕ ಮಾರ್ಗದರ್ಶಕ ಪುಸ್ತಕಗಳು, ಸಾರ್ವಜನಿಕ ದಾಖಲೆ ಪತ್ರಾಗಾರ (archives), ಜಾನಪದ ಕತೆಗಳ, ಜಾನಪದ ಗೀತಗಳ ಸಂಗ್ರಹ ಮತ್ತು ಸಮಾಧಿಯ ಶಿಲೆಗಳ ಮೇಲೆ ಕೆತ್ತಿದ ಸಂದೇಶಗಳ ಸಂಗ್ರಹಣೆ – ಈ ಕಾರ್ಯಗಳು ಅವ್ಯಾಹತವಾಗಿ ನಡೆದವು. ಈ ಯೋಜನೆಯಲ್ಲಿ 'ಮೌಖಿಕ ಇತಿಹಾಸ'ವನ್ನು (Oral History) ಸಂಗ್ರಹಿಸಲಾಯಿತು. ಉತ್ತರ ಕೆರೊಲಿನ, ಟೆನ್ನೆಸ್ಸಿ ಮತ್ತು ಜಾರ್ಜಿಯ ಸಂಸ್ಥಾನಗಳಲ್ಲಿ ಬರಹಗಾರರ ಯೋಜನೆ ಕಾರ್ಮಿಕರ, ಗೇಣಿದಾರರ ಮತ್ತು ನೀಗ್ರೋಗಳ ಚರಿತ್ರೆಗಳನ್ನು ಸಂಗ್ರಹಿಸಿತು. ಇವುಗಳನ್ನು ಓದಿದ ಚಾರ್ಲ್ಸ್ ಬಿಯರ್ಡ್ 'ಇವು ನಾನು ಓದಿದ ಎಲ್ಲ ಕಾದಂಬರಿಗಳಿಗಿಂತ ಪ್ರಭಾವಯುತವಾಗಿವೆ' ಎಂದು ಉದ್ಗರಿಸಿದನು. ಬರಹಗಾರರ ಯೋಜನೆಯ ನಿರ್ದೇಶನದಲ್ಲಿ ಮಾಜಿ ಗುಲಾಮರ ಸಂದರ್ಶನ ನಡೆಸಿ ಅದನ್ನು 'ನನ್ನ ಮೇಲಿನ ಭಾರವನ್ನು ಇಳಿಸಿ'

(Lay my Burden down) ಎನ್ನುವ ಕೃತಿಯಲ್ಲಿ ಗುಲಾಮಗಿರಿಯ ಹೃದಯವಿದ್ರಾವಕ ವರ್ಣನೆಯನ್ನು ಒದಗಿಸಿದ್ದಾರೆ.

ಈ ಸಾಹಿತ್ಯ ಪ್ರಭೇದದ ಮತ್ತೊಂದು ಶಾಖೆ 'ಸಾಧಾರ ಸಂಗತಿಯ ಸಾಹಿತ್ಯ'. ಇದರಲ್ಲಿ ಸಮಾಜಶೋಧಕ ಪತ್ರಕರ್ತರು ಮತ್ತು ಛಾಯಾಚಿತ್ರಗಾರರು ಸೇರಿ ಸೃಷ್ಟಿಸಿದ ವಾರ್ತಾಚಿತ್ರಗಳ ಸಾಹಿತ್ಯ (documentary literature) ಮೊದಲಿಗೆ ಸಾಕಷ್ಟು ಆಸಕ್ತಿ ಕೆರಳಿಸದೆಹೋದರೂ ಕ್ರಮೇಣ ಅದು ಪ್ರಭಾವಶಾಲಿ ಸುದ್ದಿಮಾಧ್ಯಮವಾಗಿ ಮನ್ನಣೆ ಪಡೆಯಿತು. ಕೃಷಿಕ್ಷೇತ್ರ ಸಂರಕ್ಷಣ ಆಡಳಿತ (Farm Security Administration) ಸಂಸ್ಥೆ ರಾಯ್ ಸ್ಟ್ರೈಕರ್‌ನ (Roy Stryker) ನಿರ್ದೇಶನದಲ್ಲಿ ಅಮೆರಿಕನ್ನರ ನಿತ್ಯಜೀವನದ ವಾರ್ತಾಚಿತ್ರಗಳನ್ನು ಅಪಾರ ಸಂಖ್ಯೆಯಲ್ಲಿ ತೆಗೆಸಿ ಸಂಗ್ರಹಿಸಿತು.

೧೯೩೦ರ ದಶಕದಲ್ಲಿ ಒಂದು ರೀತಿಯ ಸಾಂಸ್ಕೃತಿಕ ಕ್ರಾಂತಿ (cultural revolution) ಉಂಟಾಯಿತೆಂದೇ ಹೇಳಬಹುದು. ಈ ಕ್ರಾಂತಿ ಅಮೆರಿಕನ್ ಬರಹಗಾರರ ಯೋಜನೆ (Writers Project of America) ಮೂಲಕ ಅಭಿವ್ಯಕ್ತಿಗೊಂಡಿತು. ಸಂಸ್ಕೃತಿಯ ನಾನಾ ವಿಭಾಗಗಳಲ್ಲಿ – ಸಾಹಿತ್ಯ, ಕಲೆ, ಸಂಗೀತ, ನಾಟಕ ಮತ್ತು ಐತಿಹಾಸಿಕ ಸಂಶೋಧನೆಗಳಲ್ಲಿ ಕ್ರಾಂತಿಯುಂಟಾಯಿತು. ಇದರಿಂದಾಗಿ ಅಮೆರಿಕನ್ನರಿಗೆ ಮೊದಲಿನಿಂದಲೂ ಇದ್ದ, ಆದರೆ ಕಡೆಗಣಿಸಲ್ಪಟ್ಟಿದ್ದ ತಮ್ಮ ಸಂಸ್ಕೃತಿಯ ಅರಿವು ಒಮ್ಮೆಲೇ ಹೊಳೆದಂತಾಯಿತು. ಈಗ ಕಳೆದುಹೋದ ಕಾಲವನ್ನು ತುಂಬಿಸಲು ತಮ್ಮ ಸಂಸ್ಕೃತಿಯ ಶೋಧನೆಗೆ ತೊಡಗಿ, ಶೋಧಿಸಿದ್ದನ್ನು ದಾಖಲೆ ಮಾಡಿ, ಸಂರಕ್ಷಿಸಿ, ಆಚರಿಸಿ, ಶ್ಲಾಘಿಸಿ ಕೊಂಡಾಡಿದರು. ಹೀಗೆ ೧೯೨೦ ಮತ್ತು ೧೯೩೦ರ ದಶಕಗಳು ಚೈತನ್ಯಪೂರ್ಣವಾದ ಸೃಜನಶೀಲ ಕಾಲವಾಗಿದ್ದು ಅಮೆರಿಕನ್ನರು ತಮ್ಮ ಸಂಸ್ಕೃತಿಯ ಮರುಶೋಧನೆಯಲ್ಲಿ ತೊಡಗುವಂತೆ ಮಾಡಿದವು.

೧೯೨೦ರ ಚುನಾವಣೆ

ಮೊದಲನೆಯ ಜಾಗತಿಕ ಯುದ್ಧದಲ್ಲಿ ಭಾಗವಹಿಸಿದ ಅಮೆರಿಕನ್ ಸೈನಿಕರು ವಾಪಸ್ಸು ಬಂದೊಡನೆ ಸೈನ್ಯದಿಂದ ವಿಸರ್ಜಿಸಲ್ಪಟ್ಟು ಭ್ರಮನಿರಸನಗೊಂಡಿದ್ದ ಸಮಯದಲ್ಲಿ ಈ ಚುನಾವಣೆ ನಡೆಯಿತು. ಆಗ ಅಮೆರಿಕನ್ನರಲ್ಲಿ ಅಂತರರಾಷ್ಟ್ರೀಯತೆ (internationalism) ಮತ್ತು ಪ್ರಗತಿಶೀಲತೆ (progressivism) ಬಗ್ಗೆ ಜಿಗುಪ್ಸೆಯ ಭಾವನೆ ಬೆಳೆದಿತ್ತು. ೧೯೨೦ರ ನವೆಂಬರ್ ತಿಂಗಳಲ್ಲಿ ನಡೆಯಲಿದ್ದ ಚುನಾವಣೆಯಲ್ಲಿ ಗೆದ್ದೇ ಗೆಲ್ಲುತ್ತೇವೆ ಎಂಬ ಭರವಸೆ ಮತ್ತು ಉತ್ಸಾಹಗಳಿಂದ ಚಿಕಾಗೋ ನಗರದಲ್ಲಿ ನಡೆದ ರಿಪಬ್ಲಿಕನ್ ಅಧಿವೇಶನದ ಸದಸ್ಯರು ತಾವು ಸುಲಭವಾಗಿ ನಿರ್ವಹಿಸಬಲ್ಲಂಥ ಒಬ್ಬ ಅಭ್ಯರ್ಥಿಯನ್ನು ಅಧ್ಯಕ್ಷಪದವಿಗೆ ನಾಮಕರಣ ಮಾಡಲು ನಿಶ್ಚಯಿಸಿದರು. 'ಹೊಗೆ ತುಂಬಿದ ಕೋಣೆ'ಗಳಲ್ಲಿ ಸಮಾಲೋಚನೆ ನಡೆಸಿದ ಪಕ್ಷದ ಧುರೀಣರು, ಅರ್ಹತೆಯುಳ್ಳ ಎಷ್ಟೋ ಅಭ್ಯರ್ಥಿಗಳನ್ನು

ಕಡೆಗಣಿಸಿ, ಅರ್ಧರಾತ್ರಿಯ ಸಮಯದಲ್ಲಿ ಒಹಾಯೊ ಸಂಸ್ಥಾನದ ಸೆನೆಟರ್ ವಾರೆನ್ ಹಾರ್ಡಿಂಗ್‌ನನ್ನು ಅಧ್ಯಕ್ಷ ಸ್ಥಾನಕ್ಕೆ ಮತ್ತು ಕಾಲ್ವಿನ್ ಕೂಲಿಡ್ಜ್‌ನನ್ನು ಉಪಾಧ್ಯಕ್ಷಸ್ಥಾನಕ್ಕೆ ನಾಮಕರಣ ಮಾಡಿದರು. ಹಾರ್ಡಿಂಗ್ ಪ್ರಖ್ಯಾತ ರಾಜಕಾರಣಿಯೇನೂ ಆಗಿರಲಿಲ್ಲ. ಅವನು ಯಾವ ಮುಖ್ಯ ವಿಷಯಗಳ ಬಗ್ಗೆಯೂ ಖಚಿತ ನಿರ್ಧಾರ ಹೊಂದಿರಲಿಲ್ಲ. ಚುನಾವಣಾ ಪ್ರಚಾರದಲ್ಲಿ ಅವನು ಅಸ್ಪಷ್ಟವಾದ ವಾಗ್ದಾನಗಳನ್ನು – ತೆರಿಗೆ ಇಳಿಸುವುದು, ಸುಂಕಗಳನ್ನು ಹೆಚ್ಚಿಸುವುದು, ವಲಸೆಗಾರರ ಸಂಖ್ಯೆಯನ್ನು ಮಿತಿಗೊಳಿಸುವುದು ಮತ್ತು ರೈತರಿಗೆ ಸಹಾಯ ಮತ್ತು ಸೌಲಭ್ಯಗಳನ್ನು ಒದಗಿಸಿಕೊಡುವುದು – ಮುಂತಾದ ಖಚಿತವಲ್ಲದ, ಕಿವಿಗಷ್ಟೇ ಇಂಪಾದ ಮಾತುಗಳಿಂದ ಮತದಾರರ ಮನ ಒಲಸಿಕೊಳ್ಳಲು ಯತ್ನಿಸಿದನು. ಅವನ ಗೆಲುವಿನ ಪ್ರವೃತ್ತಿಯ ಸ್ನೇಹಪರತೆ, ಜನರಲ್ಲಿ ಸುಲಭವಾಗಿ ಬೆರೆಯುವ ಗುಣ, ನಿರಾಡಂಬರತೆ ಮತ್ತು ಸುಲಭವಾಗಿ ಕಾಲ ಕಳೆಯುವ ಮನೋಭಾವದ ವ್ಯಕ್ತಿಯಾಗಿದ್ದು, ಒಟ್ಟಿನಲ್ಲಿ ಜನರಲ್ಲಿ 'ಇವನು ನಮ್ಮಂಥವನೆ' ಎನ್ನುವ ಭಾವನೆ ಹುಟ್ಟಿಸಿದ್ದನು.

ರಿಪಬ್ಲಿಕನ್ನರಿಗೆ ಹೋಲಿಸಿದರೆ ಡೆಮೊಕ್ರಾಟಿಕ್ ಪಕ್ಷದಲ್ಲಿ ಗೊಂದಲದ ಪರಿಸ್ಥಿತಿ ಉಂಟಾಗಿತ್ತು. ಅಭ್ಯರ್ಥಿಗಳ ಆಯ್ಕೆಗಾಗಿ ೪ ಬಾರಿ ಮತದಾನ ನಡೆದು ಅಂತಿಮವಾಗಿ ಒಹಾಯೊ ಸಂಸ್ಥಾನದ ಗವರ್ನರ್ ಜೇಮ್ಸ್ ಕಾಕ್ಸ್ (James Cox)ನನ್ನು ಅಧ್ಯಕ್ಷ ಸ್ಥಾನಕ್ಕೆ ಮತ್ತು ನೌಕಾದಳದ ಉಪಕಾರ್ಯದರ್ಶಿಯೂ, ಮಾಜಿ ಅಧ್ಯಕ್ಷನ ದೂರದ ಸಂಬಂಧಿಯೂ ಆಗಿದ್ದ ಫ್ರಾಂಕ್ಲಿನ್ ರೂಸ್‌ವೆಲ್ಟ್ (Franklin Roosevelt) ನನ್ನು ಉಪಾಧ್ಯಕ್ಷಸ್ಥಾನಕ್ಕೆ ಸಮ್ಮೇಳನದ ಸದಸ್ಯರು ನಾಮಕರಣ ಮಾಡಿದರು. ಬೇರೆ ಸಮಯದ ಚುನಾವಣೆಯಾಗಿದ್ದರೆ ಹಾರ್ಡಿಂಗ್‌ನು ಗಣನೀಯ ಅಭ್ಯರ್ಥಿಯಾಗಿರುತ್ತಿರಲಿಲ್ಲ. ಆದರೆ ೧೯೨೦ರ ದೇಶದ ಪರಿಸ್ಥಿತಿಯಲ್ಲಿ ಅವನು ಹೆಚ್ಚಿಗೆ ಶ್ರಮ ಪಡದೆ ಡೆಮೊಕ್ರಾಟಿಕ್ ಪಕ್ಷದ ಮೇಲೆ ಮಹತ್ತಾದ ವಿಜಯ ಪಡೆಯುವುದನ್ನು ಎದುರು ನೋಡುತ್ತಿದ್ದನು. ಅವನೆಣಿಸಿದಂತೆ ಅವನಿಗೆ ಬೃಹತ ಪ್ರಮಾಣದ ವಿಜಯ ದೊರೆಯಿತು[೧]. ಸಾರ್ವಜನಿಕರ ಒಟ್ಟು ೭ ಮಿಲಿಯನ್ ಮತಗಳಲ್ಲಿ ಶೇಕಡಾ ೬೧ರಷ್ಟು ಮತಗಳು ಅವನಿಗೆ ದೊರಕಿದ್ದವು. ಎಲೆಕ್ಟರಲ್ ಕಾಲೇಜಿನ ಮತಗಳಲ್ಲಿ ೪೦೪ ಮತಗಳು ಹಾರ್ಡಿಂಗ್‌ನಿಗೆ ಮತ್ತು ಕಾಕ್ಸ್‌ನಿಗೆ ೧೨೭ ಮತಗಳು ದೊರಕಿದ್ದವು. ಕಾಂಗ್ರೆಸ್ಸಿನ ಎರಡು ಮನೆಗಳಲ್ಲೂ ರಿಪಬ್ಲಿಕನ್ನರು ಬಹುಮತ ಗಳಿಸಿದ್ದರು. ಈ ಚುನಾವಣೆಯ ಮೂಲಕ ಪ್ರಜೆಗಳು ಅಂತರರಾಷ್ಟ್ರೀಯತೆ ಮತ್ತು ಉದ್ಯಮಗಳ ಸರ್ಕಾರ ನಿಯಂತ್ರಣಗಳನ್ನು ಸಂಪೂರ್ಣವಾಗಿ ನಿರಾಕರಿಸಿದ್ದರು. ರಾಷ್ಟ್ರಜೀವನ 'ಉಲ್ಬಣ ಸ್ಥಿತಿ'ಯಿಂದ 'ಸಾಮಾನ್ಯ ಸ್ಥಿತಿ'ಗೆ (normalcy) ಹಿಂತಿರುಗಿತೆಂದು ಹಾರ್ಡಿಂಗ್ ಉದ್ಗರಿಸಿದನು.

---

೧. ಹಾರ್ಡಿಂಗ್ ಅಮೆರಿಕದ ೨೯ನೆಯ ಅಧ್ಯಕ್ಷ.

ರಿಪಬ್ಲಿಕನ್ನರ ದರ್ಬಾರು

ಹಾರ್ಡಿಂಗ್‌ನ ಚುನಾವಣಾ ಘೋಷಣೆ 'ವ್ಯವಹಾರದಲ್ಲಿ ಸರ್ಕಾರ ಕಡಿಮೆಯಾಗಬೇಕು, ಸರ್ಕಾರದಲ್ಲಿ ವ್ಯವಹಾರ ಹೆಚ್ಚಾಗಬೇಕು' – ಅವನು ಅಧ್ಯಕ್ಷನಾದ ಮೇಲೆ ಆ ಘೋಷಣೆಯ ಇತಿಮಿತಿಗಳ ಅರಿವಾಗಿ, ಅವನು ಸರ್ಕಾರದ ಧ್ಯೇಯ ಧೋರಣೆಗಳನ್ನು ರೂಪಿಸುವ ಜವಾಬ್ದಾರಿಯನ್ನು ತನ್ನ ಸಚಿವ ಮಂಡಳಿಗೆ ಮತ್ತು ಕಾಂಗ್ರೆಸ್ಸಿಗೆ ಬಿಟ್ಟಿದ್ದನು. ರಾಷ್ಟ್ರದ ಆರ್ಥಿಕ ನಿರ್ವಹಣೆಯನ್ನು ಅವನು ಖಜಾನೆ (treasury) ಕಾರ್ಯದರ್ಶಿಯಾಗಿದ್ದ ಆ್ಯಂಡ್ರೂ ಮೆಲನ್‌ಗೆ ವಹಿಸಿದ್ದನು. ಮೆಲನ್ ಮಿಲಿಯನಾಧೀಶ್ವರ, ರಾಷ್ಟ್ರದ ಅಲ್ಯೂಮಿನಂ ಲೋಹದ ಉತ್ಪಾದನೆಯ ಮೇಲೆ ಏಕಸ್ವಾಮ್ಯತೆ ಪಡೆದಿದ್ದನು. ಸರ್ಕಾರ ಒಂದು ಉದ್ಯಮ, ಆದ್ದರಿಂದ ಖಾಸಗಿ ಉದ್ಯಮವನ್ನು ನಿಯಮಬದ್ಧವಾಗಿ ದಕ್ಷತೆಯಿಂದ ನಡೆಸುವಂತೆ ಸರ್ಕಾರವನ್ನು ನಡೆಸಬೇಕು ಎಂದು ಮೆಲನ್ ನಂಬಿದ್ದನು. ಇವನಷ್ಟೆ ದಕ್ಷರಾದ ಇನ್ನಿಬ್ಬರನ್ನು ಹಾರ್ಡಿಂಗ್ ತನ್ನ ಆಡಳಿತ ಮಂಡಳಿಯಲ್ಲಿ ಸೇರಿಸಿಕೊಂಡಿದ್ದರು – ವಾಣಿಜ್ಯ ಕಾರ್ಯದರ್ಶಿಯಾಗಿದ್ದ ಹರ್ಬರ್ಟ್ ಹೂವರ್ (Herbert Hoover), ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಚಾರ್ಲ್ಸ್ ಹ್ಯೂಸ್ (Charles Hughes). ಆದರೆ ಅವನು ಸಚಿವರಾಗಿ ಆಯ್ಕೆ ಮಾಡಿದ ಇಬ್ಬರು ಸ್ನೇಹಿತರು – ಆಲ್ಬರ್ಟ್ ಫಾಲ್ (Albert Fall), ಒಳಾಡಳಿತ ಕಾರ್ಯದರ್ಶಿ (Secretary of the Interior) ಮತ್ತು ಹ್ಯಾರಿ ಡಾಟರಿ (Harry Daughterry), ನ್ಯಾಯಾಂಗ ಕಾರ್ಯದರ್ಶಿ (Attorney General) – ಇವರು ಗೋಮುಖವ್ಯಾಘ್ರಗಳಂತೆ ಸ್ನೇಹಿತರಾಗಿದ್ದುಕೊಂಡು, ತಮ್ಮ ಅಧಿಕಾರ ದುರುಪಯೋಗ ಮಾಡಿ ಭ್ರಷ್ಟಾಚಾರಕ್ಕಿಳಿದು, ತಾವು ಕೆಡುವುದಲ್ಲದೆ ಹಾರ್ಡಿಂಗ್‌ನಿಗೂ ಕೆಟ್ಟ ಹೆಸರು ತಂದರು.

ತೆರಿಗೆಯ ಭಾರವನ್ನು ಉದ್ಯಮಗಳ ಮೇಲಿಂದ ಇಳಿಸಿ ಕಡಿಮೆ ಆದಾಯವರ್ಗದ ಮೇಲೆ ಹೇರುವ ಯೋಜನೆಯನ್ನು ಕೈಗೂಡಿಸುವುದು ಖಜಾನೆ ಕಾರ್ಯದರ್ಶಿ ಕಛೇರಿಯ ಧ್ಯೇಯವಾಗಿತ್ತು. ಇದನ್ನು ಜಾರಿಗೆ ತರಲು ಮೆಲನ್ ದೃಢ ನಿರ್ಧಾರ ಮಾಡಿದ್ದನು. ಶ್ರೀಮಂತರ ಮೇಲೆ ತೆರಿಗೆ ಹಾಕುವುದು ಮತ್ತು ಕಾರ್ಪೊರೇಷನ್ ಲಾಭಗಳಿಕೆಯ ಮೇಲೆ ತೆರಿಗೆ ಹಾಕುವುದು ವ್ಯಾಪಾರ-ಉದ್ಯಮಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತದೆ ಎಂದು ಮೆಲನ್ ಪ್ರತಿಪಾದಿಸಿದನು. ಪ್ರಜಾಪ್ರತಿನಿಧಿ ಸಭೆ ಕೆಳವರ್ಗದವರ ಕರಭಾರವನ್ನು ಕಡಿಮೆ ಮಾಡಲು ಒತ್ತಡ ಹಾಕಿತು. ಆದರೆ ಮೆಲನ್ ತನ್ನ ಹೋರಾಟವನ್ನು ನಿಲ್ಲಿಸದೆ ೧೯೨೧ರಿಂದ ೧೯೨೫ರವರೆಗೆ ಸತತ ಪ್ರಯತ್ನ ನಡೆಸಿ, ಕಡೆಗೆ ೧೯೨೬ರಲ್ಲಿ ತನ್ನ ಗುರಿ ಸಾಧಿಸಿದನು. ಆ ವರ್ಷ ಆಗರ್ಭ ಶ್ರೀಮಂತರು ತಾವು ಹಿಂದೆ ಕೊಡುತ್ತಿದ್ದ ತೆರಿಗೆಯ ೧/೩ ಭಾಗವನ್ನು ಮಾತ್ರ ಕೊಡುವಂತಾಯಿತು. ೧೯೨೦ರ ದಶಕದಲ್ಲಿ ತೆರಿಗೆ ದರ ಕಡಿಮೆಯಾಗಿದ್ದರಿಂದ ಶ್ರೀಮಂತರಿಗೆ – ಮೆಲನ್ ಸೇರಿದಂತೆ, ಆದ ಉಳಿತಾಯ ನಾಲ್ಕು ಬಿಲಿಯನ್ ಡಾಲರ್‌ಗಳು!

ಕಾಂಗ್ರೆಸ್‌ನಲ್ಲಿ ಬಹುಮತ ಗಳಿಸಿದ್ದ ರಿಪಬ್ಲಿಕನ್ ಪಕ್ಷದ ನಾಯಕರು ಯುದ್ಧಪೂರ್ವದಲ್ಲಿ ಅಮೆರಿಕದ ವ್ಯಾಪಾರ/ವಾಣಿಜ್ಯ ವ್ಯವಹಾರಗಳನ್ನು ರಕ್ಷಿಸಲು ಜಾರಿಯಲ್ಲಿದ್ದ ಸುಂಕದ ದರಗಳನ್ನು ಪುನಃ ಜಾರಿಗೆ ತಂದರು. ಅವರು ಅಮೆರಿಕ ಸ್ವಯಂಪೂರ್ಣವಾಗಿರಬೇಕೆಂದು ನಿರ್ಧರಿಸಿದ್ದರು. ಯೂರೋಪಿಯನ್ ರಾಷ್ಟ್ರಗಳು ಅಮೆರಿಕಕ್ಕೆ ಕೊಡಬೇಕಾಗಿದ್ದ ಸಾಲ ತೀರಿಸಲು ತಮ್ಮ ಉತ್ಪಾದನೆಗಳನ್ನು ಅಮೆರಿಕಕ್ಕೆ ಮಾರಬೇಕಾಗಿರುವ ಅಗತ್ಯವನ್ನು ಕಡೆಗಣಿಸಲಾಯಿತು. ಅಮೆರಿಕ ದಕ್ಷಿಣ ಸಂಸ್ಥಾನಗಳಲ್ಲಿ ರಿಪಬ್ಲಿಕನ್ನರಿಗೆ ಬೆಂಬಲ ದೊರೆಯಿತು. ರೈತರು ಸುಂಕದ ಏರಿಕೆಯನ್ನು ಸ್ವಾಗತಿಸಿದರು. ಇದು ಅವರಿಗೆ ಹೆಚ್ಚು ಲಾಭದಾಯಕವಾಗಿತ್ತು.

೧೯೨೧ರಲ್ಲಿ ಪಶ್ಚಿಮ ಮತ್ತು ದಕ್ಷಿಣ ಸಂಸ್ಥಾನಗಳ ಕಾಂಗ್ರೆಸ್ ಪ್ರತಿನಿಧಿಗಳ ನಾಯಕರು ಒಟ್ಟಾಗಿ ರಾಜಕೀಯ 'ಬಣ' (bloc) ವನ್ನು ಸ್ಥಾಪಿಸಿದರು. ಇದನ್ನು ಅವರು 'ಬೇಸಾಯದ ಬಣ' (the farm bloc) ಎಂದು ಕರೆದರು. ಈ ಬಣ ಮೆಲನ್ ಮಂಡಿಸಿದ ಸುಂಕದ ದರಗಳ ಏರಿಕೆಯನ್ನು ಕಾಂಗ್ರೆಸ್ ಸುಲಭವಾಗಿ ಅನುಮೋದಿಸುವಂತೆ ಮಾಡಲು ಕಾರಣವಾಯಿತು. ೧೯೨೧ರ 'ತುರ್ತು ಸುಂಕದ ಕಾಯಿದೆ' (The Emergency Tariff Act) ೨೮ ವ್ಯವಸಾಯ ಸರಕುಗಳ ಮೇಲೆ ತೆರಲಾರದಷ್ಟು ಹೆಚ್ಚಿನ ಸುಂಕ ವಿಧಿಸಿತು. ಹಾಗೆಯೇ ಅತಿಹೆಚ್ಚಿನ ಲಾಭ (excess profits)ದ ಮೇಲಿನ ತೆರಿಗೆಯನ್ನು ರದ್ದುಗೊಳಿಸಿತು. ಶ್ರೀಮಂತರು ಕೊಡಬೇಕಾಗಿದ್ದ ತೆರಿಗೆಯನ್ನೂ ಮಿತಗೊಳಿಸಿತು. ಮಧ್ಯಮ ಮತ್ತು ಕೆಳವರ್ಗದವರಿಗೆ ಅತ್ಯಲ್ಪ ತೆರಿಗೆ ಪರಿಹಾರ ಸಿಕ್ಕಿದ್ದು ಅವರ ಅದೃಷ್ಟ. ೧೯೨೨ರಲ್ಲಿ ಜಾರಿಗೆ ಬಂದ ಫೋರ್ಡ್‌ನೀ-ಮೆಕಂಬರ್ ಕಾಯಿದೆ (The Fordney-McCumber Act) ಸುಂಕದ ದರಗಳನ್ನು ಇನ್ನೂ ಹೆಚ್ಚಿಸಿತು. ಪರಿಣಾಮವಾಗಿ ಯೂರೋಪಿನ ರಾಷ್ಟ್ರಗಳು ತಾವು ಉತ್ಪಾದಿಸಿದ ಸರಕುಗಳನ್ನು ಅಮೆರಿಕಕ್ಕೆ ರಫ್ತು ಮಾಡುವುದು ದುಸ್ಸಾಧ್ಯವಾಯಿತು. ಹಾಗೆಯೇ ಅವರಿಗೆ ಅಮೆರಿಕದ ಉತ್ಪಾದನಾ ವಸ್ತುಗಳನ್ನು ಕೊಳ್ಳುವುದು ಸಾಧ್ಯವಾಗದೆ ಹೋಯಿತು. ಅಮೆರಿಕದ ಹೆಚ್ಚುವರಿ (surplus) ವ್ಯವಸಾಯೋತ್ಪನ್ನ ಸರಕುಗಳು ಕೂಡ ಅವರು ಕೊಳ್ಳಲಾರದಷ್ಟು ದುಬಾರಿಯಾಗಿದ್ದವು.

ಖಜಾನೆ ಕಾರ್ಯದರ್ಶಿಯ ಮಾರ್ಗವನ್ನು ಅನುಸರಿಸಿ ಸರ್ಕಾರದ ಎಲ್ಲಾ ಇಲಾಖೆಗಳೂ ವ್ಯಾಪಾರ/ವಾಣಿಜ್ಯ ಸಂಸ್ಥೆಗಳ ವ್ಯವಹಾರಗಳು ಸರಾಗವಾಗುವಂತೆ ಸಹಕರಿಸಿದರು. ವಾಣಿಜ್ಯ ಕಾರ್ಯದರ್ಶಿ (Secretary of Commerce) ಹರ್ಬರ್ಟ್ ಹೂವರ್‌ನ ಅಭಿಪ್ರಾಯದಲ್ಲಿ ಕೈಗಾರಿಕೋದ್ಯಮಗಳ ಹಿತಾಸಕ್ತಿಗಳೇ ರಾಷ್ಟ್ರದ ಹಿತಾಸಕ್ತಿಗಳು. ಸರ್ಕಾರಿ ಅಧಿಕಾರಿಗಳ ಕರ್ತವ್ಯ – ಕೈಗಾರಿಕೋದ್ಯಮಗಳಿಗೆ ಸಹಾಯ ಮತ್ತು ಸಹಕಾರ ನೀಡುವುದು, ಅವುಗಳನ್ನು ನಿಯಂತ್ರಿಸುವುದಲ್ಲ. ಆಗ ಪ್ರಚಲಿತವಾಗಿದ್ದ ಆರ್ಥಿಕ ತತ್ವ: 'ಅಧಿಕ ಉತ್ಪಾದನೆಯ ಮೇಲೆ ಅವಲಂಬಿಸಿದ ರಾಷ್ಟ್ರದ ಅಭ್ಯುದಯ' – ಇದನ್ನು

ಕೈಗೂಡಿಸಬೇಕಾದರೆ ದಕ್ಷ ಉತ್ಪಾದನಾ ವ್ಯವಸ್ಥೆ ಅಗತ್ಯ ಮತ್ತು ಇದಕ್ಕೆ ಪೋಷಕವಾಗಿ ಸರ್ಕಾರ ಮತ್ತು ಉದ್ಯಮಗಳ ನಡುವೆ ಸಹಕಾರ ಇರಬೇಕಾದುದು ಅನಿವಾರ್ಯವಾಗಿತ್ತು.

ಫೆಡರಲ್ ಸರ್ಕಾರದ ಕಾರ್ಯಾಚರಣೆಯ ಬಗ್ಗೆ ತಿಳುವಳಿಕೆ ಇಲ್ಲದ ಹಾರ್ಡಿಂಗ್‌ಗೆ ಅಧ್ಯಕ್ಷ ಪದವಿ ತನ್ನ ಸಾಮರ್ಥ್ಯಕ್ಕೆ ಮೀರಿದ್ದು ಎನ್ನುವ ಅರಿವಾಯಿತು. ಯಾರನ್ನು ನಂಬಬೇಕೆನ್ನುವುದು ತಿಳಿಯದೆ ತನ್ನ ಸಂಗಡಿಗರೂ ಮತ್ತು ಬೆಂಬಲಿಗರೂ ಆಗಿದ್ದ 'ಒಹಾಯೊ ಪಟಾಲಂ' (Ohio gang) ನ ಸಲಹೆ ಕೋರಿದನು. ತನಗೆ ಬೇಕಾದವರನ್ನು ಸರ್ಕಾರದ ಹುದ್ದೆಗಳಿಗೆ ನೇಮಿಸಿದನು. ಅವರು ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡು ಅಕ್ರಮ ಹಣಕಾಸಿನ ಸಂಪಾದನೆಯಲ್ಲಿ ನಿರತರಾಗಿ, ಸಿಕ್ಕಿಬಿದ್ದು, ದೊಡ್ಡ ಹಗರಣವೇ ಆಯಿತು. ಮೊದಲು ಹೊರಬಿದ್ದಿದ್ದು ಚಾರ್ಲ್ಸ್ ಫೋರ್ಬ್‌ನ ಭ್ರಷ್ಟಾಚಾರ. ಇವನು ನಿವೃತ್ತ ಸೈನಿಕರ ಇಲಾಖೆಯ ಮುಖ್ಯಸ್ಥನಾಗಿದ್ದಾಗ ಆ ಇಲಾಖೆಯ ೨೫೦ ಮಿಲಿಯನ್ ಡಾಲರ್‌ಗಳ ವಾರ್ಷಿಕ ಆಯವ್ಯಯದಲ್ಲಿ ಬಹುಪಾಲು ಹಣ ತನ್ನ ಕಿಸೆಗಿಳಿಸುತ್ತಿದ್ದನು. ೧೯೨೨ರಲ್ಲಿ ಈ ದುರುಪಯೋಗ ಹಾಡಿಂಗ್‌ಗೆ ಗೊತ್ತಾದಾಗ ಅವನನ್ನು ಕೆಲಸಕ್ಕೆ ರಾಜೀನಾಮೆ ಕೊಟ್ಟು ವಿದೇಶಕ್ಕೆ ತೆರಳುವಂತೆ ಮಾಡಿದನು. ಕಡೆಗೆ ಫೋರ್ಬ್‌ನನ್ನು ವಿಚಾರಣೆಗೆ ಗುರಿಪಡಿಸಿ, ಅವನ ಭ್ರಷ್ಟಾಚಾರ ಸಾಬೀತಾಗಿ, ಅವನನ್ನು ಸೆರೆಮನೆಗೆ ಕಳುಹಿಸಿದರು. ಆನಂತರ ಸೆನೆಟ್ ಸಮಿತಿ ವಿಚಾರಣೆ ನಡೆಸಿದಾಗ ಲಂಚ ಮತ್ತು ಫುಢಾರಿತನ ಸರ್ಕಾರದ ಇಲಾಖೆಗಳಲ್ಲಿ ವ್ಯಾಪಕವಾಗಿರುವುದು ತಿಳಿದು ಬಂತು.

೧೯೨೧ರಲ್ಲಿ ನಡೆದ ಭ್ರಷ್ಟಾಚಾರ ಅತ್ಯಂತ ಕುಪ್ರಸಿದ್ಧವಾದುದು. ಒಳಾಂತರ ವ್ಯವಹಾರ ಕಾರ್ಯದರ್ಶಿ ಆಲ್ಬರ್ಟ್ ಫಾಲ್ (Albert Fall) ನ ಸಲಹೆಯಂತೆ ಅಧ್ಯಕ್ಷ ಹಾರ್ಡಿಂಗ್ ಎಲ್ಕ್ ಹಿಲ್ (ಕ್ಯಾಲಿಫೋರ್ನಿಯ) ದಲ್ಲಿದ್ದ ನೌಕಾತೈಲ ಸಂಗ್ರಹ (Naval Oil reserves) ವನ್ನು ಮತ್ತು ವೈಯೋಮಿಂಗ್‌ನ ಟೀ ಪಾಟ್ ಡೋಂ (Tea Pot Dome) ಎಂಬಲ್ಲಿದ್ದ ತೈಲಸಂಗ್ರಹವನ್ನು ಆಂತರಿಕ ವ್ಯವಹಾರ ಇಲಾಖೆಯ ನಿಯಂತ್ರಣ ದಿಂದ ತಪ್ಪಿಸಿ ಫಾಲ್‌ನ ವೈಯಕ್ತಿಕ ನಿಯಂತ್ರಣಕ್ಕೆ ಒಪ್ಪಿಸಿದನು. ಫಾಲ್ ಈ ಎರಡು ತೈಲಸಂಗ್ರಹಗಳನ್ನು ಗುಟ್ಟಾಗಿ ಖಾಸಗಿ ತೈಲಕಂಪನಿಗಳಿಗೆ ಗುತ್ತಿಗೆ ಕೊಟ್ಟನು. ೧೯೨೩ರಲ್ಲಿ ಸೆನೆಟ್ ಸಮಿತಿ ಈ ಗುತ್ತಿಗೆಗಳನ್ನು ವಿಚಾರಣೆಗೆ ಗುರಿಪಡಿಸಿದಾಗ ಫಾಲ್‌ನ ಭ್ರಷ್ಟಾಚಾರ ಬಯಲಾಗಿ ಅವನಿಗೂ ಸೆರೆಮನೆಯ ಶಿಕ್ಷೆ ವಿಧಿಸಲಾಯಿತು.

ಫೋರ್ಬ್‌ನ ಭ್ರಷ್ಟಾಚಾರ ಹಾರ್ಡಿಂಗ್‌ನನ್ನು ಗಾಢವಾಗಿ ಕಾಡುತ್ತಿತ್ತು; ನಂತರ ನಡೆದ ಫಾಲ್‌ನ ಹಗರಣ ಅವನನ್ನು ಅಧೀರನನ್ನಾಗಿ ಮಾಡಿತು. ವ್ಯಾಕುಲಚಿತ್ತನಾದ ಹಾರ್ಡಿಂಗ್‌ನು ಮನಸ್ಸನ್ನು ಬೇರೆ ಕಡೆ ತಿರುಗಿಸಲು ಮತ್ತು ವಾಷಿಂಗ್‌ಟನ್ ಪರಿಸ್ಥಿತಿಗಳಿಂದ ಸ್ವಲ್ಪ ಕಾಲ ದೂರವಿರಲು ಪಶ್ಚಿಮ ಸಂಸ್ಥಾನಗಳಲ್ಲಿ ಸಂಚರಿಸಿ ಭಾಷಣ ಮಾಡುವ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಹೊರಟನು. ಅವನು ಪ್ರಯಾಣ ಮಾಡುತ್ತಿರು

ವಾಗ ಭ್ರಷ್ಟಾಚಾರ ತನಿಖೆಯ ಹೊಸ ವರದಿಗಳು ತಲುಪಿ ಅವನ ವ್ಯಾಕುಲತೆಯನ್ನು ಹೆಚ್ಚಿಸಿದವು. ಹಾರ್ಡಿಂಗ್ ಸಿಯಾಟಲ್ (Seattle) ನಗರದಲ್ಲಿ ತೀಕ್ಷ್ಣವಾದ, ಆಗ ಅವರು ಅಜೀರ್ಣವೆಂದು ತಿಳಿದಿದ್ದ, ಅನಾರೋಗ್ಯಸ್ಥಿತಿಯನ್ನು ಅನುಭವಿಸಿದನು. ೧೯೨೩ರ ಆಗಸ್ಟ್ ತಿಂಗಳ ೨ರಂದು ಅವನು ಸ್ಯಾನ್‌ಫ್ರಾನ್ಸಿಸ್ಕೊ ನಗರದ ಹೋಟಲ್ ಕೊಠಡಿಯಲ್ಲಿ ಮೆದುಳಿನ ರಕ್ತಚಲನೆ ನಿಂತುಹೋದ ಕಾರಣ ಅಕಾಲ ಮರಣ ಹೊಂದಿದನು.

ಕಾಲ್ವಿನ್ ಕೂಲಿಡ್ಜ್‌ನ ಅಧ್ಯಕ್ಷತೆ

ಕಾಲ್ವಿನ್ ಕೂಲಿಡ್ಜ್ (೩೦ನೆಯ ಅಧ್ಯಕ್ಷ) ಶುದ್ಧ ಚಾರಿತ್ರ್ಯದ, ಮಿತವ್ಯಯದ ಮತ್ತು ಸಮರ್ಥ ಆಡಳಿತದಲ್ಲಿ ಗಾಢವಾದ ನಂಬಿಕೆಯುಳ್ಳ ವ್ಯಕ್ತಿಯಾಗಿದ್ದನು. ಅವನು ಮೆಸಾಚ್ಯುಸೆಟ್ಸ್ ಸಂಸ್ಥಾನದ ಗವರ್ನರ್ ಆಗಿದ್ದಾಗ ನಡೆದ ಬಾಸ್ಟನ್ ಪೊಲೀಸ್ ಮುಷ್ಕರವನ್ನು ಹತ್ತಿಕ್ಕುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದನು. ಕೂಲಿಡ್ಜ್‌ನ ಈ ಸಾಧನೆಗಾಗಿ ೧೯೨೦ರ ಚುನಾವಣೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ನಾಮಕರಣ ಮಾಡಿದ್ದರು. ಹಾರ್ಡಿಂಗ್-ಕೂಲಿಡ್ಜ್ ಜೋಡಿ ಚುನಾವಣೆಯಲ್ಲಿ ಗೆದ್ದು, ಅಧಿಕಾರ ವಹಿಸಿಕೊಂಡು ಅಧ್ಯಕ್ಷತೆಯ ಅವಧಿ ಮುಗಿಯುವುದರೊಳಗೆ ಹಾರ್ಡಿಂಗ್‌ನ ಅಕಾಲ ಮರಣದಿಂದಾಗಿ ಉಪಾಧ್ಯಕ್ಷ ಕೂಲಿಡ್ಜ್ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡನು.

'ದೃಢತೆಯ ಶ್ರೇಷ್ಠ ಆರಾಧಕ'ನೆಂದು ಮೆಚ್ಚುಗೆ ಪಡೆದಿದ್ದ ಕೂಲಿಡ್ಜ್ ಸರ್ಕಾರದ ಭ್ರಷ್ಟಾಚಾರವನ್ನು ತೊಡೆದುಹಾಕಿ ಶುದ್ಧಗೊಳಿಸುತ್ತೇನೆ ಎಂದು ವಚನಕೊಟ್ಟನು. ಹಾರ್ಡಿಂಗ್ ಆಡಳಿತದಲ್ಲಿ ಜರುಗಿದ ಅಪನಿಂದೆಗಳನ್ನು ಎದುರಿಸಲು ಇಬ್ಬರು ವಕೀಲರನ್ನು ನೇಮಕ ಮಾಡಿದನು. ಈ ವಕೀಲರು ಪ್ರಾಮಾಣಿಕತೆಗೆ ಹೆಸರಾದವರು ಮತ್ತು ಭ್ರಷ್ಟಾಚಾರದ ವಿರುದ್ಧ ನ್ಯಾಯಾಲಯದಲ್ಲಿ ನಿರ್ದಯವಾಗಿ ವಾದಿಸಿ ಭ್ರಷ್ಟಾಚಾರಿಗಳು ಶಿಕ್ಷೆಗೆ ಒಳಗಾಗುವಂತೆ ಮಾಡುವ ಅನುಭವವಿದ್ದವರು. ಹಾರ್ಡಿಂಗ್‌ನಂತೆ ಕೂಲಿಡ್ಜ್‌ನೀ ವ್ಯಾಪಾರ/ಉದ್ಯಮಗಳ ಹಿತಸಾಧಕನಾಗಿದ್ದನು. 'The business of Amerika is business' ಎನ್ನುವುದು ಅವನ ಧೋರಣೆಯಾಗಿತ್ತು. ಕಾಂಗ್ರೆಸ್ಸಿಗೆ ಅವನು ನೀಡಿದ ಮೊದಲನೆಯ ಸಂದೇಶದಲ್ಲಿ ವಿದೇಶಾಂಗ ನೀತಿಯಲ್ಲಿ ರಿಪಬ್ಲಿಕನ್ ಸಾಂಪ್ರದಾಯಿಕ ಧ್ಯೇಯ/ಧೋರಣೆಗಳನ್ನು ಹಾಗೆಯೇ ಮುಂದುವರಿಸಲು, ಮೆಲನ್ ಆರ್ಥಿಕ ಯೋಜನೆಗಳನ್ನು ಅನುಮೋದಿಸಲು ಮತ್ತು ವ್ಯವಸಾಯಕ್ಕೆ ಸರ್ಕಾರದ ಸಹಾಯ ಮಿತ ಗೊಳಿಸಲು ಕರೆಕೊಟ್ಟನು. ಅದಲ್ಲದೆ ಅಮೆರಿಕ, ರಾಷ್ಟ್ರದ ಒಕ್ಕೂಟ (The League of Nations)ದ ಆಚೆ ಇರಬೇಕೆಂದು ಮತ್ತೆ ಮತ್ತೆ ಒತ್ತಿಹೇಳಿದನು.

೧೯೨೪ರ ಚುನಾವಣೆ

ಈ ಚುನಾವಣೆಯ ಸಮಯದಲ್ಲಿ ಅಮೆರಿಕ ಸುಭಿಕ್ಷವಾಗಿತ್ತು. ಕಾಲ್ವಿನ್ ಕೂಲಿಡ್ಜ್‌ನ ಅಧಿಕಾರವನ್ನು ಜನರು ಸುಭಿಕ್ಷದ ಸಂಕೇತವೆಂದು ಪರಿಗಣಿಸಿದ್ದರು. ದೇಶದ ಆರ್ಥಿಕ

ಅಭಿವೃದ್ಧಿಗೆ ಕೂಲಿಡ್ಜ್‌ನ ವ್ಯಾಪಾರ ಮತ್ತು ಉದ್ಯಮಗಳ ಪರವಾದ ಧೋರಣೆ ಕಾರಣ ವೆಂದು ಜನರು ನಂಬಿದ್ದರಿಂದ ಅವನ ಜನಪ್ರಿಯತೆ ಹೆಚ್ಚಿತು. ಕೂಲಿಡ್ಜ್ ಜಾಗರೂಕತೆ ಯಿಂದ ರಿಪಬ್ಲಿಕನ್ ಪಕ್ಷದ ಆಡಳಿತ ಸಮಿತಿಯ ಮೇಲೆ ಹಿಡಿತ ಸ್ಥಾಪಿಸಿಕೊಂಡು ಚುನಾವಣೆಯ ನಾಮಕರಣ ಪ್ರಚಾರದ ಅನುಕೂಲವನ್ನು ಉಪಯೋಗಿಸಿಕೊಂಡು ತನ್ನ ಸ್ಥಾನ ಭದ್ರಪಡಿಸಿಕೊಂಡನು. ರಿಪಬ್ಲಿಕನ್ ಪಕ್ಷದಲ್ಲಿ ಹೇಳಿಕೊಳ್ಳುವಂತಹ ಪ್ರತಿಸ್ಪರ್ಧಿಗಳು ಇರದಿದ್ದುದರಿಂದ ಅವನು ಅಧ್ಯಕ್ಷ ಪದವಿಗೆ ಅಭ್ಯರ್ಥಿಯಾಗಿ ನಾಮಕರಣ ಪಡೆಯುವುದು ಕಷ್ಟವಾಗಲಿಲ್ಲ. ಹಣಕಾಸಿನ ಆಯ-ವ್ಯಯ ಸಮಿತಿಯ ಮಾಜಿ ನಿರ್ದೇಶಕ ಮತ್ತು ಯುದ್ಧದನಂತರದ ಜರ್ಮನ್ಯ ಪುನರುತ್ಥಾನ ಮತ್ತು ಕರಾರಿನ ಷರತ್ತುಗಳ ಪೂರೈಕೆಗಳ ತೀರ್ಮಾನಗಳನ್ನು ಯಶಸ್ವಿಯಾಗಿ ಮುಗಿಸಿಬಂದಿದ್ದ ಚಾರ್ಲ್ಸ್ ಡೇವ್‌ನನ್ನು ರಿಪಬ್ಲಿಕನ್ ಪಕ್ಷ ಉಪಾಧ್ಯಕ್ಷ ಪದವಿಗೆ ನಾಮಕರಣ ಮಾಡಿತು.

ರಿಪಬ್ಲಿಕನ್ ಪಕ್ಷಕ್ಕೆ ಹೋಲಿಸಿದರೆ ಡೆಮೊಕ್ರಾಟಿಕ್ ಪಕ್ಷ ಡೋಲಾಯಮಾನ ಸ್ಥಿತಿಯಲ್ಲಿತ್ತು. ಕೂಲಿಡ್ಜ್ ಒಂದೇ ಬಾರಿ ಮತ ಚಲಾವಣೆಯಿಂದ ನಾಮಕರಣ ಪಡೆ ದಿದ್ದರೆ, ಡೆಮೊಕ್ರಾಟಿಕ್ ಪಕ್ಷದಲ್ಲಿ ೧೦೩ ಬಾರಿ ಮತ ಚಲಾವಣೆ ನಡೆದು ಕೊನೆಗೆ ಕಾರ್ಪೊರೇಷನ್ ವಕೀಲ ಹಾಗೂ ರಾಜಕೀಯದಲ್ಲಿ ಮಧ್ಯವರ್ತಿಯಾಗಿದ್ದ ಜಾನ್ ಡೇವಿಸ್ (John Davis)ನನ್ನು ಅಧ್ಯಕ್ಷ ಪದವಿಗೆ ಸ್ಪರ್ಧಿಸಲು ನಾಮಕರಣ ಮಾಡಿದರು. ಪಕ್ಷದ ಅಸ್ತವ್ಯಸ್ತ ಪರಿಸ್ಥಿತಿಗೆ ದಕ್ಷಿಣದ ಹಳ್ಳಿಗಳನ್ನು ಪ್ರತಿನಿಧಿಸುವ ಸದಸ್ಯರು ಮತ್ತು ಉತ್ತರದ ನಗರಗಳನ್ನು ಪ್ರತಿನಿಧಿಸುವ ಸದಸ್ಯರುಗಳಿಗೂ ಆಳವಾಗಿ ಬೇರೂರಿದ್ದ ಭಿನ್ನಾಭಿಪ್ರಾಯಗಳು ಮತ್ತು ಸಂಶಯಗಳು ಕಾರಣವಾಗಿದ್ದವು. ಈ ಭಿನ್ನಾಭಿಪ್ರಾಯಗಳು ಮುಖ್ಯವಾಗಿ ಪಾನನಿರೋಧ ಮತ್ತು ಕು ಕ್ಲಕ್ಸ್ ಕ್ಲಾನ್ (Ku Klux Klan)ನಂಥ ಭಯೋತ್ಪಾದಕ ಸಂಘಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಮೇಲೆ ಆಧಾರಿತವಾಗಿದ್ದವು. ಡೇವಿಸ್‌ನ ನಾಮಕರಣ ವನ್ನು ನಿರಾಕರಿಸಿದ – ಪಕ್ಷದ ಎರಡು ಬಣಗಳಿಗೂ ಸೇರಿದ್ದ ಕೆಲವು ಪ್ರಗತಿಪರ ಸದಸ್ಯರು ರೈತರೊಡನೆ ಮತ್ತು ಸಮತಾವಾದಿಗಳೊಡನೆ ಸೇರಿಕೊಂಡು ಹೊಸ ಪ್ರಗತಿಶೀಲ ಪಕ್ಷ (progressive party)ವನ್ನು ಕಟ್ಟಿಕೊಂಡು ರಾಬರ್ಟ್ ಲಾಫೋಲಿಯೆ (Robert La Follette)ನನ್ನು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ನಾಮಕರಣ ಮಾಡಿದರು. ಇವನು ಕೂಲಿಡ್ಜ್‌ನಿಗೆ ಸರಿಸಾಟಿಯಾದ ಸ್ಪರ್ಧಿಯಾಗಿರಲಿಲ್ಲ. ಮೇಲಾಗಿ ಕಾಲ ಸುಭಿಕ್ಷವಾಗಿದ್ದುದು ಕೂಲಿಡ್ಜ್‌ನಿಗೆ ಅನುಕೂಲವಾಗಿತ್ತು. ಹಾಗಾಗಿ ಈ ಇಬ್ಬರು ಪ್ರತಿಸ್ಪರ್ಧಿಗಳ ಮೇಲೂ ಕೂಲಿಡ್ಜ್ ಸುಲಭವಾಗಿ ವಿಜಯಸಾಧಿಸಿದನು.

ದೇಶದಲ್ಲಿ ಸಮೃದ್ಧಿ ಇದ್ದಷ್ಟು ಕಾಲ ರಿಪಬ್ಲಿಕನ್ನರು ವಿವಿಧ ಗುಂಪುಗಳ ಬೆಂಬಲ ಪಡೆದಿದ್ದರು. ಮಧ್ಯಮ ವರ್ಗದವರಲ್ಲದೆ, ಶ್ರೀಮಂತ ವ್ಯಾಪಾರಿಗಳು, ದಕ್ಷಿಣ ಸಂಸ್ಥಾನ ಗಳ ರೈತರು ಮತ್ತು ಕಾರ್ಮಿಕರು ಹಾಗೂ ಕರಿಯರು ರಿಪಬ್ಲಿಕನ್ ಪಕ್ಷದವರಾಗಿದ್ದರು.

ಡೆಮೊಕ್ರಾಟಿಕ್ ಪಕ್ಷಕ್ಕೆ ಕೆಲವು ಉದ್ಯಮಗಳ ಬೆಂಬಲವಿದ್ದರೂ ಆ ಪಕ್ಷದ ಬುನಾದಿಯಾಗಿದ್ದವರು ದಾಕ್ಷಿಣಾತ್ಯರು ಮತ್ತು ಉತ್ತರ ನಗರಗಳಲ್ಲಿನ ಕಾರ್ಮಿಕರು.

ಸಮೃದ್ಧಿಯ ಸಂವತ್ಸರಗಳು

೧೯೨೦ರ ದಶಕದಲ್ಲಿ ಅಮೆರಿಕನ್ನರು ತಮ್ಮ ಆಸ್ತಿ ಪಾಸ್ತಿ ಮತ್ತು ಸರಕು ಸಾಮಗ್ರಿಗಳ ಮೌಲ್ಯ ನಿರಂತರವಾಗಿ ಹೆಚ್ಚುತ್ತ ಹೋಗುತ್ತದೆ, ಆದ್ದರಿಂದ ಇಂದು ಏನನ್ನಾದರೂ ಕೊಂಡರೆ ನಾಳೆ ಅದನ್ನು ಮಾರಿ ಲಾಭ ಗಳಿಸಬಹುದು ಎಂದು ದೃಢವಾಗಿ ನಂಬಿದ್ದರು. ಅನೇಕ ವರ್ಷಗಳವರೆಗೆ ಅವರ ನಂಬಿಕೆಗಳು ನಿಜವಾಗಿತ್ತು. ಅಂದರೆ, ಅವರವರಲ್ಲಿದ್ದ ವಸ್ತುಗಳ ಹಾಗೂ ಹೊಲ ಮನೆಗಳ ಮೌಲ್ಯ ವೃದ್ಧಿಸಿದ್ದನ್ನು ಅವರು ಕಂಡಿದ್ದರು. ಆದ್ದರಿಂದ ಅವರು ಭವಿಷ್ಯದ ಮೇಲೆ ಭರವಸೆ ಇಟ್ಟು ಸಾಮಾನ್ಯ ಜನರೂ ಕೂಡ ಸಟ್ಟಾ ವ್ಯಾಪಾರ ಪ್ರಾರಂಭಿಸಿದರು. ಇದು ಸಮಾಜದಲ್ಲಿ ವ್ಯಾಪಕವಾಗಿ ಹಬ್ಬಿತು. ದಿಢೀರನೆ ದುಡ್ಡು ಮಾಡುವ ಹುಚ್ಚು ಸಾಹುಕಾರರಿಗೆ ಮಾತ್ರವಲ್ಲದೆ, ಪಾಲು ಪತ್ರಗಳನ್ನು ಕೊಳ್ಳಲು ಹಣವಿಲ್ಲದವರಿಗೂ ಕೂಡ ಹಿಡಿದಿತ್ತು. ಇವರು ಸಣ್ಣ ಪ್ರಮಾಣದ ಮುಂಗಡ ಹಣ ಕೊಟ್ಟು ಸಟ್ಟಾ ವ್ಯಾಪಾರ ಮಾಡುತ್ತಿದ್ದರು. ಹೀಗೆ ಎಲ್ಲರೂ ವಿಸ್ತಾರವಾಗಿ ಬೆಳೆಯುತ್ತಿದ್ದ ಅಮೆರಿಕದ ಔದ್ಯೋಗಿಕ ಆರ್ಥಿಕ ವ್ಯವಸ್ಥೆಯ (industrial economy) ಅವಕಾಶಗಳನ್ನು ಉಪಯೋಗಿಸಿಕೊಂಡು ಹಣವಂತರಾಗಲು ಹಾತೊರೆಯುತ್ತಿದ್ದರು.

೧೯೨೦-೧೯೨೨ರ ಅವಧಿಯಲ್ಲಿ ಅಮೆರಿಕ ಆರ್ಥಿಕ ಮುಗ್ಗಟ್ಟನ್ನು ಅನುಭವಿಸಿ ಆಗ ತಾನೆ ಚೇತರಿಸಿಕೊಳ್ಳುತ್ತಿತ್ತು. ೧೯೨೩ರಲ್ಲಿ ಮುಂದೆ ಬರಲಿರುವ ಸಮೃದ್ಧ ಸಂವತ್ಸರಗಳ ಚಿಹ್ನೆಗಳು ಕಾಣತೊಡಗಿದವು. ೧೯೨೨ ಮತ್ತು ೧೯೨೯ರ ನಡುವಣ ಕಾಲದಲ್ಲಿ ಅಮೆರಿಕದ ಕೈಗಾರಿಕಾ ಉತ್ಪಾದನೆ ಎರಡು ಪಟ್ಟು ಹೆಚ್ಚಿತು. ಅದೇ ಸಮಯದಲ್ಲಿ ಕಾರ್ಮಿಕರ ಉತ್ಪಾದನಾ ಶಕ್ತಿ (productivity) ಶೇಕಡಾ ೫೦ರಷ್ಟು ಏರಿತು. ಹೊಸ ತಾಂತ್ರಿಕ ಶೋಧನೆಗಳು ಈ ಉತ್ಪಾದನೆಯನ್ನು ಅಪಾರವಾಗಿ ಹೆಚ್ಚಿಸಿದವು. ಕೈಗಾರಿಕೆ ಎಂಜಿನಿಯರಿಂಗ್ (industrial engineering) ಕ್ಷೇತ್ರದಲ್ಲಿ ವಿಶಿಷ್ಟ ವಿಧಾನಗಳು ಅಭಿವೃದ್ಧಿಗೊಂಡು ಬೃಹತ್ ಪ್ರಮಾಣದ ಉತ್ಪಾದನೆ (large scale production) ಸಾಧ್ಯವಾಯಿತು.

ಆರ್ಥಿಕ ಮುಗ್ಗಟ್ಟಿನಿಂದ ಚೇತರಿಸಿಕೊಂಡ ಸಮಾಜದಲ್ಲಿ ನಿರುದ್ಯೋಗ ಕಡಿಮೆಯಾಗಿತ್ತು. ಆದರೆ ಬಟ್ಟೆ ತಯಾರಿಕೆ, ಕಲ್ಲಿದ್ದಲ ಗಣಿಗಳು ಮುಂತಾದ ಕೈಗಾರಿಕೆಗಳಲ್ಲಿ ನಿರುದ್ಯೋಗ ಹೆಚ್ಚಾಗಿತ್ತು. ಇದು ೧೯೨೦ರ ದಶಕ ಮುಗಿಯುವವರೆಗೂ ಮುಂದುವರಿದಿತ್ತು. ೧೯೨೮ರ ಹೊತ್ತಿಗೆ ಅಮೆರಿಕನ್ನರ ವಾಸ್ತವ ವರಮಾನ (real income ಡಾಲರ್‌ನ ಕೊಳ್ಳುವ ಶಕ್ತಿಯನ್ನು ಅಳೆಯುವ ಸಾಧನ) ಹಿಂದಿನ ೧೪ ವರ್ಷಗಳ ವರಮಾನಕ್ಕಿಂತ ೧/೩ ಭಾಗದಷ್ಟು ಹೆಚ್ಚಾಗಿತ್ತು. ಕಾರ್ಮಿಕರ ವೇತನ ಯುದ್ಧಪೂರ್ವ ದಲ್ಲಿದ್ದ ವೇತನದ

ಎರಡು ಪಟ್ಟು ಹೆಚ್ಚಿತ್ತು. ಇದರಿಂದ ಕಾರ್ಮಿಕರಿಗೆ ಒಕ್ಕೂಟದ ಸದಸ್ಯರಾಗುವ ಅವಶ್ಯಕತೆ ಕಂಡುಬರಲಿಲ್ಲ. ಇವರ ಕೊಳ್ಳುವ ಸಾಮರ್ಥ್ಯ ಹೆಚ್ಚಿ ಕೈಗಾರಿಕಾ ಉತ್ಪನ್ನ ವಸ್ತುಗಳ ಮಾರುಕಟ್ಟೆಗಳು ವಿಸ್ತಾರಗೊಂಡವು. ಕೊಳ್ಳುವವರ ಜೇಬಿನಲ್ಲಿ ಹೆಚ್ಚು ಹಣವಿದ್ದು ಕೊಳ್ಳಲು ಬೇಕಾದಷ್ಟು ವಸ್ತುಗಳು ಮತ್ತು ಉಪಕರಣಗಳು ದೊರೆಯುತ್ತಿದ್ದವು. ಇದರಿಂದಾಗಿ ಮೋಟಾರ್ ವಾಹನಗಳು, ರೇಡಿಯೊ, ಫೋನೋ ಗ್ರಾಫ್, ರೆಫ್ರಿಜರೇಟರ್, ವ್ಯಾಕ್ಯೂಮ್ ಕ್ಲೀನರ್ ಮುಂತಾದ ಆಧುನಿಕ ಯಂತ್ರೋಪಕರಣ ಗಳಿಗೆ ಬೇಡಿಕೆ ಹೆಚ್ಚಾಗಿ ಬೃಹತ್ ಪ್ರಮಾಣದ ಮಾರುಕಟ್ಟೆಗಳು ದೇಶದಾದ್ಯಂತ ವಿಸ್ತರಿಸಿ ಹಬ್ಬಿದವು. ಮೊದಲು ತಮ್ಮ ಕೈಗೆ ಎಟುಕದಿದ್ದ ಹೆಚ್ಚಿನ ಬೆಲೆಯ ವಿಲಾಸ ವಸ್ತುಗಳನ್ನು (luxury goods) ಸುಲಭವಾಗಿ ಸಿಗುತ್ತಿದ್ದ ಸಾಲದ ಮೇಲೆ ಕೊಂಡು ಕಂತುಗಳಲ್ಲಿ ತೀರಿಸುವ ವ್ಯವಸ್ಥೆ ಜಾರಿಗೆ ಬಂದಿದ್ದರಿಂದ ಮನೆಗೆ ಬೇಕಾದ ಪೀಠೋಪಕರಣಗಳನ್ನು ಮತ್ತು ವಿದ್ಯುತ್ ಉಪಕರಣಗಳನ್ನು ಎಲ್ಲರೂ ಕೊಳ್ಳಲು ಸಾಧ್ಯವಾಯಿತು. ಹೆಚ್ಚು ಹೆಚ್ಚು ಜನರು ಸ್ವಂತ ಮನೆಗಳನ್ನು ಕಂತಿನ ಮೇಲೆ ಕೊಂಡುಕೊಂಡರು. ಅಪಾರ ಪ್ರಕೃತಿ ಸಂಪತ್ತು, ಆಧುನಿಕ ಉತ್ಪಾದನಾ ವಿಧಾನಗಳು, ವೇತನ ಹೆಚ್ಚಳ ಮತ್ತು ಸುಲಭವಾಗಿ ಸಿಗುತ್ತಿದ್ದ ಸಾಲ ಇವೆಲ್ಲಗರ ಒಟ್ಟು ಪರಿಣಾಮ – ಅಮೆರಿಕ ಸಮೃದ್ಧ ರಾಷ್ಟ್ರ ಎನಿಸಿಕೊಳ್ಳುವಂತಾಯಿತು.

ಬೃಹತ್ ಮಾರುಕಟ್ಟೆಗಳು ಜಾಹೀರಾತು ಉದ್ಯಮ ಬೆಳೆಯಲು ಕಾರಣವಾಯಿತು. ಲಾಭದಾಯಕವಾದ ಉದ್ಯಮಗಳನ್ನು ಇನ್ನೂ ಹೆಚ್ಚು ಲಾಭದಾಯಕಗೊಳಿಸಲು ಜಾಹೀರಾತು ಏಜನ್ಸಿಗಳು ಹುಟ್ಟಿಕೊಂಡವು. ಯಾವ ಉತ್ಪಾದನೆಗೊಂಡ ವಸ್ತುವಾಗಲಿ ಅದಕ್ಕೆ ಬೇಡಿಕೆ ಹೆಚ್ಚಿಸಲು ಆ ವಸ್ತುವನ್ನು ಆಕರ್ಷಣಗೊಳಿಸಿ ಅದನ್ನು ಕೊಂಡು ಉಪಯೋಗಿಸುವುದರಿಂದ ಬದುಕು ಹಸನಾಗುತ್ತದೆ ಎನ್ನುವ ಭ್ರಮೆಯನ್ನು ಬಳಕೆದಾರರ ಮನಸ್ಸಿನಲ್ಲಿ ಹುಟ್ಟಿಸುತ್ತಿದ್ದುದರಿಂದ ಆ ವಸ್ತುವಿನ ಮಾರಾಟ ಹೆಚ್ಚಾಗುತ್ತಿತ್ತು.

ಮೊದಲನೆಯ ಜಾಗತಿಕ ಯುದ್ಧ ಅನೇಕ ಹೊಸ ಕೈಗಾರಿಕೆಗಳನ್ನು ಸೃಷ್ಟಿಸಿತು. ಅದರಂತೆಯೆ ಆಗಲೇ ಅಸ್ತಿತ್ವಕ್ಕೆ ಬಂದು ಬೆಳೆಯುತ್ತಿದ್ದ ಕೈಗಾರಿಕೆ/ಉದ್ಯಮಗಳನ್ನು ಯುದ್ಧ ಪ್ರವರ್ಧಮಾನಕ್ಕೆ ತಂದಿತು. ಯುದ್ಧದಲ್ಲಿ ವಿಮಾನಗಳ ಬಳಕೆ ವಿಮಾನ ಪ್ರಯಾಣಯುಗವನ್ನೇ ಆರಂಭಿಸಿತು. ಈ ಉದ್ಯಮ ಬೃಹತ್ತಾಗಿ ಬೆಳೆದು ಅಲ್ಪಕಾಲ ದಲ್ಲಿಯೇ ಜಾಗತಿಕವಾಗಿ ವ್ಯಾಪ್ತಿಗೊಂಡಿತು. ಇದಕ್ಕೆ ಕಾರಣವಾದ ಒಂದು ಐತಿಹಾಸಿಕ ಘಟನೆ: ೧೯೨೭ರ ಮೇ ತಿಂಗಳಲ್ಲಿ ಚಾರ್ಲ್ಸ್ ಲಿಂಡ್‌ಬರ್ಗ್ (Charles Lindberg) ತನ್ನ ಪುಟ್ಟ ವಿಮಾನ 'ದಿ ಸ್ಪಿರಿಟ್ ಆಫ್ ಸೇಂಟ್ ಲೂಯಿಸ್'ನ್ನು ನ್ಯೂಯಾರ್ಕಿನಿಂದ ಪ್ಯಾರಿಸ್‌ವರೆಗೆ ಒಬ್ಬನೇ ಹಾಯಿಸಿಕೊಂಡು ಹೋದ ಅನನ್ಯ ಸಾಹಸ. ಈ ಸಾಧನೆ ವಿಮಾನ ಸಾರಿಗೆ ಸಂಸ್ಥೆಗಳ ಬೆಳವಣಿಗೆಗೆ ನಾಂದಿಯಾಯಿತು. ಜಾಗತಿಕ ಯುದ್ಧ ರಸಾಯನಿಕ ಉತ್ಪಾದನಾ ಕೈಗಾರಿಕೆ ಅಭಿವೃದ್ಧಿಗೊಳ್ಳಲು ಪ್ರೋತ್ಸಾಹ ನೀಡಿದುದೆ ಅಲ್ಲದೆ ಅದಕ್ಕೆ

ಬೇಕಾಗುವ ಬಂಡವಾಳವನ್ನೂ ಒದಗಿಸಿಕೊಟ್ಟಿತು. ೧೯೨೯ರ ಹೊತ್ತಿಗೆ ಅಲೈಡ್ ಕೆಮಿಕಲ್ಸ್, ಯೂನಿಯನ್ ಕಾರ್ಬೈಡ್ ಮತ್ತು ಡು ಪಾಂಟ್ ಕಂಪನಿಗಳು ಹೊರ ದೇಶದ ಎಲ್ಲ ರಸಾಯನಿಕ ಕಂಪನಿಗಳನ್ನು ಪ್ಲಾಸ್ಟಿಕ್ ಮತ್ತು ಮಿಶ್ರಲೋಹಗಳ ಉತ್ಪಾದನೆಯಲ್ಲಿ ಹಿಂದೆ ಹಾಕಿದ್ದವು. ರಸಾಯನಿಕಗಳು ಮತ್ತು ವಿದ್ಯುಚ್ಛಕ್ತಿ ಎರಡೂ ಸೇರಿ ಅನೇಕ ಕೈಗಾರಿಕೆಗಳಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನುಂಟುಮಾಡಿದವು. ಪೆಟ್ರೋಲಿಯಂ ಕೈಗಾರಿಕೆ ಹೊಸ ಪ್ರಕ್ರಿಯೆಗಳಿಂದ (processes) ತೀವ್ರಗತಿಯಲ್ಲಿ ಪ್ರಗತಿ ಹೊಂದಿತು. ಹಾಗೆಯೇ ಉಕ್ಕಿನ ಕೈಗಾರಿಕೆ ಮತ್ತು ವಿದ್ಯುತ್ ಉಪಕರಣಗಳನ್ನು ಉತ್ಪಾದಿಸುವ ಕೈಗಾರಿಕೆಗಳು ಕೂಡ ಅಭಿವೃದ್ಧಿಗೊಂಡವು. ಬಿಡಿಭಾಗಗಳನ್ನು ಜೋಡಿಸಲು ಕೊಂಡೊಯ್ಯುವ ಚಲಿಸುವ ಪಟ್ಟೆಯ (assembly line) ಕಾರ್ಯಸಮರ್ಥತೆಯನ್ನು ವಿದ್ಯುಚ್ಛಕ್ತಿ ಹಲವು ಪಟ್ಟು ಹೆಚ್ಚಿಸಿತು.

೧೯೨೦ರ ದಶಕದ ಕೈಗಾರಿಕಾ ಅಭಿವೃದ್ಧಿ ಮುಖ್ಯವಾಗಿ ಮೋಟಾರು ವಾಹನಗಳ ಉತ್ಪಾದನೆಯಲ್ಲಿ ಕೇಂದ್ರೀಕೃತವಾಗಿತ್ತು. ಮೋಟಾರ್ ಕಾರುಗಳನ್ನು ತಯಾರಿಸಲು ಅಧಿಕ ಸಾಮರ್ಥ್ಯವುಳ್ಳ ಕಾರ್ಮಿಕರ ಅಗತ್ಯವಿತ್ತು. ೧೯೧೧ರಲ್ಲಿ ಹೆನ್ರಿ ಫೋರ್ಡ್ ಮಿಚಿಗನ್ ಸಂಸ್ಥಾನದ ಹೈ ಲ್ಯಾಂಡ್ ಪಾರ್ಕ್ ಎಂಬಲ್ಲಿ ಮೋಟಾರು ವಾಹನ ತಯಾರಿಸುವ ಕೈಗಾರಿಕಾ ಕೇಂದ್ರವನ್ನು ಪ್ರಾರಂಭಿಸಿದನು. ಈ ಉತ್ಪಾದನಾ ಘಟಕದಲ್ಲಿ 'ವ್ಯವಸ್ಥಿತ ಯಂತ್ರಾಗಾರ ನಿರ್ವಹಣೆ' ವಿಧಾನವನ್ನು ಅನುಷ್ಠಾನಕ್ಕೆ ತಂದನು. ಈ ವಿಧಾನದಲ್ಲಿ ಯಂತ್ರಾಗಾರದಲ್ಲಿ ವ್ಯವಸ್ಥಿತವಾಗಿ ಜೋಡಿಸಿದ ಯಂತ್ರಗಳು ನಿರಂತರವಾಗಿ ಯಂತ್ರಾಗಾರವನ್ನು ಹೊಕ್ಕು ಕಚ್ಚಾ ಪದಾರ್ಥ (raw material) ಜೋಡಿಸಿದ ಯಂತ್ರಗಳ ಮೂಲಕ ಹಾದು ನೂರಾರು ಯಂತ್ರ ಕಾರ್ಯಾಚರಣೆಗಳಿಗೆ ಒಳಗಾಗಿ ಸಂಪೂರ್ಣ ಉತ್ಪಾದನೆಗೊಂಡ ವಸ್ತುವಾಗಿ ಹೊರಬರುತ್ತಿದ್ದವು. ಇದು ವಿಶಿಷ್ಟ ಯಂತ್ರಗಳ ನಿರ್ವಹಣೆ, ಕಾರ್ಯ ಪರಿಣತರು ಮತ್ತು ವಿಶೇಷ ವೃತ್ತಿಪರರ ಬೆಳವಣಿಗೆಗೆ ಕಾರಣವಾಯಿತು. ಈ ಎಲ್ಲ ಅಂಶಗಳನ್ನು ಅಳವಡಿಸಿಕೊಂಡ ಫೋರ್ಡ್ ಮೋಟಾರ್ ಕಂಪನಿ ಹಿಂದೆಂದೂ ಕಂಡು ಕೇಳರಿಯದ ಅಧಿಕ ಸಂಖ್ಯೆಯಲ್ಲಿ ಮೋಟಾರ್ ವಾಹನಗಳನ್ನು ಉತ್ಪಾದಿಸ ತೊಡಗಿತು.

ಫೋರ್ಡ್ ಕಂಪನಿಯ 'T' ಮಾದರಿಯ ಕಾರುಗಳ ಉತ್ಪಾದನೆಯಾಗುವವರೆಗೆ ಕಡಿಮೆ ಬೆಲೆಯ ಗಟ್ಟಿ ಮುಮುಟ್ಟಾದ ಕುಟುಂಬದ ಉಪಯೋಗಕ್ಕೆ ತಕ್ಕುದಾದ ವಾಹನಗಳು ಇರಲಿಲ್ಲ. ಫೋರ್ಡ್ ಉತ್ಪಾದಿಸಿದ ಕಾರುಗಳನ್ನು ಸಾಧಾರಣ ಅಮೆರಿಕನ್ ಕುಟುಂಬದ ಆದಾಯಕ್ಕೆ ಸಾಂಗತವಾದ ಬೆಲೆಗೆ ಮಾರುವಂತೆ ವ್ಯವಸ್ಥೆ ಮಾಡಲಾಯಿತು. ಕಾರುಗಳ ಉತ್ಪಾದನಾ ಕೈಗಾರಿಕೆಯ ಕ್ಷಿಪ್ರ ಅಭಿವೃದ್ಧಿ ಇತರ ಕೈಗಾರಿಕೆ ಮತ್ತು ಉದ್ಯಮಗಳ ಏಳಿಗೆಗೆ ಕಾರಣವಾಯಿತು. ಮೋಟಾರ್ ವಾಹನಗಳ ಉತ್ಪಾದನೆಗೆ ಕಬ್ಬಿಣ, ಉಕ್ಕು,

ಗಾಜು ಮತ್ತು ಟೈರುಗಳು ಅಗತ್ಯವಾಗಿ ಬೇಕಾಗುವುದರಿಂದ, ಇವುಗಳ ಉತ್ಪಾದನೆಯೂ ಹೆಚ್ಚುತ್ತ ಹೋಯಿತು. ಮೇಲಾಗಿ ಮೋಟಾರು ವಾಹನಗಳ ಉತ್ಪಾದನೆ ಹೊಸ ಉದ್ಯಮಗಳನ್ನೂ ಸೃಷ್ಟಿಸಿದವು. ಕಾರುಗಳನ್ನು ಮಾರುವುದು ಮತ್ತು ಅವು ಕೆಟ್ಟು ನಿಂತಾಗ ಅವುಗಳ ದುರಸ್ತಿ ಮತ್ತು ಕಾಲಕಾಲಕ್ಕೆ ಮಾಡಬೇಕಾದ ನಿರ್ವಹಣಾ ಕಾರ್ಯಗಳನ್ನು (maintanance) ನಡೆಸುವುದು – ಇವುಗಳೇ ದೊಡ್ಡ ಉದ್ಯಮಗಳಾಗಿ ಬೆಳೆದವು.

ಮೋಟಾರ್ ವಾಹನಗಳ ಬೆಳವಣಿಗೆ ಇನ್ನೂ ಅನೇಕ ರೀತಿಗಳಲ್ಲಿ ಸಮಾಜದ ಮೇಲೆ ಪರಿಣಾಮ ಬೀರಿದವು. ಇದರಿಂದಾಗಿ ನಗರವಾಸಿಗಳು ತಮ್ಮ ಕೆಲಸ ಮಾಡುವ ತಾಣದ ಹತ್ತಿರವೇ ವಾಸ ಮಾಡಬೇಕಾದ ಅಗತ್ಯವಿಲ್ಲದಾಯಿತು. ಕಾರ್ಮಿಕರು ನಗರ ಹೊರವಲಯದ ವಿಶಾಲ ಪ್ರದೇಶದಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸಿಸತೊಡಗಿದರು. ಮನೆಗಳಿಂದ ಹಲವಾರು ಮೈಲಿಗಳ ದೂರವಿದ್ದ ತಮ್ಮ ಕೆಲಸಗಳಿಗೆ ಹೋಗಿ ಬರಲು ಮೋಟಾರು ವಾಹನಗಳು ನೆರವಾದವು. ಶ್ರೀಮಂತರೂ ನಗರ ಮಧ್ಯದಲ್ಲಿ ವಾಸ ಮಾಡುವುದನ್ನು ಬಿಟ್ಟು ನಗರದ ಸುತ್ತ ಮುತ್ತಲಿನ ಜನನಿಬಿಡ ಜಾಗಗಳಲ್ಲಿ ದೊಡ್ಡ ಮಹಲುಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದರು. ಹೀಗೆ ಕಾರ್ಮಿಕರು ಮತ್ತು ಶ್ರೀಮಂತವರ್ಗ ನಗರದ ಮಧ್ಯಭಾಗವನ್ನು ಬಿಟ್ಟು ಬಂದುದು ನಗರಕ್ಕೆ ನಷ್ಟವುಂಟಾಯಿತು. ಅವರು ನಗರದಲ್ಲಿ ವಾಸಿಸುತ್ತಿದ್ದಾಗ ಕೊಡಬೇಕಾಗಿದ್ದ ತೆರಿಗೆಯನ್ನು ಈಗ ಕೊಡಬೇಕಾಗಿರಲಿಲ್ಲ. ಹೀಗಾಗಿ ನಗರಗಳು ತೆರಿಗೆಯ ಆದಾಯವನ್ನು ಕಳೆದುಕೊಂಡವು. ಅಮೆರಿಕನ್ನರಲ್ಲಿ ಎರಡು ಪ್ರತ್ಯೇಕ ವರ್ಗಗಳನ್ನು ಮೋಟಾರ ವಾಹನ ಸೃಷ್ಟಿಸಿತು – ನಗರ ಮಧ್ಯವನ್ನು ಬಿಟ್ಟು ಇತರ ಕಡೆಗಳಲ್ಲಿ ಮನೆಕಟ್ಟಿ ನೆಲಸಲು ಆರ್ಥಿಕ ಸಾಮರ್ಥ್ಯವುಳ್ಳವರು, ನಡುನಗರವನ್ನು (mid-town) ಬಿಟ್ಟು ಹೋಗಲಾರದ ಬಡವರ್ಗದ ಜನರು – ಈ ಎರಡು ವರ್ಗಗಳ ಬೆಳವಣಿಗೆಗೆ ಮೋಟಾರ್ ವಾಹನಗಳ ಉತ್ಪಾದನೆ ಪರೋಕ್ಷವಾಗಿ ಉತ್ತೇಜನ ನೀಡಿತು.

೧೯೩೦ರ ದಶಕದಲ್ಲಿ ಸಾರ್ವಜನಿಕರು ಸ್ವಂತ ಮನೆ ಕಟ್ಟಿಕೊಳ್ಳುವುದು ರಾಷ್ಟ್ರದ ಆರ್ಥಿಕ ಸ್ಥಿತಿ ಸೂಚಕವಾಗಿತ್ತು. ೧೯೨೧-೨೯ರ ಅವಧಿಯಲ್ಲಿ ಹೊಸ ಮನೆಗಳ ಸಂಖ್ಯೆ ಹೊಸ ದಾಖಲೆಯನ್ನೇ ಸ್ಥಾಪಿಸಿತ್ತು. ಹಿಂದಿನ ಎಲ್ಲ ವರ್ಷಗಳಿಗಿಂತ ಅಧಿಕ ಸಂಖ್ಯೆಯಲ್ಲಿ ಮತ್ತು ತ್ವರಿತ ಗತಿಯಲ್ಲಿ ಹೊಸ ಮನೆಗಳ ನಿರ್ಮಾಣ ನಡೆದಿತ್ತು. ಕೈಗಾರಿಕಾ ಕೇಂದ್ರಗಳ ಸ್ಥಾಪನೆ ಮತ್ತು ರೈಲು ಮಾರ್ಗಗಳ ವಿಸ್ತರಣೆಗಳು ರಾಷ್ಟ್ರದ ಆರ್ಥಿಕ ಅಭಿವೃದ್ಧಿಯ ಚಿಹ್ನೆಗಳಾಗಿದ್ದವು. ಈ ಅಭಿವೃದ್ಧಿಯ ಮತ್ತೊಂದು ಚಿಹ್ನೆ – ರಸ್ತೆಗಳ ನಿರ್ಮಾಣ. ನವೀನ ರೀತಿಯ ಜಲ್ಲಿಕಲ್ಲು ಮತ್ತು ಡಾಮರುಗಳಿಂದ ಭದ್ರಗೊಳಿಸಿದ, ವಾಹನ ಸಂಚಾರ ಸರಾಗವಾಗುವಂತೆ ಮಾಡುವ ರಸ್ತೆಗಳ ನಿರ್ಮಾಣಕ್ಕೆ ಸ್ಥಳೀಯ, ಸಂಸ್ಥಾನ ಮತ್ತು ರಾಷ್ಟ್ರೀಯ ಆರ್ಥಿಕ ಅಂದಾಜುಗಳಲ್ಲಿ ಅಪಾರ ಮೊತ್ತದ ಹಣವನ್ನು ಮೀಸಲಿಟ್ಟಿದ್ದರು.

ರಸ್ತೆಗಳ ನಿರ್ಮಾಣ ಸ್ಥಗಿತಗೊಂಡರೆ ಅದು ರಾಷ್ಟ್ರದ ಆರ್ಥಿಕ ಬಲಹೀನತೆಯ ಚಿಹ್ನೆಯೆಂದು ಪರಿಗಣಿಸಲಾಗುತ್ತಿತ್ತು.

ರಾಷ್ಟ್ರದ ಒಟ್ಟಾರೆ ಬೆಳವಣಿಗೆ ಸಮೃದ್ಧವಾಗಿದ್ದರೂ ಕೆಲವು ಆರ್ಥಿಕ ಸಮಸ್ಯೆಗಳಿಗೆ ಸುಲಭವಾದ ಪರಿಹಾರ ಇರಲಿಲ್ಲ. ೧೯೨೦ರ ದಶಕದಲ್ಲಿ ಕೈಗಾರಿಕೆಗಳನ್ನು ಏಕೀಕರಣ ಗೊಳಿಸುವ (consolidation) ಪ್ರಯತ್ನ ನಡೆಯುತ್ತಿತ್ತು. ಪ್ರತಿವರ್ಷ ನಿರ್ದಿಷ್ಟವಾದ ಖರ್ಚು ವೆಚ್ಚ ಹೊಂದಿದ್ದ ಪ್ರಮುಖ ಕೈಗಾರಿಕೆಗಳಿಗೆ ತಾವು ಉತ್ಪಾದಿಸಿದ ವಸ್ತುಗಳಿಗೆ ನಿಯಂತ್ರಿಸಿದ ಮತ್ತು ಸ್ಪರ್ಧೆ ಇಲ್ಲದ ಬೆಲೆ ಇರಬಹುದಾದರೆ ಅದರಿಂದಾಗುವ ಅನುಕೂಲ ಗಳು ಲೆಕ್ಕವಿಲ್ಲದಷ್ಟು ಎಂದು ತಿಳಿದಿತ್ತು. ಆದ್ದರಿಂದ ಕೆಲವು ಪ್ರಮುಖ ಕೈಗಾರಿಕೋದ್ಯಮ ಗಳು ಬೆಲೆಗಳನ್ನು ನಿಯಂತ್ರಿಸಲು ಔದ್ಯೋಗಿಕ ಏಕೀಕರಣವನ್ನು (industrial consolidation) ಅನುಸರಿಸಿದ್ದವು. ೧೯೨೯ರಲ್ಲಿ ರಾಷ್ಟ್ರದ ಆಹಾರ, ಉಡುಗೆ ತೊಡುಗೆಗಳು ಮತ್ತು ನಿತ್ಯ ಉಪಯೋಗಿಸುವ ಸರಕು ಸಾಮಗ್ರಿ ಸಲಕರಣೆಗಳ ಒಟ್ಟು ಪ್ರಮಾಣದ ಶೇಕಡಾ ೨೦ರಷ್ಟು ಒಂದು ಬೃಹತ್ ಸಂಸ್ಥೆಗೆ ಸೇರಿದ ದೇಶದಾದ್ಯಂತ ಸ್ಥಾಪಿತಗೊಂಡ ಅಂಗಡಿಗಳಲ್ಲಿ ಮಾರಾಟವಾಗುತ್ತಿತ್ತು. ಈ ಸಂಸ್ಥೆ ಸರಕು ಸರಂಜಾಮುಗಳನ್ನು ಭಾರಿ ಪ್ರಮಾಣದಲ್ಲಿ ಕೊಂಡು ತನ್ನ ಅಂಗಡಿಗಳಲ್ಲಿ ಕಡಿಮೆ ಬೆಲೆಗೆ ಮಾರಿದರೂ ಅಧಿಕ ಲಾಭ ಪಡೆಯುತ್ತಿತ್ತು. ಆದರೆ ಆ ಸಮುದಾಯದ ನೆರೆಹೊರೆಯ ಅಂಗಡಿಗಳು ಅಷ್ಟು ಕಡಿಮೆ ಬೆಲೆಗೆ ಮಾರಲಾಗದೆ ಬಾಗಿಲು ಮುಚ್ಚುವ ಪರಿಸ್ಥಿತಿ ಉಂಟಾಗಿತ್ತು. ರಾಷ್ಟ್ರದ ವಾಣಿಜ್ಯ ಸಂಸ್ಥೆಗಳ ಒಟ್ಟು ಸಂಪತ್ತಿನ ಅರ್ಧದಷ್ಟು ಮತ್ತು ರಾಷ್ಟ್ರದ ಒಟ್ಟು ಸಂಪತ್ತಿನ (total national wealth) ಶೇಕಡಾ ೨೨ ಭಾಗ ಕೇವಲ ೨೦೦ ವ್ಯಾಪಾರ ಸಂಸ್ಥೆಗಳಿಗೆ ಸೇರಿತ್ತು.

ಕೈಗಾರಿಕಾ ಕ್ಷೇತ್ರಕ್ಕೆ ಹೋಲಿಸಿದರೆ ವ್ಯವಸಾಯ ಕ್ಷೇತ್ರ ಪರಿಹರಿಸಲಾಗದ ಸಮಸ್ಯೆಗಳಿಂದ ಕೂಡಿ ನಿರಾಶಾದಾಯಕವಾಗಿತ್ತು. ಬಹುತೇಕ ಅಮೆರಿಕನ್ನರ ಆದಾಯ ಏರಿದ್ದ ಕಾಲದಲ್ಲಿ ರೈತರ ಆದಾಯ ಕುಸಿದಿತ್ತು. ಜಾಗತಿಕ ಯುದ್ಧದನಂತರ ಅಮೆರಿಕನ್ ರೈತರಿಗೆ ಯೂರೋಪಿಯನ್ ಮಾರುಕಟ್ಟೆ ಕಿರಿದಾಗುತ್ತಾ ಹೋಯಿತು. ಅದೇ ಸಮಯ ದಲ್ಲಿ ಸರ್ಕಾರ ಯುದ್ಧ ಕಾಲದಲ್ಲಿ ರೈತರ ಉತ್ಪಾದನೆಗಳಿಗೆ ಲಾಭದಾಯಕ ಬೆಲೆ ನಿಗದಿ ಮಾಡಿದ್ದನ್ನು ರದ್ದುಗೊಳಿಸಿತು. ಜಾಗತಿಕ ಯುದ್ಧ ಜಾನುವಾರುಗಳಿಗೆ, ಗೋಧಿ ಮತ್ತು ಹತ್ತಿಗಳಿಗೆ ಅಪಾರ ಬೇಡಿಕೆ ಉಂಟುಮಾಡಿತ್ತು. ಆದ್ದರಿಂದ ರೈತರು ಹೆಚ್ಚು ಎಕರೆ ಭೂಮಿ ಮತ್ತು ಯಂತ್ರೋಪಕರಣಗಳನ್ನು ಕೊಂಡು ತಮ್ಮ ಉತ್ಪಾದನೆಯನ್ನು ಅಧಿಕಗೊಳಿಸಿದ್ದರು. ಅನೇಕ ರೈತರು ದುಬಾರಿ ಬೆಲೆ ಕೊಟ್ಟು ಜಾನುವಾರು, ಭೂಮಿ ಮತ್ತು ಯಂತ್ರೋಪಕರಣಗಳನ್ನು ಕೊಂಡು ಸಾಲದಲ್ಲಿ ಮುಳುಗಿಹೋಗಿದ್ದರು. ಯುದ್ಧ ಮುಗಿದು ವ್ಯವಸಾಯ ಉತ್ಪನ್ನಗಳಿಗೆ ಬೇಡಿಕೆ ಕಡಿಮೆಯಾಗಿ ಬೆಲೆ ಕುಸಿಯಿತು. ಬೃಹತ್

ಪ್ರಮಾಣದ ಪೈರಿನ ಇಳುವರಿ ಕೊಳ್ಳುವವರಿಲ್ಲದೆ ರೈತರ ಉಗ್ರಾಣದಲ್ಲಿಯೇ ಉಳಿಯಿತು. ಸಾಲದ ಹೊರೆ ಇಳಿಸಲು ಮಾರ್ಗವೇ ಇಲ್ಲದಂತಾಯಿತು. ಆಧುನಿಕ ಕಾಲಕ್ಕೆ ತಕ್ಕಂತೆ ಅಮೆರಿಕನ್ನರ ಆಹಾರದಲ್ಲೂ ಬದಲಾವಣೆಗಳಾದವು. ಜನರು ಹೆಚ್ಚಾಗಿ ತರಕಾರಿ/ಕಾಯಿಪಲ್ಲೆ, ಹಣ್ಣು ಹಂಪಲು ಮತ್ತು ಕೋಳಿ ಮಾಂಸವನ್ನು ಸೇವಿಸುವುದು ಫ್ಯಾಷನ್ ಆಗಿತ್ತು. ಹಾಗೆಯೇ ಜನರ ಉಡುಗೆ ತೊಡುಗೆಗಳಲ್ಲಿ ಹೊಸ ಫ್ಯಾಷನ್‌ಗಳು (ಉದಾಹರಣೆಗೆ ಹೆಂಗಸರ ತುಂಡು ಲಂಗ) ಮತ್ತು ಹತ್ತಿ ಬಟ್ಟೆಗೆ ಬದಲಾಗಿ ಕೃತಕ ನೂಲಿನಿಂದ ನೇಯ್ದ ರೇಯಾನ್ (rayon) ಮತ್ತು ರೇಷ್ಮೆ (silk) ಹೆಚ್ಚಾಗಿ ಬಳಕೆಗೆ ಬಂದವು. ಇದರಿಂದಾಗಿ ಹತ್ತಿಯ ಬೆಳೆಗಾರರಿಗೆ ಭಾರಿ ನಷ್ಟ ಉಂಟಾಗಿ ವರ್ಣಿಸಲಾರದ ಕಷ್ಟ ಕಾರ್ಪಣ್ಯಗಳಿಗೆ ಗುರಿಯಾದರು.

೧೯೧೯ರಲ್ಲಿ ಮಾರುಕಟ್ಟೆಯ ಅನಿಶ್ಚಯತೆಯನ್ನು ಎದುರಿಸಲಾರದೆ ರೈತರು ಲಾಗಾಯ್ತಿನಿಂದ ಬಂದ ತಮ್ಮ ವಂಶದ ಕಸುಬನ್ನು ಒಬ್ಬೊಬ್ಬರಾಗಿ ಕೈಬಿಡುತ್ತಾ ಬಂದು ಐದು ವರ್ಷಗಳೊಳಗೆ ೧೩ ಮಿಲಿಯನ್ ಎಕರೆ ಸಾಗುವಳಿ ಭೂಮಿಯನ್ನು ಬೀಳು ಬಿಟ್ಟರು. ೧೦ ವರ್ಷಗಳ ಅವಧಿಯಲ್ಲಿ ವ್ಯವಸಾಯಗಾರರ ಸಂಖ್ಯೆ ೩ ಮಿಲಿಯನ್‌ಗಿಂತ ಹೆಚ್ಚಾಗಿ ಕ್ಷೀಣಿಸಿತು. ಇವರು ಮಹಾಪೂರದಂತೆ ಪೇಟೆ ಪಟ್ಟಣಗಳಿಗೆ ಮುತ್ತಿಗೆ ಹಾಕಿ ಸಮಸ್ಯೆಗಳಿಗೆ ಕಾರಣರಾದರು. ೧೯೨೧ ಮತ್ತು ೧೯೨೨ ರಲ್ಲಿ ಜಾರಿಗೆ ಬಂದ ಸುಂಕದ ಕಾಯಿದೆಗಳು ರೈತರಿಗೆ ಸಹಾಯಕಾರಿಯಾಗಿದ್ದರೂ, ಪರಿಣಾಮಕಾರಿಯಾಗಲಿಲ್ಲ. ಕಾರಣ, ಆ ಸಮಯದಲ್ಲಿ ರೈತರ ಕಷ್ಟಗಳು ಹೊರದೇಶದವರ ಸ್ಪರ್ಧೆಯಿಂದ ಉಂಟಾಗಿರಲಿಲ್ಲ; ವ್ಯವಸಾಯ ಉತ್ಪನ್ನಗಳಿಗೆ ಸ್ಥಳೀಯ ಮಾರುಕಟ್ಟೆಗಳಲ್ಲಿ ಬೇಡಿಕೆಯಿಲ್ಲದೆ ಬೆಲೆ ಕುಸಿದು ಹೋಗಿದ್ದು ರೈತರ ದುಸ್ಥಿತಿಗೆ ಕಾರಣವಾಗಿತ್ತು.

೧೯೨೩ರಲ್ಲಿ ಕಾಂಗ್ರೆಸ್ ರೈತರಿಗೆ ಸಹಾಯ ನೀಡಲು ಇನ್ನೊಂದು ಬಾರಿ ಪ್ರಯತ್ನಿಸಿತು. ಅದು 'ಅಂತರ್ವರ್ತಿ ಸಾಲ' (Intermediate Credit Act) ದ ಕಾಯಿದೆಯನ್ನು ಜಾರಿಗೆ ತಂದಿತು. ಇದರ ಪ್ರಕಾರ ರೈತರಿಗೆ ಅಲ್ಪಾವಧಿ ಸಾಲಗಳನ್ನು ಕೊಡುವಂಥ ೧೨ ಹೊಸ ಕೃಷಿ ಬ್ಯಾಂಕ್‌ಗಳನ್ನು ಸ್ಥಾಪಿಸಲಾಯಿತು. ಈ ಬ್ಯಾಂಕ್‌ಗಳು ಸಾಲ ನೀಡಿದವೇ ಹೊರತು ರೈತರ ನಿರಂತರ ಸಮಸ್ಯೆಯಾದ ಬೆಲೆ ಕುಸಿತವನ್ನು ಪರಿಹರಿಸಲು ಸಾಧ್ಯವಾಗಲಿಲ್ಲ. ಜಾರ್ಜ್ ಪೀಕ್ (George Peak) ಮತ್ತು ಹ್ಯೂ ಜಾನ್ಸನ್ (Hugh Johnson) ಎಂಬುವರಿಬ್ಬರು ಒಂದು ಹೊಸ ಪರಿಹಾರವನ್ನು ಸೂಚಿಸಿದರು: ಸರ್ಕಾರ ನಿರ್ದಿಷ್ಟವಾದ ಬೆಲೆಗೆ ರೈತರ ಅಧಿಕ ಫಸಲುಗಳನ್ನು ಕೊಂಡು ಅದನ್ನು ಹೊರದೇಶದ ಮಾರುಕಟ್ಟೆಗಳಿಗೆ ಸಾಗಿಸಿ ಅಲ್ಲಿನ ಬೆಲೆಗೆ ಮಾರುವುದು. ಒಳ್ಳೆಯ ಬೆಲೆ ಸಿಗದೆ ನಷ್ಟವುಂಟಾದರೆ ಅದನ್ನು ಭರ್ತಿ ಮಾಡಲು ರೈತರು 'ಸಮಗೊಳಿಸುವ ಶುಲ್ಕ' (Equalization fee) ಕೊಡಬೇಕಾಗಿತ್ತು. ಈ ಬದಲಾವಣೆಗಳನ್ನು ಒಳಗೊಂಡಿದ್ದ

ಮೆಕ್‌ನೇರಿ-ಹೌಗನ್ ಮಸೂದೆಯನ್ನು (The McNary-Haugen Bill) ಕಾಂಗ್ರೆಸ್ ಎರಡು ಬಾರಿ – ೧೯೨೭ ಮತ್ತು ೧೯೨೮ರಲ್ಲಿ – ಅನುಮೋದಿಸಿತು. ಆದರೆ ಈ ಮಸೂದೆ ಜಾರಿಗೆ ಬಂದರೆ ಉತ್ಪಾದನೆ ಮತ್ತಷ್ಟು ಅಧಿಕಗೊಂಡು ಸಮಸ್ಯೆ ಉಲ್ಬಣಗೊಳ್ಳುತ್ತದೆ ಎನ್ನುವ ಕಾರಣದಿಂದ ಅಧ್ಯಕ್ಷನಿಂದ ಎರಡು ಬಾರಿಯೂ ನಿರಾಕರಿಸಲ್ಪಟ್ಟಿತು. ಅಂತೂ ರೈತರಿಗೆ ಪರಿಹಾರ ದೊರೆಯದೆ ಹೋಯಿತು. ವ್ಯವಸಾಯ ಉತ್ಪನ್ನಗಳ ಬೆಲೆ ಭೂಮಿಗೆ ಕುಸಿದು ಬೇರೆ ವಸ್ತುಗಳ ಬೆಲೆಗಳು ಗಗನಕ್ಕೇರಿದ್ದವು. ಹೀಗೆ ವ್ಯವಸಾಯ ಮುಖ್ಯ ಕಸುಬಾಗಿದ್ದ ರೈತರೆಲ್ಲರಿಗೂ ಸಮೃದ್ಧಿ ಸಂವತ್ಸರಗಳು ಶೂನ್ಯ ಸ್ಂಪಾದನೆಯ ಸಂವತ್ಸರಗಳಾಗಿದ್ದವು.

೧೯೨೦ರ ದಶಕದಲ್ಲಿ ಕಾರ್ಮಿಕರ ಸ್ಥಿತಿಗತಿಗಳು ಉತ್ತಮಗೊಂಡಿದ್ದವು; ವೇತನಗಳೂ ಏರಿದ್ದವು. ನಿರ್ವಹಣಾಧಿಕಾರಿಗಳು (managers) ಕಾರ್ಮಿಕರಿಗೆ ವೇತನಗಳನ್ನು ಹೆಚ್ಚಿಸಿದರೆ ಅವರು ಒಕ್ಕೂಟ (union) ಸೇರಬಯಸುವುದಿಲ್ಲ ಎನ್ನುವುದನ್ನು ಮನಗಂಡಿದ್ದರು. ಈ ವೇತನಗಳು ಬಳಕೆಯ ವಸ್ತುಗಳನ್ನು ಕೊಳ್ಳುವುದಕ್ಕೆ ವಿನಿಯೋಗಿಸುವುದರಿಂದ ಮಾರುಕಟ್ಟೆಗಳು ವಿಸ್ತಾರಗೊಳ್ಳಲು ಸಾಧ್ಯವಾಯಿತು. ಇದರಿಂದಾಗಿ ಬಹುತೇಕ ವ್ಯಾಪಾರಿ/ಉದ್ಯಮ ಸಂಸ್ಥೆಗಳು 'ಸುಸ್ಥಿತಿ ಬಂಡವಾಳಶಾಹಿ' (Welfare Capitalism) ವಿಧಾನವನ್ನು ಅನುಷ್ಠಾನಕ್ಕೆ ತಂದವು. ಈ ವಿಧಾನ – ಕಾರ್ಮಿಕರ ವೇತನವನ್ನು ಹೆಚ್ಚಿಸುವುದೆ ಅಲ್ಲದೆ ಕೆಲಸ ಮಾಡಬೇಕಾದ ಗಂಟೆಗಳನ್ನು (working hours) ಕಡಿಮೆ ಮಾಡುವುದು, ವೇತನದೊಂದಿಗೆ ರಜಾ ದಿನಗಳು, ಮನರಂಜನೆ ಮತ್ತು ವ್ಯಾಯಾಮ ಶಾಲೆಗಳು, ಉಪಾಹಾರ ಗೃಹಗಳು ಮತ್ತು ಸ್ಕಲರಿಗೂ ಸಮಾನ ನಿಬಂಧನೆಗಳು – ಇವುಗಳನ್ನು ಜಾರಿಗೆ ತಂದಿತು. ಉದ್ಯಮ ಸಂಸ್ಥೆಗಳು ಪಾಲುಪತ್ರಗಳನ್ನು ಕೊಳ್ಳುವಂತೆ ಕಾರ್ಮಿಕರನ್ನು ಉತ್ತೇಜನಗೊಳಿಸುತ್ತಿದ್ದರು. ಕಂಪನಿಗಳ ಒಕ್ಕೂಟಗಳನ್ನು ಸ್ಥಾಪಿಸುವಂತೆ ಅವಕಾಶ ಕೊಟ್ಟಿದ್ದರು. ಈ ಒಕ್ಕೂಟಗಳು ಕಂಪನಿಯವರ ಅಧಿಕಾರಕ್ಕೆ ಒಳಪಟ್ಟಿದ್ದವು. ಒಕ್ಕೂಟಗಳು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಅವರನ್ನು ಉದ್ಯಮ ನಿರ್ವಹಣಾಧಿಕಾರಿಗಳೊಡನೆ (business managers) ಮಾಲಿಕರೊಡನೆ ವಿಚಾರ ವಿನಿಮಯ ಮಾಡಲು ಕಳುಹಿಸುತ್ತಿದ್ದರು.

ಸಮೃದ್ಧ ಸಂವತ್ಸರಗಳು ಉಚ್ಛ್ರಾಯ ಸ್ಥಿತಿ ಮುಟ್ಟಿ, ಕತ್ತಲೆ ಆವರಿಸುವ ಮುನ್ನ ಮುಳುಗುತ್ತಿರುವ ಸೂರ್ಯನ ಬೆಳಕು ಬಣ್ಣಗಳ ಮೆರವಣಿಗೆ ನಡೆಸಿ ಕ್ರಮೇಣ ಕತ್ತಲಲ್ಲಿ ಕರಗಿ ಹೋಗುವಂತೆ, ಅಮೆರಿಕದಲ್ಲಿ ಸಮೃದ್ಧ ಕಾಲ ಮುಗಿದು ಮುಂಬರುವ ಕಷ್ಟ ಕಾರ್ಪಣ್ಯಗಳ ಮುನ್ಸೂಚನೆಯಂತೆ ಬಳಿ ಸಾರಿತು ೧೯೨೮ರ ಚುನಾವಣೆ. ಈ ಚುನಾವಣೆ ಹತ್ತಿರವಾಗುತ್ತಿದ್ದಂತೆ ಅಧ್ಯಕ್ಷ ಕೂಲಿಡ್ಜ್ "ನಾನು ಚುನಾವಣೆಗೆ ನಿಲ್ಲುವುದಿಲ್ಲವೆಂದು ಮನಸ್ಸು ಮಾಡಿದ್ದೇನೆ" ಎಂದು ತನ್ನ ನಿರ್ಧಾರವನ್ನು ಬಹಿರಂಗ ಪಡಿಸಿದನು. ಆದ್ದರಿಂದ ರಿಪಬ್ಲಿಕನ್ ಪಕ್ಷ ಹರ್ಬರ್ಟ್ ಹೂವರ್ ಕಡೆಗೆ ಗಮನ ಹರಿಸಿ ಅವನನ್ನು ಅಧ್ಯಕ್ಷ

ಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮಕರಣ ಮಾಡಿದರು. ರೈತರ ಮನ ಒಲಿಸಿಕೊಳ್ಳಲು ರಿಪಬ್ಲಿಕನ್ ಪಕ್ಷ, ಕಾನ್ಸಾಸ್ ಪ್ರಾಂತದ ಸೆನೆಟರ್ ಚಾರ್ಲ್ಸ್ ಕರ್ಟಿಸ್‌ನನ್ನು ಉಪಾಧ್ಯಕ್ಷ ಸ್ಥಾನಕ್ಕೆ ನಾಮಕರಣ ಮಾಡಿತು. ಹೂವರನಿಗೆ ರೈತರ ಮತ್ತು ವೃತ್ತಿ ರಾಜಕಾರಣಿಗಳ ಬೆಂಬಲವಿರಲಿಲ್ಲ. ದೊಡ್ಡ ಕೈಗಾರಿಕೆಗಳು ಮತ್ತು ಶ್ರೀಮಂತ ವ್ಯಾಪರಿಗಳು/ಉದ್ದಿಮೆಗಾರರು ಅವನಿಗೆ ಸಂಪೂರ್ಣ ಒಪ್ಪಿಗೆ ಇತ್ತು ಸಹಕರಿಸಲು ಸಿದ್ಧವಾಗಿದ್ದರು. ಡೆಮೊಕ್ರಾಟಿಕ್ ಪಕ್ಷ ಆಲ್‌ಫ್ರೆಡ್ ಸ್ಮಿತ್ (Alfred Smith) ನನ್ನು ಅಧ್ಯಕ್ಷ ಸ್ಥಾನಕ್ಕೆ ಮತ್ತು ಆರ್‌ಕನ್ಸಾ (Arkansas) ಸಂಸ್ಥಾನದ ಜೋಸೆಫ್ ರಾಬಿನ್‌ಸನ್‌ನನ್ನು (Joseph Robinson) ಉಪಾಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಗಳಾಗಿ ನಾಮಕರಣ ಮಾಡಿದರು.

ರಿಪಬ್ಲಿಕನ್ ಪಕ್ಷವಾಗಲಿ ಅಥವಾ ಡೆಮೊಕ್ರಾಟಿಕ್ ಪಕ್ಷವಾಗಲಿ ತಮ್ಮ ಚುನಾವಣಾ ವೇದಿಕೆಗಳಲ್ಲಿ ಮಂಡಿಸಿದ ವಿಷಯಗಳಲ್ಲಿ ಹೆಚ್ಚಿನ ವ್ಯತ್ಯಾಸಗಳಿರಲಿಲ್ಲ. ಅಭ್ಯರ್ಥಿಗಳ ವ್ಯಕ್ತಿತ್ವದಲ್ಲಿ ವ್ಯತ್ಯಾಸಗಳು ಮತ್ತು ವಿಶಿಷ್ಟತೆಗಳು ಎದ್ದು ಕಾಣುತ್ತಿದ್ದವು. ಹೂವರ್ ಸ್ವತಃ ಕಷ್ಟಪಟ್ಟು ದುಡಿದು ಊರ್ಜಿತಗೊಂಡ ಉದ್ಯಮಿಯಾಗಿದ್ದನು. ಅವನು ವಿವೇಕ ಪೂರ್ಣ ಬಂಡವಾಳಶಾಹಿಯನ್ನು ಮೆಚ್ಚಿಕೊಂಡಿದ್ದನು. ಅಮೆರಿಕನ್ ಆರ್ಥಿಕ ವ್ಯವಸ್ಥೆ ಸಕಲರಿಗೂ ಸಮಾನ ಅವಕಾಶಗಳನ್ನು ನೀಡಿ ಪ್ರತಿಯೊಬ್ಬನಿಗೂ ಅವನ ಅರ್ಹತೆಗೆ ತಕ್ಕ ಪ್ರತಿಫಲ ದೊರಕುವಂತೆ ರಚಿತಗೊಂಡಿದೆ ಎಂದು ಅವನು ನಂಬಿದ್ದನು. ಅವನ ಸ್ವತಃ ಗಳಿಸಿದ ಯಶಸ್ಸಿನ ಜೊತೆಗೆ ಕಾರ್ಯಸಾಧಕನೆಂದು ಪ್ರಸಿದ್ಧಿ ಪಡೆದಿದ್ದನು. ಸಾಮನ್ಯ ಜನರ ಕ್ಷೇಮಾಭ್ಯುದಯದಲ್ಲಿ ಆಸಕ್ತಿಯುಳ್ಳ ಅಂತಃಕರಣವುಳ್ಳವನಾಗಿದ್ದನು[೨]. ಹೂವರ್ ತನ್ನ ಚುನಾವಣೆಯ ಪ್ರಚಾರದಲ್ಲಿ ರಾಷ್ಟ್ರದ ಉತ್ಪನ್ನವನ್ನು ರಕ್ಷಿಸಲು ಆಮದಾಗುವ ಸರಕುಗಳ ಮೇಲೆ ಹಾಕಿರುವ ಸುಂಕದ ದರವನ್ನು ಹಾಗೆಯೇ ಮುಂದುವರಿಸುವುದಾಗಿಯೂ, ಪಾನನಿರೋಧ ಕಾಯಿದೆಯನ್ನು ಜಾರಿಗೆ ತರುವುದಾಗಿಯೂ, ವ್ಯವಸಾಯೋತ್ಪನ್ನಗಳ ಹೆಚ್ಚಳವನ್ನು ನಿಯಂತ್ರಿಸಲು ಸಹಕಾರ ಮಾರುಕಟ್ಟೆಗಳನ್ನು ತೆರೆಯುವುದಾಗಿಯೂ ಮತ್ತು ಅಮೆರಿಕ ರಾಷ್ಟ್ರಗಳ ಒಕ್ಕೂಟವನ್ನು ಸೇರದಂತೆ ಮಾಡುವುದಾಗಿಯೂ ವಾಗ್ದಾನ

೨. ಹೂವರ್ ಅನೇಕ ಕ್ಷೇತ್ರಗಳಲ್ಲಿ ಕೆಲಸ ಮಾಡಿ ಅನುಭವ ಪಡೆದಿದ್ದನು. ೧೮೮೫ರಲ್ಲಿ ಸ್ಟಾನ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಎಂಜನಿಯರಿಂಗ್ ಪಡೆದ ಮೇಲೆ ಭೂಗರ್ಭಶಾಸ್ತ್ರ ಇಲಾಖೆಯಲ್ಲಿ ಸ್ವಲ್ಪ ಸಮಯ ಕೆಲಸ ಮಾಡಿ ನಂತರ ಆಸ್ಟ್ರೇಲಿಯ, ಏಷ್ಯಾ, ಯೂರೋಪ್ ಮತ್ತು ಆಫ್ರಿಕಾಗಳಲ್ಲಿ ಗಣಿ ನಿರ್ವಹಣೆ ಅಧಿಕಾರಿಯಾಗಿದ್ದನು. ಈ ಸಮಯದಲ್ಲಿ ತನ್ನ ಮಾನವೀಯ ಪರಿಹಾರ ಕಾರ್ಯಗಳಿಂದ ಮಾನ್ಯತೆ ಪಡೆದನು. ೧೯೧೪ರಿಂದ ೧೯೨೩ರವರೆಗೆ ಲಂಡನ್, ಬೆಲ್ಜಿಯಂ ಮತ್ತು ರಷ್ಯಾ ದೇಶಗಳಲ್ಲಿ ಯುದ್ಧದ ಪರಿಣಾಮವಾಗಿ ನಿರ್ಗತಿಕರಾದ ನಿರಾಶ್ರಿತರಿಗೆ ಪರಿಹಾರ ನೀಡುವ ಕಾರ್ಯ ನಿರ್ವಹಿಸಿದನು. ಹಾರ್ಡಿಂಗ್ ಮತ್ತು ಕೂಲಿಡ್ಜ್ ಆಡಳಿತಗಳಲ್ಲಿ ವಾಣಿಜ್ಯ ಕಾರ್ಯದರ್ಶಿಯಾಗಿದ್ದನು. ವಾಣಿಜ್ಯ ವಿಭಾಗದ ಅತ್ಯಂತ ಸಮರ್ಥ ಕಾರ್ಯದರ್ಶಿಯೆಂದು ಖ್ಯಾತಿ ಪಡೆದಿದ್ದನು.

ಮಾಡಿದನು. ಹೂವರ್ ಮತ್ತು ಅವನ ಬೆಂಬಲಿಗರು ರಿಪಬ್ಲಿಕನ್ ಆಡಳಿತದಲ್ಲಿ ಆಗಿರುವ ಅಸಾದೃಶ ಆರ್ಥಿಕ ಅಭಿವೃದ್ಧಿಯನ್ನು ಜನರಿಗೆ ಮನದಟ್ಟಾಗುವಂತೆ ಹೇಳುತ್ತಿದ್ದರು.

ಡೆಮೊಕ್ರಾಟಿಕ್ ಪಕ್ಷದ ಚುನಾವಣಾ ಪ್ರಚಾರ ವೇದಿಕೆ ಕೂಡ ಆ ಕಾಲಕ್ಕೆ ತಕ್ಕಂತೆ ಸಂಪ್ರದಾಯಸ್ಥ ಧೋರಣೆಗಳನ್ನು ಮುಂದುವರಿಸಿತು. ಆರ್ಥಿಕ ಸಮೃದ್ಧಿಯ ಕಾಲವಾಗಿದ್ದ ರಿಂದ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಗಳು ಪ್ರಗತಿಪರ ಧೋರಣೆಗಳಿಂದ ದೂರವಿದ್ದರು. ಬೃಹತ್ ಉದ್ಯಮಗಳ ಬಗ್ಗೆ ಚರ್ಚೆ ಮುಂದಕ್ಕೆ ಹಾಕಿರುವುದಾಗಿ ತಿಳಿಸಿದರು. ಅಮೆರಿಕ ರಾಷ್ಟ್ರಗಳ ಒಕ್ಕೂಟವನ್ನು ಸೇರುವ ಬಗ್ಗೆ ಏನೂ ಹೇಳದೆ ಸುಮ್ಮನಿದ್ದರು. ಅಧ್ಯಕ್ಷ ಸ್ಥಾನಕ್ಕೆ ಡೆಮೊಕ್ರಾಟಿಕ್ ಪಕ್ಷ ನಾಮಕರಣ ಮಾಡಿದ್ದ ಆಲ್‌ಫ್ರೆಡ್ ಸ್ಮಿತ್ ನ್ಯೂಯಾರ್ಕ್ ಗವರ್ನರ್ ಆಗಿದ್ದಾಗ ಸಮರ್ಥ ಆಡಳಿತಗಾರನೆಂದು ಖ್ಯಾತಿ ಗಳಿಸಿದ್ದನು. ಅವನು ತನ್ನ ಆಡಳಿತದ ಅವಧಿಯಲ್ಲಿ ಸಂಸ್ಥಾನದ ಆರ್ಥಿಕ ವ್ಯವಸ್ಥೆಯನ್ನು ಕ್ರಮಗೊಳಿಸಿ, ಆಡಳಿತವನ್ನು ಬಿಗಿ ಮಾಡಿ ಸಮರ್ಪಕವಾಗಿ ಕೆಲಸ ಕಾರ್ಯಗಳನ್ನು ನಡೆಸಿಕೊಂಡು ಹೋಗುವಂತೆ ಮಾಡಿದ್ದನು. ಸಾರ್ವಜನಿಕರ ಆರೋಗ್ಯ ರಕ್ಷಣೆಗೆ ಸೂಕ್ತಕ್ರಮಗಳನ್ನು ಕೈಗೊಂಡಿದ್ದನು. ಕಾರ್ಮಿಕರ ಪರಿಹಾರ ಮತ್ತು ನಾಗರಿಕ ಹಕ್ಕು ಬಾಧ್ಯತೆಗಳನ್ನು ಬೆಂಬಲಿಸಿದ್ದನು. ಆದಾಗ್ಯೂ ಸ್ಮಿತ್ ಇತರ ಅಭ್ಯರ್ಥಿಗಳಂತಿರಲಿಲ್ಲ. ಅವನನ್ನು ನಾಮಕರಣ ಮಾಡಿದ್ದು ಅಮೆರಿಕನ್ ರಾಜಕೀಯ ಪಕ್ಷಗಳ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾದಂತಿತ್ತು. ಎಷ್ಟೋ ಕಾಲದ ಹಿಂದಿನಿಂದಲೂ ಮಹಾನಗರಗಳಲ್ಲಿ ನೆಲಸಿದ ವಲಸೆಗಾರರ ರಾಜಕೀಯ ಶಕ್ತಿಗಳು ಅಭಿವ್ಯಕ್ತಿಗೊಳ್ಳಲು ಹವಣಿಸುತ್ತಿದ್ದು, ಸ್ಮಿತ್‌ನ ನಾಮಕರಣದ ಮೂಲಕ ಆವಿಷ್ಕಾರ ಗೊಂಡವು. ಸ್ಮಿತ್ ಐರಿಷ್ ವಲಸೆಗಾರರ ಮೊಮ್ಮಗ, ಅದೂ ಅಲ್ಲದೆ ಅವನು ರೋಮನ್ ಕ್ಯಾಥೊಲಿಕ್ ಮತದವನು. ಅಮೆರಿಕದ ಒಂದು ರಾಷ್ಟ್ರೀಯ ರಾಜಕೀಯ ಪಕ್ಷ ಕ್ಯಾಥೊಲಿಕ ನನ್ನು ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ನಾಮಕರಣ ಮಾಡಿದ್ದು ಇದೇ ಮೊದಲು. ಸ್ಮಿತ್ ಹುಟ್ಟಿ ಬೆಳೆದಿದ್ದು ನ್ಯೂಯಾರ್ಕ್ ನಗರದ ಪೂರ್ವಭಾಗದ ಕೆಳಗಿನ ಮನ್‌ಹಾಟನ್‌ನಲ್ಲಿ (Manhattan Lower East Side). ಆ ಮಹಾನಗರ ಮತ್ತು ನಗರವಾಸಿಗಳ ಬಗ್ಗೆ ಹೆಮ್ಮೆ ಪಟ್ಟುಕೊಂಡು ಅವರಲ್ಲಿ ಒಬ್ಬನಾಗಿ ಬೆಳೆದಿದ್ದು, ನ್ಯೂಯಾರ್ಕ್ ನಗರದ ಆಚೆಯ ಅಮೆರಿಕನ್ನರಿಗೆ ಅವನೊಬ್ಬ ಆಗಂತುಕ. ಅವರಿಗೆ ಅವನು ಪರದೇಶೀಯರ (aliens) ಪ್ರತೀಕವಾಗಿದ್ದನು. ಇಂಥ ಜನರಿಂದ ಆ್ಯಂಗ್ಲೊ ಸಾಕ್ಸನ್ ಮತ್ತು ಪ್ರಾಟೆಸ್ಟಂಟ್ ಅಮೆರಿಕಕ್ಕೆ ವಿಪತ್ತು ಕಾದಿದೆ ಎಂದು ಅವರು ನಂಬಿದ್ದರು.

೧೯೨೮ರ ಚುನಾವಣೆ ಸ್ಮಿತ್ ಸೋಲಿನಲ್ಲಿ ಪರ್ಯಾವಸಾನಗೊಂಡಿತು. ಮೇಲ್ನೋಟಕ್ಕೆ ಹೂವರ್ ಸ್ಮಿತ್‌ನನ್ನು ಸೋಲಿಸಿದಂತೆ ಕಂಡರೂ ನಿಜವಾಗಿ ಸ್ಮಿತ್‌ನನ್ನು ಸೋಲಿಸಿದ್ದು ರಾಷ್ಟ್ರದ ಆರ್ಥಿಕ ಸಮೃದ್ಧಿ. ರಿಪಬ್ಲಿಕನ್ನರ ಆಡಳಿತದಲ್ಲಿ ವಾಣಿಜ್ಯ ವ್ಯಾಪಾರ ಉದ್ಯಮಗಳು ವಿಸ್ತರಿಸಿ ಬೆಳೆದು ಅಮೆರಿಕನ್ನರ ಜೀವನಮಟ್ಟವನ್ನು ಹಿಂದೆ ಎಂದೂ ಮುಟ್ಟದ ಎತ್ತರಕ್ಕೆ

ಕೊಂಡೊಯ್ದಿದ್ದವು. ಈ ಅಂಶಗಳು ಹೂವರ್ ಗೆಲ್ಲಲು ಕಾರಣವಾದವು (ಹೂವರ್ ಅಮೆರಿಕದ ೩೧ನೆಯ ಅಧ್ಯಕ್ಷ). ಸ್ಮಿತ್ ಕ್ಯಾಥೊಲಿಕ್ ಮತದವನಾಗಿದ್ದುದೂ ಅವನು ಸೋಲಿಗೆ ಪ್ರಬಲ ಕಾರಣಗಳಲ್ಲೊಂದಾಗಿತ್ತು. ಅನ್ಯಂತದವರ ಬಗ್ಗೆ ಪೂರ್ವಾಗ್ರಹ ಬೆಳೆಸಿಕೊಂಡಿದ್ದ ಅಮೆರಿಕನ್ನರು ಕೆಲವರು ಡೆಮೊಕ್ರಾಟಿಕ್ ಪಕ್ಷವನ್ನು ತ್ಯಜಿಸಿದರು. ಮತ್ತೆ ಕೆಲವರು ತಮ್ಮ ಪಕ್ಷದವನಾದ ಸ್ಮಿತ್‌ನಿಗೆ ಮತ ನೀಡದೆ ಬೇರೆ ಪ್ರಾಟೆಸ್ಟಂಟ್ ಅಭ್ಯರ್ಥಿಗೆ ಮತ ನೀಡಿ ಅಮೆರಿಕವನ್ನು 'ಆಗಂತುಕ'ನಿಂದ ರಕ್ಷಿಸಿದೆವು ಎಂದು ತೃಪ್ತಿಪಟ್ಟುಕೊಂಡರು. ನಿರೀಕ್ಷಿಸಿದಂತೆ ಚುನಾವಣೆ ಏಕಪಕ್ಷೀಯವಾಗಿತ್ತು. ಒಟ್ಟು ಮತಗಳಲ್ಲಿ ಹೂವರ್ ಶೇಕಡಾ ೫೮ರಷ್ಟು ಮತಗಳನ್ನು ಪಡೆದಿದ್ದನು.

ಹೂವರ್‌ನನ್ನು ಆಯ್ಕೆ ಮಾಡುವುದರ ಮೂಲಕ ಅಮೆರಿಕನ್ನರು ಆರ್ಥಿಕ ಸಮೃದ್ಧಿಗೆ ಕಾರಣವಾದ ಧೋರಣೆಗಳನ್ನು ಮುಂದುವರಿಸಬೇಕೆಂದು ಸೂಚನೆ ಕೊಟ್ಟಿದ್ದರು. ಚುನಾವಣೆಯ ಫಲಿತಾಂಶವನ್ನು ವಿಶ್ಲೇಷಣೆ ಮಾಡಿದಾಗ, ಆರ್ಥಿಕ ಅಭಿವೃದ್ಧಿಯ ಜೊತೆಯಲ್ಲಿ ಮಹತ್ವದ ರಾಜಕೀಯ ಬದಲಾವಣೆಗಳು ಕಂಡುಬಂದವು. ಸ್ಮಿತ್ ಕ್ಯಾಥೊಲಿಕನಾದರೂ ೧೯೨೪ರ ಚುನಾವಣೆಯಲ್ಲಿ ಡೆಮೊಕ್ರಾಟಿಕ್ ಪಕ್ಷದ ಅಧ್ಯಕ್ಷ ಪದವಿಗೆ ಸ್ಪರ್ಧಿಸಲು ಆಯ್ಕೆ ಮಾಡಿದ್ದ ಅಭ್ಯರ್ಥಿಗಿಂತ ಎರಡು ಪಟ್ಟು ಹೆಚ್ಚು ಮತಗಳನ್ನು ಪಡೆದಿದ್ದನು. ಹಿಂದೆ 'ಪ್ರಗತಿಶೀಲ ಪಕ್ಷ'ವನ್ನು ಬೆಂಬಲಿಸಿದ್ದವರು ಈ ಚುನಾವಣೆಯಲ್ಲಿ ಡೆಮೊಕ್ರಾಟರೊಂದಿಗೆ ಸೇರಿದ್ದರು. ಇವರ ಪ್ರಾಬಲ್ಯ ಬೆಳೆಯುತ್ತಿತ್ತು. ಮುಂಬರುವ ವರ್ಷಗಳಲ್ಲಿ ರಾಷ್ಟ್ರದ ರಾಜಕೀಯ ರಂಗದಲ್ಲಿ ಅವರು ಮಹತ್ವದ ಪಾತ್ರ ವಹಿಸುವ ಚಿಹ್ನೆಗಳು ತೋರುತ್ತಿದ್ದವು. ರಾಷ್ಟ್ರದ ೧೨ ಮಹಾನಗರಗಳಲ್ಲಿ ಸ್ಮಿತ್ ಬಹುಮತ ಗಳಿಸಿದ್ದನು. ಇದು ಕೈಗಾರಿಕಾ ಕೇಂದ್ರಗಳ ಮೇಲೆ ರಿಪಬ್ಲಿಕನ್ನರ ಹಿಡಿತ ಸಡಿಲವಾಗುತ್ತಿದೆ ಎನ್ನುವುದನ್ನು ಸೂಚಿಸುತ್ತಿತ್ತು. ಪಶ್ಚಿಮ ಸಂಸ್ಥಾನದ ರೈತರು ಸಾಂಪ್ರದಾಯಿಕ ರಿಪಬ್ಲಿಕನ್ನರು, ಆದರೆ ಈ ಚುನಾವಣೆಯಲ್ಲಿ ಸ್ಮಿತ್ ಈ ಪ್ರಾಂತಗಳಲ್ಲಿ ಗಣನೀಯ ಪ್ರಮಾಣದ ಮತಗಳನ್ನು ಪಡೆದಿದ್ದನು. ಇವೆಲ್ಲಕ್ಕಿಂತ ಹೆಚ್ಚು ಮಹತ್ವಪೂರ್ಣವಾದುದು ಸ್ಮಿತ್ ಮೆಸಾಚ್ಯೂಸೆಟ್ಸ್ ಸಂಸ್ಥಾನದಲ್ಲಿ ಬಹುಮತ ಪಡೆದಿದ್ದು. ಆ ಸಂಸ್ಥಾನದಲ್ಲಿ ಬಹುಮತ ಪಡೆದು ಗೆದ್ದ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಗಳಲ್ಲಿ ಸ್ಮಿತ್ ಮೊಟ್ಟ ಮೊದಲನೆಯವನು. ಆರ್ಥಿಕ ಸಮೃದ್ಧಿ, ಮತದ್ವೇಷ ಇವುಗಳನ್ನೆಲ್ಲ ಎದುರಿಸಿ ಉತ್ತರ ಸಂಸ್ಥಾನಗಳ ಮೇಲೆ ರಿಪಬ್ಲಿಕನ್ನರ ಬಿಗಿಮುಷ್ಟಿಯನ್ನು ಸಡಿಲಗೊಳಿಸಿದ ಕೀರ್ತಿ ಸ್ಮಿತ್‌ನಿಗೆ ಸಲ್ಲುತ್ತದೆ.

ಹರ್‌ಬರ್ಟ್ ಹೂವರನ ಸತ್ವಪರೀಕ್ಷೆ

೧೯೨೯ರ ಪ್ರಾರಂಭದ ದಿನಗಳಲ್ಲಿ ಅಮೆರಿಕನ್ನರಲ್ಲಿ ಆಶಾಭಾವನೆ ವ್ಯಾಪಕವಾಗಿ ಹಬ್ಬಿತ್ತು. ಹತ್ತು ಸಂವತ್ಸರಗಳ ಸಮೃದ್ಧಿಯನ್ನು ಅನುಭವಿಸಿದ ಸಮಾಜದಲ್ಲಿ ಮುಂದೆ

ಬರಲಿರುವ ಕಷ್ಟಗಳ ಬಗ್ಗೆ ಎಚ್ಚರಿಸುವ ಮುನ್ಸೂಚನೆಗಳು ಕಾಣತೊಡಗಿದ್ದವು. ಜಾಗತಿಕ ಯುದ್ಧ ಮುಗಿದಂದಿನಿಂದಲೂ ಯೂರೋಪ್ ಮತ್ತು ಅಮೆರಿಕಗಳ ನಡುವೆ ವ್ಯಾಪಾರ ವ್ಯವಹಾರಗಳು ಸ್ಥಿರವಾಗಿರಲಿಲ್ಲ. ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳಿಗೆ ಯುದ್ಧದಿಂದಾದ ನಷ್ಟ ಭರ್ತಿ ಮಾಡಲು ಜರ್ಮನಿ ಅಮೆರಿಕದಿಂದ ಸಾಲ ಪಡೆಯಬೇಕಾಯಿತು. ಜರ್ಮನಿ ಯಿಂದ ಪಡೆದ ಹಣವನ್ನು ಇಂಗ್ಲೆಂಡ್ ಮತ್ತು ಫ್ರಾನ್ಸ್ ತಾವು ಅಮೆರಿಕದಿಂದ ಪಡೆದ ಸಾಲ ತೀರಿಸಬೇಕಾಗಿತ್ತು! ಹೀಗೆ ಹಣ ಮಹಾಪೂರದಂತೆ ಹರಿದು ಬಂದು, ನ್ಯೂಯಾರ್ಕಿನ ಎಲ್ಲ ಬ್ಯಾಂಕ್‌ಗಳು ತುಂಬಿ ತೂಬು ಒಡೆದ ಕೆರೆಗಳಂತಾಗಿದ್ದವು. ಹೀಗೆ ತುಂಬಿ ನಿಂತ ಬಂಡವಾಳ ಉತ್ಪನ್ನರಹಿತವಾಗಿತ್ತು. ಈ ಅಪಾರ ಮೊತ್ತದ ಹಣವನ್ನು ಬ್ಯಾಂಕ್‌ಗಳು ವಿವೇಚನೆಯಿಲ್ಲದೆ ಮನಸ್ಸಿಗೆ ಬಂದ ಉದ್ಯಮಗಳಲ್ಲಿ ಹೇರಳವಾಗಿ ತೊಡಗಿಸಿದವು.

ಅಲ್ಪ ಸ್ವಲ್ಪ ಮುಂಗಡ ಹಣ ಕಟ್ಟಿ ಸಟ್ಟಾ ವ್ಯಾಪಾರ ಮಾಡುವುದು ಜನಪ್ರಿಯ ಹವ್ಯಾಸವಾಗಿತ್ತು. ಸಟ್ಟಾಗಳ ಬೆಲೆಯನ್ನು ಕೃತಕವಾಗಿ ಹೆಚ್ಚಿಸಿದ್ದರು. ಅವುಗಳ ಬೆಲೆ ಅವು ಪ್ರತಿನಿಧಿಸುವ ಕಂಪನಿಗಳ ಉತ್ಪಾದನಾ ಶಕ್ತಿಗಿಂತ ಬಹಳ ಹೆಚ್ಚಾಗಿತ್ತು. ಈ ತೀವ್ರಗತಿಯ ಆರ್ಥಿಕ ಅಭಿವೃದ್ಧಿ ಮತ್ತು ಬೆಲೆ ಏರಿಕೆ, ಬುನಾದಿ ಇಲ್ಲದೆ ಬರಿಗಾಳಿಯ ಮೇಲೆ ಕಟ್ಟಿದ ಗೋಪುರವಾಗಿತ್ತು. ಬಂಡವಾಳವನ್ನು ಸರಕುಗಳ ಉತ್ಪಾದನೆಯಲ್ಲಿ ಅಥವಾ ಸರಕು ಸರಂಜಾಮುಗಳನ್ನು ಕೊಳ್ಳುವುದರಲ್ಲಿ ಹೂಡದೆ ಶೀಘ್ರವಾಗಿ ಹಣ ಮಾಡುವ ವ್ಯಾಪಾರದಲ್ಲಿ ತೊಡಗಿಸಿದ್ದರು. ಹೀಗೆ ಮಾಡುವುದರಿಂದ ಬಂಡವಾಳ ಚಲಾವಣೆಯಿಲ್ಲದೆ ಉತ್ಪನ್ನರಹಿತವಾಗುತ್ತದೆ. ಆದ್ದರಿಂದ ೧೯೨೮-೨೯ರಲ್ಲಿ ಸಟ್ಟಾ ಮಾರುಕಟ್ಟೆ ರಭಸವಾಗಿ ಬೆಳೆಯುತ್ತಿದ್ದು, ಸರಕು ಸರಂಜಾಮುಗಳು ಮಾತ್ರ ಸಮರ್ಪಕವಾಗಿ ವಿತರಣೆ ಯಾಗುತ್ತಿರಲಿಲ್ಲ.

೧೯೨೮ರಲ್ಲಿ ಹೂವರ್ ರಾಷ್ಟ್ರದ ಅಧ್ಯಕ್ಷತೆ ವಹಿಸಿಕೊಂಡಾಗ ಅದರ ಜೊತೆಯಲ್ಲಿ ಹಣದುಬ್ಬರದ ಅಪಾಯದ ಹಂತವನ್ನೂ ಮುಟ್ಟಿದ್ದ ಆರ್ಥಿಕ ವ್ಯವಸ್ಥೆಯನ್ನು ವಹಿಸಿಕೊಳ್ಳ ಬೇಕಾಯಿತು. ಅವನು ಕೂಡಲೇ ಫೆಡರಲ್ ರಿಸರ್ವ್ ಸಮಿತಿ ಸಾಲ ಪಡೆದ ಬ್ಯಾಂಕ್‌ಗಳಿಗೆ ಬಡ್ಡಿಯ ದರವನ್ನು ಏರಿಸುವ ಮೂಲಕ ಸುಲಭವಾಗಿ ಸಾಲ ಸಿಗುವುದನ್ನು ಬಿಗಿ ಮಾಡಿದನು. ಆದರೂ ೧೯೨೯ರ ಸೆಪ್ಟೆಂಬರ್‌ನಲ್ಲಿ ಸಟ್ಟಾ ಮಾರುಕಟ್ಟೆ ಶಿಥಿಲಗೊಂಡಿರುವುದರ ಮೊದಲ ಚಿಹ್ನೆಗಳು ಕಾಣತೊಡಗಿದವು. ಒಂದು ತಿಂಗಳ ಕಾಲ ಮಾರುಕಟ್ಟೆ ಮೇಲೆ ಕೆಳಗೆ ಹೋಗುತ್ತಿತ್ತು. ಕಡೆಗೆ ೧೯೨೮ರ ಅಕ್ಟೋಬರ್ ೨೪ರಂದು ದಿಢೀರನೆ ಹಣವಂತರಾಗಲು ಹಾತೊರೆದವರು ಹೂಡಿದ ಅಪಾರ ಮೊತ್ತದ ಹಣವನ್ನು ನುಂಗಿದ ಸಟ್ಟಾ ಮಾರುಕಟ್ಟೆ ಹೊಟ್ಟೆ ಮೇಲಾಗಿ ಬಿದ್ದಿತು! ಅಂದು ಗುರುವಾರದ ದಿನವಾದುದರಿಂದ ಆ ದುರ್ದಿನವನ್ನು 'ಕರಾಳ ಗುರುವಾರ' (Black Thursday) ಎಂದು ಅಮೆರಿಕನ್ನರು ಕರೆಯುತ್ತಾ ಬಂದಿದ್ದಾರೆ. ಅದೇ ತಿಂಗಳ ೨೯ರಂದು ಮಂಗಳವಾರ ೧೬ ಮಿಲಿಯನ್‌ಗಳಿಗಿಂತ ಹೆಚ್ಚು

ಪಾಲುಪತ್ರಗಳನ್ನು ಜನ ಸಟ್ಟಾ ಮಾರುಕಟ್ಟೆಗೆ ತಂದು ಸುರಿದರು. ತಮ್ಮ ಹಣ ಸ್ವಲ್ಪವಾದರೂ ವಾಪಸ್ಸು ಬರಬಹುದೆಂದು ಬಾಯ್ತೆರೆದು ಕಾದಿದ್ದು ವ್ಯರ್ಥವಾಯಿತು. ಏಕೆಂದರೆ ಅವರು ಅಷ್ಟೊಂದು ಹಣ ಸುರಿದುಕೊಂಡ ಸಟ್ಟಾಗಳು ಬೆಲೆಯಿಲ್ಲದಾಗಿದ್ದವು. ಹಲವರು ತಮ್ಮ ಜೀವಿತದಲ್ಲಿ ಉಳಿಸಿದ್ದ ಎಲ್ಲ ಹಣವನ್ನು ಪಾಲುಪತ್ರ ವ್ಯಾಪಾರದಲ್ಲಿ ಕಳೆದುಕೊಂಡು ನಿರ್ಗತಿಕರಾಗಿಬಿಟ್ಟಿದ್ದರು.

ಸಟ್ಟಾ ಮಾರುಕಟ್ಟೆ ತನ್ನ ಕಣ್ಮುಂದೆಯೆ ಕುಸಿದು ಬಿದ್ದಾಗ ಅಧ್ಯಕ್ಷ ಹೂವರನಿಗೆ ನಂಬಲಾಗಲಿಲ್ಲ. ಅವನು ಯೋಚಿಸಿದ್ದು ಸಟ್ಟಾ ಮಾರುಕಟ್ಟೆ ತನ್ನಷ್ಟಕ್ಕೆ ತಾನೇ ಹೊಂದಿಕೊಂಡು ಚೇತರಿಸಿಕೊಳ್ಳುತ್ತದೆ ಎಂದು. ಹಣ ಹೂಡುವವರಿಗೆ ಮಾರುಕಟ್ಟೆಯ ಏರು ಇಳಿತಗಳು ತಿಳಿದೇ ಇರುತ್ತವೆ. ಆದ್ದರಿಂದ ಮತ್ತೆ ಬೇರೆ ಬೇರೆ ಉದ್ಯಮಗಳಲ್ಲಿ ಹಣ ಹೂಡಿ ಮಾರುಕಟ್ಟೆಯನ್ನು ಮೇಲೆತ್ತಬಹುದೆಂದು ಆಶಿಸಿದ್ದನು. ಆದರೆ ಅವನಿಗೆ ಈ ಆರ್ಥಿಕ ಮುಗ್ಗಟ್ಟಿನ ಆಳ ಅಗಲಗಳು ತಿಳಿಯದೆ ಹೋದವು. ಬಹುತೇಕ ಅಮೆರಿಕನ್ನರು ಇದಕ್ಕೆ ಮುಂಚೆಯೇ ಸಾಲಗಾರರಾಗಿದ್ದರು. ಮತ್ತೆ ಸಟ್ಟಾ ಮಾರುಕಟ್ಟೆಯಲ್ಲಿ ಹಣ ಹೂಡಲು ಅವರಲ್ಲಿ ಏನೂ ಉಳಿದಿರಲಿಲ್ಲ. ಜನರು ಏನನ್ನೂ ಕೊಳ್ಳಲಾರದೆ ಹೋಗಿದ್ದರಿಂದ ವಸ್ತುಗಳ ಮಾರಾಟ ಸ್ಥಗಿತಗೊಂಡು ಉತ್ಪಾದನೆ ನಿಂತುಹೋಯಿತು. ಇದರ ಪರಿಣಾಮವಾಗಿ ಜನರು ಉದ್ಯೋಗ ಕಳೆದುಕೊಂಡು ಅವರ ಕೊಳ್ಳುವ ಶಕ್ತಿ (buying power)ಯನ್ನು ಕುಂದಿಸಿತು.

೧೯೨೯ರ ಸಟ್ಟಾ ಮಾರುಕಟ್ಟೆಯ ಕುಸಿತ ಅಮೆರಿಕ 'ನ ಭೂತೋ ನ ಭವಿಷ್ಯತಿ' ಎನ್ನುವಂಥ ಭೀಕರ ಹಣದ ಮುಗ್ಗಟ್ಟನ್ನು ಅನುಭವಿಸುವಂತೆ ಮಾಡಿತು. ೧೯೨೯ರಿಂದ ೧೯೩೨ರವರೆಗೆ ಅಮೆರಿಕದ ಪ್ರಮುಖ ಆರ್ಥಿಕ ಕ್ಷೇತ್ರಗಳೆಲ್ಲವೂ ಕ್ರಮೇಣ ಅವನತಿ ಗೊಳ್ಳುತ್ತಾ ಹೋಗಿದ್ದವು. ೧೯೩೨ರ ಹೊತ್ತಿಗೆ ರಾಷ್ಟ್ರದ ಒಟ್ಟು ಕಾರ್ಮಿಕರಲ್ಲಿ ಕಾಲು ಭಾಗ ನಿರುದ್ಯೋಗಿಗಳಾಗಿದ್ದರು. ಸಾವಿರಾರು ಬ್ಯಾಂಕ್‌ಗಳು ಮತ್ತು ಸಣ್ಣ ವ್ಯಾಪಾರಿಗಳು ಬಾಗಿಲು ಮುಚ್ಚಬೇಕಾಯಿತು. ೧೯೩೨ರ ಕೊನೆಯವರೆಗೂ ಮಾರುಕಟ್ಟೆ ಅವನತಿ ಹೊಂದುತ್ತಾಹೋಯಿತು. ಯೂರೋಪಿನ ಆರ್ಥಿಕ ಅವನತಿಯ ಪರಿಣಾಮವಾಗಿ ಅಮೆರಿಕ ದಲ್ಲಿ ಈ ದುಸ್ಥಿತಿ ಪ್ರಾಪ್ತವಾಗಿದೆ ಎಂದು ಹೂವರ್ ನಂಬಿದ್ದನು. ಸ್ಥಳೀಯ ಕಾರಣಗಳೂ ಇರಬಹುದೆಂದು ಅವನು ನಂಬಿರಲಿಲ್ಲ. ವ್ಯಾಪಾರ/ಉದ್ಯಮಗಳಲ್ಲಿ ಸರ್ಕಾರದ ಪಾತ್ರ ಕಡಿಮೆ ಇದ್ದಷ್ಟೂ ಒಳ್ಳೆಯದು ಎಂದು ಅವನು ನಿರ್ಧರಿಸಿದ್ದನು. ಇವುಗಳಲ್ಲಿ ಸರ್ಕಾರದ ಕೈವಾಡ ಹೆಚ್ಚಾದರೆ ಅವು ತಮ್ಮ ಸ್ವಾಯತ್ತತೆಯನ್ನು ಕಳೆದುಕೊಂಡು ಸರ್ಕಾರದ ಮೇಲೆ ಅವಲಂಬನ ಬೆಳೆಸಿಕೊಳ್ಳುತ್ತವೆ ಎಂದು ಊಹಿಸಿದ್ದನು. ಅದಕ್ಕಾಗಿ ಅವನು ವ್ಯಾಪಾರ/ಉದ್ಯಮಗಳ ಪರಿಸ್ಥಿತಿಯನ್ನು ತಾವಾಗಿಯೇ ಸರಿಪಡಿಸಿಕೊಳ್ಳಲು ಸಹಾಯವಾಗುವ ಕೆಲವು ಯೋಜನೆಗಳನ್ನು ಮತ್ತು ಕಾಯಿದೆಗಳನ್ನು ಜಾರಿಗೆ ತಂದನು. ಮೊದಲು ಕೈಗೊಂಡ

ಕಾರ್ಯ – ತೆರಿಗೆಗಳನ್ನು ಕಡಿಮೆ ಮಾಡಿದ್ದು ಮತ್ತು ವ್ಯಾಪಾರಿಗಳ, ಉದ್ಯಮಿಗಳ ನಾಯಕರೊಡನೆ ವಿಚಾರ ವಿನಿಮಯ ನಡೆಸಿದ್ದು. ಪರಿಣಾಮಕಾರಿಯಾದ ಪರಿಹಾರಗಳನ್ನು ಅನುಷ್ಠಾನಕ್ಕೆ ತರಲಿಲ್ಲವೆಂದು ಹೂವರ್ ಟೀಕೆಗೆ ಗುರಿಯಾದನು. ರಾಷ್ಟ್ರದ ಸಂದಿಗ್ಧ ಪರಿಸ್ಥಿತಿಗೆ ಹೂವರ್ ಕಾರಣನಲ್ಲದಿದ್ದರೂ ಎಲ್ಲರೂ ಅವನನ್ನು ನಿಂದಿಸುವವರೇ ಆಗಿದ್ದರು. ರಾಷ್ಟ್ರದ ಒಂದು ಉನ್ನತ ಪರ್ವಕಾಲದಲ್ಲಿ ಹೂವರ್ ಅಧಿಕಾರ ಸ್ವೀಕರಿಸಿದ್ದನು. ವ್ಯಾಪಾರ/ಉದ್ಯಮಗಳ ಪಟ್ಟಭದ್ರ ಹಿತಾಸಕ್ತಿಗಳು ಸರ್ಕಾರದ ಹಸ್ತಕ್ಷೇಪವಿಲ್ಲದೆ ಖಾಸಗಿ ಉದ್ಯಮಗಳು ಮತ್ತು ತೆರೆದ ಮಾರುಕಟ್ಟೆಗಳಲ್ಲಿ ಬೇಡಿಕೆಗಳ ಮತ್ತು ಪೂರೈಕೆಗಳ ಪರಸ್ಪರ ಒಡನಾಟದ ಮೇಲೆ ಆರ್ಥಿಕ ವ್ಯವಸ್ಥೆ ರಚನೆಗೊಂಡಿರಬೇಕು ಎನ್ನುವ ತಾತ್ವಿಕ ವಿಚಾರಗಳು ವಿಶ್ಲೇಷಣೆ ಮತ್ತು ಕಟು ಟೀಕೆಗೆ ಗುರಿಯಾಗಿದ್ದ ಪರ್ವಕಾಲ ಅದು. ಆರ್ಥಿಕ ಮುಗ್ಗಟ್ಟಿನ ಹೊಡೆತಕ್ಕೆ ಸಿಕ್ಕು ನಿರ್ಗತಿಕರಾಗಿ ಮತ್ತು ಮಾನಸಿಕವಾಗಿ ಜರ್ಜರಿತರಾದ ಜನರಿಗೆ ಏನು ಬಂದರೂ ಎದುರಿಸಿ ಹೋರಾಡಿ ಗೆಲ್ಲಬೇಕೆನ್ನುವ ಹಳೆಯ ಅಮೆರಿಕನ್ ಆದರ್ಶ ಅರ್ಥವಿಹೀನವಾಗಿ ತೋರಿದ ಪರ್ವಕಾಲವಾಗಿತ್ತು ಹೂವರನ್ ಅಧಿಕಾರದ ಅವಧಿ.

೧೯೨೦ರ ದಶಕದ ಸಮೃದ್ಧಿಯ ಸಂವತ್ಸರಗಳು ಅಮೆರಿಕನ್ನರು ವಾಸ್ತವವಾಗಿದ್ದ ಬಡತನವನ್ನು ಹುದುಗಿಸಿಟ್ಟು ಸಿರಿತನವನ್ನು ಮೆರೆಸಿದ್ದರು. ಬಡವ ಬಲ್ಲಿದರ ನಡುವಣ ಕಂದರದ ಆಳ ಅಗಲಗಳನ್ನು ಐಶ್ವರ್ಯ ಪ್ರದರ್ಶನದಿಂದ ಮರೆಮಾಚಿದ್ದರು. ರಾಷ್ಟ್ರದ ಒಟ್ಟು ಜನಸಂಖ್ಯೆಯ ಶೇಕಡಾ ೫ ಭಾಗ ಐಶ್ವರ್ಯವಂತರು ರಾಷ್ಟ್ರದ ಸಂಪತ್ತಿನ ಶೇಕಡಾ ೩೦ ಭಾಗದ ಮಾಲೀಕರಾಗಿದ್ದರು. ಬಡವರಲ್ಲಿ ರೈತರು ಬಹುಸಂಖ್ಯಾತರು. ಗೇಣಿದಾರರು ಕಡುಬಡವರಾಗಿದ್ದರು. ರಾಷ್ಟ್ರದ ಒಟ್ಟು ಜನಸಂಖ್ಯೆಯ ಶೇಕಡಾ ೪೦ ಭಾಗ ಜನರು ಅರೆಜೀವವಾಗಿ ಹೇಗೋ ಬದುಕಿದ್ದರು. ಶ್ರೀಮಂತರು ವಿಲಾಸ ವಸ್ತುಗಳ ಮೇಲೆ ಹೇರಳವಾಗಿ ಹಣ ಸುರಿಯುತ್ತಿದ್ದರು; ಸಟ್ಟಾ ವ್ಯಾಪಾರದಲ್ಲಿ ಅಪಾರ ಹಣವನ್ನೂ ಹೂಡಿದ್ದರು.

೧೯೨೯ರಲ್ಲಿ ಸಟ್ಟಾ ಮಾರುಕಟ್ಟೆ ಮುರಿದು ಬೀಳುವ ಮುಂಚೆಯೇ ಅಧ್ಯಕ್ಷ ಹೂವರ್ ಕಾಂಗ್ರೆಸ್‌ನ ವಿಶೇಷ ಅಧಿವೇಶನವನ್ನು ಕರೆದು ಅಲ್ಲಿ ರಾಷ್ಟ್ರದ ವ್ಯವಸಾಯ ಕ್ಷೇತ್ರದ ಸಮಸ್ಯೆಗಳು ಮತ್ತು ಪರಿಹಾರಗಳನ್ನು ಚರ್ಚಿಸಿದ್ದನು. ಇದಾದ ನಂತರ ಕಾಂಗ್ರೆಸ್ 'ವ್ಯವಸಾಯ ಮಾರುಕಟ್ಟೆಯ ಕಾಯಿದೆ' (Agricultural Marketing Act) ಜಾರಿಗೆ ತಂದಿತು. ಈ ಕಾಯಿದೆಗೆ ಅನುಸಾರವಾಗಿ 'ಕೇಂದ್ರ ಕೃಷಿ ಸಮಿತಿ'ಯನ್ನು ಸ್ಥಾಪಿಸಲಾಯಿತು. ಈ ಸಮಿತಿ ಕೃಷಿ ಸಹಕಾರ ಸಂಘಗಳಿಗೆ ಸಾಲ ಕೊಡುತ್ತಿತ್ತು ಮತ್ತು ಹೆಚ್ಚು ಫಸಲು ಬೆಳೆದ ರೈತರು ಅದನ್ನು ಮಾರಲಾರದೆ ಹೋದಾಗ ಈ ಸಮಿತಿ ಆ ಹೆಚ್ಚಿನ ಫಸಲನ್ನು ಕೊಂಡು ರೈತರಿಗೆ ಸಹಾಯ ಮಾಡುತ್ತಿತ್ತು. ಈ ಯೋಜನೆ ಪೂರ್ಣಗೊಳ್ಳಲಿಲ್ಲ. ೧೯೩೨ರ

ಹೊತ್ತಿಗೆ ಸಮಿತಿಯ ಹಣ ಬರಿದಾಗಿತ್ತು. ವ್ಯವಸಾಯ ಉತ್ಪನ್ನಗಳ ಬೆಲೆ ಕುಸಿಯುತ್ತಲೇ ಹೋದವು. ರೈತರು ದಾಸ್ತಾನು ಮಾಡಿದ್ದ ಅಧಿಕ ಫಸಲನ್ನು ಏನು ಮಾಡಬೇಕೆನ್ನುವುದು ಸಮಸ್ಯೆಯಾಗಿಯೇ ಉಳಿಯಿತು.

ಹೂವರ್ ರೈತರಿಗೆ ಇನ್ನೂ ಹೆಚ್ಚಿನ ಸಹಾಯ ಮಾಡಲು ಹೊರದೇಶದ ವಸ್ತುಗಳ ಮೇಲೆ ಸುಂಕ ಏರಿಸಿದನು. ೧೯೩೦ರಲ್ಲಿ ಕಾಂಗ್ರೆಸ್ 'ಹಾಲಿ-ಸ್ಮೂಟ್' ಕಾಯಿದೆಯನ್ನು (Hawley-Smoot Bill) ಅಂಗೀಕರಿಸಿತು. ಶಾಂತಿ ಕಾಲದಲ್ಲಿ ಜಾರಿಗೆ ಬಂದ ರಕ್ಷಣಾ ಕಾಯಿದೆಗಳಲ್ಲಿ ಅತ್ಯಂತ ಹೆಚ್ಚಿನ ಸುಂಕದ ದರ ಏರಿಸಿದ್ದು ಈ ಕಾಯಿದೆ. ರಫ್ತು ಮಾರಾಟ ಗಾರರಿಗೆ ಇದು ದಿಗಿಲು ಹುಟ್ಟಿಸಿತು. ಯೂರೋಪಿನ ವ್ಯಾಪಾರ ವ್ಯವಹಾರಗಳ ಮೇಲೆ ಈ ಕಾಯಿದೆಯ ದುಷ್ಪರಿಣಾಮದ ಬಗ್ಗೆ ಯೋಚಿಸಿದ ಅರ್ಥಶಾಸ್ತ್ರಜ್ಞರು ಅದನ್ನು ರದ್ದುಗೊಳಿಸುವಂತೆ ಅಧ್ಯಕ್ಷ ಹೂವರ್‌ನಿಗೆ ಸೂಚಿಸಿದರು. ಸ್ವಲ್ಪ ಸಮಯ ಚರ್ಚೆ ನಡೆಸಿ, ಯೂರೋಪಿನ ಆರ್ಥಿಕ ಸಂಬಂಧ ಅಮೆರಿಕದ ಆರ್ಥಿಕ ದುಸ್ಥಿತಿಗೆ ಭಾಗಶಃ ಕಾರಣವೆಂದು ನಿರ್ಣಯಕ್ಕೆ ಬಂದು, ಹೂವರ್ ಹಾಲಿ-ಸ್ಮೂಟ್ ಕಾಯಿದೆಗೆ ಒಪ್ಪಿಗೆ ಕೊಟ್ಟನು. ಈ ಹೊಸ ಸುಂಕ ಮೊದಲೇ ದುರವಸ್ಥೆಯಲ್ಲಿದ್ದ ಜಾಗತಿಕ ಆರ್ಥಿಕ ಪರಿಸ್ಥಿತಿಯನ್ನು ಅಸ್ತವ್ಯಸ್ತಗೊಳಿಸಿತು. ಇದರ ಪರಿಣಾಮಗಳೆಂದರೆ: ಕೈಗಾರಿಕೆ ತಯಾರಿಸಿದ ಬಳಕೆಯ ವಸ್ತುಗಳಿಗೆ ರೈತರು ಹೆಚ್ಚಿನ ಬೆಲೆ ಕೊಡಬೇಕಾಯಿತು. ಅನೇಕ ಕೈಗಾರಿಕೆಗಳು ರಫ್ತು ವ್ಯಾಪಾರವನ್ನು ಅವಲಂಬಿಸಿದ್ದವು. ಈ ಹೊಸ ಕಾಯಿದೆ ಅವರನ್ನು ಅಧೀರಗೊಳಿಸಿ ಅಮೆರಿಕ ಬಿಟ್ಟು ಹೋಗುವಂತೆ ಮಾಡಿತು. ಬಹುತೇಕ ಹೊರದೇಶಗಳು ಅಮೆರಿಕದ ಸರಕು ಸಾಮಗ್ರಿಗಳ ಮೇಲೆ ಸುಂಕ ಹೆಚ್ಚಿಸಿ ಮುಯ್ಯಿ ತೀರಿಸಿಕೊಂಡವು.

ಕಾಲ ಸರಿದಂತೆ ಪರಿಸ್ಥಿತಿ ಬಿಗಡಾಯಿಸುತ್ತ ಹೋಯಿತು. ನಿರ್ಗತಿಕರಾದವರ ದಿನನಿತ್ಯದ ಅಗತ್ಯಗಳನ್ನು ಪೂರೈಸುವುದು ಕಷ್ಟವಾಗುತ್ತ ಬಂತು. ೧೯೩೨ರಲ್ಲಿ ನ್ಯೂಯಾರ್ಕ್ ನಗರದ ಕಡುಬಡವರು ಪಡೆಯುತ್ತಿದ್ದ ಸಹಾಯಧನ ವಾರಕ್ಕೆ ೨.೩೯ ಡಾಲರ್‌ಗಳು; ಒಹಾಯೊ ಸಂಸ್ಥಾನದ ಟೋಲೀಡೊ ನಗರ ಮಂಡಲಿಯವರು ಕಡು ಬಡವರಿಗೆ ನೀಡುತ್ತಿದ್ದ ಸಹಾಯಧನ (ಆಹಾರ ಕೊಳ್ಳಲು) ದಿನಕ್ಕೆ ಎರಡು ಸೆಂಟ್ಸ್ ಮಾತ್ರ. ಕರಿಯರ ಮತ್ತು ಮೆಕ್ಸಿಕನ್ ಅಮೆರಿಕನ್ನರ ಕಷ್ಟ ಕಾರ್ಪಣ್ಯಗಳು ವರ್ಣಿಸಲಸದಳವಾಗಿತ್ತು. ರಾಷ್ಟ್ರದಾದ್ಯಂತ ಸ್ಥಳೀಯ ಸಹಾಯ ಸಂಸ್ಥೆಗಳು ಈ ಅಲ್ಪ ಸಂಖ್ಯಾತರಿಗೆ ಬಿಳಿಯರಿಗಿಂತ ಬಹಳ ಕಡಿಮೆ ಸಹಾಯ ಒದಗಿಸುತ್ತಿದ್ದವು. ಜನರ ಆರ್ಥಿಕ ಸ್ಥಿತಿಗಳು ಹದಗೆಡುತ್ತ ಹೋದ ಹಾಗೆಲ್ಲ ಬಡವರಿಗೆ ನೆರವು ನೀಡುತ್ತಿದ್ದ ಸಂಸ್ಥೆಗಳೊಡನೆ ಫೆಡರಲ್ ಸರ್ಕಾರದ ನೆರವು ಪೂರಕವಾಗುವುದು ಅಗತ್ಯವಾಯಿತು. ಫೆಡರಲ್ ಯೋಜನೆಗಳನ್ನು ಸೃಷ್ಟಿಸಿ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳನ್ನು ಮಾಡಿಕೊಡು

ವಂತೆ ಹೂವರ್ ತನ್ನ ಆಡಳಿತ ಮಂಡಳಿಗೆ ನಿರ್ದೇಶಿಸಿದನು. ಫೆಡರಲ್ ಸರ್ಕಾರ ಈ ರೀತಿಯ ಕಾರ್ಯಗಳನ್ನು ಕೈಗೊಂಡುದು ಇದೇ ಮೊದಲು.

ಹೂವರ್‌ನ ಅಧಿಕಾರದ ಅವಧಿಯಲ್ಲಿ ಜಾರಿಗೆ ಬಂದ ಕಾನೂನುಗಳು ಕೈಗಾರಿಕೆಗಳಿಗೆ ಅನ್ವಯಿಸುತ್ತಿದ್ದವೆ ಹೊರತು ವ್ಯಕ್ತಿಗಳಿಗಲ್ಲ. ಆದ್ದರಿಂದ ಅವನನ್ನು ಶ್ರೀಮಂತರ ಪಕ್ಷಪಾತಿ ಎಂದು ಅವನಿಗೆ ಆಗದವರು ಟೀಕಿಸಿದರು. ವಾಸ್ತವವಾಗಿ ಹೂವರನ್ ಯೋಜನೆಗಳು ಶ್ರೀಮಂತರಿಗಲ್ಲದೆ ಇತರರಿಗೂ ಅನುಕೂಲವಾಗುವಂತಿದ್ದವು. ೧೯೩೨ರಲ್ಲಿ ಅವನು ಜಾರಿಗೆ ತಂದ 'ಮನೆ ಸಾಲದ ಬ್ಯಾಂಕ್ ಕಾಯಿದೆ' (Home Loan Bank Act) ವಿಶಿಷ್ಟ ಬ್ಯಾಂಕ್‌ಗಳನ್ನು ಸ್ಥಾಪಿಸಿ, ಸ್ವಂತ ಮನೆಯುಳ್ಳವರಿಗೆ 'ತುರ್ತು ಸಾಲ' (Emergency Credit) ದೊರೆಯುವಂತೆ ಮಾಡಿತು. ಹೂವರ್‌ನ ಅಧ್ಯಕ್ಷತೆಯಲ್ಲಿ ರಚನೆಗೊಂಡ ಅತಿ ಮುಖ್ಯ ಸಂಸ್ಥೆ: 'ಪುನರ್‌ನಿರ್ಮಾಣ ಹಣಕಾಸಿನ ಕಾರ್ಪೊರೇಷನ್' (Reconstruction Finance Corporation). ಈ ಸಂಸ್ಥೆ ಮುಖ್ಯವಾಗಿ ಬ್ಯಾಂಕ್‌ಗಳು, ಜೀವವಿಮಾ ಕಂಪನಿಗಳು, ರೈಲುಮಾರ್ಗ ಕಂಪನಿಗಳು ಮುಂತಾದುವಕ್ಕೆ ಸಾಲ ನೀಡುವ ಸಂಸ್ಥೆಯಾಗಿತ್ತು. ಹೂವರ್ ಸ್ಥಾಪಿಸಿದ ಅತಿ ಯಶಸ್ವಿಯಾದ ಈ ಸಂಸ್ಥೆ ಅನೇಕ ಉದ್ಯಮಗಳ ಮತ್ತು ಕೈಗಾರಿಕೆಗಳ ಅವನತಿಯನ್ನು ನಿವಾರಿಸಿ, ಸಹಸ್ರಾರು ಕೈಗಾರಿಕೆಗಳು ದಿವಾಳಿ ಯಾಗುವುದನ್ನು ತಪ್ಪಿಸಿತು. ಇದಲ್ಲದೆ ಹೋಗಿದ್ದರೆ, ಆರ್ಥಿಕ ಮುಗ್ಗಟ್ಟಿನ ಪರಿಣಾಮ ಇನ್ನೂ ಹೆಚ್ಚು ಭೀಕರವಾಗಿರುತ್ತಿತ್ತು.

ಹೂವರ್‌ನ ಹೆಸರೆತ್ತಿದೊಡನೆ ಅಮೆರಿಕನ್ನರಿಗೆ ಹೊಳೆಯುವುದು ಮಹಾ ಮುಗ್ಗಟ್ಟಿನ (Great Depression) ದಾರುಣ ದಿನಗಳ ನೆನಪು. ಈ ಮಹಾಮುಗ್ಗಟ್ಟಿಗೆ ಹೂವರ್ ಕಾರಣನಲ್ಲದಿದ್ದರೂ ಜನ ಅವನನ್ನು ಆ ದುರಂತದ ಯಜ್ಞಪಶುವನ್ನಾಗಿ (scape goat) ಮಾಡಿದ್ದು ಐತಿಹಾಸಿಕ ಪರಿಹಾಸವೇ ಸರಿ. ದೂಷಣೆಗಳನ್ನು ಕಡೆಗಣಿಸಿ ಹೂವರ್‌ನ ಆಡಳಿತವನ್ನು ವಸ್ತುನಿಷ್ಠೆಯಿಂದ ನೋಡಿದಾಗ ನಮಗೆ ತೋರಿಬರುವುದು ಅವನ ಪ್ರಗತಿಶೀಲ ಪ್ರವೃತ್ತಿ ಮತ್ತು ಮಾನವೀಯತೆ. ಖಜಾನೆ ಕಾರ್ಯದರ್ಶಿಯಾಗಿದ್ದ ಮೆಲನ್ (Melion) ತೀವ್ರವಾಗಿ ವಿರೋಧಿಸಿದರೂ ಅವನ ಮಾತಿಗೆ ಮಣಿಯದೆ ಹೂವರ್ ಕಡಿಮೆ ಆದಾಯ ವರ್ಗದವರ ತೆರಿಗೆಯನ್ನು ಸಾಕಷ್ಟು ಕೆಳಗಿಳಿಸಿದನು. ಆಡಳಿತದಲ್ಲಿ ಭ್ರಷ್ಟಾಚಾರ ಪದ್ಧತಿಗಳ ಮೇಲೆ ಕ್ರಮ ತೆಗೆದುಕೊಂಡು ಅವುಗಳನ್ನು ನಾಶಪಡಿಸಿದನು. ಆಗ ಪ್ರಚಲಿತವಾಗಿದ್ದ ಕಮ್ಯೂನಿಸ್ಟರನ್ನು ಹಿಡಿದು (red hunts) ವಿಚಾರಣೆ ಇಲ್ಲದೆ ಶಿಕ್ಷಿಸುವುದನ್ನು ನಿಲ್ಲಿಸಿದನು. ಜನರು ಶ್ವೇತಭವನದ ಮುಂದೆ ಪ್ರದರ್ಶನ ಮಾಡುವುದನ್ನು ನಿಲ್ಲಿಸಬೇಕೆಂದು ಅವನ ಆಡಳಿತ ಮಂಡಳಿಯ ಸಲಹೆಯನ್ನು ನಿರಾಕರಿಸಿದನು. ಆಸ್ಕರ್ ಡಿಪ್ರೀಸ್ಟ್ (Oscar DePriest) ಅಪರೂಪಕ್ಕೆ ಆಯ್ಕೆಯಾಗಿದ್ದ ಒಬ್ಬ ಸಕ್ರಿಯ ಕಾಂಗ್ರೆಸ್ ಸದಸ್ಯ. ಅವನ ಹೆಂಡತಿಯನ್ನು ಶ್ವೇತಭವನಕ್ಕೆ ಆಹ್ವಾನಿಸಿ ಆದರಿಸಿದಳೆಂದು ಹೂವರ್‌ನ

ಹೆಂಡತಿಯ ಮೇಲೆ ಶ್ವೇತಭವನದ ಸಂಪ್ರದಾಯವನ್ನು ಮುರಿದ ಆಪಾದನೆಯನ್ನು ಹೊರಿಸಿ ಖಂಡಿಸಿದರು. ಹೂವರ್ ಈ ಸಂಪ್ರದಾಯಸ್ಥರನ್ನು ಎದುರಿಸಿ ತನ್ನ ಹೆಂಡತಿಯ ಹಕ್ಕನ್ನು ಸಮರ್ಥಿಸಿದ್ದನು. ಕರಿಯರು ಸ್ಥಾಪಿಸಿದ್ದ 'ಹೊವಾರ್ಡ್ ವಿಶ್ವವಿದ್ಯಾನಿಲಯ'ದ (Howard University) ನಿಧಿಗೆ ಹೆಚ್ಚು ಹಣವನ್ನು ಮಂಜೂರು ಮಾಡಿದನು.

ಹೂವರ್‌ನ ಆಡಳಿತ ಕಾಲದಲ್ಲಿ ಅನೇಕ ಆಂದೋಳನಗಳು ನಡೆದವು. ಕೆಲವು ಆಂದೋಲನಗಳಲ್ಲಿ ಅಮೆರಿಕನ್ ಕಮ್ಯೂನಿಸ್ಟ್ ಪಕ್ಷದ ಕೈವಾಡವಿದ್ದಿತ್ತು. ಇಲ್ಲಿಯವರೆಗೆ ಅಜ್ಞಾತವಾಗಿದ್ದ ಕಮ್ಯೂನಿಸ್ಟರು ಜನರನ್ನು ಸರ್ಕಾರದ ವಿರುದ್ಧ ಎತ್ತಿಕಟ್ಟಿ ಪ್ರದರ್ಶನ ನಡೆಸುವುದು, ಮುಷ್ಕರ ಹೂಡುವುದು ಶ್ವೇತಭವನದ ಮುಂದೆ ಧರಣಿ ಹೂಡುವುದು ಮತ್ತು 'ಹಸಿವಿನ ಮೆರವಣಿಗೆ' (hunger marches) ನಡೆಸುವುದು – ಇಂಥ ಚಟುವಟಿಕೆಗಳನ್ನು ಅವರು ಪ್ರಯತ್ನಿಸುತ್ತಿದ್ದರು. ತಮ್ಮ ಆಸ್ತಿಯನ್ನು ಕಳೆದುಕೊಂಡ ರೈತರು ಬ್ಯಾಂಕ್‌ಗಳು ಮುಟ್ಟುಗೋಲು ಹಾಕಿಕೊಳ್ಳುವುದರ ವಿರುದ್ಧ ಕೋಪಾವಿಷ್ಟರಾಗಿ ನ್ಯಾಯಾಲಯಗಳಿಗೆ ಮುತ್ತಿಗೆ ಹಾಕಿ ನ್ಯಾಯಾಧೀಶರನ್ನು ನೇಣು ಹಾಕಲು ಯತ್ನಿಸಿದರು. ನೆಬ್ರಾಸ್ಕ ರೈತರು ತಮ್ಮ ವಿರೋಧ ವ್ಯಕ್ತಪಡಿಸಲು ಜೋಳದ ಬೆಳೆಗೆ ಬೆಂಕಿ ಹಾಕಿ ಚಳಿ ಕಾಯಿಸಿಕೊಂಡರು. ಅಯೋವಾದ ರೈತರ ಸಂಘ ರೈತರಿಗೆ ಮುಷ್ಕರ ಹೂಡಲು ಕರೆಕೊಟ್ಟು ರಸ್ತೆಗಳಲ್ಲಿ ತಡೆ ಒಡ್ಡಿ ವಾಹನಸಂಚಾರವನ್ನು ನಿಲ್ಲಿಸಿದರು. ಹೈನುಗಾರರು ಅಪಾರ ಪ್ರಮಾಣದ ಹಾಲನ್ನು ಚರಂಡಿಗೆ ಸುರಿದರು. ರೈತ ಸಂಘದ ಮುಷ್ಕರ ಯಶಸ್ವಿಯಾಗ ದಿದ್ದರೂ ಅವರ ಕೃತ್ಯಗಳು ಅವರ ಆಗಿನ ಮನೋಭಾವವನ್ನು ವ್ಯಕ್ತಪಡಿಸುತ್ತಿದ್ದವು. ಕಮ್ಯೂನಿಸ್ಟ್ ಪಕ್ಷ ಅಲಬಾಮ ಸಂಸ್ಥಾನದಲ್ಲಿ 'ಗೇಣಿದಾರರ ಒಕ್ಕೂಟ'ವನ್ನು ಸ್ಥಾಪಿಸಿತ್ತು. ಇದು ಅವರಿಗೆ ತಮ್ಮ ಪ್ರಚಾರವನ್ನು ಮಾಡಲು ಅವಕಾಶ ಅನಾಯಾಸವಾಗಿ ಒದಗುವಂತೆ ಮಾಡಿತು. ಈ ಅವಕಾಶವೇ ಕುಖ್ಯಾತ 'ಸ್ಕಾಟ್ಸ್‌ಬರೋ ಹಗರಣ'.

ನಿರುದ್ಯೋಗಿಗಳಾಗಿ ನೆಲೆಯಿಲ್ಲದೆ ಅಲೆಮಾರಿಗಳಾಗಿದ್ದ ಒಂಬತ್ತು ನತದೃಷ್ಟ ನೀಗ್ರೋ ಹುಡುಗರು ಇಬ್ಬರು ಬಿಳಿಯ ಹುಡುಗಿಯರ ಮೇಲೆ ಅತ್ಯಾಚಾರ ಮಾಡಿದರೆಂದು ಸುಳ್ಳು ಆರೋಪ ಹೊರಿಸಿ, ಬಿಳಿಯರು ಅವರನ್ನು ಹಿಡಿದು ತಂದು ಕಟ್ಟಳೆ ಹೂಡಿದ್ದರು. ಕಮ್ಯೂನಿಸ್ಟ್ ಪಕ್ಷ ಈ ಹುಡುಗರ ಪರವಾಗಿ ಬೆಂಬಲ ನೀಡಿ ಆ ಸಂದರ್ಭದ ಉಪಯೋಗ ಪಡೆದುಕೊಂಡರು. ಹತಾಶರಾದ ಕೆಂಟಕಿಯ ಕಲ್ಲಿದ್ದಲ ಗಣಿ ಕಾರ್ಮಿಕರು ಕಮ್ಯೂನಿಸ್ಟರ ನಾಯಕತ್ವದಲ್ಲಿ ನಡೆಯುತ್ತಿದ್ದ 'ರಾಷ್ಟ್ರೀಯ ಗಣಿ ಕಾರ್ಮಿಕರ ಒಕ್ಕೂಟ'ವನ್ನು ಸೇರಿಕೊಂಡಿದ್ದರು. ಅವರಿಂದ ಪ್ರಚೋದಿತರಾದ ಕಾರ್ಮಿಕರು ದೊಂಬಿ, ಮುಷ್ಕರ ಮತ್ತು ಹಿಂಸಾಚಾರಗಳಲ್ಲಿ ತೊಡಗಿದ್ದರು. ಆದರೆ ಕಮ್ಯೂನಿಸ್ಟರು ಸರ್ಕಾರವನ್ನು, ರಾಷ್ಟ್ರಧ್ವಜವನ್ನು, ಮತ್ತು ಮತಧರ್ಮವನ್ನು ಖಂಡಿಸುವುದು ಕಾರ್ಮಿಕರಿಗೆ ಹಿಡಿಸಲಿಲ್ಲ. ಎಷ್ಟು ಪ್ರಚಾರ ನಡೆಸಿದರೂ ಬಹುಸಂಖ್ಯಾತ ಕಾರ್ಮಿಕರು ಕಮ್ಯೂನಿಸ್ಟ ಪಕ್ಷ ಸೇರಲು ನಿರಾಕರಿಸಿದರು.

ಎಷ್ಟು ಪ್ರಯತ್ನಪಟ್ಟರೂ ಕಮ್ಯೂನಿಸ್ಟ್ ಪಕ್ಷದ ಸದಸ್ಯರ ಸಂಖ್ಯೆ ೧೦೦೦೦೦ಕ್ಕಿಂತ ಮೇಲೇರಲು ಸಾಧ್ಯವಾಗಲಿಲ್ಲ.

ಹೂವರ್‌ನ ಅಧಿಕಾರದ ಅವಧಿಯಲ್ಲಿ ಜರುಗಿದ ಮತ್ತೊಂದು ಮುಖ್ಯ ಘಟನೆ – ೧೯೩೨ರಲ್ಲಿ ನಿವೃತ್ತ ನಿರುದ್ಯೋಗಿ ಸೈನಿಕರು ವಾಷಿಂಗ್‌ಟನ್‌ನಲ್ಲಿ ಒಟ್ಟಾಗಿ ಸೇರಿ ಧರಣಿ (ಸ್ಥಳ ಬಿಡದೆ ಕೂರುವುದು) ಹೂಡಿದ್ದು. ತಮಗೆ ಬರಬೇಕಾಗಿದ್ದ 'ಬೋನಸ್' (bonus) ಕೂಡಲೇ ಸರ್ಕಾರ ನಗದು ಹಣದಲ್ಲಿ ಕೊಡಬೇಕು – ಎನ್ನುವುದು ಅವರ ಮುಖ್ಯ ಬೇಡಿಕೆಯಾಗಿತ್ತು. ಕಾಂಗ್ರೆಸ್ 'ಬೋನಸ್ ಮಸೂದೆ'ಯನ್ನು ಅಂಗೀಕರಿಸಿತು, ಆದರೆ ಸೆನೆಟ್ ಅದನ್ನು ನಿರಾಕರಿಸಿತು. ಇದನ್ನು ತಿಳಿದ ಧರಣಿ ಹೂಡಿದ್ದ ಕೆಲವು ಸೈನಿಕರು, ಹೋಗಲು ಎಡೆಯಿಲ್ಲದೆ ಖಾಲಿಯಿದ್ದ ಸರ್ಕಾರದ ಕಟ್ಟಡಗಳಲ್ಲಿ ಮತ್ತು ಕೆಲವರು ಸಮೀಪದ ಪರವಾನಿಗೆ ಇಲ್ಲದೆ ತಾತ್ಕಾಲಿಕವಾಗಿ ಕಟ್ಟಿಕೊಂಡ ಹರಕು ಮುರುಕು ಜೋಪಡಿಗಳಲ್ಲಿ ವಾಸಿಸತೊಡಗಿದರು. ಹೂವರ್ ಪುನಃ ಈ ಮಾಜಿ ಸೈನಿಕರ 'ಬೋನಸ್ ಸರ್ಟಿಫಿಕೇಟ್'ಗಳ ಆಧಾರದ ಮೇಲೆ ಹಣವನ್ನು ಮುಂಗಡ ಸಾಲವಾಗಿ ಮಂಜೂರು ಮಾಡಬೇಕೆಂದು ಕಾಂಗ್ರೆಸ್ಸಿಗೆ ನಿರ್ದೇಶಿಸಿದನು. ಹಣ ಸಿಕ್ಕರೆ ಧರಣಿ ಹೂಡಿದವರು ವಾಪಸ್ಸಾಗಬಹುದು ಎಂದು ಅವನು ಆಶಿಸಿದ್ದನು. ಹಣ ಮಂಜೂರಾಗಿ ಅವರ ಕೈ ಸೇರಿದರೂ ಕೇವಲ ಕೆಲವು ಮಾಜಿ ಸೈನಿಕರು ವಾಪಸ್ಸಾದರು. ಅಧ್ಯಕ್ಷ ಹೂವರ್‌ನನ್ನು ಭೇಟಿ ಮಾಡುವ ಉದ್ದೇಶದಿಂದ ಇನ್ನು ಕೆಲವರು ಉಳಿದುಕೊಂಡರು. ಸ್ವಲ್ಪ ಸಮಯದ ನಂತರ ಅಧಿಕಾರಿಗಳು ಮಾಜಿ ಸೈನಿಕರಿಗೆ ಸರ್ಕಾರದ ಕಟ್ಟಡಗಳನ್ನು ಖಾಲಿ ಮಾಡಬೇಕೆಂದು ಎಚ್ಚರಿಸಿದರು. ಅವರು ನಿರಾಕರಿಸಿದ್ದರಿಂದ ಪೊಲೀಸರು ಬಲಾತ್ಕಾರವಾಗಿ ಅವರನ್ನು ಕಟ್ಟಡಗಳಿಂದ ಹೊರಡಿಸಲು ಪ್ರಯತ್ನಿಸಿದಾಗ ಉಂಟಾದ ನೂಕು ನುಗ್ಗಲು ಮತ್ತು ಗೊಂದಲದಲ್ಲಿ ಪೊಲೀಸರು ಗುಂಡು ಹಾರಿಸಿದಾಗ ಇಬ್ಬರು ಮಾಜಿ ಸೈನಿಕರು ಸತ್ತರು. ಅವರ ಸಾವಿನಿಂದ ಪರಿಸ್ಥಿತಿ ಕೈಮೀರಿ ಹೋಗಿದ್ದರಿಂದ ಯುದ್ಧ ಕಾರ್ಯದರ್ಶಿ ಪ್ಯಾಟ್ರಿಕ್ ಹರ್ಲಿ (Patrick Hurley) ಅಧ್ಯಕ್ಷನ ಅನುಮತಿ ಪಡೆದು, 'ದಂಗೆ' ಅಡಗಿಸಲು ಸೈನ್ಯವನ್ನು ಕರೆಸಿದನು. ಜನರಲ್ ಡಗ್ಲಾಸ್ ಮೆಕಾರ್ಥರ್ (Douglas MacArthur) ಕೈಕೆಳಗಿನ ೭೦೦ ಸೈನಿಕರ ಪಡೆ ದಂಗೆಯನ್ನು ಹತ್ತಿಕ್ಕಲು ಬಂದಿತು. ಜನರಲ್ ಮೆಕಾರ್ಥರ ಸಹಾಯಕ್ಕೆ ಇಬ್ಬರು ಕಿರಿಯ ಸೇನಾಧಿಕಾರಿಗಳು ಬಂದಿದ್ದರು. ಡ್ವೈಟ್ ಐಸೆನ್‌ಹೋವರ್ ಮತ್ತು ಜಾರ್ಜ್ ಪ್ಯಾಟನ್. ಸೈನಿಕರು ಸರ್ಕಾರಿ ಕಟ್ಟಡಗಳನ್ನು ಆಕ್ರಮಿಸಿಕೊಂಡವರನ್ನು ಮತ್ತು ಸಮೀಪದ ಜೋಪಡಿಗಳಲ್ಲಿದ್ದವರನ್ನು ಸುಲಭವಾಗಿ ಹೊರ ಹೊರಡಿಸಿ ಜೋಪಡಿಗಳಿಗೆ ಬೆಂಕಿಯಿಟ್ಟು ನಾಶ ಮಾಡಿದರು. ಜನರಲ್ ಮೆಕಾರ್ಥರ್ ಆ 'ದಂಗೆಕೋರರು' 'ಕ್ರಾಂತಿ' ಮಾಡುವ ಇರಾದೆಯಿಂದ ಕೆಲಸ ನಡೆಸಿದ್ದರು; ಸರ್ಕಾರವನ್ನು ವಶಪಡಿಸಿಕೊಳ್ಳಲು ತಯಾರಾಗಿದ್ದರು ಎಂದು ಹೇಳಿಕೆ ನೀಡಿದನು. 'ಬೋನಸ್ ಸೈನ್ಯ' ಕಮ್ಯೂನಿಸ್ಟರು ಮತ್ತು ಅಪರಾಧಿಗಳಿಂದ ಕೂಡಿತ್ತು ಎಂದು ಸರ್ಕಾರಿ ಅಧಿಕಾರಿಗಳು ನಂಬಿದ್ದರು.

ಇಂಥ ಹಲವಾರು ಘಟನೆಗಳು ಹೂವರ್‌ನ ಮನಸ್ಸಿಗೆ ಆಘಾತ ಉಂಟು ಮಾಡಿ, ಅವನು ಸದಾ ಖಿನ್ನತೆಯಿಂದ ಪರಿತಪಿಸುವಂತೆ ಮಾಡಿದವು. ದೇಶದ ಸಮಸ್ಯೆಗಳನ್ನು ಪರಿಹರಿಸಲು ಅವಿರತವಾಗಿ ದುಡಿದರೂ ಅವನ ಮನಸ್ಸಿಗೆ ನೆಮ್ಮದಿ ಇರಲಿಲ್ಲ. ದುಃಖಪೂರಿತನಾದ ಅವನಿಗೆ ಭವಿಷ್ಯ ಕತ್ತಲೆಯಾಗಿ ತೋರಿತು. ಅಧ್ಯಕ್ಷನ ಮನಸ್ಸಿನಲ್ಲಿ ತುಂಬಿದ ನಿರಾಶೆ ಮತ್ತು ನಿಷ್ಪ್ರಯೋಜಕತೆ ರಾಷ್ಟ್ರಜೀವನದಲ್ಲೂ ಅಭಿವ್ಯಕ್ತಿಗೊಂಡವು. ಅಮೆರಿಕನ್ನರು ಹತಾಶರಾಗಿ ಮುಂಬರುವ ಚುನಾವಣೆ ಮತ್ತಾವ ವಿಪತ್ತನ್ನು ತರುವುದೋ ಎನ್ನುವ ಆತಂಕದಿಂದ ೧೯೩೨ರ ಆಗಮನವನ್ನು ಕಾದಿದ್ದನು.

❑

ಅಧ್ಯಾಯ – ೧೭

ಅಧ್ಯಕ್ಷ ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಮತ್ತು ನ್ಯೂ ಡೀಲ್ ಯೋಜನೆ

ಹೊಸ ಹಂಚಿಕೆ (The New Deal)

೧೯೩೨ರ ಆರಂಭದಲ್ಲಿ ಬಹುಸಂಖ್ಯಾತ ಅಮೆರಿಕನ್ನರು ಹೊಟ್ಟೆಗೆ ಬಟ್ಟೆಗೆ ಗತಿಯಿಲ್ಲದೆ ದಿಕ್ಕು ತೋರದೆ ಹತಾಶರಾಗಿದ್ದರು. ಹೇಗೋ ಜೀವನವನ್ನು ಸಾಗಿಸುವ ಉದ್ದೇಶದಿಂದ ಕೆಲವರು ಸೇಬಿನ ಹಣ್ಣು ಮಾರಿ ಜೀವಿಸಿದರೆ, ಮತ್ತೆ ಕೆಲವರು ಷೂ ಪಾಲಿಷ್ ಮಾಡಿ ಅಷ್ಟು ಇಷ್ಟು ಹಣ ಸಂಪಾದಿಸುತ್ತಿದ್ದರು. ಒಟ್ಟಿನಲ್ಲಿ ಎಲ್ಲರೂ ಏನನ್ನು ಮಾರಲು ಸಾಧ್ಯವೋ ಅವನ್ನೆಲ್ಲ ಮಾರಿ ಹೊಟ್ಟೆ-ಬಟ್ಟೆ-ರಾತ್ರಿ ಮಲಗಲು ಒಂದು ಜಾಗ – ಈ ದೈನಂದಿನ ಅಗತ್ಯಗಳನ್ನು ಪೂರೈಸಲು ಹೆಣಗಾಡುತ್ತಿದ್ದರು. ಬಹುತೇಕ ಅಮೆರಿಕನ್ನರು ತಾತ್ಕಾಲಿಕವಾಗಿ ಗುಂಪಾಗಿ ಕಟ್ಟಿಕೊಂಡ ಜೋಪಡಿಗಳಲ್ಲಿ ವಾಸಿಸುತ್ತಿದ್ದರು. ಅಧ್ಯಕ್ಷ ಹೂವರ್‌ನಿಂದ ತಮಗೆ ಈ ದುರ್ಗತಿ ಬಂದಿತೆಂದು ನಂಬಿದ್ದ ಜನ ಈ ಜೋಪಡಿಗಳನ್ನು 'ಹೂವರ್‌ವಿಲ್ಸ್' (Hoovervilles) ಹೂವರ್‌ನ ಹಳ್ಳಿಗಳು ಎಂದು ಕರೆಯುತ್ತಿದ್ದರು. ಬಡತನ, ಹಸಿವು, ಬರಗಾಲ ಮತ್ತು ರೋಗರುಜಿನಗಳು ಬೇರೆ ದೇಶಗಳಲ್ಲಿ ಹಿಂದುಳಿದ ಜನಾಂಗಗಳಲ್ಲಿ ಮಾತ್ರ ಜರುಗುವ ಘಟನೆಗಳು ಎಂದು ನಂಬಿದ್ದ ಅಮೆರಿಕನ್ನರು ಈಗ ತಾವೇ ಆ ಸ್ಥಿತಿಗತಿಗಳನ್ನು ಅನುಭವಿಸಬೇಕಾಗಿ ಬಂದಿದ್ದು ಅವರ ಮನಸ್ಸಿಗೆ ಆಘಾತ ಉಂಟುಮಾಡಿತ್ತು. ತಮ್ಮ ಸುತ್ತ ಮುತ್ತ ನೋಡಿದಲ್ಲೆಲ್ಲ ಆರ್ಥಿಕ ಮುಗ್ಗಟ್ಟಿನ ಚಿಹ್ನೆಗಳು ಕಾಣುತ್ತಿದ್ದವು – ಸೂಪ್ ಪಾಕಗೃಹಗಳು, ರೊಟ್ಟಿ ಪಡೆಯಲು ನಿಂತ ಜನರ ಕೊನೆಯಿಲ್ಲದ ಸಾಲುಗಳು[೧]. ಇಂಥ ದುಸ್ಥಿತಿಯಲ್ಲಿ ಕೆಲವು ಅಮೆರಿಕನ್ನರು ಆಹಾರ ಕೇಂದ್ರಗಳಲ್ಲಿ ಕೊಡುತ್ತಿದ್ದ ಆಹಾರಕ್ಕೆ ಕೈ ಒಡ್ಡುತ್ತಿರಲಿಲ್ಲ. ಹಾಗೆ ಮಾಡುವುದರಿಂದ ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಉಂಟಾಗುತ್ತದೆ ಎಂದು ನಂಬಿದ್ದ ಇವರು ಹಸಿದುಕೊಂಡೇ ಇರುತ್ತಿದ್ದರು!

---

೧. ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಸಾಮಾಜಿಕ ಸ್ಥಿತಿಗತಿಗಳನ್ನು, ಜನರ ಕ್ರೂರತನ, ಪೂರ್ವಗ್ರಹಗಳು (prejudice), ವಂಚನೆ ಮತ್ತು ಶೋಷಣೆಗಳನ್ನು ಸ್ಟೈನ್‌ಬೆಕ್ ತನ್ನ 'ರೋಷಾವಿಷ್ಟ ದ್ರಾಕ್ಷಿಗಳು' (Grapes of Wrath) ಕಾದಂಬರಿಯಲ್ಲಿ ಮನಮುಟ್ಟುವಂತೆ ವರ್ಣಿಸಿದ್ದಾನೆ.

ಮಹಾಮುಗ್ಗಟ್ಟಿನ ಹಿನ್ನೆಲೆಯಲ್ಲಿ ರಿಪಬ್ಲಿಕನ್ ಮತ್ತು ಡೆಮೊಕ್ರಾಟಿಕ್ ಪಕ್ಷಗಳು ಮುಂಬರುವ ಚುನಾವಣೆಗೆ ಸಿದ್ಧತೆ ನಡೆಸಿದ್ದವು. ಜೂನ್ ೧೪, ೧೯೩೨. ಧರಣಿ ಹೂಡಿದ್ದ ನಿವೃತ್ತ ಸೈನಿಕರ 'ಬೋನಸ್ ಸೈನ್ಯ' ಇನ್ನೂ ವಾಷಿಂಗ್‌ಟನ್‌ನಲ್ಲಿ ಇತ್ತು. ಆದರೆ ಅವರ ಅಹವಾಲು ಕೇಳಬೇಕಾಗಿದ್ದ ರಿಪಬ್ಲಿಕನ್ನರು ರಾಜಧಾನಿಯಲ್ಲಿರಲಿಲ್ಲ. ರಿಪಬ್ಲಿಕನ್ ಪಕ್ಷದ ನಾಮಕರಣ ಅಧಿವೇಶನ ಚಿಕಾಗೊ ನಗರದಲ್ಲಿ ನಡೆದಿತ್ತು. ಸಭೆಯ ಕಾರ್ಯಕಲಾಪಗಳು ನೀರಸವಾಗಿದ್ದವು. ಸದಸ್ಯರು ಬೇಕೋ ಬೇಡವೋ ಎಂಬಂತೆ ಭಾಗವಹಿಸುತ್ತಿದ್ದರು. ಪಾನನಿರೋಧದ ವಿಷಯ ಚರ್ಚೆಗೆ ಬಂದಾಗ ಸಭೆಗೆ ಸ್ವಲ್ಪ ಕಳೆಯೇರುತ್ತಿತ್ತು. ಆದರೆ ಅಂತಿಮವಾಗಿ ಪಾನನಿರೋಧದ ಬಗ್ಗೆ ನಿಖರವಾದ ನಿರ್ಧಾರ ತೆಗೆದುಕೊಳ್ಳಲಿಲ್ಲ. ಸದಸ್ಯರಿಗೆ ಗೆಲ್ಲುತ್ತೇವೆ ಎನ್ನುವ ಭರವಸೆ ಇರಲಿಲ್ಲ. ಪದ್ಧತಿಯಂತೆ ಮಾಡಬೇಕಾಗಿದ್ದ ಕಾರ್ಯಗಳನ್ನು ಯಾಂತ್ರಿಕವಾಗಿ ಮಾಡಿ ಮುಗಿಸುತ್ತಿದ್ದರು. ರಿಪಬ್ಲಿಕನ್ ಪಕ್ಷ ಹೂವರ್ ಮತ್ತು ಕರ್ಟಿಸ್ ಜೋಡಿಯನ್ನು ಪುನಃ ಕ್ರಮವಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಿಗೆ ಸ್ಪರ್ಧಿಸಲು ನಾಮಕರಣ ಮಾಡಿತು.

ಡೆಮೊಕ್ರಾಟಿಕ್ ಪಕ್ಷದ ಅಧಿವೇಶನ ಚಿಕಾಗೊದಲ್ಲಿ ಜೂನ್ ತಿಂಗಳ ಕಡೆಯ ಭಾಗದಲ್ಲಿ ನಡೆಯಿತು. ಈ ಅಧಿವೇಶನ ಆವೇಶಪೂರ್ಣವಾಗಿ, ಸದಸ್ಯರಲ್ಲಿ ಹುಮ್ಮಸ್ಸು ತುಂಬಿ ತುಳುಕುತ್ತಿತ್ತು. ಬರುವ ಚುನಾವಣೆಯಲ್ಲಿ ಗೆಲ್ಲುತ್ತೇವೆ ಎಂಬ ಆಶಾಭಾವನೆ ಮತ್ತು ಭರವಸೆ ಅಧಿವೇಶನದ ಸದಸ್ಯರಲ್ಲಿ ಅಭಿವ್ಯಕ್ತಿಗೊಂಡಿತ್ತು. ಡೆಮೊಕ್ರಾಟರ ಚುನಾವಣಾ ವೇದಿಕೆ – ಸಮತೋಲನದ ಆಯ-ವ್ಯಯ ತಯಾರಿಸಿ ವ್ಯಾಪಕವಾದ ಫೆಡರಲ್ ಮತ್ತು ಸಂಸ್ಥಾನಗಳ ಪರಿಹಾರ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದು. ಅಧಿವೇಶನದಲ್ಲಿ ನ್ಯೂಯಾರ್ಕಿನ ಗವರ್ನರ್ ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಮತ್ತು ಸಭಾಧ್ಯಕ್ಷ (House Speaker) ನಾಗಿದ್ದ ಟೆಕ್ಸಾಸ್ ಸಂಸ್ಥಾನದ ಜಾನ್ ನ್ಯಾನ್ಸ್ ಗಾರ್ನರ್ (John Nance Garner), ಇಬ್ಬರೂ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಹವಣಿಸಿದ್ದರು. ಕ್ಯಾಲಿಫೋರ್ನಿಯ ಸಂಸ್ಥಾನದ ಡೆಮೊಕ್ರಾಟಿಕ್ ಪಕ್ಷದ ಪ್ರಾಥಮಿಕ (primary) ಚುನಾವಣೆಯಲ್ಲಿ ಗೆದ್ದುದರಿಂದ ಗಾರ್ನರ್-ರೂಸ್‌ವೆಲ್ಟ್ ನಡುವೆ ಸೆಣಸಾಟ ಪ್ರಾರಂಭವಾಗಿ ಅಭ್ಯರ್ಥಿಗಳ ಆಯ್ಕೆ ಜಟಿಲಗೊಳ್ಳುವ ಸ್ಥಿತಿ ಏರ್ಪಟ್ಟಿತ್ತು. ಕಾಂಗ್ರೆಸ್ ಪ್ರತಿನಿಧಿ ಸ್ಯಾಮ್ ರೇಬರ್ನ್ (Sam Rayburn) ಗಾರ್ನರ್‌ನೊಡನೆ ಸಂಧಾನ ನಡೆಸಿ ತನ್ನ ಅನುಯಾಯಿಗಳು ರೂಸ್‌ವೆಲ್ಟ್‌ನಿಗೆ ಮತ ನೀಡುವಂತೆ ಮಾಡಿದ ಮೇಲೆ ನಾಮಕರಣ ಪಟ್ಟಿಯಲ್ಲಿ ರೂಸ್‌ವೆಲ್ಟ್‌ನ ಹೆಸರು ಮೊದಲನೆಯ ಸ್ಥಾನಕ್ಕೆ ಏರಿ ಗಾರ್ನರ್ ಎರಡನೆಯ ಸ್ಥಾನ ಪಡೆದನು. ಹೀಗೆ ಡೆಮೊಕ್ರಾಟರು ಅಧ್ಯಕ್ಷಸ್ಥಾನಕ್ಕೆ ರೂಸ್‌ವೆಲ್ಟ್‌ನನ್ನು ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಗಾರ್ನರ್‌ನನ್ನು ನಾಮಕರಣ ಮಾಡಿದರು. ಡೆಮೊಕ್ರಾಟಿಕ್ ಪಕ್ಷ ಗೆಲ್ಲಬೇಕೆಂಬ ಹಠದಿಂದ ಗಾರ್ನರ್ ರೂಸ್‌ವೆಲ್ಟ್‌ನಿಗೆ ಅಧ್ಯಕ್ಷ ಪದವಿಗೆ ಅಭ್ಯರ್ಥಿಯಾಗಲು ಬಿಟ್ಟುಕೊಟ್ಟಿದ್ದರೂ ಉಪಾಧ್ಯಕ್ಷ ಸ್ಥಾನದ ಬಗ್ಗೆ ಅವನಿಗೆ ಅತ್ಯಂತ ತಿರಸ್ಕಾರವಿತ್ತು

ಎನ್ನುವುದು 'ಆ ಅಧಿಕಾರಸ್ಥಾನಕ್ಕೆ ಒಂದು ಪೀಕದಾನಿ ಎಂಜಲಿನಷ್ಟು ಬೆಲೆ ಕೂಡ ಇಲ್ಲ!' (An office not worth a pitcher of warm spit) ಎಂಬ ಅವನ ಉದ್ಗಾರ ಸ್ಪಷ್ಟಪಡಿಸುತ್ತದೆ.

ತನ್ನ ನಾಮಕರಣ ಖಚಿತವಾದ ಸುದ್ದಿ ತಿಳಿದ ಫ್ರಾಂಕ್ಲಿನ್ ರೂಸ್‌ವೆಲ್ಟ್‌ನು ಅಧಿಕೃತ ಪ್ರಕಟಣೆಗಾಗಿ ಕಾಯದೆ, ಸಂಪ್ರದಾಯದ ವಿರುದ್ಧವಾಗಿ ವಿಮಾನದಲ್ಲಿ ಚಿಕಾಗೊ ನಗರಕ್ಕೆ ಬಂದು ಅಧಿವೇಶನದಲ್ಲಿ ನಾಮಕರಣ ಸ್ವೀಕರಿಸಲು ಸ್ವತಃ ಹಾಜರಾದನು. ತನ್ನ ನಾಮಕರಣ ಸ್ವೀಕಾರ ಭಾಷಣದಲ್ಲಿ 'ನಾನು ಸಂಪ್ರದಾಯಗಳನ್ನು ಮುರಿದಿರುವುದು ಸಾಂಕೇತಿಕವಾಗಿದೆ . . . ರಿಪಬ್ಲಿಕನ್ನರು ಅಗತ್ಯವಸ್ತುಗಳನ್ನು (material things) ಒದಗಿಸುವುದರಲ್ಲಿ ವಿಫಲರಾಗಿದ್ದಾರಲ್ಲದೆ ರಾಷ್ಟ್ರವನ್ನು ದಾರ್ಶನಿಕವಾಗಿ ನೋಡುವುದರಲ್ಲೂ ವಿಫಲ ರಾಗಿದ್ದಾರೆ, ಏಕೆಂದರೆ ವಿಪತ್ಕಾಲದಲ್ಲಿ ಅವರು ಆಶಾಭಾವನೆಯನ್ನು ಎತ್ತಿ ಹಿಡಿಯದೆ ಹೋದರು. ನಾನು ನಿಮಗೆ ವಾಗ್ದಾನ ಮಾಡುತ್ತೇನೆ. ಅಮೆರಿಕನ್ ಜನರಿಗೆ ಹೊಸ ಹಂಚಿಕೆಯನ್ನು ಅನುಷ್ಠಾನಕ್ಕೆ ತರುತ್ತೇನೆಂದು ಮಾತು ಕೊಡುತ್ತೇನೆ' ಎಂದು ಭರವಸೆ ನೀಡಿದನು. ಜನರಿಗೆ ವಾಗ್ದಾನ ಮಾಡಿದ 'ಹೊಸ ಹಂಚಿಕೆ' ಏನೆಂದು ಅವನಿಗೇ ಸ್ಪಷ್ಟವಾಗಿ ತಿಳಿದಿರಲಿಲ್ಲ. ಆದಾಗ್ಯೂ ಅವನ ಉತ್ಸಾಹಪೂರ್ಣ ವ್ಯಕ್ತಿತ್ವ ಆಶಾಭಾವನೆಯನ್ನು ಮತ್ತು ಸಂತೋಷವನ್ನು ಪ್ರಸರಿಸುತ್ತಿತ್ತು. ರೂಸ್‌ವೆಲ್ಟ್‌ನ ಚುನಾವಣಾ ಪಲ್ಲವಿ: 'ಬಂದಿವೆ ಸಂತೋಷದ ದಿನಗಳು ಮರಳಿ' (Happy days are here again) ಜನಪ್ರಿಯವಾಯಿತು.

ಅಧ್ಯಕ್ಷ ಹೂವರ್ ಈ ಹೊಸ ಹಂಚಿಕೆ ಎಲ್ಲ ಸಂಪ್ರದಾಯಗಳಿಂದ ಹೊರತಾದುದು, ಇದು ಆರ್ಥಿಕ ವ್ಯವಸ್ಥೆಯನ್ನು ಛಿದ್ರಗೊಳಿಸಿ ರಾಜಕೀಯ ಸ್ವಾತಂತ್ರ್ಯವನ್ನು ನಾಶಗೊಳಿಸು ತ್ತದೆ ಎಂದು ರಾಷ್ಟ್ರಕ್ಕೆ ಎಚ್ಚರಿಕೆ ನೀಡಿದನು. ಹೂವರ್‌ನ ಅತಿ ಜಾಗರೂಕತೆ ಮತ್ತು ನಿರಾಶಾಭಾವನೆಗೆ ಹೋಲಿಸಿದರೆ ರೂಸ್‌ವೆಲ್ಟ್ ಭರವಸೆಯುಳ್ಳವನಾಗಿ ಮತ್ತು ಕಾರ್ಯಶೀಲನಂತೆ ಕಂಡುಬಂದನು. ವಿಸ್ತಾರಗೊಳ್ಳುತ್ತಿರುವ ಫೆಡರಲ್ ಸರ್ಕಾರದ ಅಧಿಕಾರದ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದು ಹೂವರ್ ಹೇಳಿದರೆ, ರೂಸ್‌ವೆಲ್ಟ್‌ನು ಧೀರ ಮತ್ತು ಸತತವಾದ ಪ್ರಯೋಗ ನಡೆಸುವುದು ಅಗತ್ಯವೆಂದು ಸಾರಿದನು. ಕೊನೆಯಿಲ್ಲದ ಸಂಪತ್ತು ಇದೆ, ಆದರೆ ಆ ಸಂಪತ್ತು ನ್ಯಾಯವಾದ ರೀತಿಯಲ್ಲಿ ಹಂಚಿಕೆಯಾಗಿಲ್ಲ. ಆದ್ದರಿಂದ ರೂಸ್‌ವೆಲ್ಟ್‌ನು 'ಹೊಸ ಹಂಚಿಕೆ'ಗೆ ಕರೆ ಕೊಟ್ಟನು. ಇದು ಒಂದು ಪರೋಪಕಾರಿ ಕಾರ್ಯಕ್ರಮ (Humanitarian program). ಇದು ಜನರಿಗೆ ನೀಡುವ ಪರಿಹಾರ – ಕೆಳವರ್ಗಗಳಿಂದ ಮೇಲಕ್ಕೆ, ಮೇಲ್ವರ್ಗಗಳಿಂದ ಕೆಳಕ್ಕಲ್ಲ – ಎಂದು ವಿವರಿಸಿದನು.

ಫ್ರಾಂಕ್ಲಿನ್ ರೂಸ್‌ವೆಲ್ಟ್ 'ಕೆಲವಂ ಬಲ್ಲವರಿಂದ ಕಲ್ತು' ಎನ್ನುವ ಸೂಕ್ತಿಯನ್ನು ಅನುಸರಿಸಿದನು. ಅರ್ಥಶಾಸ್ತ್ರದ ಸಂಕೀರ್ಣ ಹಾಗೂ ಕ್ಲಿಷ್ಟ ವಿಷಯಗಳ ಬಗ್ಗೆ ಹೆಚ್ಚಿಗೆ

ತಿಳಿಯದಿದ್ದುದನ್ನು ಒಪ್ಪಿಕೊಳ್ಳುವ ನಮ್ರತೆ ಅವನಲ್ಲಿದ್ದುದರಿಂದ ಅರ್ಥಶಾಸ್ತ್ರಜ್ಞರನ್ನು ಮತ್ತು ವಾಣಿಜ್ಯ/ವ್ಯಾಪಾರ ವ್ಯವಹಾರಗಳಲ್ಲಿ ಅನುಭವವಿರುವ ಪರಿಣತರನ್ನು ಕೂಡಿಸಿ ಒಂದು ಸಲಹಾ ಸಮಿತಿಯನ್ನು ಸ್ಥಾಪಿಸಿದನು. ಈ ಸಮಿತಿ ಅವನ ಆಡಳಿತ ವರ್ಗದಲ್ಲಿ 'ಮೆದುಳು ನಿಕ್ಷೇಪ' (brain trust) ಎಂದು ಹೆಸರು ಗಳಿಸಿತ್ತು. ಈ ಮೇಧಾವಿಗಳ ಗುಂಪು ರೂಸ್‌ವೆಲ್ಟ್‌ನ ಚುನಾವಣಾ ಪ್ರಚಾರದ ಮೇಲ್ವಿಚಾರಣೆ ನಡೆಸಿದುದೆ ಅಲ್ಲದೆ ಅವನ ಅಧ್ಯಕ್ಷತೆಯ ಅವಧಿಯ ಕೊನೆಯವರೆಗೂ ಸಲಹೆ ನೀಡುವ ಕಾರ್ಯ ನಿರ್ವಹಿಸಿತು.

ಚುನಾವಣೆಯಲ್ಲಿ ರೂಸ್‌ವೆಲ್ಟ್ ಅತಿ ಮಹತ್ತರವಾದ ವಿಜಯ ಸಾಧಿಸಿದನು. ಡೆಮೊಕ್ರಾಟರು ಅಧಿಕ ಸಂಖ್ಯೆಯಲ್ಲಿ ಕಾಂಗ್ರೆಸ್ಸಿಗೆ ಚುನಾಯಿತರಾಗಿದ್ದರಿಂದ ಕಾಂಗ್ರೆಸ್ ಅವರ ಕೈವಶವಾಯಿತು. ಈ ಚುನಾವಣೆಯಲ್ಲಿ ಉಂಟಾದ ಹೊಸ ತಿರುವು ಎಂದರೆ ಉತ್ತರ ಸಂಸ್ಥಾನಗಳಲ್ಲಿನ ಕರಿಯರು ರಿಪಬ್ಲಿಕನ್ ಪಕ್ಷವನ್ನು ಬಿಟ್ಟು ರೂಸ್‌ವೆಲ್ಟ್‌ನಿಗೆ ಒಮ್ಮತದಿಂದ ತಮ್ಮ ಬೆಂಬಲ ನೀಡಿ ಅವನು ಅತಿ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲುವಂತೆ ಮಾಡಿದ್ದರು.

ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್‌ನು ಅಮೆರಿಕದ ೩೨ನೆಯ ಅಧ್ಯಕ್ಷನಾಗಿದ್ದು, ಥಿಯೊಡೊರ್ ರೂಸ್‌ವೆಲ್ಟ್‌ನಿಗೆ navyಯಲ್ಲಿ ಸಹೋದರನಾಗಿದ್ದನು. ಇಬ್ಬರೂ ಸಂಪ್ರದಾಯಸ್ಥ ಮೇಲ್ವರ್ಗದಿಂದ ಬಂದವರು. ೧೯೧೨ರಲ್ಲಿ ಅಧ್ಯಕ್ಷ ವಿಲ್ಸನ್ ತನಗೆ ಚುನಾವಣೆಯಲ್ಲಿ ಸಹಾಯ ಮಾಡಿದಕ್ಕಾಗಿ ಫ್ರಾಂಕ್ಲಿನ್ ರೂಸ್‌ವೆಲ್ಟ್‌ನನ್ನು (ಎಫ್.ಡಿ.ಆರ್) ನೌಕಾದಳದ ಸಹಕಾರ್ಯದರ್ಶಿಯಾಗಿ ನೇಮಿಸಿದ್ದನು. ೧೯೨೦ರಲ್ಲಿ ಅವನು ಡೆಮೊಕ್ರಾಟಿಕ್ ಪಕ್ಷದ ಅಧ್ಯಕ್ಷ ಪದವಿ ಅಭ್ಯರ್ಥಿಯಾಗಿ ನಾಮಕರಣಗೊಂಡಿದ್ದ ಜೇಮ್ಸ್ ಕಾಕ್ಸ್‌ನ ಜೊತೆಯಲ್ಲಿ ಉಪಾಧ್ಯಕ್ಷ ಪದವಿ ಅಭ್ಯರ್ಥಿಯಾಗಿ ನಾಮಕರಣಗೊಂಡಿದ್ದನು. ೧೯೨೧ರಲ್ಲಿ ದುರದೃಷ್ಟದಿಂದ ಎಫ್.ಡಿ.ಆರ್ ಬಾಲ್ಯ ಪಾರ್ಶ್ವವಾಯು (infantile paralysis) ಪೀಡಿತನಾದನು. ಈ ರೋಗದಿಂದ ಚೇತರಿಸಿಕೊಳ್ಳುತ್ತಲೇ ತನ್ನ ರಾಜಕೀಯ ಸಂಪರ್ಕವನ್ನು ವಿಸ್ತರಿಸಿಕೊಂಡನು. ೧೯೨೮ರಲ್ಲಿ ಅವನು ನ್ಯೂಯಾರ್ಕ್ ಸಂಸ್ಥಾನದ ಗವರ್ನರ್ ಆಗಿ ಆಯ್ಕೆಗೊಂಡು ಆ ಆಡಳಿತದಲ್ಲಿ ಸಮಾಜಸುಧಾರಕನೆಂದು ಕೀರ್ತಿ ಪಡೆದನು.

ರಾಜಕಾರಣಿಯಾಗಿ ಎಫ್.ಡಿ.ಆರ್ ಅನೇಕ ಪ್ರಬಲ ಗುಣಲಕ್ಷಣಗಳನ್ನು ಪಡೆದಿದ್ದನು. ಸದಾ ಹರ್ಷಚಿತ್ತನಾಗಿ ಜನರ ವರ್ತನೆಯನ್ನು ಅರ್ಥಮಾಡಿಕೊಳ್ಳುವ ನಿಶಿತಮತಿ ಯಾಗಿದ್ದನು. ತಾನೇ ಮುಂದಾಗಿ ಹೋಗಿ ಜನರ ಸ್ನೇಹ ಬೆಳೆಸುವ ಪ್ರವೃತ್ತಿಯಿಂದ ಆತ್ಮವಿಶ್ವಾಸ, ನಿಪುಣತೆ ಮತ್ತು ಸಮಯಸಾಧಕತನ – ಈ ಲಕ್ಷಣಗಳನ್ನು ಹೊಂದಿದ್ದ ಸಂಕೀರ್ಣ ವ್ಯಕ್ತಿತ್ವ ಅವನದಾಗಿತ್ತು. ಕಾಂಗ್ರೆಸ್ ಧುರೀಣರೊಡನೆ ಹೊಂದಿಕೊಂಡು ಹೋಗುವುದು ಹೇಗೆಂದು ತಿಳಿದಿದ್ದನು. ಹಾಗೆಯೇ ಅವರ ಮೇಲೆ ಯಾವಾಗ ಒತ್ತಡ ಹಾಕಿ ಕೆಲಸ ಸಾಧಿಸಬೇಕೆನ್ನುವುದೂ ಅವನಿಗೆ ಚೆನ್ನಾಗಿ ಗೊತ್ತಿತ್ತು. ಎಫ್.ಡಿ.ಆರ್‌ನ ಅಧ್ಯಕ್ಷತೆ ಕ್ರಿಯಾತ್ಮಕ ಆಲೋಚನೆಗಳ ಮತ್ತು ಸರ್ಕಾರಿ ಧೋರಣೆಗಳ ಕೇಂದ್ರವಾಗಿತ್ತು.

೧೯೩೩ರ ಮಾರ್ಚ್ ೪ರಂದು ಎಫ್.ಡಿ.ಆರ್ ಅಧ್ಯಕ್ಷನಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಮಾಡಿದ ಆರಂಭ ಭಾಷಣದಲ್ಲಿ 'ರಿಪಬ್ಲಿಕನ್ನರು ಯಶಸ್ಸನ್ನು ಅಳೆಯುತ್ತಿದ್ದ ಹಿಂದಿನ ಹಳೆಯ ಮತ್ತು ಕೃತಕ ಪ್ರಮಾಣವಾದ ಭೌತಿಕ ಸಂಪತ್ತು (material wealth) ಬಹಳ ಸಂಕುಚಿತವಾದುದು. ಅದನ್ನು ತ್ಯಜಿಸಿ ಯಶಸ್ಸನ್ನು ಸೃಜನಶೀಲತೆ ಮತ್ತು ಕಾರ್ಯಸಾಧನೆಗಳಿಂದ ಅಳೆಯಬೇಕು. ಆರ್ಥಿಕ ಮುಗ್ಗಟ್ಟನ್ನು ಪರಿಹರಿಸಲು ಕಷ್ಟಪಟ್ಟು ದುಡಿಯಬೇಕು ಎಂದು ಸವಾಲು ಹಾಕುತ್ತಿದ್ದೇನೆ. ರಾಷ್ಟ್ರವು ಹೆದರಿಕೆಯಲ್ಲದೆ ಬೇರೆ ಯಾವುದಕ್ಕೂ ಹೆದರಬೇಕಾಗಿಲ್ಲ[೨]' ಎಂದ ಅವನ ಹೇಳಿಕೆ ಲೋಕಪ್ರಸಿದ್ಧವಾಗಿದೆ. ಅವನು ಪ್ರಬಲವಾದ ಫೆಡರಲ್ ಸರ್ಕಾರ ಆಡಳಿತದ ಮುಂಚೂಣಿಯಲ್ಲಿರಬೇಕೆಂದು ನಂಬಿದ್ದನು. ಸರ್ಕಾರ ವ್ಯಾಪಾರ/ಉದ್ಯಮಗಳಲ್ಲಿ ಮಧ್ಯೆ ಪ್ರವೇಶಿಸಬಾರದು ಎನ್ನುವ ತತ್ವವು ಏಕಸ್ವಾಮ್ಯಗಳ (monopolies) ಬೆಳವಣಿಗೆ ಅರ್ಥವಿಲ್ಲದ್ದಾಗಿ ಮಾಡುತ್ತದೆ. ಔದ್ಯೋಗಿಕ ಶಕ್ತಿ ಕೇಂದ್ರೀಕೃತವಾದ 'ಬೇಡಿಕೆ – ಪೂರೈಕೆಗಳ' ವೃತ್ತ ಕೊನೆಗೊಳ್ಳುತ್ತದೆ. ಅಲ್ಲದೆ ಈ ವೃತ್ತ ಅನಿಯಂತ್ರಿತ ಉದ್ಯಮದ ಆಧಾರದ ಮೇಲೆ ನಿಂತಿದೆ. ಆಧುನಿಕ ಕಾರ್ಪೊರೇಷನ್‌ಗಳಲ್ಲಿ ಪರಸ್ಪರ ಪೈಪೋಟಿ ಇಲ್ಲದೆ, ಪೈಪೋಟಿ ಮತ್ತು ಸ್ವತಂತ್ರ ಉದ್ಯಮಗಳ ಆರ್ಥಿಕ ವ್ಯವಸ್ಥೆ ಅವಸಾನಗೊಂಡಿದೆ. ವ್ಯಾಪಾರ/ಉದ್ಯಮಗಳು ಅತ್ಯಂತ ಬಲವಾದಾಗ ಅವುಗಳ ವ್ಯವಹಾರವನ್ನು ಫೆಡರಲ್ ಸರ್ಕಾರ ನಿಯಂತ್ರಿಸಬೇಕಾಗುತ್ತದೆ ಎಂದು ಸಲಹಾ ಸಮಿತಿ ಎಫ್.ಡಿ.ಆರ್‌ಗೆ ಸೂಚನೆ ನೀಡಿತು.

ಎಫ್.ಡಿ.ಆರ್ ಅಧಿಕಾರ ವಹಿಸಿಕೊಳ್ಳುವುದರ ಮುಂಚೆಯೆ ಬ್ಯಾಂಕ್‌ಗಳು ಮುಳುಗುತ್ತವೆ ಎಂಬ ಭಯ ಹಬ್ಬಿತ್ತು. ಚುನಾವಣೆ ನಡೆಯುತ್ತಿದ್ದಾಗಲೆ ಪುನರ್‌ನಿರ್ಮಾಣ ಆರ್ಥಿಕ ಸಂಸ್ಥೆ (Reconstruction Finance Corporation) ಸಮರ್ಪಕವಾಗಿ ಕೆಲಸ ಮಾಡುತ್ತಿದೆಯೆ ಎನ್ನುವ ಅನುಮಾನ ಬಂದು ಅದರ ದಾಖಲೆ ಪತ್ರಗಳನ್ನು ಸಾರ್ವಜನಿಕರಿಗೆ ಬಹಿರಂಗಪಡಿಸಬೇಕೆಂದು ಜನರು ಒತ್ತಾಯ ಮಾಡಿದ್ದರು. ಆ ಸಂಸ್ಥೆಗೆ ಸೇರಿದ್ದ ಬ್ಯಾಂಕ್‌ಗಳ ಹೆಸರುಗಳನ್ನು ಬಹಿರಂಗಪಡಿಸಿದಾಗ ಸಂಸ್ಥೆಯ ಪ್ರಭಾವ ಕುಗ್ಗುತ್ತ ಹೋಗಿ ನಂತರ ಸಂಸ್ಥೆ ನಿರರ್ಥಕವಾಯಿತು. ಈ ಸಂಸ್ಥೆ ಬ್ಯಾಂಕ್‌ಗಳನ್ನು ರಕ್ಷಿಸಲು ಸ್ಥಾಪಿತವಾದುದು. ಇದಕ್ಕೆ ಸೇರಿದ್ದ ಬ್ಯಾಂಕ್‌ಗಳಿಂದಲೇ ಬಂಡವಾಳ ಹಾಕಿದ್ದವರು ಎಲ್ಲರೂ ಒಟ್ಟಿಗೆ ಹಣ ವಾಪಸ್ಸು ತೆಗೆಯಲು ಪ್ರಯತ್ನಸಿದರು. ಬ್ಯಾಂಕ್‌ಗಳಲ್ಲಿ ಹಣ ಹೂಡಿದವರು ಹೆದರಿ ಹಣ ವಾಪಸ್ಸು ಪಡೆಯುವ ಸಂದರ್ಭ ಉಂಟಾಗಲು ಎಫ್.ಡಿ.ಆರ್‌ನ ಯೋಜನೆಗಳು ಸ್ಪಷ್ಟವಾಗದೆ ಇದ್ದದ್ದು ಒಂದು ಕಾರಣವಾಯಿತು.

ಎಫ್.ಡಿ.ಆರ್ ಅಧಿಕಾರ ವಹಿಸಿಕೊಳ್ಳುವ ದಿನ ರಾಷ್ಟ್ರದ ಬ್ಯಾಂಕ್ ವ್ಯವಸ್ಥೆ ಮುರಿದು

೨. A nation has nothing to fear but fear itself.

ಬೀಳುವ ಗಂಭೀರ ಸ್ಥಿತಿಯಲ್ಲಿತ್ತು. ಜನರು ಅಧಿಕ ಸಂಖ್ಯೆಯಲ್ಲಿ ತಾವು ಹಾಕಿದ್ದ ಹಣವನ್ನು ವಾಪಸ್ಸು ಪಡೆಯಲು ಸಿದ್ಧರಾಗಿದ್ದರು. ಅವರು ಹಾಗೆ ಮಾಡಿದಲ್ಲಿ ಉಂಟಾಗುವ ಅಸ್ತವ್ಯಸ್ತ ಸ್ಥಿತಿಯನ್ನು ನಿವಾರಿಸಲು ಇದ್ದ ಒಂದೇ ಮಾರ್ಗವೆಂದರೆ ಮಾರ್ಚ್ ೪ರಂದು ರಜಾದಿನವೆಂದು ಘೋಷಿಸುವುದು. ಅಧಿಕಾರ ತ್ಯಜಿಸಲಿದ್ದ ಹೂವರ್ ಆಗಲಿ ಅಧಿಕಾರ ವಹಿಸಿಕೊಳ್ಳಲು ಸಿದ್ಧನಿದ್ದ ಎಫ್.ಡಿ.ಆರ್ ಆಗಲಿ ಆ ಜವಾಬ್ದಾರಿ ತೆಗೆದುಕೊಳ್ಳಲು ಹಿಂಜರಿದರು. ಕಡೆಗೆ ನ್ಯೂಯಾರ್ಕಿನ ಗವರ್ನರ್ ಮಾರ್ಚ್ ೩ರ ಸಾಯಂಕಾಲ ನ್ಯೂಯಾರ್ಕಿನ ಎಲ್ಲ ಬ್ಯಾಂಕ್‌ಗಳಿಗೂ ಎರಡು ದಿನಗಳ ರಜೆ ಘೋಷಿಸಿದನು. ನಂತರ ೧೮ ಸಂಸ್ಥಾನಗಳು ನ್ಯೂಯಾರ್ಕಿನ ಉದಾಹರಣೆಯನ್ನು ಅನುಸರಿಸಿದವು. ಬ್ಯಾಂಕ್ ವ್ಯವಸ್ಥೆ ಮುರಿದು ಬೀಳುವ ಭಯ ಎಫ್.ಡಿ.ಆರ್‌ನ ಅಧಿಕಾರ ಸ್ವೀಕಾರ ಸಮಾರಂಭ ಕಳೆಗುಂದುವಂತೆ ಮಾಡಿದರೂ ಅವನು ಆ ದಿನ ಬೆಳಿಗ್ಗೆ ಕೆಲಸಕ್ಕೆ ಹಾಜರಾಗಿ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯನ್ನು ಭದ್ರಪಡಿಸಲು ಸಮಯ ಬೇಕಾಗಿದ್ದರಿಂದ ಬ್ಯಾಂಕ್ ರಜಾದಿನಗಳನ್ನು ರಾಷ್ಟ್ರದಾದ್ಯಂತ ಜಾರಿಗೆ ತರುವಂತೆ ಮಾಡಿದನು.

ಹೊಸ ಹಂಚಿಕೆ: ಮೊದಲನೆಯ ಹಂತ

೧೯೩೩ರ ಮಾರ್ಚ್ ೯ರಂದು ಕಾಂಗ್ರೆಸ್ ಸಭೆ ಸೇರಿತು. ಇದು ಸತತವಾಗಿ ಮೂರು ತಿಂಗಳ ಕಾಲ ನಡೆಯಿತು. ಈ ಸಭೆ ಹೊಸ ಕಾನೂನುಗಳ ಸರಣಿಯನ್ನೇ ಜಾರಿಗೆ ತಂದಿತು. ಸಭಾಸದರಲ್ಲಿ ಸಮಯಸ್ಫೂರ್ತಿ ಉಕ್ಕುತ್ತಿತ್ತು. ಹೀಗೆ ಮೂರು ತಿಂಗಳು ನಡೆದ ಈ ಸಭೆ 'ಒಂದು ನೂರು ದಿನಗಳು' (The hundred days) ಎಂದು ಹೆಸರು ಪಡೆಯಿತು. ಅದೇ ಸಮಯದಲ್ಲಿ 'ಬ್ಯಾಂಕ್‌ಗಳ ಪರಿಹಾರ ಕಾನೂನು' (The Banking Relief Act) ಅಂಗೀಕೃತವಾಯಿತು. ಈ ಕಾನೂನು ಎಫ್.ಡಿ.ಆರ್ ಘೋಷಿಸಿದ ಬ್ಯಾಂಕ್ ರಜಾದಿನಗಳನ್ನು ಅಧಿಕೃತಗೊಳಿಸಿತು. ಹಾಗೆಯೇ ಪುನರ್‌ನಿರ್ಮಾಣ ಆರ್ಥಿಕ ಸಂಸ್ಥೆಯ ನೆರವು ನೀಡುವ ಕಾರ್ಯವನ್ನು ವಿಸ್ತರಿಸಿ ಬಲಗೊಳಿಸಿತು. ಜನರು ಚಿನ್ನ ಮತ್ತು ಚಿನ್ನದ ಪ್ರಮಾಣಪತ್ರಗಳನ್ನು ಶೇಖರಿಸಿ ಇಟ್ಟುಕೊಳ್ಳುವುದನ್ನು ತಪ್ಪಿಸಲು ಅವನ್ನು ರಾಷ್ಟ್ರದ ಖಜಾನೆಗೆ (Treasury) ವಾಪಸ್ಸು ಮಾಡುವಂತೆ ಕ್ರಮ ತೆಗೆದುಕೊಳ್ಳಲಾಯಿತು. ಬ್ಯಾಂಕ್‌ಗಳನ್ನು ಪರಿಶೀಲನೆ ಮಾಡಿ, ಸಾಲ ತೀರಿಸುವ ಶಕ್ತಿಯುಳ್ಳ ಬ್ಯಾಂಕ್‌ಗಳಿಗೆ ವ್ಯವಹಾರ ಮಾಡಲು ಅನುಮತಿ ನೀಡಿ, ಅಸ್ತಿತ್ವದಲ್ಲಿದ್ದ ೧೨ ರಿಸರ್ವ್ ಬ್ಯಾಂಕ್‌ಗಳಿಗೆ ಆಸ್ತಿಯ ಆಧಾರದ ಮೇಲೆ ಹೆಚ್ಚು ಹಣವನ್ನು ಚಲಾವಣೆಗೆ ತರುವಂತೆ ಮಾಡಿ ಹಣದುಬ್ಬರ ಆಗದಂತೆ ಮಾಡಲಾಯಿತು. ಅದೇ ತಿಂಗಳ ೧೨ರಂದು ಎಫ್.ಡಿ.ಆರ್ ತನ್ನ ಮೊದಲನೆಯ 'ಅಗ್ಗಿಷ್ಟಿಕೆ ಪಕ್ಕದಲ್ಲಿ ಹರಟೆ' (fire side chat)ಯನ್ನು ರೇಡಿಯೊ ಮೂಲಕ ಪ್ರಸಾರ ಮಾಡಿದನು. ಅಮೆರಿಕನ್ನರಿಗೆ ಅವನು ರಾಷ್ಟ್ರದ ಸಂಕೀರ್ಣ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಮನವಟ್ಟಾಗುವಂತೆ ವಿವರಿಸಿ, ಸದ್ಯದಲ್ಲಿಯೆ ಆರ್ಥಿಕ ವ್ಯವಸ್ಥೆ ಉತ್ತಮಗೊಳ್ಳುವುದು ಎಂದು ಭರವಸೆ ನೀಡಿದನು.

ತುರ್ತು ಪರಿಸ್ಥಿತಿಯನ್ನು ಪರಿಹರಿಸಲು ಎಫ್.ಡಿ.ಆರ್ ಮಾಡಿದ ಪ್ರಯತ್ನಗಳು ಯಶಸ್ವಿಯಾದವು. ಬ್ಯಾಂಕ್‌ಗಳನ್ನು ಬೇಗನೆ ಪರಿಶೀಲನೆ ಮಾಡಿ ಆರ್ಥಿಕ ಭದ್ರತೆಯುಳ್ಳವುಗಳನ್ನು ಮಾರ್ಚ್ ೧೫ರಂದು ಪುನರಾರಂಭವಾಗುವಂತೆ ಮಾಡಿದನು. ಪ್ರಸಿದ್ಧ ಪತ್ರಕರ್ತನಾದ ವಾಲ್ಟರ್ ಲಿಪ್‌ಮನ್ 'ಎಲ್ಲದರಲ್ಲೂ ಮತ್ತು ಎಲ್ಲರಲ್ಲಿ ಭರವಸೆ ಕಳೆದುಕೊಂಡಿದ್ದ ದೇಶ ಒಂದು ವಾರದೊಳಗೆ ಪುನಃ ಬೆಳೆಸಿಕೊಂಡಿತು' ಎಂದು ಆಶ್ಚರ್ಯ ವ್ಯಕ್ತಪಡಿಸಿದನು. ನಂತರ ಎಫ್.ಡಿ.ಆರ್‌ನ ಆಸಕ್ತಿ – ಪರಿಹಾರ ಕಾರ್ಯ ಮತ್ತು ನಿರುದ್ಯೋಗಿಗಳನ್ನು ಪುನಃ ಉದ್ಯೋಗಸ್ಥರನ್ನಾಗಿ ಮಾಡುವುದು, ಮತ್ತು ಆಯವ್ಯಯಗಳಲ್ಲಿ ಸಮತೋಲನ ಸಾಧಿಸುವುದು – ಇವುಗಳ ಮೇಲೆ ಕೇಂದ್ರೀಕೃತವಾಯಿತು. ೧೯೩೩ರ ಮಾರ್ಚ್ ತಿಂಗಳಲ್ಲಿ ಜಾರಿಗೆ ಬಂದ 'ಮಿತವ್ಯಯ ಕಾನೂನು' (The Economy Act) ಪ್ರಕಾರ ಸರ್ಕಾರಿ ನೌಕರರ ವೇತನದಲ್ಲಿ ಶೇಕಡಾ ೧೫ರಷ್ಟು ಖೋತಾ ಮಾಡಲಾಯಿತು. ಮಿತಿಮೀರಿ ಬೆಳೆದಿದ್ದ ಕೆಲವು ಸರ್ಕಾರಿ ಏಜನ್ಸಿಗಳ ಗಾತ್ರವನ್ನು ಸಾಕಷ್ಟು ಕುಗ್ಗಿಸಲಾಯಿತು. ನಿವೃತ್ತ ಸೈನಿಕರ ನಿವೃತ್ತಿ ವೇತನ ಮತ್ತು ಭತ್ಯೆಗಳನ್ನು ಕಡಿಮೆ ಮಾಡಲಾಯಿತು. ಇದು ಪುನಃ ನಿವೃತ್ತ ಸೈನಿಕರ 'ಬೋನಸ್ ಸೈನ್ಯ' ರಾಜಧಾನಿ ವಾಷಿಂಗ್‌ಟನ್‌ಗೆ ಪ್ರತಿಭಟಿಸಲು ಹೋಗುವಂತೆ ಮಾಡಿತು. ಆದರೆ ಈ ಬಾರಿ ಅವರನ್ನು ಆದರಿಸಿ ಉಪಚರಿಸಿ ಅವರ ಪ್ರತಿಭಟನೆಯನ್ನು ಉಪಶಮನ ಮಾಡಲಾಯಿತು.

ಸರ್ಕಾರದ ಆದಾಯವನ್ನು ಹೆಚ್ಚಿಸುವ ಸಲುವಾಗಿ ಎಫ್.ಡಿ.ಆರ್ ಪಾನನಿರೋಧವನ್ನು ರದ್ದುಗೊಳಿಸಲು ಮುಂದಾದನು. ತಾನು ಚುನಾವಣಾ ಪ್ರಚಾರದಲ್ಲಿ ಮಾಡಿದ ವಾಗ್ದಾನವನ್ನು ಪೂರೈಸಲು ಮಾರ್ಚ್೧೩ರಂದು ಕಾಂಗ್ರೆಸ್ಸಿಗೆ ವೊಲ್‌ಸ್ಟೆಡ್ ಕಾಯಿದೆಯನ್ನು ಕೂಡಲೇ ರದ್ದು ಮಾಡಬೇಕೆಂದು ಮನವಿ ಸಲ್ಲಿಸಿದನು. ಈ ರದ್ದಿನಿಂದಾಗಿ ಸರ್ಕಾರಕ್ಕೆ ಅಲ್ಪ ಸ್ವಲ್ಪ ಆದಾಯವೇನೋ ಬಂತು. ಆದರೆ ಅದರಿಂದ ಆರ್ಥಿಕ ವ್ಯವಸ್ಥೆಯ ಮೇಲೆ ಮಹತ್ತರ ಪರಿಣಾಮವಾಗಿದ್ದು ನೂರು ದಿನಗಳ ಅವಧಿಯಲ್ಲಿ ಅಂಗೀಕರಿಸಿದ ವಿಶಾಲವಾದ ಪರಿಹಾರ ಕಾನೂನುಗಳಿಂದ (extensive relief legislations).

ಚಿನ್ನ ಹೋಯ್ತು, ಬೆಳ್ಳಿ ಬಂತು!

ಹಣದುಬ್ಬರ ಮತ್ತು ಏರುತ್ತಿರುವ ಬೆಲೆಗಳು ಹಣದ ಮುಗ್ಗಟ್ಟನ್ನು ಹತೋಟಿಗೆ ತರಬಹುದೆಂದು ಎಫ್.ಡಿ.ಆರ್ ಎಣಿಸಿದ್ದನು. ಆದ್ದರಿಂದ ೧೯೩೪ರಲ್ಲಿ ಸಂಯುಕ್ತ ಸಂಸ್ಥಾನಗಳು ಚಿನ್ನದ ಪರಿಮಾಣವನ್ನು ತ್ಯಜಿಸಿ ಡಾಲರ್ ಮೌಲ್ಯವನ್ನು ಶೇಕಡಾ ೪೦ರಷ್ಟು ಕಡಿಮೆ ಮಾಡಿದವು. ಹೀಗೆ ಮಾಡಿದ್ದು ಮುಖ್ಯವಾಗಿ ರೈತರ ಮನ ಒಲಿಸಿಕೊಳ್ಳುವುದಕ್ಕಾಗಿತ್ತು. ರೈತರನ್ನು ಸಮಾಧಾನಪಡಿಸಿದರೆ ಅವರು ಎದುರು ಬೀಳುವುದನ್ನು ತಪ್ಪಿಸಬಹುದು ಎನ್ನುವುದು ಇನ್ನೊಂದು ಕಾರಣ. ಸಾಲದಲ್ಲಿ ಮುಳುಗಿಹೋಗಿದ್ದ ರೈತರಿಗೆ ಡಾಲರ್ ಮೌಲ್ಯ ಕಳೆದುಕೊಂಡಿದ್ದು ಅನುಕೂಲಕರವಾಗಿತ್ತು. ಹೆಚ್ಚು ಹಣ ಚಲಾವಣೆ

ಯಲ್ಲಿರುವುದರಿಂದ ಸಾಲ ವಾಪಸ್ಸು ಕೊಡುವುದು ಸುಲಭವಾಯಿತು. ಅದೇ ಸಮಯದಲ್ಲಿ ಸರ್ಕಾರ ಡಾಲರ್‌ನ್ನು ಬೆಂಬಲಿಸಲು ಬೆಳ್ಳಿಯನ್ನು ಕೊಳ್ಳಲು ಪ್ರಾರಂಭಿಸಿತು. ಇದರಿಂದ ಮಿತವಾದ ಹಣದುಬ್ಬರವಾದುದರಿಂದ ಪ್ರಮುಖ ಬ್ಯಾಂಕ್‌ಗಳು ಈ ಯೋಜನೆಯನ್ನು ಅನುಮೋದಿಸಿದವು.

'ಹೊಸ ಹಂಚಿಕೆ' ಸಾರ್ವಜನಿಕರ ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವುದೆ ಅಲ್ಲದೆ ಅವರು ಬ್ಯಾಂಕ್‌ಗಳಲ್ಲಿ ಹಾಕಿದ್ದ ಹಣವನ್ನು ರಕ್ಷಿಸಬೇಕಾಗಿತ್ತು. ೧೯೩೩ರ ಜೂನ್ ತಿಂಗಳಲ್ಲಿ ಕಾಂಗ್ರೆಸ್ 'ಫೆಡರಲ್ ಠೇವಣಿ ಭದ್ರತಾ ಸಂಸ್ಥೆ' (Federal Deposit Insurance Corporation)ಯನ್ನು ಸ್ಥಾಪಿಸಿತು. ಪ್ರತಿ ವ್ಯಕ್ತಿಯ ಬ್ಯಾಂಕ್ ಲೆಕ್ಕವನ್ನು ಖಾತರಿ ಮಾಡುವುದು (ಹೊಣೆಯಾಗುವುದು) ಮತ್ತು ಮುರಿದು ಬಿದ್ದ ಬ್ಯಾಂಕ್‌ಗಳನ್ನು ಪುನರ್‌ವ್ಯವಸ್ಥೆಗೊಳಿಸುವುದು ಈ ಭದ್ರತಾ ಸಂಸ್ಥೆಯ ಮುಖ್ಯ ಉದ್ದೇಶವಾಗಿತ್ತು. ೧೯೩೫ರಲ್ಲಿ ಜಾರಿಗೆ ಬಂದ 'ಬ್ಯಾಂಕ್ ವ್ಯವಹಾರ ಕಾಯಿದೆ' (The banking Act) ಯನ್ನು ಫೆಡರಲ್ ರಿಸರ್ವ್ ಸಮಿತಿ ಅನುಮೋದಿಸಿತು. ಸದಸ್ಯ ಬ್ಯಾಂಕ್‌ಗಳು ಬಡ್ಡಿಯ ದರಗಳ ಮೇಲೆ ಸಮಿತಿಯ ಅಧಿಕಾರವನ್ನು ಹೆಚ್ಚಿಸಿತು. ಸದಸ್ಯ ಬ್ಯಾಂಕ್‌ಗಳ ಮಾರುಕಟ್ಟೆಯ ವ್ಯವಹಾರಗಳನ್ನು ನಿಯಂತ್ರಿಸುವ ಜವಾಬ್ದಾರಿಯನ್ನು ಫೆಡರಲ್ ರಿಸರ್ವ್ ಸಮಿತಿ ವಹಿಸಿಕೊಂಡಿತು. ಫೆಡರಲ್ ಸರ್ಕಾರ ಆರ್ಥಿಕ ಧೋರಣೆಯ ಮೇಲೆ ಮತ್ತು ದೊರಕುವ ಸಾಲದ ಪ್ರಮಾಣದ ಮೇಲೆ ಹೆಚ್ಚಿನ ನಿಯಂತ್ರಣ ಪಡೆಯಿತು.

೧೯೩೨ ಮತ್ತು ೧೯೩೪ರ ಅವಧಿಯಲ್ಲಿ ಬ್ಯಾಂಕ್‌ಗಳ ಠೇವಣಿ ರಕ್ಷಣಾಪತ್ರಗಳ ವ್ಯಾಪಾರದಲ್ಲಿ (sale of securities) ನಡೆಯುತ್ತಿದ್ದ ಭ್ರಷ್ಟಾಚಾರ ಮತ್ತು ಸುಳ್ಳು ಪ್ರಾತಿನಿಧ್ಯ (misrepresentation)ಗಳನ್ನು ತನಿಖೆಗಳಿಂದ ಬಹಿರಂಗಪಡಿಸಿ, ಸಾರ್ವಜನಿಕರನ್ನು ರಕ್ಷಿಸುವ ಸಲುವಾಗಿ ಹೊಸ ಕಾನೂನುಗಳನ್ನು ಜಾರಿಗೆ ತರಲಾಯಿತು. ಇವುಗಳ ಪ್ರಕಾರ ಮಾರಾಟಕ್ಕಿರುವ ಎಲ್ಲ ಸರ್ಕಾರಿ ಪತ್ರಗಳನ್ನು (ಹೂಡಿದ ಬಂಡವಾಳವನ್ನು ಖಚಿತ ಪಡಿಸುವ ಪತ್ರ) ಫೆಡರಲ್ ವ್ಯಾಪಾರ ಸಮಿತಿ (Federal Trade Commission)ಯಲ್ಲಿ ಕಡ್ಡಾಯವಾಗಿ ದಾಖಲೆ ಮಾಡಬೇಕೆಂದು ಖಚಿತಪಡಿಸಿದರು. ೧೯೩೪ರಲ್ಲಿ ಐದು ಜನರುಳ್ಳ ಠೇವಣಿ ರಕ್ಷಣೆ ಮತ್ತು ವಿನಿಮಯ ಸಮಿತಿಯನ್ನು (Securities and Exchange Commission) ಸ್ಥಾಪಿಸಲಾಯಿತು. ವಿನಿಮಯ ಕೇಂದ್ರದ ಪಟ್ಟಿಯಲ್ಲಿರುವ ಎಲ್ಲ ಠೇವಣಿ ರಕ್ಷಣೆ ಪತ್ರಗಳನ್ನು (Securities) ಕಡ್ಡಾಯವಾಗಿ ದಾಖಲು ಮಾಡುವುದು, ಸಟ್ಟಾ ಮಾರಾಟಗಾರರು ಒಟ್ಟಾಗಿ ವ್ಯವಹರಿಸುವುದನ್ನು ತಡೆಯುವುದು, ಪಾಲುಪತ್ರಗಳ ಬೆಲೆಯ ವೈಪರೀತ್ಯವನ್ನು ತಡೆಯುವುದು ಮತ್ತು ಸಟ್ಟಾ ವಿನಿಮಯ ಕೇಂದ್ರಗಳಿಗೆ ಅಧಿಕೃತ ಪರವಾನಗಿ ಕೊಡುವುದು – ಈ ಸಮಿತಿಯ ಮುಖ್ಯ ಕಾರ್ಯಗಳಾಗಿದ್ದವು. ವ್ಯಾಪಾರದಲ್ಲಿ ಅಪಾರ ಯಶಸ್ಸು ಗಳಿಸಿದ್ದ ಜೋಸೆಫ್ ಕೆನಡಿಯನ್ನು ಠೇವಣಿ ರಕ್ಷಣೆ

ಮತ್ತು ವಿನಿಮಯ ಸಮಿತಿಯ ಮೊದಲನೆಯ ಅಧ್ಯಕ್ಷನನ್ನಾಗಿ ನೇಮಕ ಮಾಡಿದ್ದು ವ್ಯಾಪಾರಿಗಳಿಗೆ , ಉದ್ಯಮಿಗಳಿಗೆ ಮತ್ತು ಸಟ್ಟಾ ಮಾರುಕಟ್ಟೆ ವ್ಯವಹಾರ ನಡೆಸುವವರಿಗೆ ಅಭಯ ಹಸ್ತ ನೀಡಿದಂತಾಗಿತ್ತು.

ವ್ಯವಸಾಯ ಕ್ಷೇತ್ರದಲ್ಲಿ ಹೊಸ ಹಂಚಿಕೆ

ಮಹಾಮುಗ್ಗಟ್ಟಿನ ಕಾಲದಲ್ಲಿ ರೈತರು ತಾವು ಬೆಳೆದಿದ್ದನ್ನೆಲ್ಲ ಮಾರಲಾರದೆ ಉಳಿದಿದ್ದನ್ನು (surplus) ಏನು ಮಾಡಬೇಕು ಎನ್ನುವ ಸಮಸ್ಯೇ ಒಂದು ಐತಿಹಾಸಿಕ ಪರಿಹಾಸವೆನ್ನಬೇಕು. ನಗರಗಳಲ್ಲಿ ನೂರಾರುಸಾವಿರ ಜನ ಹಸಿವಿನಿಂದ ಕಂಗೆಟ್ಟಿದ್ದರು. ರೈತರು ಹೆಚ್ಚಿಗೆ ಬೆಳೆದು ಬಡವರಾಗಿದ್ದರು! ಮಾರಲು ಸಾಧ್ಯವಾಗದಷ್ಟು ಹೆಚ್ಚಿನ ಪ್ರಮಾಣದಲ್ಲಿ ಬೆಳೆದಿದ್ದೇ ಅವರ ಬಡತನಕ್ಕೆ ಕಾರಣವಾಗಿತ್ತು! ಈ ಪರಿಸ್ಥಿತಿಯಲ್ಲಿ ವ್ಯವಸಾಯ ಉತ್ಪನ್ನಗಳ ಬೆಲೆ ಹೆಚ್ಚಿಸುವ ಯೋಜನೆ ಜಾರಿಗೆ ತರಬೇಕಾಗಿದ್ದು ಅವಶ್ಯಕ ವಾಗಿತ್ತು. ಇದರಿಂದ ಪರಿಹಾರ ದೊರಕುವ ಸಾಧ್ಯತೆ ಇದೆ ಎಂದು ಎಲ್ಲರೂ ನಂಬಿದ್ದರು. 'ಹೊಸ ಹಂಚಿಕೆ' ಕಾರ್ಯಕ್ರಮದ ಮೊದಲ ದಿನಗಳಲ್ಲಿ ವ್ಯವಸಾಯ ಉತ್ಪನ್ನಗಳನ್ನು ಹೆಚ್ಚಿಸಲು ಯುಕ್ತವಾದ ಯೋಜನೆ ಯಾವುದು ಎನ್ನುವುದರ ಬಗ್ಗೆ ಭಿನ್ನಾಭಿಪ್ರಾಯಗಳು ತಲೆದೋರಿದವು. ಸಣ್ಣ ಹಿಡುವಳಿಗಾರರು ಮತ್ತು ಬಡ ರೈತರು ತಾವು ಬೆಳೆದಿದ್ದಕ್ಕೆ ತಮ್ಮ ದೇಶದಲ್ಲಿ ಹೆಚ್ಚಿನ ಬೆಲೆ ದೊರೆಯಬೇಕೆಂದೂ, ಉಳಿದ ಉತ್ಪನ್ನವನ್ನು ಹೊರದೇಶಗಳ ಮಾರುಕಟ್ಟೆಗಳಲ್ಲಿ ಕಡಿಮೆ ಬೆಲೆಗೆ ಮಾರಬೇಕೆಂದು ವಾದಿಸಿದರು. ಆದರೆ ಎಫ್.ಡಿ.ಆರ್ ಆಡಳಿತ ಮಂಡಲದಲ್ಲಿ ವ್ಯವಸಾಯ ಕಾರ್ಯದರ್ಶಿಯಾಗಿದ್ದ ಹೆನ್ರಿ ವಾಲೆಸ್ (Henry Wallace) ಹೆಚ್ಚು ಫಸಲನ್ನು ಬೆಳೆಯದಂತೆ ಮಾಡಲು ರೈತರಿಗೆ ಸರ್ಕಾರ ಹಣ ಮಂಜೂರು ಮಾಡುವಂತೆ ಸಲಹೆ ಮಾಡಿದನು. ವ್ಯವಸಾಯ ಉತ್ಪನ್ನ ಕಡಿಮೆಯಾದರೆ ಅವುಗಳ ಬೆಲೆ ಏರುತ್ತದೆ ಎಂದು ಅವನು ನಂಬಿದ್ದನು[೩] .

ಈ ವಾಗ್ವಾದಗಳು ನಡೆಯುತ್ತಿರುವಾಗ ರೈತರ ನಿರಾಸೆ ಮತ್ತು ಅತೃಪ್ತಿ ಅವರನ್ನು ಹಿಂಸಾಕೃತ್ಯಗಳಲ್ಲಿ ತೊಡಗಿಸಿದವು. ಸಣ್ಣ ಹಿಡುವಳಿಗಾರರು ಒಗ್ಗಟ್ಟಾಗಿ ತಮ್ಮ ಆಸ್ತಿಯನ್ನು ಬ್ಯಾಂಕ್‌ಗಳು ಮುಟ್ಟುಗೋಲು ಹಾಕಿಕೊಳ್ಳುವುದರ ವಿರುದ್ಧ ಪ್ರದರ್ಶನ ನಡೆಸಿದರು. ಐಯೋವ ನ್ಯಾಯಾಧೀಶನೊಬ್ಬನನ್ನು ರೈತರು ನೇಣು ಹಾಕಿ ಕೊಲ್ಲಲು ಪ್ರಯತ್ನಿಸಿದರು. ರೈತರು ದಂಗೆ ಏಳುತ್ತಾರೆ ಎಂಬ ಸುದ್ದಿ ವ್ಯಾಪಕವಾಗಿ ಹಬ್ಬಿತ್ತು. ಕಷ್ಟದಲ್ಲಿರುವ ರೈತರಿಗೆ ನೇರ ಪರಿಹಾರ ಸರ್ಕಾರ ಒದಗಿಸದೆಹೋದರೆ ಮುಷ್ಕರ ಹೂಡುವುದಾಗಿ ರೈತರ ಸಂಘ ಬೆದರಿಕೆ ಹಾಕಿತು. ರೈತರ ಆಕ್ರೋಶವನ್ನು ಶಮನಗೊಳಿಸಲು ರೈತರಿಗೆ ತಮ್ಮ ಆಸ್ತಿಯ ಅಡಮಾನ (mortgage) ಕಂತು ಕಟ್ಟಲು, ಸಾಗುವಳಿ ಮಾಡಲು, ವ್ಯವಸಾಯ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸಲು ಮತ್ತು ಕಳಕೊಂಡ ಆಸ್ತಿಯನ್ನು ಮತ್ತೆ

೩. ೧೯೩೦ರ ದಶಕದ ಮುಗ್ಗಟ್ಟಿನ ಕಾಲದ ರೈತರ ಕಷ್ಟ ಕಾರ್ಪಣ್ಯಗಳ ವಿವರ ಹಿಂದೆ ತಿಳಿಸಿದೆ.

ಕೊಂಡುಕೊಳ್ಳಲು ಸರ್ಕಾರ ಅನೇಕ ಹೊಸ ಸಾಲಗಳನ್ನು ಮಂಜೂರು ಮಾಡಿದ್ದರಿಂದ ಪರಿಸ್ಥಿತಿ ಸುಧಾರಿಸಿತು.

೧೯೩೩ರ ಮೇ ತಿಂಗಳಲ್ಲಿ ಜಾರಿಗೆ ಬಂದ ವ್ಯವಸಾಯ ವ್ಯವಸ್ಥಾಪನೆ ಕಾನೂನು (Agricultural Adjustment Act) ಕಾರ್ಯದರ್ಶಿ ವಾಲೆಸ್‌ನ ಯೋಜನೆಯಾಗಿತ್ತು. ಈ ಯೋಜನೆಯಿಂದ ವಾಣಿಜ್ಯ ವ್ಯವಹಾರ ಮಾಡುವ ದೊಡ್ಡ ರೈತರಿಗೆ ಹೆಚ್ಚಿನ ಸಹಾಯ ದೊರಕಿತು. ರೈತರ ಕೊಳ್ಳುವ ಶಕ್ತಿಯನ್ನು ಇತರ ಕ್ಷೇತ್ರಗಳಲ್ಲಿರುವವರ ಕೊಳ್ಳುವ ಶಕ್ತಿಯ ಮಟ್ಟಕ್ಕೇರಿಸುವುದು ಸರ್ಕಾರದ ಮುಖ್ಯ ಧ್ಯೇಯವಾಗಿತ್ತು. ಈ ಸಮಾನತೆಯನ್ನು ಸಾಧಿಸಲು ಸರ್ಕಾರ ರೈತರು ಬೆಳೆದ ಅಧಿಕ ಫಸಲನ್ನು ಕೊಂಡು ದಾಸ್ತಾನು ಮಾಡುವುದು, ಅಧಿಕ ಫಸಲನ್ನು ನಾಶ ಮಾಡಲು ಮತ್ತು ಸಾಗುವಳಿ ಮಾಡುವ ಎಕರೆಗಳನ್ನು ಕಡಿಮೆ ಮಾಡಲು ರೈತರಿಗೆ ಹಣ ಕೊಡುವುದು ಮುಂತಾದ ವಿಧಾನಗಳನ್ನು ಅನುಸರಿಸಿತು. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಸರ್ಕಾರ ಆಹಾರ ಪದಾರ್ಥಗಳ ಮೇಲೆ ತೆರಿಗೆ ಹಾಕಬೇಕಾಯಿತು. ಬೆಳೆ ನಾಶ ಮಾಡಲು ರೈತರಿಗೆ ಸರ್ಕಾರ ಕೊಡಬೇಕಾದ ಪರಿಹಾರ ಹಣ ಸಾರ್ವಜನಿಕರು ಆಹಾರ ಪದಾರ್ಥಗಳಿಗೆ ಹೆಚ್ಚು ಬೆಲೆ ಕೊಟ್ಟು ಕೊಳ್ಳುವುದರಿಂದ ಸಂಗ್ರಹವಾಗುತ್ತಿತ್ತು.

ಹಣ ಕೊಟ್ಟು ರೈತರಿಗೆ ಹೆಚ್ಚು ಬೆಳೆಯಬೇಡಿ ಎಂದು ನಿರ್ಬಂಧಿಸುವುದು, ಅಧಿಕ ಫಸಲನ್ನು ಮತ್ತು ಸಾಕು ಪ್ರಾಣಿಗಳನ್ನು ನಾಶ ಮಾಡುವುದರ ಮೂಲಕ ವ್ಯವಸಾಯೋತ್ಪನ್ನಗಳ ಬೆಲೆ ಹೆಚ್ಚಿಸುವ ವಿಧಾನ ಸಾರ್ವಜನಿಕರ ಕೋಪವನ್ನು ಕೆರಳಿಸಿತು. ರಾಷ್ಟ್ರದಾದ್ಯಂತ ಆಹಾರದ ಕೊರತೆ ಇರುವಾಗ ಈ ರೀತಿಯ ನಾಶ ಮೂರ್ಖತನವಾಗಿ ತೋರಿತು. ವಾಮಪಂಥೀಯರು ಈ ಸಂದರ್ಭದ ಅನುಕೂಲತೆ ಪಡೆಯಲು ಸರ್ಕಾರದ ಈ ಯೋಜನೆಗಳು ಬಂಡವಾಳಶಾಹಿಯ ಹುಚ್ಚುತನಕ್ಕೆ ಉದಾಹರಣೆಗಳಾಗಿವೆ ಎಂದು ಖಂಡಿಸಿದರು. ಆದಾಗ್ಯೂ ಮೂರು ವರ್ಷಗಳಲ್ಲಿ ರೈತರ ಆದಾಯ ಹೆಚ್ಚುತ್ತಾ ಹೋಯಿತು. ರೈತರು ಬೆಳೆಸುವ ಫಸಲಿನ ಪ್ರಮಾಣ ಕಡಿಮೆಯಾಗಲು ಪ್ರಕೃತಿಯೂ ಸಹಾಯ ಮಾಡಿತು. ೧೯೩೪ರಲ್ಲಿ ಹುಲ್ಲುಗಾವಲಿನ ಪ್ರಾಂತಗಳು (plain states) ತೀವ್ರವಾದ ಅನಾವೃಷ್ಟಿಗೆ ಒಳಗಾಗಿ ಜನರು ಕಂಗಾಲಾಗಿದ್ದರು. ೧೯೩೩-೩೫ರ ಅವಧಿಯಲ್ಲಿ ಗೋಧಿಯ ಉತ್ಪನ್ನ ೩೦೦ ಮಿಲಿಯನ್ ಬುಷೆಲ್‌ಗಳಷ್ಟು ಕಡಿಮೆಯಾಯಿತು. ಮಾಂಸಕ್ಕಾಗಿ ಸಾಕಿದ್ದ ಲೆಕ್ಕವಿಲ್ಲದಷ್ಟು ಪ್ರಾಣಿಗಳು ಸತ್ತವು. ಮಳೆಯಿಲ್ಲದೆ ಆ ಪ್ರಾಂತಗಳು 'ಧೂಳಿನ ಬೋಗುಣಿ'ಗಳಾಗಿ (dust bowls) ಮಾರ್ಪಾಡಾಗಿ ಸಹಸ್ರಾರು ಜನರ ಜೀವನಗಳನ್ನು ದುರಂತಗೊಳಿಸಿತು. ಇದರಲ್ಲಿ ಬದುಕಿ ಉಳಿದವರ ಆರ್ಥಿಕ ಸ್ಥಿತಿ ಆಶ್ಚರ್ಯಕರವಾಗಿ ಉತ್ತಮಗೊಂಡು ಅವರ ಆದಾಯ ಹೆಚ್ಚುತ್ತ ಹೋಯಿತು. ೧೯೩೬ರ ಹೊತ್ತಿಗೆ ರೈತರ ಆದಾಯ ಇತರ ಕಾರ್ಮಿಕರ ಆದಾಯಕ್ಕೆ ಸರಿಸಮನಾಗಿ ಏರಿತ್ತು.

ಎಫ್.ಡಿ.ಆರ್ ತನ್ನ 'ಹೊಸ ಹಂಚಿಕೆ'ಯ ಯೋಜನೆಯಲ್ಲಿ ಕೆಲವು ಪರಿಹಾರ ಕ್ರಮಗಳನ್ನು ಜಾರಿಗೆ ತಂದನು. ಅವನು ಜನರು ಕೆಲಸ ಮಾಡುವುದರ ಮೂಲಕ ಆರ್ಥಿಕ ಸಮಸ್ಯೆಯನ್ನು ಪರಿಹರಿಸಬೇಕೆಂದು ನಂಬಿದ್ದನು. ಸರ್ಕಾರ ನಿರುದ್ಯೋಗಿಗಳಿಗೆ ಹೊಟ್ಟೆ-ಬಟ್ಟೆ ಮತ್ತು ವಾಸಿಸುವ ಜಾಗಕ್ಕೆ ತಗಲುವಷ್ಟು ಹಣ ವಿತರಣೆ ಮಾಡಿದರೆ ಅದು ಸಮಸ್ಯೆಯನ್ನು ಸಂಕೀರ್ಣಗೊಳಿಸುತ್ತದೆಯೆ ಹೊರತು ಪರಿಹಾರಗೊಳಿಸುವುದಿಲ್ಲ ಎನ್ನುವುದು ಅವನ ತಿಳುವಳಿಕೆಯಾಗಿತ್ತು. 'ಹೊಸ ಹಂಚಿಕೆ' ನಿರುದ್ಯೋಗಿಗಳಿಗೆ ಕೆಲಸ ಒದಗಿಸುವುದು ಮತ್ತು ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಕೆಲವು ಸಂಸ್ಥೆಗಳನ್ನು ಸ್ಥಾಪಿಸಿತು. ಆ ಸಂಸ್ಥೆಗಳ ಕೆಲವು ಉದಾಹರಣೆಗಳು:

- ನಾಗರಿಕ ಸಂರಕ್ಷಣ ದಳ (The Civilian Conservation Corps) ಬಡ ಕುಟುಂಬದ ಯುವಕರನ್ನು ಕೆಲಸಕ್ಕೆ ನೇಮಿಸಿ ಅವರನ್ನು ಅರಣ್ಯಸಂರಕ್ಷಣೆ, ಉದ್ಯಾನವನಗಳ ಮೇಲ್ವಿಚಾರಣೆ ನಿರ್ವಹಿಸುವ ಜವಾಬ್ದಾರಿ ವಹಿಸಿತು. ೧,೬೦೦,೦೦೦ ಯುವಜನರು ಸೈನಿಕರಂತೆ ಶಿಸ್ತನ್ನು ಪಾಲಿಸುತ್ತ ಶಿಬಿರಗಳಲ್ಲಿ ವಾಸಿಸಬೇಕಿತ್ತು. ಇವರು ಕಷ್ಟಪಟ್ಟು ದುಡಿದ ಅಲ್ಪಸ್ವಲ್ಪ ಹಣವನ್ನು ಅವರವರ ಮನೆಗಳಿಗೆ ಕಳುಹಿಸಿ ಅದರಿಂದ ಮನೆ ನಡೆಸಲು ಸಹಾಯ ಸಿಗುವಂತೆ ಮಾಡಲಾಗಿತ್ತು.

- ಫೆಡರಲ್ ತುರ್ತು ಪರಿಸ್ಥಿತಿ ಪರಿಹಾರ ಆಡಳಿತ: (Federal Relief Administration). ಈ ಯೋಜನೆ ನಿರುದ್ಯೋಗಿಗಳಿಗೆ ಕೆಲಸ ಸಿಗುವವರೆಗೆ ಆಹಾರ, ಉಡುಗೆ ತೊಡುಗೆ ಮತ್ತು ಇರಲು ಒಂದು ಜಾಗವನ್ನು ಏರ್ಪಾಡು ಮಾಡುತ್ತಿತ್ತು.

- ಲೋಕೋಪಯೋಗಿ ಕೆಲಸಗಳ ನಿರ್ವಹಣೆ: ಈ ಯೋಜನೆ ೪ ಮಿಲಿಯನ್ ಜನರಿಗೆ ಕೆಲಸಕ್ಕೆ ಅವಕಾಶ ಮಾಡಿಕೊಟ್ಟಿತು.

- ಸಾರ್ವಜನಿಕ ಕೆಲಸಗಳ ನಿರ್ವಹಣೆ: ಜಲಾಶಯ ನಿರ್ಮಾಣ ಮತ್ತು ಬೃಹತ್ ಪ್ರಮಾಣದ ಕಟ್ಟಡಗಳನ್ನು ನಿರ್ಮಾಣ ಮಾಡಲು ಖಾಸಗಿ ಸಂಸ್ಥೆಗಳೊಡನೆ ಕರಾರು ಮಾಡಿಕೊಂಡು ಕೆಲಸ ನಡೆಸುವುದು.

- ೧೯೩೫ರಲ್ಲಿ ಕಾರ್ಯಪ್ರಗತಿ ನಿರ್ವಹಣೆ: (Works Program Administration) ಇಲಾಖೆ ಸರ್ಕಾರದ ಅನೇಕ ಯೋಜನೆಗಳಲ್ಲಿ ನಾನಾ ರೀತಿಯ ಕೆಲಸಗಳನ್ನು ಮಾಡಲು ಅವಕಾಶ ಕಲ್ಪಿಸಿಕೊಟ್ಟಿತು. ವಿವಿಧ ರೀತಿಯ ಪ್ರತಿಭಾವಂತರಿಗೆ – ಬರಹಗಾರರಿಗೆ, ನಟರಿಗೆ, ವರ್ಣಕಲಾವಿದರಿಗೆ, ಉಪಾಧ್ಯಾಯರಿಗೆ ಮತ್ತು ಇತರ ಕಛೇರಿ ಕೆಲಸಗಳನ್ನು ಈ ಇಲಾಖೆ ದೊರಕಿಸಿಕೊಟ್ಟಿತು. ಕಾರ್ಯಪ್ರಗತಿ ನಿರ್ವಹಣೆಯ ಇಲಾಖೆಯ ಆಶ್ರಯದಲ್ಲಿ ರಾಷ್ಟ್ರೀಯ ಯುವಜನ

ನಿರ್ವಹಣೆ ಯೋಜನೆ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಥಿಗಳು ಸಣ್ಣ ಪುಟ್ಟ ಕೆಲಸಗಳನ್ನು ಮಾಡುವ ಅವಕಾಶ ಮಾಡಿಕೊಟ್ಟಿತು. ಈ ಕೆಲಸಗಳು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮುಂದುವರಿಸಲು ಸಾಕಾಗುವಷ್ಟು ವರಮಾನವನ್ನು ಒದಗಿಸುತ್ತಿದವು. ಈ ಯೋಜನೆಗಳು ಅನೇಕ ವರ್ಷಗಳವರೆಗೆ ಕಾರ್ಯಾಚರಣೆ ನಡೆಸಿದ್ದವು.

ಔದ್ಯೋಗಿಕ ಕ್ಷೇತ್ರದಲ್ಲಿ ಹೊಸಹಂಚಿಕೆ

ಮೊದಲನೆಯ ಜಾಗತಿಕ ಯುದ್ಧ ಕಾಲದಲ್ಲಿ ಮತ್ತು ೧೯೨೦ರ ದಶಕದಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ಸರ್ಕಾರ ಮತ್ತು ಕೈಗಾರಿಕೋದ್ಯಮಗಳು ಪರಸ್ಪರ ಸಹಕರಿಸಿ ಕಾರ್ಯಾಚರಣೆ ನಡೆಸಿ ಯಶಸ್ವಿಯಾಗಿದ್ದವು. ಅದೇ ಮಾದರಿಯ ಸರ್ಕಾರದ ನಿರ್ದೇಶನ ಕ್ಕೊಳಪಟ್ಟ ಸಹಕಾರ ವ್ಯವಸ್ಥೆ ರಾಷ್ಟ್ರದ ಆರ್ಥಿಕ ದುರವಸ್ಥೆಯನ್ನು ಪರಿಹರಿಸಬಹುದೆಂದು ಎಫ್.ಡಿ.ಆರ್‌ನ ಕೆಲವು ಸಲಹೆಗಾರರು ಅಭಿಪ್ರಾಯಪಟ್ಟರು. ಅಧ್ಯಕ್ಷನ ಸಲಹಾಸಮಿತಿ ಅಥವಾ ಮೆದುಳ ನಿಕ್ಷೇಪ (brain trust) ವ್ಯಾಪಾರ/ಉದ್ಯಮಗಳಲ್ಲಿ ಪೈಪೋಟಿಯ ಕಾಲ ಮುಗಿಯಿತು, ಪ್ರಸ್ತುತ ಪರಿಸ್ಥಿತಿಯಲ್ಲಿ ಬೇಕಾಗಿರುವುದು ಕ್ರಿಯಾತ್ಮಕವಾದ ರಾಷ್ಟ್ರೀಯ ಯೋಜನೆ ಎನ್ನುವ ನಿಧಾರಕ್ಕೆ ಬಂದಿತ್ತು. ನಿಕ್ಷೇಪ ನಿರೋಧ ಕಾನೂನುಗಳನ್ನು (anti-trust laws) ರದ್ದುಗೊಳಿಸಿ, ಪ್ರತಿ ಕೈಗಾರಿಕೆ ಸಾರ್ವಜನಿಕರ ಹಿತದೃಷ್ಟಿಯಿಂದ ಉತ್ಪಾದನಾ ಪ್ರಮಾಣ ಮತ್ತು ಬೆಲೆಯನ್ನು ನಿರ್ಧರಿಸಲು ಅವಕಾಶ ಕೊಡಬೇಕೆಂದು ತೀರ್ಮಾನಿಸಲಾಯಿತು. ಈ ಪ್ರಾಯೋಗಿಕ ಯೋಜನೆಯಲ್ಲಿ ಆಧುನಿಕ ಕಾರ್ಮಿಕ ಕಾನೂನುಗಳು ಅಡಕವಾಗಿರಬೇಕು. ಇದಕ್ಕೆ ಎಲ್ಲ ಕೈಗಾರಿಕೋದ್ಯಮಿಗಳ ಒಪ್ಪಿಗೆಯಿರಬೇಕು. ಮಕ್ಕಳ ದುಡಿಮೆ, ಗಾಳಿ ಬೆಳಕುಗಳಿಲ್ಲದ ಕಟ್ಟಡಗಳಲ್ಲಿ ಕೆಲಸಗಾರರನ್ನು ಕೂಡಿಹಾಕಿ ಅನವರತ ದುಡಿಸಿಕೊಂಡು ಅತ್ಯಂತ ಕಡಿಮೆ ವೇತನ ಕೊಡುವ ಕ್ರೂರ ಪದ್ಧತಿಗಳು ರದ್ದಾಗಬೇಕು ಮತ್ತು ವೇತನ ಎಲ್ಲ ಕೆಲಸಗಾರರಿಗೂ ಹೆಚ್ಚಿಸಬೇಕೆಂಬ ಷರತ್ತುಗಳನ್ನು ಅಂಗೀಕರಿಸಲಾಯಿತು. ಈ ಸಲಹೆಗಳನ್ನೆಲ್ಲ ಒಳಗೊಂಡ ಮಸೂದೆಯನ್ನು ಸರ್ಕಾರ ಕಾಂಗ್ರೆಸ್ಸಿನಲ್ಲಿ ಮಂಡಿಸಿತು. ಈ ಮಸೂದೆ ಎರಡು ಭಾಗಗಳನ್ನೊಳಗೊಂಡಿತ್ತು. ಮೊದಲನೆಯ ಭಾಗ ವ್ಯಾಪಾರ ಸಂಸ್ಥೆಗಳು ಪರಸ್ಪರ ಸಹಕರಿಸಲು ಸಾಧ್ಯವಾಗುವಂತೆ ಕೈಗಾರಿಕೆಗಳನ್ನು ವ್ಯವಸ್ಥೆಗೊಳಿಸುವ ವಿಧಾನಗಳನ್ನು ಒಳಗೊಂಡಿತ್ತು. ಎರಡನೆಯ ಭಾಗ ಲೋಕೋಪಯೋಗಿ ಕಾರ್ಯಗಳ ನಿರ್ವಹಣೆಗಾಗಿ ೩.೩ ಬಿಲಿಯನ್ ಡಾಲರ್‌ಗಳನ್ನು ಮಂಜೂರು ಮಾಡಬೇಕೆಂಬ ಕೋರಿಕೆಯನ್ನೊಳಗೊಂಡಿತ್ತು. ಈ ಹಣದಿಂದ ಲೋಕೋಪಯೋಗಿ ಕಾರ್ಯಗಳ ನಿರ್ವಹಣೆ (public works administration) ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸಿ ಸಾರ್ವಜನಿಕರ ಉಪಯೋಗಕ್ಕಾಗಿ ಅಣೆಕಟ್ಟುಗಳು, ಹೆದ್ದಾರಿಗಳು, ಅಂಚೆಕಛೇರಿಗಳು, ನ್ಯಾಯಾಲಯಗಳು, ನೌಕೆಗಳು, ಆಸ್ಪತ್ರೆಗಳು ಮತ್ತು ರಾಷ್ಟ್ರೀಯ ವನ (national parks) ಮುಂತಾದುವುಗಳ ನಿರ್ಮಾಣ

ಮತ್ತು ನಿರ್ವಹಣೆ ಕಾರ್ಯಗಳಲ್ಲಿ ಹಣವನ್ನು ಉಪಯೋಗಿಸಿತು. ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವುದು ಮತ್ತು ಸಮಾಜ ಸುಧಾರಣಾ ಕಾರ್ಯಕ್ರಮಗಳನ್ನು ಕೈಗೊಳ್ಳುವ ಉದ್ದೇಶದಿಂದ ೧೯೩೩ರಲ್ಲಿ ರಾಷ್ಟ್ರೀಯ ಕೈಗಾರಿಕಾ ಪುನಃಶ್ಚೇತನ ಕಾನೂನು (National Industrial Recovery Act) ಜಾರಿಗೆ ಬಂತು. ಇದಾದ ನಂತರ ಕಾರ್ಮಿಕರ ಕೆಲಸದ ಅವಧಿ ವಾರಕ್ಕೆ ೨೫ ಘಂಟೆಗಳಿಗೆ ಇಳಿಸಲಾಯಿತು, ಕನಿಷ್ಠ ವೇತನ ಘಂಟೆಗೆ ೩೦ ಸೆಂಟ್‌ಗಳಿಗೆ ಏರಿಸಲಾಯಿತು, ಮಕ್ಕಳ ದುಡಿತವನ್ನು ನಿಷೇಧಿಸಲಾಯಿತು. ರಾಷ್ಟ್ರೀಯ ಕಾರ್ಮಿಕ ಸಂಬಂಧಗಳ ಸಮಿತಿಯ ಮೇಲ್ವಿಚಾರಣೆಯಲ್ಲಿ ಕಾರ್ಮಿಕ ಪ್ರತಿನಿಧಿಗಳು ನಿರ್ವಹಣಾಕಾರರೊಡನೆ (managers) ಸಂಬಳ ಮತ್ತು ಸವಲತ್ತುಗಳ ಬಗ್ಗೆ ಮಾತುಕತೆ ನಡೆಸುವ ಹಕ್ಕನ್ನು ಒಪ್ಪಿಕೊಳ್ಳಲಾಯಿತು. ಆನಂತರದ ಕೆಲವು ತಿಂಗಳಲ್ಲಿ ಸರ್ಕಾರ ಮತ್ತು ವ್ಯಾಪಾರ/ಉದ್ಯಮಗಳ ಪರಸ್ಪರ ಸಹಕಾರ ವ್ಯವಸ್ಥೆ ತೊಂದರೆಗೆ ಒಳಗಾಯಿತು. ರಾಷ್ಟ್ರೀಯ ಕೈಗಾರಿಕಾ ಪುನಃಶ್ಚೇತನ ಕಾನೂನು ಸಮಿತಿ ಏಕಸ್ವಾಮ್ಯತೆಯನ್ನು (monopoly) ಸ್ಥಾಪಿಸಲು ಮತ್ತು ಬೆಲೆಗಳನ್ನು ತಮಗೆ ಲಾಭದಾಯಕವಾಗುವಂತೆ ವ್ಯಾಪಾರಿಗಳು/ಉದ್ಯಮಿಗಳು ನಿರ್ಧರಿಸಲು ಅನುಕೂಲ ಮಾಡಿಕೊಟ್ಟಿತು ಎಂದು ಜನರು ಆರೋಪಿಸಿದರು. ಈ ಕಾನೂನಿನ ಧ್ಯೇಯ ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದಾಗಿತ್ತು. ಆದರೆ ಬೆಲೆಗಳನ್ನು ಕಡಿಮೆ ಮಾಡಬೇಕೆಂಬ ಕೋರಿಕೆಗೆ ವ್ಯಾಪಾರೋದ್ಯಮಿಗಳು ಕಿವಿಗೊಡಲಿಲ್ಲ. ಬೆಲೆಗಳು ಏರುತ್ತಿದ್ದಂತೆ ಕಾರ್ಮಿಕರೊಡನೆ ಸಂಬಳ ಸವಲತ್ತುಗಳ ಬಗ್ಗೆ ಸಂವಾದ ನಡೆಸಬೇಕೆನ್ನುವ ಷರತ್ತನ್ನು ಬೃಹತ್ ಕಾರ್ಪೊರೇಷನ್‌ಗಳು ಅನೇಕ ವಿಧಗಳಲ್ಲಿ ತಪ್ಪಿಸಿಕೊಳ್ಳುತ್ತಿದ್ದವು. ಇದರಿಂದಾಗಿ ಕಾರ್ಮಿಕರ ಒಕ್ಕೂಟದ ನಾಯಕರು ಕೋಪಗೊಂಡು ಮುಷ್ಕರ ಹೂಡಲು ಕಾರ್ಮಿಕರಿಗೆ ಕರೆ ನೀಡಿದರು.

ರಾಷ್ಟ್ರೀಯ ಕೈಗಾರಿಕಾ ಪುನಃಶ್ಚೇತನ ಕಾನೂನಿನ ಪರಿಣಾಮ ಸಫಲತೆ ಮತ್ತು ವಿಫಲತೆಗಳಿಂದ ಕೂಡಿದ ಮಿಶ್ರಣವಾಗಿತ್ತು. ತಾತ್ವಿಕವಾಗಿ ಈ ಕಾನೂನು ಸರ್ಕಾರ, ವ್ಯಾಪಾರೋದ್ಯಮಗಳು ಮತ್ತು ಕಾರ್ಮಿಕರೊಡನೆ ಸಹಕಾರ ಏರ್ಪಡಿಸಿ ಕೈಗಾರಿಕೋದ್ಯಮಗಳನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಸ್ವನಿಯಂತ್ರಣಕ್ಕೊಳಪಡಿಸಿ ರಾಷ್ಟ್ರಮಟ್ಟದಲ್ಲಿ ಯೋಜನೆಗಳನ್ನು ಕಾರ್ಯಗತಗೊಳಿಸುವ ಧ್ಯೇಯವನ್ನು ಹೊಂದಿತ್ತು. ಆದರೆ ವಾಸ್ತವವಾಗಿ ಇದು ಕೆಲವು ಕೈಗಾರಿಕೆಗಳಲ್ಲಿ ಏಕಸ್ವಾಮ್ಯತೆಗಳ ಬೆಳವಣಿಗೆಗೆ ಕಾರಣವಾಯಿತು. ಇದು ಬೆಲೆ ಏರಿಕೆಗೆ ದಾರಿ ಮಾಡಿಕೊಟ್ಟಿತು. ಈ ಸಂದರ್ಭ ವ್ಯಾಪಾರಿಗಳು, ಕಾರ್ಮಿಕರು ಮತ್ತು ಬಳಕೆದಾರರಲ್ಲಿ ಪರಸ್ಪರ ವೈಷಮ್ಯ ಉಂಟುಮಾಡಿತು. ಈ ದುಷ್ಪರಿಣಾಮಗಳ ಜೊತೆಗೆ ಈ ಕಾನೂನಿನ ಕೆಲವು ಸತ್ಪರಿಣಾಮಗಳೂ ಸಂಭವಿಸಿದವು. ಡಾಲರ್ ಬೆಲೆ ಕುಸಿಯುವುದನ್ನು ಇದು ತಪ್ಪಿಸಿತು. ಕಾರ್ಮಿಕರ ಸ್ಥಿತಿಗತಿಗಳು ಉತ್ತಮಗೊಳ್ಳುವಂತೆ ಮಾಡಿತು. ಕೈಗಾರಿಕೋತ್ಪನ್ನಗಳನ್ನು ತ್ವರಿತಗೊಳಿಸಿ, ರಾಷ್ಟ್ರದಲ್ಲಿ ಸಾಮಾನ್ಯ ಜನರ ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸಿತು.

ಟೆನ್ನೆಸ್ಸೀ ಕಣಿವೆ ಆಡಳಿತ (Tennessee Valley Authority)

ನೆಬ್ರಾಸ್ಕ ಸೆನೆಟರ್ ಜಾರ್ಜ್ ನಾರಿಸ್ (George Norris) ಮೊದಲನೆಯ ಜಾಗತಿಕ ಯುದ್ಧ ಮುಗಿದಂದಿನಿಂದಲೂ ಟೆನ್ನೆಸ್ಸೀ ನದಿಯ ಸಮೃದ್ಧ ನೀರನ್ನು ಸಾರ್ವಜನಿಕರಿಗೆ ಉಪಯೋಗವಾಗುವಂತೆ ಮಾಡಬೇಕೆಂದು ಆಗ್ರಹಪಡಿಸುತ್ತಲೇ ಇದ್ದನು. ೧೯೩೨ರ ಡೆಮೊಕ್ರಾಟಿಕ್ ಪಕ್ಷದ ಚುನಾವಣಾ ವೇದಿಕೆ, ಟೆನ್ನೆಸ್ಸೀ ನದಿಯ ಕಣಿವೆಯಲ್ಲಿ ಸರ್ಕಾರಿ ನಿಯಂತ್ರಿತ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು ಪಕ್ಷದ ಮುಖ್ಯ ಗುರಿ ಎಂದು ಪ್ರಚಾರ ಮಾಡಿತ್ತು. ಆದರಂತೆ ಟೆನ್ನೆಸ್ಸೀ ನದಿ ಕಣಿವೆ ಆಡಳಿತ ಸಂಸ್ಥೆಯನ್ನು ಹುಟ್ಟುಹಾಕಲಾಯಿತು. ಈ ಸಾರ್ವಜನಿಕ ಸಂಸ್ಥೆ ಹಲವಾರು ಯೋಜನೆಗಳನ್ನು ಒಳಗೊಂಡಿದ್ದು, ಏಳು ಸಂಸ್ಥಾನಗಳ ಭಾಗಶಃ ಅಭಿವೃದ್ಧಿಯನ್ನು ಹಮ್ಮಿಕೊಂಡಿತ್ತು.

ವಿದ್ಯುಚ್ಛಕ್ತಿ ಉತ್ಪಾದನೆಗೆ ತಗಲುವ ವೆಚ್ಚದ ಪ್ರಮಾಣವನ್ನು ನಿರ್ಧರಿಸಿ, ಅದನ್ನು ಅಳತೆಗೋಲಾಗಿ ಮಾಡಿ, ಅದರಿಂದ ರಾಷ್ಟ್ರದಾದ್ಯಂತ ವಿದ್ಯುಚ್ಛಕ್ತಿಯ ದರಗಳನ್ನು ನಿಯಂತ್ರಿಸಲು ಉಪಯೋಗಿಸುವುದು ಈ ಆಡಳಿತದ ಮುಖ್ಯ ಗುರಿಗಳಲ್ಲಿ ಒಂದಾಗಿತ್ತು. ಟೆನ್ನೆಸ್ಸೀ ಕಣಿವೆಯ ನಿವಾಸಿಗಳಿಗೆ ಕಡಿಮೆ ಖರ್ಚಿನಲ್ಲಿ ವಿದ್ಯುಚ್ಛಕ್ತಿ ಒದಗಿಸಲು ಅಣೆಕಟ್ಟುಗಳನ್ನು ನಿರ್ಮಾಣ ಮಾಡುವುದು ಈ ಆಡಳಿತದ ಒಂದು ಯೋಜನೆಯಾಗಿತ್ತು. ಮತ್ತೊಂದು ಮುಖ್ಯ ಉದ್ದೇಶವೆಂದರೆ ಪ್ರತಿವರ್ಷ ಉಂಟಾಗುತ್ತಿದ್ದ ಪ್ರವಾಹದ ಹಾವಳಿಯನ್ನು ತಡೆಗಟ್ಟುವುದಾಗಿತ್ತು. ಕಡಿಮೆ ದರದಲ್ಲಿ ಪೆಟ್ಲುಪ್ಪನ್ನು (Nitrate) ತಯಾರಿಸುವುದು. ಇದು ಬಂಜರು ಭೂಮಿಯನ್ನು ಫಲವತ್ತಾಗಿ ಮಾಡಲು ಅಗತ್ಯವಾದ ಒಂದು ರಾಸಾಯನಿಕವಾಗಿದ್ದರಿಂದ ಹೆಚ್ಚಿನ ಬೇಡಿಕೆ ಇತ್ತು. ಸುಲಭ ಬೆಲೆಗೆ ಸಾಮಾನು ಸರಂಜಾಮುಗಳನ್ನು ಸಾಗಿಸಲು ಜಲಮಾರ್ಗಗಳನ್ನು ನಿರ್ಮಿಸುವುದು, ನದಿಗಳನ್ನು ಸಂರಕ್ಷಿಸಿ ಸಾರ್ವಜನಿಕರಿಗೆ ಮನರಂಜನೆ ಒದಗಿಸುವ ತಾಣಗಳನ್ನು ಆಯಕಟ್ಟಿನ ಸ್ಥಳಗಳಲ್ಲಿ ಸ್ಥಾಪಿಸಿವುದು – ಒಟ್ಟಿನಲ್ಲಿ ಏಳು ಸಂಸ್ಥಾನಗಳಿಗೆ ಸೇರಿದ ಈ ವಿಸ್ತಾರವಾದ ಕಣಿವೆ ಪ್ರದೇಶದ ಸ್ಥಿಗತಿಗಳನ್ನು ತ್ವರಿತ ಗತಿಯಲ್ಲಿ ಉತ್ತಮಗೊಳಿಸುವ ಬೃಹತ್ ಪ್ರಮಾಣದ ಯೋಜನೆ ಇದಾಗಿತ್ತು. ಅದೇ ತೆರನಾದ ಅನೇಕ ಯೋಜನೆಗಳಿಗೆ, ಉದಾಹರಣೆಗೆ – ಕೊಲಂಬಿಯ ನದಿಯ ರೇವುತಾಣದಲ್ಲಿ ನಿರ್ಮಾಣಗೊಂಡ ಗ್ರಾಂಡ್ ಕಾವ್‌ಲೀ (Grand Cowlee) ಮತ್ತು ಬಾನ್‌ವಿಲ್ (Bonneville) ಅಣೆಕಟ್ಟುಗಳು ಹಾಗೂ ಮುಸ್ಸೋರ ನದಿ ಕಣಿವೆ ಯೋಜನೆ – ಇವುಗಳಿಗೆ ಟೆನ್ನೆಸ್ಸೀ ಕಣಿವೆ ಯೋಜನೆ ಮಾದರಿಯಾಯಿತು. ಈ ಅಣೆಕಟ್ಟುಗಳ ನಿರ್ಮಾಣದಿಂದ ಅಮೆರಿಕದ ವಾಯುವ್ಯ ಪ್ರಾಂತದ ಬಂಜರು ಭೂಮಿಯನ್ನು ಸಾಗುವಳಿಗೆ ಯೋಗ್ಯವಾಗಿ ಮಾಡಲು ಸಾಧ್ಯವಾಯಿತು.

ಈ ಯೋಜನೆಯ ಪರಿಣಾಮವಾಗಿ ೧೯೩೫ರಲ್ಲಿ ಗ್ರಾಮೀಣ ವಿದ್ಯುಚ್ಛಕ್ತಿ ಆಡಳಿತ ಸ್ಥಾಪಿತಗೊಂಡು ರಾಷ್ಟ್ರದಾದ್ಯಂತ ಗ್ರಾಮೀಣ ಪ್ರದೇಶಗಳಿಗೆ ವಿದ್ಯುಚ್ಛಕ್ತಿ ಸರಬರಾಜು

ಮಾಡುವ ಯೋಜನೆಯನ್ನು ಕೈಗೊಳ್ಳಲು ಸಾಧ್ಯವಾಯಿತು. ಖಾಸಗಿ ವಿದ್ಯುಚ್ಛಕ್ತಿ ಸಂಸ್ಥೆಗಳು ಕಡೆಗಣಿಸಿದ ಹಳ್ಳಿಗಾಡು ಪ್ರದೇಶಗಳಿಗೆಲ್ಲ ವಿದ್ಯುಚ್ಛಕ್ತಿ ದೊರೆಯುವಂತಾಯಿತು.

'ಹೊಸ ಹಂಚಿಕೆ' (New Deal) ವಸತಿ ನಿರ್ಮಾಣ ಯೋಜನೆಯನ್ನೂ ಒಳಗೊಂಡಿತ್ತು. ೧೯೩೩ರಲ್ಲಿ ಅಧ್ಯಕ್ಷ ಹೂವರ್ ಕಾಲದಲ್ಲೇ ಸ್ಥಾಪಿತಗೊಂಡಿದ್ದ 'ಸ್ವಂತ ಮನೆಯುಳ್ಳವರ ಸಾಲದ ಸಂಸ್ಥೆ'ಯನ್ನು ಮಾರ್ಪಾಡು ಮಾಡಿ ಬ್ಯಾಂಕ್‌ಗಳು ಮುಟ್ಟುಗೋಲು ಹಾಕಿಕೊಳ್ಳುವ ಸ್ಥಿತಿಗೆ ಬಂದಿದ್ದ ಮನೆಗಳ ಒಡೆಯರಿಗೆ ಪುನಃ ಸಾಲ ನೀಡುವ ಕಾರ್ಯವನ್ನು ಈ ಮಾರ್ಪಾಡಾದ ಸಂಸ್ಥೆ ಕೈಗೊಂಡಿತು. ೧೯೩೪ರಲ್ಲಿ ಫೆಡರಲ್ ವಸತಿ ನಿರ್ವಹಣ ಸಂಸ್ಥೆ (The Federal Housing Administration)ಯನ್ನು ಸ್ಥಾಪಿಸಲಾಯಿತು. ಹೊಸ ವಸತಿಗೃಹಗಳನ್ನು ಕೊಳ್ಳಲು ಬೇಕಾದ ಭೋಗ್ಯಗಳಿಗೆ (mortgages) ಸಾಲದ ಹಣ ಖಾಸಗಿ ಮೂಲಗಳಿಂದ ಒದಗಿಸಲಾಯಿತು. ಈ ಖಾಸಗಿ ಹಣವನ್ನು ಭದ್ರಗೊಳಿಸಲು ವಿಮೆ ಮಾಡಲಾಯಿತು. ಗೃಹ ನಿರ್ಮಾಣ ಉದ್ಯಮವನ್ನು ಉತ್ತೇಜನಗೊಳಿಸುವುದು ಫೆಡರಲ್ ಆಸ್ತಿ ನಿರ್ಮಾಣ ಸಂಸ್ಥೆಯ ಮುಖ್ಯ ಉದ್ದೇಶವಾಗಿತ್ತು. ಈ ಸಂಸ್ಥೆ ಸ್ಥಳೀಯ ಸರ್ಕಾರಗಳಿಗೆ ಕೊಳಚೆ ಪ್ರದೇಶಗಳನ್ನು ನಿರ್ಮೂಲಗೊಳಿಸಲು ಮತ್ತು ನಗರಗಳಲ್ಲಿ ಕಡಿಮೆ ಬಾಡಿಗೆಯ ಮನೆಗಳನ್ನು ಕಟ್ಟಲು ಧನಸಹಾಯ ಮಾಡುವ ಜವಾಬ್ದಾರಿ ವಹಿಸಿಕೊಂಡಿತು.

ಹೊಸ ಹಂಚಿಕೆಯ ಎರಡನೆಯ ಹಂತ:

ಸಾಮಾಜಿಕ ಭದ್ರತಾ ಕಾನೂನು (The Social Security Act)

೧೮೮೦ರ ದಶಕದಲ್ಲಿ ಯೂರೋಪಿನಲ್ಲಿ ಸಾಮಾಜಿಕ ಭದ್ರತಾ ಯೋಜನೆ ಪ್ರಾರಂಭವಾಯಿತು. ಜನರನ್ನು ನಿರುದ್ಯೋಗ, ವೃದ್ಧಾಪ್ಯ ಮುಂತಾದ ಅಭದ್ರ ಹಾಗೂ ಅನಿಶ್ಚಯ ಪರಿಸ್ಥಿತಿಗಳಿಂದ ರಕ್ಷಿಸಲು ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಯಿತು. ಸಂಯುಕ್ತ ಸಂಸ್ಥಾನಗಳಲ್ಲಿ ಇಂಥ ಯೋಜನೆಗಳ ಅವಶ್ಯಕತೆ ಮಹಾಮುಗ್ಗಟ್ಟಿನ ಕಾಲದವರೆಗೆ ಇರಲಿಲ್ಲ. ಮಹಾಮುಗ್ಗಟ್ಟು ನಿವೃತ್ತ ಅಮೆರಿಕನ್ನರ ಜೀವನವನ್ನು ಬುಡಮೇಲು ಮಾಡಿತ್ತು. ಈ ಸಂದರ್ಭವನ್ನು ತಮ್ಮ ಅನುಕೂಲಕ್ಕೆ ಉಪಯೋಗಿಸಿಕೊಳ್ಳಲು ಉಗ್ರಗಾಮಿಗಳು ಜನರನ್ನು ಉದ್ರೇಕಗೊಳಿಸಲು ಪ್ರಯತ್ನಮಾಡಿದರು. ಇದು ಕೈಮೀರಿ ಹೋಗದಂತೆ ಫೆಡರಲ್ ಸರ್ಕಾರ ಸಕಾಲದಲ್ಲಿ ಕ್ರಮ ತೆಗೆದುಕೊಂಡು ಉದ್ರೇಕ ಪರಿಸ್ಥಿತಿಯನ್ನು ಶಮನಗೊಳಿಸಿತು. ಅಮೆರಿಕದಲ್ಲಿ ಸಾಮಾಜಿಕ ಭದ್ರತಾ ಯೋಜನೆ ಪ್ರಾರಂಭವಾಗಿದ್ದು ಎಫ್.ಡಿ.ಆರ್ ವಿರೋಧಿಗಳ ಸವಾಲನ್ನು ಎದುರಿಸಬೇಕಾಗಿ ಬಂದಿದ್ದರಿಂದ. ಈ ಯೋಜನೆಯನ್ನು ಕಾರ್ಯಗತಗೊಳಿಸಲು ದೃಢನಿಶ್ಚಯ ಮಾಡಿದ್ದು ಅವನು ಮೂರು ಕಡುವಿರೋಧಿಗಳ ಬಾಯಿ ಮುಚ್ಚಿಸುವ ಸಲುವಾಗಿ ಮತ್ತು ಅವರು ಸೃಷ್ಟಿಸಿದ ಆಂದೋಳನಗಳನ್ನು ಹತ್ತಿಕ್ಕುವುದಕ್ಕಾಗಿ.

ಲೂಯಿಸಿಯಾನ ಸಂಸ್ಥಾನದ ರಾಜಕೀಯವನ್ನು ಸಂಪೂರ್ಣ ಕೈವಶ ಮಾಡಿಕೊಂಡು ಸರ್ವಾಧಿಕಾರಿಯಂತೆ ಮೆರೆಯುತ್ತಿದ್ದ ಹ್ಯೂಯಿ ಲಾಂಗ್ (Huey Long) ಕೆಲವು ಲೋಕೋಪಯೋಗಿ ಕಾರ್ಯಗಳನ್ನು – ಆಸ್ಪತ್ರೆ, ಪಾಠಶಾಲೆ, ಸಾರ್ವಜನಿಕರಿಗೆ ಉಪಯುಕ್ತವಾಗುವ ವ್ಯವಸ್ಥೆಗಳು – ಕೈಗೊಂಡು ಅತಿ ಜನಪ್ರಿಯ ರಾಜಕೀಯ ಧುರೀಣನಾಗಿದ್ದನು. ಅವನು ಜನರಿಗೆ ಹೆಚ್ಚಿನ ಸೌಕರ್ಯ ಮತ್ತು ಸೌಲಭ್ಯಗಳನ್ನು ಕೊಡಲೇ ಒದಗಿಸುವಂತೆ ಎಫ್.ಡಿ.ಆರ್ ಸರ್ಕಾರಕ್ಕೆ ಸವಾಲು ಹಾಕಿದನು. ಅವನು ಪ್ರಾರಂಭಿಸಿದ ಆಂದೋಳನದ ಘೋಷಣೆಗಳು: 'ಸಂಪತ್ತನ್ನು ಹಂಚಿಕೊಳ್ಳಿ' (Share the wealth), 'ಶ್ರೀಮಂತರನ್ನು ಮುಳುಗಿಸಿ' (Soak the rich) ಮುಂತಾದವು ಜನರನ್ನು ಆಕರ್ಷಿಸಿ ಅನುಯಾಯಿಗಳಾಗುವಂತೆ ಮಾಡಿದ್ದವು. ಇವನ ಯೋಜನೆ – ವೃದ್ಧಾಪ್ಯ ವೇತನ, ಪುಕ್ಕಟ್ಟೆ ವಿದ್ಯಾಭ್ಯಾಸ ಮತ್ತು ಒಂದು ಕುಟುಂಬಕ್ಕೆ ವರ್ಷಕ್ಕೆ ಕನಿಷ್ಠ ೫೦೦೦ ಡಾಲರ್ ಆದಾಯ – ಇವುಗಳನ್ನು ಒಳಗೊಂಡಿದ್ದವು. ೧೯೩೫ರಲ್ಲಿ ಲಾಂಗ್ ಕೊಲೆಯಾಗದೆ ಹೋಗಿದ್ದರೆ ಡೆಮೊಕ್ರಾಟಿಕ್ ಪಕ್ಷದ ನಾಯಕ ಸ್ಥಾನಕ್ಕೆ ಎಫ್.ಡಿ.ಆರ್‌ನ ಪ್ರತಿಸ್ಪರ್ಧಿಯಾಗಿರುತ್ತಿದ್ದನು.

ಫಾದರ್ ಚಾರ್ಲ್ಸ್ ಕಾಫ್‌ಲಿನ್ (Father Charles Coughlin) ಎಂಬ ರೋಮನ್ ಕ್ಯಾಥೊಲಿಕ್ ಪಾದ್ರಿ ಎಫ್.ಡಿ.ಆರ್‌ನ ಇನ್ನೊಬ್ಬ ಕಡುವಿರೋಧಿಯಾಗಿದ್ದನು. ಈತ ರೇಡಿಯೊ ಮೂಲಕ ತನ್ನ ವರ್ಣದ್ವೇಷ ಮತ್ತು ಫ್ಯಾಸಿಸ್ಟ್ (fascist) ಚಿಂತನಗಳನ್ನು ೧೦ ಮಿಲಿಯನ್ ಶ್ರೋತೃಗಳಿಗೆ ಪ್ರಸಾರ ಮಾಡುತ್ತಿದ್ದನು. ಇದರಿಂದ ಜನ ಅವನಿಗೆ 'ರೇಡಿಯೊ ಪಾದ್ರಿ' ಎಂದು ಕರೆಯುತ್ತಿದ್ದರು. ಮೊದಲು ಈ ಪಾದ್ರಿ ಎಫ್.ಡಿ.ಆರ್‌ನ ಬೆಂಬಲಿಗನಾಗಿದ್ದನು. ಆದರೆ ೧೯೩೫ರ ವೇಳೆಗೆ ಅವನು ತನ್ನ ಧೋರಣೆಯನ್ನು ಬದಲಾಯಿಸಿ ಬಂಡವಾಳಶಾಹಿ, ಹೊಸ ಹಂಚಿಕೆ, ಸಟ್ಟಾ ವ್ಯಾಪಾರ, ಯಹೂದ್ಯರು ಮತ್ತು ಕಮ್ಯೂನಿಸ್ಟರು – ಎಲ್ಲ ಆರ್ಥಿಕ ಮುಗ್ಗಟ್ಟಿಗೆ ಕಾರಣ ಎಂದು ಕುತರ್ಕ ಹೂಡಿ ತನ್ನ ಹರಿತವಾದ ಶೈಲಿಯಲ್ಲಿ ಖಂಡನೆಗಳನ್ನು ಪ್ರಸಾರ ಮಾಡುತ್ತಿದ್ದನು. ಇವನು ಇಟಲಿಯ ಫ್ಯಾಸಿಸಂ (fascism)ಗೆ ಮಾರುಹೋಗಿದ್ದನು. ಕೈಗಾರಿಕೆ ಮತ್ತು ಬ್ಯಾಂಕ್‌ಗಳನ್ನು ರಾಷ್ಟ್ರೀಕರಣಗೊಳಿಸಬೇಕು ಮತ್ತು ಕನಿಷ್ಠ ವೇತನವನ್ನು ಜಾರಿಗೆ ತರಬೇಕು ಎನ್ನುವುದು ಅವನ ಬೇಡಿಕೆಗಳಾಗಿದ್ದವು. ಈತನಿಗೆ ಕೆಳ ಮಧ್ಯಮ ವರ್ಗದವರಲ್ಲಿ ಹೆಚ್ಚಿನ ಅನುಯಾಯಿಗಳಿದ್ದರು.

'ಹೊಸ ಹಂಚಿಕೆ'ಯನ್ನು ವಿರೋಧಿಸಿ ರಾಜಕೀಯ ಪ್ರಭಾವ ಬೆಳೆಸಿಕೊಂಡಿದ್ದ ನಾಯಕರಲ್ಲೆಲ್ಲ ಅತ್ಯಂತ ಉದಾರಿಯಾಗಿದ್ದವನು ಡಾ. ಫ್ರಾನ್ಸಿಸ್ ಟೌನ್‌ಸೆಂಡ್ (Francis Townsend). ಇವನು ಮಂಡಿಸಿದ ವೃದ್ಧಾಪ್ಯ ಮತ್ತು ನಿವೃತ್ತಿ ವೇತನ ಯೋಜನೆಯಲ್ಲಿ ೬೦ ವರ್ಷ ಪ್ರಾಯ ಮೀರಿದ ಎಲ್ಲಾ ಪ್ರಜೆಗಳಿಗೆ ತಲಾ ೨೦೦ ಡಾಲರ್‌ಗಳ ಮಾಸಾಶನ

ವನ್ನು, ಅವರು ತಿಂಗಳೊಳಗೆ ಖರ್ಚು ಮಾಡಲೇಬೇಕೆಂಬ ಷರತ್ತಿನ ಮೇಲೆ, ಕೊಡಬೇಕೆಂದು ಸಲಹೆ ನೀಡಿದನು. ಈ ಷರತ್ತಿಗೆ ಕಾರಣ ಜನ ಹಣ ಖರ್ಚು ಮಾಡಿ ವಸ್ತುಗಳನ್ನು ಕೊಂಡಷ್ಟು ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ ಎಂಬ ಅವನ ನಂಬಿಕೆ. ಟೌನ್‌ಸೆಂಡ್ ರಾಷ್ಟ್ರದ ಸಂಪತ್ತನ್ನು ಸಮತೋಲನವಾಗಿ ಹಂಚಬೇಕು ಎನ್ನುವ ಗುರಿಯಿಟ್ಟುಕೊಂಡು 'ಸಂಪತ್ತು ಹಂಚಿಕೊಳ್ಳುವ ಸಮಾಜ' (share-our-wealth society) ಎಂಬ ಸಂಸ್ಥೆಯನ್ನು ಸ್ಥಾಪಿಸಿದನು. ವ್ಯಾಪಾರ ವ್ಯವಹಾರಗಳಲ್ಲಿ ತೀವ್ರ ಸ್ಪರ್ಧೆಯನ್ನು ಸಹಿಸಲಾರದವರು, ಹೆಚ್ಚಿನ ಆರ್ಥಿಕ ಭದ್ರತೆಯನ್ನು ನಿರೀಕ್ಷಿಸುವವರು ಮತ್ತು ವಯೋವೃದ್ಧರು ಅಧಿಕ ಸಂಖ್ಯೆಗಳಲ್ಲಿ ಅವನ ಅನುಯಾಯಿಗಳಾದರು. ಅವನ ಯೋಜನೆಯನ್ನು ಜನರು ಮೊದಲಿಗೆ ಪರಿಹಾಸ್ಯ ಮಾಡಿದರೂ ಕ್ರಮೇಣ ಅವನ ಅನುಯಾಯಿಗಳ ಸಂಖ್ಯೆ ಹಲವು ಮಿಲಿಯನ್ ಮಟ್ಟಕ್ಕೇರಿತು. ಇದರಿಂದ ಎಫ್.ಡಿ.ಆರ್ ಮೇಲೆ ರಾಜಕೀಯ ಒತ್ತಡ ಬಿದ್ದು ೧೯೩೫ರಲ್ಲಿ 'ಸಾಮಾಜಿಕ ಭದ್ರತಾ ಕಾನೂನು' (Social Security Act) ಜಾರಿಗೆ ಬಂತು. ಈ ಕಾನೂನು ಅನುಷ್ಠಾನಕ್ಕೆ ತಂದ ಯೋಜನೆಗಳು:

- ೬೫ ವರ್ಷ ಪ್ರಾಯದ ಎಲ್ಲರಿಗೂ ಫೆಡರಲ್ ಸರ್ಕಾರ ವೃದ್ಧಾಪ್ಯ ವಿಮೆ (old age insurance) ಕಡ್ಡಾಯವಾಗಿ ದೊರಕುವಂತೆ ಮಾಡುವುದು. ಮೃತರಾದ ಕಾರ್ಮಿಕರ ಆಶ್ರಿತರಿಗೆ (dependants) ಸವಲತ್ತು ಒದಗಿಸುವುದು. ಈ ಅನುಕೂಲಗಳನ್ನು ಏರ್ಪಡಿಸಲು ಬೇಕಾಗುವ ಹಣ, ಉದ್ಯೋಗಿಗಳು ಮತ್ತು ಉದ್ಯಮಿ/ಉದ್ದಿಮೆಗಾರರ (employers and employees) ಮೇಲೆ ವಿಧಿಸಿದ ಆದಾಯ ತೆರಿಗೆಯ ಮೂಲಕ ಫೆಡರಲ್ ಸರ್ಕಾರ ಶೇಖರಿಸುವ ವ್ಯವಸ್ಥೆ ಮಾಡಲಾಯಿತು. ಇಂದಿಗೂ ಇದು ಹಾಗೆಯೆ ನಡೆದಿದೆ.

- ಈ ಕಾನೂನಿನ ಪ್ರಕಾರ, ವರಮಾನವಿಲ್ಲದವರಿಗೆ ಹಣಸಹಾಯ, ವೃದ್ಧಾಪ್ಯ ವೇತನ, ತಾಯಂದಿರ ಮತ್ತು ಚಿಕ್ಕ ಮಕ್ಕಳ ಆರೋಗ್ಯ ಸಂರಕ್ಷಣೆ ಮತ್ತು ಅಂಧರು/ ಅಂಗವಿಹೀನರಿಗೆ ಆರ್ಥಿಕ ಸಹಾಯ – ಈ ಎಲ್ಲ ಕಾರ್ಯಕ್ರಮಗಳನ್ನು ಜಾರಿಗೆ ತರಲು ಪ್ರಾಂತೀಯ ಸರ್ಕಾರಗಳಿಗೆ ಫೆಡರಲ್ ಸರ್ಕಾರ ಸಹಾಯಧನ ನೀಡಬೇಕೆಂದು ನಿರ್ಧರಿಸಲಾಯಿತು.

- ಕೆಲಸ ಕಳೆದುಕೊಂಡವರಿಗೆ ಪರಿಹಾರವನ್ನು ಪ್ರಾಂತೀಯ ಸರ್ಕಾರಗಳು ನಿರ್ವಹಣೆ ಮಾಡಬೇಕು. ಇದಕ್ಕೆ ತಗಲುವ ಹಣವನ್ನು ಆದಾಯ ತೆರಿಗೆಯಿಂದ ಹೊಂದಿಸಬೇಕು.

ಈ ಎಲ್ಲಾ ಯೋಜನೆಗಳ ಮೇಲ್ವಿಚಾರಣೆ ಫೆಡರಲ್ ಸಾಮಾಜಿಕ ಭದ್ರತಾ ಸಮಿತಿಗೆ ಸೇರಿದ್ದು ಎಂದು ತೀರ್ಮಾನಿಸಲಾಯಿತು.

ಸಾಮಾಜಿಕ ಭದ್ರತಾ ನಿರ್ವಹಣೆ (Social Security Administration) ಕಾಲಕ್ರಮದಲ್ಲಿ ಪ್ರತಿಯೊಬ್ಬ ಪ್ರಜೆಗೂ ನಿರ್ದಿಷ್ಟವಾದ ಸಾಮಾಜಿಕ ಭದ್ರತಾ ಸಂಖ್ಯೆಗಳನ್ನು (Social Security numbers) ವಿತರಣೆ ಮಾಡಿತು. 'ಹೊಸ ಹಂಚಿಕೆ'ಯ ಯಾವ ಯೋಜನೆಯೂ ಈ ವ್ಯವಸ್ಥೆಯಷ್ಟು ವಿಸ್ತಾರವಾದುದಲ್ಲ. ಕಾಲಾಂತರದಲ್ಲಿ ಈ ಕಾನೂನು ಅನೇಕ ತಿದ್ದುಪಡಿಗಳಿಗೆ ಒಳಗಾಗಿ ಹೆಚ್ಚು ಹೆಚ್ಚು ಪ್ರಜೆಗಳಿಗೆ ಪರಿಹಾರ ನೀಡಬೇಕಾಗಿ ಬಂತು. ಈ ವ್ಯವಸ್ಥೆಯನ್ನು ಮುಂದುವರಿಸಲು ಆದಾಯ ತೆರಿಗೆಯನ್ನು ಹೆಚ್ಚಿಸಬೇಕಾಯಿತು. ಆದಾಗ್ಯೂ ಇದು ಪ್ರತಿ ಉದ್ಯೋಗಿ ತನ್ನ ಮತ್ತು ತನ್ನ ಆಶ್ರಿತರ ಭದ್ರ ಭವಿಷ್ಯಕ್ಕಾಗಿ ಕಡ್ಡಾಯವಾಗಿ ಉಳಿತಾಯ ಮಾಡಲು ಸಾಧ್ಯವಾಗುವಂಥ ಯೋಜನೆಯಾಗಿದೆ.

೧೯೩೬ರ ಚುನಾವಣೆ

'ಹೊಸ ಹಂಚಿಕೆ' ಉಂಟುಮಾಡಿದ ಬೃಹತ್ ಬದಲಾವಣೆಗಳು ಕೆಲವರನ್ನು ಕೋಪಾವಿಷ್ಟರನ್ನಾಗಿ ಮಾಡಿದವು. ಎಫ್.ಡಿ.ಆರ್ ವಿರೋಧಿಗಳು ತಮ್ಮ ಚುನಾವಣಾ ಪ್ರಚಾರದಲ್ಲಿ ಅವನು ಮಾಡಿದ ತಪ್ಪುಗಳನ್ನು ಎತ್ತಿಹಿಡಿದು ಅವನನ್ನು ಖಂಡಿಸಿದರು. ಎಫ್.ಡಿ.ಆರ್‌ನ ಹೊಸ ಹಂಚಿಕೆಯಿಂದ ಅಪಾರ ಹಣ ವೆಚ್ಚವಾಗಿ 'ರಾಷ್ಟ್ರೀಯ ಸಾಲ' (national debt) ಅಧಿಕವಾಯಿತು. ಈ ಹಂಚಿಕೆ ಸಮಾಜವಾದದೆಡೆಗೆ ದೇಶವನ್ನು ಕೊಂಡೊಯ್ಯುತ್ತಿದೆ; ಅದು ಕಾರ್ಮಿಕರ ಒಕ್ಕೂಟವನ್ನು ಬಲಗೊಳಿಸಿ ಅತಿರೇಕದ ಬೇಡಿಕೆಗಳನ್ನು ಪೂರೈಸುವಂತೆ ಅವರು ಒತ್ತಡ ಹಾಕುವುದು ಹೆಚ್ಚುತ್ತದೆ. ಎಫ್.ಡಿ.ಆರ್ ತನ್ನ ಪಕ್ಷ ನಿರಂತರವಾಗಿ ಅಧಿಕಾರದ ಸ್ಥಾನದಲ್ಲಿರುವಂತೆ ಮಾಡಲು ಒಂದು ರಾಜಕೀಯ ಯಂತ್ರವನ್ನು (political machine) – ಅಂದರೆ ಪ್ರಬಲ ರಾಜಕೀಯ ಪಟುಗಳ ಒಳಗುಂಪು – ಫೆಡರಲ್ ಸರ್ಕಾರದ ಹಣ ಉಪಯೋಗಿಸಿ ನಿರ್ಮಿಸುತ್ತಿದ್ದಾನೆ ಎಂದು ಆಪಾದಿಸಿದರು. ಮೇಲಾಗಿ 'ಹೊಸ ಹಂಚಿಕೆ' ಅನೇಕ ರೀತಿಯಲ್ಲಿ ರಾಜ್ಯಾಂಗವನ್ನು ಉಲ್ಲಂಘನೆ ಮಾಡಿದೆ ಎಂದು ಪ್ರಚಾರ ಮಾಡಿದರು.

ರಿಪಬ್ಲಿಕನ್ ಪಕ್ಷ ಎಫ್.ಡಿ.ಆರ್ ಪ್ರತಿಸ್ಪರ್ಧಿಯಾಗಿ ಅಧ್ಯಕ್ಷ ಸ್ಥಾನಕ್ಕೆ ಆಲ್‌ಫ್ರೆಡ್ ಲ್ಯಾಂಡನ್‌ನನ್ನು ಅಭ್ಯರ್ಥಿಯಾಗಿ ನಾಮಕರಣ ಮಾಡಿದರು. ಲ್ಯಾಂಡನ್ ಕಾನ್ಸಾಸ್ ಸಂಸ್ಥಾನದ ಗವರ್ನರ್ ಆಗಿದ್ದನು. ಡೆಮೊಕ್ರಾಟರು ಎಫ್.ಡಿ.ಆರ್.ನನ್ನು ಒಮ್ಮತದಿಂದ ಎರಡನೆಯ ಬಾರಿಗೆ ಅಧ್ಯಕ್ಷ ಪದವಿಗೆ ನಾಮಕರಣ ಮಾಡಿದರು. ಡೆಮೊಕ್ರಾಟಿಕ್ ಪಕ್ಷದ ಚುನಾವಣಾ ವೇದಿಕೆ ರಿಪಬ್ಲಿಕನ್ನರು ಪ್ರಚಾರ ಮಾಡುತ್ತಿದ್ದ ಆಪಾದನೆಗಳನ್ನೆಲ್ಲ ಅಲ್ಲಗಳೆದು ತಮ್ಮ ನಿಲುವನ್ನು ಸಮರ್ಥಿಸಿಕೊಂಡರು. ರಿಪಬ್ಲಿಕನ್ನರು ಎಫ್.ಡಿ.ಆರ್ ಸರ್ಕಾರದ ಗಾತ್ರವನ್ನು ಖಂಡಿಸಿ – ಗಾತ್ರದಲ್ಲಿ ದೊಡ್ಡದಾದ ಮಾತ್ರಕ್ಕೆ ಅದರ ಆಡಳಿತ ಸಮರ್ಪಕವಾಗಿರುತ್ತದೆ ಎನ್ನುವ ಭರವಸೆ ಇಲ್ಲ; ದೊಡ್ಡ ಗಾತ್ರದ ಸರ್ಕಾರದಿಂದ ಸಾರ್ವಜನಿಕರ

ಹಣ ವ್ಯರ್ಥವಾಗುತ್ತದೆ ಎಂದು ವಾದಿಸಿದರೆ ಅದಕ್ಕೆ ಉತ್ತರವಾಗಿ ಡೆಮೊಕ್ರಾಟರು ಪ್ರಾಂತೀಯ ಸರ್ಕಾರಗಳು ರಾಷ್ಟ್ರದ ಸಂದಿಗ್ಧ ಪರಿಸ್ಥಿತಿಯನ್ನು ಪರಿಹರಿಸಲು ಸಮರ್ಥವಾಗಿಲ್ಲ, ರಾಷ್ಟ್ರದ ಅಗತ್ಯಗಳನ್ನು ಪೂರೈಸುವ ಆರ್ಥಿಕ ಶಕ್ತಿ ಪ್ರಾಂತೀಯ ಸರ್ಕಾರಗಳಿಗಿಲ್ಲ ಎಂದು ಪ್ರತಿವಾದಿಸಿದರು.

ಎಫ್.ಡಿ.ಆರ್‌ನ ಚುನಾವಣೆ ಪ್ರಚಾರ ಮಹತ್ತರವಾಗಿತ್ತು. ಅವನು ದೇಶದಾದ್ಯಂತ ಪ್ರಯಾಣ ಮಾಡಿ, ಹೋದಲ್ಲೆಲ್ಲ ಅಪಾರ ಜನಸಂದಣಿಯನ್ನು ಎದುರುಗೊಳ್ಳುತ್ತಿದ್ದನು. ಹೀಗೆ ಅವನು ಸ್ವತಃ ಮುಂದಾಗಿ ಹೋಗಿ ಜನರನ್ನು ಭೇಟಿ ಮಾಡಿ ವಿಶಾಲವಾದ ಸಂಪರ್ಕಜಾಲವನ್ನು ಸೃಷ್ಟಿಸಿಕೊಂಡನು. ಲ್ಯಾಂಡನ್‌ನ ಚುನಾವಣಾ ಪ್ರಚಾರ ತೀರ ಕಳಪೆಯಾಗಿತ್ತು. ಅವನಿಗೆ ರಾಜಕೀಯ ಪ್ರಭಾವವಿರದೆ ಆಕರ್ಷಣೀಯ ವ್ಯಕ್ತಿತ್ವವನ್ನೂ ಹೊಂದಿರಲಿಲ್ಲ. ಚುನಾವಣೆಯಲ್ಲಿ ಎಫ್.ಡಿ.ಆರ್ ಅತ್ಯಂತ ಹೆಚ್ಚಿನ ಮತಗಳಿಂದ ಎದುರಾಳಿಯ ಮೇಲೆ ಭೂಮಿ ಕುಸಿದಂತೆ (land slide victory) ಅಮೋಘ ವಿಜಯ ಸಾಧಿಸಿದನು. ೧೮೫೮ರಿಂದ ಇದೇ ಮೊದಲು ಡೆಮೊಕ್ರಾಟಿಕ್ ಪಕ್ಷ ಬಹುಮತದ ಪಕ್ಷವಾಗಿ ಜಯಗಳಿಸಿದ್ದು[೪].

ಎಫ್.ಡಿ.ಆರ್ ತಾನು ಚುನಾವಣೆಯಲ್ಲಿ ಹಿಂದೆ ಯಾರೂ ಗಳಿಸದಷ್ಟು ಹೆಚ್ಚಿನ ಬಹುಮತದಿಂದ ಗೆದ್ದಿದ್ದು ಜನ ತನ್ನ 'ಹೊಸ ಹಂಚಿಕೆ'ಯನ್ನು ಒಪ್ಪಿ ಸಮ್ಮತಿ ನೀಡಿದ್ದಾರೆಂದು ಭಾವಿಸಿದನು. ನಂತರ ಅವನು ತನ್ನ ಯಶಸ್ಸಿನ ಪಥಕ್ಕೆ ತಡೆಯೊಡ್ಡುತ್ತಿದ್ದ ಶ್ರೇಷ್ಠ ನ್ಯಾಯಾಧೀಶರನ್ನು ತೆಗೆದು ಹಾಕುವ ಪ್ರಯತ್ನ ಪ್ರಾರಂಭಿಸಿದನು. ಎಫ್.ಡಿ.ಆರ್ ಶ್ರೇಷ್ಠ ನ್ಯಾಯಾಲಯವನ್ನು ಅಲಂಕರಿಸಿರುವ ಸಂಪ್ರದಾಯಸ್ಥ 'ಒಂಬತ್ತು ಮುದುಕರು' ಇನ್ನೂ ಕುದುರೆಗಾಡಿ ಕಾಲದಲ್ಲೇ ಜೀವಿಸುತ್ತಿದ್ದಾರೆ ಎಂದು ತನ್ನ ಅಸಮಾಧಾನ ವ್ಯಕ್ತಪಡಿಸಿದನು. ಆ ಒಂಬತ್ತು ಮುದುಕರಲ್ಲಿ ಆರು ಜನ ಎಪ್ಪತ್ತು ವರ್ಷದ ಮೇಲಿನ ಪ್ರಾಯದವರು. ಒಟ್ಟಿನಲ್ಲಿ ಇವರು 'ಹೊಸ ಹಂಚಿಕೆ'ಯ ಕೆಲವು ಅತಿಮುಖ್ಯ ಯೋಜನೆಗಳನ್ನು ನಿಷಿದ್ಧಗೊಳಿಸಿದ್ದರು. ಎಫ್.ಡಿ.ಆರ್‌ಗೆ ಶ್ರೇಷ್ಠ ನ್ಯಾಯಾಧೀಶರನ್ನು ನೇಮಿಸುವ ಅವಕಾಶ ಸಿಕ್ಕಿರಲಿಲ್ಲ. ತನ್ನ ಅಧಿಕಾರದ ಎರಡನೆಯ ಅವಧಿಯಲ್ಲಾದರೂ ಶ್ರೇಷ್ಠ ನ್ಯಾಯಾಲಯವನ್ನು

೪. ಈ ಚುನಾವಣೆಯಲ್ಲಿ ನಡೆದ ಒಂದು ಸ್ವಾರಸ್ಯದ ಸಂಗತಿ ಎಂದರೆ 'ದಿ ಲಿಟರರಿ ಡೈಜೆಸ್ಟ್' ಪತ್ರಿಕೆ ತಾನು ನಡೆಸಿದ ಜನಾಭಿಪ್ರಾಯ ಸಂಗ್ರಹಣೆಯ ಆಧಾರದ ಮೇಲೆ ಲ್ಯಾಂಡನ್ ಗೆಲ್ಲುತ್ತಾನೆಂದು ಪ್ರವಾದಿಸಿತು (predicted). ಈ ತಪ್ಪಿಗಾಗಿ ಪತ್ರಿಕೆ ನಿಂತೇ ಹೋಯಿತು! ಸಮಾಜವಿಜ್ಞಾನ ವಿಧಾನವನ್ನು ಅನುಸರಿಸಿ ವಿವಿಧ ಗುಂಪುಗಳನ್ನು ನಿಖರವಾಗಿ ಪ್ರತಿನಿಧಿಸುವ ಮಾದರಿಗಳನ್ನು (representative samples) ಆಯ್ಕೆ ಮಾಡಿ ಆ ಮಾದರಿಗಳಿಂದ ಅಂಕಿ ಅಂಶಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿದ ನಂತರ ಫಲಿತಾಂಶವನ್ನು 'ಗ್ಯಾಲಪ್ ಮತಗಣಿಕೆ' ಸಂಸ್ಥೆ (Gallop poll) ಈ ಚುನಾವಣೆಯ ಫಲಿತಾಂಶವನ್ನು ನಿಖರವಾಗಿ ಪ್ರವಾದಿಸಿತ್ತು. ಹೀಗಾಗಿ ಆ ಸಂಸ್ಥೆ ಯಶಸ್ಸು ಮತ್ತು ಕೀರ್ತಿ ಪಡೆದು ಈ ಕ್ಷೇತ್ರದಲ್ಲಿ ಹೆಸರಾಂತ ಸಂಸ್ಥೆಯಾಗಿ ಬೆಳೆಯಿತು.

ಪುನರ್‌ರಚಿಸಬೇಕೆಂದು ನಿರ್ಧರಿಸಿದ ಎಫ್.ಡಿ.ಆರ್ ಕಾಂಗ್ರೆಸ್ ತನ್ನ ಬೆಂಬಲಿಗರು ಆರು ಹೆಚ್ಚಿಗೆ ನ್ಯಾಯಾಧೀಶರನ್ನು ನೇಮಕ ಮಾಡಲು ಅಧ್ಯಕ್ಷನಿಗೆ ಅನುಮತಿ ನೀಡಬೇಕೆಂದು ಕೋರುವ ಮಸೂದೆಯನ್ನು ಮಂಡಿಸುವಂತೆ ಏರ್ಪಾಡು ಮಾಡಿದನು. ಈ ಆರು ಹೊಸ ನ್ಯಾಯಾಧೀಶರನ್ನು ಎಪ್ಪತ್ತು ವರ್ಷ ಪ್ರಾಯ ಮೀರಿದರೂ ನಿವೃತ್ತರಾಗಲು ನಿರಾಕರಿಸುತ್ತಿದ್ದ (ಎಫ್.ಡಿ.ಆರ್ ಅವರನ್ನು ಕರೆಯುತ್ತಿದ್ದಂತೆ) 'ಮುದಿಯ'ರ ಸ್ಥಾನಗಳಲ್ಲಿ ನೇಮಕ ಮಾಡಲು ನಿರ್ಧರಿಸಿದ್ದನು.

ಎಫ್.ಡಿ.ಆರ್ ಮೊದಲ ಬಾರಿಗೆ ತನ್ನ ಬೆಂಬಲಿಗರಿಂದ ಮತ್ತು ತನ್ನ ಪಕ್ಷದ ನಾಯಕರಿಂದ ಶ್ರೇಷ್ಠ ನ್ಯಾಯಾಲಯವನ್ನು ತನಗೆ ಬೇಕಾದ ನ್ಯಾಯಾಧೀಶರಿಂದ ತುಂಬಿಸುವ ತೀವ್ರಗಾಮಿ ಯೋಜನೆಗೆ ವಿರೋಧ ಎದುರಿಸಬೇಕಾಯಿತು. ಈ ವಿರೋಧವನ್ನು ಎದುರಿಸಲಾರದೆ ಎಫ್.ಡಿ.ಆರ್ 'ಮುದುಕರನ್ನು' ತೆಗೆದು ಹಾಕುವ ಯೋಜನೆಯನ್ನು ಕೈಬಿಡಬೇಕಾಯಿತು. ಯೋಜನೆ ಕೈಗೂಡದಿದ್ದರೂ ಅವನ ಉದ್ದೇಶ ಪರಿಣಾಮಕಾರಿಯಾಯಿತು. ಶ್ರೇಷ್ಠ ನ್ಯಾಯಾಲಯದ ಬಗ್ಗೆ ಕಾಂಗ್ರೆಸ್ಸಿನಲ್ಲಿ ಚರ್ಚೆ ನಡೆಯುತ್ತಿದ್ದಂತೆ, ಶ್ರೇಷ್ಠ ನ್ಯಾಯಾಲಯ 'ಹೊಸ ಹಂಚಿಕೆ'ಗೆ ಅನುಕೂಲವಾದ ಕೆಲವು ತೀರ್ಪುಗಳನ್ನು ನೀಡಿತು. ಇವುಗಳಲ್ಲಿ ಕೆಲವು ಇದೇ ನ್ಯಾಯಾಧೀಶರು ಸ್ವಲ್ಪ ಸಮಯದ ಹಿಂದೆ ತಿರಸ್ಕರಿಸಿದ್ದರು. ೧೯೩೭ರ ಪ್ರಾರಂಭದಲ್ಲಿ ಹಳೆಯ ಶ್ರೇಷ್ಠ ನ್ಯಾಯಾಧೀಶರುಗಳಲ್ಲಿ ಕೆಲವರು ಮರಣ ಹೊಂದಿದರು. ಇನ್ನು ಕೆಲವರು ರಾಜೀನಾಮೆ ಕೊಟ್ಟರು. ಹೀಗೆ ತೆರವಾದ ಸ್ಥಾನಗಳಿಗೆ ಎಫ್.ಡಿ.ಆರ್ 'ಹೊಸ ಹಂಚಿಕೆ'ಯನ್ನು ದೃಢವಾಗಿ ನಂಬಿ ಬೆಂಬಲಿಸುವವರನ್ನು ನೇಮಿಸಿ ಕಾರ್ಯಾಂಗ ಮತ್ತು ನ್ಯಾಯಾಂಗಗಳ ನಡುವೆ ಉಂಟಾಗಿದ್ದ ಬಿಕ್ಕಟ್ಟನ್ನು ಪರಿಹರಿಸಿದನು. ಈ ಬಿಕ್ಕಟ್ಟಿನಿಂದ ಒಂದು ಮುಖ್ಯವಾದ ಸಂಗತಿ ನಿದರ್ಶನಗೊಂಡಿತು. ಸರ್ಕಾರದ ಒಂದು ಶಾಖೆ ಮತ್ತೊಂದು ಶಾಖೆಯನ್ನು ಕಡೆಗಣಿಸಿ, ಒಂದು ಶಾಖೆಯ ನಿರ್ಣಯವನ್ನು ಇನ್ನೊಂದು ಶಾಖೆ ಬದಲಾಯಿಸುವುದಾಗಲಿ ಅಥವಾ ನಿಷೇಧಿಸುವುದಾಗಲಿ ಸಾಧ್ಯವಿಲ್ಲ ಎನ್ನುವುದು. ನ್ಯಾಯಾಂಗ ಸ್ವತಂತ್ರವಾಗಿರುವುದು ಬಹಳ ಅಗತ್ಯವೆನ್ನುವುದು ಎಲ್ಲರಿಗೂ ಮನದಟ್ಟಾಗಿತ್ತು. ನ್ಯಾಯಾಲಯಗಳು ಕೂಡ ಕಾಲಕ್ಕೆ ತಕ್ಕಂತೆ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗಳನ್ನು ಗಣನೆಗೆ ತಂದುಕೊಂಡು ಕಾನೂನುಗಳನ್ನು ವ್ಯಾಖ್ಯಾನಿಸಿ ತೀರ್ಪು ನೀಡಬೇಕಾದುದು ಅಗತ್ಯ.

೧೯೩೩ರ ಆರ್ಥಿಕ ಮುಗ್ಗಟ್ಟಿನಿಂದ ಪಾರಾಗಿ ಚೇತರಿಸಿಕೊಳ್ಳುತ್ತಿದ್ದ ಅಮೆರಿಕದ ಆರ್ಥಿಕ ವ್ಯವಸ್ಥೆಯನ್ನು ಸುಧಾರಿಸಲು ಫೆಡರಲ್ ಸರ್ಕಾರ ಕೆಲವು ಕ್ರಮಗಳನ್ನು ಕೈಗೊಂಡಿತು. ೧೯೩೬-೩೭ರ ಅವಧಿಯಲ್ಲಿ ಹಣದ ಮುಗ್ಗಟ್ಟನ್ನು ಬಗೆಹರಿಸಲು ಜಾರಿಗೆ ತಂದ ಯೋಜನೆಗಳಿಗೆ ಅಪಾರ ಹಣ ಖರ್ಚಾಗಿದ್ದರಿಂದ ಇನ್ನು ಮುಂದೆ ವೆಚ್ಚವನ್ನು ಕಡಿಮೆ ಮಾಡಲು ಸರ್ಕಾರ ನಿರ್ಧರಿಸಿತು. ಇದರ ಪರಿಣಾಮವಾಗಿ ಆರ್ಥಿಕ ವ್ಯವಸ್ಥೆ

ಇಳಿಮುಖವಾಗತೊಡಗಿತು (recession). ಇದನ್ನು ತಡೆಗಟ್ಟಲು ಫೆಡರಲ್ ಸರ್ಕಾರ 'ಹೊಸ ಹಂಚಿಕೆ'ಯ ಯೋಜನೆಗಳ ಮೇಲೆ ಖರ್ಚು ಮಾಡತೊಡಗಿತು. ಈ ಕ್ರಮದಿಂದ ಆರ್ಥಿಕ ವ್ಯವಸ್ಥೆ ಸಾಕಷ್ಟು ಚೇತರಿಸಿಕೊಂಡಿತು. ಆದರೆ ಎರಡನೆಯ ಜಾಗತಿಕ ಯುದ್ಧ ಪ್ರಾರಂಭವಾಗುವವರೆಗೂ ಪೂರ್ಣ ಉದ್ಯೋಗ (full employment)ವನ್ನು ತಲುಪುವು ದಕ್ಕೆ ಆಗಲಿಲ್ಲ. ೧೯೩೮ರಲ್ಲಿ ಕಾಂಗ್ರೆಸ್ಸಿನ ಚುನಾವಣೆಯಲ್ಲಿ ರಿಪಬ್ಲಿಕನ್ನರು ಪರಿಣಾಮಕಾರಿ ಯಾದ ವಿರೋಧ ಪಕ್ಷವಾಗಿ ಎಫ್.ಡಿ.ಆರ್‌ನ ಆಡಳಿತವನ್ನು ಸ್ಥಗಿತಗೊಳಿಸುವಷ್ಟರಮಟ್ಟಿಗೆ ವೃದ್ಧಿಗೊಂಡಿತು.

ಸರ್ಕಾರದ ಸಾಮರ್ಥ್ಯ ಹೆಚ್ಚಿಸಲು ಮತ್ತು ಉಳಿತಾಯ ಮಾಡಲು ಎಫ್.ಡಿ.ಆರ್ ಕಾರ್ಯಾಂಗದ ವಿವಿಧ ಇಲಾಖೆಗಳ ಪುನರ್‌ರಚನೆಗೆ ಕರೆಕೊಟ್ಟನು. ಈ ಕಾರ್ಯಕ್ರಮವನ್ನು ಕಾಂಗ್ರೆಸ್ ಅಂಗೀಕರಿಸಿತು. ವಿವಿಧ ಇಲಾಖೆಗಳ ಕಾರ್ಯಸಮರ್ಥತೆಯನ್ನು ಹೆಚ್ಚಿಸಲು, ೧೯೩೯ರಲ್ಲಿ 'ಹ್ಯಾಚ್ ಕಾನೂನ'ನ್ನು (Hatch Act) ಜಾರಿಗೆ ತರಲಾಯಿತು. ಕೆಳವರ್ಗದ ಫೆಡರಲ್ ಸರ್ಕಾರಿ ನೌಕರರು ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸುವುದನ್ನು ಹ್ಯಾಚ್ ಕಾನೂನು ನಿಷೇಧಿಸಿತು.

'ಹೊಸ ಹಂಚಿಕೆ' ಯೋಜನೆಗಳಲ್ಲಿ ಕಾರ್ಮಿಕರು ಒಕ್ಕೂಟಗಳನ್ನು ಸ್ಥಾಪಿಸಲು ಉತ್ತೇಜನ ನೀಡುವ ಕಾರ್ಯಕ್ರಮವೂ ಸೇರಿತ್ತು, ಕಾರ್ಮಿಕರ ಅಭಿವೃದ್ಧಿಗೆ ಸಂಬಂಧಪಟ್ಟ ಕೆಲವು ಕಾನೂನುಗಳನ್ನು ಎಫ್.ಡಿ.ಆರ್ ಆಡಳಿತದ ಅವಧಿಯಲ್ಲಿ ಜಾರಿಗೆ ತರಲಾಯಿತು. ಜಾನ್ ಲುವಿಸ್ (John Lewis) ಈ ಕಾನೂನುಗಳನ್ನು ತನ್ನ ಏಳಿಗೆಗೆ ಉಪಯೋಗಿಸಿ ಕೊಂಡು ಕುಶಲತೆ ಇಲ್ಲದ (unskilled) ಕಾರ್ಮಿಕರ ಉಗ್ರಗಾಮಿ ಒಕ್ಕೂಟದ (militant) ನಾಯಕ ಪಟ್ಟಕ್ಕೇರಿದನು. ಗಣಿ ಕಾರ್ಮಿಕರ ಒಕ್ಕೂಟದ ನಾಯಕನಾದ ಇವರು ಅಮೆರಿಕನ್ ಫೆಡರೇಷನ್ ಆಫ್ ಲೇಬರ್ (A F of L) ಅಂಗವಾಗಿ ಔದ್ಯೋಗಿಕ ರಚನಾಸಮಿತಿಯನ್ನು (Committee for Industrial organization) ಸ್ಥಾಪಿಸಿದನು. (ಈ ಸಮಿತಿಯನ್ನು ಸಿಐಓ (CIO) ಎಂದು ಕರೆಯುವುದು ವಾಡಿಕೆ.) ಆಯಾಯ ಕೈಗಾರಿಕೆಗೆ ಸಂಬಂಧಪಟ್ಟ ಏಕಮಾತ್ರ ಒಕ್ಕೂಟ ಆಯಾಯ ಕೈಗಾರಿಕೆಯಲ್ಲಿ ಅಸ್ತಿತ್ವಕ್ಕೆ ಬರಬೇಕಾದುದು ಅಗತ್ಯವೆಂದು ಲುವಿಸ್ ವಾದಿಸಿದನು. ಈ ಒಕ್ಕೂಟಗಳು ಎಲ್ಲ ಕಾರ್ಮಿಕರನ್ನು – ಕುಶಲತೆಯುಳ್ಳವರು ಮತ್ತು ಯಾವ ಕಸುಬು/ಕುಶಲತೆ ಇಲ್ಲದವರು – ಒಳಗೊಂಡಿರಬೇಕು ಎಂದು ಆಗ್ರಹಪಡಿಸಿದನು. ಆದರೆ ಏ ಎಫ್ ಆಫ್ ಎಲ್ (A F of L) ನಾಯಕ ವಿಲಿಯಂ ಗ್ರೀನ್ ಲುವಿಸ್‌ನ ಸಲಹೆಗಳನ್ನು ನಿರಾಕರಿಸಿದನು. ಆದ್ದರಿಂದ ಲುವಿಸನ ನಾಯಕತ್ವದಲ್ಲಿ ೧೯೩೮ರಲ್ಲಿ ಸಿಐಓ ಪ್ರತ್ಯೇಕ ಒಕ್ಕೂಟವಾಗಿ ರಚನೆಗೊಂಡಿತು. ಈ ಪ್ರತ್ಯೇಕ ಒಕ್ಕೂಟವನ್ನು 'ಔದ್ಯೋಗಿಕ ರಚನಾಕಾಂಗ್ರೆಸ್' (Congress for In-

dustrial Organization) ಎಂದು ಕರೆಯಲಾಯಿತು. (ಸಂಕ್ಷಿಪ್ತವಾಗಿ ಇದನ್ನು ಸಿಐಓ ಎಂದು ಕರೆಯುವುದು ರೂಢಿಯಾಗಿದೆ.)

ಸಿಐಓ ಒಂದು ಹೊಸ ಮುಷ್ಕರ ವಿಧಾನವನ್ನು ಅನುಷ್ಠಾನಕ್ಕೆ ತಂದಿತು. ಇದೇ 'ಬೈಠಕ್ ಮುಷ್ಕರ' (sit down strike). ಹಿಂದಿನಂತೆ ಕಾರ್ಮಿಕರು ಮುಷ್ಕರ ಕಾಲದಲ್ಲಿ ಕಾರ್ಖಾನೆಯ ಹೊರಗೆ ನಿಂತು ತಮ್ಮ ಕೆಲಸಗಳನ್ನು ಒಕ್ಕೂಟದ ಸದಸ್ಯರಲ್ಲದ ಬೇರೆ ಕೆಲಸಗಾರರಿಗೆ ಕೊಡುವುದನ್ನು ತಪ್ಪಿಸಲು ಪ್ರದರ್ಶನ ನಡೆಸುವ ಅವಶ್ಯಕತೆಯನ್ನು ಬೈಠಕ್ ಮುಷ್ಕರ ತಪ್ಪಿಸಿತು. ಇದರಲ್ಲಿ ಕಾರ್ಮಿಕರು ತಮ್ಮ ಕೆಲಸದ ಜಾಗದಲ್ಲಿ ಪಟ್ಟಾಗಿ ಕುಳಿತು ತಮ್ಮ ಬೇಡಿಕೆಗಳು ಈಡೇರಿಸುವಂತೆ ಕಂಪನಿ/ಕಾರ್ಖಾನೆಯ ನಿರ್ವಹಣಕಾರರ ಮೇಲೆ ಒತ್ತಡ ಹಾಕುವುದು ಈ ವಿಧಾನದ ವೈಶಿಷ್ಟ್ಯ. ೧೯೩೭ರಲ್ಲಿ ಮೋಟಾರು ಕಂಪನಿಗಳಲ್ಲಿ ಮತ್ತು ಉಕ್ಕಿನ ಕಾರ್ಖಾನೆಗಳಲ್ಲಿ ಕಾರ್ಮಿಕರು ಬೈಠಕ್ ಮುಷ್ಕರ ಹೂಡಿ ಗೆದ್ದರು. ಆದರೆ ಈ ಮುಷ್ಕರಗಳಲ್ಲಿ ಹಿಂಸಾಕೃತ್ಯಗಳು ಹೆಚ್ಚುತ್ತ ಹೋದವು. ಆದ್ದರಿಂದ ೧೯೩೯ರಲ್ಲಿ ಈ ಮುಷ್ಕರಗಳು ಖಾಸಗಿ ಆಸ್ತಿಯನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳುವುದರಿಂದ ನ್ಯಾಯಬಾಹಿರವಾದವು ಎಂದು ಶ್ರೇಷ್ಠ ನ್ಯಾಯಾಲಯ ತೀರ್ಪು ನೀಡಿ ಬೈಠಕ್ ಮುಷ್ಕರವನ್ನು ರದ್ದುಗೊಳಿಸಿತು.

ಹೊಸ ಹಂಚಿಕೆಯ ಕೊನೆಯ ಹಂತ

೧೯೩೭ರ ನಂತರ ಎಫ್.ಡಿ.ಆರ್‌ನ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿ ಯೋಜನೆಗಳನ್ನು ಕಾನೂನುಗಳ ಮೂಲಕ ಅನುಷ್ಠಾನಕ್ಕೆ ತರುವುದು ಕಷ್ಟವಾಗುತ್ತ ಹೋಯಿತು. ಆ ವರ್ಷ ಜಮೀನು ಗುತ್ತಿಗೆ ಕಾನೂನು, ಕಡಿಮೆ ಆದಾಯದವರಿಗೆ ವಸತಿ ನಿರ್ಮಾಣ ಮತ್ತು ಕೊಳಚೆ ಪ್ರದೇಶಗಳ ನಿರ್ಮೂಲನ ಕಾನೂನುಗಳನ್ನು ಕಾಂಗ್ರೆಸ್ ಅನುಮೋದಿಸಿತು. ಇವೆರಡು 'ಹೊಸ ಹಂಚಿಕೆ' ಕಾರ್ಯಕ್ರಮದ ಕೊನೆಯ ಕಾನೂನುಗಳಾದವು. ಇವುಗಳ ನಂತರದ ಪ್ರಯತ್ನಗಳನ್ನು ಸಾಂಪ್ರದಾಯಿಕ ಧೋರಣೆ ತಾಳಿದ್ದ ಕಾಂಗ್ರೆಸ್ ತಡೆಗಟ್ಟಿತು. ಫೆಡರಲ್ ಸರ್ಕಾರದ ಅಧಿಕಾರವನ್ನು ವಿಸ್ತಾರಗೊಳಿಸಿದ್ದಕ್ಕಾಗಿ ಮತ್ತು ಅವನ ವರ್ಣದ್ವೇಷ ವಿರುದ್ಧ ಹೇಳಿಕೆಗಳಿಗಾಗಿ ದಕ್ಷಿಣ ಪ್ರಾಂತಗಳ ಡೆಮೊಕ್ರಾಟರುಗಳು ಎಫ್.ಡಿ.ಆರ್‌ನನ್ನು ತಿರಸ್ಕಾರ ದೃಷ್ಟಿಯಿಂದ ಕಾಣು ತ್ತಿದ್ದರು. ಈ ಪ್ರಾಂತಗಳ ಸಂಪ್ರದಾಯಸ್ಥ ಡೆಮೊಕ್ರಾಟರು ಉತ್ತರದ ರಿಪಬ್ಲಿಕನ್ನರೊಡನೆ ಕೂಡಿಕೊಂಡಿದ್ದು ರಾಷ್ಟ್ರದ ಮನೋಭಾವ ಬದಲಾಗುತ್ತಿರುವುದರ ಸಂಕೇತವಾಗಿತ್ತು.

ಇದೇ ಸಮಯದಲ್ಲಿ ೧೯೩೫-೩೭ರ ಅವಧಿಯಲ್ಲಿ ಚೇತರಿಸಿಕೊಂಡು ಮುಂದು ವರಿಯುತ್ತಿದ್ದ ಆರ್ಥಿಕ ವ್ಯವಸ್ಥೆ ಪುನಃ ಹಿಂದಕ್ಕೆ ಸರಿಯಲು ಪ್ರಾರಂಭಿಸಿತು (recession). ವ್ಯಾಪಾರ/ಉದ್ಯಮಗಳಲ್ಲಿ ಭರವಸೆ ಕಡಿಮೆಯಾಯಿತು. ಸಟ್ಟಾ ಮಾರುಕಟ್ಟೆ

ಪುನಃ ಅವನತಿಗೊಳಗಾಯಿತು. ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತ ಹೋಗಿ, ಪರಿಸ್ಥಿತಿ ಹಿಂದಿನ ಹಣದ ಮುಗ್ಗಟ್ಟಿನ ಅತ್ಯಂತ ಕಠಿಣ ದಿನಗಳನ್ನು ಹೋಲುತ್ತಿತ್ತು. ಆರ್ಥಿಕ ಅವನತಿಯನ್ನು ತಡೆಗಟ್ಟಲು ಎಫ್.ಡಿ.ಆರ್ ಹಲವಾರು ವಿಧಗಳಲ್ಲಿ ಪ್ರಯತ್ನಿಸಿದನು. ಮೊದಲು ಸಮತೋಲನದ ಬಜೆಟ್ – ಆಯವ್ಯಯ ಅಂದಾಜು ಪಟ್ಟಿ – ತಯಾರಿಸಲು ಯತ್ನಿಸಿದನು. ಇದು ಕೂಡ ವ್ಯಾಪಾರ/ಉದ್ಯಮಗಳಲ್ಲಿ ಭರವಸೆ ಮೂಡಿಸಲಿಲ್ಲ. ಈ ಪ್ರಯತ್ನ ವಿಫಲಗೊಂಡರೂ ಎದೆಗೆಡದೆ ಎಫ್.ಡಿ.ಆರ್ ಹೊಸ ಲೋಕೋಪಯೋಗಿ ಯೋಜನೆಗಳನ್ನು ಪ್ರಾರಂಭಿಸಲು ಹಣ ಮಂಜೂರು ಮಾಡುವಂತೆ ಕಾಂಗ್ರೆಸ್ಸಿಗೆ ಕೋರಿಕೆ ಸಲ್ಲಿಸಿದನು. ಹಣ ಮಂಜೂರಾಗಿ ಲೋಕೋಪಯೋಗಿ ಯೋಜನೆಗಳಲ್ಲಿ ಸಹಸ್ರಾರು ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿ ಒಂದು ವರ್ಷದೊಳಗೆ ಆರ್ಥಿಕ ವ್ಯವಸ್ಥೆ ಇಳಿಮುಖವಾಗುವುದು ನಿಂತು ನಿರುದ್ಯೋಗಿಗಳ ಸಂಖ್ಯೆ ಬಹಳಷ್ಟು ಕಡಿಮೆಯಾಯಿತು. ಆದರೆ ಅಮೆರಿಕ ಎರಡನೆಯ ಜಾಗತಿಕ ಯುದ್ಧ ಪ್ರಾರಂಭವಾಗುವ ತನಕ ಉಚ್ಛ್ರಾಯ ಸ್ಥಿತಿಗೇರಲು ಸಾಧ್ಯವಾಗಲಿಲ್ಲ. ೧೯೪೦ರಲ್ಲಿ ಅಂದಾಜು ೧೦ ಮಿಲಿಯನ್ ಅಮೆರಿಕನ್ನರು ನಿರುದ್ಯೋಗಿಗಳಾಗಿದ್ದರು.

'ಹೊಸ ಹಂಚಿಕೆ'ಯ ಕೊನೆಯ ಹಂತದಲ್ಲಿ ಎಫ್.ಡಿ.ಆರ್ ಜಾರಿಗೆ ತಂದ ಕೆಲವು ಸುಧಾರಣೆಗಳು – ನ್ಯಾಯವಾದ ಪರಿಶ್ರಮ ಪರಿಮಾಣ ಕಾಯಿದೆ (fair labor standards) – ಇದು ಕಾರ್ಮಿಕರ ಕೆಲಸದ ವೇಳೆಯನ್ನು ವಾರಕ್ಕೆ ೪೦ ಘಂಟೆಗಳಿಗೆ ಇಳಿಸಿ ಘಂಟೆಗೆ ೪೦ ಸೆಂಟ್ ಕನಿಷ್ಠ ವೇತನವನ್ನು ನಿಗದಿ ಮಾಡಿತು. ೧೬ ವರ್ಷದ ಕೆಳಗಿನ ಮಕ್ಕಳ ದುಡಿತವನ್ನು ನಿಷೇಧಿಸಿತು. ನಿರ್ದಿಷ್ಟ ಅವಧಿಗಿಂತ ಹೆಚ್ಚಿಗೆ ಕೆಲಸ ಮಾಡುವವರೆಗೆ ವೇತನದ ಮೇಲೆ ಹೆಚ್ಚಿನ ಅವಧಿ ಕೆಲಸದ ಪರಿಹಾರ ಸೇರಿಸಿಕೊಡಬೇಕೆಂಬ ನಿಯಮವನ್ನು ಕಡ್ಡಾಯಗೊಳಿಸಿತು. ಭೂಮಿ ಬಂಜರು ಬೀಳದಂತೆ ಸಂರಕ್ಷಿಸುವ ಯೋಜನೆಯನ್ನು ವ್ಯವಸಾಯ ವ್ಯವಸ್ಥಾಪನೆ ಕಾಯಿದೆ (Agricultural Adjustment Act) ಜಾರಿಗೆ ತಂದಿತು. ವ್ಯವಸಾಯ ಉತ್ಪನ್ನಗಳ ಬೆಲೆ ಕುಸಿಯದಂತೆ ಮಾಡಲು ಅಧಿಕ ಫಸಲು ಬೆಳೆಯದೆ ಸಹಕರಿಸಿದ ರೈತರಿಗೆ ಪರಿಹಾರ ನೀಡುವಂತೆ ಈ ಕಾಯಿದೆ ನಿರ್ದೇಶಿಸಿತು.

ವ್ಯಾಪಕವಾದ ನಿಕ್ಷೇಪ ನಿರೋಧ ಪ್ರಚಾರದೊಂದಿಗೆ 'ಹೊಸ ಹಂಚಿಕೆ' ಕೊನೆಗೊಂಡಿತೆಂದರೆ ತಪ್ಪಾಗಲಾರದು. ಈ ನಿಕ್ಷೇಪ ಸಮಸ್ಯೆಯನ್ನು ಬಗೆಹರಿಸಲು 'ರಾಷ್ಟ್ರೀಯ ಆರ್ಥಿಕ ಸಮಿತಿ'ಯನ್ನು ಕಾಂಗ್ರೆಸ್ ತಾತ್ಕಾಲಿಕವಾಗಿ ಅಂಗೀಕರಿಸಿತು. ಈ ಕಾಯಿದೆಗಳನ್ನು ಇನ್ನೂ ಹೆಚ್ಚು ಬಿಗಿಗೊಳಿಸುವಂತೆ ಈ ಸಮಿತಿ ತನ್ನ ಅಂತಿಮ ವರದಿಯಲ್ಲಿ ಸಲಹೆ ನೀಡಿತು. ಈ ಸಮಯದಲ್ಲೇ ಸರ್ಕಾರದ ನ್ಯಾಯಾಂಗ ಇಲಾಖೆ (Justice department) ೬೨ ಏಕಸ್ವಾಮ್ಯತೆಗಳ ಮೇಲೆ ನಿಕ್ಷೇಪ ನಿರೋಧ ಕಟ್ಟಳೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿತು.

ಆ ಕಟ್ಟಳೆಗಳು ಎರಡನೆಯ ಜಾಗತಿಕ ಯುದ್ಧ ಪ್ರಾರಂಭವಾಗುವವರೆಗೂ ನಡೆಯುತ್ತಲಿದ್ದವು.

೧೯೩೮ರ ಕಾಂಗ್ರೆಸ್ ಚುನಾವಣೆಯಲ್ಲಿ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಗಳು ಅನೇಕ ಕಡೆಗಳಲ್ಲಿ ಸೋಲನ್ನು ಅನುಭವಿಸಬೇಕಾಯಿತು. ಕಾಂಗ್ರೆಸ್ ಡೆಮೊಕ್ರಾಟರ ಹಿಡಿತದಲ್ಲಿದ್ದರೂ ಕೂಡ ರಿಪಬ್ಲಿಕನ್ನರು ಕೆಲವು ಮುಖ್ಯವಾದ ಚುನಾವಣೆಗಳಲ್ಲಿ ಗೆದ್ದಿದ್ದರು. ಎಫ್.ಡಿ.ಆರ್ ವಿರೋಧಿಗಳಾದ ಸಂಪ್ರದಾಯಸ್ಥ ಡೆಮೊಕ್ರಾಟರು ಚುನಾಯಿತರಾಗಿದ್ದರು. ಪರಿಣಾಮವಾಗಿ ಉತ್ತರ ಪ್ರಾಂತಗಳ ರಿಪಬ್ಲಿಕನ್ನರು ದಕ್ಷಿಣ ಪ್ರಾಂತಗಳ ಸಂಪ್ರದಾಯಸ್ಥ ಡೆಮೊಕ್ರಾಟರೊಡನೆ ಸೇರಿಕೊಂಡು ಒಂದು ಪ್ರಬಲವಾದ ಮಿಶ್ರ ರಾಜಕೀಯ ಸಂಘಟನೆ ರಚಿತಗೊಂಡಿತು.

೧೯೩೦ರ ದಶಕದಲ್ಲಿ ಮಹಿಳೆಯರು ಮತ್ತು ಅಲ್ಪಸಂಖ್ಯಾತರು

ಮಹಾ ಆರ್ಥಿಕ ಮುಗ್ಗಟ್ಟು ಮಹಿಳೆಯರ ಬದುಕನ್ನು ದುಸ್ತರಗೊಳಿಸಿತ್ತು. ಅಲ್ಲಿ ಇಲ್ಲಿ ಕೆಲವು ಮಹಿಳೆಯರು ಸರ್ಕಾರದ ದೊಡ್ಡ ಹುದ್ದೆಗಳಿಗೆ ಏರಿ ಹೆಸರುವಾಸಿಯಾಗಿದ್ದರು. ಶ್ರೀಮತಿ ರೂಸ್‌ವೆಲ್ಟ್ ಅತ್ಯಂತ ಪ್ರಭಾವಶಾಲಿಯಾದ 'ಮೊದಲನೆಯ ಮಹಿಳೆ' (First Lady)ಯಾಗಿದ್ದಳು. ಆದರೆ ಹೆಂಗಸರ ರಾಜಕೀಯ ಪ್ರಭಾವ ಅವರು ಪ್ರಭಾವಶಾಲಿ ನಾಯಕರೊಡನೆ ಬೆಳೆಸಿಕೊಂಡ ರಾಜಕೀಯ ಸಂಬಂಧದ ಮೇಲೆ ಆಧಾರಗೊಂಡಿತ್ತು. ಅವರು ಸ್ವತಃ ಪ್ರಭಾವಶಾಲಿಗಳಾಗಲು ಕಷ್ಟವಾಗಿತ್ತು. ಕುಟುಂಬದ ಆದಾಯ ಹೆಚ್ಚಿಸಲು ಒಬ್ಬಳು ಕೆಲಸ ಹುಡುಕಿದರೆ ಸಿಗುತ್ತಿದ್ದುದು ಅರ್ಧದಿನದ ಕೆಲಸ, ವರ್ಷದ ಕೆಲವು ನಿರ್ದಿಷ್ಟ ಸಮಯಗಳಲ್ಲಿ ಮಾತ್ರ. ಗುರುತರ ಜವಾಬ್ದಾರಿ ಇಲ್ಲದ, ಬೇಕಾದಾಗ ಬಿಟ್ಟು ಹೋಗಬಹುದಾದಂತಹ, ಅರ್ಥವ್ಯವಸ್ಥೆಯ ಅಂಚಿನ ಕೆಲಸಗಳು (marginal) ಹೆಂಗಸರಿಗೆ ಮೀಸಲಾಗಿದ್ದ ಕೆಲಸಗಳು. ೧೯೩೦ರ ದಶಕದ ಕೊನೆಯಲ್ಲಿ ಗಂಡಸರಿಗಿಂತ ಅಧಿಕ ಸಂಖ್ಯೆಯ ಹೆಂಗಸರು ನಿರುದ್ಯೋಗಿಗಳಾಗಿದ್ದರು. ಲಾಗಾಯ್ತಿನಿಂದಲೂ ಮಹಿಳೆಯರಿಗೆ ಕೆಲವು ಕ್ಷೇತ್ರಗಳಲ್ಲಿ ಮಾತ್ರ ಕೆಲಸಕ್ಕೆ ಅವಕಾಶವಿರುತ್ತಿತ್ತು – ಮನೆಗೆಲಸ, ಬಟ್ಟೆ ಗಿರಣಿ ಕೆಲಸ, ಶಿಕ್ಷಕವೃತ್ತಿ ಮತ್ತು ಶುಶ್ರೂಷೆ ಮಾಡುವ ಕೆಲಸ (nursing). ಫೆಡರಲ್ ಮತ್ತು ಸಂಸ್ಥಾನ ವೇತನ ಮತ್ತು ಕೆಲಸದ ಅವಧಿಯನ್ನು ನಿಯಂತ್ರಿಸುವ ಕಾಯಿದೆ ಗಂಡಸರು ಮತ್ತು ಹೆಂಗಸರಿಗೆ ಸಮನಾಗಿ ಅನ್ವಯವಾಗುತ್ತಿತ್ತು. ಹೊಸ ಸಿಐಓ ಒಕ್ಕೂಟಕ್ಕೆ ಇಬ್ಬರೂ ಸೇರಬಹುದಾಗಿತ್ತು. ಆದಾಗ್ಯೂ ೧೯೩೯ರಲ್ಲಿ ಅನೇಕ ಸಂಸ್ಥಾನಗಳಲ್ಲಿ ಕನಿಷ್ಠ ವೇತನ ಮತ್ತು ಕೆಲಸದ ಪರಮಾವಧಿ (maximum hours of work)ಯನ್ನು ನಿಗದಿ ಮಾಡಿರುವ ಕಾಯಿದೆಗಳನ್ನು ಇನ್ನೂ ಜಾರಿಗೆ ತಂದಿರಲಿಲ್ಲ. ಅಲ್ಲದೆ ಕಾರ್ಮಿಕರ ಒಕ್ಕೂಟಕ್ಕೆ ಹೆಂಗಸರು ಹೆಚ್ಚಾಗಿ ಸೇರುತ್ತಿರಲಿಲ್ಲ.

ರಾಷ್ಟ್ರದ ಅಲ್ಪ ಸಂಖ್ಯಾತರ ಗುಂಪುಗಳ ಮೇಲೆ 'ಹೊಸ ಹಂಚಿಕೆ' ಮಿಶ್ರ ಪರಿಣಾಮ ಬೀರಿತ್ತು. ಸಹಸ್ರಾರು ವಲಸೆಗಾರರು ಅಮೆರಿಕದ ಸಮಾಜದಲ್ಲಿ ಹೊಂದಿಕೊಂಡಿದ್ದರು. ಕೆಲವು ವಿಶಿಷ್ಟ ಸಂಸ್ಕೃತಿಯುಳ್ಳ ಸಮುದಾಯಗಳು – ಇಟಾಲಿಯನ್ನರು ಮತ್ತು ಯಹೂದ್ಯರು – ಹೆಚ್ಚು ಪ್ರಾಬಲ್ಯ ಗಳಿಸಿ ಸಮುದಾಯದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದವು. ಕರಿಯ ಅಮೆರಿಕನ್ನರ ಪ್ರಗತಿ ಸ್ಥಗಿತಗೊಂಡಿತ್ತು. ಕಾರ್ಯಪ್ರಗತಿ ನಿರ್ವಹಣಾ ಸಮಿತಿ ಮತ್ತು ಲೋಕೋಪಯೋಗಿ ನಿರ್ವಹಣಾ ಸಮಿತಿಗಳು ಕರಿಯರಿಗೆ ನೆರವು ನೀಡಿದರೂ ಸಹ ಬಿಳಿಯರು ಕರಿಯರ ಅಭಿವೃದ್ಧಿಯಲ್ಲಿ ಆಸಕ್ತಿ ವಹಿಸಲಿಲ್ಲ. ಕರಿಯರಿಗೆ ನಾಗರಿಕ ಹಕ್ಕುಗಳನ್ನು ಮತ್ತು ಆರ್ಥಿಕ ಅಭಿವೃದ್ಧಿಯ ಅವಕಾಶಗಳನ್ನು ಕಲ್ಪಿಸುವುದು ಅವರಿಗೆ ಬೇಕಿರಲಿಲ್ಲ. ಕೆಲವು ಹೊಸ ಹಂಚಿಕೆಯ ಯೋಜನೆಗಳು – ರಾಷ್ಟ್ರೀಯ ಕೈಗಾರಿಕಾ ಪುನಃಶ್ಚೇತನ ಕಾಯಿದೆ (NRA), ವ್ಯವಸಾಯ ವ್ಯವಸ್ಥಾಪನೆ ಕಾನೂನು (AAA) ಮತ್ತು ಟೆನ್ನಸ್ಸೀ ಕಣಿವೆ ನಿರ್ವಹಣೆ (TVA) – ವರ್ಣದ್ವೇಷವನ್ನು ಹೆಚ್ಚಿಸಿದವು. ಹೊಸ ಹಂಚಿಕೆಯ ನಿರ್ಮಾತೃಗಳು ಕೂಡ ಕರಿಯರ ಸಮಸ್ಯೆ ಬಡತನ; ಎಲ್ಲಾ ಬಡವರಂತೆ ಇವರೂ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿಂದ ಬಡವರು ಎಂದು ನಂಬಿದ್ದರು. ಈ ನಿರ್ಮಾತೃಗಳು ವರ್ಣದ್ವೇಷವನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಮೆಕ್ಸಿಕನ್ ಅಮೆರಿಕನ್ನರು ಆರ್ಥಿಕ ಮುಗ್ಗಟ್ಟಿನ ಹೊಡೆತಕ್ಕೆ ಸಿಕ್ಕಿ ಜರ್ಜರಿತರಾಗಿದ್ದರು. ೧೯೨೦ರಲ್ಲಿ ಯೂರೋಪಿನಿಂದ ಬರುವ ವಲಸೆಗಾರರ ಸಂಖ್ಯೆಯನ್ನು ನಿಯಂತ್ರಣ ಗೊಳಿಸಿದ್ದರಿಂದ ಮೆಕ್ಸಿಕೊದಿಂದ ಬರುವ ವಲಸೆಗಾರರಿಗೆ ಬೇಡಿಕೆ ಬಹಳ ಹೆಚ್ಚಿತ್ತು. ಆದರೆ ಮಹಾ ಮುಗ್ಗಟ್ಟಿನ ದಿನಗಳಲ್ಲಿ ಅಮೆರಿಕನ್ನರಿಗೇ ಕೆಲಸ ಸಿಗುವುದು ದುಸ್ಸಾಧ್ಯ ವಾಗಿದ್ದಾಗ ಮೆಕ್ಸಿಕನ್ ವಲಸೆಗಾರರ ಸ್ಥಿತಿ ಚಿಂತಾಜನಕವಾಯಿತು. ನಿರ್ಗತಿಕರಾದ ಮೆಕ್ಸಿಕನ್ನರಲ್ಲಿ ಅನೇಕರು ಇಲ್ಲಿನ ಅನಿಶ್ಚಯ ಪರಿಸ್ಥಿತಿಯಿಂದಾಗಿ ತಮ್ಮ ಸ್ವದೇಶಕ್ಕೆ ಮರಳಿದರು. ಇನ್ನು ಕೆಲವರನ್ನು ಗಡೀಪಾರು (deportation) ಮಾಡಲಾಯಿತು. ಅಮೆರಿಕದಲ್ಲಿ ಉಳಿದುಕೊಂಡ ಮೆಕ್ಸಿಕನ್ನರು ತಮ್ಮದೇ ಆದ ಪ್ರತ್ಯೇಕ ಪ್ರಪಂಚದಲ್ಲಿ ಕೂಪ ಮಂಡೂಕಗಳಂತೆ ಬದುಕಬೇಕಾಯಿತು. ಬಿಳಿಯರ ಮತ್ತು ಮೆಕ್ಸಿಕನ್ನರ ನಡುವೆ ದಾಟಲಾರದ ಕಂದಕ ಏರ್ಪಟ್ಟಿತ್ತು. ಮೆಕ್ಸಿಕನ್ನರ ಬಡತನ ಅವರ ಅನಿವಾರ್ಯ ಅಗತ್ಯಗಳನ್ನು ಪೂರೈಸಲಾರದಷ್ಟು ತೀವ್ರವಾಗಿತ್ತು. 'ಕೈಯಿಂದ ಬಾಯಿಗೆ' ಎನ್ನುವ ಮಾತು ಅವರ ಬದುಕಿನ ಬವಣೆಯನ್ನು ಯಥಾವತ್ತಾಗಿ ಚಿತ್ರಿಸುತ್ತದೆ. ಹೊಸ ಹಂಚಿಕೆಯ ಯೋಜನೆಗಳು ಇವರ ಪಾಲಿಗೆ ಇದ್ದೂ ಇರದಂತಾಗಿದ್ದವು.

ಹೊಸ ಹಂಚಿಕೆಯ ಮಹತ್ವ

ಅಮೆರಿಕದ ಇತಿಹಾಸದಲ್ಲೇ ಅತಿ ಮಹತ್ತರ ಆರ್ಥಿಕ ಕ್ರಾಂತಿಯನ್ನು ಸಾಂಪ್ರದಾಯಿಕ ಧೋರಣೆ ಮತ್ತು ಹೊಸ ವಿಧಾನಗಳಿಂದ ಎದುರಿಸಿದ ಕೀರ್ತಿ 'ಹೊಸ ಹಂಚಿಕೆ'ಯ

ನಿರ್ಮಾತೃಗಳಿಗೆ ಸಲ್ಲಬೇಕು. ಈ ಹಂಚಿಕೆಯ ಬಹುತೇಕ ಕಾಯಿದೆಗಳು ಆಶಾಪೂರ್ಣ ವಾಗಿದ್ದು, ಅಮೆರಿಕನ್ನರಲ್ಲಿ ಕಮರಿ ಹೋಗಿದ್ದ ಸ್ವಾಭಿಮಾನವನ್ನು ಧ್ಯೇಯ ಧೋರಣೆಗಳನ್ನು ಸಾಧಿಸುವ ಸವಾಲಿನ ಮೂಲಕ ಪುನಃಶ್ಚೇತನಗೊಳಿಸಿ, ದೇಶ ತನ್ನ ಆರ್ಥಿಕ ಮುಗ್ಗಟ್ಟನ್ನು ತಾನೇ ಬಗೆಹರಿಸಿಕೊಳ್ಳಬಲ್ಲುದು ಎಂಬ ಭರವಸೆಯನ್ನು ಜನರಲ್ಲಿ ಮೂಡಿಸಿದವು.

ಹೊಸ ಹಂಚಿಕೆಯನ್ನು ಧ್ಯೇಯವಾಗಿಟ್ಟುಕೊಂಡು ರಚಿತವಾದ ಎಫ್.ಡಿ.ಆರ್‌ನ ಸರ್ಕಾರವನ್ನು ಕೂಲಂಕಷವಾಗಿ ಅವಲೋಕಿಸಿದರೆ ನಮಗೆ ಕಂಡುಬರುವುದು ಹಿಂದಿನ ಆಡಳಿತಗಾರರ, ರಾಜಕಾರಣಿಗಳ ಮತ್ತು ಸಮಾಜಸುಧಾರಕರ ನನಸಾಗದ ಕನಸುಗಳು. ಆ ಕನಸುಗಳನ್ನು ನನಸಾಗಿಸಲು ಕೈಗೊಂಡ ಪ್ರಯೋಗ ಈ 'ಹೊಸ ಹಂಚಿಕೆ'. ಇದನ್ನು ಬಿಡಿಸಿ ನೋಡಿದರೆ ನಮಗೆ ಕಾಣುವುದು 'ಹೊಸ ಶೀಶೆಯಲ್ಲಿರುವ ಹಳೆಯ ಮದ್ಯ' (old wine in a new bottle). ಹೊಸ ಹಂಚಿಕೆಗಳ ಸೂತ್ರಗಳ ಮೂಲ:

- ಜೆಫರ್‌ಸನ್‌ನ ಸರ್ವೋದಯ ಸರ್ಕಾರ
- ಜಾಕ್‌ಸನ್ ಪ್ರತಿಪಾದಿಸಿದ ಸಮಾನತೆಯ ಆಧಾರದ ಮೇಲೆ ಸಮಾಜದ ಪುನರ್ರಚನೆ
- ೧೯ನೆಯ ಶತಮಾನದ ಕ್ರೈಸ್ತಮತ ಪ್ರಚಾರಕರ ಸಾಮಾಜಿಕ ಪವಿತ್ರ ಗ್ರಂಥದ (social gospel) ಸೂಕ್ತಿಗಳು: ಸರ್ಕಾರ ಇರುವುದು ಸಾಮಾಜಿಕ ಹಿತರಕ್ಷಣೆಗಾಗಿ; ಅದರ ಕಾರ್ಯಾಚರಣೆ ನೀತಿಯುತವಾಗಿರಬೇಕು
- ಪಾಪ್ಯುಲಿಸ್ಟ್ ಪಕ್ಷದ ಬೇಡಿಕೆಗಳು; ಹಣದ ಚಲಾವಣೆ ಹೆಚ್ಚಿಸುವುದು ಮತ್ತು ಸಟ್ಟಾ ಮಾರುಕಟ್ಟೆಯನ್ನು ನಿಯಂತ್ರಿಸುವುದು

ಹೊಸ ಹಂಚಿಕೆ ಹಳೆಯ ಧೋರಣೆಗಳನ್ನು ಒಳಗೊಂಡಿದ್ದರೂ ಅನೇಕ ರೀತಿಯಲ್ಲಿ ಅದು ಹಿಂದಿನ ಎಲ್ಲಾ ಸರ್ಕಾರಗಳಿಗಿಂತ ಭಿನ್ನವಾಗಿದ್ದು ತನ್ನದೇ ಆದ ವೈಶಿಷ್ಟ್ಯ ಪಡೆದಿತ್ತು. ಸಾಮಾನ್ಯ ಜನರ ದಿನನಿತ್ಯದ ಅಗತ್ಯಗಳನ್ನು ಪೂರೈಸುವ ಜವಾಬ್ದಾರಿಯನ್ನು ಹಿಂದಿನ ಯಾವ ಸರ್ಕಾರವೂ ವಹಿಸಿಕೊಂಡಿರಲಿಲ್ಲ. ಎಫ್.ಡಿ.ಆರ್ ವಿರೋಧಿಗಳು ಆಪಾದಿಸಿದಂತೆ 'ಹೊಸ ಹಂಚಿಕೆ' ಸಮಾಜವಾದವನ್ನು ಅಮೆರಿಕನ್ನರ ಮೇಲೆ ಬಲಾತ್ಕಾರವಾಗಿ ಹೇರುವ ಪ್ರಯತ್ನವಾಗಿರಲಿಲ್ಲ. ಇದು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಜನಸಾಮಾನ್ಯರ ಕ್ಷೇಮಾಭ್ಯುದಯವನ್ನು ಕಡೆಗಣಿಸದೆ ಸರ್ವರ ಶ್ರೇಯಸ್ಸಿನ ದೃಷ್ಟಿಯಿಂದ ಕಾರ್ಯಾಚರಣೆ ನಡೆಸಬೇಕೆಂದು ಆಗ್ರಹಪಡಿಸಿತು. ಸಾಮಾಜಿಕ ಭದ್ರತಾ ನಿರ್ವಹಣೆ (social security administration) ಮುಂತಾದ ಸಮಾಜ ಸುಧಾರಣೆ ಯೋಜನೆಗಳಿಂದ ಸರ್ಕಾರ ಮಾನವೀಯತೆಯ ಮೌಲ್ಯಗಳನ್ನು (humanitarian values) ಕುರಿತು ಬರಿಯ ಭಾಷಣ

ಮಾಡದೆ ಅವುಗಳನ್ನು ಅನುಷ್ಠಾನಕ್ಕೆ ತರುವ ಅಗತ್ಯವನ್ನು ನಿರ್ದೇಶಿಸಿ ಸ್ಪಷ್ಟಪಡಿಸಿತು. ಅಮೆರಿಕ ಬರಿ ತಮ್ಮಷ್ಟಕ್ಕೆ ತಾವು ನೆಮ್ಮದಿಯ ಜೀವನ ನಡೆಸುವ ರೈತರ ಮತ್ತು ಕುಶಲಕರ್ಮಿಗಳ ದೇಶವಲ್ಲ; ಅದು ಪ್ರಬುದ್ಧಮಾನಕ್ಕೆ ಬಂದಿರುವ ಔದ್ಯೋಗಿಕ ದೈತ್ಯ (industrial giant) ರಾಷ್ಟ್ರವೆನ್ನುವುದನ್ನು ಲೋಕಕ್ಕೆ ಪ್ರದರ್ಶಿಸುವಂಥ ಯೋಜನೆಗಳನ್ನು ಕಾರ್ಯಗತಗೊಳಿಸಿತು. 'ಹೊಸ ಹಂಚಿಕೆ' ಅಮೆರಿಕದ ಎಲ್ಲ ಸಮಸ್ಯೆಗಳನ್ನು ಬಗೆಹರಿಸದಿದ್ದರೂ ಕಂದರದ ತಳ ಸೇರಿದ್ದ ಅಮೆರಿಕನ್ನರ ನೈತಿಕ ಸ್ಥಿತಿಯನ್ನು ಮೇಲೆತ್ತಿ ಉನ್ನತ ಮಟ್ಟಕ್ಕೇರಿಸಿತು. ಅನೇಕ ಪ್ರಮುಖ ಕಾನೂನುಗಳನ್ನು ಜಾರಿಗೆ ತಂದಿತು. ಇವುಗಳನ್ನು ಎಫ್.ಡಿ.ಆರ್ ನಂತರ ಬಂದ ಅಧ್ಯಕ್ಷರು ಮುಂದುವರಿಸಿಕೊಂಡು ಬಂದರು. ಕಾಲಕ್ಕೆ ತಕ್ಕಂತೆ ಕೆಲವು ಯೋಜನೆಗಳನ್ನು ವಿಸ್ತಾರಗೊಳಿಸಿದರು. ಪ್ರಸ್ತುತ ಕಾರ್ಯಾಚರಣೆಯಲ್ಲಿರುವ ಹಲವಾರು ಯೋಜನೆಗಳು ಹುಟ್ಟಿದ್ದು 'ಹೊಸ ಹಂಚಿಕೆ'ಯಲ್ಲಿ.

❑

ಅಧ್ಯಾಯ – ೧೮

ಎರಡನೆ ಮಹಾಯುದ್ಧದಲ್ಲಿ ಅಮೆರಿಕ

ಪ್ರತ್ಯೇಕತೆಯಿಂದ ಜಾಗತಿಕ ಯುದ್ಧದವರೆಗೆ

ಎಫ್.ಡಿ.ಆರ್ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡ ಹೊಸದರಲ್ಲಿ ತನ್ನ ಆಸಕ್ತಿಯನ್ನೆಲ್ಲ ಸ್ವದೇಶದ ಸಮಸ್ಯೆಗಳ ಮೇಲೆ ಕೇಂದ್ರೀಕರಿಸಿದ್ದನು. ಲಂಡನ್‌ನಲ್ಲಿ ನಡೆದ ಆರ್ಥಿಕ ಸಮ್ಮೇಳನಕ್ಕೆ ಹೋಗದೆ ಅಂತರರಾಷ್ಟ್ರೀಯ ಸಹಕಾರವನ್ನು ಬೆಳೆಸುವುದರಲ್ಲಿ ಭಾಗವಹಿಸದೆ ಹೋದನು. ಹಾಗೆಯೇ ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಅಮೆರಿಕ ಅಸಡ್ಡೆ ಮಾಡಿದ್ದರಿಂದ ಕೆಲವು ರಾಷ್ಟ್ರಗಳಲ್ಲಿ ಸರ್ವಾಧಿಕಾರಿಗಳು ಪ್ರಬಲರಾಗಲು ಪರೋಕ್ಷವಾಗಿ ಪ್ರಚೋದನೆ ನೀಡಿದಂತಾಯಿತು. ಈ ಸರ್ವಾಧಿಕಾರಿಗಳು ಆಕ್ರಮಣಕಾರಿ ಧೋರಣೆಯನ್ನು ತಳೆದಾಗ ಎಫ್.ಡಿ.ಆರ್ ಉಗ್ರವಾಗಿ ಪ್ರತಿಭಟಿಸಿದನು. ಆದರೆ ಕಾಲ ಮಿಂಚಿಹೋಗಿತ್ತು.

ವಿಶಾಲ ಅಮೆರಿಕದ ಕಲ್ಪನೆ (Pan-American idea)ಯಿಂದ ಪ್ರಭಾವಿತರಾದ ಎಫ್.ಡಿ.ಆರ್ ನೆರೆಹೊರೆಯ ದೇಶಗಳೊಡನೆ ಸ್ನೇಹಪೂರ್ಣ ಸಂಬಂಧಗಳನ್ನು ಬೆಳೆಸಲು ಪ್ರಯತ್ನಿಸಿದನು. ಇದು ಪಶ್ಚಿಮ ಗೋಲಾರ್ಧದ ರಕ್ಷಣೆಯ ದೃಷ್ಟಿಯಿಂದ ಅಗತ್ಯವಾಗಿತ್ತು. ಎಫ್.ಡಿ.ಆರ್ ತನ್ನ ಮೊದಲನೆಯ ಅಧ್ಯಕ್ಷತೆಯ ಆರಂಭ ಭಾಷಣದಲ್ಲಿ ನೆರೆ ಹೊರೆಯ ದೇಶಗಳೊಡನೆ ಪರಸ್ಪರ ಅನ್ಯೋನ್ಯತೆಯನ್ನು ಕುರಿತು ಮಾತನಾಡಿದ್ದನು. ೧೯೩೩ರಲ್ಲಿ ಮಾಂಟೆವಿಡಿಯೊದಲ್ಲಿ ನಡೆದ 'ವಿಶಾಲ ಅಮೆರಿಕ ಸಮ್ಮೇಳನ'ದಲ್ಲಿ ವಿದೇಶಾಂಗ ಕಾರ್ಯದರ್ಶಿ ಕಾರ್ಡೆಲ್ ಹಲ್ 'ಯಾವ ಒಂದು ದೇಶಕ್ಕೂ ಮತ್ತೊಂದು ದೇಶದ ವ್ಯವಹಾರಗಳಲ್ಲಿ ಮಧ್ಯೆ ಪ್ರವೇಶಿಸುವ ಹಕ್ಕು ಇಲ್ಲ' ಎಂಬ ಲ್ಯಾಟಿನ್ ಅಮೆರಿಕ ದೇಶಗಳ ಅಭಿಪ್ರಾಯವನ್ನು ಒಪ್ಪಿಕೊಂಡಿದ್ದನು. ಪಶ್ಚಿಮಾರ್ಧ ಗೋಲದಲ್ಲಿ ಯಾವ ದೇಶದ ಮೇಲಾದರೂ ಸಶಸ್ತ್ರ ಆಕ್ರಮಣ ನಡೆದರೆ ಅಮೆರಿಕ ಅದನ್ನು ವಿರೋಧಿಸುವುದಾಗಿ ಎಫ್.ಡಿ.ಆರ್ ಎಚ್ಚರಿಕೆ ನೀಡಿದನು.

೧೯೩೪ರಲ್ಲಿ ಅಮೆರಿಕ ಮತ್ತು ಕ್ಯೂಬ ಪ್ಲಾಟ್ ತಿದ್ದುಪಡಿಯನ್ನು ರದ್ದುಗೊಳಿಸಿದವು (ಈ ತಿದ್ದುಪಡಿಯ ಪ್ರಕಾರ ಕ್ಯೂಬದ ವ್ಯವಹಾರಗಳಲ್ಲಿ ಅಮೆರಿಕ ಮಧ್ಯೆ ಪ್ರವೇಶಿಸಲು ಅವಕಾಶವಿತ್ತು) ಇದಾದ ನಂತರ ಕ್ಯೂಬದಲ್ಲಿ ಆಂದೋಳನಗಳು ಪ್ರಾರಂಭವಾದಾಗ

ಅಮೆರಿಕ ಮೊದಲಿನಂತೆ ಮಧ್ಯೆ ಪ್ರವೇಶಿಸಲಿಲ್ಲ. ಎಫ್.ಡಿ.ಆರ್ ಹೂವರ್‌ನ ಧೋರಣೆಯನ್ನು ಮುಂದುವರಿಸಿ ಹೈಟಿಯಿಂದ ಅಮೆರಿಕದ ಸೈನ್ಯವನ್ನು ವಾಪಸ್ಸು ಕರೆಸಿದನು. ೧೯೩೪ರ ಹೊತ್ತಿಗೆ ನಿಕರಾಗುವದಿಂದ ಅಮೆರಿಕನ್ ಸೈನ್ಯ ವಾಪಸ್ಸಾಯಿತು. ಹಾಗೆಯೇ ೧೯೩೬ರಲ್ಲಿ ಪನಾಮ ದೇಶದಲ್ಲಿ ಅಮೆರಿಕ ಮಧ್ಯೆ ಪ್ರವೇಶಿಸುವುದನ್ನು ನಿಲ್ಲಿಸಿತು. ೧೯೪೦ರಲ್ಲಿ ಡೊಮಿನಿಕನ್ ಗಣರಾಜ್ಯದಲ್ಲಿ ಅಮೆರಿಕ ನಡೆಸಿದ್ದ ಸುಂಕ ಪಡೆಯುವ ವ್ಯವಸ್ಥೆಯನ್ನು ರದ್ದುಗೊಳಿಸಲಾಯಿತು. ೧೯೧೭ರಲ್ಲಿ ಜಾರಿಗೆ ಬಂದ ಮೆಕ್ಸಿಕೊ ರಾಜ್ಯಾಂಗದ ಪ್ರಕಾರ ಅಮೆರಿಕದ ವಶದಲ್ಲಿದ್ದ ತೈಲ ಪ್ರದೇಶಗಳನ್ನು ಮೆಕ್ಸಿಕೊ ಸರ್ಕಾರ ವಶಪಡಿಸಿಕೊಂಡಿತು. ಹಾಗೆ ಮಾಡುವ ಹಕ್ಕನ್ನು ಅಮೆರಿಕ ಮಾನ್ಯ ಮಾಡಿ ಆ ತೈಲ ಪ್ರದೇಶಗಳ ಮಾಲೀಕರಿಗೆ ಸೂಕ್ತ ಪರಿಹಾರ ನೀಡಬೇಕೆಂದು ಅಮೆರಿಕ ಆಗ್ರಹಪಡಿಸಿತು.

ಜರ್ಮನಿ ಮತ್ತು ಇಟಲಿಗಳ ಆಕ್ರಮಣಕಾರಿ ಕಾರ್ಯಾಚರಣೆಗಳು ಜಗತ್ತನ್ನು ಯುದ್ಧದ ದಾವಾಗ್ನಿ ಆವರಿಸುವಂತೆ ಮಾಡುತ್ತಿದ್ದ ಸಂದಿಗ್ಧ ಸಮಯದಲ್ಲಿ ಅಮೆರಿಕ ತನ್ನ ನೆರೆ ಹೊರೆಯ ದೇಶಗಳೊಡನೆ ಒಗ್ಗಟ್ಟು ಬೆಳೆಸಲು ಶ್ರಮವಹಿಸಿತು. ೧೯೩೭ರಲ್ಲಿ ಬ್ಯೂನೊಸ್ ಐರೆಸ್ ನಗರದಲ್ಲಿ ನಡೆದ ಸಮ್ಮೇಳನದಲ್ಲಿ ಎಫ್.ಡಿ.ಆರ್ ಭಾಗವಹಿಸಿ ನೆರೆಹೊರೆಯ ದೇಶಗಳಿಂದ ಬಂದಿದ್ದ ಪ್ರತಿನಿಧಿಗಳೊಡನೆ ಸೇರಿಕೊಂಡು ಪಶ್ಚಿಮ ಗೋಲಾರ್ಧದ (Western hemisphere) ದೇಶಗಳು ಒಗ್ಗಟ್ಟಿನಿಂದ 'ಸಾಮುದಾಯಕ ರಕ್ಷಣಾ ವ್ಯವಸ್ಥೆ' (collective security)ಯನ್ನು ನಿರ್ಮಿಸಬೇಕೆಂದು ನಿರ್ಧರಿಸಿದನು. ೧೯೩೮ರಲ್ಲಿ ಲಿಮಾ ನಗರದಲ್ಲಿ ನಡೆದ ಸಮ್ಮೇಳನದಲ್ಲಿ ಮುಖ್ಯ ವಿಷಯಗಳನ್ನು ಅಮೆರಿಕ ಇತರ ದಕ್ಷಿಣ ಅಮೆರಿಕ ದೇಶಗಳೊಡನೆ ಸಮಾಲೋಚನೆ ಮಾಡಿ ನಂತರ ಏನು ಮಾಡಬೇಕೆನ್ನುವುದನ್ನು ನಿರ್ಧರಿಸುವುದಾಗಿ ಮತ್ತೊಮ್ಮೆ ಭರವಸೆ ನೀಡಿತು. ೧೯೩೯ರಲ್ಲಿ ಯೂರೋಪಿನಲ್ಲಿ ಜಾಗತಿಕ ಯುದ್ಧ ಪ್ರಾರಂಭವಾದಾಗ ವಿಶಾಲ ಅಮೆರಿಕದ ದೇಶಗಳು ಪನಾಮ ಸಿಟಿ (Panama City)ಯಲ್ಲಿ ಸಭೆ ಸೇರಿ ಪಶ್ಚಿಮ ಗೋಲಾರ್ಧವನ್ನು 'ಸುರಕ್ಷಿತ ವಲಯ' (Safety zone)ವೆಂದು ಘೋಷಿಸಲಾಯಿತು. ಯುದ್ಧದಲ್ಲಿ ಭಾಗವಹಿಸುತ್ತಿರುವ ದೇಶಗಳಿಗೆ ಈ ಸುರಕ್ಷಿತ ವಲಯದಲ್ಲಿ ಯುದ್ಧವನ್ನು ನಿಷೇಧಿಸಲಾಗಿದೆ ಎಂಬ ಪ್ರಕಟಣೆ ಹೊರಡಿಸಿದರು.

೧೯೪೦ರಲ್ಲಿ ಜಾರಿಗೆ ಬಂದ ಹವಾನ ಕಾಯಿದೆ (Act of Havana) ಪ್ರಕಾರ ವಿಶಾಲ ಅಮೆರಿಕದ ದೇಶಗಳ ನಾಯಕರು ಸೇರಿ ಪಶ್ಚಿಮ ಗೋಲಾರ್ಧದ ಯಾವ ಒಂದು ದೇಶದ ಮೇಲೆ ಅತಿಕ್ರಮಣ ಮಾಡಿದರೂ ಅದು ಎಲ್ಲ ದೇಶಗಳ ಮೇಲೆ ಆಕ್ರಮಣ ಮಾಡಿದಂತೆ ಎಂದು ಘೋಷಿಸಿದರು. ಯುದ್ಧದಲ್ಲಿ ತೊಡಗಿದ್ದ ದೇಶಗಳು ಅಮೆರಿಕದಲ್ಲಿ ಆಸ್ತಿ ಹೊಂದಿದ್ದರೆ ಆ ಆಸ್ತಿ ಪರಬಾರೆಯಾಗುವಂಥ ಸಂದರ್ಭದಲ್ಲಿ ಅದನ್ನು ವಶಪಡಿಸಿಕೊಳ್ಳಲು ಒಂದು ಸಮಿತಿಯನ್ನು ರಚಿಸಲು ಹವಾನ ಕಾಯಿದೆ

ನಿರ್ದೇಶಿಸಿತು. ಅಮೆರಿಕ ಮತ್ತು ಅದರ ನೆರೆ ಹೊರೆಯ ದೇಶಗಳು ಪಶ್ಚಿಮ ಗೋಲಾರ್ಧ ವನ್ನು ಆಕ್ರಮಣದಿಂದ ರಕ್ಷಿಸುವ ಹಕ್ಕು ಪಡೆದಿವೆ ಎಂದು ಇತರ ದೇಶಗಳು ಒಪ್ಪಿಕೊಂಡಿದ್ದವು. ಇದರಿಂದ ಮನ್ರೋ ಸಿದ್ಧಾಂತವನ್ನು ಅಂತರರಾಷ್ಟ್ರೀಯ ಗೊಳಿಸಿದಂತಾಯಿತು.

'ಹೊಸ ಹಂಚಿಕೆ' ಅಮೆರಿಕ ಬೇರೆ ಬೇರೆ ದೇಶಗಳೊಡನೆ ಪ್ರತ್ಯೇಕ ಸುಂಕದ ದರಗಳ ಒಪ್ಪಂದಗಳನ್ನು ಮಾಡಿಕೊಳ್ಳಲು ಅವಕಾಶ ಕೊಟ್ಟಿತ್ತು. ವಿದೇಶಾಂಗ ಕಾರ್ಯದರ್ಶಿ ಕಾರ್ಡೆಲ್ ಹಲ್ ಬಹುತೇಕ ಲ್ಯಾಟಿನ್ ಅಮೆರಿಕ ರಾಷ್ಟ್ರಗಳು ಮತ್ತು ಇತರ ದೇಶಗಳೊಡನೆ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳುವುದರಲ್ಲಿ ಯಶಸ್ವಿಯಾದನು. ಈ ಒಪ್ಪಂದಗಳು ಸುಂಕದ ದರಗಳನ್ನು ಇಳಿಸಿದ್ದರಿಂದ ವ್ಯಾಪಾರ ವ್ಯವಹಾರಗಳು ಹೆಚ್ಚಾದವು. ರಾಷ್ಟ್ರಗಳ ಪ್ರತ್ಯೇಕತಾ ಧೋರಣೆಯನ್ನು ಕೊನೆಗೊಳಿಸಲು ಈ ವ್ಯಾಪಾರ ಒಪ್ಪಂದಗಳು ಅತ್ಯಂತ ಪರಿಣಾಮಕಾರಿಯಾದವು.

ಈ ಮಧ್ಯೆ ಫಿಲಿಪ್ಪೈನ್ ದ್ವೀಪಗಳಿಗೆ ಸ್ವಾತಂತ್ರ್ಯ ನೀಡುವ ಪ್ರಶ್ನೆ ಪುನಃ ಚರ್ಚೆಗೆ ಕಾರಣವಾಯಿತು. ೧೯೧೬ರಲ್ಲಿ ಅಧ್ಯಕ್ಷ ವಿಲ್ಸನ್‌ನ ಆಡಳಿತದಲ್ಲಿ ಜಾರಿಗೆ ಬಂದ ಜೋನ್ಸ್ ಕಾಯಿದೆ (Jones Act) ಫಿಲಿಪ್ಪೈನ್ಸ್ ಸ್ವಾತಂತ್ರ್ಯವನ್ನು ಅಂಗೀಕರಿಸಿ ಫಿಲಿಪ್ಪಿನೋ ಪ್ರಜೆಗಳು ಪ್ರಜಾರಾಜ್ಯದ ಜವಾಬ್ದಾರಿ ಹೊರಲು ಸಮರ್ಥರಾಗುವವರೆಗೂ ತಾತ್ಕಾಲಿಕ ಸ್ವಯಂ ಆಡಳಿತ ಸರ್ಕಾರ ಅಧಿಕಾರ ವಹಿಸಿಕೊಳ್ಳಬೇಕೆಂದು ಒಪ್ಪಂದ ಮಾಡಿಕೊಳ್ಳ ಲಾಗಿತ್ತು. ವಿಲ್ಸನ್ ನಂತರ ಅಧಿಕಾರಕ್ಕೆ ಬಂದ ರಿಪಬ್ಲಿಕನ್ ಸರ್ಕಾರ ಈ ಬಗ್ಗೆ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ೧೯೩೨ರಲ್ಲಿ ಡೆಮೊಕ್ರಾಟಿಕ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಅನೇಕ ಹಿತಾಸಕ್ತಿಗಳು ಫಿಲಿಪ್ಪೈನ್ ಸ್ವಾತಂತ್ರ್ಯದಿಂದ ಲಾಭ ಪಡೆಯಲು ಹವಣಿಸಿ ದ್ದವು. ಇವುಗಳಲ್ಲಿ ಪ್ರಮುಖವಾದವು – ಸಕ್ಕರೆ ಉತ್ಪಾದಕರು, ಹೈನುಗಾರಿಕೆ ಉದ್ಯಮಿಗಳು. ಇವರು ಫಿಲಿಪ್ಪೈನ್ಸ್‌ನಿಂದ ಆಮದಾಗುತ್ತಿದ್ದ ತೆಂಗಿನೆಣ್ಣೆಯೊಡನೆ ಸ್ಪರ್ಧೆ ತಪ್ಪಿಸಲು ಕಾತುರರಾಗಿದ್ದರು. ತೆಂಗಿನೆಣ್ಣೆಯನ್ನು ಓಲಿಯೋ ಮಾರ್ಜರೀನ್ (Oleo margarine) ಉತ್ಪಾದನೆಯಲ್ಲಿ ಉಪಯೋಗಿಸುತ್ತಿದ್ದರು. ಹೊಗೆಸೊಪ್ಪಿನ ಬೆಳೆಗಾರರು ಫಿಲಿಪ್ಪಿನೋ ವಲಸೆಗಾರರು ಬರುವುದನ್ನು ತಡೆಗಟ್ಟಲು ಒತ್ತಾಯ ಹೇರುತ್ತಿದ್ದರು. ಕಾರ್ಮಿಕರ ಒಕ್ಕೂಟಗಳು ಮತ್ತು ಪ್ರತ್ಯೇಕತಾವಾದಿಗಳು – ಈ ಎಲ್ಲ ಗುಂಪುಗಳು ಫಿಲಿಪ್ಪೈನ್ಸ್ ಸ್ವಾತಂತ್ರ್ಯಗಳಿಸಲು ಆಗ್ರಹಪಡಿಸಿದ್ದು ಸ್ವಾರ್ಥ ಸಾಧನೆಗಾಗಿ.

೧೯೩೩ರಲ್ಲಿ ಈ ಹಿತಾಸಕ್ತಿಗಳ ಒತ್ತಾಯದಿಂದ ಬಹುಸಂಖ್ಯಾತ ಡೆಮೊಕ್ರಾಟರುಗಳಿದ್ದ ಕಾಂಗ್ರೆಸ್ ಹೇವ್ಸ್-ಕಟ್ಟಿಂಗ್ ಕಾಯಿದೆಯನ್ನು ಅಂಗೀಕರಿಸಿ ಫಿಲಿಪ್ಪೈನ್ಸ್‌ಗೆ ಸ್ವಾತಂತ್ರ್ಯ ಕೊಟ್ಟಿತು. ಆದರೆ ಫಿಲಿಪ್ಪಿನೋ ಪ್ರಜೆಗಳು ಅಮೆರಿಕ ಹಾಕಿದ ಷರತ್ತುಗಳನ್ನು ತಿರಸ್ಕರಿಸಿದರು. ಪ್ರಯತ್ನ ಮುಂದುವರಿದು ೧೯೩೪ರಲ್ಲಿ ಟೈಡಿಂಗ್ಸ್-ಮೆಕ್‌ಡಫಿ ಕಾಯಿದೆ

ಮಂಜೂರಾಯಿತು. ಇದರ ಪ್ರಕಾರ ಹತ್ತು ವರ್ಷಗಳ ಮೇಲೆ ಫಿಲಿಪ್ಪೈನ್ಸ್‌ಗೆ ಸ್ವಾತಂತ್ರ್ಯವನ್ನು ಕೊಟ್ಟು ಕ್ರಮೇಣವಾಗಿ ಸುಂಕ ರಿಯಾಯಿತಿಯನ್ನು ಹಿಂದಕ್ಕೆ ತೆಗೆದುಕೊಳ್ಳುವುದು ಎಂದು ನಿರ್ಧರಿಸಲಾಯಿತು. ೧೯೪೬ ಜುಲೈ ೪ರಂದು ಒಂದು ಕರಾರಿನ ಮೇಲೆ ಫಿಲಿಪ್ಪೈನ್ಸ್ ಸ್ವಾತಂತ್ರ್ಯವನ್ನು ನೀಡಲಾಯಿತು. ಈ ಕರಾರಿನಂತೆ ಅಮೆರಿಕ ಫಿಲಿಪ್ಪೈನ್ಸ್‌ನಲ್ಲಿ ವಾಯುಪಡೆ ಮತ್ತು ನೌಕಾದಳದ ನೆಲೆ (Navy bases)ಗಳನ್ನು ತನ್ನ ವಶದಲ್ಲಿಟ್ಟುಕೊಂಡಿದೆ.

ಯೂರೋಪಿನಲ್ಲಿ ಬರಲಿರುವ ಮಹಾಯುದ್ಧದ ಕಾರ್ಮೋಡಗಳು ದಟ್ಟೈಸುತ್ತಿವೆ

ಬೇರೆ ದೇಶಗಳೊಡನೆ ಅಮೆರಿಕ ಮಿಕ್ಕ ಎಲ್ಲ ರೀತಿಯಿಂದ ಸಹಕರಿಸಿದ್ದರೂ ಆಕ್ರಮಣಕಾರಿ ರಾಷ್ಟ್ರಗಳಾದ ಜಪಾನ್, ಜರ್ಮನಿ ಮತ್ತು ಇಟಲಿಗಳ ಪ್ರಾಬಲ್ಯವನ್ನು ಕುಗ್ಗಿಸಲು ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಯೂರೋಪಿನಲ್ಲಿ ಯುದ್ಧ ಆಸ್ಫೋಟಗೊಂಡಾಗ ಎಫ್.ಡಿ.ಆರ್ ಅಮೆರಿಕವನ್ನು ತಟಸ್ಥವಾಗಿರಿಸಬೇಕು ಎನ್ನುವ ಬಹುಸಂಖ್ಯಾತ ಜನಾಭಿಪ್ರಾಯವನ್ನು ಎದುರಿಸಿ ಧೈರ್ಯದಿಂದ ಮಿತ್ರರಾಷ್ಟ್ರಗಳೊಡನೆ ಸಹಕರಿಸಲು ನಿರ್ಧರಿಸಿದನು.

೧೯೩೧ರಲ್ಲಿ ಜಪಾನ್ ಮುಂಚೂರಿಯಾವನ್ನು ಆಕ್ರಮಿಸಿದ್ದು ಇಡೀ ಜಗತ್ತನ್ನು ಆವರಿಸುವ ಕದನದ ಕಾಡುಕಿಚ್ಚಿಗೆ ಕಿಡಿಯ ಮುನ್ನುಡಿ ಇಟ್ಟಂತಾಯಿತು. ಜಪಾನ್ ನಡೆಸಿದ ಈ ದೌರ್ಜನ್ಯ ಅನೇಕ ಕೌಲು ಮತ್ತು ಕರಾರುಗಳನ್ನು ಉಲ್ಲಂಘಿಸಿತು: 'ತೆರೆದ ದ್ವಾರ'ದ ಒಂಬತ್ತು ರಾಷ್ಟ್ರಗಳ ಒಪ್ಪಂದ[೧], ಕೆಲ್ಲಾಗ್-ಬ್ರಿಯಾಂಡ್ ಕರಾರು[೨] ಮತ್ತು ರಾಷ್ಟ್ರಗಳ ಒಕ್ಕೂಟ (League of Nations)ದ ಮೂಲ ತತ್ವಗಳು. ಈ ಉಲ್ಲಂಘನೆಯಿಂದ

---

೧. ಅಧ್ಯಕ್ಷ ಮೆಕಿನ್ಲೆಯ ಆಡಳಿತದಲ್ಲಿ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಜಾನ್ ಹೇ (John Hay) ೧೮೯೯ರಲ್ಲಿ ಇಂಗ್ಲೆಂಡ್, ಜರ್ಮನಿ, ಫ್ರಾನ್ಸ್, ಇಟಲಿ, ಜಪಾನ್ ಮತ್ತು ರಷ್ಯಾ ದೇಶಗಳನ್ನು ಚೈನಾ ದೇಶದಲ್ಲಿ 'ತೆರೆದ ದ್ವಾರ'ದ ಧೋರಣೆಯನ್ನು ಪಾಲಿಸಬೇಕೆಂದು ಒಪ್ಪಿಸಿ, ಈ ಒಪ್ಪಂದ ಜಾರಿಗೆ ಬರುವಂತೆ ಮಾಡಿದನು. ಇದರ ಪ್ರಕಾರ ಚೈನಾ ದೇಶದಲ್ಲಿ ವಿಶಿಷ್ಟ ಪ್ರದೇಶಗಳನ್ನು ಹೊಂದಿರುವ ಎಲ್ಲ ರಾಷ್ಟ್ರಗಳು ಆ ಪ್ರದೇಶಗಳನ್ನು ವ್ಯಾಪಾರ ವಾಣಿಜ್ಯ ವ್ಯವಹಾರಗಳಿಗೆ ಎಲ್ಲಾ ರಾಷ್ಟ್ರಗಳಿಗೂ ತೆರೆದಿರಬೇಕು ಎನ್ನುವ ತತ್ವ ಪರಿಪಾಲನೆ.

೨. ೧೯೨೮ರಲ್ಲಿ ಫ್ರೆಂಚ್ ಪ್ರಧಾನಮಂತ್ರಿ ಅರಿಸ್ಟಿಡ್ ಬ್ರಿಯಾಂಡ್ ಮತ್ತು ಅಧ್ಯಕ್ಷ ಕೂಲಿಡ್ಜ್‌ನ ವಿದೇಶಾಂಗ ಕಾರ್ಯದರ್ಶಿ ಫ್ರಾಂಕ್ ಕೆಲ್ಲಾಗ್ ಸೇರಿ ಯುದ್ಧ ನಿಷೇಧ ಕರಾರನ್ನು ತಯಾರಿಸಿದರು. ಮೊದಲಿಗೆ ಪ್ಯಾರಿಸ್ ಕರಾರು ಎಂದು ಕರೆಯಲ್ಪಡುತ್ತಿದ್ದ ಇದು ನಂತರ ಬ್ರಿಯಾಂಡ್-ಕೆಲ್ಲಾಗ ಕರಾರು ಎಂದು ಕರೆಯಲ್ಪಟ್ಟಿತು. ಯುದ್ಧವನ್ನು ತೊರೆದು ಶಾಂತರೀತಿಗಳಿಂದ ವಿವಾದಗಳನ್ನು ಪರಿಹರಿಸಿಕೊಳ್ಳಬೇಕು ಎಂದು ಒಪ್ಪಿಗೆ ನೀಡಿ ೬೨ ರಾಷ್ಟ್ರಗಳು ಸಹಿ ಹಾಕಿದ್ದ ಅಂತರರಾಷ್ಟ್ರೀಯ ಕರಾರು ಇದು.

ಜಪಾನ್ ಮುಂಚೂರಿಯಾದಲ್ಲಿ ತಮ್ಮ ಆಣತಿಗೆ ಕುಣಿಯುವ ಸರ್ಕಾರವನ್ನು ಸ್ಥಾಪಿಸಿತು. ಬಲಾತ್ಕಾರದಿಂದ ಮುಂಚೂರಿಯಾ ಮೇಲೆ ಹೇರಿದ್ದ ಈ ಸರ್ಕಾರವನ್ನು ಅಮೆರಿಕ ಅಂಗೀಕರಿಸಲು ನಿರಾಕರಿಸಿತು. ರಾಷ್ಟ್ರಗಳ ಒಕ್ಕೂಟ ಜಪಾನನ್ನು ಖಂಡಿಸಿತು. ಇದರಿಂದಾಗಿ ಜಪಾನ್ ಒಕ್ಕೂಟವನ್ನು ತ್ಯಜಿಸಿತು.

೧೯೩೭ರಲ್ಲಿ ಜಪಾನ್ ಯುದ್ಧ ಸಾರದೆಯೇ ಚೀನಾದ ಮೇಲೆ ದಾಳಿ ಮಾಡಿ ಆಕ್ರಮಣ ಮಾಡಿತು. ಅಮೆರಿಕ ಮತ್ತು ಇತರ ರಾಷ್ಟ್ರಗಳು ಜಪಾನಿನ ಮೃಗೀಯ ವರ್ತನೆ ಮತ್ತು ಕರಾರಿನ ಉಲ್ಲಂಘನೆಯನ್ನು ಖಂಡಿಸಿದವು. ಆದಾಗ್ಯೂ ಜಪಾನ್ ಚೀನಾದ ಸಮುದ್ರತೀರದ ಬಹುಭಾಗವನ್ನು ಆಕ್ರಮಿಸಿಕೊಂಡಿತು. ಅಮೆರಿಕ ಚೀನೀಯರಿಗೆ ಯುದ್ಧ ಸಾಮಗ್ರಿಗಳನ್ನು ಬರ್ಮಾ ದೇಶದ ಮೂಲಕವಾಗಿ ರವಾನಿಸಿತು. ಹಣದ ಕೊರತೆ ಇದ್ದ ಚೀನೀಯರಿಗೆ ಅಮೆರಿಕ ಅಪಾರ ಮೊತ್ತದ ಹಣ ನೀಡಿತು. ಜಪಾನ್ ಅಮೆರಿಕಕ್ಕೆ ಸವಾಲು ಹಾಕಿ ಎಚ್ಚರಿಕೆ ನೀಡಲು ಅಮೆರಿಕದ 'ಪಾನ್ಯೆ' (Panay) ಎಂಬ ಫಿರಂಗಿ ದೋಣಿಯನ್ನು ಚೈನಾ ಸಮುದ್ರತೀರದಲ್ಲಿ ಬಾಂಬ್ ದಾಳಿಯಿಂದ ನಾಶಪಡಿಸಿತು. ಇದು ಅಚಾತುರ್ಯ ದಿಂದ ನಡೆಯಿತು ಎನ್ನುವಂತೆ ಜಪಾನ್ ಅಮೆರಿಕದ ಕ್ಷಮೆ ಯಾಚಿಸಿದರೂ, ಇಂಥ ಕೃತ್ಯಗಳನ್ನು ಮಾಡಿ ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವ ಛಾತಿಯನ್ನು ಅನೇಕ ಬಾರಿ ಜಪಾನ್ ತೋರಿಸಿತ್ತು. 'ತೆರೆದ ದ್ವಾರ' ಒಪ್ಪಂದವನ್ನು ಜಪಾನ್ ಉಲ್ಲಂಘಿಸಿದಾಗ, ಒಪ್ಪಂಧಕ್ಕೆ ಸಹಿ ಹಾಕಿ ಜವಾಬ್ದಾರಿ ವಹಿಸಿಕೊಂಡ ಜಪಾನ್, ಇಷ್ಟ ಬಂದಾಗ ಒಪ್ಪಂದದಿಂದ ಹೊರಬೀಳುವುದು ಅಂತರರಾಷ್ಟ್ರೀಯ ಕಾನೂನಿನ ಉಲ್ಲಂಘನೆ ಯಾದುದರಿಂದ ಖಂಡನೀಯ ಮತ್ತು ಶಿಕ್ಷಾರ್ಹ ಎಂದು ಅಮೆರಿಕ ಪ್ರತಿಪಾದಿಸಿತು.

೧೯೩೯ರ ಜುಲೈ ತಿಂಗಳು ಜಪಾನಿನೊಡನೆ ೧೯೧೧ರಲ್ಲಿ ಮಾಡಿಕೊಂಡಿದ್ದ ವಾಣಿಜ್ಯ ಒಪ್ಪಂದವನ್ನು ರದ್ದುಗೊಳಿಸುವುದಾಗಿ ಅಮೆರಿಕ ಜಪಾನ್ ಸರ್ಕಾರಕ್ಕೆ ಪ್ರಕಟಣೆ ಪತ್ರವನ್ನು ಸಲ್ಲಿಸಿತು. ಜಪಾನ್ ಆಮದು ಮಾಡಿಕೊಳ್ಳುತ್ತಿದ್ದ ಪೆಟ್ರೋಲ್ ಮತ್ತು ಕಬ್ಬಿಣದ ತುಣುಕುಗಳ ಪ್ರಮಾಣ ತೀವ್ರವಾಗಿ ಕುಸಿಯಿತು. ಅಮೆರಿಕನ್ ಬಳಕೆಗಾರರು ಜಪಾನಿನಲ್ಲಿ ತಯಾರಾದ ವಸ್ತುಗಳನ್ನು ಬಹಿಷ್ಕರಿಸಿದರು. ಚೀನೀಯರ ಪರಿಹಾರನಿಧಿಗೆ ಅಮೆರಿಕನ್ನರು ಉದಾರವಾಗಿ ಹಣಸಹಾಯ ಮಾಡಿದರು. ಫೆಡರಲ್ ಸರ್ಕಾರ ಚೈನಾ ದೇಶಕ್ಕೆ ಇನ್ನೂ ಹೆಚ್ಚಿಗೆ ಸಾಲವನ್ನು ಮಂಜೂರು ಮಾಡಿತು. ಯುದ್ಧ ಸಾಮಗ್ರಿಗಳ ಆಮದು ಕಡಿಮೆಯಾದಂತೆ ಜಪಾನೀಯರು ಸಂಯಮ ಕಳೆದುಕೊಂಡು ತಮಗೆ ಬೇಕಾದ ವಸ್ತುಗಳನ್ನು ಪಡೆಯಲು ಏನು ಬೇಕಾದರೂ ಮಾಡಲು ಹೇಸದೆ, ಜೀವದ ಹಂಗು ತೊರೆದು ಹೋರಾಡಲು ಸಿದ್ಧರಾಗಿದ್ದರು. ಎಫ್.ಡಿ.ಆರ್ ತಟಸ್ಥ ನೀತಿಯನ್ನು ನಿರಾಕರಿಸಿ ಚೀನೀಯರಿಗೆ ಎಲ್ಲ ರೀತಿಯ ಸಹಾಯ ನೀಡಲು ನಿರ್ಧರಿಸಿದ್ದನು.

ಪೂರ್ವದಿಕ್ಕಿನ ರಣರಂಗದ ಮೇಲೆ ಜಪಾನೀಯರು ಚೀನೀಯರ ರಕ್ತದ ಹೊಳೆ

ಹರಿಸುವ ರುದ್ರ ನಾಟಕದ ಪಾತ್ರಧಾರಿಗಳಾಗಿ ತಮ್ಮ ಚಕ್ರಾಧಿಪತ್ಯವನ್ನು ವಿಸ್ತರಿಸುವ ಕನಸಿನ ದೃಶ್ಯದಲ್ಲಿ ಮೈಮರೆತು ಮೆರೆಯುತ್ತಿದ್ದರೆ, ಇತ್ತ ಪಶ್ಚಿಮ ರಂಗದಲ್ಲಿ ಜರ್ಮನರು ಮತ್ತು ಇಟಾಲಿಯನ್ನರು ತಮ್ಮದೇ ರುದ್ರ ನಾಟಕದ ತಯಾರಿ ನಡೆಸಿದ್ದರು. ಪಶ್ಚಿಮ ರಂಗದ ತೆರೆ ಎದ್ದಾಗ ನಮಗೆ ತೋರುವುದು – ಈ ನಾಟಕದ ನಾಯಕರು ಸರ್ವಾಧಿಕಾರಿಗಳಾಗಿ ಮೆರೆಯುವ ದೃಶ್ಯ.

ವೆರ್ಸಾಯ್ ಕರಾರಿನ (The Treaty of Versailles) ಕಠಿಣ ಷರತ್ತುಗಳನ್ನು ಪೂರೈಸಲು ಜೀವ ಸವೆಸುತ್ತಿದ್ದ ಜರ್ಮನರ ಸಹನೆ ಮೀರಿ, ಒಳಗೆ ಕುದಿಯುತ್ತಿರುವ ಲಾವಾರಸ ತುಂಬಿಕೊಂಡು ಮೇಲ್ನೋಟಕ್ಕೆ ಸೌಮ್ಯವಾಗಿ ತೋರುವ ಅಗ್ನಿಪರ್ವತವನ್ನು ಹೋಲುತ್ತಿತ್ತು ಜರ್ಮನಿಯ ಪರಿಸ್ಥಿತಿ! ಜಗತ್ತನ್ನು ತಲ್ಲಣಗೊಳಿಸಿದ ಆರ್ಥಿಕ ಮುಗ್ಗಟ್ಟಿನ ಹೊಡೆತಕ್ಕೆ ಸಿಕ್ಕಿ ಜರ್ಜರಿತರಾದ ಜರ್ಮನರು ಸ್ವಾಭಿಮಾನಶೂನ್ಯರಾಗಿ, ಶೂನ್ಯ ಭವಿಷ್ಯದತ್ತ ನಿರಾಶೆಯ ದೃಷ್ಟಿ ಹಾಯಿಸಿದಾಗ ಅವರು ಕಂಡಿದ್ದು ದೇಶಪ್ರೇಮ ಮೈತಳೆದು ಬಂದತ್ತಿದ್ದ ಮತ್ತು ನಿರರ್ಗಳವಾದ ಮಾತಿನ ಮೋಡಿಯಿಂದ ಜನರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಿದ್ದ, ಉತ್ಸಾಹದಿಂದ ಪುಟಿಯುತ್ತಿದ್ದ, ಸೈನಿಕ ಸಮವಸ್ತ್ರಧಾರಿಯಾದ ಯುವಕನನ್ನು! ಕಷ್ಟ ಕಾರ್ಪಣ್ಯಗಳ ಕರುಣಾಜನಕ ಕತೆಗಳನ್ನು ಕೇಳಿ ಕಿವುಡಾಗಿದ್ದ ಕಿವಿಗಳಿಗೆ ಕೇಳಿಸಿದ ಅವನಾಡುತ್ತಿದ್ದ ಮಾತುಗಳು ಸೋತು ಸೊರಗಿದ್ದ ಜರ್ಮನರಿಗೆ ಸಂಜೀವಿನಿಯನ್ನು ಸಿಂಪಡಿಸಿದಂತಾಗಿ, ಕಿಂದರಿ ಜೋಗಿಯನ್ನು ಹಿಂಬಾಲಿಸಿದ ಮಕ್ಕಳಂತೆ ಆ ಮಾತುಗಾರರನ್ನು ಜರ್ಮನರು ಹಿಂಬಾಲಿಸಿದರು! ಈ ಮಹಾಮಾತುಗಾರನೇ ಅಡಾಲ್ಫ್ ಹಿಟ್ಲರ್ (Adolf Hitler)! 'ಜರ್ಮನಿ ಅನನ್ಯ ರಾಷ್ಟ್ರ, ಜರ್ಮನ್ ಸಂಸ್ಕೃತಿ ಪ್ರಪಂಚದ ಎಲ್ಲ ಸಂಸ್ಕೃತಿಗಳಿಗಿಂತ ಶ್ರೇಷ್ಠವಾದುದು. ಮಾನವರ ತಳಿಗಳಲ್ಲಿ ಜರ್ಮನರು ಪರಿಪೂರ್ಣವಾದವರು. ಆರ್ಯರ ಬುಡಕಟ್ಟಿನವರಾದ ಜರ್ಮನರು ಜಗತ್ತನ್ನಾಳುವುದಕ್ಕೆ ಹುಟ್ಟಿದವರು' ಎಂದು ಜರ್ಮನರನ್ನು ಹುರಿದುಂಬಿಸಿ ತನ್ನ ನಾಜ಼ಿ ಪಕ್ಷಕ್ಕೆ ಸೇರುವಂತೆ ಮಾಡಿದನು. ಜರ್ಮನಿಯ ಸೋಲಿನ ಅವಮಾನವನ್ನು ಅಳಿಸಿ ಉಚ್ಛ್ರಾಯ ಸ್ಥಿತಿಗೆ ಕೊಂಡೊಯ್ಯುವ ಶಪಥ ಮಾಡಿದನು. ೧೯೩೩ರಲ್ಲಿ ಹಿಟ್ಲರ್ ಜರ್ಮನಿಯ ಮೇಲೆ ಸಂಪೂರ್ಣ ಅಧಿಕಾರ ಹೊಂದಿದನು. ಹಾಗಾದೊಡನೆಯೇ ಜರ್ಮನಿಯನ್ನು ಪುನಃ ಶಸ್ತ್ರಸಜ್ಜಿತವಾಗಿ ಮಾಡುವುದರಲ್ಲಿ ನಿರತನಾದನು.

ಯೂರೋಪಿನಲ್ಲಿ ನಡೆಯುತ್ತಿದ್ದ ಘರ್ಷಣೆಗಳಿಗೆ ಅಮೆರಿಕದ ಪ್ರತಿಕ್ರಿಯೆ – ಮಧ್ಯೆ ಪ್ರವೇಶಿಸಲು ಹಿಂಜರಿದು ಅತಿಕ್ರಮಣವನ್ನು ತೀವ್ರವಾಗಿ ಖಂಡಿಸಿದ್ದು ಅಷ್ಟೆ! ೧೯೩೪ರಲ್ಲಿ 'ನೈ ಸಮಿತಿ' (The Nye Committee) ಮದ್ದು ಗುಂಡು ಮತ್ತು ಶಸ್ತ್ರಾಸ್ತ್ರ ಉತ್ಪಾದನ ಉದ್ದಿಮೆಗಳನ್ನು ವಿಚಾರಣೆಗೆ ಗುರಿ ಮಾಡಿ ಅದರಿಂದ ಅಮೆರಿಕವನ್ನು ಮೊದಲನೆಯ ಜಾಗತಿಕ ಯುದ್ಧಕ್ಕೆ ಸೆಳೆದಿದ್ದು ಈ ಉದ್ದಿಮೆಗಾರರೆ ಎನ್ನುವುದು ಸಾಬೀತಾಯಿತು. ಈ

ಉತ್ಪಾದನೆ ಮತ್ತು ರಫ್ತುಗಳಿಂದ ಅಪಾರ ಹಣ ಗಳಿಸಿದ್ದ ಉದ್ದಿಮೆಗಾರರು ಪ್ರಸ್ತುತ ಯೂರೋಪಿನಲ್ಲಿ ನಡೆಯುತ್ತಿದ್ದ ಘಟನೆಗಳನ್ನು ತಮ್ಮ ಅನುಕೂಲಕ್ಕೆ ಉಪಯೋಗಿಸಿ ಕೊಂಡು ದೇಶವನ್ನು ಪುನಃ ಯುದ್ಧದ ದಳ್ಳುರಿಗೆ ದಬ್ಬಿ ಆ ಬೆಂಕಿಯಲ್ಲಿ ಮೈ ಕಾಯಿಸಿಕೊಳ್ಳುವಂತಹ ಸ್ವಾರ್ಥಪರತೆಯನ್ನು ತೋರಿಸಿತು. ಇಂಥ ವ್ಯಾಪಾರಿ/ಉದ್ಯಮಿಗಳ ಮೇಲೆ ಕ್ರಮ ತೆಗೆದುಕೊಂಡು ಅಮೆರಿಕ ತಟಸ್ಥ ನೀತಿಯನ್ನು ಪಾಲಿಸಿ 'ಪ್ರತ್ಯೇಕ'ವಾಗಿರ ಬೇಕೆಂದು ನೈ ಸಮಿತಿ ಸಲಹೆ ಮಾಡಿತು. ಈ ಸಲಹೆಗಳನ್ನು ಅಧಿಕೃತಗೊಳಿಸಲು ಕಾಂಗ್ರೆಸ್ ತಟಸ್ಥ ನೀತಿಯನ್ನು ಅಂಗೀಕರಿಸಿತು. ಶಸ್ತ್ರಾಸ್ತ್ರ ಮತ್ತು ಮದ್ದು ಗುಂಡುಗಳನ್ನು ಆಕ್ರಮಣಕಾರಿ ರಾಷ್ಟ್ರಗಳಿಗೆ ಮಾರಕೂಡದು, ಅಮೆರಿಕದ ಹಡಗುಗಳು ಆಕ್ರಮಣಕಾರಿ ದೇಶಗಳಿಗೆ ಸರಕು ಸರಂಜಾಮುಗಳನ್ನು ಕೊಂಡೊಯ್ಯಬಾರದು, ಆಕ್ರಮಣಕಾರಿ ದೇಶಗಳ ಹಡಗುಗಳಲ್ಲಿ ಅಮೆರಿಕನ್ನರು ಪ್ರಯಾಣ ಮಾಡಬಾರದು – ಇವು ತಟಸ್ಥ ನೀತಿ ಜಾರಿಗೆ ತಂದ ಶಿಕ್ಷಾರ್ಹ ಅಪರಾಧಗಳು. ೧೯೩೦ರ ದಶಕದಲ್ಲಿ ಅಮೆರಿಕನ್ನರು ಮೊದಲನೆಯ ಜಾಗತಿಕ ಯುದ್ಧದಲ್ಲಿ ಭಾಗವಹಿಸಿದ್ದು ಬಹಳ ದೊಡ್ಡ ತಪ್ಪು, ಪುನಃ ಅದೇ ತಪ್ಪನ್ನು ಮಾಡಬಾರದು ಎಂದು ನಿರ್ಧರಿಸಿ 'ತಟಸ್ಥ ನೀತಿ ಮತ್ತು ಪ್ರತ್ಯೇಕತೆ'ಯನ್ನು ಪಾಲಿಸುವಂತೆ ಸರ್ಕಾರದ ಮೇಲೆ ಒತ್ತಾಯ ಹಾಕಿದರು. ಈ ಕಾರಣದಿಂದ ಯೂರೋಪಿನಲ್ಲಿ ಯುದ್ಧ ಪ್ರಾರಂಭವಾದ ಮೊದಲ ವರ್ಷಗಳಲ್ಲಿ ಅಮೆರಿಕ ತಟಸ್ಥವಾಗಿಯೇ ಉಳಿದಿತ್ತು.

ಬಹುತೇಕ ಅಮೆರಿಕನ್ನರು ತಟಸ್ಥನೀತಿಯನ್ನು ಪಾಲಿಸಬೇಕೆಂದು ಒತ್ತಡ ಹಾಕಿದ್ದರೂ ಎಫ್.ಡಿ.ಆರ್ ತನ್ನ ಅಂತರಂಗದಲ್ಲಿ ಈಗಲ್ಲದಿದ್ದರೂ ಮುಂದೆ ಎಂದಾದರೂ ಅಮೆರಿಕ ಯುದ್ಧದಲ್ಲಿ ಭಾಗವಹಿಸುವುದು ಅನಿವಾರ್ಯ ಎಂದು ತಿಳಿದಿದ್ದನು. ಆದ್ದರಿಂದ ಅಮೆರಿಕ ಯುದ್ಧಕ್ಕೆ ಸಿದ್ಧವಾಗಿರಬೇಕೆಂದು ಎಚ್ಚರಿಸಿದನು. ೧೯೩೮ರಲ್ಲಿ ನೌಕಾದಳವನ್ನು ಹೆಚ್ಚು ದೊಡ್ಡದಾಗಿ ಮಾಡಬೇಕು ಮತ್ತು ಹೆಚ್ಚು ಯುದ್ಧನೌಕೆಗಳನ್ನು ನಿರ್ಮಾಣ ಮಾಡಬೇಕೆಂದು ಕಾಂಗ್ರೆಸ್ಸಿಗೆ ಮನವಿ ಮಾಡಿದನು. ಆದರೆ ೧೯೩೮ರವರೆಗೆ ಕಾಂಗ್ರೆಸ್ ಯಾವ ಕ್ರಮವನ್ನೂ ಕೈಗೊಳ್ಳಲಿಲ್ಲ. ಕಡೆಗೆ ಆ ವರ್ಷದ ಕೊನೆಯಲ್ಲಿ ಕಾಂಗ್ರೆಸ್ ನೌಕಾನಿರ್ಮಾಣಕ್ಕೆ ಹಣ ಮಂಜೂರು ಮಾಡಿತು.

೧೯೩೭ರಲ್ಲಿ ಎಫ್.ಡಿ.ಆರ್ ತನ್ನ 'ದಿಗ್ಬಂಧನ ಭಾಷಣ'ದಲ್ಲಿ (Quarantine speech) ಆಕ್ರಮಣಕಾರಿ ರಾಷ್ಟ್ರಗಳನ್ನು ಖಂಡಿಸಿ ಆ ರಾಷ್ಟ್ರಗಳ ಮೇಲೆ ಅಂತರರಾಷ್ಟ್ರೀಯ 'ದಿಗ್ಬಂಧನ' ಹಾಕಬೇಕೆಂದು ಕರೆಕೊಟ್ಟನು. ಪ್ರತ್ಯೇಕತಾವಾದಿ ಅಮೆರಿಕನ್ನರು ಇಂಥ ಉದ್ರೇಕಗೊಳಿಸುವ ಮಾತುಗಳು ಅಮೆರಿಕವನ್ನು ಯುದ್ಧದ ದಾರಿಯಲ್ಲಿ ಕರೆದೊಯ್ಯುತ್ತದೆ ಎಂದು ಪ್ರತಿಭಟಿಸಿದರು. ಆದರೂ ಎಫ್.ಡಿ.ಆರ್ ಧೃತಿಗೆಡದೆ ಅಮೆರಿಕ ಇತರ ಪ್ರಜಾರಾಜ್ಯಗಳೊಡನೆ ಸೇರಿಕೊಂಡು ಆಕ್ರಮಣಕಾರಿ ರಾಷ್ಟ್ರಗಳ ವಿರುದ್ಧ 'ಸಾಮೂಹಿಕ ರಕ್ಷಣಾ' ವ್ಯವಸ್ಥೆಯನ್ನು ರಚಿಸಿಕೊಳ್ಳಲು ಅಗತ್ಯವೆಂದು ಆಗ್ರಹಪಡಿಸಿದನು.

ದ್ವಿತೀಯ ಜಾಗತಿಕ ಯುದ್ಧದ 'ತಾಂಡವ ನೃತ್ಯ'ಕ್ಕೆ ಕಾರಣವಾದ ರಾಜಕೀಯ ಕೃತ್ಯಗಳು

೧೯೩೩ರಲ್ಲಿ ಹಿಟ್ಲರ್ 'ರಾಷ್ಟ್ರಗಳ ಒಕ್ಕೂಟ'ದಿಂದ (League of Nations) ಜರ್ಮನಿಯನ್ನು ಬಿಡಿಸಿ ಹೊರತಂದನು. ೧೯೩೬ರಲ್ಲಿ ರಾಷ್ಟ್ರಗಳ ಒಕ್ಕೂಟದ ಒಪ್ಪಂದ ವನ್ನು ಉಲ್ಲಂಘಿಸಿ ರೈನ್‌ಲ್ಯಾಂಡ್‌ನ್ನು (Rhineland) ಆಕ್ರಮಣ ಮಾಡಿ ವಶಪಡಿಸಿ ಕೊಂಡನು. ೧೯೩೮ರಲ್ಲಿ ಆಸ್ಟ್ರಿಯ ದೇಶದ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡನು. ಇದಾದ ನಂತರ ಬಹುತೇಕ ಜರ್ಮನರಿದ್ದ ಜೆಕೊಸ್ಲೋವಾಕಿಯಾ ಗಡಿ ಪ್ರದೇಶವಾದ ಸುಡೆಟೆನ್ ಲ್ಯಾಂಡ್ (Sudetenland) ಜರ್ಮನಿಗೆ ವಾಪಸ್ಸು ಮಾಡಬೇಕೆಂದು ವೆರ್ಸಾಯ್ ಒಪ್ಪಂದಕ್ಕೆ ರುಜು ಮಾಡಿದ ರಾಷ್ಟ್ರಗಳಿಗೆ ಒತ್ತಾಸೆ ಮಾಡಿದನು. ಈ ಸಂದಿಗ್ಧ ಪರಿಸ್ಥಿತಿ ಯುದ್ಧಕ್ಕೆ ಕಾರಣವಾಗುತ್ತದೆ ಎಂದು ಕಳವಳಗೊಂಡ ಬ್ರಿಟಿಷ್ ಪ್ರಧಾನಮಂತ್ರಿ ಚೇಂಬರ್‌ಲೇನ್ (Chamberlain) ಮತ್ತು ಫ್ರಾನ್ಸ್‌ನ ಪ್ರಧಾನಿ ಡಲಡಿಯರ್ (Daladier) ಹಿಟ್ಲರ್‌ನನ್ನು ತೃಪ್ತಿಗೊಳಿಸುವುದರ ಮೂಲಕ ಯುದ್ಧವನ್ನು ತಪ್ಪಿಸಲು ಮ್ಯೂನಿಕ್ ನಗರದಲ್ಲಿ ಹಿಟ್ಲರ್ ಮತ್ತು ಇಟಲಿಯ ಮುಸೋಲಿನಿಯರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು. ಬ್ರಿಟಿಷ್ ಮತ್ತು ಫ್ರೆಂಚ್ ಪ್ರಧಾನಿಗಳು ಸುಡೆಟೆನ್ ಲ್ಯಾಂಡ್ ಪ್ರದೇಶವನ್ನು ಜರ್ಮನಿಗೆ ಬಿಟ್ಟುಕೊಡಬೇಕೆಂದು ಜೆಕೊಸ್ಲೋವಾಕಿಯಾಕ್ಕೆ ಮನವಿ ಮಾಡಿಕೊಂಡರು. ಸುಡೆಟೆನ್ ಲ್ಯಾಂಡ್ ಮಾತ್ರ ಜರ್ಮನಿಯ ವಶಕ್ಕೆ ಕೊಟ್ಟರೆ ಸಾಕೆಂದು ಮ್ಯೂನಿಕ್ ಶೃಂಗಸಭೆಯಲ್ಲಿ ಒಪ್ಪಿಕೊಂಡ ಹಿಟ್ಲರ್ ಕೊಟ್ಟ ಮಾತಿನಂತೆ ನಡೆಯದೆ ೧೯೩೯ರಲ್ಲಿ ಉಳಿದ ಜೆಕೊಸ್ಲೋವಾಕಿಯಾ ದೇಶವನ್ನೂ ಆಕ್ರಮಿಸಿಕೊಂಡನು. ಅಷ್ಟಕ್ಕೆ ತೃಪ್ತನಾಗದೆ ಅವನ ರಾಜ್ಯದಾಹ ಹೆಚ್ಚುತ್ತ ಹೋಯಿತು. ಪೋಲೆಂಡಿನ ಬಹುಭಾಗ ಜರ್ಮನಿಯಿಂದ ಬಲಾತ್ಕಾರದಿಂದ ಕಿತ್ತುಕೊಂಡಿದ್ದು, ಆ ಭಾಗಗಳನ್ನು ಜರ್ಮನಿಗೆ ಹಿಂತಿರುಗಿಸಬೇಕಾದುದು ನ್ಯಾಯಸಮ್ಮತವಾದುದು ಎಂದು ಪ್ರಚಾರ ಮಾಡತೊಡಗಿದನು. ೧೯೩೯ರಲ್ಲಿ ಹಿಟ್ಲರ್, ಪೋಲೆಂಡ್ ಆಕ್ರಮಣಕ್ಕೆ ಅಡ್ಡಿ ಆಗದಂತೆ ಮಾಡಲು ಸೋವಿಯೆಟ್ ರಷ್ಯಾದೊಡನೆ (Soviet Russia) ಪರಸ್ಪರ ಆಕ್ರಮಣವನ್ನು ನಿಷೇಧಿಸುವ ಮೈತ್ರಿ ಕರಾರನ್ನು ಮಾಡಿಕೊಂಡನು. ಹಿಟ್ಲರ್ ಪೋಲೆಂಡನ್ನು ಆಕ್ರಮಿಸಿದರೆ ಪೋಲೆಂಡಿಗೆ ಎಲ್ಲ ವಿಧದ ಸಹಾಯ ನೀಡುವುದಾಗಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು ವಚನ ನೀಡಿದವು.

೧೯೩೫ರಲ್ಲಿ ಇಟಲಿ ಸರ್ವಾಧಿಕಾರಿ ಮುಸ್ಸೋಲಿನಿಯ ಕೈವಶವಾಗಿತ್ತು. ಅವನು ರಾಷ್ಟ್ರಗಳ ಒಕ್ಕೂಟದ ಅಂತರರಾಷ್ಟ್ರೀಯ ಕಾಯಿದೆಗಳನ್ನು ಉಲ್ಲಂಘಿಸಿ ಇಥಿಯೋಪಿಯಾ ದೇಶವನ್ನು ಆಕ್ರಮಣ ಮಾಡಿ ವಶಪಡಿಸಿಕೊಂಡನು. ೧೯೩೬ರಲ್ಲಿ ಇಟಲಿ ಜರ್ಮನಿಯನ್ನು ಸೇರಿಕೊಂಡು 'ರೋಮ್-ಬರ್ಲಿನ್ ಆ್ಯಕ್ಸಿಸ್' (Rome-Berlin axis) – ರೋಮ್

ಮತ್ತು ಬರ್ಲಿನ್ ಪಾಲುಗಾರಿಕೆಯನ್ನು ಸ್ಥಾಪಿಸಿದರು. ಸ್ಪೇನ್‌ನಲ್ಲಿ ಸರ್ವಾಧಿಕಾರಿಯಾಗಿದ್ದ ಫ್ರಾನ್ಸಿಸ್ಕೊ ಫ್ರಾಂಕೊ ಆಡಳಿತದ ವಿರುದ್ಧ ಜನ ದಂಗೆ ಎದ್ದಾಗ ಆ ದಂಗೆಯನ್ನಡಗಿಸಲು ಹಿಟ್ಲರ್ ಮತ್ತು ಮುಸೋಲಿನಿ ಇಬ್ಬರೂ ಫ್ರಾಂಕೋಗೆ ನೆರವು ನೀಡಿದರು. ಹಿಟ್ಲರ್ ಜೆಕೊಸ್ಲೋವಾಕಿಯಾ ಆಕ್ರಮಣ ಮಾಡಿಕೊಂಡ ಸ್ವಲ್ಪ ಸಮಯದಲ್ಲೇ ಮುಸೊಲಿನಿ ಆಲ್ಬೇನಿಯವನ್ನು (Albania) ಆಕ್ರಮಣ ಮಾಡಿ ವಶಪಡಿಸಿಕೊಂಡನು.

೧೯೩೯ನೆಯ ವರ್ಷ ಸೆಪ್ಟೆಂಬರ್ ೧ರಂದು ಜಗತ್ತಿನ ಇತಿಹಾಸದಲ್ಲಿ ಅತ್ಯಂತ ಕರಾಳವಾದ ದಿನ. ಆ ದಿನ ಜರ್ಮನಿಯ ವಾಯುಪಡೆ ಪೋಲೆಂಡಿನ ಮೇಲೆ ಮಿಂಚಿನ ದಾಳಿ (Blitzkrieg) ಮಾಡಿದ ವಿಷಘಳಿಗೆಯಲ್ಲಿ ಎರಡನೆಯ ಜಾಗತಿಕ ಯುದ್ಧ ಪ್ರಾರಂಭವಾಯಿತು. ಹೆಚ್ಚು ಕಷ್ಟವಿಲ್ಲದೆ ಹಿಟ್ಲರನ ಸೈನ್ಯಗಳು ಪೋಲೆಂಡಿನ ಬಹುಭಾಗವನ್ನು ಆಕ್ರಮಿಸಿಕೊಂಡವು. ಈ ಅವಕಾಶವನ್ನು ಉಪಯೋಗಿಸಿಕೊಂಡು ಸೋವಿಯೆಟ್ ರಷ್ಯಾ ಪೂರ್ವ ಪೋಲೆಂಡನ್ನು ಆಕ್ರಮಿಸಿಕೊಂಡು, ಬಾಲ್ಟಿಕ್ ದೇಶಗಳನ್ನು ವಶಪಡಿಸಿಕೊಂಡು, ಅದೇ ಸಮಯದಲ್ಲಿ ಫಿನ್‌ಲೆಂಡ್ ಮೇಲೆ ದಾಳಿ ನಡೆಸಿತು. ೧೯೩೯ರ ಸೆಪ್ಟೆಂಬರ್ ೩ರಂದು ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ಜರ್ಮನಿಯ ಮೇಲೆ ಯುದ್ಧ ಸಾರಿದವು.

ಅಮೆರಿಕದಲ್ಲಿ ಬಹುಸಂಖ್ಯಾತರು ಪ್ರತ್ಯೇಕತಾವಾದಿಗಳ ಪ್ರಭಾವಕ್ಕೊಳಗಾಗಿದ್ದರು. ಇವರು ಸ್ಥಾಪಿಸಿದ 'ಅಮೆರಿಕ ಮೊದಲು ಸಮಿತಿ' (America First Committee) ಪ್ರಭಾವಶಾಲಿಯಾಗಿತ್ತು. ಈ ಸಮಿತಿಯ ಸ್ಥಾಪಕ ಕ್ವೇಕರ್ ಓಟ್ಸ್ ಕಂಪನಿಯ (Quaker Oats Company) ಪ್ರೆಸಿಡೆಂಟರ ಮಗ ಡಗ್ಲಾಸ್ ಸ್ಟೂವರ್ಟ್ ಜೂನಿಯರ್. ಪ್ರಬಲ ಉದ್ಯಮಿಗಳು ಮತ್ತು ವ್ಯಾಪಾರಿಗಳು ಇದರಲ್ಲಿ ಸೇರಿದ್ದರು. ರಾಬರ್ಟ್ ಉಡ್ಸ್ ಎಂಬುವನು ಸಿಯರ್ಸ್ ರೋಬಕ್ ಕಂಪನಿಯವನು. ಮಾಂಸ ವ್ಯಾಪಾರಿ ಜೇ ಹಾರ್ಮಲ್, ಇತಿಹಾಸಕಾರ ಚಾರ್ಲ್ಸ್ ಬಿಯರ್ಡ್, ಹರ್ಬರ್ಟ್ ಹೂವರ್ ಮತ್ತು ಚಾರ್ಲ್ಸ್ ಲಿಂಡ್‌ಬರ್ಗ್ ಮುಂತಾದ ಪ್ರತಿಷ್ಠಿತರಿಂದ ಕೂಡಿದ ಈ ಸಮಿತಿ ದೇಶದಾದ್ಯಂತ ೪೫೦ ಶಾಖೆಗಳನ್ನು ಸ್ಥಾಪಿಸಿ, ಯುದ್ಧ ಯೂರೋಪಿಗೆ ಸೀಮಿತವಾದುದು, ಅದರಿಂದ ಅಮೆರಿಕದ ಭದ್ರತೆಗೆ ಭಯವಿಲ್ಲ. ಆದ್ದರಿಂದ ಅಮೆರಿಕ ಮಧ್ಯೆ ಪ್ರವೇಶಿಸಕೂಡದು, ಹಾಗೆ ಮಾಡುವ ಅವಶ್ಯಕತೆಯಿಲ್ಲ ಎಂದು ಪ್ರಚಾರ ಮಾಡಿದರು. ಅಂತರರಾಷ್ಟ್ರೀಯತೆಯನ್ನು ಬೆಂಬಲಿಸುತ್ತಿದ್ದ ಅಮೆರಿಕನ್ನರು 'ಮಿತ್ರ ರಾಷ್ಟ್ರಗಳಿಗೆ' (allies) ಸಹಾಯ ಮಾಡುವುದರ ಮೂಲಕ ಅಮೆರಿಕವನ್ನು ರಕ್ಷಿಸುವ ಸಮಿತಿಯನ್ನು ಸ್ಥಾಪಿಸಿ, ಯುದ್ಧಕ್ಕಿಳಿಯುವುದನ್ನು ಬಿಟ್ಟು, ಮಿಕ್ಕ ಎಲ್ಲ ಸಹಾಯವನ್ನು ಮಿತ್ರ ರಾಷ್ಟ್ರಗಳಿಗೆ ಒದಗಿಸಬೇಕೆನ್ನುವುದು ಈ ಸಮಿತಿಯ ಗುರಿಯಾಗಿತ್ತು. ಇದರ ಸದಸ್ಯರಾದ ಜನರಲ್ ಪರ್ಷಿಂಗ್ (General Pershing), ಹೆರಾಲ್ಡ್ ಐಕೆಸ್ (Harold Ickes) ಮತ್ತು ಹೆನ್ರಿ ಸ್ಟಿಮ್‌ಸನ್ (henry Stimson) ಜರ್ಮನಿಯು ಕೂಡಲೇ

ಯುದ್ಧ ಸಾರಬೇಕೆಂದು ಆಗ್ರಹಪಡಿಸಿದರು. ಎಫ್.ಡಿ.ಆರ್. ಇವರನ್ನು ಸೇರಿಕೊಂಡನು. ಅವನು ಕಾಂಗ್ರೆಸ್‌ನ ವಿಶೇಷ ಅಧಿವೇಶನವನ್ನು ಕರೆದು ತಟಸ್ಥನೀತಿಯ ಕಾಯಿದೆಗಳನ್ನು ಮಾರ್ಪಾಡು ಮಾಡಲು ಅನುಮತಿ ಪಡೆದುಕೊಂಡನು. ಮದ್ದು ಗುಂಡು ಮತ್ತು ಶಸ್ತ್ರಾಸ್ತ್ರಗಳ ಮಾರಾಟದ ಮೇಲೆ ಹಾಕಿದ್ದ ದಿಗ್ಬಂಧನವನ್ನು ಬದಲಾಯಿಸಿ ನಗದು ಹಣ ಕೊಟ್ಟು ಅವುಗಳನ್ನು ಕೊಳ್ಳಬಹುದೆಂದು ನಿರ್ಧರಿಸಲಾಯಿತು. ಇದರ ಉದ್ದೇಶ ಮಿತ್ರರಾಷ್ಟ್ರಗಳಿಗೆ ಶಸ್ತ್ರಾಸ್ತ್ರ ಸರಬರಾಜು ಮಾಡುವುದಾಗಿತ್ತು. ವಿಶಾಲ ಅಮೆರಿಕ ರಾಷ್ಟ್ರಗಳ (Pan-American Nations) ಸಭೆ ಸೇರಿಸಿ ಪಶ್ಚಿಮ ಗೋಲಾರ್ಧದ ರಕ್ಷಣೆಗಾಗಿ ಒಗ್ಗಟ್ಟಾಗಿ ಸಂಘಟನೆಗೊಂಡು ಯುದ್ಧಕ್ಕೆ ಸಿದ್ಧವಾಗಿರಬೇಕೆಂದು ನಿಶ್ಚಯಿಸಲಾಯಿತು.

ಯೂರೋಪಿನಲ್ಲಿ ಹಿಟ್ಲರ್ ಯಶಸ್ಸಿನ ಮೇಲೆ ಯಶಸ್ಸು ಗಳಿಸಿದ್ದು ಅಮೆರಿಕನ್ನರನ್ನು ಎಚ್ಚರಗೊಳಿಸಿತು. ೧೯೪೦ರಲ್ಲಿ ಸಿದ್ಧತೆಯ ಕ್ರಮಗಳನ್ನು ಜಾರಿಗೆ ತಂದರು. ಸೈನ್ಯ ಬಲ ಹೆಚ್ಚಿಸಲು ಕಾಂಗ್ರೆಸ್ ವಿಪುಲವಾಗಿ ಹಣ ಮಂಜೂರು ಮಾಡಿತು. ಸೈನ್ಯದಲ್ಲಿ ಸೇವೆ ಸಲ್ಲಿಸಲು ಆಯ್ಕೆಯಾಗುವ ಸಲುವಾಗಿ ೨೧ರಿಂದ ೩೫ ವರ್ಷ ಪ್ರಾಯದ ಪುರುಷರೆಲ್ಲರೂ ಕಡ್ಡಾಯವಾಗಿ ನೋಂದಾಣಿಸಿಕೊಳ್ಳಬೇಕಾಗಿ ಕಾಯಿದೆ ಜಾರಿಗೆ ತರಲಾಯಿತು. ಕೈಗಾರಿಕೆಗಳನ್ನು ಯುದ್ಧ ಸಾಮಗ್ರಿಗಳ ಉತ್ಪಾದನೆಗೆ ಸಿದ್ಧಗೊಳಿಸಲು ಉತ್ಪಾದನಾ ನಿರ್ವಹಣ ಇಲಾಖೆ (Office of Production Management) ಯನ್ನು ಸ್ಥಾಪಿಸಲಾಯಿತು. ಡೆಮೊಕ್ರಾಟಿಕ್ ಪಕ್ಷ ಮತ್ತು ರಿಪಬ್ಲಿಕನ್ ಪಕ್ಷಗಳು ಹೊಂದಿಕೊಂಡು ಒಗ್ಗಟ್ಟಿನಿಂದ ಕಾರ್ಯಾಚರಣೆ ಮಾಡಲು ನೆರವಾಗುವಂತೆ ಇಬ್ಬರು ರಿಪಬ್ಲಿಕನ್ನರನ್ನು ಎಫ್.ಡಿ.ಆರ್ ತನ್ನ ಆಡಳಿತ ಮಂಡಳಿಗೆ ಸೇರಿಸಿಕೊಂಡನು. ರಿಪಬ್ಲಿಕನ್ ಹೆನ್ರಿ ಸ್ಟಿಮ್‌ಸನ್ ಕದನ ಕಾರ್ಯದರ್ಶಿಯನ್ನಾಗಿ (Secretary of War) ಮತ್ತು ಫ್ರಾಂಕ್ ನಾಕ್ಸ್ (frank Knox) ನೌಕಾದಳದ ಕಾರ್ಯದರ್ಶಿಯಾಗಿ ನೇಮಕಗೊಂಡರು. ೧೯೪೦ರ ಸೆಪ್ಟೆಂಬರ್ ತಿಂಗಳಲ್ಲಿ ಪಶ್ಚಿಮ ಅಟ್ಲಾಂಟಿಕ್ ಸಾಗರದಲ್ಲಿ ಎಂಟು ನೌಕಾದಳದ ಮತ್ತು ವಾಯುಪಡೆಯ ನೆಲೆಗಳನ್ನು ಇಂಗ್ಲೆಂಡಿನಿಂದ ಗುತ್ತಿಗೆ ಪಡೆದುಕೊಂಡನು. ಈ ನೆಲೆಗಳಿಗೆ ಬದಲಾಗಿ ೫೦ ಯುದ್ಧ ನೌಕೆಗಳನ್ನು ಬ್ರಿಟಿಷರಿಗೆ ರವಾನಿಸಿದನು. ಇವುಗಳು ಒಂದನೆಯ ಜಾಗತಿಕ ಯುದ್ಧದಲ್ಲಿ ಕಾರ್ಯಾಚರಣೆ ಯಶಸ್ವಿಯಾಗಿ ನಡೆಸಿದ್ದವು. ಈ ವ್ಯವಹಾರ ನಡೆಸಲು ಎಫ್.ಡಿ.ಆರ್ ಕಾಂಗ್ರೆಸ್‌ನ ಅನುಮತಿ ಕೇಳಲಿಲ್ಲ.

ಇತ್ತ ಯೂರೋಪಿನಲ್ಲಿ ಹಿಟ್ಲರ್ ಪೋಲೆಂಡನ್ನು ಕ್ಷಿಪ್ರಗತಿಯಲ್ಲಿ ವಶಪಡಿಸಿಕೊಂಡ ಮೇಲೆ ಸ್ವಲ್ಪ ಕಾಲ ಯುದ್ಧ ಬಿರುಸು ಕಳೆದುಕೊಂಡು ಪಶ್ಚಿಮ ರಂಗದಲ್ಲಿ (western front) ಮಂದಗತಿಯಿಂದ ಸಾಗಿತು. ಈ ಪರಿಸ್ಥಿತಿಗೆ 'ಸಿಟ್ಜ್‌ಕ್ರೀಗ್' (Sitzkrieg) ಎಂದು ಹೆಸರು. ಫ್ರೆಂಚರು 'ಮಾಜಿನಾಟ್ ರೇಖೆಯ' ಹಿಂದೆ ಸುರಕ್ಷಿತವಾಗಿದ್ದೇವೆ ಎಂಬ ಭ್ರಮೆಯಲ್ಲಿದ್ದರು. ಜರ್ಮನರು ತಮ್ಮ 'ಸೀಗ್‌ಫ್ರೀಡ್ ರೇಖೆ' ಯನ್ನು (Siegfried

Line) ರಚಿಸಿಕೊಂಡಿದ್ದರು. ೧೯೪೦ರ ಏಪ್ರಿಲ್ ತಿಂಗಳಲ್ಲಿ ಯುದ್ಧಕ್ಕೆ ಮತ್ತೆ ಬಿಸಿ ಏರಿತು. ತ್ವರಿತಗತಿಯಲ್ಲಿ ಹಿಟ್ಲರನ ಸೈನ್ಯಗಳು ನಾರ್ವೆ ಮತ್ತು ಡೆನ್ಮಾರ್ಕ್ ದೇಶಗಳನ್ನು ಆಕ್ರಮಿಸಿಕೊಂಡವು. ಹೆಚ್ಚಿನ ಪ್ರತಿಭಟನೆಯನ್ನು ಎದುರಿಸದೆ ಹಿಟ್ಲರನ ಸೈನ್ಯಗಳು ಬ್ರೇಕ್ ಇಲ್ಲದ ರೈಲುಗಾಡಿಯಂತೆ ನುಗ್ಗಿ ಹಾಲೆಂಡ್ (Holland), ಬೆಲ್ಜಿಯಂ (Belgium), ಲುಕ್ಸಮ್‌ಬರ್ಗ್ (Luxembourg)ಗಳನ್ನು ವಶಪಡಿಸಿಕೊಂಡವು. ಮುನ್ನುಗ್ಗಿ ಬರುತ್ತಿದ್ದ ಜರ್ಮನ್ ಸೈನ್ಯ ಮಿತ್ರರಾಷ್ಟ್ರಗಳ ಸೈನ್ಯಗಳನ್ನು ಹಿಮ್ಮೆಟ್ಟಿಸಿ ಫ್ರಾನ್ಸ್‌ನ ಉತ್ತರದ ಸಮುದ್ರತೀರದ ಡನ್‌ಕರ್ಕ್ (Dunkirk) ಎನ್ನುವಲ್ಲಿ ೩೦೦ ಸಾವಿರ ಸೈನಿಕರನ್ನು ತಪ್ಪಿಸಿಕೊಂಡು ಹೋಗಲು ಸಮುದ್ರವಲ್ಲದೆ ಬೇರೆ ಮಾರ್ಗವಿಲ್ಲದೆ ಬೋನಿನಲ್ಲಿ ಸಿಕ್ಕಿಕೊಂಡ ಪ್ರಾಣಿಗಳಂತೆ ನಿಸ್ಸಹಾಯಕ ಸ್ಥಿತಿಯಲ್ಲಿ ಸಿಕ್ಕಿಸಿದರು. ಜರ್ಮನ್ ಸೈನ್ಯ ಡನ್‌ಕರ್ಕ್ ಮೇಲೆ ದಾಳಿ ಮಾಡಿ ಈ ನಿಸ್ಸಹಾಯಕ ಸೈನಿಕರನ್ನು ಕಗ್ಗೊಲೆ ಮಾಡಿದ್ದರೆ ಇಂಗ್ಲೆಂಡ್ ಸೋತು ಶರಣಾಗಬೇಕಿತ್ತು. ಆದರೆ ಬ್ರಿಟಿಷ್ ಸಣ್ಣ ನೌಕೆಗಳು ಹಾಗೂ ವ್ಯಾಪಾರದ ದೋಣಿಗಳ ಸಮರ್ಥ ಕಾರ್ಯಾಚರಣೆಯಿಂದಾಗಿ ಡನ್‌ಕರ್ಕ್‌ನಲ್ಲಿ ಸಿಕ್ಕಿಬಿದ್ದಿದ್ದ ಸೈನಿಕರು ಪಾರಾಗಿ ಸುರಕ್ಷಿತವಾಗಿ ಇಂಗ್ಲೆಂಡ್ ತಲುಪಿದರು. ಈ ಕಾರ್ಯಾಚರಣೆಗೆ ಇತಿಹಾಸದಲ್ಲಿ ಅತಿ ದೊಡ್ಡ ಹಿಮ್ಮೆಟ್ಟುವಿಕೆ (retreat) ಎಂದು ಪ್ರಖ್ಯಾತಿ ಪಡೆದಿದೆ. ಪುಟ್ಟ ನೌಕೆಗಳಲ್ಲಿ ಮತ್ತು ದೋಣಿಗಳಲ್ಲಿ ಬಹುದೊಡ್ಡ ಸೈನ್ಯವನ್ನು ಅಪಾಯದಿಂದ ಪಾರು ಮಾಡಿದ್ದು ಒಂದು ಪವಾಡವೆಂದರೆ ಉತ್ಪ್ರೇಕ್ಷೆಯಾಗಲಾರದು.

ಬೆಲ್ಜಿಯಂ ಪತನಾನಂತರ ಫ್ರಾನ್ಸ್‌ನ ಸರದಿ. ಫ್ರೆಂಚ್ ಸೈನ್ಯ 'ಮಾಜಿನಾಟ್ ರೇಖೆ' ಭೇದಿಸಲಾರದ ಕೋಟೆ, ಅದನ್ನು ದಾಟುವುದು ಜರ್ಮನ್ ಸೈನ್ಯಕ್ಕೆ ದುಸ್ಸಾಧ್ಯ ಎಂದು ನಂಬಿದ್ದರು. ಆದರೆ ಜರ್ಮನ್ ಸೈನ್ಯಗಳು ಈ ರೇಖೆಯನ್ನು ಬಳಸಿ ಬೆಲ್ಜಿಯಂ ಮುಖಾಂತರ ವಾಗಿ ಫ್ರಾನ್ಸ್ ಸೇರಿ ಅಲ್ಲಿ ಎದುರಾದ ಫ್ರೆಂಚ್ ಸೈನ್ಯಗಳನ್ನು ಧೂಳೀಪಟ ಮಾಡಿದವು. ೧೯೪೦ರ ಜೂನ್ ೧೪ರಂದು ಜರ್ಮನಿಯ 'ಸ್ವಾಸ್ತಿಕದ ಚಿಹ್ನೆ'ಯ ಬಾವುಟ ಪ್ಯಾರಿಸ್ ನಗರದ ಮೇಲೆ ಹಾರಾಡುತ್ತಿತ್ತು. ಜೂನ್ ೨೨ರಂದು ಫ್ರೆಂಚ್ ಪ್ರತಿನಿಧಿಗಳು ಹಿಟ್ಲರನ ಸಮ್ಮುಖದಲ್ಲಿ ಅವನು ಹಾಕಿದ ಷರತ್ತುಗಳನ್ನು ಒಪ್ಪಿಕೊಂಡು, ೧೯೧೮ರಲ್ಲಿ ಜರ್ಮನಿ ಶರಣಾಗತವಾದಾಗ ಕರಾರು ಪತ್ರಕ್ಕೆ ರುಜು ಹಾಕಿದ್ದು ಕಾಂಪೈನ್ (Compiegne) ಊರಿನ ರೈಲುಮಾರ್ಗದಲ್ಲಿ ರೈಲ್ವೆ ಹಳಿಗಳ ಮೇಲೆ ನಿಂತಿದ್ದ ಒಂದು ರೈಲುಗಾಡಿಯಲ್ಲಿ. ಮುಯ್ಯಿ ತೀರಿಸಿಕೊಳ್ಳಲು ಹಿಟ್ಲರ್ ಅದೇ ಊರಿನಲ್ಲಿ ಅದೇ ರೈಲ್ವೆಗಾಡಿಯೊಳಗೆ ಫ್ರೆಂಚ್ ಪ್ರತಿನಿಧಿಗಳು ಹಿಟ್ಲರ್ ತಯಾರಿಸಿದ ಸಂಧಾನಪತ್ರಕ್ಕೆ ಅವನ ಸಮ್ಮುಖದಲ್ಲಿ ರುಜು ಹಾಕುವಂತೆ ಮಾಡಿ ಜರ್ಮನಿಗೆ ಹಿಂದೆ ಆಗಿದ್ದ ಅವಮಾನವನ್ನು ಅಳಿಸಿಹಾಕಿದೆನೆಂದು ಹಿಟ್ಲರ್ ಹೆಮ್ಮೆ ಪಟ್ಟುಕೊಂಡನು.

ಫ್ರಾನ್ಸ್‌ನ ಪತನವಾದ ಮೇಲೆ ಇಂಗ್ಲೆಂಡ್‌ವೊಂದೇ ಜರ್ಮನಿಯನ್ನು ಎದುರಿಸ

ಬೇಕಾದುದು ಅನಿವಾರ್ಯವಾಯಿತು. ಜರ್ಮನ್ ವಾಯುದಳ ಇಂಗ್ಲೆಂಡಿನ ಮೇಲೆ 'ಮಿಂಚಿನ ದಾಳಿ' ಮಾಡುವ ಸಮಯದಲ್ಲಿ ಪ್ರಧಾನಮಂತ್ರಿ ಚೇಂಬರ್‌ಲೇನ್ ಬದಲಿಗೆ ವಿನ್‌ಸ್ಟನ್ ಚರ್ಚಿಲ್ ಪ್ರಧಾನಮಂತ್ರಿಯಾಗಿ ಆಯ್ಕೆಯಾಗಿದ್ದನು. ಚರ್ಚಿಲ್ ಹಿಟ್ಲರನ ಬೆದರಿಕೆಗಳಿಗೆ ಪ್ರತ್ಯುತ್ತರವಾಗಿ 'ನಾವು ಕಡೆಯವರೆಗೂ ಹೋರಾಡುತ್ತೇವೆ, ನಾವು ಎಂದಿಗೂ ಶರಣಾಗತರಾಗುವುದಿಲ್ಲ. ಒಂದು ವೇಳೆ ಬ್ರಿಟಿಷ್ ದ್ವೀಪಗಳು ಪತನವಾದರೆ, ನಾವು ನಮ್ಮ ವಸಾಹತುಗಳಲ್ಲಿ ಯುದ್ಧ ಮುಂದುವರಿಸುತ್ತೇವೆ' ಎಂಬ ಕಟು ನಿರ್ಧಾರವನ್ನು ಪ್ರಚಾರ ಪಡಿಸಿದನು. ಹಿಟ್ಲರ್ ತನ್ನ ವಾಯುಪಡೆಗಳನ್ನು ಇಂಗ್ಲೆಂಡಿನ ಮೇಲೆ ದಾಳಿ ನಡೆಸಲು ನಿರ್ದೇಶಿಸಿದಾಗ ಅಮೆರಿಕನ್ನರಿಗೆ ಇದ್ದಕ್ಕಿದ್ದ ಹಾಗೆ ತಾವು ಅಪಾಯಕರ ಸನ್ನಿವೇಶ ದಲ್ಲಿದ್ದೇವೆ ಎಂಬ ಅರಿವಾಯಿತು. ಇಂಗ್ಲೆಂಡ್ ಪತನವಾದರೆ ಮುಂದಿನ ಸರದಿ ಅಮೆರಿಕದ್ದು ಎನ್ನುವ ಸಂಗತಿ ಇನ್ನೂ ಹೆಚ್ಚಿನ ಭದ್ರತೆ ಮತ್ತು ರಕ್ಷಣಾಕ್ರಮಗಳನ್ನು ಕೈಗೊಳ್ಳುವಂತೆ ಮಾಡಿತು.

ಎಫ್.ಡಿ.ಆರ್ ತನ್ನ ವಾರ್ಷಿಕ ಆಯವ್ಯಯ ಪಟ್ಟಿಯನ್ನು ಮಂಡಿಸುತ್ತ ರಕ್ಷಣೆಗೆ ೧.೯ ಬಿಲಿಯನ್ ಡಾಲರ್ ಮಂಜೂರು ಮಾಡಲು ಕೇಳಿದ್ದವನು, ಇಂಗ್ಲೆಂಡಿನ ಮೇಲೆ ದಾಳಿ ಪ್ರಾರಂಭವಾದಾಗ, ರಕ್ಷಣಾ ವೆಚ್ಚವನ್ನು ಇನ್ನೂ ಹೆಚ್ಚಿಸಿ, ವರ್ಷಕ್ಕೆ ೫೦ ಸಾವಿರ ಯುದ್ಧ ವಿಮಾನಗಳನ್ನು ಉತ್ಪಾದನೆ ಮಾಡುವ ಅಗತ್ಯವನ್ನು ಒತ್ತಿ ಹೇಳಿದನು. ೧೯೪೦ರ ಅಕ್ಟೋಬರ್ ಸಮಾವೇಶದಲ್ಲಿ ಕಾಂಗ್ರೆಸ್ ರಕ್ಷಣಾ ಕಾರ್ಯಕ್ರಮಗಳಿಗೆ ೧೭ ಬಿಲಿಯನ್ ಡಾಲರ್‌ಗಳನ್ನು ಮಂಜೂರು ಮಾಡಿತು. ಬ್ರಿಟಿಷ್ ಪ್ರಧಾನಿ ಚರ್ಚಿಲ್ಲನ ಕೋರಿಕೆಯಂತೆ ಅಮೆರಿಕದ ಯುದ್ಧ ಮತ್ತು ನೌಕಾ ಇಲಾಖೆಗಳು ಶಸ್ತ್ರಾಸ್ತ್ರಗಳು, ಯುದ್ಧ ವಿಮಾನಗಳು ಮತ್ತು ಮದ್ದು ಗುಂಡುಗಳನ್ನು ಬ್ರಿಟಿಷರಿಗೆ ರವಾನಿಸುತ್ತ ಬಂದವು.

೧೯೪೦ರ ಆಗಸ್ಟ್ ತಿಂಗಳಲ್ಲಿ ಸಂಯುಕ್ತ ಸಂಸ್ಥಾನಗಳು ಮತ್ತು ಕೆನಡ 'ಶಾಶ್ವತವಾದ ಜಂಟಿ ರಕ್ಷಣಾ ಸಮಿತಿ'ಯನ್ನು (Permanent Joint Board of Defense) ಸ್ಥಾಪನೆ ಮಾಡಿದವು. ಆ ತಿಂಗಳ ಕೊನೆಯಲ್ಲಿ 'ರಾಷ್ಟ್ರೀಯ ರಕ್ಷಣಾದಳ'ವನ್ನು (National Guard) ಫೆಡರಲ್ ಸರ್ಕಾರದ ಸೇವೆಗೆ ಒಳಪಡಿಸಲಾಯಿತು. ೧೯೪೦ರ ಬೇಸಿಗೆಯಲ್ಲಿ ದ್ವಿತೀಯ ಜಾಗತಿಕ ಯುದ್ಧದ ಅತ್ಯಂತ ಮುಖ್ಯವಾಗಿ ನಿರ್ಣಾಯಕವಾದ 'ಬ್ರಿಟನ್ನಿನ ಕದನ' (Battle of Britain)ಪ್ರಾರಂಭವಾಯಿತು. ಈ ಕದನ ಇಂಗ್ಲೆಂಡಿನ ಅಳಿವು ಉಳಿವುಗಳನ್ನು ನಿರ್ಧರಿಸುವ ಹೋರಾಟವಾಗಿತ್ತು. ಇದರಲ್ಲಿ ಇಂಗ್ಲೆಂಡನ್ನು ಉಳಿಸಿದ ಕೀರ್ತಿ ರಾಯಲ್ ವಾಯುಪಡೆಯ (Royal Air Force) ಯೋಧರಿಗೆ ಸಲ್ಲಬೇಕು. ಹೊಸದಾಗಿ ಬಳಕೆಗೆ ಬಂದಿದ್ದ ರಾಡರ್ (radar) ಉಪಕರಣದ ಸಹಾಯದಿಂದ ತಮಗಿಂತ ಅಧಿಕ ಸಂಖ್ಯೆಯ ವಿಮಾನಗಳನ್ನು ಅಂತರಿಕ್ಷದಲ್ಲಿ ಎದುರಿಸಿ ಶುನಕ ಸಮರ (dog fight) ವಿಧಾನ ವನ್ನನುಸರಿಸಿ, ಲುಫ್ಟ್‌ವಾಫೆಯನ್ನು ಛಿದ್ರಗೊಳಿಸಿ ಇಂಗ್ಲೆಂಡನ್ನು ರಕ್ಷಿಸಿದ್ದೇ ಅಲ್ಲದೆ ಯುದ್ಧದ ದಿಕ್ಕನ್ನು ಬದಲಾಯಿಸಿದ ಆರ್.ಎ.ಎಫ್‌ನ ಅದ್ಭುತ ಸಾಧನೆ ಇತಿಹಾಸದಲ್ಲಿ ಅನನ್ಯ

ವಾದುದು. ಅಪಾರ ನಷ್ಟ ಅನುಭವಿಸಿದ ಜರ್ಮನ್ ವಾಯುಪಡೆ ಶಕ್ತಿಗುಂದಿದ್ದರಿಂದ, ಹಿಟ್ಲರ್ ಇಂಗ್ಲೆಂಡನ್ನು ಆಕ್ರಮಣ ಮಾಡುವ ಯೋಜನೆಯನ್ನು ಕೈಬಿಡಬೇಕಾಯಿತು.

ಈ ರೀತಿ ವಿಫಲಗೊಂಡ ಯೋಜನೆಯಿಂದ ಹತಾಶನಾದ ಹಿಟ್ಲರ್‌ನ ಕ್ರೋಧ ಸೋವಿಯೆಟ್ ಒಕ್ಕೂಟದ ಮೇಲೆ ತಿರುಗಿತು. ೧೯೪೧ರ ಜೂನ್ ತಿಂಗಳಲ್ಲಿ ಜರ್ಮನ್ ಸೈನ್ಯಗಳು ಸೋವಿಯೆಟ್ ಒಕ್ಕೂಟದ ಮೇಲೆ ದಾಳಿ ನಡೆಸಿದವು. ಒಕ್ಕೂಟದ ಸರ್ವಾಧಿಕಾರಿ ಸ್ಟಾಲಿನ್ ಈ ಅನಿರೀಕ್ಷಿತ ದಾಳಿಯಿಂದ ಚಕಿತಗೊಂಡನು. ಹಿಟ್ಲರನೊಡನೆ ಪರಸ್ಪರ ಒಪ್ಪಂದ ಮಾಡಿಕೊಂಡಿದ್ದರಿಂದ ಜರ್ಮನಿ ಆಕ್ರಮಣ ಮಾಡುವುದಿಲ್ಲವೆಂದು ಸ್ಟಾಲಿನ್ ನಂಬಿದ್ದನು. ಹಿಟ್ಲರ್ ಈ ರೀತಿ ವಚನಭ್ರಷ್ಟನಾಗಿ, ತೋರಿಕೆಗೆ ಸ್ನೇಹ ನಟಿಸಿ, ಹಿಂದಿನಿಂದ ಬೆನ್ನಿಗೆ ಇರಿದು ಘಾಸಿಗೊಳಿಸಿದ್ದು ಸ್ಟಾಲಿನ್‌ಗೆ ಆಘಾತ ಉಂಟುಮಾಡಿತು.

ಯೂರೋಪಿನಲ್ಲಿ ಭಯಾನಕ ಘಟನೆಗಳು ಸಂಭವಿಸುತ್ತಿದ್ದ ಸಮಯದಲ್ಲಿ ಅಮೆರಿಕದಲ್ಲಿ ಅಧ್ಯಕ್ಷ ಚುನಾವಣೆಯ ಕಾಲ ಮರಳಿ ಬಂತು. ಡೆಮೊಕ್ರಾಟಿಕ್ ಪಕ್ಷ ಸಂಪ್ರದಾಯವನ್ನು ಮೀರಿ ಎಫ್.ಡಿ.ಆರ್‌ನನ್ನು ಮೂರನೆಯ ಬಾರಿಗೆ ಅಧ್ಯಕ್ಷ ಸ್ಥಾನಕ್ಕೆ ನಾಮಕರಣ ಮಾಡಿತು. ಉಪಾಧ್ಯಕ್ಷಸ್ಥಾನಕ್ಕೆ ವ್ಯವಸಾಯ ಕಾರ್ಯದರ್ಶಿಯಾಗಿದ್ದ ಹೆನ್ರಿ ವಾಲೆಸ್ (henry Wallace) ನಾಮಕರಣಗೊಂಡನು. ರಿಪಬ್ಲಿಕನ್ ಪಕ್ಷ ರಾಜಕೀಯದಲ್ಲಿ ಹೆಚ್ಚಿನ ಅನುಭವವಿಲ್ಲದ, ವಿದ್ಯುಚ್ಛಕ್ತಿ ಕಂಪನಿಯೊಂದರ ಮುಖ್ಯಸ್ಥನಾಗಿದ್ದ ವೆಂಡೆಲ್ ವಿಲ್ಕಿಯನ್ನು (Wendell Wilkie) ಅಧ್ಯಕ್ಷಸ್ಥಾನಕ್ಕೆ ನಾಮಕರಣ ಮಾಡಿತು. ವಿಲ್ಕಿಯನ್ನು ಕಂಡರೆ ಆಗದವರು ಅವನನ್ನು 'ಕಪ್ಪು ಕುದುರೆ' (dark horse), 'ಬರಿಗಾಲಿನ ವಕೀಲ' (bare-foot lawyer)ಎಂದು ಪರಿಹಾಸ ಮಾಡಿದರು. ಆರೆಗಾನ್ ಸೆನೆಟರ್ ಚಾರ್ಲ್ಸ್ ಮೆಕ್‌ನೇರಿ ಉಪಾಧ್ಯಕ್ಷಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮಕರಣಗೊಂಡನು

ರಿಪಬ್ಲಿಕನ್ ಚುನಾವಣಾ ವೇದಿಕೆ ಮುಖ್ಯವಾಗಿ 'ಹೊಸ ಹಂಚಿಕೆ'ಯ ಯೋಜನೆಗಳನ್ನು ಮತ್ತು ಎಫ್.ಡಿ.ಆರ್ ಸಂಪ್ರದಾಯ ವಿರುದ್ಧವಾಗಿ ಮೂರನೆಯ ಬಾರಿ ಸ್ಪರ್ಧಿಸುತ್ತಿರುವುದನ್ನು ಪ್ರತಿಭಟಿಸುವ ಪ್ರಯತ್ನವಾಗಿತ್ತು. ವಿಲ್ಕಿ ಅಧ್ಯಕ್ಷ ರೂಸ್‌ವೆಲ್ಟ್‌ನು ಅಮೆರಿಕವನ್ನು ಯುದ್ಧದ ಹಾದಿಯಲ್ಲಿ ಕೊಂಡೊಯ್ಯುತ್ತಿದ್ದಾನೆ ಎಂದು ಆಪಾದಿಸದರೂ ಮಿತ್ರರಾಷ್ಟ್ರಗಳಿಗೆ ನೆರವು ನೀಡುವುದನ್ನು ಟೀಕಿಸಲಿಲ್ಲ, ಏಕೆಂದರೆ ಅವನು ಪ್ರತ್ಯೇಕತೆ ಹಾಗೂ ತಟಸ್ಥ ನೀತಿಯನ್ನು ನಿರಾಕರಿಸಿದ್ದನು. ಹೀಗೆ ಧ್ಯೇಯ ಧೋರಣೆಗಳಲ್ಲಿ ಈ ಎರಡು ಅಭ್ಯರ್ಥಿಗಳಲ್ಲಿ ಹೆಚ್ಚಿನ ವ್ಯತ್ಯಾಸವಿರಲಿಲ್ಲ. ಅಂತಿಮವಾಗಿ ಈ ಚುನಾವಣೆಯ ನಿರ್ಣಾಯಕ ಅಂಶ: 'ಸಂದಿಗ್ಧ ಪರಿಸ್ಥಿತಿಯಲ್ಲಿ ನಾಯಕನಾಗುವ ಸಾಮರ್ಥ್ಯ ಯಾರಿಗಿದೆ?' ಎನ್ನುವುದು. ಜನರಿಗೆ ಎಫ್.ಡಿ.ಆರ್‌ನಲ್ಲಿ ಹೆಚ್ಚಿನ ನಂಬಿಕೆ ಇದ್ದದ್ದರಿಂದ ಅವನು ಮೂರನೆಯ ಬಾರಿ ಅಧ್ಯಕ್ಷನಾಗಿ ಆಯ್ಕೆಗೊಂಡನು. ಅವನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲದಿದ್ದರೂ ಸಾರ್ವಜನಿಕರ ಶೇಕಡಾ ೫೪ರಷ್ಟು ಮತಗಳು ಅವನಿಗಾಗಿದ್ದವು.

ಈ ಸಲ ಎಫ್.ಡಿ.ಆರ್ ಅಧಿಕಾರ ವಹಿಸಿಕೊಂಡ ಸ್ವಲ್ಪ ಸಮಯದಲ್ಲೇ ಇಂಗ್ಲೆಂಡ್ ನಗದು ಹಣ ಕೊಟ್ಟು ಶಸ್ತ್ರಾಸ್ತ್ರಗಳನ್ನು ಕೊಳ್ಳಲು ಸಾಧ್ಯವಾಗದಂಥ ದುಃಸ್ಥಿತಿಯಲ್ಲಿ ಇರುವುದಾಗಿಯೂ, ಆದರೂ ಶಸ್ತ್ರಾಸ್ತ್ರಗಳು ಅಗತ್ಯವಾದುದರಿಂದ ನಗದು ಹಣವಲ್ಲದೆ ಬೇರೆ ರೀತಿಯಲ್ಲಿ ಅವುಗಳನ್ನು ಒದಗಿಸಿ ಸಹಾಯ ಮಾಡಬೇಕೆಂದು ಬ್ರಿಟಿಷ್ ಪ್ರಧಾನಿ ಚರ್ಚಿಲ್ ಮನವಿ ಮಾಡಿದ್ದನು. ಈ ಮನವಿಗೆ ಉತ್ತರವಾಗಿ ಎಫ್.ಡಿ.ಆರ್ ಸಾಲ ಅಡಮಾನ ಯೋಜನೆಯನ್ನು (land lease) ಪ್ರತಿಪಾದಿಸಿದನು. ೧೯೪೦ರ ಡಿಸೆಂಬರ್ ೨೯ರಂದು ಎಫ್.ಡಿ.ಆರ್ ರಾಷ್ಟ್ರವನ್ನು ಕುರಿತು ತನ್ನ 'ಅಗ್ಗಿಷ್ಟಿಕೆ ಪಕ್ಕದ ಮಾತುಕತೆ'ಯಲ್ಲಿ (fire side chat) 'ನಮ್ಮ ರಾಷ್ಟ್ರ ಪ್ರಜಾರಾಜ್ಯಗಳಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸುವ ಬೃಹತ್ ಆಯುಧಶಾಲೆಯಾಗಬೇಕಾಗಿದೆ' (the great arsenal of democracy) ಎಂದು ಹೇಳಿದನು. ಅಮೆರಿಕದ ಮೇಲೆ ಶತ್ರುದಾಳಿಗೆ ಅಡ್ಡ ನಿಂತಿರುವುದು ಬ್ರಿಟಿಷ್ ನೌಕಾಪಡೆ. ಆದ್ದರಿಂದ ಬ್ರಿಟಿಷ್ ರಕ್ಷಣಾಪಡೆಗಳನ್ನು ಬಲಪಡಿಸುವುದು ಉಚಿತವಾದುದು. ಬ್ರಿಟಿಷರಿಗೆ ಹೆಚ್ಚಿನ ಸೈನಿಕರು ಬೇಕಾಗಿಲ್ಲ, ಅವರಿಗೆ ಬೇಕಾಗಿರುವುದು ಬೃಹತ್ ಪ್ರಮಾಣದ ಸ್ವರಕ್ಷಣಾ ಶಸ್ತ್ರಾಸ್ತ್ರಗಳು (weapons of defense). ಮಾತುಕತೆಯ ಕಡೆಯ ಹಂತದಲ್ಲಿ ಹೇಳಿದ – 'ಪ್ರಜಾರಾಜ್ಯಗಳು ಹೋರಾಡುತ್ತಿರುವುದು ವಾಕ್ ಸ್ವಾತಂತ್ರ್ಯ, ಮತಧರ್ಮ ಸ್ವಾತಂತ್ರ್ಯ, ಆರ್ಥಿಕ ಸ್ವಾತಂತ್ರ್ಯ ಮತ್ತು ಭಯದಿಂದ ಬಿಡುಗಡೆಗಳಿಗಾಗಿ' – ಮಾತುಗಳು ಚರಿತ್ರಾರ್ಹವಾಗಿವೆ.

೧೯೪೧ರ ಜನವರಿ ೧೦ರಂದು 'ಸಾಲ ಅಡಮಾನ ಮಸೂದೆ'ಯನ್ನು (the Land Lease Bill) ಎಫ್.ಡಿ.ಆರ್ ಕಾಂಗ್ರೆಸ್ಸಿನಲ್ಲಿ ಮಂಡಿಸಿದನು. ಅಮೆರಿಕದ ಹಿತಾಸಕ್ತಿಗಳಿಗೆ ಅಗತ್ಯವಾದ ರಾಷ್ಟ್ರದ ರಕ್ಷಣೆಗಾಗಿ ಶಸ್ತ್ರಾಸ್ತ್ರಗಳನ್ನು ಮತ್ತು ಇತರ ಯುದ್ಧ ಸಾಧನ ಸಲಕರಣೆಗಳನ್ನು ರವಾನಿಸುವ ಅಧಿಕಾರವನ್ನು ಅಧ್ಯಕ್ಷನಿಗೆ ನೀಡುವುದು ಸಾಲ ಅಡಮಾನದ ಮಸೂದೆಯ ಗುರಿಯಾಗಿತ್ತು. ನ್ಯಾಯಾಲಯದಲ್ಲಿ ಮತ್ತು ರಾಷ್ಟ್ರದಾದ್ಯಂತ ಎರಡು ತಿಂಗಳ ಕಾಲ ಈ ಮಸೂದೆಯನ್ನು ಕುರಿತ ಚರ್ಚೆ ನಡೆಯಿತು. ಪ್ರತ್ಯೇಕತಾವಾದಿಗಳು ಸಾಲ ಅಡಮಾನ ವಾಪಸು ಬರುವುದು ಎಂದೋ ಎಂದು ಪರಿಹಾಸ ಮಾಡಿದರು. ಸೆನೆಟರ್ ವ್ಹೀಲರ್ (Wheeler) ಈ ಯೋಜನೆ ಮುಂದಿನ ಪೀಳಿಗೆಯಲ್ಲಿ ಪ್ರತಿ ನಾಲ್ಕು ಮಂದಿಗೆ ಒಬ್ಬನಂತೆ ಮಣ್ಣುಪಾಲು ಮಾಡುತ್ತಾರೆ ಎಂದು ಟೀಕಿಸಿದನು. ಇಷ್ಟೆಲ್ಲ ವಿರೋಧವಿದ್ದರೂ ಕೂಡ ಕೊನೆಯಲ್ಲಿ ೧೯೪೧ರ ಮಾರ್ಚ್ ತಿಂಗಳಲ್ಲಿ ಸಂಯುಕ್ತ ಸಂಸ್ಥಾನಗಳ ರಕ್ಷಣೆಯನ್ನು ಅಧಿಕಗೊಳಿಸುವ ಸಾಲ ಅಡಮಾನ ಕಾಯಿದೆ ಜಾರಿಗೆ ಬಂತು. ಇಂಗ್ಲೆಂಡ್ ಮತ್ತು ಚೈನಾ ದೇಶಗಳು ಈ ಕಾಯಿದೆಯ ಅನುಕೂಲ ಪಡೆದ ಮೊದಲ ಎರಡು ರಾಷ್ಟ್ರಗಳು.

ಬಹುತೇಕ ಅಮೆರಿಕನ್ನರು ಯುದ್ಧವನ್ನು ತಪ್ಪಿಸಿಕೊಳ್ಳಲು ಆಶಿಸಿದ್ದರು. ಆದರೂ

ಅವರು ಅಂತರಂಗದಲ್ಲಿ ಮಿತ್ರರಾಷ್ಟ್ರಗಳು ಜಯಗಳಿಸಬೇಕೆಂದು ಹಾರೈಸಿದ್ದರು. ಎಫ್.ಡಿ.ಆರ್ ಬಯಸಿದ್ದು ಅದನ್ನೇ. ಸಾಲ ಅಡಮಾನ ಕಾಯಿದೆ ಜಾರಿಗೆ ಬಂದ ಮೇಲೆ 'ತಟಸ್ಥ ನೀತಿ'ಯನ್ನು ಬಿಟ್ಟು ಅಮೆರಿಕದಿಂದ ಅಪಾರ ಪ್ರಮಾಣದ ಯುದ್ಧ ಸಾಮಗ್ರಿ ಮತ್ತು ಇತರ ಸರಕು ಸಾಮಗ್ರಿಗಳನ್ನು ಇಂಗ್ಲೆಂಡಿಗೆ ರವಾನಿಸಲಾಯಿತು. ಡೆನ್‌ಮಾರ್ಕ್‌ನೊಡನೆ ಒಪ್ಪಂದ ಮಾಡಿಕೊಂಡು ಸಂಯುಕ್ತ ಸಂಸ್ಥಾನಗಳು ಏಪ್ರಿಲ್ ೧೯೪೧ರಲ್ಲಿ ಗ್ರೀನ್‌ಲ್ಯಾಂಡ್‌ನ್ನು ಮತ್ತು ಜುಲೈ ತಿಂಗಳಲ್ಲಿ ಐಸ್‌ಲ್ಯಾಂಡ್‌ನ್ನು ತಮ್ಮ ವಶಕ್ಕೆ ತೆಗೆದುಕೊಂಡವು. ಹೀಗೆ ಮಾಡಿದ್ದರಿಂದ ಇಂಗ್ಲೆಂಡಿಗೆ ಹೋಗುವ ಸಮುದ್ರಮಾರ್ಗ ನೌಕಾ ಸಂಚಾರಕ್ಕೆ ಸದಾ ತೆರೆದುಕೊಂಡಿರುವಂತೆ ಮಾಡಲು ಸಾಧ್ಯವಾಯಿತು. ೧೯೪೧ರಲ್ಲಿ ಹಿಟ್ಲರ್ ಸೋವಿಯೆಟ್ ರಷ್ಯಾವನ್ನು ಆಕ್ರಮಣ ಮಾಡಿದಾಗ ಎಫ್.ಡಿ.ಆರ್ ಕೂಡಲೇ ರಷ್ಯಾಕ್ಕೆ ಸಾಲ ಅಡಮಾನ ನೆರವನ್ನು ನೀಡಿದನು.

೧೯೪೧ರ ಆಗಸ್ಟ್ ತಿಂಗಳಲ್ಲಿ ಎಫ್.ಡಿ.ಆರ್ ಮತ್ತು ಬ್ರಿಟಿಷ್ ಪ್ರಧಾನಿ ಚರ್ಚಿಲ್ ಇಬ್ಬರೂ ಕೂಡಿ ಈ ಯುದ್ಧದಲ್ಲಿ ಸಾಧಿಸಬೇಕಾಗಿರುವ ಧ್ಯೇಯೋದ್ದೇಶಗಳ ಬಗ್ಗೆ ಒಂದು ಹೇಳಿಕೆಯನ್ನು ಪ್ರಕಟಿಸಿದರು. ಈ ಜಂಟಿ ಹೇಳಿಕೆಯೇ 'ಅಟ್ಲಾಂಟಿಕ್ ಪ್ರಣಾಳಿಕೆ' (The Atlantic Charter). ಇದರ ಮುಖ್ಯಾಂಶಗಳು: ಅಮೆರಿಕ ಮತ್ತು ಇಂಗ್ಲೆಂಡ್ ಎರಡು ದೇಶಗಳಿಗೂ ರಾಜ್ಯ ವಿಸ್ತರಣೆ ಗುರಿಯಲ್ಲ. ಎರಡು ರಾಷ್ಟ್ರಗಳು ಪ್ರಪಂಚದ ಎಲ್ಲ ದೇಶಗಳಿಗೂ ವ್ಯಾಪಾರ ಮಾಡಲು ಮತ್ತು ಅಗತ್ಯವಾದ ಕಚ್ಚಾ ಪದಾರ್ಥಗಳನ್ನು ಪಡೆಯಲು ಅವಕಾಶ ಮಾಡಿಕೊಡಲು ಪ್ರಯತ್ನ ಪಡುವುದು. ಎಲ್ಲ ಜನರಿಗೂ ಅವರಿಗೆ ಇಷ್ಟ ಬಂದ ಸರ್ಕಾರವನ್ನು ರಚಿಸಿಕೊಳ್ಳುವ ಹಕ್ಕು ಇದೆ. ಶ್ರಮಜೀವಿಗಳ, ಕಾರ್ಮಿಕರ ಜೀವನಮಟ್ಟ ಹೆಚ್ಚಿಸಲು ಮತ್ತು ಸಾಮಾಜಿಕ ಭದ್ರತೆಯನ್ನು ಅನುಷ್ಠಾನಕ್ಕೆ ತರಲು ಅಂತರರಾಷ್ಟ್ರೀಯ ಸಹಕಾರವನ್ನು ಏರ್ಪಡಿಸುವುದು. ಸಮುದ್ರಮಾರ್ಗಗಳನ್ನು ನಿರ್ಬಂಧರಹಿತವಾಗಿ ಮಾಡುವುದು. ಆಕ್ರಮಣಕಾರಿ ರಾಷ್ಟ್ರಗಳನ್ನು ನಿಶಸ್ತ್ರಗೊಳಿಸುವುದು ಮತ್ತು ಜಗತ್ತಿನ ಎಲ್ಲ ಜನರು ಭೀತಿಯುತ ಒಡೆತನದಿಂದ ಬಿಡುಗಡೆ ಹೊಂದುವಂತೆ ಮಾಡಲು ಶ್ರಮಿಸುವುದು.

ಜರ್ಮನಿಯ ಜಲಾಂತರ್ಗಾಮಿ ನೌಕಾದಳ (Fleet of Submarines) ಅಮೆರಿಕದಿಂದ ಇಂಗ್ಲೆಂಡಿಗೆ ಶಸ್ತ್ರಾಸ್ತ್ರಗಳನ್ನು ಮತ್ತು ಯುದ್ಧದ ಸಾಧನ ಸಾಮಗ್ರಿಗಳನ್ನು ಕೊಂಡೊಯ್ಯುತ್ತಿದ್ದ ನೌಕೆಗಳ ಮೇಲೆ ದಾಳಿ ಮಾಡಿ ಅವು ಇಂಗ್ಲೆಂಡನ್ನು ತಲುಪದಂತೆ ಮಾಡಿದ್ದವು. ಎಫ್.ಡಿ.ಆರ್ ನೌಕಾದಳ ಮತ್ತು ವಾಯುಪಡೆಗಳಿಗೆ ಉತ್ತರ ಅಟ್ಲಾಂಟಿಕ್ ಸಮುದ್ರಮಾರ್ಗಗಳನ್ನು ಎಚ್ಚರಿಕೆಯಿಂದ ಕಾವಲು ಮಾಡುವಂತೆ ಆಜ್ಞಾಪಿಸಿದನು. ೧೯೪೧ರ ಅಕ್ಟೋಬರ್ ತಿಂಗಳಲ್ಲಿ ಅಮೆರಿಕದ ಯುದ್ಧ ನೌಕೆ 'ರ್‍ಯೂಬಿನ್ ಜೇಮ್ಸ್' ಜರ್ಮನಿಯ ಜಲಾಂತರ್ಗಾಮಿ ನೌಕೆಯ ದಾಳಿಯಿಂದ ಜಲಸಮಾಧಿ ಹೊಂದಿತು.

ಅಂದಿನಿಂದ ಜರ್ಮನ್ ನೌಕೆಗಳನ್ನು ಕಂಡಲ್ಲಿ ಗುಂಡಿಟ್ಟು ಮುಳುಗಿಸಬೇಕೆಂದು ಅಮೆರಿಕದ ನೌಕಾದಳಕ್ಕೆ ಆಜ್ಞೆಯಾಯಿತು. ವ್ಯಾಪಾರ ನೌಕೆಗಳನ್ನು ಶಸ್ತ್ರಸಜ್ಜಿತಗೊಳಿಸಲು ಕ್ರಮ ಕೈಗೊಳ್ಳಲಾಯಿತು.

ಏಷ್ಯಾ ಯುದ್ಧರಂಗದಲ್ಲಿ

ಅಟ್ಲಾಂಟಿಕ್ ಸಾಗರದಲ್ಲಿ ಅಮೆರಿಕ ಜರ್ಮನ್ ಜಲಾಂತರ್ಗಾಮಿ ನೌಕೆಗಳ ದಾಳಿಯನ್ನು ದಮನ ಮಾಡಲು ಹೋರಾಡುತ್ತಿರುವಾಗಲೇ ಏಷ್ಯಾ ರಣರಂಗದಲ್ಲಿ ಜಪಾನ್ ತನ್ನ ಚಕ್ರಾಧಿಪತ್ಯವನ್ನು ವಿಸ್ತರಿಸಲು ಚೈನಾದೇಶದ ಮೇಲೆ ದಾಳಿಯನ್ನು ಮುಂದುವರಿಸಿತು. ೧೯೪೦ರಲ್ಲಿ ಫ್ರಾನ್ಸ್ ಪತನವಾದ ಮೇಲೆ ಅದರಿಂದ ಉತ್ತೇಜನಗೊಂಡ ಜಪಾನ, ಫ್ರೆಂಚ್ ಇಂಡೋಚೈನಾ (ಈಗಿನ ವಿಯಟ್‌ನಾಮ್)ವನ್ನು ಆಕ್ರಮಿಸಿಕೊಳ್ಳಲು ಸಿದ್ಧತೆ ನಡೆಸಿತ್ತು. ಜಪಾನಿನ ಆಕ್ರಮಣಕಾರಿ ಕೃತ್ಯಗಳಿಗೆ ಪ್ರತಿಯಾಗಿ ಅಮೆರಿಕ ಜಪಾನಿನ ಮೇಲೆ ದಿಗ್ಬಂಧನ ಹಾಕಿ ಅಗತ್ಯ ವಸ್ತುಗಳು – ಪೆಟ್ರೋಲ್, ಕಬ್ಬಿಣದ ಅದಿರು ಮುಂತಾದ ಕಚ್ಚಾ ಪದಾರ್ಥಗಳು – ಜಪಾನಿಗೆ ದೊರಕುವುದು ದುಸ್ಸಾಧ್ಯವಾಗುವಂತೆ ಮಾಡಿತು. ಅಮೆರಿಕದ ನೌಕಾಪಡೆಯನ್ನು ಪರ್ಲ್ ಹಾರ್ಬರ್ (Pearl Harbor) ಬಂದರಿಗೆ ಕಳುಹಿಸಿ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳಲಾಯಿತು. ಪ್ರತ್ಯೇಕತಾವಾದಿಗಳು ಜಪಾನಿನ ಮೇಲೆ ದಿಗ್ಬಂಧನ ಹಾಕಿದ್ದನ್ನು ವಿರೋಧಿಸಿ ಪ್ರದರ್ಶನ ನಡೆಸಿದರು. ಈ ಕ್ರಮ ಯುದ್ಧವನ್ನು ಪ್ರಚೋದಿಸುತ್ತದೆ ಎಂದು ಅವರು ವಾದಿಸಿದರು.

೧೯೪೧ರಲ್ಲಿ ದಿಗ್ಬಂಧನ ಬಿಗಿಗೊಳ್ಳುತ್ತ ಹೋದಹಾಗೆ ಜಪಾನ್ ರಾಜಕಾರಣದ ಮೂಲಕ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಿತು. ಜಪಾನಿನ ಪ್ರಧಾನಿ ಫೂಮಿಮಾರೊ ಕನೊಯಿ ಅಮೆರಿಕದೊಡನೆ ಶೃಂಗಸಭೆ ಏರ್ಪಡಿಸಲು ಯತ್ನಿಸಿದನು. ಆದರೆ ಎಫ್.ಡಿ.ಆರ್ 'ಜಪಾನ್ ಚೈನಾದಿಂದ ಸೈನ್ಯವನ್ನು ವಾಪಸ್ಸು ಕರೆಸಿಕೊಳ್ಳುವವರೆಗೆ ಶೃಂಗಸಭೆ ಸಾಧ್ಯವಿಲ್ಲ' ಎಂದು ಕನೊಯಿ ಕೋರಿಕೆಯನ್ನು ನಿರಾಕರಿಸಿದನು. ಇದರಿಂದಾಗಿ ಪ್ರಧಾನಿ ಕನೊಯಿ ಅಧಿಕಾರ ಕಳೆದುಕೊಂಡು ಅವನ ಬದಲಿಗೆ ಹಿಡೆಕಿ ತೊಜೊ (Hideki Tojo) ಅಧಿಕಾರ ವಹಿಸಿಕೊಂಡನು. ಜನರಲ್ ತೊಜೊ ಕಟ್ಟಾ ಸೈನಿಕ ಮನೋವೃತ್ತಿಯವನು. ಗೋಮುಖವ್ಯಾಘ್ರನಂತೆ ಶಾಂತಿಸಂಧಾನ ಮಾಡುವ ಸೋಗಿನಲ್ಲಿ ಯುದ್ಧದ ಸಿದ್ಧತೆಗಳನ್ನು ನಡೆಸಿದ್ದನು.

೧೯೪೧ರ ನವೆಂಬರ್ ತಿಂಗಳ ಕೊನೆಯಲ್ಲಿ ಜಪಾನ್, ಅಮೆರಿಕ ವ್ಯಾಪಾರದ ದಿಗ್ಬಂಧನವನ್ನು ರದ್ದುಗೊಳಿಸಿದರೆ ತನ್ನ ಸೈನ್ಯವನ್ನು ಇಂಡೋಚೈನಾದಿಂದ ವಾಪಸ್ಸು ಕರೆಸುವುದಾಗಿ ಪ್ರಸ್ತಾಪವನ್ನು ಮಂಡಿಸಿತು. ಇದನ್ನು ವಿದೇಶಾಂಗ ಕಾರ್ಯದರ್ಶಿ ಕಾರ್ಡೆಲ್ ಹಲ್ (Cordell Hull) ನಿರಾಕರಿಸಿದನು. ನಿರಾಕರಣೆ ಯುದ್ಧವನ್ನು ಅನಿವಾರ್ಯವಾಗಿ ಮಾಡುತ್ತದೆ ಎನ್ನುವುದು ಹಲ್‌ಗೆ ಖಚಿತವಾಗಿತ್ತು. ಇದಾದ ನಂತರ ಘಟನೆಗಳು

ತ್ವರಿತವಾಗಿ ಜರುಗಿದವು. ನವೆಂಬರ್ ೨೭ರಂದು ಅಮೆರಿಕದ ಪಡೆಗಳಿಗೆ ಅತಿ ಜಾಗರೂಕರಾಗಿರಬೇಕೆಂದು ಆದೇಶ ಕಳುಹಿಸಲಾಯಿತು. ಡಿಸೆಂಬರ್ ೬ರಂದು ಅಮೆರಿಕ ಜಪಾನಿನ ಗುಪ್ತ ಸಂದೇಶವನ್ನು ವಿಚ್ಛೇದಿಸಿದಾಗ ತೊಜೊ ಜಪಾನಿನ ರಾಯಭಾರಿಗಳಿಗೆ ಅಮೆರಿಕ ರಾಯಭಾರ ಸಂಬಂಧವನ್ನು ಮಾರನೆಯ ದಿನವೇ ಕಡಿದುಕೊಳ್ಳಬೇಕೆಂದು ನಿರ್ದೇಶಿಸಲಾಗಿರುವುದು ತಿಳಿದುಬಂತು. ಎಫ್.ಡಿ.ಆರ್ ಅಂತರಂಗದಲ್ಲಿ ಯುದ್ಧ ಅನಿವಾರ್ಯವೆಂದು ತಿಳಿದಿದ್ದರೂ ಅದನ್ನು ಹೇಗಾದರೂ ನಿಲ್ಲಿಸಬೇಕೆಂದು ಜಪಾನಿನ ಚಕ್ರವರ್ತಿಗೆ ಕಟ್ಟಕಡೆಯ ಕೋರಿಕೆಯನ್ನು ಕಳುಹಿಸಿದನು. ಅದನ್ನು ಮನ್ನಣೆ ಮಾಡುವ ಅಧಿಕಾರ ಜಪಾನಿನ ಚಕ್ರವರ್ತಿ ತನ್ನ ಪ್ರಧಾನಿ ಜನರಲ್ ತೊಜೊಗೆ ವಹಿಸಿಕೊಟ್ಟಿದ್ದರಿಂದ ಸ್ವತಃ ಏನೂ ಮಾಡಲಾರದೆ ಹೋದನು. ಜನರಲ್ ತೊಜೊ 'ವಿನಾಶ ಕಾಲೇ ವಿಪರೀತ ಬುದ್ಧಿ' ಎನ್ನುವ ಗಾದೆಯಂತೆ ಜಪಾನಿನ ಜನತೆಯ ಭವಿಷ್ಯವನ್ನು ಪಣವಾಗಿಟ್ಟು ರಣರಂಗದ ಪಗಡೆಯಾಟವನ್ನು ಮುಂದುವರಿಸಿದನು.

೧೯೪೧ರ ಡಿಸೆಂಬರ್ ೭ರಂದು ಬೆಳಕು ಹರಿಯುತ್ತಿದ್ದಂತೆ ತಿಳಿನೀಲಿಯಾಗಸಕ್ಕೆದುರಾಗಿ ಗರಿಬಿಚ್ಚಿ ತಂಗಾಳಿಯ ತೆರೆಗಳ ಮೇಲೆ ಬರುವ ಪಕ್ಷಿಗಳಂತೆ ಪರ್ಲ್ ಹಾರ್ಬರ ದಿಗಂತದಲ್ಲಿ ಜಪಾನ್ ವಾಯುಪಡೆಯ ವಿಮಾನಗಳು ಕಾಣಿಸಿಕೊಂಡವು. ಪರ್ಲ್ ಹಾರ್ಬರ್ ಅಮೆರಿಕದ ಅತಿದೊಡ್ಡ ನೌಕಾನೆಲೆ. ಇದರ ನಿವಾಸಿಗಳಿಗೆ ಮತ್ತು ನೌಕಾದಳದವರಿಗೆ ಜಪಾನ್ ವಾಯುಪಡೆ ಮೃತ್ಯುರೂಪದಲ್ಲಿ ತಮ್ಮೆಡೆಗೆ ಬರುತ್ತಿದ್ದ ಅರಿವಿಲ್ಲದೆ ತಮ್ಮ ನಿತ್ಯಕರ್ಮ ಗಳಲ್ಲಿ ನಿರತರಾಗಿದ್ದರು. ಇದ್ದಕ್ಕಿದ್ದ ಹಾಗೆ ಆಕಾಶ ಬಿರಿದು ಬಾಂಬ್‌ಗಳ ಮಳೆ ಕರೆವಂತೆ ಜಪಾನ್ ವಾಯುಪಡೆ ನೌಕಾನೆಲೆಯ ಮೇಲೆ ಕ್ಷಿಪ್ರ ದಾಳಿ ನಡೆಸಿ ಯುದ್ಧನೌಕೆಗಳನ್ನು ಛಿದ್ರಗೊಳಿಸಿ, ಸಾವಿರಾರು ವಿಮಾನಗಳನ್ನು ನಾಶ ಮಾಡಿ, ೨೫೦೦ಕ್ಕೂ ಹೆಚ್ಚಿನ ಜನರನ್ನು ಕೊಂದು, ಆಸ್ತಿಪಾಸ್ತಿಗಳಿಗೆ ನಷ್ಟ ಉಂಟುಮಾಡಿತು.

ಮಾರನೆಯ ದಿನ ಎಫ್.ಡಿ.ಆರ್ ಕಾಂಗ್ರೆಸ್‌ನ್ನು ಉದ್ದೇಶಿಸಿ: 'ನಿನ್ನೆ ೧೯೪೧ರ ಡಿಸೆಂಬರ್ ೭ ಎಂದೆಂದಿಗೂ ಅಪಖ್ಯಾತಿಯ ದಿನವಾಗಿ ಉಳಿಯುತ್ತದೆ – ಜಪಾನ್ ಚಕ್ರಾಧಿಪತ್ಯದ ನೌಕಾಪಡೆ ಮತ್ತು ವಾಯುಪಡೆಗಳು ಇದ್ದಕ್ಕಿದ್ದಹಾಗೆ ಮತ್ತು ಉದ್ದೇಶಪೂರ್ವಕವಾಗಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಮೇಲೆ ದಾಳಿ ನಡೆಸಿದವು. ನಿನ್ನೆ ನಡೆದ ಸಂಗತಿಗಳು ಸ್ವಯಂಸ್ಪಷ್ಟವಾಗಿವೆ. ಸಂಯುಕ್ತ ಸಂಸ್ಥಾನಗಳ ಪ್ರಜೆಗಳು ಆಗಲೇ ನಿರ್ಧಾರಕ್ಕೆ ಬಂದಿದ್ದಾರೆ. ರಾಷ್ಟ್ರದ ಜೀವನಕ್ಕೆ ಮತ್ತು ರಕ್ಷಣೆಗೆ ಈ ಘಟನೆಗಳು ಅವರನ್ನು ತೊಡಗಿಸುತ್ತವೆ ಎನ್ನುವುದನ್ನು ಅರ್ಥ ಮಾಡಿಕೊಂಡಿದ್ದಾರೆ' ಎಂದು ಭಾಷಣ ಮಾಡಿ ಕಾಂಗ್ರೆಸ್‌ನಲ್ಲಿ ಮಂಡಿಸಿದ ಯುದ್ಧ ಮಸೂದೆಯನ್ನು ಒಮ್ಮತದಿಂದ ಅಂಗೀಕೃತ ವಾಗುವಂತೆ ಮಾಡಿದನು. ೧೧ರಂದು ಜರ್ಮನಿ ಮತ್ತು ಇಟಲಿ ರಾಷ್ಟ್ರಗಳು ಅಮೆರಿಕ ಸಂಯುಕ್ತ ಸಂಸ್ಥಾನಗಳ ಮೇಲೆ ಅಧಿಕೃತವಾಗಿ ಯುದ್ಧ ಸಾರಿದವು. ಅಮೆರಿಕ ಮಿತ್ರ

ರಾಷ್ಟ್ರಗಳ ಪರವಾಗಿ ಯುದ್ಧರಂಗವನ್ನು ಪ್ರವೇಶಿಸಿತು. ಈ ರಾಷ್ಟ್ರಗಳ ಸೈನಿಕರು ಸತತವಾಗಿ ಯುದ್ಧ ಮಾಡಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಸೊರಗಿದ್ದರು. ಅವುಗಳ ಖಜಾನೆಗಳು ಬರಿದಾಗಿದ್ದವು. ಅಮೆರಿಕನ್ನರು ಯುದ್ಧದಲ್ಲಿ ಗೆದ್ದೇ ಗೆಲ್ಲುತ್ತೇವೆ ಎನ್ನುವ ಭರವಸೆಯನ್ನು ಮತ್ತು ಅದನ್ನು ಸಾಧಿಸಲು ಯಥೇಚ್ಛವಾದ ಹಣ, ಶಸ್ತ್ರಾಸ್ತ್ರಗಳು, ಸರಕು ಸಾಮಗ್ರಿಗಳು ಹಾಗೂ ಸಾಧನ ಸಲಕರಣೆಗಳನ್ನು ತಂದು ಅರೆಜೀವವಾಗಿದ್ದ ಮಿತ್ರ ರಾಷ್ಟ್ರಗಳ ಸೈನ್ಯಕ್ಕೆ ಹೊಸ ಚೇತನ ತುಂಬಿದರು.

ದ್ವಿತೀಯ ಜಾಗತಿಕ ಯುದ್ಧ ಅಮೆರಿಕದ ಪ್ರಕೃತಿ ಸಾಧನ ಸಂಪತ್ತು, ಅಮೆರಿಕನ್ನರ ದೈಹಿಕ ಮತ್ತು ಮಾನಸಿಕ ಶಕ್ತಿ ಸಾಧನಗಳನ್ನು ಬೃಹತ್ ಪ್ರಮಾಣದಲ್ಲಿ ಯುದ್ಧಸನ್ನದ್ಧರಾಗುವಂತೆ ಮಾಡಿತು. ೧೬ ಮಿಲಿಯನ್ ಅಮೆರಿಕನ್ನರು ಸೈನ್ಯ ಸೇರಿದ್ದರು. ಹೆಂಗಸರು ಆಗತಾನೇ ರಚನೆಗೊಂಡಿದ್ದ ಮಹಿಳಾ ಸೈನ್ಯವಿಭಾಗದಲ್ಲಿ ಸೇರಿ ಯುದ್ಧದಲ್ಲಿ ಸಕ್ರಿಯವಾಗಿ ಕಾರ್ಯಾಚರಣೆ ನಡೆಸಿದರು. ಯುದ್ಧಕ್ಕೆ ಅಗತ್ಯವಾದ ಸಾಧನ ಸಲಕರಣೆಗಳ ಬೃಹತ್ ಉತ್ಪಾದನೆಗೆ ಅಪಾರ ಸಂಖ್ಯೆಯ ಕಾರ್ಮಿಕರು ಬೇಕಾಯಿತು. ಒಂದು ಮಿಲಿಯನ್‌ಗೂ ಹೆಚ್ಚಿನ ಅಮೆರಿಕನ್ನರು ಯುದ್ಧದಲ್ಲಿ ಮಡಿದರು. ಕೈಗಾರಿಕಾ ಕ್ಷೇತ್ರದಲ್ಲಿ ಕಾರ್ಮಿಕರಿಗೆ ಹೆಚ್ಚು ಅವಕಾಶಗಳು ದೊರೆಯುವಂತಾಗಿ ನಿರುದ್ಯೋಗವನ್ನು ನಿವಾರಿಸಿತು. ನಿರುದ್ಯೋಗಿಗಳಾಗಿದ್ದ ಕರಿಯರು ಅಧಿಕ ಸಂಖ್ಯೆಯಲ್ಲಿ ಕೈಗಾರಿಕಾ ಕೇಂದ್ರಗಳಿಗೆ ಪ್ರಯಾಣಿಸಿ ಕಾರ್ಖಾನೆಗಳಲ್ಲಿ ಕೆಲಸಕ್ಕೆ ಸೇರಿದರು. ಯುದ್ಧದ ಖರ್ಚುವೆಚ್ಚಗಳನ್ನು ಪೂರೈಸಲು ಸರ್ಕಾರ ಅನೇಕ ವಿಧಾನಗಳನ್ನು ಅನುಸರಿಸಿತು. ಕಾಂಗ್ರೆಸ್ ತೆರಿಗೆಯನ್ನು ಮೇಲಿನ ವರ್ಗದವರಿಗೆ ಮತ್ತು ಕಾರ್ಖಾನೆ ಕೆಲಸಗಾರರಿಗೆ ಅನ್ವಯವಾಗುವಂತೆ ವಿಸ್ತರಿಸಿತು. ವರ್ಗೀಕರಣ ತೆರಿಗೆಯನ್ನು ಜಾರಿಗೆ ತಂದು ಆಗರ್ಭ ಶ್ರೀಮಂತರು ಅವರ ಆದಾಯದ ಶೇಕಡಾ ೯೦ ಭಾಗವನ್ನು ಫೆಡರಲ್ ಸರ್ಕಾರಕ್ಕೆ ಕೊಡಬೇಕಾಯಿತು. ತಮ್ಮ ಆದಾಯದಲ್ಲಿ ಶೇಕಡಾ ೧೦ ಭಾಗವನ್ನು ಸರ್ಕಾರದ ಕರಾರು ಪತ್ರಗಳನ್ನು ಕೊಳ್ಳಲು ಮೀಸಲಾಗಿಡಬೇಕೆಂದು ಜನರಿಗೆ ಸರ್ಕಾರ ಕರೆಕೊಟ್ಟಿತು.

ಯುದ್ಧಕಾಲದಲ್ಲಿ ಅಧ್ಯಕ್ಷನ ಅಧಿಕಾರ ವಿಸ್ತಾರಗೊಂಡಿತು. ಈ ಅಧಿಕಾರಬಲದಿಂದ ಎಫ್.ಡಿ.ಆರ್ ಮಿಲಿಟರಿ ಮತ್ತು ಖಾಸಗಿ ಉದ್ಯಮಗಳನ್ನು ಸೇರಿಸಿ ಅವು ಪರಸ್ಪರ ಸಹಕರಿಸಿ ಒಂದು ಘಟಕದಂತೆ ಕಾರ್ಯ ನಡೆಸಿಕೊಂಡು ಹೋಗುವಂತೆ ಮಾಡಿದನು. ಇದರಿಂದಾಗಿ ಉತ್ಪಾದನಾ ಸಾಮರ್ಥ್ಯ ಹೆಚ್ಚಿದ್ದಲ್ಲದೆ ಉತ್ಪಾದನೆ ತ್ವರಿತಗೊಳ್ಳುವ ಸಾಧ್ಯತೆಯೂ ಹೆಚ್ಚಿತು. ೧೯೪೨ರ ಕೊನೆಯಲ್ಲಿ ಎಫ್.ಡಿ.ಆರ್ ೭೦೦ಕ್ಕೂ ಹೆಚ್ಚು ಯುದ್ಧ ಇಲಾಖೆಗಳನ್ನು ನಿರ್ಮಾಣಗೊಳಿಸಿದ್ದನು. ಈ ಎಲ್ಲ ಇಲಾಖೆಗಳ ಕಾರ್ಯ ನಿರ್ವಹಣೆಯ ಬಗ್ಗೆ ಗೊಂದಲ ಪರಿಸ್ಥಿತಿ ಉಂಟಾಗಿ ಅದನ್ನು ವ್ಯವಸ್ಥೆಗೊಳಿಸಲು ಹ್ಯಾರಿ ಹಾಪ್‌ಕಿನ್ಸ್‌ನ ನಿರ್ದೇಶನದಲ್ಲಿ 'ತುರ್ತು ಪರಿಸ್ಥಿತಿ ನಿರ್ವಹಣೆ ಇಲಾಖೆ' ಮತ್ತು 'ಯುದ್ಧ

ಉತ್ಪಾದನಾ ಸಮಿತಿಯ' ನಿರ್ದೇಶಕ ಡಾನಾಲ್ಡ್ ನೆಲ್ಸನ್‌ನ ನೆರವು ಪಡೆಯಬೇಕಾಯಿತು. ಇವನ ಅತ್ಯಂತ ಗುರುತರವಾದ ಜವಾಬ್ದಾರಿ: ಸರಕು ಸಾಮಗ್ರಿಗಳನ್ನು ಕೈಗಾರಿಕೋದ್ಯಮಿ ಗಳಿಗೆ ಮತ್ತು ರಕ್ಷಣಾಪಡೆಗಳ ಮೂರು ವಿಭಾಗಗಳಿಗೆ ಯುಕ್ತವಾಗಿ ವಿತರಣೆ ಮಾಡುವುದು. ಇವು ಸಾಧಿಸಬೇಕಾದ ಗುರಿಗಳ ಮಟ್ಟವನ್ನು ಎಫ್.ಡಿ.ಆರ್ ಏರಿಸಿದ್ದರಿಂದ ಉತ್ಪಾದನೆ ನಿರಂತರವಾಗಿ ಸಾಗಿತು. ೧೯೪೪ರ ಹೊತ್ತಿಗೆ ಅಮೆರಿಕದ ಕಾರ್ಖಾನೆಗಳು ಯೂರೋಪಿನ ಕಾರ್ಖಾನೆಗಳಿಗಿಂತ ಎರಡು ಪಟ್ಟು ಹೆಚ್ಚಿಗೆ ಉತ್ಪಾದಿಸುತ್ತಿದ್ದವು.

ತ್ವರಿತಗತಿಯ ಉತ್ಪಾದನೆಯ ಪರಿಣಾಮವಾಗಿ ಬೃಹತ್ ಕೈಗಾರಿಕೆಗಳು ಬೆಳೆದು ಸಣ್ಣ ಪ್ರಮಾಣದ ಉದ್ಯಮಗಳು ಕ್ಷೀಣಿಸುತ್ತ ಹೋದವು. ಅಮೆರಿಕದ ಸುಮಾರು ೧೦೦ ದೊಡ್ಡ ಕಾರ್ಪೊರೇಷನ್‌ಗಳು ಶೇಕಡಾ ೭೫ ಭಾಗ ಯುದ್ಧದ ಕೆಲಸಗಳ ಕಾಂಟ್ರಾಕ್ಟ್ ಪಡೆದುಕೊಂಡಿದ್ದವು. ಯುದ್ಧಕಾಲದಲ್ಲಿ ಜನಸಾಮಾನ್ಯರ ಜೀವನ ಹೆಚ್ಚು ನಿಯಂತ್ರಣ ಗಳಿಗೊಳಗಾಯಿತು. ಬಾಡಿಗೆ, ವೇತನ (Wages), ಸಂಬಳ (Salaries), ಲಾಭ ಮತ್ತು ಬೆಲೆಗಳು ಎಲ್ಲವೂ ನಿಯಂತ್ರಿತವಾಗಿದ್ದವು. ಆಹಾರ ಪದಾರ್ಥಗಳು, ಸಕ್ಕರೆ ಮತ್ತು ಪೆಟ್ರೋಲ್ ನಿಶ್ಚಿತ ಪ್ರಮಾಣದಲ್ಲಿ ವಿತರಣೆಯಾಗುವಂತೆ ವ್ಯವಸ್ಥೆ ಮಾಡಲಾಯಿತು. ಯುದ್ಧದ ಪ್ರಾರಂಭದ ದಿನಗಳಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿ ಕಾರ್ಮಿಕರು ಹೆಚ್ಚಿನ ವೇತನಕ್ಕಾಗಿ ಒತ್ತಾಯಪಡಿಸಿದರು. ಹಣದುಬ್ಬರ ೧೯೪೩ರವರೆಗೂ ಮುಂದುವರಿ ಯಿತು. ಆ ವರ್ಷ ಸ್ಥಾಪಿಸಿದ ಯುದ್ಧ ಸನ್ನದ್ಧ ಇಲಾಖೆ ಮತ್ತು ಬೆಲೆ ನಿರ್ವಹಣ ಇಲಾಖೆಗಳು ಹಣದುಬ್ಬರವನ್ನು ಹತೋಟಿಗೆ ತಂದು ವೇತನ, ಸಂಬಳ ಇತ್ಯಾದಿಗಳನ್ನು ದೃಢಪಡಿಸಿದವು.

ಉದ್ಯೋಗಾವಕಾಶಗಳು ಮತ್ತು ಜನರ ಆದಾಯ ಹೆಚ್ಚಿ ಮುಷ್ಕರಗಳು ಕಡಿಮೆ ಯಾದವು. ನಿತ್ಯಜೀವನದ ವಸ್ತುಗಳ ಬೆಲೆ ಏರಿಕೆಗೆ ಸಮನಾದ ವೇತನ ನಿಗದಿ ಮಾಡಿದರೆ ಮುಷ್ಕರ ಹೂಡುವುದಿಲ್ಲ ಎಂದು ಕಾರ್ಮಿಕರ ಒಕ್ಕೂಟದ ನಾಯಕರು (Labor Union Leaders) ಭರವಸೆ ನೀಡಿದರು. ಹೀಗಾದರೂ ಸಹ ಗಣಿ ಕಾರ್ಮಿಕರ ಒಕ್ಕೂಟ ಮುಷ್ಕರ ಹೂಡಿತು. ೧೯೪೩ರಲ್ಲಿ ಕಾಂಗ್ರೆಸ್ 'ಸ್ಮಿತ್-ಕಾನೆಲ್ಲಿ' ಕಾರ್ಮಿಕ ವಿವಾದ ಕಾನೂನನ್ನು ಜಾರಿಗೆ ತಂದಿತು. ಇದು ಯುದ್ಧಕ್ಕೆ ಅಗತ್ಯವಾದ ಕೈಗಾರಿಕೆಗಳಲ್ಲಿ ಕಾರ್ಮಿಕ ವಿವಾದ ಉಂಟಾದಲ್ಲಿ ಆ ಕೈಗಾರಿಕೆಗಳನ್ನು ವಶಪಡಿಸಿಕೊಳ್ಳುವ ಅಧಿಕಾರವನ್ನು ಸರ್ಕಾರಕ್ಕೆ ನೀಡಿತು.

ಯುದ್ಧ ೬ ಮಿಲಿಯನ್ ಮಹಿಳೆಯರಿಗೆ ಕೆಲಸ ಒದಗಿಸಿಕೊಟ್ಟಿತು. ಯುದ್ಧಪೂರ್ವದಲ್ಲಿ ಗಂಡಸರಿಗೆ ಮೀಸಲಾಗಿದ್ದ ಕೆಲಸಗಳೆಂದರೆ ಕಾರ್ಖಾನೆಗಳಲ್ಲಿ ಯಂತ್ರಗಳನ್ನು ನಡೆಸುವುದು, ನೀಲನಕ್ಷೆಗಳನ್ನು (Blue prints) ಓದುವುದು, ಯುದ್ಧವಿಮಾನಗಳನ್ನು ಸಜ್ಜುಗೊಳಿಸು ವುದು, ರೈಲ್ವೆ ಎಂಜಿನ್‌ಗಳನ್ನು ತೈಲ ಲೇಪಿಸಿ ಸಿದ್ಧಪಡಿಸುವುದು, ಸಾರ್ವಜನಿಕ ಸಂಚಾರ ವ್ಯವಸ್ಥೆಯ ನಿರ್ವಹಣೆ. ಕಾರ್ಯಕ್ಷೇತ್ರಗಳಲ್ಲಿ ಹೆಂಗಸರು ಮುಂದುವರಿದಿದ್ದರೂ ಕೆಲಸ

ಮಾಡುವ ಹೆಂಗಸರು ಗಂಡಸರಿಗೆ ಸಮಾನರಲ್ಲ ಎನ್ನುವ ಭಾವನೆ ಮುಂದುವರಿದಿತ್ತು. ಉತ್ಪಾದನೆ ಹೆಚ್ಚಿದಂತೆಲ್ಲ ಸಾಮಾಜಿಕ ಬದಲಾವಣೆಗಳೂ ಹೆಚ್ಚಿದವು – ವಿಶಿಷ್ಟವಾಗಿ, ಕರಿಯರ ಜೀವನದಲ್ಲಿ. ದಕ್ಷಿಣ ಪ್ರಾಂತಗಳಿಂದ ಕರಿಯರು ಉತ್ತರ ಪ್ರಾಂತಗಳಿಗೆ ಹೆಚ್ಚು ಸಂಖ್ಯೆಯಲ್ಲಿ ವಲಸೆ ಹೋದರು. ಇವರಿಗೆ ಉತ್ತರ ಪ್ರಾಂತಗಳಲ್ಲಿ ಉದ್ಯೋಗಾವಕಾಶಗಳು ಹೆಚ್ಚಿದ್ದಕ್ಕೆ ಕಾರಣ ಯುದ್ಧದಿಂದ ಉಂಟಾದ ತುರ್ತು ಪರಿಸ್ಥಿತಿಯೇ ವಿನಹ ವರ್ಣದ್ವೇಷ ಕಡಿಮೆಯಾಗಿದ್ದಕ್ಕಲ್ಲ.

೧೯೪೧ರಲ್ಲಿ ರಚನೆಗೊಂಡ 'ನಿಷ್ಪಕ್ಷಪಾತ ಉದ್ಯೋಗ ಸಮಿತಿ' ರಕ್ಷಣಾ ಉದ್ಯೋಗಗಳಲ್ಲಿ ಕರಿಯ ಕಾರ್ಮಿಕರನ್ನು ಪ್ರತ್ಯೇಕತೆ ಮತ್ತು ಪಕ್ಷಪಾತಗಳಿಗೆ ಗುರಿಮಾಡುವುದನ್ನು ನಿಷೇಧಿಸಿತು. ಇವುಗಳ ವಿರುದ್ಧ ಕರಿಯರು ಪ್ರದರ್ಶನ ನಡೆಸಿದಾಗ ಕರಿಯರು ಮತ್ತು ಬಿಳಿಯರ ನಡುವಣ ಸಂಬಂಧ ಬಿಗಿಗೊಂಡು, ಪರಸ್ಪರ ಸಂಘರ್ಷಣೆ, ದೊಂಬಿ ಮತ್ತು ಹಿಂಸಾಚಾರಗಳು ಉಂಟಾದವು. ಸೈನ್ಯದಲ್ಲಿಯಾದರೋ ಕರಿಯರ ಮತ್ತು ಬಿಳಿಯರನ್ನು ಪ್ರತ್ಯೇಕಿಸುವ ಪದ್ಧತಿ ಮುಂದುವರಿಯಿತು. ಕೆಲವು ಸುಧಾರಣೆಗಳು ಜಾರಿಗೆ ಬಂದವು – ಸೈನ್ಯಾಧಿಕಾರಿಗಳ ತರಬೇತಿ ಕೇಂದಗಳಲ್ಲಿ ಎರಡು ವರ್ಣದವರೂ ಕೂಡಿ ತರಬೇತಿ ಪಡೆಯುವ ವ್ಯವಸ್ಥೆ, ನೌಕಾದಳದಲ್ಲಿ ಕರಿಯರನ್ನು ಪಾಕಕಾರ್ಯಗಳಿಗೆ ಮಾತ್ರ ನೇಮಿಸುವ ಪದ್ಧತಿಗೆ ಬದಲಾಗಿ ಅವರು ನಾವಿಕರ ಸ್ಥಾನಗಳಿಗೆ ಬಡ್ತಿ ಪಡೆಯಲು ಅವಕಾಶ ಕಲ್ಪಿಸಿದರು. ಸೈನ್ಯದಳ (Marine corps) ಕರಿಯ ಅಭ್ಯರ್ಥಿಗಳನ್ನು ಸೇರಿಸಿಕೊಳ್ಳುವ ನಿರ್ಧಾರವನ್ನು ಜಾರಿಗೆ ತಂದಿತು. ೧೯೪೫ರಲ್ಲಿ ಅಮೆರಿಕನ್ ಸೈನ್ಯದಲ್ಲಿ ಮಿಶ್ರಘಟಕಗಳು (mixed units) ರಚನೆಗೊಂಡವು. ಇವುಗಳ ಯಶಸ್ಸಿನ ಪರಿಣಾಮದಿಂದಾಗಿ ಅಮೆರಿಕದ ರಕ್ಷಣಾಪಡೆಗಳ ಮೂರು ವಿಭಾಗಗಳು ಪ್ರತ್ಯೇಕತೆ ಪದ್ಧತಿಯನ್ನು ರದ್ದುಗೊಳಿಸಿದವು. ಹೀಗೆ ರಕ್ಷಣಾಪಡೆಗಳಲ್ಲಿ ಸುಧಾರಣೆಗಳು ಜಾರಿಗೆ ಬಂದಿದ್ದರೂ ಸಾಮಾಜಿಕ ಪ್ರತ್ಯೇಕತೆ (social segregation) ಮುಂದುವರಿಯಿತು. ಈ ಮನೋಭಾವವನ್ನು ಜನರು ಅನೇಕ ರೀತಿಗಳಲ್ಲಿ ವ್ಯಕ್ತಪಡಿಸುತ್ತಿದ್ದರು. ಕರಿಯರು ಮತ್ತು ಬಿಳಿಯರು ಪರಸ್ಪರ ಅರಿತುಕೊಳ್ಳದೆ ಅಜ್ಞಾನದಿಂದ ಮೂಢರಾಗಿದ್ದರು ಎನ್ನುವುದಕ್ಕೆ ನಿದರ್ಶನ: ರಕ್ತ ಸಂಗ್ರಹಣ ಕೇಂದರಗಳನ್ನು ಕರಿಯರಿಗೆ ಮತ್ತು ಬಿಳಿಯರಿಗೆ ಎಂದು ಪ್ರತ್ಯೇಕಗೊಳಿಸಿದ್ದು! ರಕ್ತಸಂಗ್ರಹಣ ಕೇಂದ್ರಗಳಲ್ಲಿ ಶೇಖರಿಸಿದ ರಕ್ತ ಕೆಡದಂತೆ ದಾಸ್ತಾನು ಮಾಡುವ ವೈಜ್ಞಾನಿಕ ವಿಧಾನವನ್ನು ಕಂಡು ಹಿಡಿದವನು ಡಾ. ಚಾರ್ಲ್ಸ್ ಡ್ರೂ (Dr. Charles Drew) ಎಂಬ ಕರಿಯ ವೈದ್ಯ ಎನ್ನುವುದನ್ನು ಬಿಳಿಯರು ಗ್ರಹಿಸದೆ ಹೋದರು.

ದ್ವಿತೀಯ ಜಾಗತಿಕ ಯುದ್ಧ ಮೆಕ್ಸಿಕನ್ ಅಮೆರಿಕನ್ನರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಿತು. ಅವರು ಕಾರ್ಮಿಕರಾಗಿ, ಯೋಧರಾಗಿ ತಾವು ಸಮರ್ಥ ಕೆಲಸಗಾರರು ಮತ್ತು ರಣರಂಗದಲ್ಲಿ ಯಾರಿಗೂ ಕಡಿಮೆಯಿಲ್ಲದ ಹೋರಾಟಗಾರರು ಎಂದು ಸಾಬೀತು

ಗೊಳಿಸಿದ್ದರು. ಯೂರೋಪಿನಲ್ಲಿ ಮತ್ತು ದೂರಪ್ರಾಚ್ಯ ಕದನಗಳಲ್ಲಿ ಜೀವದ ಹಂಗು ತೊರೆದು ಹೋರಾಡಿದ ಮೆಕ್ಸಿಕನ್ ಅಮೆರಿಕನ್ ಸೈನ್ಯ ತುಕಡಿಗಳು ಎಲ್ಲರ ಪ್ರಶಂಸೆಗೆ ಪಾತ್ರವಾಗಿದ್ದು ಮಾತ್ರವಲ್ಲದೆ ೧೭ ಕಾಂಗ್ರೆಸ್ ಪ್ರಶಸ್ತಿ ಪದಕಗಳನ್ನು (Congressional Medal oh Honor) ಪಡೆದವು. ಇದೇ ಸಮಯದಲ್ಲಿ ನಾಜ಼ಿ ಪಕ್ಷಪಾತಿಗಳಾಗಿದ್ದ ಜರ್ಮನ್ ಅಮೆರಿಕನ್ನರನ್ನು ದಸ್ತಗಿರಿ ಮಾಡಿ ವಿಚಾರಣೆಗೆ ಗುರಿಪಡಿಸಿದ್ದರು. ದೈಹಿಕ ಮತ್ತು ಸಾಮಾಜಿಕ ಲಕ್ಷಣಗಳ (Ethnic profile) ಆಧಾರದ ಮೇಲೆ ಹಲವು ಸಾವಿರ ಜಪಾನಿ-ಅಮೆರಿಕನ್ನರ ನಾಗರಿಕ ಹಕ್ಕುಗಳನ್ನು ರದ್ದುಗೊಳಿಸಿ, ಅವರನ್ನು ಪ್ರತ್ಯೇಕವಾದ ದೂರದ ಶಿಬಿರಗಳಿಗೆ ರವಾನಿಸಿದರು. ಅಮೆರಿಕದ ಶ್ರೇಷ್ಠ ನ್ಯಾಯಾಲಯ ಜಪಾನಿ-ಅಮೆರಿಕನ್ನರ ಮೇಲೆ ವಿಧಿಸಲಾದ ಸಂಚಾರ ನಿಷೇಧಾಜ್ಞೆ ಮತ್ತು ಮರುವಸತಿ ಕಾಯಿದೆಗಳನ್ನು ಅನುಮೋದಿಸಿ ಅವು ಸಂದರ್ಭಕ್ಕೆ ಸೂಕ್ತವಾದ ಕಾರ್ಯಾಚರಣೆ ಎಂದು ತೀರ್ಪು ನೀಡಿತು. ಯುದ್ಧದಲ್ಲಿ ಸಾವಿರಾರು ಜಪಾನಿ-ಅಮೆರಿಕನ್ನರು ಯೂರೋಪಿನ ರಣರಂಗದಲ್ಲಿ ಜರ್ಮನ್ ಸೈನ್ಯವನ್ನು ಎದುರಿಸಿ ಪ್ರಾಣಾರ್ಪಣೆ ಮಾಡಿದ್ದಕ್ಕೆ ಹೋಲಿಸಿದರೆ ಸರ್ಕಾರ ಜಪಾನಿ-ಅಮೆರಿಕನ್ನರ ಹಕ್ಕುಗಳನ್ನು ರದ್ದು ಮಾಡಿ ಅವರ ಮನೆಮಠಗಳಿಂದ ಬಿಡಿಸಿ ಶಿಬಿರವಾಸಿಗಳನ್ನಾಗಿ ಮಾಡಿದ್ದು ಐತಿಹಾಸಿಕ ಪರಿಹಾಸವಲ್ಲದೆ ಅಪರಾಧವೂ ಹೌದು. ಈಚೆಗೆ ಅಮೆರಿಕ ಸರ್ಕಾರ ಹಿಂದೆ ನಡೆದ ತಪ್ಪುಗಳಿಗಾಗಿ ಕ್ಷಮೆ ಯಾಚನೆ ಮಾಡಿ, ಅನ್ಯಾಯ ಅನುಭವಿಸಿದ ಜಪಾನಿ-ಅಮೆರಿಕನ್ನರಿಗೆ ಪರಿಹಾರ ಕೊಡಲು ಒಪ್ಪಿಕೊಂಡಿತು.

೧೯೪೪ರ ಚುನಾವಣೆ

ಇಡೀ ಜಗತ್ತು ಯುದ್ಧದ ಬೇಗೆಯಲ್ಲಿ ಬಸವಳಿಯುತ್ತಿದ್ದರೂ ಅದು ಅಮೆರಿಕನ್ ಚುನಾವಣೆಗೆ ಅಡ್ಡಬರಲಿಲ್ಲ. ಎಫ್.ಡಿ.ಆರ್ ಅನಾರೋಗ್ಯದಿಂದ ಕುಂದಿದ್ದರೂ ಅವನನ್ನು ಎದುರಿಸುವಷ್ಟು ಪ್ರಾಬಲ್ಯವುಳ್ಳವರು ಡೆಮೊಕ್ರಾಟಿಕ್ ಪಕ್ಷದಲ್ಲಿ ಯಾರೂ ಇರಲಿಲ್ಲ. ಆದ್ದರಿಂದ ಡೆಮೊಕ್ರಾಟಿಕ್ ಪಕ್ಷ ಅವನನ್ನು ನಾಲ್ಕನೆಯ ಬಾರಿಗೆ ಅಧ್ಯಕ್ಷಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮಕರಣ ಮಾಡಿತು. ಉಪಾಧ್ಯಕ್ಷಸ್ಥಾನಕ್ಕೆ ವ್ಯವಸಾಯ ಕಾರ್ಯದರ್ಶಿಯಾಗಿದ್ದ ಹೆನ್ರಿ ವಾಲೆಸ್ ಮತ್ತು ಮುಸ್ಸೋರಿ ಸೆನೆಟರ್ ಹ್ಯಾರಿ ಟ್ರೂಮನ್ ಸ್ಪರ್ಧಿಸಿದರು. ಎಫ್.ಡಿ.ಆರ್‌ನ ಬೆಂಬಲದಿಂದ ಡೆಮೊಕ್ರಾಟಿಕ್ ಪಕ್ಷ ಹ್ಯಾರಿ ಟ್ರೂಮನ್‌ನನ್ನು ಉಪಾಧ್ಯಕ್ಷಸ್ಥಾನಕ್ಕೆ ನಾಮಕರಣ ಮಾಡಿತು. ರಿಪಬ್ಲಿಕನ್ ಪಕ್ಷ, ಯುವಕನೂ, ನ್ಯೂಯಾರ್ಕ್ ಗವರ್ನರ್ ಆಗಿ ಸಮರ್ಥ ಆಡಳಿತಗಾರನೆಂದು ಪ್ರಖ್ಯಾತಿ ಪಡೆದಿದ್ದ ಥಾಮಸ್ ಡ್ಯೂಯಿ (Thomas Dewey)ಯನ್ನು ಅಧ್ಯಕ್ಷ ಸ್ಥಾನಕ್ಕೆ ಮತ್ತು ಜಾನ್ ಬ್ರಿಕರ್‌ನನ್ನು (John Bricker) ಉಪಾಧ್ಯಕ್ಷಸ್ಥಾನಕ್ಕೆ ಅಭ್ಯರ್ಥಿಗಳನ್ನಾಗಿ ನಾಮಕರಣ ಮಾಡಿತು. ಚುನಾವಣೆ ಪ್ರಚಾರ ವೇದಿಕೆಯಲ್ಲಿ ಚರ್ಚಿಸಿದ ಧ್ಯೇಯೋದ್ದೇಶಗಳಲ್ಲಿ ಎರಡು ಪಕ್ಷಗಳಲ್ಲಿ ಹೆಚ್ಚಿನ ವ್ಯತ್ಯಾಸಗಳಿರಲಿಲ್ಲ. ಡೆಮೊಕ್ರಾಟಿಕ್ ಅಭ್ಯರ್ಥಿಗಳು ತಮ್ಮ

ಪ್ರಚಾರದಲ್ಲಿ 'ಯುದ್ಧ ನಡೆಯುತ್ತಿರುವುದರಿಂದ ಅಧ್ಯಕ್ಷನಾಗಿ ಎಫ್.ಡಿ.ಆರ್ ಮುಂದುವರಿಯುವುದು ರಾಷ್ಟ್ರದ ರಕ್ಷಣೆಗೆ ಅಗತ್ಯ' ಎಂದು ಪ್ರತಿಪಾದಿಸಿದರು. ಚುನಾವಣೆಯಲ್ಲಿ ಎಫ್.ಡಿ.ಆರ್ ನಾಲ್ಕನೆಯ ಬಾರಿಗೆ ಅಧ್ಯಕ್ಷನಾಗಿ ಆಯ್ಕೆಯಾದನು. ಎಲೆಕ್ಟರಲ್ ಕಾಲೇಜಿನಲ್ಲಿ ಎಫ್.ಡಿ.ಆರ್ ೪೩೨ ಮತಗಳನ್ನು ಪಡೆದಿದ್ದನು. ಡ್ಯೂಯಿಗೆ ಸಿಕ್ಕಿದ್ದು ೯೯ ಮತಗಳು ಮಾತ್ರ.

ಪಶ್ಚಿಮ ಯುದ್ಧರಂಗದಲ್ಲಿ ಕದನದ ಕೊನೆಯ ಅಂಕ

ದ್ವಿತೀಯ ಜಾಗತಿಕ ಯುದ್ಧದಲ್ಲಿ ಜಪಾನಿನ ಸೈನ್ಯಗಳು ಏಷ್ಯಾ ಖಂಡದ ಕೆಲವು ರಾಷ್ಟ್ರಗಳನ್ನು ಆಕ್ರಮಿಸಿಕೊಂಡು ದಕ್ಷಿಣ ಶಾಂತ ಸಾಗರ ಪ್ರದೇಶಗಳತ್ತ ಧಾವಿಸುತ್ತಿದ್ದುದನ್ನು ಪಶ್ಚಿಮ ರಂಗದಲ್ಲಿ ಯುದ್ಧನಿರತರಾಗಿದ್ದ ಮಿತ್ರ ರಾಷ್ಟ್ರಗಳು ಹೆಚ್ಚಾಗಿ ಗಮನಿಸದೆ ಹಿಟ್ಲರನನ್ನು ಮೊದಲು ಸೋಲಿಸಲು ನಿರ್ಧಾರ ಮಾಡಿದ್ದವು. ಇದಕ್ಕೆ ಕಾರಣ ಪಶ್ಚಿಮ ರಾಷ್ಟ್ರಗಳಿಗೆ ಜರ್ಮನಿಯಿಂದ ಹೆಚ್ಚು ಅಪಾಯವಿತ್ತು, ಜಪಾನಿನಿಂದಲ್ಲ. ಜರ್ಮನಿಯ ಜಲಾಂತರ್ಗಾಮಿ ನೌಕೆಗಳು ಆ್ಯಂಗ್ಲೊ-ಅಮೆರಿಕನ್ ವಾಣಿಜ್ಯ ನೌಕೆಗಳಿಗೆ ಮೃತ್ಯುಪ್ರಾಯವಾಗಿ ಅನೇಕ ನೌಕೆಗಳನ್ನು ಮುಳುಗಿಸಿದ್ದವು. ಆ್ಯಂಗ್ಲೊ-ಅಮೆರಿಕನ್ ನೌಕೆಗಳು ಜಲಾಂತರ್ಗಾಮಿ ನೌಕೆಗಳ ಇರುವಿಕೆಯನ್ನು ದೂರದಿಂದ ಗ್ರಹಿಸಬಹುದಾದ ಉಪಕರಣವನ್ನು ಉತ್ತಮಗೊಳಿಸಿಕೊಂಡು, ಸಮುದ್ರ ಮಾರ್ಗಗಳಲ್ಲಿ ಪಹರೆ ಠಾಣ್ಯಗಳನ್ನು (Patrol posts) ಸ್ಥಾಪಿಸಿ, ಜರ್ಮನ್ ಜಲಾಂತರ್ಗಾಮಿ ನೌಕೆಗಳನ್ನು ಜಲಾಂತರ್ಗಾಮಿ ಕ್ಷಿಪಣಿಗಳಿಂದ (Torpedos) ಆಸ್ಫೋಟಿಸಿ ೧೯೪೩ರ ಹೊತ್ತಿಗೆ ಅವುಗಳ ಹಾವಳಿಯನ್ನು ಹತೋಟಿಗೆ ತಂದವು. ಆ ಸಮಯದಲ್ಲೇ ಇಂಗ್ಲೆಂಡ್ ಮತ್ತು ಅಮೆರಿಕಗಳ ಸಂಯುಕ್ತ ವಾಯುಪಡೆ, ಜರ್ಮನಿಯ ಆಯಕಟ್ಟಿನ ಸ್ಥಳಗಳು (strategic places) ಮತ್ತು ಯುದ್ಧದ ಯಂತ್ರೋಪಕರಣಗಳ ಉತ್ಪಾದನ ಕೇಂದ್ರಗಳ ಮೇಲೆ ಸರ್ವನಾಶಗೊಳಿಸುವ ಬಾಂಬ್‌ಗಳ (saturation bombs) ಸತತ ಮಳೆಗರೆಯಿತು. ಮಿತ್ರರಾಷ್ಟ್ರಗಳ ವಾಯುಪಡೆಯ ಈ ಕಾರ್ಯಾಚರಣೆ ಜರ್ಮನ್ ವಾಯುಪಡೆ ಇಂಗ್ಲೆಂಡಿನ ಮೇಲೆ ಮಾಡಿದ ದಾಳಿಗೆ ಪ್ರತೀಕಾರವಾಗಿತ್ತು. ಜರ್ಮನರ ಮನೋಸ್ಥೈರ್ಯವನ್ನು ಕುಗ್ಗಿಸುವುದು ಈ ದಾಳಿಯ ಮತ್ತೊಂದು ಕಾರಣವಾಗಿತ್ತು.

೧೯೪೨ರ ಕೊನೆಯಲ್ಲಿ ಮಿತ್ರರಾಷ್ಟ್ರಗಳು ಶತ್ರುರಾಷ್ಟ್ರಗಳನ್ನು ಆಕ್ರಮಣ ಮಾಡಲು ಸೈನಿಕ ಕಾರ್ಯಾಚರಣೆಯ ಯೋಜನೆಯನ್ನು ಸಿದ್ಧಪಡಿಸಿದವು. ಯೂರೋಪಿನ ಆಕ್ರಮಣವನ್ನು ಉತ್ತರದಿಂದ ಕೂಡಲೇ ಪ್ರಾರಂಭಿಸಲು ಒಪ್ಪಿಗೆ ಕೊಡಬೇಕೆಂದು ಮಿತ್ರರಾಷ್ಟ್ರಗಳನ್ನು ಸ್ಟಾಲಿನ್ ಒತ್ತಾಯಪಡಿಸಿದನು. ಉತ್ತರದಿಂದ ಆಕ್ರಮಣ ಪ್ರಾರಂಭಿಸಿದರೆ ರಷ್ಯನ್ನರ ಸಾವು ನೋವುಗಳನ್ನು ಕಡಿಮೆ ಮಾಡಬಹುದೆಂದು ಸ್ಟಾಲಿನ್ ಊಹಿಸಿದ್ದನು. ಈ ರಾಷ್ಟ್ರಗಳು ತನ್ನ ಸಲಹೆಗೆ ಕಿವಿಗೊಡದೆ, ಉತ್ತರ ಆಫ್ರಿಕಾದಲ್ಲಿ ಲಿಬಿಯಾದಿಂದ

ಹಿಡಿದು ಈಜಿಪ್ಟಿನವರೆಗಿನ ಪ್ರದೇಶಗಳನ್ನು ಆಕ್ರಮಣ ಮಾಡಿಕೊಂಡಿದ್ದ ಮಹಾದಂಡನಾಯಕ ಎಡ್ವಿನ್ ರೊಮ್ಮೆಲ್ (Edwin Rommel)ನ ಸೈನ್ಯದ ಮೇಲೆ ದಾಳಿ ಮಾಡಲು ನಿರ್ಧಾರ ಮಡಿದ್ದು ಸ್ಟಾಲಿನ್‌ನ ಕೋಪವನ್ನು ಕೆರಳಿಸಿತು. ಮಿತ್ರರಾಷ್ಟ್ರಗಳು ತಮ್ಮ ನಿರ್ಧಾರವನ್ನು ಕಾರ್ಯಗತಗೊಳಿಸಲು ಆಫ್ರಿಕಾದಲ್ಲಿ ಜರ್ಮನ್ ಸೈನ್ಯದ ಮೇಲೆ ಪ್ರತಿದಾಳಿ ಪ್ರಾರಂಭಿಸಿದವು. ತಿಂಗಳಾನುಗಟ್ಟಲೆ ಜರ್ಮನ್ ಮತ್ತು ಬ್ರಿಟಿಷ್ ಸೈನ್ಯಗಳು ಅಲ್ ಅಲಮ್ಮೈನ್ (El Alamein) ಎಂಬ ಸ್ಥಳದಲ್ಲಿ ಮುಖಾಮುಖಿ ಸಂಧಿಸಿ ಸೈನ್ಯಗಳು ಮುಂದುವರಿಯಲಾರದೆ ನಿಂತುಬಿಟ್ಟವು. ಹಾಗಾದರೂ ಅಲ್ ಅಲಮ್ಮೈನ್ ಕದನ ನಿಲ್ಲಲಿಲ್ಲ. ಇದರಲ್ಲಿ ಅಂತಿಮವಾಗಿ ೧೯೪೨ರ ಅಕ್ಟೋಬರ್ ತಿಂಗಳಲ್ಲಿ ಜರ್ಮನ್ ಸೈನ್ಯ ಸೋತು ಹಿಮ್ಮೆಟ್ಟಿತು. ಅಲ್ ಅಲಮ್ಮೈನ್ ಅಲ್ಲದೆ ಉತ್ತರ ಆಫ್ರಿಕದ ಇತರ ಮೂರುಕಡೆಗಳಲ್ಲಿ ಮಿತ್ರರಾಷ್ಟ್ರಗಳ ನೆಲ-ಜಲ ಸೈನ್ಯ ತುಕಡಿಗಳು (amphibious units) ಬಂದಿಳಿದವು. ಇದೇ ರೀತಿ ಮಿತ್ರರಾಷ್ಟ್ರಗಳ ಸೈನ್ಯತುಕಡಿಗಳು ಪಶ್ಚಿಮದಿಂದ ಮತ್ತು ಪೂರ್ವದಿಂದ ಬಂದು ಸೇರಿದವು. ಇವುಗಳೆಲ್ಲ ಕೂಡಿ ಆದ ಬಹುದೊಡ್ಡ ಸೈನ್ಯ ಟ್ಯೂನಿಸಿಯಾದಲ್ಲಿಬೀಡು ಬಿಟ್ಟಿದ್ದ ರೊಮ್ಮೆಲ್‌ನ ಸೈನ್ಯದ ಬೆನ್ನಟ್ಟಿ ಹೋಯಿತು.

ಮಿತ್ರರಾಷ್ಟ್ರಗಳ ಆಫ್ರಿಕದ ಸೈನ್ಯ ಕಾರ್ಯಾಚರಣೆ ಯಶಸ್ವಿಯಾಗುತ್ತಿದ್ದ ಸಮಯದಲ್ಲಿ – ಜನವರಿ ೧೯೪೩ರಲ್ಲಿ ಎಫ್.ಡಿ.ಆರ್ ಮತ್ತು ಚರ್ಚಿಲ್ ಕಾಸಾ ಬ್ಲಾಂಕಾ (Casablanca) ಪಟ್ಟಣದಲ್ಲಿ ಸಂಧಿಸಿ ವಿಚಾರ ವಿನಿಮಯ ಮಾಡಿಕೊಂಡರು. ಬ್ರಿಟಿಷರು ಯೂರೋಪಿನ ಆಕ್ರಮಣ ದಕ್ಷಿಣದಿಂದ ಸಿಸಿಲಿಯ (Sicily) ಮೂಲಕ ನಡೆಯಬೇಕೆಂದು ಅಭಿಪ್ರಾಯಪಟ್ಟರು. ಆದರೆ ಅಮೆರಿಕನ್ನರು ಆಕ್ರಮಣ ಫ್ರಾನ್ಸಿನ ಉತ್ತರದ ಕಡಲತೀರದಿಂದ ಆರಂಭಿಸಬೇಕೆಂದು ಆಗ್ರಹಪಡಿಸಿದರು. ಕಾಸಾ ಬ್ಲಾಂಕಾ ಸಭೆಯಲ್ಲಿ ಬ್ರಿಟಿಷ್ ಮತ್ತು ಅಮೆರಿಕನ್ ದಂಡನಾಯಕರು ಪರಸ್ಪರ ಒಪ್ಪಂದಕ್ಕೆ ಬಂದು, ಎರಡು ಆಕ್ರಮಣ ಯೋಜನೆಗಳನ್ನು ಕಾರ್ಯಗತಗೊಳಿಸಲು ನಿರ್ಧರಿಸಿದರು. ಯೂರೋಪಿನ ಆಕ್ರಮಣ ಮೊದಲು ದಕ್ಷಿಣದಿಂದ ಆರಂಭವಾಗಬೇಕೆಂದು ತೀರ್ಮಾನಿಸಿದರು. ಚರ್ಚಿಲ್ ಮತ್ತು ಎಫ್.ಡಿ.ಆರ್ ಶತ್ರುಗಳ ಬೇಷರತ್ ಶರಣಾಗತಿಯನ್ನು ಮಾತ್ರ ಒಪ್ಪಿಕೊಳ್ಳಲಾಗುವುದೆಂದು ಜಂಟಿ ಹೇಳಿಕೆಯನ್ನು ಪ್ರಕಟಿಸಿದರು. ಈ ಬೆದರಿಕೆಗೆ ಕಿವಿಗೊಡದೆ ಹಿಟ್ಲರ್ ಟ್ಯೂನಿಸಿಯಾಕ್ಕೆ ಹೆಚ್ಚು ಸೈನ್ಯ ರವಾನಿಸಿ ಹಲವಾರು ತಿಂಗಳು ಘೋರ ಕದನ ಮುಂದುವರಿಸಿದನು. ಕೊನೆಗೆ ಮಿತ್ರರಾಷ್ಟ್ರಗಳು ಜಯಗಳಿಸಿದವು. ಇದರಿಂದಾಗಿ ದಕ್ಷಿಣ ಮೆಡಿಟರೇನಿಯನ್ ಪ್ರಾಂತ ಅವರ ವಶವಾಯಿತು. ೧೯೪೩ರ ಮೇ ತಿಂಗಳಲ್ಲಿ ಮಿತ್ರರಾಷ್ಟ್ರಗಳು ದಕ್ಷಿಣ ಯೂರೋಪಿನ ಆಕ್ರಮಣವನ್ನು ಪ್ರಾರಂಭಿಸಿದವು.

ಮಿತ್ರರಾಷ್ಟ್ರಗಳು ಜರ್ಮನಿ ಬೇಷರತ್ ಶರಣಾಗಬೇಕೆಂದು ಪ್ರಕಟಿಸಿದ್ದು

ಜರ್ಮನರನ್ನು ರೊಚ್ಚಿಗೇಳಿಸಿತು. ಅವರಲ್ಲಿ ಗೆಲ್ಲಬೇಕೆಂಬ ಹಠ ಹೆಚ್ಚಾಗಿ ಕದನ ಬಿರುಸಾಯಿತು. ಆದರೆ ಇಟಾಲಿಯನ್ನರಲ್ಲಿ ಆಕ್ರಮಣದ ಭಯ ಹುಟ್ಟಿಸಿತು. ಇದರಿಂದ ಜನರು ಮುಸೋಲಿನಿಯನ್ನು ಅಧಿಕಾರದಿಂದ ತೆಗೆಯಲು ಪಿತೂರಿ ನಡೆಸಿದರು. ಜನರಲ್ ಡ್ವೈಟ್ ಐಸೆನ್‌ಹಾವರ್‌ನ ಕೈಕೆಳಗಿನ ಸೈನ್ಯ ಸಿಸಿಲಿಯ ಮೇಲೆ ದಾಳಿ ಮಾಡಿ ವಶಪಡಿಸಿಕೊಂಡಿತು. ಆ ಸಮಯದಲ್ಲಿ ಇಟಲಿಯ ಸರ್ವಾಧಿಕಾರಿಯಾಗಿ ಮೆರೆಯುತ್ತಿದ್ದ ಮುಸೋಲಿನಿಯನ್ನು ಅಧಿಕಾರದಿಂದ ಉರುಳಿಸಿ ಮಾರ್ಷಲ್ ಪಿಯೆತ್ರೊ ಬಡಾಗ್ಲಿಯೊ (Pietro Badoglio) ನಾಯಕತ್ವದಲ್ಲಿ ಹೊಸ ಸರ್ಕಾರ ರಚನೆಗೊಂಡಿತು. ಹಿಟ್ಲರ್ ಜರ್ಮನ್ ಸೈನ್ಯ ತುಕಡಿಯನ್ನು ರವಾನಿಸಿ ಮುಸೋಲಿನಿಯನ್ನು ಸೆರೆಯಿಂದ ಬಿಡಿಸಿ ಪುನಃ ಅಧಿಕಾರಕ್ಕೆ ತರಲು ಬಹಳ ಪ್ರಯತ್ನಪಟ್ಟನು. ಆದರೆ ಇಟಲಿಯ ಹೊಸ ಸರ್ಕಾರ ೧೯೪೩ರ ಸೆಪ್ಟೆಂಬರ್ ತಿಂಗಳಲ್ಲಿ ಮಿತ್ರರಾಷ್ಟ್ರಗಳಿಗೆ ಶರಣಾಯಿತು. ಶರಣಾದ ಸರ್ಕಾರ ಜರ್ಮನಿಯ ಮೇಲೆ ಯುದ್ಧ ಸಾರಿ ಮಿತ್ರರಾಷ್ಟ್ರಗಳ ಪಕ್ಷ ವಹಿಸಿತು. ಇಟಲಿ ಶರಣಾಗತವಾದ ಮಾರನೆಯ ದಿನ ಮಿತ್ರರಾಷ್ಟ್ರಗಳು ಇಟಲಿಗೆ ಬಂದಿಳಿದವು. ಸಲೆರ್ನೊ (Salerno) ಎಂಬಲ್ಲಿ ಇಟಲಿಯ ಪ್ರವೇಶದ್ವಾರ ತೆರೆಯಲು ಮಿತ್ರರಾಷ್ಟ್ರಗಳು ಪ್ರಯತ್ನಿಸಿದಾಗ ಜರ್ಮನ್ ಸೈನ್ಯದ ಪ್ರಬಲವಾದ ಗುಂಡಿನ ದಾಳಿಯನ್ನು ಎದುರಿಸಬೇಕಾಯಿತು. ರೋಷಾವೇಷದಿಂದ ಹೋರಾಡಿದ ಜರ್ಮನ್ ಸೈನ್ಯವನ್ನು ಹಿಮ್ಮೆಟ್ಟಿಸಿ ಮಿತ್ರರಾಷ್ಟ್ರಗಳ ಸೈನ್ಯ ರೋಮ್ ನಗರದತ್ತ ಹಾದಿಯುದ್ದಕ್ಕೂ ಹೋರಾಡುತ್ತ ಜರ್ಮನ್ ಸೈನ್ಯವನ್ನು ಹಿಮ್ಮೆಟ್ಟಿಸುತ್ತ ಸಾಗಿ, ರೋಮ್ ನಗರವನ್ನು ಸೇರಲು ೮ ತಿಂಗಳು ಬೇಕಾಯಿತು. ಕೊನೆಗೆ ೧೯೪೪ರ ಜೂನ್ ೪ರಂದು ಯುದ್ಧದಿಂದ ಬಳಲಿ, ಬಸವಳಿದಿದ್ದ ಮಿತ್ರರಾಷ್ಟ್ರಗಳ ಸೈನ್ಯ ರೋಮ್ ನಗರವನ್ನು ಪ್ರವೇಶಿಸಿದವು. ರೋಮ್ ನಗರನಿವಾಸಿಗಳಿಂದ ಮಿತ್ರರಾಷ್ಟ್ರ ಸೈನಿಕರಿಗೆ ಅದ್ಭುತ ಸ್ವಾಗತ ದೊರೆಯಿತು.

೧೯೪೩ರ ಕೊನೆಯ ವಾರದಲ್ಲಿ ಮಿತ್ರರಾಷ್ಟ್ರಗಳ ತ್ರಿಮೂರ್ತಿಗಳು – ರೂಸ್‌ವೆಲ್ಟ್, ಚರ್ಚಿಲ್ ಮತ್ತು ಸ್ಟಾಲಿನ್ – ಇರಾನ್ ದೇಶದ ಟೆಹೆರಾನ್ ನಗರದಲ್ಲಿ ಮೊದಲಬಾರಿಗೆ ಶೃಂಗಸಭೆ ಸೇರಿಸಿದರು. ಉತ್ತರದಿಂದ ಜರ್ಮನಿಯ ಮೇಲೆ ಆಕ್ರಮಣ ಮಾಡುವ ಯೋಜನೆಯನ್ನು ಚರ್ಚಿಸುವುದಾಗಿತ್ತು. ಶೃಂಗಸಭೆ ಸೇರಿದ್ದ ಈ ಮೂರು ರಾಷ್ಟ್ರಗಳ ಧ್ಯೇಯೊದ್ದೇಶಗಳು ವಿಭಿನ್ನವಾಗಿದ್ದವು. ಅಮೆರಿಕ ಯೂರೋಪಿನಲ್ಲಿ ಯಾವ ಪ್ರದೇಶವನ್ನು ಆಕ್ರಮಿಸಿಕೊಂಡು ತನ್ನ ಆಡಳಿತಕ್ಕೆ ವಶಪಡಿಸುವ ಆಸಕ್ತಿ ಹೊಂದಿರಲಿಲ್ಲ. ಬ್ರಿಟಿಷರಿಗೆ ತಮ್ಮ ಚಕ್ರಾಧಿಪತ್ಯವನ್ನು ಉಳಿಸಿಕೊಳ್ಳುವುದು ಮುಖ್ಯವಾಗಿತ್ತು. ರಷ್ಯಾ ಯುದ್ಧ ಪ್ರಾರಂಭವಾದಾಗಿನಿಂದ ಆಕ್ರಮಣ ಮಾಡಿಕೊಂಡ ಯೂರೋಪಿಯನ್ ರಾಷ್ಟ್ರಗಳನ್ನು, ಪ್ರದೇಶಗಳನ್ನು ಬಿಟ್ಟುಕೊಡಲು ಸಿದ್ಧವಾಗಿರಲಿಲ್ಲ. ಬಾಲ್ಟಿಕ್ ಸಂಸ್ಥಾನಗಳು, ಪೋಲೆಂಡ್, ಫಿನ್‌ಲೆಂಡಿನ ಕೆಲವು ಭಾಗಗಳು ಮತ್ತು ರುಮೇನಿಯಾ ರಷ್ಯಾದ ಅಧೀನತೆಯಲ್ಲಿದ್ದವು. ಆದಾಗ್ಯೂ ಶೃಂಗಸಭೆಯನ್ನು ಮುಗಿಸಿದ ಮೂರು ರಾಷ್ಟ್ರಗಳ ನಾಯಕರು ಒಗ್ಗಟ್ಟಿನಿಂದ

ಕೂಡಿ – ಯುದ್ಧಕಾಲದಲ್ಲಿ ಒಗ್ಗಟ್ಟಿನಿಂದ ಹೋರಾಡಿ, ಯುದ್ಧಾನಂತರ ಶಾಂತಿಸ್ಥಾಪನೆಗಾಗಿ ಪರಸ್ಪರವಾಗಿ ಸಹಕರಿಸಿ – ಕೆಲಸ ಸಾಧಿಸುವುದಾಗಿ ಪ್ರಕಟಿಸಿದರು. ಉತ್ತರದಿಕ್ಕಿನಿಂದ ಆಕ್ರಮಣ ಮಾಡುವ ಬಗ್ಗೆ ಚರ್ಚಿಲ್ ಭಿನ್ನಾಭಿಪ್ರಾಯ ಹೊಂದಿದ್ದರೂ ಶೃಂಗಸಭೆಯಲ್ಲಿ ಅದನ್ನು ಅನುಮೋದಿಸಿದನು. ಈ ಅಕ್ರಮಣಕ್ಕೆ ಒಪ್ಪಿಗೆ ದೊರಕಿದ್ದು ಸ್ಟಾಲಿನ್‌ಗೆ ಸಂತೋಷವಾಯಿತು. ಎಫ್.ಡಿ.ಆರ್ ಸ್ಟಾಲಿನ್‌ನ ನಾಯಕತ್ವವನ್ನು ಮೆಚ್ಚಿಕೊಂಡನು. ಟೆಹೆರಾನ್ ಶೃಂಗಸಭೆ ಪಶ್ಚಿಮ ರಾಷ್ಟ್ರಗಳ ಮತ್ತು ರಷ್ಯಾದ ನಡುವಣ ಮೈತ್ರಿಯನ್ನು ಉತ್ತುಂಗಮಟ್ಟಕ್ಕೆ ಮುಟ್ಟಿಸಿತ್ತು.

ಇದೇ ಸಭೆಯಲ್ಲಿ ಅಂಗೀಕರಿಸಲಾದ ಯೋಜನೆಯನ್ನು 'ಆಪರೇಷನ್ ಓವರ್‌ಲಾರ್ಡ್' ಎಂದು ಕರೆದರು. ಮುಖ್ಯವಾಗಿ ಇದು ಫ್ರಾನ್ಸ್ ಬಿಡುಗಡೆ ಮಾಡಲು ನಡೆದ ಕದನದ ಬಗ್ಗೆ ಅಮೆರಿಕ ಮಂಡಿಸಿದ ಯೋಜನೆ. ಈ ಬೃಹತ್ ಸೈನ್ಯ ಕಾರ್ಯಾಚರಣೆಗೆ 'ಡಿ ಡೇ' (D- Day) ಎಂದು ಹೆಸರು. ೧೯೪೪ರ ಜೂನ್ ೬ರಂದು ಫ್ರಾನ್ಸ್‌ನ ವಾಯುವ್ಯ ದಿಕ್ಕಿನ ಕಡಲತೀರದ ನಾರ್ಮಂಡಿ ಎಂಬ ಸ್ಥಳದಲ್ಲಿ ಮಹಾದಂಡನಾಯಕ ಡ್ವೈಟ್ ಐಸೆನ್‌ಹಾವರ್ ಕೈಕೆಳಗಿನ ೧೭೬ ಸಾವಿರ ಸೈನಿಕರು ೬೦೦ ಯುದ್ಧನೌಕೆಗಳಲ್ಲಿ ಮತ್ತು ೪೦೦೦ ನಾವೆಗಳಲ್ಲಿ ಬಂದಿಳಿದರು. ಜನರಲ್ ಜಾರ್ಜ್ ಪ್ಯಾಟನ್‌ನ ಕೈಕೆಳಗಿನ ಮೂರನೆಯ ಸೇನಾದಳ (Third Army) ಫ್ರಾನ್ಸ್‌ನ ಪಶ್ಚಿಮ ದಿಕ್ಕಿನಲ್ಲಿ ಮುನ್ನುಗ್ಗಿ ಬ್ರಿಟನಿ (Brittany) ಪ್ರದೇಶವನ್ನು ಆಕ್ರಮಿಸಿಕೊಂಡು ನಂತರ ಪೂರ್ವದಿಕ್ಕಿಗೆ ತಿರುಗಿ ಪ್ಯಾರಿಸ್ ಕಡೆಗೆ ಸಾಗತೊಡಗಿತು. ಪ್ಯಾಟನ್‌ನ ಉದ್ದೇಶ ದಕ್ಷಿಣದಿಂದ ಮುನ್ನುಗ್ಗಿ ಬರುತ್ತಿದ್ದ ಬ್ರಿಟಿಷ್ ಸೈನ್ಯವನ್ನು ಸೇರಿಕೊಳ್ಳುವುದಾಗಿತ್ತು. ೧೯೪೪ರ ಜುಲೈ ತಿಂಗಳ ಹೊತ್ತಿಗೆ ಮಿತ್ರರಾಷ್ಟ್ರಗಳ ಸೈನ್ಯಗಳು ಕಡಲತೀರ ಪ್ರದೇಶವನ್ನು ಆಕ್ರಮಿಸಿಕೊಂಡಿದ್ದವು. ಅಲ್ಲಿಂದ ಫ್ರಾನ್ಸ್ ಮೂಲಕವಾಗಿ ಜರ್ಮನಿಯನ್ನು ತಲುಪಿ ಆಕ್ರಮಣ ಮಾಡುವುದು ಅವರ ಗುರಿಯಾಗಿತ್ತು.

ಈ ಸಮಯದಲ್ಲಿ ಮಿತ್ರರಾಷ್ಟ್ರಗಳ ಒಂದು ಸೇನಾಪಡೆ ಆಫ್ರಿಕಾದ ತೀರಪ್ರದೇಶದಿಂದ ಉತ್ತರದಿಕ್ಕಿಗೆ ಮುಂದುವರಿದು ಪ್ಯಾರಿಸ್ ನಗರದ ಕಡೆಗೆ ತ್ವರಿತಗತಿಯಿಂದ ಸಾಗಿತು. ಮಿತ್ರರಾಷ್ಟ್ರಗಳ ಸೇನಾಪಡೆಗಳು ಸೇರಿ ಪ್ಯಾರಿಸ್ ನಗರವನ್ನು ಆಕ್ರಮಣ ಮಾಡಿದ್ದ ಜರ್ಮನ್ ಸೈನ್ಯವನ್ನು ಸೋಲಿಸಿ ಆಗಸ್ಟ್ ೨೫ರಂದು ಪ್ಯಾರಿಸ್ ನಗರವನ್ನು ಬಿಡುಗಡೆ ಮಾಡಿದವು. ಪ್ಯಾರಿಸ್ ನಾಗರಿಕರು ತಮ್ಮ ಮೇರೆಯಿಲ್ಲದ ಆನಂದ, ಉತ್ಸಾಹಗಳಿಂದ ರಾತ್ರಿ ಹಗಲೆನ್ನದೆ ಹಾಡಿ ಕುಣಿದು ಕಳೆದುಕೊಂಡಿದ್ದ ಸ್ವಾತಂತ್ರ್ಯವನ್ನು ಮರಳಿ ಪಡೆದ ಸಂದರ್ಭವನ್ನು ಅದ್ದೂರಿಯಾಗಿ ಆಚರಿಸಿದರು.

ಪ್ಯಾರಿಸ್ ಬಿಡುಗಡೆಯಾದ ನಂತರ ರಷ್ಯನ್ನರು ಪೂರ್ವದಿಕ್ಕಿನಲ್ಲಿ ಜರ್ಮನರ ಮೇಲೆ ದಾಳಿಯನ್ನು ತೀವ್ರಗೊಳಿಸಿ ಅವರನ್ನು ಹಿಮ್ಮೆಟ್ಟಿಸಲು ಹೋರಾಡಿದರು. ೧೯೪೨ರಲ್ಲಿ ರಷ್ಯನ್ನರು ಹಿಟ್ಲರನ ಸೇನಾಪಡೆಗಳನ್ನು ಸ್ಟಾಲಿನ್‌ಗ್ರಾಡ್ ಕದನದಲ್ಲಿ ಹಿಮ್ಮೆಟ್ಟಿಸಿದರು.

ಯೂರೋಪಿನ ರಣರಂಗದಲ್ಲಿ ಹಿಟ್ಲರನ ಸೈನ್ಯಗಳನ್ನು ಸೋಲಿಸಿ ಬರ್ಲಿನ್ ನಗರವನ್ನು ವಶಪಡಿಸಿಕೊಳ್ಳಲು ಪಣ ತೊಟ್ಟಿದ್ದ ರಷ್ಯನ್ನರು ಅಪಾರ ಸಾವು ನೋವುಗಳನ್ನು ಲೆಕ್ಕಿಸದೆ ಜೀವದ ಹಂಗು ತೊರೆದು ಹೋರಾಡಿದರು. ಈ ಯುದ್ಧ ಮುಗಿಯುವ ಹೊತ್ತಿಗೆ ಸತ್ತ ರಷ್ಯನ್ನರ ಸಂಖ್ಯೆ ೮ ಮಿಲಿಯನ್ ಮೀರಿತ್ತು! ಜರ್ಮನ್ ಸೇನಾಪಡೆಗಳನ್ನು ಹಿಮ್ಮೆಟ್ಟಿಸುತ್ತ ಬರ್ಲಿನ್ ನಗರದತ್ತ ಸಾಗಿದ್ದ ರಷ್ಯಾದ ಕೆಂಪು ಸೇನೆ (Red Army) ಹಂಗೆರಿ, ಯುಗೋಸ್ಲಾವಿಯಾ, ರುಮೇನಿಯಾ, ಬಲ್ಗೇರಿಯಾ, ಜೆಕೊಸ್ಲೋವಾಕಿಯಾ ಮತ್ತು ಆಸ್ಟ್ರಿಯಾ ದೇಶಗಳನ್ನು ಆಕ್ರಮಣ ಮಾಡಿ ಅಥವಾ ಅಲ್ಲಿನ ಸರ್ಕಾರದೊಡನೆ ಸೇರಿಕೊಂಡು ಕ್ರಮೇಣವಾಗಿ ಅದನ್ನು ವಶಪಡಿಸಿಕೊಳ್ಳುವ ಯೋಜನೆ ಹಾಕುತ್ತ ಜರ್ಮನಿಯತ್ತ ಸಾಗಿತು.

ಫ್ರಾನ್ಸ್ ಯುದ್ಧರಂಗದಲ್ಲಿ ಮಿತ್ರರಾಷ್ಟ್ರಗಳ ಸೇನಾಪಡೆಗಳಿಗೆ ಆಹಾರ ಪದಾರ್ಥಗಳು ಮತ್ತು ಸರಕು ಸಾಮಗ್ರಿಗಳ ಪೂರೈಕೆಗೆ ತಡೆಗಳುಂಟಾಗಿ ಸೈನಿಕ ಕಾರ್ಯಾಚರಣೆ ಸ್ಥಗಿತಗೊಂಡಿತು. ಮೇಲಾಗಿ ಮಿತ್ರರಾಷ್ಟ್ರಗಳ ಸೈನ್ಯ ದೃಢ ಸಂಕಲ್ಪದಿಂದ ಹೋರಾಡಲು ಸಿದ್ಧರಾದ ನುರಿತ ಜರ್ಮನ್ ಸೇನಾಪಡೆಗಳನ್ನು ಎದುರಿಸಬೇಕಾಯಿತು. ಹಲವಾರು ಕಠಿಣ ಕದನಗಳಲ್ಲಿ ನಷ್ಟ ಅನುಭವಿಸಿದರೂ ಹಿಮ್ಮೆಟ್ಟದೆ ಮಿತ್ರರಾಷ್ಟ್ರಗಳ ಸೇನಾಪಡೆಗಳು ಹೋರಾಡಿ ಜರ್ಮನ್ ಸೈನ್ಯಗಳನ್ನು ಸೋಲಿಸುತ್ತ ಮುಂದುವರಿದು ೧೯೪೪ರ ಕೊನೆಯಲ್ಲಿ ರೈನ್ (Rhine)ನದಿಯ ದಡವನ್ನು ತಲುಪಿದರು. ೧೯೪೪ರ ಡಿಸೆಂಬರ್ ತಿಂಗಳಲ್ಲಿ ಹಿಟ್ಲರ್ ತನ್ನ ಕಡೆಯ ಅತಿ ಮಹತ್ತರವಾದ ಪ್ರತಿದಾಳಿಯನ್ನು ಬೆಲ್ಜಿಯಮ್ ಮತ್ತು ಲುಕ್ಸಾಂಬರ್ಗ್ ಕಾಡುಪ್ರದೇಶಗಳಲ್ಲಿ ಸಾಧಿಸಿ ಮಿತ್ರರಾಷ್ಟ್ರಗಳ ಸೈನ್ಯಗಳಲ್ಲಿ ಗೊಂದಲ ಉಂಟುಮಾಡಿದನು. ಜರ್ಮನರ ಅನಿರೀಕ್ಷಿತ ದಾಳಿಯ ರಭಸ ತಪ್ಪಿಸಿಕೊಳ್ಳಲು ಎಲ್ಲ ಸೈನಿಕರು ಒಂದೇ ಜಾಗಕ್ಕೆ ನುಗ್ಗಿದರು. ಆ ಚಿಕ್ಕ ಸ್ಥಳದಲ್ಲಿ ಅಪಾರ ಸೈನ್ಯ ಸೇರಿಕೊಂಡು ಅದು ಒಂದು ದೊಡ್ಡ ಉಬ್ಬನ್ನು ಹೋಲುವಂತಿತ್ತು. ಈ ಉಬ್ಬಿನಿಂದಾಗಿಯೇ ಈ ಕದನ 'ಉಬ್ಬಿನ ಕದನ' (Battle of the Bulge) ಎಂದು ಹೆಸರುವಾಸಿಯಾಗಿದೆ. ಮಿತ್ರರಾಷ್ಟ್ರಗಳ ಸೈನ್ಯಗಳು ಜರ್ಮನ್ ರಕ್ಷಣಾಪಡೆಗಳನ್ನು ಛಿದ್ರಗೊಳಿಸಿ ಕಾಡಿನಿಂದ ಹೊರಗೆ ಬಂದವು. ಒಂದು ತಿಂಗಳು ಸತತವಾಗಿ ನಡೆದ ಕದನದಲ್ಲಿ ಮಿತ್ರರಾಷ್ಟ್ರ ಸೈನ್ಯಗಳು ಜರ್ಮನ್ ಪಡೆಗಳನ್ನು ರೈನ್ ಪ್ರದೇಶಕ್ಕೆ ಹಿಮ್ಮೆಟ್ಟಿಸಿದವು. ಇದಾದನಂತರ ಹಿಟ್ಲರನಿಗೆ ಸಶಕ್ತವಾದ ಪ್ರತಿದಾಳಿ ಮಾಡಲು ಸಾಧ್ಯವಾಗಲಿಲ್ಲ.

ಮಿತ್ರರಾಷ್ಟ್ರಗಳ ವಾಯುಪಡೆಗಳ ಸತತವಾದ ಬಾಂಬ್ ದಾಳಿಯಿಂದಾಗಿ ಬಹುತೇಕ ಜರ್ಮನ್ ನಗರಗಳು ಕುಸಿದುಬಿದ್ದವು. ಈ ದಾಳಿಗಳ ಜೊತೆಗೆ ಹಿಟ್ಲರನ 'ಸುಟ್ಟ ನೆಲ'ದ (scorched earth) ಧೋರಣೆ ಜರ್ಮನಿಯನ್ನು ಹಾಳುಗೆಡವಿದವು. ೧೯೪೪ರ ಮಾರ್ಚ್ ತಿಂಗಳಲ್ಲಿ ಮಿತ್ರರಾಷ್ಟ್ರಗಳ ಸೈನ್ಯಗಳು ನೆಲ-ಜಲ ಕಾರ್ಯಾಚರಣೆ (ಅಂದರೆ, ನೌಕಾಪಡೆ ಮತ್ತು ಸೇನಾಪಡೆಗಳು ಒಟ್ಟಾಗಿ ಒಂದು ನಿಶ್ಚಿತವಾದ ಸಮಯದಲ್ಲಿ ದಾಳಿ ನಡೆಸುವುದು)

– ನಡೆಸಿ ರೈನ್ ನದಿಯನ್ನು ದಾಟಿ ಜರ್ಮನಿಯ ಆಕ್ರಮಣವನ್ನು ಆರಂಭಿಸಿದವು. ಹೀಗೆ ಉತ್ತರ ಯೂರೋಪಿನ ಮತ್ತು ಜರ್ಮನಿಯ ಪ್ರಾಂತಗಳನ್ನು ಮಿತ್ರರಾಷ್ಟ್ರಗಳ ಸೈನ್ಯಗಳು ವಶಪಡಿಸಿಕೊಳ್ಳುತ್ತ ಹೋದಾಗ ಅವುಗಳು ಜನರನ್ನು ಜಾನುವಾರುಗಳಂತೆ ಕೂಡಿಹಾಕಿದ್ದ ಶಿಬಿರಗಳನ್ನು (concentration camps) ಪತ್ತೆ ಮಾಡಿದವು. ಡಾಕೌ (Dachau), ಔಶ್‌ವಿಟ್ಜ್ (Auschwitz), ಬ್ಯೂಕೆನ್‌ವಾಲ್ಡ್ (Buchenwald) ಮತ್ತು ಬೆಲ್ಸೆನ್ ಶಿಬಿರಗಳಲ್ಲಿ ಕೂಡಿ ಹಾಕಲ್ಪಟ್ಟಿದ್ದ ಯಹೂದ್ಯರನ್ನು ಮಿತ್ರರಾಷ್ಟ್ರಗಳ ಸೈನ್ಯಗಳು ಬಿಡುಗಡೆ ಮಾಡಿದವು. ಈ ಸಾವಿನ ಶಿಬಿರಗಳ (death camps) ಶೋಧನೆ ಮತ್ತು ಇಂಥ ಅಮಾನುಷ ಕೃತ್ಯಗಳನ್ನು ಜರ್ಮನರು ಸಾವಿನ ಶಿಬಿರಗಳಲ್ಲಿ ವ್ಯವಸ್ಥಿತವಾಗಿ ಕೈಗೊಂಡಿದ್ದರು ಎನ್ನುವುದನ್ನು ತಿಳಿದು ಇಡೀ ಜಗತ್ತು ನಂಬಲಾರದೆ ಮೂಕವಿಸ್ಮಿತವಾಯಿತು. ಸಾಮೂಹಿಕ ಸಮಾಧಿಗಳು, ಯಹೂದ್ಯರನ್ನು ವಿಷದ ಗಾಳಿಗೆ ಗುರಿಪಡಿಸಿ, ಸತ್ತವರನ್ನು ದೈತ್ಯ ದಹನ ಕಾರ್ಖಾನೆಯಲ್ಲಿ (giant crematoriums) ಸುಟ್ಟು ಬೂದಿ ಮಾಡುತ್ತಿದ್ದ ವಿಧಾನಗಳನ್ನು ಬೆಳಕಿಗೆ ತಂದಾಗ ಲೋಕ ತತ್ತರಿಸಿತು.

ದ್ವಿತೀಯ ಮಹಾಯುದ್ಧದ ಕೊನೆಯ ಕಾಲದಲ್ಲಿ ಜರ್ಮನಿಯ ಮೂರನೆಯ ರೈಕ್‌ನಲ್ಲಿಯೇ (Third Reich) ಗೊಂದಲ ಪರಿಸ್ಥಿತಿ ಉಂಟಾಗಿತ್ತು. ಹಿಟ್ಲರನಿಗೆ ತನ್ನ ಅಧಿಕಾರಿಗಳೇ ತನ್ನ ಮೇಲೆ ತಿರುಗಿ ಬಿದ್ದಿದ್ದಾರೆ ಎಂಬ ಭಾವನೆ ಉಂಟಾಯಿತು. ಸ್ವಲ್ಪ ಸಮಯದ ಹಿಂದೆ ಸಂಪೂರ್ಣ ಯೂರೋಪಿನ ಸರ್ವಾಧಿಕಾರಿಯಾಗಿ ಮೆರೆಯುತ್ತಿದ್ದ ಹಿಟ್ಲರ್ ತನ್ನ ಜೀವಿತದ ಕೊನೆಯ ದಿನಗಳನ್ನು ಸರ್ಕಾರದ ಆಡಳಿತ ಕಛೇರಿಯ ನೆಲಮಾಳಿಗೆಯಲ್ಲಿ (underground bunker) ಕಳೆದನು. ಅವನ ಜೊತೆಯಲ್ಲಿ ಅವನ ಅಂಗರಕ್ಷಕರು, ಕೆಲಸದವರು, ವೈದ್ಯರು ಮತ್ತು ಅವನ ಪ್ರಣಯಿನಿ ಈವಾ ಬ್ರೌನ್ (Eva Braun) ವಾಸವಾಗಿದ್ದರು. ತನ್ನನ್ನು ಕೊಲೆ ಮಾಡಲು ಪಿತೂರಿ ನಡೆಯುತ್ತಿದೆ ಎನ್ನುವ ಭಯ ಅವನನ್ನು ಸದಾ ಕಾಡುತ್ತಿತ್ತು. ನಾನಾ ರೀತಿಯ ಔಷಧಿಗಳನ್ನು ಸೇವಿಸುತ್ತಿದ್ದ ಅವನು ಶಕ್ತಿಗುಂದಿದವನಾಗಿ ಮಾನಸಿಕ ಸಮತೋಲನ ಕಳೆದುಕೊಂಡಿದ್ದನು. ೧೯೪೫ರ ಏಪ್ರಿಲ್ ೨೮ರಂದು ಬರ್ಲಿನ್ ಬಾಂಬ್ ದಾಳಿಯಿಂದ ಬೆಂಕಿ ಹತ್ತಿ ಉರಿಯುತ್ತಿರುವಾಗ, ಹಿಟ್ಲರ್ ತನ್ನ ಬಹುಕಾಲದ ಪ್ರಣಯಸಂಗಾತಿಯನ್ನು ಮದುವೆಯಾದನು. ನಂತರ ಅವನು ತಯಾರಿಸಿದ ಉಯಿಲಿನಲ್ಲಿ ತನ್ನ ಸ್ವತ್ತುಗಳನ್ನು ನಾಜಿ಼ ಪಕ್ಷಕ್ಕೆ ಸೇರಿಸಬೇಕು, ಅದಲ್ಲದಿದ್ದರೆ ಜರ್ಮನಿಗೆ ಸೇರಬೇಕು ಮತ್ತು ತನ್ನ ನಂತರ ಅಡ್ಮಿರಲ್ ಕಾರ್ಲ್ ಡೊನಿಟ್ಜ್ (Karl Donitz) ಉತ್ತರಾಧಿಕಾರಿಯಾಗಬೇಕೆಂದು ನಿರ್ದೇಶಿಸಿದ್ದನು. ಅದೇ ದಿನ ಮುಸೋಲಿನಿ ಮತ್ತು ಅವನ ಪ್ರಣಯ ಸಂಗಾತಿ ಕ್ಲಾರೆಟ್ಟ ಪೆಟಾಕ್ಚಿ (Claretta Petacci) ಇವರನ್ನು ಮಿತ್ರರಾಷ್ಟ್ರಗಳ ಸೈನ್ಯಗಳು ಇಟಲಿಯನ್ನು ಆಕ್ರಮಣ ಮಾಡಿದ ಸಮಯದಲ್ಲಿ ಸೆರೆ ಹಿಡಿದು ವಿಚಾರಣೆಗೆ ಗುರಿಪಡಿಸಿದರು. ಆಗ ಮುಸೋಲಿನಿ ಸೆರೆ ಹಿಡಿದವರಲ್ಲಿ 'ನನ್ನ ಪ್ರಾಣ ಉಳಿಸಿ, ನಾನು ನಿಮಗೆ ಚಕ್ರಾಧಿಪತ್ಯವನ್ನು ಕೊಡುತ್ತೇನೆ' ಎಂದು ಅಂಗಲಾಚಿದನು.

ಆದರೆ ಜನ ಅವರಿಬ್ಬರನ್ನು ಗುಂಡಿಟ್ಟು ಕೊಂದು ಆ ಮೃತದೇಹಗಳನ್ನು ಮಿಲಾನ್ ನಗರದ ಚೌಕದಲ್ಲಿ ತಲೆಕೆಳಗಾಗಿ ನೇತುಹಾಕಿದರು!

೧೯೪೫ರ ಏಪ್ರಿಲ್ ೨೦ರಂದು ಹಿಟ್ಲರ್ ಮತ್ತು ಅವನ ನವವಧು ಇಬ್ಬರೂ ತಮ್ಮ ಜೊತೆಯಲ್ಲಿದ್ದವರೆಲ್ಲರ ಕೈಕುಲುಕಿ ತಮ್ಮ ಖಾಸಗಿ ಕೋಣೆಗೆ ತೆರಳಿದರು. ಅಲ್ಲಿ ಹಿಟ್ಲರ್ ಪಿಸ್ತೂಲಿನ ನಳಿಗೆಯನ್ನು ಬಾಯಲ್ಲಿಟ್ಟುಕೊಂಡು ಗುಂಡುಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡನು. ಅವನ ಪತ್ನಿ ಈವಾ ಬ್ರೌನ್ ಸಯನೈಡ್ ವಿಷ ಸೇವಿಸಿ ಪ್ರಾಣ ಕಳೆದುಕೊಂಡಳು. ಅವರಿಬ್ಬರ ದೇಹಗಳನ್ನು ಮೇಲಿನ ಉದ್ಯಾನವನಕ್ಕೆ ರವಾನಿಸಿ, ಅಲ್ಲಿ ಅವುಗಳ ಮೇಲೆ ಪೆಟ್ರೋಲ್ ಸಮೃದ್ಧವಾಗಿ ಸುರಿದು ಬೆಂಕಿಯಲ್ಲಿ ಸುಟ್ಟು ಬೂದಿಮಾಡಿದರು. 'ನಾವು ಉಂಟೋ ಮೂರು ಲೋಕ ಉಂಟೋ' ಎಂಬ ಗಾದೆಯಂತೆ ಅಧಿಕಾರದ ಮದದಿಂದ ಮೆರೆದ ಇಬ್ಬರು ಸರ್ವಾಧಿಕಾರಿಗಳ ಅಂತ್ಯ ಶೋಚನೀಯ ವಾಯಿತು. ೧೯೪೫ರ ಮೇ ತಿಂಗಳ ೨ರಂದು ಜರ್ಮನಿ ಶರಣಾಗತವಾಯಿತು.

ಯಾಲ್ಟಾ ಶೃಂಗಸಭೆ

೧೯೪೫ರ ಫೆಬ್ರವರಿ ತಿಂಗಳಲ್ಲಿ – ಜರ್ಮನಿ ಶರಣಾಗತವಾಗುವುದಕ್ಕೆ ಮೂರು ತಿಂಗಳು ಮುಂಚಿತವಾಗಿ – ದ್ವಿತೀಯ ಮಹಾಯುದ್ಧದಲ್ಲಿ ಭಾಗವಹಿಸಿದ ಮೂರು ಮಹಾನ್ ರಾಷ್ಟ್ರಗಳ ಮಹಾನಾಯಕರು ಕ್ರೈಮಿಯ (Crimea) ಪ್ರಾಂತದ ಯಾಲ್ಟಾ (Yalta) ಎಂಬಲ್ಲಿ ಶೃಂಗಸಭೆಯಲ್ಲಿ ಸೇರಿ ಯುದ್ಧದ ಕೊನೆಯ ಹಂತಗಳನ್ನು ಯೋಜಿಸುವುದು, ಜರ್ಮನಿಯ ಭವಿಷ್ಯ ನಿರ್ಧರಿಸುವುದು ಮತ್ತು ರಾಷ್ಟ್ರಗಳ ಒಕ್ಕೂಟದ (League of Nations) ಬದಲಿಗೆ ಬೇರೊಂದು ಸಂಸ್ಥೆಯನ್ನು ರಚಿಸುವುದು – ಇಂಥ ಮಹತ್ವದ ಅಂಶಗಳ ಚರ್ಚೆಗೆ ಕೈಹಾಕಿದ್ದರು. ಜರ್ಮನಿಯು ಸೋತು ಶರಣಾಗತವಾದ ಮೇಲೆ ಸೋವಿಯೆಟ್ ಒಕ್ಕೂಟವನ್ನು ಜಪಾನಿನ ಮೇಲೆ ಯುದ್ಧ ಸಾರುವಂತೆ ಮಾಡುವ ಉದ್ದೇಶದಿಂದ, ಮಂಚೂರಿಯಾದ ವಾಣಿಜ್ಯ ವ್ಯವಹಾರಗಳ ಮೇಲೆ ರಷ್ಯಾಕ್ಕೆ ಹೆಚ್ಚಿನ ನಿಯಂತ್ರಣ ಕೊಡುವುದು, ಜಪಾನಿನ ಉತ್ತರದಲ್ಲಿರುವ ದ್ವೀಪಗಳನ್ನು ರಷ್ಯಾಕ್ಕೆ ವಾಪಸು ಮಾಡುವುದು ಸಾಧ್ಯವೆಂದು ಚರ್ಚಿಲ್ ಮತ್ತು ಎಫ್.ಡಿ.ಆರ್ ರಷ್ಯಾದ ಸರ್ವಾಧಿಕಾರಿ ಸ್ಟಾಲಿನ್‌ಗೆ ಆಸೆ ಹುಟ್ಟಿಸಿದರು. ಸ್ಟಾಲಿನ್ ಜರ್ಮನ್ ರಾಷ್ಟ್ರವನ್ನು ಶಾಶ್ವತವಾಗಿ ರದ್ದುಗೊಳಿಸಬೇಕೆಂದು ಆಗ್ರಹಪಡಿಸಿದನು. ಮೇಲಾಗಿ ಯುದ್ಧದ ಪರಿಣಾಮವಾಗಿ ಉಂಟಾದ ಸಾವು ನೋವು, ನಷ್ಟಗಳಿಗೆ ೨೦ ಬಿಲಿಯನ್ ಡಾಲರ್ ಪರಿಹಾರ ಕೊಡಬೇಕೆಂದೂ ಒತ್ತಾಯಪಡಿಸಿದನು. ಪಶ್ಚಿಮ ರಾಷ್ಟ್ರಗಳು ಪರಿಹಾರ ಕೊಡಲು ಒಪ್ಪಿದ್ದರೂ ಒಂದು ನಿರ್ದಿಷ್ಟ ಮೊತ್ತದ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿದರು. ಜರ್ಮನಿಯನ್ನು ವಿಭಾಗಿಸಬೇಕೆನ್ನುವ ಸಲಹೆಯನ್ನು ಪಶ್ಚಿಮ ರಾಷ್ಟ್ರಗಳು ಒಪ್ಪಲಿಲ್ಲ. ತಾತ್ಕಾಲಿಕವಾಗಿ ಜರ್ಮನಿಯನ್ನು ಮೂರು ವಲಯಗಳಾಗಿ ವಿಭಾಗಿಸಿ ಮೂರು ಪ್ರಬಲ

ರಾಷ್ಟ್ರಗಳ (ಅಮೆರಿಕ, ಇಂಗ್ಲೆಂಡ್ ಮತ್ತು ರಷ್ಯಾ) ಮತ್ತು ಫ್ರಾನ್ಸ್‌ನ ಆಡಳಿತಕ್ಕೆ ಒಳಪಡಿಸಬೇಕೆಂದು ಸಭೆ ಸೇರಿದ ರಾಷ್ಟ್ರಗಳು ಒಪ್ಪಂದ ಮಾಡಿಕೊಂಡವು.

ಜರ್ಮನಿಯ ಪತನವಾದ ಮೇಲೆ ಯೂರೋಪಿನ ಮೇಲೆ ರಷ್ಯಾ ತನ್ನ ಪ್ರಾಬಲ್ಯ ಗಳಿಸುವುದನ್ನು ತಪ್ಪಿಸಬೇಕೆಂದು ಚರ್ಚಿಲ್ ಮತ್ತು ಎಫ್.ಡಿ.ಆರ್ ನಿರ್ಧರಿಸಿದ್ದರು. ಸ್ಟಾಲಿನ್ ಪೋಲೆಂಡಿನ ಪ್ರಾದೇಶಿಕ ಸರ್ಕಾರ ಸ್ಥಾಪಿಸುವುದನ್ನು ಒಪ್ಪಿಕೊಂಡು ಪೋಲೆಂಡಿನ ಪೂರ್ವ ಪ್ರಾಂತಗಳಲ್ಲಿ ನಿಯಂತ್ರಣರಹಿತ ಚುನಾವಣೆಯನ್ನು ನಡೆಸುವುದಾಗಿ ಭರವಸೆ ನೀಡಿದನು. ಇದರಿಂದ ಚರ್ಚಿಲ್ ಮತ್ತು ಎಫ್.ಡಿ.ಆರ್ ರಷ್ಯಾದ ಪ್ರಭಾವವನ್ನು ಪೋಲೆಂಡಿನ ಪೂರ್ವಭಾಗಕ್ಕೆ ಸೀಮಿತಗೊಳಿಸಿದ್ದಕ್ಕಾಗಿ ಸಂತೋಷಪಟ್ಟರು. ಕೆಲವು ಕಾಲಾನಂತರ ಯಾಲ್ಟಾ ಸಭೆಯಲ್ಲಿ ಮಾಡಿಕೊಂಡ ಒಪ್ಪಂದ ಟೀಕೆಗೆ ಒಳಗಾಯಿತು. ಕೆಲವರು ಯಾಲ್ಟಾ ಒಪ್ಪಂದವನ್ನು 'ದುರಂತ'ವೆಂದು ಟೀಕಿಸಿದರೆ, ಮತ್ತೆ ಕೆಲವರು ಈ ಒಪ್ಪಂದ ಅಮೆರಿಕದ ಬಂಡವಾಳಶಾಹಿಯನ್ನು ಪೂರ್ವಯೂರೋಪಿಗೆ ವಿಸ್ತರಿಸುವ ಯೋಜನೆ ಎಂದು ಖಂಡಿಸಿದರು. ಆದರೆ ಚರ್ಚಿಲ್ ಮತ್ತು ಎಫ್.ಡಿ.ಆರ್ ತಾವು ಸ್ಟಾಲಿನ್‌ನನ್ನು ಸಂತೋಷಪಡಿಸಲು ಒಪ್ಪಂದ ಮಾಡಿಕೊಂಡಿದ್ದು ಎನ್ನುವ ಆಪಾದನೆಯನ್ನು ನಿರಾಕರಿಸಿದರು. ಪೂರ್ವ ಯೂರೋಪ್ ಸ್ವತಂತ್ರವಾಗಿರುವವರೆಗೂ ಸ್ಟಾಲಿನ್ ಪ್ರಭಾವ ಇದ್ದರೂ ಅಡ್ಡಿಯಿಲ್ಲ ಎಂದು ಅವರು ಭಾವಿಸಿದ್ದರು. ವಾಸ್ತವವಾಗಿ ರಷ್ಯಾದ ಸೈನ್ಯಪಡೆಗಳು ಪೂರ್ವಯೂರೋಪಿನಲ್ಲಿ ಇರುವವರೆಗೂ ಪಶ್ಚಿಮ ರಾಷ್ಟ್ರಗಳು ರಷ್ಯಾದೊಡನೆ ಸ್ನೇಹ ಬೆಳೆಸುವುದು ಅಗತ್ಯವಾಗಿತ್ತು.

ಸಮರದ ಸೆಳವಿನಲ್ಲಿ ಜಪಾನ್ ಮತ್ತು ಅಮೆರಿಕ

ಜರ್ಮನಿ ಶರಣಾಗತವಾದರೂ ಜಪಾನ್ ಯುದ್ಧವನ್ನು ಮುಂದುವರಿಸಿತು. ಪರ್ಲ್ ಹಾರ್ಬರ್ ಮೇಲೆ ಅನಿರೀಕ್ಷಿತ ದಾಳಿ ನಡೆಸಿ ಅಮೆರಿಕ ನೌಕಾದಳಕ್ಕೆ ಅಪಾರ ಹಾನಿ ಮಾಡಿದ ಮೇಲೆ ಜಪಾನ್ ಆಗ್ನೇಯ ಏಷ್ಯಾದ ಅನೇಕ ರಾಷ್ಟ್ರಗಳನ್ನು ಆಕ್ರಮಿಸಿಕೊಂಡಿತು. ಆದರೂ ಅದರ ಆಕ್ರಮಣದಾಹ ಹಿಂಗದೆ ಶಾಂತಸಾಗರ ದ್ವೀಪಗಳ ಮೇಲೆ ಅದು ದೃಷ್ಟಿ ಹಾಯಿಸಿತು. ಶಾಂತಸಾಗರ ಯುದ್ಧರಂಗದ (Pacific Theater) ಮೊದಲನೆಯ ಅಂಕ ಪ್ರಾರಂಭವಾಗುವುದು ಫಿಲಿಪ್ಪೈನ್ಸ್ ಆಕ್ರಮಣದಿಂದ. ಈ ರಾಷ್ಟ್ರವನ್ನು ರಕ್ಷಿಸಲು ಅಮೆರಿಕನ್ ಮತ್ತು ಫಿಲಿಪ್ಪೈನ್ಸ್ ಸೇನಾದಳಗಳ ದಂಡನಾಯಕನಾಗಿದ್ದ ಡಗ್ಲಾಸ್ ಮೆಕಾರ್ಥರ್ ಕಠಿಣ ಪರಿಸ್ಥಿತಿಯಲ್ಲಿ ಸಿಕ್ಕಿಬಿದ್ದಿರುವ ಪರಿವೆಯಿದ್ದರೂ ತನ್ನ ಸೈನ್ಯವನ್ನು ಕುಶಲತೆಯಿಂದ ಉಪಯೋಗಿಸಿ ಆಯಕಟ್ಟಿನ ಸ್ಥಳಗಳಲ್ಲಿ ಜಪಾನ್ ಸೈನ್ಯವನ್ನು ಎದುರಿಸಿ ೧೯೪೨ರ ಏಪ್ರಿಲ್ ತಿಂಗಳವರೆಗೆ ಆಕ್ರಮಣಕಾರರನ್ನು ತಡೆದು ನಿಲ್ಲಿಸುವ ಸಾಹಸ ಮಾಡಿದನು. ಕೊನೆಗೆ ಜಪಾನಿನ ಅಪಾರ ಸಂಖ್ಯೆಯ ಸೈನ್ಯವನ್ನು ತಡೆಯಲು ಸಾಧ್ಯವಾಗದೆ ಶರಣಾಗತನಾದನು. ಅಮೆರಿಕದ ಕದನದ ಇತಿಹಾಸದಲ್ಲಿ ಇದು ಅತ್ಯಂತ ದೊಡ್ಡ ಸೋಲು.

ಎಫ್.ಡಿ.ಆರ್ ಇದಕ್ಕೆ ಮುಂಚಿತವಾಗಿ ಮೆಕಾರ್ಥರನನ್ನು ಫಿಲಿಪ್ಪೈನ್ಸ್ ಬಿಟ್ಟುಹೋಗುವಂತೆ ಆಜ್ಞಾಪಿಸಿದ್ದನು. ಇವನ ಕದನಕೌಶಲ ಮುಂದೆ ಆಸ್ಟ್ರೇಲಿಯಾದ ರಕ್ಷಣೆಗೆ ಬೇಕಾಗುತ್ತದೆ ಎಂದು ಎಫ್.ಡಿ.ಆರ್ ಮನಗಂಡಿದ್ದನು. ಮೆಕಾರ್ಥರ ಫಿಲಿಪ್ಪೈನ್ಸ್ ತ್ಯಜಿಸಿ ಹೋಗುವುದು ಅನಿವಾರ್ಯವಾದಾಗ ಅವನು ಉದ್ಗರಿಸಿದ ಮಾತು: 'ನಾನು ಹಿಂದಿರುಗಿ ಬರುತ್ತೇನೆ' (I shall return) ಈ ಪ್ರತಿಜ್ಞೆ ಲೋಕವಿಖ್ಯಾತವಾಗಿದೆ.

ಈ ಹೊತ್ತಿಗಾಗಲೇ ಜಪಾನ್ ಆಕ್ರಮಣದ ಕರಾಳ ಛಾಯೆ ಇಡೀ ಆಗ್ನೇಯ ಏಷ್ಯಾದ ಮೇಲೆ ಹರಡಿಕೊಂಡಿತ್ತು – ಥಾಯ್‌ಲ್ಯಾಂಡ್, ಮಲಯ, ಡಚ್ ಪೂರ್ವ ಇಂಡೀಸ್ ದ್ವೀಪಗಳು, ಹಾಂಕಾಂಗ್, ಗುವಾಮ್, ಗಿಲ್ಬರ್ಟ್ ಮತ್ತು ಸಾಲೊಮನ್ ದ್ವೀಪಗಳು ಮತ್ತು ವೇಕ್ ದ್ವೀಪ (Wake island) – ಇವೆಲ್ಲವೂ ಜಪಾನಿನ ಕೈವಶವಾಗಿದ್ದವು. ಇಷ್ಟು ವಿಸ್ತಾರವಾದ ಚಕ್ರಾಧಿಪತ್ಯವನ್ನು ಒಟ್ಟುಗೂಡಿಸಿ ಬಲಪಡಿಸುವುದಕ್ಕೆ ಗಮನ ಕೊಡದೆ ವಿಜಯೋನ್ಮತ್ತರಾದ ಜಪಾನ್ ಸೇನಾನಾಯಕರು ಆಸ್ಟ್ರೇಲಿಯ ಖಂಡವನ್ನು ಮಿತ್ರದೇಶಗಳೊಡನೆ ಸಂಪರ್ಕ ಕಡಿದುಕೊಳ್ಳುವಂತೆ ಮಾಡಲು ತಮ್ಮ ಯುದ್ಧ ನೌಕೆಗಳನ್ನು ನ್ಯೂಗಿನಿ ದ್ವೀಪಗಳತ್ತ ತಿರುಗಿಸಿದರು. ಆ ದ್ವೀಪಗಳನ್ನು ಸಮೀಪಿಸುತ್ತಿದ್ದಂತೆ ಅಮೆರಿಕದ ವಾಯುಪಡೆಯ ವಿಮಾನಗಳನ್ನು ಸಾಗಿಸುವ 'ಲೆಕ್ಸಿಂಗ್‌ಟನ್' ಮತ್ತು 'ಯಾರ್ಕ್ ಟೌನ್' ಹಡಗುಗಳಿಂದ ಹಾರಿ ಗಗನಕ್ಕೇರಿದ ಅಮೆರಿಕನ್ ವಿಮಾನಗಳು ಬಾಂಬ್‌ನ ಮಳೆಗರೆದು ಜಪಾನಿನ ನೌಕಾಪಡೆಯನ್ನು ಹಿಮ್ಮೆಟ್ಟಿಸಿದವು. ನ್ಯೂಗಿನಿಯನ್ನು ತಲುಪಲು ವಿಫಲವಾದದ್ದು ಜಪಾನಿನ ನೌಕಾಪಡೆಯ ಸರಾಗ ವಿಜಯಸರಣಿಯನ್ನು ತುಂಡರಿಸಿತು.

ಪರ್ಲ್ ಹಾರ್ಬರ್ ದಾಳಿಯಿಂದ ಇನ್ನೂ ಚೇತರಿಸಿಕೊಳ್ಳುತ್ತಿದ್ದ ಅಮೆರಿಕದ ನೌಕಾಪಡೆ ಪುನರ್ ನಿರ್ಮಾಣಗೊಳ್ಳುವುದರೊಳಗೆ ಅದನ್ನು ನಾಶಗೊಳಿಸುವ ಭರವಸೆಯಿಂದ ಜಪಾನಿನ ನೌಕಾಪಡೆ ಶಾಂತಸಾಗರದ ಮಧ್ಯದಲ್ಲಿರುವ 'ಮಿಡ್‌ವೇ' (Midway) ದ್ವೀಪದಲ್ಲಿನ ಅಮೆರಿಕದ ನೌಕಾನೆಲೆಯ ಮೇಲೆ ದಾಳಿ ಮಾಡಿತು. ಈ ದಾಳಿಯ ಬಗ್ಗೆ ಮೊದಲೇ ತಿಳಿದಿದ್ದ ಅಮೆರಿಕ ನೌಕಾಪಡೆಯ ಅಡ್ಮಿರಲ್ ನಿಮಿಟ್ಜ್ (Nimitz) ಸರ್ವಸಿದ್ಧತೆಗಳನ್ನು ಮಾಡಿಕೊಂಡು ಕಾದಿದ್ದು ಜಪಾನಿನ ನೌಕಾಪಡೆಯನ್ನು ಛಿದ್ರಗೊಳಿಸಿದನು. ಇದುವರೆಗೆ ಜಪಾನೀಯರು ಇಷ್ಟು ಅಪಾರವಾದ ಸೋಲನ್ನು ಅನುಭವಿಸಿರಲಿಲ್ಲ. ತಾವು ಗೆಲ್ಲುತ್ತೇವೆ ಎನ್ನುವ ಅತಿಭರವಸೆಯಿಂದ ಅವರು ತಮ್ಮ ನೌಕಾಪಡೆಯ ಬಹುತೇಕ ನೌಕೆಗಳನ್ನು ಈ ಯುದ್ಧದಲ್ಲಿ ತೊಡಗಿಸಿದ್ದರು. ಅವು ಅಮೆರಿಕದ ಅವ್ಯಾಹತ ಗುಂಡಿನ ದಾಳಿಗೆ ಸಿಕ್ಕು ಜಲಸಮಾಧಿ ಹೊಂದಿದವು. ಮಿಡ್‌ವೇಯಲ್ಲಿನ ಜಪಾನಿನ ಪರಾಭವ ಯುದ್ಧದ ದಿಕ್ಕನ್ನು ಬದಲಾಯಿಸಿತು. ಇದಾದ ನಂತರ ಜಪಾನೀಯರು ಆಕ್ರಮಣ ನಿಲ್ಲಿಸಿ ತಮ್ಮನ್ನು ರಕ್ಷಿಸಿಕೊಳ್ಳುವುದರಲ್ಲಿ ನಿರತರಾದರು. ಅಮೆರಿಕನ್ನರು ನ್ಯೂಗಿನಿ ಮತ್ತು ಸಾಲೊಮನ್

ದ್ವೀಪಗಳಿಂದ ಜಪಾನ್ ಪಡೆಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಾಗಿದ್ದು ೧೯೪೨ರ ಕೊನೆಯಲ್ಲಿ. ಸಾಲೊಮನ್ ದ್ವೀಪಗಳ ಗ್ವಾಡೆಲ್‌ಕನಾಲ್ (Guadalcanal) ಕದನ ಆರು ತಿಂಗಳಿಗೂ ಹೆಚ್ಚು ಕಾಲ ನಡೆಯಿತು. ೧೯೪೩ರ ಫೆಬ್ರುವರಿಯಲ್ಲಿ ಅಂತಿಮವಾಗಿ ಜಪಾನ್ ಸೇನಾಪಡೆಗಳು ಅಲ್ಲಿಂದ ಹಿಮ್ಮೆಟ್ಟಿದವು. ಈ ಎಲ್ಲ ಕದನಗಳಲ್ಲಿ ಅಂತಿಮವಾಗಿ ಅಮೆರಿಕನ್ನರು ಜಯಗಳಿಸಿದರೂ ಅಪಾರ ಸಾವು ನೋವು, ನಷ್ಟ ಅನುಭವಿಸಬೇಕಾಯಿತು. ಕಾರಣ, ಜಪಾನೀಯರು ಪ್ರತಿ ಕದನದಲ್ಲೂ ಪ್ರಾಣದ ಹಂಗು ತೊರೆದು ಹೋರಾಡಿದುದು.

ಚೈನಾಕ್ಕೆ ಅಮೆರಿಕ ನೀಡಿದ ನೆರವು

ಏಷ್ಯಾದ ರಣರಂಗದಲ್ಲಿ ಅಮೆರಿಕ ಎರಡು ಧ್ಯೇಯಗಳನ್ನು ಸಾಧಿಸಬೇಕಾಗಿತ್ತು. ಮೊದಲನೆಯದಾಗಿ ಜಪಾನ್‌ನ್ನು ಸೋಲಿಸಿ ಶರಣಾಗುವಂತೆ ಮಾಡುವುದು. ಎರಡನೆಯ ದಾಗಿ ಚೈನಾ ದೇಶದ ಪತನವನ್ನು ತಡೆಗಟ್ಟುವುದು. ಚೈನಾ ಸ್ವತಂತ್ರವಾದ ಪ್ರಬಲ ರಾಷ್ಟ್ರವಾಗುವ ಸಾಮರ್ಥ್ಯ ಹೊಂದಿದೆ ಎಂದು ಎಫ್.ಡಿ.ಆರ್ ನಂಬಿದ್ದನು. ಹಾಗೆಯೇ ಜನರಲಿಸ್ಮೊ ಚಿಯಾಂಗ್ ಕೈಷೇಕ್‌ನಲ್ಲಿ ಭರವಸೆಯಿಟ್ಟಿದ್ದನು. ಆದರೆ ದೇಶದ ದುರ್ಬಲತೆ ಮತ್ತು ಆಡಳಿತದಲ್ಲಿ ವ್ಯಾಪಕವಾದ ಭ್ರಷ್ಟಾಚಾರ ಮತ್ತು ಪಿತೂರಿಗಳು ಅವನ ಗಮನಕ್ಕೆ ಬರಲಿಲ್ಲ.

ಜಪಾನ್ ಆಕ್ರಮಣ ಮಾಡಿದಾಗ ಅಮೆರಿಕ ಚೈನಾದೇಶಕ್ಕೆ ಇಂಡಿಯಾದಿಂದ ವಿಮಾನಗಳಲ್ಲಿ ಹಿಮಾಲಯ ಪರ್ವತಪಂಕ್ತಿಗಳ ಮೇಲಾಗಿ ಆಹಾರ ಪದಾರ್ಥಗಳು ಮತ್ತು ಸರಕು ಸಾಮಗ್ರಿಗಳನ್ನು ರವಾನಿಸಿ ಚೀನೀಯರ ಪ್ರಾಣ ಉಳಿಸಿತು. ೧೯೪೨ರಲ್ಲಿ ಅಮೆರಿಕ ಜನರಲ್ ಜೋಸೆಫ್ ಸ್ಟಿಲ್‌ವೆಲ್‌ನ ಸೇನಾಧಿಪತ್ಯದಲ್ಲಿ ಒಂದು ಸೇನಾಪಡೆಯನ್ನು ಕಳುಹಿಸಿತು. ಸ್ಟಿಲ್‌ವೆಲ್‌ನ ಸೈನ್ಯ ಉತ್ತರ ಬರ್ಮಾದ ಮೂಲಕ ಚೈನಾದೇಶಕ್ಕೆ ಸರಕುಸಾಮಗ್ರಿಗಳನ್ನು ಸಾಗಿಸುವಂಥ ಒಂದು ರಸ್ತೆಯನ್ನು ನಿರ್ಮಾಣ ಮಾಡಿತು. ಇದಕ್ಕಿಂತ ಹೆಚ್ಚಿಗೆ ಸಾಧಿಸುವುದು ಸ್ಟಿಲ್‌ವೆಲ್‌ನಿಗೆ ಸಾಧ್ಯವಾಗಲಿಲ್ಲ. ಚಿಯಾಂಗ್ ಕೈಷೇಕ್ ಅಮೆರಿಕ ಕಳುಹಿಸಿದ ಸಾಮಾನುಗಳನ್ನು ದಾಸ್ತಾನು ಮಾಡುವುದರಲ್ಲಿ ಮತ್ತು ಸೈನ್ಯ ಜಮಾಯಿಸುವುದರಲ್ಲಿ ನಿರತನಾಗಿದ್ದನು. ಏಕೆಂದರೆ ಚೈನಾದ ವಾಯುವ್ಯ ಪ್ರಾಂತದಲ್ಲಿ ಕಮ್ಯೂನಿಸ್ಟ್ ಕ್ರಾಂತಿಕಾರರನ್ನು ಹತ್ತಿಕ್ಕಲು ಸಿದ್ಧತೆ ಮಾಡಿಕೊಳ್ಳುವುದು ಅವನಿಗೆ ಮುಖ್ಯವಾಗಿತ್ತೇ ಹೊರತು ಜಪಾನ್‌ನೊಡನೆ ಹೋರಾಟ ಮಾಡುವುದಲ್ಲ.

ಮಿತ್ರರಾಷ್ಟ್ರಗಳ ಜಂಟಿ ಸೇನಾಧಿಪತಿಗಳಿಗೆ ಸ್ಟಿಲ್‌ವೆಲ್ ಚಿಯಾಂಗ್ ಜಪಾನ್‌ನೊಡನೆ ಯುದ್ಧ ಮಾಡುವುದರಲ್ಲಿ ಆಸಕ್ತಿ ತೋರುತ್ತಿಲ್ಲವೆಂದು ಎಚ್ಚರಿಸಿದನು. ಪರಿಣಾಮವಾಗಿ ಜಂಟಿ ಸೇನಾಧಿಪತ್ಯದ ಸೇನಾನಿಗಳು ಸ್ಟಿಲ್‌ವೆಲ್‌ನನ್ನೇ ಚೈನಾದ ಸೇನಾಧಿಪತಿಯನ್ನಾಗಿ ನೇಮಿಸಿದರು. ಇದರಿಂದ ಕೋಪಗೊಂಡ ಚಿಯಾಂಗ್ ಸ್ಟಿಲ್‌ವೆಲ್‌ನನ್ನು ಅಧಿಕಾರದಿಂದ ತೆಗೆದುಹಾಕುವಂತೆ ಒತ್ತಾಯ ಮಾಡಿದನು. ಎಫ್.ಡಿ.ಆರ್ ವಿಧಿಯಿಲ್ಲದೆ ೧೯೪೪ರಲ್ಲಿ

ಸ್ಟಿಲ್‌ವೆಲ್‌ನನ್ನು ವಾಪಸ್ಸು ಕರೆಸಬೇಕಾಯಿತು. ಚೀನಾದಲ್ಲಿ ನಡೆಯುತ್ತಿದ್ದ ಯುದ್ಧ ಕಾರ್ಯಾಚರಣೆ ಇದರಿಂದಾಗಿ ಅಸ್ತವ್ಯಸ್ತವಾಯಿತು.

ಸೂರ್ಯನನ್ನು ಎದುರಿಸಿದ ರಣಹದ್ದು!

ಅಮೆರಿಕ ಚೈನಾದೇಶಕ್ಕೆ ನೆರವು ನೀಡುತ್ತಿದ್ದ ಸಮಯದಲ್ಲೇ ಜಪಾನಿನ ಮೇಲೆ ಬೃಹತ್ ಪ್ರಮಾಣದ ದಾಳಿ ನಡೆಸಲು ಯೋಜನೆಯನ್ನು ಸಿದ್ಧಗೊಳಿಸುತ್ತಿತ್ತು. ಜನರಲ್ ಮೆಕಾರ್ಥರ್ ಫಿಲಿಪ್ಪೈನ್ಸ್ ಮೂಲಕ ಉತ್ತರ ದಿಕ್ಕಿನಿಂದ ಜ್ಯಾನ್ ಮೇಲೆ ದಾಳಿ ಮಾಡಬೇಕೆಂದು ವಾದಿಸಿದನು. ಆದರೆ ನೌಕಾದಳದ ಮಹಾದಂಡನಾಯಕ ಅಡ್ಮಿರಲ್ ನಿಮಿಟ್ಜ್ ಶಾಂತಿ ಸಾಗರದ ಜಪಾನಿನ ನೌಕಾನೆಲೆಗಳಾದ ಕೆರೊಲೈನ್, ಮರಿಯಾನ್ ದ್ವೀಪಗಳು ಮತ್ತು ಫಾರ್ಮೋಸಗಳನ್ನು ವಶಪಡಿಸಿಕೊಂಡು ನಂತರ ಚೈನಾದೇಶದ ಕಡಲತೀರ ಪ್ರದೇಶವನ್ನು ಆಕ್ರಮಿಸಿಕೊಂಡು ಅಲ್ಲಿಂದ ಜಪಾನಿನ ಮೇಲೆ ದಾಳಿ ಮಾಡಬೇಕೆಂದು ಸಲಹೆ ನೀಡಿದನು. ರಾಜಧಾನಿ ವಾಷಿಂಗ್‌ಟನ್‌ನಲ್ಲಿ ಈ ಎರಡು ಸಲಹೆಗಳನ್ನು ಚರ್ಚಿಸಿ, ಹಿಟ್ಲರನ ಜರ್ಮನಿಯನ್ನು ಆಕ್ರಮಣ ಮಾಡುವಾಗ ಅನುಸರಿಸಿದ ಎರಡು ಕಡೆಗಳಿಂದ ದಾಳಿಯನ್ನು (two-front attack) ಇಲ್ಲಿಯೂ ಅನುಸರಿಸಬೇಕೆಂದು ನಿರ್ಣಯಿಸಿದರು.

೧೯೪೩ರಿಂದ ೧೯೪೫ರವರೆಗೆ ಅಮೆರಿಕದ ಆಕ್ರಮಣ ಪಡೆಗಳು ಜಪಾನಿನತ್ತ ಸಾಗಲು ಹೆಜ್ಜೆ ಹೆಜ್ಜೆಗೂ ಹೋರಾಡಬೇಕಾಯಿತು. ಚಿಕ್ಕ ಚಿಕ್ಕ ದ್ವೀಪಗಳಲ್ಲಿ ಹುದುಗಿದ್ದ ಜಪಾನಿನ ಸೈನ್ಯ ತುಕಡಿಗಳು ಘೋರ ಕಾಳಗ ನಡೆಸಿ ಅಮೆರಿಕದ ಸೈನ್ಯ ಆಮೆ ಗತಿಯಲ್ಲಿ ಮುಂದುವರಿಯುವಂತೆ ಮಾಡಿದವು. ಈ ಕದನ ದ್ವೀಪದಿಂದ ದ್ವೀಪಕ್ಕೆ ಕಾಡಿನಿಂದ ಕಾಡಿಗೆ ಹಬ್ಬುವ ಕಾಳ್ಗಿಚ್ಚಿನಂತೆ ಹರಡುತ್ತ ಹೋಯಿತು. ಮೆಕಾರ್ಥರನ ಸೈನ್ಯ ಪ್ರತಿಯೊಂದು ದ್ವೀಪ ವಶಪಡಿಸಿಕೊಳ್ಳಲು ಅಪಾರ ಸಾವು ನೋವುಗಳನ್ನು ಅನುಭವಿಸಬೇಕಾಗಿ ಬಂತು. ತಾನು ಹಿಂತಿರುಗಿ ಬರುತ್ತೇನೆ ಎಂದು ಮಾಡಿದ್ದ ಪ್ರತಿಜ್ಞೆಯನ್ನು ಮೆಕಾರ್ಥರ್ ಉಳಿಸಿಕೊಂಡನು. ಫಿಲಿಪ್ಪೈನ್ಸ್ ದ್ವೀಪಗಳನ್ನು ವಶಪಡಿಸಿಕೊಳ್ಳಲು ನಡೆಸಿದ ಕದನ ಅತ್ಯಂತ ಘೋರವಾಗಿದ್ದು, ಇಡೀ ಚರಿತ್ರೆಯಲ್ಲೇ ದೊಡ್ಡದೆನಿಸಿದ ಕದನ – 'ಲೈಟ್ ಕೊಲ್ಲಿ'ಯಲ್ಲಿ (Gulf of Lyte) ನಡೆದಿದ್ದು.

ಅತ್ತ ಅಡ್ಮಿರಲ್ ನಿಮಿಟ್ಜ್ ಕೂಡ ಕದನ ಮಾಡುತ್ತಲೇ ದ್ವೀಪದಿಂದ ದ್ವೀಪಕ್ಕೆ ಸಾಗಿ ಒಂದೊಂದಾಗಿ ವಶಪಡಿಸಿಕೊಂಡನು. ಮೊದಲಿಗೆ ಗಿಲ್ಬರ್ಟ್ ದ್ವೀಪಗಳು, ನಂತರ ಮಾರ್ಷಲ್ಸ್, ಅದಾದ ಮೇಲೆ ಗುವಾಮ್ (Guam), ಅಲ್ಲಿಂದ ಮರಿಯಾನಕ್ಕೆ ಹೋಗಿ ತಲುಪಿ, ಅಲ್ಲಿಂದಲೇ ಜಪಾನ್ ಮೇಲೆ ಬಾಂಬ್ ದಾಳಿ ಪ್ರಾರಂಭಿಸಿದನು. ಇದಕ್ಕಾಗಿ ಸಣ್ಣದಾದರೂ ಆಯಕಟ್ಟಿನ ಸ್ಥಳದಲ್ಲಿದ್ದ ಐಯೊ ಜಿಮಾ (Iwo Jima) ಎಂಬ ದ್ವೀಪವನ್ನು ವಶಪಡಿಸಿಕೊಳ್ಳಲು ಸಿದ್ಧತೆ ನಡೆಸಿದನು. ಅಮೆರಿಕದ ಆಕ್ರಮಣವನ್ನು ತಡೆಯಲು ಐಯೊ ಜಿಮಾದಲ್ಲಿ ಜಪಾನೀಯರು ಅಪಾರ ಸಂಖ್ಯೆಯ ಸೈನಿಕರನ್ನು ರವಾನಿಸಿ, ಅಗಾಧ

ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಶೇಖರಿಸಿಟ್ಟಿದ್ದರು. ಈ ದ್ವೀಪಕ್ಕಾಗಿ ನಡೆದ ಕದನ ಎಷ್ಟು ಘೋರವಾಗಿತ್ತೋ ಅಷ್ಟೇ ನಿರ್ಣಾಯಕವೂ ಆಗಿತ್ತು. ಆಯಕಟ್ಟಿನಲ್ಲಿದ್ದ ಆ ಸ್ಥಳ ಜಪಾನಿಗೆ ಹೋಗುವ ಮಾರ್ಗವನ್ನು ಕಾಯುವ ಕೋಟೆಯಂತಿತ್ತು. ಅಂತಿಮವಾಗಿ ಐಯೊ ಜಿಮಾ ಅಮೆರಿಕನ್ನರ ಕೈವಶವಾದರೂ ಇದಕ್ಕಾಗಿ ಅಮೆರಿಕ ೨೦ ಸಾವಿರ ತರುಣ ಯೋಧರ ಬಲಿದಾನ ಕೊಡಬೇಕಾಯಿತು. ಇಲ್ಲಿಂದ ಅಮೆರಿಕನ್ ವಾಯುಪಡೆ ಅತ್ಯಂತ ವಿನಾಶಕಾರಿ ಅಗ್ನಿ ಆಸ್ಫೋಟಕಗಳನ್ನು (fire bombs) ಜಪಾನಿನ ಮೇಲೆ ಎಸಗುವುದು ಸುಲಭ ವಾಯಿತು. ಐಯೊ ಜಿಮಾದಿಂದ ಇನ್ನೊಂದು ಆಯಕಟ್ಟಿನ ದ್ವೀಪವಾದ ಒಕಿನಾವವನ್ನು ಆಕ್ರಮಿಸಿ ವಶಪಡಿಸಿಕೊಳ್ಳುವುದಕ್ಕೆ ಅನುಕೂಲವಾಯಿತು.

೧೯೪೫ರ ಏಪ್ರಿಲ್ ೧ರಂದು ಅತಿ ಮಹತ್ವದ, ಅತಿ ಭಯಂಕರವಾದ ಕದನ ಒಕಿನಾವವನ್ನು ವಶಪಡಿಸಿಕೊಳ್ಳುವ ಸಲುವಾಗಿ ಆರಂಭವಾಯಿತು. ತಾಯಿನಾಡನ್ನು ರಕ್ಷಿಸಲು ಜೀವದ ಹಂಗು ತೊರೆದು ಸಿದ್ಧರಾಗಿದ್ದ ಜಪಾನೀಯರನ್ನು ಎದುರಿಸಲು ಅಮೆರಿಕನ್ನರು ಅಪಾರ ಸಂಖ್ಯೆಯ ನೆಲ ಜಲ ಸೇನಾಪಡೆಗಳನ್ನು ಯುದ್ಧದಲ್ಲಿ ತೊಡಗಿಸಬೇಕಾಯಿತು. ಅಮೆರಿಕನ್ ಯೋಧರ ಸಂಖ್ಯೆ ೩೦೦ ಸಾವಿರಕ್ಕೂ ಮಿಗಿಲಾಗಿತ್ತು. ಜಪಾನೀಯರಿಗಂತೂ ಈ ಕದನವು ಅಳಿವು ಉಳಿವಿನ ಪ್ರಶ್ನೆಯಾಗಿತ್ತು. ಆದ್ದರಿಂದ ನಾನಾ ರೀತಿಗಳಿಂದ – ತಮ್ಮ ವಾಯುದಳದ ಕಡೆಯ ವಿಮಾನ ಇರುವವರೆಗೂ ಮತ್ತು ನೌಕಾದಳದ ಕಡೆಯ ಸಮರ ನೌಕೆ 'ಯಮಟೊ' ಮುಳುಗುವವರೆಗೂ – ಶತ್ರುವಿನ ನಾಶಕ್ಕಾಗಿ ಹೋರಾಡಿದರು. ಕಾಮಿಕಾಜ಼ಿ ವೈಮಾನಿಕರು (ತಮ್ಮ ವಿಮಾನಗಳನ್ನು ಶತ್ರುಗಳ ಯುದ್ಧನೌಕೆಗೆ ಢಿಕ್ಕಿ ಹೊಡೆಸಿ, ಆಸ್ಫೋಟಿಸಿ ಆತ್ಮಹತ್ಯೆ ಮಾಡಿಕೊಳ್ಳುವವರು) ನೂರಾರು ಬಾರಿ ದಾಳಿ ನಡೆಸಿ ಅಮೆರಿಕನ್ನರಿಗೆ ಅಪಾರ ಸಾವು ನೋವು, ನಷ್ಟ ಉಂಟುಮಾಡಿದರು.

೧೯೩೯ರ ಆಗಸ್ಟ್ ೨ರಂದು ಭೌತವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ಅಧ್ಯಕ್ಷ ಎಫ್.ಡಿ.ಆರ್‌ಗೆ ಬರೆದ ಕಾಗದದಲ್ಲಿ 'ಯುರೇನಿಯಮ್ ಮೂಲಧಾತುವನ್ನು (element) ನೂತನ ಮತ್ತು ಅತಿಮಹತ್ತರವಾದ ಶಕ್ತಿಯ (ಚೇತನ) ನೆಲೆಯನ್ನಾಗಿ ಮಾರ್ಪಾಡು ಮಾಡುವುದು ಸಾಧ್ಯ. ಆ ಕಾಲ ದೂರವೇನಿಲ್ಲ' ಎಂದು ತಿಳಿಸಿ, 'ಜಾಗ್ರತರಾಗಿರಬೇಕು ಮತ್ತು ತಕ್ಷಣ ಕಾರ್ಯ ಕೈಗೂಡಿಸಲು ಸಿದ್ಧರಿರಬೇಕು' ಎಂದು ಎಚ್ಚರಿಸಿದನು. ಐನ್‌ಸ್ಟೈನ್‌ನ ಸಲಹೆಯನ್ನು ಕಾರ್ಯಗತಗೊಳಿಸಲು ಎಫ್.ಡಿ.ಆರ್ 'ಮನ್‌ಹಾಟನ್ ಯೋಜನೆ' ಎನ್ನುವ ಹೆಸರಾಂತ ವಿಜ್ಞಾನಿಗಳಿಂದ ಕೂಡಿದ ಅತ್ಯಂತ ಗುಪ್ತವಾದ ಘಟಕವನ್ನು ಸ್ಥಾಪಿಸಿದನು. ಮಾನವ ಇತಿಹಾಸದಲ್ಲಿ ಅದುವರೆಗೆ ಕಂಡು ಕೇಳರಿಯದಂಥ ಒಂದು ಆಸ್ಫೋಟನೆಯಲ್ಲಿ ಹತ್ತಾರು ಸಾವಿರ ಜನರನ್ನು ಭಸ್ಮ ಮಾಡಿ, ಕಟ್ಟಡಗಳನ್ನು ನೆಲಸಮ ಮಾಡಿ, ಅಳಿದುಳಿದವರನ್ನು ಅರೆಜೀವಿಗಳನ್ನಾಗಿ ಮಾಡಿ, ಹುಟ್ಟಲಿರುವ ಜನಾಂಗವನ್ನು ವಿಕೃತಗೊಳಿಸಬಲ್ಲ ಮಾರಕಾಸ್ತ್ರವನ್ನು ತ್ವರಿತವಾಗಿ ಕಂಡು

ಹಿಡಿಯುವುದು ಈ ಗುಪ್ತ ಘಟಕದ ಗುರಿಯಾಗಿತ್ತು. ಜರ್ಮನ್ ವಿಜ್ಞಾನಿಗಳು ಇಂಥ ಅಸ್ತ್ರವನ್ನು ತಮಗಿಂತ ಮೊದಲೇ ಕಂಡು ಹಿಡಿದಾರು ಎನ್ನುವ ಭಯದಿಂದ ಮನ್‌ಹಾಟನ್ ಯೋಜನೆಯ ವಿಜ್ಞಾನಿಗಳು ಬಿಡುವಿಲ್ಲದೆ ದುಡಿದರು. ೧೯೪೨ರ ಡಿಸೆಂಬರ್ ೨ರಂದು ಚಿಕಾಗೋ ವಿಶ್ವವಿದ್ಯಾನಿಲಯದ ಡಾ. ಎನ್‌ರಿಕೊ ಫೆರ್ಮಿ (Enrico Fermi) ಮೊಟ್ಟ ಮೊದಲ ಬಾರಿಗೆ ಅಣುವಿನ ಸರಪಳಿ/ಸತತ ಪ್ರತಿಕ್ರಿಯೆಯನ್ನು (atomic chain reaction) ಉಂಟುಮಾಡುವುದರಲ್ಲಿ ಸಫಲನಾದನು. ಈ ಅದ್ಭುತ ಸಾಧನೆಯಿಂದಾಗಿ ಅಣುಬಾಂಬ್ ಬರಿಯ ಕಲ್ಪನೆಯಾಗದೆ, ಅದನ್ನು ಕೈಗೂಡಿಸುವ ಕಾಲವೂ ದೂರವೇನಿಲ್ಲ ಎನ್ನುವುದನ್ನು ವಿಜ್ಞಾನಿಗಳಿಗೆ ಮನದಟ್ಟು ಮಾಡಿಸಿತು. ಬಾಂಬ್ ತಯಾರಿಕೆಗೆ ಅಗತ್ಯವಾದ ಪ್ಲುಟೋನಿಯಮ್ ಉತ್ಪಾದಿಸಲು ಟೆನ್ನಸ್ಸೀ ಪ್ರಾಂತದ ಓಕ್‌ರಿಡ್ಜ್ ಮತ್ತು ವಾಷಿಂಗ್‌ಟನ್ ಪ್ರಾಂತದ ಹಾನ್‌ಫರ್ಡ್‌ಗಳಲ್ಲಿ ಬೃಹದಾಕಾರದ ಕಾರ್ಖಾನೆಗಳು ಸ್ಥಾಪನೆಯಾದವು. ಅದೇ ಸಮಯದಲ್ಲಿ ಭೌತಶಾಸ್ತ್ರಜ್ಞರ ಒಂದು ಗುಂಪು ನ್ಯೂ ಮೆಕ್ಸಿಕೊ ಪ್ರಾಂತದ ಲಾಸ್ ಅಲಮೋಸ್ ಪ್ರಯೋಗಶಾಲೆಯಲ್ಲಿ ಬಾಂಬ್ ಸಿದ್ಧಗೊಳಿಸಲು ಅಡ್ಡಿಯಾಗಿದ್ದ ವೈಜ್ಞಾನಿಕ ಮತ್ತು ತಾಂತ್ರಿಕ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ನಿರತರಾಗಿದ್ದರು. ಈ ವಿಜ್ಞಾನಿಗಳು ಡಾ. ರಾಬರ್ಟ್ ಓಪನ್‌ಹೈಮರ್‌ನ ನಿರ್ದೇಶನದಲ್ಲಿ ಕೆಲಸ ಮಾಡುತ್ತಿದ್ದರು.

೧೯೪೫ರ ಜುಲೈ ೧೬ರಂದು ಜಗತ್ತು ನವಯುಗಕ್ಕೆ ಕಾಲಿರಿಸಿತು – ಈ ಯುಗವೇ ಅಣುಶಕ್ತಿಯ ಯುಗ. ಅಂದಿನಿಂದ ಜಗತ್ತೇ ಬದಲಾಯಿತೆಂದು ಹೇಳಬಹುದು. ಇಂಥ ಒಂದು ಜಗದ್ವ್ಯಾಪಕ ಬದಲಾವಣೆ ಉಂಟುಮಾಡಿದ್ದು ನ್ಯೂ ಮೆಕ್ಸಿಕೋದ ಮರಳು ಗಾಡಿನಲ್ಲಿ ಆಸ್ಫೋಟನೆಗೊಂಡ ಅಣುಬಾಂಬ್. ಬಾಂಬ್ ನಿರ್ಮಾಪಕನಾದ ಓಪನ್ ಹೈಮರ್‌ನೇ ಆ 'ಮಾತಿಗೆ ನಿಲುಕದ ಶಕ್ತಿಯ' ಅದ್ಭುತ ಆವಿಷ್ಕಾರವನ್ನು ಕಂಡು ದಂಗಾಗಿ ಮೂರ್ಛೆಹೋದನಂತೆ! ಎಚ್ಚೆತ್ತ ಮೇಲೆ ಚೇತರಿಸಿಕೊಂಡು ಸುರಂಗದೊಳಗಿನ ತನ್ನ ವೀಕ್ಷಣಾಸ್ಥಾನಕ್ಕೆ ತಲುಪಿ ಕಂಡ ಪ್ರಳಯಾಗ್ನಿಯನ್ನು ಕುರಿತು ಅವನು ಉದ್ಗರಿಸಿದ 'ನನ್ನ ಮನಸ್ಸಿಗೆ ಹೊಳೆದಿದ್ದು ಭಗವದ್ಗೀತೆಯ ಒಂದು ಸಾಲು – 'ನಾನು ಮೃತ್ಯುಸ್ವರೂಪಿ ಜಗತ್ತನ್ನು ನುಚ್ಚು ನೂರು ಮಾಡುವವನು' ಲೋಕಪ್ರಸಿದ್ಧವಾಗಿದೆ.

ಅಣ್ವಸ್ತ್ರಧಾರಿಯಾದ ಅಮೆರಿಕ ಯುದ್ಧವನ್ನು ಕೊನೆಗಾಣಿಸಲು ನಿರ್ಧರಿಸಿತು. ಇದರ ತಯಾರಿ ನಡೆಯುತ್ತಿರುವಾಗ ಮತ್ತು ಯುದ್ಧಾನಂತರ ಈ ಪ್ರಪಂಚವನ್ನು ಹೇಗೆ ವ್ಯವಸ್ಥೆಗೊಳಿಸಬೇಕು ಎಂದು ಯೋಚಿಸುತ್ತಿರುವ ಸಮಯದಲ್ಲಿ ಎಫ್.ಡಿ.ಆರ್ ಮೆದುಳಿನ ರಕ್ತಸ್ರಾವದಿಂದ ನಿಧನ ಹೊಂದಿದನು. ಇದಾದದ್ದು ಜಾರ್ಜಿಯ ಸಂಸ್ಥಾನದ ವಾರ್ಮ್ ಸ್ಪ್ರಿಂಗ್ಸ್ (Warm Springs) ಎನ್ನುವ ಸ್ಥಳದಲ್ಲಿ, ೧೯೪೫ರ ಏಪ್ರಿಲ್ ೧೨ರಂದು. ಈ ಸಂದಿಗ್ಧ ಸಂದರ್ಭದ ಸಂಕೀರ್ಣತೆಯ ನಿರ್ವಹಣೆಯ ಜವಾಬ್ದಾರಿ ಉಪಾಧ್ಯಕ್ಷನಾಗಿದ್ದ ಹ್ಯಾರಿ ಟ್ರೂಮನ್ ಹೆಗಲ ಮೇಲೆ ಬಿದ್ದಿತು. ಅಮೆರಿಕದ ಇತಿಹಾಸದಲ್ಲಿ ಎಫ್.ಡಿ.ಆರ್

ಅತ್ಯಂತ ಜನಪ್ರಿಯ ಅಧ್ಯಕ್ಷನಾಗಿದ್ದನು. ನಾಲ್ಕು ಬಾರಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾಗಿ ದಾಖಲೆ ಸ್ಥಾಪಿಸಿದ ಇವನು ಮಹಾಮುಗ್ಗಟ್ಟಿನಿಂದ ಅಮೆರಿಕವನ್ನು ಮೇಲೆತ್ತಿ ಸಂಪದ್ಭರಿತವಾಗುವಂತೆ ಮಾಡಿದನು. ಇಂದಿಗೂ ಅವನ ಜನಪ್ರಿಯತೆ ಕಡಿಮೆಯಾಗಿಲ್ಲ.

ಹ್ಯಾರಿ ಟ್ರೂಮನ್ ಹುಟ್ಟಿದ್ದು ಮುಸ್ಸೋರ ಪ್ರಾಂತದಲ್ಲಿ. ಇವನು ಮೊದಲನೆಯ ಜಾಗತಿಕ ಯುದ್ಧದಲ್ಲಿ ಅಮೆರಿಕ ಸೇನೆಯ ಫಿರಂಗಿದಳದಲ್ಲಿ ಸೈನಿಕನಾಗಿದ್ದನು. ಯುದ್ಧಾನಂತರ ೧೯೨೦ರ ದಶಕದಲ್ಲಿ ರಾಜಕೀಯಕ್ಕೆ ಇಳಿಯುವ ಸಮಯದಲ್ಲೇ ಸಂಜೆ ಕಾನೂನು ಕಾಲೇಜಿನಲ್ಲಿ ಓದಿ ವಕೀಲವೃತ್ತಿಗೆ ತಯಾರಿ ನಡೆಸಿದನು. ವಕೀಲನಾಗದೆ ರಾಜಕಾರಣಿಯಾಗಿದ್ದು ಅವನ ಬದುಕಿನ ದಿಕ್ಕು ಬದಲಿಸಿದ ನಿರ್ಧಾರವಾಯಿತು. ರಾಜಕೀಯ ಕ್ಷೇತ್ರದಲ್ಲಿ ಅವನು ಕುಖ್ಯಾತ ಕಾನ್ಸಾಸ್ ಸಿಟಿ 'ಪೆಂಡರ್‌ಗಾಸ್ಟ್' (Pendergast) ಪುಢಾರಿಗಳ ರಾಜಕೀಯ ಯಂತ್ರದೊಡನೆ (political machine) ಸಹಕರಿಸಿದ್ದನೆಂದು ಪ್ರತೀತಿ ಇತ್ತು. ಆದರೆ ಅವನಿಗೆ ಭ್ರಷ್ಟಾಚಾರದ ಅಪಕೀರ್ತಿ ತಗುಲಲಿಲ್ಲ. ಒಂಬತ್ತು ವರ್ಷಗಳವರೆಗೆ ಜಿಲ್ಲಾ ನ್ಯಾಯಾಧೀಶ (County Judgeship) ನಾಗಿದ್ದನು. ನಂತರ ಸೆನೆಟ್‌ಗೆ ಆಯ್ಕೆಯಾಗಿ ೧೯೩೫ರಿಂದ ೧೯೪೫ರವರೆಗೆ ಸೆನೆಟರನಾಗಿದ್ದನು. ೧೯೪೫ರಲ್ಲಿ ಉಪಾಧ್ಯಕ್ಷನಾಗಿ ಆಯ್ಕೆಯಾಗಿ ಎಫ್.ಡಿ.ಆರ್ ನಿಧನಹೊಂದಿದ ಮೇಲೆ ರಾಜ್ಯಾಂಗದ ನಿಯಮದಂತೆ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡನು. ಅವನು ಉಪಾಧ್ಯಕ್ಷನಾಗಿ ಆಯ್ಕೆಗೊಂಡಿದ್ದು ಸೆನೆಟ್ ಭ್ರಷ್ಟಾಚಾರ ವಿಚಾರಣಾ ಸಮಿತಿಯಲ್ಲಿ ಸಮರ್ಥ ನಾಯಕತ್ವ ವಹಿಸಿದ್ದರಿಂದ.

ಅಧ್ಯಕ್ಷನಾಗಿದ್ದಾಗ ಟ್ರೂಮನ್ ಅಗೌರವದಿಂದ ನಡೆದುಕೊಂಡ ನಿದರ್ಶನಗಳು ಬೇಕಾದಷ್ಟಿವೆ – ಕೋಪಾವಿಷ್ಟ ಕಾಗದಗಳನ್ನು ಬರೆಯುವುದು ಮತ್ತು ತನಗೆ ಆಗದವರನ್ನು ಅವ್ಯಾಚ್ಯ ಪದಗಳಿಂದ ಟೀಕಿಸುವುದು ಇತ್ಯಾದಿ. ಹಠಮಾರಿತನ ಅವನಲ್ಲಿ ತೋರಿಬರುತ್ತಿದ್ದ ವಿಶಿಷ್ಟ ಗುಣ. ಅವನಿಗೆ ಅಗತ್ಯವೆಂದು ಅನ್ನಿಸಿದ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಅವಿರತವಾಗಿ ಪ್ರಯತ್ನಿಸಿ ಕೈಗೂಡಿಸುತ್ತಿದ್ದನು. ತಾನು ಅಧ್ಯಕ್ಷನಾದ ಮೇಲೆ ಎಫ್.ಡಿ.ಆರ್ ನೇಮಿಸಿದ ಅಧಿಕಾರಿಗಳನ್ನು ತೆಗೆದುಹಾಕಿ ತನಗೆ ಬೇಕಾದವರನ್ನು ಆ ಸ್ಥಾನಗಳಿಗೆ ನೇಮಕ ಮಾಡಿದನು. ಅಧ್ಯಕ್ಷ ಟ್ರೂಮನ್ ಕಾರ್ಮಿಕರ ಪರವಾದ ಮನೋಭಾವವುಳ್ಳವನಾಗಿದ್ದನು.

ಜಪಾನಿನೊಡನೆ ಯುದ್ಧವನ್ನು ಕೊನೆಗಾಣಿಸಬೇಕೆಂದು ಅತ್ತ ಅಧ್ಯಕ್ಷನ ಮೇಲೆ ಎಲ್ಲ ಕಡೆಗಳಿಂದ ಒತ್ತಡ ಬರತೊಡಗಿತು. ಇತ್ತ ತಾವು ಸೃಷ್ಟಿಸಿದ – ಸೀಸೆಯ ಮುಚ್ಚಳ ತೆಗೆದಾಗ ಅದರಲ್ಲಿ ಸೆರೆಯಾಗಿದ್ದ ದೈತ್ಯ ಬಿಡುಗಡೆಯಾಗಿ, 'ಏನಪ್ಪಣೆ!' ಎಂದು ಮೊಳಗಿದಾಗ ಏನೂ ಮಾಡಲು ತೋಚದೆ ಇದ್ದಂತಿದ್ದರು ಅಣು ವಿಜ್ಞಾನಿಗಳು. ಇದರಿಂದಾಗಿ ಅಣುಶಕ್ತಿಯ ಉಪಯೋಗದ ಬಗ್ಗೆ ಭಿನ್ನಾಭಿಪ್ರಾಯಗಳು ಉಂಟಾದವು. ಅದರ ವಿನಾಶಕಾರಕ ಶಕ್ತಿಯನ್ನು ಅರಿತಿದ್ದ ವಿಜ್ಞಾನಿಗಳು ಈ ಮಾರಕಾಸ್ತ್ರ ಏನು ಮಾಡಬಲ್ಲುದು

ಎಂದು ಪ್ರದರ್ಶಿಸಿದರೆ ಸಾಕು, ವೈರಿಗಳು ಯುದ್ಧ ನಿಲ್ಲಿಸುತ್ತಾರೆ – ಎಂದು ವಾದಿಸಿದರು. ಸೇನಾನಾಯಕರು ಅವರ ಸಲಹೆಯನ್ನು ನಿರಾಕರಿಸಿದರು. ನಿರಾಕರಿಸಲು ಅವರು ಕೊಟ್ಟ ಕಾರಣ: ನಿರ್ಮಾಣಗೊಂಡಿರುವುದು ಎರಡು ಅಣುಬಾಂಬ್‌ಗಳು ಮಾತ್ರ. ಅವು ತಯಾರಾಗಿರುವುದು ಯಾರಿಗೂ ತಿಳಿಯದು. ಪ್ರದರ್ಶನ ಏರ್ಪಡಿಸುವುದರಲ್ಲಿ ಇರುವ ಗಂಡಾಂತರವೆಂದರೆ, ಗುಟ್ಟು ರಟ್ಟಾಗುವುದಲ್ಲದೆ ದುರದೃಷ್ಟದಿಂದ ತಾಂತ್ರಿಕ ತೊಂದರೆಯಿಂದಾಗಿ ಬಾಂಬ್ ಆಸ್ಫೋಟಗೊಳ್ಳದಿದ್ದರೆ, ಅದರಿಂದಾಗಿ ತಾವು ಅನುಭವಿಸಬೇಕಾದ ಅವಮಾನ. ಆದ್ದರಿಂದ ವೈರಿಗೆ ತಿಳಿಯದಂತೆ ಬಾಂಬ್ ಹಾಕುವುದರಿಂದ ವರಿಯನ್ನು ಶರಣಾಗುವಂತೆ ಮಾಡುವುದಲ್ಲದೆ ಅಣುಬಾಂಬ್ ಆಸ್ಫೋಟನೆಯ ಪರಿಣಾಮವನ್ನು ತಿಳಿಯಬಹುದು. ಹಾಗೆಯೇ ನಿರ್ಣಯಕ್ಕೆ ಬಂದು ಬಾಂಬ್ ಹಾಕಲು ನಾಲ್ಕು ಪಟ್ಟಣಗಳನ್ನು ಆಯ್ಕೆ ಮಾಡಿದರು. ಜಪಾನಿನ ಪುರಾತನ ರಾಜಧಾನಿ ಕ್ಯೋಟೋವನ್ನು ಸಂಸ್ಕೃತಿ, ಕಲೆ ಮತ್ತು ಮತಧರ್ಮದ ಕೇಂದ್ರ ಎನ್ನುವ ಕಾರಣದಿಂದ ಆಯ್ಕೆ ಮಾಡಲಿಲ್ಲ. ಆಯ್ಕೆಯಾದ ನಗರಗಳಲ್ಲಿ ಯುದ್ಧಕ್ಕೆ ಬೇಕಾಗುವ ಸಾಧನ ಸಲಕರಣೆಗಳ ಉತ್ಪಾದನ ಕೇಂದ್ರವಾಗಿದ್ದ ಹಿರೋಶಿಮಾ (Hiroshima) ನಗರದ ಮೇಲೆ ಮೊದಲನೆಯ ಬಾಂಬ್ ಹಾಕಲು ನಿರ್ಧರಿಸಿದರು.

೧೯೪೫ರ ಜುಲೈ ೨೬ರಂದು ಮಿತ್ರರಾಷ್ಟ್ರಗಳ ಮೂರು ಮುಖ್ಯ ನಾಯಕರು ಜರ್ಮನಿಯ ಪಾಟ್ಸ್‌ಡಾಮ್‌ನಲ್ಲಿ ಸಭೆ ಸೇರಿದ್ದರು. ಅವರು ಜಪಾನೀಯರಿಗೆ ಬೇಷರತ್ತು ಶರಣಾಗತರಾಗಬೇಕು ಇಲ್ಲವೆ ಸರ್ವನಾಶಕ್ಕೆ ಸಿದ್ಧರಾಗಬೇಕು ಎನ್ನುವ ಎಚ್ಚರಿಕೆ ಸಂದೇಶ ಕಳುಹಿಸಿದರು. ಆಗಸ್ಟ್ ೩ರವರೆಗೆ ಅವಧಿ ಕೊಟ್ಟು ಅಷ್ಟರಲ್ಲಿ ಜಪಾನ್ ಶರಣಾಗದಿದ್ದರೆ ಅಣುಬಾಂಬ್ ಹಾಕುವಂತೆ ಟ್ರೂಮನ್ ತನ್ನ ದಂಡನಾಯಕರಿಗೆ ನಿರ್ದೇಶಿಸಿದನು. ಜಪಾನಿಗೆ ನೀಡಿದ ಅವಧಿ ಮೀರಿತು; ಜಪಾನ್ ಶರಣಾಗುವ ಚಿಹ್ನೆಗಳೂ ತೋರಲಿಲ್ಲ.

‘ನಾನು ಮೃತ್ಯು! ಜಗತ್ ವಿನಾಶಕಾರಿ, ಸರ್ವವಸ್ತುಗಳ ಧ್ವಂಸಕಾರಿ!’

– ಭಗವದ್ಗೀತೆ ೧೧:೩೨

೧೯೪೫ರ ಆಗಸ್ಟ್ ೬ರಂದು ಬೆಳಿಗ್ಗೆ ಹಿರೋಶಿಮಾ ನಗರ ನಿದ್ದೆಯಿದೆದ್ದು ತಮ್ಮ ದಿನಚರಿಯಲ್ಲಿ ತೊಡಗಿದ್ದರು. ಶುಭ್ರಾಕಾಶದಲ್ಲಿ ಸೂರ್ಯ ಬೆಳಗಿನ ಬಾಲಕಿರಣಗಳ ವರ್ಷ ಕರೆದಿದ್ದನು. ತಂಗಾಳಿ ತೀಡಿ, ಹಕ್ಕಿಗಳು ಹಾಡಿ ನೆಮ್ಮದಿ ನೆಲಸಿತ್ತು. ಜಪಾನಿನ ಸಮೀಪದ ಟಿನಿಯನ್ (Tinian) ದ್ವೀಪದಿಂದ ಅಮೆರಿಕದ ಬಿ-೨೯ ವಿಮಾನ – 'ಎನೋಲ ಗೇ', ಚಾಲಕ ಕರ್ನಲ್ ಪಾಲ್ ಟಿಬ್ಬೆಟ್ಸ್ ಮತ್ತು ಅವನ ಸಹಾಯಕರನ್ನು ಹೊತ್ತು ಗಗನಕ್ಕೆ ಹಾರಿ ಹಿರೋಶಿಮಾ ತಲುಪಿತು. ಮೃತ್ಯು ವಿಮಾನರೂಪದಲ್ಲಿ ತಮ್ಮೆಡೆಗೆ ಬರುತ್ತಿದೆ ಎಂದು ಹಿರೋಶಿಮಾ ನಾಗರಿಕರು ತಿಳಿಯದೆ ಹೋದರು. ನಿತ್ಯ ವಿಮಾನ ದಾಳಿಯನ್ನು ಅನುಭವಿಸುತ್ತಿದ್ದ ಅವರು ಎಂದಿನಂತೆ ಇದು ಕೂಡ ಎಂದು ಭಾವಿಸಿದ್ದರು.

ಘಂಟೆ ೯:೧೫ – ಅಂತರಿಕ್ಷ ಹೋಳೆದಂತಾಗಿ, ಬೆಂಕಿಯ ಮಳೆ ಸುರಿದು ಕೆಲವೇ ಕ್ಷಣಗಳಲ್ಲಿ ಹಿರೋಶಿಮಾ ನಗರದ ನಾಲ್ಕು ಚದರ ಮೈಲಿ ಪ್ರದೇಶವನ್ನು ಸಂಪೂರ್ಣವಾಗಿ ಅಳಿಸಿ ಹಾಕಿತು! ರಕ್ಷಣಾಪಡೆಗಳ ಮುಖ್ಯ ಕೇಂದ್ರವನ್ನು ನಾಶಗೊಳಿಸಿ ಅಲ್ಲಿ ಬೀಡುಬಿಟ್ಟಿದ್ದ ಜಪಾನಿನ ಎರಡನೆಯ ಸೈನ್ಯಪಡೆಯ ಹೆಚ್ಚು ಕಡಿಮೆ ಎಲ್ಲ ಸೈನಿಕರನ್ನು ಕೊಂದು, ಸ್ವಲ್ಪ ಸಮಯವೇ ಮುಂಚೆ ಲವಲವಿಕೆಯ ಜನರಿಂದ ತುಂಬಿದ್ದ ನಗರ ಸ್ಮಶಾನವಾಯಿತು. ಬದುಕಿ ಉಳಿದವರು ಪ್ರೇತಗಳಂತೆ ದಿಕ್ಕುಗೆಟ್ಟು ಅಲೆಯತೊಡಗಿದರು. ಸತ್ತವರ ಸಂಖ್ಯೆ ೬೦ ಸಾವಿರಕ್ಕೂ ಹೆಚ್ಚಾಗಿತ್ತು. ಬದುಕಿಕೊಂಡವರಲ್ಲಿ ಸುಟ್ಟಗಾಯದ ಅಸಾಧ್ಯ ನೋವಿನಿಂದ ನರಳುತ್ತಿದ್ದು, ಚರ್ಮ ಅಲ್ಲಲ್ಲಿ ಸುಲಿದು ಪೊರೆಯಂತೆ ನೇತಾಡುತ್ತಿತ್ತು. ಅಂದು ಬೆಳಿಗ್ಗೆ ಕ್ಯಾಪ್ಟನ್ ಮಿಟ್ಸುವೋ ಫುಚಿಡ (Mitsuo Fuchida) – ಪರ್ಲ್ ಹಾರ್ಬರ್ ಬಾಂಬ್ ದಾಳಿಯನ್ನು ನಿರ್ದೇಶಿಸಿದವನು – ಹಿರೋಶಿಮಾ ವಿಮಾನನಿಲ್ದಾಣದಲ್ಲಿ ತನ್ನ ವಿಮಾನವನ್ನು ಇಳಿಸಿ ಹೊರಬಂದಾಗ ಕಂಡಿದ್ದು – 'ಆಗ ತಾನೇ ನರಕದಿಂದ ಬಂದವರಂತೆ – ಚರ್ಮ ಸುಲಿದು ರಕ್ತಸಿಕ್ತರಾದ, ಅಡಿಯಿಂದ ಮುಡಿಯವರೆಗೆ ಸುಟ್ಟು ಕಪ್ಪಾದವರು, ಓಡಾಡುವ ಎಲುಬು ಗೂಡುಗಳಂತೆ ಭಯಂಕರವಾಗಿ ಕಾಣುವ ಜನರು. ಏನೂ ಗಾಯಗಳಾಗದೆ ಇರುವವರೂ ಕೂಡ ಅಸ್ವಸ್ಥರಾಗಿ ಅಸು ನೀಗುತ್ತಿದ್ದರು. ಇದು ರೇಡಿಯೋ ವಿಕಿರಣದ (radiation) ಪರಿಣಾಮ. ಇದಲ್ಲದೆ ಈ ವಿಕಿರಣ ಮುಂದಿನ ಪೀಳಿಗೆಯನ್ನೂ ತಟ್ಟುತ್ತದೆ. ಮಕ್ಕಳು ಹುಟ್ಟುವಾಗಲೇ ಊನಗೊಳ್ಳುವ ಸಾಧ್ಯತೆ ಹೆಚ್ಚುತ್ತದೆ. ಅಣುಬಾಂಬ್ ದಾಳಿ ಯಶಸ್ವಿಯಾದ ಸುದ್ದಿ ಕೇಳಿ ಅಮೆರಿಕನ್ನರು ಸಂತೋಷದಿಂದ ಕುಣಿದಾಡಿದರು. ಯುದ್ಧ ಚುಟ್ಟುಕದಲ್ಲಿ ಮುಗಿಯುತ್ತದೆ ಎಂದು ಆನಂದಿಸಿದರು. ಮೊದಲಿಗೆ ಅಣುಶಕ್ತಿ ವರದಾನವಾಗಿ ಕಂಡಿದ್ದು ಕಾಲಾಂತರದಲ್ಲಿ ಅದರ ದುಷ್ಪರಿಣಾಮಗಳ ಅರಿವಾಗಿ ಈ 'ಅಣುಯುಗ' (atomic age) ಯಾವ ಕಂಟಗಳನ್ನು ತರಲಿದೆಯೋ ಎಂದು ಚಿಂತೆ ಗೀಡಾದರು.

ಹಿರೋಶಿಮಾದ ಹತ್ಯಾಕಾಂಡ ಮುಗಿದ ಮೂರು ದಿನಗಳೊಳಗೆ ರಷ್ಯಾ ಅವಸರದಿಂದ ಜಪಾನ್ ಮೇಲೆ ಯುದ್ಧ ಸಾರಿತು. ಇದಾದ ಕೆಲವು ಘಂಟೆಗಳಲ್ಲಿ ಆಗಸ್ಟ್ ೯ರ ಮಧ್ಯಾಹ್ನದ ಸಮಯದಲ್ಲಿ ರೇವು ನಗರ (port city) ನಾಗಸಾಕಿಯ ಮೇಲೆ ಎರಡನೆಯ ಅಣುಬಾಂಬ್ ಸಿಡಿಯಿತು. ಈ ಆಸ್ಫೋಟನೆ ೩೬ ಸಾವಿರ ಜನರನ್ನು ಆಹುತಿ ತೆಗೆದುಕೊಂಡಿತು. ಅಂದಿನ ರಾತ್ರಿ ಜಪಾನಿನ ಚಕ್ರವರ್ತಿ ತನ್ನ ಸಚಿವಮಂಡಳಿಗೆ ಅನಿವಾರ್ಯದ ಕಾರಣದಿಂದಾಗಿ ಶರಣಾಗತರಾಗಲು ಒಪ್ಪಿಗೆ ನೀಡಬೇಕೆಂದು ನಿರ್ದೇಶಿಸಿದನು. ಜಪಾನ್ ಹಾಕಿದ ಒಂದೇ ಒಂದು ಷರತ್ತು – ಚಕ್ರವರ್ತಿ ಹಾಗೆಯೇ ಮುಂದುವರಿಯಬೇಕೆನ್ನುವುದು. ಶರಣಾಗತಿ ಸುಲಭವಾಗಿ ನಡೆದು ಅಧಿಕಾರ ವರ್ಗಾವಣೆ ವ್ಯವಸ್ಥಿತವಾಗಿ ನಡೆಯುವ ದೃಷ್ಟಿಯಿಂದ ಅಮೆರಿಕ ಈ ಷರತ್ತನ್ನು ಒಪ್ಪಿಕೊಂಡಿತು. ಜಪಾನಿನ ಶರಣಾಗತಿಯನ್ನು, ಶತಮಾನಗಳ ಸಂಪ್ರದಾಯವನ್ನು ಮುರಿದು ಚಕ್ರವರ್ತಿ ಸ್ವತಃ ರೇಡಿಯೋ ಮೂಲಕ ಜನರಿಗೆ ತಿಳಿಸಿದನು.

ಚಕ್ರವರ್ತಿಯೇ ಇದನ್ನು ಒಪ್ಪಿಕೊಂಡಿದ್ದರೂ ಕೆಲವರು ಅದನ್ನು ನಿರಾಕರಿಸಿ ಶರಣಾಗತಿಯನ್ನು ತಪ್ಪಿಸಲು ಅರಮನೆಯಲ್ಲಿ ಪಿತೂರಿ ನಡೆಸಲು ಪ್ರಯತ್ನಿಸಿದರು. ಇದನ್ನು ಹತ್ತಿಕ್ಕಿ ಶರಣಾಗತಿಯನ್ನು ಒಪ್ಪಿಸಲು ವ್ಯವಸ್ಥೆ ಮಾಡಲಾಯಿತು. ೧೯೪೫ರ ಸೆಪ್ಟೆಂಬರ್ ೨ರಂದು ಜನರಲ್ ಮೆಕಾರ್ಥರ್ ಮತ್ತು ಮಿತ್ರರಾಷ್ಟ್ರಗಳ ಪ್ರತಿನಿಧಿಗಳು ಸಮರನೌಕೆ 'ಮಿಸ್ಸೋರಿ'ದ ಮೇಲೆ ಸೇರಿ ಜಪಾನಿನ ಅಧಿಕೃತ ಶರಣಾಗತಿಯನ್ನು ಸ್ವೀಕರಿಸಿದರು. ಮೆಕಾರ್ಥರ್ ಜಪಾನಿನಲ್ಲಿ ಉಳಿದುಕೊಂಡು ಯುದ್ಧಾನಂತರದ ಸಮಸ್ಯೆಗಳ ಪರಿಹಾರ ಯೋಜನೆಯನ್ನು ಪರ್ಯಾಲೋಚಿಸತೊಡಗಿದನು. ಜಪಾನಿನ ತಾತ್ಕಾಲಿಕ ಆಡಳಿತ ಮತ್ತು ಪುನರ್‌ನಿರ್ಮಾಣಕ್ಕಾಗಿ ಮಿತ್ರರಾಷ್ಟ್ರಗಳ ಸಮಿತಿಯೊಂದನ್ನು ಸ್ಥಾಪಿಸಿದರು. ೧೯೪೬ರಲ್ಲಿ ಜಪಾನ್ ಪ್ರಜಾರಾಜ್ಯ ಸ್ಥಾಪನೆ ಮಾಡುವ ಸಲುವಾಗಿ ರಾಜ್ಯಾಂಗವನ್ನು ರಚಿಸಲಾಯಿತು. ಇದಕ್ಕಾಗಿ ಚುನಾವಣೆಗಳು ನಡೆಯುವ ವ್ಯವಸ್ಥೆ ಮಾಡಿದರು. ಇದೇ ಸಮಯದಲ್ಲಿ ಭೂಸುಧಾರಣೆ ಜಾರಿಗೆ ಬಂತು. ೧೯೫೨ರಲ್ಲಿ ಮಿತ್ರರಾಷ್ಟ್ರಗಳ ಮತ್ತು ಜಪಾನಿನ ನಡುವೆ ಶಾಂತಿಕರಾರು ಜಾರಿಗೆ ಬಂದು ಅಮೆರಿಕ ತನ್ನ ಸೈನ್ಯವನ್ನು ಜಪಾನಿನಲ್ಲಿ ನೆಲಸಲು ಅನುಮತಿ ಪಡೆಯಿತು.

ಎರಡನೆಯ ಜಾಗತಿಕ ಯುದ್ಧದ ರುದ್ರನಾಟಕ ಕೊನೆಗೊಂಡು ರಂಗದ ಮೇಲೆ ಪರದೆ ಬಿದ್ದಿತು. ಈ ಹತ್ಯಾಕಾಂಡದ ಪರಿಣಾಮ – ಸಾವು ನೋವು, ಖಾಸಗಿ ಮತ್ತು ಸಾರ್ವಜನಿಕ ಆಸ್ತಿ ಪಾಸ್ತಿಗಳ ಅಪಾರವಾದ ವಿನಾಶ – ಇವುಗಳ ಸಂಖ್ಯೆಯನ್ನು ಊಹಿಸು ವುದೂ ದುಸ್ಸಾಧ್ಯ. ಆದಾಗ್ಯೂ ಅಂದಾಜು ಲೆಕ್ಕದ ಪ್ರಕಾರ – ಸತ್ತ ಸೈನಿಕರ ಸಂಖ್ಯೆ ೧೭ ಮಿಲಿಯನ್; ಸತ್ತ ನಾಗರಿಕರ ಸಂಖ್ಯೆ ೧೮ ಮಿಲಿಯನ್‌ಗಿಂತಲೂ ಹೆಚ್ಚಿಗೆ. ಸೈನ್ಯ, ವಾಯುಪಡೆ ಮತ್ತು ನೌಕಾದಳಗಳಿಗೆ ಉಂಟಾದ ನಷ್ಟ ಕೋಟ್ಯಾಂತರ ಡಾಲರಗಳು! ಆಸ್ತಿಪಾಸ್ತಿಗಳಿಗೆ ಆದ ನಷ್ಟ ಇದರ ಎರಡು ಪಟ್ಟು. ಸೋವಿಯೆಟ್ ಇಕ್ಕೂಟ ಎಲ್ಲಾ ದೇಶಗಳಿಗಿಂತ ಹೆಚ್ಚು ಸಾವು ನೋವು ಮತ್ತು ಕಷ್ಟ ನಷ್ಟಗಳನ್ನು ಅನುಭವಿಸಿತು. ಅವರಲ್ಲಿ ಸತ್ತ ಸೈನಿಕರ ಸಂಖ್ಯೆ ೬ ಮಿಲಿಯನ್‌ಗಳಿಗಿಂತ ಹೆಚ್ಚು; ಸತ್ತ ಪ್ರಜೆಗಳ ಸಂಖ್ಯೆ ೧೦ ಮಿಲಿಯನ್‌ಗಳಿಗಿಂತ ಹೆಚ್ಚು, ಮನೆಮಠಗಳನ್ನು ಕಳೆದುಕೊಂಡು ನಿರ್ಗತಿಕರಾದವರ ಸಂಖ್ಯೆ ೨೫ ಮಿಲಿಯನ್‌ಗೂ ಮೀರಿತ್ತು. ಈ ಯುದ್ಧದಲ್ಲಿ ಅಮೆರಿಕ ನಡೆಸಿದ ಎಲ್ಲಾ ಯುದ್ಧಗಳಿಗಿಂತ ಹೆಚ್ಚು ಹಣ ಖರ್ಚು ಮಾಡಬೇಕಾಯಿತು. ಮಿತ್ರರಾಷ್ಟ್ರಗಳಿಗೆ ಹೋಲಿಸಿ ದರೆ ಅಮೆರಿಕನ್ನರ ಸಾವು ನೋವು ಮತ್ತು ಆಸ್ತಿ ಪಾಸ್ತಿಗಳಿಗೆ ಉಂಟಾದ ನಷ್ಟ ಹೆಚ್ಚಾಗಿರಲಿಲ್ಲ. ಅಮೆರಿಕ ದೇಶದ ಮೇಲೆ (ಅಮೆರಿಕದ ಸಮೀಪದ ಹವಾಯಿ ದ್ವೀಪವನ್ನು ಬಿಟ್ಟು) ಯೂರೋಪಿನಲ್ಲಾದಂತೆ ವಿಮಾನ ದಾಳಿ ನಡೆಯಲಿಲ್ಲ.

ಯುದ್ಧ ಮುಗಿದಿದ್ದು ಅಮೆರಿಕ ಹೊಸಯುಗಕ್ಕೆ ಕಾಲಿಡಲು ಕಾರಣವಾಯಿತು. ಯುದ್ಧಾನಂತರ ಅಮೆರಿಕದ ಪ್ರಾಬಲ್ಯ ಹೆಚ್ಚುತ್ತ ಹೋಯಿತು. ಯುದ್ಧ ಜಗತ್ತಿನ ಇತರ

ಪ್ರಾಬಲ ರಾಷ್ಟ್ರಗಳನ್ನು ದುರ್ಬಲಗೊಳಿಸಿತ್ತು. ಆದ್ದರಿಂದ ಅಮೆರಿಕ ಆರ್ಥಿಕವಾಗಿ ಮತ್ತು ಸೇನಾಬಲದಲ್ಲಿ ಜಗತ್ತಿನ ಮಹಾ ಶಕ್ತಿಯುತ (super power) ರಾಷ್ಟ್ರವಾಯಿತು.

ಅತ್ತ ಯೋರೋಪಿನಲ್ಲಿ ಸೋವಿಯೆಟ್ ಒಕ್ಕೂಟ ಯುದ್ಧದಲ್ಲಿ ಅಪಾರ ಪ್ರಾಣಹಾನಿ ಮತ್ತು ಆರ್ಥಿಕ ನಷ್ಟದಿಂದ ಜರ್ಜರಿತವಾದರೂ ಹೊಸ ಪ್ರಾಂತಗಳನ್ನು ಆಕ್ರಮಿಸಿ ಕೊಂಡಿದ್ದರಿಂದ ಯೂರೋಪಿನಲ್ಲಿ ಪ್ರಬಲ ರಾಷ್ಟ್ರವಾಗಿ ಬೆಳೆಯಿತು.

ಅಧ್ಯಕ್ಷ ಟ್ರೂಮನ್ ಮತ್ತು ಶೀತಲ ಸಮರದ ಸಂವತ್ಸರಗಳು

೧೯೪೫ರ ಏಪ್ರಿಲ್ ತಿಂಗಳಲ್ಲಿ ಎಫ್.ಡಿ.ಆರ್ ಮರಣಾನಂತರ ಹ್ಯಾರಿ ಟ್ರೂಮನ್ ಅವನ ಸ್ಥಾನವನ್ನು ವಹಿಸಿಕೊಳ್ಳುವುದಕ್ಕೆ ಅಸಮರ್ಥನಾಗಿ ತೋರಿಬಂದನು. ಅವನು ಉಪಾಧ್ಯಕ್ಷನಾಗಿದ್ದ ನಾಲ್ಕು ತಿಂಗಳಲ್ಲಿ ಎಫ್.ಡಿ.ಆರ್‌ನ ನಂಬಿಕೆಯ ಸಲಹೆಗಾರರ ವೃತ್ತದ ಹೊರಗಿದ್ದನು. ಎಫ್.ಡಿ.ಆರ್ ತನ್ನ ಉಪಾಧ್ಯಕ್ಷನಿಗೂ ಮನ್‌ಹಾಟನ್ ಯೋಜನೆಯ ಬಗ್ಗೆ ಏನನ್ನೂ ತಿಳಿಸಿರಲಿಲ್ಲ. ಅಧ್ಯಕ್ಷತೆ ವಹಿಸಿಕೊಂಡ ದಿನದಿಂದಲೇ ಟ್ರೂಮನ್ ತುರ್ತು ನಿರ್ಣಯಗಳನ್ನು ಮತ್ತು ಅಣುಬಾಂಬ್ ಉಪಯೋಗದ ಭಯಾನಕ ನಿರ್ಧಾರಗಳನ್ನು ಕೈಗೊಳ್ಳಬೇಕಾಯಿತು. ಅವನು ಪ್ರಾಮಾಣಿಕ ವ್ಯಕ್ತಿ; ಇದ್ದುದನ್ನು ಇದ್ದ ಹಾಗೆ ನೇರವಾಗಿ ಹೇಳುವ, ಕಡ್ಡಿ ಮುರಿದಂತೆ ಮಾತನಾಡುವ ಸ್ವಭಾವದವನಾಗಿದ್ದನು. ಅಧ್ಯಕ್ಷನಾದ ಮೇಲೆ ಅವನು ಎದುರಿಸಬೇಕಾದ, ಕೂಡಲೇ ಪರಿಹರಿಸಬೇಕಾದ ಆಂತರಿಕ ಸಮಸ್ಯೆಗಳು ಸವಾಲಾದವು. ಇವುಗಳಲ್ಲಿ ಮುಖ್ಯವಾದುದು ಯುದ್ಧಕಾಲದ ಆರ್ಥಿಕ ವ್ಯವಸ್ಥೆಯನ್ನು ಶಾಂತಿಕಾಲಕ್ಕೆ ತಕ್ಕಂತೆ ಪರಿವರ್ತಿಸಿಕೊಳ್ಳುವುದಾಗಿತ್ತು. ೧೯೪೫ರಲ್ಲಿ ಯುದ್ಧಕ್ಕೆ ಹೋಗಿದ್ದ ಐದು ಮಿಲಿಯನ್ ಸೈನಿಕರು ವಾಪಸ್ಸು ಬಂದು ಕೆಲಸ ಹುಡುಕತೊಡಗಿದ್ದರು. ಅಪಾರ ಸಂಖ್ಯೆಯಲ್ಲಿ ಅವಕಾಶಗಳನ್ನು ಒದಗಿಸುವುದು ಸಾಮಾನ್ಯ ಕೆಲಸವಾಗಿರಲಿಲ್ಲ. ಈ ಸಮಸ್ಯೆಯನ್ನು ಬಗೆಹರಿಸಲು ಟ್ರೂಮನ್ ತನ್ನ ೨೧ ಅಂಶಗಳ ಯೋಜನೆಯನ್ನು ಮಂಡಿಸಿದನು. ಈ ಯೋಜನೆ 'ಹೊಸ ಹಂಚಿಕೆ'ಯನ್ನು ಹೋಲುತ್ತಿತ್ತು. ಆ ಸಮಯದಲ್ಲಿ ಕಾಂಗ್ರೆಸ್ ಸಂಪ್ರದಾಯಸ್ಥ ರಿಪಬ್ಲಿಕನ್ನರು ಮತ್ತು ದಕ್ಷಿಣದ ಡೆಮೊಕ್ರಾಟರು ಸೇರಿ ಆಗಿದ್ದ ಸಮ್ಮಿಶ್ರಣವಾಗಿತ್ತು. ಈ ಗುಂಪು ಪ್ರಭಾವಶಾಲಿಯಾಗಿದ್ದು ಕಾಂಗ್ರೆಸ್‌ನ್ನು ಕೈವಶ ಮಾಡಿಕೊಂಡಿತ್ತು. ಟ್ರೂಮನ್ ಮಂಡಿಸಿದ ೨೧ ಅಂಶಗಳ ಯೋಜನೆಯ ಎಲ್ಲ ಮಸೂದೆಗಳನ್ನು ಸಮ್ಮಿಶ್ರ ಕಾಂಗ್ರೆಸ್ ನಿರಾಕರಿಸಿತು. ನಿರಾಕರಿಸಲ್ಪಟ್ಟ ಈ ಯೋಜನೆ ಮುಂದೆ ೧೯೪೯ರಲ್ಲಿ ಟ್ರೂಮನ್ ಯೋಜಿಸಿದ ನ್ಯಾಯವಾದ ಹಂಚಿಕೆಗೆ (Fair Deal) ಮೂಲಾಧಾರವಾಯಿತು.

ಯುದ್ಧ ಉತ್ಪಾದನೆಯನ್ನು ಹೆಚ್ಚಿಸಿ ಆರ್ಥಿಕ ಮುಗ್ಗಟ್ಟನ್ನು ತಡೆಗಟ್ಟಿತ್ತು. ಯುದ್ಧಾನಂತರ ಆರ್ಥಿಕ ವ್ಯವಸ್ಥೆ ಮತ್ತೆ ಹಣದ ಮುಗ್ಗಟ್ಟಿಗೆ ಒಳಗಾಗಬಹುದೆಂದು ಜನ ಭಯಪಟ್ಟರು. ಆದರೆ ಅಂಥ ಪರಿಸ್ಥಿತಿ ಉಂಟಾಗಲಿಲ್ಲ. ನಿತ್ಯಬಳಕೆಯ ವಸ್ತುಗಳಿಗೆ ಬೇಡಿಕೆ ಹೆಚ್ಚಿ

ಅವುಗಳ ಉತ್ಪಾದನ ಪ್ರಮಾಣವನ್ನು ಹೆಚ್ಚಿಸಿತು. ಯುದ್ಧ ಕಾಲದಲ್ಲಿ ವಿಧಿಸಿದ್ದ ತೆರಿಗೆಗಳನ್ನು ತೆಗೆದು ಹಾಕಿದುದರಿಂದ ಮತ್ತೆ ಸುಲಭವಾಗಿ ಸಾಲ ದೊರೆಯುವಂತೆ ಮಾಡಿದುದರಿಂದ ಹಣದ ಚಲಾವಣೆ ಹೆಚ್ಚಿ ಅರ್ಥಿಕ ವ್ಯವಸ್ಥೆಯನ್ನು ಭದ್ರಪಡಿಸಿತು. ೧೯೪೬ರಲ್ಲಿ ಜಾರಿಗೆ ಬಂದ 'ಉದ್ಯೋಗ ಕಾನೂನು' ಆರ್ಥಿಕ ವ್ಯವಸ್ಥೆಯು ಅಪಾಯಕರ ರೀತಿಯಲ್ಲಿ ಮೇಲೆ ಕೆಳಗೆ ತುಯ್ದಾಡುವುದನ್ನು ಹತೋಟಿಗೆ ತರುವ ಅಧಿಕಾರವನ್ನು ಸರ್ಕಾರಕ್ಕೆ ವಹಿಸಿತು. ಹಣದ ಮುಗ್ಗಟ್ಟಿನ ಭಯ ಕಡಿಮೆ ಆದಂತೆಲ್ಲ ಹಣದುಬ್ಬರದ ಭಯ ಹೆಚ್ಚುತ್ತ ಹೋಯಿತು. ಯುದ್ಧ ಕಾಲದಲ್ಲಿ ವಸ್ತುಗಳ ಬೆಲೆ ಮತ್ತು ಕಾರ್ಮಿಕರ ವೇತನಗಳು ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿದ್ದವು. ನಿಯಂತ್ರಣಗಳನ್ನು ತೆಗೆದ ಮೇಲೆ ಬೆಲೆ ಏರಿಕೆ ಮತ್ತು ವೇತನದ ಹೆಚ್ಚಳ ಸಂಭವಿಸುವ ಸಾಧ್ಯತೆ ಜನರಲ್ಲಿ ಹೆದರಿಕೆ ಹುಟ್ಟಿಸಿತು. ಹಣದುಬ್ಬರವನ್ನು ತಡೆಗಟ್ಟಲು ಟ್ರೂಮನ್ ಯುದ್ಧಕಾಲದಲ್ಲಿ ಸ್ಥಾಪಿಸಿದ್ದ 'ಬೆಲೆ ನಿರ್ವಹಣಾ ಇಲಾಖೆ'ಯ ಅವಧಿಯನ್ನು ಮುಂದುವರಿಸಲು ನಿರ್ಧರಿಸಿ ಈ ಸೂಚನೆಯನ್ನು ಮಂಡಿಸಿದನು. ಆದರೆ ಕಾಂಗ್ರೆಸ್ ವ್ಯಾಪಾರಿಗಳ ಮತ್ತು ರೈತರ ಪರ ವಹಿಸಿ, ಬೆಲೆ ಏರಿಕೆಯನ್ನು ಸಮ್ಮತಿಸಿತು. ಅಧ್ಯಕ್ಷ ಮತ್ತು ಕಾಂಗ್ರೆಸ್ ನಡುವಣ ಭಿನ್ನಾಭಿಪ್ರಾಯಗಳಿಂದ ಬೆಲೆ ನಿಯಂತ್ರಣ ಸಾಧ್ಯವಾಗಲಿಲ್ಲ. ಪರಿಣಾಮವಾಗಿ ಬದುಕಿನ ವೆಚ್ಚ (cost of living) – ಇದು ಹಣದುಬ್ಬರದ ಪ್ರಮಾಣವನ್ನು ಸೂಚಿಸುತ್ತದೆ – ೧೯೪೬ ಮತ್ತು ೧೯೪೮ರ ಅವಧಿಯಲ್ಲಿ ಶೇಕಡಾ ೨೫ರಷ್ಟು ಏರಿತು.

ಟ್ರೂಮನ್ ಬೆಲೆ ನಿಯಂತ್ರಣವನ್ನು ಜಾರಿಗೆ ತರುವ ಪ್ರಯತ್ನ ಮಾಡುತ್ತಿರುವಾಗಲೇ ಕಾರ್ಮಿಕರು ವೇತನ ಹೆಚ್ಚಿಸಬೇಕೆಂದು ಒತ್ತಾಯ ಮಾಡತೊಡಗಿದರು. ಬೆಲೆ ಏರಿಕೆಗೆ ತಕ್ಕಹಾಗೆ ವೇತನವೂ ಏರಬೇಕೆನ್ನುವುದು ಅವರ ಮುಖ್ಯ ಬೇಡಿಕೆಯಾಗಿತ್ತು. ಆದರೆ ವೇತನ ಹೆಚ್ಚಿಸಲು ಮಾಲೀಕರು ನಿರಾಕರಿಸಿದುದರಿಂದ ಕಾರ್ಮಿಕರು ಮುಷ್ಕರ ಹೂಡಿದರು. ಟ್ರೂಮನ್ ಮುಜುಗರದ ಸನ್ನಿವೇಶದಲ್ಲಿ ಸಿಕ್ಕಿಕೊಂಡನು. ಸಾಧಾರಣವಾಗಿ ಅವನು ಕಾರ್ಮಿಕರ ಪಕ್ಷ ವಹಿಸುತ್ತಿದ್ದನಾದರೂ, ಅವರ ವೇತನ ಹೆಚ್ಚಿಸುವುದರಿಂದ ಬೆಲೆ ಏರಿಕೆಗೆ ಕಾರಣವಾಗಿ ಅದು ಹಣದುಬ್ಬರವನ್ನು ಉಂಟುಮಾಡುತ್ತದೆ ಎಂದು ಯೋಚಿಸಿ, ಕಾರ್ಮಿಕ ಮುಷ್ಕರಗಳನ್ನು ಹತೋಟಿಗೆ ತರಲು ನಿರ್ಧರಿಸಿದನು. ಆದ್ದರಿಂದ ಗಣಿ ಕಾರ್ಮಿಕರ ಒಕ್ಕೂಟ ಮುಷ್ಕರ ಹೂಡಿದಾಗ ಟ್ರೂಮನ್ 'ಕಲ್ಲಿದ್ದಲು ಉತ್ಪಾದನೆ ಕಡಿಮೆಯಾಗಿರುವುದು ರಾಷ್ಟ್ರಕ್ಕೆ ವಿಪತ್ಕಾರಿಯಾಗಿದೆ' ಎನ್ನುವ ಕಾರಣದಿಂದ ಸೈನ್ಯವನ್ನು ಕಳುಹಿಸಿ ಗಣಿಗಳ ನಿಯಂತ್ರಣ ವಹಿಸಿಕೊಳ್ಳುವಂತೆ ಮಾಡಿದನು. ಪರಿಣಾಮವಾಗಿ ಎರಡು ಕಡೆಯವರು ಒಪ್ಪಂದ ಮಾಡಿಕೊಂಡು ಮುಷ್ಕರ ಕೊನೆಗೊಂಡಿತು.

ಇದಾದ ನಂತರ ಒಂದು ತಿಂಗಳೊಳಗೆ ರೈಲ್ವೆ ನೌಕರರು ಮುಷ್ಕರ ಹೂಡಿದರು. ಮತ್ತೆ ಟ್ರೂಮನ್ ಮಧ್ಯೆ ಪ್ರವೇಶಿಸಬೇಕಾಗಿ ಬಂತು. ಈ ಬಾರಿ ಅವನು ಮುಷ್ಕರ ಹೂಡಿದ ಕಾರ್ಮಿಕರಿಗೆ 'ಮುಷ್ಕರ ನಿಲ್ಲಿಸಿ ಕೆಲಸಕ್ಕೆ ಹಾಜರಾಗಿ, ಇಲ್ಲವೆ ಮುಷ್ಕರ

ಹೂಡಿದವರನ್ನು ಕಡ್ಡಾಯವಾಗಿ ಸೈನ್ಯಕ್ಕೆ ಸೇರಿಸಿಕೊಂಡು ಸೇನಾಪತೆಯ ಆಜ್ಞೆಯಂತೆ ಕೆಲಸಮಾಡಿ ರೈಲು ಸಂಚಾರ ಸರಾಗವಾಗಿ ನಡೆಯುವಂತೆ ಮಾಡುತ್ತೇನೆ' ಎಂದು ಬೆದರಿಕೆ ಹಾಕಿದನು. ಪುನಃ ಕಾರ್ಮಿಕರು ಮಾಲೀಕರೊಡನೆ ಒಪ್ಪಂದ ಮಾಡಿಕೊಳ್ಳಬೇಕಾಯಿತು. ಇದು ಕಾರ್ಮಿಕ ಮುಖಂಡರನ್ನು ಕೆರಳಿಸಿತು. ಅಧ್ಯಕ್ಷ ಕಾರ್ಮಿಕರ ಹಕ್ಕನ್ನು ಉಲ್ಲಂಘಿಸು ತ್ತಿದ್ದಾನೆ ಎಂದು ಅವರು ಆಪಾದಿಸಿದರು.

ಕಾರ್ಮಿಕರೊಡನೆ ವಿರೋಧ, ಬೆಲೆ ಏರಿಕೆಯಿಂದಾಗಿ ಸಾರ್ವಜನಿಕರಲ್ಲಿ ಅಸಮಾಧಾನ, ಕಡಿಮೆ ವೇತನ ಮತ್ತು ಬೆಲೆ ಏರಿಕೆಯನ್ನು ನಿಯಂತ್ರಿಸುವ ಪ್ರಯತ್ನ – ಈ ಎಲ್ಲಾ ಅಂಶಗಳೂ ಕೂಡಿ ೧೯೪೬ರ ಚುನಾವಣೆಯಲ್ಲಿ ಡೆಮೊಕ್ರಾಟಿಕ್ ಪಕ್ಷ ಕಾಂಗ್ರೆಸ್ಸಿನಲ್ಲಿ ಬಹುಮತ ಕಳೆದುಕೊಳ್ಳುವಂತಾಯಿತು. ಅಧ್ಯಕ್ಷ ಹೂವರ್‌ನ ಕಾಲದ ಲಾಗಾಯ್ತು ರಿಪಬ್ಲಿಕನ್ ಪಕ್ಷ ಕಾಂಗ್ರೆಸ್ಸಿನಲ್ಲಿ ಬಹುಮತದ ಪಕ್ಷವಾಗಿರಲಿಲ್ಲ. (ಅನೇಕ ಡೆಮೊಕ್ರಾಟಿಕ್ ಪಕ್ಷದವರು ಕೂಡ ತಮ್ಮ ಪಕ್ಷದ ಬಗ್ಗೆ ಭ್ರಮನಿರಸನಗೊಂಡಿದ್ದರು. ೧೯೪೭ರಲ್ಲಿ ವಾಣಿಜ್ಯ ಕಾರ್ಯದರ್ಶಿ ಹೆನ್ರಿ ವಾಲೆಸ್‌ನನ್ನು ಟ್ರೂಮನ್ ಕೆಲಸದಿಂದ ವಜಾ ಮಾಡಿದನು. ಕಾರಣ ಅವನು ಟ್ರೂಮನ್‌ನ ಉಗ್ರ ಕಮ್ಯೂನಿಸ್ಟ್ ಧೋರಣೆಯನ್ನು ಟೀಕಿಸಿದ್ದರಿಂದ) ರಿಪಬ್ಲಿಕನ್ ಬಹುಮತದ ಕಾಂಗ್ರೆಸ್ ಸರ್ಕಾರ ಖರ್ಚು ವೆಚ್ಚಗಳಿಗಾಗಿ ಕಾದಿರಿಸಿದ್ದ ಹಣವನ್ನು ಕಡಿಮೆ ಮಾಡಿದ್ದಲ್ಲದೆ ತೆರಿಗೆಯನ್ನು ಕಡಿಮೆ ಮಾಡಿತು. ೧೯೪೭ರಲ್ಲಿ 'ಟಾಫ್ಟ್-ಹಾರ್ಟ್‌ಲಿ' (Taft-Hartley) ಮಸೂದೆಯನ್ನು ಮಂಜೂರು ಮಾಡಿತು. ಇದು ಕಾರ್ಮಿಕರ ಮತ್ತು ಮಾಲೀಕರ ವಿವಾದದಲ್ಲಿ ಕಾರ್ಮಿಕರು ತೆಗೆದುಕೊಳ್ಳಬಹುದಾದ ಕ್ರಮಗಳನ್ನು ಮಿತಗೊಳಿಸಿತು. ಟಾಫ್ಟ್-ಹಾರ್ಟ್‌ಲಿ ಮಸೂದೆಯ ವಿವಾದಾತ್ಮಕ ನಿಬಂಧನೆ – ಮುಷ್ಕರ ಸಮಯದಲ್ಲಿ ಮಾಲೀಕರು ಕಾರ್ಮಿಕ ಒಕ್ಕೂಟಕ್ಕೆ ಸೇರದವರನ್ನು ಕೆಲಸಕ್ಕೆ ತೆಗೆದುಕೊಳ್ಳಬಾರದು ಎಂದು ಖಚಿತಪಡಿಸಿದ್ದ ಕಾಯಿದೆಯನ್ನು ರದ್ದುಗೊಳಿಸಿತು. ಅಲ್ಲದೆ ಮುಷ್ಕರ ಹೂಡಿರುವ ಕಾರ್ಮಿಕರನ್ನು ಕಡ್ಡಾಯವಾಗಿ ನಿಗದಿ ಮಾಡಿದ ಸಮಯದೊಳಗೆ ಹಿಂತಿರುಗುವಂತೆ ಮಾಡುವ ಸರ್ಕಾರದ ಆಜ್ಞೆ. ಮೇಲಾಗಿ ಈ ಮಸೂದೆಯ ಪ್ರಕಾರ ಕಾರ್ಮಿಕರ ಒಕ್ಕೂಟದ ಮೇಲೆ ಒಪ್ಪಂದ ಮುರಿದ ಕಾರಣಕ್ಕಾಗಿ ಮಾಲೀಕರು ದಾವಾ ಹಾಕಬಹುದಾಗಿತ್ತು. ಒಕ್ಕೂಟದ ಕಾರ್ಮಿಕರು ಒಕ್ಕೂಟಕ್ಕೆ ಸೇರದಿರುವ ಕಾರ್ಮಿಕಗೆ ಬೆದರಿಕೆ ಹಾಕುವುದು, ಒತ್ತಾಯ ಹಾಕುವುದು ಶಿಕ್ಷಾರ್ಹ ಕೃತ್ಯಗಳೆಂದು ಪರಿಗಣಿಸಿತು. ಕೊನೆಯದಾಗಿ, ಈ ಮಸೂದೆ ಕಾರ್ಮಿಕ ಒಕ್ಕೂಟಗಳು ವಾರ್ಷಿಕ ಆಯ ವ್ಯಯ ಪಟ್ಟಿಯನ್ನು ಪ್ರಕಟಿಸಬೇಕಾದು ಅಗತ್ಯವೆಂದು ನಿರ್ಧರಿಸಿತು. ಕಾರ್ಮಿಕ ಒಕ್ಕೂಟಗಳು ರಾಜಕೀಯ ಪಕ್ಷಗಳಿಗೆ ಹಣ ಕೊಡುವುದನ್ನು ರದ್ದುಗೊಳಿಸಿತು. ಕಮ್ಯೂನಿಸ್ಟರು ಕಾರ್ಮಿಕ ಒಕ್ಕೂಟದ ನಯಕರಾಗುವುದನ್ನು ನಿರಾಕರಿಸಿತು. ಟ್ರೂಮನ್ ಈ ಮಸೂದೆಯನ್ನು 'ವೀಟೊ' (ನಿರಾಕರಿಸುವುದು) ಮಾಡಿದನು. ಆದರೆ ರಿಪಬ್ಲಿಕನ್ ಬಹುಮತದ ಕಾಂಗ್ರೆಸ್ ಅವನ 'ವೀಟೊ'ವನ್ನು ತಳ್ಳಿಹಾಕಿ ತಾನೇ ಮಂಡಿಸಿದ ಮಸೂದೆಯನ್ನು ಅಂಗೀಕರಿಸಿತು.

ಟ್ರೂಮನ್ ಸೆನೆಟರ್‌ನಾಗಿದ್ದರೂ ನಾಗರಿಕ ಹಕ್ಕುಗಳ (Civil rights) ಬಗ್ಗೆ ಆಸಕ್ತಿ ವಹಿಸಿರಲಿಲ್ಲ. ಅಧ್ಯಕ್ಷನಾದ ಅವನಿಗೆ ವರ್ಣದ್ವೇಷ ಮತ್ತು ಪಕ್ಷಪಾತಗಳ ಪ್ರತ್ಯಕ್ಷ ಅರಿವುಂಟಾಗಿ ಪರಿಹಾರ ಮಾರ್ಗಗಳನ್ನು ಹುಡುಕತೊಡಗಿದನು. ೧೯೪೬ರಲ್ಲಿ ಟ್ರೂಮನ್ 'ನಾಗರಿಕ ಹಕ್ಕುಗಳ ಸಮಿತಿ'ಯನ್ನು ನೇಮಕ ಮಾಡಿ ಈ ಸಮಸ್ಯೆಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ ಪರಿಹಾರ ಸೂಚಿಸಬೇಕೆಂದು ನಿರ್ದೇಶಿಸಿದನು. ೧೯೪೭ರ ಕೊನೆಯಲ್ಲಿ ಸಮಿತಿ ತನ್ನ ಶೋಧನೆಯ ವರದಿ ಮಾಡಿ, ಅದರ ಆಧಾರದ ಮೇಲೆ ಅನೇಕ ಮಸೂದೆಗಳನ್ನು ಟ್ರೂಮನ್ ಕಾಂಗ್ರೆಸ್ಸಿನ ಅನುಮೋದನೆಗೆ ಕಳುಹಿಸಿದನು. ಸಂಪ್ರದಾಯಸ್ಥರು ಕಾಂಗ್ರೆಸ್‌ನಲ್ಲಿ ಬಹುಸಂಖ್ಯಾತರಾಗಿದ್ದರಿಂದ ಅಧ್ಯಕ್ಷನ ಮಸೂದೆಗಳನ್ನು ಅಲಕ್ಷಿಸಿದರು. ಟ್ರೂಮನ್ ವಿರೋಧಿಗಳು ಅವನು ನಾಗರಿಕ ಹಕ್ಕುಗಳನ್ನು ಜಾರಿಗೆ ತಂದು ಪ್ರತ್ಯೇಕತೆಯನ್ನು ರದ್ದುಗೊಳಿಸುವುದು ದೊಡ್ಡ ತಪ್ಪು ಎಂದು ನಾನಾ ರೀತಿಯಲ್ಲಿ ವಿರೋಧ ವ್ಯಕ್ತಪಡಿಸಿದರು. ಆಗ ಟ್ರೂಮನ್‌ನನ್ನು ಗೇಲಿ ಮಾಡಲು ಅನೇಕ ಅಣಕು ಪದಗಳನ್ನು ಸೃಷ್ಟಿಸಿದರು. 'To err is human' ಎನ್ನುವ ಗಾದೆಯನ್ನು 'To err is Truman' ಎಂದು ಬದಲಾಯಿಸಿ ಅವನನ್ನು ಹಂಗಿಸುತ್ತಿದ್ದರು. ಆಗ ಟ್ರೂಮನ್ ಸೇನಾಪಡೆಗಳಲ್ಲಿ ಮತ್ತು ಸರ್ಕಾರಿ ಇಲಾಖೆಗಳಲ್ಲಿ ಪ್ರತ್ಯೇಕತೆಯನ್ನು (segregation) ಅಧ್ಯಕ್ಷನ ಆಜ್ಞೆಯ ಮೂಲಕ ರದ್ದುಗೊಳಿಸಿದನು. ಫೆಡರಲ್ ನ್ಯಾಯಾಂಗ ಇಲಾಖೆಯಲ್ಲಿ ನಾಗರಿಕ ಹಕ್ಕುಗಳ ವಿಭಾಗವನ್ನು ಅಸ್ತಿತ್ವಕ್ಕೆ ತರಬೇಕೆಂದು ಕರೆಕೊಟ್ಟನು.

೧೯೪೮ರ ಚುನಾವಣೆ

ಈ ಚುನಾವಣೆ ಹತ್ತಿರವಾದಂತೆಲ್ಲ ಟ್ರೂಮನ್ ಎರಡನೆಯ ಬಾರಿಗೆ ಅಧ್ಯಕ್ಷನಾಗುವ ಅವಕಾಶಗಳು ಕಡಿಮೆಯಾಗುತ್ತ ಹೋದವು. ಅವನ ರಿಪಬ್ಲಿಕನ್ ವಿರೋಧಿಗಳು ಇರಲಿ, ಬಹುತೇಕ ಡೆಮೊಕ್ರಾಟರು ಅವನ ಬಗ್ಗೆ ಭ್ರಮನಿರಸನಗೊಂಡಿದ್ದರು. ೧೯೪೭ರಲ್ಲಿ ಅವನು ವಾಣಿಜ್ಯ ಕಾರ್ಯದರ್ಶಿ ಹೆನ್ರಿ ವಾಲೆಸ್‌ನನ್ನು (Henry Wallace) ಕಮ್ಯೂನಿಸ್ಟ್ ವಿರುದ್ಧವಾದ ವಿದೇಶಾಂಗ ನೀತಿಯನ್ನು ಟೀಕಿಸಿದ್ದಕ್ಕಾಗಿ ಕೆಲಸದಿಂದ ತೆಗೆದುಹಾಕಿದ್ದನು. ವಾಲೆಸ್ ಡೆಮೊಕ್ರಾಟಿಕ್ ಪಕ್ಷವನ್ನು ತ್ಯಜಿಸಿ 'ಪ್ರಗತಿಪರ ಪಕ್ಷ' (Progressive party) ಎನ್ನುವ ಹೊಸಪಕ್ಷವನ್ನು ಹುಟ್ಟುಹಾಕಿದನು. ಈ ಪಕ್ಷ ಸೋವಿಯೆಟ್ ಒಕ್ಕೂಟದೊಂದಿಗೆ ಪ್ರಪಂಚದ ಮುಖ್ಯ ಸಮಸ್ಯೆಗಳ ಬಗ್ಗೆ ಹೊಂದಿಕೊಂಡು ಹೋಗುವ ಧೋರಣೆಯನ್ನು ಹೊಂದಿತ್ತು. ಟ್ರೂಮನ್‌ನ 'ನಾಗರಿಕ ಹಕ್ಕು'ಗಳನ್ನು ಜಾರಿಗೆ ತರುವ ಯೋಜನೆಯ ಬಗ್ಗೆ ತೀವ್ರ ಅಸಮಾಧಾನಪಟ್ಟುಕೊಂಡಿದ್ದ ದಕ್ಷಿಣ ಪ್ರಾಂತಗಳ ಸಂಪ್ರದಾಯಸ್ಥ ಡೆಮೊಕ್ರಾಟರು ಕೂಡ ಡೆಮೊಕ್ರಾಟಿಕ್ ಪಕ್ಷವನ್ನು ತ್ಯಜಿಸಿ 'ಸಂಸ್ಥಾನದ ಹಕ್ಕು ಪ್ರತಿಪಾದನಾ ಪಕ್ಷ' ವನ್ನು (State's Rights Demokratic Party) ರಚಿಸಿಕೊಂಡರು. ಈ ಪಕ್ಷವನ್ನು 'ಡಿಕ್ಸಿಕ್ರಾಟ್ಸ್' (Dixiecrats) ಎಂದು ಕರೆಯುತ್ತಿದ್ದರು. ಇವರು ದಕ್ಷಿಣ ಕೆರೊಲಿನ ಗವರ್ನರ್ ಸ್ಟ್ರಾಮ್ ಥರ್ಮಂಡ್‌ನನ್ನು ನಾಮಕರಣ ಮಾಡಿದರು.

'ಹೊಸ ಹಂಚಿಕೆ'ಯ ಮೇಲೆ ಆಧಾರಿತವಾಗಿದ್ದ ಮಿಶ್ರ ಸರ್ಕಾರ ಮತ್ತು ಡೆಮೊಕ್ರಾಟಿಕ್ ಪಕ್ಷ ಅವನತಿ ಹೊಂದುತ್ತಿರುವುದು ರಿಪಬ್ಲಿಕನ್ನರಿಗೆ ತಾವು ಚುನಾವಣೆಯಲ್ಲಿ ಗೆಲ್ಲುತ್ತೇವೆ ಎನ್ನುವ ಭರವಸೆಯನ್ನು ಹೆಚ್ಚಿಸಿತು. ೧೯೨೮ರಿಂದ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿ ಅಧ್ಯಕ್ಷಸ್ಥಾನಕ್ಕೆ ಆಯ್ಕೆಯಾಗಿರಲಿಲ್ಲ. ರಿಪಬ್ಲಿಕನ್ನರು ಟ್ರೂಮನ್‌ನನ್ನು ಎದುರಿಸಲು ಥಾಮಸ್ ಡ್ಯೂಯಿಯನ್ನು ನಾಮಕರಣ ಮಾಡಿದರು. ಡ್ಯೂಯಿ ನ್ಯೂಯಾರ್ಕಿನ ಗವರ್ನರ್ ಆಗಿದ್ದನು. ಉಪಾಧ್ಯಕ್ಷ ಸ್ಥಾನಕ್ಕೆ ಕ್ಯಾಲಿಫೋರ್ನಿಯಾದ ಗವರ್ನರ್ ಅರ್ಲ್ ವಾರೆನ್ (Earl Warren) ನಾಮಕರಣಗೊಂಡನು. ಚುನಾವಣಾ ಪ್ರಚಾರದಲ್ಲಿ ಡ್ಯೂಯಿ ಅತಿಭರವಸೆಯಿಂದ ಹೆಚ್ಚು ಭಾಷಣಗಳನ್ನು ಮಾಡುವ ಗೋಜಿಗೆ ಹೋಗಲಿಲ್ಲ. ಟ್ರೂಮನ್ ದೇಶದಾದ್ಯಂತ ಸಂಚರಿಸಲು ನಿರ್ಧರಿಸಿ, ಅಲ್ಲಲ್ಲಿ ನಿಂತು (whistle stop) ಸ್ಥಳೀಯರನ್ನು ಉದ್ದೇಶಿಸಿ ಭಾಷಣ ಮಾಡಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಿಕೊಂಡ ರೈಲುಪ್ರಯಾಣವನ್ನು ಕೈಗೊಂಡನು. ಅಮೆರಿಕದ ಉದ್ದಗಲ ಸಂಚರಿಸಿ ೩೫ ದಿನಗಳಲ್ಲಿ ೩೫೬ ಭಾಷಣಗಳನ್ನು ಮಾಡಿದನು. ಚುನಾವಣೆಯ ಫಲಿತಾಂಶಗಳನ್ನು, ಸಾರ್ವಜನಿಕರ ಅಭಿಪ್ರಾಯಗಳನ್ನು ಸಂಗ್ರಹಿಸುವುದರ ಮೂಲಕ ಯಾರು ಗೆಲ್ಲುತ್ತಾರೆ ಎಂದು ಮತಗಣಿಕೆ ಮುಗಿಯುವ ಮುನ್ನವೇ ನಿರ್ಧರಿಸುವ ಸಂಸ್ಥೆಗಳ ಹೇಳಿಕೆಗಳಿಗೆ ಟ್ರೂಮನ್ ಗಮನಕೊಡಲಿಲ್ಲ. ಎಲ್ಲ ಸಾರ್ವಜನಿಕ ಅಭಿಪ್ರಾಯ ಸಂಗ್ರಹಗಳು ಟ್ರೂಮನ್ ಸೋಲುವುದನ್ನು ಭವಿಷ್ಯ ನುಡಿದಿದ್ದವು. ಅಮೆರಿಕನ್ನರ ಆಡುಭಾಷೆಯಲ್ಲಿಯೇ ತನ್ನ ಧ್ಯೇಯೋದ್ದೇಶಗಳನ್ನು ಟ್ರೂಮನ್ ಜನರಿಗೆ ನೇರವಾಗಿ ವಿವರಿಸುತ್ತ ಅವರ ನಂಬಿಕೆ ಗಳಿಸಿದನು. ಉದಾಹರಣೆಗೆ ಟ್ರೂಮನ್ 'ಈ ಕೈಲಿ ಹರಿಯದ' ರಿಪಬ್ಲಿಕನ್ ಕಾಂಗ್ರೆಸ್ ದೇಶದ ಎಲ್ಲ ಸಮಸ್ಯೆಗಳಿಗೂ ಕಾರಣವೆಂದು ಜನರಿಗೆ ಮನದಟ್ಟು ಮಾಡಿದನು. ಇದರಿಂದ ಟ್ರೂಮನ್ ಪರವಾಗಿ ಉತ್ತೇಜಿತಗೊಂಡ ಜನರು 'Give'em Hell, Harry!' ಎಂದು ಕೂಗಿ ತಮ್ಮ ಬೆಂಬಲ ಸೂಚಿಸುತ್ತಿದ್ದರು.

ಎಲ್ಲ ವಿರೋಧಿಗಳನ್ನು ಸೋಲಿಸಿ, ಅಡೆ ತಡೆಗಳನ್ನು ದಾಟಿ ಟ್ರೂಮನ್ ಚುನಾವಣೆಯಲ್ಲಿ ಎರಡು ಮಿಲಿಯನ್ ಮತಗಳ ಅಂತರದಿಂದ ಗೆದ್ದನು. ಡೆಮೊಕ್ರಾಟಿಕ್ ಪಕ್ಷ ಬಹುಮತ ಪಡೆದು ಸೆನೆಟ್ ಮತ್ತು ಕಾಂಗ್ರೆಸ್ ಎರಡನ್ನೂ ವಶಪಡಿಸಿಕೊಂಡಿತು. ಇದರಿಂದ ಟ್ರೂಮನ್‌ನ ಸ್ವಾಭಿಮಾನ ಹೆಚ್ಚಿ ತನ್ನ ಆಡಳಿತದ ಎರಡನೆಯ ಅವಧಿಯನ್ನು ಹೆಚ್ಚಿದ ಭರವಸೆಯಿಂದ ಪ್ರಾರಂಭಿಸಿದನು. ೧೯೪೯ರಲ್ಲಿ ಅವನು 'ಅನುಕೂಲ ಹಂಚಿಕೆ'ಯನ್ನು (Fair Deal) ಕಾಂಗ್ರೆಸ್ಸಿನಲ್ಲಿ ಮಂಡಿಸಿದನು. ಚುನಾವಣೆಯಲ್ಲಿ ಡೆಮೊಕ್ರಾಟರು ಬಹುಮತಗಳಿಸಿದ್ದರೂ ಕೂಡ ದಕ್ಷಿಣ ಪ್ರಾಂತಗಳ ಡೆಮೊಕ್ರಾಟರು ಮತ್ತು ರಿಪಬ್ಲಿಕನ್ನರ ಸಮ್ಮಿಶ್ರ ಒಳಪಂಗಡ ಅಧ್ಯಕ್ಷನು ಮಂಡಿಸಿದ ಮಸೂದೆಗಳನ್ನು ಕಾಂಗ್ರೆಸ್ಸಿನಲ್ಲಿ ತಡೆಯುವಷ್ಟು ಪ್ರಬಲವಾಗಿತ್ತು. ಆದಾಗ್ಯೂ ಟ್ರೂಮನ್ ಅನೇಕ ಮಸೂದೆಗಳನ್ನು ಕಾಂಗ್ರೆಸ್ ಅಂಗೀಕರಿಸುವಂತೆ ಮಾಡಿದನು. ಕನಿಷ್ಠ ವೇತನವನ್ನು ೭೫ ಸೆಂಟುಗಳಿಗೆ ಏರಿಸಿದ್ದು, ಸಾಮಾಜಿಕ ಭದ್ರತೆಯ ಅನುಕೂಲಗಳನ್ನು ವಿಸ್ತರಿಸುವುದು,

ಕಡಿಮೆ ಆದಾಯದವರಿಗೆ ಸಾರ್ವಜನಿಕ ನಿವಾಸಗಳು ಮತ್ತು ನಗರ ಪುನರ್‌ನಿರ್ಮಾಣ – ಈ ಕೆಲವು 'ಅನುಕೂಲ ಹಂಚಿಕೆ'ಯ ಯೋಜನೆಗಳನ್ನು ಜಾರಿಗೆ ತರುವುದರಲ್ಲಿ ಯಶಸ್ವಿಯಾದನು. ಆದರೆ ಕಾಂಗ್ರೆಸ್ ಟ್ರೂಮನ್ ಮಂಡಿಸಿದ ನಾಗರಿಕ ಹಕ್ಕುಗಳ ಕಾಯಿದೆ ಮತ್ತು ಆರೋಗ್ಯ ವಿಮಾಯೋಜನೆಗಳನ್ನು ನಿರಾಕರಿಸಿತು. ರೈತರಿಗೆ ವರ್ಷಾವಧಿ ಖಾತರಿಯಾದ ಆದಾಯ ಕೊಡಬೇಕೆನ್ನುವುದು ಅವನ ಇನ್ನೊಂದು ಯೋಜನೆಯಾಗಿತ್ತು. ಇದೂ ಕಾಂಗ್ರೆಸ್ಸಿನಲ್ಲಿ ಅಂಗೀಕೃತವಾಗಲಿಲ್ಲ. ಟ್ರೂಮನ್ ಚುನಾವಣಾ ಪ್ರಚಾರದಲ್ಲಿ ಮಾತು ಕೊಟ್ಟಂತೆ 'ಟಾಫ್ಟ್-ಹಾರ್ಟ್‌ಲಿ' ಕಾನೂನನ್ನು ರದ್ದು ಮಾಡಲು ಪ್ರಯತ್ನಿಸಿದಾಗ ಕಾಂಗ್ರೆಸ್ ಪುನಃ ಅವನನ್ನು ಸೋಲಿಸಿತು.

ಆರ್ಥಿಕ ಅಸ್ಥಿರತೆ, ಯೂರೋಪ್ ಯುದ್ಧ ಕಾಲದಲ್ಲಿ ಪಡೆದ ಸಾಲದ ವ್ಯವಹಾರವನ್ನು ಅಮೆರಿಕ ವ್ಯವಸ್ಥಿತವಾಗಿ ನಿರ್ವಹಣೆ ಮಾಡಲಾರದೆ ಹೋಗಿದ್ದು – ಈ ಕಾರಣಗಳು ಯೂರೋಪಿನಲ್ಲಿ ಫ್ಯಾಸಿಸಮ್ (fascism) ತಲೆಯೆತ್ತಲು ಪ್ರೇರಣೆಯಾಗಿದ್ದವು. ೧೯೪೪ರಲ್ಲಿ 'ಅಂತರರಾಷ್ಟ್ರೀಯ ಆರ್ಥಿಕ ನಿಧಿ' (International Monetary Fund) ಮತ್ತು 'ಅಂತರರಾಷ್ಟ್ರೀಯ ಪುನರ್‌ನಿರ್ಮಾಣ ಮತ್ತು ಬೆಳವಣಿಗೆ ಬ್ಯಾಂಕ್' (International Bank for Reconstruction and Development) ಅಸ್ತಿತ್ವಕ್ಕೆ ಬಂದವು. ಅಂತರರಾಷ್ಟ್ರೀಯ ಹಣದ ಚಲಾವಣೆಯನ್ನು ಸ್ಥಿರಪಡಿಸಿ, ಆರ್ಥಿಕ ಬೆಳವಣಿಗೆ ಆಗದಿರುವ ದೇಶಗಳಲ್ಲಿ ಹಣ ಹೂಡಿ ಅವುಗಳ ಅಭಿವೃದ್ಧಿಗೆ ಕಾರಣವಾಗುವುದು ಈ ಸಂಸ್ಥೆಗಳ ಧ್ಯೇಯಗಳಾಗಿದ್ದವು. ರಾಷ್ಟ್ರಗಳ ಒಕ್ಕೂಟವನ್ನು (The League of Nations) ಕೊನೆಗೊಳಿಸಿ ಅದರ ಸ್ಥಾನದಲ್ಲಿ ಹೊಸ ಸಂಸ್ಥೆಯೊಂದನ್ನು ರಚಿಸುವ ನಿರ್ಧಾರವನ್ನು ಎಫ್.ಡಿ.ಆರ್ ನಾಯಕತ್ವದಲ್ಲಿ ಯಾಲ್ಟಾ ಶೃಂಗಸಭೆಯಲ್ಲಿ ಪ್ರಮುಖ ರಾಷ್ಟ್ರಗಳು ಕೈಗೊಂಡಿದ್ದವು. ೧೯೪೫ರ ಏಪ್ರಿಲ್ ತಿಂಗಳಲ್ಲಿ ಸ್ಯಾನ್‌ಫ್ರಾನ್ಸಿಸ್ಕೊ ನಗರದಲ್ಲಿ ರಾಷ್ಟ್ರಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿ ಸಂಯುಕ್ತ ರಾಷ್ಟ್ರಗಳ ಸಂಸ್ಥೆಯ (charter) ಪ್ರಣಾಳಿಕೆಯನ್ನು ತಯಾರಿಸಿದರು. ಸಂಯುಕ್ತ ಸಂಸ್ಥಾನಗಳು ವಿಶ್ವ ರಾಷ್ಟ್ರ ಸಂಸ್ಥೆಯ ಸದಸ್ಯರಾಷ್ಟ್ರವಾಗಲು ನಿರ್ಧರಿಸಿತು. ಇದನ್ನು ಆ ವರ್ಷದಲ್ಲೇ ಸೆನೆಟ್ ಅಂಗೀಕರಿಸಿತು. ಈ ಹೊಸ ಸಂಸ್ಥೆ ವಿಶ್ವಶಾಂತಿ ಸ್ಥಾಪನೆ ಮಾಡುವುದರಲ್ಲಿ ಯಶಸ್ವಿಯಾಗುತ್ತದೆ ಎಂದು ಬಹುತೇಕ ಅಮೆರಿಕನ್ನರು ಆಶಾಭಾವನೆಯನ್ನು ತಳೆದಿದ್ದರು.

ವಿಶ್ವಸಂಸ್ಥೆಯ ಪ್ರಮುಖ ಅಂಗಗಳು:

- ಸರ್ವಸದಸ್ಯರ ಸಭೆ (General Assembly) – ಇದು ವಿಶ್ವದ ಸಮಸ್ಯೆಗಳನ್ನು ನಾನಾ ರಾಷ್ಟ್ರಗಳ ಸದಸ್ಯರು ಚರ್ಚಿಸುವ ವೇದಿಕೆ
- ರಕ್ಷಣಾ ಸಮಿತಿ (The Security Council) – ಇಲ್ಲಿ ಐದು ಶಾಶ್ವತ ಸದಸ್ಯ

ರಾಷ್ಟ್ರಗಳು; ಇಂಗ್ಲೆಂಡ್, ಫ್ರಾನ್ಸ್, ಸೋವಿಯೆಟ್ ಒಕ್ಕೂಟ, ಚೈನಾ ಮತ್ತು ಸಂಯುಕ್ತ ಸಂಸ್ಥಾನಗಳು

- ಆರು ತಾತ್ಕಾಲಿಕ ಸದಸ್ಯ ರಾಷ್ಟ್ರಗಳು; ಇವು ಬದಲಾಗುತ್ತಿರುತ್ತವೆ
- ಕಾರ್ಯಾಂಗ/ಆಡಳಿತ (Secretariat) ವಿಭಾಗ/ಶಾಖೆ – ಇದರ ಎಲ್ಲ ಇಲಾಖೆಗಳು ಮುಖ್ಯ ಕಾರ್ಯದರ್ಶಿಯ (Secretary General) ಅಧಿಕಾರಕ್ಕೆ ಒಳಪಟ್ಟಿರುತ್ತವೆ

ಪ್ರಮುಖ ರಾಷ್ಟ್ರಗಳು ಈ ಹೊಸ ಸಂಸ್ಥೆಗೆ ಪ್ರತಿನಿಧಿಗಳನ್ನು ಕಳುಹಿಸಲು ಒಪ್ಪಿಕೊಂಡಿದ್ದರೂ ತಮ್ಮ ಸ್ವಂತ ಅಧಿಕಾರವನ್ನು ಬಿಟ್ಟುಕೊಡಲು ಮನಸ್ಸಿರಲಿಲ್ಲ. ವಿಶ್ವಸಂಸ್ಥೆಯ ರಚನೆಯಲ್ಲಿ ಸಂದಿಗ್ಧ ಪರಿಸ್ಥಿತಿಗಳಿಗೆ ಅವಕಾಶ ಮಾಡಿಕೊಡುವಂಥ ಅಂಶ ವೆಂದರೆ – ಕಾರ್ಯಕಾರಿ ಸಮಿತಿ ಯಾವ ಮುಖ್ಯ ಯೋಜನೆ ಅಥವಾ ಕಾರ್ಯಾಚರಣೆ ಕೈಗೊಳ್ಳಲು ಐದು ಶಾಶ್ವತ ರಾಷ್ಟ್ರಗಳ ಒಪ್ಪಿಗೆಬೇಕು ಎನ್ನುವ ನಿಬಂಧನೆ. ಈ ರಾಷ್ಟ್ರಗಳಲ್ಲಿ ಒಂದರ ಒಪ್ಪಿಗೆ ಇಲ್ಲದೆ ಹೋದರೆ ಯಾವ ಯೋಜನೆಯೂ ಕೈಗೊಳ್ಳುವಂತಿಲ್ಲ. ಇದನ್ನು 'ವೀಟೊ' ಅಧಿಕಾರ ಚಲಾಯಿಸುವುದು ಎನ್ನುತ್ತಾರೆ.

❑

ಅಧ್ಯಾಯ – ೧೯

ಶೀತಲ ಯುದ್ಧದಲ್ಲಿ ಅಮೆರಿಕ

ಶೀತಲ ಸಮರ

ಎರಡನೆಯ ಜಾಗತಿಕ ಯುದ್ಧದಲ್ಲಿ ಭಾಗವಹಿಸಿದ ಮಿತ್ರರಾಷ್ಟ್ರಗಳಲ್ಲಿ ಸೋವಿಯೆಟ್ ಒಕ್ಕೂಟ (Soviet Union) ಸೇರಿತ್ತು. ಮೇಲ್ನೋಟಕ್ಕೆ ಮಿತ್ರರಾಷ್ಟ್ರಗಳಲ್ಲಿ ಒಗ್ಗಟ್ಟು, ಪರಸ್ಪರ ಸಹಾಯ ಕಂಡುಬರುತ್ತಿದ್ದರೂ ಒಳಗೊಳಗೆ ಪರಸ್ಪರ ಅನುಮಾನ ಮತ್ತು ದ್ವೇಷಾಸೂಯೆಗಳು ಹೊಗೆಯಾಡುತ್ತಲೇ ಇದ್ದವು. ಅದರಲ್ಲೂ ಪಶ್ಚಿಮದ ಪ್ರಜಾರಾಜ್ಯಗಳು ಮತ್ತು ಸೋವಿಯೆಟ್ ಒಕ್ಕೂಟದ ಸಂಬಂಧ ಎಂದೂ ಸೌಹಾರ್ದಯುತವಾಗಿರಲಿಲ್ಲ. ಅನಿವಾರ್ಯ ಕಾರಣಗಳಿಂದ ಈ ದೇಶಗಳು ಮಿತ್ರತ್ವ ಬೆಳೆಸಿಕೊಳ್ಳಬೇಕಾಯಿತು. ಬಲಾತ್ಕಾರದಿಂದ ಮದುವೆ ಮಾಡಿಸಿದ ಗಂಡ-ಹೆಂಡತಿ ಅನುಕೂಲಕ್ಕೋಸ್ಕರ ಒಟ್ಟಿಗೆ ಇರುವಂತೆ – ಪಶ್ಚಿಮ ಪ್ರಜಾರಾಜ್ಯಗಳು ಸೋವಿಯೆಟ್ ಒಕ್ಕೂಟದೊಡನೆ ಸ್ನೇಹ ನಟಿಸಿದ್ದವು. ಯುದ್ಧದಲ್ಲಿ ಜಯ ಗಳಿಸುವುದು ಖಚಿತವಾಗುತ್ತ ಬಂದಂತೆಲ್ಲ ಪಶ್ಚಿಮದ ಪ್ರಜಾರಾಜ್ಯಗಳಿಗೆ ಸೋವಿಯೆಟ್ ಸಹಾಯ ಅಗತ್ಯವಾಗಿ ತೋರಲಿಲ್ಲ. ಅಮೆರಿಕ ಮತ್ತು ಸೋವಿಯೆಟ್ ರಾಷ್ಟ್ರಗಳ ಮೂಲ ಧ್ಯೇಯೋದ್ದೇಶಗಳು ಪರಸ್ಪರ ವಿರೋಧವಾಗಿರುವುದು ಸ್ಪಷ್ಟವಾಗುತ್ತ ಬಂತು. ಪರಿಣಾಮವಾಗಿ ಈ ಎರಡು ಪ್ರಬಲ ರಾಷ್ಟ್ರಗಳ ನಡುವೆ ಒಂದು ನವೀನ ಸಂದಿಗ್ಧ ಪರಿಸ್ಥಿತಿ ಉಂಟಾಯಿತು. ಇದು ಪರಸ್ಪರ ನೇರ ಘರ್ಷಣೆಯಲ್ಲಿ ಪರಿಣಮಿಸದೆ, ಈ ರಾಷ್ಟ್ರಗಳು ಯುದ್ಧ ಸಾರದಿದ್ದರೂ, ಯಾವ ಕ್ಷಣದಲ್ಲಾದರೂ ಯುದ್ಧ ನಡೆಯುವ ಸಾಧ್ಯತೆ ಇದೆ ಎನ್ನುವ ಭೀತಿ ಈ ಎರಡು ರಾಷ್ಟ್ರಗಳಲ್ಲಿ ಹೆದರಿಕೆಯ ವಾತಾವರಣ ಹುಟ್ಟಿಸಿತ್ತು. ಈ 'ಯುದ್ಧವಲ್ಲದ ಯುದ್ಧ'ಕ್ಕೆ 'ಶೀತಲ ಸಮರ' (cold war) ಎಂದು ಹೆಸರಾಯಿತು.

ಕಮ್ಯೂನಿಸಮ್ ಒಂದು ಸಿದ್ಧಾಂತ. ಅದು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಗೆ ವಿರುದ್ಧವಾದುದು. ಈ ಸಿದ್ಧಾಂತ ವ್ಯಕ್ತಿಸ್ವಾತಂತ್ರ್ಯ, ಹಣ ಗಳಿಸಲು ಸಮಾನ ಅವಕಾಶಗಳು, ಖಾಸಗಿ ಆಸ್ತಿ ಮತ್ತು ಲಾಭಗಳಿಕೆಗೆ ವಿರುದ್ಧವಾದುದು ಎನ್ನುವುದು ಬಹುತೇಕ ಅಮೆರಿಕನ್ನರಿಗೆ ತಿಳಿದಿತ್ತು. ಸೋವಿಯೆಟ್ ಒಕ್ಕೂಟದ ಧ್ಯೇಯವಾದ ಪ್ರಪಂಚದ ಎಲ್ಲ ಕಡೆಗಳಿಗೆ ಕಮ್ಯೂನಿಸಂ ಪ್ರಸರಣ ಮನೋಭಾವ ಅಮೆರಿಕನ್ನರಿಗೆ ಸೋವಿಯೆಟ್ ಒಕ್ಕೂಟವ ಬಗ್ಗೆ ನಂಬಿಕೆ ಇಲ್ಲದಿರುವುದಕ್ಕೆ ಕಾರಣವಾಗಿತ್ತು. ಎರಡನೆಯ ಜಾಗತಿಕ ಯುದ್ಧ ಮುಗಿಯು

ತ್ತಿದ್ದಂತೆ ಸೋವಿಯೆಟ್ ಒಕ್ಕೂಟದ ಚಟುವಟಿಕೆಗಳು ಅಮೆರಿಕದ ಅನುಮಾನವನ್ನು ಖಚಿತಗೊಳಿಸಿದವು. ಯಾಲ್ಟಾ ಶೃಂಗಸಭೆಯ ನಂತರ ಸ್ಟಾಲಿನ್ ಪಶ್ಚಿಮ ಪ್ರಜಾರಾಜ್ಯಗಳನ್ನು ಜರ್ಮನಿಯೊಡನೆ ಗುಪ್ತಸಂಧಾನ ಮಾಡಿಕೊಂಡಿದ್ದವೆಂದು ಆಪಾದಿಸಿದನು. ಇದಲ್ಲದೆ ಸ್ಟಾಲಿನ್ ಪೂರ್ವ ಯೂರೋಪಿನ ಮೇಲೆ ತನ್ನ ಹಿಡಿತವನ್ನು ಬಿಗಿಗೊಳಿಸಿದನು. ಇದರಿಂದ ರಷ್ಯಾದ ಕಮ್ಯೂನಿಸಂ ಮತ್ತು ಸ್ಥಳೀಯ ಕಮ್ಯೂನಿಸಂ ಪ್ರಭಾವ ಹೆಚ್ಚುವಂತೆ ಮಾಡಿದನು.

ಟ್ರೂಮನ್ ಮೊದಲು ಸ್ಟಾಲಿನ್‌ನೊಡನೆ ಹೊಂದಿಕೊಂಡು ಕಾರ್ಯಾಚರಣೆ ಮಾಡಬಹುದು ಎಂದುಕೊಂಡಿದ್ದನು. ಆದರೆ ಅವನ ಸಲಹೆಗಾರರು ಕಮ್ಯೂನಿಸಂ ವಿಸ್ತಾರವಾಗಿ ಹಬ್ಬುತ್ತಿರುವುದನ್ನು ತಡೆಯಬೇಕಾದ ಅಗತ್ಯವನ್ನು ಒತ್ತಿ ಹೇಳಿದರು. ಸ್ಟಾಲಿನ್ ನಂಬಿಕೆಗೆ ಅರ್ಹನಾದ ವ್ಯಕ್ತಿಯಲ್ಲವೆಂದು ಅವನಿಗೆ ಮನದಟ್ಟು ಮಾಡಿದರು. ಅವರ ಸಲಹೆಯಂತೆ ಟ್ರೂಮನ್ ಅಮೆರಿಕ ಸೋವಿಯೆಟ್ ಒಕ್ಕೂಟಕ್ಕೆ ಗೇಣಿಕೊಟ್ಟಿದ್ದ ಜಮೀನು ಕರಾರನ್ನು ರದ್ದುಗೊಳಿಸಿದನು. ೧೯೪೫ರ ಜುಲೈ ತಿಂಗಳಲ್ಲಿ ಪಾಟ್ಸ್‌ಡಾಮ್ (Potsdam) ಶೃಂಗಸಭೆಯಲ್ಲಿ ಟ್ರೂಮನ್, ಚರ್ಚಿಲ್ ಮತ್ತು ಸ್ಟಾಲಿನ್ ಭೇಟಿಯಾದಾಗ ಯುದ್ಧಾನಂತರ ರಷ್ಯಾದ ಪ್ರಭಾವ ಮತ್ತು ಕಮ್ಯೂನಿಸಂ ವಿಸ್ತರಿಸುವುದನ್ನು ತಡೆಗಟ್ಟುವುದು ಟ್ರೂಮನ್‌ನ ಪ್ರಧಾನ ಗುರಿಯಾಗಿತ್ತು. ಅದಲ್ಲದೆ ಸ್ಟಾಲಿನ್‌ನನ್ನು ಜಪಾನಿನ ಮೇಲೆ ಯುದ್ಧ ಸಾರಬೇಕೆಂದು ಒತ್ತಾಯ ಪಡಿಸಿದನು. ಇದಕ್ಕೆ ಸ್ಟಾಲಿನ್ ಒಪ್ಪಿಕೊಂಡು ಅಮೆರಿಕ ಅಣುಬಾಂಬ್ ಸಿದ್ಧಗೊಳಿಸಿದೆ ಎಂದು ತಿಳಿದು ಅದಕ್ಕೆ ಹೆಚ್ಚಿನ ಗಮನ ಕೊಡಲಿಲ್ಲ. ಪಾಟ್ಸ್‌ಡಾಮ್ ಶೃಂಗಸಭೆ ಹಿಂದೆ ಯಾಲ್ಟಾ ಶೃಂಗಸಭೆಯಲ್ಲಿ ತೀರ್ಮಾನಿಸಿದ ಒಪ್ಪಂದದ ಅಂಶಗಳನ್ನು ಜಾರಿಗೆ ತರಬೇಕೆಂದು ಈ ಮೂರು ಮಹಾನಾಯಕರು ಒಮ್ಮತದ ನಿರ್ಧಾರಕ್ಕೆ ಬಂದರು:

- ಜರ್ಮನಿಯನ್ನು ನಾಲ್ಕು ಆಕ್ರಮಣವಲಯಗಳಾಗಿ (Occupation zones) – ಅಮೆರಿಕನ್, ಬ್ರಿಟಿಷ್, ಫ್ರೆಂಚ್ ಮತ್ತು ರಷ್ಯಾ – ವಿಂಗಡಿಸುವುದು
- ಈ ವಲಯಗಳ ಆಡಳಿತವನ್ನು ಬರ್ಲಿನ್‌ನಲ್ಲಿ ಸ್ಥಾಪಿಸುವ ಮಿತ್ರರಾಷ್ಟ್ರಗಳ ನಿಯಂತ್ರಣ ಕೇಂದ್ರದ ಮೂಲಕ ನಾಲ್ಕು ರಾಷ್ಟ್ರಗಳು ತಮ್ಮ ತಮ್ಮ ವಲಯಗಳ ಆಡಳಿತವನ್ನು ನಿರ್ವಹಿಸುವಂತೆ ವ್ಯವಸ್ಥೆಗೊಳಿಸುವುದು
- ಬರ್ಲಿನ್ ನಗರವನ್ನು ಕೂಡ ನಾಲ್ಕು ವಲಯಗಳಾಗಿ ವಿಂಗಡಿಸಿ ನಾಲ್ಕು ರಾಷ್ಟ್ರಗಳ ಆಡಳಿತಕ್ಕೆ ಒಳಪಡಿಸುವುದು

ಹೀಗೆ ಜರ್ಮನಿಯ ಭವಿಷ್ಯ ನಾಲ್ಕು ದಿಕ್ಕುಗಳ ಪಾಲಾಯಿತು. ಒಪ್ಪಂದದ ಪ್ರಕಾರ ಈ ಎಲ್ಲ ವ್ಯವಸ್ಥೆಗಳು ತಾತ್ಕಾಲಿಕವಾಗಿರಬೇಕಿತ್ತು. ಆದರೆ ಸೋವಿಯೆಟ್ ಒಕ್ಕೂಟ

ತಮ್ಮ ವಲಯದಲ್ಲಿ ಕಮ್ಯೂನಿಸ್ಟ್ ಸರ್ಕಾರವನ್ನು ಶಾಶ್ವತವಾಗಿ ಸ್ಥಾಪಿಸುವ ಯೋಜನೆ ಹಾಕಿತ್ತು. ಪೂರ್ವ ಯೂರೋಪಿನ ಮೇಲೆ ಸೋವಿಯೆಟ್ ಪ್ರಭಾವವನ್ನು ಪರಿಮಿತಿಗೊಳಿಸಲು ಟ್ರೂಮನ್ ಮಾಡಿದ ಪ್ರಯತ್ನಗಳು ಸಫಲವಾಗಲಿಲ್ಲ. ಯಾಲ್ಟಾ ಸಭೆಯಲ್ಲಿ ಚುನಾವಣೆಯ ಮೂಲಕ ಪ್ರಜಾರಾಜ್ಯಗಳನ್ನು ಸೋವಿಯೆಟ್ ವಲಯಗಳಲ್ಲಿ ಸ್ಥಾಪಿಸುವುದಾಗಿ ಸ್ಟಾಲಿನ್ ವಚನ ಕೊಟ್ಟಿದ್ದನು. ಆದರೆ ಸೋವಿಯೆಟ್ ಸೈನ್ಯ ದಳಗಳು ಆಕ್ರಮಣ ಮಾಡಿಕೊಂಡ ಜರ್ಮನ್ ಪ್ರಾಂತಗಳಲ್ಲಿ ಸ್ಥಳೀಯ ಕಮ್ಯೂನಿಸ್ಟ್ ಪಕ್ಷಗಳು ಅಧಿಕಾರಕ್ಕೆ ಬರಲು ಸಹಾಯ ಮಾಡಿದವು. ಇತರ ಮಿತ್ರರಾಷ್ಟ್ರಗಳು ಏನೂ ಮಾಡಲು ಸಾಧ್ಯವಾಗಲಿಲ್ಲ. ಹೀಗೆ ೧೯೪೬ರ ವೇಳೆಗೆ ಬಹುತೇಕ ಪೂರ್ವ ಜರ್ಮನ್ ಪ್ರಾಂತಗಳು ಸೋವಿಯೆಟ್ ಸಹಾಯದಿಂದ ಕಮ್ಯೂನಿಸ್ಟ್ ಸರ್ಕಾರಗಳನ್ನು ಸ್ಥಾಪಿಸಿದ್ದವು.

ಪಾಟ್ಸ್‌ಡಾಮ್ ಶೃಂಗಸಭೆಯಲ್ಲಿ ಪ್ರಮುಖ ರಾಷ್ಟ್ರಗಳು ತೀರ್ಮಾನಿಸಿದಂತೆ ವಿದೇಶಾಂಗ ಸಚಿವರ ಸಮಿತಿಯನ್ನು ರಚಿಸಿ ಯೂರೋಪಿನ ಇತರ ರಾಷ್ಟ್ರಗಳು – ಇಟಲಿ, ಆಸ್ಟ್ರಿಯಾ, ಹಂಗೇರಿ, ರುಮೇನಿಯಾ, ಬಲ್ಗೇರಿಯಾ ಮತ್ತು ಫಿನ್ಲೆಂಡ್ – ಶಾಂತಿಕರಾರುಗಳನ್ನು ಮಾಡಿಕೊಳ್ಳಲು ನೆರವಾಗುವ ಜವಾಬ್ದಾರಿಯನ್ನು ಈ ಸಮಿತಿಗೆ ವಹಿಸಿದರು. ೧೯೪೬ರ ಜುಲೈ ಮತ್ತು ಆಗಸ್ಟ್ ತಿಂಗಳ ಅವಧಿಯಲ್ಲಿ ಎಲ್ಲ ರಾಷ್ಟ್ರಗಳು (ಆಸ್ಟ್ರಿಯಾವನ್ನು ಬಿಟ್ಟು) ಶಾಂತಿಕರಾರುಗಳನ್ನು ಮಾಡಿಕೊಂಡವು. ಆಸ್ಟ್ರಿಯಾ ೧೯೫೫ರಲ್ಲಿ ಶಾಂತಿಕರಾರು ಮಾಡಿಕೊಂಡಿತು. ಅದುವರೆಗೆ ಸೋವಿಯೆಟ್ ಸೈನ್ಯ ಆಸ್ಟ್ರಿಯಾದಲ್ಲಿ ಬೀಡುಬಿಟ್ಟಿದ್ದು ನಂತರ ವಾಪಸ್ಸು ಹೋಯಿತು.

ಸೋವಿಯೆಟ್ ರಷ್ಯಾದ ಪ್ರಾಬಲ್ಯ, ಪೂರ್ವ ಯೂರೋಪಿನ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟ್ ಸರ್ಕಾರಗಳ ಸ್ಥಾಪನೆ ಈ ಎಲ್ಲ ಬೆಳವಣಿಗೆಗಳು ಅಮೇರಿಕ ಅಂತರರಾಷ್ಟ್ರೀಯ ಸಮಸ್ಯೆಗಳ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುವಂತೆ ಮಾಡಿದವು. ೧೯೪೭ರಲ್ಲಿ ಬ್ರಿಟಿಷರು ತಾವು ಗ್ರೀಸ್ ದೇಶದಲ್ಲಿ ಸ್ಥಾಪಿಸಿದ್ದ ಸಂಪ್ರದಾಯಸ್ಥ ಸರ್ಕಾರವನ್ನು ರಕ್ಷಿಸಿ ನಿರ್ವಹಣೆಯನ್ನು ಇದುವರೆಗೆ ಮಾಡಿ ಇನ್ನು ಮುಂದೆ ಹಣದ ಕೊರತೆಯಿಂದಾಗಿ ಅದು ಸಾಧ್ಯವಿಲ್ಲವೆಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ಗ್ರೀಸ್ ಸರ್ಕಾರವನ್ನು ಉರುಳಿಸಲು ಕಮ್ಯೂನಿಸ್ಟ್ ದಂಗೆಕಾರರು ಸಿದ್ಧರಾಗಿದ್ದರು. ಇವರಿಗೆ ಅಕ್ಕಪಕ್ಕದ ಕಮ್ಯೂನಿಸ್ಟ್ ಸರ್ಕಾರಗಳಿಂದ ಹಣ ಸಹಾಯ ಸಿಗುತ್ತಿತ್ತು. ರಷ್ಯಾ ಗ್ರೀಸ್ ದೇಶದಲ್ಲಿ ಕಮ್ಯೂನಿಸ್ಟ್ ಸರ್ಕಾರ ಸ್ಥಾಪಿತವಾದರೆ ಕಪ್ಪು ಸಮುದ್ರ ಮತ್ತು ಸೂಯಜ್ ಕಾಲುವೆಯ ಮೂಲಕ ಹಾದುಹೋಗಬೇಕಾದ ಅವಶ್ಯಕತೆ ತಪ್ಪುತ್ತದೆ ಎಂದು ಲೆಕ್ಕ ಹಾಕಿತ್ತು. ಮೇಲಾಗಿ ಟರ್ಕಿ ದೇಶವನ್ನು ಆಕ್ರಮಣ ಮಾಡುವ ಬೆದರಿಕೆ ಹಾಕುತ್ತಿತ್ತು. ಟರ್ಕಿ ತನಗೆ ಅಧೀನವಾದ ಧೋರಣೆ ತಳೆಯಬೇಕು ಮತ್ತು ಗಡಿಪ್ರದೇಶವನ್ನು ಆಕ್ರಮಿಸಿ ಸೈನ್ಯದ ನೆಲೆಗಳನ್ನು ಸ್ಥಾಪಿಸುವುದಕ್ಕೆ ಒಪ್ಪಿಗೆ ಕೊಡಬೇಕೆಂದು ಒತ್ತಾಯ ಮಾಡುತ್ತಿತ್ತು. ಅಧ್ಯಕ್ಷ ಟ್ರೂಮನ್ ರಷ್ಯಾದ ಬೆದರಿಕೆಯನ್ನು ಎದುರಿಸಿ ಗ್ರೀಸ್ ಮತ್ತು ಟರ್ಕಿಗಳ ರಕ್ಷಣೆಗೆ ಮುಂದಾದನು.

ಆ ಎರಡು ದೇಶಗಳಿಗೆ ೪೦೦ ದಶಲಕ್ಷ ಡಾಲರ್‌ಗಳ ಸಹಾಯಧನ ನೀಡುವಂತೆ ಕಾಂಗ್ರೆಸ್ಸನ್ನು ಕೇಳಿದನು. ಈ ದೇಶಗಳ ಸ್ವತಂತ್ರ ಪ್ರಜೆಗಳನ್ನು ಅಧೀನರನ್ನಾಗಿ ಮಾಡಿಕೊಳ್ಳುವ ಪ್ರಯತ್ನಕ್ಕೆ ಅಮೆರಿಕ ಅಡ್ಡಿ ತರುತ್ತದೆ ಎಂದು ಟ್ರೂಮನ್ ಘೋಷಿಸಿದನು. ಜನರ ಸ್ವಾತಂತ್ರ್ಯ ರಕ್ಷಿಸುವುದು ಅಮೆರಿಕದ ಮುಖ್ಯಧ್ಯೇಯವೆಂದು ಅವನು ನಂಬಿದ್ದನು. ಟ್ರೂಮನ್‌ನ ಈ ಧೋರಣೆ 'ಟ್ರೂಮನ್ ಸಿದ್ಧಾಂತ' (The Truman Doctrine) ಎಂದು ಹೆಸರು ಪಡೆಯಿತು. ಅಮೆರಿಕದ ಧನಸಹಾಯದಿಂದ ಗ್ರೀಸ್ ಮತ್ತು ಟರ್ಕಿ ದೇಶಗಳು ತಮ ಸೈನ್ಯಗಳನ್ನು ಬಲಪಡಿಸಿಕೊಂಡು ಕಮ್ಯೂನಿಸ್ಟ್ ಆಕ್ರಮಣದ ಬೆದರಿಕೆಯನ್ನು ಪರಿಹರಿಸಿ ಕೊಂಡವು.

ಮಾರ್ಷಲ್ ಯೋಜನೆ

ಗ್ರೀಸ್ ಮತ್ತು ಟರ್ಕಿ ದೇಶಗಳಿಗೆ ಹಣಸಹಾಯ ಮಾಡಲು ಕಾಂಗ್ರೆಸ್ ಒಪ್ಪಿಕೊಂಡ ಸಮಯದಲ್ಲೇ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಜಾರ್ಜ್ ಮಾರ್ಷಲ್ ಯೂರೋಪಿನಲ್ಲಿ ಪ್ರಜಾರಾಜ್ಯಗಳ ಸ್ಥಾಪನೆ ಮತ್ತು ಆರ್ಥಿಕ ಅಭಿವೃದ್ಧಿಯ ಅವಶ್ಯಕತೆಯನ್ನು ಮನಗಂಡನು. ಈ ಪ್ರಜಾರಾಜ್ಯಗಳ ಅಭಿವೃದ್ಧಿಯಾಗದೆ ಹೋದರೆ ಅವು ಕಮ್ಯೂನಿಸ್ಟ್ ಪ್ರಭಾವಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚುತ್ತದೆ ಎಂದು ಖಚಿತಪಡಿಸಿಕೊಂಡ ಅವನು ಅಮೆರಿಕದೊಡನೆ ಸಹಕರಿಸುವ ಯೂರೋಪಿಯನ್ ದೇಶಗಳಿಗೆ ಸಹಾಯಧನ ನೀಡುವುದಾಗಿ ಹೇಳಿಕೆ ಕೊಟ್ಟನು. ಈ ಹೇಳಿಕೆಯನ್ನು ಪೂರೈಸಲು ಕಾಂಗ್ರೆಸ್ ಐದು ಬಿಲಿಯನ್ ಡಾಲರ್‌ಗಳನ್ನು ಅದಕ್ಕಾಗಿ ಮೀಸಲಿಟ್ಟು ಆ ಯೋಜನೆಯನ್ನು ಕಾರ್ಯಗತಗೊಳಿಸಲು 'ಯೂರೋಪ್ ಸಹಕಾರ ಆಡಳಿತ ಸಂಸ್ಥೆ'ಯನ್ನು ಸ್ಥಾಪಿಸಿತು. ತಮ್ಮ ಅಭಿವೃದ್ಧಿ ಯೋಜನೆಗಳನ್ನು ತಯಾರಿಸುವುದರ ಜೊತೆಗೆ ಅಮೆರಿಕದೊಡನೆ ಸಹಕಾರ ಬೆಳೆಸುವುದೂ ಯೂರೋಪಿಯನ್ ದೇಶಗಳಿಗೆ ಮುಖ್ಯವಾಗಿತ್ತು. ಅಮೆರಿಕದ ಈ ಸಹಾಯಧನ ಇಟಲಿಯ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಕ್ಷ ಸೋಲಲು ಕಾರಣವಾಯಿತು.

೧೯೪೯ರ ಹೊತ್ತಿಗೆ ಫ್ರಾನ್ಸ್ ಮತ್ತು ಇಟಲಿ ದೇಶಗಳು ಆರ್ಥಿಕವಾಗಿ ಚೇತರಿಸಿಕೊಂಡು ಯುದ್ಧಪೂರ್ವದ ಮಟ್ಟವನ್ನು ಮುಟ್ಟಿದ್ದವು. ಮಾರ್ಷಲ್ ಯೋಜನೆಯ ಹಣ ಅಮೆರಿಕದ ನಿಯಂತ್ರಣದಲ್ಲಿತ್ತು; ಅಂತರರಾಷ್ಟ್ರೀಯ ನಿರ್ವಹಣಾ ಸಮಿತಿಗೆ ಒಳಪಟ್ಟಿರಲಿಲ್ಲ. ಈ ಯೋಜನೆ ಯೂರೋಪಿಯನ್ ದೇಶಗಳ ನಡುವೆ ಪರಸ್ಪರ ಹಾಗೂ ಅವಿರತ ಆರ್ಥಿಕ ಸಹಾಯ ಬೆಳೆಯುವಂತೆ ಮಾಡಿತು. ಪ್ರಮುಖ ಕೈಗಾರಿಕೆಗಳನ್ನು – ಜಲ-ವಿದ್ಯುತ್ (hydro-electric) ಉತ್ಪಾದನಾ ಕೇಂದ್ರಗಳ ಬೆಳವಣಿಗೆ, ರಾಸಾಯನಿಕ ಗೊಬ್ಬರದ ಕಾರ್ಖಾನೆಗಳು – ಮುಂತಾದ ಜೀವನಮಟ್ಟವನ್ನು ಎತ್ತರಿಸುವ ಪ್ರಮುಖ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಿತು. ಸ್ವಲ್ಪ ಕಾಲದಲ್ಲಿ ಯೂರೋಪ್ ಆರ್ಥಿಕವಾಗಿ ಚೇತರಿಸಿಕೊಂಡಿದ್ದಲ್ಲದೆ ಯುದ್ಧಪೂರ್ವದ ಉತ್ಪಾದನಾ ಮಟ್ಟವನ್ನು ಮೀರಿಸಿದವು.

ಉತ್ತರ ಅಟ್ಲಾಂಟಿಕ್ ಕರಾರು

೧೯೪೯ರಲ್ಲಿ ಸಂಯುಕ್ತ ಸಂಸ್ಥಾನಗಳು ಇತರ ಮಿತ್ರರಾಷ್ಟ್ರಗಳೊಡನೆ ಸೈನ್ಯ ಸಹಾಯ ಕರಾರಿನ (ಉತ್ತರ ಅಟ್ಲಾಂಟಿಕ್ ಕರಾರು) ಸದಸ್ಯ ರಾಷ್ಟ್ರವಾದುವು. ಸಂಯುಕ್ತ ಸಂಸ್ಥಾನಗಳು ಇದೇ ಮೊದಲಬಾರಿಗೆ ಶಾಂತಿ ಕಾಲದಲ್ಲಿ ಯೂರೋಪಿಯನ್ ರಾಷ್ಟ್ರಗಳೊಡನೆ ಕರಾರಿಗೆ ಸೇರಿದವು. ಸೋವಿಯೆಟ್ ಒಕ್ಕೂಟದ ಆಕ್ರಮಣಕಾರಿ ಧೋರಣೆ ಯೂರೋಪಿನಲ್ಲಿ ಅಸ್ಥಿರತೆಯ ಪರಿಸ್ಥಿತಿ ಉಂಟುಮಾಡಿತ್ತು. ಇದನ್ನು ತಡೆಗಟ್ಟುವುದು ಸಾಧ್ಯವಾಗದ ಕಾರಣ ಯೂರೋಪಿಯನ್ ದೇಶಗಳು ಪ್ರಬಲವಾದ ಸೈನ್ಯ ಕರಾರು ಮಾಡಿಕೊಳ್ಳುವುದು ಅಗತ್ಯವಾಗಿತ್ತು. ಉತ್ತರ ಅಟ್ಲಾಂಟಿಕ್ ಕರಾರಿಗೆ ೧೨ ದೇಶಗಳು ರುಜು ಮಾಡಿದ್ದವು. ಯಾವ ಒಂದು ರುಜು ಮಾಡಿದ ದೇಶದ ಮೇಲೆ ಬೇರೆ ಯಾವ ದೇಶವಾದರೂ ಆಕ್ರಮಣ ಮಾಡಿದರೆ ಉಳಿದ ೧೧ ದೇಶಗಳು ಆಕ್ರಮಣ ಮಾಡಿದಂತಹ ದೇಶದ ಮೇಲೆ ಯುದ್ಧ ಸಾರಬೇಕಾಗುವ ಜವಾಬ್ದಾರಿಯನ್ನು ಈ ಕರಾರು ನಿಗದಿಪಡಿಸಿತ್ತು. ಈ ಕರಾರನ್ನು ಜಾರಿಗೆ ತರಲು ಉತ್ತರ ಅಟ್ಲಾಂಟಿಕ್ ಕರಾರು ಸಂಸ್ಥೆಯನ್ನು (North Atlantic Treaty Organization) ಸ್ಥಾಪಿಸಿ, ಸದಸ್ಯ ರಾಷ್ಟ್ರಗಳ ಸೇನಾದಳಗಳನ್ನು ಒಟ್ಟುಗೂಡಿಸಿ, ಆಧುನಿಕ ಶಸ್ತ್ರಾಸ್ತ್ರಗಳಿಂದ ಕೂಡಿದ ಸುಸಜ್ಜಿತ ಸೈನ್ಯವನ್ನು ತಯಾರಿಸಿದರು. ಅಧ್ಯಕ್ಷ ಟ್ರೂಮನ್ ಜನರಲ್ ಐಸೆನ್‌ಹಾವರ್‌ನನ್ನು ಪಶ್ಚಿಮ ಪ್ರಜಾರಾಜ್ಯ ಸೇನಾದಳಗಳ ಮಹಾದಂಡನಾಯಕನನ್ನಾಗಿ ನೇಮಿಸಿದನು. ೧೯೫೭ರಲ್ಲಿ NATO ಸದಸ್ಯರಾಷ್ಟ್ರಗಳು ಅಣು ಅಸ್ತ್ರ ಶಸ್ತ್ರಗಳನ್ನು ಶೇಖರಿಸಿಡಲು ಪರಸ್ಪರ ಒಪ್ಪಂದಕ್ಕೆ ಬಂದವು.

೧೯೪೫ರಲ್ಲಿ ಟ್ರೂಮನ್ ಅಭಿವೃದ್ಧಿಗೊಳ್ಳುತ್ತಿರುವ ದೇಶಗಳಿಗೆ ತಾಂತ್ರಿಕ ಮತ್ತು ವೈಜ್ಞಾನಿಕ ನೆರವು ನೀಡಲು ಹಣವನ್ನು ಮೀಸಲಾಗಿಡಲು ಕಾಂಗ್ರೆಸ್ಸಿಗೆ ಮನವಿ ಸಲ್ಲಿಸಿದನು. ಇದರಿಂದುಂಟಾಗುವ ಜೀವನಮಟ್ಟದ ಏರಿಕೆ ಆ ದೇಶಗಳನ್ನು ಕಮ್ಯೂನಿಸ್ಟರ ಆಮಿಷಗಳಿಗೆ ಬಲಿಯಾಗದಂತೆ ಮಾಡುತ್ತದೆ ಎಂದು ಟ್ರೂಮನ್ ನಂಬಿದ್ದನು. ಯೂರೋಪಿನ ಪ್ರಮುಖ ರಾಷ್ಟ್ರಗಳು NATO ಸಂಸ್ಥೆಯ ನೆರಳಿನಲ್ಲಿ ನೆಮ್ಮದಿಯಾಗಿದ್ದ ಸಮಯದಲ್ಲಿ ಏಷ್ಯಾ ಭೂಖಂಡದ ಮೇಲೆ ಕಮ್ಯೂನಿಸಂನ 'ಕಬ್ಬಿಣದ ತೆರೆ' ಇಳಿಯುತ್ತಿತ್ತು. ದ್ವಿತೀಯ ಜಾಗತಿಕ ಯುದ್ಧಾನಂತರ ಚೈನಾ ದೇಶದ ವಿದ್ಯಮಾನಗಳು ಅಮೆರಿಕನ್ನರಿಗೆ ನಿರಾಶೆ ಉಂಟು ಮಾಡಿದವು. ಆಕ್ರಮಣಕಾರಿ ಜಪಾನನ್ನು ಎದುರಿಸಿ ಹೋರಾಡಲು ಚೈನಾಕ್ಕೆ ಅಮೆರಿಕ ಎಲ್ಲ ರೀತಿಯ ನೆರವು ನೀಡಿತ್ತು. ಜಪಾನ್ ಜಾಗತಿಕ ಯುದ್ಧದಲ್ಲಿ ಸೋತು ಶರಣಾದ ಮೇಲೆ ಚೈನಾ ದೇಶ ಕಮ್ಯೂನಿಸ್ಟರ ವಶವಾಯಿತು. ಇದರಿಂದಾಗಿ ಅಮೆರಿಕ ಏಷ್ಯಾದಲ್ಲಿ ಒಂದು ಪ್ರಬಲ ಮಿತ್ರರಾಷ್ಟ್ರವನ್ನು ಕಳೆದುಕೊಂಡಿತು. ಜನರಲಿಸ್ಸೊ ಚಿಯಾಂಗ್ ಕೈಷೇಕ್‌ನ ರಾಷ್ಟ್ರೀಯ ಸರ್ಕಾರ (Nationalist Government) ಅಸಮರ್ಥತೆ, ಹಣದುಬ್ಬರ, ಭ್ರಷ್ಟಾಚಾರ ಇವುಗಳಿಂದಾಗಿ ಮತ್ತು ತುರ್ತಾದ ಸಮಾಜ ಸುಧಾರಣೆಗಳನ್ನು ಮಾಡದೆ ಹೋಗಿದ್ದು, ಕಮ್ಯೂನಿಸ್ಟರ ದಾಳಿಯನ್ನು ಎದುರಿಸಲಾರದೆ ಹೋಯಿತು. ಗೆಲ್ಲುವ ಭರವಸೆ

ಇಲ್ಲದ ಚೈನಾದ ಅಂತರ್ಯುದ್ಧದಲ್ಲಿ ಅಮೆರಿಕ ಮಧ್ಯೆ ಪ್ರವೇಶಿಸಲು ಇಷ್ಟಪಡಲಿಲ್ಲ. ೧೯೪೬ರಲ್ಲಿ ಅಮೆರಿಕದ ಪ್ರತಿನಿಧಿಯಾಗಿ ಚೈನಾಕ್ಕೆ ಹೋಗಿದ್ದ ಜಾರ್ಜ್ ಮಾರ್ಷಲ್ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳ ಮೂಲಕ ಕಮ್ಯೂನಿಸಂ ತಡೆಗಟ್ಟುವ ಯೋಜನೆಗೆ ಚಿಯಾಂಗ್ ಕೈಷೆಕ್ ಅಗತ್ಯವಾದ ಸಹಕಾರ ನೀಡಲಿಲ್ಲ. ಕಾಲ ಸರಿದಂತೆ ರಾಷ್ಟ್ರೀಯ ಚೈನಾ ಅವನತಿಗೊಳ್ಳುತ್ತಾ ಹೋಯಿತು. ಸೋವಿಯೆಟ್ ಒಕ್ಕೂಟದ ಸಹಾಯದಿಂದ ಕಮ್ಯೂನಿಸ್ಟ್ ನಾಯಕ ಮಾವೊ ತ್ಸೆ ತುಂಗ್ (Mao Tse-Tung) ಬಲಿಷ್ಠ ಮತ್ತು ಪ್ರಭಾವಶಾಲಿಯಾದ ರಾಜಕೀಯ ಧುರೀಣನಾಗಿ ಅಪಾರ ಸಂಖ್ಯೆಯ ಸೈನ್ಯದ ದಂಡನಾಯಕನಾಗಿ ಬೆಳೆದನು. ಅವನ ಸುಸಜ್ಜಿತವಾದ ಸೈನ್ಯ ಕ್ರಮೇಣ ಒಂದೊಂದೇ ಪ್ರಾಂತವನ್ನು ಆಕ್ರಮಣ ಮಾಡುತ್ತ ಕೊನೆಗೆ ೧೯೫೦ರಲ್ಲಿ ಸಂಪೂರ್ಣ ಚೈನಾ ರಾಷ್ಟ್ರವನ್ನು ಕೈವಶ ಮಾಡಿಕೊಂಡಿತು. ಚಿಯಾಂಗ್ ಕೈಷೇಕನು ತನ್ನ ಅನುಯಾಯಿಗಳೊಡನೆ ಓಡಿಹೋಗಿ ಫಾರ್ಮೋಸಾ ದ್ವೀಪವನ್ನು ಸೇರಿ ಅಲ್ಲಿ ಚೈನಾ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಿದನು. ಮಾವ್ತೋ ತ್ಸೆ ತುಂಗ್‌ನಿಗೆ ಚಿಯಾಂಗ್ ಕೈಷೇಕ್‌ನ ರಾಷ್ಟ್ರೀಯ ಸರ್ಕಾರವನ್ನು ಛಿದ್ರಗೊಳಿಸಿ ಫಾರ್ಮೋಸಾ ದ್ವೀಪವನ್ನು ವಶಪಡಿಸಿಕೊಳ್ಳುವುದು ಕಷ್ಟವೇನೂ ಆಗುತ್ತಿರಲಿಲ್ಲ. ಆದರೆ ಫಾರ್ಮೋಸಾ ದ್ವೀಪ ಇಂದಿಗೂ ಕಮ್ಯೂನಿಸ್ಟ್ ಚೈನಾದ ವಶವಾಗದೆ ಉಳಿದಿರುವುದಕ್ಕೆ ಕಾರಣ ಅದರ ಸರ್ಕಾರ ಸಂಯುಕ್ತ ಸಂಸ್ಥಾನಗಳ ರಕ್ಷಣೆಗೆ ಒಳಪಟ್ಟಿದ್ದರಿಂದ. ಫಾರ್ಮೋಸ ಚೈನಾದ ಅವಿಭಾಜ್ಯ ಅಂಗವೆಂದು ಪರಿಗಣಿಸ ಲಾಗದಿದ್ದರೂ ತಾನು ಪ್ರಜಾರಾಜ್ಯವಾಗಿರಬೇಕೆಂದು ಬಯಸಿತ್ತು. ಇದು ಅಮೆರಿಕ ಮತ್ತು ಚೈನಾಗಳ ನಡುವೆ 'ಶೀತಲ ಯುದ್ಧ'ಕ್ಕೆ ಕಾರಣವಾಯಿತು. ಈ ಯುದ್ಧ ಇದುವರೆಗೂ ಮುಗಿದಿಲ್ಲ.

ಕೊರಿಯಾದ ಕತೆ

೧೯೦೫ರಲ್ಲಿ ನಡೆದ ರಷ್ಯಾ ಮತ್ತು ಜಪಾನ್ ಯುದ್ಧದಲ್ಲಿ ಜಯಗಳಿಸಿದ ಜಪಾನ್ ಕೊರಿಯಾ ದೇಶವನ್ನು ಕಬಳಿಸಿ ತನ್ನದಾಗಿಮಾಡಿಕೊಂಡಿತು. ೧೯೪೫ರಲ್ಲಿ ಜಪಾನ್ ಜಾಗತಿಕ ಯುದ್ಧದಲ್ಲಿ ಸೋತು ಶರಣಾದಾಗ ಅದು ಕಬಳಿಸಿದ್ದ ಕೊರಿಯಾಕ್ಕೆ ಸ್ವಾತಂತ್ರ್ಯ ದೊರಕಿತು. ಯುದ್ಧಾನಂತರ ನಡೆದ 'ಹಂಚಿಕೆ'ಯ ಪ್ರಕಾರ ಸೋವಿಯೆಟ್ ಒಕ್ಕೂಟ ಮತ್ತು ಸಂಯುಕ್ತ ಸಂಸ್ಥಾನಗಳು ಕೊರಿಯಾ ದೇಶವನ್ನು ೩೮ನೆಯ ಸಮಾನಾಂತರ ರೇಖೆಯನ್ನು ಅನುಸರಿಸಿ ಉತ್ತರ ಮತ್ತು ದಕ್ಷಿಣ ಕೊರಿಯಾಗಳಾಗಿ ವಿಭಜಿಸಿದರು. ಇದು ಕೊರಿಯಾ ಗಣರಾಜ್ಯವಾಗುವವರೆಗೆ ಮಾತ್ರ ಅಸ್ತಿತ್ವದಲ್ಲಿರುವ ತಾತ್ಕಾಲಿಕ ವ್ಯವಸ್ಥೆ ಎಂದು ವಿಶ್ವಸಂಸ್ಥೆಯ ಪ್ರಮುಖ ರಾಷ್ಟ್ರಗಳು ಒಪ್ಪಿಕೊಂಡಿದ್ದವು. ೧೯೪೮ರಲ್ಲಿ ಸೋವಿಯೆಟ್ ಒಕ್ಕೂಟ ಉತ್ತರ ಕೊರಿಯಾದಲ್ಲಿ ಕಮ್ಯೂನಿಸ್ಟ್ ಸರ್ಕಾರವನ್ನು ಸ್ಥಾಪಿಸಿತು. ಇದು ಚುನಾವಣೆಯ ಮೂಲಕ ಪ್ರಜಾರಾಜ್ಯ ಸ್ಥಾಪಿಸಬೇಕೆಂಬ ಒಪ್ಪಂದದ ಉಲ್ಲಂಘನೆ ಯಾಗಿತ್ತು. ಆದರೆ ಸೋವಿಯೆಟ್ ಒಕ್ಕೂಟದ ಸ್ಟಾಲಿನ್ ಒಳಸಂಚಿನಿಂದ ಉತ್ತರ ಮತ್ತು

ದಕ್ಷಿಣ ಕೊರಿಯಾಗಳ ನಡುವೆ ವೈಷಮ್ಯ ಬೆಳೆಸಿ – ಇಬ್ಬರ ಜಗಳ ಮೂರನೆಯವನಿಗೆ ಲಾಭ ಎನ್ನುವಂತೆ – ಎರಡು ಕೊರಿಯಾಗಳು ಯುದ್ಧಸಿದ್ಧತೆ ಮಾಡಿಕೊಳ್ಳುವಂತಾಯಿತು.

ದಕ್ಷಿಣ ಕೊರಿಯಾದಲ್ಲಿ ಸಿಂಗ್‌ಮನ್ ರ್ಹೀ (Sung man Rhee) ಸರ್ಕಾರ ರಚಿಸಿದನು. ಆ ಸರ್ಕಾರವನ್ನು ವಿಶ್ವಸಂಸ್ಥೆಯ ಪ್ರಮುಖ ರಾಷ್ಟ್ರಗಳು ಅನುಮೋದಿಸಿದವು. ರ್ಹೀಯ ಸರ್ಕಾರ ಸ್ಥಾಪನೆಯಾಗಿ ಸಮಾಜದಲ್ಲಿ ಪರಿಸ್ಥಿತಿ ಸುಧಾರಿಸಿದ ಮೇಲೆ ೧೯೪೯ರಲ್ಲಿ ಅಮೆರಿಕ ತನ್ನ ಸೈನ್ಯವನ್ನು ವಾಪಸ್ಸು ಕರೆಸಿಕೊಂಡಿತು. ರ್ಹೀಯ ಸರ್ಕಾರದ ನಿಸ್ಸಹಾಯಕ ಸ್ಥಿತಿಯನ್ನು ತನ್ನ ಪ್ರಯೋಜನಕ್ಕೆ ಉಪಯೋಗಿಸಿಕೊಳ್ಳಲು ಸೋವಿಯೆಟ್ ಸೈನ್ಯ ತಯಾರಿ ನಡೆಸಿ, ೧೯೫೦ರಲ್ಲಿ ಉತ್ತರ ಕೊರಿಯಾದ ಶಸ್ತ್ರಸಜ್ಜಿತ ಸೈನ್ಯ ದಕ್ಷಿಣ ಕೊರಿಯಾವನ್ನು ಆಕ್ರಮಣ ಮಾಡಿತು. ವಿಶ್ವಸಂಸ್ಥೆಯ ರಕ್ಷಣಾ ಸಮಿತಿ (Security Council) ಸಭೆ ಸೇರಿ ಉತ್ತರ ಕೊರಿಯಾ ಆಕ್ರಮಣಕಾರಿ ಎಂದು ನಿರ್ಣಯಿಸಿ ಕೂಡಲೇ ಪಡೆಗಳನ್ನು ವಾಪಸ್ಸು ಕರೆಸಿಕೊಂಡು ಶಾಂತಿಸ್ಥಾಪನೆ ಮಾಡಬೇಕೆಂದು ಉತ್ತರ ಕೊರಿಯಾಕ್ಕೆ ಸಲಹೆ ಮಾಡಿತು. ಅಧ್ಯಕ್ಷ ಟ್ರೂಮನ್ ವಿಶ್ವಸಂಸ್ಥೆಯ ಮಸೂದೆಯನ್ನು ಬೆಂಬಲಿಸುವ ನಿರ್ಧಾರವನ್ನು ತಕ್ಷಣ ಕೈಗೊಂಡು ಅಮೆರಿಕದ ವಾಯುಪಡೆ ಮತ್ತು ನೌಕಾಪಡೆಗಳಿಗೆ ದಕ್ಷಿಣ ಕೊರಿಯಾದ ರಕ್ಷಣೆ ಮಾಡಬೇಕೆಂದು ಆಜ್ಞಾಪಿಸಿದನು. ಜಪಾನಿನ ನೆಲೆಯಲ್ಲಿ ಇಟ್ಟಿದ್ದ ಸೇನಾಪಡೆಯನ್ನು ದಕ್ಷಿಣ ಕೊರಿಯಾಕ್ಕೆ ತ್ವರಿತವಾಗಿ ರವಾನಿಸಿದರು. ಒಂದು ವೇಳೆ ವಿಶ್ವಸಂಸ್ಥೆ ಏನೂ ಮಾಡದೆ ಹೋಗಿದ್ದರೆ, ಉತ್ತರ ಕೊರಿಯಾ ಮತ್ತಷ್ಟು ಪ್ರದೇಶವನ್ನು ಆಕ್ರಮಿಸಲು ಹವಣಿಸಿತ್ತು.

ದಾಳಿ ಪ್ರಾರಂಭವಾದ ಹಂತಗಳಲ್ಲಿ ಉತ್ತರ ಕೊರಿಯಾ ಪಡೆಗಳು ಯಶಸ್ವಿಯಾಗಿ ದಕ್ಷಿಣ ಕೊರಿಯಾದ ಮುಕ್ಕಾಲು ಭಾಗವನ್ನು ವಶಪಡಿಸಿಕೊಂಡವು. ಆಗ್ನೇಯ ದಿಕ್ಕಿನಲ್ಲಿದ್ದ ಪೂಸಾನ್ ಸರಹದ್ದಿನ ಪ್ರಾಂತದಲ್ಲಿ ಜನರಲ್ ಡಗ್ಲಾಸ್ ಮೆಕಾರ್ಥರ್‌ನ ಕೈಕೆಳಗೆ ವಿಶ್ವಸಂಸ್ಥೆಯ ಸೇನೆ ಭೀಕರ ಹೋರಾಟ ನಡೆಸಿ, ಉತ್ತರ ಕೊರಿಯಾದ ಸೈನ್ಯವನ್ನು ಹಿಮ್ಮೆಟ್ಟಿಸಿ, ಹೆಚ್ಚು ಕಡಿಮೆ ಉತ್ತರ ಕೊರಿಯಾದ ೩/೪ ಭಾಗವನ್ನು ವಶಮಾಡಿಕೊಂಡಿತು. ೧೯೫೦ರ ನವೆಂಬರ್ ತಿಂಗಳ ಕೊನೆಯಲ್ಲಿ ಕಮ್ಯೂನಿಸ್ಟ್ ಚೈನಾದ ಪಡೆಗಳು ಯಾಲೂ ನದಿಯ ದಂಡೆಯಿಂದ ನುಗ್ಗಿ ಬಂದು ಮೆಕಾರ್ಥರನ ಸೈನ್ಯದ ಮೇಲೆ ದಾಳಿ ಮಾಡಿ ೩೮ನೆಯ ಸಮಾನಾಂತರ ರೇಖೆಯಾಚೆಗೆ ಹಿಮ್ಮೆಟ್ಟಿಸಿದವು. ಇದೇ ಸಮಯದಲ್ಲಿ, ೧೯೫೧ರಲ್ಲಿ, ಪುನಃ ಶಾಂತಿ ಸಂಧಾನದ ಮಾತುಕತೆಗಳು ಪ್ರಾರಂಭವಾದವು. ಆದರೂ ಉತ್ತರ ಕೊರಿಯನ್ನರು ಯುದ್ದವನ್ನು ನಿಲ್ಲಿಸುವ ಆಸಕ್ತಿ ತೋರಲಿಲ್ಲ. ಯುದ್ಧದ ಸೆರೆಯಾಳುಗಳ ವಿನಿಮಯದ ಬಗ್ಗೆ ವಾದವಿವಾದಗಳಲ್ಲಿ ಶಾಂತಿಸಂಧಾನ ಸ್ಥಗಿತಗೊಂಡಿತು. ವಿಶ್ವಸಂಸ್ಥೆ ಯುದ್ಧದ ಸೆರೆಯಾಳುಗಳ ಬಿಡುಗಡೆಯಾದ ಮೇಲೆ ಉತ್ತರ ದಕ್ಷಿಣ ಕೊರಿಯಾಗಳು ತಮ್ಮ ನಿರ್ಧಾರಗಳನ್ನು ಕೈಗೊಳ್ಳುವ ಸ್ವಾತಂತ್ರ್ಯಕೊಟ್ಟಿತು. ಈ ದೇಶಗಳ ಗಡಿಯನ್ನು

ಪುನರ್‌ವಿಮರ್ಶೆಗೆ ಒಳಪಡಿಸಿದುದರಿಂದ ಶಾಂತಿಕರಾರು ಜಾರಿಗೆ ಬರುವುದು ತಡವಾಯಿತು.

ಕೊರಿಯಾ ಯುದ್ಧದಲ್ಲಿ ಉತ್ತರದ ಪರವಾಗಿ ಹೋರಾಡಲು 'ಸ್ವಇಚ್ಛೆ'ಯಿಂದ ಬಂದ ಕಮ್ಯೂನಿಸ್ಟ್ ಸೈನಿಕರನ್ನು ಎದುರಿಸಲು ಕಮ್ಯೂನಿಸ್ಟ್ ಚೈನಾದ ಗಡಿ ದಾಟಿ ಹೋಗಬೇಕಾದುದು ಅಗತ್ಯವೆಂದು ಮೆಕಾರ್ಥರ್ ವಾದಿಸಿದನು. ಮಿತ್ರರಾಷ್ಟ್ರಗಳನ್ನು ತೃಪ್ತಿ ಪಡಿಸಲು 'ಮಿತವಾದ ಯುದ್ಧ' (Limited war) ಮಾಡಲು ನಿರ್ಧರಿಸಿದ ಅಧ್ಯಕ್ಷ ಟ್ರೂಮನ್‌ನ ಧೋರಣೆಯನ್ನು ಮೆಕಾರ್ಥರ್ ತೀವ್ರವಾಗಿ ವಿರೋಧಿಸಿದನು. ಅಧ್ಯಕ್ಷನ ಅಧಿಕಾರವನ್ನು ಪ್ರಶ್ನಿಸುವ ಮೆಕಾರ್ಥರ್‌ನ ವರ್ತನೆಯನ್ನು ಅವಿಧೇಯತೆ ಎಂದು ಪರಿಗಣಿಸಿದ ಟ್ರೂಮನ್ ಅವನನ್ನು ಅಧಿಕಾರದಿಂದ ತೆಗೆದು ಹಾಕಿದನು. ಹೀಗೆ ಉಚ್ಚಾಟನೆ ಗೊಂಡ ಮೆಕಾರ್ಥರ್ ಅಮೆರಿಕಕ್ಕೆ ವಾಪಸ್ಸಾಗಿ ರಾಜಕೀಯ ಪ್ರವೇಶ ಮಾಡಿ ಚುನಾವಣೆ ಯಲ್ಲಿ ಸ್ಪರ್ಧಿಸಿ ಗೆದ್ದು ಡೆಮೊಕ್ರಾಟಿಕ್ ಪಕ್ಷಕ್ಕೆ ಅವಮಾನ ಮಾಡಬೇಕೆಂದು ನಿರ್ಧರಿಸಿದನು. ಗಣನೀಯ ಅಮೆರಿಕನ್ನರ ಪ್ರಶಂಸೆಗೆ ಪಾತ್ರನಾಗಿ ತನ್ನ ಅನುಯಾಯಿಗಳು ಚೈನಾದೊಡನೆ ಯುದ್ಧ ಮಾಡುವುದು ಅಗತ್ಯವಾಗಿತ್ತು ಎನ್ನುವ ಧೋರಣೆಗೆ ಸಮರ್ಥನೆ ಪಡೆದನು. ಆದರೆ ಪ್ರಜಾರಾಜ್ಯದಲ್ಲಿ ರಾಜ್ಯಾಂಗದ ನಿಯಮದಂತೆ ಸೈನ್ಯ ಪ್ರಜಾಸರ್ಕಾರಕ್ಕೆ ಅಧೀನ ವಾಗಿರಬೇಕೆಂಬ ಅಂಶವನ್ನು ಮೆಕಾರ್ಥರ್ ಮತ್ತು ಅವನ ಬೆಂಬಲಿಗರು ಕಡೆಗಣಿಸಿದ್ದರು. ಪದಚ್ಯುತಿಗೊಂಡ ಮೆಕಾರ್ಥರ್ ಜಂಟಿ ಕಾಂಗ್ರೆಸ್ ಅಧಿವೇಶನವನ್ನು ಕುರಿತು ಮಾಡಿದ ಭಾಷಣ ಹೃದಯಂಗಮವಾಗಿತ್ತು: 'ಬಲಾತ್ಕಾರದಿಂದ ನಮ್ಮ ಮೇಲೆ ಯುದ್ಧ ಪ್ರಾರಂಭಿಸಿದಾಗ ನಮ್ಮ ಬಳಿ ಇರುವ ಎಲ್ಲಾ ಸಾಧನಗಳನ್ನು ಉಪಯೋಗಿಸಿ ಯುದ್ಧವನ್ನು ಕ್ಷಿಪ್ರವಾಗಿ ಕೊನೆಗಾಣಿಸಬೇಕು. ಯುದ್ಧ ಮಾಡುವುದು ಗೆಲ್ಲುವುದಕ್ಕಾಗಿ. ರಣರಂಗದಲ್ಲಿ ಶತ್ರುಗಳ ಮೇಲೆ ನಮಗಿದ್ದ ಅನುಕೂಲಗಳನ್ನು ಬಿಟ್ಟುಕೊಡುವುದು ಏಕೆ ಎಂದು ನನ್ನ ಸೈನಿಕರು ನನ್ನನ್ನು ಕೇಳಿದರು. ಅವರಿಗೆ ಉತ್ತರ ಕೊಡಲು ನನಗಾಗಲಿಲ್ಲ'. ಮೆಕಾರ್ಥರ್ ನುಡಿದ 'ಹಳೆಯ ಸೈನಿಕರು ಸಾಯುವುದಿಲ್ಲ, ಅವರು ಮಸುಕಾಗಿ ಹೋಗುತ್ತಾರೆ (Old soldiers never die, they just fade away) ನಾನು ಸೈನಿಕ ವೃತ್ತಿಯನ್ನು ಬಿಟ್ಟು ಮಸುಕಾಗಿ ಹೋಗುತ್ತೇನೆ. ನಾನೊಬ್ಬ ಹಳೆಯ ಯೋಧ. ದೇವರು ತೋರಿದ ರೀತಿಯಲ್ಲಿ ನನ್ನ ಕರ್ತವ್ಯ ಮಾಡಲು ಪ್ರಯತ್ನಪಟ್ಟೆ.' ಈ ಮಾತುಗಳು ಮಹಾದಂಡನಾಯಕನೊಬ್ಬ ಯುದ್ಧರಂಗದಿಂದ ಅವಮಾನಿತನಾಗಿ ನಿಷ್ಕ್ರಮಿಸುವುದರ ದುರಂತವನ್ನು ವ್ಯಕ್ತಪಡಿಸುತ್ತವೆ.

ಅಧ್ಯಕ್ಷ ಟ್ರೂಮನ್‌ನ ಎರಡನೆಯ ಅವಧಿಯಲ್ಲಿ ಅನೇಕ ಅಂಶಗಳು ಕೂಡಿ ಅವನ ಜನಪ್ರಿಯತೆಯನ್ನು ಕ್ಷೀಣಿಸುವಂತೆ ಮಾಡಿದವು. ಎರಡನೆಯ ಜಾಗತಿಕ ಯುದ್ಧಾನಂತರ ಸಂಪ್ರದಾಯಸ್ಥರ (Conservatives) ಪ್ರಭಾವ ಅಮೆರಿಕದ ರಾಜಕೀಯದಲ್ಲಿ ಹೆಚ್ಚುತ್ತಲಿತ್ತು. ಟ್ರೂಮನ್‌ನ ವರ್ತನೆ – ಬೈಗುಳಗಳನ್ನು ಸೇರಿಸಿ ಕಾಗದ ಬರೆಯುವುದು, ಬಹಿರಂಗವಾಗಿ ವೈಯಕ್ತಿಕ ಟೀಕೆ ಮಾಡುವುದು, ಒಟ್ಟಿನಲ್ಲಿ ಎಚ್ಚರ ವಹಿಸದೆ ಒರಟಾಗಿ

ಮಾತನಾಡುವುದು – ಇವೆಲ್ಲ ಅವನನ್ನು ಜನರಿಂದ ದೂರವಾಗುವಂತೆ ಮಾಡಿ, ಪರಕೀಯತೆಯನ್ನು ಬೆಳೆಸಿಕೊಳ್ಳುವಂತಾಯಿತು. ಕೊರಿಯಾದಲ್ಲಿ ಟ್ರೂಮನ್ ಕಮ್ಯೂನಿಸ್ಟರ ವಿರುದ್ಧ ತೆಗೆದುಕೊಂಡ ಕ್ರಮಗಳಿಂದ ಜನರ ಮೆಚ್ಚುಗೆಗೆ ಪಾತ್ರನಾಗಿದ್ದನು. ಆದರೆ ಯುದ್ಧ ಮುಂದುವರಿದು ಮೆಕಾರ್ಥರ್ ಹಗರಣ ಮುಂತಾದವು ಅವನ ಜನಪ್ರಿಯತೆ ಕುಂದುವಂತೆ ಮಾಡಿದವು. ದಕ್ಷಿಣ ಪ್ರಾಂತಗಳ ಸಂಪ್ರದಾಯಸ್ಥರು ಮತ್ತು ರಿಪಬ್ಲಿಕನ್ನರು ಸೇರಿಕೊಂಡು ಟ್ರೂಮನ್ ಮಂಡಿಸಿದ 'ನ್ಯಾಯವಾದ ಹಂಚಿಕೆ' (Fair Deal) ಕಾಂಗ್ರೆಸ್ಸಿನಲ್ಲಿ ಅನುಮೋದನೆಯಾಗದಂತೆ ತಡೆ ಒಡ್ಡುತ್ತಿದ್ದರು. ಶೀತಲ ಯುದ್ಧದಲ್ಲಿ ಕಮ್ಯೂನಿಸ್ಟರ ಕೈ ಮೇಲಾಗಿ ಚೈನಾ ದೇಶವನ್ನು ಕಳೆದುಕೊಂಡಿದ್ದಕ್ಕೆ ಡೆಮೊಕ್ರಾಟಿಕ್ ಪಕ್ಷದ ರಾಜಕೀಯವೇ ಕಾರಣವೆಂದು ದೂರಿದರು. ಅಲ್ಲದೆ ಡೆಮೊಕ್ರಾಟಿಕ್ ಸರ್ಕಾರ ಕಮ್ಯೂನಿಸ್ಟ್ ಸಹಾನುಭೂತಿಯುಳ್ಳದ್ದು ಎಂದೂ ಆಪಾದಿಸಿದರು. ಟ್ರೂಮನ್‌ನ ಜನಪ್ರಿಯತೆ ಕುಗ್ಗಲು ಮತ್ತೊಂದು ಕಾರಣ – ಸರ್ಕಾರಿ ಇಲಾಖೆಗಳಲ್ಲಿ ವ್ಯಾಪಕವಾಗಿ ಹಬ್ಬುತ್ತಿದ್ದ ಭ್ರಷ್ಟಾಚಾರ. ೧೯೫೨ರಲ್ಲಿ ಉಕ್ಕು ಉತ್ಪಾದನೆಯ ಕಾರ್ಖಾನೆಯ ಕಾರ್ಮಿಕರು ಮುಷ್ಕರ ಹೂಡಿದಾಗ ಕಾರ್ಖಾನೆಯನ್ನು ಮುಚ್ಚಲಾಯಿತು. ಆಗ ಟ್ರೂಮನ್ ಆ ಕಾರ್ಖಾನೆಯನ್ನು ವಶಪಡಿಸಿಕೊಳ್ಳಲು ಫೆಡರಲ್ ಸೈನ್ಯಕ್ಕೆ ಆಜ್ಞಾಪಿಸಿದನು. ಅಂತೆಯೇ ಸೈನ್ಯ ಆ ಉತ್ಪಾದನಾ ಕೇಂದ್ರವನ್ನು ವಶಪಡಿಸಿಕೊಂಡು, ತಾನೇ ನಡೆಸಲು ಪ್ರಾರಂಭಿಸಿತು. ಈ ವಿವಾದವನ್ನು ಕಾರ್ಖಾನೆಯ ಮಾಲೀಕರು ಶ್ರೇಷ್ಠ ನ್ಯಾಯಾಲಯಕ್ಕೆ ಒಪ್ಪಿಸಿದರು. ಅದನ್ನು ಪರಿಶೀಲಿಸಿದ ನ್ಯಾಯಾಲಯ ಟ್ರೂಮನ್ ಮಾಡಿದು ತಪ್ಪು ಎಂದು ನಿರ್ಣಯಿಸಿ, ವಶಪಡಿಸಿಕೊಂಡ ಖಾಸಗಿ ಆಸ್ತಿಯನ್ನು ಮಾಲೀಕರಿಗೆ ವಾಪಸ್ಸು ಮಾಡುವಂತೆ ತೀರ್ಪು ನೀಡಿತು. ಈ ಹಗಾರಣದಿಂದಾಗಿ ಟ್ರೂಮನ್ ಮಾಲೀಕರ ಹಾಗೂ ಶ್ರೀಮಂತವರ್ಗದ ದ್ವೇಷ ಕಟ್ಟಿಕೊಂಡನು.

ಟ್ರೂಮನ್ ಆಡಳಿತದ ಕೊನೆಯ ಭಾಗದಲ್ಲಿ ಅಮೆರಿಕನ್ನರು ಕಮ್ಯೂನಿಸಂ ಭಯದಿಂದ ಪರಿತಪಿಸಿದರು. ದೇಶವನ್ನು ಆವರಿಸಿದ್ದ ಈ ಭಯ, ಧಗಿಸುವ ಬೆಂಕಿಗೆ ಪೆಟ್ರೋಲ್ ಸುರಿದಂತೆ ಕಮ್ಯೂನಿಸಂನ ಯಶಸ್ಸಿನ ಸುದ್ದಿಗಳು – ಚೈನಾದಲ್ಲಿ ಯಶಸ್ವಿಯಾದ ಕಮ್ಯೂನಿಸ್ಟ್ ಕ್ರಾಂತಿ, ಸೋವಿಯೆಟ್ ಒಕ್ಕೂಟ ಅಣುಬಾಂಬ್ ಸ್ಫೋಟಿಸಿದ್ದು, ಕೊರಿಯಾದಲ್ಲಿ ಕಮ್ಯೂನಿಸ್ಟರ ದಾಳಿ – ಇವೆಲ್ಲ ಬಹುತೇಕ ಅಮೆರಿಕನ್ನರಿಗೆ ಕಮ್ಯೂನಿಸಂ ಜಗತ್ತನ್ನು ಆವರಿಸಿಕೊಳ್ಳುವುದರ ಸಂಕೇತವಾಗಿ ತೋರಿದವು. ಇಂಥ ಉದ್ರೇಕದ ಪರಿಸ್ಥಿತಿಯಲ್ಲಿ ಅಮೆರಿಕದಲ್ಲಿ ಕಮ್ಯೂನಿಸ್ಟರ ಹಾವಳಿ ಹೆಚ್ಚುತ್ತಿದೆ ಎನ್ನುವುದು ಉತ್ಪ್ರೇಕ್ಷೆ, ಆಧಾರವಿಲ್ಲದ ವದಂತಿ ಎಂದು ಹೇಳುವ ಧೈರ್ಯ ಯಾರಿಗೂ ಇರಲಿಲ್ಲ. ಟ್ರೂಮನ್ ಕಮ್ಯೂನಿಸಂನ ವಿರೋಧಿಯಾಗಿದ್ದರೂ ಅಮೆರಿಕದ ಆಂತರಿಕ ವ್ಯವಹಾರಗಳಲ್ಲಿ ಮತ್ತು ಸರ್ಕಾರದ ಶಾಖೆಗಳಲ್ಲಿ ಕಮ್ಯೂನಿಸಂ ತನ್ನ ಪ್ರಭಾವ ಬೀರಿದೆ ಎನ್ನುವುದರ ಬಗ್ಗೆ ಅವನಿಗೆ ನಂಬಿಕೆ ಇರಲಿಲ್ಲ. ಕಮ್ಯೂನಿಸಂ ಬಗ್ಗೆ ಜನರು ಭಯಪಡಬೇಕಾದ ಪ್ರಮೇಯವಿಲ್ಲ ಎಂದು

ಅವನು ವಾದಿಸುತ್ತಿದ್ದನು. ಆದರೂ ರಿಪಬ್ಲಿಕನ್ನರ ಟೀಕೆಯನ್ನು ನಿಲ್ಲಿಸಲು ೧೯೪೭ರಲ್ಲಿ 'ನೌಕರರ ನಿಷ್ಠೆ'ಯನ್ನು ತನಿಖೆ ಮಾಡಲು ತಾತ್ಕಾಲಿಕ ಸಮಿತಿಯೊಂದನ್ನು ನೇಮಿಸಿದನು. ಈ ಸಮಿತಿಯ ವರದಿ ಕಮ್ಯೂನಿಸ್ಟರು ಸರ್ಕಾರಿ ಇಲಾಖೆಗಳಲ್ಲಿ ವ್ಯಾಪಕವಾಗಿ ಹುದುಗಿದ್ದಾರೆ, ಆದ್ದರಿಂದ ರಕ್ಷಣೆಯನ್ನು ಬಿಗಿಗೊಳಿಸಬೇಕು ಎಂದು ಸಲಹೆ ನೀಡಿತು. ಸಮಿತಿಯ ವರದಿ ಸಾಕ್ಷಿ-ಆಧಾರಗಳನ್ನು ಒದಗಿಸದೆ ಹೋದರೂ ಅದರ ಸಲಹೆಗಳನ್ನು ಕಾಂಗ್ರೆಸ್ ಒಪ್ಪಿಕೊಂಡಿತು. ಪರಿಣಾಮವಾಗಿ ೧೯೪೭ರಲ್ಲಿ ಫೆಡರಲ್ ನೌಕರರ ನಿಷ್ಠೆಯನ್ನು ತನಿಖೆ ಮಾಡುವ ಕಾರ್ಯಕ್ರಮವನ್ನು ಫೆಡರಲ್ ಸರ್ಕಾರದ ಇಲಾಖೆಗಳು ಅನುಷ್ಠಾನಕ್ಕೆ ತರಬೇಕೆಂದು ಆಜ್ಞಾಪಿಸಲಾಯಿತು. ಇದರ ಪ್ರಕಾರ ಎಫ್.ಬಿ.ಐ (F.B.I.) ಎಲ್ಲ ಸರ್ಕಾರಿ ನೌಕರರ ತನಿಖೆ ಮಾಡಿ ಅವರಲ್ಲಿ ಏನಾದರೂ ನ್ಯೂನತೆಗಳಿದ್ದಲ್ಲಿ ಅದನ್ನು ಇಲಾಖೆಯ ಪ್ರಮುಖರಿಗೆ ವರದಿ ಮಾಡಬೇಕಿತ್ತು. ನೌಕರ ತಪ್ಪಿತಸ್ಥನೆಂದು ಸಾಬೀತಾದರೆ ಅವನನ್ನು ಕೆಲಸದಿಂದ ವಜಾ ಮಾಡುವುದು ಅನಿವಾರ್ಯವಾಗಿತ್ತು. ೧೯೫೧ರ ಹೊತ್ತಿಗೆ ೨೦೦೦ಕ್ಕಿಂತ ಹೆಚ್ಚಿನ ಫೆಡರಲ್ ನೌಕರರನ್ನು ಕಡ್ಡಾಯವಾಗಿ ರಾಜೀನಾಮೆ ಕೊಡುವಂತೆ ಆಜ್ಞಾಪಿಸಿದ್ದರು. ೫೬೦ ಮಂದಿ ನೌಕರರನ್ನು ಕೆಲಸದಿಂದ ತೆಗೆದು ಹಾಕಿದ್ದರು. ಸರ್ಕಾರದ ವಿದೇಶಾಂಗ ನೀತಿಗೆ ವಿರೋಧ ಭಾವನೆ ವ್ಯಕ್ತಪಡಿಸಿದ ನೌಕರರು ಹಾಗೂ ನಿಷ್ಠಾವಂತರಲ್ಲವೆನ್ನುವ ಅನುಮಾನಕ್ಕೆ ಗುರಿಯಾದ ನೌಕರರನ್ನು ಕೆಲಸದಿಂದ ವಜಾ ಮಾಡುತ್ತಿದ್ದರು.

೧೯೪೯ರವರೆಗೆ ಅಮೆರಿಕನ್ನರಿಗೆ ತಮ್ಮಲ್ಲಿ ಅಣುಬಾಂಬ್ ಇರುವುದರಿಂದ ತಾವು ಸುರಕ್ಷಿತರಾಗಿದ್ದೇವೆಂಬ ಭರವಸೆ ಇತ್ತು. ಸೋವಿಯೆಟ್ ರಷ್ಯಾ ಅಣುಬಾಂಬ್ ಆಸ್ಫೋಟಿಸಿದ ಮೇಲೆ ಅದು ಬಹಳ ಕಾಲ ಉಳಿಯಲಿಲ್ಲ. ೧೯೫೦ರಲ್ಲಿ ಕ್ಲಾಸ್ ಫ್ಯೂಕ್ಸ್ (Klaus Fuchs) ಎಂಬ ಅಣುವಿಜ್ಞಾನಿಯನ್ನು (Nuclear Physicist) ಅಣುವಿಜ್ಞಾನದ ಗುಟ್ಟಿನ ವಿಷಯಗಳನ್ನು ರಷ್ಯನ್ನರಿಗೆ ತಿಳಿಸಿರುವುದಾಗಿ ಒಪ್ಪಿಕೊಂಡನೆಂದು ಸೆರೆ ಹಿಡಿದರು. ಫ್ಯೂಕಸ್‌ನ ಗುಪ್ತಾಚಾರದ ಪ್ರಕರಣ ಅಮೆರಿಕದಲ್ಲಿ ಗುಪ್ತಚಾರಿಗಳ ಶೋಧನೆಗೆ ಕಾರಣವಾಯಿತು. ಇದರಿಂದಾಗಿ ಜೂಲಿಯಸ್ ಮತ್ತು ಎತೆಲ್ ರೋಸೆನ್‌ಬರ್ಗ್ ದಂಪತಿಗಳನ್ನು ಅಣುವಿಜ್ಞಾನದ ರಹಸ್ಯಗಳನ್ನು ಸೋವಿಯೆಟ್ ಒಕ್ಕೂಟಕ್ಕೆ ಗುಪ್ತವಾಗಿ ರವಾನಿಸಿದರೆಂದು ಆಪಾದಿಸಿ ವಿಚಾರಣೆಗೆ ಗುರಿಪಡಿಸಿದರು. ರೋಸೆನ್‌ಬರ್ಗ್ ದಂಪತಿಗಳು ತಾವು ನಿರ್ದೋಷಿಗಳೆಂದು ವಾದಿಸಿದರೂ ಪ್ರಯೋಜನವಾಗದೆ ಅವರಿಗೆ ಮರಣದಂಡನೆ ವಿಧಿಸಿ, ೧೯೫೩ರ ಜೂನ್ ತಿಂಗಳಲ್ಲಿ ಅವರನ್ನು ಗಲ್ಲಿಗೇರಿಸಲಾಯಿತು. ಕಡೆಯ ಗಳಿಗೆಯವರೆಗೂ ಆ ದಂಪತಿಗಳು ತಾವು ತಪ್ಪಿತಸ್ಥರಲ್ಲವೆಂದು ವಿನಂತಿಸಿಕೊಳ್ಳುತ್ತಿದ್ದರು.

ಕಾಂಗ್ರೆಸ್ ಹೀಗೆ ವಿಧ್ವಂಸಕ ಕೃತ್ಯಗಳ ಪ್ರತ್ಯೇಕ ತನಿಖೆಯನ್ನು ಆರಂಭಿಸಿ, ಮಾಜಿ ಕಮ್ಯೂನಿಸ್ಟ್ ಏಜೆಂಟರುಗಳ ಸಾಕ್ಷಿಯ ಆಧಾರದ ಮೇಲೆ 'ಅಮೆರಿಕನ್ನರಿಗೆ ಹೊರತಾದ' ಚಟುವಟಿಕೆಗಳನ್ನು ತನಿಖೆ ಮಾಡುವ ಸಮಿತಿಯನ್ನು ಸ್ಥಾಪಿಸಿತು. ಇದು ಫೆಡರಲ್

ಸರ್ಕಾರದ ಮೇಲಿನಮಟ್ಟದ ಅಧಿಕಾರಿಗಳು ರಷ್ಯಾದ ಪರವಾದ ಚಟುವಟಿಕೆಗಳಲ್ಲಿ ನಿರತರಾಗಿರುವುದನ್ನು ಪತ್ತೆ ಹಚ್ಚಿತು. ಆ್ಯಲ್ಗರ್ ಹಿಸ್ಸ್ (Alger Hiss) ಎನ್ನುವ ಗೌರವಾನ್ವಿತನಾದ ವಿದೇಶಾಂಗ ಇಲಾಖೆಯ ಅಧಿಕಾರಿಯನ್ನು ಕಮ್ಯೂನಿಸ್ಟ್ ಏಜೆಂಟನೆಂದು ಆಪಾದಿಸಿದರು. ಈ ತನಿಖೆಯ ಸಮಿತಿಯ ಮುಖ್ಯಸ್ಥನಾದವನು ಕ್ಯಾಲಿಫೋರ್ನಿಯಾದ ಕಾಂಗ್ರೆಸ್ ಸದಸ್ಯನಾಗಿದ್ದ ರಿಚರ್ಡ್ ನಿಕ್ಸನ್. ಹಿಸ್ಸ್ ತನ್ನ ಮೇಲಿನ ಆಪಾದನೆಗಳನ್ನು ಅಲ್ಲಗಳೆದರೂ ಅವನ ವಿರುದ್ಧವಾದ ಸಾಂದರ್ಭಿಕ ಸಾಕ್ಷಿಯ ಆಧಾರದ ಮೇಲೆ ವಿಚಾರಣೆ ನಡೆಸಿ ಸೆರೆಮನೆ ಶಿಕ್ಷೆ ವಿಧಿಸಿದರು. ಡೆಮೊಕ್ರಾಟಿಕ್ ಪಕ್ಷದ ಪ್ರಮುಖರು, ಅಧ್ಯಕ್ಷ ಟ್ರೂಮನ್ ಸೇರಿದಂತೆ, ಹಿಸ್ಸ್‌ನ ಪರ ವಹಿಸಿದ್ದು ಅವನು ಅಪರಾಧಿ ಎಂದು ನ್ಯಾಯಾಲಯ ತೀರ್ಪು ನೀಡಿದ್ದು ಟ್ರೂಮನ್ ಆಡಳಿತದಲ್ಲಿ ಜನರಿಗೆ ನಂಬಿಕೆ ಕಡಿಮೆಯಾಗುವಂತೆ ಮಾಡಿತು.

ಈ ವಿಚಾರಣಾ ಸಮಿತಿಯ ಕಾರ್ಯಾಚರಣೆ ಎಲ್ಲರಲ್ಲೂ ಭಯ ಹುಟ್ಟಿಸಿತು. ಈ ವಾತಾವರಣ ವಿಸ್‌ಕಾನ್ಸಿನ್‌ನ ರಿಪಬ್ಲಿಕನ್ ಸೆನೆಟರ್ ಜೋಸೆಫ್ ಮೆಕಾರ್ಥಿಯ ಅಭ್ಯುದಯಕ್ಕೆ ಕಾರಣವಾಯಿತು. ೧೯೫೦ರ ಫೆಬ್ರವರಿ ತಿಂಗಳಲ್ಲಿ ಮಾಡಿದ ಭಾಷಣ ದಲ್ಲಿ – ೨೦೫ ಮಂದಿ ವಿದೇಶಾಂಗ ಇಲಾಖೆಯ ನೌಕರರು ಕಮ್ಯೂನಿಸ್ಟ್ ಪಕ್ಷದ ಸದಸ್ಯರಾಗಿದ್ದರು; ಅವರ ಹೆಸರಿನ ಪಟ್ಟಿ ತನ್ನಲ್ಲಿದೆ ಎಂದು ಜನರು ನಂಬುವಂತೆ ಹೇಳಿಕೆ ಕೊಟ್ಟನು. ಈ ಭಾಷಣ ಪರಿಣಾಮಕಾರಿಯಾಗಿ ಅಮೆರಿಕನ್ನರಿಗೆ ಕಮ್ಯೂನಿಸ್ಟರನ್ನು ಪತ್ತೆ ಮಾಡುವ, ಎಲ್ಲ ವ್ಯವಹಾರಗಳಲ್ಲಿ ಕಮ್ಯೂನಿಸ್ಟರ ಕೈವಾಡ ಕಾಣುವ ಗೀಳು ಹಿಡಿಸಿತು.

ಮೆಕಾರ್ಥಿ ಪ್ರಚಾರ ಪ್ರವೀಣ, ಅಧಿಕಾರಕ್ಕೆ ಹಾತೊರೆಯುತ್ತಿದ್ದವನು; ತನ್ನ ಗುರಿ ಸಾಧಿಸಲು ಮತ್ತು ತನ್ನ ವೃತ್ತಿಯಲ್ಲಿ ಯಶಸ್ವಿಯಾಗಲು ಏನು ಬೇಕಾದರೂ ಮಾಡುವಂಥ ಸ್ವಾರ್ಥಪರನಾಗಿದ್ದನು. ಬುದ್ಧಿಜೀವಿಗಳನ್ನು, ಅಂತರರಾಷ್ಟ್ರೀಯ ಮನೋಭಾವವುಳ್ಳ ರಾಜಕಾರಣಿಗಳನ್ನು ಮತ್ತು ಸಂಸ್ಥೆಗಳನ್ನು ಕಮ್ಯೂನಿಸಂ ಜೊತೆ ಸೇರಿಸುವುದರ ಮೂಲಕ ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಂಡಿದ್ದನು. ರಾಜಕೀಯದಲ್ಲಿ ಪ್ರಮುಖರಾಗಿದ್ದ ವಿದೇಶಾಂಗ ಕಾರ್ಯದರ್ಶಿ ಅಚಿಸನ್, ಅಧ್ಯಕ್ಷ ಟ್ರೂಮನ್, ಜಾರ್ಜ್ ಮಾರ್ಷಲ್ ಮುಂತಾದವರನ್ನು ಕಮ್ಯೂನಿಸಂ ನಿಯಂತ್ರಿಸಲು ಹಿಂಜರಿದರು ಎಂದು ಆಪಾದಿಸಿದನು. ಸಾಕಷ್ಟು ಜನರ ಬೆಂಬಲ ದೊರೆತ ಕಾರಣ ಮೆಕಾರ್ಥಿ ತನ್ನ ಎದುರಾಳಿಗಳನ್ನು ಹೆದರಿಸಲು ಸಾಧ್ಯವಾಯಿತು. ಈ ಭಯದಿಂದ ಅವನಿಗೆ ವ್ಯತಿರಿಕ್ತವಾಗಿ ಮಾತಾನಾಡಲು ಇಷ್ಟವಿದ್ದರೂ ಸುಮ್ಮನಿರುತ್ತಿದ್ದರು. ಅಧ್ಯಕ್ಷ ಟ್ರೂಮನ್ ಮೆಕಾರ್ಥಿಯನ್ನು ಎದುರಿಸಿ ಅವನ ಕಮ್ಯೂನಿಸಂ ಬೆದರಿಕೆ ಜನರನ್ನು ಹತೋಟಿಯಲ್ಲಿಟ್ಟುಕೊಳ್ಳುವ ಕುತಂತ್ರವೆಂದು ಖಂಡಿಸಿದನು.

ಮೆಕಾರ್ಥಿಯ ಪ್ರಾಬಲ್ಯದಿಂದಾಗಿ ಕಮ್ಯೂನಿಸ್ಟ್ ಪಕ್ಷವನ್ನು ಹತ್ತಿಕ್ಕಲು ಹೊಸ ಫೆಡರಲ್ ಕಾಯಿದೆಗಳು ಜಾರಿಗೆ ಬಂದವು. ಅವುಗಳಲ್ಲಿ ಮುಖ್ಯವಾದುದು ೧೯೫೦ರಲ್ಲಿ ಜಾರಿಗೆ ಬಂದ ಮೆಕ್‌ಕಾರನ್ ಒಳಾಂತರ ರಕ್ಷಣಾ ಕಾಯಿದೆ (McCarran Internal

Security Act). ಇದರ ಪ್ರಕಾರ ಎಲ್ಲ ಕಮ್ಯೂನಿಸ್ಟ್ ಸಂಘ ಮತ್ತು ಸಂಸ್ಥೆಗಳು ಹಾಗೂ ಅವುಗಳ ಸದಸ್ಯರು ಅಟಾರ್ನಿ ಜನರಲ್ ಕಛೇರಿಯಲ್ಲಿ ನೋಂದಾಯಿಸ ಬೇಕಾಗಿತ್ತು. ಈ ಕಾಯಿದೆ ಕಮ್ಯೂನಿಸ್ಟರಿಗೆ ರಕ್ಷಣಾ ವಸ್ತುಗಳ ಉತ್ಪಾದನಾ ಕಾರ್ಖಾನೆ ಗಳಲ್ಲಿ ಕೆಲಸ ನಿಷೇಧಿಸಿತು. ಹಾಗೆಯೇ ಅವರ ಪಾಸ್‌ಪೋರ್ಟ್‌ಗಳನ್ನು ರದ್ದುಮಾಡಿತು. ಯುದ್ಧ ಮುಂತಾದ ಸಂದಿಗ್ಧ ಸಂದರ್ಭಗಳಲ್ಲಿ ಕಮ್ಯೂನಿಸ್ಟರನ್ನು ಸರ್ಕಾರಿ ಶಿಬಿರಗಳಲ್ಲಿ ಕೂಡಿ ಹಾಕಬೇಕೆಂದು ನಿರ್ದೇಶಿಸಿತು. ದೇಶದ ಒಗ್ಗಟ್ಟನ್ನು ಕೆಡಿಸುವ ಚಟುವಟಿಕೆಗಳನ್ನು ಶೋಧಿಸಲು ಮತ್ತು ದೇಶಕ್ಕೆ ನಿಷ್ಠಾವಂತರಾಗಿದ್ದಾರೆ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಅವರ ದಿನಚರಿಯನ್ನು ಗುಪ್ತವಾಗಿ ಅವಲೋಕಿಸುವುದು – ಇಂಥ ಕಾರ್ಯಗಳಿಗಾಗಿ ವಿಧಿದ್ರಕಾರಿ ಚಟುವಟಿಕೆಗಳ ನಿಯಂತ್ರಣ ಸಮಿತಿ'ಯನ್ನು ಸ್ಥಾಪಿಸಿದರು. ಟ್ರೂಮನ್ ಇದನ್ನು ರದ್ದುಗೊಳಿಸಿದರೂ, ಕಾಂಗ್ರೆಸ್ ಅದನ್ನು ಲೆಕ್ಕಿಸದೆ ಮೆಕ್‌ಕಾರಿನ್ ಒಳಾಂತರ ರಕ್ಷಣಾ ಕಾಯಿದೆಯನ್ನು ಅಂಗೀಕರಿಸಿತು. ನಂತರ ಇದನ್ನು ಶ್ರೇಷ್ಠ ನ್ಯಾಯಾಲಯ ಎತ್ತಿ ಹಿಡಿಯಿತು. ಈ ನ್ಯಾಯಾಲಯ ಕ್ರಾಂತಿ ಅಥವಾ ಆಂದೋಳನಕ್ಕೆ ಜನರನ್ನು ಪ್ರಚೋದಿಸು ವುದು ದೇಶಕ್ಕೆ ಉಂಟಾಗುವ ಸ್ಪಷ್ಟ ಅಪಾಯವಾದುದರಿಂದ ಅದು ಶಿಕ್ಷಾರ್ಹ ಅಪರಾಧ ಎಂದು ತೀರ್ಪು ನೀಡಿತು. ಇದನ್ನೇ ಉಪಯೋಗಿಸಿಕೊಂಡು ಮೆಕಾರ್ಥಿ ಎಲ್ಲ ವಿರೋಧ ಗಳನ್ನು ರದ್ದುಗೊಳಿಸಲು ಪ್ರಯತ್ನಿಸಿದನು.

೧೯೫೨ರ ಹೊತ್ತಿಗೆ ಡೆಮೊಕ್ರಾಟಿಕ್ ಪಕ್ಷ ಮತ್ತು ಟ್ರೂಮನ್ ಆಡಳಿತಗಳು ಕಟುವಾದ ಟೀಕೆಗಳಿಗೆ ಗುರಿಯಾಗಿದ್ದವು. ಇದಕ್ಕೆ ಅನೇಕ ಕಾರಣಗಳೂ ಇದ್ದವು: ದೇಶದಲ್ಲಿ ಹಣದುಬ್ಬರ, ಅಂತರರಾಷ್ಟ್ರೀಯ ಕಮ್ಯೂನಿಸಂ ವಿಸ್ತರಣೆ ಮತ್ತು ದೇಶದೊಳಗಿನ ವಿಧಿದ್ರಕಾರಿ ಚಟುವಟಿಕೆಗಳು. ಡೆಮೊಕ್ರಾಟಿಕ್ ಪಕ್ಷ ಇವುಗಳಿಂದಾಗಿ ಜನರ ಬೆಂಬಲವನ್ನು ಕಳೆದುಕೊಳ್ಳುವುದೇ ಅಲ್ಲದೆ ಡೆಮೊಕ್ರಾಟರ ಕೆಲವು ಭ್ರಷ್ಟಾಚಾರ ಪ್ರಕರಣಗಳು ವಾಷಿಂಗ್‌ಟನ್ ಪತ್ರಿಕೆಗಳಲ್ಲಿ ವಿವರವಾಗಿ ಪ್ರಕಟಗೊಂಡು ಆಡಳಿತ ನಡೆಸಲು ಡೆಮೊಕ್ರಾಟರು ನೈತಿಕ ಬಲ ಕಳೆದುಕೊಂಡರು. ಅವರ ೨೦ ವರ್ಷಗಳ ಆಡಳಿತ ಜನರಿಗೆ ಸಾಕಾಗಿ ಬದಲಾವಣೆಗೆ ಹಾತೊರೆದರು. ಇದನ್ನು ಅವಲೋಕಿಸಿದ ಟ್ರೂಮನ್ ಮರುಚುನಾವಣೆಗೆ ನಿಲ್ಲುವುದಿಲ್ಲವೆಂದು ನಿರ್ಧರಿಸಿದನು. ಅವನ ಬದಲಿಗೆ ಡೆಮೊಕ್ರಾಟಿಕ್ ಪಕ್ಷ ಒಬ್ಬ ಉತ್ತಮ ವಾಗ್ಮಿ, ಬುದ್ಧಿಜೀವಿ ಮತ್ತು ಉದಾರ ಮನೋಭಾವದ ನ್ಯೂಯಾರ್ಕ್ ಗವರ್ನರ್ ಅಡ್ಲೈ ಸ್ಟೀವನ್‌ಸನ್‌ನನ್ನು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ನಾಮಕರಣ ಮಾಡಿತು. ಅಲಬಾಮ ರಾಜ್ಯದ ಸೆನೆಟರ್ ಜಾನ್ ಸ್ಪಾರ್ಕ್‌ಮನ್‌ನನ್ನು (John Sparkman) ಉಪಾಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮಕರಣ ಮಾಡಿತು.

೧೯೫೨ರ ಚುನಾವಣೆ ಹತ್ತಿರವಾದಂತೆಲ್ಲ ಮಧ್ಯವರ್ತಿಗಳಾದ ರಿಪಬ್ಲಿಕನ್ನರು ಜನರಲ್ ಐಸೆನ್‌ಹಾವರ್‌ನನ್ನು ಚುನಾವಣೆಗೆ ನಿಲ್ಲಲು ಒತ್ತಾಯ ಮಾಡಿದರು.

ಸಂಪ್ರದಾಯಸ್ಥ ರಿಪಬ್ಲಿಕನ್ನರು ಒಹಾಯೊ ಸೆನೆಟರ್ ರಾಬರ್ಟ್ ಟಾಫ್ಟ್‌ನನ್ನು ಬೆಂಬಲಿಸಿದರು. ಐಸೆನ್‌ಹಾವೆರ್ ನಾಮಕರಣ ಸಮ್ಮೇಳನದ ಮತದಾನದ ಮೊದಲ ಸುತ್ತಿನಲ್ಲಿ ಹೆಚ್ಚಿನ ಮತಗಳನ್ನು ಪಡೆದು ನಾಮಕರಣಗೊಂಡನು. ಉಪಾಧ್ಯಕ್ಷ ಸ್ಥಾನಕ್ಕೆ ಆ್ಯಲ್ಗರ್‌ನ ಮೊಕದ್ದಮೆಯಲ್ಲಿ ಪ್ರಖ್ಯಾತಿ ಪಡೆದ ವಕೀಲ ರಿಚರ್ಡ್ ನಿಕ್ಸನ್‌ನನ್ನು ನಾಮಕರಣ ಮಾಡಿದರು.

ಐಸೆನ್‌ಹಾವರ್ ಮತ್ತು ಸ್ಟೀವನ್‌ಸನ್‌ರ ನಡುವೆ ನಡೆದ ಸ್ಪರ್ಧೆಯಲ್ಲಿ ಅವರು ಪ್ರತಿನಿಧಿಸಿದ ಪಕ್ಷಗಳ ಧ್ಯೇಯ ಧೋರಣೆಗಳ ಚರ್ಚೆ ಮುಖ್ಯವಾಗಿರಲಿಲ್ಲ; ಅವರ ವ್ಯಕ್ತಿತ್ವ ಮುಖ್ಯವಾಗಿತ್ತು. ಐಸೆನ್‌ಹಾವ ಅತ್ಯಂತ ಜನಪ್ರಿಯನಾಗಿದ್ದನು. ಪ್ರೀತಿಯಿಂದ ಜನರು 'ಐಕ್' ಎಂದು ಕರೆಯುತ್ತಿದ್ದ ಅವನು ಎರಡನೆಯ ಜಾಗತಿಕ ಯುದ್ಧದಲ್ಲಿ ಗೆದ್ದು ಬಂದ ವೀರಾಗ್ರಣಿ, ಶುಭ್ರ ನಡತೆಯ ಹಸನ್ಮುಖಿ. ಜನರು ಅವನಲ್ಲಿ ಸೈನಿಕನ ಬಲ, ವಯಸ್ಸಾದಂತೆ ಬರುವ ಅನುಭವ ಮತ್ತು ವ್ಯವಹಾರಜ್ಞಾನಗಳು ಮಿಲನಗೊಂಡಿರುವುದನ್ನು ಮೆಚ್ಚಿಕೊಂಡರು. ಶೀತಲಯುದ್ಧದ ಭಯ ಮತ್ತು ದೇಶದಲ್ಲಿ ಹರಡುತ್ತಿರುವ ಕಮ್ಯೂನಿಸಂ ಪ್ರಭಾವ – ಇಂಥ ಸಮಯದಲ್ಲಿ ಐಕ್‌ನಂತಹ ಸಮರ್ಥವ್ಯಕ್ತಿ ಅಧ್ಯಕ್ಷನಾಗುವುದು ಅಮೆರಿಕನ್ನರಿಗೆ ಸೂಕ್ತವಾಗಿ ತೋರಿತು. ಐಕ್ ಅಧ್ಯಕ್ಷನಾದರೆ ಕೊರಿಯಾ ಯುದ್ಧವನ್ನು ಕೊನೆಗಾಣಿಸುವ ಭರವಸೆ ನೀಡಿದನು.

ಸ್ಟೀವನ್‌ಸನ್ ಬುದ್ಧಿಜೀವಿ, ಚತುರ ಮಾತುಗಾರ ಆದರೆ ಅವನಿಗೆ ಜನಸಾಮಾನ್ಯರ ಸಂಪರ್ಕ ಕಡಿಮೆ. ಇವನ ವ್ಯಕ್ತಿತ್ವ ಐಕ್‌ನಂತೆ ವೈವಿಧ್ಯಮಯವಾಗಿರಲಿಲ್ಲ. ಮೇಲಾಗಿ ಜನಪ್ರಿಯತೆ ಕಳೆದುಕೊಂಡ ಟ್ರೂಮನ್ ಆಡಳಿತದ ಕೆಟ್ಟ ಹೆಸರಿನಿಂದ ಇವನು ತಪ್ಪಿಸಿಕೊಳ್ಳಲಾಗಲಿಲ್ಲ. ಐಕ್‌ನ ಚುನಾವಣಾ ಪ್ರಚಾರ ಭರದಿಂದ ಸಾಗುತ್ತಿದ್ದಾಗ ಅದನ್ನು ಸ್ಥಗಿತಗೊಳಿಸುವ ಗಂಡಾಂತರವೊಂದನ್ನು ಎದುರಿಸಬೇಕಾಯಿತು. ಉಪಾಧ್ಯಕ್ಷ ಸ್ಥಾನಕ್ಕೆ ನಾಮಕರಣಗೊಂಡಿದ್ದ ನಿಕ್ಸನ್ ಮೇಲೆ ಹಣ ದುರುಪಯೋಗ ಮಾಡಿಕೊಂಡ ಅಪಾದನೆ ಬಂತು. ವರ್ತಕರು ಪಕ್ಷದ ನಿಧಿಗೆ ಕೊಡುಗೆಯಾಗಿ ನೀಡಿದ ಹಣವನ್ನು ತನ್ನ ಖಾಸಗಿ ಖರ್ಚಿನ ಲೆಕ್ಕಕ್ಕೆ ಸೇರಿಸಿಕೊಂಡನೆಂದು ದೂಷಣೆ ಬಂತು. ಇದು ಪಕ್ಷದ ಪ್ರಮುಖರಿಗೆ ನುಂಗಲಾರದ ತುತ್ತಾಯಿತು. ಅವರು ನಿಕ್ಸನ್‌ನನ್ನು ತೆಗೆದುಹಾಕುವ ಸಲಹೆ ಕೂಡ ಐಕ್‌ಗೆ ಮಾಡಿದರು. ಆದರೆ ನಿಕ್ಸನ್ ಸಕಾಲದಲ್ಲಿ ದೂರದರ್ಶನದ ಮೂಲಕ ಭಾವಪೂರ್ಣವಾದ ಭಾಷಣ ಮಾಡಿ ತಾನು ತಪ್ಪಿತಸ್ಥನಲ್ಲವೆಂದು ಸಾರ್ವಜನಿಕರಲ್ಲಿ ಯಾಚಿಸಿದನು. ಇದು ನಿಕ್ಸನ್ ತನ್ನ ಜೀವಿತದಲ್ಲಿ ಮಾಡಿದ ಅತ್ಯುತ್ತಮ ಭಾಷಣ. ಪರಿಣಾಮವಾಗಿ ಸಾರ್ವಜನಿಕರು ಮನಸ್ಸು ಬದಲಿಸಿ ನಿಕ್ಸನ್ ಪರ ವಹಿಸಿದರು.

ಚುನಾವಣೆಯಲ್ಲಿ ಐಕ್ ಅದ್ಭುತ ವಿಜಯ ಸಾಧಿಸಿದನು. ಎಲೆಕ್ಟರಲ್ ಕಾಲೇಜಿನ ಮತಗಳಲ್ಲಿ ಐಕ್ ಗಳಿಸಿದ್ದು ೪೪೨ ಮತಗಳಾದರೆ ಸ್ಟೀವನ್‌ಸನ್‌ಗೆ ದೊರಕಿದ್ದು ಕೇವಲ

೪೯ ಮತಗಳು ಮಾತ್ರ. ಐಕ್‌ನ ವಿಜಯ ಸೆನೆಟ್ ಮತ್ತು ಕಾಂಗ್ರೆಸ್ ಎರಡರಲ್ಲೂ ರಿಪಬ್ಲಿಕನ್ನರು ಬಹುಮತಗಳಿಸಿ, ೧೯೨೦ರ ನಂತರ ರಿಪಬ್ಲಿಕನ್ನರು ಕಾಂಗ್ರೆಸ್ ಮತ್ತು ಸೆನೆಟ್ ಎರಡನ್ನೂ ವಶಪಡಿಸಿಕೊಂಡಿದ್ದು ಇದೇ ಮೊದಲು.

ಐಕ್‌ನ ಆಡಳಿತ ವೈಖರಿ (೧೯೫೩–೬೧)

ಅಮೇರಿಕದ ೩೪ನೆಯ ಅಧ್ಯಕ್ಷನಾದ ಡ್ವೈಟ್ ಐಸೆನ್‌ಹಾವರ್ (ಐಕ್) ಟೆಕ್ಸಾಸ್ ಪ್ರಾಂತದ ಕುಟುಂಬವೊಂದರಲ್ಲಿ ವಿನೀತರಾದ ತಂದೆ ತಾಯಿಯರಿಗೆ ಜನಿಸಿದನು. ಅವನು ಬೆಳೆದಿದ್ದು ಕಾನ್ಸಾಸ್ ಪ್ರಾಂತದ ಅಬೆಲೀನ್ ಎಂಬ ಚಿಕ್ಕ ಊರಿನಲ್ಲಿ. ವೆಸ್ಟ್ ಪಾಯಿಂಟ್‌ನಲ್ಲಿ ಓದಿ, ತರಬೇತಿ ಪಡೆದು ಪದವೀಧರನಾದನು. ನಂತರ ಎರಡನೆಯ ಜಾಗತಿಕ ಯುದ್ಧ ಆರಂಭವಾಗುವವರೆಗೂ ಸೈನಿಕ ವೃತ್ತಿಯನ್ನು ಅವಲಂಬಿಸಿ ೧೯೩೫-೩೯ರವರೆಗೆ ಫಿಲಿಫ್ಫೈನ್ಸ್‌ನಲ್ಲಿ ಡಗ್ಲಾಸ್ ಮೆಕಾರ್ಥರನ ಸೈನ್ಯದಲ್ಲಿ ಅಧಿಕಾರಿಯಾಗಿದ್ದನು. ಅಲ್ಲಿ ಐಕ್‌ನ ಅಸಾಧಾರಣ ಆಡಳಿತ ಸಾಮರ್ಥ್ಯವನ್ನು ಗುರುತಿಸಿ ಎರಡನೆಯ ಜಾಗತಿಕ ಯುದ್ಧದಲ್ಲಿ ಅವನನ್ನು ಮಿತ್ರರಾಷ್ಟ್ರಗಳ ಸೈನ್ಯದ ಶ್ರೇಷ್ಠ ದಂಡನಾಯಕನನ್ನಾಗಿ ಆಯ್ಕೆ ಮಾಡಿದರು. ೧೯೪೪ರ ಜೂನ್ ೬ರಂದು ಜಗದ್ವಿಖ್ಯಾತವಾಗಿರುವ ನಾರ್ಮಂಡಿ ಆಕ್ರಮಣ ನಡೆಸುವುದರಲ್ಲಿ ಮುಂದಾದನು. ಜನರಲ್ ಗ್ರಾಂಟ್‌ನ ಅಧ್ಯಕ್ಷತೆಯ ನಂತರ ವೃತ್ತಿಪರ ಸೈನಿಕನೊಬ್ಬ ಅಧ್ಯಕ್ಷನಾಗಿ ಆಯ್ಕೆಗೊಂಡಿದ್ದು ಇದೇ ಮೊದಲು.

ಅಧ್ಯಕ್ಷನಾದ ಮೇಲೆ ಐಕ್ ತನ್ನ ಆಡಳಿತದಲ್ಲಿ ಮಧ್ಯವರ್ತಿ ಧೋರಣೆಯನ್ನು ಅನುಸರಿಸತೊಡಗಿದನು. ಗೌರವಾನ್ವಿತ ರಾಜಕೀಯ ಮತ್ತು ಸಂಯಮದ ನಡತೆಗೆ ಐಕ್ ಮೇಲ್ಪಂಕ್ತಿಯಾದನು. ಎರಡು ಪಕ್ಷಗಳ ಮಧ್ಯವರ್ತಿಗಳ (moderates) ಬೆಂಬಲ ಪಡೆಯಲು ಪ್ರಯತ್ನಿಸಿದನು. ರಾಜಕೀಯದಲ್ಲಿ ಹೆಚ್ಚು ಅನುಭವವಿಲ್ಲದ ಕಾರಣ ಅವನಿಗೆ ಮಾತಿನಿಂದಾಗಲಿ ಅಥವಾ ಬರಹಗಳಿಂದಾಗಲಿ ತನ್ನ ಅಭಿಪ್ರಾಯಗಳನ್ನು ಜನರಿಗೆ ಪರಿಣಾಮಕಾರಿಯಾಗಿ ತಿಳಿಸುವ ಕಲೆ ಅವನಿಗೆ ಕರಗತವಾಗಿರಲಿಲ್ಲ. ಆದ್ದರಿಂದ ಅವನ ಅಧ್ಯಕ್ಷತೆ ಹೆಚ್ಚು ಪ್ರಭಾವಪೂರ್ಣವಾಗಿರಲಿಲ್ಲ. ಅಧಿಕಾರವನ್ನು ಸೂಕ್ತವಾಗಿ ವಿತರಣೆ ಮಾಡಿ ಎಲ್ಲ ಇಲಾಖೆಗಳ ಅಧಿಕಾರಿಗಳು ಪರಸ್ಪರ ಹೊಂದಾಣಿಕೆಯಿಂದ ಕೆಲಸ ಮಾಡುವಂತೆ ವ್ಯವಸ್ಥೆಗೊಳಿಸುವುದರಲ್ಲಿ ಐಕ್ ತನ್ನ ಕುಶಲತೆಯನ್ನು ತೋರಿದನು. ತನ್ನ ಆಡಳಿತ ಮಂಡಳಿಗೆ ವ್ಯಾಪಾರಿಗಳನ್ನು ಮತ್ತು ಉದ್ಯಮಿಗಳನ್ನು ನೇಮಕ ಮಾಡಿದನು. ವಿಶ್ವವಿದ್ಯಾನಿಲಯಗಳಲ್ಲಿರುವ ಬುದ್ಧಿಜೀವಿಗಳನ್ನು ಮತ್ತು ವೃತ್ತಿ ರಾಜಕಾರಣಿಗಳನ್ನು ಅವನು ಅವಲಂಬಿಸಲಿಲ್ಲ. ವ್ಯಾಪಾರಿಗಳಿಗೆ ವ್ಯವಹಾರಜ್ಞಾನ ಇರುವುದರಿಂದ ಅವರು ಸಮಸ್ಯೆಗಳನ್ನು ಬಗೆಹರಿಸಬಲ್ಲರು ಎಂದು ಅವನು ನಂಬಿದ್ದನು. ಐಕ್ ಆಡಳಿತ ಮಂಡಳಿಯನ್ನು ಕುರಿತು ಪತ್ರಕರ್ತರು ಮತ್ತು ಇತರ ರಾಜಕಾರಣಿಗಳು ಹೇರಳವಾಗಿ ಟೀಕಿಸಿದರು. ಅಗ ಜನಪ್ರಿಯವಾಗಿದ್ದ ಒಂದು ವ್ಯಂಗ್ಯೋಕ್ತಿ ಐಕ್‌ನ ಆಡಳಿತ ಮಂಡಳಿಗೆ ಸಂಬಂಧಿಸಿದ್ದು

– 'ಐಕ್‌ನ ಆಡಳಿತ ಮಂಡಳಿ ಒಂಬತ್ತು ಮಿಲಿಯನಾಧಿಪತಿಗಳು ಮತ್ತು ಒಬ್ಬ ಕೊಳವೆ ರಿಪೇರಿ ಮಾಡುವವನನ್ನು ಒಳಗೊಂಡಿದೆ (His cabinet included nine millionaires and a plumber)'. ವಿದೇಶಾಂಗ ಕಾರ್ಯದರ್ಶಿ ಜಾನ್ ಫಾಸ್ಟರ್ ಡಲೆಸ್ (John Foster Dulles) ಭಾರತ ಮತ್ತು ಅಮೆರಿಕ ಸಂಬಂಧಗಳನ್ನು ಅವನ ಪಾಕಿಸ್ತಾನದ ಪರವಾದ ಧೋರಣೆಯಿಂದ ಕಲುಷಿತಗೊಳಿಸಿದ ಮೊದಲನೆಯ ಅಧಿಕಾರಿ. ಅವನು ಹಾಕಿದ ಮೇಲ್ಪಂಕ್ತಿಯನ್ನು ನಂತರ ಬಂದ ವಿದೇಶಾಂಗ ಕಾರ್ಯದರ್ಶಿಗಳು ಅನುಸರಿಸಿದರು. ಇಂದಿಗೂ ಅಮೆರಿಕ-ಭಾರತಗಳ ನಡುವೆ ಇರಬೇಕಾದ ಸೌಹಾರ್ದ ಸಂಬಂಧಗಳು ಏರ್ಪಟ್ಟಿಲ್ಲ. ಪಾಕಿಸ್ತಾನ ಇಂದಿಗೂ ಅಮೆರಿಕದ ಕೃಪಾಪಾತ್ರವಾದ ದೇಶವಾಗಿದೆ. ಆರೋಗ್ಯ, ವಿದ್ಯಾಭ್ಯಾಸ ಮತ್ತು ಸಾರ್ವಜನಿಕರ ಕ್ಷೇಮ – ಈ ಮುಖ್ಯ ಅವಶ್ಯಕತೆಗಳನ್ನು ಪೂರೈಸಲು ಒಂದು ಹೊಸ ಇಲಾಖೆಯನ್ನು ಸ್ಥಾಪಿಸಿ ಟೆಕ್ಸಾಸ್ ಪ್ರಾಂತದ ಕಲ್ಪ್ ಹಾಬಿ (Culp Hobby) ನೇಮಕಗೊಂಡನು. ಶರ್ಮನ್ ಆ್ಯಡಮ್ಸ್ ಎಂಬುವನು ಅಧ್ಯಕ್ಷ ಐಸೆನ್‌ಹಾವರ್‌ನ ಆಪ್ತ ಕಾರ್ಯದರ್ಶಿಯಾಗಿ ಹೆಚ್ಚಿನ ಪ್ರಭಾವ ಹೊಂದಿದ್ದನು. ಜನರಲ್ ಮೋಟಾರ್ಸ್ ಕಾರ್ಪೊರೇಷನ್‌ನ ಚಾರ್ಲ್ಸ್ ವಿಲ್ಸನ್‌ನು ರಕ್ಷಣಾ ಕಾರ್ಯದರ್ಶಿಯಾಗಿ ನೇಮಕಗೊಂಡನು.

ಎರಡನೆಯ ಜಾಗತಿಕ ಯುದ್ಧಾನಂತರ ಕೃಷಿ ಕ್ಷೇತ್ರದಲ್ಲಿ ನಿರಂತರವೆನಿಸುವ ಸಮಸ್ಯೆಗಳು ತೋರಿಬಂದವು. ಅಧಿಕ ಉತ್ಪಾದನೆ ಮತ್ತು ಬೆಲೆ ಕುಸಿತ ರೈತರ ಜೀವನವನ್ನು ಅಸಹನೀಯಗೊಳಿಸಿದ್ದವು. ತಾವು ಬೆಳೆದುದಕ್ಕೆ ಬೆಲೆ ಕಡಿಮೆಯಾದರೂ ತಮಗೆ ಬೇಕಾದ ಅಗತ್ಯವಸ್ತುಗಳಿಗೆ ರೈತರು ಹೆಚ್ಚು ಬೆಲೆ ತೆರಬೇಕಾಗಿತ್ತು. ಐಕ್‌ನ ಆಡಳಿತ ಮಂಡಳಿಯ ಸದಸ್ಯರು ತಾವು ಚುನಾವಣೆ ಪ್ರಚಾರದ ಕಾಲದಲ್ಲಿ ಮಾಡಿದ್ದ ವಾಗ್ದಾನವನ್ನು ಮರೆತು ಕೃಷಿಕ್ಷೇತ್ರದಲ್ಲಿ ವ್ಯವಸಾಯೋತ್ಪನ್ನಗಳ ಬೆಲೆ ಕಡಿಮೆಯಾದಷ್ಟು ಅಂಶವನ್ನು ಫೆಡರಲ್ ಸರ್ಕಾರ ಸಹಾಯಧನದಿಂದ ತುಂಬಿಸಿಕೊಡಲಿಲ್ಲ. ೧೯೫೬ರಲ್ಲಿ ಜಾರಿಗೆ ಬಂದ ವ್ಯವಸಾಯ ಕಾಯಿದೆಯ ಪ್ರಕಾರ ಮುಂಚೆ ಕಡ್ಡಾಯವಾಗಿ ಬೀಳು ಬಿಡಬೇಕಾಗಿದ್ದ ಒಂದು ನಿರ್ದಿಷ್ಟ ಸಂಖ್ಯೆಯ ಎಕರೆಗಳ ಜೊತೆಗೆ ಮತ್ತಷ್ಟು ಜಮೀನನ್ನು ಬೀಳು ಬಿಡುವುದಕ್ಕೆ ಪರವಾನಗಿ ಕೊಟ್ಟರು. ಇದರಿಂದ ರೈತರು ಅಧಿಕ ಇಳುವರಿ ತೆಗೆಯುವುದನ್ನು ನಿಲ್ಲಿಸಿ ವ್ಯವಸಾಯೋತ್ಪನ್ನಗಳ ಬೆಲೆ ಏರುವಂತೆ ಮಾಡುವುದು ಅವರ ಉದ್ದೇಶವಾಗಿತ್ತು. ಹೀಗೆ ಅಧಿಕ ಇಳುವರಿಯನ್ನು ತಡೆಗಟ್ಟಲು ಕೈಗೊಂಡ ಕ್ರಮಕ್ಕೆ 'ಮಣ್ಣಿನ ಬ್ಯಾಂಕ್' ಎಂದು ಕರೆಯುತ್ತಿದ್ದರು. ಕಾರಣ ರೈತರು ಬೇಸಾಯ ಮಾಡದೆ ಭೂಮಿಯನ್ನು ಬೀಳುಬಿಟ್ಟದ್ದಕ್ಕೆ ಸರ್ಕಾರದಿಂದ ಹಣ ಅನಾಯಾಸವಾಗಿ ದೊರಕುತ್ತಿತ್ತು.

ಐಕ್‌ನ ಆಡಳಿತದ ಅವಧಿಯಲ್ಲಿ ಕಾರ್ಮಿಕರ ಸಂಘಟನೆ ಅಭಿವೃದ್ಧಿಗೊಂಡು ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಂಡಿತು. ಪ್ರತಿ ವರ್ಷ ವೇತನ ಹೆಚ್ಚುತ್ತಾ ಹೋಗಿ ಹಣದುಬ್ಬರಕ್ಕೆ

ಕಾರಣವಾಯಿತು. ೧೯೫೫ರಲ್ಲಿ ನಿಗದಿಯಾದ ವಾರ್ಷಿಕ ವೇತನ ಕಾರ್ಮಿಕ ಸಂಘಟನೆಯ ಮುಖ್ಯ ಸಾಧನೆಯಾಯಿತು. ಅದೇ ವರ್ಷ ಇಷ್ಟರವರೆಗೂ ಪ್ರತ್ಯೇಕವಾಗಿದ್ದ ಎರಡು ಕಾರ್ಮಿಕ ಸಂಘಟನೆಗಳು – ಎ.ಎಫ್ ಆಫ್ ಎಲ್ (A F of L) ಮತ್ತು ಸಿ.ಐ.ಓ (C I O) – ಕೂಡಿ ಒಂದಾದವು. ಕನಿಷ್ಠ ವೇತನವನ್ನು ಘಂಟೆಗೆ ಒಂದು ಡಾಲರಿಗೆ ಏರಿಸಿದರು.

ಜಲ ವಿದ್ಯುತ್ ಉತ್ಪಾದನೆಯ ಅಭಿವೃದ್ಧಿ ಸರ್ಕಾರಕ್ಕೆ ಸೇರಿದ್ದು ಎನ್ನುವುದನ್ನು ಐಕ್‌ನ ಆಡಳಿತ ಮಂಡಳಿ ಅಲ್ಲಗಳೆದು ಆ ಜವಾಬ್ದಾರಿ ವಿದ್ಯುತ್ ಸಂಸ್ಥೆಗಳು ಮತ್ತು ಪ್ರಾಂತೀಯ ಸರ್ಕಾರಗಳಿಗೆ ಸೇರಿದ್ದು ಎಂದು ಪ್ರತಿಪಾದಿಸಿತು. ಪಶ್ಚಿಮ ಪ್ರಾಂತಗಳಲ್ಲಿ ಜಲ ವಿದ್ಯುತ್ ಉತ್ಪಾದನೆಯನ್ನು ಸಂಪೂರ್ಣವಾಗಿ ಖಾಸಗಿ ಸಂಸ್ಥೆಗಳಿಗೆ ಒಪ್ಪಿಸಿದರು. ಡಿಕ್ಸನ್ ಮತ್ತು ಯೇಟ್ಸ್ ಕಾಂಟ್ರಾಕ್ಟ್ ಪ್ರಕರಣದಲ್ಲಿ ಕಾಂಟ್ರಾಕ್ಟ್ ಪಡೆದ ಕಂಪನಿ ಯಾವ ಖಾಸಗಿ ವಿದ್ಯುತ್ ಉತ್ಪಾದನೆ ಕಂಪನಿಗಳಿಂದ ವಿದ್ಯುಚ್ಛಕ್ತಿಯನ್ನು ಕೊಳ್ಳಬಾರದು ಎಂದು ನಿರ್ಬಂಧಿಸಿದರು. ಸೇಂಟ್ ಲಾರೆನ್ಸ್ ನದಿಗೆ ಕಟ್ಟಿದ ಅಣೆಕಟ್ಟುಗಳಲ್ಲಿ ಉತ್ಪಾದನೆಯಾದ ವಿದ್ಯುಚ್ಛಕ್ತಿಯನ್ನು ನ್ಯೂಯಾರ್ಕ್ ಪ್ರಾಂತದ ಅಧಿಕಾರಕ್ಕೆ ಒಳಪಡಿಸಿದರು. Natural Gas ಉತ್ಪಾದನೆಯನ್ನು ಫೆಡರಲ್ ಸರ್ಕಾರದ ನಿಯಂತ್ರಣಕ್ಕೆ ಒಳಪಡಿಸ ಕೂಡದು ಎನ್ನುವ ಮಸೂದೆಯನ್ನು ಅಧ್ಯಕ್ಷ ಐಕ್ ರದ್ದು ಮಾಡಿದನು.

ರಾಜ್ಯಾಂಗದ ೧೪ನೆಯ ತಿದ್ದುಪಡಿ ಸರ್ಕಾರ ಪ್ರಜೆಗಳ ಸವಲತ್ತುಗಳನ್ನು ಕಿತ್ತು ಹಾಕಬಾರದು; ಹಾಗೆಯೇ ಎಲ್ಲ ಪ್ರಜೆಗಳಿಗೂ ಕಾನೂನು ಸಮಾನ ರಕ್ಷಣೆ ಒದಗಿಸಬೇಕು ಎನ್ನುವುದನ್ನು ಸ್ಪಷ್ಟಪಡಿಸಿತ್ತು. ೧೮೯೬ರಲ್ಲಿ ನಡೆದ ಒಂದು ಮೊಕದ್ದಮೆಯಲ್ಲಿ ಶ್ರೇಷ್ಠ ನ್ಯಾಯಾಲಯ ಕರಿಯರಿಗೆ 'ಪ್ರತ್ಯೇಕ ಆದರೆ ಸಮನಾದ' ಸಾರ್ವಜನಿಕ ಸೌಲಭ್ಯಗಳು ರಾಜ್ಯಾಂಗದ ಉಲ್ಲಂಘನೆ ಎಂದು ಹೇಳಲಾಗುವುದಿಲ್ಲ ಎಂದು ತೀರ್ಪು ನೀಡಿತ್ತು. ಅದರಂತೆ ಬಿಳಿಯರಿಗೆ ಮತ್ತು ಕರಿಯರಿಗೆ ಪ್ರತ್ಯೇಕ ಸೌಲಭ್ಯಗಳನ್ನು ವ್ಯವಸ್ಥೆಗೊಳಿಸಿದ್ದರು. ಆದರೆ ಕರಿಯರಿಗೆ ವ್ಯವಸ್ಥೆಗೊಳಿಸಿದ ಶಾಲಾ ಕಾಲೇಜುಗಳು ಮತ್ತು ಇತರ ಸೌಲಭ್ಯಗಳು ಪ್ರತ್ಯೇಕವಾಗಿದ್ದರೂ ಸಮಾನವಾಗಿರಲಿಲ್ಲ. ಆ ಎಲ್ಲಾ ಸೌಲಭ್ಯಗಳೂ ಕೀಳುಮಟ್ಟದ್ದಾಗಿದ್ದವು. ೧೯೫೪ರಲ್ಲಿ ವಿದ್ಯಾ ಇಲಾಖೆಯ ವಿರುದ್ಧ ಬ್ರೌನ್ ಎಂಬುವನು ಹಾಕಿದ್ದ ದಾವಾ ವಿಚಾರಣೆ (Brown vs. Board of Education of Topeka) ಶ್ರೇಷ್ಠ ನ್ಯಾಯಾಧೀಶ ಅರ್ಲ್ ವಾರೆನ್‌ನ (Earl Warren) ನಾಯಕತ್ವದಲ್ಲಿ 'ಪ್ರತ್ಯೇಕ ವಿದ್ಯಾಸಂಸ್ಥೆಗಳು/ವ್ಯವಸ್ಥೆಗಳು ಕೀಳುದರ್ಜೆಯವು' ಎಂದು ಒಮ್ಮತದ ತೀರ್ಪು ನೀಡಿತು. ಈ ವಿಚಾರಣೆಯಿಂದ ೧೭ ಸಂಸ್ಥಾನಗಳು ರಾಜ್ಯಾಂಗ ಉಲ್ಲಂಘನೆ ಮಾಡಿರುವುದು ತಿಳಿದು ಬಂತು. ೧೯೫೫ರಲ್ಲಿ ಮತ್ತೊಂದು ನ್ಯಾಯಾಲಯದ ತೀರ್ಪು ಪ್ರತ್ಯೇಕತೆಯನ್ನು ತ್ವರಿತಗತಿಯಿಂದ ಕೊನೆಗಾಣಿಸಬೇಕು ಎಂದು ಎಲ್ಲ ಸಂಸ್ಥಾನಗಳಿಗೆ ನಿರ್ದೇಶಿಸಿತು.

ಪ್ರತ್ಯೇಕತೆಯ ನಿಷೇಧವನ್ನು ವಿದ್ಯಾಭ್ಯಾಸವಲ್ಲದೆ ಸಾರ್ವಜನಿಕ ಮನರಂಜನೆ ಮತ್ತು ಸಾರಿಗೆ ವ್ಯವಸ್ಥೆಗಳಿಗೂ ಅನ್ವಯಿಸಿದ್ದರು.

ಈ ನಿಷೇಧಾಜ್ಞೆಗೆ ದಕ್ಷಿಣದ ಸಂಸ್ಥಾನಗಳು ತೀವ್ರ ವಿರೋಧ ವ್ಯಕ್ತಪಡಿಸಿದವು. ಈ ಪ್ರಾಂತಗಳಲ್ಲಿ ಕರಿಯರ ಸಂಖ್ಯೆ ಅಧಿಕವಾಗಿದ್ದರೂ ಅವರಿಗೆ ಹಕ್ಕುಬಾಧ್ಯತೆಗಳನ್ನು ಮತ್ತು ಸೌಲಭ್ಯಗಳನ್ನು ನಿರಾಕರಿಸಲು ಅಧಿಕಾರಿ ವರ್ಗದವರು ಬಿಳಿಯ ರಾಜಕೀಯ ಪಂಗಡಗಳೊಡನೆ ಸೇರಿಕೊಂಡು ಅನೇಕ ಅಡೆತಡೆಗಳನ್ನು ತಂದೊಡ್ಡಿದರು. ಶಾಲಾ ಮಕ್ಕಳನ್ನು ಪ್ರತ್ಯೇಕಿಸುವಂಥ ಸ್ಥಳೀಯ ಕಾಯಿದೆಗಳನ್ನು ಜಾರಿಗೆ ತಂದರು. ಪ್ರತ್ಯೇಕತೆಯನ್ನು ಅನುಷ್ಠಾನಕ್ಕೆ ತರದೆ ಹೋದ ಶಾಲೆಗಳಿಗೆ ಸರ್ಕಾರದ ಹಣಸಹಾಯ ನಿಲ್ಲಿಸಿದರು. ಸಾರ್ವಜನಿಕ ಪಾಠಶಾಲೆಗಳನ್ನು ಮುಚ್ಚಿಸಲು ಹೊಸ ಕಾನೂನುಗಳನ್ನು ಜಾರಿ ಮಾಡುವುದಲ್ಲದೆ ಖಾಸಗಿ ಶಾಲೆಗಳಿಗೆ ಉತ್ತೇಜನ ಮತ್ತು ಸಹಾಯ ದೊರಕುವಂತೆ ಮಾಡಿದರು. ಮುಚ್ಚಿದ ಶಾಲೆಗಳನ್ನು ನ್ಯಾಯಾಲಯ ಮತ್ತೆ ತೆರೆಯುವಂತೆ ಆಜ್ಞಾಪಿಸಿದಾಗ ಅವು ಪ್ರತ್ಯೇಕತೆಯನ್ನು ಕೈ ಬಿಡಬೇಕಾಯಿತು. ೧೯೫೭-೫೮ರಲ್ಲಿ ಆರ್ಕಾನ್ಸಾ ಪ್ರಾಂತದ ಗವರ್ನರ್ ರಾಷ್ಟ್ರೀಯ ರಕ್ಷಣಾದಳಗಳನ್ನು ಉಪಯೋಗಿಸಿಕೊಂಡು ಆಫ್ರಿಕನ್-ಅಮೆರಿಕನ್ ವಿದ್ಯಾರ್ಥಿಗಳು ಪ್ರವೇಶಿಸುವುದನ್ನು ತಡೆಗಟ್ಟಿದಾಗ ಅಧ್ಯಕ್ಷ ಐಸೆನ್‌ಹಾವರ್ ಫೆಡರಲ್ ಸೈನ್ಯವನ್ನು ಅವರ ರಕ್ಷಣೆಗೆ ಕಳುಹಿಸಿ ಆ ಪ್ರೌಢಶಾಲೆಯ ಪ್ರತ್ಯೇಕತಾ ಧೋರಣೆಯನ್ನು ನಿಷಿದ್ಧಗೊಳಿಸಿದನು.

ಸುಮಾರು ಅರ್ಧ ಶತಮಾನದಿಂದಲೂ ಸೇಂಟ್ ಲಾರೆನ್ಸ್ ನದಿಯ ಆಳ ಅಗಲಗಳನ್ನು ಹೆಚ್ಚಿಸಿ ಅಟ್ಲಾಂಟಿಕ್ ಸಾಗರದ ಮೂಲಕ ಬರುವ ನೌಕೆಗಳು ಮಹಾಸರೋವರಗಳನ್ನು ತಲುಪುವಂತೆ ಮಾಡಲು ಯೋಜನೆ ಹಾಕಿದ್ದರೂ ಅದನ್ನು ಕಾರ್ಯಗತಗೊಳಿಸಲು ಆಗಿರಲಿಲ್ಲ. ಹಾಗಾಗಿದ್ದರೆ ಅನೇಕ ಅಣೆಕಟ್ಟುಗಳು ನಿರ್ಮಿತವಾಗಿ ಜಲವಿದ್ಯುದಾಗಾರಗಳು ರಚನೆಗೊಂಡು ವಿದ್ಯುಚ್ಛಕ್ತಿಯ ಉತ್ಪನ್ನವನ್ನು ಹೆಚ್ಚಿಸುವುದು ಈ ಯೋಜನೆಯ ಒಂದು ಅಂಗವಾಗಿತ್ತು. ಇದಕ್ಕೆ ಖಾಸಗಿ ವಿದ್ಯುಚ್ಛಕ್ತಿ ಕಂಪನಿಗಳು, ಪೂರ್ವ ವಲಯದ ರೈಲುಮಾರ್ಗಗಳು ಮತ್ತು ಅಟ್ಲಾಂಟಿಕ್ ತೀರದ ಬಂದರುಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದರಿಂದ ಆ ಯೋಜನೆಯನ್ನು ಮುಂದೂಡುತ್ತ ಹೋದರು.

ಕೆನಡಾ ದೇಶ ಕೂಡ ಸೇಂಟ್ ಲಾರೆನ್ಸ್ ನದಿ ಸಮುದ್ರಮಾರ್ಗವನ್ನು ಬೆಂಬಲಿಸಿತ್ತು. ವುಡ್ರೋ ವಿಲ್ಸನ್ ಕಾಲದಿಂದ ಎಲ್ಲ ಅಧ್ಯಕ್ಷರು ಇದನ್ನು ಅನುಮೋದಿಸಿದ್ದರು. ಆದರೆ ಕಾಂಗ್ರೆಸ್ಸಿನ ಅನುಮೋದನೆ ಸಿಕ್ಕಿರಲಿಲ್ಲ. ೧೯೫೪ರಲ್ಲಿ ಅಧ್ಯಕ್ಷ ಐಸೆನ್‌ಹಾವರ್‌ನು ದೇಶದ ರಕ್ಷಣೆಗೆ ಈ ಯೋಜನೆಯ ಅಗತ್ಯವನ್ನು ಒತ್ತಿ ಹೇಳಿದ ಮೇಲೆ ಅಂತಿಮವಾಗಿ ಕಾಂಗ್ರೆಸ್ ಅನುಮೋದಿಸಿತು. ಈ ಸಮುದ್ರಮಾರ್ಗವನ್ನು ಸುಪೀರಿಯರ್ ಸರೋವರದವರೆಗೂ ನಿರ್ಮಿಸಿದರು. ೧೯೫೯ರಲ್ಲಿ ಈ ಮಾರ್ಗ ಅಧಿಕೃತವಾಗಿ ಆರಂಭವಾಯಿತು.

೧೯೫೬ರ ಚುನಾವಣೆ

೧೯೫೨ರಲ್ಲಿ ಆದಂತೆ ಈ ಚುನಾವಣೆಯಲ್ಲೂ ರಿಪಬ್ಲಿಕನ್ ಪಕ್ಷ ಅಧ್ಯಕ್ಷಸ್ಥಾನಕ್ಕೆ ಐಸೆನ್‌ಹಾವರ್‌ನನ್ನು, ಅವನ ಹೃದಯ ಚಿಕಿತ್ಸೆ ಮುಂತಾದ ಅನಾರೋಗ್ಯ ಕಾರಣಗಳನ್ನು ಕಡೆಗಣಿಸಿ, ಎರಡನೆಯ ಬಾರಿಗೆ ನಾಮಕರಣ ಮಾಡಿತು. ಡೆಮೊಕ್ರಾಟಿಕ್ ಪಕ್ಷದವರು ಸ್ಟೀವನ್‌ಸನ್‌ನನ್ನು ಪುನಃ ಅಧ್ಯಕ್ಷಸ್ಥಾನಕ್ಕೆ ನಾಮಕರಣ ಮಾಡಿದರು. ರಿಪಬ್ಲಿಕನ್ನರು ಉಪಾಧ್ಯಕ್ಷ ಸ್ಥಾನಕ್ಕೆ ನಿಕ್ಸನ್‌ನ್ನು ನಾಮಕರಣ ಮಾಡಲು ಹಿಂಜರಿದರು. ೧೯೫೪ರ ಕಾಂಗ್ರೆಸ್ ಚುನಾವಣೆಯಲ್ಲಿ ನಿಕ್ಸನ್ ಕಮ್ಯೂನಿಸಂ ಭಯವನ್ನು ತನ್ನ ಅನುಕೂಲಕ್ಕೆ ಉಪಯೋಗಿಸಿ ಕೊಂಡು ಮತಗಳಿಸಿದ್ದು ಕೆಲವು ರಿಪಬ್ಲಿಕನ್ ನಾಯಕರಿಗೆ ಹಿಡಿಸಲಿಲ್ಲ. ಪಕ್ಷದೊಳಗೆ 'ನಿಕ್ಸನ್‌ನನ್ನು ಕೈಬಿಡಿ' ಎನ್ನುವ ಆಂದೋಳನ ಪ್ರಾರಂಭವಾಯಿತು. ನಿಕ್ಸನ್‌ನನ್ನು ಕೆಲವು ಪ್ರಮುಖರು ಹಾಗೂ ವ್ಯಾಪಾರಿಗಳು ಬೆಂಬಲಿಸಿದ್ದರಿಂದ ಅವನನ್ನು ಉಪಾಧ್ಯಕ್ಷ ಸ್ಥಾನಕ್ಕೆ ನಾಮಕರಣ ಮಾಡಿದರು; ಡೆಮೊಕ್ರಾಟರು ಅದೇ ಸ್ಥಾನಕ್ಕೆ ಎಸ್ಟಸ್ ಕೆಥವರ್‌ನನ್ನು ನಾಮಕರಣ ಮಾಡಿದರು. ಚುನಾವಣಾ ಪ್ರಚಾರದಲ್ಲಿ ರಿಪಬ್ಲಿಕನ್ನರು ತಮ್ಮ ಆಡಳಿತದ ಅವಧಿಯಲ್ಲಿ – ದೇಶದಲ್ಲಿ ಶಾಂತಿ, ಸುಭಿಕ್ಷತೆಗಳು ನೆಲಸಿರುವುದನ್ನು ಮತದಾರರಿಗೆ ತಿಳಿಸಿ ತಮ್ಮ ಅಭ್ಯರ್ಥಿಗಳಿಗೆ ಮತನೀಡಬೇಕೆಂದು ಮನವಿ ಮಾಡಿಕೊಂಡರು. ಡೆಮೊಕ್ರಾಟರು ಆಡಳಿತ ಪಕ್ಷ ಅಂತರರಾಷ್ಟ್ರೀಯ ಸಂಬಂಧಗಳನ್ನು ದೂರಾಲೋಚನೆ ಯಿಲ್ಲದೆ ಬೆಳೆಸಿಕೊಂಡು ಬಂದಿದೆ ಎಂದು ಆರೋಪಿಸಿದರು. ಐಕ್ ಬೃಹತ್ ಕೈಗಾರಿಕೆಗಳ ಪರ ವಹಿಸುತ್ತಾನೆಂದು ದೂರಿದರು. ಐಕ್‌ನ ದೇಹಸ್ಥಿತಿ – ಅವನಿಗಾದ ಹೃದಯಾಘಾತ, ನಂತರ ಕರುಳಿನ ಶಸ್ತ್ರಚಿಕಿತ್ಸೆ – ಅವನು ಅಧ್ಯಕ್ಷನಾಗಿ ಜವಾಬ್ದಾರಿ ಹೊರಲು ಶಕ್ಯನಾಗಿದ್ದಾನೆಯೇ ಎಂಬ ಅನುಮಾನವನ್ನು ಜನರಲ್ಲಿ ಹಬ್ಬಿಸಲು ಪ್ರಯತ್ನಿಸಿದರು. ಆದರೆ ಅದೇ ಸಮಯದಲ್ಲಿ ಈಜಿಪ್ಟ್‌ನ ಅಧ್ಯಕ್ಷ ನಾಸೆರ್ ಸೂಯಜ್ಞ್ ಕಾಲುವೆಯನ್ನು ರಾಷ್ಟ್ರೀಕರಣ ಮಾಡಿದ ಪರಿಣಾಮವಾಗಿ ಉಂಟಾದ ಸಂದಿಗ್ಧ ಪರಿಸ್ಥಿತಿ ಐಸೆನ್‌ಹಾವರ್‌ಗೆ ಅನುಕೂಲವಾಯಿತು. ಈ ಚುನಾವಣೆಯಲ್ಲಿ ೧೯೫೨ರಕ್ಕಿಂತಲೂ ಹೆಚ್ಚಿನ ಅಂತರಗಳಿಸಿ ಅವನು ಆಯ್ಕೆಯಾದನು. ಡೆಮೊಕ್ರಾಟರು ಸೆನೆಟ್ ಮತ್ತು ಕಾಂಗ್ರೆಸ್ಸಿನಲ್ಲಿ ತಮ್ಮ ಬಲ ಹೆಚ್ಚಿಸಿಕೊಂಡರು.

ತನ್ನ ಅಧಿಕಾರದ ಎರಡನೆಯ ಅವಧಿಯಲ್ಲಿ ಐಕ್ ವೈಯಕ್ತಿಕ ಘನತೆ ಗೌರವಗಳನ್ನು ಪಡೆದಿದ್ದರೂ ಅವನ ಆಡಳಿತ ಅನೇಕ ಕಾರಣಗಳಿಂದ ಟೀಕೆಗೆ ಒಳಗಾಯಿತು. ಕೃಷಿ ಕ್ಷೇತ್ರದಲ್ಲಿ ಅಧಿಕ ಉತ್ಪತ್ತಿ ಸಮಸ್ಯೆಯಾಗಿಯೇ ಉಳಿಯಿತು. ಬೆಲೆ ಕುಸಿಯದಂತೆ ಮಾಡಲು ಸರ್ಕಾರದ ಸಹಾಯ ಧನ, ಬೆಳೆಗಳ ಪರಿಮಿತಿ ನಿಗದಿ ಮಾಡುವುದು ಮತ್ತು 'ಮಣ್ಣಿನ ಬ್ಯಾಂಕ್' ಇವುಗಳಲ್ಲಿ ಕಾಲಕ್ಕೆ ತಕ್ಕಂತೆ ಬದಲಾವಣೆಗಳು ಆಗಲಿಲ್ಲ. ಆರ್ಥಿಕ ಅಭಿವೃದ್ಧಿಗೆ ಹೆಚ್ಚಿನ ಶ್ರಮವಹಿಸಲಿಲ್ಲ ಎಂದು ಆಡಳಿತವರ್ಗದವರನ್ನು ಜನರು ದೂಷಿಸಿದರು. ಅಧ್ಯಕ್ಷ

ಐಸೆನ್‌ಹಾವರ್‌ನ ಆಪ್ತ ಕಾರ್ಯದರ್ಶಿ ಶರ್ಮನ್ ಆ್ಯಡಮ್ಸ್ ಹತ್ತಿ ಬಟ್ಟೆ ಉತ್ಪಾದಕನಾದ ಬರ್ನಾರ್ಡ್ ಗೋಲ್ಡ್‌ಫೈನ್‌ನಿಂದ ಅಪಾರ ಹಣ ಪಡೆದು ಅವನಿಗೆ ಅನೇಕ ಅನುಕೂಲತೆಗಳನ್ನು ಒದಗಿಸಿಕೊಟ್ಟನೆಂದು ಸಾಬೀತಾದರೂ ಐಕ್ ಅವನನ್ನು ಕೆಲಸದಿಂದ ತೆಗೆದು ಹಾಕಲು ಬಹಳ ತಡಮಾಡಿ ಟೀಕೆಗೆ ಗುರಿಯಾದನು.

೧೯೫೯ರಲ್ಲಿ ಕಾರ್ಮಿಕರ ಕೆಲವು ಕುಂದುಕೊರತೆಗಳನ್ನು ನಿವಾರಿಸಲು ಲ್ಯಾಂಡ್ರಮ್-ಗ್ರಿಫಿತ್ ಕಾಯಿದೆಯನ್ನು ಜಾರಿಗೆ ತಂದರು. ಕಾರ್ಮಿಕರ ಒಕ್ಕೂಟಗಳಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರಗಳನ್ನು ಹತ್ತಿಕ್ಕುವುದು ಈ ಕಾಯಿದೆಯ ಮುಖ್ಯ ಉದ್ದೇಶವಾಗಿತ್ತು. ಇದು ಕೆಲವು ಸುಧಾರಣೆಗಳನ್ನು ಜಾರಿಗೆ ತಂದಿತು – ಕಾರ್ಮಿಕ ಒಕ್ಕೂಟಗಳು ತಮ್ಮ ಸದಸ್ಯರ ಸಂಖ್ಯೆ ಮತ್ತು ಹಣಕಾಸಿನ ಲೆಕ್ಕ ಸರ್ಕಾರಕ್ಕೆ ವರದಿ ಮಾಡಬೇಕೆನ್ನುವುದು ಕಡ್ಡಾಯ ಮಾಡಿತು. ಕೆಲವು ರೀತಿಯ ಮುಷ್ಕರಗಳನ್ನು ನಿಷೇಧಿಸಿದ್ದೇ ಅಲ್ಲದೆ ರಾಜ್ಯ ಸರ್ಕಾರಗಳಿಗೆ ಕಾರ್ಮಿಕರ ಒಕ್ಕೂಟಗಳನ್ನು ನಿಯಂತ್ರಿಸುವ ಅಧಿಕಾರವನ್ನು ಹೆಚ್ಚಿಸಿತು.

೧೯೫೮ರಲ್ಲಿ ಅಲಾಸ್ಕಾ ಸಂಯುಕ್ತ ಸಂಸ್ಥಾನಗಳಿಗೆ ಸೇರಿತು. ೧೯೫೯ರಲ್ಲಿ ಹವಾಯಿ ಅಮೆರಿಕದ ಐವತ್ತನೆಯ ಸಂಸ್ಥಾನವಾಯಿತು. ವಿದ್ಯಾಭ್ಯಾಸವನ್ನು ಅಭಿವೃದ್ಧಿಗೊಳಿಸಲು ರಾಷ್ಟ್ರೀಯ ರಕ್ಷಣಾ ಕಾಯಿದೆ (National Defense Education Act) ಜಾರಿಗೆ ಬಂದು, ವಿದ್ಯಾರ್ಥಿಗಳಿಗೆ ಸಾಲ ದೊರಕಿಸಲು ಸಹಾಯ ನೀಡಿ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕೆ ಧನಸಹಾಯ (fellowships) ಒದಗಿಸಲು ಸಾಧ್ಯವಾಗುವಂತೆ ಮಾಡಿತು. ಆದರೆ ೧೯೬೦ರಲ್ಲಿ ಕಾಂಗ್ರೆಸ್ ಕನಿಷ್ಠ ವೇತನವನ್ನು ೧.೨೫ ಡಾಲರಿಗೆ ಏರಿಸಲು ವಿಫಲವಾಗಿದ್ದು, ಸಾಮಾಜಿಕ ಭದ್ರತಾ ಯೋಜನೆ (Social Security) ವಯಸ್ಸಾದವರಿಗೆ ವೈದ್ಯಕೀಯ ನೆರವು ನೀಡಲು ಸಾಧ್ಯವಾಗದೆ ಹೋಗಿದ್ದು, ಸಾರ್ವಜನಿಕ ವಸತಿಗಳನ್ನು ನಿಯಂತ್ರಿಸದೆ ಹೋದದ್ದು ಮತ್ತು ಸಾರ್ವಜನಿಕ ಶಿಕ್ಷಣ ಉತ್ತಮಗೊಳಿಸಲು ರಾಜ್ಯ ಸರ್ಕಾರಗಳಿಗೆ ಫೆಡರಲ್ ಸರ್ಕಾರ ಹಣ ಒದಗೊಸದೆ ಹೋದದ್ದು – ಇವೆಲ್ಲ ೧೯೬೦ರ ಚುನಾವಣೆಯಲ್ಲಿ ಡೆಮೊಕ್ರಾಟರ ಪ್ರಚಾರಕ್ಕೆ ಗ್ರಾಸವಾದವು.

೧೯೫೭ರ ನಾಗರಿಕ ಹಕ್ಕುಗಳ ಕಾಯಿದೆ : (The Civil Rights Act of 1957)

ಅಮೆರಿಕದ ಅಂತರ್ಯುದ್ಧದನಂತರ ದಕ್ಷಿಣ ರಾಜ್ಯಗಳಲ್ಲಿ ಪುನರ್‌ನಿರ್ಮಾಣ ಸಫಲವಾಗದೆ ಆ ರಾಜ್ಯ ಸರ್ಕಾರಗಳು ರಾಜ್ಯಾಂಗದ ೧೪ ಮತ್ತು ೧೫ನೆಯ ತಿದ್ದುಪಡಿಗಳನ್ನು ನೂರಾರು ನೆಪಗಳಿಂದ ಜಾರಿಗೆ ತರದೆ ಕರಿಯರ ಹಕ್ಕುಬಾಧ್ಯತೆಗಳನ್ನು ಹತ್ತಿಕ್ಕಿದರು. ಈ ರಾಜ್ಯಗಳ ಸೆನೆಟರ್‌ಗಳು ಕಾಂಗ್ರೆಸ್ ಮಂಡಿಸಿದ ನಾಗರಿಕ ಹಕ್ಕುಗಳ ಮಸೂದೆಯನ್ನು ಪ್ರತಿವರ್ಷವೂ 'ಫಿಲಿಬಸ್ಟರ್' (filibuster) ವಿಧಾನದ ಮೂಲಕ – ಎಂದರೆ ಸೆನೆಟರ್‌ಗಳು ಕಾಂಗ್ರೆಸ್‌ನಲ್ಲಿ ತಮಗೆ ಮಾತನಾಡಲು ನಿಗದಿ ಮಾಡಿದ ವೇಳೆಯನ್ನು ಮೀರಿ

ಇತರರಿಗೆ ಅವಕಾಶ ಕೊಡದೆ ಸಭೆಯ ಕಾರ್ಯಕಲಾಪಗಳು ನಡೆಯದಂತೆ ತಡೆಹಿಡಿಯುವ ವಿಧಾನ – ಕಾಂಗ್ರೆಸ್ ಮಂಡಿಸಿದ ಮಸೂದೆಯನ್ನು ಸೋಲಿಸಿದ್ದರು.

೧೯೫೭ರಲ್ಲಿ ಐಸೆನ್‌ಹಾವರ್ ತನ್ನ ಅಧಿಕಾರ ಮತ್ತು ಪ್ರಭಾವವನ್ನು ಉಪಯೋಗಿಸಿ ನಾಗರಿಕ ಹಕ್ಕುಗಳ ಮಸೂದೆಯನ್ನು ಪುನಃ ಕಾಂಗ್ರೆಸ್‌ನಲ್ಲಿ ಮಂಡಿಸಿ ಅದನ್ನು ಅನುಮೋದಿಸುವಂತೆ ಸೆನೆಟರ್‌ಗಳನ್ನು ಒತ್ತಾಯಿಸಿದನು. ದಕ್ಷಿಣ ರಾಜ್ಯಗಳ ಸೆನೆಟರ್‌ಗಳು ಆ ಮಸೂದೆಯ ಕೆಲವು ಅಂಶಗಳನ್ನು ಮಾರ್ಪಾಡು ಮಾಡಿದ ಮೇಲೆ, ೧೮೭೫ರಷ್ಟು ಹಿಂದಿನಿಂದಲೂ ಅನುಮೋದನೆ ಪಡೆಯದ ಮಸೂದೆ ಅಂತಿಮವಾಗಿ ಕಾಂಗ್ರೆಸ್‌ನಲ್ಲಿ ಅನುಮೋದನೆಯಾಯಿತು. ಇದರಿಂದಾಗಿ ಕೆಲವು ಬದಲಾವಣೆಗಳು ಜಾರಿಗೆ ಬಂದವು:

- ಪಕ್ಷಪಾತದಿಂದ (discrmination) ಮತದಾನದ ಹಕ್ಕುಗಳನ್ನು ನಿರಾಕರಿಸುವ ಪ್ರಕರಣಗಳನ್ನು ವಿಚಾರಣೆ ಮಾಡಲು ನಾಗರಿಕ ಹಕ್ಕುಗಳ ಸಮಿತಿಯನ್ನು (Civil Rights Commission) ಸ್ಥಾಪಿಸಿದರು.
- ನ್ಯಾಯಾಂಗ ಇಲಾಖೆ ಹಕ್ಕುಗಳನ್ನು ಜಾರಿಗೆ ತರುವಂತೆ ಮಾಡಲು ವಿಶೇಷ ಅಧಿಕಾರವನ್ನು ಪಡೆಯಿತು.
- ದಕ್ಷಿಣ ರಾಜ್ಯದ ಅಧಿಕಾರಿಗಳು ಇವುಗಳನ್ನು ಜಾರಿಗೆ ತರಲು ನಿರಾಕರಿಸಿದಾಗ ನ್ಯಾಯಾಂಗ ಇಲಾಖೆ ತನಿಖೆ ನಡೆಸಿ ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ ಕಾರ್ಯಾಂಗ ಇಲಾಖೆಗೆ ಆಜ್ಞೆ ನೀಡುವ ಅಧಿಕಾರ ನ್ಯಾಯಾಂಗ ಇಲಾಖೆ ಪಡೆಯಿತು.

ಇಷ್ಟೆಲ್ಲ ಸುಧಾರಣೆಗಳು ಕಾಯಿದೆ ಮಟ್ಟದಲ್ಲಿ ಆದವು. ವಾಸ್ತವವಾಗಿ ದಕ್ಷಿಣ ಪ್ರಾಂತಗಳ ಕರಿಯರ ನಾಗರಿಕ ಹಕ್ಕುಗಳಾಗಲಿ ಅಥವಾ ಪಾಠಶಾಲೆಗಳಲ್ಲಿ ಬಿಳಿಯ ಮತ್ತು ಕರಿಯ ವಿದ್ಯಾರ್ಥಿಗಳ ಅನುಕಲನವಾಗಲಿ (integration) ಕಾರ್ಯಗತಗೊಳ್ಳಲಿಲ್ಲ.

ನಾಗರಿಕ ಹಕ್ಕುಗಳ ಕಾಯಿದೆಯನ್ನು ಇನ್ನಷ್ಟು ಬಲಪಡಿಸಿ ಪರಿಣಾಮಕಾರಿಯಾಗಿ ಮಾಡಲು ಕಾಂಗ್ರೆಸ್ ೧೯೬೦ರಲ್ಲಿ ಹೊಸ ಕಾಯಿದೆಯನ್ನು ಅನುಮೋದಿಸಿತು. ಇದು ಪ್ರಜೆಗಳ ಮತದಾನದ ಹಕ್ಕಿಗೆ ಮತ್ತು ಶಾಲೆಗಳ ಅನುಕಲನಕ್ಕೆ ಅಡ್ಡಿ ಬರುವುದನ್ನು ಫೆಡರಲ್ ಆಪಾದನೆ ಎಂದು ಪರಿಗಣಿಸಿತು. ಕಾಯಿದೆಗಳ ಮೂಲಕ ಬದಲಾವಣೆಗಳು ಆಗುತ್ತಿದ್ದರೂ ಕರಿಯರಿಗೆ ಅವು ಬಹು ನಿಧಾನ ಎನ್ನಿಸಿ ಅವರಲ್ಲಿ ಅಸಾಮಾಧಾನ ಹೆಚ್ಚಿತು. ೧೯೫೦ರ ದಶಕ ಮುಗಿಯುತ್ತ ಬಂದಂತೆ ಕರಿಯರು ಕಾಯಿದೆ ಉಲ್ಲಂಘಿಸಿ ಮುಷ್ಕರ, ಧರಣಿ ಹೂಡುವುದು ಮತ್ತು ಪ್ರದರ್ಶನಗಳ ಮೂಲಕ ತಮ್ಮ ಗುರಿ ಸಾಧಿಸಲು ಪ್ರಯತ್ನಿಸಿದರು. ಹೀಗೆ ಪ್ರಾರಂಭವಾದ ಈ ಆಂದೋಳನ ೧೯೫೫ರಲ್ಲಿ ಮಾಂಟ್ಗೋಮರಿ, ಅಲಬಾಮದಲ್ಲಿ ಹೊಸ ಆಯಾಮ ಪಡೆಯಿತು. ಇದಕ್ಕೆ ಕಾರಣವಾದ ಘಟನೆ

ಮಾಂಟ್ಗೋಮರಿ ಸಾರಿಗೆ ಬಸ್‌ನಲ್ಲಿ ಜರುಗಿತು. ರೋಸಾ ಪಾರ್ಕ್ಸ್ ಎಂಬ ಕಪ್ಪು ಮಹಿಳೆ ಬಸ್ಸಿನಲ್ಲಿ ತಾನು ಕುಳಿತ ಜಾಗವನ್ನು ಬಿಳಿಯ ಪ್ರಯಾಣಿಕನಿಗೆ ಬಿಟ್ಟುಕೊಡಲು ನಿರಾಕರಿಸಿದಾಗ ಸಂದಿಗ್ಧ ಪರಿಸ್ಥಿತಿ ಏರ್ಪಟ್ಟು ಪೊಲೀಸರು ಅವಳನ್ನು ಬಂಧಿಸಿ ಜೈಲಿಗೆ ಸೇರಿಸಿದರು. ಆ ಪ್ರದೇಶದ ಕರಿಯರು ಮಾರ್ಟಿನ್ ಲೂಥರ್ ಕಿಂಗ್‌ನ ನಾಯಕತ್ವದಲ್ಲಿ ಮುಷ್ಕರ ಹೂಡಿ ಒಂದು ವರ್ಷ ಕಾಲ ಸಾರಿಗೆ ಬಸ್ಸುಗಳಲ್ಲಿ ಕರಿಯರು ಪ್ರಯಾಣ ಮಾಡುವುದನ್ನು ನಿಲ್ಲಿಸಿದರು. ಈ ಸಮಸ್ಯೆ ಫೆಡರಲ್ ನ್ಯಾಯಾಲಯದಲ್ಲಿ ವಿಚಾರಣೆಯಾಗಿ ಶ್ರೇಷ್ಠ ನ್ಯಾಯಾಧೀಶರು ಮಾಂಟ್ಗೋಮರಿ ಸಾರಿಗೆ ವ್ಯವಸ್ಥೆಯನ್ನು ಅನುಕಲನಗೊಳಿಸಬೇಕೆಂದು (integration) ತೀರ್ಪು ನೀಡಿದರು.

ಮಾಂಟ್ಗೋಮರಿಯಲ್ಲಿ ಜಯ ಗಳಿಸಿದ ಮೇಲೆ ಮಾರ್ಟಿನ್ ಲೂಥರ ಕಿಂಗ್ (ಜೂನಿಯರ್) ರಾಷ್ಟ್ರಮಟ್ಟದ ನಾಯಕನೆಂದು ಪರಿಗಣಿಸಲ್ಪಟ್ಟನು. ಅವನ ನಾಯಕತ್ವದಲ್ಲಿ ಮುಂದಿನ ಹತ್ತು ವರ್ಷಗಳು ದಕ್ಷಿಣ ಕ್ರಿಶ್ಚಿಯನ್ ಸಮಾವೇಶದ ಸದಸ್ಯರು ಮಹಾತ್ಮ ಗಾಂಧಿಯ ಮೇಲ್ಪಂಕ್ತಿಯನ್ನನುಸರಿಸಿ ಅಹಿಂಸಾತ್ಮಕ ನಾಗರಿಕ ಅಸಹಕಾರ ಚಳುವಳಿಯನ್ನು ನಡೆಸಿದರು. ಕಿಂಗ್‌ನ ವಿರೋಧಿಗಳು ಅವನನ್ನು ರಾಷ್ಟ್ರದ ಕಾನೂನು ಭಂಗ ಮಾಡಿ ಅರಾಜಕತೆ ಉಂಟುಮಾಡುವ ಸಮಾಜ ಹಿತಘಾತುಕನೆಂದು ಆಪಾದಿಸಿದಾಗ ಕಿಂಗ್ ಉತ್ತರಿಸಿದ್ದು: 'ಅನ್ಯಾಯವಾದ ಕಾನೂನುಗಳನ್ನು ಉಲ್ಲಂಘಿಸುವುದು ಅಪರಾಧವಲ್ಲ. ಅವುಗಳನ್ನು ಒಂದು ಸಮುದಾಯದ ಮೇಲೆ ಹೇರುವುದು ಅಪರಾಧ'. ಕಿಂಗ್ ಮತಧರ್ಮದಲ್ಲಿ ಗಾಢವಾದ ಶ್ರದ್ಧೆಯುಳ್ಳವನಾಗಿದ್ದು ಪ್ರಭಾವಶಾಲಿಯಾದ ವಾಗ್ಮಿಯಾಗಿದ್ದನು. ಅವನು ನಾಗರಿಕ ಹಕ್ಕುಗಳ ಆಂದೋಳನವನ್ನು ನ್ಯಾಯಾಲಯಗಳಿಂದ ಹೊರತಂದು ಕರಿಯ ಸಮುದಾಯದ ರಾಷ್ಟ್ರಮಟ್ಟದ ಚಳುವಳಿಯನ್ನಾಗಿ ಮಾರ್ಪಡಿಸಿದನು. ಅವನು ಹಾಕಿದ ಮೇಲ್ಪಂಕ್ತಿಯನ್ನು ಇತರ ಸಂಘ ಸಂಸ್ಥೆಗಳು ಅನುಸರಿಸಿದವು – 'ವಿದ್ಯಾರ್ಥಿಗಳ ಅಹಿಂಸಾತ್ಮಕ ಕ್ರೋಢೀಕರಣ ಸಮಿತಿ' ಮತ್ತು 'ಬುಡಕಟ್ಟುಗಳ ಸಮಾನತ್ವ ಸಮಾವೇಶ' (Racial Equality Conference) – ಇವು ಕೆಲವು ಉದಾಹರಣೆಗಳು.

ಐಸೆನ್‌ಹಾವರ್‌ನ ಅಂತರರಾಷ್ಟ್ರೀಯ ಸಮಸ್ಯೆಗಳು

೧೯೫೨ರ ಚುನಾವಣಾ ಪ್ರಚಾರದಲ್ಲಿ ರಿಪಬ್ಲಿಕನ್ನರು ತಾವು ಅಧಿಕಾರಕ್ಕೆ ಬಂದರೆ ಕಮ್ಯೂನಿಸ್ಟ್ ಆಡಳಿತದಲ್ಲಿರುವ ರಾಷ್ಟ್ರಗಳನ್ನು ಬಿಡುಗಡೆ ಮಾಡುವುದಾಗಿ ಭಾಷಣ ಮಾಡಿದ್ದರೂ ಕೂಡ ಅಧಿಕಾರಕ್ಕೆ ಬಂದನಂತರ ಟ್ರೂಮನ್ ಅನುಸರಿಸಿದ ಧೋರಣೆ – ಕಮ್ಯೂನಿಸಂ ಹರಡದಂತೆ ತಡೆಯುವುದು – ಇದನ್ನೇ ಮುಂದುವರಿಸಿದರು. ಐಸೆನ್‌ಹಾವರ್‌ನ ಆಪ್ತ ಸಲಹೆಗಾರ ಜಾನ್ ಫಾಸ್ಟರ್ ಡಲೆಸ್ ಕಮ್ಯೂನಿಸಂನ ವಿರುದ್ಧ ಹೋರಾಟವನ್ನು ದುಷ್ಟ ಮತ್ತು ಶಿಷ್ಟ ಶಕ್ತಿಗಳ ಸಂಘರ್ಷಣೆ ಎಂದು ಭಾವಿಸಿ, ದುಷ್ಟ ಶಕ್ತಿಗಳಿಂದ ರಷ್ಯಾ ಮತ್ತು ಚೈನಾ ದೇಶಗಳ ಆಕ್ರಮಣವನ್ನು ಹತ್ತಿಕ್ಕಲು ಕಮ್ಯೂನಿಸ್ಟೇತರ

ದೇಶಗಳೊಡನೆ ಒಪ್ಪಂದ ಮಾಡಿಕೊಳ್ಳುವುದು ಮತ್ತು ಸಿ ಐ ಎ ಗೂಢಚಾರ ಸಂಸ್ಥೆಯನ್ನು ಉಪಯೋಗಿಸಿಕೊಂಡು ಕಮ್ಯೂನಿಸ್ಟ್ ದೇಶಗಳಲ್ಲಿ ಒಡಕು ಹುಟ್ಟಿಸುವ, ಸರ್ಕಾರ ಉರುಳಿಸುವ ಪಿತೂರಿ ಮುಂತಾದ ದೇಶದ್ರೋಹ ಕಾರ್ಯಗಳನ್ನು ಉತ್ತೇಜಿಸುವ ಮೂಲಕ ಕಮ್ಯೂನಿಸ್ಟ್ ಪ್ರಭಾವವನ್ನು ಕ್ಷೀಣಿಸುವಂತೆ ಪ್ರಯತ್ನಿಸಿದನು.

ಐಸೆನ್‌ಹಾವರ್‌ನ ಆಡಳಿತ ತೀವ್ರ ಕಮ್ಯೂನಿಸ್ಟ್ ವಿರೋಧಿಯಾಗಿದ್ದರೂ ೧೯೫೩ರಲ್ಲಿ ಸ್ಟಾಲಿನ್ ನಿಧನ ಹೊಂದಿದ ಮೇಲೆ ರಷ್ಯಾ-ಅಮೆರಿಕ ನಡುವಣ ಬಿಕ್ಕಟ್ಟು ಸ್ವಲ್ಪ ಮಟ್ಟಿಗೆ ಸಡಿಲಗೊಂಡಿತು. ಸ್ಟಾಲಿನ್ ನಂತರ ಅಧಿಕಾರಕ್ಕೆ ಬಂದ ನಿಕಿಟಾ ಕ್ರುಶ್ಚೇವ್ ಸ್ಟಾಲಿನ್‌ನ ಕ್ರೂರ ದಬ್ಬಾಳಿಕೆಯನ್ನು ಧಿಕ್ಕರಿಸಿದನು. ಅಣ್ವಸ್ತ್ರಗಳ ಸರ್ವನಾಶಗೊಳಿಸುವ ಶಕ್ತಿಯ ಅರಿವಿದ್ದ ಕ್ರುಶ್ಚೇವ್ 'ಶಾಂತಿಯುತ ಸಹಬಾಳ್ವೆಯ' ಆಸೆಯನ್ನು ವ್ಯಕ್ತಪಡಿಸಿದನು. ಈ ಅಸ್ತ್ರಗಳನ್ನು ಬಳಸದೆಯೇ ಕಮ್ಯೂನಿಸಂ ಪ್ರಪಂಚದಾದ್ಯಂತ ಹರಡಬಹುದೆಂದು ಅವನು ನಂಬಿದ್ದನು. ವಿದೇಶಿ ಆಳ್ವಿಕೆಯಿಂದ ಬಿಡುಗಡೆ ಹೊಂದಲು ಹೋರಾಡುತ್ತಿದ್ದ ಏಷ್ಯಾ, ಮಧ್ಯ ಪ್ರಾಚ್ಯ ಮತ್ತು ಆಫ್ರಿಕಾ ಖಂಡದ ದೇಶಗಳಲ್ಲಿ ರಾಷ್ಟ್ರೀಯ ಭಾವನೆಯ ಜೊತೆಗೆ ಕಮ್ಯೂನಿಸಂ ಬೆಳೆಸಬಹುದು ಎಂದು ಕ್ರುಶ್ಚೇವ್ ಹವಣಿಸಿದ್ದನು.

ಸೋವಿಯೆಟ್ ರಾಜಕೀಯದಲ್ಲಿ ಆಕ್ರಮಣಕಾರಿ ಧೋರಣೆ ಕಡಿಮೆಯಾಗಿದ್ದರೂ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಡಲೆಸ್‌ಗೆ ಅದರಲ್ಲಿ ನಂಬಿಕೆ ಹುಟ್ಟಲಿಲ್ಲ. ಆದ್ದರಿಂದ ಅವನು ಅಂತರರಾಷ್ಟ್ರೀಯ ಸಂಬಂಧಗಳನ್ನು ಬೆಳೆಸಿಕೊಳ್ಳುತ್ತ ಹೋದನು. ಈ ಒಪ್ಪಂದಗಳು ಸಂಪೂರ್ಣ ರಕ್ಷಣೆ ನೀಡುತ್ತವೆ ಎನ್ನುವ ಭರವಸೆ ಅವನಿಗಿರಲಿಲ್ಲ. ಆದ್ದರಿಂದ ಅಮೆರಿಕನ್ನರು ಬೃಹತ್ ಪ್ರಮಾಣದ ಪ್ರತಿದಾಳಿಯನ್ನು (massive retaliation) ಮಾಡಲು ಸಿದ್ಧರಾಗಿರಲು ಎಲ್ಲ ವ್ಯವಸ್ಥೆ ಮಾಡತೊಡಗಿದರು. ಈ ದಾಳಿ ಅಣ್ವಸ್ತ್ರಗಳ ಮೇಲೆ ಆಧಾರಿತವಾಗಿದ್ದರಿಂದ ಅವುಗಳನ್ನು ಉತ್ಪಾದಿಸಿ ಶೇಖರಿಸಿಡುವುದು ಸೋವಿಯೆಟ್ ಒಕ್ಕೂಟಕ್ಕೆ ಭಯ ಹುಟ್ಟಿಸುವ ವಿಧಾನವಾಗಿತ್ತು. ಅಣ್ವಸ್ತ್ರಗಳನ್ನು ಹೆಚ್ಚಿಸುವುದರಿಂದ ಸೈನ್ಯದ ಸಂಖ್ಯೆಯನ್ನು ಕಡಿಮೆ ಮಾಡುವುದು ಸಾಧ್ಯ, ಅಲ್ಲದೆ ಕಡಿಮೆ ಖರ್ಚಿನಲ್ಲಿ ಸಂಪೂರ್ಣ ನಾಶಗೊಳಿಸುವ ಸಾಧ್ಯತೆ ಹೆಚ್ಚುತ್ತದೆ ಎಂದು ಲೆಕ್ಕ ಹಾಕಿದರು. ಡಲೆಸ್‌ನ ಈ ಯೋಜನೆಗಳು ಜನರಿಗೆ ಸೂಕ್ತವಾಗಿ ಕಂಡುಬಂದರೂ ವಾಸ್ತವವಾಗಿ ಅಣ್ವಸ್ತ್ರಗಳ ಉಪಯೋಗ ನಿಯಮಿತವಾದುದು. ಏಕೆಂದರೆ ಕಮ್ಯೂನಿಸ್ಟ್ ದೇಶದ ಮೇಲೆ ಅಣ್ವಸ್ತ್ರ ಪ್ರಯೋಗಿಸಿದರೆ ಅದು ಪ್ರಳಯಾಂತಕವಾದ ಪ್ರಪಂಚ ಯುದ್ಧಕ್ಕೆ ಕಾರಣವಾಗುತ್ತಿತ್ತು. ಈ ಎರಡು ದಿಗ್ಗಜಗಳ ಘರ್ಷಣೆ ಸರ್ವನಾಶದಲ್ಲಿ ಪರ್ಯಾವಸಾನಗೊಳ್ಳುವುದು ಖಚಿತವಾಗಿತ್ತು. ಆದ್ದರಿಂದ ಡಲೆಸ್‌ನ ವಿಕೃತ ಯೋಜನೆಗಳು ಆಲೋಚನಾ ಮಟ್ಟದಲ್ಲಿ ಉಳಿದು, ಅಮೆರಿಕ ಅಂತರರಾಷ್ಟ್ರೀಯ ಒಪ್ಪಂದಗಳ ಮತ್ತು ವಿದೇಶಿ ಧನಸಹಾಯದ ಮೂಲಕ ಕಮ್ಯೂನಿಸಂನ್ನು ತಡೆದು ನಿಲ್ಲಿಸುವ ಪ್ರಯತ್ನ ಮುಂದುವರಿಸಿದರು.

೧೯೫೩ರಲ್ಲಿ ಐಸೆನ್‌ಹಾವರ್ ತನ್ನ ಚುನಾವಣಾ ವಾಗ್ದಾನವನ್ನು ಪೂರೈಸಲು ಶಾಂತಿಸಂಧಾನಕ್ಕಾಗಿ ಕೊರಿಯಾಕ್ಕೆ ಪ್ರಯಾಣ ಬೆಳೆಸಿದನು. ಅವನ ಮುಂದಿದ್ದ ಜಟಿಲವಾದ ಸಮಸ್ಯೆಯೆಂದರೆ ಯುದ್ಧದಲ್ಲಿ ಸೆರೆ ಸಿಕ್ಕವರ ವರ್ಗಾವಣೆ. ಸಾವಿರಾರು ಉತ್ತರ ಕೊರಿಯಾ ಸೈನಿಕ ಸೆರೆಯಾಳುಗಳು ವಾಪಸ್ಸು ಉತ್ತರ ಕೊರಿಯಾಕ್ಕೆ ಹೋಗಲು ನಿರಾಕರಿಸಿದ್ದರು. ಕಮ್ಯೂನಿಸ್ಟರು ಸೆರೆ ಹಿಡಿದ ೨೧ ಅಮೆರಿಕನ್ ಸೈನಿಕರು ವಾಪಸ್ಸು ಬರಲು ಒಪ್ಪಲಿಲ್ಲ. ಈ ಕ್ಲಿಷ್ಟ ಪರಿಸ್ಥಿತಿ ಸೋವಿಯೆಟ್ ಒಕ್ಕೂಟ ಮತ್ತು ಸಂಯುಕ್ತ ಸಂಸ್ಥಾನಗಳ ನಡುವೆ ವಾಗ್ಯುದ್ಧಕ್ಕೆ ಕಾರಣವಾಯಿತು. ಅಮೆರಿಕ ತನ್ನ ಸೈನಿಕರನ್ನು ಕಮೂಸ್ಟರು ತಲೆ ಕೆಡಿಸಿಬಿಟ್ಟಿದ್ದಾರೆ ಎಂದು ಆಪಾದಿಸಿತು. ಕಡೆಗೆ ಎಲ್ಲ ಸೆರೆಯಾಳುಗಳನ್ನು ಬಿಡುಗಡೆ ಮಾಡಿ ಅವರು ತಮ್ಮ ಸ್ವಇಚ್ಛೆಯಿಂದ ಯಾವ ದೇಶಕ್ಕಾದರೂ ಹೋಗಬಹುದೆಂದು ಪರಸ್ಪರ ಒಪ್ಪಂದ ಮಾಡಿಕೊಂಡು ಎರಡು ಸೈನ್ಯಗಳನ್ನು ನಿಶಸ್ತ್ರಗೊಳಿಸುವ ಕಾರ್ಯ ಪ್ರಾರಂಭವಾಯಿತು (armistice).

೧೯೫೩ರ ಜುಲೈ ತಿಂಗಳಲ್ಲಿ ಕೊರಿಯಾದಲ್ಲಿ ನಿಶಸ್ತ್ರ ಒಪ್ಪಂದಕ್ಕೆ ರುಜು ಹಾಕಿ ಎರಡೂ ಕಡೆಯವರು ಯುದ್ಧವನ್ನು ನಿಲ್ಲಿಸಿದರು. ಈ ಒಪ್ಪಂದದ ಪ್ರಕಾರ ಕೊರಿಯಾ ದೇಶವನ್ನು ೩೮ನೆಯ ಸಮಾನಾಂತರ ರೇಖೆಯನ್ನು ಗಡಿಯಾಗಿ ಮಾಡಿ, ಉತ್ತರ ಮತ್ತು ದಕ್ಷಿಣ ಕೊರಿಯಾಗಳಾಗಿ ವಿಭಾಗಿಸಿದರು. ಈ ಎರಡು ದೇಶಗಳು ತಮ್ಮ ಸೈನ್ಯಗಳನ್ನು ಗಡಿರೇಖೆಯಿಂದ ಹಿಂದಕ್ಕೆ ಕರೆಸಿಕೊಂಡು ಒಂದು ರೀತಿಯ ಅಸ್ಥಿರವಾದ ಶಾಂತಿ ನೆಲಸುವಂತಾಯಿತು. ಕೊರಿಯಾ ಯುದ್ಧದಲ್ಲಿ ಅಮೆರಿಕ ೩೩೦೦೦ ಸೈನಿಕರನ್ನು ಕಳೆದು ಕೊಂಡು ೨೨ ಬಿಲಿಯನ್ ಡಾಲರ್‌ಗಳ ನಷ್ಟ ಅನುಭವಿಸಬೇಕಾಯಿತು. ಕೊರಿಯಾ ಸಮಸ್ಯೆ ಬಗೆಹರಿಯದೆ ಹಳೆಯ ಗಾಯದಂತೆ ವಾಸಿಯಾಗದೆ ಉಳಿದುಕೊಂಡಿದೆ.

೧೮೮೦ರ ದಶಕದಿಂದಲೂ ಆಗ್ನೇಯ ಏಷ್ಯಾ ಫ್ರೆಂಚರ ವಸಾಹತು ಆಗಿತ್ತು. ಎರಡನೆಯ ಜಾಗತಿಕ ಯುದ್ಧದಲ್ಲಿ ಜಪಾನಿನ ಸೈನ್ಯಗಳು ಏಷ್ಯಾದ ಈ ಪ್ರಾಂತದ ಮೇಲೆ ಆಕ್ರಮಣ ಮಾಡಿದಾಗ ಫ್ರೆಂಚರು ಆ ಪ್ರಾಂತವನ್ನು ಬಿಟ್ಟುಹೋದರು. ಯುದ್ಧಾನಂತರ ಅವರು ಪುನಃ ತಮ್ಮ ವಸಾಹತುಗಳಿಗೆ ಹಿಂತಿರುಗಿ ಬಂದರು. ೧೯೪೫ರ ಆಗಸ್ಟ್ ತಿಂಗಳಲ್ಲಿ ಫ್ರೆಂಚರ ಆಳ್ವಿಕೆಯನ್ನು ವಿರೋಧಿಸಿ ಕಮ್ಯೂನಿಸ್ಟ್ ನಾಯಕ್ ಹೋಚಿ ಮಿನ್ ಸ್ವಾತಂತ್ರ್ಯ ಆಂದೋಳನ ಪ್ರಾರಂಭಿಸಿ ವಿಯಟ್‌ನಾಮ್ ಸ್ವತಂತ್ರ ರಾಷ್ಟ್ರವನ್ನು ಸ್ಥಾಪಿಸಿ ಅದನ್ನು 'ವಿಯಟ್‌ನಾಮ್ ಗಣರಾಜ್ಯ' ಎಂದು ಕರೆದನು. ೧೯೪೬ರಿಂದ ೧೯೫೪ರವರೆಗೆ ವಿಯಟ್‌ನಾಮ್ ಸೈನ್ಯ ಫ್ರೆಂಚರ ಮೇಲೆ ಗೆರಿಲ್ಲ (guerilla) ಯುದ್ಧ ಮಾಡಿ ಯಶಸ್ವಿಗಳಾದರು. ಇದರಿಂದ ಫ್ರೆಂಚರಿಗೆ ಅಪಾರ ಪ್ರಾಣಹಾನಿ ಮತ್ತು ಹಣ ವ್ಯರ್ಥವಾಯಿತು. ಆಗ ಫ್ರೆಂಚರು ಅಮೆರಿಕದ ಸಹಾಯ ಕೋರಿದರು. ಮೊದಲು ಅಮೆರಿಕ ಆಗ್ನೇಯ ಏಷ್ಯಾವನ್ನು ಫ್ರೆಂಚರು ವಶಪಡಿಸಿಕೊಂಡಿದ್ದನ್ನು ಖಂಡಿಸಿ ತನ್ನ ವಿರೋಧ

ವ್ಯಕ್ತಪಡಿಸಿತ್ತು. ಆದರೆ ಕ್ರಮೇಣ ಅಮೆರಿಕನ್ ರಾಜಕಾರಣಿಗಳು ಆಗ್ನೇಯ ಏಷ್ಯಾದಲ್ಲಿ ಸೋವಿಯೆಟ್ ಒಕ್ಕೂಟ ಮತ್ತು ಚೈನಾ ದೇಶಗಳು ತಮ್ಮ ಪ್ರಭಾವ ಬೀರಿ ಕಮ್ಯೂನಿಸಂ ಹರಡುವಂತೆ ಮಾಡುತ್ತಿದ್ದುದನ್ನು ಮನಗಂಡು ತಮ್ಮ ಧೋರಣೆಯನ್ನು ಬದಲಾಯಿಸಿದರು. ಹೋಚಿಮಿನ್ ಪ್ರಾರಂಭಿಸಿದ 'ವಿಯಟ್‌ಮಿನ್' ಆಂದೋಳನದಲ್ಲಿ ಕಮ್ಯೂನಿಸ್ಟರು ಮುಖ್ಯ ಪಾತ್ರ ವಹಿಸಿದ್ದರೂ ಅದು ಮೂಲತಃ ರಾಷ್ಟ್ರೀಯ ಆಂದೋಳನವಾಗಿತ್ತು. ಅಮೆರಿಕ ಫ್ರೆಂಚರ ಸಹಾಯಕ್ಕೆ ಬಂದಮೇಲೆ ವಿಯಟ್‌ನಾಮ್ ನಾಯಕರು ಸೋವಿಯೆಟ್ ಮತ್ತು ಚೈನಾ ದೇಶಗಳಿಂದ ಸಹಾಯ ಪಡೆಯುವುದು ಅನಿವಾರ್ಯವಾಯಿತು.

೧೯೫೪ರ ಹೊತ್ತಿಗೆ ವಿಯಟ್‌ನಾಮ್ ಯುದ್ಧದ ಖರ್ಚಿನ ಶೇಕಡಾ ೮೦ ಭಾಗವನ್ನು ಅಮೆರಿಕ ಒದಗಿಸುತ್ತಿತ್ತು. ಇಷ್ಟಾದರೂ ಫ್ರೆಂಚರು ವಿಯಟ್‌ನಾಮ್ ಹೋರಾಟಗಾರರನ್ನು ಸೋಲಿಸಲು ಸಾಧ್ಯವಾಗಲಿಲ್ಲ. ೧೯೫೪ರ ಮೇ ತಿಂಗಳಲ್ಲಿ ಫ್ರೆಂಚ್ – ವಿಯಟ್‌ನಾಮ್ ಜನರ ಯುದ್ಧ ಪರಾಕಾಷ್ಠೆಯನ್ನು ಮುಟ್ಟಿತು. ಮಧ್ಯ ವಿಯಟ್‌ನಾಮ್‌ನ 'ಡೀನ್ ಬೀನ್ ಫು' (Dien Bien Phu) ಎಂಬ ಕೋಟೆಯನ್ನು ಆಕ್ರಮಿಸಿಕೊಂಡಿದ್ದ ಫ್ರೆಂಚ್ ಸೈನ್ಯದ ಮೇಲೆ ವಿಯೆಟ್‌ನಾಮೀಯರು ಪ್ರಬಲ ದಾಳಿ ಮಾಡಿದಾಗ ಫ್ರೆಂಚರು ಅಮೆರಿಕನ್ ವಾಯುಪಡೆ ವಿಯೆಟ್‌ನಾಮೀಯರ ಮೇಲೆ ದಾಳಿ ಮಾಡಬೇಕೆಂದು ಅಧ್ಯಕ್ಷ ಐಸೆನ್‌ಹಾವರ್‌ಗೆ ಕೋರಿಕೆ ಸಲ್ಲಿಸಿದರು. ಆದರೆ ಐಕ್ ಫ್ರೆಂಚರ ಕೋರಿಕೆಯನ್ನು ಮನ್ನಣೆ ಮಾಡಲಿಲ್ಲ. ಫ್ರೆಂಚರು ಇದರಿಂದಾಗಿ ಭಾರಿ ಸೋಲನ್ನು ಅನುಭವಿಸಬೇಕಾಯಿತು. ಇದರಿಂದಾಗಿ ಫ್ರೆಂಚರು ಶಾಂತಿಸಂಧಾನಕ್ಕೆ ಒಪ್ಪಿಕೊಂಡರು. ಜಿನೀವಾದಲ್ಲಿ ಈ ಶಾಂತಿ ಸಂಧಾನ ನಡೆಯಿತು. ೧೯೫೪ರ ಜುಲೈ ತಿಂಗಳಲ್ಲಿ ನಡೆದ ಈ ಸಂಧಾನದಲ್ಲಿ ಮಾಡಿಕೊಂಡ ಕರಾರಿನ ಪ್ರಕಾರ ತಾತ್ಕಾಲಿಕವಾಗಿ ವಿಯಟ್‌ನಾಮ್ ದೇಶವನ್ನು ಎರಡು ಭಾಗ ಮಾಡಿ ಉತ್ತರ ವಿಯಟ್‌ನಾಮ್, ಎಂದರೆ ೧೭ನೆಯ ಸಮಾನಾಂತರ ರೇಖೆಯಿಂದ ಉತ್ತರಕ್ಕೆ, ಹೋಚಿಮಿನ್ ಆಡಳಿತಕ್ಕೆ ಒಳಪಡಬೇಕೆಂದು ತೀರ್ಮಾನಿಸಲಾಯಿತು. ಈ ವಿಭಜನೆ ತಾತ್ಕಾಲಿಕವೆಂದೂ ೧೯೫೭ರಲ್ಲಿ ಅಂತರರಾಷ್ಟ್ರೀಯ ಮೇಲ್ವಿಚಾರಣೆಯಲ್ಲಿ ಚುನಾವಣೆ ನಡೆದು ಇಬ್ಭಾಗವಾದ ದೇಶ ಒಂದುಗೂಡುವ ಭರವಸೆ ಇತ್ತು. ಇಂಡೋ ಚೈನಾ ಪರ್ಯಾಯದ್ವೀಪದ ಮಿಕ್ಕ ಭಾಗವನ್ನು ಎರಡು ಸಣ್ಣ ದೇಶಗಳಾಗಿ – ಲಾವೊಸ್ ಮತ್ತು ಕ್ಯಾಂಬೋಡಿಯಾ – ವಿಭಜಿಸಲು ನಿರ್ಧರಿಸಿದರು. ಆದರೆ ಅಮೆರಿಕ ಇಂಡೋ ಚೈನಾವನ್ನು ಕಮ್ಯೂನಿಸ್ಟರು ಕಬಳಿಸಬಹುದಾದ ಸಾಧ್ಯತೆಯನ್ನು ತಡೆಗಟ್ಟಲು ಅಡ್ಡಿ ಬರುವಂಥ ನಿರ್ಬಂಧಗಳಿರುವ ಒಪ್ಪಂದಕ್ಕೆ ರುಜು ಹಾಕಲು ಒಪ್ಪಲಿಲ್ಲ.

೧೯೫೫ರಲ್ಲಿ ರೋಮನ್ ಕ್ಯಾಥೊಲಿಕ್ ಸಮುದಾಯ ದಕ್ಷಿಣ ವಿಯಟ್‌ನಾಮ್‌ನಲ್ಲಿ ಅಲ್ಪಸಂಖ್ಯಾತರಾದರೂ ಆರ್ಥಿಕವಾಗಿ ಪ್ರಬಲವಾಗಿತ್ತು. ಆದ್ದರಿಂದ ಈ ಸಮುದಾಯದ ನಾಯಕ ನ್ಗೋ ಡಿನ್ ಡಿಯೆಮ್ (Ngo Dinh Diem) ದಕ್ಷಿಣ ವಿಯಟ್‌ನಾಮ್‌ನ

ಅಧ್ಯಕ್ಷನಾದನು. ಅವನ ೯ ವರ್ಷಗಳ ಆಡಳಿತ ಭ್ರಷ್ಟಾಚಾರ, ಸರ್ವಾಧಿಕಾರ, ಸ್ಥಳೀಯ ಆಡಳಿತ ಮಂಡಳಿಗಳ ಅಸಡ್ಡೆ ಮತ್ತು ಅಮೆರಿಕ ಅನುಷ್ಠಾನಕ್ಕೆ ತರುವಂತೆ ಒತ್ತಾಯ ಮಾಡಿದ ರಾಜಕೀಯ ಮತ್ತು ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತರಲು ನಿರಾಕರಿಸಿದ ನೂರಾರು ದುಷ್ಕೃತ್ಯಗಳಿಂದ ಕೂಡಿ ಅಸಹನೀಯವಾಗಿತ್ತು. ೧೯೫೬ರಲ್ಲಿ ಡಿಯೆಂ ಅಂತರರಾಷ್ಟ್ರೀಯ ಸಮಿತಿಯ ಆಶ್ರಯದಲ್ಲಿ ನಡೆಯಬೇಕಾಗಿದ್ದ ಚುನಾವಣೆಯಲ್ಲಿ ಭಾಗವಹಿಸಲು ನಿರಾಕರಿಸಿದನು. ಡಿಯೆಮ್‌ನ ವರ್ತನೆಯನ್ನು ಅಮೆರಿಕ ಖಂಡಿಸಿದರೂ ಸಹ ಕಮ್ಯೂನಿಸ್ಟ್ ಉತ್ತರ ವಿಯಟ್‌ನಾಮ್ ದಕ್ಷಿಣ ವಿಯಟ್‌ನಾಮ್‌ನ್ನು ಆಕ್ರಮಣ ಮಾಡಬಹುದು ಎನ್ನುವ ಹೆದರಿಕೆಯಿಂದ ಡಿಯೆಂ ಆಡಳಿತಕ್ಕೆ ತನ್ನ ಆರ್ಥಿಕ ನೆರವನ್ನು ಮುಂದುವರಿಸಿತು.

ಏಷ್ಯಾದಲ್ಲಿ ಕಮ್ಯೂನಿಸಂ ಹಬ್ಬುತ್ತಿರುವುದು ವಿದೇಶಾಂಗ ಕಾರ್ಯದರ್ಶಿ ಡಲೆಸ್‌ಗೆ ಕಳವಳ ಉಂಟುಮಾಡಿತು. ಕಮ್ಯೂನಿಸ್ಟೇತರ ದೇಶಗಳೊಡನೆ ಒಪ್ಪಂದ ಮಾಡಿಕೊಳ್ಳುವ ಅಗತ್ಯವನ್ನು ಅವನು ಮನಗಂಡು ೧೯೫೪ರಲ್ಲಿ ಆಗ್ನೇಯ ಏಷ್ಯಾ ಕರಾರು ಸಂಸ್ಥೆಯನ್ನು (Southeast Asia Treaty Organization) ಸ್ಥಾಪಿಸಿದನು. ಈ ಕರಾರಿಗೆ ಇಂಗ್ಲೆಂಡ್, ಫ್ರಾನ್ಸ್, ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಪಾಕಿಸ್ತಾನ, ಫಿಲಿಪ್ಪೈನ್ಸ್ ಮತ್ತು ಥಾಯ್‌ಲ್ಯಾಂಡ್ ದೇಶಗಳು ಸೇರಿದ್ದವು. ದಕ್ಷಿಣ ವಿಯಟ್‌ನಾಮ್, ಲಾವೋಸ್ ಮತ್ತು ಕ್ಯಾಂಬೋಡಿಯಾ ಸೇರದಿದ್ದರೂ ಅವುಗಳ ರಕ್ಷಣೆ SEATOಗೆ ಸೇರಿತ್ತು. ಆದರೆ NATOದಂತೆ SEATO ಅಂತರರಾಷ್ಟ್ರೀಯ ಸೈನ್ಯವನ್ನು ಸೇರಿಸಲಿಲ್ಲ. ಆದಾಗ್ಯೂ SEATOದ ಯಾವ ದೇಶದ ಮೇಲೆ ಆಕ್ರಮಣ ಮಾಡಿದರೂ ಅದನ್ನು ಎಲ್ಲಾ ಸದಸ್ಯ ರಾಷ್ಟ್ರಗಳ ಮೇಲಿನ ಆಕ್ರಮಣವೆಂದು ಪರಿಗಣಿಸಿ ಸೈನ್ಯ ಕಾರ್ಯಾಚರಣೆ ಕೈಗೊಳ್ಳುವುದು SEATO ಸಂಸ್ಥೆಯ ವೈಶಿಷ್ಟ್ಯವಾಗಿತ್ತು. ಹೆಚ್ಚು ಜವಾಬ್ದಾರಿ ಅಮೆರಿಕದ ಸೈನ್ಯದ ಮೇಲೆ ಬಿದ್ದಿತು. ಅದೇ ವರ್ಷ ಫಾರ್ಮೋಸದೊಡನೆ, ಚೈನಾ ಗಣರಾಜ್ಯ ವಿರೋಧವನ್ನು ಕಡೆಗಣಿಸಿ, ಅಮೆರಿಕ ರಕ್ಷಣಾ ಕರಾರನ್ನು ಮಾಡಿಕೊಂಡಿತು.

ಎರಡನೆಯ ಜಾಗತಿಕ ಯುದ್ಧಕ್ಕೆ ಮುಂಚೆ, ಅಮೆರಿಕನ್ ಪೆಟ್ರೋಲ್ ಕಂಪನಿಗಳನ್ನು ಬಿಟ್ಟರೆ, ಮಧ್ಯಪ್ರಾಚ್ಯ ದೇಶಗಳಲ್ಲಿ ಅಮೆರಿಕನ್ನರಿಗೆ ಹೆಚ್ಚಿನ ಆಸಕ್ತಿ ಇರಲಿಲ್ಲ. ಆದರೆ ಶೀತಲಯುದ್ಧ ಮುಂದುವರಿದಂತೆಲ್ಲ ಮಧ್ಯಪ್ರಾಚ್ಯ ದೇಶಗಳು ಸೋವಿಯೆಟ್ ಒಕ್ಕೂಟ ಮತ್ತು ಸಂಯುಕ್ತ ಸಂಸ್ಥಾನಗಳ ನಡುವಣ ಪೈಪೋಟಿಗೆ ಒಳ್ಳೆಯ ಆಯಕಟ್ಟಿನ ಪ್ರದೇಶಗಳಾದವು. ಅಮೆರಿಕನ್ ಪೆಟ್ರೋಲಿಯಂ ಕಂಪನಿಗಳ ಹಿತಾಸಕ್ತಿಗಳನ್ನು ರಕ್ಷಿಸಲು ಮತ್ತು ಸೋವಿಯೆಟ್ ಒಕ್ಕೂಟದ ಪ್ರಭಾವವನ್ನು ತಡೆಗಟ್ಟಲು ಅಮೆರಿಕ ಮಧ್ಯಪ್ರಾಚ್ಯ ಅರಬರ ದೇಶಗಳ ಬೆಂಬಲ ಪಡೆಯಲು ಪ್ರಯತ್ನಿಸಿತು. ಆದರೆ ಆ ಪ್ರದೇಶದಲ್ಲಿ ಹೊಸದಾಗಿ ಸೃಷ್ಟಿಗೊಂಡ ಯಹೂದ್ಯರ ರಾಷ್ಟ್ರವಾದ ಇಸ್ರೇಲ್‌ಗೆ ಅಮೆರಿಕ ಎಲ್ಲ

ರೀತಿಯ ನೆರವು ನೀಡುತ್ತಿದ್ದುದರಿಂದ ಅಮೆರಿಕ ಎಲ್ಲ ಅರಬ್ ರಾಷ್ಟ್ರಗಳ ಬೆಂಬಲ ಪಡೆಯಲಾಗಲಿಲ್ಲ. ಇಸ್ರೇಲ್-ಅರಬ್ ದೇಶಗಳ ನಡುವೆ ಯುದ್ಧಗಳು ನಡೆದು ದ್ವೇಷಾಸೂಯೆಗಳ ದಳ್ಳುರಿ ಎಲ್ಲಾ ಮುಸ್ಲಿಂ ರಾಷ್ಟ್ರಗಳಿಗೆ ಹಬ್ಬಿ ಜಾಗತಿಕ ಸಮಸ್ಯೆಗಳ ಉದ್ಭವಕ್ಕೆ ಕಾರಣವಾಯಿತು.

೧೯೪೭ರಲ್ಲಿ ವಿಶ್ವಸಂಸ್ಥೆಯ ಸರ್ವಸದಸ್ಯರ ಸಭೆ (General Assembly) ಯಹೂದ್ಯರಿಗೆ ಪ್ಯಾಲೆಸ್ಟೈನ್‌ನ್ನು ವಿಭಜಿಸಿ, ಒಂದು ತಾಯಿನಾಡನ್ನು ಸ್ಥಾಪಿಸುವ ಮಸೂದೆಯನ್ನು ಅಂಗೀಕರಿಸಿತು. ೧೯೪೮ರಲ್ಲಿ ಯಹೂದ್ಯರು ಸ್ವತಂತ್ರ ಇಸ್ರೇಲ್ ರಾಷ್ಟ್ರವನ್ನು ಸ್ಥಾಪಿಸಿದರು. ಕೂಡಲೇ ಅರಬ್ ದೇಶಗಳು ಒಟ್ಟಾಗಿ ಇಸ್ರೇಲ್ ಮೇಲೆ ದಾಳಿ ಮಾಡಿದವು. ಆ ಯುದ್ಧದಲ್ಲಿ ಇಸ್ರೇಲ್ ಜಯಗಳಿಸಿ, ಹೆಚ್ಚು ಕಡಿಮೆ ಪೂರ್ತಿಯಾಗಿ ಪ್ಯಾಲೆಸ್ಟೈನ್ ಪ್ರಾಂತವನ್ನು ಆಕ್ರಮಿಸಿಕೊಂಡಿತು. ಆ ಪ್ರಾಂತದ ಅರಬರು ಅಲ್ಲಿಂದ ಉಚ್ಚಾಟನೆಗೊಂಡು ಗಡಿಪ್ರದೇಶದಲ್ಲಿ ನಿರಾಶ್ರಿತ ಶಿಬಿರಗಳಲ್ಲಿ ವಾಸಿಸತೊಡಗಿದರು. ಅರಬರು ಇಸ್ರೇಲ್‌ನ ಅಸ್ತಿತ್ವವನ್ನು ಒಪ್ಪಿಕೊಳ್ಳಲಿಲ್ಲ. ಅಪಾರ ಸಂಖ್ಯೆಯ ಅರಬರ ನಡುವೆ ಅಲ್ಪಸಂಖ್ಯಾತರಾದ ಯಹೂದ್ಯರು ತಮ್ಮ ರಕ್ಷಣೆಗಾಗಿ ಮತ್ತು ಇತರ ನೆರವಿಗಾಗಿ ಅಮೆರಿಕದೊಡನೆ ನಿಕಟ ಸಂಬಂಧ ಬೆಳೆಸಿಕೊಳ್ಳುವುದು ಅನಿವಾರ್ಯವಾಯಿತು. ಅಮೆರಿಕ ಇಸ್ರೇಲ್ ಪಕ್ಷ ವಹಿಸಿದರೂ ಅರಬ್ ದೇಶಗಳೊಡನೆ ಸೌಹಾರ್ದ ಸಂಬಂಧಗಳನ್ನು ಬೆಳೆಸಲು ಪ್ರಯತ್ನಪಟ್ಟಿತು. ಅರಬ್ ದೇಶಗಳು ಸೋವಿಯೆಟ್ ಒಕ್ಕೂಟದ ಪ್ರಭಾವಕ್ಕೆ ಒಳಗಾಗುವುದು ಅಮೆರಿಕನ್ನರಿಗೆ ಬೇಕಾಗಿರಲಿಲ್ಲ. ಅವರ ದ್ವೇಷವನ್ನು ತಣಿಸಲು ಅಮೆರಿಕ ಆ ದೇಶಗಳ ರಾಷ್ಟ್ರೀಯ ಆಂದೋಳನದ ನಾಯಕನೆನಿಸಿದ್ದ ಈಜಿಪ್ಟಿನ ಅಧ್ಯಕ್ಷ ಗಮಾಲ್ ಅಬ್ದುಲ್ ನಾಸೆರ್‌ನ ಸ್ನೇಹ ಗಳಿಸಲು ಪ್ರಯತ್ನಿಸಿತು. ೧೯೫೫ರಲ್ಲಿ ಈಜಿಪ್ಟಿನ ಆಸ್ವಾನ್ ಅಣೆಕಟ್ಟನ್ನು ಕಟ್ಟಲು ಧನಸಹಾಯ ಮಾಡಲು ಅಮೆರಿಕ ಮುಂದೆ ಬಂದಿತು. ಅಷ್ಟರೊಳಗಾಗಿ ನಾಸೆರ್ ಕಮ್ಯೂನಿಸ್ಟ್ ಚೈನಾದ ಅಸ್ತಿತ್ವವನ್ನು ಅಂಗೀಕರಿಸಿ, ಸೋವಿಯೆಟ್ ಒಕ್ಕೂಟದೊಡನೆ ಶಸ್ತ್ರ ಸರಬರಾಜು ಒಪ್ಪಂದ ಮಾಡಿಕೊಂಡು ಅವರಿಂದಲೇ ಅಣೆಕಟ್ಟಿಗೆ ಬೇಕಾಗುವ ಹಣವನ್ನು ಸುಲಭ ಕಂತುಗಳಲ್ಲಿ ತೀರಿಸುವ ಭರವಸೆಯ ಮೇಲೆ ಪಡೆದುಕೊಂಡನು. ಇದರಿಂದಾಗಿ ಅಮೆರಿಕನ್ ವಿದೇಶಾಂಗ ಕಾರ್ಯದರ್ಶಿ ಡಲೆಸ್ ತನ್ನ ಹಣ ಸಹಾಯ ಮಾಡುವ ವಾಗ್ದಾನವನ್ನು ವಾಪಸ್ಸು ತೆಗೆದುಕೊಂಡನು. ಇದಕ್ಕೆ ಪ್ರತೀಕಾರವಾಗಿ ನಾಸೆರ್ ಸೂಯಜ್ ಕಾಲುವೆಯನ್ನು ವಶಪಡಿಸಿಕೊಂಡು ರಾಷ್ಟ್ರೀಕರಣ ಮಾಡಿದನು. ಈ ಕಾಲುವೆ ಬ್ರಿಟಿಷ್ ಮತ್ತು ಫ್ರಾನ್ಸ್‌ಗಳ ಆಡಳಿತದಲ್ಲಿತ್ತು. ಅಲ್ಲದೆ ಇದು ಯೂರೋಪಿನ ದೇಶಗಳಿಗೆ ಅಗತ್ಯವಾದ ವ್ಯಾಪಾರ ಮಾರ್ಗವಾಗಿತ್ತು. ಆದ್ದರಿಂದ ೧೯೫೬ನೆಯ ಜುಲೈ ತಿಂಗಳಲ್ಲಿ ಬ್ರಿಟನ್, ಫ್ರಾನ್ಸ್ ಮತ್ತು ಇಸ್ರೇಲ್ ಸೇರಿಕೊಂಡು ಈಜಿಪ್ಟಿನ ಮೇಲೆ ದಾಳಿ ಮಾಡಿದರು.

ಅಧ್ಯಕ್ಷ ಐಸೆನ್‌ಹಾವರ್ ಈ ದಾಳಿಗೆ ನ್ಯಾಯಬದ್ಧವಾದ ಕಾರಣವಿಲ್ಲ ಎಂದು ನಂಬಿದ್ದನು. ಬ್ರಿಟನ್ ಮತ್ತು ಫ್ರಾನ್ಸ್ ತನ್ನನ್ನು ಕೇಳದೆಯೆ, ವಿಷಯವನ್ನು ಕೂಲಂಕಷವಾಗಿ ಚರ್ಚಿಸದೆ, ದಿಢೀರನೆ ದಾಳಿ ಮಾಡಿದ್ದಕ್ಕೆ ಐಕ್ ಕೋಪಗೊಂಡನು. ಪರಿಣಾಮವಾಗಿ ಅಮೆರಿಕ ವಿಶ್ವಸಂಸ್ಥೆಯಲ್ಲಿ ಈಜಿಪ್ಟಿನ ಮೇಲೆ ದಾಳಿ ನಿಲ್ಲಿಸುವಂತೆ ಮಸೂದೆಯನ್ನು ಮಂಡಿಸಿತು. ಇದರಿಂದಾಗಿ ಬ್ರಿಟನ್, ಫ್ರಾನ್ಸ್ ಮತ್ತು ಇಸ್ರೇಲ್ ದೇಶಗಳು ಯುದ್ಧ ನಿಲ್ಲಿಸಿ ತಮ್ಮ ಪಡೆಗಳನ್ನು ಹಿಂದಕ್ಕೆ ಕರೆಸಿಕೊಳ್ಳಬೇಕಾಯಿತು. ಅಮೆರಿಕದ ಈ ಧೋರಣೆಯಿಂದ ಬ್ರಿಟನ್ ಮತ್ತು ಫ್ರಾನ್ಸ್‌ಗಳೊಡನೆ ಸಂಬಂಧಕ್ಕೆ ಧಕ್ಕೆಯಾಯಿತು ಮತ್ತು NATO ಒಪ್ಪಂದಕ್ಕೆ ಕುಂದಾಯಿತು. ಆದರೆ ಪ್ರಪಂಚದಾದ್ಯಂತ ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರಗಳಲ್ಲಿ ಅಮೆರಿಕದ ಗೌರವ ಹೆಚ್ಚಿತು.

ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಸೋವಿಯೆಟ್ ಒಕ್ಕೂಟದ ಪ್ರಭಾವ ತಪ್ಪಿಸಲು ಈಜಿಪ್ಟಿನ ನಾಸೆರ್‌ನನ್ನು ಹತೋಟಿಯಲ್ಲಿಟ್ಟು, ಇಸ್ರೇಲ್ ರಕ್ಷಣೆಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಐಸೆನ್‌ಹಾವರ್ ನಿರ್ಧರಿಸಿದನು. ಹೀಗೆ ಮಾಡುವುದಕ್ಕೆ ಬೇರೆ ರಾಷ್ಟ್ರಗಳ ಸಮ್ಮತಿ ಸಿಗದೆ ಹೋಗಬಹುದಾದ್ದರಿಂದ ಅಮೆರಿಕ ಒಂದೇ ಕಾರ್ಯ ಕೈಗೊಳ್ಳಬೇಕಾಯಿತು. ೧೯೫೭ರ ಮಾರ್ಚ್ ತಿಂಗಳಲ್ಲಿ ಕಾಂಗ್ರೆಸ್ 'ಐಸೆನ್‌ಹಾವರ್ ಸಿದ್ಧಾಂತ' (Eisenhower Doctrine)ವನ್ನು ಅನುಮೋದಿಸಿತು. ಇದರ ಪ್ರಕಾರ ಅಂತರರಾಷ್ಟ್ರೀಯ ಕಮ್ಯೂನಿಸಂ ಪ್ರಭಾವವಕ್ಕೊಳಗಾದ ಯಾವ ದೇಶವಾದರೂ ಮಧ್ಯಪ್ರಾಚ್ಯದ ಯಾವ ದೇಶದ ಸ್ವಾತಂತ್ರ್ಯವನ್ನು ಉಲ್ಲಂಘಿಸುವುದನ್ನು ಅಮೆರಿಕ ತಡೆಗಟ್ಟುತ್ತದೆ ಎಂದು ಘೋಷಿಸಿತು. ಇದಾದ ಒಂದು ತಿಂಗಳೊಳಗೆ ಜೋರ್ಡನ್ನಿನ ರಾಜ ಹುಸೇನ್ ತನ್ನ ವಿರುದ್ಧವಾಗಿ ನಾಸೆರ್ ಬೆಂಬಲದಿಂದ ಉದ್ಭವಿಸಿರುವ ಆಂದೋಳನವನ್ನು ಹತ್ತಿಕ್ಕಲು ಅಮೆರಿಕದ ಸಹಾಯ ಕೋರಿದನು. ೧೯೫೮ರಲ್ಲಿ ನಾಸೆರ್ ಪರವಾದ ಕ್ರಾಂತಿ ಲೆಬನಾನ್‌ನಲ್ಲಿ ಉದ್ಭವಿಸಿತು. ಈ ಪೂರ್ಣಪ್ರಮಾಣದ ಅಂತರ್ಯುದ್ಧವನ್ನು ತಡೆಗಟ್ಟಲು ಐಸೆನ್‌ಹಾವರ್ ಅಮೆರಿಕದ ಸೈನ್ಯವನ್ನು ಕಳುಹಿಸಿದನು. ೧೯೫೦ರ ದಶಕದ ಕೊನೆಯಲ್ಲಿ ಅರಬ್ ರಾಷ್ಟ್ರಗಳಲ್ಲಿ ಅಮೆರಿಕದ ಘನತೆ ಗೌರವಗಳು ಕುಗ್ಗಿಹೋದವು. ಇದಕ್ಕೆ ಲೆಬನಾನ್ ರಾಜಕೀಯದಲ್ಲಿ ಮಧ್ಯಪ್ರವೇಶ ಮಾಡಿದ್ದು ಒಂದು ಕಾರಣವಾದರೆ ಅಮೆರಿಕ ಇಸ್ರೇಲ್‌ನ್ನು ಬೆಂಬಲಿಸುವುದು ಇನ್ನೊಂದು ಅತಿಮುಖ್ಯ ಕಾರಣವಾಯಿತು.

ಎರಡನೆಯ ಜಾಗತಿಕ ಯುದ್ಧದ ನಂತರ ವಿಶಾಲ ಅಮೆರಿಕ (Pan-American) ಸಂಬಂಧಗಳು ನಿಕಟವಾಗಿ ಬಲಯುತವಾಗಿದ್ದವು. 'ರಿಯೋ ಕರಾರು' (Rio pact) ಪಶ್ಚಿಮ ಗೋಲಾರ್ಧದ ದೇಶಗಳನ್ನು ಒಟ್ಟುಗೂಡಿಸಿ ಯುದ್ಧಕಾಲದಲ್ಲಿ ಪರಸ್ಪರ ಸಹಾಯ ಮಾಡುವಂತೆ ಬದ್ಧವಾಗಿ ಮಾಡಿತ್ತು. ೧೯೪೮ರಲ್ಲಿ ಬಗೋಟ, ಕೊಲಂಬಿಯಾದಲ್ಲಿ ಸಂಯುಕ್ತ ಸಂಸ್ಥಾನಗಳು ಮತ್ತು ದಕ್ಷಿಣ ಅಮೆರಿಕ ದೇಶಗಳು ಸೇರಿ 'ಅಮೆರಿಕ ಸಂಸ್ಥಾನಗಳ

ಸಂಘಟನೆ'ಯನ್ನು ರಚಿಸಿಕೊಂಡರು. ಈ ಸಂಘಟನೆಯ ಮುಖ್ಯ ಗುರಿ ವಿಶಾಲ ಅಮೆರಿಕದ ದೇಶಗಳ ಪರಸ್ಪರ ಹಿತಾಸಕ್ತಿಗಳ ರಕ್ಷಣೆಯಾಗಿತ್ತು. ಮೇಲ್ನೋಟಕ್ಕೆ ಅಮೆರಿಕ ಮತ್ತು ಲ್ಯಾಟಿನ್ ಅಮೆರಿಕನ್ ರಾಷ್ಟ್ರಗಳ ಸಂಬಂಧ ಸ್ನೇಹಪೂರ್ಣವಾಗಿ ಕಂಡುಬಂದರೂ ವಾಸ್ತವವಾಗಿ ಅಮೆರಿಕ ಮತ್ತು ಅದರ ನೆರೆಹೊರೆಯ ರಾಷ್ಟ್ರಗಳ ಸಂಬಂಧಗಳು ಕ್ಷೀಣಿಸುತ್ತ ಹೋಗಿದ್ದವು. ಲ್ಯಾಟಿನ್ ಅಮೆರಿಕ ದೇಶಗಳು ತಮ್ಮ ತಮ್ಮ ಅನವರತವಾದ ಆರ್ಥಿಕ ಸಮಸ್ಯೆಗಳಲ್ಲಿ ಮುಳುಗುತ್ತಿದ್ದುದರಿಂದ ಅವುಗಳಿಗೆ ಅಂತರರಾಷ್ಟ್ರೀಯ ಕಮ್ಯೂನಿಸಂ ಬಗ್ಗೆ ಯೋಚಿಸಲು ಸಮಯವಿರಲಿಲ್ಲ. ಹೀಗಾಗಿ ಅಮೆರಿಕದ ಕಮ್ಯೂನಿಸಂ ವಿರುದ್ಧ ಹೋರಾಟದಲ್ಲಿ ಸೇರುವುದನ್ನು ಅವು ಕಡೆಗಣಿಸಿದವು. ಮೇಲಾಗಿ ಅಮೆರಿಕನ್ನರು ಬಂಡವಾಳ ಹೂಡಿ ತಮ್ಮ ದೇಶದ ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸುವುದನ್ನು ದಕ್ಷಿಣ ಅಮೆರಿಕ ದೇಶಗಳು ವಿರೋಧಿಸಿದವು. ಅಂಥ ನಿಯಂತ್ರಣವನ್ನು ಅಮೆರಿಕದ 'ಆರ್ಥಿಕ ಸಾಮ್ರಾಜ್ಯಶಾಹಿ' (Economic imperialism) ಎಂದು ಪರಿಗಣಿಸಿದವು.

ಅಮೆರಿಕ ೧೯೫೪ರಲ್ಲಿ ಗ್ವಾಟೆಮಾಲಾದಲ್ಲಿ ಅಧಿಕಾರದಲ್ಲಿದ್ದ ವಾಮಪಂಥೀಯ ಸರ್ಕಾರದ ವಿರುದ್ಧವಾಗಿ ದಂಗೆ ಏಳುವಂತೆ ಜನರನ್ನು ಉದ್ರೇಕಗೊಳಿಸಿತು. ಅಲ್ಲಿನ ಕಮ್ಯೂನಿಸಂ ಪರವಾಗಿದ್ದ ಸರ್ಕಾರ ಜೆಕೊಸ್ಲೋವಾಕಿಯಾದಿಂದ ಹಡಗಿನಲ್ಲಿ ಶಸ್ತ್ರಾಸ್ತ್ರಗಳನ್ನು ಆಮದು ಮಾಡಿಕೊಂಡಿದ್ದನ್ನು ಸಹಿಸದ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಡಲ್ಲೆಸ್ ಸಿ.ಐ.ಎ.ಯನ್ನು ಹೊಂಡೂರಾಸ್ ಮೂಲಕ ಹೋಗಿ ಗ್ವಾಟೆಮಾಲಾದ ಮೇಲೆ ದಾಳಿ ಮಾಡುವಂತೆ ಆಜ್ಞಾಪಿಸಿದನು. ಸಿ.ಐ.ಎ ಅದೇ ರೀತಿ ದಾಳಿ ನಡೆಸಿ ವಾಮಪಂಥ ಸರ್ಕಾರವನ್ನು ಉರುಳಿಸಿ ದೇಶವನ್ನು ವಶಪಡಿಸಿಕೊಂಡಿತು. ಆನಂತರ ಸ್ಥಾಪಿತವಾದ ಹೊಸ ಮಿಲಿಟರಿ ಸರ್ಕಾರವನ್ನು ಅಮೆರಿಕ ತಕ್ಷಣ ಅಂಗೀಕರಿಸಿ ಆರ್ಥಿಕ ನೆರವು ನೀಡಿತು. ಇಂಥ ಪ್ರಸಂಗಗಳಿಂದ ಲ್ಯಾಟಿನ್ ಅಮೆರಿಕದಲ್ಲಿ ಸಂಯುಕ್ತ ಸಂಸ್ಥಾನಗಳ ಸ್ಥಾನಮಾನಗಳು ಮತ್ತಷ್ಟು ಕ್ಷೀಣಿಸಿದವು. ಅಮೆರಿಕ NATO ರಾಷ್ಟ್ರಗಳ ಖಂಡನೆಗೆ ಗುರಿಯಾಯಿತು. ೧೯೫೮ರಲ್ಲಿ ಉಪಾಧ್ಯಕ್ಷ ರಿಚರ್ಡ್ ನಿಕ್ಸನ್ ದಕ್ಷಿಣ ಅಮೆರಿಕ ದೇಶಗಳಿಗೆ ಸೌಹಾರ್ದ ಭೇಟಿ (good will visit) ಕೊಟ್ಟಾಗ ಅವನಿಗೆ ದೊರೆತ 'ಸ್ವಾಗತ' ಅಲ್ಲಿನ ಜನರ ಅಂತರಂಗದಲ್ಲಿ ಹುದುಗಿದ್ದ ಅಮೆರಿಕ ದ್ವೇಷವನ್ನು ಬಹಿರಂಗಪಡಿಸಿತು. ಪೆರುವಿನಲ್ಲಿ ವಿದ್ಯಾರ್ಥಿಗಳು ನಿಕ್ಸನ್ ವಾಹನದ ಮೇಲೆ ಕಲ್ಲಿನ ಮಳೆಗರೆದರು; ವೆನಿಜ಼ೂವೆಲಾದಲ್ಲಿ ನಿಕ್ಸನ್ ಭೇಟಿಯನ್ನು ವಿರೋಧಿಸಿ ಜನರು ಅವನ ವಾಹನದ ಗಾಜಿನ ಕಿಟಕಿಗಳನ್ನೊಡೆದು ಅವನನ್ನು ಕೊಲ್ಲಲು ಯತ್ನಿಸಿದರು. ಅವನು ಹೋದ ಎಲ್ಲಾ ಕಡೆಗಳಲ್ಲಿ ಅಮೆರಿಕ ವಿರುದ್ಧ ಪ್ರದರ್ಶನಗಳು, ಅವಮಾನಕರ ರೀತಿಯಲ್ಲಿ ಕೂಗುವುದು ಮುಂತಾದ ನಡೆವಳಿಕೆಗಳಿಂದ ನಿಕ್ಸನ್‌ನನ್ನ ಅವಹೇಳನ ಮಾಡಿದರು. ಇದರ ಪರಿಣಾಮವಾಗಿ ಐಸೆನ್‌ಹಾವರ್ ಆಡಳಿತ ತನ್ನ ದಕ್ಷಿಣ ಅಮೆರಿಕ ಧೋರಣೆಯನ್ನು ಪುನರ್ವಿಮರ್ಶೆ ಮಾಡಬೇಕಾಯಿತು. ಇದರಿಂದಾಗಿ ೧೯೬೦ರಲ್ಲಿ ಲ್ಯಾಟಿನ್ ಅಮೆರಿಕ ದೇಶಗಳಿಗೆ

ಧನಸಹಾಯ ಒದಗಿಸಲು 'ಅಂತರ ಅಮೆರಿಕನ್ ಬ್ಯಾಂಕ್' (Inter American Bank) ಸ್ಥಾಪಿತವಾಯಿತು.

ಐಸೆನ್‌ಹಾವರ್‌ನ ಆಡಳಿತ ಲ್ಯಾಟಿನ್ ಅಮೆರಿಕದಲ್ಲಿ ಸೌಹಾರ್ದತೆ ಏರ್ಪಡುವಂತೆ ಮಾಡಲು ಪ್ರಯತ್ನಿಸುವ ಸಮಯದಲ್ಲಿ ನೆರೆಯ ರಾಷ್ಟ್ರವಾದ ಕ್ಯೂಬಾದಲ್ಲಿ ಜರುಗಿದ ಘಟನೆಗಳು ಅಮೆರಿಕನ್ನರಿಗೆ ದಿಗ್ಭ್ರಮೆ ಹುಟ್ಟಿಸಿದವು. ಫಿಡೆಲ್ ಕ್ಯಾಸ್ಟ್ರೊ (Fidel Castro) ನಾಯಕತ್ವದಲ್ಲಿ ಆರಂಭವಾದ ಕ್ಯೂಬ ರಾಷ್ಟ್ರೀಯ ಆಂದೋಳನ ಅಮೆರಿಕ ಬೆಂಬಲಿಸಿದ್ದ ಸರ್ವಾಧಿಕಾರಿ ಫ್ಲೂಜೆನ್ಸಿಯೋ ಬಟಿಸ್ಟನನ್ನು (Fluegencio Batista) ಪದಚ್ಯುತಿಗೊಳಿಸಿ, ಕ್ಯಾಸ್ಟ್ರೋ ಅಧಿಕಾರ ವಹಿಸಿಕೊಂಡು ಕ್ಯೂಬವನ್ನು ವಶಪಡಿಸಿಕೊಂಡನು. ಕ್ಯಾಸ್ಟ್ರೋ ಬಗ್ಗೆ ಹೆಚ್ಚಿಗೆ ತಿಳಿದುಕೊಳ್ಳುವ ಸಲುವಾಗಿ ಐಸೆನ್‌ಹಾವರ್ ಅವನನ್ನು ವಾಷಿಂಗ್‌ಟನ್‌ಗೆ ಬರಮಾಡಿಕೊಂಡನು. ಕ್ಯಾಸ್ಟ್ರೋನನ್ನು ಭೇಟಿಯಾದ ಮೇಲೆ ಐಸೆನ್‌ಹಾವರ್‌ಗೆ ಅವನು ಕಮ್ಯೂನಿಸ್ಟನಲ್ಲ ಎಂಬ ಅಭಿಪ್ರಾಯ ಮೂಡಿತು. ಆದರೆ ಕ್ಯಾಸ್ಟ್ರೋ ಕ್ಯೂಬಕ್ಕೆ ಹಿಂತಿರುಗಿದ ಮೇಲೆ ತನ್ನ ಕಮ್ಯೂನಿಸಂ ಒಲವನ್ನು ಬಹಿರಂಗಪಡಿಸಿ, ಮಾಸ್ಕೋದೊಡನೆ ನಿಕಟ ಸಂಪರ್ಕ ಬೆಳೆಸಿಕೊಂಡನು. ನಂತರ ಕ್ಯೂಬದಲ್ಲಿ ಅಮೆರಿಕನ್ನರ ಆಸ್ತಿಪಾಸ್ತಿಗಳನ್ನು ಯಾವ ಪರಿಹಾರ ನೀಡದೆ ವಶಪಡಿಸಿಕೊಂಡನು. ಕ್ಯೂಬ ಮಾಸ್ಕೊದೊಡನೆ ವಾಣಿಜ್ಯ ಕರಾರು (೧೯೬೦ರಲ್ಲಿ) ಮಾಡಿಕೊಂಡಾಗ ಅಮೆರಿಕ ಪ್ರತೀಕಾರವಾಗಿ ಕ್ಯೂಬದ ಸಕ್ಕರೆಯ ಆಮದನ್ನು ನಿರ್ಬಂಧಿಸಿತು. ಸಂಯುಕ್ತ ಸಂಸ್ಥಾನಗಳು ಮತ್ತು ಸೋವಿಯೆಟ್ ಒಕ್ಕೂಟಗಳ ನಡುವಣ ಸಂಬಂಧ ಹದಗೆಟ್ಟು ಇನ್ನೂ ಹೆಚ್ಚಿನ ಬಿಕ್ಕಟ್ಟು ಪರಿಸ್ಥಿತು ಉಂಟಾಯಿತು. ಕ್ಯೂಬದ ಮೇಲೆ ಅಮೆರಿಕ ದಾಳಿ ಮಾಡಿದರೆ ಸೋವಿಯೆಟ್ ಒಕ್ಕೂಟ ಯುದ್ಧ ಸಾರುವುದಾಗಿ ಬೆದರಿಕೆ ಹಾಕಿದಾಗ ಇಡೀ ಪ್ರಪಂಚವನ್ನು ವಿನಾಶಗೊಳಿಸಬಹುದಾದ ಪ್ರಳಯಾಂತಕ ಪರಿಸ್ಥಿತಿ ಉಂಟಾಯಿತು. ೧೯೬೧ರ ಜನವರಿ ತಿಂಗಳಲ್ಲಿ ಅಮೆರಿಕ ಕ್ಯಾಸ್ಟ್ರೋ ಸರ್ಕಾರದೊಡನೆ ರಾಯಭಾರಿ ಸಂಬಂಧವನ್ನು ಕಡಿದುಕೊಂಡಿತು.

ಅಮೆರಿಕ ಪ್ರಪಂಚದ ನಾನಾಕಡೆಗಳಲ್ಲಿ ಆಸಕ್ತಿ ವಹಿಸಿದ್ದರೂ ಅದರ ಪೂರ್ಣ ಆಸಕ್ತಿ ಯೂರೋಪಿನಲ್ಲಿ ಕೇಂದ್ರೀಕೃತವಾಗಿತ್ತು. ಯೂರೋಪನ್ನು ಕಮ್ಯೂನಿಸ್ಟ್ ಆಕ್ರಮಣದಿಂದ ರಕ್ಷಿಸಲು NATO ಸಂಸ್ಥೆ ಸ್ಥಾಪಿತವಾಗಿದ್ದರೂ ಸಹ ಅದು ಅಮೆರಿಕ ಊಹಿಸಿದಷ್ಟು ಬಲಯುತವಾದ ಸಂಘಟನೆಯಾಗಿರಲಿಲ್ಲ. ಪ್ರಪಂಚದಾದ್ಯಂತ ಅಮೆರಿಕದ ಹಿತಾಸಕ್ತಿಗಳನ್ನು ರಕ್ಷಿಸಲು ಅಧಿಕ ಸಂಖ್ಯೆಯ ಸೈನ್ಯ ಮತ್ತು ಹಣ ಖರ್ಚು ಮಾಡ ಬೇಕಾಗಿದ್ದರಿಂದ ಯೂರೋಪಿಗೆ ಹೆಚ್ಚಿನ ಧನ ಮತ್ತು ಜನ ಸಹಾಯ ನೀಡಲು ಸಾಧ್ಯವಾಗಲಿಲ್ಲ. ಪಶ್ಚಿಮ ಜರ್ಮನಿಯ ಸೈನ್ಯವನ್ನು ಸುಸಜ್ಜಿತಗೊಳಿಸುವುದನ್ನು ಫ್ರಾನ್ಸ್ ತೀವ್ರವಾಗಿ ವಿರೋಧಿಸಿತು; ಜರ್ಮನ್ ಸೈನ್ಯವನ್ನು NATO ಸಂಸ್ಥೆಯಲ್ಲಿ ಅಳವಡಿಸಿ ಕೊಳ್ಳುವುದನ್ನು ಅದು ವಿರೋಧಿಸಿತು. ಆದಾಗ್ಯೂ ೧೯೫೪ರಲ್ಲಿ ಜರ್ಮನಿ NATO

ಸಂಸ್ಥೆಗೆ ಸೇರಿತು. ಹೀಗಾಗಿ ಎಲ್ಲಾ ಆಕ್ರಮಣಕಾರಿ ಸೈನ್ಯಗಳು ಜರ್ಮನಿಯಿಂದ ವಾಪಸ್ಸಾಗಬೇಕಾಯಿತು. ಕ್ರಮೇಣ ಅಮೆರಿಕ ಮತ್ತು ಸೋವಿಯೆಟ್ ಸಂಬಂಧಗಳು ಕುದುರುವಂತೆ ಕಂಡು ಬಂದುದರಿಂದ ಅಮೆರಿಕನ್ನರು ಯೂರೋಪ್ ರಾಷ್ಟ್ರಗಳ ಮೇಲೆ ಸೋವಿಯೆಟ್ ಆಕ್ರಮಣ ಮಾಡುವ ಸಾಧ್ಯತೆ ದೂರವಾದಂತೆ ಭಾವಿಸಿದರು. ಇದರಿಂದಾಗಿ NATO ತೀರ ಅಗತ್ಯವೆಂದು ಅಮೆರಿಕನ್ನರಿಗೆ ಅನಿಸಲಿಲ್ಲ.

೧೯೫೩ರಲ್ಲಿ ಕ್ರುಶ್ಚೋವ್‌ನ ಆಡಳಿತದಲ್ಲಿ ಅಮೆರಿಕ ಮತ್ತು ಸೋವಿಯೆಟ್ ಸರ್ಕಾರಗಳ ನಡುವೆ ಬಿಕ್ಕಟ್ಟು ಕಡಿಮೆಯಾಯಿತು. ಇದರಿಂದ ಉತ್ತೇಜನಗೊಂಡ ಐಸೆನ್‌ಹಾವರ್ ೧೯೫೫ರ ಜುಲೈ ತಿಂಗಳಲ್ಲಿ ಜಿನಿವಾದಲ್ಲಿ ಕ್ರುಶ್ಚೋವ್‌ನೊಡನೆ ಶೃಂಗಸಭೆ ಸೇರಲು ಒಪ್ಪಿಕೊಂಡನು. ಇದರಿಂದ ಯಾವ ಮಹತ್ತಾದ ಬದಲಾವಣೆಗಳಾಗಲಿ, ಸುಧಾರಣೆಗಳಾಗಲಿ ಆಗದಿದ್ದರೂ ಸಭೆಯಲ್ಲಿ ಭಾಗವಹಿಸಿದ್ದವರು ಪರಸ್ಪರ ಪರಿಚಯದಿಂದ ಒಂದು ರೀತಿಯ ಸೌಹಾರ್ದತೆಯ ವಾತಾವರಣದಲ್ಲಿ ಮಾತು ಕತೆ ನಡೆಸಲು ಸಾಧ್ಯವಾಯಿತು. ೧೯೫೦ರ ದಶಕದಲ್ಲಿ ಅಮೆರಿಕ ಮತ್ತು ಸೋವಿಯೆಟ್ ಸರ್ಕಾರಗಳು ಶೀತಲ ಯುದ್ಧವನ್ನು ಬರೀ ಮಾತಿನಲ್ಲಿ ಮುಂದುವರಿಸಿಕೊಂಡು ಹೋದವೇ ಹೊರತು ವಾಸ್ತವವಾಗಿ ಘರ್ಷಣೆಯಾಗುವುದನ್ನು ಜಾಗರೂಕತೆಯಿಂದ ತಪ್ಪಿಸಲು ಎಲ್ಲ ಪ್ರಯತ್ನಪಟ್ಟು ಪರಸ್ಪರ ಸಂಬಂಧಗಳು ಕೆಡದಂತೆ ಎಚ್ಚರಿಕೆ ವಹಿಸಿದ್ದವು. ಸೋವಿಯೆಟ್ ಒಕ್ಕೂಟ ೧೯೫೩ರಲ್ಲಿ ಪೂರ್ವ ಬರ್ಲಿನ್ ದಂಗೆಯನ್ನು ಕ್ರೂರ ರೀತಿಯಲ್ಲಿ ಅಡಗಿಸಿದಾಗ ಮತ್ತು ೧೯೫೬ರಲ್ಲಿ ಹಂಗೆರಿಯ ದಂಗೆಯನ್ನು ಹತ್ತಿಕ್ಕಿದಾಗ ಅಮೆರಿಕ ಮಧ್ಯೆ ಪ್ರವೇಶಿಸಲಿಲ್ಲ. ಅದೇ ಸಮಯದಲ್ಲಿ ಅಣ್ವಸ್ತ್ರ ತಂತ್ರ ವಿಜ್ಞಾನದಲ್ಲಿ (nuclear weapons technology) ಸೋವಿಯೆಟ್ ಸಾಧನೆಗಳಿಂದ ಮತ್ತು ಬಾಹ್ಯಾಕಾಶದಲ್ಲಿ ಮಾನವ ನಿರ್ಮಿತ ಉಪಗ್ರಹ (satellite) ಸ್ಪೂಟ್ನಿಕ್‌ನ್ನು ಹಾರಿಸಿದ ಹೆಮ್ಮೆಯಿಂದ ಉಬ್ಬಿಹೋದ ಕ್ರುಶ್ಚೋವ್‌ನು ಬರ್ಲಿನ್ ನಗರದ ಸಂಪರ್ಕವನ್ನು ಕಡಿದು ಹಾಕುವ ಬೆದರಿಕೆ ಹಾಕಿದನು.

ಇದಾದ ೧೯೬೦ರಲ್ಲಿ ಕ್ರುಶ್ಚೋವ್ ಅಮೆರಿಕಕ್ಕೆ ಭೇಟಿಕೊಟ್ಟಾಗ ಇನ್ನೊಂದು ಶೃಂಗಸಭೆಗೆ ಒಪ್ಪಿಕೊಂಡನು. ಈ ಸಭೆಯ ಉದ್ದೇಶ ಎರಡು ದೇಶಗಳ ನಡುವೆ ಬಿಕ್ಕಟ್ಟನ್ನು ಪರಿಹರಿಸುವುದಾಗಿತ್ತು. ಆದರೆ ಈ ಮೊದಲು ಪ್ಯಾರಿಸ್‌ನಲ್ಲಿ ಶೃಂಗಸಭೆ ಸೇರುವ ಕೆಲವು ದಿನಗಳ ಮುಂಚೆ ಅಮೆರಿಕದ ಗೂಢಚಾರ ವಿಮಾನ ಸೋವಿಯೆಟ್ ಸೈನ್ಯಬಲವನ್ನು ಗುಪ್ತವಾಗಿ ತಿಳಿಯುವ ಸಲುವಾಗಿ ಸೋವಿಯೆಟ್ ದೇಶದ ಬಾಹ್ಯಾಕಾಶದಲ್ಲಿ ಸಂಚರಿಸುತ್ತಿರುವಾಗ ಸೋವಿಯೆಟ್ ರಕ್ಷಣಾದಳದವರು ಅದನ್ನು ಹೊಡೆದು ಕೆಡವಿ, ವಿಮಾನ ಚಾಲಕನನ್ನು ಸೆರೆಹಿಡಿದಿದ್ದರು. ಈ ಘಟನೆಯ ಸಂಪೂರ್ಣ ಜವಾಬ್ದಾರಿಯನ್ನು ಐಸೆನ್‌ಹಾವರ್ ತಾನೇ ತೆಗೆದುಕೊಂಡರೂ ಕ್ಷಮಾಪಣೆ ಕೇಳಲು ನಿರಾಕರಿಸಿದನು. ಒಟ್ಟಿನಲ್ಲಿ ಈ ಗೂಢಚಾರ ವಿಮಾನ ಘಟನೆಯಿಂದ ಅಮೆರಿಕ ಮತ್ತು ಸೋವಿಯೆಟ್ ದೇಶಗಳ

ನಡುವೆ ಸಡಿಲಗೊಳ್ಳುತ್ತಿದ್ದ ಸಂಬಂಧಗಳು ಮತ್ತೆ ಯಥಾಸ್ಥಿತಿಯಂತೆ ಬಿಗಿಗೊಂಡು ಬಿಕ್ಕಟ್ಟಿನ ಸ್ಥಿತಿ ಏರ್ಪಟ್ಟಿತು.

ದೂರದರ್ಶನ ಸೃಷ್ಟಿಸಿದ ರಾಷ್ಟ್ರೀಯ ಸಮುದಾಯ

೧೯೩೭ರ ಏಪ್ರಿಲ್ ಏಳರಂದು ಅಮೆರಿಕನ್ ಟೆಲಿಫೋನ್ ಮತ್ತು ಟೆಲಿಗ್ರಾಫ್ (ಎ.ಟಿ.ಟಿ) ಕಂಪನಿಯ ಉಪಾಧ್ಯಕ್ಷ ಜೆ.ಜೆ.ಮೆಕಾರ್ಥರ್ ರಾಜಧಾನಿ ವಾಷಿಂಗ್‌ಟನ್‌ನ ದೂರದರ್ಶನ ಸ್ಟುಡಿಯೋದಲ್ಲಿ ನಿಂತು ಮಾತಾಡುತ್ತಿದ್ದವನ ಮುಖ ೨೦೦ ಮೈಲಿಗಳಾಚೆಯ ನ್ಯೂಯಾರ್ಕ್ ನಗರದ ದೂರದರ್ಶನ ತೆರೆಯ ಮೇಲೆ ಕಾಣಿಸಿಕೊಂಡಿತು. ಅವನಾಡಿದ ಮಾತುಗಳು ಪ್ರಯೋಗಶಾಲೆಯಿಂದಾಚೆ ಅಮೆರಿಕನ್ ದೂರದರ್ಶನದಲ್ಲಿ ಪ್ರಸಾರವಾದ ಮೊಟ್ಟ ಮೊದಲನೆಯ ಮಾತುಗಳು. ಅಷ್ಟರಲ್ಲಿ ವಿದ್ಯುಚ್ಛಕ್ತಿಯ ತೊಂದರೆಯಿಂದಾಗಿ ಅದನ್ನು ಸರಿಪಡಿಸಿದ ನಂತರ ವಾಣಿಜ್ಯ ಕಾರ್ಯದರ್ಶಿಯಾಗಿದ್ದ ಹರ್ಬರ್ಟ್ ಹೂವರ್ ತಾನು ಸಿದ್ಧ ಗೊಳಿಸಿದ ಭಾಷಣವನ್ನು ಓದಿದನು. ಇದು ಅಮೆರಿಕದಲ್ಲಿ ದೂರದರ್ಶನ ಯುಗಕ್ಕೆ ನಾಂದಿಯಾಯಿತು. ಎ.ಟಿ.ಟಿ ಸಂಸ್ಥೆ ಈ ಹೊಸ ಸಂಶೋಧನೆ ರಾಷ್ಟ್ರದ ಮೇಲೆ ಯಾವ ರೀತಿಯ ಪ್ರಭಾವ ಬೀರಬಹುದು ಎನ್ನುವುದನ್ನು ಊಹಿಸಿರಲಿಲ್ಲ. ಎರಡನೆಯ ಜಾಗತಿಕ ಯುದ್ಧ ಪ್ರಾರಂಭವಾಗಿ ದೂರದರ್ಶನ ಕ್ಷೇತ್ರದಲ್ಲಿ ಹೆಚ್ಚಿನ ಬೆಳವಣಿಗೆ ಆಗಲಿಲ್ಲ.

ಯುದ್ಧಾನಂತರದ ಮೊದಲ ದಿನಗಳಲ್ಲಿ ದೂರದರ್ಶನದ ಹೊಸ ಅನುಭವ ವ್ಯಾಪಕವಾಗಿ ಹರಡಿ ಎಲ್ಲ ಅಮೆರಿಕನ್ನರನ್ನು ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವಿತ ಗೊಳಿಸಿತು. ಇದು ಮುಂದೆ ಅಮೆರಿಕ ರಾಷ್ಟ್ರವನ್ನು ಒಂದು ಸಮುದಾಯವನ್ನಾಗಿ ಮಾಡುತ್ತದೆ ಎಂದು ಇದನ್ನು ಕಂಡುಹಿಡಿದವರು ತಿಳಿದಿರಲಿಲ್ಲ. ದೇಶದ ನಾನಾ ಕಡೆಗಳಲ್ಲಿ ಜರುಗಿದ ಘಟನೆಗಳನ್ನು ಮತ್ತು ಎಲ್ಲೋ ದೂರದಲ್ಲಿರುವ ವ್ಯಕ್ತಿಗಳನ್ನು ಜನರು ತಮ್ಮ ಮನೆಗಳಲ್ಲಿ ಕುಳಿತು ವೀಕ್ಷಿಸಬಹುದು ಎನ್ನುವುದು ಆಗ ನಂಬಲಾರದ ಸಂಗತಿಯಾಗಿತ್ತು. ಇದರ ವಾಣಿಜ್ಯ ಉಪಯೋಗ ಪ್ರಾರಂಭವಾಗಿದ್ದು ಎರಡನೆಯ ಜಾಗತಿಕ ಯುದ್ಧ ಆರಂಭವಾಗುವುದಕ್ಕಿಂತ ಸ್ವಲ್ಪ ಮುಂಚೆ. ಅತಿ ಕುತೂಹಲದಿಂದ ನಿರೀಕ್ಷಿಸುತ್ತಿದ್ದ ಆ ಘಟನೆ ನಡೆದದ್ದು ೧೯೩೯ರ ಏಪ್ರಿಲ್ ೨೦ರಂದು. ಎಫ್.ಡಿ.ಆರ್ 'ವಿಶ್ವ ಜಾತ್ರೆ'ಯನ್ನು (World Fair) ನ್ಯೂಯಾರ್ಕ್ ನಗರದಲ್ಲಿ ಅಧಿಕೃತವಾಗಿ ಉದ್ಘಾಟಿಸಿದ ಸಂದರ್ಭವನ್ನು ದೂರದರ್ಶನ ಪ್ರಸಾರ ಮಾಡಿತು. ಆ ವಿಶ್ವಜಾತ್ರೆಯಲ್ಲಿ ಪ್ರದರ್ಶಿತವಾದ ವಸ್ತುಗಳಲ್ಲಿ ಟಿ.ವಿ ಪ್ರಧಾನ ಆಕರ್ಷಣೆಯಾಗಿತ್ತು. ಮೊಟ್ಟ ಮೊದಲ ಟಿ.ವಿ ಸೆಟ್‌ಗಳು ಕೂಡ ಆ ಪ್ರದರ್ಶನದಲ್ಲಿ ಮಾರಾಟಕ್ಕೆ ಇಟ್ಟಿದ್ದರು. ಅವುಗಳ ಬೆಲೆ ೨೦೦ ರಿಂದ ೬೦೦ ಡಾಲರ್‌ಗಳ ವರೆಗೆ ಇತ್ತು. ಆಗ ಕೇವಲ ೪೦೦ ಸೆಟ್‌ಗಳು ಮಾತ್ರ ಮಾರಾಟವಾದವು. ಅಷ್ಟರಲ್ಲಿ ಜಾಗತಿಕ ಯುದ್ಧ ಪ್ರಾರಂಭವಾಗಿ ಬೇರೆ ಅವಶ್ಯಕತೆಗಳಿಗೆ ಹೆಚ್ಚಿನ ಗಮನ ಮತ್ತು ಹಣ ಕೊಡಬೇಕಾಗಿದ್ದು ಅನಿವಾರ್ಯವಾಗಿ ದೂರದರ್ಶನ ಅಭಿವೃದ್ಧಿ ಸ್ಥಗಿತಗೊಂಡಿತು.

ಯುದ್ಧಾನಂತರ ಟಿ.ವಿ ತ್ವರಿತಗತಿಯಲ್ಲಿ ಅಭಿವೃದ್ಧಿಗೊಂಡು ಅದರ ಬಳಕೆ ವ್ಯಾಪಕವಾಗಿ ಹಬ್ಬಿತು. ಯುದ್ಧ ಸಂಬಂಧವಾಗಿ ನಡೆದ ಸಂಶೋಧನೆಗಳಿಂದ ಟಿ.ವಿ ತಂತ್ರಜ್ಞಾನ ಬಹಳ ಮುಂದುವರಿಯಿತು. ೧೮೪೫ರ ಆಗಸ್ಟ್ ತಿಂಗಳ ವಿ.ಜೆ ದಿನಾಚರಣೆಯ (ಜಪಾನಿನ ಮೇಲೆ ವಿಜಯ ಗಳಿಸಿದ್ದು) ದಿನ ಐದು ಅಮೆರಿಕನ್ ನಗರಗಳಲ್ಲಿ ಟಿ.ವಿ. ಪ್ರಸಾರಗಳು ನಡೆದವು. ಆಗ ಟಿ.ವಿ. ಇದ್ದದ್ದು ೭೦೦೦ ಮನೆಗಳಲ್ಲಿ ಮಾತ್ರ. ಅವುಗಳಲ್ಲಿ ೫೫೦೦ ಸೆಟ್‌ಗಳು ನ್ಯೂಯಾರ್ಕ್ ನಗರದಲ್ಲಿದ್ದವು. ನಂತರ ಕೆಲವು ತಿಂಗಳುಗಳಲ್ಲಿಯೇ ಉತ್ತಮವಾದ ಕರಿ-ಬಿಳಿ ತೆರೆಯ ಟಿ.ವಿ.ಗಳ ಮಾರಾಟ ಆರಂಭವಾಯಿತು. ಸ್ಥಳೀಯ ಮದ್ಯಪಾನಗೃಹಗಳು ಟಿ.ವಿ. ವೀಕ್ಷಣೆಗೆ ವ್ಯವಸ್ಥೆ ಮಾಡಿ ಹೆಚ್ಚು ಗಿರಾಕಿಗಳನ್ನು ಆಕರ್ಷಿಸುತ್ತಿದ್ದವು. ೧೯೪೮ರ ವರ್ಷ ದೂರದರ್ಶನ ಜಾಲ (network TV) ಅಸ್ತಿತ್ವಕ್ಕೆ ಬಂದ ವರ್ಷವೆಂದು ಪರಿಗಣಿಸಲ್ಪಟ್ಟಿತು. ಆಗಲೇ ಹಲವಾರು ಮಿಲಿಯನ್ ಟಿ.ವಿ. ಸೆಟ್‌ಗಳು ಮಾರಾಟವಾಗಿದ್ದವು. ಅಲ್ಲದೆ ಪ್ರತಿ ತಿಂಗಳು ೧೪೦,೦೦೦ ಹೊಸ ಸೆಟ್‌ಗಳು ಮಾರಾಟವಾಗುತ್ತಿದ್ದವು. ಇದಕ್ಕೆ ಬೇಕಾಗುವ ಕೇಬಲ್ (cable) ಬಳಕೆ ಟಿ.ವಿ. ಸೆಟ್‌ಗಳ ಸಂಖ್ಯೆ ಮತ್ತು ಪ್ರಸಾರ ಕೇಂದ್ರಗಳ ಸಂಖ್ಯೆಯಷ್ಟೇ ಮುಖ್ಯವಾದುದು. ಎ.ಟಿ.ಟಿ. ಕಂಪನಿಯ ಕೇಬಲ್ ಪ್ರದರ್ಶನ ಹಾಗೂ ಕಾರ್ಯಕ್ರಮಗಲನ್ನು ಸ್ಥಳೀಯ ದೂರದರ್ಶನ ಕೇಂದ್ರಗಳಿಗೆ ರವಾನಿಸುತ್ತಿತ್ತು. ಈ ಕೇಂದ್ರಗಳು ಟಿ.ವಿ. ಕಾರ್ಯಕ್ರಮಗಳನ್ನು ಒಂದೇ ಸಮಯದಲ್ಲಿ ಬೇರೆ ಬೇರೆ ನಗರಗಳಲ್ಲಿ ಪ್ರಸಾರ ಮಾಡುತ್ತಿದ್ದವು. ೧೯೫೧ರಲ್ಲಿ ಕೇಬಲ್ ಕ್ಯಾಲಿಫೋರ್ನಿಯಾ ಪ್ರಾಂತವನ್ನು ತಲುಪಿತು. ೫೦ ಮಿಲಿಯನ್ ಟಿ.ವಿ. ಬಳಕೆದಾರರು ಪೂರ್ವತೀರದಿಂದ ಪಶ್ಚಿಮ ತೀರದವರೆಗೆ ಹರಡಿಕೊಂಡಿದ್ದರೂ ಕೂಡ ದೂರದರ್ಶನ ಅಮೆರಿಕವನ್ನು ಅತಿ ದೊಡ್ಡ ದಿವಾನೆಖಾನೆಯನ್ನಾಗಿ (living room) ಮಾರ್ಪಡಿಸಿತು. ೧೯೪೭-೪೮ರ ಅವಧಿಯಲ್ಲಿ ಮಿಲ್ಟನ್ ಬರ್ಲ್, ಸಿಡ್ ಸೀಸರ್ ಮತ್ತು ಎಡ್ ಸಲಿವನ್‌ರ ಕಾರ್ಯಕ್ರಮಗಳು ಪ್ರಸಾರವಾಗತೊಡಗಿದವು. ಇವರು ರೇಡಿಯೋ ಕಲಾವಿದರು. ಹಾಗಾಗಿ ಇವರ ಟಿ.ವಿ. ಕಾರ್ಯಕ್ರಮಗಳು ರೇಡಿಯೋದಿಂದ ನೇರವಾಗಿ ಬಂದವು. ಆದ್ದರಿಂದ ೧೯೫೦ರವರೆಗೂ ಟಿ.ವಿ.ಯನ್ನು 'ಸಚಿತ್ರ ರೇಡಿಯೋ' ಎಂದು ಜನ ತಿಳಿದಿದ್ದರು. ಇದರಿಂದಾಗಿ ಮೊದಲನೆಯ ಅಪ್ಪಟ ಟಿ.ವಿ. ಕಾರ್ಯಕ್ರಮ ಪ್ರಸಾರವಾದಾಗ ಜನರು ಆಶ್ಚರ್ಯಚಕಿತರಾದರು.

೧೯೫೦ರಲ್ಲಿ ಸೆನೆಟರ್ ಎಸ್ಟೆಸ್ ಕೆಫಾವರ್‌ನ (Estes Kefauver) 'ಸಂಘಟಿತ ಅಪರಾಧಗಳ ವಿಚಾರಣ ಉಪಸಮಿತಿ' (subcommittee on organized crime) ಅಮೆರಿಕದ ಅಪರಾಧಿ ಪ್ರಪಂಚದ (world of American crime) ತನಿಖೆಯನ್ನು ಆರಂಭಿಸಿತು. ವಿಚಾರಣೆ ನಡೆಯುತ್ತಿದ್ದಂತೆ ಅದನ್ನು ಟಿ.ವಿ.ಯಲ್ಲಿ ಪ್ರಸಾರ ಮಾಡಲು ಉಪಸಮಿತಿ ಸಮ್ಮತಿಸಿತು. ಇದ್ದುದನ್ನು ಇದ್ದಹಾಗೆ ರಾಷ್ಟ್ರದಾದ್ಯಂತ ಪ್ರಥಮವಾಗಿ ಪ್ರಸಾರಗೊಂಡ ಈ ಟಿ.ವಿ. ಕಾರ್ಯಕ್ರಮ ಆ ದಿನಗಳಲ್ಲಿ ಸುದ್ದಿ ಪ್ರಸಾರದ ವಿನೂತನ

ವಿಧಾನವಾಗಿತ್ತು. ಪ್ರೇಕ್ಷಕರು ತಾವೇ ವೀಕ್ಷಿಸಿ ವಿಚಾರಣೆಗಳ ಬಗ್ಗೆ ಸ್ವಂತ ನಿರ್ಧಾರಕ್ಕೆ ಬರಲು ಇದು ನೆರವಾಯಿತು. ವೃತ್ತಪತ್ರಿಕೆ ಮತ್ತು ಆಕಾಶವಾಣಿಯಲ್ಲಿ ಇತರರು ಬರೆದುದನ್ನು, ಹೇಳಿದುದನ್ನು ಅವಲಂಬಿಸಬೇಕಾದ ಅಗತ್ಯವನ್ನು ಟಿ.ವಿ. ನಿವಾರಿಸಿತು. ಸಂಘಟಿತ ಅಪರಾಧದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿ, ಆ ಸಮಸ್ಯೆಯನ್ನು ಪರಿಹರಿಸುವ ದಿಕ್ಕಿನಲ್ಲಿ ಸರ್ಕಾರ ನಡೆಸುತ್ತಿರುವ ಕ್ರಮಗಳಿಗೆ ಬೆಂಬಲ ನೀಡಿ ಸಹಕರಿಸುವ ಮನೋಭಾವ ಬೆಳೆಯಿತು. ೧೯೫೨ರ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ ಅಭ್ಯರ್ಥಿಗಳು ಅಪರಾಧ ಮತ್ತು ಭ್ರಷ್ಟಾಚಾರಗಳನ್ನು ಪ್ರಚಾರ ವೇದಿಕೆಯ ಪ್ರಮುಖ ಅಂಶಗಳನ್ನಾಗಿ ಮಾಡಿಕೊಂಡರು. ಉಪಸಮಿತಿಯ ಅಧ್ಯಕ್ಷನಾಗಿದ್ದ ಕೆಫಾವರ್‌ನು ರಾಷ್ಟ್ರಮಟ್ಟದ ನಾಯಕ ಸ್ಥಾನಕ್ಕೆ ಏರಿದನು.

೧೯೫೨ರಲ್ಲಿ ಎರಡು ರಾಜಕೀಯ ಪಕ್ಷಗಳ ರಾಷ್ಟ್ರಮಟ್ಟದ ಸಮಾರಂಭಗಳನ್ನು ಟಿ.ವಿ. ಯಲ್ಲಿ ಪ್ರಸಾರ ಮಾಡಿದರು. ಆ ವರ್ಷದ ಚುನಾವಣೆಯಲ್ಲಿ ನಡೆದ ಗಮನಾರ್ಹ ಸಂಗತಿಯೆಂದರೆ ಟಿ.ವಿ.ಯಲ್ಲಿ ಪ್ರಸಾರವಾದ ಸುಪ್ರಸಿದ್ಧ 'ಚೆಕರ್ಸ್ ಭಾಷಣ' (checkers speech) ಉಪಾಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮಕರಣಗೊಂಡಿದ್ದ ರಿಚರ್ಡ್ ನಿಕ್ಸನ್ ಮೇಲೆ ಚುನಾವಣ ಪ್ರಚಾರ ನಿಧಿಯ ಹಣವನ್ನು ದುರುಪಯೋಗ ಪಡಿಸಿಕೊಂಡ ಆಪಾದನೆ ಹೊರಿಸಿದರು. ಆಪಾದನೆಗಳನ್ನು ನಿರಾಕರಿಸಿ, ತಾನು ನಿರಪರಾಧಿ ಎಂದು ಸಾಬೀತುಗೊಳಿಸಲು ನಿಕ್ಸನ್ ಮಾಡಿದ ಭಾಷಣ ಟಿ.ವಿ.ಯಲ್ಲಿ ಪ್ರಸಾರವಾಗಿ ಅಪಾರ ಸಂಖ್ಯೆಯಲ್ಲಿ ಅಮೆರಿಕನ್ನರು ನಿಕ್ಸನ್ ಬಗ್ಗೆ ತಮ್ಮ ಅಭಿಪ್ರಾಯವನ್ನು ಬದಲಾಯಿಸಲು ಕಾರಣವಾಯಿತು.

ಮುಂದಿನ ಹತ್ತು ವರ್ಷಗಳಲಿ ಟಿ.ವಿ. ಇತಿಹಾಸವನ್ನು ರೂಪಿಸುವ ಸಾಧನವಾಯಿತು. ಅಮೆರಿಕ ರಾಷ್ಟ್ರವನ್ನೇ ಒಂದು ಸಮುದಾಯವಾಗುವಂತೆ ಟಿ.ವಿ. ಮಾಡಿತು. ಅಮೆರಿಕದ ಬಗ್ಗೆ ತಾವು ತಿಳಿದುಕೊಂಡಿರುವ ವಿಷಯಗಳು, ಬೆಳೆಸಿಕೊಂಡ ಅಭಿಪ್ರಾಯಗಳಲ್ಲಿ ಮುಕ್ಕಾಲು ಭಾಗ ಟಿ.ವಿ.ಯಿಂದ ಸೃಷ್ಟಿಗೊಂಡವು ಎಂದರೆ ಉತ್ಪ್ರೇಕ್ಷೆಯಾಗಲಾರದು.

ಸಂಸ್ಕೃತಿ ಮತ್ತು ವಿಜ್ಞಾನ ಕ್ಷೇತ್ರಗಳ ಮುನ್ನಡೆ

ಅಮೆರಿಕನ್ನರಿಗೆ ಪ್ರಾಪಂಚಿಕ ಸರಕುಗಳ ಮತ್ತು ಸಂಸ್ಕೃತಿಯ ಸಾಪೇಕ್ಷ ಮೌಲ್ಯಗಳ (relative values) ಅರಿವುಂಟಾಗಿದ್ದು ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ. ವ್ಯಾಪಾರ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಅರ್ಹತೆ ಪಡೆಯಲು ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಅವಧಿಯನ್ನು ವಿಸ್ತರಿಸಬೇಕಾಯಿತು. ಯಂತ್ರ ವಿಜ್ಞಾನದ ಮುಂಚೂಣಿ ಯಲ್ಲಿ ಅಮೆರಿಕ ಸ್ಥಾನ ಪಡೆಯಿತು. ಸಂಶೋಧನೆ ಮತ್ತು ನವೀನ ಮಾರ್ಪಾಡುಗಳಿಗೆ ಹಿಂದೆ ಎಂದೂ ಇರದಷ್ಟು ಹೆಚ್ಚಿನ ಪರಿಶ್ರಮವನ್ನು ಅಮೆರಿಕನ್ನರು ವಿನಿಯೋಗ ಮಾಡಿದರು. ಸಾಮಾನ್ಯವಾಗಿ ಅಮೆರಿಕ ಪ್ರಾಪಂಚಿಕ ವಸ್ತುಗಳಿಗೆ ಮತ್ತು ಹಣಕ್ಕೆ

ಕೊಡುವಷ್ಟು ಪ್ರಾಮುಖ್ಯತೆಯನ್ನು ಕುಶಲಕಲೆ, ಸಂಗೀತ ಮುಂತಾದ ಸಾಂಸ್ಕೃತಿಕ ಅಂಶಗಳಿಗೆ' ಕೊಡುವುದಿಲ್ಲ ಎಂದು ಜನ ನಂಬಿದ್ದರು. ಸಂಸ್ಕೃತಿಯ ಕ್ಷೇತ್ರದಲ್ಲಾದ ಮುನ್ನಡೆಯಿಂದಾಗಿ ಆ ಅಭಿಪ್ರಾಯ ಬದಲಾಯಿಸಿತು. ಅಮೆರಿಕನ್ನರಿಗೆ ವರ್ಣ ಚಿತ್ರಕಲೆ, ಶಾಸ್ತ್ರೀಯ ಸಂಗೀತ ಮತ್ತು ಪುಸ್ತಕ ಪ್ರಕಟಣೆಗಳಲ್ಲಿ ಆಸಕ್ತಿ ಹೆಚ್ಚಿತು. ಆದರೆ ಸಾಹಿತ್ಯ ಕ್ಷೇತ್ರದಲ್ಲಿ ಮೊದಲನೆಯ ಜಾಗತಿಕ ಯುದ್ಧಾನಂತರ ಆದಂಥ ಮಹತ್ತರವಾದ ಬದಲಾವಣೆಗಳು ಆಗಲಿಲ್ಲ. ಇದಕ್ಕೆ ಕಾರಣ ೧೯೫೦ರ ದಶಕದಲ್ಲಿ ಟಿ.ವಿ.ಯ ಜನಪ್ರಿಯತೆಯೂ ಹೌದು.

ಎರಡನೆಯ ಜಾಗತಿಕ ಯುದ್ಧಾನಂತರ ಅಮೆರಿಕದ ವಿದ್ಯಾಭ್ಯಾಸ ಪದ್ಧತಿಯಲ್ಲಿ ತ್ವರಿತಗತಿಯ ಬದಲಾವಣೆಗಳು ಮತ್ತು ಪ್ರಗತಿ ಉಂಟಾದವು. ಯುದ್ಧದಿಂದ ಹಿಂದಿರುಗಿದ ಯೋಧರು ಖರ್ಚಿಲ್ಲದೆ ದೊರೆಯುವ ವಿದ್ಯಾಭ್ಯಾಸದ ಅವಕಾಶವನ್ನು ಉಪಯೋಗಿಸಿ ಕೊಂಡು ಅಪಾರ ಸಂಖ್ಯೆಯಲ್ಲಿ ಶಾಲಾ ಕಾಲೇಜುಗಳನ್ನು ಸೇರಿದರು. ಇದು ಹೆಚ್ಚಿನ ಕಾಲ ನಡೆಯಲಿಲ್ಲ, ಏಕೆಂದರೆ ಸರ್ಕಾರ ಇದಕ್ಕೆ ಮೀಸಲಾಗಿಟ್ಟಿದ್ದ ಹಣ ಮುಗಿದಮೇಲೆ, ಬಹುತೇಕ ಅಮೆರಿಕನ್ನರು ಓದು ನಿಲ್ಲಿಸಿ ಉದ್ಯೋಗಗಳಿಗೆ ಸೇರಿಕೊಂಡಿದ್ದರು. ಮಾಜಿ ಸೈನಿಕರು ಮನೆ ಸೇರಿದ ಮೇಲೆ ಮದುವೆಯಾಗಿ ಸಂಸಾರಸ್ಥರಾದರು. ಕಾಲಕ್ರಮವಾಗಿ ಜನಗಣತಿಯ ಅಂಕಿ-ಅಂಶಗಳು ಅಮೆರಿಕದಲ್ಲಿ ಮಕ್ಕಳ ಸಂಖ್ಯೆ ಅಧಿಕವಾಗುತ್ತಿರುವುದನ್ನು ಖಚಿತಗೊಳಿಸಿದವು. ಈ ಮಕ್ಕಳ ಪ್ರಾಥಮಿಕ ವಿದ್ಯಾಭ್ಯಾಸಕ್ಕಾಗಿ ಅಧಿಕ ಸಂಖ್ಯೆಯಲ್ಲಿ ಶಾಲೆಗಳನ್ನು ತೆರೆಯಬೇಕಾಯಿತು. ಶಾಲೆಗಳ ನಿರ್ಮಾಣ ಮತ್ತು ನುರಿತ ಉಪಾಧ್ಯಾಯರಿಗೆ ಹೆಚ್ಚಿನ ಸಂಬಳ ಮತ್ತು ಸವಲತ್ತುಗಳನ್ನು ಒದಗಿಸಲು ತೆರಿಗೆಯನ್ನು ಏರಿಸಬೇಕಾಯಿತು. ೧೯೫೭ರ ಹೊತ್ತಿಗೆ ಪ್ರೌಢಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಯಿತು. ಅಭಿವೃದ್ಧಿಗೊಂಡ ವಿದ್ಯಾಭ್ಯಾಸದಿಂದಾಗಿ ೧೯೬೦ರ ಹೊತ್ತಿಗೆ ಉತ್ತಮ ಕೆಲಸ ಪಡೆಯಲು ಕಾಲೇಜು ಪದವಿ ಅನಿವಾರ್ಯವಾಯಿತು. ಸ್ನಾತಕೋತ್ತರ ಶಿಕ್ಷಣ, ವಿಶಿಷ್ಟ ವೃತ್ತಿಗಳು ಹಾಗೂ ಕಸುಬುಗಳು – ಇವುಗಳ ಮಟ್ಟ ಏರುತ್ತಿದ್ದಂತೆ ವಿಶಿಷ್ಟ ಶಿಕ್ಷಣ ಪಡೆದ ಅಭ್ಯರ್ಥಿಗಳಿಗೆ ಬೇಡಿಕೆ ಹೆಚ್ಚಾಯಿತು. ಇಂಥ ಶಿಕ್ಷಣ ವ್ಯವಸ್ಥೆಯನ್ನು ನಿರ್ವಹಿಸಲು ಅಪಾರ ಮೊತ್ತದ ಹಣ ಬೇಕಾಯಿತು. ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ಹಿಂದೆ ಕೊಡುತ್ತಿದ್ದುದಕ್ಕಿಂತ ಅನೇಕ ಪಟ್ಟು ಹೆಚ್ಚು ಹಣವನ್ನು ವಿದ್ಯಾಭ್ಯಾಸಕ್ಕೆ ವಿನಿಯೋಗಿಸಬೇಕಾಗಿ ಬಂತು. ಇಷ್ಟಾದರೂ ವಿದ್ಯಾಸಂಸ್ಥೆಗಳ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಲು ನಿರಂತರವಾಗಿ ಪ್ರಯತ್ನ ಈಗಲೂ ಮಾಡಬೇಕಾಗಿದೆ.

ಶಿಕ್ಷಣದ ಎಲ್ಲ ಹಂತಗಳಿಗೂ ಫೆಡರಲ್ ಸರ್ಕಾರ ಆರ್ಥಿಕ ನೆರವು ನೀಡಬೇಕೆಂದು ಕಾಂಗ್ರೆಸ್ಸಿನಲ್ಲಿ ಆಗ್ರಹ ಪಡಿಸುತ್ತಿದ್ದ ಸದಸ್ಯರು ಮಂಡಿಸುತ್ತಿದ್ದ ಮಸೂದೆಗಳನ್ನು ವರ್ಷ ವರ್ಷವೂ ಸಂಪ್ರದಾಯಸ್ಥ ಸದಸ್ಯರು ಸೋಲಿಸುತ್ತಿದ್ದರು. ದಕ್ಷಿಣ ಪ್ರಾಂತಗಳಲ್ಲಿ ಫೆಡರಲ್

ಸರ್ಕಾರ ವಿದ್ಯಾಭ್ಯಾಸಕ್ಕೆ ನೆರವು ನೀಡುವ ನೆಪದಲ್ಲಿ ಜನರನ್ನು ನಿಯಂತ್ರಿಸುತ್ತದೆ ಎಂದು ನಂಬಿದ್ದರು. ಆದ್ದರಿಂದ ಆ ಪ್ರಾಂತಗಳಲ್ಲಿ ಸಾರ್ವಜನಿಕ ಶಾಲೆಗಳಿಗೆ ಪ್ರೋತ್ಸಾಹ ಸಿಗಲಿಲ್ಲ. ಕ್ಯಾಥೊಲಿಕ್ ಬಹುಸಂಖ್ಯಾತರನ್ನು ಪ್ರತಿನಿಧಿಸುವ ಕಾಂಗ್ರೆಸ್ ಸದಸ್ಯರು ಸಹ ಫೆಡರಲ್ ಸರ್ಕಾರದ ಸಹಾಯ ನಿರಾಕರಿಸಿದರು. ಸರ್ಕಾರ ಮತ್ತು ಮತಧರ್ಮಗಳನ್ನು ಬೇರ್ಪಡಿಸುವ ತತ್ವದ ಆಧಾರದ ಮೇಲೆ ಮತಧರ್ಮ ಸಂಸ್ಥೆಗಳು ನಡೆಸುತ್ತಿದ್ದ ಶಾಲೆಗಳು ಸರ್ಕಾರದ ಹಣ ಪಡೆಯುವಂತಿರಲಿಲ್ಲ.

ಎರಡನೆಯ ಜಾಗತಿಕ ಯುದ್ಧಾನಂತರ ಕೆಲವು ಸಂಪ್ರದಾಯಸ್ಥ ಅಮೆರಿಕನ್ನರು ಸಾರ್ವಜನಿಕ ಶಿಕ್ಷಣವನ್ನು ಕಟುವಾಗಿ ಟೀಕಿಸಿದರು. ಸಾರ್ವಜನಿಕ ಶಾಲೆಗಳಲ್ಲಿ ಶಿಕ್ಷಣದ ಅಡಿಗಲ್ಲು ವಿಷಯಗಳಾದ ವ್ಯಾಕರಣ, ಗಣಿತ ಮುಂತಾದುವನ್ನು ಕಡೆಗಣಿಸಿ ಪೂರ್ಣ ವ್ಯಕ್ತಿತ್ವದ ಬೆಳವಣಿಗೆಗೆ ಪೋಷಕವಾದ ವಿಷಯಗಳನ್ನು, ವಿಶಿಷ್ಟವಾಗಿ, ಸಾಮಾಜಿಕ ಶಿಕ್ಷಣ – ಇಂಥ ವಿಷಯಗಳಿಗೆ ಪ್ರಾಮುಖ್ಯತೆ ಕೊಡಲಾಗಿದೆ ಎಂದು ದೂರಿದರು. ೧೯೫೭ರಲ್ಲಿ ಸೋವಿಯೆಟ್ ಒಕ್ಕೂಟ ಬಾಹ್ಯಾಕಾಶಕ್ಕೆ 'ಸ್ಪುಟ್ನಿಕ್' ಹಾರಿಸುವುದರಲ್ಲಿ ಯಶಸ್ವಿಯಾಯಿತು. ಈ ಸಾಧನೆ ಅಮೆರಿಕದ ಶಿಕ್ಷಣ ಪದ್ಧತಿಯ ಮೇಲೆ ತೀವ್ರ ಪರಿಣಾಮ ಬೀರಿತು. ಸಾರ್ವಜನಿಕರ ಅಭಿಪ್ರಾಯಗಳನ್ನು ಶಾಲೆಗಳು ಅಳವಡಿಸಿಕೊಳ್ಳುವುದು ಅನಿವಾರ್ಯವಾಯಿತು. ಇದರಿಂದಾಗಿ ಪಠ್ಯಕ್ರಮದಲ್ಲಿ ಗಣಿತ, ವಿಜ್ಞಾನ, ಭಾಷೆಗಳಿಗೆ ಒತ್ತು ಕೊಡಲಾಯಿತು. ೧೯೫೮ರಲ್ಲಿ ಅನುಮೋದಿಸಲಾದ 'ರಾಷ್ಟ್ರೀಯ ರಕ್ಷಣಾ ಶಿಕ್ಷಣ' ದಂತಹ (National Defense Education Act) ಅನೇಕ ಮಸೂದೆಗಳ ಮೂಲಕ ವಿದ್ಯಾರ್ಥಿವೇತನಗಳು, ವಿದ್ಯಭ್ಯಾಸಕ್ಕಾಗಿ ಸಾಲ ಮತ್ತು ದತ್ತಿ (grant) ಗಳನ್ನು ಸರ್ಕಾರ ಧಾರಾಳವಾಗಿ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಿಗೆ ಒದಗಿಸಿತು.

೧೯೪೦ರ ದಶಕದಲ್ಲಿ ಸಂಶೋಧನೆಗಳಿಂದ ಕಂಡುಹಿಡಿದ ಹೊಸತತ್ವಗಳ ಮತ್ತು ವಿಧಾನಗಳ ಉಪಯೋಗ ಅಮೆರಿಕದಲ್ಲಿ ಆಶ್ಚರ್ಯಕರ ರೀತಿಯಲ್ಲಿ ಮುಂದುವರಿಯಿತು. ಫೆಡರಲ್ ಸರ್ಕಾರದ ಧನಸಹಾಯ ಮತ್ತು ಖಾಸಗಿ ಉದ್ಯಮಗಳು ಹೆಚ್ಚು ಹಣ ಮೀಸಲಾಗಿಟ್ಟು ಸಂಶೋಧನಾ ಸಂಸ್ಥೆಗಳಿಗೆ ಮತ್ತು ಸಂಶೋಧಕರಿಗೆ ವಿತರಣೆ ಮಾಡುವುದರ ಮೂಲಕ ಅಮೆರಿಕದಲ್ಲಿ ಯಂತ್ರವಿಜ್ಞಾನ ಮಹತ್ತರವಾಗಿ ಪ್ರಗತಿ ಹೊಂದಿತು. ಅಣುಭೌತ ಶಾಸ್ತ್ರದಲ್ಲಿ (Atomic Physics) ಅದ್ಭುತ ಮುನ್ನಡೆ ಸಾಧಿಸಿ ಹೈಡ್ರೊಜೆನ್ ಬಾಂಬ್‌ನಂಥ ಮಾರಕ ಅಣ್ವಸ್ತ್ರಗಳನ್ನು ತಯಾರಿಸಿ ದಾಸ್ತಾನು ಮಾಡಲು ಸಾಧ್ಯವಾಯಿತು. ಇದಕ್ಕೆ ಮುಂಚೆ ಅಣುಶಕ್ತಿಯಿಂದ (Atomic Energy) ವಿದ್ಯುಚ್ಛಕ್ತಿ ತಯಾರಿಕೆ ಲಾಭದಾಯಕವಲ್ಲ ಎಂಬ ಅಭಿಪ್ರಾಯ ಬದಲಾಗಿ ೧೯೬೩ರ ಹೊತ್ತಿಗೆ ಅನೇಕ ಖಾಸಗಿ ಕಂಪನಿಗಳು ಅಣುಶಕ್ತಿಯಿಂದ ವಿದ್ಯುತ್ ಉತ್ಪಾದನೆ ಮಾಡುವ ವಿದ್ಯುದಾಗಾರಗಳನ್ನು ನಿರ್ಮಾಣ ಮಾಡುವುದರಲ್ಲಿ ನಿರತರಾದರು. ಅಣುಶಕ್ತಿಯನ್ನು ಅನೇಕ ವಿಧಗಳಲ್ಲಿ –

ತೈಲ ಪರಿಶೋಧನೆ, ಕ್ರಿಮಿನಾಶಕ, ಎಲೆಕ್ಟ್ರಾನಿಕ್ ಕ್ಷೇತ್ರ, ವೈದ್ಯಕೀಯ ವಿಜ್ಞಾನ – ಮುಂತಾದುವುಗಳಲ್ಲಿ ಬಳಸಿಕೊಂಡರು.

ಯುದ್ಧದ ಅಗತ್ಯಗಳನ್ನು ಪೂರೈಸಲು ಯಂತ್ರವಿಜ್ಞಾನವನ್ನು ವ್ಯಾಪಕವಾಗಿ ಬಳಸಿಕೊಳ್ಳಬೇಕಾಗಿದ್ದರಿಂದ ಅಮೆರಿಕದಲ್ಲಿ ಅದು ಕ್ಷಿಪ್ರವಾಗಿ ಪ್ರಗತಿಹೊಂದಿತು. ಅದರ ಮುನ್ನಡೆ ಅಸಂಖ್ಯಾತ ರೀತಿಗಳಲ್ಲಿ – ಕೈಗಾರಿಕೆಗಳಲ್ಲಿ, ಸರ್ಕಾರದ ಯೋಜನೆಗಳಲ್ಲಿ, ವೈಜ್ಞಾನಿಕ ಸಂಶೋಧನೆಗಳಲ್ಲಿ ಉಪಯುಕ್ತವಾಯಿತು; ವಿಶಿಷ್ಟವಾಗಿ ಅತ್ಯಂತ ವೇಗದ ಗಣಕಯಂತ್ರಗಳ (Computers) ನಿರ್ಮಾಣದಲ್ಲಿ. ವಿಷಯ ಸಂಗ್ರಹ ಮತ್ತು ವಿಶ್ಲೇಷಣೆ, ಗಣಿತದ ಕ್ಲಿಷ್ಟ ಸಮಸ್ಯೆಗಳಿಗೆ ಉತ್ತರಗಳು ಮತ್ತು ಇತರ ಸಂಕೀರ್ಣ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಗಣಕಯಂತ್ರಗಳು ಅನಿವಾರ್ಯವಾಗುತ್ತ ಬಂದವು.

ರಾಷ್ಟ್ರ ಸಂರಕ್ಷಣೆಗಾಗಿ ಹೊಸ ಶಸ್ತ್ರಾಸ್ತ್ರಗಳ, ಸಾಧನ ಸಲಕರಣೆಗಳ ಮತ್ತು ರಹಸ್ಯ ಸುದ್ದಿ ಸಂಗ್ರಹಕ್ಕಾಗಿ ಉಪಯೋಗಿಸುವ ವಿದ್ಯುದುಪಕರಣಗಳ ಸಂಶೋಧನೆಗೆ ಸಂಬಂಧ ಪಟ್ಟ ಕ್ಷೇತ್ರ – ಬಾಹ್ಯಾಕಾಶ ಶೋಧನೆ (Space Exploration). ಈ ಪರಿಶೋಧನೆ ರಕ್ಷಣಾಪಡೆಗಳ ಅಭಿವೃದ್ಧಿ ಮತ್ತು ರಾಷ್ಟ್ರದ ಹೆಮ್ಮೆ ಬೆಳೆಸಿಕೊಳ್ಳುವುದಕ್ಕೆ ಉಪಯುಕ್ತ ವಾದರೂ ಅದರ ಉದ್ದೇಶಗಳು ಹಲವಾರು: ಮುಖ್ಯ ಉದ್ದೇಶ – ಹವಾಗುಣ ಮತ್ತು ಅದರ ಬದಲಾವಣೆಗಳ ಬಗ್ಗೆ ತಿಳುವಳಿಕೆಯನ್ನು ಹೆಚ್ಚಿಸುವುದು. ಎರಡನೆಯದಾಗಿ, ಬಾಹ್ಯಾಕಾಶದಲ್ಲಿ ಸುತ್ತುವ ಮಾನವನಿರ್ಮಿತ ಉಪಗ್ರಹಗಳು (satellites) ಸಂಪರ್ಕ ವ್ಯವಸ್ಥೆಯನ್ನು ಉತ್ತಮಗೊಳಿಸಿ, ವೈಜ್ಞಾನಿಕ ವಿಷಯ ಸಂಗ್ರಹ ಮತ್ತು ಪ್ರಸರಣವನ್ನು ಅಭಿವೃದ್ಧಿಗೊಳಿಸುವುದರಲ್ಲಿ ಯಶಸ್ವಿಯಾದವು. ೧೯೫೦ರ ದಶಕದಲ್ಲಿ ಸಮುದ್ರದ ನೀರಿನಿಂದ ಉಪ್ಪಿನ ಅಂಶವನ್ನು ತೆಗೆದು ಸಿಹಿ ನೀರಾಗಿ ಮಾಡುವ ವಿಧಾನಗಳು ಪ್ರಗತಿ ಹೊಂದಿ ಈ ಪರಿವರ್ತನ ಪ್ರಕ್ರಿಯೆಗೆ ತಗಲುವ ವೆಚ್ಚ ಕಡಿಮೆಯಾಗಿ ನೀರು ಅಪಾರವಾಗಿ ಮನೆ ಬಳಕೆಗೆ ಮತ್ತು ಕೈಗಾರಿಕೆಗಳಲ್ಲಿ ಉಪಯೋಗಿಸಲು ದೊರೆಯುವಂತಾಯಿತು. ಪ್ರಪಂಚದ ಅನಾವೃಷ್ಟಿ ಪ್ರದೇಶಗಳಿಗೆ ಈ ವೈಜ್ಞಾನಿಕ ಸಂಶೋಧನೆ ವರಪ್ರಸಾದ ವಾಯಿತು. ಇವು ವಿಜ್ಞಾನದ ಮುನ್ನಡೆಯ ಪರಿಣಾಮದ ನಿದರ್ಶನಗಳಾಗಿವೆ.

೧೯೬೦ರ ದಶಕದಲ್ಲಿ ಅಮೆರಿಕ

೧೯೬೦ರ ದಶಕವ ಅಮೆರಿಕದ ಇತಿಹಾಸಕ್ಕೆ ಹೊಸ ತಿರುವು ಕೊಟ್ಟ ಯುಗಪ್ರವರ್ತಕ ಕಾಲವೆಂದು ಹೇಳಿದರೆ ತಪ್ಪಾಗಲಾರದು. ಈ ಕಾಲದಲ್ಲಿ ಜರುಗಿದ, ರಾಷ್ಟ್ರವನ್ನು ಅಲ್ಲೋಲಕಲ್ಲೋಲಗೊಳಿಸಿ ಹೊಸಯುಗಕ್ಕೆ ನಾಂದಿಯಾದ ಪ್ರಮುಖ ಘಟನೆಗಳ ಸ್ಥೂಲ ಪರಿಚಯ ಅಗತ್ಯ. ನಂತರ ಆ ಪ್ರಮುಖ ಘಟನೆಗಳು ರಾಷ್ಟ್ರವನ್ನು ಹೇಗೆ ಪರಿವರ್ತಿಸಿದವು ಎನ್ನುವುದನ್ನು ತಿಳಿಯಬಹುದು.

೧೯೬೧:

- ಜೆ.ಎಫ್. ಕೆನಡಿ ಅಮೆರಿಕದ ಅಧ್ಯಕ್ಷನಾಗಿ ಪ್ರಮಾಣವಚನ ಸ್ವೀಕರಿಸಿದ್ದು.
- ಸಂಯುಕ್ತ ಸಂಸ್ಥಾನಗಳು ಕ್ಯೂಬದೊಡನೆ ರಾಯಭಾರ ಸಂಬಂಧವನ್ನು ಕಡಿದು ಕೊಂಡವು.
- 'ಬೇ ಆಫ್ ಪಿಗ್ಸ್' (Bay of Pigs) ಕ್ಯೂಬ ಆಕ್ರಮಣ ಪ್ರಯತ್ನ ವಿಫಲವಾಯಿತು.
- 'ಶಾಂತಿ ಸೇನೆ'ಯನ್ನು (Peace Corps) ಸರ್ಕಾರ ಅಂಗೀಕರಿಸಿತು.
- ಸೋವಿಯೆಟ್ ಒಕ್ಕೂಟ ಬರ್ಲಿನ್ ನಗರದ ತನ್ನ ಆಡಳಿತ ಪ್ರದೇಶವನ್ನು ಪ್ರತ್ಯೇಕಿಸಲು ಗೋಡೆಯನ್ನು ನಿರ್ಮಿಸಿತು.
- ಲ್ಯಾಟಿನ್ ಅಮೆರಿಕದಲ್ಲಿ 'ಪ್ರಗತಿಪರ ರಾಷ್ಟ್ರಗಳ ಸಂಘಟನೆ' ಸ್ಥಾಪಿತಗೊಂಡಿತು

೧೯೬೨:

- ಉಕ್ಕಿನ ಕೈಗಾರಿಕೆ ಬೆಲೆ ಏರಿಸಿದ್ದರ ವಿರುದ್ಧ ಅಧ್ಯಕ್ಷ ಕೆನಡಿ ಕ್ರಮ ತೆಗೆದು ಕೊಂಡಿದ್ದು.
- ಏಪ್ರಿಲ್ ಮತ್ತು ತಿಂಗಳುಗಳಲ್ಲಿ ಸಟ್ಟಾ ಮಾರುಕಟ್ಟೆಯ ಕುಸಿತ.
- ಗ್ಲೆನ್ ಅಮೆರಿಕದ ಮೊಟ್ಟ ಮೊದಲ ಬಾಹ್ಯಾಕಾಶ ಯಾತ್ರಿಯಾದನು (Astronaut)
- ಆಫ್ರಿಕನ್-ಅಮೆರಿಕನ್ ವಿದ್ಯಾರ್ಥಿಗಳನ್ನು ಮಿಸ್ಸಿಸ್ಸಿಪ್ಪಿ ವಿಶ್ವವಿದ್ಯಾನಿಲಯದಲ್ಲಿ ಅನುಕಲನಗೊಳಿಸಲು (integration) ಫೆಡರಲ್ ಸೈನ್ಯವನ್ನು ಕಳುಹಿಸಿದ್ದು.
- ಕಮ್ಯೂನಿಸ್ಟರ ವಿರುದ್ಧ ಹೋರಾಟ ನಡೆಸುತ್ತಿದ್ದ ದಕ್ಷಿಣ ವಿಯಟ್‌ನಾಮ್ ದೇಶದ ಸಹಾಯಕ್ಕೆ ಅಮೆರಿಕನ್ ಸೈನ್ಯ ತುಕಡಿಗಳ ರವಾನೆ.
- ಕ್ಯೂಬಾದಲ್ಲಿ ಸೋವಿಯೆಟ್ ಕ್ಷಿಪಣಿಗಳನ್ನು ಸ್ಥಾಪಿಸಿದ ಸಂದಿಗ್ಧ ಪರಿಸ್ಥಿತಿಯಲ್ಲಿ ಅಮೆರಿಕ ಮತ್ತು ರಷ್ಯಾಗಳ ಮುಖಾಮುಖಿ.
- ಮಧ್ಯಂತರ ಚುನಾವಣೆಗಳಲ್ಲಿ ಡೆಮೊಕ್ರಾಟರ ಮೇಲುಗೈ

೧೯೬೩:

- ಅಣ್ವಸ್ತ್ರಗಳ ಆಸ್ಫೋಟನೆ ಮಾಡಿ ಪರೀಕ್ಷೆ ನಡೆಸುವುದನ್ನು ನಿಲ್ಲಿಸಲು ಅಮೆರಿಕ ಮತ್ತು ರಷ್ಯಾ ಪರಸ್ಪರ ಒಪ್ಪಂದ.
- ಅಧ್ಯಕ್ಷ ಕೆನಡಿ ಪಶ್ಚಿಮ ಜರ್ಮನಿಗೆ ಭೇಟಿಕೊಟ್ಟು 'ನಾನೂ ಒಬ್ಬ ಬರ್ಲಿನರ್!' (Ich bin ein Berliner) ಎಂದು ಹೇಳಿಕೆ ನೀಡಿದ್ದು.
- ಪೌರಹಕ್ಕುಗಳಿಗಾಗಿ ನಡೆಯುತ್ತಿದ್ದ ಆಂದೋಳನದ ನಾಯಕನಾಗಿದ್ದ ಮೆಡ್ಗರ್

ಎವರ್ಸ್‌ನ (Medgar Evers) ಕೊಲೆ; ಇದರ ಪ್ರಯುಕ್ತ ಅನೇಕ ಕಡೆಗಳಲ್ಲಿ ಪ್ರದರ್ಶನಗಳು ನಡೆದವು.

- ಪೌರ ಸ್ವಾತಂತ್ರ್ಯಕ್ಕಾಗಿ ೨೦೦೦೦೦ ಜನರ ಪಾದಯಾತ್ರೆ ಮಾಡಿದ್ದು. ಮಾರ್ಟಿನ್ ಲೂಥರ್ ಕಿಂಗ್ ಮಾಡಿದ ಜಗದ್ವಿಖ್ಯಾತ 'ನಾನೊಂದು ಕನಸ ಕಂಡೆ' (I have a dream) ಎಂದು ಪ್ರಾರಂಭವಾಗುವ ಭಾಷಣ.
- ನವೆಂಬರ್ ೨೨ರಂದು ಅಧ್ಯಕ್ಷ ಕೆನಡಿಯ ಕೊಲೆ, ಲಿಂಡನ್ ಜಾನ್ಸನ್ ಅಧ್ಯಕ್ಷತೆ ವಹಿಸಿಕೊಂಡದ್ದು.

೧೯೬೪:

- ರಾಜ್ಯಾಂಗದ ೨೪ನೆಯ ತಿದ್ದುಪಡಿ ಅಂಗೀಕೃತವಾಗಿ, ಪ್ರತಿಯೊಬ್ಬ ವ್ಯಕ್ತಿ ಕೊಡಬೇಕಾಗಿದ್ದ ತೆರಿಗೆಯನ್ನು (poll tax) ರದ್ದುಗೊಳಿಸಿದ್ದು.
- ೧೯೬೪ರ ಪೌರಹಕ್ಕುಗಳ ಕಾಯಿದೆಯನ್ನು ಅಧ್ಯಕ್ಷ ಜಾನ್ಸನ್ ಜಾರಿಗೆ ತಂದಿದ್ದು.
- ಟೊಂಕಿನ್ ಕೊಲ್ಲಿಯ ಪ್ರಕರಣದ ಪರಿಣಾಮವಾಗಿ ವಿಯೆಟ್‌ನಾಮ್ ರಾಜಕೀಯದಲ್ಲಿ ಮಧ್ಯೆ ಪ್ರವೇಶಿಸಲು ಜಾನ್ಸನ್ ಕಾಂಗ್ರೆಸ್ ಒಪ್ಪಿಗೆ ಪಡೆದಿದ್ದು.
- ಮಿಸ್ಸಿಸ್ಸಿಪ್ಪಿಯಲ್ಲಿ ಮೂರು ಪೌರಹಕ್ಕುಗಳ ಕಾರ್ಯಕರ್ತರ ಕೊಲೆ.
- ಅಧ್ಯಕ್ಷ ಕೆನಡಿಯ ಕೊಲೆಯನ್ನು ವಿಚಾರಣೆ ಮಾಡಿದ ವಾರೆನ್ ಕಮಿಷನ್ ವರದಿಯ ಪ್ರಕಟಣೆ. ಕೊಲೆಗೆ ಪಿತೂರಿ ಕಾರಣವಲ್ಲ ಎಂಬ ನಿರ್ಧಾರ.
- ಬರಲಿರುವ ಚುನಾವಣೆಯಲ್ಲಿ ರಿಪಬ್ಲಿಕನ್ನರು ಬ್ಯಾರಿ ಗೋಲ್ಡ್‌ವಾಟರ್‌ನನ್ನು (Barry Goldwater) ಅಧ್ಯಕ್ಷಸ್ಥಾನಕ್ಕೆ ಅಭ್ಯರ್ಥಿಯಾಗಿ ನಾಮಕರಣ ಮಾಡಿ, ಜಾನ್ಸನ್-ಗೋಲ್ಡ್‌ವಾಟರ್ ಸ್ಪರ್ಧೆ.

೧೯೬೦ರ ಚುನಾವಣೆ

ಈ ಚುನಾವಣೆಯಲ್ಲಿ ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಲು ರಿಚರ್ಡ್ ನಿಕ್ಸನ್‌ನನ್ನು ನಾಮಕರಣ ಮಾಡಲು ಐಸೆನ್‌ಹಾವರ್ ಮೊದಲು ಹಿಂಜರಿದರೂ ನಂತರ ಅರೆಮನಸ್ಸಿನಿಂದ ಒಪ್ಪಿಗೆ ನೀಡಿದನು. ರಿಪಬ್ಲಿಕನ್ ಪಕ್ಷದಲ್ಲಿ ನಿಕ್ಸನ್‌ಗೆ ಪ್ರತಿಸ್ಪರ್ಧಿಯಾಗಿದ್ದವನು ನೆಲ್ಸನ್ ರಾಕ್‌ಫೆಲರ್‌ಗೆ ಸಾಕಷ್ಟು ಮತಗಳು ದೊರೆಯಲಿಲ್ಲವಾದ ಕಾರಣ ಅವನು ತನ್ನ ನಾಮಪತ್ರವನ್ನು ಹಿಂತೆಗೆದುಕೊಂಡನು. ಆದರೆ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ನಿರಾಕರಿಸಿದನು. ಅವನ ಬದಲಿಗೆ ಆಗ ವಿಶ್ವಸಂಸ್ಥೆಯಲ್ಲಿ ಅಮೆರಿಕದ ರಾಯಭಾರಿಯಾಗಿದ್ದ ಹೆನ್ರಿ ಕ್ಯಾಬಟ್ ಲಾಡ್ಜ್‌ನನ್ನು (Henry Cabot Lodge) ರಿಪಬ್ಲಿಕನ್ನರು ನಾಮಕರಣ ಮಾಡಿದರು.

ಡೆಮೊಕ್ರಾಟಿಕ್ ಪಕ್ಷ ಯಾವ ಅಭ್ಯರ್ಥಿಗಳನ್ನು ನಾಮಕರಣ ಮಾಡುತ್ತಾರೆ ಎನ್ನುವುದು ಖಚಿತವಾಗಿರಲಿಲ್ಲ. ನಾಲ್ಕು ಪ್ರಮುಖ ನಾಯಕರು ಸ್ಪರ್ಧೆಗೆ ಇಳಿದಿದ್ದರು: ಮಿನೆಸೋಟದ

ಸೆನೆಟರ್ ಹ್ಯೂಬರ್ಟ್ ಹಂಫ್ರಿ, ಟೆಕ್ಸಾಸ್ ಸೆನೆಟರ್ ಲಿಂಡನ್ ಜಾನ್ಸನ್, ಅಡ್ಲೈ ಸ್ಟೀವನ್‌ಸನ್, ಮತ್ತು ಮೆಸಾಚುಸೆಟ್ಸ್ ಸೆನೆಟರ್ ಜಾನ್ ಕೆನಡಿ. ಆದಾಗ್ಯೂ ಪ್ರಾಂತೀಯ ಚುನಾವಣೆಗಳಲ್ಲಿ ಕೆನಡಿ ಗಳಿಸಿದ ಅಪಾರ ಯಶಸ್ಸು ಮತ್ತು ಅವನ ವ್ಯವಸ್ಥಿತವಾದ ಚುನಾವಣಾ ಪ್ರಚಾರ ಅತಿ ಪರಿಣಾಮಕಾರಿಯಾಗಿದ್ದುದರಿಂದ ಡೆಮೊಕ್ರಾಟಿಕ್ ಪಕ್ಷ ಕೆನಡಿ ನಾಮಕರಣವನ್ನು ಅಂಗೀಕರಿಸಿತು. ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಲಿಂಡನ್ ಜಾನ್ಸನ್ ನಾಮಕರಣಗೊಂಡನು.

ಕೆನಡಿ ಕ್ಯಾಥೊಲಿಕ್ ಪಂಥಕ್ಕೆ ಸೇರಿದವನು ಎನ್ನುವುದು ಚುನಾವಣೆಯ ಪ್ರಚಾರದಲ್ಲಿ ಪ್ರಮುಖ ಅಂಶವಾಗಿ ಪರ ಮತ್ತು ವಿರೋಧ ಪಂಗಡಗಳ ನಡುವೆ ವಾಗ್ವಾದಕ್ಕೆ ಕಾರಣವಾಯಿತು. ಮೇಲಾಗಿ, ಕೆನಡಿ ಇನ್ನೂ ಯುವಕ ಮತ್ತು ಅನನುಭವಿ ಎಂದು ಅವನ ವಿರೋಧಿಗಳು ಪ್ರಚಾರ ಮಾಡಿದರು. ನಿಕ್ಸನ್ ಉಪಾಧ್ಯಕ್ಷನಾಗಿ ಅನೇಕ ಜವಾಬ್ದಾರಿಗಳನ್ನು ನಿರ್ವಹಿಸಿದ ಅನುಭವಿ. ಆದ್ದರಿಂದ ಅಧ್ಯಕ್ಷನಾಗಲು ಹೆಚ್ಚಿನ ಅರ್ಹತೆಯುಳ್ಳವನು ಎಂದು ಅವನ ಬೆಂಬಲಿಗರು ವಾದಿಸಿದರು. ಆದರೆ ಕೆನಡಿಯ ತಾರುಣ್ಯ, ಉತ್ಸಾಹ, ಅಂತರರಾಷ್ಟ್ರೀಯ ರಾಜಕಾರಣದಲ್ಲಿ ನಾಯಕತ್ವ ವಹಿಸುವ ಸಾಮರ್ಥ್ಯ ಮತ್ತು ಆರ್ಥಿಕ ಮುಗ್ಗಟ್ಟಿನ ಪರಿಹಾರಕ್ಕೆ ಕೆನಡಿ ಸೂಚಿಸಿದ ಕಾರ್ಯಕ್ರಮಗಳು ಜನರಿಗೆ ಆಪ್ಯಾಮಾನವಾಗಿ ಕಾಣಿಸಿದವು. ಅದಲ್ಲದೆ, ಐಸೆನ್‌ಹಾವರ್‌ನ ಅರೆಮನಸ್ಸಿನ, ಆಮೆಗತಿಯಲ್ಲಿ ಸಾಗುವ ಆಡಳಿತ ಜನರಲ್ಲಿ ಬೇಸರ ಹುಟ್ಟಿಸಿತ್ತು. ಆ ಕಾಲದ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದ ಲೇಖನಗಳು, ಅಮೆರಿಕದ ಅಂತರರಾಷ್ಟ್ರೀಯ ಪ್ರತಿಷ್ಠೆ ಕಡಿಮೆಯಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದ್ದವು. ಸೋವಿಯೆಟ್ ಒಕ್ಕೂಟ, ಬಾಹ್ಯಾಕಾಶ ಪರಿಶೋಧನೆಯಲ್ಲಿ ಮಾನವ ನಿರ್ಮಿತ ಉಪಗ್ರಹಗಳನ್ನು ಉಡಾಯಿಸುವುದರಲ್ಲಿ ಯಶಸ್ವಿಯಾಗುತ್ತಿರುವುದು, ಫಿಡೆಲ್ ಕ್ಯಾಸ್ಟ್ರೋ ಕ್ಯೂಬಾದಲ್ಲಿ ಅಧಿಕಾರ ವಹಿಸಿಕೊಂಡದ್ದು ಮತ್ತು ರಷ್ಯಾ-ಅಮೆರಿಕಗಳ ನಡುವೆ 'ಕ್ಷಿಪಣಿಗಳ ಅಂತರ' (missile gap) – ಇವು ಅಮೆರಿಕದ ಪ್ರತಿಷ್ಠೆ ಕ್ಷೀಣಿಸಲು ಕಾರಣವಾಗಿದ್ದವು. ಇವೆಲ್ಲ ಅಮೆರಿಕದ ಭದ್ರತೆ ಮತ್ತು ರಕ್ಷಣೆಯ ವ್ಯವಸ್ಥೆ ಸಮರ್ಪಕವಾಗಿಲ್ಲ ಎನ್ನುವ ಭಾವನೆ ಜನರಲ್ಲಿ ಮೂಡಿಸಿದ್ದವು. ರಕ್ಷಣಾವ್ಯವಸ್ಥೆಯ ಅಸಮರ್ಪಕ ಜವಾಬ್ದಾರಿ ಐಸೆನ್‌ಹಾವರ್ ಆಡಳಿತಮಂಡಳಿಯ ಮೇಲೆ ಬಿದ್ದಿತು. ನಿಕ್ಸನ್ ಈ ಆಡಳಿತ ಮಂಡಳಿಗೆ ಸೇರಿದವನು. ಆದ್ದರಿಂದ ಈ ಅಸಮರ್ಥತೆಯಲ್ಲಿ ಅವನ ಪಾತ್ರ ಅಲ್ಲಗಳೆಯುವಂತಿರಲಿಲ್ಲ. ಐಸೆನ್‌ಹಾವರ್‌ನ ಒಟ್ಟಾರೆ ಆಡಳಿತದ ಕುಂದುಕೊರತೆಗಳಿಂದ ನಿಕ್ಸನ್ ದೂರ ಸರಿಯಲಾಗಲಿಲ್ಲ. ೧೯೫೯ರಲ್ಲಿ ನಿಕ್ಸನ್ ಮಾಸ್ಕೋಗೆ ಭೇಟಿ ನೀಡಿ ಕ್ರುಶ್ಚೋವ್‌ನೊಡನೆ 'ಪಾಕಶಾಲೆಯಲ್ಲಿ ಚರ್ಚಾಕೂಟ' (kitchen debate) ನಡೆಸಿದ್ದು ಪತ್ರಿಕೆಗಳಲ್ಲಿ ಪ್ರಕಟವಾಗಿ ಪ್ರಸಿದ್ಧವಾಗಿತ್ತು. ಆದರೆ ನಿಕ್ಸನ್-ಕೆನಡಿ ಮುಖಾಮುಖಿ ಚರ್ಚೆ ಟಿ.ವಿ.ಯಲ್ಲಿ ರಾಷ್ಟ್ರದಾದ್ಯಂತ ಪ್ರಸಾರಗೊಂಡು ನಿಕ್ಸನ್ ಮಾಸ್ಕೋದಲ್ಲಿ ಗಳಿಸಿದ್ದ ಪ್ರಸಿದ್ಧಿಯನ್ನು ಕಳೆದುಕೊಂಡನು. ಟಿ.ವಿ. ಚರ್ಚೆಯಲ್ಲಿ ನಿಕ್ಸನ್

ಭರವಸೆಯಿಲ್ಲದವನಂತೆ ಬೆವರುತ್ತ, ಕೆನಡಿ ಧೀಮಂತ ಮಾತಿನ ಸರಣಿಗೆ ಸರಿಸಾಟಿಯಾದ ಉತ್ತರಕ್ಕಾಗಿ ತಡಕಾಡುವವನಂತೆ ಕಾಣಿಸಿಕೊಂಡನು. ಹೀಗಾಗಿ ಈ ಚರ್ಚೆಯಲ್ಲಿ ನಿಕ್ಸನ್ ಜನರ ಮನಸ್ಸಿನ ಮೇಲೆ ಪರಿಣಾಮಕಾರಿಯಾದ ವ್ಯಕ್ತಿತ್ವದ ಚಿತ್ರ ಮೂಡಿಸಲು ವಿಫಲನಾದನು. ಟಿ.ವಿ.ಯ ಈ ಚರ್ಚೆ ಮತ್ತು ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿಗಳು ಚುನಾವಣೆಯ ಫಲಿತಾಂಶವನ್ನು ನಿರ್ಧರಿಸುವ ಪ್ರಮುಖ ಅಂಶಗಳಾದವು. ಸ್ಪರ್ಧೆ ತೀವ್ರತರವಾಗಿದ್ದರೂ ಕೆನಡಿ ಅಧಿಕ ಸಂಖ್ಯೆಯ ಎಲೆಕ್ಟರಲ್ ಮತಗಳಿಂದ ಗೆದ್ದನು; ಸಾರ್ವಜನಿಕರ ೬೯ ಮಿಲಿಯನ್ ಮತಗಳಲ್ಲಿ ಕೆನಡಿಗೆ ಸಿಕ್ಕಿದ್ದು ೧೧೩,೯೫೭ ಮತಗಳು ಮಾತ್ರ. ೧೮೮೮ರಲ್ಲಿ ಹ್ಯಾರಿಸನ್‌ನನ್ನು ಬಿಟ್ಟರೆ ಸಾರ್ವಜನಿಕರ ಮತಗಳಲ್ಲಿ ಇಷ್ಟು ಕಿರಿದಾದ ಅಂತರದಿಂದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾದವನು ಕೆನಡಿ ಒಬ್ಬನೇ. ಈ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಸೆನೆಟ್ ಎರಡರಲ್ಲೂ ಡೆಮೊಕ್ರಾಟರು ಬಹುಮತ ಗಳಿಸಿದರು.

ಜಾನ್ ಎಫ್. ಕೆನಡಿ ಹೆಸರಾಂತ ಕೆನಡಿ ಕುಟುಂಬದ ಮೂರನೆಯ ತಲೆಮಾರಿನ ರಾಜಕಾರಣಿ. ಅವನ ತಂದೆ ಜೋಸೆಫ್ ಕೆನಡಿ ಸಟ್ಟಾ ಮಾರುಕಟ್ಟೆಯಲ್ಲಿ ಅಪಾರ ಹಣಗಳಿಸಿ ಆಗರ್ಭ ಶ್ರೀಮಂತನಾದವನು. ಎರಡನೆಯ ಜಾಗತಿಕ ಯುದ್ಧಕ್ಕೆ ಮೊದಲು ಜೋಸೆಫ್ ಕೆನಡಿ ಇಂಗ್ಲೆಂಡಿನಲ್ಲಿ ಅಮೆರಿಕದ ರಾಯಭಾರಿಯಾಗಿದ್ದನು. ಜಾನ್ ಕೆನಡಿ (ಜೆ.ಎಫ್.ಕೆ.) ಹಾರ್ವಾರ್ಡ್ ವಿಶ್ವವಿದ್ಯಾನಿಲಯದ ಪದವೀಧರ. ಅವನು ಬರಹಗಾರನೂ ಹೌದು[೧]. ಕಾಂಗ್ರೆಸ್ಸಿನಲ್ಲಿ ಕಾರ್ಮಿಕರ ಒಕ್ಕೂಟಗಳಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರವನ್ನು ತನಿಖೆ ಮಾಡಿದ ಸಮಿತಿಯಲ್ಲಿ ನಾಯಕತ್ವ ವಹಿಸಿ ಯಶಸ್ವಿಯಾಗಿ ಕಾರ್ಯಕಲಾಪಗಳನ್ನು ನಡೆಸಿ ರಾಷ್ಟ್ರಮನ್ನಣೆ ಪಡೆದವನು. ಕಾರ್ಮಿಕ ಒಕ್ಕೂಟಗಳನ್ನು ಸುಧಾರಿಸುವ ಕಾಯಿದೆಗಳನ್ನು ಜಾರಿಗೆ ತರುವುದರಲ್ಲಿ ಮುಖ್ಯ ಪಾತ್ರ ವಹಿಸಿ ಜನಾನುರಾಗಿಯಾದನು. ಎರಡನೆಯ ಜಾಗತಿಕ ಯುದ್ಧದಲ್ಲಿ ಯೋಧನಾಗಿ ಅನೇಕ ಕದನಗಳಲ್ಲಿ ವೀರಾವೇಶದಿಂದ ಹೋರಾಡಿ ಹೆಸರು ಗಳಿಸಿದನು. ಯುದ್ಧನೌಕೆಯ ನಾಯಕನಾಗಿ ಸಾಲೋಮನ್ ದ್ವೀಪಗಳ ತೀರದ ಬಳಿ ನಡೆದ ದಾಳಿಯಲ್ಲಿ ಗಾಯಗೊಂಡಿದ್ದನು. ಕೆನಡಿ ಸಂಯುಕ್ತ ಸಂಸ್ಥಾನಗಳ ೩೫ನೆಯ ಅಧ್ಯಕ್ಷನಾಗಿ ಪ್ರಮಾಣವಚನ ಸ್ವೀಕರಿಸಿದಾಗ ಅವನಿಗೆ ಕೇವಲ ೪೩ ವರ್ಷ ಪ್ರಾಯವಾಗಿತ್ತು. ಅಷ್ಟು ಚಿಕ್ಕ ವಯಸ್ಸಿನಲ್ಲಿ ಅಮೆರಿಕದ ಅಧ್ಯಕ್ಷನಾಗಿದ್ದು ಇವನೊಬ್ಬನೆ. ಅದಲ್ಲದೆ ಕೆನಡಿ ಮೊಟ್ಟಮೊದಲ ಕ್ಯಾಥೊಲಿಕ್ ಅಧ್ಯಕ್ಷ.

೧೯೬೧ರ ಏಪ್ರಿಲ್ ತಿಂಗಳಲ್ಲಿ ಕೆನಡಿ ಆಡಳಿತಕ್ಕೆ ತೀವ್ರ ಧಕ್ಕೆ ಉಂಟಾಯಿತು.

---

೧. ೧೯೫೬ರಲ್ಲಿ ಬೆನ್ನುಮೂಳೆಯ ಶಸ್ತ್ರಚಿಕಿತ್ಸೆಯಿಂದ ಚೇತರಿಸಿಕೊಳ್ಳುತ್ತಿದ್ದ ಸಮಯದಲ್ಲಿ ಬರೆದ 'ದಿಟ್ಟತನದ ಪಾರ್ಶ್ವ ರೇಖಾಚಿತ್ರಗಳು' (Profiles in Courages) ಎನ್ನುವ ಕೃತಿಗೆ ಪುಲಿಟ್ಜರ್ ಬಹುಮಾನ (Pulitzer Prize) ದೊರೆಯಿತು.

ಕ್ಯೂಬಾದ ಸರ್ವಾಧಿಕಾರಿ ಕ್ಯಾಸ್ಟ್ರೋ ವಿರೋಧಿಗಳ ಗುಂಪನ್ನು ಅಮೆರಿಕದಲ್ಲಿ ಯುದ್ಧ ಕೌಶಲದಲ್ಲಿ ತರಬೇತಿ ಮಾಡಿ, ಶಸ್ತ್ರಾಸ್ತ್ರಗಳನ್ನು ಒದಗಿಸಿ, ಸಿ.ಐ.ಎ. ಸಂಸ್ಥೆಯ ನಿವೇಶನ ದಲ್ಲಿ ಕ್ಯೂಬದ ಮೇಲೆ ಈ ಗುಂಪು ದಾಳಿ ನಡೆಸಿ 'ವರಾಹ ಕೊಲ್ಲಿ' (Bay of Pigs) ಎನ್ನುವ ಸ್ಥಳದಲ್ಲಿ ಕ್ಯೂಬದ ಸೈನಿಕರ ದಾಳಿಯನ್ನು ಎದುರಿಸಲಾರದೆ ಚದುರಿ ದಿಕ್ಕಾಪಾಲಗಿ ಓಡಿ ಅಮೆರಿಕದ ಹೆಸರಿಗೆ ಮಸಿ ಬಳಿಯುವಂತಾಯಿತು. ಆದಾಗ್ಯೂ ಅಧ್ಯಕ್ಷ ಕೆನಡಿಯ ಅತಿ ಮುಖ್ಯವಾದ ಸಾಧನೆಯೆಂದರೆ ೧೯೬೨ರ ಅಕ್ಟೋಬರ್ ೨೨ರಂದು ಸೋವಿಯೆಟ್ ಒಕ್ಕೂಟ ಕ್ಯೂಬದಲ್ಲಿ ಸ್ಥಾಪಿಸಿದ್ದ ಕ್ಷಿಪಣಿಗಳ ನೆಲೆಯನ್ನು ಕೀಳಿಸಿದ್ದು. ಕ್ರುಶ್ಚೋವ್‌ನ ಕೂಗಾಟಕ್ಕೆ ಕಿವಿಗೊಡದೆ ದೃಢನಿಶ್ಚಯದಿಂದ ಮೂರನೆಯ ಮಹಾಯುದ್ಧಕ್ಕೂ ಸಿದ್ಧ ಎಂದು ಸವಾಲು ಹಾಕಿದ್ದು – ಅವನನ್ನು ಅಮೆರಿಕನ್ನರ ಮೆಚ್ಚುಗೆಗೆ ಪಾತ್ರವಾಗುವಂತೆ ಮಾಡಿ ಜನಪ್ರಿಯನಾಗಿ ಮಾಡಿತು. ಸೋವಿಯೆಟ್ ಒಕ್ಕೂಟ ಬರ್ಲಿನ್ ನಗರದಿಂದ ಮಿತ್ರರಾಷ್ಟ್ರಗಳನ್ನು ನಿಷ್ಕ್ರಮಿಸುವಂತೆ ಮಾಡಲು ಪ್ರಯತ್ನಿಸಿದುದನ್ನು ಕೆನಡಿ ಕುಶಲ ರಾಜಕಾರಣದಿಂದ ತಪ್ಪಿಸಿದನು. 'ಶಾಂತಿ ಸೇನೆ'ಯನ್ನು ಸ್ಥಾಪಿಸಿದವನು ಕೆನಡಿ. ಅಧ್ಯಕ್ಷ ಕೆನಡಿಯ ನುಡಿಗಟ್ಟು: 'ದೇಶ ನಮಗೇನು ಮಾಡಿದೆ ಎಂದು ಕೇಳಬೇಡಿ, ನಾವು ನಮ್ಮ ದೇಶಕ್ಕೆ ಏನು ಮಾಡಬೇಕೆಂದು ಕೇಳಿ' – ಇದು ಈಗಲೂ ಜನರಲ್ಲಿ ದೇಶಪ್ರೇಮವನ್ನು ಉಕ್ಕಿಸುತ್ತದೆ. ವಯೋವೃದ್ಧರಿಗೆ ಔಷಧೋಪಚಾರಗಳನ್ನು ವಿಸ್ತರಿಸಿದನು. ಕೆನಡಿ ಆಡಳಿತ ದಲ್ಲಿ ಬಾಹ್ಯಾಕಾಶ ಪರಿಶೋಧನೆ ತ್ವರಿತಗತಿಯಲ್ಲಿ ಮುಂದುವರಿಯಿತು.

ಆಗ್ನೇಯ ಏಷ್ಯಾದಲ್ಲಿ ಕಮ್ಯೂನಿಸ್ಟರ ಆಕ್ರಮಣ, ಅಣ್ವಸ್ತ್ರ ಪರೀಕ್ಷೆಗಳನ್ನು ನಿಲ್ಲಿಸುವುದು, ಶಸ್ತ್ರಾಸ್ತ್ರಗಳ ಉತ್ಪಾದನೆ ಕಡಿಮೆ ಮಾಡುವುದು ಮತ್ತು ವಿದ್ಯಾಸಂಸ್ಥೆಗಳಿಗೆ ಫೆಡರಲ್ ಸರ್ಕಾರ ಧನಸಹಾಯ ಮುಂತಾದ ಕ್ಲಿಷ್ಟ ಸಮಸ್ಯೆಗಳನ್ನು ಎದುರಿಸಲು ಯೋಜನೆಗಳ ತಯಾರಿಕೆಯಲ್ಲಿ ಕೆನಡಿ ಆಸಕ್ತಿ ವಹಿಸಿದನು. ಪತ್ರಿಕೆ ಮತ್ತು ಟಿ.ವಿ. ಸಂದರ್ಶನಗಳಲ್ಲಿ ಬುದ್ಧಿವಂತಿಕೆ ಮತ್ತು ಹಾಸ್ಯಪ್ರಜ್ಞೆಯ ಮೂಲಕ ಪ್ರಶ್ನೆಗಳಿಗೆ ಉತ್ತರಿಸಿ ಜನರ ಮೆಚ್ಚುಗೆ ಗಳಿಸಿದನು. ಈ ಸಂದರ್ಶನಗಳು ಕೆನಡಿಯ ಜನಪ್ರಿಯತೆಯನ್ನು ಅನೇಕ ಪಟ್ಟು ಹೆಚ್ಚಿಸಿದವು. ಪೂರ್ವ ಮತ್ತು ಉತ್ತರ ಪ್ರಾಂತಗಳಲ್ಲಿ ಜನಪ್ರಿಯತೆಯ ಅಲೆಯ ಮೇಲೇರಿ ಸಾಗುತ್ತಿದ್ದ ಅಧ್ಯಕ್ಷ ಕೆನಡಿ ದಕ್ಷಿಣದಲ್ಲೂ ಜನಪ್ರಿಯತೆ ಗಳಿಸುವ ಸಲುವಾಗಿ ಟೆಕ್ಸಾಸ್ ರಾಜ್ಯದ ಡಲ್ಲಸ್ ನಗರಕ್ಕೆ ಹೋಗುವಂತೆ ವಿಧಿ ಅವನನ್ನು ಕರೆದೊಯ್ದಿತು. ೧೯೬೩ನೆಯ ನವಂಬರ್ ೨೨ರ ಬೆಳಿಗ್ಗೆ ಕೆನಡಿ ಪತ್ನಿಸಮೇತನಾಗಿ ತೆರೆದ ಮೋಟಾರ್ ಗಾಡಿಯಲ್ಲಿ ಟೆಕ್ಸಾಸ್ ರಾಜ್ಯದ ಗವರ್ನರ್ ಒಡಗೂಡಿ ಡಲ್ಲಸ್ ನಗರದ ರಾಜವೀಥಿಯಲ್ಲಿ ಸಾಗುತ್ತಿರುವ ಸಮಯದಲ್ಲಿ ರಸ್ತೆಯ ಪಕ್ಕದ ಪುಸ್ತಕ ದಾಸ್ತಾನು ಮಳಿಗೆಯ ಮಹಡಿಯ ಮೇಲಿನ ಕಿಟಕಿಯಿಂದ ಕೊಲೆಗಾರನೊಬ್ಬ ಗುಂಡು ಹಾರಿಸಿಅಧ್ಯಕ್ಷ ಕೆನಡಿಯನ್ನು ಕೊಂದನು. ನಡುಯೌವನದ, ಆಕರ್ಷಣೀಯ ವ್ಯಕ್ತಿತ್ವದ , ಉತ್ಸಾಹದಿಂದ ಪುಟಿಯುತ್ತಿದ್ದ ಕೆನಡಿ

ಪಕ್ಕದಲ್ಲಿ ಕುಳಿತಿದ್ದ ಪತ್ನಿಯ ಹೆಗಲ ಮೇಲೆ ಗುಂಡಿನಿಂದ ಘಾಸಿಗೊಂಡ ತನ್ನ ತಲೆಯನ್ನಿರಿಸಿ ಚಿರನಿದ್ರೆಗೆ ಸಂದನು!

ಕೆನಡಿ ಆಡಳಿತದ ಮೈಲಿಗಲ್ಲುಗಳು

ಬಾಹ್ಯಾಕಾಶ ಪರಿಶೋಧನೆ: ೧೯೬೨ರ ಫೆಬ್ರವರಿಯಲ್ಲಿ ಅಮೆರಿಕದ ಕೃತಕ ಉಪಗ್ರಹ ಬಾಹ್ಯಾಕಾಶದಲ್ಲಿ ಭೂಮಿಯ ಕಕ್ಷೆಯನ್ನು (orbit) ಸುತ್ತುಹಾಕಿತು. ಬಾಹ್ಯಾಕಾಶ ಯಾತ್ರಿ (astronaut) ಜಾನ್ ಗ್ಲೆನ್ (John Glenn) ಬಾಹ್ಯಾಕಾಶ ವಾಹನದಲ್ಲಿ (space capsule) ಭೂಮಿಯನ್ನು ಮೂರು ಬಾರಿ ಸುತ್ತಿ ಸುರಕ್ಷಿತವಾಗಿ ಭೂಮಿಗೆ ಮರಳಿದನು. ಗ್ಲೆನ್ನನ ಬಾಹ್ಯಾಕಾಶ ಯಾತ್ರೆ ೧೯೨೦ರ ದಶಕದ ಲಿಂಡ್‌ಬರ್ಗ್‌ನ ಸಾಧನೆಗೆ ಸರಿಸಮನಾಗಿತ್ತು. ಸೋವಿಯೆಟ್ ಒಕ್ಕೂಟದ ಸಾಧನೆಗೆ ಸಮನಾದ ಕಾರ್ಯವನ್ನು ಮಾಡಿ ಕಮ್ಯೂನಿಸಂ ಮತ್ತು ಕ್ಯಾಪಿಟಲಿಸಂ ವ್ಯವಸ್ಥೆಗಳು ಏನನ್ನು ಸಾಧಿಸಬಲ್ಲವು ಎಂದು ಜಗತ್ತಿಗೆ ತೋರಿಸಿದಂತಾಯಿತು. ಗ್ಲೆನ್‌ನ ಸಾಧನೆ ಅಮೆರಿಕನ್ನರ ನೈತಿಕ ಸ್ಥೈರ್ಯವನ್ನು ವೃದ್ಧಿಗೊಳಿಸಿತು. ೧೯೬೧ರಿಂದ ರಷ್ಯನರು ಬಾಹ್ಯಾಕಾಶ ಸಂಶೋಧನೆಯಲ್ಲಿ ಅಮೆರಿಕಕ್ಕಿಂತ ಮುಂದಿದ್ದುದರಿಂದ ಅಮೆರಿಕನ್ನರಿಗೆ ಕಳವಳ ಉಂಟಾಗಿತ್ತು. ೧೯೬೧ರಲ್ಲಿ ಗ್ಲೆನ್, ೧೯೬೨ರಲ್ಲಿ ಸ್ಕಾಟ್ ಕಾರ್ಪೆಂಟರ್, ನಂತರ ೧೯೬೩ರಲ್ಲಿ ವಾಲ್ಟರ್ ಷಿರ್ರಾ (Walter Schirra) ಭೂಮಿಯನ್ನು ರಷ್ಯನರಿಗಿಂತ ಹೆಚ್ಚು ಬಾರಿ ಸುತ್ತುಹಾಕಿ ತಾವೇನೂ ಕಡಿಮೆಯಲ್ಲ ಎಂದು ತೋರಿಸಿಕೊಟ್ಟರು.

ಅಮೆರಿಕ ಹಲವಾರು ಚಾಲಕರಿಲ್ಲದ ಕೃತಕ ಉಪಗ್ರಹಗಳನ್ನು ಬಾಹ್ಯಾಕಾಶ ಪರಿಶೋಧನೆಗಾಗಿ ಮತ್ತು ಪ್ರಯೋಗಗಳನ್ನು ನಡೆಸುವ ಸಲುವಾಗಿ ಹಾರಿಸಿ ರಷ್ಯಾವನ್ನು ಹಿಂದೆ ಹಾಕಿತು. ಬಾಹ್ಯಾಕಾಶದಲ್ಲಿ ನೆಲೆಯನ್ನು ಸ್ಥಾಪಿಸುವ ಹಾಗೂ ಇಡೀ ಭೂಗೋಳದ ಸಂಪರ್ಕವ್ಯವಸ್ಥೆಯನ್ನು ನಿರ್ಮಾಣ ಮಾಡುವ ಯೋಜನೆಯ ಮೊದಲ ಹಂತವಾಗಿ ೧೯೬೨ರಲ್ಲಿ ಅಮೆರಿಕ 'ಟೆಲಿಸ್ಟಾರ್' ಎಂಬ ಕೃತಕ ಗ್ರಹವನ್ನು ಭೂಮಿಯ ಸುತ್ತ ಸುತ್ತುವಂತೆ ಮಾಡುವುದರಲ್ಲಿ ಯಶಸ್ವಿಯಾಯಿತು. ಈ ಪರಿಶೋಧನೆಯಲ್ಲಿ ಅಮೆರಿಕದ ಇನ್ನೊಂದು ಅದ್ಭುತ ಸಾಧನೆ – 'ಮ್ಯಾರಿನರ್ ೨' ಎನ್ನುವ ಕೃತಕ ಉಪಗ್ರಹ ಅದುವರೆಗೆ ಯಾವ ಉಪಗ್ರಹವೂ ಪ್ರಯಾಣ ಮಾಡದಷ್ಟು ದೂರವಾಗಿ (೩೫ ಕೋಟಿ ಮೈಲಿಗಳು) ೧೯೬೨ ಡಿಸೆಂಬರ್ ೧೪ರಂದು ವೀನಸ್ ಗ್ರಹದ ಅತಿ ಸಮೀಪದ ಸ್ಥಳವನ್ನು ತಲುಪಿತ್ತು.

ಅಣ್ವಸ್ತ್ರಗಳ ಪರೀಕ್ಷೆ: ಜಗತ್ತಿನ ಶಾಂತಿಗೆ ಕುತ್ತಾಗಿದ್ದ ಮತ್ತು ಮಾನವಕುಲಕ್ಕೆ ಕಂಟಕಪ್ರಾಯವಾಗಿದ್ದ ಮಾರಕಾಸ್ತ್ರಗಳ ಸ್ಪರ್ಧೆಯಲ್ಲಿ ಅಮೆರಿಕ ಮತ್ತು ರಷ್ಯಾ ಭೂಮಂಡಲವನ್ನು ಹಲವಾರು ಬಾರಿ ಸಂಪೂರ್ಣವಾಗಿ ನಾಶಗೊಳಿಸುವಷ್ಟು ಅಣ್ವಸ್ತ್ರಗಳನ್ನು ದಾಸ್ತಾನು ಮಾಡಿಕೊಂಡಿದ್ದವು. ಆದರೂ ಹೊಸ ಮಾರಕಾಸ್ತ್ರಗಳನ್ನು ಪರೀಕ್ಷಿಸುವುದು ಮುಂದುವರಿದಿತ್ತು. ಈ ಪರೀಕ್ಷೆಗಳಿಂದ ಉಂಟಾಗುವ ಅಪಾರವಾದ

ಅಣುವಿಕಿರಣ ಅಸಂಖ್ಯಾತ ಜನರ ಆರೋಗ್ಯದ ಮೇಲೆ ಹಾನಿಕರವಾದ ಪರಿಣಾಮ ಉಂಟುಮಾಡುವ ವಿವಾದಗ್ರಸ್ತ ಸಮಸ್ಯೆಯನ್ನು ಬಗೆಹರಿಸುವಂತೆ ಅಮೆರಿಕ ಪ್ರಪಂಚದ ಇತರ ಭಾಗಗಳಲ್ಲಿ ಸಾರ್ವಜನಿಕರು ಒತ್ತಾಯ ಮಾಡಲಾರಂಭಿಸಿದರು.

ಸೋವಿಯೆಟ್ ಒಕ್ಕೂಟ ಪ್ರಚಾರದಲ್ಲಿ ಮೇಲುಗೈ ಪಡೆಯಲು ೧೯೫೮ರಲ್ಲಿ ಏಕಪ್ರಕಾರವಾಗಿ (unilateral) ಅಣ್ವಸ್ತ್ರ ಪರೀಕ್ಷೆಗಳನ್ನು ನಿಲ್ಲಿಸುವುದಾಗಿ ಪ್ರ[illegible]ಜ್ಞೆ ಮಾಡಿತು. ಅಣ್ವಸ್ತ್ರ ಸ್ಪರ್ಧೆಯಲ್ಲಿ ಮುಂದೆ ಇದ್ದ ಪಾಶ್ಚಿಮಾತ್ಯ ರಾಷ್ಟ್ರಗಳು ತಮ್ಮ ಪ್ರಗತಿಯನ್ನು ನಿಲ್ಲಿಸಲು ನಿರಾಕರಿಸಿದವು. ಈ ಮಾರಕಾಸ್ತ್ರಗಳ ಉತ್ಪಾದನೆ ಮತ್ತು ಪರೀಕ್ಷೆ ನಿಲ್ಲಿಸುವ ಮೊದಲು ತನಿಖೆ ಮತ್ತು ನಿಯಂತ್ರಣ ವ್ಯವಸ್ಥೆಯನ್ನು ಸ್ಥಾಪಿಸಬೇಕಾದುದು ಅಗತ್ಯವಾಗಿತ್ತು. ಅದಲ್ಲದೆ ಇತರ ಶಸ್ತ್ರಾಸ್ತ್ರಗಳನ್ನು ಈ ನಿಶಸ್ತ್ರೀಕರಣ ಯೋಜನೆಯಲ್ಲಿ ಸೇರಿಸಬೇಕೆಂದು ಪಶ್ಚಿಮ ರಾಷ್ಟ್ರಗಳು ಆಗ್ರಹಪಡಿಸಿದವು. ಅಮೆರಿಕ ಮತ್ತು ರಷ್ಯಾ ದೇಶಗಳು ನಿಶಸ್ತ್ರೀಕರಣದ ಬಗ್ಗೆ ಮಾತುಕತೆ ಮುಂದುವರಿಸಿದವು. ಆದರೆ ಎರಡೂ ದೇಶಗಳು ತಮ್ಮ ಮೊದಲಿನ ನಿಲುವನ್ನು ಬದಲಾಯಿಸಲಿಲ್ಲ. ಮೂರು ವರ್ಷಗಳು ಚರ್ಚೆ ನಡೆಯಿತೇ ಹೊರತು ಫಲದಾಯಕವಾಗಲಿಲ್ಲ. ಪುನಃ ಈ ಎರಡು ಅಣುಶಕ್ತಿ ರಾಷ್ಟ್ರಗಳು (nuclear paowers) ಹೆಚ್ಚು ವಿನಾಶಕಾರಿ ಅಣುಬಾಂಬುಗಳಲ್ಲದೆ ಜಲಜನಕ ಬಾಂಬುಗಳ (Hydrogen bombs) ಉತ್ಪಾದನೆ ಮತ್ತು ಪರೀಕ್ಷೆಯನ್ನು ಪ್ರಾರಂಭಿಸಿದವು. ಈ ಎರಡು ದೇಶಗಳು ಒಂದರ ಮೇಲೊಂದು ಮೇಲುಗೈ ಸಾಧಿಸಲು ಜಗತ್ತಿಗೆ ವಿಪತ್ಕಾರಕವಾಗಬಹುದಾದ ಮಾರಕಾಸ್ತ್ರಗಳ ಸ್ಪರ್ಧೆಯಲ್ಲಿ ತೊಡಗಿದವು.

೧೯೬೩ರ ಜುಲೈ ತಿಂಗಳಲ್ಲಿ ಅಧ್ಯಕ್ಷ ಕೆನಡಿಯ ಪ್ರಯತ್ನದಿಂದ ಮಾಸ್ಕೋ ನಗರದಲ್ಲಿ ನಿಶಸ್ತ್ರೀಕರಣ ಮಾತುಕತೆಗಳು ಪುನರಾರಂಭಗೊಂಡು ಹತ್ತು ದಿನಗಳು ಸತತವಾಗಿ ಚರ್ಚೆ ನಡೆದು ಅಮೆರಿಕ, ರಷ್ಯಾ ಮತ್ತು ಇಂಗ್ಲೆಂಡ್ ದೇಶಗಳು ಒಂದು ಒಪ್ಪಂದಕ್ಕೆ ಬಂದವು. ಇದರ ಪ್ರಕಾರ ಅಣುಬಾಂಬ್ ಮತ್ತು ಇತರ ಅಣುವಿಕಿರಣಕ್ಕೆ ಕಾರಣವಾಗುವ ಅಸ್ತ್ರಗಳನ್ನು ಅಂತರಿಕ್ಷದಲ್ಲಿ, ಬಾಹ್ಯಾಕಾಶದಲ್ಲಿ ಮತ್ತು ಸಮುದ್ರತಳದಲ್ಲಿ ಆಸ್ಫೋಟನೆಗೊಳಿಸುವುದನ್ನು ನಿಷೇಧಿಸಲಾಯಿತು. ಆದರೆ ಈ ನಿಷೇಧಾಜ್ಞೆ ಭೂಗರ್ಭದಲ್ಲಿ ಆಸ್ಫೋಟಿಸುವುದಕ್ಕೆ ಅನ್ವಯಿಸಲಿಲ್ಲ. ಆದರೂ ಈ ಒಪ್ಪಂದ ಅಮೆರಿಕ-ರಷ್ಯಾಗಳ ನಡುವೆ ಸಂಬಂಧ ಉತ್ತಮಗೊಳ್ಳುವಂತೆ ಮಾಡಿತು.

ಉಕ್ಕಿನ ಕೈಗಾರಿಕೆ ಮತ್ತು ಕಾರ್ಮಿಕರ ಸಮಸ್ಯೆಗಳು: ೧೯೬೨ರ ಏಪ್ರಿಲ್ ತಿಂಗಳಲ್ಲಿ ಉಕ್ಕಿನ ಕೈಗಾರಿಕೆಯ ಆರ್ಥಿಕ ಸ್ಥಿತಿ ಚೆನ್ನಾಗಿತ್ತು. ಆದರೂ ಹೆಚ್ಚಿನ ಲಾಭ ಗಳಿಸಲು ಉತ್ಪಾದಕರು ಉಕ್ಕಿನ ಬೆಲೆಯನ್ನು ಏರಿಸಿದರು. ಇದಕ್ಕೆ ಕೆಲವು ತಿಂಗಳ ಹಿಂದೆ ಕಾರ್ಮಿಕ ಒಕ್ಕೂಟದ ಒತ್ತಾಯಕ್ಕೆ ಮಣಿದು ಕಾರ್ಮಿಕರ ವೇತವನ್ನು ಹೆಚ್ಚಿಸಿದ್ದರು. ಆ ಸಮಯದಲ್ಲಿ ಅಧ್ಯಕ್ಷ ಕೆನಡಿ ಉಕ್ಕಿನ ಉತ್ಪಾದನಾಕಾರರಿಗೆ ಉಕ್ಕಿನ ಬೆಲೆಯನ್ನು ಏರಿಸದಂತೆ ಮನವಿ

ಮಾಡಿದ್ದನು. ಅದನ್ನು ಅವರು ಒಪ್ಪಿಕೊಂಡಿದ್ದರು ಎಂದು ಕೆನಡಿ ಭಾವಿಸಿದ್ದನು. ಹಾಗಾಗದೆ ಉತ್ಪಾದಕರು ಬೆಲೆಯನ್ನು ಏರಿಸಿದ್ದರಿಂದ ಕೆನಡಿ ಕೋಪಗೊಂಡು ಉಕ್ಕಿನ ಬೆಲೆಯ ಏರಿಕೆಯನ್ನು ತಡೆಗಟ್ಟಲು ಫೆಡರಲ್ ಸರ್ಕಾರ ತನ್ನ ಎಲ್ಲ ಅಧಿಕಾರವನ್ನು ಉಪಯೋಗಿಸುವಂತೆ ಅಧಿಕಾರಿಗಳಿಗೆ ಆದೇಶ ನೀಡಿದನು. ಬೆಲೆ ಕಡಿಮೆ ಮಾಡದಿದ್ದರೆ ಉದ್ಯಮಗಳನ್ನು ನಿಕ್ಷೇಪ ನಿಷೇಧ ಕಾಯಿದೆಯ ಆಧಾರದ ಮೇಲೆ ನ್ಯಾಯಾಲಯದಲ್ಲಿ ದಾವಾ ಹಾಕುವುದಾಗಿ ಕೆನಡಿ ಹೇಳಿಕೆ ಕೊಟ್ಟ ಮೇಲೆ ಉದ್ಯಮಿಗಳು ಬೆಲೆ ಕಡಿಮೆ ಮಾಡಿದರು.

ಪ್ರತಿವರ್ಷ ಉಕ್ಕಿನ ಬೆಲೆ ಏರಿಸುವುದು ಉದ್ಯಮಿಗಳಿಗೆ ಹವ್ಯಾಸವಾಗಿತ್ತು. ಇದನ್ನು ಕೊನೆಗಾಣಿಸಲು ಅಧ್ಯಕ್ಷ ಕೆನಡಿ ಬಲಾತ್ಕಾರ ಮತ್ತು ಬೆದರಿಕೆಗಳನ್ನು ಒಡ್ಡಬೇಕಾಗಿ ಬಂತು. ಬೆಲೆ ಏರಿಕೆ ಅನೇಕ ದುಷ್ಪರಿಣಾಮಗಳಿಗೆ ಕಾರಣವಾಗಿತ್ತು. ಇದರಿಂದಾಗಿ ಡಾಲರ್ ಶಕ್ತಿಗುಂದಿತ್ತು. ಬೆಲೆ ಹೆಚ್ಚಾದುದರಿಂದ ಅಮೆರಿಕದಲ್ಲಿ ತಯಾರಾದ ವಸ್ತುಗಳನ್ನು ವಿಶ್ವ ಮಾರುಕಟ್ಟೆಯಲ್ಲಿ ಮಾರುವುದು ಕಷ್ಟವಾಯಿತು. ಇದು ಅಮೆರಿಕದ ಚಿನ್ನದ ದಾಸ್ತಾನಿನ ಮೇಲೆ ಪರಿಣಾಮ ಬೀರಿ ಅದು ಕ್ಷೀಣಿಸುವಂತೆ ಮಾಡಿತು. ಕೆನಡಿ ಆಟೋ ಕಾರ್ಮಿಕರ ಒಕ್ಕೂಟದ ಸಭೆಯನ್ನು ಉದ್ದೇಶಿಸಿ ಮಾತನಾಡಿ ಕಾರ್ಮಿಕರು ತಮ್ಮ ಉತ್ಪಾದನಾ ಶಕ್ತಿಗಿಂತ ಹೆಚ್ಚಿಗೆ ವೇತನವನ್ನು ಪಡೆಯಲು ಬಲಾತ್ಕಾರ ಮಾಡುವುದನ್ನು ವಿರೋಧಿಸಿದನು. ಕಾರ್ಮಿಕರ ಮತ್ತು ಮಾಲೀಕರ ನಡುವಣ ವಿವಾದಗಳಲ್ಲಿ ಫೆಡರಲ್ ಸರ್ಕಾರ ಮಧ್ಯೆ ಪ್ರವೇಶಿಸುವುದು ಕೆನಡಿ ಆಡಳಿತದಿಂದ ಪ್ರಾರಂಭವಾದುದಲ್ಲ, ಟ್ರೂಮನ್ ಆಡಳಿತ ಧೋರಣೆಯನ್ನು ಮುಂದುವರಿಸಿಕೊಂಡು ಬಂದದ್ದು. ಅಧ್ಯಕ್ಷ ಕೆನಡಿ ಜಾರಿಗೆ ತಂದ ನಿಯಂತ್ರಣಗಳು ಉದ್ದಿಮೆಗಾರರ ಮತ್ತು ಕಾರ್ಮಿಕರ ಏಕಸ್ವಾಮ್ಯತೆ ಪ್ರವೃತ್ತಿಯನ್ನು (monopolistic tendencies) ತಡೆಗಟ್ಟಿ, ಬೆಲೆ ಏರಿಕೆ ಮತ್ತು ವೇತನ ಏರಿಕೆಗಳ ವೃತ್ತವನ್ನು ನಿಲ್ಲಿಸುವುದೆಂದು ಸಾರ್ವಜನಿಕರು ಆಶಿಸಿದರು.

ಕೆನಡಿ ಆಡಳಿತದಲ್ಲಿ ಕನಿಷ್ಠ ವೇತನವನ್ನು ಏರಿಸಲಾಯಿತು. ಕಾರ್ಮಿಕರ ಮುಷ್ಕರ ಗಳನ್ನು ತುರ್ತು ಪರಿಸ್ಥಿತಿಗಳಂತೆ ಶೀಘ್ರವಾಗಿ ಕ್ರಮ ತೆಗೆದುಕೊಂಡು ಪರಿಹರಿಸುತ್ತಿದ್ದರು. ಐಸೆನ್‌ಹಾವರ್‌ನ ಅಧಿಕಾರದಲ್ಲಿ ಕಾರ್ಮಿಕರ ಸಮಸ್ಯೆಗಳನ್ನು ಕಡೆಗಣಿಸಲಾಗಿತ್ತು; ಕೆನಡಿ ಆಡಳಿತದಲ್ಲಿ ಈ ಸಮಸ್ಯೆಗಳಿಗೆ ಪ್ರಧಾನತೆ ದೊರೆಯಿತು.

ಶೇರು ಮಾರುಕಟ್ಟೆಯಲ್ಲಿ ಗಾಬರಿ ಮತ್ತು ಅವನತಿ: ೧೯೫೦ರ ದಶಕದಲ್ಲಿ ಶೇರು (ಸಟ್ಟಾ) ಮಾರುಕಟ್ಟೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಅಧ್ಯಕ್ಷ ಕೆನಡಿ ಉಕ್ಕಿನ ಉದ್ಯಮಿಗಳು ಬೆಲೆ ಏರಿಸುವುದರ ವಿರುದ್ಧ ಕ್ರಮ ತೆಗೆದುಕೊಂಡಾಗ ಅವನನ್ನು ವ್ಯಾಪಾರಿಗಳ ಮತ್ತು ಉದ್ದಿಮೆಗಾರರ ವಿರೋಧಿ ಎನ್ನುವ ಭಾವನೆ ಶೇರುಕೊಳ್ಳುವವರಲ್ಲಿ ಬೆಳೆಯಿತು. ಇದರಿಂದಾಗಿ ಮೇಲಕ್ಕೆ ಏರುತ್ತಿದ್ದ ಶೇರುಗಳ ಬೆಲೆ ವೇಗವಾಗಿ ಇಳಿಯತೊಡಗಿತು.

೧೯೬೨ರ ಏಪ್ರಿಲ್ ತಿಂಗಳಲ್ಲಿ ಶೇರು ಮಾರುಕಟ್ಟೆ ತೀವ್ರವಾಗಿ ಇಳಿಯಿತು. ಇದಕ್ಕೆ ಮುಂಚೆ ಹಣದುಬ್ಬರದ ಕಾರಣದಿಂದ ಶೇರುಗಳ ಬೆಲೆ ಹೆಚ್ಚಾಗಿತ್ತು. ಕೆನಡಿ ಜಾರಿಗೆ ತಂದ ಕ್ರಮಗಳು ಹಣದುಬ್ಬರವನ್ನು ನಿಲ್ಲಿಸಬಹುದೆಂಬ ನಂಬಿಕೆ ಶೇರುಗಳ ಬೆಲೆಯನ್ನು ಕಡಿಮೆ ಮಾಡತೊಡಗಿತು. ೧೯೬೨ರ ಜೂನ್ ತಿಂಗಳ ಹೊತ್ತಿಗೆ ಸಟ್ಟಾ ವ್ಯಾಪಾರಸ್ಥರು ಗಾಬರಿಯೊಳಗೆ ಸಿಕ್ಕಿಕೊಂಡರು. ಏಕೆಂದರೆ ಶೇರುಗಳ ಬೆಲೆ ೧೯೩೭ರ ಬೆಲೆಗಿಂತಲೂ ಕಡಿಮೆಯಾಗಿತ್ತು. ೧೯೬೨ರ ಕೊನೆಯ ದಿನಗಳಲ್ಲಿ ಶೇರುಗಳ ಬೆಲೆ ಉತ್ತಮಗೊಂಡಿತು. ಗಾಬರಿ ಹುಟ್ಟಿಸಿದರೂ ತೀವ್ರ ಆರ್ಥಿಕ ಮುಗ್ಗಟ್ಟು ಪರಿಸ್ಥಿತಿ ಉಂಟಾಗಲಿಲ್ಲ. ೧೯೬೩ರ ಹೊತ್ತಿಗೆ ಶೇರು ಮಾರುಕಟ್ಟೆಯ ನ್ಯೂನತೆ ಮಧ್ಯಸ್ಥಿಕೆಯವರು (ದಲ್ಲಾಳಿಗಳು) ಶೇರುಗಳ ಮೌಲ್ಯವನ್ನು ವಾಸ್ತವ ಮೌಲ್ಯಕ್ಕಿಂತ ಅನೇಕ ಪಟ್ಟು ಹೆಚ್ಚಿಸುವ ಆಸೆ ಹುಟ್ಟಿಸಿದುದರಿಂದ ಎನ್ನುವುದು ತಿಳಿದು ಅದನ್ನು ಸರಿಪಡಿಸಿದರು.

ವ್ಯವಸಾಯ: ಕೆನಡಿ ಆಡಳಿತದ ಅವಧಿಯಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ಕೆಲವು ಸಣ್ಣ ಪುಟ್ಟ ಬದಲಾವಣೆಗಳಾದುದನ್ನು ಬಿಟ್ಟರೆ ಮಿಕ್ಕಿದೆಲ್ಲ ಟ್ರೂಮನ್ ಆಡಳಿತದಲ್ಲಿ ಜಾರಿಗೆ ಬಂದ ಕ್ರಮಗಳು. ಕೆನಡಿ ಅವುಗಳನ್ನು ಹಾಗೆಯೇ ಮುಂದುವರಿಸಿಕೊಂಡು ಹೋದನು. ೧೯೬೨ರ ಸೆಪ್ಟೆಂಬರ್ ತಿಂಗಳಲ್ಲಿ ಹೊಸ 'ಆಹಾರ ಮತ್ತು ವ್ಯವಸಾಯ' ಕಾಯಿದೆಯನ್ನು ಕೆನಡಿ ಆಡಳಿತ ಜಾರಿಗೆ ತಂದಿತು. ಈ ಕಾಯಿದೆ ಕಾಂಗ್ರೆಸ್ಸಿನಲ್ಲಿ ಅನುಮೋದನೆ ಪಡೆಯಲು ಎಂಟು ತಿಂಗಳ ಕಾಲ ಹಿಡಿಯಿತು. ಇದು ರೈತರಿಗೆ ಹೆಚ್ಚಿಗೆ ಬೆಳೆಯದಿರಲು ಕೊಡುತ್ತಿದ್ದ ಹಣದ ಮೊತ್ತವನ್ನು ಹೆಚ್ಚಿಸಲಿಲ್ಲ. ಹಿಂದೆ ಕೊಡುತ್ತಿದ್ದ ಪರಿಹಾರದ ಹಣವನ್ನು ಕಡಿಮೆ ಮಾಡಲಿಲ್ಲ. ಆದರೆ ಅವರ ಬೆಳೆಗೆ ಬೆಲೆ ಕಡಿಮೆಯಾಗದಂತೆ ನೋಡಿಕೊಳ್ಳುವ, ಕಡಿಮೆಯಾದರೆ ರೈತರಿಗೆ ನಷ್ಟ ತುಂಬಿಸಿಕೊಡುವ ಭರವಸೆಯನ್ನು ಫೆಡರಲ್ ಸರ್ಕಾರ ನಿರಾಕರಿಸಿತು. ಕೆನಡಿ ಆಡಳಿತ ಕೈಗೊಂಡ ಇನ್ನೊಂದು ಹೊಸ ವಿಧಾನವೆಂದರೆ ಸರ್ಕಾರದ ಪರಿಹಾರವನ್ನು ರೈತನ ಬೆಳೆಯ ಒಂದು ನಿರ್ದಿಷ್ಟ ಭಾಗಕ್ಕೆ ಮಾತ್ರ ಅನ್ವಯಿಸುವಂತೆ ಮಾಡಿದ್ದು. ರೈತನು ಬೇಸಾಯ ಮಾಡಬಹುದಾದ ಎಕರೆಗಳ ಮಿತಿಯನ್ನು ಮುಂದುವರಿಸಲಾಯಿತು. ಹಿಂದಿನ ಆಡಳಿತದಲ್ಲಿ ಜಾರಿಗೆ ಬಂದ 'ಭೂ ಬ್ಯಾಂಕ್' ಮತ್ತು ಕೆಲವು ಇತರ ವ್ಯವಸ್ಥೆಗಳನ್ನು ಕೆನಡಿ ಬದಲಾಯಿಸದೆ ಮುಂದುವರಿಸಿದನು.

ಆರ್ಥಿಕ ಸಮಸ್ಯೆಗಳು: ಆಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಡೆಮೊಕ್ರಾಟರು ಪ್ರತಿಪಾದಿಸಿದ ಸುಲಭವಾದ ಆರ್ಥಿಕ ಧೋರಣೆಗಳನ್ನು ಅನುಷ್ಠಾನಕ್ಕೆ ತರುವುದು ಕಷ್ಟವಾಯಿತು. ಅಮೆರಿಕದ ಚಿನ್ನದ ದಾಸ್ತಾನು ಕಡಿಮೆಯಾಗುತ್ತ ಬರುತ್ತಿದ್ದುದು ಒಂದು ಬಹುಮುಖ್ಯ ಸಮಸ್ಯೆಯಾಗಿತ್ತು. ಬಡ್ಡಿ ದರ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದ್ದರೂ ಅದು ಇತರ ದೇಶಗಳಿಗಿಂತ ಹೆಚ್ಚಾಗಿರಬೇಕಾದುದು ಅಗತ್ಯವಾಗಿತ್ತು; ಬಂಡವಾಳ ಬೇರೆ ದೇಶಗಳಿಗೆ

ಹರಿಯದಂತೆ ಮಾಡಲು ಇದು ಸಹಾಯ ಮಾಡಿತು. ಇದರ ಪರಿಣಾಮ ಹಣದುಬ್ಬರ. ಅಮೆರಿಕದಲ್ಲಿ ಉತ್ಪಾದನೆಯಾದ ವಸ್ತುಗಳು ಬೇರೆ ದೇಶಗಳ ವಸ್ತುಗಳಿಗಿಂತ ದುಬಾರಿಯಾಗಿ ಜನರು ಹೊರದೇಶದ ವಸ್ತುಗಳನ್ನು ಕೊಳ್ಳತೊಡಗಿದರು. ಪರಿಣಾಮವಾಗಿ ಅಮೆರಿಕದಲ್ಲಿ ಹಣದ ಕೊರತೆ ಮತ್ತು ಚಿನ್ನದ ಪರಿಮಾಣ ವ್ಯವಸ್ಥೆಯ (gold standard) ಸಮತೋಲನ ತಪ್ಪಿತು. ಅಮೆರಿಕದಿಂದ ಚಿನ್ನ ಹೊರಗೆ ಹೋಗದಂತೆ ಮಾಡಲು ಕೆನಡಿ ಅನೇಕ ಕ್ರಮಗಳನ್ನು ಕೈಗೊಂಡನು. ಏನೇ ಆದರೂ ಡಾಲರ್ ಮೌಲ್ಯವನ್ನು ಕಡಿಮೆ ಮಾಡುವುದಿಲ್ಲ ಎಂಬ ಭರವಸೆ ನೀಡಿದನು. ಅಂತರರಾಷ್ಟ್ರೀಯ ನೆರವಿನ ಜವಾಬ್ದಾರಿಯನ್ನು ಅಮೆರಿಕ ಒಂದೇ ಹೊರುವುದು ಕಷ್ಟವಾದುದರಿಂದ ಆ ನೆರವಿನ ಒಂದು ಭಾಗವನ್ನು ವಹಿಸಿಕೊಳ್ಳುವಂತೆ ಮಿತ್ರರಾಷ್ಟ್ರಗಳನ್ನು ಒಪ್ಪಿಸಿದನು.

ಕೆನಡಿಯ ಆಡಳಿತದಲ್ಲಿ ಅಮೆರಿಕದಾರ್ಥಿಕ ವ್ಯವಸ್ಥೆಯಲ್ಲಿ ಆದ ಮುಖ್ಯ ಬದಲಾವಣೆ ಎಂದರೆ, ಬೆಳ್ಳಿಯನ್ನು ದಾಸ್ತಾನು ಮಾಡುವುದನ್ನು ಕಡಿಮೆ ಮಾಡಿ ಬೆಳ್ಳಿ ಪರಿಮಾಣ ಹಣವನ್ನು ಚಲಾವಣೆಯಿಂದ ತೆಗೆದು ಬಂಗಾರ ಪರಿಮಾಣ ಹಣ ಚಲಾವಣೆ ಹೆಚ್ಚು ಮಾಡಿ, ರಾಷ್ಟ್ರದಾದ್ಯಂತ ರಿಸರ್ವ್ ಬ್ಯಾಂಕ್‌ನ ಅಧಿಕೃತ ನೋಟುಗಳು ಚಲಾವಣೆಗೆ ಬಂದವು. ಈ ನೋಟುಗಳನ್ನು ರಾಷ್ಟ್ರದ ಬಂಗಾರದ ದಾಸ್ತಾನು ದೃಢಪಡಿಸಿತ್ತು.

ನಾಗರಿಕ ಹಕ್ಕುಗಳು ಮತ್ತು ಶಾಲೆಗಳಲ್ಲಿ ಪ್ರತ್ಯೇಕತೆಯ ನಿಷೇಧ: ಅಧ್ಯಕ್ಷ ಕೆನಡಿ ತನ್ನ ತಮ್ಮ ರಾಬರ್ಟ್ ಕೆನಡಿಯನ್ನು ಅಟಾರ್ನಿ ಜನರಲ್ ಆಗಿ ನೇಮಿಸಿದ್ದನು. ಇಬ್ಬರೂ ಸೇರಿ ಅಮೆರಿಕದ ಕರಿಯರ ನಾಗರಿಕ ಹಕ್ಕುಗಳನ್ನು ಅನುಷ್ಠಾನಕ್ಕೆ ತರಲು ತಕ್ಕ ಕ್ರಮಗಳನ್ನು ಕೈಗೊಂಡರು. ೧೯೬೦ರ ದಶಕದಲ್ಲಿ ಅಮೆರಿಕದ ಕರಿಯ ಜನಾಂಗದಲ್ಲಿ ನಾಗರಿಕ ಹಕ್ಕುಗಳ ಬಗ್ಗೆ ಜನ ಜಾಗೃತಿ ಹೆಚ್ಚಿ ಆಂದೋಳನಕ್ಕೆ ತಿರುಗಿತು. ಇವರ ಜೊತೆಯಲ್ಲಿ ಅನುಕಂಪವುಳ್ಳ ಬಿಳಿಯರೂ ಸೇರಿ ಅಹಿಂಸಾವಿಧಾನವನ್ನು ಅನುಸರಿಸಿ, 'ಬಿಡುಗಡೆಯ ಬಸ್ಸುಗಳಲ್ಲಿ' (Freedom buses) ದಕ್ಷಿಣ ರಾಜ್ಯಗಳಲ್ಲಿ ಬೇರೂರಿದ್ದ ಪ್ರತ್ಯೇಕತಾ ಪದ್ಧತಿಯನ್ನು (customary segregation) ಹತ್ತಿಕ್ಕಲು ಪ್ರಯಾಣ ಬೆಳೆಸಿದರು. ನಾಗರಿಕ ಹಕ್ಕುಗಳ ಚಳುವಳಿಗಾರರು ಸಾರ್ವಜನಿಕ ಉಪಾಹಾರ ಗೃಹಗಳಲ್ಲಿ, ದಿನಸಿ ಮತ್ತು ಔಷಧಗಳನ್ನು ಮಾರುವ ಅಂಗಡಿಗಳಲ್ಲಿ ಧರಣಿ ಮುಷ್ಕರ (sit-ins) ಹೂಡಿದರು. ಇದು ಕೆಲವು ಪಟ್ಟಣಗಳಲ್ಲಿ ಯಶಸ್ವಿಯಾಯಿತು. ಆದರೆ ಇನ್ನು ಕೆಲವು ಕಡೆಗಳಲ್ಲಿ ಇದು ಹಿಂಸಾಚಾರಗಳಲ್ಲಿ ಪರ್ಯಾವಸಾನಗೊಂಡಿತು. ೧೯೬೨ರಲ್ಲಿ ಕೆನಡಿ ಆಡಳಿತ ಫೆಡರಲ್ ಸರ್ಕಾರದ ಧನಸಹಾಯ ಪಡೆದ (FHA) ಗೃಹನಿರ್ಮಾಣ ಸಂಸ್ಥೆಯ ಮನೆಗಳನ್ನು ವಿತರಣೆ ಮಾಡುವುದರಲ್ಲಾಗಲಿ ಅಥವಾ ಬಾಡಿಗೆಗೆ ಕೊಡುವುದರಲ್ಲಾಗಲೀ ವರ್ಣ ಪಕ್ಷಪಾತ (racial discrimination) ಮಾಡುವುದು ಅಪರಾಧವೆಂದು ಆಜ್ಞೆ ಹೊರಡಿಸಿದರು.

೧೯೬೨ರಲ್ಲಿ ಜೇಮ್ಸ್ ಮೆರಿಡಿತ್ ಎಂಬ ಕರಿಯ ವಿದ್ಯಾರ್ಥಿಗೆ ಮಿಸ್ಸಿಸ್ಸಿಪ್ಪಿ

ವಿಶ್ವವಿದ್ಯಾನಿಲಯದಲ್ಲಿ ಕಡ್ಡಾಯವಾಗಿ ಪ್ರವೇಶ ದೊರಕಿಸುವ ಪ್ರಯತ್ನದಲ್ಲಿ ಫೆಡರಲ್ ಅಧಿಕಾರಿಗಳಿಗೂ ಮತ್ತು ರಾಜ್ಯದ ಅಧಿಕಾರಿಗಳಿಗೂ ಮುಖಾಮುಖಿ ಘರ್ಷಣೆಯಾಗುವ ಸಂದರ್ಭದಲ್ಲಿ ಕೆನಡಿ ಹತ್ತು ಸಾವಿರ ಫೆಡರಲ್ ಸೈನಿಕರನ್ನು ಕಳುಹಿಸಿ ಆ ವಿದ್ಯಾರ್ಥಿ ತರಗತಿಗಳಿಗೆ ಹಾಜರಾಗಲು ನೆರವು ಮತ್ತು ರಕ್ಷಣೆ ಕೊಟ್ಟು ಅವನ ಪೌರ ಹಕ್ಕನ್ನು ಚಲಾಯಿಸಲು ಅವಕಾಶ ಮಾಡಿಕೊಟ್ಟನು. ಈ ಸಮಯದಲ್ಲಿ ಜರುಗಿದ ದೊಂಬಿಯಲ್ಲಿ ಇಬ್ಬರು ಸತ್ತರು. ಪ್ರದರ್ಶನಗಳು, ದೊಂಬಿ ಮುಂತಾದುವನ್ನು ಎದುರಿಸಿ ಕರಿಯರು ಪೌರ ಹಕ್ಕುಗಳಿಗಾಗಿ ತಮ್ಮ ಆಂದೋಳನವನ್ನು ಮುಂದುವರಿಸಿ, ತೀರ ದಕ್ಷಿಣ ರಾಜ್ಯಗಳಲ್ಲದೆ ಮಿಕ್ಕ ಕಡೆಗಳಲ್ಲಿ ಕ್ರಮೇಣ ಯಶಸ್ಸು ಗಳಿಸಿದರು. ಈ ಯಶಸ್ಸು ಕರಿಯರಿಗೆ ಮೊದಲಬಾರಿಗೆ ಮತದಾನ ಮಾಡಲು, ಉತ್ತಮ ಕೆಲಸಗಳನ್ನು ಪಡೆಯಲು, ಅನುಕಲನಗೊಂಡ (integrated) ಶಾಲೆಗಳಿಗೆ ಸೇರಿಕೊಳ್ಳಲು, ಸಾರ್ವಜನಿಕ ಸಾರಿಗೆಯನ್ನು ಉಪಯೋಗಿಸಿಕೊಳ್ಳಲು ಮತ್ತು ತಮಗೆ ಬೇಕಾದ ಕಡೆ ಮನೆ ಕೊಳ್ಳಲು ಅವಕಾಶ ಮಾಡಿಕೊಟ್ಟಿತು.

೧೯೬೨ರ ಮಧ್ಯಂತರ ಚುನಾವಣೆಯಲ್ಲಿ ಡೆಮೊಕ್ರಾಟಿಕ್ ಪಕ್ಷ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡಿತು. ಈ ಪಕ್ಷದ ಅಭ್ಯರ್ಥಿಗಳು ಸೆನೆಟ್‌ನಲ್ಲಿ ನಾಲ್ಕು ಸ್ಥಾನಗಳನ್ನು ಹೆಚ್ಚಿಸಿಕೊಂಡರು; ಕಾಂಗ್ರೆಸ್‌ನಲ್ಲಿ ನಾಲ್ಕು ಸ್ಥಾನಗಳನ್ನು ಕಳೆದುಕೊಂಡರು. ಹೊಸದಾಗಿ ಆಯ್ಕೆಯಾದ ಡೆಮೊಕ್ರಾಟರಲ್ಲಿ ಎಲ್ಲರೂ ಹೆಚ್ಚಿನ ಉದಾರತೆಯುಳ್ಳವರಾಗಿದ್ದರು. ೧೯೩೪ರಿಂದ ಈಚೆಗೆ ಡೆಮೊಕ್ರಾಟಿಕ್ ಪಕ್ಷ ಪ್ರಾಬಲ್ಯ ಸ್ಥಾಪಿಸಿದ್ದು ಈ ಚುನಾವಣೆಯಲ್ಲಿ. ಹಾಗೆಯೇ ಮತದಾರರ ನಿಲುವು ಮಧ್ಯಮ ಪ್ರವೃತ್ತಿಯ ಅಭ್ಯರ್ಥಿಗಳ ಕಡೆ ತಿರುಗಿದ್ದು ಈ ಚುನಾವಣೆ ಸ್ಪಷ್ಟ ಪಡಿಸಿತು. ಕಡು ಸಂಪ್ರದಾಯಸ್ಥ ಹಾಗೂ ತೀವ್ರಗಾಮಿಗಳು ಮತ್ತು 'ಜಾನ್ ಬರ್ಚ್ ಸಮಾಜ'ದಂತಹ (John Birch Society) ಪ್ರತಿಗಾಮಿ ಸಂಸ್ಥೆಗಳು ಸೋಲನ್ನು ಅನುಭವಿಸಿದವು. ದಕ್ಷಿಣ ರಾಜ್ಯಗಳಲ್ಲಿ ದ್ವಿಪಕ್ಷ ರಾಜಕೀಯ (ಅಂತರ್ಯುದ್ಧ ಕಾಲಕ್ಕೆ ಮೊದಲು ಇದ್ದ ಪದ್ಧತಿ) ಪುನಃ ಅನುಷ್ಠಾನಕ್ಕೆ ಬಂದು ಹಲವಾರು ರಿಪಬ್ಲಿಕನ್ನರು ಕಾಂಗ್ರೆಸ್ಸಿಗೆ ಚುನಾಯಿತರಾದರು. ದಕ್ಷಿಣ ರಾಜ್ಯದ ಅಭ್ಯರ್ಥಿಗಳು ತಮ್ಮ ಸಂಪ್ರದಾಯಸ್ಥ ಅಭಿಪ್ರಾಯಗಳನ್ನು ಸಮರ್ಥಿಸಿಕೊಳ್ಳುವುದೆ ಅಲ್ಲದೆ ಇತರ ಕಾಂಗ್ರೆಸ್ ಸದಸ್ಯರನ್ನು ತಮ್ಮ ಕಡೆ ಒಲಿಸಿಕೊಳ್ಳಲು ಪ್ರಯತ್ನಿಸಿದರು.

೧೯೬೨ರ ವಾಣಿಜ್ಯ ವಿಸ್ತರಣ ಕಾಯಿದೆ: ಕೆನಡಿ ಆಡಳಿತದ ಅತಿಮುಖ್ಯವಾದ ಕಾಯಿದೆ ಎಂದು ಪರಿಗಣಿಸಲಾದ ಈ ಕಾಯಿದೆ ಯೋರೋಪಿನ ಸಾರ್ವಜನಿಕ ಮಾರುಕಟ್ಟೆಯ (European Common Market) ಬೆಳವಣಿಗೆಗೆ ಪ್ರತಿಕ್ರಿಯೆಯಾಗಿತ್ತು. ಈ ಕಾಯಿದೆ ಅಧ್ಯಕ್ಷನಿಗೆ ಸುಂಕ ಕಡಿಮೆ ಮಾಡಲು ಹೆಚ್ಚಿನ ಅಧಿಕಾರವನ್ನು ಕೊಟ್ಟಿತು. ಆಮದು ಮಾಡಿಕೊಳ್ಳುವ ನೀತಿಯಿಂದಾಗಿ ನಷ್ಟ ಅನುಭವಿಸಿದ್ದ ಉದ್ದಿಮೆಗಳಿಗೆ ಮತ್ತು

ನಿರುದ್ಯೋಗಿಗಳಾಗಿದ್ದ ಕಾರ್ಮಿಕರಿಗೆ ಫೆಡರಲ್ ಸರ್ಕಾರ ಧನಸಹಾಯ ಮಾಡುವುದನ್ನು ಅನುಮೋದಿಸಿತು. ಈ ಕಾಯಿದೆಯ ಉದ್ದೇಶ: ಪರಸ್ಪರ ಅಂತರರಾಷ್ಟ್ರೀಯ ವ್ಯಾಪಾರ ಮತ್ತು ವಾಣಿಜ್ಯಗಳನ್ನು ಹೆಚ್ಚಿಸಿ, ಅಮೆರಿಕದ ರಫ್ತು ಹೆಚ್ಚಾಗುವಂತೆ ಮಾಡುವುದು. ಆದರೆ ಕೆನಡಿ ಆಶಿಸಿದಂತೆ ಈ ಕಾಯಿದೆ ಪೂರ್ಣ ಫಲದಾಯಕವಾಗಲಿಲ್ಲ. ಅಮೆರಿಕ ಮತ್ತು ಯೂರೋಪಿನ ರಾಷ್ಟ್ರಗಳೊಡನೆ ವಾಣಿಜ್ಯ ವ್ಯವಹಾರಗಳನ್ನು ಹೆಚ್ಚಿಸುವುದು ಕೆನಡಿ ಉದ್ದೇಶಪಟ್ಟಂತೆ ಆಗದಿರಲು ಫ್ರಾನ್ಸ್‌ನ ಅಧ್ಯಕ್ಷ ಡಿಗಾಲ್ ಯೂರೋಪಿನ ಸಾರ್ವಜನಿಕ ಮಾರುಕಟ್ಟೆಗೆ ಇಂಗ್ಲೆಂಡ್ ಪ್ರವೇಶಿಸುವುದನ್ನು ನಿರಾಕರಿಸಿದ್ದು ಮುಖ್ಯ ಕಾರಣವಾಯಿತು.

೧೯೬೩ರಲ್ಲಿ ಪೌರ ಹಕ್ಕುಗಳು: ಪೌರ ಹಕ್ಕುಗಳಿಗಾಗಿ ಕರಿಯರು ಪ್ರಾರಂಭಿಸಿದ ಆಂದೋಳನ ತ್ವರಿತಗತಿಯಿಂದ ಮುಂದುವರಿಯಿತು. ದಕ್ಷಿಣದ ಟ್ಯೂಲೇನ್ ವಿಶ್ವವಿದ್ಯಾನಿಲಯ ಮತ್ತು ಕ್ಲೆಮ್ಸನ್ ಕಾಲೇಜು ಕರಿಯ ವಿದ್ಯಾರ್ಥಿಗಳಿಗೆ ಪ್ರವೇಶ ಅನುಮತಿ ನೀಡಿದವು. ಫೆಡರಲ್ ಸೈನ್ಯದ ಸಹಾಯದಿಂದ ಅಲಬಾಮ ವಿಶ್ವವಿದ್ಯಾನಿಲಯದಲ್ಲಿ ಮೂವರು ಕರಿಯ ವಿದ್ಯಾರ್ಥಿಗಳು ಪ್ರವೇಶ ದೊರಕಿಸಿಕೊಂಡರು. ದಕ್ಷಿಣ ರಾಜ್ಯಗಳಲ್ಲಿ ಪೌರಹಕ್ಕುಗಳ ಆಂದೋಳನದ ಮುಖ್ಯ ಉದ್ದೇಶ ಎಲ್ಲ ಕ್ಷೇತ್ರಗಳಲ್ಲಿ ಪ್ರತ್ಯೇಕತೆಯನ್ನು ತೊಡೆದು ಹಾಕಿ ಅನುಕಲನ ಸಾಧಿಸುವುದು. ಅದಕ್ಕೆ ತೀವ್ರ ವಿರೋಧ ಅರಾಜಕತೆ ಮತ್ತು ಹಿಂಸಾಚಾರಗಳ ಉಗ್ರರೂಪ ತಳೆಯಿತು. ಅಲಬಾಮದಲ್ಲಿ ಪೌರಹಕ್ಕು ಆಂದೋಳನದ ಕಾರ್ಯಕರ್ತನ (ಬಿಳಿಯ) ಕೊಲೆ. ಮಿಸ್ಸಿಸ್ಸಿಪ್ಪಿಯಲ್ಲಿ ಪ್ರಮುಖ ನಾಯಕನ (ಕರಿಯ) ಕೊಲೆ. ಬರ್ಮಿಂಗ್‌ಹ್ಯಾಮ್ ಚರ್ಚಿನಲ್ಲಿ ಬಾಂ ಆಸ್ಫೋಟನೆಯಿಂದ ನಾಲ್ಕು ಕರಿಯ ಬಾಲಕಿಯರ ಸಾವು. ಇವು ಹಿಂಸಾಚಾರದ ಮುಖ್ಯ ಘಟನೆಗಳು. ೧೯೬೩ರಲ್ಲಿ ಅಮೆರಿಕ ದಕ್ಷಿಣ ರಾಜ್ಯಗಳಲ್ಲಿ ಅರಾಜಕತೆ, ಪೊಲೀಸರಿಂದ ಸಾಮೂಹಿಕ ಬಂಧನ, ಪ್ರದರ್ಶನಕಾರರ ಮೇಲೆ ನಾಯಿಗಳನ್ನು ಹರಿಯಬಿಟ್ಟು ಘಾಸಿಗೊಳಿಸುವುದು ಮತ್ತು ಲಾಠಿಗಳಿಂದ ಹಲ್ಲೆ ನಡೆಸುವುದು – ಇಂಥ ಅಮಾನುಷ ಕೃತ್ಯಗಳು ಸರ್ವೇಸಾಮಾನ್ಯವಾಗಿದ್ದವು. ಕಾಂಗ್ರೆಸ್ಸಿನಲ್ಲಿ ಈ ವಿಷಯ ಚರ್ಚೆಗೆ ಬಂದಾಗ ದಕ್ಷಿಣ ರಾಜ್ಯದ ಪ್ರತಿನಿಧಿಗಳು ಖಾಸಗಿ ಉದ್ಯಮಗಳನ್ನು ಬಲಾತ್ಕಾರವಾಗಿ ಅನುಕಲನಗೊಳಿಸುವುದು, ಖಾಸಗಿ ಆಸ್ತಿಯ ಹಕ್ಕಿನ ಉಲ್ಲಂಘನೆ ಎಂದು ವಾದಿಸಿ ಅಲ್ಲಿನ ಹಿಂಸಾಚಾರಗಳನ್ನು ಸಮರ್ಥಿಸಿದರು.

ಕರಿಯ ಅಮೆರಿಕನ್ನರು ಮತ್ತು ಅವರನ್ನು ಸಹಾನುಭೂತಿಯಿಂದ ಕಾಣುತ್ತಿದ್ದ ಬಿಳಿಯ ಬೆಂಬಲಿಗರು ಒಟ್ಟಿಗೆ ಸೇರಿ ಸಾರ್ವಜನಿಕರ ಸಭೆ ಸೇರಿಸಿ ಜಾಗೃತಗೊಳಿಸುವುದು, ಅಹಿಂಸಾತ್ಮಕ ಪ್ರದರ್ಶನ ಮತ್ತು ಮೆರವಣಿಗೆ ಏರ್ಪಡಿಸುವುದು ಮತ್ತು ಕಾರ್ಮಿಕರು ತಮ್ಮ ಕೆಲಸದ ಸ್ಥಳಗಳಲ್ಲಿ, ಇನ್ನು ಕೆಲವರು ಸಾರ್ವಜನಿಕರು ಉಪಯೋಗಿಸುವ ಸ್ಥಳಗಳಲ್ಲಿ ಧರಣಿ ಹೂಡುವುದು ಮುಂತಾದ ವಿಧಾನಗಳಿಂದ ತಮ್ಮ ಹಕ್ಕುಗಳನ್ನು ಪಡೆಯಲು

ಹೋರಾಟ ನಡೆಸಿದರು. ಕೆಲವು ರಾಜಕಾರಣಿಗಳು ನೈತಿಕ ದೃಷ್ಟಿಯಿದಲ್ಲದಿದ್ದರೂ ಕರಿಯರ ಮತಗಳನ್ನು ಪಡೆದು ರಾಜಕೀಯದಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳುವ ಸಲುವಾಗಿ ಈ ಆಂದೋಳನವನ್ನು ಬೆಂಬಲಿಸಿದರು. ಅಧ್ಯಕ್ಷ ಕೆನಡಿ ಮತ್ತು ಅಟಾರ್ನಿ ಜನರಲ್ ಆಗಿದ್ದ ಅವನ ತಮ್ಮ ರಾಬರ್ಟ್ ಕೆನಡಿ ರಾಜ್ಯಾಂಗವನ್ನು ಎತ್ತಿಹಿಡಿಯುವ ಸಲುವಾಗಿ ಹಾಗೂ ನೀತಿ ನಿಯಮ ಪಾಲನೆಯ ಸಲುವಾಗಿ ಫೆಡರಲ್ ಸರ್ಕಾರದ ಅಧಿಕಾರ ಚಲಾಯಿಸಲು ಹಿಂಜರಿಯಲಿಲ್ಲ. ಫೆಡರಲ್ ನ್ಯಾಯಾಲಯಗಳು ಶಾಲಾಕಾಲೇಜುಗಳನ್ನು ಅನುಕಲನಗೊಳಿಸಲು ಆಜ್ಞೆ ಮಾಡಿದವು. ಅನೇಕ ಬಾರಿ ಫೆಡರಲ್ ಸೈನ್ಯವನ್ನು ಕಳುಹಿಸಿ ಆಜ್ಞೆಯನ್ನು ಉಲ್ಲಂಘನೆ ಮಾಡುವುದನ್ನು ಹತ್ತಿಕ್ಕುವ ಕ್ರಮ ಕೈಗೊಂಡರು.

ಅಧ್ಯಕ್ಷ ಕೆನಡಿ ಎರಡು ಬಾರಿ ಪೌರಹಕ್ಕುಗಳ ಮಸೂದೆಯನ್ನು ನ್ಯಾಯವಿಧಾಯಕ ಸಭೆಯಲ್ಲಿ ಮಂಡಿಸಿದರೂ ಫಲಕಾರಿಯಾಗಲಿಲ್ಲ. ಅವನ ಕೊಲೆಯಾದ ಮೇಲೆ ಅಧಿಕಾರ ವಹಿಸಿಕೊಂಡ ಜಾನ್ಸನ್ ಕೆನಡಿಯ ಸ್ಮಾರಕವಾಗಿ ಪೌರ ಹಕ್ಕುಗಳ ಕಾಯಿದೆಯನ್ನು ಅಂಗೀಕರಿಸುವಂತೆ ಮಾಡಿದನು. ಅಷ್ಟರಲ್ಲಿ ಪೌರಹಕ್ಕುಗಳ ಆಂದೋಳನ ಪರಾಕಾಷ್ಠೆಯನ್ನು ಮುಟ್ಟಿತ್ತು. ೧೯೬೩ರ ಆಗಸ್ಟ್ ತಿಂಗಳಲ್ಲಿ ರಾಜಧಾನಿ ವಾಷಿಂಗ್‌ಟನ್ ಸೇರಲು ರಾಷ್ಟ್ರದ ನಾನಾ ಕಡೆಗಳಿಂದ ಬಂದ ಪೌರ ಹಕ್ಕುಗಳಿಗಾಗಿ ಹೋರಾಟ ನಡೆಸಿದ್ದ ಕರಿಯರು ಮತ್ತು ಸಹಾನುಭೂತಿಯುಳ್ಳ ಬಿಳಿಯರು ಸೇರಿ ಬೃಹತ್ ಪಾದಯಾತ್ರೆಯನ್ನು ಮಾಡಿ ಲಿಂಕನ್ ಸ್ಮಾರಕದ ಮುಂದಿನ ಜಾಗದಲ್ಲಿ ಒಟ್ಟುಗೂಡಿದರು. ಸುಮಾರು ೨೦೦ ಸಾವಿರ ಜನರು ಸೇರಿದ್ದ ಈ ಸಭೆಯನ್ನು ಉದ್ದೇಶಿಸಿ ಮಾರ್ಟಿನ್ ಲೂಥರ್ ಕಿಂಗ್ 'ನಾನೊಂದು ಕನಸು ಕಂಡೆ' ಎಂದು ಪ್ರಾರಂಭವಾಗುವ ಲೋಕಪ್ರಸಿದ್ಧವಾದ ಭಾಷಣ ಮಾಡಿದನು.

೧೯೬೩ರಲ್ಲಿ ಜಾರಿಗೆ ಬಂದ ಕಾಯಿದೆಗಳು: ರಾಷ್ಟ್ರದ ಶಿಕ್ಷಣ ಗುಣಮಟ್ಟವನ್ನು ಏರಿಸಲು ತಂದ ಕಾಯಿದೆಯಿಂದಾಗಿ ಎರಡು ಬಿಲಿಯನ್ ಡಾಲರ್‌ಗಳನ್ನು ವೃತ್ತಿಶಿಕ್ಷಣಕ್ಕಾಗಿ ಮೀಸಲಿಡಲಾಯಿತು. ಇನ್ನಷ್ಟು ಹಣವನ್ನು ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳಿಗೆ ಸುಲಭಕಂತಿನ ಸಾಲ, ವಿದ್ಯಾರ್ಥಿ ವೇತನ ಮುಂತಾದ ಸೌಲಭ್ಯ ಒದಗಿಸಲು ಮೀಸಲಾಗಿಟ್ಟರು. ಈ ಕ್ಷೇತ್ರದಲ್ಲಿ ಕೈಗೊಂಡ ಅತಿಮುಖ್ಯವಾದ ಕ್ರಮವೆಂದರೆ, ಹೆಚ್ಚುತ್ತ ಹೋಗುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಶಾಲಾ ಕಾಲೇಜುಗಳನ್ನು ವಿಸ್ತರಿಸಲು ಕಟ್ಟಡಗಳ ನಿರ್ಮಾಣಕ್ಕಾಗಿ ಒಂದು ಬಿಲಿಯನ್ ಡಾಲರ್‌ಗಿಂತಲೂ ಹೆಚ್ಚಿನ ಹಣವನ್ನು ಸಾರ್ವಜನಿಕ, ಖಾಸಗಿ ಮತ್ತು ಮತೀಯ ವಿದ್ಯಾಸಂಸ್ಥೆಗಳಿಗೆ ವಿತರಣೆ ಮಾಡಿದರು.

ಕೆನಡಿ ಮಂಡಿಸಿದ ತೆರಿಗೆಯನ್ನು ಕಡಿಮೆ ಮಾಡುವ ಮಸೂದೆಯನ್ನು ಕಾಂಗ್ರೆಸ್ ಮುಂದೆ ಹಾಕುತ್ತಾ ಹೋಯಿತು. ಅವನು ಮಂಡಿಸಿದ ಸಮಾಜ ಭದ್ರತಾ ಯೋಜನೆಯ ಅಂಗವಾದ ವೃದ್ಧಾಪ್ಯದಲ್ಲಿ ಆಸ್ಪತ್ರೆಯ ಶುಶ್ರೂಷೆ ಸೌಲಭ್ಯ ಒದಗಿಸುವ ಮಸೂದೆ,

ಆರ್ಥಿಕ ದುಸ್ಥಿತಿಯಲ್ಲಿರುವ ಪ್ರದೇಶಗಳಿಗೆ ಧನಸಹಾಯ ವಿಸ್ತರಿಸುವುದು, ನಗರ ಸಾರಿಗೆ ವ್ಯವಸ್ಥೆಯನ್ನು ವಿಸ್ತರಿಸುವುದು – ಇವೆಲ್ಲವನ್ನೂ ಸಂಪ್ರದಾಯಸ್ಥ ಮತ್ತು ಪ್ರತಿಗಾಮಿ ರಿಪಬ್ಲಿಕನ್ನರು ಮತ್ತು ದಕ್ಷಿಣದ ಸಂಪ್ರದಾಯಸ್ಥ ಡೆಮೊಕ್ರಾಟಿಕ್ ಪ್ರತಿನಿಧಿಗಳು ಸೇರಿಕೊಂಡು ರಚಿಸಿದ ಘಟಕ ಸೋಲಿಸಿತು.

ಶಾಂತಿ ಸೇನೆ (Peace Corps)

ಯುದ್ಧ, ರಕ್ತಪಾತ, ಹಸಿವು, ರೋಗರುಜಿನಗಳನ್ನು ಕಂಡು ಅಮೆರಿಕನ್ನರು ರೋಸಿಹೋಗಿದ್ದರು. ಈ ಪಿಡುಗುಗಳನ್ನು ತೊಡೆದು ಹಾಕಲು ತಮ್ಮ ಕಾಲ, ಪರಿಣತಿ ಮತ್ತು ಸೇವೆ ಮಾಡಲು ಸಿದ್ಧರಾಗಿರುವ ಸಹೃದಯರಿಂದ ಕೂಡಿದ ಸಂಸ್ಥೆ 'ಶಾಂತಿ ಸೇನೆ'. ಈ ಯೋಜನೆ ಪ್ರಾರಂಭವಾಗಿದ್ದು ೧೯೬೧ರ ಮಾರ್ಚ್ ತಿಂಗಳಲ್ಲಿ. ಸಾರ್ಜೆಂಟ್ ಶ್ರೈವರ್ ಎಂಬುವನು ಈ ಯೋಜನೆಯ ಪ್ರಮುಖ ಅಧಿಕಾರಿಯಾಗಿದ್ದನು. ಆಫ್ರಿಕ, ಏಷ್ಯಾ ಮತ್ತು ಲ್ಯಾಟಿನ್ ಅಮೆರಿಕ ಖಂಡಗಳ ಅಭಿವೃದ್ಧಿಗೊಳ್ಳುತ್ತಿರುವ ರಾಷ್ಟ್ರಗಳಿಗೆ ಶಿಕ್ಷಣ, ಯಂತ್ರವಿದ್ಯಾ ಪರಿಣತಿ ಮುಂತಾದ ಕ್ಷೇತ್ರಗಳಲ್ಲಿ ನಿಷ್ಣಾತರಾದ ಅಮೆರಿಕನ್ನರನ್ನು ಕಳುಹಿಸಿ ಆ ರಾಷ್ಟ್ರಗಳ ಅಭಿವೃದ್ಧಿಯಲ್ಲಿ ಸಹಾಯ ಮಾಡುವುದು ಶಾಂತಿಸೇನೆಯ ಮುಖ್ಯ ಉದ್ದೇಶವಾಗಿತ್ತು. ಈ ಸೇನೆಗೆ ಸೇರಿದವರು ಬಹುತೇಕ ಆದರ್ಶವಾದಿ ಯುವಕರು. ಇವರು ತಮ್ಮ ವಿಶಿಷ್ಟ ಪರಿಜ್ಞಾನದಿಂದ ಆಯಾ ದೇಶಗಳ ಕ್ಷೇತ್ರಗಳಲ್ಲಿ ಸೂಕ್ತ ಸಲಹೆ, ತರಬೇತಿ ಮತ್ತು ನಿರ್ದೇಶನಗಳ ಮೂಲಕ ಅಭಿವೃದ್ಧಿಗೆ ಸಹಾಯ ಮಾಡುವುದು ಇವರ ಜವಾಬ್ದಾರಿಯಾಗಿತ್ತು. ಈ ಯೋಜನೆ ಪ್ರಾರಂಭವಾಗಿ ಒಂದು ವರ್ಷದ ನಂತರ ೫ ಸಾವಿರ ಕಾರ್ಯಕರ್ತರು ಸ್ವಯಂಪ್ರೇರಣೆಯಿಂದ ಸೇರಿಕೊಂಡು ೪೦ ದೇಶಗಳಲ್ಲಿ ಕಾರ್ಯ ನಿರತರಾಗಿದ್ದರು. ಇದು ಮುಖ್ಯವಾಗಿ ಸೇವಾಸಂಸ್ಥೆಯಾದುದರಿಂದ ಕಾರ್ಯಕರ್ತರಿಗೆ ಸಿಗುತ್ತಿದ್ದ ಹಣ ತೀರ ಕಡಿಮೆ.

ಲಿಂಡನ್ ಬೇಯ್ಸ್ ಜಾನ್‌ಸನ್ ಅಧ್ಯಕ್ಷತೆ

ವರ್ಷ: ೧೯೬೩

ತಿಂಗಳು: ನವೆಂಬರ್

ತಾರೀಖು: ೨೨

ಮೇಲ್ಕಾಣಿಸಿದ ವರ್ಷ, ತಿಂಗಳು, ತಾರೀಖುಗಳು ಇಡೀ ಅಮೆರಿಕವನ್ನು ದುಃಖದ ಕಡಲಲ್ಲಿ ಮುಳುಗಿಸಿದ ಕಾಲವನ್ನು ಸೂಚಿಸುತ್ತವೆ. ಇವು ಲಿಂಡನ್ ಜಾನ್‌ಸನ್ ಜೀವನದ ದಿಕ್ಕನ್ನು ಬದಲಾಯಿಸಿದವು. ಅಧ್ಯಕ್ಷ ಕೆನಡಿ ಹಂತಕನ ಗುಂಡಿನೇಟಿಗೆ ಬಲಿಯಾಗಿ ಇಡೀ ರಾಷ್ಟ್ರ ಶೋಕತಪ್ತವಾಗಿ, ಕೆಲಸ ಕಾರ್ಯಗಳೆಲ್ಲ ನಿಂತು ಕಣ್ಣೀರು ಕರೆಯಿತು. ಜಾನ್‌ಸನ್‌ನನ್ನು ಕೂಡಲೆ ಕರೆತಂದು ಅಧ್ಯಕ್ಷನನ್ನಾಗಿ ಮಾಡಿದ ವಿಮಾನದೊಳಗೆ ಖಿನ್ನತೆ ಎದ್ದು ಕಾಣುತ್ತಿದ್ದಂತೆ, ತನ್ನ ಬಲಗೈಯನ್ನು ಎತ್ತಿ ಹಿಡಿದು ಅಮೆರಿಕದ ೩೬ನೆಯ ಅಧ್ಯಕ್ಷನಾಗಲು

ಪ್ರಮಾಣವಚನ ಸ್ವೀಕರಿಸಿದನು. ಆ ಸಂದರ್ಭ ಸಂತೋಷಕರವಾಗಿರಬೇಕಾಗಿದ್ದುದು ಅತ್ಯಂತ ಶೋಕಪೂರ್ಣವಾಗಿತ್ತು. ಲಿಂಡನ್ ಜಾನ್‌ಸನ್ ೧೯೦೮ರ ಆಗಸ್ಟ್ ತಿಂಗಳಲ್ಲಿ ಟೆಕ್ಸಾಸ್ ರಾಜ್ಯದ ಸ್ಟೋನ್‌ವಾಲ್ ವಾಸಿಗಳಾದ ಈಲೈ ಮತ್ತು ರೆಬೆಕ್ಕಾ ಜಾನ್‌ಸನ್ ದಂಪತಿಗಳಿಗೆ ಜನಿಸಿದನು. ೧೯೩೦ರಲ್ಲಿ ನೈರುತ್ಯ ಟೆಕ್ಸಾಸ್ ರಾಜ್ಯದ ಉಪಾಧ್ಯಾಯರ ಕಾಲೇಜಿನಲ್ಲಿ ಪದವೀಧರನಾದನು. ನಂತರ ಜಾರ್ಜ್ ಟೌನ್ ವಿಶ್ವವಿದ್ಯಾನಿಲಯದ ಕಾನೂನು ಕಾಲೇಜಿಗೆ ಸೇರಿಕೊಂಡನು. ೧೯೩೧ರಲ್ಲಿ ಅಧ್ಯಾಪಕನಾಗಿ 'ಸಾರ್ವಜನಿಕ ಭಾಷಣ' ಎಂಬ ವಿಷಯವನ್ನು ಬೋಧಿಸಿದನು. ೧೯೩೨-೩೫ರ ಅವಧಿಯಲ್ಲಿ ನ್ಯಾಯವಿಧಾಯಕ ಸಭೆಯ ಸದಸ್ಯನಾಗಿ ಕ್ಲೇಬರ್ಗ್ ಎಂಬುವನ ಕಾರ್ಯದರ್ಶಿಯಾಗಿ ಕೆಲಸ ಮಾಡಿದನು. ೧೯೩೭ರಲ್ಲಿ ಸಂಯುಕ್ತ ಸಂಸ್ತಾನಗಳ ಪ್ರತಿನಿಧಿಯೊಬ್ಬನ ನಿಧನದಿಂದ ತೆರವಾದ ಸ್ಥಾನಕ್ಕೆ ಇವನು ಆಯ್ಕೆಯಾದನು. ೧೯೩೮ರಲ್ಲಿ ಪೂರ್ಣಾವಧಿ ಪ್ರತಿನಿಧಿಯಾಗಿ ನಾಲ್ಕು ಬಾರಿ ಚುನಾಯಿತನಾದನು. ೧೯೪೧-೪೨ರಲ್ಲಿ ನೌಕಾಪಡೆ ಸೇರಿ ದಕ್ಷಿಣ ಶಾಂತಿಸಾಗರದ ನೌಕಾಸಮರದಲ್ಲಿ ಭಾಗವಹಿಸಿ, ಧೈರ್ಯ ಸಾಹಸಕ್ಕಾಗಿ 'ಬೆಳ್ಳಿ ನಕ್ಷತ್ರ'ವನ್ನು (silver star) ಗಳಿಸಿದನು. ೧೯೪೮ರಲ್ಲಿ ಸಂಯುಕ್ತ ಸಂಸ್ಥಾನಗಳ ಸೆನೆಟರ್ ಆಗಿ ಆಯ್ಕೆಗೊಂಡನು. ನಾಲ್ಕು ವರ್ಷಗಳ ನಂತರ ಆ ಸ್ಥಾನಕ್ಕೆ ಪುನಃ ಚುನಾಯಿತನಾಗಿ, ೧೯೬೦ರ ಡೆಮೊಕ್ರಾಟಿಕ್ ಪಕ್ಷದ ನಾಮಕರಣ ಸಮಾವೇಶದಲ್ಲಿ (Nomination Convention) ಅಧ್ಯಕ್ಷ ಸ್ಥಾನಕ್ಕೆ ನಾಮಕರಣಗೊಳ್ಳಲು ಸಾಕಷ್ಟು ಬೆಂಬಲ ಪಡೆದಿದ್ದನು.

೧೯೬೪ರ ಚುನಾವಣೆ

ಆ ವರ್ಷ ಸ್ಯಾನ್ ಫ್ರಾನ್ಸಿಸ್ಕೊ ನಗರದಲ್ಲಿ ಸೇರಿದ ನಾಮಕರಣ ಸಮಾವೇಶದಲ್ಲಿ ರಿಪಬ್ಲಿಕನ್ ಪಕ್ಷ ತೀವ್ರಗಾಮಿ ಸಂಪ್ರದಾಯಸ್ಥರ ನಿಯಂತ್ರಣಕ್ಕೆ ಒಳಪಟ್ಟಿತ್ತು. ಆದ್ದರಿಂದ ರಿಪಬ್ಲಿಕನ್ ಸದಸ್ಯರು ಸಂಪ್ರದಾಯಸ್ಥ ಅಭ್ಯರ್ಥಿ ಬ್ಯಾರಿ ಗೋಲ್ಡ್‌ವಾಟರ್‌ನನ್ನು (ಅರಿಜ಼ೋನ ರಾಜ್ಯದವನು) ಅಧ್ಯಕ್ಷ ಸ್ಥಾನಕ್ಕೆ ನಾಮಕರಣ ಮಾಡಿದರು. ಉಪಾಧ್ಯಕ್ಷ ಸ್ಥಾನಕ್ಕೆ ಸದಸ್ಯರಿಗೆ ಹೆಚ್ಚಿನ ಪರಿಚಯವಿಲ್ಲದ ನ್ಯೂಯಾರ್ಕಿನ ಸಂಪ್ರದಾಯಸ್ಥ ವಿಲಿಯಂ ಮಿಲ್ಲರ್‌ನನ್ನು ನಾಮಕರಣ ಮಾಡಿದರು. ಡೆಮೊಕ್ರಾಟಿಕ್ ಪಕ್ಷ ಒಮ್ಮತದಿಂದ ಜಾನ್‌ಸನ್‌ನನ್ನು ಅಧ್ಯಕ್ಷ ಸ್ಥಾನಕ್ಕೆ ನಾಮಕರಣ ಮಾಡಿತು. ಜಾನ್‌ಸನ್ ಉಪಾಧ್ಯಕ್ಷ ಸ್ಥಾನಕ್ಕೆ ಮಿನೆಸೋಟಾ ಪ್ರತಿನಿಧಿ, ಉದಾರ ನೀತಿಯ ಹ್ಯೂಬರ್ಟ್ ಹಂಫ್ರಿಯನ್ನು ಆಯ್ಕೆ ಮಾಡಿಕೊಂಡನು. ಗೋಲ್ಡ್‌ವಾಟರ್‌ನ ಚುನಾವಣಾ ಪ್ರಚಾರ ವ್ಯವಸ್ಥಿತವಾಗಿರಲಿಲ್ಲ. ಮೇಲಾಗಿ ಅವನು ತನ್ನ ಭಾಷಣಗಳಲ್ಲಿ ವಿವೇಚನೆಯಿಲ್ಲದ ಹೇಳಿಕೆಗಳನ್ನು ಕೊಡುವುದು, ಅಸ್ಪಷ್ಟವಾಗಿ ಬಡಬಡಿಸುವುದು ಮತ್ತು ವಿಯಟ್‌ನಾಮ್ ಯುದ್ಧವನ್ನು ವ್ಯಾಪಕವಾಗಿ ಮಾಡಿ ತ್ವರಿತಗತಿಯಲ್ಲಿ ಸೈನ್ಯ ಕಾರ್ಯಾಚರಣೆ ನಡೆಸುವುದು – ಇವುಗಳನ್ನು ನಡೆಸಿಕೊಂಡು ಬಂದನು. ಈ ಅಭಿಪ್ರಾಯಗಳಿಗೆ ವಿರುದ್ಧವಾಗಿ ಜಾನ್‌ಸನ್‌ನು ವಿಯಟ್‌ನಾಮ್

ಯುದ್ಧವನ್ನು ಮಿತಿಗೊಳಿಸುವುದಾಗಿ ಭರವಸೆ ನೀಡಿ, ಮತದಾರರನ್ನು ಭೇಟಿ ಮಾಡಿ ಅವರೊಡನೆ ವಿಚಾರ ವಿನಿಮಯ ಮಾಡಿಕೊಳ್ಳಲು ದೇಶದ ನಾನಾಕಡೆಗಳಿಗೆ ಪ್ರಯಾಣಿಸಿ ಮತದಾರರಿಗೆ ಅಗತ್ಯವಾದ ವಿಷಯಗಳ ಬಗ್ಗೆ ತನ್ನ ಧೋರಣೆಯನ್ನು ಸ್ಪಷ್ಟಪಡಿಸುತ್ತಿದ್ದನು.

ಈ ಚುನಾವಣೆಯಲ್ಲಿ ಗೋಲ್ಡ್‌ವಾಟರ್ ಭಾರಿ ಸೋಲನ್ನು ಅನುಭವಿಸಿದನು. ಅರಿಜ಼ೋನ ಮತ್ತು ಐದು ದಕ್ಷಿಣ ರಾಜ್ಯಗಳಲ್ಲಿ ಮಾತ್ರ ಅವನು ಬಹುಮತ ಪಡೆದಿದ್ದು. ಮಿಕ್ಕ ಎಲ್ಲಾ ರಾಜ್ಯಗಳಲ್ಲಿ ಜಾನ್‌ಸನ್ ಬಹುಮತ ಗಳಿಸಿ ಅತ್ಯಂತ ಹೆಚ್ಚಿನ ಅಂತರದಿಂದ – ಸಾರ್ವಜನಿಕರ ಮತಗಳಲ್ಲಿ ಜಾನ್‌ಸನ್ ೪೨ ಮಿಲಿಯನ್ ಮತಗಳಷ್ಟು, ಗೋಲ್ಡ್‌ವಾಟರ್ ೨೬ ಮಿಲಿಯನ್ ಮತಗಳಷ್ಟು – ಗೆದ್ದನು. ಜಾನ್‌ಸನ್‌ನಂತೆ ಹಲವಾರು ಡೆಮೊಕ್ರಾಟಿಕ್ ಸದಸ್ಯರು ಗೆದ್ದು ಕಾಂಗ್ರೆಸ್ಸಿನಲ್ಲಿ ಡೆಮೊಕ್ರಾಟರ ಸಂಖ್ಯೆ ಹೆಚ್ಚಿತು.

ಮಹಾಸಮಾಜ (The Great Society)

ಚುನಾವಣೆಯಲ್ಲಿ ಜಾನ್‌ಸನ್ ಸಾಧಿಸಿದ ಅದ್ಭುತ ವಿಜಯ ಅವನು ಅನುಷ್ಠಾನಕ್ಕೆ ತಂದಿದ್ದ ಕಾರ್ಯಕ್ರಮಗಳಿಗೆ ಜನರ ಒಪ್ಪಿಗೆ ಪಡೆದಂತಾಯಿತು. ಹೆಚ್ಚು ಡೆಮೊಕ್ರಾಟರು ಆಯ್ಕೆಯಾಗಿದ್ದುದರಿಂದ ಕಾಂಗ್ರೆಸ್ ಮತ್ತು ಸೆನೆಟ್ ಎರಡನ್ನೂ ಜಾನ್‌ಸನ್ ನಿಯಂತ್ರಿಸಲು ಸಾಧ್ಯವಾಯಿತು. ಸಂಪ್ರದಾಯಸ್ಥ ರಿಪಬ್ಲಿಕನ್ನರು ಜಾನ್‌ಸನ್ ಧೋರಣೆಗಳನ್ನು ವಿರೋಧಿಸಲು ಸಾಕಷ್ಟು ಬಲಯುತರಾಗಿರಲಿಲ್ಲ. ಆದ್ದರಿಂದ ಮಹಾಸಮಾಜ ರಚನೆಗೆ ಬೇಕಾದ ಮಸೂದೆಗಳನ್ನು ಅಂಗೀಕರಿಸಲು ಅವಕಾಶ ದೊರೆಯಿತು. ಪಕ್ಷ ರಾಜಕೀಯ ದೆಸೆಯಿಂದ ನಿಂತುಹೋಗಿದ್ದ ಶಿಕ್ಷಣ ಅಭಿವೃದ್ಧಿ ಯೋಜನೆಗಳಿಗೆ ಧನಸಹಾಯ ಮಾಡಲು ಸಾಧ್ಯವಾಗುವಂತೆ, ಖಾಸಗಿ ಕಾಲೇಜುಗಳನ್ನು ನಡೆಸುವವರ ಪಟ್ಟಭದ್ರ ಆಸಕ್ತಿಗಳು ತಡೆಯಾಗದಂತೆ, ಸರ್ಕಾರ ಮತ್ತು ಚರ್ಚುಗಳ ಪ್ರತ್ಯೇಕತೆಯ ಪ್ರಶ್ನೆಯನ್ನು ಕಡೆಗಣಿಸಿ, ಶಾಲೆಯಲ್ಲಿ ಎಷ್ಟು ಬಡವಿದ್ಯಾರ್ಥಿಗಳಿದ್ದಾರೆ ಎನ್ನುವ ಆಧಾರದ ಮೇಲೆ ಎಲ್ಲಾ ಶಾಲೆಗಳಿಗೂ ಸರ್ಕಾರ ನ್ಯಾಯಬದ್ಧವಾಗಿ ಧನಸಹಾಯ ನೀಡಲು ೧೯೬೫ರ ಕಾಯಿದೆಯನ್ನು ಅಂಗೀಕರಿಸಲಾಯಿತು.

ವೃದ್ಧಾಪ್ಯದಲ್ಲಿ ಜನರಿಗೆ ಔಷಧೋಪಚಾರ ನಡೆಸುವ ಯೋಜನೆ – ಸಾಮಾಜಿಕ ಭದ್ರತಾ ವ್ಯವಸ್ಥೆ (Social Security System). ಇದನ್ನು ಕಾರ್ಯಗತಗೊಳಿಸುವುದನ್ನು ಅಮೆರಿಕದ ವೈದ್ಯಕೀಯ ಸಂಸ್ಥೆ (American Medical Association) ಬಹಳ ಸಮಯ ತಡೆಹಿಡಿದಿತ್ತು. ಎಫ್.ಡಿ.ಆರ್. ಹೊಸ ಹಂಚಿಕೆಯ ಕಾಲದಿಂದಲೂ ವಯೋವೃದ್ಧರ ಆರ್ಥಿಕ ಸ್ಥಿತಿ-ಗತಿಗಳು ಸರ್ಕಾರ ಎದುರಿಸಬೇಕಾದ ದೊಡ್ಡ ಸಮಸ್ಯೆಯಾಗಿತ್ತು. ಜಾನ್‌ಸನ್ ಆಡಳಿತ ಜಾರಿಗೆ ತಂದ ಸಾಮಾಜಿಕ ಭದ್ರತಾ ವ್ಯವಸ್ಥೆ ವಯೋವೃದ್ಧರ ಔಷಧೋಪಚಾರಗಳಿಗೆ ಧನಸಹಾಯ ದೊರಕಿಸಿತು. ಈ ಹಣ ಮುಖ್ಯವಾಗಿ ಆಸ್ಪತ್ರೆಗಳ ಖರ್ಚು ವೆಚ್ಚಗಳು ಮತ್ತು ನರ್ಸಿಂಗ್ ಹೋಂ ವೆಚ್ಚಗಳನ್ನು

ಫೆಡರಲ್ ಸರ್ಕಾರ ಸಾಮಾಜಿಕ ಭದ್ರತಾ ಯೋಜನೆಯ ಮೂಲಕ ಭರಿಸುವ ವ್ಯವಸ್ಥೆ ಮಾಡಿತು.

ಕಡೆಗಣಿಸಲಾಗಿದ್ದ 'ಅಪಲೇಷಿಯನ್ ಪ್ರಾಂತ ಅಭಿವೃದ್ಧಿ ಕಾಯಿದೆ'ಯನ್ನು ೧೯೬೪ ರಲ್ಲಿ ಜಾನ್‌ಸನ್ ಆಡಳಿತ ಜಾರಿಗೆ ತಂದಿತು. ಅದರಿಂದಾಗಿ ಬಡತನ ಹೆಚ್ಚಾಗಿದ್ದ ಅಪ್ಪಲೇಷಿಯನ್ ಪ್ರಾಂತದ (ಪೆನ್ಸಿಲ್‌ವೇನಿಯಾದಿಂದ ಅಲಬಾಮದವರೆಗೆ ಹಬ್ಬಿದ್ದು) ಬೆಳವಣಿಗೆಗೆ ೧.೧ ಬಿಲಿಯನ್ ಡಾಲರ್‌ಗಳನ್ನು ವಿವಿಧ ಯೋಜನೆಗಳನ್ನು ಕಾರ್ಯಗತ ಗೊಳಿಸಲು ಮೀಸಲಾಗಿಟ್ಟಿತ್ತು. ಇದಲ್ಲದೆ ಇನ್ನೂ ಅನೇಕ ಯೋಜನೆಗಳನ್ನು – ಸಾರ್ವಜನಿಕ ಸೌಕರ್ಯಗಳನ್ನು ಹೆಚ್ಚಿಸುವುದು, ಯುವಜನ ಸೇವಾದಳ, ನಿರುದ್ಯೋಗಿಗಳಿಗೆ ಉದ್ಯೋಗ, ಕಸುಬುಗಳನ್ನು ಕಲಿಸುವುದು – ಇವೇ ಮುಂತಾದುವುಗಳನ್ನು ಜಾನ್‌ಸನ್ ಜಾರಿಗೆ ತಂದನು.

ಜಾನ್‌ಸನ್‌ನ ಮಹಾಸಮಾಜದ ಕಲ್ಪನೆಯಲ್ಲಿ ಅತಿಮುಖ್ಯವಾದ ಅಂಶ – ಪೌರಹಕ್ಕು ಗಳ ಕಾಯಿದೆ. ೧೯೬೪ರಲ್ಲಿ ಜಾರಿಗೆ ಬಂದ ಕಾನೂನು ಸಾಕ್ಷರತೆಯ ಪರೀಕ್ಷೆಯನ್ನು ಒಳಗೊಂಡು ಸಂಕೀರ್ಣವಾಗಿದ್ದುದೇ ಅಲ್ಲದೆ ಪರೀಕ್ಷೆ ತೆಗೆದುಕೊಳ್ಳುವುದಕ್ಕೆ ಹೆಚ್ಚು ಹಣ ಕೊಡಬೇಕಾಗಿತ್ತು. ಪೌರಹಕ್ಕುಗಳಿಗಾಗಿ ಆಂದೋಳನ ನಡೆಸಿರುವವರ ಮೇಲೆ ದಕ್ಷಿಣ ರಾಜ್ಯಗಳಲ್ಲಿ ಹಿಂಸಾಚಾರ ಮತ್ತು ಹತ್ಯೆಗಳು ನಡೆದು ೧೯೬೪ರ ಕಾಯಿದೆಯನ್ನು ಸುಧಾರಣೆ ಮಾಡುವ ಅಗತ್ಯವನ್ನು ಜಾನ್‌ಸನ್ ಮನಗಂಡನು. ಸುಧಾರಣೆಗೊಂಡ ೧೯೬೫ರ ಪೌರಹಕ್ಕುಗಳ ಕಾಯಿದೆ ಸಾಕ್ಷರತೆಯ ಪರೀಕ್ಷೆಯನ್ನು ರದ್ದುಗೊಳಿಸಿತು. ಎಲ್ಲ ಕಡೆಗಳಲ್ಲಿ ಕರಿಯರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರುಗಳನ್ನು ನೋಂದಾಣಿಸಬೇಕಾಗಿತ್ತು (voter registration). ಫೆಡರಲ್ ರಿಜಿಸ್ಟ್ರಾರರು ಹೆಸರು ನೋದಾಯಿಸಲು ಸಹಾಯ ಮಾಡಬೇಕಿತ್ತು.

ಮಹಾಸಮಾಜ ಯೋಜನೆಯ ಅಂಗವಾಗಿ ಜಾರಿಗೆ ಬಂದ ಸಮಾಜ ಪುನರ್‌ರಚನೆಯ ಕಾರ್ಯಗಳಲ್ಲಿ ಮುಖ್ಯವಾದುದು ವಸತಿ ಮತ್ತು ನಗರಾಭಿವೃದ್ಧಿಯ ಕಾರ್ಯಗಳು. ಅವನ್ನು ನಿರ್ವಹಿಸಲು ಒಬ್ಬ ಸಚಿವನನ್ನು ನೇಮಿಸಿ ಆಡಳಿತ ಮಂಡಳಿಯ ಇತರ ಸಚಿವರಂತೆ ಎಲ್ಲ ಅಧಿಕಾರವನ್ನು ಕೊಟ್ಟು, ನಗರಾಭಿವೃದ್ಧಿಗೆ ಏಳು ಬಿಲಿಯನ್ ಡಾಲರ್‌ಗಳಷ್ಟು ಹಣ ಮೀಸಲಿಟ್ಟರು. ವಸತಿ ಮತ್ತು ನಗರ ಪುನರ್‌ನಿರ್ಮಾಣ ಇಲಾಖೆ ನಗರ ಸಮಸ್ಯೆ ಗಳನ್ನು ಪರಿಹರಿಸುತ್ತದೆ ಎಂದು ಆಸೆ ಹುಟ್ಟಿಸಿದ್ದರೂ, ಇದು ಸಮಸ್ಯೆಗಳನ್ನು ಹೆಚ್ಚು ಮಾಡಿದವು. ಪುನರ್‌ನಿರ್ಮಾಣ ಯೋಜನೆ ಅಲ್ಪಸಂಖ್ಯಾತ ಸಮುದಾಯಗಳನ್ನು ಒಡೆದು, ಅವುಗಳ ಸ್ಥಾನದಲ್ಲಿ ಹೊಸದಾಗಿ ವ್ಯವಸ್ಥೆಗೊಂಡ ಒಡಾವಣೆಗಳಲ್ಲಿ ಅವುಗಳ ಮರುವಸತಿ ಮಾಡುವ ಯೋಜನೆ ಊಹಿಸಿದಷ್ಟು ಸುಲಭವಾಗಲಿಲ್ಲ. ಅಲ್ಲದೆ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಸಮರ್ಥರಾದ ಅಧಿಕಾರಿಗಳಿರಲಿಲ್ಲ. ಆದ್ದರಿಂದ ಪುನರ್‌ನಿರ್ಮಾಣ ಮತ್ತು ಮರುವಸತಿ ಕಾರ್ಯಗಳು ಯಶಸ್ವಿಯಾಗಲಿಲ್ಲ.

ಉತ್ತರ ಯೂರೋಪಿನ ರಾಷ್ಟ್ರಗಳಿಂದ ವಲಸೆ ಬರುವವರಿಗೆ ಅನುಕೂಲವಾಗುವಂತೆ ರಚಿಸಿದ್ದ ಕಾಯಿದೆಯನ್ನು ತಿದ್ದುಪಡಿ ಮಾಡಿ, ಆ ರಾಷ್ಟ್ರಗಳಿಂದ ಬರುವವರಿಗೆ ಕೊಡುತ್ತಿದ್ದ ಆದ್ಯತೆಯನ್ನು ಕೊನೆಗಾಣಿಸಿ, ಹೊಸ ಕಾಯಿದೆಯನ್ನು ಜಾರಿಗೆ ತಂದಿದ್ದು ಜಾನ್‌ಸನ್ ಆಡಳಿತದ ಚರಿತ್ರಾರ್ಹವಾದ ಸಾಧನೆ. ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಫೆಡರಲ್ ಸರ್ಕಾರ ಕ್ರಮಗಳನ್ನು ಮೊದಲಬಾರಿಗೆ ಕೈಗೊಂಡಿದ್ದು ಜಾನ್‌ಸನ್ ಆಡಳಿತದಲ್ಲಿ. ಫೆಡರಲ್ ಸರ್ಕಾರ ತೆಗೆದುಕೊಂಡ ಕ್ರಮಗಳಲ್ಲಿ ನೀರನ್ನು ಕಲುಷಿತಗೊಳಿಸುವುದರ ವಿರುದ್ಧ ಜಾರಿಗೆ ಬಂದ ನಿಯಂತ್ರಣಗಳು, ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ ಯೋಜನೆ, ಮೋಟಾರು ವಾಹನಗಳ ನಿಶ್ವಾಸದಿಂದ ಉಂಟಾಗುತ್ತಿದ್ದ ಹಾನಿಕರ ಅನಿಲಗಳು ವಾಯುಮಂಡಲವನ್ನು ಕಲುಷಿತಗೊಳಿಸುವುದನ್ನು ಕಡಿಮೆ ಮಾಡುವ ಕ್ರಮಗಳು – ಇವೆಲ್ಲ ಮೊಟ್ಟಮೊದಲ ಬಾರಿಗೆ ಜಾನ್‌ಸನ್ ಆಡಳಿತದಲ್ಲಿ ಜಾರಿಗೆ ಬಂದವು.

೧೯೬೬ರ ಹೊತ್ತಿಗೆ ಅಧ್ಯಕ್ಷ ಜಾನ್‌ಸನ್‌ನ ರಾಷ್ಟ್ರೀಯ ಯೋಜನೆಗಳು ಸ್ಥಗಿತಗೊಳ್ಳುತ್ತ ಬಂದವು. ಮಹಾಸಮಾಜ ರಚನೆಯ ಯೋಜನೆಗಳಿಗೆ ಅಪಾರ ಹಣ ತಗಲುತ್ತಿತ್ತು. ಇದ್ದ ಹಣವೆಲ್ಲ ಹೊರದೇಶಗಳಲ್ಲಿ ಮಿಲಿಟರಿ ಕಾರ್ಯಾಚರಣೆಗೆ ಖರ್ಚಾಗುತ್ತಿತ್ತು. ಮಹಾಸಮಾಜದ ಅದ್ಭುತ ಕಲ್ಪನೆಯನ್ನು ಕಾರ್ಯಗತಗೊಳಿಸಬೇಕಾದರೆ ಅಧಿಕ ಸಂಖ್ಯೆಯ ಅಧಿಕಾರಿಗಳ ಅವಶ್ಯಕತೆ ಇತ್ತು. ಅಧಿಕಾರಶಾಹಿಯನ್ನು ವಿಸ್ತಾರಗೊಳಿಸಲು ಕಾಂಗ್ರೆಸ್ ಮತ್ತು ಸೆನೆಟ್ ಸದಸ್ಯರಿಗೆ ಆಸಕ್ತಿ ಇರಲಿಲ್ಲ. ಮಹಾಸಮಾಜದ ಬೃಹತ್ ಯೋಜನೆ ವ್ಯವಹಾರಿಕವಾಗಿರದೆ ಇದ್ದುದರಿಂದ ಅದನ್ನು ಕಾರ್ಯರೂಪಕ್ಕೆ ತರುವುದು ದುಸ್ಸಾಧ್ಯವಾಗಿತ್ತು. ಕೆಲವು ಕ್ಷೇತ್ರಗಳಲ್ಲಿ ಯಶಸ್ಸುಗಳಿಸಿದರೂ ಸಮಾಜದಾದ್ಯಂತ ಸಮಸ್ಯೆಗಳು ಹೆಚ್ಚುತ್ತಲೇ ಹೋದವು. ಅದರಲ್ಲೂ ಕರಿಯ ಜನಾಂಗದ ಸಮಸ್ಯೆಗಳನ್ನು 'ಮಹಾಸಮಾಜ' ಯೊಜನೆಗಳು ಎದುರಿಸಲಾರದೆ ಹೋದವು. ದೊಡ್ಡ ಪಟ್ಟಣಗಳಲ್ಲಿ ಪದೇ ಪದೇ ಹಿಂಸಾಚಾರ, ಗಲಭೆಗಳು ನಡೆದು ಕರಿಯ ಸಮುದಾಯ ಅಸ್ತವ್ಯಸ್ತವಾಯಿತು. ಅಧ್ಯಕ್ಷನಲ್ಲದೆ ಇಡೀ ರಾಷ್ಟ್ರವೇ ವಿಯಟ್‌ನಾಮ್ ಯುದ್ಧ ವಿಸ್ತಾರಗೊಳ್ಳುತ್ತಿದ್ದ ಭಯಾನಕ ಸನ್ನಿವೇಶದಲ್ಲಿ ಮುಳುಗಿದ್ದವು.

ಅಧ್ಯಕ್ಷ ಜಾನ್‌ಸನ್‌ನ ವಿದೇಶಾಂಗ ನೀತಿ: ಜಾನ್‌ಸನ್‌ನ ಅಧಿಕಾರಾವಧಿಯಲ್ಲಿ ಆಗ್ನೇಯ ಏಷ್ಯಾದಲ್ಲಿ ಜರುಗುತ್ತಿದ್ದ ಘಟನೆಗಳಿಗೆ ಹೆಚ್ಚಿನ ಗಮನ ಕೊಡಬೇಕಾಗಿದ್ದುದು ಅಗತ್ಯವಾಗಿತ್ತು. ಆದಾಗ್ಯೂ ಪ್ರಪಂಚದ ಇತರ ಭಾಗಗಳಲ್ಲಿನ ವಿದ್ಯಮಾನಗಳಿಗೆ ಗಮನ ಹರಿಸಬೇಕಾಗಿದ್ದುದೂ ಮುಖ್ಯವಾಗಿತ್ತು.

ಲ್ಯಾಟಿನ್ ಅಮೆರಿಕದಲ್ಲಿ ಅಧ್ಯಕ್ಷ ಕೆನಡಿ ಅತ್ಯಂತ ಜನಪ್ರಿಯತೆ ಗಳಿಸಿದ್ದನು; ಅವನ ನಂತರ ಬಂದ ಜಾನ್‌ಸನ್ ಆ ಜನಪ್ರಿಯತೆಯನ್ನು ಉಳಿಸಿಕೊಳ್ಳಲಾಗಲಿಲ್ಲ. ಡೊಮಿನಿಕನ್ ರಿಪಬ್ಲಿಕ್‌ನಲ್ಲಿ ಅತ್ಯಂತ ಗಂಭೀರ ಪರಿಸ್ಥಿತಿ ಉಂಟಾಯಿತು. ೧೯೬೨ರಲ್ಲಿ ಅಲ್ಲಿನ

ಅಧ್ಯಕ್ಷನಾಗಿದ್ದ ಹುವಾನ್ ಬಾಕ್ (Juan Boch) ವಾಮಪಂಥೀಯನಾದರೂ ಕಮ್ಯೂನಿಸ್ಟನಾಗಿರಲಿಲ್ಲ. ೧೯೬೩ರಲ್ಲಿ ಸೈನ್ಯ ಬಲಾತ್ಕಾರದಿಂದ ಅವನನ್ನು ಆಡಳಿತದಿಂದ ತೆಗೆದುಹಾಕಿ ಅಧಿಕಾರ ವಹಿಸಿಕೊಂಡಿತು. ಈ ಮಿಲಿಟರಿ ಅಧಿಕಾರಿಗಳ ಒಳಗುಂಪು (junta) ತೀವ್ರ ಬಲಪಂಥೀಯವಾದರೂ ಆಡಳಿತವನ್ನು ಅವ್ಯವಸ್ಥೆಗೊಳಿಸಿ ಅಂತರ್ಯುದ್ಧದ ಪರಿಸ್ಥಿತಿ ಉಂಟಾಯಿತು. ಇದರಲ್ಲಿ ಕಮ್ಯೂನಿಸ್ಟರ ಕೈವಾಡವಿದೆಯೆಂದು ತಿಳಿದು ಬಂದಿದ್ದರಿಂದ ಜಾನ್‌ಸನ್ ಸಂಯುಕ್ತ ಸಂಸ್ಥಾನಗಳ ಸೇನಾಪಡೆಗಳನ್ನು ಡೊಮಿನಿಕನ್ ರಾಷ್ಟ್ರಕ್ಕೆ ರವಾನಿಸಿದನು. ಇದು ಆ ದ್ವೀಪದಲ್ಲಿದ್ದ ಅಮೆರಿಕನ್ನರ ಪ್ರಾಣರಕ್ಷಣೆಗೆ ಅಗತ್ಯವಾಗಿತ್ತು ಎಂದು ತನ್ನ ನಿಲುವನ್ನು ಸಮರ್ಥಿಸಿಕೊಂಡನು. ಪಶ್ಚಿಮ ಗೋಲಾರ್ಧದಲ್ಲಿ ಕ್ಯೂಬಾದ ಜೊತೆಗೆ ಮತ್ತೊಂದು ಕಮ್ಯೂನಿಸ್ಟ್ ಸರ್ಕಾರ ಅಧಿಕಾರಕ್ಕೆ ಬರುವುದನ್ನು ತಪ್ಪಿಸಲು ಈ ಸೈನ್ಯ ಕಾರ್ಯಾಚರಣೆ ಅನಿವಾರ್ಯವಾಗಿತ್ತು ಎಂದು ವಾದಿಸಿದನು. ಆದರೆ ಲ್ಯಾಟಿನ್ ಅಮೆರಿಕದ ಕೆಲವು ಕಾಂಗ್ರೆಸ್ ಸದಸ್ಯರು (liberals) ಸೈನ್ಯ ಕಾರ್ಯಾಚರಣೆಗೆ ಅಗತ್ಯವಾದ ಕಾರಣಗಳನ್ನು ಒದಗಿಸಲಿಲ್ಲವೆಂದು ಜಾನ್‌ಸನ್‌ನನ್ನು ಕಟುವಾಗಿ ಟೀಕಿಸಿದರು.

ಜಾನ್‌ಸನ್ ಅಧಿಕಾರದ ಅವಧಿಯಲ್ಲಿ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಪರಿಸ್ಥಿತಿ ಹದಗೆಟ್ಟು ಯುದ್ಧ ಅನಿವಾರ್ಯವಾಯಿತು. ೧೯೬೭ರಲ್ಲಿ ಇಸ್ರೇಲ್ ಮತ್ತು ಅದರ ಸುತ್ತ ಮುತ್ತಣ ಅರಬರ ದೇಶಗಳ ನಡುವೆ ಯುದ್ಧ ಪ್ರಾರಂಭವಾಯಿತು. ಈಜಿಪ್ಟ್ ಇಸ್ರೇಲ್ ಮೇಲೆ 'ಧರ್ಮಯುದ್ಧ'ವನ್ನು (Holy war) ಸಾರಿತು. ಇದರಲ್ಲಿ ಇಸ್ರೇಲ್ ತನ್ನನ್ನು ರಕ್ಷಿಸಿಕೊಳ್ಳುವ ಶಕ್ತಿ ಪಡೆದಿದ್ದನ್ನು ಸಾಬೀತುಗೊಳಿಸಿತು. ಅರಬ್ ದೇಶಗಳು ದಾಳಿ ಮಾಡುವ ಮುಂಚೆ ಇಸ್ರೇಲ್ ದಾಳಿ ಪ್ರಾರಂಭಿಸಿ ಒಂದು ವಾರದೊಳಗಾಗಿ ಸಿರಿಯಾ ದೇಶದ ಗಡಿಪ್ರದೇಶದ ಮೇಲೆ ಮತ್ತು ಪಶ್ಚಿಮ ಜೋರ್ಡಾನ್ ಹಾಗೂ ಸಿಯನ್ನೈ ದ್ವೀಪಗಳ ಮೇಲೆ ನಿರ್ಣಾಯಕ ನಿಯಂತ್ರಣವನ್ನು ಸಾಧಿಸಿತು. ವಿಶ್ವಸಂಸ್ಥೆಯ ಮಧ್ಯಸ್ಥಿಕೆಯಿಂದ ಯುದ್ಧ ಕೊನೆಗೊಂಡಿತು. ಆದರೆ ಆ ಪ್ರದೇಶದಲ್ಲಿ ಶಾಂತಿ ನೆಲಸುವುದು ದುಸ್ತರವಾಯಿತು. ಯುದ್ಧದಲ್ಲಿ ಸೋತು ಅವಮಾನಗೊಂಡಿದ್ದ ಅರಬ್ ದೇಶಗಳು ಇಸ್ರೇಲ್ ರಾಷ್ಟ್ರದ ಅಸ್ತಿತ್ವವನ್ನು ಅಲ್ಲಗಳೆದು ಅದು ವಶಪಡಿಸಿಕೊಂಡ ಪ್ರದೇಶಗಳನ್ನು ಹಿಂದಿರುಗಿಸಬೇಕೆಂದು ಆಗ್ರಹ ಪಡಿಸಿದವು.

ಜಾನ್‌ಸನ್ ಆಡಳಿತದ ಅವಧಿಯಲ್ಲಿ ಅಮೆರಿಕ-ಯೂರೋಪ್ ರಾಷ್ಟ್ರಗಳ ಸಂಬಂಧಗಳು ಕೆಡುತ್ತ ಹೋದವು. ಫ್ರಾನ್ಸ್‌ನ ಅಧ್ಯಕ್ಷ ಚಾರ್ಲ್ಸ್ ಡಿಗಾಲ್ ಅಮೆರಿಕ ಅಣ್ವಸ್ತ್ರಗಳ ರಹಸ್ಯದ ಬಗ್ಗೆ ಮಾಹಿತಿ ನೀಡಲಿಲ್ಲವೆಂದು ಕೋಪಗೊಂಡು ೧೯೬೭ರ ಹೊತ್ತಿಗೆ 'ನೇಟೋ (NATO) ವ್ಯವಸ್ಥೆಯಿಂದ ಫ್ರೆಂಚ್ ಸೈನ್ಯ ಮತ್ತು ನಾವಿಕ ದಳಗಳನ್ನು ವಾಪಸ್ಸು ಕರೆಸಿಕೊಂಡನು. ಫ್ರಾನ್ಸ್ ಅಣುಬಾಂಬ್ ತಯಾರಿಸುವ ಯೋಜನೆಯ ಮೇಲೆ ಡಿಗಾಲ್ ಆಸಕ್ತಿ ವಹಿಸಿದನು. ಇಂಗ್ಲೆಂಡ್ ಯೂರೋಪಿನ ಸಾರ್ವಜನಿಕ ಮಾರುಕಟ್ಟೆಯನ್ನು

ಪ್ರವೇಶಿಸುವುದನ್ನು ತಡೆಗಟ್ಟುವುದರಲ್ಲಿ ಯಶಸ್ವಿಯಾದನು. ಹಾಗೇನಾದರೂ ಆದರೆ ಇಂಗ್ಲೆಂಡ್ ಪರೋಕ್ಷವಾಗಿ ಯೂರೋಪಿನ ಮೇಲೆ ಅಮೆರಿಕದ ಪ್ರಭಾವ ಹೆಚ್ಚುವಂತೆ ಮಾಡುತ್ತದೆ ಎಂದು ಡಿಗಾಲ್ ನಂಬಿದ್ದನು.

ಈ ಎಲ್ಲ ರಾಜಕೀಯ ಸಂಗತಿಗಳು ಅಮೆರಿಕ-ಯೂರೋಪಿನ ಸಂಬಂಧಗಳನ್ನು ಬಲಹೀನಗೊಳಿಸಿದವು. ಇವುಗಳನ್ನು ಉತ್ತಮಗೊಳಿಸುವ ಪ್ರಯತ್ನ ಮಾಡಲು ಜಾನ್‌ಸನ್ ಆಡಳಿತಕ್ಕೆ ಸಾಧ್ಯವಾಗಲಿಲ್ಲ. ಕಾರಣ, ಅಮೆರಿಕ ವಿಯಟ್‌ನಾಮ್ ಯುದ್ಧದ ಕಳ್ಳುಸುಕಿನಲ್ಲಿ (quick sand) ಸಿಕ್ಕು ಬಿಡಿಸಿಕೊಳ್ಳಲು ಪ್ರಯತ್ನಿಸಿದಂತೆಲ್ಲ ಅದು ಇನ್ನೂ ಆಳಕ್ಕೆ ಇಳಿಯತೊಡಗಿತ್ತು. ಜಾನ್‌ಸನ್‌ನ ಪಕ್ಕೆಗೆ ಚುಚ್ಚಿದ ಈಟಿಯಂತೆ ಈ ಯುದ್ಧ ಅವನ ಆಡಳಿತದ ಅವಧಿಯಲ್ಲಿ ಅವನನ್ನು ಸತತವಾಗಿ ಕಾಡಿತು.

ವಿಯಟ್‌ನಾಮ್ ದುರಂತ

ವಿಯಟ್‌ನಾಮ್ ರಾಜಕೀಯದಲ್ಲಿ ಅಮೆರಿಕ ಪ್ರವೇಶಿಸಿದ್ದು ಎರಡನೆಯ ಜಾಗತಿಕ ಯುದ್ಧ ನಡೆಯುತ್ತಿದ್ದಾಗ. ಆ ಸಮಯದಲ್ಲಿ ಇಂಡೋ-ಚೈನಾ ರಾಷ್ಟ್ರವಾದಿಗಳು ಫ್ರೆಂಚರಿಂದ ಸ್ವಾತಂತ್ರ್ಯ ಪಡೆಯಲು ಆಂದೋಳನ ಪ್ರಾರಂಭಿಸಿದರು. ಈ ಆಂದೋಳನ ಕಮ್ಯೂನಿಸ್ಟರಿಂದ ಪ್ರಚೋದಿತವಾದುದೆಂದು ನಿರ್ಧರಿಸಿ, ಕಮ್ಯೂನಿಸಂ ಹಬ್ಬುವುದನ್ನು ತಡೆಗಟ್ಟಲು ಅಮೆರಿಕ ಮೊದಲು ಸಣ್ಣ ಪ್ರಮಾಣದಲ್ಲಿ ಪ್ರಾರಂಭಿಸಿದ ನೆರವು ನಂತರ ದೀರ್ಘಕಾಲದ ಸೈನ್ಯಾಚರಣೆ, ಅಪಾರ ಧನಸಹಾಯ ಮತ್ತು ನೂರಾರು ಸಾವಿರ ಸೈನಿಕರ ಸಾವು-ನೋವುಗಳಲ್ಲಿ ಪರ್ಯಾವಸಾನವಾಯಿತು. ಎರಡನೆಯ ಜಾಗತಿಕ ಯುದ್ಧದಲ್ಲಿ ಜಪಾನ್, ಫ್ರೆಂಚರ ವಸಾಹತುವಾಗಿದ್ದ ಇಂಡೋ-ಚೈನವನ್ನು ಆಕ್ರಮಣ ಮಾಡಿ ಫ್ರೆಂಚರು ವಸಾಹತುವನ್ನು ಬಿಟ್ಟುಹೋಗುವಂತೆ ಮಾಡಿದರು. ಯುದ್ಧಾನಂತರ ಫ್ರಾನ್ಸ್ ತನ್ನ ವಸಾಹತುವನ್ನು ಮರಳಿ ಪಡೆದು ರಾಜ್ಯಭಾರ ನಡೆಸುವ ಪ್ರಯತ್ನ ಮಾಡಿತು. ಇಂಡೋ-ಚೈನಾದ ವಸಾಹತುವಿನಲ್ಲಿ ವಿಯಟ್‌ನಾಮ್, ಲಾವೋಸ್ ಮತ್ತು ಕ್ಯಾಂಬೋಡಿಯಾ ರಾಷ್ಟ್ರಗಳು ಸೇರಿದ್ದವು. ಇವೆಲ್ಲವೂ ಸ್ವಾತಂತ್ರ್ಯ ಪಡೆಯಲು ನಿರ್ಧರಿಸಿದ್ದವು. ವಿಯಟ್‌ನಾಮ್ ನಾಯಕ ಹೋಚಿ ಮಿನ್ ಸ್ಥಾಪಿಸಿದ ಕಮ್ಯೂನಿಸ್ಟ್ ಪಕ್ಷ 'ವಿಯಟ್‌ಮಿನ್ಹ್'. ಇದು ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿತ್ತು. ಇತರ ರಾಷ್ಟ್ರೀಯ ಪಕ್ಷಗಳು ವಿಯಟ್‌ಮಿನ್ಹ್ ಜೊತೆಗೂಡಿದವು. ಹೋಚಿ ಮಿನ್ 'ವಿಯಟ್‌ನಾಮ್ ಪ್ರಜಾಪ್ರಭುತ್ವದ ಗಣರಾಜ್ಯ' (Democratic Republik of Vietnam) ಸ್ಥಾಪನೆ ಮಾಡಿರುವುದಾಗಿ ಘೋಷಿಸಿದನು. ಫ್ರಾನ್ಸ್ ಈ ಗಣರಾಜ್ಯವನ್ನು ಫ್ರೆಂಚ್ ಒಕ್ಕೂಟದ ಒಂದು ಸ್ವತಂತ್ರ ರಾಷ್ಟ್ರವೆಂದು ಅನುಮೋದಿಸಿತು.

ಕಾಲಕ್ರಮದಲ್ಲಿ ಫ್ರಾನ್ಸ್ ಮತ್ತು ವಿಯಟ್‌ನಾಮ್‌ಗಳ ನಡುವೆ ಭಿನ್ನಾಭಿಪ್ರಾಯಗಳು ಮತ್ತು ಪರಸ್ಪರ ತಪ್ಪು ತಿಳುವಳಿಕೆಗಳಿಂದಾಗಿ೧೯೪೬ರಲ್ಲಿ ಯುದ್ಧ ಆರಂಭವಾಯಿತು.

೧೯೪೯ರಲ್ಲಿ ಫ್ರಾನ್ಸ್ ವಿಯಟ್‌ನಾಮ್‌ನ ಮಾಜಿ ಚಕ್ರವರ್ತಿಯಾಗಿದ್ದ ಬಾವೊ ಡೈನನ್ನು (Bao Dei) ಬೆಂಬಲಿಸಿ ಅವನು ವಿಯಟ್‌ನಾಮ್ ರಾಜ್ಯವನ್ನು ಸ್ಥಾಪಿಸಿ, ಸೈಗಾನ್ ನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಳ್ಳುವಂತೆ ಪ್ರೋತ್ಸಾಹಿಸಿದರು. ೧೯೫೦ರಲ್ಲಿ ಅಮೆರಿಕ ಬಾವೊ ಡೈ ಸ್ಥಾಪಿಸಿದ ರಾಜ್ಯವನ್ನು ಅಂಗೀಕರಿಸಿ ಅವನಿಗೆ ಸಲಹೆ ನೀಡಲು ಸೈನ್ಯಾಧಿಕಾರಿಗಳ ಸಮಿತಿಯನ್ನು ಕಳುಹಿಸಿತು. ಅದೇ ವರ್ಷದ ಕೊನೆಯಲ್ಲಿ ಅಮೆರಿಕ ಬಾವೊ ಡೈ ಸರ್ಕಾರದೊಡನೆ ಪರಸ್ಪರ ರಕ್ಷಣಾ ಒಪ್ಪಂದವನ್ನು ಮಾಡಿಕೊಂಡು, ಸ್ವಲ್ಪ ಕಾಲಾನಂತರ ಆರ್ಥಿಕ ನೆರವು ನೀಡಲು ಭರವಸೆ ನೀಡಿತು. ೧೯೫೪ರಲ್ಲಿ ಫ್ರಾನ್ಸ್ ವಿಯಟ್‌ನಾಮ್ ಸೈನ್ಯವನ್ನು ಡೀನ್ ಬೀನ್‌ಫೂ ಎಂಬಲ್ಲಿ ನಿರ್ಣಾಯಕ ಯುದ್ಧದಂತೆ ಎದುರಿಸಿತು. ಅಧ್ಯಕ್ಷ ಐಸೆನ್‌ಹಾವರ್ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಕೊಂಡಿದ್ದ ಫ್ರೆಂಚ್ ಸೈನಿಕರ ನೆರವಿಗೆ ಅಮೆರಿಕದ ವಾಯುಪಡೆಯನ್ನು ಕಳುಹಿಸಿ ವಿಯಟ್‌ನಾಮ್ ಮೇಲೆ ಬಾಂಬ್ ದಾಳಿ ನಡೆಸಲು ನಿರ್ಧರಿಸಿದ್ದನು. ಆದರೆ ಅವನ ನಿರ್ಧಾರವನ್ನು ಅವನ ಪಕ್ಷದ ನಾಯಕರು ಒಪ್ಪಲಿಲ್ಲ. ಅಮೆರಿಕ ಮಿತ್ರರಾಷ್ಟ್ರ ಇಂಗ್ಲೆಂಡ್ ಕೂಡ ಐಸೆನ್‌ಹಾವರ್‌ನ ನಿರ್ಧಾರವನ್ನು ನಿರಾಕರಿಸಿತು.

ಡೀನ್ ಬೀನ್‌ಫೂ ಯುದ್ಧ ಇಂಡೋ-ಚೈನಾದಲ್ಲಿ ಫ್ರಾನ್ಸ್‌ನ ಆಡಳಿತವನ್ನು ಕೊನೆಗೊಳಿಸಿತು. ಫ್ರಾನ್ಸ್‌ನ ಪತನಾನಂತರ ೧೯೫೪ರಲ್ಲಿ ಪಶ್ಚಿಮ ಮಿತ್ರರಾಷ್ಟ್ರಗಳು (western allies) ಜಿನೀವಾದಲ್ಲಿ ಸಭೆ ಸೇರಿ, ಇಂಡೋ-ಚೈನಾದ ಭವಿಷ್ಯವನ್ನು ನಿರ್ಧರಿಸಲು ರಷ್ಯಾ, ಇಂಡೋ-ಚೈನಾ ರಾಷ್ಟ್ರಗಳು ಮತ್ತು ಕಮ್ಯೂನಿಸ್ಟ್ ಚೈನಾಗಳೊಡನೆ ವಿಚಾರ ವಿನಿಮಯ ಪ್ರಾರಂಭಿಸಿದವು. ಈ ಸಭೆಯಲ್ಲಿ ವಿಯಟ್‌ನಾಮ್ ರಾಜ್ಯವನ್ನು ಉತ್ತರ ಮತ್ತು ದಕ್ಷಿಣ ವಿಯಟ್‌ನಾಮ್‌ಗಳಾಗಿ ವಿಭಜನೆ ಮಾಡಲು ನಿರ್ಣಯ ಮಾಡಿದರು. ಇದು ತಾತ್ಕಾಲಿಕ ವ್ಯವಸ್ಥೆಯಾಗಿತ್ತು; ಚುನಾವಣೆ ನಡೆಸಲು ಪರಿಸ್ಥಿತಿ ಅನುಕೂಲಕರವಾಗುವವರೆಗೆ ಮಾತ್ರ. ಚುನಾವಣೆಯಲ್ಲಿ ವಿಯಟ್‌ನಾಮ್ ಜನತೆ ಉತ್ತರ ಮತ್ತು ದಕ್ಷಿಣ ಭಾಗಗಳನ್ನು ಒಂದುಗೂಡಿಸಿ ವಿಯಟ್‌ನಾಮ್ ಒಂದೇ ರಾಷ್ಟ್ರವಾಗಿ ಪರಿವರ್ತಿತಗೊಳ್ಳುತ್ತದೆ ಎಂಬ ಹೇಳಿಕೆ ನೀಡಿತು. ಈ ಒಪ್ಪಂದಕ್ಕೆ ಅಮೆರಿಕ ಮತ್ತು ದಕ್ಷಿಣ ವಿಯಟ್‌ನಾಮ್‌ಗಳು ರುಜು ಹಾಕಲು ನಿರಾಕರಿಸಿದವು. ಈ ಎಲ್ಲಾ ಬೆಳವಣಿಗೆಗಳಿಂದ ದಕ್ಷಿಣ ವಿಯಟ್‌ನಾಮ್ ರಕ್ಷಣೆಯ ಜವಾಬ್ದಾರಿ ಪೂರ್ಣವಾಗಿ ಅಮೆರಿಕದ ಮೇಲೆ ಬಿತ್ತು. ಆರ್ಥಿಕ ನೆರವು ಅಲ್ಲದೆ ಸೈನ್ಯ ಬಲವನ್ನು ನೀಡಿ ಆ ನಾಡಿನ ರಕ್ಷಣೆಗೆ ಪಣ ತೊಟ್ಟು ನಿಂತಿತು, ಜಗತ್ತಿನ ಮಹಾಶಕ್ತಿಯುತ ರಾಷ್ಟ್ರಗಳಲ್ಲಿ ಒಂದಾದ ಅಮೆರಿಕ! ಈ ಗುರಿ ಸಾಧಿಸಲು ಅಮೆರಿಕ 'ಆಗ್ನೇಯ ಏಷ್ಯಾ ರಕ್ಷಣಾ ಒಪ್ಪಂದದ ಸಂಸ್ಥೆಯನ್ನು' (SEATO) ಸ್ಥಾಪಿಸಿತು. ಆದರೆ ದಕ್ಷಿಣ ವಿಯಟ್‌ನಾಮ್‌ನಲ್ಲಿ ಅಮೆರಿಕ ಬಯಸಿದ ಸುಧಾರಣೆಗಳು ಆಗಲಿಲ್ಲ. ಅಸಂತುಷ್ಟರಾದ ದಕ್ಷಿಣ ವಿಯಟ್‌ನಾಮ್ ಪ್ರಜೆಗಳನ್ನು ಒಲಿಸಿಕೊಂಡು ಉತ್ತರ ವಿಯಟ್‌ನಾಮ್ ಜನತೆ 'ವಿಯಟ್‌ಕಾಂಗ್' ಗೆರಿಲ್ಲ (ಅಡಗಿ

ನಿಂತು ವೈರಿಯ ಮೇಲೆ ಮಿಂಚಿನ ದಾಳಿ ಮಾಡಿ ಮರೆಯಾಗುವ) ಗುಂಪುಗಳನ್ನು ಕಟ್ಟಿ ಜನರ ನಂಬಿಕೆ ಕಳೆದುಕೊಂಡಿದ್ದ ಆಗಿನ ಪ್ರಧಾನಿ (Premier) ಎನ್ಗೋ ಥಿನ್ ಡೀಮ್‌ನ ಆಡಳಿತದ ವಿರುದ್ಧ ಹೋರಾಟ ಪ್ರಾರಂಭಿಸಿದರು. ಭ್ರಷ್ಟಾಚಾರಗಳ ಅರಿವಿದ್ದರೂ ಅಮೆರಿಕ ದಕ್ಷಿಣ ವಿಯಟ್‌ನಾಮ್‌ನ ರಕ್ಷಣೆಯನ್ನು ಮುಂದುವರಿಸಿತು. ೧೯೬೦ರಲ್ಲಿ ದಕ್ಷಿಣ ವಿಯಟ್‌ನಾಮ್ ಜನತೆ 'ರಾಷ್ಟ್ರೀಯ ವಿಮೋಚನಾ ಮುಂಚೂಣಿ'ಯನ್ನು (National Liberation Front) ಸ್ಥಾಪಿಸಿತಮ್ಮ ಸ್ವಾತಂತ್ರ್ಯ ಸಾಧಿಸಲು ಹೋರಾಟ ಪ್ರಾರಂಭಿಸಿದರು. ಉತ್ತರ ವಿಯಟ್‌ನಾಮ್ ಮತ್ತು ವಿಯಟ್‌ಕಾಂಗ್ ಗೆರಿಲ್ಲ ಗುಂಪುಗಳು ಸೋವಿಯೆಟ್ ರಷ್ಯಾ ಮತ್ತು ಚೈನಾ ದೇಶಗಳಿಂದ ನೆರವು ಪಡೆಯುತ್ತಿದ್ದವು.

೧೯೬೧ರಲ್ಲಿ ಕೆನಡಿ ಆಡಳಿತ ಮಂಡಳಿ ದಕ್ಷಿಣ ವಿಯಟ್‌ನಾಮ್‌ನೊಡನೆ ಸ್ನೇಹ ಒಪ್ಪಂದ ಕರಾರು ಮಾಡಿಕೊಂಡು ಆರ್ಥಿಕ ಮತ್ತು ಸೈನ್ಯ ಸಹಾಯಗಳನ್ನು ಮುಂದುವರಿಸಿತು. ೧೯೬೨ರಲ್ಲಿ ವಿಯಟ್‌ನಾಮ್‌ನಲ್ಲಿ ೪೦೦೦ ಅಮೆರಿಕನ್ ಸೈನಿಕರಿದ್ದರು; ಒಂದು ವರ್ಷದ ನಂತರ ಅವರ ಸಂಖ್ಯೆ ೧೫೦೦೦ಕ್ಕೇರಿತು. ೧೯೬೪ರಲ್ಲಿ ಅಮೆರಿಕ ಹೆಚ್ಚು ಸೈನ್ಯ ತುಕಡಿಗಳನ್ನು ದಕ್ಷಿಣ ವಿಯಟ್‌ನಾಮ್‌ಗೆ ರವಾನಿಸತೊಡಗಿತು. ೧೯೬೪ ಆಗಸ್ಟ್ ೨ರಂದು ದಕ್ಷಿಣ ವಿಯಟ್‌ನಾಮ್‌ಗೆ ಸೇರಿದ ನೌಕೆಗಳೊಡನೆ ಟಾನ್‌ಕಿನ್ ಕೊಲ್ಲಿಯ (Gulf of Tonkin) ಉಸ್ತುವಾರಿ ಮಾಡುತ್ತಿದ್ದ ಅಮೆರಿಕನ್ ನೌಕೆಯ ಮೇಲೆ ಉತ್ತರ ವಿಯಟ್‌ನಾಮ್‌ನ ಯುದ್ಧದೋಣಿಗಳು ದಾಳಿ ಮಾಡಿದವು. ಇದಕ್ಕೆ ಪ್ರತಿಯಾಗಿ ಅಮೆರಿಕನ್ ವಾಯುದಳದ ವಿಮಾನಗಳು ಉತ್ತರ ವಿಯಟ್‌ನಾಮ್ ದೋಣಿಗಳ ನೆಲೆಗಳ ಮೇಲೆ ದಾಳಿ ಮಾಡಿದವು. ಈ ಘಟನೆಯಿಂದಾಗಿ ಕಾಂಗ್ರೆಸ್ ಟಾನ್‌ಕಿನ್ ಕೊಲ್ಲಿಯ ಠರಾವನ್ನು (The Gulf of Tonkin resolution) ಅಂಗೀಕರಿಸಿತು. ಈ ಠರಾವು ಅಮೆರಿಕನ್ ಅಧ್ಯಕ್ಷನಿಗೆ ಅಮೆರಿಕನ್ ಪಡೆಗಳ ಮೇಲೆ ಸಶಸ್ತ್ರ ದಾಳಿ ಮಾಡಿದ ಶತ್ರುವನ್ನು ಹತ್ತಿಕ್ಕಲು ಅಗತ್ಯವಾದ ಕ್ರಮಗಳನ್ನು ತೆಗೆದುಕೊಂಡು ಮತ್ತೆ ಇಂಥ ಘಟನೆಗಳು ನಡೆಯದಂತೆ ಕ್ರಮ ಕೈಗೊಳ್ಳಲು ವಿಶೇಷ ಅಧಿಕಾರವನ್ನು ಕೊಟ್ಟಿತು. ಅಮೆರಿಕದ ವಾಯುದಳದ ನೆಲೆ ಪ್ಲೆಯಿಕು (Pleiku) ಮೇಲೆ ವಿಯಟ್‌ಕಾಂಗ್ ಫಿರಂಗಿ ದಾಳಿ ನಡೆಸಿದಾಗ ಅದಕ್ಕೆ ಪ್ರತಿಯಾಗಿ ಅಮೆರಿಕ, ಉತ್ತರ ವಿಯಟ್‌ನಾಮ್ ಮೇಲೆ ಬಾಂಬ್‌ಗಳ ಮಳೆಗರೆಯಿತು. ಇದರಿಂದ ಉತ್ತರ ವಿಯಟ್‌ನಾಮ್ ಹೆದರಿ ಒಪ್ಪಂದ ಮಾತುಕತೆಗೆ ಬರಬಹುದು ಎಂದು ಅಮೆರಿಕ ಊಹಿಸಿತ್ತು.

೧೯೬೫ರ ಮಾರ್ಚ್ ತಿಂಗಳಲ್ಲಿ ಅಮೆರಿಕ ಸೇನಾಪಡೆಗಳ ಮತ್ತು ವಾಯುದಳಗಳ ಜಮಾವಣೆ ಹೆಚ್ಚಾಯಿತು. ೧೯೬೮ರ ಹೊತ್ತಿಗೆ ಅಮೆರಿಕದ ಸೈನ್ಯ ಮತ್ತು ವಾಯುಗಳ ಒಟ್ಟು ಸಂಖ್ಯೆ ಅರ್ಧ ಮಿಲಿಯನ್‌ಗಿಂತಲೂ ಹೆಚ್ಚಾಗಿತ್ತು. ಅಧ್ಯಕ್ಷ ಜಾನ್‌ಸನ್ ಈ ಸಮಸ್ಯೆಗಳ ಪರಿಹಾರದ ಬಗ್ಗೆ ಯೋಚಿಸುತ್ತಿರುವಂತೆ ವಿಯಟ್‌ನಾಮ್ ಯುದ್ಧ ವಿಸ್ತರಿಸುತ್ತ

ಹೋಯಿತು. ವಾಯುಪಡೆಯ ವಿಮಾನದಾಳಿ ಮತ್ತು ಸೈನ್ಯದ ಕಾರ್ಯಾಚರಣೆಗಳು ತೀವ್ರಗತಿಯಲ್ಲಿ ಮುಂದುವರಿದವು. ಉತ್ತರ ವಿಯಟ್‌ನಾಮ್ ಸೈನ್ಯಹೆಚ್ಚಿನ ಸಂಖ್ಯೆಯಲ್ಲಿ ಈ ಯುದ್ಧದಲ್ಲಿ ಭಾಗವಹಿಸಿದವು. ವಿಯಟ್‌ಕಾಂಗ್ ಗೆರಿಲ್ಲ ಗುಂಪುಗಳಿಗೆ ಎಲ್ಲ ರೀತಿಯ ನೆರವನ್ನೂ ಉತ್ತರ ವಿಯಟ್‌ನಾಮ್ ಹೆಚ್ಚಿಸಿತು. ೧೯೬೪ರ ಜೂನ್ ತಿಂಗಳಿಗೆ ಅಮೆರಿಕ-ವಿಯಟ್‌ನಾಮ್ ಯುದ್ಧ ಪ್ರಾರಂಭವಾಗಿ ಅರು ವರ್ಷಗಳಾಗಿದ್ದವು. ಅಮೆರಿಕ ನಡೆಸಿದ ಎಲ್ಲ ಯುದ್ಧಗಳಿಗಿಂತ ಇದು ದೀರ್ಘವಾಗಿತ್ತು. ಯುದ್ಧ ಸಾಗುತ್ತಿದ್ದಂತೆ ಆಗಾಗ ಅಮೆರಿಕದ ವಾಯುಪಡೆ ದಾಳಿಯನ್ನು ನಿಲ್ಲಿಸಿ ಸಂಧಾನ ಮಾಡಿಕೊಳ್ಳಲು ಪ್ರಯತ್ನಿಸಿತು. ಆದರೆ ಉತ್ತರವಿಯಟ್‌ನಾಮ್‌ದವರು ಅಮೆರಿಕ ವಾಯುಪಡೆಯ ದಾಳಿಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಮತ್ತು ದಕ್ಷಿಣ ವಿಯಟ್‌ನಾಮ್‌ನಿಂದ ಬೇಷರತ್ತಾಗಿ ತನ್ನ ಸೈನ್ಯವನ್ನು ಹಿಂದಕ್ಕೆ ಕರೆಸಬೇಕು ಎಂದು ಷರತ್ತು ಹಾಕಿದರು. ಉತ್ತರ ವಿಯಟ್‌ನಾಮ್‌ದವರು ಬಾಂಬ್ ದಾಳಿ ನಿಂತ ಸಮಯದಲ್ಲಿ ತಮ್ಮ ಸೈನ್ಯ ಪಡೆಗಳನ್ನು, ಶಸ್ತ್ರಾಸ್ತ್ರಗಳನ್ನು ದಕ್ಷಿಣ ವಿಯಟ್‌ನಾಮ್‌ಗೆ ಗುಟ್ಟಾಗಿ ರವಾನಿಸುತ್ತಿದ್ದರು. ೧೯೬೯ರ ಅಕ್ಟೋಬರ್ ತಿಂಗಳಲ್ಲಿ ಅಮೆರಿಕದ ಸಾವು ನೋವುಗಳ ಅಂಕಿ ಅಂಶಗಳು:- ೪೦ ಸಾವಿರ ಸೈನಿಕರು ಸತ್ತು, ೨೫೫ ಸಾವಿರ ಜನ ಗಾಯಗೊಂಡಿದ್ದರು. ವಿಯಟ್‌ನಾಮ್ ಯುದ್ಧಕ್ಕೆ ಅಮೆರಿಕದ ಸಮರ್ಥನೆ: ಕಮ್ಯೂನಿಸಂ ತಡೆಗಟ್ಟುವುದು. ದಕ್ಷಿಣ ವಿಯಟ್‌ನಾಮ್ ಕಮ್ಯೂನಿಸ್ಟರ ಕೈವಶವಾದರೆ ಒಂದೊಂದಾಗಿ ಆಗ್ನೇಯ ಏಷ್ಯಾದ ಎಲ್ಲಾ ರಾಷ್ಟ್ರಗಳು ಕಮ್ಯೂನಿಸ್ಟರ ಕೈಸೇರುತ್ತದೆ ಎಂದೂ, ಆಗ ಅಮೆರಿಕ ತನ್ನ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಆ ಎಲ್ಲಾ ರಾಷ್ಟ್ರಗಳೊಡನೆ ಯುದ್ಧ ಮಾಡಬೇಕಾಗಬಹುದಾದ ಪರಿಸ್ಥಿತಿ ಉಂಟಾಗಬಹುದು ಎನ್ನುವುದು ಅಮೆರಿಕದ ಧೋರಣೆಯಾಗಿತ್ತು.

೧೯೬೫ರಲ್ಲಿ ವಿಸ್ತಾರಗೊಳ್ಳುತ್ತಿದ್ದ ವಿಯಟ್‌ನಾಮ್ ಯುದ್ಧದಲ್ಲಿ ಅಮೆರಿಕನ್ನರ ಸಾವು ನೋವುಗಳು ಅಧಿಕವಾಗುತ್ತಿದ್ದಂತೆ ಅಮೆರಿಕದಲ್ಲಿ ಯುದ್ಧದ ಪ್ರದರ್ಶನಗಳು ನಡೆಯತೊಡಗಿದವು. ೧೯೬೫ರ ಅಕ್ಟೋಬರ್ ತಿಂಗಳಲ್ಲಿ ಮೊದಲಬಾರಿಗೆ ರಾಷ್ಟ್ರದಾದ್ಯಂತ ವ್ಯವಸ್ಥೆಗೊಂಡ ಯುದ್ಧವಿರೋಧಿ ಪ್ರದರ್ಶನಗಳು ನಡೆದವು. ಯುದ್ಧಕ್ಕೆ ಹೋಗಲು ಸರ್ಕಾರದ ಆಜ್ಞಾಚೀಟಿಗಳನ್ನು (draft) ಪಡೆದವರು ಮತ್ತು ಯುದ್ಧವನ್ನು ತ್ಯಜಿಸಿದ 'ಶಾಂತಿಪಾಲಕರು' (doves) ಆ ಆಜ್ಞಾಚೀಟಿಗಳನ್ನು ಬಹಿರಂಗವಾಗಿ ಸುಟ್ಟುಹಾಕಿ ಸರ್ಕಾರದ ಯುದ್ಧನೀತಿಯನ್ನು ಖಂಡಿಸಿದರು. ಈ ರೀತಿ ಮಾಡುವುದು ಶಿಕ್ಷಾರ್ಹ ಅಪರಾಧವೆಂದು ಸರ್ಕಾರ ಘೋಷಿಸಿತು; ಆ ವರ್ಷದ ಕೊನೆಯಲ್ಲಿ ೨೫ ಸಾವಿರ ಪ್ರದರ್ಶನಕಾರರು ರಾಜಧಾನಿ ವಾಷಿಂಗ್‌ಟನ್‌ಗೆ ಪಾದಯಾತ್ರೆ ನಡೆಸಿದರು. ಹಣದುಬ್ಬರವೂ ಹೆಚ್ಚುತ್ತ ಹೋದಂತೆ ಅದನ್ನು ನಿಯಂತ್ರಿಸಲು ಮತ್ತು ಯುದ್ಧದ ಖರ್ಚುವೆಚ್ಚಗಳನ್ನು ಭರಿಸಲು ಶೇಕಡಾ ೧೦ ಭಾಗ ಆದಾಯ ತೆರಿಗೆಯನ್ನು ಹೆಚ್ಚಿಸುವುದನ್ನು ಕಾಂಗ್ರೆಸ್ ಕೈಗೊಳ್ಳಲು ಬಹಳ ಸಮಯ ಹಿಡಿಯಿತು. ಬಂಗಾರದ ದರವನ್ನು ನಿರ್ಧರಿಸುವ

ಒಂದು ವ್ಯವಸ್ಥೆಯನ್ನು ಸ್ಥಾಪಿಸಿ ಅಮೆರಿಕದ ಬಂಗಾರ ಹೊರದೇಶಗಳಿಗೆ ಹೋಗುವುದನ್ನು ತಡೆದರು. ಈ ಯುದ್ಧದ ದೆಸೆಯಿಂದ ಮಿತ್ರರಾಷ್ಟ್ರಗಳೊಡನೆ ಅಮೆರಿಕದ ಸಂಬಂಧ ಹದಗೆಟ್ಟಿತು. ಹೊರದೇಶಗಳಲ್ಲಿ ಜನರು ಅಮೆರಿಕದ ಯುದ್ಧನೀತಿಯನ್ನು ಖಂಡಿಸಿ ಪ್ರದರ್ಶನ ನಡೆಸಿದರು.

೧೯೬೬ರಲ್ಲಿ ವಿಯಟ್‌ನಾಮ್ ಯುದ್ಧ ಘನಘೋರ ರೂಪ ತಾಳಿತು. ಉತ್ತರ ವಿಯಟ್‌ನಾಮ್ ಮೇಲೆ ಅಮೆರಿಕ ವಾಯುದಳ ಬೃಹತ್ ಪ್ರಮಾಣದ ದಾಳಿ ನಡೆಸಿತಲ್ಲದೆ ಯುದ್ಧರಂಗದ ಮುಂಚೂಣಿಗೆ ಹೆಚ್ಚು ಸೈನಿಕರನ್ನು ಅಮೆರಿಕ ರವಾನಿಸಿತು. ಉತ್ತರ ವಿಯಟ್‌ನಾಮ್ ರಾಜಧಾನಿ ಹಾನಾಯ್ ಮತ್ತು ಅದರ ರೇವುಪಟ್ಟಣ ಹೈಫಾಂಗ್ ಮೇಲೆ ಬಾಂಬ್ ದಾಳಿ ನಡೆಯಿತು. ಅಮೆರಿಕನ ಸೈನಿಕರಲ್ಲಿ ಬಹುತೇಕ ಅಲ್ಪಸಂಖ್ಯಾತರು (ಕರಿಯರು ಮತ್ತು ಲ್ಯಾಟಿನ್ ಅಮೆರಿಕನ್ನರು) ಇದ್ದುದು ಫೆಡರಲ್ ಸರ್ಕಾರದ ಹೆಸರಿಗೆ ಕಳಂಕ ತಂದಿತು. ಅಮೆರಿಕನ್ ಸೈನಿಕರು ಗೆರಿಲ್ಲ ಯುದ್ಧದಲ್ಲಿ ಸರಿಯಾಗಿ ತರಬೇತಿ ಪಡೆದಿರಲಿಲ್ಲ. ಹೀಗಾಗಿ ಅವರಿಗೆ ವಿಯಟ್‌ಕಾಂಗ್ ಪಡೆಗಳು ಅಡಗಿ ನಿಂತು ಅನಿರೀಕ್ಷಿತ ದಾಳಿ ನಡೆಸಿ ಸುಳಿವು ಕೊಡದಂತೆ ಮರೆಯಾಗಿ ಹೋಗುವ ಯುದ್ಧ ಕೌಶಲಕ್ಕೆ ತಕ್ಕ ಪ್ರತಿಕ್ರಿಯೆ ತೋರಲಾಗಲಿಲ್ಲ.

೧೯೬೭ರಲ್ಲಿ ನ್ಯೂಯಾರ್ಕ್ ನಗರದಲ್ಲಿ ೨೫೦ ಸಾವಿರ ಜನರು ಯುದ್ಧಕ್ಕೆ ವಿರೋಧ ವ್ಯಕ್ತಪಡಿಸಲು ಪ್ರದರ್ಶನ ನಡೆಸಿ, ನ್ಯೂಯಾರ್ಕಿನ ಸೆಂಟ್ರಲ್ ಪಾರ್ಕಿನಿಂದ ವಿಶ್ವಸಂಸ್ಥೆಯ ಕಟ್ಟಡದವರೆಗೆ ಮೆರವಣಿಗೆಯಲ್ಲಿ ಘೋಷಣೆಗಳನ್ನು ಕೂಗುತ್ತ ಹೋದರು. ೧೯೬೮ರಲ್ಲಿ ಜರುಗಿದ ಘಟನೆಗಳು ಯುದ್ಧವಿರೋಧಿಗಳ ಸಂಘಟನೆಯನ್ನು ಮತ್ತಷ್ಟು ಹೆಚ್ಚಿಸಿ ಅವರ ಚಟುವಟಿಕೆಗಳು ಹತ್ತುಪಟ್ಟು ಹೆಚ್ಚುವಂತೆ ಮಾಡಿದವು. ೧೯೬೮ರ ಚುನಾವಣೆಯ ವರ್ಷ ಎರಡು ಪಕ್ಷಗಳ ಅಭ್ಯರ್ಥಿಗಳು ಅಮೆರಿಕದ ಅತಿದೀರ್ಘ ಯುದ್ಧವನ್ನು ಕೊನೆಗಾಣಿಸುವುದಾಗಿ ತಮ್ಮ ಚುನಾವಣಾ ಪ್ರಚಾರದಲ್ಲಿ ಮತದಾರರಿಗೆ ಭರವಸೆ ನೀಡಿದರು. ಕರಿಯ ಅಮೆರಿಕನ್ನರ ನಾಯಕ ಡಾ. ಮಾರ್ಟಿನ್ ಲೂಥರ್ ಕಿಂಗ್ (ಜೂನಿಯರ್) ಯುದ್ಧ ಕೊನೆಗಾಣಿಸಲು ಕರೆಯಿತ್ತನು. ೧೯೬೮ರಲ್ಲಿ ಪ್ರಾರಂಭವಾಗಿದ್ದ ಉತ್ತರ ವಿಯಟ್‌ನಾಮ್ ಪಡೆಗಳಿಂದ ಬೃಹತ್ ಪ್ರಮಾಣದ ಟೆಟ್ ದಾಳಿಯನ್ನು (Tet offensive) ಅಮೆರಿಕನ್ ಪಡೆಗಳು ಎದುರಿಸಿ ಯಶಸ್ವಿಯಾದರೂ ಅಮೆರಿಕನ್ನರು ಸೈಗಾನ್ ನಗರ ಮತ್ತು ಅದರ ಸಮೀಪದ ಅಮೆರಿಕನ್ ಸೈನ್ಯದ ನೆಲೆಯಾಗಿದ್ದ ಬಂದರಿನ ಮೇಲೆ ಉತ್ತರ ವಿಯಟ್‌ನಾಮ್ ಪಡೆಗಳು ನಡೆಸಿದ ಅನಿರೀಕ್ಷಿತ ದಾಳಿಯನ್ನು ಅಮೆರಿಕನ್ನರು ಟಿ.ವಿ.ಯಲ್ಲಿ ಕಂಡು ದಂಗು ಬಡಿದಂತಾದರು. ಈ ಸಂದರ್ಭದ ಅನುಕೂಲ ಪಡೆಯಲು ಡೆಮೊಕ್ರಾಟಿಕ್ ಪಕ್ಷದ ಸೆನೆಟರ್ ಯೂಜೀನ್ ಮೆಕಾರ್ಥಿ (Eugene McCarthy) ಯುದ್ಧವನ್ನು ಕ್ಷಿಪ್ರವಾಗಿ ಕೊನೆಗಾನಿಸುವುದನ್ನು ಮುಖ್ಯ ಧ್ಯೇಯವಾಗಿಟ್ಟುಕೊಂಡು ಅಧ್ಯಕ್ಷ

ಸ್ಥಾನಕ್ಕೆ ಅಭ್ಯರ್ಥಿಯಾಗಿ ಸ್ಪರ್ಧೆಗೆ ಇಳಿದನು. ನ್ಯೂ ಹ್ಯಾಂಪ್‌ಶೈರ್‌ನಲ್ಲಿ (New Hampshire) ನಡೆದ ಪ್ರಥಮ ಸುತ್ತಿನ ಚುನಾವಣೆಯಲ್ಲಿ ಮೆಕಾರ್ಥಿ ಶೇಕಡಾ ೪೦ ಭಾಗ ಮತಗಳನ್ನು ಪಡೆದಿದ್ದು ನೋಡಿ ಅಧ್ಯಕ್ಷ ಜಾನ್‌ಸನ್ ಆಶ್ಚರ್ಯಗೊಂಡನು. ನ್ಯೂಯಾರ್ಕಿನ ಸೆನೆಟರ್ ರಾಬರ್ಟ್ ಕೆನಡಿ ಅಭ್ಯರ್ಥಿಯಾಗಲು ನಾಮಪತ್ರ ಸಲ್ಲಿಸಿದಾಗ ಜಾನ್‌ಸನ್‌ಗೆ ತಾನು ಇನ್ನೊಂದು ಅವಧಿಗೆ ಚುನಾಯಿತನಾಗುವುದು ಕಷ್ಟವೆಂದು ತೋರಿತು. ಆದ್ದರಿಂದ ಟಿ.ವಿ. ಪ್ರಸಾರದ ಮೂಲಕ ತಾನು ತನ್ನ ಪಕ್ಷದ ನಾಮಕರಣವನ್ನು ಒಪ್ಪಿಕೊಳ್ಳುವುದಿಲ್ಲ – ಎರಡನೆಯ ಬಾರಿ ಅಧ್ಯಕ್ಷನಾಗಲು ನಿರಾಕರಿಸುತ್ತೇನೆ ಎಂದು ರಾಷ್ಟ್ರಕ್ಕೆ ತಿಳಿಸಿದನು. ಅದರ ಜೊತೆಗೆ ಉತ್ತರ ವಿಯಟ್‌ನಾಮ್ ಮೇಲೆ ಬಾಂಬ್ ದಾಳಿಯನ್ನು ಅರ್ಧಕ್ಕೆ ಇಳಿಸುತ್ತೇನೆ ಎಂದು ಹೇಳಿಕೆ ನೀಡಿ ಶಾಂತಿ ಕರಾರು ಪ್ರಯತ್ನಗಳನ್ನು ತ್ವರಿತಗೊಳಿಸುವುದಾಗಿ ಮಾತುಕೊಟ್ಟನು. ೧೯೬೮ರ ಚುನಾವಣೆಯ ರಿಪಬ್ಲಿಕನ್ ಅಭ್ಯರ್ಥಿಯಾಗಿ ರಿಚರ್ಡ್ ನಿಕ್ಸನ್ ನಾಮಕರಣಗೊಂಡನು. ನಿಕ್ಸನ್ ಯುದ್ಧವನ್ನು 'ವಿಯಟ್ನಾಮೀಕರಣ' (Vietnamize) ಮಾಡುವುದಾಗಿ ಪ್ರಚಾರದಲ್ಲಿ ಮಾತಿಕೊಟ್ಟನು.

೧೯೬೮ರ ಜುಲೈ ತಿಂಗಳಲ್ಲಿ ಅಮೆರಿಕ ಮತ್ತುರಷ್ಯಾ ಅಣ್ವಸ್ತ್ರಗಳ ಪ್ರಸರಣವನ್ನು ತಡೆಯಲು 'ಅಣ್ವಸ್ತ್ರ ಪ್ರಸರಣ ನಿರೋಧ' ಒಪ್ಪಂದಕ್ಕೆ ರುಜು ಹಾಕಿದವು. ಆಗಸ್ಟ್ ತಿಂಗಳಲ್ಲಿ ರಷ್ಯಾ ಜ಼ೆಕೊಸ್ಲೋವಾಕಿಯಾ ರಾಷ್ಟ್ರವನ್ನು ಆಕ್ರಮಣ ಮಾಡಿತು. ಆದರೆ ಜಾನ್‌ಸನ್ ಆ ರಾಜಕೀಯದ ಸುಳಿಯಲ್ಲಿ ಸಿಕ್ಕಿಕೊಳ್ಳಲು ನಿರಾಕರಿಸಿದನು. ಲ್ಯಾಟಿನ್ ಅಮೆರಿಕದಲ್ಲಿ ಬಡತನ, ತೆರಿಗೆ ಮತ್ತು ಭೂಸುಧಾರಣೆಗಳು ಹಾಗೂ ಔದ್ಯೋಗಿಕ ಬೆಳವಣಿಗೆಗಳು ಸ್ಥಗಿತಗೊಂಡವು. ೧೯೬೪ರಲ್ಲಿ ಪನಾಮಾದಲ್ಲಿ ದಂಗೆಗಳು ಎದ್ದವು. ಆಗ ಪನಾಮಾ ಅಮೆರಿಕದೊಡನೆ ರಾಯಭಾರ ಸಂಬಂಧ ಕಡಿದುಕೊಂಡಿತು. ಪನಾಮಾ ಕಾಲುವೆಯ ಒಪ್ಪಂದವನ್ನು ಪುನಃ ಪರಿಶೀಲನೆ ಮಾಡಬೇಕೆಂದು ಒತ್ತಾಯ ಮಾಡಿದರು. ೧೯೬೮ ಮೊದಲಲ್ಲಿ ಉತ್ತರ ಕೊರಿಯಾದ ನೌಕೆಗಳು ಅಮೆರಿಕದ ನೌಕೆ ' ಪ್ಯೂಬ್ಲೊ' (Pueblo) ಮೇಲೆ ದಾಳಿ ಮಾಡಿದವು. ಅಮೆರಿಕದ ಯುದ್ಧನೌಕೆಯ ನಾವಿಕರನ್ನು ಸೆರೆ ಹಿಡಿದು ಹನ್ನೊಂದು ತಿಂಗಳು ಮಾತುಕತೆ ನಡೆದು ನಂತರ ಅವರನ್ನು ಬಿಡುಗಡೆ ಮಾಡಲಾಯಿತು. ಉತ್ತರ ಕೊರಿಯಾದ ಆಕ್ರಮಣ ಧೋರಣೆ ಬದಲಾಗಿಲ್ಲದ ಕಾರಣದಿಂದ ಅಮೆರಿಕದ ಸೇನಾಪಡೆಗಳು ಇನ್ನೂ ದಕ್ಷಿಣ ಕೊರಿಯಾದಲ್ಲಿ ಉಳಿಯಬೇಕಾಗಿ ಬಂದಿದೆ.

೧೯೬೮ರ ಅದ್ಭುತ ಸಾಧನೆ ಎಂದರೆ ಮಾನವನು ಮೊಟ್ಟಮೊದಲಿಗೆ ಚಂದ್ರಗ್ರಹದ ಮೇಲೆ ಹೆಜ್ಜೆ ಇರಿಸಿದ್ದು. ಇದು ಬರಿ ಅಮೆರಿಕದ ಮಹತ್‌ಸಾಧನೆಯಾಗಿರದೆ ಇಡೀ ಮಾನವಕುಲದ ಯುಗ ಪ್ರವರ್ತಕವಾದ ಸಾಧನೆ! ೧೯೬೮ರ ಜುಲೈ ತಿಂಗಳ ೨೧ರಂದು ಮೂವರು ಅಮೆರಿಕನ್ ಬಾಹ್ಯಾಕಾಶ ಯಾತ್ರಿಕರು – ನೀಲ್ ಆರ್ಮ್‌ಸ್ಟ್ರಾಂಗ್ (Neil

Armstrong), ಎಡ್ವಿನ್ ಆಲ್ಡ್ರಿನ್ (Edwin Aldrin. Jr) ಮತ್ತು ಮೈಕೆಲ್ ಕಾಲಿನ್ಸ್ (Michael Collins) – ಅಪೋಲೋ ೧೧ (Apollo 11) ಬಾಹ್ಯಾಕಾಶ ನೌಕೆಯಲ್ಲಿ ಚಂದ್ರಲೋಕಕ್ಕೆ ಹೋಗಿ ಹಿಂತಿರುಗಿ ಬಂದರು. ಈ ಸಾಧನೆಯನ್ನು ಪ್ರಪಂಚ ಟಿ.ವಿ. ತೆರೆಯ ಮೇಲೆ ನೋಡಿ ಬೆರಗಾಯಿತು. ಇದು ವಿಜ್ಞಾನದ ದೃಷ್ಟಿಯಿಂದ ಒಂದು ಕ್ರಾಂತಿಕಾರಕ ಘಟನೆ. ಇದರಿಂದ ಅಮೆರಿಕದ ಘನತೆ ಗೌರವಗಳು ಹೆಚ್ಚಿ ಜನರ ದೇಶಾಭಿಮಾನ ಉಕ್ಕಿ ಹರಿಯುವಂತಾಯಿತು. ಮೇಲಾಗಿ ಈ ಸಾಧನೆ ಯಂತ್ರವಿಜ್ಞಾದ ಮುನ್ನಡೆ, ಶಸ್ತ್ರಾಸ್ತ್ರಗಳ ತಾಂತ್ರಿಕ ಅಭಿವೃದ್ಧಿ ಮತ್ತು ಇತರ ಕ್ಷೇತ್ರಗಲಲ್ಲಿ ಪ್ರಗತಿ ಸಾಧಿಸಲು ಕಾರಣವಾಯಿತು. ಆದರೆ ಕೆಲವರು ಸಮಾಜದಲ್ಲಿನ ಅನೇಕ ಸಮಸ್ಯೆಗಳ ಬಗ್ಗೆ ಸರ್ಕಾರ ಗಮನಹರಿಸದೆ, ಅವುಗಳ ಪರಿಹಾರಕ್ಕೆ ಪ್ರಯತ್ನ ಪಡದೆ, ಆ ಸಮಸ್ಯೆಗಳನ್ನು ಎದುರಿಸಲು ಮೀಸಲಿಡಬೇಕಾದ ಹಣವನ್ನು ಬಾಹ್ಯಾಕಾಶ ಯೋಜನೆಗಳಿಗೆ ಯಥೇಚ್ಛವಾಗಿ ಸುರಿದು ಚಂದ್ರ ಲೋಕಕ್ಕೆ ಹೋಗಿ ಬಂದುದನ್ನು ಬಿಟ್ಟರೆ ಭೂಮಿಯ ಮೇಲೆ ಏನು ಸಾಧಿಸಿದಂತಾಯಿತು? ಎಂದು ಪ್ರಶ್ನಿಸಿದರು. ಬಡತನ, ರೋಗರುಜಿನಗಳು, ವಿದ್ಯಾಭ್ಯಾಸ ಮುಂತಾದ ಮುಖ್ಯವಾದ ಸಮಸ್ಯೆಗಳು ಸರ್ಕಾರದ ಅಸಡ್ಡೆಗೆ ಒಳಗಾಗಿ ಇನ್ನೂ ಸಂಕೀರ್ಣಗೊಳ್ಳುತ್ತ ಹೋಗುತ್ತಿವೆ ಎಂದು ಜಾನ್‌ಸನ್ ಆಡಳಿತವನ್ನು ಟೀಕಿಸಿದರು. ಮೊದಲನೆಯ ಚಂದ್ರಲೋಕ ಯಾತ್ರೆಯ ನಾಲ್ಕು ತಿಂಗಳಾದ ಮೇಲೆ ಬಾಹ್ಯಾಕಾಶ ಯಾತ್ರಿಗಳ ಎರಡನೆಯ ತಂಡ ಚಂದ್ರಲೋಕದ ಯಾತ್ರೆಯನ್ನು ಮತ್ತೊಮ್ಮೆ ಯಶಸ್ವಿಯಾಗಿ ಮುಗಿಸಿ ವಾಪಸ್ಸು ಬಂದಿತು. ಈ ಎರಡು ಯಾತ್ರೆಗಳಿಂದ ವಿಜ್ಞಾನಕ್ಕೆ ಮಹತ್ತರವಾದ ಮಾಹಿತಿಗಳು ದೊರಕಿದವು. ಹೀಗೆ ೧೯೬೧ರಲ್ಲಿ ಅಧ್ಯಕ್ಷ ಕೆನಡಿ ಕಂಡ ಕನಸು ನನಸಾಗಿ ಅಮೆರಿಕ ಯಂತ್ರ ನಾಗರಿಕತೆಯ ಶಿಖರದ ತುತ್ತ ತುದಿಯನ್ನು ತಲುಪಿ ಲೋಕ ಮಾನ್ಯತೆ ಪಡೆಯಿತು.

ರಭಸದ ಸಾಮಾಜಿಕ ಬದಲಾವಣೆಗಳ ಸುಳಿವಿನಲ್ಲಿ ಅಮೆರಿಕ

೧೯೬೦-೧೯೬೮ರ ಅವಧಿಯಲ್ಲಿ ಅಮೆರಿಕ ಅಲ್ಲೋಲ ಕಲ್ಲೋಲವಾಗುವಂಥ ಪ್ರಬಲವಾದ ಮತ್ತು ಅನಿಯಂತ್ರಿತ ಬದಲಾವಣೆಗಳ ಸೆಳವಿನಲ್ಲಿ ಹಳೆಯ ಸಂಪ್ರದಾಯಗಳು ಮತ್ತು ಮೌಲ್ಯಗಳು ಕೊಚ್ಚಿಹೋಗಿ ಹೊಸ ಸಮಾಜ ಹುಟ್ಟುವ ಪ್ರಸವ ವೇದನೆಯನ್ನು ಅನುಭವಿಸುತ್ತಿತ್ತು.

೧೯೬೦ರ ದಶಕದಲ್ಲಿ ಕರಿಯ ಅಮೆರಿಕನ್ನರು ವಿಶಿಷ್ಟವಾಗಿ ದಕ್ಷಿಣ ರಾಜ್ಯಗಳಲ್ಲಿ ಬೇರೂರಿರುವ ಹಳೆಯ ನ್ಯಾಯವ್ಯವಸ್ಥೆ, ವರ್ಣ ಪಕ್ಷಪಾತ (color discrimination) ಪದ್ಧತಿಗಳನ್ನು ಕಿತ್ತೊಗೆಯಲು ಅನೇಕ ವಿಧಾನಗಳನ್ನು ಅನುಸರಿಸಿದರು. ಅಮೆರಿಕದ ಉತ್ತರ ರಾಜ್ಯಗಳಲ್ಲಿ ವರ್ಣಪಕ್ಷಪಾತ ಬಹಿರಂಗವಾಗಿ ಪ್ರಕಟಗೊಳ್ಳದಿದ್ದರೂ ಆಂತರಿಕವಾಗಿ ದಿನನಿತ್ಯದ ವ್ಯವಹಾರಗಳಲ್ಲಿ ಕಂಡುಬರುತ್ತಿತ್ತು. ಈ ಮುಚ್ಚುಮರೆಯಲ್ಲಿ ನಡೆಯುವ

ಪಕ್ಷಪಾತದ ವಿರುದ್ಧ ಆಂದೋಳನ ಪ್ರಾರಂಭವಾಗಿ, ಮೊದಲು ಕೋರ್ಟು ಕಛೇರಿಗಳಲ್ಲಿ ಪರಿಹಾರ ಪಡೆಯಲು ಪ್ರಯತ್ನಪಟ್ಟು ನಿರಾಶರಾಗಿ, ನಂತರ ಮುಷ್ಕರ, ಪ್ರದರ್ಶನ, ಧರಣಿ ಮತ್ತು ಪಾದಯಾತ್ರೆ ವಿಧಾನಗಳನ್ನು ಅನುಸರಿಸಬೇಕಾಯಿತು. ಈ ಆಂದೋಳನ ಮೊದಲ ಹಂತದಲ್ಲಿ ಪೌರ ಹಕ್ಕುಗಳಿಗಾಗಿ ಹೋರಾಟ ಮುಖ್ಯವಾಗಿ ಅಮೆರಿಕದ ದಕ್ಷಿಣ ರಾಜ್ಯಗಳಲ್ಲಿ ಕೇಂದ್ರೀಕೃತವಾಗಿತ್ತು. ದಕ್ಷಿಣ ಕ್ರಿಶ್ಚಿಯನ್ ನಾಯಕತ್ವ ಸಮಿತಿ (Southern Christian Leadership Conference- SCLC) ಡಾ. ಮಾರ್ಟಿನ್ ಲೂಥರ್ ಕಿಂಗ್ ನೇತೃತ್ವದಲ್ಲಿ ಪೌರಹಕ್ಕುಗಳ ಹೋರಾಟವನ್ನು ಬಹಿರಂಗವಾಗಿ ಅಹಿಂಸಾತ್ಮಕ ಜನತಾ ಚಳುವಳಿಯಾಗಿ ಪರಿವರ್ತಿಸಿತು. ೧೯೬೧ರ ವೇಳೆಗೆ ೭೦ ಸಾವಿರ ಜನರು ಮುಷ್ಕರ-ಧರಣಿಗಳಲ್ಲಿ ಭಾಗವಹಿಸಿದ್ದರು. ನೂರಕ್ಕೂ ಮಿಗಿಲಾದ ಉಪಾಹಾರಗೃಹಗಳು ಅನುಕಲನಗೊಂಡಿದ್ದವು. ಪೌರಹಕ್ಕುಗಳ ಪ್ರತಿಪಾದಕರ ಗುಂಪುಗಳು 'ಸ್ವಾತಂತ್ರ್ಯ ಸವಾರಿ'ಗಳನ್ನು (Freedom rides) ಏರ್ಪಡಿಸಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಅನುಕಲನಗೊಳಿಸಲು ಪ್ರಯತ್ನಿಸಿದವು. ಈ ಪ್ರಯತ್ನಗಳು ಬಿಳಿಯರಲ್ಲಿ ಹಿಂಸಾಚಾರವನ್ನು ಪ್ರಚೋದಿಸಿದವು. ಕೊನೆಯಲ್ಲಿ ಅನುಕಲನಕ್ಕೆ ಇದ್ದ ಅನೇಕ ಅಡೆತಡೆಗಳು ಮುರಿದುಬಿದ್ದವು.

ಬೇಗನೆ ಈ ಚಳುವಳಿ ಉತ್ತರ ರಾಜ್ಯಗಳಿಗೂ ಹಬ್ಬಿತು. ಅಲ್ಲಿ ಪಕ್ಷಪಾತ ಬಹಿರಂಗವಾಗಿರದಿದ್ದರೂ ವಿದ್ಯಾಭ್ಯಾಸ ವ್ಯವಸ್ಥೆ, ಆಸ್ತಿಗಳ ವಿತರಣೆ ಇತ್ಯಾದಿಗಳಲ್ಲಿ ಪರೋಕ್ಷವಾಗಿ ಸಾಗಿತ್ತು. ವರ್ಣನೀತಿಯನ್ನನುಸರಿಸಿ ಬಿಳಿಯರ ಮತ್ತು ಕರಿಯರ ಶಾಲೆಗಳು ಪ್ರತ್ಯೇಕವಾಗಿದ್ದವು. ಕಾರಣ ಈ ಎರಡು ಸಮುದಾಯಗಳು ವಾಸ್ತವವಾಗಿ ಎರಡು ಪ್ರತ್ಯೇಕ ಸಮುದಾಯಗಳಾಗಿದ್ದು ಪರಸ್ಪರ ಸಂಪರ್ಕವಿಲ್ಲದೆ ನೂರಾರು ವರ್ಷಗಳಿಂದ ಪ್ರತ್ಯೇಕ ಪ್ರಪಂಚಗಳಲ್ಲಿ ಬದುಕುತ್ತ ಬಂದಿದ್ದರು. ಪಕ್ಷಪಾತದಿಂದಾಗಿ ಕರಿಯ ವಿದ್ಯಾರ್ಥಿಗಳ ಶಾಲೆಗಳು ಅವನತಿಗೊಂಡಿದ್ದವು. ದುರಸ್ತಿ ಕಾಣದ ಕಟ್ಟಡಗಳು, ಪೀಠೋಪಕರಣಗಳು, ಶಿಕ್ಷಣ ಸಾಧನಗಳು, ಉಪಕರಣಗಳು ಇಲ್ಲದೆ ವಿದ್ಯಾಭ್ಯಾಸದ ಮಟ್ಟ ಕಡಿಮೆಯಾಗಿತ್ತು. ಬಿಳಿಯ ವಿದ್ಯಾಧಿಕಾರಿಗಳು ಈ ಶಾಲೆಗಳ ಬಗ್ಗೆ ಅನಾದರ ಮತ್ತು ಅಸಡ್ಡೆಯ ಮನೋಭಾವ ತಾಳಿದ್ದರು. ಮೇಲಾಗಿ ಈ ಅಧಿಕಾರಿಗಳು ಕರಿಯರಿಗೆ ವಿದ್ಯಾಭ್ಯಾಸ ಬೇಕಿಲ್ಲ ಎಂದು ನಂಬಿದ್ದರು.

ಕ್ಷೀಣಿಸುತ್ತಿದ್ದ ಈ ಪರಿಸ್ಥಿತಿಗಳನ್ನು ಎದುರಿಸಲು ಕರಿಯರು ಕೈಗೊಂಡ ಕ್ರಮ – ಶಾಲೆಗಳನ್ನು ಬಹಿಷ್ಕರಿಸುವುದು. ಪಾಠಶಾಲೆಗಳನ್ನು ಅನುಕಲನಗೊಳಿಸುವುದರ ಮೂಲಕ ವಿದ್ಯಾಮಟ್ಟವನ್ನು ಏರಿಸುವುದು ಅವರ ಮುಖ್ಯ ಬೇಡಿಕೆಯಾಗಿತ್ತು. ಸಾರ್ವಜನಿಕ ಶಾಲೆಗಳಿಗೆ ಬಹಿಷ್ಕಾರ ಹಾಕಿದ ಕರಿಯರು ತಾವೇ ತಾತ್ಕಾಲಿಕ ಶಾಲೆಗಳನ್ನು ನಡೆಸಲಾರಂಭಿಸಿದರು. ಇನ್ನು ಕೆಲವರು ತಮ್ಮ ಮಕ್ಕಳನ್ನು 'ಸ್ವತಂತ್ರ ಶಾಲೆ'ಗಳಿಗೆ ಸೇರಿಸಿದರು. ಈ ಶಾಲೆಗಳಲ್ಲಿ ಮಕ್ಕಳಲ್ಲಿ ಸ್ವಾಭಿಮಾನ ಮೂಡಿಸಲು ತಕ್ಕ ಶಿಕ್ಷಣ ಕೊಟ್ಟು ಅವರಲ್ಲಿ 'ಕಪ್ಪು ಶಕ್ತಿ'ಯ (Black Power) ಕಲ್ಪನೆಯನ್ನು ಹುಟ್ಟುಹಾಕಿದರು.

ಉತ್ತರ ರಾಜ್ಯಗಳಲ್ಲಿ ಕರಿಯರು ಮತ್ತು ಸಹಾನುಭೂತಿಯುಳ್ಳ ಬಿಳಿಯರು ಸೇರಿ ಕೈಗೊಂಡ ಕ್ರಮಗಳು – ಪಕ್ಷಪಾತ ಮಾಡುವ ಅಂಗಡಿ, ಕಾರ್ಖಾನೆ ಅಥವಾ ಇಲಾಖೆಗಳ ಮುಂದೆ ಅವುಗಳ ಧೋರಣೆಯನ್ನು ವಿರೋಧಿಸುವ ಘೋಷಣೆಗಳನ್ನು ಕೂಗುತ್ತ ಪ್ರದರ್ಶನ ನಡೆಸುವುದು, ಅಂಥ ವ್ಯಾಪಾರ ಸಂಸ್ಥೆಗಳೊಡನೆ ವ್ಯವಹಾರ ನಿಷೇಧಿಸುವುದು, ನಿರ್ಮಾಣ ಕಾರ್ಯಗಳನ್ನು ಗುತ್ತಿಗೆ ಹಿಡಿದು ಕೆಲಸ ನಡೆಸುವ ಕಂಪನಿಗಳಲ್ಲಿ ಕರಿಯ ಕೆಲಸಗಾರರಿಗೆ ಅವಕಾಶ ಕೊಡದೆ ಹೋದರೆ ಆ ಕಂಪನಿಯ ಕೆಲಸ ನಡೆಯದಂತೆ ಅಡೆ ತಡೆಗಳನ್ನೊಡ್ಡು ವುದು, ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಕರಿಯರು ತಮ್ಮ ವಾಸಸ್ಥಳದ ಅವನತಿಯನ್ನು ಖಂಡಿಸಲು ಬಾಡಿಗೆ ಕೊಡುವುದನ್ನು ನಿಲ್ಲಿಸುವುದು – ಇವೇ ಮುಂತಾದುವುಗಳಿಂದ ಪ್ರತ್ಯೇಕತೆಯನ್ನು ಹತ್ತಿಕ್ಕಲು ಹೋರಾಟ ನಡೆಸಿದರು.

೧೯೬೩ರ ಆಗಸ್ಟ್ ತಿಂಗಳ ೨೮ರಂದು ರಾಜಧಾನಿ ವಾಷಿಂಗ್‌ಟನ್‌ನ ಲಿಂಕನ್ ಸ್ಮಾರಕದ ವಿಶಾಲ ಪ್ರದೇಶದಲ್ಲಿ ೨೦೦ ಸಾವಿರ ಜನರು ಸೇರಿದ್ದ ಬೃಹತ್ ಸಭೆಯನ್ನುದ್ದೇಶಿಸಿ ಮಾರ್ಟಿನ್ ಲೂಥರ್ ಕಿಂಗ್ ತನ್ನ ಲೋಕ ಪ್ರಸಿದ್ಧವಾಗಿರುವ 'ನಾನೊಂದು ಕನಸ ಕಂಡೆ' ಎನ್ನುವ ಹೃದಯಸ್ಪರ್ಶಿ ಮತ್ತು ಭವ್ಯ ಭವಿಷ್ಯದ ಆಶಾವಾದದಿಂದ ಕೂಡಿದ ಭಾಷಣವನ್ನು ಮಾಡಿದನು. ಇದು ಜನಾಭಿಪ್ರಾಯದ ಮೇಲೆ ಮಹತ್ತರವಾದ ಪರಿಣಾಮ ಬೀರಿತು. ಕಾಂಗ್ರೆಸ್ ಸದಸ್ಯರು ಕಿಂಗ್ ಭಾಷಣದ ಉದ್ದೇಶಗಳನ್ನು ಪೂರೈಸಲು ಶ್ರಮಿಸಿದರು. ಅಧ್ಯಕ್ಷ ಜಾನ್‌ಸನ್ ೧೯೬೪ರಲ್ಲಿ ಪೌರಹಕ್ಕುಗಳ ಕಾಯಿದೆಯನ್ನು ಜಾರಿಗೆ ತರುವುದರಲ್ಲಿ ಯಶಸ್ವಿಯಾದನು. ಈ ಕಾಯಿದೆ ಜಾರಿಗೆ ಬಂದಿದ್ದರೂ ಕೂಡ ಜನರು ಅದನ್ನು ಕಾರ್ಯಗತಗೊಳಿಸುವುದರಲ್ಲಿ ತಡಮಾಡು ತ್ತಿರುವುದನ್ನು ಕಂಡು ಸಹಿಸದ ಉತ್ತರದ ಪ್ರಮುಖ ನಗರಗಳ ಕರಿಯರು ಕಿಕ್ಕಿರಿದ ಕಿಷ್ಕಿಂಧೆಗಳಲ್ಲಿ (ghettos) ಹಿಂಸಾಚಾರ ಮತ್ತು ಆಸ್ತಿಪಾಸ್ತಿಗಳನ್ನು ನಷ್ಟಗೊಳಿಸುವುದು ಮುಂತಾದುವುಗಳಲ್ಲಿ ತೊಡಗಿದರು. ಇವು ೧೯೬೪-೬೮ರ ಅವಧಿಯಲ್ಲಿ ನಡೆದು ಕರಿಯ ಅಮೆರಿಕನ್ನರ ಹತಾಶೆ, ರೋಷಗಳನ್ನು ಅಭಿವ್ಯಕ್ತಿಗೊಳಿಸಿದವು. ಪಕ್ಷಪಾತ ಮತ್ತು ವರ್ಣದ್ವೇಷ ದಕ್ಷಿಣ ರಾಜ್ಯಗಳಿಗೆ ಮಾತ್ರ ಸೀಮಿತವಾಗದೆ ಅವು ರಾಷ್ಟ್ರೀಯ ಸಮಸ್ಯೆ ಗಳೆನ್ನುವುದು ಸಾಬೀತಾಯಿತು. ೧೯೬೪ರ ಜೂನ್ ತಿಂಗಳಲ್ಲಿ ಹಾರ್ಲೆಮ್‌ನಲ್ಲಿ ನಡೆದ ದೊಂಬಿ, ಗಲಭೆ ಇತರ ನಗರಗಳಲ್ಲಿ ನಂತರ ನಡೆದ ಹಿಂಸಾಕೃತ್ಯಗಳಿಗೆ ನಾಂದಿಯಾಯಿತು – ೧೯೬೫ರಲ್ಲಿ ಲಾಸ್ ಏಂಜಲೀಸ್ ನಗರದ ವಾಟ್ಸ್ (Watts) ಬಡಾವಣೆಯಲ್ಲಿ ನಡೆದ ದಂಗೆಯಲ್ಲಿ ೩೫ ಜನರು ಸತ್ತು ಆಸ್ತಿಪಾಸ್ತಿಗಳಿಗೆ ಅಪಾರ ನಷ್ಟ ಉಂಟಾಯಿತು; ೧೯೬೫-೬೮ರ ಅವಧಿಯಲ್ಲಿ ಚಿಕಾಗೊ, ಸ್ಯಾನ್ ಫ್ರಾನ್ಸಿಸ್ಕೊ ಮತ್ತು ಕ್ಲೀವ್‌ಲ್ಯಾಂಡ್ ನಗರಗಳಲ್ಲಿ ಗಲಭೆಗಳಾದವು. ಮಹಾನಗರಗಳ ಕರಿಯರ ಕಿಷ್ಕಿಂಧೆಗಳಲ್ಲಿ (black ghettos) ಬಂದಿಗಳಾಗಿ ಪರಿತಪಿಸುತ್ತಿದ್ದ ಕರಿಯರ ಕೋಪ ಉಕ್ಕಿ ಹರಿದು ಬಿಳಿಯರ ಸಮಾಜ ವ್ಯವಸ್ಥೆಯ ಮೇಲೆ ತನ್ನ ಪ್ರತೀಕಾರ ತೀರಿಸಿಕೊಂಡಿತು. ಇದು ವಿಶೇಷವಾಗಿ

ಬಿಳಿಯ ಸಮಾಜದ ಪ್ರತಿನಿಧಿಗಳಾದ ವ್ಯಾಪಾರ ಸಂಸ್ಥೆಗಳು ಮತ್ತು ಪೊಲೀಸ್ ಪಡೆಗಳ ಮೇಲೆ ಕೇಂದ್ರೀಕೃತವಾಗಿತ್ತು.

ಈ ಗಲಭೆಗಳನ್ನು ಕುರಿತು ಒಂದು ವಿಶಿಷ್ಟ ಸಮಿತಿ ತನಿಖೆ ನಡೆಸಿ ೧೯೬೮ರಲ್ಲಿ ನಡೆದ ಘಟನೆಗಳನ್ನು ಕುರಿತ ರಾಷ್ಟ್ರೀಯ ಸಲಹಾ ಸಮಿತಿಯ ವರದಿ ಪ್ರಕಟಗೊಂಡಿತ್ತು. ಇದರಲ್ಲಿ ಗಲಭೆಗಳು ಬಿಳಿಯರ ಮನೋಭಾವ ಮತ್ತು ವರ್ತನೆಗಳ ಪರಿಣಾಮ ಎನ್ನುವ ತೀರ್ಮಾನ ಒಳಗೊಂಡಿತ್ತು: 'ಬಿಳಿಯ ಅಮೆರಿಕನ್ನರು ಏನನ್ನು ಪೂರ್ತಿ ಅರ್ಥ ಮಾಡಿಕೊಂಡಿಲ್ಲವೋ ಮತ್ತು ಯಾವುದನ್ನು ನೀಗ್ರೋ ಮರೆಯಲಾರನೋ – ಅದು ನಿಜವಾದ ಸಂಗತಿ – ಕರಿಯರ ಕಿಷ್ಕಿಂಧೆಗಳಲ್ಲಿ ಬಿಳಿಯರ ಸಮಾಜವ್ಯವಸ್ಥೆಯ ಕೈವಾಡ ವಿದೆ. ಬಿಳಿಯರ ಸಾಮಾಜಿಕ ಸಂಸ್ಥೆಗಳು ಅವುಗಳನ್ನು ಸೃಷ್ಟಿಸಿದವು; ಅವುಗಳನ್ನು ಉಳಿಸಿಕೊಂಡುಬಂದವರು ಬಿಳಿಯರು; ಬಿಳಿಯ ಸಮಾಜ ಅದಕ್ಕೆ ಮನ್ನಣೆ ನೀಡುತ್ತ ಬಂದಿದೆ'. ಈ ವರದಿ ಸಮಾನತೆ ಮತ್ತು ಸಾಮಾಜಿಕ ನ್ಯಾಯ (social justice) ಅನುಷ್ಠಾನಕ್ಕೆ ತರುವಂತೆ ಕಾಂಗ್ರೆಸ್‌ಗೆ ಆಗ್ರಹಪಡಿಸಿತು. ಇದರ ಪರಿಣಾಮವಾಗಿ ೧೯೬೮ರಲ್ಲಿ ಕಾಂಗ್ರೆಸ್ 'ತೆರೆದ ವಸತಿ ಕಾಯಿದೆ'ಯನ್ನು (open housing law) ಅಂಗೀಕರಿಸಿತು. ಅಧ್ಯಕ್ಷ ಜಾನ್‌ಸನ್ ರಾಷ್ಟ್ರದ ಉನ್ನತ ನ್ಯಾಯಾಲಯಕ್ಕೆ (The Supreme Court) ಮೊಟ್ಟ ಮೊದಲನೆಯ ಕರಿಯ ನ್ಯಾಯಾಧೀಶ – ಥರ್‌ಗುಡ್ ಮಾರ್ಷಲ್‌ನನ್ನು (Thurgood Marshall) ನೇಮಕ ಮಾಡಿದನು.

ಧರಣಿ ಹೂಡುವುದು, ಪ್ರದರ್ಶನ ನಡೆಸುವುದು ಮತ್ತು ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ 'ಸ್ವಾತಂತ್ರ್ಯ ಸವಾರಿ' (freedom rides) ಮಾಡುವುದು ಮುಂತಾದ ವಿಧಾನಗಳನ್ನು ಕೈಗೊಂಡ ದಾಕ್ಷಿಣಾತ್ಯ ಕರಿಯರು ೧೯೬೦ರ ದಶಕದ ಮಧ್ಯಾಂತರದಲ್ಲಿ ಹೊಸದಾಗಿ ಜಾರಿಗೆ ಬಂದ ಪೌರಹಕ್ಕುಗಳ ಕಾಯಿದೆಯನ್ನು ಅನುಷ್ಠಾನಕ್ಕೆ ತರುವ ಪ್ರಯತ್ನದಲ್ಲಿ ನಿರತರಾದರು. ಈ ದೆಸೆಗೆ ತಿರುಗಿದ ಕರಿಯರ ಆಂದೋಳನದಲ್ಲಿ ಅತಿ ಮುಖ್ಯವಾದ ಘಟನೆ ಸಂಭವಿಸಿದ್ದು ೧೯೬೬ರ ಜೂನ್ ತಿಂಗಳಲ್ಲಿ. ಕರಿಯರ ಪ್ರಮುಖ ನಾಯಕರಲ್ಲಿ ಒಬ್ಬರಾದ ಜೇಮ್ಸ್ ಮೆರಿಡಿತ್ (James Meredith) ಮಿಸ್ಸಿಸ್ಸಿಪ್ಪಿ ರಾಜ್ಯಕ್ಕೆ ವಾಪಸ್ಸು ಬಂದು ೨೦೦ ಮೈಲಿಗಳ 'ಭಯ ವಿರುದ್ಧ ಪಾದಯಾತ್ರೆ'ಯನ್ನು ವ್ಯವಸ್ಥೆ ಗೊಳಿಸಿದ ಸಂದರ್ಭದಲ್ಲಿ. ಈ ಪಾದಯಾತ್ರೆಯ ಗುರಿ: ಕರಿಯರು ಭಯವಿಲ್ಲದೆ ಮತ ನೀಡಲು ಮತದಾನ ಕೇಂದ್ರಗಳಿಗೆ ಹೋಗುವಂತೆ ಪ್ರೋತ್ಸಾಹಿಸುವುದಾಗಿತ್ತು. ಪಾದಯಾತ್ರೆ ಪ್ರಾರಂಭವಾಗುತ್ತಿದ್ದಂತೆಯೇ ಯಾರೋ ಹಾರಿಸಿದ ಗುಂಡಿನಿಂದ ಮೆರಿಡಿತ್ ಗಾಯಗೊಂಡನು. ಕೂಡಲೇ ಮಾರ್ಟಿನ್ ಲೂಥರ್‌ಕಿಂಗ್‌ನೂ ಸೇರಿದಂತೆ ಇತರ ಪೌರ ಹಕ್ಕು ಚಳುವಳಿಯ ನಾಯಕರು ಮಿಸ್ಸಿಸ್ಸಿಪ್ಪಿ ರಾಜ್ಯಕ್ಕೆ ಧಾವಿಸಿ ಬಂದು ಪಾದಯಾತ್ರೆಯನ್ನು ಮುಂದುವರಿಸಿದರೂ ಪಾದಯಾತ್ರೆಯಲ್ಲಿ ಆಗಾಗ ಎದುರಿಸಬೇಕಾಗಿ ಬಂದ ಬಿಳಿಯರ

ದಾಳಿ ಮತ್ತು ಹಿಂಸಾಚಾರ ಕೆಲವು ಕರಿಯ ನಾಯಕರು ಅಹಿಂಸಾತ್ಮಕ ಚಳಿವಳಿಯ ಮೂಲಕ ತಮ್ಮ ಧ್ಯೇಯ ಸಾಧಿಸುವ ಬಗ್ಗೆ ಅನುಮಾನ ಪಡುವಂತಾಯಿತು.

ಬಹುತೇಕ ಕರಿಯ ಚಳುವಳಿಗಾರರು ಬಿಳಿಯರ ಮುಂದೆ ತಮ್ಮ ಬೇಡಿಕೆಗಳನ್ನು ಮಂಡಿಸಿ ಅಹಿಂಸಾತ್ಮಕ ವಿಧಾನಗಳಿಂದ ಅವರ ಹೃದಯ ಪರಿವರ್ತನೆ ಮಾಡುವ ಪ್ರಯತ್ನ ವ್ಯರ್ಥವಾದುದು ಎಂಬ ನಿರ್ಧಾರಕ್ಕೆ ಬಂದರು. ಏಕೆಂದರೆ ಇವರು ಮಂಡಿಸಿದ ಬೇಡಿಕೆಗಳಿಗೆ ಪ್ರತಿಯಾಗಿ ಸಿಗುತ್ತಿದ್ದುದು ಹೊಡೆತಗಳು ಇಲ್ಲವೆ ಸಾವು. ಆದ್ದರಿಂದ ಕರಿಯರ ಸಮೂದಾಯಗಳನ್ನು ಕರಿಯರೇ ನಿಯಂತಿಸಬೇಕೆಂಬ ನಿರ್ಧಾರಕ್ಕೆ ಕೆಲವು ಪ್ರಮುಖ ನಾಯಕರು ಬೆಂಬಲ ನೀಡಿದರು. ಇದರಿಂದಾಗಿ 'ಕರಿಯ ಶಕ್ತಿ'ಯ (black power) ಕಲ್ಪನೆ ಆಕರ್ಷಣೀಯವಾಗಿ ಕಂಡು ರಾಷ್ಟ್ರದಾದ್ಯಂತ ಕರಿಯ ಸಮುದಾಯಗಳಲ್ಲಿ ಅದು ವ್ಯಾಪಕವಾಗಿ ಹಬ್ಬಿ ಬೆಳೆಯ ತೊಡಗಿತು. 'ಕರಿಯ ಶಕ್ತಿ'ಯನ್ನು ಬಳಸಿಕೊಂಡು ತಮ್ಮ ಧ್ಯೇಯ ಸಾಧಿಸಬೇಕೆಂದು ನಿರ್ಧರಿಸಿದ ನಾಯಕರಲ್ಲಿ ಅತ್ಯಂತ ಹೆಸರುವಾಸಿಯಾದವನೆಂದರೆ – ಮಾಲ್ಕಂ ಎಕ್ಸ್ (Malcolm X). ಅವನ ಮರಣಾನಂತರ ಪ್ರಕಟಣೆಯಾದ ಅವನ ಆತ್ಮಚರಿತ್ರೆ ಅತ್ಯಂತ ಜನಪ್ರಿಯವಾಗಿ ಉಗ್ರಗಾಮಿಗಳಿಗೆ ಮಾರ್ಗದರ್ಶಿಯಾಯಿತು. ಇವರ ಗಾಢ ನಂಬಿಕೆಯೆಂದರೆ ಕರಿಯರು ಬಿಳಿಯರಿಗೆ ಆರ್ಥಿಕವಾಗಿ ಮತ್ತು ರಾಜಕೀಯ ಪ್ರಾಬಲ್ಯದಲ್ಲಿ ಸಮಾನತೆ ಗಳಿಸಿದಾಗ ಮಾತ್ರ ಅಮೆರಿಕನ್ ಸಮಾಜದಲ್ಲಿ ಅನುಕಲನ ಸಂಭವಿಸುವ ಅವಕಾಶಗಳು ಏರ್ಪಡಬಹುದು ಎನ್ನುವುದು. ಮಾಲ್ಕಂ ಎಕ್ಸ್‌ನು ಬೆಳೆದಿದ್ದು ಬಾಸ್ಟನ್ ನಗರ ಮತ್ತು ಹಾರ್ಲೆಮ್‌ಗಳಲ್ಲಿ. ಅಲ್ಲಿ ಅವನು ಮಾಡಿದ ಅಪರಾಧಗಳಿಗಾಗಿ ಜೈಲುವಾಸ ಅನುಭವಿಸಬೇಕಾಯಿತು. ಸೆರೆಮನೆಯಲ್ಲಿ ಅವನು ಕರಿಯ ಮುಸ್ಲಿಂ ಧರ್ಮದ (Black Muslim Faith) ಪ್ರಭಾವಕ್ಕೊಳಗಾದನು. ಕರಿಯರು ಪ್ರತ್ಯೇಕ ರಾಷ್ಟ್ರ ಸ್ಥಾಪಿಸುವಂತೆ ಈ ಧರ್ಮ ಅವನನ್ನು ಪ್ರೇರೇಪಿಸಿತು. ತಮ್ಮ ಸಮುದಾಯಗಳಲ್ಲಿ ಕರಿಯರು ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ನಿಯಂತ್ರಣ ಪಡೆಯಬೇಕು – ಎನ್ನುವ ಗುರಿ ಸಾಧಿಸಲು ಹಿಂಸಾಕೃತ್ಯಗಳು ಅಗತ್ಯವಾದಾಗ ಅದನ್ನು ಹಿಡಿಯುವುದು ತಪ್ಪಾಗಲಾರದು ಎಂದು ಮಾಲ್ಕಂ ಎಕ್ಸ್ ಪ್ರತಿಪಾದಿಸಿದನು. ಅವನು ಹಜ್ ಯಾತ್ರೆ ಮುಗಿಸಿಬಂದ ನಂತರ ಕರಿಯ ಮುಸ್ಲಿಂ ಮತಧರ್ಮಸ್ಥಾಪಕ ಎಲಿಜ಼ಾ ಮಹಮ್ಮದ್‌ನೊಡನೆ ಭಿನ್ನಾಭಿಪ್ರಾಯ ಬೆಳೆದು ತನ್ನ ಅನುಯಾಯಿಗಳೊಡನೆ ಬೇರೆ ಶಾಖೆಯೊಂದನ್ನು ಹುಟ್ಟುಹಾಕಿದನು. ಇದರಿಂದ ಉದ್ರೇಕಗೊಂಡ ಮಹಮ್ಮದನ ಅನುಯಾಯಿಗಳು ೧೯೬೫ರ ಫೆಬ್ರುವರಿ ತಿಂಗಳಲ್ಲಿ ಮಾಲ್ಕಂ ಎಕ್ಸ್‌ನ ಕೊಲೆ ಮಾಡಿದರು.

ಈ ಕೊಲೆಯಾದ ನಂತರದ ತಲೆಮಾರಿನ ಕರಿಯ ಕಾರ್ಯಕರ್ತರಿಗೆ ಬಿಳಿಯರು ಪೌರಹಕ್ಕುಗಳ ಹೋರಾಟದಲ್ಲಿ ಇನ್ನು ಮುಂದೆ ಭಾಗವಹಿಸಲಾರರು ಎನ್ನುವುದು ಖಚಿತವಾಯಿತು. ಬಿಳಿಯರ ಹಿಂಸಾಚಾರಕ್ಕೆ ಕರಿಯರ ಹಿಂಸಾಚಾರವೆ ಮದ್ದು ಎಂದು

ನಿರ್ಧರಿಸಿದ ಕರಿಯರು ೧೯೬೬ರಲ್ಲಿ 'ಕಪ್ಪು ಚಿರತೆ ಪಕ್ಷ'ವನ್ನು (Black Panther Party) ರಚಿಸಿಕೊಂಡರು. ಕರಿಯರ ಸ್ವಯಂ ಆಡಳಿತ, ಕರಿಯರ ಶಕ್ತಿ (black power) ಮತ್ತು ಇವೆಲ್ಲಕ್ಕಿಂತಲೂ ಮಿಗಿಲಾದ ತಮ್ಮ ಕಪ್ಪುತನದಲ್ಲಿ ಹೆಮ್ಮೆ (pride in being black) ಇವು 'ಕಪ್ಪು ಚಿರತೆ ಪಕ್ಷ' ಧ್ಯೇಯಗಳಾಗಿದ್ದವು. ಇವು ಕರಿಯ ಯುವಕರ ಮೇಲೆ ಪ್ರಭಾವ ಬೀರಿ ಅವರು 'ಕಪ್ಪು ಚಿರತೆಯ' ಪಕ್ಷವನ್ನು ಹೆಚ್ಚು ಸಂಖ್ಯೆಯಲ್ಲಿ ಸೇರಿಕೊಂಡರು.

ಅಹಿಂಸಾತ್ಮಕ ವಿಧಾನಗಳಿಂದ ತಮ್ಮ ಗುರಿ ಸಾಧಿಸಬಹುದು ಎಂದುಕೊಂಡಿದ್ದ ಬಹುಸಂಖ್ಯಾತ ಕರಿಯರ ನಂಬಿಕೆಗಳು ಬುಡಮೇಲಾಗುವ ಘಟನೆ: ೧೯೬೮ರ ಏಪ್ರಿಲ್ ತಿಂಗಳಲ್ಲಿ ನಡೆದ ಮಾರ್ಟಿನ್ ಲೂಥರ್ ಕಿಂಗ್‌ನ ಕೊಲೆ. ಇದಾಗಿದ್ದು ಟೆನ್ನೆಸ್ಸೀ ರಾಜ್ಯದ ಮೆಂಫಿಸ್ ನಗರದಲ್ಲಿ. ಆದರೆ ಅದರ ಪರಿಣಾಮವಾಗಿ ದಂಗೆ, ಬೆಂಕಿ ಹಚ್ಚುವುದು ಮತ್ತು ಲೂಟಿ ಮುಂತಾದ ಹಿಂಸಾಕೃತ್ಯಗಳು ಕಾಳ್ಗಿಚ್ಚಿನಂತೆ ದೇಶದಾದ್ಯಂತ ಹಬ್ಬಿ ಅಪಾರ ಪ್ರಾಣ ಹಾನಿ, ಆಸ್ತಿ ಪಾಸ್ತಿಗಳ ನಷ್ಟ ಉಂಟುಮಾಡಿದವು. ೧೯೬೦ರ ದಶಕದಲ್ಲಿ ಪೌರ ಹಕ್ಕುಗಳ ಕಾಯಿದೆ ಜಾರಿಗೆ ಬಂದಿದ್ದು ಮಹತ್ತರವಾದ ಸಾಧನೆಯಾಗಿದ್ದರೂ ವರ್ಣದ್ವೇಷದ ದಳ್ಳುರಿ ಉರಿಯುತ್ತಲೇ ಇತ್ತು. ಕರಿಯರ ಸಮುದಾಯಗಳಲ್ಲಿ ಭಿನ್ನಾಭಿಪ್ರಾಯಗಳು ಒಗ್ಗಟ್ಟನ್ನು ಮುರಿಯದಿದ್ದರೂ ಕೂಡ ಸಂಖ್ಯಾಬಲದಲ್ಲಿ ಕರಿಯರು ಅತ್ಯಂತ ಬಲಶಾಲಿಯಾದ ಅಲ್ಪಸಂಖ್ಯಾತರಾಗಿದ್ದರು (minority group). ಮತದಾನದ ಹಕ್ಕು ಇವರನ್ನು ಯಾವ ರಾಜಕಾರಣಿಯೂ ಕಡೆಗಣಿಸಲಾರದ ಅಲ್ಪಸಂಖ್ಯಾತರನ್ನಾಗಿ ಮಾಡಿತ್ತು.

೧೯೬೦ರ ದಶಕದ ಅಮೆರಿಕನ್ ಯುವಜನಾಂಗಕ್ಕೆ ಪೌರಹಕ್ಕುಗಳಿಗಾಗಿ ನಡೆಯುತ್ತಿದ್ದ ಹೋರಾಟ ಸಮಾಜದ ಹಳೆಯ ಸಂಪ್ರದಾಯಗಳ ಮೇಲೆ ನಡೆಸಿದ ಮೊದಲನೆಯ ದಾಳಿಯಾಗಿತ್ತು. ಈ ದಶಕದುದ್ದಕ್ಕೂ ಅವರು ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಮತ್ತು ಲಾಗಾಯ್ತಿನಿಂದ ಬಂದಿದ್ದ ಜೀವನಶೈಲಿ, ಸಾಮಾಜಿಕ ಸಂಸ್ಥೆಗಳು (social institutions) ಮತ್ತು ನಡೆ ನುಡಿಗಳನ್ನು ಕಿತ್ತೊಗೆಯುವ ಪ್ರಯತ್ನ ಅವರ ಆಂದೋಳನದ ಅತಿಮುಖ್ಯ ಅಂಶವಾಗಿತ್ತು. ಯುವಜನಾಂಗದ ಅಸಂತುಷ್ಟಿಗೆ ಗುರಿಯಾದ ಮೊದಲನೆಯ ಸಾಮಾಜಿಕ ಸಂಸ್ಥೆ: ಶಿಕ್ಷಣ ವ್ಯವಸ್ಥೆ. ೧೯೫೭ರಲ್ಲಿ ಸೋವಿಯೆಟ್ ಒಕ್ಕೂಟ ಸ್ಪೂಟ್ನಿಕ್‌ನ್ನು ಬಾಹ್ಯಾಕಾಶಕ್ಕೆ ಹಾರಿಸಿಬಿಟ್ಟಲ್ಲಿಂದ ಅಮೆರಿಕನ್ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳ ಪ್ರತಿಭೆ ಮತ್ತು ಸಾಧನೆಗಳಿಗೆ ಮಹತ್ವ ಕೊಡಲಾಯಿತು. ವಿಶಿಷ್ಟ ಪರಿಣತಿ ಮತ್ತು ಪರಿಜ್ಞಾನ ಉಳ್ಳವರಿಗೆ ಬೇಡಿಕೆ ಹೆಚ್ಚಾಯಿತು. ಉತ್ತಮ ಕೆಲಸ ದೊರೆಯಲು ಕಾಲೇಜು ಪದವಿ ಅನಿವಾರ್ಯವಾಯಿತು. ಆದ್ದರಿಂದ ಬಹುತೇಕ ವಿದ್ಯಾರ್ಥಿಗಳು ಕಾಲೇಜು ಸೇರುತ್ತಿದ್ದುದು ಜ್ಞಾನಾರ್ಜನೆಯ ದೃಷ್ಟಿಯಿಂದಲ್ಲ, ಪದವಿ ಪಡೆಯುವ ದೃಷ್ಟಿಯಿಂದ.

ಇದರ ಪರಿಣಾಮ – ವಿದ್ಯಾರ್ಥಿಗಳ ಸಂಖ್ಯೆ ಅಧಿಕಗೊಳ್ಳುತ್ತ ಹೋದುದು. ಇದೇ ಸಮಯದಲ್ಲಿ ಜಾಗತಿಕ ಯುದ್ಧಾನಂತರದ ಅಮೆರಿಕದ ಜನಸಂಖ್ಯೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚು ೩೦ ವರ್ಷ ಪ್ರಾಯಕ್ಕಿಂತಲೂ ಚಿಕ್ಕವರಾಗಿದ್ದರು. ಇಷ್ಟು ಜನಸಂಖ್ಯೆಯ ಯುವಜನದ ವಿದ್ಯಾಭ್ಯಾಸದ ಅಗತ್ಯವನ್ನು ಪೂರೈಸಲು ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಪ್ರವೇಶ ಸಂಖ್ಯೆಯನ್ನು ಹೆಚ್ಚಿಸಿದರು. ಈ ಸಂಸ್ಥೆಗಳು ಸಮರ್ಪಕವಾಗಿ ನಿರ್ವಹಿಸಬಹುದಾದ ಸಂಖ್ಯೆಗಿಂತಲೂ ಅಧಿಕ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡಬೇಕಾಗಿ ಬಂದುದರಿಂದ ಶಿಕ್ಷಣ ಮಟ್ಟವನ್ನು ಕಾಪಾಡಲು ಸಾಧ್ಯವಾಗಲಿಲ್ಲ. ಬದಲಾಗಿ ಅವು ಬರಿ ಪದವಿ ನೀಡುವ ಸಂಸ್ಥೆಗಳಾದವು. ಇದರಿಂದ ವಿದ್ಯೆಯ ಗುಣಮಟ್ಟಗಳು ಕ್ಷೀಣಿಸುತ್ತ ಹೋದವು. ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳ ಸಂಪರ್ಕ ಕಡಿಮೆಯಾಗಿ ಅವರ ನಡುವಣ ಕಂದರ ವಿಸ್ತಾರಗೊಳ್ಳುತ್ತ ಹೋಯಿತು. ಇದು ಬಹತೇಕ ವಿದ್ಯಾರ್ಥಿಗಳಲ್ಲಿ ಪರಕೀಯತೆ ಬೆಳೆಯಲು ಕಾರಣವಾಯಿತು. ವಿಶ್ವವಿದ್ಯಾನಿಲಯಗಳು ಸಾಂಪ್ರದಾಯಿಕ ಪ್ರವೃತ್ತಿ, ಕಾಲಕ್ಕೆ ತಕ್ಕಂತೆ ಬದಲಾಗದ ಶಿಕ್ಷಣ ವ್ಯವಸ್ಥೆ ಮತ್ತು ಮುಕ್ತ ಚಿಂತನೆಗೆ ಅಡೆ ತಡೆಯಾದ ನಿಬಂಧನೆಗಳನ್ನು ವಿರೋಧಿಸಲು ವಿದ್ಯಾರ್ಥಿಗಳ ಪರಕೀಯತೆ ಪ್ರೇರೇಪಿಸಿತು. ವಿದ್ಯಾಸಂಸ್ಥೆಗಳ ಆವರಣ ಗಳಲ್ಲಿ ಅನುಸರಿಸಬೇಕಾದ ನಿಬಂಧನೆಗಳು ಮತ್ತು ಮಾದಕ ವಸ್ತುಗಳ ಉಪಯೋಗವನ್ನು ನಿಷೇಧಿಸುವ ಕಾಯಿದೆಗಳು – ಈ ಎಲ್ಲ ನಿರ್ಬಂಧಗಳ ವಿರುದ್ಧ ವಿದ್ಯಾರ್ಥಿಗಳು ದಂಗೆ ಎದ್ದರು. ಶಿಕ್ಷಣ ಸಂಸ್ಥೆಗಳ ಆಡಳಿತದಲ್ಲಿ ತಮಗೂ ಪಾಲಿರಬೇಕೆಂದು ಆಗ್ರಹಪಡಿಸಿದರು.

೧೯೬೪ರಲ್ಲಿ ಬರ್‌ಕ್ಲೀ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಗಳ ಮೊದಲನೆಯ ದಂಗೆ (revolt) ಸಂಭವಿಸಿತು. ಈ ಘಟನೆ 'ವಾಕ್ ಸ್ವಾತಂತ್ರ್ಯ ಚಳುವಳಿಗೆ' ನಾಂದಿಯಾಯಿತು. ಇದರಲ್ಲಿ ವಿದ್ಯಾರ್ಥಿಗಳಲ್ಲದೆ ಇತರ ಯುವಜನರೂ ಭಾಗವಹಿಸಿದರು. ವಿಶ್ವವಿದ್ಯಾನಿಲಯದ ಕಾರ್ಯಗಳು ಸ್ಥಗಿತಗೊಳ್ಳುವಂತೆ ಮಾಡಲು ವಿವಿಧ ಇಲಾಖೆಗಳ ಮುಂದೆ ಧರಣಿ ಹೂಡುವುದು, ಕೆಟ್ಟ ಪದಗಳನ್ನುಪಯೋಗಿಸಿ ಭಾಷಣ ಮಾಡುವುದು ಮುಂತಾದ ವಿಧಾನಗಳಿಂದ ವಿಶ್ವವಿದ್ಯಾನಿಲಯದ ಕಾರ್ಯಾಚರಣೆಗೆ ತಡೆಯೊಡ್ಡುವುದು, ಇವರ ಚಳುವಳಿಯ ಮುಖ್ಯ ಗುರಿಯಾಗಿತ್ತು. ಹೀಗೆ ಪ್ರಾರಂಭವಾದ ಚಳುವಳಿ ಅಮೆರಿಕದ ಇತರ ವಿದ್ಯಾಸಂಸ್ಥೆಗಳಿಗೆ ತೀವ್ರಗತಿಯಲ್ಲಿ ಹರಡಿ ೬೦ರ ದಶಕದ ಅಂತ್ಯಭಾಗದಲ್ಲಿ ವಿದ್ಯಾರ್ಥಿಗಳ ರಾಷ್ಟ್ರೀಯ ಚಳುವಳಿಯಾಗಿ ಬೆಳೆಯಿತು. ಬರ್‌ಕ್ಲೀ ವಿಶ್ವವಿದ್ಯಾನಿಲಯದ ಚಳುವಳಿ ನೂರಾರು ವಿದ್ಯಾರ್ಥಿಗಳ ಬಂಧನ ಮತ್ತು ವಿಶ್ವವಿದ್ಯಾನಿಲಯದ ಅಧ್ಯಕ್ಷರ ಬಲವಂತ ರಾಜೀನಾಮೆಯಲ್ಲಿ ಪರ್ಯಾವಸಾನಗೊಂಡಿತು.

ಯುವಜನರ ಈ ಅಸಂತುಷ್ಟಿ ಶಿಕ್ಷಣ ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಅವರಲ್ಲಿ ತಾವು ಪ್ರತ್ಯೇಕವಾದ ಹಾಗೂ ಅಪೂರ್ವವಾದ, ಸಂಪ್ರದಾಯ ಸಂಸ್ಕೃತಿಗೆ ಪ್ರತಿ ಸಂಸ್ಕೃತಿಗೆ (counter culture) ಸೇರಿದವರು ಎನ್ನುವ ಭಾವನೆಯನ್ನು ಬೆಳೆಸಿಕೊಂಡರು. ಪ್ರತಿ

ಸಂಸ್ಕೃತಿಯ ಮೂಲತತ್ವಗಳು: ಪಾಶ್ಚಿಮಾತ್ಯ ಸಾಂಪ್ರದಾಯಿಕ ಮೌಲ್ಯಗಳನ್ನು ಮತ್ತು ನಂಬಿಕೆಗಳನ್ನು ತ್ಯಜಿಸುವುದು; ಬದುಕಿನ ಹೊಸ ಅರ್ಥದ ಹುಡುಕಾಟ; ಹೊಸ ಶೈಲಿಯ ಜೀವನ ನಡೆಸುವುದು; ಸುಖ ಸಂತೋಷಗಳನ್ನರಸುವುದೆ ಬದುಕಿನ ಗುರಿ ಎಂದು ಭಾವಿಸುವುದು; ಹೊರಪ್ರಪಂಚದಿಂದ ದೂರವಾಗಿ ತಮ್ಮದೇ ಆದ ಪ್ರಪಂಚ ಸೃಷ್ಟಿಸಿಕೊಳ್ಳುವುದು. ಹಿಪ್ಪಿಗಳಾಗಿ (hippie) ಮಾದಕವಸ್ತುಗಳ ಸೇವನೆ, ಸಮುದಾಯ ಜೀವನ (communal living) ಮತ್ತು ರಾಕ್ ಸಂಗೀತಕ್ಕೆ (rock music) ಮೈಮರೆತು ಕುಣಿಯುವುದು – ಇವು ಪ್ರತಿ ಸಂಸ್ಕೃತಿಯ ಗುಣವಿಶೇಷಗಳು. ಇದರ ಇನ್ನೊಂದು ಮಗ್ಗಲು ಸಾಂಪ್ರದಾಯಿಕ ರಾಜಕೀಯ ವ್ಯವಸ್ಥೆಯ ವಿರುದ್ಧ ಪಣತೊಟ್ಟು ಹೋರಾಟ ನಡೆಸುವುದು. ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಗಳಲ್ಲದ ಯುವಜನರು ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯನ್ನು ಖಂಡಿಸಿ ವಾಮಪಂಥೀಯ ಸಮಾಜಪ್ರಜ್ಞೆಯನ್ನು ಬೆಳೆಸಿಕೊಳ್ಳುವಂತೆ ಸಾರ್ವಜನಿಕರಿಗೆ ಕರೆಯಿತ್ತರು. ಅಧ್ಯಕ್ಷ ಜಾನ್‌ಸನ್‌ನ ಮಹಾಸಮಾಜ ಕಲ್ಪನೆ ಪೂರ್ಣವಾಗಿ ಕಾರ್ಯಗತವಾಗದೆ ನಿರಾಶೆಗೊಂಡ ಯುವಜನರು ಈ ರೀತಿ ವಾಮಪಂಥವನ್ನರಸಿ ಹೋಗುವಂತಾಯಿತು.

ಶಾಂತಿ ಚಳುವಳಿ (The Peace Movement)

ಕೆನಡಿ ಆಡಳಿತದಲ್ಲಿ ವಿಸ್ತಾರಗೊಂಡ ವಿಯಟ್‌ನಾಮ್ ಯುದ್ಧ ಅಮೆರಿಕನ್ನರಲ್ಲಿ ಒಡಕು ಹುಟ್ಟಿಸಿತು. ಯುದ್ಧವನ್ನು ಬೆಂಬಲಿಸುವವರು, ಪ್ರಪಂಚದಲ್ಲಿ ಎಲ್ಲಿ ಕಮ್ಯೂನಿಸ್ಟರು ಆಕ್ರಮಣ ಮಾಡಿದರೂ ಅದನ್ನು ತಡೆಯುವ ಜವಾಬ್ದಾರಿ ಅಮೆರಿಕದ್ದು ಎಂದು ಪ್ರತಿಪಾದಿಸಿದರು. ಆದರೆ ವಿದ್ಯಾರ್ಥಿಗಳು ಮತ್ತು ಧಾರಾಳ ಮನೋಭಾವದವರು (liberals) ಯುದ್ಧವನ್ನು ಖಂಡಿಸಿದರು. ಸರ್ಕಾರದ ವಿಯಟ್‌ನಾಮ್ ಯುದ್ಧದ ಧೋರಣೆಯನ್ನು ಖಂಡಿಸಿದವರು ಆ ಯುದ್ಧ ವಿಯಟ್‌ನಾಮ್ ಜನತೆಯ ಅಂತರ್ಯುದ್ಧ, ಅದರಲ್ಲಿ ಅಮೆರಿಕ ಒಂದು ಪಕ್ಷವನ್ನು ಬೆಂಬಲಿಸುವುದು ನ್ಯಾಯವಲ್ಲ ಎಂದು ವಾದಿಸಿದರು. ಸೆನೆಟ್‌ಅಂಗವಾದ ಅಂತರರಾಷ್ಟ್ರೀಯ ಸಂಬಂಧಗಳ ಸಮಿತಿಯ ಅಧ್ಯಕ್ಷನಾಗಿದ್ದ ವಿಲಿಯಂ ಫುಲ್‌ಬ್ರೈಟ್‌ನ (William Fulbright) ಅಭಿಪ್ರಾಯದಲ್ಲಿ ವಿಯಟ್‌ಕಾಂಗ್ ಮತ್ತು ಅದರ ಅಂಗವಾದ ರಾಷ್ಟ್ರೀಯ ವಿಮೋಚನಾ ಮುಂಚೂಣಿ (NFL) ದಕ್ಷಿಣ ವಿಯಟ್‌ನಾಮ್ ಜನರ ರಾಷ್ಟ್ರೀಯ ಆಂದೋಳನದ ಸಾಧನಗಳು. ಅವರಿಗೆ ಉತ್ತರ ವಿಯಟ್‌ನಾಮ್ ಜನತೆ ಸ್ವಲ್ಪ ಸಹಾಯ ಮಾಡಿರಬಹುದು. ಈ ಸಹಾಯ ಅಮೆರಿಕದ ಬಾಂಬ್ ದಾಳಿಯ ನಂತರ ಇನ್ನೂ ಹೆಚ್ಚಾಯಿತು. ದಕ್ಷಿಣ ವಿಯಟ್‌ನಾಮ್ ಯಶಸ್ವಿಯಾದುದಕ್ಕೆ ಕಾರಣ ವಿಯಟ್‌ಕಾಂಗ್ ಸೈನ್ಯಕ್ಕೆ ಬಹುತೇಕ ದಕ್ಷಿಣ ವಿಯಟ್‌ನಾಮ್ ಜನರ ಬೆಂಬಲವಿದ್ದುದರಿಂದ. ಆಗ್ನೇಯ ಏಷ್ಯಾ ರಾಷ್ಟ್ರಗಳೆಲ್ಲ ಕಮ್ಯೂನಿಸ್ಟ್ ವಶವಾಗಿ ಚೈನಾ ದೇಶದ ಆಡಳಿತಕ್ಕೆ ಒಳಪಡುತ್ತವೆ ಎನ್ನುವ ವಾದ ಆಧಾರವಿಲ್ಲದ್ದು. ಏಕೆಂದರೆ ವಿಯಟ್‌ನಾಮ್ ಜನರು ಸ್ವಾತಂತ್ರ್ಯಪ್ರಿಯರು. ಅವರು ಚೈನಾ ದೇಶದ ಆಡಳಿತವನ್ನು

ಎಂದಿಗೂ ಒಪ್ಪಿಕೊಳ್ಳಲಾರರು ಎಂದು ಫುಲ್‌ಬ್ರೈಟ್ ಯುದ್ಧ ಮುಂದುವರಿಸುವುದನ್ನು ಖಂಡಿಸಿದನು.

ಇನ್ನೂ ಕೆಲವರು ಮನವೀಯ ದೃಷ್ಟಿಯಿಂದ ಯುದ್ಧವನ್ನು ಅಮಾನುಷ ಕೃತ್ಯವೆಂದು ಖಂಡಿಸಿದರು. ವ್ಯಾಪಕವಾದ ಬಾಂಬ್ ದಾಳಿ ಮತ್ತು ನಾಪಾಮ್ (Napalm) ಮುಂತಾದ ಮಾರಕ ಅಸ್ತ್ರಗಳ ಬಳಕೆ, ಯೋಧರಲ್ಲದ ಸಾಮಾನ್ಯ ಪ್ರಜೆಗಳ ಸಾಮೂಹಿಕ ಹತ್ಯೆ, ಸಾವಿರಾರು ಜನ ಸಾಮಾನ್ಯರನ್ನು ಮನೆ ಮಠ ಕಳೆದುಕೊಂಡ ನಿರ್ಗತಿಕರನ್ನಾಗಿ ಮಾಡುವುದು ಕ್ರೌರ್ಯದ ಪರಮಾವಧಿ ಎಂದು ಇವರು ನಿಂದಿಸಿದರು. ದೂರದರ್ಶನದಲ್ಲಿ ಯುದ್ಧರಂಗದ ಕ್ರೌರ್ಯ, ಸಾವು ನೋವುಗಳನ್ನು ಪ್ರತ್ಯಕ್ಷವಾಗಿ ಕಂಡ ಅಮೆರಿಕನ್ನರು ನಿಬ್ಬೆರಗಾದರು. ಅಲ್ಲದೆ ಸಾವಿರಾರು ಸಂಖ್ಯೆಯಲ್ಲಿ ಹತರಾಗುತ್ತಿದ್ದ ಅಮೆರಿಕನ್ ಸೈನಿಕರ ಪ್ರಾಣಹಾನಿಯನ್ನು ಕಣ್ಣಾರೆ ಕಂಡ ಜನರ ಮನಸ್ಸು ವಿಚಲಿತವಾಯಿತು. ಯುದ್ಧ ನಿರರ್ಥಕವಾದುದು ಎನ್ನುವ ಭಾವನೆ ಜನರಲ್ಲಿ ವ್ಯಾಪಕವಾಗಿ ಮೂಡಿತು. ಯುದ್ಧವಿರೋಧಿ ಉಗ್ರಗಾಮಿಗಳು ಇದನ್ನು ಹೇಗಾದರೂ ನಿಲ್ಲಿಸಲೇಬೇಕೆಂದು ಪಣತೊಟ್ಟು, ಈ ಯುದ್ಧ ಸಾಮ್ರಾಜ್ಯಶಾಹಿಯ ದಬ್ಬಾಳಿಕೆ ಎಂದು ಜರಿದು, ಇದು ಅಮೆರಿಕನ್ ಸರ್ಕಾರ ಜಗತ್ತಿನ ಮೇಲೆ ಪ್ರಭುತ್ವ ಸಾಧಿಸಲು ಯೋಜಿಸಿದ ಕುತಂತ್ರವೆಂದು ಪ್ರಚಾರ ಮಾಡಿದರು.

೧೯೬೦ರ ದಶಕದ ಮಧ್ಯದಲ್ಲಿ ಯುದ್ಧವಿರೋಧಿಗಳ ಸಂಖ್ಯೆ ಅಧಿಕವಾಗಿ ರಾಜಕೀಯ ಪ್ರಾಬಲ್ಯ ಗಳಿಸಿಕೊಂಡಿತು. ೧೯೬೫ರ ನವೆಂಬರ್ ತಿಂಗಳಲ್ಲಿ ೩೦ ಸಾವಿರ ಜನರು ರಾಜಧಾನಿ ವಾಷಿಂಗ್‌ಟನ್‌ಗೆ ತಮ್ಮ ಯುದ್ಧವಿರೋಧವನ್ನು ಪರಿಣಾಮಕಾರಿಯಾಗಿ ಪ್ರದರ್ಶಿಸಲು ಪಾದಯಾತ್ರೆಯಲ್ಲಿ ಭಾಗವಹಿಸಿದರು. ಶಾಂತಿ ಚಳುವಳಿ ವಿಶ್ವವಿದ್ಯಾನಿಲಯಗಳಿಗೆ ಕೂಡಲೇ ಹರಡಿ ವಿದ್ಯಾರ್ಥಿಗಳು ಈ ವಿರೋಧದ ಪ್ರದರ್ಶನಗಳಲ್ಲಿ ಮತ್ತು ಕಾನೂನು ಉಲ್ಲಂಘನೆ ಮಾಡುವುದರಲ್ಲಿ ನಿರತರಾದರು. ಮಿಲಿಟರಿಗೆ ಸಂಬಂಧಿಸಿದ ಸಂಶೋಧನೆಗಳನ್ನು ನಿಲ್ಲಿಸುವಂತೆ ವಿಶ್ವವಿದ್ಯಾನಿಲಯಗಳ ಮೇಲೆ ಒತ್ತಾಯ ಹೇರಿದರು. ಯುದ್ಧಕ್ಕೆ ಆಯ್ಕೆಯಾದವರು ಸರ್ಕಾರ ಕಳುಹಿಸಿದ ಆಜ್ಞಾಚೀಟಿಗಳನ್ನು ಸುಡುವುದು, ಸೈನ್ಯಕ್ಕೆ ಆಯ್ಕೆ ಮಾಡುವ ಕಛೇರಿಯನ್ನು ಸುತ್ತುವರಿದು ಕಛೇರಿಯ ಕೆಲಸಕ್ಕೆ ಅಡಚಣೆ ತರುವುದ – ಇವು ವಿದ್ಯಾರ್ಥಿಗಳ ಭ್ರಮನಿರಸನದ ಅಭಿವ್ಯಕ್ತಿಗಳಾದವು. 'ವಿದ್ಯಾರ್ಥಿಗಳ ಪ್ರಜಾಪ್ರಭುತ್ವ ಸಮಾಜ' (Students for a Democratic Society) ಎನ್ನುವ ವಿದ್ಯಾರ್ಥಿ ಸಂಘ ವಿದ್ಯಾರ್ಥಿಗಳ ಅಭಿಪ್ರಾಯಗಳನ್ನು ಪ್ರಚುರಪಡಿಸಲು ತರಗತಿಗಳನ್ನು ಪ್ರಾರಂಭಿಸಿತು.

ಶಾಂತಿ ಚಳುವಳಿ ವಿಯಟ್‌ನಾಮ್ ಯುದ್ಧದ ಬಗ್ಗೆ ಸರ್ಕಾರದ ಧೋರಣೆಯನ್ನು ಬದಲಾಯಿಸುವುದರಲ್ಲಿ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿತ್ತುಎನ್ನುವುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ವಿದ್ಯಾರ್ಥಿ ಚಳುವಳಿ ಹಿಂಸಾಕೃತ್ಯಗಳಿಗೆ ಕಾರಣವಾದ

ಎಷ್ಟೋ ಸಂದರ್ಭಗಳು – ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿ ಪ್ರಜಾಪ್ರಭುತ್ವ ಸಂಘದವರು ಮತ್ತು ಕರಿಯ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದ ಕಟ್ಟಡಗಳಲ್ಲಿ ದಟ್ಟಣಿಸಿ ಸೇರಿ, ಚರ್ಚೆಗೆ ಅವಕಾಶವಿಲ್ಲದ ಬೇಡಿಕೆಗಳ ಪಟ್ಟಿಯನ್ನು ಆಡಳಿತ ವರ್ಗದವರಿಗೆ ಕೊಟ್ಟು, ಅವುಗಳು ಈಡೇರಿಕೆಯಾಗುವವರೆಗೂ ಚಳುವಳಿ ಮುಂದುವರಿಸುವ ಬೆದರಿಕೆ ಹಾಕಿದ್ದ – ಇಂಥ ಹಿಂಸಾಕೃತ್ಯಗಳಿಂದ ವಿದ್ಯಾರ್ಥಿ ಚಳುವಳಿ ಸಾರ್ವಜನಿಕರ ಬೆಂಬಲ ಕಳೆದುಕೊಂಡಿತು. ಶಾಂತಿ ಚಳುವಳಿ ೧೯೬೮ನೆಯ ವರ್ಷ ನಡೆದ ಚುನಾವಣೆಯಲ್ಲಿ ವಿಯಟ್‌ನಾಮ್ ಸಮಸ್ಯೆ ಮತ್ತು ಆಂತರಿಕ ಆಂದೋಳನಗಳನ್ನು ಕುರಿತಾದ ವಿಷಯಗಳು ರಾಜಕೀಯ ಪಕ್ಷಗಳ ವಿಚಾರ ವೇದಿಕೆಯ ಪ್ರಮುಖ ವಿಷಯಗಳಾಗುವಂತೆ ಮಾಡಲು ಕಾರಣವಾಯಿತು. ವಿಯಟ್‌ನಾಮ್ ಯುದ್ಧ ವಿರೋಧ ಚಳುವಳಿ, ಅಧ್ಯಕ್ಷ ಜಾನ್‌ಸನ್ ಮರುಚುನಾವಣೆಗೆ ನಿಲ್ಲದೆ ಹೋದುದಕ್ಕೆ ಮುಖ್ಯ ಕಾರಣವಾಗಿತ್ತು. ೧೯೬೪ರಲ್ಲಿ ಇದ್ದ 'ರಾಷ್ಟ್ರೀಯ ಒಮ್ಮತ' ೧೯೬೮ರಲ್ಲಿ ಒಡೆದು ಚೂರಾಗಿತ್ತು. ಅಮೆರಿಕ ಆಶಾವಾದವನ್ನು ಕಳೆದುಕೊಂಡು ಒಗ್ಗಟ್ಟಿಲ್ಲದೆ, ಗುಂಪುಗಳ ಒಳಜಗಳ ಮತ್ತು ಬಗೆಹರಿಯದ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಮಸ್ಯೆಗಳ ಕಳ್ಳುಸುಕಿನಲ್ಲಿ ಸಿಕ್ಕು ಮೇಲೆದ್ದು ಬರಲು ಸಾಹಸಪಡುವ ಸ್ಥಿತಿಯಲ್ಲಿತ್ತು.

೧೯೬೮ರ ಚುನಾವಣೆ

ಈ ಚುನಾವಣೆಯಲ್ಲಿ ಎರಡು ಪಕ್ಷಗಳ ಪ್ರಚಾರವೇದಿಕೆಗಳಲ್ಲಿ ಉದ್ವೇಗದಿಂದ ಚರ್ಚೆ ನಡೆಯಲು ಕಾರಣವಾದ ಎರಡು ಪ್ರಮುಖ ವಿಷಯಗಳು: ವಿಯಟ್‌ನಾಮ್ ಯುದ್ಧ ಮತ್ತು ದೊಡ್ಡ ನಗರಗಳಲ್ಲಿ ನಡೆಯುತ್ತಿದ್ದ ಹಿಂಸಾಕೃತ್ಯಗಳು. ವಿಯಟ್‌ನಾಮ್ ಯುದ್ಧಕ್ಕೆ ವಿರೋಧ ವ್ಯಾಪಕವಾಗಿತ್ತು. ಯುದ್ಧಕ್ಕೆ ಸಂಬಂಧಿಸಿದ ಸರ್ಕಾರದ ಧೋರಣೆಗಳು ಚುನಾವಣಾ ವೇದಿಕೆಗಳ ಆಸಕ್ತಿಯನ್ನು ಕೆರಳಿಸಿದ್ದವು. ವ್ಯಾಪಾರಿಗಳು, ಉದ್ದಿಮೆಗಾರರು ಮತ್ತು ಬಹುತೇಕ ಸಾರ್ವಜನಿಕರು ಈ ಯುದ್ಧದಿಂದ ಅಮೆರಿಕದ ಆರ್ಥಿಕ ವ್ಯವಸ್ಥೆಯ ಮೇಲೆ ಉಂಟಾದ ದುಷ್ಪರಿಣಾಮಗಳ ಬಗ್ಗೆ ಕಳವಳಗೊಂಡಿದ್ದರು. ವಿದ್ಯಾರ್ಥಿಗಳು ಯುದ್ಧವನ್ನು ನೈತಿಕ ಮತ್ತು ಮಾನವೀಯ ದೃಷ್ಟಿಗಳಿಂದ ವಿರೋಧಿಸುತ್ತಿದ್ದರೂ ಅವರ ವಿರೋಧ ಕಡ್ಡಾಯವಾಗಿ ಸೈನ್ಯಕ್ಕೆ ನೋಂದಾಣಿಕೆ ಮಾಡಿಕೊಳ್ಳುವ ಸರ್ಕಾರದ ಆಜ್ಞೆಯನ್ನು ಕುರಿತದ್ದಾಗಿತ್ತು. ಮೇಲಾಗಿ ಈ ಯುದ್ಧ ನಿಷ್ಪ್ರಯೋಜಕವಾದುದು; ಪರರಾಷ್ಟ್ರದ ಆಂತರಿಕ ಸಮಸ್ಯೆಯನ್ನು ಬಗೆಹರಿಸಲು ಅಮೆರಿಕನ್ನರನ್ನು ಬಲಿ ಕೊಡುವುದು ಅಸಂಬದ್ಧವಾಗಿ ತೋರಿತು. ೧೯೬೭ರಲ್ಲಿ ವಿಯಟ್‌ನಾಮ್ ಯುದ್ಧವನ್ನು ತೀವ್ರವಾಗಿ ಖಂಡಿಸುತ್ತಿದ್ದ ಮಿನೆಸೋಟಾ ಸೆನೆಟರ್ ಯೂಜೀನ್ ಮೆಕಾರ್ಥಿ (Eugene McCarthy) ಡೆಮೊಕ್ರಾಟಿಕ್ ಪಕ್ಷದ ಪರವಾಗಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಾಗಿ ಹೇಳಿಕೆ ನೀಡಿದನು. ಇದರಿಂದಾಗಿ ಯುದ್ಧ ವಿರೋಧಿ ಆಂದೋಳನಕ್ಕೆ ಸಮರ್ಥ ನಾಯಕನೊಬ್ಬ ದೊರಕಿದಂತಾಯಿತು. ಇದು ಅವನಿಗೆ ಬೆಂಬಲ ಹೆಚ್ಚುವುದಕ್ಕೂ ಕಾರಣವಾಯಿತು. ೧೯೬೮ರ

ಮೊದಲಲ್ಲಿ ನಡೆದ 'ಟೆಟ್ ದಾಳಿ' ಯ (Tet offensive) ಅಂತರ ಮೆಕಾರ್ಥಿಯ ಪ್ರಾಬಲ್ಯ ಮತ್ತೂ ಹೆಚ್ಚಿತು. ಸಾವಿರಾರು ವಿದ್ಯಾರ್ಥಿಗಳು ಸ್ವಯಂಸೇವಕರಾಗಿ ಮೆಕಾರ್ಥಿಯ ಚುನಾವಣೆಯ ಪ್ರಚಾರದಲ್ಲಿ ಭಾಗವಹಿಸಿದರು. ಈ ಶ್ರಮದಿಂದಾಗಿ ರಾಜ್ಯಮಟ್ಟದ ಚುನಾವಣೆಯಲ್ಲಿ ಮೆಕಾರ್ಥಿ ಶೇಕಡಾ ೪೩ ಭಾಗ ಮತಗಳನ್ನು ಪಡೆದು ತನ್ನ ರಾಜಕೀಯ ಪ್ರಭಾವ ಪ್ರದರ್ಶಿಸಿದನು. ಇದಾದ ಎರಡು ವಾರಗಳ ನಂತರ ಅಧ್ಯಕ್ಷ ಜಾನ್‌ಸನ್ ತಾನು ಮರುಚುನಾವಣೆಗೆ ನಿಲ್ಲುವುದಿಲ್ಲ ಎಂಬ ನಿರ್ಧಾರವನ್ನು ಬಹಿರಂಗಪಡಿಸಿದನು. ಇದಕ್ಕೆ ಮುಬರುವ ವಿಸ್‌ಕಾನ್‌ಸಿನ್ ಚುನಾವಣೆಯಲ್ಲಿ ಮೆಕಾರ್ಥಿಗೆ ತಾನು ಸೋಲ ಬೇಕಾಗಬಹುದು ಎನ್ನುವ ಆತಂಕವೂ ಇದ್ದಿರಬಹುದು.

ಜಾನ್‌ಸನ್ ಮರುಚುನಾವಣೆಗೆ ನಿಲ್ಲುವುದಿಲ್ಲ ಎಂದ ತಿಳಿದ ನಂತರ ಡೆಮೊಕ್ರಾಟಿಕ್ ಪಕ್ಷದೊಳಗೆ ನಾಮಕರಣ ಪಡೆಯಲು ತೀವ್ರ ಸ್ಪರ್ಧೆ ಉಂಟಾಯಿತು. ನ್ಯೂ ಹ್ಯಾಂಪ್‌ಶೈರ್ (New Hampshire) ಚುನಾವಣೆಯಲ್ಲಿ ಮೆಕಾರ್ಥಿ ಜಯಗಳಿಸಿದ್ದರಿಂದ ರಾಬರ್ಟ್ ಕೆನಡಿ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದನು. ಸ್ಪರ್ಧೆಯ ಬಿಸಿ ಏರಿ ಕ್ಯಾಲಿಫೋರ್ನಿಯಾದ ಪ್ರಾಥಮಿಕ ಚುನಾವಣೆಯಲ್ಲಿ ಪರಾಕಾಷ್ಠೆ ಮುಟ್ಟಿತು. ಅದರಲ್ಲಿ ರಾಬರ್ಟ್ ಕೆನಡಿ ಬಹು ಸಣ್ಣ ಅಂತರದಿಂದ ಗೆದ್ದನು. ಇದಕ್ಕಾಗಿ ಅವನನ್ನು ಗೌರವಿಸುವ ಸಮಾರಂಭದಲ್ಲಿ ಭಾಗವಹಿಸಿ ಹಿಂತಿರುಗುತ್ತಿದ್ದ ಅವನು ಹಂತಕನೊಬ್ಬನ ಗುಂಡಿಗೆ ಬಲಿಯಾದನು. ಅರಬ್ ರಾಷ್ಟ್ರೀಯನಾದ ಸಿರ್‌ಹಾನ್ ಎಂಬುವನೇ ಕೊಲೆಗಾರ. ರಾಬರ್ಟ್ ಕೆನಡಿಯ ಕೊಲೆ ಡೆಮೊಕ್ರಾಟಿಕ್ ಪಕ್ಷದ ನಾಮಕರಣ ಸಮಾವೇಶಕ್ಕೆ ಮುಂಚೆ ಜರುಗಿದ ಅತಿ ಮಹತ್ವದ ಘಟನೆ. ಪಕ್ಷದ ಪ್ರಮುಖರಲ್ಲಿ ಉಳಿದವನೆಂದರೆ ಉಪಾಧ್ಯಕ್ಷನಾಗಿದ್ದ ಹ್ಯೂಬರ್ಟ್ ಹಂಫ್ರಿ (Hubert Humphrey). ಅವನು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುತ್ತೇನೆಂದು ಪ್ರಕಟಿಸುವ ಹೊತ್ತಿಗೆ ಬಹಳ ತಡವಾಗಿ ಮೆಕಾರ್ಥಿಯನ್ನು ಸಮರ್ಥವಾಗಿ ಎದುರಿಸುವ ಕಾಲ ಮೀರಿತ್ತು.

ಚಿಕಾಗೋ ನಗರದಲ್ಲಿ ನಡೆದ ಡೆಮೊಕ್ರಾಟಿಕ್ ಪಕ್ಷದ ನಾಮಕರಣ ಸಮಾವೇಶ ಕಹಿ ವಾತಾವರಣ, ನಿರಾಸೆ ಮತ್ತು ಹಿಂಸಾಕೃತ್ಯಗಳಿಂದ ಅಸ್ತವ್ಯಸ್ತವಾಯಿತು. ಸಾವಿರಾರು ಯುದ್ಧವಿರೋಧಿಗಳು ದೇಶದ ನಾನಾ ಕಡೆಗಳಿಂದ ಬಂದು ಸಮಾವೇಶದ ಅವಧಿಯ ಪೂರ್ಣ ಪ್ರದರ್ಶನ ನಡೆಸಿದರು. ಪ್ರದರ್ಶನಕಾರರನ್ನು ಲಾಟಿಗಳಿಂದ ಥಳಿಸಿ, ಅಶ್ರುವಾಯು ಉಪಯೋಗಿಸಿ ದಮನ ಮಾಡಲು ಪೊಲೀಸರು ಪ್ರಯತ್ನಿಸಿದರು. ಹೊರಗೆ ಪ್ರದರ್ಶನ, ಗಲಭೆ ಮತ್ತು ಪೊಲೀಸರ ದಾಳಿ ನಡೆಯುತ್ತಿದ್ದಂತೆ ಸಮಾವೇಶದಲ್ಲಿ ಸದಸ್ಯರು ಹ್ಯೂಬರ್ಟ್ ಹಂಫ್ರಿಯನ್ನು ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ನಾಮಕರಣ ಮಾಡಿದರು. ಮೇಯ್ನ್ ರಾಜ್ಯದ ಸೆನೆಟರ್ ಎಡ್‌ಮಂಡ್ ಮಸ್ಕಿಯನ್ನು (Edmund Muskie) ಹಂಫ್ರಿ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ದುಕೊಂಡನು.

ಡೆಮೊಕ್ರಾಟಿಕ್ ಪಕ್ಷದ ಸಮಾವೇಶಕ್ಕೆ ಹೋಲಿಸಿದರೆ ರಿಪಬ್ಲಿಕನ್ ಸಮಾವೇಶ ಹೆಚ್ಚಿನ ತೊಂದರೆಯಿಲ್ಲದೆ ನಡೆಯಿತು. ೧೯೬೨ರಲ್ಲಿ ಕ್ಯಾಲಿಫೋರ್ನಿಯಾದ ಗವರ್ನರ್ ಚುನಾವಣೆಯಲ್ಲಿ ಸೋತಿದ್ದ ರಿಚರ್ಡ್ ನಿಕ್ಸನ್‌ನ ರಾಜಕೀಯ ವೃತ್ತಿಜೀವನ ಮುಗಿದಂತೆ ಕಂಡುಬಂದಿತ್ತು. ಸೋತರೂ ಅವನು ರಾಜಕೀಯವನ್ನು ಬಿಡದೆ ೧೯೬೪ ಮತ್ತು ೧೯೬೬ರ ಚುನಾವಣೆಗಳಲ್ಲಿ ರಿಪಬ್ಲಿಕನ್ ಅಭ್ಯರ್ಥಿಗಳ ಪರವಾಗಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದನು. ಇದರಿಂದಾಗಿ ಪಕ್ಷದ ಬಹುತೇಕ ಸದಸ್ಯರ ಬೆಂಬಲ ಗಳಿಸಿಕೊಂಡನು. ೧೯೬೮ರ ಚುನಾವಣೆಯಲ್ಲಿ ಡೆಮೊಕ್ರಾಟಿಕ್ ಪಕ್ಷದ ಗೊಂದಲ ಪರಿಸ್ಥಿತಿ ನಿಕ್ಸನ್ ಅಧ್ಯಕ್ಷ ಸ್ಥಾನಕ್ಕೆ ನಾಮಕರಣಗೊಳ್ಳಲು ಸಹಾಯಕವಾಯಿತು. ಉಪಾಧ್ಯಕ್ಷಸ್ಥಾನಕ್ಕೆ ಅವನು ಮೇರಿ ಲ್ಯಾಂಡ್ ರಾಜ್ಯದ ಗವರ್ನರ್ ಆಗಿದ್ದ ಸ್ಪಿರೋ ಆ್ಯಗ್‌ನ್ಯೂನನ್ನು (Spiro Agnew) ಆಯ್ಕೆ ಮಾಡಿದನು. ಆ್ಯಗ್‌ನ್ಯೂ ರಿಪಬ್ಲಿಕನ್ ಪಕ್ಷದ ಅನೇಕರಿಗೆ ಪರಿಚಯವಿರಲಿಲ್ಲ. ಆದರೆ ದಕ್ಷಿಣ ರಾಜ್ಯಗಳಲ್ಲಿ ಮತಗಳಿಸಲು ಅವನು ಸಹಾಯ ಮಾಡಬಹುದೆಂದು ನಿಕ್ಸನ್ ನಂಬಿದ್ದನು. ನಿಕ್ಸನ್ ಚುನಾವಣಾ ಪ್ರಚಾರದಲ್ಲಿ ವಿಯಟ್‌ನಾಮ್ ಯುದ್ಧವನ್ನು ನಿಲ್ಲಿಸುವ ಮತ್ತು ರಾಷ್ಟ್ರದಲ್ಲಿ ಅರಾಜಕತೆಯನ್ನು ಹತ್ತಿಕ್ಕಿ ನ್ಯಾಯ ಮತ್ತು ವ್ಯವಸ್ಥೆಗಳನ್ನು ಪುನರುತ್ಥಾನಗೊಳಿಸಿ ಭದ್ರತೆಯನ್ನು ಸ್ಥಾಪಿಸುವುದಾಗಿ ಭರವಸೆ ನೀಡಿದನು.

ಈ ಚುನಾವಣೆಯ ವೈಶಿಷ್ಟ್ಯವೆಂದರೆ 'ಅಮೆರಿಕನ್ ಸ್ವತಂತ್ರ ಪಕ್ಷ' ವೆಂಬ ಹೊಸ ಪಕ್ಷದ ಅಭ್ಯರ್ಥಿಯಾಗಿ ಅಲಬಾಮ ರಾಜ್ಯದ ಗವರ್ನರ್ ಆಗಿದ್ದ ಜಾರ್ಜ್ ವಾಲೆಸ್ (George Wallace) ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದುದು. ವಾಲೆಸ್‌ನಿಗೆ ಅಲಬಾಮ ರಾಜ್ಯವಲ್ಲದೆ ಬೇರೆ ರಾಜ್ಯಗಳಲ್ಲೂ ಬೆಂಬಲಿಗರಿದ್ದರು. ಅವನು ಚುನಾವಣಾ ಪ್ರಚಾರದಲ್ಲಿ ಬಿಳಿಯರ ಮತ್ತು ಕರಿಯರ ಪ್ರತ್ಯೇಕತೆಯನ್ನಾಗಲೀ, ವರ್ಣದ್ವೇಷದ ಬಗ್ಗೆಯಾಗಲೀ ಪ್ರಸ್ತಾಪ ಮಾಡದೆ ಬೇರೆ ವಿಷಯಗಳನ್ನು – ವಿಕೇಂದ್ರೀಕರಣ (decentralization) ರಾಜ್ಯಗಳ ಸ್ವಾಯತ್ತತೆಯನ್ನು ವೃದ್ಧಿಸುವುದು, ತೆರಿಗೆಯನ್ನು ಇಳಿಸುವುದು, ಅಪರಾಧ ಸಮಸ್ಯೆಯನ್ನು (crime problem) ಪರಿಹರಿಸಲು ನ್ಯಾಯವ್ಯವಸ್ಥೆಯನ್ನು ಬಿಗಿಗೊಳಿಸುವುದು ಮತ್ತು ವಿಯಟ್‌ನಾಮ್ ಯುದ್ಧದಲ್ಲಿ ಜಯ ಗಳಿಸುವುದು – ತನ್ನ ಪ್ರಚಾರಕ್ಕಾಗಿ ಉಪಯೋಗಿಸಿಕೊಂಡನು. ಇವನು ಸಂಪ್ರದಾಯಸ್ಥರ ಮತಗಳನ್ನು ಪಡೆದು ನಿಕ್ಸನ್‌ಗೆ ತೊಂದರೆಯುಂಟುಮಾಡುವ ಸಾಧ್ಯತೆಯೂ ಇದ್ದಿತ್ತು.

ಹ್ಯೂಬರ್ಟ್ ಹಂಫ್ರಿ ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದ್ದನು. ತನ್ನ ಪಕ್ಷದ ಸರ್ಕಾರದ ನಿಲುವನ್ನು ನಾಲ್ಕು ವರ್ಷಗಳಿಂದ ಬೆಂಬಲಿಸಿದ್ದುದರಿಂದ ಅವನು ವಿಯಟ್‌ನಾಮ್ ಯುದ್ಧವನ್ನು ವಿರೋಧಿಸುವಂತಿರಲಿಲ್ಲ. ಆದರೆ ಅವನಿಗೆ ಯುದ್ಧ ವಿರೋಧಿಗಳಾದ ಡೆಮೊಕ್ರಾಟರ ಬೆಂಬಲ ಅಗತ್ಯವಾಗಿತ್ತು. ಆದ್ದರಿಂದ ೧೯೬೮ರ ಕೊನೆಯಲ್ಲಿ ಹಂಫ್ರಿ ಅಧ್ಯಕ್ಷ ಜಾನ್‌ಸನ್‌ನ ವಿಯಟ್‌ನಾಮ್ ಧೋರಣೆಯಿಂದ ದೂರ

ಸರಿಯಲು, ತಾನು ಅಧ್ಯಕ್ಷನಾದರೆ ಕೂಡಲೇ ವಿಯಟ್‌ನಾಮ್ ಮೇಲೆ ಅಮೆರಿಕನ್ ವಾಯುಪಡೆಯ ದಾಳಿಯನ್ನು ನಿಲ್ಲಿಸುತ್ತೇನೆ ಎಂದು ಘೋಷಿಸಿದನು. ಬಹುಜನರಿಗೆ ಹಂಫ್ರಿಯ ಈ ಹೊಸ ನಿಲುವು ಮೆಚ್ಚುಗೆಯಾಯಿತು. ಜಾನ್‌ಸನ್ ಧೋರಣೆಯಿಂದ ಮೊದಲೇ ದೂರ ಸರಿದಿದ್ದರೆ ಹಂಫ್ರಿ ಚುನಾವಣೆಯಲ್ಲಿ ಗೆಲ್ಲಬಹುದಿತ್ತು ಎಂದು ಕೆಲವರು ಅಭಿಪ್ರಾಯಪಟ್ಟರು. ಈ ಚುನಾವಣೆಯ ಫಲಿತಾಂಶ: ನಿಕ್ಸನ್ ಕೇವಲ ಅರ್ಧ ಮಿಲಿಯನ್ ಮತಗಳಿಂದ ಗೆದ್ದನು. ಅಮೆರಿಕದ ರಾಜಕೀಯದಲ್ಲಿ ಹೊಸ ಬೆಳವಣಿಗೆಯೊಂದನ್ನು ನಿಕ್ಸನ್ ವಿಜಯ ಹೊರಗೆಡವಿತು. ಜಾರ್ಜ್ ವಾಲೆಸ್ ಅಭ್ಯರ್ಥಿಯಾಗಿದ್ದರೂ ನಿಕ್ಸನ್ ಪಕ್ಷ ದಕ್ಷಿಣ ರಾಜ್ಯಗಳಲ್ಲಿ ಹೆಚ್ಚಿನ ಮತಗಳನ್ನು ಪಡೆದಿತ್ತು. ನಗರಗಳಲ್ಲಿ ಅಸಂತುಷ್ಟ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ರಿಪಬ್ಲಿಕನ್ ಅಭ್ಯರ್ಥಿ ನಿಕ್ಸನ್‌ಗೆ ಮತ ನೀಡಿದ್ದರು. ಈ ಕಾರ್ಮಿಕರು ಬಹಳ ಕಾಲದಿಂದಲೂ ಡೆಮೊಕ್ರಾಟಿಕ್ ಪಕ್ಷವನ್ನು ಬೆಂಬಲಿಸಿದ್ದರು. ಹೀಗೆ ರಿಪಬ್ಲಿಕನ್ ಪಕ್ಷ ದಕ್ಷಿಣದ ಬಿಳಿಯರು ಮತ್ತು ನಗರಗಳ ಕಾರ್ಮಿಕರ ಬೆಂಬಲ ಪಡೆದು ಹೊಸ ರಾಜಕೀಯ ಸಂಬಂಧ ಬೆಳೆಸಿತ್ತು. ಈ ಎರಡು ಗುಂಪುಗಳನ್ನು ಸಾಂಪ್ರದಾಯಿಕ ರಿಪಬ್ಲಿಕನ್ ಪಕ್ಷದವರಾದ ಮಧ್ಯಮ ವರ್ಗ ಮತ್ತು ಮೇಲು ಮಧ್ಯಮ ವರ್ಗ (upper middle class)ದವರೊಡನೆ ಕೂಡಿಸಿ ಹೊಸ ರಾಜಕೀಯ ಪಂಥವನ್ನು ಸ್ಥಾಪಿಸಿದನೆಂದು ನಿಕ್ಸನ್ ಭಾವಿಸಿದನು. ಈ ಪಂಥವನ್ನು ನಿಕ್ಸನ್ 'ಮೌನ ಬಹುಮತದವರು' (the silent majority) ಎಂದು ಕರೆದನು.

ರಿಚರ್ಡ್ ನಿಕ್ಸನ್ ದಕ್ಷಿಣ ಕೆರೊಲಿನದ ಕೆಳಮಧ್ಯಮ ವರ್ಗದ (lower middle calss) ಕ್ವೇಕರ್ (Quaker) ಕುಟುಂಬದಲ್ಲಿ ಬೆಳೆದನು. ೧೯೩೪ರಲ್ಲಿ ವ್ಹಿಟ್ಟಿಯರ್ ಕಾಲೇಜಿನಿಂದ (Whittier College) ಪಧವೀಧರನಾಗಿ, ನಂತರ ಡ್ಯೂಕ್ ವಿಶ್ವವಿದ್ಯಾಲಯವನ್ನು ಸೇರಿ ೧೯೩೭ರಲ್ಲಿ ಕಾನೂನು ಪದವಿ ಪಡೆದನು. ಎರಡನೆಯ ಜಾಗತಿಕ ಯುದ್ಧದಲ್ಲಿ ನೌಕಾಪಡೆಯಲ್ಲಿ ಸೇವೆ ಸಲ್ಲಿಸಿದನು. ಯುದ್ಧಾನಂತರ ೧೯೪೬ ಮತ್ತು ೧೯೪೮ರಲ್ಲಿ ಪ್ರಜಾಪ್ರತಿನಿಧಿ ಸಭೆಗೆ (House of Representatives) ಆಯ್ಕೆಯಾದನು. ಇದೇ ಸಮಯದಲ್ಲಿ ಕಾಂಗ್ರೆಸ್‌ನ 'ಅಮೆರಿಕಕ್ಕೆ ಒಗ್ಗದ ಚಟುವಟಿಕೆ'ಗಳನ್ನು (unamerican activities) ತನಿಖೆ ಮಾಡುವ ಸಮಿತಿಯ ಸದಸ್ಯನಾಗಿ ಆಲ್ಗರ್ ಹಿಸ್[೨] (Alger Hiss) ಎಂಬುವನನ್ನು ನ್ಯಾಯಾಲಯದಲ್ಲಿ ಸುಳ್ಳು ಆಪಾದನೆಯ ಮೇಲೆ ಶಿಕ್ಷೆಗೆ

೨. ಆಲ್ಗರ್ ಹಿಸ್ ಕಾರ್ನಿಗಿ ಅಂತರರಾಷ್ಟ್ರೀಯ ಶಾಂತಿ ಪುದುವಟ್ಟಿನ ಅಧ್ಯಕ್ಷನಾಗಿದ್ದನು. ಅಲ್ಲದೆ ವಿಶ್ವಸಂಸ್ಥೆಯಲ್ಲಿ ನಿಯತಕಾಲಿಕ ಜನರಲ್ ಸೆಕ್ರೆಟರಿ ಆಗಿದ್ದವನು. ಯಾಲ್ಟಾ (Yalta) ಶೃಂಗಸಭೆಯಲ್ಲಿ ಅಮೆರಿಕದ ಅಧ್ಯಕ್ಷನಿಗೆ ಸಲಹೆಗಾರನಾಗಿದ್ದನು. ಇವನು ನ್ಯಾಯಾಲಯದಲ್ಲಿ ಸುಳ್ಳು ಹೇಳಿದನೆಂದು ವಿಚಾರಣೆಗೆ ಗುರಿಯಾದನು. ಸೋವಿಯಟ್ ಒಕ್ಕೂಟಕ್ಕೆ ಸರ್ಕಾರದ ರಹಸ್ಯ ದಾಖಲೆಗಳನ್ನು ಕಳ್ಳತನದಲ್ಲಿ ಕೊಟ್ಟನೆಂದು ವಕೀಲನಾಗಿದ್ದ ನಿಕ್ಸನ್ ಆಪಾದಿಸಿ, ಹಿಸ್‌ಗೆ ೫ ವರ್ಷ ಸಜೆ ವಿಧಿಸುವಂತೆ ಮಾಡಿದನು.

ಗುರಿಪಡಿಸಲು ಮುಖ್ಯ ಕಾರಣನಾದನು. ನಿಕ್ಸನ್ ತನ್ನ ಕಮ್ಯೂನಿಸ್ಟ್ ವಿರುದ್ಧ ಧೋರಣೆಯಿಂದಾಗಿ ರಾಜಕೀಯದಲ್ಲಿ ಸಾಕಷ್ಟು ಅನುಯಾಯಿಗಳನ್ನು ಪಡೆದನು. ನಂತರ ಐಸೆನ್‌ಹಾವರ್‌ನ ಆಡಳಿತದ ಅವಧಿಯಲ್ಲಿ ಎರಡು ಬಾರಿ ಉಪಾಧ್ಯಕ್ಷನಾಗಿದ್ದನು. ಆ ಸಮಯದಲ್ಲಿ ಸಮರ್ಥನಾಗಿ ಕಾರ್ಯ ನಿರ್ವಹಿಸಿ ಪ್ರಮುಖ ಆಡಳಿತಗಾರನೆಂಬ ಭರವಸೆ ಹುಟ್ಟಿಸಿದನು. ೧೯೬೦ರ ಚುನಾವಣೆಯಲ್ಲಿ ಜಾನ್ ಕೆನಡಿಗೆ ಮತ್ತು ೧೯೬೨ರಲ್ಲಿ ಕ್ಯಾಲಿಫೋರ್ನಿಯಾ ಗವರ್ನರ್ ಚುನಾವಣೆಯಲ್ಲಿಯೂ ಸೋತಿದ್ದರೂ ತನ್ನ ಸ್ವರೂಪವನ್ನು ಉತ್ತಮ ಪಡಿಸಿಕೊಳ್ಳುವುದರಲ್ಲಿ ನಿರತನಾಗಿ ೧೯೬೮ರ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯಾಗಿ ನಾಮಕರಣಗೊಂಡನು.

ನಿಕ್ಸನ್ ಆಡಳಿತ ಮಂಡಳಿ ಮಧ್ಯಮ ಪ್ರವೃತ್ತಿಯ ಮತ್ತು ತೀವ್ರ ಸಂಪ್ರದಾಯಸ್ಥ ರಿಪಬ್ಲಿಕನ್ನರಿಂದ ಕೂಡಿತ್ತು. ಈ ಮಂಡಳಿಯಲ್ಲಿ ಅತ್ಯಂತ ಪ್ರಮುಖನಾದವನು ಕಾನೂನು ಕಾರ್ಯದರ್ಶಿ (Attorney general) ಜಾನ್ ಮಿಚ್ಚೆಲ್ (John Mitchell). ಇವನು ಹಿಂದೆ ನಿಕ್ಸನ್ ವಕೀಲಿವೃತ್ತಿಯ ಪಾಲುಗಾರನಾಗಿದ್ದನು. ಈತ ಕಡು ಸಂಪ್ರದಾಯಸ್ಥ. ಮಿಚ್ಚೆಲ್‌ನಂತೆಯೇ ಸಂಪ್ರದಾಯವಾದಿಯಾಗಿದ್ದ ಮೆಲ್ವಿನ್ ಲೆಯರ್ಡ್‌ನನ್ನು (Melvin Laird) ರಕ್ಷಣಾ ಕಾರ್ಯದರ್ಶಿಯಾಗಿ ನೇಮಿಸಿದನು. ಮಧ್ಯಮ ಸಂಪ್ರದಾಯಸ್ಥರಾಗಿದ್ದ ರಾಬರ್ಟ್ ಫಿಂಚ್‌ನನ್ನು (Robert Finch) ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಸುಸ್ಥಿತಿ (Social Welfare) ಇಲಾಖೆಯ ಕಾರ್ಯದರ್ಶಿಯಾಗಿ ನೇಮಿಸಿದನು. ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯಾಗಿ ಜಾರ್ಜ್ ರೋಮ್ನಿ (George Romney) ಮತ್ತು ವಿದೇಶಾಂಗ ಕಾರ್ಯದರ್ಶಿಯಾಗಿ ವಿಲಿಯಂ ರಾಜರ್ಸ್ (William Rogers) ನೇಮಕಗೊಂಡರು. ಮಿಚ್ಚೆಲ್‌ನನ್ನು ಬಿಟ್ಟು ಉಳಿದ ಎಲ್ಲ ಆಡಳಿತ ಮಂಡಳಿಯ ಸದಸ್ಯರಿಗಿಂತ ಪ್ರಮುಖನಾಗಿದ್ದವರು ಮೂವರು ಶ್ವೇತಭವನದ ನಿರ್ವಾಹಕರು – (೧) ಹಾರ್ವರ್ಡ್ ವಿಶ್ವವಿದ್ಯಾನಿಲಯದ ಮಾಜಿ ಪ್ರಾಧ್ಯಾಪಕನಾಗಿದ್ದ ಹೆನ್ರಿ ಕಿಸಿಂಜರ್ (Henry Kissinger). ಈತ ಮೊದಲು ನಿಕ್ಸನ್‌ನ ವಿದೇಶಾಂಗ ನೀತಿಯ ಮುಖ್ಯ ಸಲಹೆಗಾರನಾಗಿದ್ದನು. ನಂತರ ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಕಗೊಂಡನು. (೨) ಗೃಹಖಾತೆಯ ಕಾರ್ಯದರ್ಶಿ (Secretary of Domestic Affairs) ಜಾನ್ ಎರ್ಲಿಕ್‌ಮನ್ (John Ehrlichman). ಇವನು ನಿಕ್ಸನ್ ಚುನಾವಣೆಯ ಪ್ರಚಾರಾಧಿಕಾರಿ ಮತ್ತು ಮಾಜಿ ವಕೀಲ. (೩) ಎಚ್.ಆರ್. ಹಾಲ್ಡಮನ್ (H.R. Haldeman) ಇವನು ನಿಕ್ಸನ್‌ನ ನಂಬಿಕಸ್ತ ನಿಕಟವರ್ತಿ ಮತ್ತು ಮಾಜಿ ಜಾಹೀರಾತು ನಿರ್ವಹಣಕಾರ. ಇವನನ್ನು ಶ್ವೇತಭವನದ ನಿರ್ವಹಣಕಾರರ ಮುಖ್ಯಸ್ಥನನ್ನಾಗಿ (White House Chief of Staff) ನೇಮಿಸಲಾಯಿತು. ನಿಕ್ಸನ್‌ನ ಈ ಆಡಳಿತಮಂಡಳಿಯ ವಿವರಗಳನ್ನು ಕೊಟ್ಟಿರುವ ಉದ್ದೇಶವೆಂದರೆ ಮುಂದೆ ನಡೆಯಲಿರುವ ರಾಜಕೀಯ ನಾಟಕದಲ್ಲಿ ಇವರೆಲ್ಲರೂ ಪ್ರಮುಖ ಪಾತ್ರಧಾರಿಗಳಾಗಿರುವುದರಿಂದ.

ರಾಷ್ಟ್ರ ಎದುರಿಸಬೇಕಾದ ಸಮಸ್ಯೆಗಳನ್ನು ಅಧ್ಯಕ್ಷ ಕಾನೂನು ಜಾರಿಗೆ ತರುವುದರ ಮೂಲಕ, ಹೊಸಹುದ್ದೆಗಳನ್ನು ಸ್ಥಾಪಿಸುವುದು ಅಥವಾ ಆಡಳಿತದ ಧೋರಣೆ ಬದಲಾಯಿಸುವುದರ ಮೂಲಕ – ತೀವ್ರವಾದ ಪ್ರತಿಕ್ರಿಯೆಗಳನ್ನು ತೋರಿಸದೆ ಸಮಸ್ಯೆ ಗಳನ್ನು ಸಮಾಧಾನದಿಂದ ಪರಿಶೀಲಿಸಿ ಅವುಗಳ ನಿವಾರಣೆ ಕ್ರಮೇಣವಾಗಿ ಕ್ರಮ ಕೈ ಗೊಳ್ಳುವ ನಿಲುವನ್ನು ತಳೆದನು. ಸಮಸ್ಯೆಗಳ ಪರಿಹಾರದಲ್ಲಿ ಅವನು ವಿಪರೀತಕ್ಕೆ ಹೋಗದೆ ಮಧ್ಯಮ ಮಾರ್ಗವನ್ನು ಹಿಡಿದನು. ವಿವಾದಾಂಶಗಳನ್ನು ಅತಿಶಯಕ್ಕೆ ಕೊಂಡೊಯ್ಯದೆ ಮಂಡಿಸಿದ ಬೇಡಿಕೆಗಳನ್ನು ವಿಶ್ಲೇಷಿಸಲು ಸಮಿತಿಗಳನ್ನು ಕೂಡಲೇ ಸ್ಥಾಪಿಸುತ್ತಿದ್ದನು.

ಹಣವಂತರು ಆದಾಯ ತೆರಿಗೆಯನ್ನು ತಪ್ಪಿಸಿಕೊಳ್ಳಲು ಆದಾಯ ತೆರಿಗೆ ಕಾಯಿದೆಯ ನ್ಯೂನ್ಯತೆಗಳನ್ನು ಉಪಯೋಗಿಸಿಕೊಳ್ಳುವುದನ್ನು ತಪ್ಪಿಸಲು ನಿಕ್ಸನ್ ತನ್ನ ಅಧ್ಯಕ್ಷತೆಯ ಮೊದಲ ವರ್ಷದ ಕೊನೆಯಲ್ಲಿ ಸುಧಾರಿತ ಆದಾಯ ತೆರಿಗೆ ಕಾಯಿದೆಯನ್ನು ಜಾರಿಗೆ ತಂದನು. ಈ ತೆರಿಗೆ ತೈಲ ಕಂಪನಿಗಳು ಪಡೆಯುತ್ತಿದ್ದ depletion allowanceನ್ನು ಬದಲಾಯಿಸಿತು. ಕರಿಯ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳುವಂತೆ ಖಾಸಗಿ ಉದ್ಯಮಗಳಿಗೆ ಆದೇಶವೀಯಲಾಯಿತು. ಇದರಿಂದಾಗಿ 'ಕರಿಯ ಬಂಡವಾಳಶಾಹಿ' (black capitalism) ಬೆಳೆಯಬಹುದೆಂದು ನಿಕ್ಸನ್ ಆಶಿಸಿದ್ದನು.

ನಿಕ್ಸನ್ ಕಾಂಗ್ರೆಸ್‌ನಲ್ಲಿ ತಾನು ಪ್ರಬಲ ನಾಯಕನೆಂದು ತೋರಿಸಿಕೊಳ್ಳಲಿಲ್ಲ. ಅವನ ಅಧಿಕಾರದ ಅವಧಿಯಲ್ಲಿ ಅಪರಾಧಗಳ ಸಂಖ್ಯೆ ಹೆಚ್ಚಿತು. ಶಿಕ್ಷಣ, ಆರೋಗ್ಯ ಮತ್ತು ಸಮಾಜ ಸೇವೆಯ ಇಲಾಖೆಗಳ ಅನೇಕ ಖರ್ಚಿನ ಅಂಶಗಳನ್ನು ತೆಗೆದು ಹಾಕಿದನು. ಇವು ಅಧ್ಯಕ್ಷ ಜಾನ್‌ಸನ್ ಕಾಲದಿಂದ ಬಂದವು. ಆಯವ್ಯಯ ಪಟ್ಟಿಯಲ್ಲಿ ಶಿಕ್ಷಣ ಇಲಾಖೆಗೆ ಹಣ ಕಡಿಮೆ ಮಾಡಿದರೂ ಕೂಡ ಸಾರ್ವಜನಿಕ ಶಾಲೆಗಳಲ್ಲಿ ಅನುಕಲನ, ಕರಿಯ ವಿದ್ಯಾರ್ಥಿಗಳ ಶಾಲೆಗಳಲ್ಲಿ ಸರಾಸರಿ ಹಾಜರಿ ಮತ್ತು ಶಾಲಾವಿದ್ಯಾಭ್ಯಾಸ ಮುಗಿಸಿ ಕಾಲೇಜು/ವಿಶ್ವವಿದ್ಯಾನಿಲಯಗಳಿಗೆ ಹೋಗುವ ಕರಿಯ ವಿದ್ಯಾರ್ಥಿಗಳ ಸರಾಸರಿ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿತು. ನಿಕ್ಸನ್ ಆಡಳಿತದ ಅವಧಿಯಲ್ಲಿ ಉಪಾಧ್ಯಕ್ಷ ಆ್ಯಗ್‌ನ್ಯೂ (Agnew) ಒರಟಾಗಿ ಯುದ್ಧವಿರೋಧಿಗಳನ್ನು ಖಂಡಿಸುವುದು ಮತ್ತು ಸರ್ಕಾರದ ಕಾರ್ಯಾಚರಣೆಯ ಬಗ್ಗೆ ಸುದ್ದಿ ಮಾಧ್ಯಮಗಳು ಯಥಾವತ್ತಾಗಿ ವರದಿ ಮಾಡದೆ ಸರ್ಕಾರದ ಬಗ್ಗೆ ಪೂರ್ವಾಗ್ರಹಪೀಡಿತ ವರದಿಗಳನ್ನು ಪ್ರಸಾರ ಮಾಡುತ್ತವೆ ಎಂದು ಕಟುವಾಗಿ ಟೀಕಿಸಿ ತಾನೇ ಸುದ್ದಿಗೆ ಕಾರಣನಾಗುತ್ತಿದ್ದನು. ೧೯೭೨ರಲ್ಲಿ ಸಂವಿಧಾನದ ೨೬ನೆಯ ತಿದ್ದುಪಡಿಯನ್ನು ಅನುಮೋದಿಸಿ ಫೆಡರಲ್ ಚುನಾವಣೆಗಳಲ್ಲಿ ಮತದಾನದ ವಯಸ್ಸನ್ನು ೧೮ಕ್ಕೆ ಇಳಿಸಲಾಯಿತು. ಈ ಬದಲಾವಣೆಯನ್ನು ರಾಜ್ಯಸರ್ಕಾರಗಳೂ ಅನುಷ್ಠಾನಕ್ಕೆ ತಂದವು.

೧೯೬೯ರಲ್ಲಿ ರಾಷ್ಟ್ರದ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಅರ್ಲ್

ವಾರೆನ್ (Earl Warren) ನಿವೃತ್ತನಾದನು. ಅವನು ಅನೇಕ ಧಾರಾಳ ಮನೋಭಾವದ ತೀರ್ಪುಗಳನ್ನು ನೀಡಿದ್ದನು. ಇವು ನಾಗರಿಕ ಹಕ್ಕುಗಳ ರಕ್ಷಣೆ, ಆಪಾದಿತರ ಹಕ್ಕುಗಳ ರಕ್ಷಣೆ ಮತ್ತು ಪ್ರಾತಿನಿಧ್ಯದ ಪುನರ್‌ನೇಮಕ (reappointment of Representatives) ವಿಷಯಗಳನು ಕುರಿತದ್ದಾಗಿದ್ದವು. ವಾರೆನ್ ಸ್ಥಾನಕ್ಕೆ ಕೆಳನ್ಯಾಯಾಲಯದ (Lower Court) ಅಷ್ಟೇನೂ ಹೆಸರು ಗಳಿಸದ ನ್ಯಾಯಾಧೀಶ ವಾರೆನ್ ಬರ್ಗರ್‌ನನ್ನು (Warren Burger) ನಿಕ್ಸನ್ ನೇಮಕ ಮಾಡಿದನು. ಬರ್ಗರ್ ನ್ಯಾಯಪ್ರತಿಷ್ಠೆ ಮತ್ತು ವ್ಯವಸ್ಥೆ (Law and Order)ಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುತ್ತಿದ್ದನು. ಸಾರ್ವಜನಿಕ ಶಾಲಾ ಅನುಕಲನದ ಕ್ರಮೇಣಗತಿಯನ್ನು ಬದಲಿಸಿ ಅನುಕಲನ ಕೂಡಲೇ (ಅದರೆ ಕೆಲವೇ ತಿಂಗಳುಗಳೊಳಗೆ) ಆಗಬೇಕೆಂದು ನಿರ್ದೇಶಿಸಿದನು. ಇದನ್ನು ೧೯೭೦ರಲ್ಲಿ ಮಿಸ್ಸಿಸ್ಸಿಪ್ಪಿ ರಾಜ್ಯದಲ್ಲಿ ಅನುಷ್ಠಾನಕ್ಕೆ ತರಲಾಯಿತು. ನಿಕ್ಸನ್ ಆಡಳಿತದ ಅವಧಿಯಲ್ಲಿ ಶ್ರೇಷ್ಠ ನ್ಯಾಯಾಲಯ ನಾಲ್ಕು ಸಂಪ್ರದಾಯಸ್ಥ (conservatives) ನ್ಯಾಯಾಧೀಶರಾಗಿದ್ದವರು – ಬರ್ಗರ್, ಲೂವಿಸ್, ಪಾವೆಲ್ ಮತ್ತು ರ್ಹೆನ್‌ಕ್ವಿಸ್ಟ್; ಮೂವರು ಉದಾರ ಮನೋಭಾವದ ನ್ಯಾಯಾಧೀಶರು – ಡಗ್ಲಾಸ್, ಬ್ರೆನನ್ ಮತ್ತು ಮಾರ್ಷಲ್; ಇಬ್ಬರು ಮಧ್ಯಮಪ್ರವೃತ್ತಿಯ ನ್ಯಾಯಾಧೀಶರು – ವೈಟ್ ಮತ್ತು ಸ್ಟೂವರ್ಟ್. (ಈ ಹೆಸರಿನ ವಿವರಗಳನ್ನು ಕೊಟ್ಟಿರುವ ಔಚಿತ್ಯ – ಈ ಶ್ರೇಷ್ಠ ನ್ಯಾಯಾಲಯ ಮುಂದೆ ಜರುಗಲಿರುವ ರಾಜಕೀಯ ಘಟನೆಗಳ ಮೇಲೆ ಚರಿತ್ರಾರ್ಹ ತೀರ್ಪುಗಳನ್ನು ನೀಡಲಿರುವ ಕಾರಣಕ್ಕಾಗಿ.)

ನಿಕ್ಸನ್ ಅಧ್ಯಕ್ಷನಾಗಿದ್ದ ಸಮಯದಲ್ಲಿ ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ಹಣದುಬ್ಬರ ಮತ್ತು ನಿರುದ್ಯೋಗ ಸಮಸ್ಯೆಗಳು ಉಲ್ಬಣಗೊಂಡವು. ನಿಕ್ಸನ್ ಮೊದಲಿಗೆ ಹಣದುಬ್ಬರದ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಏಕೆಂದರೆ ಬಡ್ಡಿಯ ದರ ಏರಿಕೆ ಮತ್ತು ಆರ್ಥಿಕ ನಿರ್ಬಂಧಗಳು ಹಣದುಬ್ಬರವನ್ನು ಹತೋಟಿಗೆ ತರುತ್ತವೆ ಎಂದು ಅವನು ನಂಬಿದ್ದನು. ಬಡ್ಡಿಯ ದರ ಹಿಂದೆ ಅಂತರ್ಯುದ್ಧದ ಕಾಲದಲ್ಲಿ ಏರಿದ ಮಟ್ಟಕ್ಕೆ ತಲುಪಿತು. ಫೆಡರಲ್ ಸರ್ಕಾರದ ಖರ್ಚುವೆಚ್ಚಗಳನ್ನು ಬಹಳಮಟ್ಟಿಗೆ ಕಡಿಮೆ ಮಾಡಲಾಯಿತು. ೧೯೭೧ರಲ್ಲಿ ನಿಕ್ಸನ್ 'ಹೊಸ ಆರ್ಥಿಕ ಧೋರಣೆ'ಯನ್ನು ಜಾರಿಗೆ ತಂದು ಬೆಲೆಗಳು ಮತ್ತು ವೇತನಗಳನ್ನು ನಿಯಂತ್ರಿಸಿದನು. ವ್ಯಾಪಾರಿಗಳು ಮತ್ತು ಉದ್ದಿಮೆಗಾರರು ಇದನ್ನು ಮೆಚ್ಚಿದರು. ಈ ಧೋರಣೆಯ ಮೊದಲ ಹಂತದಲ್ಲಿ ವೇತನ, ಬೆಲೆ ಮತ್ತು ಬಾಡಿಗೆಗಳನ್ನು ಹೆಚ್ಚದಂತೆ ನಿಯಂತ್ರಿಸಿದನು. ಎರಡನೆಯ ಹಂತದಲ್ಲಿ ವೇತನ ಮತ್ತು ಬೆಲೆಗಳ ಮೇಲಿನ ನಿಯಂತ್ರಣವನ್ನು ಕೊನೆಗೊಳಿಸಿ ವರ್ತಕರು ಮತ್ತು ಕಾರ್ಮಿಕರು ತಾವಾಗಿಯೇ ಸ್ವಇಚ್ಛೆಯಿಂದ ವೇತನ ಮತ್ತು ಬೆಲೆಗಳು ಏರದಂತೆ ಕ್ರಮ ಕೈಗೊಳ್ಳಲು ಅವಕಾಶ ಮಾಡಿಕೊಟ್ಟನು. ಆಹಾರ, ಆರೋಗ್ಯ ಮತ್ತು ನಿರ್ಮಾಣ ಕ್ಷೇತ್ರಗಳಲ್ಲಿ ಮಾತ್ರ ನಿಯಂತ್ರಣ ಉಳಿಸಿಕೊಂಡನು. ೧೯೭೩ರಲ್ಲಿ ಮೂರನೆಯ ಹಂತದಲ್ಲಿ ಎಲ್ಲ ಕ್ಷೇತ್ರಗಳಲ್ಲಿ ನಿಯಂತ್ರಣ

ತೆಗೆದುಹಾಕಿದನು. ಇದರಿಂದ ಸಮಸ್ಯೆ ಉಂಟಾಗಿ ಅರ್ಥದಲ್ಲಿ ಮತ್ತೆ ನಿಯಂತ್ರಣಗಳನ್ನು ಜಾರಿ ಮಾಡಬೇಕಾಯಿತು.

೧೯೭೨ರ ಚುನಾವಣೆಯ ಸಿದ್ಧತೆಗಾಗಿ ನಿಕ್ಸನ್ ಬಡ್ಡಿಯ ದರವನ್ನು ಇಳಿಸಿ ಆರ್ಥಿಕ ವ್ಯವಸ್ಥೆಯನ್ನು ಚುರುಕುಗೊಳಿಸಲು ಹೆಚ್ಚು ಪ್ರಮಾಣದಲ್ಲಿ ಹಣವನ್ನು ಚಲಾವಣೆಗೆ ತಂದನು. ಆದರೆ ಚುನಾವಣೆ ಮುಗಿದ ನಂತರ ಫೆಡರಲ್ ರಿಸರ್ವ್ ಸಮಿತಿ ಬಡ್ಡಿಯ ದರವನ್ನು ಏರಿಸಿತು. ಬಳಕೆ ವಸ್ತುಗಳ ಬೆಲೆಗಳು ಕೊರಿಯಾ ಯುದ್ಧಾನಂತರದ ಬೆಲೆಗಳ ಮಟ್ಟಕ್ಕಿಂತ ಹೆಚ್ಚಾಗಿ ಏರುತ್ತಲೆ ಹೋದವು. ಮಾಂಸ ಮತ್ತು ಇತರ ವ್ಯವಸಾಯೋತ್ಪನ್ನಗಳ ಬೆಲೆ ೧೯೭೩ರ ಪ್ರಾರಂಭದಲ್ಲಿ ತೀವ್ರವಾಗಿ ಏರಿದಾಗ ನಿಕ್ಸನ್ ಹಲವು ಸರಕು ಸಾಮಗ್ರಿಗಳು ರಫ್ತು ಮಾಡುವುದನ್ನು ತಡೆಗಟ್ಟಿದನು. ೧೯೭೩ರ ಫೆಬ್ರವರಿ ತಿಂಗಳಲ್ಲಿ ಡಾಲರ್ ಮೌಲ್ಯವನ್ನು ಶೇಕಡಾ ೧೦ ಭಾಗ ಕಡಿಮೆ ಮಾಡಿದನು. ೧೯೭೧ರಲ್ಲಿ ಶೇಕಡಾ ೮.೫೭ರಷ್ಟು. ಹಾಗೆ ಡಾಲರ್ ಮೌಲ್ಯವನ್ನು ಇಳಿಸಿದರೆ ಅದು ಇತರ ದೇಶಗಳ ಹಣದ ಮೌಲ್ಯಕ್ಕಿಂತಲೂ ಕಡಿಮೆಯಾಗುವುದರಿಂದ ರಫ್ತು ಹೆಚ್ಚಾಗಿ, ಆಮದು ಕಡಿಮೆಯಾಗಿ, ಅಮೆರಿಕ ಕೊಡಬೇಕಾದ ಬಾಕಿಯ ಮೊತ್ತವನ್ನು ಕರಗಿಸಬಹುದೆಂದು ನಿಕ್ಸನ್ ನಂಬಿದ್ದನು.

ಆರ್ಥಿಕ ಹಾಗೂ ಸಾಮಾಜಿಕ ಸಮಾನತೆಗಳಿಗೆ ತೀವ್ರಗಾಮಿ ಹೋರಾಟ ನಡೆಸಿದ ಕರಿಯ ಅಮೆರಿಕನ್ನರನ್ನು ಅನುಸರಿಸಿ ಇನ್ನೂ ಕೆಲವು ಸಾಮಾಜಿಕ ಸಂಘ-ಸಂಸ್ಥೆಗಳು ಚಳುವಳಿ ಪ್ರಾರಂಭ ಮಾಡಿದವು. ಅವುಗಳಲ್ಲಿ ಮುಖ್ಯವಾದುವುಗಳು: ಮಹಿಳಾ ವಿಮೋಚನಾ ಚಳುವಳಿ, ಮೆಕ್ಸಿಕನ್ ಅಮೆರಿಕನ್ನರಿಗೆ, ಪೋರ್ಟೋ ರಿಕನ್ನರಿಗೆ (Puerto Ricans), ಅಮೆರಿಕದ ಆದಿವಾಸಿಗಳು ಮತ್ತು ಸಲಿಂಗರತಿಯರಿಗೆ (homosexuals) ಸಮಾನ ಹಕ್ಕುಗಳಿಗಾಗಿ ನಡೆದ ಚಳುವಳಿಗಳು. ಅಪರಾಧಿಗಳ ಶಿಕ್ಷಾವಿಧಾನಗಳ ಸುಧಾರಣೆ, ಪರಿಸರ ನಿಯಂತ್ರಣ – ಇವೇ ಮುಂತಾದ ಚಳುವಳಿಗಳಲ್ಲಿ ವಿದ್ಯಾರ್ಥಿಗಳನ್ನೂ ಸೇರಿದಂತೆ ಜನರು ತೊಡಗಿದರು. ತೀವ್ರಗಾಮಿ ಪ್ರದರ್ಶನಗಳು – 'ಚಿಕಾಗೊ ಅಷ್ಟಮರು' (Chicago Eight) – ಇಂಥ ಗುಂಪುಗಳನ್ನು ದಂಗೆಕೋರರು ಎಂದು ಪರಿಗಣಿಸಿ ಶಿಕ್ಷೆ ವಿಧಿಸಿದರು. ಚಿಕಾಗೊ ಅಷ್ಟಮರ ನಾಯಕ ಬಾಬಿ ಸೀಲ್ (Bobby Seal) ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದ ಸಮಯದಲ್ಲಿ ಗಲಭೆ ಮಾಡಿ ನ್ಯಾಯಾಲಯದ ಕಾರ್ಯಗಳನ್ನು ಅಸ್ತವ್ಯಸ್ತಗೊಳಿಸಿದನು. ಅವನ ಕೈಕಾಲು ಕಟ್ಟಿ, ಬಾಯಿಗೆ ಬಟ್ಟೆ ತುರುಕಿ ಹೊರಗೆ ಒಯ್ದರು. ಅವನು ಮತ್ತು ಅವನ ಅನುಯಾಯಿಗಳಿಗೆ ಕಾರಾಗೃಹವಾಸ ವಿಧಿಸಲಾಯಿತು.

ಆಂದೋಳನ ನಡೆಸುತ್ತಿದ್ದ ಅಮೆರಿಕದ ಆದಿವಾಸಿಗಳು ಫೆಡರಲ್ ಸರ್ಕಾರದ ಕಟ್ಟಡಗಳನ್ನು ವಶಪಡಿಸಿಕೊಂಡು ತಮ್ಮ ಬೇಡಿಕೆಗಳನ್ನು ಪೂರೈಸುವಂತೆ ಒತ್ತಾಯ ಮಾಡುತ್ತಿದ್ದರು. ೧೯೭೨ರ ನವೆಂಬರ್ ತಿಂಗಳಲ್ಲಿ ತೀವ್ರಗಾಮಿ ಆದಿವಾಸಿಗಳು ರಾಜಧಾನಿ

ವಾಷಿಂಗ್‌ಟನ್‌ನಲ್ಲಿ ಆದಿವಾಸಿ ಆಡಳಿತ ಕಛೇರಿಯನ್ನು ವಶಪಡಿಸಿಕೊಂಡು ಪ್ರದರ್ಶನ ನಡೆಸಿದರು. ಇದಕ್ಕೆ ಕಾರಣ: ತಾವು ಫೆಡರಲ್ ಸರ್ಕಾರದೊಡನೆ ಮಾಡಿಕೊಂಡ ಕರಾರುಗಳನ್ನು ಅದು ಕಡೆಗಣಿಸಿದುದು, ಆದಿವಾಸಿ ಆಡಳಿತ ಕಛೇರಿಯ ಅಸಮರ್ಪಕ ಕಾರ್ಯಾಚರಣೆ – ಹೀಗೆ ಅವರು ಮುರಿದುಬಿದ್ದ ಒಪ್ಪಂದಗಳು ಮತ್ತು ತಮ್ಮ ಪ್ರಸ್ತುತ ಪರಿಸ್ಥಿತಿಯನ್ನು ಆಡಳಿತ ಕಛೇರಿಯ ಅಸಡ್ಡೆಯಿಂದ ಕಾಣುತ್ತಿರುವುದರ ವಿರುದ್ಧ ಪ್ರದರ್ಶನ ನಡೆಸಿದರು. ೧೯೭೩ರ ಫೆಬ್ರವರಿ ತಿಂಗಳಲ್ಲಿ ೨೦೦ ಶಸ್ತ್ರಸಜ್ಜಿತರಾದ 'ಅಮೆರಿಕನ್ ಆದಿವಾಸಿಗಳ ಚಳುವಳಿ'ಗೆ ಸೇರಿದವರು ದಕ್ಷಿಣ ಡಕೋಟ ರಾಜ್ಯದ Wounded Knee (ಈ ಸ್ಥಳ ಸೋ – Sioux – ಇಂಡಿಯನ್ನರು ಅಂತಿಮ ಪರಾಜಯ ಹೊಂದಿದ ಸಮರಭೂಮಿ) ಎಂಬ ಪ್ರದೇಶವನ್ನು ಆಕ್ರಮಿಸಿಕೊಂಡು ತಮ್ಮ ಬೇಡಿಕೆಗಳ ಬಗ್ಗೆ ಸೆನೆಟ್ ವಿಚಾರಣೆ ನಡೆಯಬೇಕೆಂದು ಆಗ್ರಹಪಡಿಸಿದರು. ನಿಕ್ಸನ್ ಆದಿವಾಸಿಗಳ ಬಗ್ಗೆ ಹಿಂದಿನ ಸರ್ಕಾರದ ಧೋರಣೆಯ ಬದಲು (ಅಂದರೆ ಆದಿವಾಸಿಗಳ ಸಮಸ್ಯೆಗಳನ್ನು ಪ್ರತ್ಯೇಕವಾಗಿ, ವಿಶಿಷ್ಟ ಸಮಸ್ಯೆಗಳೆಂದು ಪರಿಗಣಿಸದೆ) ಫೆಡರಲ್ ಸರ್ಕಾರದ ಹೊಣೆಗಾರಿಕೆಯನ್ನು ಹೆಚ್ಚಿಸಿ, ಆದಿವಾಸಿಗಳಿಗೆ ಸರ್ಕಾರದ ನೆರವು ಹೆಚ್ಚಿಸಿದನು. ಅಲ್ಲದೆ ಆದಿವಾಸಿ ಸಮುದಾಯಗಳ ಸ್ವಾಯತ್ತತೆಗೆ ಮನ್ನಣೆ ನೀಡಿದನು.

ಅಂತರರಾಷ್ಟ್ರೀಯ ವ್ಯವಹಾರಗಳು

ಅಂತರರಾಷ್ಟ್ರೀಯ ವ್ಯವಹಾರ ಕ್ಷೇತ್ರದಲ್ಲಿ ತಾನು ಅಮೆರಿಕನ್ನರಿಗೆ ಹೆಚ್ಚಿನ ಕೊಡುಗೆ ನೀಡಬಲ್ಲನೆಂದು ನಿಕ್ಸನ್ ನಂಬಿದ್ದನು. ಈ ವ್ಯವಹಾರದ ಗೋಜಲು ಮತ್ತು ಅವ್ಯವಸ್ಥೆಯನ್ನು ಸರಿಪಡಿಸಲು ನಿಕ್ಸನ್ ಕಾರ್ಯನಿರತನಾದನು. ೧೯೬೯ರ ಜುಲೈ ತಿಂಗಳಲ್ಲಿ ವಿಯಟ್‌ನಾಮ್‌ನಿಂದ ಅಮೆರಿಕನ್ ಸೇನಾತುಕಡಿಗಳನ್ನು ಕ್ರಮೇಣ ಹಿಂದಕ್ಕೆ ಕರೆಸಿಕೊಳ್ಳಲು ಪ್ರಾರಂಭಿಸಿ, ನವೆಂಬರ್ ತಿಂಗಳಲ್ಲಿ ಅಮೆರಿಕದ ಎಲ್ಲಾ ಸೇನಾಪಡೆಗಳನ್ನು ವಾಪಸ್ಸು ಕರೆಸುವ ನಿರ್ಧಾರ ಮಾಡಿರುವುದಾಗಿ ಹೇಳಿಕೆ ನೀಡಿದನು. ನಿಕ್ಸನ್ ಯೋಜನೆ ಯುದ್ಧವನ್ನು 'ವಿಯಟ್‌ನಾಮೀಯತೆ' ಗೊಳಿಸುವುದಾಗಿತ್ತು (vietnamization). ಅಂದರೆ ಅಮೆರಿಕನ್ ಸೈನ್ಯಗಳನ್ನು ಕರೆಸಿಕೊಂಡು ಅವರ ಜಾಗದಲ್ಲಿ ದಕ್ಷಿಣ ವಿಯಟ್‌ನಾಮ್ ಪಡೆಗಳನ್ನು ನೇಮಿಸುವುದು. ೧೯೬೯ರ ಕೊನೆಯಲ್ಲಿ ೧೦೦ ಸಾವಿರ ಸೈನಿಕರನ್ನು ವಾಪಸ್ಸು ಕರೆಸಿದರೂ ಶಾಂತಿ ಬೆಂಬಲಿಗರು ಎಲ್ಲಾ ಸೇನಾಪಡೆಗಳನ್ನೂ ಕೂಡಲೇ ಯಾವ ಷರತ್ತೂ ಇಲ್ಲದೆ ವಾಪಸ್ಸು ಕರೆಸಬೇಕೆಂದು ಆಗ್ರಹಪಡಿಸಿದರು. ಹೀಗೆ ಮಾಡಿದಲ್ಲಿ ಉತ್ತರ ವಿಯಟ್‌ನಾಮ್ ಸೆರೆ ಹಿಡಿದಿರುವ ಅಮೆರಿಕನ್ ಸೈನಿಕರನ್ನು ಬಿಡುಗಡೆ ಮಾಡುತ್ತದೆ ಎಂದು ವಾದಿಸಿದರು. ೧೯೭೦ರ ಮೇ ತಿಂಗಳಲ್ಲಿ ಕ್ಯಾಂಬೋಡಿಯಾದಲ್ಲಿ ಆಶ್ರಯ ಪಡೆದಿದ್ದ ವಿಯಟ್‌ಕಾಂಗ್ ಸೈನಿಕರ ಮೇಲೆ ದಾಳಿ ಮಾಡಲು ನಿಕ್ಸನ್ ಆಜ್ಞೆ ಮಾಡಿದನು. ಈ ಆಜ್ಞೆಗೆ ವಿರೋಧ ವ್ಯಕ್ತಪಡಿಸಲು ಅಮೆರಿಕದಾದ್ಯಂತ ಹಿಂದೆ ನಡೆದ ಎಲ್ಲಾ ಪ್ರದರ್ಶನಗಳಿಗಿಂತ ತೀವ್ರತರವಾದ ಪ್ರದರ್ಶನಗಳು ನಡೆದು ಅಸಂಖ್ಯಾತ ಅಮೆರಿಕನ್ನರು ಭಾಗವಹಿಸಿದರು. ಅತಿ

ತೀವ್ರವಾದ ಪ್ರದರ್ಶನಗಳು ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳ ಆವರಣಗಳಲ್ಲಿ ನಡೆದವು. ಓಹಾಯೊ ರಾಜ್ಯದ ಕೆಂಟ್ ವಿಶ್ವವಿದ್ಯಾನಿಲಯ (Kent State University) ಮತ್ತು ಮಿಸ್ಸಿಸ್ಸಿಪ್ಪಿ ರಾಜ್ಯದ ಜಾಕ್‌ಸನ್ ವಿಶ್ವವಿದ್ಯಾನಿಲಯಗಳಲ್ಲಿ ಗಲಭೆ ಎಬ್ಬಿಸಿದ ವಿದ್ಯಾರ್ಥಿಗಳನ್ನು ಹತೋಟಿಗೆ ತರಲು ಪೊಲೀಸರು ಗುಂಡು ಹಾರಿಸಿದಾಗ ಅನೇಕ ವಿದ್ಯಾರ್ಥಿಗಳು ಸಾವಿಗೀಡಾದರು. ಇಂಥ ದುರಂತಗಳನ್ನು ತಪ್ಪಿಸಲು ನಿಕ್ಸನ್ ಆರು ವಾರಗಳೊಳಗೆ ಕ್ಯಾಂಬೋಡಿಯಾದಿಂದ ಅಮೆರಿಕನ್ ಸೈನ್ಯದಳಗಳನ್ನು ವಾಪಸ್ಸು ಕರೆಸುವುದಾಗಿ ವಚನ ನೀಡಿದನು. ಯುದ್ಧಕ್ಕೆ ಅಮೆರಿಕನ್ನರ ವಿರೋಧ ಹೆಚ್ಚುತ್ತ ಹೋಗಲು ಅಮೆರಿಕನ್ ಸೈನಿಕರಲ್ಲಿ ಮಾದಕ ವಸ್ತುಗಳ ಬಳಕೆ, ದಕ್ಷಿಣ ವಿಯಟ್‌ನಾಮ್ ಸೈನಿಕರ ಅಮಾನುಷ ಕೃತ್ಯಗಳು ಮತ್ತು ಅಮೆರಿಕನ್ ಸೈನಿಕರಿಂದ ವಿಯಟ್‌ನಾಮ್ ಜನರ ಸಾಮೂಹಿಕ ಕೊಲೆ – ಮಿ ಲೈ ಎಂಬ ಹಳ್ಳಿಯಲ್ಲಿ ಅಮೆರಿಕನ್ ಸೈನಿಕರು ನಡೆಸಿದ ಹತ್ಯಾಕಾಂಡ – ಇವು ಪ್ರಬಲ ಕಾರಣಗಳಾದವು. ಮಿ ಲೈ ಹತ್ಯಾಕಾಂಡ ನಡೆಸಿದ ಸೈನ್ಯತುಕಡಿಯ ನಾಯಕ ಲೆಫ್ಟಿನೆಂಟ್ ವಿಲಿಯಂ ಕ್ಯಾರೆಯನ್ನು ನಿವೃತ್ತಿಗೊಳಿಸಿ, ವಿಚಾರಣೆಗೆ ಒಳಪಡಿಸಿ ಶಿಕ್ಷೆ ವಿಧಿಸಿದರು.

ನಿಕ್ಸನ್‌ನ ವಿಶಿಷ್ಟ ರಾಯಭಾರಿ ಹೆನ್ರಿ ಕಿಸ್ಸಿಂಜರ್ ಮತ್ತು ಉತ್ತರ ವಿಯಟ್‌ನಾಮ್ ಪ್ರತಿನಿಧಿಗಳ ನಡುವೆ ಪ್ಯಾರಿಸ್‌ನಲ್ಲಿ ನಡೆದ ಶಾಂತಿಸಂಧಾನ ಫಲದಾಯಕವಾಗದೆ ಅಮೆರಿಕ ಪುನಃ ಉತ್ತರ ವಿಯಟ್‌ನಾಮ್ ಮೇಲೆ ಹಿಂದಿನಕ್ಕಿಂತಲೂ ಘೋರವಾದ ಬಾಂಬ್ ದಾಳಿಯನ್ನು ನಡೆಸಿತು. ೧೯೭೩ರ ಜನವರಿ ೮ರಂದು ಪ್ಯಾರಿಸ್ ಸಮೀಪದಲ್ಲಿ ಶಾಂತಿಸಂಧಾನದ ಮಾತುಕತೆಗಳು ಪುನಃ ಪ್ರಾರಂಭವಾಗಿ, ಜನವರಿ ೨೭ರಂದು ಕದನ ವಿರಾಮ ಒಪ್ಪಂದಕ್ಕೆ ಎರಡು ಪಕ್ಷಗಳು ರುಜು ಹಾಕಿದವು. ಈ ಒಪ್ಪಂದ ಯುದ್ಧ ನಿಲ್ಲಿಸುವುದೆಂದು ನಂಬಿದ್ದರು. ಅಲ್ಲದೆ ಕದನ ವಿರಾಮ ಲಾವೋಸ್ ಮತ್ತು ಕ್ಯಾಂಬೋಡಿಯಾಗಳಿಗೂ ಅನ್ವಯಿಸುವಂತೆ ವಿಸ್ತರಿಸಿದ್ದರು. ಆದರೆ ಎರಡು ಪಕ್ಷದವರೂ ಈ ಒಪ್ಪಂದವನ್ನು ಉಲ್ಲಂಘಿಸಿದುದರಿಂದ ಮತ್ತೊಂದು ಕದನ ವಿರಾಮ ಒಪ್ಪಂದವನ್ನು ಜೂನ್ ತಿಂಗಳಲ್ಲಿ ಮಾಡಿಕೊಳ್ಳಬೇಕಾಯಿತು. ಅಷ್ಟರಲ್ಲಿ ಅಮೆರಿಕದಲ್ಲಿ ಸಾರ್ವಜನಿಕರು ಬಾಂಬ್ ದಾಳಿ ಮುಂದುವರಿಸಲು ಸಾಧ್ಯವಾಗದಂತೆ ಮಾಡಲು ಹಣವನ್ನು ನಿಲ್ಲಿಸುವಂತೆ ಕಾಂಗ್ರೆಸ್ ಮೇಲೆ ಒತ್ತಾಯ ಹಾಕಿದರು. ಕಾಂಗ್ರೆಸ್ ಮತ್ತು ಅಧ್ಯಕ್ಷ ನಿಕ್ಸನ್ ಬಾಂಬ್ ದಾಳಿಗೆ ಹಣ ನಿಲ್ಲಿಸುವುದನ್ನು ೧೯೭೩ರ ಆಗಸ್ಟ್ ತಿಂಗಳಿಂದ ಜಾರಿಗೊಳಿಸುವುದಾಗಿ ಪ್ರಕಟಿಸಿದರು. ದಕ್ಷಿಣ ವಿಯಟ್‌ನಾಮ್ ಸೈನ್ಯ ೧೯೭೫ರ ಏಪ್ರಿಲ್ ತಿಂಗಳವರೆಗೂ ಯುದ್ಧವನ್ನು ಮುಂದುವರಿಸಿತು. ನಂತರ ಉತ್ತರ ವಿಯಟ್‌ನಾಮ್ ಪಡೆಗಳಿಗೆ ಶರಣಾಗತರಾದರು. ಶೀಘ್ರವಾಗಿ ಅಮೆರಿಕನ್ ಪಡೆಗಳನ್ನು ಸುರಕ್ಷಿತವಾಗಿ ವಾಪಸ್ಸು ಬರುವಂತೆ ವ್ಯವಸ್ಥೆ ಮಾಡಲಾಯಿತು. ಅಮೆರಿಕದ ಇತಿಹಾಸದಲ್ಲಿ ವಿಯಟ್‌ನಾಮ್ ಯುದ್ಧ ಅತಿದೀರ್ಘವಾದುದು – ೧೯೬೫ ರಿಂದ ೧೯೭೨ರ ಅವಧಿಯಲ್ಲಿ ಅಮೆರಿಕ

ಎರಡನೆಯ ಜಾಗತಿಕ ಯುದ್ಧದಲ್ಲಿ ಜರ್ಮನಿ ಮತ್ತು ಜಪಾನ್‌ಗಳ ಮೇಲೆ ಹಾಕಿದ ಬಾಂಬ್‌ಗಳ ಸಂಖ್ಯೆಯ ಮೂರುಪಟ್ಟು ಹೆಚ್ಚು ಬಾಂಬ್‌ಗಳನ್ನು ಉತ್ತರ ವಿಯಟ್‌ನಾಮ್ ಮೇಲೆ ಹಾಕಿತ್ತು. ೫೦ ಸಾವಿರಕ್ಕೂ ಹೆಚ್ಚಿನ ಅಮೆರಿಕನ್ನರನ್ನು ಆಹುತಿ ತೆಗೆದುಕೊಂಡ ಈ ಯುದ್ಧ ಜಯಗಳಿಸಲು ವ್ಯರ್ಥ ಪ್ರಯತ್ನಪಟ್ಟ ಅಮೆರಿಕನ್ ದುರಂತವಾಗಿ ಪರ್ಯಾವಸಾನ ಗೊಂಡಿತು.

ಪಿಂಗ್–ಪಾಂಗ್ ರಾಜಕೀಯ

ಕಮ್ಯೂನಿಸ್ಟ್ ಚೀನೀಯರೊಡನೆ ಸ್ನೇಹ ಬೆಳೆಸಲು ಮಾತು-ಕತೆ

ಜಾಗತಿಕ ಕಮ್ಯೂನಿಸಂನಲ್ಲಿ ಒಡಕು ಉಂಟಾಗಿ ಸೋವಿಯೆಟ್ ಒಕ್ಕೂಟ ಮತ್ತು ಚೈನಾ ದೇಶಗಳ ಸಂಬಂಧ ಕೆಡುತ್ತಾ ಹೋಯಿತು. ಈ ಸಂದರ್ಭವನ್ನು ಉಪಯೋಗಿಸಿ ಕೊಂಡು ರಷ್ಯಾ ಮತ್ತು ಚೈನಾ ದೇಶಗಳೊಡನೆ ಸ್ನೇಹ ಬೆಳೆಸಲು ನಿಕ್ಸನ್ ಪ್ರಯತ್ನ ಪ್ರಾರಂಭಿಸಿದನು. ಈ ದಿಕ್ಕಿನಲ್ಲಿ ಅವನಿಟ್ಟ ಮೊದಲ ಹೆಜ್ಜೆ ಎಂದರೆ ಚೈನಾ ದೇಶದ ಸರಕು ಸಾಮಗ್ರಿಗಳ ಮೇಲೆ ವಿಧಿಸಿದ್ದ ನಿಷೇಧಾಜ್ಞೆಯನ್ನು ರದ್ದುಗೊಳಿಸಿದ್ದು. ೧೯೭೧ರ ನವೆಂಬರ್ ೧೫ರಂದು ಚೈನಾದೇಶ ವಿಶ್ವಸಂಸ್ಥೆಯ ಸದಸ್ಯತ್ವ ಪಡೆಯಿತು. ಇದಾದ ಸ್ವಲ್ಪ ಕಾಲಾನಂತರ ಚೈನಾ ಅಮೆರಿಕದ ಪಿಂಗ್-ಪಾಂಗ್ ಆಟಗಾರರ ತಂಡಕ್ಕೆ ಆಹ್ವಾನ ನೀಡಿತು. ಈ ಪಂದ್ಯದ ವರದಿ ಮಾಡಲು ಪಾಶ್ಚಾತ್ಯ ಪತ್ರಿಕಾಕರ್ತರಿಗೆ ರಹದಾರಿ ಕೊಟ್ಟಿತು. ಇದೇ 'ಪಿಂಗ್-ಪಾಂಗ್ ರಾಯಭಾರ'ವೆಂದು ಹೆಸರುವಾಸಿಯಾಗಿದೆ. ಆ ವರ್ಷದ ಏಪ್ರಿಲ್ ತಿಂಗಳಲ್ಲಿ ಇಪ್ಪತ್ತು ವರ್ಷಗಳಿಂದ ಜಾರಿಯಲ್ಲಿದ್ದ ಚೈನಾ ದೇಶದೊಡನೆ ವ್ಯಾಪಾರ ನಿಷೇಧವನ್ನು ನಿಕ್ಸನ್ ತೆಗೆದುಹಾಕಿದನು. ಜುಲೈ ತಿಂಗಳಲ್ಲಿ ಚೈನಾ-ಅಮೆರಿಕ ಸಂಬಂಧಗಳನ್ನು ಕುದುರಿಸಲು ತಾನು ಚೈನಾ ದೇಶಕ್ಕೆ ಮುಂದಿನ ವರ್ಷ ಭೇಟಿ ನೀಡುವುದಾಗಿ ಹೇಳಿಕೆ ನೀಡಿ ನಿಕ್ಸನ್ ಎಲ್ಲರನ್ನೂ ಆಶ್ಚರ್ಯಗೊಳಿಸಿದನು. ಈ ಪ್ರವಾಸವನ್ನು ಹೆನ್ರಿ ಕಿಸ್ಸಿಂಜರ್ ಮತ್ತು ಚೈನಾ ದೇಶದ ಪ್ರಧಾನಿ ಚೌ ಎನ್ ಲೈ (Chou En-Lai) ಗುಪ್ತ ಸಮಾಲೋಚನೆಯಲ್ಲಿ ಯೋಜಿಸಿದ್ದರು. ೧೯೭೨ರ ಫೆಬ್ರವರಿ ಯಲ್ಲಿ ನಿಕ್ಸನ್ ಪೀಕಿಂಗ್‌ಗೆ ಬಂದಿಳಿದನು. ಅವನು ಚೈನಾದ ನಾಯಕರೊಡನೆ ಮಾತುಕತೆ ನಡೆಸಿ ಪ್ರವಾಸದ ಕೊನೆಯಲ್ಲಿ ಎರಡು ದೇಶಗಳು ಕೂಡಿ ಪರಸ್ಪರ ಸಂಬಂಧಗಳನ್ನು ಹೆಚ್ಚು ಸ್ನೇಹಪರವಾಗಿ ಮಾಡಲು ಎಲ್ಲ ಪ್ರಯತ್ನಗಳನ್ನು ಮಾಡುವುದಾಗಿ ಜಂಟಿ ಹೇಳಿಕೆಗಳನ್ನು ಪ್ರಕಟಿಸಿದರು.

ನಿಕ್ಸನ್ ಸೋವಿಯೆಟ್ ಒಕ್ಕೂಟಕ್ಕೆ ಭೇಟಿ ನೀಡಿದ ಮೊದಲನೆಯ ಅಮೆರಿಕದ ಅಧ್ಯಕ್ಷ. ೧೯೭೨ರ ಮೇ ತಿಂಗಳಲ್ಲಿ ಎರಡು ವಾರಗಳ ಪ್ರವಾಸಕ್ಕಾಗಿ ನಿಕ್ಸನ್ ಮಾಸ್ಕೋಗೆ ಬಂದಿಳಿದನು. ಅವನ ಮುಖ್ಯ ಉದ್ದೇಶ ಸೋವಿಯೆಟ್ ನಾಯಕರೊಡನೆ ಶೃಂಗಸಭೆ ನಡೆಸುವುದಾಗಿತ್ತು. ಎರಡು ಅಣುಶಕ್ತಿ (atomic powers) ರಾಷ್ಟ್ರಗಳ ನಡುವೆ

ಅಣ್ವಸ್ತ್ರಸಜ್ಜಿತವಾದ ಕ್ಷಿಪಣಿಗಳ ತಯಾರಿಕೆಯಲ್ಲಿ ನಡೆಯುತ್ತಿದ್ದ ಸ್ಪರ್ಧೆಯನ್ನು ತಪ್ಪಿಸಲು ಪರಸ್ಪರ ಶಸ್ತ್ರಾಸ್ತ್ರ ನಿಯಂತ್ರಣ ಒಪ್ಪಂದವನ್ನು ಮಾಡಿಕೊಂಡರು. ಸೈನಿಕ ಕಾರ್ಯಾಚರಣೆಯಲ್ಲಿ ಉಪಯೋಗಿಸುವ ಮಾರಕ ಶಸ್ತ್ರಾಸ್ತ್ರಗಳನ್ನು ಮಿತಿಗೊಳಿಸಲು ಒಪ್ಪಂದ ಮಾಡಿಕೊಂಡರು. ಈ ಒಪ್ಪಂದದ (SALT: Strategic Arms Limitation Treaty) ಪರಿಣಾಮವಾಗಿ ಎರಡು ದೇಶಗಳು ಕ್ಷಿಪಣಿಗಳ ಸಂಖ್ಯೆಯನ್ನು ಕಡಿಮೆ ಮಾಡಲು ಕ್ರಮ ಕೈಗೊಂಡವು. ಒಪ್ಪಂದಕ್ಕೆ ಅನುಗುಣವಾಗಿ ಎರಡು ದೇಶಗಳು ನಡೆದುಕೊಳ್ಳುತ್ತಿವೆಯೋ ಇಲ್ಲವೋ ಎನ್ನುವುದನ್ನು ಬಾಹ್ಯಾಕಾಶದಲ್ಲಿ ಸುತ್ತುವ ಗೂಢಚಾರಿ ಉಪಗ್ರಹಗಳಿಂದ (spy satellites) ತಿಳಿಯಬಹುದಿತ್ತು. ಈ ಒಪ್ಪಂದದ ಇತರ ಅಂಶಗಳು – ಆರೋಗ್ಯ, ವಿಜ್ಞಾನ ಮತ್ತು ವ್ಯವಹಾರ ಕ್ಷೇತ್ರಗಳಲ್ಲಿ ಪರಸ್ಪರ ಸಹಾಯ – ಇವು ಶೀತಲಯುದ್ಧವನ್ನು ತ್ಯಜಿಸಿ ಈ ಎರಡು ಬೃಹತ್ ರಾಷ್ಟ್ರಗಳು ಪರಸ್ಪರ ಘರ್ಷಣೆಯ ಹಾದಿಯನ್ನು ಬಿಟ್ಟು ಅನ್ಯೋನ್ಯತೆ ಬೆಳೆಸಿಕೊಳ್ಳುವ (detente) ದಿಕ್ಕಿನತ್ತ ಸಾಗುವುದು. ಇದು ನಿಕ್ಸನ್ ಆಡಳಿತದ ಒಂದು ಅದ್ಭುತ ಸಾಧನೆ ಎನ್ನಬಹುದು. ೧೯೭೨ರ ಮೇ ತಿಂಗಳಲ್ಲಿ ನಿಕ್ಸನ್ ಮತ್ತ ಸೋವಿಯೆಟ್ ಒಕ್ಕೂಟದ ಪ್ರಧಾನಿ ಕೊಸಿಜಿನ್ (Kosygin) ಅಮೆರಿಕ-ಸೋವಿಯೆಟ್ ಒಕ್ಕೂಟ, ಬಾಹ್ಯಾಕಾಶ ಶೋಧನೆ, ಜ್ಞಾನ ಮತ್ತು ತಂತ್ರ ವಿಜ್ಞಾನ ಕ್ಷೇತ್ರಗಳಲ್ಲಿ ಪರಸ್ಪರ ಸಹಕರಿಸಲು ಒಪ್ಪಿ ಕರಾರಿಗೆ ರುಜು ಹಾಕಿದರು. ಆ ವರ್ಷ ಜುಲೈ ತಿಂಗಳಲ್ಲಿ ಸೋವಿಯೆಟ್ ಒಕ್ಕೂಟ ಅಮೆರಿಕದಿಂದ ಒಂದು ಬಿಲಿಯನ್ ಡಾಲರ್‌ಗಳಷ್ಟು ಗೋಧಿ ಮತ್ತು ಇತರ ಧಾನ್ಯಗಳನ್ನ ಕೊಳ್ಳಲು ಒಪ್ಪಿಕೊಂಡಿತು.

೧೯೭೨ರ ಚುನಾವಣೆ

ಈ ಚುನಾವಣೆಗೆ ಸಿದ್ಧತೆಗಳು ನಡೆಯುತ್ತಿದ್ದಂತೆಯೆ ಉತ್ತರ ವಿಯಟ್‌ನಾಮ್‌ನೊಡನೆ ಶಾಂತಿ ಸಂಧಾನಗಳನ್ನು ವಿದೇಶಾಂಗ ಕಾರ್ಯದರ್ಶಿ ಕಿಸ್ಸಿಂಜರ್ ಮುಂದುವರಿಸಿದ್ದನು. ಹೆಚ್ಚು ಕಡಿಮೆ ಎಲ್ಲ ಅಮೆರಿಕನ್ ಸೈನ್ಯ ತುಕಡಿಗಳನ್ನು ವಾಪಸ್ಸು ಕರೆಸಿದ್ದಾಗಿತ್ತು. ಆದ್ದರಿಂದ ವಿಯಟ್‌ನಾಮ್ ಯುದ್ಧ ಚುನಾವಣೆಯ ವೇದಿಕೆಯ ಮುಖ್ಯ ಅಂಶವಾಗಿರಲಿಲ್ಲ. ಸಾರ್ವಜನಿಕರು ಸರ್ಕಾರ ಸೈನ್ಯ ತುಕಡಿಗಳನ್ನು ತಾನಾಗಿಯೇ ಕರೆಸಿಕೊಂಡದ್ದು ಗೌರವಯುತ ನಿರ್ಧಾರವೆಂದು ಅಭಿಪ್ರಾಯಪಟ್ಟರು. ಇದನ್ನು ನಿಕ್ಸನ್ ತನ್ನ ಮರುಚುನಾವಣೆಯಲ್ಲಿ ತನ್ನ ಕಾರ್ಯಸಮರ್ಥನೆಯ ದ್ಯೋತಕವೆಂಬಂತೆ ಉಪಯೋಗಿಸಿಕೊಂಡನು. ಆದ್ದರಿಂದ ನಿಕ್ಸನ್ ಹೆಚ್ಚಿನ ಚುನಾವಣಾ ಪ್ರಚಾರಕ್ಕೆ ಹೋಗಲಿಲ್ಲ.

ರಿಪಬ್ಲಿಕನ್ ಪಕ್ಷ ನಿಕ್ಸನ್‌ನನ್ನು ಪುನಃ ನಾಮಕರಣ ಮಾಡಿತು. ಫ್ಲಾರಿಡಾದ ಮಯಾಮಿಯಲ್ಲಿ ಸಮಾವೇಶಗೊಂಡಿದ್ದ ಡೆಮೊಕ್ರಾಟಿಕ್ ಪಕ್ಷ ವಿಯಟ್‌ನಾಮ್ ಯುದ್ಧವನ್ನು ಮೊದಲಿಂನಿಂದಲೂ ವಿರೋಧಿಸುತ್ತಿದ್ದ ಬಂದಿದ್ದ ದಕ್ಷಿಣ ಡಕೋಟಾದ ಜಾರ್ಜ್ ಮೆಕ್‌ಗವರ್ನ್‌ನನ್ನು (George McGovern) ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿ

ನಾಮಕರಣ ಮಾಡಿದರು. ಇದಕ್ಕೆ ಮುಖ್ಯ ಕಾರಣ ಪಕ್ಷದ ರಚನೆಯಲ್ಲಿ ಉಂಟಾದ ಬದಲಾವಣೆಗಳು. ಸಮಾವೇಶಕ್ಕೆ ಮೊದಲಿನಂತೆ ಮಧ್ಯಮವರ್ಗದವರು ಮತ್ತು ರಾಜಕಾರಣಿಗಳನ್ನು ಆಯ್ಕೆ ಮಾಡದೆ ಅಲ್ಪಸಂಖ್ಯಾತ ಸಮುದಾಯಗಳಿಂದ – ಕರಿಯರು, ಮೆಕ್ಸಿಕನ್ನರು ಮತ್ತು ಮಹಿಳೆಯರು – ಮೊದಲೇ ನಿಗದಿ ಮಾಡಿದ ಸಂಖ್ಯೆಯ ಸದಸ್ಯರನ್ನು ಆಯ್ದುದು. ಡೆಮೊಕ್ರಾಟಿಕ್ ಪಕ್ಷ 'ಬಣ್ಣ ಬದಲಾಯಿಸಿದುದನ್ನು' ಟಿ.ವಿ. ನೋಡುವವರಿಗೆ ಕೂಡಲೇ ತಿಳಿಯುತ್ತಿತ್ತು. ಈ ಬದಲಾವಣೆ ಮೆಕ್‌ಗವರ್ನ್‌ರ್ ನಾಮಕರಣಕ್ಕೆ ಅನುಕೂಲವಾಯಿತು. ಅವನು ಉಪಾಧ್ಯಕ್ಷ ಸ್ಥಾನಕ್ಕೆ ಮುಸ್ಸೋರ ಸೆನೆಟರ್ ಥಾಮಸ್ ಈಗಲ್‌ಟನ್‌ನನ್ನು ಆಯ್ಕೆ ಮಾಡಿದನು. ಆದರೆ ಈಗಲ್‌ಟನ್ ಮಾನಸಿಕ ತೊಂದರೆಗಳಿಗಾಗಿ ಮೂರು ಬಾರಿ ಚಿಕಿತ್ಸೆ ಪಡೆದಿದ್ದ ಸುದ್ದಿ ತಿಳಿದ ಮೇಲೆ ಅವನನ್ನು ಕೈಬಿಡುವಂತೆ ಪಕ್ಷದ ಪ್ರಮುಖರು ಮೆಕ್‌ಗವರ್ನ್‌ರ್ ಮೇಲೆ ಒತ್ತಾಯ ಹೇರಿದರು. ಆದ್ದರಿಂದ ಮಾಜಿ ಅಧ್ಯಕ್ಷ ಕೆನಡಿಯ ಮೈದುನ ಸಾರ್ಜಂಟ್ ಶ್ರೈವರ್‌ನನ್ನು (Seargent Shriver) ಆಯ್ಕೆ ಮಾಡಿಕೊಂಡನು.

ಅಮೆರಿಕನ್ ಸ್ವತಂತ್ರ ಪಕ್ಷದ (Amerivcan Independent Party) ಸ್ಥಾಪಕ ಜಾರ್ಜ್ ವಾಲೆಸ್ ೧೯೭೨ರ ಮೇ ತಿಂಗಳಲ್ಲಿ ಮೇರಿಲ್ಯಾಂಡ್ ರಾಜ್ಯದ ಲಾರೆಲ್ (Laurel) ಎಂಬಲ್ಲಿ ಚುನಾವಣಾ ಪ್ರಚಾರ ಮಾಡುತ್ತಿದ್ದಾಗ ಅವನನ್ನು ಕೊಲೆ ಮಾಡುವ ಪ್ರಯತ್ನ ನಡೆಯಿತು. ಕೊಲೆಗಾರ ಹಾರಿಸಿದ ಗುಂಡು ವಾಲೆಸ್‌ನನ್ನು ಸೊಂಟದ ಕೆಳಗೆ ನಿಶ್ಚೇಷ್ಟನನ್ನಾಗಿ ಮಾಡಿತು. ಎದ್ದು ಓಡಾಡಲಾರದ ಅವನು ಗಾಲಿ ಕುರ್ಚಿಯನ್ನು (wheel chair) ಸದಾ ಅವಲಂಬಿಸಿರುವುದು ಅನಿವಾರ್ಯವಾಯಿತು. ಇದರಿಂದಾಗಿ ಅವನು ಚುನಾವಣೆಯ ಸ್ಪರ್ಧೆಯಿಂದ ನಿಷ್ಕ್ರಮಿಸಿದನು. ನಾಮಕರಣದ ಮೊದಲ ಸುತ್ತಿನಲ್ಲಿ ವಾಲೆಸ್ ೧೭ ಸಾವಿರ ಮತಗಳಷ್ಟು ಪಡೆದು ಎರಡನೆಯ ಸ್ಥಾನದಲ್ಲಿದ್ದನು.

೧೯೭೨ರ ನವೆಂಬರ್ ೭ರಂದು ಚುನಾವಣೆಗಳ ಫಲಿತಾಂಶ ಪ್ರಕಟವಾಗಿ ನಿಕ್ಸನ್-ಆ್ಯಗ್ನ್ಯೂ ಮೆಸಾಚ್ಯುಸೆಟ್ಸ್ ಮತ್ತು ವಾಷಿಂಗ್‌ಟನ್ (ಡಿ.ಸಿ.)ಗಳನ್ನುಳಿದು ಎಲ್ಲಾ ರಾಜ್ಯಗಳಲ್ಲೂ ಬಹುಮತ ಪಡೆದು ಆಯ್ಕೆಯಾಗಿದ್ದರು. ಮತದಾನ ಮಾಡುವ ವಯಸ್ಸಿನ ಒಟ್ಟುಸಂಖ್ಯೆಯಲ್ಲಿ ಶೇಕಡಾ ೫೫ ಭಾಗ ಮತ ನೀಡಿದ್ದರು. ಇದು ಜನರಿಗೆ ಎರಡು ಪಕ್ಷಗಳಲ್ಲೂ ಹೆಚ್ಚಿನ ಆಸಕ್ತಿ ಇರಲಿಲ್ಲ ಎನ್ನುವುದನ್ನು ತೋರಿಸುತ್ತದೆ. ಆದರೆ ಎಲೆಕ್ಟರಲ್ ಮತಗಳಲ್ಲಿ ನಿಕ್ಸನ್ ೫೨೧ ಮತಗಳನ್ನು ಪಡೆದಿದ್ದು ಮೆಕ್‌ಗವರ್ನರ್ ೧೭ ಮತಗಳನ್ನು ಮಾತ್ರ ಪಡೆದಿದ್ದನು. ನಿಕ್ಸನ್ ದಕ್ಷಿಣ ರಾಜ್ಯಗಳ ಜನರ, ಕ್ಯಾಥೊಲಿಕ್ ಮತದವರ ಮತ್ತು ಕಾರ್ಖಾನೆಗಳ ಕಾರ್ಮಿಕರ ಮತಗಳನ್ನು ಹೆಚ್ಚಾಗಿ ಪಡೆದಿದ್ದನು. ಯುವಜನರು ಹೆಚ್ಚಾಗಿ ಮೆಕ್‌ಗವರ್ನರ್‌ಗೆ ಮತ ನೀಡುತ್ತಾರೆ ಎಂದು ಊಹಿಸಿದ್ದು ತಪ್ಪಾಯಿತು. ಮೆಕ್‌ಗವರ್ನರ್ ತನ್ನ ರಾಜ್ಯ ದಕ್ಷಿಣ ಡಕೋಟಾದಲ್ಲಿಯೆ ಸೋತಿದ್ದನು. ಮತದಾನ

ಮಾಡುವ ಜನತೆ ರಾಜಕೀಯ ಪ್ರದರ್ಶನಗಳು, ವರ್ಣದ್ವೇಷ ಮತ್ತು ಸರಿಯಾದ ರೀತಿಯಲ್ಲಿ ವ್ಯವಸ್ಥೆಗೊಳಿಸದ, ವೃಥಾ ಹಣವನ್ನು ಹಾಳು ಮಾಡುತ್ತಿದ್ದ ಬಡತನ ನಿರ್ಮೂಲ ಯೋಜನೆಗಳ ಬಗ್ಗೆ ಜಿಗುಪ್ಸೆ ತಾಳಿದ್ದರು. ಅರವತ್ತರ ದಶಕದ ಅಸ್ತವ್ಯಸ್ತ ಆಂದೋಳನಗಳ ಬಗ್ಗೆ ಜನ ತೀವ್ರ ಅಸಮಾಧಾನಗೊಂಡಿದ್ದರು.

೧೯೭೨ರ ಚುನಾವಣಾ ಪ್ರಚಾರ ಭ್ರಷ್ಟಾಚಾರ ಮತ್ತು ನ್ಯಾಯಬಾಹಿರವಾದ ಚಟುವಟಿಕೆಗಳಿಂದ ಕೂಡಿ ಅಮೆರಿಕದ ಚುನಾವಣೆಯ ಇತಿಹಾಸದಲ್ಲಿ ಅತ್ಯಂತ ಕೊಳಕು ರಾಜಕೀಯವೆನಿಸಿಕೊಂಡಿತ್ತು. ವಾಟರ್‌ಗೇಟ್ ಆವರಣದಲ್ಲಿದ್ದ ಡೆಮೊಕ್ರಾಟಿಕ್ ಪಕ್ಷದ ಕಛೇರಿಯಲ್ಲಿ ನಡೆದ ಕಳ್ಳತನ. ಇದು ಸಾಮಾನ್ಯ ಕಳ್ಳತನದಂತೆ ಮೇಲ್ನೋಟಕ್ಕೆ ಕಂಡರೂ ವಾಸ್ತವವಾಗಿ ವ್ಯವಸ್ಥಿತವಾದ, ಸಮೃದ್ಧ ಹಣಸಹಾಯವಿದ್ದ, ಪೂರ್ವನಿಯೋಜಿತ ಸುಳ್ಳಿನ ಸರಮಾಲೆ, ಗೂಢಾಚಾರಗಳನ್ನೊಳಗೊಂಡು, ಗುಪ್ತನಿಧಿ ಮತ್ತು ಪಟ್ಟಭದ್ರ ಹಿತಾಸಕ್ತಿಗಳೊಡನೆ ಅನ್ಯೋನ್ಯ ಸಂಬಂಧಗಳನ್ನೊಳಗೊಂಡ ಸಂಕೀರ್ಣ ಪಿತೂರಿಯಾಗಿತ್ತು. ಅಧ್ಯಕ್ಷ ನಿಕ್ಸನ್‌ನ ಮರುಚುನಾವಣಾ ಸಮಿತಿಯ ಸದಸ್ಯರು ನ್ಯಾಯಬಾಹಿರವಾದ ಈ ಚಟುವಟಿಕೆಗಳಲ್ಲಿ ನಿರತರಾಗಿದ್ದರು. ಇವರಲ್ಲಿ ಕೆಲವರು ನಿಕ್ಸನ್‌ನ ಅತ್ಯಂತ ನಿಕಟವರ್ತಿಗಳೂ ಆಗಿದ್ದರು.

ನಿಕ್ಸನ್‌ನ ಆಡಳಿತದ ಎರಡನೆಯ ಅವಧಿಯಲ್ಲಿ ಅಧ್ಯಕ್ಷಸ್ಥಾನದ ಅಧಿಕಾರ (the power of the Presidency) ಪರಾಕಾಷ್ಠೆಗೆ ಮುಟ್ಟಿತ್ತು. ಕೇಂದ್ರೀಕೃತವಾದ ಅಧಿಕಾರ ಮತ್ತು ನಿಕ್ಸನ್ ಅದನ್ನು ಉಪಯೋಗಿಸಿಕೊಂಡ ರೀತಿಯನ್ನು 'ಸಾರ್ವಭೌಮಿಕ ಅಧ್ಯಕ್ಷತೆ' (Imperial Presidency) ಎಂದು ಇತಿಹಾಸಕಾರರು ಕರೆದಿದ್ದಾರೆ. ಕಾಂಗ್ರೆಸ್ ಜಾರಿಗೆ ತಂದ ಅನೇಕ ಸಾಮಾಜಿಕ ಯೋಜನೆಗಳಿಗೆ ನಿಕ್ಸನ್ ಒಪ್ಪಿಗೆ ಕೊಡಲಿಲ್ಲ. ಅವಕ್ಕೆ ಮೀಸಲಾಗಿಟ್ಟಿದ್ದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಕ್ಕು ತನಗಿದೆ ಎಂದು ನಿಕ್ಸನ್ ನಂಬಿದ್ದನು. ಕಾಂಗ್ರೆಸ್ ನಡೆಸುತ್ತಿದ್ದ ಅನೇಕ ವಿಚಾರಣೆಗಳ ಬಗ್ಗೆ ಮಾಹಿತಿ ಕೇಳಿದಾಗ ನಿಕ್ಸನ್ ತನ್ನ ಕಾರ್ಯನಿರ್ವಾಹಕ ವಿಶೇಷಾಧಿಕಾರವನ್ನು (Executive Privilege) ಉಪಯೋಗಿಸಿ ಮಾಹಿತಿ ಒದಗಿಸಲು ನಿರಾಕರಿಸಿದನು. ತನ್ನ ನಂಬಿಕಸ್ಥ ನಿಕಟವರ್ತಿಗಳಿಂದ ಸುತ್ತುವರಿದಿದ್ದ ಅವನನ್ನು ಸಂಪರ್ಕಿಸುವುದೇ ದುಸ್ತರವಾಗಿತ್ತು. ಕ್ಯಾಂಬೋಡಿಯಾದ ಮೇಲೆ ಬಾಂಬ್ ದಾಳಿ ಆಜ್ಞಾಪಿಸಿದಾಗ ಅವನು ಕಾಂಗ್ರೆಸ್ ಒಪ್ಪಿಗೆ ಪಡೆಯುವ ತೊಂದರೆ ತೆಗೆದುಕೊಳ್ಳಲಿಲ್ಲ; ಅಧ್ಯಕ್ಷನಿಗೆ ಯುದ್ಧ ಸಾರುವ ಅಧಿಕಾರವಿದೆ, ಅದಕ್ಕೆ ಅವನು ಯಾರ ಒಪ್ಪಿಗೆಗಾಗಿ ಕಾಯಬೇಕಾಗಿಲ್ಲ ಎಂದು ತನ್ನ ಆಜ್ಞೆಯನ್ನು ಸಮರ್ಥಿಸಿಕೊಂಡನು. ರಾಷ್ಟ್ರದ ಭದ್ರತೆಯ ನೆವದಲ್ಲಿ ತನ್ನ ನಿಕಟವರ್ತಿಗಳ ನ್ಯಾಯಬಾಹಿರ ಚಟುವಟಿಕೆಗಳನ್ನೂ ಸಮರ್ಥಿಸಿದನು. ಬಹುತೇಕ ಅಮೆರಿಕನ್ನರು ನಿಕ್ಸನ್‌ನನ್ನು ಬ್ರಿಟಿಷ್ ಸಂಪ್ರದಾಯಸ್ಥ ರಾಜಕಾರಣಿಗೆ (Tory) ಹೋಲಿಸಿದರು. ವಾಟರ್‌ಗೇಟ್ (Watergate) ಹೊಲಸು

ಹಗರಣದ ನಿರ್ವಹಣೆಯಲ್ಲಿ ನಿಕ್ಸನ್ ಅಧಿಕಾರ ದುರುಪಯೋಗದ ಪರಮಾವಧಿಯನ್ನು ಮುಟ್ಟಿದನು.

ವಾಟರ್‌ಗೇಟ್ ಹಗರಣ

೧೯೭೨ರ ಜೂನ್ ೧೭ರ ರಾತ್ರಿ ರಾಜಧಾನಿ ವಾಷಿಂಗ್‌ಟನ್‌ನಲ್ಲಿ ವಾಟರ್‌ಗೇಟ್ ಕಟ್ಟಡದಲ್ಲಿದ್ದ ಡೆಮೊಕ್ರಾಟಿಕ್ ಪಕ್ಷದ ಪ್ರಧಾನ ಕಛೇರಿಗೆ ಕಳ್ಳತನದಲ್ಲಿ ಒಳಹೊಕ್ಕ ಐದು ಜನರಿಂದ ಪ್ರಾರಂಭವಾಯಿತು ವಾಟರ್‌ಗೇಟ್ ಅಪನಿಂದಾ ಪ್ರಕರಣ (scandal). ಬಂಧಿತರಾದ ಐವರಲ್ಲಿ ಮಾಜಿ ಸಿ ಐ ಎ (C.I.A) ಕಾರ್ಯಕರ್ತ ಹಾಗೂ ಅಧ್ಯಕ್ಷ ನಿಕ್ಸನ್‌ನ ಮರುಚುನಾವಣೆಯ ಸಮಿತಿಯ ರಕ್ಷಣಾಧಿಕಾರಿಯಾಗಿದ್ದ ಜೇಮ್ಸ್ ಮೆಕಾರ್ಡ್‌ನೂ (James McCord) ಸೇರಿದ್ದನು. ಇವರಿಂದ ಪೊಲೀಸರು ಟೆಲಿಫೋನ್ ಸಂಭಾಷಣೆಯನ್ನು ಕದ್ದು ಕೇಳುವ ಸಾಧನಗಳು ಮತ್ತು ದಾಖಲೆ ಪತ್ರಗಳನ್ನು ಫೋಟೊ ಪ್ರತಿ ಮಾಡುವ ಉಪಕರಣಗಳನ್ನು ವಶಪಡಿಸಿಕೊಂಡರು. ಈ ಕಳ್ಳರು ನಿಕ್ಸನ್‌ನ ಯುದ್ಧ ಧೋರಣೆಯನ್ನು ವಿರೋಧಿಸುವವರ ಚಟುವಟಿಕೆಗಳ ವಿವರಗಳನ್ನು ತಿಳಿಯಲು ಹವಣಿಸಿದ್ದರು. ನಿಕ್ಸನ್ ಈ ಕಳ್ಳರನ್ನು ಸಮರ್ಥಿಸಲು ಯುದ್ಧ ವಿರೋಧಿಗಳು ರಾಷ್ಟ್ರದ ರಕ್ಷಣೆಗೆ ಅಪಾಯ ಉಂಟುಮಾಡುತ್ತಾರೆ. ಆದ್ದರಿಂದ ಅವರ ಚಟುವಟಿಕೆಗಳ ಬಗ್ಗೆ ತಿಳಿಯಬೇಕಾದುದು ಅಗತ್ಯವೆಂದು ವಾದಿಸಿದನು. ವಾಟರ್‌ಗೇಟ್ ಕಟ್ಟಡದಲ್ಲಿ ನಡೆದ ಕಳ್ಳತನಕ್ಕಿಂತಲೂ ಹೆಚ್ಚು ನ್ಯಾಯಬಾಹಿರವಾದ ಕಾರ್ಯಗಳಲ್ಲಿ – ಕಾಗದ ಪತ್ರಗಳನ್ನು ಒಡೆದು ನೋಡುವುದು, ಟೆಲಿಫೋನ್ ಸಂಭಾಷಣೆಯನ್ನು ಕದ್ದು ಕೇಳುವುದು ಮತ್ತು ವಿಶ್ವವಿದ್ಯಾನಿಲಯಗಳ ಆವರಣದಲ್ಲಿ ಗೂಢಚಾರರನ್ನು ನೇಮಿಸಿ ವಿದ್ಯಾರ್ಥಿ ಮುಂದಾಳುಗಳನ್ನು ಹಿಂಬಾಲಿಸಿ ವಿಷಯ ಸಂಗ್ರಹಿಸುವುದು – ಇಂಥವುಗಳನ್ನೂ ನಿಕ್ಸನ್ ಉಪಯೋಗಿಸಿದನು. ೧೯೭೧ರಲ್ಲಿ ಪೆಂಟಗಾನ್ ಪತ್ರಿಕೆಗಳನ್ನು (Pentagon papers) ಪ್ರಕಟಿಸಿ ವಿಯಟ್‌ನಾಮ್ ಯುದ್ಧದಲ್ಲಿ ನಡೆಯುತ್ತಿರುವ ಅಮಾನುಷ ಕೃತ್ಯಗಳನ್ನು ಬಹಿರಂಗಪಡಿಸಿ ಸರ್ಕಾರಕ್ಕೆ ಧಕ್ಕೆ ಉಂಟುಮಾಡಿದ್ದ ಯುದ್ಧವಿರೋಧಿ ಡೇನಿಯಲ್ ಎಲ್ಸ್‌ಬರ್ಗ್‌ನ (Daniel Ellsberg) ಚಟುವಟಿಕೆಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ನಿಕ್ಸನ್ ನ್ಯಾಯಾಲಯದ ನಿಯಂತ್ರಣಕ್ಕೆ ಹೊರತಾದ, ತನ್ನ ಆಡಳಿತ ಮಂಡಳಿಯ ಸದಸ್ಯರಿಂದ ಕೂಡಿದ ಒಂದು ಘಟಕವನ್ನು ಸ್ಥಾಪಿಸಿದ್ದನು.

ವಾಟರ್‌ಗೇಟ್ ಕುರಿತು ಪತ್ರಕರ್ತರು ನಡೆಸಿದ ತನಿಖೆಗಳಿಂದ ಮತ್ತು ಈ ದುಷ್ಕೃತ್ಯಗಳಲ್ಲಿ ಭಾಗವಹಿಸಿದವರು ತಮಗೆ ಒದಗಲಿರುವ ಶಿಕ್ಷೆಯನ್ನು ಕಡಿಮೆ ಮಾಡಿಕೊಳ್ಳಲು ತಪ್ಪೊಪ್ಪಿಕೊಂಡು ನಿಕ್ಸನ್ ಆಜ್ಞಾನುವರ್ತಿಗಳಾಗಿ ತಾವು ಮಾಡಿದ ಕೃತ್ಯಗಳನ್ನೆಲ್ಲ ವರದಿ ಮಾಡಿದರು. ೧೯೭೨ರಲ್ಲಿ ಉತ್ತರ ಕೆರೊಲಿನಾದ ಸೆನೆಟರ್ ಸ್ಯಾಮ್ ಅರ್ವಿನ್ (Sam Ervin) ಕಾಂಗ್ರೆಸ್ಸಿನಲ್ಲಿ ನಡೆಸಿದ ವಿಚಾರಣೆಗಳಲ್ಲಿ ಅನೇಕ ಸಾರ್ವಜನಿಕ ಅಧಿಕಾರಿಗಳು ಮತ್ತು ತೆರೆಮರೆಯ ಕಾರ್ಯಕರ್ತರು (undercover

men) ತಪ್ಪೊಪ್ಪಿಕೊಂಡು ತಮ್ಮ ದುಷ್ಕೃತ್ಯಗಳನ್ನು ಬಹಿರಂಗ ಪಡಿಸಿದರು. ನಿಕ್ಸನ್ ತನ್ನ ಕಾರ್ಯಾಗಾರಗಳಲ್ಲಿ ನಡೆಯುವ ಸಂಭಾಷಣೆಗಳನ್ನು ಧ್ವನಿಮುದ್ರಣ ಮಾಡಲು ಧ್ವನಿಸುರುಳಿಗಳನ್ನು ಅಳವಡಿಸಿರುವುದು ತಿಳಿದುಬಂದು ಈ ಹಗರಣದ ವಿಚಾರಣೆ ನಡೆಸುತ್ತಿದ್ದ ನ್ಯಾಯಾಧೀಶ ಸಿರಿಕ್ (Sirica) ಆ ಧ್ವನಿಸುರುಳಿಗಳನ್ನು ನ್ಯಾಯಾಲಯದಲ್ಲಿ ಹಾಜರಿ ಪಡಿಸಲು ಆಜ್ಞೆ ನೀಡಿದನು. ನಿಕ್ಸನ್ ಇದನ್ನು ನಿರಾಕರಿಸಿದರೂ ಕೆಲವು ತಿಂಗಳ ನಂತರ ಅವುಗಳನ್ನು ಶ್ರೇಷ್ಠ ನ್ಯಾಯಾಲಯದ ಆಜ್ಞೆಯಂತೆ ವಿಶಿಷ್ಟ ನ್ಯಾಯಾಧೀಶನ ವಶಕ್ಕೆ ಒಪ್ಪಿಸಲಾಯಿತು. ಈ ಧ್ವನಿಸುರುಳಿಗಳು ನಿಕ್ಸನ್‌ನ ನ್ಯಾಯಬಾಹಿರ ವ್ಯವಹಾರಗಳನ್ನು ಸಾಬೀತುಗೊಳಿಸಿದವು. ಅಲ್ಲದೆ ಅವುಗಳನ್ನು ಮುಚ್ಚಿಹಾಕಲು ಸಾರ್ವಜನಿಕರಿಗೆ ಹೇಳಿದ ಸುಳ್ಳನ್ನೂ ನಿಕ್ಸನ್ ತಪ್ಪಿಸಿಕೊಳ್ಳುವಂತಿರಲಿಲ್ಲ. ೧೯೭೪ರ ವೇಳೆಗೆ ಮೂವತ್ತಕ್ಕೂ ಹೆಚ್ಚಿನ ನಿಕ್ಸನ್ ನಿಕಟವರ್ತಿಗಳ ಮೇಲೆ ನ್ಯಾಯಾಲಯ ದೋಷಾರೋಪಣೆ ಹೊರಿಸಿ (indicted) ಅವರಲ್ಲಿ ಕೆಲವರು ಅಪರಾಧಿಗಳೆಂದು ತೀರ್ಪು ನೀಡಿತ್ತು. ಇವರಲ್ಲಿ ನ್ಯಾಯಾಂಗ ಸಚಿವ ರಿಚರ್ಡ್ ಕ್ಲೈನ್‌ಡೀನ್ಸ್ಟ್ ಮತ್ತು ಮಾಜಿ ನ್ಯಾಯಾಂಗ ಸಚಿವ ಜಾನ್ ಮಿಚ್ಚೆಲ್ ಸೇರಿದ್ದರು. ಈ ದುಷ್ಕೃತ್ಯಗಳಲ್ಲಿ ಪಾತ್ರ ವಹಿಸಿದ್ದ ನಿಕ್ಸನ್ ಆಡಳಿತ ಮಂಡಳಿಯ ಪ್ರಮುಖರಾಗಿದ್ದ ಹಾಲ್ಡಮನ್, ಜಾನ್ ಅರ್ಲಿಕ್‌ಮನ್ ಮತ್ತು ಜಾನ್ ಡೀನ್ – ಇವರು ೧೯೭೪ರ ಏಪ್ರಿಲ್ ೨೦ರಂದು ರಾಜೀನಾಮೆ ನೀಡಿದರು.

ವಾಟರ್‌ಗೇಟ್ ಹಗರಣ[೩] ಫೆಡರಲ್ ಸರ್ಕಾರದ ಕಾರ್ಯಾಂಗವನ್ನು (The Executive) ಅನೇಕ ತಿಂಗಳುಗಳ ಕಾಲ ಸ್ಥಗಿತಗೊಳಿಸಿತು. ಈ ಹಗರಣ ಜನರು ಫೆಡರಲ್ ಸರ್ಕಾರ ಮತ್ತು ಅಧ್ಯಕ್ಷ ಸ್ಥಾನಗಳಲ್ಲಿ ನಂಬಿಕೆ ಕಳೆದುಕೊಳ್ಳುವಂತೆ ಮಾಡಿತು. ಕಾರ್ಯಾಂಗದ ಮೇಲೆ ಕಾಂಗ್ರೆಸ್ ಹೆಚ್ಚಿನ ನಿಯಂತ್ರಣ ಪಡೆಯಿತು. ಹಾಗೆಯೇ ಯುದ್ಧಕಾಲದಲ್ಲಿ ಅಧ್ಯಕ್ಷನ ವಿಶಿಷ್ಟ ಅಧಿಕಾರವನ್ನು ಕಾಂಗ್ರೆಸ್ ಮೊಟಕುಗೊಳಿಸಿತು. ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ನಿರತವಾಗಿರುವ ಸರ್ಕಾರದ ಸಂಸ್ಥೆಗಳು ಕಾಲಕಾಲಕ್ಕೆ ಕಾಂಗ್ರೆಸ್ಸಿಗೆ ತಮ್ಮ ವ್ಯವಹಾರಗಳ ಬಗ್ಗೆ ವರದಿ ಒಪ್ಪಿಸಬೇಕು ಎನ್ನುವ ಕಾಯಿದೆಯನ್ನು ಅಂಗೀಕರಿಸಲಾಯಿತು.

ಉಪಾಧ್ಯಕ್ಷನ ರಾಜಕೀಯ ವೃತ್ತಿಯ ಉಪಸಂಹಾರ

೧೯೭೩ರ ಅಕ್ಟೋಬರ್ ತಿಂಗಳಲ್ಲಿ ಉಪಾಧ್ಯಕ್ಷ ಆ್ಯಗ್‌ನ್ಯೂ (Agnew) ನ್ಯಾಯಾಲಯದ ವಿಚಾರಣೆಗೆ ಒಳಪಟ್ಟು ಅವನು ಮೇರಿಲ್ಯಾಂಡ್ ರಾಜ್ಯದ ಗವರ್ನರ್

---

೩. ೧೯೭೩ರ ಸೆಪ್ಟೆಂಬರ್ ತಿಂಗಳಲ್ಲಿ ನನ್ನ ಉನ್ನತ ಶಿಕ್ಷಣಕ್ಕಾಗಿ ಅಮೆರಿಕಕ್ಕೆ ಬಂದೆ. ದೂರದರ್ಶನದಲ್ಲಿ ನಡೆಯುತ್ತಿದ್ದ 'ವಾಟರ್‌ಗೇಟ್ ನಾಟಕ'ವನ್ನು ನೋಡುವ ಅವಕಾಶ ದೊರೆಯಿತು. ಹೀಗೆ ಇನ್ನು ಮುಂದೆ ನಡೆದ ಐತಿಹಾಸಿಕ ಘಟನೆಗಳನ್ನು ದೂರದರ್ಶನದಲ್ಲಿ ನೋಡುವ ವಿಶಿಷ್ಟ ಅವಕಾಶ ನನಗೆ ಸಿಕ್ಕಿತು.

ಆಗಿದ್ದ ಕಾಲದಲ್ಲಿ ೧೦೦ ಸಾವಿರ ಡಾಲರ್ ಲಂಚ ಪಡೆದಿದ್ದು ಮತ್ತು ಆದಾಯ ತೆರಿಗೆ ತಪ್ಪಿಸಿಕೊಳ್ಳಲು ಸುಳ್ಳು ಮಾಹಿತಿ ಒದಗಿಸಿದಕ್ಕಾಗಿ ನ್ಯಾಯಾಲಯ ೧೦ ಸಾವಿರ ಡಾಲರ್ ಜುಲ್ಮಾನೆ ವಿಧಿಸಿ ಅವನನ್ನು ಪೊಲೀಸರ ವಿಚಾರಣೆಗೆ ಒಳಪಡಿಸಿತು (probation). ಈ ಕಾರಣಗಳಿಂದ ಅವನು ರಾಜೀನಾಮೆ ಕೊಡುವುದು ಅನಿವಾರ್ಯವಾಯಿತು. ಅಮೆರಿಕದ ಇತಿಹಾಸದಲ್ಲಿ ರಾಜೀನಾಮೆ ಕೊಟ್ಟ ಉಪಾಧ್ಯಕ್ಷರಲ್ಲಿ ಇವನು ಎರಡನೆಯವನಾದನು. (೧೮೩೭ರಲ್ಲಿ ಅಧ್ಯಕ್ಷ ಜಾಕ್‌ಸನ್‌ನೊಡನೆ ಭಿನ್ನಾಭಿಪ್ರಾಯ ಹೊಂದಿದ್ದ ಉಪಾಧ್ಯಕ್ಷ ಜಾನ್ ಕಾಲ್‌ಹೂನ್ ರಾಜೀನಾಮೆ ನೀಡಿದ ಮೊದಲನೆಯವನು.) ಆ್ಯಗ್‌ನ್ಯೂ ಸ್ಥಾನಕ್ಕೆ ನಿಕ್ಸನ್ ಮಿಚಿಗನ್ ರಾಜ್ಯದ ಪ್ರಮುಖ ರಿಪಬ್ಲಿಕನ್ ಕಾಂಗ್ರೆಸ್ ಸದಸ್ಯನಾಗಿದ್ದ ಜರಾಲ್ಡ್ ಫೋರ್ಡ್ (Gerald Ford) ನನ್ನು ನೇಮಿಸಿದನು. ಫೋರ್ಡ್ ನಿಷ್ಠಾವಂತ, ನೇರಪ್ರವೃತ್ತಿಯ ನಿಯತ್ತಿನ ವ್ಯಕ್ತಿಯಾಗಿದ್ದರಿಂದ ಘನತೆ ಗೌರವಗಳಿಗೆ ಪಾತ್ರನಾಗಿದ್ದನು. ಅಧ್ಯಕ್ಷ ನಿಕ್ಸನ್ ಇದಕ್ಕೆ ವ್ಯತಿರಿಕ್ತವಾಗಿ ಗುಟ್ಟಿನ ವ್ಯವಹಾರದಲ್ಲಿ ಮುಳುಗಿ, ಮೇಲ್ನೋಟಕ್ಕೆ ಪ್ರಾಮಾಣಿಕನಂತೆ ನಟಿಸುವ ರಾಜಕಾರಣಿಯಾಗಿದ್ದನು.

ಶ್ವೇತಭವನದ ಧ್ವನಿಸುರುಳಿಗಳು ನಿಕ್ಸನ್‌ನ ಅಧಿಕಾರ ದುರುಪಯೋಗ ಮತ್ತು ದುಷ್ಕೃತ್ಯಗಳನ್ನು ಸಾಬೀತಿಗೊಳಿಸುದುದೇ ಅಲ್ಲದೆ ಅವನು ಕಛೇರಿಯಲ್ಲಿ ನಡೆಯುತ್ತಿದ್ದ ಹೊಲಸು ಹಾಗೂ ಅಸಭ್ಯ ಸಂಭಾಷಣೆ ಮತ್ತು ಅವನ ನೀತಿಬಾಹಿರ ಪ್ರವೃತ್ತಿಯನ್ನು ಬಹಿರಂಗಪಡಿಸಿದವು. ಇದರಿಂದಾಗಿ ಡೆಮೊಕ್ರಾಟಿಕ್ ಪಕ್ಷದ ಸದಸ್ಯರು ಮಾತ್ರವಲ್ಲದೆ ಅವರ ಪಕ್ಷದವರೆ ಆದ ಪ್ರಮುಖ ರಿಪಬ್ಲಿಕನ್ನರು ತಮ್ಮ ಪಕ್ಷದ ಹೆಸರಿಗೆ ಕೆಸರು ಬಳಿದು ಬವಣೆಗೀಡುಮಾಡಿದ ನಿಕ್ಸನ್ ರಾಜೀನಾಮೆ ಕೊಡುವಂತೆ ಒತ್ತಾಯಿಸಿದರು. ನ್ಯಾಯವಿಧಾಯಕ ಸಮಿತಿ ನಿಕ್ಸನ್‌ನನ್ನು ಶಿಕ್ಷೆಗೆ ಒಳಪಡಿಸುವ ಮೂರು ಮಸೂದೆಗಳನ್ನು – ವಾಟರ್‌ಗೇಟ್ ಹಗರಣವನ್ನು ಮುಚ್ಚಿಹಾಕಲು ಪ್ರಯತ್ನಿಸಿದ್ದು, ಅಧ್ಯಕ್ಷ ಸ್ಥಾನವನ್ನು ದುರುಪಯೋಗ ಮಾಡಿದ್ದು ಮತ್ತು ಸಮಿತಿಯ ವಿಚಾರಣೆಗೆ ಸಮ್ಮತಿಸದೇ ಹೋಗಿದ್ದು – ಕಾಂಗ್ರೆಸ್‌ನಲ್ಲಿ ಮಂಡಿಸಿತು. ಡೆಮೊಕ್ರಾಟಿಕ್ ಪಕ್ಷದ ಸದಸ್ಯರಲ್ಲದೆ ಬಹುತೇಕ ರಿಪಬ್ಲಿಕನ್ನರೂ ಕೂಡ ಈ ಮಸೂದೆಗಳನ್ನು ಅಂಗೀಕರಿಸುವರೆಂದು ಅರಿತ ನಿಕ್ಸನ್ ವಿಧಿಯಿಲ್ಲದೆ ೧೯೭೪ರ ಅಕ್ಟೋಬರ್ ೯ರಂದು ಅಧ್ಯಕ್ಷ ಪದವಿಗೆ ರಾಜೀನಾಮೆ ಕೊಟ್ಟು ಕ್ಯಾಲಿಫೋರ್ನಿಯಾದಲ್ಲಿದ್ದ ತನ್ನ ಮನೆಗೆ ಮರಳಿ ಬಂದನು. ನಿಕ್ಸನ್ ತನ್ನ ಉತ್ತರಾಧಿಕಾರಿಯಾಗಿ ಜೆರಾಲ್ಡ್ ಫೋರ್ಡ್‌ನನ್ನು ನೇಮಿಸಿದ್ದನು. ಅಮೆರಿಕದ ಇತಿಹಾಸದಲ್ಲಿ ಅಧ್ಯಕ್ಷ ಪದವಿಗೆ ರಾಜೀನಾಮೆ ಇತ್ತವನು ನಿಕ್ಸನ್ ಒಬ್ಬನೆ! ರಾಷ್ಟ್ರದ ಚುನಾವಣೆಯಲ್ಲಿ ಗೆಲ್ಲದೆ ಅಧ್ಯಕ್ಷನಾದವನು ಫೋರ್ಡ್ ಒಬ್ಬನೆ.

ಜೆರಾಲ್ಡ್ ಫೋರ್ಡ್‌ನ ಅಧ್ಯಕ್ಷತೆ (೧೯೭೪–೧೯೭೭)

ನಿಕ್ಸನ್ ರಾಜೀನಾಮೆ ಕೊಟ್ಟದ್ದರಿಂದ ರಾಜ್ಯಾಂಗ ನಿಯಮದಂತೆ ಉಪಾಧ್ಯಕ್ಷ ಫೋರ್ಡ್ ಅಧ್ಯಕ್ಷತೆ ವಹಿಸಿಕೊಂಡನು. ಇದಾದ ಮೇಳೆ ಅವನು ಕೈಗೊಂಡ ಕಾರ್ಯವೆಂದರೆ

ರಾಜ್ಯಾಂಗದ ೨೫ನೆಯ ತಿದ್ದುಪಡಿಯನ್ನನುಸರಿಸಿ ನ್ಯೂಯಾರ್ಕ್ ರಾಜ್ಯದ ಗವರ್ನರ್ ಆಗಿದ್ದ ನೆಲ್ಸನ್ ರಾಕ್‌ಫೆಲರ್‌ನನ್ನು (Nelson Rockefeller) ಉಪಾಧ್ಯಕ್ಷನನ್ನಾಗಿ ಆಯ್ಕೆ ಮಾಡಿದ್ದು. ಅಮೆರಿಕದ ೩೮ನೆಯ ಅಧ್ಯಕ್ಷನಾದ ಫೋರ್ಡ್ ಮಿಚಿಗನ್ ರಾಜ್ಯದವನು. ಆ ರಾಜ್ಯದ ಪ್ರತಿನಿಧಿಯಾಗಿ ಕಾಂಗ್ರೆಸ್‌ನಲ್ಲಿ ೨೫ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದನು. ಕಾಂಗ್ರೆಸ್‌ನ ಸದಸ್ಯನಾಗಿದ್ದವನು ವಿರೋಧಪಕ್ಷದ ನಾಯಕಸ್ಥಾನಕ್ಕೇರಿದನು (House Minority Leader). ಆ ಅಧಿಕಾರದಲ್ಲಿ ಡೆಮೊಕ್ರಾಟಿಕ್ ಪಕ್ಷ ಮಂಡಿಸಿದ ಎಲ್ಲ ಠರಾವು/ ಮಸೂದೆಗಳನ್ನು ಅಂಗೀಕಾರವಾಗದಂತೆ ತಡೆಗಟ್ಟುತ್ತಿದ್ದನು. ಅವನು ಜಗಳಗಂಟಿ ಸಂಪ್ರದಾಯವಾದಿ ಮತ್ತು ತನ್ನ ಪಕ್ಷದ ಪರಿಣಮಕಾರಿ ಮುಖಂಡನೆಂದು ಪ್ರಸಿದ್ಧಿ ಪಡೆದಿದ್ದನು. ಬಿಚ್ಚು ಮನಸ್ಸಿನವನಾಗಿದ್ದು ಹಾಸ್ಯ ಪ್ರವೃತ್ತಿಯುಳವರ ಸಂಗ ಬಯಸುತ್ತಿದ್ದನು. ಸದ್ಗುಣಿಯಾಗಿದ್ದರೂ ಅಡ್ಡಾದಿಡ್ಡಿ (awkward) ವ್ಯಕ್ತಿಯೂ ಆಗಿದ್ದನು. ವಿಮಾನದಿಂದ ಇಳಿಯುವಾಗ ಮುಗ್ಗರಿಸುವುದು, ಶ್ವೇತಭವನದಲ್ಲಿ ಪ್ರತಿಷ್ಠಿತ ವ್ಯಕ್ತಿಗಳನ್ನು ಬರಮಾಡಿಕೊಳ್ಳುವಾಗ ಎಡವಿ ಬೀಳುವುದು, ಅಂತರರಾಷ್ಟ್ರೀಯ ನಾಯಕರೊಡನೆ ಭೋಜನ ಮಾಡುವಾಗ ಬಟ್ಟೆಯ ಮೇಲೆ ಆಹಾರ ಚೆಲ್ಲಿಕೊಳ್ಳುವುದು ಮುಂತಾದ ಅಚಾತುರ್ಯಗಳಿಂದ ಹಾಸ್ಯಕ್ಕೀಡಾಗಿದ್ದನು. ಅಧ್ಯಕ್ಷ ಫೋರ್ಡ್‌ನ ಗಾಲ್ಫ್ ಆಟದ ವೈಖರಿ ಮತ್ತು ಅವನಿಂದ ಆಗಾಗ ಆಗುತ್ತಿದ್ದ ಅಚಾತುರ್ಯಗಳು ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ ಹಾಸ್ಯಪ್ರಸಂಗಗಳಿಗೆ ಗ್ರಾಸವಾಗಿದ್ದವು.

ಫೋರ್ಡ್ ಅಧ್ಯಕ್ಷನಾದ ಮೇಲೆ ನಿಕ್ಸನ್ ಆಡಳಿತ ಮಂಡಳಿಯ ಬಹುತೇಕ ಸದಸ್ಯರನ್ನು ಉಳಿಸಿಕೊಂಡನು. ಹಾಗೆ ಉಳಿಸಿಕೊಂಡವರಲ್ಲಿ ಪ್ರಮುಖನಾದವನು ನಿಕ್ಸನ್ ವಿದೇಶಾಂಗ ನೀತಿಯನ್ನು ರೂಪಿಸಿದ ಕಾರ್ಯದರ್ಶಿ ಹೆನ್ರಿ ಕಿಸ್ಸಿಂಜರ್. ಆರ್ಥಿಕ ಮತ್ತು ಸಾಮಾಜಿಕ ವಿವಾದಾಂಶಗಳ ಬಗ್ಗೆ ಫೋರ್ಡ್ ನಿಕ್ಸನ್‌ನ ಸಾಂಪ್ರದಾಯಿಕ ನಿಲುವನ್ನೆ ಮುಂದುವರೆಸಿದನು. ವಿದೇಶಾಂಗ ನೀತಿಯಲ್ಲಿ ಅವನು ಶೀತಲಯುದ್ಧವನ್ನು ಎದುರಿಸುವ ಸಲುವಾಗಿ ರಕ್ಷಣಾಪಡೆಗಳಿಗೆ ಹೆಚ್ಚು ಹಣವನ್ನು ಮೀಸಲಿಟ್ಟನು. ಇದೇ ಅವಧಿಯಲ್ಲಿ ಕಾಂಗ್ರೆಸ್ಸಿನಲ್ಲಿ ಡೆಮೊಕ್ರಾಟಿಕ್ ಪಕ್ಷ ಬಹುಮತ ಪಡೆದು ಪ್ರಬಲವಾಗಿತ್ತು. ಧಾರಾಳ ಪ್ರವೃತ್ತಿಯ (liberal minded) ಡೆಮೊಕ್ರಾಟರು ಸಮಾಜಾಭಿವೃದ್ಧಿ ಯೋಜನೆಗಳಿಗೆ ಮತ್ತು ವಿದ್ಯಾಸಂಸ್ಥೆಗಳಿಗೆ ಖರ್ಚು ಮಾಡುತ್ತಿದ್ದ ಹಣ ಮಿತಿಮೀರಿದ್ದು ಎಂದು ಭಾವಿಸಿದ ಫೋರ್ಡ್ ಅದನ್ನು ತಡೆಗಟ್ಟಲು ತನ್ನ ವಿಶಿಷ್ಟ ಅಧಿಕಾರವನ್ನು ಆಗಾಗ ಉಪಯೋಗಿಸಿಕೊಂಡನು. ವ್ಯಾಪಾರ ಮತ್ತು ಉದ್ಯೋಗಗಳ ಮೇಲೆ ಫೆಡರಲ್ ಸರ್ಕಾರದ ನಿಯಂತ್ರಣ ಕಡಿಮೆ ಮಾಡಲು ಫೋರ್ಡ್ ಬಹಳ ಪ್ರಯತ್ನಪಟ್ಟನು. ಹಣದುಬ್ಬರದ ಬಗ್ಗೆ ವ್ಯಾಕುಲಗೊಂಡ ಫೋರ್ಡ್ ಸರ್ಕಾರದ ಖರ್ಚು ವೆಚ್ಚಗಳನ್ನು ಕಡಿಮೆ ಮಾಡುವಂತೆ ಮತ್ತು ಖಾಸಗಿ ಉದ್ಯಮಗಳ ಮೇಲಿನ ನಿಯಂತ್ರಣವನ್ನು ತೆಗೆದುಹಾಕುವಂತೆ ಮತ್ತು ತೆರಿಗೆಗಳನ್ನು ಕುಗ್ಗಿಸುವಂತೆ ಕಾಂಗ್ರೆಸ್ಸಿಗೆ ಮನವಿ ಮಾಡಿದನು. ಆದರೆ ಡೆಮೊಕ್ರಾಟರ ಹಿಡಿತದಲ್ಲಿದ್ದ

ಕಾಂಗ್ರೆಸ್ ಅಧ್ಯಕ್ಷನ ಮನವಿಯನ್ನು ಕಡೆಗಣಿಸಿ, ವ್ಯವಸಾಯ, ವಸತಿ ನಿರ್ಮಾಣ, ಶಿಕ್ಷಣ, ಆರೋಗ್ಯ ಮತ್ತು ಸಾರ್ವಜನಿಕ ಕಾರ್ಯಗಳಿಗೆ ಹೆಚ್ಚು ಹಣವನ್ನು ಮೀಸಲಾಗಿಡುವ ಮಸೂದೆಯನ್ನು ಅಂಗೀಕರಿಸಿತು. ಇದನ್ನು ತಡೆಗಟ್ಟಲು ಫೋರ್ಡ್ ವಿಟೋ ಉಪಯೋಗಿಸಿದನು. ದೇಶದ ತೈಲ ಬಳಕೆಯನ್ನು ಕಡಿಮೆ ಮಾಡಲು ಸ್ಥಳೀಯ ತೈಲಬೆಲೆಯ ಮೇಲಿನ ನಿಯಂತ್ರಣವನ್ನು ತೆಗೆದುಹಾಕಲು ಯೋಜಿಸಿದ ಕ್ರಮವನ್ನು ಕಾಂಗ್ರೆಸ್ ನಿರಾಕರಿಸಿತು. ಅದರ ಬದಲಿಗೆ ಕಚ್ಚಾ ತೈಲ (crude oil) ಬೆಲೆಯನ್ನು ಕಡಿಮೆ ಮಾಡಿತು. ಕಾಂಗ್ರೆಸ್‌ನ ಸಹಕಾರ ದೊರೆತಿದ್ದರೂ ಫೋರ್ಡ್ ಹಣದುಬ್ಬರವನ್ನು ಎದುರಿಸಲು ತನ್ನ 'ಹಣದುಬ್ಬರವನ್ನು ಹತ್ತಿಕ್ಕಿರಿ' (Whip Inflation Now - WIN) ಯೋಜನೆಯನ್ನು ಅನುಷ್ಠಾನಕ್ಕೆ ತಂದನು. ಇದಕ್ಕೆ ನಿಯಂತ್ರಣರಹಿತ ಆರ್ಥಿಕವ್ಯವಸ್ಥೆ (Laissez-faire economy) ಅಗತ್ಯವೆಂದು ಅವನು ನಂಬಿದ್ದನು. ಅವನ ಈ ಪ್ರಯತ್ನಗಳಿಂದ ೧೯೭೬ರ ಹೊತ್ತಿಗೆ ಹಣದುಬ್ಬರ ಅರ್ಧದಷ್ಟು ಕಡಿಮೆಯಾಯಿತು. ಆದರೂ ಆರ್ಥಿಕ ಅಭಿವೃದ್ಧಿ ಸ್ಥಗಿತಗೊಂಡಿತ್ತು. ನಿರುದ್ಯೋಗ ಹೆಚ್ಚಿ ಅಮೆರಿಕನ್ನರು ದೇಶದ ಆರ್ಥಿಕ ಭವಿಷ್ಯದ ಬಗ್ಗೆ ನಿರಾಶರಾಗಿದ್ದರು.

ನಿರುದ್ಯೋಗವನ್ನು ಕಡಿಮೆ ಮಾಡಲು ನಿಕ್ಸನ್‌ನಂತೆಯೆ ಫೋರ್ಡ್ ಖೋತಾ ಆಯವ್ಯಯವನ್ನು ಮುಂದುವರಿಸಿದನು. ಇದು ಹಣದುಬ್ಬರವನ್ನು ಹೆಚ್ಚಿಸಿತು. ೧೯೭೫ರಲ್ಲಿ ಮತಿಗೆಟ್ಟ ಹೆಂಗಸೊಬ್ಬಳು ಅಧ್ಯಕ್ಷ ಫೋರ್ಡ್‌ನನ್ನು ಕೊಲೆ ಮಾಡಲು ಯತ್ನಿಸಿ, ಅದೃಷ್ಟವಶಾತ ಅದು ವಿಫಲವಾಯಿತು. ಇದೇ ಸಮಯದಲ್ಲಿ ಮಾಜಿ ಅಧ್ಯಕ್ಷ ನಿಕ್ಸನ್‌ನನ್ನು ಕ್ಷಮಿಸಿದ್ದಕ್ಕಾಗಿ ಫೋರ್ಡ್ ಟೀಕೆಗಳ ಮಹಾಪೂರವನ್ನೇ ಎದುರಿಸಬೇಕಾಯಿತು. ಅಮೆರಿಕದ ಇತಿಹಾಸದ ಒಂದು ಅತ್ಯಂತ ದಾರುಣವಾದ ಪರಿಚ್ಛೇದವನ್ನು ಮುಚ್ಚುವುದು ಅಗತ್ಯವೆಂದು ಫೋರ್ಡ್ ಪರಿಗಣಿಸಿದ್ದನು. ಅವನು ನೀಡಿದ ಕ್ಷಮಾದಾನ ನಿಕ್ಸನ್‌ನನ್ನು ಅವನು ಅಧ್ಯಕ್ಷನಾಗಿದ್ದಾಗ ಮಾಡಿರಬಹುದಾದ ಎಲ್ಲ ಅಪರಾಧಗಳಿಂದ ಪಾರುಮಾಡಿತು. ಹಾಗೆಯೇ ವಿಯಟ್‌ನಾಮ್ ಯುದ್ಧ ನಡೆಯುತ್ತಿದ್ದಾಗ ಸೈನ್ಯಕ್ಕೆ ನೋಂದಣಿಸಲು ನಿರಾಕರಿಸಿದವರಿಗೆ ಮತ್ತು ಸೈನ್ಯದಿಂದ ಓಡಿಹೋದವರಿಗೆ ಸಾಮೂಹಿಕ ಕ್ಷಮಾದಾನ (amnesty) ನೀಡಿದನು. ಇದರಿಂದ ಜನರಲ್ಲಿ ಒಗ್ಗಟ್ಟು ಮೂಡಬಹುದೆಂದು ಫೋರ್ಡ್ ಆಶಿಸಿದ್ದನು. ಆದರೆ ಅದು ಹಾಗಾಗಲಿಲ್ಲ. ರಾಜಕೀಯವನ್ನು ಪರಿಶಿಷ್ಟಗೊಳಿಸುವ ಸುಧಾರಣೆಗಳು ಸಹ 'ಕೊರಿಯಾ ಗೇಟ್' ಹಗರಣದಿಂದ ಕಲುಷಿತವಾದವು. ಈ ಹಗರಣಕ್ಕೆ ಚುನಾವಣಾ ಪ್ರಚಾರಕ್ಕೆ ಪಟ್ಟಭದ್ರ ಹಿತಾಸಕ್ತಿಗಳಿಂದ ನ್ಯಾಯಬಾಹಿರವಾದ ಹಣ ಪಾವತಿಯಾಗಿದ್ದು ಕಾರಣವಾಗಿತ್ತು. ಅಮೆರಿಕದ ದ್ವಿಶತಮಾನೋತ್ಸವ (bicentennial) ಆಚರಣೆ ಜನರಲ್ಲಿ ಪುನಃ ಒಗ್ಗಟ್ಟನ್ನು ಮೂಡಿಸಲು ಬೇಕಾದ ವಾತಾವರಣವನ್ನು ತಾತ್ಕಾಲಿಕವಾಗಿ ಸೃಷ್ಟಿಸಿತು.

ಅಧ್ಯಕ್ಷ ಫೋರ್ಡ್ ಕಮ್ಯೂನಿಸಂನ ಕಡುವಿರೋಧಿ. ರಕ್ಷಣಪಡೆಗಳನ್ನು ಹೆಚ್ಚಿಸಿ ಬಲಪಡಿಸಬೇಕೆಂದು ನಂಬಿದ್ದವನು. ಆದಗ್ಯೂ ಕಮ್ಯೂನಿಸ್ಟ್ ದೇಶಗಳೊಡನೆ ಮಾತುಕತೆ

ಬೆಳೆಸಿ ಪರಸ್ಪರ ವಿಚಾರ ವಿನಿಮಯ ಮಾಡುವುದಕ್ಕೆ ಸಿದ್ಧನಿದ್ದನು. ಅವನು ಸೋವಿಯೆಟ್ ಒಕ್ಕೂಟ ಮತ್ತು ಚೈನಾ ಗಣರಾಜ್ಯಗಳಿಗೆ ಭೇಟಿ ನೀಡಿ ಮಾತುಕತೆ ನಡೆಸಿದನು. ಸೋವಿಯೆಟ್ ಒಕ್ಕೂಟಕ್ಕೆ ಅಮೆರಿಕದ ಧಾನ್ಯಗಳನ್ನು ಐದು ವರ್ಷಗಳವರೆಗೆ ಮಾರಾಟ ಮಾಡುವ ಒಪ್ಪಂದ ಮಾಡಿಕೊಂಡನು. ಮಧ್ಯಪ್ರಾಚ್ಯ ಪ್ರದೇಶದಲ್ಲಿ ಇಸ್ರೇಲ್‌ಗೆ ಬೆಂಬಲ ನೀಡಿದ್ದು ಅಮೆರಿಕ ಮಾತ್ರ. ಇಸ್ರೇಲ್ ಸುತ್ತಮುತ್ತಲಿನ ಎಲ್ಲ ಅರಬ್ ರಾಷ್ಟ್ರಗಳೂ ಅದನ್ನು ನಾಶಗೊಳಿಸಲು ಸಿದ್ಧವಾಗಿದ್ದವು. ಅಮೆರಿಕದ ಆರ್ಥಿಕ ವ್ಯವಸ್ಥೆಗೆ ಅರಬ್ ರಾಷ್ಟ್ರಗಳ ತೈಲ ಸರಬರಾಜು ಅತಿಮುಖ್ಯವೆಂದು ಫೋರ್ಡ್‌ಗೆ ತಿಳಿದಿದ್ದರೂ ಅವನು ಇಸ್ರೇಲ್-ಅಮೆರಿಕ ಸಂಬಂಧವನ್ನು ಮುಂದುವರಿಸಿದನು. ಎರಡನೆಯ ಜಾಗತಿಕ ಯುದ್ಧ ಮತ್ತು ಕೊರಿಯಾ ಯುದ್ಧಗಳ ನಂತರ ಫೋರ್ಡ್‌ನ ಆಡಳಿತದ ಅವಧಿಯಲ್ಲಿ ಅಮೆರಿಕದ ಹಿತಾಸಕ್ತಿಗಳಿಗೆ ಕೆಡುಕು ಉಂಟುಮಾಡುವ ಅಂತರರಾಷ್ಟ್ರೀಯ ಘಟನೆಗಳು ನಡೆಯಲಿಲ್ಲ. ೧೯೭೫ರಲ್ಲಿ[೪] ಅಮೆರಿಕ ದಕ್ಷಿಣ ವಿಯಟ್‌ನಾಮ್‌ನಿಂದ ತನ್ನ ಸೇನಾಪಡೆಗಳನ್ನು ಸಂಪೂರ್ಣವಾಗಿ ವಾಪಸ್ಸು ಕರೆಸಿಕೊಂಡಿತು. ಅಮೆರಿಕನ್ ಪಡೆಗಳು ಸೈಗಾನ್‌ನಿಂದ ಹಿಂತೆಗೆಯುತ್ತಿದ್ದಂತೆಯೆ ಉತ್ತರ ವಿಯಟ್‌ನಾಮ್ ಪಡೆಗಳು ನುಗ್ಗಿ ಆ ನಗರವನ್ನು ವಶಪಡಿಸಿಕೊಂಡವು. ಇಬ್ಭಾಗವಾಗಿದ್ದ ವಿಯಟ್‌ನಾಮ್ ಒಂದಾಯಿತು. ದೀರ್ಘವಾದ ಈ ಯುದ್ಧ ದಿಢೀರನೆ ಕೊನೆಗಂಡಿತು. ಈ ಯುದ್ಧ ಅಮೆರಿಕನ್ ಜನಜೀವನವನ್ನು ಅಲ್ಲೋಲಕಲ್ಲೋಲ ಮಾಡಿತ್ತು. ಇದರ ದುಷ್ಪರಿಣಾಮಗಳು ಲೆಕ್ಕವಿಲ್ಲದಷ್ಟು. ಮುಗಿದು ಕಾಲು ಶತಮಾನವಾಗುತ್ತ ಬಂದಿದ್ದರೂ ಅದರಲ್ಲಿ ಭಾಗವಹಿಸಿದ್ದ ಬಹುತೇಕ ಅಮೆರಿಕನ್ನರ

---

೪. ಉತ್ತರ ವಿಯಟ್‌ನಾಮ್ ಸೈನ್ಯ ಸೈಗಾನ್ ನಗರವನ್ನು ಮುತ್ತುವುದರೊಳಗೆ ಅಮೆರಿಕ ದಕ್ಷಿಣ ವಿಯಟ್‌ನಾಮ್‌ನಿಂದ ಅವಸರದಲ್ಲಿ ಹೊರಬೀಳಬೇಕಿತ್ತು. ಅಮೆರಿಕನ್ನರು ಮತ್ತು ಯುದ್ಧದಲ್ಲಿ ಅವರಿಗೆ ಸಹಾಯ ಮಾಡಿದ್ದ ವಿಯಟ್‌ನಾಮ್ ಜನರು ಈ ಅವಸರದ ಸಂದರ್ಭದಲ್ಲಿ ಜೀವ ಉಳಿಸಿಕೊಳ್ಳಲು ಅಮೆರಿಕನ್ ರಾಯಭಾರಿ ಕಛೇರಿಯ ಮುಂದೆ ಮಹಾಪೂರದಂತೆ ನಡೆದು ತಮ್ಮನ್ನು ಹಿಂದೆ ತಳ್ಳುತ್ತಿದ್ದ ಅಮೆರಿಕನ್ ಸೈನಿಕರನ್ನು ತಾವಲ್ಲದಿದ್ದರೂ ತಮ್ಮ ಮಕ್ಕಳನ್ನಾದರೂ ಅಮೆರಿಕಕ್ಕೆ ಕರೆದೊಯ್ಯುವಂತೆ ಯಾಚಿಸುತ್ತಿದ್ದ ಹೃದಯವಿದ್ರಾವಕ ದೃಶ್ಯ ದೂರದರ್ಶನದಲ್ಲಿ ನಾನು ನೋಡಿದೆ. ನಾಗರಿಕರೆಂದು ಕರೆದುಕೊಳ್ಳುವ ಮನುಷ್ಯರು ಎಷ್ಟು ಅನಾಗರಿಕ, ಅಮಾನುಷರಂತೆ ವರ್ತಿಸಬಲ್ಲರು ಎನ್ನುವುದನ್ನು ಕಣ್ಣಾರೆ ಕಂಡು ಮಾನವಕುಲದ ಭವಿಷ್ಯದ ಬಗ್ಗೆ ಅನುಮಾನ ಉಂಟಾಗುವಂತೆ ಮಾಡಿತ್ತು. ಅಮೆರಿಕನ್ ಸೈನಿಕರು ಸೈಗಾನ್ ಬಿಟ್ಟು ಓಡುವಾಗ ಬೇಡದೆ ಹೋದ ಹೆಲಿಕಾಪ್ಟರ್‌ಗಳನ್ನು ಅಮೆರಿಕನ್ ರಾಯಭಾರಿ ಕಟ್ಟಡದ ಮೇಲಿಂದ ನೂಕಿ ಕೆಡವುತ್ತಿದ್ದರು. ಒಟ್ಟಿನಲ್ಲಿ ಯುದ್ಧದಿಂದ ಅಪಾರ ಪ್ರಾಣಹಾನಿ ಮತ್ತು ಹಣ, ಆಸ್ತಿಪಾಸ್ತಿಗಳಿಗೆ ನಷ್ಟವಾಯಿತೆ ಹೊರತು ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ೫೦ ಸಾವಿರಕ್ಕೂ ಹೆಚ್ಚು ಅಮೆರಿಕನ್ನರು ತಮ್ಮ ಜೀವ ಮುಡಿಪಾಗಿಟ್ಟ ವಿಯಟ್‌ನಾಮ್ ಯುದ್ಧ ಯಾರಿಗೋಸ್ಕರ, ಯಾತಕ್ಕಾಗಿ ನಡೆಯಿತು? ಆ ಯುದ್ಧ ಸಾಧಿಸಿದ್ದೇನು? ಈ ಪ್ರಶ್ನೆಗಳಿಗೆ ಇದುವರೆಗೂ ಯಾರೂ ತರ್ಕಬದ್ಧವಾಗಿ ಉತ್ತರ ಕೊಟ್ಟಿಲ್ಲ. ಬಹುಶಃ ಅವು ಉತ್ತರಿಸಲಾಗದ ಪ್ರಶ್ನೆಗಳು.

ಜೀವನ ಅಸ್ತವ್ಯಸ್ತವಾಗಿ, ಮಾನಸಿಕ ಸಮಸ್ಯೆಗಳಿಗೀಡುಮಾಡಿತ್ತು. ಇಂದಿಗೂ ಇದು ಅವರನ್ನು ದುಸ್ವಪ್ನದಂತೆ ಕಾಡುತ್ತಿವೆ.

೧೯೭೫ರಲ್ಲಿ ಪೋರ್ಚುಗಲ್ ತನ್ನ ಆಫ್ರಿಕನ್ ವಸಾಹತು ಅಂಗೋಲವನ್ನು ತ್ಯಜಿಸಿದ ಮೇಲೆ ಆಫ್ರಿಕ ಖಂಡದಲ್ಲಿ ವಸಾಹತುಶಾಹಿ ಕೊನೆಗೊಳ್ಳುವ ಸಾಧ್ಯತೆ ತೋರಿತು. ದಕ್ಷಿಣ ಅಮೆರಿಕದಲ್ಲಿ ಕಮ್ಯೂನಿಸ್ಟ್ ವಿರೋಧಿ ಸರ್ವಾಧಿಕಾರಿ ಸರ್ಕಾರಗಳಿಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳು ಅನೇಕ ರೀತಿಯಲ್ಲಿ ಸಹಾಯ ಮಾಡಿದವು; ಅರ್ಜೆಂಟೈನಾದ ಅಗಸ್ಟೋ ಪಿನೋಷೆಯಂಥ (Augusto Pinochet) ಕ್ರೂರ ಸರ್ವಾಧಿಕಾರಿಗಳಿಗೆ ಬೆಂಬಲ ನೀಡಿತು. ಫೋರ್ಡ್‌ನ ಆಡಳಿತ ಕಾಲದಲ್ಲಿ ಶೀತಲಸಮರವನ್ನು (cold war) ತಡೆಗಟ್ಟಲು ೧೯೭೬ರಲ್ಲಿ ಅಮೆರಿಕ-ಸೋವಿಯೆಟ್ ಒಕ್ಕೂಟ ಭೂಗರ್ಭದಲ್ಲಿ ಅಣ್ವಸ್ತ್ರಗಳನ್ನು ಪರೀಕ್ಷಿಸಿತ್ತುರುವುದನ್ನು ನಿಷೇಧಿಸುವ ಒಪ್ಪಂದವನ್ನು ಮಾಡಿಕೊಂಡವು. ಫೋರ್ಡ್‌ನ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಅತ್ಯಂತ ವಿವಾದಾತ್ಮಕವಾದ ಮತ್ತು ಟೀಕೆಗಳಿಗೆ ಗುರಿಯಾದ ಘಟನೆ ಎಂದರೆ 'ಮಯಾಗ್ಯುವೆಜ಼್ ಹಗರಣ' (The Mayaguez incident). ೧೯೭೫ರ ಮೇ ತಿಂಗಳಲ್ಲಿ ಕ್ಯಾಂಬೋಡಿಯಾ ಕಮ್ಯೂನಿಸ್ಟರು ಅಮೆರಿಕದ ಮಯಾಗ್ಯುವೆಜ಼್ ಎನ್ನುವ ವ್ಯಾಪಾರ ನೌಕೆಯನ್ನು ವಶಪಡಿಸಿಕೊಂಡು ಅದರ ೩೮ ನಾವಿಕರನ್ನು ಸೆರೆ ಹಿಡಿದರು. ಇವರನ್ನು ಬಿಡುಗಡೆ ಮಾಡಲು ನಡೆದ ಮಾತುಕತೆಗಳು ಯಶಸ್ವಿಯಾಗಲಿಲ್ಲ. ಅಧ್ಯಕ್ಷ ಫೋರ್ಡ್ ಬಂಧಿತರನ್ನು ಬಿಡಿಸುವ ಸಲುವಾಗಿ ಸೆರೆ ಹಿಡಿದವರ ಮೇಲೆ ದಿಢೀರನೆ ದಾಳಿ ಮಾಡಲು ಅಮೆರಿಕದ ರಕ್ಷಣಾ ಪಡೆಗಳಿಗೆ ಆಜ್ಞೆ ಮಾಡಿದನು. ಅಮೆರಿಕದ ಸೈನ್ಯ, ವಾಯು ಮತ್ತು ನೌಕಾಪಡೆಗಳು ಕ್ಯಾಂಬೋಡಿಯಾ ಪಡೆಗಳ ಮೇಲೆ ಬೃಹತ್ ಪ್ರಮಾಣದ ದಾಳಿ ನಡೆಸಿದುದರ ಪರಿಣಾಮವಾಗಿ ಬಂಧಿತರ ಬಿಡುಗಡೆಯೇನೋ ಆಯಿತು, ಆದರೆ ೩೮ ಅಮೆರಿಕನ್ನರು ಸತ್ತು ಆಸ್ತಿಪಾಸ್ತಿಯ ಅಪಾರ ನಷ್ಟವಾಯಿತು. ಅನೇಕ ರಾಜಕಾರಣಿಗಳು ಫೋರ್ಡ್ ಸೈನ್ಯ ಕಾರ್ಯಾಚರಣೆ ಕೈಗೊಂಡಿದ್ದು ೧೯೭೩ರ 'ಯುದ್ಧ ಅಧಿಕಾರ ಕಾಯಿದೆ'ಯನ್ನು (War Powers Act) ಉಲ್ಲಂಘಿಸಿದೆ ಎಂದು ಟೀಕಿಸಿದರು. ಮೇಲಾಗಿ ಕ್ಯಾಂಬೋಡಿಯಾ ಸರ್ಕಾರ ಅಮೆರಿಕದ ವ್ಯಾಪಾರ ನೌಕೆಯನ್ನು ಗೂಢಚಾರಿ ನೌಕೆ ಎಂದು ತಪ್ಪಾಗಿ ತಿಳಿದಿದ್ದುದರಿಂದ ಈ ಅಚಾತುರ್ಯ ನಡೆಯಿತು. ಸೆರೆ ಹಿಡಿದವರನ್ನು ಬಿಡುವಷ್ಟರಲ್ಲೆ ಅಮೆರಿಕ ಅನಾವಶ್ಯವಾದ ದಾಳಿ ನಡೆಸಿತು ಎಂದು ದೂರಿದರು. ಫೋರ್ಡ್‌ನ ಅಡ್ಡಾದಿಡ್ಡಿತನಕ್ಕೆ ಈ ಘಟನೆ ಇನ್ನೊಂದು ನಿದರ್ಶನವಾಯಿತು. ವ್ಯಂಗ್ಯ ಚಿತ್ರಕಾರರಿಗೆ ಮತ್ತು ಟಿ.ವಿ. ಹಾಸ್ಯಪಟುಗಳಿಗೆ ಫೋರ್ಡ್‌ನ ಬಗ್ಗೆ ಇನ್ನಷ್ಟು ಅಪಹಾಸ್ಯ ಮಾಡುವಂತಾಯಿತು.

ಅಮೆರಿಕದ ಆಂತರಿಕ ಆಂದೋಳನಗಳು

ಎಪ್ಪತ್ತರ ದಶಕದಲ್ಲಿ ಅಮೆರಿಕನ್ನರಿಗೆ ಅರವತ್ತರ ದಶಕದಲ್ಲಿ ನಡೆದ ಚಳುವಳಿಗಳು,

ಹಿಂಸಾಚಾರ, ಅಮೆರಿಕನ್ ಸಂಸ್ಕೃತಿಯ ಅವಹೇಳನ ಮತ್ತು ವಿರೋಧ ಸಂಸ್ಕೃತಿಗಳ (counter cultures) ವ್ಯಾಪಕ ಬೆಳವಣಿಗೆ – ಇವು ಸಮಾಜವನ್ನು ಅವನತಿಯ ಹಾದಿಯಲ್ಲಿ ಕೊಂಡೊಯ್ಯುತ್ತಿವೆ ಎಂಬುದರ ಅರಿವಾಗಿ ಅವನ್ನು ನಿಲ್ಲಿಸುವ ಪ್ರಯತ್ನ ಮಾಡಿದರು. ವಿರೋಧ ಸಂಸ್ಕೃತಿ ತಡೆಗಟ್ಟುವ ಆಂದೋಳನ, ಯುದ್ಧವಿರೋಧಿ ಚಳುವಳಿ ಮತ್ತು ನಾಗರಿಕ ಹಕ್ಕುಗಳಿಗಾಗಿ ಹೋರಾಟ – ಇವುಗಳನ್ನು ಅನುಸರಿಸಿ ಎಪ್ಪತ್ತರ ದಶಕದಲ್ಲಿ ಇನ್ನೂ ಕೆಲವು ಸಾಮಾಜಿಕ ಆಂದೋಳನಗಳು ಅಸ್ತಿತ್ವಕ್ಕೆ ಬಂದವು.

ಎರಡನೆಯ ಜಾಗತಿಕ ಯುದ್ಧದ ಕಾಲದಿಂದ ಅರವತ್ತರ ದಶಕದವರೆಗೆ ಮೆಕ್ಸಿಕೊ ಕೆಲಸಗಾರರನ್ನು ಗುತ್ತಿಗೆಯ ಆಧಾರದ ಮೇಲೆ ಅಮೆರಿಕಕ್ಕೆ ಕೊಯ್ಲು ಮಾಡುವುದಕ್ಕಾಗಿ ಕರೆತರುತ್ತಿದ್ದರು. ಅನೇಕ ಮೆಕ್ಸಿಕನ್ನರು ರಹದಾರಿಯಿಲ್ಲದೆ ಕಳ್ಳತನದಲ್ಲಿ ಗಡಿ ದಾಟಿ ಬರುತ್ತಿದ್ದರು. ಹೀಗೆ ಅಮೆರಿಕದ ನೈರುತ್ಯ ಭಾಗಕ್ಕೆ ನುಸುಳಿ ಬರುತ್ತಿದ್ದ ಕೆಲಸಗಾರರನ್ನು ಅತ್ಯಂತ ಕಡಿಮೆ ದಿನಗೂಲಿ ಕೊಟ್ಟು ದಿನವೆಲ್ಲ ದುಡಿಸಿಕೊಳ್ಳುತ್ತಿದ್ದರು. ಈ ಕೆಲಸಗಾರರು ಸಂಘಟಿತರಾಗಿರದೆ ಭೂಮಾಲೀಕರ ಶೋಷಣೆಗೆ ಒಳಗಾಗಿರುತ್ತಿದ್ದರು. ಈ ಶ್ರಮಜೀವಿಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ೧೯೬೨ರಲ್ಲಿ ಸೀಜ಼ರ್ ಶವೇಜ಼್ (Cesar Chavez) ಎಂಬುವನ ನಾಯಕತ್ವದಲ್ಲಿ 'ರಾಷ್ಟ್ರೀಯ ಕೃಷಿ ಕಾರ್ಮಿಕ ಸಂಘ' (National Farm Workers Organization) ಸ್ಥಾಪಿತಗೊಂಡು ಅದು ಅವರ ಮುಷ್ಕರ ಮುಂತಾದ ವಿಧಾನಗಳನ್ನು ಜಾರಿಗೆ ತಂದು ಕ್ಯಾಲಿಫೋರ್ನಿಯಾದ ಕೃಷಿ ಕಾರ್ಮಿಕರ ವೇತನ ಹೆಚ್ಚಾಗುವಂತೆ ಮಾಡುವುದರಲ್ಲಿ ಯಶಸ್ವಿಯಾಯಿತು.

೧೯೭೦ರಲ್ಲಿ ಸ್ಪಾನಿಷ್-ಅಮೆರಿಕನ್ನರು ರಾಷ್ಟ್ರದ ಅಲ್ಪಸಂಖ್ಯಾತ ಜನಾಂಗಗಳಲ್ಲಿ (minority groups) ಕರಿಯ-ಅಮೆರಿಕನ್ನರನ್ನು ಬಿಟ್ಟರೆ ಜನಸಂಖ್ಯೆಯಲ್ಲಿ ಎರಡನೆಯ ಸ್ಥಾನ ಪಡೆದಿದ್ದರು. ಸಂಖ್ಯಾಬಲದಿಂದಾಗಿ ಸ್ಪಾನಿಷ್-ಅಮೆರಿಕನ್ನರು ಅನುಭವಿಸುತ್ತಿದ್ದ ಪೂರ್ವಾಗ್ರಹ ಪೀಡನೆ ಮತ್ತು ಪಕ್ಷಪಾತ ವರ್ತನೆಗಳನ್ನು ಪ್ರತಿಭಟಿಸಿ ಆ ಪದ್ಧತಿಗಳನ್ನು ಕೊನೆಗೊಳಿಸುವಂತೆ ಒತ್ತಾಯ ಮಾಡಿದರು. 'ಒಗ್ಗಟ್ಟಾದ ಲ್ಯಾಟಿನ್ ಅಮೆರಿಕನ್ ನಾಗರಿಕರ ಒಕ್ಕೂಟ' (The League of United Latin American Citizens- LULAC) ಕ್ಯಾಲಿಫೋರ್ನಿಯಾ ಮತ್ತು ಟೆಕ್ಸಾಸ್ ರಾಜ್ಯಗಳಲ್ಲಿ ಪ್ರತ್ಯೇಕ ಶಾಲಾವ್ಯವಸ್ಥೆಯನ್ನು ರದ್ದುಗೊಳಿಸುವಂತೆ ನ್ಯಾಯಾಲಯದಲ್ಲಿ ಕಟ್ಟಳೆ ಹೂಡಿ ಯಶಸ್ವಿಯಾಗಿತ್ತು. ಇದರಿಂದ ಉತ್ತೇಜನಗೊಂಡ ಪೋರ್ಟೋರೀಕನ್ನರು, ಕ್ಯೂಬನ್ನರು ಮತ್ತು ಚಿಕಾನೋ (chicano) ಜನಾಂಗಗಳು ತಮ್ಮ ಸ್ವಂತಿಕೆ ಉಳಿಸಿಕೊಂಡು ತಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಲು ಜನರಿಗೆ ಕರೆ ನೀಡಿದರು. ಶಾಲೆಗಳಲ್ಲಿ ದ್ವಿಭಾಷಾ ಶಿಕ್ಷಣ (bilingual education) ಜಾರಿಗೆ ತರಬೇಕೆಂದು ಸರ್ಕಾರದ ಮೇಲೆ ಒತ್ತಾಯ ಹಾಕಿದರು. ಚಿಕಾನೋ ಜನಾಂಗ ಮೆಕ್ಸಿಕನ್ ಪರಂಪರೆಯ ಬಗ್ಗೆ ಶಿಕ್ಷಣ ನೀಡುವ ವ್ಯವಸ್ಥೆಯಾಗಬೇಕೆಂದು ಆಗ್ರಹಪಡಿಸಿದರು.

ಅಲ್ಲದೆ ಸ್ಪಾನಿಷ್-ಅಮೆರಿಕನ್ನರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯಕ್ಕೆ ಇಳಿದರು. ಆರಿಜ಼ೋನ ಮತ್ತು ನ್ಯೂ ಮೆಕ್ಸಿಕೊ ರಾಜ್ಯಗಳಲ್ಲಿ ಇವರು ಗವರ್ನರ್ ಸ್ಥಾನಗಳಿಗೆ ಚುನಾಯಿತರಾದರು. ನ್ಯೂಯಾರ್ಕಿನ ಕಾಂಗ್ರೆಸ್ ಸದಸ್ಯನಾಗಿ ಸ್ಪಾನಿಷ್-ಅಮೆರಿಕನ್ ಒಬ್ಬ ಚುನಾಯಿತನಾದನು. ೧೯೭೫ರಲ್ಲಿ ೧೯೩೫ರಲ್ಲಿ ಜಾರಿಗೆ ಬಂದ ಮತದಾನ ಹಕ್ಕುಗಳ ಕಾಯಿದೆಯನ್ನು ವಿಸ್ತರಿಸಿ ಇಂಗ್ಲಿಷ್ ಮಾತೃಭಾಷೆಯಲ್ಲದ ಜನರು ಹೆಚ್ಚಾಗಿರುವ ಮತದಾನ ಕ್ಷೇತ್ರಗಳಲ್ಲಿ ಪ್ರಕಟಿಸುವ ವ್ಯವಸ್ಥೆ ಮಾಡಲಾಯಿತು.

ಒಂದಾನೊಂದು ಕಾಲದಲ್ಲಿ ಅಮೆರಿಕ ಭೂಖಂಡದಲ್ಲಿ ನಿಸರ್ಗದ ಮಕ್ಕಳಾಗಿ, ಯಾರ ಹಂಗೂ ಇಲ್ಲದೆ ಸ್ವತಂತ್ರರಾಗಿ, ಇಷ್ಟ ಬಂದಲ್ಲಿ ತಮ್ಮ 'ಟೀಪೀ' ಗುಡಾರಗಳನ್ನು ಸ್ಥಾಪಿಸಿಕೊಂಡು ಕಾಡುಕೋಣಗಳನ್ನು ಬೇಟೆಯಾಡುತ್ತ, ಪ್ರಕೃತಿಯನ್ನು ಕಲುಷಿತಗೊಳಿಸದೆ ಬದುಕುತ್ತಿದ್ದ ಅಮೆರಿಕದ ಆದಿವಾಸಿಗಳನ್ನು (Native Americans) ಕೊಲಂಬಸ್‌ನನ್ನು ಹಿಂಬಾಲಿಸಿ ಬಂದ ಬಿಳಿಯ ವಲಸೆಗಾರರು ಎಲ್ಲ ರೀತಿಯಿಂದ ಶೋಷಣೆ ಮಾಡಿ, ಮೋಸ ವಂಚನೆಗಳಿಂದ ಅವರ ಭೂಮಿಯನ್ನು ಅಪಹರಿಸಿ ಅವರನ್ನು ಏನೂ ಬೆಳೆಯಲು ಸಾಧ್ಯವಿಲ್ಲದ ಬಂಜರು ಭೂಮಿಯ 'ಕಾಯ್ದಿಟ್ಟ ಪ್ರದೇಶ'ಗಳಿಗೆ (reservations) ತರುಬಿ, ಕಡುಬಡತನದಲ್ಲಿ ಬದುಕುವಂತೆ ಮಾಡಿದರು. ಈ ಜನ ಎರಡು ಶತಮಾನಗಳಿಂದ ಶೋಷಣೆಗೊಳಗಾಗಿ ಸ್ವಾಭಿಮಾನ ಕಳೆದುಕೊಂಡು ಬದುಕಬೇಕಾಯಿತು. ಅರವತ್ತರ ದಶಕದಲ್ಲಿ ವಿಯಟ್‌ನಾಮ್ ಯುದ್ಧದಿಂದ ಹಿಂದಿರುಗಿದ ಆದಿವಾಸಿ ಯುವಕರು ತಮ್ಮ ಜನರನ್ನು ಸಂಘಟಿಸಿ ಅವರ ಏಳಿಗೆಗಾಗಿ ಶ್ರಮಿಸಲು 'ಅಮೆರಿಕನ್ ಇಂಡಿಯನ್ ಆಂದೋಳನ'ವನ್ನು (American Indian Movement -AIM) ಪ್ರಾರಂಭಿಸಿದರು. ಕಾಯ್ದಿಟ್ಟ ಪ್ರದೇಶಗಳ ಕೂಪಮಂಡೂಕ ಬದುಕನ್ನು ಮುಂದುವರಿಸಲು ನಿರಾಕರಿಸಿ, ಮೋಸದಿಂದ ವಶಪಡಿಸಿಕೊಂಡ ತಮ್ಮ ಪೂರ್ವಜರ ಭೂಮಿಯನ್ನು ತಮಗೆ ವಾಪಸ್ಸು ಮಾಡಬೇಕೆಂದು ಸರ್ಕಾರಕ್ಕೆ ಸವಾಲು ಹಾಕಿದರು. ತಮ್ಮ ಜನರಿಗೆ ಆದಿವಾಸಿ ಸಂಸ್ಕೃತಿಯನ್ನು ಪುನರುತ್ಥಾನಗೊಳಿಸಲು ಕರೆ ನೀಡಿ, ಬುಡಕಟ್ಟುಗಳ ನಡುವಣ ಪರಸ್ಪರ ದ್ವೇಷಾಸೂಯೆಗಳನ್ನು ಮರೆತು ಒಗ್ಗಟ್ಟಿನಿಂದ ಭವಿಷ್ಯವನ್ನು ಉತ್ತಮಗೊಳಿಸುವ ಆಂದೋಳನದಲ್ಲಿ ಭಾಗವಹಿಸಲು ಹುರಿದುಂಬಿಸಿದರು.

೧೯೭೨ರಲ್ಲಿ AIM ಏರ್ಪಡಿಸಿದ ರಾಜಧಾನಿ ವಾಷಿಂಗ್‌ಟನ್‌ಗೆ ಪಾದಯಾತ್ರೆಯಲ್ಲಿ ಸಾವಿರಾರು ಅಮೆರಿಕನ್ ಆದಿವಾಸಿಗಳು ಭಾಗವಹಿಸಿದ್ದರು. ಇವರು ಇಂಡಿಯನ್ ವ್ಯವಹಾರ ಕಛೇರಿಯನ್ನು (Bureau of Indian Affairs) ಮುತ್ತಿಗೆ ಹಾಕಿ ವಶಪಡಿಸಿಕೊಂಡು ತಮ್ಮ ಬಲಪ್ರದರ್ಶನ ಮಾಡುವುದರಲ್ಲಿ ಯಶಸ್ವಿಯಾದರು. ನಂತರ AIM ಏರ್ಪಡಿಸಿದ್ದ ಇನ್ನೊಂದು ಪ್ರದರ್ಶನ ಹಿಂಸಾಚಾರಕ್ಕೆ ತಿರುಗಿತು. ಈ ಘಟನೆ ನಡೆದಿದ್ದು ವೂಂಡೆಡ್ ನೀ (Wounded Knee) ಎಂಬ ಸ್ಥಳದಲ್ಲಿ. ಆದಿವಾಸಿಗಳು

ಮುಯ್ಯಿ ತೀರಿಸಲು ಮಾಡಿದ ಈ ಆಕ್ರಮಣದಲ್ಲಿ ಅವರು ಆ ಹಳ್ಳಿಯನ್ನು ಮುತ್ತಿ ಆಕ್ರಮಿಸಿಕೊಂಡರು. ೧೮೯೦ರಲ್ಲಿ ಇದೇ ಸ್ಥಳದಲ್ಲಿ ಫೆಡರಲ್ ಸೈನಿಕರು ೩೦೦ ಡಕೋಟ ಸೂ ಇಂಡಿಯನ್ನರ (Sioux Indians) ಸಾಮೂಹಿಕ ಕೊಲೆ ಮಾಡಿದ್ದರು. ಈಗಿನ ಆಕ್ರಮಣ ೧೯೭೩ರ ಮಾರ್ಚ್ ತಿಂಗಳಿಂದ ಮೇ ತಿಂಗಳವರೆಗೆ ನಡೆಯಿತು. ಅದು ಕೊನೆಗೊಂಡಾಗ ಯಾವ ಸಮಸ್ಯೆಯೂ ಬಗೆಹರಿಯದಿದ್ದರೂ, ಶತಮಾನಗಳಿಂದ ಶೋಷಣೆಗೆ ಒಳಗಾಗಿದ್ದ ಆದಿವಾಸಿಗಳ ಶೋಚನೀಯ ಸ್ಥಿತಿ ಮತ್ತು ಅವರ ಆಕ್ರೋಶ ಇಡೀ ರಾಷ್ಟ್ರಕ್ಕೆ ಪ್ರತ್ಯಕ್ಷವಾಗಿ ತಿಳಿಸಿ ಜನರ ಸಹಾನುಭೂತಿ ಪಡೆಯುವ ಅವಕಾಶ ದೊರೆಯಿತು.

ಎಪ್ಪತ್ತರ ದಶಕದಲ್ಲಿ ಆಸ್ಫೋಟಗೊಂಡ ಇನ್ನೊಂದು ಆಂದೋಳನ ಮಹಿಳೆಯರ ಹಕ್ಕುಬಾಧ್ಯತೆಗಳನ್ನು ಕುರಿತದ್ದಾಗಿತ್ತು. ಮಹಿಳೆಯರು ರಾಷ್ಟ್ರದ ಒಟ್ಟು ಜನಸಂಖ್ಯೆಯ ಅರ್ಧಭಾಗದಷ್ಟಿದ್ದರೂ ಅಲ್ಪಸಂಖ್ಯಾತರಂತೆ ಗಂಡಸರ ಅಧೀನತೆಯಲ್ಲಿ ಬದುಕಬೇಕಾಗಿತ್ತು. ಆದ್ದರಿಂದ ಮಹಿಳೆಯರು ತಾವು ಶೋಷಣೆಗೊಳಗಾದವರೆಂದು ಭಾವಿಸಿದ್ದರು. ಇದನ್ನು ಕೊನೆಗಾಣಿಸಿ ತಮ್ಮ ಹಕ್ಕುಬಾಧ್ಯತೆಗಳನ್ನು ಪಡೆಯುವ ಸಲುವಾಗಿ ಪ್ರಬಲವಾದ ಚಳುವಳಿಯನ್ನು ಪ್ರಾರಂಭಿಸಿದರು. ಇದಕ್ಕೆ ನಾಂದಿಯಾಗಿದ್ದು ೧೯೬೩ರಲ್ಲಿ ಬೆಟ್ಟಿ ಫ್ರೀಡನ್‌ಳ (Betty Friedan) ಕೃತಿ 'ಹೆಣ್ತನದ ರಹಸ್ಯ' (Feminine Mystique) ಪ್ರಕಟವಾದುದರಿಂದ. ಅದರಲ್ಲಿ ಅವಳು ಅಮೆರಿಕನ್ ಮಹಿಳೆಯರು ಸಮಾಜದ ಸಾಂಪ್ರದಾಯಿಕ ಚಿಂತನೆ ಮತ್ತು ಮೌಲ್ಯಗಳಿಗೆ ಬಲಿಯಾದ ಅಬಲೆಯರಾಗಿದ್ದಾರೆ. ಈ ಮೌಲ್ಯಗಳು ಮಹಿಳೆಯರ ಸಂತೋಷ ಸಂಪೂರ್ಣವಾಗಿ ಅವರ ಪತ್ನಿತ್ವ ಹಾಗೂ ತಾಯ್ತನದಲ್ಲಿ ಅಡಗಿದೆ ಎಂದು ನಿರೂಪಿಸಿ, ಸಮಾಜದಲ್ಲಿ ಅವರಿಗೆ ಬೇರೆ ಅವಕಾಶಗಳನ್ನು ಕಲ್ಪಿಸದೆ ಪರಾವಲಂಬಿಗಳನ್ನಾಗಿ ಮಾಡಿವೆ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಮನೆಯ ಹೊರಗೆ ಕಾರ್ಮಿಕರಾಗಿ ಕಾರ್ಖಾನೆಗಳಲ್ಲಿ, ಕಛೇರಿಗಳಲ್ಲಿ ಮತ್ತು ಇತರ ಉದ್ಯಮಗಳಲ್ಲಿ ನಿರತರಾಗಿದ್ದರೂ ಸಹಾ ಬಹುತೇಕ ಜನರು ಮಹಿಳೆಯರ ಸ್ಥಾನ ಮನೆಯಲ್ಲಿಯೇ ಎಂದು ನಂಬಿದ್ದರು.

ಸಮಾಜದಲ್ಲಿ ಮತ್ತು ಕಾರ್ಯರಂಗದಲ್ಲಿ ಸಮಾನತೆ ಪಡೆಯುವ ಸಲುವಾಗಿ ಔದ್ಯೋಗಿಕ ಸಂಘ-ಸಂಸ್ಥೆಗಳು ಸಭೆ ಸೇರುವಲ್ಲಿ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಸೇರಿ ಪ್ರದರ್ಶನ ನಡೆಸುವುದು, ಬೃಹತ್ ಕಾರ್ಪೊರೇಷನ್ ಕಛೇರಿಗಳ ಮುಂದೆ ಧರಣಿ ಹೂಡುವುದು ಮುಂತಾದ ವಿಧಾನಗಳಿಂದ ತಮ್ಮ ಬೇಡಿಕೆಗಳನ್ನು ಮಾಲೀಕರ ಮತ್ತು ಅಧಿಕಾರಿಗಳ ಅವಗಾಹನೆಗೆ ತಂದು ಸಾರ್ವಜನಿಕರಿಗೂ ಅರಿವಾಗುವಂತೆ ಬಹಿರಂಗ ಪಡಿಸುವುದರಲ್ಲಿ ಯಶಸ್ವಿಯಾದರು. ಇವರ ಬೇಡಿಕೆಗಳ ಮೂಲ ಸಮಾನ ಉದ್ಯೋಗಾವಕಾಶಗಳು ಮತ್ತು ಕೆಲಸಕ್ಕೆ ತಕ್ಕ ವೇತನ - ಇವೇ ಆಗಿದ್ದವು. ಪರಿಣಾಮವಾಗಿ

ಖಾಸಗಿ ಉದ್ಯಮಗಳಲ್ಲಿ ಮತ್ತು ಸರ್ಕಾರಿ ಕೆಲಸಗಳಲ್ಲಿ ಸ್ತ್ರೀಯರಿಗೆ ಸಮಾನ ಅವಕಾಶ ಮತ್ತು ತಕ್ಕ ವೇತನ ದೊರೆಯುವಂತೆ ಮಾಡುವ ಕಾಯಿದೆಯನ್ನು ಕಾಂಗ್ರೆಸ್ ಅಂಗೀಕರಿಸಿತು. ಎಪ್ಪತ್ತರ ದಶಕದಲ್ಲಿ ರಾಷ್ಟ್ರದ ಶ್ರೇಷ್ಠ ನ್ಯಾಯಾಲಯ ನೀಡಿದ ಅನೇಕ ತೀರ್ಪುಗಳು ಮಹಿಳೆಯರಿಗೆ ಅನುಕೂಲವಾಗಿದ್ದವು. ಈ ತೀರ್ಪುಗಳು ಮಕ್ಕಳಿರುವ ಮಹಿಳೆಯರಿಗೆ ಕೆಲಸ ಕೊಡದಿರುವುದು ನ್ಯಾಯಬಾಹಿರವೆಂದು ನಿರ್ಧರಿಸಿತು. ನಿವೃತ್ತಿಯ ವಯಸ್ಸು ಗಂಡಸರು ಮತ್ತು ಹೆಂಗಸರಿಗೆ ಒಂದೇ ಆಗಿರಬೇಕೆಂದು ತೀರ್ಮಾನಿಸಿದ್ದು ಮಹಿಳಾ ಹಕ್ಕುಬಾಧ್ಯತೆಗಳನ್ನು ಜಾರಿಗೆ ತರುವುದಕ್ಕೆ ಸಹಾಯ ನೀಡಿತು. ಹೆಂಗಸರು ಗರ್ಭಿಣಿಯರಾದ ಕಾಲವನ್ನು ಅನಾರೋಗ್ಯ ನಿಮಿತ್ತ ರಜಾದಿನಗಳೆಂದು ಪರಿಗಣಿಸಬೇಕೆಂದು ಆಗ್ರಹಪಡಿಸುವ ಬೇಡಿಕೆಯನ್ನು ಶ್ರೇಷ್ಠ ನ್ಯಾಯಾಲಯ ತಳ್ಳಿಹಾಕಿತು.

೧೯೬೬ರಲ್ಲಿ ಅಮೆರಿಕದ ಮಹಿಳೆಯರು 'ರಾಷ್ಟ್ರೀಯ ಮಹಿಳಾಸಂಘ'ವನ್ನು (National Organization for Women- NOW) ಸ್ಥಾಪಿಸಿದರು. ಈ ಮಹಿಳಾ ಸಂಘಟನೆ ಮಹಿಳೆಯರಿಗೆ ಸಮಾನ ಹಕ್ಕುಗಳಿಗೆ ಬಾಧ್ಯರಾಗಿರುವುದನ್ನು ಖಚಿತಪಡಿಸಲು ರಾಜ್ಯಾಂಗದ ತಿದ್ದುಪಡಿಯಾಗಬೇಕೆಂದು ಒತ್ತಾಯಪಡಿಸಿತು. ಮಹಿಳೆಯರಿಗೆ ಸಮಾನ ಸ್ಥಾನಮಾನಗಳು ಈಗಾಗಲೇ ದೊರಕಿರುವುದರಿಂದ ರಾಜ್ಯಾಂಗದ ತಿದ್ದುಪಡಿಗೆ ಅಗತ್ಯ ತೋರಿಬಂದಿಲ್ಲ ವೆಂದು ಸಂಪ್ರದಾಯಸ್ಥರು ಅದನ್ನು ವಿರೋಧಿಸುತ್ತ ಬಂದಿದ್ದಾರೆ. ಅಮೆರಿಕನ್ ಮಹಿಳೆ ಯರು ಎಲ್ಲಾ ಕ್ಷೇತ್ರಗಳಲ್ಲಿ – ರಕ್ಷಣಾಪಡೆಗಳು ಮತ್ತು ಉದ್ಯಮಗಳನ್ನೂ ಒಳಗೊಂಡಂತೆ – ಗಂಡಸರೊಂದಿಗೆ ಸರಿಸಮನಾಗಿ ಪಾಲ್ಗೊಳ್ಳುತ್ತ ಬಂದಿದ್ದಾರೆ. ಆದರೆ ಕೆಲವು ಸ್ಥಾನಗಳು ಅವರಿಗೆ ಇನ್ನೂ ಎಟುಕದಂತಿವೆ. ಅಮೆರಿಕದ ಅಧ್ಯಕ್ಷಸ್ಥಾನಕ್ಕೆ ಮಹಿಳೆಯೊಬ್ಬಳು ಆಯ್ಕೆ ಯಾಗುವ ಕಾಲ ಇನ್ನೂ ಬಂದಿಲ್ಲ. ಆ ಕಾಲ ಬರಲಿರುವ ಸೂಚನೆಗಳು ಕಾಣುತ್ತಿವೆ.

೧೯೭೬ರ ಚುನಾವಣೆ

ಈ ಚುನಾವಣೆ ನಡೆದಾಗ ನಾನು ಅಮೆರಿಕದಲ್ಲಿ ಡಾಕ್ಟರೇಟ್ ಪದವಿಯ ಮೂರನೆಯ ವರ್ಷದಲ್ಲಿದ್ದೆ. ದೂರದರ್ಶನದಲ್ಲಿ ಚುನಾವಣಾ ಪ್ರಚಾರವನ್ನು ಕುತೂಹಲದಿಂದ ವೀಕ್ಷಿಸುತ್ತಿದ್ದೆ. ೧೯೭೬ರ ಪ್ರಾರಂಭದಲ್ಲಿ ಡೆಮೊಕ್ರಾಟಿಕ್ ಪಕ್ಷದಲ್ಲಿ ೧೨ ಜನ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಗಳಾಗಿ ನಾಮಕರಣಗೊಳ್ಳಲು ಹವಣಿಸುತ್ತಿದ್ದರು. ಆದರೆ ಇವರಲ್ಲಿ ಯಾರೊಬ್ಬರೂ ನಾಯಕತ್ವದ ಮುಂಚೂಣಿಯಲ್ಲಿರಲಿಲ್ಲ. ಅವರಲ್ಲಿ ವಾಷಿಂಗ್‌ಟನ್ ಸೆನೆಟರ್ ಹೆನ್ರಿ ಜಾಕ್‌ಸನ್ (Henry Jackson) ಮತ್ತು ಅಲಬಾಮದ ಗವರ್ನರ್ ಜಾರ್ಜ್ ವಾಲೆಸ್ ಪ್ರಮುಖರಾಗಿದ್ದರು. ಇವರಲ್ಲೆಲ್ಲ ಅಪರಿಚಿತ ವ್ಯಕ್ತಿಯಾಗಿದ್ದವನು ಜಾರ್ಜಿಯಾ ರಾಜ್ಯದ ಮಾಜಿ ಗವರ್ನರ್ ಆಗಿದ್ದ ಜಿಮ್ಮಿ ಕಾರ್ಟರ್ (Jimmy Carter). ಕಾರ್ಟರ್ ತನ್ನ ಚುನಾವಣಾ ಪ್ರಚಾರವನ್ನು ಎರಡು ವರ್ಷಗಳ ಹಿಂದೆಯೇ ಪ್ರಾರಂಭಿಸಿ ದ್ದನು. ದೇಶದ ನಾನಾ ಕಡೆಗಳಲ್ಲಿ ಸಂಚರಿಸಿ, ಜನರನ್ನು ಆಪ್ತವಾಗಿ ಭೇಟಿ ಮಾಡಿ,

ಚರ್ಚಿಸಿ, ಜನಸಂಪರ್ಕ ಬೆಳೆಸಿಕೊಂಡನು. ಪ್ರಥಮಸುತ್ತಿನ ಚುನಾವಣೆಗಳಲ್ಲಿ – ಐಯೋವಾ ಮತ್ತು ನ್ಯೂ ಹ್ಯಾಂಪ್‌ಶೈರ್, ನಂತರ ಫ್ಲಾರಿಡಾದಲ್ಲಿ – ಜಯಗಳಿಸಿ ತಾನು ಜನಾನುರಾಗಿ ಎಂಬುದನ್ನು ಸಾಬೀತುಗೊಳಿಸಿದನು. ನೀತಿಯುತ ನಡತೆ ಮತ್ತು ವಾಷಿಂಗ್‌ಟನ್ ರಾಜಕಾರಣಿಗಳಿಂದ ದೂರವಿದ್ದು, ಫೆಡರಲ್ ಸರ್ಕಾರವನ್ನು ಪುನರ್‌ರಚಿಸಿ, ಆದಾಯ ತೆರಿಗೆ ವ್ಯವಸ್ಥೆಯನ್ನು ಸುಧಾರಿಸಿ, ಹಣದುಬ್ಬರವನ್ನು ಹತೋಟಿಗೆ ತಂದು, ಪೂರ್ಣ ಉದ್ಯೋಗ (full employment) ಕಲ್ಪಿಸುವುದಾಗಿ ಚುನಾವಣೆಯ ಪ್ರಚಾರದಲ್ಲಿ ಆಶ್ವಾಸನೆ ನೀಡಿದನು. ಅವನು ಎಲ್ಲರಿಗೆ ಎಲ್ಲ ರೀತಿಯ ವಾಗ್ದಾನ ಮಾಡಿದಂತೆ ತೋರಿದರೂ ಜನರು ಅವನ ಪ್ರಾಮಾಣಿಕತೆ, ವಿಶಾಲ ಮನಸ್ಸು ಮತ್ತು ಶ್ರದ್ಧೆಯನ್ನು ಮೆಚ್ಚಿಕೊಂಡರು. ಅವನು 'ನಾನೆಂದಿಗೂ ನಿಮಗೆ ಸುಳ್ಳು ಹೇಳುವುದಿಲ್ಲ' ಎಂದು ಮಾತು ಕೊಟ್ಟಾಗ, ರಾಜಕಾರಣಿಗಳಲ್ಲಿ ನಂಬಿಕೆ ಕಳೆದುಕೊಂಡಿದ್ದ ಜನತೆಗೆ ಅದು ಮೆಚ್ಚಿನ ಮಾತಾಯಿತು. ಜನತೆಯನ್ನು ಒಲಿಸಿಕೊಂಡವನಿಗೆ ತನ್ನ ಪಕ್ಷದವರನ್ನು ತನ್ನ ಪರ ವಹಿಸುವಂತೆ ಮಾಡುವುದು ಕಷ್ಟವಾಗಲಿಲ್ಲ. ಪರಿಣಾಮವಾಗಿ ಜಿಮ್ಮಿ ಕಾರ್ಟರ್ ಮೊದಲ ಸುತ್ತಿನ ಮತದಾನದಲ್ಲೇ ನಾಮಕರಣ ಪಡೆದನು. ಅವನು ಉಪಾಧ್ಯಕ್ಷ ಸ್ಥಾನಕ್ಕೆ ಮಿನೆಸೋಟ ಸೆನೆಟರ್ ವಾಲ್ಟರ್ ಮಾಂಡೇಲ್‌ನನ್ನು (Walter Mondale) ಅಭ್ಯರ್ಥಿಯಾಗಿ ಆಯ್ಕೆ ಮಾಡಿಕೊಂಡನು.

ಅತ್ತ ಆ ರಿಪಬ್ಲಿಕನ್ ಅಧಿವೇಶನದಲ್ಲಿ ಉಪಸ್ಥಿತ ಅಧ್ಯಕ್ಷ ಫೋರ್ಡ್‌ನನ್ನು ಅಧ್ಯಕ್ಷಸ್ಥಾನಕ್ಕೆ ನಾಮಕರಣ ಮಾಡಿದರು. ಆದರೆ ಅವನ ಬಗ್ಗೆ ಸಾರ್ವಜನಿಕರಲ್ಲಿ ಮತ್ತು ಬಹುತೇಕ ರಿಪಬ್ಲಿಕನ್ನರಲ್ಲಿ ಹುಟ್ಟಿದ್ದ ನಕಾರಾತ್ಮಕ ಭಾವನೆಗಳನ್ನು ಹೋಗಲಾಡಿಸಲು ಸಾಧ್ಯವಾಗಲಿಲ್ಲ. ಈ ಭಾವನೆಗಳ ಅನುಕೂಲ ಪಡೆದು ಪಕ್ಷದ ನಾಮಕರಣ ಪಡೆಯಲು ಕ್ಯಾಲಿಫೋರ್ನಿಯದ ಮಾಜಿ ಗವರ್ನರ್ ರೋನಾಲ್ಡ್ ರೇಗನ್ (Ronald Regan) ಹವಣಿಸಿ, ಫೋರ್ಡ್‌ನೊಡನೆ ಸ್ಪರ್ಧಿಸಿ, ಅವನ ಮರುಚುನಾವಣೆಗೆ ಧಕ್ಕೆ ಉಂಟು ಮಾಡಿದನು. ರೇಗನ್ ರಿಪಬ್ಲಿಕನ್ ಪಕ್ಷದ ಕಡು ಸಂಪ್ರದಾಯಸ್ಥರ ಬೆಂಬಲ ಪಡೆದಿದ್ದನು. ಆದಾಗ್ಯೂ ಉಪಸ್ಥಿತ ಅಧ್ಯಕ್ಷಸ್ಥಾನದ ಬಲದಿಂದ ಫೋರ್ಡ್‌ನು ನಾಮಕರಣಗೊಳ್ಳುವುದರಲ್ಲಿ ಯಶಸ್ವಿಯಾದನು. ಅವನು ಉಪಾಧ್ಯಕ್ಷ ಸ್ಥಾನಕ್ಕೆ ಕಾನ್ಸಾಸ್ ರಾಜ್ಯದ ಸಂಪ್ರದಾಯಸ್ಥ ಸೆನೆಟರ್ ರಾಬರ್ಟ್ ಡೋಲ್‌ನನ್ನು (Robert Dole) ಆಯ್ಕೆ ಮಾಡಿದನು.

ಚುನಾವಣಾ ಪ್ರಚಾರದಲ್ಲಿ ಕಾರ್ಟರ್ ಜನಸಂಪರ್ಕವನ್ನು ಹೆಚ್ಚಿಸಲು ದೇಶದಾದ್ಯಂತ ಪ್ರವಾಸ ಮಾಡಿ ಜನಸಾಮಾನ್ಯರನ್ನುದ್ದೇಶಿಸಿ ಮುಚ್ಚುಮರೆಯಿಲ್ಲದ ನಿಷ್ಕಪಟತೆಯಿಂದ – ತನ್ನ ಆಂತರ್ಯದ ಲೈಂಗಿಕ ವಿಷಯಾಸಕ್ತಿಯನ್ನು 'ಪ್ಲೇ ಬಾಯ್' ಮಾಸಿಕದ ಪತ್ರಕರ್ತನಿಗೆ ನೀಡಿದ ಸಂದರ್ಶನದಲ್ಲಿ ತಿಳಿಸಿದ್ದನ್ನೂ ಒಳಗೊಂಡಂತೆ – ಮಾತನಾಡಿ

ಜನರ ನಂಬಿಕೆಗೆ ಪಾತ್ರನಾದನು. ಅಧ್ಯಕ್ಷನಾಗಿ ಗಹನ ವಿಚಾರಗಳಲ್ಲಿ ಮಗ್ನನಾಗಿ ಶ್ವೇತಭವನ ಬಿಟ್ಟು ಬರಲು ಸಮಯವಿಲ್ಲದೆ ದುಡಿಯುವ ರಾಷ್ಟ್ರನಾಯಕನೆಂದು ತೋರಿಸಿಕೊಳ್ಳಲು ಪ್ರಯತ್ನಿಸಿ ಇಂದು ತನ್ನ 'ಇಮೇಜ್' ಸ್ವರೂಪವನ್ನು ಉತ್ತಮಗೊಳಿಸಬಹುದೆಂದು ಆಶಿಸಿದನು. ನಾನು ನೀರಿಕ್ಷಿಸಿದ ಟಿ.ವಿ. ಯಲ್ಲಿ ಪ್ರಸಾರ ಮಾಡಿದ ಮೂರು ಕಾರ್ಟರ್‌ಫೋರ್ಡ್ ಚರ್ಚೆಗಳಲ್ಲೂ ಕಾರ್ಟರ್ (Carter) ಹೆಚ್ಚು ತಿಳಿದವನಾಗಿ ತನ್ನ ಮನಸ್ಸಿನಲ್ಲಿದ್ದುದನ್ನು ನೇರವಾಗಿ, ಪರಿಣಾಮಕಾರಿಯಾಗಿ ತಿಳಿಸಬಲ್ಲವನಾಗಿ ತೋರಿದನು. ಫೋರ್ಡನ ಗಂಭೀರ, ಭಾವನಾರಹಿತ ಮುಖಮುದ್ರೆ ಮತ್ತು ಪ್ರಶ್ನೆಗಳಿಗೆ ಉತ್ತರಿಸುವಾಗ ತಡವರಿಸುವುದು ಇವೆಲ್ಲ ಅವನ 'ಇಮೇಜ್'ನ್ನು ಉತ್ತಮಗೊಳಿಸಲು ಸಹಾಯವಾಗಲಿಲ್ಲ.

ಚುನಾವಣೆಯಲ್ಲಿ ನಿರೀಕ್ಷಿಸಿದಂತೆ ಜಿಮ್ಮಿ ಕಾರ್ಟರ್ ಜಯಗಳಿಸಿದನು. ಅವನು ವರ್ಜೀನಿಯಾ ರಾಜ್ಯವನ್ನುಳಿದು ಮಿಕ್ಕ ಎಲ್ಲ ದಕ್ಷಿಣ ರಾಜ್ಯಗಳಲ್ಲಿ ಬಹುಮತಗಳಿಸಿದ್ದನು. ಫೋರ್ಡ್ ಪಶ್ಚಿಮ ಮತ್ತು ನೈರುತ್ಯ ರಾಜ್ಯಗಳಲ್ಲಿ (ಟೆಕ್ಸಾಸ್‌ನ್ನು ಬಿಟ್ಟು) ಗೆದ್ದಿದ್ದನು. ಕ್ಯಾಲಿಫೋರ್ನಿಯಾ ರಾಜ್ಯದ ಗವರ್ನರ್ ಜೆರಿ ಬ್ರೌನ್ (Jerry Brown)ನ ರಾಜಕೀಯದಿಂದಾಗಿ ಕಾರ್ಟರ್ ಕ್ಯಾಲಿಫೋರ್ನಿಯಾದಲ್ಲಿ ಸೋತನು. ಫೋರ್ಡ್ ನಿಕ್ಸನ್‌ನಿಗೆ ಕ್ಷಮಾದಾನ ಮಾಡಿದ್ದು ಅವನ ಸೋಲಿಗೆ, ಅನೇಕ ಕಾರಣಗಳಲ್ಲಿ ಒಂದು ಮುಖ್ಯ ಕಾರಣವಾಗಿರಬಹುದು. ಕರಿಯ ಅಮೆರಿಕನ್ನರು, (black Americans) ಕಾರ್ಮಿಕರು, ನಗರವಾಸಿಗಳು ಮತ್ತು ದಾಕ್ಷಿಣಾತ್ಯರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಟರ್‌ಗೆ ಮತ ನೀಡಿದ್ದರು. ಆದರೆ ಒಟ್ಟು ಜನ ಸಂಖ್ಯೆಯು ದೃಷ್ಟಿಯಿಂದ ನೋಡಿದಾಗ ಚುನಾವಣೆಯಲ್ಲಿ ಭಾಗವಹಿಸಿದವರು ಶೇಕಡ ೫೩ರಷ್ಟು ಮಾತ್ರ! ಎಲೆಕ್ಟರಲ್ ಮತಗಳಲ್ಲಿ ೨೯೭ ಕಾರ್ಟರ್‌ಗೆ, ೨೪೦ ಫೋರ್ಡ್‌ಗೆ ದೊರಕಿದ್ದವು. ಬಹಳ ಕಿರಿದಾದ ಅಂತರದಲ್ಲಿ ಕಾರ್ಟರ್ ಗೆದ್ದಿದ್ದು, ಕಾಂಗ್ರೆಸ್ ಮತ್ತು ಸೆನೆಟ್‌ನಲ್ಲಿ ಡೆಮೊಕ್ರಾಟರು ಬಹು ಸಂಖ್ಯಾತರಾಗಿ ಪ್ರಬಲರಾಗಿದ್ದರು.

ಅಧ್ಯಕ್ಷ ಕಾರ್ಟರ್‌ನ ಆಡಳಿತ

ಜೇಮ್ಸ್ ಕಾರ್ಟರ್ ಅಮೆರಿಕದ ೩೯ನೆಯ ಅಧ್ಯಕ್ಷ. ದಕ್ಷಿಣ ರಾಜ್ಯದ ಗ್ರಾಮೀಣ ಪ್ರದೇಶದಿಂದ ಅಧ್ಯಕ್ಷ ಪದವಿಗೆ ಆಯ್ಕೆಯಾದವರಲ್ಲೀ ಇವನೇ ಮೊದಲಿಗನು. ಅಮೆರಿಕ ನಾವಿಕ ಶಿಕ್ಷಣ ಶಾಲೆಯಲ್ಲಿ ಓದಿ ಪದವೀಧರನಾಗಿ ನಂತರ ೧೯೫೨ರಲ್ಲಿ ಅನುಶಕ್ತಿ ಚಾಲಿತ ಜಲಾಂತರ್ಗಾಮಿ ನಾವೆಯ ಯೋಜನೆಯನ್ನು ಸೇರಿದನು. ನಂತರ 'ಯೂನಿಯನ್' ಕಾಲೇಜಿನಲ್ಲಿ ಅಣುಭೌತಶಾಸ್ತ್ರದಲ್ಲಿ ಅಭ್ಯಾಸ ಮುಂದುವರಿಸಿದನು. ೧೯೫೩ರಲ್ಲಿ ಕಾರ್ಟರ್‌ನ ತಂದೆ ತೀರಿಕೊಂಡಾಗ ಅವನು ನೌಕಾದಳವನ್ನು ಬಿಟ್ಟು ಕುಟುಂಬದ ಉದ್ಯೋಗವನ್ನು ವಹಿಸಿಕೊಳ್ಳಲು ವಾಪಸ್ಸು ಊರಿಗೆ ಬಂದನು. ೧೯೬೩ರಿಂದ ೧೯೬೭ರ ವರೆಗೆ ಜಾರ್ಜಿಯಾದ ಸೆನೆಟ್‌ನಲ್ಲಿ ಸೇವೆ ಸಲ್ಲಿಸಿದನು. ೧೯೭೧ ರಿಂದ ೧೯೭೫ರ ವರೆಗೆ

ಜಾರ್ಜಿಯ ರಾಜ್ಯದ ಗವರ್ನರ್ ಆಗಿದ್ದನು. ೧೯೭೬ರಲ್ಲಿ ಅಧ್ಯಕ್ಷಸ್ಥಾನಕ್ಕೆ ಡೆಮೊಕ್ರೆಟಿಕ್ ಪಕ್ಷದ ಅಭ್ಯರ್ಥಿಯಾಗಿ ನಾಮಕರಣಗೊಂಡನು. ಆ ವರ್ಷದ ಚುನಾವಣೆಯಲ್ಲಿ ಕಾರ್ಟರ್ ಜೆರಾಲ್ಡ್‌ನನ್ನು ಸೋಲಿಸಿ ಅಮೆರಿಕದ ಅಧ್ಯಕ್ಷನಾಗಿ ಆಯ್ಕೆಗೊಂಡನು.

ಜಿಮ್ಮಿ ಕಾರ್ಟರ್ ಅಮೆರಿಕದ ೩೯ನೆಯ ಅಧ್ಯಕ್ಷನಾಗಿ ಪ್ರಮಾಣವಚನ ಸ್ವೀಕರಿಸಿದ ಮೇಲೆ ತನ್ನ ಕುಟುಂಬದವರೊಡನೆ ಪೆನ್ಸಿಲ್‌ವೆನಿಯಾ ರಾಜಬೀದಿಯಲ್ಲಿ ನಡೆದು ಹೋಗಿ ಶ್ವೇತಭವನ ತಲುಪಿದನು. ಅಧ್ಯಕ್ಷನಾಗಿ ಕೈಗೊಂಡ ಮೊಟ್ಟ ಮೊದಲನೆಯ ಕಾರ್ಯ – ಸೈನ್ಯಕ್ಕೆ ಸೇರಲು ನಿರಾಕರಿಸಿದ ಫೆಡರಲ್ ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿ ಓಡಿಹೋಗಿದ್ದ ೧೦,೦೦೦ ಅಮೆರಿಕನ್ ಯುವಜನರಿಗೆ ಸಾಮೂಹಿಕ ಕ್ಷಮಾದಾನ ಮಾಡಿದ್ದು. ಕಾರ್ಟರ್ ತಾನು ವಾಷಿಂಗ್‌ಟನ್ ಹೊರಗಿನವನೆಂದು ಹೇಳಿಕೊಂಡರೂ ಅವನ ಸಚಿವ ಮಂಡಳಿ ವಾಷಿಂಗ್‌ಟನ್ ರಾಜಕಾರಣಗಳಿಂದ, ಬೃಹತ್ ಕಾರ್ಪೊರೇಶನ್ ನಿರ್ವಾಹಕರಿಂದ ಹಾಗೂ ಗಳಸ್ಯ ಕಂಠಸ್ಯ ಗೆಳೆಯರಿಂದ ಕೂಡಿತ್ತು. ಕಾರ್ಟರ್‌ನ ನಿಕಟವರ್ತಿಗಳು ಮತ್ತು ಸಲಹೆಗಾರರು – ಆಯವ್ಯಯ ಇಲಾಖೆಯ ಮುಖ್ಯಸ್ಥ ಬರ್ಟ್ ಲ್ಯಾನ್ಸ್ (Bert Lance), ನ್ಯಾಯಾಂಗ ಕಾರ್ಯದರ್ಶಿ ಗ್ರಿಫಿನ್‌ಬೆಲ್ (Griffin Bell), ಶ್ವೇತಭವನ ಮುಖ್ಯಾಧಿಕಾರಿ ಹ್ಯಾಮಿಲ್‌ಟನ್ ಜೋರ್ಡ್‌ನ್ (Hamilton Jordan), ಪತ್ರಕರ್ತ ನಿರ್ವಹಣ ಕಾರ್ಯದರ್ಶಿ ಜೋಡಿ ಪಾವೆಲ್ (Jody Powell) ಎಲ್ಲರೂ ಜಾರ್ಜಿಯಾದವರು. ಶ್ರೀಮಂತ ಉದ್ದಿಮೆಗಾರರಾದ ವಿದೇಶಾಂಗ ಕಾರ್ಯದರ್ಶಿ ಸೈರಸ್ ವ್ಯಾನ್ಸ್ (Cyrus Vance), ಮತ್ತು ರಕ್ಷಣಾ ಕಾರ್ಯದರ್ಶಿ ಹೆರಾಲ್ಡ್ ಬ್ರೌನ್ (Harold Brown) – ಇಂಥವರಿಂದ ಕೂಡಿದ್ದ ಆಡಳಿತ ಕಾರ್ಟರ್ ತಾನೊಬ್ಬ ಸಾಮಾನ್ಯ ರೈತನೆಂಬ ಭಾವನೆ ಜನರಲ್ಲಿ ಮೂಡಿಸಲು ಸಾಧ್ಯವಾಗಲಿಲ್ಲ. ಅವನ ಆಡಳಿತದಲ್ಲಿ ಅಲ್ಪಸಂಖ್ಯಾತ ಜನಾಂಗಗಳ (minority people) ಪ್ರಾತಿನಿಧ್ಯ ಬಹಳ ಕಡಿಮೆಯಾಗಿತ್ತು.

ಕಾಂಗ್ರೆಸ್‌ನಲ್ಲಿ ಡೆಮೊಕ್ರಾಟಿಕ್ ಪಕ್ಷದ ಬಹುಮತವಿದ್ದರೂ ಸಹ ಕಾರ್ಟರ್ ಪ್ರಾರಂಭದಿಂದಲೇ ಪಕ್ಷದೊಡನೆ ಭಿನ್ನಾಭಿಪ್ರಾಯ ಬೆಳೆಸಿಕೊಂಡು ಘರ್ಷಣೆಗೆ ಎಡೆ ಮಾಡಿಕೊಟ್ಟನು. ಪಕ್ಷದ ನಾಯಕರೊಡನೆ ಹೊಂದಿಕೊಳ್ಳಲಾರದೆ ಹೋದದ್ದರಿಂದ ಅವನು ಮಂಡಿಸಿದ ಮಸೂದೆಗಳನ್ನು ಕಾಂಗ್ರೆಸ್ ತನ್ನ ವಿಶಿಷ್ಟ ಅಧಿಕಾರ ಉಪಯೋಗಿಸಿ ತಳ್ಳಿ ಹಾಕುವುದು ಪರಿಪಾಠವಾಯಿತು. ೧೯೭೭ರಲ್ಲಿ ಕಾಂಗ್ರೆಸ್ ಹೊಸ ವಿದ್ಯುತ್ ಮಂಡಳಿಯನ್ನು ಸ್ಥಾಪಿಸಿತು. ನಿಕ್ಸನ್‌ನ ರಕ್ಷಣಾ ಕಾರ್ಯದರ್ಶಿಯಾಗಿದ್ದ ಜೇಮ್ಸ್ ಷ್ಲೆಸಿಂಗರ್‌ನನ್ನು (James Schlesinger) ಆ ಮಂಡಳಿಯ ಪ್ರಥಮ ಅಧ್ಯಕ್ಷನನ್ನಾಗಿ ಕಾರ್ಟರ್ ನೇಮಿಸಿದನು. ಕೂಡಲೆ ಆ ವಿದ್ಯುತ್ ಮಂಡಳಿ ಕಾಂಗ್ರೆಸ್‌ನೊಡನೆ ಘರ್ಷಣೆಯಾಗುವಂಥ ಸನ್ನಿವೇಶಗಳು ಉಂಟಾದವು. ಫೆಡರಲ್ ಸರ್ಕಾರದ ನಿಯಂತ್ರಣವನ್ನು ಜಾರಿಗೆ ತರದೆ ಕಾರ್ಟರ್ ತೈಲ ಉತ್ಪಾದನೆಯನ್ನು ಹೆಚ್ಚಿಸಿ, ತೈಲ ಉಪಯೋಗವನ್ನು ಕಡಿಮೆ ಮಾಡಿದನು. ಅವನು ಮಂಡಿಸಿದ ಗ್ಯಾಲನ್‌ಗೆ ೧೦ ಸೆನ್ಟ್ ಸುಂಕವನ್ನು ಕಾಂಗ್ರೆಸ್

ಅನುಮೋದಿಸಲಿಲ್ಲ. ೧೯೭೯ರಲ್ಲಿ ಸಂಭವಿಸಿದ ಮೂರು ಮೈಲಿ ದ್ವೀಪ ಅಣು ಪ್ರತಿಕ್ರಿಯಾ ಕೇಂದ್ರ ಕರಗಿಹೋದ ಅನಾಹುತ ಸಾರ್ವಜನಿಕರಲ್ಲಿ ಗೊಂದಲದ ಪರಿಸ್ಥಿತಿ ಉಂಟು ಮಾಡಿತ್ತು. ಈ ಪರಿಸ್ಥಿತಿಯಲ್ಲಿ ಅಣುಶಕ್ತಿಯನ್ನು ಉಪಯೋಗಿಸಿ ಯಂತ್ರಚಾಲನೆ ಮಾಡುವುದು ಮುಂದೆ ತೈಲದ ಮೇಲಿನ ಅವಲಂಬನೆಯನ್ನು ತಪ್ಪಿಸಬಹುದು ಎಂದು ಕಾರ್ಟರ್ ಲೆಕ್ಕ ಹಾಕಿದ್ದನು.

ಸಮಾಜಾಭಿವೃದ್ಧಿ ಯೋಜನೆಯನ್ನು ಉತ್ತಮಗೊಳಿಸುವುದು, ಎಲೆಕ್ಟರಲ್ ಕಾಲೇಜಿನ (electoral college) ಸುಧಾರಣೆ, ಚುನಾವಣೆಗೆ ಹಣ ಒದಗಿಸುವುದನ್ನು ನಿಯಂತ್ರಿಸುವುದು ಮತ್ತು ೧೯೭೪ರ ಕಾಯಿದೆಯ ಸೂಚನೆಗಳನ್ನು ಅನುಷ್ಠಾನಕ್ಕೆ ತರುವುದು – ಈ ಕುರಿತು ಮಂಡಿಸಿದ ಮಸೂದೆಗಳನ್ನು ಕಾಂಗ್ರೆಸ್ ತಳ್ಳಿಹಾಕಿತು. ಪ್ರಾರಂಭದಲ್ಲಿ ಕಾರ್ಟರ್ ಮಂಡಿಸಿದ ಕೆಲವು ಮಸೂದೆಗಳು – ಫೆಡರಲ್ ಸರ್ಕಾರದ ಪುನರ್‌ರಚನೆ, ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ, ಕನಿಷ್ಠ ವೇತನ ಏರಿಕೆ (minimum wage increase), ತೆರಿಗೆಗಳನ್ನು ಇಳಿಸಿದಂತೆ ಮಾಡಿ ವೇತನಪಟ್ಟಿಯಲ್ಲಿ (pay roll) ತೆರಿಗೆ ಹೆಚ್ಚಿಸುವುದು, ಹೊಸದಾಗಿ ಶಿಕ್ಷಣ ಇಲಾಖೆಯನ್ನು ಸ್ಥಾಪಿಸುವುದು – ಇವೆಲ್ಲ ಮಸೂದೆಗಳನ್ನು ಕಾಂಗ್ರೆಸ್ ಅಂಗೀಕರಿಸಿತ್ತು. ೧೯೭೯ರ ನಂತರ ಕಾರ್ಟರ್ ಮತ್ತು ಕಾಂಗ್ರೆಸ್ ನಡುವೆ ಸೌಹಾರ್ದತೆ ಉಳಿಯಲಿಲ್ಲ.

ತೈಲಕ್ಷೇತ್ರದಲ್ಲಿ ವಿಕ್ಷುಬ್ಧ ಪರಿಸ್ಥಿತಿ

೧೯೭೩ರ ಅರಬ್ ತೈಲ ಪ್ರತಿಬಂಧಕ (embargo) ಮುಗಿದ ಮೇಲೆ ಅಮೆರಿಕ ಹೊರದೇಶಗಳಿಂದ ತೈಲ ಆಮದು ಮಾಡಿಕೊಳ್ಳುವುದು ಅನೇಕ ವರ್ಷಗಳವರೆಗೆ ಹೆಚ್ಚುತ್ತ ಹೋಯಿತು. ವಿಶಿಷ್ಟವಾಗಿ ಅರಬ್ ದೇಶಗಳಿಂದ ತೈಲ ಆಮದು ಮಾಡಿಕೊಂಡು ರಾಜಕಾರಣ ಸಂಬಂಧಗಳಲ್ಲಿ ಇಸ್ರೇಲ್ ದೇಶವನ್ನು ಬೆಂಬಲಿಸುವುದು ತದ್ವಿರುದ್ಧವಾದ ನಡವಳಿಕೆಯಾಗಿದ್ದು ಅಮೆರಿಕದ ಬಗ್ಗೆ ಅರಬ್ ದೇಶಗಳಲ್ಲಿ ಅನುಮಾನ ಹೆಚ್ಚಿತು. ಈ ದೇಶಗಳು 'ಒಪೆಕ್' (OPEC) ಎಂಬ ಪ್ರಬಲವಾದ ವಾಣಿಜ್ಯ ಸಂಸ್ಥೆಯನ್ನು ಸ್ಥಾಪಿಸಿದವು. ತೈಲ ಉತ್ಪಾದನೆ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲದ ಬೆಲೆ ನಿರ್ಧರಿಸುವುದು ಈ ಸಂಸ್ಥೆಯ ಮುಖ್ಯ ಉದ್ದೇಶಗಳಾಗಿದ್ದವು. ಈ ಸಂಸ್ಥೆ ತೈಲದ ಬೆಲೆ ಏರಿಸಿ ಅಮೆರಿಕದಲ್ಲಿ ಖೋತಾ ವಾಣಿಜ್ಯವನ್ನು (trade deficit) ಉಂಟು ಮಾಡಿದವು. ಇದು ಬೇರೆ ದೇಶಗಳಲ್ಲಿ ಡಾಲರ್ ಬೆಲೆ ಕುಸಿಯುವಂತೆ ಮಾಡಿತು. ಹೀಗಾಗಿ ಅಮೆರಿಕದ ಆರ್ಥಿಕ ವ್ಯವಸ್ಥೆ ತಾತ್ಕಾಲಿಕವಾಗಿಯಾದರೂ ತೈಲ ಉತ್ಪಾದಿಸುವ ಅರಬ್ ದೇಶಗಳ ಬಂದಿಯಾಯಿತು. ಕಾಲ ಸರಿದಂತೆ ಈ ಸಮಸ್ಯೆಗೆ ಪರಿಹಾರವೂ ಕಂಡುಬರಲಿಲ್ಲ. ಇದಕ್ಕೆ ಜನರು ಕಾರ್ಟರ್‌ನ ನಾಯಕತ್ವವನ್ನು ದೂರಿ, ಅಮೆರಿಕ ಆಂತರಿಕವಾಗಿ ತೈಲದ ಅಭಾವವನ್ನು ಎದುರಿಸಲು ಸಿದ್ಧವಾಗಿಲ್ಲ ಎಂಬ ನಿರ್ಣಯಕ್ಕೆ

ಬಂದರು. ತೈಲದ ಬೆಲೆ ಗಗನಕ್ಕೇರುತ್ತಿದ್ದಂತೆ ಹಣದುಬ್ಬರವೂ ಏರಿತು. ೧೯೭೯ರಲ್ಲಿ ಅಮೆರಿಕದ ಹಣದುಬ್ಬರ ಎರಡು ಅಂಕೆಗಳ ಮಟ್ಟಕ್ಕೇರಿತ್ತು (double digit). ಅಲ್ಲದೆ ವಾಣಿಜ್ಯ-ವ್ಯವಹಾರಗಳಲ್ಲಿ ಸಮತೋಲ ಕಳೆದುಕೊಂಡಿತ್ತು. ಫೆಡರಲ್ ಸರ್ಕಾರದಲ್ಲಿ ಖೋತಾ ನಿರಂತರವಾಗಿ ಸಾಗಿತು. ಅಧ್ಯಕ್ಷ ಕಾರ್ಟರ್‌ನಿಗೆ ಆಯವ್ಯಯಗಳನ್ನು ಸಮತೋಲಕ್ಕೆ ತರಲು ಸಾಧ್ಯವಾಗಲಿಲ್ಲ. ೧೯೮೦ರಲ್ಲಿ ಅಮೆರಿಕ ಆರ್ಥಿಕ ಮುಗ್ಗಟ್ಟಿನಲ್ಲಿ ಸಿಕ್ಕಿಬಿದ್ದಿದೆ ಎಂದು ಅಧಿಕೃತವಾಗಿ ಪ್ರಕಟಿಸಲಾಯಿತು. ಇದು ಆ ವರ್ಷ ನಡೆಯಲಿದ್ದ ಚುನಾವಣೆಯ ವೇದಿಕೆಯಲ್ಲಿ ಚರ್ಚಿಸುವ ಮುಖ್ಯ ವಿಷಯವಾಯಿತು.

ನೆಂಟರಿಂದಾದ ಕಂಟಕಗಳು:

ಕಾರ್ಟರನ ಕೌಟುಂಬಿಕ ಸಮಸ್ಯೆಗಳು

ಜಿಮ್ಮಿ ಕಾರ್ಟರನ ತಮ್ಮ ಬಿಲ್ಲಿ ಕಾರ್ಟರ್ ತನ್ನ ಹಾಸ್ಯಾಸ್ಪದ ನಡವಳಿಕೆಯಿಂದ ಪತ್ರಕರ್ತರಿಗೆ, ವ್ಯಂಗ್ಯ ಚಿತ್ರಕಾರರಿಗೆ ಮತ್ತು ದೂರದರ್ಶನದಲ್ಲಿ ಪ್ರಸಾರಗೊಳ್ಳುವ ಹಾಸ್ಯಪ್ರಸಂಗಗಳಿಗೆ ಈಡಾದನು. ಅಧ್ಯಕ್ಷ ಕಾರ್ಟರ್ನಿಗೆ ತನ್ನ ತಮ್ಮನ ವರ್ತನೆ ಅಸಹನೀಯವಾಗಿತ್ತು. ಬಿಲ್ಲಿ ತನ್ನ ಕುಖ್ಯಾತಿಯನ್ನು ಹಣ ಗಳಿಸಲು ಉಪಯೋಗಿಸಿಕೊಂಡನು. ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸಲು ಬಿಲ್ಲಿಗೆ ಒಂದು ನಿರ್ದಿಷ್ಟ ಮೊತ್ತದ ಹಣ ಕೊಡಬೇಕಾಗಿತ್ತು. ಅಂಥ ಸಮಾರಂಭಗಳಲ್ಲಿ ತನ್ನ ಹಳ್ಳಿಗಾಡಿನ (hill-billy) ಮಾತು, ಹಾಸ್ಯಗಾರಿಕೆ ಮತ್ತು ನಡವಳಿಕೆಗಳನ್ನು ಪ್ರದರ್ಶಿಸಿ ಜನರ ಮನ ರಂಜಿಸುತ್ತಿದ್ದನು. ಬಿಯರ್ ಕುಡಿಯುವ ಚಟವಿದ್ದುದರಿಂದ ಅವನ ಹೆಸರಿನಲ್ಲಿ 'ಬಿಲ್ಲಿ ಬಿಯರ್' ಎಂಬ ಹೆಸರಿನ ಮದ್ಯವೂ ಮಾರುಕಟ್ಟೆಗೆ ಬಂತು. ಇದು ತಮ್ಮನ ಮಾತಾದರೆ, ಅಧ್ಯಕ್ಷ ಕಾರ್ಟರನ ತಾಯಿ ಸ್ವತಂತ್ರ ಪ್ರವೃತ್ತಿಯವಳಾಗಿ, ಮನಸ್ಸಿನಲ್ಲಿದ್ದುದನ್ನು ನೇರವಾಗಿ, ಒರಟಾಗಿ ಹರಟುತ್ತಿದ್ದು ವರದಿಗಾರರಿಗೆ ಪ್ರಿಯಳಾಗಿದ್ದಳು. ಕಾರ್ಟರನ ತಂಗಿಯೊಬ್ಬಳು ಕಡು ಸಂಪ್ರದಾಯಸ್ಥ ಕ್ರೈಸ್ತ ಮತ ಪ್ರಚಾರಕಳಾಗಿದ್ದಳು. ಕಾರ್ಟರ್‌ನ ಹೆಂಡತಿ ರೋಸಲಿನ್ ಬ್ರೆಝಿಲ್ ದೇಶದ ರಾಯಭಾರಿಯಾಗಲು ಪ್ರಯತ್ನಿಸಿ ಅಸಂಬದ್ಧವಾದ ಹೇಳಿಕೆಯೊಂದನ್ನು ನೀಡಿ ಪೇಚಿನ ಪ್ರಸಂಗಕ್ಕೆ ಸಿಕ್ಕಿದ್ದಳು. ತಮ್ಮ ಬಿಲ್ಲಿ ಕಾರ್ಟರನನ್ನು ಲಿಬಿಯಾ ದೇಶದ ಗಡಾಫಿ ಸಂಬಳ ಕೊಟ್ಟು ಏಜಂಟನನ್ನಾಗಿ ಮಾಡಿಕೊಂಡನು. ಈ ರೀತಿ ಬಿಲ್ಲಿ ಕಾರ್ಟರ್ ಪಡೆದ ಹಣ: ೨೨೦ ಸಾವಿರ ಡಾಲರ್. ಇದರಲ್ಲಿ ಅಧ್ಯಕ್ಷ ಕಾರ್ಟರನ ಕೈವಾಡವಿರಬಹುದೆ ಎನ್ನುವುದನ್ನು ವಿಚಾರಣೆಗೆ ಗುರಿಪಡಿಸಿ, ಕೂಲಂಕಷವಾದ ತನಿಖೆಯ ನಂತರ ಅಧ್ಯಕ್ಷ ನಿರ್ದೋಷಿ ಎಂಬ ತೀರ್ಮಾನಕ್ಕೆ ಬರಲಾಯಿತು.

ಹೊರದೇಶಗಳಲ್ಲಿ ಸಂಭವಿಸಿದ ಘಟನೆಗಳು

ಜಿಮ್ಮಿ ಕಾರ್ಟರನು ಅವನ ಅಧಿಕಾರದ ಮೊದಲ ಭಾಗದಲ್ಲಿ ಮಾನವೀಯ ಹಕ್ಕುಗಳ ಸಂರಕ್ಷಕನಾಗಿದ್ದನು. ಆ ಸಂರಕ್ಷಣೆಯನ್ನು ಕಾರ್ಟರ್ ಧರ್ಮಯುದ್ಧದ ಮಟ್ಟಕ್ಕೆ

ಕೊಂಡೊಯ್ದಿದ್ದನು. ಸರ್ವಾಧಿಕಾರಿಗಳ ಶೋಷಣೆಗೆ ಒಳಗಾಗಿ ಸ್ವಾತಂತ್ರ್ಯ ಕಳೆದುಕೊಂಡು ಪರಿತಪಿಸುತ್ತಿದ್ದ ಕ್ಯೂಬಾ, ಉಗಾಂಡ, ಈಥಿಯೋಪಿಯಾ ಮತ್ತು ಅರ್ಜಂಟೈನಾ ಪ್ರಜೆಗಳ ಪರವಾಗಿ ಆ ಸರ್ಕಾರಗಳ ಸುಧಾರಣೆಗಾಗಿ ಕರೆಕೊಟ್ಟನು. ಆ್ಯಂಡ್ರೂ ಯಂಗ್ ಎಂಬ ದಾಕ್ಷಿಣಾತ್ಯ ಕರಿಯ ಅಮೆರಿಕನ್ ಕಾಂಗ್ರೆಸ್ ಸದಸ್ಯನನ್ನು ವಿಶ್ವಸಂಸ್ಥೆಯ ಪ್ರತಿನಿಧಿ ಸಮಿತಿಯ ನಾಯಕನನ್ನಾಗಿ ನೇಮಿಸಿದನು. ಆದರೆ ಯಂಗ್ ಮಾನವೀಯ ಹಕ್ಕುಗಳ ಬಗ್ಗೆ ಅಮೆರಿಕದ ಅಧಿಕೃತ ನಿಲುವಿಗೆ ವಿರುದ್ಧವಾದ ಹೇಳಿಕೆಗಳನ್ನು ಕೊಟ್ಟು ಕಾರ್ಟರ್‌ನನ್ನು ಪೇಚಿನ ಪರಿಸ್ಥಿತಿಗೆ ಗುರಿಮಾಡಿದನು. ಅದಲ್ಲದೆ ಅಮೆರಿಕದ ವಿದೇಶಾಂಗ ನೀತಿಗೆ ವಿರುದ್ಧವಾಗಿ ಪ್ಯಾಲೆಸ್ಟೈನ್ ವಿಮೋಚನಾ ಸಂಸ್ಥೆಯ (Palestine Liberation Organization) ಸದಸ್ಯರೊಡನೆ ಸಂಪರ್ಕ ಬೆಳೆಸಿದನು. ಸೋವಿಯೆಟ್ ಒಕ್ಕೂಟದಿಂದ ಯಹೂದ್ಯರನ್ನು ವಲಸೆ ಹೋಗಲು ಯಾವ ಅಡೆತಡೆಯಿಲ್ಲದೆ ಬಿಡಬೇಕೆಂದು ಕಾರ್ಟರ್ ಆಗ್ರಹಪಡಿಸಿದನು. ಇದಕ್ಕೆ ಪ್ರತಿಯಾಗಿ ಸೋವಿಯೆಟ್ ಒಕ್ಕೂಟದ ನಾಯಕರು ಕಾರ್ಟರನ ಮನವಿಯನ್ನು ತಳ್ಳಿಹಾಕಿ ಅಲ್ಪಸಂಖ್ಯಾತರಿಗೆ ಅಪಾರ ಅನ್ಯಾಯ ಮಾಡಿ, ಶತಮಾನಗಳಿಂದ ಶೋಷಣೆ ಮಾಡುತ್ತ ಬಂದಿರುವ ಅಮೆರಿಕಕ್ಕೆ ಮಾನವೀಯ ಹಕ್ಕುಗಳ ಮೇಲೆ ಭಾಷಣ ಮಾಡಲು ಯಾವ ಹಕ್ಕೂ ಇಲ್ಲವೆಂದು ಮೂದಲಿಸಿದರು.

ಇರಾನ್‌ನಲ್ಲಿ 'ಹೊಸ್ಟೇಜ್' ಹಗರಣ

ಹಿಂದೆ ಎಂದೂ ಆಗದಂಥ ರಾಯಭಾರಿ ಕಟ್ಟಡವನ್ನು ಮುತ್ತಿಗೆ ಹಾಕಿ ರಾಯಭಾರ ಸ್ವಾಯತ್ತತೆಯನ್ನು ಉಲ್ಲಂಘಿಸಿ, ಸಿಬ್ಬಂದಿಯನ್ನು ಸೆರೆಹಿಡಿದ ಅತ್ಯಂತ ಆಸ್ಫೋಟಕ ಘಟನೆ ೧೯೭೯ರ ನವೆಂಬರ್ ತಿಂಗಳಲ್ಲಿ ಇರಾನ್ ದೇಶದ ಟೆಹೆರಾನ್‌ನಲ್ಲಿ ನಡೆಯಿತು. ಹೀಗೆ ಮಾಡಿದವರು ಇರಾನಿನ ಇಸ್ಲಾಂ ಮತಪಂಥವೊಂದರ ನಾಯಕ ಅಯತೊಲ್ಲಾ ಖೊಮೇನಿಯ ಅನುಯಾಯಿಗಳು. ಇರಾನಿನಲ್ಲಿ ಬಹಳ ಕಾಲದಿಂದ ಷಾ ಮಹಮ್ಮದ್ ರೇಜ಼ ಪಹಲ್ವಿಯ ದಬ್ಬಾಳಿಕೆಯ ವಿರುದ್ಧವಾಗಿ ಸಮಾಜದ ಅಂತರಾಳದಲ್ಲಿ ಜನರ ಅತೃಪ್ತಿ, ಹತಾಶೆ, ಕೋಪಗಳು ಲಾವಾರಸದಂತೆ ಆಸ್ಫೋಟನೆಗಾಗಿ ಅವಕಾಶ ಕಾಯುತ್ತಿದ್ದವು. ಆ ಅವಕಾಶ ೧೯೭೯ರ ಜನವರಿ ತಿಂಗಳಲಿ ಒದಗಿ ಬಂದು ಕ್ರಾಂತಿಗೆ ಹಾದಿಯಾಯಿತು. ಪರಿಣಾಮವಾಗಿ ಷಾ ರೇಜ಼ ಪಹಲ್ವಿ ಪದಚ್ಯುತಿಗೊಂಡು ಅಮೆರಿಕದಲ್ಲಿ ಆಶ್ರಯ ಪಡೆದನು. ಅಮೆರಿಕ ತನ್ನ ತೈಲ ಸರಬರಾಜಿನ ಸ್ವಂತದ ಹಿತಕ್ಕಾಗಿ ಇರಾನಿನ ಜನತೆಯ ಹಿತವನ್ನೂ ಕಡೆಗಣಿಸಿ ಷಾನ ದಮನಕಾರಿ ದಬ್ಬಾಳಿಕೆಯನ್ನು ಬೆಂಬಲಿಸುತ್ತ ಬಂದಿತ್ತು. ಷಾಗೆ ಆಸರೆ ಕೊಟ್ಟಿದ್ದಕ್ಕಾಗಿ ಇರಾನಿನ ಜನರು ಅಮೆರಿಕನ್ ರಾಯಭಾರಿ ಕಛೇರಿಯ ೫೦ ಮಂದಿ ಸಿಬ್ಬಂದಿಯವರನ್ನು ಸೆರೆಹಿಡಿದು ಷಾನನ್ನು ವಿಚಾರಣೆಗೆ ಗುರಿಪಡಿಸಲು ಅಮೆರಿಕಕ್ಕೆ ವಾಪಸ್ಸು ಕಳಿಸುವಂತೆ ಒತ್ತಾಯ ಹಾಕಿದರು. ಅಧ್ಯಕ್ಷ ಕಾರ್ಟರ್ ಆರ್ಥಿಕ ನಿರ್ಬಂಧ, ರಾಯಭಾರಿಗಳೊಂದಿಗೆ ಮಾತುಕತೆ – ಮುಂತಾದ ಎಲ್ಲ ವಿಧಾನ ಗಳನ್ನು ಉಪಯೋಗಿಸಿ ಬಂಧಿತರಾದ ಅಮೆರಿಕನ್ನರನ್ನು ಬಿಡಿಸಲು ಪ್ರಯತ್ನಪಟ್ಟನು.

ಹತ್ತಿರ ಸಾರುತ್ತಿರುವ ಚುನಾವಣೆಯ ಪ್ರಚಾರ ಪ್ರಾರಂಭವಾಗುವುದರೊಳಗೆ ಈ ಕೆಲಸದ ಆಗತ್ಯವನ್ನು ಮನಗಂಡ ಕಾರ್ಟರ್ ೧೯೮೦ರ ಏಪ್ರಿಲ್ ತಿಂಗಳಲ್ಲಿ ಟೆಹೆರಾನಿನ ಸುತ್ತಮುತ್ತ ದಾಳಿ ನಡೆಸುವಂತೆ ವಾಯುಪಡೆಯ ವಿಮಾನಗಳನ್ನು ಕಳುಹಿಸಿದನು. ಆದರೆ ಅಲ್ಲಿನ ಮರುಭೂಮಿಯ ಭಯಂಕರ ಬಿರುಗಾಳಿಯಿಂದಾಗಿ ಈ ಯೋಜನೆಯನ್ನು ಕೈಬಿಡ ಬೇಕಾಯಿತು. ಇದರಿಂದಾಗಿ ಅನೇಕ ಹೆಲಿಕಾಪ್ಟರುಗಳು ಕೆಟ್ಟುಹೋದವಲ್ಲದೆ ಒಂದು ಹೆಲಿಕಾಪ್ಟರಿಗೆ ಸಾರಿಗೆ ವಿಮಾನ ಢಿಕ್ಕಿ ಹೊಡೆದು ಎಂಟು ಅಮೆರಿಕನ್ನರ ಸಾವಿಗೆ ಕಾರಣವಾಯಿತು. ೧೯೮೦ರ ಚುನಾವಣಾ ಪ್ರಚಾರ ಮುಗಿದರೂ ಇರಾನಿನಲ್ಲಿ ಬಂಧಿತ ರಾಗಿದ್ದ ಅಮೆರಿಕನ್ನರ ಬಿಡುಗಡೆಯಾಗಲಿಲ್ಲ. ಆ ಸಮಯದಲ್ಲೇ ಷಾ ರೇಜ಼ ಪಹಲ್ವಿ ಮರಣ ಹೊಂದಿದನು. ವಿಶ್ವಸಂಸ್ಥೆ ಅಮೆರಿಕನ್ನರನ್ನು ಬಂಧಿಸಿಟ್ಟಿರುವುದಕ್ಕಾಗಿ ಇರಾನ್‌ನನ್ನು ಖಂಡಿಸಿತು.

೧೯೮೦ರಲ್ಲಿ ಇರಾನಿನ ಮೇಲೆ ಇರಾಕ್ ದಾಳಿ ಮಾಡಿತು. ಈ ದೀರ್ಘಾವಧಿ ಯುದ್ಧದ ಪರಿಣಾಮವಾಗಿ ಪರ್ಶಿಯಾ ಕೊಲ್ಲಿ ದೇಶಗಳಿಂದ ತೈಲ ಆಮದು ಮಾಡಿಕೊಳ್ಳುತ್ತಿದ್ದ ದೇಶಗಳಿಗೆ ತೈಲ ಸರಬರಾಜು ನಿಂತುಹೋಯಿತು. ಕೊನೆಯಲ್ಲಿ ೧೯೮೧ರ ಜನವರಿ ತಿಂಗಳಲ್ಲಿ ದೀರ್ಘವಾದ ಮಾತುಕತೆಗಳು ನಡೆದು ೫೨ ಜನ ಅಮೆರಿಕನ್ನರನ್ನು ಇರಾನ್ ಬಂಧನದಿಂದ ಬಿಡುಗಡೆ ಮಾಡಿತು.

ಅಧ್ಯಕ್ಷ ಕಾರ್ಟರ್‌ನ ಆಡಳಿತ ಪ್ರಪಂಚದಲ್ಲಿ ಶಾಂತಿಸ್ಥಾಪನೆಗಾಗಿ ಕೆಲವು ಮುಖ್ಯ ಯೋಜನೆಗಳನ್ನು ಕೈಗೊಂಡಿತು. ಇದರಲ್ಲಿ ಮೊದಲನೆಯದು SALT ಮಾತುಕತೆ. ೧೯೭೭ರಲ್ಲಿ SALT ಮಾತುಕತೆ ಮತ್ತು ಸಂಧಾನ ಪುನಃ ಚರ್ಚೆಗೆ ಬಂದವು. ಆದರೆ ಸೋವಿಯೆಟ್ ಒಕ್ಕೂಟ ತನ್ನ ದೂರ ಪ್ರಯಾಣಿಸುವ ವಿಮಾನಗಳು ಮತ್ತು ಕ್ಷಿಪಣಿಗಳ ಸಂಖ್ಯೆಯನ್ನು ಕಡಿಮೆ ಮಾಡಲು ಒಪ್ಪಲಿಲ್ಲ. ಆದಗ್ಯೂ ಅವರು ೧೯೭೨ರ ಸಂಧಾನವನ್ನು ಅನುಷ್ಠಾನಕ್ಕೆ ತರಲು ಒಪ್ಪಿದರು. ಇದರಿಂದ ಕೆಲವು ವಿಶಿಷ್ಟ ಅಣ್ವಸ್ತ್ರಗಳ ಸಂಖ್ಯೆಯನ್ನು ಮಿತಗೊಳಿಸಿದರು. ಕಾರ್ಟರ್ ಎರಡನೆಯ SALT ಸಂಧಾನ ಯಶಸ್ವಿಯಾಗುತ್ತದೆ ಎಂದು ನಂಬಿ ಎಲ್ಲ ಪ್ರಯತ್ನಗಳನ್ನು ಮಾಡಿದನು. ೧೯೭೯ರಲ್ಲಿ ಸೋವಿಯೆಟ್ ಒಕ್ಕೂಟದ ಅಧ್ಯಕ್ಷ ಲಿಯೊನಿಡ್ ಬ್ರೆಜ಼್‌ನೆವ್‌ನೊಡನೆ (Leonid Brezhnev) ಹೊಸ ಸಂಧಾನಕ್ಕೆ ಸಹಿ ಹಾಕಿದನು. ಈ ಸಂಧಾನದ ಪ್ರಕಾರ ಸೋವಿಯೆಟ್ ಒಕ್ಕೂಟ ಸಂಗ್ರಹಿಸಿರುವ ಕ್ಷಿಪಣಿಗಳ ಸಂಖ್ಯೆಯನ್ನು ಬಹಳವಾಗಿ ಕಡಿಮೆ ಮಾಡುವುದು, 'nuclear warheads' ಉತ್ಪಾದನೆಯನ್ನು ಮಿತಗೊಳಿಸುವುದು ಮತ್ತು ಮುಂದೆ ಸ್ಥಾಪಿಸಬಹುದಾದ ಕ್ಷಿಪಣಿ ವ್ಯವಸ್ಥೆಗಳನ್ನು ಕಡಿಮೆ ಮಾಡುವುದು. ಇದು ಬಹಳ ಮುಖ್ಯ ಅಂಶಗಳನ್ನೊಳಗೊಂಡು ಅಣ್ವಸ್ತ್ರ ತಯಾರಿಕೆಯ ಮೇಲೆ ವ್ಯಾಪಕವಾದ ನಿಯಂತ್ರಣಗಳನ್ನು ವಿಧಿಸಿ ಅಮೆರಿಕ ಮತ್ತು ಸೋವಿಯೆಟ್ ಒಕ್ಕೂಟಗಳ ನಡುವೆ ನಡೆಯುತ್ತಿದ್ದ ಶಸ್ತ್ರಾಸ್ತ್ರ ಸ್ಪರ್ಧೆ ಮತ್ತು ಶೀತಲ ಸಮರಗಳನ್ನು ಕಡಿಮೆ ಮಾಡಲು ಒಳ್ಳೆಯ ಅವಕಾಶವನ್ನು ಕಲ್ಪಿಸಿತು.

ಈ ಒಪ್ಪಂದವನ್ನು ಅನುಮೋದಿಸಬೇಕೆಂದು ಅಧ್ಯಕ್ಷ ಕಾರ್ಟರ್ ಕಾಂಗ್ರೆಸ್ಸಿಗೆ ಹೃತ್ಪೂರ್ವಕ ವಿನಂತಿ ಮಾಡಿದನು. ಆದರೆ ಅಧ್ಯಕ್ಷ ಚುನಾವಣೆಯಲ್ಲಿ ರಾಜಕೀಯ ಮತ್ತು ಇರಾನಿನಲ್ಲಿ ಬಂಧಿತರಾದ ಅಮೆರಿಕನ್ ಒತ್ತೆಯಾಳುಗಳನ್ನು (hostages) ಬಿಡುಗಡೆ ಮಾಡಲಾರದೆ ಹೋದುದು ಈ ಒಪ್ಪಂದ ಮುರಿದು ಬೀಳಲು ಕಾರಣಗಳಾದವು. ಸೋವಿಯೆಟ್ ಒಕ್ಕೂಟ ಮತ್ತು ಕ್ಯೂಬ ಸೇರಿಕೊಂಡು ಆಫ್ರಿಕದ ಕೆಲವು ಭಾಗಗಳಲ್ಲಿ (ಅಂಗೋಲಾ, ಇಥಿಯೋಪಿಯಾ) ನಡೆಸಿದ ಕ್ರಾಂತಿಕಾರಕ ಚಟುವಟಿಕೆಗಳು ಅಮೆರಿಕ ಮತ್ತು ಸೋವಿಯೆಟ್ ಒಕ್ಕೂಟಗಳ ನಡುವೆ ಬಿಕ್ಕಟ್ಟು ಉಂಟುಮಾಡಿದವು.

೧೯೭೯ರ ಡಿಸೆಂಬರ್ ತಿಂಗಳಲ್ಲಿ ಅಫ್‌ಘಾನಿಸ್ತಾನದಲ್ಲಿ ಸ್ಥಾಪಿತವಾಗಿದ್ದ ಮಾಸ್ಕೋ ಪರವಾದ ಸರ್ಕಾರ, ಕಡು ಸಂಪ್ರದಾಯಸ್ಥ ಮುಸ್ಲಿಂ ದಂಗೆಕೋರರನ್ನು ಹತ್ತಿಕ್ಕುವ ಪ್ರಯತ್ನದಲ್ಲಿ ಸಹಾಯ ಮಾಡಲು ಸೋವಿಯೆಟ್ ಒಕ್ಕೂಟ ೫ ಸಾವಿರ ಸೈನಿಕರನ್ನು ರವಾನಿಸಿತು. ಅಧ್ಯಕ್ಷ ಕಾರ್ಟರ್ ಈ ಸೈನ್ಯ ಕಾರ್ಯಾಚರಣೆಯನ್ನು 'ಆಕ್ರಮಣ' ಎಂದು ಪರಿಗಣಿಸಿ, ತೀವ್ರವಾಗಿ ಖಂಡಿಸಿ, ೧೯೮೦ರಲ್ಲಿ ಮಾಸ್ಕೊದಲ್ಲಿ ನಡೆಯಲಿರುವ ಒಲಿಂಪಿಕ್ ಪಂದ್ಯಗಳಲ್ಲಿ ಅಮೆರಿಕನ್ ಕ್ರೀಡಾಪಟುಗಳು ಭಾಗವಹಿಸುವುದನ್ನು ನಿಷೇಧಿಸಿದನು. ಮೇಲಾಗಿ ರಷ್ಯಾಕ್ಕೆ ಕಳುಹಿಸಬೇಕಾಗಿದ್ದ ಧಾನ್ಯಗಳ ರಫ್ತನ್ನೂ ನಿಲ್ಲಿಸಿದನು. NATO ಒಪ್ಪಂದದ ದೇಶಗಳಿಗೆ ತನ್ನ ನಿರ್ಧಾರವನ್ನು ಬೆಂಬಲಿಸುವಂತೆ ಮನವಿ ಮಾಡಿದನು.

ಪನಾಮಾ ಸರ್ಕಾರ ಬಹಳ ಕಾಲದಿಂದಲೂ ಪನಾಮಾ ಕಾಲುವೆಯನ್ನು ಹಿಂತಿರುಗಿಸ ಬೇಕೆಂಬ ಬೇಡಿಕೆಯನ್ನು ಮಂಡಿಸುತ್ತಲೆ ಬಂದಿತ್ತು. ಪನಾಮಾದೊಡನೆ ಮಾಡಿಕೊಂಡ ಒಪ್ಪಂದಗಳನ್ನೆಲ್ಲ ಸೆನೆಟ್ ಚರ್ಚಿಸುತ್ತಿತ್ತು. ಅಲ್ಲಿರುವ ಕಡು ಸಂಪ್ರದಾಯಸ್ಥರು ಪನಾಮಾ ಸಲ್ಲಿಸಿದ ಮಸೂದೆಗಳನ್ನು ಅಂಗೀಕರಿಸಲು ನಿರಾಕರಿಸಿದರು. ಆದರೆ ೧೯೭೮ರಲ್ಲಿ ಪನಾಮಾ ಕಾಲುವೆ ತಟಸ್ಥವಾಗಿರಬೇಕು ಎನ್ನುವ ಮಸೂದೆ, ಅಲ್ಲಿನ ಪರಿಸ್ಥಿತಿಯನ್ನು ಹತೋಟಿಗೆ ತರಲು ಸೈನ್ಯವನ್ನು ಕಳುಹಿಸುವ ಹಕ್ಕು ಪಡೆದಿದೆ ಎನ್ನುವ ತಿದ್ದುಪಡಿಯೊಡನೆ ಕೇವಲ ಎರಡು ಬಹುಮತಗಳಿಂದ ಅಂಗೀಕೃತವಾಯಿತು. ೧೯೭೯ರ ಅಕ್ಟೋಬರ್‌ನಲ್ಲಿ ಪನಾಮಾ ಕಾಲುವೆ ಮತ್ತು ಸುತ್ತಣ ಪ್ರದೇಶವನ್ನು ಪನಾಮಾ ಸರ್ಕಾರ ವಶಕ್ಕೆ ತೆಗೆದುಕೊಂಡಿತು.

ಕ್ಯಾಂಪ್ ಡೇವಿಡ್ ಒಪ್ಪಂದ

೧೯೭೭ರ ನವೆಂಬರ್ ತಿಂಗಳಲ್ಲಿ ಈಜಿಪ್ಟಿನ ಅಧ್ಯಕ್ಷ ಅನ್ವರ್ ಸದಾತ್ (Anwar Sadat) ಆಶ್ಚರ್ಯವೆನಿಸುವ ರೀತಿಯಲ್ಲಿ ಜರೂಸಲೇಮ್ (Jerusalem) ನಗರಕ್ಕೆ ಭೇಟಿ ನೀಡಿದನು. ೧೯೭೮ರಲ್ಲಿ ಅಧ್ಯಕ್ಷ ಕಾರ್ಟರ್ ಕೈರೋಗೆ ಭೇಟಿ ನೀಡಿ ಅಧ್ಯಕ್ಷ ಸದಾತ್‌ನೊಡನೆ ಮಂತ್ರಾಲೋಚನೆ ನಡೆಸಿದನು. ಈಜಿಪ್ಟ್ ಅಧಿಕೃತವಾಗಿ ಇಸ್ರೇಲ್ ಒಂದು ಪ್ರತ್ಯೇಕ ರಾಷ್ಟ್ರವಾಗಬೇಕೆಂದು ಒಪ್ಪಿಕೊಂಡಾಗ ಇಸ್ರೇಲ್ ಇದಕ್ಕೆ ಪ್ರತಿಯಾಗಿ ತಾನು ಆಕ್ರಮಿಸಿಕೊಂಡ ಪ್ರದೇಶಗಳನ್ನು ಈಜಿಪ್ಟಿಗೆ ವಾಪಸ್ಸು ಮಾಡುವುದು ಮತ್ತು

ಪ್ಯಾಲೆಸ್ಟೈನ್ ಪ್ರಜೆಗಳ ನ್ಯಾಯಬದ್ಧವಾದ ಹಕ್ಕುಗಳನ್ನು ಮನ್ನಣೆ ಮಾಡಬೇಕೆಂದು ತೀರ್ಮಾನವಾಯಿತು. ಮುಂದೆ ನಡೆಯಬಹುದಾದ ಮಾತುಕತೆಗಳಲ್ಲಿ ಪ್ಯಾಲೆಸ್ಟೈನ್ ಪ್ರತಿನಿಧಿಗಳು ಭಾಗವಹಿಸುವುದು ಅನಿವಾರ್ಯ ಎಂದು ಅನ್ವರ್ ಸದಾತ್ ಷರತ್ತು ಹಾಕಿದನು.

೧೯೭೮ರಲ್ಲಿ ಅಧ್ಯಕ್ಷ ಕಾರ್ಟರ್ ಇಸ್ರೇಲ್ ಮತ್ತು ಈಜಿಪ್ಟ್‌ಗಳ ನಡುವೆ ಸಂಧಾನ ನಡೆಸಲು ಎರಡು ರಾಷ್ಟ್ರಗಳ ನಾಯಕರನ್ನು – ಈಜಿಪ್ಟಿನ ಅಧ್ಯಕ್ಷ ಅನ್ವರ್ ಸದಾತ್ ಮತ್ತು ಇಸ್ರೇಲ್‌ನ ಪ್ರಧಾನಿ ಮೆನಾಕಮ್ ಬೇಗಿನ್ – ಬರಮಾಡಿಕೊಂಡು ಕ್ಯಾಂಪ್ ಡೇವಿಡ್ ಎಂಬ ಸ್ಥಳದಲ್ಲಿ ಸೇರಿ ಮಂತ್ರಾಲೋಚನೆ ನಡೆಸಿದರು.ಈ ರೀತಿ ಯಾವ ಘಳಿಗೆಯಲ್ಲಾದರೂ ಆಸ್ಫೋಟನೆಗೊಳ್ಳಬಹುದಾದ ಪರಿಸ್ಥಿತಿಯಿರುವ ಮಧ್ಯಪ್ರಾಚ್ಯ ದೇಶಗಳ ನಡುವೆ ಸಂಧಾನ ಏರ್ಪಡಿಸಲು ಸರ್ವಪ್ರಯತ್ನ ಮಾಡಿದ ಕೀರ್ತಿ ಅಧ್ಯಕ್ಷ ಕಾರ್ಟರನಿಗೆ ಸಲ್ಲುತ್ತದೆ. ಇಸ್ರೇಲ್ ಮತ್ತು ಈಜಿಪ್ಟ್‌ಗಳ ನಡುವೆ ಸಂಧಾನ ಏರ್ಪಡುವುದರಿಂದ ಆಗುವ ಅನಾನುಕೂಲಗಳನ್ನು ಈ ಎರಡು ಮಧ್ಯಪ್ರಾಚ್ಯ ದೇಶಗಳ ನಾಯಕರು ಮನಗಾಣುವಂತೆ ಮಾಡುವುದರಲ್ಲಿ ಕಾರ್ಟರ್ ಯಶಸ್ವಿಯಾದನು.

ಕ್ಯಾಂಪ್ ಡೇವಿಡ್‌ನಲ್ಲಿ ಎರಡು ವಾರಗಳ ಸತತವಾದ ವಿಚಾರ ವಿನಿಮಯದ ನಂತರ ೧೯೭೮ರ ಸೆಪ್ಟೆಂಬರ್ ೧೭ರಂದು ಈ ಮೂವರು ನಾಯಕರು ಒಪ್ಪಂದಕ್ಕೆ ಬಂದಿರುವುದಾಗಿ ಹೇಳಿಕೆ ನೀಡಿದರು. ಇದನ್ನು ಪರಿಷ್ಕರಿಸಿ ರುಜುವಾತು ಪಡೆಯಲು ಆರು ತಿಂಗಲ ಕಾಲ ಹಿಡಿಯಿತು. ಈಜಿಪ್ಟ್-ಇಸ್ರೇಲ್ ಒಪ್ಪಂದವನ್ನು ಅಧಿಕೃತಗೊಳಿಸುವ ಸಮಾರಂಭ ೧೯೭೮ರ ಮಾರ್ಚ್ ೨೬ರಂದು ಶ್ವೇತಭವನದಲ್ಲಿ ನಡೆಯಿತು. ಮಧ್ಯಪ್ರಾಚ್ಯದ ಒಂದು ಅರಬ್ ರಾಷ್ಟ್ರ ಇಸ್ರೇಲ್‌ನೊಡನೆ ಸಂಧಾನ ಮಾಡಿಕೊಂಡದ್ದು ಅಂದಿನ ರಾಜಕೀಯ ಸಂದರ್ಭದಲಿ ಒಂದು ಪವಾಡವೇ ಸರಿ. ಬೇರೆ ಯಾವ ಅರಬ್ ದೇಶವೂ ಈ ಒಪ್ಪಂದವನ್ನು ಮನ್ನಣೆ ಮಾಡಲು ಸಿದ್ಧವಿರದಿದ್ದರೂ ಇದನ್ನು ಸಾಧಿಸಿದ ಕಾರ್ಟರ್‌ನ ಜನಾದರಣೆ ಹೆಚ್ಚಿತು.ಆದರೂ ಇರಾನಿನಲ್ಲಿ ನಡೆದ ಕ್ರಾಂತಿಯಿಂದಾಗಿ ಪಡೆದುದಕ್ಕಿಂತಲೂ ಕಳೆದುಕೊಂಡ ಜನಾದರಣೆಯೇ ಕಾರ್ಟರ್‌ನಿಗೆ ಹೆಚ್ಚಾಗಿತ್ತು. ಒಟ್ಟಾರೆ ಮಧ್ಯಪ್ರಾಚ್ಯದಲ್ಲಿ ಯುದ್ಧದ ಕಾರ್ಮೋಡಗಳು ದಟ್ಟೈಸಿದವೇ ಹೊರತು ಚದುರುವ ಚಿಹ್ನೆಗಳು ಮುಂಬರುವ ವರ್ಷಗಳಲ್ಲಿ ಕಾಣಲಿಲ್ಲ.

ಅಮೆರಿಕ ಚೈನಾ ದೇಶಗಳ ಸಂಬಂಧಗಳ ಬಗ್ಗೆ ಅಧ್ಯಕ್ಷ ಕಾರ್ಟರ್ ಬಹಳ ಆಸಕ್ತಿ ವಹಿಸಿದ್ದನು. ರಿಚರ್ಡ್ ನಿಕ್ಸನ್ ಕಮ್ಯೂನಿಸ್ಟ್ ಚೈನಾದೊಡನೆ ಪೂರ್ಣ ರಾಯಭಾರ ಸಂಬಂಧವನ್ನು ಸ್ಥಾಪಿಸಬೇಕೆಂದು ಆಗ್ರಹಪಡಿಸಿದರೂ ಅವನ ಅಧಿಕಾರಾವಧಿಯಲ್ಲಿ ಅದು ಸಾಧ್ಯವಾಗಿರಲಿಲ್ಲ. ಕಾರ್ಟರ್ ಈ ಸಂಬಂಧವನ್ನು ಭವಿಷ್ಯದ ದೃಷ್ಟಿಯಿಂದ ಯೋಚಿಸಿ ಅದರಿಂದಾಗುವ ಅನುಕೂಲ-ಪ್ರತಿಕೂಲಗಳನ್ನು ವಿಶ್ಲೇಷಣೆ ಮಾಡಿ ೧೯೭೯ರ

ಜನವರಿಯ ೧ರಂದು ಕಮ್ಯೂನಿಸ್ಟ್ ಚೈನಾಕ್ಕೆ ಪೂರ್ಣ ರಾಯಭಾರ ಅಂತಸ್ತನ್ನು ನೀಡಲಾಗಿದೆ ಎಂದು ಪ್ರಚುರಪಡಿಸಿದನು. ಇದರಿಂದಾಗಿ ಅಮೆರಿಕ ತೈವಾನ್‌ನೊಡನೆ ಮಾಡಿಕೊಂಡಿದ್ದ ಒಪ್ಪಂದಗಳೆಲ್ಲ ಕೊನೆಗೊಂಡವು. ಇದಾದ ಸ್ವಲ್ಪ ಸಮಯದಲ್ಲೇ ಕಮ್ಯೂನಿಸ್ಟ್ ಚೈನಾ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಯಿತು.

೧೯೮೦ರ ಚುನಾವಣೆ

ಸರ್ವಾಧಿಕಾರ ಸರ್ಕಾರಗಳಿಗೆ ಚುನಾವಣೆಯ ತೊಂದರೆ ಇರುವುದಿಲ್ಲ. ಅಂಥ ಸರ್ಕಾರಗಳಿಗೆ ಕುತ್ತು ಬರುವುದು ಕ್ರಾಂತಿಯಿಂದ. ಪಾರ್ಲಿಮೆಂಟ್ ಪದ್ಧತಿ ಅನುಸರಿಸುವ ಸರ್ಕಾರಗಳು ಚುನಾವಣೆಯನ್ನು ಪ್ರಕ್ಷುಬ್ಧ ಪರಿಸ್ಥಿತಿಯ ಕಾರಣಕ್ಕಾಗಿ ಮುಂದೆ ಹಾಕಬಹುದು. ಈ ಸೌಲಭ್ಯ ಸಂಯುಕ್ತ ಸಂಸ್ಥಾನಗಳ ಸರ್ಕಾರಕ್ಕಿಲ್ಲ. ೧೯೮೦ರ ಚುನಾವಣೆ 'ನ ಭೂತೋ ನ ಭವಿಷ್ಯತಿ' ಎನ್ನಬಹುದಾದ ಸಂದಿಗ್ಧ ಸ್ಥಿತಿಯಲ್ಲಿ ನಡೆಯಿತು. ಇದು ಅಧ್ಯಕ್ಷ ಕಾರ್ಟರ್‌ನ ದುರಾದೃಷ್ಟ. ಹಣದುಬ್ಬರ ಶೇಕಡಾ ೧೨ ಭಾಗ ಮುಟ್ಟಿತ್ತು. ನಿರುದ್ಯೋಗಿಗಳ ಸಂಖ್ಯೆ ೧೨ ಮಿಲಿಯನ್ ದಾಟಿತ್ತು. ಆಯವ್ಯಯ (budget) ಯಾವಾಗಲೂ ಖೋತಾ (deficit) ಸ್ಥಿತಿಯಲ್ಲಿರುತ್ತಿತ್ತು. ತೈಲದ ಬೆಲೆ ಗಗನಕ್ಕೇರಿದ್ದು ಇನ್ನೂ ಏರುವ ಸೂಚನೆಗಳಿದ್ದವು. ವಿದೇಶ ವ್ಯವಹಾರಗಳು ಸಮರ್ಪಕವಾಗಿರಲಿಲ್ಲ. ಕೆಲವು ವಿಷಯಗಳಲ್ಲಿ ಈ ವ್ಯವಹಾರಗಳು ನಿಷ್ಪ್ರಯೋಜಕವೇ ಆಗಿದ್ದವು. ಉದಾಹರಣೆಗೆ ಇರಾನಿನಲ್ಲಿ ಬಂಧಿತರಾಗಿದ್ದ ಅಮೆರಿಕನ್ ರಾಯಭಾರಿ ಕಛೇರಿಯ ಸಿಬ್ಬಂದಿಯವರನ್ನು ಬಿಡಿಸಲಾಗದೆ ಹೋಗಿದ್ದು. ಅಮೆರಿಕಕ್ಕೆ ಒಂದು ಸ್ಪಷ್ಟವಾದ, ಸ್ಥಿರವಾದ ರಾಜಕೀಯ ಧೋರಣೆ ಇಲ್ಲ ಎನ್ನುವ ಭಾವನೆ ತೋರಿಬರುತ್ತಿತ್ತು. ಅಧ್ಯಕ್ಷ ಕಾರ್ಟರ್‌ನಿಗೆ ನಾಲ್ಕು ವರ್ಷಗಳ ಹಿಂದೆ ಇದ್ದ ಜನಾನುರಾಗ ವಾಗಲಿ, ಗೌರವವಾಗಲಿ ೧೯೮೦ರಲ್ಲಿ ಉಳಿದಿರಲಿಲ್ಲ.

೧೯೮೦ರ ಚುನಾವಣೆಯಲ್ಲಿ ಅಮೆರಿಕದ ಜನತೆಯ ನಿರಾಕರಣ ಮನೋಭಾವ ವ್ಯಕ್ತಗೊಂಡಿತ್ತು; ಉದಾರತತ್ವ, ಫೆಡರಲ್ ಸರ್ಕಾರದ ಕಾರ್ಯವಿಸ್ತರಣೆ, ಹೆಚ್ಚುತ್ತಿರುವ ಹೊರ ಬಾಕಿ ಮತ್ತು ಹಣದುಬ್ಬರ – ಜನರಿಗೆ ಈ ಸಮಸ್ಯೆಗಳಿಂದ ಪರಿಹಾರ ಬೇಕಿತ್ತು. ಕಾರ್ಟರ್ ಕೈಗೊಂಡ ಕಾರ್ಯಗಳು ವಿಫಲವಾದುದರಿಂದ, ಈ ಚುನಾವಣೆಯಲ್ಲಿ ಅವನು ಸೋಲಬೇಕಾಯಿತು. ಎರಡು ಪಕ್ಷಗಳಲ್ಲಿ ಅಧ್ಯಕ್ಷಸ್ಥಾನಕ್ಕೆ ನಾಮಕರಣಗೊಳ್ಳಲು ಸ್ಪರ್ಧೆ ತೀಕ್ಷ್ಣವಾಗಿತ್ತು. ಅಧ್ಯಕ್ಷ ಜಿಮ್ಮಿ ಕಾರ್ಟರ್ ಪಕ್ಷದ ಸಮ್ಮೇಳನದ ಪದ್ಧತಿಯ ಪ್ರಕಾರ ನಾಮಕರಣಕ್ಕೆ ಅರ್ಹನಾದವನು. ಆದರೆ ಮೆಸಾಚ್ಯುಸೆಟ್ಸ್ ಸೆನೆಟರ್ ಎಡ್ವರ್ಡ್ ಕೆನಡಿ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಯಾಗಿ ನಾಮಕರಣಕ್ಕೆ ಸ್ಪರ್ಧಿಸಿದನು. ರಿಪಬ್ಲಿಕನ್ ಪಕ್ಷದಲ್ಲಿ ಅನೇಕ ಸಂಪ್ರದಾಯಸ್ಥ ರಿಪಬ್ಲಿಕನ್ನರು ನಾಮಕರಣಕ್ಕಾಗಿ ಸ್ಪರ್ಧಿಸಲು ಸಿದ್ಧರಾಗಿದ್ದರು. ಅವರಲ್ಲಿ ಪ್ರಮುಖರಾದವರು: ಕ್ಯಾಲಿಫೋರ್ನಿಯಾದ ಮಾಜಿ ಗವರ್ನರ್ ರೋನಾಲ್ಡ್ ರೇಗನ್ (Ronald Regan), ಸ್ವಲ್ಪ ಕಾಲದ ಹಿಂದೆ ರಿಪಬ್ಲಿಕನ್ ಪಕ್ಷ

ಸೇರಿದ್ದ ಟೆಕ್ಸಾಸ್‌ನ ಜಾನ್ ಕಾನ್ನಲಿ (John Connolly), ಸಿ.ಐ.ಎ. ಡೈರೆಕ್ಟರ್ ಆಗಿದ್ದ ಜಾರ್ಜ್ ಬುಷ್ (George Bush) ಮತ್ತು ಕಾನ್ಸಾಸ್ ರಾಜ್ಯದ ಸೆನೆಟರ್ ರಾಬರ್ಟ್ ಡೋಲ್ (Robert Dole). ಆದರೆ ಈ ಸ್ಪರ್ಧೆಯಲ್ಲಿ ಗೆದ್ದು ಪಕ್ಷದಿಂದ ನಾಮಕರಣ ಗೊಂಡವನು ರೋನಾಲ್ಡ್ ರೇಗನ್. ಮೂರನೆಯ ಪಕ್ಷದ ಅಭ್ಯರ್ಥಿ ಇಲಿನಾಯ್ ರಾಜ್ಯದ ಜಾನ್ ಆ್ಯಂಡರ್ಸ್ಸನ್, ಇತರ ಅಭ್ಯರ್ಥಿಗಳಿಗೆ ಹೋಗಬೇಕಾದ ಮತಗಳನ್ನು ಪಡೆದು ಅವರಲ್ಲಿ ಗಾಬರಿ ಹುಟ್ಟಿಸಿದ್ದನು. ಕುಸಿಯುತ್ತಿದ್ದ ಆರ್ಥಿಕ ವ್ಯವಸ್ಥೆ ಮತ್ತು ಇರಾನ್ ಹಗರಣ – ಈ ಘಟನೆಗಳು ಕಾರ್ಟರ್‌ನ ಬೆಂಬಲವನ್ನು ಎಷ್ಟು ಕ್ಷೀಣಿಸಿತ್ತೆಂದರೆ ವಾಟರ್‌ಗೇಟ್ ಹಗರಣದ ನಂತರ ನಿಕ್ಸನ್‌ಗಿದ್ದ ಜನಬೆಂಬಲಕ್ಕಿಂತಲೂ ಕಡಿಮೆಯಾಗಿತ್ತು. ಕಾರ್ಟರ್ ಮತ್ತು ರೇಗನ್ ನಡುವೆ ನಡೆದ ಚರ್ಚೆಗಳಲ್ಲಿ ರೇಗನ್ ಅಧ್ಯಕ್ಷಗಿರಿಯ ಗತ್ತು ಇದ್ದವನಂತೆ ವರ್ತಿಸಿ ಜನರ ಮನಸ್ಸನ್ನು ಆಕರ್ಷಿಸಿದನು. ಕಾರ್ಟರ್ ಸೋತವನಂತೆ ಕಂಡು ರೇಗನ್‌ನ ವಾಕ್ಚಾತುರ್ಯವನ್ನು ಮೀರಿಸಲಾರದೆ ಹೋದನು. ಕಾರ್ಟರ್ ಯಾವ ಅಂಶವನ್ನಾಗಲಿ ವಿಷದಪಡಿಸಲು ಯತ್ನಿಸಿದರೆ ರೇಗನ್ 'There he goes again' ಎಂದು ಕಾರ್ಟರ್ ಹೇಳಿದ್ದನ್ನೆ ಹೇಳುತ್ತಿದ್ದಾನೆ ಎನ್ನುವ ಭಾವನೆ ಜನರಲ್ಲಿ ಮೂಡುವಂತೆ ಮಾಡಿದನು. ಹೀಗಾಗಿ ರೇಗನ್ 'ಮಹಾ ಮಾತುಗಾರ' (the great communicator) ಎನ್ನುವ ಹೆಸರು ಪಡೆದನು. ಅವನ ಯಶಸ್ಸಿಗೆ ಅವನ ಹಾಲಿವುಡ್ ಸ್ವರೂಪ (image) ಕಾರಣ ಎಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಇದೇ ಸಮಯದಲ್ಲಿ ಕಾರ್ಟರ್‌ನಿಗೆ ದಾಕ್ಷಿಣಾತ್ಯರ ಸಹಾಯವೂ ಸಿಗದೆ ಹೋಯಿತು[೫]. ಈ ಚುನಾವಣೆ ಸ್ಪಷ್ಟಪಡಿಸಿದ ಅಂಶವೆಂದರೆ ಸಾಂಪ್ರದಾಯಿಕ ಪಕ್ಷನಿಷ್ಠೆ (party loyalty) ಬದಲಾಗುತ್ತಿರುವುದು. ದಕ್ಷಿಣ ರಾಜ್ಯಗಳಲ್ಲಿ ಸಾಂಪ್ರದಾಯಿಕ ಡೆಮೊಕ್ರಾಟರು 'ರೇಗನ್ ಡೆಮೊಕ್ರಾಟರು'ಗಳಾಗಿ ಮಾರ್ಪಾಡಾದರು. ರೇಗನ್ ೪೩ ಸಂಸ್ಥಾನಗಳಲ್ಲಿ ಗೆದ್ದು ಅಧಿಕಾರದಲ್ಲಿರುವ ಅಧ್ಯಕ್ಷನನ್ನು ಸೋಲಿಸಿದ (೧೯೩೨ರಿಂದ ಈಚೆಗೆ) ಮೊದಲಿಗನಾದನು. ೧೯೩೨ರಲ್ಲಿ ಫ್ರಾಂಕ್ಲಿನ್ ರೂಸ್‌ವೆಲ್ಟ್‌ನು ಹರ್ಬರ್ಟ್ ಹೂವರ್‌ನನ್ನು ಹೀಗೆಯೆ ಸೋಲಿಸಿದ್ದನು. ಮೇಲಾಗಿ ರಿಪಬ್ಲಿಕನ್ನರು ಬಹುಸಂಖ್ಯಾತರಾಗಿದ್ದ ಸೆನೆಟ್ ಅವರ ನಿಯಂತ್ರಣಕ್ಕೊಳಗಾಯಿತು. ಡೆಮೊಕ್ರಾಟಿಕ್ ಪಕ್ಷ ಸದಸ್ಯರನ್ನು ಕಳೆದುಕೊಂಡು ಬಲಹೀನವಾಗಿದ್ದರೂ ಕಾಂಗ್ರೆಸ್‌ನಲ್ಲಿ ಬಹುಸಂಖ್ಯಾತರಾಗಿದ್ದರಿಂದ ಅದು ಅವರ ನಿಯಂತ್ರಣದಲ್ಲಿ ಉಳಿಯಿತು.

---

೫. ವ್ಯಕ್ತಿಶಃ ಅಧ್ಯಕ್ಷ ಕಾರ್ಟರ್ ಸಂಭಾವಿತ, ಪ್ರಾಮಾಣಿಕ ಮತ್ತು ದೈವಭಕ್ತ. ಇಂಥ ಸಂಭಾವಿತರು ರಾಜಕೀಯ ರಂಗದ ಗಿಲೀಟು, ಚತುರ ಮಾತುಗಾರಿಕೆ, ಸೂಕ್ಷ್ಮವಾದ ಚಾರಿತ್ರ್ಯ ವಧೆ – ಇತ್ಯಾದಿಗಳ ಸಹಾಯವಿಲ್ಲದೆ ಜನರಿಗೆ ಕಳಪೆಯಾಗಿ ತೋರುತ್ತಾರೆ. ಕಾರ್ಟರ್ ಅಧಿಕಾರದಲ್ಲಿದ್ದಾಗಕ್ಕಿಂತ ಅಧಿಕಾರ ಬಿಟ್ಟ ಮೇಲೆ ಯಾವ ನಿವೃತ್ತ ಅಧ್ಯಕ್ಷನೂ ಮಾಡದಷ್ಟು ಮಾನವೀಯ ಸಮಾಜಸೇವೆ, ಶಾಂತಿಸೇನೆ ಮುಂತಾದ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಜನಪ್ರಿಯನಾಗಿದ್ದಾನೆ. ಅವನ 'Habitat for Humanity' ಯೋಜನೆ ಅವನಿಗೆ ಅಂತರರಾಷ್ಟ್ರೀಯ ಖ್ಯಾತಿ ತಂದುಕೊಟ್ಟಿದೆ.

ರೇಗನ್ ಯಾರು? ಏನು?

ರೋನಾಲ್ಡ್ ವಿಲ್ಸನ್ ರೇಗನ್ (Ronald Wilson Regan) ಅಮೆರಿಕ ಸಂಯುಕ್ತ ಸಂಸ್ಥಾನಗಳ ೪೦ನೆಯ ಅಧ್ಯಕ್ಷ. ಇವನು ಇಲ್ಲಿನವರೆಗಿನ ಎಲ್ಲಾ ಅಧ್ಯಕ್ಷರಿಗಿಂತಲೂ ವಯಸ್ಸಿನಲ್ಲಿ ಹಿರಿಯನು. ೧೯೧೧ರ ಫೆಬ್ರವರಿ ೬ರಂದು ಇಲಿನಾಯ್ ರಾಜ್ಯದ ಟಾಂಪಿಕೊ ದಲ್ಲಿ ಜನಿಸಿದ ಇವನು ೧೯೩೨ರಲ್ಲಿ ಯುರೇಕಾ ಕಾಲೇಜಿನಿಂದ ಪದವೀಧರನಾದನು. ನಂತರ ಐದು ವರ್ಷಗಳು ಕ್ರೀಡಾ ಪ್ರಕಟಣೆಗಾರನಾಗಿ ಕೆಲಸ ಮಾಡಿದನು. ೧೯೩೭ರಲ್ಲಿ ರೇಗನ್ ಚಲನಚಿತ್ರ ನಟನಾಗಿ ವೃತ್ತಿಯಸ್ನಾರಂಭಿಸಿದನು. ೧೯೬೦ರ ದಶಕದವರೆಗೂ ರೇಗನ್ 'ಬಿ' ದರ್ಜೆಯ ಚಿತ್ರಗಳಲ್ಲಿ, ನಂತರ ದೂರದರ್ಶನ ಕಾರ್ಯಕ್ರಮಗಳಲ್ಲಿ ಪಾತ್ರ ವಹಿಸಿದನು. ೧೯೪೭ರಿಂದ ೧೯೫೨ರವರೆಗೆ ಮತ್ತು ೧೯೫೯ರಲ್ಲಿ ಚಿತ್ರನಟರ ವೃತ್ತಿಸಂಘದ ಅಧ್ಯಕ್ಷನಾಗಿದ್ದನು. ಚಿತ್ರತಾರೆ ಜೇನ್ ವೈಮನ್‌ಳಿಂದ (Jane Wyman) ವಿವಾಹವಿಚ್ಛೇದನ ಪಡೆದ ಮೇಲೆ ಅವನು ನ್ಯಾನ್ಸಿ ಡೇವಿಡ್ ಮಾರೀನ್‌ಳನ್ನು (Nancy David Maureen) ವಿವಾಹವಾದನು. ರೇಗನ್ ಮೊದಲನೆಯ ವಿವಾಹದಿಂದ ಹೆಣ್ಣುಮಗಳೊಬ್ಬಳಿದ್ದಳು. ಅವಳು ತನ್ನ ತಂದೆಯ ಅಧ್ಯಕ್ಷತೆಯ ಅವಧಿಯಲ್ಲಿ ದಿಟ್ಟತನದ ಮಾತುಗಾರಿಕೆಗೆ ಹೆಸರುವಾಸಿಯಾಗಿದ್ದಳು. ರೇಗನ್‌ನಿಗೆ ಮೈಕೆಲ್ ಎಂಬ ದತ್ತುಪುತ್ರ ಮತ್ತು ಎರಡನೆಯ ಮದುವೆಯಿಂದ ಪೆಟ್ರೀಷಿಯಾ ಮತ್ತು ರಾನ್ ಎಂಬ ಇಬ್ಬರು ಮಕ್ಕಳಿದ್ದಾರೆ. ನ್ಯಾನ್ಸಿ ರೇಗನ್ ಅಧ್ಯಕ್ಷ ರೆಗನ್‌ನನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದಾಳೆಂದು ವದಂತಿ! ಶ್ವೇತಭವನಕ್ಕೆ 'ಹಾಲಿವುಡ್' ಮೆರಗು ಕೊಟ್ಟು ಅಲ್ಲಿಯ ಅದ್ದೂರಿಯ ಜೀವನಶೈಲಿಯನ್ನು ಅನುಷ್ಠಾನಕ್ಕೆ ತಂದಳೆಂದು ಕೆಲವು ಅಂಕಣ ಬರಹಗಾರರು ಟೀಕಿಸಿದ್ದಾರೆ.

ಮೊದಲು ಡೆಮೊಕ್ರಾಟಿಕ್ ಪಕ್ಷದಲ್ಲಿದ್ದ ರೇಗನ್ ೧೯೬೪ರಲ್ಲಿ ರಿಪಬ್ಲಿಕನ್ ಪಕ್ಷದಲ್ಲಿ ಸಕ್ರಿಯವಾಗಿ ಭಾಗವಹಿಸಿ ಬ್ಯಾರಿ ಗೋಲ್ಡ್‌ವಾಟರ್‌ನ ಚುನಾವಣಾ ಪ್ರಚಾರದ ಮುಂಚೂಣಿಯಲ್ಲಿದ್ದನು. ೧೯೬೬ರಲ್ಲಿ ರೇಗನ್ ಕ್ಯಾಲಿಫೋರ್ನಿಯಾದ ಗವರ್ನರ್ ಆಗಿ ಆಯ್ಕೆಯಾದನು. ೧೯೭೦ರಲ್ಲಿ ಪುನಃ ಅದೇ ಸ್ಥಾನಕ್ಕೆ ಚುನಾಯಿತನಾಗಿ, ನಂತರ ಗವರ್ನರ್ ಸ್ಥಾನದಿಂದ ನಿವೃತ್ತನಾದ ಮೇಲೆ ರಿಪಬ್ಲಿಕನ್ ಪಕ್ಷದ ಸಂಪ್ರದಾಯಸ್ಥ ಪಂಗಡದ ವಕ್ತಾರನಾದನು. ೧೯೭೬ರಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದನು. ಆದರೆ ಜೆರಾಲ್ಡ್ ಫೋರ್ಡ್ ಗೆದ್ದಾಗ ನಮ್ರತೆಯಿಂದ ಸೋಲನ್ನೊಪ್ಪಿಕೊಂಡಿದ್ದನು.

ರೇಗನ್ ಅಧ್ಯಕ್ಷತೆ ಮತ್ತು ಅವನ ರಾಜಕೀಯ ತತ್ವಗಳು

ರೇಗನ್ ಅಧ್ಯಕ್ಷತೆ ವಹಿಸಿಕೊಂಡೊಡನೆಯೇ 'ರಾಷ್ಟ್ರದ ನವನಿರ್ಮಾಣ'ಕ್ಕೆ ಕರೆಕೊಟ್ಟನು. ಸರ್ಕಾರ ದೊಡ್ಡದಾದಷ್ಟೂ ಸಮಸ್ಯೆಗಳು ಹೆಚ್ಚುತ್ತವೆ ಎಂದು ನಂಬಿದ್ದ ರೇಗನ್ 'ನಮ್ಮ ಸಮಸ್ಯೆಗಳಿಗೆ ಸರ್ಕಾರ ಪರಿಹಾರವಲ್ಲ; ಸರ್ಕಾರವೇ ನಮ್ಮ ಸಮಸ್ಯೆ'

ಎನ್ನುವ ಜನಪ್ರಿಯ ಹೇಳಿಕೆಯನ್ನಿತ್ತಿದ್ದನು. ಸಂಯುಕ್ತ ಸಂಸ್ಥಾನಗಳ ಆಡಳಿತವನ್ನು ಸಾಂಪ್ರದಾಯಿಕ ರಾಜಕೀಯ ತತ್ವಗಳ ಆಧಾರದ ಮೇಲೆ ರಚಿಸಿದನು. ಹಣದುಬ್ಬರ, ಆರ್ಥಿಕ ಮುಗ್ಗಟ್ಟು, ನಿರುದ್ಯೋಗ ಮತ್ತು ಆಯವ್ಯಯದಲ್ಲಿ ಖೋತಾ – ಈ ಎಲ್ಲ ಸಮಸ್ಯೆಗಳ ಪರಿಹಾರಕ್ಕೂ ರೇಗನ್ ತನ್ನ ತತ್ವವನ್ನು ಉಪಯೋಗಿಸಿಕೊಂಡನು. ಇದರಿಂದಾಗಿ ಫೆಡರಲ್ ಯೋಜನೆಗಳು ಕಡಿಮೆಯಾದವು, ವೈಯಕ್ತಿಕ ಆದಾಯ ತೆರಿಗೆಯೂ ಕಡಿಮೆ ಯಾಯಿತು. ಆದರೆ ರಕ್ಷಣಾದಳಗಳ ವೆಚ್ಚಕ್ಕಾಗಿ ಹೆಚ್ಚು ಹೆಚ್ಚು ಹಣವನ್ನು ಅವನ ಆಡಳಿತದ ಅವಧಿಯವರೆಗೂ ಕಾಂಗ್ರೆಸ್ಸನ್ನು ಒತ್ತಾಯಿಸಿ ಪಡೆಯುತ್ತಿದ್ದನು. ಆಯವ್ಯಯದಲ್ಲಿ ಸಮತೋಲನ ತರಲು ಅವನಿಗೆ ಸಾಧ್ಯವಾಗಲಿಲ್ಲ. ಆದಗ್ಯೂ ಅದನ್ನು ಸಾಧಿಸಲು ರಾಜ್ಯಾಂಗ ತಿದ್ದುಪಡಿ ಮಾಡಲು ಆಗ್ರಹಪಡಿಸಿದನು. ಅವನು ಕೈಗೊಂಡ ಮೊದಲನೆಯ ಕಾರ್ಯಕ್ರಮ ವೆಂದರೆ – 'hiring freeze' – ಹೊಸ ಕೆಲಸಗಳಿಗೆ ಅವಕಾಶ ರದ್ದು ಮಾಡಿದ್ದು. ಫೆಡರಲ್ ಸರ್ಕಾರದ ಐದು ಮಿಲಿಯನ್ ಕೆಲಸಗಾರರ ದಂಡನ್ನು ಕಡಿಮೆ ಮಾಡಿ ಕಾರ್ಯಸಾಮರ್ಥ್ಯವನ್ನು ಹೆಚ್ಚಿಸುವುದು ಅವನ ಉದ್ದೇಶವಾಗಿತ್ತು. ಇದೇ ಸಮಯದಲ್ಲಿ ವಿದ್ಯುಚ್ಛಕ್ತಿ ಇಲಾಖೆ ಮತ್ತು ಶಿಕ್ಷಣ ಇಲಾಖೆಗಳನ್ನು ತೆಗೆದುಹಾಕಲು ಅವನು ಪ್ರಯತ್ನಪಟ್ಟನು. ಆದರೆ ಅವು ಸಫಲವಾಗಲಿಲ್ಲ. ಅವನ ಸಾಂಪ್ರದಾಯಿಕ ಧೋರಣೆ ರಾಷ್ಟ್ರದ ಶ್ರೇಷ್ಠ ನ್ಯಾಯಾಲಯಕ್ಕೂ ತಟ್ಟಿತು. ತನ್ನ ಆಡಳಿತದ ಮೊದಲನೆಯ ಅವಧಿಯಲ್ಲಿ ಸಾಂಡ್ರಾ ಡೇ ಒಕಾನರ್‌ಳನ್ನು (Sandra Day O'Connor) ಶ್ರೇಷ್ಠ ನ್ಯಾಯಾಲಯಕ್ಕೆ ನೇಮಕ ಮಾಡಿದ್ದು ಚರಿತ್ರಾರ್ಹವಾದುದು. ಅಂತಿಮವಾಗಿ ರೇಗನ್ ನೇಮಿಸಿದ ನ್ಯಾಯಾಧೀಶರು ರಾಷ್ಟ್ರದ ಶ್ರೇಷ್ಠ ನ್ಯಾಯಾಲಯವನ್ನು ಅಮೆರಿಕದ ಇತಿಹಾಸದಲ್ಲಿ ಅತ್ಯಂತ ಸಾಂಪ್ರದಾಯಿಕವಾಗಿ ಮಾಡಿದರು. ವಿಮಾನ ನಿಲ್ದಾಣಗಳಲ್ಲಿ ವಿಮಾನಗಳ ಹೋಗು ಬರುವುದನ್ನು ನಿಯಂತ್ರಿಸುವ ಸಿಬ್ಬಂದಿ ಮುಷ್ಕರ ಹೂಡಿದಾಗ ಅವರನ್ನೆಲ್ಲ ನಿರ್ದಯದಿಂದ ಕೆಲಸದಿಂದ ತೆಗೆದುಹಾಕಿದನು. ಇದು ಕಾರ್ಮಿಕ ಸಂಘಗಳಿಗೆ ರೇಗನ್ ಕೊಟ್ಟ ಎಚ್ಚರಿಕೆಯಾಗಿತ್ತು. ಬಾಹ್ಯಾಕಾಶ ಪರಿಶೋಧನ ಯೋಜನೆಗಳನ್ನು ಮುಂದು ವರಿಸಲು ನಿಶ್ಚಯ ಮಾಡಿದ್ದನು. ಅವನ ಆಡಳಿತದಲ್ಲಿ ಬಾಹ್ಯಾಕಾಶಕ್ಕೆ ಹೋಗಿ ಬರುವ ಬೃಹತ್ ನಾವೆ 'ಷಟಲ್' ತನ್ನ ಯಾತ್ರೆಯನ್ನು ಪ್ರಾರಂಭಿಸಿತು. ಅಧ್ಯಕ್ಷ ರೇಗನ್‌ನ ವ್ಯಕ್ತಿತ್ವದ ಪ್ರಮುಖ ಗುಣವಾದ ಅವನ ವಾಕ್‌ಚಾತುರ್ಯ, ಮನಮುಟ್ಟುವಂತೆ ಮಾತನಾಡುವ ಕಲೆ. ಆದರೆ ರೇಗನ್ ತನ್ನ ಆಡಳಿತವರ್ಗದವರೊಡನೆ, ತನ್ನ ಪಕ್ಷದ ಸದಸ್ಯರೊಡನೆ ಪರಿಣಾಮಕಾರಿಯಾಗಿ ವಿಚಾರ ವಿನಿಮಯ ಮಾಡಲಾರದೆ ಹೋದನು.

ರೇಗನ್ ಆಡಳಿತ ಮಂಡಳಿಯ ಸದಸ್ಯರು ಬೃಹತ್ ಕಾರ್ಪೊರೇಷನ್‌ಗಳ ಹಿತಾಸಕ್ತಿ ಗಳನ್ನು ಪ್ರತಿನಿಧಿಸುವವರಾಗಿದ್ದರು. ಖಜಾಂಚಿಯಾಗಿ (ಹಣ ಕಾಸು ಕಾರ್ಯದರ್ಶಿ) ನೇಮಕಗೊಂಡ ಡೊನಾಲ್ಡ್ ರೇಗನ್ (Donald Regan) ಮೆರಿಲ್ಲಿಂಚ್ (Merrill Lynch) ಕಂಪನಿಯ ಛೇರ್‌ಮನ್ ಆಗಿದ್ದನು. ರಕ್ಷಣಾ ಕಾರ್ಯದರ್ಶಿಯಾಗಿ

ನೇಮಕಗೊಂಡ ಕಾಸ್ಪರ್ ವೈನ್‌ಬರ್ಗರ್ (Casper Weinberger) ಬೆಕ್‌ಟೆಲ್ ಕಂಪನಿಯಿಂದ ಬಂದವನು. ವಿದೇಶಾಂಗ ಕಾರ್ಯದರ್ಶಿ ಅಲೆಗ್ಸಾಂಡರ್ ಹೇಗ್ (Alexander Haig) ನಿವೃತ್ತ ಜನರಲ್ ಹಾಗೂ ಯುನೈಟೆಡ್ ಟೆಕ್ನಾಲಜೀಸ್ ಎಂಬ ಸಂಸ್ಥೆಯಿಂದ ಬಂದವನು. ಒಳಾಡಳಿತ ಕಾರ್ಯದರ್ಶಿ (Secretary of Interior) ಜೇಮ್ಸ್ ವಾಟ್ (James Watt) ಪ್ರತಿಷ್ಠಿತ ವಕೀಲನಾಗಿದ್ದನು. ಮಾರ್ಗರೆಟ್ ಹೆಕ್ಲರ್ (Margaret Heckler) ಆರೋಗ್ಯ ಮತ್ತು ಮಾನವ ಸೇವೆಗಳ (Health and Human Services) ಕಾರ್ಯದರ್ಶಿಯಾಗಿ ನೇಮಕಗೊಂಡಳು. ರೇಗನ್ ನೇಮಿಸಿದವರಲ್ಲಿ ಅನೇಕರು ಅನೈತಿಕ ಮತ್ತು ನ್ಯಾಯಬಾಹಿರವಾದ ವ್ಯವಹಾರಗಳಲ್ಲಿ ನಿರತರಾಗಿದ್ದರು. ಕೆಲವರು ರಾಜಕೀಯ ಧೋರಣೆಗಳ ಭಿನ್ನಾಭಿಪ್ರಾಯಗಳಿಂದಾಗಿ ರಾಜೀನಾಮೆ ಕೊಟ್ಟರು. ೧೯೮೨ರಲ್ಲಿ ರೇಗನ್ ಆಡಳಿತ ಹಿಂದೆ ಯೋಜಿಸಿದ ವಿದೇಶಾಂಗ ನೀತಿಯನ್ನು ಬಿಟ್ಟು ಬೇರೆ ಧೋರಣೆಯನ್ನು ಅನುಸರಿಸುತ್ತಿದೆ ಎಂಬ ಕಾರಣಕ್ಕಾಗಿ ಅಲೆಗ್ಸಾಂಡರ್ ಹೇಗ್ ರಾಜೀನಾಮೆ ಕೊಟ್ಟನು. ಅವನ ಸ್ಥಾನಕ್ಕೆ ನಿಕ್ಸನ್ ಆಡಳಿತದಲ್ಲಿ ಖಜಾಂಚಿಯಾಗಿದ್ದ ಜಾರ್ಜ್ ಷೂಲ್ಟ್ಜ್ (George Schultz) ನೇಮಕಗೊಂಡನು. ಆಯ-ವ್ಯಯ ಮತ್ತು ನಿರ್ವಹಣೆ (Budget management) ಇಲಾಖೆಯ ಮುಖ್ಯಸ್ಥನೂ ರೇಗನ್ ಆರ್ಥಿಕ ನೀತಿಗೆ ತಳಹದಿ ಹಾಕಿದವನೂ ಆದ ಡೇವಿಡ್ ಸ್ಟಾಕ್‌ಮನ್ (David Stockman) ಕೊಳ್ಳುವುದನ್ನು ಕಡಿಮೆ ಮಾಡುವುದು, ತೆರಿಗೆ ಕಡಿಮೆ ಮಾಡುವುದು – ಎರಡನ್ನೂ ಏಕ ಕಾಲದಲ್ಲಿ ಮಾಡಿದರೆ ಅವು ಬೃಹತ್ ಆಯ-ವ್ಯಯ ಖೋತಾಗಳಿಗೆ ಕಾರಣವಾಗುತ್ತವೆ ಎಂದು ಒಪ್ಪಿಕೊಂಡು (ಮೊದಲು ಇದನ್ನು ಅವನು ಅಲ್ಲಗಳೆದಿದ್ದನು) ತಾನು ಮಾಡಿದ ತಪ್ಪಿಗಾಗಿ ರಾಜೀನಾಮೆ ಕೊಟ್ಟನು. ರೇಗನ್ ನೇಮಕ ಮಾಡಿದವರಲ್ಲಿ ನೂರಕ್ಕೂ ಹೆಚ್ಚು ಮಂದಿ ಆಪಾದನೆಗಳಿಗೆ ಗುರಿಯಾಗಿದ್ದರು! ಅಥವಾ ಅನೈತಿಕ ಕಾರಣಗಳಿಗಾಗಿ ರಾಜೀನಾಮೆ ಕೊಡಬೇಕಾಗಿ ಬಂದಿತ್ತು. ರೇಗನ್ ನೇಮಿಸಿದ ವಸತಿ ಮತ್ತು ನಗರಾಭಿವೃದ್ಧಿ ಕಾರ್ಯದರ್ಶಿ ಸಾಮ್ಯುಯಲ್ ಪಿಯರ್ಸ್ (Samuel Pierce) ಕಾಂಗ್ರೆಸ್ ಸಮಿತಿಯ ವಿಚಾರಣೆಗೆ ಒಳಪಟ್ಟಾಗ ರಾಜ್ಯಾಂಗದ ೫ನೆಯ ತಿದ್ದುಪಡಿಯ (5th Amendment) ಮೊರೆಹೊಕ್ಕು ಬೀಸುವ ದೊಣ್ಣೆಯನ್ನು ಸಕಾಲಕ್ಕೆ ತಪ್ಪಿಸಿಕೊಂಡನು

೧೯೮೧ರ ಮಾರ್ಚ್ ೩೦ರಂದು ರಾಜಧಾನಿ ವಾಷಿಂಗ್‌ಟನ್‌ನಲ್ಲಿ ಜಾನ್ ಹಿಂಕ್ಲೆ (John Hinkley) ಎಂಬುವನು ಗುಂಡು ಹಾರಿಸಿ ಅಧ್ಯಕ್ಷ ರೇಗನ್‌ನನ್ನು ಘಾಸಿಗೊಳಿಸಿದನು. ಅವನ ವಾರ್ತಾ ಕಾರ್ಯದರ್ಶಿ ಜೇಮ್ಸ್ ಬ್ರೇಡಿ ಘಾಸಿಗೊಂಡು ಆತನ ಪರಿಸ್ಥಿತಿ ಗಂಭೀರವಾಗಿತ್ತು. ಆದರೂ ಅದೃಷ್ಟವಶಾತ್ ಬದುಕಿಕೊಂಡರೂ ಚೇತರಿಸಿಕೊಳ್ಳಲು ಬಹಳ ಕಾಲ ಹಿಡಿಯಿತು. ನಂತರ ಅವನು 'ಬಂದೂಕು ನಿಯಂತ್ರಣ' ಕಾಯಿದೆಯನ್ನು (Gun Control Law) ಜಾರಿಗೆ ತರುವುದನ್ನು ತ್ವರಿತಗೊಳಿಸಬೇಕೆಂದು ಆಗ್ರಹ ಪಡಿಸಿದನು. ರೇಗನ್ ಪ್ರಾಣಾಪಾಯದಿಂದ ಪಾರಾದ ಮೇಲೆ ಅವನ ಜನಪ್ರಿಯತೆ

ಅಧಿಕವಾಯಿತು. ಇದರಿಂದ ಉತ್ತೇಜಿತನಾದ ಅವನು ೧೯೮೧ರ ಏಪ್ರಿಲ್ ೨೮ರಂದು ಕಾಂಗ್ರೆಸ್ಸನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ತನ್ನ ಆರ್ಥಿಕ ತತ್ವ ಹಾಗೂ ತಾನು ಕೈಗೊಳ್ಳಲಿರುವ ಕಾರ್ಯಗಳನ್ನು ವಿಶದಪಡಿಸಿದನು.

ರೇಗನಾಮಿಕ್ಸ್

ಅಧ್ಯಕ್ಷ ರೇಗನ್‌ನ ಆರ್ಥಿಕ ತತ್ವ ಮತ್ತು ಕ್ರಮಗಳು 'ರೇಗನಾಮಿಕ್ಸ್' ಎಂಬ ಹೆಸರು ಪಡೆದವು. ತಾತ್ವಿಕವಾಗಿ ಇದು ದೊಡ್ಡ ಗಾತ್ರದ ಸರ್ಕಾರದ ವಿರೋಧಿಯಾಗಿತ್ತು. ಇದರ ಅನುಸಾರವಾಗಿ ಅವನು ಸರ್ಕಾರದ ಗಾತ್ರ ಕಡಿಮೆ ಮಾಡುವುದು (downsizing the government) ಮೊದಲನೆಯ ಹಂತವಾಗಿತ್ತು. ನಂತರ ಅವನು ತೆರಿಗೆಗಳ ಕಡಿತ (tax cuts) ಮತ್ತು ಫೆಡರಲ್ ಸರ್ಕಾರದ ಖರ್ಚು ಕಡಿಮೆ ಮಾಡುವ ಕಾರ್ಯಕ್ರಮವನ್ನು ಪ್ರತಿಪಾದಿಸಿದನು. ಆ ವರ್ಷದ ಜುಲೈ ತಿಂಗಳಲ್ಲಿ ರಾಷ್ಟ್ರದ ಆಯ ವ್ಯಯದಲ್ಲಿ (budget) ಮತ್ತು ತೆರಿಗೆಗಳಲ್ಲಿ ಕಡಿತ ಮಾಡುವ ನಿರ್ಣಯವನ್ನು ಕಾಂಗ್ರೆಸ್ ಅಂಗೀಕರಿಸಿತು. ಇದು ನ್ಯಾಯವಿಧಾಯಕ ಸಭೆಯಲ್ಲಿ ಅವನು ಗಳಿಸಿದ ದಿಗ್ವಿಜಯ ಎನ್ನಬಹುದು. ಹೀಗೆ ಮಾಡಿ ಬಡ್ಡಿಯ ದರ ಏರಿಸಿದುದರಿಂದ ರಾಷ್ಟ್ರ ಆರ್ಥಿಕ ಇಳಿತಕ್ಕೆ (deflation) ಒಳಗಾಯಿತು. ಇದನ್ನು ಜನಸಾಮಾನ್ಯರು 'ರೇಗನಾಮಿಕ್ಸ್' ಎಂದು ಕರೆದರು. ಆಯ-ವ್ಯಯದಲ್ಲಿ ಖೋತಾ ಹೆಚ್ಚುತ್ತ ಹೋಯಿತು. ಏರುತ್ತಿರುವ ಖೋತಾ ಮತ್ತು ಅದರ ಜೊತೆಗೆ ಏರುತ್ತಿರುವ ನಿರುದ್ಯೋಗಿಗಳ ಸಂಖ್ಯೆ ಅವಲೋಕಿಸಿದ ಅರ್ಥಶಾಸ್ತ್ರಜ್ಞರು ಮತ್ತು ರಾಜಕಾರಣಿಗಳು ಗಾಬರಿಗೊಂಡರು. ಜಾರ್ಜ್ ಬುಷ್ ಈ 'ರೇಗನಾಮಿಕ್ಸ್'ನ್ನು 'ಮಾಟ ಮಾಡುವ ಅರ್ಥಶಾಸ್ತ್ರ' (Voodoo economics) ಎಂದು ಟೀಕಿಸಿದನು. ೧೯೮೧ರಲ್ಲಿ ರಾಷ್ಟ್ರದ ಸಾಲಮಿತಿಯನ್ನು ಒಂದು ಟ್ರಿಲಿಯನ್ ಡಾಲರ್‌ಗಳಿಗೆ ಹೆಚ್ಚಿಸಿದರು. ಕಾಂಗ್ರೆಸ್ ಗ್ರಾಮ್-ರೆಡ್‌ಮನ್ ಕಾಯಿದೆಯನ್ನು ಅಂಗೀಕರಿಸಿ ಫೆಡರಲ್ ಖೋತಾವನ್ನು ೫ ವರ್ಷದ ಅವಧಿಗೆ ಮಿತಿಗೊಳಿಸಿತು. ಆದರೆ ಈ ಕಾಯಿದೆಯಲ್ಲಿನ ನ್ಯೂನತೆಗಳಿಂದಾಗಿ ಖೋತಾವನ್ನು ನಿರ್ಬಂಧಿಸಲು ಸಾಧ್ಯವಾಗಲಿಲ್ಲ. ಅಮೆರಿಕದಲ್ಲಿ ಆರ್ಥಿಕ ಮುಗ್ಗಟ್ಟು ಉಂಟಾಗುವ ಪರಿಸ್ಥಿತಿ ಒದಗಿತ್ತು. ಆದಾಗ್ಯೂ ವೈಯಕ್ತಿಕ ಸಂಪತ್ತು ಮತ್ತು ವೈಯಕ್ತಿಕ ವೆಚ್ಚಗಳು (personal spending) ಎಲ್ಲ ಕಾಲಕ್ಕಿಂತಲೂ ಹೆಚ್ಚಾಗಿದ್ದವು. ಹಣದುಬ್ಬರ ಕಡಿಮೆಯಾಗುತ್ತ ಹೋಗಿ ೧೯೮೩ರಲ್ಲಿ ಶೇಕಡಾ ೪ ಭಾಗಕ್ಕೆ ಇಳಿಯಿತು. ಕುಟುಂಬದ ಆದಾಯದಲ್ಲಿ ಗಣನೀಯ ಏರಿಕೆ ಕಂಡು ಬಂದಿತು. ೧೯೮೧ ಮತ್ತು ೧೯೮೬ರ ನಡುವೆ ೧೩ ಮಿಲಿಯನ್ ಕೆಲಸಗಳನ್ನು ಸೃಷ್ಟಿಸಿದರೂ ಸಹ ೧೯೮೩ರ ಜನವರಿಯಲ್ಲಿ ನಿರುದ್ಯೋಗಿಗಳ ಸಂಖ್ಯೆ ಶೇಕಡಾ ೧೧ಕ್ಕೆ ಮುಟ್ಟಿತ್ತು.

ರೇಗನಾಮಿಕ್ಸ್‌ನ್ನು ಕೆಲವರು 'ತೊಟ್ಟಿಕ್ಕುವ ಆರ್ಥಿಕ ತತ್ವ' (trickle-down economic principle) ಎಂದು ಕರೆದಿದ್ದಾರೆ. ಹಾಗೆಂದರೆ ರಾಷ್ಟ್ರದ ಶೇಕಡಾ ೧ ಭಾಗ

ಇರಬಹುದಾದ ಆಗರ್ಭ ಶ್ರೀಮಂತರಿಗೆ ತೆರಿಗೆ ಕಡಿಮೆ ಮಾಡಿದರೆ ಅವರು ಆ ಹಣವನ್ನು ವ್ಯಾಪಾರ/ಉದ್ಯಮಗಳನ್ನು ವಿಸ್ತರಿಸುವ ಅಥವಾ ಉತ್ತಮಗೊಳಿಸುವ ಕೆಲಸಕ್ಕೆ ಉಪಯೋಗಿಸಿ ಹೆಚ್ಚಿನ ಕೆಲಸಗಳನ್ನು ಸೃಷ್ಟಿಸುತ್ತಾರೆ. ಇದರಿಂದ ನಿರುದ್ಯೋಗ ಕಡಿಮೆಯಾಗಿ ಆರ್ಥಿಕ ಸ್ಥಿತಿ ಉತ್ತಮಗೊಂಡು ರಾಷ್ಟ್ರದ ಆರ್ಥಿಕ ಬಲ ಹೆಚ್ಚುತ್ತದೆ. ರೇಗನ್ ಆಡಳಿತದ ಅವಧಿಯಲ್ಲಿ ನಿಕ್ಷೇಪ ನಿರೋಧವನ್ನು ಕಡೆಗಣಿಸಿದ್ದರಿಂದ ಬೃಹತ್ ಪ್ರಮಾಣದಲ್ಲಿ ಕಾರ್ಪೊರೇಷನ್‌ಗಳು ವಿಲೀನಗೊಂಡವು. ಈ ಅವಧಿಯಲ್ಲಿ ೨೫ ಸಾವಿರಕ್ಕೂ ಹೆಚ್ಚು ವಿಲೀನಗೊಳ್ಳುವುದು, ಸಣ್ಣ ಉದ್ಯಮಗಳನ್ನು ದೊಡ್ಡವು ಆಕ್ರಮಿಸುವುದು, ಉದ್ಯಮ/ಕಾರ್ಖಾನೆಗಳನ್ನು ಹೊಸದಾಗಿ ರಚಿಸುವುದು – ಈ ಕೆಲಸಗಳು ನಡೆದವು. ಇವೆಲ್ಲವುಗಳ ಒಟ್ಟು ಮೌಲ್ಯ ೨ ಟ್ರಿಲಿಯನ್ ಡಾಲರ್‌ಗಳು. ಅಲ್ಲದೆ ಬೃಹತ್ ಕಾರ್ಪೊರೇಷನ್‌ಗಳು ವಿಶ್ವವ್ಯಾಪಕವಾಗಿ (global) ಬೆಳೆದವು; ಆಗರ್ಭ ಶ್ರೀಮಂತರು ಇನ್ನೂ ಹೆಚ್ಚು ಶ್ರೀಮಂತರಾಗಿ, ಬಡವರು ಬಡವರಾಗಿಯೇ ಅಥವಾ ನಿರ್ಗತಿಕರಾಗಿ ಉಳಿದರು. ವಸತಿಹೀನರ ಸಂಖ್ಯೆ ಹೆಚ್ಚಿ, ಶ್ವೇತಭವನದ ಸಮೀಪದ ಉದ್ಯಾನವನದಲ್ಲಿಯೇ ವಸತಿಹೀನರು ತಾತ್ಕಾಲಿಕವಾಗಿ ಬೀಡು ಬಿಡುವಂತಾಯಿತು. ಇವರಲ್ಲಿ ಬಹುತೇಕ ಮಂದಿ ನಿರುದ್ಯೋಗಿಗಳಲ್ಲ; ಅವರು ಸಂಪಾದಿಸುವುದು ಮನೆಯ ಅಥವಾ ಅಪಾರ್ಟ್‌ಮೆಂಟ್ ಬಾಡಿಗೆ ಕೊಡಲು ಸಾಲುತ್ತಿರಲಿಲ್ಲ. ಈ ಸಮಸ್ಯೆಯನ್ನು ಕುರಿತು ಪತ್ರಕರ್ತನೊಬ್ಬ ಕೇಳಿದ ಪ್ರಶ್ನೆಗೆ ಅಧ್ಯಕ್ಷ ರೇಗನ್ 'ಅವರು ಸ್ವಇಚ್ಛೆಯಿಂದ ವಸತಿಹೀನರಾಗಿದ್ದಾರೆ! (They are homeless by choice!)' ಎಂದು ಉತ್ತರಿಸಿದನು!

ರೇಗನ್ ಸರ್ಕಾರದ ನಿಯಂತ್ರಣ ಕಡಿಮೆ ಮಾಡುವುದರಲ್ಲಿ ಯಶಸ್ವಿಯಾದರೂ ಇದು ಕಾರ್ಟರ್‌ನ ಆಡಳಿತದಲ್ಲಿಯೇ ಆರಂಭವಾಗಿತ್ತು. ಆದರೆ ಕಾರ್ಟರ್‌ನ ಆಡಳಿತದಲ್ಲಿ ಕಾರ್ಮಿಕರ ಆರೋಗ್ಯ ಮತ್ತು ಕ್ಷೇಮಗಳನ್ನು ರಕ್ಷಿಸಲು, ಇಂಧನ ಉಳಿತಾಯ ಮಾಡಲು ಮತ್ತು ಪರಿಸರ ಸಂರಕ್ಷಣೆ ಮಾಡಲು ಸರ್ಕಾರದ ನಿಯಂತ್ರಣಗಳಿದ್ದವು. ರೇಗನ್ ಈ ವಿಷಯಗಳ ಬಗ್ಗೆ ಆಸಕ್ತಿ ವಹಿಸಲಿಲ್ಲ. ಅವನ ಆಡಳಿತದಲ್ಲಿ ಅನಿಯಂತ್ರಣ (deregulation) ಎಂದರೆ ಖಾಸಗಿ ಆರ್ಥಿಕ ವ್ಯವಹಾರಗಳಲ್ಲಿ ಸರ್ಕಾರ ಕೈ ಹಾಕದಿರುವುದು ಸಾಗಿತ್ತು. ಸರ್ಕಾರದ ಆಯ-ವ್ಯಯವನ್ನು ಕಡಿಮೆ ಮಾಡಿ ನಿಯಂತ್ರಣಾಧಿಕಾರಿಗಳನ್ನು ಕೆಲಸಗಳಿಂದ ತೆಗೆದು ಹಾಕಲಾಯಿತು. ತಮ್ಮನ್ನು ತಾವೇ ನಿಯಂತ್ರಿಸಿಕೊಳ್ಳಲು ಬಿಟ್ಟದ್ದರಿಂದ ದುರಾಸೆ ಮತ್ತು ಲಾಭಕೋರತನಕ್ಕೆ ದಾರಿ ಮಾಡಿಕೊಟ್ಟಂತಾಯಿತು.

ಉಳಿತಾಯ ಮತ್ತು ಸಾಲ ನೀಡುವ ಸಂಸ್ಥೆಗಳನ್ನು ಅನಿಯಂತ್ರಣಗೊಳಿಸಿದ್ದು ಅಮೆರಿಕದ ಇತಿಹಾಸದಲ್ಲಿ ಅತಿ ದೊಡ್ಡ ಅನಾಹುತಕ್ಕೆ ಕಾರಣವಾಯಿತು. ಈ ಸಂಸ್ಥೆಗಳಿಗೆ ಬ್ಯಾಂಕ್‌ಗಳಿಗಿಂತ ಹೆಚ್ಚು ಹಣ ಹೂಡುವ ಅಧಿಕಾರವಿತ್ತು. ಈ ಸಂಸ್ಥೆಗಳು 'High risk speculative investment' ಮಾಡಲು ಮತ್ತು 'high risk' ಸಾಲ ಕೊಡಲು ಯಾವ

ನಿರ್ಬಂಧವೂ ಇರಲಿಲ್ಲ. ಇವು ಬೇಜವಾಬ್ದಾರಿ ಕಾರ್ಯನಿರ್ವಹಣೆ ಮತ್ತು ಭ್ರಷ್ಟಾಚಾರಗಳಿಂದ ನಡೆಯುತ್ತಿದ್ದರೂ ಸರ್ಕಾರಿ ನಿಯಂತ್ರಣಾಧಿಕಾರಿಗಳು ನೋಡಿಯೂ ನೋಡದಂತಿದ್ದು ಅನಾಹುತಕ್ಕೆ ಅವಕಾಶ ಮಾಡಿಕೊಟ್ಟರು. ಇಂಥ ಸಂಸ್ಥೆಗಳು ದಿವಾಳಿ ಏಳುವುದರಲ್ಲಿದ್ದಾಗ, ರೇಗನ್ ಸಾರ್ವಜನಿಕರ ಹಣ ಉಪಯೋಗಿಸಿ ಆ ಅನಾಹುತವನ್ನು ತಪ್ಪಿಸಿದನು. ಇಲ್ಲದೆ ಹೋಗಿದ್ದರೆ ಲೆಕ್ಕವಿಲ್ಲದಷ್ಟು ಜನ ಈ ಸಂಸ್ಥೆಗಳಲ್ಲಿ ಹೂಡಿದ್ದ ಹಣ ಕಳೆದುಕೊಳ್ಳುತ್ತಿದ್ದರು. ೧೯೮೮ರಲ್ಲಿ ಸುಮಾರು ೫೦೦ ಉಳಿತಾಯ ಮತ್ತು ಸಾಲ ನೀಡುವ ಸಂಸ್ಥೆಗಳು ದಿವಾಳಿ ಏಳುತ್ತಿವೆ ಎಂದು ಅಂದಾಜು ಮಾಡಿದ್ದರು.

ಅಂತರರಾಷ್ಟ್ರೀಯ ವ್ಯವಹಾರಗಳು

ಅಧ್ಯಕ್ಷ ರೇಗನ್‌ಗೆ ಮೊದಲಿನಿಂದಲೂ ಸೋವಿಯೆಟ್ ಒಕ್ಕೂಟದ ಮೇಲೆ ಅಪನಂಬಿಕೆ ಇದ್ದಿತ್ತು. ಆ ಒಕ್ಕೂಟವನ್ನು ಅವನು 'ದುಷ್ಟ ಚಕ್ರಾಧಿಪತ್ಯ' (evil empire) ಎಂದು ಕರೆದಿದ್ದನು. ಇರಾನಿನೊಡನೆ ಒತ್ತೆಯಾಳುಗಳ ಹಗರಣ ಮುಗಿದ ನಂತರ ರೇಗನ್ ವಿದೇಶಾಂಗ ನೀತಿ ಪ್ರಪಂಚದಲ್ಲಿ ಹತಾಶೆ, ಕೋಪ-ತಾಪಗಳಿಂದ ಕುದಿಯುತ್ತಿರುವ ಮೂರು ಪ್ರದೇಶಗಳ ಮೇಲೆ ಕೇಂದ್ರೀಕೃತವಾಯಿತು. ದಕ್ಷಿಣ ಅಮೆರಿಕ, ಮಧ್ಯಪ್ರಾಚ್ಯ, ಸೋವಿಯೆಟ್ ಒಕ್ಕೂಟ ಮತ್ತು ಅದರ ಅನುಯಾಯಿಗಳಾದ ಪೌರ್ವಾತ್ಯ ರಾಷ್ಟ್ರಗಳು – ಇವೇ ಆ ಪ್ರದೇಶಗಳು. ರೇಗನ್ ಆಡಳಿತ ಸೋವಿಯೆಟ್ ಒಕ್ಕೂಟದೊಡನೆ ಕಠಿಣವಾಗಿ ವರ್ತಿಸಿತು. ಅವನ ಆಡಳಿತದ ಅವಧಿಯಲ್ಲಿ ರಾಷ್ಟ್ರ ಸಂರಕ್ಷಣೆಗಾಗಿ ಅಪಾರ ಮೊತ್ತದ ಹಣವನ್ನು ರಕ್ಷಣಾಪಡೆಗಳಿಗೆ ಮೀಸಲಾಗಿಡಲಾಯಿತು. ಇದಕ್ಕೆ ಕಾರಣ ಸೋವಿಯೆಟ್ ಒಕ್ಕೂಟಕ್ಕೆ ಎಚ್ಚರಿಕೆ ನೀಡುವುದಾಗಿತ್ತು. ರಾಷ್ಟ್ರದ ರಕ್ಷಣೆಗಾಗಿ ೧೦೦ B-೧ ಬಾಂಬರ್‌ಗಳನ್ನು ಉತ್ಪಾದಿಸಿ, ೧೦೦ MX ಭೂಮಿಯಿಂದ ಹಾರುವ ಕ್ಷಿಪಣಿಗಳನ್ನು ಸ್ಥಾಪಿಸಲು ಅವನು ಕರೆಕೊಟ್ಟನು. 'ಡೆಟಾಂಟ್' (detente) ರೇಗನ್ ರಾಜನೀತಿಯ ಧ್ಯೇಯವಾಯಿತು. ಅವನ ಆಡಳಿತದ ಎರಡನೆಯ ಅವಧಿಯಲ್ಲಿ (೧೯೮೪) ಚೈನಾ ದೇಶಕ್ಕೆ ಭೇಟಿ ನೀಡಿದನು. ನಂತರ ಸೋವಿಯೆಟ್ ಒಕ್ಕೂಟದೊಡನೆ ಶಾಂತಿಸ್ಥಾಪನೆಗಾಗಿ ಸಿದ್ಧವಾಗಿರುವ ಚಿಹ್ನೆಯಾಗಿ ಧಾನ್ಯ ರಫ್ತು ಮಾಡದಿರಲು ಅದುವರೆಗೆ ಜಾರಿಯಲ್ಲಿದ್ದ ನಿಷೇಧಾಜ್ಞೆಯನ್ನು ರದ್ದುಗೊಳಿಸಿದನು. ಸೋವಿಯೆಟ್ ಒಕ್ಕೂಟದ ಅಂತಃಕಲಹ ಪ್ರಾರಂಭವಾದಾಗ ರೇಗನ್ 'ಡೆಟಾಂಟ್'[೬] ಧೋರಣೆ ತಳೆಯುವುದು ಸಾಧ್ಯವಾಯಿತು.

ರೇಗನ್ ಮಧ್ಯಪ್ರಾಚ್ಯ ಧೋರಣೆ ಅಲ್ಲಿನ ವಿದ್ಯಮಾನಗಳಿಗೆ ಪ್ರತಿಕ್ರಿಯೆಯಾಗಿತ್ತೇ ಹೊರತು ಕಾರ್ಯಾಚರಣೆಯಾಗಿರಲಿಲ್ಲ. ಇರಾಕ್ ಮತ್ತು ಇರಾನ್ ದೇಶಗಳ ನಡುವೆ ಯುದ್ಧ ನಡೆಯುತ್ತಿದ್ದಾಗ ಅಮೆರಿಕನ್ ಸೈನ್ಯತುಕಡಿಗಳು ಲೆಬನಾನ್‌ನಲ್ಲಿ ಬಂದಿಳಿದವು. ಲ್ಯಾಟಿನ್ ಅಮೆರಿಕದಲ್ಲಿ ಅಮೆರಿಕ ನಿಕರಾಗುವಾದಲ್ಲಿ ಕ್ರಾಂತಿಕಾರರಿಗೆ ಸಹಾಯ ಮಾಡಿ

---

೬. ಡೆಟಾಂಟ್ ಅಂದರೆ ಎರಡು ರಾಷ್ಟ್ರಗಳ ನಡುವೆ ಸೌಹಾರ್ದ ಸಂಬಂಧಗಳನ್ನು ಏರ್ಪಡಿಸುವುದು.

ಸರ್ವಾಧಿಕಾರಿಗಳಿಗೆ ನೆರವು ನೀಡಿತು. ಗ್ರೆನಾಡಾ ದ್ವೀಪ ಸಂರಕ್ಷಣೆಗೆ ಸೈನ್ಯವನ್ನು ರವಾನಿಸಿತು. ಫಾಕ್‌ಲ್ಯಾಂಡ್ ದ್ವೀಪಗಳಿಗಾಗಿ ಅರ್ಜಂಟೈನಾ ಮತ್ತು ಇಂಗ್ಲೆಂಡ್‌ಗಳ ನಡುವೆ ಯುದ್ಧ ಸಂಭವಿಸಿದಾಗ ಅಧ್ಯಕ್ಷ ರೇಗನ್ ಇಂಗ್ಲೆಂಡಿನ ಪರ ವಹಿಸಿ ಪ್ರಧಾನಿ ಯಾಗಿದ್ದ ಮಾರ್ಗರೆಟ್ ಥ್ಯಾಚರ್‌ಳಿಗೆ ಎಲ್ಲ ರೀತಿಯ ನೆರವು ನೀಡಿದನು. ಅಂತಿಮವಾಗಿ ಆ ಯುದ್ಧ ಶಾಂತಿಸಂಧಾನದ ಮೂಲಕ ಕೊನೆಗೊಂಡಿತು.

೧೯೮೧ರ ಏಪ್ರಿಲ್ ೧ರಂದು ಲೆಬನಾನ್‌ನಲ್ಲಿ ಕದನವಿರಾಮ (cease fire) ಮುಗಿದು ಸಿರಿಯಾದ ಸೈನಿಕರಿಗೂ ಮತ್ತು ಕ್ರೈಸ್ತಮತದ ಹೋರಾಟಗಾರರಿಗೂ (christian militia men) ಘರ್ಷಣೆ ಪ್ರಾರಂಭವಾಯಿತು. ಇಸ್ರೇಲ್ ವಾಯುಪಡೆ ದಕ್ಷಿಣ ಲೆಬನಾನ್‌ನ ಗೆರಿಲ್ಲ ನೆಲೆಗಳ ಮೇಲೆ ದಾಳಿ ನಡೆಸಿತು. ಹಾಗೆಯೆ ಸಿರಿಯಾದ ವಾಯುಪಡೆಯೊಂದಿಗೆ ಘರ್ಷಣೆ ನಡೆಯಿತು. ೧೯೮೨ರ ಆಗಸ್ಟ್ ತಿಂಗಳಲ್ಲಿ ಸಂಯುಕ್ತ ಸಂಸ್ಥಾನಗಳ ೮೦೦ ಮರೀನ್‌ಗಳಿದ್ದ (marines) ಒಂದು ತುಕಡಿ ಬೈರೂತ್‌ನಲ್ಲಿ (Beirut) ಬಂದಿಳಿಯಿತು. ಆ ತುಕಡಿ ವಿಶ್ವಸಂಸ್ಥೆಯ ಶಾಂತಿಸೇನೆಯ ಒಂದು ಭಾಗವಾಗಿತ್ತು. ಇದಕ್ಕೆ ಅಮೆರಿಕದ ಕಾಂಗ್ರೆಸ್ ಯುದ್ಧ ಅಧಿಕಾರ ಕಾಯಿದೆಯ (war power Act) ಪ್ರಕಾರ ಒಪ್ಪಿಗೆ ನೀಡಿತ್ತು. ೧೯೮೩ರಲ್ಲಿ ಆ ಪ್ರದೇಶದ ಭಯೋತ್ಪಾದಕರು ಅಮೆರಿಕದ ರಾಯಭಾರಿ ಕಛೇರಿಯ ಮೇಲೆ ಕಾರಿನಲ್ಲಿ ಹುದುಗಿಸಿದ್ದ ಬಾಂಬ್ ಸಿಡಿಸಿದ ಪರಿಣಾಮವಾಗಿ ೧೭ ಅಮೆರಿಕನ್ನರು ಮತ್ತು ೪೬ ಇತರ ದೇಶದವರು ಸತ್ತು ಕಛೇರಿ ಕುಸಿದುಬಿತ್ತು. ನಂತರ ಕೆಲವು ಸಮಯದ ನಂತರ ಭಯೋತ್ಪಾದಕನೊಬ್ಬ ಒಂದು ದೊಡ್ಡ ಲಾರಿಯಲ್ಲಿ ಆಸ್ಫೋಟಕ ವಸ್ತುಗಳನ್ನು ತುಂಬಿಸಿಕೊಂಡು ತಂದು ಅಮೆರಿಕನ್ ಮೆರೀನ್ ತುಕಡಿ ತಂಗಿದ್ದ ಕಟ್ಟಡಕ್ಕೆ ರಭಸದಿಂದ ಢಿಕ್ಕಿ ಹೊಡೆದ ಪರಿಣಾಮವಾಗಿ ನಿದ್ರಿಸುತ್ತಿದ್ದ ೨೪೧ ಅಮೆರಿಕನ್ ಸೈನಿಕರು ಮರಣಹೊಂದಿದರು. ಇದರಲ್ಲಿ ನೌಕಾದಳದವರು ಕೆಲವರು ಇದ್ದರು. ೧೯೮೪ರಲ್ಲಿ ಅಧ್ಯಕ್ಷ ರೇಗನ್ ಅಮೆರಿಕದ ಸೇನಾದಳಗಳನ್ನು ಲೆಬನಾನ್‌ನಿಂದ ವಾಪಸ್ಸು ಕರೆಸಿದನು. ಇಷ್ಟಾದರೂ ಭಯೋತ್ಪಾದಕರು ಧ್ವಂಸಾತ್ಮಕ ಕಾರ್ಯಗಳನ್ನು ಮುಂದುವರಿಸಿ ಮತ್ತೊಂದು ಬಾರಿ ಅಮೆರಿಕನ್ ರಾಯಭಾರಿ ಕಛೇರಿಯ ಮೇಲೆ ದಾಳಿ ನಡೆಸಿದರು. ರೇಗನ್ ಭಯೋತ್ಪಾದಕರ ಸಮಸ್ಯೆಯನ್ನು ಎದುರಿಸಲು ಕೈಗೊಂಡ ವಿಧಾನಗಳು ಪ್ರೇಕ್ಷಣೀಯವಾಗಿದ್ದವೇ ಹೊರತು ಪರಿಣಾಮಕಾರಿಯಾಗಿರಲಿಲ್ಲ. ಭಯೋತ್ಪಾದನೆ ಅನೇಕ ಸಮಸ್ಯೆಗಳನ್ನು ಸೃಷ್ಟಿಸುತ್ತದೆ. ಇಂಥ ಕೃತ್ಯಗಳಿಗೆ ಹೊಣೆಗಾರರು ಯಾರು? ಅವರನ್ನು ಹಿಡಿಯುವುದು ಹೇಗೆ? ಶಿಕ್ಷೆ ವಿಧಿಸುವ ವಿಧಾನಗಳೇನು? ೧೯೮೦ರ ದಶಕದಲ್ಲಿ ಬಹುತೇಕ ಭಯೋತ್ಪಾದಕ ಕಾರ್ಯಗಳು ರಾಜಕೀಯ ಪಂಗಡಗಳ ಜಗಳದಿಂದ ಒಡೆದು ಪಾಲಾಗಿ ಹೋಗಿದ್ದ ಲೆಬನಾನ್‌ನಲ್ಲಿ ನಡೆಯುತ್ತಿದ್ದವು. ಅಲ್ಲಿ ಮತ್ತು ಇತರ ಕಡೆಗಳಲ್ಲಿ ಅಮೆರಿಕದ ವಿರುದ್ಧ ಆ ಪಂಗಡಗಳಿಗೆ ನೆರವು ನೀಡುತ್ತಿದ್ದ ದೇಶಗಳೆಂದರೆ: ಸಿರಿಯಾ, ಇರಾನ್ ಮತ್ತು ಲಿಬಿಯಾ. ರೇಗನ್ ಸಿರಿಯಾಕ್ಕೆ ಹೆಚ್ಚಿನ ಗಮನ ಕೊಡದೆ,

ಇರಾನ್‌ನೊಡನೆ ಎಂದಿನಂತೆ ವ್ಯವಹಾರ ಮುಂದುವರಿಸಿ, ಲಿಬಿಯಾವನ್ನು ಶಿಕ್ಷಿಸಲು ಮನಸ್ಸು ಮಾಡಿದನು.

೧೯೮೫ರ ಡಿಸೆಂಬರ್ ತಿಂಗಳಲ್ಲಿ ರೋಂ ಮತ್ತು ವಿಯೆನ್ನಾ ವಿಮಾನ ನಿಲ್ದಾಣಗಳಲ್ಲಿ ಭಯೋತ್ಪಾದಕರು ಏಕಕಾಲದಲ್ಲಿ ದಾಳಿ ನಡೆಸಿದ ಪರಿಣಮವಾಗಿ ಸತ್ತವರ ಮತ್ತು ಗಾಯಗೊಂಡವರ ಸಂಖ್ಯೆ ೧೧೦. ಈ ಅಮಾನುಷ ಕೃತ್ಯದಲ್ಲಿ ಲಿಬಿಯಾದ ಕೈವಾಡವಿದೆ ಎಂದು ತಿಳಿದ ಅಧ್ಯಕ್ಷ ರೇಗನ್ ಆ ದೇಶದ ಮೇಲೆ ಆರ್ಥಿಕ ದಿಗ್ಬಂಧನವನ್ನು ಘೋಷಿಸಿದನು. ಸಿಡ್ರಾ ಕೊಲ್ಲಿ (Gulf of Sidra) ಲಿಬಿಯಕ್ಕೆ ಸೇರಿದ್ದೆಂದು ಕರ್ನಲ್ ಖಡಾಫಿಯ (Colonel Qaddafi) ಹೇಳಿಕೆಯನ್ನು ಕಡೆಗಣಿಸಿ ೧೯೮೬ರ ಮಾರ್ಚ್ ತಿಂಗಳಲ್ಲಿ ಸಿಡ್ರಾ ಕೊಲ್ಲಿಯಲ್ಲಿ ಕಾರ್ಯಾಚರಣೆ ನಡೆಸುವಂತೆ ರೇಗನ್ ಆಜ್ಞೆ ಮಾಡಿದನು. ಇದು ಖಡಾಫಿಯನ್ನು ಕೆರಳಿಸಿ ಘರ್ಷಣೆಗೆ ಕಾರಣವಾಯಿತು. ಇದರಲ್ಲಿ ಅಮೆರಿಕದ ವಾಯುದಳ ಲಿಬಿಯಾದ ಕ್ಷಿಪಣಿ ನೆಲೆಗಳನ್ನು (missile sites) ಧ್ವಂಸ ಮಾಡಿ ಲಿಬಿಯಾದ ಸಮುದ್ರತೀರದಲ್ಲಿ ಕಾವಲು ತಿರುಗುವ ಎರಡು ಹಡಗುಗಳನ್ನು ಮುಳುಗಿಸಿದವು. ಇದಾದ ಒಂದು ತಿಂಗಳ ನಂತರ ಪಶ್ಚಿಮ ಜರ್ಮನಿಯಲ್ಲಿ ಅಮೆರಿಕನ್ ಸೈನಿಕರು ಹೆಚ್ಚಾಗಿ ಸೇರುತ್ತಿದ್ದ ನೈಟ್ ಕ್ಲಬ್ (night club) ಒಂದರಲ್ಲಿ ಭಯೋತ್ಪಾದಕರು ಬಾಂಬ್ ಸಿಡಿಸಿ ಸಾವು ನೋವು ಮತ್ತು ಆಸ್ತಿಯ ಹಾನಿ ಉಂಟುಮಾಡಿದರು. ಈ ದುರ್ಘಟನೆಯಲ್ಲಿ ಖಡಾಫಿಯ ಕೈವಾಡವಿದೆ ಎಂದು ತಿಳಿದ ರೇಗನ್ ಲಿಬಿಯಾದ ಸುತ್ತಮುತ್ತಲಿನ ಆಯಕಟ್ಟಿನ ಸ್ಥಳಗಳನ್ನು ಅಮೆರಿಕದ ವಾಯುಪಡೆಗಳು ಧ್ವಂಸ ಮಾಡುವಂತೆ ಮಾಡಿದನು. ರೇಗನ್ ಆಡಳಿತ ಅಮೆರಿಕ ಲಿಬಿಯಾದ ಮೇಲಿನ ದಾಳಿಯನ್ನು ಸಮರ್ಥಿಸಿಕೊಳ್ಳಲು ನೀಡಿದ ಹೇಳಿಕೆ: 'ಭಯೋತ್ಪಾದಕರನ್ನು ಬೆಂಬಲಿಸುವುದನ್ನು 'ದುಬಾರಿ' (costly) ಮಾಡಲೋಸುಗ ಈ ದಾಳಿ ಅಗತ್ಯವಾಗಿತ್ತು' ಎಂದು. ಸಾಮಾನ್ಯ ಅಮೆರಿಕನ್ನರಿಗೆ ರೇಗನ್ ಖಡಾಫಿಯ ಗರ್ವಭಂಗ ಮಾಡಿದ್ದು ಹೆಮ್ಮೆಯ ಸಂಗತಿಯಾಗಿತ್ತು. ಅವರ ದೃಷ್ಟಿಯಲ್ಲಿ ರೇಗನ್ ಒಬ್ಬ ಧೀರ ಮತ್ತು ಹೇಳಿದಂತೆ ಮಾಡುವ ಬಲಿಷ್ಠ ನಾಯಕನಾಗಿ ಕಾಣಿಸಿದನು.

ಇಸ್ರೇಲ್ ಮತ್ತು ಅಮೆರಿಕದ ನಡುವಣ ಸಂಬಂಧ ಎಲ್ಲ ಅರಬ್ ರಾಷ್ಟ್ರಗಳಲ್ಲಿ ಅಸಮಾಧಾನ, ದ್ವೇಷಾಸೂಯೆಗಳಿಗೆ ಕಾರಣವಾಗಿತ್ತು. ೧೯೮೧ರ ಜೂನ್ ತಿಂಗಳಲ್ಲಿ ಇಸ್ರೇಲ್ ವಾಯುದಳದ ವಿಮಾನಗಳು ಬಾಗ್ದಾದ ಬಳಿ ಇದ್ದ ಅಣುಶಕ್ತಿ ಉತ್ಪಾದನಾ ಕೇಂದ್ರವನ್ನು ಹಾಳುಗೆಡವಿದವು. ತಾನು ಮಾಡಿದ್ದನ್ನು ಸಮರ್ಥಿಸಿಕೊಳ್ಳಲು ಇಸ್ರೇಲ್ ಕೊಟ್ಟ ಕಾರಣವೆಂದರೆ ಆ ಇರಾಕಿನ ಅಣುಶಕ್ತಿ ವಿಕಿರಣ ಕೇಂದ್ರ ಅಣುಬಾಂಬ್ ತಯಾರಿಸಲು ಸಹಾಯಕವಾಗುತ್ತದೆ ಎಂದು. ವಿಶ್ವಸಂಸ್ಥೆಯ ಸೆಕ್ಯೂರಿಟಿ ಕೌನ್ಸಿಲ್ ಇಸ್ರೇಲ್ ಅನ್ನು ಇದಕ್ಕಾಗಿ ಖಂಡಿಸಿತು. ಅಮೆರಿಕ ಕೂಡ ಇಸ್ರೇಲ್ ಮಾಡಿದ್ದು ತಪ್ಪು ಎಂದು ಖಂಡಿಸಿ, ಮುಂದೆ ಇಸ್ರೇಲ್ ಮೇಲೆ ಶಸ್ತ್ರಾಸ್ತ್ರಗಳ ನಿರ್ಬಂಧ ಹಾಕುವುದಾಗಿ ಬೆದರಿಸಿತು.

೧೯೮೧ರ ಡಿಸೆಂಬರ್ ೧೪ರಂದು ಇಸ್ರೇಲ್ ಪ್ರಧಾನಿ ಮೆನಾಕಿನ್ ಬೇಗನ್ ಗೋಲಾನ್ ಶಿಖರಗಳನ್ನು ವಶಪಡಿಸಿಕೊಳ್ಳಲು ಕ್ನೆಸ್ಸೆಟ್‌ನ (knesset) ಒಪ್ಪಿಗೆ ಪಡೆದನು. ಈ ಶಿಖರಗಳು ಸಿರಿಯಾದ ಗಡಿಯುದ್ದಕ್ಕೂ ಇರುವ ಆಯಕಟ್ಟಿನ ಸ್ಥಳದಲ್ಲಿವೆ. ಹೀಗೆ ವಶಪಡಿಸಿಕೊಂಡಿದ್ದು ನ್ಯಾಯಬದ್ಧವಲ್ಲವೆಂದು ವಿಶ್ವಸಂಸ್ಥೆಯ ಸೆಕ್ಯೂರಿಟಿ ಕೌನ್ಸಿಲ್ ಒಮ್ಮತದಿಂದ ತೀರ್ಪು ನೀಡಿತು. ೧೯೮೨ರ ಜೂನ್ ತಿಂಗಳಲ್ಲಿ ಇಸ್ರೇಲ್ ಸೈನ್ಯದ ತುಕಡಿಗಳು ದಕ್ಷಿಣ ಲೆಬನಾನ್‌ನ್ನು ಆಕ್ರಮಣ ಮಾಡಿದವು. ಇದು ಇಂಗ್ಲೆಂಡಿಗೆ ಇಸ್ರೇಲ್‌ನ ರಾಯಭಾರಿಯನ್ನು ಕೊಲ್ಲಲು ಮಾಡಿದ ಪ್ರಯತ್ನಕ್ಕೆ ಮುಯ್ಯಿ ತೀರಿಸಿಕೊಳ್ಳಲು ಮಾಡಿದ್ದು. ಇಸ್ರೇಲ್ ಸೈನ್ಯ ಬೈರೂತ್ ತಲುಪಿದಾಗ ರೇಗನ್ ಕದನವಿರಾಮಕ್ಕೆ ಕರೆಕೊಟ್ಟನು. ಆದರೆ ಇಸ್ರೇಲ್ ಸೈನ್ಯ ಬೈರೂತ್ ಆಕ್ರಮಿಸಿದ್ದಾಗಿತ್ತು. ಅಮೆರಿಕದ ಮೆರೀನ್ ತುಕಡಿಗಳು ಬೈರೂತ್‌ಗೆ ಬಂದಿಳಿದವು. ಆಗ ಲೆಬನಾನಿನ ಕ್ರೈಸ್ತಮತದ ಹೋರಾಟಗಾರರು ನಿರಾಶ್ರಿತ ಶಿಬಿರಗಳಲ್ಲಿದ್ದ ೩೦೦ ಪ್ಯಾಲೆಸ್ಟೈನ್ ಜನರ ಸಾಮೂಹಿಕ ಕೊಲೆ ಮಾಡಿದರು. ಪ್ರಪಂಚದ ಎಲ್ಲೆಡೆಗಳಲ್ಲೂ ಈ ಹತ್ಯಾಕಾಂಡ ನಡೆಸಿದ ಲೆಬನಾನ್ ಕ್ರೈಸ್ತಮತೀಯರನ್ನು ಮತ್ತು ಆ ರಾಕ್ಷಸ ಕೃತ್ಯವನ್ನು ಕಂಡೂ ಕಾಣದಂತಿದ್ದ ಇಸ್ರೇಲ್‌ನ್ನು ರಕ್ತಪಿಪಾಸೆಯ ಕ್ರೂರ ಪ್ರಾಣಿಗಳೆಂದು ಜರಿದು ಅವರ ಕೃತ್ಯ ಇಡೀ ಮಾನವಜನಾಂಗದ ಮೇಲೆ ಎಸಗಿದ ಅಪರಾಧ ಎಂದು ಘೋಷಿಸಿದರು.

ಅತ್ತ ಈಜಿಪ್ಟಿನಲ್ಲಿ ೧೯೮೧ರ ಅಕ್ಟೋಬರ್ ೬ರಂದು ಅಧ್ಯಕ್ಷ ಅನ್ವರ್ ಸದಾತ್‌ನ ಕೊಲೆಯಾಯಿತು. ಹತ್ಯೆ ಮಾಡಿದವರು ಇಸ್ಲಾಂ ಧರ್ಮದ ಮೂಲಭೂತವಾದಿಗಳು (fundamentalists). ಈಜಿಪ್ಟಿನ ರಾಜಧಾನಿ ಕೈರೋ ಸಮೀಪದಲ್ಲಿ ನಡೆಯುತ್ತಿದ್ದ ಸೈನ್ಯದ ಕವಾಯಿತಿನಲ್ಲಿ ಕೊಲೆಗಾರರು ಸೈನ್ಯದ ಸಮವಸ್ತ್ರ ಧರಿಸಿ ಶಿಸ್ತಿನಿಂದ ಹೆಜ್ಜೆ ಹಾಕುತ್ತಿದ್ದ ಸೈನಿಕರಂತೆ ಸದಾತ್ ಬಳಿ ಸಾರಿದಾಗ ಅವನ ಮೇಲೆ ಗುಂಡಿನ ಮಳೆಗರೆದರು. ಸದಾತ್‌ನ ಸ್ಥಾನದಲ್ಲಿ ಉಪಾಧ್ಯಕ್ಷ ಹೋಸ್ನಿ ಮುಬಾರಕ್ (Hosni Mubarak) ಸ್ಥಾಪಿತಗೊಂಡನು. ನಂತರ ಮುಬಾರಕ್ ಅಧ್ಯಕ್ಷನಾಗಿ ಚುನಾಯಿತನಾದನು. ಅವನು ಅಧಿಕಾರ ವಹಿಸಿಕೊಳ್ಳುವ ಸಮಯದಲ್ಲಿ ಸದಾತ್‌ನ ಧೋರಣೆಗಳನ್ನು, ತತ್ವಗಳನ್ನು ಮುಂದುವರಿಸುವುದಾಗಿ ಮಾತುಕೊಟ್ಟನು. ಕ್ಯಾಂಪ್ ಡೇವಿಡ್ ಒಪ್ಪಂದಗಳನ್ನು ಮುಬಾರ್ಕ್ ಅನುಮೋದಿಸಿದನು. ಇಸ್ರೇಲ್-ಈಜಿಪ್ಟ್‌ಗಳ ನಡುವೆ ಶಾಂತಿಸಂಧಾನನದ ಕಾರ್ಯ ಈಜಿಪ್ಟ್ ಪ್ರಜೆಗಳಿಗೆ ಸದಾತ್ ಬಿಟ್ಟು ಹೋದ ಕೊಡುಗೆ.

ಷಟ್-ಅಲ್-ಅರಬ್ ಮಧ್ಯಪ್ರಾಚ್ಯದ ಒಂದು ಮುಖ್ಯವಾದ ಜಲಮಾರ್ಗ. ಇದು ತೈಲ ಸಂಪದ್ಭರಿತ ಪ್ರದೇಶಕ್ಕೆ ಸಮೀಪವಾಗಿರುವುದರಿಂದ ಇರಾಕ್ ಮತ್ತು ಇರಾನ್ ದೇಶಗಳು ಅದರ ಮೇಲೆ ಪ್ರಭುತ್ವ ಸಾಧಿಸಲು ಪ್ರಯತ್ನಿಸುತ್ತ ಬಂದಿದ್ದು, ೧೯೮೧ರಲ್ಲಿ ಇದರ ನಿಮಿತ್ತ ಘರ್ಷಣೆಗಳಾಗಿ ಅವು ಭೀಕರ ಯುದ್ಧಕ್ಕೆ ಕಾರಣವಾದವು. ಈ ಯುದ್ಧ

ಏಳು ವರ್ಷಗಳು ನಡೆಯಿತು. ಯುದ್ಧ ನಡೆಯುತ್ತಿದ್ದ ಪ್ರದೇಶದಲ್ಲಿ ತೈಲ ಶುದ್ಧೀಕರಣ ಕೇಂದ್ರಗಳಿದ್ದವು. ಯುದ್ಧದ ದೆಸೆಯಿಂದಾಗಿ ಇರಾಕ್ ಮತ್ತು ಇರಾನ್ ದೇಶಗಳಿಂದ ತೈಲ ರಫ್ತಾಗುವುದು ನಿಂತುಹೋಗಿ ತೈಲದ ಬೆಲೆ ವಿಷಮಶೀತ ಜ್ವರದಂತೆ ಏರತೊಡಗಿತು. ಇರಾಕ್ ರಾಸಾಯನಿಕ ಅಸ್ತ್ರಗಳನ್ನು (chemical weapons) ಉಪಯೋಗಿಸಿತು. ಮಾನವರು ಮಾನವರಿಗೆ ದಾನವರು ಸಹ ಮಾಡಲಾರದ ದುಷ್ಕೃತ್ಯಗಳನ್ನು ಎಸಗಿ ನಿರ್ದೋಷಿಗಳಾದ ಜನಸಾಮಾನ್ಯರ, ವಿಶಿಷ್ಟವಾಗಿ ಹೆಂಗಸರು ಮತ್ತು ಮಕ್ಕಳ ಬಾಳನ್ನು ಮಸಣ ಮಾಡುವುದನ್ನು ಜಗತ್ತು ದೂರದರ್ಶನದಲ್ಲಿ ಕಂಡು ಮೂಕವಿಸ್ಮಯಪಟ್ಟಿತು.

ಅಮೆರಿಕ ಯಾವ ಪಕ್ಷವನ್ನೂ ವಹಿಸದೆ ತಟಸ್ಥ ನೀತಿಯನ್ನು ಪಾಲಿಸುವುದಾಗಿ ಹೇಳಿದರೂ ಕೂಡ ಗುಟ್ಟಾಗಿ ಇರಾಕಿಗೆ ನೆರವು ನೀಡಿತು! ಅಮೆರಿಕ ಈ ರೀತಿ ನೀಡಿದ ಶಸ್ತ್ರಾಸ್ತ್ರಗಳ ನೆರವು ಮುಂದೆ ತಮ್ಮ ಮೇಲೆ ಉಪಯೋಗಿಸಲಾಗುವುದೆಂದು ಊಹಿಸಿರಲಿಲ್ಲ. ಈ ಯುದ್ಧ ರೇಗನ್‌ಗೆ ಇರಾನಿನ ಜೊತೆ ವ್ಯವಹರಿಸುವ ಅವಕಾಶಗಳನ್ನು ದೊರಕಿಸಿತು. ಇರಾನಿಗೆ ಶಸ್ತ್ರಾಸ್ತ್ರಗಳನ್ನು ಒದಗಿಸಿ ಒತ್ತೆಯಾಳುಗಳನ್ನು (hostages) ಬಿಡಿಸಿಕೊಳ್ಳುವುದು ಪರಸ್ಪರ ಅನುಕೂಲವಾದ ವಿಧಾನವಾಗಿ ರೇಗನ್‌ಗೆ ಕಂಡುಬಂತು. ಈ ಗುಟ್ಟಿನ ವ್ಯವಹಾರ 'ಇರಾನ್-ಕಾಂಟ್ರಾ ಹಗರಣ' ಎಂದು ಕುಖ್ಯಾತಿ ಪಡೆದು ರೇಗನ್‌ನ ಆಡಳಿತದ ಎರಡನೆಯ ಅವಧಿಯನ್ನು ಮಸುಕುಗೊಳಿಸಿತು. ರೇಗನ್ ಹೆಸರಿಗೆ ಕಳಂಕ ಹಿಡಿಯುವುದಿಲ್ಲ ಎಂದು ಬೀಗುತ್ತಿದ್ದ ರಿಪಬ್ಲಿಕನ್ನರು ತಮ್ಮ ನಾಯಕ ಶತ್ರುವಿನೊಡನೆ ಕಳ್ಳ ವ್ಯಾಪಾರ ಮಾಡಿ ಸಿಕ್ಕಿಬಿದ್ದ ನಂತರ ಅವನ ಹೆಸರು ಉಳಿಸಲು ನಾನಾ ರೀತಿಯಲ್ಲಿ ಯತ್ನಿಸಿದರೂ ಆಲಿ ನಾರ್ಥ್‌ನನ್ನು ಬಲಿಪಶುವನ್ನಾಗಿ ಮಾಡಿ ಈ ವ್ಯವಹಾರ ರೇಗನ್‌ಗೆ ಗೊತ್ತೇ ಇರಲಿಲ್ಲ ಎಂದು ಎಲ್ಲರ ಕಣ್ಣಿಗೆ ಮಣ್ಣೆರಚಲು ಪ್ರಯತ್ನಿಸಿದರು. ಇದರಿಂದ ರೇಗನ್ ಕಳ್ಳನಲ್ಲದೆ ಸುಳ್ಳನೂ ಹೌದು ಎಂದು ತಿಳಿಯಿತು. ಅವನ ಬೆಂಬಲಿಗರು 'ಅಧ್ಯಕ್ಷನಿಗೆ ಅಲ್ಪ ಸ್ವಲ್ಪ ತಿಳಿದಿರಬಹುದು, ತಪ್ಪೆಲ್ಲವೂ ನಾರ್ಥ್‌ನದ್ದೇ' ಎಂದು ವಾದಿಸಿದರು. ಆನೆ ಕದ್ದರೇನು? ಅಡಕೆ ಕದ್ದರೇನು? ಕಳ್ಳ ಕಳ್ಳನೇ!

ಈ ಹೊತ್ತಿಗೆ ಸೋವಿಯೆಟ್ ಒಕ್ಕೂಟದಲ್ಲಿ ಬಲಿಷ್ಠ ನಾಯಕನಿಲ್ಲದೆ ಒಂದರ ಹಿಂದೆ ಒಂದರಂತೆ ಸಂದಿಗ್ಧ ಪರಿಸ್ಥಿತಿಗಳು ಉಂಟಾಗುತ್ತಿದ್ದವು. ೧೯೮೨ರಲ್ಲಿ ಲಿಯೊನಿಡ್ ಬ್ರೆಝ್‌ನೆವ್, ಆನಂತರ ಯೂರಿ ಆ್ಯಂಡ್ರೊಪೊವ್ ಮರಣ ಹೊಂದಿದ ಮೇಲೆ ಕಾನ್ಸ್‌ಟಂಟಿನ್ ಚರ್‌ನೆಂಕೊವನ್ನು 'ಪ್ರಧಾನ ಕಾರ್ಯದರ್ಶಿ'ಯಾಗಿ ಆಯ್ಕೆ ಮಾಡಿದರು. ಅವನೂ ಕೊಡ ೧೯೮೫ರಲ್ಲಿ ತೀರಿಕೊಂಡನು. ಈ ಪರಿಸ್ಥಿತಿಗಳನ್ನು ಅರಿತ ಅಧ್ಯಕ್ಷ ರೇಗನ್ ಸೋವಿಯೆಟ್ ಒಕ್ಕೂಟಕ್ಕೆ ತಕ್ಕ ಪ್ರತಿಕ್ರಿಯೆ ಎಂದರೆ ಆಯ-ವ್ಯಯದಲ್ಲಿ ರಕ್ಷಣಾವೆಚ್ಚವನ್ನು (defense expenditure) ಹೆಚ್ಚಿಸುವುದು. ಆಗ ಹಣದ ಕೊರತೆ ಇರುವ ಸೋವಿಯೆಟ್ ಒಕ್ಕೂಟ ಅಮೆರಿಕದೊಂದಿಗೆ ಸ್ಪರ್ಧಿಸದೆ ಇರುವ ಹಣವನ್ನೆಲ್ಲ

ಸೈನ್ಯ ಮತ್ತು ಶಸ್ತ್ರಾಸ್ತ್ರ ಕೊಳ್ಳಲು ಉಪಯೋಗಿಸಿ ಮಿಕ್ಕ ಅಗತ್ಯಗಳಿಗೆ ಹಣವಿಲ್ಲದೆ ಜನರಲ್ಲಿ ಹಾಹಾಕಾರ ಉಂಟಾಗುತ್ತದೆ. ಆಗ ಈ 'ದುಷ್ಟ ಸಾಮ್ರಾಜ್ಯ'ವನ್ನು ಎದುರಿಸುವುದು ಕಷ್ಟವಾಗಲಾರದು ಎಂದು ಅವನು ಹವಣಿಸಿದ್ದನು.

೧೯೮೩ರಲ್ಲಿ ಸೋವಿಯೆಟ್ ಒಕ್ಕೂಟದ ವಾಯುಪಡೆಯ ವಿಮಾನಗಳು ದಕ್ಷಿಣ ಕೊರಿಯಾದ ಪ್ರಯಾಣಿಕರ ವಿಮಾನವನ್ನು ಅದು ಸೋವಿಯೆಟ್ ಗಡಿಯನ್ನು ಅತಿಕ್ರಮಿಸಿದೆ ಎಂಬ ನೆವದಿಂದ ಹೊಡೆದುರುಳಿಸಿದವು. ಆ ದುರಂತದಲ್ಲಿ ಮಡಿದವರ ಸಂಖ್ಯೆ ೨೬೯. ಆಗ ಅಮೆರಿಕ ಸೋವಿಯೆಟ್ ಒಕ್ಕೂಟದ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹಾಕಿತು.

ಸೋವಿಯೆಟ್ ಒಕ್ಕೂಟದ ಬಲಹೀನತೆಯ ಅನುಕೂಲ ಪಡೆಯಲು ಪೋಲೆಂಡಿನಲ್ಲಿ ಲೆಕ್ ವಲೇಸಾ ನಾಯಕತ್ವದಲ್ಲಿ ಒಗ್ಗಟ್ಟಿನ ಚಳುವಳಿ ಪ್ರಾರಂಭವಾಯಿತು. ಆಹಾರದ ಕೊರತೆ, ರಾಜಕೀಯ, ಮತ್ತು ಸಾಮಾಜಿಕ ಸಂದಿಗ್ಧ ಪರಿಸ್ಥಿತಿಗಳು ಅಶಾಂತಿ, ಅಸ್ಥಿರತೆ ಮತ್ತು ಪರಕೀಯತೆಯನ್ನು ವೃದ್ಧಿಸುತ್ತ ಹೋದವು. ಮುಷ್ಕರಗಳು ಮತ್ತು ಮುಷ್ಕರಗಳ ಬೆದರಿಕೆ ಅನಿಶ್ಚಯದ ನೆರಳು ಬದುಕನ್ನು ಆವರಿಸಿ ಜನರನ್ನು ಹತಾಶರನ್ನಾಗಿ ಮಾಡಿತ್ತು. ೧೯೮೧ರಲ್ಲಿ ಪೋಲೆಂಡಿನ ಸರ್ಕಾರ ದೇಶದಾದ್ಯಂತ ಮಾರ್ಷಲ್ ಕಾಯಿದೆಯನು ಘೋಷಿಸಿ ಒಗ್ಗಟ್ಟು (solidarity) ವೃತ್ತಿಸಂಘವನ್ನು ಮುಚ್ಚಿಸಿದರು. ಅಮೆರಿಕ ವಲೇಸಾನಿಗೆ ಬೆಂಬಲ ನೀಡಿ ಸರ್ವವಿಧದಲ್ಲಿ ಸಹಾಯ ಮಾಡಿತು. ಪೋಲೆಂಡಿನ ಈ ಒಗ್ಗಟ್ಟಿನ ಚಳುವಳಿ ಸೋವಿಯೆಟ್ ಒಕ್ಕೂಟ ಕುಸಿದು ಬೀಳುವುದನ್ನೇ ಕಾಯುತ್ತಿತ್ತು.

ರೇಗನ್ ಆಡಳಿದ ಮೊದಲನೆಯ ಅವಧಿಯಲ್ಲಿ ಅವನು ಲ್ಯಾಟಿನ್ ಅಮೆರಿಕದ ಬಗ್ಗೆ ತಳೆದ ರಾಜಕೀಯ ಧೋರಣೆ – ಎಲ್ಲಾ ರೀತಿಯ ಸರ್ಕಾರಗಳಿಗೆ – ಅವು ಪ್ರಜಾಪ್ರಭುತ್ವವಾಗಿರಲಿ ಅಥವಾ ಸರ್ವಾಧಿಕಾರವೇ ಆಗಿರಲಿ – ಅವು ಕಮ್ಯೂನಿಸಂ ವಿರುದ್ಧವಾಗಿದ್ದರೆ ಸಾಕು – ನೆರವು ನೀಡುವಂತೆ ನಿರ್ಧರಿಸಿದ್ದನು. ಎಲ್ ಸಾಲ್ವಡೋರ್‌ನಲ್ಲಿ (El Salvador) ಬಲಪಂಥೀಯ ಸರ್ವಾಧಿಕಾರ ಸರ್ಕಾರ ಹೊಸೆ ದುಆರ್ತೆಯ (Jose Duarte) ನಾಯಕತ್ವದಲ್ಲಿ ಜನರನ್ನು ಶೋಷಣೆ ಮಾಡುತ್ತಿತ್ತು. ಇದರ ವಿರುದ್ಧವಾಗಿ ಪ್ರಜೆಗಳ ಸಂಘಟಿತ ಗುಂಪು ಗೆರಿಲ್ಲ ಯುದ್ಧ ನಡೆಸಿತ್ತು. ಈ ಗೆರಿಲ್ಲಾಗಳಿಗೆ ಹೊರಗಿನ ಕಮ್ಯೂನಿಸ್ಟರು ಸಹಾಯ ಮಾಡುತ್ತಿದ್ದರು. ಆದ್ದರಿಂದ ಅಮೆರಿಕ ದುಆರ್ತೆಯ ಸರ್ಕಾರವನ್ನು ಬೆಂಬಲಿಸಿಎಲ್ಲ ರೀತಿಯ ನೆರವು ನೀಡಿತು. ಗ್ವಾಟೆಮಾಲಾದಲ್ಲೂ ಇದೇ ಕತೆ. ಹೈತಿ (Haiti) ಪ್ರಜೆಗಳು ಬಡತನ ಮತ್ತು ಭ್ರಷ್ಟಾಚಾರ ರಾಜಕೀಯಗಳಿಂದ ತಪ್ಪಿಸಿಕೊಳ್ಳಲು ವಿವಿಧ ರೀತಿಯಲ್ಲಿ ಪ್ರಯತ್ನಿಸಿ ಅಮೆರಿಕಕ್ಕೆ ವಲಸೆ ಹೋಗುತ್ತಿದ್ದರು. ನಿಕರಾಗುವಾದಲ್ಲಿ ಎಡಪಂಥೀಯ ಸ್ಯಾಂಡನಿಸ್ಟಾ ಸರ್ಕಾರದ ವಿರುದ್ಧ ಬಲಪಂಥೀಯ ಕಾಂಟ್ರಾ ದಂಗೆ ಕೋರರಿಗೆ ಅಮೆರಿಕ ನೆರವು ನೀಡಿದ್ದು ಕಾಂಗ್ರೆಸ್‌ನಲ್ಲಿ ಸುದೀರ್ಘವಾದ ಚರ್ಚೆಗೆ ಕಾರಣವಾಯಿತು.

ಲೆಬನಾನಿಗೆ ಸೈನ್ಯ ಕಳುಹಿಸಿ ೨೬೦ ಸೈನಿಕರನ್ನು ಕಳೆದುಕೊಂಡ ಅಧ್ಯಕ್ಷ ರೇಗನ್ ಮೆರೀನ್ ಸೈನಿಕರ ನೈತಿಕ ಸ್ಥೈರ್ಯ ಹೆಚ್ಚಿಸುವ ಸಲುವಾಗಿಯೋ ಅಥವಾ ಲೆಬನಾನಿನಲ್ಲಿ ಕಳೆದುಕೊಂಡ ಗೌರವವನ್ನು ಗ್ರನಾಡಾದಲ್ಲಿ ಸಂಪಾದಿಸಲೋ ಎಂಬಂತೆ ಗ್ರನಾಡಾದಲ್ಲಿ ಓದುತ್ತಿದ್ದ ೧೦೦೦ ಅಮೆರಿಕನ್ ವಿದ್ಯಾರ್ಥಿಗಳನ್ನು ಕಾಪಾಡುವ ಕುಂಟು ನೆವದಿಂದ ೪,೬೦೦ ಅಮೆರಿಕನ್ ಸೈನಿಕರನ್ನು ಅಲ್ಲಿಗೆ ರವಾನಿಸಿದನು. ಆದರೆ ಸೈನ್ಯದ ಮುಖ್ಯ ಗುರಿ: ಗ್ರನಾಡಾದಲ್ಲಿ ಕೆಲವು ದಿನಗಳ ಹಿಂದೆ ನಡೆದಿದ್ದ ರಾಜಕೀಯ ಘಟನೆಯನ್ನು ಸರಿಪಡಿಸುವುದಾಗಿತ್ತು. ಆ ಘಟನೆ ಎಂದರೆ ಕ್ಯೂಬಾದ ಮಾರ್ಕ್ಸ್‌ವಾದಿಗಳಿಂದ ಪ್ರಭಾವಿತ ರಾದ ಗ್ರನಾಡಾದ ಒಂದು ಗುಂಪು ಅಧಿಕಾರದಲ್ಲಿದ್ದ ಸರ್ಕಾರವನ್ನು ಬಲಾತ್ಕಾರದಿಂದ ಉರುಳಿಸಿ ದೇಶವನ್ನು ವಶಪಡಿಸಿಕೊಂಡಿದ್ದು. ಅಷ್ಟೊಂದು ಅಮೆರಿಕನ್ ಸೈನಿಕರಿಗೆ ಮಾರ್ಕ್ಸ್‌ವಾದಿ ಗ್ರನಾಡಾದವರನ್ನು ಹತ್ತಿಕ್ಕಿ ಪ್ರಜಾರಾಜ್ಯವನ್ನು ಸ್ಥಾಪಿಸಲು ಮೂರು ದಿನಗಳು ಹಿಡಿದವು. ಅಧ್ಯಕ್ಷ ರೇಗನ್‌ನ ಈ ಶೌರ್ಯಪ್ರದರ್ಶನವನ್ನು ಬಹುತೇಕ ಅಮೆರಿಕನ್ನರು ಮೆಚ್ಚಿ ಹಾಡಿ ಹೊಗಳಲಿಲ್ಲ. ಏಕೆಂದರೆ ಗ್ರನಾಡಾದಲ್ಲಿ ಅಮೆರಿಕದ ಶಕ್ತಿ ಪ್ರದರ್ಶನ ಕೆಲವರಿಗೆ ಕಟ್ಟುಮಸ್ತಾದ ಪೈಲ್ವಾನನೊಬ್ಬ ಶಾಲಾಬಾಲಕನನ್ನು ಹಿಡಿದು ಹೊಡೆದಂತೆ ಹಾಸ್ಯಾಸ್ಪದವಾಗಿತ್ತು. ಪತ್ರಕರ್ತರು ಕೂಡ ಈ ದಿಗ್ವಿಜಯಕ್ಕೆ ಹೆಚ್ಚಿನ ಗಮನ ಕೊಡಲಿಲ್ಲ. ಕಾಂಗ್ರೆಸ್ಸಿನ ಒಪ್ಪಿಗೆ ಇಲ್ಲದೆ ಅಧ್ಯಕ್ಷ ರೇಗನ್ ಸೈನ್ಯವನ್ನು ಯುದ್ಧಕ್ಕೆ ಕಳುಹಿಸಿದ್ದರ ಬಗ್ಗೆ ವಾಗ್ವಾದ ನಡೆಯಿತು. ಇದರಲ್ಲಿ ಸಂತೋಷಪಟ್ಟವರು ಎಂದರೆ ರೇಗನ್‌ನ ನಿಷ್ಠಾವಂತ ಭಕ್ತರು. ಇವರು ತಮ್ಮ ನಾಯಕನ ವಿಜಯ ತಮ್ಮ ಟೋಪಿಗೆ ಸಿಕ್ಕಿಸಿದ ಇನ್ನೊಂದು ಗರಿ ಎಂದು ಭಾವಿಸಿ ಮೆರದಾಡಿದರು.

೧೯೮೪ರ ಚುನಾವಣೆ

ಈ ಚುನಾವಣೆ ಡೆಮೊಕ್ರಾಟಿಕ್ ಪಕ್ಷದಲ್ಲಿ ಎರಡು ಸಮಸ್ಯೆಗಳನ್ನು ಸೃಷ್ಟಿಸಿತು: ಪಕ್ಷದ ಒಗ್ಗಟ್ಟನ್ನು ಸಾಧಿಸುವ ಕಷ್ಟ ಮತ್ತು ಸಮಾವೇಶದ ಪ್ರಧಾನ ಭಾಷಣಕಾರ ನ್ಯೂಯಾರ್ಕ್ ನಗರದ ಮಾರಿಯೋ ಕೋಮೊ ವರ್ಣಿಸಿದ 'ಸಂಪದ್ಭರಿತ ಅಭ್ಯುದಯ ಅಮೆರಿಕ'ವನ್ನು ಜನರು ನಂಬುವಂತೆ ಮಾಡುವುದು. ಅಧ್ಯಕ್ಷ ಸ್ಥಾನಕ್ಕೆ ನಾಮಕರಣಗೊಳ್ಳಲು ಪಕ್ಷದ ಮುಂಚೂಣಿಯಲ್ಲಿದ್ದವರು ಇಬ್ಬರು ಅಭ್ಯರ್ಥಿಗಳು ಮಾತ್ರ: ಮಾಜಿ ಉಪಾಧ್ಯಕ್ಷ ವಾಲ್ಟರ್ ಮಾಂಡೇಲ್ ಮತ್ತು ಸೆನೆಟರ್ ಗ್ಯಾರಿ ಹಾರ್ಟ್ (Gary Hart). ಈ ಚುನಾವಣೆಯ ವೈಶಿಷ್ಟ್ಯವೆಂದರೆ ಕರಿಯ ಅಮೆರಿಕನ್ ಅಭ್ಯರ್ಥಿ ಜೆಸ್ಸೀ ಜಾಕ್‌ಸನ್ (Jesse Jackson) ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದ್ದು. ಇವನ ಬೆಂಬಲಿಗರು ಎಲ್ಲ ರಾಜಕೀಯ ಪಕ್ಷಗಳ/ಒಳಗುಂಪುಗಳ/ವರ್ಣಗಳ (races) ಸಮ್ಮಿಶ್ರಣವನ್ನು 'ಕಾಮನಬಿಲ್ಲ ಸಮ್ಮಿಶ್ರಣ' (Rainbow Coalition) ಎಂದು ಕರೆದರು. ಈ ಸಮ್ಮಿಶ್ರಣ ಅಮೆರಿಕದ ಅಲ್ಪಸಂಖ್ಯಾತ ರಲ್ಲಿ ಆಸೆ ಮತ್ತು ಹುಮ್ಮಸ್ಸು ಹುಟ್ಟಿಸಿ ಗಣನೀಯ ಸಂಖ್ಯೆಯಲ್ಲಿ ಕರಿಯರು ಮತ್ತು ಹಿಸ್ಪಾನಿಕ್ (hispanic) ಜನಾಂಗ ಮೊದಲ ಬಾರಿಗೆ ತಮ್ಮ ಹೆಸರುಗಳನ್ನು

ನೋಂದಾಯಿಸುವಂತೆ (registration) ಮಾಡಿತು. ಡೆಮೊಕ್ರಾಟಿಕ್ ಪಕ್ಷದ ಸಮಾವೇಶದಲ್ಲಿ ವಾಲ್ಟರ್ ಮಾಂಡೆಲ್ (Walter Mondale) ಅಧ್ಯಕ್ಷಸ್ಥಾನದ ಅಭ್ಯರ್ಥಿಯಾಗಿ ನಾಮಕರಣಗೊಂಡನು. ಅವನು ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಸದಸ್ಯೆ ಜೆರಾಲ್ಡೀನ್ ಫೆರಾರೊ (Geraldine Ferraro) ಎಂಬ ಮಹಿಳೆಯನ್ನು ಆಯ್ಕೆ ಮಾಡಿಕೊಂಡನು. ಮಹಿಳೆಯೊಬ್ಬಳು ರಾಷ್ಟ್ರದ ಉನ್ನತ ಸ್ಥಾನಕ್ಕೆ ಸ್ಪರ್ಧಿಸಿದ್ದು ಇದೇ ಮೊದಲು. ಅಲ್ಲದೆ ಅಮೆರಿಕದ ರಾಜಕೀಯದಲ್ಲಿ ಇದು ಒಂದು ಮೈಲಿಗಲ್ಲಾಯಿತು.

ರಿಪಬ್ಲಿಕನ್ ಪಕ್ಷದಲ್ಲಿ ಅಧ್ಯಕ್ಷ ರೇಗನ್‌ನನ್ನು ಎದುರಿಸುವವರು ಯಾರೂ ಇರಲಿಲ್ಲ. ಅವನು ನಾಮಕರಣಗೊಂಡ ಮೇಲೆ ಉಪಾಧ್ಯಕ್ಷ ಸ್ಥಾನದಲ್ಲಿ ಜಾರ್ಜ್ ಬುಷ್ ಮುಂದುವರಿದನು. ಅವರು ಚುನಾವಣೆಯಲ್ಲಿ ಗೆಲ್ಲುವುದರಲ್ಲಿ ಅನುಮಾನವಿರಲಿಲ್ಲ. ಸುಧಾರಿಸಿದ ಆರ್ಥಿಕ ಪರಿಸ್ಥಿತಿ ರೇಗನ್-ಬುಷ್ ಮರುಚುನಾವಣೆಗೆ ಪ್ರಬಲ ಕಾರಣವಾಯಿತು. ದೂರದರ್ಶನದಲ್ಲಿ ಪ್ರಸಾರಗೊಂಡ ರೇಗನ್‌ನ ಹಾಲಿವುಡ್ ರೀತಿಯ ಹಾವಭಾವಗಳು, ಆಕರ್ಷಣೀಯ ನಿಲುವು, ಪಳಗಿದ ಮಾಜಿ ಸಿನೆಮಾ ನಟನ ಮುಂದೆ ಮಾಂಡೇಲ್‌ನ ಗಂಭೀರ ಮುಖಚರ್ಯೆ ಮತ್ತು ಪ್ರಯತ್ನಪೂರ್ವಕವಾಗಿ ಮಾತನಾಡುವ ಶೈಲಿ ಜನರಿಗೆ ಕಳಪೆ ಎನ್ನಿಸಿದ್ದರೆ ಆಶ್ಚರ್ಯವಿಲ್ಲ. ಮಾಂಡೇಲ್ ಸತ್ಯವಂತ, ನಿಷ್ಠಾವಂತ ವ್ಯಕ್ತಿ ಮತ್ತು ಇದ್ದುದನ್ನು ಇದ್ದ ಹಾಗೆ ಹೇಳುವ ಪ್ರಾಮಾಣಿಕ. ಆದರೆ ಚುನಾವಣೆಯ ಪ್ರಚಾರದಲ್ಲಿ ಈ ರೀತಿಯ ನೇರ ನಡವಳಿಕೆ ಅಮೆರಿಕನ್ ಜನರನ್ನು ಆಕರ್ಷಿಸುವುದಿಲ್ಲ. ಮಾಂಡೇಲ್ ಮಾಡಿದ ತಪ್ಪು ಎಂದರೆ ಖೋತಾ ಆಯ-ವ್ಯಯದ ದೀರ್ಘಾವಧಿ ದುಷ್ಪರಿಣಾಮಗಳನ್ನು ಜನರಿಗೆ ವಿವರಿಸಿ, ಅದನ್ನು ಭರ್ತಿ ಮಾಡುವ ಅವಶ್ಯಕತೆಯನ್ನು, ಅನಿವಾರ್ಯತೆಯನ್ನು ಒತ್ತಿ ಹೇಳಿ, ಹಾಗೆ ಮಾಡಲು ತೆರಿಗೆಗಳನ್ನು ಏರಿಸುವುದು ಅಗತ್ಯ ಎನ್ನುವ ನಿಜವನ್ನು ಹೇಳಿದ್ದು. ಆದರೆ ವಾಕ್‌ಚತುರನಾದ ರೇಗನ್ ಜನರನ್ನು ಕುರಿತು: 'Are you better off now than you were during the Carter years' ಎಂದು ಪ್ರಶ್ನಿಸುತ್ತಿದ್ದನು. ಇದಕ್ಕೆ ಉತ್ತರ – ಚುನಾವಣೆಯ ಫಲಿತಾಂಶದಲ್ಲಿ ವ್ಯಕ್ತಗೊಂಡಿತು. ರೇಗನ್‌ಗೆ ೫೨೫ ಎಲೆಕ್ಟರಲ್ ಮತಗಳು ದೊರಕಿದ್ದವು. ಮಿನೆಸೋಟ ಮತ್ತು ವಾಷಿಂಗ್‌ಟನ್ ಡಿ.ಸಿ.ಗಳನ್ನು ಬಿಟ್ಟು ಮಿಕ್ಕ ಎಲ್ಲ ಸಂಸ್ಥಾನಗಳಲ್ಲಿ ರೇಗನ್ ಜಯಗಳಿಸಿದ್ದನು.

ರೇಗನ್ ಆಡಳಿತದ ಎರಡನೆಯ ಅವಧಿಯಲ್ಲಿ ಕೂಡ ಆರ್ಥಿಕ ಸ್ಥಿತಿ ಗತಿಗಳು ಆಡಳಿತ ಮಂಡಳಿ ತೀವ್ರ ಗಮನ ಕೊಡಬೇಕಾಗಿದ್ದ ವಿಷಯಗಳಾಗಿದ್ದವು. ೧೯೮೪ರಲ್ಲಿ ಅಮೆರಿಕದ ಆರ್ಥಿಕ ಬೆಳವಣಿಗೆ ಶೇಕಡಾ ೯.೮ರಷ್ಟು ವಿಸ್ತಾರಗೊಂಡಿತು. ೧೯೫೧ರಿಂದ ಈ ಬೆಳವಣಿಗೆ ಇಷ್ಟು ವಿಸ್ತಾರಗೊಂಡಿರಲಿಲ್ಲ. ವೈಯಕ್ತಿಕ ಆದಾಯ ಶೇಕಡಾ ೬.೮ರಷ್ಟು ಏರಿತು. ಮೂರು ವರ್ಷಗಳ ನಂತರ ಸಟ್ಟಾ ಮಾರುಕಟ್ಟೆ ಕುಸಿಯಿತು. ಅಮೆರಿಕ ಸಾಲಗಾರ

ರಾಷ್ಟ್ರವಾಯಿತು. ಮೊದಲನೆಯ ಜಾಗತಿಕ ಯುದ್ಧದಿಂದೀಚೆಗೆ ಹೀಗೆ ಆಗಿದ್ದು ಇದೇ ಮೊದಲು. ಆಯವ್ಯಯದಲ್ಲಿ ಖೋತಾ ಮುಂದುವರಿಯಿತು. ಉಳಿತಾಯ ಮತ್ತು ಸಾಲ ಸಂಸ್ಥೆಗಳು ಅನಿಯಂತ್ರಣದಿಂದಾಗಿ ಸ್ವಯಂಕೃತ ಅಪರಾಧಗಳಿಂದ ಮುಳುಗುವ ಸ್ಥಿತಿಗೆ ಬಂದಿದ್ದು ಫೆಡರಲ್ ಸರ್ಕಾರ ಸಾರ್ವಜನಿಕರ ಹಣ ಸುರಿದು ಅವುಗಳನ್ನು ಉಳಿಸ ಬೇಕಾಯಿತು. ಈ ಸಂಸ್ಥೆಗಳನ್ನು ಉದ್ಧರಿಸುವ ಕೆಲಸ ರೇಗನ್ ಅಧ್ಯಕ್ಷತೆ ಮುಗಿದು ಬುಷ್ ಅಧಿಕಾರದಲ್ಲಿಯೂ ಮುಂದುವರಿಯಿತು. ಆದಾಗ್ಯೂ ಅಮೆರಿಕದ ಪ್ರಜೆಗಳು ಸ್ಥಿತಿವಂತರಾಗುತ್ತ ಹೋದರು. ಕುಟುಂಬದ ಆದಾಯ ಶೇಕಡಾ ೧೦ಕ್ಕಿಂತಲೂ ಹೆಚ್ಚಾಯಿತು. ೧೯೮೬ರಲ್ಲಿ ಒಂದು ಪ್ರಮುಖ ತೆರಿಗೆ ಸುಧಾರಣಾ ಕಾಯಿದೆಯನ್ನು ಅಂಗೀಕರಿಸಲಾಯಿತು. ರೇಗನ್ ಆಡಳಿತದ ಕೊನೆಯ ವರ್ಷದಲ್ಲಿ ನಿರುದ್ಯೋಗ ಬಹಳ ಕಡಿಮೆಯಾಗಿತ್ತು. ೧೯೭೪ರಿಂದ ನಿರುದ್ಯೋಗ ಇಷ್ಟು ಕಡಿಮೆಯಾದದ್ದು ಇದೇ ಮೊದಲು.

ಗ್ರಾಮ್-ರೆಡ್‌ಮನ್ ಕಾಯಿದೆ ಮತ್ತು ತೆರಿಗೆ ಸುಧಾರಣೆ ಕಾಯಿದೆ – ಇವು ಹೆಚ್ಚುತ್ತಲಿದ್ದ ಖೋತಾ ಆಯ-ವ್ಯಯದ ಮೇಲೆ ಹೆಚ್ಚಿನ ಪರಿಣಾಮ ಮಾಡಿದವು. ಈ ಕಾಯಿದೆಗಳ ಗುರಿ – ೧೯೯೧ರ ಒಳಗೆ ಫೆಡರಲ್ ಸರ್ಕಾರದ ಖೋತಾವನ್ನು ಸಂಪೂರ್ಣವಾಗಿ ಅಳಿಸಿಹಾಕುವುದು. ಹಾಗೆ ಮಾಡಲು ಅನುಸರಿಸುವ ವಿಧಾನಗಳು – ಸರ್ಕಾರದ ಖರ್ಚು ವೆಚ್ಚಗಳನ್ನು ಕಡ್ಡಾಯವಾಗಿ ಕಡಿಮೆ ಮಾಡುವುದು. ಸಮತೋಲನ ಆಯ-ವ್ಯಯವನ್ನು ಅನುಷ್ಠಾನಕ್ಕೆ ತರಲು ರಾಜ್ಯಾಂಗ ತಿದ್ದುಪಡಿ ಮಾಡಬೇಕೆಂಬ ರೇಗನ್ ಮಂಡಿಸಿದ ಮಸೂದೆ ಸೆನೆಟ್‌ನಲ್ಲಿ ಬಿದ್ದುಹೋಯಿತು. ೧೯೫೦ರಿಂದ ತೆರಿಗೆ ಸುಧಾರಣೆಯಾಗಿರಲಿಲ್ಲ. ೧೯೮೯ರ ಆದಾಯ ತೆರಿಗೆ ಕಾಯಿದೆ ತೆರಿಗೆ ನಿಬಂಧನೆಗಳನ್ನು ಪರಿಷ್ಕಾರಗೊಳಿಸಿ, ತೆರಿಗೆದಾರರನ್ನು ವರ್ಗೀಕರಣ ಮಾಡಿ, ಆದಷ್ಟು ತೆರಿಗೆದಾರರನ್ನು ಒಂದೊಂದು ವರ್ಗದೊಳಗೆ ತುಂಬಿಸಿ, ವರ್ಗಗಳ ಸಂಖ್ಯೆಗಳನ್ನು ಕಡಿಮೆ ಮಾಡಿದರು. ಗ್ರಾಮ್-ರೆಡ್‌ಮನ್ ಮತ್ತು ೧೯೮೬ರ ಆದಾಯ ತೆರಿಗೆ ಕಾಯಿದೆಗಳನ್ನು ಶ್ರೀಮಂತ ವರ್ಗದ ತೆರಿಗೆಯ ದರವನ್ನು ಶೇಕಡಾ ೫೦ರಿಂದ ಶೇಕಡಾ ೩೮ಕ್ಕೆ ಇಳಿಸಿದರು. ಶೇಖರಿಸಬೇಕಾದ ತೆರಿಗೆಯ ಮೊತ್ತದಲ್ಲಿ ಬದಲಾವಣೆ ಮಾಡಲಿಲ್ಲ. ಮೊದಲು ಎಷ್ಟು ತೆರಿಗೆ ವಸೂಲು ಮಾಡುತ್ತಿದ್ದರೋ ಅಷ್ಟೇ ತೆರಿಗೆ ಕೊಡಬೇಕಾಗಿತ್ತು. ಧನಿಕರು ತಮ್ಮ ಹಣವನ್ನು ತೆರಿಗೆ ತಪ್ಪಿಸಲು ಬಳಸುತ್ತಿದ್ದ ರಕ್ಷಣೆಗಳನ್ನು (taxa shelter) ತೆಗೆದುಹಾಕಿದರು.

೧೯೮೭ರ ಮೊದಲ ಭಾಗದಲ್ಲಿ ಸಟ್ಟಾ ಮಾರುಕಟ್ಟೆ ಏರುತ್ತ ಹೋಯಿತು. ಒಂದೊಂದು ದಿನ ಕಂಪ್ಯೂಟರ್ ತಪ್ಪುಗಳಿಂದಾಗಿ (glitches) ಮಾರುಕಟ್ಟೆ ಅಲ್ಲೋಲ ಕಲ್ಲೋಲವಾಗುತ್ತಿತ್ತು. ೧೯೨೯ರ ಮಹಾಕುಸಿತದಿಂದೀಚೆಗೆ ಆಗದಿದ್ದ ಸಟ್ಟಾ ಮಾರುಕಟ್ಟೆಯ ಒಂದು ದಿನದ ಅಪಾರ ನಷ್ಟ (ಒಂದೇ ದಿನದಲ್ಲಿ ೮೮ ಪಾಯಿಂಟ್ ಗಳಿಗಿಂತಲೂ ಹೆಚ್ಚಿನ ಕುಸಿತ) ೧೯೮೭ರ ಅಕ್ಟೋಬರ್ ೧೯ರಂದು ಜರುಗಿತು. ಈ

ಆರ್ಥಿಕ ಅನಾಹುತಕ್ಕೆ ವ್ಯಾಪಾರ ವ್ಯವಸ್ಥೆಯನ್ನು ಕಂಪ್ಯೂಟರಕರಿಸಿದ್ದು (computerized trading) ಮತ್ತು ಅಸ್ಥಿರವಾದ ಅಂತರರಾಷ್ಟ್ರೀಯ ಮಾರುಕಟ್ಟೆಗಳು ಕಾರಣವಾದವು. ಇದರ ಪರಿಣಾಮವಾಗಿ ಸೆಕ್ಯೂರಿಟಿಸ್ ಮತ್ತು ಎಕ್ಸ್‌ಚೇಂಜ್ ಕಮಿಷನ್ (Securities and Exchange Commission) ಕಂಪ್ಯೂಟರ್ ಮೂಲಕ ವ್ಯಾಪಾರ ವ್ಯವಹಾರ ಮಾಡುವುದರ ಮೇಲೆ ನಿರ್ಬಂಧಗಳನ್ನು ಹಾಕಿತು. ಕಂಪ್ಯೂಟರ್‌ನ ಈ ವ್ಯವಹಾರ ಏನಾದರೂ ತಪ್ಪಾದರೆ ಕೂಡಲೇ ಎಲ್ಲ ಕಂಪ್ಯೂಟರ್‌ಗಳು ತಮ್ಮಷ್ಟಕ್ಕೆ ತಾವೇ ನಿಂತುಹೋಗುವಂತೆ ಮಾಡಿದರು. ೧೯೮೭ರ ಸಟ್ಟಾ ಮಾರುಕಟ್ಟೆಯ ಅನಾಹುತದ ನಂತರ ಮಾರುಕಟ್ಟೆ ಚೇತರಿಸಿಕೊಂಡಿತು, ಆದರೆ ಸ್ಟಾಕ್‌ಗಳಲ್ಲಿ ಹಣ ಹೂಡಿದ ಬಹುತೇಕ ಜನರು ಹಣ ಕಳೆದುಕೊಂಡರು. ಆಶ್ಚರ್ಯವೆಂದರೆ ರಾಷ್ಟ್ರದ ಆರ್ಥಿಕ ಸ್ಥಿತಿಗತಿಗಳು ಸಟ್ಟಾ ಮಾರುಕಟ್ಟೆಯ ಸ್ಥಿತಿಗಿಂತಲೂ ಉತ್ತಮವಾಗಿದ್ದವು.

೧೯೮೬ರ ಜನವರಿ ೨೮ರಂದು ಅಮೆರಿಕ ಹಾಗೂ ಪ್ರಪಂಚದಾದ್ಯಂತೆ ದೂರದರ್ಶನ ವೀಕ್ಷಿಸುತ್ತಿದ್ದ ಕೋಟ್ಯಾಂತರ ಜನರು ಬೆಚ್ಚಿ ಬೀಳುವಂತೆ ಬಾಹ್ಯಾಕಾಶದಲ್ಲಿ 'ಚಾಲೆಂಜರ್' ಷಟಲ್ (shuttle) ಆಸ್ಫೋಟಗೊಂಡಿತು. ಫ್ಲಾರಿಡಾದ ಕೇಪ್ಕೆನಾವರಲ್‌ನಿಂದ ಹಾರಿಸಿದ ಷಟಲ್ ಸ್ವಲ್ಪ ಸಮಯದಲ್ಲೇ ಸಿಡಿದು ಬೆಂಕಿಯ ಬೃಹದಾಕಾರದ ಚೆಂಡಾಗಿ, ಆ ಚೆಂಡು ಮತ್ತೆ ಆಸ್ಫೋಟಗೊಂಡು ಅಗ್ನಿ ಅಂತರಿಕ್ಷವನ್ನೆಲ್ಲ ಆವರಿಸಿದಂತೆ ಕಾಣಿಸಿತು. ಇದರೊಳಗಿನ ಸಿಬ್ಬಂದಿ – ಏಳೂ ಜನ ಬಾಹ್ಯಾಕಾಶ ಯಾತ್ರಿಗಳು ಅಗ್ನಿಗೆ ಆಹುತಿಯಾದರು. ಅವರಲ್ಲಿ 'ಬಾಹ್ಯಾಕಾಶದಲ್ಲಿ ಉಪಾಧ್ಯಾಯ' ಎನ್ನುವ ಸ್ಪರ್ಧೆಯಲ್ಲಿ ಗೆದ್ದು ಈ ಯಾತ್ರೆಗೆ ಅರ್ಹಳೆಂದು ಆಯ್ಕೆಗೊಂಡ ಕ್ರಿಸ್ಟಾ ಮೆಕಾಲಿಫ್ (Christa McAuliffe) ಒಬ್ಬಳು. ಚಾಲೆಂಜರ್ ಹೊಸ ಬಾಹ್ಯಾಕಾಶ ಷಟಲ್ ಅಲ್ಲ. ಅದು ಒಂಬತ್ತು ಸಲ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿ ಬಂದ ನೌಕೆ. ಸರ್ಕಾರ ನಡೆಸಿದ ತನಿಖೆಯಿಂದ ಚಾಲೆಂಜರ್ ಅನಾಹುತಕ್ಕೆ ಆ ಷಟಲ್ ಯಂತ್ರದ ಘನ ಇಂಧನವನ್ನು (solid fuel) ಉರಿಸಿ ಮೇಲಕ್ಕೆ ಸೆಳೆಯುವ 'rocket' ಮುಚ್ಚಳಿಕೆ ಕೆಟ್ಟು ಹೋಗಿದ್ದರಿಂದ (faulty seal) ಈ ಆಕಸ್ಮಿಕವಾಯಿತೆಂದು ನಿರ್ಧರಿಸಿತು. ತನಿಖೆಯ ನಂತರ ಪ್ರಕಟಿಸಿದ ವರದಿಯಲ್ಲಿ ಷಟಲ್‌ನಲ್ಲಿರುವ ಈ ತೊಂದರೆಯ ಬಗ್ಗೆ NASAಕ್ಕೆ (National Aeronautics and Space Administration) ಮುನ್ನೆಚ್ಚರಿಕೆ ಕೊಟ್ಟಿದ್ದಾಗಿ ತಿಳಿಸಿದೆ. ಬಾಹ್ಯಾಕಾಶ ಪರಿಶೋಧನೆಗೆ ಒದಗಿಸುವ ಹಣದ ಬಗ್ಗೆ ಚರ್ಚೆ ಕಾಂಗ್ರೆಸ್‌ನಲ್ಲಿ ದೀರ್ಘಕಾಲ ನಡೆಯಿತು. ಕಡೆಯಲ್ಲಿ ಈ ಸಂಶೋಧನೆಗಳು ಮುಂದುವರಿಯಲು ಕಾಂಗ್ರೆಸ್ ಒಪ್ಪಿಗೆ ಕೊಟ್ಟಿತು.

ರೇಗನ್ ಆಡಳಿತ ಕಾಲದಲ್ಲಿ ಸೆನೆಟ್ ರಿಪಬ್ಲಿಕನ್ ಪಕ್ಷದ ವಶದಲ್ಲಿದ್ದರೂ ಅವನು ಹೊಸ ಕಾಯಿದೆಗಳನ್ನು ಜಾರಿಗೆ ತರುವುದರಲ್ಲಿ ಯಶಸ್ವಿಯಾಗಲಿಲ್ಲ. ೧೯೮೬ರಲ್ಲಿ ಡೆಮೊಕ್ರಾಟರು ಸೆನೆಟ್ ಮತ್ತು ಕಾಂಗ್ರೆಸ್ ಮೇಲೆ ನಿಯಂತ್ರಣ ಗಳಿಸಿದರು. ರೇಗನ್

'ವೀಟೋ' ಮಾಡಿದ್ದರೂ ಸಹಾ ಕಾಂಗ್ರೆಸ್ ಅದನ್ನು ರದ್ದುಗೊಳಿಸಿ ಮೂರು ಕಾಯಿದೆಗಳನ್ನು ಜಾರಿಗೆ ತಂದಿತು – ೧೯೮೮ರ ನಿರ್ಮಲ ವಾಯು (clean air) ಕಾಯಿದೆ, ಸಾಮೂಹಿಕ ಸಾರಿಗೆ (mass transit act) ಕಾಯಿದೆ ಮತ್ತು ೧೯೮೬ರ ವಲಸೆ ನಿಯಂತ್ರಣ ಕಾಯಿದೆ. ವಲಸೆ ಬರುವ ಕಾಯಿದೆ ವಲಸೆ ವಿದೇಶೀಯರ ಮೇಲೆ ಹೊಸ ನಿರ್ಬಂಧಗಳನ್ನು ಹೇರಿತು. ಹಾಗೆಯೇ ವಿದೇಶೀಯರನ್ನು ಕೆಲಸಕ್ಕೆ ತೆಗೆದುಕೊಳ್ಳುವವರ ಮೇಲೂ ನಿರ್ಬಂಧಗಳನ್ನು ಹಾಕಿತು. ಆದಾಗ್ಯೂ ಈ ಕಾಯಿದೆ ನ್ಯಾಯ ಉಲ್ಲಂಘಿಸಿ ಈ ದೇಶದಲ್ಲಿ ಉಳಿದುಕೊಂಡ ವಿದೇಶೀಯರಿಗೆ ನ್ಯಾಯಬದ್ಧ ಸ್ಥಾನ ಗಳಿಸುವ ಕ್ರಮಗಳ ಮಾಹಿತಿ ಒದಗಿಸಿತ್ತು. ಎರಡನೆಯ ಜಾಗತಿಕ ಯುದ್ಧದ ಸಮಯದಲ್ಲಿ ಜಪಾನೀಯ ಅಮೆರಿಕನ್ನರನ್ನು ಬಲಾತ್ಕಾರದಿಂದ ಅವರವರ ಮನೆಗಳಿಂದ ಹೊರಡಿಸಿ ಕೊಂಡೊಯ್ದು ಪ್ರತ್ಯೇಕ ಪ್ರದೇಶದಲ್ಲಿ ನಿರ್ಮಿಸಿದ ಶಿಬಿರಗಳಲ್ಲಿ ಕೂಡಿ ಹಾಕಿದ್ದರು. ೧೯೮೮ರಲ್ಲಿ ಕಾಂಗ್ರೆಸ್ ಜಾರಿಗೆ ತಂದ ಮತ್ತು ರೇಗನ್ ಒಪ್ಪಿಗೆ ಇತ್ತು ರುಜು ಮಾಡಿದ ಕಾಯಿದೆಯ ಪ್ರಕಾರ ಈ ಜಪಾನೀಯ ಅಮೆರಿಕನ್ನರ ವಂಶ/ಸಂತತಿಯವರಿಗೆ ೨೦ ಸಾವಿರ ಡಾಲರ್‌ಗಳನ್ನು ವಿತರಣೆ ಮಾಡಲಾಯಿತು. ಮತ್ತೊಂದು ಮುಖ್ಯ ಕಾಯಿದೆ – ೧೯೮೮ರ Welfare Reform Act. ಇದರ ಪ್ರಕಾರ ಒಬ್ಬಂಟಿ ತಾಯಿ ಅಥವಾ ತಂದೆಗೆ ಮೂರು ವರ್ಷಗಳ ಮೇಲಿನ ಮಕ್ಕಳಿದ್ದರೆ, ಅಂಥವರು ಕೆಲಸಕ್ಕೆ ಸೇರಬೇಕಾಗಿತ್ತು ಅಥವಾ ಕೆಲಸಕ್ಕೆ ತರಬೇತಿ ನೀಡುವ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಸೇರಿಕೊಳ್ಳಬೇಕಿತ್ತು.

ನ್ಯಾಯವ್ಯವಸ್ಥೆ ರಾಷ್ಟ್ರದ ಅಡಿಗಲ್ಲು. ರಾಷ್ಟ್ರದ ಧ್ಯೇಯ ಧೋರಣೆಗಳು ಮತ್ತು ಕಾರ್ಯಾಚರಣೆಗಳು ರಾಜ್ಯಾಂಗಬದ್ಧವಾಗಿವೆಯೇ? ಜಾರಿಯಲ್ಲಿರುವ ಅಥವಾ ಬರಲಿರುವ ಕಾಯಿದೆಗಳು ವ್ಯಕ್ತಿಸ್ವಾತಂತ್ರ್ಯಕ್ಕೆ ಪೂರಕವಾಗಿವೆಯೇ ಅಥವಾ ಮಾರಕವಾಗಿವೆಯೇ? ಈ ಮುಖ್ಯ ಅಂಶಗಳನ್ನು ಸ್ಪಷ್ಟ ಪಡಿಸುವುದು ರಾಷ್ಟ್ರದ ನ್ಯಾಯವ್ಯವಸ್ಥೆಯ ಅಂಗಗಳಾದ ನ್ಯಾಯಾಲಯಗಳು. ಒಂದು ರಾಷ್ಟ್ರ ಪ್ರಜಾರಾಜ್ಯವೇ ಅಥವಾ ಸರ್ವಾಧಿಕಾರವೇ ಎನ್ನುವುದನ್ನು ಆ ರಾಷ್ಟ್ರದ ನ್ಯಾಯವಿತರಣೆಯನ್ನು ಅವಲೋಕಿಸಿದಾಗ ಗೊತ್ತಾಗುತ್ತದೆ. ರೋನಾಲ್ಡ್ ರೇಗನ್ ರಾಷ್ಟ್ರಕ್ಕೆ ಕೊಟ್ಟ ಚರಿತ್ರಾರ್ಹ ಕೊಡುಗೆಯೆಂದರೆ ಅವನು ರಾಷ್ಟ್ರದ ವಿವಿಧ ನ್ಯಾಯಲಯಗಳಿಗೆ ನೇಮಕ ಮಾಡಿಹೋಗಿರುವ ನ್ಯಾಯಾಧೀಶರು! ಅವನ ಸಂಪ್ರದಾಯ ತತ್ವ ಅವನು ಆಯ್ಕೆ ಮಾಡಿದ ನ್ಯಾಯಮೂರ್ತಿಗಳಲ್ಲಿ ವ್ಯಕ್ತವಾಗುತ್ತದೆ. ವಾಸ್ತವವಾಗಿ ರೇಗನ್ ನೇಮಕ ಮಾಡುವ ಮೊದಲು ಒಂದು ಅನೌಪಚಾರಿಕ ಪರೀಕ್ಷೆ ನಡೆಸಿ ಆ ವ್ಯಕ್ತಿ ಸಾಂಪ್ರದಾಯಿಕ (conservative) ತತ್ವಗಳನ್ನು ನ್ಯಾಯಾಧೀಶ ಪದವಿಯಲ್ಲಿ ಅನುಷ್ಠಾನಕ್ಕೆ ತರಬಲ್ಲನೆ/ಳೆ ಎನ್ನುವುದನ್ನು ದೃಢಪಡಿಸಿಕೊಳ್ಳುತ್ತಿದ್ದನು. ಪರೀಕ್ಷೆ ಪ್ರಶ್ನೆಗಳು ಕೆಲವು ವಿವಾದಾತ್ಮಕ ವಿಷಯಗಳನ್ನು ಒಳಗೊಂಡಿರುತ್ತಿದ್ದವು – ಗರ್ಭಪಾತ (abortion), ಅಪರಾಧಿ/ಖೈದಿಗಳ ಹಕ್ಕುಗಳು, ಮತಧರ್ಮ ಮತ್ತು ಸರ್ಕಾರವನ್ನು ಬೇರ್ಪಡಿಸುವುದು ಮತ್ತು 'affirmative action'. ರೇಗನ್ ಆಡಳಿತದ ಎರಡನೆಯ

ಅವಧಿ ಮುಗಿಯುವ ವೇಳೆಗೆ ಶ್ರೇಷ್ಠ ನ್ಯಾಯಾಲಯದಲ್ಲಿ ಸಂಪ್ರದಾಯ ತತ್ವಪಾಲಕ ನ್ಯಾಯಾಧೀಶರು ಹೆಚ್ಚಿನ ಸಂಖ್ಯೆಯಲ್ಲಿದ್ದರು (majority). ಈ ಪದವಿಗೆ ಮೊಟ್ಟಮೊದಲ ಮಹಿಳಾನ್ಯಾಯಾದೀಶಳನ್ನು (ಸಾಂಡ್ರಾ ಡೇ ಒಕಾನರ್) ನೇಮಿಸಿದ ರೇಗನ್ ತನಗೆ ಬೇಕಾದ ಇತರರನ್ನು ನೇಮಕ ಮಾಡಲು ಆಗಿನ ಮುಖ್ಯ ನ್ಯಾಯಾಧೀಶನಾಗಿದ್ದ ವಾರೆನ್ ಬರ್ಗರ್ (Warren Burger) ನಿವೃತ್ತನಾಗುವವರೆಗೂ ಕಾಯಬೇಕಾಯಿತು. ೧೯೮೬ರಲ್ಲಿ ಬರ್ಗರ್ ನಿವೃತ್ತನಾದ ನಂತರ ಗೌರವಾನ್ವಿತ ಸಂಪ್ರದಾಯಸ್ಥನಾಗಿದ್ದ ವಿಲಿಯಂ ರೈನ್‌ಕ್ವಿಸ್ಟ್‌ನನ್ನು (William Rehnquist) ಮುಖ್ಯ ನ್ಯಾಯಾಧೀಶನನ್ನಾಗಿ ರೇಗನ್ ನೇಮಕ ಮಾಡಿದನು. ಇದಾದ ನಂತರ ರೇಗನ್ ಆಂಟನಿನ್ ಸ್ಕಲೀಯನನ್ನು (Antonin Scalia) ನ್ಯಾಯಾಧೀಶನನ್ನಾಗಿ ನೇಮಕ ಮಾಡಿದನು. ಇವನು ಶ್ರೇಷ್ಠ ನ್ಯಾಯಾಲಯದ ಚುರುಕು ಬುದ್ಧಿಯವನು ಎನಿಸಿಕೊಂಡನು. ಬಹುಮತದ ಅಭಿಪ್ರಾಯ ಬರೆಯುವುದನ್ನು ಇವನಿಗೆ ಬಿಟ್ಟಿದ್ದರು. ಇಷ್ಟು ಜನ ತನಗೆ ಬೇಕಾದವರನ್ನು ನೇಮಿಸಿಕೊಂಡಿದ್ದರೂ ರೇಗನ್ ಶ್ರೇಷ್ಠ ನ್ಯಾಯಾಲಯದ ಸಮತೋಲನವನ್ನು ನಿರೂಪಿಸಲು ಅಶಕ್ಯನಾದನು.

೧೯೮೭ರಲ್ಲಿ ನ್ಯಾಯಾಧೀಶ ಲೂವಿಸ್ ಪಾವೆಲ್ (Lewis Powell) ರಾಜೀನಾಮೆ ಇತ್ತನು. ಈ ನಾಲ್ಕನೆಯ ಸ್ಥಾನಕ್ಕೆ ಮತ್ತೊಬ್ಬ ಸಂಪ್ರದಾಯವಾದಿ ನ್ಯಾಯಾಧೀಶನನ್ನು ನೇಮಕ ಮಾಡಿ ಶ್ರೇಷ್ಠ ನ್ಯಾಯಾಲಯವನ್ನು ಪೂರ್ತಿ ತನಗೆ ಬೇಕಾದ ಸಂಪ್ರದಾಯ ನಿಲುವಿನ ಜಾಗವನ್ನಾಗಿ ಮಾಡಿಕೊಳ್ಳಲು ರೇಗನ್ ಹವಣಿಸಿದ್ದನು. ಆದರೆ ಅವನ ಳನೆಯ ನೇಮಕವನ್ನು ಪ್ರಶ್ನಿಸಿ ನಡೆದ ವಾಗ್ಯುದ್ಧ ರಾಷ್ಟ್ರದ ಮನೋಭಾವವನ್ನು ಪ್ರತಿಬಿಂಬಿಸಿತ್ತು. ಈ ಸ್ಥಾನದ ನ್ಯಾಯಾಧೀಶ ನ್ಯಾಯಾಲಯದ ತೀರ್ಪನ್ನು ತನ್ನ ಒಂದು ಮತದಿಂದ ಯಾವ ಕಡೆಗಾದರೂ ತಿರುಗಿಸಬಲ್ಲನಾದುದರಿಂದ ಈ ನೇಮಕ ಎಲ್ಲರ ಆಸಕ್ತಿಯನ್ನು ಕೆರಳಿಸಿತ್ತು. ರೇಗನ್ ಸೆನೆಟ್ ಒಪ್ಪಿಗೆಗೆ ಕಳುಹಿಸಿದ ಮೊದಲನೆಯ ಹೆಸರು ರಾಬರ್ಟ್ ಬೋರ್ಕ್ (Robert Bork)ನದು. ಸೆನೆಟ್ ನ್ಯಾಯಾಂಗ ಸಮಿತಿ (Senate Judiciary Committee) ಬೋರ್ಕ್‌ನನ್ನು ದೀರ್ಘ ಕಾಲ ಪ್ರಶ್ನಿಸಿದಾಗ ಅವನು ಕೆಲವು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಕೊಡಲಿಲ್ಲವಾದುದರಿಂದ ಅವನ ನೇಮಕವನ್ನು ಸೆನೆಟ್ ೫೮-೪೨ ಮತಗಳಿಂದ ತಿರಸ್ಕರಿಸಿತು. ಇದಾದ ನಂತರ ರೇಗನ್ ಡಗ್ಲಾಸ್ ಗಿನ್ಸ್‌ಬರ್ಗ್‌ನನ್ನು ನೇಮಕ ಮಾಡಿದಾಗ, ಅವನು ಒಮ್ಮೆ ಮಾದಕ ವಸ್ತು ಸೇದಿದ್ದನೆಂದು ಒಪ್ಪಿಕೊಂಡ ಬಳಿಕ ಅವನೂ ತಿರಸ್ಕೃತನಾದನು. ಕೊನೆಗೆ ಸಂಪ್ರದಾಯಸ್ಥನಾದರೂ ಬೋರ್ಕ್‌ನಿಗಿಂತ ಸ್ವತಂತ್ರ ಪ್ರವೃತ್ತಿಯ ಆ್ಯಂಥನಿ ಕೆನಡಿಯ (Anthony Kennedy) ನೇಮಕವನ್ನು ಸೆನೆಟ್ ಅಂಗೀಕರಿಸಿತು. ರೇಗನ್ ಆಡಳಿತದ ಉಳಿದ ಕಾಲದಲ್ಲಿ ಮತ್ತು ಬುಷ್‌ನ ಆಡಳಿತದಲ್ಲಿ ರೈನ್‌ಕ್ವಿಸ್ಟ್ ನೇತೃತ್ವದಲ್ಲಿ ವಾರೆನ್ ಬರ್ಗರ ಕಾಲದಿಂದ ಜಾರಿಗೆ ಬಂದಿದ್ದ ಬದಲಾವಣೆಗಳನ್ನು – ವಿಶಿಷ್ಟವಾಗಿ, ನಾಗರಿಕ ಹಕ್ಕುಗಳು (civil liberties) ಮತ್ತು ಗರ್ಭಪಾತ – ಇವುಗಳ ಅತಿಕ್ರಮವಾಯಿತು. ರೈನ್‌ಕ್ವಿಸ್ಟ್ ನ್ಯಾಯಾಲಯ ಪೊಲೀಸರಿಗೆ

ಸಾಕ್ಷ್ಯಾಧಾರ ಪಡೆಯಲು ಹೆಚ್ಚಿನ ಅಧಿಕಾರ ಕೊಟ್ಟಿತು. ಮುಖ್ಯವಾಗಿ ಮಹಿಳೆಯರು ಗರ್ಭಪಾತ ಮಾಡಿಸಿಕೊಳ್ಳುವ ಹಕ್ಕಿನ ಮೇಲೆ ಈ ನ್ಯಾಯಾಧೀಶರು ನಿರ್ಬಂಧಗಳನ್ನು ಹಾಕಿದರು.

ರೇಗನ್‌ನ ವಿದೇಶಾಂಗ ನೀತಿ

ರೇಗನ್ ಅಧಿಕಾರದ ಮೊದಲನೆಯ ಅವಧಿಯಲ್ಲಿ ವಿದೇಶಾಂಗ ನೀತಿ ಸ್ವರಕ್ಷಣೆಯ ಮೇಲೆ ಕೇಂದ್ರೀಕೃತವಾಗಿತ್ತು. ಅಲ್ಲದೆ ಸೋವಿಯೆಟ್ ಒಕ್ಕೂಟದ ಬಗ್ಗೆ ತೀವ್ರ ಅಪನಂಬಿಕೆ ಇತ್ತು. ಅವನ ಆಡಳಿತದ ಎರಡನೆಯ ಅವಧಿಯಲ್ಲಿ ಸೋವಿಯೆಟ್ ಒಕ್ಕೂಟದ ಹೊಸ ನಾಯಕ ಮಿಖಾಯಿಲ್ ಗೊರ್ಬಚಾವ್ (Mikhail Gorbachev) ನೊಡನೆ ನಡೆಸಿದ ೫ ಶೃಂಗಸಭೆಗಳು ಚರಿತ್ರಾರ್ಹವಾದವು. ಮಧ್ಯಪ್ರಾಚ್ಯದಲ್ಲಿ ರೇಗನ್ ಯಶಸ್ಸು ಗಳಿಸಲಾಗದೆ ಹತಾಶನಾಗಿದ್ದನು. ದಕ್ಷಿಣ ಅಮೆರಿಕಾದಲ್ಲಿ ಅವನ ವಿದೇಶಾಂಗ ನೀತಿ ಸಫಲವಾಗಲಿಲ್ಲ. ಈ ವಿಫಲ ನೀತಿಯ ಕೆಲವು ಅಂಶಗಳು ಮುಂದೆ ಇರಾನ್-ಕಾಂಟ್ರಾ ಹಗರಣದಲ್ಲಿ ಬೆಳಕಿಗೆ ಬಂದವು.

ಮಧ್ಯಪ್ರಾಚ್ಯಗಳ ರಾಷ್ಟ್ರಗಳೊಡನೆ ವ್ಯವಹರಿಸುವ ಸಲುವಾಗಿ ಅಮೆರಿಕ ತನ್ನ ನಿಲುವನ್ನು ವ್ಯಕ್ತಪಡಿಸುವಾಗ ಅದು ಅಮೆರಿಕನ್ ಹಿತಾಸಕ್ತಿಗಳನ್ನು ಕಾಪಾಡುವುದೇ ಅಲ್ಲದೆ ರಾಜಕೀಯ ಬಲದಲ್ಲಿ ಸಮತೋಲನ ಸಾಧಿಸಬೇಕಾಗಿತ್ತು. ಹೀಗೆ ಮಾಡುವಾಗ ಭಯೋತ್ಪಾದಕರ ದಾಳಿ ಮತ್ತು ಒತ್ತೆಯಾಳುಗಳ ಬಿಡುಗಡೆಯನ್ನು ಗಣನೆಗೆ ತಂದುಕೊಳ್ಳ ಬೇಕಾಗಿತ್ತು. ೧೯೮೫ರಲ್ಲಿ ಭಯೋತ್ಪಾದಕರ ದಾಳಿಯಿಂದಾಗಿ ೧೭ ಅಮೆರಿಕನ್ನರು ಹತರಾದರು. ಭಯೋತ್ಪಾದಕರು ಹಾಕಿದ ಯೋಜನೆಗಳಲ್ಲಿ ಶೇಕಡಾ ೬೦ ಭಾಗವನ್ನು ರಕ್ಷಣಾಪಡೆಗಳು ಪತ್ತೆ ಮಾಡಿ ಆಸ್ಫೋಟಕಗಳನ್ನು ನಿರುಪಯುಕ್ತವಾಗಿ ಮಾಡಿದ್ದರು. ೧೯೮೫ರ ಜೂನ್ ತಿಂಗಳಲ್ಲಿ TWA ಜೆಟ್ ವಿಮಾನವನ್ನು ಷಿಯಾ ಮುಸ್ಲಿಮರು ಬಲಾತ್ಕಾರವಾಗಿ ವಶಪಡಿಸಿಕೊಂಡು ಅದನ್ನು ಲೆಬನಾನ್ ವಿಮಾನನಿಲ್ದಾಣದಲ್ಲಿ ಇಳಿಸಿ ೩೯ ಜನ ಅಮೆರಿಕನ್ನರನ್ನು ಒತ್ತೆಯಾಳುಗಳಾಗಿ ಎರಡು ವಾರಗಳಿಗೂ ಹೆಚ್ಚು ಹಿಡಿದಿಟ್ಟಿದ್ದರು. ಅದೇ ವರ್ಷ ಇಟಲಿಯ 'ಅಖಿಲೆ ಲಾರೋ' (Achille Lauro) ನಾವೆಯನ್ನು ಭಯೋತ್ಪಾದಕರು ಆಕ್ರಮಣ ಮಾಡಿ (ಇವರು ಪ್ಯಾಲೆಸ್ಟೈನ್ ವಿಮೋಚನಾ ಸಂಸ್ಥೆಗೆ ಸೇರಿದವರು) ಆ ನಾವೆಯಲ್ಲಿದ್ದ ಗಾಲಿ ಕುರ್ಚಿಯಲ್ಲಿ ಕುಳಿತಿದ್ದ ಅಂಗಹೀನ ಅಮೆರಿಕನ್ ಪ್ರಜೆಯನ್ನು ತಳ್ಳಿ ಸಮುದ್ರಪಾಲು ಮಾಡಿದ ಹೀನಕೃತ್ಯದ ವರದಿ ಅಮೆರಿಕನ್ನರನ್ನು ಕೋಪೋದ್ರಿಕ್ತರನ್ನಾಗಿ ಮಾಡಿತ್ತು. ೧೯೮೬ರಲ್ಲಿ ರೋಮ್ (Rome) ನಿಂದ ಅಥೆನ್ಸ್ (Athens) ಗೆ ಪ್ರಯಾಣಿಸುತ್ತಿದ್ದ ವಿಮಾನವೊಂದನ್ನು ಭಯೋತ್ಪಾದಕರು ಬಾಂಬ್ ಆಸ್ಫೋಟಿಸಿ ನಾಲ್ಕು ಅಮೆರಿಕನ್ನರನ್ನು ಕೊಂದರು.

ಭಯೋತ್ಪಾದಕರ ಇನ್ನೊಂದು ದಾಷ್ಟೀಕ ಕೃತ್ಯವೆಂದರೆ ಪಶ್ಚಿಮ ಬರ್ಲಿನ್

ಡಿಸ್ಕೋದಲ್ಲಿ ಬಾಂಬ್ ಸಿಡಿಸಿ ೬೦ ಅಮೆರಿಕನ್ನರನ್ನು ಘಾಸಿಗೊಳಿಸಿದರು. ಇದರಲ್ಲಿ ಲಿಬಿಯಾದ ಕೈವಾಡ ಇತ್ತೆಂದು ಪುರಾವೆಗಳ ಆಧಾರದ ಮೇಲೆ ತಿಳಿದುಬಂದಿತು. ೧೯೮೮ರ ಕ್ರಿಸ್‌ಮಸ್ ದಿನ. ಜರ್ಮನಿಯ ಫ್ರಾಂಕ್‌ಫರ್ಟ್ ವಿಮಾನನಿಲ್ದಾಣದಲ್ಲಿ PAN AM ವಿಮಾನದಲ್ಲಿ ಬಂಧು-ಮಿತ್ರರೊಡನೆ ಹಬ್ಬ ಆಚರಿಸಲು ಅಮೆರಿಕಕ್ಕೆ ಹೊರಟಿದ್ದ ಮುಗ್ಧ ಮಕ್ಕಳು, ಮಹಿಳೆಯರು ಮತ್ತು ಇತರ ಪ್ರಯಾಣಿಕರಿಗೆ ಅದು ತಮ್ಮ ಜೀವನದ ಕಡೆಯ ದಿನವೆಂಬ ಅರಿವು ಇರಲಿಲ್ಲ. ಆ ವಿಮಾನ ಸ್ಕಾಟ್‌ಲ್ಯಾಂಡಿನ ಲಾಕರ್‌ಬೀ (Lockerbie) ಊರಿನ ಮೇಲೆ ಹಾರಿಹೋಗುತ್ತಿದ್ದಾಗ ಭಯೋತ್ಪಾದಕರು ಹುದುಗಿಸಿಟ್ಟ ಬಾಂಬ್ ಸಿಡಿದು ವಿಮಾನ ನುಚ್ಚುನೂರಾಗಿ ಎಲ್ಲಾ ಪ್ರಯಾಣಿಕರು ಅಂತರಿಕ್ಷದಲ್ಲೇ ಅಗ್ನಿಗೆ ಆಹುತಿಯಾದರು. ಈ ಪ್ರಯಾಣಿಕರಲ್ಲಿ ಬಹುತೇಕ ಅಮೆರಿಕನ್ನರು, ಅವರಲ್ಲಿ ೩೫ ವಿದ್ಯಾರ್ಥಿಗಳೂ ಇದ್ದರು. ದೊರೆತ ಎಲ್ಲ ಪುರಾವೆಗಳು ಈ ದುಷ್ಕೃತ್ಯಗಳಲ್ಲಿ ಲಿಬಿಯಾದ ಕೈವಾಡವಿರುವುದನ್ನು ಸ್ಪಷ್ಟಪಡಿಸಿದವು. ಆದ್ದರಿಂದ ಲಿಬಿಯಾದ ಏಕೈಕ ನಾಯಕ ಕರ್ನಲ್ ಖಡಾಫಿ (Qaddafi) ಅಮೆರಿಕದ ಆಕ್ರೋಶಕ್ಕೆ ಗುರಿಯಾದನು. ೧೯೮೬ರಲ್ಲಿಯೇ ಅಮೆರಿಕ ಲಿಬಿಯಾದ ಮೇಲೆ ಆರ್ಥಿಕ ನಿರ್ಬಂಧ ಹೇರಿತ್ತು. ಲಿಬಿಯಾದ ಆಸ್ತಿ ಪಾಸ್ತಿ, ಹಣಕಾಸು ಎಲ್ಲವನ್ನೂ ತಡೆಹಿಡಿಯಲಾಗಿತ್ತು. ೧೯೮೬ರ ಮಾರ್ಚ್ ತಿಂಗಳಲ್ಲಿ ಅಮೆರಿಕದ ನೌಕಾಪಡೆ ಲಿಬಿಯಾ ಸಮೀಪದ ಸಮುದ್ರದಲ್ಲಿ ಬಲಪ್ರದರ್ಶನ ಮಾಡಿತು. ಇದನ್ನು ಲಿಬಿಯಾ ಪ್ರತಿಭಟಿಸಿದರೂ ಅಮೆರಿಕದ ವಾಯುದಳಗಳು ಲಿಬಿಯಾದ ಕ್ಷಿಪಣಿತಾಣಗಳನ್ನು ಧ್ವಂಸ ಮಾಡಿ, ಖಡಾಫಿಯ ಮನೆಯ ಒಂದು ಪಾರ್ಶ್ವವನ್ನು ಹಾಳುಗೆಡವಿ ಆತನ ಕೆಲವು ಕುಟುಂಬದವರನ್ನೂ ಸಾಯಿಸಿದವು.

ಅಧ್ಯಕ್ಷ ರೇಗನ್‌ನ ಅಧಿಕಾರದ ಎರಡನೆಯ ಅವಧಿಯಲ್ಲಿ ದಕ್ಷಿಣ ಅಮೆರಿಕ ರಾಷ್ಟ್ರಗಳ ಬಗ್ಗೆ ಮೊದಲನೆಯ ಅವಧಿಯಲ್ಲಿ ಅನುಸರಿಸಿದ ಧೋರಣೆಗಳನ್ನೇ ಮುಂದುವರಿಸಿದನು. ಕಮ್ಯೂನಿಸಂ ಪ್ರಭಾವಕ್ಕೆ ಒಳಗಾಗದಂತೆ ಆ ರಾಷ್ಟ್ರಗಳಿಗೆ ರಕ್ಷಣೆ ನೀಡುವುದು ಅಮೆರಿಕದ ಜವಾಬ್ದಾರಿ ಎನ್ನುವುದನ್ನು ಮತ್ತೊಮ್ಮೆ ಖಚಿತಪಡಿಸಲಾಯಿತು. ಗಲಭೆ, ದೊಂಬಿ ಮತ್ತು ಹಿಂಸಾಕೃತ್ಯಗಳು ಯಾವ ಘಳಿಗೆಯಲ್ಲಾದರೂ ಸಂಭವಿಸಬಹುದಾದ ದೇಶಗಳು – ಹೈತಿ (Haiti), ಹಾಂಡುರಾಸ್ (Honduras), ಎಲ್ ಸಾಲ್ವಡೋರ್ (El Salvador) ಮತ್ತು ನಿಕರಾಗುವ (Nicaragua) – ಈ ದೇಶಗಳಲ್ಲಿ ಕಮ್ಯೂನಿಸ್ಟರ ಪ್ರಭಾವ ಹರಡದಂತೆ ಮಾಡಲು ಅಮೆರಿಕ ಅಲ್ಲಿ ಅಧಿಕಾರಗಳಲ್ಲಿದ್ದ ದಮನಕಾರಿ ಸರ್ವಾಧಿಕಾರಿಗಳನ್ನು ಬೆಂಬಲಿಸಿತು. ಹೈತಿಯಲ್ಲಿ ಬಡಬಗ್ಗರನ್ನು ಶೋಷಣೆ ಮಾಡಿ ದೇಶದ ಹಣವನ್ನು ದೋಚಿ ಪ್ಯಾರಿಸ್‌ನಲ್ಲಿ ಮೋಜಿನ ಜೀವನ ನಡೆಸುತ್ತಿದ್ದ ಬಲಪಂಥೀಯ ಸರ್ವಾಧಿಕಾರಿಗಳಾದ ಪಾಪಾ ಡುವಾಲಿಯರ್ (Papa Doc), ಅವನ ನಂತರ ಅವನ ಮಗ (Baby Doc) ಇವರ ಸರ್ಕಾರಕ್ಕೆ ಅವರು ಕಮ್ಯೂನಿಸ್ಟ್ ವಿರೋಧಿಗಳು ಎನ್ನುವ ಒಂದೇ ಒಂದು ಕಾರಣದಿಂದ ಅಮೆರಿಕ ಬೆಂಬಲ ಮತ್ತು ಸಹಾಯ ನೀಡಿ ಅಲ್ಲಿನ ಸಾಮಾನ್ಯ ಪ್ರಜೆಗಳ

ಜೀವನವನ್ನು ನರಕಸದೃಶವಾಗಿ ಮಾಡಿತು. ಹಾಂಡುರಾಸ್‌ಗೆ ಅಮೆರಿಕ ನೆರವು ನೀಡಿದ್ದು ಅದರ ನೆರೆ ದೇಶವಾದ ನಿಕರಾಗುವದಲ್ಲಿರುವ ಕಾಂಟ್ರಾಗಳ (contras) ಮೇಲೆ ನಿಕರಾಗುವಾ ಸರ್ಕಾರ ದಾಳಿ ಮಾಡಬಹುದು ಎನ್ನುವ ಕಾರಣಕ್ಕಾಗಿ; ೧೯೮೮ರಲ್ಲಿ ನಿಕರಾಗುವಕ್ಕೆ ಎಚ್ಚರಿಕೆ ನೀಡಲು ಅಲ್ಲಿಗೆ ಸೈನ್ಯವನ್ನೂ ಕಳುಹಿಸಿದ್ದರು. ಎಲ್ ಸಾಲ್ವಡೋರ್‌ನಲ್ಲಿ ಬಲಪಂಥೀಯ ಸೈನಿಕರು ನಡೆಸುತ್ತಿದ್ದ ಸರ್ಕಾರಕ್ಕೆ ಅಮೆರಿಕ ನೆರವು ನೀಡುವುದನ್ನು ಕಾಂಗ್ರೆಸ್ ಬಿಗಿ ಮಾಡಿತು. ಇದರ ಪರಿಣಾಮವಾಗಿ ಅಮೆರಿಕದ ಸಹಾಯ ಬೇಕಾದರೆ ಎಲ್ ಸಾಲ್ವಡೋರ್ ಸರ್ಕಾರ ಮಾನವಹಕ್ಕುಗಳ ಸುಧಾರಣೆ ಮಾಡಬೇಕು ಎಂಬ ಷರತ್ತು ಹಾಕಿತು. ಆ ಸರ್ಕಾರ ಅದನ್ನು ಒಪ್ಪಂದದಲ್ಲಿ ಸೇರಿಸಿದ್ದರೂ ಆ ಹಕ್ಕುಗಳು ಕಾಗದದ ಮೇಲೆ ಉಳಿದಿಬಿಟ್ಟವು.

ಅತ್ತ ಪನಾಮಾದಲ್ಲಿ ಅಧ್ಯಕ್ಷ ಜನರಲ್ ಮಾನ್ಯುಯೆಲ್ ನೊರಿಯೇಗನ (Manuel Noriega) ಮೇಲೆ ನಿಷಿದ್ಧ ವಸ್ತುಗಳ ಮಾರಾಟದ (drug trafficking) ಆಪಾದನೆ ಹೊರಿಸಿದರು. ಅವನನ್ನು ಪದವಿಯಿಂದ ತೆಗೆದುಹಾಕಲು ಮಾಡಿದ ಪ್ರಯತ್ನ ಸಫಲವಾಗಲಿಲ್ಲ. ಬೇರೆ ಎಲ್ಲಾ ಲ್ಯಾಟಿನ್ ಅಮೆರಿಕ ದೇಶಗಳಿಗೆ ನೀಡಿದ ನೆರವು 'ಕಾಂಟ್ರಾ'ಗಳಿಗೆ ನೀಡಿದ ನೆರವಿನಷ್ಟು ವಿವಾದಾತ್ಮಕವಾಗಿರಲಿಲ್ಲ. ನಿಕಾರಾಗುವಾದ ಕಮ್ಯೂನಿಸ್ಟ್ ಪಂಥದ ಸಾಂಡಿನಿಸ್ಟಾ (sandinista) ಸರ್ಕಾರದ ವಿರುದ್ಧ ಹೋರಾಡುತ್ತಿದ್ದ 'ಕ್ರಾಂತಿಕಾರರೇ' ಈ ಕಾಂಟ್ರಾಗಳು. ಸಾಂಡಿನಿಸ್ಟಾ ಸರ್ಕಾರವನ್ನು ಇತರ ರಾಷ್ಟ್ರಗಳ ವಿರುದ್ಧ ದಂಗೆ ಏಳುವಂತೆ ಪ್ರಚೋದಿಸುತ್ತಿರುವ ಅನಿಷ್ಟ ಸರ್ಕಾರವೆಂದು ದೂಷಣೆ ಮಾಡಿ, ರೇಗನ್ ಆಡಳಿತ ಆ ಸರ್ಕಾರವನ್ನು ತೆಗೆದು ಹಾಕುವ ತುರ್ತು ಯೋಜನೆಯನ್ನು ಕೈಗೊಂಡಿದ್ದನು. ಸಿ.ಐ.ಎ. ಸಂಸ್ಥೆ ಕಾಂಟ್ರಾ ದಂಗೆಕೋರರಿಗೆ, ಸಾಂಡಿನಿಸ್ಟಾರಿಂದ ದೂರದ ಹಾಂಡುರಾಸ್ ಮತ್ತು ಕೋಸ್ಟಾರೀಕಾಗಳಲ್ಲಿ ಶಸ್ತ್ರಾಸ್ತ್ರಗಳಿಂದ ಹಿಡಿದು ಎಲ್ಲ ರೀತಿಯ ಸಹಾಯ ಒದಗಿಸಿ, ಅವರಿಗೆ ತರಬೇತಿ ಕೊಟ್ಟು ಸಿದ್ಧಪಡಿಸುತ್ತಿದ್ದರು. ೧೯೮೭ರ ಆಗಸ್ಟ್ ತಿಂಗಳಲ್ಲಿ ಕಾಂಗ್ರೆಸ್ ೧೦೦ ಮಿಲಿಯನ್ ಡಾಲರ್‌ಗಳನ್ನು ಮಾನವೀಯತೆಯ ದೃಷ್ಟಿಯಿಂದ ಕಾಂಟ್ರಾ ದಂಗೆಕೋರರಿಗೆ ಲೋಕೋಪಕಾರಕ ಕಾರ್ಯಗಳಿಗಾಗಿ ಕಳುಹಿಸಿತು. ಕಾಂಟ್ರಾ ಜೊತೆಯಲ್ಲಿ ಅಮೆರಿಕನ್ ಸೈನ್ಯ ಯಾವ ರೀತಿಯಲ್ಲೂ ಯುದ್ಧದಲ್ಲಿ ಭಾಗವಹಿಸ ಕೂಡದೆಂದು ಕಾಂಗ್ರೆಸ್ ಅಪ್ಪಣೆ ನೀಡಿತ್ತು. ಈ ನಿರ್ಬಂಧವನ್ನು ರೇಗನ್‌ನನ್ನು ಆಡಳಿತದ ಕೊನೆಯ ಎರಡು ವರ್ಷಗಳಲ್ಲಿ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಕ್ಕಿಸಿ, ಅವನು ನಂಬಲರ್ಹನೆ ಎಂಬ ಪ್ರಾಮಾಣಿಕತೆಯ ಪ್ರಶ್ನೆಯನ್ನೂ ಅವನು ಎದುರಿಸಬೇಕಾಗಿ ಬಂತು.

ಎರಡನೆಯ ವಾಟರ್‌ಗೇಟ್ (Watergate) ಎನ್ನಬಹುದಾದ ಇರಾನ್-ಕಾಂಟ್ರಾ ಹಗರಣ ರೇಗನ್‌ನ ಆಡಳಿತವನ್ನು ಸ್ಥಗಿತಗೊಳಿಸಿತು. ಅವನನ್ನು ಶಿಕ್ಷಿಸಲು (impeachment) ಈ ವ್ಯವಹಾರದಲ್ಲಿ ಅವನು ನೇರವಾಗಿ ಭಾಗವಹಿಸಿದ್ದನೆನ್ನುವುದಕ್ಕೆ ಸಾಕಷ್ಟು ಸಾಕ್ಷಿ, ಪುರಾವೆಗಳು ಇರಲಿಲ್ಲ. ಅವನ ಕೈಕೆಳಗಿನ ಅಧಿಕಾರಿಗಳು – ಲೆಫ್ಟಿನೆಂಟ್ ಕರ್ನಲ್

ಆಲಿವರ್ ನಾರ್ಥ್ (Oliver North) ಮತ್ತು ಅವನ ಮೇಲಧಿಕಾರಿ ಅಡ್ಮಿರಲ್ ಜಾನ್ ಪಾಯಿಂಡೆಕ್ಸ್ಟರ್ ಇಬ್ಬರು ಈ 'ಶಸ್ತ್ರಾಸ್ತ್ರಗಳಿಗೆ ಒತ್ತೆಯಾಳುಗಳು' (arms for hostages) ಯೋಜನೆಯನ್ನು ವ್ಯವಸ್ಥೆಗೊಳಿಸಿ ಕಾರ್ಯ ಕೈಗೊಂಡವರು ಎಂದು ಒಪ್ಪಿಕೊಂಡರು.

೧೯೮೫ರಲ್ಲಿ ರೇಗನ್ ಇಸ್ರೇಲ್‌ಗೆ ಶಸ್ತ್ರಾಸ್ತ್ರಗಳನ್ನು ಮಾರಲು ಒಪ್ಪಿಗೆ ಕೊಟ್ಟನು. ಇಸ್ರೇಲ್ ಇವುಗಳನ್ನು ಇರಾನಿಗೆ ಮಾರಾಟ ಮಾಡಿ ಅದಕ್ಕೆ ಪ್ರತಿಯಾಗಿ ಕೆಲವು ಅಮೆರಿಕನ್ ಒತ್ತೆಯಾಳುಗಳನ್ನು ಬಂಧನದಿಂದ ಬಿಡುಗಡೆ ಮಾಡಿಸಿತು. ಆದರೆ ಇರಾನ್ ಹೊಸ ಒತ್ತೆಯಾಳುಗಳನ್ನು ಹಿಡಿಯುತ್ತಲೇ ಇತ್ತು. ಇದು ರೇಗನ್ ಆಡಳಿತದ ಅವಧಿ ಮುಗಿಯುವವರೆಗೂ ನಡೆಯುತ್ತಲೇ ಇತ್ತು. ಇರಾನ್ ಅಮೆರಿಕದ ಶಸ್ತ್ರಾಸ್ತ್ರಗಳಿಗೆ ವಿಪರೀತ ಬೆಲೆ ಕೊಟ್ಟು ಕೊಳ್ಳುತ್ತಿದ್ದುದರಿಂದ ಈ ವ್ಯಾಪಾರವನ್ನು ಕುದುರಿಸಿದ ಮಧ್ಯಸ್ಥಿಕೆಗಾರರು ಸಿ.ಐ.ಎ. ಮತ್ತು ರಾಷ್ಟ್ರೀಯ ರಕ್ಷಣಾ ಸಮಿತಿಯ ಸದಸ್ಯರನ್ನು ಈ ವ್ಯಾಪಾರದಿಂದ ಗಳಿಸಿದ ಅಪಾರ ಲಾಭವನ್ನು ಕಾಂಟ್ರಾ ಹೋರಾಟಗಾರರ ಸಹಾಯಕ್ಕೆ ಉಪಯೋಗಿಸಬಹುದು ಎಂದು ಸಲಹೆ ಮಾಡಿದರು. ಕಾಂಗ್ರೆಸ್ ತಿದ್ದುಪಡಿಯೊಂದರ ಪ್ರಕಾರ ಕಾಂಟ್ರಾಗಳಿಗೆ ನೇರವಾಗಿ ಸೈನ್ಯ ಸಹಾಯ ನೀಡುವುದನ್ನು ನಿಷೇಧಿಸಿತ್ತು. ಸಿ.ಐ.ಎ. ಡೈರೆಕ್ಟರ್ ವಿಲಿಯಂ ಕೇಸಿ (William Casey) ಆಲಿವರ್ ನಾರ್ಥ್ ಜೊತೆಯಲ್ಲಿ ಕೆಲಸ ಮಾಡುತ್ತಾ ಇರಾನ್‌ನಿಂದ ಪಡೆದ ಲಾಭ ೪೮ ಮಿಲಿಯನ್‌ಗೂ ಹೆಚ್ಚು ಹಣವನ್ನು ಕಾಂಟ್ರಾ ಕಾರ್ಯಗಳಿಗೆ ಉಪಯೋಗಿಸಿದರೆ ಅಕ್ಷರಶಃ ಕಾನೂನು ಉಲ್ಲಂಘನೆ ಮಾಡಿದಂತಾಗುವುದಿಲ್ಲ ಎಂದು ಅಭಿಪ್ರಾಯಪಟ್ಟನು.

೧೯೮೭ರ ಜುಲೈನಲ್ಲಿ ಸೆನೆಟ್ ಈ ಕುರಿತ ವಿಚಾರಣೆ ನಡೆಸಿ, ಅಧ್ಯಕ್ಷ ರೇಗನ್ ಮತ್ತು ಶ್ವೇತಭವನದ ಸಿಬ್ಬಂದಿಯ ಮುಖ್ಯಸ್ಥ ಡೊನಾಲ್ಡ್ ರೇಗನ್‌ನನ್ನು (Donald Regan) ಕಟುವಾಗಿ ಟೀಕಿಸಿತು. ಸೆನೆಟ್ ವರದಿ ಪ್ರಕಟವಾದ ಮೇಲೆ ಅದರ ಪರಿಣಾಮವಾಗಿ ಡೊನಾಲ್ಡ್ ರೇಗನ್ ರಾಜೀನಾಮೆ ನೀಡಿದನು. ಆ ವರ್ಷ ನವೆಂಬರ್ ತಿಂಗಳಲ್ಲಿ ಪ್ರಕಟವಾದ ಕಾಂಗ್ರೆಸ್‌ನ ಅಧಿಕೃತ ವರದಿಯಲ್ಲಿ 'ಎಲ್ಲಾ ಜವಾಬ್ದಾರಿ ಅಧ್ಯಕ್ಷರದು, ಏಕೆಂದರೆ ಅವನು ತನ್ನ ಕೈಕೆಳಗಿನವರ ಮೇಲೆ ಹತೋಟಿ ಇಟ್ಟಿರಬೇಕು' ಎಂದು ತಿಳಿಸಿತು. ಆಲಿವರ್ ನಾರ್ಥ ಮತ್ತು ಪಾಯಿಂಡೆಕ್ಸ್ಟರ್‌ಗೆ ಶಿಕ್ಷೆ ವಿಧಿಸಲಾಯಿತು. ಅವರಿಬ್ಬರೂ ಕಾಂಗ್ರೆಸ್ ಕಾರ್ಯಾಚರಣೆಗೆ ತಡೆ ಒಡ್ಡಿದ್ದಾರೆ ಎಂದು ಆಪಾದಿಸಲ್ಪಟ್ಟಿದ್ದರೂ ಕೂಡ ಅವರ ಶಿಕ್ಷೆಯನ್ನು (on appeal) ವಜಾ ಮಾಡಿದರು.

ಫಿಲಿಪ್ಪೈನ್ಸ್‌ನಲ್ಲಿ ರೇಗನ್ ಆಡಳಿತ ಫರ್ಡಿನಾಂಡ್ ಮಾರ್ಕೊಸ್‌ನ (Ferdinand Marcos) ಅತಿ ದಮನಕಾರಿ ಮತ್ತು ಭ್ರಷ್ಟಾಚಾರದ ಸರ್ವಾಧಿಕಾರ ಸರ್ಕಾರವನ್ನು ಸಹಿಸಿಕೊಂಡು ಸಹಕಾರ ನೀಡುತ್ತ ಬಂದಿತ್ತು. ಮಾರ್ಕೊಸ್‌ನ ಅಧಿಕಾರಕ್ಕೆ ಸವಾಲು

ಹಾಕಿ ಅಧ್ಯಕ್ಷನಾಗಲು ಹವಣಿಸುತ್ತಿದ್ದ ಆತನ ಎದುರಾಳಿ ಬೆನಿನ್ಯೋ ಅಕೀನೊನನ್ನು (Benigno Aquino) ಹಾಡ ಹಗಲಿನಲ್ಲಿಯೇ ಎಲ್ಲರೂ ನೋಡುತ್ತಿದ್ದಂತೆ ವಿಮಾನದಿಂದಿಳಿದಾಗ ಗುಂಡಿಕ್ಕಿ ಕೊಲೆ ಮಾಡಿದರು. ಕೊಲೆಗಾರರನನ್ನೂ ಆ ಸ್ಥಳದಲ್ಲಿಯೇ ಕೊಂದರು. ಸತ್ತವರು ಯಾವ ಕತೆ ಹೇಳಲಾರರು ಎನ್ನುವ ಗಾದೆಯಂತೆ ಕೊಲೆಗಾರ ಯಾರು, ಅವನ ಉದ್ದೇಶ ಏನು ಎನ್ನುವುದು ಯಾರಿಗೂ ತಿಳಿಯದೇ ಹೋಯಿತು. ಆದರೆ ಎಲ್ಲರಿಗೂ ಸ್ಪಷ್ಟವಾಗಿ ತೋರಿದ ಸತ್ಯ – ಕೊಲೆಗಾರ ಮಾರ್ಕೊಸ್‌ನ ಸಿಬ್ಬಂದಿಗೆ ಪರಿಚಿತನೆ. ಅಕಿನೋ ಕೊಲೆಯಲ್ಲಿ ಅಧಿಕಾರಿಗಳ ಕೈವಾಡವಿತ್ತೆಂಬುದರಲ್ಲಿ ಫಿಲಿಪ್ಪೈನ್ಸ್ ಪ್ರಜೆಗಳಿಗೆ ಸಂದೇಹವೇ ಇರಲಿಲ್ಲ. ಮಾರ್ಕೊಸ್ ಅಕಿನೋ ನಿಧನದ ಬಗ್ಗೆ ಶೋಕ ಸಂದೇಶ ಪ್ರಸಾರ ಮಾಡಿ ಶ್ರದ್ಧಾಂಜಲಿ ಸಲ್ಲಿಸುವ ನಟನೆ ಮಾಡಿದನು.

ಅಕಿನೋ ಕೊಲೆಯಿಂದಾಗಿ ರೇಗನ್ ತನ್ನ ಫಿಲಿಪ್ಪೈನ್ಸ್ ನಿಲುವನ್ನು ಬದಲಾಯಿಸಿ ಅಕಿನೋ ಹೆಂಡತಿ ಕೋರಾಜ಼ಾನ್ ಅಕಿನೋಳ ಜನತಾ ಆಂದೋಳನವನ್ನು ಬೆಂಬಲಿಸಿದನು. ೧೯೮೬ರಲ್ಲಿ ಪ್ರಜೆಗಳ ಪ್ರಬಲ ಚಳುವಳಿ ಮತ್ತು ಅಮೆರಿಕದ ವಿದೇಶಾಂಗ ಇಲಾಖೆಯ ಒತ್ತಡಗಳಿಗೆ ಮಣಿದು ಮಾರ್ಕೊಸ್ ಅಧ್ಯಕ್ಷ ಚುನಾವಣೆಯನ್ನು ಏರ್ಪಡಿಸಿದನು. ಅವನ ೧೭ ವರ್ಷದ ಆಳ್ವಿಕೆಯಲ್ಲಿ ಚುನಾವಣೆ ನಡೆಯುತ್ತಿದ್ದುದು ಇದೇ ಮೊದಲು. ಮಾರ್ಕೊಸ್ ವಿರುದ್ಧವಾಗಿ ಕೊರಾಜ಼ಾನ್ ಅಕಿನೋ ಸ್ಪರ್ಧಿಸಿದ್ದಳು. ಚುನಾವಣೆಗಳಲ್ಲಿನ ಅನ್ಯಾಯ ಗಳಿಂದಾಗಿ ಕೊರಾಜ಼ಾನ ಅಕಿನೋ ಸೋತಳು. ಈ ಅನ್ಯಾಯಗಳನ್ನು ಖಂಡಿಸಿ ಅವಳು ರಾಷ್ಟ್ರದಾದ್ಯಂತ ಚಳುವಳಿ ಹೂಡಲು ಕರೆಕೊಟ್ಟಳು. ಇದಾದ ಕೆಲವು ದಿನಗಳಲ್ಲಿ ಜನರಲ್ ಜುವಾನ್ ಪೋನ್ಸೆ ಎನ್‌ರಿಲೆ (Juan Ponce Enrile) ಮತ್ತು ಫಿಡೆಲ್ ರಮೋಸ್ (Fidel Ramos) ಅಧ್ಯಕ್ಷ ಮಾರ್ಕೊಸ್‌ನ ವಿರುದ್ಧ ದಂಗೆ ಎದ್ದರು. ಸಾವಿರಾರು ನಿಶ್ಯಸ್ತ್ರ ಪ್ರಜೆಗಳು ಮಾರ್ಕೊಸ್‌ನ ವಿರುದ್ಧ ದಂಗೆ ಎದ್ದ ಪಡೆಗಳನ್ನು ಸುತ್ತುವರಿದು ರಕ್ಷಣೆ ನೀಡಿದರು. ಈ ಜನತಾಶಕ್ತಿಯ ರಕ್ತರಹಿತ ಕ್ರಾಂತಿ ಫಿಲಿಪ್ಪೈನ್ಸ್‌ನಲ್ಲಿ ವಿಸ್ತಾರವಾಗಿ ಹಬ್ಬಿತು. ಅಧ್ಯಕ್ಷನ ಅರಮನೆಯ ಬಳಿ ಹಾರಿಸಿದ ಕೆಲವು ಗುಂಡುಗಳನ್ನು ಬಿಟ್ಟರೆ ಇನ್ನು ಯಾವ ರೀತಿಯ ಹೋರಾಟವೂ ನಡೆಯಲಿಲ್ಲ. ಇದಾದ ಸ್ವಲ್ಪದಿನಗಳೊಳಗೆ ಮಾರ್ಕೊಸ್ ತನ್ನ ಕುಟುಂಬದವರೊಡನೆ ಫಿಲಿಪ್ಪೈನ್ಸ್ ತ್ಯಜಿಸಿ ಹವಾಯಿ ದ್ವೀಪಗಳಿಗೆ ತಲೆ ತಪ್ಪಿಸಿಕೊಂಡು ಓಡಿಹೋದನು. ಜಯಪ್ರದವಾದ ಜನತೆ ಉಕ್ಕಿ ಹರಿಯುವ ಸಂತೋಷದಿಂದ ಅರಮನೆಗೆ ದಾಳಿ ಇಕ್ಕಿತು. ಅಲ್ಲಿ ಅವರಿಗೆ ಮಾರ್ಕೊಸ್‌ನ ವಿಪುಲೈಶ್ವರ್ಯದ ದರ್ಶನವಾದುದಲ್ಲದೆ ಕಂಡದ್ದನ್ನೆಲ್ಲ ಕೊಂಡು ತರುವ ಮಾರ್ಕೊಸನ ಹೆಂಡತಿ ಇಮೆಲ್ಡಾಳ ೧೦೬೦ ಜೊತೆ ಪಾದರಕ್ಷೆಗಳೂ ಕಾಣಸಿಕ್ಕವು! ಬಡ ಫಿಲಿಪ್ಪಿನಿಸ್ ಜನರ ರಕ್ತ ಹೀರಿ ವಿಲಾಸ ಜೀವನ ನಡೆಸಿದ ಮಾರ್ಕೊಸ್ ದಂಪತಿಗಳು ಮಾನವ ಪರೋಪಜೀವಿಗಳೆಂದು (parasites) ಹೆಸರು ಪಡೆದು ಜೀವಂತವಾಗಿರುವಾಗಲೆ ದಂತಕತೆಯಾಗಿದ್ದಾರೆ.

ಕೊರಾಜ಼ಾನ್ ಅಕಿನೋ ಅಧ್ಯಕ್ಷತೆ ವಹಿಸಿಕೊಂಡ ನಂತರ ಮಾಡಿದ ಮೊದಲನೆಯ ಕಾರ್ಯವೆಂದರೆ ರಾಜಕೀಯ ಸೆರೆಯಾಳುಗಳನ್ನು ಬಿಡಿಸಿದ್ದು. ಅಲ್ಲದೆ ಪ್ರಜಾರಾಜ್ಯ ಸಂಸ್ಥೆಗಳನ್ನು ಪುನರುತ್ಥಾನಗೊಳಿಸಲು ಪ್ರಾರಂಭಿಸಿದಳು. ರಾಜಕೀಯ ಅನುಭವವಿಲ್ಲದ ಈಕೆ ಮಾಡಿದ ಎಲ್ಲಾ ವಾಗ್ದಾನಗಳನ್ನು ಪೂರೈಸಲಾಗಲಿಲ್ಲ. ಕಮ್ಯೂನಿಸ್ಟರು ಮತ್ತು ಬಲಪಂಥೀಯ ಸೇನಾಧಿಪತಿಗಳು ಇವಳನ್ನು ಅಧಿಕಾರದಿಂದ ಇಳಿಸಲು ಬಹಳ ಪ್ರಯತ್ನ ಪಟ್ಟರು. ಒಂದೇ ವರ್ಷದೊಳಗೆ ಈ ಪ್ರಯತ್ನ ಏಳು ಬಾರಿ ನಡೆಯಿತು. ಅಂತಿಮವಾಗಿ ಕೊರಾಜ಼ಾನ್ ಚುನಾವಣೆಗೆ ನಿಲ್ಲುವುದಿಲ್ಲ ಎಂದು ನಿರ್ಧರಿಸಿದಳು. ತನ್ನ ಆಡಳಿತ ಮಂಡಳಿಯಲ್ಲಿ ರಕ್ಷಣಾ ಸಚಿವನಾಗಿದ್ದ ರಾಮೋಸ್‌ನನ್ನು (Ramos) ಬೆಂಬಲಿಸಿದಳು. ರಾಮೋಸ್ ಚುನಾವಣೆಯಲ್ಲಿ ಗೆದ್ದು ಈಗಿನ ಫಿಲಿಪ್ಪೈನ್ಸ್‌ನ ಅಧ್ಯಕ್ಷನಾಗಿದ್ದಾನೆ.

ಸೋವಿಯೆಟ್ ಒಕ್ಕೂಟದ ಕಡೆಯ ದಿನಗಳು

೧೯೮೫ರಲ್ಲಿ ಗೋರ್ಬಚಾವ್ (Gorbachev) ಸೋವಿಯೆಟ್ ಒಕ್ಕೂಟದ ನಾಯಕತ್ವ ವಹಿಸಿಕೊಂಡ ಮೇಲೆ ಅವನು ಪಶ್ಚಿಮ ರಾಷ್ಟ್ರಗಳೊಡನೆ ಬಿಗಿಗೊಂಡಿದ್ದ ಸಂಬಂಧಗಳನ್ನು ಸಡಿಲಗೊಳಿಸುತ್ತ ಹೋದನು. ಅಂತರರಾಷ್ಟ್ರೀಯ ಸಮಸ್ಯೆಗಳಿಗೆ ಗೋರ್ಬಚಾವ್ ಸರಳ ಹಾಗೂ ಕಾರ್ಯಗತಗೊಳಿಸಬಹುದಾದ ಪರಿಹಾರಗಳನ್ನು ಹುಡುಕಲು ಪ್ರಯತ್ನಿಸಿದನು. ದಿನ ಕಳೆದಂತೆ ಹದಗೆಡುತ್ತಿದ್ದ ಸೋವಿಯೆಟ್ ಒಕ್ಕೂಟದ ಸ್ಥಿತಿಗತಿಗಳನ್ನು ಸರಿಪಡಿಸುವ ಸಲುವಾಗಿ ಮತ್ತು ಶಸ್ತ್ರಾಸ್ತ್ರಗಳಿಗೆ ವಿನಿಯೋಗಿಸುತ್ತಿದ್ದ ಅಪಾರ ಮೊತ್ತದ ಹಣ ಮತ್ತು ರಕ್ಷಣಾಪಡೆಗಳ ನಿರ್ವಹಣೆಗೆ ತಗಲುತ್ತಿದ್ದ ಖರ್ಚು ವೆಚ್ಚಗಳನ್ನು ಕಡಿಮೆ ಮಾಡಲು ಕೈಗೊಂಡ ಪರಿಹಾರವೆಂದರೆ ಸೋವಿಯೆಟ್ ಒಕ್ಕೂಟವನ್ನು ನಾಶಗೊಳಿಸಲು ಸಿದ್ಧನಾಗಿದ್ದ, ಅತ್ಯಾಧುನಿಕ ಶಸ್ತ್ರಾಸ್ತ್ರ ಸ್ಪರ್ಧೆಗೆ ಇಳಿಯುವಂತೆ ಸವಾಲು ಹಾಕುತ್ತಿದ್ದ ಪ್ರತಿಸ್ಪರ್ಧಿ ರೇಗನ್‌ನನ್ನು ಶೃಂಗಸಭೆಗಳ ಸರಣಿಗೆ ಆಹ್ವಾನಿಸಿದನು. ಜಿನೀವಾದಲ್ಲಿ ನಡೆದ ಮೊದಲ ಸಭೆಯಲ್ಲಿ ಪರಸ್ಪರ ಬೈದಾಡುತ್ತಿದ್ದ ಇಬ್ಬರನ್ನು ಒಟ್ಟಿಗೆ ಕೂರಿಸಿ ಕೈಕುಲುಕುವ ಸೌಜನ್ಯ ತೋರುವಂತೆ ಮಾಡಲಾಯಿತು. ಮುಂದಿನ ಸಭೆಗಳಲ್ಲಿ ಏನನ್ನು ಸಾಧಿಸಬೇಕೆಂದು ಖಚಿತ ಪಡಿಸಿಕೊಂಡು ಆ ಗುರಿಗಳನ್ನು ಮುಂದಿಡಲಾಯಿತು. ಆದರೆ ಐಸ್‌ಲ್ಯಾಂಡ್‌ನ ರೆಕ್ಯಾವಿಕ್ (Reykjavik)ನಲ್ಲಿ ನಡೆದ ಸಭೆಯಲ್ಲಿ ಹಿಂದಿನ ಸಭೆಗಳಲ್ಲಿದ್ದಷ್ಟು ಸೌಹಾರ್ದತೆ ಕಾಣಲಿಲ್ಲ. ಅಧ್ಯಕ್ಷ ರೇಗನ್ ಆಡುಭಾಷೆಯಲ್ಲಿ ಹೇಳುವ ತನ್ನ 'ನಕ್ಷತ್ರಗಳ ಕದನ'[೭] (Star wars Strategy)ದ ಬಗ್ಗೆ ತನ್ನ ನಿರ್ಧಾರವನ್ನು ಬದಲಾಯಿಸಲಿಲ್ಲ. ಆದ್ದರಿಂದ ಸೋವಿಯೆಟ್ ಒಕ್ಕೂಟ ತಾನಾಗಿ ಶಸ್ತ್ರಾಸ್ತ್ರಗಳನ್ನು ಕಡಿಮೆ ಮಾಡುವ ರಿಯಾಯಿತಿ ತೋರಿದರೆ ಮಾತ್ರ ಅಮೆರಿಕ ಅದಕ್ಕೆ ಪ್ರತಿಯಾಗಿ ಶಸ್ತ್ರಾಸ್ತ್ರಗಳನ್ನು

೭. ಇದನ್ನು ಇಂಗ್ಲಿಷಿನಲ್ಲಿ Strategic Defense System ಅಥವಾ Star Wars ಎಂದು ಕರೆಯುತ್ತಾರೆ. ಇದು ಬಾಹ್ಯಾಕಾಶದಲ್ಲಿ ಶತ್ರುಕ್ಷಿಪಣಿಗಳನ್ನು ನಾಶಗೊಳಿಸುವ ಒಂದು ವ್ಯವಸ್ಥೆ.

ಕಡಿಮೆ ಮಾಡಲು ಒಪ್ಪಬಹುದು ಎನ್ನುವುದು ಗೊರ್ಬಚಾವ್‌ಗೆ ಮನದಟ್ಟಾಯಿತು. ಡಿಸೆಂಬರ್ ೧೯೮೭ರಲ್ಲಿ ಮೊದಲನೆಯನ್ನು SALT (Strategic Arms Limitations Treaty) ವಾಷಿಂಗ್‌ಟನ್‌ನಲ್ಲಿ ರೇಗನ್ ಮತ್ತು ಗೋರ್ಬಚಾವ್ ಒಪ್ಪಿಕೊಂಡು ರುಜು ಮಾಡಿದರು. ಇದರ ಪರಿಣಾಮವಾಗಿ ಸೋವಿಯೆಟ್ ಒಕ್ಕೂಟದ ಮತ್ತು ಅಮೆರಿಕದ ೨,೫೦೦ ಕ್ಷಿಪಣಿಗಳನ್ನು ನಾಶ ಮಾಡಲಾಯಿತು. ಈ ಕೆಲಸ ನಿಜವಾಗಿಯೂ ನಡೆಯುತ್ತದೆ ಎನ್ನುವುದನ್ನು ಸಾಬೀತುಗೊಳಿಸುವ ವಿಧಾನಗಳನ್ನು ಪರಸ್ಪರ ಅನುಮೋದಿಸಿದರು. ಸೆನೆಟ್ ಈ ಒಪ್ಪಂದವನ್ನು ಅಂಗೀಕರಿಸಲು ಒಂದು ವರ್ಷ ಹಿಡಿಯಿತು. ಇನ್ನೂ ಹೆಚ್ಚಿನ ನಂಬಿಕೆ ಹುಟ್ಟಿಸಲು ಸೋವಿಯೆಟ್ ಒಕ್ಕೂಟ ಅಫ್ಘಾನಿಸ್ತಾನದಿಂದ ತನ್ನ ಎಲ್ಲ ಸೇನಾಪಡೆಗಳನ್ನು ವಾಪಸ್ಸು ಕರೆಸಿತು. ಇಷ್ಟೆಲ್ಲ ಪ್ರಗತಿ ಸಾಧಿಸಿದ್ದರೂ ಕೂಡ ಮಾಸ್ಕೊದಲ್ಲಿ ಸೇರಿದ್ದ ನಾಲ್ಕನೆಯ ಶೃಂಗಸಭೆ ಯಶಸ್ವಿಯಾಗಲಿಲ್ಲ. ಏಕೆಂದರೆ ಶಸ್ತ್ರನಿವಾರಣೆಯನ್ನು ಮುಂದು ವರಿಸುವುದು ಸಾಧ್ಯವಾಗಲಿಲ್ಲ. ಆದಾಗ್ಯೂ ಈ ಶೃಂಗಸಭೆ SALT II ಒಪ್ಪಂದವನ್ನು ಬುಷ್ ಆಡಳಿತದಲ್ಲಿ ಯಶಸ್ವಿಯಾಗಿ ಮುಗಿಸಲು ಅನುಕೂಲ ಮಾಡಿಕೊಟ್ಟಿತು. ರೇಗನ್ ತನ್ನ ಅಧಿಕಾರ ಅವಧಿಯನ್ನು ಮುಗಿಸಿ ಶ್ವೇತಭವನದಿಂದ ನಿರ್ಗಮಿಸುವಾಗ, 'ದುಷ್ಟ ಚಕ್ರಾಧಿಪತ್ಯ' ಹಲ್ಲಿಲ್ಲದ ಹುಲಿಯಂತಾಗಿ ಪಶ್ಚಿಮ ರಾಷ್ಟ್ರಗಳೊಡನೆ ತಾನಾಗಿಯೆ 'ಡೆಟಾಂಟ್' ನಡೆಸಲು ಸಿದ್ಧವಾಗಿರುವ ಸ್ಥಿತಿಗೆ ಬಂದಿರುವುದರಲ್ಲಿ ತನ್ನ ಕೈವಾಡವೂ ಇದೆ ಎನ್ನುವ ತೃಪ್ತಿ ಅವನಲ್ಲಿತ್ತು.

೧೯೮೮ರ ಚುನಾವಣಾ ಪ್ರಚಾರ

ಕಾಲಚಕ್ರ ಉರುಳಿ ರೇಗನ್ ಆಡಳಿತ ಮುಗಿಯಿತು. ಅಮೆರಿಕದ ರಾಜಕೀಯ ರಂಗಸ್ಥಳದ ಮೇಲೆ ತನ್ನ ಪಾತ್ರವನ್ನು ಯಶಸ್ವಿಯಾಗಿ ನಟಿಸಿ ರೇಗನ್ ನಿಷ್ಕ್ರಮಿಸಿದನು. ಇದರ ಪರಿವೆಯೆ ಇಲ್ಲದ ಸಾಮಾನ್ಯ ಅಮೆರಿಕನ್ನರ ಜೀವನ ಎಂದಿನಂತೆ ಸಾಗಿತು. 'ರೇಗನ್‌ಗೆ ರಾಜ್ಯ ಬಂದರೆ ರೆಬೆಕ್ಕಾಗೆ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡೋದು ತಪ್ಪುತ್ಯೇ?' ಎನ್ನುವುದು ಒಂದು ಅಮೆರಿಕನ್ನರ ಗಾದೆ. ಅಮೆರಿಕದ ಯಂತ್ರ ನಾಗರಿಕತೆ ನಡೆಯುವುದು ರೆಬೆಕ್ಕಾಳಂಥ ಜನಸಾಮಾನ್ಯರು ಅಡೆತಡೆಯಿಲ್ಲದೆ ತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗುವುದರಿಂದ. ರಾಜಕೀಯ ಬದಲಾವಣೆಗಳು ಅಮೆರಿಕದ ನಿತ್ಯ ಜೀವನವನ್ನು ಅಲ್ಲೋಲ ಕಲ್ಲೋಲ ಮಾಡುವುದಿಲ್ಲ. ಇತರೆ ದೇಶಗಳಲ್ಲಿ – ಉದಾಹರಣೆಗೆ ಅಂಗೋಲಾ, ನೈಜೀರಿಯಾ, ರುವಾಂಡಾ, ಬಾಲ್ಕನ್ ದೇಶಗಳು – ಇವುಗಳ ಕತೆಯೇ ಬೇರೆ. ಅರ್ಜೆಂಟೈನಾದಂಥ ದೇಶದಲ್ಲಿ ಆಡಳಿತ ಬದಲಾದಾಗ ಸಾಮಾನ್ಯ ಜನರ ಬದುಕು ಬುಡಮೇಲಾಗುತ್ತದೆ. ಅಮೆರಿಕ ರಾಜ್ಯಾಂಗಬದ್ಧ ಪ್ರಜಾರಾಜ್ಯವಾದುದರಿಂದ ಚುನಾವಣೆ ಯಿಂದ ಹಿಡಿದು ಅಧ್ಯಕ್ಷ ಪ್ರಮಾಣವಚನ ಸ್ವೀಕರಿಸುವುದು ಎಲ್ಲವೂ ಮುಂಚೆಯೇ ನಿಗದಿ ಮಾಡಿದ್ದಕ್ಕನುಗುಣವಾಗಿ ನಡೆಯುತ್ತದೆ. ಅಮೆರಿಕದ ಎಲ್ಲ ಸಂಘ ಸಂಸ್ಥೆಗಳು ಮತ್ತು ವ್ಯಾಪಾರ ವ್ಯವಹಾರಗಳು ಇದೇ ರೀತಿ ವ್ಯವಸ್ಥಿತವಾಗಿ ನಡೆಯುತ್ತವೆ.

ರೇಗನ್ ಆಡಳಿತದ ಅವಧಿ ಮುಗಿದ ಮೇಲೆ ರಾಜ್ಯಾಂಗವನ್ನು ಅನುಸರಿಸಿ ೧೯೮೮ರ ಚುನಾವಣೆ ಪ್ರಚಾರ ಆರಂಭವಾಯಿತು. ೧೯೮೪ರ ಚುನಾವಣೆಯಲ್ಲಿ ರೇಗನ್ ಗೆಲ್ಲುತ್ತಾನೆ ಎನ್ನುವುದು ಎಲ್ಲರಿಗೂ ಮೊದಲೇ ಗೊತ್ತಿತ್ತು. ಆದರೆ ೧೯೮೮ರ ಚುನಾವಣೆಯಲ್ಲಿ ಯಾರುಬೇಕಾದರೂ ಗೆಲ್ಲಬಹುದು ಎನ್ನುವ ಪರಿಸ್ಥಿತಿ ಉಂಟಾಗಿತ್ತು. ಡೆಮೊಕ್ರಾಟಿಕ್ ಪಕ್ಷದ ಕೆಲವು ಗಣನೀಯ ನಾಯಕರು ಚುನಾವಣೆಯಲ್ಲಿ ಭಾಗವಹಿಸಲು ಹಿಂಜರಿದರು. ನ್ಯೂಯಾರ್ಕ್ ಗವರ್ನರ್ ಮಾರಿಯೋ ಕೋಮೊ (Mario Cuamo), ಸೆನೆಟರ್‌ಗಳಾದ ಬಿಲ್ ಬ್ರಾಡ್ಲಿ (Bill Bradley) ಮತ್ತು ಸ್ಯಾಮ್ ನನ್ (Sam Nunn) ಇವರೆಲ್ಲ ಚುನಾವಣೆಗೆ ನಿಲ್ಲಲು ಹಿಂದೇಟು ಹಾಕಿದರು. ಇದಕ್ಕೆ ಕಾರಣ ದೀರ್ಘಾವಧಿ ಚುನಾವಣಾ ಪ್ರಚಾರ, ಅಪಾರ ಹಣದ ಖರ್ಚು ಮತ್ತು ಪತ್ರಕರ್ತರ ಕೂಲಂಕಷ ತನಿಖೆ. ಚುನಾವಣೆಗೆ ನಿಂತ ಹುರಿಯಾಳುಗಳ ಖಾಸಗಿ ಜೀವನ, ನಿಕಟ ಸಂಬಂಧಗಳು, ಪ್ರೇಮ ಪ್ರಕರಣಗಳು ಎಲ್ಲವೂ ಬಹಿರಂಗವಾಗುತ್ತಿದ್ದುದು ಈ ನಾಯಕರನ್ನು ರಾಜಕೀಯದಿಂದ ದೂರ ಉಳಿಯುವಂತೆ ಮಾಡಿದವು. ಆದರೂ ಸಹ ಏಳು ಅಭ್ಯರ್ಥಿಗಳು ಸ್ಪರ್ಧೆಗೆ ಸಿದ್ಧರಾಗಿದ್ದರು. ಅವರು ಡೆಮೊಕ್ರಾಟರ ವಿವಿಧ ಆಸಕ್ತಿಗಳನ್ನು ಪ್ರತಿನಿಧಿಸುತ್ತಿದ್ದರು. ಇವರಲ್ಲಿ ಬರೀ ಹೆಸರಿಗೆ ಮಾತ್ರ ನಿಂತವರು ಇಬ್ಬರು – ಜೆಸ್ಸಿ ಜಾಕ್ಸನ್ ಮತ್ತು ಗ್ಯಾರಿ ಹಾರ್ಟ್ (Gary Hart). ಹಾರ್ಟ್ ಮದುವೆಯಾಗಿದ್ದರೂ ಮತ್ತೊಬ್ಬ ಚೆಲುವೆಯೊಡನೆ ಪ್ರಣಯ ಪ್ರಸಂಗವಿದ್ದಿತ್ತು. ಅದರ ಬಗ್ಗೆ ಪತ್ರಕರ್ತರು ಪ್ರಶ್ನಿಸಿದಾಗ ಒಪ್ಪಿಕೊಂಡಿದ್ದರೆ ಅವರು ಅದನ್ನು ಮುಂದುವರಿಸದೆ ಕೈಬಿಡುತ್ತಿದ್ದರೇನೋ. ಆದರೆ ಹಾರ್ಟ್ ತನ್ನ ಪ್ರಣಯವನ್ನು ಅಲ್ಲಗಳೆದು ಪತ್ರಕರ್ತರು ಪುರಾವೆಯಿಲ್ಲದೆ ಪುಕಾರು ಹೊರಡಿಸಿದ್ದಾರೆ ಎಂದು ಪತ್ರಿಕೆಗಳನ್ನೇ ಹೀಗಳೆಯುವ ಪ್ರಯತ್ನ ಮಾಡಿದನು. ಇದು ಪತ್ರಕರ್ತರನ್ನು ಕೆರಳಿಸಿ ಈ ತನಿಖೆಯ ಬಗ್ಗೆ ಮತ್ತೂ ಕಾರ್ಯನಿರತರನ್ನಾಗಿ ಮಾಡಿದವು. ಕೆಲವು ದಿನಗಳೊಳಗೆ ಸುಂದರ ದ್ವೀಪವೊಂದರ ಮರಳಿನ ಹಾಸಿನ ಮೇಲೆ ಅರೆ ನಗ್ನರಾಗಿ ಪ್ರಣಯಕೇಳಿಯಲ್ಲಿ ಮಗ್ನರಾಗಿದ್ದ ಹಾರ್ಟ್ ಮತ್ತು ಅವನ ಪ್ರೇಯಸಿಯ ಚಿತ್ರಗಳು ಪತ್ರಿಕೆಗಳಲ್ಲಿ ಪ್ರಕಟವಾಗಿ ಹಾರ್ಟ್‌ನ ರಾಜಕೀಯ ವೃತ್ತಿ ಕೊನೆಗೊಂಡಿತು. ಹಾಸ್ಯದ ಸಂಗತಿ ಎಂದರೆ ಹಾರ್ಟ್ ಮತ್ತು ಅವನ ಪ್ರೇಯಸಿ ಸಮುದ್ರಯಾನಕ್ಕೆ ಉಪಯೋಗಿಸಿದ ನಾವೆಯ ಹೆಸರು 'ಮಂಗಚೇಷ್ಟೆ' (Monkey Business)!

ಹಾರ್ಟ್ ಹಾದರ ಮಾಡಿ ಕೆಟ್ಟ, ಬೈಡೆನ್ ಭಾಷಣ ಮಾಡಿ ಕೆಟ್ಟ! ಚುನಾವಣೆಯ ಪ್ರಚಾರದ ಹುರುಪಿನಲ್ಲಿ ಸೆನೆಟರ್ ಬೈಡೆನ್ ಯಾರೋ ಮಾಡಿದ್ದ ಭಾಷಣದ ಕೃತಿ ಚೌರ್ಯ ಮಾಡಿ ಪದಗುಚ್ಛಗಳನ್ನು ಆಯ್ದು ತಾನೆ ಅವುಗಳನ್ನು ಸೃಷ್ಟಿಸಿದ್ದು ಎನ್ನುವ ರೀತಿಯಲ್ಲಿ ಭಾಷಣ ಬಿಗಿಯುತ್ತಿದ್ದನು. ಸದಾ ಜಾಗರೂಕರಾಗಿರುವ ಪತ್ರಕರ್ತರು ಅದನ್ನು ಶೋಧಿಸಿ ಪ್ರಕಟಿಸಿದಾಗ ಬೈಡೆನ್ ಚುನಾವಣೆಯಿಂದ ಹೊರಬೀಳಬೇಕಾಯಿತು. ನಂತರ

ಉಳಿದವರು ಇಬ್ಬರು: ಉತ್ತರದ ಉದಾರತತ್ವದ (liberal) ಮೆಸಾಚ್ಯುಸೆಟ್ಸ್ ಗವರ್ನರ್ ಮೈಕೆಲ್ ಡುಕಾಕಿಸ್ (Michael Dukakis) ಮತ್ತು ದಕ್ಷಿಣದ ಮಧ್ಯಮವರ್ತಿ (moderate) ಟೆನ್ನೆಸ್ಸೀ ರಾಜ್ಯದ ಸೆನೆಟರ್ ಆ್ಯಲ್ ಗೋರ್ (Al Gore). ಪಕ್ಷದ ಪ್ರಥಮ ಸಾಲಿನ ಮತದಾನದಲ್ಲಿ ಹೆಚ್ಚು ಮತಗಳನ್ನು ಪಡೆದು ಮುಂಚೂಣಿಯಲ್ಲಿದ್ದ ಡುಕಾಕಿಸ್‌ನನ್ನು ಪಕ್ಷದ ಸಮ್ಮೇಳನ ಅಧ್ಯಕ್ಷ ಪದವಿಗೆ ಅಭ್ಯರ್ಥಿಯನ್ನಾಗಿ ನಾಮಕರಣ ಮಾಡಿತು. ಡುಕಾಕಿಸ್ ಉಪಾಧ್ಯಕ್ಷ ಸ್ಥಾನಕ್ಕೆ ಟೆಕ್ಸಾಸ್ ಸೆನೆಟರ್ ಲಾಯ್ಡ್ ಬೆನ್‌ಸನ್ (Lloyd Bentsen)ನನ್ನು ಆಯ್ಕೆ ಮಾಡಿದನು.

ಜಾರ್ಜ್ ಬುಷ್ ಉಪಾಧ್ಯಕ್ಷನಾಗಿ ರೇಗನ್‌ಗೆ ಬಹಳ ನಿಷ್ಠಾವಂತನಾಗಿ ನಡೆದುಕೊಂಡಿದ್ದನು. ರಿಪಬ್ಲಿಕನ್ ಪಕ್ಷ ನೇರವಾಗಿ ಅವನನ್ನು ಅಧ್ಯಕ್ಷ ಪದವಿಗೆ ನಾಮಕರಣ ಮಾಡಬಹುದೆಂಬ ಊಹೆ ತಪ್ಪಾಯಿತು. ಹೆಸರಾಂತ ರಿಪಬ್ಲಿಕನ್ ನಾಯಕರು ಸ್ಪರ್ಧೆಗೆ ಇಳಿದಿದ್ದರು. ಅವರಲ್ಲಿ ಮುಖ್ಯರಾದವರು: ಸೆನೆಟ್‌ನ ಅಲ್ಪಸಂಖ್ಯಾತರ ನಾಯಕ (Minority leader) ಕಾನ್ಸಾಸ್ ರಾಜ್ಯದ ರಾಬರ್ಟ್ ಡೋಲ್, ಕಾಂಗ್ರೆಸ್ ಸದಸ್ಯ ನ್ಯೂಯಾರ್ಕ್‌ನ ಜಾಕ್ ಕೆಂಪ್ (Jack Kemp), ದೂರದರ್ಶನದ ಕ್ರೈಸ್ತ ಮತಪ್ರಚಾರಕ ಪ್ಯಾಟ್ ರಾಬರ್ಟ್‌ಸನ್ (Pat Robertson) ಮತ್ತು ಮಾಜಿ ವಿದೇಶಾಂಗ ಕಾರ್ಯದರ್ಶಿ ಅಲೆಗ್ಸಾಂಡರ್ ಹೇಗ್ (Alexander Haig). ಅಯೋವಾ ಅನೌಪಚಾರಿಕ ಸಭೆಯಲ್ಲಿ (caucus)[೮] ರಾಬರ್ಟ್ ಡೋಲ್ ಗೆದ್ದನು. ಆದರೆ ನ್ಯೂ ಹ್ಯಾಂಪ್‌ಶೈರ್‌ನಲ್ಲಿ (New Hampshire) ಬುಷ್ ಜಯಗಳಿಸಿ ತಾನೊಬ್ಬ ಹರಿತವಾದ ವ್ಯಂಗ್ಯವನ್ನುಪಯೋಗಿಸಿ ಪರಿಣಾಮಕಾರಿಯಾಗಿ ಚರ್ಚೆ ಮಾಡಬಲ್ಲ ಸಾಮರ್ಥ್ಯ ಉಳ್ಳವನಂತೆ ತೋರಿಸಿಕೊಂಡನು. ಪಕ್ಷದ ಪ್ರಥಮ ಸಾಲಿನ ಮತದಾನ ನಡೆಯುವ ಮಂಗಳವಾರವನ್ನು 'ಮಹಾ ಮಂಗಳವಾರ' (Super Tuesday) ಎಂದು ಕರೆಯುತ್ತಾರೆ. ಆ ದಿನ ಬುಷ್ ನಿರ್ಣಾಯಕವಾಗಿ ಜಯ ಗಳಿಸಿ ಪಕ್ಷದ ನಾಮಕರಣ ಪಡೆದನು. ೧೯೮೮ರ ರಿಪಬ್ಲಿಕನ್ ಪಕ್ಷದ ಸಮಾವೇಶದಲ್ಲಿ ಎರಡು ಮುಖ್ಯ ಘಟನೆಗಳು ನಡೆದವು: ನಾಮಕರಣವನ್ನು ಸ್ವೀಕರಿಸುವ ಸಮಯದಲ್ಲಿ ಮಾಡಿದ ಭಾಷಣದಲ್ಲಿ ಬುಷ್ ಒಂದು ವಾಗ್ದಾನ(pledge) ಮಾಡಿದನು – 'Read My Lips, No New Taxes' – ಈ ವಾಗ್ದಾನ ನಾಲ್ಕು ವರ್ಷಗಳ ನಂತರ ಹಿಂತಿರುಗಿ ಬಂದು ಅವನನ್ನು ನಿರಂತರವಾಗಿ ಕಾಡಿತು. ಎರಡನೆಯ ಘಟನೆ – ಉಪಾಧ್ಯಕ್ಷ ಸ್ಥಾನಕ್ಕೆ ಬುಷ್ ರಾಷ್ಟ್ರಮಟ್ಟದಲ್ಲಿ ಯಾರೂ ಅರಿಯದ, ೪೧ ವರ್ಷ ಪ್ರಾಯದ ಇಂಡಿಯಾನಾದ ಸೆನೆಟರ್ ಡ್ಯಾನ್ ಕ್ವೇಲ್‌ನನ್ನು (Dan Quale) ಆಯ್ಕೆ ಮಾಡಿದ್ದು. ಅನುಭವವಿಲ್ಲದ

೮. 'ಕಾಕಸ್' ಎಂದರೆ ಅನೌಪಚಾರಿಕ (informal) ರಾಜಕೀಯ ಕೂಟ. ೧೮೨೪ರವರೆಗೂ ಕಾಂಗ್ರೆಸ್ ಸದಸ್ಯರ ಅನೌಪಚಾರಿಕ ಕೂಟಗಳು ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಗಳನ್ನು ನಾಮಕರಣ ಮಾಡುತ್ತಿದ್ದವು.

ಕ್ವೇಲ್ ಡೆಮೊಕ್ರಾಟಿಕ್ ಪಕ್ಷದವರ ಟೀಕೆಗಳಿಗೆ ಗುರಿಯಾದನು[೯]. ಪತ್ರಕರ್ತರು ಕ್ವೇಲ್ ವಿಯಟ್‌ನಾಮ್ ಯುದ್ಧಕ್ಕೆ ಹೋಗುವುದನ್ನು ತಪ್ಪಿಸಿಕೊಳ್ಳಲು ರಾಷ್ಟ್ರೀಯ ರಕ್ಷಣಾದಳವನ್ನು (National Guard) ಸೇರಿಕೊಂಡಿದ್ದನ್ನು ಬೆಳಕಿಗೆ ತಂದರು[೧೦].

೧೯೮೮ರ ಚುನಾವಣೆಯಲ್ಲಿ ದೂರದರ್ಶನ, ಪತ್ರಿಕೆಗಳು ಮತ್ತು ಜನಾಭಿಪ್ರಾಯ ಸಂಗ್ರಹ ಮಹತ್ತರ ಪಾತ್ರ ವಹಿಸಿದವು. ಆಧುನಿಕ ಇತಿಹಾಸದಲ್ಲಿ ೧೯೮೮ರ ಚುನಾವಣೆ ಅತ್ಯಂತ ಕೊಳಕಾದ ಚುನಾವಣೆಗಳಲ್ಲಿ ಒಂದು. ಡುಕಾಕಿಸ್ ಡೆಮೊಕ್ರಾಟಿಕ್ ಪಕ್ಷದ ಸಮಾವೇಶ ಮುಗಿಸಿ ಹೊರಬಂದಾಗ ಜನಾಭಿಪ್ರಾಯ ಸಂಗ್ರಹದ ಅಂಕಿ-ಅಂಶಗಳಲ್ಲಿ ೧೭ ಅಂಕಗಳಷ್ಟು ಮುಂದಿದ್ದನು. ತಮ್ಮ ಚುನಾವಣಾ ಪ್ರಚಾರವನ್ನು ಮುಂದುವರಿಸುವುದನ್ನು ಬಿಟ್ಟು ರಿಪಬ್ಲಿಕನ್ನರು ತಮ್ಮ ಸಮಾವೇಶದ ಮೇಲೆ ಬೆಳಕು ಚೆಲ್ಲಿ ಜನರ ಆಸಕ್ತಿಯನ್ನು ಸೆಳೆಯುವಂತೆ ಮಾಡಿದರು. ಡುಕಾಕಿಸ್ ನೋಡಲು ಬಡಕಲಾಗಿದ್ದರೂ ತಾನೊಬ್ಬ ವೀರಾಗ್ರಣಿ ಎಂದು ತೋರಿಸಲು ಯುದ್ಧದ ಟ್ಯಾಂಕ್ (combat tank)ನ್ನು ಯುದ್ವಾತದ್ವಾ ಓಡಿಸಿ ಜನರ ದೃಷ್ಟಿಯಲ್ಲಿ ಹಾಸ್ಯಾಸ್ಪದವಾಗಿ ಕಂಡನು. ಜಾರ್ಜ್ ಬುಷ್ ಡುಕಾಕಿಸ್‌ನ ಹೆಸರು ಕೆಡಿಸಲು 'ಅವನು ಅಪರಾಧಿಗಳ ಬಗ್ಗೆ ಮೆದುವಾಗಿ ವರ್ತಿಸುತ್ತಾನೆ' ಎನ್ನುವ ವದಂತಿ ಹಬ್ಬಿಸಿದನು. 'ಬೆಳ್ಳಿ ಚಮಚ ಬಾಯಲ್ಲಿ ಇಟ್ಟುಕೊಂಡು ಹುಟ್ಟಿದವ' ಎನ್ನುವ ನಾಮಪಟ್ಟಿಯನ್ನು ಜನರು ಬುಷ್‌ನಿಗೆ ಹಚ್ಚಿದ್ದರು. ಅದನ್ನು ಬದಲಾಯಿಸಲು ತಾನೊಬ್ಬ ಸಾಧಾರಣ ಅಮೆರಿಕನ್ ಎಂದು ತೋರಿಸಲು ಎಣ್ಣೆಯಲ್ಲಿ ಕರಿದ ಹಂದಿಯ ಹಕ್ಕಳೆಯನ್ನು (pork rind) ಸುದ್ದಿ ಮಾಧ್ಯಮಕ್ಕೆ ಗ್ರಾಸವಾಗುವಂತೆ ಹಳ್ಳಿಯ ಹೊಟ್ಟೆಬಾಕನಂತೆ ಮುಕ್ಕಿದನು!

'ಶಾಂತಿ' ಮತ್ತು 'ಸಮೃದ್ಧಿ' ಬುಷ್‌ನ ಪ್ರಚಾರಮಂತ್ರಗಳಾದವು. ಉದಾರತೆ ಎನ್ನುವ ಪದ ಸುಳ್ಳು ಹೇಳುವ (perjorative) ಅರ್ಥ ಬರುವಂತೆ ವ್ಯಾಖ್ಯಾನ ಮಾಡಿದನು.

---

೯. ಬೆನ್‌ಟ್ಸನ್ ಮತ್ತು ಕ್ವೇಲ್ ನಡುವೆ ನಡೆದ ಚರ್ಚೆಯನ್ನು ದೂರದರ್ಶನದಲ್ಲಿ ಪ್ರಸಾರ ಮಾಡಿದಾಗ, ಬೆನ್‌ಟ್ಸನ್ ಕ್ವೇಲ್ ಅನನುಭವಸ್ಥನೆಂದು ಹೇಳಿದನು. ಕ್ವೇಲ್ 'ಜಾನ್ ಕೆನಡಿ ಅಧ್ಯಕ್ಷನಾದಾಗ ಅವನಿಗೂ ಅನುಭವವಿರಲಿಲ್ಲ' ಎಂದುತ್ತರಿಸಿದಾಗ, ಬೆನ್‌ಟ್ಸನ್ 'ನಾನು ಜಾನ್ ಕೆನಡಿಯನ್ನು ಚೆನ್ನಾಗಿ ಬಲ್ಲೆ. ನೀನು ಜಾನ್ ಕೆನಡಿ ಅಲ್ಲ' ಎಂದು ಹೇಳಿ ಕ್ವೇಲ್‌ನ ಬಾಯಿ ಮುಚ್ಚಿಸಿದನು.

೧೦. ಡ್ಯಾನ್ ಕ್ವೇಲ್‌ನ ಅತ್ಯಂತ ಪೇಚಿನ ಪ್ರಸಂಗವೆಂದರೆ ವಿದ್ಯಾಭ್ಯಾಸದ ಮಹತ್ವವನ್ನು ಮಕ್ಕಳಿಗೆ ಮನದಟ್ಟು ಮಾಡಲು ಒಂದು ಶಾಲೆಗೆ ಭೇಟಿ ಕೊಟ್ಟಾಗ ಬಾಲಕರು potato ಕುರಿತು ಚರ್ಚೆ ನಡೆಸುತ್ತಿದ್ದರು. ಕ್ವೇಲ್ ಹುಡುಗನೊಬ್ಬನಿಗೆ ಬೋರ್ಡಿನ ಮೇಲೆ ಆ ಪದವನ್ನು ಬರೆಯುವಂತೆ ಹೇಳಿದಾಗ ಆ ಹುಡುಗ ಅದನ್ನು ಸರಿಯಾಗಿಯೇ 'potato' ಎಂದು ಬರೆದನು. ಕ್ವೇಲ್ ಅದನ್ನು ತಪ್ಪು ಎಂದು ಹೇಳಿ ತಾನು ಅದನ್ನು potatoe ಎಂದು e ಅಕ್ಷರವನ್ನು ಸೇರಿಸಿ ಬರೆದು ನಗೆಪಾಟಲಿಗೆ ಗುರಿಯಾದನು.

ಕೊನೆಗೂ ಪ್ರಚಂಡ ಬಹುಮತದಿಂದ (landslide) ಜಯ (೪೨೬-೧೧೨) ಬುಷ್‌ನ ದಾಯಿತು. ರಿಪಬ್ಲಿಕನ್ನರು ದಕ್ಷಿಣ ರಾಜ್ಯಗಳನ್ನು ಹತೋಟಿಯಲ್ಲಿಟ್ಟುಕೊಂಡಿದ್ದರು. ಬೃಹತ್ ಕೈಗಾರಿಕೆಗಳ ರಾಜ್ಯಗಳಲ್ಲಿ ಬಹುತೇಕ ರಾಜ್ಯಗಳು ಬುಷ್‌ನನ್ನು ಬೆಂಬಲಿಸಿದ್ದವು. ಡೆಮೊಕ್ರಾಟರು ಕಾಂಗ್ರೆಸ್ ಮೇಲಿನ ನಿಯಂತ್ರಣ ಹೊಂದಿದ್ದರು. ಆದಾಗ್ಯೂ ಮುಂದಿನ ನಾಲ್ಕು ವರ್ಷಗಳು ಅಧ್ಯಕ್ಷ ಬುಷ್ ಕಾಂಗ್ರೆಸ್ಸಿನಲ್ಲಿ ಮಂಡಿಸಿದ ೩೬ ಮಸೂದೆಗಳಲ್ಲಿ ೩೪ ಮಸೂದೆಗಳನ್ನು 'ವೀಟೊ' ಮಾಡಿದನು.

'Read My Lips: No New Taxes'

ಜಾರ್ಜ್ ಬುಷ್ ಯಾರು? ಏನು?

ಜಾರ್ಜ್ ವಾಕರ್ ಬುಷ್ ಅಮೆರಿಕದ ೪೧ನೆಯ ಅಧ್ಯಕ್ಷ. ೧೯೨೪ರ ಜೂನ್ ೧೨ರಂದು ಜನಿಸಿದ ಇವನ ತಂದೆ ಪ್ರೆಸ್‌ಕಾಟ್ ಬುಷ್ (Prescott Bush) ಕನೆಕ್ಟಿಕಟ್ (Connecticut) ರಾಜ್ಯದ ಸೆನೆಟರ್ ಆಗಿದ್ದನು. ಸುಪ್ರತಿಷ್ಠ ಪ್ರಾಥಮಿಕ ಶಾಲೆಯಾದ ಫಿಲಿಪ್ಸ್ ಅಕಾಡೆಮಿಯಲ್ಲಿ ಕಲಿಯಲು ಶುರು ಮಾಡಿದ ಬುಷ್ ಆನಂತರ ಎರಡನೆಯ ಜಾಗತಿಕ ಯುದ್ಧದ ಸಮಯದಲ್ಲಿ ನೌಕಾದಳವನ್ನು ಸೇರಿಕೊಂಡನು. ಯುದ್ಧಾನಂತರ ಯೇಲ್ ವಿಶ್ವವಿದ್ಯಾನಿಲಯ ಸೇರಿ, ೧೯೪೫ರಲ್ಲಿ ಬಾರ್ಬರಾ ಪ್ರೈಸ್ ಎಂಬಾಕೆಯನ್ನು ಮದುವೆಯಾದನು. ಈ ದಂಪತಿಗಳು ಟೆಕ್ಸಾಸ್ ರಾಜ್ಯದಲ್ಲಿ ನೆಲಸಿ ತೈಲ ವ್ಯಾಪಾರವನ್ನು ಪ್ರಾರಂಭಿಸಿದರು. ಇದರಲ್ಲಿ ಅಪಾರ ಹಣ ಗಳಿಸಿ ಐಶ್ವರ್ಯವಂತನಾದ ಮೇಲೆ ಅಧಿಕಾರದ ಆಸೆ ಹುಟ್ಟಿ ರಾಜಕೀಯ ಪ್ರವೇಶ ಮಾಡಿ ಟೆಕ್ಸಾಸ್ ರಾಜ್ಯವನ್ನು ಪ್ರತಿನಿಧಿಸುವ ಕಾಂಗ್ರೆಸ್ ಸದಸ್ಯನಾದನು. ನಂತರ ವಿಶ್ವಸಂಸ್ಥೆಯಲ್ಲಿ ಅಮೆರಿಕನ್ ರಾಯಭಾರಿಯಾಗಿ ಸೇವೆ ಸಲ್ಲಿಸಿ, ನಿಕ್ಸನ್ ಆಡಳಿತದಲ್ಲಿ ಸಿ.ಐ.ಏ ಸಂಸ್ಥೆಯ ನಿರ್ದೇಶಕನಾಗಿದ್ದನು. ರೇಗನ್ ಬುಷ್‌ನನ್ನು ತನ್ನ ಆಡಳಿತದಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ನೇಮಕ ಮಾಡಿದನು. ಬುಷ್‌ಗೆ ರೇಗನ್‌ನ ಎಲ್ಲ ತತ್ವಗಳನ್ನು ಒಪ್ಪಿಕೊಳ್ಳಲಾಗದಿದ್ದರೂ ಅವನ ಆಡಳಿತದ ಎರಡು ಅವಧಿಯಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸಿದನು. ಅವನ ಹೆಂಡತಿ ಬಾರ್ಬರಾ ಅತಿ ಪ್ರೀತಿಪರಳಾದ ಮತ್ತು ಜನಾನುರಾಗಿಯಾದ 'ಮೊದಲನೆಯ ಮಹಿಳೆ' (First Lady) ಆಗಿದ್ದಳು. ಅನೇಕರು ಅವಳನ್ನು 'ಯಜಮಾನಗಿತ್ತಿ' (matriarch) ಎಂದು ಕರೆಯುತ್ತಿದ್ದರು. ಬುಷ್ ದಂಪತಿಗಳಿಗೆ ನಾಲ್ಕು ಗಂಡು ಮಕ್ಕಳು, ಒಬ್ಬಳು ಮಗಳು ಮತ್ತು ಹತ್ತು ಮೊಮ್ಮಕ್ಕಳು. ಬಾರ್ಬರಾ ಬುಷ್ ಅನಕ್ಷರತೆಯ ವಿರುದ್ಧ ಕೈಗೊಂಡ ಯೋಜನೆ ಯಶಸ್ವಿಯಾಗಿ ಅವಳಿಗೆ ಸಾಮಾನ್ಯ ಜನರಲ್ಲಿದ್ದ ಅವ್ಯಾಜ್ಯ ಪ್ರೇಮಕ್ಕೆ ನಿದರ್ಶನವಾಗಿತ್ತು.

ಅಧ್ಯಕ್ಷ ಬುಷ್‌ನ ಆಡಳಿತ ಮಂಡಳಿಯಲ್ಲಿದ್ದವರು ಬಹುತೇಕ ವ್ಯಾಪಾರ, ವಾಣಿಜ್ಯ ಕ್ಷೇತ್ರಗಳಿಂದ ಬಂದವರು. ಅವರಲ್ಲಿ ನುರಿತ ರಾಜಕಾರಣಿಗಳನ್ನು ಮತ್ತು ರಾಜಕೀಯ

ವ್ಯವಹಾರಗಳಲ್ಲಿ ಆಳವಾದ ಅನುಭವವಿರುವವರನ್ನು ಆಯ್ಕೆ ಮಾಡಿಕೊಂಡನು. ಬುಷ್ ನೇಮಕ ಮಾಡಿದವರಲ್ಲಿ ಟೆಕ್ಸಾಸ್‌ನ ಜಾನ್ ಟವರ್ಸ್‌ನನ್ನು ಬಿಟ್ಟರೆ ಮಿಕ್ಕ ಎಲ್ಲರನ್ನೂ ಸೆನೆಟ್ ಸರಾಗವಾಗಿ ಅಂಗೀಕರಿಸಿತು. ಟವರ್‌ನನ್ನು ನಿರಾಕರಿಸಲು ಅವನಾಗಿಯೇ ಒಪ್ಪಿಕೊಂಡ ಕುಡಿತದ ದುರಾಭ್ಯಾಸ ಮತ್ತು ರಕ್ಷಣಾ ಉಪಕರಣಗಳನ್ನು ತಯಾರಿಸುವ ಕೈಗಾರಿಕೆಗಳ ಪರವಾಗಿ 'ಲಾಬಿ'[೧೧] ಮಾಡುತ್ತಿದ್ದುದು ಕಾರಣವಾಯಿತು. ಟವರ್ ಸ್ಥಾನಕ್ಕೆ ಮಾಜಿ ಕಾಂಗ್ರೆಸ್ ಸದಸ್ಯ ಡಿಕ್ ಚೇನಿ (Dick Cheney)ಯನ್ನು ರಕ್ಷಣಾ ಕಾರ್ಯದರ್ಶಿಯ ಸ್ಥಾನಕ್ಕೆ ನೇಮಕ ಮಾಡಿದನು. ವಸತಿ ಮತ್ತು ನಗರಾಭಿವೃದ್ಧಿ ಕಾರ್ಯದರ್ಶಿಯಾಗಿ ಜಾಕ್ ಕೆಂಪ್ (Jack Kemp) ಮತ್ತು ಚುನಾವಣೆಯಲ್ಲಿ ತನ್ನ ಎದುರಾಳಿಯಾಗಿದ್ದ ರಾಬರ್ಟ್ ಡೋಲ್‌ನ ಹೆಂಡತಿ ಎಲಿಜ಼ಬೆತ್ ಡೋಲ್‌ಳನ್ನು (Elizabeth Dole) ಸಾಗಾಣಿಕೆ ಮತ್ತು ಸಾರಿಗೆ ಕಾರ್ಯದರ್ಶಿಯಾಗಿ ನೇಮಿಸಿದನು. ರೇಗನ್ ಆಡಳಿತ ಮಂಡಳಿಯಲ್ಲಿ ಖಜಾನೆ ಕಾರ್ಯದರ್ಶಿಯಾಗಿದ್ದ ನಿಕೊಲಾಸ್ ಬ್ರೇಡಿ (Nicholas Brady) ಮತ್ತು ಅಟಾರ್ನಿ ಜನರಲ್ ಡಿಕ್ ಥಾರ್ನ್‌ಬರ್ಗ್ (Dick Thornburgh) ಇಬ್ಬರನ್ನೂ ಅವರ ಸ್ಥಾನಗಳಲ್ಲಿ ಮುಂದುವರಿಯುವಂತೆ ಕೇಳಿಕೊಂಡನು. ರೇಗನ್ ಶ್ವೇತಭವನದ ಮುಖ್ಯಸ್ಥ ಹಾಗೂ ಬುಷ್‌ನ ಆಪ್ತ ಗೆಳೆಯ ಜೇಮ್ಸ್ ಬೇಕರ್‌ನನ್ನು ವಿದೇಶಾಂಗ ಕಾರ್ಯದರ್ಶಿಯಾಗಿ (Secretary of State) ನೇಮಿಸಿದನು. ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಬೇಕರ್ ಮತ್ತು ಚೇನಿ ಅಧ್ಯಕ್ಷ ಬುಶ್‌ನ ಆಡಳಿತದ ಅವಧಿಯಲ್ಲಿ ಮಹತ್ವದ ಪಾತ್ರ ವಹಿಸಿದರು. ಆಫ್ರಿಕನ್ ಅಮೆರಿಕನ್ ಲೂಯಿಸ್ ಸಲಿವನ್ (Lewis Sullivan) ಆರೋಗ್ಯ ಮತ್ತು ಮಾನವಸೇವೆ (Health and Human Services) ಇಲಾಖೆಯ ಕಾರ್ಯದರ್ಶಿಯಾಗಿ ನೇಮಕಗೊಂಡನು. ಬುಷ್‌ನ ಆಡಳಿತ ಮಂಡಳಿಯಲ್ಲಿ ಒಮ್ಮತ ಹಾಗೂ ದೃಢತೆ ಕಂಡುಬರುತ್ತಿದ್ದವು. ಶ್ವೇತಭವನದ ಮುಖ್ಯಸ್ಥನಾಗಿ ನ್ಯೂ ಹ್ಯಾಂಪ್‌ಶೈರ್‌ನ ಮಾಜಿ ಗವರ್ನರ್ ಜಾನ್ ಸುನೂನು ಅಧಿಕಾರ ವಹಿಸಿಕೊಂಡನು. ಬ್ರೆಂಟ್ ಸ್ಕೊವ್‌ಕ್ರಾಫ್ಟ್ (Brent Stowecroft) ರಾಷ್ಟ್ರೀಯ ರಕ್ಷಣಾ ಸಲಹೆಗಾರನಾದನು. ರಿಚರ್ಡ್ ಡಾರ್ಮನ್ (Richard Dorman) ನಿರ್ವಹಣೆ ಮತ್ತು ಆಯವ್ಯಯ ಇಲಾಖೆಯ (Office Management and Budget) ಮುಖ್ಯಸ್ಥನೂ ಮತ್ತು ಅಧ್ಯಕ್ಷ ಬುಷ್‌ನ ಪ್ರಮುಖ ಆರ್ಥಿಕ ಸಲಹೆಗಾರನೂ ಆದನು.

ಬುಷ್‌ನ ಆಡಳಿತದ ಅವಧಿಯಲ್ಲಿ ಅಮೆರಿಕದ ಆಂತರಿಕ ಸಮಸ್ಯೆಗಳು

ಬುಷ್ ಅಧಿಕಾರ ವಹಿಸಿಕೊಂಡ ಒಂದು ತಿಂಗಳಲ್ಲಿಯೇ ಹಣಕಾಸಿನ

---

೧೧. ಪ್ರತಿಷ್ಠಿತ ವ್ಯಕ್ತಿಗಳು ಮತ್ತು ಪ್ರಭಾವಯುತವಾದ ಗುಂಪುಗಳು ತಾವು ಪ್ರತಿನಿಧಿಸುವ ಪಟ್ಟಭದ್ರ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ಸರ್ಕಾರದ ವಿವಿಧ ಸಮಿತಿಗಳ ಸದಸ್ಯರು ಮತ ನೀಡುವಂತೆ ಒತ್ತಾಯ ಮಾಡುವುದು.

ತೊಂದರೆಯಲ್ಲಿರುವ ಎಲ್ಲ ಉಳಿತಾಯ ಮತ್ತು ಸಾಲ ನೀಡುವ ಸಂಸ್ಥೆಗಳೆಲ್ಲವನ್ನೂ (Savings and Loan Associations) ಮಾರುವ ಅಥವಾ ಮುಚ್ಚುವ ಮಸೂದೆಯನ್ನು ಮಂಡಿಸಿದನು. ೩೫೦ಕ್ಕೂ ಹೆಚ್ಚು ಬ್ಯಾಂಕ್‌ಗಳು ೫೦ ಬಿಲಿಯನ್ ಡಾಲರ್‌ಗಳ ಸರ್ಕಾರದ ಸಹಾಯಧನವನ್ನು ಮುಂದಿನ ಹತ್ತು ವರ್ಷಗಳ ಅವಧಿಯಲ್ಲಿ ಪಡೆಯುವಂತೆ ವ್ಯವಸ್ಥೆ ಮಾಡಿದನು. ಈ ಹಣವನ್ನು ಸರ್ಕಾರದ ಬಾಂಡ್‌ಗಳು ಸುರಕ್ಷಿತವಾಗಿ ಮಾಡಿದ್ದವು. ಈ ವೆಚ್ಚದ ಬಹುಭಾಗ ತೆರಿಗೆದಾರರು ಭರಿಸಬೇಕಾಗಿತ್ತು. ಅನೇಕ ಬ್ಯಾಂಕ್‌ಗಳು ಆಗಲೇ ಬಾಗಿಲು ಮುಚ್ಚಿದ್ದವು. ಸರ್ಕಾರದ ಸಹಾಯವಿಲ್ಲದೆಹೋದರೆ ಇನ್ನೂ ಹೆಚ್ಚಿನ ಸಂಖ್ಯೆಯ ಬ್ಯಾಂಕ್‌ಗಳು ದಿವಾಳಿ ಏಳುತ್ತಿದ್ದವು. ಇದನ್ನು ತಡೆಗಟ್ಟಲು 'Resolution Trust Company' ಅಸ್ತಿತ್ವಕ್ಕೆ ಬಂದು ಅದು ಮುಚ್ಚಿದ ಬ್ಯಾಂಕ್‌ಗಳ ಪ್ರತಿನಿಧಿಯಂತೆ ಕಾರ್ಯಾಚರಣೆಗೆ ತೊಡಗಿತು. ೧೯೯೦ರ ಹೊತ್ತಿಗೆ ಖಜಾನೆ ಕಾರ್ಯದರ್ಶಿ ತಾನು ಮೊದಲು ಅಂದಾಜು ಮಾಡಿದ್ದು ಕಡಿಮೆಯಾಯಿತು, ಹೊಸ ಗಣನೆಯ ಪ್ರಕಾರ ಖರ್ಚು ಭರಿಸಲು ೧೦೦ ಬಿಲಿಯನ್ ಡಾಲರ್‌ಗಳಿಗಿಂತಲೂ ಹೆಚ್ಚು ಹಣ ಬೇಕಾಗುತ್ತದೆ ಎಂದು ತಿಳಿಸಿದನು. ಇವೆಲ್ಲದರ ಮೇಲೆ, ಅಧ್ಯಕ್ಷ ಬುಷ್‌ನ ಮಗ ನೀಲ್ ಬಾಗಿಲು ಮುಚ್ಚಿದ ಬ್ಯಾಂಕ್‌ವೊಂದರ ನಿರ್ದೇಶಕನಾಗಿದ್ದನು. ಅವನು ಕಾಂಗ್ರೆಸ್ ಸಮಿತಿಯ ಮುಂದೆ ಸಾಕ್ಷ್ಯ ಹೇಳುತ್ತ ತಾನು ನಿರ್ದೇಶಿಸುತ್ತಿದ್ದ ಬ್ಯಾಂಕ್ ಮುಚ್ಚಿದ್ದಕ್ಕೂ ಸರ್ಕಾರ ಸಹಾಯ ಮಾಡಲು ನಿರ್ಧರಿಸಿದ್ದಕ್ಕೂ ಯಾವ ಸಂಬಂಧವೂ ಇಲ್ಲವೆಂದು ಸ್ಪಷ್ಟಪಡಿಸಿದನು. ೧೯೯೦ರ ಸೆಪ್ಟೆಂಬರ್ ತಿಂಗಳಲ್ಲಿ 'Federal Deposit Insurance Corporation' ನೀಲ್‌ಬುಷ್‌ನ ಮೇಲೆ 'ಅತಿ ಅಲಕ್ಷ್ಯತೆ'ಯಿಂದ ಬ್ಯಾಂಕ್ ಮುಳುಗಿಸಿದ ಆಪಾದನೆ ಹೊರಿಸಿ ನ್ಯಾಯಾಲಯದಲ್ಲಿ ದಾವಾ ಹಾಕಿತು. ಬ್ಯಾಂಕ್‌ಗಳು ಎದುರಿಸುತ್ತಿದ್ದ ಸಮಸ್ಯೆಗಳು ಸಾಲದು ಎಂಬಂತೆ ಕ್ಯಾಲಿಫೋರ್ನಿಯಾದಲ್ಲಿ ಚಾರ್ಲ್ಸ್ ಕೀಟಿಂಗ್ (Charles Keating) ಎಂಬ ಉಳಿತಾಯ ಮತ್ತು ಸಾಲದ ಬ್ಯಾಂಕ್‌ವೊಂದರ ಮಾಜಿ ಮಾಲೀಕನಿಗೆ ಭ್ರಷ್ಟಾಚಾರದ ಅಪರಾಧಕ್ಕಾಗಿ ಶಿಕ್ಷೆ ವಿಧಿಸಲಾಯಿತು. ಈ ಬ್ಯಾಂಕ್‌ಗಳಿಗೆ ಸರ್ಕಾರ ಹಣ ಒದಗಿಸಿ ಅವನ್ನು ಉಳಿಸಿದ್ದು ರೇಗನ್ ಆಡಳಿತದ ಅನಿಯಂತ್ರಿತ ಆರ್ಥಿಕ ತತ್ವದ ಕುರುಹಾಗಿತ್ತು. ರೇಗನ್ ತತ್ವ ಪ್ರತಿಪಾದಕನಾಗಿದ್ದ ಬುಷ್ ಅದೇ ರೀತಿ ಸರ್ಕಾರದ ಸಹಾಯವನ್ನು ಅಂಗೀಕರಿಸಿದನು. ಇದು ರಾಷ್ಟ್ರದ ಖೋತಾವನ್ನು ಮತ್ತಷ್ಟು ಹೆಚ್ಚಿಸಿತು.

'ಒಂದು ಸಾವಿರ ಬೆಳಕಿನ ಕುಡಿಗಳು'
ಸಮಾಜ ಸುಧಾರಣೆ ಸರ್ಕಾರದ ಕೆಲಸವೆ?

ಅಧ್ಯಕ್ಷ ಬುಷ್‌ನ ಆಡಳಿತದಲ್ಲಿ ನ್ಯಾಯವಿಧಾಯಕ ಸಭೆ (Legislature) ಸಮಾಜಕ್ಕೆ ಸಂಬಂಧಿಸಿದ ಕೆಲವು ಕಾಯಿದೆಗಳನ್ನು ಕಾಂಗ್ರೆಸ್ ಅನುಮೋದಿಸುವಂತೆ ಪ್ರಯತ್ನಿಸಿತು. ಆದರೆ ಬುಷ್ ಸಾಮಾಜಿಕ ಕಾಯಿದೆಗಳನ್ನು ಸೃಷ್ಟಿಸುವುದಾಗಲಿ ಅಥವಾ ಜಾರಿಗೆ

ತರುವುದಾಗಲಿ ಸರ್ಕಾರದ ಕೆಲಸವಲ್ಲವೆಂದು ದೃಢವಾಗಿ ನಂಬಿದ್ದನು[೧೨]. ಈ ವಿಷಯ ಕುರಿತು ಕಾಂಗ್ರೆಸ್‌ನಲ್ಲಿ ದೀರ್ಘವಾದ ಚರ್ಚೆ ನಡೆಯಿತು. ಕಾಂಗ್ರೆಸ್ ಮತ್ತು ಅಧ್ಯಕ್ಷರ ನಡುವೆ ರಾಜಿ (compromise) ಕಷ್ಟವಾಯಿತು. ಬುಷ್ ಒಂದು ವಿಷಯದಲ್ಲಿ ಮಾತ್ರ ಯಾವ ಚರ್ಚೆ ಮಾಡಲೂ ನಿರಾಕರಿಸಿದನು. ಅದೆಂದರೆ, ಗರ್ಭಪಾತ. ಮಹಿಳೆಯರು ಗರ್ಭಪಾತ ಮಾಡಿಸಿಕೊಳ್ಳಲು ಸರ್ಕಾರ ಹಣ ಒದಗಿಸುವುದು ಅವನಿಗೆ ಅಸಂಬದ್ಧವಾಗಿ ತೋರಿತು. ಗರ್ಭಪಾತ ಅನೈತಿಕವೆಂದು ಅವನು ನಿರ್ಧರಿಸಿದ್ದರಿಂದ ಅದಕ್ಕೆ ಸರ್ಕಾರದ ಹಣ ಉಪಯೋಗಿಸುವುದು ಪಾಪಕಾರ್ಯದಲ್ಲಿ ಪಾಲುಗೊಂಡಂತೆ ಎಂದು ಆ ವಿಷಯಕ್ಕೆ ಸಂಬಂಧಿಸಿದ ಎಲ್ಲ ಮಸೂದೆಗಳನ್ನು ನಿರಾಕರಿಸುತ್ತಿದ್ದನು.

೧೯೮೯ರ ಅಕ್ಟೋಬರ್ ತಿಂಗಳಲ್ಲಿ ಕಾಂಗ್ರೆಸ್ ಅಧ್ಯಕ್ಷನಿಗೆ ಕಳುಹಿಸಿದ ಮಸೂದೆಯಲ್ಲಿ ಬಲಾತ್ಕಾರ ಮತ್ತು ಕುಟುಂಬದ ಸದಸ್ಯರಿಂದ ಗರ್ಭಧಾರಣೆಯಾದ (incest) ಸಂದರ್ಭಗಳಲ್ಲಿ ಗರ್ಭಪಾತ ಮಾಡಿಸಿಕೊಳ್ಳಲು ಫೆಡರಲ್ ಸರ್ಕಾರ ಮೆಡಿಕೇಡ್ (Medicaid) ನಿಧಿಯಿಂದ ಹಣ ಒದಗಿಸಬೇಕೆಂದು ಒತ್ತಾಯ ಮಾಡಿದಾಗ ಅಧ್ಯಕ್ಷ ಬುಷ್ ಅದನ್ನು 'ವೀಟೊ' ಮಾಡಿದನು. ಆದರೆ ಗರ್ಭಿಣಿಗೆ ಪ್ರಾಣಾಪಾಯವಾಗಬಹುದಾದ ಸಂದರ್ಭಗಳಲ್ಲಿ ಮಾತ್ರ ಗರ್ಭಪಾತಕ್ಕೆ ಸರ್ಕಾರ ಹಣ ಒದಗಿಸಬಹುದೆಂದು ಒಪ್ಪಿಗೆ ನೀಡಿದನು. ೧೯೯೦ರ ಸಮಯದಲ್ಲಿ 'ಏಡ್ಸ್' (AIDS) ಪಿಡುಗು ಅಮೆರಿಕದಲ್ಲಿ ಪರಮಾವಧಿಯನ್ನು ತಲುಪಿದೆ ಎಂದು ಪತ್ರಿಕಾವರದಿಗಳು ಎಚ್ಚರ ನೀಡುತ್ತಿದ್ದರೂ ಸಹ ಬುಷ್ ಆಡಳಿತದಲ್ಲಿ ಏಡ್ಸ್ ಬಗ್ಗೆ ಸಂಶೋಧನೆಗೆ ಕರೆನೀಡಿ ಧನ ಸಹಾಯ ಮಾಡಲಿಲ್ಲ. ೧೯೯೦ರ ಜುಲೈ ತಿಂಗಳಲ್ಲಿ ಕಾಂಗ್ರೆಸ್ ಅಂಗೀಕರಿಸಿದ 'ಅಂಗಹೀನ ಅಮೆರಿಕನ್ನರ ಕಾಯಿದೆ'ಗೆ (The Americans with Disabilities Act) ಅಧ್ಯಕ್ಷ ಬುಷ್ ರುಜು ಹಾಕಿದನು. ಇದರ ಗುರಿ ಅಂಗಹೀನರನ್ನು ಪಕ್ಷಪಾತಕ್ಕೆ ಒಳಪಡಿಸುವುದನ್ನು ತಪ್ಪಿಸುವುದಾಗಿತ್ತು. ಶುಶ್ರೂಷೆ ಪಡೆಯುತ್ತಿದ್ದ ಏಡ್ಸ್ ರೋಗಿಗಳಿಗೆ ಧನಸಹಾಯ ದೊರಕುವಂತೆ ಮಾಡುವ ಭಾಗವನ್ನು ಈ ಕಾಯಿದೆ ಒಳಗೊಂಡಿತ್ತು. ಬ್ಯಾಸ್ಕೆಟ್‌ಬಾಲ್ ಕ್ರೀಡಾಪಟು ಮ್ಯಾಜಿಕ್ ಜಾನ್‌ಸನ್‌ನನ್ನು (Magic Johnson) ಬುಷ್ ಏಡ್ಸ್ ಕಮಿಷನ್‌ಗೆ

---

೧೨. ಸರ್ಕಾರ ಸಾಮಾಜಿಕ ಕಾರ್ಯಗಳಲ್ಲಿ ಕೈಹಾಕಬಾರದು ಎಂದ ಬುಷ್ ಇಂಥ ಕಾರ್ಯಗಳು ಮತ್ತು ಸುಧಾರಣೆಗಳು ಸ್ವಯಂಸೇವಕ ಸಂಸ್ಥೆಗಳಿಗೆ (voluntary organizations) ಮೀಸಲಾಗಿಡಬೇಕು ಎಂದು ನಂಬಿದ್ದನು. ಅವನು ಈ ಸಂಸ್ಥೆಗಳನ್ನು 'ಸಾವಿರ ಬೆಳಕಿನ ಕುಡಿಗಳು' (A thousand points of light) ಎಂದು ಕರೆದನಾದರೂ ಆ ಬೆಳಕಿನ ಕುಡಿಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಕೊಡಲಿಲ್ಲ. ಒಬ್ಬೊಬ್ಬರು ಒಂದೊಂದು ರೀತಿ ಅರ್ಥ ಮಾಡಿಕೊಂಡು ಇದು ಗೊಂದಲದ ಪರಿಸ್ಥಿತಿಗೆ ಎಡೆಮಾಡಿಕೊಟ್ಟಿತು. ಬಡಬಗ್ಗರ ಸ್ಥಿತಿಗಳನ್ನು ಈ 'ಕುಡಿಗಳು' ಉತ್ತಮಗೊಳಿಸಲಿಲ್ಲ. ಅಂತೆಯೇ ಬುಷ್‌ನ ಆಡಳಿತ ಮುಗಿದೊಡನೆಯೇ ಈ 'ಕುಡಿಗಳು' ನಂದಿಹೋದವು.

ನೇಮಕ ಮಾಡಿದನು. ಸ್ವಲ್ಪ ಕಾಲಾನಂತರ ಮ್ಯಾಜಿಕ್ ಜಾನ್‌ಸನ್ ಸರ್ಕಾರ ಸಂಶೋಧನೆಗೆ ಹಣ ಒದಗಿಸದೆ ಹೋದ ಕಾರಣಕ್ಕಾಗಿ ರಾಜೀನಾಮೆ ನೀಡಿದನು.

ಸಾಮಾಜಿಕ ಕಾಯಿದೆ (Social legislation) ಬಗ್ಗೆ ಬುಷ್‌ನಿಗಿದ್ದ ಕಡುವಿರೋಧ ವನ್ನು ವ್ಯಕ್ತಪಡಿಸುವ ಇನ್ನೊಂದು ಉದಾಹರಣೆ: ಅವನು ಚರಿತ್ರಾರ್ಹ ಪೌರಹಕ್ಕುಗಳ ಕಾಯಿದೆಯನ್ನು 'ವೀಟೊ' ಮಾಡಿದ್ದು. ಈ ಕಾಯಿದೆ ಅಂಗೀಕೃತವಾಗಿದ್ದರೆ ಅದು ಶ್ರೇಷ್ಠ ನ್ಯಾಯಾಲಯದ ಪಕ್ಷಪಾತ ವಿರುದ್ಧ ತೀರ್ಪನ್ನು ಬಲಪಡಿಸಿ ಖಾಯಂಗೊಳಿಸುತ್ತಿತ್ತು. ಇದರಿಂದ ಮಾಲೀಕರು, ಉದ್ದಿಮೆಗಾರರು ಮತ್ತು ನಿರ್ವಹಣಕಾರರು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಪಕ್ಷಪಾತ ಮಾಡುವುದು ಕಡಿಮೆಯಾಗುತ್ತಿತ್ತು. ಈ ಕಾಯಿದೆಯಲ್ಲಿ ಅಲ್ಪಸಂಖ್ಯಾತರಿಗೆ ಅನುಕೂಲಕರವಾದ ಅಂಶಗಳು ಇದ್ದುದರಿಂದ (ಮತ್ತು ಈ ಅಂಶಗಳು 'affirmative action' ಖಾಯಂ ಮಾಡುತ್ತಿದ್ದುದರಿಂದ) ಈ ಕಾಯಿದೆಯನ್ನು ಬುಷ್ ನಿರಾಕರಿಸಿದನು. ೧೯೯೧ರಲ್ಲಿ ಪೌರಹಕ್ಕುಗಳ ಕಾಯಿದೆಯನ್ನು ತಿದ್ದಿ ಬುಷ್‌ನ ಅಭಿಪ್ರಾಯಗಳಿಗೆ ಸಮನ್ವಯವಾಗುವಂತೆ ಮಾಡಿ ಈ 'ಬಲಹೀನ ಆವೃತ್ತಿ'ಯನ್ನು (weaker version) ಕಾಂಗ್ರೆಸ್ ಅಂಗೀಕರಿಸಿತು. ಇದಕ್ಕೆ ಬುಷ್ ರುಜು ಮಾಡಿದನು.

ಬುಷ್ ಜಾರಿಗೆ ತಂದ ಎರಡು ಮಹತ್ವಪೂರ್ಣ ಕಾಯಿದೆಗಳು: ೧೯೯೧ರ ವಲಸೆ ನಿಯಂತ್ರಣ ಕಾಯಿದೆ ಮತ್ತು ನಿರ್ಮಲ ವಾಯು ಕಾಯಿದೆ (Clean air Act). ವಲಸೆ ನಿಯಂತ್ರಣ ಕಾಯಿದೆ ರಾಷ್ಟ್ರದ ವಲಸೆ ಧೋರಣೆಯನ್ನು ತೀವ್ರತರವಾಗಿ ಬದಲಾಯಿಸಿತು. ಇದರಿಂದ ಯೂರೋಪ್ ರಾಷ್ಟ್ರಗಳಿಂದ ಬರುವ ವಲಸೆಗಾರರಿಗೆ ಹೆಚ್ಚಿನ ಆದ್ಯತೆ ಕೊಟ್ಟಿತು. ವ್ಯಕ್ತಿಗಳ ರಾಜಕೀಯ ಅಭಿಪ್ರಾಯದ ಆಧಾರದ ಮೇಲೆ ಅವರನ್ನು ಅನರ್ಹರನ್ನಾಗಿ ಮಾಡುವುದನ್ನು ಇದು ತೆಗೆದುಹಾಕಿತು. ೧೯೯೦ರ ನಿರ್ಮಲ ವಾಯು ಕಾಯಿದೆ ದೇಶದ ಎಲ್ಲಾ ಕಡೆಗಳಲ್ಲಿ 'sulfur dioxide' ಪ್ರಮಾಣ ಎಷ್ಟಿರಬೇಕು ಎನ್ನುವುದನ್ನು ಖಚಿತಪಡಿಸಿತು. ಈ ಕಾಯಿದೆ 'acid rain' ಸಮಸ್ಯೆಯನ್ನು ಬಗೆಹರಿಸಲು ಗಾಳಿಯಲ್ಲಿ 'nitrogen oxide' ಪ್ರಮಾಣವನ್ನು ಕಡಿಮೆ ಮಾಡುವುದನ್ನು ಕಡ್ಡಾಯವಾಗಿ ಜಾರಿಗೆ ತಂದಿತು. ನಗರಗಳಲ್ಲಿ ಮೋಟಾರ್ ವಾಹನಗಳು ಹೊರಹಾಕುವ fluorocarbon ಮುಂತಾದ ವಿಸರ್ಜನೆಗಳು (emissions) ಓಝೋನ್ (ozone) ತೆರೆಯನ್ನು ಹಾಳು ಮಾಡುವುದರಿಂದ ಅವುಗಳ ಪ್ರಮಾಣವನ್ನು ಕಡ್ಡಾಯವಾಗಿ ಕಡಿಮೆ ಮಾಡುವ ಕ್ರಮಗಳನ್ನು ಕೈಗೊಳ್ಳಲಾಯಿತು. ತೈಲ ಕಂಪನಿಗಳು ಕಲ್ಮಷರಹಿತವಾಗಿ ಉರಿಯುವಂಥ ಇಂಧನಗಳನ್ನು ತಯಾರಿಸುವ ಅಗತ್ಯವನ್ನು ಈ ಕಾಯಿದೆ ಸ್ಪಷ್ಟಪಡಿಸಿತು. ತೈಲ ಕಂಪನಿಗಳು ಹೊರಹಾಕುವ ಕಲ್ಮಷಗಳ ಪ್ರಮಾಣವನ್ನು ಕಡಿಮೆ ಮಾಡಲು ನಿಯಂತ್ರಣ ಪರಿಮಾಣ ಗಳನ್ನು ಈ ಕಾಯಿದೆ ಬಿಗಿಗೊಳಿಸಿತು.

ಬುಷ್ ಆಡಳಿತದಲ್ಲಿ ಶ್ರೇಷ್ಠ ನ್ಯಾಯಾಲಯ

ರೊನಾಲ್ಡ್ ರೇಗನ್ ಶ್ರೇಷ್ಠ ನ್ಯಾಯಾಧೀಶರ ನೇಮಕಾತಿಯಲ್ಲಿ ಸಂಪ್ರದಾಯಸ್ಥ (conservative) ಕ್ರಾಂತಿಯನ್ನು ಪ್ರಾರಂಭಿಸಿದವನು. ಬುಷ್ ಅದನ್ನು ಪೂರ್ಣಗೊಳಿಸಿದನು. ಶ್ರೇಷ್ಠ ನ್ಯಾಯಾಲಯದ ಈಚಿನ ತೀರ್ಪುಗಳು ಈ ಕ್ರಾಂತಿ ಜರುಗಿರುವುದಕ್ಕೆ ಪುರಾವೆ ಒದಗಿಸಿವೆ. ನ್ಯಾಯಾಧೀಶ ವಿಲಿಯಂ ಬ್ರೆನನ್ (Willian Brennan) ರಾಜೀನಾಮೆ ಕೊಟ್ಟಾಗ ರಾಷ್ಟ್ರದ ಅತ್ಯುನ್ನತ ನ್ಯಾಯಾಲಯಕ್ಕೆ ನ್ಯಾಯಾಧೀಶನನ್ನು ನೇಮಿಸುವ ಅವಕಾಶ ಬುಷ್‌ಗೆ ಒದಗಿ ಬಂದಿತು. ವಿವಾದಕ್ಕೆ ಗುರಿಯಾಗಬಹುದಾದಂಥ ಮತ್ತು ಬಹಿರಂಗ ವಾಗ್ವಾದಕ್ಕೆ ಕಾರಣವಾಗಬಹುದಾದವರನ್ನೆಲ್ಲ ಬಿಟ್ಟು ಬುಷ್ ಸಂಪ್ರದಾಯಸ್ಥನೆನ್ನಬಹುದಾದ ನ್ಯೂ ಇಂಗ್ಲೆಂಡಿನ ಡೇವಿಡ್ ಸೌಟರ್‌ನನ್ನು (David Souter) ಬ್ರೆನನ್ ಸ್ಥಾನದಲ್ಲಿ ನೇಮಿಸಿದನು. ಗರ್ಭಪಾತ ಮುಂತಾದ ವಿಷಯಗಳ ಬಗ್ಗೆ ಸೌಟರ್ ನಿಲುವೇನು ಎನ್ನುವುದು ಯಾರಿಗೂ ಗೊತ್ತಿರಲಿಲ್ಲ. ಆದ್ದರಿಂದ ಸೆನೆಟ್ ಅವನ ನೇಮಕಾತಿಯನ್ನು ಅಂಗೀಕರಿಸಿತು. ಕೊನೆಯಲ್ಲಿ ಸೌಟರ್‌ನು ನ್ಯಾಯಾಧೀಶ ಓಕಾನರ್ ಜೊತೆಗೂಡಿ 'Roe vs. Wade' ದಾವಾದಲ್ಲಿ[೧೩] Roe ಪರವಾದ ತೀರ್ಪನ್ನು ಒಪ್ಪಿಕೊಂಡು ಅದನ್ನು ದೃಢೀಕರಿಸಲು ಕಾರಣನಾದ ಸಂದರ್ಭದಲ್ಲಿ ಅವನು ಮಧ್ಯವರ್ತಿ ಎಂದು ತಿಳಿಯಿತು.

ಅಧ್ಯಕ್ಷ ಬುಷ್ ಶ್ರೇಷ್ಠ ನ್ಯಾಯಾಲಯಕ್ಕೆ ಎರಡನೆಯ ಬಾರಿ ನಿವೃತ್ತನಾದ ಆಫ್ರಿಕನ್

---

೧೩. Roe vs. Wade: ೧೯೭೩ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಗರ್ಭವತಿಯರಿಗೆ ಗರ್ಭವನ್ನು ೯ ತಿಂಗಳವರೆಗೆ ಇಟ್ಟುಕೊಳ್ಳುವುದೋ ಬೇಡವೋ ಎನ್ನುವುದನ್ನು ನಿರ್ಧರಿಸುವ ಹಕ್ಕನ್ನು ಕೊಡಲಾಯಿತು. ಆದರೆ ಕೆಲವು ರಾಜ್ಯಗಳು ಈ ಹಕ್ಕನ್ನು ನಿರಾಕರಿಸಿದವು. ರಾಜ್ಯ ಸರ್ಕಾರಗಳು ತಮ್ಮ ಹಕ್ಕನ್ನು ನಿರಾಕರಿಸಿದ್ದನ್ನು ಪ್ರಶ್ನಿಸಿ ಇಬ್ಬರು ಮಹಿಳೆಯರು – ಟೆಕ್ಸಾಸ್‌ನಲ್ಲಿ ಜೇನ್ ರೋ (Jane Roe) ಎಂಬಾಕೆ ಮತ್ತು ಜಾರ್ಜಿಯಾದಲ್ಲಿ ಮೇರಿ ಡೋ (Mary Doe) ಎಂಬಾಕೆ – ಶ್ರೇಷ್ಠ ನ್ಯಾಯಾಲಯದಲ್ಲಿ ಕಟ್ಟಳೆ ಹೂಡಿದರು. ನ್ಯಾಯಾಲಯ 'ಗರ್ಭ ಧರಿಸಿದ ಮೊದಲ ಮೂರು ತಿಂಗಳಲ್ಲಿ ಗರ್ಭಪಾತ ಮಾಡಿಸಿಕೊಳ್ಳಲು ತಡೆಯೊಡ್ಡುವುದು ರಾಜ್ಯಾಂಗ ನಿಷಿದ್ಧವಾದುದು (unconstitutional)' ಎಂಬ ತೀರ್ಪು ನೀಡಿತು. ಮೊದಲನೆಯ ಮೂರು ತಿಂಗಳಲ್ಲಿ ಖಾಸಗಿ ವಿಷಯಗಳನ್ನು ನಿರ್ಧರಿಸುವ ಹಕ್ಕಿನ (right to privacy) ಪ್ರಕಾರವಾಗಿ 'ಗರ್ಭಪಾತ' ಗರ್ಭಿಣಿ ಮತ್ತು ಅವಳ ವೈದ್ಯರು ಕೂಡಿ ಮಾಡುವ ಖಾಸಗಿ ನಿರ್ಧಾರ ಎಂದು ಶ್ರೇಷ್ಠ ನ್ಯಾಯಾಲಯ ತೀರ್ಪು ನೀಡಿತು. ಈ 'ರೋ' ಪರವಾದ ತೀರ್ಪು ಪ್ರಪಂಚದಲ್ಲಿ ಅತ್ಯಂತ ದಮನಕಾರಿ ಹಾಗೂ ಕ್ರೂರವಾದ ಗರ್ಭಪಾತ ವಿರೋಧಿ ಚಳುವಳಿಗೆ (anti-abortion movement) ನಾಂದಿಯಾಯಿತು. ಈ ವಿರೋಧಿಗಳು ಕ್ಯಾಥೊಲಿಕ್ ಮತ್ತು ಇತರ ಕ್ರೈಸ್ತಮತ ಪ್ರಚಾರಕ ಗುಂಪುಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಅಮೆರಿಕದಲ್ಲಿ 'ಜೀವಪರವಾದ' (pro-life) ಚಳುವಳಿಯನ್ನು ರಿಪಬ್ಲಿಕನ್ ಪಕ್ಷ ಬೆಂಬಲಿಸುತ್ತದೆ. ಇದು ಪ್ರಬಲ ರಾಜಕೀಯ ಶಕ್ತಿಯಾಗಿದೆ. ೧೯೯೦ರಿಂದ ಈ ಚಳುವಳಿ ಭಯೋತ್ಪಾದಕ ಗೂಂಡಾಗಿರಿಯಾಗಿ ಪರಿವರ್ತನೆಗೊಂಡಿರುವುದು ದುರದೃಷ್ಟಕರ.

ಅಮೆರಿಕನ್ ನ್ಯಾಯಾಧೀಶ ಥರ್‌ಗುಡ್ ಮಾರ್ಷಲ್‌ನ (Thurgood Marshall) ಸ್ಥಾನಕ್ಕೆ ಮತ್ತೊಬ್ಬ ಅದೇ ಬುಡಕಟ್ಟಿಗೆ ಸೇರಿದ 'ಸಮಾನ ಉದ್ಯೋಗಾವಕಾಶಗಳ ಕಮಿಷನ್' (Equal Employment Opportunities Commission) ಮುಖ್ಯಸ್ಥನಾಗಿದ್ದ ಕ್ಲಾರೆನ್ಸ್ ಥಾಮಸ್‌ನನ್ನು (Clarence Thomas) ನೇಮಕ ಮಾಡಿದನು. ಅವನ ನೇಮಕಾತಿ ಬಿರುಸಿನ ವಾಗ್ವಾದಕ್ಕೆ ಗುರಿಯಾಯಿತು. ಅವನ ನೇಮಕವನ್ನು ಅನೇಕ ನ್ಯಾಯವೃತ್ತಿ ಸಂಘಗಳು ವಿರೋಧಿಸಿದವು. ರಾಷ್ಟ್ರೀಯ ವರ್ಣ ಜನಾಂಗದ ಅಭ್ಯುದಯ ಸಂಸ್ಥೆ (NAACP) ಕೂಡ ಥಾಮಸ್‌ನ ನೇಮಕವನ್ನು ನಿರಾಕರಿಸಿತು. ಈ ನೇಮಕವನ್ನು ದೃಢಪಡಿಸಲು (confirmation) ನಡೆಸಿದ ವಿಚಾರಣೆ (hearing) ದೂರದರ್ಶನದಲ್ಲಿ ಪ್ರಸಾರವಾಯಿತು. ಅನಿತಾ ಹಿಲ್ (Anita Hill) ಎಂಬ ಕಾಲೇಜಿನ ಪ್ರಾಧ್ಯಾಪಕಿ ಥಾಮಸ್‌ನ ಮೇಲೆ 'ಲೈಂಗಿಕ ಕಿರುಕಳ'ದ (sexual harassment) ಆಪಾದನೆಯನ್ನು ಹೊರಿಸಿದಾಗ ಈ ವಿಚಾರಣೆ ಅಪನಿಂದೆಗಳಿಂದ (scandal) ಕೂಡಿದ ರಸವತ್ತಾದ ನಾಟಕದ ರೂಪ ತಳೆದು ಸಾರ್ವಜನಿಕರಿಗೆ ಒಂದು ರೀತಿಯ ಮನರಂಜನೆ ಒದಗಿಸಿತು. ಗಂಡಸರೇ ಹೆಚ್ಚಾಗಿದ್ದ ನ್ಯಾಯವಿಧಾಯಕ ಸಮಿತಿ ಥಾಮಸ್ ಮತ್ತು ಹಿಲ್ ಇಬ್ಬರನ್ನೂ ಸಾರ್ವಜನಿಕರ ಎದುರಿನಲ್ಲಿ ನಡೆಸಿಕೊಂಡ ರೀತಿ ಕಟುಟೀಕೆಗೆ ಗುರಿಯಾಯಿತು. ಅಂತಿಮ ವಾಗಿ ಒಂದೆರಡು ಮತಗಳ ಹೆಚ್ಚಳದಿಂದ ಕ್ಲಾರೆನ್ಸ್ ಥಾಮಸ್‌ನ ನೇಮಕವನ್ನು ತೂಗಿ, ಅಳೆದು ದೃಢಪಡಿಸಿತು.

ಶ್ರೇಷ್ಠ ನ್ಯಾಯಾಲಯದ ತೀರ್ಪುಗಳಲ್ಲಿ ಸಂಪ್ರದಾಯಸ್ಥ ನಿಲುವು ಹೆಚ್ಚಾಗಿ ತೋರುತ್ತಿದ್ದುದು ಅಪರಾಧಿಗಳ ಹಕ್ಕುಗಳು, ಸರ್ಕಾರ ಮತ್ತು ಮತಧರ್ಮದ ಸಂಬಂಧಗಳು, ವಾಕ್ ಸ್ವಾತಂತ್ರ್ಯ ಮತ್ತು ಗರ್ಭಪಾತವನ್ನು ಕುರಿತ ಕಟ್ಟಳೆಗಳಲ್ಲಿ. ಆದಾಗ್ಯೂ ನ್ಯಾಯಾಲಯ ವಿರೋಧಿಗಳು ಜಯಗಳಿಸಿದ ಸಂದರ್ಭಗಳೂ ಉಂಟು. ಉದಾಹರಣೆಗೆ ಅಮೆರಿಕದ ರಾಷ್ಟ್ರಧ್ವಜಕ್ಕೆ ಅಗ್ನಿಸ್ಪರ್ಶ ಮಾಡುವುದು ವಾಕ್ ಸ್ವಾತಂತ್ರ್ಯವನ್ನು ವ್ಯಕ್ತಪಡಿಸುವ ಒಂದು ವಿಧಾನವೆಂದು ನ್ಯಾಯಾಲಯ ತೀರ್ಪು ನೀಡಿತು. ಬುಷ್ ಆಡಳಿತ ಧ್ವಜ ಸುಡುವುದು ವಾಕ್ ಸ್ವಾತಂತ್ರ್ಯವಲ್ಲ ಎಂದು ರಾಜ್ಯಾಂಗ ತಿದ್ದುಪಡಿಯ ಮೂಲಕ ಸಾಧಿಸಲು ಮಂಡಿಸಿದ ಮಸೂದೆಯನ್ನು ಕಾಂಗ್ರೆಸ್ ಅಂಗೀಕರಿಸಲಿಲ್ಲ. ಸರ್ಕಾರ ಮತ್ತು ಮತಧರ್ಮಗಳನ್ನು ಬೇರ್ಪಡಿಸುವ ವಿಷಯದಲ್ಲಿ ಶ್ರೇಷ್ಠ ನ್ಯಾಯಾಲಯ ತೀರ್ಮಾನಿಸಿದ್ದು ಅವೆರಡು ಬೇರೆಯಾಗಿರಬೇಕೆಂದು. ಈ ತೀರ್ಮಾನದ ಪ್ರಕಾರ ಶಾಲೆಗಳ ಪದವೀದಾನ ಸಮಾರಂಭಗಳಲ್ಲಿ ಪಾದ್ರಿಗಳಿಂದ ಪ್ರಾರ್ಥನೆ ಹೇಳಿಸುವುದು ರಾಜ್ಯಾಂಗ ವಿರುದ್ಧವಾಗುತ್ತದೆ. ಅಪರಾಧಿಗಳು ನಿವೇದಿಸುವ ಹಕ್ಕುಗಳಿಗೆ (the right to appeal) ಸಂಬಂಧಿಸಿದಂತೆ ಶ್ರೇಷ್ಠ ನ್ಯಾಯಾಲಯ ಒಂದು ಪರಿಮಾಣವನ್ನು (standard) ಸ್ಥಾಪಿಸಿ ಮರಣದಂಡನೆಗೆ ಗುರಿಯಾದ ಖೈದಿಗಳು ತಮ್ಮ ಶಿಕ್ಷೆಯನ್ನು ರದ್ದು ಮಾಡಬೇಕೆಂಬ ಮತ್ತೆ ನಿವೇದಿಸಿಕೊಳ್ಳಲಾರದಂತೆ ಅವರು ಅನುಸರಿಸಬೇಕಾದ ಕ್ರಮವನ್ನು ಕಠಿಣಗೊಳಿಸಿತು.

ಗರ್ಭಪಾತದ ವಿಷಯದಲ್ಲಿ ಅತ್ಯಂತ ವಿವಾದಾತ್ಮಕ ಸಮಸ್ಯೆಗಳು ತಲೆದೋರಿದವು. ಪ್ರಸ್ತುತವಾಗಿ ಶ್ರೇಷ್ಠ ನ್ಯಾಯಾಲಯ Roe vs. Wade ಕಟ್ಟಳೆಯ ತೀರ್ಪನ್ನು ಎತ್ತಿ ಹಿಡಿದಿದೆ. ಅದರ ಜೊತೆಗೆ ಕೆಲವು ನಿರ್ಬಂಧಗಳನ್ನು – ಉದಾಹರಣೆಗೆ, ೨೪ ಘಂಟೆಗಳು ಕಾಯಬೇಕಾದ ನಿಬಂಧನೆ ಮತ್ತು ಅಪ್ರಾಪ್ತ ವಯಸ್ಕರು ತಂದೆ ತಾಯಿಯರಿಗೆ ವಿಷಯ ತಿಳಿಸಬೇಕೆಂಬ ಅಗತ್ಯ – ವಿಧಿಸುವ ಹಕ್ಕು ರಾಜ್ಯ ಸರ್ಕಾರಗಳಿಗಿದೆ ಎನ್ನುವುದನ್ನು ಶ್ರೇಷ್ಠ ನ್ಯಾಯಾಲಯ ಸ್ಪಷ್ಟಪಡಿಸಿದೆ.

೧೯೯೧ರ ಹೊತ್ತಿಗೆ ಅಮೆರಿಕದ ಆರ್ಥಿಕ ಸ್ಥಿತಿ ಮುಗ್ಗಟ್ಟಿನ ಕಂದರಕ್ಕೆ ಉರುಳುವ ಅಂಚಿನಲ್ಲಿ ತತ್ತರಿಸುತ್ತಿತ್ತು. ೧೯೯೦ರಲ್ಲಿ ಹಣದುಬ್ಬರ ಮತ್ತು ನಿರುದ್ಯೋಗ ಶೇಕಡಾ ೬.೧ ಭಾಗದವರೆಗೆ ಏರಿತ್ತು. ದಿನಬಳಕೆಯ ವಸ್ತುಗಳ ಬೆಲೆ ೧೯೮೧ರಿಂದೀಚೆಗೆ ಇಷ್ಟು ದುಬಾರಿಯಾಗಿರಲಿಲ್ಲ. ೧೯೯೦ರಲ್ಲಿ ಇರಾಕ್ ಕುವೈತ್‌ನ್ನು ಆಕ್ರಮಿಸಿಕೊಂಡ ನಂತರ ತೈಲದ ಬೆಲೆ ಗಮನಾರ್ಹವಾಗಿ ಏರಿತ್ತು. 'Gross National Product'[೧೪] ೧೯೯೦ರ ಕೊನೆಯ ನಾಲ್ಕು ತಿಂಗಳಲ್ಲಿ ಕಡಿಮೆಯಾಗುತ್ತ ಹೋಯಿತು. ೧೯೯೧ರ ಮಧ್ಯಭಾಗದಲ್ಲಿ ಫೆಡರಲ್ ರಿಸರ್ವ್ ಬೋರ್ಡ್ ದೇಶದಲ್ಲಿ ಹಣದ ಮುಗ್ಗಟ್ಟು ಪ್ರಾರಂಭವಾಗಿದೆಯೆಂದು ಎಂದು ಪ್ರಕಟಿಸಿತು. ಇತರ ದೇಶಗಳೊಡನೆ ವ್ಯಾಪಾರದ ಸಮತೋಲನ ತಪ್ಪಿತು. ಹೊರೆ ಬಾಕಿ ಜಾಸ್ತಿಯಾಗುತ್ತ ಹೋಗಿ ಆರ್ಥಿಕ ಖೋತಾ ಹೆಚ್ಚಿತು. ಕೊಲ್ಲಿ ಯುದ್ಧದ (Gulf War) ಕಾರಣದಿಂದ ಇದು ಇನ್ನೂ ಹೆಚ್ಚುತ್ತ ಹೋಗಿ ಏರಿಕೆಯ ದಾಖಲೆ ಸ್ಥಾಪಿಸಿತು. ಜಪಾನ್‌ನೊಡನೆ ವ್ಯಾಪಾರದ ಸಮತೋಲನವನ್ನು ಕುದುರಿಸಲು ಬುಷ್ ಜಪಾನಿಗೆ ಭೇಟಿ ಕೊಟ್ಟು ಹೆಚ್ಚು ಹೆಚ್ಚು ಅಮೆರಿಕದ ಸರಕು ಸಾಮಗ್ರಿಗಳನ್ನು ಕೊಳ್ಳಬೇಕೆಂದು ಒತ್ತಾಯಿಸಿದನು. ಈ ಭೇಟಿಯ ನಿರುಪಯುಕ್ತತೆಯ ಚಿಹ್ನೆಯೋ ಎಂಬಂತೆ ಅಧ್ಯಕ್ಷ ಬುಷ್ ಔತಣಕೂಟವೊಂದರಲ್ಲಿ ಬಸವಳಿದು ಬಿದ್ದನು. ಶೈತ್ಯೋಪಚಾರ ಮಾಡಿ ವಿಶ್ರಾಂತಿ ಪಡೆದ ಮೇಲೆ ಗುಣಮುಖನಾದನು. ಆದರೆ ಯಾವ ಒಪ್ಪಂದವನ್ನೂ ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಉಳಿದ ಒಂದೇ ಒಂದು ದಾರಿ ಎಂದರೆ ಕೆನಡಾ ಮತ್ತು ಮೆಕ್ಸಿಕೊ ಗಳೊಡನೆ ಒಪ್ಪಂದಕ್ಕೆ ಬರುವುದು. ಉತ್ತರ ಅಮೆರಿಕ ಮುಕ್ತ (free) ವ್ಯಾಪಾರ ಒಪ್ಪಂದದ North American Free Trade Agreement (NAFTA) ಪ್ರಕಾರ ಸಂಯುಕ್ತ ಸಂಸ್ಥಾನಗಳು ಮತ್ತು ದಕ್ಷಿಣ ಗೋಲಾರ್ಧದ ರಾಷ್ಟ್ರಗಳೊಡನೆ ಮುಕ್ತ ವ್ಯಾಪಾರ ವಿನಿಮಯ ನಡೆಸಬೇಕೆಂದು NAFTA ಆಗ್ರಹ ಪಡಿಸಿತ್ತು. NAFTAದ ವಿರೋಧಿಗಳು ಈ ಒಪ್ಪಂದ ವ್ಯಾಪಕವಾದ ನಿರುದ್ಯೋಗಕ್ಕೆ ಕಾರಣವಾಗುತ್ತದೆ ಎಂದು ಪ್ರತಿಪಾದಿಸಿದ್ದರು.

❑

---

೧೪. GNP –ಒಂದು ರಾಷ್ಟ್ರ ಒಂದು ವರ್ಷದಲ್ಲಿ ಉತ್ಪಾದಿಸುವ ಎಲ್ಲಾ ಸರಕು ಸಾಮಗ್ರಿಗಳ ಮತ್ತು ಅಗತ್ಯಸೇವೆಗಳ ಮೊತ್ತ.

ಅಧ್ಯಾಯ - ೨೦

ಶೀತಲ ಯುದ್ಧದ ಅಂತ್ಯ

ರಷ್ಯಾ ಮತ್ತು ಯೂರೋಪಿಯನ್ ರಾಷ್ಟ್ರಗಳಲ್ಲಿ ಕಮ್ಯೂನಿಸಂ ಅಸ್ತಂಗತವಾಯಿತು

ಕಮ್ಯೂನಿಸಂ ರಷ್ಯಾದ ಪ್ರಜೆಗಳ ವ್ಯಕ್ತಿಸ್ವಾತಂತ್ರ್ಯ ಕಸಿದುಕೊಂಡು, ೭೦ ವರ್ಷಗಳಿಗಿಂತಲೂ ಹೆಚ್ಚು ಕಾಲ ಸರ್ವಾಧಿಕಾರದ ನರಕ ಸೃಷ್ಟಿಸಿ, ಅಂತಿಮವಾಗಿ ತನ್ನ ಆಂತರಿಕ ದುರ್ಬಲತೆಯಿಂದ ಕುಸಿದು ಬಿದ್ದು ರಾಜಕೀಯ ರಂಗದಿಂದ ನಿಷ್ಕ್ರಮಿಸಿತು. ಅಧ್ಯಕ್ಷ ಬುಷ್ ಅಧಿಕಾರಕ್ಕೆ ಬಂದ ಎರಡು ವರ್ಷಗಳಲ್ಲೆ ಪ್ರಪಂಚದ ಭೂಪಟ ಬದಲಾಯಿಸಿತು. ರೇಗನ್ ಆಡಳಿತದಲ್ಲಿ ಶೀತಲ ಸಮರ (cold war) ಶೈತ್ಯವನ್ನು ಕಳೆದುಕೊಳ್ಳಲಾರಂಭಿಸಿ, ಬುಷ್‌ನ ಆಡಳಿತದ ಅವಧಿಯಲ್ಲಿ ಕರಗಿಹೋಯಿತು. ಹೀಗಾಗಲು ರೇಗನ್‌ನ 'ಸದ್ದಿಲ್ಲದ ರಾಜಕಾರಣ ಕೌಶಲ್ಯ' (quiet diplomacy) ನೇರವಾದ ಕಾರಣವಲ್ಲದೆಹೋದರೂ ಗೊರ್ಬಚಾವ್‌ನ ಮೇಲೆ ನಿರಂತರ ಒತ್ತಡ ಹಾಕಿದ್ದು ಕಮ್ಯೂನಿಸಂನ ಅವಸಾನಕ್ಕೆ ಪರೋಕ್ಷವಾಗಿ ಕಾರಣವಾಯಿತು. ಬುಷ್‌ನ ಹೊರದೇಶಗಳ ರಾಜಕೀಯ ಪರಿಜ್ಞಾನ ರಷ್ಯಾ ಮತ್ತು ಯೂರೋಪಿನಲ್ಲಿ ಆಗುತ್ತಿದ್ದ ಬದಲಾವಣೆಗಳ ಮಹತ್ವವನ್ನು ಅರಿತು, ಆ ಬದಲಾವಣೆಗಳಿಗೆ ಯಾವ ಅಡೆತಡೆಗಳು ಬಾರದಂತೆ ನೋಡಿಕೊಂಡು ಅವು ಸಂಭವಿಸುವಂತೆ ಸರಿಯಾದ ವಾತಾವರಣವನ್ನು ಸೃಷ್ಟಿಸಿ ಕಮ್ಯೂನಿಸಂ ಯೂರೋಪಿನಲ್ಲಿ ಪತನವಾಗಲು ಕಾರಣವಾಯಿತು.

ಸೋವಿಯೆಟ್ ಒಕ್ಕೂಟದ ನಾಯಕನಾಗಿದ್ದ ಮಿಖಾಯಿಲ್ ಗೊರ್ಬಚಾವ್ ಅವನ ರಾಷ್ಟ್ರದ ಉಪಗ್ರಹಗಳಂತಿದ್ದ ಪೂರ್ವ ಯೂರೋಪಿನ ರಾಷ್ಟ್ರಗಳಿಗೆ ಸ್ವಾತಂತ್ರ್ಯದ ಹಾದಿ ಹಿಡಿದು ಹೋಗಲು ಅಡ್ಡಿ ಮಾಡಲಿಲ್ಲ. ಸೋವಿಯೆಟ್ ಒಕ್ಕೂಟದಲ್ಲಿ ಒಗ್ಗಟ್ಟಿಲ್ಲದೆ ಗಣರಾಜ್ಯಗಳು (republics) ಪರಸ್ಪರವಾಗಿ ದೂರ ಸರಿದು ಅಂತಃಕಲಹದಲ್ಲಿ ನಿರತವಾಗಿದ್ದವು. ಸೋವಿಯೆಟ್ ಒಕ್ಕೂಟದ ಆರ್ಥಿಕ ಸ್ಥಿತಿ ಚಿಂತಾಜನಕವಾಗಿತ್ತು. ಕಮ್ಯೂನಿಸ್ಟ್ ಮೂಲ ತತ್ವವಾದಿಗಳು ಸೈನ್ಯದ ಸಹಾಯದಿಂದ ದಂಗೆ ಎದ್ದು ಸರ್ಕಾರವನ್ನು ಉರುಳಿಸಿ ತಾವು ಅಧಿಕಾರಕ್ಕೆ ಬರಲು ಹವಣಿಸುತ್ತಿದ್ದರು. ರೈತರ ಮತ್ತು ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವವನಂತೆ ಕಂಡುಬಂದ (populist) ಬೋರಿಸ್ ಯೆಲ್ಟ್ಸಿನ್ (Boris Yeltsin) ರಷ್ಯಾ ಗಣರಾಜ್ಯದ (Russian Republic) ಅಧ್ಯಕ್ಷನಾಗಿ

ಚುನಾಯಿತನಾಗಿ ಅಧಿಕಾರ ವಹಿಸಿಕೊಂಡನು. ಇವನು ಗೊರ್ಬಚಾವ್‌ನನ್ನು ಕಟುವಾಗಿ ಟೀಕಿಸತೊಡಗಿದನು.

ಜರ್ಮನಿಯಲ್ಲಿ ಶೀತಲ ಸಮರದ ಕುರುಹಾಗಿ ಬರ್ಲಿನ್ ಗೋಡೆ (Berlin Wall) ಇನ್ನೂ ಉಳಿದಿತ್ತು. ರೇಗನ್ ಗೊರ್ಬಚಾವ್‌ನಿಗೆ ಆ ಗೋಡೆಯನ್ನು ಕುಟ್ಟಿ ಕೆಡವಿ ಎಂದು ಹೇಳಿದ್ದರೂ ಅದನ್ನು ಕೈಗೊಳ್ಳುವ ಕಾಲ ಒದಗಿ ಬಂದಿರಲಿಲ್ಲ. ೧೯೮೯ರ ಅಕ್ಟೋಬರ್ ತಿಂಗಳಲ್ಲಿ ಪೂರ್ವ ಜರ್ಮನಿಯ ನಾಯಕ ಎರಿಕ್ ಹೋನೆಕರ್ (Eric Honeker) ನಿವೃತ್ತನಾದ ಮೇಲೆ ಪೂರ್ವ ಮತ್ತು ಪಶ್ಚಿಮ ಜರ್ಮನಿಗಳ ಗಡಿಯನ್ನು ತೆರೆಯಲಾಯಿತು. ಸಾವಿರಾರು ಪೂರ್ವ ಜರ್ಮನರು ಪಶ್ಚಿಮ ಜರ್ಮನಿಗೆ ಓಡಿಹೋದರು. ಇದಾದ ಒಂದು ತಿಂಗಳ ನಂತರ ಬರ್ಲಿನ್ ಗೋಡೆಯನ್ನು ಕುಟ್ಟಿ ಕೆಡವಿದರು. ಈ ಗೋಡೆ ನಿರ್ನಾಮವಾಗಿದ್ದು ಕಮ್ಯೂನಿಸಂ ಪತನದ ಸಂಕೇತವಾಗಿತ್ತು. ೧೯೯೦ರಲ್ಲಿ ಪೂರ್ವ ಮತ್ತು ಪಶ್ಚಿಮ ಜರ್ಮನಿಗಳು ಒಂದಾದವು. ಜರ್ಮನಿ ಪುನಃ ಒಂದು ಅವಿಭಾಜ್ಯ ರಾಷ್ಟ್ರವಾಯಿತು. ಈ ಘಟನೆಗಳ ಪರಿಣಾಮವಾಗಿ ಪೋಲೆಂಡ್, ಜೆಕೊಸ್ಲೋವಾಕಿಯಾ, ಹಂಗೇರಿ ಮತ್ತು ರುಮೇನಿಯಾಗಳಲ್ಲಿ ಸ್ವಾತಂತ್ರ್ಯ ಚಳುವಳಿಗಳು ಪ್ರಾರಂಭವಾದವು. ಕಾರ್ಮಿಕ ನಾಯಕ ಲೆಕ್ ವಲೇಸ ಪೋಲೆಂಡಿನ ಅಧ್ಯಕ್ಷನಾಗಿ ಚುನಾಯಿತನಾದನು. ರುಮೇನಿಯಾದಲ್ಲಿ ಕ್ರಾಂತಿಯಾಗಿ ಪ್ರಜಾದ್ರೋಹಿ ಕಮ್ಯೂನಿಸ್ಟ್ ನಾಯಕ ನಿಕೊಲೇ ಕೋಸೆಸ್ಕ್ಯೂ (Nicolae Caeusescu) ಮತ್ತು ಅವನ ಹೆಂಡತಿಯನ್ನು ದೇಶ ಬಿಟ್ಟು ಓಡಿಹೋಗುತ್ತಿದ್ದಾಗ ಸೆರೆ ಹಿಡಿದು, ರೊಚ್ಚಿಗೆದ್ದ ಜನ ಗುಂಡಿಟ್ಟು ಕೊಂದರು. ಜೆಕೊಸ್ಲೋವಾಕಿಯಾದಲ್ಲಿ ಹಿಂಸಾಕೃತ್ಯಗಳು ನಡೆಯದೆ, ಕಮ್ಯೂನಿಸ್ಟ್ ಸರ್ಕಾರವನ್ನು ಎದುರಿಸಿ ನಿಂತ ನಾಟಕಕಾರ ವಾಚ್‌ಲಾವ್ ಹಾವೆಲ್ (Vaclav Havel) ಅಧ್ಯಕ್ಷನಾಗಿ ಆಯ್ಕೆಯಾದನು. ಹಂಗೇರಿಯಲ್ಲಿ ಚುನಾವಣೆಗಳು ನಡೆದು ಕಮ್ಯೂನಿಸ್ಟ್ ಪಕ್ಷ ಮತ್ತೆ ತಲೆ ಎತ್ತದಂತೆ ಸೋಲನ್ನು ಅನುಭವಿಸಿತು. ಯುಗೋಸ್ಲಾವಿಯಾ ಯಾದವೀ ಕಲಹದಲ್ಲಿ ತೊಡಗಿ ರಕ್ತದ ಹೊಳೆ ಹರಿಸಿತು[೧].

---

೧. ಹಲವಾರು ಜನಾಂಗಗಳನ್ನು ಬಲಾತ್ಕಾರವಾಗಿ ಒಟ್ಟುಗೂಡಿಸಿ ಕಮ್ಯೂನಿಸ್ಟ್ ಸರ್ವಾಧಿಕಾರ ಸರ್ಕಾರ ಹತ್ತಾರು ತುಂಡುಬಟ್ಟೆಗಳನ್ನು ತೇಪೆ ಹಾಕಿದ ಹಚ್ಚಡದಂತೆ ಯುಗೋಸ್ಲಾವಿಯಾ ರಾಷ್ಟ್ರವನ್ನು ರಚಿಸಿತ್ತು. ೧೯೯೦ರಲ್ಲಿ ಕಮ್ಯೂನಿಸ್ಟ್ ಪಕ್ಷದ ಸರ್ವಾಧಿಕಾರ ಕೊನೆಗೊಂಡಿತು. ಇತರ ಪಕ್ಷಗಳು ರಾಜಕೀಯ ರಂಗ ಪ್ರವೇಶಿಸಿ ಅಧಿಕಾರಕ್ಕಾಗಿ ಸೆಣಸಾಟ ಪ್ರಾರಂಭವಾಯಿತು. ಒಂದೇ ವರ್ಷದಲ್ಲಿ (೧೯೯೧) ಯುಗೋಸ್ಲಾವಿಯಾ ಹರಿದು ಹಂಚಿಹೋಯಿತು. ೧೯೮೯ರಲ್ಲೇ ಮುಸ್ಲಿಮರು ಹೆಚ್ಚಾಗಿರುವ ಕೊಸಾವೊ ಪ್ರಾಂತದಲ್ಲಿ ಮುಸ್ಲಿಮರು ಸರ್ಬ್ (Serb) ಜನಾಂಗದ ಪ್ರಾಬಲ್ಯದ ವಿರುದ್ಧ ದಂಗೆ ಎದ್ದರು. ಸರ್ಬಿಯಾ ಪ್ರಾಂತ ಈ ದಂಗೆಯನ್ನು ಅಡಗಿಸಲು ಸೈನ್ಯವನ್ನು ರವಾನಿಸಿತು. ದಂಗೆ ಅಡಗಿ ಅಲ್ಪ ಕಾಲ ಶಾಂತಿ ನೆಲಸಿತ್ತು. ೧೯೯೦ರಲ್ಲಿ ಕೋಮುವಾರು ಯುದ್ಧ ಪುನಃ ಪ್ರಾರಂಭವಾಗಿ ಮ್ಯಾಸಿಡೋನಿಯಾ, ಸ್ಲೊವೇನಿಯಾ ಮತ್ತು ಕ್ರೋಯೇಷಿಯಾ ಕಮ್ಯೂನಿಸ್ಟೇತರ ಸರ್ಕಾರಗಳನ್ನು ಚುನಾಯಿಸಿದವು.

ಬಲ್ಗೇರಿಯಾದಲ್ಲಿ ಮಾತ್ರ ಕಮ್ಯೂನಿಸ್ಟ್ ಮೂಲತತ್ವವಾದಿಗಳು ಅಧಿಕಾರಕ್ಕೆ ಬಂದರು. ಪ್ರಪಂಚದಲ್ಲಿ ಈಗ ಕಮ್ಯೂನಿಸಂ ಉಳಿದಿರುವುದು ನಾಲ್ಕೇ ನಾಲ್ಕು ರಾಷ್ಟ್ರಗಳಲ್ಲಿ – ಕ್ಯೂಬಾ, ಚೈನಾ ಗಣರಾಜ್ಯ, ವಿಯಟ್‌ನಾಮ್ ಮತ್ತು ಉತ್ತರ ಕೊರಿಯಾ. ಈ ರಾಷ್ಟ್ರಗಳು ನವಸಹಸ್ರ ಸಂವತ್ಸರದ (millenium) ಸ್ವಾತಂತ್ರ್ಯದ ಉಲ್ಲಾಸಕರ ಗಾಳಿ ತಮ್ಮ ಪ್ರಜೆಗಳ ಮೇಲೆ ಬೀಸದಂತೆ. ಹಿಂದಿನ ಪಾಳೆಯಗಾರರಂತೆ ಏಳು ಸುತ್ತಿನ ಕೋಟೆಯಿಂದಾಚೆ ನಡೆಯುವ ಬದಲಾವಣೆಗಳು, ಸುಧಾರಣೆಗಳು ತಮ್ಮ ಜನಕ್ಕೆ ತಗಲದಂತೆ ಎಚ್ಚರ ವಹಿಸಿ ಕಮ್ಯೂನಿಸಂನ ಪಳೆಯುಳಿಕೆಗಳಾಗಿ (fossils) ಉಳಿದಿವೆ. ಚೈನಾ ಗಣರಾಜ್ಯದಲ್ಲಿ ಸ್ವಾತಂತ್ರ್ಯದ ಬಯಕೆ ಅಗ್ನಿಪರ್ವತದ ಅಂತರಾಳದಲ್ಲಿ ಕುದಿಯುವ ಲಾವಾರಸದಂತೆ ಆಸ್ಫೋಟನೆಗೊಳ್ಳಲು ಅವಕಾಶ ಕಾಯುತ್ತಲಿದೆ. ೧೯೮೯ರಲ್ಲಿ ಸ್ವಾತಂತ್ರ್ಯ ಚಳುವಳಿ ವಿದ್ಯಾರ್ಥಿಗಳ ಪ್ರಜಾರಾಜ್ಯ ಪರವಾದ (pro-democracy) ಆಂದೋಳನವಾಗಿ ಪ್ರಾರಂಭವಾಯಿತು. ಬೀಜಿಂಗ್‌ನ ಹೆಸರಾಂತ ೧೦೦ ಎಕರೆ ಟೀನಮೆನ್ ಚೌಕದಲ್ಲಿ (Tianamen Square) ಮೂರುವಾರಗಳಿಂದ ಪ್ರದರ್ಶನ ನಡೆಸುತ್ತಿದ್ದ ವಿದ್ಯಾರ್ಥಿ ಸಮೂಹವನ್ನು ೧೯೮೯ರ ಜೂನ್ ಎರಡು ಚೈನಾ ಗಣರಾಜ್ಯದ ಟ್ಯಾಂಕ್‌ಗಳು (tanks) ಫಿರಂಗಿಗಳ ಸಮೇತ ಬಂದು, ಮೊದಲು ಚೌಕವನ್ನು ಬೆಳಗಾಗುವುದರೊಳಗೆ ಖಾಲಿ ಮಾಡುವಂತೆ ಆಜ್ಞಾಪಿಸಿ, ಬೆಳಕು ಹರಿಯುವುದರೊಳಗೆ ಟ್ಯಾಂಕ್‌ಗಳನ್ನು ನುಗ್ಗಿಸಿ ವಿದ್ಯಾರ್ಥಿಗಳ ಡೇರೆಗಳನ್ನು ಒಳಗೆ ಮಲಗಿದ್ದವರ ಸಮೇತ ನೆಲಸಮ ಮಾಡಿ ವಿದ್ಯಾರ್ಥಿಗಳ ನಾಯಕರನ್ನು ಸೆರೆಹಿಡಿದರು. ಸರ್ವಾಧಿಕಾರದ ವಿರುದ್ಧ ಚೈನಾದಲ್ಲಿ ಜರುಗಿದ ಅತಿ ದೊಡ್ಡ ಮತ್ತು ಅತಿ ಮಹತ್ತರವಾದ ಚಳುವಳಿಯನ್ನು ಅದು ಹುಟ್ಟಿದ ಮೂರು ವಾರಗಳೊಳಗೆ ಕ್ರೂರವಾಗಿ ಹೊಸಗಿ ಹಾಕಲಾಯಿತು. ಟೀನಮೆನ್ ಚೌಕದ ದಮನಕಾರಿ ಸೈನ್ಯ ಕಾರ್ಯಾಚರಣೆ ಚೈನಾ-ಅಮೆರಿಕ ಸಂಬಂಧಗಳನ್ನು ಕೆಲವು ಕಾಲ ಸ್ಥಬ್ಧಗೊಳಿಸಿತು.[೨]

---

೨. ೧೯೯೧ರ ಜೂನ್ ತಿಂಗಳಲ್ಲಿ ಸರ್ಬಿಯನ್ ಅಧ್ಯಕ್ಷ ಸ್ಲೊಬೊಡಾನ್ ಮಿಲೊಸೋವಿಚ್ ಕ್ರೊಯೇಷಿಯನ್ ನಾಯಕ ಸ್ಟೈಪಿಮೆಸೊಕ್‌ನನ್ನು ಅಯುಗೋಸ್ಲಾವಿಯಾದ ಅಧ್ಯಕ್ಷನಾಗಲು ಬಿಡದೆ ಹೋದುದರಿಂದ ಕ್ರೊಯೇಷಿಯಾ ಮತ್ತು ಸ್ಲೊವೇನಿಯಾ ಯುಗೋಸ್ಲಾವಿಯಾದಿಂದ ಬೇರೆಯಾದವು. ಈ ಎರಡು ಬೇರೆಯಾದ ರಿಪಬ್ಲಿಕ್‌ಗಳನ್ನು ಬಹುಸಂಖ್ಯಾತ ಸರ್ಬ್ ಸೈನಿಕರಿದ್ದ ಯುಗೋಸ್ಲಾವ್ ಪಡೆ ಆಕ್ರಮಿಸಿಕೊಂಡಿತು. ಸ್ವಲ್ಪ ಕಾಲಾನಂತರ ಯುಗೋಸ್ಲಾವ್ ಸೈನ್ಯ ಸ್ಲೊವೇನಿಯಾದಿಂದ ವಾಪಸ್ಸಾದರೂ ಕ್ರೊಯೇಷಿಯಾದಲ್ಲಿ ಅಲ್ಲಿನ ಕ್ರೊಯೇಟರನ್ನು ಸರ್ಬ್ ಪ್ರದೇಶಗಳಿಂದ ಉಚ್ಚಾಟನೆ ಮಾಡತೊಡಗಿದರು. ಇದು 'ಕೋಮುವಾರು ಸ್ವಚ್ಚತೆ' (ethnic cleansing) ಎಂಬ ಕುಪ್ರಸಿದ್ಧಿ ಪಡೆದಿದೆ. ಇದು ಸಾಮೂಹಿಕ ಕೊಲೆಗೆ ಮತ್ತೊಂದು ಹೆಸರಾಯಿತು. ಇದು ಸುಮಾರು ೧೯೯೨ರವರೆಗೂ ನಡೆಯಿತು. ಆ ಸಮಯದಲ್ಲಿ ೨೫ ಸಾವಿರ ಜನರು ಸತ್ತಿದ್ದು, ಸರ್ಬ್ ಜನ ಕ್ರೊಯೇಷಿಯಾದ ಬಹುಭಾಗವನ್ನು ಆಕ್ರಮಿಸಿಕೊಂಡಿದ್ದರು. ಆಗ ವಿಶ್ವಸಂಸ್ಥೆ ೧೪ ಸಾವಿರ ಸೈನಿಕರನ್ನು ಶಾಂತಿಸ್ಥಾಪನೆಗಾಗಿ ಕಳುಹಿಸಬೇಕಾಯಿತು.

ಅತ್ತ ಸೋವಿಯೆಟ್ ಒಕ್ಕೂಟದಲ್ಲಿ ಕಮ್ಯೂನಿಸಂ ಉಳಿಸಲು ಮೂಲ ತತ್ವವಾದಿಗಳು ಕಡೆಯ ಪ್ರಯತ್ನ ಮಾಡಿದರು. ಅದೆಂದರೆ ಗೊರ್ಬಚಾವ್‌ನನ್ನು ಗೃಹಬಂಧನದಲ್ಲಿರಿಸಿದರು (house arrest). ಸಾವಿರಾರು ಸೋವಿಯೆಟ್ ಪ್ರಜೆಗಳು ಬೋರಿಸ್ ಯೆಲ್ಟ್ಸಿನ್‌ನ ನಾಯಕತ್ವದಲ್ಲಿ ಸರ್ಕಾರದ ನೆಲೆಯಾದ ಕ್ರೆಮ್‌ಲಿನ್‌ಅನ್ನು (Kremlin) ಸುತ್ತುವರಿದು ಕಮ್ಯೂನಿಸ್ಟ್ ಮೂಲತತ್ವವಾದಿಗಳು ಬಲಾತ್ಕಾರದಿಂದ ಅಧಿಕಾರವನ್ನು ವಶಪಡಿಸಿ ಕೊಳ್ಳುವುದನ್ನು ತಪ್ಪಿಸಿದರು. ಗೊರ್ಬಚಾವ್ ರಾಜೀನಾಮೆ ಕೊಟ್ಟನಂತರ ಯೆಲ್ಟ್ಸಿನ್ ರಷ್ಯಾದ ಗಣರಾಜ್ಯಗಳೊಡನೆ ಒಪ್ಪಂದ ಮಾಡಿಕೊಂಡು ಎಲ್ಲಾ ಗಣರಾಜ್ಯಗಳು ಸೇರಿದ ಸಂಯುಕ್ತ ಗಣರಾಜ್ಯಗಳ ಸಂಘಟನೆ ಅಸ್ಥಿತ್ವಕ್ಕೆ ಬಂದಿತು.

ಬುಷ್ ಮತ್ತು ಗೊರ್ಬಚಾವ್ ಸೇರಿ ಸಮೂಹನಾಶಕ ಮಾರಕಾಸ್ತ್ರಗಳನ್ನು (weapons of mass destruction) ಪರಸ್ಪರ ಒಪ್ಪಂದದ ಮೂಲಕ ನಾಶಗೊಳಿಸಿ ಅವುಗಳ ಸಂಖ್ಯೆ ಕ್ರಮೇಣ ಕಡಿಮೆಯಾಗಿ ಆಕಸ್ಮಿಕವಾಗಿ ಆಗಬಹುದಾದ ಪ್ರಳಯದಿಂದ ಜಗತ್ತು ಪಾರಾಗುವಂತೆ ಮಾಡಿದರು. ಪರಸ್ಪರ ವೈರಿಗಳಾಗಿದ್ದ ಅಮೆರಿಕ ಮತ್ತು ರಷ್ಯಾ ಮಾತುಕತೆಗಳ ಮೂಲಕ ಮಾಡಿಕೊಂಡ ಮಹತ್ವದ ಒಪ್ಪಂದವೆಂದರೆ ಒಂದು ಭೂಖಂಡ ದಿಂದ ಮತ್ತೊಂದು ಭೂಖಂಡಕ್ಕೆ ಅಣ್ವಸ್ತ್ರಗಳನ್ನು ಕೊಂಡೊಯ್ದು ಆಸ್ಫೋಟಿಸುವ ಅಸ್ತ್ರಗಳ ಸಂಖ್ಯೆಯನ್ನು ಕಡಿಮೆ ಮಾಡುವುದು. ರಾಸಾಯನಿಕ ಮಾರಕಾಸ್ತ್ರಗಳ ಉತ್ಪಾದನೆಯನ್ನು ನಿಲ್ಲಿಸಲು ಮಾಡಿಕೊಂಡ ಒಪ್ಪಂದವನ್ನೂ ಸೇರಿದಂತೆ, ಸೆನೆಟ್ ಈ ಒಪ್ಪಂದಗಳನ್ನು ೧೯೯೨ರಲ್ಲಿ ಅಂಗೀಕರಿಸಿತು. ಯೆಲ್ಟ್ಸಿನ್ ಅಧ್ಯಕ್ಷನಾದ ಮೇಲೆ ಬುಷ್ ಅವನನ್ನು ಭೇಟಿ ಮಾಡಿ ಇಬ್ಬರೂ ಅಂತರರಾಷ್ಟ್ರೀಯ ನೆರವು ನೀಡಲು ಪ್ರತಿಜ್ಞೆ ಮಾಡಿದರು.

❑

ಅಧ್ಯಾಯ - ೨೧

ಶೀತಲ ಯುದ್ಧೋತ್ತರ ಅಮೆರಿಕ

ಪನಾಮಾ ಆಕ್ರಮಣ: ನಾರಿಯೇಗ ದಮನ

ಭಾರಿ ಪ್ರಮಾಣದ ಮಾದಕವಸ್ತುಗಳು ಪನಾಮಾ ಮೂಲಕವಾಗಿ ಅಮೆರಿಕವನ್ನು ಸೇರುತ್ತಿದ್ದವು. ಈ ಲಾಭದಾಯಕ ವ್ಯಾಪಾರದಲ್ಲಿ ಪನಾಮಾ ದೇಶದ ಸರ್ವಾಧಿಕಾರಿಯಂತೆ ಅಧಿಕಾರ ನಡೆಸುತ್ತಿದ್ದ ಮಾನ್ಯುಯೆಲ್ ನಾರಿಯೇಗನ ಕೈವಾಡವಿದೆ ಎನ್ನುವುದಕ್ಕೆ ಬೇಕಾದಷ್ಟು ಪುರಾವೆಗಳಿದ್ದುದರಿಂದ ಅವನನ್ನು ಅಧಿಕಾರದಿಂದ ತೆಗೆಯಲು ಮಾಡಿದ ಪ್ರಯತ್ನಗಳು ವಿಫಲವಾಗಿ ಬೇರೆ ದಾರಿ ತೋರದೆ ಅಧ್ಯಕ್ಷ ಬುಷ್ ೨೦ ಸಾವಿರ ಅಮೆರಿಕನ್ ಸೈನಿಕರಿಗೆ ಪನಾಮಾ ಆಕ್ರಮಣ ಮಾಡಿ ನಾರಿಯೇಗನನ್ನು ಸೆರೆಹಿಡಿಯಲು ಆಜ್ಞೆ ಮಾಡಿದನು. ಬುಷ್ ಸಿ.ಐ.ಎ ನಿರ್ದೇಶಕನಾಗಿದ್ದಾಗ ನಾರಿಯೇಗನನ್ನು ಅಧಿಕಾರಕ್ಕೆ ತಂದು ಮಾದಕವಸ್ತು ವ್ಯಾಪಾರಿಗಳನ್ನು ಹತೋಟಿಯಲ್ಲಿಡಲು ಅವನನ್ನು ಉಪಯೋಗಿಸಿ ಕೊಂಡಿದ್ದನು. ಈಗ ಈ ನಾರಿಯೇಗನೇ ವ್ಯಾಪಾರಿಗಳೊಡನೆ ಸೇರಿ ಪನಾಮಾ ಮೂಲಕ ಮಾದಕವಸ್ತುಗಳು ಅಮೆರಿಕವನ್ನು ಸುಲಭವಾಗಿ ಸೇರುವಂತೆ ಮಾಡುತ್ತಿದ್ದನು. ನಾರಿಯೇಗನನ್ನು ಹಿಡಿದು ತಂದು ಶಿಕ್ಷಿಸಿದರೆ ಮಾದಕವಸ್ತುಗಳನ್ನು ತಯಾರಿಸಿ ಪ್ರಪಂಚದ ನಾನಾಕಡೆಗಳಿಗೆ (ಮುಖ್ಯವಾಗಿ ಅಮೆರಿಕಕ್ಕೆ) ಕಳುಹಿಸಿ, ಅಪಾರ ಹಣ ಗಳಿಸಿ ಭಯೋತ್ಪಾದನೆಯಿಂದ ಎಲ್ಲರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದ ಕಳ್ಳವ್ಯಾಪಾರಿಗಳ ಗುಂಪುಗಳಿಗೆ (cartel) ಎಚ್ಚರಿಕೆ ನೀಡಿದಂತಾಗುತ್ತದೆ ಎಂದು ಬುಷ್ ಭಾವಿಸಿದ್ದನು. ಅವನ ಆಜ್ಞೆಯಂತೆ ಸೈನ್ಯ ಮಿಂಚಿನ ದಾಳಿ ನಡೆಸಿ ನಾರಿಯೇಗನನ್ನು ಸೆರೆಹಿಡಿಯುವುದರಲ್ಲಿ ಯಶಸ್ವಿಯಾಯಿತು. ಅಮೆರಿಕದ ಮಯಾಮಿ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿ, ನಾರಿಯೇಗನ ಮೇಲೆ ಹೊರಿಸಿದ ಆಪಾದನೆಗಳೆಲ್ಲ ಸಾಬೀತಾಗಿ ಅವನಿಗೆ ಜೀವಾವಧಿ ಸೆರೆಮನೆವಾಸದ ಶಿಕ್ಷೆ ವಿಧಿಸಲಾಯಿತು. ಬುಷ್‌ನ ಪನಾಮಾ ಸಾಹಸವನ್ನು ಅನೇಕ ಪತ್ರಿಕೆಗಳು ಮತ್ತು ಕಾಂಗ್ರೆಸ್ ಸದಸ್ಯರು ಟೀಕಿಸಿದರು. ಇದಕ್ಕೆ ಕಾರಣ ಅವನು ಪನಾಮಾಕ್ಕೆ ಸೈನ್ಯ ರವಾನಿಸಲು ಕಾಂಗ್ರೆಸ್ ಒಪ್ಪಿಗೆ ಪಡೆದಿರಲಿಲ್ಲ. ಈ ಸಾಹಸದಿಂದ ಪನಾಮಾದೊಡನೆ ಅಮೆರಿಕದ ಸಂಬಂಧ ಹದಗೆಟ್ಟಿತು.

ಮರುಭೂಮಿಯಲ್ಲಿ ಎದ್ದ ಬಿರುಗಾಳಿ

ಇದನ್ನು ಎಬ್ಬಿಸಿದವನು ಇರಾಕ್ ದೇಶದ ಸರ್ವಾಧಿಕಾರಿ ಸದ್ದಾಂ ಹುಸೇನ್. ಇವನು

ಕುವೈತ್‌ನ್ನು ಆಕ್ರಮಣ ಮಾಡಲು ಮನಸ್ಸು ಮಾಡಿದ್ದಕ್ಕೆ ಕಾರಣ ಅವನು ಅಮೆರಿಕವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಹೋದುದರಿಂದ. ಬಾಗ್ದಾದ್‌ನಲ್ಲಿ ಕುಳಿತು ಕುವೈಯತ್‌ನ ತೈಲ ಸಂಪತ್ತು ತನ್ನ ವಶವಾದರೆ ಏನೆಲ್ಲ ಮಾಡಬಹುದು ಎಂದು ಹಗಲುಗನಸು ಕಾಣುತ್ತಿದ್ದನು. ಅಪಾರ ಪ್ರಮಾಣದ ತೈಲ ತನ್ನದಾದರೆ ಅಮೆರಿಕ ಮತ್ತು ಇತರ ಪಾಶ್ಚಿಮಾತ್ಯ ದೇಶದ ರಾಯಭಾರಿಗಳು ತನ್ನ ಬಾಗಿಲು ಕಾಯುವಂತೆ ಮಾಡ ಬಹುದು. ತಾನು ಅಣುಬಾಂಬಲ್ಲದೆ ತನಗೆ ಇಷ್ಟಬಂದ ಸಾಮೂಹಿಕ ಹತ್ಯೆ ಮಾಡುವ ಯಾವ ಅಸ್ತ್ರಶಸ್ತ್ರವನ್ನು ಬೇಕಾದರೂ ಕೊಳ್ಳುವಷ್ಟು ಹಣವಂತನಾಗುತ್ತೇನೆ ಎಂದು ಯೋಚಿಸಿದನು. ಅಮೆರಿಕದ ಯೋಚನೆ ಬಂದ ಸಮಯದಲ್ಲಿ ಅವನಿಗನ್ನಿಸಿತು: ಅಮೆರಿಕ ವಿಯಟ್‌ನಾಮ್‌ನಿಂದ ಬಾಲ ಮುದುಡಿಕೊಂಡು ಓಡಿ ಬರಲಿಲ್ಲವೇ? ಲೆಬನಾನ್‌ನಲ್ಲಿ ಏನೋ ಕಡಿದು ರಾಶಿ ಹಾಕುತ್ತೇವೆ ಎಂದು ಹೊರಟ ಅಮೆರಿಕನ್ ಸೈನ್ಯ ೨೦೦ಕ್ಕಿಂತಲೂ ಹೆಚ್ಚು ಸೈನಿಕರನ್ನು ಕಳೆದುಕೊಂಡು ವಾಪಸ್ಸು ಬರಲಿಲ್ಲವೇ? ಅಕ್ಕಪಕ್ಕದ ಅರಬ್ ದೇಶದವರು ಅಲ್ಲಾಹುವಿನಲ್ಲಿ ನಂಬಿಕೆ ಇಲ್ಲದ ಅಮೆರಿಕನ್ನರನ್ನು ಕರೆಸಿ ಆ ಕಾಫಿರರನ್ನು ತಮ್ಮ ದೇಶದ ಭೂಮಿಯ ನೆಲೆಯಿಂದ ಇರಾಕ್‌ನ ಮೇಲೆ ಬಾಂಬ್ ದಾಳಿ ಮಾಡಲು ಬಿಡುವುದಿಲ್ಲ, ಮೇಲಾಗಿ ಇರಾನ್-ಕಾಂಟ್ರಾ ಹಗರಣದಲ್ಲಿ ಸಾರ್ವಜನಿಕರ ಅಭಿಪ್ರಾಯ ಅಮೆರಿಕದ ಅಧ್ಯಕ್ಷನಿಗೆ ವಿರುದ್ಧವಾಗಿತ್ತು. ಅಮೆರಿಕದ ಸಾರ್ವಜನಿಕ ಅಭಿಪ್ರಾಯದಂತೆ ಅಮೆರಿಕ ಬೇರೆ ದೇಶಗಳಿಗೆ ಸೈನ್ಯ ಕಳುಹಿಸುವುದನ್ನು ಒಪ್ಪುವುದಿಲ್ಲ. ಹೀಗೆ ತನಗೆ ಅನುಕೂಲಕರವಾದ ಅಂಶಗಳನ್ನೇ ಲೆಕ್ಕ ಹಾಕಿ ಸದ್ದಾಂ ಹುಸೇನ್ ಕುವೈತ್‌ನ್ನು ಕಬಳಿಸಲು ಸಿದ್ಧನಾದನು.

ತನಗೆ ಅನುಕೂಲಕರವಾದ ಅಂಶಗಳನ್ನು ಸದ್ದಾಂ ಹುಸೇನ್ ಚಿಂತಿಸಿದನೇ ಹೊರತು ತನ್ನ ಸಾಹಸದ ವಿರುದ್ಧವಿರುವ ಶಕ್ತಿಗಳನ್ನು ಅವನು ಗಣನೆಗೆ ತೆಗೆದುಕೊಳ್ಳಲಿಲ್ಲ. ೧೯೯೦ರ ಆಗಸ್ಟ್‌ನಲ್ಲಿ ಸದ್ದಾಂ ಹುಸೇನ್ ತನ್ನ ಹಗಲುಗನಸನ್ನು ಕೈಗೂಡಿಸಲು ಕುವೈತ್‌ನ ಆಕ್ರಮಣ ಮಾಡಿದನು. ಮೇಲೆ ಮಾರನೆಯ ದಿನವೇ ಅಮೆರಿಕ ತನ್ನ ನೌಕಾದಳವನ್ನು ಆ ಪ್ರದೇಶದಲ್ಲಿ ಹೆಚ್ಚಿಸುವುದಾಗಿ ಪ್ರಕಟಣೆ ಮಾಡಿ ಅಮೆರಿಕದಲ್ಲಿರುವ ಇರಾಕಿನ ಆಸ್ತಿ ಪಾಸ್ತಿ, ಹಣ ಕಾಸು ಎಲ್ಲವನ್ನೂ ನಿಶ್ಚೇಷ್ಟಗೊಳಿಸಿತು. ಒಂದು ವಾರದಲ್ಲಿ ಅಮೆರಿಕನ್ ಸೈನ್ಯವನ್ನು ಸೌದಿ ಅರೇಬಿಯಾಕ್ಕೆ ಕಳುಹಿಸುವುದಾಗಿ ಬುಷ್ ಹೇಳಿಕೆ ನೀಡಿದನು. ಇತರ ಎಲ್ಲಾ ವಿಶ್ವಸಂಸ್ಥೆ ಸದಸ್ಯ ರಾಷ್ಟ್ರಗಳು, ಪ್ರತಿ ಅರಬ್ ರಾಷ್ಟ್ರವೂ ಸೇರಿದಂತೆ (ಜೋರ್ಡಾನ್ ಮತ್ತು ಲಿಬಿಯಾ ಬಿಟ್ಟು) ವಿಶ್ವಸಂಸ್ಥೆ ಮಂಡಿಸಿದ ಮಸೂದೆಗಳ ಸರಣಿಯನ್ನು (series of resolutions) ಅನುಮೋದಿಸಿದವು. ಈ ಮಸೂದೆಗಳು ಇರಾಕ್ ತಕ್ಷಣವೇ ಬೇಷರತ್ತಾಗಿ (unconditional) ಸೈನ್ಯವನ್ನು ಕುವೈತ್‌ನಿಂದ ವಾಪಸ್ಸು ಕರೆಸಿಕೊಳ್ಳಬೇಕು ಎಂದು ಆಗ್ರಹಪಡಿಸಿದವು. ವಿಶ್ವಸಂಸ್ಥೆ ಇರಾಕ್ ಮೇಲೆ ಆರ್ಥಿಕ ನಿರ್ಬಂಧ ಹೇರಿ ವಾಯುಪಡೆ ಮತ್ತು ನೌಕಾಪಡೆಗಳನ್ನು ಉಪಯೋಗಿಸಿ ನಿರ್ಬಂಧವನ್ನು ಜಾರಿಗೆ ತಂದಿತು.

ಇದಕ್ಕೆ ಪ್ರತಿಯಾಗಿ ಇರಾಕ್ ಹೊರದೇಶದವರನ್ನು ಒತ್ತೆಯಾಳುಗಳಾಗಿ (hostages) ಸೆರೆಹಿಡಿದು ಅವರನ್ನು ತನ್ನ ಷರತ್ತುಗಳನ್ನು ಪೂರೈಸಿದಂತೆ ಬಿಡುಗಡೆ ಮಾಡುವುದಾಗಿ ಹೇಳಿಕೆ ನೀಡಿತು. ಬುಷ್ 'ಮರುಭೂಮಿ ರಕ್ಷಣೆಯ ಆಪರೇಷನ್' (Operation Desert Storm) ಎಂದು ಕರೆದ ಈ ಯೋಜನೆಯನ್ನು ಪ್ರಕಟಿಸಿದಾಗ ಅದರಲ್ಲಿ ಸದ್ದಾಂ ಹುಸೇನ್‌ನಿಗೆ ಎಚ್ಚರದ ವೇಳಾಪಟ್ಟಿಯೂ (time table) ಸೇರಿತ್ತು. ಸೌದಿ ಅರೇಬಿಯಾಕ್ಕೆ ಸೈನ್ಯ ರವಾನಿಸುವುದು ಮತ್ತು ೧೯೯೧ ಜನವರಿ ೧೭ಕ್ಕೆ ನಿಗದಿ ಮಾಡಿದ ಅವಧಿ – ಆ ದಿನದಿಂದ ಕಡ್ಡಾಯವಾಗಿ ಇರಾಕ್ ವಿಶ್ವಸಂಸ್ಥೆಯ ನಿರ್ಣಯಗಳನ್ನು ಅನುಷ್ಠಾನಕ್ಕೆ ತರ ಬೇಕೆಂದು ಸ್ಪಷ್ಟ ಪಡಿಸಿದನು.

ಅಮೆರಿಕದಲ್ಲಿ ಅಧ್ಯಕ್ಷ ಬುಷ್‌ನ ಕಾರ್ಯಾಚರಣೆಗೆ ಅತಿ ಹೆಚ್ಚಿನ ಬೆಂಬಲ ಸಿಕ್ಕಿತು. ಕಾಂಗ್ರೆಸ್‌ನಲ್ಲಿ ಈ ಯುದ್ಧ ಸಾರಬೇಕೋ ಬೇಡವೋ ಎಂಬುದರ ಬಗ್ಗೆ ದೀರ್ಘ ಚರ್ಚೆ ನಡೆಯಿತು. ನಂತರ ಕಾಂಗ್ರೆಸ್ ಮತ್ತು ಸೆನೆಟ್ ಕೂಡಿ ವಿಶ್ವಸಂಸ್ಥೆಯ ನಿರ್ಣಯಗಳನ್ನು ಬೆಂಬಲಿಸುವುದಾಗಿ ನಿಶ್ಚಯಿಸಿದವು. ಇದರಿಂದ ಅಮೆರಿಕ ಮಿತ್ರರಾಷ್ಟ್ರಗಳ ಸೈನ್ಯದ ನಾಯಕತ್ವ ವಹಿಸಿಕೊಂಡು ಇರಾಕ್‌ನ್ನು ಆಕ್ರಮಣ ಮಾಡಲು ಸಿದ್ಧವಾಗಿದೆ ಎಂದು ಎಲ್ಲರಿಗೂ ತಿಳಿಯಿತು. ೧೯೯೧ರ ಜನವರಿ ೧೭ರಂದು 'ಮರುಭೂಮಿಯ ಬಿರುಗಾಳಿ ಕಾರ್ಯಾಚರಣೆ' (Operation Desert Storm) ಪ್ರಾರಂಭವಾಯಿತು. ವಾಯುಪಡೆಯ ವಿಮಾನಗಳು ಬಾಗ್ದಾದ್ ಪಟ್ಟಣದ ಮೇಲೆ ಅತ್ಯಂತ ಭೀಕರವಾದ ಮತ್ತು ನಿರಂತರವಾದ ಬಾಂಬ್ ಮಳೆಗರೆಯಿತು. ಇರಾಕ್‌ನ ವಾಯುಮಾರ್ಗದ ಮೇಲೆ ಮಿತ್ರರಾಷ್ಟ್ರಗಳ ವಾಯುಪಡೆಗಳು ಸಂಪೂರ್ಣ ನಿಯಂತ್ರಣ ಪಡೆದು ಇರಾಕ್‌ನ ಇತರ ಆಯಕಟ್ಟಿನ ಜಾಗಗಳನ್ನು, ಶಸ್ತ್ರಾಸ್ತ್ರ ಸಂಗ್ರಹ ಮಳಿಗೆಗಳನ್ನು ನಾಶಮಾಡಿದವು. ಈ ದಾಳಿಗೆ ಪ್ರತಿಯಾಗಿ ಸದ್ದಾಂ ಹುಸೇನ್ ಇಸ್ರೇಲ್ ಮೇಲೆ 'ಸ್ಕಡ್' (Scud) ಕ್ಷಿಪಣಿಗಳಿಂದ ದಾಳಿ ನಡೆಸಿದನು. ಅಮೆರಿಕ ಇಸ್ರೇಲ್‌ಗೆ 'ಪೇಟ್ರಿಯಟ್' ಕ್ಷಿಪಣಿಗಳನ್ನು ಒದಗಿಸಿತು. ಈ ಕ್ಷಿಪಣಿಗಳು ಇರಾಕ್‌ನ Scud ಕ್ಷಿಪಣಿಗಳನ್ನು ಅಂತರಿಕ್ಷದಲ್ಲೇ ನಾಶಮಾಡುತ್ತಿದ್ದವು. ಇದರಿಂದಾಗಿ ಇಸ್ರೇಲ್‌ಗೆ ಹೆಚ್ಚಿನ ಸಾವು-ನೋವು ನಷ್ಟಗಳಾಗಲಿಲ್ಲ. ಇರಾಕ್ ರಾಸಾಯನಿಕ ಶಸ್ತ್ರಗಳನ್ನು ಬಳಸಬಹುದು ಎನ್ನುವ ಭಾವನೆ ಜನಾಭಿಪ್ರಾಯ ಸದ್ದಾಂ ಹುಸೇನ್ ವಿರುದ್ಧ ತಿರುಗುವಂತೆ ಮಾಡಿತು.

ಅಮೆರಿಕದ ಸೇನಾನಾಯಕ ನಾರ್ಮನ್ ಶ್ವಾರ್ಟ್ಜ್‌ಕಾಫ್‌ನ (Norman Schwartzkopf) ಕೈಕೆಳಗೆ ಮಿತ್ರರಾಷ್ಟ್ರ ಸೈನ್ಯಗಳು ೧೯೯೧ರ ಫೆಬ್ರವರಿಯಲ್ಲಿ ಇರಾಕ್ ಮತ್ತು ಕುವೈತ್‌ನ ಮೇಲೆ ದಾಳಿ ನಡೆಸಿದವು. ಈ ಸೈನ್ಯ ಮೂರು ದಿನಗಳೊಳಗೆ ಕುವೈತ್‌ನ್ನು ಬಿಡುಗಡೆ ಮಾಡಿ ಸದ್ದಾಂ ಹುಸೇನನ ಸೈನ್ಯ ದಿಕ್ಕಾಪಾಲಾಗಿ ಓಡುವಂತೆ ಮಾಡಿತು. ಕುವೈತ್‌ನಲ್ಲಿ ಸದ್ದಾಂ ಹುಸೇನ್ ಅಂತಿಮವಾಗಿ ನಡೆಸಿದ ರಾಕ್ಷಸಕೃತ್ಯವೆಂದರೆ

ಕುವೈಯತ್‌ನ ಎಲ್ಲ ತೈಲ ಪ್ರದೇಶಗಳಿಗೆ (oil fields) ಬೆಂಕಿ ಹಾಕಿದ್ದು. ದಟ್ಟವಾದ ಕಪ್ಪು ಹೊಗೆ ನಾಡನ್ನು ಆವರಿಸಿ ಪರಮಾವಧಿ ಪರಿಸರ ಮಾಲಿನ್ಯ ಉಂಟಾಯಿತು. ಸದ್ದಾಂ ಹುಸೇನನ ಸೊಕ್ಕು ಮುರಿದರೂ ಅವನು ಗದ್ದುಗೆ ಬಿಡಲಿಲ್ಲ. ಅಮೆರಿಕದ ಮೇಲಿನ ರೋಷಕ್ಕೆ ಕುರ್ಡಿಸ್ತಾನದವರು ಬಲಿಪಶುಗಳಾದರು. ಅವರ ಮೇಲೆ ರಾಸಾಯನಿಕ ಅಸ್ತ್ರ ಪ್ರಯೋಗಿಸಿ ಸಾವಿರಾರು ಮಂದಿಯನ್ನು ಕೊಂದು ಕೋಪ ತೀರಿಸಿಕೊಂಡನು. ಅತ್ತ ಅಮೆರಿಕದಲ್ಲಿ ಬುಷ್‌ನ ಜನಪ್ರಿಯತೆ ಹಿಂದೆ ಯಾವ ಅಧ್ಯಕ್ಷನಿಗೂ ಇಲ್ಲದಷ್ಟು ಹೆಚ್ಚಾಯಿತು (೯೦%). ಇರಾಕಿನ ಮೇಲೆ ಆರ್ಥಿಕ ದಿಗ್ಬಂಧನ ಹಾಕಿದರೂ ಹುಸೇನನಿಗೆ ಅದು ತಟ್ಟಲಿಲ್ಲ. ಬುಷ್ ತನ್ನ ಅಧಿಕಾರದ ಅವಧಿಯಲ್ಲಿ ಸದ್ದಾಂ ಹುಸೇನನನ್ನು ಅಧಿಕಾರದಿಂದ ಇಳಿಸಲಾಗಲಿಲ್ಲ. ಚುನಾವಣೆಯಲ್ಲಿ ಸೋತು ಬುಷ್ ರಾಜಕೀಯ ರಂಗದಿಂದ ನಿಷ್ಕ್ರಮಿಸುತ್ತಿದ್ದಾಗ ಸಿಂಹಾಸನದ ಮೇಲೆ ಕುಳಿತ ಸದ್ದಾಂ ಹುಸೇನ್ ಹುಸಿ ನಗೆ ನಗುತ್ತಿರಬಹುದು.

೧೯೯೩ರಲ್ಲಿ ಮಾಜಿ ಅಧ್ಯಕ್ಷ ಬುಷ್ ಅಭಿನಂದನಾ ಸಮಾರಂಭಕ್ಕೆ ಕುವೈತ್‌ಗೆ ಭೇಟಿ ಕೊಟ್ಟಾಗ ಅವನನ್ನು ಕೊಲೆ ಮಾಡಲು ಸದ್ದಾಂ ಹುಸೇನ್ ನಡೆಸಿದ ಪಿತೂರಿ ಬೆಳಕಿಗೆ ಬಂದಿತು. ಇದಕ್ಕೆ ಪ್ರತಿಯಾಗಿ ಅಮೆರಿಕ ಇರಾಕಿನ ಗುಪ್ತಚಾರ ಪ್ರಮುಖ ಕಛೇರಿಯ (Intelligence Headquarters) ಮೇಲೆ ದಾಳೀ ನಡೆಸಿದ ಭಯೋತ್ಪಾದಕ ಕೃತ್ಯಗಳನ್ನು ಅಮೆರಿಕ ಸಹಿಸುವುದಿಲ್ಲವೆಂದು ಸದ್ದಾಂ ಹುಸೇನನಿಗೆ ಎಚ್ಚರಿಕೆ ಕೊಟ್ಟಿತು.

ಹೊಸ ಪ್ರಪಂಚದ ಹೊಸ್ತಿಲಲ್ಲಿ

ಇರಾಕಿನ ಮೇಲೆ ಅಮೆರಿಕ ಸಾಧಿಸಿದ ವಿಜಯ 'ಹೊಸ ಪ್ರಪಂಚ'ದ ಉದಯಕ್ಕೆ ಕಾರಣವಾಯಿತು. ಅಧ್ಯಕ್ಷ ಬುಷ್‌ನ ಪ್ರಕಾರ ಈ ಹೊಸ ಪ್ರಪಂಚದಲ್ಲಿ ಸಂಪದ್‌ಭರಿತ ಮತ್ತು ಅಸಾದೃಶ ಶಕ್ತಿಶಾಲಿಯಾದ ಅಮೆರಿಕ ಜಗತ್ತಿನ ಆರಕ್ಷಕ ಪಾತ್ರ ವಹಿಸಿಕೊಳ್ಳ ಬೇಕಾಗುತ್ತದೆ (the role of world's policeman). ವಿಶ್ವಸಂಸ್ಥೆ ಸಹಾಯ ಪಾತ್ರವನ್ನಷ್ಟೆ ವಹಿಸಬಹುದು. ಅಮೆರಿಕನ್ನರನ್ನು ಬೆಂಬಲಿಸಲು ವಿಶ್ವಸಂಸ್ಥೆ ಶಾಂತಿಸೇನೆಯನ್ನು (Peace Keeping Forces) ಕಳುಹಿಸಬಹುದು ಮತ್ತು ಸರ್ವಸದಸ್ಯರ ಸಭೆಯಲ್ಲಿ ನಿರ್ಣಯಗಳನ್ನು ಮಾಡಿ ಅವನ್ನು ಅನುಸರಿಸುವಂತೆ ರಾಷ್ಟ್ರಗಳ ಮೇಲೆ ಒತ್ತಾಯ ಹೇರಬಹುದು. ಈ ತತ್ವವನ್ನು ವಿಶ್ವಸಂಸ್ಥೆ ಅನುಷ್ಠಾನಕ್ಕೆ ತಂದ ಮೂರು ಉದಾಹರಣೆ ಗಳೆಂದರೆ – ಸೋಮಾಲಿಯಾ, ಯುಗೋಸ್ಲಾವಿಯಾ ಗಣರಾಜ್ಯಗಳು ಮತ್ತು ಮಧ್ಯಪ್ರಾಚ್ಯ ರಾಷ್ಟ್ರಗಳು.

ಸೋಮಾಲಿಯಾದಲ್ಲಿ ಅಧಿಕಾರಕ್ಕಾಗಿ ಬುಡಕಟ್ಟುಗಳ ಮುಖ್ಯಸ್ಥರ (tribal chieftains) ನಡುವೆ ಹೋರಾಟ ನಡೆಯುತ್ತಿತ್ತು. ಈ ಜಗಳದಲ್ಲಿ ಜನಸಾಮಾನ್ಯರು ಸಿಕ್ಕಿಬಿದ್ದು ಹೊಟ್ಟೆಗೆ ಬಟ್ಟೆಗೆ ಇಲ್ಲದೆ ಬಡವಾಗುತ್ತ ಹೋದರು. ವಿಶ್ವಸಂಸ್ಥೆ ಕಳುಹಿಸುತ್ತಿದ್ದ

ಆಹಾರ ಮತ್ತು ಇತರ ಸರಕುಗಳು ಜನರಿಗೆ ಸಿಗುತ್ತಿರಲಿಲ್ಲ. ಎಲ್ಲೆಲ್ಲಿಯೂ ಬರಗಾಲ, ಹಸಿವಿನಿಂದ ಹೆಂಗಸರು, ಮಕ್ಕಳು ಸಾವಿರಗಟ್ಟಲೆ ಸಾವಿಗೀಡಾಗುತ್ತಿದ್ದರು. ಬುಡಕಟ್ಟುಗಳ ಯಾದವೀಕಲಹ ೧೯೯೧ರಷ್ಟು ಮೊದಲೇ ಪ್ರಾರಂಭವಾಗಿತ್ತು. ಆಗ ಕೇವಲ ೨೨ ವರ್ಷ ಪ್ರಾಯದ ಸರ್ವಾಧಿಕಾರಿ ಮೊಹಮ್ಮದ್ ಸೈಯದ್ ಬ್ಯಾರಿ ಎಂಬುವನನ್ನು ಸೈನ್ಯದ ಮುಖ್ಯಸ್ಥನಾದ ಮೊಹಮ್ಮದ್ ಫಾರ್ ಅದೀದ್ ಎಂಬುವನು ಅಧಿಕಾರದಿಂದ ಪದಚ್ಯುತಿ ಮಾಡಿದ್ದನು. ಸೋಮಾಲಿಯಾದ ರಾಜಕೀಯ ವ್ಯವಸ್ಥೆ ಕುಟುಂಬ ಮತ್ತು ರಕ್ತಸಂಬಂಧಗಳ ಮೇಲೆ ಆಧಾರಿತವಾಗಿದ್ದು ಸೈಯದ್ ಬ್ಯಾರಿಯಿಂದ ಅಧಿಕಾರ ಕಿತ್ತುಕೊಂಡ ಅದೀದ್‌ನ ಹಾಗೆಯೇ ಬಣ (Hawiye) ಮತ್ತು ಬ್ಯಾರಿಯ ದಾರೊದ್ ಬಣಗಳ (Darod) ನಡುವೆ ಭೀಕರ ಕದನ ನಡೆಯಿತು. ಹಾಇಯೇ ಬಣದ ಮಹಮ್ಮದ್ ಅಲೀ ಮಹದಿ (ಇವನು ಅದೀದ್‌ನ ಪಂಗಡವಾದ ಸಂಯುಕ್ತ ಸೋಮಾಲೀ ಕಾಂಗ್ರೆಸ್ಸಿಗೆ ಸೇರಿದವನು) ಹಂಗಾಮಿ ಅಧ್ಯಕ್ಷತೆ ವಹಿಸಿಕೊಂಡಾಗ ಹಾಇಯೇ ಬಣದ ಒಳಪಂಗಡಗಳ ನಡುವೆ ಹೊಡೆದಾಟ ಪ್ರಾರಂಭವಾಗಿ ಪರಿಸ್ಥಿತಿ ಇನ್ನೂ ಗೊಂದಲಮಯವಾಯಿತು. ಪಶ್ಚಿಮ ರಾಷ್ಟ್ರಗಳಿಂದ ಪರಿಹಾರ ಬರುವ ಹೊತ್ತಿಗೆ ಆ ಸರಕುಗಳನ್ನು, ಮುಖ್ಯವಾಗಿ ಆಹಾರವನ್ನು ವ್ಯವಸ್ಥಿತವಾಗಿ ಜನರಿಗೆ ಹಂಚಲು ಸೋಮಾಲಿಯಾದಲ್ಲಿ ಸರ್ಕಾರವೇ ಇರಲಿಲ್ಲ. ಶಸ್ತ್ರಸಜ್ಜಿತರಾದ ಸ್ಥಳೀಯರು (militia men) ಹೊರದೇಶಗಳಿಂದ ಬರುತ್ತಿದ್ದ ಪರಿಹಾರ ಸರಕುಗಳನ್ನು ಅಪಹರಿಸುತ್ತಿದ್ದರು.

೧೯೯೨ರ ಡಿಸೆಂಬರ್‌ನಲ್ಲಿ ಅಮೆರಿಕದ ನಾಯಕತ್ವದಲ್ಲಿ ಮಿತ್ರರಾಷ್ಟ್ರಗಳ ಸೈನ್ಯ ಸೋಮಾಲಿಯಾವನ್ನು ಆಕ್ರಮಣ ಮಾಡಿ ಪರಿಸ್ಥಿತಿಯನ್ನು ಹದ್ದುಬಸ್ತಿಗೆ ತರುವಂತೆ ಅಧ್ಯಕ್ಷ ಬುಷ್ ಆಜ್ಞಾಪಿಸಿದನು. ಇದನ್ನು 'ಆಸೆಯ ಕುಡಿ ಹೊತ್ತಿಸುವ ಯೋಜನೆ' (Operation Restore Hope) ಎಂದು ಕರೆದನು. (ಈ ಆಕ್ರಮಣವನ್ನು ದೂರದರ್ಶನದ ಪ್ರಸಾರದಲ್ಲಿ ಜನರು ನೋಡಿದರು.) ಹೆಚ್ಚಿನ ಹೋರಾಟವಿಲ್ಲದೆ ಅಮೆರಿಕದ ಮೆರೀನ್ ಪಡೆ ಹಳ್ಳಿಗಾಡನ್ನು ವಶಪಡಿಸಿಕೊಂಡಿತು. ಈ ಜಾಗಗಳಲ್ಲಿ ಹೋರಾಡುತ್ತಿದ್ದ ಬಣಗಳನ್ನು ನಿಶ್ಶಸ್ತ್ರಗೊಳಿಸಲು ಮಾಡಿದ ಪ್ರಯತ್ನಗಳು ಸಫಲವಾಗಲಿಲ್ಲ. ಸೋಮಾಲಿಯಾದ ಜನ ಮೊದಲಿಗೆ ಹೊರದೇಶದ ಸೈನಿಕರಿಗೆ ಸಹಾಯ ಮಾಡುತ್ತಿದ್ದರು. ಯಾವಾಗ ಈ ಸೈನಿಕರು ಸೋಮಾಲಿಯಾವನ್ನು ನಿಶ್ಶಸ್ತ್ರಗೊಳಿಸಲು ಪ್ರಯತ್ನಿಸಿದರೋ ಅಂದಿನಿಂದ ಸೋಮಾಲಿಯಾ ಜನತೆ ಹೊರದೇಶದ ಸೈನಿಕರ ವಿರುದ್ಧ ತಿರುಗಿಬಿದ್ದು 'ಗೆರಿಲ್ಲಾ' ಕದನ ಪ್ರಾರಂಭಿಸಿದರು. ೧೯೯೨ರ ಜೂನ್ ತಿಂಗಳಲ್ಲಿ ಅದೀದ್‌ನ ಸೈನಿಕರು ೨೪ ಪಾಕಿಸ್ತಾನದ ಸೈನಿಕರನ್ನು ಕೊಲೆ ಮಾಡಿದಾಗ, ಅಮೆರಿಕದ ಹೊಸ ಅಧ್ಯಕ್ಷ ಬಿಲ್ ಕ್ಲಿಂಟನ್ ಅಮೆರಿಕ ಸೈನ್ಯಕ್ಕೆ ಅದೀದ್‌ನನ್ನು ಸೆರೆಹಿಡಿಯಲು ಆಜ್ಞಾಪಿಸಿದನು. ಕೆಲವು ತಿಂಗಳ ನಂತರ ಅಮೆರಿಕನ್ ಸೈನಿಕರು ಅದೀದ್‌ನ ಪ್ರಮುಖ ಕಛೇರಿಯ ಮೇಲೆ ಸುವ್ಯವಸ್ಥಿತವಲ್ಲದ ದಾಳಿ ಮಾಡಿದಾಗ ಅದೀದ್‌ನ ಸೈನಿಕರು ಪ್ರತಿದಾಳಿ ನಡೆಸಿ ೧೮ ಅಮೆರಿಕನ್ ಸೈನಿಕರನ್ನು ಕೊಂದರು. ಈ

ಘಟನೆಯಲ್ಲಿ ಅಮೆರಿಕನ್ನರನ್ನು ಆಘಾತಗೊಳಿಸಿದ ದೃಶ್ಯವೆಂದರೆ ಅಳಿದ ಅಮೆರಿಕನ್ ಸೈನಿಕರ ಅಂಗಹೀನ ದೇಹಗಳನ್ನು ಮೊಗದಿಶು ಪಟ್ಟಣದ ಹೊಲಸು ಬೀದಿಗಳಲ್ಲಿ ಸಂತೋಷದಿಂದ ಕೂಗಾಡುತ್ತ, ಕುಣಿಯುತ್ತ ಎಳೆದುಕೊಂಡು ಹೋಗುತ್ತಿದ್ದ ಹೃದಯ ವಿದ್ರಾವಕ ದೃಶ್ಯ. ಇದರಿಂದಾಗಿ ಅಮೆರಿಕನ್ನರಲ್ಲಿ ಸೋಮಾಲಿಯಾ ದೇಶದವರ ಬಗ್ಗೆ ಜಿಗುಪ್ಸೆ ಮೂಡಿ ಅಮೆರಿಕನ್ ಸೈನಿಕರನ್ನು ವಾಪಸ್ಸು ಕರೆಸುವಂತೆ ಒತ್ತಾಯಿಸಿದರು. ೧೯೯೪ಳರಲ್ಲಿ ಸೋಮಾಲಿಯಾದ ನತದೃಷ್ಟ ಜನಸಾಮಾನ್ಯರನ್ನು ಕಚ್ಚಾಡುತ್ತಿರುವ ಬಣ ನಾಯಕರ ಕೈಗೊಪ್ಪಿಸಿ ಆ ರುದ್ರ ರಾಜಕೀಯ ರಂಗದಿಂದ ಅಮೆರಿಕನ್ ಸೈನಿಕರು ಭಾರವಾದ ಹೃದಯದಿಂದ ನಿಷ್ಕ್ರಮಿಸಿದರು. ಸೋಮಾಲಿಯಾದ ಆ ದುರಂತ ನಾಟಕದ ಪರದೆ ಇನ್ನೂ ಬಿದ್ದಿಲ್ಲ.

ಬಾಸ್ನಿಯಾ-ಹರ್ಜ಼ಗೊವಿನಾದಲ್ಲಿ ಪರಿಸ್ಥಿತಿ ಸೋಮಾಲಿಯಾಕ್ಕಿಂತ ಭಿನ್ನವಾಗಿರಲಿಲ್ಲ. ಸೋಮಾಲಿಯಾದಲ್ಲಿ ಬಣಗಳ ನಡುವೆ ಹೊಡೆದಾಟ ನಡೆದಿದ್ದರೆ, ಇಲ್ಲಿ ಕ್ರೈಸ್ತಮತದ ಸರ್ಬ್ ಜನರಿಗೂ ಮತ್ತು ಮುಸ್ಲಿಂ ಪಂಥದ ಬಾಸ್ನಿಯಾ ಜನರಿಗೂ ವಂಶ ಪಾರಂಪರ್ಯವಾಗಿ ಬಂದ ಯಾದವೀ ಕಲಹ ನಡೆದಿತ್ತು. ಹರಿದು ಹಂಚಿಹೋಗಿರುವ ಯುಗೋಸ್ಲಾವಿಯಾದಲ್ಲಿ ನಡೆದ ಹತ್ಯಾಕಾಂಡದ ಬಗ್ಗೆ ಸಾಕಷ್ಟು ಹಿಂದೆ ಹೇಳಿದೆ. ಅಧ್ಯಕ್ಷ ಬುಷ್ ತನ್ನ ಆಡಳಿತದ ಕೊನೆಯ ಹಂತದಲ್ಲಿದ್ದುದರಿಂದ ಪರಸ್ಪರ ಕಾದಾಡುತ್ತಿದ್ದ ಯುಗೋಸ್ಲಾವ್ ಗಣರಾಜ್ಯಗಳ ನಡುವೆ ಸಂಧಾನ ಏರ್ಪಡಿಸಿ ಶಾಂತಿಸ್ಥಾಪನೆ ಮಾಡುವಷ್ಟು ಸಮಯವಿರಲಿಲ್ಲ.

ಇಸ್ರೇಲ್ ರಾಷ್ಟ್ರಸ್ಥಾಪನೆಯಾದಾಗಿನಿಂದ ಮಧ್ಯಪ್ರಾಚ್ಯ ರಾಷ್ಟ್ರಗಳು ಸದಾಕಾಲ ಸಿಡಿಮದ್ದು ತುಂಬಿದ ಪೀಪಾಯಿಯಂತೆ ಯಾವ ಕ್ಷಣದಲ್ಲಾದರೂ ಅಸ್ಫೋಟನಗೊಳ್ಳ ಬಹುದಾದ ಪ್ರಕ್ಷುಬ್ಧ ವಾತವರಣದಲ್ಲಿದೆ. ಇಸ್ರೇಲ್ ಅಸ್ತಿತ್ವಕ್ಕೆ ಬಂದಾಗ ನಿರಾಶ್ರಿತರಾದ ಪ್ಯಾಲೆಸ್ಟೈನ್ ಮುಸ್ಲಿಮರು ಅರ್ಧ ಶತಮಾನ ಕಳೆದರೂ ಇನ್ನೂ ನಿರಾಶ್ರಿತರಾಗಿ ಶಿಬಿರಗಳಲ್ಲಿದ್ದಾರೆ. ಈ ದೇಶಹೀನ (stateless) ಮತ್ತು ವಸತಿಹೀನ (homeless) ಜನರನ್ನು ಪ್ರತಿನಿಧಿಸುವ 'ಪ್ಯಾಲೆಸ್ಟೈನ್ ವಿಮೋಚನಾ ಸಂಸ್ಥೆ'ಯನ್ನು (Palestine Liberation Organization- PLO) ಅಧಿಕೃತವಾಗಿ ಮಾನ್ಯ ಮಾಡಬೇಕೆ? ನಿರಾಶ್ರಿತ ಪ್ಯಾಲೆಸ್ಟೈನ್ ಜನರಿಗೆ ಸ್ವತಂತ್ರ ಪ್ಯಾಲೆಸ್ಟೈನ್ ರಾಷ್ಟ್ರ ಸಾಧ್ಯವೇ? ಹಾಗಾದಲ್ಲಿ ಆ ರಾಷ್ಟ್ರದ ರಾಜಧಾನಿ ಯಾವುದು? ಮಧ್ಯಪ್ರಾಚ್ಯದ ಯಾವ ಪ್ರದೇಶಗಳು ಆ ರಾಷ್ಟ್ರಕ್ಕೆ ಸೇರುತ್ತವೆ? ಈ ಸಂಕೀರ್ಣ ಪ್ರಶ್ನೆಗಳು ಸಮಸ್ಯೆಗಳಾಗಿ ಉಳಿದಿವೆ. ೧೯೯೨ರಲ್ಲಿ ಅಧ್ಯಕ್ಷ ಬುಷ್ 'ಮಧ್ಯಪ್ರಾಚ್ಯ ಶಾಂತಿ ಸಮಾವೇಶ'ವನ್ನು ಏರ್ಪಡಿಸಿದ್ದನು. ಇದರಲ್ಲಿ ರಷ್ಯಾ ಮತ್ತು ಎಲ್ಲ ಮಿತ್ರರಾಷ್ಟ್ರಗಳು ನೆರವು ನೀಡಿದವು. ಈ ಚರಿತ್ರಾರ್ಹ ಸಮಾವೇಶದಲ್ಲಿ ಇತಿಹಾಸದಲ್ಲಿ ಮೊದಲ ಬಾರಿಗೆ ಇಸ್ರೇಲ್ ಮುಖಾಮುಖಿಯಾಗಿ ಅರಬ್ ರಾಷ್ಟ್ರಗಳೊಡನೆ

ಮಾತುಕತೆ ನಡೆಸಿದ್ದಲ್ಲದೆ, ಅದುವರೆಗೂ ಮಾನ್ಯ ಮಾಡಲು ನಿರಾಕರಿಸಿದ ಪಿ.ಎಲ್.ಓ ಪ್ರತಿನಿಧಿಯೊಡನೆ ಸೌಜನ್ಯ ಸಂಭಾಷಣೆ ನಡೆಯಿತು. ಈ ಸಮಾವೇಶದಲ್ಲಿ ಮಹತ್ತಾದ ಸಾಧನೆಗಳು, ಸಂಧಾನಗಳು ಘಟಿಸದೆ ಹೋದರೂ ಸಾಂಕೇತಿಕವಾಗಿ, ಅನೇಕ ದಶಕಗಳ ಪರಸ್ಪರ ಅಪನಂಬಿಕೆ, ದ್ವೇಷಗಳನ್ನು ಬದಿಗಿಟ್ಟು ಬುದ್ಧಿಮತ್ತತೆಯಿಂದ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಪ್ರಯತ್ನಗಳಿಗೆ ನಾಂದಿಯಾಯಿತೆಂದು ಹೇಳಿದರೆ ಉತ್ಪ್ರೇಕ್ಷೆ ಯಾಗಲಾರದು.

೧೯೯೨ ಚುನಾವಣಾ ಪ್ರಚಾರ

ಡೆಮೊಕ್ರಾಟಿಕ್ ಪಕ್ಷದ ಪ್ರಮುಖರು ಜಾರ್ಜ್ ಬುಷ್‌ನನ್ನು ಸೋಲಿಸುವುದು ಸಾಧ್ಯವಿಲ್ಲವೆಂದು ಭಾವಿಸಿದ್ದರು. ಹೆಸರಾಂತ ಡೆಮೊಕ್ರಾಟರು – ನ್ಯೂಯಾರ್ಕ್ ಗವರ್ನರ್ ಮಾರಿಯೋ ಕ್ಯೂಮೊ (Mario Cuemo), ಸೆನೆಟರ್ ಬಿಲ್ ಬ್ರಾಡ್ಲೆ (Bill Bradley) ಚುನಾವಣೆಯಲ್ಲಿ ಸ್ಪರ್ಧಿಸಲು ನಿರಾಕರಿಸಿದರು. ಹೀಗಾಗಿ ಡೆಮೊಕ್ರಾಟಿಕ್ ಪಕ್ಷದಿಂದ ಚುನಾವಣೆಯ ಅಖಾಡಾಕ್ಕೆ ಇಳಿದವರು ಮೂರು ಜನ – ಆರ್ಕನ್‌ಸಾದ (Arkansas) ಬಿಲ್ ಕ್ಲಿನ್‌ಟನ್, ಮೆಸಾಚ್ಯುಸೆಟ್ಸ್‌ನ ಪಾಲ್ ಟ್ಸಾಂಗಾಸ್ ಮತ್ತು ಹಳಬನಾದ ಜೆರ್ರಿ ಬ್ರೌನ್ (Jerry Brown). ಈ ಮೂವರಲ್ಲಿ ಪ್ರತಿಯೊಬ್ಬನಿಗೂ ತನ್ನದೇ ಆದ ವಿಶಿಷ್ಟ ಪ್ರಚಾರ ಶೈಲಿ ಮತ್ತು ಮತದಾರ ಕ್ಷೇತ್ರಗಳಿದ್ದವು (constituency). ಟ್ಸಾಂಗಾಸ್ ಮಧ್ಯಮಪರ (moderate) ಡೆಮೊಕ್ರಾಟರ ಬೆಂಬಲ ಪಡೆದಿದ್ದು, ತನ್ನದೆ ಆದ ಆರ್ಥಿಕ ಯೋಜನೆಯನ್ನು ಸಿದ್ಧಗೊಳಿಸಿಟ್ಟುಕೊಂಡಿದ್ದನು. ಬ್ರೌನ್ ಜನಸಾಮಾನ್ಯರಂತೆ (populist) ಮತದಾರರನ್ನು ಸಂಪರ್ಕಿಸಿ ಅವರ ಬೆಂಬಲ ಪಡೆಯಲು ಪ್ರಯತ್ನಿಸಿದನು. ಇನ್ನೂ ಮುಂದೆ ಹೋಗಿ ಅವನು ಕರೆಯಲು ದುಡ್ಡು ಕೊಡಬೇಕಾಗಿಲ್ಲದ ೮೦೦ ಸಂಖ್ಯೆಯ ದೂರವಾಣಿಯನ್ನು ಸ್ಥಾಪಿಸಿ ಜನಸಾಮಾನ್ಯರು ಅದನ್ನು ಉಪಯೋಗಿಸಿ ಚುನಾವಣಾ ಪ್ರಚಾರಕ್ಕೆ ತಮ್ಮ ಕಿರುಕಾಣಿಕೆ (೧೦೦ ಡಾಲರ್‌ಗಳಿಗೂ ಕಡಿಮೆ) ಕಳುಹಿಸುವ ಏರ್ಪಾಡು ಮಾಡಿದ್ದನು. ಆರ್ಕನ್‌ಸಾ ಗವರ್ನರ್ ಕ್ಲಿನ್‌ಟನ್ ತನ್ನನ್ನು 'ನವ ಡೆಮೊಕ್ರಾಟ'ನೆಂದು ಹೇಳಿಕೊಳ್ಳುತ್ತಿದ್ದನು. ಇದನ್ನು ಪ್ರಶ್ನಿಸಿದವರಿಗೆ 'ಜನರ ಅಗತ್ಯಗಳನ್ನು ಪೂರೈಸುವುದು ನನ್ನ ಪ್ರಥಮ ಕರ್ತವ್ಯ' ಎಂದು ಹಾರಿಕೆಯ ಉತ್ತರ ಕೊಡುತ್ತಿದ್ದನು. ಚುನಾವಣಾ ಪ್ರಚಾರ ಮುಂದುವರಿದಂತೆಲ್ಲ ಕ್ಲಿನ್‌ಟನ್ ಪಕ್ಷದ ಮುಂಚೂಣಿಯತ್ತ ಸರಿಯತೊಡಗಿದನು. ಅವನು ನಾಮಕರಣಗೊಳ್ಳಬಹುದು ಎನ್ನುವುದು ಸ್ಪಷ್ಟವಾದಂತೆಲ್ಲ ಅವನ ಚಾರಿತ್ರ್ಯದ ಬಗ್ಗೆ ಪ್ರಶ್ನೆಗಳು ಏಳುವುದನ್ನು ತಪ್ಪಿಸಲು ಸಾಧ್ಯವಿರಲಿಲ್ಲ. ಪ್ರಚಾರದುದ್ದಕ್ಕೂ ಆ ಪ್ರಶ್ನೆಗಳು ಅವನನ್ನು ಕಾಡಿದವು. ಪಕ್ಷದ ಪ್ರಥಮ ಚುನಾವಣೆಯ (primary) ಮುನ್ನ ಕ್ಲಿನ್‌ಟನ್‌ನ ವ್ಯಭಿಚಾರದ ಬಗ್ಗೆ ಮತ್ತು ವಿಯಟ್‌ನಾಮ್ ಯುದ್ಧ ಸಮಯದಲ್ಲಿ ಕಡ್ಡಾಯ ನೋಂದಣಿ (draft) ತಪ್ಪಿಸಿಕೊಳ್ಳಲು ಅವನು ಕೈಗೊಂಡ ಚಟುವಟಿಕೆಗಳ ಬಗ್ಗೆ ಪತ್ರಕರ್ತರು ಪ್ರಶ್ನಿಸಿದುದೆ ಅಲ್ಲದೆ ಪತ್ರಿಕೆಯೊಂದರಲ್ಲಿ ಪ್ರಕಟವಾದ ಕಾಗದದಲ್ಲಿ ಅವನು

ವಿಯಟ್‌ನಾಮ್ ಯುದ್ಧವಿರೋಧಿ ಎಂದು ಕಡ್ಡಾಯ ನೋಂದಣಿಯನ್ನು ತಪ್ಪಿಸಿಕೊಳ್ಳಲು 'ROTC' ತರಬೇತಿಗೆ ಸೇರಿಕೊಂಡನೆಂದು ಅಪಪ್ರಚಾರ ಮಾಡಿದರು. ಅವನ ಮೇಲೆ ದೂಷಣೆಗಳಿದ್ದರೂ ಕೂಡ ಅತಿಮುಖ್ಯವಾದ ನ್ಯೂ ಹ್ಯಾಂಪ್‌ಶೈರ್ ಪ್ರಥಮಹಂತದ ಚುನಾವಣೆಯಲ್ಲಿ ಅವನು ಎರಡನೆಯ ಸ್ಥಾನದಲ್ಲಿ ಆಯ್ಕೆಯಾದನು. ಕ್ಲಿನ್‌ಟನ್ ತಾನು 'ಬಿದ್ದರೂ ಎದ್ದುಬರುವ ಹುಡುಗ' (The Come back Kid) ಎಂದು ಕರೆದುಕೊಂಡು ಪ್ರಚಾರವನ್ನು ಚುರುಕುಗೊಳಿಸಿದನು. ಅವನ ಪರಿಸ್ಥಿತಿಯಲ್ಲಿ ಮಹತ್ತರವಾದ ಬದಲಾವಣೆಯಾಗಿದ್ದು 'ಮಹಾ ಮಂಗಳವಾರ'ದಂದು (Super Tuesday). ಅಂದು ಕ್ಲಿನ್‌ಟನ್ ನಿರ್ಣಾಯಕ ಜಯಗಳಿಸಿದನು. ನ್ಯೂಯಾರ್ಕ್ ನಗರದಲ್ಲಿ ನಡೆದ ಈ ಸಮಾವೇಶದಲ್ಲಿ ಡೆಮೊಕ್ರಾಟರು ತೋರಿದ ಒಗ್ಗಟ್ಟು ರಾಜಕೀಯ ಇತಿಹಾಸದಲ್ಲಿ ಅತಿ ಹೆಚ್ಚಿನದು. ಅಧ್ಯಕ್ಷ ಮತ್ತು ಉಪಾಧ್ಯಕ್ಷರಲ್ಲಿ ಒಬ್ಬ ಉತ್ತರದವನಾದರೆ ಇನ್ನೊಬ್ಬ ದಕ್ಷಿಣದವನಾಗಿರಬೇಕು ಎನ್ನುವ ರಾಜಕೀಯ ತತ್ವಕ್ಕೆ ವಿರುದ್ಧವಾಗಿ ಕ್ಲಿನ್‌ಟನ್ ಮತ್ತೊಬ್ಬ ದಾಕ್ಷಿಣಾತ್ಯನನ್ನು ಉಪಾಧ್ಯಕ್ಷ ಸ್ಥಾನಕ್ಕೆ ಆಯ್ದುಕೊಂಡನು. ಅವನೇ ಟೆನ್ನಸ್ಸೀ ರಾಜ್ಯದ ಸೆನೆಟರ್ ಆ್ಯಲ್ ಗೋರ್ (Al Gore).

ಅತ್ತ ರಿಪಬ್ಲಿಕನ್ ಸಮಾವೇಶದಲ್ಲಿ ಕಡು ಸಂಪ್ರದಾಯಸ್ಥ ಅಂಕಣ ಬರಹಗಾರ ಪ್ಯಾಟ್ ಬ್ಯೂಕಾನನ್ (Pat Buchanan) ಅಧ್ಯಕ್ಷನಾಗಲು ಹಾರೈಸಿ ಪಕ್ಷದ ನಾಮಕರಣ ಬಯಸಿ ಸ್ಪರ್ಧೆಗೆ ಇಳಿದಿದ್ದನು. ದೇಶ ಆರ್ಥಿಕವಾಗಿ ಒಳಸರಿದಂತೆ ಆಗುತ್ತಿರುವುದರಿಂದ ನ್ಯೂ ಹ್ಯಾಂಪ್‌ಶೈರ್‌ನ ಪ್ರಾಥಮಿಕ ಚುನಾವಣೆಯಲ್ಲಿ ವ್ಯಕ್ತವಾದ ಅಂಶವೆಂದರೆ ಅಧ್ಯಕ್ಷ ಬುಷ್‌ನಿಗೆ ಅವನ ಪಕ್ಷದ ಮತಬಾರರೆ ಅವನನ್ನು ಬೆಂಬಲಿಸದೆ ಇರುವ ಪರಿಸ್ಥಿತಿ. ಬ್ಯೂಕಾನನ್ ಶೇಕಡಾ ೪೦ರಷ್ಟು ಮತಗಳನ್ನು ಪಡೆದಿದ್ದರೂ 'ಮಹಾ ಮಂಗಳವಾರ'ದಂದು ಬುಷ್ ಅತಿಹೆಚ್ಚಿನ ಮತಗಳನ್ನು ಪಡೆದು ನಾಮಕರಣ ಗಳಿಸಿದನು. ಹ್ಯೂಸ್ಟನ್‌ನಲ್ಲಿ ನಡೆದ ರಿಪಬ್ಲಿಕನ್ ಸಮಾವೇಶದಲ್ಲಿ ಬಲಪಂಥೀಯ ಸಂಪ್ರದಾಯಸ್ಥರು ನಾಮಕರಣಗೊಂಡ ಡೆಮೊಕ್ರಾಟಿಕ್ ಪಕ್ಷದ ಅಭ್ಯರ್ಥಿಯನ್ನು ಟೀಕಿಸುವುದಲ್ಲದೆ ಸಾಮಾಜಿಕ ವಿವಾದಾಂಶಗಳನ್ನು (ಉದಾಹರಣೆಗೆ, ಗರ್ಭಪಾತ) ದೀರ್ಘವಾಗಿ ಚರ್ಚಿಸಿದರು. ಬುಷ್ ಉಪಾಧ್ಯಕ್ಷ ಕ್ವೇಲ್‌ನನ್ನು ಮುಂದುವರಿಸಿದನು. ಸಮಾವೇಶ ಮುಗಿಸಿ ಹೊರಟ ಬುಷ್-ಕ್ವೇಲ್ ಜೋಡಿಯನ್ನು ಜನಪ್ರಿಯತೆಯಲ್ಲಿ ಕ್ಲಿನ್‌ಟನ್-ಗೋರ್ ಜೋಡಿ ಹಿಂದೆ ಹಾಕಿತು.

ಈ ನಡುವೆ ರಾಸ್ ಪೆರೋ ಎಂಬ ಸಮರ್ಥನಾದ ಮೂರನೆಯ ಪಕ್ಷದ ಅಭ್ಯರ್ಥಿಯೊಬ್ಬ ರಾಜಕೀಯ ರಂಗಪ್ರವೇಶ ಮಾಡಿದನು. ಇವನು ಸ್ವತಃ ದುಡಿದು ಧನವಂತನಾದವನು (billionaire). ಇವನು ಕೇಬಲ್ ದೂರದರ್ಶನದಲ್ಲಿ ಪ್ರಸಾರವಾಗುವ ಪ್ರದರ್ಶನವೊಂದರಲ್ಲಿ ಭಾಗವಹಿಸಿ ಸಾರ್ವಜನಿಕರಿಗೆ 'ನೀವು ಬಯಸಿ ನನ್ನ ಹೆಸರನ್ನು ೫೦ ರಾಜ್ಯಗಳ ಮತದಾನ ಪಟ್ಟಿಯಲ್ಲಿ ಸೇರಿಸುವುದಾದರೆ ನಾನು ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಲು

ಸಿದ್ಧನಾಗಿದ್ದೇನೆ. ನಾನು ನಿಮ್ಮ ಸೇವಕನಾಗಿ ದೊಡ್ಡ ರಾಜಕೀಯ ಪಕ್ಷಗಳನ್ನು ಎದುರಿಸುತ್ತೇನೆ' ಎಂದು ಪ್ರಸಾರ ಮಾಡಿದನು. ಕ್ರಮೇಣ ರಾಸ್ ಪೆರೋ ಜನಪ್ರಿಯತೆ ಎಷ್ಟರ ಮಟ್ಟಿಗೆ ಏರಿತ್ತೆಂದರೆ ಯಾವ ಅಭ್ಯರ್ಥಿಗೂ ಚುನಾವಣೆಯಲ್ಲಿ ಬಹುಮತ ದೊರೆಯದೆ ಅಧ್ಯಕ್ಷನ ಆಯ್ಕೆಯನ್ನು ಪ್ರಜಾಪ್ರತಿನಿಧಿ ಸಭೆಗೆ ಕಳುಹಿಸುವ ಸಂದರ್ಭ ಉಂಟಾಗಬಹುದೆಂದು ಕೆಲವರು ಆತಂಕಗೊಂಡಿದ್ದರು. ಗೊಂದಲ ಮತ್ತು ಗದ್ದಲದ ಚುನಾವಣಾ ಪ್ರಚಾರಕ್ಕೆ ರಾಸ್ ಪೆರೋ ತನ್ನ ಧ್ವನಿಗೂಡಿಸಿದನು. ಆ ಗದ್ದಲವನ್ನು ಮೀರಿ ಕೇಳುತ್ತಿತ್ತು ಅವನ ಧ್ವನಿ. ಅವನ ಹಿಂದೆ ರಾಶಿ ರಾಶಿ ಹಣ ಸಿದ್ಧವಾಗಿತ್ತು. ಅವನ ಭಾಷಣ ಸಾಮಾನ್ಯ ಜನರ ಆಡುಭಾಷೆಯಲ್ಲಿತ್ತು. ತನ್ನ ಅಭಿಪ್ರಾಯಗಳು ಜನರಿಗೆ ಮನದಟ್ಟಾಗಲಿ ಎಂದು ನಕಾಶೆಗಳನ್ನು (charts) ಮತ್ತು ರೇಖಾನಕ್ಷೆಗಳನ್ನು (graphs) ಯಥೇಚ್ಛವಾಗಿ ಬಳಸಿದನು. ಹತಾಶರಾದ ಹಲಕೆಲವು ಮತದಾರರಿಗೆ ಈ ಪ್ರಚಾರ ಹಿಡಿಸಿತು. ಆದರೆ ಕಡೆಯಲ್ಲಿ ಅತಿಉತ್ಸಾಹದಲ್ಲಿ ಮತ್ತು ಕೆಲವು ಅತಿರೇಕ ಹೇಳಿಕೆಗಳಿಂದ ಜನಪ್ರಿಯತೆ ಕಳೆದುಕೊಂಡು ರಾಸ್ ಪೆರೋ ಚುನಾವಣೆಯಿಂದ ಹಿಂದೆ ಸರಿದು, ಅಲ್ಲಿ ಇಲ್ಲಿ ಭಾಷಣ ಮಾಡುತ್ತ ಅಭ್ಯರ್ಥಿಗಳನ್ನು ಟೀಕಿಸುತ್ತ ಮುಂದಿನ ಚುನಾವಣೆಗೆ ತಯಾರಾಗತೊಡಗಿದನು.

ಕ್ಲಿನ್‌ಟನ್ ಪಕ್ಷದ ನಾಮಕರಣ ಪಡೆದ ನಂತರ ವಿಳಂಬಿಸದೆ ಚುನಾವಣಾ ಪ್ರಚಾರವನ್ನು ಪ್ರೇಕ್ಷಣೀಯವಾಗಿ ದೇಶದಾದ್ಯಂತ ಬಸ್ ಪ್ರಯಾಣದ ಮೂಲಕ ಪ್ರಾರಂಭಿಸಿದನು. ಸಮಾವೇಶದಲ್ಲಿ ಪಡೆದ ಹುರುಪು ಹುಮ್ಮಸ್ಸುಗಳನ್ನು ಚುನಾವಣೆ ಮುಗಿಯುವವರೆಗೂ ಅದೇ ಮಟ್ಟದಲ್ಲಿ ಮುಂದುವರಿಸಿಕೊಂಡುಹೋದನು. ಅವನ ಭಾಷಣಗಳು ಮುಖ್ಯವಾಗಿ ಆಗ ಬೇಕಾಗಿರುವ ಬದಲಾವಣೆಗಳು ಮತ್ತು ಸ್ಥಗಿತಗೊಂಡಿರುವ ಆರ್ಥಿಕ ವ್ಯವಸ್ಥೆಯನ್ನು ಕುರಿತದ್ದಾಗಿರುತ್ತಿದ್ದವು. ೧೯೮೦ರ ಚುನಾವಣೆಯಲ್ಲಿ ಪಾಠ ಕಲಿತ ಡೆಮೊಕ್ರಾಟರು ಆರ್ಥಿಕ ಸ್ಥಿಗತಿಗಳ ಮೇಲೆ ಪ್ರಚಾರ ಕೇಂದ್ರೀಕರಿಸಿದನು. ಬುಷ್‌ನ ಚುನಾವಣಾ ಪ್ರಚಾರಕ್ಕೆ ಒಂದು ನಿರ್ದಿಷ್ಟ ದಿಕ್ಕು ಇರಲಿಲ್ಲ. ಅವನು ತನ್ನ ಭಾಷಣಗಳಲ್ಲಿ ರಾಷ್ಟ್ರದ ಸಮಸ್ಯೆಗಳನ್ನು ಚರ್ಚಿಸದೆ ಕ್ಲಿನ್‌ಟನ್‌ನ ಚಾರಿತ್ರ್ಯವನ್ನು ಕುರಿತು ಕಟುವಾದ ಮಾತನಾಡತೊಡಗಿದನು. ತನಗೆ ವಿದೇಶಾಂಗ ವ್ಯವಹಾರಗಳಲ್ಲಿರುವ ಅನುಭವವನ್ನು ಮತ್ತೆ ಮತ್ತೆ ಹೇಳಿ ಅದು ತನಗೆ ರಾಷ್ಟ್ರದ ನಾಯಕನಾಗಲು ಅರ್ಹತೆ ಗಳಿಸಿಕೊಟ್ಟಿದೆ, ರಾಷ್ಟ್ರದ ಆರ್ಥಿಕ ಅವನತಿಗೆ ಕಾಂಗ್ರೆಸ್‌ನ ಬಿಗಿಮುಷ್ಟಿಯೇ ಕಾರಣ ಎಂದು ದೂರಿದನು. ರಷ್ಯಾ ಮಾರಕ ಅಣ್ವಸ್ತ್ರಗಳನ್ನು ಕಡಿಮೆ ಮಾಡಿದ್ದು ತನ್ನಿಂದಾಗಿ ಎಂದು ಹೇಳಿ, ಅಮೆರಿಕದ ಮಕ್ಕಳು ಅಣುಬಾಂಬಿನ ಭಯವಿಲ್ಲದೆ ನಿದ್ರಿಸಬಹುದು ಎಂದು ಇಂಥ ಸಾಧನೆಗಳನ್ನು ಹೇಳಿಕೊಂಡನೆ ಹೊರತು ಅವನತಿಗೊಳ್ಳುತ್ತಿದ್ದ ರಾಷ್ಟ್ರದ ಆರ್ಥಿಕ ಸ್ಥಿತಿಯ ಬಗ್ಗೆ ಮಾತನಾಡುತ್ತಿರಲಿಲ್ಲ. ಚುನಾವಣೆಯ ಪ್ರಚಾರ ಅರ್ಧದಷ್ಟು ಮುಗಿದ ಮೇಲೆ ರಾಸ್ ಪೆರೋ ತಾನೂ ಚುನಾವಣೆಯಲ್ಲಿ ಭಾಗವಹಿಸುವುದಾಗಿ ಹೇಳಿಕೆ ನೀಡಿ ತಾನು ಆಯ್ದ ಉಪಾಧ್ಯಕ್ಷನನ್ನು ಪರಿಚಯಿಸಿದನು. ಆತ ವಿಯಟ್‌ನಾಮ್ ಯುದ್ಧದಲ್ಲಿ ಪ್ರಶಸ್ತಿ ವಿಜೇತನಾದ ಜೇಮ್ಸ್

ಸ್ಟಾಕ್‌ಡೇಲ್ (James Stockdale) ಎಂಬಾತ. ಈ ಮೂವರು ಅಭ್ಯರ್ಥಿಗಳು ದೂರದರ್ಶನದ ಚರ್ಚೆಯಲ್ಲಿ ಭಾಗವಹಿಸಿದಾಗ ಆ ಚರ್ಚಾ ಸರಣಿಯ ವ್ಯವಸ್ಥೆ ಕ್ಲಿನ್‌ಟನ್‌ಗೆ ಅನುಕೂಲಕರವಾಗಿತ್ತು. ವಿಶಿಷ್ಟವಾಗಿ ಪತ್ರಕರ್ತರಲ್ಲದೆ ಸಭಾಸದರು ಪ್ರಶ್ನೆ ಕೇಳುವವರಾಗಿದ್ದರೆ ಕ್ಲಿನ್‌ಟನ್ ಅವರೊಡನೆ ಅನೌಪಚಾರಿಕವಾಗಿ ಮಾತನಾಡುವ ವಾಕ್‌ಚಾತುರ್ಯ ಪಡೆದಿದ್ದನು. ಚುನಾವಣಾ ಪ್ರಚಾರದ ಸಮಯದಲ್ಲಿ ಬುಷ್‌ನ ಜನಪ್ರಿಯತೆ ಅಭಿಮತ ಗಣತಿಯ ಪ್ರಕಾರ ಶೇಕಡಾ ೩೮ರಷ್ಟು ಇದ್ದು ನಂತರ ಚುನಾವಣೆಯಲ್ಲಿ ಬುಷ್ ಪಡೆದ ಸಾರ್ವಜನಿಕ ಮತಗಳ ಸಂಖ್ಯಾಸೂಚಿಯಾಗಿತ್ತು. ಆಶ್ಚರ್ಯವೆಂದರೆ ೧೯೯೨ರ ಚುನಾವಣೆಯಲ್ಲಿ ನೋಂದಾಯಿಸಿದ ಮತದಾರರು (registered voters) ಈಚಿನ ಯಾವ ಚುನಾವಣೆಲ್ಲಿರದಷ್ಟು ಅಧಿಕ ಸಂಖ್ಯೆಯಲ್ಲಿದ್ದರು. ಇದಕ್ಕೆ ಕಾರಣ ಜೆಸ್ಸೀ ಜಾಕ್‌ಸನ್ ಅಲ್ಪಸಂಖ್ಯಾತರನ್ನು ನೋಂದಣಿ ಮಾಡಿಸುವಂತೆ ಒತ್ತಾಯಪಡಿಸಿದ ಚಳುವಳಿ. ಅಲ್ಲದೆ ಅಲ್ಪಸಂಖ್ಯಾತ ಯುವಕಯುವತಿಯರ ಸಂಸ್ಕೃತಿಯ 'ಧ್ವನಿ'ಯಾದ ಎಂ.ಟಿ.ವಿ. ದೂರದರ್ಶನ (Music Tele Vision) ಚುನಾವಣಾ ಪ್ರಚಾರದ ಅಂಗವಾಗಿ 'Rock the Vote' ಎಂಬ ಹಾಡನ್ನು ಅರ್ಥಪೂರ್ಣವಾಗಿ ಪ್ರಸಾರ ಮಾಡಿತು.

ಪ್ರಚಾರದ ಕಡೆಯ ದಿನಗಳಲ್ಲಿ ಅಧ್ಯಕ್ಷ ಬುಷ್ ಜನಪ್ರಿಯತೆಯಲ್ಲಿ (ಅಭಿಪ್ರಾಯ ಗಣತಿಯ ಪ್ರಕಾರ) ಹಿಂದೆ ಬೀಳತೊಡಗಿದನು. ಆದರೂ ಸೋಲನ್ನೊಪ್ಪಿಕೊಳ್ಳದೆ ತನ್ನ ಭಾಷಣಗಳಲ್ಲಿ ತಾನು ಹ್ಯಾರಿ ಟ್ರೂಮನ್‌ನಂತೆ ಜಯಗಳಿಸುತ್ತೇನೆ ಎಂಬ ಭರವಸೆ ಕೊಡುತ್ತಿದ್ದನು. ಚುನಾವಣೆ ಹತ್ತಿರವಾದಂತೆ ಇರಾನ್-ಕಾಂಟ್ರಾ ಹಗರಣದ ತನಿಖೆ ನಡೆಸಿದ ವಿಶಿಷ್ಟ ನ್ಯಾಯಾಧೀಶ ಪ್ರಚುರಪಡಿಸಿದ ವಿಷಯ: ಇರಾನ್ ವಶದಲ್ಲಿದ್ದ ಅಮೆರಿಕದ ಒತ್ತೆಯಾಳುಗಳನ್ನು ಬಿಡಿಸಿಕೊಳ್ಳುವ ಮಾತುಕತೆಗಳು ನಡೆಯುತ್ತಿರುವಾಗ ದಕ್ಷಿಣ ಅಮೆರಿಕದ ಕಾಂಟ್ರಾಗಳೊಡನೆ ಶಸ್ತ್ರಾಸ್ತ್ರ ವಿನಿಮಯ ಮಾಡಿಕೊಂಡ ಗುಪ್ತ ಸಂಧಾನಗಳಲ್ಲಿ ಆಗ ಉಪಾಧ್ಯಕ್ಷನಾಗಿದ್ದ ಬುಷ್ ಹಾಜರಿದ್ದನೆಂದು ಸಾಬೀತಾಗಿದೆ ಎಂಬ ವರದಿ. ಈ ಘಟನೆಯಿಂದ ಬುಷ್‌ಗೆ ತೊಂದರೆಯುಂಟಾದರೂ ಮತ ನೀಡಿದವರ ಅಭಿಮತ ಗಣತಿಯ (exit polls) ಪ್ರಕಾರ ಅವನು ಸೋತಿದ್ದು ರಾಷ್ಟ್ರದ ಆರ್ಥಿಕ ಸ್ಥಿತಿ ಅವನತಿಗೊಳ್ಳುತ್ತಿದ್ದು, ಅದನ್ನು ತಡೆಯುವ ಸಾಮರ್ಥ್ಯವನ್ನು ಜನರು ಅವನಲ್ಲಿ ಕಾಣದೆ ಹೋದುದು ಅವನ ಸೋಲಿಗೆ ಕಾರಣವಾಯಿತು. ಬಿಲ್ ಕ್ಲಿನ್‌ಟನ್ ೩೭೦ ಎಲೆಕ್ಟರಲ್ ಮತಗಳನ್ನು ಪಡೆದು ಜಯಪ್ರದನಾದನು. ಅವನಿಗೆ ದೊರೆತ ಜನಪ್ರಿಯ (popular) ಮತಗಳು ಶೇಕಡಾ ೪೩ರಷ್ಟು ಮಾತ್ರ. ಮಹಿಳೆಯರು ಮತ್ತು ಅಲ್ಪಸಂಖ್ಯಾತರು ಅಧಿಕಸಂಖ್ಯೆಯಲ್ಲಿ ಕ್ಲಿನ್‌ಟನ್‌ಗೆ ಮತ ನೀಡಿದ್ದುದರಿಂದ ಚುನಾವಣೆ ಅವನಿಗೆ ಒಲಿಯಿತು. ದಕ್ಷಿಣ ರಾಜ್ಯಗಳಲ್ಲಿ ಕೂಡ ರಿಪಬ್ಲಿಕನ್ನರ ಕೌಶಲ್ಯ (strategy) ಯಶಸ್ವಿಯಾಗಲಿಲ್ಲ. ಅವುಗಳೆಲ್ಲ ಕ್ಲಿನ್‌ಟನ್‌ನನ್ನು ಬೆಂಬಲಿಸಿದ್ದವು.

ರಾಸ್ ಪೆರೋಗೆ (Ross Pero) ಒಂದೇ ಒಂದು ಎಲೆಕ್ಟೋರಲ್ ಮತ ದೊರೆಯದೆ ಹೋದರೂ ಸಹ ಅವನ ಚುನಾವಣಾ ಸ್ಪರ್ಧೆ ಮೂರನೆಯ ಪಕ್ಷದ ಯಾವ ಅಭ್ಯರ್ಥಿಯೂ ಮುಟ್ಟಲಾರದ ಗುರಿಯನ್ನು ಸಾಧಿಸಿತ್ತು. ರಾಷ್ಟ್ರದ ಒಟ್ಟು ಜನಪ್ರಿಯ ಮತಗಳಲ್ಲಿ ಶೇಕಡಾ ೨೦ ಭಾಗ ಮತ ಪಡೆದು ಪೆರೋ ದಾಖಲೆ ಸ್ಥಾಪಿಸಿದನು. ಚುನಾವಣೆಯ ನಂತರ ಪೆರೋ ಹೊಸ ರಾಜಕೀಯ ಪಕ್ಷ 'United We Stand' ಎಂಬುದನ್ನು ಸ್ಥಾಪಿಸಿದನು. ಬುಷ್ ಅಧಿಕಾರ ಕಳೆದುಕೊಂಡು ತನ್ನ ರಾಜಕೀಯ ವೃತ್ತಿಜೀವನದಿಂದ ನಿವೃತ್ತನಾದನು. ಅಮೆರಿಕದ ದಿಕ್ಕು ಬದಲಾಯಿಸುವ ಅವಕಾಶ ಕ್ಲಿನ್‌ಟನ್‌ಗೆ ದೊರೆಯಿತು. ಮುಂದಿನ ಘಟನೆಗಳು ಬುಷ್ ಮತ್ತು ಕ್ಲಿನ್‌ಟನ್‌ರ ನಡುವಣ ವ್ಯತ್ಯಾಸಗಳನ್ನು – ಯಾರು ಏನು ಮಾಡಿದರು, ಏನು ಗೆದ್ದರು, ಏನು ಕಳೆದುಕೊಂಡರು – ಎನ್ನುವುದನ್ನು ಸ್ಪಷ್ಟಪಡಿಸುತ್ತವೆ. ಜನಸಾಮಾನ್ಯರು ಅವಲೋಕಿಸಿದಂತೆ 'ಬುಷ್ ಸೋತರೂ ಗೆದ್ದ, ಕ್ಲಿನ್‌ಟನ್ ಗೆದ್ದರೂ ಸೋತ' ಅದು ಹೇಗೆ ಎಂದು ಪ್ರಶ್ನಿಸಿದರೆ ಅವರು ಕೊಡಬಹುದಾದ ಉತ್ತರ ಹೀಗಿರಬಹುದು: 'ಬುಷ್ ಅಧಿಕಾರ ಕಳೆದುಕೊಂಡ, ಕ್ಲಿನ್‌ಟನ್ ಮಾನ ಮರ್ಯಾದೆ ಕಳೆದುಕೊಂಡ!'

ಕ್ಲಿನ್‌ಟನ್ ನಡೆದು ಬಂದ ದಾರಿ

ಬಿಲ್ ವಿಲಿಯಂ ಜಫರ್‌ಸನ್ ಕ್ಲಿನ್‌ಟನ್ ಅಮೆರಿಕದ ೪೨ನೆಯ ಅಧ್ಯಕ್ಷ. ಅಮೆರಿಕದ ಹೆಸರುಗಳ ಬಗ್ಗೆ ನಾಲ್ಕು ಮಾತು ಹೇಳಿದರೆ ಅದು ಅಪ್ರಾಪ್ತವಾಗಲಾರದು. ಎಲ್ಲ ಸಂಸ್ಕೃತಿಗಳಲ್ಲೂ ಹೆಸರು 'ಮೋಟಕು' ಮಾಡುವುದು ಪರಂಪರಾನುಗತವಾಗಿ ಕಂಡುಬರುತ್ತದೆ. ಕನ್ನಡವಲ್ಲಿ ವೆಂಕಟೇಶ್ವರ 'ವೆಂಕ'ನಾಗುತ್ತಾನೆ, ನಾರಾಯಣ 'ನಾಣಿ'ಯಾಗುತ್ತಾನೆ, ಶ್ರೀನಿವಾಸ 'ಸೀನು'ವಾಗುತ್ತಾನೆ. ಕೆಲವು ಹೆಸರುಗಳ ಉಚ್ಚಾರಣೆ ಕಷ್ಟವಾದರೆ ಅವು ಅಪಭ್ರಂಶಗೊಳ್ಳುತ್ತವೆ: ಮಹಾದೇವ-ಮಾದಪ್ಪ, ಅಹೋಬಲ-ಓಬಯ್ಯ, ಸುಬ್ರಹ್ಮಣ್ಯ-ಸುಬ್ಬಣ್ಣ ಇತ್ಯಾದಿ. ಹೆಸರು ಮೊಟಕುಗೊಳಿಸುವ ಸಂಪ್ರದಾಯ ಅಮೆರಿಕದಲ್ಲೂ ಇದೆ. ಇದು ಎಲ್ಲೆಡೆಯಲ್ಲಿರುವಂತೆ ತರ್ಕಬದ್ಧವಾಗಿ, ವ್ಯಾಕರಣಬದ್ಧವಾಗಿರುವುದಿಲ್ಲ. ಆದ್ದರಿಂದ ವಿಲಿಯಂ ಬಿಲ್ ಆಗುತ್ತಾನೆ, ರೆಚರ್ಡ್ ಡಿಕ್ ಆಗುತ್ತಾನೆ, ರಾಬರ್ಟ್ ಬಾಬ್ ಆಗುತ್ತಾನೆ. ಬಿಲ್ ಕ್ಲಿನ್‌ಟನ್ ಹುಟ್ಟಿದ್ದು ೧೯೪೬ರ ಆಗಸ್ಟ್ ೧೯ರಂದು. ಆರ್ಕನ್‌ಸಾ ರಾಜ್ಯದ ಹೋಪ್ ಎಂಬ ಊರಲ್ಲಿ. ವಿಲಿಯಂ ಬ್ಲೈತ್ (William Blythe) ಮತ್ತು ವರ್ಜೀನಿಯಾ ಕ್ಯಾಸಿಡಿ ಅವನ ತಂದೆ ತಾಯಿಯರು. ವಿಲಿಯಂ ಬ್ಲೈತ್ ಮೋಟಾರ್ ಅಪಘಾತದಲ್ಲಿ ಮಗ ಹುಟ್ಟುವ ಮುಂಚೆಯೇ ಮರಣಹೊಂದಿದನು. ವಿಧವೆ ತಾಯಿ ರಾಜರ್ ಕ್ಲಿನ್‌ಟನ್ ಎಂಬುವನನ್ನು ಮದುವೆಯಾದಳು. ಬಿಲ್ ಕ್ಲಿನ್‌ಟನ್‌ನ ಮೊದಲನೆಯ ಹೆಸರು ವಿಲಿಯಂ ಜೆಫರ್ಸನ್ ಬ್ಲೈತ್. ಅವನು ತನ್ನ ೧೬ನೆಯ ವಯಸ್ಸಿನಲ್ಲಿ ಹೆಸರನ್ನು ಬಿಲ್ ಕ್ಲಿನ್‌ಟನ್ ಎಂದು ಬದಲಾಯಿಸಿಕೊಂಡನು.

೧೯೬೪ರಲ್ಲಿ ಕ್ಲಿನ್‌ಟನ್ ಜಾರ್ಜ್ ಟೌನ್ ವಿಶ್ವವಿದ್ಯಾನಿಲಯದಲ್ಲಿ ಪದವೀಧರನಾಗಿ, ನಂತರ ರ್ಹೋಡ್ಸ್ ವಿದ್ಯಾರ್ಥಿಯಾಗಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿದ್ದನು. ೧೯೭೩ರಲ್ಲಿ ಯೇಲ್ ಕಾನೂನು ವಿಶ್ವವಿದ್ಯಾನಿಲಯದಿಂದ ನ್ಯಾಯಶಾಸ್ತ್ರದ ಪದವಿ ಗಳಿಸಿದನು. ೧೯೭೨ರಲ್ಲಿ ಜಾರ್ಜ್ ಮೆಕ್‌ಗವರ್ನ್ (George McGovern) ಅಧ್ಯಕ್ಷ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಿದನು. ೧೯೭೩ರಿಂದ ೧೯೭೬ರವರೆಗೆ ಆರ್ಕನ್‌ಸಾ ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕನಾಗಿದ್ದನು. ೧೯೭೫ರಲ್ಲಿ ಕ್ಲಿನ್‌ಟನ್ ಹಿಲರಿ ರಾಡಮ್‌ಳನ್ನು ಮದುವೆಯಾದನು. ಮುಂದೆ ೧೯೭೮ರಲ್ಲಿ ಬಿಲ್ ಕ್ಲಿನ್‌ಟನ್ ಆರ್ಕನ್‌ಸಾ ರಾಜ್ಯದ ಗವರ್ನರ್ ಆಗಿ ಆಯ್ಕೆಯಾದನು. ಈತ ಅಮೆರಿಕದಲ್ಲಿ ಅತಿಚಿಕ್ಕ ವಯಸ್ಸಿನಲ್ಲಿ ಗವರ್ನರ್ ಆಗಿ ಆಯ್ಕೆಯಾದವನು. ೧೯೮೦ರ ಮರುಚುನಾವಣೆಯಲ್ಲಿ ಸೋತುಹೋಗಿ, ಪುನಃ ೧೯೮೨, ೧೯೮೪, ೧೯೮೬ ಮತ್ತು ೧೯೮೮ರಲ್ಲಿ ಗವರ್ನರ್ ಸ್ಥಾನಕ್ಕೆ ಆಯ್ಕೆಯಾದನು. ೧೯೯೨ರ ಚುನಾವಣೆಯಲ್ಲಿ ತನ್ನ ಎದುರಾಳಿ ತನ್ನ ಚಾರಿತ್ರ್ಯವಧೆ ಮಾಡಿದರೂ ಸಹ ಡೆಮೊಕ್ರಾಟಿಕ್ ಪಕ್ಷದ ನಾಯಕತ್ವ ವಹಿಸಿಕೊಂಡು ಪಕ್ಷವನ್ನು ಉದಾರ ನಿಲುವಿನಿಂದ (liberal stance) ಮಧ್ಯವರ್ತಿ ನಿಲುವು ಅಳವಡಿಸ್ಕೊಳ್ಳುವಂತೆ ಮಾಡಿ ಜಾರ್ಜ್ ಬುಷ್‌ನನ್ನು ಸೋಲಿಸಿ ಅಧ್ಯಕ್ಷನಾಗಿ ಅಧಿಕಾರ ವಹಿಸಿಕೊಂಡನು. ಹೀಗೆ ಕ್ಲಿನ್‌ಟನ್ ನಡೆದುಬಂದ ದಾರಿ ಅವನನ್ನು ಬಾಲ್ಯದ ಕಷ್ಟ ಕಾರ್ಪಣ್ಯಗಳು, ಮಲತಂದೆಯ ಕುಡಿತ ಬಡಿತದ (abusive) ದಿನಗಳನ್ನು ಕಳೆದು ಆಕ್ಸ್‌ಫರ್ಡ್ ಮತ್ತು ಯೇಲ್ ವಿಶ್ವವಿದ್ಯಾ ನಿಲಯಗಳ ಮೆಟ್ಟಿಲುಗಳನ್ನೇರಿ, ರಾಜಕೀಯ ಗೋಜಲಿನ ಸುತ್ತುಬಳಸಿನ ಹಾದಿಗಳನ್ನು ಸವೆದು ಗವರ್ನರ್ ಹುದ್ದೆಯನ್ನು ತಲುಪಿತು. ನಂತರ ರಾಷ್ಟ್ರಮಟ್ಟದಲ್ಲಿ ಅಧ್ಯಕ್ಷ ಚುನಾವಣೆ ಯಲ್ಲಿ ಸ್ಪರ್ಧಿಸಿ, ನಿರಂತರವಾದ ಪ್ರಚಾರ ಮಾಡಿ ಜಯಶೀಲನಾಗಿ ಶ್ವೇತಭವನವನ್ನು ತಲುಪಿದನು.

ಅಧ್ಯಕ್ಷನಾಗಿ ಕ್ಲಿನ್‌ಟನ್ ಮಧ್ಯಮಪರ ಉದಾರನೀತಿಯ (moderately liberal) ತತ್ವವನ್ನು ಪಾಲಿಸಿಕೊಂಡು ಬಂದನು. ಚುನಾವಣಾ ಪ್ರಚಾರದಲ್ಲಿ ಮಧ್ಯಮವರ್ಗದವರಿಗೆ ತೆರಿಗೆ ಕಡಿಮೆ ಮಾಡುವುದಾಗಿ ಮಾತುಕೊಟ್ಟಿದ್ದನು; ಅಲ್ಲದೆ ಹೊಸ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತಂದು ಹಣವಂತರಿಗೆ ಹೆಚ್ಚಿನ ತೆರಿಗೆ ಹಾಕುವಂತೆ ಮಾಡಿದನು. ಅವನ ಸಾಮಾಜಿಕ ಕಾರ್ಯಕ್ರಮ ಹೊಸ ಕ್ಷೇತ್ರಗಳ (New Frontiers) ಕಾರ್ಯಕ್ರಮ ಮತ್ತು 'ಮಹಾಸಮಾಜ' (Great Society) ಕಾರ್ಯಕ್ರಮಗಳು ಸಮ್ಮಿಳನಗೊಂಡತ್ತಿದ್ದವು. ಎಫ್.ಡಿ.ಆರ್ ನ (F.D.R) 'ಹೊಸ ಹಂಚಿಕೆ' ಜಾರಿಗೆ ಬಂದಂದಿನಿಂದ ಹೊಸದಾಗಿ ಚುನಾಯಿತರಾದ ಅಧ್ಯಕ್ಷರನ್ನು ಮೊದಲ ನೂರು ದಿನಗಳಲ್ಲಿ ಅವರ ಕಾರ್ಯಾಚರಣೆ ಮತ್ತು ಸಾಧನೆಗಳನ್ನು ಪತ್ರಕರ್ತರು ಮತ್ತು ಇತರರು ಅವಲೋಕಿಸಿ ತೀರ್ಪು ನೀಡುವ ರಾಜಕೀಯ ಸಂಪ್ರದಾಯ ಬೆಳೆದುಬಂದಿದೆ. ಬಿಲ್ ಕ್ಲಿನ್‌ಟನ್ ಪತ್ರಕರ್ತರನ್ನು ಆಹ್ವಾನಿಸಿ ತಾನು ಅಧಿಕಾರ ವಹಿಸಿಕೊಂಡ ಮೊದಲ ದಿನದಿಂದಲೇ ಕಾರ್ಯಾಚರಣೆ ಭರದಿಂದ

ಪ್ರಾರಂಭಿಸುವುದರಿಂದ ಮೊದಲ ನೂರು ದಿನಗಳು 'ಆಸ್ಫೋಟನಕಾರಿ' ದಿನಗಳಾಗಿರುತ್ತವೆ ಎಂದು ಹೇಳಿಕೆ ನೀಡಿದನು. ರೊನಾಲ್ಡ್ ರೇಗನ್‌ನ ಮೊದಲ ಮೂರು ತಿಂಗಳ ಯಶಸ್ಸು ಕ್ಲಿನ್‌ಟನ್‌ಗೆ ಮಾದರಿಯಾಗಿತ್ತು. ಚುನಾವಣಾ ಪ್ರಚಾರದಲ್ಲಿ ಕೊಟ್ಟ ವಾಗ್ದಾನಗಳು (promises) ಮತ್ತು ಮೊದಲೇ ಪ್ರಕಟಗೊಳಿಸಿದ ಗೊತ್ತು ಗುರಿಗಳು ಮೌಲ್ಯಮಾಪನದ ಅಂಶಗಳಾಗಿದ್ದವು. ಪತ್ರಕರ್ತರು ಮತ್ತು ಸಾರ್ವಜನಿಕರು ಬಿಲ್ ಕ್ಲಿನ್‌ಟನ್‌ನ ಕಾರ್ಯದಕ್ಷತೆಯನ್ನು ಮೌಲ್ಯಮಾಪನ ಮಾಡಲು ಕಾತುರರಾಗಿದ್ದರು.

ಈ ಮೌಲ್ಯದ ವರ್ಗೀಕರಣದಲ್ಲಿ (grading) ವ್ಯತ್ಯಾಸಗಳು ಕಂಡುಬಂದವು. ರಾಷ್ಟ್ರೀಯ ದಿನಪತ್ರಿಕೆ 'USA Today' ಕ್ಲಿನ್‌ಟನ್‌ನ ಕಾರ್ಯನಿರ್ವಹಣೆಗೆ ಸಿ (C) ಮೌಲ್ಯವನ್ನು ಕೊಟ್ಟಿತ್ತು. ಗ್ಯಾಲಪ್ ಪೋಲ್ (Gallop Poll) ಸಂಸ್ಥೆಯವರು ನಡೆಸಿದ ಅಭಿಮತ ಗಣನೆಯ ಪ್ರಕಾರ ಶೇಕಡಾ ೫೫ರಷ್ಟು ಮತದಾರರು ಕ್ಲಿನ್‌ಟನ್ ಕಾರ್ಯನಿರ್ವಹಣೆ ಸಮರ್ಪಕವಾಗಿದೆ ಎಂದು ಒಪ್ಪಿದ್ದರು. ಹೀಗೆ ಈ ಎರಡು ಮೌಲ್ಯ ಮಾಪನಗಳಲ್ಲೇ ವ್ಯತ್ಯಾಸ ಕಂಡುಬಂದಿತ್ತು.

ಕ್ಲಿಂಟನ್ ಅಧಿಕಾರದ ಆರಂಭೋತ್ಸವವನ್ನು ಜಿಮ್ಮಿ ಕಾರ್ಟರ್‌ನ ಮಾದರಿಯಲ್ಲಿ ಶ್ವೇತಭವನ ಅಧಿಕಾರ ವಹಿಸಿಕೊಳ್ಳುವ ತಾನು ಸಾಮಾನ್ಯ ರೈತನ ಮತ್ತು ಕಾರ್ಮಿಕನ ಪ್ರತಿನಿಧಿ ಎಂಬ ಭಾವನೆ ಜನರ ಮನಸ್ಸಿನಲ್ಲಿ ಬೆಳೆಯುವಂತೆ ಮಾಡಿದನು. ರೈತರನ್ನು ಮತ್ತು ಕಾರ್ಮಿಕರನ್ನು ಆಕರ್ಷಿಸಲು ಆ್ಯಂಡ್ರೂ ಜಾಕ್‌ಸನ್ ಅನುಸರಿಸಿದ ವಿಧಾನಗಳನ್ನು ಕ್ಲಿನ್‌ಟನ್ ತನ್ನ ಜನಪ್ರಿಯತೆಯನ್ನು ಹೆಚ್ಚಿಸಿಕೊಳ್ಳಲು ಉಪಯೋಗಿಸಿಕೊಂಡನು. ಪ್ರಮಾಣವಚನ ಸ್ವೀಕರಿಸಿದ ಮಾರನೆಯ ದಿನ ಬೆಳಿಗ್ಗೆ ಶ್ವೇತಭವನವನ್ನು ಸಾರ್ವಜನಿಕರಿಗೆ ತೆರೆದು, ದೊಡ್ಡ ಸಮಾರಂಭವೊಂದನ್ನು ಏರ್ಪಡಿಸಿ ಜನರು ಅಧ್ಯಕ್ಷ ಮತ್ತು ರಾಷ್ಟ್ರದ 'ಮೊದಲನೆಯ ಮಹಿಳೆ'ಯನ್ನು (First Lady) ನೋಡುವ, ಮಾತನಾಡಿಸುವ ಅವಕಾಶ ಕಲ್ಪಿಸಿಕೊಟ್ಟಿದ್ದನು. ತನ್ನ ಆಡಳಿತದ ಮೊದಲ ದಿನಗಳಲ್ಲಿ ಅವನು ಚುನಾವಣಾ ಪ್ರಚಾರದಲ್ಲಿ ಹೇಳಿದಂತೆ ಆರ್ಥಿಕ ಅಭಿವೃದ್ಧಿಗೆ ಗಮನ ಕೊಡದೆ ಅಧ್ಯಕ್ಷನ ಹಕ್ಕುಗಳನ್ನು ಚಲಾಯಿಸಿ ರಕ್ಷಣಾದಳಗಳಲ್ಲಿ ಜಾರಿಯಲ್ಲಿದ್ದ ಸಲಿಂಗಪ್ರೇಮಿಗಳ (homosexuals) ಮೇಲಿನ ನಿಷೇಧಾಜ್ಞೆಯನ್ನು ರದ್ದುಗೊಳಿಸಿದನು. ಆನಂತರ ಅವನು ಹೊರಡಿಸಿದ ಆಜ್ಞೆಯನ್ನು ರಕ್ಷಣಾಪಡೆಗಳ ದಂಡನಾಯಕರು, ಕಾಂಗ್ರೆಸ್ ಮತ್ತು ಇತರ ಸಂಸ್ಥೆಗಳು ವಿರೋಧಿಸಿ, ಅದು ಪ್ರಸಂಗೋಚಿತವಾದುದೆ ಅಲ್ಲ ಎಂದು ಖಂಡಿಸಿದರು. ಇದರಿಂದಾಗಿ ತನ್ನ ಆಜ್ಞೆಯನ್ನು ತಿದ್ದಿ ತನ್ನ ವಿರೋಧಿಗಳಿಗೆ ಒಪ್ಪಿಗೆಯಾಗುವಂಥ ಒಂದು ಹೆಚ್ಚು ಕಸುವಿಲ್ಲದ ಆಜ್ಞೆಯನ್ನು ಹೊರಡಿಸಿನು. ಈ ತಿದ್ದುಪಡಿಯಾದ ಆಜ್ಞೆಯಂತೆ ರಕ್ಷಣಾ ಪಡೆಗಳಿಗೆ ನೋಂದಾಯಿಸುವವರ ಲೈಂಗಿಕ ಇಚ್ಛೆ ಅಥವಾ ಆಯ್ಕೆಯನ್ನು (sexual preference) ಕುರಿತು 'ಕೇಳಬಾರದು, ಹೇಳಬಾರದು ಮತ್ತು ತನಿಖೆ ಮಾಡಬಾರದು'

ಎನ್ನುವ ರಿವಾಜನ್ನು ಜಾರಿಗೆ ತಂದನು. ಇದರಿಂದಾಗಿ ಸಲಿಂಗಪ್ರೇಮಿಗಳಿಗೆ ರಕ್ಷಣಾದಳಗಳಿಗೆ ನೋಂದಾಣಿಕೆ ಮಾಡುವುದು ಸುಲಭವಾಯಿತು.

ತನ್ನ ವಿಶೇಷಾಧಿಕಾರವನ್ನು ಬಳಸಿ ಅಧ್ಯಕ್ಷ ಕ್ಲಿನ್‌ಟನ್ ಹಿಂದಿನ ಎಲ್ಲ ಆಡಳಿತಗಾರರು ಗರ್ಭಪಾತದ ಮೇಲೆ ವಿಧಿಸಿದ್ದ ನಿರ್ಬಂಧವನ್ನು ತೆಗೆದುಹಾಕಿದನು. ಫೆಡರಲ್ ಸರ್ಕಾರದ ಹಣಸಹಾಯದಿಂದ ನಡೆಯುತ್ತಿದ್ದ ಆಸ್ಪತ್ರೆಗಳಲ್ಲಿ ಗರ್ಭಿಣಿಯರಿಗೆ ಗರ್ಭಪಾತದ ಬಗ್ಗೆ ತಿಳುವಳಿಕೆ ಕೊಡುವುದರ ಮೇಲೆ ಜಾರಿಯಲ್ಲಿದ್ದ ನಿಷೇಧಾಜ್ಞೆಯನ್ನು ಕ್ಲಿನ್‌ಟನ್ ರದ್ದು ಗೊಳಿಸಿದನು. ಪ್ರಯೋಗಕ್ಕೆ ಭ್ರೂಣಗಳನ್ನು ಉಪಯೋಗಿಸುವುದು ಪುನಃ ಜಾರಿಗೆ ಬಂತು. ಆಹಾರ ಮತ್ತು ಔಷಧ ನಿರ್ವಹಣ ವಿಭಾಗಕ್ಕೆ ಫ್ರಾನ್ಸ್‌ನಲ್ಲಿ ಉಪಯೋಗಿಸುವ ಆರ್.ಯು. (RU) ೪೮೬ ಮಾತ್ರೆಗಳ ಮೇಲೆ ಪ್ರಯೋಗ ನಡೆಸುವಂತೆ ನಿರ್ದೇಶಿಸಿದನು.

ಕ್ಲಿನ್‌ಟನ್ ಆಡಳಿತ ಮಂಡಳಿಯಲ್ಲಿ ಯಾರು? ಏನು?

ಚುನಾವಣೆ ಪ್ರಚಾರ ಸಮಯದಲ್ಲಿ ತಾನು ಅಧ್ಯಕ್ಷನಾದರೆ ಅಮೆರಿಕನ್ ಪ್ರಜೆಗಳನ್ನು ಪ್ರತಿನಿಧಿಸುವ ಆಡಳಿತ ಮಂಡಳಿಯನ್ನು ರಚಿಸುತ್ತೇನೆ ಎಂದು ಕ್ಲಿನ್‌ಟನ್ ಮಾತು ಕೊಟ್ಟಿದ್ದನು. ಇದನ್ನು ಕೆಲವರು ಇವನು ವಿಶಿಷ್ಟ ಆಸಕ್ತಿಗಳನ್ನು ಪ್ರತಿನಿಧಿಸುವ ಹಲವು ಗುಂಪುಗಳ ಪ್ರಭಾವಕ್ಕೆ ಒಳಗಾಗುತ್ತಾನೆ ಎಂದು ಟೀಕಿಸಿದರು. ಆದಾಗ್ಯೂ ಕ್ಲಿನ್‌ಟನ್‌ನ ಆಡಳಿತ ಮಂಡಳಿಯಲ್ಲಿ ಹೆಂಗಸರಿಗೆ ಮತ್ತು ಅಲ್ಪಸಂಖ್ಯಾತರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟಿದ್ದನು. ಡೆಮೊಕ್ರಾಟಿಕ್ ಪಕ್ಷದ ಮುಖ್ಯಸ್ಥನಾಗಿದ್ದ ರಾನ್ ಬ್ರೌನ್ (Ron Brown) ವಾಣಿಜ್ಯ ಕಾರ್ಯದರ್ಶಿಯಾಗಿ, ವಸತಿ ನಿರ್ವಹಣೆ ಮತ್ತು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಯಾಗಿ ಹೆನ್ರಿ ಸಿಸ್‌ನೆರೊ (Henry Cisnero) ನೇಮಕಗೊಂಡರು. ಇದು ಸ್ಪಾನಿಷ್ ಅಮೆರಿಕನ್ನರನ್ನು ಒಲಿಸಿಕೊಳ್ಳಲು ಮಾಡಿದ ನೇಮಕ ಎಂಬ ಟೀಕೆಗೆ ಒಳಗಾದರೂ ಕ್ಲಿನ್‌ಟನ್‌ಗೆ ಈ ನೇಮಕವನ್ನು ಸಮರ್ಥಿಸಿಕೊಳ್ಳುವುದು ಕಷ್ಟವಾಗಲಿಲ್ಲ. ಅಟಾರ್ನಿ ಜನರಲ್ ಹುದ್ದೆಗೆ ಜನೆಟ್ ರೀನೊ (Janet Reno) ಎಂಬ ಮಹಿಳೆಯನ್ನು ನೇಮಕ ಮಾಡಿದನು. ಮಹಿಳೆಯೊಬ್ಬಳು ಈ ಹುದ್ದೆಗೆ ನೇಮಕಗೊಂಡಿದ್ದು ಇದೇ ಮೊದಲು. ಕ್ಲಿನ್‌ಟನ್‌ನ ಈ ನಿರ್ಧಾರ ಅವನನ್ನು ಅತಿ ಗೋಜಲು ಸಮಸ್ಯೆಗೆ ಸಿಕ್ಕಿಸಿತು. ಈ ಸ್ಥಾನಕ್ಕೆ ಅವನು ಮೊದಲು ಆಯ್ದಿದ್ದ ಜೋ ಬೆಯರ್ಡ್ (Zoe Baird) ಎಂಬ ಹೆಸರಾಂತ ಕಾರ್ಪೊರೇಟ್ ವಕೀಲಳನ್ನು ಆಯ್ಕೆ ಮಾಡುವ ಮುಂಚೆ ಅವಳ ಹಿನ್ನೆಲೆಯನ್ನು ಪರಿಶೀಲಿಸಿದಾಗ ಅವಳು ತನ್ನ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ಕಾನೂನು ಬಾಹಿರವಾಗಿ (illegal) ಅಮೆರಿಕದಲ್ಲಿ ಉಳಿದುಕೊಂಡಿದ್ದ ಅನ್ಯದೇಶೀಯಳನ್ನು ಕೆಲಸಕ್ಕೆ ಇಟ್ಟು ಕೊಂಡಿದ್ದು ಸಾಬೀತಾಗಿ ಅವಳು ತನ್ನ ಹೆಸರನ್ನು ಹಿಂತೆಗೆದುಕೊಂಡಳು. ಕ್ಲಿನ್‌ಟನ್ ಎರಡನೆಯ ನೇಮಕವೂ ಇದೇ ರೀತಿಯ ಕಷ್ಟಗಳಿಗೆ ಒಳಗಾಯಿತು. ಆದರೆ ಜನೆಟ್ ರೀನೊಳ ಬಗ್ಗೆ ಯಾವ ಅಪವಾದವೂ ಇರಲಿಲ್ಲವಾದುದರಿಂದ ಸೆನೆಟ್ ಒಪ್ಪಿಗೆ ನೀಡಿತು.

ಅಟಾರ್ನಿ ಜನರಲ್ ಆದ ಸ್ವಲ್ಪ ಕಾಲದಲ್ಲಿ ಅವಳು ತನ್ನ ಸಾಮರ್ಥ್ಯವನ್ನು ಪರೀಕ್ಷಿಸುವ ಸಂದರ್ಭ ಒದಗಿ ಬಂದಿತು. ಡೇವಿಡ್ ಕರೆಷ್ ಎನ್ನುವ ಪ್ರವಾದಿ ಟೆಕ್ಸಾಸ್ ರಾಜ್ಯದ ವೇಕೋ (Waco) ಎಂಬಲ್ಲಿ ಒಂದು ಮೂಲತತ್ವವಾದಿಗಳ (fundamentalists) ಪಂಥವನ್ನು ಸ್ಥಾಪಿಸಿ, ದುರ್ಗಮವಾದ ಕೋಟೆಯಂತೆ ಸುತ್ತುವರಿದ ಗೋಡೆಯ ಮೇಲೆ ಅಲ್ಲಲ್ಲಿ ರಚಿಸಿದ ವೀಕ್ಷಣ ಕೇಂದ್ರಗಳಿಂದ ಕೂಡಿದ್ದ ಕಟ್ಟಡದೊಳಗಿದ್ದನು. ಇದರ ಮಧ್ಯೆ ಡೇವಿಡ್ ಕರೆಷ್ ತನ್ನ ನಿಷ್ಠಾವಂತ ಅನುಯಾಯಿಗಳೊಡನೆ ವಾಸಿಸುತ್ತಿದ್ದನು. ಅವನಿಗೆ ಹಲವಾರು ಪತ್ನಿಯರು ಮತ್ತು ಮಕ್ಕಳಿದ್ದರು. ಅವನ ಪತ್ನಿಯರಲ್ಲಿ ಕೆಲವರು ತಪ್ಪಿಸಿಕೊಂಡು ಬಂದು ಅಲ್ಲಿ ನಡೆಯುತ್ತಿರುವ ವಿದ್ಯಮಾನಗಳ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ಒದಗಿಸಿ ದರು. ಅಲ್ಲಿನ ಬಹುತೇಕ ಭಕ್ತರು ತಮ್ಮ ಸ್ವಇಚ್ಛೆಯಿಂದ ಅಲ್ಲಿ ಜೀವಿಸುತ್ತಿಲ್ಲ; ಅವರನ್ನು ಬಲಾತ್ಕಾರದಿಂದ ಬಂಧಿಸಲಾಗಿದೆ ಎಂದೂ ಮತ್ತು ಆ ಕೋಟೆಯೊಳಗೆ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಕೂಡಿಸಿದ್ದಿರುವುದಾಗಿಯೂ ವರದಿ ಬಂದಿತು. ಹೀಗೆ ಶಸ್ತ್ರಾಸ್ತ್ರಗಳ ಸಂಗ್ರಹ ನ್ಯಾಯಬಾಹಿರವಾದುದು, ಆದ್ದರಿಂದ ಈ ಪಂಥದ ಚಟುವಟಿಕೆಗಳನ್ನು ಅವಲೋಕಿಸುವಂತೆ ಅಟಾರ್ನಿ ಜನರಲ್ ರೀನೊ ಸರ್ಕಾರದ ವಿಭಾಗವಾದ 'ಮದ್ಯ, ತಂಬಾಕು ಮತ್ತು ತುಪಾಕಿ' (fire arms) (Alcohol, Tobacco and Firearms) ಎಂಬ ಸಂಸ್ಥೆಗೆ ಆಜ್ಞಾಪಿಸಿದಳು. ATFಗೂ ಮತ್ತು ಡೇವಿಡ್ ಕರೆಷ್‌ನ ಪಂಥದವರಿಗೂ ಪರಸ್ಪರ ಘರ್ಷಣೆಯ ಸನ್ನಿವೇಶಗಳು ಹೀಗೆ ಪ್ರಾರಂಭವಾದವು. ರಾಷ್ಟ್ರೀಯ ರೈಫಲ್ ಸಂಘಕ್ಕೂ ಮತ್ತು ATFಗೂ ಲಾಗಾಯ್ತಿನಿಂದ ಜಿದ್ದು, ಅಪನಂಬಿಕೆಗಳಿದ್ದವು. ರಾಷ್ಟ್ರೀಯ ರೈಫಲ್ ಸಂಘ ATF ಅಮೆರಿಕದ ಪ್ರಜೆಗಳ ಸಂವಿಧಾನದ ಎರಡನೆಯ ತಿದ್ದುಪಡಿ ಕೊಟ್ಟಿರುವ ಹಕ್ಕನ್ನು (ಬಂದೂಕು ಮತ್ತು ಶಸ್ತ್ರಾಸ್ತ್ರಗಳನ್ನು ಹೊಂದಿರುವುದು ಅಮೆರಿಕನ್ನರ ಜನ್ಮಸಿದ್ಧ ಹಕ್ಕು) ದಮನ ಮಾಡುವ ಧ್ಯೇಯವುಳ್ಳ ಸಂಸ್ಥೆ ಎಂದು ATF ವಿರುದ್ಧ ರೈತರು ಮತ್ತು ಇತರ ಸಂಪ್ರದಾಯಸ್ಥ ಜನರನ್ನು ಎತ್ತಿಕಟ್ಟಿದರು. ಇದಕ್ಕೆ ಜನೆಟ್ ರೀನೊ ಫೆಡರಲ್ ಸರ್ಕಾರದ ಪ್ರತಿಕ್ರಿಯೆಯನ್ನು ಪ್ರಬಲವಾಗಿ ಪ್ರದರ್ಶಿಸಿದಳು. ಡೇವಿಡ್ ಕರೆಷ್‌ನ ಅನುಯಾಯಿಗಳು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುತ್ತಿದ್ದಾರೆ ಮತ್ತು ಒತ್ತೆಯಾಳು ಗಳನ್ನು (hostages) ಹಿಡಿದಿಟ್ಟಿದ್ದಾರೆ ಎನ್ನುವ ವರದಿಯನ್ನು ತನಿಖೆ ಮಾಡಲು ೧೯೯೩ರ ಫೆಬ್ರವರಿ ೨೮ರಂದು ಹೋದ ATF ಸಿಬ್ಬಂದಿಗಳ ಮೇಲೆ ಕರೆಷ್‌ನ ಭಕ್ತರು ಗುಂಡಿನ ಮಳೆಗರೆದು, ನಾಲ್ಕು ಜನ ATF ಏಜೆಂಟರನ್ನು ಕೊಂದು ಹಲವರನ್ನು ಗಾಯಗೊಳಿಸಿದರು. ಕರೆಷ್‌ನ ಇಬ್ಬರು ಭಕ್ತರು ಸತ್ತು ಅನೇಕರಿಗೆ ಗಾಯಗಳಾದವು. ಜನೆಟ್ ರೀನೊ ಖಂಡನೆಗಳಿಗೆ ಕಿವಿಗೊಡದೆ ಈ ಪಂಥದವರ ಮೇಲೆ ೧೯೯೩ರ ಏಪ್ರಿಲ್ ೧೯ರಂದು ಪೋಲಿಸ್ ಕಾರ್ಯಾಚರಣೆ ನಡೆಸಿದಳು. ಪಂಥದ ನಾಯಕ ಕರೆಷ್‌ನ ಆಜ್ಞೆಯಂತೆ ಭಕ್ತರು ತಮ್ಮ ವಸತಿಗಳಿಗೆ ತಾವೇ ಬೆಂಕಿ ಹಾಕಿದರು. ಅವರು ಹೊತ್ತಿಸಿದ ದಾವಾಗ್ನಿ ಡೇವಿಡ್ ಕರೆಷ್‌ನನ್ನು ಮತ್ತು ಅವನೊಂದಿಗೆ ೮೦ ಭಕ್ತರು, ೧೭ ಮಕ್ಕಳನ್ನು ಆಹುತಿ

ತೆಗೆದುಕೊಂಡಿತು. ಈ ಘಟನೆ ದುರಂತದಲ್ಲಿ ಪರ್ಯಾವಸಾನಗೊಂಡರೂ ಸಾರ್ವಜನಿಕರು ಸರ್ಕಾರಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಕ್ಲಿನ್‌ಟನ್ ಆಡಳಿತ ಮಂಡಳಿಯಲ್ಲಿ ಅಲ್ಪ ಸಂಖ್ಯಾತರ ಪ್ರಾತಿನಿಧ್ಯ ಹೆಚ್ಚಿಗಿದ್ದರೂ ವಾಷಿಂಗ್‌ಟನ್‌ನ ವಕೀಲರ ಮತ್ತು ರಾಜಕಾರಣಿಗಳ ಪ್ರಾಬಲ್ಯವೂ ಹೆಚ್ಚಾಗಿತ್ತು. ಟೆಕ್ಸಾಸ್ ರಾಜ್ಯದ ಸೆನೆಟರ್ ಆಗಿದ್ದ ಲಾಯ್ಡ್ ಬೆನ್‌ಟ್ಸನ್ ಖಜಾನೆ ಕಾರ್ಯದರ್ಶಿಯಾಗಿ, ಆಯವ್ಯಯ ನಿರ್ವಹಣೆ ಇಲಾಖೆಗೆ ಕಾಂಗ್ರೆಸ್ ಸದಸ್ಯ ಲಿಯಾನ್ ಪನೆಟ್ಟ, ರಕ್ಷಣಾ ಕಾರ್ಯದರ್ಶಿಯಾಗಿ ಲೆ ಆ್ಯಸ್ಪಿನ್ (Les Aspin), ಜಿಮ್ಮಿ ಕಾರ್ಟರ್‌ನ ಅಧ್ಯಕ್ಷತೆಯಲ್ಲಿ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ವಾರೆನ್ ಕ್ರಿಸ್ಟೋಫರ್‌ನನ್ನು ಪುನಃ ಅದೇ ಹುದ್ದೆಗೆ ಕ್ಲಿನ್‌ಟನ್ ನೇಮಿಸಿದನು. ಕೆಳವರ್ಗದ ಹುದ್ದೆಗಳಿಗೆ ನೇಮಕ ಮಾಡಲು ಕ್ಲಿನ್‌ಟನ್ ಬಹಳ ತಡಮಾಡಿದ ಕಾರಣಕ್ಕಾಗಿ ಅನೇಕರ ಟೀಕೆಗೆ ಒಳಗಾದನು.

ಹಿಲರಿ ರಾಡಂ ಕ್ಲಿನ್‌ಟನ್‌ಳ ಪಾತ್ರ

ಶ್ವೇತಭವನಕ್ಕೆ ಬರುವ ಮುಂಚೆಯೆ ಹಿಲರಿ ಕ್ಲಿನ್‌ಟನ್‌ಳು ಯಶಸ್ವಿ ವಕೀಲಳಾಗಿದ್ದಳು. ಅನೇಕ ಅಮೆರಿಕನ್ನರಿಗೆ ಅವಳು ರಾಷ್ಟ್ರದ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಸಕ್ರಿಯವಾಗಿ ಪಾತ್ರ ವಹಿಸುವ 'ಮೊದಲನೆಯ ಮಹಿಳೆ'ಯ ಸಂಕೇತವಾಗಿದ್ದಳು. ಅಧ್ಯಕ್ಷ ಕ್ಲಿನ್‌ಟನ್ ಸಂಪ್ರದಾಯವನ್ನು ಕಡೆಗಣಿಸಿ ಅವಳನ್ನು ರಾಷ್ಟ್ರೀಯ ಆರೋಗ್ಯ ಸುಧಾರಣಾ ಯೋಜನೆಯ ಮುಖ್ಯಸ್ಥಳನ್ನಾಗಿ ನೇಮಿಸಿದನು. ಶ್ವೇತಭವನದಲ್ಲಿ ಅವಳಿಗೆ ಒಂದು ಕಛೇರಿಯನ್ನು ತೆರೆಯಲಾಯಿತು. ಕ್ಲಿನ್‌ಟನ್ ತನ್ನ ಹೆಂಡತಿ ರಾಷ್ಟ್ರದ ಆರೋಗ್ಯ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವ ಸಾಮರ್ಥ್ಯ ಹೊಂದಿದ್ದಾಳೆಂದು ನಂಬಿದ್ದನು. ನ್ಯಾಯಬದ್ಧವಾಗಿ ಅಧ್ಯಕ್ಷ ತನ್ನ ಕುಟುಂಬದವರನ್ನು ಅಥವಾ ಹತ್ತಿರದ ನೆಂಟರನ್ನು ಅಧಿಕಾರಯುತವಾದ ಹುದ್ದೆಗಳಿಗೆ ನೇಮಿಸಬಾರದು. ಈ ದೃಷ್ಟಿಯಿಂದ ಹಿಲರಿ ಕ್ಲಿನ್‌ಟನ್‌ಳದ್ದು ಒಂದು ಅಪೂರ್ವವಾದ ನೇಮಕ. ಅವಳು ತನ್ನ ಕಛೇರಿಯಲ್ಲಿ ಸಹೋದ್ಯೋಗಿಗಳೊಡನೆ ವಿಚಾರ ವಿನಿಮಯ ನಡೆಸಿ ಆಗಸ್ಟ್ ೧೯೯೩ರ ಹೊತ್ತಿಗೆ ವರದಿಯೊಂದನ್ನು ತಯಾರಿಸಿ ಪರಿಶೀಲನೆಗಾಗಿ ಕಾಂಗ್ರೆಸ್‌ಗೆ ಕಳುಹಿಸಿದಳು.

ಕ್ಲಿನ್‌ಟನ್ ಮತ್ತು ಕಾಂಗ್ರೆಸ್

ಕ್ಲಿನ್‌ಟನ್ ಆಡಳಿತ ಯಶಸ್ವಿಯಾಗಬೇಕಾದರೆ ಎರಡು ಮುಖ್ಯ ಸಮಸ್ಯೆಗಳನ್ನು ಬಗೆಪರಿಸಬೇಕಾಗಿತ್ತು: ಮೊದಲನೆಯದಾಗಿ ಸ್ಥಗಿತಗೊಂಡ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದು ಮತ್ತು ಎರಡನೆಯದಾಗಿ ಖೋತಾ ಆಯವ್ಯಯವನ್ನು (deficit budget) ಸಮತೋಲನಗೊಳಿಸುವುದು. ೧೯೯೩ರ ಫೆಬ್ರವರಿಯಲ್ಲಿ ರಾಷ್ಟ್ರದ ಸ್ಥಿತಿಗತಿಗಳನ್ನು ಕುರಿತು ಕಾಂಗ್ರೆಸ್‌ಅನ್ನು ಉದ್ದೇಶಿಸಿ ಭಾಷಣ ಮಾಡುತ್ತ ಆಯವ್ಯಯ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು , ತನ್ನ ಸೂಚನೆಗಳನ್ನು (proposals) ಕ್ಲಿನ್‌ಟನ್

ವಿಶದಪಡಿಸಿದನು. ಆಯವ್ಯಯ ಖೋತಾ ಕಡಿಮೆ ಮಾಡಲು ಸಮಾಜದ ಎಲ್ಲಾ ಸ್ತರಗಳ ಮೇಲೆ ತೆರಿಗೆ ಹೆಚ್ಚಿಸಿದನು. ಇದರೊಂದಿಗೆ ಜನರಿಗೆ ಕೆಲಸ ಮಾಡಲು ಉತ್ತೇಜನ ನೀಡುವ ಕಾರ್ಯಕ್ರಮಗಳನ್ನು ಏರ್ಪಡಿಸಲು ಹಣವನ್ನು ಮೀಸಲಾಗಿಡುವ ಯೋಜನೆಯನ್ನು ಮಂಡಿಸಿದಾಗ ಅದನ್ನು ರಿಪಬ್ಲಿಕನ್ನರು 'ಇದು ಲಾಗಾಯ್ತಿನಿಂದ ಬಂದ ಡೆಮೊಕ್ರಾಟರ 'ತೆರಿಗೆ ಹೆಚ್ಚಿಸುವುದು – ಖರ್ಚು ಮಾಡುವುದು' ಪರಿಪಾಟವಲ್ಲದೆ ಮತ್ತೇನಲ್ಲ' ಎಂದು ಟೀಕಿಸಿದರು[೧]. ಕ್ಲಿನ್‌ಟನ್ ಮುಂದುವರಿದು ಸಮಾಜದ ಸರ್ವರಿಗೂ ಅನ್ವಯಿಸುವ ಆರೋಗ್ಯ ಯೋಜನೆಯನ್ನು (Universal Health Plan) ಅನುಷ್ಠಾನಕ್ಕೆ ತರುವುದಾಗಿ ಖಚಿತ ಪಡಿಸಿದನು. ಶ್ವೇತಭವನದ ಸಿಬ್ಬಂದಿಯಲ್ಲಿ ಶೇಕಡಾ ೨೫ರಷ್ಟು ಕಡಿಮೆ ಮಾಡುವುದಾಗಿ ಮಾತುಕೊಟ್ಟನು. ಈ ಭಾಷಣವನ್ನು ವರದಿಗಾರರು ಶ್ಲಾಘಿಸಿದರು. ಅಧ್ಯಕ್ಷ ಕ್ಲಿನ್‌ಟನ್‌ನ ಜನಪ್ರಿಯತೆಯನ್ನು ಈ ಭಾಷಣ ತುತ್ತತುದಿಗೇರಿಸಿತು.

ಡೆಮೊಕ್ರಾಟಿಕ್ ಪಕ್ಷದ ನಾಯಕರಿಗೆ ಜಿಮ್ಮಿ ಕಾರ್ಟರ್‌ನ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಡೆತಡೆಗಳನ್ನೊಡ್ಡಿ ಕಾರ್ಟರನ ಅಧಿಕಾರದ ಮೊದಲ ದಿನಗಳನ್ನು ನಿರರ್ಥಕವಾಗಿ ಮಾಡಿದ್ದ ನೆನಪು ಮಾಸಿರಲಿಲ್ಲ. ಕ್ಲಿನ್‌ಟನ್‌ಗೆ ಹಾಗೆ ಆಗಬಾರದೆಂದು ಎಚ್ಚೆತ್ತ ಕಾಂಗ್ರೆಸ್ ಅಧ್ಯಕ್ಷನೊಡನೆ ಸಹಕರಿಸಲು ಸಿದ್ಧವಾಗಿತ್ತು. ಆದ್ದರಿಂದ ೧೯೯೩ರ ಮಾರ್ಚ್ ತಿಂಗಳೊಳಗೆ ಕಾಂಗ್ರೆಸ್ ಮತ್ತು ಸೆನೆಟ್ ೧.೫ ಟ್ರಿಲಿಯನ್ ಡಾಲರ್‌ಗಳ ಆಯವ್ಯಯ ಠರಾವನ್ನು (budget resolution) ಪರಿಶೀಲಿಸಿ ಒಪ್ಪಿಗೆ ನೀಡಿದವು. ಠರಾವು ಹೀಗೆ ಎರಡು ಸದನಗಳ (both houses) ಒಪ್ಪಿಗೆ ಶೀಘ್ರವಾಗಿ ಪಡೆದದ್ದು ಅಪರೂಪವಾಗಿತ್ತು. ಆದರೆ ಕೆಲಸ ಅಥವಾ ಕಸುಬು ಉತ್ತೇಜನಾ ಯೋಜನೆಗೆ ರಿಪಬ್ಲಿಕನ್ನರು 'ಫಿಲಿಬಸ್ಟರ್'[೨] (filibuster) ವಿಧಾನದಿಂದ ಒಪ್ಪಿಗೆ ದೊರೆಯದಂತೆ ಮಾಡಿದರು. ಆಯವ್ಯಯ ಖೋತಾ ಕಡಿಮೆ ಮಾಡುವ ಯೋಜನೆ ಪಕ್ಷರಾಜಕೀಯದ ಗೋಜಲಿನಲ್ಲಿ ಸಿಕ್ಕಿ ಬಿದ್ದು, ದೀರ್ಘಕಾಲದ ಚರ್ಚೆಯ ನಂತರ ಎರಡು ಪಕ್ಷಗಳು ಸಂಧಾನಕ್ಕೆ ಬಂದು, ಮುಂದಿನ ಐದು ವರ್ಷಗಳಲ್ಲಿ ಖೋತಾವನ್ನು ೪೯೬ ಬಿಲಿಯನ್ ಡಾಲರ್‌ಗಳಷ್ಟು ಕಡಿಮೆ ಮಾಡಬೇಕೆಂದು ನಿರ್ಣಯ ಮಾಡಿದರು. ಖೋತಾ ಕಡಿಮೆ ಮಾಡುವ ಮಸೂದೆ ಕಾಂಗ್ರೆಸ್ಸಿನಲ್ಲಿ ಕೇವಲ ಎರಡು ಮತಗಳಿಂದ ಅನುಮೋದನೆ ಪಡೆಯಿತು. ಸೆನೆಟ್‌ನಲ್ಲೂ ಹೀಗೆ ಚರ್ಚೆ ನಡೆದು ಪಕ್ಷದ ಆದೇಶದಂತೆ ಮತ ನೀಡಿದಾಗ ಮಸೂದೆಗೆ ಬಹುಮತ ದೊರೆಯದೆ (Senate tie)

೧. ಕ್ಲಿನ್‌ಟನ್ ಕುರಿತು ಕಾಂಗ್ರೆಸ್ ಸದಸ್ಯನೊಬ್ಬನ ಟೀಕೆ: 'ತನ್ನ ಷರಾಯಿ ಗುಂಡಿಗಳ ಮೇಲೆ ಹತೋಟಿಯಿಲ್ಲದವನಿಗೆ ಅಣ್ವಸ್ತ್ರಗಳನ್ನು ನಿಯಂತ್ರಿಸುವ ಗುಂಡಿಗಳ ಜವಾಬ್ದಾರಿ ಕೊಡುವುದು ಹೇಗೆ?'

೨. ಕಾಂಗ್ರೆಸ್‌ನಲ್ಲಿ ಅಲ್ಪಸಂಖ್ಯಾತ ಪಕ್ಷದವರು ಉಪಯೋಗಿಸುವ ಒಂದು ತಡೆಯೊಡ್ಡುವ ವಿಧಾನ. ಅಲ್ಪಸಂಖ್ಯಾತ ಪಕ್ಷದ ಸದಸ್ಯನೊಬ್ಬ ತನಗೆ ಕೊಟ್ಟ ಕಾಲಾವಧಿಯನ್ನು ಮೀರಿ ಭಾಷಣ ಮಾಡುತ್ತ ಹೋಗಿ ಮಂಡಿಸಿದ ಠರಾವು ವೇಳೆ ಮೀರಿದ್ದರಿಂದ ಬಿದ್ದುಹೋಗುವಂತೆ ಮಾಡುವುದು.

ಅಂತಿಮವಾಗಿ ಉಪಾಧ್ಯಕ್ಷ ಆ್ಯಲ್ ಗೋರೆಯನ್ನು ತನ್ನ ಮತ ಚಲಾಯಿಸಿ ಈ ಮಸೂದೆಗೆ ಒಪ್ಪಿಗೆ ಪಡೆಯುವಂತೆ ಮಾಡಲಾಯಿತು.

ಅಧ್ಯಕ್ಷ ಕ್ಲಿನ್‌ಟನ್ ಅನೇಕ ಉಪಯುಕ್ತವಾದ ಕಾಯಿದೆಗಳನ್ನು ಮಂಡಿಸಿ ದ್ವಿಪಕ್ಷೀಯ ಬೆಂಬಲದಿಂದ (bipartisan support) ಅವುಗಳನ್ನು ಜಾರಿಗೆ ತರುವುದರಲ್ಲಿ ಯಶಸ್ವಿಯಾದನು. ಅಧ್ಯಕ್ಷ ಜಾರ್ಜ್ ಬುಷ್ ವೀಟೊ ಮಾಡಿದ್ದ ಕೆಲಸಗಾರರು ತಮ್ಮ ಅಥವಾ ತಮ್ಮ ಕುಟುಂಬದ ಸದಸ್ಯರ ಅನಾರೋಗ್ಯದ ನಿಮಿತ್ತ ಪಡೆಯುವ ಸಂಬಳವಿಲ್ಲದ ರಜೆಯ ಕಾಯಿದೆಯನ್ನು ಜಾರಿಗೆ ತಂದನು. ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳು ಚುನಾವಣಾ ಪ್ರಚಾರಕ್ಕಾಗಿ ಪಟ್ಟಭದ್ರ ಹಿತಾಸಕ್ತಿ ಗುಂಪುಗಳಿಂದ ಪಡೆಯುವ 'ಪ್ರಚಾರ ವಂತಿಗೆ ಹಣ'ವನ್ನು (campaign contributions) ಕಡಿಮೆ ಮಾಡುವ ಮಸೂದೆಯನ್ನು ಮಂಜೂರು ಮಾಡಲು ಕಾಂಗ್ರೆಸ್‌ನ ಮೇಲೆ ಒತ್ತಾಯ ಹಾಕಿದನು. 'ಮೋಟಾರು ಬಂಡಿ ಮಾಲಿಕರ ಮತದಾನ ನೋಂದಾಣಿಕೆಯ' ಕಾಯಿದೆಯನ್ನು (motor voter registration law)ಕ್ಲಿನ್‌ಟನ್ ಜಾರಿಗೆ ತಂದನು. ಈ ಕಾಯಿದೆ ಮೋಟಾರು ವಾಹನ ಮಾಲೀಕರು ಅದನ್ನು ಓಡಿಸಲು 'ಸನದು' (license) ಪಡೆಯಲು ಹೋದಾಗ ತಮ್ಮ ಹೆಸರನ್ನು ಮತದಾರರ ಪಟ್ಟಿಗೆ ನೋಂದಾಯಿಸುವ ಅವಕಾಶ ಮಾಡಿಕೊಟ್ಟಿತು. ನಿರುದ್ಯೋಗಿಗಳಿಗೆ ಸರ್ಕಾರ ಒದಗಿಸುವ ಸಹಾಯದ ಅವಧಿಯನ್ನು ಹೆಚ್ಚಿಸಲಾಯಿತು. ಯುವಜನರು ಕಾಲೇಜು ಶುಲ್ಕವನ್ನು ರಾಷ್ಟ್ರಸೇವೆ ಮಾಡುವುದರ ಮೂಲಕ ತೀರಿಸುವ ಕಾಯಿದೆಗೆ ಕ್ಲಿನ್‌ಟನ್ ರುಜು ಮಾಡಿ ಜಾರಿಗೆ ತಂದನು. ಉತ್ತರ ಅಮೆರಿಕ ಮುಕ್ತ ವಾಣಿಜ್ಯ ಒಪ್ಪಂದ (North American Free Trade Agreement- NAFTA) ಕುರಿತು ನಡೆದ ಬಿರುಸಿನ ವಾಗ್ವಾದ ಕ್ಲಿನ್‌ಟನ್ ಅಧ್ಯಕ್ಷತೆಯ ದಿಕ್ಕನ್ನು ಬದಲಾಯಿಸುವ ಘಟನೆಯಾಯಿತು. ಮಾಜಿ ಅಧ್ಯಕ್ಷರಾದ ಫೋರ್ಡ್, ಕಾರ್ಟರ್ ಮತ್ತು ಬುಷ್ ಕ್ಲಿನ್‌ಟನ್‌ಗೆ ಬೆಂಬಲ ನೀಡಿದರು. NAFTAದ ಕಡುವಿರೋಧಿ ರಾಸ್ ಪೆರೋನನ್ನು ಉಪಾಧ್ಯಕ್ಷ ಆ್ಯಲ್ ಗೋರೆ ಚರ್ಚಾಸ್ಪರ್ಧೆಯಲ್ಲಿ ಸೋಲಿಸಿದ ಮೇಲೆ ಕಾಂಗ್ರೆಸ್ ದ್ವಿಪಕ್ಷೀಯ ಬೆಂಬಲದಿಂದ (bipartisan support) NAFTA ಒಪ್ಪಂದವನ್ನು ಅನುಮೋದಿಸಿತು. ಪರಿಣಾಮವಾಗಿ ಸಂಯುಕ್ತ ಸಂಸ್ಥಾನಗಳು, ಕೆನಡಾ ಮತ್ತು ಮೆಕ್ಸಿಕೊ ದೇಶಗಳ ನಡುವೆ ಮುಕ್ತ ಮಾರುಕಟ್ಟೆ ತೆರೆಯಿತು. ಕ್ಲಿನ್‌ಟನ್ ಆಡಳಿತದಲ್ಲಿ ಜಾರಿಗೆ ಬಂದ ಅತ್ಯಂತ ಹೆಸರುವಾಸಿಯಾದ ಕಾಯಿದೆ – ಬ್ರೇಡಿ ಕಾಯಿದೆ. ಈ ಕಾಯಿದೆಯನ್ನು ಅಧ್ಯಕ್ಷ ರೇಗನ್‌ನ ವಾರ್ತಾಸಂಪರ್ಕ ಕಾರ್ಯದರ್ಶಿಯಾಗಿದ್ದ ಜೇಮ್ಸ್ ಬ್ರೇಡಿಯ (ರೇಗನ್‌ನನ್ನು ಕೊಲೆ ಮಾಡಲು ಜಾನ್ ಹಿಂಕ್ಲೆ ಗುಂಡು ಹಾರಿಸಿದಾಗ ಮರಣಾಂತಿಕ ಗಾಯಗೊಂಡವನು) ಹೆಸರಿನಲ್ಲಿ ಜಾರಿಗೆ ತರಲಾಯಿತು. ಈ ಕಾಯಿದೆ ಪಿಸ್ತೂಲಿನಂತಹ ಚಿಕ್ಕ, ಸುಲಭವಾಗಿ ಅಡಗಿಸಿಟ್ಟುಕೊಳ್ಳಬಹುದಾದ ಗುಂಡು ಹಾರಿಸುವ ಆಯುಧಗಳನ್ನು ಕೊಳ್ಳಲು ಐದು ದಿನಗಳ ತಡೆಯಾಜ್ಞೆಯನ್ನು ಕಡ್ಡಾಯ ಮಾಡಿತು. ತಡೆಯಾಜ್ಞೆಯ ಅವಧಿಯಲ್ಲಿ ಆಯುಧ

ಕೊಳ್ಳುವವರ ಹಿನ್ನೆಲೆಯನ್ನು ಕೂಲಂಕಷವಾಗಿ ವಿಶ್ಲೇಷಣೆ ಮಾಡಲು ಅವಕಾಶ ದೊರಕಿಸಿಕೊಟ್ಟಿತು. ಆದರೆ ಈ ಕಾಯಿದೆಯನ್ನು ರಾಷ್ಟ್ರೀಯ ರೈಫಲ್ ಸಂಘ (National Rifle Association-NRA) ತೀವ್ರವಾಗಿ ವಿರೋಧಿಸಿತು. ಸಾರ್ವಜನಿಕರ ಒತ್ತಾಯದ ಮೇರೆಗೆ ಕಾಂಗ್ರೆಸ್ ಈ ಕಾಯಿದೆಯನ್ನು ಅನುಮೋದಿಸಿ, ಕ್ಲಿನ್‌ಟನ್ ಅದಕ್ಕೆ ರುಜು ಹಾಕಿ ಜಾರಿಗೆ ತಂದನು. ಅಮೆರಿಕನ್ನರು ಕ್ಲಿನ್‌ಟನ್‌ನ ಕಾರ್ಯದಕ್ಷತೆಯನ್ನು ಅವನ ಆರ್ಥಿಕ ಯೋಜನೆಗಳಿಂದ, ಆರ್ಥಿಕ ಪರಿಸ್ಥಿತಿ ಉತ್ತಮಗೊಂಡುದರಿಂದ ಮತ್ತು ಅನೇಕ ಉಪಯುಕ್ತ ಕಾಯಿದೆಗಳನ್ನು ಜಾರಿಗೆ ತಂದುದರಿಂದ ನಿರ್ಣಯಿಸಿದರು. ಅವನ ಜನಪ್ರಿಯತೆ ಶೇಕಡಾ ೬೦ರಷ್ಟು ಹೆಚ್ಚಾಯಿತು. ಈಚಿನ ಅಧ್ಯಕ್ಷರಲ್ಲೆಲ್ಲ ಕ್ಲಿನ್‌ಟನ್ ಅತ್ಯಂತ ಪರಿಣಾಮಕಾರಿಯಾದ ಅಧ್ಯಕ್ಷನೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು.

ಕ್ಲಿನ್‌ಟನ್‌ನ ಆಡಳಿತ ಅವಧಿಯಲ್ಲಿ ಜರುಗಿದ ಕುಖ್ಯಾತ ದುರ್ಘಟನೆ – ನ್ಯೂಯಾರ್ಕಿನ ವಿಶ್ವ ವ್ಯಾಪಾರ ಕೇಂದ್ರದಲ್ಲಿ (World Trade Center) ಭಯೋತ್ಪಾದಕರು ೧೯೯೩ರ ಫೆಬ್ರವರಿಯಲ್ಲಿ ಬಾಂಬ್ ಸಿಡಿಸಿದ್ದು. ಈ ದುರಂತದಲ್ಲಿ ಆರು ಜನ ಸತ್ತು ಸಾವಿರಾರು ಜನರಿಗೆ ಗಾಯಗಳಾದವು. ವಿಶ್ವ ವ್ಯಾಪಾರ ಕೇಂದ್ರದ ಎರಡು ಕಟ್ಟಡಗಳನ್ನು ಒಂದು ತಿಂಗಳವರೆಗೆ ಮುಚ್ಚಿ ಎಫ್.ಬಿ.ಐ. (F.B.I) ಸಿಬ್ಬಂದಿ ತನಿಖೆ ನಡೆಸಿತು. ಇದರಿಂದಾಗಿ ಮಧ್ಯಪ್ರಾಚ್ಯದ ಹತ್ತು ಜನರನ್ನು ಆರೋಪಿಗಳಾಗಿ ಬಂಧಿಸಿದರು. ಇದಾದ ನಂತರ ನ್ಯೂ ಯಾರ್ಕ್ ನಗರದ ಇತರ ಸುಪ್ರಸಿದ್ಧ ಸ್ಥಳಗಳಲ್ಲಿ ಜುಲೈ ನಾಲ್ಕರ ಸ್ವಾತಂತ್ರ್ಯ ಸಮಾರಂಭದ ಸಮಯದಲ್ಲಿ ಬಾಂಬ್ ಸಿಡಿಸಲು ಪಿತೂರಿ ನಡೆಸಿದ್ದು ತಿಳಿಯಿತು. ಸಿಟ್ಟಿನಿಂದ ಉದ್ರಿಕ್ತರಾದ ಪ್ರಜೆಗಳು ವಲಸೆ ನಿಯಂತ್ರಣ ಕಾಯಿದೆಗಳನ್ನು ಬಿಗಿಗೊಳಿಸಿ, ಕಾಯಿದೆಯನ್ನು ಉಲ್ಲಂಘಿಸಿದ ಅನ್ಯದೇಶೀಯರನ್ನು ಉಚ್ಚಾಟನೆ ಮಾಡಲು ಕಾಂಗ್ರೆಸ್‌ನ್ನು ಆಗ್ರಹಪಡಿಸಿದರು. ಪರಿಣಾಮವಾಗಿ ಕ್ಲಿನ್‌ಟನ್ ಅಮೆರಿಕಕ್ಕೆ ಪ್ರವೇಶಿಸುವವರ ಮೇಲೆ ಹೆಚ್ಚಿನ ನಿರ್ಬಂಧಗಳನ್ನು ಅನುಷ್ಠಾನಕ್ಕೆ ತಂದನು.

ಅಧ್ಯಕ್ಷ ಕ್ಲಿನ್‌ಟನ್‌ನ ಅಂತರರಾಷ್ಟ್ರೀಯ ವ್ಯವಹಾರಗಳು

ಜಾರ್ಜ್ ಬುಷ್ ಅಧಿಕಾರದಲ್ಲಿದ್ದಾಗಿನ ಪ್ರಪಂಚ ಕ್ಲಿನ್‌ಟನ್ ಅಧಿಕಾರಕ್ಕೆ ಬರುವಷ್ಟರಲ್ಲಿ ಗುರುತು ಸಿಗದಷ್ಟು ಬದಲಾಯಿಸಿತ್ತು. ಸೋವಿಯೆಟ್ ಒಕ್ಕೂಟ ಅವಸಾನ ಹೊಂದಿ ಗತಕಾಲದ ದುರ್ಘಟನೆಯಾಗಿ ಹೋಗಿತ್ತು. ಶೀತಲಯುದ್ಧ ಮುಗಿದು 'ಹೊಸ ಪ್ರಪಂಚ ವ್ಯವಸ್ಥೆ' ರೂಪುಗೊಳ್ಳುತ್ತಿತ್ತು. ಸೋವಿಯೆಟ್ ಒಕ್ಕೂಟ ತನ್ನ ಮಾರಕಾಸ್ತ್ರಗಳಿಂದ ಅನೇಕ ರಾಷ್ಟ್ರಗಳಿಗೆ ಮೃತ್ಯುಸ್ವರೂಪಿಯಾಗಿದ್ದ ದೈತ್ಯ ರಾಷ್ಟ್ರ. ಅದು ಛಿದ್ರಗೊಂಡು ಒಕ್ಕೂಟದ ಗಣರಾಜ್ಯಗಳು ಮೂರಾಬಟ್ಟೆಯಾಗಿ 'ನವ ರಷ್ಯಾ' ನಿರ್ಮಾಣಗೊಂಡಿತ್ತು. ಹೊಸದಾಗಿ ಹುಟ್ಟಿದ ಈ ರಾಷ್ಟ್ರಕ್ಕೆ ಎದ್ದು ನಿಲ್ಲಲು ಆರ್ಥಿಕ ಶಕ್ತಿ ಇಲ್ಲದಂತಾಗಿ ಆಪತ್ತಿನ ಅಂಚಿನಲ್ಲಿ ತತ್ತರಿಸಿತ್ತು. ರಷ್ಯಾದ ಕೆಲವು ಗಣರಾಜ್ಯಗಳು ಅಣ್ವಸ್ತ್ರವನ್ನು ಹೊಂದಿದ್ದವು.

ಅತ್ತ ಆಫ್ರಿಕಾದಲ್ಲಿ ಸೋಮಾಲಿಯಾ ದೇಶ ಯಾದವೀಕಲಹದಲ್ಲಿ ತೊಡಗಿ, ಸಾಮಾನ್ಯ ಪ್ರಜೆಗಳಿಗೆ ಆಹಾರ ಸರಬರಾಜು ಆಗದಂತೆ, ಔಷಧಿಗಳು ತಲುಪದಂತೆ ಮಾಡಿ ಸಾವಿರಗಟ್ಟಲೆ ಜನರ ಸಾವಿಗೆ ಕಾರಣರಾದ, ಅಧಿಕಾರಕ್ಕಾಗಿ ಕಚ್ಚಾಡುತ್ತಿದ್ದ ನಾಯಕರ ನಡುವೆ ಸಿಕ್ಕಿ ತೊಳಲಾಡುತ್ತಿತ್ತು. ಈ ನಾಯಕರ ನಡುವೆ ಸಂಧಾನ ಏರ್ಪಡಿಸಲು ಅಮೆರಿಕನ್ ಸೇನಾಪತಿಗಳು ಪ್ರಯತ್ನಿಸುತ್ತಿದ್ದರು. ಇತ್ತ ಯೂರೋಪಿನಲ್ಲಿ ಬಾಸ್ನಿಯಾ (Bosnia) ಅಂತರ್ಯುದ್ಧದಲ್ಲಿ ಛಿದ್ರಗೊಂಡು, ಅಲ್ಲಿ ನಡೆಯುತ್ತಿದ್ದ ಹತ್ಯಾಕಾಂಡಕ್ಕೆ ಕಾರಣರಾದ ಸರ್ಬ್ ಜನರು (Serbs) ಮತ್ತು ಕ್ರೊಯೇಷರನ್ನು (Croats) ಹತೋಟಿಗೆ ತರುವಂತೆ ವಿಶ್ವದಾದ್ಯಂತ ಕೋರಿಕೆಗಳು ಕೇಳಿಬರುತ್ತಿದ್ದವು. ಮಧ್ಯಪ್ರಾಚ್ಯದ ಮಹಾದುರಂತ – ಪ್ಯಾಲೆಸ್ಟೈನ್ ಮತ್ತು ಇಸ್ರೇಲ್ ನಡುವಣ ಸಂಘರ್ಷಣೆ ಅವ್ಯಾಹತವಾಗಿ ಸಾಗಿ, ಶಾಂತಿಸಂಧಾನದ ಮಾತುಕತೆಗಳು ಸ್ಥಗಿತಗೊಂಡಿದ್ದವು[೩]. ಇರಾಕ್‌ನ ಅಧ್ಯಕ್ಷ ಸದ್ದಾಂ ಹುಸೇನ್ ಪುನಃ ದುರಹಂಕಾರದಿಂದ ವರ್ತಿಸಲು ಪ್ರಾರಂಭಿಸಿದ್ದನು. ಇಂಥ ಅನಿಶ್ಚಯ ಮತ್ತು ಆಸ್ಫೋಟಕ ಸನ್ನಿವೇಶದ ಅಂತರರಾಷ್ಟ್ರೀಯ ರಾಜಕೀಯ ರಂಗವನ್ನು ಅಧ್ಯಕ್ಷ ಕ್ಲಿನ್‌ಟನ್ ಪ್ರವೇಶಿಸಿದ್ದನು.

ಕ್ಲಿನ್‌ಟನ್‌ನ ಆಡಳಿತದ ಮೊದಲ ನೂರುದಿನಗಳಲ್ಲಿ ರಷ್ಯಾ ಅಧ್ಯಕ್ಷನಾಗಿದ್ದ ಬೋರಿಸ್ ಯೆಲ್ಟ್ಸಿನ್ (Boris Yeltsin) ತನ್ನ ಅಧಿಕಾರ ಉಳಿಸಿಕೊಳ್ಳಲು ಹೋರಾಡುತ್ತಿದ್ದನು. ರಷ್ಯಾದ ಪ್ರಜೆಗಳು ಮತನೀಡಿ ಯೆಲ್ಟ್ಸಿನ್‌ನಲ್ಲಿ ಭರವಸೆ ವ್ಯಕ್ತಪಡಿಸಿದ ನಂತರ ಅವನು ಅಧ್ಯಕ್ಷ ಕ್ಲಿನ್‌ಟನ್‌ನನ್ನು ೧೯೯೩ರ ಫೆಬ್ರವರಿ ತಿಂಗಳಲ್ಲಿ ವ್ಯಾಂಕೂವರ್ (Vancouver) ಎಂಬಲ್ಲಿ ಭೇಟಿಯಾದನು. ಕ್ಲಿನ್‌ಟನ್ ರಷ್ಯಾಕ್ಕೆ ಭೇಟಿ ನೀಡುವುದಾಗಿ ಭರವಸೆ ನೀಡಿದನು. ಅದರ ದ್ಯೋತಕವಾಗಿ ೧.೬ ಬಿಲಿಯನ್ ಡಾಲರ್‌ಗಳ ಸಹಾಯಧನ ಒದಗಿಸುವುದಾಗಿ ಮಾತುಕೊಟ್ಟನು. ಅಂತರರಾಷ್ಟ್ರೀಯ ವ್ಯವಹಾರವನ್ನು ಸಮರ್ಥವಾಗಿ ನಿರ್ವಹಿಸಬಲ್ಲ ನೆಂಬುದಕ್ಕೆ ಯೆಲ್ಟ್ಸಿನ್ ಭೇಟಿ ಮೊದಲನೆಯ ನಿದರ್ಶನವಾಯಿತು. ಯೆಲ್ಟ್ಸಿನ್ ತನ್ನ ಕೃತಜ್ಞತೆಯನ್ನು ತೋರಲು ಬಾಸ್ನಿಯಾದಲ್ಲಿ ಅಮೆರಿಕದ ಧೋರಣೆಯನ್ನು ಬೆಂಬಲಿಸಿ ಸರ್ಬ್ ಮತ್ತು ಕ್ರೊಯೇಟ್ ಜನರನ್ನು ವಿಶ್ವಸಂಸ್ಥೆಯ ಶಾಂತಿಸಂಧಾನವನ್ನು ಒಪ್ಪಿಕೊಳ್ಳು ವಂತೆ ಆಗ್ರಹಪಡಿಸಿದನು. ೧೯೯೩ರ ಕೊನೆಯಲ್ಲಿ ಯೆಲ್ಟ್ಸಿನ್ ತನ್ನ ವಿರೋಧಿಗಳನ್ನು

೩. ಇಸ್ರೇಲ್ ಮತ್ತು ಪ್ಯಾಲೆಸ್ಟೈನ್ ನಡುವೆ ಶಾಂತಿಸಂಧಾನ ಏರ್ಪಡಿಸಲು ಕ್ಲಿನ್‌ಟನ್ ಬಹಳ ಪ್ರಯತ್ನ ಪಟ್ಟನು. ಆಗ ಇಸ್ರೇಲ್ ಪ್ರಧಾನಮಂತ್ರಿಯಾಗಿದ್ದ ಯಹುದ್ ಬರಾಕ್ ಮತ್ತು ಪಿ.ಎಲ್.ಓ ಸಂಸ್ಥೆಯ ಯಾಸೆರ್ ಅರಾಫಾತ್ ಇಬ್ಬರನ್ನೂ ಅನೇಕ ಬಾರಿ ಅಮೆರಿಕಕ್ಕೆ ಕರೆಸಿಕೊಂಡು ಶೃಂಗಸಭೆಯಲ್ಲಿ ವಿಚಾರ ವಿನಿಮಯ ಮಾಡಲು ಅವಕಾಶ ಕಲ್ಪಿಸಿಕೊಟ್ಟನು. ಬರಾಕ್‌ನು ಉದಾರ ಮನಸ್ಸಿನಿಂದ ಅರಾಫಾತ್‌ನ ಕೋರಿಕೆಗಳಿಗೆ ಒಪ್ಪಿಗೆ ನೀಡಿದನು. ಇಸ್ರೇಲ್ ಇಷ್ಟು ಉದಾರ ನೀತಿ ತೋರಿಸಿದ್ದು ಇದೇ ಮೊದಲು. ಅರಾಫಾತ್ ಜೆರುಸಲೇಂ ಬಗ್ಗೆ ಬರಾಕ್‌ನ ಸೂಚನೆಗಳನ್ನು ಒಪ್ಪಿಕೊಳ್ಳದೆ ಶಾಂತಿಸ್ಥಾಪನೆಗೆ ಇದ್ದ ಒಂದು ಅವಕಾಶವನ್ನು ಕಳೆದುಕೊಂಡನು.

ಎದುರಿಸಬೇಕಾಗಿ ಬಂದಿದ್ದರಿಂದ ರಷ್ಯಾದ ಪಾರ್ಲಿಮೆಂಟ್‌ನ್ನು ರದ್ದುಗೊಳಿಸಿದನು. ಮಾಜಿ ಕಮ್ಯೂನಿಸ್ಟ್ ನಾಯಕರು ತಾವು ಅಧಿಕಾರ ವಹಿಸಿಕೊಂಡಿದ್ದೇವೆ ಎಂದು ಘೋಷಿಸಿ ಪಾರ್ಲಿಮೆಂಟ್ ಭವನವನ್ನು ಬಿಟ್ಟು ಹೊರಬರಲು ನಿರಾಕರಿಸಿದರು. ಆಗ ಯೆಲ್ಟ್ಸಿನ್ ವಿಧಿಯಿಲ್ಲದೆ ಮಾರ್ಷಲ್ ಕಾಯಿದೆಯನ್ನು (Martial law) ಜಾರಿ ಮಾಡಿ, ಪಾರ್ಲಿಮೆಂಟ್ ಭವನವನ್ನು ಖಾಲಿ ಮಾಡುವಂತೆ ಸೈನ್ಯಕ್ಕೆ ಆಜ್ಞಾಪಿಸಿದನು. ಸೈನ್ಯ ಕಾರ್ಯಾಚರಣೆಯಲ್ಲಿ ಕೆಲವು ವಿರೋಧಿಗಳನ್ನು ಕೊಂದು ಕಮ್ಯೂನಿಸ್ಟರ ದಂಗೆಯನ್ನು ಅಡಗಿಸಿತು. ಈ ಸಮಯದಲ್ಲಿ ಯೆಲ್ಟ್ಸಿನ್‌ಗೆ ಕ್ಲಿನ್‌ಟನ್ ಸರ್ಕಾರ ಪರೋಕ್ಷ ಸಹಾಯ ನೀಡಿತು. ೧೯೯೩ರ ಡಿಸೆಂಬರ್ ತಿಂಗಳಲ್ಲಿ ರಷ್ಯಾದ ಪ್ರಜೆಗಳು ನೂತನ ರಾಜ್ಯಾಂಗವನ್ನು ರಚಿಸಿ ಜಾರಿಗೆ ತಂದರು. ಇದು ರಷ್ಯಾ ಅಧ್ಯಕ್ಷನಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು, ರಾಜ್ಯಾಂಗವನ್ನು ಅನುಸರಿಸಿ ಹೊಸ ಪಾರ್ಲಿಮೆಂಟ್ ಅಸ್ತಿತ್ವಕ್ಕೆ ಬರುವಂತೆ ಮಾಡಿತು. ಅಧ್ಯಕ್ಷ ಕ್ಲಿನ್‌ಟನ್ ಯುಕ್ರೇನಿಗೆ (Ukraine) ಭೇಟಿ ನೀಡಿ ಅಲ್ಲಿನ ಸರ್ಕಾರದೊಡನೆ ಅಮೆರಿಕದ ಆರ್ಥಿಕ ಸಹಾಯಕ್ಕೆ ಪ್ರತಿಯಾಗಿ ಯುಕ್ರೇನ್ ತನ್ನ ಅಣ್ವಸ್ತ್ರಗಳನ್ನು ನಿಷ್ಕ್ರಿಯಗೊಳಿಸುವುದಕ್ಕೆ ಒಪ್ಪಿಕೊಂಡು ಅದರಂತೆ ಪರಸ್ಪರ ನಡೆದುಕೊಂಡರು.

ಬಾಸ್ನಿಯಾದ ಮುಸ್ಲಿಮರನ್ನು ಸರ್ಬ್ ಜನ ಸಾಮೂಹಿಕವಾಗಿ ಕೊಲೆ ಮಾಡುತ್ತಿರುವ ವರದಿಗಳನ್ನು ಕೇಳಿ ಪ್ರಪಂಚದಾದ್ಯಂತ ಜನರು ಕೋಪಾವಿಷ್ಟರಾದರು. ಬಾಸ್ನಿಯಾದಿಂದ ಮುಸ್ಲಿಮರನ್ನು ಹೊರಹಾಕಿ ಅವರ ಜಮೀನು, ಆಸ್ತಿ ಪಾಸ್ತಿಗಳನ್ನು ವಶಪಡಿಸಿಕೊಂಡು ಕ್ರಮೇಣ ಬಾಸ್ನಿಯಾ ಸಂಪೂರ್ಣ ಸರ್ಬ್‌ರ ಸ್ವತ್ತಾಗಿ ಮಾಡಿಕೊಳ್ಳುವುದು ಈ ದುಷ್ಕೃತ್ಯಗಳ ಉದ್ದೇಶವಾಗಿತ್ತು. ಇಂಥ ಅಮಾನುಷ ಕೆಲಸ 'ಬುಡಕಟ್ಟು ನಿರ್ಮೂಲನ' (ethnic cleansing) ಎಂದು ಕುಖ್ಯಾತಿ ಪಡೆದಿದೆ. ಅಧ್ಯಕ್ಷ ಕ್ಲಿನ್‌ಟನ್ ವಿದೇಶಾಂಗ ಕಾರ್ಯದರ್ಶಿ ವಾರೆನ್ ಕ್ರಿಸ್ಟೊಫರ್‌ನನ್ನು ಯೂರೋಪಿಗೆ ಕಳುಹಿಸಿ ಅಮೆರಿಕ ಸರ್ಬ್‌ರ ಮೇಲೆ ಕೈಗೊಳ್ಳಲಿರುವ ಭೀಕರ ದಾಳಿಗೆ ಯೂರೋಪಿಯನ್ ರಾಷ್ಟ್ರಗಳ ಒಪ್ಪಿಗೆ ಮತ್ತು ಸಹಕಾರ ಪಡೆಯಲು ಪ್ರಯತ್ನಿಸಿದನು. ನಿರ್ಗತಿಕರಾದ ಬಾಸ್ನಿಯಾದ ಮುಸ್ಲಿಮರಿಗೆ ಆಹಾರ ಸರಕು ಸಾಮಗ್ರಿಗಳನ್ನು ವಿಮಾನಗಳಲ್ಲಿ ಕೊಂಡೊಯ್ದು ಸರಬರಾಜು ಮಾಡುವ ಪ್ರಯತ್ನ ವಿಫಲಗೊಂಡಾಗ ಸರ್ಬರ್ ಒಪ್ಪಂದ ಮಾಡಿಕೊಳ್ಳದಿದ್ದರೆ ಅಮೆರಿಕ ಭೀಕರ ಬಾಂಬ್ ದಾಳಿ ಮಾಡುವುದಾಗಿ ಕ್ಲಿನ್‌ಟನ್ ಎಚ್ಚರಿಕೆ ನೀಡಿದನು. ಮಿತ್ರರಾಷ್ಟ್ರಗಳು ಕ್ಲಿನ್‌ಟನ್ ಕರೆಗೆ ಉತ್ಸಾಹದಿಂದ ಓಗೊಡಲಿಲ್ಲ. ನಂತರ ಅಮೆರಿಕ ಒಂದೇ ಮಿತ್ರರಾಷ್ಟ್ರಗಳ ನೆರವಿಲ್ಲದೆ ಈ ಸಾಹಸಕ್ಕಿಳಿಯುವ ಅಪಾರ ಜವಾಬ್ದಾರಿಯ ಅರಿವಾಗಿ ವಿಶ್ವಸಂಸ್ಥೆಯ ಯೋಜನೆಯಂತೆ ಮಿತ್ರರಾಷ್ಟ್ರಗಳೊಡಗೂಡಿ ನಡೆಸುವ ಕಾರ್ಯಾಚರಣೆಯಲ್ಲಿ ಅಮೆರಿಕ ಮುಖ್ಯಪಾತ್ರ ವಹಿಸುವ ನಿರ್ಧಾರ ಕೈಗೊಂಡಿತು.

ಸೋಮಾಲಿಯಾದಲ್ಲಿ ಶಾಂತಿಸ್ಥಾಪನೆಯ ಉಸ್ತುವಾರಿ ಮಾಡುತ್ತಿದ್ದ ಅಮೆರಿಕದ

ಸೈನ್ಯ ತುಕಡಿಗಳನ್ನು ಅಲ್ಲಿ ಶಾಂತಿ ನೆಲೆಗೊಂಡ ಕೂಡಲೇ ವಾಪಸ್ಸು ಕರೆಸಿಕೊಳ್ಳಬೇಕೆಂದು ಕ್ಲಿನ್‌ಟನ್ ನಿರ್ಧರಿಸಿದ್ದನು. ಆದರೆ ಸೋಮಾಲಿಯಾದ ಪರಿಸ್ಥಿತಿ ಉತ್ತಮಗೊಳ್ಳದಿದ್ದುದರಿಂದ ಅಮೆರಿಕದ ಸೈನ್ಯತುಕಡಿಗಳನ್ನು ವಿಶ್ವಸಂಸ್ಥೆಯ ಶಾಂತಿಸೈನ್ಯದ ಅಂಗವಾಗಿ ಸೇರಿಸಲು ಒಪ್ಪಿಕೊಂಡನು. ೧೯೯೩ರ ಕೊನೆಯಲ್ಲಿ ವಿಶ್ವಸಂಸ್ಥೆಯ ಹೊಸ ಸೈನ್ಯ ಶಾಂತಿಸ್ಥಾಪನೆಯ ಕಾರ್ಯವನ್ನು ವಹಿಸಿಕೊಂಡಿತು. ಆ ಸಮಯದಲ್ಲಿ ಸೋಮಾಲಿಯಾದ ಒಬ್ಬ ದಳವಾಯಿ (warlord) ತನ್ನ ವಿರೋಧಿಗಳೊಡನೆ ಯಾದವೀ ಕಲಹ ಪ್ರಾರಂಭಿಸಿ, ಕಲಹ ಹತ್ತಿಕ್ಕಲು ಪ್ರಯತ್ನಿಸಿದ. ವಿಶ್ವಸಂಸ್ಥೆಯ ಅಂಗವಾಗಿದ್ದ ಪಾಕಿಸ್ತಾನಿ ಸೈನಿಕರ ಮೇಲೆ ಹಲ್ಲೆ ನಡೆಸಿ ಹಲವರನ್ನು ಕೊಂದು ನೂರಾರು ಸೈನಿಕರನ್ನು ಗಾಯಗೊಳಿಸಿದನು. (ಈ ವಿವರಗಳನ್ನು ಹಿಂದೆ ತಿಳಿಸಿದೆ) ಆ ದಳವಾಯಿಯ ಮುಖ್ಯನೆಲೆಯ ಮೇಲೆ ದಾಳಿಯಿಟ್ಟು ಅವನನ್ನು ಸೆರೆಹಿಡಿಯಲು ಮಾಡಿದ ಪ್ರಯತ್ನ ವಿಫಲವಾಗಿ ಅಮೆರಿಕನ್ ಸೈನಿಕರ ಸಾವು ಮತ್ತು ಹೆಲಿಕಾಪ್ಟರುಗಳ ನಾಶದಲ್ಲಿ ಪರ್ಯಾವಸಾನಗೊಂಡಿತು. ದೂರದೇಶದಲ್ಲಿ ನಡೆದ ಈ ದುರಂತ ಘಟನೆ ಅಮೆರಿಕನ್ನರ ಹೃದಯವನ್ನು ಕಲಕಿತು. ಕಾಂಗ್ರೆಸ್ಸಿನಲ್ಲಿ ದೊಡ್ಡ ವಾಗ್ಯುದ್ಧ ನಡೆದು ಅಧ್ಯಕ್ಷ ಕ್ಲಿನ್‌ಟನ್ ೧೯೯೪ರ ಏಪ್ರಿಲ್ ತಿಂಗಳೊಳಗೆ ಸೋಮಾಲಿಯಾದಿಂದ ಅಮೆರಿಕದ ಎಲ್ಲಾ ಸೈನ್ಯವನ್ನು ವಾಪಸ್ಸು ಕರೆಸಿಕೊಳ್ಳುವುದಾಗಿ ವಾಗ್ದಾನ ಮಾಡಿದನು. ಈ ದುರ್ಘಟನೆಗೆ ಬಲಿಯಾದವನೆಂದರೆ ರಕ್ಷಣಾ ಕಾರ್ಯದರ್ಶಿ ಲೆ ಆಸ್ಪಿನ್ (Les Aspin). ಇದಕ್ಕೆ ತಾನು ಜವಾಬ್ದಾರನೆಂದು ಹೇಳಿ ತನ್ನ ಹುದ್ದೆಗೆ ರಾಜೀನಾಮೆ ಸಲ್ಲಿಸಿದನು. ಕ್ಲಿನ್‌ಟನ್‌ನ ಆಡಳಿತ ಮಂಡಳಿಯ ಸದಸ್ಯರಲ್ಲಿ ರಾಜೀನಾಮೆ ಕೊಟ್ಟವರಲ್ಲಿ ಇವನೇ ಮೊದಲಿಗನು.

ಯೂರೋಪಿನಲ್ಲಿ ಶಾಂತಿಸ್ಥಾಪನೆಯಲ್ಲಿ ಪಾಲುಗಾರರಾಗುವಂತೆ (partnership of peace) ಮಾಜಿ ವಾರ್ಸಾ ಒಡಂಬಡಿಕೆ ರಾಷ್ಟ್ರಗಳನ್ನು (former Warsaw Pact countries) NATO ಸಂಘಟನೆಯನ್ನು ಸೇರಿಸಿಕೊಳ್ಳುವಂತೆ ಆ ಸಂಸ್ಥೆಯ ಅಧಿಕಾರಿಗಳನ್ನು ಕ್ಲಿನ್‌ಟನ್ ಆಗ್ರಹಪಡಿಸಿದನು. ಇವನ ಕರೆಗೆ NATO ಮತ್ತು Warsaw Pact ರಾಷ್ಟ್ರಗಳು ಸಮ್ಮತಿಸಿದವು. ಪರಿಣಾಮವಾಗಿ ಜ಼ೆಕೊಸ್ಲೋವಾಕಿಯಾ, ಪೋಲೆಂಡ್, ಹಂಗೇರಿ NATO ಸಂಸ್ಥೆಯ ಸದಸ್ಯ ರಾಷ್ಟ್ರಗಳಾದವು. ಈ ಪ್ರಕ್ರಿಯೆ ತನ್ನ ಅಂತಿಮ ಘಟ್ಟದ ಗುರಿ ಸಾಧಿಸುವುದು ರಷ್ಯಾ ಮತ್ತು ಮಾಜಿ ರಷ್ಯಾ ಗಣರಾಜ್ಯಗಳು NATO ಸಂಘಟನೆಯನ್ನು ಸೇರಿದಾಗ.

ಯೂರೋಪ್ ಮತ್ತು ರಷ್ಯಾಗಳಲ್ಲಿ ಕಮ್ಯೂನಿಸಂ ಅವಸಾನ ಹೊಂದಿ ಗತಕಾಲದ ನೆನಪಾಗಿ ಹೋಗಿರುವಾಗ, ದೂರ ಪ್ರಾಚ್ಯದ ದೇಶವಾದ ಉತ್ತರ ಕೊರಿಯಾ 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂವು' ಎಂಬ ಗಾದೆಯಂತೆ ಕಮ್ಯೂನಿಸಂನ ಹಿಂದಿನ ಹಿರಿಮೆಯನ್ನು ಮೆರೆಸುವ ವ್ಯರ್ಥ ಪ್ರಯತ್ನ ಮಾಡುತ್ತಿದೆ. ಸಿ.ಐ.ಎ. (C.I.A)

ವರದಿಗಳಿಂದ ಉತ್ತರ ಕೊರಿಯಾ ಅಣ್ವಸ್ತ್ರಗಳನ್ನು ತಯಾರಿಸಿ ಉಪಯೋಗಿಸುವ ತಾಂತ್ರಿಕ ಜ್ಞಾನ ಪಡೆದಿದೆ ಎನ್ನುವುದು ಸಾಬೀತಾಯಿತು. ಕ್ಲಿನ್‌ಟನ್ ದಕ್ಷಿಣ ಕೊರಿಯಾಕ್ಕೆ ಭೇಟಿ ಕೊಟ್ಟ ಸಂದರ್ಭದಲ್ಲಿ ಮಾತನಾಡುತ್ತ ಅಮೆರಿಕ ದಕ್ಷಿಣ ಕೊರಿಯಾದ ರಕ್ಷಣೆಗೆ ಸದಾ ಸಿದ್ಧವಾಗಿರುವುದಾಗಿ ತಿಳಿಸಿ, ಉತ್ತರ ಕೊರಿಯಾ ತನ್ನ ಅಣ್ವಸ್ತ್ರ ಉತ್ಪಾದನಾ ತಾಣಗಳನ್ನು ವಿಶ್ವಸಂಸ್ಥೆಯ ಸಿಬ್ಬಂದಿಗೆ ತೆರವು ಮಾಡಿಕೊಡಬೇಕೆಂದು ಆಗ್ರಹಪಡಿಸಿದನು. ಹೀಗೆ ಒತ್ತಡ ಹಾಕಿದ್ದರಿಂದ ಉತ್ತರ ಕೊರಿಯಾ ಇನ್ನು ಮುಂದೆ ನಡೆಯುವ ಅಣ್ವಸ್ತ್ರಗಳ ಪ್ರಯೋಗವನ್ನು ತೆರವು ಮಾಡುವುದಾಗಿ ಒಪ್ಪಿಕೊಂಡಿತು. ಅಮೆರಿಕ ದಕ್ಷಿಣ ಕೊರಿಯಾದ ರಕ್ಷಣೆಯನ್ನು ಹೆಚ್ಚು ಬಲಪಡಿಸಲು 'ಪೇಟ್ರಿಯಟ್' (Patriot) ಕ್ಷಿಪಣಿಗಳನ್ನು ಕಳುಹಿಸುವುದಾಗಿ ಕ್ಲಿನ್‌ಟನ್ ಭರವಸೆ ನೀಡಿದನು.

೧೯೯೪ರ ಫೆಬ್ರುವರಿ ತಿಂಗಳಲ್ಲಿ ದೀರ್ಘಕಾಲದಿಂದ ವಿಯಟ್‌ನಾಮ್ ಮೇಲೆ ವಿಧಿಸಿದ್ದ ಆರ್ಥಿಕ ನಿರ್ಬಂಧಗಳನ್ನು ಅಧ್ಯಕ್ಷ ಕ್ಲಿನ್‌ಟನ್ ತೆಗೆದುಹಾಕಿದನು. ಇದು ಮೇಲ್ನೋಟಕೆ ಒಂದು ಸಾಮಾನ್ಯ ಸಂಗತಿಯೆನಿಸಿದರೂ ಅರವತ್ತರ ದಶಕದಲ್ಲಿ ವಿಯಟ್‌ನಾಮ್ ಯುದ್ಧ ಎರಡು ದೇಶಗಳ ತಳಹದಿಯನ್ನು ಅಲ್ಲಾಡಿಸಿ, ಜನಜೀವನವನ್ನು ಅಲ್ಲೋಲಕಲ್ಲೋಲ ಮಾಡಿ, ಸಂಪ್ರದಾಯ ಸಂಸ್ಕೃತಿಗೆ ವ್ಯತಿರಿಕ್ತವಾದ ಜೀವನ ಶೈಲಿಗಳನ್ನು ಸೃಷ್ಟಿಸಿ, ಅಮೆರಿಕನ್ನರು ತಮ್ಮ ಅಂತರಾಳವನ್ನು ಗಂಭೀರವಾಗಿ ಪರಿಶೀಲಿಸುವಂತೆ ಮಾಡಿತ್ತು. ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಆಧ್ಯಾತ್ಮಿಕವಾಗಿ (spiritual) ಕೂಡ ಅಮೆರಿಕವನ್ನು ಬದಲಾವಣೆ ಹೊಂದುವಂತೆ ಮಾಡಿತ್ತು ಈ ದುರಂತ ಐತಿಹಾಸಿಕ ಘಟನೆ. ನಿರ್ಬಂಧಗಳನ್ನು ತೆಗೆದುಹಾಕಿದ್ದು ಈ ಎರಡು ರಾಷ್ಟ್ರಗಳ ನಡುವೆ ಯುದ್ಧ ಅಂತಿಮವಾಗಿ ಮುಗಿಯಿತು ಎನ್ನುವುದರ ಸಂಕೇತವಾಯಿತು. ಈ ನಿರ್ಧಾರವನ್ನು ಆ ಯುದ್ಧದಲ್ಲಿ ಭಾಗವಹಿಸಿ ನರಕಜೀವನವನ್ನು ಅನುಭವಿಸಿದ್ದ ಹಳೆಯ ಸೈನಿಕರು (veterans) ವಿರೋಧಿಸಿದರು.

ಅಧ್ಯಕ್ಷ ಕ್ಲಿನ್‌ಟನ್ ತನ್ನ ಆಡಳಿತದ ಮೊದಲನೆಯ ವರ್ಷ ಮುಗಿಯುವ ಹೊತ್ತಿಗೆ ಪತ್ರಕರ್ತರು ಮತ್ತು ಇತರ ಟೀಕಾಕಾರರು 'ಕ್ಲಿನ್‌ಟನ್ ಆಡಳಿತ ಪೂರ್ಣ ಅವಧಿಯವರೆಗೆ ಉಳಿಯುವುದಿಲ್ಲ' ಎಂದು ಭವಿಷ್ಯ ಹೇಳಲು ಪ್ರಾರಂಭಿಸಿದ್ದರು. ಆದರೆ ಇನ್ನೇನು ಇವನ ಗತಿ ಮುಗಿದೇ ಹೋಯಿತು ಎನ್ನುವ ಸನ್ನಿವೇಶದಲ್ಲಿ 'ಬಿದ್ದರೂ ಎದ್ದು ಬರುವ ಹುಡುಗ!' (The come back Kid) ಎನ್ನಿಸಿಕೊಂಡ ಕ್ಲಿನ್‌ಟನ್ ತನ್ನ ತೀವ್ರ ವಿರೋಧಿಗಳು ಕೂಡ ಆಶ್ಚರ್ಯಪಡುವ ರೀತಿಯಲ್ಲಿ ಶ್ವೇತಭವನದ ಸಿಬ್ಬಂದಿಯನ್ನು ಬದಲಾಯಿಸಿ, ತಾನು ರೂಪಿಸಿದ ಆರ್ಥಿಕ ಯೋಜನೆಗಳನ್ನು ಪಕ್ಷ ರಾಜಕೀಯ ವಿಭಜಿಸಿದ ಕಾಂಗ್ರೆಸ್ ಅನುಮೋದಿಸುವಂತೆ ಮಾಡಿದನು. ಸುದ್ದಿ ಮತ್ತು ಸಂಪರ್ಕ ಇಲಾಖೆಯ ಮುಖ್ಯಸ್ಥನಾಗಿ ರೇಗನ್ ಆಡಳಿತದಲ್ಲಿ ಇದೇ ಇಲಾಖೆಯ ನಿರ್ದೇಶಕನಾಗಿದ್ದ ಡೇವಿಡ್ ಜರ್ಗೆನ್ (David

Gergen)ನ್ನು ನೇಮಿಸಿದನು. ಜಪಾನ್‌ನಲ್ಲಿ ನಡೆದ ವ್ಯಾಪಾರ/ವಾಣಿಜ್ಯ ಶೃಂಗಸಭೆಯಲ್ಲಿ ಸಂಯುಕ್ತ ಸಂಸ್ಥಾನಗಳ ಪ್ರತಿನಿಧಿಯಾಗಿ ಕ್ಲಿನ್‌ಟನ್ ಅತ್ಯಂತ ಪರಿಣಾಮಕಾರಿಯಾಗಿ ಭಾಗವಹಿಸಿ ಜಗತ್ತಿನ ಪ್ರಭಾವಶಾಲಿ ನಾಯಕರಲ್ಲಿ ಒಬ್ಬನೆಂಬ ಕೀರ್ತಿ ಪಡೆದನು.

ನೆರೆ ಬಂದು ಅಮೆರಿಕದ ಮಧ್ಯ-ಪಶ್ಚಿಮ ಪ್ರದೇಶವನ್ನು (mid-west) ಕೊಚ್ಚಿ ಅಪಾರ ಪ್ರಾಣಹಾನಿ ಮತ್ತು ಆಸ್ತಿ ಪಾಸ್ತಿಗಳನ್ನು ನಷ್ಟಗೊಳಿಸಿದ ಅಮೆರಿಕನ್ನರಿಗೆ, ಲಾಸ್ ಎಂಜಲಿಸ್ ನಗರದಲ್ಲಿ ಭೂಕಂಪನದಿಂದ ಮನೆ ಮಠಗಳನ್ನು ಕಳೆದುಕೊಂಡ ನತದೃಷ್ಟರಿಗೆ – ಈ ಪ್ರಕೃತಿಯ ವಿಕೋಪಕ್ಕೊಳಗಾಗಿ ನಿರ್ಗತಿಕರಾದ ಅಮೆರಿಕನ್ನರಿಗೆ ಫೆಡರಲ್ ಸರ್ಕಾರ ನೆರವು, ನಷ್ಟವನ್ನು ಭರಿಸುವ ಪ್ರಮಾಣದ ಹೆಚ್ಚಳ – ಇವುಗಳನ್ನು ಶೀಘ್ರವಾಗಿ ದೊರೆಯುವಂತೆ ಮಾಡಿ ಕ್ಲಿನ್‌ಟನ್ ಜನಾದರಣೆ ಪಡೆದನು.

ರಾಷ್ಟ್ರದ ಸ್ಥಿತಿಗತಿಗಳನ್ನು ಕುರಿತು ಮಾಡಿದ ತನ್ನ ಎರಡನೆಯ ಭಾಷಣದಲ್ಲಿ (Second State of the Union Address) ತಾನು ಜಾರಿಗೆ ತರಲಿಚ್ಛಿಸುವ ಕಾಯಿದೆಗಳ ಬಗ್ಗೆ ಕ್ಲಿನ್‌ಟನ್ ಮಾಹಿತಿ ನೀಡಿದನು – ಉಪಾಧ್ಯಕ್ಷ ಗೋರ್ ನಿರ್ಮಿಸಿದ 'ಸರ್ಕಾರದ ಪುನರನ್ವೇಷಣೆ' (reinventing government) – ಇದು ಅನಾವಶ್ಯಕವಾದ ಇಲಾಖೆಗಳನ್ನು ಮುಚ್ಚಿ ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆ ಮಾಡಿ ಸರ್ಕಾರದ ಒಟ್ಟಾರೆ ಸಾಮರ್ಥ್ಯವನ್ನು ಹೆಚ್ಚಿಸುವ ಗುರಿಯಿಟ್ಟುಕೊಂಡಿತ್ತು. ಹಿಂದಿನ ವರ್ಷ ಕಾಂಗ್ರೆಸ್ಸಿನಲ್ಲಿ ಮಂಡಿಸಿದ ಇನ್ನೂ ಇತ್ಯರ್ಥವಾಗದೆ ಉಳಿದಿರುವ ಮಸೂದೆಗಳನ್ನು ಕಾಂಗ್ರೆಸ್ ಅನುಮೋದಿಸಿ ಜಾರಿಗೆ ತರುವಂತೆ ಮಾಡುವುದು – ಅಪರಾಧ ಕಾಯಿದೆಯನ್ನು ಬಿಗಿಗೊಳಿಸುವುದು, ಚುನಾವಣೆಯ ಪ್ರಚಾರದ ಖರ್ಚನ್ನು ಬಿಗಿಗೊಳಿಸುವುದು (Campaign Spending Reform Bill) – ಇವೂ ಇದರಲ್ಲಿ ಸೇರಿದ್ದವು. ಈ ಭಾಷಣದ ಬಹುಮುಖ್ಯ ಅಂಶವೆಂದರೆ 'ಔಷಧೋಪಚಾರಗಳ ಯೋಜನೆ' (Health Care Plan). ಕ್ಲಿನ್‌ಟನ್ ಸೂಚಿಸಿದ ಆರೋಗ್ಯ ಭದ್ರತಾ ಕಾರ್ಡ್ (Health Security Plan) ಮತ್ತು ಅವನು ಚುನಾವಣಾ ಪ್ರಚಾರದಲ್ಲಿ ಕೊಟ್ಟ ಮಾತಿನಂತೆ 'ಈ ಶತಮಾನ ಮುಗಿಯುವುದರೊಳಗೆ ಪ್ರತಿಯೊಬ್ಬ ಅಮೆರಿಕನ್ನನಿಗೆ ಖಾತರಿಯಾಗಿ ಔಷಧೋಪಚಾರಗಳು (Guaranteed Universal Health Care) ಎಲ್ಲಾ ಅಮೆರಿಕನ್ ಪ್ರಜೆಗಳನ್ನು ಒಳಗೊಳ್ಳದೆ ಹೋದ ಯಾವ ಆರೋಗ್ಯ ಯೋಜನೆಯನ್ನಾದಾದರೂ ಕಾಂಗ್ರೆಸ್ ಜಾರಿಗೆ ತರಲು ಪ್ರಯತ್ನಿಸಿದರೆ ಅದನ್ನು 'ವೀಟೊ' ಮಾಡುವುದಾಗಿ ಬೆದರಿಕೆ ಹಾಕಿದನು. ಕಡೆಯದಾಗಿ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಅಧೀನತೆಯನ್ನು (dependency) ಬೆಳೆಸುವ ಸಮಾಜ ಕಲ್ಯಾಣ ವ್ಯವಸ್ಥೆಯನ್ನು (social welfare system) ಸುಧಾರಿಸಿದ್ದು ಚರಿತಾರ್ಹವಾದುದು. ಅದನ್ನು ಅನುಷ್ಠಾನಕ್ಕೆ ತಂದ ಕೀರ್ತಿ ಕ್ಲಿನ್‌ಟನ್‌ದಾಯಿತು.

ಬಿಲ್ ಕ್ಲಿನ್‌ಟನ್‌ನ ಬೆಂಬಿಡದ ಸಮಸ್ಯೆಗಳು

ರೊನಾಲ್ಡ್ ರೇಗನ್ 'Tefflon coated' ಅಧ್ಯಕ್ಷನೆಂದು ಹೆಸರು ಪಡೆದಿದ್ದನು. ಅಪನಿಂದೆಗಳು (scandals) ಅವನಿಗೆ ಅಂಟುತ್ತಿರಲಿಲ್ಲ. ಕ್ಲಿನ್‌ಟನ್ ಇದಕ್ಕೆ ತದ್ವಿರುದ್ಧ. ಆಯಸ್ಕಾಂತ ಕಬ್ಬಿಣದ ಅದುರನ್ನು ಸೆಳೆಯುವಂತೆ ಅವನಿಗೆ ಅಪನಿಂದೆಗಳು ಅಂಟಿ ಕೊಳ್ಳುತ್ತಿದ್ದವು. ಅವನು ತನ್ನ ರಾಜಕೀಯ ವೃತ್ತಿಜೀವನದಲ್ಲಿ ಜನಪ್ರಿಯತೆ, ಯಶಸ್ಸು ಮತ್ತು ಕೀರ್ತಿಗಳನ್ನು ಗಳಿಸಿದ್ದನು. ಆದರೆ ಖಾಸಗಿ ಜೀವನದಲ್ಲಿ ದುರ್ವ್ಯಸನಕ್ಕೊಳಗಾಗಿ ಮಾನ ಮರ್ಯಾದೆಗಳನ್ನೂ ಕಳೆದುಕೊಳ್ಳುವಂತಾಯಿತು. ಅವನು ಆರ್ಕನ್‌ಸಾ ಗವರ್ನರ್ ಆಗಿದ್ದ ಕಾಲದಿಂದಲೂ ಅವನನ್ನು 'ಹೆಣ್ಣಾಗಿ ಕಾಡಿತ್ತು ಮಾಯೆ!'

೧೯೯೨ರಲ್ಲಿ ಅಧ್ಯಕ್ಷ ಚುನಾವಣೆ ಪ್ರಚಾರ ನಡೆಯುತ್ತಿದ್ದಾಗ ನೈಟ್ ಕ್ಲಬ್ ನರ್ತಕಿ ಜೆನಿಫರ್ ಫ್ಲವರ್ಸ್ (Jennifer Flowers) ತನಗೂ ಕ್ಲಿನ್‌ಟನ್‌ಗೂ ಬಹಳ ಕಾಲದಿಂದ ಅನೈತಿಕ ಸಂಬಂಧವಿತ್ತೆಂದು ಹೇಳಿಕೆ ನೀಡಿದಳು. ಮೊದಲು ಕ್ಲಿನ್‌ಟನ್ ಈ ಅಪವಾದ ಗಳನ್ನು ಅಲ್ಲಗಳೆದರೂ ವರದಿಗಾರರು ಹೆಚ್ಚಿನ ಮಾಹಿತಿಗಳನ್ನು ಹುಡುಕಿ ತೆಗೆದಂತೆಲ್ಲ ಕಡೆಗೆ ಆ ವಿವಾಹದಾಚೆಗಿನ (extra marital) ಸಂಬಂಧವಿತ್ತೆಂದು ಒಪ್ಪಿಕೊಂಡನು. ಕ್ಲಿನ್‌ಟನ್ ಅಧ್ಯಕ್ಷನಾಗುವುದನ್ನೇ ಕಾಯುತ್ತಿದ್ದು ಅವನು ಅಧ್ಯಕ್ಷನಾದ ಕೂಡಲೇ ಪಾಲಾ ಜೋನ್ಸ್ ಎಂಬ ಆರ್ಕನ್‌ಸಾ ರಾಜ್ಯದ ಮಾಜಿ ನೌಕರಳು ಕ್ಲಿನ್‌ಟನ್ ಗವರ್ನರ್ ಆಗಿದ್ದಾಗ ಅವಳಿಗೆ ಲೈಂಗಿಕ ಕಿರುಕುಳ (sexual harassment) ಕೊಡುತ್ತಿದ್ದನೆಂದು ಆಪಾದಿಸಿ ನ್ಯಾಯಾಲಯದಲ್ಲಿ ದಾವಾ ಹಾಕಿದಳು. ಕ್ಲಿನ್‌ಟನ್ ವಿರೋಧಿಗಳು ಅವಳಿಗೆ ಎಲ್ಲ ವಿಧದ ಸಹಾಯವನ್ನೊದಗಿಸಿ ಕಟ್ಲೆ ಮುಂದುವರಿಸಿದರು. ಕಡೆಗೂ ಅದು ಯಶಸ್ವಿ ಯಾಗಲಿಲ್ಲ. 'ಬಿದ್ದರೂ ಎದ್ದು ಬರುವ ಹುಡುಗ'ನಾದ ಕ್ಲಿನ್‌ಟನ್ ಕಟ್ಲೆಯ ಆರೋಪ ಗಳನ್ನು ತನ್ನ ಮೇಲಿನ ಜಿದ್ದಿಗಾಗಿ ಮತ್ತು ಹಣಕ್ಕಾಗಿ ಸೃಷ್ಟಿಸಿಕೊಂಡಿದ್ದು ಎಂದು ವಾದಿಸಿದನು. ಕಟ್ಲೆ ಮುಂದುವರಿಸಲು ಸಮಯವಿಲ್ಲದಿದ್ದರಿಂದ ಜೋನ್ಸ್‌ನ ವಕೀಲ ರೊಡನೆ ಒಪ್ಪಂದ ಮಾಡಿಕೊಂಡು ಕೇಳಿದಷ್ಟು ಹಣ ಕೊಟ್ಟು ಕೈತೊಳೆದುಕೊಂಡನು. ಹಣ ಕೊಟ್ಟ ಮಾತ್ರಕ್ಕೆ ತಪ್ಪು ಒಪ್ಪಿಕೊಂಡಂತಾಯಿತು ಎಂದು ಕೆಲವರು ಅಭಿಪ್ರಾಯ ಪಟ್ಟರು. ಆದರೆ ಕ್ಲಿನ್‌ಟನ್‌ನ ಬೆಂಬಲಿಗರು ಇಂಥ ಸಣ್ಣ ವಿಷಯಕ್ಕೆ ಗಮನ ಕೊಡಲು ಅವನಿಗೆ ಸಮಯವಿರದಿದ್ದುದರಿಂದ ಹಾಗೆ ಮಾಡಬೇಕಾಯಿತು ಎಂದರು. ಪಾಲಾ ಜೋನ್ಸ್ ಕಟ್ಲೆ ಮುಖ್ಯವೋ, ಬರಾಕ್-ಅರಾಫಾತ್ ನಡುವೆ ಶಾಂತಿ ಏರ್ಪಡುವುದು ಮುಖ್ಯವೋ ಎಂದು ಅವರು ಸವಾಲು ಹಾಕಿದರು.

೧೯೯೮ರ ಜನವರಿಯಲ್ಲಿ ಹಿಲರಿ ಕ್ಲಿನ್‌ಟನ್‌ಳ 'White Water' ಆಸ್ತಿಯ ವ್ಯವಹಾರದಲ್ಲಿ ಅಕ್ರಮಗಳು ನಡೆದಿವೆ ಎಂದು ಆಪಾದನೆ ಹೊರಿಸಿ ಅವಳ ಎಲ್ಲ ಹಣಕಾಸು ವ್ಯವಹಾರಗಳನ್ನು ತನಿಖೆ ಮಾಡಲು ಕಾಂಗ್ರೆಸ್ ಕೆನೆತ್ ಸ್ಟಾರ್ (Kenneth

Starr) ಎಂಬ ವಕೀಲನನ್ನು ನೇಮಿಸಿತು. ಇವನು ನಕ್ಷತ್ರಿಕನಂತೆ ಹಿಲರಿ ಮತ್ತು ಬಿಲ್ ಕ್ಲಿನ್‌ಟನ್‌ರ ಬೆನ್ನು ಹತ್ತಿದನು. ಮಿಲಿಯನ್‌ಗಟ್ಟಲೆ ಡಾಲರ್ ಖರ್ಚು ಮಾಡಿ ಹಲವಾರು ವರ್ಷಗಳು ತನಿಖೆ ನಡೆಸಿದರೂ'White Water' ಆಸ್ತಿಯ ವ್ಯವಹಾರದಲ್ಲಿ ಯಾವ ಅಕ್ರಮವಾಗಲಿ ಅಥವಾ ಕಾನೂನು ಭಂಗವಾಗಲಿ ಕಂಡುಬರಲಿಲ್ಲ.

ಈ ಮಧ್ಯೆ ಶ್ವೇತಭವನದಲ್ಲಿ ಕದ್ದು ಮುಚ್ಚಿ ನಡೆಯುತ್ತಿದ್ದ ಕ್ಲಿನ್‌ಟನ್-ಲೂವಿನ್ಸ್ಕಿಯರ ಪ್ರಣಯ ಪ್ರಸಂಗ ಬೆಳಕಿಗೆ ಬಂದಿತು[೪]. ವರದಿಗಾರರಿಗೆ ಇದು ಸಮೃದ್ಧಿಯಾದ ಸುದ್ದಿಯ ಹಬ್ಬವಾಯಿತು. ರಿಪಬ್ಲಿಕನ್ನರ ಹಿಡಿತದಲ್ಲಿದ್ದ ಕಾಂಗ್ರೆಸ್ ಶ್ವೇತಭವನಕ್ಕೆ ಮಸಿ ಬಳಿದು ಅದರ ಘನತೆಗೆ ಧಕ್ಕೆ ತಂದ ಅನೈತಿಕ ಹಾಗೂ ಕಾನೂನು ಬಾಹಿರವಾಗಿರಬಹುದಾದ ಕಾಮಪ್ರಸಂಗ ಕಾನೂನು ಉಲ್ಲಂಘನೆಯ ದೃಷ್ಟಿಯಿಂದ ತನಿಖೆ ಮಾಡಲು ಕೆನೆತ್ ಸ್ಟಾರ್‌ಗೆ ಒಪ್ಪಿಸಿದರು. ಕ್ಲಿನ್‌ಟನ್ ಈ ಪ್ರಕರಣದಲ್ಲಿ ಕಾನೂನು ಉಲ್ಲಂಘನೆ ಮಾಡಿದ್ದು ಅವನ ಕೃತ್ಯಗಳನ್ನು 'High Crimes and Misdemeanor' ಎಂದು ಸಾಬೀತುಗೊಳಿಸಲು ಸಾಧ್ಯವಾದರೆ ಅವನನ್ನು ಅಧ್ಯಕ್ಷಗಿರಿಯಿಂದ ತೆಗೆದುಹಾಕುವುದಕ್ಕೆ ರಿಪಬ್ಲಿಕನ್ ಸೆನೆಟರುಗಳು ಕಾತುರರಾಗಿದ್ದರು. ಈ ಸುದ್ದಿ ಹರಡಿದ ಮೊದಲ ಮೂರು ದಿನಗಳಲ್ಲಿ ಕ್ಲಿನ್‌ಟನ್ ಮತ್ತು ಲೂವಿನ್ಸ್ಕಿ ಇಬ್ಬರೂ ತಮ್ಮ ನಡುವೆ ಯಾವ ಅನೈತಿಕ ಸಂಬಂಧ ಇಲ್ಲವೆಂದೂ, ಪತ್ರಿಕಾವರದಿಗಳು ಆಧಾರರಹಿತವಾದವುಗಳೆಂದು ಹೇಳಿ ನಿಜವನ್ನು ಮರೆಮಾಚಲು ಯತ್ನಿಸಿದರು[೫]. ಲಿಂಡಾ ಟ್ರಿಪ್ ಎನ್ನುವ ಲೂವಿನ್ಸ್ಕಿಯ ಸಹೋದ್ಯೋಗಿ ಕ್ಲಿನ್‌ಟನ್-ಲೂವಿನ್ಸ್ಕಿಯರ ಪರಸ್ಪರ ಸಂಭಾಷಣೆಯನ್ನು ಧ್ವನಿಸುರುಳಿಯಲ್ಲಿ ಮುದ್ರಿಸಿ ಬಹಿರಂಗ ಪಡಿಸಿದ ಮೇಲೆ ಕ್ಲಿನ್‌ಟನ್ ಅನಿವಾರ್ಯವಾಗಿ 'ಲೂವಿನ್ಸ್ಕಿಯೊಡನೆ ಅಯುಕ್ತವಾದ ಸಂಬಂಧ ಇತ್ತೆಂದು' ಒಪ್ಪಿಕೊಂಡನು. ೧೯೯೯ರ ಡಿಸೆಂಬರ್ ೧೯ರಂದು ರಿಪಬ್ಲಿಕನ್ನರು ಅಧಿಕ ಸಂಖ್ಯೆಯಲ್ಲಿದ್ದ ಕಾಂಗ್ರೆಸ್‌ನಲ್ಲಿ ಅಧ್ಯಕ್ಷ ಕ್ಲಿನ್‌ಟನ್ ಮೇಲೆ ಆರೋಪ ಹೊರಿಸಿದರು (impeachment charges) ಈ ಆಪಾದನೆಗಳು, ವಿಶಿಷ್ಟವಾಗಿ ಕ್ಲಿನ್‌ಟನ್ ಲೂವಿನ್ಸ್ಕಿಯೊಡನೆ ವ್ಯಭಿಚಾರ ನಡೆಸಿದ್ದರೂ ಇಲ್ಲವೆಂದು ಸುಳ್ಳು ಹೇಳಿದ್ದು,

೪. ಕ್ಲಿನ್‌ಟನ್-ಲೂಪಿನ್ಸ್ಕಿಯರ ಸಂಬಂಧ ಯಾವ ರೀತಿಯದು ಎಂದು ನಿರೂಪಿಸುವುದು ಕಷ್ಟ. ಕ್ಲಿನ್‌ಟನ್ ಅದು ಲೈಂಗಿಕ ಸಂಬಂಧವಲ್ಲವೆಂದು ಬಹಿರಂಗವಾಗಿ ಹೇಳಿದ್ದಾನೆ. ಶ್ವೇತ ಭವನದಲ್ಲಿ ಏನು ನಡೆಯಿತು ಎನ್ನುವುದು ಅವರಿಬ್ಬರಿಗೆ ಮಾತ್ರ ಗೊತ್ತು. ಸುದ್ದಿ ಮಾಧ್ಯಮ (news media) ಈ ಪ್ರಕರಣವನ್ನು ರಂಗು ರಂಗಿನ ಕಥೆಯನ್ನಾಗಿ ಮಾಡಿದ್ದಾರೆ.

೫. ೧೯೯೮ರ ಜನವರಿ ೧ರಂದು ದೂರದರ್ಶನದ ಪ್ರಸಾರದಲ್ಲಿ ಇಡೀ ರಾಷ್ಟ್ರಕ್ಕೆ ಕ್ಲಿನ್‌ಟನ್ ಹೇಳಿದ ಸುಳ್ಳು ಕುಖ್ಯಾತವಾಗಿದೆ: 'I want you to listen to me. I am going to say this again. I did not have sexual relation with that woman Ms. Lewinsky. I never told anybody to lie . . . . . Never. These allegations are false and I need to go back to work for the American people.'

ನ್ಯಾಯಾಲಯದ ವಿಚಾರಣೆಗೆ ಅಡ್ಡಿಪಡಿಸಿದ್ದು, ಸಾಕ್ಷ್ಯಾಧಾರಗಳನ್ನು ತನಗೆ ಅನುಕೂಲವಾಗುವಂತೆ ಬದಲಾಯಿಸಲು ಪ್ರಯತ್ನಿಸಿದ್ದು ಮತ್ತು ಪ್ರಮಾಣಬದ್ಧನಾಗಿಯೂ ಸುಳ್ಳು ಹೇಳಿದ್ದು – ಇವು ಸಾಬೀತಾಗಿ ಅವನನ್ನು ಅಧಿಕಾರದಿಂದ ತೆಗೆದುಹಾಕಬೇಕೆಂದು ರಿಪಬ್ಲಿಕನ್ ಸೆನೆಟರುಗಳು ನಿರ್ಣಯಿಸಿದರು. ಈ ರೀತಿ ನಿರ್ಧಾರಕ್ಕೆ ಒಳಪಟ್ಟವರಲ್ಲಿ ಕ್ಲಿನ್‌ಟನ್ ಎರಡನೆಯವನು (ಮೊದಲನೆಯವನು ೧೭ನೆಯ ಅಧ್ಯಕ್ಷ ಆ್ಯಂಡ್ರೂ ಜಾಕ್‌ಸನ್)

ಈ ನಿರ್ಧಾರ ಸೆನೆಟ್ ಕೈಗೊಂಡರೂ ಜನಾಭಿಪ್ರಾಯ ಗಣತಿಯ (opinion polls) ಪ್ರಕಾರ ಅವನ ಅನೀತಿಯುತ ನಡವಳಿಕೆಯನ್ನು ಅಮೆರಿಕನ್ನರು ಖಂಡಿಸಿದರೂ ಅವನನ್ನು ಅಧ್ಯಕ್ಷತೆಯಿಂದ ತೆಗೆದುಹಾಕಬಾರದು ಎಂದು ತೀರ್ಮಾನಿಸಿದ್ದರು. ಜನಾಭಿಪ್ರಾಯಕ್ಕೆ ವಿರುದ್ಧವಾಗಿ ಹೋಗಲಾರದೆ ಸೆನೆಟ್ ೧೯೯೯ರ ಫೆಬ್ರವರಿ ೧೨ರಂದು ಕ್ಲಿನ್‌ಟನ್ ನಿರ್ದೋಷಿ ಎಂದು ನಿರ್ಣಯಿಸಿ ಅವನನ್ನು ಆಪಾದನೆಗಳಿಂದ ಮುಕ್ತಗೊಳಿಸಿತು[೭]. ಕ್ಲಿನ್‌ಟನ್ ತನ್ನ ಅಧ್ಯಕ್ಷತೆಯ ಪೂರ್ಣ ಅವಧಿಯನ್ನು ಮುಗಿಸಿದನು. ಹಿಲರ್ ಕ್ಲಿನ್‌ಟನ್‌ಳು ನ್ಯೂ ಯಾರ್ಕ್ ಸೆನೆಟರ್ ಆಗಿ ಚುನಾಯಿತಳಾದಳು. ಉಪಾಧ್ಯಕ್ಷ ಆ್ಯಲ್ ಗೋರ್‌ನು ೨೦೦೦ ವರ್ಷದ ಅಧ್ಯಕ್ಷ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಲು ಡೆಮೊಕ್ರಾಟಿಕ್ ಪಕ್ಷದ ನಾಮಕರಣ ಪಡೆದನು. ರಿಪಬ್ಲಿಕನ್ ಪಕ್ಷ ಟೆಕ್ಸಾಸ್ ಗವರ್ನರ್ ಜಾರ್ಜ್ ಬುಷ್‌ನನ್ನು ಅಧ್ಯಕ್ಷ ಸ್ಥಾನಕ್ಕೆ ನಾಮಕರಣ ಮಾಡಿತು. ಚುನಾವಣೆಯಲ್ಲಿ ಇಬ್ಬರೂ ಸಮಾನ ಮೊತ್ತದ ಮತಗಳನ್ನು ಪಡೆಯುತ್ತ ಬಂದುದರಿಂದ ಯಾರು ಗೆಲ್ಲುತ್ತಾರೆ ಎನ್ನುವುದು ಫ್ಲಾರಿಡಾ ರಾಜ್ಯದ ಮತಗಣತಿಯ ಫಲಿತಾಂಶದ ಮೇಲೆ ನಿರ್ಧಾರವಾಗಬೇಕಾಗಿ ಬಂದು ಅದು ಮುಗಿಯುವವರೆಗೂ ರಾಷ್ಟ್ರದ ಮತ್ತು ಪ್ರಪಂಚದ ದೃಷ್ಟಿ ಫ್ಲಾರಿಡಾ ಚುನಾವಣೆಯ ಫಲಿತಾಂಶದ ಮೇಲೆ ಕೇಂದ್ರೀಕರಿಸಿತ್ತು.

೨೦೦೦ ವರ್ಷದ ಅಧ್ಯಕ್ಷ ಚುನಾವಣೆಯಲ್ಲಿ ರಾಷ್ಟ್ರದ ಸಮಸ್ಯೆಗಳಾಗಲಿ, ಪಕ್ಷಗಳ

---

೭. ಕ್ಲಿನ್‌ಟನ್ ನಡತೆ ಲಜ್ಜಾರಹಿತ, ಅನೀತಿಯುತವಾಗಿದ್ದರೂ ಸಹ ಅದು ದೇಶದ್ರೋಹ, ಕೊಲೆ–ಸುಲಿಗೆ, ಲಂಚ ರುಷುವತ್ತು ಪಡೆಯುವುದು ಮುಂತಾದ 'High crimes and misdemeanors' ಮಟ್ಟದ ದುಷ್ಕೃತ್ಯಗಳಲ್ಲದೆ ಹೋದುದರಿಂದ ರಾಜ್ಯಾಂಗದ ಪ್ರಕಾರ ಕ್ಲಿನ್‌ಟನ್‌ನನ್ನು ಅನೈತಿಕ ನಡವಳಿಕೆಗಳಿಗಾಗಿ ಅಧ್ಯಕ್ಷಪದವಿಯಿಂದ ತೆಗೆಯುವುದು ಸಾಧ್ಯವಿರಲಿಲ್ಲ. ಕ್ಲಿನ್‌ಟನ್ 'ಬಿದ್ದರೂ ಎದ್ದು ಬರುವ ಹುಡುಗ' ಎಂದು ಸುಮ್ಮನೆ ಹೆಸರು ಪಡೆದಿಲ್ಲ. ಅಮೆರಿಕನ್ನರು ಅವನ ಖಾಸಗಿ ನಡವಳಿಕೆಗಾಗಿ ಅವನನ್ನು ಹೀಗಳೆದರೂ ಅವನು ಈಚಿನ ಅಧ್ಯಕ್ಷರಲ್ಲೆಲ್ಲ ಅತ್ಯಂತ ಪರಿಣಾಮಕಾರಿಯಾದವನು. ಅವನ ಅಧಿಕಾರದ ಅವಧಿಯಲ್ಲಿ ಜಾರಿಗೆ ಬಂದ ಜನಸಾಮಾನ್ಯರಿಗೆ ಅನುಕೂಲವಾಗುವ ಕಾಯಿದೆಗಳು ಬೇರೆ ಯಾವ ಅಧ್ಯಕ್ಷನ ಅಧಿಕಾರದಲ್ಲಿಯೂ ಜಾರಿಯಾಗಲಿಲ್ಲ. ಆದ್ದರಿಂದ ಕ್ಲಿನ್‌ಟನ್ ಈಗ ಮಾಜಿ ಅಧ್ಯಕ್ಷನಾಗಿದ್ದರೂ ವಿದೇಶಗಳೂ ಸೇರಿದಂತೆ, ಜನಪ್ರಿಯನಾಗಿದ್ದಾನೆ.

ಧ್ಯೇಯ ಧೋರಣೆಗಳಾಗಲಿ ಅಥವಾ ಸಮಾಜ ಸುಧಾರಣೆಯಾಗಲಿ – ಯಾವುದೂ ಮುಖ್ಯವಾಗಿರದೆ ಪಕ್ಷ ರಾಜಕೀಯವೊಂದೇ ಪರಮಾವಧಿಗೆ ಮುಟ್ಟಿತ್ತು. ಮುಂದಿನ ಅಧ್ಯಕ್ಷ ಯಾರು – ಆ್ಯಲ್ ಗೋರ್‌ನೋ ಅಥವಾ ಜಾರ್ಜ್ ಬುಷ್‌ನೋ – ಎನ್ನುವುದಷ್ಟೆ ಮುಖ್ಯವಾಗಿತ್ತು. ಮತಗಣಿಕೆ ಪ್ರತಿಹಂತದಲ್ಲಿ ವಾದಗ್ರಸ್ಥವಾಗಿ, ಗೋರ್ ಮತ್ತು ಬುಷ್‌ನ ಅನುಯಾಯಿಗಳು ಕೋಪಾವಿಷ್ಟರಾಗಿ, ಕೂಗಾಟ, ಗೊಂದಲಮಯ ವಾತಾವರಣ ಉಂಟಾಗಿ ಪರಿಸ್ಥಿತಿ ಗಂಭೀರವಾಗಿತ್ತು. ಅಂತಿಮವಾಗಿ ಈ ವಾದಗ್ರಸ್ಥ ಚುನಾವಣೆಯಲ್ಲಿ ಗೆದ್ದವನು ಯಾರು ಎನ್ನುವುದನ್ನು ರಾಷ್ಟ್ರದ ಶ್ರೇಷ್ಠ ನ್ಯಾಯಾಲಯ (Supreme Court) ನಿರ್ಣಯಿಸಬೇಕಾಯಿತು. ಈ ಚುನಾವಣೆಯ ಕಾಲದಲ್ಲಿ ಏರ್ಪಟ್ಟಿದ್ದ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಈ ಕೆಳಗಿನ ವಿಡಂಬನಾತ್ಮಕ ಕವನ ಅಭಿವ್ಯಕ್ತಗೊಳಿಸುತ್ತದೆ.

ಫ್ಲಾರಿಡಾ ಎಲೆಕ್ಷನ್

(ಕುವೆಂಪು ಅವರ ಕ್ಷಮೆ ಬೇಡಿ)

ಸಿ ಎನ್ ಎನ್ ವಾರ್ತೆಯ ಕೇಳಿದನೆಂದರೆ
ಅಲಬಾಮ ಫ್ಲಾರಿಡ ಆಗುವುದು
ಆ ವೋಟಿನ ಕದನವು ಕಾಣುವುದು
ಆ ರಾಜಕೀಯ ರಣರಂಗದಲಿ
ಆ ಪಕ್ಷಗಳ ಪರದಾಟದಲಿ
ಪಕ್ಷದ ಜನರಾರ್ಭಟಾ ಕೇಳುವುದು
ಮೈ ನವಿರೇಳುವುದು!

ಹೊಳೆಯುವ ಭಿತ್ತಿಗಳಾಟದಲಿ
ಪಕ್ಷಗಳೆರಡರ ಜಿದ್ದಿನಲಿ
ಕೂಗುವ ಜನ ಸಂಘಟನೆಯಲಿ
ಸೈರನ್‌ಗಳ ಚೀತ್ಕಾರದಲಿ
ಸೋಲ್ವರ ಶಾಪದಲಿ
ಮತ ಎಣಿಸುವವರ ತಾಪದಲಿ
ನಸು ಸೋತವರ ಕೋಪದಲಿ
ನೆರೆಗೆದ್ದಿಹರಾಟೋಪದಲಿ
ನುಗ್ಗುವ ಜನರ ಹಾಹಾಕಾರದಿ
ಕೆರಳಿದ ಜನರ ರೋಷಾರವದಲಿ
ಕಿವಿ ಬಿರಿಯುವುದು!
ಎದೆ ಮುರಿಯುವುದು!

ಬಸಿಯುವ ಬೆವರಿನ ಸ್ನಾನದೊಳೂಡಿ
ಚಿಮ್ಮುವ ಉತ್ಸಾಹ ಹರಿಯಿತು ಕೋಡಿ
ನೋಡುವವರ ಕಣ್ಣೊಡೆಯುವುದು!
ಹೇಸಿಗೆಯಲಿ ಮೈ ನಡಗುವುದು!

ಕೇಳಿರಿ! ಬುಷ್ ಪ್ರತಿನಿಧಿ ಬೇಕರನು
ಎಲೆಕ್ಷನ್ ರೀತಿಯನು
ಎಲೆಕ್ಷನ್ ನೀತಿಯನು
ಬೋಧಿಸುವನು ನಿರ್ಭೀತಿಯನು!

ವೈಟ್‌ಹೌಸಿನ ಲಿಂಕನ್ ಮಂಚದಲಿ
ಕ್ಲಿನ್‌ಟನ್ ಮಲಗಿಹನು
ಮುಗಿಯದ ಮತಗಳ ಎಣಿಕೆಯಲಿ
ಗೋರೆನು ಬಿದ್ದಿಹನು!

ತಂದೆಯ ನೆರಳಲಿ ಸುಖದಿಂದಿರುವನು
ಬುಷ್‌ನು ನೋಡಲ್ಲಿ!
ಅಧ್ಯಕ್ಷಪೀಠದಿಂದುರುಳುತಲಿರುವನು ಗೋರೆನು
ಹಾ! ಹಾ! ನೋಡಿಲ್ಲಿ!

ಈ ರಾಷ್ಟ್ರದ ಮೊದಲಿನ ಮಹಿಳೆ
ಹೆಣ್ಣಿನ ರೂಪದ ಡೆಮೊಕ್ರಾಟಿಕ್ ಕಹಳೆ
ಮುಗುಳ್ನಗೆ ಬೀರುತ ನೋಡಲ್ಲಿ
ನಿಂತಿರುವಳು ನ್ಯೂಯಾರ್ಕಿನಲಿ
ಹಿಲರಿ ಹೊಸ ಸೆನೆಟರಳಾಗಿ!

ಪೊಟೊಮ್ಯಾಕ್ ನದಿ ತೀರದಿ
ತೋರುವರಾರಲ್ಲಿ?
ಗೋರೆಯು ಸಿಡಿಲಾಗಿರುವನು
ಬುಷ್‌ನ ಸವಾಲಿನಲಿ
ವಿರೋಧಿಯ ಎದೆಯನು
ಬಿರಿಯುವ ಭಾಷಣ
ಮಾಡುತ್ತಿರುವನು ನೋಡಲ್ಲಿ!

ಗೋರೆಯು ಬಿದ್ದನೆ?
ಬುಷ್‌ನು ಗೆದ್ದನೆ?
ಮುಂದಾಗುವುದನು ಕಾಣಲ್ಲಿ!
ಇದಾವ ನ್ಯಾಯ?
ಏನನ್ಯಾಯ!
ಚೇನಿಯ ಕುಹಕವ ನೋಡಲ್ಲಿ!
ಏನನು ನೋಡುವೆ?
ತಡೆಯುವೆ ಏಕೆ?
ಆ್ಯಲ್ ಗೋರೆಯು ಸೋಲಲೆಬೇಕೆ?
ಯುವಕನೆ ಹುಡುಕು ಕಂಪ್ಯೂಟರನು
ಕೂಡಲೆ ಕಳುಹಿಸು ಇ–ಮೇಲ್‌ಗಳನು!
ಹೊಡೆ ಮರುಚುನಾವಣಾ ಭೇರಿಯನು
ನಡೆ ನಡೆ ಊದು ತುತ್ತೂರಿಯನು
ಕರೆ ರಿಪಬ್ಲಿಕನ್ ರಣಹೇಡಿಗಳನು!

ಅಮೆರಿಕ: ೨೧ನೆಯ ಶತಮಾನದಲ್ಲಿ ಮತ್ತು ಅದರಿಂದಾಚೆಗೆ

ಸೋವಿಯೆಟ್ ಒಕ್ಕೂಟ ಇಡೀ ಜಗತ್ತನ್ನು ಸರ್ವನಾಶಗೊಳಿಸಬಲ್ಲ ಅಣ್ವಸ್ತ್ರಗಳನ್ನು ಹೊಂದಿದ್ದ ದೈತ್ಯ ರಾಷ್ಟ್ರವಾಗಿತ್ತು. ಅದಕ್ಕೆ 'ಕಮ್ಯೂನಿಸಂ' ಒರಲೆ ಹಿಡಿದು ಒಳಗಿನಿಂದ ಶಿಥಿಲವಾಗುತ್ತ ಬಂದು ಕಸುವು ಕಳೆದುಕೊಂಡು ಎಲ್ಲರ ಕಣ್ಣೆದುರು ಕುಸಿದು ಬಿದ್ದು ಕೊನೆಯ ಉಸಿರೆಳೆಯಿತು. ಸೋವಿಯೆಟ್ ಒಕ್ಕೂಟದ ಅನಿರೀಕ್ಷಿತ ಅವಸಾನ ಅಮೆರಿಕವನ್ನು ಜಗತ್ತಿನ ಅತ್ಯಂತ ಶಕ್ತಿಯುತ (Super Power) ರಾಷ್ಟ್ರದ ಅಂತಸ್ತಿಗೆ ಏರಿಸಿತು. ಇದು ಅಮೆರಿಕನ್ನರನ್ನು 'ತಮ್ಮ ಸಮ ಯಾರೂ ಇಲ್ಲ' ಎನ್ನುವ ಸ್ವಪ್ರಶಂಸೆಯ ಸುಷುಪ್ತಿಯಲ್ಲಿ ಮೈಮರೆಯುವಂತೆ ಮಾಡಿತು. "೯-೧೧" ಎಂದು ಕುಖ್ಯಾತವಾಗಿರುವ ಸೆಪ್ಟೆಂಬರ್ ೧೧, ೨೦೦೧ರ ಘಟನೆ ಅಮೆರಿಕನ್ನರನ್ನು ಈ ಸುಷುಪ್ತಿಯಿಂದ ಬಡಿದೆಚ್ಚರಿಸಿ ಭಯೋತ್ಪಾದಕರ ದಾಳಿಯಿಂದ ತಾವು ಸುರಕ್ಷಿತವಾಗಿಲ್ಲ ಎಂಬ ಸತ್ಯವನ್ನು ಮನಗಾಣಿಸಿತು. ಪರಿಣಾಮವಾಗಿ ಅಮೆರಿಕ ಸ್ವದೇಶಿ ಮತ್ತು ವಿದೇಶಿ ಭಯೋತ್ಪಾದಕರ ಸವಾಲನ್ನು ಎದುರಿಸಲು ಸರ್ವಸಿದ್ಧತೆಗಳನ್ನು ಮಾಡಿಕೊಳ್ಳುವುದು ಅನಿವಾರ್ಯವಾಯಿತು. ಈ ಸಿದ್ಧತೆಗಳು ರಕ್ಷಣೆಯ ದೃಷ್ಟಿಯಿಂದ ಉಪಯುಕ್ತವಾದರೂ, ವೈಯಕ್ತಿಕ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತವೆ. ಅಮೆರಿಕದ ಪ್ರಜೆಗಳು ತಮ್ಮ ದೇಶದೊಳಗೆ ಎಲ್ಲೆಂದರಲ್ಲಿಗೆ ಅಡೆತಡೆಯಿಲ್ಲದೆ ಓಡಾಡುತ್ತಿದ್ದುದು '೯-೧೧' ಘಟನೆಯಿಂದಾಗಿ ಪರಿವರ್ತನೆಗೊಂಡು ಪ್ರಯಾಣ ಮತ್ತು ರಕ್ಷಣಾವ್ಯವಸ್ಥೆಗಳಲ್ಲಿ ಪ್ರಜೆಗಳಿಗೆ ಅಹಿತಕರ ಅನುಭವಗಳಾಗುವಂತಾಯಿತು. ಉದಾಹರಣೆಗೆ ಪ್ರಯಾಣಿಕರು ಅವಮಾನಕರವಾದ 'ಹುಡುಕಾಟ'ಗಳಿಗೆ (search) ಒಪ್ಪಿಸಿಕೊಳ್ಳಬೇಕು. ಇವೆಲ್ಲ ಅಮೆರಿಕನ್ನರಿಗೆ ಹೊಸದಾದುವು.

ಭಯೋತ್ಪಾದಕರ ಪಿತೂರಿ ಮತ್ತು ಕಾರ್ಯಾಚರಣೆಗಳು ಎಲ್ಲಿ, ಯಾವಾಗ, ಹೇಗೆ ನಡೆಯುತ್ತವೆ ಎಂದು ಊಹಿಸುವುದೂ ಕಷ್ಟವಾಯಿತು. ೨೦ನೆಯ ಶತಮಾನದಲ್ಲಾದ ಕೆಲವು ಘಟನೆಗಳ ಬಗ್ಗೆ ಯಾರೂ ಖಚಿತವಾದ ಭವಿಷ್ಯ ಹೇಳಿರಲಿಲ್ಲ. ೬೦ರ ದಶಕದ ಸಾಮಾಜಿಕ ಅವ್ಯವಸ್ಥೆ, ಸೋವಿಯೆಟ್ ಒಕ್ಕೂಟದ ಅಸ್ತಮಾನ – ಇಂಥ ಎಷ್ಟೋ ಘಟನೆಗಳೂ ಸಂಭವಿಸುತ್ತವೆ ಎಂದು ಯಾರೂ ಊಹಿಸಿರಲಿಲ್ಲ. ಆದ್ದರಿಂದ ಮುಂದಿನ ಶತಮಾನದಲ್ಲಿ ಏನಾಗಬಹುದೆಂಬ ಭವಿಷ್ಯ ನುಡಿಯುವಾಗ ಎಚ್ಚರಿಕೆ ವಹಿಸಬೇಕು. ಮುಂದೆ ಸಂಭವಿಸಬಹುದಾದ ಪ್ರಕೃತಿ ವಿಕೋಪಗಳನ್ನು, ದುರಂತಗಳನ್ನು ಆಧುನಿಕ ಯಂತ್ರೋಪಕರಣಗಳ ಸಹಾಯದಿಂದ ಸಾಕಷ್ಟು ಖಚಿತವಾಗಿ ಊಹಿಸಬಹುದು – ಭೂಮಿಯ ಸಂಪನ್ಮೂಲಗಳಿಗೆ 'ಜನಸಂಖ್ಯೆಯ ಆಸ್ಫೋಟನೆ' ತರಬಹುದಾದ ಆಪತ್ತು, ದಿಢೀರನೆ ಧನವಂತರಾಗುವ ದುರಾಸೆಯಿಂದ ಸುತ್ತಮುತ್ತಲಿನ ಪ್ರಕೃತಿ ಸಂಪತ್ತನ್ನು ನಾಶಮಾಡಿ ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸುವುದು; ಈ ಕೈಗಾರಿಕೆಗಳನ್ನು ಹಿಂಬಾಲಿಸಿ ಬರುವ ಸಾಮಾಜಿಕ ಸಮಸ್ಯೆಗಳು ಮತ್ತು ಯಂತ್ರ ನಾಗರಿಕತೆಯನ್ನು ವಿಸ್ತರಿಸುವಾಗ ಉಂಟಾಗುವ ಸಮಸ್ಯೆಗಳು; ಈ ವಿಷವೃತ್ತದ ಪರಿಹಾರ ವಿಜ್ಞಾನದಿಂದಲೇ ಎಂದು ನಾವು ನಂಬಿರುವುದು ಒಂದು ವಿಪರ್ಯಾಸ!

ಈ ಯುಗದ ಕಾಮಧೇನು, ಕಲ್ಪವೃಕ್ಷ ಎಲ್ಲ ಆಗಿರುವ 'ಕಂಪ್ಯೂಟರ್' ಕೈಗೂಡಿಸಿರುವ 'ಸೈಬರ್ ಸ್ಪೇಸ್' (Cyber Space) ಸಮಾಜ ಸಮಾನತೆಯನ್ನು ಸೃಷ್ಟಿಸುತ್ತದೆ ಎಂದು ನಾವು ಆಶಿಸಿದ್ದೇವೆ. ಈ ಹೊಸಯಂತ್ರಜ್ಞಾನ ನಮ್ಮ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಮುಖ್ಯ ಪಾತ್ರ ವಹಿಸುತ್ತದೆ ಎಂದು ನಾವು ನಂಬಿದ್ದೇವೆ. ಆದರೆ ಈ ಯಂತ್ರಜ್ಞಾನವನ್ನು ಯಾರು, ಯಾವುದಕ್ಕಾಗಿ ಉಪಯೋಗಿಸುತ್ತಾರೆ? ಅದನ್ನು ನಿಯಂತ್ರಿಸುವವರಾರು? ಅದರ ಗೊತ್ತುಗುರಿ ಏನು? – ಇವೆಲ್ಲ ಮುಖ್ಯ ಪ್ರಶ್ನೆಗಳಾಗುತ್ತವೆ. ಹೊಸ ಯಂತ್ರಗಳು ಬೇಕು ನಿಜ, ಆದರೆ ಇದುವರೆಗಿನ ಯಂತ್ರ ನಾಗರಿಕತೆ ಸಮಸ್ಯೆಗಳನ್ನು ಹೆಚ್ಚಿಸಿದೆಯೇ ಹೊರತು ಯಾವ ಮೂಲಭೂತ ಸಮಸ್ಯೆಯನ್ನೂ ಸಂಪೂರ್ಣವಾಗಿ ಪರಿಹರಿಸಿಲ್ಲ. ಈ ಮೂಲಭೂತ ಸಮಸ್ಯೆಗಳು ರೂಪಾಂತರಗೊಳ್ಳಬಹುದೇ ಹೊರತು ಪರಿಹಾರಗೊಳ್ಳುವುದಿಲ್ಲ. ಅಮೆರಿಕನ್ ಗಣರಾಜ್ಯ ಸ್ಥಾಪಿಸಿದ ನಾಯಕರು ಯಾವ ಸಮಸ್ಯೆಗಳನ್ನು ಎದುರಿಸಿದರೋ – ವರ್ಣದ್ವೇಷ, ಬಡತನ, ರೋಗರುಜಿನಗಳು, ಶೋಷಣೆ, ಕೊಲೆ ಸುಲಿಗೆ – ಇತ್ಯಾದಿ ಸಮಸ್ಯೆಗಳು ಈಗಲೂ ಇವೆ. ವೈವಿಧ್ಯತೆಯುಳ್ಳ ಹಾಗೂ ಸಂಕೀರ್ಣವಾದ ಅಮೆರಿಕನ್ ಸಮಾಜದ ವಿವಿಧ ವರ್ಣಗಳ (races) ನಡುವೆ ಸೌಹಾರ್ದತೆ ಮತ್ತು ಸಮಾನತೆ ಏರ್ಪಡಿಸಲು ಹಿಂದಿನಂತೆ ಇಂದು, ಇಂದಿನಂತೆ ಮುಂದು ಪ್ರಯತ್ನ ಮಾಡುತ್ತಲೇ ಇರಬೇಕಾದುದು ಅನಿವಾರ್ಯ. ಒಟ್ಟಾರೆ ಹೇಳುವುದಾದರೆ, ಅಮೆರಿಕ ೨೧ನೆಯ ಶತಮಾನದಲ್ಲಿ ಸಾಧಿಸಬೇಕಾಗಿರುವ ಗುರಿ, ಸಾಮಾಜಿಕ ಅನುಕಲನ. ಅಮೆರಿಕನ್ನರು ಸಾಧಿಸಿರುವ ವಿಸ್ಮಯಕಾರಿ ವೈಜ್ಞಾನಿಕ ಪ್ರಗತಿಯ ಫಲ ಅನುಭವಿಸಲು

ಸಮಾಜದ ಎಲ್ಲ ವರ್ಗದವರಿಗೂ ಸಮಾನ ಅವಕಾಶಗಳಿವೆಯೋ? ಅಥವಾ ಅವು ಶ್ರೀಮಂತವರ್ಗಕ್ಕೆ ಮೀಸಲೋ? ವರ್ಷ ವರ್ಷಕ್ಕೆ ಹೆಚ್ಚುತ್ತಿರುವ ವರ್ಣ (race) ಮತ್ತು ಸಾಂಸ್ಕೃತಿಕ (ethnic) ವೈವಿಧ್ಯತೆ ಅಮೆರಿಕನ್ನರಲ್ಲಿ ಸಹಿಷ್ಣುತೆಯನ್ನು ಹೆಚ್ಚಿಸಬಲ್ಲವೆ? ಅಥವಾ ಒಡಕುಗಳನ್ನು ಹೆಚ್ಚಿಸಿ ಸಮಾಜವನ್ನು ಛಿದ್ರಗೊಳಿಸುತ್ತವೆಯೋ – ಇವೇ ವಿವಾದಗ್ರಸ್ತ ಅಂಶಗಳು ಹೇಗೆ ನಿರ್ಣಯಗೊಳ್ಳುತ್ತವೆ ಎನ್ನುವುದು ೨೧ನೆಯ ಶತಮಾನದ ಅಮೆರಿಕನ್ನರ ಜೀವನವನ್ನು ರೂಪಿಸುತ್ತವೆ.

ಮೂಲಭೂತ ಸಮಸ್ಯೆಗಳು ಯಾವ ಸಮಾಜದಲ್ಲಿಲ್ಲ? ಆ ಸಮಸ್ಯೆಗಳನ್ನು ಆಯಾ ರಾಷ್ಟ್ರ ಯಾವ ರೀತಿಯಲ್ಲಿ ಪರಿಹರಿಸಿಕೊಳ್ಳುತ್ತದೆ ಎನ್ನುವುದರ ಮೇಲೆ ಆ ರಾಷ್ಟ್ರದ ಅಭ್ಯುದಯ/ಪ್ರಗತಿಯನ್ನು ನಿರ್ಧರಿಸಬಹುದು. ಇತರ ರಾಷ್ಟ್ರಗಳಿಗೆ ಹೋಲಿಸಿದರೆ ಅಮೆರಿಕ ಅತ್ಯಂತ ಪ್ರಗತಿಶೀಲ ರಾಷ್ಟ್ರ ಎಂದು ಹೇಳಲು ಸಾಕಷ್ಟು ಪುರಾವೆಗಳಿವೆ. ಅಮೆರಿಕ ಜಗತ್ತಿನ ಅತ್ಯಂತ 'ತೆರೆದ' ರಾಷ್ಟ್ರ (open nation). ಜಗತ್ತಿನ ಮೂಲೆ ಮೂಲೆಗಳಿಂದ ಜನ ಹೆಚ್ಚಾಗಿ ವಲಸೆ ಬರುವುದು ಅಮೆರಿಕಕ್ಕೆ. ಇಲ್ಲಿನ ಸಮ್ಮಿಶ್ರ ಸಮಾಜದಲ್ಲಿ ತಾವೆಲ್ಲ ವಲಸೆಗಾರರ ಸಂತತಿಯವರು ಎನ್ನುವ ಭಾವನೆ ಅವರಲ್ಲಿ ಮೂಡಬಹುದು. ಆ ಸಂದರ್ಭದಲ್ಲಿ ಸಂಪೂರ್ಣ ಅನುಕಲನ ಸಾಧ್ಯವಾದೀತೆ? ೧೯೬೦ರ ಮತ್ತು ೭೦ರ ದಶಕದಲ್ಲಿ ಅಮೆರಿಕದ ಸಮಾಜ ಈ ಅನುಕಲನದತ್ತ ರಭಸದಿಂದ ಸಾಗಿದರೂ ೧೯೮೦ರ ದಶಕದಲ್ಲಿ ಸಂಪ್ರದಾಯಸ್ಥ ರಾಜಕಾರಣಿಗಳು, ನ್ಯಾಯಾಧೀಶರು, ರಾಷ್ಟ್ರಾಧ್ಯಕ್ಷರು ಮತ್ತು ಅವರ ಅಧಿಕಾರಿಗಳ ಧೋರಣೆ ಮತ್ತು ಕಾರ್ಯಾಚರಣೆಗಳು ಇದಕ್ಕೆ ತಡೆಯೊಡ್ಡಿ ಸ್ಥಗಿತಗೊಳಿಸಿದವೆಂದೇ ಹೇಳಬೇಕು. ಇದೇ ದಶಕದಲ್ಲಿ ಸಾಮಾಜಿಕ ಪ್ರಗತಿಯ ಬದಲು ಹಳೆಯ ವ್ಯವಸ್ಥೆಯ ಮೌಲ್ಯಗಳು ಕಂಡುಬಂದವು (retrogression). ರಾಷ್ಟ್ರದಲ್ಲಿ ಬಡತನ, ನಿರ್ವಸತಿ, ನಿರುದ್ಯೋಗ – ಈ ಎಲ್ಲ ಸಮಸ್ಯೆಗಳು ಹೆಚ್ಚಾಗುತ್ತ ಹೋದವು. ೧೯೮೦ರ ದಶಕವನ್ನು 'ಕಂಡದ್ದೆಲ್ಲ ಕೊಳ್ಳುವವರ ಯುಗ' (age of consumerism) ಎಂದು ಕರೆಯುತ್ತಾರೆ. 'ಆಸೆ' ಹೊಸ ಅರ್ಥ ಪಡೆದು ಒಂದು ಮುಖ್ಯವಾದ ಸಾಮಾಜಿಕ ಮೌಲ್ಯ ಎನಿಸಿಕೊಂಡಿತು. ಆಸೆ ಒಳ್ಳೆಯದು, ಇದು ಕಾರ್ಯಸಾಮರ್ಥ್ಯವನ್ನು ಹೆಚ್ಚಿಸುತ್ತದೆ ಎಂದು ವ್ಯಾಖ್ಯಾನಿಸಲಾಯಿತು. ಈ ಯುಗವನ್ನು 'ಯಪ್ಪಿ' ಯುಗವೆಂದೂ ಕರೆಯುತ್ತಾರೆ. ಈ 'ಯಪ್ಪಿ' ಎನ್ನುವ ಜನಾಂಗದವರು ಯಾರು? ಐಶ್ವರ್ಯವಂತರಾಗಲು ಈ ಪಂದ್ಯದ ಜೀವನ ನಡೆಸುತ್ತಿರುವ ವೃತ್ತಿಪರ ಯುವಜನಾಂಗ (Young Upwardly Mobile Professionals) ಇದು. ಇದೇ ಪ್ರವೃತ್ತಿಯ ಕರಿಯ ಯುವಜನಾಂಗದವರು 'ಬಪ್ಪಿ' (Black Upwardly Mobile Professionals) ಎಂದು ಕರೆಸಿಕೊಂಡರು. ವೃದ್ಧಿಗೊಳ್ಳುತ್ತಿರುವ 'ಯಪ್ಪಿ' ಮತ್ತು 'ಬಪ್ಪಿ' ಜನಾಂಗದ ಮುಖ್ಯ ಲಕ್ಷಣಗಳೆಂದರೆ ಐಶ್ವರ್ಯವನ್ನು ಮೆರೆಸುವುದು ಮತ್ತು ತಮ್ಮನ್ನು ತಾವೇ ಹೊಗಳಿಕೊಳ್ಳುವುದು. ಇದರ

ಪರಿಣಾಮ: ವೈಯಕ್ತಿಕ ಮತ್ತು ಸಾಮಾಜಿಕ ಅತೃಪ್ತಿಯಿಂದ ಉಂಟಾದ ಹತಾಶೆ (deprivation), ಇದರಿಂದಾದ ಪರಕೀಯತೆ. ಇವುಗಳ ಒಟ್ಟಾರೆ ದುಷ್ಪರಿಣಾಮ ಕುಟುಂಬದ ಮೇಲೆ ಮತ್ತು ವೃತ್ತಿಯ ಮೇಲೆ ಹೇರಿದ ಒತ್ತಡದಿಂದಾಗಿ ಅನೇಕ ವೈಯಕ್ತಿಕ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ಕಾರಣವಾಯಿತು. 'ಬಪ್ಪಿಯರು' ಅಥವಾ ಮಧ್ಯಮವರ್ಗದ ಕರಿಯರು ಅಧಿಕ ಸಂಖ್ಯೆಯಲ್ಲಿ ರಾಜಕೀಯ ಅಖಾಡಾಕ್ಕೆ ಇಳಿದರು. ಇದು ೨೧ನೆಯ ಶತಮಾನದಲ್ಲಿ ಜೆಸ್ಸೀ ಜಾಕ್‌ಸನ್ ಆಶಿಸಿದಂತೆ 'ಕಾಮನ ಬಿಲ್ಲ ಸಮ್ಮಿಶ್ರಣ'ವನ್ನು (rainbow coalition) ಉಂಟುಮಾಡುತ್ತದೆಯೋ ಅಥವಾ 'ವರ್ಣವಿಭಜನೆ'ಗೆ (racial divide) ಕಾರಣವಾಗಿ ರಾಷ್ಟ್ರದಲ್ಲಿ ಒಡಕು ಹುಟ್ಟಿಸುತ್ತದೆಯೋ ಎಂದು ಕಾದು ನೋಡಬೇಕಾಗಿದೆ. ಅಮೆರಿಕದ ಕೆಲವು ಸಂಸ್ಥಾನಗಳಲ್ಲಿ ಭಾಷಾ ಸಮಸ್ಯೆ ತಲೆ ಎತ್ತುತ್ತಿದೆ. ಆ ಸಂಸ್ಥಾನಗಳು 'ಹಿಸ್ಪಾನಿಕ್' ಜನಾಂಗ (ಸ್ಪಾನಿಷ್ ಮೂಲದ ಜನಾಂಗ) ದ್ವಿಭಾಷಾ ಸೂತ್ರವನ್ನು ಅನುಷ್ಠಾನಕ್ಕೆ ತರಬೇಕೆಂದು ಸರ್ಕಾರದ ಮೇಲೆ ಒತ್ತಡ ಹೇರುತ್ತಿವೆ.

೨೧ನೆಯ ಶತಮಾನದ ಅಮೆರಿಕ ತನ್ನ ಆಂತರಿಕ ಸಮಸ್ಯೆಗಳಾದ ಅಕ್ರಮ ವಲಸೆ (illegal immigration), ಪರಿಸರ ಮಾಲಿನ್ಯ ಮುಂತಾದುವುಗಳಿಗೆ ಹೆಚ್ಚಿನ ಗಮನ ಹರಿಸಬೇಕಾಗುತ್ತದೆ. ಅಮೆರಿಕ ಅಂತರರಾಷ್ಟ್ರೀಯ ಆರಕ್ಷಕ (police) ದೇಶವಾಗಬಾರದು. ಇದು ಬಹುತೇಕ ಅಲ್ಪಸಂಖ್ಯಾತರ ಮತ್ತು ಕರಿಯರ ಅಭಿಪ್ರಾಯವೂ ಅಗಿದೆ. ಅಮೆರಿಕ ತನ್ನ ಮನೆಯನ್ನು ಮೊದಲು ಚೊಕ್ಕ ಮಾಡಿಕೊಂಡು ಆನಂತರ ಬೇರೆಯವರ ಉಸಾಬರಿಗೆ ಹೋದರೆ ತನ್ನ ಗೌರವ ಉಳಿಸಿಕೊಳ್ಳಬಲ್ಲುದು. ಅಲ್ಲದಿದ್ದರೆ ಅಮೆರಿಕದಿಂದ ಆರ್ಥಿಕ ಸಹಾಯ ಪಡೆದ ದೇಶಗಳೇ ಅದರ ಮಾತಿಗೆ ಬೆಲೆ ಕೊಡಲಾರದೆ ಹೋಗುವಂತಾಗಬಹುದು. ಅಮೆರಿಕದ ವಿದೇಶಾಂಗ ನೀತಿ ಸಶಕ್ತವಾಗಿ ಫಲಿಸದೆ ಹೋಗುವುದು ಇದಕ್ಕಾಗಿಯೇ. 'ಹೇಳುವುದೊಂದು, ಮಾಡುವುದಿನ್ನೊಂದು' ಎನ್ನುವ ನೀತಿ ವಿದೇಶೀಯರಿಗೆ ಸಹ್ಯವಾಗುವುದಿಲ್ಲ.

೬೦ರ ದಶಕದಲ್ಲಿ ಅನುಕಲನ ಮತ್ತು ಸಮಾನತೆಯತ್ತ ಸಾಗಿದ್ದ ಅಮೆರಿಕವನ್ನು ೭೦ರ ಮತ್ತು ೮೦ರ ದಶಕಗಳಲ್ಲಿ ಸಾಮಾಜಿಕ ಭದ್ರತೆಯನ್ನು ಸಾಧಿಸುವ ನೆವದಲ್ಲಿ ಹಳೆಯ ವ್ಯವಸ್ಥೆಯತ್ತ ಸಾಗಿಸಲಾಯಿತು. ಈ ವ್ಯವಸ್ಥೆಯಲ್ಲಿ ರಾಷ್ಟ್ರದ ಜನಸಂಖ್ಯೆಯ ಶೇಕಡಾ ೧ ಭಾಗ (೧%) ದೇಶದ ಒಟ್ಟು ಸಂಪತ್ತಿನ ಮೂರನೆಯ ಒಂದು ಭಾಗದ (೧/೩) ಮೇಲೆ ಒಡೆತನ ಸ್ಥಾಪಿಸಿದೆ. ಜನಸಂಖ್ಯೆಯ ಶೇಕಡಾ ೯೯ ಭಾಗ (೯೯%) ಶ್ರೀಮಂತವರ್ಗ ಉಳಿಸಿಬಿಟ್ಟಿರುವ ಸಂಪತ್ತಿನಲ್ಲಿ ತಮ್ಮ ಪಾಲಿಗಾಗಿ ಸಮಾಜದ ಇತರ ಗುಂಪುಗಳೊಡನೆ ಪೈಪೋಟಿ ನಡೆಸಬೇಕಾಗಿ ಬಂದಿದೆ. ಇದು ಪರಸ್ಪರ ವೈರ, ದ್ವೇಷ, ಮೋಸ ಮುಂತಾದ ಹಾನಿಕಾರಕ ಪ್ರವೃತ್ತಿಗಳಿಗೆ ಎಡೆ ಮಾಡಿಕೊಟ್ಟು ಬದುಕನ್ನು ದುಸ್ಸಾಧ್ಯಗೊಳಿಸಿವೆ. ಈ ಇಲಿ ಪಂದ್ಯದ ಬದುಕು (rat race) ೨೧ನೆಯ ಶತಮಾನದಲ್ಲಿ

ಬಹುತೇಕ ಅಮೆರಿಕನ್ನರು ಅನುಭವಿಸಬೇಕಾಗಬಹುದಾದ ಸ್ಥಿತಿಯ ಮುನ್ಸೂಚನೆಯಾಗಿದೆ. ಏಕೆಂದರೆ ೨೦ನೆಯ ಶತಮಾನ ೨೧ನೆಯ ಶತಮಾನಕ್ಕೆ ಬರೆದ ಮುನ್ನುಡಿಯೇ ಸರಿ.

ಅಮೆರಿಕ ಅಂತಃಶಕ್ತಿ ಮತ್ತು ಮೌಲ್ಯಗಳ ಆಧಾರದ ಮೇಲೆ ರಚಿತವಾದ ಪ್ರಜಾರಾಜ್ಯ. ಇತರ ರಾಷ್ಟ್ರಗಳಲ್ಲಿ ಆ ಮೌಲ್ಯಗಳನ್ನು ಬಿತ್ತಿ ಅವು ೨೧ನೆಯ ಶತಮಾನ ಪ್ರವರ್ಧಮಾನಕ್ಕೆ ಬರುವುದರೊಳಗೆ ಬೆಳೆದು ಫಲಕಾರಿಯಾಗುವಂತೆ ಪೋಷಿಸಬೇಕಾದುದು ಅಗತ್ಯ. ನೀತಿ, ನ್ಯಾಯ ಮತ್ತು ಮೌಲ್ಯಗಳಿಗೆ ಪ್ರಾಮುಖ್ಯತೆ ಕೊಡದಿರುವ ಸಮಾಜವಾಗಲಿ, ರಾಷ್ಟ್ರವಾಗಲಿ ಬಹಳ ಕಾಲ ಉಳಿಯಲಾರದು. ಅಮೆರಿಕದ ಆರ್ಥಿಕ ವ್ಯವಸ್ಥೆಗೆ ಬುನಾದಿಯಾಗಿರುವ ಅಂಶಗಳೆಂದರೆ, ವ್ಯಾಪಾರಿಗಳು ಪೈಪೋಟಿ ನಡೆಸುವ ಜಾಗತಿಕ ಮಾರುಕಟ್ಟೆ, ಚಲಾವಣೆಯಲ್ಲಿರುವ ಹಣದ ಭದ್ರತೆ. ಈ ಆರ್ಥಿಕ ಭದ್ರತೆ ರಾಷ್ಟ್ರದ ಸೇನಾಬಲದೊಂದಿಗೆ ಸೇರಿ ಅಮೆರಿಕವನ್ನು ಮಹಾನ್ ಶಕ್ತಿಯಾಗಿ ಮಾಡಿದೆ. ಆದರೆ ಇದು ಎಷ್ಟು ಕಾಲ ಉಳಿದೀತು? ಅಮೆರಿಕದ ಅಪಾರ ಪ್ರಕೃತಿ ಸಂಪತ್ತಿನ ಆಧಾರದ ಮೇಲೆ ಹೇಳುವುದಾದರೆ ಮುಂದಿನ ಶತಮಾನದ ಅರ್ಧದವರೆಗೂ ಅಮೆರಿಕ ಈ ಶಕ್ತಿಯನ್ನು ಉಳಿಸಿಕೊಳ್ಳಬಲ್ಲುದು. ಇತರ ದೇಶಗಳು ಅಮೆರಿಕದೊಡನೆ ಸ್ಪರ್ಧಿಸಲು ಹಲವಾರು ವರ್ಷಗಳೇ ಹಿಡಿಯಬಹುದು. ವಿಶಿಷ್ಟವಾಗಿ ಪೌರ್ವಾತ್ಯ ದೇಶಗಳು (East Asia) ಈ ದಿಕ್ಕಿನಲ್ಲಿ ನಡೆದಿವೆ. ೨೦೦೦ದ ದಶಕದಲ್ಲಿ ವಿಚಾರ ವಿನಿಮಯ (ವಾರ್ತೆ/ಸಮಾಚಾರ) ಜೀವನದ ಅತಿಮುಖ್ಯ ಅಂಗ ವಾಗಿತ್ತು. ಯಾವ ರಾಷ್ಟ್ರ ವಾರ್ತಾ ವ್ಯವಸ್ಥೆಯಲ್ಲಿ (information system) ಮೇಲುಗೈ ಯಾಗಿರುತ್ತದೋ ಅದು ಶಕ್ತಿಯುತವಾಗಿರಬಲ್ಲುದು. ಕೆಲವು ಇತಿಹಾಸಕಾರರು 'ಸಮಾಚಾರ ಯುಗ' (information age) ರಾಷ್ಟ್ರಗಳ ನಡುವೆ ಸಮಾನತೆಯನ್ನು ಏರ್ಪಡಿಸುತ್ತದೆ ಎಂದು ಭವಿಷ್ಯ ನುಡಿದಿದ್ದರು. ಇದು ಸದ್ಯಕ್ಕೆ ಸಾಧ್ಯವಾಗದು ಎಂದು ಕೆಲವರ ವಾದ. ಕಾರಣ ವ್ಯಾಪಾರ ವಿನಿಮಯದಲ್ಲಿ ರಾಷ್ಟ್ರಗಳು ತಮ್ಮ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳಲು ಬೇರೆಯವರು ಪ್ರಬಲರಾಗದಂತೆ ಅಡೆತಡೆಗಳನ್ನು ರಚಿಸಿಕೊಂಡಿರುತ್ತಾರೆ. ಸಮಾಚಾರದ ಸುಲಭ ಪ್ರಸಾರ ರಾಷ್ಟ್ರಗಳ ಗಡಿಯನ್ನು ಅನಾವಶ್ಯಕ ಹಾಗೂ ಅರ್ಥವಿಲ್ಲದ ಅಡಚಣೆಯಾಗಿ ಮಾರ್ಪಾಡು ಮಾಡಿವೆ. 'ಇಂಟರ್‌ನೆಟ್' 'ಸುದ್ದಿ ಸಂಪರ್ಕ ಜಾಲ' ಹೊಸ ಪ್ರಪಂಚವನ್ನೇ ಸೃಷ್ಟಿಸುತ್ತಿದೆ. ಇದರಲ್ಲಿ ಜನರ ನಡವಳಿಕೆ ಮತ್ತು ಮನೋಭಾವಗಳಲ್ಲಿ ಹೆಚ್ಚಿನ ವ್ಯತ್ಯಾಸಗಳಿಗೆ ಅವಕಾಶವಿಲ್ಲ. ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗಳನ್ನು ಹಿಂದಿನಂತೆ ಸರ್ಕಾರ ಸಂಪೂರ್ಣವಾಗಿ ನಿಯಂತ್ರಿಸಲೂ ಸಾಧ್ಯವಿಲ್ಲ. ಅನೇಕ ಸಂಸ್ಥೆಗಳು, ಭಯೋತ್ಪಾದಕರ ಅಂತರರಾಷ್ಟ್ರೀಯ ಜಾಲವೂ ಸೇರಿದಂತೆ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿರುವುದಿಲ್ಲ.

ಸಮಾಚಾರ ಕ್ರಾಂತಿಯ ಮುಂಚೂಣಿಯಲ್ಲಿರುವ ಅಮೆರಿಕಕ್ಕೆ ಇತರೆ ರಾಷ್ಟ್ರಗಳ ಸಮ್ಮಿಶ್ರ ಸಂಸ್ಥೆಗಳು (coalition organizations) ಸವಾಲಾಗಬಹುದು. ಹಿಂದಿನ

ಕಾಲದಂತೆ ರಾಷ್ಟ್ರದ ಶಕ್ತಿ ಪ್ರಾಬಲ್ಯಗಳು ಬಂದೂಕಿನ ನಳಿಗೆಯಿಂದ ಬರುವುದಿಲ್ಲ. ಆ ಶಕ್ತಿ ಬರುವುದು ರಾಷ್ಟ್ರದ ಸಮಾಚಾರ ಸಂಪರ್ಕ ವ್ಯವಸ್ಥೆಯು ಅನನ್ಯ ಹಾಗೂ ಉತ್ಕೃಷ್ಟ ಮಟ್ಟದ್ದಾಗಿರುವುದರಿಂದ. ಇಂಥ ಪರಿಣಾಮಕಾರಿ ವ್ಯವಸ್ಥೆಯನ್ನು ಇತರ ರಾಷ್ಟ್ರಗಳು ಬಯಸುವುದು ಸಹಜ. ಆಗ ಈ ಕ್ಷೇತ್ರದ ಮುಂಚೂಣಿಯಲ್ಲಿರುವ ರಾಷ್ಟ್ರ ಇತರ ರಾಷ್ಟ್ರಗಳ ಮೇಲೆ ಪ್ರಭಾವ ಬೀರಬಲ್ಲುದು. ಅಲ್ಲದೆ ಸಮಾಚಾರ ಕ್ರಾಂತಿ ವಿಶ್ವವ್ಯಾಪಕವಾಗಿರುವುದರಿಂದ ಜಗತ್ತಿನ ರಾಜಕೀಯ ವ್ಯವಹಾರಗಳು ತ್ವರಿತಗತಿಯಿಂದ ಬದಲಾಗುತ್ತಿವೆ. ಆದ್ದರಿಂದ ಅಮೆರಿಕನ್ನರು ತಮ್ಮ ಸ್ವಂತ ಬಲದಿಂದಲೇ ತಮ್ಮ ರಾಷ್ಟ್ರದ ಎಲ್ಲಾ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳುವ ಸ್ಥಿತಿಯಲ್ಲಿಲ್ಲ. ಇತರೆ ದೇಶಗಳೊಡನೆ ಸೇರಿ ಆ ದೇಶಗಳ ಸಹಕಾರದಿಂದ ತಮ್ಮ ಹಿತರಕ್ಷಣೆಯ ಕಾರ್ಯ ಸಾಧಿಸಬೇಕಾಗಿದೆ.

ಶಸ್ತ್ರಾಸ್ತ್ರ ಹಾಗೂ ಸೇನಾಬಲದಲ್ಲಿಯೂ ಅಮೆರಿಕ ಬಲಿಷ್ಠವಾದ ರಾಷ್ಟ್ರವಾಗಿದೆ. ಇಷ್ಟಾದರೂ ಅದು ಅಣ್ವಸ್ತ್ರಗಳು ಜಗತ್ತಿನಾದ್ಯಂತ ಹರಡಿಕೊಳ್ಳುವುದನ್ನು ಮತ್ತು ಭಯೋತ್ಪಾದಕರ ಹಾವಳಿಯನ್ನು ತಡೆಗಟ್ಟಲು ಸಾಧ್ಯವಾಗಿಲ್ಲ. ಪ್ರಸ್ತುತವಾಗಿ ಅಮೆರಿಕ ಭಯೋತ್ಪಾದಕರ ನಿಯಂತ್ರಣಕ್ಕಾಗಿ ಅಂತರರಾಷ್ಟ್ರೀಯ ಸಮ್ಮಿಶ್ರಣ (international coalition) ಪಡೆಗಳನ್ನು ರಚಿಸಿ ವಿಶಿಷ್ಟ ತರಬೇತಿ ನೀಡುವ ಕಾರ್ಯದಲ್ಲಿ ನಿರತವಾಗಿದೆ. ಇದಕ್ಕಾಗಿ ಇತರ ರಾಷ್ಟ್ರಗಳ ಗೌರವ ಗಳಿಸುವುದಕ್ಕೆ ಅಮೆರಿಕ ಹೆಚ್ಚು ಕೆಲಸ ಮಾಡಬೇಕಾಗಿದೆ.

ಅಮೆರಿಕ ಪ್ರಬಲ ರಾಷ್ಟ್ರವಾಗಿ ವಿಜ್ಞಾನ ಮತ್ತು ಯಂತ್ರ ನಾಗರಿಕತೆಯ ಮುಂಚೂಣಿಯಲ್ಲಿರುವುದರಿಂದ ಇತರ ರಾಷ್ಟ್ರಗಳ ಜನಜೀವನ ತೀವ್ರಗತಿಯಲ್ಲಿ ಬದಲಾವಣೆಯಾಗಲು ಕಾರಣವಾಗಿದೆ. ಈ ಸಾಮಾಜಿಕ ಪ್ರಕ್ರಿಯೆಯನ್ನು ಸಮಾಜಶಾಸ್ತ್ರಜ್ಞರು 'ಅಮೆರಿಕರಣ' (Americanization) ಎಂದು ಕರೆದಿದ್ದಾರೆ. ಅಮೆರಿಕರಣ ಜಾಗತೀಕರಣದ (globalization) ಒಂದು ಅಂಶ. ಜಾಗತೀಕರಣದಲ್ಲಿ ಅಂತರರಾಷ್ಟ್ರೀಯ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಜಾಗತೀಕರಣ ಪ್ರಜಾರಾಜ್ಯವನ್ನು ಬಲಹೀನಗೊಳಿಸುತ್ತವೆ ಎನ್ನುವ ವಾದಕ್ಕೆ ಹೆಚ್ಚಿನ ಪುರಾವೆಗಳು ದೊರೆತಿಲ್ಲ. ಈ ಸಂಸ್ಥೆಗಳು ಪ್ರಜಾರಾಜ್ಯಗಳ ನಿಯಮಗಳನ್ನು ಪಾಲಿಸುವುದು ಅಗತ್ಯವಾಗುತ್ತದೆ. ಜಾಗತೀಕರಣ ಇದೇ ರೀತಿಯಲ್ಲಿ, ಇದೇ ಗತಿಯಲ್ಲಿ ಮುಂದುವರಿಯುತ್ತದೆ ಎಂದು ಹೇಳಲಾಗುವುದಿಲ್ಲ. ಇದಕ್ಕೆ ರಾಜಕೀಯ ವಲಯಗಳಿಂದ ವಿರೋಧ ಎದುರಿಸಬೇಕಾಗಿದೆ. ರಾಷ್ಟ್ರದ ಕಲ್ಪನೆ, ರಾಷ್ಟ್ರೀಯತೆ ಮತ್ತು ರಾಷ್ಟ್ರಭಕ್ತಿ – ಇವು ಇನ್ನೂ ಪ್ರಬಲ ಪ್ರಕ್ರಿಯೆಗಳಾಗಿ ಉಳಿದಿವೆ. ಅನೇಕ ರಾಷ್ಟ್ರಗಳಲ್ಲಿ ಜಾಗತೀಕರಣದ ವಿರುದ್ಧ ಪ್ರದರ್ಶನಗಳು ನಡೆದಿವೆ. ಇಂಥ ಸಂದರ್ಭದಲ್ಲಿ ಅಮೆರಿಕ ತನ್ನ ಶಕ್ತಿ ಸಾಮರ್ಥ್ಯ ಹಾಗೂ ಪ್ರಭಾವಗಳನ್ನು ಉಪಯೋಗಿಸಿಕೊಂಡು ತನ್ನ ಅಂತಃಶಕ್ತಿ ಮತ್ತು ಸಾಮಾಜಿಕ ಭದ್ರತೆಯನ್ನು ಬೆಳೆಸುವ ಸಾಮಾಜಿಕ ಸಂಸ್ಥೆಗಳನ್ನು (social institutions) ಬಲಪಡಿಸಿ ಬೆಳೆಸಿಕೊಂಡರೆ ಆಗ ಅದು ಇತರ ದೇಶಗಳಿಗೆ ಮಾದರಿಯಾಗುತ್ತದೆ. ಅಮೆರಿಕದ ಅಂತಸ್ತೂ ಇದರಿಂದ ಹೆಚ್ಚುತ್ತದೆ.

ಅಮೆರಿಕನ್ನರು ತಮ್ಮನ್ನು ತಾವೇ ಪರೀಕ್ಷಿಸಿಕೊಳ್ಳುವ ಸಮಯ ಬಂದಿದೆ. ತಮ್ಮ ಸಮಾಜದಲ್ಲಿನ ನ್ಯೂನತೆಗಳನ್ನು – trends like unwed motherhood, rising divorce rates, smaller households and poverty – ಮುಂತಾದುವುಗಳನ್ನು ಸರಿಪಡಿಸದೆ ಬೇರೆಯವರಿಗೆ ಉಪದೇಶ ಮಾಡಿದರೆ ಅದಕ್ಕೆ ಇತರರು ಏನು ಬೆಲೆ ಕೊಟ್ಟಾರು? ಹಾಗೆಯೇ ಲಾಗಾಯತಿನಿಂದ ಇತ್ಯರ್ಥವಾಗದ ಸಾಮಾಜಿಕ ಸಂಘರ್ಷಣೆಗಳಿಗೆ ಕಾರಣಭೂತವಾಗಿರುವ ವಿವಾದಾಂಶಗಳು – ಮರಣದಂಡನೆ (capital punishment), ಗರ್ಭಪಾತ, ಬಂದೂಕು ನಿಯಂತ್ರಣ (gun control) – ಇವು ಸಾಮಾಜಿಕ ಭದ್ರತೆಗೆ ಸವಾಲಾಗುತ್ತವೆ. ಇದು ಇತರರ ದೃಷ್ಟಿಯಲ್ಲಿ ಅಮೆರಿಕದ ಘನತೆ ಗೌರವಗಳನ್ನು ಕಡಿಮೆ ಮಾಡಿ, ಪ್ರಭಾವ ಬೀರಲು ಬೇಕಾಗಿರುವ ನೈತಿಕ ಶಕ್ತಿಯನ್ನು ಕಳೆದುಕೊಳ್ಳುವಂತೆ ಮಾಡುತ್ತದೆ. ೬೦ರ ದಶಕದಿಂದ ಅಮೆರಿಕನ್ನರ ಬಾಹ್ಯ ನಡವಳಿಕೆಗಳು ಅವನತಿಯ ಹಾದಿ ಹಿಡಿದಿರುವ ಚಿಹ್ನೆಗಳು ತೋರಿಬರುತ್ತಿವೆ. ಹಿಂದೆ ತಿಳಿಸಿರುವ ವಿವಾದಾಂಶಗಳು (ಗರ್ಭಪಾತ ಇತ್ಯಾದಿ) ಅಮೆರಿಕದ ಆಂತರಿಕ ಸಮಸ್ಯೆಗಳಾಗಿಯೇ ಉಳಿಯದೆ ಅಂತರ ರಾಷ್ಟ್ರೀಯ ವಿವಾದಾಂಶಗಳಾಗಿವೆ. ಆಗ ಅಮೆರಿಕ ಈ ಸಮಸ್ಯೆಗಳನ್ನು ಜಾಗತಿಕ ದೃಷ್ಟಿಕೋನದಿಂದಲೂ ನೋಡಬೇಕಾಗುತ್ತದೆ.

ಅಮೆರಿಕ ವಲಸೆ ಬಂದು ನೆಲಸಿದ್ದವರ ದೇಶವಾಗಿದ್ದರೂ ಕೂಡ ಹೊಸದಾಗಿ ಬರುವ ವಲಸೆಗಾರರು ಅಮೆರಿಕನ್ ಮೌಲ್ಯಗಳಲ್ಲಿ (American values), ಜೀವನಶೈಲಿಯಲ್ಲಿ ಉಂಟುಮಾಡಬಹುದಾದ ದುಷ್ಪರಿಣಾಮಗಳ ಬಗ್ಗೆ ಆತಂಕ ವ್ಯಕ್ತಪಡಿಸಿರುವುದು ಅಮೆರಿಕದ ಇತಿಹಾಸದುದ್ದಕ್ಕೂ ಕಂಡುಬರುತ್ತದೆ. ಹೀಗೆ ಬರುವ ವಲಸೆಗಾರರು ಅಮೆರಿಕದ ಭದ್ರತೆಗೆ ಕಂಟಕಪ್ರಾಯರಾಗುತ್ತಾರೆ ಎಂದು ತಿಳಿದಿರುವ ಬಹುತೇಕ ಅಮೆರಿಕನ್ನರು ಪ್ರಸ್ತುತವಾಗಿ ವಲಸೆಗಾರರ ಸಂಖ್ಯೆಯನ್ನು ಕಡಿಮೆ ಮಾಡಬೇಕು ಎಂದು ಸರ್ಕಾರವನ್ನು ಆಗ್ರಹಪಡಿಸುತ್ತಿದ್ದಾರೆ. ಇವರ ಹಿಂದಿನ ತಲೆಮಾರಿನವರೂ ಹೀಗೆ ಮಾಡಿದ್ದರು. ವಲಸೆಯ ಪರ ಮತ್ತು ವಿರುದ್ಧವಾದ ವಾಗ್ಯುದ್ಧ ಈ ದೇಶ ಹುಟ್ಟಿದ ಕಾಲದಿಂದಲೂ ನಡೆದು ಬಂದಿವೆ. ಇದು ಎರಡು ಚಿಂತನ ಪಂಥಗಳಿಗೆ (schools of thought) ಎಡೆ ಮಾಡಿ ಕೊಟ್ಟಿದೆ. ಮೊದಲನೆಯದಾಗಿ 'ಕರಗಿಸುವ ಕಡಾಯಿ' (Melting Pot) ಎನಿಸಿಕೊಳ್ಳುವ ವಿಚಾರ. ಪ್ರಪಂಚದ ಮೂಲೆಮೂಲೆಗಳಿಂದ 'ಅಮೆರಿಕದ ಕನಸನ್ನು' ಅರಸುತ್ತ ಬರುವ ವಲಸೆಗಾರರು ತಮ್ಮ ವಿಶಿಷ್ಟ ಸಂಸ್ಕೃತಿ (ಭಾಷೆ, ಮತಧರ್ಮ ಮತ್ತು ಜೀವನಶೈಲಿ)ಯನ್ನು ತಂದು ಅಮೆರಿಕದ ಕರಗಿಸುವ ಕಡಾಯಿಯಲ್ಲಿ ಇತರ ಸಂಸ್ಕೃತಿಗಳೊಡನೆ ಬೆರೆಸಿ ಕಾಲಾನುಕ್ರಮದಲ್ಲಿ ಅಮೆರಿಕರಣಗೊಳ್ಳುವುದು. ಕಾಲಕ್ರಮದಲ್ಲಿ ವಿಶಿಷ್ಟ ಸಂಸ್ಕೃತಿಗಳು ಕರಗಿ ಉಂಟಾಗುವ ಹಣೆಸು 'ಅಮೆರಿಕನಿಸಮ್' ಎನಿಸಿಕೊಳ್ಳುತ್ತದೆ. ಈ ಚಿಂತನ ಪಂಥ ವಲಸೆಯ ಅನುಕೂಲಗಳನ್ನು ಎತ್ತಿಹಿಡಿಯುತ್ತದೆ. ವಲಸೆ ದೇಶಕ್ಕೆ ಹರಿಯುವ ನದಿ ಸದಾ ಹೊಸ ನೀರನ್ನು ಒದಗಿಸುವಂತೆ ಮುಪ್ಪಡರದಂತೆ ಮಾಡುತ್ತದೆ. ಸಂಶೋಧನೆ

ಮತ್ತು ವಿಜ್ಞಾನ ಪ್ರಗತಿಗೆ ಕಾರಣರಾದ ಕುಶಾಗ್ರಮತಿಗಳು ವಲಸೆ ಬಂದು ನೆಲಸಿ ಅಮೆರಿಕ ಯಂತ್ರಜ್ಞಾನದ ಮುಂಚೂಣಿಯಲ್ಲಿರುವಂತೆ ಮಾಡಿದ್ದಾರೆ. ಕಲಾಕ್ಷೇತ್ರ ಹಾಗೂ ಕ್ರೀಡಾಕ್ಷೇತ್ರಗಳಿಗೂ ಇದು ಅನ್ವಯಿಸುತ್ತದೆ.

'ಬಹುಸಂಸ್ಕೃತಿ'ಯ (Multiculturalism) ವಾದ ವಲಸೆಯ ಅನಾನುಕೂಲ/ಪ್ರತಿಕೂಲಗಳನ್ನು ವಿಶದಪಡಿಸುತ್ತದೆ. ಕರಗಿಸುವ ಕಡಾಯಿ ಎನ್ನುವ ಮೆಟಾಫರನ್ನನ್ನು ಬಹುಸಂಸ್ಕೃತಿಯ ವಾದದವರು ಒಪ್ಪುವುದಿಲ್ಲ. ವಲಸೆ ಬರುವ ಪ್ರತಿಯೊಂದು ಜನಾಂಗವೂ ತಮ್ಮ ಮೂಲಬೇರುಗಳನ್ನು ಅಷ್ಟು ಸುಲಭವಾಗಿ ಮರೆಯುವುದಿಲ್ಲ. ಈ ಜನಾಂಗಗಳು ತಮ್ಮ 'ಸ್ವಂತಿಕೆಯನ್ನು' ಅಂದರೆ ತಮ್ಮ ಭಾಷೆ, ಸಂಪ್ರದಾಯಗಳು, ಮತಧರ್ಮಗಳನ್ನು ಉಳಿಸಿ ಬೆಳೆಸಲು ಸಂಘ ಸಂಸ್ಥೆಗಳನ್ನು ರಚಿಸಿಕೊಳ್ಳುತ್ತಾರೆ. ಆದ್ದರಿಂದ ನಾವು ಅಮೆರಿಕದಲ್ಲಿರುವ ಎಲ್ಲರನ್ನೂ 'ಅಮೆರಿಕನ್ನರೆಂದು' ಕರೆಯದೆ ಪ್ರತಿ ಜನಾಂಗವನ್ನೂ ಅದರ ಮೂಲ ಸೂಚಿಸುವ ಪದದಿಂದ ಗುರುತಿಸುತ್ತೇವೆ. 'ಆಫ್ರಿಕನ್ ಅಮೆರಿಕನ್', 'ಮೆಕ್ಸಿಕನ್ ಅಮೆರಿಕನ್', 'ಜಪಾನಿ ಅಮೆರಿಕನ್', ಇತ್ಯಾದಿ. ಅನಿಯಂತ್ರಿತ ವಲಸೆ ೨೧ನೆಯ ಶತಮಾನದ ಅತಿದೊಡ್ಡ ಸಮಸ್ಯೆಯಾಗಬಹುದೆಂದು ಬಹುಸಂಸ್ಕೃತಿ ಪಂಥದವರು ಮುನ್ನೆಚ್ಚರಿಕೆ ನೀಡಿದ್ದಾರೆ. ಈಗ ಬರುತ್ತಿರುವ ವಲಸೆಗಾರರ ವಿದ್ಯಾಮಟ್ಟ ಮತ್ತು ಗುಣಮಟ್ಟ ಅಸಮರ್ಪಕವಾಗಿರುವುದರಿಂದ ಆಯಾ ಜನಾಂಗಗಳ ಕೂಪಮಂಡೂಕ ಪ್ರಪಂಚಗಳು ಸೃಷ್ಟಿಗೊಳ್ಳುತ್ತವೆ. ಇಂಥ ಪ್ರದೇಶಗಳಲ್ಲಿ ವಾಸಿಸುವ ಜನಕ್ಕೆ ತಾವು ತಾಯ್ನಾಡನ್ನು ತೊರೆದು ಬಂದಿರುವ ಅರಿವು ಇರುವುದಿಲ್ಲ. ಈ ಜನ ಅಮೆರಿಕನ್ ರಾಷ್ಟ್ರೀಯ ಭಾವನೆಯನ್ನು ಬೆಳೆಸಿಕೊಳ್ಳುವುದಾದರೂ ಹೇಗೆ? ಇಂಥ ಗುಂಪುಗಳು ಕ್ರಮೇಣ ಪ್ರತ್ಯೇಕ ರಾಜ್ಯಗಳೆಂದು ಭಾವಿಸುವ ವೈಪರೀತ್ಯಕ್ಕೆ ಹೋದ ನಿದರ್ಶನಗಳು ದೊರೆಯುತ್ತವೆ. ವಲಸೆಗಾರರ ಸಂಖ್ಯೆ ಹೆಚ್ಚಿದಂತೆಲ್ಲ ಸಮಸ್ಯೆಗಳು ಸಂಕೀರ್ಣಗೊಳ್ಳುತ್ತವೆ.

ದಕ್ಷತೆ, ನಿಷ್ಠೆ, ಭರವಸೆ ಮತ್ತು ಘನತೆ ಗೌರವ ಇವೇ ಮುಂತಾದ ಮೌಲ್ಯಗಳನ್ನು ಫೆಡರಲ್ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳು ಅನುಷ್ಠಾನಕ್ಕೆ ತಂದು ಅವುಗಳನ್ನು ಪುನರುತ್ಥಾನಗೊಳಿಸಬೇಕು. ಸರ್ಕಾರದಲ್ಲಿ ಅಧಿಕಾರಿಗಳಲ್ಲಿ ನಂಬಿಕೆ (trust) ಕಳೆದುಕೊಂಡ ಅಮೆರಿಕನ್ನರು ಹಿಂಸಾಕಾರ್ಯಗಳಲ್ಲಿ ಭಾಗವಹಿಸಿ ಸೇಡು ತೀರಿಸಿಕೊಳ್ಳುವ ಅಪಾಯ ಹೆಚ್ಚದಂತೆ ನೋಡಿಕೊಳ್ಳಬೇಕು. ಉದಾಹರಣೆಗೆ, 'ರೂಬಿ ರಿಡ್ಜ್' (Ruby Ridge) ಹಗರಣ, ವೇಕೋ, ಟೆಕ್ಸಾಸ್‌ನಲ್ಲಿ ನಡೆದ ಡೆವಿಡಿಯನ್ನರ ಸಾಮೂಹಿಕ ಸಾವು – ಇವು ಸರ್ಕಾರದಲ್ಲಿ ನಂಬಿಕೆ ಕಳೆದುಕೊಂಡವರು ತಮ್ಮ ವಿರೋಧ ವ್ಯಕ್ತಪಡಿಸುವ ಅತಿರೇಕದ ನಡವಳಿಕೆ ಎಂದು ಅಭಿಪ್ರಾಯಪಡಲಾಗಿದೆ. ಭಯೋತ್ಪಾದಕರ ವಿರುದ್ಧ ಕಾರ್ಯಾಚರಣೆ ನಿಷ್ಠಾವಂತ ಅಧಿಕಾರಗಳಿಂದ ಮಾತ್ರ ಸಾಧ್ಯ. ಅಲ್ಲದೆ ಈ ಕೆಲಸ ಅಂತರರಾಷ್ಟ್ರೀಯ ಸಹಕಾರವಿಲ್ಲದೆ ಅಮೆರಿಕ ಒಂದರಿಂದಲೇ ನಡೆಸಲು ಸಾಧ್ಯವಿಲ್ಲ. ಸಮಾಜದ ಒಳಗು

ಶಿಥಿಲಗೊಳ್ಳದಂತೆ ಎಲ್ಲ ಸ್ತರಗಳನ್ನೂ ಬಲಪಡಿಸುವ ಸಲುವಾಗಿ ಯಂತ್ರಜ್ಞಾನದ (technology) ಉಪಯೋಗವಾಗಬೇಕಾಗಿದೆ.

ಈಗಿನ ಶತಮಾನದಲ್ಲಿ ಅಮೆರಿಕ ತುರ್ತಾಗಿ ಗಮನ ಕೊಡಬೇಕಾದ ಕಾರ್ಯಕ್ಷೇತ್ರಗಳು: (೧) ತಾಯ್ನಾಡ ರಕ್ಷಣೆ (Homeland Security) ಇದು ಸಮಾಜದ ಅಂತರಾಳದ ಶಕ್ತಿಯನ್ನು ಅವಲಂಬಿಸಿರುತ್ತದೆ. (೨) ಯೂರೋಪಿಯನ್ ಯೂನಿಯನ್ (EU) ಶಕ್ತಿಯುತವಾಗಿ ಬೆಳೆದು ಅಮೆರಿಕಕ್ಕೆ ಸವಾಲು ಹಾಕುವ ಸಾಧ್ಯತೆ ಇದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಅಮೆರಿಕದ ಶಕ್ತಿ ವೃದ್ಧಿಗೊಳ್ಳುವ ಚಿಹ್ನೆಗಳು ಕಂಡುಬರುತ್ತಿವೆಯೆ ಹೊರತು ಅವನತಿ ಚಿಹ್ನೆಗಳಲ್ಲ. '೯-೧೧' ನಂಥ ದುರಂತ ಮತ್ತೆ ಜರುಗದಂತೆ ನೆಲ-ಜಲ-ವಾಯು ಮಾರ್ಗಗಳಲ್ಲಿ ರಕ್ಷಣೆಯನ್ನು ಬಿಗಿಮಾಡಿ ಭಯೋತ್ಪಾದಕರು ನುಸುಳಿ ಬಾರದಂತೆ ಸೂಕ್ತಕ್ರಮಗಳನ್ನು ಕೈಗೊಳ್ಳಲಾಗಿದೆ. ಹೊಸ ರೀತಿಯ ಕಟ್ಟಡಗಳು, ಸೇತುವೆಗಳು ಮತ್ತು ಸಾರಿಗೆ ಸಂಪರ್ಕ ವಿಧಾನಗಳನ್ನು ಬಳಕೆಗೆ ತಂದು ಅಮೆರಿಕದ ಜನಜೀವನವನ್ನು, ಸ್ವಾತಂತ್ರ್ಯ ಮೊಟಕುಗೊಳಿಸದೆ, ಸುರಕ್ಷಿತವಾಗಿ ಸಾಗುವಂತೆ ಮಾಡಿರುವುದು ಒಂದು ಅದ್ಭುತ ಸಾಧನೆಯೇ ಸರಿ. ಅಮೆರಿಕನ್ನರು ಹಿಂದಿನ ಎಲ್ಲ ಸಂದಿಗ್ಧ ಸಮಯಗಳಿಗಿಂತ ಪ್ರಸ್ತುತವಾಗಿ 'Eternal vigilence is the price we pay for freedom' ಎಂಬ ಸೂತ್ರವನ್ನು ೨೧ನೆಯ ಶತಮಾನದಲ್ಲಿ ಪಾಲಿಸಿ ಅದರಂತೆ ನಡೆಯುವುದು ತಮ್ಮ ಪವಿತ್ರ ಕರ್ತವ್ಯವೆಂದು ತಿಳಿಯಬೇಕಾಗಿದೆ.

೨೧ನೆಯ ಶತಮಾನದಲ್ಲಿ ಅಮೆರಿಕನ್ನರು ತಮ್ಮ ರಾಷ್ಟ್ರದ ಆದರ್ಶಗಳನ್ನು ಇತರ ರಾಷ್ಟ್ರಗಳ ಹಿತಾಸಕ್ತಿ ಮತ್ತು ಧ್ಯೇಯ ಧೋರಣೆಗಳನ್ನು ಗಣನೆಗೆ ತೆಗೆದುಕೊಂಡು ಆ ರಾಷ್ಟ್ರಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತಾರದೆ ರೂಪಿಸಿಕೊಳ್ಳಬೇಕು. ಅಭಿವೃದ್ಧಿಗೊಳ್ಳುತ್ತಿರುವ ರಾಷ್ಟ್ರಗಳನ್ನು ತನ್ನ ಹಿಂಬಾಲಕರಾಗಿರಬೇಕೆಂದು ಒತ್ತಾಯಿಸದೆ, ಹಿಂಬಾಲಕರಾಗದೆ ಹೋದಾಗ ಅವುಗಳನ್ನು ಹತ್ತಿಕ್ಕಲು ಪ್ರಯತ್ನಿಸದೆ, ಅವುಗಳನ್ನು ಗೌರವದಿಂದ ಕಾಣುವ ಮೂಲಕ ತನ್ನ ಘನತೆಯನ್ನು ಹೆಚ್ಚಿಸಿಕೊಳ್ಳಬೇಕು. ಸಕಲ ರಾಷ್ಟ್ರಗಳ ಅಭಿವೃದ್ಧಿಯನ್ನು ಹಾರೈಸಿ ಮಾನವಕುಲದ ಶ್ರೇಯಸ್ಸಿಗೆ ಇತರ ರಾಷ್ಟ್ರಗಳೊಡನೆ ಸಹಕರಿಸಿ ಶ್ರಮಿಸಬೇಕು. ಕೆಲವು ಅಮೆರಿಕನ್ನರು 'ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರೀಲಿ ಛತ್ರಿ ಹಿಡಿದನಂತೆ' ಎನ್ನುವ ರೀತಿಯಲ್ಲಿ ಡಂಬಾಚಾರದ ವರ್ತನೆಯನ್ನು ಬಿಟ್ಟು ಸೌಜನ್ಯದಿಂದ ವರ್ತಿಸುವುದನ್ನು ಕಲಿಯಬೇಕು. 'ಶಕ್ತಿ ಬಂದೂಕಿನ ನಳಿಗೆಯಿಂದ ಬರುತ್ತದೆ' ಎನ್ನುವುದು ೨೦ನೆಯ ಶತಮಾನಕ್ಕೆ ಮುಗಿಯಿತು. ಈ ಶತಮಾನದಲ್ಲಿ ಯಾವ ರಾಷ್ಟ್ರ 'information technology and management'ನಲ್ಲಿ ಮುಂದುವರಿದಿದೆಯೋ ಅದು ಪ್ರಬಲ ರಾಷ್ಟ್ರವೆನಿಸುತ್ತದೆ. ಮಿಲಿಟರಿ ವಿಜ್ಞಾನ ಮತ್ತು ವರ್ತಮಾನ ನಿರ್ವಹಣೆ (information management)ಗಳಲ್ಲಿ ಅಪಾರ ಯಶಸ್ಸು ಗಳಿಸಿದ ಅಮೆರಿಕ ಕಾಲಕ್ರಮೇಣ

ಯೂರೋಪಿಯನ್ ಯೂನಿಯನ್‌ನಂಥ ಸಮ್ಮಿಶ್ರಣ ಸಂಸ್ಥೆಗಳ ಪ್ರತಿಸ್ಪರ್ಧಿಯಾಗಿ ನಿಲ್ಲುವ ಸಾಧ್ಯತೆಗಳಿವೆ. ಆಗ ಅಮೆರಿಕ ಪೈಪೋಟಿಯ ಮನೋಭಾವದ ಬದಲು ಪರಸ್ಪರ ಸಹಕಾರ, ವಿಚಾರ ವಿನಿಮಯದ ಮೂಲಕ ಜಗತ್ತಿನಲ್ಲಿ ಶಾಂತಿ ಮತ್ತು ಸಹಬಾಳ್ವೆಗೆ ಪೋಷಕವಾದ ವಾತಾವರಣ ಸೃಷ್ಟಿಸುವ ರಾಷ್ಟ್ರವಾಗಬೇಕು.

ಸೋವಿಯೆಟ್ ಒಕ್ಕೂಟ ೫೦ರ ದಶಕದಲ್ಲಿ ಸ್ಪುಟ್ನಿಕ್ ಹಾರಿಸಿದಂದಿನಿಂದ ಅಮೆರಿಕ ತನ್ನ ಬಾಹ್ಯಾಕಾಶ ಶೋಧನೆಯಲ್ಲಿ ಹಂತ ಹಂತವಾಗಿ ಮುಂದುವರಿದು ವಿಜಯ ಸಾಧಿಸಿದೆ. ಅಮೆರಿಕದ ಬಾಹ್ಯಾಕಾಶಯಾತ್ರಿಗಳು (astronauts) ಚಂದ್ರಲೋಕಕ್ಕೆ ಹೋಗಿ ಬಂದು ಇತ್ತೀಚೆಗೆ ಮಂಗಳಗ್ರಹದವರೆಗೂ ಹೋಗಿ ಆ ಗ್ರಹದ ಕಲ್ಲು ಮಣ್ಣನ್ನು ಭೂಮಿಗೆ ತಂದು ಸಂಶೋಧನೆ ನಡೆಸಿದ್ದಾರೆ. ದಶಕದ ಹಿಂದೆ ಹಾರಿಸಿದ ಅಮೆರಿಕದ ಕ್ಷಿಪಣಿಗಳು ಊಹಿಸಲಾರದಷ್ಟು ದೂರದ ಗ್ರಹಗಳತ್ತ ಊಹಿಸಲಾರದಷ್ಟು ವೇಗದಿಂದ ಇನ್ನೂ ಚಲಿಸುತ್ತಿವೆ. ಅಮೆರಿಕ ಮತ್ತು ರಷ್ಯಾ ದೇಶಗಳು ಕೂಡಿ ಬಾಹ್ಯಾಕಾಶದಲ್ಲಿ ನಿಲ್ದಾಣ (space station) ಸ್ಥಾಪಿಸಿದ್ದಾರೆ. ನಾನಾ ದೇಶದ ಬಾಹ್ಯಾಕಾಶ ಯಾತ್ರಿಕರು ಈ ನಿಲ್ದಾಣಕ್ಕೆ ಹೋಗಿಬರುವಂತಾಗಿದೆ. 'ಷಟಲ್' ಬಾಹ್ಯಾಕಾಶ ಕ್ಷಿಪಣಿ ಭೂಮಿಯಿಂದ ಬಾಹ್ಯಾಕಾಶ ನಿಲ್ದಾಣಕ್ಕೆ ಹೋಗಿ ಬರುವುದು ವಿಮಾನ ಪ್ರಯಾಣ, ರೈಲುಪ್ರಯಾಣದಂತೆ ಸರ್ವೇಸಾಮಾನ್ಯವಾಗುತ್ತಿದೆ. ಬಾಹ್ಯಾಕಾಶ ಪ್ರಯಾಣಕ್ಕೆ ಅವಶ್ಯವಾದ ಯಂತ್ರೋಪಕರಣ ಗಳು ಅಭಿವೃದ್ಧಿಗೊಂಡಂತೆಲ್ಲ 'ಆಸ್ಟ್ರೊನಾಟ್'ಗಳು (astronauts) ಮಾತ್ರವಲ್ಲದೆ ಸಾಮಾನ್ಯ ಪ್ರಜೆಗಳು ಕೂಡ ಈ ವಿಶೇಷ ಪ್ರಯಾಣ ಮಾಡಲು ಸಾಧ್ಯವಾಗುತ್ತದೆ. ಈ ಚರಿತ್ರಾರ್ಹ ಸಮಯದಲ್ಲಿ ಜೀವಿಸಿರುವ ನಾವು ಧನ್ಯರು! ಬಾಹ್ಯಾಕಾಶ ಸಂಶೋಧನೆ ಯಿಂದಾಗಿ ಹಿಂದೆ ಬಹು ವಿಶಾಲವಾಗಿ ಕಾಣುತ್ತಿದ್ದ ಭೂಮಿ ಇಂದು ಚಿಕ್ಕದಾಗಿದೆ. ಅದರ ಸುತ್ತ ತಿರುಗುತ್ತಿರುವ 'ಸೆಟಲೈಟ್'ಗಳು ಎಲ್ಲಾ ಭೂಭಾಗಗಳನ್ನು ಸಂಪರ್ಕಜಾಲ ದಿಂದ (ಟೆಲಿಫೋನ್, ಟೆಲಿವಿಷನ್, ಇಂಟರ್‌ನೆಟ್) ಪರಸ್ಪರವಾಗಿ ಸೇರಿಸಿದ್ದರಿಂದ ಯಾವ ಪ್ರದೇಶವಾಗಲಿ ಸಾವಿರಾರು ಮೈಲಿ ದೂರವಿದ್ದರೂ ಕೂಡ ಅದು 'Just a phone call away!' ಈ ಅರ್ಥದಲ್ಲಿ ಭೂಮಿ ಕುಗ್ಗುತ್ತ ಹೋಗುತ್ತಿದೆ. ಸೌರಶಕ್ತಿಯಿಂದ ಚಲಿಸುವ ಬಾಹ್ಯಾಕಾಶ ಶಕಟಗಳು ಸೌರವ್ಯೂಹದ ಮೂಲೆಗಳನ್ನೆಲ್ಲ ಶೋಧಿಸಿ, ಕೆಲವು ಶಕಟಗಳು ಧೂಮಕೇತುಗಳ ಧೂಳನ್ನು, ಇನ್ನೂ ಕೆಲವು ಚಂದ್ರಗ್ರಹದ ಅಗೋಚರವಾದ ಭಾಗದಿಂದ ಮಂಜಿನ ತುಣುಕುಗಳನ್ನು, ಮತ್ತೂ ಕೆಲವು ಮಂಗಳಗ್ರಹದ ಕಲ್ಲಿನ ಚೂರುಗಳನ್ನು ಭೂಮಿಗೆ ತರಬಹುದು. ಅವುಗಳನ್ನು ವಿಶ್ಲೇಷಣೆ ಮಾಡಿದ ವಿಜ್ಞಾನಿಗಳು ಕನಸು ಕಾಣುವವರು. ಇವೇ ಶೋಧನೆಗಳು ನಮ್ಮ ಲೋಕದಿಂದಾಚೆ ಯಾವುದಾದರೂ ಜೀವ ಕಣಗಳು ಇರಬಹುದೆ ಎನ್ನುವ ಶೇಷಪ್ರಶ್ನೆಗೆ ಉತ್ತರ ನೀಡಬಹುದು. ವರ್ಷ ವರ್ಷಕ್ಕೆ ಉತ್ತಮಗೊಳ್ಳುತ್ತಿರುವ ಟೆಲಿಸ್ಕೋಪ್‌ಗಳಿಗೆ ಮುಂಬರುವ ದಿನಗಳಲ್ಲಿ ಯಾವ ಅದ್ಭುತಗಳು ಕಾಣಸಿಗುತ್ತವೆಯೋ ಯಾರಿಗೆ ಗೊತ್ತು? ಈ ಶೋಧನೆ, ಅಭಿವೃದ್ಧಿಗಳು ಮುಂಬರುವ

ಕ್ರಾಂತಿಗೆ ಅಮೆರಿಕ ಬರೆದಿರುವ ಮುನ್ನುಡಿ ಎಂದರೆ ಉತ್ಪ್ರೇಕ್ಷೆಯಾಗಲಾರದು. ಹಿಂದೆ ರಾಜಕೀಯ ಕ್ರಾಂತಿಯ ಮೂಲಕ ಅಮೆರಿಕನ್ನರು ನವರಾಷ್ಟ್ರವೊಂದನ್ನು ನಿರ್ಮಾಣ ಮಾಡಿದರು. ಆ ಕ್ರಾಂತಿಯ ಪುತ್ರರ ಪರಂಪರೆಯವರಾದ ಈಗಿನ ಅಮೆರಿಕನ್ನರು ಬಾಹ್ಯಾಕಾಶದಲ್ಲಿ ಹೊಸ ಸಮಾಜವನ್ನು ಹುಟ್ಟುಹಾಕುವ ಹವಣಿಕೆಯಲ್ಲಿದ್ದಾರೆ. ಶ್ರೀ ಕುವೆಂಪು ಬೇರೆ ಸಂದರ್ಭದಲ್ಲಿ ಬರೆದ ಈ ಸಾಲುಗಳು ಸಾಹಸಿಗಳಾದ ಅಮೆರಿಕನ್ನರಿಗೆ ಅನ್ವಯಿಸುತ್ತವೆ:

'ಉದಯಿಸುತಿದೆ ನೂತನ ಯುಗ . . . . .
ಮಿಥ್ಯೆಯ ಮೌಢ್ಯತೆಯ ಸೀಳಿ
ಜ್ಞಾನದ ವಿಜ್ಞಾನದ . . . . .
ಕೆಚ್ಚಿನ, ನೆಚ್ಚಿನ ತನುಮನ ಪಟುತೆಯನು
ಸಂಪಾದಿಸಿ ಓ ಮೇಲೇಳಿ
ಕಣ್ದೆರಿಯಿರಿ ಕಾಂತಿಗೆ ಶಾಂತಿಗೆ
ಓ ಕ್ರಾಂತಿಯ ಪುತ್ರರೆ ಬಾಳಿ!'

❑

ಅನುಬಂಧ - ೧

ಆಧಾರ ಗ್ರಂಥಗಳು

1. Andrews, Charles M., *The Colonial Period of American History*, Yale University Press
2. Main, Jackson T., *The Social Structure of Revolutionary America*, Princeton University Press
3. Wood, Gordon S., *Creation of the American Republic, 1776-1787*, University of North Carolina Press
4. Charles, Joseph., *The Origins of the American Party System*, Williamsburg, VA; Institute of Early American History and Culture
5. Collier, John., *Indians of the Americas* [New York; Mentor]. A sensitive, comprehensive overview of Native American history
6. Smerlser, Marshall., *The Democratic Republic, 1800-1815*, Harper Row, New York
7. Billington, Ray., *Westward Expansion*, Macmillan, New York
8. Daingerfield, George., *The Era of Good Feelings*, Harcourt, Brace and World, New York
9. Freehling, Williams W., *Prelude to Civil War*, Harper and Row, New York
10. Tocqueville, Alexis de., *Democracy in America*. Phillip Bradley, ed., Vintage Books, New York
11. Gutman, Herbert G., *The Black Family in Slavery and Freedom, 1750-1925*, Pantheon, New York
12. Boller, P.F. Jr., *American Transcendentalism, 1830-1860*, An Intellectual Enquiry, Putnam, New York
13. Merk. Frederick., *Manifest Destiny and Mission in American History*, New York

14. Merk, Frederick., *The Monroe Doctrine and American Expansionism*, New York
15. Current, Richard N., *Lincoln and the First Shot*, Lippincott, Philadelphia
16. Franklin, John H., *Reconstruction after Civil War*, University of Chicago Press
17. McPherson, James M., *The Struggle for Equality: Abolitionists and the Negro in the Civil War and Reconstruction*, Princeton University Press
18. Tomsich, John., *A Genteel Endeavor: American Culture and Politics in the Gilded Age*, Stanford University Press
19. Healy, David., *United States Expansionism: The !mperialist Urge in the 1890s*, University of Wisconsin Press
20. Furnas, J.C., *Great Times: Social History of United States*
21. Osgood, Robert E et al., *America and the World: From the Truman Doctrine to Vietnam*, John Hopkins Press, Baltimore
22. Berman, Ronald., *America in the Sixties: An Intellectual History*, Harper and Row, New York
23. White, Theodore H., *Breach of Faith: The Fall of Richard Nixon*, Athenaeum, New York
24. Alder, Bill., *The Wit and Wisdom of Jimmy Carter*
25. Rozak, Theodore., *The Making of a Counter Culture*, Doubleday, New York
26. Evans, Rowland and Novak, Robert., *The Reagan Revolution*
27. Blumenthal, Sidney and Byrne Edsall, Thomas., *Reagan Legacy*, Pantheon Books
28. Slevin, Jonathan and Wilmsen, Steven., Chameleon: *The Unauthorized Biography of George Bush*
29. Allen, Charles P., *The Comeback Kid: The Life and Career of Bill Clinton*
30. Levine, Robert E., Bill Clinton: *The Inside Story*

ಅನುಬಂಧ - ೨


ಪೂರಕ ಚಿತ್ರಗಳು



ಕೊಲಂಬಸ್ ಹೊಸ ಜಗತ್ತನ್ನು ಕಂಡುಹಿಡಿದದ್ದು




ಹೊಸ ಪ್ರಪಂಚದ ವಸಾಹತುಗಳು



ಹೊಸ ಜಗತ್ತಿನೆಡೆಗೆ ಹೊರಟ ಪ್ರತ್ಯೇಕತಾವಾದಿಗಳು




ಸ್ಥಳೀಯ ಇಂಡಿಯನ್‌ರೊಂದಿಗೆ ವಿಲಿಯಂ ಪೆನ್ ನಡೆಸಿದ ಶಾಂತಿ ಪ್ರಸ್ತಾವನೆಯ ಪ್ರಯತ್ನ




ಸ್ವಂತಿಕೆಯ ಛಾಪು ಮೂಡಿಸುವ ಯತ್ನ.
ಗಯಾನದಲ್ಲಿ ಸಶಸ್ತ್ರ ದಂಗೆ. ೧೭೭೨-೧೭೭೭



ವರ್ಜೀನಿಯಾದಲ್ಲಿ ಗುಲಾಮರ ಹರಾಜು



ವಸಾಹತುಶಾಹಿಗಳ ವಿದೇಶ ವ್ಯಾಪಾರ



ಬೋಸ್ಟನ್ ಹತ್ಯಾಕಾಂಡ – ಪೌಲ್ ರಿವಿಯರ್ ಗ್ರಹಿಸಿದಂತೆ




ಬೋಸ್ಟನ್ ಚಹಾಕೂಟ



ಹೊಸ ಸರ್ಕಾರದ ಸ್ಥಾಪನೆ


ಸಂವಿಧಾನದ ಅನುಮೋದನೆಯನ್ನು ಆಚರಿಸಲು ನ್ಯೂಯಾರ್ಕಿನ ಜನತೆ ಏರ್ಪಡಿಸಿದ್ದ ಮೆರವಣಿಗೆ. ವಾಷಿಂಗ್‌ಟನ್ ಮತ್ತು ಅವನ ಮಂತ್ರಿಮಂಡಲವನ್ನು ಹಾದು ಹೋಗುವಾಗ ಅವರಿಗೆ ೧೩ ಗನ್‌ಗಳ ಉಡಾವಣೆಯ ಗೌರವವನ್ನು ತೋರಿಸಲಾಯಿತು.



ಸ್ವಾತಂತ್ರ್ಯ ಭವನದಲ್ಲಿ (ಇಂಡಿಪೆಂಡೆನ್ಸ್ ಹಾಲ್) ರಾಜ್ಯಾಂಗಕ್ಕೆ ರುಜು ಹಾಕುತ್ತಿರುವುದು.
ನಿಂತಿರುವವರಲ್ಲಿ ಎಡಗಡೆಯಿಂದ ಎರಡನೆಯವರು ಬೆಂಜಮಿನ್ ಫ್ರಾಂಕ್ಲಿನ್.
ಮೇಜಿನ ಹಿಂದೆ ಮಧ್ಯದಲ್ಲಿ ಕುಳಿತಿರುವವರು ಜಾರ್ಜ್ ವಾಷಿಂಗ್‌ಟನ್.



ಕಣ್ಣೀರಿನ ಹಾದಿ (ಟ್ರಯ್ಲ್ ಆಫ್ ಟಿಯರ್ಸ್)ಯಲ್ಲಿ ಸಂಕಟಪಡುತ್ತಿರುವ ಇಂಡಿಯನ್ನರು.
ರಾಬರ್ಟ್ ಲಿಂಡ್ನೊ ಅವರು ಬಿಡಿಸಿದ ಚಿತ್ರ.
(ಕೃಪೆ : ಪೂಲರೋಕ ಮ್ಯೂಸಿಯಂ, ಬಾರ್ಟ್ಲ್ಸ್‌ವಿಲ್ಲೆ, ಓಕ್ಲಹಾಮ.)



ಪ್ರಮುಖ ಯುದ್ಧಗಳು ೧೮೬೧–೧೮೬೫



ಲಿಂಕನ್‌ನ ಕೊನೆಯ ಭಾವಚಿತ್ರ. ಆವನ ಹತ್ಯೆಗೆ ಮೂರು ದಿನಗಳ ಹಿಂದೆ ತೆಗೆದದ್ದು



ಟಸ್ಕೆಗೀ ಇನ್ಸ್‌ಟ್ಯೂಟ್‌ನಲ್ಲಿ ಥಿಯೋಡರ್ ರೂಸ್‌ವೆಲ್ಟ್ ಸಭೆಯನ್ನುದ್ದೇಶಿಸಿ
ಮಾತನಾಡುತ್ತಿರುವುದು. ಅವರ ಬಲಕ್ಕೆ ಕುಳಿತಿರುವವರು ಬೂಕರ್ ಟಿ. ವಾಷಿಂಗ್‌ಟನ್.



ವರ್ಸೆಯ್ಸ್‌ನಲ್ಲಿ ನಾಲ್ವರು ಮಹಾನಾಯಕರು.
ಎಡಗಡೆಯಿಂದ : ಬ್ರಿಟನ್ನಿನ ಪ್ರಧಾನಿ ಲಾಯ್ಡ್ ಜಾರ್ಜ್, ಇಟಲಿಯ ಪ್ರಧಾನಿ ಓರ್ಲಾಂಡೋ
ಫ್ರಾನ್ಸಿನ ಪ್ರಧಾನಿ ಕ್ಲೆಮೆನ್ಸೋ ಮತ್ತು ಪ್ರೆಸಿಡೆಂಟ್ ವಿಲ್ಸನ್.



ರೂಸ್‌ವೆಲ್ಟ್ ಪ್ರಮಾಣ ವಚನ ಸ್ವೀಕಾರದ ಸಂದರ್ಭದಲ್ಲಿ ಹರ್ಬರ್ಟ್ ಹೂವರ್ ಜೊತೆ



ಪರ್ಲ್ ಹಾರ್ಬರ್. ೧೯೪೧ರ ಡಿಸೆಂಬರ್ ೭ನೆಯ ತಾರೀಖು
ಅನಿರೀಕ್ಷಿತ ದಾಳಿಗೆ ತುತ್ತಾದ ಯುದ್ಧ ನೌಕೆ ಅರಿಝೋನಾ



ಅಣುಸಮರ – ಹಿರೋಷಿಮಾದಲ್ಲಿ ಮೊದಲ ಅಣುಬಾಂಬಿನಿಂದಾದ ದುರಂತ



ಬರ್ಲಿನ್‌ನಲ್ಲಿ ಜನರನ್ನು ವಿಮಾನಗಳು ರಕ್ಷಿಸಿ ಸಾಗಿಸುತ್ತಿರುವುದು



೧೯೫೭ರಲ್ಲಿ ಫೆಡರಲ್ ಸೈನಿಕರ ರಕ್ಷಣೆಯಲ್ಲಿ ಕಪ್ಪು ವಿದ್ಯಾರ್ಥಿಗಳು ಲಿಟ್ಲ್ ರಾಕ್
ಸೆಂಟ್ರಲ್ ಹೈಸ್ಕೂಲಿನಲ್ಲಿ (ಇತರ ವಿದ್ಯಾರ್ಥಿಗಳೊಡನೆ) ಸಮಾವೇಶಗೊಳ್ಳುತ್ತಿರುವುದು



೧೯೬೩ರಲ್ಲಿ ಎಸ್.ಸಿ.ಎಲ್.ಸಿ. ನಾಯಕ ಮಾರ್ಟಿನ್ ಲೂಥರ್ ಕಿಂಗ್ (ಜೂನಿಯರ್) ಕರಿಯರಿಗೆ ಸಮಾನ ಉದ್ಯೋಗಾವಕಾಶ ಹಾಗೂ ಪ್ರತ್ಯೇಕತಾ ನೀತಿ ತ್ಯಾಗ ಇವುಗಳನ್ನು ಒತ್ತಾಯಿಸಿ ವಾಷಿಂಗ್‌ಟನ್ ಡಿ.ಸಿ.ಯ ಕಡೆಗೆ ಹೊರಟ ಜಾಥಾದ ನೇತೃತ್ವ ವಹಿಸಿರುವುದು.



ಚಂದ್ರನ ಮೇಲೆ ಮಾನವನ ಮೊದಲ ಹೆಜ್ಜೆ –
ಅಂತರಿಕ್ಷಯಾನಿ ನೀಲ್ ಆರ್ಮ್‌ಸ್ಟ್ರಾಂಗ್ ತೆಗೆದ ಎಡ್ವಿನ್ ಆಲ್ಡ್ರಿನ್‌ರ ಚಿತ್ರ



೧೯೭೪ರ ನವೆಂಬರ್‌ನಲ್ಲಿ ಅಧ್ಯಕ್ಷ ಫೋರ್ಡ್ ಮತ್ತು ಲಿಯೊನಿಟ್ ಬ್ರೆಜ್ನೆವ್
ಶಸ್ತ್ರಾಸ್ತ್ರಗಳನ್ನು ಕುರಿತ ಮಾತುಕತೆಯ ವಿಜಯದ ಸಂಕೇತವಾಗಿ ಸ್ವಸ್ತಿ ಪಾನ ಮಾಡುತ್ತಿರುವುದು.
(ಡೇವಿಡ್ ಹ್ಯೂಮ್ಸ್ ಕೆನರ್ಲಿ – ಶ್ವೇತಭವನ – ಇಮೇಜ್ ಫ್ರೆಂಡರ್ಸ್ ಇಂಕ್)



ಕ್ಯಾಂಪ್ ಡೇವಿಡ್‌ನಲ್ಲಿ ಮೆನಚೆಮ್ ಬೆಗಿನ್, ಜಿಮ್ಮಿ ಕಾರ್ಟರ್ ಮತ್ತು ಅನ್ವರ್ ಸಾದತ್.

(ಕೃಪೆ : ನ್ಯಾಷನಲ್ ಆರ್ಖೈವ್ಸ್, ಆಫೀಸ್ ಆಫ್ ದಿ
ಪ್ರೆಸಿಡೆನ್ಷಿಯಲ್ ಲೈಬ್ರರೀಸ್ / ಇಮೇಜ್ ಫೈಂಡರ್ಸ್ ಇಂಕ್)

The Washington Post

SUNDAY, DECEMBER 20, 1998

$1.50

Clinton Impeached

House Approves Articles Charging Perjury, Obstruction

. . Mrs. Clinton, the president, Vice President Al Gore and House Minority Leader Richard Gephardt after the House voted to impeach Clinton. On the South Lawn, the president told Democratic House members, "We must stop the politics of personal destruction."




ಸದನವು ಕ್ಲಿಂಟರನ್ನು ವಿಚಾರಣೆಗೆ ಗುರಿಪಡಿಸಬೇಕು ಎಂಬುದರ ಪರವಾಗಿ ಮತನೀಡಿದ ಸಂದರ್ಭದಲ್ಲಿ ಶ್ರೀಮತಿ ಕ್ಲಿಂಟನ್, ಅಧ್ಯಕ್ಷ ಕ್ಲಿಂಟನ್, ಉಪಾಧ್ಯಕ್ಷ ಅಲ್‌ಗೋರ್ ಮತ್ತು ಸದನದ ಅಲ್ಪಸಂಖ್ಯಾತ ಸದಸ್ಯರ ನಾಯಕ ರಿಚರ್ಡ್ ಗೆಫರ್ಡ್ಟ್. ಸೌತ್ ಲಾನಿನ ಮೇಲೆ ನಿಂತು ಅಧ್ಯಕ್ಷರು ಸದನದ ಡೆಮೊಕ್ರಾಟಿಕ್ ಸದಸ್ಯರನ್ನುದ್ದೇಶಿಸಿ ಹೇಳಿದರು :
'ವ್ಯಕ್ತಿತ್ವ ನಾಶದ ರಾಜಕೀಯವನ್ನು ನಾವು ನಿಲ್ಲಿಸಬೇಕು'

The Washington Post

SATURDAY, FEBRUARY 13, 1999

Clinton Acquitted

2 Impeachment Articles Fail to Win Senate Majority



The president on February 12, 1999, walks to the Rose Garden after the Senate acquitted him of the impeachment charges. "I want to say again to the American people how profoundly sorry I am for what I said and did to trigger these events," he said, adding, "I believe any person who asks forgiveness has to be prepared to give it."

೧೯೯೯ರ ಫೆಬ್ರವರಿ ೧೨ರಂದು ಸೆನೆಟ್ ತಮ್ಮನ್ನು ದೋಷ ಮುಕ್ತಗೊಳಿಸಿದ ಬಳಿಕ ಗುಲಾಬಿ ವನಕ್ಕೆ ತೆರಳಿ ಹೀಗೆ ಹೇಳಿದರು : 'ಈ ಘಟನಾವಳಿಗಳ ಆರಂಭಕ್ಕೆ ಕಾರಣನಾದುದರಿಂದ ನಾನೆಷ್ಟು ವಿಷಾದಿಸುತ್ತೇನೆ ಎಂದು ಅಮೆರಿಕದ ಜನತೆಗೆ ಹೇಳಲಿಚ್ಛಿಸುತ್ತೇನೆ. ಯಾರು ಕ್ಷಮೆಯನ್ನ ಯಾಚಿಸುತ್ತಾನೆಯೋ ಅವನು ಅದನ್ನು ನೀಡಲೂ ಸಿದ್ಧನಿರಬೇಕು.'

ಅನುಬಂಧ - ೩

ಮೋಹನ್ ಅವರ 'ನೆನಪುಗಳು' ಕೃತಿಯ ಬಗೆಗೆ...

- ೧ -

ಅಂತರಾಳದ ಪದರುಗಳಲ್ಲಿ ಹುದುಗಿ ಕಾಲ ಸರಿದಂತೆ ಅಮೂಲ್ಯ ಹರಳುಗಳಾಗಿ ಮಾರ್ಪಟ್ಟ ಆ ಮಧುರ ಭಾವನೆಗಳನ್ನು ನೆನಪಿನ ಗಣಿಯಿಂದ ಹೊರತಂದು ಪ್ರೊ. ವೈ.ಆರ್. ಮೋಹನ್ ಅವರು ನಮ್ಮ ಮುಂದೆ ಇರಿಸಿದ್ದಾರೆ.

೧. ಜೀವನದಲ್ಲಿ ಜರುಗಿ ಹೋದ ಘಟನೆಗಳು.

೨. ಬದುಕನ್ನು ಅರ್ಥವತ್ತಾಗಿ ಮಾಡಿದ, ಸುಖ ದುಃಖಗಳನ್ನು ಹಂಚಿಕೊಂಡು ಬಾಳಿನ ಬವಣೆಗಳನ್ನು ಭರಿಸಲು ನೆರವಾದ ವ್ಯಕ್ತಿಗಳು.

೩. ಆಸೆ ಆಕಾಂಕ್ಷೆಗಳು ಕೈಗೂಡದೆ ಬಾಳು ಬರಿದಾಗಿ ತೋರಿದಾಗ, ಆ ಬರಿದಾದ ಬಾಳ ತೆರೆಯ ಮೇಲೆ ರಂಗುರಂಗಿನ ಕನಸುಗಳನ್ನು ಕಂಡು ಸುಖಿಸುವಂತೆ ಮಾಡಿದ ಆತ್ಮೀಯ ಬಂಧುಗಳು, ಸಖರು, ಸೋದರ-ಸೋದರಿಯರು ಇವರೆಲ್ಲ ತಮಗೆ ದೇವರು ದಯಪಾಲಿಸಿದ ದೇಣಿಗೆ ಎಂದು ಪರಿಗಣಿಸಿ. ಬಾಳಿನ ರಂಗಮಂದಿರದಲ್ಲಿ ಮುಖ್ಯ ಪಾತ್ರಗಳನ್ನು ವಹಿಸುವಂತೆ ಮಾಡಿ. ಬದುಕು ಅನುಗ್ರಹಿಸಿದ ಸುಖ-ಸಂತೋಷಗಳನ್ನು ಬರಹಗಳಲ್ಲಿ ಎತ್ತಿತೋರಿಸಿದ್ದಾರೆ. ಅವರ ಸಾರ್ಥಕ ಬದುಕಿನ ಒಟ್ಟು ಅಂದವನ್ನು ಈ ಪ್ರಬಂಧಗಳು ಬಿಂಬಿಸುತ್ತವೆ. ಸರಳ ಶೈಲಿ, ಓದುತ್ತ ಹೋದಂತೆ ಆತ್ಮೀಯವಾಗುವ ಪಾತ್ರಗಳು ಈ ಪ್ರಬಂಧಗಳ ವೈಶಿಷ್ಟ್ಯ.

- ಹ.ಶಿ. ಭೈರನಟ್ಟಿ

- ೨ -

೧. ಭಾವಪೂರ್ಣ ನೆನಪುಗಳು ಒಳ್ಳೆಯ ಲಲಿತಪ್ರಬಂಧಗಳಾಗಬಲ್ಲವು ಎಂಬುದಕ್ಕೆ ಪ್ರೊ. ವೈ.ಆರ್. ಮೋಹನ್ ಅವರ ನೆನಪುಗಳು ಒಂದು ಮಾದರಿಯಾಗಿದೆ.

೨. ಲೇಖಕರ ಆರೋಗ್ಯಪೂರ್ಣ ಹಾಗೂ ಧೀರೋದಾತ್ತ ಜೀವನದೃಷ್ಟಿಯಿಂದಾಗಿ ಇಲ್ಲಿಯ ಲಲಿತಪ್ರಬಂಧಗಳು ಅನನ್ಯವಾಗಿವೆ.

೩. ಪಾರ್ಕಿನ್‌ಸನ್ ರೋಗದಿಂದ ಬಳಲುತ್ತಿರುವ ಲೇಖಕರ ಜೀವನ ಪ್ರೀತಿ ಅಪೂರ್ವವಾಗಿದೆ. ಏಕಕಾಲಕ್ಕೆ ಅವರು ಮೃತ್ಯುಮುಖಿ ಜೀವನವನ್ನೂ ಅದಮ್ಯ ಜೀವನ ಪ್ರೀತಿಯನ್ನೂ ಗ್ರಹಿಸಿದ್ದಾರೆ.

೪. ಲೇಖಕರ ಬಾಲ್ಯದ ಅನುಭವಗಳು, ಅದರಲ್ಲೂ ಫುಟಬಾಲ್ ಆಟ, ಕಡುಬಿನ ಊಟ, ಕೃಷಿಗೆ ಸಂಬಂಧಿಸಿದ ಮಶೀನು ಹಿಡಿದು ಲೇಖಕರ ತಂದೆ ಹಾಗೂ ಮಾವಂದಿರ ನಡುವಿನ ಕಿತ್ತಾಟ. ಬಾಲಕನಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲುಗೊಳ್ಳುವಿಕೆ, ಹಿರೇತೋಟದಲ್ಲಿ ಎಣ್ಣೆಸ್ನಾನ, ಹೊಚ್ಚಹೊಸ ಹುಮ್ಮಸ್ಸಿನಿಂದ ಸಾಹಿತ್ಯದ ಅಧ್ಯಯನದಲ್ಲಿ ತೊಡಗುವಿಕೆ. ವಿಭಿನ್ನ ಮನೋಭಾವದ ಅಜ್ಜ ಹಾಗೂ ತಂದೆಯವರ ಕುರಿತ ಲೇಖಕರ ನಿಲುವು. ಮದರಂಗಿ ಬಣ್ಣದ ತಂಗಿ, ಹುಲಿಬಣ್ಣದ ಅಣ್ಣ. ಆರ್.ಎಸ್.ಎಸ್. ಚಟುವಟಿಕೆಗಾಗಿ ತಂದೆಯು ಜೇಲುವಾಸ, ಪ್ರೌಢಶಾಲೆ, ಕಾಲೇಜು, ವಿಶ್ವವಿದ್ಯಾಲಯದ ದಿನಗಳು ಹಾಗೂ ಅವರ ಮೇಲೆ ಪ್ರಭಾವ ಬೀರಿದ ಪ್ರಾಧ್ಯಾಪಕರು, ಹಾಕಿಯ ಆಟ ಇವೆಲ್ಲ ಸ್ಫುಟವಾಗಿ ಮೂಡಿವೆ. ಅದಕ್ಕೆ ಕಾರಣ ಮೃತ್ಯುಮುಖದಲ್ಲಿದ್ದರೂ ಲೇಖಕರು ಬಾಲ್ಯದ ಈ ಘಟನೆಗಳನ್ನು ತೀವ್ರವಾಗಿ ಅನುಭವಿಸಿ ಗಟ್ಟಿಯಾಗಿ ಸಮರ್ಥವಾಗಿ ಅವುಗಳನ್ನು ಅಭಿವ್ಯಕ್ತಿಗೆ ಈಡುಮಾಡಿದ್ದು.

೫. ಏಕಕಾಲಕ್ಕೆ ಲೇಖಕರ ವ್ಯಕ್ತಿತ್ವದ ವಿಕಾಸದ ಚಿತ್ರಣವನ್ನು ಈ ಗ್ರಂಥ ವ್ಯಕ್ತಪಡಿಸಿದಂತೆ, ಮಲೆನಾಡಿನ ಸಾಮಾಜಿಕ ಜೀವನದ ಸ್ಥಿತ್ಯಂತರವೂ ಮೂಡಿದೆ.

೬. ಮಲೆನಾಡಿನ ಕಾಡು, ಪ್ರಕೃತಿ ವರ್ಣನೆ ಹೃದ್ಯವಾಗಿ ಮೂಡಿಬಂದಿದೆ.

೭. ಲೇಖಕರು ತಮ್ಮ ಅಕ್ಕ ಹಾಗೂ ತಂದೆಯವರ ಕುರಿತು ಪ್ರಬುದ್ಧ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ.

೮. ಕಾಲೇಜಿನಲ್ಲಿ ಸಹಪಾಠಿ ಮಲ್ಲಿಕಾಳ ಆದರ್ಶ ಪ್ರೀತಿಯ ಅಧ್ಯಾಯ, ಮತ್ತೆ ಅರಸೀಕೆರೆ ಪ್ರಯಾಣದಲ್ಲಿ ಸಂಧಿಸಿದ ಯುವತಿಯೊಂದಿಗಿನ ಪ್ರೇಮದ ಅನುಭವಗಳನ್ನು ಅತ್ಯಂತ ಪ್ರಭಾವಪೂರ್ಣವಾಗಿ ವರ್ಣಿಸಿದ್ದಾರೆ. ಅದರಂತೆ ಲಗ್ನ, ಲಗ್ನದ ಮುಂಚಿನ ಅವರ ಮನೋಸ್ಥಿತಿಗಳನ್ನು ಕಲಾತ್ಮಕವಾಗಿ ಸೆರೆಹಿಡಿದ್ದಾರೆ.

೯. ಅಮೆರಿಕದಲ್ಲಿ ಲೇಖಕರ ಏಕಾಕಿತನ, ಒಂಬತ್ತು ವರ್ಷಗಳ ನಂತರದ ಮಕ್ಕಳ ಭೇಟಿಯ ಅಪೂರ್ವ ಸನ್ನಿವೇಶವೂ ಹೃದಯಸ್ಪರ್ಶಿಯಾಗಿದೆ.

೧೦. ಜೀವನದಲ್ಲಿ ಬದಲಾಗುತ್ತಿರುವ ಮಾನವಸಂಬಂಧಗಳ ಕುರಿತ ಅನುಪಮ ವಿಶ್ಲೇಷಣೆಯನ್ನು ಗ್ರಂಥ ಒಳಗೊಂಡಿದೆ.

೧೧. ಈ ಪುಸ್ತಕ ಲಲಿತ ಪ್ರಬಂಧಗಳ ಸಾಲಿನಲ್ಲಿ ಬಹುಮಾನಕ್ಕೆ ಅತ್ಯಂತ ಯೋಗ್ಯವಾಗದೆ.

– ವೀರೇಂದ್ರ ಸಿಂಪಿ

– ३ –

ಇದೊಂದು ಅನನ್ಯ ಕೃತಿ. ಬದುಕಿನ ಸಂಕೀರ್ಣ ಘಟ್ಟದಲ್ಲಿರುವ ಜೀವವೊಂದರ ಭೂತಕಾಲದ ದಾರಿಯ ಅವಲೋಕನ ಇದು ಅಂದುಕೊಂಡರೂ ಬದುಕನ್ನು ನಿರ್ಲಿಪ್ತವಾಗಿ ನೋಡುವ, ಸನ್ನಿವೇಶಗಳನ್ನು ಇರುವಂತೆಯೇ ಸ್ವೀಕರಿಸುವ ಹಾಗೆಯೇ ಓದುಗನೆದುರು ತೆರೆದಿಡುವ ರೀತಿ ಮೆಚ್ಚುಗೆಯಾಗುತ್ತದೆ. ಲೇಖಕನ ಬದುಕಿನ ಕೆಲವೊಂದು ಘಟನೆಗಳು, ಓದುಗನನ್ನು ತನ್ನ ಬದುಕು, ಬಾಲ್ಯದ ಬಗೆಗೆ ಒಂದಿಷ್ಟು ಆತ್ಮವಿಮರ್ಶೆ ಮಾಡಿಕೊಳ್ಳುವಂತೆ ಮಾಡುತ್ತವೆ.

ಕೃತಿಯುದ್ದಕ್ಕೂ ನಮ್ಮನ್ನು ಸೆಳೆಯುವ ಅಂಶ ಲೇಖಕನ ಸರಳತೆ, ಇರುವ ವಿಷಯವನ್ನು ಮತ್ತಷ್ಟು ಸರಳಗೊಳಿಸಿ ಹೇಳುವ ರೀತಿಯು ಹೃದಯಕ್ಕೆ ಹತ್ತಿರವಾಗುತ್ತದೆ. ಪರಸ್ಪರ ಮಾತನಾಡುವ ಶೈಲಿಯಲ್ಲಿ ಇರುವ (ಕೆಲವು ಕಡೆ) ಬರವಣಿಗೆಯ ರೀತಿಯೂ, ಜೀವನ ಪ್ರೀತಿಯೂ ಆತ್ಮೀಯವಾಗುತ್ತವೆ. ಜೀವನದಲ್ಲಿ ಅಷ್ಟೊಂದು ಮೇಲಕ್ಕೇರಿದ ವ್ಯಕ್ತಿಯೊಬ್ಬನ ಗತ ಬದುಕು ಎಷ್ಟೊಂದು ಹೋರಾಟದಿಂದ ಕೂಡಿತ್ತು ಎಂದು ಆಶ್ಚರ್ಯವಾಗುತ್ತದೆ, ಮಾತ್ರವಲ್ಲ 'ಬದುಕೆಂದರೆ ಇಷ್ಟೆ' ಎಂದು ಅಂದುಕೊಳ್ಳುವ ಮನಸ್ಸಿಗೆ ಈ ಕೃತಿ ಬದುಕಿನ ಬಗೆಗೆ ಬೇರೆಯದೇ ದೃಷ್ಟಿಕೋನವನ್ನು ನೀಡುತ್ತದೆ.

ಲೇಖಕನ ಸ್ವಾಸ್ಥ್ಯವನ್ನು ಬದಿಗಿರಿಸಿ ನೋಡಿದರೂ ಈ ಕೃತಿಯೊಂದು ಪರಿಪೂರ್ಣ ಬದುಕಿನ ಸುಂದರ, ಸಮಗ್ರ ನಿರೂಪಣೆ ಎನ್ನಲು ಅಡ್ಡಿಯಿಲ್ಲ.

– ಅಬ್ದುಲ್ ರಶೀದ್

(ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವ ಬಹುಮಾನಿತ ಕೃತಿಗಳು ಪುಸ್ತಕದಿಂದ)

ಸಂ: ಡಾ. ಗುರುಲಿಂಗಕಾಪಸೆ, ೨೦೦೨

– ೪ –

ಡಾ. ವೈ.ಆರ್. ಮೋಹನರು ತಮ್ಮ ನೆನಪುಗಳನ್ನು ಸ್ವಂತಕ್ಕಾಗಿ ಬರೆದುಕೊಂಡದ್ದು; ಆದರೆ, ಅವರ ಬರವಣಿಗೆಯಲ್ಲಿ ಇರುವ ತೀವ್ರತೆ ಮತ್ತು ಘನತೆಯಿಂದಾಗಿ ಅವರ ಕೃತಿ ನಮ್ಮೆಲ್ಲರ ಒಳಜೀವನದ ಅಗತ್ಯವನ್ನು ಪೂರೈಸುತ್ತದೆ. ಈ ಬದುಕು ಹುಟ್ಟಿಕೊಂಡ ಕ್ಷಣದಿಂದಲೇ ಮೃತ್ಯುಮುಖಿ; ಹಾಗೆಯೇ ಜೀವಕಾಮಿ. ಈ ಎರಡು ಸತ್ಯಗಳನ್ನೂ

ಏಕಕಾಲದಲ್ಲೇ ಗ್ರಹಿಸುವ ಶಕ್ತಿ ನಮಗಿರುವುದಿಲ್ಲ. ಅಂತಹ ಶಕ್ತಿ ಒದಗಿಬರುವುದು ಕೆಲವರಿಗೆ ಮಾತ್ರ. ಮೋಹನರ ಅಂತಹ ಶಕ್ತಿ ನಮ್ಮಲ್ಲಿ ಬೆರಗನ್ನೂ ಗೌರವವನ್ನೂ ಹುಟ್ಟಿಸುವಂತೆ ಈ ಕೃತಿಯಲ್ಲಿ ಮೂಡಿಬಂದಿದೆ. ಪಾರ್ಕಿನ್‌ಸನ್‌ನಂತಹ ಘೋರವಾದ ದೇಹದ ಸ್ಥಿತಿಯನ್ನು ಮೋಹನರು ಅಳುಬುರಕರಾಗದೆ, ಆತ್ಮವಂಚನೆ ಮಾಡಿಕೊಳ್ಳದೆ ಎದುರಿಸುವ ಕ್ರಮವೇ ಜೀವೋಪಿಯಾಗುವ, ಬದುಕಿನ ಸುಖ-ದುಃಖದ ನೆನಪುಗಳ ಉತ್ಸವವಾಗುವ, ಉತ್ತಮ ಸಾಹಿತ್ಯದ ಎಲ್ಲ ಗುಣಗಳೂ ಮೋಹನರ ಈ ಕೃತಿಯಲ್ಲಿದೆ.

ಈ ಕೃತಿ ಓದುತ್ತಿದ್ದಂತೆ ಕವಿ ಗಂಗಾಧರ ಚಿತ್ತಾಲರು ನನಗೆ ನೆನಪಾದರು. ಗಂಗಾಧರ ಚಿತ್ತಾಲರು ತಮ್ಮ ಬದುಕನ್ನು ದಾರುಣವಾಗಿ ಪೀಡಿಸುವ, ಅರ್ಥವೇ ಆಗದಂತೆ ವಿನಾ ಕಾರಣ ಪೀಡಿಸುವ ರೋಗಕ್ಕೆ ಎದುರಾಗಿ ವಿಧಿಯನ್ನು ಪ್ರಶ್ನಿಸುತ್ತಾರೆ. ಹಳೆ ಒಡಂಬಡಿಕೆಯ ಜೋಬ್‌ನಂತೆ ಆರ್ತನಾಗಿ ಪ್ರಶ್ನಿಸುತ್ತ ದೈವವನ್ನೇ ಧಿಕ್ಕರಿಸುತ್ತಾರೆ. ಮೋಹನರೂ ತಮ್ಮ ವಿಧಿಗೆ ಎದುರಾಗುವುದು ಚಿತ್ತಾಲರಿಗಿಂತ ಭಿನ್ನವಾಗಿ ಎಂದು ನನಗನ್ನಿಸುತ್ತದೆ. ಆದರೆ ಅಷ್ಟೇ ಪರಿಣಾಮಕಾರಿಯಾಗಿ ಎಂದೂ ನನಗೆ ಅನ್ನಿಸುತ್ತದೆ. ಮೋಹನರ ಬರವಣಿಗೆಯ ಮುಖ್ಯ ಗುಣ ನಮ್ರತೆ. ಇದು ಅಸಹನೀಯ ನೋವಿನಲ್ಲಿರುತ್ತಲೇ, ಆ ನೋವನ್ನು ನುಂಗಿ ಮೂಡುವ ಮಂದಹಾಸಯುಕ್ತವಾದ ನಮ್ರತೆಯೆಂದು ನಮ್ಮಲ್ಲಿ ಬೆರಗನ್ನು ಕೃತಜ್ಞತಾ ಭಾವವನ್ನೂ ಹುಟ್ಟಿಸುತ್ತದೆ.

ಕೇರಳದಲ್ಲಿ ಭಟ್ಟತಿರಿ ಪಾದ್ ಎಂಬ ಹಿಂದಿನ ಕಾಲದ ಸಂಸ್ಕೃತ ಕವಿಯೊಬ್ಬನ ಬಗ್ಗೆ ಒಂದು ಕಥೆ ಹೇಳುತ್ತಾರೆ. ಭಟ್ಟತಿರಿಗೆ ಅಸಹನೀಯವಾದ ವಾತರೋಗ. ಏಳಲಾರ, ಕೂರಲಾರ. ಅವನು ಗುರುವಾಯೂರಿನ ದೇವಸ್ಥಾನದಲ್ಲಿ ಕೂತು ನಾರಾಯಣೀಯಮ್ ಬರೆಯುತ್ತಾನೆ; ವ್ರತಶೀಲನಾಗಿ, ತನ್ನ ರೋಗದ ಶಮನಕ್ಕಾಗಿ. ಭಾಗವತದ ಕಥೆಯನ್ನು ಸಂಸ್ಕೃತದಲ್ಲಿ ಬರೆಯುತ್ತ ಕೂತಂತೆ ಒಂದು ದಿನ ತನ್ನ ಎದುರಿನ ಶ್ರೀಕೃಷ್ಣ ಕುಣಿಯುವುದನ್ನು ವರ್ಣಿಸತೊಡಗುತ್ತಾನೆ. ಆಗ ಅವನು ಬರೆಯುವ ಮಾತುಗಳಿಗೇ ಕುಣಿತದ ಲಯ ಪ್ರಾಪ್ತವಾಗುತ್ತದೆ. ಅಚ್ಚರಿಯೆಂದರೆ, ಭಟ್ಟತಿರಿಯ ವಾತಪೀಡಿತ ಕಾಲುಗಳೂ ಸಡಿಲಾಗಿ ಹಗುರಾಗಿ ಕುಣಿಯತೊಡಗುತ್ತವೆ.

ಈ ಕಥೆ ನನಗೆ ಮೋಹನರ ಕೆಲವು ವರ್ಣನೆಗಳನ್ನು ಓದುತ್ತಿದ್ದಂತೆ ನೆನಪಾಯಿತು. ಉದಾಹರಣೆಗೆ ಫುಟ್‌ಬಾಲಿನ ವರ್ಣನೆ; ಅಲ್ಲಲ್ಲಿ ಬರುವ ಕೆಲವು ಹುಡುಗಿಯರ ವರ್ಣನೆ. ಮೋಹನರಂತೆ ನಾನೂ ಮಲೆನಾಡಿನ ಪರಿಸರದಲ್ಲಿ ಹುಟ್ಟಿ ಬೆಳೆದವನು. ನನಗೆ ನನ್ನ ಬಾಲ್ಯವೇ ಮರುಕಳಿಸುವಂತೆ ಮೋಹನರು ಮಾಡಿದರು. ಮೋಹನರು ತಮ್ಮನ್ನು ನರಳಿಸುವ ಪಾರ್ಕಿನ್‌ಸನ್ನನ್ನು ಈ ಕ್ಷಣಗಳಲ್ಲಿ ಮೀರಿದವರಂತೆ ನನಗೆ ಕಂಡರು. ಈ ಕೃತಿಯ ಒಟ್ಟು ಜೀವದೃಷ್ಟಿ ಎಷ್ಟು ಪಕ್ವವಾದದ್ದು ಎಂದು ನನಗೆ ಸೋಜಿಗವಾಗಿದೆ. ಮೋಹನರು ತಮ್ಮ ತಂದೆಯ ಬಗ್ಗೆ ಬರೆಯುವ ಕ್ರಮ, ತಮ್ಮ ಯೌವನದ ಒಂದು

ಪ್ರೇಮ ಪ್ರಕರಣದ ಬಗ್ಗೆ ಹೇಳುವ ಮಾತುಗಳು ತುಂಬಿದ ಬದುಕಿನಿಂದ ಮಾತ್ರ ಬರುವಂತಹ ಮಾತುಗಳು.

ಕನ್ನಡದಲ್ಲಿ ಇದೊಂದು ಅನನ್ಯವಾದ ಕೃತಿ. ಊರಿನಿಂದ ದೂರವಾಗಿ, ಎಲ್ಲೋ ಅಮೆರಿಕದಲ್ಲಿ ಇದ್ದು ಇವರು ಕನ್ನಡವನ್ನು ಅದರ ಎಲ್ಲ ಸೊಗಸಿನಲ್ಲೂ ಶಕ್ತಿಯುತವಾಗಿ ಮತ್ತೆ ಪಡೆದುಕೊಳ್ಳುವ ಪ ತ್ತು ಬಳಸುವ ಕ್ರಮ ಕೂಡ ಅನನ್ಯವಾಗಿದೆ. ಮೋಹನರು ತಮ್ಮ ಬಾಲ್ಯದ ಕನ್ನಡದಲ್ಲಿ ಮತ್ತೆ ಹುಟ್ಟಿ ಭಟ್ಟತಿರಿಯಂತೆ ಚೈತನ್ಯಪೂರ್ಣರಾಗಿ ನಮ್ಮೆದುರು ಓಡಾಡುತ್ತಿದ್ದಾರೆ, ನಗಿಸುತ್ತಿದ್ದಾರೆ, ನಗುತ್ತಿದ್ದಾರೆ, ಟೆನ್ನಿಸ್ ಆಟವಾಡುತ್ತಿದ್ದಾರೆ – ಎಂದು ನನಗೆ ಅನ್ನಿಸಿತು.

ಕುವೆಂಪುರ 'ಎಂದೆಂದಿಗು ನೀ ಕನ್ನಡವಾಗಿರು' ಎಂಬ ಮಾತು ಮೋಹನರ ಬಗ್ಗೆ ನಿಜ. ಮೋಹನರಿಗೆ ಎಲ್ಲ ಕನ್ನಡಿಗರ ಪರವಾಗಿ ಕೃತಜ್ಞತೆಯನ್ನು ಹೇಳುವುದು ನನ್ನ ಕರ್ತವ್ಯವೆಂದುಕೊಂಡಿದ್ದೇನೆ.

ಪ್ರೊ. ಯು.ಆರ್. ಅನಂತಮೂರ್ತಿ

(ವೈ.ಆರ್. ಮೋಹನ್ ಅದರ ನೆನಪುಗಳು ಕೃತಿಗೆ ಬರೆದ ಮುನ್ನುಡಿಯಿಂದ)

ಪ್ರ : ಅಮೆರಿಕನ್ನಡ ಮತ್ತು ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ : ೨೦೦೦.

❑

ನಮ್ಮ ಪುಸ್ತಕಗಳು

ಅಮೆರಿಕಾಯಣ (ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಂಕ್ಷಿಪ್ತ ಇತಿಹಾಸ)	ವೈ.ಆರ್. ಮೋಹನ್	೬೫೦-೦೦
ಆಟ-ಮಾಟ (ಸೃಜನಶೀಲತೆ ಕುರಿತು)	ಪ್ರೊ. ಕೆ.ಜಿ. ಸುಬ್ರಹ್ಮಣ್ಯನ್ ಅನು: ಕೆ.ಎಸ್. ಶ್ರೀನಿವಾಸಮೂರ್ತಿ	೧೦೦-೦೦
ಅರಹಂತ (ನಾಟಕ)	ರಾಮನಾಥ್	೭೫-೦೦
ಹಕ್ಕಿ ಪುಟಾಣಿ (ಮಕ್ಕಳ ಕವಿತೆ)	ಆನಂದ ವಿ. ಪಾಟೀಲ	೫೦-೦೦
ಹಳೆಯ ಕಾಲದ ಹೊಸ ಕತೆ (ಕಥಾ ಸಂಕಲನ)	ಕೆ. ಸತ್ಯನಾರಾಯಣ	೧೨೫-೦೦
ಯುಗಪಲ್ಲಟ (ಲೇಖನಗಳು)	ಯು.ಆರ್. ಅನಂತಮೂರ್ತಿ	೮೦-೦೦
ಮಕ್ಕಳ ಸಾಹಿತ್ಯ ಶತಮಾನ (ಸಮೀಕ್ಷೆ)	ಸಂ. ಆನಂದ ಪಾಟೀಲ ಮತ್ತು ನ. ರವಿಕುಮಾರ	೭೫-೦೦
ಮನುಕುಲದ ಮಾತುಗಾರ (ಚಾಮ್‌ಸ್ಕಿ ಚಿಂತನೆ ಮತ್ತು ದರ್ಶನಗಳು)	ವಿವಿಧ ಲೇಖಕರು*	೧೫೦-೦೦
ಮಯಾಪಾತಾಳ (ಕವಿತೆ)	ರಾಮಲಿಂಗಪ್ಪ ಟ. ಬೇಗೂರು	೫೦-೦೦
ಗೊಂದಲಪುರ (ಹಿಂಸೆ ಕುರಿತು)	ಸಂ. ನ. ರವಿಕುಮಾರ, ಡಿ.ಆರ್. ಚಂದ್ರಮಾಗಡಿ	೧೭೫-೦೦
ಯೇಗ್ದಾಗೆಲ್ಲಾ ಐತೆ	ಜ. ಗೆರೆ ಕೃಷ್ಣಶಾಸ್ತ್ರೀ	೫೦-೦೦

ಪ್ರೀತಿಸುವುದೆಂದರೆ... (ಆರ್ಟ್ ಆಫ್ ಲವಿಂಗ್)	ಮೂಲ: ಎರಿಕ್ ಫ್ರಾಂ ಅನು: ಡಾ. ಎಚ್.ಎಸ್. ರಾಘವೇಂದ್ರರಾವ್ ಡಾ. ಕೆ.ವಿ. ನಾರಾಯಣ	೫೦-೦೦
ಬೊಗಸೆಯಲ್ಲಿ ಮಳೆ (ನುಡಿ ನೋಟಗಳು)	ಜಯಂತ ಕಾಯ್ಕಿಣಿ	೧೦೦-೦೦
ಕರುಳಬಳ್ಳಿಯ ಸೊಲ್ಲು (ಬೇಂದ್ರೆ ಕಾವ್ಯವಿಮರ್ಶೆ)	ರಾಜೇಂದ್ರ ಚೆನ್ನಿ*	೪೦-೦೦
ಫಾದರ್ (ಸ್ಟ್ರಿಂಡ್‌ಬರ್ಗ್ ನಾಟಕ)	ಅನು: ಸಿ. ನಾಗಣ್ಣ	೪೦-೦೦
ಬೆಳದಿಂಗಳು (ಮಕ್ಕಳ ಕಾದಂಬರಿ)	ಆನಂದ ವಿ. ಪಾಟೀಲ*	೧೫-೦೦
ರಚನೆ-ನಿರಚನೆ (ವಿಮರ್ಶೆ)	ಕೇಶವಶರ್ಮ ಕೆ.*	೮೦-೦೦
ಯಾರ ಜಪ್ತಿಗೂ ಸಿಗದ ನವಿಲುಗಳು (ದೇವನೂರು ಮಹಾದೇವ ಸಾಹಿತ್ಯ ಕುರಿತು)	ಸಂ. ಪಿ. ಚಂದ್ರಿಕಾ	೧೨೦-೦೦
ನೀಲಿತತ್ತಿ (ಕವನ ಸಂಕಲನ)	ಲಕ್ಷ್ಮೀಪತಿ ಕೋಲಾರ*	೫೦-೦೦
ಜನ್ನ ಮತ್ತು ಅನೂಹ್ಯ ಸಾಧ್ಯತೆ (ಕಥಾಸಂಕಲನ)	ಆನಂದ ಋಗ್ವೇದಿ*	೫೦-೦೦
ವಿರೊಧ ವಿಲಾಸ (ವಕ್ರೋಕ್ತಿ ವರಸೆಗಳು)	ಎಂ.ಎಸ್.ಕೆ. ಪ್ರಭು	೩೦-೦೦
ದೇಶೀ ದರ್ಶನಗಳು	ವಿವಿಧ ಲೇಖಕರು*	೬೦-೦೦
ನಮ್ಮ ತವಕ ತಲ್ಲಣಗಳು (ಲೇಖನಗಳು)	ಕೆ.ವಿ. ಸುಬ್ಬಣ್ಣ*	೬೦-೦೦
ಮಾಗಿ ಮೂವ್ವತ್ತೈದು (ಕಥೆಗಳು)	ಕೇಶವ ಮಳಗಿ	೬೫-೦೦

ಪಾತಿದೋಣಿ (ಕಥೆಗಳು)	ಉಮಾ ಹೆಗಡೆ	೪೫-೦೦
ಶಬ್ದರೇಖೆ (ವಿಮರ್ಶೆ)	ಕೇಶವಶರ್ಮ ಕೆ.*	೫೦-೦೦
ಅನಾಹತನಾದ (ಸಂಗೀತ ಕುರಿತು)	ವಿವಿಧ ಲೇಖಕರು*	೩೫-೦೦
ಕದಳೀವನ ಕರ್ಪೂರ (ಪರಿಸರ ಚಿಂತನೆ)	ವಿವಿಧ ಲೇಖಕರು*	೫೦-೦೦
ಯದುಗಿರಿಯ ಅಂಗಳದಿಂದ (ಪ್ರತಿನ ಸಾಹಿತ್ಯ)	ವಿವಿಧ ಲೇಖಕರು*	೪೫-೦೦
ಕ್ಯಾಪ್ಸೂಲಗಿತ್ತಿ (ಅಂಕಣ ಬರಹ)	ನಾಗೇಶ ಹೆಗಡೆ	೩೦-೦೦
ಚಲ್ ಮೇರಿ ಲೂನಾ (ಪ್ರಬಂಧಗಳು)	ಆರ್. ನಿರ್ಮಲ*	೫೦-೦೦
ಪಾವೆಂ ಹೇಳಿದ ಕಥೆ (ಕಥೆಗಳು)	ರವಿಬೆಳಗೆರೆ	೧೦೦-೦೦
ದಾಂಪತ್ಯಕ್ಕೊಂದುಶೀಲ (ಪ್ರಬಂಧಗಳು)	ಕೆ. ಸತ್ಯನಾರಾಯಣ	೩೦-೦೦
ಒಂದು ಅನುರಾಗಕ್ಕಾಗಿ ಎಷ್ಟೆಲ್ಲಾ (ಕವನ)	ಕೆ.ಪಿ. ಮೃತ್ಯಂಜಯ*	೨೦-೦೦
ಆಶಯ ಆಕೃತಿ (ವಿಮರ್ಶೆ)	ಸಿ.ಎನ್. ರಾಮಚಂದ್ರನ್*	೨೭-೦೦
ಖಾಸ್‌ಬಾತ್-೯೭ (ಅಂಕಣ ಬರಹ)	ರವಿಬೆಳಗೆರೆ*	೧೦೦-೦೦
ಕಂಪ್ಯೂಟರ್‌ಗೊಂದು ಕನ್ನಡಿ	ಡಾ. ಸಿ.ಪಿ. ರವಿಕುಮಾರ್*	೨೭-೦೦
ನೋಟ ಪಲ್ಲಟ (ದೃಶ್ಯಸಂಸ್ಕೃತಿ ಕುರಿತು)	ಎಚ್.ಎ. ಅನಿಲ್ ಕುಮಾರ್	೩೫-೦೦

ಇಚ್ಛಾಶಕ್ತಿಯ ನಿರೂಪ (ವೋಲೆ ಷೋಯಿಂಕಾ ಸಾಹಿತ್ಯ ಕುರಿತು)	ವಿವಿಧ ಲೇಖಕರು*	೩೫–೦೦
ಅಂಧ ಮಕ್ಕಳ ಅರಿವಿನಂಗಣ (ಮಹಾ ಪ್ರಬಂಧ)	ಎಂ.ಆರ್. ಮಂದಾರವಲ್ಲಿ	೨೫–೦೦
ಮೊದಲ ಕಟ್ಟಿನ ಗದ್ಯ (ಲೇಖನಗಳು)	ಎಚ್.ಎಸ್. ಶಿವಪ್ರಕಾಶ್	೭೦–೦೦
ಗೌರವ (ಜಿಎಸ್‌ಎಸ್ – ೭೫)	ಸಂ. ಚಿ. ಶ್ರೀನಿವಾಸರಾಜು	೨೫೦–೦೦

<u>**ಅಚ್ಚಿನಲ್ಲಿ**</u>

ಹೇರಾಮ್ (ಭಾರತದ ಆತ್ಮಚ್ಛೇದದ ಕಥನ) – ಸಂ. ನ. ರವಿಕುಮಾರ

ಆಂಟೋನಿಯೊ ಗ್ರಾಮ್ಷಿ – ಕೆ. ಫಣಿರಾಜ್

ಜಾನಪದ ರಂಗಭೂಮಿ – ಡಾ. ಬಸವರಾಜ ಮಲಶೆಟ್ಟಿ

ಮಂದಹಾಸ ಮೀಮಾಂಸೆ (ಸಮಗ್ರ ಲಲಿತ ಪ್ರಬಂಧಗಳು) – ಡಾ. ಪ್ರಭುಶಂಕರ

ಅಮೂರ್ತತೆ ಮತ್ತು ಪರಿಸರ (ವಿಮರ್ಶೆ) – ಡಾ. ರಾಜೇಂದ್ರ ಚೆನ್ನಿ

ಭಾರತೀಯ ತತ್ವಶಾಸ್ತ್ರದ ರೂಪುರೇಶೆಗಳು – ಮೂಲ : ಎಂ. ಹಿರಿಯಣ್ಣ, ಅನು: ಪ್ರಭುಶಂಕರ

ಲೇಖನಗಳು – ಡಾ. ಕೆ.ವಿ. ತಿರುಮಲೇಶ್

ನಮನ (ಅನುಭಾವಿ ಕಥನ) – ಆನಂದ ಪಾಟೀಲ

ಟಿಬೆಟ್ – ಮಂಗಳೂರು ವಿಜಯ

ಮರೆಯಲಾದೀತೇ? – ಬೆಳಗೆರೆ ಕೃಷ್ಣಶಾಸ್ತ್ರಿ

ಈತನಕದ ಕಥೆಗಳು – ಅಬ್ದುಲ್ ರಶೀದ್

---

*ಪ್ರತಿಗಳು ಮುಗಿದಿವೆ

....ಇಂಥ ಅಗಾಧವಾದ ಪುಸ್ತಕವನ್ನು ತಮ್ಮ ವರ್ಣಿಸಲಸಾಧ್ಯವಾದ ಅನಾರೋಗ್ಯದ ಸ್ಥಿತಿಯಲ್ಲಿ ಮೋಹನ್ ರಚಿಸಿದ್ದಾರೆ ಎಂದರೆ, ನಾನು ಖುದ್ದಾಗಿ ಅವರ ನರಳುವಿಕೆಯನ್ನು ನೋಡಿದ್ದರಿಂದ ಮಾತ್ರ ನಂಬಲು ಸಾಧ್ಯವಾಗಿದೆ. ಆತ ಪರಮಸಾಹಸಿ, ಪರಮ ಪ್ರಾಮಾಣಿಕರು. ತುಂಬಾ ಪರಿಶ್ರಮಪಟ್ಟು, ಆಕರ ಗ್ರಂಥಗಳಲ್ಲಿ ಮುಖ್ಯವಾದುವುಗಳನ್ನೆಲ್ಲಾ ಅಧ್ಯಯನಮಾಡಿ ಅಮೆರಿಕ ಸಂಯುಕ್ತಸಂಸ್ಥಾನಗಳ ಇತಿಹಾಸವನ್ನು - ಇದರಲ್ಲಿ ರಾಜಕೀಯ ಹಾಗು ಸಾಮಾಜಿಕ ಕ್ರಾಂತಿಗಳೆರಡೂ ಸೇರಿವೆ - ಬರೆದಿದ್ದಾರೆ. ಒಂದು ದೇಶದ ಇತಿಹಾಸವು, ಮೋಹನ್‌ರವರಿಗೆ ದೊರೆತಿರುವ ಆಕರ್ಷಣೀಯ ಶೈಲಿಯಿಂದಾಗಿ ಸೊಗಸಾದ ಕಾದಂಬರಿಯಂತೆ ಓದಿಸಿಕೊಳ್ಳುತ್ತದೆ.....

– ಡಾ. ಪ್ರಭುಶಂಕರ
ಮೈಸೂರು

.... ಭೌಗೋಳಿಕ ಪರಿಸರದ ಪರಿಚಯದಿಂದ ಆರಂಭವಾಗಿ, ವಸಾಹತುಗಳ ಸ್ಥಾಪನೆಯಿಂದ ಹಿಡಿದು ಇತ್ತೀಚೆಗೆ ಅಧಿಕಾರದಿಂದ ನಿವೃತ್ತಿಯಾದ ಬಿಲ್ ಕ್ಲಿಂಟನ್‌ವರೆಗೆ ಯಾವ ಮುಖ್ಯಾಂಶವನ್ನೂ ಬಿಡದೆ ಮೋಹನ್ ಪರಿಚಯಿಸಿದ್ದಾರೆ. ಇದೊಂದು ಸಾಹಸವೇ ಸರಿ.....

....ಪ್ರೊ.ವೈ.ಆರ್. ಮೋಹನ್‌ರ ನಿರೂಪಣೆ ಸರಳವಾಗಿದೆ ಮತ್ತು ನೇರವಾಗಿದೆ. ಅಲ್ಲಲ್ಲಿ ನಿರೂಪಣೆಯ ಝಳಕುಗಳಿಂದ ಉಜ್ವಲಗೊಂಡಿದೆ. ಯಾವುದೇ ಪಂಥ ಪ್ರಭೇದಗಳಿಗೆ ಒಳಗಾಗದೆ ಸಾಧ್ಯವಾದಷ್ಟು ವಸ್ತುನಿಷ್ಠತೆಯನ್ನು ತೋರಿಸಿದ್ದಾರೆ. ಈ ಕೃತಿ ವಿದ್ವಾಂಸರಿಗೂ ಜನಸಾಮಾನ್ಯರಿಗೂ ಉಪಯುಕ್ತವಾಗಲೆಂದು ಆಶಿಸುತ್ತೇನೆ....

ಪ್ರೊ.ಕೆ.ಎಸ್.ಶಿವಣ್ಣ
ಮೈಸೂರು



ಅಭಿನವ